ವಾ. ಚಂದಾ ರೂ. 6-25 ಬೆಲೆ 13 ನ.ಪೈಸೆ

Vol. 39 No. 18
ವರುಷ ೩೯. ವಾರ ೧೮

7-1-1960

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಸಂತುಷ್ಟ ಅಮೆರಿಕೆಯ ಮಕ್ಕಳು ವಿನೋದವಾಡುತ್ತಿದ್ದಾರೆ

ಪ್ರಚಲಿತ ಪ್ರಸಂಗ

ಬೆಂಗಳೂರಿನ ಕಾಂಗ್ರೆಸ್ ಅಧಿವೇಶನ

ಸಂಕ್ರಾಂತಿಯ ಕಾಲದ ಈ ಅಧಿವೇಶನವು ತನ್ನ ನಿಶ್ಚಿತ ಧೋರಣೆಯನ್ನು ನಿರ್ಭಯತೆಯಿಂದ ನಿರ್ಧರಿಸಲಿ

ಇದೇ ತಾ ೧೬ರಿಂದ ಪ್ರಾರಂಭವಾಗಿ ...ರ ವರೆಗೆ ಬೆಂಗಳೂರಿನಲ್ಲಿ ಸೇರಲಿರು... ಕಾಂಗ್ರೆಸ್ ಅಧಿವೇಶನವು ಕರ್ನಾಟಕ್ಕೆ ಮಾತ್ರವಲ್ಲ ಅಖಿಲ ಭಾರತಕ್ಕೇನೇ ...ಮಹತ್ವಪೂರ್ಣವೆನಿಸಿದುದಾಗಿದೆ ಕಳೆದ ...ನಾಗಪುರ ಅಧಿವೇಶನಾನಂತರದ ಈ ...ಂದು ವರ್ಷದಲ್ಲಿ ಭಾರತದಲ್ಲಿಯೇ ಬ... ಪರಿವರ್ತನೆಗಳಾಗಿರುವುದರಿಂದ ಇ... ಇತಿಹಾಸಪ್ರಸಿದ್ಧ ಅಧಿವೇಶನವಾಗು...ದರಲ್ಲಿ ಸಂದೇಹಕ್ಕೆ ಎಡೆಯಿಲ್ಲ. ಭೂಧಾರಣೆಯ ಬಗ್ಗೆ ನಿಶ್ಚಿತ ಧೋರಣೆಯನ್ನು ನಾಗಪುರ ಅಧಿವೇಶನವು ಸ್ವೀಕರಿಸಿತ್ತು. ಇದರನ್ವಯ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯಗಳಿಗನುಕೂಲವಾದ ಭೂಸುಧಾರಣಾ ವಿಧೇಯಕಗಳು ತಯಾರಾಗುತ್ತಿವೆ, ಕೆಲವೆಡೆ ಪರಿಶೀಲನೆಗೆ ಗುರಿಯಾಗಿವೆ.

ಮೂವತ್ತು ವರ್ಷಗಳಿಗೆ ಮೊದಲು ...ಗಿನ ಬೊಂಬಾಯಿ ರಾಜ್ಯಕ್ಕೆ ಸೇರಿದ್ದ ...ಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ...ಸೇರಿತ್ತು. ಈಗ ಕರ್ನಾಟಕದ ರಾಜಧಾನಿ ಬೆಂಗಳೂರಲ್ಲಿ ಈ ಅಧಿವೇಶನವು ಸಮಾವೇಶಗೊಳ್ಳುತ್ತಿದೆ. ಇಂದು ಕಾಂಗ್ರೆಸ್ಸು ಕೇಂದ್ರದಲ್ಲಿಯೂ ಸರ್ವೇಸಾಮಾನ್ಯ ಎಲ್ಲ ರಾಜ್ಯಗಳಲ್ಲಿಯೂ ಅಧಿಕಾರಸೂತ್ರವನ್ನು ಹಿಡಿದು ರಾಷ್ಟ್ರವನ್ನು ಸಮೃದ್ಧಿ ಪಥದಲ್ಲಿ ಮುನ್ನಡೆಸುತ್ತಿದೆ. ತ...ನ್ನ ವಿರೋಧಿ ಪಕ್ಷಗಳನ್ನು ಸೋಲಿಸಿ ಅ...ಮ ತನ್ನ ಸತ್ವವನ್ನು ಹೆಚ್ಚಿಸಿಕೊಂಡಿದೆ ...ದರೆ, ಕಾಂಗ್ರೆಸ್ ಪಕ್ಷವೂ ಸರಕಾರಗ...ಳ ವಿಶಾಲ ಜನತೆಯ ವಿಶ್ವಾಸಕ್ಕೆ ದಿನೇ ದಿನೇ ಎರವಾಗುತ್ತಿದೆ ಎಂಬುದು ಪೂರ್ಣ ಸತ್ಯವಲ್ಲವಾದರೂ ಈ ದೂರನ್ನು ಅಲ್ಲಗಳೆಯುವುದು ಮಾತ್ರ ಎಂದಿಗೂ ಸಾಧ್ಯವಿಲ್ಲ.

ರಾಷ್ಟ್ರದ ಮಹಾ ನಾಯಕರಲ್ಲಿ ಪ್ರಮುಖರಾದವರು ಕವಲು ದಾರಿಯಲ್ಲಿ ಚಲಿಸತೊಡಗಿರುವ ಸಂಧಿಕಾಲವಿದು. ಈ ಒಂದು ವರ್ಷದಲ್ಲಿ ಕಾಂಗ್ರೆಸ್ಸಿನ ಭೂಸುಧಾರಣೆಯೇ ಮೊದಲಾದ ಕೆಲವೊಂದು ನೀತಿಯನ್ನು ವಿರೋಧಿಸಿ, ವೈಯಕ್ತಿಕ ಉನ್ನತಿಯನ್ನು ಪ್ರಬಲ ಧ್ಯೇಯವಾಗಿರಿಸಿ ಮಾಜಿ ಗವರ್ನರ ಜನರಲ್ ರಾಜಾಜಿಯವರು ಸ್ವತಂತ್ರ ಪಕ್ಷವೊಂದನ್ನು ಕಟ್ಟಿರುವುದಲ್ಲದೇ ಈ ಪಕ್ಷವನ್ನು ದಕ್ಷಿಣ ಭಾರತದಲ್ಲಿ ಬಲಪಡಿಸದ ಹೊರತು ತಾನು ಉತ್ತರ ಭಾರತಕ್ಕೆ ಪಾದಾರ್ಪಣ ಮಾಡಲಾರೆನೆಂದು ಭೀಷ್ಮ ಪ್ರತಿಜ್ಞೆಯನ್ನೂ ಗೈದಿದ್ದಾರೆ. ದಕ್ಷಿಣ ಭಾರತದ ನಾಯಕ ಶಿರೋಮಣಿಗಳಲ್ಲಿ ಕೆಲವರು ರಾಜಾಜಿಯವರತ್ತ ವಾಲಿದಿದ್ದಾರೆ. ಮಾಜಿ ರಾಜ್ಯಪಾಲ ಶ್ರೀ ಕೆ.ಎಂ ಮುನಷಿಯವರೂ ಪ್ರೊ॥ ರಂಗರವರು ಇಂತಹರಲ್ಲಿ ಕೆಲವರು. ಸ್ವತಂತ್ರ ಪಕ್ಷದ ಸ್ಥಾಪನೆಯಾದುದರಿಂದ ಕೇವಲ ಕಾಂಗ್ರೆಸಿಗೆ ಮಾತ್ರ ಹಾನಿಯೊದಗಿದುದೆಂದು ತಿಳಿದರೆ ತಪ್ಪೆನಿಸುವುದು. ಇತರ ವಿರೋಧಿ ಪಕ್ಷಗಳ ಶಕ್ತಿಯೂ ಹ್ರಾಸವಾಗುತ್ತ ಬರುತ್ತಿರುವುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಕಾಂಗ್ರೆಸ್, ಪ್ರಸಮಾ ಮತ್ತು ಸಾಮ್ಯವಾದಿ ಪಕ್ಷಗಳ ತತ್ವ ...ದವ ಧೋರಣೆಗಳಲ್ಲಿ ಗಣನೀಯ ವ್ಯತ್ಯಾಸವಿಲ್ಲದಿರುವುದರಿಂದ ಜನತೆಯ ಒಲವು ಕಾಂಗ್ರೆಸ್ಸಿನಿಂ ಸರಿದು ಕಮ್ಯೂನಿಜಂನತ್ತ ಒಲಿಯದಂತೆ ನೋಡಿಕೊಳ್ಳಲು ಸ್ವತಂತ್ರ ಪಕ್ಷದ ಸ್ಥಾಪನೆಯಾಯಿತೆಂದು ... ಅನ್ನಲಾಗುತ್ತಿದೆ. ಸ್ವತಂತ್ರ ಪಕ್ಷವು ರೂಪಗೊಳ್ಳದಿದ್ದರೆ, ಜನಮತವು ಕಮ್ಯೂನಿಜಂ ಅನ್ನು ಅಪ್ಪಿಕೊಳ್ಳುತ್ತಿತ್ತೆಂದು ಅವರ ಹೇಳಿಕೆಯಿದೆ. ಆದರೆ ಇದನ್ನು ಸರಿಯೆಂದು ತಿಳಿಯುವುದ ಕಷ್ಟವಾದ.

ಸ್ವತಂತ್ರ ಪಕ್ಷವೇ ಇರಲಿ ಅಥವಾ ಇನ್ನಾವುದೇ ಪಕ್ಷಗಳಿರಲಿ ದೇಶದ ಇಂದಿನ ಅವಶ್ಯಕತೆಯನ್ನು ಪೂರೈಸಿ ಕೊಡಲು, ರಾಷ್ಟ್ರವನ್ನು ಸಮೃದ್ಧಿಯ ಪಥದಲ್ಲಿ ಮುನ್ನಡೆಸಲು ಅಧಿಕಾರ ಸೂತ್ರ ಗ್ರಹಣಗೈದಿದ ಕಾಂಗ್ರೆಸ್ಸು ವಹಿಸುತ್ತಿರುವ ಕಾರ್ಯಪ್ರಣಾಳಿಯನ್ನು ಟೀಕಿಸುವುದರಿಂದಲೇ ತೃಪ್ತಿಪಟ್ಟುಕೊಳ್ಳುತ್ತಿವೆಯಲ್ಲದೇ ಭಾರತದ ಶ್ರೇಯೋಭಿವೃದ್ಧಿಗೆ ಯಾವುದೇ ರಚನಾತ್ಮಕ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲ. ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತಹ ಅವಶ್ಯಕ ಸುಧಾರಣೆಗಳನ್ನು ಕಾಂಗ್ರೆಸ್ಸು ಮಾಡಿದರೆ ಅದನ್ನು ಅಲ್ಲಗಳೆಯುವುದು ಮಾತ್ರ ಅವಿವೇಕವೆನಿಸೀತು.

ಕಾಂಗ್ರೆಸ್ಸು ತನ್ನ ಪ್ರತಿಸ್ಪರ್ಧಿಗಳನ್ನು ಎದುರಿಸಿ ಹೋರಾಡಿ ಯಶಸ್ಸು ಪಡೆಯುವುದು ಅಗತ್ಯವಾಗಿದೆ. ದೇಶದ ಆರೋಗ್ಯವು ಕಾಂಗ್ರೆಸ್‌ನ ಕೈಯಲ್ಲಿರುವಷ್ಟು ಉತ್ತಮವಾಗಿ ಸದ್ಯ ಬೇರಾವ ಪಕ್ಷದಲ್ಲಿಯೂ ಇರಲಾರದು. ರಾಷ್ಟ್ರದ ಐಕ್ಯವನ್ನೂ ಅಭಿವೃದ್ಧಿಯನ್ನೂ ಸಾಧಿಸುವುದರೊಡನೆ ಪ್ರಜೆಗಳ ವಿಶ್ವಾಸವನ್ನೂ ಗಳಿಸುವುದೂ ಕಾಂಗ್ರೆಸಿಗರ ಆದ್ಯ ಕರ್ತವ್ಯವಾಗಿದೆ. ಜನತೆಗೆ ಹಿತವಾಗುವಂತಹ ಅವಶ್ಯಕ ಕಾಯುದೆ ಕಾನೂನುಗಳನ್ನು ತ

(ಆನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ –
ಮಂಗಳೂರು—3

ಸ್ಥಾಪನೆ –
1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4½%
6 ,, 12 ,, 4¾%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ ಇತ್ಯಾದಿ

NAVAYUGA WEEKLY, UDIPI, S. INDIA,

ಕಥಾವಿಹಾರ

ರಾಕ್ಷಸನಲ್ಲಿಯೂ ಮಾನವತೆಯಿಲ್ಲವೆ?

ಎಲ್ಲರನ್ನೂ ದ್ವೇಷಿಸಿದ್ದ ದೊಡ್ಡಪ್ಪನವರೂ ಕಾಲಾಘಾತದಿಂದ ನೊಂದು ನವೆದು ಮುಂದೆ ಬೆಸೆದು ಬಂದರು.

ಮಳೆಗಾಲ ಆದೇ ತಾನೇ ಕಾಲಿಟ್ಟಿತ್ತು. ಎರಡುಮೂರು ಗಂಟೆಗಳಿಂದಲೂ, 'ಧೋ' ಧೋ', ಎಂದುರಾಗ ಹೊರಡಿಸುತ್ತ ಸುರುವಾದ ಮಳೆ, ಇನ್ನೂ ಮಂಗಳ ಹಾಡುವ ಸ್ಥಿತಿಗೆ ಮುಟ್ಟಿರಲಿಲ್ಲ. ಹೋಟೆಲ್ ವ್ಯಾಪಾರದಲ್ಲೇ ಒಂದು ತರದ ಜಿಗುಪ್ಸೆ ಹುಟ್ಟಿ, ಆ ವ್ಯವಹಾರದಿಂದ ಸಂಪೂರ್ಣ ಕೈತೊಳೆದುಕೊಂಡು ಊರಿಗೆ ಮರಳಿದ್ದ ನಾನು, ಅಷ್ಟು ಹೊತ್ತು ಸೆರೆಯಲ್ಲಿಟ್ಟ ಕೈದಿಯಂತೆ ಚಡಪಡಿಸಿದೆ. ಓಡಾಟವೆಂದರೆ ನನಗೆ ಸಖ್ಯವಾಗಿತ್ತು. ಅಂತಲೇ ಕೊನೆಗೆ ಕೊಡೆಯೊಂದನ್ನು ಬಗಲಿಗೇರಿಸಿ, ಮನೆಯಿಂದ ಹೊರಬಿದ್ದೆ. ಆಗ ಗಗನಾಂಗಣವು, ಸಿಕ್ಕ ಸಿಕ್ಕಲ್ಲಿ ಮನೆಮಾಡಿಕೊಂಡಿದ್ದ ಮೋಡಗಳೆಂಬ ಕಸಕಡ್ಡಿಗಳು ಗಾಳಿ ಪೊರಕೆಯಿಂದ ಚೆನ್ನಾಗಿ ಗುಡಿಸಲ್ಪಟ್ಟ ಮೇಲೆ ಸ್ವಚ್ಛವಾಗಿತ್ತು. ಮುಳುಗ ಹೊರಟಿದ್ದ ಸೂರ್ಯ, ಗುಡುಗು ಸಿಡಿಲುಗಳ ಆರ್ಭಟೆಗೆ ತಲ್ಲಣಿಸಿ, ಪ್ರಾಣಭೀತಿಯಿಂದ ಮೋಡಗಳ ಮೊರೆಹೊಕ್ಕಿದ್ದವನು, ಈಗ ಏನೂ ಅಪಾಯವಿಲ್ಲವೆಂದು ಮನಗಂಡು ತಲೆಯನ್ನು ಹೊರಹಾಕ ಹವಣಿಸಿದ್ದ. ಎಂದೋ ಒಮ್ಮೆ ದರ್ಶನಕೊಟ್ಟು ಬಂದು, ಪುನಃ ಇದು ವರೆಗೂ ಅತ್ತ ಮುಖ ಹಾಕಿ ನೋಡದ ನಮ್ಮ ಹಾಡಿಯನ್ನೊಮ್ಮೆ ಕಣ್ಣಾರೆ ನೋಡಿ ಬರಬೇಕೆಂಬ ಚಪಲತೆ ಹುಟ್ಟಿಯೇ ನಾನು ಮನೆಯಿಂದ ಹೊರಬರುವ ನಿಶ್ಚಯ ಮಾಡಿದೆ ಎನ್ನಬಹುದು.

ನಮ್ಮೂರ ಅಂಗಡಿ ಸಾಲುಗಳ ನಡುವೆ ನಾನು ಹಾದು ಹೋಗುತ್ತಿದ್ದೆ. ಮನದಲ್ಲಿ ಏನೇನೋ ಆಲೋಚನೆಗಳು ತುಂಬಿಕೊಂಡಿದ್ದುವು. "ಹಾಡಿ ಈಗ ತುಂಬಾ ಬೆಳೆದಿರಬಹುದು ಅಥವಾ ಬೇರೆಯವರ ಉಪಕಾರಕ್ಕೆ ಹೋಗಿರಬಹುದು. ಈ ವರ್ಷವಾದರೂ ಒಂದು ನಾಲ್ಕುನೂರು ಗಾಳಿ ಸಸಿಗಳನ್ನು ಹಾಕಬೇಕು" — ಇನ್ನೂ ಎಷ್ಟು ಯೋಚನೆಗಳಲ್ಲಿ ತಲ್ಲೀನನಾಗುತ್ತಿದ್ದೆನೋ ತಿಳಿಯದು. ಆದರೆ, ಅಷ್ಟಕ್ಕೇ ಸಂಚಕಾರ ಬಂತು. ಎತ್ತಲಿಂದಲೋ "ಓ ಸರೂ, ಸರೂ" ಎಂಬ ದನಿ ನನ್ನ ಕಿವಿಗೆ ಬಂದು ಬಡಿಯಿತು. ಕರೆದವರು ಯಾರೆಂದು ಸುತ್ತಲೂ ದೃಷ್ಟಿ ಹಾಯಿಸಿದೆ. ಒಂದು ಹರಕು ಪಂಚೆತೊಟ್ಟು, ಅಸ್ಥಿಪಂಜರವಾಗಿದ್ದ ನಮ್ಮ ದೊಡ್ಡಪ್ಪನೋರು ತಮ್ಮ ಕಡತಂದ ದನಿ ಸೇರಿಸಿ ಕರೆದಿದ್ದರು.— ನಾಗಪ್ಪ ಶಾಸ್ತ್ರಿಗಳ ಹೋಟೆಲ ಹೊರಗೆ ನಿಂತು.

ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಹತ್ತಾರು ವರ್ಷಗಳಿಂದ "ನೀವು ಇದ್ದಿರಾ? ಸತ್ತಿರಾ?" ಎಂದು ನಮ್ಮ ಮನೆಯತ್ತ ಮುಖ ಹಾಕಿ ನೋಡದ, ನಾನೆಂದರೆ ಉರಿದು ಬೀಳುತ್ತಿದ್ದ ನಮ್ಮ ದೊಡ್ಡಪ್ಪಯ್ಯನವರು ತಮ್ಮ ನಾಲಗೆಯಿಂದಲೇ ನನ್ನ ಹೆಸರೆತ್ತಿ ಕರೆಯುವ ಪುಣ್ಯ ತೋರಿಸಿದರಲ್ಲಾ ಎಂಬ ಯೋಚನೆ ಬಂದು. ಅದಕ್ಕೊಂದು ದೃಷ್ಟಾಂತವೂ ಎರಡು ದಿನಗಳ ಹಿಂದೆ ನನಗೆ ಸಿಕ್ಕಿತ್ತು. ಅವರ ಕಿರಿಮಗಳ ಗಂಡನ ಮನೆಯಲ್ಲೊಂದು ವಿಶೇಷವಾದುದರಿಂದ ಹೇಳಿಕೆ ಬಂದು, ನನಗೂ ಹೋಗಬೇಕಾದ ಸಂದರ್ಭ ಬಂದೊದಗಿತ್ತು. ಹಾಗೆ ಹೋದಾಗ ದೊಡ್ಡಪ್ಪಯ್ಯನವರು ಎದುರಿಗೆ ಸಿಕ್ಕಾಗ್ಯೂ ಮಾತಾಡಿಸದೆ, ಉರಿಮೋರೆ ಮಾಡಿಕೊಂಡು ಹೋಗಿದ್ದರು. ಅಂಥವರು ಇಂದು ತಾವೇ ಕರೆಯುವಷ್ಟರ ಮಟ್ಟಿಗೆ ಬಂದರಲ್ಲಾ ಎಂದು ಮನಸ್ಸಿನಲ್ಲೇ ಬೆರಗುಪಡುತ್ತ ಅವರ ಬಳಿಗೆ ಹೋಗಿ, "ಏನು?" ಎಂದೆ. "ಒಂದು ಬೀಡಾ ತೆಗೆಸಿಕೊಡು ಮಾರಾಯ" ಎಂದರು, ಮೊದಲು ಉಪ್ಪು—ಉಪ್ಪಿನಕಲ್ಲು ಎಂದು ಹೇಳಲು ಹಿಂದೆಗೆಯುತ್ತಿದ್ದ ದೊಡ್ಡಪ್ಪನವರು. ಅವರ ಬಡಸ್ಥಿತಿಯನ್ನು ನೆನೆದು ನನಗೆ ನಾಚಿಕೆಯಾಯಿತು. ಅವರೆ, ಹೆಚ್ಚು ಮಾತು ಬೆಳೆಸುವ ಗೋಜಿಗೆ ಹೋಗದೆ, ಅವರು ಕೇಳಿದಷ್ಟನ್ನು ತೆಗೆಸಿಕೊಟ್ಟು, ನನ್ನ ಹಾದಿ ಹಿಡಿದೆ.

ಹೋಗುತ್ತ—ಹೋಗುತ್ತ, ಮನಸ್ಸಿನಲ್ಲಿ ಹಿಂದಿನ ಸ್ಮರಣೆಗಳ ಮರಹೋಗತೊಡಗಿತು ನಮ್ಮ ತಂದೆಯವರಿಗಿಂತ ಕೇವಲ ನಾಲ್ಕು ವರ್ಷಗಳಿಗೆ ದೊಡ್ಡಪ್ಪನವರು ಹಿರಿಯರಾಗಿದ್ದರು. ಅವರದು ಗೋಮುಖವ್ಯಾಘ್ರ ಸ್ವಭಾವ. ಹೃದಯದಲ್ಲೊಂದ, ಮಾತಿನಲ್ಲೊಂದು. ನಮ್ಮ ತಾಯಿ ಮದುವೆಯಾಗಿ ಬಂದಾಗ, ಅವರಿಂದ ಪಡಬಾರದ ಕಷ್ಟಗಳನ್ನು ಅನುಭವಿಸಿದ್ದಳು. ಹುಚ್ಚು ತಲೆಯೋರಿದ್ದ ಗಂಡನೊಡನೆ ಸಹಜೀವನವನ್ನು ನಡೆಸುತ್ತಲೂ ಮನೆವಾರ್ತೆಯಲ್ಲಿ ಭಾವಯ್ಯನವರ ಚುಚ್ಚುನುಡಿ ಕೇಳುತ್ತಲೂ, ನಿತ್ಯವೂ ಅಳುವಿನ ಅಡಿಗೆಯನ್ನು ತಿಂದು ತಿಂದು ಹಣ್ಣಾಗಿ ಹೋಗಿದ್ದಳು. ಪಾಲಾಗಬೇಕಾಗಿ ಬಂದಾಗ, ನಮ್ಮ ತಂದೆ ಅಣ್ಣನೊಡನೆ ಆಸ್ತಿಯಲ್ಲಿ ಪಾಲುಕೇಳಿದರು. "ದೇವಸ್ಥಾನ ಮಕ್ಕಿ ಜಡ್ಡೇ ನಿನ್ನ ಆಸ್ತಿ" ಎಂದು ದೊಡ್ಡಪ್ಪಯ್ಯನವರು ಹಂಗಿಸಿದ್ದರಂತೆ. ಈ ಸಂಗತಿಗಳೆಲ್ಲವನ್ನೂ ತಾಯಿಯಿಂದಲೇ ನಾನು ಕೇಳಿ ತಿಳಿದಿದ್ದೆ. ಆಗಿನ ಅವರ ಆಡಂಬರ ಜೀವನವನ್ನೂ ಪರಿಚಯಮಾಡಿಕೊಂಡಿದ್ದೆ.

ಆದರೆ, ಇವೆಲ್ಲವೂ ನಶಿಸಿಹೋಗುವ ಕಾಲ ಬಂತು. ದೊಡ್ಡಪ್ಪನವರು ಕೀಳು ಹೆಂಗಸರ ಸಹವಾಸಕ್ಕೆ ಬಿದ್ದು ಭೀಕರ ರೋಗಕ್ಕೆ ತುತ್ತಾದರು. ಬೆನ್ನುಹತ್ತಿದ ಬೇತಾಳನಂತೆ ಕಾಡಹತ್ತಿದ ಆ ಬೇನೆ ಶಮನಕ್ಕಾಗಿ, ವೈದ್ಯರಿಗೆ ನೀರಿನ ಹಾಗೆ ಹಣ ಸುರಿದರು. ಕಾಸುಕಾಸು ಸೇರಿಸಿದ್ದ ಇಡುಗಂಟೆಲ್ಲಾ ಪೋಲಾಗಿ ಹೋಯಿತು. ಕೊನೆಗೆ ದೊಡ್ಡಪ್ಪನವರಿಗೆ ಎಲ್ಲಾ ಕೈಬಿಟ್ಟು, ಪರಊರಿಗೆ ಪಯಣಿಸುವ ವೇಳೆ ಒದಗಿತು.

ಈ ಸುದ್ದಿ ತಿಳಿದು ನಮ್ಮ ತಾಯಿಗೆ ಕರುಳು ಕಿತ್ತುಬಂದ ಹಾಗಾಯಿತು. ಎಷ್ಟೆಂದರೂ ಕೈಹಿಡಿದವರ ಅಣ್ಣನಲ್ಲವೇ— ಎಂಬ ಭಾವನೆತಾಳಿದು, ಅವರನ್ನು ಬಿಟ್ಟುಕೊಡುವ ಹಾಗಿಲ್ಲವಲ್ಲಾ, ಎಂದು ಒಳ್ಳೇ ಮನಸ್ಸು ಮಾಡಿದ್ದಳು. ನಮ್ಮ ತಂದೆ ಅಷ್ಟು ಹೊತ್ತಿಗೆ ಸ್ವರ್ಗಾರೋಹಿಸಿದ್ದರು. ವಿಮುಖರಾಗಿದ್ದರು. ತಮ್ಮ ಅಣ್ಣ ಪಾಲಾಗುವ ವೇಳೆ ತಮಗೆ ಹೇಳಿದ ಮಾತನ್ನೂ, ಹಾಳು ಸಾಮಾನುಗಳನ್ನೇ ಹೆಕ್ಕಿ ಕೊಟ್ಟಿರುವುದನ್ನೂ ಅವರು ಜನ್ಮಜನ್ಮಾಂತರಗಳಲ್ಲಿ ಮರೆಯುವ ಹಾಗಿರಲಿಲ್ಲ ಅದರಿಂದಲೇ, "ಅವನಿಗೆ ಒಂದು ಚೂರು ಸಹ ಜಾಗಕೊಡೆನ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ತಾಯಿ ಕಾಲುಹಿಡಿದು, ಗೋಗರೆದುಕೊಂಡ ಮೇಲೆ ಅವರಿಗೂ ಭ್ರಾತೃವಾತ್ಸಲ್ಯ ತಲೆದೋರಿ, "ಇದ್ದರೆ ಇರಲಿ ನನ್ನ ಹೆಸರು ಹೇಳಿಕೊಂಡು" ಎಂದು ತಾವು ಹೊಸದಾಗಿ ಕೊಂಡುಕೊಂಡಿದ್ದ ಮನೆಯೊಂದನ್ನು ದೊಡ್ಡಪ್ಪನವರು ಸಾಯುವ ವರೆಗೂ ಉಪಭೋಗಿಸಬಹುದೆಂದು ಅವರ ವಶಕ್ಕೆ ಬಿಟ್ಟರು.

ದೊಡ್ಡಪ್ಪನವರು ಹೊಸಮನೆಯಲ್ಲಿ ಬೀಡುಬಿಟ್ಟರು. ಎರಡು ಹೆಣ್ಣುಮಕ್ಕಳೂ ಆದುವು ಆಗ ನಮ್ಮ ತಂದೆಯವರಿಗೂ, ಅವರಿಗೂ ಇದ್ದ ಸ್ನೇಹ ಅಳೆವ ಪ್ರಸಂಗ ಬಂತು. ನಮ್ಮೂರ ದೇವಸ್ಥಾನದ ಮೊಕ್ತೇಸರರು ನಾರಾಯಣ ಶಾಸ್ತ್ರಿಗಳೆಂಬವರು ಅವರಿಬ್ಬರ ಸ್ನೇಹಶೈಲಕ್ಕೆ ಪೆಟ್ಟು ಸುರಿದರು. ತಂದೆಯವರು ಮನೆಯ ಗೇಣಿ ಕೇಳಿದಾಗ ನಾಲ್ಕಾರು ಬಿರುಸಿನ ಮಾತುಗಳಾದುವು. ಅಂದೇ ಇಬ್ಬರ ಮುಖಗಳೂ ಉತ್ತರಧ್ರುವ, ದಕ್ಷಿಣಧ್ರುವಗಳಿಗೆ ತಿರುಗಿದುವು.

ನಮ್ಮ ತಂದೆಯವರ ಅರವತ್ತರ ಶಾಂತಿ ನಡೆದಿತ್ತು. ನೆಂಟರಿಷ್ಟರೆಲ್ಲಾ ಬಂದಿದ್ದರು. ಬರದಿದ್ದವರೆಂದರೆ, ನಮ್ಮ ದೊಡ್ಡಪ್ಪ ಮಾತ್ರ. ನಾನು ಹೋಗಿ ಬರಬೇಕೆಂದು ಎಷ್ಟು ಹೇಳಿದರೂ ಅವರದಕ್ಕೆ ಕಿವಿಗೊಡುವ ತ್ರಾಸ ತೆಗೆದುಕೊಳ್ಳಲಿಲ್ಲ. ನಾನೂ ಹೆಚ್ಚಿಗೆ ಮಾತುಗಳನ್ನಾಡಲಿಚ್ಛಿಸಲಿಲ್ಲ. ಬೇಗನೆ ಅಲ್ಲಿಂದ ಕಾಲ್ತೆಗೆದೆ. ಅದೇ ಕಡೆಯದೂ ಆಯಿತು. ಅಂದಿನಿಂದ ನಮ್ಮೆರಡು ಮನೆಗಳಲ್ಲಿ ಊಟ-ಪಾತ್ರಗಳು, ಮಾತುಕತೆಗಳು ನಿಂತುಹೋದುವು.

ನನಗೂ ನಾರಾಯಣಶಾಸ್ತ್ರಿಗಳಿಗೂ ಮೊದಲಿನಿಂದಲೂ ಅಸ್ಪಷ್ಟಸ್ಪಷ್ಟ. ಒಂದು ಕೋರ್ಟಿನ ಜಗಳ ಅದಕ್ಕಿನ್ನೂ ಪುಷ್ಟಿಕೊಟ್ಟಿತ್ತು. ದೊಡ್ಡಪ್ಪನವರು ಅವರ ಪಕ್ಷಕ್ಕೆ ಸೇರಿ, ನಮ್ಮನ್ನು ಎಲ್ಲ ವಿಧದಲ್ಲೂ ಕೀಳುಮಾಡಿ ತೋರಿಸಲಿಕ್ಕೆ ಪ್ರಾರಂಭಿಸಿದರು. ಅವರು ನಮ್ಮಿಂದಲೇ ಚೇತರಿಸಿಕೊಂಡವರಾದಾಗ್ಯೂ ನಮ್ಮಿಂದಾದ ಉಪಕಾರವನ್ನೇ ಮರೆತು ವರ್ತಿಸಲಾರಂಭಿಸಿದರು.

ಅವರದೊಂದು ದನವು ನಿತ್ಯವೂ ನಮ್ಮ ಗದ್ದೆಗೆ ನುಗ್ಗಿ, ಪೈರನ್ನು ನಾಶಮಾಡುತ್ತಿರುವುದನ್ನು ನೋಡುತ್ತ ಕುಳಿತಿರಲಾಗದೆ, ಅದನ್ನು ಹೇಳಹೊರಟ ನಮ್ಮ ತಾಯಿಗೆ ಬಾಯಿಗೆ ಬಂದಹಾಗೆ ಬಯ್ದು ಮುಖಭಂಗಮಾಡಿದರು. ತಮ್ಮ ಜೀವನ ನಾವೆಯನ್ನೇ ಬದಲಿಸಿದ ಮಹಾತಾಯಿಯನ್ನು ನಿಂದಿಸಿ. ಅದರ ಶಾಪವನ್ನು ಬಹುಬೇಗನೇ ಕಂಡುಕೊಂಡರು.

ದೊಡ್ಡಪ್ಪನವರ ಹಿರಿಮಗಳು ಅಕ್ಕಮ್ಮನನ್ನು ಬೈಂದೂರಿಗೆ ಕೊಟ್ಟು ಮದುವೆಯಾಗಿತ್ತು. ಗಂಡ ಬಡವನಾಗಿದ್ದರೂ ಸುಗುಣಶೀಲನಾಗಿದ್ದ. ಒಂದು ಗಂಡು, ಮತ್ತೊಂದು ಹೆಣ್ಣು— ಹೀಗೆ ಇಬ್ಬರು ಮುದ್ದಾದ ಮಕ್ಕಳು ಹುಟ್ಟಿದ್ದರು. ಅಕ್ಕಮ್ಮನನ್ನು ಕಂಡರೆ ದೊಡ್ಡಪ್ಪನವರಿಗೆ ಅಷ್ಟು ಪ್ರೀತಿ ಇರಲಿಲ್ಲ. ಅವಳನ್ನು ಮನೆಗೆ ಕರೆದುಕೊಂಡು ಬರುವುದಂತಿರಲಿ, ಕಾಗದ ಹಾಕಲಿಕ್ಕೂ ಏನು ಸಮೇತ್ತೈಸೆ ಖರ್ಚಾಗುತ್ತದಲ್ಲಾ ಎಂದು ಹಿಂದೆಮುಂದೆ ನೋಡುತ್ತಿದ್ದರು.

ಒಂದು ದಿನ ಅಕಸ್ಮಾತ್ತ ಅಕ್ಕಮ್ಮನ ಗಂಡ ಮೃತ್ಯುವಶನಾದನೆಂಬ ಕಾಗದ ಅವರಿಗೆ ಸಿಡಿಲಿನಂತೆ ಬಂದೆರಗಿತು. ಅವರ ಹೆಂಡತಿ ಮೊದಲೇ ಕಾಯಿಲೆಯಿಂದ ನೋತು ಸಣ್ಣವಾಗಿದ್ದ ಜೀವ, ಮಗಳ ವೈಧವ್ಯ ಸುದ್ದಿ ಕೇಳಿ ಹಾಸಿಗೆ ಹಿಡಿದವರು ಮೇಲೇಳಲಿಲ್ಲ. ಕೊರಗಿಕೊರಗಿ, ಸರಿಯಾದ ಔಷಧೋಪಚಾರವಿಲ್ಲದೆ ಆ ಪ್ರಾಣದೀಪ ಒಂದುದಿನ ನಂದಿಯೇ ಹೋಯಿತು.

ಉಪಾಯವಿಲ್ಲದೆ ಮಗಳನ್ನು ಮನೆಗೆ ಕರತಂದ ದೊಡ್ಡಪ್ಪನವರಿಗೆ, ಹೆಂಡತಿಯ ಸಾವು ಮತ್ತೊಂದು ಆಘಾತವಾಯಿತು. ಮಗಳ ಗಂಡ ಹಿಂದಿನವರು ಮಾಡಿಟ್ಟು ಹೋದ ಸಾಲ ತೀರಿಸಲಾಗದೆ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡು ಮಗಳಿಗೆ ಗತಿ ಕಾಣಿಸದೆ ಹೋದ ಎಂದು ಊರಿನಲ್ಲಿ ಸಾರಿಕೊಂಡು ಬಂದಿದ್ದರು. ಆದರೆ, ನೈಜ ವಿಷಯ ಬೇರೆಯೇ ಆಗಿತ್ತು. ಅಕ್ಕಮ್ಮನಿಂದ ನಾನು ಸ್ವಲ್ಪಾಂಶ ಕೇಳಿ ತಿಳಿದಿದ್ದೆ. ಅದರ ಸಾರಾಂಶವಿಷ್ಟು. ಟೈಫಾಯ್ಡ್ ಸುರುವಾಗಿ ಹಾಸಿಗೆ ಹಿಡಿದವರಿಗೆ, ಸಾಲದ ಹೊರೆಯೊಂದು ಬಂದು ಬಿದ್ದು, ಅದೇ ಯೋಚನೆಯಲ್ಲಿ ಸ್ವರ್ಗದ ಹಾದಿ ಹಿಡಿದರು.

೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಕಾಸರಗೋಡು ಪ್ರಶ್ನೆ

ಕಾಸರಗೋಡಿನ ನಷ್ಟ—ಇಡೀ ಕರ್ನಾಟಕದ ನಷ್ಟ! ಕವಿ ಬೇಂದ್ರೆಯವರ ಸಂದರ್ಶನ

ಬರುವ ಫೆಬ್ರುವರಿ ೧ಕ್ಕೆ ಕೇರಳದಲ್ಲಿ ಸಾರ್ವತ್ರಿಕ ಚುನಾವಣೆಯು ಘೋಷಣೆಯಾಗಿದೆ.

ಲೋಕಸಭೆಯಲ್ಲಿ ರಾಷ್ಟ್ರಾಧ್ಯಕ್ಷರಿಗೆ ಹೆಚ್ಚಿನ ಅಧಿಕಾರಕೊಡುವ ಮಸೂದೆ ಸ್ವೀಕೃತವಾಗಿದೆ.

ಸ್ವಾತಂತ್ರ್ಯಾನಂತರ ಕೇರಳದ ರಾಜಕೀಯ ಕದನ ಇತಿಹಾಸದ ಪುಟಗಳಲ್ಲಿ ಹರಡಿಕೊಂಡಿದೆ. ಈಸಲ ಕಮ್ಯೂನಿಸ್ಟ್ ಮಂತ್ರಿಮಂಡಳದ ಆಡಳಿತದ ಅವಧಿಯಂತೂ ದಿನಕ್ಕೊಂದು ಚೆಂಡದ ಅವಸ್ಥೆ ತಳೆದಿತ್ತು. ಆ ಅವಸ್ಥೆಯ ಬಣ್ಣವಂತೂ ಕೆಂಪು. ಕೆಂಗಣ್ಣು, ರಕ್ತ, ಭಯ,— ಭಯಂಕರ!

ಭಾರತದಲ್ಲೇ ವಿದ್ಯಾವಂತರ ಸಂಖ್ಯೆ ಕೇರಳದಲ್ಲಿ ಹೆಚ್ಚಿನದು. ಬಹು ಜಾಗೃತವಾದ ಜನಾಂಗದ ನಾಡು.

ವಿದ್ಯಾ-ಬುದ್ಧಿ ಸಂಪನ್ನತೆಯೇ ಕದನಕ್ಕೆ ಮೂಲವಾದರೆ ಭಾರತದ ಮುನ್ನಡೆಯ ದಾರಿ ಬದಲಾಗಬೇಕು.

ಅನ್ನಾಭಾವ, ನಿರುದ್ಯೋಗ, ಬಡತನ, ಜನದಟ್ಟಣೆ— ಇವು ಭಾರತದ ವಿಶಿಷ್ಟ ರೋಗಗಳು. ಇವರ ಜತೆಗೇ ಕೇರಳದಲ್ಲಿ ಕ್ಷೇತ್ರ ಇಕ್ಕಟ್ಟಿನದು, ಮತ್ತೆ ಪರಿಣಾಮ ಕೇಳುವುದೇ ಬೇಡ ಧರ್ಮ— ಕರ್ಮಗಳ ಜೀವಂತ ಕಲಹಕ್ಕೆ ತಕ್ಕ ವ್ಯವಸ್ಥೆ.

ಅಂತೂ ಭಾರತ ನಿದ್ರಾಲೋಲ ದೇಶವಲ್ಲ—ಎಂಬುದು ಕೇರಳದ ಜಾಗೃತಿಯ ಪುಣ್ಯದಿಂದ ಸಿದ್ಧವಾದಂತಾಯಿತು. ಇಂದಿನ ಜಗತ್ತು ಭಾರತದ ಎಚ್ಚರವನ್ನು ಕೇರಳದ ಕಹಳೆಯಿಂದಲೇ ಕೇಳುವಂತಾಗಿದೆ.

ಇಂಥ ಕೇರಳದ ಒಂದು ಭಾಗವಾಗಿ ಕನ್ನಡದ ಕಾಸರಗೋಡು ಸಿಕ್ಕಿಕೊಂಡಿದೆ. ರಾಜ್ಯಗಳ ಪುನರ್ವಿಂಗಡಣೆಯಲ್ಲಿ ನಡೆದ ಈ ಘಟನೆ ಒಂದು ಚೆಂಡಾಟದ ಗೆಲವು—ಸೋಲಿನಂತೆ ನಡೆಯಿತು. ಪಣಿಕ್ಕರ ಮಹಾಶಯರ ಕೈಚಳಕ ಈ ಚೆಂಡಾಟ.

ಅಂದು ನವಂಬರ ೧೯೫೬ರ ೧ನೆಯ ದಿನಾಂಕದವರೆಗೆ ಕಾಸರಗೋಡನ್ನು ಕರ್ನಾಟಕದ ಅವಿಭಾಜ್ಯ ಅಂಗವೆಂದೇ ರಾಜಕೀಯ ಮುಂದಾಳುಗಳು ಸಾರುತ್ತಾ ಬಂದರು. ನಂತರದ ಮೂರು ವರ್ಷಗಳೂ ಅದು ಆದದ್ದು ಅನ್ಯಾಯವೆಂದೇ ಅನ್ನುತ್ತಾ ಬಂದಿದ್ದಾರೆ.

ಎರಡು ವರ್ಷಕ್ಕೆ ಮೇಲ್ಪಟ್ಟು ರಾಜ್ಯವಾಳಿದ ಕೇರಳದ ಕಮ್ಯೂನಿಸ್ಟ್ ಪಾರ್ಟಿಯ ಮುಂದಾಳು ಶ್ರೀ ಗೋಪಾಲನ್ ಕನ್ನಡದ ನೆಲದಿಂದಲೇ ಕೇಂದ್ರಕ್ಕೆ ಆಯ್ಕೆಯಾದರು. ಕನ್ನಡ ಜನತೆಗೆ ಚುನಾವಣೆಯ ಸಮಯ ಇತ್ತ ಭರವಸೆಯನ್ನು ಅವರು ಮರೆತೂ ಇಲ್ಲ. ಆದರೆ ಅವರ ಪಾರ್ಟಿ ಸಾಧಿಸಬಯಸಿದ ಅವಾಂತರಗಳಲ್ಲಿ ಈ ಭೂಭಾಗದ ಮಾತು ಅಪ್ರಸ್ತುತವೆನಿಸಿರಬೇಕು. ಹೌದು; ಕೇರಳಕ್ಕೆ ಕಾಸರಗೋಡು ಸೇರಿದ್ದೆ ಅವಾಂತರ. ಅದು ಮರಳಿ ಕರ್ನಾಟಕಕ್ಕೆ ಬರುವುದು ನ್ಯಾಯಸಮ್ಮತ. ಅಂಥ ಕೃತಿಯನ್ನು ನಾವು ಕಮ್ಯೂನಿಸ್ಟ್ ನಾಯಕರಿಂದ ಬಯಸಬಾರದ.

ಕೇಂದ್ರಕ್ಕೆ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಿಂದ ಆಯ್ಕೆಗೊಂಡವರು ಕಾಂಗ್ರೆಸ್ಸಿನ ಶ್ರೀ ಬೆನಗಲ್ಲ ಶಿವರಾಯರು. ಅವರು ಪುನರ್ವಿಂಗಡಣೆಯ ಕತೆ ಹೇಳುತ್ತಾ, ಕಾಸರಗೋಡನ್ನು ಕೊನೆಯ ಕಾಲದಲ್ಲಿ ಪಣಿಕ್ಕರರು ಹಿಡಿದರು ಎಂದು ಹೇಳುತ್ತ ಬಂದಿದ್ದಾರೆ.

ಕಾಂಗ್ರೆಸ್ ಪಾರ್ಟಿಯಲ್ಲಿ ನಡೆದ ಸಡಿಲುತನ ಕನ್ನಡದ ಒಂದು ಭಾಗವನ್ನು ತರ್ಪಣಬಿಡುವಂತೆ ಮಾಡಿತು. ಬೆಳಗಾವಿಯನ್ನು ಉಳಿಸಿಕೊಳ್ಳಲು ಕಾಸರಗೋಡನ್ನು ಬಿಟ್ಟರು—ಎಂಬ ಒಂದು ಧ್ವನಿಯೂ ಇದೆ.

ಇಂದಿಗೂ ಕರ್ನಾಟಕ ಮಂತ್ರಿಮಂಡಲ ಕಾಸರಗೋಡಿನ ಬಗ್ಗೆ ಯಾವ ಚಟುವಟಿಕೆಯನ್ನೂ ತೋರುತ್ತಿಲ್ಲ. ಮುಂಬಯಿಯ ಕೂಗಿಗೆ ಬೆಳಗಾವಿಯನ್ನು ಧಾರೆ ಎರೆಯಲೂ ನಮ್ಮ ಮುಂದಾಳು ಹಿಂದಾಗುವವರಲ್ಲ. ಅವರಿಗೆ ತಮ್ಮ ಪಟ್ಟ ಭದ್ರವಾಗಿದ್ದರಾಯಿತು.

ಕರ್ನಾಟಕದಲ್ಲಿ ಮೈಸೂರಿನ ಬ್ರ್ಯಾಂಡ್ ಚಟುವಟಿಕೆಯೇ ಬಿಡುವಿಲ್ಲದ್ದು. ಕಾಸರಗೋಡು ಬಂದರೇನು— ಬೆಳಗಾವಿ ಹೋದರೇನು?

ಮುಂಬಯಿ-ಮೈಸೂರು ಗಡಿಸಮಸ್ಯೆಯ ಮಾತು ಮುಂದುವರಿಯುತ್ತಲೇ ಇದೆ. ಮಹಾರಾಷ್ಟ್ರ-ಗುಜರಾತುಗಳೇ ರೂಪುಗೊಳ್ಳುತ್ತಿವೆ. ಕನ್ನಡದ ಒಂದು ಗಡಿಯ ಹೊಂದಿಕೆಗೂ ಕೇಂದ್ರವೇ ಮುಂದಾಗಬೇಕು.

ಅನೇಕ ಆಯೋಗಗಳ ನಿರ್ಣಯಪಡೆದ ಬೆಳಗಾವಿಯದೇ ಅಸ್ಥಿರವೆನ್ನುವಾಗ ನಿನ್ನೆ ಕೈಬಿಟ್ಟ ಕಾಸರಗೋಡು ಈ ಮುಂದಾಳುಗಳಿಂದ ಕರ್ನಾಟಕಕ್ಕೆ ಸೇರಿತೆಂದು ಹೇಗೆ ನಂಬುವುದು? ಮೈಸೂರು ರಾಜಕಾರಣಿಗಳಿಗೆ ಸೊಲ್ಲಾಪುರದ ಮಾತು ಅಪಸ್ವರ; ಕಾಸರಗೋಡಿನದು ಅಪ್ರಸ್ತುತ; ಬೆಳಗಾವಿ ಭವಿತವ್ಯದ ಸೊತ್ತು.

ಇಂಥ ಸಿಕ್ಕಿನ ರಾಜ್ಯಕ್ಕೇ ಸೇರುವ ತೀವ್ರತರ ಬಯಕೆ ಕಾಸರಗೋಡಿನ ಪ್ರಜಾವರ್ಗದ್ದು. ಅದು "ಇಂದು ಇದ್ದು ನಾಳೆ ಹೋಗುವ" ಮಂತ್ರಿಮಂಡಳದ ಆಕರ್ಷಣೆಯಿಂದಲ್ಲ. ಅದಕ್ಕೆ ಯುಗ—ಯುಗಗಳಿಂದ ಬೆಸೆದುಕೊಂಡು ಹೊಸೆದುಕೊಂಡು ಬಂದ ಕನ್ನಡ ಜಿಲ್ಲೆಯ ಹುರಿಗೊಂಡ ಸಂಬಂಧ ಬಿಡಲಾಗದಷ್ಟು ಬಿಗಿತವುಳ್ಳದ್ದು.

ಕಾಸರಗೋಡಿನ ವ್ಯಾಪಾರೀ ಸಂಬಂಧವೆಲ್ಲ ಮಂಗಳೂರಿನೊಡನೆ. ಕೊಡುವುದು-ಕೊಳ್ಳುವುದು, ರಕ್ತಸಂಬಂಧ, ನಡೆವಳಿಕೆ, ಹುಟ್ಟುವಳಿ, ಆದರ್ಶ, ಭಾವ—ಸ್ವಭಾವ ಮೈತ್ರಿಯಲ್ಲಿ ಮಂಗಳೂರಿನ ಜತೆಗೆ ಏಕಸೂತ್ರವಾಗಿದೆ. ಭಾಷೆ ಈ ಸಂಬಂಧದ ಮುಂದೆ ಮಸಕು-ಮಸಕು. ಚಂದ್ರಗಿರಿ ಹೊಳೆ ತುಳುನಾಡಿನ ನೈಸರ್ಗಿಕ ಗಡಿ.

ಅಂಥದ್ದಕ್ಕೆ ಭಾಷಾ ದೃಷ್ಟಿಯಿಂದ ಹೋಗಬೇಕಾಗಿದ್ದ ಕೋಲಾರ ಮೈಸೂರಿಗೆ ಉಳಿದದ್ದು ಯಾತರಿಂದ? ಮೈಸೂರಿನೊಡನೆ ಕೋಲಾರದ ಸಂಬಂಧ ಹೇಗೆ ಬಿಡಿಸಲಾಗದ್ದಾಯಿತು? ಅದಕ್ಕಿಂತ ಹೆಚ್ಚಿನ ಭಾಷಾ ಬಾಂಧವ್ಯವುಳ್ಳ ಕಾಸರಗೋಡು ಯಾಕೆ ಕನ್ನಡ ಜಿಲ್ಲೆಯಿಂದ ಸಿಡಿದುಳಿಯಬೇಕು? ಕೋಲಾರ ಉಳಿಸಿಕೊಂಡ ಮೈಸೂರಿನ ಮುಂದಾಳುಗಳಿಗೆ ಕನ್ನಡ ಜಿಲ್ಲೆ ಕಾಸರಗೋಡನ್ನು ಕಳೆದು ಕೊಂಡದ್ದು ಯಾವ ನಷ್ಟವೂ ಅಲ್ಲವೇನೋ!

ವಿಸ್ತೃತ ಕರ್ನಾಟಕದ ಬಾವುಟ ಹಿಡಿದ —ದಕ್ಷಿಣ ಕನ್ನಡ ತನ್ನ ಒಂದು ಬಲಿಷ್ಠ ಭಾಗವನ್ನು ಕಳೆದು ಕೊಂಡಿತು. ಅದು ಒಂದು ಜಿಲ್ಲೆಯ ನಷ್ಟವಲ್ಲ. ಆ ಜಿಲ್ಲೆಯನ್ನೊಳಗೊಂಡ ಕರ್ನಾಟಕ ರಾಜ್ಯ ತನ್ನ ಒಂದು ಭಾಗದ ಜನತೆಯ ಅತೃಪ್ತಿಯನ್ನು ಹಾಗೇ ಇರಗೊಟ್ಟರೆ ದೇಹದ ಒಂದು ಅಂಗ ವಿಕಲವಾದರೆ ಇಡೀ ವ್ಯಕ್ತಿತ್ವವೇ ಊನವಾದಂತೆ—ಒಂದು ಅಂಗಕ್ಕೆ ತಗಲಿದ ರೋಗ ದೇಹವಿಡೀ ವ್ಯಾಪಿಸಲು ತಡವಾಗಬಹುದು. ಆದರೆ ಅದು ವ್ಯಾಪಿಸದಿರುವುದಿಲ್ಲ. ಆದ್ದರಿಂದ ಕಾಸರಗೋಡು ಕನ್ನಡ ಜಿಲ್ಲೆಯ ನಷ್ಟವಲ್ಲ; ಹೊರಗುಳಿದ ಕಾಸರಗೋಡಿನ ನಷ್ಟವಲ್ಲ; ಇಡಿ ಕರ್ನಾಟಕದ ಬಹು ಮೂಲ್ಯವಾದ ನಷ್ಟ.

ಕಳೆದ ನವಂಬರ ೨೬ರಂದು ಬೆಳಗಿನಲ್ಲಿ ಪುತ್ತೂರಿನಿಂದ ವಿಟ್ಲ ಮಾರ್ಗವಾಗಿ ಕಾಸರಗೋಡು ತಾಲೂಕನ್ನು ಪ್ರವೇಶಿಸಿದೆವು. ಉಡುಪಿಗೆ ಬಂದಿದ್ದ ಕವಿವರ ಬೇಂದ್ರೆಯವರನ್ನೂ ಜತೆಗಿದ್ದ ನನ್ನನ್ನೂ ಕರೆದು ಕಯ್ಯಾರ 'ಕಾರಿನ' ಕೊಂಡು ಶ್ರೀ ಕಿಞ್ಞಣ್ಣ ರೈ ಹೊರಟರು. ಹಿಂದೆ ಅದೇ ದಾರಿಯಾಗಿ ಕನ್ನಡದ ನೆಲದಲ್ಲಿ ಕಂಡು ಹೋಗಿದ್ದ ನನಗೆ ಪರ್ವದ ಬದಿಯ ಕೇರಳದ ಗಡಿ ರೇಖೆ ಅಣಕಿಸಿತು. ಅದೇ ನೆಲ; ಅದೇ ನಿಸರ್ಗರಮ್ಯ ಕಾಡು-ಮೇಡು. ಅದೇ ತೆಂಗು-ಕಂಗು. ಅದೇ ತೋಳ ಬೀಸುವ ಬಾಳೆ. ಅದೇ—ಅದೇ ಜನತೆ. ಈಗ ಮಧ್ಯಕ್ಕೆ ಬರೆ ಎಳೆದಂತೆ ಈ ಗಡಿ ರೇಖೆ; ಎಚ್ಚರಿಸುವ ಕೈಗಂಬ; ವಾಹನಗಳಿಗೆ ಅಡ್ಡಯಿಸುವ ಕೋಲು ದಿಡ್ಡಿ ಅದಷ್ಟೇ ವಿಶ್ವಾಮಿತ್ರ ಸೃಷ್ಟಿ. ಮುಂದೆ ಹೋದರೆ ಮತ್ತದೇ ಗಾಳಿ-ಅದೇ ಜನರ ಹಸನ್ಮುಖದ ಸ್ವಾಗತ. ಇವರನ್ನು ನಮ್ಮಿಂದ ಬೇರೆ ಮಾಡಿದ 'ಪುಣ್ಯ' ಯಾರದ್ದು?

ಈ ಮೂರು ವರ್ಷದಲ್ಲಿ ಕೇರಳದಿಂದ ಇಲ್ಲಿ ಎಂಥ ಬದಲಾವಣೆ ಬಂದಿದೆ. ಆ ಸಂಪದ್ಭರಿತ ದಕ್ಷಿಣ ದೇಶಗಳಲ್ಲೇ ಹೆಸರು ಪಡೆದಿರುವ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನಿಂದ ಕಾಸರಗೋಡನ್ನು ಕಳೆದು ಕೊಂಡ ನಂತರ ಗಡಿಯ ವರೆಗೇ ತ

(೧೦ನೇ ಪುಟ ನೋಡಿರಿ)

ಪ್ರಕಟಣೆ

ಉಡುಪಿ ತಾಲ್ಲೂಕು ಆಲೆವೂರು ಗ್ರಾಮದಲ್ಲಿರುವ ರಾಮು ಮಡಿವಾಳ್ತಿ ಮಗಳು ಪ್ಯಾರಿ ಹೆಂಗಸು ಸರ್ವಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:— ನಾನು ನನ್ನ ಅಣ್ಣ ಮುದುಕ್ರ ಮಡಿವಾಳ ಸನ್ಯರರು ಒಂದೇ ಅಳಿಯಸಂತಾನ ಕುಟುಂಬದ ಅವಿಭಕ್ತ ಮೆಂಬರರಾಗಿರುತ್ತೇವೆ. ನಮ್ಮ ಕುಟುಂಬದ ಪಕ್ಕಿನ ಬಾಬ್ತು ಉಡುಪಿತಾಲ್ಲೂಕು ಮಜೂರು ಗ್ರಾಮದಲ್ಲಿರುವ ಸ್ಥಿರಾಸ್ತಿಗಳನ್ನು ಸಧ್ರಿ ಮುದುಕ್ರ ಮಡಿವಾಳನು ಕುಟುಂಬದ ಕಡೆಯಿಂದ ಸ್ವಾಧೀನಗಾರನಾಗಿ ಅನುಭವಿಸಿಕೊಂಡು ಬರುತ್ತಾನೆ. ನಮ್ಮ ಕುಟುಂಬಕ್ಕೆ ಸಾಲವೇನೂ ಇರುವುದಿಲ್ಲ. ಹಾಗೆ ಸಾಲಮಾಡುವರೇನೂ ಮುದುಕ್ರ ಮಡಿವಾಳನಿಗೆ ಹಕ್ಕೂ ಇರುವದಿಲ್ಲ. ಗರಜೂ ಇರುವದಿಲ್ಲ. ಸಧ್ರಿ ಮುದುಕ್ರ ಮಡಿವಾಳನು ನಮ್ಮ ಕುಟುಂಬಕ್ಕೆ ಕೆಡುಕುಂಟುಮಾಡುವ ಉದ್ದೇಶದಿಂದ ಕೆಲವು ಒಳಸಂಚಿನ ಸಾಲಗಳನ್ನು ಕಲ್ಪಿಸಿಕೊಳ್ಳುವ ಇರಾದೆಯುಳ್ಳವನಾಗಿ ತಿಳಿದುಬರುತ್ತದೆ. ಸಧ್ರಿಯವನಿಗೆ ಯಾರೂ ಸಾಲ ಕೊಡಬಾರದಾಗಿ ಈ ಮೂಲಕ ಸರ್ವರಿಗೂ ತಿಳಿಸಿಯದೆ. ಇದಕ್ಕೆ ವಿರೋಧವಾಗಿ ಯಾರಾದರೂ ಅವನಿಗೆ ಸಾಲಕೊಟ್ಟಲ್ಲಿ ಅಂಥಾ ಸಾಲವು ನಮ್ಮ ಕುಟುಂಬವನ್ನಾಗಲೀ ಕುಟುಂಬದ ಆಸ್ತಿಯನ್ನಾಗಲೀ ಬದ್ಧಪಡಿಸತಕ್ಕದ್ದಲ್ಲವೆಂಬ ಸಂಗ್ತಿ ತಿಳಿದಿರಲಿ.

● ಈ ಎಡಹೆಬ್ಬೆಟ್ಟಿನ ಗುರುತು
ಸಧ್ರಿ ಪ್ಯಾರಿ ಹೆಂಗ್ಸಿನ ರುಜು.

ತಾರೀಕು, 19—12—1959.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: **ಉಡುಪಿ** (ದ. ಭಾರತ)

In the Court of the
Subordinate Judge of S·K.

R. E. P. No. 163/59 in
O. S. 261/53.

Padmayya Shetty—Petr.
Vs.
Ramanna Shetty & Others—
Respts,

Respondents. (2) Ganapayya. (3) Babi. (4) Raghu. (5) Bhujanga, (6) Narayana—Minors by next friend father Annappa Shetty, (9) Narasimha Shetty. (10) Chandaya Shetty. (11) Laxmi Shedthi· Children of Subbakke Shedthi. All are residing at Halthur of Ulthur Village of Kundapur Tq.

Please take notice that the Petitioner has filed the above execution for recovery of costs decreed and the same is posted to 15—1—1960. If you fail to appear on that day the matter will be decided in your absence.

By order of the Court.
(Sd.) S. Venkat Rao,
Vakil for Petitioner.

Mangalore. 22—12—1959.

ಇತಿಹಾಸ ಪೃಷ್ಠ

ಕಾಶ್ಮೀರಕ್ಕೆ ಏಶ್ಯನರು ಋಣಿಗಳು

ಕಾಶ್ಮೀರಿಗಳಿಂದಲೇ ಮಧ್ಯ ಮತ್ತು ಆಗ್ನೇಯ ಏಶ್ಯದಲ್ಲಿ ಭಾರತೀಯ ಸಂಸ್ಕೃತಿಯು ಸುವಿಸ್ತಾರವಾಗಿ ಹರಡಿತು. ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ಮಡಿದ ಅವರನ್ನು ಯಾರೂ ಮರೆಯಲಾರರು.

ಇಂದು ಭಾರತದಲ್ಲಿ ಮಾತ್ರವಲ್ಲ ಪ್ರಪಂಚದಲ್ಲಿಯೇ ವಿಖ್ಯಾತವೆನಿಸಿದ ಕಾಶ್ಮೀರದ ಬೆಟ್ಟ ಪ್ರದೇಶವು ಒಂದು ಕಾಲದಲ್ಲಿ ಸರೋವರವಾಗಿತ್ತೆಂದೂ ಕಶ್ಯಪ ಋಷಿಯು ಈ ತಟಾಕೋದಕವನ್ನು ಒಣಗಿಸಿ ಭೂಮಿಯನ್ನು ತೋರಿಸಿದನೆಂದೂ ಕಲ್ಹಣನ 'ರಾಜತರಂಗಿಣೀ' ಎಂಬ ಪುಸ್ತಕದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದನ್ನಾಧರಿಸಿ ಕೆಲವು ಮಾರ್ಗವಿದರಾದ ಪಂಡಿತರು ಕಾಶ್ಮೀರದ ಹೆಸರಿನ ಸಂಬಂಧವನ್ನು ಮುನಿ ಕಶ್ಯಪನೊಡನೆ ನಿಡುತ್ತಾರೆ; ಆದರೆ, ಇತಿಹಾಸಕಾರರು ಇದನ್ನು ಮನ್ನಿಸುವುದಿಲ್ಲ.

ಕಲ್ಹಣನು ಹೇಳುವಂತೆ 'ನಾಗ'ರು ಕಾಶ್ಮೀರದ ಮೂಲ ನಿವಾಸಿಗಳು. ಇವರು ಮಧ್ಯ ಏಶ್ಯದ ಎಲ್ಲೆಡೆಯಲ್ಲಿಯೂ ಹರಡಿಕೊಂಡಿದ್ದು ನಾಗ ಪೂಜೆಯನ್ನು ಮಾಡುತಿದ್ದರು. ಆದರೆ, ಬಹುತೇಕ ವಿದ್ವಾಂಸರು ನಾಗ ಪೂಜೆ -- ನಾಗ ಜಾತಿಗಳೊಳಗೆ ನಿಕಟ ಸಂಬಂಧವಿದೆ ಎಂದೇ ಒಪ್ಪುವುದಿಲ್ಲ. ಇವರು ನಾಗರನ್ನು ಆರ್ಯರ ಒಂದು ಪಂಗಡವೆಂದು ಹೇಳುತ್ತಾರೆ. ಅಲ್ಲದೇ ಕಾಶ್ಮೀರದ ಮೂಲ ನಿವಾಸಿಗಳು ಮಧ್ಯಏಶ್ಯಾ ವಾಸಿಗಳಲ್ಲವೆಂಬುದಕ್ಕೆ ಐತಿಹಾಸಿಕ ಆಧಾರವಿದೆ. ಚೀನ, ಮಂಗೋಲಿಯಾ ಮತ್ತು ಟಿಬೇಟುಗಳ ನಿವಾಸಿಗಳ ರೂಪರೇಷೆಯು ಇವರಿಂದ ತೀರ ಭಿನ್ನವಾಗಿರುವುದಾದರೂ ಆರ್ಯರೊಡನೆ ಸಂಪೂರ್ಣ ಹೋಲಿಕೆಯಿರುತ್ತದೆ. ನಾಗರನಂತರ ಕಾಶ್ಮೀರದ ಪರ್ವತ ಕಣಿವೆಗಳಲ್ಲಿ ಇತರ ಅನೇಕ ಜಾತಿಗಳವರು ವಾಸಿಸಿದರು. ಗಾಂಧಾರರು, ದರಯೂಕ, ಖಸಾ, ಮಂಗೋಲ ಇತ್ಯಾದಿ ವಂಶಗಳಲ್ಲಿ ನೆಲಸಿರುವುವು. ಇವುಗಳಲ್ಲಿ ಖಸಾ ವಂಶದವರಿಂದಲೇ ಇದಕ್ಕೆ ಕಾಶ್ಮೀರವೆಂಬ ಹೆಸರು ಬಂದಿತೆಂದು ಇತಿಹಾಸಕಾರರು ಹೇಳುತ್ತಾರೆ ಈ ವರ್ಗದ ಜನರು ಇಂದಿಗೂ ಕಾಶ್ಮೀರದ ಕಣಿವೆಗಳಲ್ಲಿ ಕಂಡುಬರುವುದರಿಂದ ಈ ಅಭಿಪ್ರಾಯವನ್ನು ತತ್ತ್ವತಃ ಒಪ್ಪಿಕೊಳ್ಳಬಹುದಾಗಿದೆ.

ಕಾಶ್ಮೀರದಲ್ಲಿ ಅಶೋಕನ ಕಾಲಕ್ಕೆ ಮೊದಲಿನ ಐತಿಹಾಸಿಕ ಅವಶೇಷಗಳು ಉಪಲಬ್ಧವಿರುವುದಿಲ್ಲ. ಸಾಮ್ರಾಟ ಅಶೋಕನ ಆಡಳಿತೆಯ ವೇಳೆ, ಬೌದ್ಧ ಧರ್ಮದ ಎಲ್ಲೆಯು ವಿಸ್ತಾರ ಹೊಂದಿತು, ಆಗ ಕಾಶ್ಮೀರವೂ ಬೌದ್ಧ ಧರ್ಮಕ್ಕೆ ಪ್ರಾಧಾನ್ಯವಿತ್ತಿತು ಅಶೋಕನ ಮರಣಾನಂತರ ಅನ್ಯ ಪ್ರದೇಶಗಳಂತೆಯೇ ಕಾಶ್ಮೀರದಲ್ಲಿಯೂ ಬೌದ್ಧ ಮತವು ಹ್ರಾಸವಾಗುತ್ತಬಂದಿತು. ಆದರೆ, ಕ್ರಿಸ್ತ ಶಕದ ಆರಂಭಕಾಲದಲ್ಲಿ ಬೌದ್ಧ ಧರ್ಮವು ಪುನಃ ಚಿಗುರ ತೊಡಗಿತು. ಭಾರತವನ್ನು ಆಕ್ರಮಿಸಿದ ಶಕರು ರಾಜಧರ್ಮವಾಗಿ ಇದನ್ನೇ ಸ್ವೀಕರಿಸಿ, ಪ್ರಚಾರದಲ್ಲಿ ಸಂಲಗ್ನರಾದರು. ಶಕರಾಜರಾದ ಹವಿಷ್ಕ ಮತ್ತು ಕನಿಷ್ಕರ ಕಾಲದಲ್ಲಿ ಬೌದ್ಧ ಮತದ ಮಹಾಯಾನ ಶಾಖೆಯು ಕಾಶ್ಮೀರದ ಪ್ರಧಾನ ಧರ್ಮವಾಗಿ ಪರಿಣಮಿಸಿತು. ಇದರೊಡನೆ ಹಿಂದೂ ಧರ್ಮವೂ ತನ್ನ ಮೂಲವನ್ನು ಭದ್ರಪಡಿಸುತ್ತ ಬೆಳೆಯಿತು. ಕ್ರಿ. ಶ. ೫ರಿಂದ ೧೦ನೆಯ ಶತಮಾನಾವಧಿಯಲ್ಲಿ ಕಾಶ್ಮೀರದಲ್ಲಿ ಬೌದ್ಧ ಮತ್ತು ಹಿಂದೂ ಧರ್ಮಗಳೆರಡೂ ಪಲ್ಲವಿತವಾಗಿದ್ದುವೆಂದು ಇತಿಹಾಸದಿಂದ ವೇದ್ಯವಾಗುತ್ತದೆ. ಇಂದು ಕಾಶ್ಮೀರದಲ್ಲಿರುವ ದೇವಾಲಯಗಳಲ್ಲಿ ಸೇಕಡಾ ಐವತ್ತು ಈ ಅವಧಿಯಲ್ಲಿಯೇ ನಿರ್ಮಿತವಾಗಿದ್ದುವು.

ಕಾಶ್ಮೀರದಲ್ಲಿ ಹಿಂದೂ ದೇವಾಲಯ ರಚನೆಗೆ ಶಂಕರಾಚಾರ್ಯರೇ ಕಾರಣ ಪುರುಷರೆಂದು ಹೇಳಲಾಗುತ್ತದೆ. ಅಖಿಲ ಭಾರತದಲ್ಲಿ ದಿಗ್ವಿಜಯಗೈದ ಶ್ರೀಮದಾಚಾರ್ಯರು ಕಾಶ್ಮೀರಕ್ಕೂ ಆಗಮಿಸಿದರು. ಇವರು "ಮಂದಿರ ನಿರ್ಮಾತ ಶಂಕರಾಚಾರ್ಯ" ಎಂಬ ಹೆಸರಿನಿಂದ ಕಾಶ್ಮೀರೇತಿಹಾಸದಲ್ಲಿ ಸುವಿಖ್ಯಾತರಾಗಿದ್ದಾರೆ. ಶ್ರೀನಗರದ ನಿಕಟವರ್ತಿಯಾದ ತಖ್ತೇ ಸುಲೇಮಾನ್ ಪರ್ವತವನ್ನು ಪಂಡಿತರು ಇಂದಿಗೂ "ಶಂಕರಾಚಾರ್ಯ ಪರ್ವತ" ವೆಂಬ ನಾಮಧೇಯದಿಂದ ಕರೆಯುತ್ತಾರೆ. ಇದರ ಶಿಖರದಲ್ಲಿ ಒಂದು ವಿಚಿತ್ರತರದ ದೇವಾಲಯವಿದೆ. ಇಲ್ಲಿ ಬೌದ್ಧ ಮತ್ತು ಹಿಂದೂ ಧರ್ಮಗಳ ವಾಸ್ತುಕಲೆಯ ಸಮ್ಮಿಶ್ರಣವು ಕಂಡು ಬರುತ್ತದೆ. ದೇವಾನಾಂ ಪ್ರಿಯದರ್ಶಿ ಸಾಮ್ರಾಟ ಅಶೋಕನ ಕಾಲದಲ್ಲಿ ರೂಪಿತಗೊಂಡಿದ್ದ ಬೌದ್ಧ ಸ್ತೂಪವೊಂದರ ಭಗ್ನಾವಶೇಷದ ಮೇಲೆಯೇ ಈ ದೇವಾಲಯವು ಕಟ್ಟಲ್ಪಟ್ಟಿರುವುದರಿಂದಲೇ ಈ ಅಪೂರ್ವ ಸಮನ್ವಯವು ತೋರಿ ಬರುತ್ತಿದೆ ಎನ್ನಬಹುದು. ಮಂದಿರದ ಅಡಿಭಾಗವು ಅಶೋಕನ ಕಾಲದ ಶಿಲ್ಪಕಲೆಯನ್ನು ಪ್ರತಿನಿಧೀಕರಿಸಿದರೆ, ಮೇಲ್ಭಾಗವು ಕ್ರಿ. ಶ. ಐದನೆಯ ಶತಮಾನದ ಮಾದರಿಯನ್ನು ಪ್ರತಿಬಿಂಬಿಸುತ್ತದೆ. ಕಾಶ್ಮೀರದಲ್ಲಿ ಇಂತಹ ಹಲವಾರು ಮಂದಿರಗಳು ನಮಗಿಂದೂ ನೋಡ ದೊರೆವುವು.

ಕಾಲಕ್ರಮದಲ್ಲಿ ಭಾರತದ ಮೇಲಾದ ಮಹಮ್ಮದೀಯರ ದಾಳಿಗಳಿಂದಾಗಿ ಕಾಶ್ಮೀರದ ಹಲವಾರು ದೇವಸ್ಥಾನಗಳು ನೆಲಸಮವಾದರೂ ಶಂಕರಾಚಾರ್ಯ ಪರ್ವತದ ಈ ವಿಚಿತ್ರ ಮಂದಿರವು ಅವು ಹೇಗೋ ತಪ್ಪಿ ಉಳಿಯಿತು. ಶ್ರೀನಗರದ ಪ್ರತಿ ಹಜ್ಜೆ ಭೂಮಿಯೂ ಧ್ವಂಸಾವಶೇಷಗಳಿಂದ ಮತ್ತು ಭಗ್ನಮೂರ್ತಿಗಳಿಂದ ತುಂಬಿಹೋಗಿದೆ ಮಂದಿರಗಳ ಸಂಭಾರಂಗಾದಿಗಳನ್ನು ಬಳಸಿಕೊಂಡು ಇಲ್ಲಿ ಮಸೀದಿಗಳನ್ನು ಕಟ್ಟಲಾಯಿತು. "ಬಾದಶಹ ಇಮಾರತ್" ಎಂಬುದಿದಕ್ಕೊಂದುದಾಹರಣೆ. ಮಧ್ಯಏಶ್ಯದ ಆಕ್ರಮಣಕಾರರು ಕಾಶ್ಮೀರದ ಶಿಲ್ಪಕಲೆಯುವನ್ನು ಹಾಳುಗೆಡಹದಿರುತಿದ್ದರೆ, ಇದು ಪ್ರಾಕೃತಿಕ ಸೌಂದರ್ಯದ ನೆಲವೀಡು ಮಾತ್ರವಲ್ಲದೆ ಶಿಲ್ಪಕಲೆಯ ತೌರೂರೂ ಆಗಿರುತಿತ್ತು.

ಕ್ರಿ. ಶ. ಐದರಿಂದ ಹತ್ತನೆಯ ಶತ

(೯ನೇ ಪುಟ ನೋಡಿರಿ)

ಹತ್ತನೆ ಕ್ಷಯರೋಗ ಮೊಹರು ಮಾರಾಟ ಚಳವಳ

(ದಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟುದು)

(ಅಕ್ಟೋಬರ 2ರಿಂದ ಜನವರಿ 26ರ ತನಕ)

ಕ್ಷಯರೋಗ ಮೊಹರುಗಳನ್ನು ನಿಮ್ಮ ಪತ್ರಗಳ, ಶುಭಾಶಯ ಕಾರ್ಡುಗಳ ಮತ್ತು ಪಾರಿತೋಷಕ ಪಾಕೇಟುಗಳ ಮೇಲೆ ಅಂಟಿಸಿರಿ. ಒಂದು ಮೊಹರಿನ ಬೆಲೆ 10 ನಯೇ ಪೈಸೆ ಮಾತ್ರ. ಇದು ಕ್ಷಯರೋಗ ವಿರುದ್ಧವಾದ ದೇಶದ ಹೋರಾಟಕ್ಕೆ ನಿಮ್ಮ ಅತ್ಯುತ್ತಮ ದೇಣಿಗೆಯಾಗಿದೆ. ಮುದ್ರೆಗಳು ನಿಮ್ಮ ರಾಜ್ಯದ ಟಿಬಿ ಎಸೋಸಿಯೇಶನ್‌ಗಳಲ್ಲಿಯೂ ಮತ್ತು ಅವುಗಳ ಬೇರೆ ಬೇರೆ ಏಜನ್ಸಿಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ.

ಡಿಸೈನುಗಳು ಬೇಕಾಗಿವೆ. ಹನ್ನೊಂದನೇ ಕ್ಷಯರೋಗ ಮೊಹರು ಮಾರಾಟ ಚಳವಳಿಗೆ ಟಿಬಿ ಮೊಹರಿಗಾಗಿ ಸಾದಾ ಮತ್ತು ಆಕರ್ಷಣೀಯವಾದ ನಕಾಶೆಗಳು ಆಮಂತ್ರಿಸಲ್ಪಟ್ಟಿವೆ. ಅತ್ಯುತ್ತಮ ಮುದ್ರಾನಕಾಶೆಗೆ ರೂ. 500-00ರ ಒಂದು ಬಹುಮಾನವು ಕೊಡಲ್ಪಡುವುದು. ವಿವರವಾದ ಮಾಹಿತಿ ಫಾರ್ಮುಗಳಿಗೆ ಕಾರ್ಯದರ್ಶಿ, ಟ್ಯೂಬರ್-ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3, ರೆಡ್ ಕ್ರಾಸ್ ರೋಡ್, ನ್ಯೂ ಡಿಲ್ಲಿ-2, ಇವರಿಗೆ ದಯಮಾಡಿ ಬರೆಯಿರಿ.

Space kindly donated by: **THE SINGARENI COLLIERIES CO. LTD., HYDERABAD.**

ವಿಚಾರವರ್ಷ

ಅನರ್ಘ್ಯ ಮೌಕ್ತಿಕ ಫಲ—ಪ್ರಜ್ಞೆ

ಪ್ರಜ್ಞಾಹೀನನಾದವನು ನಿತ್ಯ ಅತೃಪ್ತನಾಗುವನು; ಇದರಿಂದಾಗಿ ಸರ್ವಸುಖಗಳಿಗೂ ಆತನು ಎರವಾಗುವನು.

ನ ಪಶ್ಯೋ ಮೃತ್ಯುಂ ಪಶ್ಯತಿ
ನರೋಗಂ ನೋತ ದುಃಖತಾಮ್
ಸರ್ವಂ ಹಿ ಪಶ್ಯಃ ಪಶ್ಯತಿ
ಸರ್ವಮಾಪ್ನೋತಿ ಸರ್ವಶಃ ||

"ಪ್ರಜ್ಞೆ"ಯ ಪುನೀತವಾದ ಪ್ರಭೆಯಲ್ಲಿ ನೋಡುವವನು ಜೀವನದಲ್ಲಿ ಮೃತ್ಯುವನ್ನು ಕಾಣಲಾರನು; ರೋಗದಿಂದ ನಿರ್ಮುಕ್ತನಾಗುವನು ಮತ್ತು ದುಃಖ ಹಾಗೂ ದಾರಿದ್ರ್ಯಗಳನ್ನು ಎಂದಿಗೂ ಹೊಂದಲಾರನು; ಆತನು ಜೀವನದಲ್ಲಿ ಸರ್ವತ್ರ ಸರ್ವ ಸಾರ್ಥಕ್ಯವನ್ನು ಮಾತ್ರ ಕಾಣಬಲ್ಲನು; ಮತ್ತು ಎಲ್ಲವನ್ನೂ ಪಡೆಯಬಲ್ಲನು".

ಅತೃಪ್ತನಾದೊಬ್ಬ ರಾಜ ದಿನಂಪ್ರತಿ ತಾನು ರೋಗಿ ಎಂದೂ ತನ್ನ ಆರೋಗ್ಯ ದಿನೇ ದಿನೇ ಕೆಡುತ್ತ ಬರುತ್ತಿರುವುದೆಂದೂ ಭಾವಿಸಿ ನಾನಾ ವೈದ್ಯರಿಂದ ಬಗೆ ಬಗೆಯ ಚಿಕಿತ್ಸೆ ನಡೆಸಿದರೂ ವಾಸಿಯಾಗದಿದ್ದುದರಿಂದ ವಿಪರೀತ ಚಿಂತಿತ ಮನಸ್ಕನಾದನೆಂದೂ ಕೊನೆಗೊಬ್ಬ ಚಾಣಾಕ್ಷ ವೈದ್ಯ ಈ ರೋಗದ ಮೂಲ ಹೇತುವನ್ನು ಕಂಡು ಹಿಡಿದು ನಿತ್ಯತೃಪ್ತನೋರ್ವನ ಅಂಗಿಯೊಂದನ್ನು ಒಂದು ದಿನದ ಮಟ್ಟಿಗೆ ತೊಡಲು ಆದೇಶಿಸಿದನೆಂದೂ ಒಂದು ಕಥೆ ಹೇಳುತ್ತದೆ. ದುರದೃಷ್ಟ ವಶದಿಂದಾಗಿ ಆ ರಾಜನಿಗೆ ತನ್ನ ಸುವಿಶಾಲ ರಾಜ್ಯದ ಅಸಂಖ್ಯಾತ ಪ್ರಜೆಗಳಲ್ಲಿ ಒಬ್ಬನೇ ಒಬ್ಬ ಭಿಕ್ಷುಕನು ಸುಖಿಯಾಗಿದ್ದರೂ ಆತನಿಗೆ ಅಂಗಿಯೇ ಇಲ್ಲದುದರಿಂದ, ಅತೀವ ಬೇಸರವೆನಿಸಿತಾದರೂ ತನ್ನ ತಪ್ಪಿನ ಪ್ರಜ್ಞೆಯೊದಗಿದಂತಾಗಿ, ರೋಗ ಮುಕ್ತನಾಗುವಂತಾಯಿತು. ಅತೃಪ್ತಿಯೇ ಆತನ ಸರ್ವ ದುಃಖಗಳಿಗೂ ಮೂಲವೆಂಬುದು ಅವನಿಗೆ ಮುಂದೆ ತಿಳಿದು ಬಂದು ಅವನು ಇದ್ದುದರಲ್ಲಿಯೇ ತೃಪ್ತಿಪಟ್ಟು ಸುಖಿಯಾದನು.

ಮಾನವನನ್ನು ಅತೃಪ್ತಿಯೆಂಬುದು ಬಯಸಿದತ್ತ ಕೊಂಡೊಯ್ಯಬಲ್ಲ ಒಂದು ಮೋಹಕಾಸ್ತ್ರವಾಗಿದೆ. ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು ಕುಳಿತಿರುವುದರಿಂದ ಏನೂ ಹಾನಿಯಿಲ್ಲವೆಂದು ತೋರಬಹುದಾದರೂ ಮಾನವನನ್ನು ಇಷ್ಟೊಂದು ನಾಗರಿಕತೆಗೆ ತಂದು ನಿಲ್ಲಿಸಿದ ಅಪೂರ್ವ ಶಕ್ತಿಯೆಂದರೆ, ಆತನ ಅತೃಪ್ತಿ. ಇಂದು ವಿಜ್ಞಾನದಿಂದ ನಮ್ಮ ಜೀವನಕ್ಕೆ ಮಾರಕವಾಗಿಯೂ ಪೋಷಕವಾಗಿಯೂ ಸಿದ್ಧಪಡಿಸಿಕೊಂಡಿರುವ ವಿವಿಧ ಯಂತ್ರೋಪಕರಣಗಳು, ಬಗೆ ಬಗೆಯ ಶಕ್ತಿಗಳು, ಭಿನ್ನ ಭಿನ್ನ ವಾಹನಗಳು, ಅಸ್ತ್ರಗಳು ಎಲ್ಲವೂ ಮಾನವನಲ್ಲಿ ಮೂಲ ಭೂತವಾಗಿರುವ ಅತೃಪ್ತಿಯ ಬೀಜದಿಂದಲೇ ಮೊಳೆತು ಬಂದ ಮರದ ಫಲಗಳೆಂಬುವನ್ನು ಅಲ್ಲಗಳೆಯುವಂತಿಲ್ಲ. ರಶ್ಯನರು ಚಂದ್ರಲೋಕಕ್ಕೆ ಮುಟ್ಟುವ ಸಾಹಸ ಕಾರ್ಯವನ್ನು ಇನ್ನೂ ಮುಂದುವರಿಸುವ ಅಭಿಲಾಷೆಯಿಂದ ಹಿಡಿದು ಅನಭಿವೃದ್ಧ ರಾಷ್ಟ್ರಗಳು ತಮ್ಮ ಅಭಿವೃದ್ಧಿಗಾಗಿ ಪರರ ಮುಂದೆ ಕೈಚಾಚಿಯಾದರೂ ಯೋಜನೆಗಳನ್ನು ರೂಪಿಸಿ ಅವನ್ನು ಕಾರ್ಯಗತಗೊಳಿಸಲು ಶಕ್ತಿಮೀರಿ ಶ್ರಮಿಸುವುದಕ್ಕೂ ಈ ಅತೃಪ್ತಿಯೇ ಮೂಲವಾಗಿದೆ. ಅತೃಪ್ತ ಮನೋಭಾವನೆಯು ಮಾನವನಲ್ಲಿ ಇಲ್ಲದೆ ಹೋಗಿದ್ದರೆ, ಆಗ, ಈ ಪ್ರಪಂಚವೂ ಅದರ ಜೀವ ಜಂತುಗಳೂ ಇಂದಿನ ರೂಪದಲ್ಲಿ ಎಂದೂ ಇರುತ್ತಿರಲಿಲ್ಲ.

ತೃಪ್ತಿಯೇ ಸುಖ; ಇದ್ದುದರಲ್ಲಿ ತೃಪ್ತಿಗೊಳ್ಳಬೇಕು ಎಂದು ಲೋಕೋಕ್ತಿಗಳು ಸಾರುತ್ತಿರುವಾಗ, ಮಾನವನ ಮೂಲಭೂತ ಗುಣಗಳಲ್ಲಿ ಒಂದಾದ ಈ ಅತೃಪ್ತಿಯೆಂಬುದನ್ನು ದೂರೀಕರಿಸಬೇಕೆಂಬ ಅರ್ಥವು ಹೊಳೆಯುತ್ತದೆ. ನಮ್ಮ ಪ್ರಧಾನಿ ನೆಹರು ಅವರು ನಾವು ಬಹಳಷ್ಟು ಸಾಧಿಸಿದ್ದೇವಾದರೂ ತೃಪ್ತಿಯಿಂದಿರುವುದು ಸರಿಯಲ್ಲ; ನಾವು ಸಾಧಿಸಬೇಕಾದುದು ಇನ್ನೂ ಅತ್ಯಧಿಕವಿದೆ ಎಂದು ಯಾವಾಗಲೂ ಹೇಳುತ್ತಾರೆ. ಚೀನವು ಅತೃಪ್ತ ಭಾವನೆಯಿಂದಲೇ ಭಾರತದ ಸೀಮಾ ಪ್ರದೇಶದಲ್ಲಿ ಆಕ್ರಮಣ ಮಾಡಿ ಭಾರತವನ್ನು ಅತೃಪ್ತಗೊಳಿಸಿದೆ. ಕಾಶ್ಮೀರವೂ ಸಿಂಧೂ ನದಿಯ ನೀರೂ ತನಗೇನೇ ದಕ್ಕಲಿಲ್ಲ ಎಂದು ಪಾಕಿಸ್ತಾನ ಅತೃಪ್ತವಾಗಿದೆ. ಕೇರಳವನ್ನು ಕಳೆದುಕೊಂಡೆವೆಂದು ಕಾಂಗ್ರೆಸಿಗರೂ ಕೈಗೆ ಸಿಕ್ಕಿದ ತುತ್ತು ಬಾಯಿಗಿಲ್ಲವೆಂದಾಯಿತೆಂದು ಕಮ್ಯುನಿಸ್ಟರೂ ಅತೃಪ್ತರಾಗಿ ಮುಂದಿನ ಚುನಾವಣೆಯಲ್ಲಿ ತಲ್ಲೀನರಾಗಿದ್ದಾರೆ. ರಾಜ್ಯಕ್ಕೆ ಕರ್ನಾಟಕ ಹೆಸರು ಬರಲಿಲ್ಲವೆನ್ನುವ ಅತೃಪ್ತರೊಂದೆಡೆಯಿದ್ದರೆ, ಮೈಸೂರಿಗೆ ಯಾಕೆ ಬಂದರಪ್ಪಾ ಎನ್ನುವವರೂ ಇನ್ನೊಂದೆಡೆಯಿಲ್ಲದಿಲ್ಲ. ಮನುಷ್ಯ ಸದಾ ಅತೃಪ್ತನಾಗಿರುವುದರಿಂದಲೇ ಆತನಿಂದ ತಿಳಿದೋ ತಿಳಿಯದೆಯೋ ಕೆಲವು ವೇಳೆ ಅಗಣಿತವಾದ ಮಹತ್ಕಾರ್ಯಗಳು ನಡೆದು ಹೋಗುವುದುಂಟು. ರಾವಣನು ಮಂಡೋದರಿಯಲ್ಲಿಯೇ ತೃಪ್ತನಾಗದೆ ಸೀತಾದೇವಿಯನ್ನು ಬಯಸಿದುದರಿಂದಲೇ ರಾಮನ ದುಷ್ಟಹನನ ಶಿಷ್ಟ ಪ್ರತಿಪಾಲನ ಕಾರ್ಯವು ಈಡೇರಲು ಉತ್ತಮ ಮಾರ್ಗವೊದಗಿತು. ಭಾರತೀಯರು ಬ್ರಿಟಿಷಸತ್ತೆಯಿಂದ ಅತೃಪ್ತರಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದುದರಿಂದಾಗಿ ಸ್ವತಂತ್ರರಾದರು. ಜರ್ಮನಿಯ ಹಿಟ್ಲರನು ತನ್ನ ಎಳೆಯ ರಾಜ್ಯವು ಸಾಲದೆಂದು ಅತೃಪ್ತಿಗೊಂಡುದರಿಂದಲ್ಲೇ ದ್ವಿತೀಯ ಜಾಗತಿಕ ಸಂಗ್ರಾಮವು ಘಟಿಸಿತು! ಇಷ್ಟೊಂದು ಪ್ರಭಾವಶಾಲಿಯಾದ ಅತೃಪ್ತಿಯನ್ನು ತಡೆಹಿಡಿಯುವುದು ಮೂರ್ಖತನವೆಂದು ಯಾರಾದರೂ ಹೇಳಬಹುದು.

ಹಾಗಾದಲ್ಲಿ ಸಂತೃಪ್ತನೆಂದರೆ ಯಾರು? ಕೈಲಾಗದ ಹೇಡಿಯೆ? ಎಂಬ ಪ್ರಶ್ನೆ ಎದ್ದು ಬರುವುದು. ತೃಪ್ತಿ ಮತ್ತು ಅತೃಪ್ತಿಗಳಿಗೂ ಪ್ರಜ್ಞೆಗೂ ನಿಕಟವಾದ ಸಂಬಂಧವಿದೆಯೆಂಬುದನ್ನು ನಾವಿಲ್ಲಿ ಅವಶ್ಯ ಗಮನಿಸಬೇಕು. ಮಾನವನಲ್ಲಿ ಆವಶ್ಯಕವಾಗಿರಬೇಕಾದುದು ಪ್ರಜ್ಞೆ. ತಾನು ಏನು ಮಾಡುತ್ತೇನೆ; ಏನು ಮಾಡಲು ಯೋಜಿಸುತ್ತಿದ್ದೇನೆ; ಅದಕ್ಕಾಗಿ ಯಾವ ಮಾರ್ಗವನ್ನು ಅನುಸರಿಸುತ್ತಿದ್ದೇನೆ; ಈ ಮಾರ್ಗದಲ್ಲಿರುವ ನೈತಿಕತೆಯೆಷ್ಟು? ಎಂಬಿತ್ಯಾದಿಗಳ ಪ್ರಜ್ಞೆಯು ನಮಗಿರಬೇಕು. ಸತ್ಕಾರ್ಯ ಅಥವಾ ಅಸತ್ಕಾರ್ಯಗಳೆರಡೂ ಅತೃಪ್ತಿಯ ಫಲಗಳೆಂಬುದನ್ನು ಅಲ್ಲಗಳೆಯುವುದಸಾಧ್ಯವಾದರೂ ಪ್ರಜ್ಞೆಯೊಡನೆ ಕಾರ್ಯಗತ ಅತೃಪ್ತ ಕಾಮನೆಯಿಂದ ಸತ್ಕಾರ್ಯಗಳು ಘಟಿಸುವುವೆಂಬುದನ್ನು ಪ್ರಜ್ಞಾಹೀನನಾಗಿ ಮಾಡುವ ಕಾರ್ಯಗಳಿಂದ ಅಸತ್ಕಾರ್ಯಗಳು ಆಗುವುವೆಂಬುದನ್ನೂ ನಾವು ಕಣ್ಣಾರೆ ಕಾಣುತ್ತೇವೆ. ಆದುದರಿಂದ ಪ್ರಜ್ಞೆಯೆಂಬುದು ಒಂದು ಅತ್ಯಮೂಲ್ಯ ವಸ್ತು.

ಭಗವದ್ಗೀತೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ವಿವರವಾಗಿ ಉಲ್ಲೇಖಿಸಲಾಗಿದೆ. "ಮನಸ್ಸಿನ ಕಾಮನೆಗಳನ್ನು ಆಮೂಲಾಗ್ರವಾಗಿ ಕಿತ್ತೊಗೆದು ಆತ್ಮದರ್ಶನವೆಂಬ ಅಮೃತಪಾನವನ್ನು ಮಾಡಿ ತೃಪ್ತನಾಗಿರುವವನು, ದುಃಖ ಬಂದಾಗ ದುಃಖಿಸದೆ ಸುಖ ಬಂದಾಗ ಹಿಗ್ಗದೆ ಹೆದರದೆ, ರಾಗ, ಭಯ, ಕ್ರೋಧಗಳಿಂದ ದೂರವಾಗಿರುವವನು ಸರ್ವವಸ್ತುಗಳಲ್ಲಿಯೂ ಆತ್ಮಾಸಕ್ತಿ ತೋರ್ಪಡಿಸದೆ ಸುಖದುಃಖಗಳನ್ನು ಪ್ರಶಂಸಿಸದೆ, ನಿಂದಿಸದೆ ಇರುವವನು ಪರಮಾತ್ಮನಲ್ಲಿ ದತ್ತಮನನಾಗಿರುವವನು."

ಪ್ರಜ್ಞಾಹೀನನಾಗಿರುವವನು ಖಂಡಿತಕ್ಕೂ ನಾಶ ಹೊಂದುತ್ತಾನೆ. ಪ್ರಜ್ಞೆಯೆಂಬ ಪದಕ್ಕೆ ಜ್ಞಾನ, ಬುದ್ಧಿ, ಎಚ್ಚರಿಕೆ ಮೊದಲಾದ ಹಲವು ಅರ್ಥಗಳಿವೆ. ಮಾನವನು ಸದಾ ಪ್ರಜ್ಞೆಯ ಬೆಳಕಿನಲ್ಲಿ ನಡೆಯಬೇಕು; ಆತನು ಜ್ಞಾನಿಯಾಗಿರಬೇಕು; ಬುದ್ಧಿನಾಶ ಹೊಂದಿರಬಾರದು; ಜಾಗ್ರತಾವಸ್ಥೆಯಲ್ಲಿಯೇ ಸದಾ ಇರಬೇಕು. ಹೀಗಿದ್ದರೆ ಮಾತ್ರ, ಅವನು ಉತ್ತಮವಾದ ಸನ್ಮಾರ್ಗ ಪಥಪ್ರಮುಖನಾಗಿ ಜೀವನದಲ್ಲಿ ಸೋಲೆಂಬುದನ್ನು ಅರಿಯನು, ಅಥವಾ ಬಂದರೂ ಅದಕ್ಕೆ ಅಂಜನು. ಸುಪ್ರಸನ್ನನಾಗಿರುವುದರಿಂದ ರೋಗ ರುಜಿನಗಳಿಂದ ದೂರವಿರುವನು; ದುಃಖ ಅಥವಾ ದಾರಿದ್ರ್ಯಗಳೆಂದರೇನೆಂಬುದನ್ನು ಅವನರಿಯನು. ಆತನ ನೇತ್ರಗಳಿಗೆ ಕೇವಲ ಸಾರ್ಥಕ್ಯಗಳು ಗೋಚರಿಸುವುವು; ಏಕೆಂದರೆ, ಅವನು ಇಂದ್ರಿಯ ನಿಗ್ರಹಿಯಾಗಿರುವನು.

ಆದುದರಿಂದ 'ಪ್ರಜ್ಞೆ'ಯನ್ನು ಕಳೆದುಕೊಳ್ಳುವುದು ಅವಿವೇಕತೆಯ ಲಕ್ಷಣ, ಉನ್ಮತ್ತತೆಯ ಚಿಹ್ನೆ. ಅನರ್ಘ್ಯಮಣಿಗಿಂತಲೂ ಅಮೂಲ್ಯವೆನಿಸಿದ, ಎಲ್ಲಿಯೂ ದೊರೆಯದ ಈ ಪ್ರಜ್ಞಾಫಲವನ್ನು ನಾವು ಅರಸಿಕೊಂಡು ಅದನ್ನು ಸಂರಕ್ಷಿಸಿಕೊಂಡು ಬರಬೇಕು. ಭಾರತೀಯ ಸಂಸ್ಕೃತಿಯು ವಿಶ್ವಕ್ಕೆ ಇತ್ತಿರುವ ಬೆಲೆಬಾಳುವ ಉಪದೇಶಾಮೃತ ಸಾಗರದಲ್ಲಿ ಈ ಪ್ರಜ್ಞಾಸಮುದ್ರವೂ ಸೇರಿಕೊಂಡಿದೆ; ಅಲ್ಲದೆ, ಇದು ಅತೀವ ಗಹನವಾಗಿದೆ. ನಾವಿಂದು 'ಪ್ರಜ್ಞಾವಾನ್' ಆಗಲು ಇಂದ್ರಿಯನಿಗ್ರಹವೇ ಮೊದಲಾದ ಆಚರಣೆಗಳನ್ನು ಕಾರ್ಯರೂಪಕ್ಕೆ ತರುವ ಆವಶ್ಯಕತೆಯಿದೆ. ಪೂಜ್ಯ ಬಾಪೂಜಿಯವರೂ ಸರ್ವೋದಯಕ್ಕೆ ಅಹಿಂಸಾದಿ ಏಕಾದಶ ಕರ್ತವ್ಯಗಳನ್ನು ಉಲ್ಲೇಖಿಸಿದ್ದಾರೆ. ಅವುಗಳನ್ನು ಕಾರ್ಯರೂಪಕ್ಕಿಳಿಸಿದರೆ, ಆಗಲೇ ಮಾನವನು 'ಸ್ಥಿತಪ್ರಜ್ಞ'ನಾಗುವುದು ಸಾಧ್ಯ.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 32/1955; R. E. P. 590/1959

ಪೂವ ಪೂಜಾರಿ .... ಅರ್ಜಿದಾರ

ಮತ್ತು

ದೊಡ್ಡು ಹೆಂಗ್ಸು—ಬಡ್ಡು ಹೆಂಗ್ಸಿನ ಮಗಳು—ಉಡ್ಪಿ ತಾಲ್ಲೂಕ ಕಿದಿಯೂರು ಗ್ರಾಮ .... 1ನೇ ಎದ್ರಿ

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಅರ್ಜಿದಾರನು ಸದ್ರಿ ಪ್ರಿಲಿಮಿನರಿ ಡಿಕ್ರಿಯ ಅಸ್ತಿಯ ಯೇಲಂ ಬಗ್ಗೆ ಮೇಲ್ಕಂಡ ಅಮಲ್ದಾರಿ ದಾಖಲು ಮಾಡಿರುವದ್ರಿಂದ ಆ ಕುರಿತು ಆಕ್ಷೇಪಣೆಯೇನಾದರೂ ಇದ್ದರೆ ತಾರೀಕು 16-1-1960ನೇ ದಿವ್ಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳಬಹುದು.

K. Ramakrishna Rao,
Vakil for Petitioner.

Udipi, Dated 4—1—1960.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.**

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

'ಅನ್ನ, ಅನ್ನ"ವೆಂದು ನಾಲಗೆಯಿಂದ ಉಚ್ಚರಿಸಿದ ಮಾತ್ರಕ್ಕೆ ಹೊಟ್ಟೆ ತಣ್ಣಗಾಗುವುದಿಲ್ಲ; ಅನ್ನವನ್ನು ಉಂಡರೆ ಮಾತ್ರ ಉದರ ಶಾಂತವಾದೀತು. "ಭಗವಾನ್" ಎಂದು ಹೇಳುವವನು ಭಕ್ತನಲ್ಲ; ಆತನ ಮಹಿಮೆಯನ್ನು ತಿಳಿದವನೇ ಮಹಾಭಕ್ತನು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨-೧-'೬೦	೧೮

ನಾಗಾ ಬಂಡುಗಾರರು

ಅಸಾಮದ ನಾಗಾ ಪ್ರದೇಶದಲ್ಲಿ ಹಾಗೂ ಅದರ ಸುತ್ತುಮುತ್ತಲೂ ನಾಗಾ ಜನರ ಪುಂಡಾಟಿಕೆಗಳು ಪ್ರಬಲವಾಗುತ್ತಿವೆಯೆಂದು ವರದಿ ಬರುತ್ತಿದೆ. ಈ ದಂಗೆಕೋರರು ವಿದೇಶೀಯರಿಂದ ಸಹಾಯ ಹಾಗೂ ಪ್ರೋತ್ಸಾಹಗಳನ್ನೂ ಪಡೆಯುತ್ತಿರುವರೆಂಬ ಸಂದೇಹಕ್ಕೂ ಆಸ್ಪದವಿದೆಯೆಂದು ಗೊತ್ತಾಗಿದೆ. ಭಾರತದ ಆಗ್ನೇಯ ಸೀಮೆಯಲ್ಲಿ ಹಾಗೂ ಇನ್ನಿತರೆಡೆಗಳಲ್ಲಿ ಚೀನವು ಆಕ್ರಮಣ ಮಾಡುತ್ತಿರುವ ಈ ಸಂದರ್ಭದಲ್ಲಿ ದೇಶದ ಆಂತರಿಕ ಪ್ರದೇಶದಲ್ಲಿಯೂ ಈ ರೀತಿಯ ವಿದ್ರೋಹವು ಏಳುವುದು ಸಮಂಜಸವೆನ್ನುವುದು ಸರಿಯಲ್ಲ; ಇದರಿಂದ ದೇಶದ ಆಂತರಿಕ ಭದ್ರತೆಯೂ ಆಂತರಿಕ ಶಾಂತಿಯೂ ಕೆಡುವುದು ಸಹಜವೇ. ಯಾವನೇ ಒಬ್ಬ ಭಾರತೀಯನು ಈ ರೀತಿಯ ಗೊಂದಲವನ್ನು ನಿರೀಕ್ಷಿಸುವುದೂ ಇಲ್ಲ; ಅದರಿಂದ ರಾಷ್ಟ್ರದ ನೆಮ್ಮದಿಯನ್ನು ಉಳಿಸುವುದೂ ಸಾಧ್ಯವಿಲ್ಲ. ಆದುದರಿಂದಾಗಿ ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ ಈ ರೀತಿಯ ಅನಪೇಕ್ಷಣೀಯ ಗೊಂದಲವನ್ನು ಹತ್ತಿಕ್ಕುವುದು ತೀರ ಅಗತ್ಯವಿದೆ.

ನಾಗಾ ಬಂಡುಗಾರರ ಈ ರೀತಿಯ ಉಪದ್ರವಗಳು ಇದೇನೂ ಮೊದಲಿನವಲ್ಲ. ಮೊದಲಿನಿಂದಲೂ ಪ್ರತ್ಯೇಕ ನಾಗಾ ರಾಜ್ಯದ ಬೇಡಿಕೆಯನ್ನು ಮುಂದಿಟ್ಟುಕೊಂಡು ದಂಗೆಯೇಳುತ್ತ ಇದ್ದುದರಿಂದ ನಾಗಾ ಜನರ ಮುಂದಾಳುಗಳೊಡನೆ ಸಮಾಲೋಚನೆ ನಡೆಸಿ ಅವರ ಪ್ರತ್ಯೇಕ ನಾಗಾರಾಜ್ಯದ ಬೇಡಿಕೆಯನ್ನು ಮನ್ನಿಸಿದ್ದು, ಅದನ್ನು ಅಸ್ಸಾಮದ ರಾಜ್ಯಪಾಲರ ಅಧೀನದಲ್ಲಿರಿಸಲಾಗಿದೆ. ಹಾಗಿದ್ದರೂ ನಾಗಾ ಜನರಿಗೆ ತೃಪ್ತಿಯೊದಗಿದಂತೆ ತೋರಬರಲಿಲ್ಲ. ಸ್ವಭಾವತಃ ಕ್ರೂರಿಗಳಾದ ಮತ್ತು ನಿಷ್ಠುರಿಗಳಾದ ನಾಗಾ ಜನರು ಪುನಃ ದಂಗೆಯೆದ್ದದ್ದು ನಿಜವಾದರೂ, ಎಲ್ಲ ನಾಗಾ ಜನರೂ ಅದೇ ಮನೋಭಾವದವರೆಂದು ಹೇಳಬರುವಂತಿಲ್ಲ; ಅಥವಾ ನಾಗಾ ಜನರು ವಿದ್ರೋಹಪ್ರಿಯರೆಂದೂ ಅನ್ನುವಂತಿಲ್ಲ. ಅವರಲ್ಲಿ ಹೆಚ್ಚಿನವರು ಶಾಂತಿಯನ್ನು ಬಯಸುವುದು ಖಂಡಿತವೇ. ಆದರೆ, ಕೆಲವೊಂದು ಉಗ್ರವಾದಿಗಳಾದ ನಾಗಾ ನಾಯಕರಿಂದಾಗಿ ಈಗ ಈ ವಿದ್ರೋಹವು ಕಾಣಿಸಿಕೊಂಡಿದೆ. ಗುಡ್ಡಗಾಡುಗಳ ಪ್ರದೇಶವಾದ ಈ ಸ್ಥಳದಲ್ಲಿ ನಾಗಾ ಜನರನ್ನು ಕುಶಲತೆಯಲ್ಲಿ ಬೇರೆ ಯಾರಾದರೂ ಸಂಚರಿಸುವುದು ಕಷ್ಟಸಾಧ್ಯವಾದುದರಿಂದ, ಅವರ ವಿದ್ರೋಹವು ನಿರಾತಂಕವಾಗಿ ಸಾಗುವಂತಾಗಿದೆ. ಅಲ್ಲದೇ ಕೆಲವು ನೇಪಾಳಿ ಗುಡ್ಡಗಳ ಜನರೂ ಈ ಬಂಡುಗಾರರಿಗೆ ಸಹಾಯವನ್ನು ನೀಡುತ್ತಿರುವುದು ವಿಮಂಚನೆಗೆ ಸಾಕಾಗಬಹುದಾದರೂ ಇವರು ಕೇವಲ ಧನದಾಶೆಯಿಂದ ಮಾತ್ರವೇ ಅವರೊಡನೆ ಸೇರಿಕೊಂಡಿರುವರೆಂದು ಹೇಳಲಾಗುತ್ತಿದೆ. ಸದ್ಯ ಈ ಎಲ್ಲ ಬಂಡುಗಾರರು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೆಲಸಿ ಜನತೆಯನ್ನು ಲೂಟಿ ಮಾಡುವುದರಲ್ಲೇ ತತ್ಪರರಾಗಿರುವರೆಂದೂ ದಿನೇದಿನೇ ಉಪಟಳವು ಪ್ರಬಲಿಸುತ್ತ ಬರುತ್ತಿರುವುದೆಂದೂ ತಿಳಿದು ಬಂದಿದೆ.

ಈ ಸಂದರ್ಭದಲ್ಲಿ ಸರಕಾರವು ಕೈಗೊಂಡ ಕಾರ್ಯಕ್ರಮವನ್ನು ಎಲ್ಲರೂ ಸ್ವಾಗತಿಸಬೇಕಾಗಿದೆ. ಭಾರತೀಯ ಸೈನ್ಯದ ಘಟಕಗಳು ಹಾಗೂ ಅಸಾಮ ಗಡಿ ಸಂರಕ್ಷಣಾ ಪಡೆಯವರು ಅಸಾಮ ಮತ್ತು ನಾಗಾ ಪರ್ವತಗಳ ಗಡಿಯಲ್ಲಿನ ಗುಡ್ಡಗಾಡು ಪ್ರದೇಶದಲ್ಲಿ ಕಾರ್ಯಚರಣೆಯನ್ನು ಪ್ರಾರಂಭಿಸಿದ್ದಾರೆಂದು ತಿಳಿದುಬಂದಿದೆ; ಈ ಕೃತ್ಯವಲ್ಲದೇ ಮತ್ತಾವ ರೀತಿಯಿಂದಲಾದರೂ ಈ ವಿದ್ರೋಹವನ್ನು ಅಣಗಿಸುವುದು ಸಾಧ್ಯವಿಲ್ಲ. ನಾಗಾಜನರು ಪ್ರತ್ಯೇಕತೆಯನ್ನು ಬಯಸುವುದಾದರೂ ಸ್ವತಂತ್ರ ನಾಗಾರಾಜ್ಯವನ್ನು ಅಪೇಕ್ಷಿಸುವುದು ಎಂದಿಗೂ ಸಮಂಜಸವಾಗದು. ಹಿಂದಿನ ಕಾಲದಿಂದಲೂ ಸಾಮಾನ್ಯ ಜನತೆಯಿಂದ ದೂರವುಳಿದು ಹಿಂದುಳಿದಿರುವ ಈ ಜನರು ಸಮಸ್ತ ಭಾರತೀಯರಂತೆಯೇ ನಾಗರಿಕರಾಗಿ ಬದುಕುವುದರಲ್ಲಿಯೇ ಅವರ ಯಶಸ್ಸು ಅಡಗಿದೆ; ಮತ್ತು ಭಾರತ ಸರಕಾರದ ಅಭಿಲಾಷೆಯಾದರೂ ನಾಗಾ ಸಂಸ್ಕೃತಿಯನ್ನು ಹಾಳುಗೆಡಹಬೇಕೆಂಬುದಾಗಿರದೇ ಅವರನ್ನು ಇತರ ಭಾರತೀಯರ ಸಮಜೋಡಿಯಲ್ಲಿ ನಿಲ್ಲುವಂತೆ ಸುಧಾರಿಸುವುದೇ ಆಗಿದೆ. ಈ ಸದುದ್ದೇಶವನ್ನು ಸರಿಯಾಗಿ ಅರಿತುಕೊಳ್ಳದೆ ತೀರ ಅನಾಗರಿಕ ಮನೋವೃತ್ತಿಯಿಂದಾಗಿ ದಂಗೆ, ಲೂಟಿಗಳಲ್ಲಿಯೇ ತಮ್ಮ ಆಯುಷ್ಯ ಸವೆಯಿಸುವ ಕೆಲ ಪುಂಡರ ಒತ್ತಾಸೆಯಿಂದ ತಮ್ಮ ಹಾನಿ ಮಾಡಿಕೊಳ್ಳುವುದು ನಾಗಾ ಜನರಿಗೆ ಹಿತಕಾರಿಯಲ್ಲ. ಪ್ರತ್ಯೇಕ ನಾಗಾ ರಾಜ್ಯದ ಬೇಡಿಕೆಯನ್ನವರು ಬಿಟ್ಟುಕೊಟ್ಟು ಸ್ವತಂತ್ರ ಭಾರತದ ಪ್ರಜೆಗಳಾಗಿ ಮುಂದುವರಿಯುವುದರಿಂದಲೇ ಅವರ ಮೇಲ್ಮೆಯಡಗಿದೆ. ತಮ್ಮ ಹಿಂಸ್ರ ಮನೋವೃತ್ತಿಯ ಆಗ್ರಹವನ್ನೂ ಬಿಟ್ಟು ಈ ವಿದ್ರೋಹಿಗಳು ಸಮಾಧಾನದಿಂದ ತಮ್ಮ ನ್ಯಾಯವಾದ ಅವಶ್ಯಕತೆಗಳಾವುವೆಂದು ತಿಳಿಸಿದರೆ, ಅದನ್ನು ಸಹಾನುಭೂತಿ ಪೂರ್ವಕವಾಗಿ ಪರಿಶೀಲಿಸಲು ಭಾರತ ಸರಕಾರವು ಸಿದ್ಧವಿರುವುದು ಹಾಗಿರುವಾಗ, ಈ ವಿದ್ರೋಹವೇಕೆ?

ಸಂಕ್ಷಿಪ್ತ ಸುದ್ದಿಗಳು

ಕಾಂಗ್ರೆಸ್ ಅಧಿವೇಶನ

ಕರ್ನಾಟಕದಲ್ಲಿ ಇದೇ ತಿಂಗಳ ತಾ. ೧೨ರಿಂದ ೧೮ರ ವರೆಗಿನ ಒಂದು ವಾರ ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್‌ನ ಅಧಿವೇಶನವು ಜರಗಲಿದೆ. ಈ ಬಗ್ಗೆ ನಿರ್ಮಿತವಾದ ಸದಾಶಿವ ನಗರದಲ್ಲಿ ಆವಶ್ಯಕವೆನಿಸಿದ ವ್ಯವಸ್ಥೆಯು ಸಂಪೂರ್ಣವಾಗಿ ಮುಗಿಯುತ್ತಿದೆ. ಅಧಿವೇಶನದ ಒಂದಂಗವಾಗಿ ವಸ್ತು ಪ್ರದರ್ಶನವು ಈಗಾಗಲೇ ಮದ್ರಾಸದ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡರರಿಂದ ಉದ್ಘಾಟಿತವಾಗಿದ್ದು ಇದರಲ್ಲಿ ಆಧುನಿಕ ಭಾರತದ ಪರಿಚಯ ಸಾಧನಗಳಿವೆ. ಜನವರಿ ೩೧ರ ವರೆಗೆ ಈ ಪ್ರದರ್ಶನವು ತೆರೆದಿರುವುದು.

ಕಾಂಗ್ರೆಸ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ನೀಲಂ ಸಂಜೀವ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ಅಧಿವೇಶನವು ಸೇರಲಿದ್ದು ಅದರ ಕಾರ್ಯಕ್ರಮವು ಈ ರೀತಿಯಿರುವುದು: ತಾ. ೧೨ ಮತ್ತು ೧೩ ರಂದು ಪೂರ್ವಾಹ್ನ ೯ರಿಂದ ೧ ಮತ್ತು ಅಪರಾಹ್ನ ೩ರಿಂದ ೭ರ ವರೆಗೆ ಕಾರ್ಯಕಾರಿ ಸಮಿತಿಯ ಸಭೆ.

ತಾ. ೧೪ ಮತ್ತು ೧೫ರಂದು ಬೆಳಿಗ್ಗೆ ೯ರಿಂದ ೧ ಹಾಗೂ ಸಂಜೆ ೩ರಿಂದ ೭ರ ವರೆಗೆ ವಿಷಯ ನಿಯಾಮಕ ಸಮಿತಿಯ ಸಭೆ.

ತಾ. ೧೬ರಂದು ಪೂರ್ವಾಹ್ನ ೯ರಿಂದ ೧೨-೩೦ರ ವರೆಗೆ ವಿಷಯ ನಿಯಾಮಕ ಸಮಿತಿಯ ಸಭೆ, ಅಪರಾಹ್ನ ೩ ರಿಂದ ೭-೩೦ರ ವರೆಗೆ ಬಹಿರಂಗಾಧಿವೇಶನ.

ತಾ. ೧೭ ಮತ್ತು ೧೮ರಂದು ಬೆಳಿಗ್ಗೆ ೯ರಿಂದ ೧೨-೩೦ ಹಾಗೂ ಅಪರಾಹ್ನ ೩ರಿಂದ ೭-೩೦ರ ವರೆಗೆ ಬಹಿರಂಗಾಧಿವೇಶನ

ಈ ಸಮ್ಮೇಳನವು ಕರ್ನಾಟಕರಾಜ್ಯದಲ್ಲಿ ಬಹಳ ಅಪರೂಪವಾಗಿ ಆಗುತ್ತಿರುವುದರಿಂದ ಅತ್ಯಧಿಕ ಸಂಖ್ಯೆಯಲ್ಲಿ ಜನ ಸೇರುವ ನಿರೀಕ್ಷೆಯಿದೆ. ೩೫ರ ನಡುಕವನ್ನು ಕಾಂಗ್ರೆಸಿಗೆ ತೋರಿಸಿದ ಕರ್ನಾಟಕವು ೬೫ರ ವಿವೇಕವನ್ನೂ ಅದರಲ್ಲಿ ಹುಟ್ಟಿಸುವುದೆಂದೂ ಆಶಿಸುವುದು ತಪ್ಪಾಗಲಾರದು..

ರಾಜ್ಯ ವಿಭಜನೆ

ಅಖಿಲ ಭಾರತ ಕಾಂಗ್ರೆಸ್‌ನ ಸೂಚನೆಯಂತೆ ಭಾರತ ಸರಕಾರವು ದ್ವಿಭಾಷಾ ಮುಂಬಯಿ ರಾಜ್ಯವನ್ನು ಏಕಭಾಷಾ ಘಟಕಗಳಾಗಿ ವಿಭಜಿಸಲು ನಿರ್ಧರಿಸಿದ್ದು ಈ ಬಗ್ಗೆ ಆವಶ್ಯಕವಾದ ಮಸೂದೆಗಳನ್ನು ತಯಾರಿಸುವಲ್ಲಿ ನಿರತವಾಗಿದೆ. ಈ ವಿಭಜನೆಯನಂತರ ಮರಾಠಿ ಭಾಷೆಯ ಬೊಂಬಾಯಿ ಮತ್ತು ಗುಜರಾಥಿ ಭಾಷೆಯ ಗುಜರಾಥ ರಾಜ್ಯಗಳು ರೂಪಿತವಾಗುವುವು. ಇದುವರೆಗೆ ಅತಿ ಹಿರಿಯದೆನಿಸಿದ್ದ ಬೊಂಬಾಯಿಯು ದ್ವಿಭಾಜಿತವಾಗುವುದು. ಈ ಸಂದರ್ಭದಲ್ಲಿಯೇ ಪ್ರತ್ಯೇಕ ವಿದರ್ಭ ರಾಜ್ಯದ ಬೇಡಿಕೆಯು ಮುಂದಿಡಲ್ಪಟ್ಟರೂ ಕಾಂಗ್ರೆಸ್ಸಾಗಲೀ ಸರಕಾರವಾಗಲೀ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡದೆ, ಪ್ರಕೃತ ವಿದರ್ಭದ ಹಿತಾಸಕ್ತಿಗಳಿಗಾಗಿ ಅದು ಬೊಂಬಾಯಿಯಲ್ಲಿಯೇ ಸೇರಿಕೊಂಡಿರುವುದು ಯೋಗ್ಯವೆಂದು ಅಭಿಪ್ರಾಯಪಟ್ಟಿದೆ. ರಾಜ್ಯ ಪುನಾರಚನಾ ವೇಳೆಯಲ್ಲಿ ಉಂಟಾದ ಗೊಂದಲಗಳಿಂದಾಗಿ ದ್ವಿಭಾಷಾ ಬೊಂಬಾಯಿ ರಾಜ್ಯವನ್ನು ಸ್ಥಾಪಿಸಲಾಯಿತೆಂದೂ ಇದೀಗ ಪರಿಸ್ಥಿತಿಯು ತುಸು ತಿಳಿಯಾಗುತ್ತ ಬಂದು ಗುಜರಾಥ ಮತ್ತು ಮಹಾ ರಾಷ್ಟ್ರಗಳ ನಡುವೆ ಸೌಹಾರ್ದ ಸ್ವೀಕೃತಿಯಾಯಿತೆಂದೂ ನಾವು ತಿಳಿಯಬಹುದು. ಮಹಾರಾಷ್ಟ್ರ ಪರಿಷತ್ತು ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕೂಡ ಪ್ರತ್ಯೇಕ ಮಹಾರಾಷ್ಟ್ರ ಸ್ಥಾಪನೆಯನ್ನು ತನ್ನ ಚುನಾವಣಾ ಘೋಷಣೆಯಲ್ಲಿ ಸೇರಿಸಿ ಹಲವಾರು ಸ್ಥಾನಗಳನ್ನು ಪಡೆದಿರುವುದನ್ನು ನೆನಪಿಗೆ ತಂದುಕೊಳ್ಳಬೇಕು. ಕಾಂಗ್ರೆಸ್ಸು ಈ ವಿಭಜನೆಯನ್ನು ನಿರಾಕರಿಸಲಿಲ್ಲವಾದರೂ ಸಂಪೂರ್ಣ ಪುರಸ್ಕರಿಸದಿದ್ದುದರಿಂದಲೇ ಅದು ಅಂದು ಅಲ್ಲಿ ಕೆಲವು ಸ್ಥಾನಗಳನ್ನು ಕಳೆದುಕೊಂಡಿತ್ತು; ಈಗ ಇನ್ನೊಂದು ಚುನಾವಣೆಯು ಸಮೀಪಿಸುತ್ತ ಬಂದಂತೆ, ಜನಮತವನ್ನು ಪಡೆಯಲು ಜನಮನಕ್ಕೆ ಅದು ತಲೆತಗ್ಗಿಸಿಯೇ ಈ ವಿಭಜನೆಗೆ ಒಪ್ಪಿತೆಂದೂ ಹೇಳುವವರಿದ್ದಾರೆ; ಆದರೆ, ಇದುವೇ ನಿಜವಾದರೆ, ಮುಂದೆ, ಪ್ರತ್ಯೇಕ ವಿದರ್ಭ ರಾಜ್ಯಸ್ಥಾಪನೆಗೂ ಇದೇರೀತಿಯ ಒತ್ತಾಯ ತಲೆದೋರಿದರೆ, ಆಗ ಕಾಂಗ್ರೆಸ್‌ನ ನೀತಿಯೇನು ಎಂಬುದಿನ್ನೂ ಕೋಶಾವಸ್ಥೆಯಲ್ಲಿಯೇ ಇದೆಯೆನ್ನಬೇಕು ತಾನೆ?

ಭಾರತವೇ ಆಕ್ರಮಣ ಮಾಡಿದೆ

ಭಾರತ-ಚೀನಾ ಸೀಮಾ ವಿವಾದದ ಬಗ್ಗೆ ಉಭಯ ಪ್ರಧಾನಿಗಳ ನಡುವೆ ನಡೆಯುತ್ತಿರುವ ಪತ್ರವ್ಯವಹಾರವು ಮತ್ತಷ್ಟು ಮುಂದುವರಿಯುತ್ತಿದೆ. ಈಗ ಶ್ರೀ ಚಾ ಎನ್ ಲಾಯ್ ಅವರು ಇನ್ನೊಂದು ಪತ್ರವನ್ನು ಬರೆದು ಅದರಲ್ಲಿ ತಮಗೆ ಆಕ್ರಮಣ ಮಾಡುವ ಇಚ್ಛೆ ಎಂದೂ ಇರುವುದಿಲ್ಲವೆಂದು ಉಲ್ಲೇಖಿಸಿದ್ದಾರೆ. ಅವರು ಮುಂಬರಿದು, ಭಾರತ-ಚೀನಾಗಳ ನಡುವಿನ ೨,೫೦೦ ಮೈಲುದ್ದದ ಗಡಿಯು ಯಾವ ಕಾಲದಲ್ಲೂ ನಿರ್ಧರಿಸಲ್ಪಟ್ಟಿಲ್ಲವೆಂದೂ ಮ್ಯಕಮೋಹನ ರೇಖೆಯನ್ನು ಚೀನಾವು ಎಂದೂ ಒಪ್ಪಿಕೊಂಡಿಲ್ಲವೆಂದೂ ಲಡಖ್ ಹಾಗೂ ನೇಫಾ ಪ್ರದೇಶಗಳಲ್ಲಿ ಭಾರತವೇ ತಮ್ಮಮೇಲೆ ಆಕ್ರಮಣ ನಡೆಸಿರುವುದೆಂದೂ ಪ್ರತ್ಯಾರೋಪ ಹೊರಿಸಿ ಸೌಹಾರ್ದಮಯ ವಾತಾವರಣದಲ್ಲಿಯೇ ಈ ವಿವಾದ ಬಗೆ ಹರಿಯಬೇಕೆಂದು ತಾವು ಬಯಸುವುದಾಗಿ ಹೇಳಿದ್ದಾರೆ 'ವಿವಾದಾಸ್ಪದ' ಪ್ರದೇಶವನ್ನು ಸೈನ್ಯ ರಹಿತವಾಗಿರಿಸಿ ಮಾತುಕತೆಗೆ ತಯಾರಿ ನಡೆಸುವುದು ಸೂಕ್ತವೆಂದವರು ಸೂಚಿಸಿದ್ದಾರೆ.

ಕಾರ್ಪೊರೇಶನ್‌ನ ಸ್ತುತ್ಯ ಯೋಜನೆ

ದೇಶದಲ್ಲಿ ಹೆಚ್ಚುತ್ತಿರುವ ವಸತಿ ಸಮಸ್ಯೆಯನ್ನು ಪರಿಹರಿಸಲು ಭಾರತೀಯ ಜೀವ ವಿಮಾ ಕಾರ್ಪೊರೇಶನ್ ಪ್ರಯತ್ನಿಸುವುದೆಂದು ತಿಳಿದು ಬಂದಿದೆ. ಇದಕ್ಕಾಗಿ ಒಂದು ಯೋಜನೆಯು ರೂಪಿತವಾಗಿದ್ದು ಅದರ ನ್ವಯ ಸಹಕಾರಿ ಸಂಘಗಳು, ಸಾರ್ವಜನಿಕ ಲಿಮಿಟೆಡ್' ಸಂಸ್ಥೆಗಳು ಮತ್ತು ಜೀವ ವಿಮೆಯುಳ್ಳದ ಪಾಲಿಸಿದಾರರಿಗೆ

ಅಲ್ಲಲ್ಲಿಯ ಸುದ್ದಿಸಾರ

ಡಾ| ಪೈಗಳಿಗೆ ನವ ವರ್ಷದ ಅಭಿನಂದನೆ— ನೂತನ ವರ್ಷದ ಪ್ರಾರಂಭದಂದು ಸಾರ್ವಜನಿಕ ಸೇವಾಸಕ್ತರಾದ ಹಿರಿಯ ಮಹನೀಯರನ್ನು ಸತ್ಕರಿಸಿ ಗೌರವಿಸುವ ವಾಡಿಕೆಯಂತೆ ಇದೇ ತಾ 1ರಂದು ಆಧುನಿಕ ಉಡುಪಿಯ ಶಿಲ್ಪಿ ಡಾ. ಟಿ. ಎಮ್. ಎ ಪೈಗಳವರನ್ನು ಮಣಿಪಾಲದ ನಿವಾಸದಲ್ಲಿ ಜನರಲ್ ಇನ್‌ವೆಸ್ಟ್‌ಮೆಂಟ್ ಎಂಡ್ ಕಮ್ಮರ್ಶಿಯಲ್ ಕಾರ್ಪರೇಶನ್ ಮೊದಲಾದ ಹನ್ನೊಂದು ಲಿಮಿಟೆಡ್ ಸಂಸ್ಥೆಗಳು ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಭಿನಂದಿಸಿ ಗೌರವಿಸಿದರು. ಉಪಾಹಾರವಾದ ಮೇಲೆ ಶ್ರೀ ಟಿ. ರಮೇಶ ಪೈಗಳು ಸ್ವಾಗತ ಭಾಷಣಮಾಡಿ ಈ ನೂತನ ಪದ್ಧತಿಯ ಹಿನ್ನೆಲೆಯನ್ನೂ ಮುಖ್ಯ ಅತಿಥಿಗಳ ಸೇವಾ ಕಾರ್ಯಗಳನ್ನೂ ವಿವರಿಸಿದರು. ಅನಂತರ ಶ್ರೀಗಳಾದ ಬಿ ಶೀನಪ್ಪ ಹೆಗ್ಡೆ, ಪ್ರಿನ್ಸಿಪಾಲ್ ಸುಂದರ್ ರಾವ್, ಕೆ. ಆರ್. ಕೆ. ಭಟ್, ಟಿ. ಎ. ಪೈ, ಬಿ. ಶ್ಯಾಮರಾಯ ಶೆಟ್ಟಿ ಇವರು ಡಾ. ಮಾಧವ ಪೈಗಳ ವ್ಯಕ್ತಿತ್ವವನ್ನೂ ಅವರು ಸಾಧಿಸಿದ ಮಹತ್ವಾದ ಕೆಲಸ ಕಾರ್ಯಗಳನ್ನೂ ಕೊಂಡಾಡಿ ಉಪನ್ಯಾಸವಿತ್ತು ಅವರಿಗೆ ಜಯವನ್ನು ಹಾರೈಸಿದರು. ಡಾ| ಪೈಗಳು ತನ್ನ ಭಾಷಣದಲ್ಲಿ ಜನರ ಸಹಕಾರಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ಸಮಾರೋಪ ಭಾಷಣ ಮಾಡಿದ ಮೇಲೆ ಶ್ರೀ ರಮೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಈ ಸಹಾಯವನ್ನು ನೀಡಲಾಗುವುದು. ಸಧ್ಯ ಮುಖ್ಯವಾಗಿ ೧೦ ಲಕ್ಷಕ್ಕಿಂತ ಹೆಚ್ಚು ಜನ ಸಂಖ್ಯೆಯಿರುವ ನಗರಗಳಲ್ಲಿ ಮಾತ್ರ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದೆಂದೂ ಕ್ರಮೇಣ ಅದನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಗುವುದೆಂದೂ ತಿಳಿದು ಬಂದಿದೆ. ವಸತಿಯ ಅಭಾವವಿರುವ ಈ ಸಮಯದಲ್ಲಿ ಕಾರ್ಪರೇಶನ್‌ನ ಯೋಜನೆಯು ಸ್ತುತ್ಯವಾಗಿದೆ.

ಪಾಕ್‌ನೊಡನೆ ಮಾತುಕತೆ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಬಹುಕಾಲದಿಂದಲೂ ಇದ್ದಿರುವ ಸಮಸ್ಯೆಗಳೀಗ ಸೌಹಾರ್ದದೊಡನೆ ಪರಿಹಾರಗೊಳ್ಳುವತ್ತ ವಿಶೇಷ ಗಮನವನ್ನು ಹರಿಸಲಾಗುತ್ತಿದೆ. ಇತ್ತೀಚೆಗೆ ಪೂರ್ವ ಪಾಕಿಸ್ತಾನ ಹಾಗೂ ಭಾರತಗಳ ಸೀಮಾ ಪ್ರಶ್ನೆಯನ್ನು ಪರಿಶೀಲಿಸಿದ ಘಟನೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಈಗ, ಈ ಮಾತುಕತೆಯ ದ್ವಿತೀಯ ಹಂತವಾಗಿ ಬಹುದಿನಗಳಿಂದ ಉಳಿದಿರುವ ಆರ್ಥಿಕ ವಿವಾದವನ್ನು ಉಭಯ ಸರಕಾರಗಳ ಅಧಿಕಾರಿ ಶಿಷ್ಟಮಂಡಳವು ಚರ್ಚಿಸಿತು. ಈ ಚರ್ಚೆಯು ಉತ್ತಮ ವಾತಾವರಣದಲ್ಲಿಯೇ ನಡೆದಿದ್ದು ಪ್ರಶ್ನೆಯನ್ನು ಬಿಡಿಸುವುದಕ್ಕೆ ಮಾರ್ಗದರ್ಶಕವಾಗಿದೆ. ಆದಾಯ ಕರ, ಸರಕಾರಿ ಸಾಲ ಮುಂತಾದ ವಿಷಯಗಳಲ್ಲಿ ಈ ಶಿಷ್ಟಮಂಡಳಗಳು ಒಮ್ಮತಕ್ಕೆ ಬಂದಿವೆ. ಇನ್ನು ಉಳಿದಿರುವ ಕೆಲವೊಂದು ವಿಷಯವನ್ನು ಚರ್ಚಿಸಲು ಉಭಯ ರಾಷ್ಟ್ರಗಳ ಆರ್ಥಿಕ ಮಂತ್ರಿಗಳು ಸಭೆಸೇರಲಿರುವರು. ನೆರೆರಾಷ್ಟ್ರಗಳೊಡನಿರುವ ವಿವಾದಗಳನ್ನು ಶಾಂತವಾಗಿಯೇ ಪರಿಹರಿಸುವುದು ಸಾಧ್ಯವಿದೆಯೆಂದೀಗ ಎರಡೂ ದೇಶಗಳು ತೋರಿಸಿಕೊಟ್ಟಂತಾಗಿದೆ. ಇದೇರೀತಿಯಲ್ಲಿ ಇನ್ನುಳಿದ ಎಲ್ಲ ಸಮಸ್ಯೆಗಳೂ ಉತ್ತಮರೀತಿಯಲ್ಲೇ ಬಗೆಹರಿಯುವಂತೆ ಮಾಡುವ ಪ್ರಯಾಸವನ್ನು ಎರಡೂ ರಾಷ್ಟ್ರಗಳು ವಹಿಸುವ ನಿರೀಕ್ಷೆಯಿದೆ.

ಭಾರತಕ್ಕೆ ಅಧ್ಯಕ್ಷ ನಸ್ಸೇರರು

ಈಜಿಪ್ತದ ಅಧ್ಯಕ್ಷ ಮೌ|| ಜ| ಅಬ್ದುಲ್ ಗಮಾಲ್ ನಸ್ಸೇರರು ಭಾರತವನ್ನು ಫೆಬ್ರುವರಿ ತಿಂಗಳಲ್ಲಿ ಸಂದರ್ಶಿಸುವ ನಿರೀಕ್ಷೆಯಿದೆ. ಕಳೆದ ಡಿಶಂಬರ ತಿಂಗಳಲ್ಲಿ ಅವರು ಭೇಟಿಕೊಡಬೇಕಾಗಿದ್ದರೂ ಅಮೆರಿಕೆ ಅಧ್ಯಕ್ಷ ಐಕರು ಭಾರತ ಪ್ರವಾಸ ಕೈಕೊಂಡುದರಿಂದಾಗಿ ಅದನ್ನು ನಿಲ್ಲಿಸಲಾಗಿತ್ತು. ಅಂತೆಯೇ ಈ ವರ್ಷಾರಂಭದಲ್ಲಿ ರಶ್ಯನ್ ನಾಯಕರೂ ಭಾರತಕ್ಕೆ ಭೆಟ್ಟಿ ಕೊಡುವ ನಿರೀಕ್ಷೆಯಿದೆ.

ವಾರ್ಷಿಕೋತ್ಸವ:—ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ತಾ. 24—12—59ರಂದು ಮಹಾತ್ಮಾಗಾಂಧೀ ಬುನಾದಿ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಉ. ಅ. ಶೆಣೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ನಾರಾಯಣ ಐತಾಳರು ಸ್ವಾಗತಿಸಿದರು. ಕುಮಾರಿ ಯು. ಚಂದ್ರಭಾಗಿಯವರು ವಾರ್ಷಿಕ ವರದಿಯನ್ನು ಒಪ್ಪಿಸಿದರು. ಕುಮಾರಿ ಶಾಂತಿ ದೇವಿ ಬೈಲೂರು ಇವರ ಸಂಗೀತವಾದ ಮೇಲೆ ಶ್ರೀ ಸಿ. ಮಹಾಬಲ ನಾಯಕರು ಧನ್ಯವಾದ ಸಮರ್ಪಿಸಿದರು.

ಕರ್ನಾಟಕ ಸ್ಪೋರ್ಟ್ಸ್ ಕ್ಲಬ್, ಚೆಂಬೂರು—ಈ ಕ್ಲಬ್ಬಿನ ವಾರ್ಷಿಕೋತ್ಸವವು ತಾ 19—12—1959ರಂದು ಟಿಳಕ್ ಶಿಕ್ಷಣ ಕಾಲನಿಯ ಬಯಲುನಾಟ್ಯ ಗೃಹದಲ್ಲಿ ಶ್ರೀ ಯಸ್. ಕನ್ನಾ ಅವರ ಅಧ್ಯಕ್ಷತೆಯಿಂದ ಬಹಳ ವಿಜೃಂಭಣೆಯಿಂದ ನೆರವೇರಿತು.

ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಶಂಕರ ಹೆಜ್ಮಾಡಿಯವರು ಸ್ವಾಗತಿಸಿದ ಬಳಿಕ ಕ್ಲಬ್ಬಿನ ಪ್ರಧಾನಕಾರ್ಯದರ್ಶಿ ಶ್ರೀ ಬಿ. ರಘುರಾಮ ಶೆಟ್ಟಿಯವರು ಕ್ಲಬ್ಬಿನ ಸಂಕ್ಷಿಪ್ತ ವರದಿಯನ್ನೋದಿದರು. ಶ್ರೀ ಪಿ.ಯಂ. ಶಹಾ (ಡಿಸ್ಟ್ರಿಕ್ಟ್ ಸ್ಟಾಫ್ ಮೇನೇಜರ್, ದಿ. ಪ್ರೀಮಿಯರ್ ಆಟೋಮೊಬಯಿಲ್ಸ್ ಲಿ.) ಮತ್ತು ಶ್ರೀ ರಘು ಶೆಟ್ಟಿ ಕಳವಾರರು ಸಮಯೋಚಿತ ಭಾಷಣ ಮಾಡಿದರು. ಆ ಮೇಲೆ ಕ್ಲಬ್ಬಿನ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರೆಲ್ಲರಿಗೂ ಮುಖ್ಯ ಅತಿಥಿಯವರು ಬಹುಮಾನ ವಿತರಣೆಮಾಡಿದರು. ಶ್ರೀ ಮತ್ತು ಶ್ರೀಮತಿ ಯಚ್. ಸುಬ್ಬರಾವ್‌ರವರು ದಾನವಾಗಿಕೊಟ್ಟಿರುವ ಮಹಿಳೆಯರ ಚ್ಯಾಂಪಿಯನ್‌ಶಿಪ್ ಕಪ್ಪನ್ನು ಕುಮಾರಿ ಸ್ಟೆಲ್ಲಾ ಸಾಲಿನ್ಸ್‌ರವರೂ, ಶ್ರೀ ಮತ್ತು ಶ್ರೀಮತಿ ಶಂಕರ ಹೆಜ್ಮಾಡಿಯವರು ದಾನವಾಗಿ ಕೊಟ್ಟಿರುವ "ಕರ್ನಾಟ ಸ್ಪೋರ್ಟ್ಸ್ ಕ್ಲಬ್ ಚ್ಯಾಂಪಿಯನ್‌ಶಿಪ್ ರೋಲಿಂಗ್ ಶೀಲ್ಡ"ನ್ನು ಶ್ರೀ ಗಂಗಾಧರ ವಾಸ್‌ರವರೂ ಪಡೆದಿರುವರು.

ಮುಖ್ಯ ಅತಿಥಿ ಶ್ರೀ ಯಸ್. ಕನ್ನಾರವರು ತನ್ನ ಭಾಷಣದಲ್ಲಿ ಕರ್ನಾಟಕ ಸ್ಪೋರ್ಟ್ಸ್ ಕ್ಲಬ್ 2 ವರ್ಷದಲ್ಲಿ ನೆರವೇರಿಸಿರುವ ಚಟುವಟಿಕೆಗಳನ್ನೆಲ್ಲಾ ಶ್ಲಾಘಿಸಿ ಕ್ಲಬ್ಬಿಗೆ ಯಶಸ್ಸನ್ನು ಕೋರಿದರು. ಅಲ್ಲದೆ ಕ್ಲಬ್ಬಿಗೆ ಬೇಕಾದ ಸಹಕಾರಗಳನ್ನು ಕೊಡಲು ತಾನು ಸದಾ ಸಿದ್ಧನಿರುವನೆಂದು ತಿಳಿಸಿದರು. ಆ ಬಳಿಕ ನೃತ್ಯ, ಸಂಗೀತ, ಹಾಸ್ಯಪ್ರಹಸನ ಮೊದಲಾದ ವಿವಿಧ ಮನರಂಜನೆಯ ಕಾರ್ಯಕ್ರಮಗಳಾದುವು.

ಪೆರಡಾಲ—ಇಲ್ಲಿನ ಮಹಾಜನ ಸಂಸ್ಕೃತ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ದಿನಾಂಕ 23—12 59 ರಂದು ಶ್ರೀ ಮಲಿಯ ಮಹಾಬಲ ಭಟ್, ಎಡ್ವಕೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಗೀತಕಛೇರಿ ನಾಟಕ— ಮುಂತಾದ ವಿನೋದಾವಳೀ ಕಾರ್ಯಕ್ರಮಗಳಿದ್ದುವು. ಶ್ರೀ ಎಸ್ ಎನ್. ನವಕಾನರು ಧನ್ಯವಾದವಿತ್ತರು. ಮುಂದಿನ ವರ್ಷಕ್ಕೆ ಶ್ರೀ ಕೆ. ಸಿ. ಅಳ್ವರನ್ನು ಅಧ್ಯಕ್ಷರನ್ನಾಗಿಯೂ, ಎಸ್. ವಿ. ಎಲ್. ಎನ್. ಶರ್ಮರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು.

ಬದಿಯಡ್ಕ—ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಚುನಾವಣಾ ಸಂಬಂಧದ ಸಭೆಯೊಂದು ದಿನಾಂಕ ತಾ. 29—12—59ರಂದು ಬದಿಯಡ್ಕ ಗಾಂಧೀ ಮೈದಾನದಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸುಂದರರಾವ್ ಶೆಟ್ಟರು ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಸಮಿತಿಯ ಕಡೆಯಿಂದ "ಕನ್ನಡವೇ ಪಕ್ಷ, ಬಿಡುಗಡೆಯೇ ಪಂಥ" ಎಂಬ ಒಂದೇ ಧ್ಯೇಯದಿಂದ ನಿಷ್ಪಕ್ಷಪಾತ ಉಮೇದ್ವಾರರಾಗಿ ನಿಂತ—ಡಾ. ಕೆ. ಎ. ಶೆಟ್ಟಿ ಮತ್ತು ಎಡ್ವಕೇಟ್ ಕೆ. ಯಂ. ಭಂಡಾರಿಯವರನ್ನು ಸಭಾಂಗಣದ ವಠಾರದಲ್ಲಿ ಅಂದಂಕ್ಯೂ ಮಿಕ್ಕಿದ ಮೆರವಣಿಗೆಯೊಂದು ಸ್ವಾಗತಿಸಿ ಹಾರಾರ್ಪಣೆ ಮಾಡಿತು. ಕಯ್ಯಾರ ಕಿಞ್ಞಣ್ಣ ರೈಗಳು ಸ್ವಾಗತ ಭಾಷಣ ಮಾಡಿದರು. ಕಡಂಗೋಡ್ಲು ಶಂಕರ ಭಟ್ಟ, ಯನ್. ಲಕ್ಷ್ಮಣನ್ ಕೆ. ಪಿ. ಮಾಧವರಾವ್, ಬಿ. ಯಸ್. ಕಕ್ಕಿಲ್ಲಾಯ ಮುಂತಾದವರು ಭಾಷಣ ಮಾಡಿದರು.

ಕುರಾಡಿ— ತಾ. 1—1—1960ನೇ ಹೊಸ ವರ್ಷಾರಂಭದ ದಿನ ಕುರಾಡಿ ಶಾಲಾ "ಪ್ರಾಕ್ತನ ವಿದ್ಯಾರ್ಥಿ ಸಂಘ"ದ ವಾರ್ಷಿಕೋತ್ಸವವು, ಎಡ್ವೊಕೇಟ್ ಎನ್. ಎಸ್ ಪರಮೇಶ್ವರಯ್ಯ ಇವರ ಸನ್ಯಾಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ಪಿ. ಬ್ಯಾರಿಯವರು ವರದಿಯನ್ನು ಓದಿದ ಬಳಿಕ, ಶ್ರೀ ವಿ. ಎಸ್. ಶೆಟ್ಟಿ, ಸ್ವಾಗತ ಭಾಷಣ ಮಾಡಿದರು. ಶ್ರೀ ಎ. ಕೃಷ್ಣ ಮೂರ್ತಿ ಭಟ್ಟರಿಂದ ಸಂದೇಶ ವಾಚನವಾದನಂತರ ಪ್ರಾಕ್ತನ ವಿದ್ಯಾರ್ಥಿಗಳಿಂದ "ಸುಧನ್ವ ಕಾಳಗ" ಮತ್ತು "ಕರ್ಣಾರ್ಜುನರ ಕಾಳಗ" ಎಂಬ ಯಕ್ಷಗಾನ ಬಯಲಾಟವು ಅತ್ಯುತ್ತಮ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟಿತು. ಪಂಚಾಯತ್ ಪ್ರೆಸಿಡೆಂಟ್ ಶ್ರೀ ಕೆ ಕೆ. ಶೆಟ್ಟಿ ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರು ಯಕ್ಷಗಾನ ಕಲೆಗೆ ಪ್ರೋತ್ಸಾಹದ ಕ್ರಮ ಮತ್ತು ಅಗತ್ಯತೆಯನ್ನು ತಿಳಿಸಿದರು. ಡಾ. ಕೆ. ಕೆ ಕಲ್ಕೂರರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಂದ ಬಾರಂದಾಡಿ:— ಬೋ. ಎ. ಶಾಲೆಯಲ್ಲಿ ರಕ್ಷಕ ಶಿಕ್ಷಕರ ಸಭೆಯು ತಾ. 22 12—59ರಲ್ಲಿ ವಕೀಲ್ ಶ್ರೀ ಸೂರಪ್ಪ ಶೆಟ್ಟಿ ಕೊಕ್ಕರ್ಣೆ ಬೈಲು ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ರಾಗಿಹಕ್ಲು—ಹೇರೂರುಗ್ರಾಮದ ರಾಗಿಹಕ್ಲು ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ತಾ. 21—12—59ರಲ್ಲಿ ಶ್ರೀ ಶ್ರೀಧರ ಮಣ್ಣಪ್ಪ ಬಿ. ಎ. ಬಿ. ಟಿ. ಇವರಿಂದ ನೆರವೇರಿಸಲ್ಪಟ್ಟಿತು. ಸಭಾಧ್ಯಕ್ಷತೆಯನ್ನು ಶ್ರೀ ಸಂಜೀವರಾವ್ ಆರ್. ಕೆ. ಅವರು ವಹಿಸಿದ್ದರು. ಶ್ರೀ ಬಿ. ಎಸ್. ಹಾಲಾಡಿ ಇವರು ಕೊಟ್ಟ ಬಹುಮಾನಗಳನ್ನು ಅಧ್ಯಕ್ಷರು ವಿತರಣೆಮಾಡಿದರು. ಸಭಿಕರ ಭಾಷಣವಾದ ಮೇಲೆ ಮುಖ್ಯೋಪಾಧ್ಯಾಯ ಶ್ರೀ ಮಹಾಬಲ ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದರು. ಪಂಚಾಯತ್ ಪ್ರೆಸಿಡೆಂಟ್ ಶ್ರೀ ಅಂತಯ್ಯ ಶೆಟ್ಟರು ಧ್ವಜಾರೋಹಣ ಮಾಡಿದ್ದರು.

ಶಾವು (ಮಾಡ್ನೂರು) ಪುತ್ತೂರು ರಾ. ವಿ. ಯೋಜನೆ ವತಿಯಿಂದ ಕಟ್ಟಿಸಲ್ಪಟ್ಟ ಬೋರ್ಡ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ತಾ. 31—12—59 ರಂದು ಪುತ್ತೂರು ಅಸಿಸ್ಟೆಂಟ್ ಕಮಿಶನರ್ ಶ್ರೀ ಎಸ್ ಯು. ಪಿ. ನಾಯರ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ವೆಂಕಟರಮಣ ಗೌಡ ಎಂ. ಎಲ್. ಎ. ಇವರಿಂದ ನೆರವೇರಿಸಲ್ಪಟ್ಟಿತು. ಗ್ರಾಮ ಸೇವಕ ಶ್ರೀ ಬಿ. ಎಲ್. ಆನಂದ ರೈ ಇವರಿಂದ ಪ್ರಾರ್ಥನೆಯಾದ ಮೇಲೆ ಶ್ರೀಗಳಾದ ಗಂಗಾಧರನ್, ಪಿ. ಎನ್. ವೆಂಕಟರಾವ್, ಶ್ರೀನಿವಾಸ ಶೆಣೈ, ಕೆ. ವೆಂಕಟರಾವ್, ಅಂಗಾಜೆ ಗೋಪಾಲ ಕೃಷ್ಣ ಭಟ್ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು.

ಪರಿಯಾಳ ಸಮಾಜ ಸುಧಾರಕ ಸಂಘ, ಉಡುಪಿ—ಇದರ ವಾರ್ಷಿಕ ಮಹಾಸಭೆಯು ತಾ. 29—12—59ರಂದು ಮಹಾತ್ಮಾಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಡಾ. ವಿ. ಎಲ್. ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ ಮತ್ತು ಲೆಕ್ಕಪತ್ರ ಮಂಜೂರಾತಿ ಆದಮೇಲೆ ಶ್ರೀ ಟಿ ಟಿ ಸಾಲಿಯಾನ್ ಇವರು ಅಧ್ಯಕ್ಷರಾಗುಳ್ಳ ಕಾರ್ಯಕಾರೀ ಮಂಡಳಿ ಚುನಾಯಿಸಲ್ಪಟ್ಟಿತು.

ಕುಂದಾಪುರ—ಇಲ್ಲಿಯ ಅಂಚೆ ತಂತಿ ರಿಕ್ರಿಯೇಶನ್ ಕ್ಲಬ್ಬಿನ "ಸಾಂಸ್ಕೃತಿಕ ಮತ್ತು ಕ್ರೀಡೋತ್ಸವ"ವು ಕಳೆದ ತಾ. 20ರಂದು ಬ್ಲೋಕ್ ಡೆವಲಪ್‌ಮೆಂಟ ಆಫೀಸರರಾದ ಶ್ರೀ ಎಸ್ ಎಮ್. ಕುಲಕರ್ಣಿಯರ ಅಧ್ಯಕ್ಷತೆಯಲ್ಲಿ ಸೈಂಟ್ ಮೇರೀಸ್ ಸ್ಕೂಲ್ ಸಭಾಂಗಣದಲ್ಲಿ ಜರಗಿತು ಸಮಾರಂಭವನ್ನು ದ. ಕ. ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಕೆ. ಆರ್. ಸಿ. ಅಯ್ಯಂಗಾರರು ನೆರವೇರಿಸಿದರು. ಕುಂದಾಪುರ ಸಬ್ ಡಿವಿಜನಿನ ಪೋಸ್ಟಲ್ ಇನ್ಸ್‌ಪೆಕ್ಟರರಾದ ಶ್ರೀ ಎ. ಎಂ. ಪ್ರಭು ಇವರು ಸ್ವಾಗತ ಭಾಷಣವನ್ನಿತ್ತ ಬಳಿಕ, ಕಾರ್ಯದರ್ಶಿ ಕೆ ಆರ್. ಕೊತ್ವಾಲರಿಂದ ವರದಿಯ ನಿರೂಪಣೆಯಾಯಿತು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನವಿತರಣೆಯಾದ ಮೇಲೆ ಮನರಂಜನಾ ಕಾರ್ಯಕ್ರಮಗಳಾದುವು. ಅದೇ ದಿನ ಮಹಾಸಭೆ ಸೇರಿ ಶ್ರೀ ಕೆ. ಆರ್. ಪೈಯವರು ಅಧ್ಯಕ್ಷರಾಗುಳ್ಳ ಕಾರ್ಯಕಾರಿ ಮಂಡಳಿ ರಚಿಸಲ್ಪಟ್ಟಿತು.

ಪ್ರಚಾರ ಸಭೆ—ಉಡುಪಿ ಸ್ವತಂತ್ರ ಪಕ್ಷದ ಪ್ರಚಾರ ಸಭೆಯೊಂದು ಕಳೆದ ತಾ. 23 ರಲ್ಲಿ ರಥಬೀದಿಯಲ್ಲಿ ಶ್ರೀ. ಬೈಲೂರು ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಮೊದಲಾದವರಿಂದ ಭಾಷಣಗಳಾದುವು.

ಉಡುಪಿ ಪರ್ಯಾಯ—ಇದೇ ತಿಂಗಳ 18ನೇ ಬೆಳಿಗ್ಗೆ ಉಡುಪಿ ಪರ್ಯಾಯೋತ್ಸವವು ಜರಗಲಿದೆ. 2ವರ್ಷಗಳ ಯಶಸ್ವೀ ಪರ್ಯಾಯವನ್ನು ಮುಗಿಸಿದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಪರ್ಯಾಯ ಪೀಠವನ್ನು ಅಂದು ಬಿಟ್ಟುಕೊಡಲಿರುವರು. ಶ್ರೀ ಪುತ್ತಿಗೆ ಮಠದ ವಿದ್ಯಾವಲ್ಲಭ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀ ಪಾದಂಗಳವರು ಪರ್ಯಾಯ ಪೀಠವನ್ನು ಏರಲಿರುವರು.

ಉಡುಪಿಯ ಸಪ್ತೋತ್ಸವವು ತಾ 9ರಲ್ಲಿ ಪ್ರಾರಂಭವಾಗಿ ತಾ 14ರಂದು ಮಕರಸಂಕ್ರಾಂತಿ ಜಾತ್ರೆಯೂ ಮರುದಿನ ಹಗಲುತ್ಸವವೂ ನೆರವೇರಲಿರುವುವು.

೧೯೬೦ರ
ಅರುಣೋದಯ ಕಾಲದಲ್ಲಿ

ನಮ್ಮೆಲ್ಲ ಹಿತಚಿಂತಕರಿಗೆ ಹಾರ್ದಿಕ
ಶುಭಕಾಮನೆಗಳನ್ನು ಸಮರ್ಪಿಸುತ್ತೇವೆ.

ಸಂಪಾದಕ,
ನವಯುಗ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಪುಸ್ತಕ ವಿಮರ್ಶೆ

ಮಹಾಮಾತೆ ಶ್ರೀ ಶಾರದಾದೇವಿ

ಬರೆದವರು: ಸ್ವಾಮಿ ಪ್ರಣವೇಶಾನಂದ. ಪ್ರಕಾಶಕರು: ಗ್ರಾಮ ಸೇವಾ ಪ್ರತಿಷ್ಠಾನ್, ಮಣಿಪಾಲ, ದ. ಕನ್ನಡ ಪುಟಗಳು: ಡೆಮ್ಮಿ ಅಷ್ಟ ಪತ್ರ್ರಕಾರದ VIII + ೫೨೬. ಬೆಲೆ: ರೂ. ೧೦.

ಭಗವದವತಾರಿಗಳಾದ ಶ್ರೀರಾಮಕೃಷ್ಣ ಪರಮಹಂಸರ ಹೆಸರನ್ನೂ ಚರಿತ್ರೆಯನ್ನೂ ಅರಿಯದವರು ಅಪರೂಪವೆಂದು ಹೇಳಬೇಕು. ಅಂತಹ ಮಹಾತ್ಮರ ಕೈಹಿಡಿದ ಮಡದಿಯಾಗಿ, ಸರ್ವ ಜೀವಜಂತುಗಳಿಗೆ ಶ್ರೀ ಮಾತೆಯಾಗಿ ತಮ್ಮ ಜೀವನವನ್ನು ಜನಹಿತಕ್ಕಾಗಿ ಮೀಸಲಿಟ್ಟು ಸ್ವಾರ್ಥವನ್ನು ತೊರೆದ ಶ್ರೀ ಶಾರದಾದೇವಿಯವರ ದಿವ್ಯ ಅಮರ ಚರಿತ್ರೆಯನ್ನೂ ಕನ್ನಡಿಗರು ಅರಿತುಕೊಳ್ಳುವುದು ಆವಶ್ಯವಾಗಿದೆ. "ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ"ವೆಂಬ ಬೃಹದ್ ಗ್ರಂಥದಲ್ಲಿ ಶ್ರೀರಾಮಕೃಷ್ಣರ ವೃತ್ತಾಂತವನ್ನು ನಾವು ಓದ ಬಹುದಾದರೆ, ಈಗ, ಅಂತಹುದೇ ಆಗಿರುವ ಈ ಪುಸ್ತಕದಲ್ಲಿ ಶ್ರೀಮಾತೆಯವರ ಆದ್ಯಂತ ಚರಿತ್ರೆಯನ್ನು ನಾವು ತಿಳಿದುಕೊಳ್ಳಬಹುದು.

'ಶ್ರೀಮಾತೆ ಶಾರದಾದೇವಿ' ಪುಸ್ತಕವನ್ನು ನೋಡಿದೊಡನೆಯೇ ನಮ್ಮ ಕಣ್ಮನಗಳನ್ನದು ಆಕರ್ಷಿಸುವುದು ಉತ್ತಮ ವರ್ಗದ ಹಾಳು ಕಾಗದದಲ್ಲಿ ಶೋಭನವಾಗಿ ಮುದ್ರಿತವಾಗಿರುವುದು ಮಾತ್ರವಲ್ಲದೇ ಪುಸ್ತಕದ ಗಾತ್ರ, ಮೌಲ್ಯಗಳಿಗನುಸಾರವಾಗಿ ಅದರ ಹೊದಿಕೆಯೂ ಇರುವುದು ಕೈಗೆತ್ತಿಕೊಂಡ ಪುಸ್ತಕವನ್ನು ಮೊದಲಿನಿಂದ ಓದಲು ಪ್ರಾರಂಭಿಸಿದಂತೆ ಆರಂಭದಲ್ಲಿ ತುಸು ವಿಚಲಿತಚಿತ್ತರಾದರೂ ದೃಢಮನಸ್ಸಿನಿಂದ ಮುಂದುವರಿಯುತ್ತ ಹೋದಾಗ ಯಾವನೇ ಒಬ್ಬ ವಾಚಕನು ಕಥಾಪ್ರವಾಹದಲ್ಲಿ ತಾದಾತ್ಮ್ಯವನ್ನು ಹೊಂದಿಬಿಡುವುದು ನಿಸ್ಸಂಶಯ. ಇಂತಹ ಮನಶ್ಚೇತೋಹಾರಿಯೆನಿಸಿದ, ಕನ್ನಡದಲ್ಲಿ ಅದ್ವಿತೀಯವೆನಿಸಿದ ಅಮೂಲ್ಯ ಕೃತಿರತ್ನವಿದಾಗಿದೆ.

ಈಶ್ವರನ ಪುರುಷಾವತಾರಿಗಳಾದ ರಾಮಕೃಷ್ಣರೊಡನೆ ಸೇರುವುದಕ್ಕಾಗಿಯೇ ಶಕ್ತಿದೇವಿಯು ಶ್ರೀ ಶಾರದಾದೇವಿಯಾಗಿ ಈ ಭುವಿಯಲ್ಲಿ ಅವತಾರ ಮಾಡಿದರು. ಪತಿವ್ರತೆಯಾಗಿ, ಮಹಾ ಸಾಧ್ವಿಯಾಗಿ, ಪತಿಯ ಕೈಮನಗಳಿಗನುಕೂಲೆಯಾದ ಸತಿಯಾಗಿ ಬಾಳಿ ಬದುಕಿ, ಪತಿಯ ಸೇವೆಯಲ್ಲಿ ತಲ್ಲೀನಳಾಗಿ ಅವರ ದೇಹಾವಸಾನಾನಂತರದಲ್ಲಿ ಅವರ ಆದೇಶದಂತೆ ಮಹಾ ಮಾತೆಯಾಗಿ ಬಾಳಿದ ಅಪೂರ್ವ ಆದರ್ಶ ಬದುಕು ಶ್ರೀ ಶಾರದಾದೇವಿಯರದು. ಠಾಕೂರ ರಾಮಕೃಷ್ಣರ ಅನಂತ ಶಿಷ್ಯ ಕೋಟಿಯೊಡನೆ ಸಮರಸದಿಂದಿದ್ದು ಲೋಕ ಕಲ್ಯಾಣಕ್ಕಾಗಿ ಬದ್ಧಕಂಕಣೆಯಾದ ಶಾರದಾದೇವಿಯವರು 'ಶ್ರೀಮಾತೆ' ಯೆಂಬ ಮರ್ಯಾದೆಯ ವಚನದಿಂದ ಕರೆಯಲ್ಪಟ್ಟುದರಲ್ಲಿ ಆಶ್ಚರ್ಯವಿಲ್ಲ. ತನ್ನ ಪುರುಷ ಶಿಷ್ಯರೊಡನೆ, ಸ್ತ್ರೀ ಶಿಷ್ಯೆಯರೊಡನೆ, ನಿಕಟ ಸಂಬಂಧಿಕರೊಡನೆ, ದೂರ ದೇಶೀಯರೊಡನೆ ಅವರು ವ್ಯವಹರಿಸಿದ ವರ್ತನೆಯಲ್ಲಿ ಮಾನುಷತೆಯ ಗಂಧ ಸೋಕಿರುವುದಾದರೂ ಅದರೆಡೆಯಲ್ಲಿ ದೇವತ್ವವೇ ನಮಗೆ ದೃಗ್ಗೋಚರವಾಗುತ್ತದೆ. ತಮ್ಮ ಜೀವಿತೇಶರಿಂದ ಉಪದೇಶ ಹೊಂದಿದ ಶ್ರೀಮಾತೆಯವರು ಅದನ್ನು ಅಳವಡಿಸಿಕೊಂಡಿದ್ದಾರೆ; ಯಶಸ್ವಿಯಾಗಿ ಪತಿಯ ಮನೋಭಿಲಾಷೆಯನ್ನು ಈಡೇರಿಸಿದ್ದಾರೆ. "ಭಕ್ತರಿಗೆ ಜಾತಿಯಿಲ್ಲ" ಎಂದು ಜಾತಿಭೇದದ ಬೇಡಿಯನ್ನವರು ಕಿತ್ತೊಗೆದಿದ್ದಾರೆ. ಜಗದಂಬೆಯೆಂಬ ಭಕ್ತಿಶ್ರದ್ಧೆಯನ್ನು ತ್ಯಾಗಿ ಶಿಷ್ಯರಿಂದ ಪಡೆದಿದ್ದಾರೆ. "ಅವರು ಮಾನವೀಯಲ್ಲ, ದೇವಿಯೇ ಆಗಿರುವರು" ಎಂದವರ ತಮ್ಮನಿಂದಲೂ ಪ್ರಶಂಸಿತರಾಗಿದ್ದಾರೆ. ಶ್ರೀಮಾತೆಯವರ ಹೊರಗಿನ ಸನ್ಯಾಸಕ್ಕಿಂತಲೂ ಒಳಗಿನ ವೈರಾಗ್ಯಕ್ಕೆ ಉಚ್ಚತರವಾದ ಸ್ಥಾನವನ್ನು ಕೊಡುತ್ತಿದ್ದರು. ಅವರ ವಾತ್ಸಲ್ಯ ದೇಶ, ಜಾತಿ, ಸಂಪ್ರದಾಯಗಳನ್ನು ಮೀರಿ ನಡೆದಿತ್ತು; ತಾವು ಠಾಕೂರರ ಪದಾಶ್ರಿತರೆಂದೇ ಅವರು ತಿಳಿಯುತ್ತಿದ್ದರು. ಆದರೆ, ಅವರು ಜಗಜ್ಜನನಿಯಾಗಿದ್ದರು; ಸಾವಿರಾರು ಭಕ್ತರಿಗೆ ಪೂಜಿತೆಯಾಗಿದ್ದರು, ಅವರ ದೇಹ ಮನಸ್ಸುಗಳಿಂದ ೨೦ನೆಯ ಶತಮಾನಾರಂಭದಲ್ಲಿ ಒಂದು ಮಹಾಶಕ್ತಿ ಎಚ್ಚರಗೊಂಡು ವಿಭಿನ್ನಾಕಾರವಾಗಿ ಜಗತ್ತಿನ ಕಲ್ಯಾಣದಲ್ಲಿ ತೊಡಗಿತ್ತು. "ನಿನಗೆ ಶಾಂತಿ ಬೇಕಾದರೆ, ಯಾರಲ್ಲಿಯೇ ಆಗಲಿ ದೋಷವನ್ನು ಕಾಣಬೇಡ ದೋಷವನ್ನು ಕಾಣುವುದಾದರೆ ತನ್ನ ದೋಷವನ್ನೇ ಕಾಣಬೇಕು. ಜಗತ್ತನ್ನು ತನ್ನದಾಗಿ ಮಾಡಿಕೊ. ಪರರು ಎನ್ನುವವರು ಯಾರೂ ಇಲ್ಲ; ಜಗತ್ತೆಂಬುದು ನಿನ್ನದೇ ಆಗಿದೆ" ಎಂಬುದೇ ಶ್ರೀ ಮಾತೆಯವರ ಜೀವನದಿಂದ ಕಲಿಯತಕ್ಕ ಪಾಠ.

ವೈರಾಗ್ಯ ನಿಧಿ ಲೋಕ ಕಲ್ಯಾಣಿ ಜಗದಂಬೆ ಶಾರದಾದೇವಿಯವರ ವಿಸ್ತಾರವಾದ ಜೀವನದ ಪ್ರತಿ ಘಟನೆಯನ್ನೂ ನಾನಾ ಮೂಲಗಳಿಂದ ಸಂಗ್ರಹಿಸುವ ಕಾರ್ಯ ಯಶಸ್ವಿಯಾಗಿ ಸಾಗಿರುವುದರಿಂದ, ಈ ಬೃಹದ್ ಗ್ರಂಥವು ಶ್ರೀ ಮಾತೆಯವರ ಅಧಿಕೃತ ಜೀವನ ಚರಿತ್ರೆಯೆನ್ನಬಹುದು. ವಿಷಯ ಗಾಂಭೀರ್ಯವನ್ನು ಕೆಡಿಸದೆ ಮಹಾತ್ಮರ ಜೀವನೇತಿಹಾಸವನ್ನು ಬರೆಯುವವರು ವಿರಳವಾಗಿರುವಾಗ, ಉತ್ತಮ ಶಬ್ದಗಳಲ್ಲಿ ಉನ್ನತ ಹಾಗೂ ಪ್ರೌಢವಾದ ಭಾಷೆಯಲ್ಲಿ ಕನ್ನಡಿಗರಿಗೆ ಸುಸ್ಪಷ್ಟವಾಗಿ ಶ್ರೀ ಮಾತೆಯವರ ಸಂಪೂರ್ಣ ಪರಿಚಯವನ್ನು ಮಾಡಿಕೊಟ್ಟ ಸ್ವಾಮಿ ಪ್ರಣವೇಶಾನಂದರ ಅಗಾಧ ಪರಿಶ್ರಮಕ್ಕೆ ಅವರು ಸಂಪೂರ್ಣ ಕೃತಜ್ಞರಾಗಿರಲೇಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿನವರಿಗೆ ಧರ್ಮಶ್ರದ್ಧೆಯನುಂಟುಮಾಡುವ ತಮ್ಮ ಯೋಜನೆಯಲ್ಲಿ ಹೊಂದಿಸಿಕೊಂಡು ಈ ಗ್ರಂಥವನ್ನು ಪ್ರಕಾಶಪಡಿಸುವ ಗುರುತರ ಉತ್ತರದಾಯಿತ್ವವನ್ನು ಹೊತ್ತ ಗ್ರಾಮಸೇವಾ ಪ್ರತಿಷ್ಠಾನದ ಸಾಹಸವು ಜಯಪ್ರದವಾಗಿದೆಯೆಂಬುದು ನಿರ್ವಿವಾದ. ಪುಸ್ತಕವನ್ನು ಎಲ್ಲರಿಗೂ ನಿಲುಕುವಂತೆ ಬೆಲೆಯಲ್ಲಿ ತುಸು ಇಳಿತವನ್ನು ಬಯಸುವುದು ಸಹಜವಾದರೂ ಗ್ರಂಥದ ಆಕಾರ ಹಾಗೂ ಇಂದಿನ ವೆಚ್ಚಗಳನ್ನು ಗಮನಕ್ಕೆ ತಂದುಕೊಂಡರೆ, ಬೆಲೆಯೇನೂ ಹೆಚ್ಚಲ್ಲವೆಂದೇ ಹೇಳಬೇಕಾಗುತ್ತದೆ. ಇಷ್ಟೊಂದು ಮಹತ್ವಪೂರ್ಣ ಪುಸ್ತಕವನ್ನು ಪ್ರಕಟಿಸುವಾಗ ಅಚ್ಚಿನ ದೋಷಗಳೊಂದೂ ಉಳಿಯದಂತೆ ನೋಡಿಕೊಳ್ಳುವುದರ ಆವಶ್ಯಕತೆಯನ್ನು ಒತ್ತಿಹೇಳಬೇಕಾದ ಒಂದು ದೋಷವನ್ನುಳಿದರೆ, ಎಲ್ಲ ದೃಷ್ಟಿಯಿಂದಲೂ "ಶ್ರೀಮಾತೆ ಶಾರದಾದೇವಿ" ಎಂಬುದು ಉತ್ಕೃಷ್ಟ ಪ್ರಕಟಣೆ; ಶ್ರೀ ಮಾತೆಯವರಲ್ಲಿ ಲವ ಆಸಕ್ತಿಯಿರುವವರೆಲ್ಲರೂ ಅವಶ್ಯ ಓದಬೇಕಾದುದು ಮಾತ್ರವಲ್ಲ ಸಂಗ್ರಹಿಸಬೇಕಾದ ಪುಸ್ತಕವಿದು. ಲೇಖಕರ ಮತ್ತು ಪ್ರಕಾಶಕರ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಕನ್ನಡಿಗರು ಕೊಡುವರೆಂದು ಆಶಿಸುತ್ತೇವೆ.

—ಗೋರಾ.

"Applications are invited for the post of Manager of the Sri Hosamarigudi Temple, Kaup, to reach the undersigned on or before 31—1—1960.

"Salary: Rs. 30—40 with a dearness allowance of Rs. 25/- per mensem.

"Qualification: S. S. L. C. with sound knowledge of English.

"Age: Below 25 years.

"Security upto Rs. 2000/- (two thousand) will have to be furnished if required on appointment.

K. S. Shetty,
President, Board of Trustees.
Sri Hosamarigudi Temple, Kaup.
Kaup, 2—1—1960.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಯಾರಿಸಿ ರಾಜ್ಯದ ಉನ್ನತಿಗಾಗಿ ಪ್ರಯತ್ನಶೀಲರಾಗುವುದೇ ಕಾಂಗ್ರೆಸ್ ಸರಕಾರಗಳ ಧ್ಯೇಯವಾಗಬೇಕಲ್ಲವೇ ಅಧಿಕಾರ ಚಲಾಯಿಸುವುದಲ್ಲ. ಅಧಿಕಾರವನ್ನು ಶಾಶ್ವತವಾಗಿಟ್ಟುಕೊಳ್ಳಬೇಕೆಂಬ ಆಸೆ, ಅಧಿಕಾರ ತಪ್ಪಿಹೋದೀತೆಂಬ ಅಂಜಿಕೆಗಳು ಕಾಂಗ್ರೆಸ್ ಶಾಸಕರಲ್ಲಿ ಎಂದೂ ಇರಬಾರದು ಪಕ್ಷದೊಳಗಿನ ಬಿಕ್ಕಟ್ಟೇ ಈ ಅಭದ್ರಸ್ಥಿತಿಗೆ ಕಾರಣವೆಂಬುವದನ್ನು ನಾವು ಮರೆಯುವಂತಿಲ್ಲವಾದುದರಿಂದ, ಪಕ್ಷದ ಎಲ್ಲ ಮುಖಗಳೂ ಒಂದೇ ದಿಕ್ಕನ್ನು ನೋಡುವಂತೆ ಕಾಂಗ್ರೆಸ್ ಅಧಿನಾಯಕರು ಎಚ್ಚರವಹಿಸುವ ಆವಶ್ಯಕತೆಯನ್ನು ಒತ್ತಿಹೇಳಬೇಕಾಗಿದೆ. ಕಾಂಗ್ರೆಸ್‌ನ ಈ ಅಧಿವೇಶನವು ಗುಂಪು ರಾಜಕೀಯದ ತವರ್ಮನೆಯೆನಿಸಿರುವ ಕರ್ನಾಟಕದಲ್ಲಿ ನಡೆಯುವುದರಿಂದ ಇನ್ನು ಮುಂದಾದರೂ ಇಲ್ಲಿ ಕಾಂಗ್ರೆಸ್‌ನ ಒಳಗಿನ ಪಂಗಡಗಳು ದೂರವಾಗುವುವೆಂದು ಆಶಿಸಬಹುದು.

ಕಳೆದೊಂದು ವರ್ಷದಲ್ಲಿ ಸ್ಫೋಟನಗೊಂಡ ಇನ್ನೊಂದು ಸಂಗತಿಯೆಂದರೆ, ಚೀನದ ಸಂಭಾವಿತಗಿರಿಯ ರಹಸ್ಯ. ಇದರಿಂದಾಗಿ ಭಾರತದ ಆಂತರಿಕ ನೀತಿ ನಡೆವಳಿಕೆಯ ಮೇಲೆ ಮಾತ್ರವಲ್ಲ, ವಿದೇಶ ನೀತಿಯ ಕಡೆಗೂ ಈ ಅಧಿವೇಶನ ಮಹತ್ವವನ್ನು ಸಲ್ಲಿಸುವುದು. ಸಾಮಾನ್ಯವಾಗಿ ಇಂದಿನ ಪರಿಸ್ಥಿತಿಯಲ್ಲಿ ಭಾರತವು ಒಳಗೂ ಹೊರಗೂ ನಿತ್ಯ ಪರೀಕ್ಷೆಯನ್ನು ಕೊಡುವ ಕಾಲ ಸನ್ನಿಹಿತವಾಗಿದೆ ಆದುದರಿಂದ ಇಂತಹ ಸಂಕ್ರಾಂತಿಯ ಕಾಲದ ಈ ಅಧಿವೇಶನವು ತುಂಬ ಮಹತ್ತ್ವಪೂರ್ಣವಾಗಿದೆ.

ಕಾಂಗ್ರೆಸ್ ಅಧಿವೇಶನವು ವೈಭವಪೂರ್ಣವಾಗಿ ನೆರವೇರುವುದು. ಬಹುವರ್ಷಾನಂತರ, ದಕ್ಷಿಣ ಭಾರತೀಯರಲ್ಲೊಬ್ಬರಾದ ಶ್ರೀ ಸಂಜೀವ ರೆಡ್ಡಿಯವರು ಅಧ್ಯಕ್ಷ ಗದ್ದುಗೆಯನ್ನೇರುವರು. ಈ ಬಗ್ಗೆ ಏರ್ಪಡಿಸಿದ್ದ ವಸ್ತು ಪ್ರದರ್ಶನವೊಂದು ಈಗಾಗಲೇ ಉದ್ಘಾಟಿತವಾಗಿದೆ. ಜನ ನೆರೆಯ ತೊಡಗಿದ್ದಾರೆ. ಆದರೆ, ಇಂದು ಉತ್ಸವಕ್ಕೆ ಬಂದ ಜಾತ್ರೆಯ ಮಂದಿಯಂತೆ, ಬಂದು ಸೇರಿ ಅಗಲುವುದಕ್ಕೆ ಪ್ರಾಶಸ್ತ್ಯವಿಲ್ಲ. ವೇದಿಕೆಯ ಮೇಲೆ ಆಗುವ ನಿರ್ಣಯಗಳಿಗೆ ಮಾತ್ರ ಮಹತ್ತ್ವವಿದೆ. ಅಧಿಕಾರಕ್ಕೆ ಅಂಟಿಕೂರುವುದನ್ನೇ ಗುರಿಯಾಗಿರಿಸದೆ ರಾಷ್ಟ್ರಾಭಿವೃದ್ಧಿಯೇ ಧ್ಯೇಯವಾಗಿರುವ ನಿರ್ಣಯಗಳಿಂದಲೂ ಅವುಗಳ ಕಾರ್ಯಾಚರಣೆಯಿಂದಲೂ ಇಂದು ಕಾಂಗ್ರೆಸ್ ಆಳಬಲ್ಲುದು ಎಂಬುದನ್ನು ಸ್ಮರಣೆಯಲ್ಲಿಡಬೇಕು.

—ರಾಶಿ.

ಲಘು ಪರಿಚಯ

೧. ಜ್ವಾಲಾಮುಖಿ—ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ ಪೋಸ್ಟ್, ಹೊಳಲ್ಕೆರೆ ತಾಲ್ಲೂಕ್ ಇವರು ಪ್ರಕಟಿಸಿರುವ ಶ್ರೀ 'ತಿರುಕ'ರ ಈ ಏಕ ಪಾತ್ರಾಭಿನಯ ರೂಪಕದಲ್ಲಿ ನೀಲಧ್ವಜನ ಪತ್ನಿ ಜ್ವಾಲೆಯು ಪತಿಯಿಂದ ತಿರಸ್ಕೃತೆಯಾಗಲು, ಗಂಗಾದೇವಿಯ ಅನುಗ್ರಹದಿಂದ ಅರ್ಜುನನ ಮೇಲೆ ಸೇಡು ತೀರಿಸುವ ಕಥೆಯ ಆಧಾರದಿಂದ ಜ್ವಾಲಾಮುಖಿಯುರಿಸುವ ಘಟನೆಯು ಚಿತ್ರಿತವಾಗಿದೆ; ಉತ್ತಮರೀತಿಯಲ್ಲಿ ಬರೆಯಲ್ಪಟ್ಟ ಹನ್ನೆರಡು ಪುಟಗಳ ಈ ಪುಸ್ತಿಕೆಯ ಬೆಲೆ ೨೫ ನಯೇಪೈಸೆ ಕಡಿಮೆಯೆನ್ನುವಂತಿಲ್ಲ.

೨. ಸಂದರ್ಶನ—ಶ್ರೀ ವಿ ಬಿ ನಾಯಕರು ಬಿಜಾಪುರದಿಂದ ನೂತನವಾಗಿ ಸಂದರ್ಶನವೆಂಬ ವಾರಪತ್ರಿಕೆಯನ್ನು ಸಂಪಾದಿಸಲು ತೊಡಗಿದ್ದಾರೆ ಶ್ರೀ ಟಿ. ಕೆ ನಾಯಕರು ಪ್ರಕಾಶನದ ಭಾರವನ್ನು ಹೊತ್ತಿದ್ದಾರೆ ಪತ್ರಿಕೆಗಳೇ ಇಲ್ಲದಂತಿರುವ ಬಿಜಾಪುರ ಹಾಗೂ ಆಸುಪಾಸಿನ ಕನ್ನಡಿಗರಿಗೆ ಆವಶ್ಯಕವಾಗಿದ್ದ ಒಂದು ಆದರ್ಶ ಪತ್ರಿಕೆಯು ಇಂದವರಿಗೆ ದೊರೆಯುವಂತಾದುದು ಅಭಿನಂದನೀಯ. ಸ್ಥಳೀಯ ಪರಿಸ್ಥಿತಿಗೆ ತಕ್ಕ ಲೇಖನಾದಿಗಳಿಂದ ಕೂಡಿರುವ ಈ ಹೊಸ ಬಂಧುವಿಗೆ ಆದರದ ಸ್ವಾಗತವನ್ನು ಬಯಸುವುದಲ್ಲದೇ ಪತ್ರಿಕೋದ್ಯಮದಲ್ಲಿ ಅನುಭವಿಗಳಾದ ಶ್ರೀ ನಾಯಕರು ಅದನ್ನು ಉನ್ನತಸ್ತರದಲ್ಲಿರಿಸಿ ಯಶಸ್ವಿಗೊಳಿಸುವಲ್ಲಿಯೂ ಶಕ್ತರಾಗುವರೆಂದು ಹಾರೈಸುತ್ತೇವೆ. ಈ ಪತ್ರಿಕೆಯ ವಾರ್ಷಿಕ ಚಂದಾ: ರೂ. ೭. ಬಿಡಿಪ್ರತಿ ರೂ. ೦—೧೨.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ಼ ಕೋರ್ಟಿನಲ್ಲಿ

O. S No. 642/1958
R. E P. 478/1959

ಎಸ್. ರಾಮಚಂದ್ರ ಶ್ಯಾನುಭಾಗ
—ಅರ್ಜಿದಾರ.

ಮತ್ತು

ಪೂವಪ್ಪ ಪೂಜಾರಿ, ತನಿಯೂರು ಮಗ ಹೊಸಬೆಟ್ಟು ಗ್ರಾಮದಲ್ಲಿರುವವ
—ರೆಸಪೊಂಡೆಂಟ.

ಮೇಲ್ಕಾಣಿಸಿದ ರೆಸಪೊಂಡೆಂಟನಿಗೆ, ತಿಳಿಯಪಡಿಸುವುದೇನೆಂದ್ರೆ, ಅರ್ಜಿದಾರನು ಜಪ್ತಿ ಮಾಡಿದ ಹಲಸಿನ ಮರದ ಸೋಸುಗಳು ಏಲಂ ಪಡಿಸಬೇಕಾಗಿ ದಾಕ್ಲು ಮಾಡಿದ ಏಲಂ ಇಸ್ತಿಹಾರಿನ ನೋಟೀಸಿನ ಬಗ್ಗೆ ತಾರೀಕು 21—1—1960ಕ್ಕೆ ಅಮಲ್ ಜ್ಯಾರಿಯು ಇಟ್ಟಿರುತ್ತದೆ. ಆ ದಿವಸ ರೆಸಪೊಂಡೆಂಟನು ಖುದ್ದಿಯಾ ವಕೀಲ ಮುಖಾಂತ್ರ ಹಾಜರಾಗದಿದ್ದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)
K. Narayana Nayak,
Advocate for Petitioner.
Kasaragod 1—1—1960.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ
ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇತಿಹಾಸ ಪೃಷ್ಠ

(೪ನೇ ಪುಟದಿಂದ)

ಮಾನದ ಅವಧಿಯು ಭಾರತದ ಇತಿಹಾಸದಲ್ಲಿಯೇ ಸುವರ್ಣಯುಗವಾಗಿದೆ. ಅಂತೆಯೇ ಕಾಶ್ಮೀರದಲ್ಲಿಯೂ ಕಲೆ ಮತ್ತು ಸಾಹಿತ್ಯದ ಸೃಷ್ಟಿಯ ಕಾಲವಾಗಿದೆ. ಕಾಶ್ಮೀರವು ಈ ಸಮಯದಲ್ಲಿ ಸಮಸ್ತ ಮಧ್ಯ ಏಶ್ಯ ಮತ್ತು ಚೀನಕ್ಕೆ ತನ್ನ ಸಾಂಸ್ಕೃತಿಕ ದೂತನನ್ನು ಕಳಿಸಿತು. ಮತ್ತು ಭಾರತೀಯ ಸಂಸ್ಕೃತಿಯನ್ನು ಪಸರಿಸಿತು. ಹಿಮಾಲಯದಾಚೆಗಿನ ಆಧುನಿಕ ಚೀನೀ ತುರ್ಕಿಸ್ತಾನ, ಖೋತನ, ಟಿಬೇಟು, ಮಂಗೋಲಿಯ, ಚೀನ ಮತ್ತು ಜಪಾನಗಳಿಗೆ ಕಾಶ್ಮೀರದಿಂದ ಧರ್ಮಪ್ರಚಾರಕರು ತೆರಳಿದರು. ನಾಲ್ಕನೆಯ ಶತಮಾನದಲ್ಲಿ ಖೋತನದಲ್ಲಿ ಕಾಶ್ಮೀರಿಗಳು ನೆಲಸ ತೊಡಗಿ ಅದು ಭಾರತದ ವಸಾಹತೂ ಆಗಿತ್ತು. ಕಾಶ್ಮೀರೀ ಬ್ರಾಹ್ಮಣರು ಆಗ ತಮ್ಮ ಶಾಸ್ತ್ರವಿದ್ವತ್ತು ಮತ್ತು ಪ್ರತಿಭೆಗಳಿಂದ ಸುವಿಖ್ಯಾತರಾಗಿದ್ದರು. ಖೋತನದ ಕಾಶ್ಮೀರೀ ಬ್ರಾಹ್ಮಣ ಶಾಖೆಯು ತನ್ನ ಕರ್ತೃತ್ವಕ್ಕೆ ಹೆಸರಾಗಿದೆ. ಟಿಬೇಟದ ಲಿಪಿ ಮತ್ತು ವರ್ಣಮಾಲೆಯನ್ನು ಖೋತನ ವಾಸಿ ಕಾಶ್ಮೀರೀ ಬ್ರಾಹ್ಮಣನೊಬ್ಬನು ಮಾಡಿದನೆಂದು ಇತಿಹಾಸ ಹೇಳುತ್ತದೆ. ಟಿಬೇಟದ ಅನೇಕ ಮಠಗಳ ಗೋಡೆಗಳಲ್ಲೂ ಈ ಸಾಂಸ್ಕೃತಿಕ ವಿನಿಮಯವನ್ನು ಪುಷ್ಟೀಕರಿಸುವ ಶಿಲ್ಪಕಲೆಯು ದೃಗ್ಗೋಚರವಾಗುತ್ತದೆ.

ಬೌದ್ಧ ಧರ್ಮದ ಮಹಾಯಾನ ಶಾಖೆಯ ಪ್ರಸಿದ್ಧದಾರ್ಶನಿಕ ಮತ್ತು ಲೇಖಕನಾದ ಕುಮಾರಜೀವನು ಕಾಶ್ಮೀರಕ್ಕೆ ಸೇರಿದವನು. ಇವನ ತಂದೆ ಕುಮಾರಾಯಣನು ಕಾಶ್ಮೀರದ ಮಂತ್ರಿಪದವನ್ನು ಬಿಟ್ಟು, ಕೂಚ್ ರಾಜ್ಯದಲ್ಲಿ ಹೋಗಿ ನೆಲೆಸಿಂತನು. ಗೋಬಿ ಮರುಭೂಮಿಯ ಉತ್ತರದಲ್ಲಿರುವ ಈ ದೇಶವು ೪—೫ನೆಯ ಶತಮಾನದಲ್ಲಿ ಬೌದ್ಧ ಮತ್ತು ಬ್ರಾಹ್ಮಣ ಧರ್ಮಗಳ ವಿದ್ವಾಂಸರಿಂದ ಕೂಡಿಕೊಂಡಿತ್ತು. ಕುಮಾರಾಯಣನ ಪ್ರತಿಭೆಗೆ ಮುಗ್ಧನಾದ ಕೂಚೆನ ರಾಜನು ಅವನನ್ನು ಗುರುವೆಂದು ಮನ್ನಿಸಿದನು. ಸುಂದರನಾದ ಕುಮಾರಾಯಣನು ರಾಜಕನ್ಯೆಯ ಮನಸ್ಸನ್ನು ತನ್ನತ್ತ ಆಕರ್ಷಿಸಿದನು. ಇವರ ವಿವಾಹವಾಗಿ ಕುಮಾರಜೀವನು ಜನಿಸಿದನು. ಪುತ್ರಜನ್ಮವಾದನಂತರ ರಾಜಕುಮಾರಿ ಜೀವೆಯು ಬೌದ್ಧ ಭಿಕ್ಷುಣಿಯಾಗಿ ಹೋದಳು. ಕುಮಾರಜೀವನಿಗೆ ೯ ವರ್ಷ ಪ್ರಾಯವಾದಾಗ ಆತನನ್ನು ಕರೆದುಕೊಂಡು ಕಾಶ್ಮೀರಕ್ಕೆ ನಡೆದು ಬಿಟ್ಟಳು.

ಕುಶಾಗ್ರಬುದ್ಧಿಯ ಕುಮಾರಜೀವನು ಕಾಶ್ಮೀರದಲ್ಲಿ ಬಂಧುದತ್ತನೆಂಬವನಲ್ಲಿ ಬ್ರಾಹ್ಮಣ ಮತ್ತು ಬೌದ್ಧ ಧರ್ಮದ ಸಾಹಿತ್ಯ ಹಾಗೂ ದರ್ಶನಗಳ ಅಭ್ಯಾಸವನ್ನು ಮಾಡಿದನು. ಅಲ್ಪ ಕಾಲದಲ್ಲಿಯೇ ಅಪರಿಮಿತ ಜ್ಞಾನಗಳಿಸಿದನು. ಮರಳಿ ಕೂಚಿಗೆ ತೆರಳುವಾಗ ಈತನ ವಿದ್ವತ್ತು ನಾಲ್ದೆಸೆಯಲ್ಲಿಯೂ ಪ್ರತಿಧ್ವನಿತವಾಗುತ್ತಿತ್ತು. ಮುಂದಿವನು ಬೌದ್ಧ ದೀಕ್ಷೆ ಸ್ವೀಕರಿಸಿದನು. ೩೮೩ರಲ್ಲಿ ಚೀನದ ತ್ಸಿನ್ ವಂಶದ ಅರಸನು ಕೂಚದ ಮೇಲೆ ದಾಳಿ ಮಾಡಿ ಅದನ್ನು ಗೆದ್ದುಕೊಂಡನು. ಆಗ ಸಂಪ್ರದಾಯದಂತೆ ಕುಮಾರ ಜೀವನು ಚೀನೀಯರ ವಶನಾಗಿ, ತನ್ನ ಪ್ರತಿಭೆಯಿಂದ ಪ್ರಭಾವಿತನಾದ ಅರಸನಿಂದ ರಾಜಗುರುವೆಂದು ಸ್ವೀಕೃತನಾದನು. ೪೧೩ರ ವರೆಗೆ ಚೀನದಲ್ಲಿದ್ದು ಆತನು ಅದೇ ವರ್ಷ ಮೃತ್ಯುಮುಖನಾದನು. ಸಂಸ್ಕೃತ ಮತ್ತು ಪಾಲಿ ಭಾಷೆಯ ಅನೇಕ ಗ್ರಂಥಗಳನ್ನು ಈತ ಚೀನೀ ಭಾಷೆಗೆ ಅನುವಾದಿಸಿದ್ದನು. ಚೀನ ಮತ್ತು ಜಪಾನುಗಳ ಅನೇಕಾನೇಕ ವಿದ್ವಾಂಸರು ಇವನ ಶಿಷ್ಯರಾದರು. ಚೀನದಲ್ಲಿ ಬೌದ್ಧ ಧರ್ಮ ಹರಡುವುದಕ್ಕೆ ಕುಮಾರ ಜೀವನೂ ಒಬ್ಬ ಪ್ರಬಲ ಕಾರಣ ಪುರುಷನು. ಈ ಮತಪ್ರಚಾರದ ಇತಿಹಾಸವನ್ನು ಬರೆಯುವ ಸಮಯದಲ್ಲಿ ಚೀನೀಯ ವಿದ್ವಾಂಸರು ಇವನ ಹೆಸರನ್ನು ಮರೆಯಲಾರರು. ಅನಂತಪ್ರೇಮ ಮತ್ತು ಕರುಣೆಯ ಪ್ರತೀಕನಾದ ಕುಮಾರಜೀವನನ್ನು ಅವರೆಂತು ಮರೆಯಬಲ್ಲರು? ಈತನ ಪ್ರತಿಭೆಯ, ಜ್ಞಾನದ ಮತ್ತು ಅಪಾರ ವಿದ್ವತ್ತಿನ ಪ್ರಕಾಶಬೀರದ ಬೌದ್ಧವರ್ಗ ಚೀನದಲ್ಲಿರಲಾರದು.

ಬುದ್ಧಯಶನೆಂಬ ಇನ್ನೊಬ್ಬ ಕಾಶ್ಮೀರೀ ಬ್ರಾಹ್ಮಣನು ಈತನ ಸಮಕಾಲೀನನಾಗಿದ್ದು ಮಧ್ಯಏಶ್ಯದಲ್ಲಿ ಗೌರವಿಸಲ್ಪಡುತಿದ್ದನು. ವಿದ್ಯಾಧ್ಯಯನಾನಂತರ ಈತನು ಕಾಶಗಂಕ್ಕೆ ತೆರಳಿದನು. ಅಲ್ಲಿ ಬುದ್ಧಭಿಕ್ಷು ಸಮ್ಮೇಳನವೊಂದು ನಡೆಯುತಿತ್ತು. ಈತನೂ ಭಿಕ್ಷುವಾಗಿದ್ದನು. ಕಾಶಗರದ ರಾಜನು ಇವನ ಪಾಂಡಿತ್ಯ ಮತ್ತು ನಿಸ್ಪೃಹ ಜೀವನದಿಂದ ಶ್ರದ್ಧಾವಂತನಾಗಿ ಆತನನ್ನು ತನ್ನ ಮನೆಯಲ್ಲಿಯೇ ಇರಿಸಿಕೊಂಡುಬಿಟ್ಟನು. ಕುಮಾರಜೀವ-ಬುದ್ಧಯಶರು ಇಲ್ಲಿಯೇ ಮೊತ್ತಮೊದಲು ಪರಸ್ಪರರನ್ನು ಭೆಟ್ಟಿಯಾದರು.

ಅಲ್ಲಿ ಹತ್ತು ವರ್ಷವುಳಿದು ಕೂಚಿಗೆ ತೆರಳಿದ್ದ ಬುದ್ಧಯಶನು ಕುಮಾರಜೀವನನ್ನು ಭೆಟ್ಟಿಯಾಗಲು ಚೀನದ ದಾರಿ ಹಿಡಿದನು. ಕೆಲವರ್ಷ ಇವರಿಬ್ಬರೂ ಜತೆಯಾಗಿ ಕೆಲಸಮಾಡಿದರು. ಮುಂದೆ, ಕುಮಾರಜೀವನು ಸಾವನ್ನಪ್ಪಿದ ಮೇಲೆ ಬುದ್ಧಯಶನು ಕಾಶ್ಮೀರಕ್ಕೆ ಮರಳಿದನು. ಈತನು ಪ್ರಕಾಂಡ ಪಂಡಿತನಾಗಿದ್ದುದಲ್ಲದೆ ದೃಢಸಂಕಲ್ಪಿಯೂ ನಿರ್ಲಿಪ್ತವೃತ್ತನೂ ಆಗಿದ್ದನು. ಹಲವಾರು ಅರಸರು ಈತನ ಮೇಲೆ ಶ್ರದ್ಧಾಭಾವವನ್ನಿಟ್ಟುಕೊಂಡಿದ್ದರು. ಆದರೆ, ಯಾವನೇ ರಾಜ ಅಥವಾ ಶ್ರೀಮಂತರಿಂದ ಉಡುಗೊರೆಗಳನ್ನು ಸ್ವೀಕರಿಸುವುದಕ್ಕೆ ಈತನ ಮನಸ್ಸು ಸರ್ವಥಾ ಸಮ್ಮತಿಸಿರಲಿಲ್ಲ.

ಆ ಕಾಲದಲ್ಲಿ ಮಧ್ಯ ಏಶಿಯಾದಲ್ಲಿದ್ದ ಭಾರತೀಯ ವಸಾಹತುಗಳಲ್ಲಿ ಹೆಚ್ಚಿನವು ಕಾಶ್ಮೀರ ಭಿಕ್ಷುಗಳದ್ದಾಗಿತ್ತು. ಬೌದ್ಧರು ಮಾತ್ರವಲ್ಲದೆ ಭಾಗವತ ಮತ್ತು ಶೈವ ಪಂಥಾವಲಂಬಿಗಳೂ ಅಲ್ಲಿ ಧಾರಾಳವಾಗಿ ನೆಲಸಿರುತಿದ್ದರು.

ಕುಮಾರಜೀವನನಂತರ ಈ ಭಾರತೀಯ ಸಂಸ್ಕೃತಿಯ ಪ್ರಸಾರವನ್ನು ಗುಣವರ್ಮನೆಂಬವನು ಮುಂದುವರಿಸಿದನು. ಈತನು ಕಾಶ್ಮೀರೀ ರಾಜಮನೆತನದಲ್ಲಿ ಹುಟ್ಟಿದ್ದನು. ಆದರೆ, ವಿರಕ್ತನಾಗಿ ಸಮಸ್ತ ರಾಜಕೀಯ ವೈಭವವನ್ನು ಪರಿತ್ಯಜಿಸಿ, ಬೌದ್ಧ ಭಿಕ್ಷುವಾದನು. ರಾಜನ ಮೃತ್ಯುವು ಖನಾದನಂತರ ಸಂಚಿವ ಸಂಪುಟವು ಈತನನ್ನು ಗದ್ದುಗೆಗೇರಿಸಲು ಪ್ರಯತ್ನ ನಡೆಸಿತು; ಆದರೆ, ಮೂವತ್ತು ವರ್ಷದ ರಾಜಕುಮಾರನು ಅರಣ್ಯಕ್ಕೆ ತೆರಳಿದನು; ಮುಂದೆ ಕೆಲಕಾಲಾನಂತರ ಧರ್ಮಪ್ರಚಾರಾರ್ಥವಾಗಿ ಲಂಕೆಗೆ ಹೋದನು. ಲಂಕೆಯಿಂದ ಜಾವಾದಲ್ಲಿ ಕಾಲಿಟ್ಟು, ಅಲ್ಲಿನ ರಾಜ ಮತ್ತು ರಾಜಮಾತೆಯರಿಗೆ ದೀಕ್ಷೆಯಿತ್ತನು. ಇದೇ ಸಮಯದಲ್ಲಿ ಪರಕೀಯರು ಜಾವಾದಲ್ಲಿ ಆಕ್ರಮಣಮಾಡಿದರು. ಅಹಿಂಸಾ ವ್ರತಧಾರಿ ರಾಜನು ಯುದ್ಧಕ್ಕೆ ಹಿಂಜರಿಯಲು ಗುಣವರ್ಮನು ಆತನ ಸಂಶಯ ನಿವಾರಣೆ ಮಾಡಿದುದರಿಂದ, ಅರಸನು ಹೋರಾಡಿ ಶತ್ರುಗಳನ್ನು ಸೋಲಿಸಿಬಿಟ್ಟನು.

ಗುಣವರ್ಮನ ಬೌದ್ಧಿಕ ಮತ್ತು ಆಧ್ಯಾತ್ಮಿಕ ಬಲಗಳು ಆಗ್ನೇಯ ಏಶ್ಯದಲ್ಲಿ ಹರಡಿದುವು. ಇವನ ಯಶಸ್ವೀ ಪ್ರಯತ್ನಗಳಿಂದಲೇ ಜಾವವು ಬೌದ್ಧಮತವನ್ನು ಸ್ವೀಕರಿಸಿತು. ಮಹಾಯಾನರು ಇವನನ್ನು ಬುದ್ಧನೆಂದೇ ಗೌರವಿಸುತಿದ್ದರು. ೪೨೪ರಲ್ಲಿ ಈತನನ್ನು ಚೀನಕ್ಕೆ ಕರೆತರಲು ಚೀನೀ ರಾಯಭಾರಿಯು ಜಾವಕ್ಕೆ ಬಂದನು. ಈ ಆಮಂತ್ರಣವನ್ನು ಸ್ವೀಕರಿಸಿ ಹಡಗವೊಂದರಲ್ಲಿ ಕುಳಿತು ಹಲವಾರು ಸ್ಥಳಗಳನ್ನು ಸಂದರ್ಶಿಸಿ, ೪೩೧ರಲ್ಲಿ ನಾನ್‌ಕಿಂಗ್‌ಅನ್ನು ತಲಪಿದನು. ಈತನನ್ನು ಒಂದು ಬೌದ್ಧ ಮಠದಲ್ಲಿ ಇರಿಸಲಾಯಿತು. ಚೀನೀಯರೆಲ್ಲರೂ ದ್ವಿತೀಯ ಬುದ್ಧನೆಂದಿವನನ್ನು ಗೌರವಿಸಿದರು. ಒಂದು ವರ್ಷಾನಂತರವೇ ಗುಣವರ್ಮನು ದೇಹತ್ಯಾಗಮಾಡಿದರೂ, ಈ ಅಲ್ಪಾವಧಿಯಲ್ಲಿಯೇ ಈತನು ಹನ್ನೊಂದು ಸಂಸ್ಕೃತ ಗ್ರಂಥಗಳನ್ನು ಚೀನೀ ಭಾಷೆಗೆ ಅನುವಾದಮಾಡಿ, ಚೀನೀಯರ ಗೌರವಾದರಗಳನ್ನು ಪಡೆದಿದ್ದನು.

ಸಂಸ್ಕೃತಿಯ ವಿನಿಮಯವು ಕ್ರಿ. ಶ. ೫ರಿಂದ ೧೦ನೆಯ ಶತಮಾನಗಳ ನಡುವೆ ಚೀನಾ-ಭಾರತಗಳ ನಡುವೆನಡೆದಿರುವಂತೆ ಮತ್ತೆಲ್ಲಿಯೂ ಆಗಿಲ್ಲ. ಚೀನೀಯ “ತ್ರಿಪಿಟಕ”ದತ್ತ ಗಮನಹರಿಸಿದರೆ, ಈ ವಿಷಯವು ನಮಗೆ ಸುಸ್ಪಷ್ಟವಾಗುವುದು. ಈ ಸಂಸ್ಕೃತಿ ವಿನಿಮಯದ ಮಹಾಕಾರ್ಯವನ್ನು ಸಾಧಿಸಿದ ಶ್ರೇಯಸ್ಸು ಕಾಶ್ಮೀರಿಯರಿಗೆ ಅವಶ್ಯ ಸಲ್ಲಬೇಕು. ಪ್ರಾಚೀನ ಕಾಶ್ಮೀರದ ಚಿರಕಾಲ ವಂದನೀಯ ಕುಮಾರಜೀವ, ಬುದ್ಧಯಶ ಮತ್ತು ಗುಣವರ್ಮ ಈ ತ್ರಿಮೂರ್ತಿಗಳ ಪ್ರಯತ್ನ ಸಾಹಸಗಳೇ ಈ ವಿನಿಮಯಕ್ಕೆ, ಹೇತು ಮತ್ತು ಕರಣಗಳಾದುವೆಂಬುದನ್ನು ಮರೆಯಬಾರದು.

— ಗೋರಾ.

In the Court of the Subordinate Judge of South Kanara.

O. S No. 41 59 II Adl.

Thejappa Hegde— Plaintiff.

Vs.

Sheenappa Hegde & Others— Defendants.

6th Deft: Shantharama Hegde. Son of Jalaja, Residing in Nadibettu of Shirva Village of Udipi Taluk.

Please take notice that the Plaintiff above named has filed the above suit for partition and for other reliefs and the same is posted to 22—1—1960. If you fail to appear on that day, the above suit will be decided in your absence.

By order of the Court.

(Sd) S. Venkat Rao,
Vakil for Plaintiff.

Mangalore, 23—12—1959.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕಿ: ಜಿನೇ ಇಯೇಟಿನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ — ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುವನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ.

ಕಾಸರಗೋಡು ಪ್ರಶ್ನೆ

(೩ನೇ ಪುಟದಿಂದ)

ನ್ನನ್ನು ದುರಸ್ತಿ ಕೊಳ್ಳುತ್ತಿದೆ. ಮುಂದೆ ಕೇರಳ ಸರಕಾರಕ್ಕೊಳಪಟ್ಟ ರಸ್ತೆ ಜಲ್ಲಿ ಕಲ್ಲುಗಳಿಂದ ಹಲ್ಲು ತೆಗೆದಿದೆ; ಹೊಂಡ—ಕೊಂಡವಾಗಿ, ಧೂಳೀ ಸ್ನಾನ ಮಾಡಿ ಸುತ್ತ ವಾಹನಗಳಿಗೆ ನೃತ್ಯಗತಿಯನ್ನು ತಂದು ಕೊಟ್ಟಿದೆ. ಕೇರಳ ಸರಕಾರಕ್ಕೊ ಭಯವಿರಬೇಕು. ಇಂದಿಲ್ಲ ನಾಳೆ ಕೈ ಬಿಡುವ ಕಾಸರಗೋಡಿಗೇಕೆ ಒಪ್ಪ–ಓರಣ ಎಂದಿರಬೇಕು. ಅವರನ್ನೇ ನೆಚ್ಚದ ಜನತೆಯನ್ನು ಅವರಾದರೂ ಯಾಕೆ ನೋಡಿಕೊಂಡಾರು? ಮಲತಾಯಿ—ಮಲಮಕ್ಕಳ ಸಂಬಂಧ ಕೇರಳ—ಕಾಸರಗೋಡಿನದು.

ರಸ್ತೆಯನ್ನು, ಆಡಳಿತವನ್ನು ಮಾತ್ರ ಹದಗೆಡಿಸಬಲ್ಲದು ಸರಕಾರ. ಆದರೆ ಜನಮನವನ್ನು ಅದು ಥಕ್ಕನೆ ಗೆಲ್ಲಲಾರದು; ಬದಲಿಸಲೂ ಆರದು. ಬದಿಯಡ್ಕ ಸೇರಿ ನವಜೀವನ ಹೈಸ್ಕೂಲಿನಲ್ಲಿ ನೆರೆದ ಸಭೆಯನ್ನು ಸೇರಿದೆವು. ಆ ಸಂಸ್ಥೆಯ ಸ್ಥಾಪಕರು ಡಾ.ಪಿ. ಯಸ್.ಶಾಸ್ತ್ರಿಗಳು ಗದ್ಗದ ಕಂಠದಿಂದ ಸ್ವಾಗತಿಸಿದರು. ನಮ್ಮನ್ನು ನೀವು ತೊರೆದರೂ ನಿಮ್ಮನ್ನು ಮುಂಚಿನ ಪ್ರೀತಿಯಿಂದಲೇ ಸ್ವಾಗತಿಸುತ್ತೇವೆಂದರು. ತಮ್ಮನ್ನೂ ಹಾಗೆ ತೆರೆದ ತೋಳಿನಿಂದ ತನ್ನ ಮಡಲಿಗೆ ಕನ್ನಡ ತಾಯಿ ಕರೆದುಕೊಳ್ಳುವಂತಾಗಲಿ–ಎಂದರು. ಮಾತಿಗೆ ಮೀರಿದ ಅನುಕಂಪ, ಸ್ಪಂದನಗಳ ನವಿರಿನಿಂದ ಹಿತವಾದ ಆ ನೋವು ನಮ್ಮನ್ನು ವಿಸ್ಮಿತಗೊಳಿಸಿತು. ಸಭೆಯಲ್ಲೇನಾಯಿತೋ–ತಿಳಿಯದು. ಆಂತರಿಕವಾದ ಒಂದು ಪ್ರಜ್ಞಾ ಲೋಲುಪತೆಯಲ್ಲಿ ನಾವು ಮಿಂದಂತಾಗಿತ್ತು. ಕನ್ನಡದ ವರಕವಿಯನ್ನು ಕಾಣಲು ಬಂದ ರಸಿಕರಿಗೆ ಗೋಡೆಗಳ ಮೇರೆ ಕೇರಳದಗಡಿಯಂತೆ ಚುಚ್ಚಿತು. ಕಿಕ್ಕಿರಿದ ಆ ಮಕ್ಕಳ ಕಿಲಕಿಲ ನಿನಾದ, ಆ ಹಸನ್ಮುಖ, ಆರ್ದ್ರ ನೋಟ ನಮ್ಮನ್ನು ಕನಸಿನೂರಿಗೇ ಕೊಂಡುಹೋದ ಅನುಭವವಾಯಿತು. ಈ ಜನ ಈ ಮಕ್ಕಳು, ಈ ನೆಲ, ಈ ವನ–ಜನ ಕೇರಳದ್ದು ಏಕಾದೀತು?

ಅಂದೇ ಸಂಜೆ ಕೇರಳ ಸರಕಾರ ಕಾಸರಗೋಡು ಜನತೆಯನ್ನು ರಮಿಸಲು ಕೊಡಮಾಡದ ಸರಕಾರೀ ಕಾಲೇಜಿನಲ್ಲಿ ಸಭೆ ಪ್ರಿನ್ಸಿಪಾಲ್ ಮೆನನ್‌ರು ಬೇಂದ್ರೆಯವರನ್ನು ಉಪೇಂದ್ರನೆಂದು ಕರೆದು ಸ್ವಾಗತಿಸಿದರು. ಆ ನೆರೆದ ಸಭೆಯಲ್ಲಿ ಮಲೆಯಾಳೀ ಪಾಠಶಾಲೆಯೂ ಇದ್ದಿಲ್ಲ. ಸ್ವತಃ ಮಲೆಯಾಳೀ ಪ್ರಿನ್ಸಿಪಾಲ್ ಮೆನನ್‌ರು ಯಾವುದೋ ಅವಸರದ ಕೆಲಸಕ್ಕೆ ಮಧ್ಯೆ ಹೋಗಬೇಕಾಗುತ್ತದೆಂದು ಮುಂಚೆಯೇ ಹೇಳಿಕೊಂಡವರು ಮರೆತು ಸಭೆ ಮುಗಿದಾದ ಮೇಲೆ ಎಚ್ಚೆತ್ತರು. ಅವರು ಕವಿವಾಣಿಯನ್ನು ಕೇಳುತ್ತಿದ್ದರೋ—ನೆರೆದ ತಮ್ಮ ವಿದ್ಯಾರ್ಥಿಗಳ ತನ್ಮಯತೆಯನ್ನು ನೋಡುತ್ತಿದ್ದರೋ ತಿಳಿಯದು. ಅವರಿಗೂ ಅಂದು ಕನ್ನಡತಾಯಿಯ ದರ್ಶನವೇ ಆಗಿರಬೇಕು.

ಸ್ವಾತಂತ್ರ್ಯಪೂರ್ವದ ನಾಲ್ಕೇ ತಿಂಗಳ ಮೊದಲು ಅದೇ ಕಾಲೇಜಿರುವ ಆವರಣದಲ್ಲಿ ಸೇರಿದ ಕನ್ನಡಸಾಹಿತ್ಯ ಸಮ್ಮೇಳನ, ಕರ್ನಾಟಕ ಏಕೀಕರಣ ಪರಿಷತ್ತುಗಳ ಅಧಿವೇಶನಗಳ ನೆನಪು ಕೆದರಿತ್ತು ನನಗೆ. ಅಂದು ವೇದಿಕೆಯ ಮೇಲೆ ನಡೆದ ತಾಯಿ ಪೂಜೆ ಇಂದು ಫಲಿಸದಿದೆಯಲ್ಲಾ—ಎಂಬ ಕಳವಳವಾಯಿತು. ಕಾಸರಗೋಡಿನ ಜನತೆ ಕೇರಳಕ್ಕೆ ದೂಡಲ್ಪಟ್ಟ ನಂತರ ನಡೆಸಿದ ಸವಿನಯ ಕಾಯ್ದೆಭಂಗದ ಕತೆಯನ್ನು ಮಿತ್ರರು ಹೇಳುತ್ತಿದ್ದರು. ಎಲ್ಲಾ ಕನಸು—ಕನಸು!

ಕಾಂಗ್ರೆಸಿನ ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿ ಅಂದೇ ಮಂಗಳೂರಿಗೆ ಬಂದಿದ್ದರು. ಕಾಸರಗೋಡಿನ ಕರ್ನಾಟಕ ಏಕೀಕರಣ ಸಮಿತಿಯ ಮುಂದಾಳುಗಳು ಅವರನ್ನು ಕಾಣಲು ನಿಯೋಗ ಹೋಗಿದ್ದರು. ಶ್ರೀಮತಿ ಇಂದಿರಾ ನಿಯೋಗದವರನ್ನು ಸರಿಯಾಗಿ ಕಾಣಲಿಲ್ಲ. ಕೇರಳದಿಂದ ಕಾಸರಗೋಡನ್ನು ಬಿಡಿಸದಿದ್ದರೆ ಬರುವ ಚುನಾವಣೆಯಲ್ಲಿ ಏಕೀಕರಣ ಸಮಿತಿ ಕಾಂಗ್ರೆಸ್ಸನ್ನು ಎದುರಿಸುತ್ತದೆ—ಎಂದು ಹೇಳಿ ಬಂದರು—ಶ್ರೀ ಕಕ್ಕಿಲ್ಲಾಯ ಪ್ರಭೃತಿಗಳು.

ಮರುದಿನ ಮಹಾಜನ ಸಂಸ್ಕೃತ ಕಾಲೇಜಿಗೂ, ಪೆರ್ಲದ ಹೈಸ್ಕೂಲಿಗೂ ಭೆಟ್ಟಿಕೊಟ್ಟು ಸಂಜೆ ಎಡನೀರು ಮಠದಲ್ಲಿ ಸೇರಿದ ಕನ್ನಡ ಮುಂದಾಳುಗಳ ಸಭೆಯನ್ನು ಹೊಕ್ಕೆವು. ಅಲ್ಲಿ ಶ್ರೀ ಬೇಂದ್ರೆಯವರಿಗೆ ಶ್ರೀಗಳಿಂದ ಮಾನಪತ್ರದ ಸನ್ಮಾನವಾಯಿತು.

ಅಲ್ಲಿ ನೆರೆದ ಕಾಸರಗೋಡಿನ ಕರ್ನಾಟಕರೂ ಏಕೀಕರಣ ಸಮಿತಿಯ ಸಭೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸಂದರ್ಶನದ ಫಲಶ್ರುತಿ ಹೇಳಲಾಯಿತು. ಹಿಂದೆ ಅದೇ ನೆಲದಿಂದ, ಅದೇ ಜನತೆಯಿಂದ ಕಾಂಗ್ರೆಸ್ಸಿಗೆ ಅನೇಕಬಾರಿ ಚುನಾಯಿತರಾದ ಇಂದಿನ ಪಿ. ಯಸ್. ಪಿ. ನಾಯಕ ಕೆ ಆರ್. ಕಾರಂತರು ಈಗಿನ ಕಾಂಗ್ರೆಸ್ ನೀತಿಯನ್ನು ಖಂಡಿಸುತ್ತಾ ಪ್ರಜಾಪ್ರಭುತ್ವ ಯಾರಪ್ಪನ ಸೊತ್ತಲ್ಲ-ಎಂದು ಘೋಷಿಸಿದರು.

ಕಾಸರಗೋಡಿಗೆ ಈಗ ಕಾಂಗ್ರೆಸ್-ಕಮ್ಯೂನಿಸ್ಟ್ ಎಲ್ಲಕ್ಕೂ ಅಷ್ಟೆ. ಒಂದಲ್ಲ ಒಂದು ಬಗೆಯಿಂದ ದ್ರೋಹಬಗೆದ ಪಕ್ಷಗಳವು. ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗ. ಇದನ್ನೊಪ್ಪದ ಯಾವ ಪಕ್ಷವೂ ನಮಗೆ ಅಪಥ್ಯ. ಬರುವ ಚುನಾವಣೆಯಲ್ಲಿ ಕಾಸರಗೋಡಿನ ಜನತೆಯ ಅಭಿಪ್ರಾಯವನ್ನು ಇನ್ನೊಮ್ಮೆ—ಮತ್ತೊಮ್ಮೆ ಸಾರುವುದಕ್ಕಾಗಿಯೇ ಕರ್ನಾಟಕ ಪ್ರಾಂತೀಕರಣ ಸಮಿತಿಯಿಂದ ಈ ಭಾಗದ ಎರಡು ಸ್ಥಳಗಳಿಗೆ ಉಮೇದುವಾರರನ್ನು ನಿಲ್ಲಿಸಿ ಕಣಕ್ಕಿಳಿಯುವುದೆಂದು ಗೊತ್ತುವಳಿ ಸ್ವೀಕೃತವಾಯಿತು. ಕನ್ನಡ ಜಿಲ್ಲೆಯ ಜತೆಗೆ ಈ ತಾಲೂಕಿನ ಜನತೆಗಿರುವ ಸಂಬಂಧವೇ ಮುಖ್ಯ. ಮಂಗಳೂರು ಪೇಟೆಗೆ ಹೋಗಿಬರಲು ಇಂದಿರುವ ಅಡ್ಡಿ ಆತಂಕಗಳು ಕೇರಳದಿಂದ ಸಂಬಂಧ ಕಡಿದುಕೊಳ್ಳದೆ ದೂರಾಗಲಾರವು. ಇದು ಭಾಷೆಯದೊಂದೇ ಪ್ರಶ್ನೆಯಲ್ಲ. ಜನಪದದ ಬದುಕಿನ ದೈನಂದಿನ ಪ್ರಶ್ನೆಯೆಂದು ಮಲೆಯಾಳಿ ಮಾತೃಭಾಷೆಯ ಪ್ರಜಾಧುರೀಣರಿಬ್ಬರು ಕರ್ನಾಟಕದೊಡನೆ ಒಂದಾಗುವ ಅನಿವಾರ್ಯ ಪ್ರಸಂಗವನ್ನು ಮನಮುಟ್ಟುವಂತೆ ವಿವರಿಸಿದರು.

ಅಂತೂ ಕಾಸರಗೋಡು ಜನತೆ ತನ್ನ ಬದುಕಿನ ಪ್ರಶ್ನೆಯನ್ನೆದುರಿಸಲು ಬದ್ಧಕಂಕಣವಾಗಿದೆ. ಕೇರಳ ಚುನಾವಣೆಯ ಕಣಕ್ಕಿಳಿದು ತನ್ನ ಸತ್ವವನ್ನು ತೋರಿಸುತ್ತದೆ. ಕರ್ನಾಟಕ ಪ್ರಾಂತೀಕರಣ ಪಕ್ಷಕ್ಕೆ ಜಯನಿಶ್ಚಿತ. ಯಾವ ರಾಜಕೀಯ ಪಕ್ಷದ ಡೊಂಬರಾಟವೂ ಜಾಗೃತ ಜನತೆಯ ನಿಚ್ಚಳವಾದ ನಂಬುಗೆಯನ್ನು ಕೆಡಿಸಲಾರದು. ಕೆಲವೇ ವ್ಯಕ್ತಿಗಳ ಸ್ವಾರ್ಥಸಾಧಕ ಪ್ರವೃತ್ತಿಯಿಂದ ಜನತೆಯು ಸುಖಮಣ್ಣು ಪಾಲಾಗಲಾರದು.

ಮುಂಚೆಯೇ ಹೇಳಿದಂತೆ ಕಾಸರಗೋಡಿನ ಪ್ರಶ್ನೆ ಕೇವಲ ಕಾಸರಗೋಡಿನದಲ್ಲ; ಬರೇ ಕನ್ನಡ ಜಿಲ್ಲೆಯದಲ್ಲ; ಇಡೀ ಕರ್ನಾಟಕದಜೀವಾಳದ ಪ್ರಶ್ನೆ. ಇಂದು ಮೈಸೂರು ರಾಜಕೀಯದಲ್ಲಿ ನಡೆದ ಆತ್ಮಘಾತಕ ಪ್ರವೃತ್ತಿ ಕಾಸರಗೋಡನ್ನು ಅಲಕ್ಷಿಸಿದರೆ ಮುಂದೆ ಬಹುದೊಡ್ಡ ದಂಡ ತೆರಬೇಕಾಗುತ್ತದೆ. ಆದರೆ ಕಾಸರಗೋಡಿನ ಹೋರಾಟ ಬರೀ ರಾಜಕೀಯ ಪಕ್ಷಗಳ ಗತ್ತುಗಾರಿಕೆಯ ಹೋರಾಟವಲ್ಲ. ಅದು ಕನ್ನಡ ಜನತೆಯ ಬದುಕಿನ ಹೋರಾಟ. ಕರ್ನಾಟಕವನ್ನಾಳುವ ಕಾಂಗ್ರೆಸ್ ಪಕ್ಷ ಇಂದಾದರೂ ಕಣ್ತೆರೆದು ನಮ್ಮ ಬಂಧುಗಳನ್ನು ಕರೆದುಕೊಳ್ಳುವಂತಾಗಲಿ. ಸರಕಾರೀ ಮಟ್ಟದ ಮೂಕತೆಯಲ್ಲಿಯ ಆಸಕ್ತಿ ತೋರುವಂತಾಗಲಿ. ಇಡೀ ಕನ್ನಡನಾಡಿನ ಜೀವಾಳದ ಗಡಿಸಮಸ್ಯೆಯನ್ನು ಬಿಡಿಸಲು ನಿಶ್ಚಯದ ಧೋರಣೆ ಇಂದಾದರೂ ಕರ್ನಾಟಕ ರಾಜ್ಯಸರಕಾರಕ್ಕೆ ಬರುವಂತಾಗಲಿ. ನಾಳೆ ಕರ್ನಾಟಕದ ರಾಜಧಾನಿಯಲ್ಲೇ ನೆರೆಯುವ ಅಖಿಲಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಗಡಿಪ್ರಶ್ನೆ ಇತ್ಯರ್ಥವಾಗಲಿ.

ಇಲ್ಲವಾದರೆ ನಿನ್ನೆ ಕಾಸರಗೋಡನ್ನು ಕಳೆದುಕೊಂಡಂತೆ ನಾಳೆ ಬೆಳಗಾವಿಯನ್ನೂ ಕಳೆದುಕೊಂಡು ಸುತ್ತಲಿಂದ ಹತ್ತಿಕ್ಕಲ್ಪಟ್ಟ ರಾಜ್ಯ ಒಹು ಇಕ್ಕಟ್ಟಿನಲ್ಲಿ ಸಿಲುಕಿದಂತಾದೀತು.

ಉತ್ತರದ ಗಡಿ ಬೆಳಗಾವಿ, ದಕ್ಷಿಣದ ಗಡಿ ಕಾಸರಗೋಡು ಭದ್ರವಾಗದೆ ಕರ್ನಾಟಕ ರಾಜ್ಯಕ್ಕೆ ನಿಲುಗಡೆಯಿಲ್ಲ. ಪಶ್ಚಿಮಕ್ಕೆ ಕಡಲೇ ನಮ್ಮ ಗಡಿ. ದಕ್ಷಿಣೋತ್ತರ ಗಡಿ ಭದ್ರವಾಗಲಿಲ್ಲವಾದರೆ ಪೂರ್ವದ ಆಂಧ್ರ - ಮದ್ರಾಸುಗಳೂ ಧಾಳಿಮಾಡಿದರೆ ಆಶ್ಚರ್ಯವಿಲ್ಲ.

ಇದು ಕೇಂದ್ರದ ಪ್ರಶ್ನೆಯಲ್ಲ. ನಮ್ಮ ಮನೆಯ ಪ್ರಶ್ನೆ. ಬಹು ಪರಿಶ್ರಮದಿಂದ ಪಡೆದ ಕನ್ನಡನಾಡಿನ ಪ್ರತಿಯೊಬ್ಬ ಕನ್ನಡಿಗನ ಜೀವಾಳದ ಪ್ರಶ್ನೆ.

—ಶ್ರೀ ದಾ. ಬಾ. ಕುಲಕರ್ಣಿ,
ಧಾರವಾಡ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ.2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ಕುಮಾರಿ ಚಿತ್ರಿಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ
ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ.

ಸ್ಥಾಪನೆ: 1920

ಕಥಾವಿಹಾರ

(೨ನೇ ಪುಟದಿಂದ)

ಅಕ್ಕಮ್ಮನ ಇಬ್ಬರು ಮಕ್ಕಳು ರಾಮು ಮತ್ತು ಸತ್ಯವತಿ ನಮ್ಮ ಮನೆಗೆ ಬರುತ್ತಿದ್ದುದನ್ನೂ ಸಹ ದೊಡ್ಡಪ್ಪಯ್ಯನವರಿಂದ ಸಹಿಸಲಾಗಲಿಲ್ಲ. “ನೀವಿನ್ನು ಆಚೆ ಮನೆಗೆ ಹೋದರೆ ಸೊಂಟ ಮುರಿದು ಹಾಕುತ್ತೇನೆ” ಎಂದು ಗರ್ಜನೆ ಮಾಡಿದರೆಂದು ಅಕ್ಕಮ್ಮ ಗುಟ್ಟಿನಲ್ಲಿ ನಮ್ಮ ಮನೆಗೆ ಬಂದವಳು, ನನ್ನ ಮುಂದೆ ಕಣ್ಣೀರುಗರೆಯುತ್ತ ಹೇಳಿಕೊಂಡು ಅತ್ತಳು. ಅವಳು ಏನು ಕೆಲಸ ಮಾಡಿದರೂ ದೊಡ್ಡಪ್ಪಯ್ಯನವರಿಗೆ ಅದರಲ್ಲಿ ತಪ್ಪೇ ಕಾಣಿಸುತ್ತಿತ್ತಂತೆ. ದಿನವಿಡೀ ಬೈಗಳ ಸುರಿಮಳೆಯಲ್ಲಿ ಅವಳು ಕಾಲ ಕಳೆಯಬೇಕಾಗಿತ್ತು. ಮಕ್ಕಳಂತೂ ಮನೆಬಿಟ್ಟು ಹೊರಹೊರಡುವ ಹಾಗಿರಲಿಲ್ಲ, ಅಜ್ಜಯ್ಯನವರ ಸುಗ್ರೀವಾಜ್ಞೆ ಅವರಿಗೆ ಪ್ರತಿಬಂಧಕವಾಗಿತ್ತು.

ತನ್ಮಧ್ಯೆ ಅವರಿಗೆ ಹಿಂದೆಂದೂ ಕಾಣಿಸದ ರೋಗವೊಂದು ತಲೆಯೆತ್ತಿತು. ಎರಡು ತಿಂಗಳೊಳಗೆ ಓಡಿಯಾಡುವುದೂ ನಿಂತು ಹೋಯಿತು. ಅನ್ನ ದಕ್ಕಿರಸ ಬಾಯಿಗೆ ಹಾಕುತ್ತಿರಲಿಲ್ಲವಂತೆ. ಮೊದಲೇ ಅಕ್ಕಮ್ಮನನ್ನು ಕಂಡು ಬುಸುಗುಟ್ಟುತ್ತಿದ್ದವರು, ಈಗ ಕಾಯಿಲೆ ಬಂದ ಮೇಲಂತೂ ಸಿಡಿಮಿಡಿಗುಟ್ಟುವುದು ಹೆಚ್ಚಾಯಿತು. ಮಕ್ಕಳು ಒಂದು ತುತ್ತು ಹೆಚ್ಚಾಗಿಯೇ ತಿಂದರೆ, “ಬಕಾಸುರನ ಜಾತಿಯವು. ನನ್ನ ಮನೆ ತೆಗೆಯಲಿಕ್ಕೆ ಹುಟ್ಟಿಕೊಂಡುವು. ಇವಕ್ಕೆ ಸಾವೇಕೆ ಬರಬಾರದೋ” ಎಂದು ಹಿಡಿಶಾಪ ಹಾಕುತ್ತಿದ್ದರಂತೆ. “ನೀನು ಮಾಡಿದ ಅಡಿಗೆ ತಿನ್ನೋದು ಮನುಷ್ಯ ಜಾತಿಯವರಿಗೆ ಸಾಧ್ಯವಿಲ್ಲ. ನನ್ನ ಗತಿ ಕಾಣಿಸಬೇಕೆಂದೇ ಇಲ್ಲಿಗೆ ಬಂದಂತೆ ಕಾಣುತ್ತದೆ” ಎಂದು ಅಕ್ಕಮ್ಮ ತನಗೆ ನುಂಗಲಾರದ ತುತ್ತಾಗಿರುವುದನ್ನು ಪ್ರತಿಯೊಂದು ನಡೆನುಡಿಯಲ್ಲಿ ಮನಗಾಣಿಸುತ್ತಿದ್ದರು. ಇವೆಲ್ಲ ಸಂಗತಿಗಳನ್ನೂ ಇದ್ದಕ್ಕಿದ್ದಂತೆ ಅಕ್ಕಮ್ಮ ನಮ್ಮ ಮನೆಗೆ ಟಪ್ಪಾಲು ಒಯ್ಯುತ್ತಿದ್ದಳು. ತನ್ನ ಒಳಗುದಿಯನ್ನು ತೋಡಿಕೊಂಡು, ಮನಸ್ಸನ್ನು ಹಗುರಮಾಡಿಕೊಂಡು ಹೋಗುತ್ತಿದ್ದಳು.

ನಾನು ಊರಿಗೆ ಬಂದದಿನ, ಅಮ್ಮ ನನಗೆ ಅಕ್ಕಮ್ಮನ ದುರವಸ್ಥೆಯನ್ನು ಮನ ಕರಗುವಂತೆ ಹೇಳಿದ್ದಳು. ಸರ್ವವೂ ವಿದಿತವಾದ ಮೇಲೆ, ನನ್ನ ಕಣ್ಣಂಚಿನಲ್ಲಿ ನೀರುಬರಲು ಹವಣಿಸಿತು. ಆಗ ತಾಯಿ ದೊಡ್ಡಪ್ಪನವರಿಗೆ ಹೇಳಿದ ಒಂದು ಉಪಮೆಯು ನನಗೆ ಮೆಚ್ಚಿಗೆಯಾಯಿತು:— ಅವನು ಮನುಷ್ಯನಲ್ಲ, ರಾಕ್ಷಸ!

ತಾಯಿ ಇನ್ನೊಂದು ಸಂಗತಿಯನ್ನೂ ತಿಳಿಸಿದ್ದಳು. ನಾನು ಊರಿಗೆಬರುವ ಹದಿನೈದು ದಿವಸಗಳ ಹಿಂದೆ ದೊಡ್ಡಪ್ಪಯ್ಯನವರು ಮೊದಲಬಾರಿಗೆ ನಮ್ಮ ಮನೆಗೆ ಸಂದರ್ಶನಕೊಟ್ಟು ಹೋಗಿದ್ದರಂತೆ— ನೀರುಕುಡಿಯುವ ನೆಪದಲ್ಲಿ. ಅನಂತರ ಎರಡು ಮೂರು ದಿವಸಗಳಿಗೊಮ್ಮೆ ಬರಹತ್ತಿದವರು, ಬಿಡದೆ ಬರಲಿಕ್ಕೆ ಸುರುಮಾಡಿದರಂತೆ. ಬಂದು ಚಾವಡಿಯಲ್ಲಿ ಕುಳಿತವರು, ತಾಂಬೂಲವನ್ನು ಸವಿದು, ಅಕ್ಕಮ್ಮನಿಗೊಂದಿಷ್ಟು ಸಹಸ್ರನಾಮ ಹಾಕಿಯೇ ಹೋಗುತ್ತಿದ್ದರಂತೆ. ಆದರೆ, ಇತ್ತೀಚೆಗೆ ಅವರು ನಮ್ಮಮನೆ ಮೆಟ್ಟಿಲು ಹತ್ತುವ ಧೈರ್ಯ ಮಾಡಿಲ್ಲವಂತೆ, ನಾನು ಮನೆಗೆಬಂದ ಸುದ್ದಿ ಕೇಳಿದಾಗಿನಿಂದ!

ಇವೆಲ್ಲ ವಿಚಾರಲಹರಿಗಳು ನಾಮುಂದೆ ತಾಮುಂದೆ ಎಂದು ಮನೋವೀಥಿಯಲ್ಲಿ ಏಳುತ್ತಿರಲು, ಹಾಡಿ ತಲುಪಿದೆ. ಅದನ್ನು ನೋಡಿಕೊಂಡು ಮನೆಗೆಬಂದು ತಾಯಿಯೊಡನೆ ದೊಡ್ಡಪ್ಪಯ್ಯನವರು ಇಂದು ಅಕಸ್ಮಾತ್ತಾಗಿ ಮಾತನಾಡಿಸಿದರೆಂದು ಹೇಳಿದಾಗ ಅವಳು ಹೇಳಿದ ಉತ್ತರವಿದು—“ಇಂದು ನಿನ್ನ ನೆನಪಾಯಿತೇನೋ ನಿನ್ನ ದೊಡ್ಡಪ್ಪಯ್ಯನವರಿಗೆ!”

೨

“ಸರೂ ಮನೆಯಲ್ಲಿದ್ದೀಯೇನು?” ಎಂದು ಯಾರೋ ನನ್ನನ್ನು ಕೇಳುತ್ತಿದ್ದುದು ತಿಳಿದುಬಂದು, ಉಪ್ಪರಿಗೆಯ ಮೇಲೆ ನಿದ್ದೆಬರದೆ, ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ನಾನು ಕೆಳಗಿಳಿದುಬಂದೆ. ದಯಮಾಡಿಸಿದ್ದವರು ಹಿಂದಿನ ದಿನ ನನ್ನನ್ನು ಕರೆದು ಮಾತಾಡಿಸುವ ಸಾಹಸ ತೋರಿಸಿದ್ದ ನಮ್ಮ ದೊಡ್ಡಪ್ಪಯ್ಯನವರೇ ಆಗಿದ್ದರು.

“ಏನುಬಂದಿರಿ ದೊಡ್ಡಪ್ಪಯ್ಯ?” ಎಂದು ನಾನು ಸಂಕೋಚ ಬದಿಗಿಟ್ಟು ಪ್ರಶ್ನೆ ಮಾಡಿದೆ.

“ಏನಿಲ್ಲ ನಮ್ಮನೆ ಎಮ್ಮೆಯೊಂದು ಮೇಲಕ್ಕೇಳುವ ಸ್ಥಿತಿಯಲ್ಲಿಲ್ಲ. ಸ್ವಲ್ಪ ಏಳಿಸಲಿಕ್ಕೆ ನೀನಿಬ್ಬರು ಜನರನ್ನು ಕೂಡಿಸಿಕೊಡಬಹುದು ಎಂತ ಬಂದೆ” ಎಂದರು. ನಿನ್ನೆಗಿಂತ ಅವರಲ್ಲಿ ಇಂದು ಎಷ್ಟೋ ಬದಲಾವಣೆಯುಂಟಾಗಿತ್ತು. ಮೊದಲಿನ ಸಂಕೋಚವೆಲ್ಲಾ ಹಾರಿಹೋಗಿತ್ತು. ಆವರ ಮಾತಿನಲ್ಲಿ ಆದರ ಒಡೆದು ಕಾಣಿಸುತ್ತಿತ್ತು.

“ದೊಡ್ಡಪ್ಪಯ್ಯ, ಎಮ್ಮೆ ಉಳಿಯುವ ಹಾಗೆ ಕಾಣಿಸುವುದಿಲ್ಲ. ಅದನ್ನಿನ್ನು ಹೊರಗೊಯ್ಯುವುದೊಂದೇ ಉಳಿದಿದೆ. ಮತ್ತೇಕೆ ಅದನ್ನು ಏಳಿಸುವ ತೊಂದರೆ? ಎರಡೂ ಕೆಲಸಗಳನ್ನೂ ಒಂದೇ ಬಾರಿಗೆ ಹೇಳಿಬಿಡಿ” ಎಂದೆ.

“ಎಮ್ಮೆಗೇನಾಗಿದೆ? ಯಾರಾದರೂ ಕೇಳುವವರಿದ್ದರೆ ತಕ್ಷಣವೇ ಕೊಟ್ಟುಬಿಡುತ್ತಿದ್ದೆ” ಎಂದರು.

“ಅದನ್ನಿನ್ನು ಕೊಳ್ಳುವವರೆಂದರೆ ಕೊರಗರು ಮಾತ್ರ” ಎಂದು ನಗುತ್ತ ಹೇಳಿದೆ ನಾನು. ಅವರಿಗೂ ಸತ್ಯಸಂಗತಿ ಮನದಟ್ಟಾಗಿ ಹೋಗಿರಬೇಕು. ಆ ದಿವಸಕ್ಕೆ ಇಷ್ಟೇ ಕಾರ್ಯಕ್ರಮ ಸಾಕೆಂತಲೋ ಏನೋ ಕೂಡಲೇ ಹೊರಟುಹೋದರು.

ಮರುದಿನ ನಾನು ಮಧ್ಯಾಹ್ನ ಊಟ ಮುಗಿಸಿ ತಾಂಬೂಲ ಮೆಲ್ಲುತ್ತಾ ಕುಳಿತಿರುವಾಗ ತಕ್ಷಣ ಬಂದುಹೋಗಬೇಕೆಂಬ ಕರೆಬಂತು ನನಗೆ, ದೊಡ್ಡಪ್ಪಯ್ಯನವರಿಂದ. “ಏನೋ ವಿಶೇಷವಿರಬಹುದು” ಎಂದು ಯೋಚಿಸುತ್ತ ಅವರ ಮನೆ ಕಡೆಗೆ ನಡೆದೆ. ಮೆಟ್ಟಿಲನ್ನಿಳಿಯುವಾಗ ಮನಸ್ಸಿನಲ್ಲೇನೋ ಕಸಿವಿಸಿಯಾಯಿತಾದರೂ ಅದನ್ನು ಲೆಕ್ಕಕ್ಕೆ ತರದೆ ಮುನ್ನಡೆದೆ. ಒಂದು ಹರಕು ಗೋಣಿಚೀಲದ ಹಾಸಿಗೆಯ ಮೇಲೆ ದೊಡ್ಡಪ್ಪಯ್ಯನವರು ಆಸೀನರಾಗಿದ್ದರು. ಅವರ ಕಡುಬಡತನವನ್ನು ಮನೆಯೇ ಸಾರಿ ಹೇಳುತ್ತಿತ್ತು, ಈಗ ಬೀಳಲೋ ಇನ್ನೊಂದು ಗಳಿಗೆಯಲ್ಲಿ ಬೀಳಲೋ ಎಂದು ತೂಗಾಡುತ್ತ, ದನಕರುಗಳು ಹುಲ್ಲಿನ ಮುಖ ಕಾಣದೆ ಬಹಳ ದಿನಗಳಾಗಿರಬೇಕೆಂದು ಅವುಗಳನ್ನು ನೋಡಿದರೇ ಹೇಳುವಂತಿತ್ತು.

“ಏಕೆ ಬರಹೇಳಿದಿರಿ ದೊಡ್ಡಪ್ಪಯ್ಯ” ಎಂದೆ ನಯವಾಗಿ. ಅವರು ಕೈಯಲ್ಲೊಂದು ಉಂಗುರವನ್ನು ಹಿಡಿದು ಕೊಂಡಿದ್ದರು. ಅದನ್ನು ನನ್ನ ಮುಂದಿಟ್ಟು “ಇದನ್ನು ಎಲ್ಲಾದರೂ ಅಡವಿಟ್ಟು ಒಂದು ಐದು ರೂಪಾಯಿ ತಂದುಕೊಡು. ಔಷಧಿ ತರಬೇಕೆಂದರೆ, ನನ್ನಲ್ಲಿ ಒಂದು ಚಿಕ್ಕಾಸಿಲ್ಲ. ಆ ನಾರಾಯಣ ಶಾಸ್ತ್ರಿಯ ಹತ್ತಿರ ನಾನು ಅಕಸ್ಮಾತ್ ಸತ್ತರೆ ನನ್ನ ಬೊಜ್ಜಕ್ಕಾದೀತೆಂತ ಸ್ವಲ್ಪ ಹಣವಿರಿಸಿದ್ದೆ. ಇಂದು ಒಂದು ರೂಪಾಯಿ ಹೋಗಿ ಕೇಳಿದರೆ, ತನ್ನ ಕೈಯಲ್ಲಿ ಏನೂ ಇಲ್ಲವೆಂದ, ಬಂದ ಹಾದಿಗೆ ಸುಂಕವಿಲ್ಲವೆಂದು ಒಂದು ಗಾದೆಯೇ ಇದೆಯಲ್ಲಾ ಹಾಗೇ ನನ್ನ ಅವಸ್ಥೆಯಾಯಿತು. ಅಂಥವರು ನಂಬಿಸಿ ಕುತ್ತಿಗೆ ಕೊಯ್ಯುವ ಜಾತಿಯವರು” ಎಂದು ತಮ್ಮ ಬೈಗಳ ಮಾಲೆಯನ್ನಿನ್ನು ಬಿಚ್ಚುವವರಿದ್ದರು. ಸುದೈವ ವಶಾತ್, ನಾನವನ್ನು ಮುಂಚಿತವಾಗಿಯೇ ತಿಳಿದು ಮುಂದುವರಿಯಗೊಡದೆ, “ನನ್ನಿಂದ ಉಂಗುರ ಒತ್ತೆಯಾಗಿಟ್ಟು ಹಣ ತಂದು ಕೊಡುವ ಕೆಲಸ ಸಾಧ್ಯವಿಲ್ಲ. ತೆಗೆದುಕೊಳ್ಳಿ” ಎಂದು ಹತ್ತು ರೂಪಾಯಿ ನೋಟೊಂದನ್ನು ಕಿಸೆಯಿಂದ ಹೊರತೆಗೆದು ಅವರ ಕೈ ಮೇಲೆ ಹಾಕಿದೆ. “ಬೇಡ ಮಾರಾಯ. ಹತ್ತು ರೂಪಾಯಿ ನನ್ನ ಹತ್ತಿರವಿದ್ದರೆ ಖರ್ಚಾಗಿ ಹೋಗಿಬಿಡುತ್ತದೆ. ಸದ್ಯ ಐದೇ ಸಾಕು” ಎಂದು ಹತ್ತು ರೂಪಾಯಿಗಳನ್ನು ಹಿಂದಿರುಗಿಸಿ ಐದು ಮಾತ್ರ ತೆಗೆದುಕೊಂಡು, “ಉಂಗುರ” ಎಂದರು. “ಬೇಡ. ನಿಮ್ಮ ವಶದಲ್ಲೇ ಇರಲಿ” ಎಂದು ಹೇಳಿ, ಅವರ ಪ್ರತ್ಯುತ್ತರಕ್ಕೆ ಕಾಯದೆ ಸರಸರನೆ ಹೊರಟುಹೋದೆ. ಅವರ ಅಂದಿನ ದುರವಸ್ಥೆಯನ್ನು ಕಣ್ಣಾರೆ ನೋಡಿ, ನನ್ನಲ್ಲಿದ್ದ ದಯಾಭಾವನೆಯು ಹೆಡೆಯೆತ್ತಿ ಕೊಂಡಿತ್ತು.

ನಾನು ಎಣಿಸಿದ್ದಕ್ಕೂ, ಕಾರ್ಯ ನಡೆದದ್ದಕ್ಕೂ ಸರಿ ಹೋಯಿತು. ಅವರ ಎಮ್ಮೆ ಅಂತಕನೂರಿಗೆ ಪಯಣ ಹೊರಟಿತು. ನಾನು ಅಕ್ಕಮ್ಮನೊಡನೆ, “ನಿಮ್ಮಗಿನ್ನು ಹತ್ತು ದಿವಸ ಅಕ್ಕಿ ಖರ್ಚಾಗುವುದು ತಪ್ಪಿತು” ಎನ್ನಲು ಅವಳು ನಗುತ್ತ ಹೊರಟು ಹೋದಳು. ಬರುಬರುತ್ತ ದೊಡ್ಡಪ್ಪಯ್ಯನವರ ಓಡಾಟ ನಮ್ಮಲ್ಲಿ ಹೆಚ್ಚಾಯಿತು. ಕೊನೆಗೆ ನಮ್ಮಲ್ಲಿಯೇ ವಾಸ್ತವ್ಯವನ್ನು ಹೂಡಿ ಬಿಟ್ಟರು, ಅಕ್ಕಮ್ಮನ ಅಡಿಗೆ ಉಣ್ಣುವ ಬಾಬಲ್ಲವೆಂದು. ನಮ್ಮ ತಂದೆಯವರೂ, ದೊಡ್ಡಪ್ಪನವರ ಮೇಲಿನ ಹಗೆತನವನ್ನು ಮರೆತು ನಗಿಸಲಾರಂಭಿಸಿದ್ದರು. ಪರಸ್ಪರ ಸಂಭಾಷಣೆಗೂ ಕೈಹಚ್ಚಿದ್ದರು. ಅಣ್ಣ, ತಮ್ಮಂದಿರಿಬ್ಬರೂ, ಪಕ್ಕಪಕ್ಕದಲ್ಲಿ ಮಲಗಿಕೊಂಡಿರುವುದನ್ನು ನೋಡಿ ನನಗೆ ಎಲ್ಲಿಲ್ಲದ ತೃಪ್ತಿಯಾಯಿತು.

ದೊಡ್ಡಪ್ಪನವರು ಮಗಳ ಮೇಲೂ ಪ್ರಸನ್ನರಾಗಹತ್ತಿದ್ದರು. ಅವರು ಆಗಾಗ ನನ್ನೊಡನೆ ಹೇಳುತ್ತಿದ್ದರು—“ಮಗೂ, ನಾನೆಲ್ಲಿಯಾದರೂ ಥಕ್ಕನೆ ಸತ್ತುಬಿಟ್ಟರೆ, ಬಂದು ಸುಟ್ಟುಹಾಕಿಬಿಡು.” ಅದಕ್ಕೆ ನಾನು, “ಆ ಹೆದರಿಕೆ ನಿಮಗೆಬೇಡ ನಾನು ಊರಲ್ಲಿದ್ದರೆ ಅದೊಂದು ಆಗಲಾರದು. ನಿಮ್ಮ ಆತ್ಮಕ್ಕೆ ತೃಪ್ತಿಯಾಗುವಂತೆ ಮುಂದಿನ ಕೆಲಸಗಳನ್ನು ನಡೆಸುತ್ತೇನೆ” ಎನ್ನುತ್ತಿದ್ದೆ. ಈಗ ಅವರಿಗೂ ಬಂಧುತ್ವದ ಬೆಲೆ ತಿಳಿಯತೊಡಗಿದೆ. ಅವರು ಬಂದುಹೋಗುವವರೊಡನೆ, “ನಮ್ಮ ಸರೂ ಇಲ್ಲದಿದ್ದರೆ ಇಷ್ಟುಹೊತ್ತಿಗೆ ನಾವೆಲ್ಲ ಎಲ್ಲಿರುತ್ತಿದ್ದೆವೋ!” ಎನ್ನುತ್ತಿದ್ದಾರೆ.

—ಉಳ್ಳೂರು ತಮ್ಮಯ್ಯ ಪಾಟಾಳಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 462/1959ರ

ನಾರಾಯಣ ಹೆಗ್ಡೆ —ವಾದಿ

ಮತ್ತು

ಶಿವಮ್ಮ ಹೆಗಡ್ತಿ ಕೂಡಾ — ಪ್ರತಿವಾದಿರು

ಕಾರ್ಕಳ ತಾಲ್ಲೂಕು ಮುಡಾರು ಗ್ರಾಮದ ಕಟ್ಟಿಮನೆಯೊಂಬಲ್ಲಿರುವ ಮಂಜಮ್ಮ ಹೆಗಡ್ತಿರ ಮಗಳು 2ನೇ ಪ್ರತಿವಾದಿ ರುಕ್ಮ ಹೆಗಡ್ತಿಗೆ—

ವಾದಿಯು ಜೀವನಾಂಶ (Maintenance) ಕೇಳಿ ದಾಖಲ್ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 8-1-1960ಕ್ಕೆ ಇಟ್ಟಿರುತ್ತದೆ ಆ ಕುರಿತು ನಿಮಗೇನಾದರೂ ಆಕ್ಷೇಪಯಿದ್ದಲ್ಲಿ ಸ್ವತಃ ಸದ್ರಿ ತಾ. 8-1-1960ರಂದು ಪೂರ್ವಾಹ್ನ ಗಂಟೆ 10ಕ್ಕೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.—

(By order of the Court)

K. S. Hegde,
Advocate for Plaintiff.

Karkala, 27—12—59.

ಕಲಾರಕ್ಷಣೆ

ಟಿಪ್ಪುಸುಲ್ತಾನ್ ವಸ್ತುಸಂಗ್ರಹಾಲಯ

ಶ್ರೀರಂಗ ಪಟ್ಟಣದಲ್ಲಿ ಹೊಚ್ಚಹೊಸತಾಗಿ ಮೈಸೂರುಹುಲಿ ಟಿಪ್ಪುವಿನ ಹೆಸರಿನಲ್ಲಿ ಒಂದು ವಸ್ತುಸಂಗ್ರಹಾಲಯವು ಪ್ರಾರಂಭಿಸಲ್ಪಟ್ಟಿದೆ.

ಈ ವಸ್ತುಸಂಗ್ರಹಾಲಯವನ್ನು ಮೈಸೂರು ರಾಜ್ಯದ ಶ್ರೀರಂಗಪಟ್ಟಣದಲ್ಲಿರುವ ಸುಂದರಿಯಾದ ದೌಲತ್‌ಬಾಗ್‌ನಲ್ಲಿ, ಟಿಪ್ಪುವಿನ ಬೇಸಿಗೆಯ ಅರಮನೆಯಲ್ಲಿ ತೆರೆಯಲಾಗಿದೆ. ಟಿಪ್ಪುವಿನ ಜೀವನವನ್ನೂ ರಾಜ್ಯಾಡಳಿತವನ್ನೂ ಆತನ ಸಮಕಾಲೀನ ಅವಶೇಷಗಳಿಂದ ತೋರಿಸುವುದೇ ಈ ವಸ್ತು ಸಂಗ್ರಹಾಲಯದ ಉದ್ದೇಶವಾಗಿರುವುದು. ಭಾರತ ಸರಕಾರದ ಪ್ರಾಚ್ಯವಸ್ತು ಸಂಶೋಧನ ಶಾಖೆಯವರು ಏರ್ಪಡಿಸಿರುವ ಅನೇಕ ವಸ್ತು ಸಂಗ್ರಹಾಲಯಗಳಲ್ಲಿ ಇದೂ ಒಂದು. ಈ ಪ್ರತಿಯೊಂದು ವಸ್ತುಸಂಗ್ರಹಾಲಯವೂ ಇತಿಹಾಸದ ಒಂದೊಂದು ಕಾಲಕ್ಕೆ ಸಂಬಂಧಪಡುವ ವಸ್ತುಗಳನ್ನು ಸಂಗ್ರಹಿಸಿದೆ.

ಶ್ರೀರಂಗಪಟ್ಟಣವು ಪ್ರಾಮುಖ್ಯಕ್ಕೆ ಬಂದುದು ವಿಜಯನಗರದ ಕಾಲದಲ್ಲಿ. ಶ್ರೀರಂಗಪಟ್ಟಣದ ಒಡೆಯರ್ ರಾಜರಿಂದ ಸಿಂಹಾಸನವನ್ನು ೧೭೬೧ರಲ್ಲಿ ಹೈದರಾಲಿಖಾನನು ವಶಕ್ಕೆ ತೆಗೆದುಕೊಂಡ ಮೇಲೆ ಅದು ರಾಜಕೀಯ ಪ್ರಾಮುಖ್ಯ ಪಡೆದ ಒಂದು ಸ್ಥಾನವಾಗಿತ್ತು. ಹೈದರಾಲಿಯು ತನ್ನ ೨೦ ವರ್ಷಗಳ ಆಡಳಿತದಲ್ಲಿ ರಾಜ್ಯವನ್ನು ದಕ್ಷಿಣ ಭಾರತದಲ್ಲಿ ತುಂಗಭದ್ರಾ ನದಿಯವರೆಗೆ ಬಹುಭಾಗ ವಿಸ್ತರಿಸಿದನು ಸಮಕಾಲೀನ ಪ್ರಬಲ ಶಕ್ತಿಗಳೆನಿಸಿದ, ಬ್ರಿಟಿಷರು ಮತ್ತು ಸ್ಥಳೀಯ ಶಕ್ತಿಗಳು, ತನ್ನ ವಿಸ್ತೃತವಾದ ಹಾಗೂ ಆಗಾಗಿನ ಜೈತ್ರಯಾತ್ರೆಗಳಿಂದ, ತನ್ನ ಶಕ್ತಿ ಸಾಮರ್ಥ್ಯವನ್ನು ಅರಿಯುವಂತೆ ಮಾಡಿದ್ದನು. ಆತನ ಮಗ ಟಿಪ್ಪೂ, ಆತನಷ್ಟೇ ಸಮರ್ಥ. ಆತನು ೧೭೮೨ರಲ್ಲಿ ಸಿಂಹಾಸನಕ್ಕೆ ಬಂದನು. ಇಂಗ್ಲೀಷರನ್ನು ಭಾರತದಿಂದ ಓಡಿಸಲು ನಿರ್ಧರಿಸಿದನು. ಟಿಪ್ಪೂಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣವು (೧೭೮೨–೧೭೯೯) ತನ್ನ ವೈಭವದ ತುತ್ತತುದಿಯನ್ನು ಮುಟ್ಟಿತು.

ಈ ವಸ್ತುಸಂಗ್ರಹಾಲಯದ ಮೊದಲನೆಯ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆಯೇ ಪ್ರೇಕ್ಷಕರು, ಟಿಪ್ಪೂವಿನ ಪ್ರತಿಕೃತಿಯೊಂದನ್ನು ಕಾಣಬಹುದು ಅದಕ್ಕೆ ಟಿಪ್ಪೂ ತೊಡುತ್ತಿದ್ದ ಉಡುಪನ್ನೇ ತೊಡಿಸಲಾಗಿದೆ. ಇಲ್ಲಿ ಪ್ರದರ್ಶಿಸಲಾಗಿರುವ 'ಪಾಯಿಜಾಮು' ಮತ್ತು ಕೋಟುಗಳೆರಡೂ ಅತ್ಯುತ್ತಮ ರೇಷಿಮೆಯವಾಗಿದ್ದು, ಅವುಗಳ ಮೇಲೆ ಚಿನ್ನದ ಸರಿಗೆಯಲ್ಲಿ ಹೂಗಳನ್ನು ಬಿಡಿಸಲಾಗಿದೆ.

ಎರಡನೆಯ ಕೋಣೆಯಲ್ಲಿ ಸಮಕಾಲೀನ ಯೂರೋಪಿಯನ್ ಕಲಾವಿದರಿಂದ ತೆಗೆಸಿದ ಎರಡು ಭಾವಚಿತ್ರಗಳನ್ನು ಇಡಲಾಗಿದೆ. ಅವುಗಳಲ್ಲಿ ಒಂದು ಜಾಫ್ನೆ ಎಂಬುವನು ಬಿಡಿಸಿದ ಚಿತ್ರ, ಟಿಪ್ಪೂ ಕುಮಾರನಾಗಿದ್ದಾಗಿನದು. ಇನ್ನೊಂದು ೧೭೯೨ರ ಒಪ್ಪಂದದ ಪ್ರಕಾರ, ಟಿಪ್ಪೂವಿನ ಮಕ್ಕಳಿಬ್ಬರು, ಬ್ರಿಟಿಷ್ ಅತಿಥಿಗಳಾಗಿ ನಿರ್ಗಮಿಸವಾಗುತ್ತಿರುವುದನ್ನು ಚಿತ್ರಿಸಿದೆ. ಅದರ ಕಲಾವಿದನು, ಆರ್. ಹೋಂ. ಆತನು ಟಿಪ್ಪೂ ಸುಲ್ತಾನನ ವಿರುದ್ಧ ನಡೆದ ಯುದ್ಧಗಳಲ್ಲಿ ಇಂಗ್ಲೀಷ್ ದಳಗಳೊಂದಿಗಿದ್ದನು ೧೭೯೯ರ ಮೇ ೪ರಂದು ಶ್ರೀರಂಗ ಪಟ್ಟಣದ ಪತನವಾದುದನ್ನು ಕೆರ್–ಪೋರ್ಟರ್ ಎಂಬ ಕಲಾವಿದನು ಚಿತ್ರಿಸಿರುವನು. ಅದನ್ನು ಮೂರನೆಯ ಕೋಣೆಯಲ್ಲಿ ಪ್ರದರ್ಶಿಸಲಾಗಿದೆ. ಈ ಚಿತ್ರವು ಅಂದಿನ ದಾರುಣ ಸನ್ನಿವೇಶವನ್ನು ಚಿತ್ರಿಸುತ್ತದೆ.

ಟಿಪ್ಪೂವಿನ ಮಕ್ಕಳು, ಅಧಿಕಾರಿಗಳು ಮತ್ತು ಇತರ ಸಮಕಾಲೀನ ಚಿತ್ರಗಳನ್ನು ಸೀಸದ ಕಡ್ಡಿಯಿಂದ ಬಿಡಿಸಿರುವ ಚಿತ್ರಗಳೂ ಈ ವಸ್ತು ಸಂಗ್ರಹಾಲಯದಲ್ಲಿರುವುವು. ಇವನ್ನು ಥಾಮಸ್ ಹಿಕೀ ಎಂಬಾತನು ಚಿತ್ರಿಸಿದ್ದಾನೆ. ಈ ಚಿತ್ರಗಳನ್ನು ಮಧ್ಯದಲ್ಲಿರುವ ಅಂಗಣದಲ್ಲಿಯೂ ಇತರ ಎರಡು ಕೋಣೆಗಳಲ್ಲಿಯೂ ಪ್ರದರ್ಶಿಸಲಾಗಿದೆ.

ಟಿಪ್ಪೂ ಹನ್ನೆರಡು ಟಂಕಸಾಲೆಗಳಿಂದ ಹೊರಡಿಸಿದ್ದ ವಿವಿಧ ಮೌಲ್ಯದ ತಾಮ್ರದ ನಾಣ್ಯಗಳನ್ನೂ ಬ್ರಿಟಿಷರು, ಟಿಪ್ಪೂ ಸುಲ್ತಾನನ ಮೇಲೆ ತಮ್ಮ ವಿಜಯವನ್ನು ಸೂಚಿಸುವಂತಹ ಅನೇಕ ಮೆಡಲುಗಳನ್ನೂ ಮಧ್ಯದ ಅಂಗಣದಲ್ಲಿ ಪ್ರದರ್ಶನಕ್ಕಿಡಲಾಗಿದೆ. ಈ ಮೆಡಲುಗಳಲ್ಲಿ ಕೆಲವು, ಒಂದು ಮುಖದಲ್ಲಿ ೧೭೯೯ರ ಮೇ ೪ರಂದು ಇದ್ದ ಶ್ರೀರಂಗ ಪಟ್ಟಣವನ್ನೂ ಟಿಪ್ಪೂವಿನ ರಾಜಧಾನಿಯ ಹೊರವಲಯಗಳಲ್ಲಿ ಇಂಗ್ಲೀಷರ ಸೇನೆಗಳು ಧಾಳಿ ಇಡುತ್ತಿದ್ದುದನ್ನೂ ತೋರಿಸುತ್ತವೆ ಮತ್ತೊಂದು ಮುಖದಲ್ಲಿ ಬ್ರಿಟಿಷ್ ಸಿಂಹವು, "ಟಿಪ್ಪೂ ಹುಲಿ"ಯನ್ನು ಗೆದ್ದಿರುವುದನ್ನು ತೋರಿಸುತ್ತವೆ. ಟಿಪ್ಪೂವಿನ ಸ್ವಂತಕ್ಕೆ ಸೇರಿದ ಚಿನ್ನದ ಕಾಲಮಾಪಕ ಯಂತ್ರವನ್ನೂ ಇಲ್ಲಿ ಪ್ರದರ್ಶನಕ್ಕಿಡಲಾಗಿದೆ.

ಈ ವಸ್ತು ಸಂಗ್ರಹಾಲಯದಲ್ಲಿ, ಟಿಪ್ಪೂವಿನ ರಾಜ್ಯದಲ್ಲಿನ ಇತರ ಪ್ರಮುಖ್ಯ ಸ್ಥಳಗಳನ್ನೂ ಕೋಟೆ ಕೊತ್ತಲಗಳನ್ನೂ ತೋರಿಸುವ ವರ್ಣ ಚಿತ್ರಗಳಿರುವುವು. ಅವುಗಳನ್ನು ಕ್ಯಾಪ್ಟನ್ ಅಲೆನ್ ಓರ್ಮ್ ಮತ್ತಿತರರು ಚಿತ್ರಿಸಿರುವರು. ಈ ಚಿತ್ರಗಳು ಟಿಪ್ಪೂವಿನ ನೆಲೆಗಳನ್ನೂ ಆಗಿನ ಕಾಲದ ಮಿಲಿಟರಿ ಶಿಲ್ಪವನ್ನೂ ತಿಳಿಸುತ್ತವೆ.

ಟಿಪ್ಪೂಸುಲ್ತಾನನು ತನ್ನ ಕಾಲದ ಭಾರತೀಯ ರಾಜರಿಗಿಂತ ಮೇಲ್ಮಟ್ಟದಲ್ಲಿ ನಿಲ್ಲುತ್ತಾನೆ. ಅದಕ್ಕೆ ಕಾರಣ ಆತನು, ಉತ್ತಮ ಸೈನಿಕ ಹಾಗೂ ಮಿಲಿಟರಿ ಮುಖಂಡನಾಗಿ ಅಸಾಧಾರಣ ಸಾಮರ್ಥ್ಯ ತೋರಿಸಿದುದಷ್ಟೇ ಅಲ್ಲ, ಅಸಾಧಾರಣ ದೇಶ ಪ್ರೇಮವನ್ನೂ ವಿಶಾಲ ದೃಷ್ಟಿಯನ್ನೂ ತನ್ನ ಪ್ರಜೆಗಳ ಯೋಗ ಕ್ಷೇಮವನ್ನೂ ಸದಾ ಇಟ್ಟುಕೊಂಡಿದ್ದುದು. ಯೂರೋಪಿಯನ್ನರ ಆಕ್ರಮಣದ ಸಂಕ್ಲಿಷ್ಟತೆಯನ್ನು ಆ ಕಾಲದಲ್ಲಿ ಅರಿತುಕೊಂಡವನೆಂದರೆ ಇವನೊಬ್ಬನೇ ಇತರರು, ಪರಸ್ಪರ ಒಳ ಜಗಳಗಳಲ್ಲಿ ತಮ್ಮ ಶಕ್ತಿಸಂಕ್ರಮಗಳನ್ನು ಅಪವ್ಯಯಗೊಳಿಸಿದರು. ಟಿಪ್ಪುವಾದರೋ ವಿದೇಶೀ ಆಕ್ರಮಣದಿಂದ ದೇಶವನ್ನು ದೂರವಿಡುವುದಕ್ಕೆ ವಿಶೇಷ ಗಮನವಿತ್ತಿದ್ದನು. ಆ ಉದ್ದೇಶ ಸಾಧನೆಯಲ್ಲಿ ಅವನು ಪ್ರಾಣತ್ಯಾಗ ಮಾಡಿದನು.

ಇಂಗ್ಲೀಷರೊಡನೆ ಪ್ರಥಮತಃ ಹೋರಾಟವನ್ನು ಆರಂಭಿಸಿದಾಗ ಟಿಪ್ಪೂ ಕೇವಲ ೧೭ ವರ್ಷ ವಯಸ್ಸಿನವನಾಗಿದ್ದ ಆತನು ಮೈಸೂರು, ನೈಜಾಂ, ಮರಾಠಾ ಮತ್ತು ಫ್ರೆಂಚರ ಸಂಯುಕ್ತ ಸೇನೆಯನ್ನು ಎದುರಿಸಬೇಕಾಯಿತು. ಅಲ್ಲಿಂದೀಚೆಗೆ ಆತನು ಇಂಗ್ಲೀಷರನ್ನು ಹಿಮ್ಮೆಟ್ಟಿಸುವ ಏಕಮಾತ್ರ ಉದ್ದೇಶವನ್ನು ಇಟ್ಟುಕೊಂಡಿದ್ದನು. ಆತನ ತಂದೆಯ ಅಕಾಲ ಮೃತ್ಯು (ಡಿಸೆಂಬರ್ ೧೭೮೨) ವಿನಿಂದ ಅವನು ದುರ್ಬಲಗೊಂಡನು ಆದರೂ ಆತನು ತನ್ನ ಶೌರ್ಯದಿಂದ ಯುದ್ಧ ಕುಶಲತೆಯಿಂದ, ತಾನೊಬ್ಬನೇ ಇಂಗ್ಲೀಷರೊಂದಿಗೆ ಹೋರಾಡುತ್ತಲೇ ಇದ್ದ. ೧೭೮೪ರಲ್ಲಿ ಅವನು ಇಂಗ್ಲೀಷರನ್ನು ಸೋಲಿಸಿ, ಅಪಮಾನಕಾರಕ ಷರತ್ತಿನ ಮೇಲೆ ಸಂಧಿ ಮಾಡಿಕೊಳ್ಳುವ ಅವಕಾಶವಿತ್ತಾಗಲೂ ಅವನ ಉದ್ದೇಶವು ಇಂಗ್ಲೀಷರನ್ನು ದೇಶದಿಂದ ಹೊರಗೆ ಓಡಿಸುವುದೇ ಆಗಿತ್ತು.

ತನ್ನ ಸಮಕಾಲೀನ ರಾಜರನ್ನು ಒಂದುಗೂಡಿಸಿ, ವಿದೇಶೀಯ ಆಕ್ರಮಣ ಶೀಲರೊಂದಿಗೆ ಹೋರಾಟ ಹೂಡುವುದರಲ್ಲಿ ಫಲ ದೊರೆಯಲಿಲ್ಲ. ಅವನ ಎಚ್ಚರಿಕೆ ಮಾತುಗಳು ಯಾರಿಗೂ ಕೇಳಿಸಲಿಲ್ಲ. ಕೊನೆಯಲ್ಲಿ ಅವನ ಮಿತ್ರರೇ ಶತ್ರುಗಳಾದರು. ಮರಾಠಾ ಸೇನೆಯು, ೧೭೯೦ರಲ್ಲಿ ಅವನ ಮೇಲೆ ದಾಳಿಯಿಟ್ಟಿತು. ಅನಂತರ ನಾಲ್ಕು ವರ್ಷಗಳಲ್ಲಿ ಪೇಶ್ವೆ, ಸಿಂಧಿಯಾ, ನೈಜಾಂ ಇವರೆಲ್ಲಾ ಇಂಗ್ಲೀಷರೊಡನೆ ಸೇರಿ ಯುದ್ಧ ಮಾಡಿದರು ಇದರಲ್ಲಿ ಟಿಪ್ಪೂ ತನ್ನ ಅರ್ಧ ರಾಜ್ಯವನ್ನು ಕಳೆದುಕೊಂಡನು ಇದರ ನಂತರ ಅವನಿಗೆ ಆರು ವರ್ಷಗಳ ಸಮಯ ಸಿಕ್ಕಿತು. ಪುನಃ ಲಾರ್ಡ್ ವೆಲ್ಲೆಸ್ಲಿಯು ಅವನಿಗೆ ಸಹಾಯಕ ಸಂಧಿಯನ್ನು ಸ್ವೀಕರಿಸುವಂತೆ ಒತ್ತಾಯ ಮಾಡಿದನು. ಈ ಸಂಧಿ ಹಾಗೂ ಅದರ ಫಲ ಸ್ವರೂಪವಾಗಿ ಪರಾಧೀನತೆಯನ್ನು ಸ್ವೀಕರಿಸುವ ಬದಲು ಇಂಗ್ಲೀಷರೊಡನೆ ಯುದ್ಧವನ್ನೇ ಮಾಡುತ್ತ ಇವನು ಸತ್ತನು

ಟಿಪ್ಪೂ ವೀರಯೋಧನಷ್ಟೇ ಅಲ್ಲ, ಸಮಾಜ ಸುಧಾರಕನೂ ಶಾಂತಿ ಪ್ರಿಯನೂ ಆಗಿದ್ದನು. ತನ್ನ ರಾಜ್ಯಾಡಳಿತದಲ್ಲಿ ಬೆಳಗಿನಿಂದ ಸಂಜೆಯ ವರೆಗೂ ಆತನು ಸಾರ್ವಜನಿಕ ವ್ಯವಹಾರಗಳಲ್ಲಿ ತಲ್ಲೀನನಾಗಿರುತ್ತಿದ್ದನೆಂದು ಆತನ ಸಮಕಾಲೀನರು ಬರೆದಿರುವರು. ಆತನು ಅನೇಕ ಸಮಾಜ ಸುಧಾರಣೆಗಳನ್ನು ಆಚರಣೆಗೆ ತಂದನು. ಅವುಗಳಲ್ಲಿ, ವಿಜ್ಞಾನ ರೀತಿಯ ಕ್ಯಾಲೆಂಡರ್ ಮತ್ತು ಹೊಸ ನಾಣ್ಯಗಳನ್ನು ಉಲ್ಲೇಖಿಸಬಹುದು. ಆತನು ಮೈಸೂರಿನಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಿಸಿದನು ನೀರಾವರಿ ಕಾಮಗಾರಿ, ಬೇಸಾಯ ಸುಧಾರಣೆಗಳನ್ನು ಕೈಗೊಂಡನು, ದೇಶದ ಕಲೆ ಮತ್ತು ಕುಶಲಕಲೆಗಳನ್ನು ಆಧುನಿಕಗೊಳಿಸಿದನು.

ಆತನಿಗೆ ಸ್ವತಃ ಸಾಹಿತ್ಯ ಮತ್ತು ಲಲಿತ ಕಲೆಗಳಲ್ಲಿ ಆಸಕ್ತಿಯಿತ್ತು ತತ್ಫಲವಾಗಿ ಕಲೆ ಮತ್ತು ಸಾಹಿತ್ಯಕ್ಕೆ ಉತ್ತೇಜನವಿತ್ತನು. ಜೇಮ್ಸ್ ಮಿಲ್ ಎಂಬ ಇತಿಹಾಸಜ್ಞನು ಆತನ ವಿಚಾರವಾಗಿ ಬರೆಯುತ್ತಾ ಪೂರ್ವದ ರಾಜರಿಗೆ ಹೋಲಿಸಿದಲ್ಲಿ ಆತನು ಅತ್ಯುತ್ತಮ ಆಡಳಿತಗಾರನೆಂದು ಹೆಸರು ತಾಳಿರುವನೆಂದು ಹೇಳಿರುವನು.

— —

ಪ್ರತಿಯೊಬ್ಬರಿಗೂ ಸಮೃದ್ಧಿ.......1960

"ನೂರು ವರುಷ ಬಾಳುವ
ಸಿರಿಯ ಸುಖವ ಕಾಣುವ"

ಕವಿಯ ಹಾರೈಕೆ ನಮ್ಮೆಲ್ಲರ ಜೀವನದಲ್ಲಿ
ಮೈದೋರಿ ಬರಲೆಂದು ಬಯಸುವೆವು: ಈ ಹೊಸ
ವರ್ಷ ಮೂಡುವಂದು; ಹೊಂಬೆಳಕು ಬೀರುವಂದು.

ಟಿ. ಎ. ಪೈ
ಜನರಲ್ ಮೆನೆಜರ್

ಟಿ ಎಂ. ಎ. ಪೈ
ಮೆನೆಜಿಂಗ್ ಡೈರೆಕ್ಟರ್

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ
ಪ್ರಧಾನ ಕಾರ್ಯಾಲಯ: ಉಡುಪಿ, ಮೈಸೂರು ರಾಜ್ಯ
ಸ್ಥಾಪನೆ: ೧೯೨೫

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No 466 N/50 date 2-12-1950 of the Director of public Instruction Madras·

Edited, Printed & Published by K, H, Shetty, at the Navayuga Press, Udipi, S, India,

ವಾ. ಚಂದಾ ರೂ. 6-25

ಬೆಲೆ: 13 ನ.ಪೈಸೆ

ನವಯುಗ

Vol. 39. No. 19.
ವರುಷ ೩೯. ವಾರ ೧೯.

14-1-1960

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ



ತಾಸಿಗೆ ೭,೫೦೦ ಅಲ್ಯುಮಿನಿಯಂ ತಗಡಿನ ಟೊಟ್ಟೆಗಳನ್ನು ಉಗುಳುವ ಯಂತ್ರವಿದು.

ಪ್ರಚಲಿತ ಪ್ರಸಂಗ

ಸದಾಶಿವರಾಯರಿಗೆ ಚಿರಸ್ಮಾರಕ

ದೇಶಭಕ್ತ ರಾಯರ ಹೆಸರಿನಿಂದ ಕರೆಯುವ ಸಭಾಭವನದಲ್ಲಿ ಕಾಂಗ್ರೆಸ್ ರಚನಾತ್ಮಕ ಕಾರ್ಯಕ್ರಮಗಳಿಗೆ ಪ್ರಾಶಸ್ತ್ಯ ನೀಡುವ ನಿರ್ಧಾರ ಮಾಡಲಿ.

೧೯೩೭ನೆಯ ಜನವರಿ ತಿಂಗಳ ಮೊದಲ ದಿನಗಳವು. ಮಂಗಳೂರಲ್ಲಿ ತಮ್ಮ ಅಜ್ಜಿಯೊಡನೆ ತಮ್ಮ ತಂದೆಯ ಆಗಮನವನ್ನೇ ನಿರೀಕ್ಷಿಸಿಕೊಂಡಿದ್ದ ರಾಧಾಬಾಯಿ ಮತ್ತು ಕಮಲಾಬಾಯಿಯವರಿಗೆ ಅನಿರೀಕ್ಷಿತವಾಗಿ ಬೊಂಬಾಯಿಗೆ ಹೊರಡಬೇಕೆಂಬ ವಾರ್ತೆ ದೊರೆಯಿತು. ಇದನ್ನು ತಿಳಿದೊಡನೆಯೇ ಮೊದಲೇ ಚಳಿಯಿಂದ ತಣ್ಣಗಾಗಿದ್ದ ಅವರ ರಕ್ತ ಹೆಪ್ಪುಗಟ್ಟಿದಂತಾಯಿತು. ಆದರೆ, ತಮ್ಮ ತಂದೆಯು ಜೀವನ ಮರಣಗಳ ನಡುವೆ ಹೊಯ್ದಾಡುತ್ತಿರುವಾಗ, ಒಂದು ಆವೇಶಯುಕ್ತರಾಗಿಯೇ ಅವರು ಬೊಂಬಾಯಿಯತ್ತ ಪಯಣಿಸಿದರು. ಆದರೆ, ದುರ್ಭಾಗ್ಯವಶದಿಂದ ಕಾರ್ನಾಡು ಸದಾಶಿವರಾಯರು ಜನವರಿ ೯ರಂದೇ ತಮ್ಮ ಇಹಲೀಲೆಯನ್ನು ಮುಕ್ತಾಯಗೊಳಿಸಿ ಪರಲೋಕಗಾಮಿಗಳಾಗಿದ್ದರೆಂದು ತಿಳಿದುಬಂತು.

ಕೈಯಲ್ಲಿ ಒಂದೂ ಕಾಸಿಲ್ಲದ ಸದಾಶಿವರಾಯರ ಅಂತ್ಯ ಸಂಸ್ಕಾರವನ್ನು ಬೊಂಬಾಯಿಯ ಕಾಂಗ್ರೆಸ್ ಧುರೀಣರು ಸಾಂಗವಾಗಿ ನೆರವೇರಿಸಿದರು. ಸುಮಾರು ಮೂರು ಮೈಲುದ್ದದ ವರೆಗೆ ಸೇರಿದ ಜನಸ್ತೋಮ ಉನ್ನತಸ್ತರದ ಸಮಾಜ ಸೇವಕನಿಗೆ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿತು. ನಶ್ವರ ಶರೀರವು ಮಣ್ಣಿನಲ್ಲಿ ಸೇರಿ ಹೋಯಿತು. ಆದರೆ, ಶಾಶ್ವತವಾದ ದೇಶಭಕ್ತ ಕಾರ್ನಾಡು ಸದಾಶಿವರಾಯರ ಹೆಸರು ಕೇವಲ ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲ, ಅಖಂಡ ಭಾರತದಲ್ಲಿಯೇ ದೇದೀಪ್ಯಮಾನವಾಗಿ ಚಿರಸ್ಥಾಯಿಯಾಗಿ ಉಳಿದುಕೊಂಡಿದೆ.

೧೮೮೧ರ ಎಪ್ರಿಲ್ ಮಾಸದಲ್ಲಿ ಯುಗಾದಿ ದಿನದಂದು ಜನಿಸಿದ್ದ ಶ್ರೀ ಸದಾಶಿವ ರಾಯರು ಎಳವೆಯಲ್ಲೇ ತಮ್ಮ ಅಭಿರುಚಿಯೆತ್ತವೆಂಬುದನ್ನು ತಮ್ಮ ತಾಯ್ತಂದೆಯರಾದ ರಾಧಾಬಾಯಿ ಮತ್ತು ರಾಮಚಂದ್ರಯ್ಯನವರಿಗೆ ಸೂಚ್ಯವಾಗಿ ತಮ್ಮ ಆಚರಣೆಗಳ ಮೂಲಕ ತೋರಿಸಿಕೊಟ್ಟಿದ್ದರು. ಸುಶೀಲೆಯೂ ಸಾಧ್ವಿಯೂ ದೀನ ಜನಪ್ರೀತೆಯೂ ಆಗಿದ್ದ ತಾಯ ತೊಡೆಯಲ್ಲಿ ಮೊದಲ ಪಾಠವನ್ನು ಕಲಿತಿದ್ದ ಇವರು ಈ ಪ್ರಥಮ ಪಾಠವನ್ನು ಆ ಜೀವನ ಪರ್ಯಂತ ಮರೆಯದೆ ವ್ಯವಹಾರದಲ್ಲಿ ತೊಡಗಿಸಿದ್ದರು; ಮತ್ತು ಇದರಿಂದಾಗಿಯೇ ಸರ್ವ ಸುಖ ಭೋಗಗಳನ್ನು ಉಪೇಕ್ಷಿಸಿ, ಜನತಾಸೇವೆಯಲ್ಲಿ ತತ್ಪರರಾಗಿ ತಮ್ಮ ಜೀವನವನ್ನು ಸ್ವಾತಂತ್ರ್ಯ ಹೋರಾಟ, ದಲಿತೋದ್ಧಾರ, ದೀನಸೇವೆ ಮೊದಲಾದ ಉನ್ನತೋನ್ನತ ಕಾರ್ಯಗಳಲ್ಲಿ ಸವೆಯಿಸಿದರು.

ಮಂಗಳೂರಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಪಡೆದನಂತರ, ಸರಕಾರಿ ಕಾಲೇಜಿನಲ್ಲಿ ಇಂಟರಮೀಡಿಯೆಟ್ ಪರೀಕ್ಷೆಗೆ ಓದಿ, ಮದ್ರಾಸದ ಪ್ರೆಸಿಡೆನ್ಸಿ ಕಾಲೇಜದಲ್ಲಿ ಬಿ. ಎ. ಪದವಿಯನ್ನು ಪಡೆದರು. ಮುಂದೆ, ಮುಂಬಯಿಯಲ್ಲಿ ಎಲ್. ಎಲ್. ಬಿ. ಪದವಿಯನ್ನು ಗಳಿಸಿ, ಮಂಗಳೂರಲ್ಲಿ ನೆಲಸಿ ವಕೀಲವೃತ್ತಿಯಲ್ಲಿ ತೊಡಗಿದರು. ಮೊದಲೇ ಆಗರ್ಭ ಶ್ರೀಮಂತರಾಗಿದ್ದ ಶ್ರೀ ಸದಾಶಿವರಾಯರು ತಮ್ಮ ವೃತ್ತಿಯಲ್ಲಿಯೂ ಅತೀವ ಯಶಸ್ವಿಯಾದುದರಿಂದ ಮತ್ತಷ್ಟು ಸಂಪತ್ತನ್ನು ಗಳಿಸಿದರು. ಈ ನಡುವೆಯೇ ಅವರ ವಿವಾಹವು ಶಾಂತಾಬಾಯಿಯೆಂಬ ಕುಲೀನ ಕನ್ಯೆಯೊಡನೆ ಆಗಿತ್ತು.

ಆದರೆ, ಸಂಪತ್ತಿನ ಸುಪ್ಪತ್ತಿಗೆಯಲ್ಲಿ ಬಹುಕಾಲ ವಿರಾಜಮಾನರಾಗುವ ಹಂಬಲ ಅಥವಾ ಲೋಲುಪತೆ ಅವರಿಗುಳಿಯಲಿಲ್ಲ. ಸಿದ್ಧಾರ್ಥನು ಸುಖಭೋಗಗಳನ್ನು ತ್ಯಜಿಸಿ ಜನಹಿತಸಾಧನೆಗಾಗಿ ಅರಣ್ಯವಾಸ ಕೈಗೊಂಡು ತಪಸ್ಸನ್ನು ಮಾಡಿದರೆ, ಸದಾಶಿವರಾಯರು ಜನಹಿತಕ್ಕಾಗಿ ಚರಿತ್ರ ಜನಸಾಗರದಲ್ಲಿ ಧುಮುಕಿದರು; ೧೯೨೦ರಲ್ಲಿ ತಮ್ಮ ೪೦ನೆಯ ವಯಸ್ಸಿನಲ್ಲಿ ಬದುಕಿನ ಸ್ವಾರ್ಥ ವಿಕ ನಲುಗಿನೊಡನೆ ಅವರ ಪಚಾರಂಧಾರೆಯೂ ನಲುಗಿ, ಗಾಂಧೀಜಿಯವರ ಅಸಹಕಾರಾಂದೋಲನದಲ್ಲಿ ಅವರಿಗೆ ಆಸಕ್ತಿ ಹುಟ್ಟಿತು. ಅಂದಿನಿಂದ ಅಂತ್ಯದ ವರೆಗೂ ಅವರ ವ್ಯಯ

(೧೨ನೇ ಪುಟ ನೋಡಿರಿ)

ದಿ ವಿಜಯ ಬ್ಯಾಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬ್ಯಾಂಕ್)

ಪ್ರಧಾನ ಕಛೇರಿ:- ಮಂಗಳೂರು—3.

ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾವಿಹಾರ

ತಾನೊಂದು ಬಯಸಿದರೆ ವಿಧಿ ಬೇರೊಂದು ಬಯಸಿತ್ತು

ರಾಜೀವಮ್ಮ ಮತ್ತವರ ಸೊಸೆಯರ ವಿಪರೀತ ಕಲ್ಪನೆಯಿಂದ ಇಬ್ಬರಿಗೂ ಪ್ರಿಯನಾದವನು ಜಾರಿ ಹೋದ!

ನರಸಿಂಹನ ಕಷ್ಟಗಳನ್ನು ನೋಡಿ, ನೋಡಿ ಆತನ ತಾಯಿ ರಾಜೀವಮ್ಮನವರು ಬೆಂದು ಬೆಂಡಾಗಿ, ತನ್ನ ಕಿರಿಯ ಮಗನಾದ ನಾಗೇಶನ ಮನೆಯನ್ನು ಸೇರಿದರು.

ಬೀಡಾ—ಬೀಡಿಯ ಅಂಗಡಿಯನ್ನಿಟ್ಟುಕೊಂಡಿದ್ದ ನರಸಿಂಹನಿಗೆ ದಿನಕ್ಕೆ ಎರಡು ರೂಪಾಯಿಗಳಷ್ಟು ಮುನಾಫೆ ಸಿಗುವುದೇ ಕಷ್ಟದ ಮಾತಾಗಿತ್ತು. ಅದರೊಂದಿಗೆ ಎರಡು ಹೆಣ್ಣು, ಮೂರು ಗಂಡು ಮಕ್ಕಳುಗಳ ತಂದೆಯಾಗಿದ್ದನು. ಮಡದಿಯ ಮಾತಂತೂ ಹೇಳಿ ತೀರದು: ವರುಷ ವರುಷ ಮಕ್ಕಳನ್ನು ಹೆತ್ತು ಹೆತ್ತು ಆಕೆ ಸುಸ್ತಾಗಿ ಹಾಸಿಗೆ ಹಿಡಿಯುವಂತಾಗಿದ್ದಳು. ಹೊಟ್ಟೆಗಿಲ್ಲದೆ, ಬಟ್ಟೆಗಳನ್ನು ಕಾಣದೆ ಅಸ್ಥಿಪಂಜರಗಳಾಗಿದ್ದ ಆ ಮಕ್ಕಳನ್ನು ಕಂಡಾಗಂತೂ ರಾಜೀವಮ್ಮನವರ ಕಣ್ಣುಗಳಲ್ಲಿ ನೀರು ಹನಿಯುತ್ತಿತ್ತು.

ಈಗ ಕೆಲವು ವರ್ಷಗಳಿಂದ ಕೆಮ್ಮು ಬೇರೆ ನರಸಿಂಹನನ್ನು ಹತ್ತಿಕೊಂಡಿತ್ತು. ಆತ ಕೆಮ್ಮುವಾಗಂತೂ ಅವರಿಗೆ ತಾವು ಜೀವದಿಂದೇಕಿದ್ದೇನೆಂದು ತೋರುತ್ತಿತ್ತು.

ಇಷ್ಟು ಕಷ್ಟಗಳಿಂದ ನರಸಿಂಹ ತನ್ನ ಬಡತನದ ಬಾಳನ್ನು ಸಾಗಿಸಿಕೊಂಡು ಹೋಗುತ್ತಿದ್ದರೂ ತಾಯಿಯ ಕುರಿತು ಎಂದೂ ಗೊಣಗುಟ್ಟಿದವನಲ್ಲ. ಸೊಸೆಯಂತೂ ಅವರ ಪಾಲಿಗೆ ಬಂಗಾರವೇ ಆಗಿದ್ದಳು-ತನ್ನ ತಾಯಿಗಿಂತ ಹೆಚ್ಚಾಗಿ ರಾಜೀವಮ್ಮನನ್ನು ಅವಳು ಕಾಣುತ್ತಿದ್ದಳು. ಗಂಡ-ಹೆಂಡಿರಿಬ್ಬರೂ ತಮ್ಮ ಹೊಟ್ಟೆಯನ್ನು ಹೊಡೆದುಕೊಂಡಾದರೂ ರಾಜೀವಮ್ಮನವರನ್ನು ಬಳಲಿಸಿರಲಿಲ್ಲ.

ಈ ಮಧ್ಯೆ ಮಳೆಗಾಲವೊಂದು ಬೇರೆ ನರಸಿಂಹನನ್ನು ಗೋಳು ಹೊಡೆಯಿಸಿತು. ಆತನ ಅಂಗಡಿಯತ್ತ ನೊಣವೂ ಸುಳಿದಾಡದಂತಾಯಿತು. ಕಣ್ಣಮುಂದೆ ಅಬ್ಬರಿಸಿ ನಾಟ್ಯವಾಡುವ ಬಡತನದ ಭೀಕರ ತಾಂಡವವನ್ನು ಕಾಣಲಾರದೆ, ತಾವೂ ಅಲ್ಲೊಂದು ಭಾರವಾಗಿರುವುದು ಅಸಾಧ್ಯವಾಗಲು ನಾಗೇಶನ ಮನೆಯತ್ತ ಕಾಲನ್ನು ಕಿತ್ತಿದ್ದರು.

ನಾಗೇಶ ತನ್ನ ಜೀವನದ ಮೊದಲ ಘಟ್ಟವನ್ನು ಮಡದಿ ಸುಶೀಲಳೊಡನೆ ಈಗಾಗಲೇ ಪ್ರಾರಂಭಿಸುತ್ತಿದ್ದನಷ್ಟೆ. ಹೊಸ ಮನೆ, ಹೊಸ ಸಂಸಾರ, ಹೊಸ ಆನಂದಗಳಿಂದ ನಗುನಗುತ್ತ ಹೊಸ ಬಾಳರಥವನ್ನು ಪ್ರೇಮದ ಗಾಲಿಗಳನ್ನು ಸಂತಸದ ಬೀದಿಯತ್ತ ಸಾಗಿಸುತ್ತಿದ್ದ ಆ ದಂಪತಿಗಳಿಗೆ ರಾಜೀವಮ್ಮನವರ ಆಗಮನ ಒಂದು ತಡೆಯಾಯಿತು.

ಗಂಡನೊಂದಿಗೆ ಸರಸಗಳನ್ನಾಡುವಾಗಲೂ ರಾಜೀವಮ್ಮನವರ ಕಣ್ಣುಗಳನ್ನು ತಪ್ಪಿಸಬೇಕಾಗಿತ್ತು. ಹಳೆಯ ಸಂಪ್ರದಾಯದ ರಾಜೀವಮ್ಮನವರಿಗೆ ಅಹೋರಾತ್ರಿಗಳೆನ್ನದೆ ನಡೆಯುವ ಗಂಡ—ಹೆಂಡಿರ ಚೇಷ್ಟೆಗಳು ಸಹನವಾಗುತ್ತಿರಲಿಲ್ಲ. ಪ್ರತ್ಯಕ್ಷವಲ್ಲವಾದರೂ ಪರೋಕ್ಷವಾಗಿ ತಮ್ಮ ಅಭಿಪ್ರಾಯವನ್ನು ಈ ಕುರಿತು ಅವರು ಅರಹುತ್ತಿದ್ದರು.

ವಸಂತೋದ್ಯಾನದಲ್ಲಿ ನಗುಮುಖದಿಂದ ದಿನಗಳೆವ ಹೊಸ ರೆಕ್ಕೆ ಮೂಡಿದ್ದ ಹಕ್ಕಿಗಳಂತೆ ಉದ್ವೇಗ, ಉನ್ಮಾದ, ಉತ್ಸಾಹ, ಆನಂದದ ದಿನಗಳನ್ನು ಕಳೆಯಲು ಅತ್ತೆಯ ತಡೆ! ಗಂಡನ ತೋಳ್ತೆಕ್ಕೆಯ ಸವಿಯನ್ನು ಉಂಟಲು ಅತ್ತೆಯ ತೊಂದರೆ!! ಶಾಲೆಯ ಅಧ್ಯಾಪಕನಾಗಿದ್ದ ನಾಗೇಶ ರಾಜೀವಮ್ಮನ ಆಗಮನದ ಮೊದಲು ಹೋಟೇಲಿನ ಬಿಸಿ-ಬಿಸಿ ಸಿಹಿ—ಸಿಹಿ ತಿಂಡಿಗಳ ಪೊಟ್ಟಣಗಳನ್ನು ತಂದು ಸುಶೀಲಳ ಕೈಗೆ ಕೊಡುತ್ತಿದ್ದನು. ವಾರಕ್ಕೆರಡುಬಾರಿ ಸಿನೇಮಕ್ಕೆ ಕರೆದೊಯ್ಯುತ್ತಿದ್ದನು.

ಇನ್ನೆಷ್ಟೋ ಆಮೋದ ಪ್ರಮೋದಗಳು........

ಈಗ?

ಅವೊಂದೂ ಇಲ್ಲ.

ನಾಗೇಶ ಕೂಡ ಮೊದಲಿನಂತಿಲ್ಲೆಂಬ ಭಾವನೆ ಸುಶೀಲಳಲ್ಲಿ ಮೂಡದಿರಲಿಲ್ಲ. ತಾಯನ್ನು ವಂಚಿಸಲು ಎಂದೂ ಆತ ಒಪ್ಪಲಿಲ್ಲ. ತನ್ನ ಪ್ರೇಮದ ಮಡದಿಯ—ಬಾಳ್ಗೆಳತಿಯ-ಪ್ರೇಮದ ನುಡಿಗಳನ್ನೂ ತಾಯ ಅನುಮೋದನೆ ಇಲ್ಲದೆ ಆತ ಕಾರ್ಯರೂಪಕ್ಕೆ ತರುತ್ತಿರಲಿಲ್ಲ.

ಇದೊಂದೇ ದೃಷ್ಟಾಂತ ಸಾಕಲ್ಲವೇ?—

ಹೊಟೇಲಿನ ತಿಂಡಿ—ತೀರ್ಥಗಳು ರಾಜೀವಮ್ಮನ ಮನಸ್ಸಿಗೆ ಒಗ್ಗುವ ಮಾತಿರಲಿ. ಅವನ್ನು ಮನಸಾ ದ್ವೇಷಿಸುತ್ತಿದ್ದರು.—“ಯಾವನು ಅದನ್ನು ಮಾಡಿದವನೋ; ಅವನ ಜಾತಿ—ನೀತಿಗಾಳಾವುವೋ?” ಎಂದು ಗೊಣಗುಟ್ಟುತ್ತಿದ್ದರು.

“ಅವರಿಗೆ ಹೊಟೇಲಿನ ತಿಂಡಿ ಒಗ್ಗದಿದ್ದರೆ ಬೇಡ. ಗುಟ್ಟಾಗಿ ನನ್ನೊಡನೆ ತಂದು ಕೊಡಿರಿ.”—ಎಂದಿದ್ದಳು ಸುಶೀಲ ಒಂದು ದಿನ ರಾತ್ರಿ.

ಆಗ ಆತ ಹೇಳಿದ ಮಾತಾದರೂ ಏನು?—“ಒಂಬತ್ತು ತಿಂಗಳು ನನ್ನನ್ನು ಹೊಟ್ಟೆಯಲ್ಲಿ ಹೊತ್ತು, ತನ್ನೆದೆಯ ಹಾಲನ್ನು ಉಣಿಸಿದವಳು ನನ್ನ ಅಮ್ಮ. ಆಕೆಯ ಮನಸ್ಸಿಗೆ-ಮಾತಿಗೂ—ವಿರುದ್ಧವಾದ ಕಾರ್ಯ ನನ್ನಂತರಾತ್ಮನಿಗೆ ಒಪ್ಪದು.” ಎಂದಿದ್ದನು;—ದೊಡ್ಡ ತಾತ್ವಿಕನಂತೆ!

ಇನ್ನು ಸಿನೇಮದ ಮಾತಂತೂ ಇಲ್ಲವೇ ಇಲ್ಲ.

ತನ್ನ ಗಂಡ ತನ್ನ ನಿಷ್ಕಾಮ ಪ್ರೇಮಕ್ಕೆ ಕೊಟ್ಟ ಬೆಲೆ ಇಷ್ಟೇ. ತನ್ನನ್ನು ತೋಳುಗಳಲ್ಲಿ ಸೆರೆ ಸಿಕ್ಕಿಸಿ ಗಳಹಿದ ಪ್ರೇಮ ಭಾಷಣಗಳು ಕೇವಲ ಹುಚ್ಚು ನುಡಿಗಳೇ? ಕಾಮೊಂಧನ ಹುಸಿ ಮಾತುಗಳಲ್ಲದೆ ಮತ್ತೇನು!

...ಸುಶೀಲಳ ಎದೆ ವೇಗವಾಗಿ ಬಡಿಯಿತು. ರಾಜೀವಮ್ಮನತ್ತ ಮತ್ಸರದ ಕಿಚ್ಚು ಉರಿದು ಭುಗಿಲೆಂದು ಮನೆತುಂಬಾ ವ್ಯಾಪಿಸಿತು. “ಇವಕ್ಕೆಲ್ಲ ಕಾರಣ ಆ ರಾಜೀವಮ್ಮ. ಪ್ರೇಮದ ಹಾಲಿಗೆ ಹುಳಿ ಎರೆದ ಪಾಪಿ!”—ಎಂದು ಕೂಗಾಡಿತು ಮನಸ್ಸು.

ಆಗಸದ ಗುಡುಗಿನ ಗಡ—ಗಡಾಟ, ಮಿಂಚಿನ ಮಿಂಚಾಟ, ಹನಿಮಳೆ, ಸುರಿಮಳೆಗಳ ಗೋಳಾಟಗಳು ಆ ಮನೆಯಲ್ಲಿ ತಾಂಡವವಾಡಿದವು. ಸೊಸೆಯ ಆರ್ಭಟ, ಕೆಟ್ಟಿನ ನಡೆ, ಅತ್ತೆಯ ಕಂಬನಿ, ಕಣ್ಣೀರುಗಳು ನಾಗೇಶನಲ್ಲಿ ಚಿಂತೆಯನ್ನುಂಟುಮಾಡಿದುವು

ಸುಶೀಲಳಿಗೆ ಮೃದು ಮಾತಿನಿಂದ ಹೇಳಿನೋಡಿದನು. ಗದರಿಸಿಯೂ ಆಯಿತು, ಕಣ್ಣೀರನ್ನು ಹರಿಸಿ ಬೇಡಿದ್ದನು, ಹೊಡೆತಗಳ ಪರಿಣಾಮಗಳನ್ನು ಕಂಡಾಯಿತು—ಆಕೆ ಸರ್ಪದಂತೆ ತನ್ನ ಛಲವನ್ನು ಬಿಡಲಿಲ್ಲ. ಅಷ್ಟೇಕೆ, ಗಂಡನನ್ನೇ ಛೀಮಾರಿ ಹಾಕಿ ಕಳುಹಿಸುತ್ತಿದ್ದಳು. ಈಗೀಗ ಉದ್ವೇಗ, ಸಿಟ್ಟುಗಳನ್ನು ಸಹಿಸಲಾಗದೆ ಆತ ಸುಶೀಲಳಿಗೆ ಸಿಕ್ಕಾಬಟ್ಟೆ ಬಡೆಯಲಾರಂಭಿಸಿದ್ದನು.

ಇವೆಲ್ಲವನ್ನ ಕಂಡು ರಾಜೀವಮ್ಮನವರ ಸಾತ್ವಿಕ ಜೀವ ಹಣ್ಣಾಯಿತು.

ಇದರ ಪರಿಣಾಮವಾಗಿ ಸುಶೀಲಳನ್ನು ಎರಡು ದಿನಗಳ ಮಟ್ಟಿಗೆ ತವರುಮನೆಯತ್ತ ಸಾಗಹಾಕಲು ನಾಗೇಶ ಹೊರಟನು. ರಾಜೀವಮ್ಮನವರಿಗೂ ಇದು ಸರಿಯಾಗಿ ತೋರಿತು—ನಿತ್ಯ ಮರಣವಾಗಿದ್ದ ಮನೆಯಲ್ಲಿ ಒಮ್ಮೆಯಾದರೂ ಶಾಂತಿಯ ಗಂಧ ಹರಡಲು ಸಾಧ್ಯವಿತ್ತು. ಚಿಂತೆಯ ಚಿತೆಯಲ್ಲಿ ಬೇಯುವ ನಾಗೇಶನಲ್ಲಿಯೂ ಈಗ ಅಸ್ಥಿಗಳು ಮಾತ್ರ ಉಳಿದಿದ್ದವು. ಮಾವನ ಮನೆಯಲ್ಲಿ ಎರಡು ದಿನ ಸುಖವಾಗಿರಲೆಂದು ಅವರು ಭಾವಿಸಿದರು. ಅಂತೂ ನಾಗೇಶ ಸತಿಯೊಡನೆ ಹೊರಟು ಹೋದನು.

ಅವರು ಆ ರೀತಿ ಭಾವಿಸಿದ್ದರೇನೋ ನಿಜ. ಆದರೆ, ಸುಶೀಲಳ ತಂದೆಯಿಂದ ಅನಿರೀಕ್ಷಿತವಾಗಿ ಒಂದು ಪತ್ರ ಅವರ ಕೈ ಸೇರಿತು. ಮಗನಿಗೆ ಸೌಖ್ಯವಿಲ್ಲವೆಂದು ಆ ಕಾಗದದಲ್ಲಿ ಕಂಡೊಡನೆ, ಉಟ್ಟ ಸೀರೆಯಿಂದಲೇ ರಾಜೀವಮ್ಮ ಸೊಸೆಯ ತವರಿನತ್ತ ಹೊರಟರು. ಹೊರಟರು ನಡುಗುವ ಎದೆಯಿಂದ, ನೀರು ತುಂಬಿದ್ದ ಕಂಗಳಿಂದ.

ಅಲ್ಲಿ ಅವರು ಕಂಡುದಾದರೂ ಏನು?...

ಮರಣಶಯ್ಯೆಯಲ್ಲಿ ತೊಯ್ದಾಡುವ ಮಗನನ್ನು!

ಎರಡು ದಿನಗಳ ಮೊದಲು ಮಡದಿಯನ್ನು ಬಿಟ್ಟುಬರಲು ಹೋದ ಮಗ ಆ ರ ಕೈಯನ್ನೇ ಬಿಡುವುದರಲ್ಲಿದ್ದನು!!

ಕೈಯನ್ನೇ ಬಿಟ್ಟನು...ಕೊನೆಗೊಮ್ಮೆ ಶಾಂತವಾದ ಕೊನೆಯುಸಿರನ್ನು ಬಿಟ್ಟು, ಅವರೆದೆಯಲ್ಲಿ ಅಶಾಂತತೆಯ ಬಿರುಗಾಳಿಯನ್ನೆಬ್ಬಿಸಿ ಅನಂತ, ಅಚಿಂತ್ಯದತ್ತ ರಾಜೀವಮ್ಮನವರ ಪ್ರೇಮದ ಕೂಸು ಸಾಗಿ

(೧೧ನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
“ಕೊರ್ಪೊರೇಶನ್” ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
“ಕೊರ್ಪೊರೇಶನ್” ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ-ಕಚೇರಿ: ಉಡುಪಿ (ದ. ಭಾರತ)

ವಿಜ್ಞಾನ ಪ್ರಪಂಚ

ಮಾನವನನ್ನು ವಿಜ್ಞಾನ ಸೆಳೆಯುತ್ತಿದೆ!

ಜನಜೀವನ ಪ್ರತಿಕ್ಷೇತ್ರದಲ್ಲಿಯೂ ವಿಜ್ಞಾನದ ಗಾರುಡಿ ನಡೆದಿರುವಾಗ, ಮಾನವನೇ ವಿಜ್ಞಾನದ ಕೈಗೊಂಬೆಯಾದರೆ ಆಶ್ಚರ್ಯಪಡಬೇಕೇಕೆ?

ವಿಜ್ಞಾನವು ನಮ್ಮನ್ನು ತನ್ನತ್ತ ಸೆಳೆಯುತ್ತಿದೆ ಎಂಬುದೊಂದು ಮಹಾ ವಿಷಯವಾಗಿದ್ದು, ಇದರ ಮೇಲೆ ಬಹಳಷ್ಟು ಗ್ರಂಥಗಳು ಬರೆಯಲ್ಪಟ್ಟಿವೆ. ವಿಜ್ಞಾನವೆಂಬುದು ಅಲ್ಲಾವುದ್ದೀನನ ದೀಪವಾಗಿದ್ದು ಅದು ಹಲವಾರು ವಿಚಿತ್ರ ಇಂದ್ರಜಾಲವನ್ನು ಮಾಡಿತೋರಿಸಿದೆ. ವಿಜ್ಞಾನದ ಪ್ರತಿಯೊಂದು ಸಂಶೋಧನೆ ಮತ್ತು ಕೊಡುಗೆಯು ಮಾನವನ ಸುಖ ಸೌಲಭ್ಯಗಳನ್ನು ಹೆಚ್ಚಿಸುವುದೇ ಆಗಿದೆ.

ಇಂದಿನ ಯುಗವನ್ನು ವಿಜ್ಞಾನ ಮತ್ತು ಕರ್ಮಕಾಂಡದ ಯುಗವೆಂದು ಉಲ್ಲೇಖಿಸಬಹುದು. ಪಾಕಶಾಲೆಯಿಂದ ಪ್ರಾರಂಭವಾಗಿ ಸಂಸತ್ ಭವನದವರೆಗಿನ ಎಲ್ಲ ಕಾರ್ಯಭಾರಗಳೂ ವಿಜ್ಞಾನದ ಸಹಾಯದಿಂದ ನಡೆಯುತೊಡಗಿವೆ. ವಿಜ್ಞಾನವು ಮನುಷ್ಯನಿಗೆ ಶಕ್ತಿ ಮತ್ತು ಸಾಮರ್ಥ್ಯಗಳನ್ನು ತಂದುಕೊಟ್ಟಿದೆ. ಭೂಗರ್ಭದಿಂದ ಅಮೂಲ್ಯ ಖನಿಜಗಳನ್ನು ತೆಗೆಯುವುದಕ್ಕೂ ಒಂದರಡೇ ಕ್ಷಣಗಳಲ್ಲಿ ಪ್ರಪಂಚದ ಯಾವುದೇ ಮೂಲೆಯನ್ನು ಸೇರುವುದಕ್ಕೂ ಶಬ್ದವೇಗಕ್ಕಿಂತಲೂ ತ್ವರಿತಗತಿಯಲ್ಲಿ ಆಕಾಶದಲ್ಲಿ ಹಾರುವುದಕ್ಕೂ ವಿಜ್ಞಾನವೇ ಸಹಾಯಕವಾಗಿದೆ. ಭೂಮಾತೆಯ ಗರ್ಭವನ್ನು ಭೇದಿಸಿ ತೃಪ್ತಿಗೊಂಡದ ಮಾನವನಿಂದು ಅಂತರಿಕ್ಷದ ಗರ್ಭವನೂ ಬಗೆಯಲು ಸನ್ನದ್ಧನಾಗಿ ಚಂದ್ರಾದಿಗ್ರಹಗಳ ರಹಸ್ಯವನ್ನರಿಯುವ ಮಹಾ ಸಾಹಸಗಳನ್ನು ಮಾಡತೊಡಗಿದ್ದಾನೆ.

ಮಾನವನ ಈ ಅದ್ಭುತ ಸಾಫಲ್ಯಗಳ ವಿಜ್ಞಾನದ ಒಂದು ರಹಸ್ಯವನ್ನು ತೋರಿಸುತ್ತವೆ. ಜ್ಞಾನದ ಯಾವುದೇ ಭಾಗವು ಇಂದು ವಿಜ್ಞಾನಕ್ಕೆ ಅಸ್ಪರ್ಶವಾಗಿಲ್ಲ. ದರ್ಶನ, ಧರ್ಮ ಮತ್ತು ಸಂಸ್ಕೃತಿ ಎಲ್ಲವೂ ವೈಜ್ಞಾನಿಕ ಚಿಂತನೆಯಿಂದ ಪ್ರಭಾವಿತವಾಗಿವೆ. ವಿಜ್ಞಾನ ಪದದ ಅರ್ಥವು ಯಂತ್ರೋಪಕರಣಗಳಿಗೇನೇ ಸೀಮಿತವಾಗಿಲ್ಲ; ಶತಮಾನಾಂತರಗಳಿಂದ ಸಂಚಿತವಾದ ಜ್ಞಾನ ಭಂಡಾರವೂ ವಿಜ್ಞಾನ ಮಾತ್ರವಲ್ಲ. ಮಸ್ತಿಷ್ಕದ ಒಂದು ವಿಶೇಷ ಪ್ರವೃತ್ತಿಯೇ ವಾಸ್ತವವಾಗಿ ವಿಜ್ಞಾನವಾಗಿದೆ. ನಿತ್ಯ ನೂತನ ಸಂಶೋಧನೆ ನಡೆಸುವುದು, ನವೀನ ವಿಧಾನಗಳನ್ನೂ ಪದಾರ್ಥಗಳನ್ನೂ ಆವಿಷ್ಕರಿಸುವುದು, ಅಂಧವಿಶ್ವಾಸ ಮತ್ತು ನಿರರ್ಥಕ ಪದ್ಧತಿಗಳನ್ನು ದೂರೀಕರಿಸುವುದು ಮತ್ತು ಪ್ರಮಾಣವೆಂಬ ಒರೆಗಲ್ಲಿನಲ್ಲಿ ಗೆದ್ದುಬಂದಿರುವ ಸತ್ಯಾಂಶಗಳನ್ನು ಸ್ವೀಕರಿಸುವುದು — ಮೊದಲಾದುವುಗಳ ಒಂದು ಸಜೀವ ಪ್ರೇರಣೆಯೇ ವಿಜ್ಞಾನವಾಗಿದೆ.

ಈ ವೈಜ್ಞಾನಿಕ ಪ್ರೇರಣೆಯು ಮಾನವನನ್ನು ಪ್ರತಿಕ್ಷೇತ್ರದಲ್ಲೂ ಬಹುದೂರಕ್ಕೆ ಕೊಂಡೊಯ್ದಿದೆ. ಬ್ರಹ್ಮಾಂಡ ಮತ್ತು ಜೀವರಾಶಿಗಳ ರಹಸ್ಯವನ್ನಾತನಿಗೆ ಪರಿಚಯ ಮಾಡಿಕೊಟ್ಟುದು ವಿಜ್ಞಾನವೇ. ಭೂಮಿಯ ಮೇಲಿರುವ ವನಸ್ಪತಿ, ಪಶು ಪಕ್ಷಿಕುಲ ಹಾಗೂ ವಿವಿಧ ಪದಾರ್ಥಗಳು ಮತ್ತು ಶಕ್ತಿಯ ಬಗೆಬಗೆಯ ರೂಪಗಳನ್ನಾತನಿಗೆ ತೋರಿಸಿಕೊಟ್ಟುದೂ ವಿಜ್ಞಾನವೇ. ರೋಗಗಳೊಡನೆ ಹೋರಾಡಿ ಆರೋಗ್ಯವನ್ನುಳಿಸಿಕೊಳ್ಳುವುದಕ್ಕೂ, ಉದ್ಯೋಗ ವ್ಯಾಪಾರಗಳನ್ನು ಸುಧಾರಿಸಿಕೊಳ್ಳುವುದಕ್ಕೆ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವುದಕ್ಕೆ ನಮಗಿಂದು ವಿಜ್ಞಾನವೇ ಮಾರ್ಗದರ್ಶಕವಾಗಿದೆ.

ಯಂತ್ರ ಮತ್ತು ಕೈಗಾರಿಕೆಗಳಲ್ಲಿ ನಿತ್ಯವೂ ಆಗುತ್ತಿರುವ ಪರಿಶೋಧನೆಗಳಿಂದ, ಕಾರಖಾನೆಗಳಲ್ಲಿ ಇಂದು ಅನುಸರಿಸುವ ವಿಧಾನವು ನಾಳೆಗೆ ಹಳೆಯದೆನಿಸುವಂತಾಗಿದೆ. ಉದ್ದಿಮೆಯಲ್ಲಿ ಹೊಸ ಹೊಸ ಶೋಧನೆಗಳೊಡನೆ ಮುನ್ನಡೆಯುತ್ತ ಹೋಗುವುದು ಕಠಿನವೆನಿಸಿದೆ. ಬೆಳೆಯುತ್ತಿರುವ ಜನಸಂಖ್ಯೆ, ಏರುತ್ತಿರುವ ಜೀವನಸ್ತರಗಳೊಡನೆ ವಸ್ತುಗಳ ಬೇಡಿಕೆಯೂ ಮಿತಿಮೀರಿ ಹೆಚ್ಚುತ್ತಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಸಣ್ಣ ಕಾರಖಾನೆಗಳು ದಿನೇ ದಿನೇ ಬೆಳೆಯುತ್ತಿವೆ. ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸುವ ಪ್ರಯತ್ನವನ್ನು ಇವು ಮಾಡುತ್ತಿವೆ. ಮೊದಲಿನ ಕಾಲದಲ್ಲಿಲ್ಲದ ಕೆಲವೊಂದು ವ್ಯಾಪಾರ ದಂಧೆಯೂ ವಿಜ್ಞಾನದ ಸಹಾಯದಿಂದಲೇ ಮೊದಲಾಗಿವೆ. ಇದರಿಂದಾಗಿ ಕಚ್ಚಾ ಪದಾರ್ಥಗಳು ಮತ್ತು ವಿದ್ಯುಚ್ಛಕ್ತಿಯ ಬೇಡಿಕೆಯು ದುಬಾರಿಯಾಗುತ್ತ ನಡೆಯುತ್ತಿದೆ. ಪ್ರಾಕೃತಿಕ ಸಾಧನಗಳ ಭಂಡಾರವು ತೀವ್ರ ರೀತಿಯಲ್ಲಿ ಕಡಿಮೆಯಾಗುತ್ತಿವೆ. ಅನ್ನ, ಉರುವಲು, ನೀರು, ಖನಿಜ ಮೊದಲಾದ ಸಾಧನಗಳ ಕೊರತೆಯನ್ನು ಪೂರೈಸಬೇಕಾದರೆ, ನಮ್ಮ ಸಹಾಯಕ್ಕೆ ಬರಬೇಕು, ವಿಜ್ಞಾನ!

ಬೆಳೆಯುತ್ತಿರುವ ಜನರಿಗೆ ಉಣ್ಣುವ ಆಹಾರವೊದಗಿಸಲು ಅಧಿಕಾಹಾರೋತ್ಪಾದನೆಯು ಅವಶ್ಯವಾಗಿದೆ. ಇದಕ್ಕೋಸ್ಕರ ಉತ್ತಮ ಬೀಜ, ಅಧಿಕ ಗೊಬ್ಬರ, ನೂತನ ಕೃಷಿ ವಿಧಾನ, ಹಾನಿಕಾರಕ ಕ್ರಿಮಿಕೀಟ ನಾಶ ಗಿಡಗಳನ್ನೂ ಪಶುಗಳನ್ನೂ ರೋಗದಿಂದುಳಿಸುವುದು ಆವಶ್ಯಕವಾಗಿವೆ. ಮೊಳೆತ ಗಿಡಗಳಿಗೆ ನೀರು ಸುರಿಯುವುದು, ಬೆಳೆದ ಧಾನ್ಯವನ್ನು ಪೇಟೆಗೆ ಸಾಗಿಸಿ, ಅಲ್ಲಿ ಅದನ್ನು ಮಾರುವ ವ್ಯವಸ್ಥೆಯೂ ಆಗುವುದು ಅವಶ್ಯ.

ನಾಗರಿಕತೆಯು ಪ್ರಾರಂಭವಾದಂದಿನಿಂದ ಮನುಷ್ಯ ಭೂಮಿ ಮತ್ತು ನೀರುಗಳ ಉಪಯೋಗವನ್ನು ಅತ್ಯಧಿಕವಾಗಿ ಮಾಡಿಕೊಳ್ಳುತ್ತಾನೆ. ಇದರಿಂದಾಗಿ ಕೃಷಿ ಮತ್ತು ವಸತಿಗಾಗಿ ಬಹಳಷ್ಟು ಅರಣ್ಯಗಳು ನಿರ್ನಾಮವಾಗಿವೆ. ಮರಗಳು ನಷ್ಟವಾದುದರಿಂದ, ಭೂಮಿ ಒಣಗುತ್ತ ಬಂದಿದೆ; ಅದರ ಉತ್ಪಾದನೆಯು ಇಳಿಯುತ್ತ ಬರುತ್ತಿದೆ. ಹೆಚ್ಚಿನ ಪ್ರದೇಶಗಳು ನಮ್ಮ ತಪ್ಪಿನಿಂದಲೇ ಒಣಗಿ ಹೋಗಿವೆ; ಹೋಗುತ್ತ ಬರುತ್ತಿವೆ. ನಾವು ಮರಗಿಡಗಳನ್ನು ಅತ್ಯಧಿಕವಾಗಿ ಬೆಳೆಸಬೇಕು ಮತ್ತು ಸಾಧ್ಯವಿದ್ದಲ್ಲೆಲ್ಲಾ ಭೂಮಿಯನ್ನು ವಿಸ್ತಾರವಾಡಬೇಕು. ಭೂಮಿಯನ್ನು

(೮ನೇ ಪುಟ ನೋಡಿರಿ)

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O S. 361/59.

ವಾದಿ— ಚಂದ್ರಶೇಖರ ಆಚಾರ್ಯ.

ಪ್ರತಿವಾದಿರು— 1. ಸುಬ್ರಾಯ ಆಚಾರಿ ಕೂಡಾ.

2. ಶ್ರೀನಿವಾಸ ಆಚಾರ್ಯ, 3. ರಾಮಚಂದ್ರ ಆಚಾರಿ, 4. ಸೂರ್ಯನಾರಾಯಣ ಆಚಾರ್ಯ, 5. ಮೈನರ ರಾಧಾಕೃಷ್ಣ, 6. ಮೈನರ ಅನಂತಕೃಷ್ಣ ವರ್ಣ 7. ಮುರಲೀಧರ ಕೃಷ್ಣ, 8. ವಾಸುದೇವ ಆಚಾರ್ಯ.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಮೇಲಿನ ದಾವೆಯನ್ನು ವಾದಿಯು A. B. C. ಶೆಡ್ಯೂಲು ಚರಸೊತ್ತುಗಳ ಪಿಸೆ ಬಗ್ಗೆ ಮಾಡಿದ್ದಾಗಿರುತ್ತದೆ. ಸದ್ರಿ ದಾವೆಯು ತಾ 21—1—60ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ವ್ಯಾಖ್ಯೆ ಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಗೈರಹಾಜರಿಯಿಂದ ಸದ್ರಿ ದಾವೆಯನ್ನು ತೀರ್ಮಾನಿಸಲಾದೀತು. ತಿಳಿದಿರುವುದು.

(ಕೋರ್ಟಿನ ಹುಕುಂ ಪ್ರಕಾರ)

By order.

Y. Tejappa Shetty,
Advocate for plaintiff.

Coondapoor, Date 7—1—60

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿವೆ.
ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 56/59.

ಮಿಸಿಸ್. ಸಿಸಿಲಿಯಾ ಫೆರ್ನಾಂಡೀಸ್ ಕೂಡಾ ಅರ್ಜಿದಾರ.

ಮತ್ತು

ಚಾರ್ಲ್ಸ್ ಫೆರ್ನಾಂಡೀಸ್ ಕೂಡಾ ರೆಸ್ಪಾಂಡೆಂಟರು. ಇವರೊಳಗೆ —

ರೆಸ್ಪಾಂಡೆಂಟರು:—1. ಚಾರ್ಲ್ಸ್ ಫೆರ್ನಾಂಡೀಸ್. 2. ಸಲೀನ್ ಫೆರ್ನಾಂಡಿಸ್. 3. ಸ್ಟೇನೀ ಜೇಮ್ಸ್ ಫೆರ್ನಾಂಡೀಸ್. 4. ಅವಿತ್ ವಿನಿಫ್ರೆಡ್ ಫೆರ್ನಾಂಡಿಸ್— ಅಂತೋಣಿಜೋನ್ ಫೆರ್ನಾಂಡೀಸರ ಮಕ್ಕಳು— ಉಡುಪಿ ಕಸ್ಬಾ ಅಜ್ಜರಕಾಡಿನಲ್ಲಿರುವವರು— ಇವರಿಗೆ ಸ ೧ತರ ಸಂಬಂಧ ಪಟ್ಟವರಿಗೆ—

ಮೇಲ್ಕಂಡ ಅರ್ಜಿಯ A. ಶೆಡ್ಯೂಲಿನಲ್ಲಿ ವಿವರಿಸಿದಂತೆ ಮೃತ ಅಂತೋಣಿ ಜೋನ್ ಫೆರ್ನಾಂಡೀಸರಿಗೆ ಬಹಾ ಆ್ಯವೇಜನ್ನು ವಸೂಲು ಮಾಡುವ ಬಗ್ಗೆ ವಾರೀಸು ಸರ್ಟಿಫಿಕೇಟು ಕೇಳಿ ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 30 1—60ಕ್ಕೆ ತನಿಖೆಗೆ ಇಟ್ಟಿವೆ. ಆ ದಿವಸ ನಿಮ್ಮ ಬರೆಹ ಮೂಲಕದ ಆಕ್ಷೇಪವಿದ್ದಲ್ಲಿ ಕೋರ್ಟಿನ ಮುಂದೆ 11 ಗಂಟೆಗೆ ಹಾಜರಾಗಿ ದಾಖಲ್ಲು ಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಮೇಲ್ಕಂಡ ಅರ್ಜಿಯು ತೀರ್ಮಾನಿಸಲಾಗುವುದು.

By order of cort

(Sd.) V. G. Kodlaya,
M. A. LL. B.,
Advocate for Petitioners.

ಉಡುಪಿ. 8—1—60

ಆರೋಗ್ಯದಾನ

ಮೂಲವ್ಯಾಧಿ—ಕಾರಣ ಮತ್ತು ಚಿಕಿತ್ಸೆ

ಮೂಲವ್ಯಾಧಿಯ ಅನೇಕ ಪ್ರಕಾರಗಳಿಗೆ ಸಿದ್ಧೌಷಧಗಳು ಇಲ್ಲಿ ಹೇಳಲಾಗಿವೆ. ನೀವೂ ಅವುಗಳ ಉಪಯೋಗ ಮಾಡಿಕೊಳ್ಳಬಹುದು.

ಇಂದು ದೃಷ್ಟಫಲ ಚಿಕಿತ್ಸಾ ವಿಧಾನದಿಂದ ಮೂಲವ್ಯಾಧಿಯು ಒಂದು ಭಯಪ್ರದವಾದ ರೋಗವೆಂದು ತಿಳಿಯಲ್ಪಟ್ಟಿರುತ್ತದೆ. Pilles = ಪೈಲ್ಸ್ ಶಸ್ತ್ರ ಚಿಕಿತ್ಸೆ ವಿನಃ ಗುಣವಾಗದು ಎಂಬ ಭಾವನೆ ಕೆಲವರಿಗಿದ್ದರೆ, ಶಸ್ತ್ರಚಿಕಿತ್ಸೆಯಿಂದಲೂ ಗುಣವಾಗುವುದಿಲ್ಲ ಎಂಬ ಅನುಭವ ಹಲವರಿಗಾಗಿದೆ. ಇದು ದುಸ್ತರವಾದ ರೋಗ. ನಿವಾರಣೋಪಾಯ ಇದಕ್ಕಿರುವುದಿಲ್ಲ ಎಂಬ ನಿಃಸಂಶಯವಾದವು ದಿನ ದಿನ ಪ್ರಚಾರವಾಗುತ್ತಲಿದೆ ಇದು ಪ್ರತ್ಯಕ್ಷ ಫಲ.

ಆಯುರ್ವೇದದಲ್ಲಿ ಎಲ್ಲಾ ಕಾಯಿಲೆಗಳ ಕಾರ್ಯ ಕಾರಣವನ್ನು ತಿಳಿಸಿ ಚಿಕಿತ್ಸಾ ವಿಧಾನ ಹೇಳಿದೆ. ಇದು ಅದೃಷ್ಟ ಫಲ (ಕಣ್ಣಿಗೆ ಕಾಣದಿರುವ ಫಲ)ವಾದರೂ ನಂಬಿ ಚಿಕಿತ್ಸಿದರೆ ಇಂತಹ ಕಾಯಿಲೆಗಳಿಗೆ ಹೆದರುವ ಪ್ರಸಂಗವೇ ಬರುವುದಿಲ್ಲ. ಚಿಕಿತ್ಸಾ ಸೂತ್ರವನ್ನು ಚೆನ್ನಾಗಿ ಮನನ ಮಾಡಿಕೊಂಡವನಿಗೆ ಸಂದರ್ಭಾನುಸಾರ ಬೇಕಾದ ನಿವಾರಣೋಪಾಯಗಳನ್ನು ಒದಗಿಸಿಕೊಳ್ಳುವುದು ಕಷ್ಟದ ಕೆಲಸವೇನಲ್ಲ. ಮಹಾತ್ಮರಾದ ಮಹರ್ಷಿಳು ಲೋಕೋಪಕಾರಕ್ಕಾಗಿ ತಪಸ್ಸಿದ್ಧಿಯಿಂದ ಹಲವಾರು ಪ್ರಯೋಗಗಳನ್ನು ಸಾರಿರುವರು. ಅಮೂಲ್ಯವಾದ ಈ ತತ್ವವು ವಿಶ್ವಾಸವಿಟ್ಟಲ್ಲಿ ಪೂರ್ಣ ಫಲಕಾರಿಯಾಗುವುದು ಎಂಬುದು ಹೊಸ ವಿಷಯವಲ್ಲ.

ಸಕಾಲದಲ್ಲಿ ಮಲ ವಿಸರ್ಜನೆ ಆಗದಿರುವುದು ಯಾ ಮಾಡದಿರುವುದು. ೨. ಮಂದಾಗ್ನಿಯ ದೆಸೆಯಿಂದ ಆಗಾಗ ಮಲಬದ್ಧತೆ ಬರುವುದು. ೩. ದೇಹಾಯಾಸದಿಂದ ಕರುಳಿನಲ್ಲಿ ಮಲ ಒಣಗುವುದು, ಶೌಚಕ್ಕೆ ಸದಾ ಶೀತಜಲ ಉಪಯೋಗಿಸುವುದು ಮುಖ್ಯವಾಗಿ ಮಲ ಬದ್ಧತೆಯ ಹಲವು ಕಾರಣಗಳು. ಜೀರ್ಣಶಕ್ತಿ ಸರಿಯಾಗಿಟ್ಟು ಆಯಾ ದಿನದ ಮಲ ಕಾಲಕ್ಕೆ ಸರಿಯಾಗಿ ಶೋಧನೆಯಾಗುವಂತೆ ನೋಡಿಕೊಂಡರೆ ಮೂಲ ವ್ಯಾಧಿಯು ತಾನಾಗಿ ಪರಿಹಾರವಾಗುವುದು. ಇನ್ನೂ ಹಲವು ಸುಲಭ ಪ್ರಯೋಗಗಳಿವೆ. ಉಂಸಣಿಗೆ ಬೇರು, ಬಿಲ್ವಪತ್ರೆ ಬೇರು, ಓಮ, ಶುಂಠಿ ಇವುಗಳನ್ನು ತಲಾ ಅರ್ಧರ್ಧ ತೊಲೆಯಂತೆ ಸೇರಿಸಿ ೨ ತೊಲೆ ಅಥವಾ ಯಾವುದಾದರೂ ಒಂದೊಂದೇ ಬಗೆ ೨ ತೊಲೆ ಇದರೊಂದಿಗೆ ಹುಡಿಗಡ್ಡೆ ೨ ತೊಲೆ ಸೇರಿಸಿ ಜಜ್ಜಿ ಅಷ್ಟಮಾಂಶ ಕಷಾಯಮಾಡಿ ರಾತ್ರಿ ಬೆಳಿಗ್ಗೆ ಸೇವನೆ ೬—ವಾ—೧೨ ದಿನ, ಮಾಡುವುದರಿಂದ ಜೀರ್ಣಶಕ್ತಿ ಚುರುಕಾಗಿ ಮಲಶೋಧನೆ ಸಲೀಸಾಗಿ ವ್ಯಾಧಿ ಗುಣವಾದೀತು.

ಎಲಗದ ಮೇಣ, (ಬೂರು ಗದಹಗಿಸು) ಜಾದಿಕ್ಕಾಯಿ ಒಂದೊಂದು ಭಾಗ ೨ ಭಾಗ ಶುಂಠಿ ಒದಾಗಿ ಸೇರಿಸಿ ನಿಂಬೆ ಹುಳಿಯ ರಸದಲ್ಲಿ ಅರೆದು ನೆಲ್ಲಿಕಾಯಿ ಪ್ರಮಾಣದ ಮಾತ್ರೆಮಾಡಿ ನೆಳಲೊಣಗಿಸಿ ದಿನವೂ ಬೆಳಿಗ್ಗೆ ಒಂದೊಂದು ಮಾತ್ರೆಯಂತೆ ಆಕಳ ಮೊಸರಿನಲ್ಲಿ ಸೇವನೆಮಾಡಿದರೆ ಕೆಲವೇ ದಿನಗಳಲ್ಲಿ ಗುಣವಾದೀತು.

ಕಗ್ಗಾಮೆಬೇರು— (ಕೊಮ್ಮೆ=ಗಣಜಲೀ) ಹಾಲಿನಲ್ಲಿ ಬೇಯಿಸಿ ಹಾಲು ಪೂರಾ ಬತ್ತಿದಾಗ ಬೇರುತೆಗೆದು ನೆಳಲಿನಲ್ಲಿ ಒಣಗಿಸಿ ವಸ್ತ್ರಗಾಳಿತ ಚೂರ್ಣ ಮಾಡಿ ಈ ಚೂರ್ಣವನ್ನು ದಿನವೂ ಬೆಳಿಗ್ಗೆ ಅರ್ಧರ್ಧ ತೊಲೆಯಂತೆ ನಸು ಸಕ್ಕರೆ ಸೇರಿಸಿ ಆಕಳ ತುಪ್ಪದಲ್ಲಿ ಕಲಿಸಿ ೧೨, ೨೪, ೪೮ ದಿನ ಹೀಗೆ ಮಂಡಲ ಕ್ರಮದಲ್ಲಿ ಸೇವಿಸಿದರೆ ವಿಶೇಷ ಗುಣ. ಈ ಮೂಲಿಕೆ ಕಣ್ಣಿನ ಚಿಕಿತ್ಸೆಯಲ್ಲಿ ಅದ್ವಿತೀಯವಾದುದು.

ವಿ. ಸೂ.— ಈ ವಿಚಾರದಲ್ಲಿ ಬಹಳ ಶೋಧನೆ ನಡೆಸಿ ಪ್ರತ್ಯಕ್ಷ ಫಲ ಕಂಡಿರುವುದನ್ನು ನಮ್ಮ ಸರಕಾರವು ಪತ್ರಿಕಾ ಪ್ರಕಟಣೆ ಕೊಟ್ಟಿರುವುದು ಸರ್ವವಿದಿತ. ಸಮುದ್ರ ಮೊಖಲ ಕ್ಕಾಯಿ ಬೊಂಡು (ಸಮುದ್ರಾಫಲ ಒಣ ಕಾಯಿಯ ಪುಪ್ಪ) ಒಂದು—ವಾ—ಎರಡಾಣೆ ತೂಕವನ್ನು ಅರ್ಧವಾ ಒಂದು ಕುಡುತೆ ಆಕಳ ನೊರೆ ಹಾಲಿನಲ್ಲಿ ತೇದು ಕದಡಿ ಪ್ರಾತಃ ಸೇವನೆ ಒಂದು ವಾರ ಸೇವನೆಯಿಂದ ಮೊಳಕೆ ಬತ್ತಿ ಒಣಗಿ ಹೋಗುವುದು. ೧ ಕುಡ್ತೆ ಅರಸಿನ ಗಂಟಿಕೆಯ ರಸ (ಹಳದಿ ಗೋರಟೆ) ೧ ಕುಡ್ತೆ ದನದ ತುಪ್ಪ. ೩ ತೊಲೆ ಕಾಳಮೆಣಸಿನ ಚೂರ್ಣ. ೨ ಆಣೆ ತೂಕ ಬೆಳ್ಳುಳ್ಳಿ ಸಹ ಅರೆದು ಒಂದಾಗಿ ಸೇರಿಸಿ ಹದವಾಕಬಾಗಿ ಕಾಸಿ ಇಳಿಸಿ ೧೨ ತೊಲೆ ಶುಂಠಿ ಚೂರ್ಣವನ್ನು ಸೇರಿಸಿ ಕಲಸಿ ದಿನ ೨ ಹೊತ್ತು ಅರ್ಧರ್ಧ ತೊಲೆಯಂತೆ ಸೇವನೆಮಾಡುವುದರಿಂದ ಮೂಲವ್ಯಾಧಿ ಪರಿಹಾರವಾಗುವುದು.

ಹುಳಿ ಮಾವಿನ ಮರದ ಕೆತ್ತೆಯನ್ನು ಜಜ್ಜಿ ನೀರಲ್ಲಿ ಕದಡಿ ಸೋಸಿ (ಕೂವೆ ಹುಡಿ ತೆಗೆಯುವ ರೀತಿ) ಹನಿಸಿ ಹುಡಿ ತೆಗೆದು ಒಣಗಿಸಿ ಈ ಚೂರ್ಣವನ್ನು ಒಂದೊಂದು ಚಮಚೆದಂತೆ ಹಾಲಿನಲ್ಲಿ ಕದಡಿ ಸೇವಿಸುವುದರಿಂದ ಮೂಲವ್ಯಾಧಿ ಪರಿಹಾರವಾಗುವುದು. ಚಪ್ಪೆ ಆಹಾರವನ್ನು ಮಾತ್ರ ಸೇವಿಸುವ ಪಥ್ಯ ಮಾಡಬೇಕು.

ಭಾರತವು ಸ್ವತಂತ್ರವಾದ ಬಳಿಕ ಸ್ತ್ರೀ ಶಿಕ್ಷಣವು ಸಮುನ್ನತ ರೀತಿಯಲ್ಲಿ ಮುನ್ನಡೆಯುತ್ತಿದೆ. ನವದೆಹಲಿಯ ಲೇಡಿ ಇರ್ವಿನ್ ಕಾಲೇಜಿನಲ್ಲಿ ಹೆಂಗಸರು ಹಿತ್ತಾಳೆಯ ಮತ್ತು ಮರದ ಪಾತ್ರೆಗಳಿಗೆ ಪಾಲಿಶ್ ಹಾಕುವುದನ್ನು ಅಭ್ಯಸಿಸುತ್ತಿದ್ದಾರೆ.

ಶುದ್ಧಿ ಮಾಡಿದ ಚಿತ್ರಮೂಲದ ಬೇರು ಕಾಡುಮೆಣಸಿನ ಬೇರುಗಳ ಅಷ್ಟಮಾಂಶ ಕಷಾಯ ಸೇವನೆಯಿಂದ ಅರ್ಶಸ್ಸು ಗುಣವಾಗುವುದು.

ಚಿತ್ರಮೂಲದ ಬೇರು (ಶುದ್ಧಿ) ಓಮ ಶುಂಠಿ ಕಾಳುಮೆಣಸು ಇಂದುಪ್ಪು (ಸೈಂಧವ) ಇವನ್ನು ಸಮಾಂಶಸೇರಿಸಿ ಚೂರ್ಣ ಮಾಡಿ ದಿನವೂ ಬೆಳಿಗ್ಗೆ ೨ ಆಣೆ ತೂಕ ಚೂರ್ಣ ದನದ ಮಜ್ಜಿಗೆಯಲ್ಲಿ ಕದಡಿ ಸೇವಿಸಿದರೆ, ಅರ್ಶಸ್ಸುಹರ.

ರಕ್ತಾರ್ಶಸ್ಸಿಗೆ ಎಳ್ಳು ಸಕ್ಕರೆ ಬೆಣ್ಣೆ. ಸೇರಿ ೨ ತೊಲೆ ಅರೆದು ಸೇವನೆಯಿಂದ ರಕ್ತಸ್ರಾವ ಹದವಾಗುವುದು.

ಗರಿಕೆಹುಲ್ಲಿನ ರಸ ಅರ್ಧಕುಡ್ತೆಗೆ ೧ ತೊಲೆ ಜೇನು ಸೇರಿಸಿ ಬೆಳಿಗ್ಗೆ ಸೇವನೆ ೧ ವಾರ ಮಾಡುವುದರಿಂದ, ದುರ್ನಾಮ ರೋಗ ಹರ.

ರಕ್ತಾರ್ಶಕ್ಕೆ—ಮರದರಸಿನ ಕೆತ್ತೆ ಲವಂಗಪಟ್ಟೆ. (ಇಜನುಕೆತ್ತೆ ಭೇದ) ಲಾವಂಚದ ಬೇರು (ಮುಡಿವಾಳ), ಕಹಿಬೇವಿನ ಕೆತ್ತೆ. ಇವುಗಳು ತಲಾ ಒಂದೊಂದು ತೊಲೆ ಸೇರಿಸಿ ಜಜ್ಜಿ ೮ ಕುಡ್ತೆ ನೀರು ಬತ್ತಿಸಿ ೧ ಕುಡ್ತೆ ಮಾಡಿ ಅರಿಸಿ ರಾತ್ರಿ ಊಟದ ನಂತರವೂ ಬೆಳಿಗ್ಗೆ ಮುಖತೊಳೆದೊಡನೆಯೂ ಅರ್ಧರ್ಧ ಕುಡ್ತೆ ಕಷಾಯ ಸೇವನೆ. 12 ದಿನ ಮಾಡಿದರೆ (ಅಷ್ಟಮಾಂಶ ಕಷಾಯ ಕ್ರಮ ಹೀಗೇ)

ನಾಗಕೇಸರಿ ಕಲ್ಲುಸಕ್ಕರೆ ಸಮಾಂಶ ಸೇರಿಸಿ ವಸ್ತ್ರಗಾಳಿತ ಚೂರ್ಣಮಾಡಿ ಅರ್ಧತೊಲೆ ಚೂರ್ಣಸಮಾನ ಬೆಣ್ಣೆಯಲ್ಲಿ ಕಲಸಿ ಸೇವನೆಯಿಂದ ಗುದರಕ್ತಸ್ರಾವ ಹರ.

ಕೆಂಪು ಉತ್ತಾರಣೆಯ ಎಲೆ-ಶ್ರೀಗಂಧ ಅರ್ಧರ್ಧ ತೊಲೆಯಂತೆ ಅರೆದು ಸಮಾಂಶ ಬೆಣ್ಣೆಯೊಡನೆ ಸೇರಿಸಿ ಕಲಸಿ ಸೇವನೆ. ಉತ್ತಾರಣೆ ಎಲೆ ಅರೆದುಮೂಲಕ್ಕೂ ಲೇಪ. ರಕ್ತಾರ್ಶಸ್ಸು ಗುಣವಾಗುವುದು. ಶ್ರೀಗಂಧದತಿರುಳು, ಕಿರಾತ್ ಕಡ್ಡಿ ಉರಿಸಣಿಗೆ ಬೇರು, ಕೊಡಸಿಗೆಯ ಬೀಜ ಇವುಗಳ ಅಷ್ಟಮಾಂಶ ಕಷಾಯ ರಾತ್ರಿ ಬೆಳಿಗ್ಗೆ ಸೇವನೆ 12 ದಿನ ಮಾಡುವುದರಿಂದ ಕಠಿಣ ರಕ್ತಸ್ರಾವ ಪರಿಹಾರ.

ಗರಗ (ಭೃಂಗ) ಎಳ್ಳು ಸಮಾನ ಸೇರಿಸಿ ಅರೆದು ೨ ತೊಲೆ ಬೆಣ್ಣೆಯಲ್ಲಿ ಕಲಸಿ ಸೇವಿಸುವುದರಿಂದಲೂ ಪರಿಹಾರ. ರಕ್ತಸ್ರಾವಗಳಿಗೆ ರಕ್ತಪಿತ್ತಕ್ಕೆ ಹೇಳಿದ ಚಿಕಿತ್ಸೆ ಉಪಯೋಗವೂ ಫಲಪ್ರದವೂ ಆಗಿದೆ

ಗುದಭ್ರಂಶಕ್ಕೆ — ಭಜೆ ಚೂರ್ಣ

(ಆನೇ ಪುಟ ನೋಡಿರಿ)

ಹೊಸ ಪ್ರಕಟಣೆ

ಶ್ರೀ ರಾಮಾಶ್ವಮೇಧದ ರಸತರಂಗಗಳು

ಶ್ರೀ ಪಿರ್ಯ ಲಕ್ಷ್ಮೀನಾರಾಯಣ ಆಳ್ವ

ಕ್ರೌನ್ 1/8 134 + XVI ಪುಟಗಳು. ಬೆಲೆ: ಸಾಮಾನ್ಯ ಪ್ರತಿ ರೂ. 2-25
ಕೇಲಿಕೊ ರೂ. 3-00

ಪ್ರಕಾಶಕರು:

ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್

ಕಾರ್ನಾಡು ಸದಾಶಿವರಾವ್ ರೋಡ್, ಮಂಗಳೂರು-1.

ಅಭಿಪ್ರಾಯ

ದೊಡ್ಡವರು ಸಣ್ಣತನ ತೋರಿಸಬಾರದು

ಮಾತೆಂದರೆ ಮುತ್ತು ಸುರಿಯಬೇಕು. ಆದುದರಿಂದ ನಮ್ಮ ದೊಡ್ಡ ದೊಡ್ಡ ರಾಜಕಾರಣಿಗಳು ಮಾತು ಕಡಿಮೆ ಮಾಡಬೇಕು.

ಹಿಂದೀ ಸಾಹಿತ್ಯದಲ್ಲಿ ಅಪೂರ್ವ ಸ್ಥಾನಗಳಿಸಿರುವ ಆಚಾರ್ಯ ರಾಮಚಂದ್ರ ಶುಕ್ಲರನ್ನು ಭೇಟಿ ಮಾಡುವ ಉದ್ದೇಶದಿಂದ ಕಾನಪುರದ ಒಬ್ಬ ಸಂಪಾದಕ ಮಹಾಶಯನು ಬಂದನು. ಮಾತುಕತೆಯು ಸರಾಗವಾಗಿ ಮುಂದುವರಿಯುತಿದ್ದಾಗ, ಒಂದು ಸಂದರ್ಭದಲ್ಲಿ ಸಂಪಾದಕ ಮಹಾಶಯ ಹೇಳಿದ— "ನಮ್ಮ ಕಾನಪುರದಲ್ಲಿ ಧೂಳು, ಧೂಮ ಮತ್ತು ಧೂರ್ತರನ್ನು ಬಿಟ್ಟರೆ ಇನ್ನೇನೂ ಇರುವುದಿಲ್ಲ."

ಶುಕ್ಲರು ತತ್‌ಕ್ಷಣ ಮಾರ್ನುಡಿದರು— "ಹಾಗಾದರೆ, ನನಗೆ ಕಾನಪುರಕ್ಕೆ ತೆರಳಿ ಕೇವಲ ಧೂಳು ಮತ್ತು ಧೂಮಗಳನ್ನು ನೋಡಿಕೊಂಡು ಬಂದರೆ ಸಾಕು."

ಸಂಪಾದಕ ಮಹಾಶಯ ತನ್ನ ಅವಿವೇಕಕ್ಕಾಗಿ ತಲೆ ತಗ್ಗಿಸಿದ.

ಪ್ರಪಂಚದ ಸರ್ವ ಜೀವರಾಶಿಗಳಲ್ಲೂ ಉಚ್ಚಕೋಟಿಯವನಾದ ಮಾನವನ ಒಲವು ಇಂದು ಬಹುಮುಖವಾಗಿ ಹರಿಯುತ್ತಿದೆ. ಪ್ರಜಾಪ್ರಭುತ್ವದತ್ತ ಜನತೆಯೊಲವು ವಾಲುತ್ತಿರುವ ಈ ಕಾಲದಲ್ಲಿ, ಪ್ರಜಾಪ್ರಭುತ್ವದ ಜೀವಾಳವಾದ ಪಕ್ಷಗಳೂ, ಆ ಪಕ್ಷದ ನಾಯಕರೂ ಅಗ್ರಗಣ್ಯರಾಗಿದ್ದಾರೆ. ಒಂದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸರಕಾರಿ ಪಕ್ಷದ ನಾಯಕರ ವಿಚಾರಧಾರೆಯನ್ನೇ ರಾಷ್ಟ್ರವೂ ಬಹಳ ಮಟ್ಟಿಗೆ ಮನ್ನಿಸುತ್ತ ಹೋಗುತ್ತಿದೆ. ಆದುದರಿಂದ, ಈ ಸರಕಾರಿ ಪಕ್ಷವು ಉನ್ನತಾದರ್ಶದತ್ತ ಜನತೆಯನ್ನು ಒಯ್ಯುವ ಗುರುತರ ಉತ್ತರದಾಯಿತ್ವವನ್ನು ವಹಿಸಬೇಕಾಗುವುದೆಂದು ಬೇರೆ ಹೇಳಬೇಕಾಗಿಲ್ಲ.

ಪಕ್ಷ ಮತ್ತು ವ್ಯಕ್ತಿಗಳ ಸಂಬಂಧವೇನೆಂಬುದು ಆಯಾಯ ವ್ಯಕ್ತಿಯನ್ನೂ ಪಕ್ಷವನ್ನೂ ಹೊಂದಿಕೊಂಡಿದೆ. ಆದರೆ, ಸಾಮಾನ್ಯವಾಗಿ ಒರ್ವನು ಒಂದು ಪಕ್ಷದ ನಾಯಕನಾಗುವಾಗ, ಆತನು ಹೆಚ್ಚಾಗಿ ತನ್ನ ವ್ಯಕ್ತಿಗತ ಅಭಿಪ್ರಾಯವನ್ನು ಬಿಟ್ಟುಬಿಡಬೇಕಾಗುತ್ತದೆ. ಹಾಗೆಯೇ ಒಂದು ರಾಷ್ಟ್ರದ ಪ್ರಧಾನ ಮಂತ್ರಿಯು ವೈಯಕ್ತಿಕ ಅಭಿಪ್ರಾಯಕ್ಕಿಂತ ತನ್ನ ರಾಷ್ಟ್ರದ ಅಭಿಪ್ರಾಯವನ್ನೆ ಹೆಚ್ಚಾಗಿ ಪ್ರತಿಬಿಂಬಿಸಬೇಕಾಗುತ್ತದೆ. ಇಲ್ಲವಾದರೆ, ವಿಭಿನ್ನ ಅಭಿರುಚಿಯ ಸಹಸ್ರಾರು ನಾಗರಿಕರನ್ನು ಮುಂದೆ ಸಾಗಿಸುವಷ್ಟು ವೈಯಕ್ತಿಕ ಶಕ್ತಿ ಯಾರಲ್ಲಿ ತಾನೇ ಇದೆ?

ಪ್ರಾಯಶಃ ನಮ್ಮ ದೇಶದಲ್ಲಿ ನಾಯಕರು ನಾಲಗೆ ಸಡಿಲು ಬಿಡುವಷ್ಟು ಪ್ರಪಂಚದ ಮತ್ತಾವ ರಾಷ್ಟ್ರದಲ್ಲಿಯೂ ಬಿಡುವುದಿಲ್ಲವೆಂದು ತೋರುತ್ತದೆ. ನಮ್ಮ ದೇಶದ ಪತ್ರಿಕೆಗಳು ವರ್ಷದ ೩೬೫— ಅಥವಾ ಇನ್ನೂ ಒಂದು ಹೆಚ್ಚು—ದಿನವೂ ರಾಜಕಾರಣಕ್ಕೂ ನಮ್ಮ ಬೇರೆಬೇರೆ ಮಂತ್ರಿಗಳ ಭಾಷಣಕ್ಕೂ ಪ್ರಾಧಾನ್ಯವನ್ನು ಈಯುವುದು ಕಂಡು ಬರುತ್ತಿದೆ. ವಿದೇಶಗಳಲ್ಲಿ ಪಾರ್ಲಿಮೆಂಟು ಸಭೆ ಸೇರುವ ದಿನಗಳಲ್ಲಿ ಮಾತ್ರ ಪತ್ರಿಕೆಗಳು ಇದಕ್ಕೆ ಪ್ರಾಧಾನ್ಯ ಕೊಡುವುದು ರೂಢಿಯೆಂದು ಅಲ್ಲಿ ಹೋಗಿ ಬಂದವರು ಹೇಳುವುದನ್ನು ನಂಬುವುದಾದರೆ, ನಮ್ಮ ರಾಜಕಾರಣವೂ ನಮ್ಮ ಜನತೆಯ ಒಲವೂ ತೀರ ಕೆಳಮಟ್ಟದಲ್ಲಿದೆಯೆಂದು ಹೇಳಬೇಕಾಗುತ್ತದೆ

ನಮ್ಮ ನಾಯಕರ ವಾಚಾಳತನವೂ ಈ ರೀತಿಯ ಒಲವಿಗೆ ಕಾರಣವಾಗಬಹುದು. ಒಂದು ಗಣನೀಯ ಅಧಿಕಾರಪಟ್ಟವನ್ನು ಹಿಡಿದುಕೊಂಡು ತಮ್ಮ ವೈಯಕ್ತಿಕ ಅಹಂಕಾರದಿಂದಾಗಿ ತೀರ ಕೀಳುಮಟ್ಟದ ಮಾತನಾಡುವುದು ನಮ್ಮಲ್ಲಿ ಆಗಾಗ ಕೇಳಿ ಬರುವುದು ಎಂದಿಗೂ ಶುಭ ಚಿಹ್ನೆಯೆಂದು ಹೇಳುವುದು ಸಾಧ್ಯವಿಲ್ಲ.

ಹಿಂದೊಮ್ಮೆ ರಾಜಗೋಪಾಲಾಚಾರಿಯವರು ಮದ್ರಾಸದ ಮುಖ್ಯ ಮಂತ್ರಿಯಾಗಿದ್ದಾಗ, ವಿಧಾನ ಸಭೆಯಲ್ಲಿ ಮದ್ಯಪಾನ ನಿಷೇಧದ ಕುರಿತಾಗಿ ಪ್ರಶ್ನೋತ್ತರ ನಡೆಯುತಿತ್ತು. ಈ ಸಂದರ್ಭದಲ್ಲಿ ಮದ್ಯಪಾನ ಅಥವಾ ಮದ್ಯತಯಾರಿಸಿದ ತಕ್ಷೀರುಗಳ ಸಂಖ್ಯೆ ಕಡಿಮೆಯಾಗಿದೆ ಇದಕ್ಕೆ ಪೋಲೀಸುಖಾತೆಯ ಕರ್ತವ್ಯಕ್ಷಮತೆಯ ಕೊರತೆಯೇ ಕಾರಣವೆಂಬ ಅಭಿಪ್ರಾಯವು ಬರಲು, ರಾಜಾಜಿ ಎದ್ದುನಿಂತು, ಮದ್ಯಪಾನ ನಿಷೇಧವು ಯಶಸ್ವಿಯಾದುದರ ದ್ಯೋತಕವೆಂದರು. ಇನ್ನೊಂದುಬಾರಿ ಇದೇ ಪ್ರಶ್ನೆ ತಿರುಗಿ ಎದ್ದಾಗ, ಪೋಲೀಸು ಖಾತೆಯ ದಕ್ಷತೆಯ ಪ್ರತೀಕವೆಂದು ಉತ್ತರಿಸಿದರು. ಒಂದಕ್ಕೊಂದು ಹೊಂದಾಣಿಕೆಯಿಲ್ಲದ ಈ ಮಾದರಿಯ ಉತ್ತರಗಳ ಅರ್ಥವೇನೆಂಬುದು ಸರಿಯಾಗಿ ತಿಳಿಯುವಂತಿಲ್ಲ.

ಇತ್ತೀಚೆಗೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಬೊಂಬಾಯಿಯಲ್ಲಿ ಮಾತನಾಡುತ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧಕ್ಕೆ ಬಿಲ್ಲವರೇ ಕಾರಣರೆಂದು ಪ್ರಶಂಸಿಸಿದರು. ಮಾನ್ಯಮಂತ್ರಿಗಳ ಇಂತಹ ಹೇಳಿಕೆಯ ಹಲವಾರು ಟೀಕೆ ಟಿಪ್ಪಣಿಗಳನ್ನು ನಾವೆಲ್ಲರೂ ಪತ್ರಿಕೆಗಳಲ್ಲಿ ಕಂಡಿದ್ದೇವೆ ಪ್ರತ್ಯಕ್ಷವನ್ನು ಕಂಡ ಯಾವನೊಬ್ಬನೂ ಮಂತ್ರಿಯವರ ಈ ಹೇಳಿಕೆಯು ಸರಿಯೆಂದಾಗಲೀ, ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ ಯಶಸ್ವಿಯಾಗಿದೆಯೆಂದಾಗಲೀ ಹೇಳಲಾರನು.

ಇದೇ ಮಾದರಿಯಲ್ಲಿನ ಅಧಿಕಾರಯುಕ್ತ ಹೊಣೆಗಾರ ವ್ಯಕ್ತಿಗಳು ಕೆಲವೊಮ್ಮೆ ತೀರ ಸಾಮಾನ್ಯನಿಗಿಂತಲೂ ತುಚ್ಛ ರೀತಿಯಲ್ಲಿ ನಡೆದುಕೊಳ್ಳುವುದಿದೆ. ಮೊನ್ನೆ ಮೊನ್ನೆ ಕನ್ಯಾಕುಮಾರಿ ಮತ್ತು ತಿರುಚೆಂದೂರು ದೇವಾಲಯವನ್ನು ಸಂದರ್ಶಿಸಿದ ರೇಲ್ವೆ ಉಪಮಂತ್ರಿ ಶ್ರೀ ಎಸ್. ವಿ. ರಾಮಸ್ವಾಮಿಯವರು ಅಲ್ಲಿನ ದೇವಾಲಯಗಳಲ್ಲಿ ಪ್ರಸಾದ ವಿತರಣೆಯಲ್ಲಿ ದೋಷವನ್ನು ಕಂಡು, ಅದನ್ನು ನಾಗರಕೊಯಿಲಿನಲ್ಲಿ ಸೇರಿದ್ದ ವಕೀಲರ ಸಮ್ಮೇಳನದಲ್ಲಿ ಹೊರಗೆಡಹಿದರು!

ಭಾರತ ಸರಕಾರವು ತನ್ನ ಎಲ್ಲ ಸಮಸ್ಯೆಗಳನ್ನು ವಿಚಾರವಿನಿಮಯಗಳ ಮೂಲಕ ಬಗೆಹರಿಸಲು ಪ್ರಯತ್ನಿಸುವಾಗ ಅಂತಹ ಸರಕಾರದ ಉಪಮಂತ್ರಿಗಳು ತಮಗೆ ದೋಷಪೂರಿತವಾಗಿ ಕಂಡುದನ್ನು ದೇವಾಲಯದ ಅಧಿಕಾರಿಗಳಿಗೆ ತಿಳಿಸಿ, ವಿಚಾರವಿನಿಮಯ ಮಾಡಿ ಸತ್ಯ ಸಂಗತಿಯನ್ನು ತಿಳಿದುಕೊಳ್ಳದೆ, ತಮಗೆ ಸಿದ್ಧವಾಗಿದ್ದ ವಕೀಲರ ಸಮ್ಮೇಳನದ ವೇದಿಕೆಯಲ್ಲಿ ನಿಂತು ಹೊರಗೆಡಹಿದರು. ಆದರೆ, ಇದರಿಂದ ನಾಗರಿಕ ಭಕ್ತ ಜನರಲ್ಲಿ ಯಾವ ರೀತಿಯ ಅಭಿಪ್ರಾಯ ಹುಟ್ಟೀತು ಎಂಬುದನ್ನವರು ಯೋಚಿಸಲಿಲ್ಲ. ಶ್ರೀ ರಾಮಸ್ವಾಮಿಯವರಿಗೆ ಸರಿಯಾದ ಉತ್ತರವನ್ನು ಮದ್ರಾಸದ ಮಂತ್ರಿ ಭಕ್ತವತ್ಸಲಮರು ಇತ್ತಿದ್ದಾರೆ. ಅದು ಸಮರ್ಪಕವಾದುದೇ ಸರಿ.

ದೇವಾಲಯವೆನ್ನುವುದು ಒಂದು ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿರುವ ಆಸ್ತಿಕರ ಸಂಸ್ಥೆ. ಅಲ್ಲಿ ಸರ್ವರೂ ಸಮಾನರೆಂದು ಹೇಳುವಂತಿಲ್ಲ ಸರ್ವರಿಗೂ ಸಮಾನಯೆಂದು ಹೇಳುವಂತಿಲ್ಲ. ಸರ್ವರಿಗೂ ಸಮಾನತೆ ರಾಜಕಾರಣದಲ್ಲಿ ಯಾದರೂ ಇದೆಯೆ? ಸಾಮಾನ್ಯ ವ್ಯಕ್ತಿ ತಾನೂ ಮಂತ್ರಿಯೆನಿಸಿಕೊಂಡಾನೆ? ಅದಕ್ಕೂ ಮಿತಿಯಿದೆ ಸಮಾನತೆಯ ಹೆಸರಿನಲ್ಲಿ ನ್ಯಾಯಾಲಯದ ಚಪರಾಸಿ ನ್ಯಾಯಾಧೀಶನಾಗುವುದು ಹೇಗೆ ಅಸಾಧ್ಯವೋ ಹಾಗೆಯೇ ದೇವಾಲಯದ ಅರ್ಚಕರೂ ಸಾಮಾಜಿಕರೂ ಭಿನ್ನಭಿನ್ನರು. ಅರ್ಚಕರು ದೇವಾಲಯದಲ್ಲಿ ಹಿಂದಿನಿಂದ ನಡೆದುಬಂದ ಸಂಪ್ರದಾಯದಂತೆಯೇ ನಡೆಯಬೇಕು, ಸಂಪ್ರದಾಯಪ್ರಿಯ ಆಸ್ತಿಕ ಮಹಾಶಯರಿಗೆ ಮಾತ್ರ ದೇವಾಲಯವೆಂದರೆ ಪ್ರಿಯವಾಗಿರುವುದು. ಅಲ್ಲಿ ಸಮಾನತೆಯ ಪ್ರಶ್ನೆ ಎಂದಿಗೂ ಉದ್ಭವಿಸುವಂತಿಲ್ಲ ನಮ್ಮ ಮಂತ್ರಿವರ್ಯರು ತಮಗೆ ವಿಲಕ್ಷಣವೆಂದು ತೋರಿಬಂದರೂ ಅದನ್ನು ತಾಳ್ಮೆಯಿಂದ ಸಹಿಸಿ ಸಂಬಂಧಪಟ್ಟವರೊಡನೆ ಕೇಳಿ ತಿಳಿದುಕೊಳ್ಳಬಹುದಿತ್ತು; ಅವರಿಗೆ ತಮ್ಮ ಸಲಹೆಯೊಯಬಹುದಾಗಿತ್ತು. ಆದರೆ, ಜನತೆಯ ಅಭಿಪ್ರಾಯವನ್ನು ತಿಳಿಯದೆ ತಮ್ಮ ಸ್ವಂತ ಗತ್ತುಗಾರಿಕೆಯನ್ನು ಪ್ರದರ್ಶಿಸಹೊರಟ ಅವರಿಗೆ ನಾಗರಕೊಯಿಲಿನ ಜನತೆ ಸರಿಯಾದ ಪಾಠವನ್ನು ಕಲಿಸಿತು; ಶ್ರೀ ಭಕ್ತವತ್ಸಲಮರೂ ಬುದ್ಧಿ ಹೇಳಿದರು.

ಇದೇ ಮಾದರಿಯ ದೊಡ್ಡವರ ಸಣ್ಣತನವನ್ನು ಪ್ರದರ್ಶಿಸುವ ನಿದರ್ಶನಗಳು ನಮ್ಮಲ್ಲಿ ಕಡಿಮೆಯಿಲ್ಲ. ಹೊಣೆಗಾರ ವ್ಯಕ್ತಿಗಳು ಉಪದೇಶ ಮಾಡುವುದೇ ತಮ್ಮ ಕರ್ತವ್ಯವೆಂದು ತಿಳಿದು ಕೇವಲ ನಾಲಿಗೆಗೆ ವ್ಯಾಯಾಮವಿತ್ತು ತೃಪ್ತಿಪಟ್ಟುಕೊಳ್ಳುವುದು ಮಾತ್ರವಲ್ಲದೇ ವಿಧಾಯಕ ಕಾರ್ಯಗಳತ್ತ ಅವರ ಗಮನ ಹರಿಯುವುದು ಅಪರೂಪವೆನಿಸುವ ಸಂದರ್ಭಗಳೂ ಉಂಟು; ಅಂತಹ ಕಡೆಗಳಲ್ಲಿ ಜನ ಬುದ್ಧಿವಂತರಾದರೆ, ಅವರ ಮನೋದ್ಘಾಟನೆಯನ್ನೂ ಮಾಡಬಲ್ಲರು

ನಮ್ಮ ಮಂತ್ರಿಗಳೂ ಅವರ ಕೈಕೆಳಗಿನ ಅಧಿಕಾರಿಗಳೂ ಮೊತ್ತಮೊದಲು ಮಾತು ಕಡಿಮೆ ಮಾಡಬೇಕಾಗಿದೆ. ಅದರಲ್ಲಿಯೂ ಅಸಂಬದ್ಧ ಹೇಳಿಕೆಗಳನ್ನೀಯುವುದು, ಯುಕ್ತಾಯುಕ್ತತೆಗಳನ್ನು ಗಮನಿಸದೆ ಮಾತನಾಡುವುದು ನಿಲ್ಲಬೇಕಾಗಿದೆ ಒಬ್ಬ ರಾಜಕಾರಣಿಯೆನಿಸಿಕೊಂಡವನಲ್ಲಿ ಇಂದು ಎಲ್ಲ ವಿಷಯಗಳ ಮೇಲೂ ಭಾಷಣ ಬಿಗಿಯುವ ಅಧಿಕಾರ ಅಯಾಚಿತವಾಗಿ ಬಂದುಬಿಡುತ್ತಿದೆ. ಪದವೀದಾನ ಸಮಾರಂಭವಿರಲಿ, ಅಣೆಕಟ್ಟಿನ ಉದ್ಘಾಟನೆಯಿರಲಿ, ಸೇತುವೆಯ ಶಿಲಾನ್ಯಾಸವಿರಲಿ, ಒಂದು ವಾರ್ಷಿಕೋತ್ಸವವೇ ಇರಲಿ, ಎಲ್ಲೆಂದರಲ್ಲಿ ರಾಜಕಾರಣಿಗಳು ರಾಜಕಾರಣದ ಕುರಿತು ತಾಸುಗಟ್ಟಲೆ ಭಾಷಣ ಮಾಡಬಹುದು; ಮಂತ್ರಿಗಳಾದರೆ, ವಿದೇಶ ನೀತಿಯಿಂದ ಹಿಡಿದು ರಾಮರಾಜ್ಯದ ವರೆಗಿನ ಎಲ್ಲ ವಿಷಯಗಳನ್ನೂ ಅಧಿಕಾರಿಕವಾಗಿ ಹೇಳುವ ಅರ್ಹತೆ ಪಡೆದವರು. ಆದರೆ, ಇದರಿಂದ ಜನತೆಯ ಮನಸ್ಸಿನ ಮೇಲೆ ರಾಜಕಾರಣದ ಭಾರವೊಂದೇ ಧಾರಾಳವಾಗಿ ಬೀಳುವುದಲ್ಲದೆ ಇನ್ನೇನೂ ಇಲ್ಲ. ಹೀಗೆ ವಿಧಾಯಕ ಕಾರ್ಯಕುಂಠಿತವಾಗಿ ಕ್ರಮೇಣ ಉಪದೇಶ ಸಾಗರವನ್ನೇ ಬತ್ತಿಸಿ ಜೀವಿಸಬೇಕಾಗಬಹುದೇನೋ?

ಕುಲವನ್ನು ನಾಲಗೆ ಅರುಹುವುದೆಂದು ಒಬ್ಬ ಕವಿ ಒಂದು ಸಂದರ್ಭದಲ್ಲಿ ಹೇಳಿದ್ದಾನೆ ಹಾಗೆಯೇ ನಮ್ಮ ಮನಸ್ಸಿನ ಭಾವನೆಯನ್ನು ಅನಾವಶ್ಯಕವಾಗಿ ಬೇರೆಯೊರಿಗೂ ಲಾಭದೊರೆಯದಿರುವಾಗ ಪ್ರಕಟಿಸಿ ಪ್ರಯೋಜನವಿಲ್ಲ. ನಮ್ಮ ಪ್ರಜಾಪ್ರಭುತ್ವದ ಮುಖ್ಯ ಕೊರತೆಯೆಂದರೆ, ಆಲೋಚನಾಶಕ್ತಿ ತುಸು ಗಾಢವಾಗಿ ಯೋಚಿಸುವ ಬುದ್ಧಿ ನಮ್ಮಲ್ಲಿ ಹೆಚ್ಚಿದರೆ ಮಾತ್ರ ನಮ್ಮ ಭವಿಷ್ಯ ಉನ್ನತವಾದೀತು; ಇಲ್ಲವಾದರೆ, ಮರ್ಕಟಸ್ಯ ಸುರಾಪಾನಂ ಆದಂತೆ, ಯದ್ವಾ ತದ್ವಾ ಆಗದುಳಿಯುವುದೆ?

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

> ಇತಿಹಾಸ ಪ್ರಾರಂಭವಾದಗಳಿಗೆಯಿಂದಲೂ ಪಾಪಕಾರ್ಯಗಳು ನಡೆಯುತ್ತ ಬಂದಿವೆ; ಆದರೆ, ನಾವಿಂದು ಆ ಪಾಪಗಳನ್ನು ಮಾಡುವುದು ಮಾತ್ರವಲ್ಲ ಪೂಜಿಸಲೂ ತೊಡಗಿದ್ದೇವೆ.

NAVAYUGA

Founder:—

A. B. SHETTY,

Former Minister for Public Health

Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೪-೧-'೬೦	೧೯

ಆದರ್ಶ ಪ್ರಚಾರ ಬೇಕು

ಏಕೀಕೃತ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಈಗ ಸೇರಲಿರುವ ಕಾಂಗ್ರೆಸ್ ಅಧಿವೇಶನದ ಬಗ್ಗೆ ಸಕಲ ಏರ್ಪಾಡುಗಳೂ ನಡೆದಿದ್ದು, ಅಧಿವೇಶನದ ಕಾರ್ಯಕ್ರಮಗಳು ಪ್ರಾರಂಭವಾಗಿವೆ. ತಾ. ೧೧ರಂದು ನಿಯೋಜಿತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನೀಲಂ ಸಂಜೀವರೆಡ್ಡಿಯವರ ಆಗಮನದಿಂದ ಈ ಅಧಿವೇಶನವು ಪ್ರಾರಂಭವಾಯಿತೆಂದು ಹೇಳಬಹುದು. ಪ್ರಧಾನಿ ನೆಹರು ಮತ್ತು ಈಗಿನ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರ ಗಾಂಧಿಯವರೂ ಬೆಂಗಳೂರಿಗೆ ಸಮಾಗಮಿಸಿದ್ದಾರೆ. ಹೀಗಾಗಿ, ಕಾಂಗ್ರೆಸ್ ಸದಸ್ಯರೆಲ್ಲರೂ ಬೆಂಗಳೂರಿನತ್ತ ದೃಷ್ಟಿ ಹರಿಸಿದ್ದಾರೆ. ತಾ. ೧೬ರಿಂದ ಬಹಿರಂಗಾಧಿವೇಶನವು ನಡೆಯುವುದು.

ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಇಂತಹ ಅಧಿವೇಶನದ ಮಹತ್ವವು ಹೆಚ್ಚಿತ್ತು. ಬರಬರುತ್ತ, ಈಗ, ಸ್ವಾತಂತ್ರ್ಯಪ್ರಾಪ್ತ್ಯನಂತರದ ದಿನಗಳಲ್ಲಿ ಜನತೆಯ ಒಲವು ಬೇರೆ ಬೇರೆ ಪಕ್ಷಗಳತ್ತ ಹರಿಯತೊಡಗಿವುದರಿಂದ ಹಿಂದಿನ ಒಂದು ಗರಿಮೆ ಇಂದಿಲ್ಲವೆಂಬುದು ನಿಜವೇ. ಹಿಂದೆ ರಾಷ್ಟ್ರ ಸ್ವಾತಂತ್ರ್ಯದ ಜ್ಯೋತಿಯನ್ನು ಸಮಸ್ತ ಭಾರತೀಯರ ಗಮನಕ್ಕೆ ತರುತಿದ್ದ ಕಾಂಗ್ರೆಸ್‌ನ ಪ್ರಮುಖತೆಯೂ ನಾಯಕತನವೂ ಅದ್ವಿತೀಯವಾಗಿತ್ತು; ಅಸಾಮಾನ್ಯವಾಗಿತ್ತು. ಆದರೆ, ಇಂದಿನ ಸ್ಥಿತಿಗತಿ ಹಾಗಿಲ್ಲ. ಇಂದು ದೇಶ ಪಾರತಂತ್ರ್ಯದ ಶೃಂಖಲೆಯಿಂದ ವಿಮೋಚನೆಗೊಂಡಿದೆ; ಬ್ರಿಟಿಷರ ಅರಸೊತ್ತಿಗೆಯನ್ನು ಕಳಚಿ, ನಮ್ಮ ದೇಶವನ್ನು ನಾವೇ ಕಟ್ಟುವ ಅಧಿಕಾರವನ್ನು ಪಡೆದಿದ್ದೇವೆ. ಆದುದರಿಂದ ದೇಶ ಕಟ್ಟುವ ಮಾದರಿಯಲ್ಲಿ ಭಿನ್ನಾಭಿಪ್ರಾಯವಿರುವವರು ಬೇರೆಬೇರೆ ಪಕ್ಷಗಳನ್ನು ಕಟ್ಟಿಕೊಳ್ಳುವುದು ಸ್ವಾಭಾವಿಕವೇ; ಪ್ರಜಾಪ್ರಭುತ್ವದ ಅಸ್ತಿವಾರವೇ ರಾಜಕೀಯ ಪಕ್ಷಗಳೆಂದರೂ ತಪ್ಪಾಗದು. ಸ್ವಾತಂತ್ರ್ಯ ದೊರೆತ ಗಳಿಗೆಯಲ್ಲಿ ದೇಶದ ಹಿರಿಯ ಪಕ್ಷವಾಗಿದ್ದ ಕಾಂಗ್ರೆಸ್ಸು ಅಧಿಕಾರ ಸೂತ್ರವನ್ನು ವಹಿಸಿತು. ರಾಷ್ಟ್ರದ ಅಭಿವೃದ್ಧಿಗಾಗಿ ಅದು ಶ್ರಮಿಸುತ್ತ ನಡೆದುದರಿಂದ ಕಳೆದೆರಡು ಚುನಾವಣೆಗಳಲ್ಲೂ ಅದು ಬಹುಮತಗಳಿಸಿದೆಯೆಂದು ಹೇಳಲಾಗುತ್ತಿದೆ. ದಿನೇ ದಿನೇ ಕಾಂಗ್ರೆಸಿಗೆ ದೊರೆಯುವ ಬೆಂಬಲವು ಕಡಿಮೆಯಾಗುತ್ತಿದೆ ಎಂಬುದಕ್ಕೆ ಅನ್ಯ ಪಕ್ಷಗಳಿಗೆ ಸಿಕ್ಕಿದ ಮತಗಳಿಂದಲೇ ನಾವು ತಿಳಿದುಕೊಳ್ಳಬಹುದು. ಆದರೆ, ಇದರಿಂದ ಗಾಬರಿಪಡಬೇಕಾಗಿಲ್ಲ; ಏಕೆಂದರೆ, ಸ್ವಾತಂತ್ರ್ಯಪರ್ವದಲ್ಲಿ ಎಲ್ಲ ವಿಚಾರದ ಎಲ್ಲ ಮತಗಳ ಎಲ್ಲ ಜನರ ಉದ್ದೇಶಗಳು ಒಂದೇ ಆಗಿದ್ದುದರಿಂದ ಮತ್ತು ತಮ್ಮ ಉದ್ದೇಶ ಸಾಧನೆಗಾಗಿ ಒಂದೇ ಕ್ರಮ ಅನುಸರಿಸಲು ಬಯಸಿದುದರಿಂದ ಭಾರತೀಯರೆಲ್ಲರೂ ಒಂದು ರೀತಿಯಿಂದ ಕಾಂಗ್ರೆಸ್ಸೇ ಆಗಿದ್ದರು. ಆದರೆ, ಇಂದು ಸಮೃದ್ಧ ಭಾರತ ಕಟ್ಟುವ ವಿಧಾಯಕ ಕಾರ್ಯಕ್ರಮಗಳ ಕಾರ್ಯಾಚರಣೆಯಲ್ಲಿ ಭಿನ್ನಾಭಿಪ್ರಾಯಗಳಿರುವುದರಿಂದ, ಜನತೆಯೊಲವು ಕಾಂಗ್ರೆಸ್ಸಿನಲ್ಲಿ ಮಾತ್ರ ಕೇಂದ್ರೀಕೃತವಾಗಬೇಕೆಂದು ಯಾರಾದರೂ ಹೇಳಿದರೆ, ಅದು ಅಗ್ರಹವಾದೀತು. ಪ್ರತಿಯೊಬ್ಬ ನಾಗರಿಕನಿಗೂ ತಾನು ಮೆಚ್ಚುವ ಪಕ್ಷವನ್ನು ಕಟ್ಟುವ ಅಥವಾ ಸೇರುವ ಸ್ವಾತಂತ್ರ್ಯವಿರುವಾಗ, ದೇಶದಲ್ಲಿ ಭಿನ್ನ ಭಿನ್ನ ಪಕ್ಷಗಳೂ ಹುಟ್ಟಿಕೊಂಡಿರುವುದರಲ್ಲಿ ವಿಸ್ಮಯವಿಲ್ಲ. ಇಂದಿಗೂ ಕಾಂಗ್ರೆಸ್ಸು ದೇಶದ ದೊಡ್ಡ ರಾಜಕೀಯ ಪಕ್ಷವಾಗಿ ಉಳಿದಿದೆ; ಅದರ ಬಲ ಹೇಳಿಸಿಕೊಳ್ಳುವಷ್ಟು ಹ್ರಾಸವಾಗಿಲ್ಲ. ಇದಕ್ಕೆ ಜನತೆ ಹಿಂದಿನಿಂದಲೂ ಕಾಂಗ್ರೆಸ್ಸಿನ ಮೇಲೆ ಇಟ್ಟಿದ್ದ ವಿಶ್ವಾಸ ಒಂದು ಕಾರಣವಾದರೆ, ಕಳೆದ ೧೨ ವರ್ಷಗಳಲ್ಲಿ ಕಾಂಗ್ರೆಸ್ಸು ರಾಷ್ಟ್ರಹಿತಚಿಂತನೆಗಾಗಿ ಅಹರ್ನಿಶಿ ನಡೆಸಿದ ಹೋರಾಟದ ಫಲಶ್ರುತಿಯೂ ಇನ್ನೊಂದು ಹೇತುವೆಂಬುದಾಗಿ ಧೈರ್ಯದಿಂದ ಹೇಳಬಹುದು. ಕಾಂಗ್ರೆಸ್ ಸರಕಾರಗಳು ಸಾಧಿಸಿದ ಸಾಧನೆಯು, ಅದೂ ಒಂದು ದಶಕದಲ್ಲಿ, ಭಾರತದಂತಹ ದಟ್ಟ ದರಿದ್ರರ ಮತ್ತು ವಿಸ್ತೃತವಾದ ದೇಶದಲ್ಲಿ ತೀರ ಅತ್ಯಲ್ಪವೆಂದು ಕಂಡುಬರುವುದಾದರೂ ಅದು ಗಣನೀಯವಾಗಿದೆಯೆಂಬುದನ್ನು ವಿವೇಕಿಗಳೆಲ್ಲರೂ ಒಪ್ಪಬೇಕಾದುದಾಗಿದೆ. ಕಾಂಗ್ರೆಸ್ಸು ಇಂದಿನ ಕಾಲಸ್ಥಿತಿಗನುವಾಗಿ ತುಸು ಪ್ರತಿಗಾಮಿಯಾಗಿ ನಡೆದುಕೊಂಡು ಬರುತ್ತಿರುವುದು ಸಹಜವಾದರೂ ಕೆಲವರಿಗೆ ಇದು ಸರಿಯಲ್ಲವೆಂದು ತೋರಿಬರುವುದು ಅಷ್ಟೇ ಸಹಜವೇ. ಆದುದರಿಂದ ಇಂದು ಕಾಂಗ್ರೆಸ್ ಸಂಸ್ಥೆಯು ತನ್ನ ಧ್ಯೇಯ ಹಾಗೂ ಧೋರಣೆಗಳನ್ನು ವಿಶದವಾಗಿ ಜನತೆಯ ಮುಂದೆ ಇಡುವುದು ಮಾತ್ರವಲ್ಲ, ಅವು ಜನತೆಗೂ ಸರಿಯೆಂದು ಕಂಡುಬರುವಂತೆ, ಜನಮನವನ್ನು ತನ್ನತ್ತ ಆಕರ್ಷಿಸುವಂತೆ ಪ್ರಯತ್ನಿಸಬೇಕು. ಕಾಂಗ್ರೆಸ್ಸು ತನ್ನ ಹೆಸರಿನಿಂದ ಮತ್ತು ಕೆಲನಾಯಕರ ಪ್ರಭಾವದಿಂದ ಉಳಿದುಕೊಂಡಿದೆ ಎಂಬ ಆರೋಪಗಳು ಬರದಂತೆ, ವೈಧಾನಿಕವಾಗಿ ಜನದೊಲವು ಪಡೆಯುವತ್ತ ಕಾಂಗ್ರೆಸ್ ಸಂಸ್ಥೆಯ ಕಾರ್ಯಕರ್ತರು ಶ್ರಮಿಸಬೇಕು; ಆಗ ಕಾಂಗ್ರೆಸ್ಸು ಪ್ರವರ್ಧಮಾನ ಪಥದಲ್ಲಿ ಭ್ರಮಿಸತೊಡಗುವುದು ಮಾತ್ರವಲ್ಲ, ವಿರೋಧೀ ಪಕ್ಷಗಳ ಬಲವನ್ನೂ ಕುಂದಿಸಲು ಸಮರ್ಥವಾಗುವುದು.

ಕಾಂಗ್ರೆಸಿನ ಗುರಿ ಚುನಾವಣೆಗಳಲ್ಲಿ ಗೆಲ್ಲುವುದು ಮಾತ್ರವಾಗಿರದೆ ನಿರ್ವಂಚನೆಯಿಂದ ಜನಸೇವೆ ಮಾಡುವುದಾಗಿರಬೇಕು. ನಮ್ಮ ಕಾಂಗ್ರೆಸ್ ಧುರೀಣರು ಜನಸಂಪರ್ಕ ಬೆಳೆಸಬೇಕೆಂದು ಉದ್ಘೋಷಿಸುತ್ತಿರುವರಾದರೂ, ಕಾಂಗ್ರೆಸ್‌ನ ಮೂಲತತ್ತ್ವ ಪ್ರಚಾರಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸುತ್ತಿರುವುದು ಕಂಡುಬರುವುದಿಲ್ಲ. ತಮ್ಮ ವೇತನದಲ್ಲಿ ಭಡ್ತಿಯನ್ನು ಮಾಡಿಕೊಳ್ಳಲು ಬಯಸಿದ ಎಂ. ಎಲ್. ಎ.ಗಳು ತಮ್ಮ ಮತದಾರ ಕ್ಷೇತ್ರದಲ್ಲಿ ಅದೆಷ್ಟು ತಿರುಗಾಡಿದ್ದಾರೆ? ಎಂದರೆ, ಅಗ ಉತ್ತರಿಸುವುದು ಪ್ರಯಾಸವಾಗಬಹುದು. ಪ್ರಗತಿಪಥದಲ್ಲಿ ಓಡುತ್ತಿರುವ ಭಾರತ ಪುನಾರಚನಾ ಕಾರ್ಯಭಾರದ ಈ ಸಮಯದಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಮಹತ್ವಪೂರ್ಣ ಗೊತ್ತುವಳಿಗಳು ಸ್ವೀಕೃತವಾಗುವ ಸಂದರ್ಭವೀಗ ಇಲ್ಲ. ದೇಶದ ಪ್ರಬಲ ಸಮಸ್ಯೆಯಾದ ಭೂ ಪ್ರಶ್ನೆಯ ಬಗ್ಗೆ ಕಳೆದ ವರ್ಷವೇ ನಿರ್ಣಯವಾಗಿಬಿಟ್ಟಿರುವುದರಿಂದ, ಈ ವರ್ಷ ಪುನಃ ಅದನ್ನು ಒತ್ತಿ ಹೇಳಬೇಕಾಗಿಲ್ಲ. ಆದುದರಿಂದ ದೇಶದಲ್ಲಿನ ಪಂಚವಾರ್ಷಿಕ ಯೋಜನೆ ಹಾಗೂ ಆರ್ಥಿಕ ಸ್ಥಿತಿಗತಿಗಳ ವಿಷಯವಾಗಿ ಸಾಮಾನ್ಯ ಗೊತ್ತುವಳಿಗಳೇ ಅಧಿಕೃತವಾಗಿ ಬರುವುವು. ಚೀನಾ-ಭಾರತಗಳ ನಡುವಿನ ಸೀಮಾವಿವಾದದ ಬಗ್ಗೆ ಇದುವರೆಗೆ ಭಾರತವು ವಹಿಸಿದ್ದ ಧೋರಣೆಯನ್ನು ಸಂಪೂರ್ಣವಾಗಿ ಈ ಅಧಿವೇಶನದಲ್ಲಿ ಸಮರ್ಥಿಸದಿರುವುದೂ ಸಾಧ್ಯವಿಲ್ಲ. ಆರ್ಥಿಕ ಸ್ಥಿತಿಗತಿಗಳ ವಿಚಾರವೆನ್ನುವಾಗ, ಭಾರತದ ಕರಾಳ ಚಿತ್ರ ನಮ್ಮೆದುರು ಕಟ್ಟಿದಂತಾಗುತ್ತದೆ. ದೇಶದಲ್ಲಿನ ಪ್ರಜೆಯ ಸರಾಸರಿ ಆದಾಯವು ಏರಿರುವುದೆಂದು ಅಂಕೆಸಂಖ್ಯೆಗಳು ಹೇಳಿದರೂ ಪ್ರತ್ಯಕ್ಷದಲ್ಲಿ ಇದು ತೋರಿಬರುತ್ತಿಲ್ಲ; ನಾವು ಅರ್ಥಸಂಬಂಧದಲ್ಲಿ ಸದಾ ಅನ್ಯರ ವಶವರ್ತಿಯಾಗಿಯೇ ಉಳಿಯಬೇಕಾದ ಅವಸ್ಥೆಯಲ್ಲಿಯೇ ಉಳಿದಿದ್ದೇವೆ. ನಮ್ಮ ಯೋಜನೆಗಳನ್ನು ಪೂರ್ಣಗೊಳಿಸಬೇಕಾದರೆ, ಅಮೆರಿಕೆಯ ಅಥವಾ ರಶ್ಯದ ಇಲ್ಲವೇ ಬೇರಾವುದೋ ರಾಷ್ಟ್ರದ ಮುಂದೆ ಕೈಚಾಚುತಿದ್ದೇವೆ. ಈ ಧೋರಣೆಯನ್ನೂ ಖಂಡಿಸುವ ಪಕ್ಷಗಳು ನಮ್ಮಲ್ಲಿವೆ. ದೇಶದಲ್ಲಿ ಮಿತವ್ಯಯವನ್ನು ಸಾಧಿಸುವುದರಿಂದ ದೇಶದ ಆಂತರಿಕ ಸಂಪತ್ತು ಉಳಿಯುವುದು ದಿಟವಾದರೂ ಈ ಉಳಿತಾಯವು ಉಪದೇಶ ಮಾತ್ರವಾಗಿರುವುದನ್ನು ನಾವು ಎಲ್ಲೆಲ್ಲಿಯೂ ಕಾಣುತ್ತೇವೆ. ಹೀಗೆ, ಇಂದು ಕರ್ನಾಟಕದಲ್ಲಿ ಸೇರಲಿರುವ ಬೆಂಗಳೂರು ಕಾಂಗ್ರೆಸ್ ಅಧಿವೇಶನವು ತನ್ನ ಘನಸ್ತಿಕೆಯನ್ನು ಶಾಶ್ವತವಾಗಿ ಉಳಿಸಲು ನೆರವಾಗುವಂತಹ ರಚನಾತ್ಮಕ ಕಾರ್ಯಕ್ರಮಗಳಿಗೆ ಪ್ರಾಶಸ್ತ್ಯವನ್ನು ಕೊಡುವಂತೆ ಕಾಂಗ್ರೆಸಿಗರಿಗೆ ಸ್ಫೂರ್ತಿಕೊಡಬೇಕು. ಇಲ್ಲವಾದರೆ, ಕಾಂಗ್ರೆಸಿನ ಆದರ್ಶಗಳು ಜನತೆಗೆ ತಿಳಿಯದೆ, ಅವರು ಇತರ ಪಕ್ಷಗಳ ವಂಚನೆಗೆ ಬಲಿಯಾಗಿ ಬಿಡುವರು; ಇದರಿಂದ ಕಾಂಗ್ರೆಸ್ಸು ಬೆಳೆಯುವುದೂ ಇಲ್ಲ; ಕಾಂಗ್ರೆಸ್ಸಿನ ಗುರಿ ಯಶಸ್ವಿಯಾಗುವುದೂ ಇಲ್ಲ.

ಕಾಸರಗೋಡು ಚುನಾವಣೆ

ಮುಂದಿನ ತಿಂಗಳ ಮೊದಲ ಭಾಗದಲ್ಲಿ ನಮ್ಮ ನೆರೆರಾಜ್ಯ ಕೇರಳದಲ್ಲಿ ಮಧ್ಯಾವಧಿ ಚುನಾವಣೆಯು ನಡೆಯಲಿದ್ದು, ಅಲ್ಲಿನ ೧೨೬ ಸ್ಥಾನಗಳಿಗೆ ೩೨೨ ಸ್ಪರ್ಧಾಳುಗಳು ಎದುರಾಡಲಿದ್ದಾರೆ. ಇವರಲ್ಲಿ ಕಾಸರಗೋಡು ಕರ್ನಾಟಕ ಭಾಗದ ಮಂಜೇಶ್ವರ ಮತ್ತು ಕಾಸರಗೋಡು ಮತದಾರಕ್ಷೇತ್ರಗಳಿಂದ ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಇರ್ವರು ಸ್ಪರ್ಧಾಳುಗಳೂ ಸೇರಿದ್ದಾರೆ. ಈ ಎರಡೆಡೆಗಳಲ್ಲಿ ಈ ಹುರಿಯಾಳುಗಳನ್ನು ಒಲಿಸಿಕೊಳ್ಳುವಸಲುವಾಗಿ ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಡೇಬರರೂ, ಶ್ರೀ ಬಿ. ಶಿವರಾಯರೂ ಸಂಧಾನ ಪ್ರಯತ್ನ ನಡೆಸಿದರು, ಆದರೆ ಕಾಸರಗೋಡು ಕರ್ನಾಟಕ ಭಾಗದವರಿಗೆ ಸರಿಯಾದ ಭರವಸೆಯನ್ನು ಅವರಿಂದೆಂದೂ ಕೊಡಲು ಆಗಲಿಲ್ಲ; ಹಾಗಾಗಿ ಇಂದಿರಾ ಗಾಂಧಿಯವರೆಂದಂತೆ, "ಮೊದಲು ಸ್ಪರ್ಧೆ ಹಿಂದೆಗೆಯಿರಿ; ಅನಂತರ ಮಾತುಕತೆನಡೆಸುವ" ಎಂಬಂತಾದುದರಿಂದ ಸಂಧಾನವಿಫಲವಾಯಿತು. ಚಂದ್ರಗಿರಿ ಹೊಳೆಯ ಉತ್ತರದ ಭಾಗವು ಅಚ್ಚ ಕನ್ನಡ ಪ್ರದೇಶವಾಗಿದೆ. ಈ ಭಾಗದ ಜನರಿಗೆ ನಮ್ಮ ಇಂಗಿನ ಕರ್ನಾಟಕ ಸರಕಾರದ ಸುವ್ಯವಸ್ಥೆಯ ಅನುಭವವಿಲ್ಲದಿರುವುದರಿಂದ ಅವರು ಕರ್ನಾಟಕದೊಡನೆ ಸೇರಲು ತಹತಹಿಸುತ್ತಿದ್ದಾರೆಂದು ತಿಳಿಯಬಾರದು; ಜೇನಾಗಲಿ, ನೀರಾಗಲಿ ಒಂದಾಗಿ ಕುಡಿಯಬೇಕೆಂಬುದೇ ಅವರ ಆಶಯ. ಮಹಾರಾಷ್ಟ್ರ-ಗುಜರಾಥ ಕಾಂಗ್ರೆಸ್ ಸಮಿತಿಗಳ ವಿನಂತಿಯಂತೆ (ತನ್ನ ಸ್ಥಾನ ಕಾಯ್ದುಕೊಳ್ಳಲು?) ದ್ವಿಭಾಷಾ ಮುಂಬಯಿಯನ್ನು ವಿಂಗಡಿಸಿದ ಕಾಂಗ್ರೆಸ್ಸು ಕಾಸರಗೋಡಿನ ಕನ್ನಡಿಗರ ನ್ಯಾಯವಾದ ಕೇಳಿಕೆಯನ್ನು ಈಡೇರಿಸಬೇಕಾಗಿತ್ತು. ಈಗ, ಈ ಎರಡು ಸ್ಥಾನಗಳನ್ನು ಪಡೆದಾದರೂ ಕರ್ನಾಟಕ

ನಿರೀಕ್ಷಿಸಿರಿ!

'ನವಯುಗ'ದ
ಪ್ರಜಾರಾಜ್ಯ ವಿಶೇಷಾಂಕ

ತಾ. ೨೬—೧—೬೦ರ ಸಂಚಿಕೆಯಲ್ಲಿ ಬರೆಯುವ ಕೆಲವರು ಸುಪ್ರಸಿದ್ಧ ಲೇಖಕರು:

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ,
ಡಾ| ಕೆ. ಕೃಷ್ಣಮೂರ್ತಿ,
ಪ್ರೊ| ಬಿ. ಎಚ್. ಶ್ರೀಧರ,
ವಿದ್ವಾನ್ ಯು. ನಾ. ಉಡುಪ.
ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ,
ಶ್ರೀ ಗೌರೀಶ ಕಾಯ್ಕಿಣಿ,
ಶ್ರೀ ಎಸ್. ವೆಂಕಟರಾಜ,
ಶ್ರೀ ರಸಿಕರಂಗ...... ಮೊದಲಾದವರು... ...

ಅಲ್ಲಲ್ಲಿಯ ಸುದ್ದಿಸಾರ

ಸುರತ್ಕಲ್— ಮುಕ್ಕ ಗಂಗಯ್ಯ ಸ್ಮಾರಕ ರಾತ್ರಿ ಶಾಲೆಯಲ್ಲಿ ದಿನಾಂಕ ೮ರಂದು ಕೊಡಗಿನ ಶ್ರೀ ರಾಮಕೃಷ್ಣ ಕಲ್ಲೂರಾಯ, ಹರಿದಾಸ್ ಇವರು 'ಸತಿ ಅನಸೂಯಾ ಚರಿತ್ರೆ' ಎಂಬ ಹರಿಕತೆಯನ್ನು ಮಾಡಿದರು. ಶ್ರೀ ಸೋಮಸುಂದರ ಮಾಸ್ತರರು ಹಾರ್ಮೋನಿಯಂ ಮತ್ತು ಶ್ರೀ ಶೀನ ಕೋಟ್ಯಾನರು ತಬ್ಲವನ್ನೂ ಹಿಮ್ಮೇಳವಾಗಿ ಒದಗಿಸಿದ್ದರು.

ಕುಂದಾಪುರ 'ರೂಪರಂಗ'ದವರು ಏರ್ಪಡಿಸಿದ ನಾಟಕ ಸ್ಪರ್ಧೆಯಲ್ಲಿ ಪಡುಬಿದ್ರಿನ ಕಲಾಮಂಡಳಿಯವರ 'ಶುದ್ಧ ಸುಂಠಿ'ಗೆ ಪ್ರಥಮ ಬಹುಮಾನವೂ ಸೋಮೇಶ್ವರದ ಯುವಕ ಕಲಾಮಂಡಳಿಯವರ 'ಒಂದೇ ಗುಟುಕು'ಗೆ ದ್ವಿತೀಯ ಬಹುಮಾನವೂ ದೊರಕಿದೆ. ಅಭಿನಯಕ್ಕಾಗಿ ಇಟ್ಟಿರುವ ಬಹುಮಾನಗಳಲ್ಲಿ ಮೊದಲನೆಯದು 'ಶುದ್ಧ ಸುಂಠಿ'ಯಲ್ಲಿ ಶಂಕರನ ಪಾತ್ರ ವಹಿಸಿದ ಶ್ರೀ ಎ. ಪಿ. ಕಲ್ಯಾಣಿ ಅವರಿಗೂ ಎರಡನೆಯದು ಅದೇ ನಾಟಕದಲ್ಲಿ ಪದ್ಮಳ ಪಾತ್ರ ವಹಿಸಿದ ಶ್ರೀ ಶ್ರೀನಿವಾಸರಾಯರಿಗೂ ದೊರಕಿವೆ. ಶ್ರೀ ರಾಯರಿಗೆ ಹಾಡುಗಾರಿಕೆಯ ದ್ವಿತೀಯ ಪಾರಿತೋಷಕವೂ ಲಭಿಸಿದ್ದು, ಮೊದಲನೆಯದು ಸೋಮೇಶ್ವರ ಕಲಾಮಂಡಳಿಯ ಶ್ರೀ ಹುಸೇನರಿಗೆ ಸಿಕ್ಕಿದೆ. ಯಕ್ಷಗಾನ ಸ್ಪರ್ಧೆಯಲ್ಲಿ ಕೋಟದ ಕಲಾವಿದರು ಪ್ರಥಮ ಬಹುಮಾನವನ್ನೂ ಪಡೇರಹೋಬಳಿಯ ಕಲಾವಿದರು ದ್ವಿತೀಯ ಬಹುಮಾನವನ್ನೂ ಗಳಿಸಿರುವರು.

"ರೂಪರಂಗ" ಕುಂದಾಪುರದವರ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಾಮಂಡಳಿಯ ಕಲಾವಿದರನ್ನು ಗೌರವಿಸುವ ಸಮಾರಂಭವೊಂದು ಪಡುಬಿದ್ರಿನಲ್ಲಿ ನಡೆಯಿತು. ಈ ಕೂಟವನ್ನು ಶ್ರೀ ಅಲಂಗಾರು ವೀರಣ್ಣ ಸೂಡರವರೂ ಶ್ರೀ ಎ ಉಮಾನಾಥ ಹೆಗ್ಡೆಯವರೂ ಏರ್ಪಡಿಸಿದ್ದರು.

ಧರ್ಮಾರ್ಥ ಹಾಲು ಹಂಚುವ ಕೇಂದ್ರ— ಕುಂದಾಪುರದ ದೈವಜ್ಞ ಸಮಾಜ ಯುವಕ ಸಂಘದ ಆಶ್ರಯದಲ್ಲಿ ಬಡ ಮಕ್ಕಳಿಗೆ ಹಾಲು ಹಂಚುವ ಪಂಚಾಯತ ಧರ್ಮಾರ್ಥ ಕ್ಷೀರ ಕೇಂದ್ರವನ್ನು ದೈವಜ್ಞ ವೆಲ್‌ಫೇರ್ ಸೆಂಟರಿನ ಸಂಘಟಕರಾದ ಶ್ರೀ ಕೆ. ಕೆ. ಆರ್. ಶೇಟ್, ಮಂಗಳೂರು ಇವರು ತಾ. ೩ರಂದು ಉದ್ಘಾಟಿಸಿದರು. ರೆಡ್ ಕ್ರಾಸ್ ಮಿಲ್ಕ್ ಸೆಂಟರಿನ ಸಂಘಟಕ ಶ್ರೀ ಕೆ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯನ್ನು ವಹಿಸಿದ್ದರು ಶ್ರೀಗಳಾದ ಗಣಪತಿ ಶೇಟ್, ಪದ್ಮನಾಭ ಶೇಟ್, ರಾಮದಾಸ್ ಮೊದಲಾದವರು ಭಾಷಣಮಾಡಿದರು ಅಂತ್ಯದಲ್ಲಿ ರಮೇಶ ಶೇಟರು ಧನ್ಯವಾದಗಳನ್ನರ್ಪಿಸಿದರು.

ಮೂರನೆಯ ಅಖಿಲ ಭಾರತ ಸಂಬಾರ ಮತ್ತು ಗೋಡಂಬಿ ಪ್ರದರ್ಶನವು ಮಂಗಳೂರಿನ ಜಿಲ್ಲಾ ಬೋರ್ಡ್ ಕಾರ್ಯಾಲಯದಲ್ಲಿ 30-1-60ರಿಂದ 2-2-60ರ ವರೆಗೆ ನಡೆಯಲಿರುವುದು. ಉತ್ತಮ ಪ್ರದರ್ಶಿಕೆಗಳಿಗೆ ಬಹುಮಾನವನ್ನೂ ಕೊಡಲಾಗುವುದು. ಸಾರ್ವಜನಿಕರಿಗೆ ತಾ. 30ರಂದು ಸಂಜೆ ೬ರಿಂದ ೮ ತಾಸುಗಳ ವರೆಗೆ, ತಾ. 31, ಮತ್ತು 1ರಂದು ಮುಂಜಾನೆ 9ರಿಂದ ರಾತ್ರೆ 8ರ ವರೆಗೆ ಹಾಗೂ ತಾ. 2ರಂದು ಮುಂಜಾನೆ 9ರಿಂದ ಸಂಜೆ ೬ರ ವರೆಗೆ ಪ್ರದರ್ಶನವನ್ನು ತೆರೆದಿಡಲಾಗುವುದು. ಎಲ್ಲ ಉತ್ಪಾದಕರೂ, ತಯಾರಕರೂ ವ್ಯಾಪಾರಿಗಳೂ ತಮ್ಮ ಪ್ರಯೋಜನಕಾರಿಯಾದ ಪ್ರದರ್ಶಿಕೆಗಳನ್ನು ಗೋಡಂಬಿ ಅಭಿವೃದ್ಧಿ ಅಧಿಕಾರಿಗಳು, ಮಂಗಳೂರು ಇವರಿಗಾಗಲೀ ಮಂಗಳೂರಿನ ಜಿಲ್ಲಾ ಕೃಷಿ ಅಧಿಕಾರಿಗಳಿಗಾಗಲೀ ತಾ. 29ರಂದು ಸಂಜೆ ೪ ಗಂಟೆಯವೊಳಗೆ ತಲಪುವಂತೆ ಕಳಿಸಬೇಕೆಂದೂ ಎಲ್ಲರಿಗೂ ಸ್ವಾಗತವಿರುವುದೆಂದೂ ಜಿಲ್ಲಾ ಗೋಡಂಬಿ ಅಭಿವೃದ್ಧಿ ಅಧಿಕಾರಿಗಳು ತಿಳಿಸುತ್ತಾರೆ.

ಮೂಡಬಿದ್ರಿ ಜೈನ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೩೧ರಂದು ಬ್ಲೋಕ್ ಡೆವೆಲಪ್‌ಮೆಂಟ್ ಆಫೀಸರ ಶ್ರೀ ಟಿ. ಜಿ. ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ರಘುಚಂದ್ರ ಶೆಟ್ಟರು ಸ್ವಾಗತಿಸಿದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಎ. ಸೋಮಪ್ಪ ರೈಯವರು ಶಾಲೆಯ ಪ್ರಗತಿಸೂಚಕ ವರದಿಯೋದಿದರು. ಅಧ್ಯಕ್ಷರು ಶಾಲೆಯು ಗಳಿಸುತ್ತಿರುವ ಸರಕಾರಿ ಪರೀಕ್ಷಾ ಪರಿಣಾಮಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ವಿದ್ಯೆಯೊಂದಿಗೆ ವಿದ್ಯಾರ್ಥಿಗಳು ಶಿಸ್ತನ್ನೂ ಅಭ್ಯಸಿಸುವ ಆವಶ್ಯಕತೆಯನ್ನು ಒತ್ತಿಹೇಳಿದರು. ತದನಂತರ ವಿವಿಧ ನಾಟಕಗಳು ಅಭಿನಯಿಸಲ್ಪಟ್ಟವು.

ತಾ. ೨೪ರಂದು ಇದೇ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ದಿನಾಚರಣೆಯು ಶ್ರೀ ಮಹೇಲ್ ಶ್ರೀನಿವಾಸ ನಾಯ್ಕರ ನೇತೃತ್ವದಲ್ಲಿ ಜರಗಿತು. ಶ್ರೀ ಶಾಂತ ರೈಗಳು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಸಿ. ವಿ. ಕುಮಾರರು ವರದಿ ವಾಚಿಸಿದರು. ಹಳೆಯ ವಿದ್ಯಾರ್ಥಿಗಳು ಶಾಲೆಯ ಬಳಿ ಕಟ್ಟಲಿರುವ ಕಲಾಮಂದಿರದ ಬಗ್ಗೆ ಉದಾರ ಸಹಾಯ ನೀಡುವಂತೆ ಅಧ್ಯಕ್ಷರು ವಿನಂತಿಸಿದರು. ಮನರಂಜನೆಯ ಕಾರ್ಯಕ್ರಮಗಳ ನಂತರ ವಾರ್ಷಿಕೋತ್ಸವವು ಮುಕ್ತಾಯಗೊಂಡಿತು,

ಅಮೇರಿಕೆಯ ರಾಯಭಾರಿ—ಶ್ರೀ ಎಲ್ಸ್‌ವರ್ಥ್ ಬಂಕರರು ಫೆಬ್ರವರಿ 3ರಂದು ಮಂಗಳೂರಿಗೆ ಆಗಮಿಸುವ ತಮ್ಮ ಕಾರ್ಯಕ್ರಮವನ್ನು ಮುಂದುವರಿಸಿರುವರೆಂದು ತಿಳಿಯುತ್ತದೆ. ಬೇರೆ ಕಾರ್ಯಭಾರದಿಂದಾಗಿ ಈ ಸಂದರ್ಶನವನ್ನು ಮುಂದೂಡಬೇಕಾಯಿತೆಂದು ಅವರು ಸೂಚಿಸಿದ್ದು, ಅವರ ಭೆಟ್ಟಿಯ ನಿಜವಾದ ದಿನವಿನ್ನೂ ತಿಳಿದು ಬಂದಿಲ್ಲ.

ಅಂಚೆ ತಂತಿ ನೌಕರರ ಸಭೆಯು ತಾ 7ರಂದು ಶ್ರೀ ಪಿ. ಕುಮಾರರವರ ಅಧ್ಯಕ್ಷತೆಯಲ್ಲಿ ಜರಗಿ, ದ್ವಿತೀಯ ವೇತನ ಆಯೋಗದ ಕೆಲವೊಂದು ಶಿಫಾರಸುಗಳನ್ನು ವಿರೋಧಿಸಿತು. ರಜೆಯ ಸವಲತ್ತುಗಳು ಮೊದಲಿನಂತಿರಬೇಕು, ಪ್ರೊವಿಡೆಂಟ್ ಫಂಡಿಗೆ ಸೇರಲು ಒತ್ತಾಯಕೂಡದು, ಪರಿಹಾರವನ್ನು ೧-೭-೫೭ರಿಂದಲೇ ಕೊಡಬೇಕು ಮುಂತಾದ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ಕಾರ್ಕಳ ಎಸ್. ವಿ. ಟಿ. ಹುಡುಗಿಯರ ಹೈಸ್ಕೂಲಿನ – ರಕ್ಷಕರ ಶಿಕ್ಷಕ ಸಂಘದ ಸಭೆಯು ತಾ. ೫ರಂದು ಶ್ರೀ ಕೆ. ರಾಮಚಂದ್ರ ಶೆಣೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ನಿವೃತ್ತ ಶಾಲಾಧ್ಯಾಪಕ ಮತ್ತು ಮಕ್ಕಳು ಅಭಿನಯಿಸಲಿರುವ ಸಹಾಯಾರ್ಥ ನಾಟಕವನ್ನು ಯಶಸ್ವಿಗೊಳಿಸುವಂತೆ ಸಭೆಯಲ್ಲಿ ವಿನಂತಿಸಲಾಯಿತು. ಶ್ರೀ ಕೆ. ವಿ. ಎಸ್. ಉಪಾಧ್ಯಾಯರು ಸಂಘದ ಉದ್ದೇಶಸಾಧನೆಯ ಯೋಜನಾವರದಿಯನ್ನು ಮಂಡಿಸಿದರು. ಸಂಘದ ಅಧ್ಯಕ್ಷ ಶ್ರೀ ಶೆಣೈ ಅವರು ತಮ್ಮ ತಂದೆ ದಿ. ಮಂಗಳಂಬಿರ ಪರವಾಗಿ ೧೦೦–೧೦೦ ರೂಪಾಯಿ ಮೂಲನಿಧಿಯಾಗಿ ಅರ್ಪಿಸಿದ್ದನ್ನು ಸಾದರದಿಂದ ಸ್ವೀಕರಿಸಲಾಯಿತು.

ಶ್ರೀ ಎ. ಬಿ. ಶೆಟ್ಟರ ನಿಧನ

"ನವಯುಗ"ದ ಸಂಸ್ಥಾಪಕ – ಸಂಪಾದಕರಾಗಿದ್ದು, ೧೯೩೫ರ ವರೆಗೆ ಅದನ್ನು ನಡೆಸಿಕೊಂಡು ಬಂದಿರುವ, ಮದ್ರಾಸ ಮತ್ತು ಕರ್ನಾಟಕ ಸರಕಾರಗಳ ಮಂತ್ರಿಗಳಾಗಿದ್ದ, ಜಿಲ್ಲೆಯಲ್ಲಿ ಜನತಾ ಸೇವೆಯನ್ನೇ ಮುಖ್ಯೋದ್ದೇಶವಾಗಿರಿಸಿ ಜನತೆಯಲ್ಲಿ ನವಜಾಗ್ರತಿಯನ್ನು ಹುಟ್ಟಿಸಿದ್ದ ಶ್ರೀ ಎ. ಬಿ. ಶೆಟ್ಟರು ದಿನಾಂಕ ೧೬ರಂದು ರಾತ್ರಿ ೮-೩೦ಕ್ಕೆ ನಿಧನಹೊಂದಿದರು. ಮೃತ್ಯುಮುಖರಾಗುವಾಗ ಶ್ರೀಯುತರು ೭೮ ವರ್ಷ ಪ್ರಾಯದವರಾಗಿದ್ದಾರೆ.

ಮಂಗಳೂರಿನಸ್ಸಿನ ಅತ್ತಾವರದ ಪ್ರಸಿದ್ಧ ಮನೆತನದಲ್ಲಿ ಜನಿಸಿದ ಶ್ರೀ ಶೆಟ್ಟರು ಜಿಲ್ಲೆಯಲ್ಲಿ ಮೊತ್ತಮೊದಲಿಗೆ ತಮ್ಮ ಸಮಾಜ ಸಂಘಟನೆ ಮಾಡಿದರು. ರಾಮಕೃಷ್ಣ ವಿದ್ಯಾರ್ಥಿಭವನ, ವಿಜಯ ಬ್ಯಾಂಕ್, ಬಂಟರ ಸಂಘಟನೆಯಲ್ಲಿ ಇವರು ಗಣನೀಯ ಸೂತ್ರಧಾರತನವನ್ನು ವಹಿಸಿದ್ದಾರೆ. ಸ್ಕೌಟ್ ಚಳವಳ, ಹರಿಜನ ಸೇವೆಗಳಲ್ಲಿಯೂ ದುಡಿದಿದ್ದಾರೆ. ಅನ್ನಿ ಬೆಸೆಂಟರ ಹೋಂರೂಲ್ ಚಳವಳದಲ್ಲಿ ಆಸ್ಥೆ ವಹಿಸಿದ ಇವರು ಕ್ರಮೇಣ ರಾಜ್ಯ ರಾಜಕೀಯದಲ್ಲಿ ಪ್ರವೇಶಿಸಿ ೧೯೨೩ರಿಂದಲೂ ರಾಜ್ಯ ಶಾಸನ ಸಭೆಯ ಸದಸ್ಯರಾಗಿದ್ದರು. ೧೯೩೩-೩೫ರಲ್ಲಿ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದರು. ೧೯೩೭ರಲ್ಲಿ ಮದ್ರಾಸ ಆರೋಗ್ಯ ಸಚಿವರ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿದ್ದ ಇವರು ೧೯೪೦ರ ಅಸಹಕಾರಾಂದೋಲನದಲ್ಲಿ ಜೇಲು ವಾಸವನ್ನೂ ಅನುಭವಿಸಿದ್ದರು. ೧೯೪೭ರಿಂದ ೧೯೫೭ರ ವರೆಗೂ ಮದ್ರಾಸ ಮತ್ತು ಕರ್ನಾಟಕಗಳ ವಿವಿಧ ಸಾಂಪುಕರ ಸರಕಾರಗಳಲ್ಲಿ ವಿವಿಧ ಶಾಖೆಗಳ ಮಂತ್ರಿಗಳಾಗಿ ದುಡಿದಿರುವರು. ಇದರ ನಂತರ ರಾಜಕೀಯದಲ್ಲಿ ಸಕ್ರಿಯ ಭಾಗವಹಿಸದಿರಲು ನಿಶ್ಚಯಿಸಿದ ಇವರು ಕುಟುಂಬ ಯೋಜನೆ ಮೊದಲಾದ ವಿಧಾಯಕ ಕಾರ್ಯಗಳಲ್ಲಿ ನಿರತರಾಗಿದ್ದರು.

ನಮ್ಮ ಜಿಲ್ಲೆಯಲ್ಲಿ ಸಾರ್ವಜನಿಕ ವೈದ್ಯಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಸಾಧನೆಗೆ ಕಾರಣರಾದವರಲ್ಲಿ ಶ್ರೀ ಶೆಟ್ಟರು ಅಗ್ರಗಣ್ಯರಾಗಿದ್ದು, ಬಹುಮುಖವಾಗಿ ಬಹುಜನ ಹಿತಕ್ಕಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟ ವ್ಯಕ್ತಿಯಾಗಿದ್ದಾರೆ. ದ. ಕ. ಜಿಲ್ಲೆಗಂತೂ ಇವರ ನಿಧನದಿಂದ ಅಪಾರ ನಷ್ಟಸಂಭವಿಸಿರುವುದು ನಿಸ್ಸಂದೇಹ. ಶ್ರೀ ಅತ್ತಾವರ ಬಾಲಕೃಷ್ಣ ಶೆಟ್ಟಿ ಅವರು ಎಲ್ಲರ ಪ್ರೀತಿಗೂ ಆದರಕ್ಕೂ ಪಾತ್ರರಾಗಿದ್ದು 'ನವಯುಗ'ದ ಜನ್ಮದಾತರಿದ್ದಾರೆ. ದಿವಂಗತರಿಗೆ 'ನವಯುಗ'ವು ತನ್ನ ಹೃದಯಪೂರ್ವಕವಾದ ಶ್ರದ್ಧಾಂಜಲಿಯನ್ನು ಸಮರ್ಪಿಸುವುದಲ್ಲದೇ, ಅವರ ಕುಟುಂಬದ ದುಃಖದಲ್ಲಿ ಸಹಭಾಗಿಯಾಗಿ ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಶ್ರೀ ಪರಮಾತ್ಮನಲ್ಲಿ ಪ್ರಾರ್ಥಿಸುತ್ತದೆ.

ಪ್ರಾಂತೀಕರಣ ಸಮಿತಿಯು ಮಾಡುವುದೇನೆಂದು ಯಾರಾದರೂ ಪ್ರಶ್ನಿಸಬಹುದು. ಆದರೆ, ಈ ಭಾಗದ ಜನರ ಮತ ಕೇರಳಕ್ಕಿಲ್ಲ. ಕರ್ನಾಟಕಕ್ಕಿದೆ ಎಂದು ತೋರಿಸಿಕೊಡುವುದು ಮಾತ್ರ ಇದರಿಂದ ಸಾಧ್ಯ. ಆದುದರಿಂದ, ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಈ ಎರಡು ಉಮೇದ್ವಾರರು ಗೆದ್ದು ಬಂದು, ಕಾಂಗ್ರೆಸ್ ಉಚ್ಚ ಸಮಿತಿಗೆ ಇಲ್ಲಿನ ಜನತೆಯೊಲವಿನ ಸಂಪೂರ್ಣ ಚಿತ್ರವನ್ನು ತೋರಿಸುವುದು ಅವಶ್ಯಕವೇ. ಕೇರಳೀ ಭರಣದಿಂದ ವಿಮೋಚನೆಗಾಗಿ ಹೋರಾಡುತ್ತಿರುವ ಸಮರದಲ್ಲಿ ಅವರು ಸಂಪೂರ್ಣ ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಪ್ರಕಟಣೆ

ಕಾರ್ಕಳ ತಾಲೂಕು ಯೆಲ್ಲಾರ್ಪಡಿ ಗ್ರಾಮದ ತೋಟ ಹೊಸಮನೆ ನಾಗಯ್ಯ ಯಾನೆ ಬೀರ ಸೆಟ್ರ ಅಳಿಯ ವಿಠಲ ಸೆಟ್ಟಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದ್ರೆ— ಉಡುಪಿ ತಾಲೂಕು ಪಡುಬಿದ್ರಿ ಗ್ರಾಮ ಮತ್ತು ಪರ್ಯೆಂಬಲ್ಲಿರುವ ನಿಗಳೆ ಸೀತಾರಾಮಯ್ಯನವರ ಮಗ ಪಿ. ಪಣಿಯಪ್ಪನವರ ಹಕ್ಕಿನ–ಬಾಲಗೇಣಿ ಒಕ್ಲು–ತಮ್ಮು ಮರೆಕಾಲ, ಚೀಂಕ್ರ ಮಡಿವಾಳ, ಕೊರಪಳು ಮಡಿವಾಳ್ತಿ ಈ ಮೂರು ಜನರ ಸ್ವಾಧೀನ ಇರುವ ಆಸ್ತಿಗಳನ್ನು ರೂ. 9000-0 0 ಒಂಬತ್ತು ಸಾವಿರಕ್ಕೆ ಕ್ರಯ ಬರ್ಸಿ ಕೊಡುವದಾಗಿ ವಗೈರೆ ಶರ್ತ ಕಾಣಿಸಿ ರೂ. 500|- ಐನೂರನ್ನು ಡಿಪೊಜೀಟು ಪಡೆದು ತಾ. 11–9–59ರಲ್ಲು ಒಂದು ಕರಾರು ಯಾನೆ ಟೀಂದು ಬರಕೊಟ್ಟಿರುತ್ತಾರೆ. ಈಗ ಪಣಿಯಪ್ಪನವರು ಬೇರೆಯವರ ಮಬೋದನೆಗೆ ಸೇರಿ ಬೇರೆಯವರಿಗೆ ಕ್ರಯ ಬರ್ಸಿ ಕೊಡುವ ಆಲೋಚನೆಯಲ್ಲಿರುವದಾಗಿ ನಾನು ತಿಳಿಯುತ್ತೇನೆ. ಆ ಪ್ರಕಾರ ಸದ್ರಿ ಆಸ್ತಿಗಳನ್ನು ಕ್ರಯ ಬರ್ಸಿಕೊಂಡಲ್ಲಿ ಅಂಥಾ ಕ್ರಯವು ಸಿಂಧುವಾಗಲಾರದು. ಯಾರಾದ್ರೂ ಕ್ರಯ ಬರ್ಸಿಕೊಂಡಲ್ಲಿ ಅದರ ನಷ್ಟಕ್ಕೆ ಅವರೇ ಜವಾಬುದಾರರಲ್ಲದೆ ನಾನು ಜವಾಬುದಾರನಲ್ಲ ಎಂಬ ಸಂಗ್ತಿ ಎಲ್ಲಾ ಜನರಿಗೆ ಈ ಮೂಲಕ ತಿಳಿಸೋಣಾಗಿಯದೆ,

ವಿಠಲ ಶೆಟ್ಟಿ ರುಜು.

ಮೊಕ್ಕಾಂ: ಯಲ್ಲಾರ್ಪಡಿ, ತಾ. 13.1.60.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ

ವಿಚಾರಿಸಿರಿ–

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಶಾಂತಿದೂತ

ಸಂತ್ರಸ್ತರೆದುರು ಬಾಪೂಜಿ

ಶಾಂತಿಪಥ ಗವುನೇಚ್ಛುಗಳಿಗೆ ಮಹಾತ್ಮಾ ಗಾಂಧಿಯವರ ಶಾಂತಿ ಅಹಿಂಸೆಗಳೇ ಪ್ರಕಾಶವೊದಗಿಸಬಲ್ಲದು.

ಯುಗದ ಜಟಿಲ ಮತ್ತು ಜ್ವಲಂತ ಸಮಸ್ಯೆಗಳ ಸಮಾಧಾನಕ್ಕಾಗಿ, ವಿಶೇಷವಾಗಿ ಅಶಾಂತಿಯಿಂದ ಕೂಡಿರುವ ಜಗತ್ತನ್ನು ಶಾಂತಿಯ ಕಡೆಗೆ ಕರುವಲ್ಲಿ ಮಹಾತ್ಮಾ ಗಾಂಧೀಜೀಯವರ ಜೀವನ ಹಾಗೂ ಕಾರ್ಯಗಳ ಪಾತ್ರ ಅತುಲನೀಯ ಮಹತ್ವದ್ದಾಗಿದೆ.

ಶೀತಯುದ್ಧ ಮತ್ತು ಮಾನವ ಸಂಹಾರಕ ಆಯುಧ ವಿಸ್ಫೋಟಗಳ ಮಧ್ಯೆ ಮಾನವತೆಯ ಭವಿಷ್ಯ ದಿನದಿಂದ ದಿನಕ್ಕೆ ಮಣ್ಣುಪಾಲಾಗುತ್ತಿದೆ. ಗಾಂಧೀಜೀಯವರ ವಿಚಾರಗಳು ಈ ಅರ್ಥ ಪ್ರಕಾಶಿತವಾದ ವಾತಾವರಣದಲ್ಲಿ ಜ್ಯೋತಿಪುಂಜದ ರೂಪದಲ್ಲಿ ನಮಗೆ ಮಾರ್ಗದರ್ಶಕವಾಗಿವೆ. ಅಶಾಂತಿಯ ಉತ್ಪತ್ತಿಯು ಅಧಿಕಾರ ಮತ್ತು ಕರ್ತವ್ಯದಲ್ಲಿ ಸಾಮಂಜಸ್ಯದ ಅಭಾವದಲ್ಲುಂಟಾಗುತ್ತದೆ. ದುಃಖ ಬೇಕಾದರೆ ಮನೆಯ ನಾಲ್ಕು ಗೋಡೆಗಳ ಒಳಗೇ ಸೀಮಿತವಾಗಿರಲಿ ಅಥವಾ ವಿಶ್ವ ಧರಾತಳದವರೆಗೆ ಅಪರಿಮಿತವಾಗಿರಲಿ, ಪ್ರತಿಯೊಂದು ಪರಿಸ್ಥಿತಿಯಲ್ಲೂ ಅಧಿಕಾರ ಮತ್ತು ಕರ್ತವ್ಯದ ನಡುವೆ ವಿವಾದವನ್ನು ಸಮಾಪ್ತಗೊಳಿಸಿಯೇ ಶಾಂತಿಯನ್ನು ಸ್ಥಾಪಿಸಬಹುದಾಗಿದೆ. "ಪ್ರತಿಯೊಬ್ಬ ವ್ಯಕ್ತಿ ತನ್ನ ಅಧಿಕಾರಗಳ ಕುರಿತು ಒತ್ತಾಯಮಾಡುವ ಬದಲು, ತನ್ನ ಕರ್ತವ್ಯಗಳನ್ನು ಪಾಲಿಸಿದರೆ ಆಗ ಮನುಷ್ಯಜಾತಿಯ ನಡುವೆ ತತ್ಕಾಲ ಸುವ್ಯವಸ್ಥೆ ಸ್ಥಾಪಿತವಾಗಬಲ್ಲುದು" ಎಂದು ಬಾಪೂಜಿ ಹೇಳಿದ್ದರು. ಸಬಲ ರಾಷ್ಟ್ರಗಳು ಇಂದು ಕರ್ತವ್ಯ ವಿಮುಖವಾಗಿ ಭಯ ಹಾಗೂ ಆಶಂಕೆಯ ಬೀಜ ಬಿತ್ತುತ್ತಿವೆ. ಆದರೆ ವಿಶ್ವ ಶಾಂತಿಗಾಗಿ ಉತ್ಸಾಹ ಮತ್ತು ವಿಶ್ವಾಸದ ಆವಶ್ಯಕತೆಯಿದೆ. ಅದು ಕೇವಲ ಕರ್ತವ್ಯನಿಷ್ಠೆಯಿಂದಲೇ ಸಾಧ್ಯ.

ಗಾಂಧೀಜೀಯವರು ದೀನ, ದುಃಖಿ, ನಿರ್ಬಲ ಮತ್ತು ವಿಕಲಮಾನಸರನ್ನು ಪೂಜ್ಯರೆಂದು ತಿಳಿಯುತ್ತಿದ್ದರು. ಜೀವನ ಪರ್ಯಂತ ಅವರು ಮಾನವ ಸೇವೆಯಲ್ಲೇ ನಿರತರಾಗಿದ್ದರು. ಅವರು ಈ ಮಾನವಸೇವೆಯನ್ನು ಯಾವುದೇ ಒಂದು ಆಭಾರ ಅಥವಾ ಅನುಗ್ರಹದ ಆಕಾಂಕ್ಷೆಯಿಂದ ಮಾಡಿಲ್ಲ. ಆದರೆ, ಮಾನವರ ಕುರಿತು ತಮಗಿರುವ ಅಪಾರ ಶ್ರದ್ಧೆಯ ಕಾರಣದಿಂದಲೇ ಅವರು ಸೇವಾನಿರತರಾದರು. ಬಣ್ಣ, ವರ್ಗ ಅಥವಾ ಜಾತಿಭೇದಕ್ಕೆ ಅವರು ಯಾವುದೇ ಸ್ಥಾನ ಕೊಟ್ಟಿರಲಿಲ್ಲ. ಇಂದು ಕೇವಲ ಬಣ್ಣ, ವರ್ಗ ಅಥವಾ ಜಾತಿಭೇದದ ಕಾರಣದಿಂದಾಗಿಯೇ ಮಾನವತೆಯು ದುಃಖ, ದರಿದ್ರತೆ ಅಥವಾ ದೌರ್ಬಲ್ಯದ ವಿಕಟ ಪರಿಸ್ಥಿತಿಗಳನ್ನೆದುರಿಸುತ್ತಿರುವಾಗ, ನಮಗೆ ಬಾಪೂಜಿಯ ಜೀವನದರ್ಶನ ಅಂಧಕಾರದಿಂದ ಪ್ರಕಾಶದ ಕಡೆಗೆ ಹೋಗುವಂತೆ ಪ್ರೇರೇಪಣೆ ನೀಡುತ್ತದೆ.

ಬಾಪೂಜಿಯವರು ಅಪರಿಗ್ರಹದ ಪ್ರಬಲ ಸಮರ್ಥಕರಾಗಿದ್ದರು. ಭೌತಿಕವಾದದ ಪ್ರಸ್ಥಾರದಿಂದ ಮಾನವ ಜಾತಿಯಲ್ಲಿ ಸಂಚಯ ವೃತ್ತಿಯು ವಿಸ್ತಾರವಾಗತೊಡಗಿತು: ಆಯುಧಗಳಿಂದ ಅಥವಾ ಆಹಾರ ಧನವಿರಲಿ ಅಥವಾ ಭೂಖಂಡ ಅಂತತಃ ಸಂಚಯ ಅಶಾಂತಿಯ ಜನಕವಾಗಿದೆ. ಚಕ್ರವರ್ತಿ, ಸಾಮ್ರಾಟರಿಗಿಂತಲೂ ಅಧಿಕ ವಂದ್ಯರಾದ ಬಾಪೂ ತನ್ನ ಜೀವನದಲ್ಲಿ ಎಂದಿಗೂ ಯಾವುದೇ ತರಹದ ಸಂಚಯ ವೃತ್ತಿಯನ್ನು ಇಟ್ಟುಕೊಂಡಿಲ್ಲ. ಇಂದು ಶಕ್ತಿ ಅಥವಾ ಶಾಸ್ತ್ರ ಸಂಚಯವನ್ನು ತೆಗೆದುಕೊಂಡು ಜಗತ್ತಿನಲ್ಲಿ ವಿಷಸಿಕ್ತ ವಾತಾವರಣವಿಸ್ತೃತವಾಗುತ್ತಿರುವಾಗ, ಅಪರಿಗ್ರಹವೇ ಏಕಮಾತ್ರ ವಿಷ ನಿರಾಕರಣದ ಸಮಾಧಾನವಾಗಿದೆ.

ಇಂದಿನ ಯುಗದಲ್ಲಿ ಅಹಿಂಸೆಗೆ ಬಹಳ ಮಹತ್ವವಿದೆ. ಮಾನವತೆಯ ರಕ್ಷಣೆಗಾಗಿ ಅಹಿಂಸಕ ರಾಜನೀತಿಗೆ ಮಾನ್ಯತೆ ಕೊಡುವುದು ಸಾಧಾರಣ ಶಕ್ತಿಗಳಿಗೆ ಮಾತ್ರವಲ್ಲ, ದೊಡ್ಡ ದೊಡ್ಡ ರಾಷ್ಟ್ರಗಳಿಗೂ ತುಂಬ ಆವಶ್ಯಕವಾಗಿದೆ. ಬಾಪೂಜಿಯವರ ವ್ಯವಹಾರ ಹಾಗೂ ಅವರ ವಾಣಿಯ ಅನುಸಾರ ನಡೆಯುವುದರಿಂದ ಮಾನವತೆಯ ಮಾರ್ಗ ನಿಶ್ಚಯವಾಗಿಯೂ ನಿಷ್ಕಂಟಕವಾಗುವುದು.

ಅನು:— ಉಡುಪಿ ನಾರಾಯಣ ಬಲ್ಲಾಳ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಆರೋಗ್ಯದಾನ

(೪ನೇ ಪುಟದಿಂದ)

ಮಾಡಿ ಬೆಂಕಿ ಕೆಂಡದಲ್ಲಿ ಹಾಕಿ ಧೂಪ ಹಿಡಿದರೆ ಚಿಕ್ಕದಾಗಿ ಸ್ವಸ್ಥಾನ ಸೇರುವುದು ಅಥವಾ

ಬೆಳ್ಳುಳ್ಳಿ – ಎಳ್ಳು, ಸಾಸಿವೆ ಇವುಗಳ ಚೂರ್ಣ ಮಾಡಿ ಬೆಂಕಿ ಕೆಂಡದಲ್ಲಿ ಹಾಕಿ ಧೂಪಗುದಕ್ಕೆ ಹಿಡಿದರೂ ಸ್ವಸ್ಥಾನ ಸೇರುವುದು.

ಗುದತುರಿಕೆ ಬಹಳ ಇದ್ದರೆ— ಕಳ್ಳಿ ಎಲೆ ಬೆಂಕಿಯಲ್ಲಿ ಬಾಡಿಸಿ ಜಜ್ಜಿ ಗುದಕ್ಕೆ ಇಟ್ಟು ರಾತ್ರಿ ಕಟ್ಟಿ ಬಿಗಿದು ಬೆಳಗ್ಗೆ ತೆಗೆಯುವುದು ೩ ದಿನದಲ್ಲಿ. ಅರ್ಶಸ್ಸು, ಕೃಮಿ ತುರಿಕೆ ಸಹ ಗುಣವಾಗಿ ಸುಖವಾಗುವುದು.

ಮೊಳೆ ಬೆಳೆದಿದ್ದರೆ— ಮುಂಡಾಂಗಿ ಎಲೆಯ ಚಾಪೆ (ಕ್ಷುದ್ರಕೇಶಕೀ-ಮುಂಡಿಗೆ) ಸುಟ್ಟು ಕರಿಮಾಡಿ ಜೇನಿನಲ್ಲಿ ಅರದು ಹರಳೆಣ್ಣೆ ಸೇರಿಸಿ ಗುದಮೊಳೆಗೆ ಲೇಪಹಾಕಿದರೆ ಗುಣ ಕಂಡುಬರುವುದು.

೧ ಭಾಗ ಜೀರಿಗೆ ೯ ಭಾಗ ಚೂರಿಮುಳ್ಳಿನ ಎಲೆ ಸಹ ಒಂದಾಗಿ ಸೇರಿಸಿ ಅರದು ಬೊಗರಿಗಾತ್ರ ಮಾತ್ರೆಮಾಡಿ ದಿನವೂ ಬೆಳಗ್ಗೆ ಒಂದೊಂದು ಮಾತ್ರೆಯಂತೆ ಸೇವನೆಮಾಡಿದರೆ ಕೆಲವೇ ದಿನಗಳಲ್ಲಿ ಮೊಳೆನಾಶ.

ಮೊಳೆಗೆ—ಗೋಳಿ ಎಲೆ ಕರಕುಮಾಡಿ ಎಳ್ಳೆಣ್ಣೆಯಲ್ಲಿ ಅರದು ಲೇಪಹಾಕಿದರೆ ಗುಣ.

ಪುಜಿಂಗರಿ (ಅಟ್ಟದಕರಿ) ಪುಪ್ಪದಲ್ಲಿ ಅರದು ಲೇಪಿಸಿ ಬೆಂಕಿಯಲ್ಲಿ ಕಾಸಿದರೆ ಮೊಳೆ ಬತ್ತುವುದು. ಮಜ್ಜಿಗೆಯಲ್ಲಿ ಅರದೂ ಲೇಪಿಸಬಹುದು.

ಮೊಳೆಗೆ—ಚಪಲ್ಯರ ಮತ್ತು ಪೊಂಗಾರ ಬೆಳುಗರ ಅರಳು ಮಾಡಿ ಸೇರಿಸಿ ನಿಂಬೆರಸದಲ್ಲಿ ಅರದು ಲೇಪಿಸಿದರೆ ನೊರಗಿ ಹೊದೀತು ಅಥವಾ.

ಎಕ್ಕೆ—ಬೇವಿನ ಹಿಪ್ಪೆ ಬೆಳ್ಳುಳ್ಳಿ ಕಾಲು ಕಾಲು ತೊಲೆ ಸೇರಿಸಿ ನುಣ್ಣಗೆ ಅರದು ಆಕಳ ಮೊಸರಿನಲ್ಲಿ ಕದಡಿ ಪ್ರಾತಃ ಸೇವನೆ ೧ ವಾರ ಕಟು ಪಥ್ಯ ಅರ್ಶಸ್ಸು ಮೊಳೆ, ಕ್ರಿಮಿ, ಸಹಿತಕನವಾಗಿ ಸುಖವಾದೀತು.

ಆಣಿಲೆ ಕಾಯಿ— (ಅಳಲೆ ಕಾಯಿ) ವಸ್ತ್ರಗಾಳಿತ ಚೂರ್ಣ ಮಾಡಿ ಬೆಲ್ಲದಲ್ಲಿ ಕಲಸಿ ದಿನವೂ ರಾತ್ರಿ ಊಟದ ನಂತರ ಒಂದೊಂದು ತೊಲೆಯಂತೆ ಸೇವನೆ ೧೨, ೪೮ ದಿನ. ಜೀರ್ಣಶಕ್ತಿ ವೃದ್ಧಿಯಾಗಿ ಮಲ ಶೋಧನೆ ಸರೀಸಾಗಿ ಎಲ್ಲಾ ವಿಧ ಮೂಲವ್ಯಾಧಿ ಗುಣವಾಗಿ ಆರೋಗ್ಯವಾದೀತು.

(ಪಾಣಾಜೆ ಪಂಡಿತರ ಸಂಗ್ರಹದಿಂದ)

— ಪಾಣಾಜೆ ಶಂಕರ ನಾರಾಯಣ ಭಟ್ಟ.



ಅಮೆರಿಕೆಯ ಆರನೆಯ ಎಕ್ಸ್‌ಪ್ಲೋರರ್‌ನನ್ನು ಎಸೆಯಿತು.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆನಾರಾ (ಅನು: ಕು. ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ ಶೆಟ್ಟಿ, ಎಂ ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭೂನಾರ್ಜನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನಮ್ಮಲ್ಲಿ ಸಿಗುವ ಇತರ ಪುಸ್ತಕಗಳ ಯಾದಿಗೆ ಬರೆಯಿರಿ

ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No 466 N/50 date 2-12-1950 of the Director of public Instruction Madras·

ಪರಿಚಯ

ಉಕ್ಕಿನ ಕಾರಖಾನೆಯ ದುರ್ಗಾಪುರ

ಕೆಲವರ್ಷಗಳ ಮೊದಲು ಕುಗ್ರಾಮವಾಗಿದ್ದ ದುರ್ಗಾಪುರವು ಇಂದು ಜನಭರಿತವಾದ ನಗರವಾಗಿದೆ. ಇಲ್ಲಿನ ಕಾರಖಾನೆಯ ಪ್ರಥಮ ಕುಲುಮೆಯು ದಶಂಬರ ೨೯ರಂದು ಉದ್ಘಾಟಿತವಾಯಿತು.

ಕಲ್ಕತ್ತೆಗೆ ಪಶ್ಚಿಮ ದಿಕ್ಕಿನಲ್ಲಿ ಸುಮಾರು ೧೦೦ ಮೈಲಿಗಳ ದೂರದಲ್ಲಿ ದುರ್ಗಾಪುರವಿದೆ. ಕೆಲವು ವರ್ಷಗಳ ಹಿಂದಿನವರೆಗೂ ಯಾರಿಗೂ ದುರ್ಗಾಪುರದ ಹೆಸರು ಗೊತ್ತಿರಲಿಲ್ಲ. ಯುಗಯುಗಗಳಿಂದಲೂ ಹೇಳುವವರು ಕೇಳುವವರು ಇಲ್ಲದೆ ಇದ್ದ ಕುಗ್ರಾಮವದು. ಆದರದೇ ಇಂದು ಬರ್ದ್ವಾನ್ ಮತ್ತು ಅಸನ್‌ಸೋಲ್ ನಡುವೆ ಗ್ರಾಂಡ್ ಟ್ರಂಕ್ ಛಾಟ್ರಾ ಮಾರ್ಗದಲ್ಲಿ ಪ್ರಯಾಣ ಮಾಡುವ ಪ್ರವಾಸಿ ರಾಷ್ಟ್ರಸರಕಾರದ ಉಕ್ಕಿನ ಕಾರ್ಖಾನೆಯ ಕಟ್ಟಡಗಳು ಸುಮಾರು ನಾಲ್ಕೈದು ಮೈಲಿಗಳ ಉದ್ದಕ್ಕೂ ಇರುವುದನ್ನು ಕಂಡು ವಿಸ್ಮಯಗೊಳ್ಳದೇ ಇರನು. ರಾತ್ರಿಕಾಲದಲ್ಲಿ ಈ ಛಾಟಾ ಮಾರ್ಗದಲ್ಲಿ ಸಂಚರಿಸುವವರಿಗೆ ದುರ್ಗಾಪುರವು ಒಂದು ಮಾಯಾಲೋಕವಿದ್ದಂತೆ ಭಾಸವಾಗದೇ ಇರದು. ಅಸಂಖ್ಯಾತ ದೀಪಗಳಿಂದ ಬೆಳಗುತ್ತಿರುವ ಈ ಪ್ರದೇಶವು ಮನಮೋಹಕವಾಗಿ ಕಾಣುವುದು.

ಸ್ಥಳದ ಆಯ್ಕೆ

೧೯೫೫ರ ಆದಿಭಾಗದಲ್ಲಿ ಸರ್ಕಾರದವರು ಸರ್ಕಾರಿ ಉದ್ಯಮ ಕ್ಷೇತ್ರದಲ್ಲಿ ಮೂರನೆಯ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ಕೈಗೊಂಡರು. ಉಳಿದ ಎರಡು ಕಾರ್ಖಾನೆಗಳನ್ನು ರೂರ್ಕೆಲಾ ಮತ್ತು ಭಿಲೈಗಳಲ್ಲಿ ಸ್ಥಾಪಿಸಲು ಈ ಮೊದಲೇ ನಿರ್ಧಾರವಾಗಿತ್ತು. ಈ ಎರಡು ಕಾರ್ಖಾನೆಗಳಲ್ಲಿ ಪ್ರತಿಯೊಂದೂ ವರ್ಷಕ್ಕೆ ೧೦ ಲಕ್ಷ ಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸಬೇಕೆಂಬ ಗುರಿಯನ್ನಿರಿಸಿಕೊಳ್ಳಲಾಗಿತ್ತು. ದೇಶದಲ್ಲಿ ವರ್ಷಕ್ಕೆ ೬೦ ಲಕ್ಷ ಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸಬೇಕೆಂಬ ಗುರಿಯನ್ನಿಟ್ಟುಕೊಳ್ಳಲಾಗಿತ್ತು. ಸರ್ಕಾರಿ ಉದ್ಯಮ ಕ್ಷೇತ್ರಗಳಿಂದ ೩೦ ಲಕ್ಷ ಟನ್ನುಗಳಷ್ಟು ಉಕ್ಕನ್ನೂ ಖಾಸಗಿ ಉದ್ಯಮ ಕ್ಷೇತ್ರದಿಂದ ೩೦ ಲಕ್ಷ ಟನ್ನುಗಳಷ್ಟು ಉಕ್ಕನ್ನೂ ಉತ್ಪಾದಿಸಿ ಗುರಿಯನ್ನು ಮುಟ್ಟುವ ಉದ್ದೇಶವನ್ನಿಟ್ಟುಕೊಳ್ಳಲಾಗಿತ್ತು.

ಮೂರನೆಯ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಸ್ಥಳದ ಆಯ್ಕೆ, ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯ, ಕಾರ್ಖಾನೆಯ ಸ್ಥಾಪನೆಗಾಗಿ ತಗಲುವ ಖರ್ಚುವೆಚ್ಚ ಮತ್ತು ಸಿಬ್ಬಂದಿಯ ಅಗತ್ಯ ಈ ಮುಂತಾದ ವಿಷಯಗಳಲ್ಲಿ ಸಲಹೆ ನೀಡಲು ಕೊಲಂಬೋ ಯೋಜನೆಯ ಪ್ರಕಾರ ಇಂಗ್ಲೆಂಡಿನಿಂದ ಒಂದು ತಾಂತ್ರಿಕ ಮಂಡಲಿಯ ಸೇವೆಯನ್ನು ಪಡೆಯಲಾಯಿತು. ಮಂಡಲಿಯು ದುರ್ಗಾಪುರದ ಆಯ್ಕೆಮಾಡಿ ತನ್ನ ಶಿಫಾರಸನ್ನು ಸರ್ಕಾರದವರಿಗೆ ತಿಳಿಸಿತು. ದುರ್ಗಾಪುರದಲ್ಲಿ ನಾನಾ ರೀತಿಯ ಸೌಲಭ್ಯಗಳು ದೊರಕುವುದೇ ಸ್ಥಳದ ಆಯ್ಕೆಗೆ ಪ್ರಬಲ ಕಾರಣವೆಂದೂ ಮಂಡಲಿ ತಿಳಿಸಿತು. ದುರ್ಗಾಪುರವು ಗ್ರಾಂಡ್ ಟ್ರಂಕ್ ರಸ್ತೆಯಲ್ಲಿದೆ ಹಾಗೂ ಕಲ್ಕತ್ತೆಯಿಂದ ಅಸನ್‌ಸೋಲ್ ಮುಖ್ಯ ರೈಲು ಮಾರ್ಗದಲ್ಲಿದೆ. ದಾಮೋದರ ನದಿಗೆ ಅಡ್ಡವಾಗಿ ಕಟ್ಟಿರುವ ದುರ್ಗಾಪುರ ಅಣೆಕಟ್ಟೆಯು ಈ ಕಾರ್ಖಾನೆಗೆ ಅಪರಿಮಿತ ಪ್ರಮಾಣದ ನೀರನ್ನು ಪೂರೈಸಬಲ್ಲದು. ಝರಿಯಾ ಮತ್ತು ರಾಣಿಗಂಜ್ ಕಲ್ಲಿದ್ದಲು ಗಣಿ ಕ್ಷೇತ್ರಗಳೂ ದುರ್ಗಾಪುರಕ್ಕೆ ಸಮೀಪದಲ್ಲಿಯೇ ಇವೆ. ಕಬ್ಬಿಣ ಅದಿರಿನ ನಿಕ್ಷೇಪಗಳು ದುರ್ಗಾಪುರಕ್ಕೆ ಸಮೀಪದಲ್ಲಿ ಗ್ವಾ ಪ್ರದೇಶದಲ್ಲಿರುವುದೂ ಕಾರ್ಖಾನೆಯ ಸ್ಥಾಪನೆಗೆ ದುರ್ಗಾಪುರವು ಸರ್ವೋತ್ಕೃಷ್ಟವಾದ ಸ್ಥಳವೆಂದು ಪರಿಗಣಿಸಲ್ಪಟ್ಟಿತು. ಸರ್ಕಾರದವರು ತಾಂತ್ರಿಕ ಮಂಡಲಿಯ ಈ ಶಿಫಾರಸನ್ನು ಅಂಗೀಕರಿಸಿದರು.

ಕರಾರು

ಭಿಲೈ ಮತ್ತು ರೂರ್ಕೆಲಾ ಉಕ್ಕಿನ ಕಾರ್ಖಾನೆಗಳ ಸ್ಥಾಪನೆ ಸಂಬಂಧದಲ್ಲಿ ಕೈಗೊಳ್ಳಲಾಗಿದ್ದ ಮಾತುಕತೆಗಳ ಅನುಭವವು ದುರ್ಗಾಪುರ ಉಕ್ಕಿನ ಕಾರ್ಖಾನೆ ಸ್ಥಾಪನೆ ಸಂಬಂಧವಾದ ಮಾತುಕತೆಗಳು ಮತ್ತು ಒಪ್ಪಂದದ ಸಮಯದಲ್ಲಿ ಉಪಯುಕ್ತವೆನಿಸಿತು. ಭಾರತಕ್ಕೆ ನಿಯೋಗ ಕಳುಹಿಸುವಂತೆ ಬ್ರಿಟನ್ನಿನ ಹೆಸರಾಂತ ಉಕ್ಕಿನ ಕೈಗಾರಿಕೆ ಮತ್ತಿತರ ಆಸಕ್ತಿಗಳಿಗೆ ಆಹ್ವಾನ ಕಳುಹಿಸಲಾಯಿತು. ಅಂತೆಯೇ ೧೯೫೫ರ ಅಂತ್ಯದ ವೇಳೆಗೆ ನಿಯೋಗವೊಂದು ಭಾರತಕ್ಕೆ ಬಂದು ಪೀಠಿಕಾ ಸ್ವರೂಪದ ಮಾತುಕತೆಗಳನ್ನು ಆರಂಭಿಸಿತು. ದೇಶದಲ್ಲಿ ಉಕ್ಕಿನ ಕಾರ್ಖಾನೆಗಳ ಸ್ಥಾಪನಾ ಕಾರ್ಯದಲ್ಲಿ ಅನುಭವ ಪಡೆದಿದ್ದ ಮೆ|| ಇಂಟರ್‌ನೇಷನಲ್ ಕನ್‌ಸ್ಟ್ರಕ್ಷನ್ ಕಂಪನಿಯೆಂಬ ಹೆಸರಿನ ಒಂದು ವಿಖ್ಯಾತ ಸಂಸ್ಥೆಯನ್ನು ಭಾರತ ಸರ್ಕಾರದ ಸಲಹಾಗಾರ ಸಂಸ್ಥೆಯನ್ನಾಗಿ ನೇಮಿಸಿಕೊಳ್ಳಲಾಯಿತು. ೩೧-೧೦-೫೬ರಂದು ಕರಾರಿಗೆ ಸಹಿಬಿತ್ತು.

ಕಾರ್ಖಾನೆ

ದುರ್ಗಾಪುರ ಕಾರ್ಖಾನೆಯು ಆಧುನಿಕ ರೀತಿಯದಾಗಿದ್ದು ವರ್ಷಕ್ಕೆ ೧೦ ಲಕ್ಷ ಟನ್ನುಗಳಷ್ಟು ಉಕ್ಕಿನ ಗಟ್ಟಿಗಳನ್ನೂ ೩,೫೦,೦೦೦ ಟನ್ನುಗಳಷ್ಟು ಬೀಡು ಕಬ್ಬಿಣವನ್ನೂ ಉತ್ಪಾದಿಸುವ ಸಾಮರ್ಥ್ಯ ಪಡೆದಿರುತ್ತದೆ. ಜೊತೆಗೆ ಅಮೋನಿಯಂ ಸಲ್ಫೇಟ್, ಬೆಂಜೀನ್, ಟಾಲೀನ್, ನಾಫ್ಥಲೀನ್, ಟಾರ್ ಮುಂತಾದ ಉಪ ಉತ್ಪನ್ನಗಳೂ ಈ ಕಾರ್ಖಾನೆಯಲ್ಲಿ ತಯಾರಾಗುತ್ತವೆ.

ದುರ್ಗಾಪುರದಲ್ಲಿ ಒಂದು ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ಈ ಉಕ್ಕಿನ ಕಾರ್ಖಾನೆಯು ಜಾಯಿಂಟ್‌ಗಳು, ಕೊಳವೆಗಳು, ಹಗುರವಾದ ಕಂಬಗಳು, ಸರಳುಗಳು, ಬೇರಿಂಗ್ ಪ್ಲೇಟ್‌ಗಳು, ಫಿಷ್ ಪ್ಲೇಟ್‌ಗಳು ಮುಂತಾದುವನ್ನು ತಯಾರಿಸುವುದು.

ಈ ಕಾರ್ಖಾನೆಯಲ್ಲಿ ನಿರ್ಮಿಸಲಾಗುತ್ತಿರುವ ಮೂರು ಕೋಕ್ ಓವನ್—ಬ್ಯಾಟರಿಗಳಲ್ಲಿ ಮೊದಲನೆಯದನ್ನು ೧೯೫೯ರ ಆಗಸ್ಟ್ ೨೪ರಂದು ಗೊತ್ತಿಸಲಾಯಿತು. ಈ ಕಾರ್ಖಾನೆಯಲ್ಲಿ ನಿರ್ಮಿಸಲಾಗುತ್ತಿರುವ ಮೂರು ಊದು ಕುಲುಮೆಗಳಲ್ಲಿ ಮೊದಲನೆಯದನ್ನು ಡಿಸೆಂಬರ್ ೨೯ರಂದು ಕಾರ್ಯಾಚರಣೆಗೆ ತೊಡಗಿಸಲಾಯಿತು. ವರ್ಷಗಳ ಕಾಲದ ಶ್ರಮ, ಬೆವರಿನ ದುಡಿತಕ್ಕೆ ಇಂದು ಪ್ರತಿಫಲ ದೊರೆಯುತ್ತಿದೆ. ಆದರೆ ಇಷ್ಟಕ್ಕೆ ತೃಪ್ತಿಪಟ್ಟು ಕೂಡುವಂತಿಲ್ಲ. ಕಾರ್ಖಾನೆಯ ನಿರ್ಮಾಣಕಾರ್ಯದಲ್ಲಿ ಇದು ಮೊದಲನೆಯ ಘಟ್ಟದ ಅಂತ್ಯಮಾತ್ರ. ಇಡಿ ಕಾರ್ಖಾನೆಯು ೧೯೬೧ರ ಡಿಸೆಂಬರ್ ವೇಳೆಗೆ ಪೂರ್ಣ ಉತ್ಪಾದನೆಗೆ ಸಿದ್ಧವಾಗುವ ನಿರೀಕ್ಷೆಯಿದೆ.

ಸ್ಥಾಪನಾಕಾರ್ಯ ಸುಗಮವೇನಲ್ಲ

ದುರ್ಗಾಪುರ ಉಕ್ಕಿನ ಕಾರ್ಖಾನೆಯ ಸ್ಥಾಪನಾಕಾರ್ಯವು ಸುಸೂತ್ರವಾಗಿ ನಡೆಯಲಿಲ್ಲ. ಅಡ್ಡಿ ಆತಂಕಗಳು ಕಂಡು ಬಂದವು. ಒಪ್ಪಂದವನ್ನು ಮಾಡಿಕೊಂಡ ತಾರುಣ್ಯದಲ್ಲಿಯೇ ಸೂಯೇಜ ಕಾಲುವೆ ಹಗರಣ ಪ್ರಾರಂಭವಾಯಿತು. ಮೊದಲನೆಯ ಊದು ಕುಲುಮೆಯ ಉದ್ಘಾಟನೆಗೆ ಕೆಲವು ದಿನಗಳ ಮುಂಚೆ ಭಾರಿ ಮಳೆಗಾಳಿ, ಪ್ರವಾಹಗಳಿಂದ ನಿರ್ಮಾಣ ಕಾರ್ಯಕ್ಕೆ ಅಡಚಣೆಯುಂಟಾಯಿತು. ಈ ಕಾರ್ಖಾನೆಗೆ ಅಗತ್ಯವಾದ ನುರಿತ ತಂತ್ರಜ್ಞರ ಅಭಾವ ತಲೆದೋರಿತು. ಪ್ರಾರಂಭದಲ್ಲಿ ವಿದೇಶೀ ತಂತ್ರಜ್ಞರನ್ನು ಮುಖ್ಯವಾದ ಹುದ್ದೆಗಳಿಗೆ ನೇಮಿಸಿಕೊಳ್ಳಲಾಗುವುದು.

ವಿವಿಧ ಸಂಘ ಸಂಸ್ಥೆಗಳ ಸಹಕಾರದಿಂದಾಗಿ ನಮ್ಮ ಉದ್ದೇಶ ಸಾಧನೆಯಲ್ಲಿ ಇಷ್ಟು ಹಾದಿ ತುಳಿದಿದ್ದೇವೆ. ಈ ಸಂಘ ಸಂಸ್ಥೆಗಳ ಮತ್ತಷ್ಟು ಸಹಕಾರದಿಂದಾಗಿ ನಮ್ಮ ಅಂತಿಮ ಗುರಿಯನ್ನು ಮುಟ್ಟುವ ಭರವಸೆಯನ್ನು ಹೊಂದಿದ್ದೇವೆ.

ಉದ್ಯೋಗಿಗಳಿಗಾಗಿ ವಸಾಹತು

ಹಿಂದೆ ಸಾಲುವೃಕ್ಷಗಳಿಂದ ಕೂಡಿಟ್ಟ ಒಂದು ವನವಾಗಿದ್ದ ಕ್ಷೇತ್ರವು ಇಂದು ಜನವಾಸ ಯೋಗ್ಯವಾದ ವಸಾಹತಿನ ರೂಪ ತಾಳುತ್ತಿದೆ. ಕಾರ್ಖಾನೆಯಲ್ಲಿ ಕೆಲಸ ಮಾಡುವ ಸಹಸ್ರಾರು ಜನ ಕೆಲಸಗಾರರಿಗಾಗಿ ವಸತಿಗಳನ್ನು ಕಟ್ಟಿಸಿಕೊಡಲಾಗುತ್ತಿದೆ ಹಾಗೂ ಸೌಲಭ್ಯಗಳನ್ನೂ ಕಲ್ಪಿಸಿ ಕೊಡಲಾಗುತ್ತಿದೆ. ಈ ವಸಾಹತು ಕಾರ್ಖಾನೆಯಿಂದ ಸುಮಾರು ನಾಲ್ಕು ಮೈಲಿಗಳ ದೂರದಲ್ಲಿದೆ. ಈ ವಸಾಹತಿನಲ್ಲಿ ೭,೫೦೦ ವಸತಿಗಳನ್ನು ನಿರ್ಮಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಈಗಾಗಲೇ ಸುಮಾರು ೨,೫೦೦ ವಸತಿಗಳ ನಿರ್ಮಾಣ ಮುಗಿದಿದೆ. ಇಷ್ಟೇ ಸಂಖ್ಯೆಯ ವಸತಿಗಳು ನಿರ್ಮಾಣದ ವಿವಿಧ ಘಟ್ಟಗಳಲ್ಲಿವೆ. ಶಾಲೆಗಳು, ಆಸ್ಪತ್ರೆಗಳು, ಮಾರುಕಟ್ಟೆ ಕೇಂದ್ರಗಳು, ಇತ್ಯಾದಿಗಳಿಗಾಗಿ ಸಾಕಷ್ಟು ಸ್ಥಳಾವಕಾಶ ಒದಗಿಸಿಕೊಡಲಾಗಿದೆ.

ಇತರ ಸಂಸ್ಥೆಗಳು

ದುರ್ಗಾಪುರದಲ್ಲಿ ಕೇವಲ ಉಕ್ಕಿನ ಕಾರ್ಖಾನೆ ಮಾತ್ರ ಸ್ಥಾಪನೆಗೊಂಡಿಲ್ಲ. ಇನ್ನೂ ಅನೇಕ ಸಂಸ್ಥೆಗಳು ವೃದ್ಧಿಸುತ್ತಿವೆ. ದಾಮೋದರ ಕಣಿವೆ ಕಾರ್ಪೋರೇಷನ್ನಿನವರು ದುರ್ಗಾಪುರ ಅಣೆಕಟ್ಟೆ ಮತ್ತು ಉಷ್ಣಜನಿತ ವಿದ್ಯುದಾಗಾರಗಳ ಕಾರ್ಯನಿರ್ವಹಣೆಗಾಗಿ ತಮ್ಮದೇ ಆದ ಸಂಸ್ಥೆಯನ್ನು ದುರ್ಗಾಪುರದಲ್ಲಿ ಸ್ಥಾಪಿಸಿದ್ದಾರೆ. ಈ ಸಂಸ್ಥೆ ಕಾರ್ಖಾನೆಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರ ಜೊತೆಗೆ ವಿದ್ಯುದಾಗಾರಕ್ಕೆ ಅಗತ್ಯವಾದ ಕಲ್ಲಿದ್ದಲು ಕಿಟ್ಟ ಮತ್ತಿತರ ವಸ್ತುಗಳನ್ನು ಕೊಳ್ಳುವುದು. ಪಶ್ಚಿಮ ಬಂಗಾಳ ಸರ್ಕಾರ ಸಹ ಸ್ಥಾಪಿಸುವ ಕೋಕ್ ಓವನ್ ಕಾರ್ಖಾನೆ ಉತ್ಪಾದನೆಯನ್ನಾರಂಭಿಸಿದೆ. ಸೆಂಟ್ರಲ್ ಮೆಕಾನಿಕಲ್ ಇನ್‌ಸ್ಟಿಟ್ಯೂಟ್ ಸ್ಥಾಪನೆಗೊಳ್ಳುತ್ತಿದೆ. ಕನ್ನಡಕದ ಗಾಜುಗಳನ್ನು ತಯಾರಿಸುವ ಕಾರ್ಖಾನೆ ಮತ್ತು ಗಣಿ ಉದ್ಯಮದಲ್ಲಿ ಬಳಸುವ ಯಂತ್ರೋಪಕರಣಗಳನ್ನು ತಯಾರಿಸುವ ಕಾರ್ಖಾನೆಗಳು ಸಹ ದುರ್ಗಾಪುರದಲ್ಲಿ ಸ್ಥಾಪಿಸಲ್ಪಡುವ ನಿರೀಕ್ಷೆಯಿದೆ. ಈ ಎಲ್ಲ ಅಭಿವೃದ್ಧಿ ಕಾರ್ಯದಿಂದಾಗಿ ದುರ್ಗಾಪುರವು ದೇಶದ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದ ಮುಖ್ಯ ಕೇಂದ್ರಗಳಲ್ಲಿ ಒಂದಾಗಿದೆ.

–ಶ್ರೀ ಎ. ಎನ್. ರಾಜಗೋಪಾಲನ್,
ಮುಖ್ಯ ಇಂಜಿನಿಯರರು, ದುರ್ಗಾಪುರ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

ವಿಜ್ಞಾನ ಪ್ರಪಂಚ

(೩ನೇ ಪುಟದಿಂದ)

ಬೆಳೆಸಿದಂತೆಯೇ ಅದರ ಸಾರವನ್ನೂ ಹೆಚ್ಚಿಸುವುದು ಅವಶ್ಯವೆಂದು ಮತ್ತೆ ಹೇಳಬೇಕಾಗಿಲ್ಲ.

ನೀರನ್ನು ಒಂದುಗೂಡಿಸಿ ಅದನ್ನು ನೀರಾವರಿಗೆ ಉಪಯೋಗಿಸುವ ಸಲುವಾಗಿ ನಾವು ದೊಡ್ಡ ದೊಡ್ಡ ಅಣೆಕಟ್ಟುಗಳನ್ನೂ ಕಾಲುವೆಗಳನ್ನೂ ನಿರ್ಮಿಸಿ ಕೊಂಡಿದ್ದೇವೆ. ಆದರೆ, ಇದರಿಂದಲೂ ಸಮಸ್ಯೆಗಳು ಹುಟ್ಟಿಕೊಂಡಿವೆ; ಅಣೆಕಟ್ಟಿನಲ್ಲಿ ಹೊಯ್ಗೆ ಸಂಗ್ರಹವಾಗುವುದು ಮತ್ತು ಭೂಮಿಯಲ್ಲಿ ಉಪ್ಪು ಬೆಳೆಯುವುದು ಅವುಗಳಲ್ಲಿ ಮುಖ್ಯವಾಗಿದೆ. ಇವುಗಳನ್ನೂ ನಾವು ಪರಿಹರಿಸಬೇಕಾಗಿದೆ. ಸಾಕಷ್ಟು ನೀರು ದೊರೆಯದಿರುವಲ್ಲಿ ಅಣೆಕಟ್ಟುಗಳನ್ನು ಕಟ್ಟಲಾಗಿದ್ದುದಲ್ಲದೇ ಮಲ ಮತ್ತು ಕಾರಖಾನೆಗಳ ಕೊಳಕು ನೀರನ್ನು ಶುದ್ಧಗೊಳಿಸಿ ಮತ್ತು ವಿದ್ಯುತ್‌ನ ಸಹಾಯದಿಂದ ಸಮುದ್ರದ ನೀರಿನ ಉಪ್ಪನ್ನು ತೆಗೆದು ಅದರಿಂದಾಗಿ ನೀರಾವರಿ ಕೆಲಸವನ್ನು ನಡೆಸಲಾಗುತ್ತದೆ.

ಸೂರ್ಯಕಿರಣ ಮತ್ತು ಪ್ರಕಾಶದಿಂದ ಮರಗಿಡಗಳ ಪೋಷಣ ಗ್ರಹಣ ಮಾಡುವ ಪ್ರಾಕೃತಿಕ ಪ್ರಕ್ರಿಯೆ (ಅಂಗಾರ ಸಮೀಕರಣ) ಯಿಂದಲೂ ಉತ್ಪತ್ತಿಯನ್ನು ಹೆಚ್ಚಿಸುವುದು ಸಾಧ್ಯವಿದೆ. ಕಸಿಕಟ್ಟುವುದರಿಂದ ಅಧಿಕ ಫಲವೀಯುವ ಉತ್ತಮ ಜಾತಿಯ ಗಿಡಗಳನ್ನೂ ತಯಾರಿಸಿಕೊಳ್ಳಬಹುದು.

ಆಹಾರದಂತೆಯೇ ಉರುವಲು, ಎಣ್ಣೆ, ವಿದ್ಯುತ್ ಮೊದಲಾದುವೂ ಮಾನವನಿಗೆ ಅವಶ್ಯಕವಾದ ಪದಾರ್ಥಗಳಾಗಿವೆ. ಇದುವರೆಗೆ ವಿದ್ಯುದುತ್ಪಾದನೆಗೆ ವಿಶೇಷವಾಗಿ ಎಣ್ಣೆ ಮತ್ತು ಇದ್ದಲುಗಳನ್ನೇ ಬಳಸಿಕೊಳ್ಳಲಾಗುತಿತ್ತು. ಆದರೆ, ಇದೇ ವಿಧಾನವು ಮುನ್ನಡೆಯುತ್ತ ಹೋದರೆ, ನಮ್ಮ ತೈಲ ಹಾಗೂ ಇದ್ದಲಿನ ಭಂಡಾರಗಳು ಬೇಗನೆ ಖಾಲಿಯಾಗಿ ಹೋಗುವುವು. ಆದುದರಿಂದ, ಅಣುಶಕ್ತಿ ಮತ್ತು ಸೂರ್ಯಕಿರಣದಿಂದ ವಿದ್ಯುತ್ತನ್ನು ತಯಾರಿಸುವ ಆಗತ್ಯ ಬಿತ್ತು. ಅಣುಶಕ್ತಿಯಿಂದ ಈಗ ವಿದ್ಯುತ್ ಸಿದ್ಧವಾಗುತ್ತಿದೆ; ಆದರೆ, ಕಿರಣಗಳನ್ನು ವಿದ್ಯುತ್ತಾಗಿ ಪರಿವರ್ತನೆ ಮಾಡುವುದು ತುಸು ಪ್ರಯಾಸವಾಗಿದೆ. ಆದರೂ ಇಂದಿನ ಸಂಶೋಧನೆಗಳ ಫಲವಾಗಿ ಇದರಲ್ಲಿಯೂ ನಾವು ಸಫಲರಾಗುವ ಆಶೆಯನ್ನು ಕಟ್ಟಿಕೊಂಡಿದ್ದೇವೆ.

ಖನಿಜ ಪದಾರ್ಥಗಳ ಮಿತಿಮೀರಿದ ಬೇಡಿಕೆಯೂ ಚಿಂತಾಕಾರಕವಾಗಿದೆ. ಇವುಗಳ ಭಂಡಾರವೂ ಅಸೀಮವಾಗಿಲ್ಲ. ಎಲ್ಲ ವಿಧದ ಖನಿಜಗಳನ್ನೂ ಶುದ್ಧೀಕರಿಸಿ ಉಪಯೋಗಕ್ಕೆ ಬಳಸಿಕೊಳ್ಳಲಾಗುತ್ತದೆ. ಲೋಹಗಳನ್ನು ಹುಡುಕಲು ಮತ್ತು ಅಗೆಯಲು ಕೈಗೊಂಡ ವಿಧಾನಗಳಿಂದ ತುಸು ಉಳಿತಾಯವಾಗಿದೆ. ಇನ್ನೊಂದಲ್ಪ ಕಾಲದಲ್ಲಿ ಸಮುದ್ರದಿಂದಲೂ ಲೋಹಗಳನ್ನು ಶೋಧಿಸಿ ತೆಗೆಯುವ ಸಾಹಸವು ಜಯಪ್ರದವಾಗಬಹುದೆಂದು ನಿರೀಕ್ಷಿಸಲಾಗಿದೆ. ಇಂದು ಲೋಹಗಳ ಬದಲಿಗೆ ಅವುಗಳ ಸ್ಥಾನಗಳಲ್ಲಿ ಪ್ಲಾಸ್ಟಿಕನ್ನೂ ಉಪಯೋಗಿಸುವಂತಾಗಿದೆ.

ಹೈದರಾಬಾದ ಪ್ರಾದೇಶಿಕ ಪ್ರಯೋಗ ಶಾಲೆಯಲ್ಲಿ ರಸಾಯನ ಶಾಸ್ತ್ರದ ವಿಭಾಗದೊಂದರ ದೃಶ್ಯವಿದು.

ರೋಗಗಳ ಕಾರಣಗಳನ್ನು ಕಂಡು ಹಿಡಿಯುವುದರಲ್ಲಿ, ಅವುಗಳ ಚಿಕಿತ್ಸೆಯಲ್ಲಿ ವಿಜ್ಞಾನವು ಮಾನವನಿಗೆ ಅಪೂರ್ವ ಸೇವೆ ಸಲ್ಲಿಸಿದೆ. ಹೆಚ್ಚಿನ ಸಾಂಕ್ರಾಮಿಕ ರೋಗಗಳನ್ನು ಪ್ರತಿಬಂಧಕ ದಾಕುಗಳ ಮೂಲಕ ತಡೆಗಟ್ಟಲಾಗಿದೆ. ಇದರಲ್ಲಿ ಮಾನವನು ಯಶಸ್ವಿಯಾಗಿರುವುದಾದರೆ, ಈ ಯಶಸ್ವಿತೆಯ ಕೀರ್ತಿಗೆ ಭಾಜನವು ವಿಜ್ಞಾನವೇ. ಇದರಿಂದ ಮಾನವನ ಆಯುಷ್ಯ ಹೆಚ್ಚಿದುದು ಮಾತ್ರವಲ್ಲ, ಆರೋಗ್ಯವೂ ನೆಟ್ಟಗಾಗಿ ಸುಖ ಪ್ರದವೆನಿಸಿದೆ.

ಕೂಡಿಸುವಿಕೆ, ಕಳೆಯುವಿಕೆ ಮಾತ್ರವಲ್ಲನೇ ದೊಡ್ಡ ದೊಡ್ಡ ಸಮೀಕರಣಗಳನ್ನು ಪರಿಷ್ಕರಿಸುವುದಕ್ಕೂ ಇಂದು ಯಂತ್ರಗಳು ಸಿದ್ಧವಾಗಿವೆ. ಸ್ವಯಂಚಾಲಿತ ಯಂತ್ರಗಳ ಸಂಖ್ಯೆ ಹಾಗೂ ಪ್ರಯೋಗ ಇತ್ತೀಚೆಗೆ ಹೆಚ್ಚಾಗಿದೆ. ಇದರಿಂದ ಮಾನವನ ಸುಖವೂ ಹೆಚ್ಚಿರುವುದು ಮಾತ್ರವಲ್ಲ, ಅವನ ಶ್ರಮವೂ ಉಳಿಯುತ್ತಿದೆ.

ವಿಜ್ಞಾನವು ಮಾನವನ ಹಲವಾರು ಸಮಸ್ಯೆಗಳನ್ನು ಉತ್ತರಿಸಿರುವುದು ಮಾತ್ರವಲ್ಲ, ಆತನ ಜೀವನವನ್ನೂ ಸುಖಮಯವಾಗಿಸಿದೆ. ಅಣುಶಕ್ತಿ, ರಾಕೆಟ್, ರೇಡಾರ್, ಕೃತಕವರ್ಷ ಮೊದಲಾದ ಚಮತ್ಕಾರಪೂರ್ಣ ಆವಿಷ್ಕಾರಗಳು ಆತನಿಗೆ ಸಹಾಯ ನೀಡಲು ಉತ್ಸುಕತೆಯಿಂದ ಮುಂದೆಬರುತ್ತಿವೆ. ಆದರೆ, ಸದುಪಯೋಗಕರವೆನಿಸಿದ ವಿಜ್ಞಾನವನ್ನು ಮಾನವನು ವೈಯಕ್ತಿಕ ದುರ್ಬಲತೆಯು ಕಾರಣವಾಗಿ ದುರುಪಯೋಗಪಡಿಸುತ್ತಿರುವುದು ಖೇದದ ಸಂಗತಿಯಾಗಿದೆ; ಆತನು ಪರರೊಡನೆ ಆತ್ಮವಿನಾಶವನ್ನೂ ನೋಡಲು ಮುಂದಾಗುವುದನ್ನು ಕಾಣುವಾಗ ನಾವು ಸಜಲ ನೇತ್ರರಾಗುತ್ತೇವೆ

ಮಾನವನ ನಾಗರಿಕತೆಯನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಡುವ ಗೋಲಿಗಳನ್ನು ಅಣು ಒದಗಿಸಬಲ್ಲುದು. ಕ್ರಿಮಿನಾಶಕಗಳ ಪ್ರಯೋಗದಿಂದ ಮಾನವನಾಶವೂ ಅಸಾಧ್ಯವೆಂಬಂತಿಲ್ಲ. ರೋಗಗಳ ಕೀಟಾಣುಗಳನ್ನು ಅರಸುವ ಪ್ರಯೋಗಗಳು ಕೀಟಾಣು ಯುದ್ಧದಲ್ಲಿ ಪರ್ಯವಸಾನಗೊಳ್ಳುವುದೂ ಇದೆ.

ಇದರಿಂದ ಮಾನವನು ವಿಜ್ಞಾನವನ್ನು ತನ್ನ ಉನ್ನತಿಗಾಗಿ ಬಳಸುವುದಾದರೆ, ಆತನು ತನ್ನ ವಿಚಾರಧಾರೆಯನ್ನು ಅವಶ್ಯ ಬದಲಿಸಿಕೊಳ್ಳಬೇಕೆಂದು ಹೇಳಬಹುದು. ಅಥವಾ ಮಾನವನ ವಿಚಾರವನ್ನೂ ವಿಜ್ಞಾನವು ಸತ್‌ಪಂಥದಲ್ಲಿ ಹರಿಯುವಂತೆ ಮಾಡಬೇಕು. ವಿಜ್ಞಾನವು ಈ ಕಾರ್ಯವನ್ನೂ ಮಾಡಬಹುದೆ?

ಆದರೆ, ವಿಜ್ಞಾನವು ಮಾನವೋನ್ನತಿಯ ಪ್ರಯೋಗಗಳನ್ನೇ ಮಾಡಲು ಪ್ರೇರೇಪಿಸುವ ವಾತಾವರಣವನ್ನು ನಿರ್ಮಿಸುವುದೆಂದು ಪಶ್ಚಿಮದವರು ಆಶಾವಾದಿಗಳಾಗಿದ್ದಾರೆ.

ಸಾಮಾಜಿಕ ವಿಕಾಸದಲ್ಲಿಯೂ ವಿಜ್ಞಾನದ ಕೊಡುಗೆ ಅಮೂಲ್ಯವಿದೆ. ಸಂಪ್ರದಾಯ ಸಂಬಂಧಿ ಜಗಳಗಳನ್ನು ದೂರಗೊಳಿಸುವುದಕ್ಕೋಸ್ಕರ ಹಲವಾರು ಅಂಧವಿಶ್ವಾಸ ಹಾಗೂ ರೂಢಿಗಳನ್ನು ವಿಜ್ಞಾನ ದೂರಮಾಡಿಬಿಟ್ಟಿದೆ. ವಿಜ್ಞಾನಿಗಳು ಜ್ಞಾನ ಭಂಡಾರವನ್ನು ಮಾತ್ರ ವರ್ಧಿಸಿದರಲ್ಲದೇ ಪ್ರಪಂಚದ ಸತ್ಯಗಳನ್ನೂ ಸಂಗ್ರಹಿಸಿದ್ದಾರೆ, ಅವುಗಳ ಬಗ್ಗೆ ತೀವ್ರ ವಿವೇಚನೆಯನ್ನು ಮಾಡಿದ್ದಾರೆ; ಅವಕ್ಕೆ ಹೊಸ ನೋಟವನ್ನಿತ್ತಿದ್ದಾರೆ. ಸತ್ಯ ಶೋಧನೆಯ ಸರಳ ಹಾಗೂ ಸುಲಭ ಮಾರ್ಗ ವಿಜ್ಞಾನವೊಂದೇ ಎಂದು ವಿಜ್ಞಾನದ ಒರೆಗಲ್ಲಿನಲ್ಲಿ ಗೆದ್ದು ಬಂದು ಸತ್ಯ ಸ್ಥಿರಸತ್ಯವೆಂದೂ ಇಂದು ಎಲ್ಲರೂ ತಿಳಿದುಕೊಳ್ಳುವಂತಾಗಿದೆ. ವಿಜ್ಞಾನದ ಚರಮ ಲಕ್ಷ್ಯ ಸಂಪೂರ್ಣ ಸತ್ಯ ಸಂಶೋಧನೆಯಲ್ಲವೆ?

ಈ ಯುಗದ ವೈಜ್ಞಾನಿಕ ಸಾಫಲ್ಯ ಮಹಾನ್ ಆಗಿದೆ; ಇದರಿಂದ ಮಾನವನಿಗೆ ಬಹಳ ಒಳಿತೂ ಆಗಿದೆ. ಪ್ರಪಂಚದ ದೊಡ್ಡ ದೊಡ್ಡ ವೈಜ್ಞಾನಿಕರು ಪರಸ್ಪರ ಸಹಕಾರದಿಂದ ವರ್ತಿಸುತಿದ್ದಾರೆ, ಜ್ಞಾನವನ್ನರಸುವಲ್ಲಿ ಪ್ರಯತ್ನಶೀಲರಾಗಿದ್ದಾರೆ. ಇವರ ಪರಿಶ್ರಮದಿಂದ ಮನುಷ್ಯನ ಸುಖ ಮತ್ತು ಸಮೃದ್ಧಿ ಪಥವು ಅವಶ್ಯ ಪ್ರಶಸ್ತವೆನಿಸುವುದರಲ್ಲಿ ಸಂದೇಹ ಪಡುವುದು ಇಂದು ಅಸಾಧ್ಯವೆನಿಸಿದೆ!

- ಪ್ರೊ| ಮಣಿಕ್‌ಲಾಲ್ ಎಸ್ ಟೆಕ್ಕರ್.

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕಿ: ಜಿನೇ ಇಂಗೋಟನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನಸ್ಸನ್ನು ಗೆದ್ದನು ಅಂತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚಿಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ವಿಚಾರವೀಚಿ

ಪ್ರಜಾಪ್ರಭುತ್ವ ಮತ್ತು ಸತ್ಯಾಗ್ರಹ

ಸರಿಯಾದ ರೀತಿಯಲ್ಲಾಚರಿಸಿದ ಸತ್ಯಾಗ್ರಹದಿಂದ ಅಶಿಸ್ತಿಗೆ ಬುನಾದಿ ಹಾಕಿದಂತಾಗುವುದು.

ಸತ್ಯಾಗ್ರಹವು ಮಹಾತ್ಮಾ ಗಾಂಧೀಜಿಯವರು ಅಖಿಲ ವಿಶ್ವದ ಮಾನವ ಕೋಟಿಯ ಶ್ರೇಯಸ್ಸಿಗಾಗಿ ಬಿಟ್ಟು ಹೋಗಿರುವ ಒಂದು ಅಮೂಲ್ಯ ಸಂಪತ್ತು! ಸತ್ಯಾಗ್ರಹವೆಂಬ ಶಬ್ದವೇ ಸೂಚಿಸುವಂತೆ ಸತ್ಯಕ್ಕೆ ಆಗ್ರಹ ಎಂಬುದೇ ಅದರ ಸ್ಪಷ್ಟವಾದ ಅರ್ಥವು. ಬಾಪೂಜಿಯವರ ಜೀವನವೇ ಸತ್ಯಾಗ್ರಹ ಸಾಧನೆಯ ಅದ್ಭುತ ಪ್ರಯೋಗ ಮಂದಿರವಾಗಿತ್ತು. ಅವರ ಆ ಪ್ರಯೋಗ ಮಂದಿರದಲ್ಲಿ— ಅನುಭವದ ಅಮೃತ ಬೆಳಕಿನಲ್ಲಿ —ಸತ್ಯಾಗ್ರಹಕ್ಕೆ ವಿಶೇಷ ಸಂಸ್ಕಾರವೂ ವಿಶಾಲ ಅರ್ಥವೂ ಬಂದಿದೆ. ಅವರೇ ಹೇಳಿರುವಂತೆ ಪಾಶವೀ ಶಕ್ತಿಯ ಮೇಲೆ ಆತ್ಮ ಶಕ್ತಿಯ ವಿಜಯವೇ ಸತ್ಯಾಗ್ರಹದ ಬಿರುದು!

'ಸತ್ಯಕ್ಕೆ ವಿರುದ್ಧ'ವಾದ ಪಾಶವೀ ಶಕ್ತಿಯನ್ನು ಪಾಶವೀ ಶಕ್ತಿಯಿಂದಲೇ ತಡೆಗಟ್ಟದೆ ಆತ್ಮ ಶಕ್ತಿ ಪ್ರೇರಿತವಾದ ಸತ್ಯಾಗ್ರಹದ ಮೂಲಕ ಎದುರಿಸಬೇಕೆಂಬುದೇ ಈ ಮಾತಿನ ಅರ್ಥವು. ಬ್ರಿಟಿಷರು ನಮ್ಮನ್ನು ಆಳುತ್ತಿದ್ದುದು ಅಂತಹ ಪಾಶವೀ ಶಕ್ತಿಯಿಂದಲೇ! ಕಾರಣ ಅಂದಿನ ಪರಿಸ್ಥಿತಿಯಲ್ಲಿ ನಮ್ಮ ಹಿತಾಸಕ್ತಿಗಳ ಕುರಿತು ನಮಗೇ ಚಿಂತಿಸುವುದಕ್ಕೆ ಅಧಿಕಾರವಿರಲಿಲ್ಲ; ನಮ್ಮ ಅಭಿಪ್ರಾಯವನ್ನು ಪ್ರತಿನಿಧೀಕರಿಸುವ ಯಾವ ಧ್ವನಿಗೂ ಸರಕಾರದಲ್ಲಿ ಆಸ್ಪದವಿಂಲಿಲ್ಲ. ಆ ರೀತಿಯ ದಬ್ಬಾಳಿಕೆಯನ್ನು ಕೊನೆಗಾಣಿಸಲು ಇದ್ದುದು ಎರಡೇ ಎರಡು ದಾರಿ'—ಒಂದು ಪಾಶವೀ ಶಕ್ತಿಯದು ಮತ್ತೊಂದು ಆತ್ಮ ಶಕ್ತಿಯದು; ಒಂದು ಕ್ರಾಂತಿಯದು ಇನ್ನೊಂದು ಶಾಂತಿಯದು. ಗಾಂಧೀಜಿ ಕ್ರಾಂತಿಯ ಮೇಲೆ ಶಾಂತಿಯ ಅದ್ಭುತ ವಿಜಯವನ್ನು ಲೋಕಕ್ಕೆ ಸಾರಿದರು—ಸಮಗ್ರ ಭಾರತೀಯರ ಸಮನ್ವಯ ಸತ್ಯಾಗ್ರಹದ ಶಕ್ತಿಯಿಂದ ಸ್ವಾತಂತ್ರ್ಯ ಸಂಪಾದಿಸುವುದು ಸಾಧ್ಯವಾಯಿತು.

ಆದರೆ ಸ್ವಾತಂತ್ರ್ಯಾನಂತರ ನಾವು ಸತ್ಯಾಗ್ರಹವನ್ನು ಆಚರಿಸಬೇಕೆಂದು ಅರಿತಿರುವೆವೇ ವಿನಃ ಹೇಗೆ, ಎಲ್ಲಿ, ಯಾಕೆ ಎಂಬುದರ ಕುರಿತು ಏನೇನೂ ತಿಳಿಯದಿರುವುದು ವಿಷಾದಕರ. ಪ್ರಜಾಪ್ರಭುತ್ವದಲ್ಲಿ ಬಹುಮತವಿರುವ ಪಕ್ಷವೊಂದು ಸರಕಾರವನ್ನು ರಚಿಸುವುದು ರೂಢಿ. ಹಾಗೆ ಚುನಾಯಿಸಿ ಬಂದ ಸರಕಾರವು ಬಹುಮತದವರ ಹಿತಕ್ಕಾಗಿ—ಕೆಲವು ವೇಳೆ ಅದು ಅಲ್ಪ ಮತದವರ ಆಸಕ್ತಿಗಳಿಗೆ ಧಕ್ಕೆ ತರಲೂಬಹುದು—ಮಾಡುವ ಕಾನೂನು ನಿಯಮಗಳನ್ನು ಸಾಧ್ಯವಿರುವಷ್ಟು ಪಾಲಿಸುವುದು ನಮ್ಮ ಕರ್ತವ್ಯ ಹಾಗಿದ್ದರೇನೇ ರಾಷ್ಟ್ರದಲ್ಲಿ ಸುಭದ್ರವಾದ ಸರಕಾರವಿರುವುದು ಸಾಧ್ಯ. ಅದು ಹೊರತು ಸರಕಾರದ ಕಾನೂನೊಂದು ನಮ್ಮಲ್ಲಿ ಕೆಲವರ ಕೆಲವು ಅನುಕೂಲತೆಗಳಿಗೆ ತೊಡಕುಂಟು ಮಾಡಿತೆಂದು ಅದರ ವಿರುದ್ಧ ಸತ್ಯಾಗ್ರಹ ಆಚರಿಸುವುದಕ್ಕೆ ತೊಡಗಿದರೆ ಅರಾಜಕತೆ ತಲೆಯೆತ್ತುವುದರಲ್ಲಿ ಸಂಶಯವಿಲ್ಲ. ಉದಾಹರಣೆಗಾಗಿ ಜನರು ತೆರಿಗೆಯನ್ನೇ ಕೊಡಲಾರೆವೆಂದು ಸತ್ಯಾಗ್ರಹ ಆರಂಭಿಸಿದರೆ ಮತ್ತೆ ಸರಕಾರ ನಡೆಯುವುದು ಸಾಧ್ಯವಿದೆಯೆ? ಹಲವರ ಸುಖಕ್ಕಾಗಿ ಕೆಲವರು ತಮ್ಮ ಅಲ್ಪ ದುಃಖವನ್ನು ಲೆಕ್ಕಿಸಬಾರದೆಂಬುದೇ ಪ್ರಜಾಪ್ರಭುತ್ವದ ಬುನಾದಿ.

ಇಂದು ನಮ್ಮದೇ ಆದ ಸರಕಾರವಿದೆ; ನಮ್ಮಿಂದಲೇ ಆರಿಸಿಹೋದ ಪ್ರತಿನಿಧಿಗಳ ದ್ವಾರೆ. ಒಂದುವೇಳೆ ನಮಗೆ ಅನ್ಯಾಯವಾದರೂ ಅದನ್ನು ಘಟನಾಬದ್ಧವಾಗಿ ವಿಮರ್ಶಿಸುವ–ಚರ್ಚಿಸುವ ಹಕ್ಕು ನಮಗಿದೆ. ನ್ಯಾಯವನ್ನು ನ್ಯಾಯವಾಗಿಯೇ ಪಡೆಯುವ ದಾರಿಗಳು ನಮಗಾಗಿ ತೆರವಿವೆ. ಹೀಗಿರುತ್ತಾ ಚಿಕ್ಕಪುಟ್ಟ ವಿಷಯಗಳಿಗೂ ಸತ್ಯಾಗ್ರಹವನ್ನು ಆಚರಿಸುವುದರ ಅರ್ಥವೇನು? ಅಂತಹ ಸತ್ಯಾಗ್ರಹವು ಕೊನೆಗೆ ಹಿಂಸಾಚಾರಕ್ಕೆ ಎಡೆಯೀಯುತ್ತದೆ. ಇದರಿಂದ ಸತ್ಯಾಗ್ರಹವೆಂಬ ಪವಿತ್ರ ಶಬ್ದಕ್ಕೇ ಕಳಂಕ ಮಾತ್ರವಲ್ಲ; ಮಹಾತ್ಮಾಜಿಯವರ ಒಂದು ತತ್ವವನ್ನು ಆಚರಿಸುವ ಭರದಲ್ಲಿ ನಾವು ಅವರ ಹೃದಯವನ್ನು ಘಾಸಿಸುವ ನೂರು ತಪ್ಪುಗಳಿಗೆ ಅನುವು ಕೊಡುತ್ತೇವೆ. ಮುಂಬಯಿ ಕೇರಳಗಳಲ್ಲಿ ನಡೆದ ಘಟನೆಗಳೇ ಇದಕ್ಕೆ ಸಾಕ್ಷಿ. ಇದು ಕೇವಲ ದುರಾಗ್ರಹವೇ ಹೊರತು ಸತ್ಯಾಗ್ರಹವಲ್ಲ.

ಇತ್ತೀಚೆಗೆ ಮೈಸೂರಿನಲ್ಲಿ ಹಾಗೂ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಂದ ನಡೆದ ನವೀನ ಸತ್ಯಾಗ್ರಹವಂತೂ (?) ಬಹಳ ಬೇಸರವನ್ನುಂಟುಮಾಡುವಂತಹದು. ಅವರ ಬೇಡಿಕೆ ನ್ಯಾಯವೋ–ಅನ್ಯಾಯವೋ ಅದು ಹೇಗೂ ಇರಲಿ. ಅವರು ಅದರ ಪೂರೈಕೆಗಾಗಿ ಕೈಗೊಂಡ ಮಾರ್ಗ ಮಾತ್ರ ನ್ಯಾಯವಲ್ಲ. ವಿಧಾನ ಸೌಧದ ಹೂದೋಟದ ಮೇಲೆ ಸೈಕಲ್ ಸವಾರಿ ಮಾಡುವುದೂ ಸತ್ಯಾಗ್ರಹದ ಒಂದು ರೂಪವಾದರೆ ಬಾಪೂ ಅದನ್ನು ಖಾಡಿತವಾಗಿಯೂ ಅಪೇಕ್ಷಿಸಿರಲಿಲ್ಲ. ಸೂಕ್ಷ್ಮವಾಗಿ ವಿಚಾರಿಸಿದರೆ ಈ ಸತ್ಯಾಗ್ರಹ ಮನೋವೃತ್ತಿಯೇ ನಮ್ಮ ವಿದ್ಯಾರ್ಥಿಗಳ 'ಅಶಿಸ್ತಿ"ಗೆ ಮೂಲಕಾರಣ. ವಿಚಾರವನ್ನು ವಿಮರ್ಶಿಸದೆ ಪ್ರತಿಯೊಂದಕ್ಕೂ ಸತ್ಯಾಗ್ರಹ (?) ವನ್ನು ಆಚರಿಸುವುದು ಅವರಿಗೆ ರೂಢಿಯಾಗಿ ಹೋಗಿದೆ. ಇದನ್ನೇ ಬಯಸುತ್ತಿರುವ ಕೆಲ ರಾಜಕೀಯ ಪುಢಾರಿಗಳು ಅವರ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕೆ ಎಳ್ಳಷ್ಟೂ ಹಿಂಜರಿಯುವುದಿಲ್ಲ. ವಕೀಲರು ಕೋರ್ಟಿಗೆ ಹೋಗುವುದು ನಿಲ್ಲಿಸುವುದಿಲ್ಲ. ಡಾಕ್ಟರರು ಮದ್ದು ಕೊಡದೆ ಸುಮ್ಮನಿರುವುದಿಲ್ಲ. ವ್ಯಾಪಾರಿ ವ್ಯಾಪಾರವನ್ನು ಬಿಡುವುದಿಲ್ಲ. ಆದರೆ ವಿದ್ಯಾರ್ಥಿಗಳು ಮಾತ್ರ ಶಾಲೆಗೆ ಹೋಗದೆ ಸತ್ಯಾಗ್ರಹ ಆಚರಿಸಬೇಕು—ಇದು ಈಗಿನ ಹೊಸತತ್ವ! ಇದಕ್ಕೆ ಮರುಳಾದ ವಿದ್ಯಾರ್ಥಿಗಳು ಕುರುಡು ರಾಜಕೀಯ ಕುಂಡದಲ್ಲಿ ಬಿದ್ದು, ತಮ್ಮ ಭವಿತವ್ಯವನ್ನು ಕಳೆಯುಕೊಂಡಿದ್ದಾರೆ.

ಈ ರೀತಿ ದೇಶದೊಳಗಣ ಸಾಮಾನ್ಯ ವಿಷಯಗಳಿಗೂ ಸತ್ಯಾಗ್ರಹವನ್ನು ಆಚರಿಸುವುದರಿಂದ ಯಾರಿಗೂ ಕ್ಷೇಮವಿಲ್ಲ. ಆತ್ಮಶಕ್ತಿಯ ಔನ್ನತ್ಯವನ್ನು ಪ್ರಕಾಶಿಸುವ ಸತ್ಯಾಗ್ರಹವೂ ಅದಲ್ಲ. ಅದರಿಂದಾಗಿ ನಮ್ಮ ಆತ್ಮಶಕ್ತಿಯ ದೃಢತೆ ಕಡಿಮೆಯೂ ಆಗಬಹುದು. ಸಾಮೂಹಿಕ ಅನ್ಯಾಯವಾದಾಗ ಅದನ್ನು ತಡೆಗಟ್ಟಲು ಘಟನಾಬದ್ಧವಾದ ದಾರಿ ಬೇರೆ ಇಲ್ಲದಾಗ ಉಪಯೋಗಿಸಬೇಕಾದ ಈ ಅಸ್ತ್ರವನ್ನು ನಾವು ದುರುಪಯೋಗಪಡಿಸಬಾರದು. ತನ್ನ ಮಹಾಸ್ತ್ರವನ್ನು ಘಟೋತ್ಕಚನಿಗೆ ಪ್ರಯೋಗಿಸಿದ ಕರ್ಣನಲ್ಲಿ ಅರ್ಜುನನ್ನು ಸಂಹರಿಸುವುದಕ್ಕೆ ಅಸ್ತ್ರವೇ ಉಳಿಯಲಿಲ್ಲ.

—ರಮಾನಂದ ಬನಾರಿ,
ದೇಲಂಪಾಡಿ.

ಕಥಾವಿಹಾರ

(೬ನೇ ಪುಟದಿಂದ)

ತು....ರಾಜೀವಮ್ಮನವರ ಕೈಯನ್ನು ಬಿಟ್ಟು - ಅವರನ್ನು ಮರೆತು!!

ಕಣ್ಣೀರ್ಗರೆಸಿ ಮನೆಯನ್ನೆಲ್ಲ ಒಂದು ಮಾಡಿದ್ದರು ರಾಜೀವಮ್ಮ. ಆದರೆ, ಕೈಯನ್ನು ಬಿಟ್ಟ ಗಾಳಿಪಟದ ದಾರದಂತೆ ಮತ್ತೆ ಅದು ಅವರ ಕೈಗೆ ಎಟಕಲಿಲ್ಲ. ದೇವರಲ್ಲಿ ಮೊರೆಯಿಟ್ಟರು, ಹರಕೆಯ ಹೊರೆ ಹೊತ್ತರು. ಆದರೂ ವಿಧಿಯ ಅಟ್ಟಹಾಸದ ಮುಂದೆ ಅವರ ಮಕ್ಕಳಾಟ ಸಾಗಲಿಲ್ಲ.

ಸುಶೀಲ ಅತ್ತೆಯ ಕಾಲುಗಳನ್ನು ಹಿಡಿದು ಅತ್ತಳು; ನಡೆದುದನ್ನು ಬಿಕ್ಕುತ್ತ ವಿವರಿಸಿದಳು. ಆದಾವುದೂ ಅವರ ಕಿವಿಯನ್ನು ಸ್ಪರ್ಶಿಸಲಿಲ್ಲ; ಒಂದೇ ಒಂದು ಮಾತು ಮಾತ್ರ ಅವರನ್ನು ಕೆಣಕಿತು: ರಾಜೀವಮ್ಮನವರು ಮಗನಿಗೆ ಮದ್ದನ್ನು ಹಾಕಿ ತಮ್ಮೆಡೆಗೆ ಸೆಳೆದುಕೊಂಡಿದ್ದಾರೆಂದು ಭಾವಿಸಿ ಸುಶೀಲಳ ತಾಯಿ, ತಮ್ಮ ಹಸ್ತಗತವಾಗಿದ್ದ ಮಗ್ಗಿನಿಂದ ಮೊದಲು ಬಿದ್ದಿರಬಹುದಾದ ಮದ್ದನ್ನು ತೆಗೆಯಲು ಪ್ರಯತ್ನಿಸಿದರು. ನಾಗೇಶನಿಗೆ ಅರಿವಾಗದಂತೆ ಮದ್ದನ್ನು ಅನ್ನದಲ್ಲಿ ಸೇರಿಸಿದ್ದರು.

ಅವರ ಪ್ರಯತ್ನ ವ್ಯರ್ಥವಾಗಲಿಲ್ಲ: ಅಂದು ಉಂಡು ಮಲಗಿದ್ದ ನಾಗೇಶ ಮತ್ತೆ ಹಾಸಿಗೆಯಿಂದ ಏಳಲೇ ಇಲ್ಲ.

ತನ್ನೆಡೆಗೆ ನಿಷ್ಕಲ್ಮಷ ಪ್ರೇಮವನ್ನಿಟ್ಟ ಮಗನತ್ತ ಸುಶೀಲ ತೋರಿದ ಸಂದೇಹ, ಅದರಿಂದುಂಟಾದ ದುರಂತ —ಇವು ರಾಜೀವಮ್ಮನನ್ನು ಹಿಂಡಿದವು. ಹಣೆಗೆ ತಮ್ಮೆರಡು ಕೈಗಳನ್ನು ಒತ್ತಿಹಿಡಿದು ಅವರು ಬಿಕ್ಕಿ ಬಿಕ್ಕಿ ಅತ್ತರು. ಸೊಸೆಯನ್ನು ಶಪಿಸಿದರು.

ರಾಜೀವಮ್ಮನವರು ಅತ್ತರು, ಅತ್ತರು, ಮತ್ತೂ ಅತ್ತರು. ತಮ್ಮ ಜೀವನವನ್ನೇ ಕಣ್ಣೀರ ಕಡಲಲ್ಲಿ, ನಿಟ್ಟುಸಿರ ದೋಣಿಯಲ್ಲಿ ಕಳೆದರು.

ಆದರೂ ಅಳು ನಿಲ್ಲಲಿಲ್ಲ.

ಹೋದ ಮಗ ಹಿಂದಿರುಗಲಿಲ್ಲ.

—"ಪ್ರಿಯಾಗಿ", ಕಾರ್ಕಳ.

ಕುಂದಾಪುರ ಅಸಿಸ್ಟಾಂಟ್
ಕಮಿಶನರ ಕೋರ್ಟಿನಲ್ಲಿ

O. P. ನಂಬ್ರ 7/1960

ಡಾಕ್ಟರ್ H R. ಕೆದ್ಲಾಯ—ಅರ್ಜಿದಾರ
ಮತ್ತು ಬಿ. ಅಣ್ಣಯ್ಯ ನಾಯ್ಕ—ಎದ್ರಿ

ಉಡುಪಿ ತಾಲೂಕು ಜೆರ್ಗಿ ಗ್ರಾಮದಲ್ಲಿರುವ ಚೆರ್ಡಪ್ಪ ನಾಯ್ಕರ ಮಗ ಬಿ. ಅಣ್ಣಯ್ಯ ನಾಯ್ಕರಿಗೆ—

ನಿಮ್ಮ ಮೇಲೆ ಅರ್ಜಿದಾರರು ಮಾಡಿದ ಚಾಲಗೇಣಿ ಆಸ್ತಿ ಸ್ವಾಧೀನತೆ ನಂಬ್ರವು ತಾ. 16_1_60ಕ್ಕೆ ತನಿಖೆಗೆ ಇಟ್ಟಿದೆ. ಆದ್ದರಿಂದ ಆ ದಿವಸ ನಿಮ್ಮ ಉದಾಹರಣೆ ಏನಾದರೂ ಇದ್ದರೆ ಕೋರ್ಟಿನ ಮುಂದೆ ಸಾಕ್ಷಾತ್ತಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ, ಸದ್ರಿ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಪಿ. ರಾಮಚಂದ್ರ ರಾವ್,
ಬಿ. ಎ., ಬಿ. ಎಲ್.,
ಎಡ್ವಕೇಟ್.

ಮೊಕ್ಕಾಂ: ಉಡುಪಿ, ತಾ. 6-1_1960.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತವೆ.
P. DEVEE & CO. (M. I.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಪ್ರತಿ ಹನಿರಕ್ತವೂ ಕಾಂಗ್ರೆಸ್ ಆಗಿ ಉಳಿದಿತ್ತು; ದೀನದಲಿತರ ಉದ್ಧಾರ, ಮಹಿಳೆಯರ ಉನ್ನತಿ, ದೇಶಸ್ವಾತಂತ್ರ್ಯ, ಅಖಂಡ ಕರ್ನಾಟಕ ಸ್ಥಾಪನೆ, ರಾಷ್ಟ್ರೀಯ ಶಿಕ್ಷಣ, ಖಾದಿ ಪ್ರಚಾರ, ಚರಕದ ಮೂಲಕ ವಸ್ತ್ರ ತಯಾರಿ ಕಾಂಗ್ರೆಸ್ ಬಲಸಂವರ್ಧನೆ ಮೊದಲಾದ ಹಲವಾರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅವರು ತೊಡಗಿ ಅವುಗಳಲ್ಲಿಯೇ ಜೀವಸವೆಸಿ, ತಮ್ಮ ಸಂಪತ್ತನ್ನೂ ದೇಹವನ್ನೂ ಸೊರಗಿಸಿ ಸ್ಥಿರಕೀರ್ತಿಯನ್ನು ಗಳಿಸಿದರು.

ಇವರ ದೇಶಸೇವಾ ಕಾರ್ಯಕಲಾಪಗಳು ಎಲ್ಲ ದೇಶಭಕ್ತರಿಗೂ ಮಾದರಿಯಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಗಾಳಿ ವರ್ಗ, ಮತ ಭೇದವಿಲ್ಲದೆ ಎಲ್ಲೆಲ್ಲಿಯೂ ಹರಿದಾಡಲು ಮೂಲಕಾರಣಪುರುಷರಿವರು! ತಮ್ಮ ಅಪಾರ ಕರ್ತವ್ಯದಕ್ಷತೆಯಿಂದ ಮೊದಲೇ ಸಾಕಷ್ಟು ಜನಾನುರಾಗ ಪಡೆದಿದ್ದ ಸದಾಶಿವರಾಯರು ಎಲ್ಲರ ಮನಸ್ಸನ್ನೂ ತನ್ನತ್ತ ಆಕರ್ಷಿಸಿದರು. ಎಂಜಲೆಲೆ ತಿಂದು ಜೀವಿಸುತ್ತಿದ್ದ ಹರಿಜನರಿಗೆ ತಮ್ಮ ಸ್ವಗೃಹದಲ್ಲಿಯೇ ಹೊಟ್ಟೆತುಂಬ ಆಹಾರವನ್ನು ಬಡಿಸಿದರು. ತಿಲಕ ವಿದ್ಯಾಲಯ, ಸಾಧನಾಶ್ರಮ, ಮಹಿಳಾಸಭಾ ಮೊದಲಾದುವುಗಳ ಮೂಲಕ ಜನತೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿದುದಲ್ಲದೆ ಚರಕಗಳನ್ನು ಹಂಚಿ, ಅವುಗಳ ಮೂಲಕ ನೂಲುವುದಕ್ಕೆ ಜಿಲ್ಲೆಯಲ್ಲಿ ಪ್ರಾಶಸ್ತ್ಯವನ್ನು ಕೊಡಿಸಿದ್ದರು. ಮದ್ಯಪಾನ ಪ್ರತಿಬಂಧಕ್ಕೆ ಪ್ರೋತ್ಸಾಹ ನೀಡಿದರು. ಕಾಂಗ್ರೆಸ್‌ಗೆ ವಿಧಾಯಕ ಕಾರ್ಯಕ್ರಮಗಳಿಗಾಗಿ ತಮ್ಮ ಸರ್ವಸ್ವವನ್ನೂ ಸಮರ್ಪಿಸಿ, ದೇಶಕ್ಕೋಸ್ಕರ, ಸ್ವಾತಂತ್ರ್ಯಕ್ಕೋಸ್ಕರ ಇವರು ಸರ್ವವನ್ನೂ ತ್ಯಾಗಮಾಡಿ ಕೊನೆಗೆ ದಟ್ಟದರಿದ್ರರಾಗುವ ಪರಿಸ್ಥಿತಿಯೂ ಬಂದೊದಗಿತ್ತು.

ಅಸಹಕಾರ ಆಂದೋಲನವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಶಸ್ವಿಯಾಗುವುದಕ್ಕೆ ಕಾರಣರಾದ ಮೂಲ ಪುರುಷರಲ್ಲಿ ಶ್ರೀ ಸದಾಶಿವರಾಯರು ಒಬ್ಬರು ಮಾತ್ರವಲ್ಲ, ಅವರ ನಾಯಕರು. ಈ ಸಂದರ್ಭದಲ್ಲಿ ಅವರು ಮೂರು ಸಲ ಕಾರಾಗೃಹವಾಸವನ್ನೂ ಅನುಭವಿಸಿದ್ದರು. ದ. ಕ. ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್‌ನ ಉಪಾಧ್ಯಕ್ಷ-ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದರು. ಕಾಂಗ್ರೆಸ್‌ನ ಮಹಾಶಕ್ತಿಯಾಗಿ, ಸ್ಫೂರ್ತಿಯ ಸೆಲೆಯಾಗಿ ಅವರು ನಿಂತಿದ್ದರು.

೧೯೩೬ರಲ್ಲಿ ದಶಂಬರದಲ್ಲಿ ಕಾಂಗ್ರೆಸ್ ಅಧಿವೇಶನವು ಫೈಜಪುರದಲ್ಲಿ ಸೇರಿತ್ತು. ಕಾಂಗ್ರೆಸ್ಸೇ ಪ್ರಾಣಪ್ರಿಯವಾಗಿದ್ದ ಸದಾಶಿವರಾಯರು ಅದರಲ್ಲಿ ಭಾಗವಹಿಸಿದರು. ಆದರೆ, ಅಲ್ಲಿ ವಿಪರೀತ ಮಳೆಗೆ ಗುರಿಯಾಗಿ ಬಳಲಿದುದರಿಂದ, ನಡು ದಾರಿಯಲ್ಲೇ ಅವರ ಆರೋಗ್ಯ ಕೆಟ್ಟು ಬಿಟ್ಟಿತು. ಕಾರ್ಯಭಾರದಿಂದಲೂ ಸದ್ಯದ ಮಾರ್ಗಾಯಾಸದಿಂದಲೂ ನೊಂದಿದ್ದವರ ಬೇನೆಯು ಉಲ್ಬಣಾವಸ್ಥೆಗೇರಿತು. ಅನ್ಯತ್ರ ಗತಿಯಿಲ್ಲದೆ, ಅವರು ಮುಂಬಯಿಯ ಆಸ್ಪತ್ರೆ ಸೇರಿದರು. ಅಲ್ಲಿಯೇ ತಮ್ಮ ಅಂತ್ಯದುಸಿರು ಎಳೆದರು.

ಕಾರ್ನಾಡು ಸದಾಶಿವರಾಯರು ಶಾಂತ, ನಿಷ್ಕಲ್ಮಷ, ಪರೋಪಕಾರಿ, ನಿಸ್ವಾರ್ಥ, ನಿರಹಂಕಾರಿ ವ್ಯಕ್ತಿ. ದೇಶಮಾತೆಯ ಕರೆಗೆ ಓಗೊಟ್ಟು ಮಾತೆಯ ಬಂಧವಿಮೋಚನೆಗಾಗಿ ಅಹರ್ನಿಶಿ ಹೋರಾಟ ನಡೆಸಿದ ಮಹಾನ್ ಶಕ್ತಿ. ಕಾಂಗ್ರೆಸ್‌ನ ಉನ್ನತಾದರ್ಶಗಳ ಒಂದು ಅನುಪಮವಾದ ಅಭಿವ್ಯಕ್ತಿ. ಇಂತಹ ಒಂದು ಅನರ್ಘ್ಯ ರತ್ನದ ಭೌತಿಕ ರೂಪವನ್ನು ದ. ಕ. ಜಿಲ್ಲೆಯು ಕಳೆದುಕೊಂಡುದು ಮಾತ್ರವಲ್ಲ, ಅಖಿಲಭಾರತದ ಅಮೂಲ್ಯ ಮಣಿಯೊಂದು ಮಣ್ಣುಗೂಡಿದಂತಾಯಿತು. ಮಂಗಳೂರು ತನ್ನ ಸತ್ಪುತ್ರನ ಚಿರಸ್ಮರಣೆಗಾಗಿ, ತನ್ನ ಮುಖ್ಯವೀಧಿಯನ್ನೇ ಈ ಅಪ್ರತಿಮ ಉದಾತ್ತ ದೇಶಸೇವಕನ ಹೆಸರಿನಿಂದ ಕರೆದು ದಿನಂಪ್ರತಿ ಸ್ಮರಿಸಿಕೊಳ್ಳುತ್ತಿದೆ. ಈಗ, ಕಾಂಗ್ರೆಸ್ಸೂ ತನ್ನ ಈ ಅಕ್ಕರೆಯ ಮಗನ ನೆನಪನ್ನು ಮಾಡಿಕೊಳ್ಳಲು ಮುಂದಾಗಿದೆ.

ಕರ್ನಾಟಕ ರಾಜ್ಯವು ನೂತನವಾಗಿ ರೂಪುಗೊಂಡಮೇಲೆ ಮೊತ್ತಮೊದಲಾಗಿ ಇಲ್ಲಿ ನಡೆಯುತ್ತಲಿರುವ (೬೫ನೆಯ) ಕಾಂಗ್ರೆಸ್ ಅಧಿವೇಶನದ ಸಭಾಭವನಕ್ಕೆ ಕಾರ್ನಾಡು ಸದಾಶಿವರಾಯರ ಅಮರ ನಾಮಧೇಯವನ್ನಿತ್ತು ಕನ್ನಡಿಗರೂ ಕಾಂಗ್ರೆಸ್ಸೂ ಅವರಿಗೆ ಸರಿಯಾದ ಶ್ರದ್ಧಾಂಜಲಿಯನ್ನರ್ಪಿಸಿದಂತಾಗಿದೆ; ಒಂದು ಅಮರ ಸ್ಮಾರಕವನ್ನು ನಿರ್ಮಿಸಿದಂತಾಗಿದೆ. ಕರ್ನಾಟಕದ ಚರಿತ್ರೆಯಲ್ಲಿಯೇ ಸುವಿದಿತರಾಗಿರುವ ದಿವಂಗತರ ಆತ್ಮವು ಇದನ್ನು ಬಯಸುವುದಿಲ್ಲವಾದರೂ ದೇಶನಾಯಕರಿಗೆ ಸಮರ್ಪಕವಾದ ರೀತಿಯಲ್ಲಿ ಗೌರವಾರ್ಪಣೆ ಮಾಡುವುದು ಜನತೆಯ ಕರ್ತವ್ಯ. ಅಂತಹ ಕರ್ತವ್ಯವನ್ನು ಕನ್ನಡಿಗರು ಪೂರೈಸಿದುದು ಅಭಿನಂದನೀಯ. ಸದಾಶಿವರಾಯರು ತತ್ತ್ವಕ್ಕಿಂತ, ಉಪದೇಶಕ್ಕಿಂತ ವಿಧಾಯಕ ಕಾರ್ಯಕ್ರಮಕ್ಕೆ ವಿಶೇಷ ಪ್ರಾಧಾನ್ಯವೀಯುತ್ತಿದ್ದರು. ಸದಾಶಿವ ನಗರದಲ್ಲಿ ಸೇರುವ ಕಾಂಗ್ರೆಸ್ಸು ಈ ಮಾತನ್ನು ನೆನಪಿನಲ್ಲಿಟ್ಟುಕೊಂಡು, ಭಾರತಕ್ಕಿಂದು ಬೇಕಾಗಿರುವುದು ತತ್ತ್ವೋಪದೇಶವಲ್ಲ; ರಚನಾತ್ಮಕ ಕಾರ್ಯವೆಂಬುದನ್ನು ಅವಶ್ಯ ತಿಳಿದುಕೊಂಡು ಕಾರ್ಯಮಗ್ನವಾದರೆ, ಅದರಿಂದ ಸದಾಶಿವರಾಯರ ಆತ್ಮಕ್ಕೆ ನೆಮ್ಮದಿಯಾಗುವುದೆಂಬುದರಲ್ಲಿ ಸಂಶಯವೆಂಬುದಿಲ್ಲ; ನಮ್ಮ ಸಮೃದ್ಧಿಯೂ ಅವರೊಡನೆಯೇ ಆಗುವುದು.



ರಾಜಕುಮಾರ ಫಿಲಿಪರು ಅಬರ್‌ಫೋರ್ತ್‌ನಲ್ಲಿ ಮಾರ್ಗದರ್ಶಕ ಬಾಣ ಹಾರಿಸುವುದನ್ನು ನೋಡಿದರು.

In the Court of the District Munsif of Karkal

O. S. No. 268/1959.

Between

Srimathi and others. Plaintiffs.

and

Thangappe and others —Defendants.

To

The Defendants.

4. Ammanni, daughter of Amrithavathi,

7. Vimala. 8. Leela. 9. Narendra. —Minors. by guardian adlitem and mother 4th Defendant residents of Hajankala, Irvathur village of Karkala Taluk.

Whereas the Plaintiffs above named have instituted the above suit claming partition of the family properties etc., and the said suit stands posted to 23—1—1960. you are hereby informed that you are at liberty to appear before the said Court at 11 A. M. on the said date and plead your defence, if any, failing which you will be declared exparte and the suit will be decided in your absence.

H. P. A. Jain.
Pleader for Plaintiffs.

Karkala, Dated 7—1—1960.

1960

- ಹೊಸ ವರುಷ
  ಸಂಪತ್ತು ಸಮೃದ್ಧಿಗಳನ್ನು ತರಲಿ;
- ಆರ್ಥಿಕ ವ್ಯವಹಾರಕ್ಕೆ
  ಸಿಂಡಿಕೇಟ್ ಬೇಂಕಿನ ನೆನಪಿರಲಿ.

— ಸಿಂಡಿಕೇಟ್ ಬೇಂಕ್.

THE CANARA INDUSTRIAL & BANKING SYNDICATE LTD.
UDIPI.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2 V. P. ಮಾಡುವುದಿಲ್ಲ.
ರೂ 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ವಾ ಚಂದಾ ರೂ. 6-25

ಬೆಲೆ: 13 ನ.ಪೈಸೆ

Vol. 39 No. 20.
ವರುಷ ೩೯. ವಾರ ೨೦

21-1-1960

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಬೆಂಗಳೂರು ಕಾಂಗ್ರೆಸ್

ಕಾಂಗ್ರೆಸಿಗರ ಹೊಣೆ ಗುರುತರವಿದೆ

ದೇಶಪ್ರೇಮ ಮತ್ತು ರಾಜಭಕ್ತಿಗಳು ಚರ್ಚೆಯ ವಿಷಯಗಳಲ್ಲ ವಿದೇಶನಿಷ್ಠರನ್ನು ಉನ್ಮೂಲನಗೊಳಿಸಬೇಕಾಗಬಹುದು

ಅಖಿಲ ಭಾರತ ಕಾಂಗ್ರೆಸ್ಸಿನ ಬೆಂಗಳೂರು ಅಧಿವೇಶನವು ಈಗತಾನೇ ಪರಿಸಮಾಪ್ತಿಯವಾಗಿದೆ, ಕಾಂಗ್ರೆಸ್ ಅಧಿವೇಶನದ ನೂತನ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ತಾ. ೧೬ರಂದು ಅಧ್ಯಕ್ಷ ಭಾಷಣವನ್ನು ಮಾಡುತ್ತ ಕಾಂಗ್ರೆಸ್ಸಿಗರಿಗೆ ಮಾತ್ರವಲ್ಲ ಅಖಿಲ ಭಾರತ ರಾಷ್ಟ್ರೀಯರಿಗೆ ಉದ್ಬೋಧಕವಾದ ಹಿತವಾಕ್ಯಗಳನ್ನು ಹೇಳಿದರು ಅದರ ವಿವರವಿಲ್ಲಿ ಸಂಗ್ರಹಿತವಾಗಿದೆ

ಕಾಂಗ್ರೆಸ್‌ನ ಹೊಣೆ

ಸ್ವಾತಂತ್ರ್ಯಸಂಗ್ರಾಮ ಪೂರ್ವದಲ್ಲಿ ಕಾಂಗ್ರೆಸ್ ಅಧ್ಯಕ್ಷನ ಪದವಿಗಿದ್ದ ಮಹತ್ವವಿಂದಿಲ್ಲ ಅಂದು ಸ್ವಾತಂತ್ರ್ಯದ ಗುರಿಯತ್ತ ಕೊಂಡೊಯ್ಯುವುದೇ ಕಾಂಗ್ರೆಸಿನ ಗುರಿಯಾಗಿತ್ತು ಸ್ವಾತಂತ್ರ್ಯಪ್ರಾಪ್ತ್ಯನಂತರ ಸರಕಾರವು ನಮ್ಮದಾಯಿತು ಈ ಏಕಾಗ್ರ ಪ್ರತಿಭೆಗೆ ರಾಜ್ಯಸಂಚಾಲನ, ನಾಗರಿಕ ಹಿತರಕ್ಷಣೆಯ ಭಾರವೂ ಬಿದ್ದು ಅದು ಇಬ್ಭಾಗವಾಯಿತು ಈ ಎರಡು ವಿಭಾಗಗಳಲ್ಲಿ ಘರ್ಷಣೆಯೇಳಬಾರದು. ಎರಡೂ ರಾಷ್ಟ್ರಹಿತದೃಷ್ಟಿಯಿಂದ ಸದ್ಭಾವನೆಯಿಂದ ಕೂಡಿರಬೇಕಾದ ಆವಶ್ಯಕತೆಯಿದೆ ನಮ್ಮ ಕೆಲವರು ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಕಾಂಗ್ರೆಸ್‌ನೊಡನೆ ಸಂಬಂಧ ಬೆಳೆಸಿದವರಿದ್ದಾರೆ. ಕಾಂಗ್ರೆಸ್ಸು ರಾಷ್ಟ್ರ ಪ್ರಜಾಪ್ರಭುತ್ವವಾದೀ ಮಹಾಸಕ್ಷವಾಗಿದೆ ಸೇವೆ ಮತ್ತು ತ್ಯಾಗಗಳ ಸ್ವೀತಿಹಾಸ ಅದಕ್ಕಿದೆ ಬಿರುಗಾಳಿಯಲ್ಲೂ ಹಿಮಾಚಲದಂತೆ ಅಚಲವಾಗಿ ಅದು ನಿಲ್ಲಬಲ್ಲುದು ಪ್ರಪಂಚದ ಯಾವುದೇ ದೇಶದವನಾದರೂ ಕಾಂಗ್ರೆಸ್‌ನ ತ್ಯಾಗಬದ್ಧ ಈ ಇತಿಹಾಸವನ್ನು ಅಭಿಮಾನದಿಂದ ಕಾಣಬಲ್ಲನು. ಸ್ವಾತಂತ್ರ್ಯ ದೊರೆತನಂತರವಾದರೂ ಅದು ಅಧಿಕ ರಾರೂಢವಾಗಿರುವಾಗ, ಜನತೆಯನ್ನು ಯೋಗ್ಯ ಶಿಕ್ಷಣದೊಂದಿಗೆ ಸಂಘಟಿಸುವುದೂ ಅದರ ಕರ್ತವ್ಯವಾಗಿದೆ ಜನತೆಯ ಹಾರ್ದಿಕ ಸಹಯೋಗವಿಲ್ಲದೆ ಸರಕಾರದ ಕಾರ್ಯಕಲಾಪಗಳೂ ನೀತಿಧೋರಣೆಗಳೂ ಯೋಗ್ಯರೀತಿಯಲ್ಲಿ ನಿರ್ವಹಿಸಲ್ಪಡಲಾರವು. ಜನತೆಯ ಪೂರ್ಣ ಸಹಮತವಾಗಿ ವಿಶ್ವಾಸದೊಡನೆ ಸ್ವಬುದ್ಧಿಯಿಂದ ನಂಬುವವರೆಗೆ ನಾಯಕನ ನಾಯಕತನ ಸಫಲವಾಯಿತೆಂದು ಹೇಳುವಂತಿಲ್ಲ ಈ ಕರ್ತವ್ಯ ಪ್ರೇರಣೆಯನ್ನು ಭಾರತೀಯ ಜನತೆಯಲ್ಲಿ ಜಾಗ್ರತಗೊಳಿಸುವ ಹೊಣೆಗಾರಿಕೆಯು ಕಾಂಗ್ರೆಸಿಗಿದೆ, ಇದನ್ನು ಪೂರೈಸುವುದು ಮಾತ್ರ ಬಾಕಿಯುಳಿದಿದೆ

ವ್ಯವಸಾಯ ನೀತಿ

ಐದು ವರ್ಷಗಳಿಗೆ ಮೊದಲು ಆವಡಿ ಸಮ್ಮೇಳನದಲ್ಲಿ ನಾವು ಧರ್ಮನಿರಪೇಕ್ಷ ಸಮಾಜದ ಸ್ಥಾಪನೆಯ ಉದಾರ ಆಶಯವನ್ನು ಸ್ಪಷ್ಟೀಕರಿಸಿದೆವು ಇದೇನೂ ಕಾಂಗ್ರೆಸ್ಸಿಗೆ ಹೊಸ ವಿಷಯವಾಗಿರಲಿಲ್ಲ. ಏಕೆಂದರೆ, ಅದು ಈ ಆದರ್ಶ ನೀತಿಯನು ಹಲವು ವರ್ಷ ಪೂರ್ವದಲ್ಲಿಯೇ ಸ್ವೀಕರಿಸಿತ್ತು. ಕಳೆದ ವರ್ಷ ನಾಗಪುರ ಅಧಿವೇಶನದಲ್ಲಿ 'ಕೃಷಿ ನೀತಿ'ಯ ಗೊತ್ತುವಳಿಯು ಸ್ವೀಕೃತವಾಯಿತು. ಇದೂ ನೂತನ ವಿಷಯವಲ್ಲ ಬಹಳ ಕಾಲಕ್ಕೆ ಮೊದಲೇ ರೂಪಿತಗೊಂಡಿದ ವಿಷಯವೊಂದು ಪೂರ್ಣರೂಪವನ್ನು ತಾಳಿತು, ಅಷ್ಟೇ. ಈ ವ್ಯವಸಾಯ ನೀತಿಯನ್ನು ಖಂಡಿಸಲಾಗುತ್ತಿದೆ ಇದರ ವಿರೋಧಿಗಳ ಸಂಖ್ಯೆ ಅತ್ಯಲ್ಪವಿದ್ದರೂ ಗೊಂದಲವೇಳಿಸುವುದರಲ್ಲಿ ಇದು ಪ್ರಬಲ ಪಾತ್ರವನ್ನು ವಹಿಸಿದೆ ಶ್ರೀ ರಾಜಗೋಪಾಲಾಚಾರಿಯಂತಹ ನಾಯಕರೇ ಈ ಪ್ರತಿಕ್ರಿಯಾವಾದಿಗಳ ನೇತೃತ್ವವನ್ನು ವಹಿಸಿದ್ದಾರೆಂಬುದು ಖೇದದ ಸಂಗತಿ ಪರಂಪರೆಯಿಂದ ಬಂದಿರುವ ಕಾಂಗ್ರೆಸಿನ ಈ ನೀತಿಯನ್ನು ಅವರು ಖಂಡಿಸುತ್ತ ಬರುತ್ತಿರುವುದು ದುಃಖ ಹೇತುವಾಗಿದೆ ಈ ನೀತಿಯನ್ನು ಶ್ರೀ ರಾಜಗೋಪಾಲಾಚಾರಿಯವರು ಅಂದು ಸ್ವೀಕರಿಸಿದ್ದರು. ಕೆಲ ವರ್ಷಗಳ ಹಿಂದೆ ಒಪ್ಪಿದ್ದ ಉದಾರ ನೀತಿಯಿಂದ ಇಂದವರು ಸೆಟೆದು ನಿಲ್ಲುತಿದ್ದಾರೆ ಎಂಬುದು ಆಶ್ಚರ್ಯ ಜನಕ ಪ್ರಶ್ನೆಯಾಗಿದೆ ಸ್ವಾತಂತ್ರ್ಯ ಸಂಗ್ರಾಮದ ವರೆಗಿನ ನಮ್ಮ ಕಾರ್ಯಕ್ರಮಗಳನ್ನು ಖಂಡಿಸಿದವರೂ ಈ ನೀತಿಯನ್ನು ವಿರೋಧಿಸುತ್ತಿರುವುದು ಇನ್ನೂ ವಿಸ್ಮಯಕಾರಿಯಾಗಿದೆ ಚಿಕ್ಕಪುಟ್ಟ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವುದಾದರೂ ಕಾಂಗ್ರೆಸ್‌ನ ಈ ಉದಾರ ನೀತಿಗೆ ಎಲ್ಲೆಡೆಯೂ ಮನ್ನಣೆಯಿದೆ ಈ ಉದಾರ ಸಿದ್ಧಾಂತ ಮತ್ತು ಆದರ್ಶಗಳ ಕುರಿತಾಗಿ ಮಹಾತ್ಮಾ ಗಾಂಧಿಯವರೂ ಹಲವು ಬಾರಿ ಹೇಳಿದ್ದಾರೆ, ಬರೆದಿದ್ದಾರೆ



ಲಂಡನ್ ವಿಶ್ವವಿದ್ಯಾಲಯದವರು ಶಾರೀರಿಕ ಶಿಕ್ಷಣದ ಗೋಷ್ಠಿಯೊಂದನ್ನು ಏರ್ಪಡಿಸಿ, ಅದರಲ್ಲಿ ಉತ್ತಮ ಆಟಗಾರಿಕೆಯ ಕುರಿತು ವಿಮರ್ಶೆ ನಡೆಸಿತ್ತು

ಯೋಜನಾಮಯ ಜೀವನ

ಪ್ರತ್ಯೇಕ ಭಾರತೀಯ ನಾಗರಿಕನಿಗೆ ನ್ಯಾಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂರಕ್ಷಣೆ ದೊರಕಿಸುವುದು, ವಿಚಾರ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ವಿಶ್ವಾಸ, ಶ್ರದ್ಧೆ, ಸಾಮಾಜಿಕ ಸಮಾನತೆಯ ಅವಕಾಶಗಳನ್ನು ಒದಗಿಸುವುದು, ಪಾರಸ್ಪರಿಕ ಪ್ರೇಮ-ಬಂಧವ್ಯಗಳನ್ನು ವಿಕಸಿತಗೊಳಿಸಿ, ವ್ಯಕ್ತಿಗೌರವದೊಡನೆ ರಾಷ್ಟ್ರೀಯ ಐಕ್ಯವನ್ನೂ ಉಳಿಸಿಕೊಳ್ಳುವುದು ನಾವು ಸ್ವೀಕರಿಸಿದ ಸಂವಿಧಾನದನ್ವಯ ನಮ್ಮೆಲ್ಲರ ಕರ್ತವ್ಯವಾಗಿದೆ ಸ್ತ್ರೀಪುರುಷರಲ್ಲಿ ಸಮಾನತೆ, ಸಾಧ್ಯವಿದ್ದಲ್ಲಿ ವಿಕೇಂದ್ರೀಕರಣ, ಸಾರ್ವಜನಿಕ ಹಿತಕ್ಕೆ ಆಘಾತವಾಗದಂತೆ ಆರ್ಥಿಕ ಮೂಲದ ವಿಕೇಂದ್ರೀಕರಣಗಳು ಇದಕ್ಕಾಗಿ ಬೇಕು ಆದರ್ಶಗಳನ್ನು ರೂಪಿಸಿದಷ್ಟು ಸುಲಭದಲ್ಲಿ ಸಾಧಿಸುವುದು ಸಾಧ್ಯವಿಲ್ಲ ನಾವು ನಮ್ಮ ಜನತೆಯ ಆರ್ಥಿಕ, ಸಾಮಾಜಿಕ, ನೈತಿಕಾದಿ ಎಲ್ಲ ನಾಗರಿಕಸ್ತರಗಳಲ್ಲಿ ಸಂಪೂರ್ಣ ವಿಮರ್ಶೆಮಾಡಿ, ವಿಚಾರಿಸಿ ತಿಳಿದು ಒಂದು ಪೂರ್ಣರೂಪವನ್ನು ಬಿಡಿಸಿ, ಅವನ್ನು ವಾಸ್ತವಿಕಗೊಳಿಸಲು ಯೋಜನೆಗಳನ್ನು ತಯಾರಿಸಬೇಕಾಗಿದೆ. ಬಡತನವನ್ನು ದೂರೀಕರಿಸಿ ಸಂಪನ್ನ ರಾಷ್ಟ್ರವನ್ನು ಕಟ್ಟುವುದು, ಆರ್ಥಿಕ ವಿಷಮತೆಯನ್ನು ಹೋಗಲಾಡಿಸಿ ಸಾಮಾಜಿಕ ನ್ಯಾಯಸ್ಥಾಪಿಸುವುದು, ಸರ್ವರಿಗೂ ಸಮಾನಾವಕಾಶ ಕಲ್ಪಿಸುವುದೇ ಈ ರೂಪಗಳು ಇವನ್ನು ರಾಷ್ಟ್ರೀಯ ಮತ್ತು ವೈಯುಕ್ತಿಕ ಸ್ವಾತಂತ್ರ್ಯವನ್ನು ಉಳಿಸಿಕೊಂಡು

(ಆನೇ ಪುಟ ನೋಡಿರಿ)

ಕಥಾವಿಹಾರ

ಸಾಹಿತಿ ಸತ್ತಾಗ……

ಯೋಗ್ಯತೆಯುಳ್ಳವರನ್ನು ಭಾರತ ಮರೆಯುವುದಿಲ್ಲ ಜನ ಒಂದಲ್ಲ ಒಂದು ದಿನ ಅವನ ಬಗ್ಗೆ ಜಾಗ್ರತವಾಗುತ್ತದೆ. ಆದರೆ, ಸೆಟ್ಟ ಸಿಂಗಾರವಾಗುವಾಗ ಪಟ್ಟಣವುಳಿಯುವುದೆ?

ಅಯ್ಯೋ … ನಾನು ಸತ್ತಿದ್ದೇನೆ. ಕೈ ಹಿಡಿದ ಹೆಂಡತಿಯನ್ನು 'ವಿಧವೆ'ಯಾಗಿ ಮಾಡಿ ಹುಟ್ಟಿದ ಮೂರು ಮಕ್ಕಳನ್ನು ಅನಾಥರನ್ನಾಗಿ ಮಾಡಿ ನಾನು ಸತ್ತಿದ್ದೇನೆ.

ಆದರೂ … ಒಂದು ಸಂತೃಪ್ತಿ—ನಿತ್ಯ ಕಣ್ಣೀರಿನಲ್ಲಿ ಕೈ ತೊಳೆಯುವ ಆ ಜೀವನದಿಂದ, ವಿಶ್ವದ ಆ ಪಾಶಕರವಾದ ಬಂಧನದಿಂದ ಪಾರಾಗಿ ಬಂದಿದ್ದೇನೆ!

ಆದರೆ …. ವಿಧವೆ ಹೆಂಡತಿ, ಅನಾಥ ಮಕ್ಕಳು …. ಅವರಲ್ಲದೇ ನನಗೆ ಆ ಜಗತ್ತಿನಲ್ಲಿ ಇನ್ನಾರೂ ಇಲ್ಲ. ಅವರ ಸುಖವನ್ನಲ್ಲದೇ ನಾನುಬೇರಾವುದನ್ನೂ ಬಯಸುತ್ತಿದ್ದಿಲ್ಲ; ಈಗಲೂ ಬಯಸುತ್ತಿಲ್ಲ.

ಆ ಸುಖ—ಅವರಿಗೆಂತು ದೊರಕೀತು? ನಾನಿರುವಾಗಲೇ ದೊರೆಯದ ಆ ಸುಖ ನಾನಗಲಿದನಂತರ ಇನ್ನೆಲ್ಲಿ? ಇಲ್ಲ…ಹಾಗಾಗಲಾರದು. ದೇಶ ಪೂರ್ವ ಸುಪ್ರಸಿದ್ಧ ಸಾಹಿತಿಯಿಂದ ಹೊಂದಿದ ಮಹೋಪಕಾರಗಳಿಗೆ ಪ್ರತಿಯಾಗಿ ಕೃತಘ್ನತೆಯನ್ನೆಸಗಲಾರದು. ಆದರೂ… ನಾನಿರುವಾಗಲೇ ನನ್ನನ್ನರಿಯಲಾರದಿದ್ದ ಜಗತ್ತು ಈಗ ಏನು ಮಾಡೀತು?…. ಏನು ತಾನೇ ಮಾಡಿತು?

ಇಲ್ಲ… ಏನೂ ಮಾಡಲಿಕ್ಕಿಲ್ಲ .. ನನಗಿನ್ನೂ ನೆನಪಿದೆ…. ಆಗ— ನನ್ನ ಮೊದಲ ಕಾದಂಬರಿ 'ಮಣ್ಣಿನ ಮಕ್ಕಳು' ಹೊರಬಿದ್ದಾಗ ಅದೆಷ್ಟು ಜನ ನನ್ನನ್ನು ಹೊಗಳಲಿಲ್ಲ! ಅದೆಷ್ಟು ಜನ ನನ್ನನ್ನು ಸತ್ಕರಿಸಿಲ್ಲ! ಪತ್ರಿಕೆಯ ತುಂಬ ನನ್ನ ಫೋಟೋಗಳೇ ಅಚ್ಚಾಗಿದ್ದುವು. ಆದರೆ ನನಗೆ ಬೇಕಾದುದೇನು? ಆ ಹೊಗಳಿಕೆ—ಆ ಸತ್ಕಾರ— ಅದರ ಆಗತ್ಯ ನನಗಿರಲಿಲ್ಲ. ನನಗೆ ಬೇಕಿದ್ದುದೇನು?

ನಾನು ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ಕಾರಕೂನಿಕೆಯಿಂದ ನಿವೃತ್ತರಾದ ವೃದ್ಧ ತಂದೆ ಮತ್ತು ತಾಯಿಯನ್ನು ಸಲಹುವ ಹೊರೆ ನನ್ನ ಮೇಲೆರಗಿತ್ತು. ನಾಲ್ಕಾರು ಮಕ್ಕಳನ್ನು ಹಡೆದು ಕಣ್ಣೆದುರಿನಲ್ಲಿಯೇ ಅವುಗಳ ಮೃತ್ಯುವನ್ನೂ ಕಂಡು, ಕೊನೆಯಲ್ಲಿ ಹುಟ್ಟಿದ ನನ್ನನ್ನು ಹೊಟ್ಟೆ, ಬಟ್ಟೆ ಕಟ್ಟಿ ಸಲಹಿದ ಹಿರಿಯರನ್ನು ಉಪವಾಸ ಕೆಡಹಲು ಹೇಗಾದೀತು? ಅದಕ್ಕಾಗಿ ಅರ್ಧದಲ್ಲಿಯೇ ಕಾಲೇಜು ಶಿಕ್ಷಣ ತ್ಯಜಿಸಬೇಕಾಯಿತು. ಜೀವನ ನಿರ್ವಹಣೆಯ ಬಗ್ಗೆ ವಾಡಿಕೆಯಂತೆ ನೌಕರಿ ಬೇಟೆ ಆರಂಭಿಸಿದೆ. ನೌಕರಿ ಕೊಡುವ ಮಹಾಶಯರು ಬಡತನ ಮತ್ತು ವರ್ಚಸ್ಸಿನ ಅಭಾವವನ್ನು ಮನಸ್ಸಿನಲ್ಲಿಯೇ ಗುಣಿಸಿ ನೌಕರಿ ಇಲ್ಲವೆಂದರು. ಕೊನೆಗೋರ್ವ ಪತ್ರಿಕೆಯ ಸಂಪಾದಕ ಮಹಾಶಯರು ತಮ್ಮ ಪತ್ರಿಕೆಯ ಕಾರ್ಯಾಲಯದಲ್ಲಿ ತಿಂಗಳಿಗೆ ೪೦ ರೂಪಾಯಿ ಸಂಬಳ ದೊರಕಿಸುವ ಚಿಕ್ಕ ಕೆಲಸವೊಂದನ್ನು ದಯಪಾಲಿಸಿದರು. ಅದೇ ಸಂಬಳದಲ್ಲಿ ಪಾಲುಗೊಳ್ಳಲು ವೃದ್ಧ ತಂದೆತಾಯಿಯವರ 'ಕೊನೆಯಾಸೆ'ಯೆನ್ನಿಸಿದ ಕೋರಿಕೆಯನ್ನು ಈಡೇರಿಸಲು ಹೆಂಡತಿಯೆಂಬಾಕೆಯನ್ನು ಕರೆತಂದೆ. ಐದು ವರುಷಗಳ ತನಕ ಅದೇ ಕೆಲಸವನ್ನು ಸಾಗಿಸಿದೆ. ಆ ಸಮಯದಲ್ಲಿ ಅದೇ ಪತ್ರಿಕೆಯ ಮೂಲಕ ಆಗಾಗ ಲೇಖನಗಳನ್ನೂ ಬರೆಯುತ್ತಿದ್ದೆ. (ಅವುಗಳಲ್ಲಿ ಹೆಚ್ಚಿನವು ಸಂಪಾದಕ ಮಹಾಶಯರ ಹೆಸರಲ್ಲಿ ಅಚ್ಚಾದುವೆನ್ನುವುದು ಗುಟ್ಟಿನ ಸಂಗತಿ.) ಸಂಬಳ ಕಡಿಮೆಯಾಯಿತೆಂಬ ಕಾರಣದಿಂದ ನಮ್ಮ ಸಂಪಾದಕರು ನೌಕರಿ ಬಿಟ್ಟು ಹೋದ ಕಾರಣದಿಂದಾಗಿ, ಪತ್ರಿಕೆಯ ಯಜಮಾನರು ನನ್ನ ಯೋಗ್ಯತೆ ಗುರುತಿಸಿಯೋ ಏನೋ—ನನ್ನನ್ನೇ ಆ ಪತ್ರಿಕೆಯ ಸಂಪಾದಕನನ್ನಾಗಿ ನೇಮಿಸಿದರು. ನಾನು ನನ್ನ ಪತ್ರಿಕೆಯ ಮೂಲಕ ಬರೆಯುತ್ತಿದ್ದ ಸಂಪಾದಕೀಯ ಲೇಖನಗಳನ್ನು ದೇಶದ ಒಂದು ಪಂಗಡ ಹೊಗಳಿದರೆ ಇನ್ನೊಂದು ಪಂಗಡ ದೂಷಿಸುತ್ತಿತ್ತು. ಬಡಜನತೆಯ ವಿರುದ್ಧ ದುಡ್ಡಿದ್ದವರು ನಡೆಸುತ್ತಿದ್ದ ಪ್ರತಿಯೊಂದು ಅತ್ಯಾಚಾರವನ್ನೂ ನಾನು ಟೀಕಿಸುತ್ತಿದ್ದೆ. ಅನ್ಯಾಯವನ್ನು ಪ್ರತಿಭಟಿಸುವವರೆಲ್ಲರೂ ಕಮ್ಯೂನಿಷ್ಟರೆನ್ನುವುದು ಹಣವಂತರ ಸ್ವಭಾವವಾಗಿ ಹೋಗಿದೆ ಹೀಗಾಗಿ ಬಡಜನರು ನನ್ನನ್ನು ಕೊಂಡಾಡಿದರೆ ಅಧಿಕಾರದಲ್ಲಿದ್ದ, ಹಣವಂತರಾದವರು ನನ್ನನ್ನು ದ್ವೇಷಿಸಿದರು. ಆದರೆ ಆ ರಾ ಆ ಬಂಡವಾಳಶಾಹಿಗಳು ನನ್ನನ್ನು ಹೊಗಳುವುದು ನನಗೆ ಬೇಕಿಲ್ಲ. ಬಡವರು ನನ್ನನ್ನು ಪ್ರೀತಿಸುತ್ತಿದ್ದರು. ಮಾನವತಾ ಪ್ರೇಮಿಯಾದ ನನಗೆ ಅದಷ್ಟೇ ಸಾಕಿತ್ತು. ಆದರೆ ಅದೊಂದೇ ಸಾಕೇ? ಬರೇ ಪ್ರೀತಿಯಿಂದ ನನ್ನ ಹೊಟ್ಟೆ ತುಂಬುವುದೇ? ಹಾಗಾದರೆ ನನಗೇನುಬೇಕು? ನನ್ನ ಜೀವನ—ಅದು ದುರಂತವೋ, ಸುಖಮಯವೋ-ಅದರ ಕತೆ ಕೇಳಿದ ನೀವೇ ನಿರ್ಧರಿಸಿ—ನನಗೆ ಮತ್ತೇನುಬೇಕು?

ಜೀವನದ ಪ್ರಥಮ ಹಂತದಲ್ಲೇ ಬಡತನದ ಕಹಿಯುಂಡ ನನಗೆ ನನ್ನಂತಹ, ಈ ದೇಶದ ಮಿಲಿಯಗಟ್ಟಲೆ ಬಡಜನರ ಕಷ್ಟಪರಂಪರೆಗಳ ಅನುಭವನಾಗಿತ್ತು. ದುಡಿಯುವ ಜೀವಿ ದುಡಿಯುತ್ತಿರಬೇಕು; ದುಡಿಸುವವರ ಹೊಟ್ಟೆತುಂಬುತ್ತಿರಬೇಕು ಕಾರ್ಯ ಮತ್ತು ತತ್ವಗಳೆರಡರ ಮಧ್ಯೆ ನಮ್ಮ ದೇಶದಲ್ಲಿ ಬೆಳೆದುಬಂದಿರುವ ಬಹುದೊಡ್ಡ ವ್ಯತ್ಯಾಸದ ಪರಿಣಾಮವಿದೆ. ಬಾಪೂ ಬೀರಿದ ಅಮರ ಸಂದೇಶವನ್ನು ಬರೇ ತತ್ವವಾಗಿಸಿಕೊಂಡು ಅದರ ಹಿನ್ನೆಲೆಯಲ್ಲಿ ರಾಜಕೀಯವಾಡುವ ದುಷ್ಟಶಕ್ತಿಗಳಿಂದಾವೃತವಾದ ನಮ್ಮ ನಾಡಿನಲ್ಲೆಂತಾದೀತು ಬಡಜನರ ಏಳಿಗೆ? ಶಾಂತಿಯ ನೆಲೆವೀಡೆನಿಸಿದ ಭಾರತದಲ್ಲಿ ಬಡಜನತೆ ತಮ್ಮ ನ್ಯಾಯವಾದ ಹಕ್ಕುಸ್ಥಾಪಿಸಿಕೊಳ್ಳಲು ಕ್ರಾಂತಿಯ ಆಗಬೇಕೇ? ಹಿಂಗದ ನಮ್ಮವರ ಬಡತನದಿಂದ ಕಂಗೆಟ್ಟು, ಹೃದಯದಲ್ಲುಂಟಾದ ತುಮುಲ ಯುದ್ಧದ ಪರಿಣಾಮವಾಗಿ ನನ್ನ "ಮಣ್ಣಿನ ಮಕ್ಕಳು" ಕಾದಂಬರಿ ಹೊರಬಿದ್ದಿತು. ಅಂತಹ ಕ್ರಾಂತಿಕಾರಕ ವಿಚಾರಧಾರೆಯಿಂದ ಕೂಡಿದ ಕಾದಂಬರಿಯನ್ನು ಪ್ರಕಟಿಸಲು ನಾನು ಪಟ್ಟಪಾಡು, ಹೇಳತೀರದು. ಆದರೆ ಬಡಜನತೆ ಅದನ್ನು ಆದರದಿಂದ ಸ್ವಾಗತಿಸಿತು. ಆಳುವ ಸರಕಾರ ನನ್ನ ಕಾದಂಬರಿಯಿಂದಾಗಿ ತನ್ನ ಧೋರಣೆಯನ್ನು ಸ್ವಲ್ಪಮಟ್ಟಿಗೆ ಬದಲಿಸಿತು. ನಾನು ಕಾದಂಬರಿಯಲ್ಲಿ ಮುಖ್ಯವಾಗಿ ಪ್ರತಿಪಾದಿಸಿದ್ದ ಭೂಸುಧಾರಣೆಯ ವಿಷಯವಾಗಿ ಶಾಸನವೊಂದನ್ನು ಮಾಡಿ ಬಡರೈತರತ್ತ ತನ್ನ ಕಟಾಕ್ಷ ಬೀರಿತು. ಅಂದು ನನಗೆ ಜೀವನದಲ್ಲಿ ದೊರೆತ ಪ್ರಥಮ ಸಂತೃಪ್ತಿ! ಇದೊಂದೇ ಅಲ್ಲ—ಇಂತಹ ಹಲವಾರು ಕ್ರಾಂತಿಕಾರಕ ಕಾದಂಬರಿಗಳಿಂದಾಗಿ ಸರಕಾರ ಮತ್ತು ಸಮಾಜಗಳಲ್ಲಿ ಬದಲಾವಣೆಗಳುಂಟಾಗಿ ಜನತೆ ನನ್ನನ್ನು ಕೊಂಡಾಡಿತು. ಆದರೆ…ಯಾರಿಗೆ ಬೇಕಿತ್ತು-- ಈ ಕೊಂಡಾಟ! ನಾನು ಕೀರ್ತಿಗಾಗಿ ಎಂದೂ ಆಶಿಸಿದವನಲ್ಲ. ನನಗೆ ಬೇಕಿದ್ದುದಿಷ್ಟೇ: ನಾನು ಬಯಸುವ ಆ ಜಗತ್ ಕಲ್ಯಾಣ; ನನ್ನ ಹೆಂಡತಿಮಕ್ಕಳ ಸುಖ—ನನಗೆ ಒಪ್ಪೊತ್ತಿನ ಊಟ. ಸ್ವಾರ್ಥ ಮತ್ತು ನಿಸ್ವಾರ್ಥಗಳ ತುಲನೆಯಲ್ಲಿ ಈ ತರದ ಆಸೆಯಿರುವಾತ ನ್ಯಾಯವಾಗಿ ಯಾವವರ್ಗಕ್ಕೆ ಸೇರಬೇಕೆಂದು ನೀವುಬಯಸುವಿರೋ ಅಷ್ಟೇ ನಾನೂ. ಅದಕ್ಕಿಂತ ಹೆಚ್ಚು ನಾನು ಇನ್ನೇನೂ ಅಲ್ಲ. ಇನ್ನೊಬ್ಬರ ಕಷ್ಟಗಳ ಬಗೆಗೆ ಅನುಕಂಪ ತಾಳಿ ಅದರ ಪರಿಹಾರಕ್ಕಾಗಿ ಹೋರಾಡುವ ನಾನು ನನ್ನ ಮಕ್ಕಳು ಹಸಿದು ಅಳುತ್ತಿರುವುದನ್ನು ಕಂಡು ಅಸಹಾಯನಾಗಿ ಕಣ್ಣೀರುಸುರಿಸುವುದು. ಸ್ವಾರ್ಥವೆನಿಸಿದರೆ ನಾನೂ ಸ್ವಾರ್ಥಿಯೇ ಸರಿ. ಭವಿಷ್ಯದ ಸುಖಕ್ಕಾಗಿ ಬಾಯ್ದೆರೆದು ನನ್ನ ಕೈಹಿಡಿದಿದ್ದ ನನ್ನ ಪತ್ನಿ, ನನ್ನ ಅಳಿಯದ ಬಡತನದಿಂದ ಬೆಂದರೂ ಒಂದು ದಿನವಾದರೂ ಒಂದು ನಿಷ್ಠುರದ ಮಾತನಾಡದೇ ನನ್ನೊಡನೆ ನಗುನಗುತ್ತ ಜೀವಿಸಿದಳು. ಆದರೆ ಆ ನಗುವಿನ ಹಿಂದೆ ಅಡಗಿದ್ದ ಸುಖವನ್ನರಸಿಬಂದ ಹೆಣ್ಣು ಹೃದಯದ ಅಪಾರ ವೇದನೆಯ ಅರಿವು ನನಗಾದಾಗ ಎದೆಯಲ್ಲಿ ಶೂಲವಿಟ್ಟಂತಾಗುತ್ತಿತು.

ಅಂತೂ ನಾನು ಮೊದಲೇ ಎಣಿಕೆ ಹಾಕಿದಂತೆ ನಲವತ್ತು ತುಂಬುವ ಮೊದಲೇ ಆ ಲೋಕ ಬಿಟ್ಟುಬಂದೆ. ಹೆಂಡತಿ ಮಕ್ಕಳನ್ನು ನಡುದಾರಿಯಲ್ಲಿ ಕೈಬಿಟ್ಟು 'ನಿರ್ಗತಿಕರೆ'ಂದು ಲೋಕ ಕರೆಯುವಂತೆ ಮಾಡಿ ಬಂದೆ ನನ್ನ ಜೀವಿತಕಾಲದಲ್ಲಿ ಯಾವ ಗಂಟನ್ನೂ ಮಾಡಿಟ್ಟಿಲ್ಲ. ಆದರೂ ಭವಿಷ್ಯದ—ಅಂದರೆ ಇಂದು ನನ್ನೆಣಿಕೆಯಂತೆ ನಡೆದ – ಮುನ್ಸೂಚನೆಯ ಮೇರೆಗೆ ಸಾಲ ಕಡವಾದರೂ ಬಿಡದೇ ಒಂದೇ ಒಂದು ನಾವಿರದ ಜೀವ ವಿಮೆಯನ್ನಿಳಿಸಿದ್ದೆ. ಅದು ಇಂದು ನನ್ನ ಮಡದಿ ಮಕ್ಕಳ ತಾತ್ಕಾಲದ ಜೀವನಕ್ಕೆ ನೆರವಾಗಬಹುದು. ಆದರೆ ನಾನಿಂದು ಕಂಡದ್ದೇನ? ಜೀವ ವಿಮೆಯ ಹಣವನ್ನು ಪಡೆಯಲು ನನ್ನ ಹೆಂಡತಿ ಹೆಣಗುತ್ತಿದ್ದಾಳೆ.

(೧೧ನೇ ಪುಟ ನೋಡಿರಿ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1920

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ನುಡಿಚಿತ್ರ

ಘಾನಾದ ಸ್ವಾತಂತ್ರ್ಯಶಿಲ್ಪಿ—ಕ್ವಾಮೆ ಎನ್‌ಕ್ರೂಮಾ

ಘಾನಾದ ಸ್ವಾತಂತ್ರ್ಯಕ್ಕಾಗಿ ದುಡಿದು ಯಶಸ್ವಿಯಾಗಿ ಈಗ ರಾಷ್ಟ್ರ ಪುನಾರಚನೆಗೆ ಹೆಣಗುವ ಮಹಾಶಕ್ತಿಯಿವರು.

ವಸಾಹತು ಸ್ಥಾನದಿಂದ ಸ್ವತಂತ್ರ ರಾಷ್ಟ್ರದ ಸ್ಥಾನಕ್ಕೆ ಪರಿವರ್ತನೆ ಹೊಂದಿದ ಸಮಯದಿಂದಲೂ ಘಾನಾದ ಮುಖ್ಯ ಮಂತ್ರಿ ಶ್ರೀ ನುಕ್ರೂಮಾರವರು ನೂತನ ರಾಷ್ಟ್ರವೊಂದರ ಶಿಲ್ಪಿಯಾಗಿ ತಮ್ಮ ರಾಷ್ಟ್ರವನ್ನು ಸಂಘಟಿಸುತ್ತಿದ್ದಾರೆ.

೧೯೫೭ರಲ್ಲಿ ಬ್ರಿಟಿಷ್ ಗೋಲ್ಡ್ ಕೋಸ್ಟ್ (ಘಾನಾದ ಹಳೆಯ ಹೆಸರು) ಚುನಾವಣೆಗಳು ನಡೆದಾಗ ಡಾ। ಎನ್‌ಕ್ರೂಮಾರವರು ಆದರ್ಶ ಜನನಾಯಕರೆಂದು ಸಂಪೂರ್ಣ ಜಗತ್ತಿಗೆ ತಿಳಿದುಬಂತು. ಅಂದಿನಿಂದಲೂ ಅವರು ತಮ್ಮ ಮಾತೃಭೂಮಿ ಘಾನಾದ ಉನ್ನತಿಯನ್ನೇ ಹಾರೈಸಿಕೊಂಡು ಬಂದಿರುವರು.

ಪ್ರಾರಂಭಿಕ ಶಿಕ್ಷಣವನ್ನು ಗೋಲ್ಡ್ ಕೋಸ್ಟ್‌ನಲ್ಲಿಯೇ ಪಡೆದಿದ್ದ ಎನ್‌ಕ್ರೂಮಾರವರ ಜ್ಞಾನತೃಷೆ ಅತ್ಯಪಾರವಾಗಿತ್ತು. ಇದರಿಂದಾಗಿ ಅವರು ಕಾಲೇಜ್ ವಿದ್ಯಾಭ್ಯಾಸವನ್ನೂ ಅಲ್ಲಿಯೇ ಹೊಂದಿದರು. ಶ್ರೀಯುತರು ಅಧ್ಯಯನದಲ್ಲಿ ತೀವ್ರ ಆಸಕ್ತಿ ವಹಿಸಿದುದರಿಂದ ತಮ್ಮ ಅಧ್ಯಾಪಕರನ್ನೂ ತನ್ನತ್ತ ಆಕರ್ಷಿಸುತ್ತಿದ್ದರು. ಇತಿಹಾಸವೆಂದರೆ, ಶ್ರೀ ಎನ್‌ಕ್ರೂಮಾ ಅವರಿಗೆ ಅತಿಪ್ರಿಯ ವಿಷಯವಾಗಿತ್ತು.

ಹೊರದೇಶಗಳಲ್ಲಿ ಉಚ್ಚ ಶಿಕ್ಷಣ

ಕಾಲೇಜ್ ವಿದ್ಯಾಭ್ಯಾಸ ಮಾತ್ರದಿಂದ ತೃಪ್ತಿಪಟ್ಟುಕೊಳ್ಳದೇ ಹೋದ ಶ್ರೀ ಎನ್‌ಕ್ರೂಮಾರವರು ಮುಂದೆ ಉಚ್ಚ ಶಿಕ್ಷಣಕ್ಕಾಗಿ ವಿದೇಶ ಪ್ರಯಾಣ ಮಾಡಲೂ ಬಯಸಿದರು. ೧೯೩೫ರಲ್ಲಿ ಈ ಬಯಕೆ ಅವರನ್ನು ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಕೊಂಡೊಯ್ದಿತು. ೧೯೩೯ರಲ್ಲಿ ಅವರು ಬಿ. ಎ. ಪದವೀಧರರಾದರು. ಅವರು ಪೆನ್ಸಿಲ್ವೇನಿಯಾದಲ್ಲಿರುವ ಲಿಂಕನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ. ಅರ್ಥಶಾಸ್ತ್ರ ಮತ್ತು ಸಮಾಜ ಶಾಸ್ತ್ರ ಇವೆರಡೂ ಅವರು ಆರಿಸಿದ ಮುಖ್ಯ ವಿಷಯಗಳಾಗಿದ್ದುವು. ಇಷ್ಟಕ್ಕೇ ಅವರು ತೃಪ್ತಿಪಟ್ಟುಕೊಳ್ಳದೆ ಅವರು ಥಿಯಾಲಜಿ ಮತ್ತು ಶಿಕ್ಷಣ ಶಾಸ್ತ್ರಗಳಲ್ಲಿಯೂ ಪದವೀಧರರಾದರು. ಮುಂದೆ ಪಿ. ಎಚ್‌ಡಿ. ಪದವಿ ಪಡೆಯುವ ದೃಷ್ಟಿಯಿಂದ ಅದಕ್ಕಾಗಿ ಅಧ್ಯಯನ ನಡೆಸುವ ಸಮಯದಲ್ಲಿ ಲಿಂಕನ್ ವಿಶ್ವವಿದ್ಯಾನಿಲಯದಲ್ಲಿ ಅವರು ತತ್ವಶಾಸ್ತ್ರದ ಬೋಧಕರಾಗಿಯೂ ಕೆಲಸ ಮಾಡುತ್ತಿದ್ದರು. ಗ್ರೀಕ್ ಮತ್ತು ನಿಗ್ರೋ ಇತಿಹಾಸವನ್ನೂ ಬೋಧಿಸುತ್ತಿದ್ದರು.

ಹೀಗೆ ಡಾ॥ ಎನ್‌ಕ್ರೂಮಾ ಕೇವಲ ಜನನಾಯಕರಷ್ಟೇ ಅಲ್ಲ ಒಬ್ಬ ದೊಡ್ಡ ವಿದ್ವಾಂಸರೂ ಹೌದು. ಅವರ ವಿದ್ವತ್ತಿಗೆ ಮನ್ನಣೆ ಕೊಡುವ ದೃಷ್ಟಿಯಿಂದಲೇ ಅವರಿಗೆ ೧೯೫೧ರಲ್ಲಿ, ಅವರು ಅಮೇರಿಕಾಕ್ಕೆ ಭೇಟಿ ಕೊಟ್ಟಾಗ, ಲಿಂಕನ್ ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿತು.

ಅಮೇರಿಕದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದ ಸಮಯದಲ್ಲಿ ಅವರು ತಮ್ಮಂತೆಯೇ ಅಮೇರಿಕ ಮತ್ತು ಕೆನಡಾದಲ್ಲಿ ವಿದ್ಯಾಭ್ಯಾಸ ಪಡೆಯಲು ಬಂದಿದ್ದ ಆಫ್ರಿಕನ್ ವಿದ್ಯಾರ್ಥಿಗಳ ಸಂಘವೊಂದನ್ನು ಸ್ಥಾಪಿಸಿದರು. ಮತ್ತು, ಈ ವಿದ್ಯಾರ್ಥಿಗಳು ಹೊರಡಿಸುತ್ತಿದ್ದ ಪತ್ರಿಕೆಗೆ ಸಂಪಾದಕರಾಗಿದ್ದರು. ಅವರೇ ಈ ಸಂಘದ ಪ್ರಥಮ ಅಧ್ಯಕ್ಷರಾಗಿದ್ದುದಲ್ಲದೆ ಅವರು ಈ ಸಂದರ್ಭದಲ್ಲಿ ನಡೆಸಿದ ಕಾರ್ಯ ಚಟುವಟಿಕೆಗಳಿಂದ ಜನನಾಯಕರಾಗಲು ಬೇಕಾದ ಎಷ್ಟೋ ಅನುಭವವನ್ನು ಗಳಿಸಿದರು. ಮತ್ತು ಆಫ್ರಿಕಾದ ರಾಜಕೀಯ ಸಮಸ್ಯೆಗಳು ಮತ್ತು ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ವಿಶೇಷ ರೀತಿಯ ಅಧ್ಯಯನವನ್ನು ನಡೆಸಿದರು.

ಅರ್ಥಶಾಸ್ತ್ರದಲ್ಲಿನ ಅವರ ಆಸಕ್ತಿ ಮುಂದೆ ೧೯೪೫ರಲ್ಲಿ ಅವರನ್ನು ಇಂಗ್ಲೆಂಡಿಗೆ ಕೊಂಡೊಯ್ದಿತು. ಅವರು ಅಲ್ಲಿ ಸುಪ್ರಸಿದ್ಧ "ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್" ಸಂಸ್ಥೆಗೆ ಸೇರಿ ಉಚ್ಚ ಶಿಕ್ಷಣ ಪಡೆದರು. ಮತ್ತು ಅದೇ ಸಮಯದಲ್ಲಿ 'ಗ್ರೇಸ್ ಇನ್'ಗೆ ಸೇರಿನ್ಯಾಯ ಶಾಸ್ತ್ರವನ್ನೂ ಅಭ್ಯಸಿಸಿದರು. ಪ್ರಾಯಶಃ ಈ ವಕೀಲ ವಿದ್ಯಾಭ್ಯಾಸವೇ ಅವರು ರಾಜಕೀಯಕ್ಕೆ ಧುಮುಕಲು ಸಹಾಯಕವಾಗಿರಬೇಕು.

ರಾಜಕೀಯಕ್ಕೆ ಪ್ರವೇಶ

೧೯೪೫ ಮತ್ತು ೧೯೪೭ರ ಮಧ್ಯೆ ಅವರು ಪಶ್ಚಿಮ ಆಫ್ರಿಕದ ಐಕ್ಯಮತಕ್ಕಾಗಿ ಶ್ರಮಿಸುವುದೇ ಈ ಸಂಸ್ಥೆಯ ಉದ್ದೇಶವಾಗಿದ್ದಿತು. ಎನ್‌ಕ್ರೂಮಾರವರು ಪಶ್ಚಿಮ ಆಫ್ರಿಕಾದ ವಿದ್ಯಾರ್ಥಿಗಳು ಪ್ರಕಟಿಸುತ್ತಿದ್ದ ಪತ್ರಿಕೆಯ ಸಹಸಂಪಾದಕರಾದರಲ್ಲದೆ ಅಖಿಲ ಆಫ್ರಿಕಾ ಕಾಂಗ್ರೆಸ್ ಸಂಸ್ಥೆಯ ಜಂಟಿಕಾರ್ಯದರ್ಶಿಗಳಾಗಿಯೂ ಕೆಲಸಮಾಡಿದರು. ಇದೇಸಮಯದಲ್ಲಿ ಡಾ. ಎನ್‌ಕ್ರೂಮಾರವರು ೧೯೪೭ರಲ್ಲಿ ಗೋಲ್ಡ್ ಕೋಸ್ಟ್‌ನಲ್ಲಿ ಪ್ರಚಾರದಲ್ಲಿದ್ದ "ನೂತನ ಆಫ್ರಿಕಾ" ಎಂಬ ಪ್ರಚಾರ ಪತ್ರಿಕೆಯ ಸಂಪಾದಕರೂ ಆಗಿದ್ದರು.

ಒಬ್ಬ ಒಳ್ಳೆಯ ಲೇಖಕರೂ ಹೌದು

ಡಾ. ಎನ್‌ಕ್ರೂಮಾರವರು ಒಬ್ಬ ಒಳ್ಳೆಯ ಕ್ರಿಯಾಶೀಲ ಲೇಖಕರೆಂಬುದಕ್ಕೆ ಅವರು ಬರೆದಿರುವ ಕೆಲವು ಪ್ರಕಟಣೆಗಳೇ ಸಾಕ್ಷಿಯಾಗಿವೆ. ೧೯೪೩ರಲ್ಲಿ ಅವರು ಪಶ್ಚಿಮ ಆಫ್ರಿಕಾದಲ್ಲಿ ವಿದ್ಯಾಭ್ಯಾಸ ಮತ್ತು ರಾಷ್ಟ್ರೀಯತೆ" ಎಂಬ ಒಂದು ಪುಸ್ತಕ ಬರೆದರು. ೧೯೪೭ರಲ್ಲಿ ಅವರು "ಸ್ವಾತಂತ್ರ್ಯದೆಡೆಗೆ ವಸಾಹತಿನ ಮುನ್ನಡೆ" ಎಂಬ ಗ್ರಂಥವನ್ನೂ ಬರೆದರು. ೧೯೪೬ರಲ್ಲಿ "ನನ್ನ ಕಲ್ಪನೆಯ ಪಂಥಾಮಕಾರಿ ಕಾರ್ಯಕ್ರಮ" ಎಂಬ ಗ್ರಂಥವನ್ನೂ ೧೯೫೭ ರಲ್ಲಿ 'ಘಾನಾ: ಕ್ವಾಮೆ ಎನ್‌ಕ್ರೂಮಾನ ಆತ್ಮಕಥೆ" ಎಂಬ ಗ್ರಂಥವನ್ನೂ ಅವರು ಬರೆದಿರುವರು.

ಡಾ. ಎನ್‌ಕ್ರೂಮಾರವರು ಇಂಗ್ಲೆಂಡಿನಲ್ಲಿದ್ದುಕೊಂಡೇ ಆಫ್ರಿಕನರ ಸಂಘಟನೆಗಾಗಿ ನಡೆಸಿದ ಕಾರ್ಯ ಅವರ ಖ್ಯಾತಿಯನ್ನು ಗೋಲ್ಡ್ ಕೋಸ್ಟಿನ ಮೂಲೆ ಮೂಲೆಗೂ ಹರಡಿತು. ಮತ್ತು ಸ್ವಾತಂತ್ರ್ಯ ಹಂಬಲದಿಂದ ಕೆರಳಿ ನಿಂತಿದ್ದ ಈ ವಸಾಹತಿನ ಜನತೆ ಸಂಯುಕ್ತ ಗೋಲ್ಡ್ ಕೋಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯ ಪದವಿಯನ್ನು ಡಾ. ಎನ್‌ಕ್ರೂಮಾ ಅವರಿಗೆ ನೀಡಿತು. ಮುಂದಿನ ವರ್ಷಗಳಲ್ಲಿ ಗೋಲ್ಡ್‌ಕೋಸ್ಟ್ ರಾಜಕೀಯದಲ್ಲಿ ಡಾ. ಎನ್‌ಕ್ರೂಮಾರವರ ವ್ಯಕ್ತಿತ್ವ ಹೆಚ್ಚುಹೆಚ್ಚು ಪ್ರಭಾವಶಾಲಿಯಾಗ ತೊಡಗಿತು. ಅವರ ಭಾಷಣಗಳು ಈ ವಸಾಹತು ಪ್ರದೇಶದ ಮೂಲೆ ಮೂಲೆಯಲ್ಲೂ ಅವರಿಗೆ ಹಿಂಬಾಲಕರ ಗುಂಪನ್ನು ಒದಗಿಸಿದವು; ಅವರೊಬ್ಬ ಹಿರಿಯ ಜನ ನಾಯಕರಾದರು. ೧೯೪೯ರಲ್ಲಿ ಈ ರಾಜಕೀಯ ಪಕ್ಷದಲ್ಲಿ ಒಡಕುಉಂಟಾಗಿ ಎನ್‌ಕ್ರೂಮಾರು ಈ ಪಕ್ಷದಿಂದ ಹೊರಬಂದು ತಮ್ಮದೇಶದ ಒಂದು ಹೊಸ ಪಕ್ಷವನ್ನೇ ಸ್ಥಾಪಿಸಿದರು. ಡಾ। ಎನ್‌ಕ್ರೂಮಾರವರ ಪ್ರಜಾಪಕ್ಷವು ಮುಖ್ಯವಾಗಿ ಯುವಕರನ್ನು ತುಂಬಾ ಆಕರ್ಷಿಸಿತು. ಮತ್ತು ಮಧ್ಯಮ ವರ್ಗದವರೇ ವಿಶೇಷವಾಗಿದ್ದ ಸಂಯುಕ್ತ ಗೋಲ್ಡ್‌ಕೋಸ್ಟ್ ಕನ್‌ವೆನ್‌ಷನ್ ಪಕ್ಷಕ್ಕಿಂತ ಹೆಚ್ಚು ಜನಪ್ರಿಯವಾಯಿತು. ಹೊಸ ರಾಜ್ಯಾಂಗದ ರೀತ್ಯಾ ೧೯೫೧ರಲ್ಲಿ ನಡೆದ ಪ್ರಥಮ ಚುನಾವಣೆಗಳಲ್ಲಿ ಎನ್‌ಕ್ರೂಮಾರವರ "ಕನ್‌ವೆನ್‌ಷನ್ ಪೀಪಲ್ಸ್ ಪಾರ್ಟಿ" ಪಕ್ಷಕ್ಕೆ ಅದ್ಭುತ ವಿಜಯ (೩೮ ಚುನಾಯಿತ ಸ್ಥಾನಗಳ ಪೈಕಿ ಒಟ್ಟು ೩೪ ಸ್ಥಾನಗಳು) ಲಭಿಸಿತು.

ಸಾಮ್ರಾಜ್ಯಶಾಹಿ ಆಕ್ರೋಶ

ಡಾ। ಎನ್‌ಕ್ರೂಮಾರವರ ರಾಜಕೀಯ ಚಟುವಟಿಕೆಗಳು ಸಾಮ್ರಾಜ್ಯಶಾಹಿ ಅಧಿಕಾರಿ ವರ್ಗಕ್ಕೊಂದು ದೊಡ್ಡ ತಲೆನೋವಾಯಿತು. ಮತ್ತೆ ಮತ್ತೆ ಅವರು

(೧೦ನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ "ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!

"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ.೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಂತರಿಕ್ಷಗಮನ

ಅಂತರಿಕ್ಷಗಾಮಿ—ಹನುಮಂತ

ಐದುಬಾರಿ ಅಂತರಿಕ್ಷಕ್ಕೆ ಹಾರಿದ ಹನುಮಂತನ ಕಾಲವು ಪುನರಾವರ್ತಿತಗೊಳ್ಳುವುದೆ?



ಅಮೇರಿಕೆಯ ಸೇನಾಶಾಖೆಯಲ್ಲಿನ ಆಧುನಿಕ ಮಾದರಿಯ ವಿಮಾನ

ಅಂತರಿಕ್ಷ ಯಾತ್ರೆಯೆಂಬುದು ಇಂದಿನ ದಿನಗಳಲ್ಲಿ ಅತ್ಯಂತ ಸುಗಮ ಹಾಗೂ ಸರಳವಾದುದಾಗಿದೆ ಆಕಾಶದಲ್ಲಿ ದೀರ್ಘ ಪ್ರಯಾಣ ನಡೆಸುವ ವಾಯುಯಾನಗಳ ಮೂಲಕ ತೀರ ಹಳಸಲಾಗಿ ಪರಿಣಮಿಸಿದೆ ಚಂದ್ರಲೋಕವನ್ನು ಬಿಟ್ಟು ಮಂಗಳ ಲೋಕದತ್ತ ಎಲ್ಲರ ದೃಷ್ಟಿಯೆಂದು ಹರಿಯುವಕಾಲ ಸನ್ನಿಹಿತವಾಗಿದೆ.

"ಎಲ್ಲವೂ ಭಾರತದಲ್ಲಿತ್ತು" ಎಂದು ಹೇಳುವ ಭಾರತೀಯರಿಗೆ ಇಂದಿನ ಪಾಶ್ಚಾತ್ಯ ವೈಜ್ಞಾನಿಕರ ಕಾರಭಾರುಗಳನ್ನು ಅವಲೋಕಿಸುವಾಗ ತುಸು ಅಭಿಮಾನ ಹೀನತೆಯು ತೋರಿಬರುವುದು ಸಾಧ್ಯ. ಅವರು ಗೃಧ್ರದೃಷ್ಟಿಯಿಂದ ತಮ್ಮ ಗತೇತಿಹಾಸವನ್ನು ವೀಕ್ಷಿಸಿದರೆ, ತಮ್ಮ ದೇಶದ ಒರ್ವ ಮಹಾನುಭಾವನು ಅಂತರಿಕ್ಷ ಯಾತ್ರೆಯನ್ನು ಮಾಡಿ, ಗ್ರಹ–ನಕ್ಷತ್ರಗಳನ್ನೂ ಮುಟ್ಟಿದ್ದನೆಂಬುದರ ಸತ್ಯಕಲ್ಪನೆಯಾಗುವುದು ವಾಲ್ಮೀಕಿ ರಾಮಾಯಣದ ಭಕ್ತ ಹನುಮಂತನು ಸೂರ್ಯಲೋಕವನ್ನೂ ಮುಟ್ಟಿದ್ದನೆಂದು ಆತನಿಗೆ ತಿಳಿದು ಬರುವುದು ಹಾಗಾಗಿ ಹನುಮಂತನೇ ಪ್ರಥಮ ಅಂತರಿಕ್ಷ ಯಾತ್ರಿಕನೆಂದು ನಾವು ಹೇಳಬಹುದು

ಹನುಮಂತನು ವಾಯುಪುತ್ರ; ಆದರಿಂದಾಗಿಯೇ ಸರ್ವತ್ರ ಅವನ ಗಮನ ಸಾಧ್ಯ ಹಲವು ಅಂತರಿಕ್ಷ ಯಾತ್ರೆಯನ್ನೀತ ಮಾಡಿದ್ದಾನೆ ಬಾಲ್ಯಾವಸ್ಥೆಯಲ್ಲಿ ಈತ ಸೂರ್ಯಬಿಂಬವನ್ನೂ ಹಿಡಿದು ಬಿಟ್ಟ ಆಗ, ದೇವ ದಾನವ ಮಾನವ ಲೋಕಗಳಲ್ಲಿ ಅಲ್ಲಕಲ್ಲೋಲವೇಳಲು, ದೇವತೆಗಳ ಸಾನುನಯ ವಿನಂತಿಯಂತಾತ ಸೂರ್ಯನನ್ನು ಬಿಟ್ಟುಬಿಟ್ಟದ್ದ. ಆಧುನಿಕರು ಇದನ್ನು ಕೇವಲ ಕಲ್ಪನಾವಿಲಾಸನೆಂದ ಅಡಿ ತಳ್ಳಿಬಿಡಬಹುದು ಆದರೆ, ಕಲ್ಪನೆಯಾದರೂ ಇದ್ದಿರಬೇಕಾದರೆ, ಆ ಕಾಲದಲ್ಲಿ ಭಾರತೀಯ ವಿಜ್ಞಾನವು ಮುಂದುವರಿದಿರಬೇಕೆಂಬುದನ್ನು ನಾವು ಅಲ್ಲಗಳೆಯುವಂತಿಲ್ಲ.

ಇದು ಹನುಮಂತನ ಪ್ರಥಮ ಅಂತರಿಕ್ಷ ಪ್ರವಾಸದ ಕಥನವಾಯಿತು. ಆತನ ದ್ವಿತೀಯ ಪ್ರವಾಸಕಥನವು ವೈಜ್ಞಾನಿಕ ವಿಧಾನದಲ್ಲಿಯೇ ವರ್ಣಿಸಲ್ಪಟ್ಟಿದೆ ಸೀತಾನ್ವೇಷಣೆಗಾಗಿ ನಾಲ್ಕುನೂರು ಕ್ರೋಶ ದೂರ ಲಂಘನವೇ ಈ ಅಂತರಿಕ್ಷ ಯಾತ್ರೆಯಾಗಿದೆ ಇದಾದನಂತರ ಸಂಜೀವಿನೀ ಬೇರನ್ನು ತರುವುದಕ್ಕೆ ಮತ್ತು ರಾಮಾದಿಗಳನ್ನು ಅಯೋಧ್ಯೆಗೆ ಮುಟ್ಟಿಸುವುದಕ್ಕೆ ಪುನಃ ಅಂತರಿಕ್ಷ ಯಾತ್ರೆಯನ್ನು ಮಾಡಿದನು ನಾಲ್ಕುನೂರು ಕ್ರೋಶ ಹಾರಲು ಆತ ತನ್ನ ಶರೀರವನ್ನು ಹಿಗ್ಗಿಸಬೇಕಾಯಿತು. ಉದ್ದವಾದ ನೆಗೆತದಿಂದ ಆತ ಹಾರಿದಾಗ, ನಿಂತ ಪರ್ವತವೂ ಕಂಪಿಸಿತು. ಮರದ ಹೂ ಹಣ್ಣುಗಳು ಉರುಳಿಬಿದ್ದುವು. ಆತನ ವೇಗದಿಂದಾಗಿ ಪಕ್ಕದ ಹಲವಾರು ಮರಗಿಡಗಳೂ ಆತನೊಡನೆಯೇ ಹಾರಿಹೋದುವು. ಹನುಮಂತನ ಎರಡೂ ಭುಜಗಳು ಸರ್ಪಗಳಂತೆ ದೇದೀಪ್ಯಮಾನವಾಗಿದ್ದುವು ಆಕಾಶದಲ್ಲಿ ಹರಡಿದ್ದ ಆತನ ಬಾಲವು ಇಂದ್ರನ ಬಿಲ್ಲಿನಂತೆ ಪ್ರಕಾಶಿಸುತಿತ್ತು ಹಾರುವ ವಾಯುಪುತ್ರನ ನೆಗೆತದಿಂದಾಗಿ ಸೀಳಲ್ಪಟ್ಟ ಗಾಳಿಯಿಂದಾದ ಧ್ವನಿ ಆಕಾಶಮಂಡಲದಲ್ಲಿ ತುಂಬಿ ಹೋಯಿತು ಕೆಲವೊಮ್ಮೆ ಆತನ ಬಾಲವು ಬಾಲಕೇತುವಿನಂತೆ ತೋರುತಿತ್ತು ಅತ್ಯಂತ ವೇಗದಿಂದ ಹಾರಾಡುತಿದ್ದ ಆತನ ಶರೀರದ ನೆರಳು ಸಮುದ್ರದ ಮೇಲೆ ತೀವ್ರ ಗಮನದಿಂದ ಹರಿದಾಡುವ ನೌಕೆಯಂತೆ ಕಾಣಿಸುತಿತ್ತು

ಹನುಮಂತನು ಓಡುವ ಭಾಗದಡಿಯ ಸಮುದ್ರ ಭಾಗದಲ್ಲಿ ತೆರೆಗಳು ಭಯಂಕರಾಕಾರ ತಾಳತೊಡಗಿದುವು ಕೆಲವೊಮ್ಮೆ ವಾಯು ಮೇಘಗಳೊಡನೆ ಹನುಮಂತನ ಶರೀರವು ಬಡೆದುಕೊಳ್ಳುತಿತ್ತು ಆಗ ಉಂಟಾಗುವ ಭಯಂಕರ ಗರ್ಜನೆಯಿಂದ ಆಕಾಶವು ಪ್ರತಿಧ್ವನಿತವಾಗುತಿತ್ತು. ಆತನ ವೇಗವು ಹೆಚ್ಚಿದಂತೆ ಸಮುದ್ರವೂ ಉಕ್ಕೇರುತಿತ್ತು ಶರತ್ಕಾಲದ ಮೇಘ ಇಳಿದು ಬರುವಂತೆ ಸಮುದ್ರದ ಬಿಳಿಯ ನೊರೆಯ ತೆರೆಗಳು ಮೇಲೇರುತಿದ್ದವು ಆಗ ಆತನ ನೆರಳು ಉದ್ದಗಲವಾಗಿ ತೋರುತಿತ್ತು ಕೆಲವೊಮ್ಮೆ ಈ ನೆರಳು ಹತ್ತು ಯೋಜನ ಅಗಲ ಮತ್ತು ಮೂವತ್ತು ಯೋಜನ ಉದ್ದವಾಗಿರುತಿತ್ತು ಇನ್ನು ಕೆಲವೊಮ್ಮೆ ಈ ನೆರಳು ಆತನನ್ನು ಹಿಂಬಾಲಿಸಿ ಓಡುತ್ತಿರುವಂತೆ ಭಾಸವಾಗುತಿತ್ತು ಆಕಾಶದಲ್ಲಿ ಹಾರುತ್ತಿರುವ ಹನುಮಂತ "ಪಕ್ಷವಾನ್ ಇವ ಪರ್ವತಃ" (ರೆಕ್ಕೆಗಳಿರುವ ಪರ್ವತದಂತೆ) ತೋರಿ ಬರುತಿದ್ದ ಮೇಘಗಳ ಮರೆಯಲ್ಲಿ ಹಲವುಬಾರಿ ಮರೆಯಾಗುತಿದ್ದು, ಮತ್ತೆ ಹೊರಬರುತಿದ್ದ.

ಹನುಮಂತನ ಶರೀರದ ನೆರಳಿನ ಆಕಾರದ ವರ್ಣನೆಯನ್ನು ನೋಡುವಾಗ, ಆತ ಅತಿ ಎತ್ತರದಲ್ಲಿ ಧಾವಿಸುತಿದ್ದನೆಂದು ತಿಳಿದುಬರುವುದು ಸೂರ್ಯ ಪ್ರಕಾಶದಿಂದ ಆತನ ನೆರಳು ಸಮುದ್ರದಲ್ಲಿ ಬೀಳುತಿತ್ತು. ನೆರಳಿನ ಬೃಹದಾಕಾರವನ್ನು ನೋಡುವಾಗ ಆತ ಸೂರ್ಯಬಿಂಬದ ಅತಿನಿಕಟದಲ್ಲಿಯೇ ಅಂತರಿಕ್ಷ ಯಾತ್ರೆ ಮಾಡುತಿದ್ದನೆಂಬುದನ್ನು ನಾವು ತಿಳಿಯಬೇಕು ಏಕೆಂದರೆ, ಪ್ರಕಾಶದ ಸಮೀಪ ಹೋದರೆ ಮಾತ್ರ ನೆರಳು ದೊಡ್ಡದಾಗುವುದು ಸಾಧ್ಯ.

ಹನುಮಂತನು ಹಾರು ಹಾರುತ್ತ ನಕ್ಷತ್ರ ಗ್ರಹಗಳಿಗೂ ತಲಪಿದನೆಂದು ಮುಂತಾಗಿ ರಾಮಾಯಣದಲ್ಲಿ ಹೇಳಿದೆ ಏಕೆಂದರೆ, ಈತನು ಓಡುತಿದ್ದ "ಮಾರ್ಗ"ದಲ್ಲಿಯೇ ನಕ್ಷತ್ರ ಹಾಗೂ ಚಂದ್ರರೂ ಸುತ್ತುವರಿಯುತಿದ್ದರು. (ಗ್ರಹನಕ್ಷತ್ರ ಚಂದ್ರಾದಿ ತಾರಾಗಣ ವಿಭೂಷಿತೇ) ಮಾರ್ಗ ಶಬ್ದದಿಂದಲೇ ಗ್ರಹನಕ್ಷತ್ರಗಳ ಸಮೀಪವೆಂದು ಹೇಳಬರುವುದಿಲ್ಲ ಏಕೆಂದರೆ, ಅಂತರಿಕ್ಷದಲ್ಲಿ ಮಾರ್ಗಶಬ್ದಕ್ಕೆ ಭೂಮಿಯೆಂಬ ಅರ್ಥವೂ ಇದೆ ಆದಿಕವಿ

(೯ನೇ ಪುಟ ನೋಡಿರಿ)

ಲೈಬ್ರೆರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ ಬರೆದವರು ಡಾಕ್ಟರ ಜೇಮ್ಸ್ ಬಿ ಕೊನೇಂಟ ಅನುವಾದಕ ಯು ಲಕ್ಷ್ಮೀನರಾಯಣಾಚಾರ್ಯ. ಪುಟ ೧೮೦ ಬೆಲೆ ರೂ ೧-೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು ಕು ಶಿ ಹರಿದಾಸ ಭಟ್ಟರು ಪುಟ ೩೦೮ ಬೆಲೆ ರೂ ೨-೫೦

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು ಕೆ ಬಿ ರಾಮಕೃಷ್ಣರಾಯ ಮತ್ತು ಯು ಲಕ್ಷ್ಮೀನಾರಾಯಣಾಚಾರ್ಯ ಪುಟ ೨೫೦ ಬೆಲೆ ರೂ ೨-೭೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ನಿರ್ಮಿಸುವ ಅಪೂರ್ವ ಗ್ರಂಥ ಅನುವಾದಕ ಕು ಶಿ ಹರಿದಾಸ ಭಟ್ಟ ಪುಟ ೩೫೦ ಬೆಲೆ ರೂ ೨,

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ' ವರ್ಣಿಸಲಾಗಿದೆ ಬರೆದವರು ಯು ರಾಘವೇಂದ್ರಾಚಾರ್ಯ. ಪುಟ: ೯೦ ಬೆಲೆ ರೂ ೧-೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆಯ ಒಂದು ಸ್ವತಂತ್ರ ರಚನೆ. ಬರೆದವರು ಕು ಶಿ ಹರಿದಾಸ ಭಟ್ಟ ವಿ ಸೀತಾರಾಮಯ್ಯನವರ ಮುನ್ನುಡಿ ಇದೆ ಪುಟ ೧೫೦, ಬೆಲೆ ರೂ ೨

ಫಂಟಮಾರಾ

ಇಗ್ನೇಶಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ ಅನುವಾದಕರು: ಕು ಶಿ. ಹರಿದಾಸ ಭಟ್ಟ ಪುಟ: ೨೦೦ ಬೆಲೆ ರೂ ೨

ಬರೆಯಿರಿ **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ**
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾರ್ಕಳ ಡಿ. ಮು ಕೋರ್ಟಿನಲ್ಲಿ

ಕ್ರಮನಂಬ್ರ 494/1959.

ದಿ ಮೂಲ್ಕಿ ಬೇಂಕ್ ಲಿಮಿಟೆಡ್ ಮೂಲ್ಕಿ— ವಾದಿ

ಮತ್ತು

H ಹುಸೆನ್ ಕೂಡಾ – ಪ್ರತಿವಾದಿರು

ಇವರೊಳಗೆ

ಈ ಮೂಲ್ಕಿ ಸದ್ರಿ ದಾವೆಯ ಪ್ರತಿವಾದಿರು 1 ಎಚ್. ಹುಸೈನ್, ಶೇಕ್ ಅಹಮ್ಮದರ ಮಗ 2 ಶೇಕ್ ಅಹಮ್ಮದ್ ಮಹಮ್ಮದ ಬ್ಯಾರಿಗಳ ಮಗ 1ನೆಯವರು ಮಂಗ್ಲೂರು ತಾಲ್ಲೂಕು ಹಳೆಯಂಗಡಿ ಗ್ರಾಮದ ಸಂತೆಕಟ್ಟೆ, 2ನೆಯವರು ಕಾರ್ಕಳ ತಾಲ್ಲೂಕು ಪ್ರಾಂತ್ಯ ಗ್ರಾಮದ ಮೂಡಬಿದ್ರಿ ಪೇಟೆಯಲ್ಲಿ ಕೂಡಾ ಇರುತ್ತಾರೆ ಇವರಿಗೆ ಈ ಮೂಲ್ಕ ತಿಳಿಯಪಡಿಸುವದೇನಂದ್ರೆ—

ವಾದಿ ನಿಮ್ಮ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರತಿ ಬಗ್ಗೆ ತಾರೀಕು 30-1 1960ಕ್ಕೆ ಇಟ್ಟಿದೆ ಸದ್ರಿ ದಿನ ಬೆಳಗ್ಗೆ ನೀವು ಸ್ವತಹಾ ಯಾ ವಕೀಲ್‌ದ್ವಾರಾ ಮೇಲ್ಕಂಡ ಕೋರ್ಟು ಮುಂದೆ 10 ಗಂಟೆಗೆ ಹಾಜರಾಗಿ ಉದಪಡಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿವಾ ಮಾಡಿ ಸದ್ರಿ ದಾವಾ ಯೇಕಪಕ್ಷವಾಗಿ ತೀರ್ಮಾನಿಸಲ್ಪಡೀತು ಎಂತ ಈ ಮೂಲ್ಕ ತಿಳಿಸೋಣಾಗುತ್ತದೆ

By order of the Court.

N M Adyanthaya
Advocate for Plaintiff.

Karkala, 15—I—60.

ಬೆಂಗಳೂರು ಕಾಂಗ್ರೆಸ್

(೧ನೇ ಪುಟದಿಂದ)

ಧಿಸಬೇಕಾಗಿದೆ ನಮ್ಮ ಶಕ್ತಿ ಮಿತಗಿದೆ, ಆದರೆ, ಅದರ ಸಂಪೂರ್ಣ ಉಪಯೋಗವು ಸರ್ವರ ಹಿತದೃಷ್ಟಿಯಿಂದಾಗಬೇಕಾದರೆ, ಒಂದು ಸರ್ವತೋಮುಖವಾದ ಯೋಜನೆಯು ಅವಶ್ಯಕವಾಗಿದೆ.. ರಾಜಕೀಯ ಗೊಂದಲದ ಸಮಯದಲ್ಲಿ ಸಾಧಾರಣ ಸಿದ್ಧಾಂತವೂ ಮರೆತು ಹೋಗುತ್ತದೆ. ಕೆಲವು ಪ್ರಭಾವಶಾಲಿ ನಾಯಕರೂ ಈ ಯೋಜನೆಯ ವಿಚಾರವನ್ನು ತುಚ್ಛವೆಂದು ತಿಳಿದು ಯೋಜನಾಬದ್ಧ ವಿಕಾಸವು ದೇಶಕ್ಕೆ ಹಾನಿಯನ್ನು ತಂದೊಡ್ಡಿ ಅದನ್ನು ಮುಳುಗಿಸುವುದೆಂದು ತಿಳಿದಿರುವುದನ್ನು ಕಂಡು ನನಗೆ ಅತೀವ ವಿಸ್ಮಯವೆನಿಸುತ್ತದೆ. ಯೋಜನೆಯ ಕಾರ್ಯಪ್ರಣಾಲಿಯಲ್ಲಿ ಭಿನ್ನತೆಯಿದ್ದರೂ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಈ ವಿಧದ ಯೋಜನೆಗಳು ಪ್ರಚಲಿತವಿವೆ.

ಭಾರತದಲ್ಲಿರುವ ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳೆರಡನ್ನೂ ಸಂಘರ್ಷವಿಲ್ಲದಂತೆ ನಡೆಸಬೇಕಾದರೆ ದೇಶದ ಉತ್ಪಾದನೆಯು ಅಭಿವೃದ್ಧಿಯಾಗಬೇಕಾದರೆ, ಖಾಸಗಿ ವ್ಯವಸಾಯಕ್ಕೆ ಸರಕಾರದ ನೆರವು ಅವಶ್ಯಬೇಕಾಗುತ್ತದೆ. ನಮ್ಮ ಬಡತನ ಮತ್ತು ನಿರುದ್ಯೋಗ ಪ್ರಶ್ನೆಗಳನ್ನು ದೂರೀಕರಿಸಬೇಕಾದರೆ, ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸಲೇಬೇಕಾಗಿದೆ. ವರ್ತಮಾನ ಪರಿಸ್ಥಿತಿಗೆ ಹೊಂದಿಕೊಂಡೇ ನಾವು ಮುಂದುವರಿಯಬೇಕಾಗಿದೆ. ವಿಕಾಸಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನಮಗೆ ಕಠಿನತೆಗಳ ಎದುರುಬಂದಿವೆ. ಇವನ್ನು ನಾವು ಗಮನಿಸಬೇಕು ನಾವು ಕಷ್ಟಗಳನ್ನು ಸಹಿಸಿ ದ್ವಿತೀಯ ಯೋಜನೆಯನ್ನು ಯಶಸ್ವಿಯಾಗಿ ಮುಗಿಸುತ್ತಿದ್ದೇವೆ; ತೃತೀಯ ಯೋಜನೆಯ ರೂಪ ತಯಾರಿಸುತ್ತಿದ್ದೇವೆ ಅತಿ ಶೀಘ್ರವಾಗಿ ಸಂಪನ್ನ, ಸ್ವಾವಲಂಬಿ ರಾಷ್ಟ್ರವಾಗಿ ಪರಿವರ್ತಿಸಲು ಏನು ಮಾಡಬೇಕೆಂಬುದೇ ನಮ್ಮ ಮುಖ್ಯ ಪ್ರಶ್ನೆ ಇದಕ್ಕಾಗಿ ನಾವು ಪ್ರಯಾಸಪಟ್ಟು ಕಾರ್ಯಪ್ರವೃತ್ತರಾಗಬೇಕಾಗಿದೆ.

ಆಹಾರೋತ್ಪಾದನೆ

ಆಹಾರದಲ್ಲಿ ನಾವು ಕಷ್ಟಪಟ್ಟು, ಗತ ವರ್ಷ ಉತ್ತಮ ಬೆಳೆ ಪಡೆದೆವು. ಆದರೆ ಇಷ್ಟೇ ಸಾಲದು ನಮ್ಮ ಹೆಚ್ಚುತ್ತಿರುವ ಜನಸಂಖ್ಯೆಗೂ ಸಾಲುವಷ್ಟು ಆಹಾರಧಾನ್ಯಗಳನ್ನು ನಾವು ಉತ್ಪಾದಿಸಬೇಕು. ಉತ್ತಮ ಗೊಬ್ಬರ, ನೀರಾವರಿ ಸಾಧನ, ನೀರಿನ ಸದುಪಯೋಗ, ಉತ್ತಮ ಬೀಜ, ಉತ್ತಮ ಉಳುಮೆ ಮೊದಲಾದವನ್ನು ಸಾಧಿಸಬೇಕಾಗಿದೆ; ಬಳಸಬೇಕಾಗಿದೆ ಆಧುನಿಕ ವ್ಯವಸಾಯ ಸಾಧನಗಳ ಪ್ರಚಾರವೂ ಆವಶ್ಯಕವಾಗಿದೆ. ಅದಿಲ್ಲದೆ ಹೋದರೆ ನಾವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗುವುದು ಸಾಧ್ಯವಿಲ್ಲ ಆದುದರಿಂದ ಆಹಾರೋತ್ಪಾದನೆಗೆ ಅವಶ್ಯಕವೆನಿಸಿದ ಎಲ್ಲ ಕೆಲಸಗಳನ್ನೂ ನಾವು ಮಾಡಲೇ ಬೇಕಾಗಿದೆ. ಕೆರೆ, ಬಾವಿಗಳ ತೋಡುವಿಕೆ, ಅಣೆಕಟ್ಟು, ಕಾಲುವೆಗಳ ರಚನೆ ಮಾತ್ರವಲ್ಲದೆ ದೊಡ್ಡ ಗೊಬ್ಬರದ ಕಾರಖಾನೆಗಳೊಡನೆ ಚಿಕ್ಕ ಘಟ್ಟವನ್ನೂ ಸ್ಥಾಪಿಸುವುದು ಅವಶ್ಯವೆಂದು ನಾನು ತಿಳಿಯುತ್ತೇನೆ. ರಾಜ್ಯ ಸರಕಾರ ಕೃಷಿಕರ ಸಹಾಯದಿಂದ ಆಹಾರ ಸ್ವಾವಲಂಬನೆಯನ್ನು ಸಾಧಿಸಬಹುದು. ನಮ್ಮ ಸಂವಿಧಾನದಂತೆ ಕೃಷಿಯು ರಾಜ್ಯ ಸರಕಾರದ ಅಧಿಕಾರ ಕಕ್ಷೆಗೆ ಸೇರಿದುದು ಆದುದರಿಂದ ಈ ಪ್ರಮುಖ ಕರ್ತವ್ಯದತ್ತ ರಾಜ್ಯ ಸರಕಾರಗಳು ತೀವ್ರ ಗಮನ ಹರಿಸುವುದು ಆವಶ್ಯಕವಾಗಿದೆ

ಸಹಕಾರಿ ವ್ಯವಸಾಯ

ಕೃಷಿ ಪದ್ಧತಿಯಲ್ಲಿ ಸಹಕಾರಿ ಕೃಷಿ ಲಾಭಕರವೆಂದು ಎಲ್ಲ ದೇಶಗಳ ಅನುಭವ ಪಡುತ್ತಿವೆ ಸಣ್ಣಪುಟ್ಟ ಗದ್ದೆಗಳಿರುವ ಭಾರತದಲ್ಲಿದು ಅತ್ಯಂತಾವಶ್ಯಕವಾಗಿದೆ. ಸಹಕಾರದ ಹೊರತು ಕೃಷಿಯಲ್ಲಿ ಉನ್ನತಿಯಾಗಲಾರದು ನಾಗಪುರ ಅಧಿವೇಶನದಲ್ಲಿ ಇದನ್ನು ಎತ್ತಿ ಹಿಡಿಯಲಾಯಿತು ಇದಕ್ಕಾಗಿ ಉತ್ಸಾಹ ಮಾತ್ರವಲ್ಲದೇ ಗ್ರಾಮದ ಜನರಿಗೆ ಆವಶ್ಯಕ ಶಿಕ್ಷಣವೂ ಬೇಕಾಗಿದೆ ರಾಜ್ಯಸರಕಾರಗಳು ತಮ್ಮ ಈ ಭಾರವನ್ನು ನಿರ್ವಹಿಸುತ್ತಿವೆ. ಸೇವಾಸಹಕಾರ ಮತ್ತು ಸಹಕಾರಿ ಕೃಷಿಯು ವಿರುದ್ಧ ಕಾಣಿಸಲಾಗುತ್ತಿದೆ ಅವರು ಈ ಬಗ್ಗೆ ವಿಚಾರ ಮಾಡಿಲ್ಲ ಮುಂದಿನ ಎರಡು ವರ್ಷಗಳಲ್ಲಿ ಪ್ರತಿ ಗ್ರಾಮದಲ್ಲಿಯೂ ಸೇವಾ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆಂದೂ ಮುಂದೆ ಸಹಕಾರಿ ಕೃಷಿಯೇ ಮುಖ್ಯ ಉದ್ದೇಶವೆಂದೂ ಸ್ಪಷ್ಟೀಕರಿಸಲಾಗಿತ್ತು ಇದು ವೈಯುಕ್ತಿಕ ಇಷ್ಟದಂತೆ ನಡೆಯುವುದಲ್ಲದೇ ಸ್ವಾಮಿತ್ವವು ಈಗಿನಂತೆಯೇ ಉಳಿಯುವುದು. ಇದನ್ನು ಯಾರಾದರೂ ಏಕೆ ವಿರೋಧಿಸುತ್ತಾರೋ ನಾನರಿಯೆ. ಇವರ ಮುಖ್ಯ ಆಕ್ಷೇಪವೆಂದರೆ, ನಮ್ಮ ಇಂದಿನ ಕೃಷಿಕ್ರಮವನ್ನು ಸುಧಾರಿಸುವುದೇ ಆಗಿದೆ. ನಮ್ಮ ರೈತರು ವೈಯುಕ್ತಿಕವಾಗಿ ಆಧುನಿಕ ಉಪಕರಣಗಳನ್ನು ಕೊಳ್ಳಲಾರರು. ಕೊಂಡರೂ ಅವು ಉಪಯುಕ್ತವಾಗಲಾರವೆಂದೇ ಈ ರೀತಿ ಸಹಕಾರಿ ಕೃಷಿಗೆ ಬೆಂಬಲವೀಯುತ್ತೇವೆ. ವ್ಯಕ್ತಿ ಸ್ವಾತಂತ್ರ್ಯವು ಯಾವ ರೀತಿಯಿಂದಲೂ ಇದರಿಂದ ಅಪಹೃತವಾಗುವುದಿಲ್ಲ. ಸಂಪತ್ತು ಹೆಚ್ಚುವುದರಿಂದ ಸ್ವಾತಂತ್ರ್ಯದ ಬೆಲೆ ಹೆಚ್ಚುವುದಲ್ಲದೇ ಬಡತನದಿಂದಲ್ಲ.

ಪಂಚಾಯತ ರಾಜ್ಯ

ಆಡಳಿತೆಯ ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆಯೊಂದು ನಮ್ಮಲ್ಲಿದೆ. ಭಾರತದಲ್ಲಿ ಎರಡು ರಾಜ್ಯಗಳೀಗ ಪಂಚಾಯತ ರಾಜ್ಯಗಳನ್ನು ಘೋಷಿಸಿವೆ. ಗ್ರಾಮೀಣ ಜನರಿಗೆ ಉಪಯುಕ್ತ ಸಂದರ್ಭಗಳನ್ನು ಕಲ್ಪಿಸಿಕೊಟ್ಟು ಅವರೆಲ್ಲರ ಬುದ್ಧಿಮತ್ತೆಯ ಪ್ರಯೋಜನವನ್ನು ಪಡೆದು ಸಮೃದ್ಧಿ ಸಾಧಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ ಸರಕಾರಿ ಅಧಿಕಾರಿಗಳು ಅವರ ಹಿಂದೆ ನಿಂತು ಅಪ್ರತ್ಯಕ್ಷ ರೂಪದಲ್ಲಿ

(೬ನೇ ಪುಟ ನೋಡಿರಿ)



ದನಬಾದದ ಇದ್ದಲು ಸಂಶೋಧನಾ ಕೇಂದ್ರದ ಒಂದು ಸಾಮಾನ್ಯ ದೃಶ್ಯ.

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ

'. DEVEE & Co. (M. I.) CALCUTTA—40

ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಮೈಸೂರು ರಾಜ್ಯದ ಸಂಗೀತ ನೃತ್ಯ ಅಕಾಡಮಿ

ನ್ಯೂ ಪಬ್ಲಿಕ್ ಆಫೀಸು, ಬೆಂಗಳೂರು.

ಸಂಗೀತ, ನೃತ್ಯ (ಭರತನಾಟ್ಯ)ಗಳಲ್ಲಿ ಉಚ್ಚ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ಆಯ್ಕೆ

ಸಂಗೀತ ಮತ್ತು ಭರತನಾಟ್ಯಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯುವ ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೋರಲಾಗಿದೆ ಇತರ ವಿವರಗಳಿಗೆ ಮತ್ತು ಅರ್ಜಿಫಾರಂಗೆ ತಮ್ಮ ವಿಳಾಸ ಬರೆದಿರುವ ಉದ್ದನೆಯ ಲಕೋಟೆಯನ್ನು 25 ನಯೇಪೈಸೆ ಅಂಚೆಯ ಚೀಟಿಯೊಡನೆ ಈ ಕೆಳಗಿನವರಿಗೆ ಕಳುಹಿಸಿ ಪಡೆಯಬಹುದು.

ಅರ್ಜಿಗಳನ್ನು ಸ್ವೀಕರಿಸಲು ಕಡೆಯ ತಾರೀಖು 31—1—1960.

ಎಂ. ಬಿ. ಗೋವಿಂದರಾಜ್,
ಸೆಕ್ರೆಟರಿ,
ಮೈಸೂರು ದೇಶದ ಸಂಗೀತ ನಾಟಕ ಅಕಾಡಮಿ,
ಬೆಂಗಳೂರು

ಬೆಂಗಳೂರು,
ತಾ. 8-1-1960.

> ಸೌಂದರ್ಯವೆಂಬುದು ಎಲ್ಲೆಲ್ಲಿಯೂ ನೆಲಸಿಕೊಂಡಿದೆ; ಆದರೆ, ಅದನ್ನು ಆಸ್ವಾದಿಸುವ ಮನೋವೃತ್ತಿಯಿರುವವನು ಮಾತ್ರ ಅದನ್ನು ಕಂಡುಕೊಳ್ಳಬಲ್ಲನು; ಉಳಿದವರು ವೃಥಾ ಅದನ್ನು ಅರಸುತ್ತ ಸುತ್ತುತ್ತಿರುವರು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೧-೧-'೬೦	೨೦

ಸದಾಶಿವ ನಗರ

ಬೆಂಗಳೂರಿನ 'ಸದಾಶಿವ ನಗರ'ದಲ್ಲಿ ೬೫ನೆಯ ಕಾಂಗ್ರೆಸ್ ಸಮ್ಮೇಳನವು ನಿಯೋಜಿತ ದಿನಕ್ಕಿಂತಲೂ ಒಂದು ದಿನ ಮೊದಲೇ ಯಶಸ್ವಿಯಾಗಿ ನೆರವೇರಿ ಮುಕ್ತಾಯಗೊಂಡಿತು. ಸಾಮಾನ್ಯವಾಗಿ, ಇಂತಹ ಅಧಿವೇಶನಗಳಲ್ಲಿ ಪ್ರಚಲಿತ ಸ್ಥಿತಿಗತಿಗಳ ಬಗ್ಗೆ ವಿವೇಚಿಸಿ ಗೊತ್ತುವಳಿಗಳನ್ನು ಸ್ವೀಕರಿಸುವುದು ಮಾತ್ರವಲ್ಲದೇ ಪಕ್ಷದ ಮುಂದಿನ ಧೋರಣೆಯನ್ನು ರೂಪಿಸುವುದೂ ಸಾಮಾನ್ಯವಾಗಿ ಪರಿಣಮಿಸಿದೆ. ಆದರೆ, ಕಾಂಗ್ರೆಸ್ಸು ತನ್ನ ಪ್ರಚಲಿತ ನೀತಿಯನ್ನು ಈ ಮೊದಲೇ ಸಂಪೂರ್ಣವಾಗಿ ಸ್ಪಷ್ಟೀಕರಿಸಿರುವುದರಿಂದ, ಸದ್ಯದ ಅಧಿವೇಶನದಲ್ಲಿ ಯಾವುದೇ ಹೊಸನೀತಿಯನ್ನು ಒಪ್ಪಿಕೊಳ್ಳುವ ಆವಶ್ಯಕತೆಯಿಂದಿಲ್ಲ. ಕಳೆದ ವರ್ಷ ನಾಗಪುರ ಅಧಿವೇಶನದಲ್ಲಿ ಭೂಸುಧಾರಣೆ—ಸಹಕಾರಿ ವ್ಯವಸಾಯದ ಕುರಿತಾಗಿ ಸ್ವೀಕರಿಸಿದ ಗೊತ್ತುವಳಿಯೇ ಸಾಕಷ್ಟು ಕ್ರಾಂತಿಕಾರಿಯೆಂಬ ಟೀಕೆಗೆ ಗುರಿಯಾಗಿರುವಾಗ, ಅದನ್ನು ಸಮರ್ಥಿಸಿಕೊಂಡು, ಜನತೆಯ ಒಲವನ್ನು ತನ್ನತ್ತ ಆಕರ್ಷಿಸುವುದೇ ಇಂದು ಕಾಂಗ್ರೆಸ್ ಪಕ್ಷದ ಕರ್ತವ್ಯಗಳಲ್ಲಿ ಒಂದಾಗಿದೆ. ಈ ಎಲ್ಲ ಕಾರಣಗಳಿಂದ ಗೊತ್ತುವಳಿಗಳ ಸಂಖ್ಯೆಯಲ್ಲಿ ಪರಿಮಿತವಿದ್ದು ನೀತಿಗಳಲ್ಲಿ ಯಾವ ವೈಶಿಷ್ಟ್ಯವೂ ಇಲ್ಲದ ವೈಶಿಷ್ಟ್ಯಪೂರ್ಣ ಅಧಿವೇಶನವಿದಾಗಿದೆ.

ದೇಶದಲ್ಲಿನ ಯೋಜನೆಗಳನ್ನು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸಿ, ಅದರಿಂದ ದೇಶದ ಸಂಪತ್ತನ್ನು ಹೆಚ್ಚಿಸಿ, ಭಾರತೀಯರ ಜೀವನ ಸಾಧನಗಳನ್ನು ಬೆಳೆಯಿಸಿ ಉನ್ನತಿಸಾಧಿಸುವ ಘನೋದ್ದೇಶದಿಂದ, ಯೋಜನೆಗಳ ಕಾರ್ಯಾಚರಣೆ ಹಾಗೂ ಅದಕ್ಕೆ ಬೇಕಾದ ಆರ್ಥಿಕ ಬಲದ ಕುರಿತಾಗಿ ಒಂದು ಗೊತ್ತುವಳಿಯು ಸ್ವೀಕೃತವಾಯಿತು. ಇದು ಸಾಮಾನ್ಯತಃ ಕಾಂಗ್ರೆಸ್ ಸರಕಾರದ ಇಂದಿನ ಕಾರ್ಯಪ್ರಣಾಳಿಯನ್ನೇ ಸಂಪೂರ್ಣವಾಗಿ ಬೆಂಬಲಿಸುತ್ತಿದೆ. ಸ್ವತಂತ್ರಪಕ್ಷದ ನಾಯಕ ಶ್ರೀ ರಾಜಾಜಿ ಮೊದಲಾದವರು ಸರಕಾರದ ಯೋಜನೆಯ ರೂಪರೇಷೆ ಮತ್ತು ಅದಕ್ಕೆ ಬೇಕಾಗುವ ಸಂಪತ್ತುಗಳ ಕ್ರೋಢೀಕರಣ ನೀತಿಗಳನ್ನು ಕಟುವಾದ ಟೀಕೆಗೆ ಗುರಿಮಾಡುತ್ತಿರುವುದರಿಂದ, ಈ ಗೊತ್ತುವಳಿಯು ತುಸು ಮಹತ್ವಪೂರ್ಣವೇ ಆಗಿರುವುದು. ಪ್ರಚಲಿತ ಪ್ರಸಂಗಗಳ ಕುರಿತಾದ ಪ್ರಸ್ತಾವವು ಸಾಂಪ್ರದಾಯಿಕವೇ ಆಗಿದೆ. ಇನ್ನು ನೂರನೆಯದಾಗಿ, ಭಾರತ-ಚೀನೀ ಸೀಮಾ ವಾದದ ಪ್ರಶ್ನೆಯ ಪ್ರಸ್ತಾವ. ಇದು ಈ ರೀತಿಯಾಗಿಯೇ ಆಗುವುದೆಂದು ಮೊದಲೇ ತಿಳಿಯಲಾಗಿತ್ತು. ಈಗ, ಸರಕಾರದ ಧೋರಣೆಯನ್ನು ಪಕ್ಷವು ಸಮರ್ಥಿಸಿದಂತಾಯಿತು. ಚೀನದೊಡನೆ ಒಂದು ವೇಳೆ ಯುದ್ಧವೇ ಆದರೂ ಭಾರತದ ವಿದೇಶ ನೀತಿಯು ತಾಟಸ್ಥ್ಯ ಸ್ವರೂಪವನ್ನು ಬಿಟ್ಟು ಹೋಗಲಾರದು ಎಂಬ ವಿಷಯವನ್ನು ಸ್ಪಷ್ಟೀಕರಿಸಲಾಗಿದೆ. ಚೀನವು ಸೌಹಾರ್ದಮಯ ವಾತಾವರಣದಲ್ಲಿಯೇ ಈ ಸಮಸ್ಯೆಯನ್ನು ತೀರ್ಮಾನಗೊಳಿಸುವ ಆಶಯವನ್ನು ಕಾಂಗ್ರೆಸ್ ಇಟ್ಟುಕೊಂಡಿದೆ. ನಮ್ಮ ಸ್ನೇಹ ಭಾವನೆಯು ನಿರ್ಬಲತೆಯ ದ್ಯೋತಕವೆಂದಾಗಲೀ, ನಮ್ಮ ರಾಷ್ಟ್ರ ರಕ್ಷಣೆಯ ವಿಷಯದಲ್ಲಿ ನಾವು ಆಸಕ್ತಿ ವಹಿಸುದಿಲ್ಲವೆಂದಾಗಲೀ, ಪ್ರಕಟಗೊಳಿಸುವುದಿಲ್ಲ; ಅದು ನಮ್ಮ ಸಂಸ್ಕೃತಿಯ ಪ್ರರೂಪ. ತಮ್ಮ ದೇಶದ ಭದ್ರತೆಯನ್ನುಳಿಸಲು ಭಾರತೀಯರು ಸಮರ್ಥರೇ ಇರುವರು—ಎಂಬ ವಿಷಯವು ಅಧಿವೇಶನದಲ್ಲಿ ವ್ಯಕ್ತಪಟ್ಟಿದೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬಹಳಷ್ಟು ಹೇಳಿದ್ದಾರೆ. ಅವರು ಮುಟ್ಟದ ವಿಷಯವಿಲ್ಲವೆಂದರೂ ಸಲ್ಲುವುದು ಆದರೂ ದೇಶದ್ರೋಹಿಗಳಿಗೆ ಅವರಿತ್ತ ಎಚ್ಚರಿಕೆ ಮತ್ತು ಕಾಂಗ್ರೆಸ್ಸಿಗರ ಕರ್ತವ್ಯಶೀಲತೆಯ ಸಂಸ್ಮರಣೆಗಳು ಅತಿ ಪ್ರಧಾನವಾಗಿದೆ. ಭಾರತದ ಮೇಲೆ ಚೀನವು ಆಕ್ರಮಣ ನಡೆಸಿರುವಾಗ, ದೇಶದ ಇತರ ಎಲ್ಲ ಪಕ್ಷಗಳೂ ತೀವ್ರ ವಿಮರ್ಶನೆಗೀಡಾಗಿರುವಾಗ, ಸಾಮ್ಯವಾದಿಗಳು ಮಾತ್ರ ದೇಶದಲ್ಲಿ ಯಾವುದೇ ಒಂದು ವಿಶೇಷ ಘಟನೆ ನಡೆಯದಂತೆ ಮೌನವಾಗಿರುವುದು ಮತ್ತು ವಿದೇಶೀಯರ ನೀತಿಗೆ ಪ್ರೋತ್ಸಾಹಣೆಯೀಯುವುದನ್ನವರು ಖಂಡತುಂಡವಾಗಿ ಖಂಡಿಸಿರುವರು. ಕಮ್ಯುನಿಸ್ಟರಿಗೆ ಅವರು ಎಚ್ಚರಿಕೆಯನ್ನೀಯುತ್ತ, ರಾಷ್ಟ್ರಭಕ್ತಿ ಮತ್ತು ರಾಷ್ಟ್ರಪ್ರೇಮವೆಂಬಿವು ಕೇವಲ ಚರ್ಚಾಸ್ಪದ ವಿಷಯವಲ್ಲವೆಂಬುದನ್ನು ಸ್ಪಷ್ಟೀಕರಿಸಿರುವರು. ಒಂದುವೇಳೆ, ತಮ್ಮ ಆಚರಣೆ ಮತ್ತು ಕೃತ್ಯಗಳಿಂದ ರಾಷ್ಟ್ರದಭದ್ರತೆಗೆ ಹಾನಿತಟ್ಟುವ ಪ್ರಸಂಗ ಒದಗಿದರೆ, ಬಲಾತ್ಕಾರದಿಂದ ಪಕ್ಷವನ್ನು ಹತ್ತಿಕ್ಕಲಾಗುವುದೆಂದು ಅವರು ಸಾರಿದ್ದಾರೆ. ಶ್ರೀ ರೆಡ್ಡಿಯವರ ಎಚ್ಚರಿಕೆಯು ಸಕಾಲಿಕವಾಗಿದ್ದು, ಕಮ್ಯುನಿಸ್ಟ್ ಬಂಧುಗಳು ಅವಶ್ಯ ತಿಳಿದುಕೊಳ್ಳಬೇಕಾದ ಸಂಗತಿಯಿದು.

ಕಾಂಗ್ರೆಸ್ ಸಂಸ್ಥೆಗೆ ತನ್ನದೇ ಆದ ತ್ಯಾಗ ಮತ್ತು ಸೇವೆಗಳ ಪರಂಪರೆಯಿದೆ. ಸ್ವಾತಂತ್ರ್ಯ ಪ್ರಾಪ್ತ್ಯನಂತರ ಕಾಂಗ್ರೆಸ್ ನಾಯಕರಲ್ಲಿ ಕೆಲವರು ಸರಕಾರದತ್ತ ಇನ್ನು ಕೆಲವರು ಪಕ್ಷದತ್ತ ಗಮನಹರಿಸಬೇಕಾಗಿ ಬಂದುದರಿಂದಾಗಿ, ಪಕ್ಷದ ಪ್ರತಿಭೆಯು ದ್ವಿಮುಖವಾಗಿ ಒಡೆದು ತುಸು ಬಲಹೀನವಾಯಿತೆಂಬುದು ನಿಜವೇ. ಅಲ್ಲದೇ, ಕಾಂಗ್ರೆಸ್ಸಿಗರಿಗೆ ಒಂದು ಬಾರಿ ಅಧಿಕಾರದ ರುಚಿ ಹಿಡಿಯಿತೆಂದರೆ, ಮತ್ತೆ ಅದರಿಂದ ದೂರವಿರಲು ಎಂದೂ ಸಮ್ಮತಿಸಲಾರನೆಂಬ ಸ್ಥಿತಿಯಿಂದು ಕಾಣಿಸಿಕೊಳ್ಳುತ್ತಿದೆ. ಆದರೆ, ಇಂತಹ ವರ್ತನೆಯಿಂದಾಗಿ ಕಾಂಗ್ರೆಸ್‌ನ ಬಲ ಹ್ರಾಸಗೊಳ್ಳುತ್ತ ನಡೆಯುತ್ತಿದೆ. ಆದುದರಿಂದ ಕಾಂಗ್ರೆಸಿಗರು ಮೊತ್ತಮೊದಲು ತಮ್ಮ ದುರ್ಬಲತೆಗಳನ್ನು ಕಂಡುಕೊಂಡು, ಅವನ್ನು ದೂರೀಕರಿಸಿ, ತ್ಯಾಗ ಮತ್ತು ಸೇವೆಯ ಪ್ರಾಚೀನ ಆದರ್ಶಗಳನ್ನೇ ಪುನಃ ಹಿಂಬಾಲಿಸುವುದರಿಂದಲೇ ಕಾಂಗ್ರೆಸ್‌ನ ಪ್ರಗತಿ ಸಂವರ್ಧನೆ ಸಾಧ್ಯವಿದ್ದೀತಲ್ಲ್. ಒಬ್ಬನು ಕೆಲಕಾಲ ತನ್ನ ಪದವಿಯಲ್ಲಿ ಕೆಲಸ ಮಾಡಿದನಂತರ, ಪುನಃ ತನ್ನ ಅತಿ ಕೆಳಗಿನ ನೌಕರನಾಗಿ ದುಡಿಯಲು ಮನದಂದಿದ್ದನಂತೆ. ಹಾಗೆಯೇ, ಉನ್ನತ ಪದದಲ್ಲಿರುವ ಕಾಂಗ್ರೆಸ್ಸಿಗರು ಜನಹಿತಕ್ಕಾಗಿ ಆ ಪದವನ್ನು ಬಿಡುವುದಕ್ಕೂ ಸಿದ್ಧರಾಗಬೇಕು. ತ್ಯಾಗ ಮತ್ತು ಸೇವೆಗಳ ಆದರ್ಶವನ್ನು ನಾಲಗೆಯ ತುದಿಯಲ್ಲಿ ಧರಿಸುವಷ್ಟರಿಂದಲೇ ಕರ್ತವ್ಯ ಮುಗಿದಂತಾಗಲಿಲ್ಲ; ತಾನು ಇನ್ನೊಬ್ಬರನ್ನು ಮಾಡುವಂತೆ ಕೇಳಿಕೊಳ್ಳುವುದಕ್ಕೆ ಮೊದಲು ಅದನ್ನು ತಾನು ಆಚರಣೆಯಲ್ಲಿ ತೊಡಗಿಸಿಕೊಳ್ಳಬೇಕು. ಉಪದೇಶಾಮೃತ ಸುರಿಸಿದೊಡನೆಯೇ ತ್ಯಾಗವಾಗಲಿಲ್ಲ; ಸೇವೆ ಸಂದಂತಾಗಲಿಲ್ಲ. ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನ ಶಕ್ತಿಯು ಕುಂಠಿತವಾಗಿರುವುದಕ್ಕೆ ಇದೂ ಒಂದು ಪ್ರಬಲ ಕಾರಣವಿದೆ. ಆದುದರಿಂದ ಕಾಂಗ್ರೆಸ್ಸಿಗರು ಈ ಎಚ್ಚರಿಕೆಯನ್ನು ಅವಶ್ಯ ಗಮನಿಸಿ, ಶಿರಸಾವಹಿಸಬೇಕಾಗಿದೆ.

ಪರ್ಯಾಯ ಸಮಾರಂಭ

ಎರಡು ವರ್ಷಗಳ ತನಕ ತಮ್ಮ ಪರ್ಯಾಯಾವಧಿಯಲ್ಲಿ ಶ್ರೀಕೃಷ್ಣಪೂಜಾದಿಗಳನ್ನು ನಿರ್ವಿಘ್ನವಾಗಿ ನೆರವೇರಿಸಿಕೊಂಡು ಬಂದಿರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ಶ್ರೀಪಾದಂಗಳವರು ತಮ್ಮ ಪರ್ಯಾಯದ ಮಂಗಲೋತ್ಸವವನ್ನು ನೆರವೇರಿಸಿ, ಸರದಿಯಂತೆ ಶ್ರೀ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀಪಾದಂಗಳವರಿಗೆ ಪರ್ಯಾಯ ಪೀಠವನ್ನು ಒಪ್ಪಿಸಿಕೊಟ್ಟರು. ನಿತ್ಯ ವಿಧಿ ಹಾಗೂ ಸಂಪ್ರದಾಯಕ್ಕೆ ಕುಂದಿಲ್ಲದಂತೆ ಉತ್ತಮರೀತಿಯಲ್ಲಿ ತಮ್ಮ ಪರ್ಯಾಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಶ್ರೀ ವಿದ್ಯಾರತ್ನ ತೀರ್ಥರು ವಿಶೇಷ ಬಾಹ್ಯಾಡಂಬರಗಳಿಗೆ ಹೋಗದೆ ತಮ್ಮ ಕರ್ತವ್ಯವನ್ನು ಪಾಲಿಸಿಕೊಂಡು ಬಂದಿರುವರು. ಮೊನ್ನೆ, ತಾ. ೧೮ರಂದು ಪರ್ಯಾಯ ಪೀಠವನ್ನೇರಿದ ಸುಮಾರು ೫೫ ವರ್ಷ ಪ್ರಾಯದ ಶ್ರೀ ಸುಜ್ಞಾನೇಂದ್ರ ತೀರ್ಥರ ಪ್ರಪ್ರಥಮವೆನಿಸಿದ ಈ ಪರ್ಯಾಯ ಕಾಲದಲ್ಲಿ ಸಂಪ್ರದಾಯವನ್ನು ನಡೆಸಿಕೊಂಡು ಬಂದು ಕೀರ್ತಿ ಶಾಲಿಗಳಾಗುವರೆಂಬುದರಲ್ಲಿ ಸಂದೇಹವಿಲ್ಲ. ಸ್ವಯಂ ವಿದ್ಯಾಭಿಮಾನಿಗಳೂ ವೇದಾಂತ, ಜ್ಯೋತಿಷ, ಆಯುರ್ವೇದಾದಿಗಳ ಪಂಡಿತರೂ ಆಗಿರುವ ಇವರು ಕಲೆ, ಸಾಹಿತ್ಯಾದಿಗಳಿಗೂ ಪ್ರೋತ್ಸಾಹವನ್ನು ನೀಡುವವರೇ ಆಗಿದ್ದಾರೆ. ಸನಾತನ ಸಂಪ್ರದಾಯಕ್ಕೆ ವ್ಯತ್ಯಯ ಬರದಂತೆ, ಇಂದಿನ ಪರಿಸ್ಥಿತಿಗೆ ಹೊಂದಿಸಿಕೊಂಡು ಶ್ರೀ ಪಾದಂಗಳವರು ತಮ್ಮ ಪರ್ಯಾಯ ಕಾಲದಲ್ಲಿ ಭಕ್ತ ಜನರ ಹಿತಕಾಂಕ್ಷಿಯಾಗಿ ನಡೆದುಕೊಂಡು ಬರುವರೆಂಬುದಕ್ಕೆ ಸಂಶಯವಿಲ್ಲ. ಅನ್ನದಾನ, ಧರ್ಮೋಪದೇಶ, ಕಲಾಪ್ರೋತ್ಸಾಹ ಮೊದಲಾದ ಕಾರ್ಯಗಳಲ್ಲಿ ನಿರತರಾಗಿ ತಮ್ಮ ಪರ್ಯಾಯವನ್ನು ಹಿಂದಿನ ಪರ್ಯಾಯಕಾಲದಂತೆಯೇ ಆದರ್ಶಗೊಳಿಸುವರೆಂದು ಹಾರೈಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಕಾಂಗ್ರೆಸ್ ಅಧಿವೇಶನ

ಸದಾಶಿವ ನಗರದಲ್ಲಿ ಸೇರಿದ ೬೫ನೆಯ ಕಾಂಗ್ರೆಸ್ ಅಧಿವೇಶನವು ಮುಕ್ತಾಯಗೊಂಡಿತು. ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರು ಕಾರ್ಯಕಾರಿ ಸಮಿತಿಯ ಸದಸ್ಯರ ಹೆಸರನ್ನು ಈಗಾಗಲೇ ಪ್ರಕಟಿಸಿದ್ದಾರೆ. ಶ್ರೀ ಸಾದಿಕ ಅಲಿ ಮತ್ತು ಶ್ರೀ ಜಿ. ರಾಜಗೋಪಾಲನ್ನರನ್ನು ಪ್ರಧಾನ ಕಾರ್ಯದರ್ಶಿಯರನ್ನಾಗಿ ನೇಮಿಸಲಾಗಿದೆ ಸಾಮಾನ್ಯವಾಗಿ ಹಿಂದಿನ ಸಮಿತಿಯಲ್ಲಿದ್ದವರೆಲ್ಲರೂ ಈ ನೂತನ ಸಮಿತಿಯಲ್ಲೂ ಇರುತ್ತಾರೆ. ಶ್ರೀ ಎಸ್. ಕೆ. ಪಾಟೀಲರು ಕೋಶಾಧ್ಯಕ್ಷರಾಗಿದ್ದಾರೆ. ಇನ್ನೊಬ್ಬ ಪ್ರಧಾನ ಕಾರ್ಯದರ್ಶಿಯನ್ನು ನೇಮಿಸಬೇಕಾಗಿದ್ದು ಈ ನೇಮಕವನ್ನು ಕ್ರಮೇಣ ಮಾಡಲಾಗುವುದು. ಕರ್ನಾಟಕದಿಂದ ಶ್ರೀ ಎಸ್. ನಿಜಲಿಂಗಪ್ಪನವರೂ ಪ್ರತಿನಿಧಿಯಾಗಿ ಉಳಿದಿದ್ದಾರೆ.

ಉಚಿತ ಮಾಧ್ಯಮಿಕ ಶಿಕ್ಷಣ

ಮೈಸೂರು ಸರಕಾರವೊಂದು ಯೋಜನೆಯನ್ನು ಸಿದ್ಧಗೊಳಿಸಿದ್ದು ಇದು ಮುಂದಿನ ವರ್ಷ ವ್ಯವಸ್ಥಿತವಾಗುವ ನಿರೀಕ್ಷೆಯಿದೆ. ಇದರನ್ವಯ ಯಾರೇ ಆಗಲಿ ರೂ. ೧,೨೦೦ಕ್ಕಿಂತ ಕಡಿಮೆ ವಾರ್ಷಿಕ ವೇತನವಿರುವವರ ಮಕ್ಕಳಿಗೆ ಹೈಸ್ಕೂಲು ವರೆಗಿನ ಶಿಕ್ಷಣವನ್ನು ಧರ್ಮಾರ್ಥವಾಗಿ ಕೊಡಲಾಗುವುದು. ಉಳಿದವರೆಲ್ಲರೂ ಸಂಬಳ ತೆರಬೇಕಾಗುವುದು. ಈಗ ರಿಯಾಯತಿ ಪಡೆಯುತ್ತಿರುವ ಅಧ್ಯಾಪಕರು, ಹರಿಜನರು, ಹಿಂದುಳಿದವರು ಮೊದಲಾದವರಿಗೆಲ್ಲರಿಗೂ ಈ ಯೋಜನೆಯ ನಿಯಮಗಳು ಲಗಾವಾಗುವುದರಿಂದಾಗಿ ಇವರು ತಮಗೀಗ ದೊರೆಯುವ ಸೌಲಭ್ಯಗಳನ್ನು ಕಳೆದುಕೊಳ್ಳುವರು. ನಿಜವಾದ ಬಡವರಿಗೆ ಮಾತ್ರ ಉಚಿತ-ಶಿಕ್ಷಣವೀಯಬೇಕೆಂಬುದೇ ಸರಕಾರದ ಉದ್ದೇಶವಿದ್ದು ೨೧೦೦ ರೂಪಾಯಿ ವಾರ್ಷಿಕವಾದಾಯವೇ ಕನಿಷ್ಠ ಆದಾಯವಾಗಿರಬೇಕೆಂದದು ತಿಳಿದುಕೊಂಡಂತಿದೆ.

ಐಕರ ರಶ್ಯ ಸಂದರ್ಶನ

ಕೆಲವು ತಿಂಗಳುಗಳಿಗೆ ಮೊದಲು ರಶ್ಯನ್ ಪ್ರಧಾನಿ ಕ್ರುಶ್ಚೇವರು ಅಮೇರಿಕೆಯನ್ನು ಸಂದರ್ಶಿಸಿ ಒಂದು ದಾಖಲೆಯನ್ನೇ ನಿರ್ಮಿಸಿದ್ದಾರೆ. ಇದರಂತೆಯೇ ಅಮೇರಿಕೆಯ ಅಧ್ಯಕ್ಷ ಐಸನ್‌ಹಾವರರೂ ರಶ್ಯ ಸಂದರ್ಶನ ಮಾಡಲಿದ್ದಾರೆ. ಈ ಯಾತ್ರೆಯು ಮುಂದಿನ ಜೂನ್ ೧೦ರಿಂದ ಪ್ರಾರಂಭವಾಗುವುದೆಂದೂ ಕೇವಲ ೧೦ ದಿನಗಳ ವರೆಗೆ ಉಳಿಯುವುದೆಂದೂ ತಿಳಿದುಬಂದಿದೆ. ವಿಸ್ತೃತ ಕಾರ್ಯಕ್ರಮವಿನ್ನೂ ತಯಾರಾಗಬೇಕಷ್ಟೆ. ಐಕರ ರಶ್ಯನ್ ಭೆಟ್ಟಿಯಿಂದ ಜಾಗತಿಕ ಪರಿಸ್ಥಿತಿ

ಯು ಮತ್ತಷ್ಟು ಸರಳಗೊಳ್ಳುವುದೆಂದು ನಿರೀಕ್ಷಿಸಬಹುದು.

ಕಾಶ್ಮೀರ ಭಾರತದ್ದೇ

ಸದಾಶಿವನಗರದ ಕಾಂಗ್ರೆಸ್ ಅಧಿವೇಶನದಲ್ಲಿ ಅನಿರೀಕ್ಷಿತವಾಗಿ ಕಾಶ್ಮೀರದ ಪ್ರಧಾನಿ ಬಕ್ಷಿ ಗುಲಾಂ ಮಹಮ್ಮದರು ಮಾತನಾಡುವಾಗ, ಅಯೂಬ ಖಾನರು ಬರಲಿ, ಹೋಗಲಿ, ಚೀನಾ ಪಾಕಿಸ್ತಾನಗಳು ಎಷ್ಟೇ ಕಿರುಕುಳ ಕೊಡಲಿ, ಕಾಶ್ಮೀರವು ಮಾತ್ರ ಭಾರತದ ಅವಿಭಾಜ್ಯ ಅಂಗವಾಗಿ ಉಳಿಯುವುದು; ಕಾಶ್ಮೀರಿಗಳ ಈ ನಿರ್ಣಯವನ್ನು ಯಾವನೂ ಬದಲಾಯಿಸಲಾರನೆಂದು ದೃಢೀಕರಿಸಿದರು.

ರಶ್ಯನ್ ಪ್ರಧಾನಿ ಕ್ರುಶ್ಚೇವ

ಮುಂದಿನ ತಿಂಗಳು ಆಗ್ನೇಯ ಏಶ್ಯದಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿರುವ ರಶ್ಯನ್ ಪ್ರಧಾನಿ ಶ್ರೀ ಕ್ರುಶ್ಚೇವರು ಭಾರತದ ಮೂಲಕ ಹಾದು ಹೋಗುವುದು ಸುನಿಶ್ಚಿತವಿದೆ. ಈ ಸಂದರ್ಭದಲ್ಲಿ ದಿಲ್ಲಿಯಲ್ಲಿಯೂ ಕೆಲಕಾಲ ತಂಗಿ ಭಾರತದ ಆತಿಥ್ಯವನ್ನು ಸ್ವೀಕರಿಸಬೇಕೆಂದವರಿಗೆ ಭಾರತ ಸರಕಾರವು ವಿನಂತಿಸಿದೆ. ಈ ಕೇಳಿಕೆಯನ್ನು ಪ್ರಧಾನಿ ಕ್ರುಶ್ಚೇವರು ಮನ್ನಿಸುವ ನಿರೀಕ್ಷೆಯೂ ಇದೆ. ಭಾರತ—ಚೀನಾ ಸೀಮಾ ವಿವಾದವೇ ಉಭಯ ದೇಶಗಳ ಪ್ರಧಾನಿಗಳ ಭೇಟಿಯ ಕಾಲದಲ್ಲಿ ಚರ್ಚಿಸಲ್ಪಡುವ ವಿಷಯವಾಗಬಹುದು.

ಅಸಾಮುದಲ್ಲಿ ಸುಸಂಬಂಧ

ಭಾರತದ ದೊಡ್ಡ ನದಿಗಳಲ್ಲಿ ಒಂದಾದ ಬ್ರಹ್ಮಪುತ್ರ ನದಿಗೆ ಗೌಹಾತಿಯ ಬಳಿಯೊಂದು ಸೇತುವೆಯನ್ನು ಕಟ್ಟುವ ಸಲುವಾಗಿ ಪ್ರಧಾನಿ ನೆಹರು ಶಿಲಾನ್ಯಾಸಮಾಡಿದ್ದಾರೆ. ಅಸಾಮುವನ್ನು ವಿಭಜಿಸುವ ಈ ನದಿಗೆ ಕಟ್ಟುವ ಸೇತುವಿನಿಂದ ಅಸಾಮುದ ಉತ್ತರ ಹಾಗೂ ದಕ್ಷಿಣ ಭಾಗಗಳ ನಡುವೆ ಸಂಪರ್ಕ ಬೆಳೆಯಲು ಅನುಕೂಲವಾಗುವುದು. ಇದೇ ಮಾದರಿಯಲ್ಲಿ ಬಿಹಾರದಲ್ಲಿ ಗಂಗಾ ನದಿಗೆ ಅಡ್ಡವಾಗಿ ಒಂದು ಬೃಹದ್ ಸೇತುವನ್ನು ಕೆಲ ತಿಂಗಳ ಹಿಂದೆ ಉದ್ಘಾಟನೆ ಮಾಡಲಾಗಿತ್ತು.

ಆಂಧ್ರಕ್ಕೆ ಹೊಸ ಮಂತ್ರಿ ಮಂಡಲ

ಆಂದ್ರದ ಮುಖ್ಯ ಮಂತ್ರಿ ಶ್ರೀ ಎನ್. ಸಂಜೀವ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡುದರಿಂದ ಆಂದ್ರ ಮಂತ್ರಿ ಮಂಡಳಿಯಲ್ಲಿ ಪರಿವರ್ತನೆಯಾಗುವುದು ಅನಿವಾರ್ಯವೆನಿಸಿತು. ನಾಯಕ ಚುನಾವಣೆಯಲ್ಲಿ ಮೊದಮೊದಲು ಬೇರೆ ಬೇರೆ ಹೆಸರು ಕೇಳಿ ಬಂದರೂ ಕೊನೆಯ ಗಳಿಗೆಯಲ್ಲಿ ಶ್ರೀ ಡಿ. ಸಂಜೀವಯ್ಯನವರು ಅವಿರೋಧವಾಗಿ ಆಯ್ಕೆಗೊಂಡರು. ಶ್ರೀ ಸಂಜೀವಯ್ಯನವರು ೩೮ ವರ್ಷದ ಯುವಕರಿದ್ದು ಹರಿಜನರಾಗಿರುವರು. ಭಾರತದ ಯಾವುದೇ ರಾಜ್ಯದಲ್ಲಿ ಇದುವರೆಗೆ ಹರಿಜನ ಮುಖ್ಯಮಂತ್ರಿಯಾದುದಿಲ್ಲವಾದುದರಿಂದ, ಆಂಧ್ರ ಪ್ರದೇಶದ ಈ ಚುನಾವಣೆಯು ಮಾದರಿಯೆನಿಸಿದಂತಿದೆ. ಚುನಾಯಿತ ಮುಖ್ಯಮಂತ್ರಿಯವರು ತನ್ನ ೧೪ ಸದಸ್ಯರ ಮಂತ್ರಿ ಮಂಡಳವನ್ನೂ ರಚಿಸಿದ್ದು ಇವರಲ್ಲಿ ೫ ಜನರು ಸಂಜೀವರೆಡ್ಡಿ ಮಂತ್ರಿಮಂಡಳಿಯಲ್ಲಿಯೂ ಇದ್ದರು.

ಯಾರಿಗೆ ಜಯಮಾಲೆ?

ಕೇರಳದಲ್ಲಿ ನಡೆಯುವ ಮಧ್ಯಾವಧಿ ಚುನಾವಣೆಗಳು ಸಮೀಪಿಸುತ್ತ ಬಂದಂತೆ ವಿವಿಧ ಪಕ್ಷಗಳ ಪ್ರಚಾರಕಾರ್ಯವೂ ರಭಸದಿಂದ ಸಾಗತೊಡಗಿದೆ. ಎರಡೂ ಕಡೆಯವರು ತಮತಮಗೆ ಜಯ ಖಂಡಿತವೆಂದು ವಿಶ್ವಾಸ ತಾಳಿಕೊಂಡಿರುವರು. ಕೇಂದ್ರಮಂತ್ರಿ ಶ್ರೀ ಬಿ. ಗೋಪಾಲರೆಡ್ಡಿಯವರು ಹೇಳುವಂತೆ, ಕೇರಳದ ಚುನಾವಣೆಯತ್ತ ವಿದೇಶಗಳು ಕೂಡ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿವೆ. ಆಂಧ್ರದಲ್ಲಿ ೧೯೫೫ರಲ್ಲಿ ಕಮ್ಯುನಿಸ್ಟರು ಪರಾಭವಗೊಂಡಿರುವಂತೆಯೇ ೧೯೬೦ರಲ್ಲಿ ಕೇರಳದಲ್ಲೂ ಅಪಜಯ ಹೊಂದುವರೆಂದು ಅವರು ನಂಬಿದ್ದಾರೆ.

ಇದಕ್ಕೆ ಪ್ರತಿಯಾಗಿ ಮಾಜಿ ಮುಖ್ಯಮಂತ್ರಿ ಶ್ರೀ ನಂಬೂದರಿಪಾದರು ತಮ್ಮ ಜಯದಲ್ಲಿ ಸೋಲಿನ ಲವಲೇಶವಿಲ್ಲವೆಂದು ಅಭಯಗೊಂಡಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ಮತ್ತಿತರ ಶಕ್ತಿಗಳ ಒಕ್ಕೂಟದಿಂದ ಜಾತೀಯತೆಯೇ ಮೊದಲಾದ ಅನಿಷ್ಟ ಸಂಭವಿಸುವುದು. ಕಾಂಗ್ರೆಸು ಈ ಮೊದಲೇ ಕೇರಳವನ್ನು ಎಂದೆಂದಿಗೂ ಕಳೆದುಕೊಂಡಿದೆ; ಅದನ್ನು ಗಳಿಸುವುದು ಈ ಸಂಯುಕ್ತ ರಂಗಕ್ಕೆ ಸಾಧ್ಯವೆನಿಸಿದರೂ ಅದನ್ನು ಮುನ್ನಡೆಸುವುದು ಸುತರಾಂ ಅಸಾಧ್ಯವೆಂದವರ ಹೇಳಿಕೆ.

ಭವಿಷ್ಯದ ನುಡಿಯನ್ನು ಕೆಲವೇ ದಿನ ದಿನಗಳಲ್ಲಿ ನೋಡಲಿದೆ.

ಮಂಗಲಗ್ರಹಕ್ಕೆ ಯಾನ

ಅಂತರಿಕ್ಷಯಾತ್ರೆಯಲ್ಲಿ ಈಗಾಗಲೇ ಯಶಸ್ಸುಪಡೆದಿರುವ ರಶ್ಯವು ಮೇ ತಿಂಗಳಲ್ಲಿ ಸೇರಲಿರುವ ವರಿಷ್ಠ ಸಮ್ಮೇಳನಕ್ಕೆ ಮೊದಲೇ ಚಂದ್ರದ ಸಂಪೂರ್ಣ ನಕ್ಷೆಯನ್ನು ಪಡೆಯುವ ಪ್ರಯತ್ನ ನಡೆಸುತ್ತಿದೆ. ಟೆಲಿವಿಜನ್ ಚಿತ್ರಗಳನ್ನು ಪಡೆಯಲಾಗುತ್ತಿದೆ. ಇಷ್ಟು ಮಾತ್ರವಲ್ಲದೆ, ಇನ್ನೊಂದು ಗ್ರಹಮಂಗಳಕ್ಕೂ ರಶ್ಯನರು ಆಕಾಶಬಾಣ ಹಾರಿಸಿ ಅದರ ಪರಿಸ್ಥಿತಿಯನ್ನೂ ಅಭ್ಯಸಿಸುವಲ್ಲಿ ಮುಂದುವರಿಯುತಿದ್ದಾರೆ. ಚಂದ್ರನು ಶೀತ ಶರೀರಿಯೇ ಆಗಿದ್ದರೆ, ಮಂಗಳನಲ್ಲಿ ಸಸ್ಯ ಹಾಗೂ ಕೆಲವೊಂದು ಪ್ರಾಣಿಗಳಾದರೂ ಜೀವಿಸಿರಬಹುದೆಂದೂ ಇಲ್ಲಿ ತಲಪಲು ೨೬೦ ದಿನಗಳು ಬೇಕಾಗಬಹುದೆಂದೂ ಅಲ್ಲಿಂದ ತಿರುಗಿ ಭೂಮಿಗೆ ಮರಳಲು ಒಂದು ವರ್ಷಗಳ ಕಾಲ ಗ್ರಹದಲ್ಲಿಯೇ ಕೂರಬೇಕಾಗುವುದೆಂದೂ ಇದುವರೆಗೆ ನಡೆದಿದ್ದ ಪರಿಶೀಲನೆಯಿಂದ ತಿಳಿದುಬಂದಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿ ನಗರಸಭೆಯ ಸಾಮಾನ್ಯ ಸಭೆಯೊಂದು ತಾ. ೧೧ರಂದು ಸೇರಿದ್ದಾಗ ಸದಸ್ಯರು ನಗರಸಭೆಯ ನೌಕರರ ಅಸಭ್ಯ ವರ್ತನೆಗಳನ್ನು ಖಂಡಿಸಿದರು. ಸಭೆಯು ಆರೋಗ್ಯ ಇಲಾಖೆಯವರು ಕಸ ಗುಡಿಸುವ ನೌಕರರಿಗೂ ನಿಮ್ನ ವರ್ಗದ ಕೆಲಸಗಾರರಿಗೂ ಉಡುಪಿಯ ಸಾರ್ವಜನಿಕರಿಗೂ ಉಪದ್ರವ ಕೊಡುತಿದ್ದಾರೆಂದೂ ಅವರನ್ನು ಬೆದರಿಸುವಂತೆ ಮಾಡುತ್ತಿರುವರೆಂದೂ ಸದಸ್ಯರು ಅಭಿಪ್ರಾಯಪಟ್ಟರು. ಇದರಿಂದಾಗಿ ನಗರಸಭೆಯ ನೌಕರರು ತಮ್ಮ ವೇತನವಲ್ಲದೆ ಬೇರೆ ವಕ್ರ ವಿಧಾನಗಳಿಂದ ಹಣ ಸಂಪಾದಿಸುತ್ತಿರುವರೆಂದೂ ಹೇಳಿ ಇವೆಲ್ಲ ಅಕ್ರಮಗಳನ್ನು ತಡೆಗಟ್ಟುವುದಕ್ಕೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಕಮಿಶನರರನ್ನೂ ಸರಕಾರವನ್ನೂ ವಿನಂತಿಸುವ ಕೆಲವಾರು ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು. ಆರೋಗ್ಯ ಖಾತೆಯ ಮೇಲೆ ಬಹಿರಂಗವಾಗಿ ಟೀಕೆಗಳಿದ್ದು ಅದು ಉಲ್ಬಣಾವಸ್ಥೆಗೇರಿದ ಘಟನೆ ಇತ್ತೀಚೆಗೆ ನಡೆದಿರಲಿಲ್ಲ.

ಸಂತಾಪ ಸೂಚಕ ಸಭೆ— ತಾ. 15-1-1960ರಂದು ಕೋಟೇಶ್ವರ ಪಂಚಾಯತ್ ಬೋರ್ಡು ಕಟ್ಟಡದಲ್ಲಿ ಮಾನ್ಯ ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರ ನಿಧನದ ಕುರಿತು ಸಂತಾಪ ಸೂಚಿಸಲು, ಶ್ರೀ ಕೆ. ಯಸ್. ಉರಾಳ್, ಬಿ. ಎ. ಎಲ್., ಟಿ. ಮುಖ್ಯೋಪಾಧ್ಯಾಯ, ಬೋರ್ಡು ಹೈಸ್ಕೂಲ್, ಕೋಟೇಶ್ವರ, ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಸೇರಿತು. ಶ್ರೀ ಕೆ. ಸೀತಾರಾಮ ಐತಾಳ್, ಪಂಚಾಯತ್ ಅಧ್ಯಕ್ಷ. ಇವರು ಸಭಿಕರನ್ನು ಸ್ವಾಗತಿಸಿ ಸಭೆಯ ಸಂದರ್ಭವನ್ನು ವಿವರಿಸಿ, ದಿವಂಗತರಿಂದ ನಮ್ಮ ಜಿಲ್ಲೆಗೆ ಅದರಲ್ಲೂ ನಮ್ಮ ಊರಿಗಾದ ಸಹಾಯ ಪ್ರಯೋಜನವನ್ನು ತಿಳಿಸಿ ಶ್ಲಾಘಿಸಿದರು. ಶ್ರೀ ಪಿ. ಅಣ್ಣಪ್ಪ ಚಡಗರು, ಪಿ. ರಾಮರಾಯರು, ಮತ್ತು ವಿ. ವೆಂಕಪ್ಪ ಶೆಟ್ಟರು ಸಂದರ್ಭೋಚಿತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂತಹ ರಾಷ್ಟ್ರೀಯ ಸೇವಾ ಪ್ರವೃತ್ತಿಯ ಜನರ ಅಭಾವ ಉಂಟಾದುದು. ನಮ್ಮ ಜಿಲ್ಲೆಯ ದೌರ್ಭಾಗ್ಯವೆಂದು ತಿಳಿಸುವುದಲ್ಲದೆ ಅವರು ದೇಶಕ್ಕೆ ಸಲ್ಲಿಸಿದ ಅನೇಕಾನೇಕ ಸೇವೆಗಳಿಂದ ನಮಗೆ ಅವರು ಚಿರಸ್ಮರಣೀಯರೆಂದರು. ಅನಂತರ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿ, ತನ್ನ ಸಂತಾಪ ಸೂಚನೆಯ ಠರಾವನ್ನು ಸರ್ವಾನುಮತದಿಂದ ಅಂಗೀಕರಿಸಿ ಅದನ್ನು ದಿವಂಗತರ ಕುಟುಂಬಕ್ಕೆ ಕಳುಹಿಸುವುದೆಂತ ನಿರ್ಧರಿಸಿ, ಶ್ರೀ ಪಿ. ಯಸ್. ಕಾರಂತರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಉಡುಪಿಯಲ್ಲಿ ಪರ್ಯಾಯೋತ್ಸವ

ತಾ. ೯ರಂದು ಉತ್ಸವವು ಪ್ರಾರಂಭವಾಗಿ ೧೪ರಂದು ಮಕರ ಸಂಕ್ರಾಂತಿ ಮಹಾರಥೋತ್ಸವೂ ೧೫ರಂದು ಚೂರ್ಣೋತ್ಸವವೂ ನಡೆಯಿತು. ತಾ ೧೭ರಂದು ಕಳೆದೆರಡು ವರ್ಷಗಳಿಂದ ಪರ್ಯಾಯ ಪೀಠವನ್ನೇರಿದ್ದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಗಳವರು ತಮ್ಮ ಪರ್ಯಾಯದ ಮಂಗಲೋತ್ಸವನ್ನು ಆಚರಿಸಿದರು. ತಾ ೧೮ರಂದು ಶ್ರೀ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀಗಳವರು ಪರ್ಯಾಯ ಪೀಠವನ್ನೇರಿದರು ಆ ದಿನ ವಿಷ್ಣು ಪದತ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ (ಪುತ್ತಿಗೆ ಮಠ) ಶತಮಾನೋತ್ಸವದ ಸ್ಮಾರಕವಾಗಿ ಭಕ್ತ ಜನರ ಸಹಾಯದಿಂದ ನಿರ್ಮಿಸಿದ್ದ ರಜತ ರಥೋತ್ಸವವು ನೆರವೇರಿತು. ಊರ ಪರವೂರುಗಳ ಯಾತ್ರಿಕರು ಬಹಳ ಸಂಖ್ಯೆಯಲ್ಲಿ ನೆರೆದಿದ್ದು ಉತ್ಸವವು ಅತ್ಯಂತ ವೈಭವದಿಂದ ಜರಗಿತು.

ಪರ್ಯಾಯ ಪೀಠಾರೂಢ ಶ್ರೀ ಸುಜ್ಞಾನೇಂದ್ರ ಶ್ರೀಪಾದಂಗಳವರನ್ನು ಉಡುಪಿ ನಗರ ಸಭೆ, ಆಯುರ್ವೇದ ಕಾಲೇಜು, ಸಂಸ್ಕೃತ ಕಾಲೇಜು ಹಾಗೂ ಕಲಾವೃಂದ ಇವರು ಸನ್ಮಾನಪತ್ರವಿತ್ತು, ಗೌರವಿಸಿದ್ದರು. ನಗರಸಭೆಯ ಮಾನಪತ್ರಕ್ಕೆ ಉತ್ತರಿಸುತ್ತ ಸಭೆಯು ಮಧ್ವಸರೋವರದ ತೆಂಕಪಕ್ಕದ ಪಾಗಾರ ತೆಗೆದು ಕಾಂಕ್ರೀಟ್ ಪಾಗೆ ಹಾಕುವುದಾದರೆ, ತಾವು ಒಂದು ಸಾವಿರ ರೂಪಾಯಿ ಕೊಡುವುದಾಗಿ ವಾಗ್ದಾನವಿತ್ತರು.

ಕಲೋದ್ಧಾರಕ ಸಂಘದವರ ಜಯಭೇರಿ— ಹಾಸನದಲ್ಲಿ ಪ್ರತಿವರ್ಷದಂತೆ ಏರ್ಪಡಿಸಿದ ಅಖಿಲ ನಾಟಕ ಸ್ಪರ್ಧೆಯಲ್ಲಿ ಧಾರವಾಡದ ಕಲೋದ್ಧಾರಕ ಸಂಘದವರು ಪ್ರೊ. ವಿ. ಎಂ. ಇನಾಂದಾರ್ ಅವರು ಬರೆದ 'ಬಿಡುಗಡೆ' ಎಂಬ ನಾಟಕವನ್ನು ಅಭಿನಯಿಸಿ, ಪ್ರಥಮ ಬಹುಮಾನವನ್ನು ಪಡೆದರು. ಸ್ಪರ್ಧೆಯಲ್ಲಿ ೨೨ ನಾಟಕ ಸಂಘಗಳವರು ಭಾಗವಹಿಸಿದ್ದರು.

ಸ್ಪರ್ಧೆಯ ಸಂಘಟಕರು ಮೇಕಪ್-ರಂಗಸಜ್ಜಿಕೆಗಳಿಗೂ ವೈಯಕ್ತಿಕ ಅಭಿನಯಕ್ಕೂ ಪ್ರತ್ಯೇಕ ಪಾರಿತೋಷಕಗಳನ್ನು ಕೊಡುವ ಕ್ರಮವನ್ನಿಟ್ಟುಕೊಂಡಿದ್ದು, ಮೇಕಪ್-ರಂಗಸಜ್ಜಿಕೆಗೂ ಕಲೋದ್ಧಾರಕ ಸಂಘದವರಿಗೇ ಪ್ರಥಮ ಸ್ಥಾನ ದೊರಕಿತು. ವೈಯಕ್ತಿಕ ಅಭಿನಯಗಳಲ್ಲಿ ಸಂಘದ ಸೌ. ಭಾರತೀ ಹಾವನೂರ ಮತ್ತು ಕು. ಸುಧಾ ಸವಣೂರ ಇವರಿಗೆಯೇ ಪ್ರಥಮ, ದ್ವಿತೀಯ ಬಹುಮಾನಗಳು ದೊರತುವು ಪುರುಷ ಪಾತ್ರಗಳಲ್ಲಿ ಸಂಘದ ಕಲಾವಿದರಾದ ಶ್ರೀ ಕೃಷ್ಣ ಉಪಾಧ್ಯೆ ಇವರಿಗೆ ದ್ವಿತೀಯ ಪಾರಿತೋಷಕ ಸಂದಿತು ಇತರ ಪಾತ್ರಗಳಲ್ಲಿ ಸರ್ವಶ್ರೀ ಜನಾರ್ದನ ನಾವಡ, ರಾಘವೇಂದ್ರ ನಾಸೂರ ಮತ್ತು ನಾರಾಯಣ ಆಡೂರ ಇವರ ಅಭಿನಯವು ಮೇಲ್ಮಟ್ಟದ್ದಾಗಿತ್ತು. ಇದಲ್ಲದೆ ಕಳೆದವರ್ಷ ಹಾಸನದ ಸಂಘಟಕರು ಇಟ್ಟಿದ್ದ ರೋಲಿಂಗ ಶೀಲ್ಡನ್ನು, ಸಂಘದವರು ಹೋದವರ್ಷವೂ ಪ್ರಥಮ ಸ್ಥಾನ ಪಡೆದು ಗೆದ್ದುದನ್ನು ಈ ವರ್ಷ ಉಳಿಸಿಕೊಂಡರು.

'ಬಿಡುಗಡೆ' ನಾಟಕವನ್ನು ಯಶಸ್ವಿಯಾಗಿ ನಿರ್ದೇಶಿಸಿದವರು ಶ್ರೀ ಧೀರೇಂದ್ರ ಕುಲಕರ್ಣಿಯವರು. ಈ ನಾಟಕ ಯಾತ್ರೆಯ ಹಾಗೂ ರಂಗಭೂಮಿಯ ಸೂತ್ರಧಾರಕತ್ವವನ್ನು ಸರ್ವಶ್ರೀ ಸ್ವಾಮಿರಾಯ ಕಾಳಗಿ ಮತ್ತು ಶ್ರೀನಿವಾಸ ಹಾವನೂರ ಇವರು ವಹಿಸಿದ್ದರು.

ಮಂಗಳೂರು ಸೈಂಟ್ ಎಲೋಶಿಯಸ್ ಕಾಲೇಜಿನ ಕೆಡೆಟ್— ಶ್ರೀ ಕ್ರಿಸ್ಟೋಫರ ಡಿಸಿಲ್ವಾ ಇವರು ಮುಂಬಯಿಯಲ್ಲಿ ಜರಗಿದ್ದ ಎನ್. ಸಿ. ಸಿ. ನೌಕಾದಳ ತರಬೇತಿಯಲ್ಲಿ ಉತ್ತಮ ಕೆಡೆಟ್ ಎಂದು ಪ್ರಶಸ್ತಿ ಪಡೆದಿರುವರೆಂದು ತಿಳಿದುಬರುತ್ತದೆ. ಇವರಲ್ಲದೆ, ಈ ತರಬೇತಿ ಸಮಯದಲ್ಲಿ ನಡೆದಿದ್ದ ಆಟ ಮತ್ತು ಶಿಸ್ತುಗಳಲ್ಲಿ ಮಂಗಳೂರಿನ ಕೆಡೆಟ್ಟುಗಳು ಉತ್ತಮ ಯಶಸ್ಸು ಪಡೆದಿರುವರೆಂದು ಹೇಳಲಾಗುತ್ತಿದೆ.

ವಿವಾಹ ಸಮಾರಂಭ:— ಶ್ರೀ ಬಿ. ನಾರಾಯಣ ಹೆಗ್ಡೆಯವರ ಪುತ್ರ ಶ್ರೀ ಕೃಷ್ಣಾನಂದ ಹೆಗ್ಡೆಯವರು ಶ್ರೀ ಬಿ. ಶ್ಯಾಮರಾಯ ಶೆಟ್ರ ಪುತ್ರಿ ಕುಮಾರಿ ವಸಂತಿಯನ್ನೂ, ಶ್ರೀ ಮುಗ್ಗಪ್ಪ ನಾಯ್ಕರ ಪುತ್ರ ಶ್ರೀ ಶಿವರಾಮ ಶೆಟ್ಟರು ಶ್ರೀ. ಬಿ ನಾರಾಯಣ ಹೆಗ್ಡೆಯವರ ಪುತ್ರಿ ಕುಮಾರಿ ಸುನಂದಾಳನ್ನೂ ಇದೇ ತಾ 17-1-60ರಂದು ಉಡುಪಿ ರಾಮಕೃಷ್ಣ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಕಾರ್ಕಳದ ಬಿ. ಡಿ ಪ್ರೊ.— ಶ್ರೀ ಟಿ. ಜೆ. ಬಂಗೇರರವರನ್ನು ಸ್ವಾಗತಿಸುವ ಮತ್ತು ಬಿ. ಡಿ ಪ್ರೊ. ವೆಂಕಟರಮಣಯ್ಯನವರನ್ನು ಬೀಳ್ಕೊಡುವ ಸಮಾರಂಭವೊಂದು ಇತ್ತೀಚೆಗೆ ನಡೆಯಿತು ಡಿಸ್ಟ್ರಿಕ್ಟ್ ಮುನಸೀಫ ಶ್ರೀ ಲಕ್ಷ್ಮಣ ಪಾಲಿಯಾನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಪಿ. ಮುಕುಂದ ಪ್ರಭು, ಸಿ. ಸಿ. ಸುಬ್ಬಯ್ಯ ಶೆಟ್ಟಿ ಮೊದಲಾದವರು ಪ್ರಶಂಸನಾತ್ಮಕವಾಗಿ ಮಾತನಾಡಿದರು.

ನಿರೀಕ್ಷಿಸಿರಿ!

'ನವಯುಗ'ದ
ಪ್ರಜಾರಾಜ್ಯ ವಿಶೇಷಾಂಕ

ತಾ. ೨೬—೧-೬೦ರ ಸಂಚಿಕೆಯಲ್ಲಿ ಬರೆಯುವ ಕೆಲವರು ಸುಪ್ರಸಿದ್ಧ ಲೇಖಕರು:

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ,
ಡಾ| ಕೆ. ಕೃಷ್ಣಮೂರ್ತಿ,
ಪ್ರೊ| ಬಿ. ಎಚ್. ಶ್ರೀಧರ,
ವಿದ್ವಾನ್ ಯು. ನಾ. ಉಡುಪ,
ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ,
ಶ್ರೀ ಗೌರೀಶ ಕಾಯ್ಕಿಣಿ,
ಶ್ರೀ ಎಸ್. ವೆಂಕಟರಾಜ,
ಶ್ರೀ ರಸಿಕರಂಗ...... ಮೊದಲಾದವರು......

(೫ನೇ ಪುಟದಿಂದ)

ಸಲಹೆ ನೀಡಬೇಕೇ ಹೊರತು ಅಧಿಕಾರ ಚಲಾಯಿಸುವುದಲ್ಲ ಇದರಿಂದ ಗ್ರಾಮೀಣ ಜನತೆಯಲ್ಲಿ ಆತ್ಮ ವಿಶ್ವಾಸವೂ ಆತ್ಮ ಬಲವೂ ಹೆಚ್ಚುವುವು.

ರಾಷ್ಟ್ರ ಭಾಷೆಯ ಪ್ರಶ್ನೆ

ಹಿಂದೀ ಮತ್ತು ಅಹಿಂದೀ ಭಾಷಾ ಜನರ ನಡುವೆ ಸಂಘರ್ಷಣೆ ನಡೆಯುತ್ತಿದೆ; ಇದರಿಂದಾಗಿ ವಿವಾದವೂ ಎದ್ದಿದೆ. ಅಹಿಂದೀ ಪ್ರದೇಶವು ಆತ್ಮಸಂತೋಷದಿಂದಲೇ ಹಿಂದಿಯನ್ನು ಸ್ವೀಕರಿಸುವವರೆಗೆ ಅವರ ಮೇಲೆ ಹಿಂದಿಯನ್ನು ಹೇರಲಾಗುವುದಿಲ್ಲ ಎಂದು ಪ್ರಧಾನಿಯವರೇ ಹೇಳಿದರೂ ಈ ಘರ್ಷಣೆ ಶಾಂತವಾಗಲಿಲ್ಲ ಬಹುಜನರ ಭಾಷೆ ಹಿಂದಿಯು ರಾಷ್ಟ್ರಭಾಷೆಯಾಗಲೇ ಬೇಕು ಅಮೆರಿಕೆ, ಯುರೋಪಗಳಲ್ಲಿಯೂ ವಿಭಿನ್ನಭಾಷೆಗಳ ಜನವರ್ಗಗಳಿರುವಾಗ ಯಾವುದಾದರೂ ಒಂದೇ ಭಾಷೆಯನ್ನು ರಾಜಭಾಷೆಯಾಗಿ ಆರಿಸಲಾಗುತ್ತದೆ.

ವಿದೇಶನೀತಿ

ಭಾರತದ ಪಂಚಶೀಲ ಆಧಾರಿತ ವಿದೇಶನೀತಿಯು ಈವರೆಗೆ ಜಯಪ್ರದವಾದರೂ ಈಗ ಕೊಂಚ ಆಘಾತಕ್ಕೆ ಸಿಲುಕಿದೆ ಪ್ರಪಂಚದ ಮಹಾರಾಷ್ಟ್ರಗಳಾದ ಅಮೆರಿಕೆ ಮತ್ತು ರಶ್ಯಗಳೂ 'ಇರು, ಇರಗೊಡು' ತತ್ತ್ವವನ್ನು ಒಪ್ಪುವ ಮಟ್ಟಕ್ಕೆ ಬಂದಿರುವಾಗ, ಅಹಿಂಸಾವಾದಿ ಭಾರತವು ಅದನ್ನು ಬಿಟ್ಟುಕೊಡಬೇಕೆಂಬ ವಾದದಲ್ಲಿ ಹುರುಳಿಲ್ಲ

ಚೀನೀಯ ಆಕ್ರಮಣ

ನಾವಿಂದು ನಮ್ಮ ಉತ್ತರದ ಸೀಮೆಯಲ್ಲಿ, ಬೆಟ್ಟ—ಪರ್ವತ ಪ್ರದೇಶದಲ್ಲಿ ಮಹಾಸಮಸ್ಯೆಯೊಂದನ್ನು ಎದುರಿಸಬೇಕಾಗಿದೆ. ಆದರೆ, ಇದರಿಂದ ನಮ್ಮ ಮೂಲ ನೀತಿಯಲ್ಲಿ ಪರಿವರ್ತನೆಯಾಗಬೇಕಿಲ್ಲ. ಸ್ವಯಂ ಪಂಚಶೀಲವನ್ನು ಉದ್ಘೋಷಿಸಿದ ಚೀನವೇ ಇಂದು ಅದನ್ನು ಅವಮಾನಗೊಳಿಸಿ ಭಾರತದ ಸೀಮೆಯಲ್ಲಿ ಆಕ್ರಮಣ ಮಾಡುತ್ತಿರುವುದು ದುರ್ಭಾಗ್ಯದ ವಿಷಯವಾಗಿದೆ. ಸಾಧ್ಯವಾದಷ್ಟು ಕಾಲ ನಾವು ನಮ್ಮ ನೀತಿಯನ್ನೇ ಅನುಸರಿಬೇಕು, ಆದರೆ ನವೀನ ಪರಿಸ್ಥಿತಿಗನುಸಾರವಾಗಿ ಹೋರಾಡಲೂ ನಾವು ಸಿದ್ಧರಿರಬೇಕು. ನಮ್ಮ ಈ ಬಗ್ಗೆ ಇರುವ ನೀತಿಯು ಏಕಪಕ್ಷೀಯವಾಗಬಾರದು, ಭಾರತದ ಮೇಲೆ ಆಕ್ರಮಣವೇ ಆಗುವುದಾದರೆ ನಾವದನ್ನು ಎದುರಿಸಲೇಬೇಕು ಸೀಮಾವಿವಾದದಿಂದ ನಾವು ಅನುಭವಿಸುವ ಹೊಸ ಪರಿಸ್ಥಿತಿಯು ಏಷ್ಯದ ಸ್ಥಿತಿಗತಿಯನ್ನೂ ಪರಿವರ್ತಿಸಬಲ್ಲುದು; ಬಹುಕಾಲ ಕಷ್ಟ ತಂದು ಕೊಡಬಲ್ಲುದು. ನಾವು ನಿರ್ಭಯತೆ ಮತ್ತು ಧೈರ್ಯಗಳಿಂದ ಅದನ್ನು ಎದುರಿಸಬೇಕು ಭಯಭೀತರಾಗಿ ನಿರ್ಬಲರಾಗಿ ಉಳಿಯುವುದು ಕಾಂಗ್ರೆಸಿನ ನೀತಿಯಲ್ಲ, ಜನತೆಯದೂ ಅಲ್ಲ, ಆದರೆ ಹೋರಾಟವೂ ನಮ್ಮ ನೀತಿಯಾಗಿ ಉಳಿದಿಲ್ಲ ನಮ್ಮ ಸೀಮೆಗಳನ್ನು ರಕ್ಷಿಸಲು ಆಕ್ರಮಣವನ್ನು ನಾವು ಎದುರಿಸುವೆವು, ಅದರೊಡನೆ ಸಂಧಿ ಸಮಾಧಾನಗಳ ಬಾಗಿಲನ್ನೂ ತೆರೆದಿಡುವೆವು ನಮಗಿಂದು ಕೃಷಿಯ ಉತ್ಪಾದನೆಯತ್ತ ಅತ್ಯಧಿಕ ಗಮನ ಹರಿಸಬೇಕಾಗಿದೆ, ನಿಜ, ಆದರೆ, ದೇಶದ ಮೇಲೆ ಪರಾಕ್ರಮಣ ಸಹಿಸುವಷ್ಟು ಬುದ್ಧಿಗೇಡಿಗಳು ನಾವಲ್ಲ

ದೇಶ ದ್ರೋಹಿಗಳು

ನಮ್ಮ ಪ್ರಧಾನಿಗಳು ಈ ರೀತಿ ಸಂಕಟ ಪಡುತ್ತಿರುವಾಗ ಭಾರತದ ಕೆಲವರು ಅರಾಷ್ಟ್ರೀಯ ಭಾವನೆಯುಳ್ಳವರು ಏನೂ ನಡೆದಿಲ್ಲವೆಂಬಂತೆ ಕಣ್ಣುಮುಚ್ಚಿ ಕುಳಿತಿರುವುದನ್ನು ಕಾಣುವಾಗ ದುಃಖವೆನಿಸುತ್ತದೆ. ಕಾಂಗ್ರೆಸ್ಸು ಯಾವುದೇ ವಾದಕ್ಕೆ, ದೇಶಕ್ಕೆ ವಿರೋಧವಿಲ್ಲ, ಅದು ಯಾರನ್ನೂ ಸ್ವಾಗತಿಸುವುದಕ್ಕೂ ಯಾರಿಂದಲೂ ತಿಳಿದುಕೊಳ್ಳುವುದಕ್ಕೂ ವಿರೋಧಿಯಲ್ಲ ನಮ್ಮ ದೇಶದ ಹಿತದೃಷ್ಟಿಯನ್ನದು ಮುಂದಿಟ್ಟುಕೊಳ್ಳುತ್ತದೆ ಆದರೆ, ಭಾರತೀಯ ಕಮ್ಯೂನಿಸ್ಟರು ತಮ್ಮ ತನವನ್ನು ಕಳೆದುಕೊಂಡಿದ್ದಾರೆ ಭಾರತಕ್ಕೆ ಸಂಪೂರ್ಣ ವಿದೇಶೀಯವೆನಿಸಿದ ನೀತಿಯನ್ನವರು ಕೈಗೊಂಡಿದ್ದಾರೆ ಭಾರತವೊಂದು ವಿಶಾಲದೇಶ ಅದಕ್ಕೆ ತನ್ನದೇ ಆದ ಪರಂಪರೆ ಇದೆ, ಅದು ಎಲ್ಲಾ ವಾದಗಳ ವಿರೋಧೀ ವಿಚಾರಧಾರಿಗಳನ್ನು ಸಮ್ಮಾನಿಸಿದೆ ಆದರೆ, ಈ ಉದಾರತೆಯ ಅನುಚಿತ ಲಾಭವನ್ನೆತ್ತಿ ರಾಷ್ಟ್ರಕ್ಕೆ ಮತ್ತು ರಾಷ್ಟ್ರರಕ್ಷಣೆಗೆ ಬಾಧಕವನ್ನು ತಂದೊಡ್ಡುವ ಕಾರ್ಯಕಲಾಪಗಳನ್ನು ಯಾರಾದರೂ ಮಾಡಿದರೆ, ಮತ್ತು ಪಂಚಮದಳೀಯ ನೀತಿಯಿಂದ ತೊಂದರೆಯೆಬ್ಬಿಸಿದರೆ, ಬಲಾತ್ಕಾರದಿಂದ ಅವನ್ನು ತಡೆಗಟ್ಟಬೇಕಾಗಬಹುದು; ಅದರೊಡನೆ, ಆ ಮನೋಭಾವನೆಯನ್ನೂ ಬೇರುಸಹಿತ ಕಿತ್ತು ಬಿಡಬೇಕಾಗಬಹುದು ರಾಜಭಕ್ತಿ ಮತ್ತು ದೇಶಭಕ್ತಿಗಳು ಚರ್ಚೆಯ ವಿಷಯಗಳಲ್ಲ, ಕೇವಲ ವಿಚಾರಧಾರೆಯ ಪ್ರಶ್ನೆಗಳಲ್ಲ, ಅವು ಪ್ರತ್ಯೇಕ ನಾಗರಿಕನಲ್ಲಿ ಸಹಜವಾಗಿ ವಿಕಸಿತವಾಗುವ ಮೌಲಿಕ ತತ್ವವೂ ಆಗಿದೆಯೆಂದು ಕಮ್ಯುನಿಸ್ಟ ಮಿತ್ರರೊಡನೆ ಸ್ಪಷ್ಟವಾಗಿ ಹೇಳುತ್ತೇನೆ.

ಅಮೆರಿಕದ ವರಿಷ್ಠ ಸೇನಾಧಿಕಾರಿಗಳು ಸಭೆಸೇರಿದ ಒಂದು ದೃಶ್ಯ

ಕೇರಳದ ಪ್ರಶ್ನೆ

ಪ್ರಜಾಸತ್ತೆಯಲ್ಲಿ ವಿಶ್ವಾಸವಿಲ್ಲದ ಒಂದು ಪಕ್ಷ ಅಧಿಕಾರ ಗ್ರಹಣ ಮಾಡಿದಾಗ ಏನಾಗುವುದೆಂದು ನಾವು ಕೇರಳದಲ್ಲಿ ನೋಡಿದ್ದೇವೆ ಕೇರಳದ ಜನರು ಕಷ್ಟ ಸಹಿಸಬೇಕಾಯಿತು ನಮ್ಮ ಪವಿತ್ರ ಭೂಮಿಯಲ್ಲಿ ಚೀನೀಯರು ಆಕ್ರಮಣವನ್ನು ಕಾಣುವಾಗ, ನಮ್ಮ ರಾಷ್ಟ್ರದ ಪ್ರತಿಯೊಂದು ಮೂಲೆ ಮೂಲೆ ಎಚ್ಚರಿಕೆ ವಹಿಸಬೇಕಾಗಿದೆ ಈ ಪಂಚಮದಳೀಯ ಕಾರ್ಯಕಲಾಪ ಮತ್ತು ಘಾತಕ ಪ್ರವೃತ್ತಿಗಳನ್ನು ಗಮನಿಸುವುದು ಮಾತ್ರವಲ್ಲ ಇಂತಹವುಗಳಿಗೆ ಎಲ್ಲಿಯೂ ಸ್ಥಾನ ಕಲ್ಪಿಸಿಕೊಡಬಾರದು. ದೇಶಭಕ್ತಿ ಮತ್ತು ರಾಜನಿಷ್ಠೆಯಲ್ಲಿ ಸಂದೇಹವಿಲ್ಲದವರಿಗೆ ಮಾತ್ರವೇ ರಾಷ್ಟ್ರದ ಚರ್ಚೆಯಲ್ಲಿ ಅವಕಾಶ ಕಲ್ಪಿಸಿಕೊಡಬೇಕು.

ಕಾಂಗ್ರೆಸ್‌ನ ಕೊರತೆ

ಕಾಂಗ್ರೆಸ್ ದೊಡ್ಡ ಸಂಸ್ಥೆಯಾದರೂ ಅದರಲ್ಲಿ ಕೆಡುಕುಗಳಿವೆಯೆಂದು ಒಪ್ಪಿಕೊಳ್ಳಬೇಕು ನಮ್ಮ ರಾಜಕೀಯ ತತ್ತ್ವಗಳಲ್ಲಿ ವಿಶ್ವಾಸವಿಲ್ಲದವರೂ ನಮ್ಮ ಪಕ್ಷದಲ್ಲಿದ್ದಾರೆ ಭಾರತೀಯರು ಆಧ್ಯಾತ್ಮಿಕ ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಯೋಗ್ಯತೆ ಹಾಗೂ ಬುದ್ಧಿಮತ್ತೆಯಿಂದಲೇ ಭಾರತದಲ್ಲಿ ಸುಖನೆಲೆಸಿತ್ತೆಂಬುದನ್ನು ಮರೆತುಬಿಟ್ಟಿದ್ದಾರೆ ಕಾಂಗ್ರೆಸಿಗರಲ್ಲಿ ವಿಸ್ತು ಬಂಗವೊಂದು ಮಹಾಮಾರಿಯಾಗಿದೆ. ಆತ್ಮನಿರ್ಭರತೆ ಹಾಗೂ ತ್ಯಾಗಭಾವನೆಗಳು ದೂರವಾಗಿ ಇಂದು ಅಧಿಕಾರಾಭಿಲಾಷೆ ಮತ್ತು ಪ್ರತಿಷ್ಠಾಭಾವನೆಗಳು ಬೆಳೆದಿವೆ ಕಾಂಗ್ರೆಸಿಗರು ತಮ್ಮ ತ್ಯಾಗ ಹಾಗೂ ಸೇವಾಬುದ್ಧಿಯನ್ನು ಜಾಗ್ರತಗೊಳಿಸಬೇಕು

ಕಾಂಗ್ರೆಸಿಗರು ಸತ್ಯವಾದಿಗಳೂ ಪೂರ್ಣ ವಿಕಸಿತ ವ್ಯಕ್ತಿಗಳೂ ಆಗಿರಬೇಕು ಪ್ರಶಾಸನ ಕಾರ್ಯದಲ್ಲಿರುವವರು ಅವಶ್ಯ ಹೀಗಿರಲೇ ಬೇಕು. ದೇಶದ ಎಲ್ಲ ಪಕ್ಷಗಳೂ ನಮ್ಮ ನೀತಿಯನ್ನೂ, ಕಾರ್ಯಕ್ರಮವನ್ನು ವಿಮರ್ಶಿಸುವಂತೆ ನಾನು ಕೇಳಿಕೊಳ್ಳುತ್ತೇನೆ. ಆದರೆ, ವ್ಯಕ್ತಿಗತ ಅಸತ್ಯವಾದದ ಆಧಾರದಿಂದ ಸಾರ್ವಜನಿಕ ಜೀವನದ ಮರ್ಯಾದೆಗೆ ಭಂಗತರಬೇಡಿರೆಂದು ವಿನಂತಿಸುತ್ತೇನೆ

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಇಲ್ಲಿದೆ ನೋಡಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.
ಹೊಸ ಮುದ್ರಣ—ಸಾದಾ ಪ್ರತಿ 1 50 ಉತ್ತಮ ಪ್ರತಿ 2.00
ಪುಸ್ತಕದ ಬೆಲೆಯೊಂದಿಗೆ 25 ನ ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು
ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕನ್ನಡ.
ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

BUY
ADVERTISED
GOODS!

ಅಂತರಿಕ್ಷಗಮನ

(೪ನೇ ಪುಟದಿಂದ)

ವಾಲ್ಮೀಕಿಯೇ ಪುನಃ ಬರೆಯುತ್ತ ಹೋಗುತ್ತಾನೆ: ಹನುಮಂತನು ಹಾರುತಿದ್ದ ದಾರಿಯೇ ಸೂರ್ಯ, ಚಂದ್ರರ ಮಾರ್ಗವೂ ಆಗಿತ್ತು. ಆ ಸಮಯದಲ್ಲಿ ಅತ್ಯಂತ ವೇಗದಲ್ಲಿ ಓಡುತಿದ್ದ ಹನುಮಂತನ ಅತ್ತಿತ್ತ ಇರುವ ಮೋಡಗಳು ಆತನ ಹಿಂದೆಯೇ ಓಡಿಬರುತಿದ್ದುವು. ಆ ಕನೇ ಅವನ್ನು ಸೆಳೆದುಕೊಂಡು ಓಡುತ್ತಿರುವಂತೆ ಕಂಡುಬರುತಿತ್ತು. ತನ್ನ ಅಂತರಿಕ್ಷ ಯಾತ್ರೆಯಲ್ಲಿ ಎದುರಾದ ಛಾಯಾಗ್ರಾಹಿಣೀ ರಾಕ್ಷಸಿಯನ್ನು ವಧಿಸಬೇಕಾಗಿ ಬಂತು. ಈ ರೀತಿಯಾಗಿ ಹನುಮಂತನ ದ್ವಿತೀಯ ಅಂತರಿಕ್ಷಯಾತ್ರೆಯು ಸಕುಶಲವಾಗಿ ಮುಕ್ತಾಯವಾಯಿತು.

ಅಂತರಿಕ್ಷದ ಮೂರನೆಯ ಪ್ರಯಾಣವು ಸೀತಾಮಾತೆಯ ಸಂದೇಶವನ್ನು ತೆಗೆದುಕೊಂಡು ಶ್ರೀ ರಾಮನಿಗೆ ಮುಟ್ಟಿಸುವುದಕ್ಕಾಗಿದೆ. ಇದರ ವರ್ಣನೆಯನ್ನೂ ಕವಿ ಸುಂದರವಾಗಿ ಮಾಡಿದ್ದಾನೆ. ತೀವ್ರ ವೇಗಿ ವಾಯುಪುತ್ರನು ಪಕ್ಷಸಹಿತವಾದ ಪರ್ವತದಂತೆ ಸಮುದ್ರದಂತಹ ಆಕಾಶದಲ್ಲಿ ಪ್ರವೇಶಿಸಿದನು. ಅಂತರಿಕ್ಷದಲ್ಲಿ ಕುಮುದದಂತೆ ಚಂದ್ರನೂ, ಸೂರ್ಯನು ಕಾರಂಡವ ಪಕ್ಷಿಯಂತೆಯೂ ತೋರಿಬರುತಿದ್ದರು. ಪುಷ್ಯ ಮತ್ತು ಹಸ್ತ ನಕ್ಷತ್ರಗಳು ಹಂಸಗಳಂತೆ, ಮೋಡಗಳು ನೀರುಗಿಡಯಂತೆ, ಪುನರ್ವಸು ನಕ್ಷತ್ರ ಮೀನಿನಂತೆ, ಮಂಗಳ ಗ್ರಹ ಮೊಸಳೆಯಂತೆ ಕಂಡುಬಂದುವು. ಸ್ವಾತೀನಕ್ಷತ್ರ ಪುಂಜವು ಹಂಸದಂತೆಯೂ ಚಂದ್ರನ ಶೀತಲ ಕಿರಣಗಳು ತಣ್ಣೀರಿನಂತೆಯೂ ಪ್ರತೀತವಾದುವು. ವೇಗವಾಗಿ ಓಡುವ ಹನುಮಂತನು ಆಕಾಶವನ್ನು ಸುತ್ತುವುದಕ್ಕೋಸ್ಕರ ಧಾವಿಸುವವನಂತೆ ಊಹಿಸಬಹುದಾಗಿತ್ತು. ಚಂದ್ರಮಂಡಳವನ್ನು ಛಿದ್ರಿಸುವವನಂತೆ ಭಾಸವಾಗುತಿತ್ತು. ಅತ್ಯಂತ ವೇಗದಿಂದಾಗಿ ಸೂರ್ಯ ಮತ್ತು ಆಕಾಶಗಳೂ ಆತನೊಡನೆ ಓಡುತಿದ್ದುವು. ಆ ಮೇಘ ಮಂಡಳವನ್ನು ಛಿನ್ನೀಕರಿಸಿ ಅಂತರಿಕ್ಷದಲ್ಲಿ ನೂರು ಯೋಜನ ವಿಸ್ತಾರದ ಸಮುದ್ರವನ್ನು ಹಾರಿ ದಾಟುತಿದ್ದ ಆ ಸಮಯದಲ್ಲಿ ಹಸುರು, ಹಳದಿ, ನೀಲಿ, ಕೆಂಪು ಮೊದಲಾದ ನಾನಾತರದ ಮೋಡಗಳು ಆಕಾಶದಲ್ಲಿ ತೋರಿಬರುತಿದ್ದುವು. ಈ ಮೇಘಮಾಲೆಯಲ್ಲಿ ಹನುಮಂತ ಕೆಲವೊಮ್ಮೆ ಮರೆಯಾಗುತಿದ್ದ; ಇನ್ನು ಕೆಲವೊಮ್ಮೆ ದೃಶ್ಯನಾಗುತಿದ್ದ. ವಿವಿಧ ವರ್ಣರಂಜಿತ ಮೇಘಗಳ ನಡುವೆ ಹನುಮಂತನ ಶರೀರವು ಸ್ವರ್ಣಮಯವಾಗಿರುವಂತೆ ಭಾಸವಾಗುತಿತ್ತು.

ಈ ಪ್ರಕಾರವಾಗಿ ಮೂರನೆಯ ಅಂತರಿಕ್ಷ ಯಾತ್ರೆಯಲ್ಲಿ ಜಯಶೀಲನಾದ ಹನುಮಂತ ಭಯಾನಕ ಗರ್ಜನೆಯನ್ನು ಹೊರಡಿಸಿ, ತನ್ನ ಸಂಗಡದವರನ್ನು ಕೂಡಿಕೊಂಡು, ಅವರಿಗೆ ತನ್ನ ಪ್ರವಾಸ ವೃತ್ತಾಂತವನ್ನು ವಿವರಿಸಿದನು.

ಅನಂತ ಆಕಾಶದಲ್ಲಿ ಹನುಮಂತನ ತೃತೀಯ ಅಂತರಿಕ್ಷ ಯಾತ್ರೆಯ ವರ್ಣನಾದಿಗಳನ್ನು ಕವಿಯು ತನ್ನ ದಿವ್ಯ ದೃಷ್ಟಿಯಿಂದ ಕಂಡು ಮಾಡಿದ್ದಾನೆ. ಕವಿಯು ಸಮುದ್ರ ಕಿನಾರೆಯಲ್ಲಿ ಮಂಡಿಸಿ ಭಾವಾ ಹನುಮಂತನೊಡನೆ ತಾನೂ ಯಾತ್ರೆ ಬೆಳೆಸಿ ಈ ವರ್ಣನೆಯನ್ನು ಬರೆದಿರುವಂತೆ, ನಮ್ಮ ಮನಸ್ಸನ್ನು ನಾಟಿ ಹೋಗುವಂತೆ ಭಾಸವಾಗುತ್ತದೆ.

ಭಾರತದ ಅವಶ್ಯಕತೆಗಳಲ್ಲಿ ಬಾಲಕಲ್ಯಾಣವು ಪ್ರಮುಖವಾದುದಾಗಿದ್ದು ಸರಕಾರವು ಆ ಬಗ್ಗೆ ತೀವ್ರ ಆಸಕ್ತಿ ಹರಿಸುತ್ತಿದೆ. ಈ ಕೆಲಸಕ್ಕಾಗಿ ಆರಿಸಿದ ಕೆಲವರಿಗೆ ತರಬೇತಿಯನ್ನೂ ನೀಡಲಾಗುತ್ತಿದೆ. ಒಬ್ಬಾಕೆ ಪ್ರತ್ಯಕ್ಷ ತರಬೇತಿ ಪಡೆಯುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ವೀರ ಹನುಮಂತನ ಚತುರ್ಥ ಯಾತ್ರೆಯು ಔಷಧಿ ತರುವುದಕ್ಕಾಗಿ ನಡೆಯಿತು. ಯುದ್ಧರಂಗದಲ್ಲಿ ಮೇಘನಾದನ ಶಕ್ತಿಯಿಂದಾಗಿ ಶ್ರೀರಾಮ, ಲಕ್ಷ್ಮಣ, ಹಾಗೂ ಮತ್ತಿತರ ವಾನರವೀರರು ಗಾಯಗೊಂಡು ಮೂರ್ಛಿತರಾದಾಗ, ಹನುಮಂತನು ಲಂಕೆಯಿಂದ ಹಿಮಾಲಯದವರೆಗೆ ಯಾತ್ರೆ ಮಾಡಬೇಕಾಗಿ ಬಂತು. ಸಂಜೀವಿನಿ, ತರುವುದಕ್ಕಾಗಿ ಈ ಯಾತ್ರೆಯಲ್ಲಿ ಹನುಮಂತ ಸೂರ್ಯಪಥದಲ್ಲಿಯೇ ಹಾರ ಬಯಸಿದ. ಭಾರತೀಯ ಗಣಿತ ವಿಜ್ಞಾನಕ್ಕನುಸಾರವಾಗಿ ಸೂರ್ಯ ಕ್ರಾಂತಿ ವೃತ್ತದಲ್ಲಿಯೇ ಚಲಿಸುತ್ತಾನೆ. ಪಾಶ್ಚಾತ್ಯ ಗಣಿತ ಪದ್ಧತಿಯಂತೆ ಸೂರ್ಯ ಮಾರ್ಗ ಕ್ರಾಂತಿ ವೃತ್ತವಿದ್ದು, ಭೂಮಿ ಚಲಿಸುತ್ತದೆ. ಹನುಮಂತನೂ ತನ್ನ ಈ ಬಾರಿಯ ಅಂತರಿಕ್ಷ ಯಾತ್ರೆಯನ್ನು ಈ ದಾರಿಯಾಗಿಯೇ ಮಾಡಿದನು;

ಆದಿತ್ಯ ಪಥಮಾಶ್ರಿತ್ಯ
ಜಗಾಮ ಸಗತಃ ಕ್ರಮಃ
ಹನುಮಾನ ಸಂವೀರಲೋ
ವೀರ ಪಿತೃತುಲ್ಯ ಪರಾಕ್ರಮಃ

ಆದಿತ್ಯ ಸೂರ್ಯದ ಮಾರ್ಗದಲ್ಲಿ ಹನುಮಂತನು ಹಾರಿ (ಕ್ರಾಂತಿವೃತ್ತದ ಧರಾತಳದಲ್ಲಿ ಹಾರಿ) ಹಿಮಾಲಯ ಪರ್ವತವನ್ನು ಮುಟ್ಟಿದನು. ಹನುಮಂತನು ನೆಗೆಯುವುದಕ್ಕೆ ಮೊದಲು ತನ್ನ ಸರ್ಪಾಕಾರದ ಬಾಲವನ್ನು ಮೇಲೇರಿಸಿ, ತನ್ನ ಬೆನ್ನನ್ನು ಬಗ್ಗಿಸಿ, ಕಿವಿಗಳನ್ನು ಸಂಕೋಚಗೊಳಿಸಿ, ಆ ಮೇಲೆ ಕುದುರೆಯಂತೆ ತನ್ನ ಮುಖವನ್ನು ಪಸರಿಸಿ ಅಂತರಿಕ್ಷದಲ್ಲಿ ತೇಲಿಹೋದನು. ಆತನ ಪ್ರಚಂಡ ವೇಗದಿಂದಾಗಿ ಅನೇಕಾನೇಕ ವೃಕ್ಷಗಳು ಬೇರು ಸಹಿತ ಕಿತ್ತುಹೋದುವು. ಸುದರ್ಶನ ಚಕ್ರದ ವೇಗದಿಂದೀತ ಹಾರತೊಡಗಿದನು. ಭೂಮಿಯ ಮೇಲಿರುವ ಮನೆ, ಕಾಡು, ನದಿ ಮೊದಲಾದುವನ್ನೂ ನೋಡುತಿದ್ದನು; ಏಕೆಂದರೆ, ದಾರಿತಪ್ಪಿ ಹೋಗಬಾರದಲ್ಲ! ಹಿಮಾಲಯದಿಂದ ಔಷಧಿಯನ್ನು ಹಿಡಿದುಕೊಂಡು ಅದೇ ಮಾರ್ಗದಲ್ಲಿ ಆತ ಹಿಂದೆ ಓಡಿದನು. ಹಿಂದಿರುಗುವಾಗ ಮಾತ್ರ ಸೂರ್ಯನಿಗೆ ಸಮೀಪವಾಗಿಯೇ ಹಾರಿದನು.

ಸ ಭಾಸ್ಕರಾಧ್ವಾನಮನು ಪ್ರಪಸ್ಥಂ
ಭಾಸ್ಕರಾಭ : ಶಿಖರಂ ಪ್ರಗೃಹ್ಯ
ವಭೌ ತದಾ ಭಾಸ್ಕರ ಸನ್ನಿಕಾಶೋ
ರವೇಃ ಸಮೀಪೇ ಪ್ರತಿ ಭಾಸ್ಕರಾಭಃ

ಈ ರೀತಿಯಾಗಿ ಹನುಮಂತನು ನಾಲ್ಕನೆಯ ಯಾತ್ರೆಯ ವರ್ಣನೆಯನ್ನೂ ಮಾಡಿ ಕವಿ ವಾಲ್ಮೀಕಿಯು ಭಾರತೀಯ ಪ್ರಾಚೀನ ವಿಜ್ಞಾನ ಹಾಗೂ ವೀರತೆಯ ಭದ್ರ ಪ್ರಮಾಣವನ್ನು ನಮ್ಮ ಮುಂದಿಟ್ಟಿದ್ದಾನೆ.

ಹೀಗೆ ಭಾರತೀಯ ಸಾಹಿತ್ಯದಲ್ಲಿ ಮೊತ್ತಮೊದಲಿಗೆ ಅಂತರಿಕ್ಷ ಯಾತ್ರೆಯು ಮೂತು ರಾಮಾಯಣದಲ್ಲಿ ಬರುವುದು. ಈ ರಾಮಾಯಣವಾದರೋ ಭಾರತದಲ್ಲಿ ಮಾತ್ರವಲ್ಲ ಪ್ರಪಂಚದ ಅತಿ ಪ್ರಾಚೀನವೆನಿಸಿದ ಕೃತಿಯಾಗಿದೆ. ಹಾಗಿರುವಾಗ, ಪ್ರಾಚೀನ ಭಾರತೀಯರು ಅಂತರಿಕ್ಷಯಾನ ಮಾಡಿರಬಹುದು ಎಂಬುದಾಗಿ ಊಹಿಸಲು ಕಾರಣಗಳಿವೆ.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಜಮಾ ಮಾಡಬಹುದಾಗಿದೆ, ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಜಮಾ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ

ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ.

ಉಡುಪಿ.

ನುಡಿಚಿತ್ರ

(೪ನೇ ಪುಟದಿಂದ)

ಅಧಿಕಾರ ವರ್ಗದ ಆಕ್ರೋಶಕ್ಕೆ ಬಲಿಯಾಗುತ್ತಿದ್ದರು.

೧೯೪೯ರಲ್ಲಿ ಎನ್‌ಕ್ರೂಮಾರವರ ಕನ್‌ವೆನ್‌ಷನ್ ಪೀಪಲ್ಸ್ ಪಾರ್ಟಿಯು ಸ್ವಾತಂತ್ರ್ಯದ ಚಳುವಳಿಯನ್ನು ಬಿರುಸುಗೊಳಿಸಿತು. ಸ್ವಯಾಡಳಿತಾಧಿಕಾರ ಸಿಗದೆ ಹೋದರೆ ಭಾರಿ ಸಂಪು ಹಾಗೂ ಅಸಹಕಾರ ಚಳುವಳಿಯನ್ನೇ ಆರಂಭಿಸುವುದು ಅನಿವಾರ್ಯವಾಗುತ್ತದೆಯೆಂದು ಘೋಷಿಸಿತು. ೧೯೫೦ರಲ್ಲಿ ಎನ್‌ಕ್ರೂಮಾರವರನ್ನು ಆಡಳಿತ ವರ್ಗ, ಸಾರ್ವತ್ರಿಕ ಮುಷ್ಕರದ ಚಿತಾವಣೆ ನಡೆಸಿದರೆಂಬ ಅಪಾದನೆ ಮೇಲೆ ಬಂಧನಕ್ಕೊಳಪಡಿಸಿತು.

ಸಾರ್ವತ್ರಿಕ ಚುನಾವಣೆಗಳಲ್ಲಿ ಡಾ। ಎನ್‌ಕ್ರೂಮಾರವರ ಪಕ್ಷವು ವಿಜಯಿಯಾದಾಗ ಅವರ ಬಿಡುಗಡೆ ಅನಿವಾರ್ಯವಾಯಿತು. ಅವರೇ ಮುಖ್ಯ ಮಂತ್ರಿಯೂ ಆದರು. ಮತ್ತು, ಸಂಪರ್ಕ ಸಾಧನಗಳು ಮತ್ತು ಸಾರ್ವಜನಿಕ ಕಾಮಗಾರಿ ಶಾಖೆ ಮಂತ್ರಿಗಳೂ ಆಗಿದ್ದರು. ಒಂದು ವರ್ಷದ ತರುವಾಯ ರಾಜ್ಯಾಂಗಕ್ಕೆ ಸಂಬಂಧಿಸಿದಂತೆ ಅಂಗೀಕೃತವಾದ ಒಂದು ತಿದ್ದುಪಡಿ ಪರಿಣಾಮವಾಗಿ ಅವರು ಗೋಲ್ಡ್‌ಕೋಸ್ಟ್‌ನ ಪ್ರಧಾನ ಮಂತ್ರಿಯಾಗಿ ಘೋಷಿಸಲ್ಪಟ್ಟರು.

ಡಾ। ಎನ್‌ಕ್ರೂಮಾರವರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಾಗಿನಿಂದ ಎಷ್ಟೋ ಪ್ರಗತಿಪರ ಯೋಜನೆಗಳನ್ನು ಜಾರಿಗೆ ತಂದರಲ್ಲದೆ ೧೯೫೭ರಲ್ಲಿ ಗ್ರೇಟ್ ಬ್ರಿಟನ್ನಿಗೆ ಭೇಟಿ ಇತ್ತು ಗೋಲ್ಡ್‌ಕೋಸ್ಟ್‌ನ ಉನ್ನತಿಗೆ ಅತ್ಯಾವಶ್ಯಕವೆನಿಸಿದ್ದ ತಂತ್ರಜ್ಞರನ್ನು ಅರಿಸಿ ತಮ್ಮ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಲು ಬೇಕಾದ ಮುಖ್ಯ ಆವಶ್ಯಕತೆಯೊಂದನ್ನು ಪೂರೈಸಿಕೊಂಡು ಬಂದರು.

ಗೋಲ್ಡ್‌ಕೋಸ್ಟ್‌ನ ಸ್ವಾತಂತ್ರ್ಯ ಘೋಷಣೆ

ಘಾನಾ ಸ್ವತಂತ್ರವಾಗುವುದಕ್ಕೆ ಮೊದಲೇ ಡಾ। ಎನ್‌ಕ್ರೂಮಾರವರ ಸರ್ಕಾರವು ಪಂಚವಾರ್ಷಿಕ ಯೋಜನೆಯೊಂದನ್ನು ತಯಾರಿಸಿದ್ದು ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆಗೂ ಬೇಸಾಯದ ಉನ್ನತಿಗೂ ಆದಿಮಾಡಿತ್ತು. ಅಲ್ಲದೆ ನೀರಿನ ಸೌಕರ್ಯ ಒದಗಿಸುವ ಕಾಮಗಾರಿಗಳು ಮತ್ತು ರಸ್ತೆ ನಿರ್ಮಾಣದ ಭಾರಿ ಯೋಜನೆ ಸಹ ಜಾರಿಯಾಗತೊಡಗಿದ್ದವು. ಸ್ವಾತಂತ್ರ್ಯಪ್ರಾಪ್ತಿಯ ತರುಣದಲ್ಲಿ ಮೊದಲನೆ ಪಂಚವಾರ್ಷಿಕ ಯೋಜನೆಯೂ ಮುಗಿಯಿತು. ಸ್ವಾತಂತ್ರ್ಯ ಪ್ರಾಪ್ತಿಯನಂತರ ಡಾ। ಎನ್‌ಕ್ರೂಮಾರವರ ಸರ್ಕಾರವು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡಿದ ಕಾರ್ಯಕ್ರಮಗಳನ್ನೀಗ ಸಂಘಟಿಸುತ್ತಿದ್ದು, ಮುಂದೆ ದ್ವಿತೀಯ ಯೋಜನೆಯನ್ನು ತಯಾರಿಸಲು ಅಡಿಪಾಯ ಹಾಕುತ್ತಿದೆ.

ಆಫ್ರಿಕನ್ ಸಂಘಟನೆಯಲ್ಲಿ ಆಸಕ್ತಿ

ಡಾ। ಎನ್‌ಕ್ರೂಮಾರವರ ಸಾಧನೆಗಳ ಪೈಕಿ ಇನ್ನೊಂದು ಮುಖ್ಯ ವೈಶಿಷ್ಟ್ಯವೆಂದರೆ ಅವರು ತಮ್ಮ ಕಾರ್ಯಯೋಜನೆಗಳಲ್ಲಿ ಇತರ ಆಫ್ರಿಕನ್ ರಾಷ್ಟ್ರಗಳ ಸಹಕಾರವನ್ನೂ ಪಡೆಯುತ್ತಿರುತ್ತಿರುವುದು. ಗೋಲ್ಡ್ ಕೋಸ್ಟ್‌ನ ಪ್ರಧಾನ ಮಂತ್ರಿಯಾಗಿ ೧೯೫೩ರಲ್ಲಿ ಅವರು ಪ್ರಥಮ ಅಖಿಲ ಆಫ್ರಿಕಾ ಕಾರ್ಮಿಕರ ಸಮ್ಮೇಳನವೊಂದನ್ನು ಕರೆದು ಅದನ್ನು ಯಶಸ್ವೀಗೊಳಿಸಿದರು. ೧೯೫೮ರ ಮಾರ್ಚಿ ತಿಂಗಳಲ್ಲಿ ಆಕ್ರಾದಲ್ಲಿ ಹನ್ನೊಂದು ರಾಷ್ಟ್ರಗಳ ಒಂದು ಸಮ್ಮೇಳನ ನಡೆಯಲು ವ್ಯವಸ್ಥೆ ಮಾಡಿದರಲ್ಲದೆ ಸಹಾರಾಕ್ಕೆ ದಕ್ಷಿಣದಲ್ಲಿರುವ ಆಫ್ರಿಕನ್ ರಾಷ್ಟ್ರಗಳ ಪರಸ್ಪರ ಸಹಕಾರ ವ್ಯವಸ್ಥೆಗೂ ಒಂದು ಸಂಸ್ಥೆ ಸ್ಥಾಪಿಸಿರುವರು. ಏಪ್ರಿಲ್ ತಿಂಗಳಲ್ಲಿ ಆಕ್ರಾದಲ್ಲಿ ಆಫ್ರಿಕಾದ ಸ್ವತಂತ್ರ ರಾಷ್ಟ್ರಗಳ ಇನ್ನೊಂದು ಸಮ್ಮೇಳನ ಸಹ ನಡೆಯಿತು. ಈ ರಾಷ್ಟ್ರಗಳು ಎದುರಿಸುತ್ತಿರುವ ಏಕರೀತಿಯ ಸಮಸ್ಯೆಗಳನ್ನು ಪರಿಶೀಲಿಸಿ ಒಂದು ಇತ್ಯರ್ಥಕ್ಕೆ ಬರುವುದೇ ಈ ಸಮ್ಮೇಳನದ ಉದ್ದೇಶವಾಗಿದ್ದಿತು. ಸಮ್ಮೇಳನದ ತರುವಾಯ ಡಾ। ಎನ್‌ಕ್ರೂಮಾರವರು ಸಮ್ಮೇಳನದಲ್ಲಿ ಭಾಗವಹಿಸಿದ್ದ ರಾಷ್ಟ್ರಗಳಿಗೂ ಹೋಗಿ ಬಂದರು.

ಆಫ್ರಿಕಾದ ಈ ಭೇಟಿ ಮುಗಿಸಿಕೊಂಡು ಶ್ರೀಯುತರು ಉತ್ತರ ಅಮೇರಿಕಾದ ಪ್ರವಾಸವನ್ನು ಕೈಗೊಂಡು ಬಂದರು. ಒಟ್ಟಾವಾದಲ್ಲಿ ಕೆನಡಾದ ಪ್ರಧಾನಿ ಡೀಫೆನ್ ಬೇಕರ್ ಮತ್ತು ವಾಷಿಂಗ್‌ಟನ್‌ನಲ್ಲಿ ಅಧ್ಯಕ್ಷ ಐಸೆನ್ ಹೋವರ್‌ರವರ ಅತಿಥಿಗಳಾಗಿದ್ದು ವಿಶೇಷ ರಾಜಕೀಯ ಸಮಾಲೋಚನೆಗಳನ್ನು ನಡೆಸಿ ಬಂದರು.

೧೯೫೭ರಲ್ಲಿ ಡಾ। ಎನ್‌ಕ್ರೂಮಾರವರು ಈಜಿಪ್ಷಿಯನ್ ತರುಣಿ ಮಿಸ್ ಫಾತಿಮಾ ಹೆಲೆನ್ ರಿತ್ಸ್ಕರವರನ್ನು ಮದುವೆಯಾದರು, ಆಕೆ ಆಗ ಕೈರೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ.

ಆರೋಗ್ಯ ಪ್ರಪಂಚ

ಒಂದು ಜಾಗತಿಕ ರೋಗ—ಕೆನ್ಸರ್

ಅನಾದಿಕಾಲದಿಂದಲೂ ಇದ್ದ ಈ ರೋಗಕ್ಕೀಗ ತಡೆಯುಂಟುಮಾಡುವ ಸಲ್ಲಕ್ಷಣಗಳು ಗೋಚರವಾಗುತ್ತಿವೆ.

ಕೆನ್ಸರ್ ಈ ರೋಗದ ಹೆಸರು ಇತ್ತೀಚೆಗೆ ಎಲ್ಲ ಜನರಿಂದಲೂ ಕೇಳಿ ಬರುತ್ತದೆ. ಈ ರೋಗಕ್ಕೆ "ಕರ್ಕರೋಗ"ವೆಂದೂ ಬಹುಜನರು ಕರೆಯುತ್ತಾರೆ ಆದರೆ ಕೆನ್ಸರ್ ಎಂಬ ಹೆಸರು ಜಾಗ್ತಾ ಪ್ರಸಾರವಾಗಿದೆ. ಕೆಲವೇ ಜಾಗತಿಕ ಪ್ರಸಿದ್ಧ ರೋಗಗಳಲ್ಲಿ ಇದೂ ಒಂದು ಗಣನೀಯ ಸ್ಥಾನವನ್ನು ಪಡೆದುಕೊಂಡಿದೆ. ಆಂತೆಯೇ ಈ ಕೆನ್ಸರ್‌ದ ಬಗ್ಗೆ ಸದ್ಯ ನಾವು ವಿಶೇಷವಾಗಿ ಎಲ್ಲೆಡೆಯಲ್ಲೂ ಕೇಳುತ್ತೇವೆ ಮತ್ತು ವರ್ತಮಾನ ಪತ್ರಿಕೆಗಳಲ್ಲಿ ಓದುತ್ತೇವೆ. ಇದರಿಂದ ಅನೇಕ ದೊಡ್ಡ ದೊಡ್ಡ ಮುತ್ಸದ್ದಿಗಳು ಮರಣಕ್ಕೀಡಾದದ್ದು ಇತ್ತೀಚಿನ ತಲೆಮಾರಿಗೆ ಚೆನ್ನಾಗಿ ಗೊತ್ತಿದ್ದ ಸಂಗತಿಯಾಗಿದೆ. ಇದರ ಬಗ್ಗೆ ಸದ್ಯವೇ ನಾವು ಕೇಳಿದರೂ ಅದು ಅತಿ ಪುರಾತನಕಾಲದಿಂದಲೂ ಇಂದಿನ ತನಕ ಎಲ್ಲೆಡೆಯಲ್ಲೂ ಹಬ್ಬಿ ಕೊಳ್ಳುತ್ತ ಬಂದಿದೆ. ಕೆನ್ಸರ್ ರೋಗವು ಕೇವಲ ಮನುಷ್ಯರಿಗಷ್ಟೇ ಆಗುವದೆಂದಲ್ಲ; ಅದು ನಾಯಿ, ಬೆಕ್ಕು, ಕುದುರೆ, ಆನೆ, ಹುಲಿ, ದನಕರುಗಳು ಇತ್ಯಾದಿ ಪಶುಗಳಿಗೂ ಮತ್ತು ಪಕ್ಷಿಗಳಿಗೂ ಆಗುವ ಒಂದು ಮಹಾರೋಗವಾಗಿ ಪರಿಣಮಿಸಿದೆ! ಈ ಮಹಾರೋಗವು ಅನಾದಿಕಾಲದಿಂದಲೂ ಈ ಭೂಮಿಯ ಮೇಲಿದ್ದರೆ, ಅದರ ಬಗ್ಗೆ ಯೋಗ್ಯವಾದ ಔಷಧ ಯೋಜನೆಗಳು ಯಾಕೆ ಆಗಲಿಲ್ಲ? ಎಂಬ ಪ್ರಶ್ನೆಯು ಎಲ್ಲರಿಂದಲೂ ಆಕಸ್ಮಿಕವಾಗಿ ಉದ್ಭವಿಸುವದು. ಕೆನ್ಸರ್ ಸಂಬಂಧವಾಗಿ ಅನೇಕ ದಂತ ಕಥೆಗಳೂ ರೂಢಿಯಲ್ಲಿ ಪ್ರಚಲಿತ ಇವೆ. ಅಮೇರಿಕಾ ರಾಷ್ಟ್ರದಲ್ಲಿರುವ ಅತಿ ಪ್ರಖ್ಯಾತಿ ಪಡೆದ ನ್ಯೂಯಾರ್ಕ ಪಟ್ಟಣದಲ್ಲಿರುವ ಓರ್ವ ವ್ಯಕ್ತಿಯು ರಾತ್ರಿಗೆ ಮಲಗಿಕೊಳ್ಳುವಾಗ ಎರಡು ಕಪ್ಪು ಬಣ್ಣದ ಚಾದರುಗಳನ್ನು ಹೊದ್ದುಕೊಳ್ಳುತ್ತಿದ್ದನು. ಒಂದು ರಾತ್ರಿ ಹಿಗೆಯೇ ಮಲಗಿದಾಗ "ನೆಲದ ಮೇಲೆ ಮಲಗಿ ಕೊಂಡರೆ ಕೆನ್ಸರ್‌ದ ಭಾದೆಯಾಗುತ್ತದೆ" ಎಂದು ಅವನು ಹೇಳಿದನು. "ನಿದ್ದೆಯಲ್ಲಿದ್ದಾಗ ಕಪ್ಪು ಚಾದರಗಳು ಅವರನ್ನು ಕೆನ್ಸರ್‌ದಿಂದ ಸಂರಕ್ಷಿಸುವವು" ಆತನ ವಿಚಿತ್ರ ಕಲ್ಪನೆ ಆಯಿತು.

ಈ ಪ್ರಕಾರದ ಅನೇಕ ಭ್ರಾಮಕ ಕಲ್ಪನೆಗಳು ಹಲವು ಜನರ ಬಾಯಿಯೊಳಗಿಂದ ನಾವು ಸದಾ ಕೇಳುತ್ತೇವೆ. ನಮ್ಮ ಭಾರತದಲ್ಲಿ ಇಂಥದೊಂದು ವಿಚಿತ್ರ ತರಹದ ಮೂಢ ಕಲ್ಪನೆಯು ಇರುವದು. ಕೆನ್ಸರ್ ಎರಡು ಪ್ರಕಾರದ್ದು ಇರುತ್ತದೆ. ಒಂದು ಪುರುಷರಿಗೆ ಆಗುವ ಕೆನ್ಸರ್; ಇನ್ನೊಂದು ಸ್ತ್ರೀಯರಿಗೆ ಆಗುವ ಕೆನ್ಸರ್! ಆದರೆ ಈ ಉಭಯ ಕೆನ್ಸರ್‌ಗಳಲ್ಲಿ ಹೆಂಗಸರಿಗೆ ತಗಲುವ ಕೆನ್ಸರ್‌ವು ಅತಿಘೋರ ಸ್ವರೂಪದ್ದಿರುವದು. ಇದು ನಮ್ಮ ಭಾರತೀಯರ ಮೂಢ ನಂಬಿಕೆಯಾಗಿದೆ!

ಕೆನ್ಸರ್ ಈ ರೋಗದ ಮೇಲೆ ಅಂತಾರಾಷ್ಟ್ರೀಯ ನಿಯಂತ್ರಣವು ಇರಬೇಕೆಂಬ ಬೇಡಿಕೆಯು ಇಂದು ಪ್ರಚಲಿತವಾಗಿದೆ. ಜಾಗತಿಕ ಆರೋಗ್ಯ ಸಂಘದವರು ಈ ಸಾಹಸದ ಕೆಲಸವನ್ನು, "ಇಂಟರ ನೇಶನಲ್ ಯೂನಿಯನ್ ಅಗೇನ್ಸ್ಟ ಕೆನ್ಸರ್" ಎಂಬ ದೊಡ್ಡ ಸಂಸ್ಥೆಯ ಕಡೆಗೆ ಒಪ್ಪಿಸಿರುವರು. ಈ ಬೃಹತ್ ಸಂಸ್ಥೆಯ ಪ್ರಧಾನ ಕಾರ್ಯಾಲಯವು ಪ್ಯಾರೀಸ್ ನಗರದಲ್ಲಿರುವದು. ಕೆನ್ಸರ್ ರೋಗದ, ಆಳವಾಗಿ ಸೇರಿಕೊಂಡಿದ್ದ ಬೇರನ್ನು ಬುಡಸಹಿತ ಕಿತ್ತೊಗೆಯುವದಕ್ಕೆ ಪ್ರಪಂಚದ ಅನೇಕ ವೈದ್ಯಕೀಯ ಸಂಸ್ಥೆಗಳೂ ಅನೇಕ ವೈದ್ಯಕೀಯ ತಜ್ಞ ಕಾರ್ಯಕರ್ತರೂ ಮುಂದೆ ಬಂದಿದ್ದಾರೆ. ಅವರೆಲ್ಲರೂ ಒಕ್ಕಟ್ಟಾಗಿ ಏಕ ಸೂತ್ರದ ಬೃಹತ್ ಯೋಜನೆಯನ್ನು ಕಾರ್ಯರೂಪದಲ್ಲಿ ತರುತಲಿದ್ದಾರೆ. 'ಇಂಟರ್ ನೇಶನಲ್ ಕೆನ್ಸರ್ ಕಮಿಶನ್ಸ್" ದ ಮೇಲೆ ಬೇರೆ ಬೇರೆ ಭಾಗದೊಳಗಿನ, ಒಬ್ಬರು ಸಂಶೋಧನೆಯಗೋಸ್ಕರ; ಇನ್ನೊಬ್ಬರು ನಿಯಂತ್ರಣೆಯ ಬಗ್ಗೆ ಹೀಗೆ ಎರಡೆರಡು ತಜ್ಞರನ್ನು ನೇಮಿಸುವುದು ಪ್ರತಿಮೂರು ವರ್ಷಕೊಮ್ಮೆ ಜಗತ್ತಿನ ಭಿನ್ನ ಭಿನ್ನ ಪ್ರದೇಶಗಳಲ್ಲಿ "ಕೆನ್ಸರ್ ಪರಿಷತ್ತು" ವಗೈರೆ ಸಭೆ-ಸಮ್ಮೇಲನಗಳನ್ನು ಜರುಗಿಸುವದು ಇತ್ಯಾದಿ ಪ್ರಮುಖ ಕಾರ್ಯಗಳನ್ನು ಮೇಲಿನ ಸಂಸ್ಥೆಯು ಮಾಡಿಸುವವು. ಇನ್ನೂ ಅನೇಕ ಯೋಜನೆಗಳಿವೆ. ಅವೆಲ್ಲವುಗಳನ್ನು ಇಲ್ಲಿ ಹೇಳುವ ಅವಶ್ಯಕತೆಯಿಲ್ಲ.

ಟಾಟಾ ಮೆಮೋರಿಯಲ್ ಹೊ

(೧೨ನೇ ಪುಟ ನೋಡಿರಿ)

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No· 466 N/50 date 2-12-1950 of the Director of public Instruction Madras·

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ ವಾಶಿಂಗ್‌ಟನ್

ಲೇಖಕಿ: ಜಿನೇ ಇಯೋಟನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ. ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ;

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ, ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಅಭಿಪ್ರಾಯ

ವೈದ್ಯ ವೃತ್ತಿಗೆ ಯಾರು ಇಳಿಯಬೇಕು?

ಕ್ರಮಬದ್ಧ ಅಭ್ಯಾಸ ಪಡೆಯದವರು ಎಂದಿಗೂ ವೈದ್ಯವೃತ್ತಿಗೆ ಇಳಿಯಬಾರದು; ಅಂಚೆ ಮೂಲಕ ವೈದ್ಯಕೀಯ ಶಿಕ್ಷಣ ಈಯುವುದನ್ನು ಸರಕಾರ ತಡೆಗಟ್ಟಬೇಕು; ಇಲ್ಲವಾದರೆ, ಜನಜೀವನಕ್ಕೆ ಭದ್ರತೆಯಿಲ್ಲ!

ಜನತೆಯ ಆಹಾರದ ಪೂರೈಕೆ ಮತ್ತು ಆರೋಗ್ಯ ಸಂರಕ್ಷಣೆ—ಇವೆರಡು ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಅತಿ ಅಗತ್ಯದ ಕಾರ್ಯಗಳು. ಸ್ವಾತಂತ್ರ್ಯ ನಂತರ ನಾವು ಈ ದೆಸೆಯಲ್ಲಿ ಹೆಮ್ಮೆಪಟ್ಟುಕೊಳ್ಳುವಷ್ಟು ಅಲ್ಲವಾದರೂ ಸಾಕಷ್ಟು ಪ್ರಗತಿಯನ್ನು ಪಡೆದಿರುವೆವೆಂಬುದು ಸಂತೋಷದ ವಿಚಾರವೇ ಸರಿ.

ಆಧುನಿಕ ವೈದ್ಯ ಶಾಸ್ತ್ರದಲ್ಲಿ ಬಲವಾದ ನಂಬಿಕೆಯುಳ್ಳ ನಮ್ಮ ಸರಕಾರ ಮತ್ತು ಜನತೆ, ವೈದ್ಯಕೀಯ ಕಾಲೇಜುಗಳನ್ನು ಹೆಚ್ಚಿಸುವುದರ ಮೂಲಕ ಜನರಿಗೆ ಆರೋಗ್ಯ ಭಾಗ್ಯವನ್ನು ನೀಡುವುದು ಸಾಧ್ಯ-ಎಂಬುದನ್ನು ತಿಳಿದುಕೊಂಡಿದೆ. ಎಂತಲೇ ಸಾಧ್ಯವಿದ್ದಲ್ಲೆಲ್ಲಾ ಇಂತಹ ವೈದ್ಯಕೀಯ ಕಾಲೇಜುಗಳನ್ನು ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಸ್ಥಾಪಿಸುವುದಕ್ಕೆ ಸರಕಾರ ಪ್ರಯತ್ನಿಸುತ್ತಿದೆ. ನಮ್ಮಲ್ಲಿ ಇಂದು ಯಂ. ಬಿ. ಬಿ. ಯಸ್. ಪದವಿ ಕೊಡುವ ಇಂಗ್ಲಿಷ್ ಔಷಧ ಕಲಿಸುವ ಕಾಲೇಜುಗಳು ಮಾತ್ರವಲ್ಲದೆ ಆಯುರ್ವೇದದ ಅಭ್ಯಾಸ ಕೊಡುವ ಅದೆಷ್ಟೋ ಸಂಸ್ಥೆಗಳೂ, ಶಾಲೆಗಳೂ ಆಗಿಂದಾಗ್ಗೆ ತಲೆಯೆತ್ತುತ್ತಿವೆ. ಇವುಗಳಲ್ಲೆಲ್ಲಾ ಸಂಬಂಧಪಟ್ಟ ವೈದ್ಯ ಶಾಸ್ತ್ರದ ಜ್ಞಾನ ವಿದ್ಯಾರ್ಥಿಗಳಿಗೆ ಸಾಕಷ್ಟು ಸಿಗುತ್ತಿದೆ ಎಂದು ನಂಬಲಾಗಿದೆ. ಕಾರಣ ಅಲ್ಲಿ ಒಂದು ನಿಶ್ಚಿತ ಕಾಲದ ತನಕ ಶಿಸ್ತಿನ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ಪಡೆಯಬೇಕಾಗಿದೆ.

ವೈದ್ಯ ಶಾಸ್ತ್ರದಲ್ಲಿ ಸ್ವಲ್ಪವೇ ಸಮಯದ ಕಲಿಯುವಿಕೆಯಿಂದ-ಅದೂ ಅಂಚೆ ಮೂಲಕ ಸಾಕಷ್ಟು ಅನುಭವ(?) ಕೊಟ್ಟು ಹೊಸ ಹೊಸ ಡಿಗ್ರಿಗಳನ್ನೂ ನೀಡುವ ಸಂಸ್ಥೆಗಳು ಈಗ ಹೆಚ್ಚು ಪ್ರಚಾರಕ್ಕೆ ಬರುತ್ತಿವೆ. ಸಾಮಾನ್ಯ ಜನತೆಗೂ ಸುಲಭದಲ್ಲೇ ವೈದ್ಯ ಶಾಸ್ತ್ರದ ಮೂಲಭೂತ ತತ್ವಗಳನ್ನು ತಿಳಿಸುವುದು ಈ ಪ್ರವೃತ್ತಿಯ ಉದ್ದೇಶವಿರಬಹುದಾದರೂ ಇದರಿಂದ ಅನಿವಾರ್ಯವಾದ ಕೆಲವೊಂದು ದುಷ್ಪರಿಣಾಮಗಳು ತಲೆದೋರದೆ ಇರಲಾರವೆಂಬುದು ಸ್ಪಷ್ಟ.

ವೈದ್ಯ ಶಾಸ್ತ್ರವು (ಅಂತೆಯೇ ಇತರ Profecional courseಗಳು ಕೂಡಾ) ಬರೇ ಪುಸ್ತಕವನ್ನು ಓದಿ ಕಲಿಯಬಹುದಾದ ವಿದ್ಯೆಯಲ್ಲ. ಅದರಲ್ಲಿ ಪ್ರಯೋಗಕ್ಕೇನೇ ಪ್ರಾಮುಖ್ಯ. ಒಂದೆರಡು ವರ್ಷಗಳಾದರೂ ರೋಗಿಗಳ ಕೂಡೆ ಒಡಾಡಿ ರೋಗ ಪರೀಕ್ಷೆಯ ವಿಧಾನ ಮತ್ತು ಚಿಕಿತ್ಸಾಕ್ರಮಗಳನ್ನು ಸರಿಯಾಗಿ ಕಲಿಯದ ಆ ವಿದ್ಯಾಭ್ಯಾಸವು ಎಂದಿಗೂ ಸಂಪೂರ್ಣವಾಗಲಾರದು. ಕ್ರಮೇಣವಾಗಿ 'ನೋರ್ಮಲ್' ಆಗಿರುವ ಶರೀರದ ರಚನೆ ಮತ್ತು 'ಎಬ್‌ನೋರ್ಮಲ್' (Abnormal) ಪರಿಸ್ಥಿತಿಯನ್ನು (=ರೋಗವನ್ನು) ಅರ್ಥಮಾಡಿಕೊಳ್ಳುವುದು ಸಾಧ್ಯವಾಗಲಾರದು. ನೋರ್ಮಲ್ ಪರಿಸ್ಥಿತಿಯನ್ನು ತಿಳಿಯಬೇಕಾದರೆ ಇತರ ಪ್ರಾಣಿಗಳ ಅಂಗಾಂಗಗಳನ್ನು ಉಪಯೋಗಿಸಿ ಮಾಡಬಹುದಾದ ಪ್ರಯೋಗಗಳು ಮಾತ್ರವಲ್ಲದೆ ಸತ್ತ ಮನುಷ್ಯ ದೇಹವನ್ನು ಕೊಯ್ದು ನೋಡಿ ಪಡೆಯುವ ಅನುಭವವೂ ಅಗತ್ಯ. ಅದುದರಿಂದಲೇ ವೈದ್ಯ ಶಾಸ್ತ್ರವನ್ನು ಆರು ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಕಲಿತು ಪೂರೈಸಲು ಸಾಧ್ಯವಿಲ್ಲ. ಅದರ ತಲೆ ಬುಡ ತಿಳಿಯಬೇಕಾದರೆ ಕನಿಷ್ಠ ಪಕ್ಷ ೪-೫ ವರ್ಷಗಳ ಕ್ರಮಬದ್ಧ ಅಭ್ಯಾಸ ಬೇಕೇ ಬೇಕು.

ಅಂಚೆಯ ಮೂಲಕ ರೋಗಿಗಳ ದೀರ್ಘ ಸಂಪರ್ಕವಿಲ್ಲದೆ ಪಡೆಯುವ ವಿದ್ಯೆಯಿಂದ ವೈದ್ಯಶಾಸ್ತ್ರದ ಕೆಲವೊಂದು ತತ್ವಗಳು ತಿಳಿಯಬಹುದೋ ಏನೋ—ಆದರೆ ಅವರಿಂದ ಪ್ರಾಯೋಗಿಕ ಪ್ರಯೋಜನವಾಗಲಾರದು. ಕೆಲವೊಮ್ಮೆ ಇಂತಹ ಅಪೂರ್ಣ ಅನುಭವದಿಂದ ಹಾನಿಯೂ ಸಂಭವಿಸಬಹುದು. ಈಜು ಕಲಿಯುವವನು ನೇರವಾಗಿ ನೀರಿಗೇ ಇಳಿಯಬೇಕೇ ಹೊರತು ನೆಲದಲ್ಲಿ ಕೈಕಾಲು ಬಡೆದರೆ ಉಪಯೋಗವಿಲ್ಲ.

ವೈದ್ಯ ಶಾಸ್ತ್ರವು ಒಂದು ಖಡ್ಗವಿದ್ದಂತೆ. ಅದರಿಂದ ಎಷ್ಟು ಬೇಗ ಒಳ್ಳೆಯದು ಆಗುವುದು ಸಾಧ್ಯವಿದೆಯೋ ಅಷ್ಟೇ ಬೇಗ ಕೆಟ್ಟದೂ ಆಗಬಹುದು— ಉಪಯೋಗ ಸರಿಯಾಗದಿದ್ದರೆ! ಉದಾಹರಣೆಗೆ 'ಪೆನ್ಸಿಲಿನ್' ಇಂಜೆಕ್ಷನ್ ಕೊಡುವಾಗ ಎಷ್ಟು ಜಾಗರೂಕರಾಗಿದ್ದರೂ ಸಾಲದೆಂದು ಅತ್ಯಂತ ಅನುಭವಶಾಲಿಗಳಾದ ವೈದ್ಯ ಶಾಸ್ತ್ರಜ್ಞರೇ ಅಭಿಪ್ರಾಯಪಡುತ್ತಾರೆ. ಒಂದೆರಡು ತಿಂಗಳುಗಳ ಹಿಂದೆ ಯಂ. ಪಿ ಯವರೊಬ್ಬರು ಪೆನ್ಸಿಲಿನ ಪರಿಣಾಮದಿಂದ ಮೃತರಾದರೆಂಬ ವಾರ್ತೆಯನ್ನು ಓದಿದ್ದೇವೆ. ಯೋಗ್ಯತೆ ಪಡೆದ ಡಾಕ್ಟರರಿಂದಲೇ ಇಂತಹ ಪ್ರಮಾದ ಸಂಭವಿಸಬಹುದಾದರೆ ಇನ್ನು ಸಾಮಾನ್ಯ ವರ್ಗದ ವೈದ್ಯರ ಪಾಡೇನು.

ಹಣದ ಮುಂದೆ ಎಲ್ಲಾ ಆದರ್ಶಗಳೂ ತೃಣಸಮಾನವಾಗುತ್ತವೆ. ಪುಸ್ತಕ ಕೋರ್ಸ್ (ಅಥವಾ ಇತರ ಸಾಮಾನ್ಯ ಕೋರ್ಸ್) ಪಡೆದು ವಿಚಿತ್ರ ಡಿಗ್ರಿಗಳನ್ನು ಹಾಕಿಕೊಂಡು 'ಡಿಸ್ಪೆನ್ಸರಿ' ತೆಗೆಯುವ ಹವ್ಯಾಸ ಈಗ ಹೆಚ್ಚುತ್ತಿವೆ. ಇವರು ಕೊಡುವ ಮದ್ದು ಏನು ಯಾಕೆ ಎಂಬುದರ ಸಂಪೂರ್ಣ ಜ್ಞಾನವೇ ಇವರಿಗಿರುವುದಿಲ್ಲ. ಆದರೂ ಅರಿಯದ ಜನರು ಮರುಳಾಗಿ ಮೋಸಹೋಗುತ್ತಾರೆ. ಇಂತಹ ವೈದ್ಯರು ಯಾವ ಇಂಜೆಕ್ಷನ್ ಬೇಕಾದರೂ ಕೊಡುತ್ತಾರೆ, ಏನು ಚಿಕಿತ್ಸೆ ಬೇಕಾದರೂ ಮಾಡುತ್ತಾರೆ. ಆದರೆ ಪ್ರಾಣವನ್ನು ಮಾತ್ರ ಗ್ರಹಿಸುವುದಿಲ್ಲ.

ವೈದ್ಯಶಾಸ್ತ್ರದ ಮೂಲ ತತ್ವಗಳನ್ನು ಪ್ರತಿಯೊಬ್ಬರೂ ಅರಿತಿರಬೇಕೆಂಬುದೇನೋ ನಿಜ. ಆದರೆ ಆದರಲ್ಲಿ ಪೂರ್ಣ ಅನುಭವವಿಲ್ಲದವರು ಹಣದ ದುರಾಶೆಯಿಂದ ಆ ವೃತ್ತಿಗೆ ಇಳಿಯುವುದು ಮಾತ್ರ ಯೋಗ್ಯವಲ್ಲ. ಅವರೇನೋ ಅದನ್ನು ತಮ್ಮ ಮಟ್ಟಿಗೆ ಪ್ರಥಮ ಚಿಕಿತ್ಸೆಯಂತೆ ಉಪಯೋಗಿಸಿಕೊಳ್ಳಲೂ ಬಹುದ; ಹೊರತು ಅವನ್ನೇ ವೃತ್ತಿಯಾಗಿಟ್ಟುಕೊಂಡರೆ ಅದರಿಂದ ಬಹು ದೊಡ್ಡ ಅನರ್ಥಗಳು ಸಂಭವಿಸುವುದಕ್ಕೆ ಸಾಧ್ಯವಿದೆ. ಆದುದರಿಂದ ಸರಕಾರವು ಇಂಥವರಿಗೆ ಅಸ್ಪದವೀಯಬಾರದು. ಜನರು ಚಿಕಿತ್ಸೆ ಮಾಡಿಸುವುದಿದ್ದರೆ ಒಳ್ಳೆಯ ನುರಿತ ವೈದ್ಯರಿಂದ ಚಿಕಿತ್ಸೆ ಮಾಡಿಸಬೇಕು; ಇಲ್ಲದಿದ್ದರೆ ಚಿಕಿತ್ಸೆ ಮಾಡಿಸದಿರುವುದೇ ಒಳ್ಳೆಯದು. ರಾಮಧ್ಯಾನಮಾಡುತ್ತ ಮನೆಯಲ್ಲಿ ಕುಳಿತರೂ ಕೆಲವೊಮ್ಮೆ ರೋಗ ಗುಣವಾಗಬಹುದು; ಆ ವಿಚಾರ ಬೇರೆ!

—ರಮಾನಂದ ಬನಾರಿ,

ದೇಲಂಪಾಡಿ.

ಕಥಾವಿಹಾರ

(೨ನೇ ಪುಟದಿಂದ)

ಆ ಬಗ್ಗೆ ನನ್ನ ಕೊನೆಯ ಅಸ್ವಸ್ಥದ ದಿನಗಳಲ್ಲಿ ಔಷಧೋಪಚಾರ ಮಾಡಿದ ವೈದ್ಯರ ಸರ್ಟಿಫಿಕೇಟಿಗಾಗಿ ಅವಳು ಅವರೆಡೆಗೆ ಹೋದಾಗ-ಆ ವೈದ್ಯ-ಇವ್ನೂ ಯೌವನೆಯಾದ ಆವಳೆಡೆಗೆ ಬೀರಿದ ಆ ಕಾಮಪೂರಿತ ದೃಷ್ಟಿ—ಅಯ್ಯೋ ಸಮಾಜವೇ-ನಿನ್ನ ಹಿತಕ್ಕಾಗಿ ಹೆಣಗಾಡಿದ ಓರ್ವ ಸುಪ್ರಸಿದ್ಧ ಸಾಹಿತಿಯ ಬಗೆಗೆ ನೀನಿಟ್ಟ ಗೌರವ ಇದೇನೇ? ನನ್ನ ಪತ್ನಿ ನನ್ನೆಡೆಗೆ ಬರುವುದರೊಳಗಾಗಿ ಇಂತಹ-ಇದಕ್ಕಿಂತ ಹೆಚ್ಚಿನ ಇನ್ನೆಷ್ಟು ಪ್ರಸಂಗಗಳನ್ನೆದುರಿಸಬೇಕಾದೀತೋ ಏನೋ.

ಅದೋ-ನನಗೆ ನನ್ನ ವಿಪತ್ತಿನಲ್ಲಿ ಸಾಲಕೊಟ್ಟು ಪ್ರತ್ಯಕಟ್ಟಿಕೊಂಡ ಮಹಾಶಯ ಸಾಲ ತೀರಿಸದಿದ್ದುದರಿಂದ ನನ್ನ ಮನೆಯನ್ನೇ ಹರಾಜಿಗೆ ತಂದಿದ್ದಾನೆ. ಇನ್ನೇನು-ಎಂಟು ದಿನಗಳಲ್ಲಿ ನನ್ನವರು ಬೀದಿಯ ಭಿಕಾರಿಗಳು; ನನ್ನ ಮನೆ ಚಪ್ಪಲಿನ ಅಂಗಡಿಯೋ, ಮದ್ಯದಂಗಡಿಯೋ ಆಗಿ ಮಾರ್ಪಡಬಹುದು ಇನ್ನೆರಡು ವರುಷಗಳೊಳಗೆ ನಾನು ಹಿಂದೆ ಆ ಲೋಕದಲ್ಲಿ ಜೀವಿಸಿದ್ದೆನೆಂಬುದನ್ನೂ ಜನ ಮರೆಯಬಹುದು. ನಾನು ಸತ್ತ ಮರುದಿನ ನನ್ನ ಮೃತ್ಯುವಿನ ಬಗೆಗೆ ಸಂತಾಪ ಸೂಚಿಸಿ, ನನ್ನ ಆತ್ಮಕ್ಕೆ ಶಾಂತಿ ಕೋರಲು ಅದೆಷ್ಟೋ ಸಭೆಗಳು ನಡೆದುವು. ಹುಚ್ಚು ಜನರು—ಅದಲ್ಲದೇ ಇನ್ನೇನು ತಾನೇ ಮಾಡಿಯಾರು! ನನ್ನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ನನ್ನ ಹೆಂಡಿರು ಮಕ್ಕಳಾದರೂ ಸುಖವಾಗಿ ಜೀವಿಸಬೇಕೆಂಬುದನ್ನೊ ಅರಿಯದ ಅವರು ಹುಚ್ಚರಲ್ಲದೇ ಇನ್ನೇನು? ಅದೆಷ್ಟು ಬೇಗ ಮರೆತು-ಜನತೆ ನನ್ನ ಸೇವೆಯನ್ನು! ಅವರ ಕೃತಘ್ನತೆಯ ಕುರಿತು ಬರೆಯಲು ಅಥವಾ ಆಡಲು ನಾನು ಆ ಲೋಕದಲ್ಲಿಲ್ಲನೆಂಬುದೇ ಅವರಿಗಿರುವ ಸಮಾಧಾನವೋ ಏನೋ

ಆದರೂ ಒಂದಿದೆ...ಯೋಗ್ಯತೆಯುಳ್ಳವರನ್ನು ಭಾರತ ಮರೆತುದಿಲ್ಲ-ಅವರನ್ನು ಪಾಳು ಮಾಡಿಸುದಿಲ್ಲ. ಎಂದಾದರೂ ಜನತೆ ಜಾಗ್ರತವಾಗಿಯೇ ತೀರುತ್ತದೆ. ಆದರದು ಸಂದರ್ಭಯುಕ್ತವಲ್ಲ ಕೆಟ್ಟ ತಯಾರಾಗುವುದರೊಳಗಾಗಿ ಪಟ್ಟಣ ಸೂರೆಯಾಗಿರುತ್ತದೆ.

—"ಜನ್ನ", ಮರವಂತೆ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. ೨-೫೦ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.





NAVAYUGA
REGD. NO. M. 3619

UDIPI, THURSDAY
21-1-1960

LICENSE NO. 31
Licensed to Post without Prepayment

ಆರೋಗ್ಯ ಪ್ರಪಂಚ

(೧ನೇ ಪುಟದಿಂದ)

ಸ್ಪೀಟಲ್—ನಮ್ಮ ಭಾರತದಲ್ಲಿ ಇಂಡಿಯನ್ ಕೆನ್ಸರ್ ಸೊಸೈಟಿಯ ಸ್ಥಾಪನೆಯು ಕಳೆದ ಸನ್ ೧೯೫೫ರಲ್ಲಿ ಆಯಿತು. ಈ ಸಂಸ್ಥೆಯ ಮುಂದೆ, ಕೆನ್ಸರ್ ಬಗ್ಗೆ ನಮ್ಮ ದೇಶದಲ್ಲಿದ್ದ ಗೈರಸಮಜೂತಿ (ಮೂಢನಂಬಿಕೆ ಇಲ್ಲವೇ ತಪ್ಪುಕಲ್ಪನೆ) ಯನ್ನು ದೂರಗೊಳಿಸುವದು ಹಾಗೂ ರೋಗಪ್ರತಿಬಂಧಕ ಉಪಾಯ ಯೋಜನೆಗಳನ್ನು ಕೈಕೊಳ್ಳುವದು ಹೀಗೆರಡು ಮುಖ್ಯ ಕಾರ್ಯಗಳಾಗಿವೆ. ಬೇರೆ ರಾಷ್ಟ್ರಗಳಂತೆ ಇಲ್ಲಿಯೂ ಕೆನ್ಸರ್ ಸಂಬಂಧವಾಗಿ ಮಾಹಿತಿ ಪ್ರಚಾರಮಾಡಿ, ಕೆನ್ಸರ್‌ದ ಬಗ್ಗೆ ಪ್ರತ್ಯೇಕ ಸ್ಥಳಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವದರ ಬಗ್ಗೆ ಜನತೆಯು ಆಗ್ರಹಪೂರ್ವಕವಾಗಿ ಬೇಡಿಕೊಂಡಿರುವದು.

ಸನ್ ೧೯೪೧ರ ವರೆಗೆ ಭಾರತದಲ್ಲಿ ಕೆನ್ಸರ್ ಬಗ್ಗೆ ಸರ್ವಸಾಧನೆಗಳಿಂದ ಸುಸಜ್ಜಿತ ಇದ್ದ ಖಾತೆಗಳನ್ನು ಒಂದೂ ಹಾಸ್ಪೀಟಲ್‌ದಲ್ಲಿ ಜೋಡಿಸಿಲ್ಲವಾಗಿದ್ದರು. ಆದರೆ ಸರ್ ಡೋರಾಬಜಿ ಟಾಟಾ ಟ್ರಸ್ಟಿನವರು, ಅದರ ಬಗ್ಗೆ "ಟಾಟಾ ಮೆಮೋರಿಯಲ್ ಹೊಸ್ಪೀಟಲ್ಲಿನ ಸ್ಥಾಪನೆಯನ್ನು ಮಾಡುವದರಲ್ಲಿ ನಿರ್ಧರಿಸಿದರು. ಅಂದಿನಿಂದ ಇಂದಿನವರೆಗೆ ಅನೇಕ ಕೋಟಿಗಟ್ಟಲೆ ರೂಗಳನ್ನು ಈ ಜನಹಿತ ಕಾರ್ಯಕ್ಕೋಸ್ಕರ ವೆಚ್ಚಮಾಡಿರುವರು. ಈ ರೀತಿಯ ಅನೇಕ ಹಾಸ್ಪೀಟಲ್ಲಿನ ಅಭಾವು ಇಂದು ನಮ್ಮ ಭಾರತದೇಶಕ್ಕೆ ತುಂಬಾ ಇದೆ ಸಧ್ಯ ಮುಂಬಯಿಯಲ್ಲಿರುವಂತೆ ಮದ್ರಾಸ ಮತ್ತು ಕಲಕತ್ತಾ ಪಟ್ಟಣಗಳಲ್ಲಿಯೂ ಕೆನ್ಸರ್‌ದ ಮೇಲೆ ಔಷಧೋಪಚಾರಮಾಡುವ ಹಾಸ್ಪೀಟಲ್‌ಗಳು ಉಪಲಬ್ಧವಾಗಿರುವವು.

ಕೆನ್ಸರ್ ರೋಗವನ್ನು ಗುಣಪಡಿಸುವದು ಅಸಾಧ್ಯ, ಎಂದು ಅನೇಕ ಜನರಲ್ಲಿ ದೃಢವಾಗಿ ಅಳವಡಿಸಿಕೊಂಡಿದ್ದ ಮೂಢಭಾವನೆಯನ್ನು ಜಗತ್‌ವಿಖ್ಯಾತ ಕೆನ್ಸರ್ ತಜ್ಞರಾದ ಕೈ. ಪ್ರೊ ಇವ್ಹಿಂಗ್ ಇವರು ಇಂದು ಈ ರೋಗವನ್ನು ಗುಣಪಡಿಸುವದು ಸಾಧ್ಯವಿದೆಯೆಂದು ಪ್ರಪಂಚದ ಮಾನವಕೋಟಿಗೆ ತೋರಿಸಿಕೊಟ್ಟಿದ್ದಾರೆ. ಅವರ ಈ ಅನುಪಮ ಸಾಹಸಕೃತಿಯೇ ಮಹಾರೋಗ ಕೆನ್ಸರ್‌ದ ಬೇರನ್ನು ಕಿತ್ತೊಗೆಯುವದರಲ್ಲಿ ಸಹಕಾರಿಯಾಯಿತು. ವಿಶ್ವಕ್ಕೆ ನೀಡಿದ ಅವರ ಈ ದೇಣಿಗೆಯ ಬಗ್ಗೆ ಪ್ರೊ. ಇವ್ಹಿಂಗ್‌ರನ್ನು ಅದೆಷ್ಟು ಪ್ರಣಾಮಗಳನ್ನು ಮಾನವರು ಸಲ್ಲಿಸಿದರೂ ಕಡಿಮೆಯೇ! ಅಷ್ಟು ಬಹುಮೂಲ್ಯದ ಅವರ ಕಾರ್ಯವಾಗಿದೆ.

ಸಂಪೂರ್ಣ ಅಭ್ಯಾಸ ಬೇಕು— "ಎಕ್ಸರೇ" ಮತ್ತು "ರೇಡಿಯಮ್" ಇವುಗಳ ಪರಿಣಾಮದ ಮಾಹಿತಿ ಪೂರ್ವದಲ್ಲಿದ್ದರೆ, ಅದರ ಬಗ್ಗೆ ಅವಶ್ಯಬೇಕಾಗುವದು. ಪೂರ್ವಕಾಲದಲ್ಲಿ ಯಾವ ಡಾಕ್ಟರರು ಹಣದ ಬಲದಿಂದ ರೇಡಿಯಮ್ ಮತ್ತು ಎಕ್ಸರೇ ಥೇರಪೀ ಪ್ಲೆಂಟ್ ತೆಗೆದುಕೊಳ್ಳುತ್ತಿದ್ದರೋ, ಅವರನ್ನು "ಕೆನ್ಸರ್ ತಜ್ಞ"ರೆಂದು ಕರೆಯುತ್ತಿದ್ದರು. ಆದರೆ ಇಂದು ಆ ಸ್ಥಿತಿ ಸ್ಥಿರವಾಗಿ ಬಾಳಲಿಲ್ಲ. ಈ ರೋಗದ "ಸಂಪೂರ್ಣ ಅಭ್ಯಾಸ" ಇದ್ದವರಿಗೇ ತಜ್ಞರೆಂದು ತಿಳಿದುಕೊಳ್ಳುತ್ತಾರೆ.

ಸನ್ ೧೯೩೯ರಿಂದ ೧೯೪೫ರ ಕಾಲಾವಧಿಯಲ್ಲಿ ಈ ಕೆನ್ಸರ್ ರೋಗವು, ದ್ವಿತೀಯ ಜಾಗತಿಕ ಮಹಾ ಯುದ್ಧದಲ್ಲಿ ಮಡಿದ ಸೈನಿಕರಿಗಿಂತ, ಅಧಿಕ ಜನರನ್ನು ಬಲಿತೆಗೆದುಕೊಂಡು ಜಾಗತಿಕ ಹೊಸ ವಿಕ್ರಮವನ್ನು ಸ್ಥಾಪಿಸಿದೆ. ಆದರೆ ಇಂದು ಈ ರೋಗದ ಬಗ್ಗೆ ತುಂಬಾ ಸಂಸೋಧನೆಯು ಪ್ರಪಂಚದಾದ್ಯಂತ ಚಾಲೂಸ್ಥಿತಿಯಲ್ಲಿರುವದು. ಅಂತೆಯೇ "ಕೆನ್ಸರ್ ಮಹಾ ರೋಗವನ್ನು ಗುಣಪಡಿಸುವದು ಸಾಧ್ಯವಿದೆ" ಎಂದ. ಸಮಗ್ರ ಮಾನವಕೋಟಿಯು ಎದೆತಟ್ಟಿ ಹೇಳುವದು. ಇದರಿಂದ ಕೆನ್ಸರ್‌ದ ಬಗ್ಗೆ ಜನರಲ್ಲಿದ್ದ ಅಂದಿನ ಭಯವು ಕ್ರಮೇಣ ಇಳಿಕೆಯ ರೂಪಾಂತರ ಹೊಂದಿತು. ಈ ಕೆನ್ಸರ್ ರೋಗದ ಮೇಲೆ ಪರಿಣಾಮ ಮಾಡುವಗು ಶಕ್ಯವಾಗುವದು ಎಂದು ೧೦೦ಕ್ಕಿಂತ ಅಧಿಕ ಔಷಧಗಳು ಉಪಲಬ್ಧವಾಗಿವೆ.

ವಿದ್ಯಾರ್ಥಿಯರ ಮೇಲೆ ಬಂಧನ— ಮೆಡಿಕಲ್ ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳಿಗೋಸ್ಕರ ನಮ್ಮ ವಿದ್ಯಾಪೀಠಗಳು ಕೆನ್ಸರ್ ಸಂಬಂಧವಾಗಿ ಮಾಹಿತಿಯನ್ನು ಕೊಡುವದರಲ್ಲಿ ಕೆಲವು ವಾರಗಳನ್ನು ಕಾಯ್ದಿಡಬೇಕು. ಡಾಕ್ಟರ್‌ಪದವೀ ದೊರಕುವ ಪೂರ್ವದಲ್ಲಿ ಕೆನ್ಸರ್‌ದ ಬಗ್ಗೆ ಜ್ಞಾನವಿದ್ದವರಿಗೆ, ಅಮೇರಿಕೆಯಲ್ಲಿ ಮತ್ತು ಯುರೋಪದಲ್ಲಿ ಒಂದು ಆವಶ್ಯಕ ಮಹತ್ವವನ್ನು ಕೊಡುವರು.

ಕಾರಖಾನೆಯೊಳಗಿನ ಕೆಲಸಗಾರರಿಗೆ ಕೆಲವು ದ್ರವ್ಯಗಳಮೂಲಕ ಆಗುವ ಕೆನ್ಸರ್ ಬಾಧೆ ತಗಲಿದರೆ, ಇತರ ಕೆನ್ಸರ್‌ದ ಮೇಲೆಯೂ ಪ್ರತಿಬಂಧಕ ಮಾಡುವ ಉಪಾಯವು ಇನ್ನೂ ಆಗಲಿಲ್ಲ; ಇದನ್ನು ಸ್ಪಷ್ಟಗೊಳಿಸಬೇಕು. ಇದರಬಗ್ಗೆ ಮುಂಬಯಿಯಲ್ಲಿ (ಆರ್ಥಿಕ ಸಹಾಯದ ಮದ್ದತ್ತು ಮಾಡಿದರೆ) ಒಂದು ಕೇಂದ್ರ ಸ್ಥಾಪನೆ ಮಾಡುವ ಬಗ್ಗೆ ಟಾಟಾ ಟ್ರಸ್ಟಿನವರ ಯೋಜನೆಯಿದೆಯೆಂದು ಅಧಿಕೃತವಾಗಿ ತಿಳಿದು ಬಂದಿದೆ

ಮುಂಬೈ ಮತ್ತು ಕಲಕತ್ತಾ ಈ ಪಟ್ಟಣಗಳಲ್ಲಿ "ಟಾಟಾ ಮೆಮೋರಿಯಲ್ ಕೇಂದ್ರಗಳನ್ನು "ಕೇಂದ್ರ ಸರಕಾರದ ಆರೋಗ್ಯ ಇಲಾಖೆಯವರು ತಮ್ಮ ಸ್ವಾಧೀನದಲ್ಲಿ ವಹಿಸಿಕೊಂಡರೆ, ದೇಶದಲ್ಲಿ "ಕೆನ್ಸರ್ ಹೊಸ್ಪೀಟಲ್"ಗಳ ಸಂಖ್ಯೆಯು ಏರಿಕೆ ಹೊಂದುವದರಲ್ಲೂ "ಆಯ್ ಸೋಟೋಪ್" ಕೇಂದ್ರದ ಬಗ್ಗೆ ಇದ್ದ ಅಭಾವವೂ ದೂರವಾಗುವದರಲ್ಲಿ ತಿಳಿ ಮಾತ್ರವೂ ಸಂದೇಹವಿಲ್ಲ [ಹೀಗೆ ಆಶಾದಾಯಕ ವಿಚಾರವನ್ನು ವ್ಯಕ್ತಪಡಿಸುವದರಲ್ಲಿ ಅಡ್ಡಿಯಿಲ್ಲ.

—ರಾಮಕೃಷ್ಣ, ಎ. ಪೈ.
ಕಾಕರಮಠ, ಅಂಕೋಲಾ (ಎನ್ಕೆ)

"ಭಾರತ, ೧೯೫೮" ಪ್ರದರ್ಶನದ ನೋಟ. ಇದು ೧೨೩ ಎಕ್ರೆಗಳನ್ನು ವಿಸ್ತಾರದಲ್ಲಿ ಹರಡಿಕೊಂಡಿತ್ತು.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಪ್ರೇಮ ಭುವನ	3	0
7	ಪಾಠಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೇ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜವಿಾನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮಸಂಕಟ	0	6
39	ಮದುವೆ ಸೀರೆ	1	0

ರೂ38-6-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಲೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

1960

- ಹೊಸ ವರುಷ ಸಂಪತ್ತು ಸಮೃದ್ಧಿಗಳನ್ನು ತರಲಿ;
- ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕಿನ ನೆನಪಿರಲಿ.

— ಸಿಂಡಿಕೇಟ್ ಬೇಂಕ್.

THE CANARA INDUSTRIAL &
BANKING SYNDICATE LTD.
UDIPI.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

Edited, Printed & Published by K. H. Shetty, at the Navayuga Press, Udipi, S. India.

AVAYUGA
ರಾಜ್ಯ ವಿಶೇಷಾಂಕ
೧೯೬೦

ನವಯುಗ

REPUBLIC DA
SPECIAL
1960
ಬೆಲೆ: ೨೦ ನಯೇಪೈ



ಸ್ವಾತಂತ್ರ್ಯ ಸಮಾನತೆ ಸಹೋದರತೆ

ಪ್ರಜಾರಾಜ್ಯ

ಪ್ರಜಾಪ್ರಭುತ್ವ ಚಿರಾಯುವಾಗಲಿ
ಆರ್ಥಿಕ ಪ್ರಗತಿಯಿಂದ ನಾಡು ಬೆಳಗಲಿ

THE CANARA INDUSTRIAL & BANKING SYNDICATE LTD.

H. O: UDIPI.

ಅಂದವಾದ ಮನೆಗಳಿಗೆ! ಆಕರ್ಷಕವಾದ ಆಫೀಸುಗಳಿಗೆ!! ಸುಸಜ್ಜಿತವಾದ ಆಸ್ಪತ್ರೆಗಳಿಗೆ!!!

ಮೆಸರ್ಸ್ ಖೀರಾ ಸ್ಟೀಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್,

ಬೊಂಬಾಯಿ,— ಇವರಿಂದ ತಯಾರಿಸಲ್ಪಟ್ಟ

'ಮಿಡ್ಗೆಟ್', 'ಪೊಪ್ಯುಲರ್', 'ಯುಟಿಲಿಟೀ' 'ವಾರ್ಡ್ರೋಬು'ಗಳು

(ಸಾದಾ ಮತ್ತು ಒಳಗಡೆ ಲೋಕ್ಕರುಗಳುಳ್ಳವು ಮತ್ತು ಕನ್ನಡಿಗಳೊಡನೆ)

ತರತರದ ಬರೆಯುವ ಮತ್ತು ಊಟದ ಮೇಜುಗಳು, ಕುರ್ಚಿಗಳು, ಸೋಫಾ ಸೆಟ್ಟುಗಳು, ಮಂಚಗಳು

ಇತ್ಯಾದಿ ಇತ್ಯಾದಿ ಇತ್ಯಾದಿ

ಫುನಕ್ ಮೆನ್ಯುಫೆಕ್ಚರಿಂಗ್ ವರ್ಕ್ಸ್, ಬೊಂಬಾಯಿ ಇವರಿಂದ ತಯಾರಿಸಲ್ಪಟ್ಟ

ಡಾಕ್ಟರುಗಳಿಗೆ, ನರ್ಸಿಂಗ್ ಹೋಮ್ಸ್‌ಗಳಿಗೆ ಮತ್ತು ಆಸ್ಪತ್ರೆಗಳಿಗೆಲ್ಲಾ ಉಪಯುಕ್ತವಾದ
ಸ್ಟೀಲಿನ ಸಕಲ ರೀತಿಯ ಸಲಕರಣೆಗಳು ಒಂದು ವೈಶಿಷ್ಟ್ಯ.
"ಉಷಾ ಮತ್ತು ಔರಾ" ಟೇಬಲ್ ಮತ್ತು ಸೀಲಿಂಗ್ ಫೇನುಗಳು.

ಹೆಚ್ಚಿನ ವಿವರಗಳಿಗೆ

ಶಾಸ್ತ್ರಿ ಎಂಡ್ ಕಂಪೆನಿ, ಹಂಪನಕಟ್ಟೆ, ಮಂಗಳೂರು.

TelePhone: 788
TeleGrams: 'SHASTRYCO'

ತಮಗೆಲ್ಲರಿಗೂ
೧೧ನೇ ಪ್ರಜಾರಾಜ್ಯ ದಿನದ
ಹಾರ್ದಿಕ ಶುಭಾಶಯಗಳು

ಪಿ. ವಿ. ಎಸ್.
ಬೀಡಿಗಳ
(ಪುತ್ತು ಬೀಡಿಗಳ)

ತಯಾರಕರು,
ಮಂಗಳೂರು.

ನಾವು ಬಾಳಲು ಯಾರು ಮಡಿದರೊ,
ನಾವು ಸುಖಿಸಲು ಯಾರು ತ್ಯಾಗ ಮಾಡಿದರೊ,
ನಾವು ಸ್ವತಂತ್ರರಾಗಲು ಯಾರು ಸೆರೆಮನೆ ಸೇರಿದರೋ,

ಆ ಹುತಾತ್ಮರಿಗೆ
ಕೃತಜ್ಞತಾಪೂರ್ವಕ ಶ್ರದ್ಧಾಂಜಲಿ!

555
ಬಾರ್ ಸೋಪ್
ತಯಾರಕರು.

ಸೋಲ್ ಏಜಂಟರು:
ದಿನಕರ ಪೈ ಮತ್ತು ಕಂಪೆನಿ
ಮಂಗಳೂರು

ಗಣರಾಜ್ಯ ದಿನದ

ಹಾರ್ದಿಕ ಶುಭಾಶಯಗಳು!

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

NAVAYUGA ENTERPRISE LTD., UDIPI.

(ನವಯುಗ ಪ್ರೆಸ್, ಉಡುಪಿ, ಇದರ ಮ್ಯಾಲಿಕರು.)

ಹೆಚ್ಚಿನ ಜನರಿಗೆ ಹೆಚ್ಚಿನ ಸೇವೆಗೆ

— ಹೊಸ ಶಾಖೆಗಳು —

			ಪ್ರಾರಂಭ
1.	ನೂತುಂಗ	ಬೊಂಬಾಯಿ	1–2–1960
2.	ರಾಜಮುಂಡ್ರಿ	ಆಂಧ್ರ	1–2–1960
3.	ಇರೋಡು	ಮದ್ರಾಸು	1–2–1960
4.	ಸೇಲಂ	ಮದ್ರಾಸು	1–2–1960
5.	ಕೊಟ್ಟಾಯಮ್....	ಕೇರಳ	1–2–1960
6.	ತ್ರಿವೇಂದ್ರಮ್	ಕೇರಳ	8–2–1960

— ಸಿಂಡಿಕೇಟ್ ಬೇಂಕ್ —

THE CANARA INDUSTRIAL &
BANKING SYNDICATE LTD.,
H. O: UDIPI.

ಗಣರಾಜ್ಯ ದಿನದ ಶುಭಾಶಯಗಳು!

ನಿಯೋ ಮೈಸೂರು ಕಫೆ

ಕೆಂಪೇಗೌಡ ರಸ್ತೆ, ಬೆಂಗಳೂರು.

ನೂರಾರು ಕೊಠಡಿಗಳಿರುವ ಭಾರಿ ಹೋಟೆಲು

ಹೊಸ ಮ್ಯಾನೇಜ್‌ಮೆಂಟ್.

ಮುದ್ದಾದ ಮುದ್ರಣಕ್ಕೆ

ಸಂದರ್ಶಿಸಿರಿ:

ಕೆನರಾ ಛಾಪಖಾನೆ

ಗಣಪತಿ ಹೈಸ್ಕೂಲ್ ರಸ್ತೆ,

ಮಂಗಳೂರು - ೧.

ಉತ್ತಮ, ಖಾತ್ರಿ, ಆಯುರ್ವೇದ ಶಾಸ್ತ್ರೀಯ ವ
ಅನುಭವಸಿದ್ಧ ಯಾವತ್ತೂ ಔಷಧಿಗಳಿಗೆ
ನಮ್ಮ ನೆನಪಿರಲಿ.

ಬಾಣಂತಿಯರಿಗೆ ಅತ್ಯುಪಯುಕ್ತ ಔಷಧಿಗಳು

ಅಷ್ಟವರ್ಗ ಸಹಿತ ಕಸ್ತೂರಿಯುಕ್ತ

ದಶಮೂಲ

ಗರ್ಭಾಶಯದ ದೋಷಗಳನ್ನು ನಿವಾರಿಸುವುದು.

* * *

ಪ್ರಸೂತಿಯರಿಗೆ ಅಮೃತಸಮಾನ

ಪ್ರಸೂತಿ ಕಲ್ಯಾಣ

ರಕ್ತ ವ ಶಕ್ತಿವರ್ಧಕ.

●

ನಿಮ್ಮ ಪ್ರೀತಿ ವಿಶ್ವಾಸದ ಸಂಸ್ಥೆ

ನಾಯಕ ಆಯುರ್ವೇದಾಶ್ರಮ

ಕಟಪಾಡಿ, ದ. ಕ.

ಬ್ರಾಂಚು: ಇಗರ್ಜಿ ಎದುರು, ಉಡುಪಿ.

ಮ್ಯಾಲಕ: ಪಾಂಗಾಳ ಲಕ್ಷ್ಮೀನಾರಾಯಣ ನಾಯಕ.

Visit and Enjoy

City's best Boarding & Lodging

VIJAYA LODGE

No. 6 Lady Curzon Road,
BANGALORE-1.

ಜನತಾಸೇವೆಗಾಗಿ ಮೂವತ್ತನೇ ವರುಷದಲ್ಲಿ
ಪದಾರ್ಪಣೆ ಗೈಯುತ್ತಿರುವ

ನಂಬರ್ ಮೂವತ್ತು ಮಾರ್ಕಿನ 30 Regd.

ಬೀಡಿಗಳು

ಫೋನ್ ನಂಬ್ರ: 3 ಟೆಲಿಗ್ರಾಮ್ಸ್: ದಾಮೋದರ್.

ತಯಾರಕರು:

ದಿ ಭಾರತ್ ಬೀಡಿ ವರ್ಕ್ಸ್,

(ರಿಜಿಸ್ಟರ್ಡ್)

ಪೋಸ್ಟು ಬೋಕ್ಸ್ ನಂಬ್ರ 30.

ಕಾರ್ಕಳ - - - - - ದ. ಕನ್ನಡ

OUR 77TH BRANCH

CHAMARAJPET-BANGALORE BRANCH

Another Centre of Security & Service
& 6th Branch in Bangalore City

WAS INAUGURATED BY

The Hon'ble Shri Morarji R. Desai

Minister for Finance
Government of India

on 16th January 1960

**Safe Deposit Lockers
available
at this Branch**

CANARA BANK
LIMITED

(ESTD: 1906)

**— More Branches to serve
More & More People —**

ಎಲ್ಲಾ ತರದ ಕೈಮಗ್ಗದ ಉತ್ತಮ ತರಗತಿಯ
ಖಾತ್ರಿರಂಗಿನ ಶೀರೆಗಳಿಗೆ
ಒಮ್ಮೆ ಸಂದರ್ಶಿಸಿರಿ.

ಪೂರ್ಣಿಮಾ ಸ್ಟೋರ್ಸ್

—ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ—
ಪೊಪ್ಯುಲರ್ ಇನ್‌ಶೂರೆನ್ಸ್ ಕಟ್ಟಡ,

ಮಂಗಳೂರು-೧

ಅಖಿಲಭಾರತ ಕೈಮಗ್ಗ ಸಪ್ತಾಹದ ಪ್ರದರ್ಶನದಲ್ಲಿ
ಪದಕ ಮತ್ತು ಪ್ರಶಸ್ತಿ ಪಡೆದ
ನಮ್ಮ ಶೀರೆಗಳನ್ನು ಉಪಯೋಗಿಸಿರಿ.

ಹಂಚುಗಳನ್ನು ಆರಿಸುವಾಗ ಜಾಣ್ಮೆಯಿರಲಿ!

ನಿಮಗೆ ಹಂಚುಗಳು ಬೇಕಾದಾಗ ತಾಳಿಕೆ ಬಾಳಿಕೆಯುಲ್ಲಿ ನಾಜೂಕಿನಲ್ಲಿ ಉತ್ತಮವಾದುದೆಂದು ಸರ್ವತ್ರ ಪ್ರಸಿದ್ಧವಾಗಿ ಪ್ರಚಾರದಲ್ಲಿರುವ ಕೋಮನ್‌ವೆಲ್ತ್‌ನವರ

ಬಾಸೆಲ್ ಮಿಶನ್ ಹಂಚುಗಳನ್ನೇ
ಆರಿಸಿಕೊಳ್ಳಿರಿ.

ಬಾಸೆಲ್ ಮಿಶ್ಯನಿನ ಹಂಚು, ಎರಡು ಚಡಿಯ ಹಂಚು, ದಂಬೆ
ಇತ್ಯಾದಿಗಳಿಗೆ ನಮ್ಮೊಡನೆ ವಿಚಾರಿಸಿರಿ.

ಕಾರ್ನಾಡು ಪಾಂಡುರಂಗ ರಾವ್,
ಕಮಿಶನ್ ಏಜಂಟ್, ಸರ್ವಿಸ್ ಬಸ್‌ಸ್ಟಾಂಡಿನ ಬಳಿ,
ಉಡುಪಿ.

ತಾಜಾ ವಜ್ರಗಳಿಗೆ ಖಾತ್ರಿ ವಜ್ರದಂಗಡಿ

ಎಸ್. ಎಲ್. ಶೇಟ್ ಡಾಯಮಂಡ್ ಹೌಸ್

ಕಾರ್ನಾಡ್ ಸದಾಶಿವರಾವ್ ರೋಡ್,
ಮಂಗಳೂರು.

ಚಿನ್ನದ ಯಾವತ್ತೂ ಆಧುನಿಕ ಫೇಶನಿನ ಆಭರಣಗಳಿಗೆ
ಹೆಸರಾಂತ ಸುವರ್ಣ ಗೃಹ.

ಬೆಳ್ಳಿ, ಬಂಗಾರದ ತರಹವಾರು ಒಡವೆಗಳು ಸದಾ ದೊರೆಯುತ್ತವೆ.
ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

Tel. GOLDKING. *Proprietor.* **S. L. SHET.**

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ೧.

1) ದೇಹ ದಾರ್ಢ್ಯತೆಗೆ- ದೇಹಪುಷ್ಟಿ ಲೇಹ (ಸುವರ್ಣ ಸಾಲಾ ಮಿಶ್ರಿಕಲ್ಮದಮಿಶ್ರಿತ) ಪೌಂಡು 1ರ ರೂ. 7=00 ಪೌಂಡು½ ರೂ. 4=00,

2) ಬಾಣಂತಿಯರ ನವಚೇತನಕ್ಕೆ— ಕಸ್ತೂರಿ ಮಿಶ್ರಣ ದಶಮೂಲ 24 ಔನ್ಸ್ ರೂ. 6=00, 12 ಔನ್ಸ್ ರೂ. 3=00, 8 ಔನ್ಸ್ ರೂ. 2=00.

3) ಶಾರೀರಿಕ ಮತ್ತು ಮೆದುಳುಶಕ್ತಿಗೆ, ರಕ್ತವೃದ್ಧಿಗೆ— ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರಿತ) ಪೌಂಡು 1ರ ರೂ. 6=00, ½ ಪೌಂಡು ರೂ. 3=25.

4) ಗರ್ಭಿಣಿಯರಿಗೆ ದಿವ್ಯೌಷಧ—ಗರ್ಭ ರಕ್ಷಕ ಬಾಟ್ಲಿ 1ರ ರೂ. 4=00.

5) ಮಕ್ಕಳ ಚೇಷ್ಟೆ ಹಾಗೂ ಮಕ್ಕಳ ಸರ್ವ ರೋಗಗಳಿಗೆ— ಬಾಲಗ್ರಹ ಗುಟಿಕೆ ಬಾಟ್ಲಿ 1ರ ರೂ. 1=00

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು. ಪೋಸ್ಟು ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸಬೇಕು.

ಔಷಧಿಗಳು ಸಿಗುವ ಸ್ಥಳ—(1) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡು, ಬ್ಯಾಕುಲ್ಲಾ; (2) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್, 648—A, ಡಿಲ್ಯಾಲ್ ರೋಡ್, ಬ್ಯಾಕುಲ್ಲಾ; (3) ಪ್ರಭು ಫಾರ್ಮಸಿ, ಕಾರ್ಕಳ; (4) ಜಯಾ ಫಾರ್ಮಸಿ, ಕುಂದಾಪುರ; (5) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. (6) ವೆಂಕ್ಟಾಟಿ ಸ್ಟೋರ್ಸ್, ಸುಳ್ಯ; (7) ಟಿ. ಗೋಪಾಲಕೃಷ್ಣ ಪೈ, ಮರ್ಚಂಟ್, ಬ್ರಹ್ಮಾವರ; (8) ಕೃಷ್ಣಾ ಮೆಡಿಕಲ್ಸ್, ಕಾಸರಗೋಡು.

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ
೧೧ನೇ ಪ್ರಜಾರಾಜ್ಯ ದಿನದ ಶುಭಾಶಯಗಳು

ಗೋವಾ ಸ್ಟೋರ್ಸ್ ಮತ್ತು ಬೇಕರಿ

ಕೆಥೊಲಿಕ್ ಬ್ಯಾಂಕಿನ ಎದುರು
: ಉಡುಪಿ, ದ. ಕ. :

ನವಯುಗ

ಪ್ರಜಾರಾಜ್ಯ ವಿಶೇಷಾಂಕ 1960

NAVAYUGA
REPUBLIC DAY
SPECIAL 1960

Vol. 39 ಸಂಪುಟ ೩೯
No. 21 ಸಂಚಿಕೆ ೨೧

ರಾಷ್ಟ್ರೀಯತೆಯ ತೀವ್ರ ಪ್ರಕಾಶ ಬೀರಲಿ

ಜನವರಿ ೨೬ ಪುನಃ ನಮ್ಮ ಮುಂದೆ ಕಾಣಿಸಿ ಕೊಂಡಿದೆ. ದೇಶದ ಮೂಲೆ ಮೂಲೆಯಲ್ಲಿ ಇಂದು ಸಂಭ್ರಮದಿಂದ ಭಾರತ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಪ್ರಭಾತ ಫೇರಿಯಿಂದ ಮೊದಲಾದ ಈ ಆಚರಣೆಯು ಸಡಗರ ರಾತ್ರಿ ವಿವಿಧ ವಿನೋದಾವಳಿಗಳೊಡನೆಯೇ ಅಂತ್ಯಗೊಳ್ಳುವುದು ಸಂಪ್ರದಾಯವಾಗಿ ಬಂದಿದೆ. ಎತ್ತರವಾದ ವೇದಿಕೆಗಳ ಮೇಲೆ ನಿಂತು ಉದ್ದುದ್ದನೆಯ ಭಾಷಣಗಳನ್ನು ಬಿಟ್ಟು, ಹೇಗಾಯಿತು ಪ್ರಜಾಪ್ರಭುತ್ವದಿನ? ಎಂದು ಬೆನ್ನ ಚಪ್ಪರಿಸುವಲ್ಲಿಯೇ ನಮ್ಮ ಉತ್ಸಾಹವು ಮುಕ್ತಾಯವಾಗುವುದೂ ಒಂದು ಪರಂಪರೆಯಾಗಿ ಪರಿಣಮಿಸಿದೆ. ದೇವರ ತಲೆಯ ಮೇಲೆ ಹೂ ಏರಿಸದಿದ್ದರೂ ಇಂತಹ ರಾಷ್ಟ್ರೀಯ ಹಬ್ಬದ ದಿನ ದೂರವುಳಿಯುವುದು 'ಗಣ್ಯ' ವ್ಯಕ್ತಿಗಳಿಗೆ ಹೇಳಿಸದ ಕೆಲಸವಾಗಿದೆ.

ಆದರೆ, ಮಾತಿನಿಂದಲೇ ಕೃತಿಯಾಗುವುದಾದರೆ, ನಾವು ಈ ಕಳೆದ ೧೦ ವರ್ಷಗಳಲ್ಲಿ ಘೋಷಿಸಿದ ಘೋಷಣೆಗಳಲ್ಲಿಯೇ ಭಾರತ ಸಮೃದ್ಧ ಭಾರತವಾಗಿ ರೂಪಾಂತರ ಪಡೆಯಬೇಕಾಗಿತ್ತು. ಗೊತ್ತುಗುರಿಯಿಲ್ಲದೆ ಹತ್ತರೊಡನೆ ಹನ್ನೊಂದೆನುವ ನಮ್ಮಲ್ಲಿ ಶಾಪಾನುಗ್ರಹ ಸಮರ್ಥರಾದ ದೇವರ್ಷಿಗಳ ಹಿರಿಮೆಯೆಲ್ಲಿಂದ ಬರಬೇಕು? ಹಾಗಿರುವುದರಿಂದಲೇ ನಮ್ಮ ಪ್ರಜಾಪ್ರಭುತ್ವ ಸಮೃದ್ಧಿಯ ಪಥದತ್ತ ಧಾವಿಸುತ್ತಿದೆ ನಿಜ, ಆದರೆ, ಅದರ ಗತಿಮಾತ್ರ ಮಂದವೇ ಎಂದು ಕೆಲವರ ಅಭಿಪ್ರಾಯ. ಇದೇನಿದ್ದರೂ, ನಾವು ಸುಮ್ಮನೆ ಕೈಕಟ್ಟಿ ಕುಳಿತಿಲ್ಲ, ವಿಶಾಲ ಅಪಾರ ಸಾಗರವನ್ನು ಪಾರುಗಾಣುವ ಅಭಿಲಾಷೆಯಿಂದ ಎಳೆಯದಾದರೂ ಚಿಕ್ಕ ಚಿಕ್ಕ ತೂತುಗಳಿಂದ ಕೂಡಿರುವುದಾದರೂ 'ದೋಣಿ'ಯೊಂದರಲ್ಲಿ ಕುಳಿತು ಸಾಗುತಿದ್ದೇವೆ; ಬಿರುಗಾಳಿ ಬೀಸಿ ತೆರೆಯೇರಿ ನೌಕೆಯು ಹರಿದಾಡತೊಡಗುವಂತೆ ತೋರಿಬಂದರೂ ಅದು ಸ್ವಾಭಾವಿಕವೇ. ಆದುದರಿಂದ, ಧೈರ್ಯಗುಂದದೆ ನಾವು ಮುನ್ನಡೆಯುವ ದೃಢನಿರ್ಧಾರವನ್ನು ಮಾಡಿದ್ದೇವೆ. ಇದರಲ್ಲಿ ನಾವು ಯಶಸ್ವಿಯಾಗುವಂತೆ ಹಾರೈಸುತಿದ್ದೇವೆ.

ಒಂದು ದಶಕದ ಕಾಲಮಾನವೊಂದು ಅಪೂರ್ವ ಮೈಲುಗಲ್ಲೆಂದು ಹೇಳಬಹುದು. ಕಳೆದೊಂದು ದಶಕದ ಅವಧಿಯಲ್ಲಿ ನಮ್ಮ ಗಣತಂತ್ರ ನೌಕೆ ವಿಘ್ನವಿಡ್ಡೂರಗಳು ಎಡತಾಕಿದರೂ ಮುಂದುವರಿಯುತ್ತ ಬಂದಿದೆ. ದೇಶದ ಆಡಳಿತೆಯ ಸೂತ್ರ ವಹಿಸಿದ ಕಾಂಗ್ರೆಸ್ ದೇಶದ ಉದ್ಧಾರಕ್ಕಾಗಿ ಯೋಜನೆಗಳನ್ನು ಯೋಜಿಸಿ ಬಂಡವಳವನ್ನು ವೆಚ್ಚ ಮಾಡುತ್ತಿದೆ. ಕೆಲವೆಡೆ ಈ ಬಂಡವಳವು ತನ್ನ ಮೌಲ್ಯವನ್ನು ರಾಷ್ಟ್ರಕ್ಕೆ ಕೊಡುವುದಕ್ಕೂ ಸಿದ್ಧವಾಗಿದೆ. ರಾಷ್ಟ್ರೀಯ ಅವಶ್ಯಕತೆಯುಳ್ಳವನ್ನೂ ಕಂಡುಕೊಂಡು, ಅವುಗಳಲ್ಲಿ ಅತ್ಯಂತಾವಶ್ಯಕವಾದುವಕ್ಕೆ ಪ್ರಾಶಸ್ತ್ಯವಿತ್ತು ಕಾರ್ಯರೂಪದಲ್ಲಿ ತರಲಾಗುತ್ತಿದೆ. ವಿಶಾಲ ಭಾರತದ ಎಲ್ಲೆಡೆಯಲ್ಲಿಯೂ ಒಂದಿಲ್ಲೊಂದು ರೂಪದಲ್ಲಿ ಈ ಸಾಧನೆಯು ರೂಪಿತವಾಗಿರುವುದನ್ನು ಯಾರಾದರೂ ಕಾಣಬಹುದು. ದೇಶದಲ್ಲಿ ವಿದೇಶವಿನಿಮಯ ವುಳಿಸುವುದಕ್ಕೆ ಮೂಲಕಾರಣವಾದ ಉಕ್ಕಿನ ಕಾರ್ಖಾನೆಗಳನ್ನೂ ನಾವು ಸ್ಥಾಪಿಸಿಕೊಂಡಿದ್ದೇವೆ. ಇದೇ ಮಾದರಿಯಲ್ಲಿ ಗೊಬ್ಬರ, ಸೈಕಲು, ಯಂತ್ರೋಪಕರಣಗಳು, ರೇಲುಗಾಡಿ ವಿಮಾನ ಮೊದಲಾದುವನ್ನು ತಯಾರಿಸುವ ಕಾರಖಾನೆಗಳು, ಅಣುಶಕ್ತಿ ಕೇಂದ್ರ, ಹಡಗುಕಟ್ಟುವ ಕೇಂದ್ರ, ಅಣೆಕಟ್ಟು, ಜಲವಿದ್ಯುದಾಗಾರ, ಕಾಲುವೆ ಮೊದಲಾದುವುಗಳು ರಸ್ತೆ, ಆಸ್ಪತ್ರೆ, ಶಾಲೆ, ಪೋಸ್ಟ್ ಆಫೀಸು ಇತ್ಯಾದಿ ಎಲ್ಲವೂ ನಾಗರಿಕರಿಗೆ ತಂತಮ್ಮ ಪ್ರಭಾವವನ್ನು ಜನತೆಯ ಜೀವನದ ಮೇಲೆ ಬೀರಿವೆ. ಬೇಕಾಗಿರಲಿ, ಬೇಡವಾಗಿರಲಿ, ಜನತೆಯು ಇದರ ಲಾಭವನ್ನು ಜ್ಞಾತಾಜ್ಞಾತ ವಿಧಾನಗಳಿಂದ ಮಾಡಿಕೊಳ್ಳುತ್ತಿದೆ.

ಭಾರತ ಪ್ರಜಾಪ್ರಭುತ್ವ ಒಂದು ರೀತಿಯಿಂದ ಸಾಗುತ್ತಿರುವಾಗ, ಗಂಡಾಂತರದ ಪರಿಸ್ಥಿತಿಯನ್ನದು ಎದುರಿಸಬೇಕಾಗಿ ಬಂದಿದೆ. ನಮ್ಮ ಅತೀವ ಸ್ನೇಹಿತನೆಂದು ಡಂಗುರ ಹೊಯ್ಸಿಕೊಂಡ ಚೀನವು ನಮಗೆಸಗಿದ ಕೇಡನ್ನು ರಾಷ್ಟ್ರೀಯನಾಗಿರುವ ಯಾವನೊಬ್ಬನೂ ಕಂಡು ಕಂಡು ಸುಮ್ಮನಿರಲಾರ. ನಮ್ಮ ಉತ್ತರದ ಉದ್ದವಾದ ಗಡಿಯಲ್ಲಿ ಪರ್ವತ ಹಿಮ ಮಯವಾದ ಎಡೆಯಲ್ಲಿ ಅತಿಕ್ರಮಣವನ್ನು ಮಾಡಿ ಬಗೆದ ದ್ರೋಹ ವಿಶ್ವಾಸಘಾತವೇ ಎಂಬುದನ್ನು ನಾವು ತಿಳಿಯಬೇಕು. ಚೀನದೊಡನೆ ಇದೀಗ ಎದ್ದಿರುವ ಪ್ರಶ್ನೆಯನ್ನು ಪಂಚಶೀಲಗಳನ್ನು ಆಧರಿಸಿಯೇ ಶಾಂತಿ ಸಮಾಧಾನ ಸೌಹಾರ್ದಗಳಿಂದಲೇ ಬಗೆಹರಿಸಿಕೊಳ್ಳಲು ಬಯಸುವುದಾದರೂ ಅವಕಾಶವು ಕರೆಯುತ್ತಲ್ಲಿ ನಾವು ಚೀನವನ್ನು ಶಕ್ತಿ ಸಾಮರ್ಥ್ಯಗಳಿಂದ ಎದುರಿಸಬೇಕಾಗಬಹುದೆಂಬುದನ್ನು ಕಡೆಗಣಿಸಬಾರದು. ಹಾಗಿರುವಾಗ, ಇದು ನಮ್ಮಲ್ಲಿ ರಾಷ್ಟ್ರೀಯತೆಯು ನಾಡಿನಾಡಿಯಲ್ಲಿ ಹರಿದು ಚಿಮ್ಮಬೇಕಾದ ಸಂಧಿಗ್ಧಕಾಲ ಎಂದು ಅಥವಾ ನಮ್ಮ ಸತ್ತ್ವಪರೀಕ್ಷೆಯ ವಿಷಮಯ ಸನ್ನಿವೇಶವೆಂದು ನಾವು ತಿಳಿಯಬೇಕಾಗಿದೆ.

ಪ್ರಜಾಪ್ರಭುತ್ವದಲ್ಲಿ ಸಹೋದರತೆ, ಸಮಾನತೆಗಳೊಡನೆಯೇ ಸ್ವಾತಂತ್ರ್ಯವೂ ಇರುವುದು. ಹಾಗಿರುವಾಗ ವಿವಿಧ ಪಕ್ಷಗಳು ಹುಟ್ಟಿಕೊಳ್ಳುವುದು ಸ್ವಾಭಾವಿಕವೇ. ಅಂತೆಯೇ ಈ ಪಕ್ಷಗಳೆಲ್ಲವೂ ಪ್ರಜಾಪ್ರಭುತ್ವವಾದೀ ಪಕ್ಷಗಳಾಗಿದ್ದರೆ ಮಾತ್ರ ಅವುಗಳು ರಾಷ್ಟ್ರೀಯತೆಯ ಪಾಠವನ್ನು ತಮ್ಮ ಅನುಯಾಯಿಗಳಿಗೆ ಕಲಿಸಿಕೊಟ್ಟಾವು. ನಮ್ಮಲ್ಲಿ ವಿದೇಶನಿಷ್ಠವಾದ ಕಮ್ಯೂನಿಸ್ಟ್ ಪಕ್ಷವೊಂದು ರಾಷ್ಟ್ರೀಯತೆಯನ್ನು ಮರೆತುಬಿಟ್ಟು ಸಾಗುತ್ತಿರುವುದಕ್ಕೆ ಪ್ರತ್ಯಕ್ಷವೇ ಸಾಕ್ಷಿಯಾಗಿದೆ. ಇಂತಹ ಕುಶಕ್ತಿಗಳನ್ನು ಅಡಗಿಸಲು ಪ್ರಜಾಪ್ರಭುತ್ವವಾದಿ ಪಕ್ಷಗಳು ರಾಷ್ಟ್ರೀಯತೆಯ ಬೀಜವನ್ನು ಎಲ್ಲೆಲ್ಲಿಯೂ ಬಿತ್ತಬೇಕು. ಈ ಮಹಾಕಾರ್ಯದಲ್ಲಿ ಇವು ಸಹಕರಿಸುವುದು ರಾಷ್ಟ್ರೀಯ ಹಿತದೃಷ್ಟಿಯಿಂದ ಯುಕ್ತವಾದುದೇ ಸರಿ. ಪಾಂಡವರು ವನವಾಸದಲ್ಲಿದ್ದಾಗ, ಕೌರವನು ಸಸೈನ್ಯನಾಗಿ ತನ್ನ ದಾಯಾದಿಗಳ ಕಷ್ಟವನ್ನು ಕಣ್ಣಾರೆಕಂಡು ಸಂತೋಷಪಡುವ ಲವಲವಿಕೆಯಿಂದ ಅಲ್ಲಿಗೆ ತೆರಳಿದಾಗ, ಚಿತ್ರಾಂಗದ ಆತನನ್ನು ಒಯ್ದನಂತೆ. ಆಗ, ಆತನ ರಾಣಿ ಧರ್ಮರಾಯನೊಡನೆ ಮೊರೆಯಿಡಲು, "ನಮ್ಮ ನಮ್ಮ ವ್ಯಾಜ್ಯಗಳೇನಿದ್ದರೂ, ಅದು ನಮ್ಮೊಳಗೆ ಮಾತ್ರ. ಪರರೊಡನೆ ಹೋರಾಡುವಾಗ ನಾವು ನೂರೈವರು" ಎಂದು ಹೇಳಿ, ಆತನನ್ನು ಬಿಡಿಸಿ ತರಿಸಿದನಂತೆ. ಇದೇ ರೀತಿಯಲ್ಲಿ, ದೇಶದ ಆಂತರಿಕ ಸುಧಾರಣೆಯ ಮಾರ್ಗದಲ್ಲಿ ಹಲವಾರು ಭಿನ್ನಾಭಿಪ್ರಾಯಗಳು ನಮ್ಮಲ್ಲಿವೆಯೆಂಬುದನ್ನು ಒಪ್ಪಿಕೊಳ್ಳಬೇಕು. ಆದರೆ, ಇದರೊಡನೆ ೪೦ ಕೋಟಿ ಭಾರತೀಯರು ಒಂದಾಗಿ ರಾಷ್ಟ್ರೀಯ ಭಾವನೆಯಿಂದ ಇರುವುದು. ಇಂದಿನ ವಿಷಮ ಪರಿಸ್ಥಿತಿಯಲ್ಲಿ ಅತ್ಯಂತಾವಶ್ಯಕವಿದೆ. ದ್ವಿತೀಯ ದಶಕದ ಗಣರಾಜ್ಯ ಭಾಸ್ಕರನು ಈ ರಾಷ್ಟ್ರೀಯತೆಯ ದಿವ್ಯ ಪ್ರಕಾಶವನ್ನು ಜನತೆಯ ಅಂತರಾಳದಲ್ಲಿ ಪಸರಿಸಲಿ ಎಂದು ಹಾರೈಸುವುದಕ್ಕಿಂತ ಪವಿತ್ರ ಕರ್ಮವಿಂದಿನ ದಿನ ಬೇರೊಂದಿಲ್ಲ.

ಚಿರಸ್ಮಾರಕ ಬೇಕು

ದಕ್ಷಿಣ ಕನ್ನಡ ಜಿಲ್ಲೆಯ ಹಿತಕ್ಕಾಗಿ ದುಡಿದು ಅಮರರಾಗಿರುವ ಶ್ರೀ ದಿವಂಗತ ಎ. ಬಿ. ಶೆಟ್ಟರನ್ನು ಯಾರೂ ಮರೆಯಲಾರರು. ಅವರು ಬಂಟ ಸಮಾಜದ ಉನ್ನತಿಗಾಗಿಯೂ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿಯೂ, ಸಾಮಾಜಿಕ ಸುಧಾರಣೆಗಾಗಿಯೂ ಹೋರಾಡಿದವರು. ಇಂತಹ ಉತ್ತಮರ ಹೆಸರನ್ನು ಅವರ ಹಿಂದೆಯೇ ಅಳಿಸಿ ಹೋಗಗೊಡುವುದು ಎಂದೆಂದಿಗೂ ಸರಿಯಾಗದು. ದಿವಂಗತ ಎ. ಬಿ. ಶೆಟ್ಟರಂತಹರ ಹೆಸರು ಚಿರಕಾಲ ಉಳಿಯಬೇಕಾದುದು ಅಪೇಕ್ಷಣೀಯ. ಇದಕ್ಕಾಗಿ ಅವರ ಸವಿನೆನಪಿಗಾಗಿ ಒಂದು ಚಿರಸ್ಮಾರಕವನ್ನು ರಚಿಸುವುದು ಅವಶ್ಯವೆಂದು ನಾವು ಸೂಚಿಸ ಬಯಸುತ್ತೇವೆ. ಈ ಕಾರ್ಯವನ್ನು ಜಿಲ್ಲೆಯ ಬಂಟ ಸಮಾಜದ ನಾಯಕರಾಗಲಿ, ಜಿಲ್ಲೆಯ ಸಾರ್ವಜನಿಕ ಕಾರ್ಯಕರ್ತರಾಗಲಿ ಕೂಡಲೇ ಪ್ರಾರಂಭಿಸುವುದು ಅನುಚಿತವಾಗಲಾರದು. ಈ ಸ್ಮಾರಕಕ್ಕಾಗಿ ಒಂದು ನಿಧಿಯನ್ನು ಸಂಗ್ರಹಿಸಿ, ಅದನ್ನು ಉಚಿತ ರೀತಿಯಿಂದ ವಿನಿಯೋಗಿಸ ಬಹುದು ಆದುದರಿಂದ, ಉತ್ಸಾಹಿತರು ಈ ಬಗ್ಗೆ ಮುಂದೆಬರುವ ಆವಶ್ಯಕತೆಯಿದೆ.

ಕೃತಜ್ಞತೆಗಳು

ಭಾರತ ಪ್ರಜಾರಾಜ್ಯದ ೧೧ನೆಯ ವರ್ಷದ ಅರುಣೋದಯದ ಅವಸರದಲ್ಲಿ ಪ್ರಕಾಶಗೊಂಡ ಈ ನಮ್ಮ 'ವಿಶೇಷ ಸಂಚಿಕೆ'ಯು ಒಂದು ಉತ್ತಮ ವಿಶೇಷಾಂಕವಾಗುವಂತೆ ರೂಪಿಸುವಲ್ಲಿ ನಮಗೆ ಹಲ

(೨೬ನೇ ಪುಟ ನೋಡಿರಿ)

ಕಾವ್ಯ ಕಲೆ

ಕಾವ್ಯ ಲೇಖನವೂ ಒಂದು ಕಲೆ ಅದು ಕರಗತವಾಗಬೇಕಾದರೆ, ತುಂಬ ಪ್ರಯಾಸಪಡಬೇಕಾಗುವುದು. ಕಾವ್ಯ ಸಂಪ್ರದಾಯ, ಕಾವ್ಯ ತತ್ತ್ವಜ್ಞರ ಜಿಜ್ಞಾಸೆ ಅಲಂಕಾರ ಶಾಸ್ತ್ರದ ಜ್ಞಾನಗಳಿಂದ ಮಾತ್ರ ರಸಿಕನು ಕಾವ್ಯ ಪ್ರಯೋಗ ಪರಿಣತಮತಿಯಾಗಬಲ್ಲನು.

ಡಾ। ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿ. ಎಚ್. ಡಿ.

"ಜಗತಿ ನರಜನ್ಮ ತಸ್ಮಿನ್ ವೈದುಷ್ಯಂ
ತತ್ರ ಸತ್ಕವಿತಾ ।
ಕವಿತಾಯಾಂ ಪರಿಣಾಮೋ
ದುಷ್ಪ್ರಾಪಃ ಪುಣ್ಯಹೀನೇನ"
(ಜಗನ್ನಾಥ)

ಲೋಕದಲ್ಲಿ ನರಜನ್ಮ, ಅದರಲ್ಲಿ ವೈದುಷ್ಯ, ಅದರಲ್ಲಿ ಸತ್ಕವಿತೆ, ಸತ್ಕವಿತೆಯಲ್ಲಿಯೂ ಪರಿಪಾಕ-ಇವು ಪುಣ್ಯಹೀನನಿಗೆ ಬಾರವು.

ಮಾನವಕುಲದ ಇತಿಹಾಸದಲ್ಲಿ ಮಹಾಕವಿಗೆ ಪೂಜ್ಯಸ್ಥಾನವು ಸಿಕ್ಕದಿದ್ದ ಕಾಲವಿಲ್ಲ; ಅವನಿಗೆ ಪುರಸ್ಕಾರವೀಯದ ಸಮಾಜವಿಲ್ಲ. ಧರ್ಮನಿರತರಾದ ಪ್ರಾಚೀನರಂತೆ ವಿಜ್ಞಾನಲೋಲರಾದ ಆಧುನಿಕರೂ ಸಾಹಿತ್ಯ ಸೌಂದರ್ಯಕ್ಕೆ ಪರವಶರಾಗುತ್ತಾರೆ; ಜೀವನದಲ್ಲಿ ಕಾವ್ಯಾಸ್ವಾದಕ್ಕಿಂತ ಹೆಚ್ಚಿನ ಸುಖವಿಲ್ಲವೆಂದು ತಿಳಿಯುತ್ತಾರೆ. ಆದುದರಿಂದ ಕವಿಯಶಃಪ್ರಾರ್ಥಿಗಳ ಸಂಖ್ಯೆ ಸದಾ ಕಾಲಗಲ್ಲಿಯೂ ದೊಡ್ಡದಾಗಿಯೇ ಇದೆ. ಸಾಹಿತ್ಯದ ಇತಿಹಾಸವನ್ನು ನೋಡಿದರೆ ನಾಟಕ, ಕವಿತೆ, ಕಥೆ, ಮುಂತಾದ ಯಾವದೇ ಪ್ರಕಾರದಲ್ಲಿಯೂ ಅವಿಸ್ಮರಣೀಯವಾದ ಸಿದ್ಧಿಯನ್ನು ಪಡೆದವರ ಸಂಖ್ಯೆ ಮಾತ್ರ ಸಣ್ಣದೇ ಎಂಬುದು ಸ್ಪಷ್ಟ. ಇದರ ವಿವೇಚನೆ ಈ ಸಣ್ಣ ಲೇಖನದ ಗುರಿ.

ಮಾನವನ ಹೃದಯವನ್ನು ಮುಗ್ಧಗೊಳಿಸುವ ಸಾಹಿತ್ಯ ರಹಸ್ಯವೇ ಸೌಂದರ್ಯ. ಸೌಂದರ್ಯದ ಸಾನ್ನಿಧ್ಯದಲ್ಲಿ ಮೈಮರೆಯುವುದೇ ಮಾನವ ಸ್ವಭಾವ. ಆದರೆ ಸೌಂದರ್ಯವಿರುವುದೆಲ್ಲಿ, ಅದರ ಲಕ್ಷಣಗಳೇನು ಎಂಬುದನ್ನು ನಿರ್ಧರಿಸಲು ಉದ್ದಾಮ ಶಾಸ್ತ್ರಜ್ಞರೂ ತಡವರಿಸುವಂತಾಗಿದೆ. ಹಿಂದಿನಂತೆ ಇಂದೂ ಸೌಂದರ್ಯ ವಿವೇಚನೆ ನಿರಂತರವಾಗಿ ಸಾಗಿದೆ; ಸೌಂದರ್ಯ ಸೃಷ್ಟಿಯೂ ನಡೆದೇ ಇದೆ.

ಮನುಷ್ಯನ ಅಭಿರುಚಿಗಳು ಕಾಲಕಾಲಕ್ಕೆ ಬದಲಾಗುತ್ತ ಬಂದಂತೆ ಕಾಲಕಾಲಕ್ಕೂ ವಿಜ್ಞಾನದ ಕಲ್ಪನೆ ಬೇರೆಯಾಗುತ್ತ ನಡೆದಿದೆ; ಧರ್ಮದ ಶ್ರದ್ಧೆ ಕದಲುತ್ತ, ಹೊಸ ವಿಚಾರಗಳು ಹರಡುತ್ತ, ಹೊಸ ಸಂಪ್ರದಾಯಗಳು ಹುಟ್ಟಿಕೊಳ್ಳುತ್ತ ಬಂದಿವೆ. ಕಾವ್ಯ, ಸಂಗೀತಾದಿ ಕಲೆಗಳಲ್ಲಿ ಹೊಸ ಪ್ರಕಾರಗಳು ಉದಿಸಿದರೂ ಹಳೆಯ ಮಹಾ ಕೃತಿಗಳ ಪ್ರಭಾವ ಪೂರ್ಣವಾಗಿ ಲುಪ್ತವಾದಂತಿಲ್ಲ.

ಒಂದು ಇಡಿಯ ರಾಷ್ಟ್ರದ ಮನೋಭೂಮಿಕೆಯನ್ನೇ ಸಾಕಾರಗೊಳಿಸಿ ಅಮರವಾಗಿಸಿರುವ ರಾಮಾಯಣ ಮಹಾಭಾರತಗಳು ಇಂದಿಗೂ ಒಂದಿಲ್ಲೊಂದು ಬಗೆಯಲ್ಲಿ ನಮ್ಮ ಸ್ಮೃತಿಪಥದಲ್ಲುಳಿದಿವೆ. ಸುರಸರಸ್ವತಿಯ ವೀಣೆಯನ್ನೇ ತೆಗೆದುಕೊಂಡು ಮಂಜುಳರಾಗವನ್ನು ನುಡಿಸುತ್ತಿರುವನೋ ಎನ್ನುವಂತೆ ಮಧುರ ಮನೋಧರ್ಮದ ಕಾಳಿದಾಸನು ಇಂದಿಗೂ ನಮ್ಮ ಮಹಾಕವಿಗಳ ಮಾಲೆಯಲ್ಲಿ ರಾಜಿಸುತ್ತಿದ್ದಾನೆ. ಪಂಪರನ್ನರ, ಕುಮಾರವ್ಯಾಸ—ಲಕ್ಷ್ಮೀಶರ, ಸರ್ವಜ್ಞ ರತ್ನಾಕರವರ್ಣಿಗಳ ಕನ್ನಡ ವಾಣಿಯಲ್ಲಿ ಇಂದಿಗೂ ಒಂದು ಸಮ್ಮೋಹನ ಶಕ್ತಿಯಿದೆ. ಆದರೆ ಅಭೂತಪೂರ್ವವಾದ ವಿಸ್ತಾರ ಕನ್ನಡ ಸಾಹಿತ್ಯ ಕ್ಷೇತ್ರಕ್ಕೊದಗಿರುವುದು ಈ ಶತಮಾನದಲ್ಲಿಯೇ. ಆಳ ಅಗಲಗಳೆರಡರಲ್ಲೂ ವಿಸ್ತಾರವುಂಟಾಗಿದೆ.

ಇವೆಲ್ಲಕ್ಕೂ ತಪ್ಪದೆ ಅನ್ವಯಿಸುವಂತಹ ಸೌಂದರ್ಯ ಸೂತ್ರವನ್ನು ಹುಡುಕಿತೆಗೆಯುವುದೇನೂ ಸುಲಭವಲ್ಲ. ನಮ್ಮ ಹಿಂದಿನ ಲಾಕ್ಷಣಿಕರು ತಮಗೆ ಗೊತ್ತಿದ್ದ ವ್ಯಾಕರಣ, ತರ್ಕ, ಮೀಮಾಂಸಾ ಶಾಸ್ತ್ರಸಿದ್ಧಾಂತಗಳ ಆಧಾರದ ಮೇಲೆ ಕಾವ್ಯಕಲೆಯ ಗೊತ್ತುಗುರಿಗಳನ್ನು ನಿರ್ಧರಿಸ ಹೊರಟು ಅಲಂಕಾರ, ಗುಣ, ರೀತಿ, ರಸ, ಧ್ವನಿ, ಔಚಿತ್ಯ ಮುಂತಾದ ಪ್ರಕ್ರಿಯೆಗಳನ್ನು ಸುದೀರ್ಘವಾಗಿ ಪ್ರತಿಪಾದಿಸಿರುವರು, ಕಾವ್ಯದಲ್ಲಿ ವಸ್ತುಕಥನ, ವರ್ಣನೆ, ರಸಪುಷ್ಟಿ—ಇವುಗಳ ವಿಮರ್ಶೆಯನ್ನು ಸೋದಾಹರಣವಾಗಿ ಮಾಡಿ ತೋರಿಸಿರುವರು. ಕವಿಪ್ರತಿಭೆಯ ವಿಲಾಸವಿನ್ಯಾಸಗಳನ್ನು ಗುರುತಿಸಲು ಯತ್ನಿಸಿರುವರು. ಅದರಂತೆ ಪಾಶ್ಚಾತ್ಯ ದೇಶಗಳಲ್ಲಿಯೂ ಇತ್ತೀಚಿಗೆ ವೃದ್ಧಿಂಗತವಾಗುತ್ತಿರುವ ಭಾಷಾಶಾಸ್ತ್ರ, ಮನೋವಿಜ್ಞಾನ ಶಾಸ್ತ್ರ, ತತ್ತ್ವಶಾಸ್ತ್ರಗಳ ಸಿದ್ಧಾಂತಗಳಿಗೆ ಅನುಗುಣವಾಗುವಂತೆ ಕಾವ್ಯಕಲೆಯ ಅನುಸಂಧಾನವು ಸಹಸ್ರ ಮುಖಗಳಿಂದ ಸಾಗುತ್ತಿದೆ. ಹಿಂದೆ ಅನೇಕ ಶತಮಾನಗಳವರೆಗಾದರೂ ಹೆಚ್ಚು ಬದಲಿಸದೆ ಉಳಿಯುತ್ತಿದ್ದ ಕಾವ್ಯ ಸಂಪ್ರದಾಯಗಳು ಇಂದು ಒಂದೇ ದಶಕದಲ್ಲಿ ಬೇರೆ ಬೇರೆ ಮುಖಗಳನ್ನು ತಾಳುತ್ತ, ಚರ್ಚೆಗಳನ್ನು ಕೆರಳಿಸುತ್ತ, ಸಾಮಾನ್ಯ ಜನರನ್ನು ಮಂಕಾಗಿಸುತ್ತಿವೆ.

ಕಲೆಯು ಮುಖ್ಯವಾಗಿ ಒಂದು ಅನುಭವ, ಕಾವ್ಯಕಲೆಯಲ್ಲಿ ಸೌಂದರ್ಯಾನುಭೂತಿಯುಂಟಾಗಲು ಅರ್ಥಮಯವಾದ ಶಬ್ದಗಳೇ ಸಾಮಗ್ರಿಗಳು. ಸಾರ್ಥಕ ಶಬ್ದಗಳೇ ನಿತ್ಯ ವ್ಯವಹಾರದಲ್ಲಿಯೂ ಉಂಟು; ವಿಜ್ಞಾನದ ವಿಚಾರ ಕಾಲದಲ್ಲಿಯೂ ಉಂಟೆನ್ನುವುದು ನಿಜ. ಆದರೆ ಕಾವ್ಯದಲ್ಲಿ ಅವುಗಳ ಉಪಯೋಗ ಮಾತ್ರ ಬೇರೆ ರೀತಿಯದಾಗಿರುತ್ತದೆ. ವ್ಯವಹಾರದ ಭಾಷಾಪ್ರಯೋಗದಲ್ಲಿ ಒಂದು ವೈಯಕ್ತಿಕವಾದ ಪ್ರಯೋಜನವಿರುತ್ತದೆ. ಮಾತನ್ನಾಡುವಾಗ ನಮ್ಮ ಅಭಿಪ್ರಾಯ ಇನ್ನೊಬ್ಬರಿಗೆ ತಿಳಿಯಬೇಕು; ಅದರಿಂದ ಏನಾದರೂ ಕೆಲಸ ಮುಂದುವರೆಯಬೇಕೆಂಬ ಅಭೀಪ್ಸೆಯಿರುತ್ತದೆ, ಇಲ್ಲವೆ ನಮ್ಮ ಚಿತ್ತವೃತ್ತಿಯ ಪ್ರಕಟಣೆಯಾಗಬೇಕೆಂಬ ಭಾವವಿರುತ್ತದೆ. ಉದ್ದಿಷ್ಟ ಸಾಧನೆಗೆ ತಕ್ಕಂತೆ ಅರ್ಥಬೋಧಕವಾದ, ಸರ್ವಪರಿಚಿತವಾದ, ಶಬ್ದಗಳನ್ನು ಬಳಸುತ್ತೇವೆ. ಶಾಸ್ತ್ರವಿಚಾರ ಕಾಲದಲ್ಲಿಯೂ ಅಷ್ಟೆ! ಆದರೆ ಕಾವ್ಯದಲ್ಲಿ ಇದಕ್ಕಿಂತ ಹೆಚ್ಚಾಗಿ, ಇಲ್ಲಿ ಕಾಣದ ಮತ್ತೊಂದು ಪರಿಣಾಮವುಂಟಾಗುತ್ತದೆ. ಅದನ್ನು ಚಮತ್ಕಾರವೆನ್ನಬಹುದು. ಕವಿಯು ಚಮತ್ಕಾರವನ್ನುಂಟು ಮಾಡುವ ಉದ್ದೇಶದಿಂದಲೇ ಭಾಷೆಯನ್ನು ಬಳಸುತ್ತಾನೆ. ಆದರೆ ಚಮತ್ಕಾರವನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಭಾಷೆಯನ್ನು ಬಳಸುವವರೆಲ್ಲರೂ ಮಹಾಕವಿಗಳೆನಿಸಿ ಬಿಡುವುದಿಲ್ಲ. ಗುರಿಗೆ ಅನುರೂಪವಾದ ಸಿದ್ಧಿ ಕೆಲವರಿಗೆ ಮಾತ್ರ ಸಾಧಿಸುತ್ತದೆ. ಅದು ಎಲ್ಲರಿಗೂ ಸಮಾನವಾಗಿ ಸಿದ್ಧಿಸುವಂತಹುದಲ್ಲ. ಪ್ರತಿಭಾವಂತರಿಗೆ ಮಾತ್ರ ಅಯತ್ನಪೂರ್ವಕವೋ ಎನಿಸುವಷ್ಟು ಸುಖವಾಗಿ ಸಾಧಿಸುತ್ತದೆ. ಯಾವುದು ಕವಿಪ್ರತಿಭೆಯ ಸಹಜ ಪ್ರಕಾರ, ಯಾವುದು ಪ್ರಯತ್ನದಿಂದ ಹೊಸೆದ ಕೃತಕ ಪ್ರಕಾರ ಎಂಬುದು ಸಹೃದಯನಿಗೆ ನೋಡುವಾಗಲೇ ತಿಳಿದು ಹೋಗುತ್ತದೆ. ಸಹಜ ಕವಿ ಒಬ್ಬನಾದರೆ ಅನುಕರಣ ಕವಿಗಳು ನೂರಾರು

ಆದುದರಿಂದ ಕಾವ್ಯಕಲೆಯ ರಹಸ್ಯವನ್ನರಿಯಲು ಸಹಜ ಕವಿಗಳ ಲಕ್ಷ್ಯಗಳೊಂದೇ ಸರಿಯಾದ ಆಧಾರ. ಆ ಲಕ್ಷ್ಯಗಳಲ್ಲೆಲ್ಲ ಅನುಸ್ಯೂತವಾಗಿ ಎರಡು ಮುಖಗಳನ್ನು ಗಮನಿಸಬಹುದು. ಒಂದು ಮುಖ ಕವಿಯ ಮನೋಭಾವ ಅಥವಾ ಸಂವೇದನ ಅಥವಾ ಭಾವಸಾಂದ್ರತೆ; ಅದು ಪರಿಪಾಕಗೊಂಡು ಶಬ್ದದ ಬಾಹ್ಯರೂಪದಲ್ಲಿಯೂ, ಅರ್ಥದ ಸೂಕ್ಷ್ಮರೂಪದಲ್ಲಿಯೂ ವಿಕಸಿತವಾಗುವ ಚಮತ್ಕಾರ ಅಥವಾ ಅಲಂಕಾರವೇ ಎರಡನೆಯ ಮುಖ. ಪ್ರತಿ ಕವಿಗೂ ಬದಲಾಯಿಸುತ್ತ ಹೋಗುವ ಅವನ ವಿಶಿಷ್ಟ ಪದರಚನಾ ಕೌಶಲವೇ ರೀತಿ. ಆ ರೀತಿಯ ವಿವಿಧಾಂಶಗಳೇ ಗುಣಗಳು.

ಹಿಂದಿನ ಕಾಲದಲ್ಲಿ ನಮ್ಮ ರಾಜರು ಕಾವ್ಯಪ್ರೇಮಿಗಳಾಗಿರುತ್ತಿದ್ದರು. ತಮ್ಮ ಆಸ್ಥಾನಗಳಲ್ಲಿ ಕವಿತ್ವಸ್ಪರ್ಧೆಗಳನ್ನು ನಡೆಯಿಸುತ್ತಿದ್ದರು. ಹತ್ತಾರು ಕವಿಗಳು ಸ್ಪರ್ಧಿಸುವಾಗ ರಾಜಮರ್ಯಾದೆಗೆ ಯೋಗ್ಯನಾರೆಂದು ನಿರ್ಣಯಿಸಲು ಪರೀಕ್ಷಕರು ಕೆಲವೊಂದು ಸ್ಥೂಲನಿಯಮಗಳನ್ನಾದರೂ ಅನುಸರಿಸಬೇಕಾಗಿದ್ದಿತು. ಅದಕ್ಕಾಗಿ ಅವರು 'ಸಮಸ್ಯಾಪೂರಣ' ಮುಂತಾದ ಕೆಲವೊಂದು ಪರೀಕ್ಷೆಗಳನ್ನು ಏರ್ಪಡಿಸುತ್ತಿದ್ದರು. ಯಾವ ಪೂರ್ವಸಿದ್ಧತೆಯೂ ಇಲ್ಲದೆ ಕವಿತ್ವ ಕೌಶಲವನ್ನು ಮೆರೆಯಿಸಲು ಬಯಸುವಾತನು ಹೇಳಿದ ಛಂದಸ್ಸಿನಲ್ಲಿ ಗಂಗಾಪ್ರವಾಹದಂತೆ ನಿರರ್ಗಳವಾಗಿ ವಾಗ್ಝರಿಯನ್ನು ಹರಿಸಬೇಕಾಗುತ್ತಿದ್ದಿತು: ಆ ವಾಗ್ಝರಿಯಲ್ಲಿ ಶಬ್ದ ಸೌಂದರ್ಯವು ಕೋರೈಸುವಂತೆ ತಳತಳಿಸಬೇಕಾಗಿದ್ದಿತು. ಇಷ್ಟೇ ಅಲ್ಲ; ಅಜಾತತಃ ಅಪಾರ್ಥಕವಾದ ಒಂದು ಪದ್ಯಚರಣಕ್ಕೆ ಅರ್ಥಸ್ವಾರಸ್ಯವುಕ್ಕುವಂತೆ ಉಳಿದ ಮೂರು ಚರಣಗಳನ್ನು ಸೇರಿಸಿ ತನ್ನ ಪ್ರತಿಭಾಪ್ರಕಾಶವನ್ನು ಬೀರಬೇಕಾಗುತ್ತಿತ್ತು. ಒಂದು ಉದಾಹರಣೆಯನ್ನು ನೋಡಿ. ಇನ್ನೂ ಮೊನ್ನೆಮೊನ್ನೆ (೧೯ನೆಯ ಶತಮಾನದಲ್ಲಿ) "ಕಾವ್ಯಕಂಠ" ಎಂಬ ಪ್ರಶಸ್ತಿಯನ್ನು ಕೊಡುವ ಮೊದಲು ನವದ್ವೀಪದ ವಿದ್ವಾಂಸರು ವಾಸಿಷ್ಠ ಗಣಪತಿ ಮುನಿಗಳಿಗೆ ಪೂರ್ತಿಮಾಡಲು ಕೊಟ್ಟ ಸಮಸ್ಯೆಯಿದು—

"ಪಿಪೀಲಿಕಾ ಚುಂಬತಿ ಚಂದ್ರ
ಮಂಡಲಮ್"
'ಇರುವೆಯು ಚಂದ್ರಮಂಡಲವನ್ನು
ಚುಂಬಿಸುತ್ತಿದೆ!'

ಇದನ್ನು ಸಮಂಜಸವಾಗಿಸುವುದಕ್ಕೆ, ಅದೂ ಕ್ಷಣಾರ್ಧದಲ್ಲಿ, ಹೆಚ್ಚಿನ ಕಲ್ಪನಾಶಕ್ತಿ ಬೇಕಾಗುತ್ತದೆ. ಅದಕ್ಕೆ ಪರೀಕ್ಷ್ಯನ ಉತ್ತರವಿದು—

ಸತೀವಿಯೋಗೇನ ವಿಷಣ್ಣಚೇತಸಃ
ಪ್ರಭೋಃ ಶಯಾನಸ್ಯ ಹಿಮಾ
ಲಯೇ ಗಿತಾ ।
ಶಿವಸ್ಯ ಚೂಡಾಕಲಿತಂ ಸುಧಾಶಯಾ
ಪಿಪೀಲಿಕಾ ಚುಂಬತಿ ಚಂದ್ರ
ಮಂಡಲಮ್ ॥

(ದಕ್ಷಯಜ್ಞದಲ್ಲಿ ಸತಿಯು ಸಾಯಲು) ಶಿವನಿಗೆ ವಿರಹತಾಪವು ದುಸ್ಸಹವಾಯಿತು. ಅವನು ವಿಷಣ್ಣಮನಸ್ಕನಾಗಿ ಹಿಮಾಚಲದಲ್ಲಿ ಹಾಗೆಯೇ ಮಲಗಿದಾಗ ಅಲ್ಲಿ

(೨೬ನೇ ಪುಟ ನೋಡಿರಿ)

ESTD: 1919 VISIT PHONE NO. 374
K.R.K. SHET DIAMOND MART
JEWELLERS & DIAMOND MERCHANTS
FRESH ARRIVALS OF LATEST SPORTS PRESENTATION ARTICLES
HAMPANKATTA, MANGALORE, S. K.
Prop: K. K. R. SHET.] · Service of 40 years [Tel. Ad. BLUEYAGAR.

ರಾಷ್ಟ್ರೀಯ ಸರಕಾರ -- ಒಂದು ಸಮೀಕ್ಷೆ

ಇಂದು ಭಾರತಕ್ಕೆ ರಾಷ್ಟ್ರೀಯ ಸರಕಾರ ಬೇಕೆಂದು ಕೆಲವು ಪ್ರಮುಖ ಧುರೀಣರು ಅನ್ನತೊಡಗಿದ್ದಾರೆ. ಈ ಒಂದು ಗಂಭೀರ ಸಲಹೆಯ ಗುಣಾವಗುಣಗಳನ್ನು ಈ ಲೇಖನದಲ್ಲಿ ಶ್ರೀ ಮಲ್ಲರು ವಿವೇಚಿಸಿದ್ದಾರೆ.

ಶ್ರೀ ಸೇವ ನಮಿರಾಜ ಮಲ್ಲ.

ನಮ್ಮ ಪ್ರಜಾರಾಜ್ಯಕ್ಕೆ ಹತ್ತು ವರ್ಷ ತುಂಬುವಾಗ ರಾಷ್ಟ್ರೀಯ ಸರ್ಕಾರದ ರಚನೆಯ ಸೂಚನೆ ಕೇಳತೊಡಗಿರುವುದು ಸಂಕೇತಾತ್ಮಕವಾಗಿದೆ. ಹತ್ತು ವರ್ಷಗಳ ಕಾಲದಲ್ಲಿ ಕಾಂಗ್ರೆಸ್ ತನ್ನ ಭಾರೀ ಬಹುಮತವನ್ನು ಕಳೆದುಕೊಳ್ಳುತ್ತಿದ್ದರೂ, ದೇಶದ ಪ್ರಮುಖ ಪಕ್ಷವಾಗಿ ಉಳಿದಿದೆ ಮಾತ್ರವಲ್ಲ, ಕೇಂದ್ರದಲ್ಲೂ, ಹೆಚ್ಚಿನ ರಾಜ್ಯಗಳಲ್ಲೂ ಅಧಿಕಾರವನ್ನು ಚಲಾಯಿಸುತ್ತದೆ. ಆದರೆ ಯಾವ ಚುನಾವಣೆಯಲ್ಲಿ ನೋಡಿದರೂ ಅದು ಕ್ರಮೇಣ ತನ್ನ ಬಹುಮತವನ್ನು ಕಳೆದುಕೊಳ್ಳುತ್ತಿರುವುದು ಸುಸ್ಪಷ್ಟವಾಗುತ್ತಿದೆ.

ಇದೇನಾದರೂ ಕಾಂಗ್ರೆಸಿನ ತಪ್ಪಲ್ಲ, ಜನರ ತಪ್ಪೂ ಅಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಚಳವಳಿಯಾಗಿತ್ತು ವಿನಃ ಮತ ಬೇಡುವ ರಾಜಕೀಯ ಪಕ್ಷವಾಗಿರಲಿಲ್ಲ. ಆ ಕಾಲದಲ್ಲಿ ಕಾಂಗ್ರೆಸಿಗೆ ಸೇರುವವರ ಮುಖ್ಯ ಅರ್ಹತೆಯೆಂದರೆ, ದೇಶಭಕ್ತಿ ಮಾತ್ರ: ಅವನು ಅರಸನಾಗಿದ್ದಿರಬಹುದು ಜಮೀನ್ದಾರನಾಗಿದ್ದಿರಬಹುದು, ಬಿರ್ಲಾರಂತೆ ದೊಡ್ಡ ಬಂಡವಲಗಾರನಾಗಿದ್ದಿರಬಹುದು, ಇಲ್ಲದೇ ಬರೇ ಸಾಮಾನ್ಯ ವ್ಯಕ್ತಿಯಾಗಿದ್ದಿರಬಹುದು. ಆ ಕಾಲದಲ್ಲಿ ಕಾಂಗ್ರೆಸ್‌ನ ಮುಖ್ಯ ಸೂತ್ರ ಬ್ರಿಟಿಷರನ್ನು ದ್ವೇಷಿಸಿ ದೇಶದಿಂದ ಹೊರಗಟ್ಟುವುದಾಗಿತ್ತು. ಗಾಂಧೀಜೀಯವರು ವರ್ಧಾ ಶಿಕ್ಷಣ ಯೋಜನೆಯಂಥ ಹದಿನೆಂಟು ಅಂಶದ ರಚನಾತ್ಮಕ ಕಾರ್ಯಕ್ರಮವನ್ನು ದೇಶದ ಮುಂದಿಟ್ಟಿದ್ದರೆನ್ನೋಣ. ಆದರೆ ಹೆಚ್ಚಿನ ಕಾಂಗ್ರೆಸಿಗರ ಗಮನ ಸಾಮಾಜಿಕ ಮಹತ್ವವಿದ್ದ ರಚನಾತ್ಮಕ ಕಾರ್ಯಕ್ರಮದ ಕಡೆಗೆ ಹರಿದಿರಲಿಲ್ಲವೆಂದರೂ ಸರಿಯೇ. ಆಗ ಕಾಂಗ್ರೆಸಿಗನ ಲಕ್ಷಣವೆಂದರೆ ಅವನು ಜೈಲಿಗೆ ಹೋಗಲು ಸಿದ್ಧನಿರುವುದು, ತನ್ನ ಆಸ್ತಿಪಾಸ್ತಿಗಳಿಗೆ ಮುಟ್ಟುಗೋಲು ಹಾಕಿಸಿಕೊಳ್ಳಲು ಸಿದ್ಧನಿರುವುದು, ಸ್ವತಃ ಖಾದಿಧಾರಿಯಾಗಿರುವುದು ಇವೇ ಮುಖ್ಯವಾಗಿದ್ದುವು. ಸಾಮಾಜಿಕ ಸುಧಾರಣೆ, ಆಡಳಿತೆ ಇತ್ಯಾದಿಗಳ ಕುರಿತೇನೋ ಕಾಂಗ್ರೆಸ್ ನಿರ್ಣಯಗಳನ್ನು ಆಗಿಂದಾಗ್ಗೆ ಮಾಡುತ್ತಿದ್ದರೂ, ಅವುಗಳ ಅರ್ಥ ಹೆಚ್ಚಿನವರಿಗೆ ಆಗುತ್ತಿದ್ದಿಲ್ಲ.

ಆದರೆ ಕಾಂಗ್ರೆಸ್ ರಾಜಕೀಯ ಪಕ್ಷವಾಗಿ ಸ್ವಾತಂತ್ರ್ಯಾನಂತರ ರೂಪುಗೊಳ್ಳುವುದೊಡನೆ ಅದರ ಧೋರಣೆಗಳು ಜನರಿಗೆ ಸ್ಪಷ್ಟವಾಗತೊಡಗಿದುವು. ಸ್ವಾತಂತ್ರ್ಯ ಸಿಕ್ಕಿದ ಎರಡು ವರ್ಷಗಳಲ್ಲೇ ಅದು ಸಮಾಜವಾದಿಗಳೇ ಮುಂತಾದ ಹಲವು ಗುಂಪುಗಳನ್ನು ಕಳೆದುಕೊಂಡಿತು. ಮತ್ತೆ ಪ್ರತಿಪಕ್ಷಗಳು ಕಾಣಿಸಿಕೊಂಡುವು. ಪ್ರಥಮ ಮಹಾ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ತನ್ನ ರಾಜಕೀಯ ನೀತಿಯನ್ನು ಮತದಾರರ ಮುಂದಿಡಬೇಕಾಗಿ ಬಂತು.

ಕಾಂಗ್ರೆಸ್ಸಿನ ಆಡಳಿತ ನೀತಿ ಹೀಗೆ ಸ್ಪಷ್ಟವಾಗುತ್ತ ಬರುತ್ತಿದ್ದಂತೆ ಪ್ರತಿಪಕ್ಷಗಳ ನೀತಿಯೂ ರೂಪುಗೊಳ್ಳತೊಡಗಿತು. ಪ್ರತಿಪಕ್ಷಗಳ ಬೆಳವಣಿಗೆಯೂ ಸಾಕಷ್ಟು ಶೀಘ್ರದಲ್ಲೇ ಆಯಿತೆನ್ನಬಹುದು. ೧೯೫೭ರಲ್ಲಿ ನಡೆದ ದ್ವಿತೀಯ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿಯೂ ಕೆಲವು ಸ್ಥಾನಗಳನ್ನು ಕಳೆದುಕೊಂಡಿತು. ಕೇರಳದಲ್ಲಿ ಅದು ಅಧಿಕಾರವನ್ನು ಕಳೆದುಕೊಂಡಿತು. ಒರಿಸ್ಸಾದಲ್ಲಿ ನೇರ ಬಹುಮತ ಪಡೆದು ಕೊನೆಗೆ ಗಣತಂತ್ರ ಪರಿಷತ್ತಿನೊಡನೆ ಸಮ್ಮಿಶ್ರ ಸರ್ಕಾರ ನಡೆಸಬೇಕಾಯಿತು. ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮುಂತಾದೆಡೆ ಅದರ ಬಹುಮತ ಇಳಿಯಿತು. ನಮ್ಮ ಮೈಸೂರು ರಾಜ್ಯದಲ್ಲಿ ಕೂಡಾ ನಾಲ್ಕನೇ ಒಂದಂಶದಷ್ಟು ಶಾಸನ ಸಭೆಯ ಸ್ಥಾನಗಳು ಪ್ರತಿಪಕ್ಷಗಳಿಗೆ ಹೋಗಿವೆ. ಮುಂಬಯಿ ರಾಜ್ಯದಲ್ಲಂತೂ ಕಾಂಗ್ರೆಸ್ ಭಾರೀ ಪರಾಭವಗಳನ್ನನುಭವಿಸಿತು. ಈ ಮುಂಬಯಿ ರಾಜ್ಯವನ್ನು ಮಹಾರಾಷ್ಟ್ರ-ಗುಜರಾತುಗಳನ್ನಾಗಿ ವಿಭಜಿಸುವಾಗ ಕಾಂಗ್ರೆಸಿನ ಅಧಿಕಾರಕ್ಕೆ ಚ್ಯುತಿ ಬರುವ ಅಪಾಯ ಒಡೆದು ಕಾಣುತ್ತಿದೆ. ಮಹಾರಾಷ್ಟ್ರದಲ್ಲಂತೂ ಅದಕ್ಕೆ ಸರ್ಕಾರ ನಡೆಸಲು ಬೇಕಾಗುವಷ್ಟು ಬಹುಮತ ದುರ್ಲಭವೆಂದೇ ಹೇಳಬಹುದು.

ಕಾಂಗ್ರೆಸಿನ ಆಡಳಿತ ಸ್ಥಾನದ ಪರಿಸ್ಥಿತಿಯು ಹೀಗಿರುವಾಗ, ದೇಶದ ಪರಿಸ್ಥಿತಿಯಲ್ಲಿ ಕೆಲವು ಮುಖ್ಯ ಬದಲಾವಣೆಗಳು ಕಳೆದ ವರ್ಷ ತೋರಿಬಂದಿವೆ. ಕಾಂಗ್ರೆಸ್ ಪಕ್ಷವು ಸಮಾಜವಾದದ ದಾರಿಯನ್ನನುಸರಿಸಲು ಕಳೆದ ವರ್ಷ ನಿಶ್ಚೈಸಿತು. ಉದ್ಯಮಗಳ ರಾಷ್ಟ್ರೀಕರಣದ ನೀತಿಯನ್ನಂತೂ ಅದು ಮೊದಲೇ ಕೈಗೊಂಡಿದ್ದರೂ, ಈ ದಿಶೆಯಲ್ಲಿ ಅದು ಅಷ್ಟು ವಿಶೇಷವಾಗಿ ಮುಂದುವರಿದಂತೆ ಕಾಣುವುದಿಲ್ಲ. ರೈಲು ಸಾರಿಗೆಯನ್ನಂತೂ ಬ್ರಿಟಿಷ್ ಸರ್ಕಾರವೇ ರಾಷ್ಟ್ರೀಕರಣ ಮಾಡಿತ್ತು. ಆ ಮೇಲೆ ವಿಮಾನ ಸಾರಿಗೆ, ಸ್ವಲ್ಪ ಪ್ರಮಾಣದಲ್ಲಿ ಬಸ್ಸು ಸಾರಿಗೆ ಮತ್ತು ಜೀವವಿಮೆಯ ಸಂಸ್ಥೆ – ಇವುಗಳನ್ನು ರಾಷ್ಟ್ರೀಕರಣ ಮಾಡಿದೆ. ಉಕ್ಕಿನ ಉದ್ಯಮ, ಎಣ್ಣೆ ಉದ್ಯಮ, ಮೋಟಾರು ಕಾರು ತಯಾರಿ, ಬಟ್ಟೆ ತಯಾರಿ, ಬ್ಯಾಂಕುಗಳು ಮುಂತಾದ ಇನ್ನು ಅನೇಕ ಪ್ರಮುಖ ಉದ್ಯಮಗಳು ಖಾಸಗಿ ಕ್ಷೇತ್ರದಲ್ಲೇ ಹೆಚ್ಚಾಗಿ ಇವೆ. ಹೀಗಾಗಿ ಪ್ರಜಾಪ್ರಭುತ್ವಕ್ಕೆ ಸುಲಭವಾಗಿ ಅಳವಡದ ಪಂಚವಾರ್ಷಿಕ ಯೋಜನೆಗಳಿಗೆ ಬೇಕಾದ ಸಂಪತ್ತು ಹೆಚ್ಚು ಪ್ರಮಾಣದಲ್ಲಿ ಹೊರ ದೇಶಗಳಿಂದ ಬರಬೇಕಾಗಿದೆ. ಅದೂ ಅಮೇರಿಕ, ಪಶ್ಚಿಮ ಜರ್ಮನಿ ಮುಂತಾದ ಕಮ್ಯೂನಿಸ್ಟೇತರ ದೇಶಗಳಿಂದ ಪಡೆಯುವ ಸಾಲ ಮತ್ತು ಧನ ಸಹಾಯಗಳಿಗೆ ಪ್ರಚೋದನೆಯನ್ನೀಯಲು ಸರ್ಕಾರವು ಅದಷ್ಟು ಮಟ್ಟಿಗೆ ತನ್ನ ಸಮಾಜದ ನೀತಿ ಬದಿಗೊತ್ತಬೇಕಾದ ಪ್ರಸಂಗ ಮೂಡಿ ಬಂದಿದೆ.

ಹೀಗೆ ಔದ್ಯಮಿಕ ಕ್ಷೇತ್ರದಲ್ಲಿ ಕಾಂಗ್ರೆಸಿನ ಸಮಾಜವಾದದ ನೀತಿ ಕುಂಠಿತವಾಗಿದ್ದು, ಉದ್ಯಮಿಗಾರರ ಆದಾಯದ ಪ್ರಮಾಣಕ್ಕೆ ಸಮಾಜವಾದದ ನೀತಿತಾಗಿಲ್ಲ. ಸರ್ಕಾರವೇನೋ ತೆರಿಗೆಗಳನ್ನು ಹೊರಿಸುತ್ತಿದ್ದರೂ, ಉದ್ಯಮಿಗಾರರು ತೆರಿಗೆಗಳಿಂದಾಗಿ ದಿವಾಳಿ ಹೋಗುವಂತೆಯೂ ಇಲ್ಲ. ಸರ್ಕಾರದ ಖಜಾನೆ ಅದರಿಂದ ತುಂಬ ವಂತೆಯೂ ಇಲ್ಲ. ಪ್ರಧಾನಿ ನೆಹರೂರವರೇ ಉದ್ಯಮಿಗಾರರ ಆದಾಯಕ್ಕೆ ಮಿತಿ ಹೇರುವುದಿಲ್ಲವೆಂದು ಸ್ವತಃ ಆಗಿಂದಾಗ್ಗೆ ಆಶ್ವಾಸನೆಯನ್ನೀಯುತ್ತ ಬಂದಿದ್ದಾರೆ.

ಕಾಂಗ್ರೆಸ್ ಹೀಗೆ ಉದ್ಯಮಗಳ ಸಮಾಜವಾದವನ್ನು ಸ್ವಲ್ಪ ಸಡಿಲಗೊಳಿಸಿ ಭೂಮಿಯ ಸಮಾಜವಾದಕ್ಕೆ ಕಳೆದ ವರ್ಷ ಇಳಿದಿದೆ. ಮುಕ್ಕಾಲು ಪಾಲಿಗಿಂತಲೂ ಹೆಚ್ಚಿಗೆ ಕೃಷಿಯಲ್ಲಿ ನಿರತರಾದ ಭೂಸಂಬಂಧವುಳ್ಳವರ ಆಕ್ರೋಶ ಇದರಿಂದಾಗಿ ಒಮ್ಮೆಲೇ ಕೆರಳಿದೆ. ಆದಾಯದ ಪರಿಮಿತಿ, ಸಹಕಾರೀ ವ್ಯವಸಾಯ ಇತ್ಯಾದಿ ಭೂಸುಧಾರಣೆಗಳು ಕಾಂಗ್ರೆಸಿಗೆ ಅಪೂರ್ವವಾದ ಪ್ರಬಲ ಪ್ರತಿಪಕ್ಷವನ್ನು ಒದಗಿಸಿಕೊಟ್ಟಿವೆ. ಇದರಿಂದ ಹುಟ್ಟಿಕೊಂಡ ಆರು ತಿಂಗಳು ಪ್ರಾಯದ ಸ್ವತಂತ್ರ ಪಕ್ಷವು ಜನತೆಯ ಯೋಜನಾ ಸರಣಿಯನ್ನು ಇಬ್ಭಾಗವಾಗಿ ಒಡೆದಿದೆ. ಅದು ಈತನಕ ಇದ್ದ ಜನಸಂಘ, ಹಿಂದೂಮಹಾಸಭೆ ಮುಂತಾದ ಬಲಗೈ ಪಕ್ಷಗಳಿಗಿಂತಲೂ ಪ್ರಬಲವಾದ ಹಾಗೂ ಪ್ರಬುದ್ಧವಾದ ಸಂಪ್ರದಾಯಬದ್ಧ ನೀತಿಯನ್ನನುಸರಿಸುವ ಪಕ್ಷವಾಗಿ ಪರಿಣಮಿಸಿ ಕಾಂಗ್ರೆಸಿನ ಆಡಳಿತೆಯ ಲೋಪದೋಷಗಳ ಲಾಭವನ್ನು ಪಡೆದು ಪುಷ್ಟಿಗೊಳ್ಳುತ್ತಿದೆ. ಅದರ ವರ್ಚಸ್ಸಿನಿಂದಾಗಿ ಕಾಂಗ್ರೆಸಿಗರಲ್ಲೇ ಸಮಾಜವಾದದ ಬಗ್ಗೆ ಕುಸು ಕಳವಳ ಅಥವಾ ಪುನರ್ಯೋಜನೆ ಆರಂಭವಾಗಿದೆಯೆಂದರೂ ತಪ್ಪಾಗಲಾರದು.

ಸುಧಾರಣೆಗೆ ಮೇಲೆ ಹೇಳಿದಂತೆ ತಾತ್ವಿಕ ನೆಲೆಯಲ್ಲಿ ವಿರುದ್ಧವಾದ ಮುಂದೆಗಾಮಿ ಪಕ್ಷವೊಂದು ಪ್ರಸಿದ್ಧ ನಾಯಕರ ಮುಂದಾಳುತ್ವದಲ್ಲಿ ರೂಪುಗೊಂಡಿರುವಾಗ, ಇನ್ನೊಂದೆಡೆ ಭಾರತದ ಭೌಗೋಳಿಕ ಅಸ್ತಿತ್ವಕ್ಕೇ ಕೊಡಲಿಯೇಟು ಹಾಕುವಂಥ ದುಷ್ಕೃತ್ಯವನ್ನು ಚೀನಾದೇಶವು ಮಾಡಿದೆ. ಭಾರತದ ವಿದೇಶನೀತಿಯು ತಾಟಸ್ಥ್ಯಕ್ಕೆ ಹೆಸರುವಡೆದಿದ್ದರೂ, ಅದರ ಒಲವು ರಷ್ಯಾ ಮತ್ತು ಚೀನಾಗಳೆಡೆಗೆ ಹೆಚ್ಚಿಚ್ಚು ವಾಲಿದೆಯೆಂದು ಸ್ಪಷ್ಟವಾಗುತ್ತ ಬರುತ್ತಿತ್ತು. ಮಧ್ಯಾಹಪೂರ್ವ ಮುಂತಾದ ಪ್ರಶ್ನೆಗಳಲ್ಲಿ ಭಾರತವು ಪಶ್ಚಿಮ ರಾಷ್ಟ್ರಗಳಿಗೆ ವಿರುದ್ಧವಾದ ನೀತಿಯನ್ನೇ ಅನುಸರಿಸುತ್ತಿತ್ತು. ಚೀನಾಕ್ಕೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಸ್ಥಾನ ದೊರಕಿಸಲು ಅದರ ಪರವಾಗಿ ಪ್ರತಿಪಾದನೆ ಮಾಡುತ್ತಿತ್ತು. ಆದರೆ ಚೀನಾ ಭಾರತದ ಸೀಮೆಯನ್ನೇ ಉಲ್ಲಂಘಿಸಿದೆ. ಅಲ್ಲದೆ ಆ ಬಗ್ಗೆ ನಡೆದ ಪತ್ರವ್ಯವಹಾರದಲ್ಲಿ ಅದು ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ ಎಂಬ ನೀತಿಯನ್ನು ಅನುಸರಿಸುವಂತೆ ತೋರುತ್ತಿದೆ. ಅದರಮೇಲೆ ಏಳುಮಂದಿ ಭಾರತೀಯ ಪೋಲೀಸು ಕಾವಲುಪಡೆಯ ಸೈನಿಕರನ್ನು ಅದು ಕೊಂದಿತು. ಅವರ ನಾಯಕ ಕರಮ್‌ಸಿಂಘ್ ಮತ್ತಿತರರಿಗೆ ಅಮಾನುಷಯಾತನೆಯನ್ನು ಕೊಟ್ಟಿತು.

ಚೀನದ ಈ ಅಕೃತ್ಯಗಳನ್ನು ಬಹುಕಾಲ ಬಚ್ಚಿಡಲು ಕಾಂಗ್ರೆಸ್ ಸರ್ಕಾರ ಯತ್ನಿಸಿದೆ. ಈಗಲೂ ಕೂಡಾ ಚೀನಾ ನಡೆಸಿದ ಆಕ್ರಮಣವು ಕೇವಲ 'ಪುಟಾಣಿ ಹೆಸ'ವೆಂದು ನಮ್ಮ ರಕ್ಷಣಾಮಂತ್ರಿ ಸಾರುತ್ತಿದ್ದಾರೆ. ಕಾಂಗ್ರೆಸಿನಲ್ಲಿ ಕೆಲವರು ಇದು ಆಕ್ರಮಣವಲ್ಲ, ಬರೇ ಗಡಿಕಲಹ, ಯುದ್ಧವಲ್ಲ ಬರೇ ಹುಚ್ಚಾಟ ಎಂಬಿತ್ಯಾದಿ ವಿಚಿತ್ರವಾದ ಅಸಮರ್ಪಕ ವ್ಯಾಖ್ಯಾನಗಳನ್ನು ಉಪದೇಶಿಸತೊಡಗಿದ್ದಾರೆ.

ಭಾರತದಂತೆ ಸಮಾಜವಾದದ ದಾರಿಯನ್ನನುಸರಿಸಿರುವ ಚೀನಾ ಆಕ್ರಮಣಶೀಲತೆಯ ಮೂಲಕ ಭಾರತೀಯ ಜನಜೀವನದಲ್ಲಿ ಪ್ರಕ್ಷುಬ್ಧ ವಾತಾವರಣವನ್ನು ಕಲ್ಪಿಸಿದೆಯಲ್ಲದೆ, ದೇಶದ ಪ್ರಗತಿಶೀಲ ಪಕ್ಷಗಳೆಂದೆನ್ನಿಸಿಕೊಳ್ಳುವ ಕಾಂಗ್ರೆಸ್ ಮತ್ತು ಮುಖ್ಯವಾಗಿ ಕಮ್ಯೂನಿಸ್ಟ್ ಪಕ್ಷಗಳ ಮೇಲೆ ಜನರಿಗೆ ಅವಿಶ್ವಾಸ ಹುಟ್ಟುವಂತೆ ಮಾಡಿದೆ. ಯುದ್ಧದ ಮನೋವೃತ್ತಿ ತಾಳಬೇಡಿ, ಶಿಸ್ತಿನಿಂದ ಯಾವುದಕ್ಕೂ ಸನ್ನದ್ಧರಾಗಿ ಎನ್ನುವ ಪ್ರಧಾನಿ ನೆಹರೂವಿನ ಕರೆಯಲ್ಲಿ ಒಡಮೂಡುವ ವಿರೋಧಾಭಾಸದ ಅಂಶವು ಯೋಚನಾಶೀಲರನ್ನು ಮಂಗುಬಡಿಸಿದೆ, ಕಾಂಗ್ರೆಸ್ ಯಾವದಾರಿಯನ್ನು ಹಿಡಿಯುತ್ತಿದೆ ಎಂಬುದೇ ಅನೇಕರಿಗೆ ಅರ್ಥವಾಗುವುದಿಲ್ಲ.

ಕಾಂಗ್ರೆಸಿನ ಜನಪ್ರಿಯತೆಯು ನಶಿಸಿ ಹೋಗುತ್ತಿರುವುದಕ್ಕೆ ಇವೆರಡು ಮುಖ್ಯ ಕಾರಣಗಳು. ಇವಲ್ಲದೆ ಅದರ ಆಡಳಿತೆಯ ಲೋಪದೋಷಗಳು, ಅಸಮರ್ಥತೆ ಮತ್ತು ಅಧಿಕಾರ ಮದದಿಂದೊಡಗೂಡಿದ ಸ್ವಾರ್ಥಲೋಲುಪತೆಗಳು ಜನರಲ್ಲಿ ತುಂಬಾ ಅತೃಪ್ತಿಯನ್ನುಂಟುಮಾಡಿವೆ. ಅದರಲ್ಲಿರುವ ಒಳಜಗಳಗಳಂತೂ ಲಜ್ಜಾಸ್ಪದ ರೂಪವನ್ನು ತಾಳಿವೆ. ಹೀಗಾಗಿ ಕಾಂಗ್ರೆಸ್ ಮುಂದಿನ ಚುನಾವಣೆಗಳಲ್ಲಿ ತನ್ನ ಬಹುಮತವನ್ನು ದೊಡ್ಡ ಪ್ರಮಾಣದಲ್ಲಿ ಕಳೆದುಕೊಳ್ಳುವ ಸಂಭವವೇ ಹೆಚ್ಚೆಂದು ರಾಜಕಾರಣ ಜಿಜ್ಞಾಸುಗಳಿಗೆ ತೋರತೊಡಗಿದೆ.

ಇದೇ ದೃಷ್ಟಿಯಿಂದ, ಕಾಂಗ್ರೆಸಿನೊಳಗಿರುವ ಸಮಾಜವಾದೀ ಬಂಗಡವು ಭಾರತಕ್ಕೆ ಇಂದು ಬೇಕಾದುದು ರಾಷ್ಟ್ರೀಯ ಸರ್ಕಾರ ವಿನಃ ಪಕ್ಷದ ಸರ್ಕಾರವಲ್ಲ ಎಂಬ ಅಭಿಪ್ರಾಯವನ್ನು ತಾಳಿದೆ. ಕಾಂಗ್ರೆಸ್ಸಿನ ನೀತಿಗೆ ಅತ್ಯಂತ ಸಮೀಪದಲ್ಲಿರುವ ಪ್ರಜಾಸಮಾಜವಾದೀ ಪಕ್ಷವೇ ಮುಂತಾದ ಪ್ರಜಾಸತ್ತಾತ್ಮಕ ಪ್ರಗತಿ ಪರ ಪಕ್ಷಗಳನ್ನು ಕೂಡಿಸಿಕೊಂಡು ಕೇಂದ್ರದಲ್ಲೂ ರಾಜ್ಯಗಳಲ್ಲೂ ಸರ್ಕಾರ ನಡೆಸುವುದೇ ಇಂದಿನ ಈ ಗೊಂದಲದ ವಾತಾವರಣಕ್ಕೆ ಪರಿಹಾರ ಎಂದು ಅದು ಸಾರಿದೆ. ಪ್ರಜಾಸಮಾಜವಾದಿಗಳು ಈ ಅಭಿಪ್ರಾಯವನ್ನು

(೨೫ನೇ ಪುಟ ನೋಡಿರಿ)

ಕನ್ನಡ ರಂಗಭೂಮಿಯ ಮೇಲೆ ತೆರೆ ಬಿದ್ದಿದೆಯೆ?

ಎಲ್ಲೆಲ್ಲಿಯಂತೆ ಕನ್ನಡಕ್ಕೂ ಒಂದು ರಂಗಭೂಮಿಯಿದೆ; ಆದರೆ, ನಮ್ಮ ರಂಗಭೂಮಿಯು ಯಶಸ್ವಿಯಾಗಿಲ್ಲ; ಯಶಸ್ವಿಯಾಗುವಂತೆ ಪ್ರಯತ್ನಿಸುವವರೂ ಇಲ್ಲ. ಈ ಬಗ್ಗೆ ಕೈಗೊಳ್ಳಬೇಕಾದ ಜಾಗ್ರತೆ ಮತ್ತು ಪರಿಶ್ರಮಗಳನ್ನು ಸ್ವಾನುಭವದಿಂದ ಇಲ್ಲಿ ವಿವೇಚಿಸಲಾಗಿದೆ.

ಶ್ರೀ ಗೌರೀಶ ಕಾಯ್ಕಿಣಿ, ಗೋಕರ್ಣ.

ನನ್ನ ಕೆಲವು ಕಲಾಪ್ರೇಮಿಗಳಾದ ಮಿತ್ರರು ಊರಿನ ಒಂದು ಶಿಕ್ಷಣ ಸಂಸ್ಥೆಯ ಸಹಾಯಕ್ಕಾಗಿ ಒಂದು ನಾಟಕವಾಡಲು ಗೊತ್ತುಪಡಿಸಿದರು. ಆಗ ತಾನೇ ನಮ್ಮ ಆಧುನಿಕ ನಾಟಕ ಯುಗದ ಪ್ರವರ್ತಕರಲ್ಲಿ ಒಬ್ಬರಾದ ಶ್ರೀ ರಂಗರ ಹೊಸ ನಾಟಕ "ಗೆಳೆಯ ನೀನು ಹಳೆಯ ನಾನು" ಬೆಳಕಿಗೆ ಬಂದು ವಿಮರ್ಶಕರ ಗಮನಕ್ಕೂ ಗೌರವಕ್ಕೂ ಪಾತ್ರವಾಗಿತ್ತು. ನನ್ನ ಗೆಳೆಯರು ಅದನ್ನೇ ಆಡುವದಾಗಿ ಸಂಕಲ್ಪಿಸಿದರು. ಆದರೆ ಈ ನಾಟಕದ ಪ್ರಯೋಗ ಅವರು ಎಣಿಸಿದಷ್ಟು "ಸುಲಭ"ವಿದ್ದಿಲ್ಲ. ಅದಕ್ಕೆ ಅನುಮತಿ ಸಿಗುವ ಮೊದಲು ನಾಟಕ ಕರ್ತರಿಗೆ ೧೦೦ ರೂ. ಶುಲ್ಕ ತೆರಬೇಕಿತ್ತು. ಆಗ ಈ ಮಿತ್ರರ ಪರವಾಗಿ ನಾನು ಶ್ರೀ ರಂಗರಿಗೆ ಕೇಳಿಕೊಂಡೆ—ಕಲಾಭಿಮಾನಿಗಳು ಧರ್ಮಾರ್ಥ ನಾಟಕ ಮಾಡಲಿದ್ದಾರೆ, ತಾವೂ ಧರ್ಮಾರ್ಥ ಸಮ್ಮತಿ ಕೊಡಬೇಕು ಎಂದು. ಆದರೆ ನಾಟಕಕಾರರು ಹಾಗೆಲ್ಲ ಭಾವನಾವಶರಾಗುವವರಲ್ಲ. ಅವರು ಬರೆದ ಉತ್ತರ ಸಂಕ್ಷೇಪವಾಗಿ ಹೀಗಿತ್ತು "ನಿಮ್ಮ ಮಿತ್ರರಿಗೆ ಬೇರೊಂದು ನಾಟಕ ಆಯ್ದುಕೊಳ್ಳಲು ಹೇಳಿರಿ. ಈ ನಾಟಕ ಬಿಟ್ಟುಕೊಡಲು ತಿಳಿಸಿರಿ. ಹೀಗೆ ಪ್ರಯೋಗಕ್ಕಾಗಿ ಶುಲ್ಕ ಬೇಡುವ ಪರಿಪಾಠ ಯಾರಾದರೊಬ್ಬರು ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಆರಂಭಿಸಲೇಬೇಕು. ಪರದೆ, ದೀಪ, ಬಣ್ಣ ಜಾಹಿರಾತು ಏನೆಲ್ಲ ಒದಗಿಸಿಕೊಳ್ಳಲು ದುಡ್ಡು ತೆರುವ ನಾಟಕವಾಡುವವರು ಬಡ ನಾಟಕಕಾರನಿಗೆ ಮಾತ್ರ ಒಂದು ಕಾಸೂ ಕೊಡುವದು ಕರ್ತವ್ಯವೆಂದಾಗಲಿ ಅಗತ್ಯವೆಂದಾಗಲಿ ಭಾವಿಸುವದಿಲ್ಲ. ಈ ದುಷ್ಟ ಚಟಕ್ಕೆ ತಡೆಬೀಳಬೇಕು. ನಾಟಕಕಾರನಿಗೂ ಹೊಟ್ಟೆಯಿದೆ ಸಂಸಾರವಿದೆ. ಜೀವಿತಾರ್ಥ ನಡೆಯಬೇಕು. ಇನ್ನು ನಿಮ್ಮ ಮಿತ್ರರು ಮಾಡುವ ಪ್ರಯೋಗಕ್ಕೆ ಎಲ್ಲ ಸಹಾಯ ಸಲಕರಣೆಗಳೂ ಪುಕ್ಕಟೆ ಸಿಗುವಂತಿದ್ದರೆ ನಾಟಕಕಾರನೂ ತನ್ನ ರಾಯಲ್ಟಿಯಲ್ಲಿ ನೂರಕ್ಕೆ ೬೦ರ ವರೆಗೂ ಸೂಟು ಬಿಡಬಹುದು..." ನಮ್ಮ ಮಿತ್ರರು ಈ ನಾಟಕದ ವಿಚಾರವನ್ನೇ ಬಿಟ್ಟರು ಇರಲಿ.

ಈ ಪ್ರಸಂಗದಲ್ಲಿ ಪ್ರಕಟವಾದ ಒಂದು ಪ್ರಮೇಯ ಇಂದಿನ ಕನ್ನಡ ರಂಗಭೂಮಿಯ ಬಹು ಮುಖದ ಸಮಸ್ಯೆಯ ಒಂದು ಮಗ್ಗಲು. ನಾಟಕಕಾರನಿಗೆ ನಾಟಕ ಪ್ರಯೋಗದ ಸಮ್ಮತಿಗಾಗಿ ಏನಾದರೂ ಹಣ ದೊರೆಯಬೇಕು. ಅದು ಯಾರಾದರೂ ತೆರಬೇಕು-ಎಂಬ ವಿವೇಕ ಇಲ್ಲವೇ ಆಗ್ರಹ ನಮ್ಮಲ್ಲಿ ಅನೇಕರಿಗೆ ಅನಿಸುವದಿಲ್ಲ. ಥಿಯೇಟರು, ರಂಗಸಜ್ಜೆ, ನಟ-ನಟಿಯರು ಬೆಳಕು ಥಳಕು ಇವೆಲ್ಲಕ್ಕೆ, ತಾಲೀಮುಗಳ ನಡುವೆ ಉಪಹಾರಕ್ಕೆ ನಾಟಕಾನಂತರ ಸಂತೋಷ ಕೂಟಗಳಿಗೆ, ನಟಕಕ್ಕೆ ಆಮಂತ್ರಿತರಾದ ಮಹಾ ಜನಗಳ ಅತಿಥಿ ಪೂಜೆಗೆ ನಮ್ಮಲ್ಲಿ, ಧಾರಾಳವಾಗಿ ಹಣ ಚೆಲ್ಲಲಾಗುತ್ತದೆ ಆದರೆ ಇದೆಲ್ಲ ಪ್ರಪಂಚಕ್ಕೆ ಮೂಲದ ಮೊತ್ತವನ್ನೆ ಒದಗಿಸಿದ ನಾಟಕಕಾರನ ನೆನಪು ಯಾರಿಗೂ ಇರುವದಿಲ್ಲ! ನಮ್ಮ ಹಳ್ಳಿಯ ಕಡೆಗೆ ಅಂಚೆಕಟ್ಟಿಗೆ ಯಾರಾದಾದರೂ ಕಾರ್ಡು ಬಂದರೆ ಅದನ್ನು ಓದುವದು ಯಾರೂ ತಪ್ಪೆಂದು ಭಾವಿಸುವದಿಲ್ಲ. ಏಕೆಂದರೆ ಯಾರೂ ಓದಬಾರದೆಂದಿದ್ದರೆ ಬರೆದವ ತೆರೆದ ಕಾರ್ಡಿನಲ್ಲಿ ಬರೆಯುತ್ತಿದ್ದನೇ? ಎಂದು ಮರುಸವಾಲು ಬರುತ್ತದೆ. ಆ "ನಿರುತ್ತರ ಕುಮಾರ"ರಿಂದ! ಹಾಗೆಯೇ ನಾಟಕಕಾರ ಒಮ್ಮೆ ಪುಸ್ತಕ ಪ್ರಕಟಿಸಿದ ಮಾತ್ರಕ್ಕೆ ಆ ನಾಟಕ ಸಾರ್ವಜನಿಕ ಸೊತ್ತು.-ಎಂಬ ಭಾವನೆ ನಮ್ಮ ಕಲಾರಸಿಕರಲ್ಲಿ ವಿಶೇಷ. ಯಾವದೇ ಉಪಯುಕ್ತ ವಸ್ತುವಿಗೆ ಯುಕ್ತವಾದ ಬೆಲೆಕೊಡುವದೂ ಭಾರವೆನಿಸುವಷ್ಟು ನಮ್ಮ ಸಾಮಾಜಿಕ ಪ್ರಜ್ಞೆ ವಿಕೃತವಾಗಿಬಿಟ್ಟಿದೆ ವಿಷಮ ಮಟ್ಟಕ್ಕೆ ಇಳಿದುಬಿಟ್ಟಿದೆ. ಶ್ರೀರಂಗರು ತಮ್ಮ ಪ್ರಯೋಗದ ಶುಲ್ಕವೇನೋ ೧೦೦ ರೂಪಾಯಿ ಇಟ್ಟರು. ಆದರೆ ೫ ೧೦-೨೦ ರೂ ಕೊಡಬೇಕೆಂದು ಸೂಚನೆ ಪ್ರಕಟಿಸಿದ ನಾಟಕಕಾರರಿಗೂ ನಮ್ಮ ನಾಟ್ಯವಿಲಾಸಿಗಳೂ ಸಂಪಾದನೆಗಾಗಿ ಪ್ರಯೋಗ ಮಾಡುವ ಕಸಬಿನ ನಟರೂ ಕೊಡುವದು ಸೊನ್ನೆಯೇ! ಅವರ ಕಸಬು ಕಂಡು ಬರುವದು ಲೋಕಪ್ರಿಯ ಉತ್ತಮೋತ್ತಮ ನಾಟಕಗಳ ಹೆಸರುಗಳನ್ನೇ ನಿದಾಕ್ಷಿಣ್ಯವಾಗಿ ಬದಲಿಸಿ ನಿರ್ಭಯವಾಗಿ ಅವನ್ನು ಆಡಿತೋರಿಸುವದರಲ್ಲಿ! ಕೆಲವೊಮ್ಮೆ ಒಂದು ನಾಟಕದ ಹೆಸರು ಬದಲಿಸಹೋಗಿ ಆ ಹೊಸ ಹೆಸರು ಇನ್ನೊಂದು ಹಳೆಯ ನಾಟಕದ ಹೆಸರಾಗಿ ಹೊಸದೊಂದು ದಿಗಿಲೆಬ್ಬಿಸುವದೂ ಉಂಟು!

ಈ ದುಷ್ಟ ಸಂಪ್ರದಾಯ ಆರಂಭವಾದದ್ದು ಹೇಗೆ? ಮೂಲತಃ ನಮ್ಮ ನಾಟ್ಯವಿಲಾಸಿಗಳು ವಿನೋದಕ್ಕಾಗಿ ನಾಟಕವಾಡುವವರು ಪ್ರಯೋಗ ಪರಿಜ್ಞಾನ ಕಲಿತದ್ದೆ ಕಂಪನೀ ನಾಟಕದವರಿಂದ. ನಮ್ಮ ಕನ್ನಡ ರಂಗಭೂಮಿ ಈ ಪಟ್ಟಿಗೆ ಎಂದಿನಿಂದಲೂ ಶಾಪಭ್ರಷ್ಟ ಕ್ಷೇತ್ರವಾಗಿದೆ. ನಮ್ಮ ರಂಗಭೂಮಿ ನಿಶ್ಚಿತವಾಗಿ ಎಂದೇ ಆರಂಭವಾಗಿರಲಿ. ದಿವಂಗತ ವರದಾಚಾರ್ಯರೂ, ಅನಂತರ ಗರುಡ ಸದಾಶಿವರಾಯರೂ ಶ್ರೀ ಗುಬ್ಬಿ ವೀರಣ್ಣನವರೂ ಕಂಪನಿಗೆ ನಾಟಕ ಆಯ್ದುಕೊಳ್ಳುವದಲ್ಲಿ ಯಾವ ರೀತಿ ಇಟ್ಟುಕೊಂಡಿದ್ದರೊ! ಆ ನೈತಿಕ ಮಟ್ಟದಿಂದ ಈಚೆಗೆ ಅಥವಾ, ಆಚೆಗೆ ಹಾಯ್ದು ಮಿಕ್ಕ ನಾಟಕ ಮಂಡಳಿಗಳು ಪ್ರಯೋಗಿಸುತ್ತಿದ್ದ ನಾಟಕಗಳತ್ತ ನೋಡಿದರೆ ಕನ್ನಡ ರಂಗ ದೇವತೆಯ ದುರ್ದೈವದ ದಶಾವತಾರಗಳೇ ನಮ್ಮನ್ನು ಕಂಗೆಡಿಸುತ್ತ ಬಂದಿವೆ.

ದಿವಂಗತ ಗರುಡ ಸದಾಶಿವರಾಯರೊಬ್ಬರೇ—ನನಗೆ ನೆನಪಿದ್ದ ಮಟ್ಟಿಗೆ—ತನ್ನ ನಾಟಕವನ್ನಷ್ಟೇ ತನ್ನ ರಂಗದಲ್ಲಿ ಆಡುವ ಪ್ರತಿಜ್ಞೆ ಮಾಡಿ ಕೊನೆಯುವರೆಗೂ ಅದನ್ನು ನಿರ್ವಹಿಸಿದ ಧೀರರಾಗಿದ್ದರು! ಶ್ರೀ ಹುಯಿಲಗೋಳ ನಾರಾಯಣರಾಯರ "ಸ್ತ್ರೀಧರ್ಮ ರಹಸ್ಯ" ಎಷ್ಟು ಕಂಪನಿಗಳು ಎಷ್ಟು ಹೆಸರು ಬದಲಿಸಿ ಆಡಿದರೋ ಅದು ಸ್ತ್ರೀಧರ್ಮಕ್ಕಿಂತ ಹೆಚ್ಚು ರಹಸ್ಯಮಯವಾಗಿದೆ! ಒಂದು ಕಂಪೆನಿಯ ನಟರು—ತಕ್ಕಮಟ್ಟಿಗೆ ಕನ್ನಡ ಓದ ಬರೆಯ ಬಲ್ಲವರು ಇನ್ನೊಂದು ಕಂಪನಿಯ ಪ್ರಸಿದ್ಧ ನಾಟಕ ಒಂದರ ಪ್ರಯೋಗಕ್ಕೆ ಹೋಗಿ ಹಿಂದಿನ ಬೆಂಚೋ ಚಾಪೆಯೋ ಹಿಡಿದು ಕೂಡ್ರುವನು. ನಾಟಕ ನಡೆದಂತೆ ಭರಭರನೆ ಒಬ್ಬಿಬ್ಬರು ಒಂದೊಂದು ಪಾತ್ರದ ಮಾತುಗಳನ್ನು ಬರೆದುಕೊಂಡು ಬಿಡಾರಕ್ಕೆ ಬರುವದು. ಕಡೆಗೆ ಒಟ್ಟಾಗಿ ಅವೆಲ್ಲ ಒಂದು ಆಕಾರಕ್ಕೆ ಇಳಿಸಿ, ಹೊಸ ಹೆಸರು—ಅನೇಕಸಲ ಅದೇ ಹೆಸರು - ಕೊಟ್ಟು ತಮ್ಮ ರಂಗಕ್ಕೆ ಏರಿಸುವದು! ಇದೇ ತಂತ್ರವನ್ನು ಒಂದು ದಶಕದ ಹಿಂದೆ ಹಲವು ವ್ಯಾವಸಾಯಿಕ ಕಂಪನಿಗಳು ಅನುಸರಿಸುತ್ತಿದ್ದವಂತೆ ಎಷ್ಟೋ ನಾಟಕಗಳು ವೇದಗಳಂತೆಯೇ "ಅಪೌರುಷೇಯ"ವಾಗಿದ್ದವು. ಒಬ್ಬರ ನಕಲು ಒಬ್ಬರು ಹೊಡೆದರೇನು. ಆ ಒಬ್ಬನೂ ಇನ್ನೊಬ್ಬನಿಂದಲೇ ನಕಲು ಹೊಡೆದವನು! ಈ ಬಗೆಯ 'ಸಹಜೀವನ'ದಿಂದ ಕಂಪೆನಿಗಳು 'ಜಾತ್ರೆ ಕಲೆಕ್ಷನ್' ಹೇರಳ ಶೇಖರಿಸುವಂತಾದರೂ ಇದರಿಂದ ಆದ ಬಹು ದೊಡ್ಡ ಪಾಪ ನಾಟಕಕಾರನೆಂಬ ಒಂದು ಘಟಕ ರಂಗಭೂಮಿಗೆ ಅತಿಮಹತ್ವದ್ದು. ಅವನನ್ನು ಬದುಕಿಸಿಯೇ ರಂಗಭೂಮಿ ಬಾಳಬೇಕು-ಎಂಬ ಕಲ್ಪನೆಯೇ ಮಾಯವಾದದ್ದು. ಮುಂದೆ ಇದೇ ರಂಗನೀತಿ ನಾಟ್ಯವಿಲಾಸಿಗಳೂ ಸ್ವಾಭಾವಿಕವಾಗಿ ಎತ್ತಿಕೊಂಡರು.

ಇದಕ್ಕೆ ಕೆಲವಟ್ಟಿಗೆ ನಾಟಕಕಾರರೂ ತಮ್ಮ ರೀತಿಯಲ್ಲಿ ನೆರವಾದರೆನ್ನಬೇಕು. ತಮ್ಮ ನಾಟಕ ಒಂದು ಕಂಪನಿ ಉಡಿಯಲ್ಲಿ ಹಾಕಿ ಕೊಂಡರೆ ಸರಿ. ತಾನು ಧನ್ಯ ಎಂಬಂತೆ ಅನೇಕ ಅನಾಮಿಕ ಲೇಖಕರು ಕನ್ನಡ ರಂಗಭೂಮಿಗಾಗಿ ಲೆಕ್ಕಣಿಕೆ ಹಿಡಿಯ ಹತ್ತಿದರು ಕಂಪನಿಯ ಒಡೆಯ ಒಬ್ಬ ಮೇಷ್ಟ್ರನ್ನೋ ಉಪಸಂಪಾದಕನನ್ನೋ ತರುಣ ವಕೀಲರನ್ನೊ ಗಂಟುಬಿದ್ದು ಕೈಹಿಡಿದು ಪ್ರೋತ್ಸಾಹ ಕೊಟ್ಟು ಅವರ ಪ್ರಸಿದ್ಧಿ ಪಯುರ್ತ್ಸುಕತೆಯನ್ನೆ ಪ್ರಯೋಜನಕ್ಕೆ ಹೂಡಿ ಅವರಿಂದ ತನಗೆ ಬೇಕಾದಂತೆ ನಾಟಕ ಬರೆಯಿಸಿಕೊಂಡು ಆ ಬಡಪಾಯಿಗಳ ಪತರಾಗ್ನಿಯ ಮೇಲೆ ತಮ್ಮ ಬೇಳೆ ಬೇಯಿಸಿಕೊಂಡು ಕಂಪನಿ ತೇಲಿಸಿಕೊಂಡು ಹೋಗುತ್ತಿದ್ದರು. ಸಾಮಾನ್ಯ ಮಧ್ಯ ಯುಗದಲ್ಲಿ ಇಂಗ್ಲೆಂಡ್

(೨೪ನೇ ಪುಟ ನೋಡಿರಿ)

SHETTY & COMPANY

Distributors, Manufacturers, Representatives & Wholesalers in Electricals,

OLD POST OFFICE ROAD,
Post Box No. 262,
COIMBATORE.

Distributors & Factory representatives for "RI" chokes, fluorescent starters and Battery eleminators.

Distributors for:

"SSE" Products for South India.
"SUPER" Soldering irons 25 watts to 1000 watts.
"SUPER" Public address equipments
"HILITE" Steel Fixtures for South India
"SNAPONE" Steel patties for Kerala State & Coimbatore District.
"ALFA" Ordinary & decorative fittings for tube lights.
"RCA' Public address equipments.
"MECOM" Immersion Heaters ranging from 1 to 4 K.W.
"GEC", "SEIMENS" & "JAURA" Table and ceiling fans.
"LPW" Plastic products for Kerala State & Coimbatore District.
"BHAKRA" Cables for South India

Dealers are requested to contact for their requirements to the sole distributors.

Specilised in Electrical & P. A. Appliances.
Wholesale & Retail

ಆಹಾರ ಸ್ವಾವಲಂಬನದ ಏಕೈಕ ಮಾರ್ಗ—

ಸಹಕಾರಿ ಕೃಷಿ

ಭಾರತದ ಸರ್ವಾಂಗೀಣಾಭಿವೃದ್ಧಿಗೆ ಆಹಾರ ಸ್ವಾವಲಂಬನೆಯು ಪರಿಹಾರವಾಗುವುದಾದರೆ, ಅದಕ್ಕೆ ತಾರಕೋಪಾಯ ಸಹಕಾರಿ ವ್ಯವಸಾಯ ಕ್ರಮವೆಂಬುದನ್ನು ಶ್ರೀ ಸಾಂಡೇಶ್ವರರು ಇಲ್ಲಿ ಪ್ರತಿಪಾದಿಸಿದ್ದಾರೆ.

ಶ್ರೀ ಜಿ. ಆರ್. ಸಾಂಡೇಶ್ವರ, ಧಾರವಾಡ.

ವ್ಯಕ್ತಿಯ ಏಳಿಗೆಗೆ ಸ್ವಾವಲಂಬನವೇ ಸಾಧನವಾಗಿರುವಂತೆ ಸಮಾಜದ ಏಳಿಗೆಗೆ ಸಹಕಾರವೇ ಸಾಧನವಾಗಿದೆ. ಸಹಕಾರವಿಲ್ಲದೆ ಸಂಸಾರವಿಲ್ಲ; ಹಾಗೆಯೇ ಸಮಾಜವೂ ಇಲ್ಲ. ಹಿಂದಿನ ಕಾಲದ ಸಮಾಜ ಜೀವನದ ಸುಖಸಂಪತ್ತಿನ ಅಭಿವೃದ್ಧಿಗೂ ನೆಮ್ಮದಿಗೂ ಪರರ ದುಃಖದಲ್ಲಿ ಸಮಭಾಗಿಗಳಾಗಿ ಸಹಾಯ ಸಲ್ಲಿಸಿ ದುಃಖ ದೂರೀಕರಿಸಬೇಕೆಂಬ 'ಸಹಕಾರ ಮಂತ್ರ'ದ ಅನುಷ್ಠಾನವೇ ಕಾರಣವಾಗಿದ್ದಿತು. ಸಮಾಜದಲ್ಲಿ ಸಹಕಾರವೂ, ತದಂತರ್ಗತವಾದ ಸಹಜೀವನವೂ, ಕ್ಷೀಣಿಸುತ್ತ ಬಂದಂತೆ, ಅನೈಕ್ಯವೂ ಬಡಿದಾಟಗಳೂ ಹೆಚ್ಚುತ್ತ ಬಂದವು; ಅದರ ಪರಿಣಾಮವಾಗಿ ಹಳ್ಳಿಗಳ ಸಾರ್ವಜನಿಕ ಕೆರೆ-ಕಟ್ಟೆಗಳೂ ಹಾದಿ-ಬೀದಿಗಳೂ ಹಾಳಾಗಿ ಹೋದುವು; ಅವುಗಳೆಲ್ಲ ತಿಪ್ಪೆಯ ಕುಪ್ಪೆಗಳಾದುವು, ಕೊಳಚೆಯ ಕೊಂತಗಳಾದುವು. ದ್ವೇಷಾಸೂಯೆಗಳು ಪ್ರಬಲಿಸಿ, ನೆರೆಮನೆಯ ಹಾಳನ್ನು ಕಾಣುವುದೇ ಬಾಳಿನ ಸಂತೋಷ ಎಂಬ ದುರ್ಬುದ್ಧಿಯು ತಾಂಡವವಾಡ ತೊಡಗಿತು. ಜನರಿಗಿಂತ ಚಿನ್ನ ಬೆಳ್ಳಿಗಳೇ ಹೆಚ್ಚಿನವೆಂಬ ದುರಾಶೆಯು ಹಳ್ಳಿಗಳ ಹಿರಿಯರ ಹೃದಯದಲ್ಲಿ ಮನೆಮಾಡಿಕೊಂಡು, ಹಳ್ಳಿಗಳ ದುಃಖಕ್ಕೆ ಕಾರಣವಾಯಿತು. ಪರಕೀಯರು ಬಂದು ಆಳುವಂತಾಯಿತು.

ಈಗ ಸ್ವಕೀಯ ಆಳಿಕೆಯಲ್ಲಿರುವ ನಮ್ಮ ರಾಷ್ಟ್ರದ ಪುನರುದ್ಧಾರಕ್ಕೆ ಹಳ್ಳಿಗಳ ಉದ್ಧಾರವೇ ಮೂಲಾಧಾರವೆಂದು ಎಲ್ಲರೂ ಹೇಳುತ್ತಾರೆ; ಆ ಹಳ್ಳಿಗಳ ಉದ್ಧಾರಕ್ಕೆ ಹಳ್ಳಿಗರಲ್ಲಿ ಪರಸ್ಪರ ಪ್ರೇಮಾದರ ಭಾವವನ್ನುಂಟು ಮಾಡುವಂತೆ ತಕ್ಕ ಯೋಜನೆ ಮಾಡುವುದೇ ಮುಖ್ಯವಾಗಿದೆ. ಅದಕ್ಕೆ ಸಹಕಾರವೇ ಸಾಧನೋಪಾಯವಲ್ಲವೆ? ಸಹಕಾರವು ಅಮೃತದಂತೆ ಜನಾಂಗ ಜೀವನವನ್ನು ಸದಾ ಜೀವಂತವಾಗಿಡುವ ಮಹೌಷಧವೇ ಸರಿ. ಆದರೆ, ಅದರಲ್ಲಿ ಜಾತಿ, ಮತ, ಪಕ್ಷ, ಪಂಗಡಗಳೆಂಬ ಸಂಕುಚಿತ ಸ್ವಾರ್ಥತೆಯು ಪ್ರವೇಶಿಸಿಬಿಟ್ಟರೆ, ರಾಕ್ಷಸರಿಗೆ ಅಮೃತ ಸಿಕ್ಕಿದಂತಾಗಿ, ಸಾತ್ವಿಕ ಜನರು ಕಷ್ಟನಷ್ಟಗಳಿಗೆ ತುತ್ತಾಗಬೇಕಾಗುವುದು. ಸರಕಾರವೂ ಧ್ಯೇಯನಿಷ್ಠರಾದ ಮುಖಂಡರೂ ಈ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ವರ್ತಿಸಿ, ದುರ್ಜನರನ್ನು ನಿಷ್ಕರುಣೆಯಿಂದ ಹೊರಗೆಳೆದು ಛೀಹಾಕಿ ದಂಡಿಸಬೇಕು. ಸಹಕಾರವು ಫಲಿಸಬೇಕಾದರೆ ಹಳ್ಳಿಗಳಲ್ಲಿಯ ಧನಿಕರೂ ಆಸ್ತಿವಂತರೂ ತಮ್ಮ ಸ್ವಾರ್ಥಲೋಲುಪತೆಯನ್ನು ಬದಿಗೊತ್ತಿ, ಮುಂದೆ ಬರಬೇಕು. ಅವರು ತ್ಯಾಗವನ್ನೂ ವಿನಯವನ್ನೂ ತೋರಲು ಹಿಂಜರಿದರೆ, ಸಾಮಾನ್ಯ ಜನತೆಯಾದರೂ ತಮ್ಮದೊಂದು ಕೂಟ ಕಟ್ಟಿಕೊಂಡು, ನಿಸ್ವಾರ್ಥಿಯಾದ ಮುಖಂಡನನ್ನಾರಿಸಿಕೊಂಡು ಸರಕಾರದ ಮತ್ತು ಸಾರ್ವಜನಿಕ ಸಂಸ್ಥೆಗಳ ಸಹಾಯ-ಸಲಹೆಗಳನ್ನು ಪಡೆದು ಕಾರ್ಯೋನ್ಮುಖರಾಗಬೇಕು. "ಸರ್ವಂ ಭಕ್ಷ್ಯಾಮಿ" (ಎಲ್ಲವೂ ನನ್ನ ಮನೆತನಕ್ಕೇ ಸಿಗಬೇಕ; ನಾನು ಈ ಹಳ್ಳಿಯ ರಾಜ) ಎಂಬ ದುರಹಂಕಾರಿಗಳಾದ ದರ್ಪಿಷ್ಠರನ್ನು ಹಾದಿಗೆ ತರಬೇಕು.

ನಮ್ಮ ಹಳ್ಳಿಗಳ ಸ್ಥಿತಿಯನ್ನು ಸುಧಾರಿಸಲು ಪ್ರತಿಯೊಂದು ಹಳ್ಳಿಗೂ, ಆ ಹಳ್ಳಿಗೆ ಸಾಲುವಷ್ಟು ಕಟ್ಟುಪಳಿಯ ಜಮೀನುಗಳೂ, ಬಡವರಿಗೆ ಬಿಡುವೇಳೆಯಲ್ಲಿ ಉತ್ಪನ್ನ ತರುವ ಗೃಹ ಕೈಗಾರಿಕೆಗಳೂ ಇರಬೇಕಾಗುವುದು. ಸರಕಾರವು ಸಾವಿರಾರು ಕೋಟಿ ರೂಪಾಯಿಗಳ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಳ್ಳುತ್ತಿರುವಂತೆ ಹಳ್ಳಿಗಾಗಿಯೇ ಒಂದು ಪ್ರತ್ಯೇಕ ಯೋಜನೆಯನ್ನು ಏಕೆ ಮಾಡಬಾರದು? ಸದ್ಯಕ್ಕೆ ನಮ್ಮ ದೇಶದಲ್ಲಿ ಶೇಕಡಾ ೭೧ ರಷ್ಟು ಜನರು ಭೂಮಿಯ ಸಾಗುವಳಿಯ ಮೇಲೆಯೇ ಅವಲಂಬಿಸಿರುವರು. ೬೦ ವರ್ಷಗಳ ಹಿಂದಿನ (೧೮೯೧ರಲ್ಲಿ) ಖಾನೆಷುಮಾರಿ ಕಡಿತವನ್ನು ನೋಡಿದರೆ ಆಗ್ಗೆ ಶೇಕಡಾ ೫೧ರಷ್ಟು ಜನರು ಮಾತ್ರವೇ ಭೂವ್ಯವಸಾಯದ ಮೇಲೆ ಅವಲಂಬಿಸಿದ್ದುದು ಸ್ಪಷ್ಟವಾಗುವುದು. ನಾಗರಿಕತೆಯೂ, ಅದರ ಯಾಂತ್ರಿಕ ಸಲಕರಣೆಗಳೂ ಹೆಚ್ಚುತ್ತ ಹೋದಂತೆ, ಭೂವ್ಯವಸಾಯದ ಮೇಲಿನ ಭಾರವೂ ಬೆಳೆಯುತ್ತ ಬಂದಿರುವ ಈ ದುಃಸ್ಥಿತಿಯು ಯಾರಿಗೆ ತಾನೇ ದುಃಖ ಉಂಟುಮಾಡದೇ ಇದ್ದೀತು? ಜನಸಂಖ್ಯೆಯು ಏರುತ್ತ ಬಂದಿದೆ ಎನ್ನಬಹುದು; ಆದರೆ ಆ ಪ್ರಮಾಣಕ್ಕನುಸರಿಸಿ ಸಾಗು ಜಮೀನು ಹೆಚ್ಚಬೇಕಾಗಿದ್ದಿತಲ್ಲವೇ? ವಸ್ತುಸ್ಥಿತಿ ಹೀಗಾಗಿರುವುದಿಲ್ಲ. ಸ್ವರಾಜ್ಯವು ಬಂದು ೧೨ ವರ್ಷಗಳು ಉರುಳಿ ಹೋದರೂ ಸರಕಾರವು ಕೃಷಿ ವಿಸ್ತರಣಾ ಕಾರ್ಯದಲ್ಲಿ ತೀರ ಅಸಮರ್ಥವಾಗಿದೆ. ಪಡಬಿದ್ದ ಜಮೀನುಗಳನ್ನು ಸಾಗುವಳಿಗೆ ತರುವುದನ್ನೇ ಕೇಂದ್ರ ಮತ್ತು ರಾಜ್ಯಸರಕಾರಗಳು ತಮ್ಮ ಯೋಜನೆಗಳ ಪ್ರಪ್ರಥಮ ಕಾರ್ಯವಾಗಿಟ್ಟುಕೊಳ್ಳಬೇಕಾಗಿದ್ದಿತು. ಹಾಗೆ ಮಾಡಿದ್ದರೆ, ಆಹಾರ ಧಾನ್ಯಗಳಿಗಾಗಿ ಪ್ರತಿವರ್ಷವೂ ನೂರಾರು ಕೋಟಿ ರೂಪಾಯಿ ರಕಮನ್ನು ವಿದೇಶಗಳಿಗೆ ಕಳುಹಿಸುವುದು ನಿಲ್ಲುತ್ತಿದ್ದಿತು. ಭಾರತದಲ್ಲಿ ಸಾಗುವಳಿಗೆ ತಕ್ಕುದಾದ ಜಮೀನು ೭೧ ಕೋಟಿ ೫೩ ಲಕ್ಷ ಎಕರೆಯಷ್ಟಿದ್ದು, ಕೇವಲ ೩೦ ಕೋಟಿ ೨೪ ಲಕ್ಷ ಎಕರೆಯಷ್ಟು ಮಾತ್ರವೇ ಈಗ ಸಾಗುವಳಿಯಲ್ಲಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ಎರಡು ಪಂಚವಾರ್ಷಿಕ ಯೋಜನೆಗಳ ಪರಿಣಾಮವಾಗಿಯೂ ಕೂಡಾ ಸಾಗುವಳಿಗೆ ತಂದಿರುವ ಒಟ್ಟು ಜಮೀನೆಂದರೆ ಕೇವಲ ೩೭ ಲಕ್ಷ ಎಕರೆ! ಇದೇ ಪ್ರಮಾಣದಿಂದ ಕಾರ್ಯನಡೆದರೆ ಎಲ್ಲ ಜಮೀನೂ ಸಾಗುವಳಿಗೆ ಬರಲು ಒಂದು ನೂರು ವರ್ಷ ಬೇಕಾದೀತು! ಅಷ್ಟರೊಳಗೆ ಈಗಿನ ಜನಸಂಖ್ಯೆಯು ಇಮ್ಮಡಿಯಾಗಿ ಬೆಳೆದೀತು.

ಸ್ವರಾಜ್ಯದ ಪೂರ್ವದಲ್ಲಿ ಮಹಾತ್ಮಾ ಗಾಂಧಿಯವರು ತಮ್ಮ ರಾಜಕೀಯಾಂದೋಲನದ ಉದ್ದೇಶವನ್ನು ಹೇಳುತ್ತ ಹೀಗೆಂದಿದ್ದರು—"ಪ್ರತಿವರ್ಷವೂ ನಮ್ಮ ದೇಶವು ವಿದೇಶಗಳಿಂದ ೬೦ ಕೋಟಿ ರೂಪಾಯಿಗಳ ಬಟ್ಟೆಯನ್ನು ತರಿಸಿಕೊಳ್ಳುತ್ತಿದೆ. ಇದನ್ನು ನಿಲ್ಲಿಸಿ, ಜನತೆಯನ್ನು ಅನ್ನವಸ್ತ್ರದ ಮಟ್ಟಿಗಾದರೂ ಸ್ವಾವಲಂಬಿಯಾಗುವಂತೆ ಮಾಡುವುದೇ ನನ್ನ ರಾಜಕೀಯ ಚಳವಳಿಯ ಉದ್ದೇಶವಾಗಿದೆ. ಆ ಉದ್ದೇಶವನ್ನು ಈಡೇರಿಸಿಕೊಳ್ಳಲು, ದೇಶವು ಸ್ವತಂತ್ರವಾಗಲೇಬೇಕು." ಈಗ ಆಗಿರುವುದೇನು? ಪ್ರತಿವರ್ಷವೂ ನಮ್ಮ ಕೇಂದ್ರ ಸರಕಾರವು ನೂರು ಕೋಟಿ ರೂಪಾಯಿ ಬೆಲೆಯ ಧಾನ್ಯಗಳನ್ನು ಪರದೇಶಗಳಿಂದ ತರಿಸುತ್ತಿದೆ! ಇದಕ್ಕಿಂತ ಹೆಚ್ಚು ಹಾಸ್ಯಾಸ್ಪದವಾದ ಮತ್ತು ಕ್ರೂರವಾದ ಪರಾವಲಂಬನ ಸ್ಥಿತಿ ಬೇರೇನಿದೆ? ಪಡಬಿದ್ದ ಜಮೀನುಗಳಲ್ಲಿ ಹಿಂದಿನ ಕಾಲದಲ್ಲಿ ಉತ್ತಮ ಬೆಳೆಯಾಗುತ್ತಿದ್ದವು. ಅವುಗಳಿಗೆ ಹೆಚ್ಚು ದೊಡ್ಡ ನೀರಾವರಿ ಕಾಮಗಾರಿಗಳಾಗಲಿ, ದೊಡ್ಡ ಯಂತ್ರೋಪಕರಣಗಳಾಗಲಿ ಅವಶ್ಯವಿಲ್ಲ. ಅವಶ್ಯವಿರುವುದೆಂದರೆ ಸರಕಾರದಲ್ಲಿ ಈ ಬಗ್ಗೆ ಮನಃಪೂರ್ವಕವಾದ ಆಸಕ್ತಿ ಮತ್ತು ಶ್ರದ್ಧೆ. ನಮ್ಮ ದೇಶದಲ್ಲಿ ಬಟ್ಟೆಗಿರಣಿಗಳು, ಸಕ್ಕರೆ ಕಾರಖಾನೆಗಳು, ಸಿಮೆಂಟ್, ಕಬ್ಬಿಣ, ಗೊಬ್ಬರದ ಕಾರಖಾನೆಗಳೂ ಹೆಚ್ಚುತ್ತ ಹೋಗಿವೆಯೇ ಹೊರತು, ಪಡಬಿದ್ದ ಹಾಗೂ ಹೊಸ ಜಮೀನುಗಳನ್ನು ಸಾಗುವಳಿಗೆ ತರುವ ಬಗ್ಗೆ ದೊಡ್ಡ ಪ್ರಮಾಣದ ಯಾವ ಯೋಜನೆಯೂ ಮಾಡಲ್ಪಟ್ಟಿರುವುದಿಲ್ಲ. ಉದ್ಯಮಗಳ ಅಭಿವೃದ್ಧಿಯೊಂದಿಗೆ ಕೃಷಿಯ ಅಭಿವೃದ್ಧಿಯೂ ಆಗಬೇಕಾಗಿದ್ದಿತು. ಆದರೆ, ಕೃಷಿವಲಯಗಳ ಮಾತನ್ನು ಕೇಳುವವರಾರು? ನಮ್ಮ ರಾಜ್ಯ ಮತ್ತು ಕೇಂದ್ರ ಶಾಸನ ಮಂಡಲಗಳಲ್ಲಿ ಜನತೆಯ (ಬಹುಸಂಖ್ಯಾತ ಸಮಾಜಗಳ) ಪ್ರತಿನಿಧಿಗಳೇ ಬಹುಮತದಲ್ಲಿರುವರಾದರೂ ಅವರಲ್ಲಿ ಸ್ವತಃ ಕೃಷಿಯಿಂದ ಜೀವಿಸುವವರೆಷ್ಟು ಮಂದಿ? ಅವರಿಗೆ ಬಡ ಕೃಷಿಕರ ನಿಜವಾದ ಪರಿಸ್ಥಿತಿಯು ಅರಿವೆಂತಾಗಬೇಕು? ಎಲ್ಲಕ್ಕೂ ಅನ್ನವೇ ಮೂಲವೆಂದು ಎಲ್ಲರೂ ಬಾಯಿ ತುಂಬ ಭಾಷಣ ಮಾಡುತ್ತಾರೆ; ಆದರೆ ಅನ್ನದ ಮಟ್ಟಿಗೆ ಮೊಟ್ಟಮೊದಲು ದೇಶವನ್ನು ಪೂರ್ಣ ಸ್ವಾವಲಂಬಿಯಾಗಿ ಮಾಡಬೇಕೆಂಬ ಬುದ್ಧಿ ಯಾಕೆ ಬರಬಾರದು? ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡಿದ ವೆಚ್ಚದಿಂದ ನಾವು ಸಾಧಿಸಿರುವ ಅನ್ನ ಸ್ವಾವಲಂಬನವಾದರೂ ಎಷ್ಟು? ಮೊನ್ನೆ ಮೊನ್ನೆ ಕೇಂದ್ರದ ಆಹಾರ ಮಂತ್ರಿಗಳೂ ಅರ್ಥ ಸಚಿವರೂ ಯುರೋಪ್ — ಅಮೇರಿಕೆಗಳಲ್ಲಿ ಸಂಚಾರ ಮಾಡಿ "ಅನ್ಯಧಾನ್ಯ"ಗಳ ಬಗ್ಗೆ ದೊಡ್ಡ ಮೊತ್ತದ ಸಾಲ ಕೇಳಿಕೊಂಡು ಬಂದರು! ಎಂತಹ ನಾಚಿಕೆಗೇಡಿನ ಸ್ಥಿತಿ ಇದು!!

ಇಂತಹ ಪರಿಸ್ಥಿತಿಯನ್ನು ಸುಧಾರಿಸಲು ಸಹಕಾರವೂ ಸಹಕಾರೀ ಕೃಷಿಯೂ ಉತ್ತಮ ಸಾಧನಗಳೆನ್ನಬೇಕು. ಪ್ರತಿ ಹಳ್ಳಿಯಲ್ಲಿಯೂ ಸೇವಾ ಸಹಕಾರಿ ಸಂಘಗಳನ್ನು ಸಂಘಟಿಸಿಕೊಂಡು ಕ್ಷಿಪ್ರವಲ್ಲಿಯೇ ಸಹಕಾರೀ ಕೃಷಿ ಪದ್ಧತಿಯನ್ನು ಜಾರಿಗೆ ತರಬೇಕು. ಈ ಕಾರ್ಯಕ್ಕೆ ಜನತೆಯೇ ಮುಂದಾಗಬೇಕು. ಆಯಾ ಹಳ್ಳಿಯ 'ಪ್ರಮುಖ'ರೆಂಬ ಆಸ್ತಿ ದ್ರವ್ಯಾಧಿಕಾರ ಸಂಪನ್ನರಿಂದ ಇದಕ್ಕೆ ಆರಂಭದಲ್ಲಿ, ಪ್ರತ್ಯಕ್ಷಾಪ್ರತ್ಯಕ್ಷವಾದ ಪ್ರತಿಭಟನೆಗಳುಂಟಾಗಬಹುದು. ಆದರೆ ಊರಿನ ಸಾಮಾನ್ಯ ಜನತೆಯು ಅದಕ್ಕೆ ಸೊಪ್ಪು ಹಾಕದೆ, ಯಾವ ಬಗೆಯ ಘರ್ಷಣೆಗೂ ಅವಕಾಶ ಕೊಡದೆ, ಸರಕಾರದ ಸಹಾಯ ಸಲಹೆಗಳನ್ನು ಪಡೆದುಕೊಂಡು ಕಾರ್ಯಾರಂಭ ಮಾಡಬೇಕು. ಆದರಿಂದ, ಅಲ್ಪಸಂಖ್ಯಾತರ ಸಹಕಾರಕ್ಕೆರವಾಗಬೇಕಾದರೂ, ಬಹುಸಂಖ್ಯಾತರಾದ ಬಡವರು ತಮ್ಮ ಏಳಿಗೆಯನ್ನು ತಾವೇ ಸಾಧಿಸಿಕೊಳ್ಳುವಂತಾಗುವುದು. ಜಿಲ್ಲೆಯ ಮತ್ತು ತಾಲೂಕುಗಳ ಅಧಿಕಾರಿಗಳು ಕೂಡಾ ಈ ವಿಷಯದಲ್ಲಿ ಬಡಜನರಿಗೆ ಬೆಂಬಲವಾಗಿ ನಿಂತು, ಎಲ್ಲ ಬಗೆಯ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಹಾಗೆ ಮಾಡಿದಲ್ಲಿ ಸಹಕಾರದ ಮಂತ್ರವಾಣಿಯು ಬೇಗನೇ ಫಲಿಸುವಂತಾಗುವುದು. ದುಡಿತವೇ ದುಡ್ಡು, ಹಾಗೂ ಜನಶಕ್ತಿ (man power)ಯೇ ರಾಜ್ಯದ ಜೀವಾಳ ಎಂಬ ಸಿದ್ಧಾಂತಗಳನ್ನು 'ಸಹಕಾರ'ಕ್ಕಿಂತ ಹೆಚ್ಚು ಸುಖಕರವಾಗಿಯೂ ವೇಗವಾಗಿಯೂ ಆಚರಣೆಗೆ ತರುವ ಬೇರೆ ಮಾರ್ಗವೇ ಇರುವುದಿಲ್ಲವೆನ್ನಬಹುದು.

ಸದ್ಯದ ಸ್ಥಿತಿ

ಸದ್ಯಕ್ಕೆ ನಮ್ಮ ದೇಶದಲ್ಲಿರುವ ಸಾಗುವಳಿ ಜಮೀನನ್ನು ಹಂಚಿ ಹಾಕಿದರೆ ಒಂದು ವ್ಯಕ್ತಿಗೆ ಒಂದು ಎಕರೆಯಷ್ಟೂ ಬರುವುದಿಲ್ಲ. ಅಂದ ಮೇಲೆ ಜನಸಂಖ್ಯೆಯ ಎಷ್ಟೊಂದು ದೊಡ್ಡ ಭಾಗದವರು ಅರೆಹೊಟ್ಟೆ ಉಂಡು ಜೀವಿಸುತ್ತಿದ್ದಾರೆಂದು ಬೇರೆ ಹೇಳಬೇಕೆ? ಈ ಕುರಿತು ಸರಕಾರವು ನಡೆಸಿರುವ 'ಪರಿಶೀಲನೆ'ಯ ಅಂಕೆ-ಅಂಶಗಳು ಹೃದಯ ದ್ರಾವಕವಾಗಿವೆ. ಸಾಗುವಳಿಯಿಂದ ಹೊಟ್ಟೆ ಹೊರಕೊಳ್ಳುವ ದುಡಿಮೆಗಾರರ ಕುಟುಂಬಗಳಲ್ಲಿ ಶೇಕಡಾ ೫೦ರಷ್ಟು ಕುಟುಂಬಗಳಿಗೆ ಸ್ವಂತದ್ದಾಗಲಿ, ಗೇಣಿಯದಾಗಲಿ ಜಮೀನು ಇರುವುದಿಲ್ಲ! ಅವರೆಲ್ಲರೂ ಬೇಸಾಯದ ಕಾಲ ಮುಗಿದ ಮೇಲೆ ನಿರುದ್ಯೋಗಿಗಳಾಗುತ್ತಿದ್ದಾರೆ. ಹಾಗೂ ಗಟ್ಟಬೆಟ್ಟಗಳ ಕಾಫಿ—ಅಡಿಕೆ ತೋಟಗಳ ಜೀತದಾಳುಗ

(೨೨ನೇ ಪುಟ ನೋಡಿರಿ)

ವಚನಶಾಸ್ತ್ರ ರಹಸ್ಯ

ವಚನಸ್ಯ ಕಿಂ ದುರ್ಲಭಮ್? ಅಥವಾ ಮಾತಿಗೆ ಬರಗಾಲವೇನು ಎಂಬ ಉಕ್ತಿ ಯಾನೆ ಗಾದೆ ನಮಗೆಲ್ಲ ಚಿರಪರಿಚಿತವಿದೆ. ಈ "ವಚನ ಶಾಸ್ತ್ರದ ರಹಸ್ಯವನ್ನು ಭೇದಿಸುವ ಸಾಹಸವನ್ನಿಲ್ಲಿ ನಾವು ಕಾಣಬಹುದು.

ಶ್ರೀ ಬಿ. ಎಚ್. ಶ್ರೀಧರ, ಎಂ. ಎ., ಕುಮಟಾ.

ಆಡಿದ ಮಾತಿಗೆ ತಪ್ಪುವುದಕ್ಕೆ ವಚನವೆಂದು ಹೆಸರು. ಭಾಷಾಶಾಸ್ತ್ರದ ಹೊಸ ಸಂಶೋಧನೆಯ ಪ್ರಕಾರ 'ವಂಚನ' ಎಂಬ ನಾಮಪದದ ನಡುವಣ ಬಿಂದುವು Syncope ಲುಪ್ತವಾಗಿ 'ವಚನ'ವೆಂದಾಯಿತು. 'ವಚ್' ಎಂಬ ಧಾತುವಿಗೆ ಕೊಂಕಣಿಯಲ್ಲಿ 'ಹೋಗು' ಎಂಬರ್ಥವಿದೆ. ಆದುದರಿಂದ ವಚನ ಕೊಟ್ಟದ್ದರ ಅರ್ಥವು ಆದರಿಂದ ಮೊದಲೇ ಹೊರಟು ಹೋಗಿರುತ್ತದೆ.

ವಚನಶಾಸ್ತ್ರದ ಮೂಲಭೂತ ತತ್ವವೆಂದರೆ "Appearance in Reality ತೋರಿಕೆಯೇ ನಿಜ" ಎಂಬುದೇ ಆಗಿದೆ. ವಚನದಲ್ಲಿ (ಮಾತಿನಲ್ಲಿ ಮತ್ತು ಬರಹದಲ್ಲಿ) ಅರ್ಥದ ತೋರಿಕೆಯಿರುವುದಲ್ಲದೆ ಅರ್ಥವಿಲ್ಲ. ಏಕೆಂದರೆ ಮೆಹರ್ ಬಾಬಾ ಹೇಳಿದ್ದಾನೆ— "Existence is substance and life is a shadow ಅಸ್ತಿತ್ವವು ವಸ್ತುಸತ್ಯ, ಜೀವನವು ಕೇವಲ ಛಾಯೆ'' ಎಂದು.

ವಚನಕ್ಕೆ ಭಾರತದಲ್ಲಿ ಎಂದೂ ದಾರಿದ್ರ್ಯವಿಲ್ಲ. ಭಾರತದ ವೀರರು ಯಾವಾಗಲೂ ವಚನಸಂಪನ್ನರು. ವಚನವೀರರೇ ವರಿಷ್ಠವೀರರು. ವಚನವಾಗದಿರುವ ಅರ್ಥವನ್ನು ಹೇಳುವುದೇ ವಚನದ ಕರ್ತವ್ಯ. ಅದು ಪರಿಷ್ಕಾರ ಶೀಲವಾದುದರಿಂದ ವಕಾರಾದಿಯಾಯ್ತು; ಆದರ ಛಂದ ಅನುಪಮವಾದುದರಿಂದ ನಡುವೆ ಚಕಾರ ಬಂತು. ಅದರಿಂದ ನಮಸ್ಕಾರ ಸಂಪಾದನೆಯಾಗುವುದರಿಂದ ಅದರ ಅಂತ್ಯದಲ್ಲಿ ನಕಾರ ಬಂತು.

ವಚನವೆಂಬ ಭಾವನಾಮವು ನಪುಂಸಕ ಲಿಂಗದಲ್ಲಿದೆ ಏಕೆಂದರೆ ಅದು ಸ್ತ್ರೀ-ಪುರುಷರಿಬ್ಬರಿಗೂ ಸಮಾನತೆಯನ್ನು ತೋರಿಸುತ್ತದೆ. ಇಂದಿನ ಪ್ರಜಾಪ್ರತಿನಿಧಿ ಪ್ರಭುತ್ವದ ನಿಯಮದಂತೆ ವಕಾರವು ಸ್ವರವನ್ನೂ ಚಕಾರವು ವ್ಯಂಜನವನ್ನೂ ನಕಾರವು ಅನುನಾಸಿಕವನ್ನೂ ಪ್ರತಿನಿಧಿಸುತ್ತವೆ. ವಕಾರವು ಪೂರ್ಣ ಸ್ವರವಲ್ಲವಾದುದರಿಂದ ವಚನವನ್ನು (ಮಾತಿನಿಂದಾಗಲಿ, ಬರಹದಿಂದಾಗಲಿ) ಸಂದಿಗ್ಧ ಧ್ವನಿಯಿಟ್ಟೇ ಕೊಡುವುದು ಸಾಮಾನ್ಯ ನಿಯಮ. ಅಂಥ ಸಂದೇಹದ ಒಳದನಿಯನ್ನು ವ್ಯಂಜಿಸುವುದು ಚಕಾರವೆಂಬ ವ್ಯಂಜನದ ಕೆಲಸ. ಅದನ್ನು ಮೂಗಿನಲ್ಲೇ ಮುಕ್ತಾಯಗೊಳಿಸುವುದು ಅನುನಾಸಿಕವೆನಿಸಿದ ನಕಾರದ ಕೆಲಸ.

ಅನುಭವದ ಪರಿಷ್ಕಾರವೇ ಶಾಸ್ತ್ರ ವಚನದನುಭವವನ್ನು ಪರಿಷ್ಕರಿಸಿದಾಗ ವಚನಶಾಸ್ತ್ರ ಹುಟ್ಟಿತು. ವಚನದರ್ಶನವನ್ನು ಕಂಡವನು ಚ್ಯವನ; ಮಾತಿನ ಅರ್ಥಕ್ಕೆ ಚ್ಯುತಿ ಬಂದಾಗ ಅವನಿಗೆ ವಚನದ ಸಾಕ್ಷಾತ್ಕಾರವಾಯ್ತು. ಚಿನ್ನದಿಂದ ವಿವಿಧ ಆಭರಣಗಳನ್ನು ತಯಾರಿಸಿದಂತೆ ವಚನವೆಂಬ ಮೂಲದ್ರವ್ಯದಿಂದ ವಿವಿಧ ಸಾಮಾನುಗಳನ್ನು ಉತ್ಪಾದಿಸಲಾಗಿದೆ:

ವಚನಕಾರುಣ್ಯ=Lip-sympathy.
ವಚನಶೌರ್ಯ=Verbal heroism.
ವಚನೌದಾರ್ಯ=Verbal generosity.
ವಚನಸಹಕಾರ=Verbal co-operation
ವಚನಶಾಸ್ತ್ರ=The science of breaking promises.
ವಚನಧರ್ಮ=Gossipping.
ವಚನಸತ್ಯ = A lie.
ವಚನವೇದಾಂತ = Psendo-Vedanta

ವಚನ ಸಾಹಿತ್ಯ, ವಚನ ಸಂಗೀತ, ವಚನ ಶಿಕ್ಷಣ, ವಚನ ವ್ಯಾಪಾರ, ವಚನ ಆಡಳಿತ, ವಚನ ವ್ಯವಹಾರ ಎಂಬೀ ಎಲ್ಲವುಗಳಲ್ಲೂ ಅರ್ಥ ವಂಚನೆಯು ಸರ್ವ ಸಾಧಾರಣವಾಗಿದೆ.

ಅರ್ಥ ವಂಚನೆಯಲ್ಲಿ ಭಾವಾರ್ಥ, ಧನಾರ್ಥಗಳೂ ಸೇರುತ್ತವೆ. ಕೊಟ್ಟವರಿಗೆ, ಕೊಡಬೇಕಾದವರಿಗೆ ಕೊಡುವುದೆಂದು ಅರುಚಿಕರ. ಕಾಗದಗಳಿಗೆ ಪ್ರತ್ಯುತ್ತರವನ್ನು ಕಾಲಕ್ಕೆ ಸರಿಯಾಗಿ ಬರೆಯುವುದು ಕೂಡ ಈ ದಿನಮಾನದಲ್ಲಿ ಅಧರ್ಮ. ಬರವಣಿಗೆಯ ಮೂಲಕ ವಚನವಿತ್ತರೆ ಅದನ್ನು ಪೂರಯಿಸಲು ಒತ್ತಾಯ ಬರಬಹುದೆಂಬ ಹೆದರಿಕೆ ಭಾರತೀಯರನೇಕರಿಗಿನ್ನು ಅತಿ ಹೆಚ್ಚು. ಆದುದರಿಂದ ಹಿಂದಿನ ಸುಲ್ತಾನರಂತೆ (ಕಲೆಕ್ಟರರಿಂದ ಹಿಡಿದು ಖಾಲಿ ಮನುಷ್ಯನ ವರೆಗೆ) ಎಲ್ಲ ದೊಡ್ಡ ಮನುಷ್ಯರೆಂದುಕೊಂಬವರೂ ಎದುರಾದಾಗ ಬಾಯುಣ್ಣುವಷ್ಟನ್ನೇ ತೋರಿಸುವುದು ಸದಾಚಾರವೆಂದ ಕೊಂಡಂತಿದೆ. ವಚನ ಶಾಸ್ತ್ರದ ರಹಸ್ಯವಿರುವುದಿಲ್ಲಿ. ಬಾಯಲ್ಲೇಕೆ ನಿಷ್ಠುರ? "ಕಾರ್ಯಕಾಲೇಚ ನಿಷ್ಠುರಃ" ಎಂದಿರುವುದೇ ವೈಶ್ಯ ಯುಗದ ಕಾಲನೀತಿ. ಈ ಅನಿಷ್ಠುರ ವಚನದ ಅಭ್ಯಾಸವಿಂದು ಮೈಸೂರು ಕರ್ನಾಟಕಗಳಲ್ಲಿ ಅತಿ ಹೆಚ್ಚು. ಎದುರಿಗೆ ಬೇಕಾದರೆ ವಚನಾಮೃತದ ಜೊತೆಗೆ ತಿಂಡಿ-ತೀರ್ಥಗಳ ಊಟ-ಉಪಚಾರಗಳ ಪ್ರದಾನವೂ ನೇರಬಹುದು. ಆದರೆ ನೀವು ಬೆನ್ನು ಹಾಕಿದ ಮರುಗಳಿಗೆಯಲ್ಲಿ ಮರುಸ್ಥಳದ ನದಿಯಂತೆ ನಿಮ್ಮ ಆತಿಥ್ಯದಾತರ ವಚನ ಇಂಗಿ ಹೋಗುತ್ತದೆ. ಕಾಗದ-ತಂತಿಗಳಿಗೆ ಉತ್ತರವನ್ನು ಬೇಕಾದಾಗ ಕೊಡದಿರಬಹುದು. ಏಕೆ? ಹೊಳೆ ದಾಟಿದ ಮೇಲೆ ಅಂಬಿಗರ ಮಿಂಡ! "ಉಪಾಧ್ಯಾಯಾಶ್ಚ ವೈದ್ಯಾಶ್ಚ ಲೇಖಕಾಃ ಸೇವಕಾಃ ಖಲು! ಉತ್ತಮರ್ಣಾ ಉಪಗಣಾಃ ಕಾರ್ಯಾಂತೇ ಚಾಪ್ರಯೋಜಕಾಃ" ಅಲ್ಲವೇ?

ವಚನ ಸಂಬಂಧವೆಂಬುದು ಹಾದಿಹೋಕರ ಗೆಳೆತನಕ್ಕಿಂತಲೂ ತೆಳ್ಳಗಿನದು. ಅದು ಬೆಳಕಿಗಿಂತ ಬೆಳ್ಳಗೆ, ಗಾಳಿಗಿಂತ ತೆಳ್ಳಗೆ, ಅದರ ಅರ್ಥವು ವಾಮನನಿಗಿಂತ ಕುಳ್ಳ. ತನ್ನನ್ನು ನಂಬಿದವರನ್ನದು ಬಲಿ ತೆಗೆದು ಕೊಳ್ಳುತ್ತದೆ. "ಗಂಡಸಾದರೆ (ಹೆಂಗುಸಾದರೆ ಸಹ) ನಿನ್ನ ಬಲಿ ಕೊಡುವೆಯೇನು?'' ಎಂದು ಅದರ ಸವಾಲು.

"ವಚನವೆಂದರೆ ಮಾಯೆ, ವಚನವೆಂದರೆ ಜಾದು, ವಚನವೇ ಮಂತ್ರ ಸರ್ವ ಕಾರಣಿಗಳಿಗು! ವಚನ ಸರ್ವಸ್ವ ಕೇಳಯ್ಯಾ" ಎಂಬುದು ನಿತ್ಯಸತ್ಯ. ವಚನ ವಿದ್ಯೆಯು ಅರುವತ್ತೈದನೆಯ ಕಲೆ. ಅದರ ನುಣ್ಪುಗರ, ಚೆಂಗದಿರ, ಮಿದುವೆಚ್ಚೆಯ, ಸುಕುಮಾರ ಪರಿಸರ್ಪಣದ, ಸುಮಧುರ ಸ್ವರ ಸಂಪ್ರಚೋದನೆಯ, ಥಳುಕಿನ, ಬಳುಕಿನ, ಬೆಳ್ಳಗಿನ, ಹುಳ್ಳಗಿನ, ಹೂನಗೆಯ, ಹುಸಿ ಮುನಿಸಿನ, ಒನಪಿನ, ವೈಯಾರದ, ಗಾಂಭೀರ್ಯದ, ಗತ್ತುಗಾರಿಕೆಯ, ನಾಭಿನಯ ಸಾತ್ವಿಕ ಸ್ವರೂಪವು ದೇವತೆಗಳಿಗೂ ಅಗಮ್ಯ. ವಚನ ಮಹಾದೇವಿಯು ನವನಾಗರಿಕತೆಯ ಅಳರಸಿ. ಅವಳು ಹಾದುರಾಯನ ಮಿಂಡಿತಿ, ರಸಾಧಿದೇವಿ, ಸ್ವರ್ಗಸೀ ಮಾತಿವರ್ತಿನೀ-ಎಂದರೆ ಕವಿಗಳೇನಾದರೂ ಜಗಳಕ್ಕೆ ಬಂದಾರೇ?

ಕೈಯಿಂದ ಮುಟ್ಟಿದಂತೆ ಮಾತಿನಿಂದ ಮನುಷ್ಯರನ್ನು ಮುಟ್ಟುವುದಲ್ಲ. ಮಾತಿಗೆ ಮೈಲಿಗೆ ಎಲ್ಲಿ ಬಂತು? ಅದು ಮುಟ್ಟಿಯೂ ಮುಟ್ಟದೆ ಇರುವ ಕ್ರಮ; ಸವಿ ಹಚ್ಚಿ ಸರಿದು ಕೊಳ್ಳುವ ಲೀಲೆ; ಮೂಗಿಗೆ ತುಪ್ಪ ಒರಿಸುವ ಕೌಶಲ—ಮೂಗಿಗಲ್ಲವಾದರೆ ಮೊಣ ಕೈಗೆ ಎನ್ನಿ!

ಮಾತಿನಿಂದ ಮಂಟಪವನ್ನು ಕಟ್ಟಬಹುದಂತೆ; ವಚನದಿಂದ ವೇದವನ್ನು ಸುಳ್ಳುಮಾಡಲು ಬರಲಾರದೆ? ವಚನವಿಜ್ಞಾನಿಗಳ ನಾಡಿದು ಮೈಸೂರು.

"ಮೈಯಲ್ಲಿ ಸೂರಿಲ್ಲ, ಸೂರಲ್ಲಿ ಮೈಯಿಲ್ಲ; ಅಯ್ಯ, ಮೊಲದಲೆಗೆ ಕೊಂಬಿಲ್ಲ: ಮುಗಿಲ ಹೂ ಕೊಯ್ಯಯ್ಯ ಕುಯ್ದು ಮುಡಿಯಯ್ಯ"

ಇಂಥ ವಚನದಲ್ಲಿಯ ರಸವಾವುದು? ಮೋಸರಸ. ಜೀವನದಲ್ಲಿ ತನ್ನ ಸಂಪರ್ಕಕ್ಕೆ ಬರುವ ವಿವಿಧ ಸಂಬಂಧವುಳ್ಳ ವಿವಿಧ ಜನರಿಗೆ ವ್ಯಕ್ತಿಯೊಂದು ಮಾಡಬಹುದಾದ ಮೋಸಗಳ ವೈವಿಧ್ಯ ಅನಂತ; ಲೆಕ್ಕಕ್ಕೆ ಬೇಕಾದರೆ ಸೊನ್ನೆ ಡಿಗ್ರಿಯಿಂದ ನೂರು ಡಿಗ್ರಿಗಳ ವರೆಗೆ ಎಂದಿಟ್ಟುಕೊಳ್ಳಬಹುದು. ಮೋಸದ ಡಿಗ್ರಿ ಏರಿದಂತೆ ಪ್ರಾಮಾಣಿಕತೆಯ ಡಿಗ್ರಿಯು ಇಳಿಯುವುದು ಸಹಜ. ಮನಸ್ಸು, ಮಾತು, ಕಾಯ, ಕಾರ್ಯಗಳೆಂಬ ನಾಲ್ಕು ವೇಷ ಪ್ರಕಟನದ ಸಾಧನಗಳು ಪ್ರಾಮಾಣಿಕತೆಗಾದರೂ ಅವೇ ಪ್ರಕಟನ ಸಾಧನಗಳಾದುದರಿಂದ ಈ ನಾಲ್ಕೂ ಮಾಧ್ಯಮಗಳಲ್ಲಿ ಸುಸಂಗತನಾಗಿರುವ ಒಬ್ಬ ಚತುರನು ಪ್ರಕರಣವೊಂದರಲ್ಲಿ ಮೋಸಗಾರನೂ ಆಗಬಹುದು, ಸತ್ಯವಂತನೂ ಆಗಬಹುದು. ಆದರೆ ಇಂಥ ಸಾಹಿತ್ಯವು ಅಮರಣ ಕಂಡುಬಂದಲ್ಲಿ ಮೋಸಕ್ಕೆಡೆ ಇಲ್ಲವೇ ಇಲ್ಲ.

ಮೇಲೆ ಹೇಳಿದ ಚತುರ್ವಿಧವಾದ ಮೋಸದಲ್ಲಿ ವಚನಮೋಸವು ಅತಿ ಸುಲಭ, ಅತಿ ಹೆಚ್ಚು ರೂಢ, ಏಕೆಂದರೆ. ಶಾವಕರು ನಾಕಷ್ಟು ವಿಸ್ಮರಣ ಶಕ್ತಿಯುಳ್ಳವರಾಗುತ್ತಾರೆ.—ಸಾಮಾನ್ಯ ಸಂದರ್ಭಗಳಲ್ಲಿ ಬುದ್ಧಿಯೇ ನ್ಯಾಯಾನ್ಯಾಯ ವಿವೇಕವು ಸಂಯೂಗಿ ಕೆಲಸಮಾಡಬೇಕಾದರೆ ಅದಕ್ಕೆ ಎಡೆಬಿಡದೆ ಸುಸಂಬದ್ಧ ಸ್ಮೃತಿ ಸಂಗ್ರಹದ ಪೂರಯಿಕೆ ಅಗತ್ಯ. ಇಂಥ ಪೂರಯಿಕೆಯ ಅಗತ್ಯವನ್ನು ಇಂದಿನ ಅಸಮವೇತ ಶಿಕ್ಷಣವು ಲಕ್ಷಿಸುತ್ತಿಲ್ಲ. ಆದುದರಿಂದ ಅಲ್ಪ-ಮಹಾಜನರೆಲ್ಲರಲ್ಲೂ ಬಹುಸಂಖ್ಯೆ ಮಹಾಶಯರು (ಅಥವಾ ಅಲ್ಪಾಶಯವನ್ನೇ ಮಹಾಶಯವೆಂದಿಟ್ಟು ಕೊಂಡವರು) ಅಸಂಬದ್ಧ — ವಿಸಂಬದ್ಧ ಭಾಷಣ- ಲೇಖನ-ಕಲ್ಪನಾವಿವರಗಳನ್ನು ನಿಷ್ಕಾರಣವಾಗಿ ನಂಬುತ್ತಾರೆ ಅಥವಾ ನಂಬಲೊಲ್ಲದಾಗಿರುತ್ತಾರೆ. ಈ ದೌರ್ಬಲ್ಯವನ್ನಿಂದು ರಾಜ

(೨೨ನೇ ಪುಟ ನೋಡಿರಿ)

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1

M/s Navabharat Book Depot, Udipi.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No 466 N/50 date 2-12-1950 of the Director of public Instruction Madras.

ಪಾನನಿರೋಧ ಕಾನೂನು ಯಶಸ್ವಿಯಾಗಬೇಕು, ಏಕೆ?

ಭಾರತದ ಬಹುಪ್ರದೇಶಗಳಲ್ಲಿ ಮದ್ಯಪಾನ ನಿಷೇಧ ಕಾನೂನು ಅಯಶಸ್ವಿಯಾಗಿದೆ ಎಂಬ ಪಿಸುಮಾತಿಗೆ ಉತ್ತರವಾಗಿ ಅದು ಏಕೆ ಯಶಸ್ವಿಯಾಗಬೇಕೆಂಬುದರ ವಿವರಣೆ ಮತ್ತು ವಿಧಾಯಕ ಸೂಚನೆಗಳನ್ನೂ ಇಲ್ಲಿ ಕಾಣಬಹುದು

ಶ್ರೀ. ಮ. ಜಾ.

ಭಾರತ ಸರಕಾರವು ಪ್ರಕಟಿಸಿದ ಅನೇಕಾನೇಕ ಶಾಸನಗಳಲ್ಲಿ ಪಾನನಿರೋಧ ಶಾಸನವು ಅತ್ಯಂತ ಮಹತ್ತಾದುದು. ಮನುಷ್ಯನ ಪಾರಮಾರ್ಥಿಕ, ಧಾರ್ಮಿಕ ಮತ್ತು ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಜಗತ್ತಿನಲ್ಲಿ ಪಾನನಿರೋಧ ಶಾಸನಗಳು ಅತಿ ಅಗತ್ಯವಾಗಿ ಯಶಸ್ವಿಯಾಗಬೇಕು.

ಭಾರತದಲ್ಲಿ ಪಾನನಿರೋಧ ಶಾಸನವು ಯಶಸ್ವಿಯಾಗಿಲ್ಲವೆಂಬ ಕೂಗು ಎಲ್ಲೆಲ್ಲೂ ಕೇಳಬರುತ್ತಿದೆ. ಅದು ಯಶಸ್ವಿಯಾಗಿಲ್ಲವೆಂದು ಹೇಳಿ ಅದನ್ನು ರದ್ದುಗೊಳಿಸಬೇಕು ಎಂದು ಘಂಟಾಘೋಷವಾಗಿ ಹೇಳುವವರೇ ಇರುವರು ವಿನಃ ಅದು ಯಶಸ್ವಿಯಾಗಬೇಕೆಂದು ಮನಃಬಿಟ್ಟು ಯೋಚಿಸುವವರೇ ಕಡಿಮೆ. ಕುಡಿಯುವವರ ಸಂಖ್ಯೆಯನ್ನು ನೋಡಿ "ಸರಕಾರವು ಹೋಯಿತು!" ಎಂದು ಕಠೋರವಾಗಿ ಹೇಳುವವರಿರುವರೇ ವಿನಃ "ಕುಡಿಯುವುದು ತಪ್ಪು ನಾವು ಕುಡಿಯುವುದಿಲ್ಲ. ನಮ್ಮ ಮಕ್ಕಳು ಮರಿಗಳು ಕುಡಿಯುವುದನ್ನು ನಾವು ನೋಡಿ ಸಹಿಸಲಾರೆವಾದರೆ ಇತರರು ಕುಡಿಯುವುದನ್ನೂ ನೋಡಿ ನಾವು ಸಹಿಸಲಾರೆವು"ಎನ್ನುವವರೇ ಕಡಮೆ.

ಈ ಮನೋವೃತ್ತಿಯಿಂದಾಗಿಯೇ ಭಾರತದಲ್ಲಿ ಸರಕಾರವನ್ನು ನಿಂದಿಸುವವರ ಸಂಖ್ಯೆ ಬೆಳೆಯುತ್ತಾ ಇದೆ. ಯಾರೀ ಪಾನನಿರೋಧ ಶಾಸನವನ್ನು ಖಂಡಿಸುವರೋ ಆ ಜನರು ಬಹಿರಂಗವಾಗಿ ಕುಡಿಯಲು ಸಿದ್ಧರಿರುವುದಿಲ್ಲ. ಅವರ ಮಕ್ಕಳು ಮರಿಗಳಿಗೂ ಶರಾಯಿಯನ್ನು ಕೊಡುವಷ್ಟು ಧೈರ್ಯ ಮಾಡರು. ಆದರೆ ಇತರ ಜನರು ಕುಡಿಯುವುದನ್ನು ನೋಡಿ ಪ್ರೊಹಿಬಿಷನ್ ಪೋಲೀಸರಿಗೆ ಬೈಯ್ಯಲು ತೊಡಗುವರು. ಹಾಗಿದ್ದರೂ ಕುಡಿಕನ ಬಳಿ ಹೋಗಿ ಅವನಿಗೆ ಎದುರೆದುರು ಒಂದೆರಡು ಉಪದೇಶದ ಮಾತುಗಳನ್ನು ಹೇಳರು ಇದೊಂದು ವಿಚಿತ್ರ ವಿಷಯ

ಮದ್ಯಪಾನ ಮಾಡಿದೊಡನೆ ಏನಾಗುತ್ತದೇ? ಆ ದ್ರಾವಕದ ಅಮಲು ಇಡೀ ಶರೀರದೊಡನೆ ನಿಮಿಷಾರ್ಧದಲ್ಲಿ ಸೇರಿ ಮೊದಲು ಕುಡಿಕನ ಹೃದಯ ಬಡಿತವು ಹೆಚ್ಚಾಗುವುದ. ಅರೆಕ್ಷಣದಲ್ಲಿ ಅವನ ಎರಡು ಕಿವಿಗಳೂ ಕೆಂಪಾಗುವುವು. ರಕ್ತದ ಒತ್ತಡವು ಅತ್ಯಂತ ವೇಗದಿಂದಾಗಿ ಕಣ್ಣುಗಳೆರಡೂ ಕೆಂಪು ಕೆಂಪಾಗುವುವು. ಆದೇ ಮದ್ಯವು ಕೈಕಾಲುಗಳ ನರನಾಡಿಗಳಿಗೆ ಹೊಡೆದು ಕಾಲುಗಳ ಶಕ್ತಿಯು ಕಡಮೆಯಾಗುವುದು. ಮನುಷ್ಯ ಬಿಸಿಯೇರಿ ತಲೆಯು ಕುತ್ತಿಗೆಯ ಮೇಲೆ ನಿಲ್ಲದಂತಾಗುವುದು. ಮದ್ಯವು ಮೊದಲು ಬಡಿಯುವುದು ನರನಾಡಿಗಳಿಗೆ ನರನಾಡಿಗಳ ಶಕ್ತಿಯು ಹೋದಾಕ್ಷಣವೇ ಯೋಚನಾಶಕ್ತಿಯು ಹೋಗಿ ಬಿಟ್ಟು ಕುಡಿಕನು ಬುದ್ಧಿ ಹೀನನೂ ವಿವೇಕ ಹೀನನೂ ಆಗಿ ಪಿಶಾಚಿಯಂತಾಗುತ್ತಾನೆ. ಮತ್ತೆ ಕೇಳಬೇಕೇ? ಕುಡಿಕ ಯಾವ ಯಾವ ರೂಪದಲ್ಲಿ ಪ್ರಾಣಿಯಂತಾಗುತ್ತಾನೆಂದು ನಾವು ನೋಡುತ್ತೇವೆ.

ಇಂತಹ ದುಷ್ಟ ದ್ರಾವಕವನ್ನು ಮನುಷ್ಯರು ಕುಡಿಯುವುದಾದರೂ ಏತಕ್ಕೇ? ಮನುಷ್ಯನು ಪಿಶಾಚಿಯಾಗುತ್ತಾನೆ—ಮರ್ಯಾದೆ ಇಲ್ಲದ ಅಭ್ಯಾಸವಿದು—ಕಾನೂನಿಗೆ ವಿರೋಧವಾದ ಅಭ್ಯಾಸವಿದು—ಎಂದು ತಿಳಿದೂ ತಿಳಿದೂ ಕುಡಿಕನು ಮತ್ತೇಕೆ ಮತ್ತೆ ಮತ್ತೆ, ಶಿಕ್ಷೆಯ ಮೇಲೆ ಶಿಕ್ಷೆಯಾದರೂ ಕುಡಿಯುತ್ತಾನೆ? ಇದಕ್ಕೆ ಕಾರಣವೇನು?

"ಕುಡಿದೊಡನೆ ದುಃಖ ಮರೆತು ಹೋಗುತ್ತದೆ, ಅದಕ್ಕಾಗಿ ಕುಡಿಯುವುದು." ಎನ್ನುವರು ಕೆಲವರು. "ಕುಡಿಯದಿದ್ದರೆ ಧೈರ್ಯಬರುವುದಿಲ್ಲ. ನಾಲಗೆ ಕೈಕಾಲುಗಳು ಚಲಿಸುವುದಿಲ್ಲ. ಕುಡಿದರೆ ತುಂಬಾ ಚೇತನವುಂಟಾಗಿ 'ಯಾವ ಕೆಲಸವನ್ನೂ ಧೈರ್ಯದಿಂದ ಮಾಡಲಾಗುತ್ತದೆ." ಎನ್ನುವರು ಹಲವರು. "ನಿದ್ದೆ ಬರುವುದಕ್ಕೆ-ಆರೋಗ್ಯಕ್ಕೆ ಶರಾಬು ಬಹಳ ಹಿತಕರ" ಎನ್ನುವರು ಇತರರು. ಹೀಗೆ ಮದ್ಯದ ಗುಣಗಳನ್ನು ಪ್ರಶಂಸಿಸುವವರೇ ಅದನ್ನು ಕುಡಿಯುತ್ತಾರೆ.

ಮದ್ಯಸೇವಿಸುವ ಅಭ್ಯಾಸವುಳ್ಳವರ ನರನಾಡಿಗಳು ಪ್ರತಿ ಮೂರು ತಾಸುಗಳಿಗೆ ತಣ್ಣಗಾದಂತೆ ಮನಸ್ಸಿನಲ್ಲಿ ಭಾವನೆಯುಂಟಾಗುತ್ತದೆ. ಅರೆಕ್ಷಣದಲ್ಲಿ ಕಂಠದ ರುಚಿ—ನಾಲಿಗೆಯ ರುಚಿಯು ಹೋದಂತಾಗುತ್ತದೆ. ಒಡನೆ ಆ ರುಚಿಯನ್ನು ಪುನಃ ಹಿಂತರುವ ಮದ್ಯದ ನೆನಪುಂಟಾಗುತ್ತದೆ. ಒಡನೆ ಕುಡಿಯುತ್ತಾರೆ. ಎಷ್ಟು ಹೆಚ್ಚೆಚ್ಚು ಕುಡಿಯುತ್ತಾರೋ? ಅಷ್ಟಷ್ಟು ಕಂಠದ ರುಚಿ ಕಡಮೆಯಾಗುತ್ತದೆ; ಅಷ್ಟಷ್ಟು ಬೇಗ ಬೇಗ ಕುಡಿಯುತ್ತಾರೆ. ಹೆಚ್ಚೆಚ್ಚು ಕುಡಿದಂತೆ ನರನಾಡಿಗಳ ಶಕ್ತಿಯು ಕುಂದಿ ಮದ್ಯದ ಶಕ್ತಿಯು ಅಷ್ಟಷ್ಟು ಕಡಮೆಯಾಗುತ್ತದೆ. ಅಮಲೇರಲು ತಡವಾಗುತ್ತದೆ. ಅಮಲೇರದಿದ್ದರೆ ಕುಡಿದವನಿಗೆ ಕುಡಿದಂತೆಯೇ ಭಾಸವಾಗುವುದಿಲ್ಲ. ಸಿಗರೇಟನ್ನು ಎಳೆಯುವುದು ಹೊಗೆ ಮಾಡಲಿ

(೨೧ನೇ ಪುಟ ನೋಡಿರಿ)

39 ವರ್ಷಗಳ

ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಕಾಂಗ್ರಾಳ ನಾಯಕ್ ಬೇಂಕ್, ಲಿ.

ಪ್ರಧಾನ ಕಾರ್ಯಾಲಯ: ಉಡುಪಿ ದ. ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ಬಡ್ಡಿ ಸೇ. 5ರಂತೆ ರೂ. 87 ಮೂರು ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ
ರೂ. 100ನ್ನು ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು
ಬಡ್ಡಿ ಸೇಕಡಾ 4¾ರ ವರೆಗೆ. ದೊಡ್ಡ ಠೇವಣಿಗಳ ಮೇಲೆ ಹೆಚ್ಚಿನ ಬಡ್ಡಿ.

ಶಾಖೆಗಳು:- ಮಂಗಳೂರು—ಬೆಂಗಳೂರು—ಬೇಲೂರು—ಶಿವಮೊಗ್ಗ—ಕಾಸರಗೋಡು—ಕುಣಿಗಲ್ ಇತ್ಯಾದಿ.

ಸ್ಥಾಪನೆ—1920

ಭಾಸನ ಊರುಭಂಗವೂ ರನ್ನನ ಗದಾಯುದ್ಧವೂ

ವಾಗ್ದೇವಿಯ ಭಂಡಾರದ ಮುದ್ರೆಯೊಡೆದ ಮಹಾಕವಿ ರನ್ನನು ಭಾಸನ ಊರುಭಂಗವನ್ನು ಓದಿದ್ದರೂ ತನ್ನ ಕೌರವನನ್ನು ಅನ್ಯನಾಗಿಯೇ ಚಿತ್ರಿಸಿದ್ದಾನೆ.

ಶ್ರೀ ನಂಜೇಶ್ವರ ಗೋವಿಂದ ಪೈ.

ಪಂಪ ಭಾರತದಲ್ಲಿ 'ವೇಣೀ ಸಂಹಾರೋರುಭಂಗ ಮಕುಟಭಂಗಗಳೆಂಬ ತನ್ನ ಮಹಾ ಪ್ರತಿಜ್ಞೆಯಂ ನೆರಪಿದ ಭೀಮಸೇನ' (XIII. ೯೮ಗ) ಎಂದಿರುವಲ್ಲಿಯೂ ಗದಾ ಯುದ್ಧದಲ್ಲಿ 'ವೇಣೀ ಸಂಹಾರಂ ಮಾಡುವೆನ್' (I. ೬೨) 'ಮೂರುತಿ ನಿಜ ವೇಣೀ ಸಂಹಾರಂ ಮಾಡಿದೊಡೆ' (II. ೧೦), 'ಆಕೆಯ ವೇಣೀ ಸಂಹಾರಂ ತಾನೆ ಮಾಡಿ' (VIII. ೪೮ ಗ) ಎಂದಿರುವಲ್ಲಿಯೂ ಪಂಪ—ರನ್ನರು ಭೀಮನು ದ್ರೌಪದಿಯ ಕೇಶಪಾಶವನ್ನು ಕಟ್ಟಿದುದನ್ನು ಅಥವಾ ಆ ಮುಂದೆ ಕಟ್ಟುವುದನ್ನು ಸೂಚಿಸಿರುವರಷ್ಟೇ ಅಲ್ಲ, 'ವೇಣೀ ಸಂಹಾರಂ' ಎಂಬ ಆ ಪ್ರಸಿದ್ಧ ಸಂಸ್ಕೃತ ನಾಟಕವನ್ನೂ ಹೆಸರು ಹಿಡಿದು ಹೇಳಿರಬೇಕು ಎಂಬುದಕ್ಕೆ ಪಂಪ ಭಾರತದಲ್ಲಿಯೂ (ಉಪೋದ್ಘಾತ ಪು. xli) ಗದಾಯುದ್ಧದಲ್ಲಿಯೂ, (ಅನುಬಂಧ ೧ ಪು. xlv-vi) ಆ ವೇಣೀ ಸಂಹಾರದಿಂದ ಆ ಕವಿಗಳು ತಂತಮ್ಮ ಕೃತಿಯಲ್ಲಿ ಎತ್ತಿ ಕೊಂಡುವೆಂದು ಪ್ರತ್ಯಕ್ಷವಾಗಿ ತೋರುವ ಹಲವು ಪದ್ಯಗಳ ಸಾಕ್ಷಿ ದೊರಕುತ್ತಿದೆ. ಅದ ಕಾರಣ ಪಂಪ ಭಾರತದ ಆ ಮಾತಿನಲ್ಲಿ ವೇಣೀಸಂಹಾರದ ಜತೆಯಲ್ಲಿಯೇ ಹೇಳಿರುವ 'ಊರುಭಂಗ- ಮಕುಟಭಂಗಗ'ಳೆಂಬವು ದುರ್ಯೋಧನನಿಗೆ ಭೀಮನಿಂದಾದ ಆಯಾ ಅವಸ್ಥೆಗಳನ್ನು ಮಾತ್ರವಲ್ಲ, ವೇಣೀಸಂಹಾರದಂತೆಯೇ ಬೇರೆರಡು ಸಂಸ್ಕೃತ ಗ್ರಂಥಗಳ, ಪ್ರಾಯಶಃ ನಾಟಕಗಳ, ಹೆಸರುಗಳನ್ನು ಹೇಳುತ್ತವೆಂದು ಸಹೇತುಕವಾಗಿ ಭಾವಿಸಬಹುದು. ಈ ಊರುಭಂಗ–ಮಕುಟ ಭಂಗಗಳ ಮಾತು ಗದಾಯುದ್ಧದಲ್ಲಿಯೂ ಇದೆ—'ಊರು ಭಂಗಮಾಗದೆ'(IV. ೪೩), 'ಊರುಭಂಗ ಶಾಪಮಂ ನನೆ ನೆನೆದು' (IV. ೪೩ಗ), 'ತನ್ನ ಮುನ್ನನುಡಿದೂರುಭಂಗ ಪ್ರತಿಜ್ಞೆಯಂ ತೀರ್ಚಿ ಮಕುಟ–ಭಂಗ ಪ್ರತಿಜ್ಞೆಯಂ ತೀರ್ಚಲೆಂದು' (VIII ೩೭-ಗ). 'ಭೀಮಸೇನನ ಗದಾಘಾತದೊಳೂರು ಭಂಗಮುಂ ಪದಾಘಾತದೊಳ್ ಮಕುಟ ಭಂಗಮುಮಾಗೆ' (IX. ೧೬ ಗ). ಹಾಗಾದರೆ ಈ ಮಾತುಗಳಲ್ಲಿಯೂ ಭೀಮಸೇನನ ಪ್ರತಿಜ್ಞಾ ಪೂರ್ತಿಯನ್ನು ಹೇಳುವ ರೀತಿಯಲ್ಲಿಯೇ ಆ ಹೆಸರಿನ ಸಂಸ್ಕೃತ ಕಾವ್ಯಗಳನ್ನೊ ನಾಟಕಗಳನ್ನೊ ಹೆಸರಿಸಿರಬೇಕು.

'ನಲ ಚಂಪು' ಎಂಬ ಸಂಸ್ಕೃತ ಕಾವ್ಯಕ್ಕೆ ಗುಣವಿನಯಗಣಿ ಎಂಬಾತನು ಬರೆದ ಟೀಕೆಯಲ್ಲಿ–

'ಯಥಾಹ ಮುಕುಟ ತಾಡಿತಕ
ನಾಟಕೇ ಬಾಣಃ ।
ಆಶಾಃ ಪ್ರೋಜ್ಝಿತದಿಗ್ಗಜಾ ಇವ
ಗುಹಾಃ ಪ್ರಧ್ವಸ್ತ ಸಿಂಹಾ ಇವ
ದ್ರೋಣ್ಯಃ ಕೃತ್ತಮಹಾದ್ರುಮಾ ಇವ
ಭುವಃ ಪ್ರೋತ್ಖಾತ ಶೈಲಾ ಇವ ।
ಬಿಭ್ರಾಣಾಃ ಕ್ಷಯಕಾಲರಿಕ್ತ ಸಕಲ
ತ್ರೈಲೋಕ್ಯ ಕಷ್ಟಂ ದಶಾಂ
ಜಾತಾಃ ಕ್ಷೀಣ ಮಹಾರಥಾಃ ಕುರು
ಪತೇರ್ದೇವಸ್ಯ ಶೂನ್ಯಾಃ ಸಭಾಃ ॥'

ಎಂದಿದೆಯಂತೆ ಅತಏವ ಬಾಣನು 'ಮುಕುಟ ತಾಡಿತಕ' ಎಂಬ ನಾಟಕವನ್ನು ರಚಿಸಿರಬೇಕು, ಪಂಪ–ರನ್ನರು ಹೇಳಿರುವ ಮಕುಟ ಭಂಗ ಎಂಬುದು ಪ್ರಾಯಶಃ ಅದೇ ನಾಟಕದ ಹೆಸರಾಗಿರಬೇಕು. ರನ್ನನಂತೂ ಬಾಣನನ್ನು ಆದೇ ತನ್ನ ಗದಾಯುದ್ಧದಲ್ಲಿ (I. ೯) ಅಭಿನಂದಿಸಿರುತ್ತಾನೆ. ಮುಕುಟ ತಾಡಿತಕ ಎಂದರೂ ಮುಕುಟಭಂಗ ಎಂದರೂ ಗ್ರಂಥನಾಮವಾಗಿರತಕ್ಕ ಮಟ್ಟಿಗೆ ಅರ್ಥದಲ್ಲಿ ವ್ಯತ್ಯಾಸವಿಲ್ಲ ಮಾತ್ರವಲ್ಲ, ಅದೇ ಹೆಸರನ್ನು ರನ್ನನು ಕಿರೀಟಭಂಗ ಎಂದೂ ಶಬ್ದಾಂತರವಾಗಿ ಸೂಚಿಸಿರುತ್ತಾನೆ–

ಸತ್ಯ ಪ್ರತಿಜ್ಞನೆನೆ ಕುರು
ಪತ್ಯುರು ಕಿರೀಟ ಭಂಗಮಂ
ಪಡೆದು....। (ಗದಾ. I. ೬೪)

ಅಲ್ಲಿಯೇ ಊರು (+ ಭಂಗ) ಎಂದೂ ಇದೆ. ಅದ ಕಾರಣ ಮಿಕ್ಕುಳಿದ ಊರುಭಂಗ ಎಂಬುದೂ ಯಾವುದೊಂದು ಸಂಸ್ಕೃತ ನಾಟಕದ ಹೆಸರೇ ಆಗಿರಬೇಕು. ಈಗ ತಿಳಿದಿರುವ ಮಟ್ಟಿಗೆ ಮಹಾಕವಿ ಭಾಸನ 'ಊರುಭಂಗ' ಎಂಬ ಹೆಸರಿನ ಅದೊಂದು ಚಿಕ್ಕ ಏಕಾಂಕ ನಾಟಕವಲ್ಲದೆ ಆ ಹೆಸರಿನ ಬೇರೆ ಸಂಸ್ಕೃತ ನಾಟಕವಿಲ್ಲ. ಭಾಸನ ಊರುಭಂಗದ ಕೇರಳದಲ್ಲಿ ದೊರೆತ ಪ್ರತಿಯಲ್ಲಿ ಅದರ ಹೆಸರು 'ಗದಾಯುದ್ಧ' ಎಂದಿರುವುದರಿಂದ[2], ರನ್ನನು ತನ್ನ ಗದಾಯುದ್ಧದ 'ಸಾಹಸ ಭೀಮ ವಿಜಯ' ಎಂಬ ಹೆಸರಿನ ಪೂರ್ವ ಪದವನ್ನು ಪಂಪ ಭಾರತದಿಂದ (III. ೧೬ಗ, ೩೭ಗ, ಇತ್ಯಾದಿ) ಆಯ್ದು ಕೊಂಡಿರಬಹುದೆಂಬಂತೆ, ಆ ಸಾಹಸಭೀಮ ವಿಜಯದ ಗದಾಯುದ್ಧ ಎಂಬ ಹೆಸರನ್ನು ಭಾಸನ ಊರುಭಂಗದ ಮೂಲನಾಮವೋ, ಪರ್ಯಾಯನಾಮವೋ ಆದ ಗದಾಯುದ್ಧ ಎಂಬುದರಿಂದ ಎರಕೊಂಡಿರಬಹುದು. ಹಾಗಾದರೆ ರನ್ನನು ಭಾಸನ ಊರುಭಂಗವನ್ನು ಕಂಡಿರಬೇಕೆಂಬಲ್ಲಿ ಇನ್ನು ಸಂಶಯವಿರಲಾರದಾದರೂ, ಹೆಸರನ್ನು ಮಾತ್ರವಲ್ಲ, ಇನ್ನೇನನ್ನಾದರೂ ಎರಕೊಂಡಿರುತ್ತಾನೋ ನೋಡೋಣ.

ಭಾಸನ ನಾಟಕದಲ್ಲಿ 'ಯುದ್ಧಯಜ್ಞ' (ಪ. ೬; ೫೫), 'ಸಂಯುಗಾಧ್ವರ' (ಪ.- ೪೬) ಎಂದಿದೆಯಾದರೆ, ಗದಾಯುದ್ಧದಲ್ಲಿಯು 'ಸಂಗರಾಧ್ವರ'ದ (VIII. ೪೬)ರೂಪಕೋಕ್ತಿಯನ್ನು ರನ್ನನು ಭಾಸನಿಂದಲ್ಲ, ತನ್ನ ಆ ಇಡೀ ಪದ್ಯದ ಮಾತೃಕೆಯಾಗಿರುವ ವೇಣೀಸಂಹಾರದಲ್ಲಿಯ (I. ೨೫) 'ಸಂಗ್ರಾಮಾಧ್ವರ ದೀಕ್ಷಿತೋ ನರಪತಿಃ' ಎಂಬಲ್ಲಿಂದ ತಾನೆ ನೆಟ್ಟಗೆ ಎತ್ತಿಕೊಂಡಿರಬೇಕೆಂಬುದು ಸರಿಯೇ. ಆದರೂ, ಗದಾಯುದ್ಧದ

ಧಾತು ನಿರ್ಜರ ಗಿರಿ ಕೆಡೆವಂತೆ
(VIII ೩೦ ಗ).

ಶಿರಿಯೆಂ ಬಿಳ್ದನನ್ (VIII ೩೨).

ಕುರುಕುಲಾರ್ಕನುಮರ್ಕನುಮಸ್ತಮಿ
ಯ್ದುದರ್ ॥ (IX ೩೫) ಎಂಬಿವಲ್ಲ ಊರುಭಂಗದಲ್ಲಿಯ

ಶಿಥಿಲ ವಿಸ್ಮೃತ ಧಾತುರ್ಮೇಕೂಟೋ
ಯಥಾದ್ರಿಃ ॥ (ಪ. ೨೦)
..............ನತು ಭೀಮ ಧೀನಂ
ವೀರೋನಿಹಂತಿ ಸಮರೇಷು........ ॥
(ಪ. ೩೨)
ಸಂಧ್ಯಾವಗಾಢ ಇವ ಪಶ್ಚಿಮ ಕಾಲಸೂ
ರ್ಯಃ ॥ (ಪ ೫೯)

ಎಂಬೀ ಮಾತುಗಳ ಪ್ರತಿಧ್ವನಿ ಕೇಳಿಸದು ಎನ್ನಲಾಗುವುದಿಲ್ಲ.

ಆದರೆ ಭಾಸನ ನಾಟಕದಲ್ಲಿ ದ್ವೈಪಾಯನನೂ ವಿದುರನೂ ಭೀಮ ಸುಯೋಧನರ ಗದಾಯುದ್ಧದ ಸಾಕ್ಷಿಗಳಾಗಿದ್ದರೆ–

'ದ್ವೈಪಾಯನ ಹಲಾಯುಧ ಕೃಷ್ಣ
ವಿದುರ ಪ್ರಮುಖಾನಾಂ
ಕುರು ಯದುಕುಲ ದೈವತಾನಾಂ ಪ್ರ
ತ್ಯಕ್ಷಂ ಪ್ರವೃತಂ ಗದಾ ಯುದ್ಧಮ್,
(ಪ. ೧೫ ಗ)

ಬಲರಾಮನೂ ಧೃತರಾಷ್ಟ್ರನೂ ದುರ್ಯೋಧನನ ಪ್ರಾಣೋತ್ಕ್ರಮಣದ ಗಳಿಗೆಯಲ್ಲಿಯೂ ಆತನೊಂದಿಗೆ ಇದ್ದರೆ, ಅಶ್ವತ್ಥಾಮನು ಕೌರವನ ಮರಣಾನಂತರವೇ —

ಯಾತೋಽದ್ಯ ಸೌಪ್ತಿಕವಧೋದ್ಯತ
ಬಾಣಪಾಣಿಃ ॥ (ಪ.೬೬).

ಸೌಪ್ತಿಕ ವಧಕ್ಕೆ- ನಡೆದನಾದರೆ, ರನ್ನನ ಕಾವ್ಯದಲ್ಲಿ ಈ ಸನ್ನಿವೇಶಗಳು ಬೇರೆ ಅನ್ಯಥಾ ಇವೆ; ವ್ಯಾಸನಾಗಲಿ ವಿದುರನಾಗಲಿ ಗದಾಯುದ್ಧದ ಹೊತ್ತಿಗೆ ಯುದ್ಧಭೂಮಿಯಲ್ಲಿರಲಿಲ್ಲ. ಬಲರಾಮನಾಗಲಿ ಧೃತರಾಷ್ಟ್ರನಾಗಲಿ ಸುಯೋಧನನ ಮರಣದ ಗಳಿಗೆಯಲ್ಲಿ ಆತನೊಂದಿಗೆ ಇರಲಿಲ್ಲ. ಅಶ್ವತ್ಥಾಮನು ತನ್ನ ಸೌಪ್ತಿಕವನ್ನು ತೀರಿಸಿ ಪಂಚಪಾಂಡವರ ಶಂಕೆಯಿಂದ ಪಂಚದ್ರೌಪದೇಯರ ತಲೆಗಳನ್ನು ತಂದು ಕೌರವನಿಗೆ ತಂದೊಪ್ಪಿಸುವ ವರೆಗೆ ಆತನು ಪ್ರಾಣವನ್ನು ಬಿಟ್ಟುದೂ ಇಲ್ಲ. ಅಥವಾ ಇಷ್ಟೆಲ್ಲವೇಕೆ? ಭಾಸನ ಕೌರವನೂ ರನ್ನನ ಕೌರವನೂ ಒಂದೇ ಎರಕದ ಮೂರ್ತಿಗಳಲ್ಲ, ತೀರ ಅನ್ಯಾನ್ಯರೇ. ಭಾಸನ ಕೌರವನು ಆಗಾಗ್ಗೆ ಪಶ್ಚಾತ್ತಪಿಸುವನು, ಕೌರವನಲ್ಲಿ ಏಕತಾನವಾಗಿರತಕ್ಕ ಆ ವೈರವೂ ಆತನಲ್ಲಿಲ್ಲ, ಆ ಛಲವೂ ಇಲ್ಲ. ಭಗ್ನೋರುವಾದ ಆತನ ದೀನಾವಸ್ಥೆಯನ್ನು ಕಂಡ ಬಲರಾಮನು ತಾನೇ ನೋಗಿ ..'ದಾಸ್ಯಾಮಿ ಪಾಂಡು ಪುತ್ರಾನ್'

(೩೦ನೇ ಪುಟ ನೋಡಿರಿ)

1. Introduction (p. 98) to Bana's 'Kadambari' (Bombay Sanskrit Series XXIV Part II.)

2. ಮದ್ರಾಸಿನಲ್ಲಿ ಪ್ರಕಟವಾದ (1929) ಸಂಸ್ಕೃತ 'ಕೌಮುದೀಮಹೋತ್ಸವ' ನಾಟಕದ ಮುನ್ನುಡಿ (ಪುಟ 1)

QUALITY IN
PRINTING INKS
means many things....
- brilliance
- depth of colour
- covering power
- drying capacity
- workability
- fastness to light etc.
in GANGES inks
the emphasis is on QUALITY
used and proved for 34 years
* * *
Factories at
HOWRAH BOMBAY - MADRAS

ಕಾಶ್ಮೀರವು ಭೂಸ್ವರ್ಗ

ವಿದ್ಯಾಭಿಮಾನಿ ದೇವತೆ ಶಾರದೆಯು ತವರೂರು ಕಾಶ್ಮೀರವು ವಿಶ್ವ ವಿಖ್ಯಾತವಾಗಿದೆ. ನಾವು ಅದರ ಪರಿಚಯ ಮಾಡಿಕೊಳ್ಳದಿರುವುದು ಅವಿವೇಕವಲ್ಲವೆ?

ಶ್ರೀ ಯು. ನಾ. ಉಡುಪ, ವಿದ್ವಾನ್.

ಸ್ವಮಗ್ರ ವಿಶ್ವದಲ್ಲಿ ಸತ್ಯ—ಶಿವ—ಸುಂದರನು ಸೌಂದರ್ಯದ ಚಿತ್ರಗಳನ್ನು ಕೆಲವೇ ಪ್ರಾಂತಗಳಲ್ಲಿ ಕೈಹಿಡಿತವಿಲ್ಲದೆ ಚೆಲ್ಲಿದ್ದಾನೆ. ಅವು ಶತಮಾನ—ಸಹಸ್ರಮಾನಗಳು ದಾಟಿದರೂ ಉಜ್ವಲವಾದ ಸೌಂದರ್ಯ ಕಿರಣಗಳ ಕಿಡಿಕಾರುತ್ತಲೇ ಇವೆ. ಯುರೋಪಿನಲ್ಲಿ ಸ್ವಿಜರ್‌ಲಂಡವು ದೇವದೇವನ ಒಲುಮೆಗೆ ಒಳಗಾಗಿದ್ದರೆ, ಭಾರತದಲ್ಲಿ ಕಾಶ್ಮೀರವು ಭಗವಂತನ ಸಂಪೂರ್ಣ ಕೃಪೆಗೆ ಒಳಗಾಗಿ ಆತನ ನಿತ್ಯ ವಿಹಾರದ ದಿವ್ಯೋದ್ಯಾನವಾಗಿದೆ. ಈ ಕಾಶ್ಮೀರದ ಸೊಬಗನ್ನು ಕಂಡೂಕಂಡು, ಇನ್ನು ಹಿಮಾಚಲನು ಕಣ್ಣುಗಳಿಂದ ಪಂಚನದಿಗಳೆಂಬ ಆನಂದಾಶ್ರುಗಳನು ಕೋಡಿ ಹರಿಸುತ್ತಾ, ಹಿಮದ ಹಾಸೆಂಬ ದರಹಾಸದಿಂದ ಶೋಭಿತನಾಗಿ ಸಾನು ಪ್ರದೇಶಗಳ ಸಾಂದ್ರೋನ್ನತ ವೃಕ್ಷ ಪಂಕ್ತಿಗಳೆಂಬ ರೋಮಾಂಚನವನ್ನು ಕಳೆದೇ ಇದ್ದಾನೆ! ಆ ಸೌಂದರ್ಯಕ್ಕೆ ಬರಗಾಲ ಬರುವಂತಿಲ್ಲ; ನಗರಾಜನ ಮುದಿತ ಹೃದಯದಲ್ಲಿ ಮುದಿತನವುದಯಿಸುವಂತಿಲ್ಲ. ನಮ್ಮ ವಿದ್ಯಾಭಿಮಾನಿ ದೇವತೆಯಾದ ಶಾರದೆಯೇ ಕಾಶ್ಮೀರಪುರವಾಸಿನಿಯಂತೆ!

ರಾವಲಪಿಂಡಿಯಿಂದ ೭೫ ಮೈಲು ಪ್ರಯಾಣ ಮಾಡಿದ ಮೇಲೆ (ರಾವಲಪಿಂಡಿಯು ಈಗ ಪ. ಪಾಕಿಸ್ತಾನಕ್ಕೆ ಸೇರಿದೆ) ಸೌಂದರ್ಯ ಪಿಪಾಸಾತುರನಾದ ಯಾತ್ರಿಕನು ಕೋಹಾಲವೆಂಬ ರಮ್ಯ ಪ್ರದೇಶವನ್ನು ಸೇರುವನು. ಇಲ್ಲಿಂದ ಜೀಲಂ ನದಿಯು ಶ್ರೀ ನಗರದವರೆಗೆ ಯಾತ್ರಿಕನ ಗೆಳೆಯನಾಗಿ–ಕೆಳೆಯನಾಗಿ ಸಾಗುವದು, ಇದರ ದಡದಲ್ಲೇ ಕಾಶ್ಮೀರದ ಗಡಿ ಪ್ರದೇಶವನ್ನು ಕಾಣುವೆವು. ಮುಂದೆ ೩೦ ಮೈಲುಗಳ ವರೆಗೆ ಜೀಲಂ ನದಿಯ ಸರಸ ಸಂಭಾಷಣೆಯನ್ನಾಲಿಸುತ್ತಾ ಸಾಗುವೆವು. ಮುಂದೆ ದುಮೇಲದಲ್ಲಿ ಕೃಷ್ಣ ಗಂಗೆಯು ಜೀಲಂ ನದಿಯನ್ನು ತೋಳ ತೆಕ್ಕೆಯಲ್ಲಿ ಬಿಗಿದು ಚಿತ್ರ ವಿಚಿತ್ರ ಗತಿಯಿಂದ ಸಾಗುವುದನ್ನು ಕಾಣಬಹುದು. ಇಲ್ಲಿನ ಈ ಚೆಲುವನ್ನು ಸವಿಯಲಿಕ್ಕಾಗಿಯೇ ಮಹಾ ಜನರು ಛತ್ರಗಳನ್ನಿರಿಸಿದ್ದಾರೆ; ಇಲ್ಲಿ ಹೋಟೆಲುಗಳೂ ಸಾಕಷ್ಟು ಇವೆ. ಇಲ್ಲಿಂದ ಮುಂದರಿಯುವ ಪ್ರಯಾಣಿಕನು ಮಾರ್ಗದ ಎರಡು ಬದಿಗಳಲ್ಲಿ ಸಾಂದ್ರವಾಗಿ ತಲೆಯೆತ್ತಿ ನಿಂತಿದ್ದ ಪೈನ್ ವೃಕ್ಷಗಳ ಛಾಯೆಯಲ್ಲಿ ಝರಿಗಳ ಸವಿಮಾತುಗಳನ್ನಾಲಿಸುತ್ತಾ ರಾಮಪುರವನ್ನು ಸೇರಬಹುದು. ಇದು ರಾವಲಪಿಂಡಿಯಿಂದ ೧೬೩ ಮೈಲು ದೂರದಲ್ಲಿದೆ; ಅಲ್ಲದೆ ಇದು ಸಮುದ್ರ ಮಟ್ಟದಿಂದ ೪೨೨೫ ಅಡಿ ಎತ್ತರದಲ್ಲಿದೆ. ಇಲ್ಲಿಂದ ಶ್ರೀನಗರಕ್ಕೆ ೭೦ ಮೈಲೂ ಇಲ್ಲ. ಆ ಭೂಸ್ವರ್ಗದ ಸಾನ್ನಿಧ್ಯವನ್ನು ಮಾರ್ಗಗಳ ಪಕ್ಕಗಳಲ್ಲಿ ಉನ್ನತವಾಗಿ ಬೆಳೆದ ದೇವದಾರು ವೃಕ್ಷಗಳು ತಮ್ಮ ಶಾಖಾಚಲನೆಯಿಂದಲೇ ಸೂಚಿಸುವುವು. ಇಷ್ಟರವರೆಗೆ ಪರ್ವತಗಹ್ವರಗಳಲ್ಲಿ ನಡೆದ ಯಾತ್ರಿಕನು ಈಗ ಕಾಶ್ಮೀರದ ವಿಸ್ತಾರವಾದ ಬಯಲಿನಲ್ಲಿ ಸಂಚರಿಸುವನು.

ರಾಮಪುರದ ಸಮೀಪದ ಜೀಲಂ ನದಿಯಿಂದ ಶ್ರೀನಗರಕ್ಕೆ ಬೇಕಾದಷ್ಟು ವಿದ್ಯುತ್ತನ್ನು ಸಂಗ್ರಹಿಸಿ ಒಯ್ಯುವರು. ಯಾತ್ರಿಕರು ಹಿಂದೆ ಸವಿದ ಸೌಂದರ್ಯಗಳನ್ನು ಮೆಲುಕಾಡುತ್ತ ಇಲ್ಲಿಂದ ಮುಂದೆ ಸಾಗಿದಾಗ ಅವನ ಹಿರಿಯಾಸೆಯು ಸಂಪೂರ್ಣವಾಗುವುದು. ಶ್ರೀನಗರವು ಅಮರಲೋಕದ ಅಪ್ಸರೆಯಂತೆ ಯಾತ್ರಿಕನನ್ನು ಸ್ವಾಗತಿಸಲು ಸಿದ್ಧವಾಗಿ ನಿಂತಿರುವುದನ್ನು ಕಾಣುವನು. ಮುಂದೆ ಶ್ರೀನಗರ! ಶ್ರೀನಗರ!

ಈ ರಮ್ಯ ನಗರವು ಜೀಲಂ ನದಿಯ ಎರಡೂ ತಡಿಗಳಲ್ಲಿ ಹಬ್ಬಿದೆ. ಇಲ್ಲೇ ಜೀಲಂ ನದಿಗೆ ಏಳು ಸೇತುವೆಗಳಿವೆ. ಇಲ್ಲಿಯ ನಗರ ಪರಿಭ್ರಮಣಕ್ಕೆ ಜೀಲಂ ನದಿಯ ಕಾಲುವೆಗಳೂ, ನಾಗರಿಕರಿಂದ ರಚಿತವಾದ ರಸ್ತೆಗಳೂ ಹಾಸುಹೊಕ್ಕಾಗಿ ಹಾಸಿವೆ. ಇಲ್ಲಿನ ಎಷ್ಟೋ ವರ್ತಕರು ತಮ್ಮ ಅಂಗಡಿ ಮಳಿಗೆಗಳನ್ನು ನದಿಯಲ್ಲಿ ದೋಣಿಗಳ ಮೇಲೆಯೇ ರಚಿಸಿಕೊಂಡು ಮನೆಮನೆಗಳಿಗೂ ತಮ್ಮ ಚಲಿಸುತ್ತಿರುವ ಅಂಗಡಿಗಳನ್ನು ಒಯ್ಯುತ್ತಿರುವರು. ಇವರ ವ್ಯವಹಾರವೆಲ್ಲಾ ನದಿಯಲ್ಲೇ. ಈ ನದಿ—ಇವುಗಳ ಕಾಲುವೆಗಳ ತಟದಲ್ಲೇ ವಿವಿಧ ವರ್ಣಗಳ ಗೋಡೆ ಕಿಟಕಿಗಳಿಂದ ಆಕಾಶಚುಂಬಿತ ಸೌಧಮಂದಿರಗಳು ಎಷ್ಟೋ ಎಷ್ಟೋ ಸುಂದರವಾಗಿ ಕಾಣಿಸುತ್ತಿವೆ. ಇಲ್ಲಿಯ ವಿದ್ಯಾಲಯ ಮತ್ತು ಪ್ರಾಚೀನ ವಸ್ತು ಸಂಗ್ರಹಾಲಯವು ಕಿರಿದಲ್ಲ. ಇಲ್ಲಿನ ಮೂರನೆಯ ಸೇತುವೆಯ ಪಕ್ಕದಲ್ಲಿ ದೇವದಾರು ಮರಗಳಿಂದ ರಚಿತವಾದ ಅಹಮ್ಮದ ಶಹನ ಮಸೀದಿ ಇದೆ. ಇದನ್ನು, ಶಹನು ಹಿಂದುಗಳ ಕಾಳೀ ಮಂದಿರವನ್ನು ಧ್ವಂಸಮಾಡಿ ಅದರ ವಸ್ತುಗಳಿಂದಲೇ ರಚಿಸಿದ್ದಾನೆ. ಈ ಮಸೀದಿಯ ಬಾಗಿಲಿನಲ್ಲೇ ಅರಬಿ ಭಾಷೆಯಲ್ಲಿ ಆ ಶಹನು— 'ಇದು ಅಲ್ಲಾನ ದೊಡ್ಡ ಗುಲಾಮನಾದ ಅಹಮ್ಮದನ ಮಸೀದಿ. ಅಲ್ಲಾನಲ್ಲಿ ವಿಶ್ವಾಸವಿಲ್ಲದವರು ಇದನ್ನು ಪ್ರವೇಶಿಸಿದರೆ ಕುರುಡರಾಗುವರು; ಅಲ್ಲದೆ ನರಕಕ್ಕೆ ಉರುಳುವರು!' ಎಂದು ಬರೆದಿಡಿಸಿದ್ದಾನೆ. ಇದರ ಸಮೀಪದಲ್ಲಿದ್ದ ಕರಿಸೀರಿನ ಕಾರಂಜಿಯಲ್ಲಿ ಕಾಳಿಯ ಸಾನ್ನಿಧ್ಯವುಂಟೆಂದು ಇನ್ನೂ ಅದನ್ನು ಹಿಂದುಗಳು ಪೂಜಿಸುತ್ತಿದ್ದಾರೆ. ಈ ನದಿಯ ತಟದಲ್ಲೇ ಮುಂದರಿದರೆ ಸಲೀಮನನ್ನು ತನ್ನ ಸೊಬಗಿನಿಂದ ಸೆರೆಹಿಡಿದ ಸುರಸುಂದರಿ ನೂರ್ ಜಹಾನಳಿಂದ ನಿರ್ಮಿತವಾದ ಮಸೀದಿಯೊಂದು ಸಿಕ್ಕುವುದು. ಇದು ಸ್ತ್ರೀಯೊಬ್ಬಳಿಂದ ರಚಿತವಾದುದರಿಂದ ಮುಸಲ್ಮಾನರಾರೂ ಇದರಲ್ಲಿ ನಮಾಜು ಮಾಡುವುದಿಲ್ಲ! ನಾಲ್ಕನೆಯ ಸೇತುವೆಯ ಬಳಿಯೇ ಮಹಾರಾಜಾ ಪ್ರವರಸೇನನು ಕಟ್ಟಿಸಿದ ಮಹಾ ಶ್ರೀಮಂದಿರವಿದೆ. ಇಲ್ಲೇ ಕಾಶ್ಮೀರದ ಮಹಾವ್ಯಕ್ತಿಗಳ ಸಮಾಧಿಗಳ ಸಾಲಿವೆ.

ಶ್ರೀನಗರದ ವಿಶಾಲವಾದ ಹೊರಬಯಲಿನಲ್ಲಿ ಹರಿಪರ್ಜತ, ಶಂಕರ ಗಿರಿಗಳೆಂಬ ಎರಡು ಗುಡ್ಡಗಳಿವೆ. ಹರಿಪರ್ಜತವು ೭ ಸಾವಿರ ಅಡಿ ಎತ್ತರವಿದ್ದು ಇದರ ತುದಿಯಲ್ಲೇ ಮೊಗಲಬಾದಶಹನಾದ ಅಕಬರನು ಒಂದು ಭದ್ರವಾದ ಕೋಟೆಯನ್ನು ಕಟ್ಟಿಸಿದ್ದಾನೆ. ಇವರ ಬುಡದಲ್ಲೇ ಕಾಶ್ಮೀರಿಗಳ ಮನೆಗಳು ಸಾಲು ಸಾಲಾಗಿ ಚದರಿವೆ; ಜೀಲಂ ನದಿಯು ಇಲ್ಲಿಯೂ ಹರಿಯುತ್ತಿದೆ. ಇನ್ನು ಶಂಕರಗಿರಿಯು ೧೦೦೦ ಅಡಿ ಎತ್ತರವಿದ್ದು ಇದರ ತುದಿಯಲ್ಲಿ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಶಿವಲಿಂಗವಿದೆ. ಈ ದೇವ ಮಂದಿರದಲ್ಲಿ ಗಜನಿ ಮಹಮ್ಮದನೂ ಪ್ರಾರ್ಥನೆ ನಡೆಸಿದ್ದನಂತೆ! ಈ ದೇವಾಲಯದ ಮೇಲೆ ಒಳಹೊರ ವಲಯದಲ್ಲಿ ಮತ್ತು ಗಿರಿಯ ಮೇಲೆಲ್ಲಾ ಮೈಸೂರು ರಾಜರಿಂದ ಏರ್ಪಡಿಸಲ್ಪಟ್ಟ ವಿದ್ಯುದ್ದೀಪ ಮಾಲೆಯು ಇದರ ಸೊಬಗಿಗೆ ತಾರುಣ್ಯವನ್ನೂಡುತ್ತಿವೆ. ಇದರ ಬುಡದಲ್ಲೇ ಶಂಕರಾಚಾರ್ಯರ ಶಾರದಾಪೀಠವಿದೆ.

ಕಾಶ್ಮೀರದಲ್ಲಿ ಇನ್ನು ನೋಡತಕ್ಕದ್ದು ಅರಮನೆ: ಡಲ್ ಸರೋವರ ಮತ್ತು ಊಲರ್ ಸರೋವರಗಳೂ ಅಲ್ಲದೆ ಅವುಗಳ ದಡದಲ್ಲಿದ್ದ ಉದ್ಯಾನಗಳು; ಈ ಸರೋವರಗಳ ದಡದ ವಿಸ್ತಾರವಾದ ಪುಷ್ಪ ಫಲೋದ್ಯಾನಗಳು ಕಾಶ್ಮೀರಕ್ಕೆ ಹೆಸರನ್ನು ತಂದಿವೆ ಇಲ್ಲಿಯ ದ್ರಾಕ್ಷಿ, ನಿಂಬೆ, ಬಾದಾಮು, ಅಕ್ರೋಡು, ಸೇಬು ಫಲಗಳ ತರುಲತೆಗಳು ಹಣ್ಣುಗಳಿಂದ ಕಿಕ್ಕಿರಿದು ಯಾತ್ರಿಕ ನಿಗರ್ಪಿಸುವ ಕಾಣಿಕೆಯಂತೆ ವಿಶಾಲ ಹೃದಯಿಗಳಾಗಿವೆ. ಡಲ್ ಸರೋವರವು ೫ ಮೈಲುದ್ದ, ಎರಡು ಮೈಲಗಲವಿದೆ. ಇದರ ಸುತ್ತಲೂ ಅಲಂಕಾರದ ಗಿರಿಶ್ರೇಣಿಗಳು ಸಿಂಗರಿಸಿಕೊಂಡೇ ನಿಂತಿವೆ. ಇವುಗಳ ಮೇಲಿನಿಂದ ಚಿಕ್ಕ ಚಿಕ್ಕ ತೊರೆಗಳು ಚಿಮ್ಮಿ ಚಲಿಸುತ್ತಾ, ಹಾರಿಹಲವಾಗಿ ಹರಿಯುತ್ತಾ ಡಲ್ ಸರೋವರವನ್ನು ಸೇರುವುವು. ಜೂನ್ ಮತ್ತು ಆಗೋಸ್ತು ತಿಂಗಳು ಬಂತೆಂದರೆ ಈ ಸರೋವರಗಳು ಗುಲಾಬೀ ವರ್ಣದ ಕಮಲಗಳಿಂದ ತುಂಬುವುವು. ಆಗ ಆ ಸರೋವರಗಳ ಅಮರ ಸೌಂದರ್ಯದ ವಿಧಾನವೇ ಮತ್ತೊಂದು! ಇವುಗಳ ಚೆಲುವನ್ನು ನಿರೀಕ್ಷಿಸುವುದಕ್ಕೆ-ಇವುಗಳ ನಿರ್ಮಲವಾರಿಧಿಯಲ್ಲಿ ಈಜಾಡುವುದಕ್ಕೆ ಯುರೋಪದ, ಅಮೇರಿಕದ ಹಲವು ನಡುಹರೆಯದ ತರುಣ ತರುಣಿಯರು ಬರುವರು. ಈ ಸರೋವರಗಳಲ್ಲಿ ಕಾಶ್ಮೀರಿಗಳು ತೇಲಾಡುವ ತರಕಾರಿ ತೋಟಗಳನ್ನೆಬ್ಬಿಸಿದ್ದಾರೆ! ಇವು ನೀರಿನಲ್ಲಿ ತೇಲಾಡುವ ಸುಂದರ ದ್ವೀಪಗಳು.

ಡಲ್ ಸರೋವರದ ಮೇಲೆ ಶಾಲಮಾರ್ ಮತ್ತು ನಿಶಾತ್ ಬಾಗಗಳೆಂಬ ಉದ್ಯಾನಗಳಿವೆ. ಇವನ್ನು ನೋಡಲು ಮತ್ತು ಇಲ್ಲಿ ವಿಹರಿಸಲು ಯಾತ್ರಿಕರೂ ಆ ಊರವರೂ ಪ್ರತಿ ಆದಿತ್ಯವಾರ ದಿನ

(೧೮ನೇ ಪುಟ ನೋಡಿರಿ)

ನಿಮ್ಮ ಸುಖಕರ ಪ್ರಯಾಣ ಸೌಲಭ್ಯಪೂರ್ಣವಾಗಬೇಕೇ?

ಮದುವೆ, ವಿಹಾರ ಮುಂತಾದ ಸಂದರ್ಭಗಳಲ್ಲಿ 'ಸ್ಪೆಶಲ್ ಬಸ್ಸಿ'ನ ಏರ್ಪಾಡು ಬೇಕಾದರೆ ೧ ವಾರ ಮುಂಚಿತವಾಗಿ ತಿಳಿಸಿದಲ್ಲಿ ನಾವು ಸಕಾಲದಲ್ಲಿ ನಿಮ್ಮ ಆವಶ್ಯಕತೆ ಪೂರೈಸಬಲ್ಲೆವು.

ಕಾರು (5 Seater), ಟಾಕ್ಸಿ (7 Seater)ಗಳು ಯಾವ ಕಾಲದಲ್ಲಿ ಬೇಕಾದರೂ ನಿಮ್ಮ ಸೇವೆಗೆ ಸಿದ್ಧವಿವೆ.

ನಿಮ್ಮ ಯಾವತ್ತೂ ಪ್ರಯಾಣದ ಯೋಜನೆಯ ಕುರಿತು ಮೊದಲಾಗಿ ನಮ್ಮೊಂದಿಗೆ ಸಮಾಲೋಚನೆ ನಡೆಸಿರಿ.

ಮಂಜುನಾಥ ಮೋಟರ್ ಸರ್ವೀಸ್,
ಅಜ್ಜರಕಾಡು, ಉಡುಪಿ. ಫೋನ್: 82

Manjunatha Motor Service,
AJJARKAD, UDIPI. PHONE: 82

ಸ್ವಾತಂತ್ರ್ಯಪ್ರಾಪ್ತಿಯ ಸುಖದುಃಖಗಳು

ಭಾರತವು ಬ್ರಿಟಿಷರೆದುರು ಅಹಿಂಸಾತ್ಮಕವಾಗಿ ಹೋರಾಡಿಯೇ ಸ್ವತಂತ್ರವಾಯಿತು. ಆದರೆ, ಬಾಪೂಜಿ ಭಾರತೀಯರಿಗಿತ್ತ ಮಹಾಸ್ತ್ರ ಅಹಿಂಸೆಯನ್ನು ತುಚ್ಛ ದೃಷ್ಟಿಯಿಂದ ಕಾಣುವ ನಮ್ಮವರೇ ಇಂದಿನ ನಮ್ಮ ದುಃಖಕ್ಕೆ ಹೇತುವೆನಿಸಿದ್ದಾರೆ. ಒಳಗಿರುವ ರೋಗಾಣುಗಳನ್ನು ಓಡಿಸುವಂತೆ ಇಂತಹ ದೇಶದ್ರೋಹಿಗಳಿಂದ ದೂರವಿರಬೇಕಾದುದು ಮಾತ್ರವಲ್ಲ, ಅವರನ್ನು ಸರಿದಾರಿಗೆ ತರುವುದು ನಮ್ಮ ಆದ್ಯ ಕರ್ತವ್ಯ.

ಶ್ರೀ ಎಂ. ರಂಗ ರಾವ್.

ಅದು ೧೮೫೭ನೇ ಇಸವಿಯಾಗಿತ್ತು. ಭಾರತದ ಜನ ಸಮೂಹವು ಬಹಳ ನೆಮ್ಮದಿಯಾಗಿರುವರೆಂದು ಆಂಗ್ಲೇಯರು ಸಂತೋಷ ಪಡುತ್ತಿದ್ದಕಾಲ. ಭಾರತದ ಸೈನಿಕ ಸ್ವಾಮಿಭಕ್ತಿಗೆ ಈಡು ಜೋಡಿಲ್ಲವೆಂದು ಆಂಗ್ಲೇಯ ಅಧಿಕಾರಿಗಳು ಅವರ ಬೆನ್ನನ್ನು ಬಹಳ ಜೋರಾಗಿ ತಟ್ಟುತ್ತಿದ್ದರು. ಆದರೆ ಹಿಂದಿನಿಂದ ಮಾತ್ರ, ಭಾರತೀಯರೆಂದರೆ ತಮ್ಮನ್ನು ತುಳಿದವರ ಕಾಲನ್ನು ಮುದ್ದಿಸುವ ಕೇವಲ ಮೊದ್ದುಗಳು ಎಂದು ತಮ್ಮೊಳಗೆ ಹೀನಾಯವಾಗಿ ಹೇಳಿಕೊಳ್ಳುತ್ತ ನಗುತ್ತಿದ್ದರು. ಈ ನಗು ಬಹುಕಾಲ ಬಾಳಲಿಲ್ಲ. ಬರಿಯ ನೀರ್ಗುಳ್ಳೆಯಾಯಿತು. ಇದ್ದಕ್ಕಿದ್ದಂತೆ ಭೂಕಂಪವಾಗಿ, ಆಂಗ್ಲೇಯ ಅಧಿಕಾರಿಗಳಿಗೆಲ್ಲಾ ದಿಗ್‌ಭ್ರಮೆ ಹಿಡಿಯಿತು.

ಭಾರತೀಯ ಸೈನಿಕರು ತಿರುಗಿ ಬೀಳುವರೆಂದು ಯಾರೂ ಭಾವಿಸಿರಲಿಲ್ಲ. ಮೊದಲನೇ ಸ್ವಾತಂತ್ರ್ಯ ಸಂಗ್ರಾಮವೆನಿಸಿದ ಇದರಲ್ಲಿ ವಿಶೇಷವೇನೆಂದರೆ, ಭಾರತ ದೇಶಭಕ್ತರು ವಿಸ್ತಾರವಾದ ರೀತಿಯಲ್ಲಿ ಕ್ರಮಬದ್ಧವಾಗಿ, ಆಂಗ್ಲೇಯರಿಗೆ ಎಳ್ಳಿನಷ್ಟು ಕೂಡ ಸಂದೇಹಬಾರದ ಹಾಗೆ ಎಲ್ಲಾ ಸಿದ್ಧತೆಯನ್ನು ನಡೆಸಿದ್ದರು. ಒಳಗೊಳಗೇ ಸುಳಿದಾಡಿಕೊಂಡಿದ್ದ ಹೊಗೆ ಹೊರಗೆಲ್ಲಿಯೂ ತೋರದ ಹಾಗೆ ಬಹಳ ಚಾತುರ್ಯದಿಂದ ಕಾಪಾಡಿಕೊಂಡರು. ಆದೊಂದು ದಿನ ಆಕಸ್ಮಿಕವಾಗಿ ಸಿಡಿದೆದ್ದಿತು ಆಂಗ್ಲೇಯ ಸರಕಾರವು ಗದಗದಿಸಿ ಹೋಗುವಂತೆ ಮಾಡಿತು.

ಅಸಹನೀಯವಾದ ಆಂಗ್ಲೇಯರ ಆಕ್ರಮಗಳ ಪರಿಣಾಮವಾಗಿ ಭುಗಿಲೆದ್ದ ಬೆಂಕಿ ಥಳ್ಳುರಿಯಾಗಿ ನಿಮಿಷ ಮಾತ್ರದಲ್ಲಿ ವಿಸ್ತಾರವಾಗಿ ಹರಡಿತು. ಮೀರತ್ತಿನಲ್ಲಿ ನಡೆದ ಒಂದು ಅಸಹ್ಯ ಸಂಭವವೇ ಭಾರತ ದೇಶದೊಳಗೆಲ್ಲಾ ಯುದ್ಧದ ಜ್ವಾಲೆ ಹಬ್ಬಿಹೋಗುವಂತಾಯಿತು. ಅಲ್ಲಿ ಸಿಡಿದ ಕಿಡಿ ಚಿಕ್ಕದೇ ಆದರೂ ಬಿರುಗಾಳಿಯ ಸಿದ್ಧತೆ ಮೊದಲೇ ಇದ್ದುದರ ಪರಿಣಾಮವಾಗಿ ಉರಿದೆದ್ದ ಬೆಂಕಿ ಎಂಟು ದಿಕ್ಕುಗಳನ್ನೂ ವ್ಯಾಪಿಸಿಕೊಂಡಿತು. ಆದೊಂದು ರಕ್ತಪ್ರವಾಹದ ಕ್ರಾಂತಿ! ಸಾವಿರಾರು ವೀರರು ಈ ಸ್ವಾತಂತ್ರ್ಯ ಸಂಗ್ರಾಮದ ರಕ್ತದ ಕಾಲುವೆಯಲ್ಲಿ ಬಿದ್ದು ವೀರಸ್ವರ್ಗವನ್ನು ಸೇರಿದರು.

ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ಧರಾಗಿರುವಂತೆ ಭಾರತೀಯ ಸಿಪಾಯಿಗಳನ್ನು ಪ್ರೇರೇಪಿಸಿದನೆಂಬ ತಪ್ಪಿಗಾಗಿ 'ಮಂಗಳಪಾಂಡೆ' ಎಂಬ ಸಿಂಹಸದೃಶ ಯುವಕನನ್ನು ಆಂಗ್ಲೇಯ ಅಧಿಕಾರಿಗಳು ಹಿಡಿದು ತೂಗಾಡಿಸಿ ಕೊಂದರು. ಮೊದಲನೇ ಸ್ವಾತಂತ್ರ್ಯ ಸಮರದಲ್ಲಿ ಮೊತ್ತಮೊದಲು ತನ್ನ ಪ್ರಾಣವನ್ನು ತೆತ್ತ ಆ ವೀರತ್ಯಾಗಿಯನ್ನು ಭಾರತಾವನಿಯ ಪ್ರಜೆಗಳು ಎಂದೆಂದೂ ಮರೆಯಲು ಸಾಧ್ಯವಿಲ್ಲ.

ಮಂಗಳಪಾಂಡೆಯ ವೀರ ರಕ್ತದಿಂದ ಕೆರಳಿಸಲ್ಪಟ್ಟ ಯುದ್ಧವು ಬಗಬಗನೆ ಬೆಳೆದು ವಿಸ್ತರಿಸಿಕೊಂಡಿತು. ಮೀರತ್ತಿನಿಂದ ಭಾರತೀಯ ಸಿಪಾಯಿಗಳು 'ದಿಲ್ಲಿ ಚಲೋ' ಜಯಘೋಷದೊಂದಿಗೆ ವೀರಾವೇಶದಿಂದ ಹೊರಟರು. ಅವರ ಆಕಸ್ಮಿಕ ಧಾಳಿಯ ಮಹಾ ಶಕ್ತಿಯಿಂದ ಧಿಲ್ಲಿ ನಗರದಲ್ಲಿ ಆಂಗ್ಲೇಯರ ಆಧಿಪತ್ಯವು ತೊಲಗಿ, ಭಾರತೀಯರ ಆಧಿಪತ್ಯವು ಏರ್ಪಟ್ಟಿತು.

ದಿಲ್ಲಿ ಸ್ವತಂತ್ರವಾಯಿತು ಎಂಬ ವಾರ್ತೆ ಮಿಂಚಿನವೇಗದಿಂದ ದೇಶದೊಳಗೆಲ್ಲಾ ಹರಡಿತು. ಇದಿರುನೋಡದ ವಿಧವಾಗಿಯೇ ಆ ಸುದ್ದಿ ಬಂದುದರಿಂದ ಪರಕೀಯರು ಮಾತ್ರವಲ್ಲ, ಭಾರತೀಯರೂ ಕೂಡ ಭ್ರಮಿಸಿಬಿಟ್ಟರು. ಆಗ ಇಂಡಿಯದ ವೈಸರಾಯಿಯಾಗಿದ್ದ ಲಾರ್ಡ್ ಕ್ಯಾನಿಂಗ್ ಭಾರತ ದೇಶವೆಲ್ಲಾ ನೆಮ್ಮದಿಯಾಗಿದೆ, ಶಾಂತವಾಗಿದೆ ಎಂದುಕೊಂಡು ನಿಶ್ಚಿಂತನಾಗಿ ನಿದ್ರಿಸಿಕೊಂಡಿದ್ದನು. ಪ್ರಥಮ ಸೇನಾಧಿಪತಿಯಾದ ಅನ್ಸನ್ ತಣ್ಣಗಿನ ಸಿಮ್ಲಾ ಪರ್ವತ ಶಿಖರಕ್ಕೆ ಆದೇ ಹೊರಟು ನಿಂತಿದ್ದನು. ದಿಲ್ಲಿ ಆಂಗ್ಲೇಯರ ಕೈತಪ್ಪಿತು ಎಂಬ ತಂತಿಯನ್ನು ಕಾಣುತ್ತಲೇ ಕ್ಯಾನಿಂಗ್‌ನ ನಿದ್ರೆಯ ಮತ್ತು ಇಳಿದು ಅವನು ಎಚ್ಚರಕ್ಕೆ ಬರಲು ಬಹಳ ಹೊತ್ತಾಯಿತು.

ಆ ಮೊದಲನೇ ಸ್ವಾತಂತ್ರ್ಯ ಸಂಗ್ರಾಮವು ನಿಲ್ಲದೆ ಎರಡು ವರ್ಷಗಳ ವರೆಗೂ ಸಾಗಿತು. ಆಂಗ್ಲೇಯ ವೀರರನ್ನು ಹೊಡೆದೋಡಿಸಿ ಆ ಸ್ಥಳಗಳನ್ನೆಲ್ಲಾ ಭಾರತ ವೀರರು ಮರಳಿ ಪಡೆದುಕೊಂಡುಬಿಟ್ಟರು. ಆದರೆ ತಂತ್ರಕೋವಿದರಾದ ಆಂಗ್ಲೇಯರು ಬಹಿರಂಗ ಯುದ್ಧದಲ್ಲಿ ಸೋತರೆಂಬುದು ನಿಜ; ಕೂಡಲೇ ಅವರು ಒಳತಂತ್ರ, ಮೋಸ ಎಂಬ ಭಯಂಕರವಾದ ಮಾಯಾಯುಧಗಳನ್ನು ಉಪಯೋಗಿಸಲಾರಂಭಿಸಿಬಿಟ್ಟರು. ಅವರ ಬೆಣ್ಣೆ ಪೂಸಿದ ಕತ್ತಿಯಂತಹ ಮಾತುಗಳನ್ನು ನಂಬಿ ಕೆಲವು ಸ್ವದೇಶೀ ರಾಜರು, ಚರಿತ್ರೆಯಲ್ಲಿ ತಮ್ಮ ಹೆಸರು ಕೆಡುವುದೆಂಬ ಯೋಚನೆಯೇ ಇಲ್ಲದೆ—ತಮ್ಮ ಸಹೋದರರನ್ನೇ ಶತ್ರುಗಳಿಗೆ ತೋರಿಸಿಕೊಟ್ಟುಬಿಟ್ಟರು.

ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ದಿಲ್ಲಿಯ ಚಕ್ರವರ್ತಿ ಬಹದೂರ್ ಷಹನೂ, ಇತರ ದೇಶಭಕ್ತರೂ ತಮ್ಮ ಪ್ರಾಣಗಳನ್ನೇ ತುಚ್ಛವಾಗಿ ಎಣಿಸಿ ಉಗ್ರೋಗ್ರವಾಗಿ ಹೋರಾಡುತಿದ್ದಾಗ, ದಿಲ್ಲಿಯ ಯುವರಾಜರುಗಳಾದ ಮಿರ್ಜಾ ಮೊಗಲ್, ಮಿರ್ಜಾ ಕಿಸೀರ್ ಸುಲ್ತಾನ್, ಮಿರ್ಜಾ ಅಬುಬೇಕರ್ ಎಂಬ ಈ ಮೂವರು ಬಾಲಕರನ್ನು ಹಾಡ್ಸನ್ ಎಂಬ ಬ್ರಿಟಿಷ್ ದಳಪತಿ ನಿರ್ದಯದಿಂದ ಕೊಲೆ ಮಾಡಿಬಿಟ್ಟಾಗ, ನೀಲ್ ಎಂಬ ಮತ್ತೊಬ್ಬ ಬ್ರಿಟಿಷ್ ದಳಪತಿ ಅನೇಕ ಸುಂದರ ನಗರಗಳನ್ನು ಸುಟ್ಟು ಪಾಳುಗೆಡಹಿದಾಗ ಹೈದ್ರಾಬಾದ್ ನವಾಬನಾದ ಅಬ್ದುಲ್ ಉದ್ದೌಲಾ ಹೈದ್ರಾಬಾದಿನ ಬ್ರಿಟಿಷ್ ರೆಸಿಡೆನ್ಸಿಗೆ ನೇರಾಗಿ ಹೋಗಿ ಬಾಗಿಬಾಗಿ ಸಲಾಂ ಮಾಡುತ್ತ ಆಂಗ್ಲೇಯರಲ್ಲಿ ತನಗಿರುವ ಪರಮ ವಿಶ್ವಾಸವನ್ನು ಪ್ರದರ್ಶನ ಮಾಡುತ್ತಿದ್ದನು!

ಅಂತೆಯೇ ಪ್ರಾರಂಭದಲ್ಲಿ ವಿಜಯಶಾಲಿಗಳಾದ ವೀರರಾಣಿ ಲಕ್ಷ್ಮೀಬಾಯಿ, ಕುಮಾರಸಿಂಹ, ವೀರಕೇಸರಿ ತಾಂತ್ಯಾ ಟೋಪೆ, ಆಸೀಮುಲ್ಲಾಖಾನ್, ಮೌಲ್ವೀ ಅಹಮದ್ ಷಹ, ಗುಜರನ್ ಸಿಂಗ್ ಮೊದಲಾದ ದೇಶಭಕ್ತರು ಕಟ್ಟಕಡೆಗೆ ಬಲಿಯಾಗಿಯೇ ಹೋದರು. ವೀರ ನಾನಾ ಸಾಹೇಬ್ ತಪ್ಪಿಸಿಕೊಂಡು ಘೋರ ಕಾನನದೊಳಗೆ ಹೋಗಿ ಅಡಗಿಕೊಳ್ಳಬೇಕಾಯಿತು. ಚಕ್ರವರ್ತಿ ಬಹದೂರ್ ಷಹನು ಆಂಗ್ಲೇಯರ ಖೈದಿಯಾಗಿ ಬರ್ಮಾದೇಶದ ಸೆರೆಮನೆಯಲ್ಲಿ ಕೊಳೆತು ಮರಣವನ್ನಪ್ಪಿದನು. ಮೊದಲನೇ ಸ್ವಾತಂತ್ರ್ಯ ಸಂಗ್ರಾಮದ ವೀರ ಮುಖಂಡರಾದ ಇವರೆಲ್ಲಾ ಭಾರತದ ಚರಿತ್ರೆಯಲ್ಲಿ ಎಂದೆಂದೂ ಅಳಿಯದ ಹೆಸರನ್ನು ಪಡೆದು ಅಮರರೆನಿಸಿದ್ದಾರೆ.

೧೮೪೮ನೆಯ ಇಸವಿಯಲ್ಲಿ ಇಟಲಿಯಲ್ಲಿ ಎದ್ದ ಮಹತ್ತಾದ ಸ್ವಾತಂತ್ರ್ಯ ಕ್ರಾಂತಿಯೂ ಸೋತುಹೋಗಿತ್ತು. ಆದರೂ ಆ ಸೋಲಿನ ಮಹತ್ವವು ಕುಂದಲಿಲ್ಲ. ಅನಂತರ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಟಲಿಗೆ ಸಿಕ್ಕಿದ ಮಹತ್ತಾದ ವಿಜಯಕ್ಕೆ ಆ ಸೋಲೇ ಅಸ್ತಿವಾರವಾಯಿತು. ಆದರಂತೆಯೇ ಭಾರತದಲ್ಲಿ ನಡೆದ ಮೊದಲನೇ ಸ್ವಾತಂತ್ರ್ಯ ಯುದ್ಧವೂ, ಅನಂತರ ೯೦ ವರ್ಷಗಳವರೆಗೆ ನಡೆದ ಅನೇಕ ಸಮರಗಳೂ ಕೊನೆಗೆ ಭಾರತ ದೇಶವು ಪಡೆದ ಸ್ವಾತಂತ್ರ್ಯಕ್ಕೆ ಅಸ್ತಿವಾರವೂ ಅದರ ಮೇಲೆ ಕಟ್ಟಲ್ಪಟ್ಟ ಕಲ್ಲುಗಳೂ ಆದುವೆಂದು ಹೇಳಬಹುದು.

೦ ೦ ೦ ೦

೧೯೪೪ನೇ ವರ್ಷದಲ್ಲಿ ಪೂರ್ವ ಏಷ್ಯಾದಲ್ಲಿ ಸ್ವಾತಂತ್ರ್ಯವೀರ ನೇತಾಜಿ ಸುಭಾಷ್‌ಚಂದ್ರ ಬೋಸರ ಮುಖಂಡತ್ವದಲ್ಲಿ ಸ್ವಾತಂತ್ರ್ಯಯುದ್ಧವೊಂದು ಪ್ರಾರಂಭವಾಯಿತು. ಅದು ಮೊದಲನೇ ಸ್ವಾತಂತ್ರ್ಯಯುದ್ಧದ ರೀತಿಯದೇ ಆಗಿದೆ. ೧೮೫೭ರಲ್ಲಿ ಸ್ವಾತಂತ್ರ್ಯ ಸಮರವನ್ನು ಪ್ರಾರಂಭಿಸಿದ ದೇಶಭಕ್ತರು "ಚಲೋ ದಿಲ್ಲಿ" ಘೋಷಣದೊಂದಿಗೆ ಹೊರಟಹಾಗೆಯೇ ನೇತಾಜಿ ಮುಖಂಡತ್ವದಲ್ಲಿಯೂ ದೇಶೀಯ ವೀರರು ಅದೇ ಘೋಷಣದೊಂದಿಗೆ ಹೊರಟರು.

(೧೭ನೇ ಪುಟ ನೋಡಿರಿ)

ಸರ್ವರಿಗೂ ಪ್ರಜಾರಾಜ್ಯದಿನದ ಶುಭಾಶಯಗಳು!

ಪುಣ್ಯಸ್ಥಳವೆಂದೂ ವಿದ್ಯಾಕ್ಷೇತ್ರವೆಂದೂ
ಪ್ರಖ್ಯಾತವಾಗಿದೆ— ಉಡುಪಿ!

ಉಡುಪಿಯಲ್ಲಿ ಸಕಲ ಸೌಕರ್ಯಗಳಿಂದೊಡಗೂಡಿರುವ
ಅತ್ಯುತ್ಕೃಷ್ಟ ವಸತಿ ಗೃಹವೆಂದು ಪ್ರಸಿದ್ಧವಾಗಿದೆ—

ರೋಯಲ್ ಮಹಾಲ್!

ಪ್ರವಾಸಿಕರ ಆದರ್ಶ ನಿವಾಸ

ಅತ್ಯಾಧುನಿಕವಾದ ಹೆಚ್ಚಿನ ಕೊಠಡಿಗಳು
ಸೇರಿಸಲ್ಪಟ್ಟು ವಿಸ್ತರಿಸಲ್ಪಟ್ಟಿದೆ.

ನಗರದ ಕೇಂದ್ರ ಸ್ಥಳದಲ್ಲಿ—
ಪ್ರಶಾಂತ ವಾತಾವರಣದಲ್ಲಿದೆ—

ರೋಯಲ್ ಮಹಾಲ್

ಉಡುಪಿ.

ಮ್ಯಾನೇಜರು:— ಕೆ. ವೆಂಕಟ್ರಮಣ ಭಟ್.

ಸತ್ಪಾತ್ರದೊಳ್ ದಾನಮಂ

ದಾನಗುಣ ಭಾರತೀಯರಿಗೆ ಜನ್ಮದಿಂದ ಬಂದುದು; ಇದರ ದುರ್ಲಾಭವನ್ನು ಪಡೆದುಕೊಂಡೇ ಸಾವಿರಾರು ಭಿಕ್ಷುಕರು ಜೀವಿಸಿ ದಾಂಡಿಗರಾಗಿ ಬೆಳೆದಿದ್ದಾರೆ. ಆದುದರಿಂದಲೇ ಉಳಿದವರು ಅಧಿಕ ಶ್ರಮಪಡಬೇಕಾಗಿದೆ. ಆಲಸ್ಯವನ್ನು ದೂರೀಕರಿಸಲು ದಾನಕ್ಕೆ ಸತ್ಪಾತ್ರರನ್ನು ಮಾತ್ರ ಆರಿಸಬೇಕಾಗುತ್ತದೆ.

ಶ್ರೀ ಸಂಜೀವ ಲಕ್ಷ್ಮೇಶ್ವರ, ಬಿ. ಎ.

ಹಿಂದುಸ್ಥಾನವು ದಾನಮಾಡುವದರಲ್ಲಿ ಪ್ರಸಿದ್ಧವಿದೆ. ಅಂತೆಯೇ ಅದು ಭಿಕ್ಷುಕರ ತವರೂರಾಗಿದೆ. ಇಲ್ಲಿ ಭಿಕ್ಷಾಟನೆಗೆ ಇದ್ದಷ್ಟು ಪುರಸ್ಕಾರ ಬೇರೆ ಯಾವದೇ ದೇಶದಲ್ಲಿಯೂ ಇಲ್ಲ ಎಂದು ಹೇಳಬಹುದು. ಬ್ರಾಹ್ಮಣರಂತೂ ಉಪದೇಶಮಾಡುತ್ತ ಇದೊಂದು ಉಪಜೀವನದ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ಮನು, ಬ್ರಾಹ್ಮಣರ ಬಗ್ಗೆ ಹೀಗೆ ಹೇಳಿದ್ದಾನೆ. "ಇವರು ಎಂದೆಂದಿಗೂ ಪರರ ದಾನಗಳ ಮೂಲಕವೇ ಜೀವಿಸಿರಲಿ. ನೌಕರಿಮಾಡಿ ಜೀವಿಸಿರುವವರ . ಬಾಳೆಂದರೆ ನಾಯಿಯ ಬಾಳು ಇದ್ದಂತೆ. ಅದು ಇವರಿಗೆ ಎಂದೆಂದಿಗೂ ಬೇಡ." ಎಂದೇ ಅವರು ಭಿಕ್ಷಾಟನೆಯನ್ನು ಜೀವನೋಪಾಯವನ್ನಾಗಿ ಮಾಡಿಕೊಂಡಿದ್ದಾರೆ.

ಜನಸಾಮಾನ್ಯರು ಇಲ್ಲಿ ದಾನಮಾಡಿದರೆ ಪರಲೋಕದಲ್ಲಿ ದೊರೆಯಬಹುದಾದ ಪ್ರತಿಫಲಗಳ ಆಶೆಯಿಂದ ದಾನಮಾಡುವರು. ಗೋದಾನಮಾಡಿದರೆ ಮೋಕ್ಷ ದೊರೆಯುವದು. ಭೂದಾನ, ಗೃಹದಾನ, ಸುವರ್ಣದಾನ ಮುಂತಾದವುಗಳಿಗೆ ಅವುಗಳಿಗೆ ತಕ್ಕಂತೆ ಪ್ರತಿಫಲಗಳು ಪರಲೋಕದಲ್ಲಿ ದೊರೆಯುವವು. ಬ್ರಾಹ್ಮಣರಿಗೆ ದಾನಮಾಡದಿರುವದು ಪಾಪಕೃತ್ಯವೆನಿಸಿತಂತೆ. ಆದರೆ ಇಂದು ಕಾಲ ಬದಲಾದ್ದರಿಂದ ಇಂದಿನ ಬ್ರಾಹ್ಮಣರು ಮನು "ನಾಯಿಯ ಬಾಳೆಂದು" ಹೇಳಿದ ನೌಕರಿಗೆ ಮೊರೆಹೋಗುತ್ತಿರುವರು.

ಬ್ರಾಹ್ಮಣರಿಗೆ ದಾನಮಾಡುವದು ಪುಣ್ಯದ ಕೆಲಸವಾದ್ದರಿಂದ ಪರಲೋಕದಲ್ಲಿ ಪ್ರತಿಫಲ ದೊರೆಯುವದೆಂದು ನಂಬಿಕೆ ಇದ್ದರೂ, ದಾನಪಡೆಯಲು ಬ್ರಾಹ್ಮಣರೇ ಅರ್ಹರು ಎಂದು ಕಟ್ಟುನಿಟ್ಟಾಗಿ ಹೇಳಲು ಬಾರದು. ಪ್ರತಿನಿತ್ಯ ಮಾಡಬಹುದಾದ ಸುಕೃತ್ಯಗಳಲ್ಲಿ ದಾನಮಾಡುವದು ಒಂದು ಎಂದು ಗಣಿಸಲ್ಪಡುತ್ತಿದೆ. ಎಷ್ಟೋ ಭಾವಿಕ ಹೆಣ್ಣುಮಕ್ಕಳು ಪ್ರತಿನಿತ್ಯ ಅಡಿಗೆ ಮಾಡಲು ಪ್ರಾರಂಭಿಸುವ ಮೊದಲು, ಅಂದು ಬಡವರಿಗೆ ದಾನಮಾಡಲು ಎಂದು ಬೊಗಸೆತುಂಬ ಕಾಳುಕಡಿಗಳನ್ನು ತೆಗೆದಿಡುವ ಪದ್ಧತಿ ಉಂಟು. ಮೂವತ್ತೆರಡು ಪ್ರಕಾರದ ದಾನಗಳಲ್ಲಿ ಬಡವರಿಗಾಗಿ ಮನೆಕಟ್ಟಿಸುವದು, ಅವರ ಉಪಜೀವನದ ವೆಚ್ಚವನ್ನು ವಹಿಸುವದು, ವಿದ್ಯೆಕಲಿಸುವದು, ಆಕಳ ಸಾಕುವದು, ಬೇನೆಯಿಂದ ಬಳಲುತ್ತಿರುವವರಿಗೆ ಔಷಧೋಪಚಾರ ಮಾಡುವದು, ನೀರಡಿಸಿದವರಿಗೆ ನೀರು ಕೊಡುವದು, ರಸ್ತೆಯ ಬದಿಗೆ ಗಿಡಹಚ್ಚುವದು ಮುಂತಾದವುಗಳು ಮುಖ್ಯವಾಗಿರುವವು.

ದಾನಮಾಡುವದು ಎಂದರೆ ಧಾರ್ಮಿಕ ದೃಷ್ಟಿಯಿಂದ ಒಂದು ಸುಕೃತ್ಯಮಾಡಿದಂತೆ ಎಂಬ ಭಾವನೆ ರೂಢಿಯಲ್ಲಿದೆ. ಆ ಭಾವನೆಯೇ ಹಿಂದುಗಳನ್ನು ದಾನಮಾಡಲು ಹಚ್ಚುವದು. ಆದರೆ ಸ್ವಲ್ಪ ವಿಚಾರಮಾಡಿ ನೋಡಲಾಗಿ ಧಾರ್ಮಿಕ ದೃಷ್ಟಿಯಿಂದ ಸುಕೃತ್ಯವಾಗಿ ಕಾಣುವ ಈ ಕಾರ್ಯವು ಸಾಮಾಜಿಕ ದೃಷ್ಟಿಯಿಂದ ಅಪಾಯಕಾರಿ ಆಗಿದೆ. ಉದಾಹರಣಾರ್ಥವಾಗಿ ಒಬ್ಬ ಗೃಹಸ್ಥನು ಪ್ರತಿ ತಿಂಗಳು ಉದಾರ ಮನಸ್ಸಿನಿಂದ ದಾನ ಮಾಡುತ್ತಿರುವನು. ಆದರೆ ಅವನು ಮಾಡಿದ ದಾನವು ಅನೇಕ ನಿರುದ್ಯೋಗಿಗಳ, ಕಳ್ಳತನ ಮಾಡುವ, ಅನೈತಿಕ ಜೀವನ ನಡೆಸುವಂಥ ಸಮಾಜ ಘಾತುಕರ ಜೀವನ ನಿರ್ವಹಣೆಗೆ ಸಹಾಯವಾಗುವದು. ಹೀಗಿದ್ದಲ್ಲಿ ದಾನ ಮಾಡಿದ, ಆ ಗೃಹಸ್ಥನು ಯಾವ ಸುಕೃತ್ಯವನ್ನೆಸಗಿದಂತಾಯಿತು ? ಅವರ ಬದಲು ಅಪ್ರತ್ಯಕ್ಷವಾಗಿ ಸಮಾಜ ಘಾತುಕ ಕಾರ್ಯಗಳಿಗೆ ಆರ್ಥಿಕ ಸಹಾಯ ಮಾಡಿ ಪ್ರೋತ್ಸಾಹಿಸಿದಂತೆ ಆಗುವದಿಲ್ಲವೆ? ಅವನ ದಾನದ ಮೇಲೆ ಆಶ್ರಿತರಾದ ಸಮಾಜ ಕಂಟಕರು ಮಾಡಿದ ದುಷ್ಕೃತ್ಯಕ್ಕೆ ಅವನೂ ಹೊಣೆಗಾರನಲ್ಲವೆ? ಇಂಥ ದಾನ ಧರ್ಮದ ಹೆಸರಿನಿಂದ ಆದರಂತೂ ಅಂಥ ದುಷ್ಕೃತ್ಯ ಬೇರೆಯಾವದೂ ಇರಲಾರದು. ಆದುದರಿಂದ ದಾನಮಾಡುವಾಗ್ಗೆ ದಾನ ಸ್ವೀಕರಿಸುವವನ ಪಾತ್ರತೆ ಅಪಾತ್ರತೆಗಳನ್ನು ವಿಚಾರಿಸಿ ದಾನಮಾಡಬೇಕು. ಇಲ್ಲದಿದ್ದರೆ ಅಪಾತ್ರರಿಗೆ ಅದರ ಲಾಭ ದೊರಿತು ಸತ್ಪಾತ್ರರು ಕಡೆಗಣಿಸಲ್ಪಡುವರು.

ತೋರಿಕೆಯ ದೃಷ್ಟಿಯಿಂದಲೂ ಹಾಗು ನ್ಯಾಯವಾಗಿಯೂ ನೋಡಲಾಗಿ ಯಾರಿಗೆ ಪರಸಹಾಯದ ಆವಶ್ಯಕತೆ ಹೆಚ್ಚಿರುವದೋ ಅವರೇ ದಾನಕ್ಕೆ ಪಾತ್ರರು ಎಂದು ಅನಿಸುವದು ಸಹಜ. ಆದರೆ ದಾನಕೊಡುವ ಹಿಂದುಗಳ ದೃಷ್ಟಿಯಲ್ಲಿ ಇದು ಮಹತ್ವದ ವಿಷಯವಲ್ಲ. ಅವರ ದೃಷ್ಟಿಯಿಂದ ಉಪವಾಸದಿಂದ ಬಳಲುತ್ತಿರುವ ಒಬ್ಬ ಭಿಕ್ಷುಕನಿಗೆ ಸಹಾಯಮಾಡುವದಕ್ಕಿಂತ, ಒಬ್ಬ ಶ್ರೇಷ್ಠ ಬ್ರಾಹ್ಮಣನಿಗೆ ದಾನಮಾಡುವದು ಹೆಚ್ಚು ಶ್ರೇಯಸ್ಕರ ಅದರಂತೆ ಹಿಂದು ಧರ್ಮಗಳಲ್ಲಿ ಅನೇಕ ಢೋಂಗಿ ತತ್ವಗಳಿವೆ. ಜನಸಾಮಾನ್ಯರ ಮನಸ್ಸನ್ನು ಅನೇಕ ಮೂಢನಂಬಿಕೆಗಳಿಂದ ಕೆಡಿಸಲಾಗಿದೆ. ಬ್ರಾಹ್ಮಣರೇ ದಾನಕ್ಕೆ ಯೋಗ್ಯರು, ಉಳಿದವರು ಅನರ್ಹರು. ಅನರ್ಹರಿಗೆ ದಾನಕೊಡುವದು ಪಾಪದ ಕೆಲಸ ಎಂಬ ಭಾವನೆಯನ್ನು ಬೇರೂರಲಾಗಿದೆ. ಬಡವರು, ರೋಗಿಗಳು, ಅಶಕ್ತರೂ ಹಾಗು ಊನರು ಮುಂತಾದವರು ತಮ್ಮ

(೧೬ನೇ ಪುಟ ನೋಡಿರಿ)

ಜ್ಯೋತಿ ಟಾಕೀಸ್,
ಮಂಗಳೂರು
14-1-60ರಿಂದ ಕಿಕ್ಕಿರಿದ ಜನಸಂದಣಿಗೆ
ಪ್ರದರ್ಶಿತವಾಗುತ್ತಿದೆ
ಜೆಮಿನಿಯವರ
ಮಹೋನ್ನತ ಸಾಮಾಜಿಕ ಚಿತ್ರ—
ಇರುಂಬು ತಿರೈ
[IRON CURTAIN]
ತಾರಾಗಣ—
ವೈಜಯಂತಿಮಾಲಾ
ಬಿ. ಸರೋಜಾ ದೇವಿ
ಪಂಡರಿಬಾಯಿ, ರಂಗರಾವ್
ಶಿವಾಜಿ ಗಣೇಶನ್
ತಂಗವೇಲು, ದೊರೈರಾಜ್

1960 ಹೊಸ ವರುಷ . . . .
ಎಂದಿನಂತೆ ಇಂದೂ ನವವರುಷವು
ನವ ಹುರುಪುಗಳನ್ನೀಯಲಿ!
ನಾವು ನಮ್ಮ ಕರ್ತವ್ಯದಲ್ಲಿ ಎಂದಿನಂತೆ—ಇಂದೂ—ಮುಂದೂ—
ಪ್ರಾಮಾಣಿಕ ಸೇವೆಯನ್ನು
ಗ್ರಾಹಕರ ಪ್ರೀತಿವಿಶ್ವಾಸಗಳಿಗೆ ಪಾತ್ರವಾಗುವಂತೆ
ಸಲ್ಲಿಸುವ ಭರವಸೆಗಳನ್ನೀಯಲು ಸಂತೋಷಪಡುತ್ತೇವೆ.
ಮುದ್ರಣಾಲಯಗಳ ಸಕಲಸಾಮಗ್ರಿಗಳ ಸರಬರಾಜಿಗಾಗಿ
ಶ್ರೀನಿವಾಸ ಬ್ರದರ್ಸ್
ಪ್ರಖ್ಯಾತ ಕಾಗದ ಹಾಗೂ ಸ್ಟೇಶನರಿ ವ್ಯಾಪಾರಿಗಳು
ಪೋಸ್ಟ್ ಬಾಕ್ಸ್ ನಂಬ್ರ 130
ರಥಬೀದಿ, ಮಂಗಳೂರು
ಅಧಿಕೃತ ವಿತರಕರು:
"BAMBOO" ಮಾರ್ಕಿನ ಕಾಗದಗಳು
"J B A" ಮುದ್ರಣ ಶಾಯಿಗಳು
SRINIVAS BROTHERS
P. B. No 130 Car Street, MANGALORE.
Phone: 449 Grams: "ACTIVE"

ಮೈಸೂರು ರಾಜ್ಯದಲ್ಲಿ

ಕನ್ನಡ ಜಿಲ್ಲೆಗಳ ಆರ್ಥಿಕ ಪ್ರಾಮುಖ್ಯ

ಮೈಸೂರಿನ ಕಡಲ ಕರೆಯ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳು ಹಿಂದಿನಿಂದಲೂ ವಿಶೇಷ ಐತಿಹ್ಯದೊಡನೆ ಬೆಳೆದು ಬಂದುವು; ಇಂದಿಗೂ ಈ ವೈಶಿಷ್ಟ್ಯವನ್ನವು ಪ್ರತಿ ಕ್ಷೇತ್ರದಲ್ಲಿಯೂ ಉಳಿಸಿಕೊಂಡಿವೆ

ಶ್ರೀ. ಸೆವೆರಿನ್ ಸಿಲ್ವ, ಬಿ. ಎ., ಎಲ್. ಎಲ್. ಬಿ.

ಉತ್ತರ ಮತ್ತು ದಕ್ಷಿಣ ಕನ್ನಡಾ (ಕೆನರಾ) ಜಿಲ್ಲೆಗಳನ್ನೊಳಗೊಂಡ ಭೂಭಾಗವೆಲ್ಲವೂ ತನ್ನದೇ ಆದ ವೈಶಿಷ್ಟ್ಯವುಳ್ಳದ್ದಾಗಿದೆ. ಅನಾದಿಕಾಲದಲ್ಲಿ ಭೂಗರ್ಭದ ನಡುಕ ಮತ್ತು ಜ್ವಾಲಾಮುಖಿಗಳ ಉದ್ಭವದಂಥ ಕಾರ್ಯಕ್ರಮಗಳಿಂದ ಈ ಭಾಗದ ಪೂರ್ವದಲ್ಲಿ ಸಹ್ಯಾದ್ರಿಗಳು ತಲೆದೋರಿದಾಗ, ಅವುಗಳಲ್ಲಿ ಏನೇನೂ ಕರಾವಳಿ ಪ್ರಾಂತವು ಉಳಿಯಲಿಲ್ಲ; ಪರ್ವತಗಳೇ ಸಮುದ್ರದ ತನಕವೂ ಚಾಚಿ ಅಲ್ಲಿ ಸಾಲಾಗಿ ನಿಂತವು. ಅನಂತರ ಕಾಲವು ಗತಿಸುತ್ತ ಹೋದಂತೆ ಸಮುದ್ರವು ಹಿಂದೆ ಸರಿಯುತ್ತಲೋ, ಭೂಭಾಗವು ಮೇಲೇರುತ್ತಲೋ ಇಲ್ಲಿ ಕರಾವಳಿಯು ತಲೆದೋರಿತು. ಅಂತೂ ವಿಶಿಷ್ಟ ಪ್ರಾಕೃತಿಕ ಕ್ರಿಯೆಗಳಿಂದಲೇ ಈ ಜಿಲ್ಲೆಗಳು[1] ರೂಪುಗೊಂಡುವು. ಬಹಳ ಹಿಂದೆ ಈ ಭೂಭಾಗವನ್ನೆಲ್ಲ 'ಯಾವನಿಗೂ ಸೇರದಿರುವ ನೆಲ' (Noman's land) ವೆಂಬರ್ಥದ ತಮಿಳು ಮಾತಿನಿಂದ 'ಕೋಲ್ ಕನ್ನಂ' (Kol Kannam) ಎಂದು ಕರೆಯಲಾಗುತ್ತಿತ್ತು.

ಯಾವನಿಗೂ ಸೇರದ ನೆಲವೆಂದಬಳಿಕ ಇಲ್ಲಿಗೆ ಯಾವನೂ ಬಂದು ನೆಲಸುವುದು ಸಾಧ್ಯವಿತ್ತೆ ತಾನೆ? ಅಂತೂ ಸಹ್ಯಾದ್ರಿಗಳನ್ನು ದಾಟಿಬಂದ ತಮಿಳರು ಇಲ್ಲಿ ಮೆಲ್ಲನೆ ತಂಗಲಾರಂಭಿಸಿದರು. ಜನವಸತಿಯು ಕಂಡುಬಂದಂತೆ ಈ ಭಾಗಕ್ಕೆ ಪರಶುರಾಮ ಸೃಷ್ಟಿ ಎಂಬಿತ್ಯಾದಿ ನಾಮಕರಣಗಳೂ ಆದುವು.

ಅಂತೂ ಕಡಲ ಕರೆಯು ರಚನೆಯಾಗುತ್ತಲಿದ್ದಂತೆ, ಈ ವೇಳೆ ಅರಬ್ಬೀ ಸಮುದ್ರದ ಆಚೆ ಹುಟ್ಟಿ ರಾಜ್ಯಗಳಿದ್ದುವು ಎಂಬುದು ಮರೆಯಲಾಗದ ವಿಷಯ. ಅಲ್ಲಿನ ನಾಗರಿಕತೆ, ಸಂಸ್ಕೃತಿಗಳು ಹೇಗೆ ಸಮುದ್ರವನ್ನು ದಾಟಿ ಇತ್ತಲಿನ ಸಂಸ್ಕೃತಿಯೊಡನೆ ಬೆರೆತುವು ಎಂಬುದು ಇನ್ನೂ ಶೋಧನೀಯವಾಗಿ ಉಳಿದಿರುವ ವಿಚಾರವೇ ಆಗಿದೆ. ಅಂತೆಯೇ ಹೇಗೆ ಮತ್ತು ಎಂದು ನಾಗರಿಕ ಸಂಪರ್ಕ ವ್ಯವಹಾರಗಳೂ ಈ ಭಾಗದಲ್ಲಿ ಆರಂಭವಾದುವು ಎನ್ನುವುದೂ ತಿಳಿಯದೆ ಇರುವ ವಿಚಾರವೇ. ಮೊದಮೊದಲು ದೊಡ್ಡ ದೊಡ್ಡ ಮರಗಳನ್ನೋ, ದೊಡ್ಡ ಪ್ರಾಣಿಗಳ ಮೈಚರ್ಮವನ್ನೋ ಸಮುದ್ರಯಾನಕ್ಕಾಗಿ ಉಪಯೋಗಿಸಿದ ಐತಿಹ್ಯಗಳಿವೆ. ಆದರೆ ಇಂಥ ಉಪಕರಣಗಳನ್ನು ಕೇವಲ ಬಂದರಗಳ ಮೂಲಕ ಉಪಯೋಗಿಸಿರಬಹುದು ಎನ್ನಲಾಗುತ್ತಿದೆ.

ಏನೇ ಇರಲಿ, ಅರಬ್ಬೀಸಮುದ್ರದ ವಿರುದ್ಧ ಪಾರ್ಶ್ವಗಳಲ್ಲಿನ ಜನರಲ್ಲಿ ಕ್ರಮೇಣ ಸಂಪರ್ಕ ಮತ್ತು ವ್ಯವಹಾರಗಳುಂಟಾದುವು. ಕರಾವಳಿಯಲ್ಲೇ ಮುಂಬರಿದು ಜನ ಕಡಲನ್ನು ದಾಟಿದರೋ, ಅಥವಾ ನೇರಾಗಿ ಕಡಲ ಮಧ್ಯವನ್ನೇ ಹಾದು ಇಂಥ ಸಂಪರ್ಕವನ್ನು ಬೆಳೆಸಿದರೋ ಹೇಳಲಾರೆವು. ತಾಯಿಯಿಂದ ಮುಂದರಿಯುವ ಹಕ್ಕು ಎಂದು ನಮ್ಮಲ್ಲಿಗೆ, ಅಂದರೆ ಈ ಕರಾವಳಿ ಪ್ರಾಂತಕ್ಕೆ, ಮಧ್ಯ ಸಮುದ್ರದ ತೀರದ ದೇಶಗಳಿಂದ ಬಂದಿತೋ, ಆಗಲೇ ಅಲ್ಲಿನ ಮತ್ತು ನಮ್ಮ ಕರಾವಳಿ ಪ್ರಾಂತಗಳ ನಡುವಣ ಸಂಪರ್ಕವು ಭದ್ರವಾಗಿ ಬೇರೂರಿತು ಎಂದರ್ಥ. ಐಸಿಸ್ (Isis) ದೇವತೆಯ ಆರಾಧನೆಯಿಂದಲೇ ಪ್ರಾಚೀನ ರೋಮನರು ಇಂಥ ವ್ಯವಹಾರಗಳನ್ನು ಮುಂದರಿಸುತ್ತ ಹೋದುದನ್ನು ನಾವು ಇತಿಹಾಸದಲ್ಲಿ ಕಾಣುತ್ತೇವೆ ಈ ದೇವತೆಯೇ ಕೃಷಿ, ಬೆಳೆಗಳ ದೇವತೆಯಾಗಿದ್ದಳು. ಐಗುಪ್ತರಲ್ಲಿ ಮೊದಲು ಆರಾಧಿತಳಾದ ದೇವತೆಯನ್ನು ಮುಂದೆ ಜನರು ಸಮುದ್ರಯಾನ ಮತ್ತು ನ್ಯಾಯಗಳ ಅಧಿದೇವತೆಯೆಂದೂ ಬಗೆದರು.

ಆಂಡ್ರೋ ದ್ವೀಪದಲ್ಲಿ ಕಂಡುಬರುವ ಒಂದು ಪ್ರಾರ್ಥನಾ ಮಂತ್ರದಲ್ಲಿ ಆವಳು ಹೇಳಿದ ಮಾತುಗಳಿವು: "ಸಮುದ್ರಯಾನಕ್ಕೆ ಆವಶ್ಯವಿರುವ ಧೈರ್ಯವನ್ನು ನಾನೇ ಪುರುಷರಲ್ಲಿ ತುಂಬಿಸಿದೆ. ನ್ಯಾಯಪರಿಪಾಲನೆಯ ಪಾಠವನ್ನೂ ನಾನೇ ಅವರಲ್ಲಿ ಪ್ರೇರೇಪಿಸಿದ್ದೇನೆ. ಇನ್ನು ಸಂತತಿಯನ್ನು ಪಡೆಯುವ ಗುಣವನ್ನು ಹೆಂಗಸರಿಗೂ ನಾನೇ ಇತ್ತಿರುವೆನು.[2] ರೋಮ್ ದೇಶದಲ್ಲಿಯೂ ಸುಲ್ಲ (Sulla)ನ ಕಾಲದಲ್ಲೇ ಈ ಸಂಸ್ಕೃತಿಯು ಐಗುಪ್ತದಿಂದ ಸಿಸಿಲಿಯನ್ನು ಹಾದು ಕಾಲಿರಿಸಿತು ಎಂದು ಹೇಳಬಹುದು.

ಕ್ರಿಸ್ತನಿಗಿಂತಲೂ ಬಹಳ ಪೂರ್ವದ ಈ ಮತವನ್ನು, ಮಾತೃ ಪ್ರಧಾನ ಸಂಸ್ಕೃತಿಯನ್ನು (mother right culture) ಸುಮಾರು ಕ್ರಿಸ್ತಪೂರ್ವ 58ರ ಸಮಯದಲ್ಲಿ ರೋಮ್‌ನಲ್ಲಿ ಖಂಡಿಸಿದರೂ, ಪುನಃ ಕ್ರಿ. ಪೂ. 43ರ ಸಮಯ ಆ ದೇವತೆಗಾಗಿ ದೇಗುಲವೊಂದನ್ನು ಕಟ್ಟಿದುದು ಕಂಡು ಬರುತ್ತದೆ. ಇತ್ತ ಇಂಡಿಯದಲ್ಲಿ ಕ್ರಿಸ್ತಪೂರ್ವ 900ರ ಸಮಯ ಸೊಲೊಮನ್ ಅರಸನ ಹಡಗುಗಳು ಕೇರಳಕ್ಕೆ ಬಂದ ದಾಖಲೆಗಳಿವೆ. ಅಂತೂ ಸುಲ್ಲ ಸೊಲೊಮನರಿಂದಲೇ ಇಂಥ ಸಂಸ್ಕೃತಿಯೂ ನಮ್ಮತ್ತ ಬಂದಿರುತ್ತದೆ ಎನ್ನುವುದು ನಿರ್ವಿವಾದ.

ಮಾತೃಪ್ರಧಾನ ಸಂಸ್ಕೃತಿಯು ಕ್ರಿ. ಪೂ. 43ರಲ್ಲಿ ರೋಮ್‌ನಲ್ಲಿ ಬಳಕೆಗೆ ಬಂದಿದ್ದರೆ, ಭಾರತದ ಅಳಿಯ ಸಂತಾನ ಕಟ್ಟು ಕ್ರಿ. ಶ. 78ರ ಸಮಯ ರೂಢಿಗೆ ಬಂದಿತು 3.

ರೋಮ್‌ನಲ್ಲಿ ಐಸಿಸ್ ಎಂದು ಕರೆಯಲ್ಪಟ್ಟ ದೇವತೆಯನ್ನೇ ಇಲ್ಲಿ ಭೂಮಿತಾಯಿ ಎಂದು ಕರೆಯಲಾಯಿತು. ಈ ವಿಚಾರದಲ್ಲಿ ಬೆಕೋಫೆನ್‌ನ ಮಾತುಗಳು ಉಲ್ಲೇಖನಾರ್ಹವಿವೆ "ಮಾತೃಪ್ರಧಾನ ಸೂತ್ರಗಳೇ ಪ್ರಜೆಗಳನ್ನು ಒದಗಿಸುವುದಲ್ಲದೆ, ಸಾಗರಯಾನವನ್ನೂ ಸುಲಭವನ್ನಾಗಿಸುತ್ತದೆ, ಕಾರಣ, ಗಂಡಸು ಹೆಂಗಸರ ಸಂಮಿಲನದಿಂದ ಸಂತಾನವನ್ನೊದಗಿಸುವ ದೇವತೆಯೇ ದೇಶದ ಕಾನೂನನ್ನೂ, ಶಾಸನಗಳನ್ನೂ ನಿರ್ವಚಿಸಿದ್ದಾಳೆ. ಸಂತಾನ ಲಾಭ ಮತ್ತು ನ್ಯಾಯಗಳೆರಡೂ ತಾಯಿತನದ ಮುಖ್ಯ ಕೊಡುಗೆಗಳು. ತನ್ನೆಲ್ಲವನ್ನೂ ಮಕ್ಕಳಲ್ಲಿ ಸಮವಾಗಿ ಹಂಚುವ ತಾಯಿಯೇ ಸಮಸ್ತ ನ್ಯಾಯವನ್ನೂ ಮೂರ್ತಿಮತ್ತಾಗಿಸುತ್ತಾಳೆ. ಹೀಗೆ ತಾಯಿಯು ಐಶ್ವರ್ಯ ಮತ್ತು ಶಾಂತಿಗಳ ಸಂಕೇತವಾಗಿದ್ದಾಳೆ."

ಈ ಮಾತುಗಳಲ್ಲೇ ಕೆನರಾ ಜಿಲ್ಲೆಯ ಅಳಿಯ ಸಂತಾನದ ಮೂಲ ರಹಸ್ಯವನ್ನೂ ಹಾಗೆಯೇ ತುಳುವರು ತಮ್ಮ ಕಾಲದಲ್ಲಿ ಸಪ್ತ ಸಾಗರಗಳನ್ನು ದಾಟಿ ಉಜ್ಜುಗಿಸಿದುದರ ವಿವರವನ್ನೂ ಕಾಣುತ್ತೇವೆ. ಹಿಪಾಲಸ್ (Hippalus)ನು ಸೂಚಿಸಿದ ಅನುಕೂಲಮಾರುತಗಳ ನಿಯಮಗಳನ್ನು ಅನುಸರಿಸಿಯೇ ತುಳುವರು ತಮ್ಮ ನಾವೆಗಳನ್ನು ಪಯೋಗಿಸಿ ಅರಬ್ಬೀ ಸಮುದ್ರದ ಎಲ್ಲ ರೇವುಗಳೊಡನೆ ಸಂಬಂಧವನ್ನು ಬೆಳೆಸಿದರು. ಹೀಗೆ ಪ್ರಾಚೀನ ಕಾಲದಿಂದಲೂ ಕೆನರಾ ಜಿಲ್ಲೆಯು ವಾಣಿಜ್ಯ ವ್ಯವಹಾರಗಳಿಗೆ ಹೆಸರಾಗಿದೆ.

ಮೈಸೂರಿನ ಕಬ್ಬಿಣದ ಅದುರುಗಳನ್ನೂ, ಧಾರವಾಡದ ಮಸ್ಲಿನುಗಳನ್ನೂ ಹಾಗೆಯೇ ಘಟ್ಟದ ತಪ್ಪಲುಗಳು ಒದಗಿಸುತ್ತಿದ್ದ ಸಂಬಾರ ಜಿನಸು ಮತ್ತು ಪಯಳಿಕ ದ್ರವ್ಯಗಳನ್ನೂ ಇಲ್ಲಿನ ರೇವುಗಳಿಂದ ಸಾಗಿಸುತ್ತಿದ್ದರು.

ಕ್ರಿ. ಶ 150ರ ಸಮಯದಲ್ಲಿ ಟಾಲೆಮಿ (Tlolamey)ಯು ಓಲ್ಯೊಯ್‌ಕ್ಹೋರಾ (Oloikhora, ಅಳಿವೆ ಕೋಡಿ) ಎಂಬ ರೇವುಗಳನ್ನು ಪ್ರಸ್ತಾಪಿಸಿದ್ದಾನೆ. ಅಲ್ಲದೆ ಸಿರ್ಸಿಯ ಹತ್ತಿರದ ಹುಲೇಕಲ್‌ನ ಹತ್ತಿರ ರೋಮ್ ಸಾಮ್ರಾಜ್ಯದ ನಾಣ್ಯಗಳೂ ಸಿಕ್ಕಿರುತ್ತವೆ.

ಪ್ರಾಚೀನ ತುಳುವರು ಸಾಗರಯಾನದಲ್ಲಿ ಕುಶಲರಾಗಿದ್ದರೆನ್ನುವುದನ್ನು ತುಳುನಾಡಿನ ಪಾಡ್ದನಗಳು ಸಾರುತ್ತಲಿವೆ.

ಮೋಹೆಂಜಾದಾರೋ ಸಂಸ್ಕೃತಿಯ ಭಾಗಗಳಿದ್ದೆಡೆಗಳಿಂದಲೇ ತುಳುವರು ಅಂಗಾರಾಧನೆಯ ಕ್ರಮವನ್ನು ಈ ಜಿಲ್ಲೆಗೆ ತಂದುದರಿಂದಲೇ ಈ ಕೆನರಾ ಜಿಲ್ಲೆಯ ಉದ್ದಕ್ಕೂ ಕರಾವಳಿಯಲ್ಲಿ ಅಂಗ ಪ್ರತಿಷ್ಠೆಯ ಅನಾದಿ ದೇವಸ್ಥಾನಗಳನ್ನು ನಾ

1. ಈ ಜಿಲ್ಲೆಗಳೇ ಮಾತ್ರವಲ್ಲ, ಉಳಿದ ಪಶ್ಚಿಮಕರಾವಳಿಯ ಪ್ರಾಂತವೆಲ್ಲವೂ ಹೀಗೆಯೇ ರೂಪುಗೊಂಡಿರುತ್ತದೆ.

2. "ಪ್ರಾಚೀನ ಮತಗಳು ಮತ್ತು ಸಂಕೇತಗಳು" ಎಂಬ ಬೇಕೋಫೆನ್‌ರ ಗ್ರಂಥದಿಂದ.

(೧೫ನೇ ಪುಟ ನೋಡಿರಿ)

ಮಕ್ಕಳ ಮಮತೆಯ
"ಬಿಕ್ರೊ" ರವರ ಗ್ಲುಕೋಸ್ ಕೂಡಿದ
ಪೆಪ್ಪರ್ ಮಿಠಾಯಿಗಳು—ರುಚಿಕರ
ಸೇವನೆಗೆ ಪ್ರಸಿದ್ಧಿಪಟ್ಟಿವೆ.
"ಬಿಕ್ರೊ" ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್
ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.

ಕನ್ನಡ ಜಿಲ್ಲೆಗಳ ಆರ್ಥಿಕ ಪ್ರಾಮುಖ್ಯ

(೧೪ನೇ ಪುಟದಿಂದ)

ವು ಕಾಣುತ್ತೇವೆ. ಈ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸಿದವರೇ ತುಳುವ ಸಮುದ್ರ ಜೀವಿಗಳು.

ಪಶ್ಚಿಮ ಘಟ್ಟ ಮತ್ತು ಸಮುದ್ರದ ನಡುವಣ ಭಾಗದಲ್ಲೆಲ್ಲಾ ಶಾಂತಿಯು ಬಹಳಕಾಲ ನೆಲಸಿತ್ತು. ದಕ್ಷಿಣದಲ್ಲಿ ನಡೆದ ಯುದ್ಧಗಳಾದರೋ, ಇಲ್ಲಿನ ಶಾಂತಿಯನ್ನು ಕೆಡಿಸಲಿಲ್ಲ.

ಶಾಂತಿಯು ನೆಲಸಿದ್ದ ಭೂಭಾಗಗಳಲ್ಲಿ ಭೂಮಿಗೆ ಹೆಚ್ಚಿನ ಪ್ರಾಶಸ್ತ್ಯವು ದೊರಕಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ನೆಲದ ಮೇಲಣ ಮೋಹವು ಕ್ರಮೇಣ ಅಳಿಯ ಕಟ್ಟಿನ ಜನರಲ್ಲಿ ಬೆಳೆಯಿತು. ನೆಲವು ಅಂತೆಯೇ ಈ ಜನರ ಹಕ್ಕಿನ ಸೊತ್ತು ಆಯಿತು.

ತಮ್ಮ ಸ್ವಂತದ ಅಥವಾ ಹಕ್ಕಿನ ಭೂಮಿಯನ್ನು ಕ್ರಮೇಣ ಇತರರಿಗೆ ಗೇಣಿ ಕೊಡುವ ಕ್ರಮವೂ ಜಾರಿಗೆ ಬಂದು ಮೂಲಗೇಣಿಯ ಕ್ರಮವು ಇಲ್ಲಿನ ಅನಾದಿ ಕ್ರಮವೇ ಆಗಿದೆ. ಶಾಶ್ವತವಾದ ಗೇಣಿಯ ಈ ಕ್ರಮವಾದರೋ ಜಗತ್ತಿನಲ್ಲೆಲ್ಲಾ ಅತ್ಯಂತ ಪ್ರಸಿದ್ಧವೆನಿಸಿದ ಕ್ರಮವಾಗಿರುತ್ತದೆ.

ಸಣ್ಣ ವಾಯಿದೆಯ ಅವಧಿಯೆಂದರೆ ಹತ್ತು ವರ್ಷಗಳಷ್ಟಿತ್ತು. ಅಂತೂ ಜಗತ್ತಿನ ಉಳಿದೆಡೆಗಳಲ್ಲಿ 4 ವರ್ಷದ ಅವಧಿಗಿಂತ ಹೆಚ್ಚಿನ ಅವಧಿಯ ಗೇಣಿ ಕ್ರಮವಿಲ್ಲದಿದ್ದರೂ ಇಲ್ಲಿನ ಕ್ರಮವು ಜಗತ್ತಿನಲ್ಲೆಲ್ಲಾ ಅದ್ವಿತೀಯವೆನಿಸಿದೆ.

ತೋಟ ವಿದ್ಯೆಯಲ್ಲಿಯೂ ಅಳಿಯಸಂತಾನಿಗ ಹೆಂಗಸರು ಪ್ರಸಿದ್ಧರಾಗಿದ್ದರು, ಕಾರ್ಯಜಾಣರಾಗಿದ್ದರು. ತಮತಮಗೆ ಅವಶ್ಯವಿದ್ದುದನ್ನೆಲ್ಲ ಇವರು ತಮ್ಮ ಮನೆಗಳ ಸುತ್ತಲೂ ಬೆಳಸುತ್ತ ಅವೇ ಇಂದಿನ ತೆಂಗಿನ, ಕಂಗಿನ ತೋಟಗಳಾಗಿಯೂ ಪರಿಣಮಿಸಿವೆ. ಮಾತ್ರವಲ್ಲದೆ ಮನೆಯ ಸುತ್ತಲೂ ಬೆಳೆವ ಕೈತೋಟದ ಕ್ರಮವೂ ಇಲ್ಲಿಯೇ ಪ್ರಾದುರ್ಭವಿಸಿತು. ಹೀಗೆ ತಾನು ಬೆಳೆವ ಭೂಮಿಯ ಸ್ವಾಮ್ಯದ ಗುಟ್ಟೇ ನಾಡವ ಅಥವಾ ಬಂಟಜೀವನದ್ದಾಗಿದೆ.

ಅಂತೂ ಈ ಮಾತೃಪ್ರಧಾನ ಸಂಸ್ಕೃತಿಯಿಂದ ಈ ಎರಡು ಜಿಲ್ಲೆಗಳ ಹೆಸರು ವ್ಯವಸಾಯ, ವ್ಯವಹಾರಗಳಲ್ಲೆಲ್ಲ ಬೆಳೆಯಿತು. ಇಲ್ಲಿನ ಜನರ ಸಂಸ್ಕೃತಿ, ಕಷ್ಟಸಹಿಷ್ಣುತೆಗಳೇ ವಿಜಯನಗರ ಮತ್ತು ಬಿದನೂರು ಅರಸರ ವಿಶೇಷಗಮನವನ್ನು ಎಳೆಯಲು ಕಾರಣವಾದುವು. ವಿಜಯನಗರದ ಅರಸರಂತೂ ಕೃಷಿಯನ್ನು ಇಲ್ಲಿ ತುಂಬಾ ಪ್ರೋತ್ಸಾಹಿಸಿದರು.

ಡಚ್ಚರೂ, ಆಂಗ್ಲರೂ ಈ ಜಿಲ್ಲೆಯನ್ನು ಅಕ್ಕಿಯ ಉಗ್ರಾಣವೆಂದೇ ಕರೆದಿರುತ್ತಾರೆ. 1743ರಲ್ಲಿ ಜೂಲಿಯನ್ ವೆಲೆಂಟೀನ್ ಹೇಳಿದ ಮಾತುಗಳಿವು: "ದಕ್ಷಿಣದಲ್ಲಿ ನೀಲೇಶ್ವರಂ ನದಿಯು ಗಡಿಯಾಗಿರುವ ಕೆನರಾ ಜಿಲ್ಲೆ ಯಾವರೋ ಧಾನ್ಯಗಳ ಮುಖ್ಯ ಅಕ್ಕಿಯ ಉಗ್ರಾಣವಾಗಿದೆ." 1781ರ ಸಮಯ "ಕೆನರಾವು ಅತ್ಯಂತ ಫಲವತ್ತಾದ ಜಿಲ್ಲೆಯಿದ್ದು, ಇವ್ಯಾವ ಜಿಲ್ಲೆಗಿಂತಲೂ ಅಧಿಕ ಫಲಪ್ರದವಾಗಿದೆ," ಎಂದು ಎಟ್ರಿಯನ್ ಲೋಕಸ್ ಬರೆದಿರುತ್ತಾನೆ.

ಹಾಗೆಯೇ ಭೂಮಿಗೆ ವ್ಯಕ್ತಿಯೊಬ್ಬ ಸ್ವಾಮಿಯಾಗಿರುವುದೂ ಇಲ್ಲಿನ ವಿಶಿಷ್ಟ ಕ್ರಮವಾಗಿತ್ತು. "ಇಲ್ಲಿಯ ಭೂಮಿಯ ಒಡೆತನವು ವ್ಯಕ್ತಿಶಃ ಪ್ರತ್ಯೇಕವಾಗಿದ್ದರೆ ಮಲಬಾರಿನಲ್ಲಿ ಎಲ್ಲ ಭೂಮಿಗೂ ಸರಕಾರವೇ ಸ್ವಾಮಿಯಾಗಿದ್ದು ಅಂಥ ಸ್ವಾಮಿಯೇ ಇಲ್ಲಿನದೆಲ್ಲವನ್ನೂ ಹಂಚಬೇಕಿತ್ತು" ಎಂದು 4-8-1807ರ ಥೇಕರೇ ರಿಪೋರ್ಟಿನಲ್ಲಿ ಹೇಳಲಾಗಿದೆ. ಇನ್ನೊಬ್ಬ ಆಂಗ್ಲ ಬರೆಹಗಾರನ ಮಾತುಗಳು ಹೀಗಿವೆ; "ಇಲ್ಲಿನ ಜನರ ಭೂಮಿಯಮೇಲಣ ಮೋಹ, ಅದನ್ನು ಅವರು ಸಾಗುವಳಿಮಾಡುವ ಕ್ರಮ, ಅವರು ಭೂಮಿಯನ್ನು ಮಾರುವ ಕೊಳ್ಳುವ ಕ್ರಮಗಳನ್ನು ಕಂಡರೆ ಇಲ್ಲಿ ನೆಲವು ಖಂಡಿತವಾಗಿಯೂ ವ್ಯಕ್ತಿಶಃ ಹಂಚಿಹೋಗಿದೆ. ಇದನ್ನು ಯಾವ ಪ್ರೇಕ್ಷಕನೂ ಅಲ್ಲಗಳೆಯುವಂತಿಲ್ಲ. ಇಲ್ಲೆಲ್ಲಾದರೂ ಸರಕಾರವು ಭೂಮಿಯನ್ನು ಕಸಿದುಕೊಳ್ಳಲೆತ್ನಿಸಿದರೆ, ಇಲ್ಲಿಯೂ ಫ್ರಾನ್ಸಿನಲ್ಲಿ ಇಗರ್ಜಿಗಳ ಮತ್ತು ಪ್ರತಿಷ್ಠಿತರಿಂದ ಭೂಮಿಯನ್ನು ಕೊಂಡಂತೆಯೇ ಆಗುತ್ತದೆ".

ಆಂಗ್ಲರೊಡನೆ ಹೈದರ್ ಮತ್ತು ಟಿಪ್ಪು ಇವರು ನಡೆಸಿದ ಯುದ್ಧಗಳೇ ಇಲ್ಲಿನ ಪ್ರಾಚೀನ ವೈಭವವನ್ನು ಕಳೆಯಲು ಕಾರಣವಾದುವು. ಇವರಿಬ್ಬರೂ ಇಲ್ಲಿನ ಸಮೃದ್ಧಿಯಿಂದ ಮೋಹಿತರಾಗಿದ್ದರೆ, ಆಂಗ್ಲರ ದೃಷ್ಟಿಯಲ್ಲಿ ಈ ನೆಲವು ಅವರ ಮುಂದಿನ ವಿಜಯಗಳ ಬಗ್ಗೆ ಇದ್ದ ನಿಲ್ದಾಣವೇ ಆಗಿತ್ತು.

ಟಿಪ್ಪುವಿನ ಯುದ್ಧಗಳಿಂದ ಭೂಮಿಗೆ ವಿಶೇಷ ಹಾನಿಯೊದಗಿತು. ಜನರು ನೆಲವನ್ನೂ ಬಿಟ್ಟೋಡಿದರು. ಉತ್ತರ ಕೆನರಾದಲ್ಲೇ 80% ನೆಲವು ಕಾಡುಮಯವಾಯಿತು. 1799ರಲ್ಲಿ ಟಿಪ್ಪುವಿನಿಂದ ಆಂಗ್ಲರು ಇದನ್ನು ಪಡೆದಾಗ ಇಲ್ಲಿ ಸಾಕಷ್ಟು ಹಾನಿಯೊದಗಿತ್ತು. ಅನಂತರ ಇದನ್ನು ವಿಂಗಡಿಸಿದನಂತರವಂತೂ ಎರಡೂ ಜಿಲ್ಲೆಗಳ ಪ್ರಾಮುಖ್ಯತೆಯು ಕುಸಿದಿತ್ತು ಇವೆರಡೂ ತಾಯಿ ಅಗಲಿದ ಶಿಶುಗಳಂತಾದುವು.

ಈಗ ಪುನಃ ಎರಡು ಜಿಲ್ಲೆಗಳನ್ನು ಮೈಸೂರಿಗೆ ಸೇರಿಸಲಾಗಿದೆ. ಆರ್ಥಿಕ ಪ್ರಾಮುಖ್ಯತೆ ಇರುವ ಈ ಭಾಗವನ್ನು ಸುಧಾರಿಸುವ ಕರ್ತವ್ಯವು ಮೈಸೂರು ರಾಜ್ಯದ್ದಾಗಿರುತ್ತದೆ.

ವ್ಯವಸಾಯವಂತೂ ಇಲ್ಲಿ ಅತ್ಯುನ್ನತ ಮಟ್ಟದಲ್ಲಿದೆ. ಅದರ ಪ್ರಗತಿಗೆ ಅವಶ್ಯ ಸಹಕಾರವನ್ನೂ, ಪ್ರೋತ್ಸಾಹವನ್ನೂ ಸರಕಾರವು ಕೊಡಬೇಕು.

ಇಲ್ಲಿನ ವನ ಸಂಪತ್ತು ಅಸದೃಶವಾಗಿದ್ದು ಇಲ್ಲಿನ ತೇಗಿನಿಂದ ಜಗತ್ತಿನ ಮಾರುಕಟ್ಟೆಗಳಲ್ಲೆಲ್ಲಾ ಪ್ರಮುಖ ಸ್ಥಾನವನ್ನು ಪಡೆವುದು ಸಾಧ್ಯವಿದೆ. ಇದರತ್ತ ತಕ್ಕ ಗಮನವನ್ನೀಯುವುದು ರಾಜ್ಯ ಸರಕಾರದ ಕರ್ತವ್ಯ.

ಇಲ್ಲಿನ ಹಳೆಯ ರೇವುಗಳಿಂದ ಕಾರವಾರ ಮತ್ತು ಮಂಗಳೂರು, ಇವೆರಡೂ ಅನಾದಿ ಕಾಲದವುಗಳು, ಅನಾದಿಯಿಂದಲೂ ಪರರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧವನ್ನಿಟ್ಟು ಕೊಂಡಿದ್ದ ನಮ್ಮ ದೇಶದ ರೇವುಗಳು. ಇವುಗಳಿಗೆ ರೈಲು ಮಾರ್ಗವನ್ನು ಕಲ್ಪಿಸಿ ಪುನಃ ಇವು ಮುಖ್ಯ ರೇವುಗಳಾಗುವಂತೆ ನಮ್ಮ ರಾಜ್ಯವು ಮಾಡುವುದೆ? ಜಗತ್ತಿನಲ್ಲೆಲ್ಲಾ ಆರನೆಯ ಸ್ಥಾನವನ್ನು ಕಾರವಾರ ಬಂದರಕ್ಕೆ ಕೊಡಲಾಗಿದೆ. ಈಸ್ಟ್ ಇಂಡಿಯಾ ಕಂಪೆನಿಯು ಮುಂಬಯಿಯನ್ನು ವರ್ಷ ಒಂದರ ಹತ್ತು ಪವನುಗಳ ಗೇಣಿಗೆ ಪಡೆಯುವ ಸಮಯದಲ್ಲಿ ಕಾರವಾರವು ಆಂಗ್ಲರೊಡನೆ, ಫ್ರೆಂಚರೊಡನೆ ಹಾಗೂ ಡಚ್ಚರೊಡನೆ ವ್ಯಾಪಾರವನ್ನು ನಡೆಸುತ್ತ ಭಾರತದಲ್ಲಿ ಮೊದಲಿನ ಸ್ಥಾನವನ್ನು ಪಡೆದಿದ್ದ ಬಂದರವೇ ಆಗಿತ್ತು. ಮುಂಬಾಯಿ ಪ್ರಾಂತದಲ್ಲಿ ಬನಿಯರು ವಹಿಸಿದ ಮುಂಜಾಗ್ರತೆಯಿಂದಲೇ ಮುಂಬಯಿಯು ಮುಂದೆ ಬಂದು, ಕಾರವಾರವು ಹಿಂದುಳಿಯಬೇಕಾಗಿ ಬಂತು. ಈ ಕೊರತೆಯನ್ನು ಮೈಸೂರು ರಾಜ್ಯವು ಹೋಗಲಾಡಿಸುವುದು ಎಂದಾಶಿಸೋಣವೆ. ಕಾರವಾರ, ಮಂಗಳೂರು ಈ ಎರಡು ಬಂದರುಗಳಂತೂ ಮೈಸೂರಿನ ಆರ್ಥಿಕ ಭದ್ರತೆಗೆ ಅತಿ ಹೆಚ್ಚಿನ ನೆರವನ್ನೀಯಲಿವೆ.

ಕೆನರಾ ಜಿಲ್ಲೆಗಳ ಮೀನುಗಾರಿಕೆಯೂ ಹೆಸರಾದುದು. ಮೀನುಗಾರಿಕೆಯಿಂದ ರಾಜ್ಯಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೇನೇ ಹೆಚ್ಚಿನ ಅರ್ಥ ಪ್ರಾಪ್ತಿಯಾಗಲಿದೆ. ಈ ವಿಚಾರವನ್ನು ಈ ಬಗ್ಗೆ ನಿಯೋಜಿತವಾದ ತಜ್ಞರ ಸಂಗಡವೇ ಅವಶ್ಯವಾಗಿ ಯೋಚಿಸತಕ್ಕುದು.

ಹೀಗೆ ಅನೇಕ ರೀತಿಯಲ್ಲಿ ನಮ್ಮ ದೇಶಕ್ಕೂ ರಾಜ್ಯಕ್ಕೂ ಆರ್ಥಿಕ ನೆರವನ್ನೀಯಬಲ್ಲ ಈ ಜಿಲ್ಲೆಗಳಲ್ಲಿ ಸಾಧ್ಯವಿರುವ ಸುಧಾರಣೆಗಳನ್ನೆಲ್ಲ ನಡೆಸಿ ನಮ್ಮ ರಾಜ್ಯ ಸರಕಾರವು ತನ್ನ ಮತ್ತು ತನ್ಮೂಲಕ ದೇಶದ ಸುಧಾರಣೆಯನ್ನು ಸಾಧಿಸ ಬಲ್ಲುದೆ?

ಶ ಮುಂದಿನ ಶೋಧಕರ ಅವಗಾಹನೆಯ ಬಗ್ಗೆ ಈ ಭೇದಗಳನ್ನು ಕೊಟ್ಟಿರುತ್ತೇನೆ. ಈ ವಿಚಾರದಲ್ಲಿ ಆಳವಾದ ಶೋಧ ವಿಮರ್ಶೆಗಳಿಗೆ ತುಂಬಾ ಅವಕಾಶವಿದೆ.

Best of Automobile Service offered by the Engineers of

MODERN GARAGE

UDIPI.

Your cars made new by the most modern and experienced spray painters

Phone: 65 Gramo: KARNAD

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ಸತ್ಪಾತ್ರದೊಳ್ ದಾನಮಂ

(೧೩ನೇ ಪುಟದಿಂದ)

ಪೂರ್ವಜನ್ಮದ ಕರ್ಮದ ಫಲಗಳನ್ನು ಈ ಜನ್ಮದಲ್ಲಿ ಅನುಭೋಗಿಸುತ್ತಿರುವರು. ಆದುದರಿಂದ ಅವರು ದಾನ ಸ್ವೀಕರಿಸಲು ಅಯೋಗ್ಯರು ಎಂದು ಪ್ರಚಾರಮಾಡಲಾಗಿದೆ.

ಕೆಲಸಲ ಅನೇಕ ಸಶಕ್ತರು ಕೂಡ ಭಿಕ್ಷೆ ಬೇಡಿ ಜೀವಿಸುವರು. ಇಂಥವರ ಮೂಲಕವಾಗಿ ನಿಜವಾಗಿ ದಾನಕ್ಕೆ ಯೋಗ್ಯರಾದ ವೃದ್ಧರು, ರೋಗಿಗಳು, ಅಶಕ್ತರು ಹಾಗು ಊನರಂಥವರಿಗೆ ದಾನ ದೊರೆಯುವದಿಲ್ಲ. ಅಯೋಗ್ಯರಿಗೆ ದಾನಮಾಡುವದರಿಂದ ಆಲಸ್ಯತನ, ಹಾಗು ನಿರುದ್ಯೋಗಿತನಕ್ಕೆ ಪ್ರೋತ್ಸಾಹನೆ ಕೊಟ್ಟಂತಾಗುವದು. ಆಲಸ್ಯವು ಮನುಷ್ಯಸ್ವಭಾವವಿದ್ದುದರಿಂದ, ಎಲ್ಲಿಯುವರೆಗೇ ಯಾವದೇ ದೈಹಿಕ ಶ್ರಮವಿಲ್ಲದೇ ಉದರ ನಿರ್ವಾಹವು ಸುಸೂತ್ರವಾಗಿಸಾಗುವದೋ ಅಲ್ಲಿಯವರೆಗೆ ದುಡಿದು ತಿನ್ನಲು ಮನಸ್ಸು ಹಿಂಜರೆಯುವದು ಸ್ವಾಭಾವಿಕವಾದದ್ದು. ಹಿಂದುಗಳ ದಾನಮಾಡುವ ಉದಾರತೆಯ ದುರುಪಯೋಗವನ್ನು ಪಡೆದು ಲಕ್ಷಾಂತರ ಜನರು ಭಿಕ್ಷಾಟನೆಯನ್ನೇ ತಮ್ಮ ಉಪಜೀವನದ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇದು ಯಾವದೇ ತರಹದ ದೈಹಿಕ ದುರ್ಬಲತೆಯು ಮೂಲಕವಾಗಿರದೇ, ತಲೆತಲಾಂತರವಾಗಿ ನಡೆದು ಬಂದ ವೃತ್ತಿಯಾಗಿದೆ. ಅಂಥವರಿಗೆ ಭಿಕ್ಷೆ ಬೇಡುವದು ಅಪಮಾನಕರವೆಂದೆನಿಸದೇ, ಕಷ್ಟಪಟ್ಟು ದುಡಿದು ಜೀವನ ನಡೆಸುವದು ಕಡಿಮೆ ದರ್ಜೆಯದೆನಿಸುವದು.

ಧರ್ಮದ ಹೆಸರಿನಲ್ಲಿ ಭಿಕ್ಷೆಬೇಡಿ ರಾಜಾರೋಷವಾಗಿ ಜೀವನ ನಡೆಸುವ ಅನೇಕ ಸದೃಢ ಜನರಿದ್ದಾರೆ. ಅಂಥವರಿಗೆ ದಾನಮಾಡುವದು ಪುಣ್ಯದ ಕೆಲಸವೆಂದು ತಿಳಿಯಲಾಗಿದೆ. ಅರ್ಥಾತ್ ಇವರಿಗೆ ದಾನಮಾಡುವದೆಂದರೆ ಸ್ವರ್ಗಕ್ಕೆ ಟಿಕೆಟ್ ಕೊಂಡಂತೆ ಎಂಬ ಭಾವನೆ ಬೇರೂರಿದೆ. ಆ ಭಾವನೆಯ ಆಧಾರದಿಂದ ಅನೇಕರ ಉದರ ನಿರ್ವಾಹ ಅಡೆತಡೆ ಇಲ್ಲದೆ ಸಾಗಿದೆ.

ಇಂದು ಅನೇಕರು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಕೆಟ್ಟಿದೆ ಎಂದು ಹೇಳುತ್ತಿರುವರು. ಇದು ನಿಜವಿರಲಿ, ಇಲ್ಲದಿರಲಿ, ಆದರೆ ಇಂದು ಆಲಸಿಗಳ ಸಂಖ್ಯೆ ಮಾತ್ರ ಏರುತ್ತಿರುವದು ನಿಜ. ಈ ಆಲಸಿಗಳನ್ನು ಸಾಕಲು ಅನೇಕರು ಹೆಚ್ಚು ಶ್ರಮವಹಿಸಬೇಕಾಗುವದು. ಹಿಂದುಸ್ಥಾನದ ಜನಸಂಖ್ಯೆ ಪ್ರತಿವರುಷ ೫೦ ಲಕ್ಷದಂತೆ ಹೆಚ್ಚುತ್ತಿದೆ ಹೆಚ್ಚುತ್ತಿರುವ ಜನಸಂಖ್ಯೆಗೆ ಬೇಕಾಗುವ ಹೆಚ್ಚಿನ ಆಹಾರದ ಬೆಳವಣಿಗೆಗೆ ಸದೃಢರಾದ ಭಿಕ್ಷುಕರು ಯಾವದೇ ರೀತಿಯಿಂದ ಸಹಾಯಕಾರಿಗಳಾಗಿಲ್ಲ. ಅದೇ ಅವರಿಗೆ ಭಿಕ್ಷೆ ಹಾಕದೇ ಅವರನ್ನು ಒಕ್ಕಲುತನಕ್ಕೆ ಹಚ್ಚಿ ಒತ್ತಾಯದಿಂದ ಕೆಲಸ ತೆಗೆದುಕೊಂಡಲ್ಲಿ ದೇಶದ ಆಹಾರೋತ್ಪಾದನೆಯು ಹೆಚ್ಚುವದರಲ್ಲಿ ಸಂಶಯವಿಲ್ಲ.

ಭಿಕ್ಷುಕರ ಇನ್ನೊಂದು ದೋಷವೆಂದರೆ, ಭಿಕ್ಷೆ ಕೊಡದಿದ್ದವರನ್ನು ತೆಗಳುವದು, ಶಪಿಸುವದು, ಇಲ್ಲದ ಸಲ್ಲದ ಬಿರುಕೆ ಹಾಕುವದು. ಹೀಗಾಗಿ ಅಶಿಕ್ಷಿತರು, ಭಾವಿಕರು ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳು ಅವುಗಳಿಗೆ ಹೆದರಿ ಭಿಕ್ಷೆ ಕೊಡುವದುಂಟು. ಈ ರೀತಿಯಾಗಿ ಅನೇಕಸಲ ಅಯೋಗ್ಯರು ಲಾಭಪಡೆಯುವರು. ಇವೆಲ್ಲವುಗಳನ್ನು ನೋಡಲಾಗಿ ದಾನಮಾಡುವಾಗ್ಗೆ ಹೆಚ್ಚು ವಿಚಾರಮಾಡಿ ಸತ್ಪಾತ್ರರಿಗೆ ದಾನಮಾಡುವದು ಶ್ರೇಯಸ್ಕರ. ಆದರೆ ಹಿಂದುಗಳು ದಾನಮಾಡುವಾಗ್ಗೆ, ಅದನ್ನು ತೆಗೆದುಕೊಳ್ಳುವವನ ಪಾತ್ರಾಪಾತ್ರತೆ ಹಾಗು ಅದರಿಂದ ಅವನಿಗಾಗಲಿ ದೇಶಕ್ಕಾಗಲೀ ಆಗುವ ಲಾಭ ಹಾನಿಗಳ ವಿಚಾರಮಾಡದೇ, ದಾನಮಾಡಬೇಕೆಂದು ಧರ್ಮದಲ್ಲಿ ಹೇಳಿದೆ ಎಂದು ದಾನ ಮಾಡುವ ಪದ್ಧತಿ ಉಂಟು. ಅವರ ದಾನದ ಈ ಪದ್ಧತಿಗೆ ಅದಕ್ಕೆ ಪರಲೋಕದಲ್ಲಿ ದೊರೆಯಬಹುದಾದ ಪ್ರತಿಫಲದ ಆಶೆಯೇ ಕಾರಣ. ನಿಜವಾದ ದಾತೃ ಪ್ರತಿಫಲವನ್ನು ಅಪೇಕ್ಷಿಸುವದಿಲ್ಲ. ಅದಕ್ಕೆ ಉಚ್ಚವಾದ ಧ್ಯೇಯವಿರುವದು. ನಿಜವಾದ ದಾತೃ ವಿಶಾಲ ಹೃದಯವುಳ್ಳ, ಪ್ರೇಮದ ಪ್ರತೀಕವಾದ ದೇವರಂತಿರುವನು.

ಹಿಂದೂ ಧರ್ಮದ ಇನ್ನೊಂದು ನ್ಯೂನತೆ ಎಂದರೆ ತಾರತಮ್ಯವಿಲ್ಲದೇ ದಾನ ಮಾಡುವದು. ನಿಜವಾಗಿ ನೋಡಲಾಗಿ ಕುರುಡರು, ಅಂಗವಿಹೀನರು, ಬಡವರು, ವೃದ್ಧರು, ಅನಾಥ ಸ್ತ್ರೀಯರು ಮುಂತಾದವರು ದಾನಕ್ಕೆ ಯೋಗ್ಯರು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹಿಂದುಗಳು ಇದಾವುದನ್ನು ವಿಚಾರಿಸದೇ ದಾನ ಮಾಡುವದುಂಟು. ಧರ್ಮದ ಹೆಸರಿನಿಂದ ಅನೇಕ ಸದೃಢರುಕೂಡ ಆಲಸಿಗಳಾಗಿ ಭಿಕ್ಷೆಬೇಡಿ ಜೀವನ ನಡೆಸುವದುಂಟು.

ಕೆಲ ಹಿಂದುಗಳಂತೂ ಉದ್ದೇಶಪೂರ್ವಕವಾಗಿ ಬಡವರಿಗೆ ಭಿಕ್ಷೆ ಹಾಕುವದಿಲ್ಲ. ಏಕೆಂದರೆ ಸದ್ಬ್ರಾಹ್ಮಣರಿಗೆ ದಾನ ಮಾಡದೇ ಬಡವರಿಗೆ ಭಿಕ್ಷೆ ಹಾಕಿದರೆ ಸ್ವರ್ಗ ದೊರೆಯುವದಿಲ್ಲವೆಂಬ ಭಾವನೆ ಇದೆ. ಕೆಲ ಸುಧಾರಿಸಿದ ಹಿಂದುಗಳು, ಸ್ವರ್ಗ ನರಕದಲ್ಲಿ ವಿಶ್ವಾಸವಿಲ್ಲದ್ದರಿಂದ ದಾನ ಮಾಡುವದನ್ನೇ ಬಿಟ್ಟು ಕೊಟ್ಟಿದ್ದಾರೆ. ಹೀಗಾಗಿ ಸತ್ಪಾತ್ರರಿಗೆ ಹಾಗು ಪರಾವಲಂಬಿತರಿಗೆ ದಾನ ಮಾಡಬೇಕೆಂಬ ಹಿಂದೂ ಧರ್ಮದ ಮೂಲ ತತ್ವಕ್ಕೆ ಕೊಡಲಿ ಏಟು ಹಾಕಿದ್ದಾರೆ. ಇದು ಶೋಚನೀಯವೇ ಸರಿ. ನಿಜವಾಗಿ ದಾನ ಮಾಡಬೇಕೆಂಬುವವರು ತಮ್ಮ ದಾನದಿಂದ ಸತ್ಪಾತ್ರರಿಗೆ ಹಾಗು ಸಮಾಜಕ್ಕೆ ಲಾಭವಾಗಬೇಕೆಂಬ ಉದ್ದೇಶವನ್ನಿಟ್ಟುಕೊಳ್ಳಬೇಕು. ಅಂಥ ಉಚ್ಚ ಧ್ಯೇಯ ಉಳ್ಳವರಿಗೆ ದಾನ ಮಾಡಲು ಅನೇಕ ಅವಕಾಶಗಳುಂಟು. ಶಾಲೆ ಕಾಲೇಜುಗಳಂಥ ವಿದ್ಯಾಸಂಸ್ಥೆ ಆಸ್ಪತ್ರೆಗಳಂಥ ವೈದ್ಯಕೀಯ ಸಂಸ್ಥೆಗಳಿಗೆ ದಾನ ಮಾಡಿದರೆ ಸಮಾಜಕ್ಕೆ ಹಾಗು ಸಮಾಜದ ಬಹುಜನರಿಗೆ ಕಲ್ಯಾಣವಾಗುವದರಲ್ಲಿ ಸಂಶಯವಿಲ್ಲ.

ಹಿಂದುಸ್ಥಾನದಲ್ಲಿ ಸದೃಢರಾಗಿದ್ದು, ಆಲಸಿಗಳಾಗಿ ಭಿಕ್ಷೆ ಬೇಡಿ ಹೊಟ್ಟೆ ಹೊರಕೊಳ್ಳುವವರ ಪ್ರಶ್ನೆ ಬಹುದೊಡ್ಡದಾಗಿದೆ. ಇಂಥ ಆಲಸಿಗಳನ್ನು ಕೆಲಸ ಮಾಡಲು ಹಚ್ಚುವದು ಹೇಗೆ ಎಂಬುದು ವಿಚಾರಿಸತಕ್ಕ ವಿಷಯವಾಗಿದೆ. ಕೇವಲ ಬಾಯ್ಮಾತಿನಿಂದ ಅವರ ಕರ್ತವ್ಯದ ಅರಿವನ್ನು ಮಾಡಿಕೊಡುವದರಿಂದ ಏನೂ ಪರಿಣಾಮವಾಗಲಾರದು. ಅವರಿಗೆ ಕೆಲಸ ಮಾಡಲು ಪ್ರೇರೇಪಿಸುವಂಥ ಪರಿಸ್ಥಿತಿಯನ್ನು ನಿರ್ಮಿಸಬೇಕು. ಅಂದರೆ ಅವರಿಗೆ ಕೆಲಸದ ಅರಿವು ಉಂಟಾಗುವದು. ಅಂಥ ಅರಿವು ಉಂಟು ಮಾಡಲು ಹಸಿವೆಯೇ ಮುಖ್ಯವಾದದ್ದು. ಹೊಟ್ಟೆ ತುಂಬ ದುಡಿಯದೇ ತಿನ್ನಲು ದೊರೆಯುವದಿಲ್ಲ ಎಂಬುದು ಅವರ ಅನುಭವಕ್ಕೆ ಬರುವಂತಾಗಬೇಕು. ಎಲ್ಲಿಯ ವರೆಗೆ ಯಾವದೇ ಶ್ರಮವಿಲ್ಲದೇ ತಿನ್ನಲು ದೊರೆಯುವದೊ ಅಲ್ಲಿಯವರೆಗೆ ಭಿಕ್ಷೆ ಬೇಡಿ ಜೀವಿಸುವದು ಇರತಕ್ಕದ್ದೆ. ಈಗಿದ್ದ ಈ ಪದ್ಧತಿಯನ್ನು ಬದಲಿಸಲು ಒಂದೇ ಉಪಾಯವೆಂದರೆ ಸುದೃಢ ಹಾಗು ಸಶಕ್ತ ಭಿಕ್ಷುಕರಿಗೆ ಭಿಕ್ಷೆ ಹಾಕದೇ ಅವರನ್ನು ದುಡಿಯಲು ಹಚ್ಚುವದು. ಹೀಗೆ ಮಾಡುವದು ಅವರಿಗೂ, ಸಮಾಜಕ್ಕೂ ಲಾಭಕರವಾದದ್ದು. ಇದರಿಂದಾಗಿ ಅವರನ್ನು ಉದ್ಯೋಗಶೀಲರನ್ನಾಗಿ ಮಾಡಿ ಸಮಾಜದಲ್ಲಿಯ ಆಲಸ್ಯತನದ ಕಲಂಕವನ್ನು ದೂರಮಾಡಲು ಸಹಾಯವಾಗುವದು.

[ಆಂಗ್ಲ ಭಾಷೆಯ ಮಾಸಪತ್ರಿಕೆ "Caravan"ದಲ್ಲಿ ಪ್ರಕಟವಾದ ಲೇಖನದ ಆಧಾರದಿಂದ]

ಸ್ಥಾಪನೆ 1930

ಟೆಲಿಫೋನ್ ನಂಬ್ರ
19 ಮೆನೇಜಿಂಗ್ ಡೈರೆಕ್ಟರ್
19A ವರ್ಕ್ಸ್ ಮೆನೇಜರ್

ಟೆಲಿಗ್ರಾಂ
"HANUMANCO"
ಪೋ. ಬಾ ನಂ. 27.

ದಿ. ಹನುಮಾನ್ ಟ್ರಾನ್ಸ್‌ಪೋರ್ಟ್
ಕಂಪೆನಿ ಪ್ರೈವೇಟ್ ಲಿಮಿಟೆಡ್

ಹೆಡ್ ಆಫೀಸ್: ಉಡುಪಿ (ಮಹಾಮೈಸೂರು)

ಉಡುಪಿಯ ಶ್ರೀ ಕೃಷ್ಣನ ದರ್ಶನಾರ್ಥಿಗಳು ಪ್ರಕೃತಿ ಸೌಂದರ್ಯದ ಅರಣ್ಯ ಮಧ್ಯದಲ್ಲಿರುವ ಇನ್ನೊಂದು ಪವಿತ್ರ ಕ್ಷೇತ್ರವಾದ ಕೊಲ್ಲೂರನ್ನು ಸಂದರ್ಶಿಸಿ ಶ್ರೀ ಮುಕಾಂಬಿಕಾ ದರ್ಶನದಿಂದ ಪೂರ್ಣ ಪುಣ್ಯ ಪಡೆಯಿರಿ. ಯಾತ್ರಿಕರ ಸೌಕರ್ಯಕ್ಕಾಗಿ ಸುಸಜ್ಜಿತ ವಾಹನಗಳು ಸದಾ ಓಡಾಡುತ್ತಿವೆ.

ಮಹಾ ಮೈಸೂರಿನಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಸಂದರ್ಶನ ಗೈಯುವ ಪ್ರೇಕ್ಷಕರಿಗೆ ಸುಸಜ್ಜಿತ ವಾಹನ ಒದಗಿಸಿಕೊಟ್ಟು ಅವರ ಪ್ರಯಾಣವನ್ನು ಯಶಸ್ವಿಗೊಳಿಸುವ ಬಗ್ಗೆ ನಾವು ಸದಾ ಸಿದ್ಧರಿದ್ದೇವೆ.

THE HANUMAN TRANSPORT
CO. PRIVATE LTD.
UDIPI (MYSORE)

೧೧ನೆ ಪ್ರಜಾರಾಜ್ಯದ ಶುಭಾಶಯಗಳು
ಮತ್ತು
ಶ್ರೀಶ್ರೀ ಪುತ್ತಿಗಾ ಮಠಾಧೀಶರ ಹೊಸ ಪರ್ಯಾಯ ಕಾಲದಲ್ಲಿ ನಾವು ಹಿಂದುಸ್ತಾನದ ಎಲ್ಲಾ ಊರುಗಳಿಂದ ಹೊಸ ಹೊಸ ಮಾದರಿಯ ಬೆಳ್ಳಿ, ಸ್ಟೀಲ್, ತಾಮ್ರ, ಹಿತ್ತಾಳೆ, ಕಂಚು, ಎಲ್ಯುಮಿನಿಯಂ ಪಾತ್ರೆಗಳನ್ನು ತುಂಬಾ ರಿಯಾಯತಿ ದರಗಳಲ್ಲಿ ಮಾರಾಟಮಾಡುವರೆ ತರಿಸಿರುತ್ತೇವೆ

ಮೆಸರ್ಸ್ ಐರೋಡಿ ರಾಧಾಕೃಷ್ಣ ಪೈ
ಪಾತ್ರೆ ವ್ಯಾಪಾರಿಗಳು
ರಥಬೀದಿ - - - ಉಡುಪಿ

ಸ್ವಾತಂತ್ರ್ಯಪ್ರಾಪ್ತಿಯ ಸುಖದುಃಖಗಳು

(೧೨ನೇ ಪುಟದಿಂದ)

ಇಂಫಾಲದ ಯುದ್ಧ ಕೇಂದ್ರದಲ್ಲಿ ಆ ವೀರರು ಸೋತುಹೋದಾಗ ನೇತಾಜಿಯವರಿಂದ ಉಪದೇಶಿಸಲ್ಪಟ್ಟ "ಜೈಹಿಂದ್" ಎಂಬ ಮಂತ್ರವನ್ನು ಉಚ್ಚರಿಸಿಕೊಂಡೇ ವೀರ ಸ್ವರ್ಗವನ್ನೈದಿದರು. ೧೮೫೭ರಲ್ಲಿಯೂ ೧೯೪೪ರಲ್ಲಿಯೂ ಯುದ್ಧರಂಗದಲ್ಲಿ ಭಾರತೀಯ ದೇಶಭಕ್ತರು ಸೋತುಬಿದ್ದರಾದರೂ ಅವರ ಲಕ್ಷ್ಯವು ಕಟ್ಟಕಡೆಗೆ ಜಯವನ್ನು ಕೈಗೊಂಡಿತು. ಆ ಚಂದ್ರಾರ್ಕ ಸ್ಥಾಯಿಯಾಗಿ ಶ್ಲಾಘಿಸಲ್ಪಡುವಂತಹ ವಿಜಯವೇ ಸಿಕ್ಕಿತೆನ್ನಬಹುದು.

ಇದುವರೆಗೆ ಪ್ರಪಂಚದಲ್ಲಿರುವ ಅನೇಕ ನಾಡುಗಳು ಪರಕೀಯರ ಅಧಿಕಾರವನ್ನು ಕಿತ್ತೆಸೆದುಕೊಂಡು ಸ್ವಾತಂತ್ರ್ಯವನ್ನು ಪಡೆದಿವೆನಿಜ; ಅವೆಲ್ಲಾ ಬಲಾತ್ಕಾರದ ಯುದ್ಧವನ್ನು ಮಾಡಿ ಹಗೆಗಳನ್ನು ಕಡಿದುಚೆಲ್ಲಿಯೇ ಸ್ವಾತಂತ್ರ್ಯವನ್ನು ಪಡೆದುವು. ಭಾರತ ದೇಶವಾದರೋ ಮಹಾತ್ಮಾ ಗಾಂಧಿಯ ಎಣೆಯಿಲ್ಲದ ಮುಖಂಡತ್ವದಲ್ಲಿ ಕತ್ತಿರಕ್ತಗಳಿಲ್ಲದೆಯೇ, ಸಕಲ ವಿಧ ನವೀನ ಆಯುಧಗಳೊಂದಿಗೆ ಸದಾ ಸಿದ್ಧವಾಗಿದ್ದ ಪರಚಕ್ರವನ್ನು ಇದಿರಿಸಿ ನಿಂತು ಪರಾಧೀನತೆಯನ್ನು ಹರಿದೆಸೆದುಕೊಂಡು ಸ್ವಾತಂತ್ರ್ಯವನ್ನು ಸ್ಥಾಪಿಸಿತು. ಶತ್ರುವು ಸ್ನೇಹಿತನಾಗಿಯೇ ಹೊರಟು ಹೋಗಿದ್ದಾನೆ!

ಮಹಾತ್ಮಾ ಗಾಂಧಿಯ ಮುಖಂಡತ್ವದಲ್ಲಿ ನಡೆದ ಸಾತ್ವಿಕ ಯುದ್ಧವು ಪ್ರಪಂಚವು ಹಿಂದೆಂದೂ ಕಾಣದಂತಹ ಅತಿಶಯವೆನ್ನಲು ಸಂದೇಹಬೇಡ. ಇಂತಹ ಅಹಿಂಸಾ ಯುದ್ಧದಲ್ಲಿಯೇ ಭಾರತ ದೇಶವು ವಿಜಯಶಾಲಿಯಾಗಿ ಕೀರ್ತಿ ಪಡೆಯಬೇಕೆಂಬುದೇ ಕಾಲನಿಯಮವಾಗಿರಬೇಕು. ಇದನ್ನು ನೆನೆಯುವಾಗ ಇದಕ್ಕೆ ಮುಂಚೆ ಭಾರತೀಯ ದೇಶಭಕ್ತರು ನಡೆಸಿದ ಬಲಾತ್ಕಾರ ಯುದ್ಧಗಳಲ್ಲಿ ಸೋತು ಹೋದುದನ್ನು ಕುರಿತು ನಾವು ಚಿಂತಿಸಲಿಕ್ಕೋ ಆ ವೀರರನ್ನು ದೂರಲಿಕ್ಕೋ ಏನೂ ಇಲ್ಲ. ತಿರುಗಿ ಕೇಳಿದರೆ ಅವರ ಸಾಹಸಗಳೇ ಅಹಿಂಸಾ ಯುದ್ಧಕ್ಕೆ ತಾಯಿತಂದೆಗಳಾದುವು. ಭಾರತದ ಈ ಪಾತ ಪಾತಾಂತರಗಳು ಇಡಿಯ ಪ್ರಪಂಚವೇ ಯೋಚನೆ ಮಾಡತಕ್ಕುವಾಗಿವೆ. ಈಗಿನ ವೈಜ್ಞಾನಿಕ ಅಭಿವೃದ್ಧಿಗಳನ್ನು ನೋಡುವಾಗ, ಅಹಿಂಸಾ ತತ್ವವು ಪ್ರಪಂಚಕ್ಕೆಷ್ಟು ಅಗತ್ಯವೆಂಬುದನ್ನು ಮನಗಾಣಬಹುದಾಗಿದೆ; ಹಾಗೆ ಕಾಣುತಿದ್ದಾರೆ ಕೂಡ.

೦೦ ೦೦ ೦೦

ಮೊನ್ನೆ ತಾನೇ ಜರುಗಿದ ಚರಿತ್ರೆ, ಪ್ರಸ್ತುತ ಪರಿಸ್ಥಿತಿ ಹೇಗಿದ್ದರೂ ಮಹಾತ್ಮಾ ಗಾಂಧಿಯ ಅವತಾರ ಸಮಾಪ್ತಿಯಾದ ಮೇಲೆ, ಅದೇ ಅಹಿಂಸಾ ತತ್ವದಲ್ಲಿ ಅಪನಂಬುಗೆ ತಾಳುವವರು ನಮ್ಮ ದೇಶದಲ್ಲಿಯೇ ಬಹಳ ಮಂದಿ ಇದ್ದಾರೆಂದರೆ ಆಶ್ಚರ್ಯವಾದೀತು. ಹಿಂಸಾಯುದ್ಧವನ್ನೇ ಬಲವಾಗಿ ಅವಲಂಬಿಸಿರುವ ದೇಶಗಳು ಕೂಡ ಭಾರತ ದೇಶದ ಸ್ಥಿತಿಗತಿ ಪರಿಣಾಮಗಳನ್ನು ಯೋಚಿಸುತ್ತಾ ತಲೆದೂಗಿಕೊಂಡು ಶಸ್ತ್ರಾಸ್ತ್ರಶುದ್ಧಿಗೆ ಪ್ರಯತ್ನಿಸುತ್ತಿರುವಾಗ, ಇಲ್ಲಿ ಕೆಲವರು ಅಪಸ್ವರವೆಬ್ಬಿಸುವುದನ್ನು ನಿಲ್ಲಿಸಿಲ್ಲ. ಒಳಜಗಳವೆಂಬ ಇನ್ನೊಂದು ಸ್ವರೂಪದಲ್ಲಿ ಅದು ಕಾಡುತ್ತಿದೆ. ಅಸಲು, ಒಳಜಗಳವೇ ಭಾರತದ ಶತ್ರುವಾಗಿತ್ತು; ಈಗಲೂ ಇದೆ. "ಅಹಿಂಸೆ ಎಂಬುದೆಲ್ಲಾ ಸುಳ್ಳು. ಪ್ರಪಂಚ ಮಹಾಯುದ್ಧದ ಬೇಗೆಯಲ್ಲಿ ನಮ್ಮನ್ನಾಕ್ರಮಿಸಿದ್ದ ಶತ್ರು ಚೆನ್ನಾಗಿ ಹಣ್ಣಾಗಿ ಹೋದ. ಆದರಿಂದಲೇ ಮಹಾತ್ಮಾ ಗಾಂಧಿಯ ವೀರಘೋಷಣಕ್ಕೆ ವಿಜಯ ಸಿಕ್ಕಿತು. ಆ ಮಹಾಯುದ್ಧದ ಒತ್ತಡವಿಲ್ಲದಿರುತ್ತಿದ್ದರೆ, ನಮ್ಮ ಈ ಸ್ವಾತಂತ್ರ್ಯವು ಇನ್ನೂ ಬಿಸಿಲುಗುದುರೆಯಾಗಿಯೇ ಇರುತಿತ್ತು" ಎಂದು ಈಗಲೂ ಅನೇಕರು ಹೇಳುತಿದ್ದಾರೆ. ವಸ್ತುಸ್ಥಿತಿ ಹಾಗಿಲ್ಲ; ಮಹಾಯುದ್ಧವು ನಿಂತ ಮೇಲೆ ಉಜ್ವಲವಾಗಿ ಬೆಳೆದುಹೋದ ಭಾರತೀಯರ ಅಹಿಂಸಾತ್ಮಕ ಯುದ್ಧಪ್ರಣಾಳಿಕೆಗಳೇ ಹಿಂಸಾಧಿಪತ್ಯದ ಆತ್ಮವನ್ನು ಕೆಣಕಿ, ಆತ ಸ್ನೇಹಪೂರ್ವಕವಾಗಿಯೇ ನಮ್ಮದನ್ನು ನಮಗೆ ಬಿಟ್ಟುಕೊಟ್ಟು ಹೊರಟುಹೋಗುವಂತಾಯಿತಲ್ಲದೆ ಬೇರೆಯಲ್ಲ.

ಇದನ್ನು ಅರಿಯದಿರುವವರು, ಅರಿತೂ ವಿಪರೀತವಾಗಿ ಚಿತ್ರಿಸಿ ಪ್ರಚಾರ ಪಡಿಸುವವರು ಯಾರು ಗೊತ್ತೆ? ಹೊರಗಿನವರಲ್ಲ; ನಮ್ಮ ನಡುವಿನಲ್ಲಿರುವ ನಮ್ಮವರೇ! ದೇಹದಲ್ಲಿರುವ ರೋಗಗಳಂತೆ ಅಂಥವರು ನಮ್ಮಲ್ಲಿದ್ದಾರೆ. ಹಿಂದೆಯೂ ಇದ್ದರು; ಈಗಲೂ ಇದ್ದಾರೆ. ಹಿಂದೆ ಇಂಥವರ ದುರಭಿಮಾನ, ದ್ವೇಷಭಾವನೆ, ಅಸೂಯೆ, ಸ್ವಾರ್ಥ ಇತ್ಯಾದಿ ಗುಣಗಳ ಪ್ರಭಾವದಿಂದಲೇ ಭಾರತವು ಪರಕೀಯರ ವಶವಾಯಿತು. ಇಲ್ಲಿಯವರ ಒಳಜಗಳಗಳಿಂದಲೇ ಪರಕೀಯರು ಇಲ್ಲಿ ಗಟ್ಟಿಯಾಗಿ ಬೇರೂರಿಕೊಳ್ಳಲು ಎಡೆ ಮಾಡಿಕೊಟ್ಟಿತು. ಅದೇ ಒಳಜಗಳಗಳಿಂದಲೇ ಸ್ವಾತಂತ್ರ್ಯವು ಸಿಕ್ಕುವಾಗ ಅಖಂಡ ಭಾರತವು ಖಂಡವಾಗಿ, ಚರಿತ್ರೆಯಲ್ಲೆಂದೂ ಕಾಣದ ಹೊಸ ಚಿತ್ರವನ್ನು ಪಡೆಯಿತು. ರಕ್ತದ ಕಾಲುವೆ ಹರಿದುದು, ಹತ್ಯಾಕಾಂಡವು ನಡೆದುದು, ಸ್ತ್ರೀಯರ ಮಾನಭಂಗಗಳಾದುದು, ಸೊತ್ತುಗಳು ಕೊಳ್ಳೆ ಹೋದುದು ಇವೆಲ್ಲಾ ಪರಾಧಿಪತ್ಯದೊಂದಿಗೆ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಲ್ಲವೆಂಬುದನ್ನು ನಾವು ಯೋಚನೆ ಮಾಡಬೇಕು. "ಚಿಕ್ಕ ಹಿಂಸೆಯಿಂದ ದೊಡ್ಡ ಹಿಂಸೆಯನ್ನು ತಪ್ಪಿಸುವುದೇ ಅಹಿಂಸಾಯುದ್ಧದ ಮರ್ಮ" ಎಂಬ ರೀತಿಯಲ್ಲಿ ಮಹಾತ್ಮಾ ಗಾಂಧಿಯ ಮುಖಂಡತ್ವದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆಲವರು ಸತ್ತಿರಬಹುದು, ಕೆಲವರು ಗುಂಡಿಗಾಹುತಿಯಾಗಿರಬಹುದು, ಹಲವರು ಖೈದಾಗಿರಬಹುದು. ಆದರೆ ಅದು ಡಾಣಾಡಂಗುರವಾದ ಯುದ್ಧವಲ್ಲ; ಆದುದರಿಂದ ಅಹಿಂಸೆಯಿಂದಲೇ ಸ್ವರಾಜ್ಯ ಸಂಪಾದನೆಯಾಯಿತೆಂಬುದು ನಿರ್ವಿವಾದ.

ಆಗಲೂ ಆ ಮೇಲೆಯೂ ಇಂದಿನ ತನಕವೂ ನಮ್ಮ ದೇಶವನ್ನು ಕಾಡುವಂತಹುದೆಲ್ಲಾ ಈ ಒಳಗಿನ ಅಪಾಯವೇ ಆಗಿದೆ. ಇಂತಹರು ಅಹಿಂಸೆಯನ್ನು ಬಲಹೀನತೆಯೆನ್ನುತ್ತಾರೆ. ಏಕೆಂದರೆ ಮಾತು ಮಾತಿಗೆ ಯುದ್ಧವು ಪ್ರಾಪ್ತವಾದರೆ, ಕಾಳಸಂತೆಯನ್ನು ಸೃಷ್ಟಿಸಿಕೊಂಡು ತೈಅರಮನೆ ಕಟ್ಟಿಕೊಳ್ಳಬಹುದಿತ್ತು. ದೇಶವೇ ಮಣ್ಣುಗೂಡಿ, ಅಹಿಂಸಾ ತತ್ವವೇ ಸಮಾಧಿಯಾಗಿ, ಒಂದುಕಡೆ ರಣತಾಂಡವ ನಡೆಯುತ್ತಿರಬೇಕೆಂತಲೂ, ಇನ್ನೊಂದುಕಡೆ ತಾವು ಒಳಗೊಳಗೇ ಪ್ರಜೆಗಳ ಸಾರಹೀರಿ ಉಬ್ಬಿಕೊಳ್ಳಬಹುದೆಂದೂ ಹಾರೈಸುತ್ತಿರುವ ಸ್ವಾರ್ಥೀ ಪಂಗಡವು ಈಗಲೂ ಇದ್ದಾರೆ—ರ.ಜಿಕಂತ ಬಿಕ್ಕುಗಳು!

ಇಂತಹ ಮೂಗುಗಳಿಗೆಲ್ಲಾ ದಾರ ಹಾಕಿಕೊಂಡು ಅಶೇಷ ಪ್ರಜಾಜನರ ಆದರಾಭಿಮಾನಗಳನ್ನು ಪಡೆದಿರುವ ಮಹಾಮಂತ್ರಿ ನೆಹರುಗಳಾದುದರಿಂದಲೇ ಎಚ್ಚರದಪ್ಪದೆ ಸನಾಳಿಸಿಕೊಂಡು ಹೋಗುತ್ತಿದ್ದಾರೆ. 'ನೆಹರೂನಂತರ ಯಾರೊ?' ಎಂಬ ಪ್ರಶ್ನೆ ತಲೆದೂಗಿಸಿಕೊಂಡಿರಬೇಕಾದರೆ ಅವರೊಬ್ಬರು ಅದ್ವಿತೀಯ ಪುರುಷರೆನ್ನದೆ ವಿಧಿಯಿಲ್ಲ. ಹೌದು, ಬಹುಮುಖ ವ್ಯಕ್ತಿತ್ವವನ್ನು ಪಡೆದಿರುವ ನೆಹರೂ, ಬಹುಮುಖರಾದ ಭಾರತೀಯರನ್ನು ಹತೋಟಿಯಲ್ಲಿಟ್ಟುಕೊಂಡು ಸಾಗಿಸಿಕೊಂಡು ಹೋಗುತಿದ್ದಾರೆ. ಇಂತಹ ವ್ಯಕ್ತಿಯನ್ನು ಮಹಾತಾಯಿಯಾದ ಭಾರತಮಾತೆಯೇ ತಯಾರಿಸಿಕೊಡುತ್ತಾಳೆಂದು ನಾವು ನಂಬಿರೋಣ.

ಮುಖ್ಯವಾಗಿ ಪ್ರಜಾರಾಜ್ಯವು ಸುಲಲಿತವಾಗಿ ಸಾಗಬೇಕಾದರೆ ಮಂತ್ರಿಮುಂತಾದ ಮುಖಂಡರಿಗಿಂತಲೂ ಪ್ರಜೆಗಳೇ ಮುಖ್ಯರಾಗಿದ್ದಾರೆ. ಜನರೆಲ್ಲಾ ವಿವೇಕಿಗಳಾಗಬೇಕು. ವಿವೇಕಿಗಳು ಸ್ವಾರ್ಥಿಗಳಾಗಬಾರದು; ಸ್ವಾರ್ಥಿಗಳಾದವರು ಪ್ರಜೆಗಳನ್ನು ಮರುಳು ಮಾಡುವಂಥ ಶಕ್ತಿಯುಳ್ಳ-ವಾಕ್ ಶಕ್ತಿ-ಲೇಖನ ಶಕ್ತಿ ಪಡೆದವರಾಗಿರಬಾರದು. ಇಂತಹ ಪ್ರಜೆಗಳಿಂದಲೇ ಪ್ರಜಾರಾಜ್ಯವು ಸುಗಮವಾಗಬೇಕು. ಆಗಲೇ ಉನ್ನತಮಟ್ಟದಲ್ಲಿ ಸಾಗುತ್ತಿರುವ ಪ್ರಪಂಚದ ಔನ್ನತ್ಯಕ್ಕೆ ಸರಿಯಾಗಿ, ಭಾರತ ದೇಶವೂ ತಕ್ಕ ಪ್ರಮಾಣವನ್ನು ಪಡೆದುಕೊಂಡು ಮರ್ಯಾದೆಯುಳಿಸಿಕೊಂಡು ಬೆಳಗೀತು. ಸ್ವಾತಂತ್ರ್ಯವನ್ನು ಸದ್ವಿನಿಯೋಗಪಡಿಸಿಕೊಂಡು ಅನುಭವಿಸೀತು. ಈಗ ಸ್ವಾತಂತ್ರ್ಯವು ಸಿಕ್ಕಿ, ಅಂತಾರಾಷ್ಟ್ರೀಯ ದೃಷ್ಟಿಯಲ್ಲಿ ಭಾರತಕ್ಕೊಂದು ಉತ್ತಮ ಗಣ್ಯತೆಯುಂಟಾದರೂ, ದೇಶೀಯತೆಯಾಗಿ ಅಭಿವೃದ್ಧಿಯನ್ನು ಗಳಿಸಿಕೊಳ್ಳಲು, ಅರ್ಥಾತ್ ಆತ್ಮೋನ್ನತಿಯನ್ನು ಸಾಧಿಸಿಕೊಳ್ಳಲು ಜನರಿನ್ನೂ ಅಭ್ಯಾಸ ಮಾಡಿ ಕಲಿಯಬೇಕಾಗಿದೆ. ಪ್ರಜಾರಾಜ್ಯವು ಸ್ಥಾಪನೆಯಾದ ಈ ಸುದಿನದಲ್ಲಿ ಇಂತಹ ಸ್ವಲ್ಪ ಕಹಿಯಾಲೋಚನೆಯ ಔಷಧಿಯನ್ನು ಪ್ರತಿಯೊಬ್ಬರೂ ಸೇವಿಸಿಕೊಂಡು ತಮ್ಮ ತಮ್ಮ ಜೀರ್ಣಶಕ್ತಿಯನ್ನು ಜೀರ್ಣೋದ್ಧಾರ ಮಾಡಿಕೊಳ್ಳಬೇಕು.

ಪ್ರಜಾರಾಜ್ಯದಿನದ ಶುಭಾಶಯಗಳು!

* * *

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P. ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾಶ್ಮೀರವು ಭೂಸ್ವರ್ಗ

(೧೧ನೇ ಪುಟದಿಂದ)

ಮಾತ್ರ ಹೋಗುವರು. ಇಂದು ಅಲ್ಲಿ ಕೆಲವು ನೂರು ಕಾರಂಜಿಗಳು ನೀರನ್ನು ಚಿತ್ರವಿಚಿತ್ರವಾಗಿ ಪುಟಿಸುವುವು. ಶಾಲಮಾರ್ ಉದ್ಯಾನವನ್ನು (ಶಾಲಮಾರ್=ಮನ್ಮಥನ ಸ್ಥಾನ) ಎರಡನೆಯ ಪ್ರವರ ಸೇನನು ಕಟ್ಟಿಸಿದನು. ಇದು ಒಮ್ಮೆ ಜೀರ್ಣವಾಗಿ ಪುನಃ ಜಹಾಂಗೀರನಿಂದ ಜೀರ್ಣೋದ್ಧಾರಗೊಳಿಸಲ್ಪಟ್ಟಿತು. ಇದರಲ್ಲಿ ಈಗಲೂ ಮೂರು ವಿಭಾಗಗಳಿವೆ. ಜಹಾಂಗೀರ ಬಾದಶಹನ ಕಾಲದಲ್ಲಿ ಹೊರವಲಯದ ದಿವಾನಿ-ಈ-ಆಮ್ ಎಂಬ ಕಟ್ಟಡದಲ್ಲೇ ಬಾದಶಹನು ಸಾಮಾನ್ಯ ಪ್ರಜೆಗಳಿಗೆ ದರ್ಶನ ಕೊಡುತ್ತಿದ್ದನಂತೆ. ಉದ್ಯಾನದ ಮಧ್ಯದ ದಿವಾನಿ-ಈ-ಖಾಸ್ ಎಂಬುದು ಬಾದಶಹನ ವಸತಿ ಗೃಹ. ಇದರ ಹಿಂದಿನ ವಿಭಾಗವು ಬೇಗಮರಿಗಾಗಿಯೇ ರಚಿತವಾದುದು. ಅಂದಿನ ಚಕ್ರವರ್ತಿಯ ಸಂಪತ್ತೆಲ್ಲಾ ಈ ಕಾಶ್ಮೀರದಲ್ಲೇ ನೀರಿನಂತೆ ವ್ಯಯವಾದಲ್ಪಟ್ಟಿತು

ಮಯೂರ ಸಿಂಹಾಸನದ ಶಾಜಹಾನನು ಈ ಉದ್ಯಾನವನ್ನು, ತಾಜಮಹಲನ್ನು ರಚಿಸಿದ ತನ್ನ ಅಮೃತ ಹಸ್ತಗಳಿಂದಲೇ ಇನ್ನೂ ಸುಲುಪು ಮಾಡಿದನು. ಇದೊಂದರಲ್ಲೇ ಇನ್ನೂರೈವತ್ತರಷ್ಟು ಕಾರಂಜಿಗಳಿವೆ, ಇನ್ನೆಷ್ಟೋ ಕೃತಕ ಝರಿಗಳಿವೆ. ಇಲ್ಲೇ ನೂರ್‌ಜಹಾನಳು ಜಹಾಂಗೀರನೊಡನೆ ಜಲಕ್ರೀಡೆ ಮತ್ತು ವನವಿಹಾರಗಳಿಂದ ಎಷ್ಟೋ ಹಗಲು ರಾತ್ರಿಗಳನ್ನು ನಿಮಿಷದಂತೆ ಕಳೆದಿದ್ದಳು. ಕಾಶ್ಮೀರವು ನೂರ್‌ಜಹಾನಳಂಥಾ ರೂಪರಾಣಿಯರಿಂದ ಸ್ವರ್ಗೀಯ ಸೌಂದರ್ಯದ ಒಂದೊಂದಂಶವನ್ನು ಪಡೆದು ತನ್ನನ್ನು ಅಲಂಕರಿಸಿಕೊಂಡಿಂಬೇಕು. ಈಗ ಈ ಶಾಲಮಾರ್ ಉದ್ಯಾನದ ಎಲ್ಲಾ ಭಾಗಗಳೂ ಸಾರ್ವಜನಿಕರಿಗೆ ತೆರೆಯಲ್ಪಟ್ಟು ಅವು ಅವರ ಹೃದಯಾಹ್ಲಾದಕಾರಿಯಾಗಿವೆ.

ನಿಶಾತ್‌ಬಾಗನ್ನು ನೂರ್‌ಜಹಾನಳ ಸೋದರನಾದ—ಒಂದು ಕಾಲದಲ್ಲಿ ಮೊಗಲ್ ಸಾಮ್ರಾಜ್ಯದ ಅಧಿಪತಿಗಳನ್ನೇ ಪಗಡೆಯಾಳದಂತೆ ಚಲಿಸಲು ಶಕ್ತನಾಗಿದ್ದ—ಅಸಫ್ ಖಾನನು ತನಗಾಗಿಯೇ ಕಟ್ಟಿಸಿದನು. ಇದು ೫೫೫ ಗಜ ಉದ್ದ, ೩೬೦ ಗಜ ಅಗಲವಿದೆ. ಇದರಲ್ಲೂ ಶಾಲಮಾರದಂತೆ ಮೂರು ಭಾಗಗಳಿದ್ದು, ಎಲ್ಲಾ ಸೌಂದರ್ಯಗಳೂ ಇಲ್ಲಿ ಚೆಲ್ಲಾಡಿವೆ; ಇಲ್ಲಿ ಅಲ್ಲಲ್ಲಿ ಬೆಳೆಸಿದ ವಿಶಾಲ ನೆರಳನ್ನೀಯುವ ಚಿನಾರ ವೃಕ್ಷಗಳು ಇದರ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಿವೆ. ಈಗ ಶಾಲಮಾರ್ ಉದ್ಯಾನಕ್ಕಿಂತ ನಿಶಾತ್‌ಬಾಗೇ ಮನೋಹರವಾಗಿದೆ. ಇವಲ್ಲದೆ ಕಾಶ್ಮೀರದಲ್ಲಿ ಚಸ್ಮಾಶಾಹೀಬಾಗಿನಂಥ ಇನ್ನೂ ಚಿಕ್ಕಪುಟ್ಟ ಆಕರ್ಷಕ ಉದ್ಯಾನಗಳು ಹಲವಿವೆ. ಆದರೆ ಕಾಶ್ಮೀರವನ್ನು ಭೂಸ್ವರ್ಗವೆನ್ನಿಸಲು ಸಾಹಸಪಟ್ಟವುಗಳಲ್ಲಿ ಶಾಲಮಾರ್ ಮತ್ತು ನಿಶಾತ್ ಬಾಗ್ ಉದ್ಯಾನಗಳೇ ಅಪ್ರತಿಮವಾದವು.

ಡಲ್ ಸರೋವರಕ್ಕಿಂತ ಊಲರ್ ಸರೋವರವು ಇನ್ನೂ ದೊಡ್ಡದು. ಇದು ಬೇಸಿಗೆಯಲ್ಲಿ ಹದಿನೈದು ಮೈಲುದ್ದವಾಗುವುದು. ಇದರಲ್ಲಿ ಕ್ರೀಡಾನೌಕೆಗಳೂ ಗೃಹನೌಕೆಗಳೂ ಸಂಚರಿಸುತ್ತವೆ. ಪ್ರಪಂಚದ ಎಷ್ಟೋ ಮಂದಿ ಆಢ್ಯ ಮಹನೀಯರು ಕಾಶ್ಮೀರಕ್ಕೆ ಬಂದರೆ ಈ ಗೃಹನೌಕೆಗಳಲ್ಲೇ ಉಳಿದುಕೊಳ್ಳುವರು. ಈ ಗೃಹನೌಕೆಗಳೊಂದಕ್ಕೆ ಮಾಸಿಕ ಬಾಡಿಗೆಯು ೬೦೦ ರೂ.ಯನ್ನೂ ಮೀರುವುದುಂಟು. ಇದರಲ್ಲಿ ವಿಲಾಸ ಜೀವನಕ್ಕೆ ಬೇಕಾದ ಎಲ್ಲಾ ವಸ್ತುಗಳ ಸರಬರಾಯಿಯೂ ಇದೆ. ಇವುಗಳು ಪ್ರಸಿದ್ಧವಾದ ವ್ಯಭಿಚಾರ ಕೇಂದ್ರಗಳು.

ಕಾಶ್ಮೀರದ ಪುರುಷರೆಲ್ಲಾ ಸಾಮಾನ್ಯವಾಗಿ ಉನ್ನತ ಗೌರವೋಜ್ವಲ ದೇಹವುಳ್ಳವರಾಗಿದ್ದಾರೆ. ಸ್ತ್ರೀಯರೆಲ್ಲಾ ಉದ್ಯಾನ ರಾಣಿಯರಂತಿದ್ದು ಹರಿಣಿಯ ಕಣ್ಣು, ಸಂಪಗೆಯ ಮೂಗು, ಗುಲಾಬಿ ವರ್ಣದ ಕೆನ್ನೆಗಳು, ದೀರ್ಘ ನೀಲಕುಟಿಲ ಕುಂತಲಗಳು ತುಂಬಿದ ಇಂಬುದೇಹಗಳಿಂದ ಪ್ರತ್ಯಕ್ಷ ರಂಭೆಯರಾಗಿದ್ದಾರೆ. ನಾವು ಅವರ ಮೇರೆ ಮೀರಿದ ಸೌಂದರ್ಯವನ್ನು ನೋಡುತ್ತಾ ನಿಂತರೆ, ಅವರೂ ತಪೋವನದ ಹುಲ್ಲೆ ಮರಿಗಳಂತೆ ನಮ್ಮನ್ನು ನೋಡುತ್ತಾ ನಿಲ್ಲುತ್ತಾರೆ. ಆದರೆ ಅವರ ದೃಷ್ಟಿಯು ದೇವಗಂಗೆಯಂತೆ ಪವಿತ್ರವಾದುದು; ಸ್ತ್ರೀ ಸಹಜವಾದ ಕವಡುಬಿಜ್ಜೆಯನ್ನು ಅವರು ಅರಿತವರಲ್ಲ.

ಶ್ರೀನಗರದಲ್ಲಿ ಸಾಮಾನ್ಯರಿಗೆ ಉಳಿದುಕೊಳ್ಳಲು ಅನೇಕ ಧರ್ಮಶಾಲೆಗಳಿವೆ. ಇಲ್ಲಿ ಹಲವು ಸಸ್ಯಾಹಾರದ ಮತ್ತು ಮಾಂಸಾಹಾರದ ಹೋಟೆಲುಗಳು ಇವೆ. ಸಸ್ಯಾಹಾರದ ಹೋಟೆಲುಗಳಲ್ಲೂ ಮಾಂಸಾಹಾರದ ಸಂಪರ್ಕವಿಲ್ಲದವುಗಳು ವಿರಳವಾಗಿವೆ. ಈ ಹೋಟೆಲುಗಳಲ್ಲಿ ಪೂರಿ, ಬ್ರೆಡ್, ಬಿಸ್ಕಿಟು, ಅನ್ನ, ರೊಟ್ಟಿ ಮೊದಲಾದುವುಗಳು ಸಿಕ್ಕುವುವು. ಅಲ್ಲಿ ನಮ್ಮಲ್ಲಿರುವಂತೆ ಊಟದ ಕೊನೆಗೆ ಮೊಸರು ಅಥವಾ ಮಜ್ಜಿಗೆ ಬಡಿಸುವ ಪದ್ಧತಿ ಇಲ್ಲ. ಅಕಸ್ಮಾತ್ ನಮಗೆ ಇವು ಬೇಕಾದರೆ ಪ್ರತ್ಯೇಕವಾಗಿಯೇ ತರಿಸಿಕೊಳ್ಳಬೇಕು.

ಶ್ರೀನಗರದಿಂದ ೧೧ ಮೈಲು ದೂರದಲ್ಲಿರುವ ಗಂಧರ್ಬಲಕ್ಕೆ ಸ್ಥಲಜಲ ಮಾರ್ಗಗಳಿಂದ ಹೋಗಬಹುದು. ಇಲ್ಲಿ ಕ್ಷೀರಭವಾನಿ ಮಂದಿರವಿದೆ ಕಾಶ್ಮೀರದ ವೈಶಿಷ್ಟವಾದ ಸೊಬಗಿನ ಕಣಜ. ನಿರ್ಮಲ ಕೊಳ ಕಾಲುವೆಗಳೂ ಇಲ್ಲಿವೆ. ಜ್ಯೇಷ್ಠ ಶುದ್ಧ ಅಷ್ಟಮಿಯ ದಿನ ಇಲ್ಲಿ ಜಾತ್ರೆ ಜರಗುವುದು. ಆ ದಿನ ಕಾಶ್ಮೀರದ ಲಾವಣ್ಯದ ಉಕ್ಕು ಇಲ್ಲೆಲ್ಲಾ ತುಳುಕಾಡುವುದು ಆಗ ಊರು ಪರವೂರುಗಳಿಂದ ಸಾವಿರಾರು ಸ್ತ್ರೀ ಪುರುಷ ಪ್ರೇಕ್ಷಕರು ಇಲ್ಲಿಗೆ ಬರುವರು ಇಲ್ಲಿಂದ ಏಳು ಮೈಲು ದೂರದಲ್ಲಿರುವ ಮಾನಸ ಬಲವೂ ಒಂದು ಪ್ರೇಕ್ಷಣೀಯಸ್ಥಳ. ಇಲ್ಲಿಗೂ ನೌಕಾ—ಮೋಟರುಗಳಿಂದ ಪ್ರಯಾಣ ಮಾಡಬಹುದು. ಇಲ್ಲಿಯೂ ಸುಂದರವಾದ ಹಲವು ಸರೋವರಗಳನ್ನು ಗುಡ್ಡಗಳು ಸುತ್ತುಹಾಕಿಕೊಂಡು ನಿಂತಿವೆ.

ಕಾಶ್ಮೀರವು ಗುಡಿಕೈಗಾರಿಕೆಗಳ ತವರುಮನೆ. ಇಲ್ಲಿನ ಸ್ತ್ರೀಯರಿಂದ ರಚಿತವಾದ ಪಶ್ಮೀನಾ ಶಾಲಿನ ಒಂದು ಗಜಕ್ಕೇ

ಕಾಶ್ಮೀರದ ಪ್ರಕೃತಿ ಸೌಂದರ್ಯದ ಒಂದು ನೋಟ.

ತುಂಬಾ ಬೆಲೆ ಇದೆ. ಇನ್ನು ಪಟ್ಟೂ, ಲೂಯಿ ಶಾಲುಗಳು ಇದಕ್ಕಿಂತ ಕಡಿಮೆ ಬೆಲೆಗೆ ಸಿಕ್ಕುವುವು. ಪಶ್ಮೀನಾ ಶಾಲಿಗೆ ಉಪಯೋಗಿಸುವ ನಯವಾದ ಉಣ್ಣೆಯು ಪ್ರತಿಯೊಂದು ಕುರಿಯಿಂದ ಅರ್ಧಪಾವಿನಷ್ಟು ದೊರಕುವುದೂ ಇದರ ಧಾರಣೆಯ ಏರಿಕೆಯ ಕಾರಣ.

ಕಾಶ್ಮೀರದ ಸ್ತ್ರೀಯರು ಲಾವಣ್ಯದ ನಿಧಿಗಳಾಗಿದ್ದಂತೆ, ಕಸೂತಿಕಲೆಯ ಆಗರವಾಗಿದ್ದಾರೆ. ಇಲ್ಲಿ ಹೆಣ್ಣುಮಕ್ಕಳಿಗೆ ಮದುವೆಯ ಕಾಲದಲ್ಲಿ ಬಣ್ಣ ಬಣ್ಣದ ಸುಂದರವಾದ ಚರಕಗಳನ್ನು ಬಳುವಳಿ ಕೊಡುತ್ತಾರೆ. ಇಲ್ಲಿಯ ಸ್ತ್ರೀಯರು, ತಮ್ಮ ಪತಿದೇವರು ಕಾರ್ಯಾಂತರದಿಂದ ಪರಸ್ಥಳಕ್ಕೆ ಹೋದಾಗ ತಮ್ಮ ಪ್ರಿಯ ರಾಟೆಯಮುಂದೆ ಕುಳಿತು ನೂಲುತೆಗೆಯುತ್ತಾ ವಿರಹ ದುಃಖವನ್ನು ಮಾಸಲು ಆಗಾಗ ಹಾಡಿಕೊಳ್ಳುತ್ತಾ ಕಾಲಕಳೆಯುತ್ತಾರೆ.

ಕಾಶ್ಮೀರದ ಮಾರ್ತಾಂಡ ಮಂದಿರವು ಉತ್ತಮ ಶಿಲ್ಪಕಲೆಗೊಂದು ಮಾದರಿಯಾಗಿದೆ. ಇಲ್ಲಿನ ಘಂಟರಿನಾಥವು ಕಾಶ್ಮೀರದ ಹಳೆಯ ರಾಜಧಾನಿ. ಈ ನಗರವು ಅಶೋಕನ ಕಾಲದಲ್ಲಿ ನಿರ್ಮಿತವಾಯಿತು. ಇಲ್ಲಿ ಬೌದ್ಧ ಯುಗದ ಶಿಲ್ಪಚಾತುರ್ಯವಿದೆ. ಇಲ್ಲಿಂದ ಚಂದನವಾಡಿಗೆ ಹೋಗುವಾಗ ನಿರಾವಿಲಳಾದ ಪ್ರಕೃತಿಯ ಬೆಡಗನ್ನು ಕಂಡು ರೋಮಾಂಚನಗೊಳ್ಳದವನಾರು? ಇಲ್ಲಿಂದ ಯಾತ್ರಿಕನ ಮುಂದಿನ ಗಟ್ಟವೇ ಅಮರನಾಥ. ಇಲ್ಲಿ ಪ್ರತಿವರ್ಷ ಶ್ರಾವಣ ಪೂರ್ಣಿಮೆಯ ದಿನ ಜಾತ್ರೆ ಜರಗುವುದು. ಈ ಜಾತ್ರೆಯ ಕಾಲದಲ್ಲಿ ಇಲ್ಲಿಯ ಮಾರ್ಗದಲ್ಲಿ ಆಹಾರ ವಸ್ತುಗಳ ಚಿಕ್ಕ ಚಿಕ್ಕ ಅಂಗಡಿಗಳನ್ನು ತೆರೆಯುತ್ತಾರೆ. ಈ ಜಾತ್ರೆಯ ಕಾಲವನ್ನು ಬಿಟ್ಟು ಉಳಿದ ಸಮಯದಲ್ಲಿ ಇಲ್ಲಿಗೆ ಪ್ರಯಾಣಹೋಗುವವನು ಒಂದು ಹಪ್ತೆಗೆ ಕಡಿಮೆಬೀಳದಷ್ಟು ಆಹಾರವನ್ನು ಹೊತ್ತುಕೊಂಡೇ ಹೊರಡಬೇಕು; ಇತರ ವೇಳೆಗಳಲ್ಲಿ ಅಲ್ಲಿ ಅಂಗಡಿಗಳಿರುವುದಿಲ್ಲ.

ಅಮರನಾಥವು ಸ್ಫಟಿಕೋಜ್ವಲವಾದ ಹಿಮದಿಂದ ನಿರ್ಮಿತವಾದ ಲಿಂಗವು. ಇದು ಅಮಾವಾಸ್ಯೆಯಿಂದ ಪೂರ್ಣಿಮೆಯವರೆಗೆ ದಿನದಿನಕ್ಕೆ ಬೆಳೆಯುತ್ತಾ ಹೋಗಿ ಹುಣ್ಣಿಮೆಯದಿನ ಒಂದೂವರೆಗೇಣಿನಷ್ಟು ಎತ್ತರವೂ ಒಂದು ಗೇಣಿನಷ್ಟು ಅಗಲವೂ ಆದ ಸುಂದರ ಲಿಂಗವಾಗುವುದು. ಮುಂದೆ ಅಮಾವಾಸ್ಯೆಯವರೆಗೆ ಇದು ಸ್ವಲ್ಪಸ್ವಲ್ಪ ಕರಗುತ್ತಾ ಬಂದು ಅಮಾವಾಸ್ಯೆಯ ದಿನ ಒಂದು ಅಂಗುಲದಷ್ಟು ಮಾತ್ರ ಈ ಲಿಂಗವು ಕಾಣಿಸುವುದು. ಹೀಗೆ ಸಾವಿರಾರು ವರ್ಷಗಳಿಂದ ಈ ಅಮರನಾಥೇಶ್ವರ ಲಿಂಗವು ಚಂದ್ರನಂತೆ ವೃದ್ಧಿಹ್ರಾಸಕ್ಕೆ ಗುರಿಯಾಗುತ್ತಾ ಬರುತ್ತಿದೆ ಈ ಅಮರನಾಥನ ಗುಹಾಮಂದಿರದ ಸನಿಯದಲ್ಲೇ ಎರಡು ಗಿರಿಗಳ ನಡುವಿನಿಂದ ಅಮರ ಗಂಗೆಯು ಸುಮಾರು ಹತ್ತು-ಹನ್ನೆರಡಡಿ ಎತ್ತರದಿಂದ ಧುಮುಕುವುದು. ಈ ಗುಹಾಮಂದಿರದೊಳಗೆ ಒಂದೆಡೆ ಹಿಮದ ಗಣೇಶ; ಮತ್ತೊಂದೆಡೆ ಹಿಮದ ಪಾರ್ವತಿಯ ಪ್ರತಿಮೆ ಇದೆ. ಇವೆರಡರ ನಡುವೆ ಮಹಿಮಾಮಯನಾದ ಅಮರನಾಥನ ಲಿಂಗವಿದೆ. ಇಲ್ಲಿಯ ಶಾಂತಿ ಸಾಮ್ರಾಜ್ಯವು ಮಾನವನ ಊಹೆಗೆ ಮೀರಿದುದು —

ಕಾಶ್ಮೀರದ ಪ್ರಕೃತಿ ಸೌಂದರ್ಯವನ್ನು ಹುಡುಕುತ್ತಾ ಅಲೆಯ ತೊಡಗಿದರೆ ಈ ರಮ್ಯ ಕಂದರಗಳಲ್ಲೇ ಯಾತ್ರಿಕನ ಸಮಾಧಿಯಾಗಲೂ ಬಹುದು. ಎಷ್ಟೋ ಬೆಡಗಿನ ಅಚ್ಚುಕಟ್ಟಾದ ಬೀಡುಗಳಿಗೆ ಹಿಮನದಿಗಳನ್ನು ದಾಟಿಯೇ ಹೋಗಬೇಕಾಗಿದೆ ಕೆಲವಕ್ಕೆ ಹಿಮಶೃಂಗಗಳನ್ನೇರಿ ಕಡಿದಾದ ಕಣಿವೆಯನ್ನು ಸೇರಬೇಕಾಗುವುದು. ಇವಕ್ಕೆಲ್ಲಾ ವಜ್ರ ಹೃದಯ, ಮಾಸದ ತಾರುಣ್ಯಬೇಕು. ಈ ಪ್ರಯಾಣಗಳಲ್ಲಿ ಪ್ರಕೃತಿ ದೇವಿಯ ಸೌಂದರ್ಯಾವಲೋಕನಕ್ಕೆ ಗೋಷೆಯಂತೆ ಅಲ್ಲಲ್ಲಿ ಹಿಮಾನಿಯ ಪರದೆಗಳು ನಮ್ಮನ್ನು ಇಡಗಿಸುವುವು. ಸಮೀಪದಲ್ಲೇ ನಮ್ಮ ಎದೆಯ ಹುಯಿಲನ್ನು ಅಳೆಯುತ್ತಾ ಶುಭ್ರಶ್ವೇತ ತುಷಾರಧವಳ ವಸನವನ್ನು ಹೊದ್ದುನಿಂತ ನಗರಾಜನ ಶೃಂಗಗಳಿವೆ ಇಲ್ಲಿ ಸೃಷ್ಟಿ ಸೌಂದರ್ಯದ ಸ್ಥಳಗಳಿಗೆಲ್ಲಾ ನಡೆದು ಹೋಗಲು ಎರಡು ಕಾಲುಗಳೂ, ಇವುಗಳನ್ನು ನೋಡಿ ತಣಿಯಲು ಎರಡು ಕಣ್ಣುಗಳೂ ಎಂದೂ ಸಾಲವು. ನಮಗೆ ವಿಧಿಯ ವಿಡಂಬನೆಯು ಇಲ್ಲಿಯೇ ಮುಂದಟ್ಟಿಗುವುದು!

ಪ್ರಜಾಪ್ರಭುತ್ವದಲ್ಲಿ ಪಕ್ಷದ್ವೇಷವೇಕೆ?

ಅಭಿಪ್ರಾಯ ಸ್ವಾತಂತ್ರ್ಯ, ಗಣತಂತ್ರದ ಅಧಿಕಾರವೆಂತಲೇ ಪ್ರಜಾಪ್ರಭುತ್ವದಲ್ಲಿ ನಾನಾ ಪಕ್ಷಗಳು ಉದಯಿಸಬಹುದು. ನಮ್ಮಲ್ಲಿಯ ಪಕ್ಷಗಳು ಸದಾಚಾರವನ್ನುಳಿಸಿಕೊಂಡಿವೆಯೋ ಎಂಬುದರ ವಿವೇಚನೆ ಇಲ್ಲಿ ಮಾಡಲಾಗಿದೆ.

ಶ್ರೀ ತಡ್ಡಲಸೆ ವಿಶ್ವೇಶ್ವರ ಶರ್ಮಾ

ಭಾರತೀಯ ರಾಜ್ಯ ಶಾಸನವು ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯಸಂಗ ಬದ್ಧವಾಗಿ ತನ್ನ ವಿಚಾರವನ್ನು ಪ್ರಕಟಿಸುವದಕ್ಕೂ ಅದಕ್ಕೆ ಜನತೆಯ ಬೆಂಬಲ ಪಡೆಯುವದಕ್ಕೂ ಅವಕಾಶವನ್ನಿತ್ತಿದೆ. ದೇಶದ ಸ್ವಾತಂತ್ರ್ಯದೊಡನೆ ವಿಚಾರ ಸ್ವಾತಂತ್ರ್ಯವೂ ಭಾರತೀಯ ಪ್ರಜೆಗೆ ದೊರಕಿದೆ. ಇದರಿಂದಾಗಿ ಭಾರತೀಯ ಪ್ರಜೆಯು ರಾಜ್ಯಾಂಗ, ನ್ಯಾಯಾಂಗಗಳಿಗೆ ಅವಿರೋಧವಾಗಿ ಪಕ್ಷ ಕಟ್ಟುವದಾಗಲೀ ಪಕ್ಷಕ್ಕೆ ಸೇರುವುದಾಗಲೀ ಅಪರಾಧವೆನಿಸುವುದಿಲ್ಲ

ಹಾಗಾಗಿ ನಮ್ಮ ಭಾರತದ ರಾಜಕೀಯ ರಂಗದಲ್ಲಿ ಅನೇಕ ಪಕ್ಷಗಳು ಹುಟ್ಟಿವೆ ಹುಟ್ಟುತ್ತಲೂ ಇವೆ ಹುಟ್ಟಿದ ಕೆಲವು ಪಕ್ಷಗಳು ಅಳಿಯುತ್ತಲೂ ಮತ್ತೊಂದರಲ್ಲಿ ವಿಲೀನವಾಗುತ್ತಲೂ ಇರವುದು ನಮಗ ಅಪರೂಪವೇನಲ್ಲ ಆದರೆ ಈ ಅಳಿವಾಗಲೀ ವಿಲೀನವಾಗಲೀ ನಮಗೆ ಪ್ರಧಾನವಲ್ಲ ಪಕ್ಷದಲ್ಲಿ ಪ್ರಭಾವವಿದ್ದರೆ ಉಳಿದುಕೊಳ್ಳುತ್ತದೆ. ಆದರೆ ಒಂದು ಪಕ್ಷದವರು ಮತ್ತೊಂದು ಪಕ್ಷವನ್ನು ದ್ವೇಷಿಸುವದಾಗಲೀ ಟೀಕಿಸುವುದಾಗಲೀ ಪ್ರಜಾಪ್ರಭುತ್ವಕ್ಕೆ ಸರಿಯೆನಿಸುವುದಿಲ್ಲ

ನಮ್ಮ ದೇಶದಲ್ಲಿ ಈ ಪಕ್ಷಗಳು ಹೆಚ್ಚಿದಂತೆಲ್ಲ ಪಕ್ಷ ಪಕ್ಷಗಳಲ್ಲಿಯ ಘರ್ಷಣೆ ದ್ವೇಷಗಳೂ ಹೆಚ್ಚುತ್ತಲೇ ಇರುವುದು ಕಂಡು ಬರುತ್ತಿದೆ. ಇದೀಗ ರಾಜಾಜಿಯ ಸ್ವತಂತ್ರ ಪಕ್ಷ ಉದಯವಾದೊಡನೆ ಅನೇಕ ಪಕ್ಷಗಳು ಸಿಡಿಮಿಡಿಗೊಂಡು ಅದರ ಮೇಲೆ ತಮ್ಮ ಅಸಹನೆಯನ್ನು ತೋರಿಸಿದ್ದು ಅನೇಕ ಪತ್ರಿಕಗಳಲ್ಲಿ ಓದುತ್ತೇವೆ ಅಧಿಕಾರದಲ್ಲಿರುವ ಕೆಲವು ರಾಜಕೀಯ ಮುಖಂಡರೇ ಈ ಪಕ್ಷ ದ್ವೇಷಕ್ಕೆ ನಾಂದಿಯೋ ಎಂಬಂತೆ— "ಇದು ಭೂತಗಳ ಪಕ್ಷ. ಇದು ಹಾಗೆ ..ಇದು ಹೀಗೆ...." ಎಂದು ಹೇಳಿದ್ದು ಪ್ರಜಾಪ್ರಭುತ್ವಕ್ಕೆ ಸರಿಯೆನಿಸಲಾರದು.

ಹೀಗೆ ಹೇಳುವಾಗ ಈ ಪಕ್ಷ ದ್ವೇಷದ ಹಿನ್ನೆಲೆಯಲ್ಲಿ ವ್ಯಕ್ತಿಯ ಮನೋಧರ್ಮವೇನಿದೆ ಎಂಬುದನ್ನೂ ನಾವು ತಿಳಿಯಲು ಪ್ರಯತ್ನಿಸಬೇಕು. ಹಾಗೆ ಪ್ರಯತ್ನಿಸಿದಾಗ ಈ ಮನೋಧರ್ಮದಲ್ಲಿ ಸರ್ವಾಧಿಕಾರಿ ಒಲುವು ನಿಲುವುಗಳೇ ಅಡಗಿವೆಯೋ ಎಂದು ಶಂಕಿಸಬೇಕಾಗುತ್ತದೆ. ಯಾಕೆಂದರೆ ನ್ಯಾಯಾಂಗಕ್ಕೆ ವಿರೋಧವಾಗದ ಹಾಗೆ ಪಕ್ಷಗಳು ಹುಟ್ಟಿ ಬೆಳದುಕೊಂಡರೆ ಅದಕ್ಕೆ ವಿರೋಧವನ್ನು ಸೂಚಿಸುವದಾಗಲೀ, ಅಸಹನೆಯನ್ನು ವ್ಯಕ್ತಪಡಿಸುವದಾಗಲೀ ಅದೂ ಒಂದು ರೀತಿಯ ನ್ಯಾಯಾಂಗಕ್ಕೆ ಅಪ್ರತ್ಯಕ್ಷವಾಗಿ ಅಪ್ರಿಯತೆಯನ್ನೂ ತೋರಿಸಿದಂತೆಯೇ ಆಗಬಹುದು. ಇಂಥ ಮನೋವೃತ್ತಿಗೆ ಪರ ಪಕ್ಷದ ಸಹಿಷ್ಣುತೆ ಇಲ್ಲವೆಂದೂ ತಮ್ಮದೊಂದೇ ಉಳಿದು ಬೆಳೆಯಬೇಕೆಂಬ ಸ್ವಾರ್ಥಪರ ಧೋರಣೆಗೆ ಒಳಪಟ್ಟಿದೆಯೆಂದೂ ನಾವು ಊಹಿಸಿದರೆ ತಪ್ಪೇನಿದೆ?

ಪಕ್ಷದ ಸ್ವಾಸ್ಥ್ಯ ಸಂಘಟನೆಯ ಕುರಿತಾಗಿಯೂ, ಪಕ್ಷದ ಪ್ರಭಾವ ಪ್ರತಿಷ್ಠೆಗಳ ಸಲುವಾಗಿಯೂ ದುರಭಿಮಾನಿಯು, ಪಕ್ಷ ಧುರೀಣನು ಪ್ರಯತ್ನಿಸುವದು ಸ್ವಾಭಾವಿಕ ಅದು ಅವನ ಕರ್ತವ್ಯ ಆದರೆ ಇದರ ಹೆಸರಿನಲ್ಲಿ ಮತ್ತೊಂದು ಪಕ್ಷವನ್ನು ದೂಷಿಸುವದಾಗಲೀ ದ್ವೇಷಿಸುವುದಾಗಲೀ ಪ್ರಜಾಪ್ರಭುತ್ವಕ್ಕೆ ಸಮ್ಮತವೆನಿಸಬಹುದೇ? ಜನಾಂಗದ ಹೃದಯ ಪರಿವರ್ತನೆಯೊಂದಿಗೆ ಪಕ್ಷ ಪರಿವರ್ತನೆಯೋ, ಸಂಘಟನೆಯೋ ಇವನ್ನು ಸಾಧಿಸುವುದು ಪಕ್ಷಕ್ಕೆ ಭೂಷಣವೇ ಹೊರತು ಮತ್ತೊಂದನ್ನು ನಿಂದಿಸಿ ಇಲ್ಲದ ಆಮಿಷ ತೋರಿಸಿ ಜನತೆಯ ಮನಸ್ಸನ್ನು ಆಕರ್ಷಿಸಿ ಪಕ್ಷದ ಬಲ ಸಂವರ್ಧನೆ ಮಾಡುವುದು ಸರ್ವಥಾ ಯೋಗ್ಯವಾದುದಲ್ಲ. ಪಕ್ಷದ ಸದಸ್ಯರನ್ನು ಕಲೆಹಾಕುವಾಗಲೂ ಇಂಥದೇ ನೀತಿಯನ್ನು ಅನುಸರಿಸಿ ಸದಸ್ಯ ಸಂಖ್ಯೆಯನ್ನು ಹೆಚ್ಚಿಸುವುದು ಹಲವಾರು ಪಕ್ಷಗಳಿರುವ ನಮ್ಮ ನಾಡಿನಲ್ಲಿ ಅಪರೂಪವೇನಲ್ಲ. ಸದಸ್ಯರಿಗೆ ಪಕ್ಷದ ತತ್ವ ವಿಚಾರ ತಿಳಿಸುವದಕ್ಕಿಂತ ಇನ್ನೊಂದು ಪಕ್ಷದ ದೋಷಾರೋಪಣೆಯೊಂದನ್ನೇ ಮುಖ್ಯವಾಗಿಟ್ಟುಕೊಂಡರೆ ಅವರಲ್ಲಿಯೂ ಪರ ಪಕ್ಷದ ಸಹಿಷ್ಣುತೆಯ ಮನೋಭಾವ ಉಂಟಾಗಲಾರದೆಂಬುದನ್ನು ನಾವು ತಿಳಿಯಬೇಕಾದ ಸಂಗತಿಯಾಗಿದೆ

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗೆ ಪ್ರಧಾನತೆ ಇಲ್ಲ. ತತ್ವಕ್ಕೆ ಪ್ರಧಾನತೆ ಹೆಚ್ಚು. ಅಂದಾಗ ವ್ಯಕ್ತಿ ಪೂಜೆಯನ್ನು ಹಿಂದಿರಿಸಿ ತತ್ವಕ್ಕೆ ಅಂಟಿಕೊಳ್ಳಬೇಕಾದುದು ಪ್ರಜಾಪ್ರಭುತ್ವವಾದಿಯ ಪ್ರತಿಯೊಬ್ಬ ಪ್ರಜೆಯ ಪ್ರಥಮ ಕರ್ತವ್ಯ ಸದಸ್ಯರನ್ನು ಕಲೆಹಾಕುವಾಗಲೂ ಇಂಥ ನೀತಿಯನ್ನು ಉಲ್ಲಂಘಿಸುವದುಂಟು. 'ನಮ್ಮ ಪಕ್ಷದಲ್ಲಿ ಇಂಥವರು ಇದ್ದಾರೆ, ಅಂಥವರು ಇದ್ದಾರೆ'' ಎಂದು ಹೇಳಿ ಜನತೆಯ ಮನಸ್ಸನ್ನು ಒಲಿಸುವದೂ ಆ ಪಕ್ಷದಲ್ಲಿ ಅವರಿದ್ದಾರೆ. ಇವರಿದ್ದಾರೆ ಎಂದು ವ್ಯಕ್ತಿಗಳನ್ನು ನಿಂದಿಸುವುದೂ ಇದೆ. ಇವೆಲ್ಲ ಸಂಪ್ರದಾಯಗಳು ಪ್ರಜಾಪ್ರಭುತ್ವಕ್ಕೆ ಹಿತಕಾರಿಯಲ್ಲ.

ಒಂದು ಪಕ್ಷವು ಹುಟ್ಟಿಕೊಂಡೊಡನೆ ಅದರಿಂದ ತಮ್ಮ ಪಕ್ಷಕ್ಕೆ ಏನೂ ಹಾನಿಯಾಗಿಲ್ಲವೆಂದೂ, ಕೆಲವು ಸದಸ್ಯರು ತಮ್ಮ ಪಕ್ಷದಿಂದ ಹೋದದ್ದು ತಮ್ಮ ಪಕ್ಷ ಬೆಳವಣಿಗೆಗೆ ಸುಗಮವೇ ಆಯಿತೆಂದು ಪಕ್ಷ ಮುಖಂಡರು ಹೇಳಿಕೆ ಕೊಡುವುದುಂಟು ಇಂಥ ಹೇಳಿಕೆಗಳ ಸಾರಾಸಾರವನ್ನು ವಿಚಾರಿಸಿದರೆ ಸದಸ್ಯರ ತತ್ವನಿಷ್ಠ ವರ್ತನೆ ನಮಗೆ ಸ್ಪಷ್ಟವಾಗುತ್ತದೆ. ಇಂದ ಸದಸ್ಯರು ಪಕ್ಷದಲ್ಲಿರುವಾಗ ಪ್ರಮುಖರಾಗಿಯೂ ಪಕ್ಷ ಪರಾಙ್ಮುಖರಾದಾಗ ಪ್ರತಿಗಾಮಿಗಳಾಗಿಯೂ ಕಾಣುವುದು ಒಂದು ಆಶ್ಚರ್ಯದ ಸಂಗತಿ

ಕೆಲವು ಕಾಲದ ಹಿಂದೆ ಮತ ಮತಗಳಲ್ಲಿ ಘರ್ಷಣೆ ನಡೆಯುತ್ತಿತ್ತು. ಮತಗಳು ಹಣಾಹಣಿಯಾಗ ಹಿಂಸಾತ್ಮಕ ಕೃತ್ಯಗಳೂ ನಡೆಯತೊಡಗಿದವು ಕೊನೆಗೆ ಗಾಂಧೀಜೀಯವರ ಕಾಲದಲ್ಲಿ ಈ ಸಂಪ್ರದಾಯ ಮುಕ್ತಾಯಗೊಂಡಿತು. "ಎಲ್ಲ ಮತಗಳೂ ದೇವರನ್ನು ಕಾಣಲು ಸಾಗುವಂಥ ಬೇರೆ ಬೇರೆ ದಾರಿಗಳಾಗಿವೆ ದಾರಿಗಳು ಭಿನ್ನವೇ ಹೊರತು ಉದ್ದೇಶ್ಯ ಭಿನ್ನವಾಗಿಲ್ಲ" ಎಂದು ಅವರ ಸರಿಯಾದ ವಿಚಾರ ತಿಳಿಸಿ ಪರಮತ ಸಹಿಷ್ಣುತೆಯ ಪಾಠ ಕಲಿಸಿದರು.

ಹಾಗೆಯೇ ಇಂದು ನಮಗೆ ಪರಪಕ್ಷ ಸಹಿಷ್ಣುತೆಯ ಪಾಠವೂ ಬೇಕಾಗಿದೆ. ಮತಗಳ ಉದ್ದೇಶದಂತೆ ಪಕ್ಷಗಳ ಉದ್ದೇಶವಾದರೂ ದೇಶವನ್ನು ಸಮೃದ್ಧಿಯ ಕಡೆಗೆ ಒಯ್ಯುವುದಕ್ಕಾಗಿಯೇ ಇದೆ. ಅಂದಾಗ ಮತ್ತೊಂದು ಪಕ್ಷಕ್ಕಾಗಿ ದ್ವೇಷ ದೂಷಣೆಗಳು ಸರಿಯಾಗಲಾರವು. ಕೇವಲ ಶಾಸ್ತ್ರಿಕ ಪ್ರಣಾಲಿಯಲ್ಲಿಯೇ ಪಕ್ಷ ಬೆಳವಣಿಗೆ ಸಾಧಿಸುವುದು ಸರಿಯಾದ ಮಾರ್ಗವಾಗಿದೆ.

ನಮ್ಮ ದೇಶಕ್ಕೆ ಹಲವಾರು ವಿಷಯಗಳ ಬಗ್ಗೆ ಬೇರೆ ದೇಶದ ಅನುಕರಣೆ ಮಾಡುತ್ತೇವೆ. ಪ್ರಜಾಪ್ರಭುತ್ವವಿರುವ ಬೇರೆ ದೇಶಗಳಲ್ಲಿ ಅನ್ಯ ಪಕ್ಷಗಳ ಬಗೆ ಯಾವ ಭಾವನೆ ಇದೆಯೆಂಬದನ್ನೂ ಆ ಪಕ್ಷಗಳ ಬೆಳವಣಿಗೆಗೆ ಯಾವ ಚಾಲನೆ ಕೊಡಲಾಗುತ್ತಿದೆಯೆಂಬುದನ್ನೂ ಗಮನಿಸಬೇಕು. ಮತ್ತೊಂದು ಪಕ್ಷಗಳ ಬಗ್ಗೆ ಅಲ್ಲಿ ದ್ವೇಷಾಸೂಯೆ ಇಲ್ಲ ಹಾಗಾಗಿಯೇ ಪ್ರಜಾಪ್ರಭುತ್ವವು ಅಲ್ಲಿ ಯಶಸ್ವಿಯಾಗಿದೆಯೆಂಬುದು ಮನನೀಯ ಅಂಶವಾಗಿದೆ, ಆಡಳಿತ ಪಕ್ಷಕ್ಕೆ ಸಮರ್ಥವಾದ ಮತ್ತೊಂದು ಪಕ್ಷವಿರಬೇಕೆಂದೂ ಅದರಿಂದ ಆಡಳಿತಕ್ಕೆ ಹೆಚ್ಚು ಮಾರ್ಗದರ್ಶನವಾಗುತ್ತದೆಂದೂ ಪ್ರಜಾಪ್ರಭುತ್ವವಾದಿಗಳ ಮತವಾಗಿದೆ.

ನಮ್ಮ ನಾಡಿನಲ್ಲಿ ಪ್ರಜಾಪ್ರಭುತ್ವವು ಇನ್ನೂ ಪ್ರಥಮಾವಸ್ಥೆಯಲ್ಲಿಯೇ ಅದರ ಸರಿಯಾದ ಅರ್ಥವೂ ಸಾಕಷ್ಟು ಜನಕ್ಕಾಗಲಿಲ್ಲ. ಇಂಥ ಸ್ಥಿತಿಯಲ್ಲಿಯೇ ಈ ಪಕ್ಷ ಪಕ್ಷಗಳಲ್ಲಿಯ ವಿದ್ವೇಷ, ಘರ್ಷಣೆಗಳು ನಡೆದರೆ ಅದರ ಸರಿಯಾದ ಬೆಳವಣಿಗೆಗೆ ಅವಕಾಶ ದೊರೆಯಲಾರದು ಎಲ್ಲ ಪಕ್ಷಗಳೂ ಸಹೋದರಭಾವದಿಂದ ವರ್ತಿಸುವುದು ಅತಿ ಅವಶ್ಯ ಸಂಗತಿ. ಯಾವುದೇ ರೀತಿಯಿಂದಾದರೂ ಸದಸ್ಯ ಸಂಖ್ಯಾಬಲವನ್ನೂ ಹೆಚ್ಚಿಸಿ ಪಕ್ಷಪ್ರಭಾವವನ್ನೂ ಗಳಿಸಬೇಕೆಂಬುದಕ್ಕಿಂತಲೂ, ತತ್ವಪ್ರಸಾರದಿಂದ, ತತ್ವನಿಷ್ಠ ಸದಸ್ಯರನ್ನು ಸಂಪಾದಿಸುವದರಿಂದಲೇ ಪಕ್ಷಪ್ರಭಾವಕ್ಕೆ ಸಾವಿರಪಟ್ಟು ಹೆಚ್ಚಿನದಾಗಿದೆ

ಪ್ರಜಾಪ್ರಭುತ್ವದಲ್ಲಿ ಪ್ರಜೆಯ ಮನೋಧರ್ಮವು ಪರಿಶುದ್ಧವಾಗಿರಬೇಕು. ಯಾವ ಆಮಿಷಕ್ಕೂ ಜಗ್ಗದೇ ಒಗ್ಗದೇ ಕುಗ್ಗದೇ ಇರುವ ಸ್ಥಿತಪ್ರಜ್ಞತೆ ಪಡೆದಿರಬೇಕು. ವ್ಯಕ್ತಿ ನಿಂದೆಯ ಮತ್ತು ಪಕ್ಷ ದ್ವೇಷದ ಪ್ರವೃತ್ತಿಯನ್ನು ತೊಡೆದು ಹಾಕುವುದು ಪ್ರಜಾಪ್ರಭುತ್ವಕ್ಕೆ ತುಂಬಾ ಹಿತಕಾರಿಯೆಂಬುದನ್ನು ನಾವು ಅಲ್ಲಗಳೆಯಲಾರೆವು ಅನೇಕ ಪಕ್ಷ ಪ್ರತಿಪಕ್ಷಗಳಿರುವ ನಮ್ಮ ದೇಶದಲ್ಲಿ ಇಂಥ ಮನೋಧರ್ಮವನ್ನು ಬೆಳೆಸದಿದ್ದರೆ ಪ್ರಜಾಪ್ರಭುತ್ವದ ಉದ್ದೇಶ್ಯವೂ ಸಫಲವಾಗಲಾರದು. ಅದರ ಬೆಳವಣಿಗೆಯೂ ಸುಗಮವಾಗಲಾರದು.

BUY ADVERTISED GOODS!

ಭಾಸನ ಊರುಭಂಗವೂ ರನ್ನನ ಗದಾಯುದ್ಧವೂ

(೧೦ನೇ ಪುಟದಿಂದ)

(ಪ. ೨೨)—ಪಾಂಡವರನ್ನು ಕೊಲ್ಲುವೆನೆಂದಾಗ, 'ಬೇಡ, ಬೇಡ, ದಯಮಾಡಿ ನೀನಿಂತು ಮಾಡಬೇಡ!' 'ಮಾ ಮಾ, ಭವಾನೇವಮ್!' (ಶ. ೩೨೧) ಎಂದು ಬೇಡಿಕೊಳ್ಳುವನು; ತನ್ನ ಮಗನಾದ ದುರ್ಜಯನಿಗೆ—'ಅಹಮಿವ ಪಾಂಡವಾಃ ಶುಶ್ರೂಷಯಿತವ್ಯಾಃ| ....ಅಭಿಮನ್ಯೋರ್ಜನನೀ ದ್ರೌಪದೀ ಚೋಭೇ ಮಾತೃವತ್ ಪೂಜಯಿತವ್ಯೇ| ' (ಪ. ೫೩೧)—ನನ್ನಂತೆ ಪಾಂಡವರ ಶುಶ್ರೂಷೆಯನ್ನು ಮಾಡುತ್ತಿರು! ಸುಭದ್ರೆಯನ್ನೂ ದ್ರೌಪದಿಯನ್ನೂ ತಾಯಿಯಂತೆ ಪೂಜಿಸುತ್ತಿರು!' ಎಂದು ಬೋಧಿಸುವನು; ಆ ಮೇಲೆ ಅಶ್ವತ್ಥಾಮನೂ ಆತನ ದೀನಾವಸ್ಥೆಯನ್ನು ಕಂಡು ಕನಿಕರಿಸಿ 'ಅಯ್ಯೋ ಕುರುರಾಯನೇ, ಏನಿದು?'—'ಭೋಃ ಕುರುರಾಜ! ಕಿಮಿದಮ್?'—ಎನ್ನಲು ಆತನು—'ಗುರುಪುತ್ರ, ಫಲಮಪರಿತೋಷಸ್ಯ! (ಪ. ೫೯೧)—'ಇದಾದರೋ ಅತೃಪ್ತಿಯ ಫಲ' ಎಂದು ತನ್ನನ್ನೇ ತಾನು ಸಾನುಶಯನಾಗಿ ಹೀಗಳೆದು 'ಇನ್ನು ನೀನೂ ಬಿಲ್ಲನ್ನು ಕಳೆದು ಬಿಡು!'— 'ಧನುರ್ಮುಂಚತು ಭವಾನ್!' (ಪ. ೬೧) ಎಂದುಸುರುತ್ತಲೇ ಕ್ರುದ್ಧನಾದ ಅಶ್ವತ್ಥಾಮನು—

> ಸಂಯುಗೇ ಪಾಂಡು ಪುತ್ರೇಣ
> ಗದಾಪಾತ ಕಚಗ್ರಹೇ ।
> ಸಮಮೂರು ದ್ವಯೇನಾದ್ಯ
> ದರ್ಪೋsಪಿ ಭವತೋ ಹೃತಃ ॥
> (ಪ. ೬೨)

—'ಭೀಮಸೇನನು ಯುದ್ಧರಂಗದಲ್ಲಿ ನಿನ್ನನ್ನು ಮುಡಿಯಲ್ಲಿ ಹಿಡಿದು ಗದೆಯಿಂದ ಹೊಯ್ದಾಗ, ನಿನ್ನ ತೊಡೆಗಳೊಂದಿಗೆ ನಿನ್ನ ಕೆಚ್ಚೆದೆಯನ್ನೂ ಸೆಳೆಕೊಂಡನೇ?' ಎಂದು ಜರೆದಾಗ ಕೌರವನು

> ಯತ್ರ ಕೃಷ್ಣಾ ಕರ ನಿಗ್ರಹಾಂಚಿತ-
> ಕಚಾ ದ್ಯೂತೇ ತದಾ ದ್ರೌಪದೀ
> ಯುದ್ಧಾಲೋಕೇಪಿ ಹತಸ್ತನಃ ರಣಮುಖೇ
> ಪುತ್ರೋsಭಿಮನ್ಯುಃ ಪುನಃ ।
> ಅಕ್ಷವ್ಯಾಜಜಿತಾ ವನಂ ವನಮೃಗೈ
> ರ್ಯತ್ ಪಾಂಡವಾಃ ಸಂಶ್ರಿತಾ
> ನನ್ವಲ್ಪಂ ಮಯಿ ತೈಃ ಕೃತಂ ವಿಮೃಶ
> ಭೋ ದರ್ಪಾಹೃತಂ ದೀಕ್ಷಿತೈಃ ॥
> (ಪ. ೬೩)

'ಅಂದು ದ್ಯೂತ ಸಭೆಯಲ್ಲಿ ದ್ರೌಪದಿಯನ್ನು ತುರುಬು ಹಿಡಿದು ಸೆಳೆತಂದುದನ್ನೂ ಆ ಮೇಲೆ ಹಸುಳೆಯಾದ ಮಗು ಅಭಿಮನ್ಯುವನ್ನು ಅಂದು ಯುದ್ಧಮುಖದಲ್ಲಿ ಕೊಂದುದನ್ನೂ ಜೂಜಾಟದ ನೆಪದಿಂದ ಪಾಂಡವರನ್ನು ಸೋಲಿಸಿ ವನಮೃಗಗಳ ಜತೆಯಲ್ಲಿರುವಂತೆ ಅವರನ್ನು ಕಾಡುಪಾಲಾಗಿಸಿದುದನ್ನೂ ನೆನೆದರೆ, ಅವರು ನನ್ನ ದರ್ಪವನ್ನು ಕಿತ್ತುಕೊಂಡ ಪ್ರತೀಕಾರವು ತೀರ ಅಲ್ಪವಲ್ಲವೇ? ನೀನೇ ಯೋಚಿಸಿ ನೋಡು!' ಎಂದು ಆತನನ್ನು ಶಂತವಿಸುವನು. ರನ್ನನ ದುರ್ಯೋಧನನಾದರೊ ಎಂದಿಗೂ ಹೀಗಲ್ಲ; ಕೆಡುಕನೇ ಆದರೂ ಕೆಡುಕಿನಲ್ಲಿಯೂ ಉತ್ಕಟ ನಿಷ್ಠಾವಂತನು; ತನ್ನ ವೈರಿಗಳಲ್ಲಿ ದಯೆದಾಕ್ಷಿಣ್ಯಗಳನ್ನು ಸ್ವಪ್ನೇಪಿ ಅರಿತವನಲ್ಲ; ಜೀವಕ್ಕೂ ಛಲಕ್ಕೂ ತನ್ನ ಎಳವೆಯಲ್ಲಿಯೇ ಬಿದೊಮ್ಮೆ ಅಷ್ಟು ಬಿಗಿಯಾಗಿ ಹಾಕಿಕೊಂಡ ಗಂಟನ್ನು ಸಾವನಕ ಬಿಚ್ಚಿದವನೂ ಅಲ್ಲ, ತನ್ನ ತಪ್ಪೆಂದು ಒಪ್ಪಿಕೊಂಡವನೂ ಅಲ್ಲ; ಪಂಚ ದ್ರೌಪದೇಯರ ತಲೆಗಳನ್ನು ಕಂಡ ಅಂದೊಮ್ಮೆಯಲ್ಲದೆ ಆ ಮುಂಚೆ ಆ ಕಾವ್ಯದಲ್ಲಿ ಆತನು ಪಶ್ಚಾತ್ತಾಪವನ್ನು ಬಲ್ಲವನಲ್ಲ, ಅಂದಾದರೂ ಅವು ಪಾಂಡವರ ತಲೆಗಳಲ್ಲವೆಂದು ಕಳವಳಪಟ್ಟನೇ? ಅಥವಾ ಉಳಿದಿದ್ದ ಆ ನಕ್ಕಳೂ ಹೋದ ಮೇಲೆ ಇನ್ನು ಮುಂದೆ ತಮಗೆ ತಿಲೋದಕಕ್ಕೆ ಗತಿ ಏನೆಂದು ಮರುಗಿದನೇ? ಎಂದೂ ಹೇಳಲಾಗುವುದಿಲ್ಲ. ಆತಏವ ರನ್ನನು ಭಾಸನ ತೂಲಿಕೆಯನ್ನು ಒಂದೆರಡು ಮಾತುಗಳ ಮಟ್ಟಿಗಷ್ಟೇ ತನ್ನ ಕಾವ್ಯದಲ್ಲಿ ಮುಟ್ಟಿಸಿರುವನಲ್ಲದೆ, ಇತರತ್ರ ಅದನ್ನು ಎತ್ತಿಲ್ಲ. ತನ್ನ ಪ್ರಧಾನ ಪಾತ್ರವಾದ ದುರ್ಯೋಧನನ ಕಡೆಗಾದರೂ ಅದನ್ನು ತೋರಿಸಿಲ್ಲವಾದರೂ, ಯಾವನೊಬ್ಬ ಕವಿ ತಾನು ಬರೆವ ವಿಷಯವನ್ನೇ ಕುರಿತು ಆ ಮುಂಚೆ ಬರೆದಿರುವ ತನ್ನ ಪೂರ್ವಿಕರ ಕೃತಿಗಳನ್ನು ಮಾದರಿಯಾಗಿ ಇಟ್ಟುಕೊಳ್ಳುವುದಾಗಲಿ ಅವನ್ನು ಇತರಥಾ ಉಪಯೋಗಿಸುವುದಾಗಲಿ ಅವರನ್ನು ಅನುವರ್ತಿಸಲೆಂದೇ ಅಲ್ಲ, ಅವರ ರೀತಿಗಳಿಂದ ಭಿನ್ನವಾದ ಹೊಸ ರೀತಿಗಳನ್ನು ಕಲ್ಪಿಸಲಿಕ್ಕೂ ಎಂಬುದು ಅನೇಕ ಶ್ರೇಷ್ಠ ಕವಿಗಳು ತಂತಮ್ಮ ಪೂರ್ವಿಕರ ಕಾವ್ಯಗಳಲ್ಲಿಯ ಸನ್ನಿವೇಶಗಳನ್ನೂ, ಪಾತ್ರಗಳನ್ನೂ ತಮ ತಮಗೆ ಬೇಕಾದಂತೆ ಮಾರ್ಪಡಿಸಿಕೊಂಡು ಹೊಸ ಸೃಷ್ಟಿಗೆಯ್ದಿರುವ ನಿದರ್ಶನಗಳಿಂದ ತಿಳಿಯುವುದರಿಂದ, ರನ್ನನು ಭಾಸನ ಊರುಭಂಗದಿಂದ ಒಂದೆರಡು ಮಾತುಗಳನ್ನು ಮೆಚ್ಚಿ ಎರವು ಕೊಂಡಿರುವಂತೆ, ಭಾಸನ ಕೌರವನನ್ನು ಬಗೆಗಂಡು ತಾನೆ ತನ್ನ ಕೌರವನನ್ನು ಆತನಿಂದ ಭಿನ್ನವಾಗಿ ನಿರ್ಮಿಸಿರಬಹುದು.

ಇದು ಕಾರಣ ಪಂಪನೂ ರನ್ನನೂ ಇದ್ದ ಕ್ರಿ. ಶ. ೧೦ನೆಯ ಶತಮಾನದಲ್ಲಿ ಭಾಸನ ನಾಟಕಗಳು ಕನ್ನಡ ನಾಡಿನಲ್ಲಿ ಸಾಕಷ್ಟು ಪ್ರಚಲಿತದಲ್ಲಿ ಇದ್ದಿರಬೇಕು. ಅಲ್ಲಿಂದ ಎಷ್ಟೋ ಬಳಿಕ ಹೈದರ್ ಅಲ್ಲೀ ಖಾನನಲ್ಲಿ ಮಂತ್ರಿಯಾಗಿದ್ದ (ಕ್ರಿ. ಶ. ಸು. ೧೭೭೦) ವೆಂಕಾಮಾತ್ಯನೆಂಬ ಕನ್ನಡ ಕವಿ[3] ತನ್ನ ಪೂರ್ವಕವಿಗಳಲ್ಲಿ ಕಾಳಿದಾಸ—ಬಾಣ—ದಂಡಿ— ಮಯೂರರೆಂಬ ಸಂಸ್ಕೃತ ಕವಿಗಳೊಂದಿಗೆ ಮಹಾಕವಿ ಭಾಸನನ್ನೂ ಸ್ಮರಿಸಿರುವುದರಿಂದ, ಆತನು ಕಾಳಿದಾಸನ 'ಮಾಲವಿಕಾಗ್ನಿ ಮಿತ್ರ' ನಾಟಕದಲ್ಲಿಯ—

> ಪ್ರಥಿತಯಶಸಾಂ ಭಾಸ ಸೌಮಿಲ್ಲಕ
> ಕವಿ ಪುತ್ರಾದೀನಾಂ ಪ್ರಬಂಧಾನತಿಕ್ರಮ್ಯ
> ವರ್ತಮಾನ ಕವೇಃ ಕಾಲಿದಾಸಸ್ಯ
> ಕ್ರಿಯಾಯಾಂ ಕಥಂ ಬಹುಮಾನಃ ।

ಎಂಬಲ್ಲಿ ಭಾಸನ ಹೆಸರನ್ನಷ್ಟೇ ಕಂಡ ಕಾರಣದಿಂದಲ್ಲ. ಭಾಸನ ನಾಟಕಗಳನ್ನು ಓದಿ ತಾನೆ, ಅವಕ್ಕೆ ಮೆಚ್ಚಿ ತಾನೆ ಆತನನ್ನು ಕಾಳಿದಾಸನ ಸರಿಬಂತಿಯಲ್ಲಿ ಸ್ತುತಿಸಿರಬೇಕೆಂದು ಸಾಕಷ್ಟು ದೃಢವಾಗಿ ಅನುಮಾನಿಸಲಾಗುವುದರಿಂದ, ಭಾಸನ ನಾಟಕಗಳು ಇತ್ತೀಚೆಗೆ ೧೮ನೆಯ ಶತಕದಲ್ಲಿಯೂ ಕನ್ನಡ ನಾಡಿನ ವಿದ್ವಾಂಸರಲ್ಲಿಯಾದರೂ ಬಳಕೆಯಲ್ಲಿ ಇದ್ದಿರಬೇಕು.

೧೮-೧೨-೫೯.

---

3. ಕರ್ಣಾಟಕ ಕವಿಚರಿತೆ III (ಪು. 129)

ಸ್ಪೇಶಲ್ ನಂ. ೧

ರಾಮತೀರ್ಥ ಬ್ರಾಹ್ಮಿ ತೈಲ

[ಆಯುರ್ವೇದಿಕ್ ಔಷಧ]

ರಾಮತೀರ್ಥ ಬ್ರಾಹ್ಮಿ ತೈಲ (ರಜಿಸ್ಟರ್ಡ ಸ್ಪೇಶಲ್ ನಂ. ೧) ಅನೇಕ ಔಷಧಗಳಿಂದ ತಯಾರಿಸಿದ ರಾಮತೀರ್ಥ ಬ್ರಾಹ್ಮೀ ತೈಲದಿಂದ ಎಲ್ಲ ಋತುಗಳಲ್ಲೂ ಎಲ್ಲರಿಗೂ ಲಾಭ ದೊರಕುತ್ತದೆ. ಶರೀರಕ್ಕೆ ಮಾಲೀಶ್ (ಅಭ್ಯಂಜನ) ಮಾಡಿದರೆ ಉತ್ತಮ.

ಚಿತ್ರಪಟದ ಬೆಲೆ ೫೦ ನ. ಪೈಸೆ

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ, (ಸೆಂಟ್ರಲ್ ರೇಲ್ವೆ) ಮುಂಬಯಿ-೧೪

Grand reduction in rates!

ಮೈಸೂರು ಟೈಪ್ ಫೌಂಡ್ರಿ,

ಸುಬೇದಾರ್ ಛತ್ರಂ ರೋಡು, ಬೆಂಗಳೂರು-2.

ದರವನ್ನು ಬಹಳ ಕಡಿಮೆ ಮಾಡಿದೆ.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ.

THE MYSORE TYPE FOUNDRY
Subedar Chatram Road, BANGALORE-2.

NAVAYUGA WEEKLY
(Estd in 1921)

ADVERTISEMENT RATES

Display Advertisements:— Rs. 2-8/ per column inch for contracts of 100" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions please write to:

ADVERTISEMENT MANAGER,
'NAVAYUGA'
Post Box No. 22, UDIPI, S. K.

ಉಡುಪಿ ಕೃಷ್ಣ

ಕವಿ: ಶ್ರೀ ಎಸ್. ವೆಂಕಟರಾಜ.

೧

ದೇಶಗಳನೆಲ್ಲ ನಾನಲೆದಲೆದು ಬಂದೆ
ಸಾಸಿರಕು ಮಿಕ್ಕಿ ನುಸಿ ತಗಣೆಗಳ ಕೊಂದೆ
  ಕಾಸುಕೊಟ್ಟೂ ಹೊಳೆಯು
  ನೀಸುವನುಭವದ ಸಂ
ನ್ಯಾಸ ಸೌಕರ್ಯದಲಿ ಸುಳಿಸುಳಿಯುತಿದ್ದೆ
  ಹಾಸುಗೆಯು ಮೇಲೆ ದು–
  ರ್ವಾಸನೆಯ ಹೊಲಸಿನಲಿ
ಯಾವುದೋ ಕೋಣೆಯಲಿ ಕೊಳೆ
                    ಕೊಳೆಯುತಿದ್ದೆ

೨

ನಾಡಿಗೊದಗಿತು ನಮ್ಮ ನವರಾತ್ರಿ ಹಬ್ಬ
ಬೇಡಲೆಂದೇ ಹುಟ್ಟಿ ಬಂದನು ಗರೀಬ
  ಮೈಸೂರಿನರಮನೆಯ
  ಬೆಳಕು ಬೆಂಕಿಯ ಮೇಲೆ
ಕುದಿದಿತ್ತು ಪಿಲಯ ವಿಶ್ವಂಭರನ ಕುಕ್ಷಿ
  ಅದ ಕಂಡು ಮೆಚ್ಚುತಿಹ
  ಜನರ ನುಗ್ಗಾಟದಲಿ
ಬಿದ್ದು ಬೆಂಡಾಗಿತ್ತು ಬಡ ಜೀವ ಪಕ್ಷಿ!

೩

ನೋಡಲ್ಲಿ ಹಾರುತಿದೆ ನವರಂಗ ಧಾರೆ
ಆಸುರ ವೃಂದಾವನದ ಕಲ್ಪನೆಯ ಕುದುರೆ
  ಆ ಕಡೆಗು ಈ ಕಡೆಗು
  ತೂಗಿ ತಕ್ಕೈಸುತಿಹ
ಮರ ಮರಗಳಾಸರದ ಕರಿನೆರಳ ರಾವ
  ದೇವರೆಡೆಯಲಿ ನುಸುಳು
  ತಿರುವ ದಾನವರಂತೆ
ಹುದುಗಿಹುದು ಬಡತನದ ಹಸಿದ
                    ಹೆಬ್ಬಾವು!

೪.

ಮುಂದೆ ಮುಂದಕೆ ಸಾಗಿತಲ್ಲಿ ಮೆರವಣಿಗೆ
ಆನೆಯಂಬಾರಿಯಲಿ ಕುಳಿತ ಬಂದಣಿಗೆ
  ಬನ್ನಿ ಮಂಟಪವಾಯ್ತು
  ಜನರ ಸಂಕಟವಾಯ್ತು
ಹಿಂದೆ ಹಿಂದಕೆ ಬಂತು ಕುರುಡು ಕುರಿ
                    ಸಂತೆ
  ತಾನೆ ತಾನೇ ಮರೆತ
  ನಿಟ್ಟಿನಲಿ ಮೊಗ ಮುಚ್ಚಿ
ದಿಬ್ಬಣದ ಹಿನ್ನಡೆದ ಹೊಸ ವಿಧವೆಯಂತೆ

೫

ಕಂಡು ಸೈರಣೆಯಿತ್ತು ನನ್ನ ಜೀವಾತ್ಮ
ಅಂಡಲೆದು ಸೋತನೋ ಪುಣ್ಯ
                    ಪರಮಾತ್ಮ
  ಬಳಲಿ ಬೇಗುದಿಗೊಂಡ
  ಬಾಳುವೆಯ ಹೂಗಿಡಕೆ
ನೀರ ನೀಡಲು ಸುತ್ತ ನೋಡುತಿರುವನ್ನ–
  ಸುರ ಸುಂದರಾಕಾರ
  ಗೋವಳ ಪರಿವಾರ
ಮೇಲೆದ್ದು ಬಂದನೋ ನಮ್ಮುಡುಪಿ ಕೃಷ್ಣ!

೬.

ಕಾಯಕವೆ ಕೈಲಾಸ– ದುಡಿಮೆ ವೈಕುಂಠ
ಕಾರ್ಮಿಕರ ಕಲ್ಪನೆಯೆ ವಿಶ್ವವೇದಾಂತ
  ಬೆಮರ ಹೊಳೆಯಲಿ ಮಿಂದು
  ಬಾಗಿಲಿಗೆ ಬಂದಾಗ
ತೆರೆದಿರುವುದೊಂದೆ ಈ ದೇವಾಲಯ
  ಇಲ್ಲಿ ಶಿವಸತ್ಯ ಸೌಂ-
  ದರ್ಯದಾರಾಧನೆಗೆ
ಸೇರಲಿರುವುದೆ ಮಾನವನ ಮಹಾ
                    ವಿಜಯ!

೭.

ಉಗುವ ಕಮ್ಮನೆಯಲ್ಲಿ ಜೊಗರು ತಿಹ
                    ಕಾಫಿ
ಅದರ ಸವಿಯರಿಯದವನವನೊಬ್ಬ
                    ಪಾಪಿ!
  ಆ ಪುಣ್ಯ ತೀರ್ಥ ಪ್ರ—
  ಸಾದಗಳ ಸ್ವೀಕರಿಸಿ
ಸಫಲ ಸಾಯುಜ್ಯದಲಿ ನಾ ಧನ್ಯ ಧನ್ಯ!
  ಎಲ್ಲಿ ನೋಡಲು ಕಾಯ
  ಲೆಂದು ನಿಂದಿಹ ನಮ್ಮ
ಉಡುಪಿ ಕೃಷ್ಣನ ಕಾಂಬುದೇ ಪೂರ್ವ
                    ಪುಣ್ಯ!

ಪಾನನಿರೋಧ ಕಾನೂನು ಯಶಸ್ವಿಯಾಗಬೇಕು, ಏಕೆ?

(೯ನೇ ಪುಟದಿಂದ)

ಕ್ಕಲ್ಲ; ಹೊಗೆಸೊಪ್ಪಿನ ನಿಕೋಟಿನನ್ನು ಕಂಠದೊಳಗೆ ಸೇರಿಸಲಿಕ್ಕೆ. ಹಾಗೆಯೇ ಕುಡಿಕ ಕುಡಿಯುವುದು ಬಾಯಾರಿಕೆಗಲ್ಲ— ಅಮಲು ಆಗುವುದಕ್ಕೆ —ನಿಶೆಯೊಡನೆ ತಲ್ಲೀನರಾಗಲಿಕ್ಕೆ. ಆನಂದ ಪಡುವದಕ್ಕೆ. ಹೀಗಾಗಿ, ಮದ್ಯದ ಮಾಯೆಯಿಂದ ಕೋಟ್ಯಾನು ಕೋಟಿ ಜನರು ಸೋತು ಸುಣ್ಣವಾಗಿ ಹೋಗುತ್ತಿದ್ದಾರೆ.

ಮದ್ಯ ಸೇವಕರಲ್ಲಿ ನಾಲ್ಕು ಬಗೆಯವರಿರುವರು. ಒಂದನೇ ವರ್ಗದವರು (Addicts) ಕೇವಲ ಕುಡಿಕರು. ರಾತ್ರಿಂದಿವ ಅವರ ಕಣ್ಣುಗಳು ಕೆಂಪೇ! ಬಾಯಿಯಲ್ಲಿ ವಾಸನೆ. ಅಮಲಿನಲ್ಲೇ ಬದುಕುವವರು ಎರಡನೆಯ ವರ್ಗದವರು ಮನೆಯಲ್ಲಿ ರಹಸ್ಯವಾಗಿ ಕುಡಿಯುವವರು ಮರ್ಯಾದೆಗೆ ಹೆದರಿ ಅಭ್ಯಾಸವನ್ನು ಬಿಡದೆ ಆತ್ಮಕ್ಕೆ ವಿರೋಧವಾಗಿ ವರ್ತಿಸುವವರು. ಮೂರನೆಯ ತರಗತಿಯವರು ಫೆಶನಿಗಾಗಿ ಕುಡಿಯುವವರು ಕುಡಿಸುವವರು ದೊಡ್ಡ ದೊಡ್ಡ ಕೆಲಸವಾಗಬೇಕಾದರೆ ದೊಡ್ಡ ದೊಡ್ಡ ವ್ಯಕ್ತಿಗಳನ್ನು ಕುಡಿಸಿ ಕೆಲಸಮಾಡಿಸಿಕೊಳ್ಳಬೇಕೆಂಬ ಅಭಿಪ್ರಾಯವುಳ್ಳವರು. ನಾಲ್ಕನೆಯ ವರ್ಗದವರು ಮನೆಯವರಿಗೂ ತಿಳಿಸದೆ, ಒಡನಾಡಿಗಳಿಗೂ ತಿಳಿಸದೆ ಅತ್ಯಂತ ರಹಸ್ಯವಾಗಿ ಕುಡಿಯುವವರು

ಇವರಲ್ಲಿ ಕೇವಲ ಕುಡಿಕರನ್ನು ಸರಿಪಡಿಸಲಿಕ್ಕೆ ಅಸಾಧ್ಯ! ಅವರಲ್ಲಿ ಮದ್ಯಪಾನವೆಂಬ ದುಶ್ಚಟದ ಒಂದು ಅಂಗವೇ ಆಗಿ ಬಿಡುತ್ತದೆ ಅವರನ್ನು ಎಷ್ಟು ಸಲ ಜೈಲಿಗೆ ಕಳಹಿಸಿದರೂ ಅವರು ಬದಲಾಗುವಂತಿಲ್ಲ. ಅಂತಹವರನ್ನು ಹುಚ್ಚರ ಆಸ್ಪತ್ರೆಗಳಿಗೆ ಕಳುಹಿ ಅವರ ಮನೋರೋಗಕ್ಕೆ ಔಷಧಿ ಕೊಡಬೇಕಲ್ಲದೆ ಪಾನನಿರೋಧ ಕಾನೂನಿನಿಂದ ಅವರನ್ನು ಆರೋಗ್ಯವಂತರನ್ನಾಗಿ ಮಾಡಲು ಅಸಾಧ್ಯ

ಇತರ ಮೂರು ವರ್ಗಗಳ ಕುಡಿಕರನ್ನು ಸರಿಪಡಿಸಲು ಸಾಧ್ಯವಿದೆ. ಮಾತ್ರ ಕಾನೂನಿನ ಮೂಲಕವಲ್ಲ— ಶಿಕ್ಷೆಕೊಟ್ಟು ಅಲ್ಲ. ಹಿತೋಪದೇಶದಿಂದ.

ಗ್ರಾಮಗಳಲ್ಲಿನ ಅಥವಾ ಪಟ್ಟಣಗಳಲ್ಲಿನ ಪ್ರಖ್ಯಾತ ವ್ಯಕ್ತಿಗಳು ಅವರನ್ನು ಮಿತ್ರರಂತೆ ಸಂದರ್ಶಿಸಿ, ಕುಡಿಕತನವನ್ನು ಬಿಡಬೇಕೆಂದು ಉಪದೇಶಕೊಡತಕ್ಕದ್ದು ರಾಷ್ಟ್ರಸೇವಕರ ತಂಡಗಳಿಗೆ ಈ ಕೆಲಸ ಬಿಟ್ಟುಕೊಟ್ಟರೂ ಬಾಧಕವಿಲ್ಲ. ಕುಡಿಯುವವರ ಹೆಸರು ವಿಳಾಸಗಳನ್ನು ರಾಷ್ಟ್ರಸೇವಕರು ಗುಟ್ಟಾಗಿ ಸಂಗ್ರಹಿಸಿ ಅವರನ್ನು ಖಾಸಗಿಯಾಗಿ ಭೇಟಿಮಾಡಿ ಅವರಿಗೆ ನೋವಾಗದಂತೆ ಹಿತವಚನಗಳನ್ನು ಹೇಳಬಹುದು. ಮದ್ಯಪಾನ ನಿರೋಧ ಸಮಿತಿ, ಪಾನನಿರೋಧ ಶಾಸನ ಸಮಿತಿ ಎಂಬ ಹೆಸರುಗಳಲ್ಲಿ ಕುಡಿಕರನ್ನು ಸಂದರ್ಶಿಸಬಾರದು. ಕುಡಿಕನು ಕುಡಿಕನಾದರೂ ತನ್ನ ಆತ್ಮ ಗೌರವಗಳಿಗೆ ಧಕ್ಕೆಯನ್ನು ಇತರರು ತರುವುದಕ್ಕೆ ಸಿದ್ಧನಿರುವುದಿಲ್ಲ

ಕುಡಿಕತನವು ಕೆಟ್ಟದೆಂದು ಕ್ರೈಸ್ತ ಧರ್ಮಗುರುಗಳು ಇಗರ್ಜಿಗಳಲ್ಲಿ ಇಷ್ಟರವರೆಗೆ ಹೇಳಲಿಲ್ಲ ಅವರು "ಕುಡಿಯುವುದು ತಪ್ಪು, ಶರಾಯಿಯನ್ನು ತಯಾರಿಸುವುದೂ ತಪ್ಪು" ಎಂದು ಇಗರ್ಜಿಗಳಲ್ಲಿ ಹೇಳಬೇಕು.

ದೇವಸ್ಥಾನಗಳಲ್ಲಿ, ಮಸೀದಿಗಳಲ್ಲಿ "ಕುಡಿಯಬಾರದು ಮದ್ಯ ಮಾಡಬಾರದು" ಎಂದು ಧರ್ಮಗುರುಗಳು ಸಾರಬೇಕು.

ಗೇರುಹಣ್ಣು, ಸಕ್ಕರೆ, ಕಬ್ಬು ಮೊದಲಾದುವುಗಳನ್ನು ಮಾರುವವರು ಮದ್ಯ ತಯಾರಕರಿಗೆ ಅವುಗಳನ್ನು ಮಾರಬಾರದು ಎಂದು ಪ್ರಚಾರಮಾಡಬೇಕು. ಶೇಂದಿಯನ್ನು ಮರಗಳಿಂದ ತೆಗೆಯಬಾರದು ಎಂದು ಪ್ರಚಾರವಾಗಬೇಕು. ನೀರಾದ ಲೈಸನ್ಸನ್ನು ಸರಕಾರವು ರದ್ದುಗೊಳಿಸುವಂತೆ ಚಳವಳವಾಗಬೇಕು ಬೆಲ್ಲ ಮಾಡುವುದಕ್ಕಾಗಿ ತಾಳೆಮರಗಳನ್ನು ಮೂರ್ತೆ ಮಾಡುವವರು ನಿಜವಾಗಿಯೂ ಬೆಲ್ಲ ಮಾಡುವುದಾದರೆ ಅವರಿಗೆ ಮೂರ್ತೆ ಮಾಡಲು ಲೈಸನ್ಸ್ ಕೊಡಬೇಕು. ಇಲ್ಲದಿದ್ದರೆ ಅಂತಹ ಲೈಸೆನ್ಸನ್ನು ರದ್ದುಗೊಳಿಸಬೇಕು

ಕುಡಿಯುವವರು ಕುಡಿಯದಿದ್ದರೆ ಶರಾಯಿ ಮಾರುವವನು ಯಾರಿಗೆ ಮಾರಬೇಕು? ಆದುದರಿಂದ ಕುಡಿಯುವವರನ್ನು ಪ್ರತ್ಯ ಪ್ರತ್ಯೇಕ ಸ್ವಯಂ ಸೇವಕದಳದವರು ಕಂಡು ಬೋಧನೆಯಿತ್ತು ಕುಡಿಯದಂತೆ ಮಾಡಿದರೆ ಕ್ರಮಕ್ರಮೇಣ ಕುಡಿಯುವವರ ಸಂಖ್ಯೆ ಕಡಿಮೆಯಾಗಬಹುದು

ಅಂತೂ ಪಾನನಿರೋಧ ಕಾನೂನು ಯಶಸ್ವಿಯಾಗಲೇ ಬೇಕು ಕಾರಣ, ಮದ್ಯ ಬುದ್ಧಿ, ವಿವೇಕ, ಮನಸ್ಸು, ದೇಹಗಳನ್ನು ನಾಶ ಮಾಡುತ್ತದೆ. ಮನುಷ್ಯನನ್ನು ಪ್ರಾಣಿಯನ್ನಾಗಿ ಮಾಡುತ್ತದೆ ನಾಗರಿಕನನ್ನು ಅನಾಗರಿಕನನ್ನಾಗಿ ಮಾಡುತ್ತದೆ. ಎಷ್ಟು ಗುಣವಂತನನ್ನೂ ನಿರ್ಗುಣವಂತನನ್ನಾಗಿ ಮಾಡುತ್ತದೆ. ಆದುದರಿಂದ ಎಷ್ಟು ಕೋಟಿ ರೂಪಾಯಿಗಳ ನಷ್ಟವಾದರೂ ಭಾರತದಲ್ಲಿ ಮದ್ಯಪಾನ ನಿಲ್ಲಲೇಬೇಕು.

'ಹಾಗಾದರೆ ವಿದೇಶಗಳಲ್ಲಿ ಕುಡಿಯುವವರಿಲ್ಲವೇ? ಅವರು ಅನಾಗರಿಕರೇ?"

ಮದ್ಯಸೇವಿಸುವವರು ಯಾವ ದೇಶದವ್ಲೇ ಇರಲಿ, ಅವರು ನಾಗರಿಕರಲ್ಲ. ನಾಗರಿಕರಾದವರು ತಮ್ಮ ಬುದ್ಧಿಶಕ್ತಿಯನ್ನು ನಾಶಗೊಳಿಸುವ ವಿಷವನ್ನು ಕುಡಿಯುತ್ತಾರೆಯೋ? ವಿದೇಶಗಳಲ್ಲಿ ಕುಡಿಯುವುದು ಒಂದು ಸಾಮಾಜಿಕ ಸಂಪ್ರದಾಯವಾಗಿ ಅದಕ್ಕೆ ಒಂದು ರೂಪದ ಮಾನವೂ ದೊರಕುತ್ತದೆ. ಮದ್ಯವಿಲ್ಲದ ಮಿತ್ರತ್ವ–ಬಾಂಧವ್ಯ–ಕೂಟ ಯುರೋಪಿಯನ್ ದೇಶಗಳಲ್ಲಿಲ್ಲ. ಆದರೆ ಭಾರತದಲ್ಲಿ ಹಾಗಲ್ಲ–ಕುಡಿತಕ್ಕೆ ಮಾನವಿಲ್ಲ. ಕುಡಿಕನಿಗೆ ಮರ್ಯಾದೆ ಇಲ್ಲ–ಎಂಬ ಸಾಂಪ್ರದಾಯವು ಸಾವಿರಾರು ವರ್ಷಗಳಿಂದ ಬಂದಿದೆ. ಆ ಸಾಂಪ್ರದಾಯಕ್ಕೆ ನಾವು ಮನ್ನಣೆಯನ್ನು ಕೊಡಲೇ ಬೇಕಾಗಿದೆ. ಭಾರತೀಯರು ಜಗತ್ತಿನಲ್ಲಿ ಬುದ್ಧಿವಂತರಾಗಿ ಬಾಳಿ ಯಶಸ್ವಿಗಳಾಗಬೇಕಾದರೆ ಬೇರಾವ ಅಭ್ಯಾಸವೇ ಇರಲಿ–ಮದವನ್ನು ಕುಡಿಯುವುದನ್ನು ನಿಲ್ಲಿಸಲೇಬೇಕು.

ಮನಸ್ಸಿಗಿಂತ ದೊಡ್ಡ ದೇವರಿಲ್ಲ. ಮನಸ್ಸನ್ನು ಬಿಗಿಹಿಡಿದರೆ ಎಂತಹ ಕುಡಿಕನೂ ಕುಡಿತವನ್ನು ಬಿಡಲು ಸಾಧ್ಯ. ಕುಡಿಯುವ ನೆನಪು ಬಂದಾಕ್ಷಣ ತನ್ನ ಮಕ್ಕಳ ನೆನಪು ಮಾಡಿದರೆ–ನಿಜವಾದ ತಂದೆಯು ತಾನಾಗಿಯೇ ಕುಡಿಯುವುದನ್ನು ನಿಲ್ಲಿಸುತ್ತಾನೆ.

ಪಾನನಿರೋಧ ಶಾಸನವನ್ನು ಯಶಸ್ವಿಗೊಳಿಸುವ ಸರ್ವ ಭಾರ ಕುಡಿಯದಿರುವವರದ್ದು, ಕುಡಿದವರನ್ನು ಕಂಡೊಡನೆ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಅವನೊಡನೆ ಸಂಭಾಷಣೆಗೆ ತೊಡಗಿ ಅವನನ್ನು ಎಚ್ಚರಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯ 'ಕುಡಿದವನು ಬೈದು ಭಂಗಿಸಿದರೆ?" ಎಂಬ ಸಂಶಯಕ್ಕೂ ಎಡೆಗೊಡಬಾರದು. ನಮ್ಮ ಆತ್ಮ ಸಾಕ್ಷಿಯಾಗಿ ಅವನಿಗೆ ಬುದ್ಧಿ ಹೇಳುವ ಅಧಿಕಾರ ಕುಡಿಯದಿರುವವರಿಗೆ ಇದೆ.

"Mind is the brightness of the body,-lights it, when strength, its proper but less subtle fire! begins to fail" ಎಂದು ಜೆ ಎಸ್. ನೌಲ್ಸ್ ಎಂಬವರು ಹೇಳಿದ್ದಾರೆ ದೇಹದ ಪ್ರಕಾಶವಾದ ಮನಸ್ಸನ್ನು ನಂದಿಸುವ ಮದ್ಯವನ್ನು ಭಾರತೀಯರು ದ್ವೇಷಿಸಿ, ಭಾರತ ಸರಕಾರದ ಮದ್ಯನಿರೋಧ ಕಾನೂನು ಜಯಹೊಂದಲೆಂದು ಸ್ವಾತಂತ್ರ್ಯದಿನಗಳಲ್ಲಿ ಹಾರೈಸೋಣ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಹಕಾರಿ ಕೃಷಿ

(೬ನೇ ಪುಟದಿಂದ)

ಳಾಗಿ, ಶೋಷಕರ ಲಾಭ–ದರ್ಪಗಳಿಗೆ ಬಲಿಯಾಗುತ್ತಾರೆ. ಇಷ್ಟೊಂದು ದೊಡ್ಡ ಪ್ರಮಾಣದ ಜನತೆಗೆ ಸಾಗುವಳಿ ಜಮೀನನ್ನು ಒದಗಿಸಿ ಕೊಟ್ಟರೆ ಆಹಾರಧಾನ್ಯಗಳ ಉತ್ಪನ್ನವು ಎಷ್ಟೊಂದು ಹೆಚ್ಚಲಿಕ್ಕಿಲ್ಲ!

ಸಹಕಾರಿ ಬೇಸಾಯದಿಂದ ಈ ಜನರು ಪಡಬಿದ್ದ ಜಮೀನುಗಳನ್ನು ಸಾಗುವಳಿಗೆ ತಂದು,ಅವುಗಳನ್ನುತಮ್ಮ ಆಸ್ತಿಗಳನ್ನಾಗಿ ಮಾಡಿಕೊಳ್ಳಬಹುದು; ಪ್ರತಿಯೊಬ್ಬನೂ ತನ್ನಶಕ್ತಿಗನುಗುಣವಾದಷ್ಟು ಜಮೀನನ್ನು ಮಾಡಬಹುದು; ಹೆಚ್ಚಿನ ಶಕ್ತಿವಂತರು ಹೆಚ್ಚು ಕ್ಷೇತ್ರದಲ್ಲಿ ಸಾಗುವಳಿ ಮಾಡಬಹುದು. ಹೀಗೆ ಇಬ್ಬಗೆಯವರೂ ಒಟ್ಟು ಕೂಡಿಕೊಂಡು, ಉತ್ತಮವಾದ ಬೀಜ, ಗೊಬ್ಬರ, ಸಲಕರಣೆಗಳನ್ನು ಒಟ್ಟಾಗಿ ಪಡೆದು ಒಳ್ಳೆಯ ಬೆಳೆ ಬೆಳೆಸಿಕೊಂಡು ತಮ್ಮ ತಮ್ಮ ಪಾಲಿಗೆ ಬರುವಷ್ಟು ಹುಟ್ಟುವಳಿಯನ್ನು ಹಂಚಿಕೊಳ್ಳಬಹುದಲ್ಲವೆ? ಇದರಿಂದ ಯಾರಿಗೂ ಯಾವುದೇ ರೀತಿಯ ಅಹಿತವಿಲ್ಲ. ಕೃಷಿ ಕ್ಷೇತ್ರದಲ್ಲಿ ಅವರು ಅನುಸರಿಸುವ ಸಹಕಾರ ವರ್ತನೆಯು ಇತರ ಕ್ಷೇತ್ರಗಳಲ್ಲಿಯೂ ಅವರಿಗೆ ಪ್ರೇಮದ ವಾತಾವರಣವನ್ನುಂಟುಮಾಡಿಕೊಡುವುದು ಅವರು ತಮಗೆ ಬೇಕಾಗುವ ಸಲಕರಣೆಗಳನ್ನು ಇತರ ವಸ್ತು ಒಡವೆಗಳನ್ನೂ ತಯಾರಿಸಿಕೊಳ್ಳಲು ಸಹಕಾರೀ ಉದ್ಯಮಾಲಯಗಳನ್ನು ಸ್ಥಾಪಿಸಿಕೊಳ್ಳಲು ಅನುಕೂಲವಾಗುವುದು. ಆದ್ದರಿಂದ ಬಡಜನರ ಮತ್ತು ಕೃಷಿ ಕೂಲಿಕಾರರ ಏಳಿಗೆಯನ್ನು ಸಾಧಿಸಲು ಸಹಕಾರೀ ಕೃಷಿ ಪದ್ಧತಿಯು ಒಂದು ಅಮೂಲ್ಯವಾದ ಸಾಧನವೆನ್ನಲು ಸಂದೇಹವಿಲ್ಲ. ಅದರ ಮೂಲಕವಾಗಿ ದೇಶವನ್ನು ಬೇಗನೇ ಆಹಾರ ಸ್ವಾವಲಂಬಿಯಾಗಿ ಮಾಡಲು ಸಾಧ್ಯವಾಗುವುದು. ಯಾವ ದೇಶವು ಆಹಾರದ ಮಟ್ಟಿಗೆ ಸ್ವಾವಲಂಬಿಯಾಗುವುದಿಲ್ಲವೋ ಅದು ಬದುಕಿದ್ದರೂ ಸತ್ತಂತೆಯೇ ಸರಿ.

ಮಹಾತ್ಮಾ ಗಾಂಧಿಯವರು ವಿಶ್ವಸ್ತತೆ (Trusteeship)ಯ ಕುರಿತು ಹೃದಯಂಗಮವಾದ ವಿವೇಚನೆ ಮಾಡುತ್ತ, ಆರ್ಥಿಕ ಸಮಾನತೆಯನ್ನು ಸಾಧಿಸುವ ಬಗ್ಗೆ ಹೇಳಿರುವ ಮಾತುಗಳನ್ನೆತ್ತಿ ಹೇಳುವಂತಿದೆ. ("According to me the economic constitution of India.. should be such that no one under it should suffer from want of food and clothing. Everybody should be able to get sufficient work to enable him to make the two ends meet. And this ideal can be universally realized only if the means of production of elementary necessaries of life remain **under the control of the masses**. These should be freely available to all as God's air and water are, or ought to be; they should not be made a vehicle of traffic for the exploitation of others." ಯಂಗ್ ಇಂಡಿಯಾ 15-11-28.) ತಾತ್ಪರ್ಯ— ಭಾರತದ ಆರ್ಥಿಕ ಘಟನೆ ಹೇಗಿರಬೇಕೆಂದು ಹೇಳುವುದಾದರೆ, ಅದರಲ್ಲಿ ಯಾವ ವ್ಯಕ್ತಿಯೂ ಸಾಕಷ್ಟು ಅನ್ನವಸ್ತ್ರಗಳಿಲ್ಲದೆ ನರಳುವಂತಾಗಬಾರದು. ಪ್ರತಿಯೊಂದು ವ್ಯಕ್ತಿಗೂ ಬಾಳಲು ಬೇಕಾಗುವಷ್ಟು ಉತ್ಪನ್ನವನ್ನುಂಟುಮಾಡಿಕೊಡುವ ಕೆಲಸವು ಸಿಗಲೇಬೇಕು. ಹೀಗೆ ಮಾಡಲು, ಜೀವನಾವಶ್ಯಕ ವಸ್ತುಗಳ ಉತ್ಪಾದನದ ಅಧಿಕಾರವು ಜನಸಾಮಾನ್ಯರ ಕೈಯಲ್ಲೇ ಇರಬೇಕಾಗುವುದು. ದೇವರು ಸೃಷ್ಟಿಸಿದ ಗಾಳಿ,ನೀರುಗಳು ಹೇಗೆ ಎಲ್ಲರಿಗೂ ಸಿಗುತ್ತವೆಯೋ ಹಾಗೆ ಇವುಗಳೂ ಎಲ್ಲರಿಗೂ ಸಿಗುವಂತಾಗಬೇಕು; ಅವುಗಳು ಪರಶೋಷಣೆಯ ಸಾಧನಗಳಾಗದಂತೆ ನೋಡಿಕೊಳ್ಳಬೇಕು.

ಮಹಾತ್ಮರ.ಈ ವಾಣಿಯ ಗರ್ಭಿತಾರ್ಥವು ಸ್ಪಷ್ಟವಾಗಿಯೇ ಇದೆ. ತಮ್ಮ ತಮ್ಮ ಅನ್ನವಸ್ತ್ರಗಳ ಉತ್ಪಾದನೆಯನ್ನು ಜನರು ತಾವೇ ಮಾಡಿಕೊಳ್ಳಲು ಅವರಿಗೆ ಸಾಕಷ್ಟು ಜಮೀನೂ, ಸಲಕರಣೆಗಳೂ ಕೊಡಲ್ಪಡಬೇಕು. ಅದಕ್ಕೆ ಸಹಕಾರೀ ಕೃಷಿಯು ಅತ್ಯುತ್ತಮವಾದ ಸಾಧನರಂಗವೆನ್ನಬಹುದು. ಪರಶೋಷಣೆಯು ತಗ್ಗುವುದಲ್ಲದೆ, ಬಡ ಜನರಲ್ಲಿ ಸ್ವಾಭಿಮಾನವೂ ಧೈರ್ಯವೂ ಪ್ರಯತ್ನಶೀಲತೆಯೂ ಹಿಗ್ಗುತ್ತ ಹೋಗುವುದು; ಸುಖೀರಾಜ್ಯ ಅಥವಾ ರಾಮರಾಜ್ಯಕ್ಕೆ ಅಂಕುರಾರ್ಪಣ ಮಾಡಿದಂತಾಗುವುದು.

ಲೈಬ್ರರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ ಜೇಮ್ಸ್ ಬಿ. ಕೊನೇಂಟ. ಅನುವಾದಕ: ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦. ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು ಕು.ಶಿ.ಹರಿದಾಸ ಭಟ್ಟರು. ಪುಟ: ೩೦೮ ಬೆಲೆ: ರೂ. ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ. ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨.೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨,

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಬಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ವರ್ಣಿಸಲಾಗಿದೆ, ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ರೂ. ೧.೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆಯು ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ. ವಿ. ಸೀತಾರಾಮಯ್ಯನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ: ರೂ. ೨.

ಫಂಟಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ. ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ರೂ. ೨.

ಬರೆಯಿರಿ: ನವಯುಗ ಎಂಟರ್‌ಪ್ರೈಜ್ ಲಿಮಿಟೆಡ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ವಚನಶಾಸ್ತ್ರ ರಹಸ್ಯ

(೮ನೇ ಪುಟದಿಂದ)

ಕಾರಣೆಯಷ್ಟೇ ಅಲ್ಲ – ಪ್ರತಿಯೊಬ್ಬ ವಾಚಾಲನೂ ತನಗನುಕೂಲವಾಗುವಂತೆ ದುರುಪಯೋಗ ಮಾಡಿಕೊಳ್ಳುತ್ತಾನೆ. ಆದುದರಿಂದ "ವಾಙ್ಮಯ ಮೋಷೋ ಮೋಷರಾಜಃ".

ವಚನದಿಂದ ಯುಕ್ತ್ಯಾರ್ಥವನ್ನು ಅಪಹರಿಸುವ ಅಪಹಾರಯುಗವಿದೆಂಬುದನ್ನು ವಿವಿಧ ವ್ಯವಹಾರ ಕ್ಷೇತ್ರಗಳಲ್ಲಿ ಅನುಭವ ಪಡೆದ ಕೆಲ ಸೂಕ್ಷ್ಮಜ್ಞರಿಗೆ ಹೊಸದಾಗಿ ಹೇಳಬೇಕಾಗಿಲ್ಲ, "ತನ್ನ ಮಾತಿಗೇ ತಾನು ತಪ್ಪಿಬಿದ್ದು ಅನ್ಯರ ಮೇಲೆ ತಪ್ಪು ಹೊರಿಸ್ಯಾನೋ" ಎಂಬುದಿಂದು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರಿಂದ .ಹಿಡಿದು ಹಳ್ಳಿಯ ಗೌಡನವರೆಗೂ ಅನೇಕ ಕಡೆ ಕಾಣಬಹುದು. ಜವಾಬುದಾರ ನಾಗರಿಕ ಆಡಳಿತದ ಹೆಸರಿನಲ್ಲಿ ಬೇಜವಾಬುದಾರ ನಡತೆ ಎಲ್ಲೆಲ್ಲಿ ಕಂಡುಬರುವುದೋ ಅಲ್ಲೆಲ್ಲಾ ವಚನ ಶಾಸ್ತ್ರದ ರಹಸ್ಯವು ಅಡಗಿದೆ. ಮೊದಲು ವಚನಬದ್ಧರಾಗದಿರುವುದಕ್ಕೆ ಪ್ರಯತ್ನಿಸುವುದು; ಅನಂತರ ಒತ್ತಾಯದಲ್ಲಿ ಸಿಕ್ಕಾಗ ಅಸ್ಪಷ್ಟ ವಚನವನ್ನೀಯುವುದು; ಸ್ಪಷ್ಟತೆಗೆ ಒತ್ತಾಯಬಂದರೆ ನಿರುತ್ತರ ಕುಮಾರರಾಗಿ ಬಿಡುವುದು! ಆಗ ಮಾನ್ಯ ವ್ಯಾವಹಾರಿಕರಿಗೆ "ಮಾತು ಬೆಳ್ಳಿ, ಮೌನ ಬಂಗಾರ" ಎಂಬ ನ್ಯಾಯದ ನೆನಪಾಗುತ್ತದೆ. ಮುಂದಿಯ ಶ್ರಮದಿಂದ ಧನ—ಕೀರ್ತಿಗಳನ್ನು ಪಡೆದು ಬಾಳುವ ಅನಾಗರಿಕ ಕುಟುಂಬಾಹಂಕಾರ ಕಿಕ್ಕಿರಿದ ಹೃದಯಗಳ ದೆಸೆಯಿಂದಲೇ ಭಾರತವಿಂದು ಬರಿ "ವಚನ ಶೂರ" ಎನಿಸಿದೆ; ತನ್ನನ್ನು ತಾನು ಬಹುಕಾಲ ಸುಭದ್ರವಾಗಿ ಸಂರಕ್ಷಿಸಿಕೊಳ್ಳಲಾರದಾಗಿದೆ; ದೇಶ ಪ್ರೇಮಕ್ಕೆ ಇಲ್ಲಿ ಸಲ್ಲುತ್ತಿರುವುದು ಬರಿಯ ವಚನ ಸೇವೆ ಮಾತ್ರವಾಗಿರುವುದರಿಂದ ದೇಶೀಯರು ಸ್ವಬಾಂಧವರಾಗಿ ಅನೇಕ ಉದರಂಭರರಿಗೆ ಕಾಣಿಸುವುದೇ ಇಲ್ಲ. ಈ ಕೃಷ್ಣ ಸತ್ಯ (Black Truth) ವಚನ ವೈಭವಕ್ಕಾಧಾರ!

ಕೊಟ್ಟ ಭಾಷೆಗೆ ತಪ್ಪಲಾರದ ಪುಣ್ಯಕೋಟಿಯ ಕಾಲದ ಕನ್ನಡ - ಭಾರತಗಳಿಂದು ರೂಢಿಯಲ್ಲಿಲ್ಲ. "ಆಟ—ಊಟ—ಓಟದ" ಕನ್ನಡ—ಭಾರತಗಳಿಗೆ ಇಂದು ಕಾಲ, ಇದು ವಚನ ಭಾರತ; ಕೃತಿ ಭಾರತವಲ್ಲ! ಕೃತಿ ಭಾರವನ್ನಿಂದು ವಚನ ಹೊರಲಾರದಾಗಿದೆ!

ಅಜ್ಜನ ಗಡ್ಡದಂತೆ ಹಾರುವ ವಚನ, ನೀರಿನ ನೊರೆಯಂತೆ ಕರಗುವ ವಚನ, ಬಿಸಿಲುಗೆದುರೆಯಂತೆ ಕಾಣೆಯಾಗುವ ವಚನ, ಗಗನಾರವಿಂದದಂತೆ ಲೋಪವನ್ನಾಧರಿಸಿದ ವಚನ, ಕೂರ್ಮನ ಮೊಲೆಯಂತೆ ಹಾಲುಳ್ಳ ವಚನ, ಹಾವಿನ ಕಾಲಿಂದ ಹರಿಯುವ ವಚನ, ತನ್ನ ಹೆಗಲನ್ನೇರಿ ತಾನೇ ನಿಲ್ಲುವೆನೆಂಬ ವಚನ, ಅಪ್ಪನ ಹೆಸರ ಹೇಳಲಾರದ ಅಪರೂಪ ವಚನ— ಅವಚನ—ದ್ವಿವಚನ— ಬಹುವಚನ, ನಿರ್ವಚನ- ದುರ್ವಚನ—ಗುರ್ ವಚನ. ಅಚರಿತ್ರ—ಕುಚರಿತ್ರ ವ್ಯಂಜಕವಾದ ಶ್ವವಚನ! ನೀನೆಮಗೆ ಪ್ರತ್ಯಕ್ಷನಾಗು, ಕಾಣಿಸದಂತೆ ಕಾಣಿಸು ವಚನ ಸಿದ್ಧಲಿಂಗೇಶ್ವರಾ!

ಸಾವವರೆಗೆ ಓಂಕಾರವಂ ಧ್ಯಾನಿಪರೊ

(ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.)

[ಅಥರ್ವವೇದಕ್ಕೆ ಸಂಬಂಧಿಸಿದ ಪ್ರಶ್ನೋಪನಿಷತ್ತು ಆರು ಪ್ರಶ್ನೆಗಳಿಂದ ಕೂಡಿದೆ; ಪ್ರಶ್ನೋತ್ತರರೂಪವಾಗಿರುವುದರಿಂದ ಇದಕ್ಕೆ ಈ ಹೆಸರು ಬಂತು. ಇದರಲ್ಲಿ ಪಿಪ್ಪಲಾದನು ಶಿಷ್ಯರಿಗೆ ಉಪದೇಶವೂಡುವ ಆಚಾರ್ಯನು; ಜಗತ್ತಿನ ಮೂಲಕಾರಣವಾವುದೆಂದು ಕಬಂಧೀ ಕಾತ್ಯಾಯನನ ಮೊದಲಿನ ಪ್ರಶ್ನೆಗೆ, ಪ್ರಜಾಪತಿಯೇ ಸೃಷ್ಟಿಯ ಮೂಲಕಾರಣನೆಂದು ಉತ್ತರಿಸಿದ ಮೇಲೆ, ಭಾರ್ಗವ ವೈದರ್ಭಿಯು ದೇಹದಲ್ಲಿರುವ ಇಂದ್ರಿಯಗಳಿಗೂ ಮುಖ್ಯಪ್ರಾಣನಿಗೂ ಇರುವ ಸಂಬಂಧದ ಕುರಿತು ಪ್ರಶ್ನಿಸಲು, ಪ್ರಾಣನೇ ಶ್ರೇಷ್ಠನೆಂದೂ ಅವನೇ ಪ್ರಜಾಪತಿಯೆಂದೂ ತಿಳಿಸಿದನಂತರ, ಪ್ರಾಣನ ಉತ್ಪತ್ತಿ ಸ್ವರೂಪಗಳನ್ನು ನಿರ್ಣಯಿಸಲು ಮೂರನೆಯ ಪ್ರಶ್ನೆಯನ್ನು ಕೌಸಲ್ಯ ಆಶ್ವಲಾಯನನು ಕೇಳುವನು; ನಾಲ್ಕನೆಯ ಪ್ರಶ್ನೆಯನ್ನು ಪುರುಷನ ಸ್ವಪ್ನ ಪ್ರಪಂಚದ ಕುರಿತು ಸೌರ್ಯಾಯಣಿಗಾರ್ಗ್ಯನು ಕೇಳಿದ ಮೇಲೆ, ಐದನೆಯ ಪ್ರಶ್ನೆಯನ್ನು ಶಿಬಿಸುತ ಸತ್ಯಕಾಮನು ಮರಣಕಾಲದವರೆಗೆ ಓಂಕಾರವನ್ನು ಧ್ಯಾನಿಸುವವನಿಗೆ ಯಾವಲೋಕವು ಲಭಿಸುತ್ತದೆಂದು ಪ್ರಶ್ನಿಸುವನು.]

ಮುಂದೆ–ಶಿಬಿಸುತ ಸತ್ಯಕಾಮ ಕೇಳಿದ ನಿಂತು:
"ಭಗವಂತ! ಪೇಳ್ವರು ಸಾವವರೆಗೆ
– ೧ – ಓಂಕಾರವಂ ಧ್ಯಾನಿಪರೊ, ಜಯಿಪರಾವ ಜಗ
ವನ್ನೆನಲು ಪೇಳ್ದನೀತೆರದೊಳವಗೆ:

"ಹೇಸತ್ಯಕಾಮ! ಓಂಕಾರವಿದ ನೆಂಬತ್ತೈ
ಪರವೆಂಬ ಪರವೆಂಬ ಬ್ರಹ್ಮವೆಂದು;
– ೨ – ಅದು ಕಾರಣದೊಳಿಯೂ ಯಾತನದಿಂದಲ್ತಿ
ಅಂದರನು ಸರಿಸುವರು ಯಿದರೊಳೊಂದು.

"ಒಂದು ಮಾತ್ರೆಯ ಜ್ಞಾನಿಕಲ್ಪೊಂದು ವಂಜಗದಿ
ಜವದಿ ಶ್ರೇಷ್ಠತೆಯ; ಋಕ್ಕುಗಳವನನು
– ೩ – ನರಲೋಕಕೊಯ್ವವಾತಂ ತಪದಿ ಬ್ರಹ್ಮಚ-
ರ್ಯದಿ ಶ್ರದ್ಧೆಯಿಂ ಕೂಡಿ ಮಹಿಮನಹನು.

"ಮತ್ತೆಯೆರಡನೆಯ ಮಂತ್ರದಿ ಮನಸಿನೊಳಗಾತ್ಮ
ಭಾವನೆಲಸಿರೆ ಯಜುಗಳಿಂದಾತನನು–
– ೪ – ಅಂತರಿಕ್ಷದ ಸೋಮಲೋಕವಂ ಪಡೆದಲ್ಲಿ
ಸುಖವನನುಭವಿಸಿ ಮರಳಿಯು ಬರುವನು.

"ಪರಮ ಪುರುಷನನು ಜ್ಞಾನಿಸುವನಾವನು ಮುಂದೆ
ಓಂ ಎನ್ನುವಕ್ಷರದಿ ಮೂರುಮಾತ್ರೆಗಳಿಂದೆ,–
ಅವನು ತೇಜಸ್ಸಿನಲಿ ಸೂರ್ಯನಂ ಸೇರುವನು,
ಪಾಪದಿಂ ಮುಕ್ತನಾಗುವನು ಹರೆಯುರ್ಚಿದುರ
– ೫ – ಗನತೆರದಿ; ಬ್ರಹ್ಮಲೋಕವನು ಸಾಮಗಳಿಂದೆ
ನಾಗುವನು; ಶ್ರೇಷ್ಠನಾದೀ ಜೀವಘನನಿಂದ-
ಲೂ ಶ್ರೇಷ್ಠನಾಗಿರುವ ಸರ್ವದೇಹದೊಳಿರುವ
ಪುರುಷನಂ ಕಾಣುವನು – ಅದಕೆರಡು
ಮಂತ್ರವಿದೆ:

"ಅನ್ಯೋನ್ಯ ಸೇರಿಯು ವಿಳಂಬವಾಗಿಯು ನುಡಿವ
ಮೂರುಮಾತ್ರೆಗಳು ಮೃತ್ಯುವ ತರುವವು;
– ೬ – ಹೊರಪೂಳಗು ನಡುವಿನಲ್ಲಿಹ ಕ್ರಿಯೆಗಳಲ್ಲಿ-ಸಂ
ಯುಚ್ಚರಿಸಬಲ್ಲವಗೆ ನಡುಕವಿರದು.

"ಋಕ್ಕುಗಳಿನೀಲೋಕ; ಯಜುಗಳಿಂದಾಕಾಶ;
ಸಾಮಂಗಳಿಂ ಕವಿಗಳರಿತ ಲೋಕವನು;
– ೭ – ಓಂಕಾರ ಬಲದಿಬಲ್ಲವ ಪಡೆವ ನವಶಾಂತ
ಅಜರಾಮೃತಾಭಯ ಪರ ಬ್ರಹ್ಮವನ್ನು."

† ಪ್ರಶ್ನೋಪನಿಷತ್ – ಐದನೆಯ ಪ್ರಶ್ನೆ

ನಿರ್ವಿತಿ

ಕವಿ: ಶ್ರೀ ರಸಿಕರಂಗ.

ಮೋಡಗಳ ಸಾಲುಸಾಲನು ನೋಡಿ ಮೈಮರೆತು
ಮೊದಲಸಲ ಬಾನಿನಲಿ ಚಿರೆತೆ.
ಎಳಹುಲ್ಲ ಹಸುರನೂ ಹೊಹೂವ ಕುಸುರನೂ
ಕಂಡು ಮಣ್ಣಿಗೂ ಮುದ್ದಿತ್ತೆ.
ತೆರೆದಿತ್ತು ಕಣ್ಣೊಂದು, ತುಂಬಿತ್ತು ಚೈತನ್ಯ
ಹರಿದಿತ್ತು ಸವಿನುಡಿಯ ತೊರೆಯು.
ಅಡಿಗಡಿಗೆ ರೋಮಾಂಚಗಣ ನಿಮಿರಿ ನಿಂದಿತ್ತು
ಚಲುವಿನರಸಿಯು ತೂರಿ ಬರೆಯು

ಮೋಡಗಳ ಸಾಲಿಂದು ಬಾದಂತೆ ಸಾಗುತಿದೆ
ಹನಿಹನಿಯು ಸಿಂಪಡಿಸಿ ಬುವಿಗೆ.
ಅದೆ ಹುಲ್ಲು ಅದೆ ಹೂವು ನೆಲವ ಸಿಂಗರಿಸಿಹುದು
ಒಲಿದರೂ ಉಲಿಯದಿದೆ ನಾಲಿಗೆ.

ಏಸುಸಲ ನೋಡಿದರು ಲೇಸೆಂದು ಹಾಡಿದರು
ದಣಿವೆಂಬುದಿಲ್ಲವೆನೆ ನುಡಿವೆ.
ಈಗೇಕೆ ಹೀಗಾಯ್ತು ಹಾಡುಸೆಲೆ ಬರಿದಾಯ್ತು
ನಿರ್ವಿತಿಗು ಮಿತಿಯೆಂಬುದಿಹುದೆ?

ಶ್ರೀ ಕೆ. ಕೆ. ಶೆಟ್ಟರ ಆತ್ಮಾಧುನಿಕ ಪುಸ್ತಕಗಳು
'ಗಾಂಧೀ ಜೀವನ ಕಿಡಿಗಳು'
'ಶ್ಯಾಮುವಿನ ಶಾಲಾ ದಿನಗಳು'
'ಜೀವನ ಶಿಕ್ಷಣ'
ವಿದ್ಯಾರ್ಥಿ ಜೀವನ ವಿಕಾಸಕ್ಕೆ ಉತ್ತಮ ಮಾರ್ಗದರ್ಶನವೀಯುವ ಉಪಯುಕ್ತ ಪುಸ್ತಕನಾಗಿ ಗಣನೆ ಪಡೆದಿರುವ ಚಿಕ್ಕ ಹೊತ್ತಗೆಗಳು.
ಹೆಚ್ಚಿನ ವಿವರಕ್ಕೆ ಈ ವಿಳಾಸಕ್ಕೆ ಬರೆಯಿರಿ:—
ಕೆನರಾ ಛಾಪಖಾನೆ,
ಹಂಪನಕಟ್ಟೆ, ಮಂಗಳೂರು—1.

ಸ್ಪ್ರಿಂಗುಗಳು ಮುರಿದು ಬೀಳುವುದನ್ನು ತಪ್ಪಿಸಿರಿ
ಕೆನರಾ ಸ್ಪ್ರಿಂಗುಗಳು ನಿಶ್ಚಿಂತೆಯಿಂದ ನಿಮ್ಮನ್ನೊಯ್ಯುವುವು.
ಬಾಳಿಕೆ ಮತ್ತು ಭರವಸೆ ಅವೆರಡೂ ಈ ಸ್ಪ್ರಿಂಗಿನಲ್ಲಿವೆ.
ತಯಾರಿಕೆಯ ಪ್ರತಿ ಮಟ್ಟದಲ್ಲೂ ಗುಣ ಪರೀಕ್ಷಿಸಲಾಗಿದ್ದು ಅಮೇರಿಕದ ಅತ್ಯುತ್ತಮ ಮಟ್ಟದಂತೆ ಸ್ಪ್ರಿಂಗಿನ ಪ್ರತಿ ಹಾಳೆಗಳನ್ನು ದೀರ್ಘಕಾಲ ಬಾಳುವಿಕೆಯ ಬಗ್ಗೆ ಆಧುನಿಕ ವಿಜ್ಞಾನ ರೀತ್ಯಾ ಉಷ್ಣಶಕ್ತಿ ಪ್ರಯೋಗಿಸಲ್ಪಟ್ಟಿವೆ.
ತಯಾರಕರು:–
ದಿ. ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್
ಮಂಗಳೂರು - 3.

ಕನ್ನಡ ರಂಗಭೂಮಿಯ ಮೇಲೆ ತೆರೆಯೆದ್ದಿದೆಯೆ?

(೬ನೇ ಪುಟದಿಂದ)

ಸ್ಪೇನ್ ಕಡೆಗೆ ಇಂಥ ನಾಟಕ ನೀತಿ ಕಂಡು ಬರುತಿತ್ತು. ಆದೇ ೨೦ನೇ ಶತಮಾನದ ಮೊದಲಿನ ದಶಕಗಳಲ್ಲಿ ಕನ್ನಡ ರಂಗಭೂಮಿಯು ಧಮನವಾಯಿತು. ಅಂದಾಗ ನಾಟಕಕಾರನೂ ತನ್ನ ವ್ಯಕ್ತಿತ್ವವದ ಮುದ್ರೆ ಪ್ರಭಾವಿಯಾಗಿ ಒತ್ತಲಿಕ್ಕೆ ಆತುರ ಪಡುವ ರೂಢಿ ಬೀಳಲೇ ಇಲ್ಲ! ವ್ಯಾವಸಾಯಿಕ ರಂಗಭೂಮಿಯು ಈ ವಿಕೃತ ಸಂಕೇತಕ್ಕೇ ಕನ್ನಡ ನಾಟಕಕಾರ ಒಗ್ಗಿ (conditioned) ನಡೆಯುವಂತಾಯಿತು.

ಹೀಗಾಗುವದರ ಹಿಂದಿನ ಸಾಮಾಜಿಕ ಸನ್ನಿವೇಶವೇನು? ನಮ್ಮ ನೆರೆಯ ಮಹಾರಾಷ್ಟ್ರದ ರಂಗಭೂಮಿಯೊಂದಿಗೆ ಕನ್ನಡ ರಂಗಭೂಮಿಯನ್ನು ಹೋಲಿಸಿ ನೋಡಿದರೆ ಈ ಹಿನ್ನೆಲೆಯು ಹೀನಾಯ ಮನದಟ್ಟಾಗುತ್ತದೆ. (ಇಲ್ಲಿ, ಕನ್ನಡವೆಂದರೆ ಹಳೆಯ ಮೈಸೂರ ಹೊರಗಿನ ಕರ್ನಾಟಕದ ರಂಗಭೂಮಿಯೆಂದು ತಿಳಿಯಬೇಕು.) ಮಹಾರಾಷ್ಟ್ರದಲ್ಲಿ ಮೊದಲಿನಿಂದಲೂ ರಂಗಭೂಮಿಯನ್ನು ಅಂದರೆ ವ್ಯಾವಸಾಯಿಕ ನಾಟಕ ಕಂಪನಿಗಳನ್ನು ಅಲ್ಲಿಯ ಸುಪ್ರತಿಷ್ಠ ಸುಸಂಸ್ಕೃತ ವರ್ಗವೂ ಸಾಮಾಜಿಕ ರಾಜಕೀಯ ಮುಂದಾಳುಗಳೂ ಸಾಹಿತಿಗಳೂ ಎತ್ತಿ ಹಿಡಿದರು. ಶ್ರೀ ಶ್ರೀಪಾದಕೃಷ್ಣ ಕೋಲ್ಹಟಕರ, ಶ್ರೀ ಕೃಷ್ಣಾಜಿ ಪಂತ ಖಾಡಿಲಕರ, ಶ್ರೀ ನರಸಿಂಹ ಚಿಂತಾಮಣಿ ಕೇಳಕರ, ಶ್ರೀ ವೀರ ವಾಮನರಾವ ಜೋಶಿ. ಇಂಥ ಮೇಲ್ಪಂಕ್ತಿಯ ಮೇಧಾವಿಗಳೂ ವಿದ್ವಾಂಸರೂ ಸಾಹಿತಿಗಳೂ ನಾಟಕ ಕಂಪನಿಗಳೊಂದಿಗೆ ಸ್ನೇಹದ ನಿಕಟದ ಸಂಪರ್ಕವಿಟ್ಟು ಕೊಂಡರು. ಅವರಿಗಾಗಿ ನಾಟಕಗಳನ್ನು ಬರೆದರು, ಅಂದಿನ ಪ್ರಸಿದ್ಧ ನಟರೊಂದಿಗೆ ಆತ್ಮೀಯತೆಯಿಂದ ನಡೆದುಕೊಂಡರು. ಪ್ರಸಿದ್ಧ ಅಣ್ಣಾ ಸಾಹೇಬ ಕಿರ್ಲೋಸ್ಕರಿಗೆ ಒಬ್ಬ ನಾಯಕ ಪಾತ್ರದ ಕೊರತೆ ಬಿದ್ದಾಗ ಲೋಕಮಾನ್ಯ ಟಿಳಕರ ಕಾಯಿದೇ ಅಭ್ಯಾಸದ ವರ್ಗದಿಂದ ಒಬ್ಬ ತರುಣನನ್ನು ಲೋಕಮಾನ್ಯರೇ ಮನ ಒಲಿಸಿ ನಾಟಕ ಕಂಪನಿಗೆ ಕಳುಹಿಸಿದ್ದುಂಟು. ಇದರ ಪರಿಣಾಮವಾಗಿ ಮರಾಠಿ ಕಂಪನಿಗಳ ನಟ-ನಾಟಕಗಳಿಗೆಲ್ಲ ಪ್ರತಿಷಿತ್ಠ ಪರಿಷ್ಕೃತ ಅಭಿರುಚಿಯ ಪುರಸ್ಕಾರ ಅವ್ಯಾಹತವಾಗಿ ದೊರೆಯುತ್ತ ಹೋಯಿತು. ಅಂಥ ಸಂಕೇತಕ್ಕೆ ಒಗ್ಗಿದ ನಾಟಕಕಾರ ತನ್ನ ವ್ಯಕ್ತಿತ್ವಕ್ಕಾಗಿ ನಾಚ ಬೇಕಾಗಿದ್ದಿಲ್ಲ. ರಾಜಕಾರಣಿಗಳೂ ಸಂಪಾದಕರೂ ಹಿರಿಯ ವಕೀಲರೂ ಪ್ರಾಧ್ಯಾಪಕರೂ ಪ್ರಸಿದ್ಧ ಕಂಪನಿಗಳಿಗಾಗಿ ನಾಟಕ ಬರೆದುಕೊಡುತಿದ್ದರು. ನ್ಯಾಯಾಧೀಶರು ನಟರ ಸಹವಾಸ ಮಾಡುತಿದ್ದರು. ನಟರ ನೆನಸುಗಳನ್ನು ಚರಿತ್ರಗಳನ್ನು ಬರೆಯುತಿದ್ದರು. (ಶ್ರೀ ವಸಂತರಾವ್ ದೇಸಾಯಿ ಇವರ "ಮುಖಮಲ ಪಂದೆ" ಈ ಪುಸ್ತಕ ಇದಕ್ಕೆ ಸಾಕ್ಷಿ.) ಆದ್ದರಿಂದ ನಾಟಕಕಾರನೆನಿಸಿಕೊಳ್ಳುವದರಲ್ಲಿ ಯಾರಿಗೂ ಧನ್ಯತೆ. ಅಂಥ ನಾಟಕಕಾರನ ಹೆಸರು ತಮ್ಮ ಜಾಹಿರಾತಿನಲ್ಲಿ ಮೆರೆಯಿಸುವದರಲ್ಲಿ ಯಾವ ಕಂಪನಿಗೂ ಮಾನ್ಯತೆ ಅನಿಸಿದ್ದರೆ ಆಶ್ಚರ್ಯವಲ್ಲ.

ಆದರೆ ಕನ್ನಡದ ದುರ್ದೈವಕ್ಕೆ ನಮ್ಮ ರಂಗಭೂಮಿ ಆರಂಭದಿಂದಲೂ ಈ ಮೇಲ್ವರ್ಗದ ಸುಸಂಸ್ಕೃತ ಸದಭಿರುಚಿಯ ಪ್ರೋತ್ಸಾಹಕ್ಕೆ ಪರಿಚಿತವಾಗಿಯೇ ಉಳಿಯಿತು. ಹಳೆಯ ಮೈಸೂರಿನ ಕೆಲವು ಕಂಪನಿಗಳಿಗೆ ಅರಮನೆಯ ಆಶ್ರಯ ಸಿಕ್ಕಿದ್ದರೂ ಪ್ರತಿಷ್ಠೆಯ ಪ್ರಭಾವಲಯ ಲಭಿಸಿದ್ದರೂ, ಸಾಮಾನ್ಯವಾಗಿ ಕನ್ನಡ ರಂಗಭೂಮಿ ಗೌರವದ ಸಂತತಿಯಾಗಿ ಬೆಳೆಯಲಿಲ್ಲ. ಆದ್ದರಿಂದ ಬಲ್ಲವರು ಕವಿಗಳು ಸಾಹಿತಿಗಳು ರಂಗಭೂಮಿಗಾಗಿ ಬರೆಯಲಿಲ್ಲ ಬರೆದವರು ಅನಾಮಿಕರಾಗಿ ಉಳಿದರು. ಎಷ್ಟೋ ನಾಟಕಗಳು ಅನುವಾದಗಳಾಗಿದ್ದವು—ಭಾಷಾನುವಾದ ಛಾಯಾನುವಾದ ಮಾಯಾನುವಾದ (ಅಂದರೆ ಅನುವಾದವೇ ಅಲ್ಲವೆಂದು ತೋರಿಸುವ ಆವಿರ್ಭಾವವಿದ್ದ!) ಹೀಗೆ ಬಹುರೂಪಿಯಾಗಿ ಕನ್ನಡ ರಂಗಭೂಮಿ "ಮಾಯಾಬಜಾರ" ವಾಯಿತು.

ಈಗಿತ್ತಲಾಗಿ ನಾಟಕ ಕಂಪೆನಿಗಳೂ ನಾಟಕಕಾರರ ಹೆಸರುಗಳನ್ನು ಪ್ರಕಟಿಸಹತ್ತಿವೆ. ನಾಟಕಕಾರರಿಗೆ ತಮ್ಮತನದ ಅರಿವು ಆಗಿದೆ. ಆದರೆ ನಡೆದುಬಂದ ದಾರಿಯ ಧೂಳಿ ಇನ್ನೂ ಅಂಟಿಕೊಂಡಿಯೇ ಇದೆ. ಅದೇನೆಂದರೆ, ನಮ್ಮ ರಂಗಭೂಮಿಯಲ್ಲಿ ಒಂದು ಕೃತ್ರಿಮ ಭೇದವಾಗಿದೆ. ಅದು ಬೆಳೆಯುತ್ತಿದೆ:—ಸಾಹಿತ್ತಿಕ ನಾಟಕಗಳು ವ್ಯಾವಸಾಯಿಕ ನಾಟಕಗಳು! ನಮ್ಮಲ್ಲಿಯ ಇಂದು ಹೆಸರಾದ ನಾಟಕಕಾರರು ಕೈಲಾಸಂ ಶ್ರೀರಂಗ ರಿಂದ ಮೊದಲಾಗಿ ಕ್ಷೀರಸಾಗರ, ಪರ್ವತವಾಣಿ, ಕೆ. ಗುಂಡಣ್ಣರವರೆಗಿನ ಹೊಸ ನಕ್ಷತ್ರಗಳೆಲ್ಲ ಮಿಸುಗುವ ಬಾನೇ ಬೇರೆ, ಜನಪ್ರಿಯವಾಗಿ ೨೦೦ ಗಟ್ಲೆ ಪ್ರಯೋಗ ಕಂಡು ಕಂಪನಿಗಳನ್ನು ಉದ್ಧಾರಮಾಡುವ ನಾಟಕಗಳ ಲೇಖಕರು ಉರಿಯುವ ಖಗೋಲವೇ ಬೇರೆ! ಮಹಾರಾಷ್ಟ್ರದಲ್ಲಿ ರಂಗದ ಮೇಲೆ ಅತ್ಯಂತ ಯಶಸ್ವಿಯಾದ ನಾಟಕಗಳು ಸಾಹಿತ್ತಿಕ ಮೂಲ್ಯದಲ್ಲಿಯೂ ಅಷ್ಟೇ ಶ್ರೇಯಸ್ಸುಗಳಿಸಿವೆ. ಬಿ.ಎ. ಎಂ. ಎ. ಗಳಿಗೆ ಪಾಠ್ಯಗಳಾಗಿವೆ. ಇಂಗ್ಲಂಡದ—ಅಮೇರಿಕೆಯ ಕಡೆಗೆ ಶೇಕ್ಸಪಿಯರನ ನಾಟಕಗಳು ಇನ್ನೂ ಈಗಲೂ ಅತ್ಯಂತ ಯಶಸ್ವಿಯಾಗಿ ಕಂಪನಿಗಳಿಗೆ ಆಧಾರವಾಗಿವೆ. ಆದರೆ ನಮ್ಮಲ್ಲಿ? ಸಾಹಿತ್ತಿಕ ನಾಟಕಗಳು ಕಂಪನಿಗಳಿಗೆ, ಕಂಪನಿ ನಾಟಕ ನೋಡುವ ಜನಸ್ತೋಮಕ್ಕೆ ಮೆಚ್ಚಿಗೆ ಆಗುವದಿಲ್ಲ. ಜನಪ್ರಿಯ ನಾಟಕಗಳಿಗೆ ಸಾಹಿತ್ತಿಕ ಬೆಲೆ ಇರುವದಿಲ್ಲ.

ಇಂದಿನ ಜನಪ್ರಿಯ ನಾಟಕಗಳ ಯುಗ "ಕಂದಲ ಯುಗ" ವೆನ್ನಬಹುದು. ಅವರ ನಾಟ್ಯ ಪ್ರತಿಭೆಯ "ಬಡತನದ ಭೂತ" ಕನ್ನಡ ರಂಗಭೂಮಿಯ ಮೇಲೆ ತಾಂಡವವಾಡಿ "ರಕ್ತ ರಾತ್ರಿ" ಯನ್ನಾಡುತ್ತಿದೆ! ಒಳ್ಳೆಯ ಕೃತಿಗಳನ್ನು ರಂಗಕ್ಕೆ ತರುವ ಶಕ್ತಿ ಇಚ್ಛೆ ಅನುಕೂಲವಿದ್ದು ಉದಾಹರಣೆಯನ್ನು ಹಾಕಿಕೊಟ್ಟ ಕಂಪನಿ ಮಾಲಕರು ನಮ್ಮಲ್ಲಿ ಇಂದಿಗೂ ಇದ್ದಾರೆ. ಶ್ರೀ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು, ಶ್ರೀ ಪಠಾಣಗಬಾಳಪ್ಪನವರು, ಅದೇ ರೀತಿ ಮಹಾಂತೇಶ ಶಾಸ್ತ್ರಿಗಳಂಥ ನಾಟಕಕಾರರೂ ಇದ್ದಾರೆ. ಆದರೆ ಇಲ್ಲಿ ಒಂದು ದುರ್ದೈವದ ಸಂಗತಿ ಒಪ್ಪಿಕೊಳ್ಳಬೇಕು: ಕಂಪೆನಿಗಳಿಂದ ಜನತೆಯದೊ, ಜನತೆಯಿಂದ ಕಂಪೆನಿಗಳದೋ ಯಾರಿಂದ ಯಾರ ಅಭಿರುಚಿ ಕೆಟ್ಟಿದೆ ಕೆಡುತ್ತಿದೆ ಇದನ್ನು ತೀರ್ಮಾನಿಸುವದೇ ಕಷ್ಟವಾಗಿದೆ. ಜನಾಭಿರುಚಿಗಾಗಿ ಬರೆಯುವ ಹವ್ಯಾಸ ನಾಟಕಕಾರನಿಗೆ ಬೀಳುವದು ಒಂದು ವಿಧಿ. "ನಾಟಕ ಜನಸಂದಣಿಗಾಗಿ" ಎಂಬ ಸೂತ್ರವನ್ನೆ ಕಣ್ಣೆದುರಿಗಿಟ್ಟು ಬರೆದ ಶ್ರೀ ಪ್ರ. ಕೆ. ಅತ್ರೆ, ಶ್ರೀ ಮೊರಾಂಗಣೇಕರ ಮುಂತಾದ ಮರಾಠಿ ನಾಟಕಕಾರರೂ ಶ್ರೇಷ್ಠ ಕಲಾಕೃತಿಗಳನ್ನು ನಿರ್ಮಿಸಿದರು—ಕೀರ್ತಿ ಉಪ್ಪೇರಿಕೆ ಎರಡೂ ಗಳಿಸಿದರು. ಆದರೆ ನಮ್ಮ ಕಂಪೆನಿಗಳ ಯಶಸ್ವೀ ನಾಟಕಗಳಲ್ಲಿ ಅವುಗಳ ಪ್ರತಿಭಾಶಾಲಿ ನಾಟಕಕಾರರು ಕಾಣಿಸುವ ಚಿತ್ರವೇನು? ವಿಕಾರಗೆಟ್ಟ ಅತಿರಂಜಿತ ಕೃತ್ರಿಮ ಭಾವೋದ್ರೇಕದ ಚರಿತ್ರ ಚಿತ್ರಣ! ಬೀಭತ್ಸ ಶೃಂಗಾರ, ಅಶ್ಲೀಲ ಹಾಸ್ಯ, ಅವಾಸ್ತವ ಸನ್ನಿವೇಶ, ವ್ಯಭಿಚಾರ, ಕೊಲೆ ಚಿತ್ರಹಿಂಸೆ, ಗರ್ಭಪಾತ ಮುಂತಾದವುಗಳ ವಿಕರಾಳ ದೃಶ್ಯ, ಲಂಪಟತೆಯ (pornography) ನಗ್ನ ನೃತ್ಯ. ಮತ್ತು ಇವುಗಳನ್ನೆಲ್ಲ ಲೇಪಿಸುವ ಕರ್ಣಕರ್ಕಶವಾಗಿ ಮೊಳಗುವ ದವಡೆ ಕೀಳುವ ಉದ್ಧತ ವ್ಯರ್ಥ ಪ್ರಾಸಾನುಪ್ರಾಸಗಳ ಕೃತಕ ಭಾಷೆ! "ಕರ್ಣಭಿತ್ತಿಯ ಮೇಲೆ ನಿನ್ನ ನಾಲಿಗೆ ಯಾವ ಭೀಕರ ಭವ್ಯ ಭವಿಷ್ಯವನ್ನು ಚಿತ್ರಿಸಿವೆ? ಎಂಬ ಮಾದರಿಯ ಸಮ್ಮಿಶ್ರಾಲಂಕಾರದ ಕೃತಕ ಕಾವ್ಯದ ಸರಳ ರಗಳೆಗಳ ಆಬ್ಬರ ಕಡಸಲು! ಕರದಗಲ್ಲ ಹನುಮಂತರಾಯರು ಈ ಕೃತಕ ಆಡಂಬರದ ಕಾವ್ಯವಿಡಂಬನೆಯ ಯುಗವನ್ನು ಆರಂಭಿಸಿದರು. ಅವರ ಕೃತಿಗಳಿಂದ ಈ ಮಾದರಿಯ ಭಾಷೆಯ ಶೈಲಿಯು ಒಂದು ಹದಗೆಟ್ಟ ರುಚಿ ಅರ್ಥದ ಮರ್ಮವರಿಯದ ಜನತೆಗೆ ಕಂಪನೀನಟರು ಹಿಡಿಸಿದರು. ಇಂದು ಮಹಾಂತೇಶ ಶಾಸ್ತ್ರಿಯಂಥವರು ಒಳ್ಳೇ ನಾಟ್ಯ ಸಂವಿಧಾನಕ ಹೆಣೆಯಬಲ್ಲ ಪುರೋಗಾಮಿ ದೃಷ್ಟಿಯ ಯಶಸ್ವಿಯಾದ ನಾಟಕಕರ್ತರೂ ಇದೇ ಗೆರೆಯನ್ನು ವಿಚಾರದಿಂದಲೋ ವಿವಶರಾಗಿಯೋ ಗೀರುತಿದ್ದುದು ನೋಡಿದರೆ ಖೇದವಾಗುತ್ತದೆ.

ಕಂಪನಿ ನಾಟಕಗಳ ಇಷ್ಟೆಲ್ಲ ದೋಷಗಳೂ ಜನಪ್ರಿಯವಾಗುವದೇಕೆ? ಜನತೆಗೆ ಕಥೆ ಬೇಕು. ವಸ್ತು ವಿನ್ಯಾಸ ಬೇಕು. ವಸ್ತು ನಾಟಕವಾಗುವಾಗ ಭಾವರಸವಾಗುತ್ತದೆ. ನಮ್ಮ ಸಾಹಿತ್ತಿಕ ನಾಟಕಕಾರರಲ್ಲಿ ಇದರದೇ ಅಭಾವ ಕೈಲಾಸಂ ಸ್ಕೂಲಿನಲ್ಲಿ ತಿದ್ದಿ ಹೊರಬಿದ್ದ ನಾಟಕಕಾರರೆಲ್ಲ ಮಾತಿನ ಚಾಕಚಕ್ಯ ವಿಶಿಷ್ಟ ಪಡಿಯಚ್ಚಿನ ವಿನೋದ, ಅವೇ ಅವೇ ಸಮಸ್ಯೆಗಳ ಮೇಲೆ ಹೆಣೆದ ಚಮತ್ಕೃತಿ ಕಳೆದುಕೊಂಡ ಕಲಾಕೃತಿಗಳಲ್ಲಿ ನಮಗೆ ನೀಡುತಿದ್ದಾರೆ. ಮದುವೆ, ತಪ್ಪು ತಿಳುವಳಿಕೆ, ಆಳಿಯತನ, ಇತ್ಯಾದಿ ಒಂದು ವಿಶಿಷ್ಟ ಕೌಟುಂಬಿಕ ಪ್ರಮೇಯವನ್ನೆ ಹೊರಳಿಸಿ ತಿರುವು ಹಾಕಿ ಸುತ್ತು ಬಳಸಿ, ಬೇರೆಬೇರೆ ಕೋನಕ್ಕೆ ನಿಲ್ಲಿಸಿ ಅವುಗಳ ಮೇಲೆ ಚಿಕ್ಕಪುಟ್ಟ ನಾಟಕಗಳನ್ನು ಇಂದು ಈ ಪಂಥದವರು ಕಟ್ಟುತ್ತಾರೆ. ಇಲ್ಲಿ ವಿನೋದ ಹೆಚ್ಚಾಗಿ ಶಾಬ್ದಿಕ, ಇಲ್ಲವೆ ಪ್ರಾಸಂಗಿಕ: ಪಾತ್ರಪರಿಪೋಷ ಬಹಳ ಕಡಿಮೆ. ಮರಪ್ಪ, ಲೋಭಿ, ನಾಟಕದ್ವೋ- ಇನ್ನೇನೊ ಹುಚ್ಚು, ಮುಂತಾದ ಪ್ರೇರಣೆಗಳ ಮೇಲೆ ಪಾತ್ರ ಸೃಷ್ಟಿ. ಹೇಗಾದರೂ ಕೆಲವೊಂದು ವಿನೋದದ ಪ್ರಸಂಗ ಕಟ್ಟಿತರುವ ಹೆಣಗಾಟ ಇವೇ ಈ ಆಧುನಿಕ ನಾಟಕಗಳ ಜೀವಾಳ ಮತ್ತು ಬಂಡವಾಳ. ಇಂಥ ನಾಟಕಗಳಿಂದ ತಾತ್ಕಾಲಿಕ ಮನೋರಂಜನೆ ಆಗುವದೇ ಹೊರತು ಒಂದು ಭವ್ಯ ರಸಾನುಭವ ಅಸಂಭವ. ಜನತೆಗೆ ಅದು ಬೇಕು ಆದಕ್ಕಾಗಿಯೇ ಜನ "ಹೇಮರಡ್ಡಿ ಮಲ್ಲಮ್ಮ" ೮೦ನೇ ಸಲವಾದರೂ ನೋಡುತ್ತಾರೆ. ಅಲ್ಲಿ ಸಂದೇಶ ಸಾಮಯಿಕವಿಲ್ಲ ಆಧುನಿಕವಲ್ಲ. ಮಾತಿನ ಚಮತ್ಕಾರವಿಲ್ಲ. ಆದರೆ ಜನತೆಯ ಹೃದಯಕ್ಕೆ ಒಂದು ಉತ್ಕಟತೆಯ ಸಾಕ್ಷಾತ್ಕಾರವಾಗುತ್ತದೆ. 'ಮಲ್ಲಮ್ಮ'ನ ಚಾರಿತ್ರ್ಯದೊಂದಿಗೆ 'ವೇಮಣ್ಣ'ನ ಚರಿತ್ರ ಕ್ರಾಂತಿಯನ್ನೂ ಪ್ರೇಕ್ಷಕ ನಿದ್ದೆಗಣ್ಣಲ್ಲಿಯೂ ಮರೆಯುವದಿಲ್ಲ. ಸದಾಶಿವರಾವ ಗರುಡರ 'ಚವತಿಯ ಚಂದ್ರ' ಅಂಥ ಒಂದು ಕಲಾಕೃತಿ. ನಾಟ್ಯ ಪ್ರತಿಭೆ ಇಲ್ಲಿ ಮುಖ್ಯ. ಸಾಹಿತ್ತಿಕ ಇಲ್ಲವೆ ಕಾವ್ಯಗುಣ ಗೌಣ, ನಾಟಕ ಒಂದು ಸಾಕ್ಷಾತ್ಕಾರ ಬರೆ ಕ್ಷಣಿಕ ಚಮತ್ಕಾರವಲ್ಲ.

ಈ ದೃಷ್ಟಿಯಿಂದ ಇಂದು ನಮಗೆ ಪಂಡಿತಪಾಮರ ರಂಜಕರಾದ ವಿನಯ ವಿನೋದ ವ್ಯಂಜಕರಾದ ನಾಟಕಕಾರರು ಬೇಕು. ಶ್ರೀ ಲಕ್ಷ್ಮಣರಾವ ಬೇಂದ್ರೆ, ಶ್ರೀ ಕೆ. ವಿ. ಗುಂಡಣ್ಣ, ಶ್ರೀ ಎನ್. ಕೆ. ಕುಲಕರ್ಣಿ-ಮುಂತಾದವರು ವ್ಯಾವಸಾಯಿಕ ಕಂಪನಿಗಳು ಜನ ಸಂದಣಿಗಾಗಿ ಆಡಿಯೂ ಉತ್ತಮ ಕಲಾಗುಣವನ್ನೂ ಸೌಂದರ್ಯಮೂಲ್ಯಗಳನ್ನೂ ರೂಪಿಸುವ ರೂಪಕಗಳನ್ನು ಪ್ರಯತ್ನ ಮಾಡಿದರೆ ನೀಡಬಲ್ಲರು. ಶ್ರೀರಂಗ 'ಗೆಳೆಯ ನೀನು ಹಳೆಯ ನಾನು' ಈ ದಾರಿಯಲ್ಲಿ ಒಂದು ದೊಡ್ಡ ದೀರ. ಬರೇ ಮಾತಿನ ಜಾಣತನಕ್ಕೂ ಆಚೆಯ ಜೀವನ ಚಾರಿತ್ರ್ಯದ ನಾಟ್ಯ ಕಥೆ ಇಲ್ಲಿ ಅರಳಿದೆ. ಹೀಗೆ ಒಂದು ಮೊತ್ತದಲ್ಲಿ ವಸ್ತು ವಿಕಾಸ ಸಾಧಿಸಿ 'ಮೂರೂ ಪರಿಮಾಣ'ಗಳಲ್ಲಿ ಮೂರ್ತವಾಗಿ ನಿಲ್ಲುವ ನಾಟಕದ ರಸಕಲಶ ಶ್ರೀರಂಗರಂಥವರಲ್ಲದೇ ಇನ್ನಾರು ತುಂಬಬೇಕು?

ಕನ್ನಡ ರಂಗಭೂಮಿ ಎಲ್ಲಿಗೆ? ಪ್ರಶ್ನೆಗೆ ಇನ್ನೂ ಸೂತ್ರವಾದ ಉಪಪ್ರಶ್ನೆಗಳು ಬಹಳ. ಅವೆನ್ನೆಲ್ಲ ಇಲ್ಲಿಎತ್ತಿ ಹೇಳುವದು ನನ್ನ ಅವಕಾಶಕ್ಕೂ ಅಧಿಕಾರಕ್ಕೂ ಹೊರತು ಮುಖ್ಯ ಲೋಕ ಚಿಂತನವನ್ನು ಪೂರ್ತಿ ನಿರೂಪಿಸಿದ ಹೊರತು ನಾಟಕ ಜನಕ್ಕೆ ಒಂದೇ ಒಂದು ಸಮಾರಾಧನೆ ಸಿಗುವದಿಲ್ಲ. ಬರಿ ವಿದ್ವಜ್ಜನರ ಪರಿತೋಷಕ್ಕೆ ಮೀಸಲಾದ ಪ್ರಯೋಗ ವಿಜ್ಞಾನ ಬೇರೆಯಾಗಿ ಬೆಳೆದರೆ ಸಾಲದು. ಆ ಸಮಾರಾಧನೆಗೆ ಈ ವಿಜ್ಞಾನ ಉಪಯೋಗವಾಗಬೇಕು. ಆಗಲೇ ಕನ್ನಡ ರಂಗಭೂಮಿಯ ನಿಜವಾದ ಅಭ್ಯುದಯದ ತೆರೆ ಏಳುವದು. ಅಲ್ಲಿಯ ತನಕ ಈಗ ನಡೆದದ್ದು ಒಂದು ಅಭ್ಯಾಸ. "ನಾಟಕವೆಂಬ ನಾಟಕ."

ಜ್ಯಾಹೀರು ಮಾಡಿದ ವಸ್ತುಗಳನ್ನೆ ಕೊಂಡುಕೊಳ್ಳಿರಿ.

ಎಲರ್ಜಿ-ಭೂತ

ಎಲರ್ಜಿ ಅಥವಾ ಅಸಹನೆಯೆಂಬುದು ಕೆಲವೊಂದು ವಿಶಿಷ್ಟ ಕಾರಣಗಳಿಂದ ಅಂಟುವ ರೋಗ. ಇದಕ್ಕೆ ಚಿಕಿತ್ಸೆಯನ್ನು ಆಯುರ್ವೇದದಲ್ಲಿ ಸಾವಿರಾರು ವರ್ಷ ಹಿಂದೆಯೇ ಹೇಳಲಾಗಿದ್ದು ಈ ಚಿಕಿತ್ಸೆ ಪರಿಣಾಮಕಾರಿಯಾಗಿದೆ.

ಡಾ| ಎಂ. ಗೋಪಾಲಕೃಷ್ಣ ರಾವ್.

ಆಧುನಿಕ ವಿಜ್ಞಾನವು ಸ್ಪಷ್ಟತೆ, ನಿಷ್ಕೃಷ್ಟತೆ, ಪ್ರತ್ಯಕ್ಷತೆಗಳ ಕಿರೀಟವನ್ನು ಹೊತ್ತು ಮೆರೆಯುತ್ತದೆ. ಆ ಗುಣಗಳಿಗಾಗಿಯೆ ವಿಜ್ಞಾನವು ಮಹಾ ಮಹಾ ವಿದ್ವಾಂಸರಿಂದ ಪೂಜೆಯನ್ನು ಪಡೆಯುತ್ತದೆ. ಅಥವಾ ಬೇರೊಂದು ಮಾತಿನಲ್ಲಿ ಹೇಳುವುದಾದರೆ, 'ವಿಜ್ಞಾನಕ್ಕೆ ಮನ್ನಣೆಯನ್ನು ಸಲ್ಲಿಸದಿರುವವರು ಅವಿದ್ಯಾವಂತರೆಂಬ ದುರ್ನಾಮಕ್ಕೆ ಗುರಿಯಾಗುತ್ತಾರೆ'.

ಆದರೆ ವೈಜ್ಞಾನಿಕವೆಂದು ಮೆರೆಯುತ್ತಿರುವ ವಿಷಯಗಳಲ್ಲೆಲ್ಲ, ವಿಜ್ಞಾನದ ಹೆಗ್ಗುರುತುಗಳಾದ ಸ್ಪಷ್ಟತೆ, ನಿಷ್ಕೃಷ್ಟತೆ ಮತ್ತು ಪ್ರತ್ಯಕ್ಷತೆಗಳು ಇವೆಯೇ, ಎಂದು ಪರಿಶೀಲಿಸಿದರೆ ಮಾತ್ರ ತುಂಬ ನಿರಾಶೆಯಾಗುವುದು. ಆ ಮೂರು ಗುಣಗಳಲ್ಲಿ ಒಂದೂ ಇಲ್ಲದ ವಿಷಯಗಳು ಸಹ ವೈಜ್ಞಾನಿಕತೆಯ ಹಣೆಪಟ್ಟಿಯನ್ನು ಕಟ್ಟಿಕೊಂಡು ಮೆರೆಯುತ್ತಿರುವುದು ನಿತ್ಯವೂ ನಿದರ್ಶನಕ್ಕೆ ಬರುತ್ತದೆ. ಮತ್ತೆ ವಿಜ್ಞಾನದ ವ್ರತವನ್ನೇ ಹೊತ್ತ ವಿದ್ಯಾವಂತರು ಕೂಡ ಅಂತಹ ವಿಷಯಗಳನ್ನು ಗೌರವಿಸುತ್ತಿರುವುದು ಬೇಸರ ಹುಟ್ಟಿಸುವಂತಹದಾಗಿದೆ. ಮತ್ತು ಅಂತಹವರು, ತಮ್ಮ ಅಭಿಪ್ರಾಯವನ್ನು ಒಪ್ಪದಿರುವವರನ್ನೆಲ್ಲ 'ಅವೈಜ್ಞಾನಿಕರು' ಎಂದು ಟೀಕಿಸುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಮತ್ತೆ ಅಂತಹ ತಪ್ಪಿನಿಂದ ಅವರಿಗೆ ಮಾತ್ರ ಹಾನಿಯಾಗುತ್ತಿದ್ದರೆ, ಯಾರೂ ಯೋಚಿಸುವ ಆಗತ್ಯವಿರಲಿಲ್ಲ. ಆದರೆ ಅಂತಹ ತಪ್ಪು ಅಭಿಪ್ರಾಯವನ್ನೆ ಸರಕಾರವಾಗಲಿ, ಸಮಾಜವಾಗಲಿ ನಂಬಿ ಕಾರ್ಯರೂಪಕ್ಕಿಳಿಸಿದರೆ ಇಡಿ ಸಮಾಜವೇ ಅಥವಾ ದೇಶವೇ ಅನೇಕ ಗಂಡಾಂತರಗಳಿಗೆ ಗುರಿಯಾಗುವುದು ಸಹಜವೇ ಆಗಿದೆ.

ಉದಾಹರಣಾರ್ಥ ಈಗ ಆಧುನಿಕ ವೈದ್ಯವಿಜ್ಞಾನದ ಕ್ಷೇತ್ರದಲ್ಲಿ ತುಂಬ ಬಳಕೆಗೆ ಬಂದಿರುವ 'ಎಲರ್ಜಿ' ಎಂಬ ಶಬ್ದ ಅಥವಾ ಭಾವನೆಯ ವಿಷಯವನ್ನು ಇಲ್ಲಿ ಪರಿಶೀಲಿಸಿದರೆ ನಮ್ಮ ಅಭಿಪ್ರಾಯವು ಸ್ಪಷ್ಟವಾದೀತು. 'ಎಲರ್ಜಿ' (Allergy) ಎಂಬ ಶಬ್ದಕ್ಕೆ ವೈದ್ಯಕೀಯ ಶಬ್ದಕೋಶದಲ್ಲಿ 'ಕೆಲವು ವಸ್ತುಗಳ ಬಗ್ಗೆ ಅತಿ ಸಂವೇದಿತ್ವ (Hypersensitivity) ಅಥವಾ ಅಸಹನೆ' ಎಂದು ಅರ್ಥವಿದೆ-ಎಂದರೆ ಬೇರೆಯವರಿಗೆಲ್ಲ ನಿರಪಾಯಕಾರಿಯಾದ ಒಂದು ವಸ್ತುವು, ಒಬ್ಬ ವ್ಯಕ್ತಿಗೆ ಸಹನೆಯಾಗದಿರುವುದು; ಆ ವಸ್ತುವನ್ನು ಸೇವಿಸಿದರೆ ಅಥವಾ ಆ ವಸ್ತುವಿನ ಸಂಪರ್ಕವಾದರೆ ಆ ವ್ಯಕ್ತಿಯ ಶರೀರದಲ್ಲಿ ಕೆಲವು ಪೀಡೆಗಳು ಕಾಣಿಸಿಕೊಳ್ಳುವವು. ಹಾಗೆ ಅಸಹನೆಯ ಲಕ್ಷಣಗಳನ್ನು (ಪೀಡೆಗಳನ್ನು) ಕೆರಳಿಸುವ ದ್ರವ್ಯವು ಒಬ್ಬೊಬ್ಬರಿಗೆ ಒಂದೊಂದಾಗಿರಬಹುದು. ಅದು ಒಂದು ಔಷಧವಾಗಿರಬಹುದು, ಆಹಾರ ವಸ್ತುವಾಗಿರಬಹುದು, ಕ್ರಿಮಿಕೀಟಕಗಳ ಕಚ್ಚುವಿಕೆ, ಹೂವಿನ ಪರಾಗ, ಧೂಳು, ಕೂದಲು, ಹಕ್ಕಿಯ ಗರಿ ಮುಂತಾಗಿ ಯಾವ ವಸ್ತುವೂ ಆಗಿರಬಹುದು.

ಒಬ್ಬನಿಗೆ ಬೆಳ್ಳುಳ್ಳಿಯನ್ನು ಮೂಸಿದರೆ ಮೈಮೇಲೆಲ್ಲ ಗಂಡೆಗಳೇಳುವವು; ಇನ್ನೊಬ್ಬನಿಗೆ ಟೊಮೆಟೊ ಸೇವಿಸಿದೊಡನೆ ಉಬ್ಬಸ ಪ್ರಾರಂಭವಾಗುವುದು; ಬೇರೊಬ್ಬನಿಗೆ ಉಣ್ಣೆಯ ಸಂಪರ್ಕ ಬಂದೊಡನೆ ಮೈಯೆಲ್ಲ ಕೆರೆತ ಪ್ರಾರಂಭವಾಗುವುದು. ಆ ಮೂವರೂ ಆಯಾ ವಸ್ತುಗಳಿಗೆ, ಬಾಲ್ಯದಿಂದಲೇ ಎಲರ್ಜಿಕ್ ಆಗಿರುವುದಿಲ್ಲ. ಯಾವುದೋ ಒಂದು ವಯಸ್ಸಿನಲ್ಲಿ ಆ ಅಸಹನೆಯು ಹುಟ್ಟಿಕೊಳ್ಳುವುದು. ಎಲರ್ಜಿ (ಅಸಹನೆಯ) ಲಕ್ಷಣಗಳನ್ನು ಹುಟ್ಟಿಸಲು ಆಯಾ ವಸ್ತುವಿನ ಪ್ರತ್ಯಕ್ಷ ಸಂಪರ್ಕವೇ ಆಗಬೇಕೆಂದಿಲ್ಲ. ತಾನು ಸೇವಿಸುತ್ತಿರುವ ಆಹಾರ, ಪಾನೀಯಗಳಲ್ಲಿ ತನಗೆ ಸಹನೆಯಾಗದ ದ್ರವ್ಯವು ಮಿಶ್ರವಾಗಿದೆಯೆಂದು ಸಂಶಯ ಬಂದರೂ ಸಾಕು, ಅವನಲ್ಲಿ ಎಲರ್ಜಿ (ಅಸಹನೆಯ) ಪೀಡೆಗಳು ತೋರಿಕೊಳ್ಳುವವು. ಆದ್ದರಿಂದ ಕೇವಲ ಭೌತಿಕ ದ್ರವ್ಯಗಳಷ್ಟೇ ಅಲ್ಲ ಕೆಲಕೆಲವು ವಿಚಾರಗಳು ಸಹ ಕೆಲವರಿಗೆ ಎಲರ್ಜಿ—ಪೀಡೆಯನ್ನು ಕೊಡಬಹುದೆಂದು ಈಗ ವಿಜ್ಞಾನಿಗಳು ಒಪ್ಪಲಾರಂಭಿಸಿದ್ದಾರೆ. ಕೆಲವು ವ್ಯಕ್ತಿಗಳಿಗೆ ವಿಶಿಷ್ಟ ವಯಸ್ಸಿನಲ್ಲಿ ವಿಶಿಷ್ಟ ದ್ರವ್ಯಗಳ ಬಗ್ಗೆ ಅಸಹನೆ (ಎಲರ್ಜಿ) ಉಂಟಾಗಬಹುದೆಂಬುದನ್ನು ಯಾರಾದರೂ ಒಪ್ಪಬಹುದು, ಆದರೆ ಆ ಅಸಹನೆಯು (ಎಲರ್ಜಿ) ತನು-ಮನಗಳಲ್ಲಿಯ ಯಾವುದೋ ಒಂದು ಅಕ್ರಮದಿಂದ ಹುಟ್ಟಿಕೊಂಡಿರಬೇಕಲ್ಲವೇ. ಆ ಅಕ್ರಮವಾವುದು, ಅದು ಹೇಗೆ ಉಂಟಾಯಿತು, ಅದನ್ನು ಪರಿಹರಿಸುವುದು ಹೇಗೆ, ಎಂಬುದನ್ನು ಪರಿಶೀಲಿಸಿ ಚಿಕಿತ್ಸೆಯನ್ನು ಕೈಕೊಳ್ಳಬೇಕಲ್ಲವೇ. ವೈಜ್ಞಾನಿಕತೆಯ ವ್ರತಧಾರಿಯಾದ ಆಧುನಿಕ ವೈದ್ಯ ವಿಜ್ಞಾನವು ಎಲರ್ಜಿಗೆ ಮೂಲಭೂತವಾದ ಅಕ್ರಮವನ್ನು ಪರಿಹರಿಸಲು ಪ್ರಯತ್ನಿಸಿದೆಯೇ? ಎಲರ್ಜಿಯ ವಿಷಯವನ್ನು ೧೯೦೬ರಲ್ಲಿ ಬೆರೊನ್ ಕ್ಲೆಮೆನ್ಸ್ ವಾನ್ ಪಿರ್ಕೆಟ್‌ನು ವೈದ್ಯ ಪ್ರಪಂಚಕ್ಕೆ ಮೊದಲು ಸಾರಿದನು. ಆ ಸಂಶೋಧನೆಯು ನಡೆದು ಅರ್ಧ ಶತಮಾನ ಕಳೆದರೂ ಇನ್ನೂ ಎಲರ್ಜಿ ಭೂತದ ಉಚ್ಚಾಟನೆಯೇಕಾಗಿಲ್ಲ? ಎಲರ್ಜಿ (ಅಸಹನೆಯ) ಲಕ್ಷಣಗಳನ್ನು ಮಾತ್ರ ಶಮನಿಸುವ ನೂರಾರು ಔಷಧಗಳನ್ನು ಡಾಕ್ಟರುಗಳು ಉಪಯೋಗಿಸುತ್ತಿದ್ದಾರೆ. ಆದರೆ ಒಬ್ಬ ರೋಗಿಯಲ್ಲಿ ವಿಶಿಷ್ಟ ದ್ರವ್ಯದ ಬಗ್ಗೆ, ಎಂದೂ ಇಲ್ಲದ ಎಲರ್ಜಿ (ಅಸಹನೆ) ಇಂದೇಕೆ ಹುಟ್ಟಿಕೊಂಡಿತು? ಶರೀರದಲ್ಲಿಯ ಯಾವ ಅಕ್ರಮವು ಇಂದು ಆ ಎಲರ್ಜಿಗೆ ಕಾರಣವಾಗಿದೆ? ಎಂಬುದನ್ನು ವಿಶ್ಲೇಷಿಸಿ ಆ ಮೂಲಭೂತವಾದ ಅಕ್ರಮದ ನಿವಾರಣೆಗಾಗಿ, ಸಾವಿರಕ್ಕೊಬ್ಬ ಡಾಕ್ಟರಾದರೂ ಪ್ರಯತ್ನಿಸದಿರುವುದು ದುರ್ದೈವದ ಸಂಗತಿಯಾಗಿದೆ. ಮೂಗಿಗೆ ದುರ್ಗಂಧ ಬಂದರೆ ಅದಕ್ಕೆ ಕಾರಣವಾಗಿರಬಹುದಾದ ಸುತ್ತುಮುತ್ತಲಿನ ಕೊಳೆ, ಕಶ್ಮಲಗಳನ್ನು ಚೊಕ್ಕಟಗೊಳಿಸದೆ, ಮೂಗಿಗೇ ಸುಗಂಧವನ್ನು ಲೇಪಿಸುವಂತಾಗಿದೆ ಆಧುನಿಕ ಎಲರ್ಜಿ ಚಿಕಿತ್ಸಾಕ್ರಮವು. ಎಲರ್ಜಿಯನ್ನೆ ಹತ್ತಿಕ್ಕಲು 'ಆ್ಯಂಟಿ ಹಿಸ್ಟೆಮಿನಿಕ್ಸ್, ಆ್ಯಂಟಿ ಎಲರ್ಜಿಕ್ಸ್'ಗಳೆಂಬ ಸಾವಿರಾರು ಔಷಧಗಳ ಶೋಧವು ನಿತ್ಯವೂ ನಡೆಯುತ್ತಿದೆ.

ಆದರೆ ಒಬ್ಬ ವ್ಯಕ್ತಿಯು ಹಿಂದೆಂದೂ ಎಲರ್ಜಿಕ್ (ಅಸಹನಶೀಲ) ನಾಗಿರದವನು ಈಗ ಏಕೆ ಎಲರ್ಜಿಕ್ ಆಗಿದ್ದಾನೆ, ಎಂಬುದರ ಗೂಢವನ್ನು ಶೋಧಿಸಿ ಅದನ್ನು ಚಿಕಿತ್ಸಿಸುವುದೇ ವೈಜ್ಞಾನಿಕ ಚಿಕಿತ್ಸೆಯಲ್ಲವೇ? ಯಾವಾಗಲೂ ಬೆಳ್ಳುಳ್ಳಿಯ ಅಭಿರುಚಿಯುಳ್ಳ ಶರೀರವು ಇಂದೇಕೆ ಅದನ್ನು ತಿರಸ್ಕರಿಸುತ್ತಿದೆ? ಅದನ್ನು ಜೀರ್ಣಿಸುವ ಶಕ್ತಿಯನ್ನು ಶರೀರವು ಕಳೆದುಕೊಂಡಿದೆಯೇ? ಅಥವಾ ಅದರ ಉಷ್ಣತೆಯನ್ನು ಉಪಯೋಗಿಸಲಾರದಷ್ಟು ಮಿತಿಮೀರಿದ ಉಷ್ಣತೆಯು ಶರೀರದಲ್ಲಿ ಉಂಟಾಗಿದೆಯೇ? ಈ ಎರಡು ಪ್ರಶ್ನೆಗಳಿಗೂ 'ಹೌದು' ಎಂದು ಉತ್ತರ ಬಂದರೆ, ಬೆಳ್ಳುಳ್ಳಿಯನ್ನು ಜೀರ್ಣಿಸುವ ಶಕ್ತಿಯನ್ನು ಕುದುರಿಸುವುದು ಅಥವಾ ಮಿತಿಮೀರಿದ ಉಷ್ಣತೆಯನ್ನು ಸ್ವಸ್ಥಾವಸ್ಥೆಗೆ ತರಲೆತ್ನಿಸುವುದು, ಇದೇ ಸಾರ್ಥಕವಾದ ವೈಜ್ಞಾನಿಕ ಚಿಕಿತ್ಸೆಯಲ್ಲವೇ? ಎಲರ್ಜಿಯ ಲಕ್ಷಣಗಳ ಮೂಲಕ ಶರೀರವು ತನ್ನಲ್ಲಿ ಉಂಟಾಗಿರುವ ಅಕ್ರಮಗಳನ್ನು ಸಾರಿಹೇಳುತ್ತದೆ. ಆ ಲಕ್ಷಣಗಳನ್ನೇ ಹತ್ತಿಕ್ಕುವ ಚಿಕಿತ್ಸೆಯಿಂದ ಮೂಲಭೂತವಾದ ಶಾರೀರಿಕ ಅಕ್ರಮಗಳು ಬಲಗೊಂಡು ಬೇರೊಂದು ರೋಗರೂಪದಲ್ಲಿ ಪ್ರಕಟವಾಗುವುದರಲ್ಲಿ ಸಂದೇಹವೇ ಇಲ್ಲ. ಹಾಗೆ ಮೈಮೇಲೆ ಎದ್ದ ಶೀತಪಿತ್ತದ (Urticaria) ಗಂಡೆಗಳನ್ನು 'ಆ್ಯಂಟಿ ಎಲರ್ಜಿಕ್'ಗಳಿಂದ ಚಿಕಿತ್ಸಿಸಿದಾಗ ಉಗ್ರವಾದ ಉಬ್ಬಸ (Asthma) ಹುಟ್ಟಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ; ಉಬ್ಬಸವನ್ನು ಆ್ಯಂಟಿ ಎಲರ್ಜಿಕ್‌ಗಳಿಂದ ಚಿಕಿತ್ಸೆಮಾಡಿದಾಗ ಇಸುಬು (Eczema), ರಕ್ತಭಾರ (Blood Pressure) ಮುಂತಾದ ರೋಗಗಳು ಕೆರಳಿಕೊಂಡುದುಂಟೆಂದು ಡಾಕ್ಟರುಗಳೇ ಹೇಳುತ್ತಾರೆ.

ಆದ್ದರಿಂದಲೇ ಆಯುರ್ವೇದವು 'ವ್ಯಾಧೇಸ್ತತ್ವ ಪರಿಜ್ಞಾನಂ ವೇದನಾಯಾಶ್ಚ ನಿಗ್ರಹಃ' ಎಂದರೆ ಮೊದಲು ವ್ಯಾಧಿಯ ಮೂಲಭೂತ ಕಾರಣಗಳನ್ನು ಪರಿಶೀಲಿಸಿ ಆ ಕಾರಣಗಳು ಹೆಚ್ಚಾಗದಂತಹ ಚಿಕಿತ್ಸೆಯನ್ನೇ ವೇದನೆಗಳ ಪರಿಹಾರಕ್ಕಾಗಿ ಮಾಡಬೇಕೆಂದು ಸಾವಿರಾರು ವರ್ಷಗಳ ಪೂರ್ವದಲ್ಲಿಯೇ ಹೇಳಿದೆ.



≈ ಕುಮಾರಿ ಬಿಲ್ಲೆಗಳು ≈

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶಲ್), ರೂ. 8/- (ಎಕ್ಸ್ಟ್ರಾ ಸ್ಪೆಶಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

(2) ರಾಜಾ ಮೆಡಿಕಲ್ ಹೋಲ್, 31 ಧರ್ಮರಾಜ ಸ್ಟ್ರೀಟ್, ಬೆಂಗಳೂರು ಕೆಂಟೋನ್‌ಮೆಂಟ್.

(3) ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕನ್ನಡ).

ರಾಷ್ಟ್ರೀಯ ಸರಕಾರ—ಒಂದು ಸಮೀಕ್ಷೆ

(೫ನೇ ಪುಟದಿಂದ)

ಹಿಂದಿನಿಂದಲೂ ಪುರಸ್ಕರಿಸುತ್ತ ಬಂದಿದ್ದಾರೆ.

ಈ ವಿಚಾರವು ಕಾರ್ಯಗತವಾದರೆ ಕಾಂಗ್ರೆಸಿನ ಸಮಾಜವಾದೀ ನೀತಿಗೆ ಬಲ ಸಿಗಬಹುದೇನೋ ನಿಜ. ಆದರೆ ಆಗ ದೇಶದಲ್ಲಿ ವಿರೋಧ ಪಕ್ಷದ ಸ್ಥಾನ ಸ್ವತಂತ್ರ ಪಕ್ಷಕ್ಕೂ ಕಮ್ಯುನಿಸ್ಟ್ ಪಕ್ಷಕ್ಕೂ ಸೇರುವುದರಲ್ಲಿ ಸಂಶಯವಿಲ್ಲ. ಜನರಲ್ಲಿರುವ ಕಾಂಗ್ರೆಸ್—ವಿರೋಧಿತನವು ಈ ಎರಡು ವಿರೋಧಿ ಪಕ್ಷಗಳ ಬಲವನ್ನು ಹೆಚ್ಚಿಸಬಹುದು. ಇವುಗಳೆರಡು ಏಕೈಕ ವಿರೋಧ ಪಕ್ಷಗಳಾಗಿ ದೇಶದಲ್ಲಿ ಉಳಿಯುವುದು ಪ್ರಜಾಸತ್ತೆಯ ದೃಷ್ಟಿಯಿಂದ ಅಷ್ಟೊಂದು ಹಿತವಾಗದು. ಏಕೆಂದರೆ ಇವೆರಡೂ ಭಾರತದ ರಾಜ್ಯಾಂಗ ಘಟನೆಯನ್ನು ಒಳಗಿಂದೊಳಗೆ ಮಾನ್ಯಮಾಡದವುಗಳಾಗಿವೆ.

ಅಂತೂ ಈ ಸೂಚನೆಯು ಗಮನಾರ್ಹವಾಗಿದೆ. ಭಾರತದ ರಾಜಕೀಯ ಸ್ಥಿತಿಯು ಮುಂದಕ್ಕೆ ಯಾವ ರೂಪವನ್ನು ತಾಳಬಹುದೆನ್ನುವುದಕ್ಕೆ ಇದು ಮುನ್ಸೂಚಕವಾಗಿದೆ ಎಂದರೂ ಸರಿಯೇ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳು ಸಿಗುತ್ತವೆ.

ವಿಚಾರಿಸಿ—

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ.

ಕಾವ್ಯ ಕಲೆ

(೬ನೇ ಪುಟದಿಂದ)

ಯೇ ನೆಲದ ಮೇಲೆ ಇದ್ದ ಇರುವೆಗೆ ಅವನ ಮೈ ಬಿಸಿಯ ಸಂಪರ್ಕದಿಂದ ತಡೆಯಲಾರದಷ್ಟು ತಾಪವಾಯಿತು. ಅದರ ನಿವಾರಣೆಗೆಂದು ಪಕ್ಕದಲ್ಲೇ ಶಿವನ ತಲೆಯಲ್ಲಿದ್ದ ಚಂದ್ರಬಿಂಬವನ್ನು ಹೋಗಿ ಇರುವೆ ಮುತ್ತಿಡುತ್ತಿದೆ!

ಜಗನ್ನಾಥ. ಪಂಡಿತರಾಜನ ಯಾವುದೇ ಪದ್ಯವನ್ನು ನೋಡಲಿ—ಮೊದಲು ನಮ್ಮ ಮನಸ್ಸನ್ನು ಸೆಳೆಯುವುದು ಅವನ ಶಬ್ದಾಲಂಕಾರಗಳ ಚಮತ್ಕಾರ. ಉದಾಹರಣೆಗೆ—

ಹತಕೇನ ಮಯಾ ವನಾಂತರೇ
ವನಜಾಕ್ಷೀ ಸಹಸಾ ವಿವಾಸಿತಾ |
ಅಧುನಾ ಮಮ ಕುತ್ರ ಸಾ ಸತೀ
ಪತಿತಸ್ಯೇವ ಪರಾ ಸರಸ್ವತೀ ||

ಸೀತೆಯನ್ನು ಪರಿತ್ಯಾಗ ಮಾಡಿದ ರಾಮನ ಶೋಕವೇ ಈ ಪದ್ಯರೂಪವನ್ನು ತಾಳಿದೆ. ‘ನಾನು ಎಂತಹ ಪಾಪಿ! ಆ ವನಜಾಕ್ಷಿಯನ್ನು ವನಾಂತರಕ್ಕೆ ಅಟ್ಟಿರುವೆನಲ್ಲಾ! ಇನ್ನು ಆ ಸತಿ ನನಗೆಲ್ಲಿ? ಪತಿತನಿಗೆ ಪರಾಶಕ್ತಿ ಲಭಿಸಿಯಾಳೆ?’ ಈ ಭಾವನಾಲಹರಿಯಲ್ಲಿ ಕರುಣರಸವು ಕೋಡಿ ಹರಿಯುತ್ತಿದೆ; ಅಷ್ಟೇ ಹಿತಮಿತವಾಗಿ ಅನುಪ್ರಾಸಯಮಕಾದಿ ಶಬ್ದಾಲಂಕಾರಗಳೂ ಬೆಳಗುತ್ತಿವೆ. ಕವಿಯ ಪ್ರಥಮ ಪರೀಕ್ಷೆ ಮಾಡುವಾಗ ಛಂದೋ ನೈಪುಣ್ಯ, ವಾಗ್ವಿಲಾಸ, ಶಬ್ದ ಚಮತ್ಕಾರಗಳಿಗೆ ಮೊದಲ ಪ್ರಾಶಸ್ತ್ಯ; ಮಹಾ ಕವಿಯ ಪದವಿಯುಂಟೇ ಇಲ್ಲವೇ ಎಂದು ನಿರ್ಣಯಿಸುವಾಗ ಇವುಗಳಿಗಿಂತಲೂ ರಸ-ಭಾವಗಳ ಪ್ರತಿಪಾದನೆಯ ಪ್ರಾಗಲ್ಭ್ಯ, ಸಮಗ್ರ ಜೀವನ ದೃಷ್ಟಿಯ ನೂತನಾವಿಷ್ಕಾರ—ಇವುಗಳಿಗೆ ಪುರಸ್ಕಾರವುಂಟಾಗುತ್ತದೆ.

ಹೀಗೆ ಕಾವ್ಯಕಲೆಯಲ್ಲಿ ಎಡೆಬಿಡದೆ ಕೂಡಿಕೊಂಡಿರುವ ಈ ಎರಡು ಮುಖಗಳಲ್ಲಿ ಮೊದಲನೆಯದು ಒಂದು ಸಣ್ಣ ಪ್ರಾಸ್ತಾವಿಕ ಇಲ್ಲವೆ ಪ್ರಾಸಂಗಿಕ ಕವಿತೆಯಲ್ಲಿ ಕೂಡ ಕನಿಷ್ಠಪಕ್ಷ ಇರಲೇಬೇಕಾದುದು (irreducible minimum) ಎಷ್ಟು ಇರಬಹುದೆಂಬುದಕ್ಕೆ ಪರಿಮಿತಿಯಿಲ್ಲ. ಮಹಾಕವಿಯ ಪ್ರತಿಭೆ ಎಷ್ಟು ಎತ್ತರ ಹಾರಬಲ್ಲದೋ ಎಷ್ಟು ಆಳಕ್ಕೆ ಇಳಿಯಬಲ್ಲದೋ ಎಲ್ಲವನ್ನೂ ಕಾವ್ಯ ಸೌಂದರ್ಯದ ಪರಮಾವಧಿ (maximum) ಅಳವಡಿಸಿಕೊಳ್ಳಬಲ್ಲುದು. ಆಗ ಕವಿತೆಯ ‘ಸುಧಾವೃಷ್ಟಿ’ಯು ‘ಪರಮ ಬ್ರಹ್ಮ ಶರೀರ ಪುಷ್ಟಿ’ಯೂ ಆಗುತ್ತದೆ; ‘ನವೀನ ಸೃಷ್ಟಿ’ಯೂ ಆಗುತ್ತದೆ. ರಸೈಕಲೋಲನಾದ ಕವಿಗೆ ಅಲಂಕಾರಗಳೆಲ್ಲವೂ ಸೇವಕರಂತೆ ನಾನು ತಾನೆಂದು ಬಂದು ಸೇವೆ ಮಾಡುತ್ತವೆ. ರಸಾವೇಶನಲ್ಲದ ನೀರಸಪಂಡಿತನಿಗೆ ಎಷ್ಟೇ ಪ್ರಯತ್ನಪಟ್ಟು ಬರೆದರೂ ಅಲಂಕಾರಗಳು ತರಗೆಲೆಯಂತೆ ಶುಷ್ಕವಾಗಿ ಕೃತ್ರಿಮ ಆಡಂಬರದಲ್ಲಿ ಮಾತ್ರ ಪರ್ಯವಸಾನಗೊಳ್ಳುತ್ತವೆ. ಅರಸಿಕನಿಗೆ ಅಲಂಕಾರ ಶಾಸ್ತ್ರದ ಪಾಂಡಿತ್ಯದಿಂದ ಬರುವ ಪ್ರಯೋಜನ ಅತ್ಯಲ್ಪ; ಆದರೆ ರಸಿಕನಿಗೆ ಅದರಿಂದಾಗಬಹುದಾದ ಉಪಕಾರ ಅನಂತ. ಕಾವ್ಯಲೋಲರು ಕವಿಗಳ ಚಿತ್ರ ಚರಿತ್ರೆಗಳನ್ನೋದುವುದರಿಂದಲೂ ಕಾವ್ಯ ಸಂಪ್ರದಾಯಗಳ ಇತಿಹಾಸವನ್ನೋದುವುದರಿಂದಲೂ, ಕಾವ್ಯ ತತ್ತ್ವಜ್ಞರ ಜಿಜ್ಞಾಸೆಗಳನ್ನು ಮನನ ಮಾಡುವುದರಿಂದಲೂ ತಮ್ಮ ಸೌಂದರ್ಯ ಸಂಸ್ಕಾರವನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಅವರು ‘ಕಾವ್ಯ ಪ್ರಯೋಗ ಪರಿಣತಮತಿ’ಗಳಾಗುವುದಿಲ್ಲ. ಹಾಗಾಗಬೇಕಾದರೆ ಅವರು ನಮ್ಮ ಅಲಂಕಾರ ಶಾಸ್ತ್ರದ ಮೂಲ ತತ್ತ್ವಗಳನ್ನೂ ಅರಿತು ಅರಗಿಸಿಕೊಳ್ಳಬೇಕಾಗುತ್ತದೆ.

“ಕವೀನಾಂ ಮಾನಸಂ ನೌಮಿ ತರಂತಿ
ಪ್ರತಿಭಾಂಭಸಿ |
ಯತ್ರ ಹಂಸವಯಾಂಸೀವ ಭುವನಾನಿ
ಚತುರ್ದಶ ||”

ಯಾವುದರ ಪ್ರತಿಭಾಜಲದಲ್ಲಿ ರಾಜಹಂಸಗಳಂತೆ ಈರೇಳು ಲೋಕಗಳೂ ಈಸುತ್ತಿರುವವೋ ಆ ಕವಿಮಾನಸವೆಂಬ ಸರೋವರಕ್ಕೆ ನಮಸ್ಕಾರ!

ಕೃತಜ್ಞತೆಗಳು

(೩ನೇ ಪುಟದಿಂದ)

ವಾರು ಮಹನೀಯರ ಸಹಕಾರವೇ ಪ್ರೋತ್ಸಾಹನೀಯವಾಗಿದೆ. ವಿವಿಧಾಭಿರುಚಿಯ ರೋಚಕ ಲೇಖನಗಳನ್ನಿತ್ತು ಸಹಕರಿಸಿದ ಲೇಖಕ ಬಂಧುಗಳಿಗೂ, ಜಾಹೀರಾತುಗಳನ್ನಿತ್ತು ಉತ್ತೇಜನವಿತ್ತ ವ್ಯಾಪಾರಿ ಸಂಘ ಸಂಸ್ಥೆಗಳವರಿಗೂ ಮುದ್ರಣಕಾರ್ಯವನ್ನು ಸುಂದರವಾಗಿ ಪೂರೈಸಿದ ಪ್ರೆಸ್‌ನ ವ್ಯವಸ್ಥಾಪಕರಿಗೂ ನಾವು ಕೃತಜ್ಞರಾಗಿದ್ದೇವೆ. ಕೆಲವೊಂದು ಉತ್ತಮ ಲೇಖನಗಳು ಈ ಸಂಚಿಕೆಗಾಗಿ ಶ್ರೇಷ್ಠ ಲೇಖಕರಿಂದ ಬಂದಿರುವುವಾದರೂ ಸ್ಥಳಾವಕಾಶದ ಅಭಾವದಿಂದಾಗಿ ಪ್ರಕಟಿಸಲಾಗದಿದ್ದುದಕ್ಕೆ ಅವರೊಡನೆ ಕ್ಷಮಾಪಣೆಯನ್ನು ಬೇಡಿಕೊಳ್ಳುತ್ತೇವೆ.

— —

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬ್ಯಾಂಕು)
ಅಧಿಕೃತ ಭಂಡವಾಳ: ರೂ. 20,00,000
ಚಂದಾ ತೆತ್ತ ಭಂಡವಾಳ: ರೂ. 10,00,000
ಪಾವತಿಯಾದ ಭಂಡವಾಳ
ಮತ್ತು ಕ್ಷೇಮನಿಧಿ ರೂ. 9,93,000
ಒಟ್ಟು ಚಲಾವಣಾ ಮೊತ್ತ
ರೂ. 2,00,00,000 ಗೂ ಮೀರಿದೆ
— ಶಾಖೆಗಳು —
ಮಂಗಳೂರು, ಬೆಂಗಳೂರು,
ಮದರಾಸು - ಇತ್ಯಾದಿ
The
Karnataka Bank
Limited.

While at Mangalore.......
Please visit
For the Latest and Best Selections
in all kind of Sarees and Textiles
REPUTED FIRM SINCE 1938
JAYANTILAL BROTHERS
Our Friendly Suggestions
Homely Atmosphere
and Hearty co-operation at every Step.
Makes your Shopping Pleasant
and Worth Paying.
JAYANTILAL BROTHERS
WHOLESALE & RETAIL
CLOTH MERCHANTS
Wholesale Dept: MISSION STREET Telephone: 263
Retail Dept: HAMPANKATTA Telephone: 538
MANGALORE-1.

VISIT
GENERAL RADIO
ELECTRONICS
Light House Hill Road, Hampankatta,
MANGALORE-1.
MANY LATEST MODELS RADIOS TO CHOOSE
AUTHORISED DEALERS FOR
Bush (England), Metz Printed Circuit (Germany),
& Sahara (Holland).

ಅಂದು ಇಂದಿನ ಭಾರಮಾಪಕಗಳು

ಮಾನವನ ಭಾರವನ್ನು ಕಂಡು ಹಿಡಿಯುವ ವೈಜ್ಞಾನಿಕ ವಿಧಾನದಿಂದ ಆತನ ರಾತಲುಗಳಷ್ಟೇ ತಿಳಿದಾವು. ಇದಕ್ಕೆ ವ್ಯತಿರಿಕ್ತವಾದ 'ಭಾರಮಾಪಕ' ಮತ್ತು ಅವುಗಳಲ್ಲಿ ಕಾಲಕಾಲದಲ್ಲಾದ ಸುಧಾರಣೆಗಳನ್ನು ಲೇಖಕಿಯರು ಮಾರ್ಮಿಕವಾಗಿ ವಿವರಿಸಿರುವರು.

ಶ್ರೀಮತಿ ರುಕ್ಮಿಣೀದೇವಿ, ಐರೋಡಿ.

ಮನುಷ್ಯನು ಎಲ್ಲಾ ವಸ್ತುಗಳ-ಪ್ರಾಣಿಗಳ, ಭಾರ—ಯೋಗ್ಯತೆಯನ್ನು ನಿರ್ಣಯಿಸಬಲ್ಲ. ಈ ಧಾನ್ಯವು ಉತ್ತಮ ಜಾತಿಯದು; ಇದಕ್ಕೆ ಒಂದು ಕುರುಡು ಕವಡೆ ಹಡೆಯದು. ಇದು ಉತ್ತಮ ಜಾತಿಯ ದನ; ಇದು ಮಠಾರಟೊಳಿ; ಇದು ತಂಬಿಗೆಗಟ್ಟಲೆ ಹಾಲು ಕೊಡಬಲ್ಲುದು; ಇದು ಶುದ್ಧ ಪಶು. ಈ ಮರವು ದೋಣಿಗೆ ಉತ್ತಮವಾದುದು; ಇದು ಅಲಂಕಾರ ಸಾಮಗ್ರಿಗಳ ರಚನೆಗೆ ಹೇಳಿಸಿದುದು; ಇದರಿಂದ ಮನೆಕಟ್ಟಿಸಿದರೆ ಒಂದು ಶತಮಾನಕ್ಕೆ ಮೋಸವಿಲ್ಲ; ಇದು ಯಾವ ಕೆಲಸಕ್ಕೂ ಮುಡಿಯದು; ಇಸ್ಸಿ! ಈ ಸ್ಥಳದಲ್ಲಿ ಮನೆ ಬಾವಿ ರಚಿಸುವುದಾ? ಇನ್ನು ವಾರದಿಂದ ವಾರ ಏಳು ದಿನಗಳಲ್ಲಿ ತಡೆಯದೆ ಹೊಡೆಯುವ ಮಳೆಯು ಚಂದವನ್ನಾದರೂ ಕಾಣೆ. ಈ ವರ್ಷ ಚಳಿ ಸಾಕಷ್ಟಿಲ್ಲದುದರಿಂದ ಮಾವಿನಕಾಯಿ ಹಲಸಿನಕಾಯಿಗೆ ದೇವರೇ ಗತಿ. ಕುಂಭ ಮಾಸದಲ್ಲಿ ಈ ವರ್ಷ ಮಳೆ ಬಂದುದರಿಂದ ಕುಪ್ಪೆಗುಳಿಯೆಲ್ಲಾ ಅನ್ನ. ಪ್ರಯಾಣಕ್ಕೆ ಬೆಕ್ಕು ಅಡ್ಡಬಂತೆ? ಒಂದು ಕ್ಷಣ ಮನೆಯಲ್ಲಿ ಕೂತು ಹೊರಡು—ಇತ್ಯಾದಿ ಗಹನ ವಿಚಾರಗಳನ್ನೂ ಕಂಡತುಂಡಾಗಿ ಮಾನವನು ಹೇಳಲು ಶಕ್ತನಿದ್ದಂತೆ ತನ್ನ ಸಜಾತೀ ಜನತೆಯ ಕುರಿತು ಯಾವ ಕಾಲಕ್ಕೂ ಹೊಂದಿಕೆಯಾಗುವ ಅವರ ಲಘುತ್ವ ಭಾರತ್ವವನ್ನು ಹೇಳಲಾರ. ದೀಪದ ಬುಡದಲ್ಲಿ ಕತ್ತಲೆಯಂತೆ! ಮನುಷ್ಯನ ವಿಚಾರಗಳೆಲ್ಲಾ ಇಷ್ಟೆಯೇ—ಆದರೂ ಆಯಾ ಕಾಲದ ಜನರು ಮಾನವರ ಯೋಗ್ಯತೆಯ ಅಳೆಯಲು ಒಂದೊಂದು ರೀತಿಯ ಭಾರ ಮಾಪಕವನ್ನು ಇಟ್ಟುಕೊಂಡಿದ್ದರೆಂದು ಪುರಾಣೇತಿಹಾಸಗಳಿಂದ ತಿಳಿಯುತ್ತದೆ. ಪುರಾಣ ಯುಗಕ್ಕಿಂತ ಮೊದಲು ಮನುಷ್ಯರು ಶಾಂತಜೀವನದ ಹಲವು ಮಾರ್ಗಗಳಲ್ಲಿ ತಿವಳಾಡಿ ಕೊನೆಗೆ ಕೆಲವು ಸೂತ್ರಗಳನ್ನು ಕಲ್ಪಿಸಿಕೊಂಡು ಅವುಗಳನ್ನು ಆಚರಣೆಗೆ ತಂದು, ಅವುಗಳನ್ನು ತೂಗಿ, ಅವುಗಳಿಂದ ಜಗತ್ತು ಧರಿಸಲ್ಪಡುವುದು ಎಂದು ನಿರ್ಣಯಿಸಿ ಅವಕ್ಕೆ ಧರ್ಮವೆಂದು ನಾಮಕರಣಮಾಡಿದರು. ಆ ಮೇಲೆ ಅವರು ವನಾಂತರಗಳಲ್ಲಿ, ನದೀ ತೀರಗಳಲ್ಲಿ ಕುಳಿತು ವರ್ಷಗಟ್ಟಲೆ ಏಕಾಗ್ರತೆಯಿಂದ ಯೋಚಿಸಿ ಧರ್ಮದ ಹೂರಣವನ್ನೆಲ್ಲಾ ಹೀಗೆಯೇ ಎಂದು ನಿರ್ಣಯಿಸಿ ಅವಕ್ಕೆ ಶಾಸ್ತ್ರರೂಪವನ್ನು ಕೊಟ್ಟರು. ಧರ್ಮಶಾಸ್ತ್ರವು ಹೇಳುವುದನ್ನು ಆ ಕಾಲದ ಜನರು ಆಚರಣೆಗೆ ತಂದು, ಬಾಳಿಗೆ ದೇವತ್ವವನ್ನು ಬಳಿದುಕೊಂಡು ಬಾಳಿನ ಹೊಳೆಯಲ್ಲಿ ಹೀಗೆಯೇ ಈಜಾಡಬೇಕೆಂದು ನಿರ್ಣಯಿಸಿದರು; ಕೊನೆಗೆ ಈ ಧರ್ಮವು ಮೋಕ್ಷವೆಂಬ ಅನಂತಾನಂದವನ್ನು ಕೊಡುವುದೆಂದು ಸಾರಿದರು. ಜನರಲ್ಲಿ ಆಗ ಅಸಂಖ್ಯರು ಧರ್ಮ ಮೋಕ್ಷದ ಕಡೆಗೇ ಮೋರೆ ತಿರುವಿದರು. ಆಗ ಜನತೆಯ ಮುಂದಾಳುಗಳು ಧರ್ಮಮೋಕ್ಷದ ಧ್ವಜ ಪಟಗಳಾಗಿದ್ದುದರಿಂದ ಅದೇ ಭಾರದ ಶಕ್ತಿಯೆಂದೂ, ಅದನ್ನು ಮೈಗೂಡಿಸಿಕೊಂಡ ವ್ಯಕ್ತಿಯೇ ಮಹಾವ್ಯಕ್ತಿಯೆಂದೂ ನಿಶ್ಚಯಿಸಿ ಅಂಥವರಿಗೆಲ್ಲಾ ಸಮಾಜದಲ್ಲಿ ಗಣನೀಯ ಸ್ಥಾನವನ್ನು ತಂದು ಕೊಟ್ಟರು. ಇದು ಧರ್ಮ ಮೋಕ್ಷಗಳ ಯುಗ. ಆ ಯುಗದಲ್ಲಿ ಅವೇ ಮಾನವನ ಭಾರ ಮಾಪಕವಾಗಿದ್ದುವು.

ಕಾಲ ಚಕ್ರವು ಉರುಳಿತು; ಮಾನವನಿಗೆ ಗೌರವದ ಆಶೆ ಹೆಚ್ಚಿತು. ಆದ್ದರಿಂದ ಸಮಾಜದಲ್ಲಿ ಹಲವರು ರಾವಣ ಸನ್ಯಾಸಿಗಳು ನಿರ್ಮಾಣವಾದರು; ಮೊಳ ಉದ್ದದ ಗಡ್ಡದ, ಮಾರುದ್ದದ ಬೀಳಲು ಬಿದ್ದ ಜಡೆಯ ಮೋರೆ, ಮೈಯೆಲ್ಲಾ ಭಸ್ಮಮಯವಾದ ಅಥವಾ ಉಟ್ಟಪಟ್ಟೆಮಡಿ, ಛರ್ಜರಿ ಎಳೆದುಕೊಂಡ ನಾಮ—ಇವುಗಳಿಂದ ಧರ್ಮಾವತಾರರಾಗಿ ಶಾಸ್ತ್ರ ವಾಕ್ಯಗಳನ್ನು ಮಾತುಮಾತಿಗೆ ಉದಾಹರಿಸುವ ಆಷಾಢಭೂತಿಗಳ ತಂಡವೇರ್ಪಟ್ಟಿತು. ಇವರಿಂದ ಊಹಿಸದ ಅನರ್ಥಗಳೆಲ್ಲಾ ಆಗತೊಡಗಿದುವು. ಆಗ ಜನರಿಗೆ ಧರ್ಮವೆಂದೊಡನೆ ಕಂಪನಪ್ರಾರಂಭವಾಗ ತೊಡಗಿತು. ಅವರಲ್ಲಿ ಧರ್ಮಪ್ರಿಯರಾದ ಹಲವರು ಆ ಮಾರ್ಗಕ್ಕೆ ಶರಣು ಹೋದರು. ಹೀಗೆ ಧರ್ಮದಲ್ಲಿ ಉದಾಸೀನ ಬಂದ ಮೇಲೆ ಪುನಃ ಜನರು ಗೌರವವನ್ನು ಹೊಂದುವ ಮಾರ್ಗವನ್ನು ಶೋಧಿಸತೊಡಗಿದರು. ಆ ಕಾಲದಲ್ಲಿ ಭಾರತ ಭೂಮಿಯನ್ನು ಮುಸಲ್ಮಾನ ದೊರೆಗಳು ಆಕ್ರಮಿಸ ತೊಡಗಿದ್ದರು; ಜನರೆಲ್ಲಾ ಆಗ ಬಾಯಿಯಿಂದ ಮಾತ್ರ ಧರ್ಮ ಧರ್ಮವೆಂದು ಒದರುತ್ತಾ ಬಗಲಲ್ಲಿ ಕನ್ನಗತ್ತರಿಯನ್ನು ಅಡಗಿಸಿಕೊಂಡಿದ್ದರು. ದುರ್ಬಲ ಭಾರತೀಯರ ಆಗಿನ ಕುಹಕತನವು ಆ ಇತರರ ಮುಂದೆ ಮಾರಾಟವಾಗಲಿಲ್ಲ. ಅವರು ಹಿಂದೂ ದೇವಾಲಯ, ನಗರಗಳನ್ನು ನೆಲಸಮ ಮಾಡಿ ಸುವರ್ಣದ ಹೊಳೆಯನ್ನೇ ತಮ್ಮ ದೇಶದ ಕಡೆಗೆ ತಿರುಗಿಸಿದರು. ಕೆಲವರು ಆ ಸಂಪತ್ತಿನ ರಾಶಿಯನ್ನು ತಮ್ಮೂರವರಿಗೆ ಹೊರಲಾರದೆ ಭಾರತದಲ್ಲೇ ನೆಲೆನಿಂತು ಹರಕು ಮುರುಕು ತಕಡಿಯವರ ಮುಂದೆ ಸಂಪತ್ತಿನ ವೈಭವಗಳನ್ನೆಲ್ಲಾ ಬಿಚ್ಚಿದರು. ವಿಲಾಸವು ವಿನಾಶದ ಹಾದಿಯೆಂದು ಬಗೆಯದೆ ಅವರು ವಿಲಾಸದ ತೆರೆಗಳೇ ಸ್ವರ್ಗ ಸುಖದ ಹೊರಳಿಗಳೆಂದು ನಿರ್ಧರಿಸಿ, ಅವುಗಳಿಗೆ ಬೇಕಾದ ತಾಳಮೇಳಗಳನ್ನೆಲ್ಲಾ ಬರಬರನೇ ನಿರ್ಮಿಸಿಕೊಂಡರು. ಅರ್ಥವನ್ನು ಕೊಡಕೊಡಗಳಲ್ಲಿ ತುಂಬಿಸಿಟ್ಟವರೆಲ್ಲಾ ತರುಣಿಯರ ತಾರುಣ್ಯದ ಲಾವಣ್ಯದ ಹೊಳೆಯಲ್ಲಿ ಮನಸೇಚ್ಛೆ ಈಜಾಡ ತೊಡಗಿದ್ದರು. ಒಬ್ಬೊಬ್ಬ ಶ್ರೀಮಂತನು ನೂರಾರು ರಮಣಿಯರೊಡನೆ ರಮಮಾಣನಾಗಲು ಹಿಂಜರಿಯಲಿಲ್ಲ; ಸ್ವತಃ ಬಾದಶಹನೇ ಈ ಓಡಾಟದ ಲೋಲಿಗೆ ಬಿದ್ದಾಗ ಸಾಮಾನ್ಯ ವ್ಯಕ್ತಿಗಳು ಅರ್ಥಕಾಮಗಳ ಬೆನ್ನುಹತ್ತುವುದೇನಾಶ್ಚರ್ಯ? 'ಹಣವೆ, ನಿನ್ನ ಗುಣವನ್ನು ಎಷ್ಟೆಂದು ಹೊಗಳಲಿ?' ಎಂದು ಕೆಲವರು ಧನದ ಮಹಿಮೆಯ ಕುರಿತು ಕವನ ಕಟ್ಟಿ ಹಾಡಿದರು. ಸರಿ; ಧರ್ಮದ ಸ್ಥಾನವನ್ನು ಅರ್ಥ ಪಡೆಯಿತು; ಮೋಕ್ಷದ ಸ್ಥಾನವನ್ನು ಕಾಮ ಪಡೆಯಿತು; ಇದು ಅರ್ಥಕಾಮಗಳ ಯುಗ. ಇದರಲ್ಲಿ ಸಾಕಷ್ಟು ಅರ್ಥಕಾಮಗಳನ್ನು ಚಲಾವಣೆಗೆ ತಂದವನು ಗುರಿಕಾರನಾದ. ಸಾಮಾನ್ಯ ವ್ಯಕ್ತಿಗಳ ಮೋರೆಯೆಲ್ಲಾ ಆ ಕಡೆಗೆ ತಿರುಗಿ ವ್ಯಾಪಾರದಿಂದಲೋ ಅಥವಾ ಧಾಳಿಯಿಂದಲೋ ಧನ ಸಂಗ್ರಹಕ್ಕಾಗಿ ಯತ್ನಿಸ ತೊಡಗಿದರು. ಕೈ ಎಳೆದರೆ ಬೆನ್ನು ತಾನಾಗಿ ಬರುವುದೆಂದು ಅರ್ಥ ಸಂಗ್ರಹಿಸಿ ಅವರಿಂದ ಕಾಮಸೇವನೆಗೆ ತೊಡಗಿದರು. ಈ ಯುಗದಲ್ಲಿ ಅರ್ಥಕಾಮವು ಮನುಷ್ಯನ ಭಾರವನ್ನು ಅಳೆಯಿತು.

ಕ್ರಮೇಣ, ಮನುಷ್ಯರು ಧರ್ಮವನ್ನು ಬಿಟ್ಟು ಒಹುಕಾಲವಾದುದರಿಂದಲೂ, ಅದರಲ್ಲಿ ತತ್ಕಾಲದಲ್ಲಿ ಸುಖವಿಲ್ಲದುದರಿಂದಲೂ, ಆ ಕ್ಷಣದಲ್ಲೇ ವಿಷಯಾನಂದವ

Estd. 1906

TO SUIT ALL SIGHTS AND TASTES

SPECTACLES

at moderate rates

Enquire at:

M/S. Y. RAMA RAO & CO.,

MANUFACTURING OPTICIANS,

MANGALORE-1. (S. K.)

ಎಲ್ಲಾ ತರದ ಫೋಟೋ ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ.

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು-1.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ. ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ. ಬಿ. ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು. ಶಿ. ಹರಿದಾಸ ಭಟ್)	2	0
ನೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.

ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಸ್ನೀವ ಕಾಮತೃಪ್ತಿಗಾಗಿ ಅರ್ಥಾರ್ಜನೆಗೋಸ್ಕರ ಅವರು ತಡಕಾಡ ತೊಡಗಿದರು. ಇದರಿಂದ ಮಾನವ ವರ್ಗವೇ ಜಳ್ಳಾಯಿತು. ಮೊದಲಿನಂತೆ ಈಗ ಅವರು ಸಾಹಸ ಕಾರ್ಯಗಳಿಂದ ಧನ ಸಂಗ್ರಹಿಸದಾದರು; ಆದರೆ ದುರಾಶೆಗಳೆಲ್ಲಾ ಮಾನವ ದೇಹದಲ್ಲಿ ಗೂಡುಕಟ್ಟಿ ಎಂದೋ ತಮ್ಮ ಕಾರ್ಯಭಾರಕ್ಕೆ ತೊಡಗಿದ್ದುವು. ಆಗ ಅವರು ಮೊದಲಿನ ಗುತ್ತಿಗೇ ಹಿಂತಿರುಗುವಷ್ಟು ಶಕ್ತರಾಗಿರಲಿಲ್ಲ; ಕಾಮದ ಆರ್ತನಾದವನ್ನು ಅಲ್ಲಗಳೆಯುವಂತಿರಲಿಲ್ಲ. ಇದರಿಂದ ಹೇಗಾದರೂ ಧನ ಸಂಗ್ರಹಿಸಿ ಹೇಗಾದರೂ ಸುಖಪಟ್ಟರಾಯಿತೆಂದು ನಿಶ್ಚಯಿಸಿ, ಕಳವು, ದರೋಡೆ, ಲಂಚ, ರುಷುವತ್ತುಗಳಿಗಾರಂಭಿಸಿದರು. ಸ್ತ್ರೀಯರಲ್ಲಿ ಕೆಲವರು ವೇಶ್ಯಾವೃತ್ತಿಗಿಳಿದರು. ಈ ಕುಟಿಲ ಮಾರ್ಗದಿಂದ ಹಲವರು ವಿಸ್ತಾರವಾದ ಜಮೀನಿನ ಒಡೆಯರಾಗಿ, ಉಪ್ಪರಿಗೆ ಮನೆಕಟ್ಟಿಕೊಂಡು ಡಿಂಗಾಗಿ ಜೀವನ ನಡೆಸತೊಡಗಿದರು. ಉಳಿದವರೂ ಇದಕ್ಕಾಗಿ ಬಾಯಿನೀರು ಕರೆದು, ಧರ್ಮದ ಗ್ರಂಥಗಳನ್ನೆಲ್ಲಾ ಕಟ್ಟಿಟ್ಟು ಸ್ನಾನಮಾಡಿದೊಡನೆ ಅವುಗಳನ್ನು ಬಿಚ್ಚಿ ಅವುಗಳಿಂದ ಒಂದೊಂದು ಅಧ್ಯಾಯವನ್ನು ಪಾರಾಯಣ ಮಾಡಿ ಆ ಮೇಲೆ ಹಾಗೆಯೇ ಮುಚ್ಚಿ ಅವನ್ನು ಹೂವಿನಿಂದ ಪೂಜಿಸಿ, ಅನಂತರ ತಮ್ಮ ತಸಕು ವಿದ್ಯೆಯನ್ನು ನಡೆಸುತ್ತಾ ಬರತೊಡಗಿದರು. ಇವರ ನಡುವೆ ಬಾಳುತ್ತಿದ್ದ ಧರ್ಮಪ್ರಿಯರು ಇಂಥ ಜನರಿಂದಾಗುವ ಪೀಡೆಗಳನ್ನೆಲ್ಲಾ ಸಹಿಸುತ್ತಾ—'ಅಯ್ಯೋ! ಕಲಿಕಾಲ ಬಂತಪ್ಪಾ! ಕಲಿಪುರುಷನು ಸಜ್ಜನರಿಗೆ ನಿಲ್ಲಲು ನಿಟ್ಟೆನ್ನು ಕೊಡುವುದಿಲ್ಲವಲ್ಲಾ!' ಎಂದು ಹಮ್ಮಯಿಸ ತೊಡಗಿದರು. ಈ ಸಂಗಡದ ಕೆಲವು ಬಾಯಿ ಬಲವಿದ್ದವರು ತಮ್ಮ ಲಾಭದ ಮಾರ್ಗಕ್ಕೆ ತಡೆಯೊಡದಂತೆ ಈ ಶಕುನಿಗಳು ಆಗಾಗ ಅವರನ್ನು ಮುಂದೆಮಾಡಿಕೊಂಡು ಹೋಮ ಶಾಂತಿಗಳನ್ನು ಮಾಡಿ ತಮಗೆ ಅಡ್ಡಗಾಲು ಹಾಕುವವರಿಗೆಲ್ಲಾ ಧಾರಾಳ ದಾನದಕ್ಷಿಣೆ ಕೊಟ್ಟರು. ಇದರಿಂದ ಕುಟಿಲರ ಕಸರತ್ತಿಗೆ 'ಟಂ ಟಂ' ಎನ್ನುವವರಿಲ್ಲವಾಯಿತು. ಇದು ಲಂಚದ ಸಾಂಸಾರಿಕ ಯುಗ. ಈ ಯುಗದಲ್ಲಿ ಪ್ರಚಂಡನಾದ ಧನಿಕನೇ ಭಾರದವನಾದನು.

ಮುಂದೆ ಜನರು ಶ್ರೀಮಂತರ ವಿಲಾಸ ಜೀವನಕ್ಕೆ ಸಂಪೂರ್ಣ ಮರುಳಾದರು. ಇವರನ್ನು ಇಷ್ಟರಲ್ಲೇ ಪಾಶ್ಚಾತ್ಯರ ಬಣ್ಣದ ಜೀವನವು ಆಕರ್ಷಿಸಿಕೊಂಡಿತ್ತು. ಆ ಜೀವನಕ್ಕೆ ಕಾಂಚನವೇ ಪರಮೌಷಧಿಯಾಗಿತ್ತು. ಇದಕ್ಕಾಗಿ ಜನರು ತಮ್ಮ ಧರ್ಮ ಕರ್ಮಗಳನ್ನೆಲ್ಲಾ ಬದಿಯಲ್ಲಿಟ್ಟು ಮಾತಾಡಬೇಕಾದರೂ 'ಫೀಸು ಕಟ್ಟಬೇಕು' ಎನ್ನುವ ಭಾವನೆ ಬಲವಾಡಿಕೊಂಡರು. ತಾವು ಮಾಡುವ ಪ್ರತಿ ಉದ್ಯೋಗಕ್ಕೂ ಸಂಬಳ ಸಾಲದೆ ಗಿಂಬಳಕ್ಕಾಗಿ ಹಾತೊರೆಯತೊಡಗಿದ್ದರು. ಆಗ ಪಾಶ್ಚಾತ್ಯರ ವಿಲಾಸ ಸಾಮಗ್ರಿಗಳು-'ನಮ್ಮ ಗತಿಯೇನು?' ಎಂದು ಭಾರತೀಯನನ್ನು ಕೇಳತೊಡಗಿದ್ದುವು. ಯುದ್ಧಕಾಲವೆಂದೋ, ಬರಗಾಲವೆಂದೋ ಧಾರಣೆಯನ್ನು ರೈತನೂ ಸಾಹುಕಾರನೂ ಏರಿಸಿದ. ಶ್ರೀಮಂತರು ತಮ್ಮ ಸಂಖ್ಯೆ ಹೆಚ್ಚಲು ಬಡವರು ಸಂತತಿ ಸಂಯಮನ ಮಾಡಬೇಕೆಂದು ಸಾಗತೊಡಗಿದರು. ಇದನ್ನು ಕಂಡ ಉಳಿದವರೂ ಸಂಘಕಟ್ಟಿದರು. ಕೆಲವಕೀಲರು ಎರಡೂ ಕಡೆಯಿಂದ ಲಂಚಪಡೆದರೂ ಅವರ ಬಾಯಾರಿಕೆ ತಣಿಯಲಿಲ್ಲ. ಭೂಮ್ಯಾಡಳಿತ ವಿಭಾಗದವರಲ್ಲಿ ಹಲವರು ತಮ್ಮ ಹೆಂಡಿರ ಮೈಮೇಲೆ...ಗಟ್ಟಲೆ ಚಿನ್ನ ಮಾಡಿಸಿಹಕಿ, ಈ ವಾರ್ತೆ ಹೊರಬೀಳಬಾರದೆಂದು ಉಳಿದ ನೋಟುಗಳ ಕಟ್ಟನ್ನೆಲ್ಲಾ ಒಳಗೇ ಇಟ್ಟರು. ಈ ಜಂಜಾಟದೊಳಗೆ ಅಗ್ರಗಣ್ಯರು ಕಾಸುಮಾಡಿಕೊಂಡರು; ಪಾಪದ ಸುಬ್ರಹ್ಮಣ್ಯರು ಕೇಸುಮಾಡಿಕೊಂಡರು! ಕೆಲವು ಇಲಾಖೆಯ ಕೆಲವರು ಅವುಗಳ ವಿಚಾರಣೆಯ ಹೋರಾಟದಲ್ಲಿ ತಾವೂ ಸಾಧ್ಯವಿದ್ದಷ್ಟು ಕಂಡರು. ಆಗ ಬಸ್ಸು ಕಂಡಕ್ಟರರೂ, ಬುಕ್ಕಿಂಗ್ ಕ್ಲಾರ್ಕರೂ ಕೆಲವರು ಗುಪ್ತಕಾಣಿಕೆ ಕೊಟ್ಟವರಿಗೆ ಮಾತ್ರ ಟಿಕೇಟುಕೊಟ್ಟು, ಬಡವನನ್ನು ಗೋಳಾಡಿಸಿ ತಾವೇ ಲಾರಿ ಇಟ್ಟು ವ್ಯಾಪಾರಕ್ಕೆ ತೊಡಗಿದರು. ಆಗ ವಿದ್ಯಾ ಇಲಾಖೆಗೆ ಮಾತ್ರ ನೈವೇದ್ಯಕ್ಕೆ ತತ್ವಾರವಾದುದರಿಂದ ಅದು ಈ ಯುಗದಲ್ಲಿ ಹಗುರವೆನ್ನಿಸಿಕೊಂಡಿತು. ಅವರಲ್ಲಿಯೂ ಈ ಕಾಲದಲ್ಲಿ ತೋರಗಂಟಲಿನವರು ಕೂಗಿಕೊಳ್ಳದಿರಲಿಲ್ಲ. ಆದರೆ ಎಲ್ಲಾ 'ಬರೀ ಗುಲ್ಲು ನಿದ್ದೆಗೇಡಾಯಿತು.' ಜನರಲ್ಲಿ ಕೆಲವರು ಕಾಂಗ್ರೆಸೆಂಬ ಆ ಪವಿತ್ರ ಸಂಸ್ಥೆಯನ್ನು ಮುಂದೆ ಮಾಡಿಕೊಂಡು, 'ಗಾಂಧಿ ಟೊಪ್ಪಿ'ಯನ್ನು ತಲೆಗೇರಿಸಿಕೊಂಡು, 'ಸಹಕಾರ ಸಹಕಾರ'ವೆನ್ನುತ್ತಾ ಬಡಜನರಿಗೆ ತುಂಬಾ ಕಾಟ ಕೊಟ್ಟರು. ಆಗ ಅಪ್ಪನ ನಂಬಿಗೆ ಮಗನಿಗಿಲ್ಲ; ಹೆಂಡತಿಯ ವಿಶ್ವಾಸ ಗಂಡನಿಗಿಲ್ಲವಾಯಿತು. ಆಗ ಈ ದರ್ಬಾರಿನಲ್ಲಿ ಮೇಲೇರಿದವನು ಏರಿಯೇ ಬಿಟ್ಟ. ಧರ್ಮಕರ್ಮವೆಂದವನು ಕಣ್ಣು ಪಿಳುಕಿಸುತ್ತಿದ್ದಾನೆ! ಅಡಿಗೆ ಬಿದ್ದವನು ಇನ್ನು ಏಳು ಮನ್ವಂತರ ದಾಟಿದರೂ ಮೇಲೇಳಲಾರ! ಇದು ಸ್ವಾರ್ಥಾಂಧರ ಯುಗ! ಈ ಯುಗದಲ್ಲಿ ಲಂಚಕೊಡಲು ಸಮರ್ಥನಾದವ, ವಿಷದಂತವಿದ್ದವ—ಇಂಥವರೂ ಕೆಲವರು ಅಖಂಡ ಪುರುಷರು! ಇಂಥವರನ್ನೇ ಕರೆದು ಕರೆದು ಬುಕ್ಕಿಂಗ್ ಕ್ಲಾರ್ಕರು ಟಿಕೇಟು ಕೊಡುತ್ತಾರೆ, ಅಂಗಡಿಕಾರರು ಸಾಲ ಕೊಡುತ್ತಾರೆ. ಉಳಿದವರು ಇಂಥ ಆ ಮಹಾಶಯರಿಗೆ ಬಾಗಿ ನಮಸ್ಕರಿಸುತ್ತಾರೆ. ಈ ಯುಗದಲ್ಲಿ ಇಂಥ ಅವತಾರ ಪುರುಷರೇ ಭಾಗ್ಯಶಾಲಿಗಳೆಂಬುದು ತಿಳಿಯಿತೆ?

ಇಂದು ನಮ್ಮ ಪ್ರಭುತ್ವದ್ದು ರಾಮರಾಜ್ಯವನ್ನು ತರುವುದಕ್ಕಾಗಿ ಪ್ರಯತ್ನ! ಅಂದರೆ ಹೊಳ್ಳುಗಳನ್ನೆಲ್ಲಾ ತಪ್ಪಿ ಹಾರಿಸಿ ಭಾರದ ಕಾಲನ್ನೇ ಬಾಳಿಸಬೇಕೆಂಬ ಆಶೆ. ಇದರ ಯೋಜನೆಗಳು ಇಂದಲ್ಲ ನಾಳೆಯಾದರೂ ನೆರವೇರಿಯೋ ನೆರವೇರುವುವು. ಆಗ ಸ್ವಾರ್ಥಾಂಧರ ಕಂಡವೆಲ್ಲಿ ಹುದುಗುವುದೋ ನೋಡಬೇಕಾಗಿದೆ.

ಮಕ್ಕಳ ಕಾಯಿಲೆಗಳಿಗೆ

ಮಾರ್ಗರೇಟರ

ಫಿಟ್ಸ್ ಕ್ಯೂರ್

ಗ್ರೋಥ್ ಆಯಿಲ್

ಉಪಯೋಗಿಸಲು ಮರೆಯದಿರಿ.

ತಯಾರಕರು:

ಮಾರ್ಗರೇಟ್ ಪ್ರೊ. ಕಂ., ಉಡುಪಿ.

ಬೇಕು

ಪ್ರೆಸ್ಸಿನ ಬೇರೆ ಬೇರೆ ವಿಭಾಗದಲ್ಲಿ ತರಬೇತಿಗಾಗಿ ಕೆಲವು ಹುಡುಗರನ್ನು ತೆಗೆದುಕೊಳ್ಳಲಾಗುವುದು,

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ—

ನವಯುಗ ಪ್ರೆಸ್,

ಉಡುಪಿ.

ಮಂಗಳೂರಿಗೆ ಬಂದಾಗ

ಭೋಜನ ಮತ್ತು ವಸತಿ ಸೌಕರ್ಯಕ್ಕಾಗಿ

ಬಸ್ ಸ್ಟೇಂಡಿನ ಪಕ್ಕದಲ್ಲಿರುವ

ಜಯ ಕೆಫೆ

"ಲಕ್ಷ್ಮಿ ನಿವಾಸ"

ಹಂಪನಕಟ್ಟಾ, ಮಂಗಳೂರು

ಇವರಲ್ಲಿ ವಿಚಾರಿಸಿರಿ

ಪತ್ರ ಮುಖಾಂತ್ರ ಮುಂದಾಗಿ ಕಾದಿರಿಸದೆ ನಿರಾಶರಾಗಬೇಡಿ!!

ಫೋನ್: 82. ತಂತಿ: "Laxminivas"

Prop: N. V. BHAT.

ಗುಣಕ್ಕೆ! ರುಚಿಗೆ!! ತೃಪ್ತಿಗೆ!!!

ಮಂಗಳೂರು

ಗಣೇಶ್ ಬೀಡಿಗಳು

ಮುಖ್ಯ ಕಚೇರಿ ಮತ್ತು ಮಾರಾಟದ ಡಿಪ್ಪೋ:

ಮಂಗಳೂರು ಗಣೇಶ್ ಬೀಡಿ ವರ್ಕ್ಸ್

ಸಂತೇಪೇಟೆ — ಮೈಸೂರು.

ಮುದ್ರಣ

ಕಾರ್ಯಗಳಿಗೆ—

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ.

ಬೇಕಾಗಿದ್ದಾರೆ

ಜಿಲ್ಲೆಯಲ್ಲಿಯೂ ಹೊರ ಜಿಲ್ಲೆಗಳಲ್ಲಿಯೂ ಸಂಚರಿಸಿ 'ನವಯುಗ'ಕ್ಕೆ ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ಜಾಹೀರಾತುಗಳನ್ನು ಸಂಗ್ರಹಿಸಲಿಕ್ಕೂ ಸಂಬಳ ಯಾ ಕಮಿಶನಿನ ಮೇಲೆ ಸರಿಯಾಗಿ ಕೆಲಸ ಮಾಡಬಲ್ಲ ನಂಬಿಗಸ್ಥ, ವಿದ್ಯಾವಂತ ಉತ್ಸಾಹೀ ತರುಣರು ಬೇಕಾಗಿದ್ದಾರೆ. ವಿವರಗಳಿಗೆ ವಿಚಾರಿಸಿರಿ,

ಕೆ. ಹೊನ್ನಯ್ಯ ಶೆಟ್ಟಿ,
ಮೆನೇಜಿಂಗ್ ಎಡಿಟರ್,
ನವಯುಗ, ಉಡುಪಿ.

A VISIT TO MANGALORE

THEY SAY

Is Incomplete Unless
You Spend Some Time At HAMPANKATTA,
The Fashionable Shopping Centre of MANGALORE.

AS A LEADING TEXTILE FIRM

WE PROMISE YOU

PERSONAL ATTENTION AND WELCOME

Which On Returning Home You Will Cherish to Remember.

Chandarana Brothers,

HAMPANKATTA

MANGALORE—1

INDIA'S MOST DURABLE & ECONOMICAL

DIESEL TRUCK & BUS CHASSIS........

TATA-MERCEDES-BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD

MANGALORE

For your requirements in:

School and College Books
Books on Current Day Politics and fiction etc.
Stationery and office requisites
Paper and Printer's Sundries

The Reputed Firm in South Kanara

SCHOOL BOOK COMPANY

Book Sellers • Publishers • Stationers

PRINCIPAL PAPER DEALERS

Head Office:	*Branch Office:*
CAR-STREET	K. S. R. ROAD HAMPANKATTA
MANGALORE	MANGALORE
Phone No. 229	Phone No. 229 A

Distributors for:

The Mysore Paper Mills, Ltd.

BHADRAVATHI

(For S. Kanara & N. Malabar)

Agents of:

Ganges Printing Ink Factory, Ltd.

HOWRAH

ಒಂದೇ ಸಂಸ್ಥೆಯಿಂದ ಬಹುಮುಖ ಸೇವೆ

ಮನೋರಂಜನೆಗೆ ಉತ್ತಮ ಚಲಚಿತ್ರಗಳು!
ಮನಸ್ಸು ಮಿದುಳಿನ ವಿಕಾಸನೆಗೆ
ಉತ್ತಮ ಜಾಹೀರಾತಿಗೆ
ಉತ್ತಮ ಸಾಧನ--"ಪ್ರಕಾಶ ಪತ್ರಿಕೆ"

○

ಮದುವೆ, ಮುಂಜಿಗೆ ಥಿಯೇಟರಿನ ವ್ಯವಸ್ಥೆ,
ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕ ಯಂತ್ರ,
ವ್ಯಾಪಾರ ವಹಿವಾಟು ಸಮೃದ್ಧಿಗೆ ಸ್ಲೈಡ್ ಪ್ರದರ್ಶನ,
ಇತ್ಯಾದಿ ಸೇವಾ ಸೌಲಭ್ಯಗಳಿವೆ.

ಶ್ರೀ ರಾಮಕೃಷ್ಣ ಥಿಯೇಟರ್

ಲಿಮಿಟೆಡ್,

ಉಡುಪಿ, ದ. ಕ.

Regd. No. M. 3619
LICENCE No. 31
Licensed to Post without Prepaym

ವೈದ್ಯರತ್ನಂ ಪಿ. ಎಸ್. ವಾರಿಯರರ

ಆರ್ಯ ವೈದ್ಯ ಶಾಲಾ, ಕೋಟ್ಟಕ್ಕಲ್

(ಕೇರಳ ರಾಜ್ಯ)

ಸ್ಥಾಪನೆ: 1902] [ಫೋನ್ ನಂ. 44 (ತಿರೂರ್)

ಶಾಖೆಗಳು:

ಕಲ್ಲಾಯಿ ರೋಡ್, ಕೋಝಿಕೋಡ್ (ಫೋನ್ ನಂ. 155); ವಡಕ್ಕಂತರ, ಪಾಲ್‌ಘಾಟ್ (ಫೋನ್ ನಂ. 104); ಸೇಲ್ಸ್ ಡಿಪೋ ಸಹಿತ: ವೆಟ್ಟಿಕುಳಂ ರೋಡ್, ತಿರೂರ್ (ಫೋನ್ ನಂ. 31); ಈರೋಡ್ (ಮುನ್ಸಿಪಲ್ ಬಸ್ ಸ್ಟೇಂಡ್ ಎದುರು); ಮಹಾತ್ಮಾ ಗಾಂಧಿ ರೋಡ್, ಎರ್ನಾಕುಲಂ (ಫೋನ್ ನಂ. 674); ಮತ್ತು ಸ್ಟೇಚ್ಯೂ ರೋಡ್, ತಿರುವನಂತಪುರಂ.

ಖಾತ್ರಿಯಾದ ಮತ್ತು ಉತ್ತಮ ಆಯುರ್ವೇದ ಔಷಧಿಗಳು ಹಾಗೂ ತಜ್ಞ ವೈದ್ಯಕೀಯ ಸಲಹೆಗಳು ನಮ್ಮ ಕೇಂದ್ರ ಆಫೀಸು ಮತ್ತು ಶಾಖೆಗಳಲ್ಲಿ ದೊರೆಯುವುವು. ಕೋಟ್ಟಕ್ಕಲ್‌ನಲ್ಲಿರುವ ನಮ್ಮ ಮುಖ್ಯ ವೈದ್ಯಾಧಿಕಾರಿಗಳು ಪತ್ರವ್ಯವಹಾರ ಮೂಲಕವೂ ಸಲಹೆ ನೀಡುವರು. ಕೇರಳದ ವಿಶಿಷ್ಟ ಚಿಕಿತ್ಸೆಗಳಾದ ಪಿಝಿಚಿಲ್, ನವಕ್ಕಿಳಿ ಇತ್ಯಾದಿ ಚಿಕಿತ್ಸೆಗಳನ್ನು ನಮ್ಮ ತಜ್ಞ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಇಲ್ಲಿಕ್ಕೆಗೊಳ್ಳಲಾಗುವುದು.

ಸುವರ್ಣೋತ್ಸವ ನರ್ಸಿಂಗ್ ಹೋಮ್, ಕೋಟ್ಟಕ್ಕಲ್.

ಮೆನೇಜಿಂಗ್ ಟ್ರಸ್ಟಿ.

ದೇಶದ ಬೆಳವಣಿಗೆಗೆ ನೆರವು ನೀಡಿರಿ.

ಜನರ ಉಳಿತಾಯವನ್ನು ಠೇವಣಾತಿಗಳ ಮೂಲಕ ಶೇಖರಿಸಿ ಅದನ್ನು ವ್ಯಾಪಾರ, ಕೈಗಾರಿಕೆ ಮತ್ತು ರಾಷ್ಟ್ರದ ಹಿತಯೋಜನೆಗಳಿಗೆ ಪ್ರಯೋಜನಕಾರಿಯಾಗುವಂತೆ ಮಾಡಿ, ಬ್ಯಾಂಕುಗಳು ದೇಶದ ಆರ್ಥಿಕ ಸ್ಥಿತಿಯನ್ನು ಬಲಗೊಳಿಸುವ ಕೆಲಸದಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಅಂತಲೇ ಬ್ಯಾಂಕುಗಳಲ್ಲಿ ಶೇಖರಿಸಲ್ಪಡುವ ನಿಮ್ಮ ಉಳಿತಾಯವು ದೇಶದ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗುವುದು.

ನಮ್ಮ **54** ವರುಷಗಳ ದೀರ್ಘಾನುಭವ ಮತ್ತು ಭಾರತದಾದ್ಯಂತವಿರುವ ನಮ್ಮ **53** ಶಾಖೆಗಳ ಮೂಲಕ ನಿಮ್ಮ ನೆಚ್ಚಿನ ಬ್ಯಾಂಕು ಸದಾ ನಿಮ್ಮ ಸೇವೆಗೆ ಸಿದ್ಧವಿದೆ.

ಸದ್ಯದಲ್ಲಿಯೇ ತೆರೆಯಲ್ಪಡುವ ನಮ್ಮ ಬ್ಯಾಂಕಿನ ಶಾಖೆಗಳು:

ಮಲ್ಲೇಶ್ವರಂ .... (ಬೆಂಗಳೂರು ಸಿಟಿ)
ಕಾರವಾರ .... (ಉತ್ತರ ಕನ್ನಡ ಜಿಲ್ಲೆ)
ಈರೋಡ್ .... (ಕೊಯಮುತ್ತೂರು ಜಿಲ್ಲೆ)

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: **1906**

ಪ್ರಧಾನ ಕಚೇರಿ : ಉಡುಪಿ (ದ. ಕ. ಜಿಲ್ಲೆ)

Edited, Printed & Published by K. H. Shetty at the Navayuga Press, Udipi, S. India

ನವಯುಗ

ವಾ. ಚಂದಾ ರೂ 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೯. ವಾರ ೨೨ 4-2-1960 Vol. 39 No. 22.

ಪ್ರಜ್ವಲಿತ ಪ್ರಸಂಗ:

ಆತ್ಮ ಬಲವರ್ಧನೆಯೇ ಭಾರತೀಯರ ಕರ್ತವ್ಯ

ನಮ್ಮನ್ನು, ನಮ್ಮ ದೇಶವನ್ನು ಉಳಿಸುವುದಕ್ಕಾಗಿ, ತಮ್ಮ ಬಲನನ್ನು ಅವಶ್ಯ ಬೆಳೆಸಿಕೊಳ್ಳಬೇಕು

ಭಾರತದಲ್ಲಿ ಈ ಬಾರಿ ಪ್ರಜಾರಾಜ್ಯ ದಿನಾಚರಣೆಯನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ರಶ್ಯನ್ ಅಧ್ಯಕ್ಷ ವೊರೊಶಿಲೋವರೂ ನೇಪಾಳದ ಪ್ರಧಾನಮಂತ್ರಿ ಶ್ರೀ ಬಿ ಪಿ ಕೋಯಿರಾಲಾರೂ ಉಪಸ್ಥಿತರಿದ್ದರು. ಭಾರತದಲ್ಲಿ ಉಕ್ಕಿನ ಅಭಾವವನ್ನು ನೀಗಿಸಲು ರಶ್ಯನ್ ನೆರವಿನಿಂದ ಭಿಲಾಯ್ ಉಕ್ಕಿನ ಕಾರಖಾನೆಯನ್ನು ಕಟ್ಟಲಾಗಿದೆಯೆಂಬುದನ್ನು ನಾವು ನೆನಪಿಸಿಕೊಂಡರೆ, ರಶ್ಯವು ಭಾರತದ ಅಭಿವೃದ್ಧಿಗಾಗಿ ಸಲ್ಲಿಸುತ್ತಿರುವ ಸಹಾಯದ ಚಿತ್ರ ಕಣ್ಮುಂದೆ ನಿಲ್ಲುವುದು ಈ ಪ್ರಜಾಪ್ರಭುತ್ವದಿನದಂದು ರಶ್ಯನ್ ಜನತೆಯ ಪ್ರತಿನಿಧಿಯಾಗಿ ಶ್ರೀ ವೊರೊಶಿಲೋವರು ಭಾಗವಹಿಸಿದರು ಶ್ರೀ ಕೊಯಿರಾಲಾರೊಡನೆ ಭಾರತದ ಸಂಬಂಧ ತುಸು ನಿಕಟವಾಗಿಯೇ ಇದೆ ಚೀನೀಯ ಸೇನೆಯು ಭಾರತವನ್ನು ಆಕ್ರಮಿಸಿರುವಂತೆಯೇ ನೇಪಾಳದ ಸೀಮೆಯನ್ನೂ ಉಲ್ಲಂಘಿಸಿವೆಯೆಂಬುದು ಸತ್ಯವಾದರೆ, ಎರಡೂ ರಾಷ್ಟ್ರಗಳು ಸಮಾನಚಿಂತೆಯವಾಗುತ್ತವೆ. ಆದರೆ, ಪ್ರಧಾನಿ ಕೋಯಿರಾಲಾ ತಮ್ಮ ಸೀಮಾತಿಕ್ರಮಣದ ಬಗ್ಗೆ ಏನನ್ನೂ ಹೇಳುವುದಿಲ್ಲ ಮತ್ತು ಸದ್ಯದಲ್ಲಿಯೇ ಅವರು ತಮ್ಮ ನಿಷ್ಟ ಚೀನವನ್ನು ಸಂದರ್ಶಿಸಲಿರುವರು ಶ್ರೀ ಕೋಯಿರಾಲಾ ಪುಟ್ಟ ಗುಡ್ಡಗಾಡಿನ ರಾಜ್ಯ ನೇಪಾಲದ ಪ್ರಧಾನಿಯಾದರೂ ಸದ್ಯವೇ ಕೈಗೊಳ್ಳಲಿರುವ ಚೀನಾ ಪ್ರವಾಸದಿಂದ ಅವರ ಭಾರತಸಂದರ್ಶನಕ್ಕೂ ತುಂಬ ಬೆಲೆಯೂ ಮಹತ್ವವೂ ಬಂದಿದೆಯೆನ್ನಬೇಕು

ಭಾರತದ ರಾಜಧಾನಿಯಲ್ಲಿ ಹಾಗೂ ಇನ್ನಿತರ ಎಲ್ಲ ಕಡೆಗಳಲ್ಲಿಯೂ ಈ ಗಣರಾಜ್ಯೋದಯ ದಿನವನ್ನು ಆಚರಿಸುತ್ತಿರುವಾಗ ಎಲ್ಲ ವೇದಿಕೆಗಳಿಂದಲೂ ಕೇಳಿಬಂದ ಒಂದು ಸಾಮಾನ್ಯ ಮಾತೆಂದರೆ, ನಮ್ಮಲ್ಲಿ ರಾಷ್ಟ್ರೀಯ ಮನೋಭಾವ ಬೆಳೆಯಬೇಕು, ದೇಶದ ಐಕ್ಯಕ್ಕಾಗಿ ಒಂದಾಗಿ ಬಾಳಿ, ರಾಷ್ಟ್ರದ ಸ್ವಾತಂತ್ರ್ಯವನ್ನುಳಿಸಬೇಕು ಎಂಬ ಜನತೆಗಿತ್ತ ಕರೆ. ರಾಷ್ಟ್ರಾಧ್ಯಕ್ಷರಿಂದ ಹಿಡಿದು ತುಂಡು ರಾಜಕಾರಣಿಯ ವರೆಗಿನ ಎಲ್ಲರ ಪಲ್ಲವಿಯೂ ಇದೇ ಆಗಿದೆ ನಮ್ಮ ದೇಶದ ಉತ್ತರದ ಗಡಿಯಲ್ಲಿ ಚೀನಾ ಮಾಡಿದ ಅತಿಕ್ರಮಣದ ಪಾರವೇ ಇದು ಎಂದು ತಿಳಿಯುವುದು ಸರಿಯೇ. ನಮಗೆ ರಾಷ್ಟ್ರೀಯತೆಯ ಪಾಠವನ್ನು ಕಲಿಸಿಕೊಡಲು ಚೀನೀಯರು ತಮ್ಮ ನಿಷ್ಟರೇ ಮುಂದೆ ಬಂದರೆಂದು ಹೇಳಬಹುದು ತಾನೆ?

ಚೀನ-ಭಾರತಗಳ ನಡುವಣ ಸೀಮಾವಿವಾದವು ಶಾಂತಯುತವಾಗಿ ಒಗೆಹರಿಯಬೇಕೆಂಬುದೇ ಈ ಎರಡು ರಾಷ್ಟ್ರಗಳ ಮೂಲೋದ್ದೇಶವೆಂದು ಪ್ರಕಟವಾಗಿದೆ. ಚೀನವು ಅಕ್ರಮವಾಗಿ ತನ್ನದೆಂದು ಭಾರತದ ಭೂಮಿಯನ್ನು ವಶಪಡಿಸಿಕೊಂಡಿರುವುದಾದರೂ ಈ ವಿವಾದವನ್ನು ಪಂಚಶೀಲಗಳ ತಳಹದಿಯಲ್ಲಿಯೇ ಬಗೆಹರಿಸಬೇಕೆಂದು ಘೋಷಿಸುತ್ತಿದೆ ಈ ಪ್ರಸ್ತಾಪವನ್ನು ಪೇಕಿಂಗದಲ್ಲಿ ನಡೆದ ಭಾರತೀಯ ಪ್ರಜಾರಾಜ್ಯ ದಿನಾಚರಣಾ ಸಂದರ್ಭದಲ್ಲಿ ಶ್ರೀ ಚೌ ಪುನರುಚ್ಚಿಸಿದರು ಶ್ರೀ. ವೊರೊಶಿಲೊವ್ ಹಾಗೂ ಸದ್ಯವೇ ಭಾರತಕ್ಕೆ ಸಮಾಗಮಿಸಲಿರುವ ರಶ್ಯನ್ ಪ್ರಧಾನಿ ಶ್ರೀ ಕ್ರುಶೇವರೂ ಇದೇ ರೀತಿಯ ಆಶಯವನ್ನು ವ್ಯಕ್ತಪಡಿಸಿದ್ದಾರೆ ಎರಡು ರಾಜ್ಯಗಳನಡುವೆ ತಪ್ಪು ಅಭಿಪ್ರಾಯಗಳು ಹರಡಿಕೊಂಡಿರುವುದರಿಂದ ಈ ಗಂಡಾಂತರ ಒದಗಿದೆಯೆಂದೂ ಈ ತಪ್ಪಭಿಪ್ರಾಯಗಳು ಶಾಂತಿಯುತವಾಗಿ ಪರಿಹಾರ ಹೊಂದುವಂತಾಗಲೆಂದೂ ಅವರು ಆಶಿಸಿದ್ದಾರೆ

ಈಗ ಎದ್ದಿರುವ ಪ್ರಶ್ನೆಯೊಂದೆ. ಆಕ್ರಮಣಕಾರರು ಯಾರು? ಭಾರತೀಯರೆ? ಅದವಾ ಚೀನೀಯರೆ? ಉಭಯತರರೂ ಪರಸ್ಪರ ದೋಷಾರೋಪಣೆ ಮಾಡುತ್ತ ಹೊತ್ತನ್ನು ದೂಡುತ್ತಿರುವುದಾದರೂ ಅವರಿಬ್ಬರ ವಾದಗಳು ಅಚಲವಾಗಿರುವುದರಿಂದ ಈ ಸಮಸ್ಯೆಯಿನ್ನೂ ಬಗೆಹರಿದಂತಾಗಲಿಲ್ಲ ಚೀನವು ತಾನು ನಿರಪರಾಧಿಯೆಂದೂ ಭಾರತವೇ ತನ್ನ ಮೇಲೆ ಆಕ್ರಮಣ ನಡಸಿ ತನ್ನ ಭೂಭಾಗವನ್ನು ವಶಪಡಿಸಿಕೊಂಡಿದೆ ಎಂದು ದೂರುವುದಾದರೆ, ಅದೇ ಮಾತನ್ನು ಭಾರತವೂ ಉಚ್ಚರಿಸುತ್ತಿದೆ. ಹಾಗಾಗಿ, ಈ ಪ್ರಸಂಗದ ನ್ಯಾಯಾನ್ಯಾಯ ವಿಮರ್ಶೆ ನಡೆಸುವ ಹೊಣೆಗಾರಿಕೆಯನ್ನು ಮೂರನೆಯವನಿಗೆ ಒಪ್ಪಿಸಿಕೊಡಬೇಕೇ ಎಂಬ ಸಂದೇಹವೂ ಆಗಾಗ ಉದ್ಭವಿಸದಿರದು

ಅದೇನೇ ಇದ್ದರೂ ಇಂದು ನಮ್ಮ ಭೀಷಣ ಪರೀಕ್ಷಾಕಾಲ ನಮ್ಮ ಮುಂದಿರುವ ಈ ಭಯಂಕರ ಪರೀಕ್ಷೆಯ ಅವಧಿಯಲ್ಲಿ ನಾವು ತಪ್ಪಿ ನಡೆಯಬಾರದು ಎಂದಿಗೂ ಸರಿಯಲ್ಲ ಭಾರತ-ಚೀನಗಳಲ್ಲಿ ಯಾವ ಶಕ್ತಿ ಹಿರಿಯದೆಂದು ಯುದ್ಧವೇ ನಿರ್ಣಯಿಸಬಲ್ಲದು. ಆದರೆ, ಉಭಯ ಪ್ರಧಾನಿಗಳೂ ಶಾಂತಿಮಂತ್ರ ಪಠಿಸುತ್ತಿರುವುದರಿಂದ ಈ ಯುದ್ಧ ಸಂಭಾವ್ಯವೆನಿಸಬಹುದ ; ಅಸಂಭಾವ್ಯವೂ ಆಗಬಹುದು ನಮ್ಮಲ್ಲಿ ಐಕ್ಯ, ಸಾಹಸ ಮತ್ತು ರಾಷ್ಟ್ರಕ್ಕೋಸ್ಕರ ಆತ್ಮೋತ್ಸರ್ಗ ಮಾಡುವ ಶಕ್ತಿಯಿದೆ ಎಂಬುದನ್ನು ನಾವು ಕಂಡುಕೊಳ್ಳಬೇಕಾಗಿದೆ. ಚೀನ-ಭಾರತಗಳ ನಡುವಣ ಉದ್ಭವಾದ ಉತ್ತರ ಸೀಮೆಯು ಇದುವರೆಗೆ ನಿಷ್ಕ್ರಿಯವಾಗಿದ್ದರೂ ಚೀನವು ಅದನ್ನು ಸಕ್ರಿಯವೆನಿಸಿದೆ. ತಮ್ಮ ಶಕ್ತಿಯು ಹೆಚ್ಚಿದುದರಿಂದ ಚೀನವು ಅಹಂಕಾರಿತಾಳಿ, ಅದು ಆಕ್ರಮಕ ಮನೋವೃತ್ತಿಯನ್ನು ತಾಳಿದೆ. ಸೀಮಾ ಘಟನೆಯಿಂದ ಭೀಷಣ ಪರಿಣಾಮವಾಗಬಹುದು, ಆದುದರಿಂದ, ತನ್ನ ದೇಶದ ಸ್ವಾತಂತ್ರ್ಯವನ್ನೂ ಭದ್ರತೆಯನ್ನೂ ಕಾಪಾಡುವುದು ಸರಕಾರದ ಕರ್ತವ್ಯವಾಗಿದೆ. ವಿದೇಶೀ ರಾಷ್ಟ್ರವೊಂದನ್ನು ನಮ್ಮಗಡಿಯೊಳಗಿನ ಯಾವುದೇ ಒಂದು ಭಾಗದಲ್ಲಿ ಕಾಲೂರಲು ಬಿಡುವುದೆಂದರೆ, ಅದು ರಾಷ್ಟ್ರ ವಿಭಜನೆ, ವಿಘಟನೆ, ದೇಶದ ಗೌರವ, ಸೀಮೆಗಳಿಗೆ ಕುಂದುಂಟಾಗುವಂತೆ ಯಾವುದೇ ಸಂಧಿಯ ಮಾತು ನಾವೆತ್ತುವುದಿಲ್ಲ. ಆದರೆ, ಚೀನದೊಡನೆ ಯುದ್ಧ ಮಾಡುವುದಕ್ಕೂ ನಾವು ಬಯಸುವುದಿಲ್ಲ ಭಾರತ ಮತ್ತು ಚೀನಗಳ ನಡುವೆ ಯುದ್ಧವು ಸಂಘಟಿಸಿತೆಂದರೆ ಇಡಿ ಪ್ರಪಂಚವೇ ಯುದ್ಧಜಾಲದಲ್ಲಿ ಸಿಕ್ಕಿ

(೮ನೇ ಪುಟ ನೋಡಿರಿ)

ಅಮೆರಿಕೆಯ ಕೆಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಜೆಟ್ ಸಂಶೋಧನಾ ವಿಭಾಗದ ಮಾರ್ಗದರ್ಶಕ ಡಾ| ವಿಲ್ಲಿಯಂ ಎಚ್ ಪಿಕೆರಿಂಗ್. ಇವರು ನ್ಯೂಜಿಲೆಂಡಿನಲ್ಲಿ ೧೯೧೦ರಲ್ಲಿ ಜನಿಸಿದ್ದು ೧೯೩೬ರಲ್ಲಿ ಸ್ಕೂಲ್ ಆಫ್ ಫಿಸಿಕ್ಸ್‌ನಲ್ಲಿ ಪದವೀಧರರಾದರು. ತಮ್ಮ ಈಗಿನ ಹುದ್ದೆಯಲ್ಲಿವರು ೧೯೫೪ರಿಂದ ದುಡಿಯುತ್ತಿದ್ದಾರೆ ಜುಪಿಟರ್ ಸಿ ರಾಕೆಟಿನ ನಾಲ್ಕನೆಯ ಅಂತಸ್ತನ್ನು ಅವರ ಪಕ್ಕದಲ್ಲಿ ಕಾಣಬಹುದು.

ಕಥಾವಿಹಾರ

ವಾರದ ಭವಿಷ್ಯ

ಜನ ರಾಶಿಭವಿಷ್ಯಕ್ಕೆ ಹುಚ್ಚರಾಗುತ್ತಾರೆ, ಇದು ಸತ್ಯ. ರಾಶಿಭವಿಷ್ಯ ಜನರಿಗೆ ಹುಚ್ಚು ಹಿಡಿಸುತ್ತದೆ. ಇದೂ ಸತ್ಯ. [ಆದರೆ, ಹುಚ್ಚರಲ್ಲದವರು ವಾರದ ಭವಿಷ್ಯ ಓದುವುದಿಲ್ಲವೆಂಬುದು ಮಾತ್ರ ಶುದ್ಧ ಮಿಥ್ಯ!

"ಹೋ, ಅದು ವಾರಪತ್ರಿಕೆ. ವಾರ ಪತ್ರಿಕೆಯೆಂದ ಮೇಲೆ ಭವಿಷ್ಯವಿದ್ದೇ ಇರ ಬೇಕು."—ಮನಸ್ಸಿನಲ್ಲೇ ಮಥಿಸತೊಡಗಿದ ಹಯವದನ.

"ಥೂ. ಇನ್ನೂ ಪುಟ ತಿರುಗಿಸುವುದಿಲ್ಲ. ಏನು ಅಭಿರುಚಿಯೋ ಮಣ್ಣು "ಈ ಗೋಣಿನ ಭೀಕರ ಕಥೆ"ಯ ಮೇಲೆ!—ಗೊಣಗಿದ ಹಯವದನ.

ಅದೇನು ಹುಚ್ಚು ಹಿಡಿದಿತ್ತೋ ಹಯವದನನಿಗೆ ರಾಶಿಭವಿಷ್ಯದ ಮೇಲೆ. ಚರ್ಚಿಲ್ ಚುಟ್ಟಾವನ್ನಾದರೂ ಬಿಟ್ಟಾರು. ನೆಹರೂ ಗುಲಾಬಿಯನ್ನಾದರೂ ಬಿಟ್ಟಾರು. ಹಯವದನ ರಾಶಿಭವಿಷ್ಯವನ್ನು ಬಿಡಲಾರದವನಾಗಿದ್ದ.

ಆದರೆ ಪತ್ರಿಕೆಗಳನ್ನು ಕ್ರಯಕ್ಕೆ ಪಡೆದುಕೊಂಡು ಓದುವುದೆಂದರೆ ಅದು ತನ್ನ ಭವಿಷ್ಯಕ್ಕೆ ಕಮ್ಮಿ ಎಂದೇ ಅವನ ಅಭಿಪ್ರಾಯವಿತ್ತು.

ಯಾರ ಕಂಕುಳಲ್ಲಾದರೂ ಪತ್ರಿಕೆ ಕಾಣತೊಡಗಿದರೆ ಸರಿ.

"ಸ್ವಾಮಿ, ಅದು ಕರ್ಮವೀರವಾಣಿಯೇ, ಕಲಿಪಿಶಾಚಿಯೇ,....ಅದರಲ್ಲಿ ರಾಶಿಭವಿಷ್ಯವಿದೆಯೇ.... ಸ್ವಲ್ಪ... ನೋಡಿಕೊಡಲೇ—ಹೀಗೆ ಪೀಡಿಸಿ, ಇಸಕೊಂಡು ಓದಿ "ತೆಂಕ್ಸ್" ಎನ್ನುತಿದ್ದ.

ಯಾರಾದರೊಬ್ಬ ಓದುತಿದ್ದನಾದರೆ, ಆತನು ಓದುವ ಪತ್ರಿಕೆಯಲ್ಲಿ ವಾರದ ಭವಿಷ್ಯ ಬರುತ್ತದೆ ಎಂದು ತಿಳಿದಿದ್ದರೆ, ಕುಡಿದ ವಿಟಪುರುಷ ಬೀದಿಸೂಳೆಯ ಹತ್ತಿರ ಸುಳಿಯುವಂತೆ ಸುಳಿದು ಸಮೀಪಿಸುತ್ತಾ ಅವನ ಭುಜ ಮುಖಗಳ ಮಧ್ಯದಲ್ಲಿ ತನ್ನ ಮುಖಾರವಿಂದವನ್ನು ಮೂಡಿಸುತಿದ್ದ.

ಹೆಸರು ಹಯವದನ. ವಾರದ ಭವಿಷ್ಯವನ್ನು ಇಣುಕುವ ಹಯವದನ ನಿಜವಾದ ಹಯವದನನಾಗುತಿದ್ದ.

ಮುನಿಸಿಪಾಲಿಟಿಯ ಗಟಾರವಾಗಿದ್ದ ಹಯವದನ ಬಾಯಿಯಿಂದ ಹೊರಡುತಿದ್ದ 'ಪ್ಯಾಖಾನೆ ಸೆಂಟ'ಗೆ ಸೋತು ಪತ್ರಿಕೆ ಓದುವವ ಪತ್ರಿಕೆಯನ್ನೇ ಹಯವದನನ ಕೈಗೊಪ್ಪಿಸಿ ಉಗುಳಲು ಹೊರಡದೆ ವಿಧಿ ಇರುತಿದ್ದಿಲ್ಲ.

ಇಂದು ನಡೆದುದೂ ಅಷ್ಟೆ. ಹಯವದನ ಇಣುಕುತಿದ್ದ. ಪತ್ರಿಕೆಯ ಆಸಾಮಿ ಮಾತ್ರ ಸೋಲುವಂತಿರಲಿಲ್ಲ.

ಮುನ್ಸಿಪಾಲಿಟಿ ಗಟಾರ ತೆರೆಯಿತು. ಪತ್ರಿಕೆ ಹಯವದನನ ಕೈಗೆ ಬಂತು.

ಹಯವದನ ಕ್ಷಣಮಾತ್ರದಲ್ಲಿ ರಾಶಿಭವಿಷ್ಯದ ಪುಟದಲ್ಲಿ ಮಗ್ನನಾದ.

ಮಕರ ರಾಶಿ.

....ಸ್ತ್ರೀ ಸುಖ ಚೆನ್ನಾಗಿರುತ್ತೆ. ಎಂದಿನಿಂದಲೂ ಕೈಗೂಡದೆ ಉಳಿದಿರುವ ಆಸೆ ಈಡೇರಲಿದೆ....ತಾ. 18 ಅತ್ಯುತ್ತಮ....

ಓದಿದ ಹಯವದನ ಮತ್ತೆ ಮತ್ತೆ ಓದಿದ.

"ಸ್ತ್ರೀ ಸುಖ ಚೆನ್ನಾಗಿರುತ್ತೆ. ಕೈಗೂಡದ ಆಸೆ ನೆರವೇರುತ್ತೆ. 18ನೇ ತಾರೀಕು ಅತ್ಯುತ್ತಮ"

"ಸ್ತ್ರೀ ಸುಖ! ಮದುವೆಯಾಗದ ತನಗೆ ಸ್ತ್ರೀ ಸುಖ. ಯಾಕಾಗಲಾರದು?"

ಯಾವ ತೊಂದರೆಯಿದೆ? ಫೇಮಿಲಿ ಪ್ಲಾನಿಂಗ್ ಭಾಷಣಗಳನ್ನು ಪುಸ್ತಕಗಳನ್ನು ತಾನು ಓದಿಲ್ಲವೆ? ನಳಿನಿಯೂ ಕೇಳಿಲ್ಲವೆ ಅಂದು ಡಾಕ್ಟರ್ ಚಿಪ್ಳಿಸ್‌ಕರ್ ಮಾಡಿದ ಭಾಷಣವನ್ನು.

ನಳಿನಿ ಕೇಳಿದ್ದಾಳೆ. ಲಕ್ಷ್ಯಕೊಟ್ಟು ಕೇಳುವಾಗ ನಾನೇ ಕಂಡಿದ್ದೇನೆ. ಭಾಷಣ ಕೇಳಿದ್ದು ಮಾತ್ರವಲ್ಲ. ಪ್ರದರ್ಶನವನ್ನೂ ಕಂಡಿದ್ದಾಳೆ.

ವಿವಾಹಿತ ಸ್ತ್ರೀಯೆಂದು ನಟಿಸಿ ಅವಳು ಹೋದಂತೆ ಮದುವೆಯಾದ ಗಂಡೆಂದು ನಂಬಿಸಿ ಹಯವದನನೂ ಹೋಗಿದ್ದ "ಫೇಮಿಲಿ ಪ್ಲಾನಿಂಗಿನ ಎಕ್ಸಿಭಿಜ"ನ್ನನ್ನು ನೋಡಲಿಕ್ಕೆ.

"ನಳಿನಿ...ನಳಿನಿ...ನಳಿನಿ" ಈ ಮೂರಕ್ಷರದ ಮಂತ್ರ ಹಯವದನನ ಒಳನಾಲಗೆಯಲ್ಲೇ ಹೊರಳಾಡುತಿತ್ತು.

ಬಟ್ಟೆಯಂಗಡಿಯೊಂದರ ಮೆನೇಜರನಾಗಿದ್ದ ಹಯವದನನಿಗೆ ನಳಿನಿಯನ್ನು, ನಳಿನಿಯ ಡಿಫರೆಂಟ್ ಪೋಜುಗಳನ್ನು ನೋಡುವ ಅವಕಾಶ ಕಡಿಮೆಯಿರಲಿಲ್ಲ.

ಬಟ್ಟೆಯಂಗಡಿಗೆ ತನ್ನ ಗೆಳತಿಯರೊಡನೆಬಂದಾಗ ಹಯವದನ ತಾನೇ ಸರ ಸರ ಮುಂದೆ ಹೋಗಿ ಎಲ್ಲ ಸ್ಟೋಕನ್ನು ಮೇಜಿನ ಮೇಲೆ ಸುರುವಿ ಹಾಕಿದ್ದ.

ನಳಿನಿ ನಕ್ಕಳು. ಮಾತಾಡಿದಳು. ಹೆಸರು ಕೇಳಿದಳು. ಹಯವದನ ತರಿಸಿ ಕೊಟ್ಟ ಕೋಲ್ಡ್ ಕುಡಿದಳು. ನಳಿನಿಯ ಹೊಟ್ಟೆಯಲ್ಲೇನುಂಟೆಂದು ಖಂಡಿತವಾಗಿ ನಿರ್ಧರಿಸಲಾಗಲಿಲ್ಲ ಹಯವದನನಿಗೆ. ತುಟ್ಟಿಯಾದ ಅರುವೆಯಿಂದ ಹೊಲಿಸಿದ ರವಕೆ ಮತ್ತು ಬಿಗಿದು ಕಟ್ಟಿದ ಸೀರೆಯ ಮಧ್ಯೆ ನಳಿನಿಯ ಗೇಣುದ್ದದ ಬಿಳಿ ಹೊಟ್ಟೆ ಹಯವದನನಿಗೆ ಕಾಣುತಿತ್ತು. ಆದರೆ ಅದರೊಳಗೇನಿದೆ? ಅವಳ ಅಭಿಪ್ರಾಯವೇನೆಂದು ಅವನಿಂದ ಖಂಡಿತ ಮಾಡಿಕೊಳ್ಳಲಾಗಲಿಲ್ಲ.

ನಳಿನಿ ಗೆಳತಿಯರೊಡನೆ ಹೊರಡುವಾಗ ಬಟ್ಟೆಯ ಗಂಟನ್ನೊಪ್ಪಿಸುತ್ತಾ ಹೇಳಿದ ಹಯವದನ.

"ಇನ್ನು ಕೆಲವೇ ದಿನಗಳಲ್ಲಿ ಉತ್ತಮ ನಾಯಿಲಾನ್, ಕೋಟ ಬರುವುದಿದೆ ಮರೆಯದೆ ಬನ್ನಿ ಮಿಸ್ ನಳಿನಿ".

"ಥೆಂಕ್ ಯು ಮಿಸ್ಟರ್ ವದನ್" ಎಂದಿದ್ದಳು ನಳಿನಿ.

ತನ್ನನ್ನು ಮಿಸ್ಟರ್ ವದನ್ ಎಂದು ಬೇಕೆಂದೇ ಕರೆದಳೆಂದು ಹಯವದನ ತಿಳಿದುಕೊಂಡ.

ಇಂದಿನ ವಾರದ ರಾಶಿ ಭವಿಷ್ಯ ಓದಿದ ಮೇಲೆ ಹಯವದನ ಒಂದು ನಿರ್ಧಾರಕ್ಕೆ ಬಂದ.

"ಸ್ತ್ರೀ ಸುಖ ಚೆನ್ನಾಗಿರುತ್ತೆ....... ತಾ 18...."

"ಇಂದು ಹದಿನಾಲ್ಕು ನಾಳೆಯಿಂದಲೇ ತೊಡಗಬೇಕು ಸಾಹಸಕ್ಕೆ".

ಅಂದಿನಿಂದ ಹಯವದನ ನಳಿನಿಯ ಮನೆಯೆದುರು ನೂರಾರು ಬಾರಿ ಸುಳಿಯತೊಡಗಿದ. ಒಳಹೋಗುವ ಧೈರ್ಯವೂ ಆತನ ಮೀಸೆಯೊಡನೆ ಬೋಳಿಸಿ ಹೋಗಿತ್ತು. ಅಲ್ಲದೆ ಬಾಗಿಲಲ್ಲೇ ಅಲ್ಸೆಸನ್ ಬೇರೆ ಇದೆ.

ತಾ. 17 ಬೆಳಗ್ಗೆ ಎಂಟುಗಂಟೆಯಿರಬಹುದು. ಬಾಡಿಗೆ ಟ್ಯಾಕ್ಸಿಯೊಂದು ನಳಿನಿಯ ಮನೆಯೆದುರು ನಿಂತುದು; ನಳಿನಿಯ ತಂದೆ ತಾಯಿ ಟ್ಯಾಕ್ಸಿಯಲ್ಲಿ ಹೊರಟದ್ದು. ಮಗಳಿಗೆ ಎಚ್ಚರಿಕೆ ಹೇಳಿದ್ದೂ—ಎಲ್ಲವನ್ನೂ ಕೇಳಿದ ಹಯವದನ.

ಅವನು ಓದಿದ ವಾರದಭವಿಷ್ಯ ಸತ್ಯವಾಗಲು ಹೆಚ್ಚು ಆಧಾರಗಳು ಬೇಕಿರಲಿಲ್ಲ. ನಳಿನಿಯೊಬ್ಬಳನ್ನೇ ಮನೆಯಲ್ಲಿ ಬಿಟ್ಟು ವೃದ್ಧ ದಂಪತಿಗಳು ಎಲ್ಲಿಗೋ ದೂರ ಊರಿಗೆ ಹೊರಟಿದ್ದರು.

ತಾ. 18 ಬಂತು ಸಾಯಂಕಾಲ ಸುಮಾರು ಎಂಟು ಎಂಟೂವರೆ ಯಾಗಿರಬಹುದು.

ಇಂದು, ಈಗ ಸೀದಾ ಒಳ ಹೋಗುವುದೆಂದು ನಿರ್ಧರಿಸಿಯೇ ಬಂದಿದ್ದ ಹಯವದನ.

"ಸ್ತ್ರೀ ಸುಖ ತನಗೆ ಬೇಕು. ಸಿಕ್ಕುತ್ತದೆ. ಹಾಗೆಯೇ ಪುರುಷ ಸುಖ ನಳಿನಿಗೇಕೆ ಬೇಡ?"

"ತೊಂದರೆ, ಅಪಾಯಗಳ ಭಯವಿದೆಯೆ ಫೆಮಿಲಿ ಪ್ಲಾನಿಂಗ್ ಎಕ್ಸಿಭಿಷನ್ ಕಂಡ ಮೇಲೆ? ನಳಿನಿಗೆ ಇವುಗಳ ಪರಿಚಯವಿರಲೂ ಬಹುದು. ಬಹುದು ಯಾಕೆ? ಇರಲೇಬೇಕು. ಒಂದೊಮ್ಮೆ ಇಲ್ಲದಿದ್ದರೆ ತಾನೇಕೆ ಮಾಡಿಸಬಾರದು?"

"ಯಾರಿಗೂ ನಷ್ಟವಿಲ್ಲದ, ಎಲ್ಲರಿಗೂ ಹಿತಕರವಾದ ಈ ಯೋಜನೆ, ಮೇಲೆ ರಾಶಿ ಭವಿಷ್ಯದ ಸಹಾಯ"—ಹಯವದನನ ಎದೆ ಕಲ್ಲಾಯಿತು.

ಅಲ್ಸೆಸನ್ ಕಂಡಾಗ ಮಾತ್ರ ಪುನಃ ನಡುಕ ಓಡಿಸಿಕೊಂಡು ಬಂತು.

"ಸಂಶಯಾತ್ಮಾ ವಿನಶ್ಯತಿ"

"ಎದ್ದೇಳು ಎಚ್ಚರಗೊಳ್ಳು"

ಗೇಟನ್ನು ದಾಟಿ ಕಂಪೌಂಡಿನ ಒಳ ಹೊಕ್ಕು ನಾಲ್ಕು ಹೆಜ್ಜೆ ಹಾಕಿದ ಹಯವದನ.

ಉಪ್ಪರಿಗೆಯಲ್ಲಿ ನಿಂತು 'ಛು" ಎಂದಳು ನಳಿನಿ

ಶರವೇಗದಿಂದ ಬಂತು ಅಲ್ಸೇಶನ್. ಹುಲಿಯಂತಹ ನಾಯಿ ಹೆಣ್ಣು ನಾಯಿ.

ಹಯವದನ ಕಣ್ಣಿಗೆ ಕಂಡದ್ದು ಉಪ್ಪರಿಗೆಯಲ್ಲಿ ಅರ್ಧನಗ್ನಾವಸ್ಥೆಯಲ್ಲಿ ನಿಂತು ನಗುತ್ತಿರುವ ಒಂದು ಗಂಡು ಒಂದು ಹೆಣ್ಣು; ಇಲ್ಲಿ ತನ್ನ ಮೇಲಕ್ಕೆ ನೆಗೆದು ಬರುತ್ತಿರುವ ಅಲ್ಸೆಸನ್ ಹೆಣ್ಣುನಾಯಿ.

"ಸ್ತ್ರೀ ಸುಖ ಚೆನ್ನಾಗಿರುತ್ತೆ. ತಾ 18 ಉತ್ತಮ."

ಹರಿದ ನೆತ್ತರು, ತುಂಡಾದ ಮಾಂಸ ಖಂಡಗಳು—ಹರಿದ ಉಡುಪು—ಪ್ರಾಣವೊಂದೇ ಉಳಿದರೆ ಸಾಕೆಂದು ಮೂರ್ಛೆ ಬಿದ್ದ ಹಯವದನ.

ಮುಖದಲ್ಲಾದ ಗಾಯವನ್ನು ಒತ್ತಿ ಹಿಡಿಯಲೆಂದು ಅಲ್ಲೇ ಬಿದ್ದಿದ್ದ ಪತ್ರಿಕೆಯ ತುಂಡೊಂದನ್ನು ಎತ್ತಿಕೊಂಡ.

ಅದೇ ರಾಶಿ ಭವಿಷ್ಯ.

ಪತ್ರಿಕೆ ಮಾತ್ರ ಬೇರೆ. ವಾರ ಮಾತ್ರ ಅದೇ.

ಮಕರ ರಾಶಿ.

ಓದ ತೊಡಗಿದ.

"...ಅನಾಯಾಸವಾಗಿ ಮಿತ್ರ ಭೇಟಿ. ಸುಖ ಪ್ರಾಪ್ತಿ. ಸ್ತ್ರೀಗಳಿಂದ ದ್ವೇಷ. ತಾ. 18 ಇದ್ದುದರಲ್ಲಿ ಉತ್ತಮ......

ಒಂದೇ ವಾರದ ಎರಡು ಪತ್ರಿಕೆಗಳು!

ಒಂದೇ ರಾಶಿಯಲ್ಲಿ ಎರಡು ಭವಿಷ್ಯಗಳು!

ಯಾವುದು ಸತ್ಯ ಯಾವುದು ಸುಳ್ಳು!

ಜನ ರಾಶಿ ಭವಿಷ್ಯಕ್ಕೆ ಹುಚ್ಚಾಗುತ್ತಾರೆ—ಇದು ಸತ್ಯ.

ರಾಶಿ ಭವಿಷ್ಯ ಜನರಿಗೆ ಹುಚ್ಚು ಹಿಡಿಸುತ್ತದೆ—ಇದೂ ಸತ್ಯ.

ಬುದ್ಧಿವಂತರು ವಾರದ ಭವಿಷ್ಯ ಓದುವುದಿಲ್ಲ—ಇದು ಮಾತ್ರ ಸುಳ್ಳು.

—ಶ್ರೀ ವಾಂತಿ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಸ್ಮೃತಿ ಚಿತ್ರ

ಕಿಲ್ಲೆಯರೊಡನೆ ಎರಡು ದಿನ...

ಹಸನ್ಮುಖ ನಿರಾಡಂಬರತೆಗಳಿಂದ ಎಲ್ಲರನ್ನೂ ಆಕರ್ಷಿಸುತ್ತಿದ್ದ ಅವರು ಕರ್ನಾಟಕವೊಂದೇ ಎಂದು ಹೇಳುತ್ತಿದ್ದರು.

ಕನ್ನಡ ನಾಡಿನ ಪವಿತ್ರ ಕ್ಷೇತ್ರವಾದ ಶ್ರೀ ಧರ್ಮಸ್ಥಳದಲ್ಲಿ ಪ್ರತಿ ವರ್ಷವೂ ಸೇರುತ್ತಲಿರುವ ಸರ್ವಧರ್ಮ ಸಮ್ಮೇಳನವು ನಾಡಿನ ವಿವಿಧ ಭಾಗದ ಸಾಹಿತ್ಯಿಕರೂ ಕಾರ್ಯಕರ್ತರೂ ಒಟ್ಟಿಗೆ ಸೇರಿ, ಪರಸ್ಪರ ಪರಿಚಯ ಮಾಡಿಕೊಳ್ಳಲಿಕ್ಕೆ ಒಂದು ಉತ್ತಮ ಸಂದರ್ಭವಾಗಿದೆ. ಇಂಥ ಒಂದು ಸಮ್ಮೇಳನದ ಸಮಯದಲ್ಲಿ ನನಗೆ ಶ್ರೀ ನಾರಾಯಣ ಕಿಲ್ಲೆಯವರ ಪರಿಚಯವಾಯಿತು. ಸ್ವತಃ ಶ್ರೀ ಧರ್ಮಸ್ಥಳದ ಪೂಜ್ಯ ಮಂಜಯ್ಯ ಹೆಗ್ಗಡೆಯವರೇ ತಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯಕರ್ತರ ಪರಿಚಯ ಮಾಡುತ್ತ ‘‘ಇವರು ನಾರಾಯಣ ಕಿಲ್ಲೆಯವರು; ಸರ್ವೋದಯ ಪತ್ರಿಕೆಯ ಸಂಪಾದಕರು’’ ಎಂದು ತುಂಬ ಅಭಿಮಾನದಿಂದಲೇ ಕಿಲ್ಲೆಯವರನ್ನು ನನಗೆ ತೋರಿಸಿ ನುಡಿದರು.

ಎದುರಿಗೆ ನಿಂತ ಕಿಲ್ಲೆಯವರ ಕಡೆಗೆ ನೋಡಿದೆ.

ತುಸು ನಸುಗಪ್ಪಾದ—ಎಣ್ಣೆಗೆಂಪೆಂದರೂ ಎನ್ನಬಹುದು--ಎತ್ತರವಾದ ಆಳು ಸ್ವಲ್ಪ ನೀಳವಾದ ಮುಖದ ಮಾಟ. ನಿಡಿದಾದ ಮೂಗು ತೀಕ್ಷ್ಣವಾದ ತೇಜಃಪುಂಜವಾದ ಕಣ್ಣುಗಳು. ಯಾರ ಮನಸನ್ನಾದರೂ ಮೊದಲ ದರ್ಶನದಲ್ಲಿಯೇ ವಶಪಡಿಸಿಕೊಳ್ಳಬಲ್ಲ ವರ್ಚಸ್ವಿಯಾದ ಮುಖ ಮುದ್ರೆ. ಒಮ್ಮೆಲೇ ನನ್ನ ಮನಸ್ಸನ್ನು ಸೆಳೆದುವು. ಆದರಲ್ಲೂ ಅವರ ಉಡುಗೆ ತೊಡಿಗೆಗಳೆಲ್ಲ ಖದ್ದರಿನವು. ಅದೂ ಮೈಮೇಲಿನ ನೆಹರು ಶರಟು ನಸುಗೆಂಪು ವರ್ಣದ್ದು. ಅವರ ತ್ಯಾಗ ಜೀವನದ ಪ್ರತೀಕವೆಂಬಂತೆ ಇತ್ತು. ತಲೆಯ ಮೇಲಿನ ಕೂದಲುಗಳನ್ನು ಓರಣದಿಂದ ಬಾಚಿಕೊಂಡು ಬೈತಲೆ ತೆಗೆದು ಬಿಡುವ ಅವರ ರೀತಿಯು ಎಂಥ ಪ್ರತಿಕಾರಕ್ಕೂ ಸತ್ಯವನ್ನು ಬಿಡದೆ ಹಿಡಿದ ಧ್ಯೇಯದತ್ತ ಸಾಗುವ ನಿರ್ಭಯ ವ್ಯಕ್ತಿಯನ್ನು ಪ್ರದರ್ಶಿಸುತ್ತಿತು. ಬಂದುದಕ್ಕೂ ತಲೆಕೊಟ್ಟು—ಬೇಕಾದರೆ ತಲೆತೆರೆದು ಎನ್ನಬಹುದು—ನಿಲ್ಲುವ ಧೈರ್ಯ ಅವರದಾಗಿತ್ತು. ಅಂತಲೇ ಮೊದಲಿನ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಅವರು ಎದುರಿಸಿದ ಪ್ರಸಂಗ ಎಂದಿಗೂ ಮರೆಯುವಂತಹದಲ್ಲ. ಹೆಚ್ಚೇನು? ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಭದ್ರಕೋಟೆಯಂತಿದ್ದರು ಕಿಲ್ಲೆಯವರು! ಅದರಿಂದ ಅವರ ಅಡ್ಡ ಹೆಸರಾದ ‘ಕಿಲ್ಲೆ’ ಎಂಬುವು ಅನ್ವರ್ಥಕ ನಾಮವಾಗಿ ಪರಿಣಮಿಸಿದಂತಿತ್ತು.

ಅಂದು ಸಭೆಯಲ್ಲಿ ಕಿಲ್ಲೆಯವರು ಯಕ್ಷಗಾನವನ್ನು ಕುರಿತು ಮಾತನಾಡಿದರು ರಾಜಕೀಯ ಕಣದಲ್ಲಳಿದು ಸಾಹಿತ್ಯ ಸಂಸ್ಕೃತಿಗಳ ಅಭಿರುಚಿಯನ್ನು ಕಿಲ್ಲೆಯವರಂತೆ ಕಾಯ್ದುಕೊಂಡು ಹೋಗುವವರು ವಿರಳರು. ಕಿಲ್ಲೆಯವರಿಗೆ ಯಕ್ಷಗಾನವೆಂದರೆ ಪ್ರಾಣ. ಅವರು ಅನೇಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆಂದು ಕೇಳಿದ್ದೇನೆ. ಇಷ್ಟೇ ಅಲ್ಲ ಅದರಲ್ಲಿ ವೇಷ ಕಟ್ಟಿ ಅಭಿನಯಿಸಿದ್ದೂ ಉಂಟೆಂತೆ ಇರಲಿ; ಅಂದು ಅವರು ತಮ್ಮ ಅಸ್ಖಲಿತ ವಾಣಿಯಿಂದ ಯಕ್ಷಗಾನದ ಹುಟ್ಟು, ಬೆಳವಣಿಗೆಗಳನ್ನು ಕುರಿತು ಬಹು ಹೃದಯಂಗಮವಾಗಿ ವಿವರಿಸಿದರು. ಆಗ ಅವರ ಮಾತುಗಾರಿಕೆಯನ್ನು ಕಂಡು ಯಾರೂ ಮೆಚ್ಚಬಹುದೆಂದೆನಿಸಿತು. ತುಂಬ ಚತುರ ಉಪನ್ಯಾಸಕಾರರು ಕಿಲ್ಲೆಯವರು.

ಆ ದಿನ ಇರುಳೆಲ್ಲ ನಾನು ಕಿಲ್ಲೆಯವರು ಕೂಡಿಯೇ ಕಳೆದೆವು. ಅಂದು ರಾತ್ರಿ ಶ್ರೀ ಮಂಜುನಾಥ ದೇವಾಲಯದ ಎದ್ರಿರಿನಲ್ಲಿ ಒಂದು ಯಕ್ಷಗಾನ ಪ್ರಸಂಗ ನಡೆಯಿತು. ಅರ್ಜುನ ಬಬ್ರುವಾಹನ ಕಥೆಯನ್ನು ಅಭಿನಯಿಸುವವರಿದ್ದರು. ಅವರಿಗೆಲ್ಲ ಕಿಲ್ಲೆಯವರೇ ವೇಷಕಟ್ಟುವುದರಲ್ಲಿ ಸಹಾಯಕರು. ತುಂಬ ಉತ್ಸಾಹಿ ಜೀವ, ಎಂಥ ಜನಸಾಮಾನ್ಯರಲ್ಲಿಯೂ ಸೇರಿ ಕೆಲಸ ಮಾಡುವ ಸ್ವಭಾವ ಅವರದು. ಬೆಳವಲದ ಬೆಳಗಾಂವಿ ಜಿಲ್ಲೆಯ ನಾವು ಅದೇ ಮೊದಲ ಸಲ ಯಕ್ಷಗಾನವನ್ನು ನೋಡುತ್ತಿದ್ದುದು. ಅದರಿಂದ ಕಿಲ್ಲೆಯವರು ನಮ್ಮ ಹತ್ತರ ಕುಳಿತು ಅದರ ವಿವರವನ್ನೆಲ್ಲ ತಿಳಿಸಿದರು. ತುಂಬ ರಸಿಕರು. ಅಂಥ ಚಳಿಯಿಂದ ಮೈಕೊರೆಯುವಂಥ ಇರುಳೆಲ್ಲ ಎದುರಿಗೆ ಕುಳಿತು ಯಕ್ಷಗಾನವನ್ನು ನಮ್ಮೊಡನೆ ನೋಡಿದರು, ನಲಿದರು

ಕಿಲ್ಲೆಯವರದು ತುಂಬ ಸ್ನೇಹಮಯಿಯಾದ ಜೀವ. ಮುಂದೆಯೂ ಆಗಾಗ ಕಾಗದ ಬರೆಯುತ್ತಿದ್ದರು. ತಮ್ಮ ‘ಸರ್ವೋದಯ’ ಪತ್ರಿಕೆಯನ್ನೂ ಕಳಿಸುತ್ತಿದ್ದರು. ಪತ್ರಿಕೆಯಾದರೂ ಅವರಂತೆಯೇ ಸದಭಿರುಚಿಯನ್ನು ಪ್ರದರ್ಶಿಸುತ್ತಿತ್ತು. ಅದಕ್ಕಾಗಿ ಕಿಲ್ಲೆಯವರು ಬಹು ಶ್ರದ್ಧೆಯಿಂದ ದುಡಿಯುತ್ತಿದ್ದರು.

ಆ ಮೇಲೆ ಬಹುದಿನಗಳು ಉರುಳಿದುವು. ನಾನು ಯಾವುದೋ ಒಂದು ಕೆಲಸಕ್ಕಾಗಿ ಹುಬಳ್ಳಿಗೆ ಹೋಗಿದ್ದೆ. ಆಕಸ್ಮಾತ್ ದಾರಿಯಲ್ಲಿ ಕಿಲ್ಲೆಯವರು ಎದುರಿಗೆ ಬಂದರು! ಮತ್ತಾರಾರೋ ಕಾಂಗ್ರೆಸಿನ ಮುಖಂಡರೂ ಜತೆಯಲ್ಲಿದ್ದರು. ತುಂಬ ಅವಸರ ಅಗತ್ಯದ ಕೆಲಸದಲ್ಲಿಯೂ ಅವರು ಇದ್ದಂತಿತ್ತು. ಅಂದೇ ಮಧ್ಯಾಹ್ನ ಕೆ. ಪಿ. ಸಿ. ಸಿ. ಯ ಮೀಟಿಂಗೂ ಇತ್ತು. ಅಂಥದರಲ್ಲೂ ಕಿಲ್ಲೆಯವರು ನನ್ನ ಕೈಹಿಡಿದು ಎಳೆದುಕೊಂಡು ನಡೆದು ಬಿಟ್ಟರು! ಹಾಗೆಯೇ ತಾವು ಅತಿಥಿಗಳಾಗಿದ್ದ ಶ್ರೀ ಹಳ್ಳಿಕೇರಿಯವರಲ್ಲಿ ಕರೆದುಕೊಂಡು ಹೋದರು. ಮತ್ತೆ ಸಾಹಿತ್ಯ, ಬರವಣಿಗೆ, ಕ್ಷೇಮ ಸಮಾಚಾರದ ಮಾತುಗಳೆಲ್ಲ ನಡೆದುವು. ಅವರ ಆತ್ಮಪಕ್ಷಿ ತುಸು ಹೊತ್ತು ರಾಜಕಾರಣದ ಜಂಜಾಟದಿಂದ ಮೇಲೆದ್ದು, ಪಕ್ಷ ಪ್ರತಿಪಕ್ಷಗಳ ಗೊಂದಲವನ್ನಳಿದು, ಸ್ವಾತಂತ್ರ್ಯಾಕಾಶದಲ್ಲಿ ವಿಹರಿಸಿತು. ಅಂಥದರಲ್ಲಿಯೇ ಅವರ ಜೀವ ನಿಜವಾದ ಆನಂದವನ್ನು ಪಡೆಯುತ್ತಿತ್ತು.

ಆ ದಿನ ಶ್ರೀ ಹಳ್ಳಿಕೇರಿಯವರಲ್ಲಿ ಇಬ್ಬರೂ ಕೂಡಿ ಊಟ ಮಾಡಿದೆವು. ಕಿಲ್ಲೆಯವರು ಅಲ್ಪಾಹಾರಿಗಳು. ದಕ್ಷಿಣ ಕನ್ನಡ ಜಿಲ್ಲೆಯವರಾದರೂ ನಮ್ಮ ಉತ್ತರ ಕರ್ನಾಟಕದ ಊಟವನ್ನು ಬಹು ಪ್ರೀತಿಯಿಂದ ಸೇವಿಸಿದರು. ರೊಟ್ಟಿಯನ್ನು ಬಿಸ್ಕೀಟೆಂದು ವರ್ಣಿಸಿ ನಕ್ಕು ನಲಿಸಿದರು. ‘ಇಂದಿಲ್ಲ ನಾಳೆ ನಾವೆಲ್ಲ ಕರ್ನಾಟಕದವರು ಒಂದೇ ಆಡಳಿತೆಗೆ ಸೇರತಕ್ಕವರು. ಕನ್ನಡ ನಾಡಿನ ಯಾವ ಮೂಲೆಯಲ್ಲಿ ಹೋದರೂ ಕೂಡ ತೋರಿಕೆಗೆ ಊಟ ಉಡಿಗೆಗಳಲ್ಲಿ ಅಂತರ ಕಂಡಿತೇ ವಿನಹ ಅಭಿರುಚಿಯಲ್ಲಿ ಒಂದೇ; ಸಂಸ್ಕಾರದ ಮೂಲವೆಲ್ಲ ಒಂದೇ’—ಎಂದು ನುಡಿದರು.

ಮುಂದೆ ಎಲ್ಲರೂ ಸೇರಿ ಕೆ. ಪಿ. ಸಿ. ಸಿ. ಕಾರ್ಯಾಲಯದ ಕಡೆಗೆ ಸಾಗಿದೆವು. ಕಿಲ್ಲೆಯವರ ಕೈಯಲ್ಲಿ ನನ್ನ ಕೈಯಿತ್ತು. ನನಗಾದರೊ ಅವರನ್ನು ಬೀಳ್ಕೊಂಡು ಬೇರೆಡೆಗೆ ಹೊರಡಬೇಕಿತ್ತು.

‘‘ಹುಬಳ್ಳಿಯವರೆಗೆ ಬಂದಿರುವಿರಿ ನೋಡಬಾರದವರೆಗೂ ನಡೆಯಿರಲ್ಲ! ‘ಇಲ್ಲಿಂದ ಬೆಳಗಾಂವಿ ಏನೂ ದೂರಲ್ಲ.’’ ಎಂದು ಮಾತಿಗೆ ನಾನೇ ಬೇರೆ ದಿಶೆಯನ್ನು ತೋರಿಸಿದೆ.

‘‘ಬರುವೆ; ಒಮ್ಮೆ ಬರಬೇಕಾಗಿದೆ ನನಗೆ. ಆದರೆ ಈ ಸಲ ಆಗುವದಿಲ್ಲ’’ ಎಂದು ಕಿಲ್ಲೆಯವರು ನುಡಿದರು.

ಆ ಮಾತಿನಲ್ಲಿ ರಾಜಕಾರಣಿಗಳ ರೀತಿಯಿರಲಿಲ್ಲ. ಹೃತ್ಪೂರ್ವಕವಾಗಿಯೇ ಕಿಲ್ಲೆಯವರು ನಕ್ಕು ನುಡಿದಿದ್ದರು.

‘‘ಇನ್ನು ನಾನು ಹೋಗಿ ಬರುವೆ’’

‘‘ಇಂದು ಹೊರಡುವುದೋ ಊರಿಗೆ?’’

‘‘ಅಹುದು; ಇಂದು ರಾತ್ರಿಯ ಗಾಡಿಗೆ ಹೊರಡುವೆ ...’’

ಹಾಗಾದರೆ ಅಲ್ಲಿಯವರೆಗೆ ನಡೆಯಿರಿ! ಏನಾದರೂ ನಿಮ್ಮ ಸಾಹಿತ್ಯಕ್ಕೆ ವಸ್ತು ಸಿಕ್ಕುವುದೇನು ನೋಡುವ ನಡೆಯಿರಿ!’’

‘‘ಬೇಡ, ನಿಮ್ಮ ರಾಜಕಾರಣದ ಗುದ್ದಾಟದಲ್ಲಿ ನನ್ನದೇನು ಕೆಲಸವಿದೆ?’’ ಅಷ್ಟೇ ನಕ್ಕು ನುಡಿದು ನಡೆದೆ.

ಸ್ವಲ್ಪ ದೂರ ಹೋಗಿ ಹೊರಳಿನೋಡಿದೆ. ಕಿಲ್ಲೆಯವರು ಕೆ. ಪಿ. ಸಿ. ಸಿ. ಯ ಮೆಟ್ಟಿಲಗಳ ಮೇಲೆ ನಿಂತು. ನನ್ನನ್ನೇ ನೋಡುತ್ತಿದ್ದರು. ನಾನು ಹೊರಳಿ ನೋಡಿದುದನ್ನು ಗಮನಿಸಿ,

‘‘ಹೋಗಿ ಬನ್ನಿ!’’

ಎಂದು ಮನಸ್ಸಿಲ್ಲದೆಯೂ ಬೀಳ್ಕೊಟ್ಟರು ಕಿಲ್ಲೆಯವರು. ಅಷ್ಟರಲ್ಲಿ ನಾವು ಬಹುದಿನದ ಆಪ್ತ ಸ್ನೇಹಿತರಂತೆ ಆಗಿ ಬಿಟ್ಟಿದ್ದೆವು. ಅಂಥ ಸ್ನೇಹಪೂರ್ಣ ವ್ಯಕ್ತಿಯವರದು.

‘‘ಇನ್ನಾವಾಗ ತಿರುಗಿ ಭೆಟ್ಟಿ?’’

ಎಂದು ನಾನು ಕೇಳಿದೆ.

‘‘ಇದೆಯಲ್ಲ ಧರ್ಮಸ್ಥಳದ ದೀಪೋತ್ಸವ ನಮ್ಮ ಭೆಟ್ಟಿಗೆ ಸ್ಥಾನ. ಆ ಪುಣ್ಯಕ್ಷೇತ್ರದ ಸನ್ನಿಧಿಯಲ್ಲಿ.......’’

ಎಂದು ಹೇಳಿ ಕಿಲ್ಲೆಯವರು ಹುಬ್ಬಳ್ಳಿಯಲ್ಲಿ ಹೂನಗೆಯೊಂದನ್ನು ಬೀರಿ ಬೀಳ್ಕೊಟ್ಟರು.

ಆ ಮೇಲೆ ನಾನು ಧರ್ಮಸ್ಥಳಕ್ಕೆ ಹೋಗಿ ಬಂದೆ. ಆದರೆ ಕಿಲ್ಲೆಯವರ ಭೆಟ್ಟಿಯಾಗಲಿಲ್ಲ. ಆ ನಗೆ ಮುಖವೇ ನನಗೆ ಅವರ ಕೊನೆಯ ದರ್ಶನವಾಯಿತು. ಆದರೂ ಕಿಲ್ಲೆಯವರ ವ್ಯಕ್ತಿತ್ವವು ನನ್ನ ಮನಸ್ಸಿನ ಮೇಲೆ ಅಚ್ಚಳಿಯದೆ ಇನ್ನೂ ಉಳಿದಿದೆ. ಎಂದಿಗೂ ಉಳಿಯುತ್ತದೆ.

—ಶ್ರೀ ಮಿರ್ಜಿ ಅಣ್ಣಾರಾಯ

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೪–೨–'೬೦	೨೨

ನೇಪಾಳ ಭಾರತ ಸಂಬಂಧ

ಭಾರತದ ಉತ್ತರ ಸೀಮೆಯ ಬಳಿಯ ಅಗಲಕಿರಿದಾದ ಗುಡ್ಡಕಾಡುಗಳ ರಾಜ್ಯ ನೇಪಾಳದ ಪ್ರಧಾನಿ ಶ್ರೀ ಕೋಯಿರಾಲಾ ಅವರು ತಮ್ಮ ಎರಡುವಾರಗಳ ಭಾರತದ ಸೌಹಾರ್ದ ಸಂದರ್ಶನವನ್ನು ಮುಕ್ತಾಯಗೊಳಿಸಿ ಸ್ವದೇಶಕ್ಕೆ ತೆರಳಿದರು. ಈ ಸಂದರ್ಭದಲ್ಲಿ ನೇಪಾಲ ಮತ್ತು ಭಾರತಗಳ ಪ್ರಧಾನಿದ್ವಯರು ಜತೆಹೇಳಿಕೆಯೊಂದನ್ನಿತ್ತು ಅದರಲ್ಲಿ ತಾವು ಹಲವಾರು ವಿಷಯಗಳ ಕುರಿತಾಗಿ ಚರ್ಚೆನಡೆಸಿರುವುದಾಗಿಯೂ ಇಂದಿನ ಅಂತಾರಾಷ್ಟ್ರೀಯ ಪರಿಸ್ಥಿತಿ ಮತ್ತು ಆರ್ಥಿಕ ಸ್ಥಿತಿಗತಿಗಳನ್ನೂ ಪರಿಶೀಲಿಸಿರುವುದಾಗಿಯೂ ಹೇಳಿದ್ದಾರೆ. ವಿಶ್ವಶಾಂತಿಯ ಬಗ್ಗೆ ಎರಡೂ ದೇಶಗಳು ವಿಶೇಷ ಕಳಕಳಿಯನ್ನು ವ್ಯಕ್ತಪಡಿಸುವುದರಿಂದ ಈ ಬಗ್ಗೆ ವಿಚಾರವಿನಿಮಯವು ಅವಶ್ಯವಾಗಿ ಕಾಣುತ್ತದೆ. "ಭಾರತ ಮತ್ತು ನೇಪಾಲಗಳ ಪ್ರಧಾನಿಗಳು ಪರಸ್ಪರ ಸ್ವಾತಂತ್ರ್ಯ ಮತ್ತು ಭದ್ರತೆಯ ಆಸಕ್ತಿಯನ್ನು ತೋರಿಸುತ್ತಾರೆ. ಸಾಮಾನ್ಯಾಭಿರುಚಿಯ ವಿಷಯಗಳಲ್ಲಿ ಇನ್ನೂ ನಿಕಟಸಂಬಂಧವನ್ನಿಟ್ಟುಕೊಳ್ಳಬಯಸುತ್ತಾರೆ". ಎಂಬ ಈ ಹೇಳಿಕೆಯ ಮಾತು ನೇಪಾಳವು ಅಂತಾರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಭಾರತದ ಧೋರಣೆಯತ್ತ ದೃಷ್ಟಿಹರಿಸುವುದಿಲ್ಲ ಎಂಬವರಿಗೆ ಒಂದು ಸಮರ್ಪಕವೆನಿಸಿದ ಉತ್ತರವನ್ನು ಕೊಡುತ್ತದೆ. ಹಿಂದೂ ನೇಪಾಲಿ ಸ್ನೇಹ ಸಂಘದಲ್ಲಿ ಮಾತಾಡಿದ ಶ್ರೀ ಕೋಯಿರಾಲಾರವರು ಎರಡೂ ದೇಶಗಳ ಕೆಲವೊಂದು ವ್ಯಕ್ತಿಗಳು ತಪ್ಪು ತಿಳುವಳಿಕೆಯ ಬೀಜವನ್ನು ಬಿತ್ತಿ ಅದರ ಪ್ರಸಾರವನ್ನು ಮಾಡುತ್ತಿರುವರೆಂದೂ ಇದು ನಿಜವಾದ ಸತ್ಯದರ್ಶನವನ್ನು ಮಾಡುವುದಿಲ್ಲವೆಂದೂ ಉದ್ಗರಿಸಿದರು. ನೇಪಾಳವು ಇತ್ತೀಚೆಗೆ ಪ್ರಜಾಪ್ರಭುತ್ವವಾಗಿ ಮಾರ್ಪಟ್ಟಿದ್ದು ಅದು ಪ್ರತಿಯೊಂದರ ಮಾರ್ಗದರ್ಶನಕ್ಕೂ ಭಾರತವನ್ನೇ ಇದಿರುನೋಡುವುದು ಸರಿಯೇ. ಏಕೆಂದರೆ, ಪ್ರಪಂಚದ ಅತಿದೊಡ್ಡ ಗಣರಾಜ್ಯಗಳಲ್ಲಿ ಭಾರತವೂ ಒಂದಾಗಿರುವುದು ಮಾತ್ರವಲ್ಲ; ನೇಪಾಳ—ಭಾರತಗಳ ಸಂಬಂಧವು ಇಂದು ನಿನ್ನೆಯದಲ್ಲ. ಪೌರಾಣಿಕಕಾಲದಿಂದಲೂ ಸಂಬಂಧಿತವಾಗಿರುವ ಈ ಎರಡು ದೇಶಗಳ ಸಂಸ್ಕೃತಿ ಹಾಗೂ ಇತಿಹಾಸಗಳಲ್ಲಿರುವ ಗಾಢವಾದ ಸಂಬಂಧವೇ ಈ ರೀತಿಯ ಹೊಂದಾಣಿಕೆಗೆ ಹೇತುವಾಗಿದೆ. ಇದರಿಂದಾಗಿ ಸಾಮಾನ್ಯಾಭಿರುಚಿಯ ವಿಚಾರಗಳಲ್ಲಿ ಎರಡೂ ರಾಷ್ಟ್ರಗಳು ಅತಿ ನಿಕಟವಾಗಿ ಮುಂದುವರಿಯುವುದು ನಿಜವಾಗಿಯೂ ಅಪೇಕ್ಷಣೀಯವಾಗಿದೆ.

ಈ ಜತೆ ಹೇಳಿಕೆಯಲ್ಲಿ ಅನಭಿವೃದ್ಧ ದೇಶವಾದ ನೇಪಾಳದ ಅಭಿವೃದ್ಧಿ ಯೋಜನೆಯ ಬಗ್ಗೆ ಭಾರತ ಸರಕಾರವು ೧೮ ಕೋಟಿ ರೂಪಾಯಿಗಳ ಸಹಾಯವನ್ನು ನೀಡಲು ಸಮ್ಮತಿಸಿದೆಯೆಂದೂ ಸುಮಾರು ೪ ಕೋಟಿ ರೂಪಾಯಿಗಳ ವೆಚ್ಚದಿಂದ ಪೂರ್ವಕೋಸಿ ಕಾಲುವೆಯನ್ನು ಕಡಿಸಲು ಒಪ್ಪಿದ್ದು ಈ ರೀತಿ ಒಟ್ಟು ೧೮ ಕೋಟಿ ರೂಪಾಯಿಗಳನ್ನು ನೀಡಲು ಸನ್ನದ್ಧವಾಗಿದೆಯೆಂದು ಹೇಳಲಾಗಿದೆ. ನೇಪಾಳದ ನಾಣ್ಯ ಪರಿವರ್ತನೆಯನ್ನು ಮಾಡಲು ಅನುಕೂಲವಾಗುವಂತೆ ವ್ಯಾಪಾರ ವಾಣಿಜ್ಯ ಸಂಬಂಧದ ಒಪ್ಪಂದವೊಂದನ್ನು ಪುನಾರಚಿಸಲಾಗುವುದೆಂದೂ ತಿಳಿದು ಬರುತ್ತದೆ. ಆದರೆ, ಆರ್ಥಿಕ ಸ್ಥಿತಿಯಲ್ಲಿ ಭಾರತಕ್ಕಿಂತಲೂ ಹಿಂದುಳಿದಿರುವ ನೇಪಾಳವು ಈ ಸಂಬಂಧವನ್ನು ಬೇಗನೆ ಕಡಿದುಕೊಳ್ಳಲು ಇಷ್ಟಪಡಲಾರದು. ಅನಭಿವೃದ್ಧ ನೇಪಾಳದ ಅಭಿವೃದ್ಧಿ ಯೋಜನೆಯ ರೂಪರೇಷೆಗಳ ಬಗ್ಗೆ ಅಧ್ಯಯನ ಮಾಡಲು ನೇಪಾಲೀ ತಜ್ಞರನ್ನು ಭಾರತಕ್ಕೆ ಕಳಿಸಲಾಗುವುದೆಂದೂ ಇಲ್ಲಿ ಅವರು ಯೋಜನೆಯ ರೂಪು, ಸಾಧನೆ ಮೊದಲಾದುವುಗಳಲ್ಲಿ ಅನುಭವಪಡೆಯುವರೆಂದೂ ಪಿಸುಮಾತು ಕೇಳುತ್ತಿದೆ. ನೇಪಾಳದ ಅರಸರು ಇತ್ತೀಚೆಗೆ ತಮ್ಮ ದೇಶದ ಅಭಿವೃದ್ಧಿಸಾಧಿಸಲು ಸಹಾಯಪಡೆಯಲು ರಶ್ಯಕ್ಕೆ ತೆರಳಿಬಂದಿದ್ದು, ಸದ್ಯದಲ್ಲಿಯೇ ಅಮೆರಿಕೆಗೂ ಸಂದರ್ಶನವೀಯಲಿದ್ದಾರೆ. ಹೀಗೆ ಎಲ್ಲರ ಸಹಾಯ ಹಾಗೂ ಸಹಕಾರದಿಂದ ನೇಪಾಲವನ್ನು ಭದ್ರವಾಗಿ ಕಟ್ಟುವ ಇರಾದೆ ಅವರಿಗಿದೆಯೆಂಬುದನ್ನು ಒಪ್ಪಬೇಕು. ಆದರೆ, ಕೇವಲ ವಿದೇಶೀಯ ಸಹಾಯವನ್ನೇ ಅವಲಂಬಿಸಿಕೂತರೆ ಅದರಿಂದ ಅಭಿವೃದ್ಧಿ ಸಾಧಿಸಿದಂತಾಗಲಿಲ್ಲ. ದೇಶದ ಜನತೆಯೂ ಯೋಜನೆಯ ಯಶಸ್ಸಿಗಾಗಿ ಬದ್ಧಕಂಕಣವಾಗಬೇಕು. ಇಲ್ಲವಾದರೆ, ನಿರೀಕ್ಷಿತ ಪರಿಣಾಮವಾಗುವುದು ಎಂದಿಗೂ ಸಾಧ್ಯವಿಲ್ಲ. ಭಾರತವು ಸ್ವತಂತ್ರವಾದಾಗ, ಅದರ ಸ್ಥಿತಿಗತಿಯು ಇಂದಿನ ನೇಪಾಲದಕ್ಕಿಂತ ಉನ್ನತವಾಗಿತ್ತು. ಇದೊಂದು ಭಾರತದ ಅದೃಷ್ಟವೆಂದೇ ಹೇಳಬೇಕು. ಇಲ್ಲಿ ಸುವ್ಯವಸ್ಥಿತವಿದ್ಯೆ, ಆರೋಗ್ಯ, ಸಾರಿಗೆ, ಅಂಚೆತಂತಿ, ವ್ಯಾಪಾರಿ ಸಂಘಸಂಸ್ಥೆಗಳು, ಸಹಕಾರ ಸಂಘಗಳು, ಬೇಂಕುಗಳೆಲ್ಲವೂ ಇದ್ದುವೆಂಬುದನ್ನೂ ರಾಷ್ಟ್ರಪುನಾರಚನೆಯ ಮಹಾಕಾರ್ಯಕ್ಕೆ ಇವುಗಳಿಂದ ವಿಶೇಷ ಪ್ರಯೋಜನ ಲಭಿಸಿರುವುದೆಂಬುದನ್ನೂ ನಾವು ಮರೆಯುವಂತಿಲ್ಲ.

ಆದರೆ, ನೇಪಾಳದ ಸ್ಥಿತಿಗತಿಯು ಇದಕ್ಕೆ ವಿರುದ್ಧವಾಗಿದೆ. ಮೊನ್ನೆ ಮೊನ್ನೆಯವರೆಗೆ ರಾಜಪ್ರಭುತ್ವವಾಗಿದ್ದ ನೇಪಾಳವು ರಾಜರ ಉದಾರತೆಯಿಂದಾಗಿ ಪ್ರಜಾಪ್ರಭುತ್ವವಾಗಿ ರೂಪುಗೊಂಡಿತು. ಅಲ್ಲಿ ಪ್ರಜಾಸತ್ತೆಯಿನ್ನೂ ಹಾಲು ಹಸುಗೂಸಿನಂತಿದೆ. ಆದುದರಿಂದ ಅದು ಸ್ವತಂತ್ರವಾಗಿ ನಡೆದುಕೊಂಡು ಹೋಗುವುದು ಅಸಾಧ್ಯವೆಂತಲೇ ತನ್ನ ಸಂಬಂಧಿಕನಾದ ಭಾರತದತ್ತ ದೃಷ್ಟಿ ಹರಿಸುವುದು ಸ್ವಾಭಾವಿಕವೇ. ಅನಭಿವೃದ್ಧ ರಾಜ್ಯಗಳ ಉನ್ನತೀಕರಣದ ಪರಮ ಪುನೀತವಾದ ಕಾರ್ಯವು ಅಂತಾರಾಷ್ಟ್ರೀಯ ಮಹತ್ವದ್ದೆಂದು ಶ್ರೀ ಕೋಯಿರಾಲಾ ಅಭಿಪ್ರಾಯ ಪಡುತ್ತಾರೆ. ಇದನ್ನು ನಾವೂ ಒಪ್ಪಿಕೊಳ್ಳಬಹುದು. ಭಾರತದಲ್ಲಿಯೇ ಶಿಕ್ಷಣಾದಿಗಳನ್ನು ಪಡೆದು, ಇಲ್ಲಿನ ಪರಿಪಕ್ವ ಅನುಭವಗಳಿಂದ ಕೂಡಿದ ಇಂದಿನ ನೇಪಾಲೀಯ ನಾಯಕರು ತಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಕಾದುಕೊಂಡು ಸ್ವಾಭಿವೃದ್ಧಿ ಕಾರ್ಯದಲ್ಲಿ ನಿರತರಾಗುವರೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೇ ಈ ರೀತಿ ಉನ್ನತೀಕರಣ ಪಥದತ್ತ ಸಾಗುವುದೂ ಅವಶ್ಯವಿದೆ ತಾನೆ?

ಧಾರ್ಮಿಕ ಶಿಕ್ಷಣ

ಭಾರತ ಸರಕಾರವು ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣವು ಅವಶ್ಯವೆ, ಅನವಶ್ಯವೆ; ಅವಶ್ಯವಾದರೆ ಯಾವ ರೀತಿಯಲ್ಲಿ ಅದನ್ನು ಕೊಡಬಹುದೆಂಬ ವಿಷಯಗಳನ್ನು ಪರಿಶೀಲಿಸಿ, ವರದಿ ಮಾಡಲು ಬೊಂಬಾಯಿಯ ರಾಜ್ಯಪಾಲ ಶ್ರೀ ಶ್ರೀಪ್ರಕಾಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯು ಈಗ ತನ್ನ ವರದಿಯನ್ನು ಭಾರತ ಸರಕಾರಕ್ಕೆ ಅರ್ಪಿಸಿದ್ದು, ಅದರಲ್ಲಿ ಇಂದಿನ ವಿದ್ಯಾರ್ಥಿಗಳಲ್ಲಿ ಕಂಡು ಬರುವ ಅಶಿಸ್ತು, ಅಸಭ್ಯ ವರ್ತನೆ ಮೊದಲಾದುವುಗಳಿಗೆ ಪ್ರಚಲಿತ ಶಿಕ್ಷಣದಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಶಿಕ್ಷಣದ ಹ್ರಾಸವಿರುವುದೇ ಕಾರಣವೆಂದು ಅಭಿಪ್ರಾಯಪಟ್ಟಿದೆ. ಇಂದಿನ ನವನಾಗರಿಕತೆಯ ದಿನಗಳಲ್ಲಿ ನಾಗರಿಕನು ಧಾರ್ಮಿಕ ಬಲವನ್ನು ಕಳೆದುಕೊಂಡಿರುವುದರಿಂದ ತನ್ನ ಜೀವನದ ಅಮೂಲ್ಯ ರತ್ನವೊಂದನ್ನೇ ದೂರವಿಟ್ಟಿರುವಂತೆ ಭಾವಿಸುವುದು ಸಹಜ. ಹಳೆಯ ಧರ್ಮ ಸತ್ತಿದೆ; ಹೊಸ ಧರ್ಮ ಹುಟ್ಟಿಲ್ಲ ಎಂಬಂತಾಗಿ ಆತ ನಿಸ್ಸಹಾಯಕನಾಗಿದ್ದಾನೆ; ಅಶಾಂತಿಯ ತ್ರಿಶಂಕು ಸ್ವರ್ಗದಲ್ಲಿ ಜೋಲಾಡುತಿದ್ದಾನೆ. ಇದಕ್ಕೆ ಪ್ರಾಥಮಿಕ ವರ್ಗಗಳಿಂದಲೇ ಮೌನ ಪ್ರಾರ್ಥನೆಯೊಡನೆ ಹಿಂದಿನ ಧಾರ್ಮಿಕ ಮಹಾಪುರುಷರ ಜೀವನ ವೃತ್ತಾಂತಗಳನ್ನೂ, ಕ್ರಮೇಣ ವಿವಿಧ ಧರ್ಮಗಳ ಸ್ಥೂಲಪರಿಚಯವನ್ನೂ ಮಾಡಿಕೊಟ್ಟು ಧರ್ಮದಲ್ಲಿ ಆಸಕ್ತಿಹುಟ್ಟುವಂತೆ ಮಾಡುವುದು ಅವಶ್ಯವಿದೆಯೆಂದೀ ವರದಿಯು ಹೇಳಿದೆ. ವಿದ್ಯಾರ್ಥಿಗಳು ಇಂದಿನ ಪರಿವರ್ತನ ಶೀಲ ಪ್ರಪಂಚದ ಸಂಪೂರ್ಣ ಜ್ಞಾನವನ್ನು ಪಡೆಯುವುದರೊಡನೆ, ಶಿಸ್ತು, ಸಂಯಮನ ಹಾಗೂ ಶಾಂತಯುಕ್ತ ಜೀವನವನ್ನು ಬದುಕಲು ಸಹಾಯಕವಾಗುವಂತೆ ಧಾರ್ಮಿಕ ಶಿಕ್ಷಣವನ್ನು ಯಾವರೀತಿ ಅಳವಡಿಸಿಕೊಳ್ಳಬಹುದು ಎಂಬ ವಿಷಯದಲ್ಲಿ ವಿಶೇಷ ಆಸಕ್ತಿವಹಿಸಬೇಕಾಗಿದೆ. ಏಕೆಂದರೆ, ಈಗಾಗಲೇ ವಿದ್ಯಾರ್ಥಿಯಾದವನು ಅಭ್ಯಸಿಸಬೇಕಾದ ಹಲವಾರು ವಿಷಯಗಳೇ ಆತನ ತಲೆ ಚಿಟ್ಟುಹಿಡಿಸಲು ಸಾಕಾಗಿರುವಾಗ ಇನ್ನೂ ಹೆಚ್ಚಿನ ವಿಷಯವನ್ನು ತುಂಬಿಸಿದರೆ, ಅದನ್ನು ಜೀರ್ಣಿಸುವ ಶಕ್ತಿಯೂ ತನ್ನಲ್ಲಿರಬೇಕು ತಾನೆ? ಜೀವನಕ್ಕಾಧಾರವಾದ ಧಾರ್ಮಿಕ ಶಿಕ್ಷಣದಿಂದ ನಮ್ಮ ಜನಾಂಗವು ಅಧಃಪತನದಿಂದ ಬದುಕಬಲ್ಲುದು ಸರಿಯೇ. ಆದರೂ ವ್ಯವಹಾರಕ್ಕೆತರುವಲ್ಲಿ ಅದು ಅಂಧಶ್ರದ್ಧೆ ಯುತ್ತ ಜನಮನವನ್ನಾಕರ್ಷಿಸದೆ ಶೀಲ, ಸಹಿಷ್ಣುತೆ, ಶಿಸ್ತು, ಚಾರಿತ್ರ್ಯ, ಸಂಯಮಾದಿಗಳ ವರ್ಧನೆಗೆ ನೆರವಾಗುವಂತೆ ವಿವೇಚಿಸಬೇಕಾದುದು ಅವಶ್ಯವಲ್ಲವೆ?

ಅಲ್ಲಲ್ಲಿಯ ಸುದ್ದಿಸಾರ

ಸಿಂಡಿಕೇಟ್ ಬ್ಯಾಂಕಿನ ಹೊಸ ಪ್ರಧಾನ ಕಚೇರಿ ಕಟ್ಟಡದ ಶಂಕು

ಸ್ಥಾಪನೆಯು—ತಾ. 13ನೇ ಬೆಳಿಗ್ಗೆ ಮಣಿಪಾಲದಲ್ಲಿ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ| ಟಿ. ಎಂ. ಎ. ಪೈಗಳಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ವಿ. ಎಸ್. ಕುಡುವರು ವಹಿಸಿದ್ದರು. ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳು ಸ್ವಾಗತಭಾಷಣ ಮಾಡುತ್ತ ಸಣ್ಣ ರೀತಿಯಲ್ಲಿ ಪ್ರಾರಂಭವಾದ ಸಿಂಡಿಕೇಟು ಬೆಳೆದುಬಂದ ಬಗೆಯನ್ನು ಇಂದು ಅದು ಪಡೆದಿರುವ ಉನ್ನತ ಸ್ಥಾನಕ್ಕಾಗಿ ಡಾ| ಪೈಗಳ ಅವಿಶ್ರಾಂತ ದುಡಿಮೆಯೇ ಕಾರಣವೆಂದೂ ಸಿಬ್ಬಂದಿಯವರ ಕರ್ತವ್ಯನಿಷ್ಠೆಯನ್ನೂ ವಿವರಿಸಿದರು. ಡಿಪ್ಯುಟಿ ಜನರಲ್ ಮೆನೇಜರ್ ಶ್ರೀ ಕೆ. ಕೆ. ಪೈಗಳು ಸಂದೇಶಗಳನ್ನೋದಿದರು. ಶಂಕುಸ್ಥಾಪನೆಯು ವಿಧಿಪೂರ್ವಕ ನೆರವೇರಿದ ಮೇಲೆ ಸಭೆಯಲ್ಲಿ ಉಪಸ್ಥಿತರಿದ್ದ ಅದಮಾರು ಮತ್ತು ಕಾಣಿಯೂರು ಮಠದ ಶ್ರೀಪಾದಂಗಳವರು ಡಾ| ಪೈಗಳ ಕರ್ತೃತ್ವ ಶಕ್ತಿಯನ್ನು ಮೆಚ್ಚಿ ಮಾತಾಡಿ ಬ್ಯಾಂಕಿಗೆ ಶ್ರೇಯಸ್ಸನ್ನು ಕೋರಿದರು. ಡಾ| ಪೈಗಳು ಜನತೆಯ ಸಹಕಾರದಿಂದಲೇ ಸಂಸ್ಥೆ ಉನ್ನತಿಹೊಂದಿತೆಂದೂ ಜನತೆಗೆ ಸೌಕರ್ಯವನ್ನು ಒದಗಿಸುವುದೇ ಸಂಸ್ಥೆಯ ಗುರಿಯೆಂದೂ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 418/1958
R. E. P. 447/1959

ಹಿರಿಯಣ್ಣ ಶೆಟ್ಟಿ —ಅರ್ಜಿದಾರ

ಮತ್ತು

ನಾಗಯ್ಯ ಶೆಟ್ಟಿ —ಎದ್ರಿ

ಇವರೊಳಗೆ

ಎದ್ರಿ: ನಾಗಯ್ಯ ಶೆಟ್ಟಿ—ತಿಮ್ಮಪ್ಪ ಶೆಟ್ರ ಮಗ—ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಪಡುಮುನ್ನೂರು ಈಗ ಹಾಲಿಬೊಂಬಾಯಿಯಲ್ಲಿರುವವ—ಸದ್ರಿ ಎದ್ರಿಗೆ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ ಅಮಲ್‌ಜಾರಿಯಲ್ಲಿ ನಿಮ್ಮ ಹಕ್ಕಿನ ಸ್ಥಿರಾಸ್ತಿ ಏಲಮ್ಮ ಹಾಕುವ ನೋಟಿಸು ಬಗ್ಗೆ ತಾರೀಕು 11—2—60 ಕ್ಕೆ ಇಟ್ಟಿದೆ—ಆ ಕುರಿತು ಏನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಹಗಲು 11 ಗಂಟೆಗೆ ಹಾಜರ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು.

(By order of the Court)

P. N. Krishnamurthi Rao
Advocate for Petr.
Udipi Dated 1—2—1960

Canara Bank Limited.

Impressive Results of working for 1959.

As against Rs. 14 lakhs in 1958, the net profit of Canara Bank Limited in 1959 amounted to Rs. 18.30 lakhs which together with the balance of Rs. 0.37 lakh brought forward from the previous year brings the amount available for distribution to Rs. 18.67 lakhs. A sum of Rs. 5 lakhs has been transferred to Reserves to bring them on a par with Paid-up Capital of Rs. 50 lakhs. The Directors have recommended a gross taxable dividend of 15% (Rs. 5—40 lakhs) on Equity Shares which works out to 10.50% net per share as against 10% declared in the previous years. Dividend at 5% on Preference Capital will amount to Rs. 0.70 lakh. Provision for taxation of Rs. 4.75 lakhs (1958—Rs. 3.91 lakhs) is also recommended. Bonus to staff amounts to Rs. 2.40 lakhs (1958—Rs. 2.10 lakhs), leaving a balance of Rs. 0.42 lakh to be carried forward.

ಜನರಲ್ ಮೆನೇಜರ್ ಶ್ರೀ ಟಿ ಎ. ಪೈಗಳ ಅನುಭವಪೂರ್ಣ ಮಾರ್ಗದರ್ಶನವು ಕೊಂಡಾಡತಕ್ಕುದೆಂದೂ ಹೇಳಿದರು. ಮಾಜಿ ಮಂತ್ರಿ ಶ್ರೀ ಬಿ.ವಿ. ಬಾಳಿಗ, ಶ್ರೀ ಕೆ.ಪಿ. ಮುಕುಂದ ಪ್ರಭು, ಶ್ರೀ ಎಲ್. ಎಚ್. ಪ್ರಭು ಇವರು ಸಂದರ್ಭೋಚಿತ ಭಾಷಣ ಮಾಡಿ ಶುಭ ಕೋರಿದರು.

ಅಧ್ಯಕ್ಷ ಶ್ರೀ ವಿ. ಎಸ್. ಕುಡುವರು ಮಾತನಾಡುತ್ತ ಡಾ| ಪೈಗಳೂ ತಾನೂ ಸಹಪಾಠಿಗಳೆಂದೂ ಆಗಿನಿಂದಲೇ ಅವರು ಕರ್ತೃತ್ವ ಶಕ್ತಿವುಳ್ಳವರಾಗಿದ್ದರೆಂದೂ ಹೇಳಿ ಬ್ಯಾಂಕಿನ ಸರ್ವತೋಮುಖ ಪ್ರಗತಿಯನ್ನು ಆಶಿಸಿದರು. ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಬ್ಯಾಂಕಿನ ಡ್ಯಾರೆಕ್ಟರ್ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರು ಮುಖ್ಯ ಅತಿಥಿಗಳಿಗೆ ಹೂಮಾಲೆಯನ್ನರ್ಪಿಸಿದ್ದರು.

ಉಡುಪಿಯಲ್ಲಿ ಮಂತ್ರಿ ಕರಮರಕರರು—ಕೇಂದ್ರ ಸರಕಾರದ ಆರೋಗ್ಯ ಸಚಿವ ಶ್ರೀ ಡಿ. ಪಿ. ಕರಮರಕರರು ಕಳೆದ ತಾ. ೨೪ನೇ ಬೆಳಿಗ್ಗೆ ಮಣಿಪಾಲದಲ್ಲಿ ನವೀನವಾಗಿ ಕಟ್ಟಿಸಿದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮೈನ್ ಹಾಸ್ಪೆಲ್ ಬ್ಲಾಕನ್ನು ಉದ್ಘಾಟಿಸುತ್ತ ಎಕೇಡೆಮಿಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಯಶಸ್ಸಿಗಾಗಿ ಸಂತೃಪ್ತಿಯನ್ನು ವ್ಯಕ್ತಪಡಿಸಿದರಲ್ಲದೆ ಇಲ್ಲಿಯ ಮೆಡಿಕಲ್ ಕಾಲೇಜು ತಜ್ಞ ಶಿಕ್ಷಕರನ್ನು ಉತ್ತಮ ಸಾಮಗ್ರಿಗಳನ್ನೂ ಪಡೆದು ರಾಷ್ಟ್ರದ ಉತ್ತಮ ಕಾಲೇಜುಗಳಲ್ಲಿ ಒಂದಾಗಿ ಪರಿಗಣಿಸಲ್ಪಡಬೇಕಾಗಿದೆಯೆಂದರು. ಸರಕಾರಕ್ಕೆ ಅಸಾಧ್ಯವಾದ ವಿದ್ಯಾಪ್ರಕರ್ಷ ಒಂದು ಖಾಸಗಿ ಪ್ರಯತ್ನದಿಂದ ಸಾಧ್ಯವಾಗುವುದು ಪುರಸ್ಕರಣೀಯವಾಗಿದೆ. ಈ ಸಂಸ್ಥೆಯನ್ನು ಸ್ಥಾಪಿಸಿ ಬೆಳೆಸಿದ ಡಾ| ಟಿ. ಎಂ. ಎ. ಪೈಗಳ ದೂರದೃಷ್ಟಿ ಕಾರ್ಯದಕ್ಷತೆ ಒಂದು ಮೇಲ್ಪಂಕ್ತಿಯಾಗಿದೆ ಎಂದು ಹೇಳಿ ವಿದ್ಯಾರ್ಥಿಗಳಿಗೆ ತಕ್ಕ ಉಪದೇಶವಿತ್ತು ಮಣಿಪಾಲವು ವಿಶ್ವವಿದ್ಯಾನಿಲಯದ ಕೇಂದ್ರವಾಗಲೆಂದು ಹಾರೈಸಿದರು.

ಉಡುಪಿ ನಗರಸಭೆಯ ಪರಿಯಿಂದ ಮಂತ್ರಿ ಕರಮರಕರರಿಗೆ ಉಡುಪಿ ಮೈನ್ ಶಾಖೆಯಲ್ಲಿ ನಳ್ಳಿನೀರಿನ ಪೂರೈಕೆ ಒಳಚರಂಡಿ ವ್ಯವಸ್ಥೆ ಮೊದಲಾದುವುಗಳಿಗೆ ಕೇಂದ್ರದ ಸಹಾಯವನ್ನು ಕೇಳಿಕೊಳ್ಳುವ ಮಾನಪತ್ರವನ್ನು ನಗರಸಭಾಪತಿ ಡಾ| ಕೆ. ಎಲ್. ಐತಾಳರು ಅರ್ಪಿಸಿದರು. ಮಂತ್ರಿಗಳು ಸೂಕ್ತ ಉತ್ತರವಿತ್ತ ಮೇಲೆ ಡಾ| ಪಿ. ಜಿ. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮಂತ್ರಿಗಳು ಆಯುರ್ವೇದ ಕಾಲೇಜಿಗೆ ಸಂದರ್ಶನವಿತ್ತಾಗ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಮಾನಪತ್ರವನ್ನರ್ಪಿಸಿದರು.

ಎಂ. ಜಿ. ಎಂ. ಕಾಲೇಜಿನ—ಅರ್ಥ ಹಾಗೂ ಇತಿಹಾಸ ಸಂಘದ ಆಶ್ರಯದಲ್ಲಿ ಡಚ್ ಮನಶ್ಶಾಸ್ತ್ರಜ್ಞರಾದ ಶ್ರೀ ಹೊಂಡಿಯಸ್ ಅವರು 'ಹೊಲ್ಲೆಂಡ್ ಮತ್ತು ಭಾರತ' ಎಂಬ ಕುರಿತು ಉಪನ್ಯಾಸವಿತ್ತರು. ಆರಂಭದಲ್ಲಿ ಶ್ರೀ ಶಿವರಾಮ ಕಾರಂತರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸಂಜೀವ ಸೆಟ್ಟಿರು ಧನ್ಯವಾದಗಳನ್ನಿತ್ತರು.

ಪ್ರಜಾಪ್ರಭುತ್ವ ದಿನಾಚರಣೆಯು ಇತರ ಕಡೆಗಳಂತೆ ಉಡುಪಿಯಲ್ಲಿಯೂ ಯಥಾ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಬೆಳಿಗ್ಗೆ ಪ್ರಭಾತಪೇರಿಯಾಗಿ ಗಾಂಧಿ ಮೈದಾನದಲ್ಲಿ ಡಾ| ಕೆ.ಎಲ್. ಐತಾಳರಿಂದ ಧ್ವಜಾರೋಹಣ ನಡೆಯಿತು. ಮಕ್ಕಳಿಗೆ ಸಿಹಿತಿಂಡಿ ವಿತರಣೆಯಾಯಿತು. ಸಾಯಂಕಾಲ ಯನ್.ಸಿ.ಸಿ. ಮತ್ತು ಎ.ಸಿ.ಸಿ.ಯವರ ಪಥಸಂಚಲನವಾಗಿ ಶ್ರೀ ಟಿ. ಪೈಗಳವರಿಂದ ವಂದನಾ ಸ್ವೀಕಾರವಾಯಿತು. ಶ್ರೀ ಪೇಜಾವರ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಸ್ಪರ್ಧೆಯಲ್ಲಿ ವಿಜಯಗಳಿಸಿದವರಿಗೆ ಬಹುಮಾನ ವಿತರಣೆಯಾಯಿತು.

ಶ್ರೀ ಕೆ. ಗೋಪಾಲಕೃಷ್ಣ ಬಲ್ಲಾಳರ ನಿಧನ-ಬೆಳ್ಳೆ ಪಂಚಾಯತಿನ ಅಧ್ಯಕ್ಷರೂ ಜನಪ್ರಿಯ ಕಾರ್ಯಕರ್ತರೂ ಆಗಿದ್ದ ಶ್ರೀ ಕೆ. ಗೋಪಾಲಕೃಷ್ಣ ಬಲ್ಲಾಳರು ಇತ್ತೀಚೆಗೆ ಆದ ಕನ್ನಡಿಪಾವಿನ ಕಡಿತದಿಂದ ಕಳೆದ ತಾ. ೨೮ರಂದು ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಉಡುಪಿ ನಗರಸಭೆಯಲ್ಲಿ ಸ್ವಲ್ಪ ಸಮಯ ಬಿಲ್‌ಕಲೆಕ್ಟರರಾಗಿಯೂ ದುಡಿದಿದ್ದರು.

ಶ್ರೀ ಕೆ. ಆರ್. ಕೆ. ಭಟ್ಟರಿಗೆ ಸನ್ಮಾನ—ಲೈಫ್ ಇನ್ಸೂರೆನ್ಸ್ ಕಾರ್ಪೋರೇಶನಿನ ಉಡುಪಿ ವಿಭಾಗದ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರಿಗೆ ಪೈದರಾಬಾದಿಗೆ ವರ್ಗವಾದ ಪ್ರಯುಕ್ತ ಸ್ಥಳೀಯ ಆಫೀಸರು ಮತ್ತು ಸಿಬಂದಿಯ ಪರಿಯಿಂದ ಬೀಳ್ಕೊಡುವ ಸಮಾರಂಭವು ತಾ. ೨೩ರಂದು ಆಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಇ. ಯು. ಜಕೋಬರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಸನ್ಮಾನ ಪತ್ರವೊಂದನ್ನು ಸಿಬಂದಿಯ ಪರವಾಗಿ ಶ್ರೀ ಸಿ. ಎಚ್. ದಾಸರು ಅರ್ಪಿಸಿದರು. ಅದರಲ್ಲಿ ಭಟ್ಟರ ಕಾರ್ಯಪಟುತ್ವ ಮತ್ತು ವ್ಯಕ್ತಿತ್ವದ ಹಾರ್ದಿಕ ಪ್ರಶಂಸೆಯನ್ನೂ ಅವರ ಸಮರ್ಥ ಮಾರ್ಗದರ್ಶನದ ಬಗ್ಗೆ ಕೃತಜ್ಞತೆಯನ್ನೂ ವ್ಯಕ್ತಪಡಿಸಿದ್ದರು. ಅನಂತರ ಶ್ರೀಗಳಾದ ಕೆ. ಜನಾರ್ಧನ ಪೈ, ಯು. ಕೆ. ಶಿಣೈ, ಜಿ. ಎಂ. ಸಿ. ಡಿ'ಸೋಜ, ಎನ್. ಎಸ್. ಪರ್ಕಳ, ಟಿ. ವಿ. ವೆಂಕಣ್ಣ, ಕೆ. ಆನಂದ ಗಾಣಿಗ ಟಿ. ಸಂಜೀವ ಪೈ ಮತ್ತು ಕುಮಾರಿ ಎಂ. ನಳಿನಿ ಬಾಯಿಯವರು ಶ್ರೀ ಭಟ್ಟರ ಗುಣಗಾನ ಮಾಡುತ್ತಾ ಗೌರವಾದರಗಳನ್ನು ಸೂಚಿಸಿದರು. ತಮ್ಮ ಉತ್ತರದಲ್ಲಿ ಶ್ರೀ ಭಟ್ಟರು ತನ್ನ ಬಗ್ಗೆ ತೋರಿಸಿದ ಪ್ರೀತಿಗಾಗಿ ಆಭಾರ ಸಲ್ಲಿಸುತ್ತಾ ಸಿಬಂದಿಯವರೂ ಜೀವ ವಿಮಾ ಕಾರ್ಯಕರ್ತರೂ ಕೂಡಿ ತನಗಿತ್ತ ಉತ್ಸಾಹಪೂರ್ಣ ಸಹಕಾರ ಮತ್ತು ಒಮ್ಮನಸ್ಸಿನ ದುಡಿಮೆಯೇ ಉಡುಪಿ ವಿಭಾಗದ ಯಶಸ್ಸಿನ ರಹಸ್ಯವಾಗಿದೆ ಎಂದರು. ಅಧ್ಯಕ್ಷರು ಶ್ರೀ ಭಟ್ಟರಿಗೂ ಶ್ರೀಮತಿ ಆಶಾ ಭಟ್ಟರಿಗೂ ಉತ್ತರೋತ್ತರ ಶ್ರೇಯಸ್ಸನ್ನು ಕೋರಿದರು ಉಡುಪಿ ಶಾಖಾ ಮೆನೇಜರ್ ಶ್ರೀ ಟಿ. ಪಿ. ಎನ್. ನಂಬಿಯಾರರು ಧನ್ಯವಾದವಿತ್ತರು. ಶ್ರೀ ಭಟ್ಟರ ಸ್ಥಾನಕ್ಕೆ ಮದ್ರಾಸಿನ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳ ನೇಮಕವಾಗಿದ್ದು ಅವರು ಫೆಬ್ರವರಿ ಎರಡನೇ ವಾರದಲ್ಲಿ ಅಧಿಕಾರ ವಹಿಸಿಕೊಳ್ಳುವರೆಂದು ತಿಳಿದು ಬರುತ್ತದೆ.

ವಿದೇಶ ಪ್ರವಾಸ ಕಥನ—ಯುರೋಪು ಮತ್ತು ಅಮೆರಿಕದ ಸಂಚಾರವನ್ನು ಮುಗಿಸಿ ಬಂದಿರುವ ಡಾ. ಟಿ. ಮಾಧವ ಪೈ ಮತ್ತು ಶ್ರೀ ಟಿ. ರಮೇಶ ಪೈ ಇವರು ತಮ್ಮ ಪ್ರವಾಸಾನುಭವವನ್ನು ತಾ. ೨೫ರಂದು ಉಡುಪಿ ಲೈಫ್ ಇನ್ಸೂರೆನ್ಸ್ ಕಾರ್ಪೋರೇಶನಿನ ನೌಕರ ವರ್ಗಕ್ಕೆ ವಿವರಿಸಿ ಹೇಳಿದರು. ಈ ಬಗ್ಗೆ ಏರ್ಪಡಿಸಲಾದ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಆಶಾ ಕೆ. ಆರ್. ಕೆ. ಭಟ್ಟರು ವಹಿಸಿದ್ದರು. ತಂತಿ ಮುಂತಾದವುಗಳ ಪ್ರಶ್ನೋತ್ತರಗಳಾದ ತರುವಾಯ ಅಧ್ಯಕ್ಷರು ಪಾಶ್ಚಾತ್ಯ ದೇಶಗಳಂತೆ ನಮ್ಮಲ್ಲಿಯ ಮಹಿಳೆಯರೂ ಮುಂದುಬರಬೇಕಾದ ಆಗತ್ಯವನ್ನು ಒತ್ತಿ ಹೇಳಿದರು. ಆರಂಭದಲ್ಲಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಕೊನೆಗೆ ಆಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಇ. ಯು. ಜಕೋಬರು ಧನ್ಯವಾದವಿತ್ತರು.

ಮುಲ್ಕಿ ಹೈಸ್ಕೂಲಿನ ರಜತೋತ್ಸವ—ಮುಲ್ಕಿ ಸರಕಾರಿ ಹೈಸ್ಕೂಲಿನ ರಜತೋತ್ಸವದ ಉದ್ಘಾಟನಾ ಸಮಾರಂಭವು ಡಾ. ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ತಾ. ೨೭ರಂದು ಸಂಜೆ ಜರಗಿತು. ಡಾ. ರಾಮಪ್ಪ ಕಾಮತರು ಸ್ವಾಗತವನ್ನು ಕೋರಿದರು. ಶ್ರೀ ಎಸ್. ಆರ್. ಎಚ್. ಹೂಜರು ಶಾಲೆಯ ಇಷ್ಟರವರೆಗಿನ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಓದಿದರು. ಶ್ರೀಗಳಾದ ಎ. ಬಿ ಶೆಟ್ಟಿ, ಬಿ. ಆರ್. ಕರ್ಕೇರ, ಬಿ. ಭೋಜರಾವ್ ಇವರ ನಿಧನದಬಗ್ಗೆ ದುಃಖ ಸೂಚಕ ನಿರ್ಣಯವಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ವಿ. ಶೆಣೈಯವರು ಕೇಳಿಕೊಂಡಂತೆ ಹೊಸತಾಗಿ ನಿರ್ಮಿಸಲ್ಪಟ್ಟ ಸಾಯನ್ಸ್ ಬ್ಲಾಕನ್ನೂ ಅದರಲ್ಲೇ ಏರ್ಪಡಿಸಿದ ವೈಜ್ಞಾನಿಕ ಪ್ರದರ್ಶನವನ್ನೂ ಡಾ. ಪೈಗಳು ಉದ್ಘಾಟಿಸಿದರು. ಶ್ರೀ ಕೆ. ದಾಮಪ್ಪ, ಎಮ್. ಎಲ್. ಎ. ಯವರು ಬಹುಮಾನ ವಿತರಣೆಗೈದರು. ಡಾ. ಪೈಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಾಲೆಯ ಪ್ರಗತಿಯ ಬಗ್ಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಮೂಲ್ಕಿಯಲ್ಲಿ ಒಂದು ಕಾಲೇಜು ಸ್ಥಾಪಿಸಬೇಕೆಂಕಲೂ ಆ ಬಗ್ಗೆ ತಾನು ೧,೦೦೦ ರೂ. ದಾನವೀಯುವುದಲ್ಲದೆ ಎಕೆಡಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲದ ಕಡೆಯಿಂದ ಸಾಧ್ಯವಿರುವ ಸಹಾಯವನ್ನು ನೀಡುವ ಆಶ್ವಾಸನವಿತ್ತರು. ಶ್ರೀ ಕೆ. ಟಿ. ಮಾಡ್ಯೆಯವರಿಂದ ಧನ್ಯವಾದಪರ್ಣೆಯಾಯಿತು.

ತಾ. ೨೬—೧—೬೦ರಂದು ಬೆಳಗ್ಗೆ ರಜತೋತ್ಸವದ ಆಟೋಟ ಸ್ಪರ್ಧೆಗಳನ್ನು ಮಂಗಳೂರಿನ ಎಡ್ವೊಕೇಟ್ ಶ್ರೀ ಬಿ. ಎಸ್. ಭಾಸ್ಕರ ಕೃಷ್ಣರು ಉದ್ಘಾಟಿಸಿದರು.

ತಾ. ೨೮ರಂದು ಉಡುಪಿ ಅದಮಾರು ಮಠದ ಶ್ರೀ ವಿಭುದೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಹಳೆವಿದ್ಯಾರ್ಥಿಗಳ ದಿನವು ಆಚರಿಸಲ್ಪಟ್ಟಿತು. ಶ್ರೀ ವಿ. ಎಂ. ಇನಾಂದಾರ್ ಇವರು ಶಾಲಾ ರಜತೋತ್ಸವ ಸಂಚಿಕೆಯನ್ನು ಉದ್ಘಾಟಿಸಿದರು.

ತಾ. ೨೯ರಂದು ರಜತೋತ್ಸವವು ಶ್ರೀ ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ರಜತೋತ್ಸವ ಸಮಿತಿಯ ಉಪಾಧ್ಯಕ್ಷರಾದ ಶ್ರೀ ವಿ. ಎಸ್. ಕುಡುವರು ಸ್ವಾಗತ ಭಾಷಣ ಮಾಡುತ್ತ ಮೂಲ್ಕಿಯು ಒಂದು ಉತ್ತಮ ಕೇಂದ್ರವೆಂದೂ ಇಲ್ಲಿ ಒಂದು ಕಾಲೇಜಿನ ಆವಶ್ಯಕತೆ ಇದೆಯೆಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿಗಳು

ಕೇರಳದಲ್ಲಿ ಚುನಾವಣೆ

ಭಾರತದಲ್ಲಿ ಮಾತ್ರವಲ್ಲ ಪ್ರಪಂಚದ ಎಲ್ಲ ರಾಷ್ಟ್ರಗಳೂ ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದ ಕೇರಳದ ಮಧ್ಯಾವಧಿ ಚುನಾವಣೆಗಳು ಫೆಬ್ರವರಿ ಒಂದರಂದು ಮುಕ್ತಾಯಗೊಂಡುವು. ಈ ಚುನಾವಣೆಯಲ್ಲಿ ಸಾಮಾನ್ಯತಃ ಸೇಕಡ ೮೦ರಷ್ಟು ಮತದಾನ ನಡೆದಿದೆಯೆಂದು ತಿಳಿದುಬಂದಿದ್ದು, ಪ್ರಜಾಪ್ರಭುತ್ವದಲ್ಲಿನ ನಾಗರಿಕಾಧಿಕಾರವನ್ನು ಕೇರಳೀಯರು ಸಂಪೂರ್ಣವಾಗಿ ಉಪಯೋಗಿಸಿಕೊಂಡಿರುವರೆಂದು ಹೇಳಬಹುದು. ಚುನಾವಣೆಯ ಸಮಯದಲ್ಲಿ ನಿರೀಕ್ಷಿಸಿಕೊಂಡಿರುವಷ್ಟು ಗಲಭೆಗಳು ಆಗದೆ 'ಶಾಂತಿಯುತ' ವಾತಾವರಣದಲ್ಲಿಯೇ ಮುಕ್ತಾಯಗೊಂಡ ಯಶಸ್ಸನ್ನು ಈ ಚುನಾವಣೆ ಪಡೆಯಿತೆನ್ನಬಹುದು. ಫಲಿತಾಂಶವು ಈಗತಾನೇ ಪ್ರಕಟಗೊಳ್ಳುತ್ತಿದ್ದು, ಇಷ್ಟರಲ್ಲೇ ಸಂಯುಕ್ತ ರಂಗಕ್ಕೆ ಬಹುಮತ ಲಭಿಸಿದೆ.

ಈ ಪಂಚಿಕೆಯು ಅಚ್ಚಿಗೆಪೋಗುವ ಸಮಯಕ್ಕೆ ಕೇರಳ ಶಾಸನಸಭೆಯ ಒಟ್ಟು 127 ಸ್ಥಾನಗಳಲ್ಲಿ 90 ಸ್ಥಾನಗಳ ಫಲಿತಾಂಶವು ತಿಳಿದುಬಂದಿದೆ. ಅವುಗಳಲ್ಲಿ ಕಾಂಗ್ರೆಸ್ 44, ಪ್ರಜಾಸೋಶಿಯಲಿಸ್ಟ್ 15, ಮುಸ್ಲಿಂಲೀಗ್ 7, (ಸಂಯುಕ್ತರಂಗ ಒಟ್ಟು ೬೬) ಕಮ್ಯುನಿಸ್ಟ್ 19 ಬೆಂಬಲಿತ ಸ್ವತಂತ್ರರು 2, ಮತ್ತು ಕಾಸರಗೋಡು ಕರ್ನಾಟಕ ಸಮಿತಿ, ಆರ್. ಎಸ್. ಪಿ. ಮತ್ತು ಇತರ ಸ್ವತಂತ್ರರು ಒಂದೊಂದು ಸ್ಥಾನಗಳಿಸಿರುವರು.

ಭಾರತದಲ್ಲಿ ರಶ್ಯದ ಅಧ್ಯಕ್ಷ

ಸದ್ಯ ಭಾರತದಲ್ಲಿ ಸೌಹಾರ್ದಸಂಚಾರವನ್ನು ಮಾಡುತ್ತಿರುವ ಸೋವಿಯೆತ್ ರಶ್ಯದ ಅಧ್ಯಕ್ಷ ಶ್ರೀ ವೊರೋಶಿಲೋವರು ದೊಂಬಾಯಿ, ಬೆಂಗಳೂರು, ಮದ್ರಾಸು ಮೊದಲಾದ ಪ್ರಧಾನ ನಗರಗಳಲ್ಲಿ ಸಂಚರಿಸಿದರು ಇವರು ಹೋದೆಡೆಗಳಲ್ಲೆಲ್ಲಾ ಅವರಿಗೆ ನಾಗರಿಕರಿಂದ ಭವ್ಯ ಸ್ವಾಗತವು ಲಭಿಸಿದೆ. ಶ್ರೀ ವೊರೋಶಿಲೋವರು ಜಾಗತಿಕ ಶಾಂತಿಯ ಸ್ಥಾಪನೆಯ ಬಗ್ಗೆ ವಿಶೇಷ ಕಳಕಳಿಯನ್ನು ಪ್ರದರ್ಶಿಸುತ್ತ ಈ ಬಗ್ಗೆ ಭಾರತ ಹಾಗೂ ರಶ್ಯಗಳು ವಹಿಸಿದ ಪ್ರಶಂಸಾರ್ಹ ಭಾಗವನ್ನು ಪ್ರಶಂಸಿಸಿದರು. ರಶ್ಯವು ಅವಶ್ಯವಿದ್ದರೆ. ಪರಮಾಣು ಅಸ್ತ್ರಗಳ ಪರಿಶೀಲನೆಯನ್ನೂ ಸ್ಥಗಿತಗೊಳಿಸಲು ಸಿದ್ಧವಿರುವುದಾಗಿ ಅವರು ಉದ್ಘೋಷಿಸಿದರು. ರಶ್ಯ—ಭಾರತಗಳ ಸಂಬಂಧವು ದೃಢಗೊಳ್ಳುತ್ತ ಮುಂದುವರಿಯಬೇಕೆಂದವರು ಹಾರೈಸಿದರು. ಭಿಲಾಯ್ ಉಕ್ಕಿನ ಕಾರಖಾನೆಯನ್ನೂ ಶ್ರೀ ವೊರೋಶಿಲೋವರು ನೋಡಿಬಂದರು.

---

೮ ಪುಟಗಳು

ಕೆಲವೊಂದು ಅನಾನುಕೂಲತೆಯ ದೆಸೆಯಿಂದ ಈ ಸಂಚಿಕೆಯಲ್ಲಿ ಬರೇ ೮ಪುಟಗಳನ್ನು ಮಾತ್ರ ಕೊಡಲಾಗಿದೆ. ವಾಚಕರು ಗಮನಿಸ ಬೇಕಾಗಿ ವಿನಂತಿ. —ವ್ಯವಸ್ಥಾಪಕ

Record Profit of the Syndicate Bank

The net profits of the Syndicate Bank for the year 1959 show a fresh record at Rs, 20,01.828 which with the carry forward from the last year's account is Rs. 20,14,459 (last year Rs. 10,22,350). Directors have transferred a sum of Rs. 7,50 000 to the Sratutory Reserve, raising the Reserves to Rs. 34,00,000. Dividend at 20% less tax (14% tax free as against 15% tax free last year) on Ordinary Shares and 8.57% and 7.14% on Preference Shares gross will be Rs. 4,87,306. Bonus to staff Rs 2,00,000 as against Rs 1 lakh last year. Provision for Taxes is at Rs. 5,50,000 and carry forward is Rs. 27,153.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

೧ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: ೧೯೫೯

ವಿನೋಬಾವಾಣಿ:

ಪರಮಾತ್ಮನಿಗೆ ಮಾತ್ರ ಪೂಜೆ

ನಾವು ನದಿಯ ನೀರಿನಂತೆ ವಿಶಾಲವಿರುವಲ್ಲಿ ಕಲ್ಮಶಯುಕ್ತರಾಗದೆ ಆಕಾಶದಂತೆ ಅತ್ಯಂತ ನಿರ್ಮಲರೂ ಅತ್ಯಧಿಕ ವಿಶಾಲರೂ ಆಗಬೇಕು.

ಗಂಗೋತ್ರಿಯ ಬಳಿ ಗಂಗಾನದಿಯ ನೀರು ನಿರ್ಮಲವಾಗಿಯೂ ಪರಿಶುದ್ಧವಾಗಿಯೂ ಹರಿಯುತ್ತದೆ; ಆದರೆ, ಅಲ್ಲಿ ಅದರ ಪ್ರವಾಹವು ಮಾತ್ರ ಕಿರಿದಾಗಿದೆ. ಮುಂದುವರಿದಂತೆ, ಅದರ ಪ್ರವಾಹವು ಶಕ್ತಿಶಾಲಿಯಾಗುತ್ತದೆ; ವಿಸ್ತಾರವಾಗುತ್ತದೆ. ಸಾಗರ ಸಂಗಮದ ಬಳಿಯಲ್ಲಿ ಅದು ಅತೀವ ವಿಶಾಲವಾಗಿ ಹರಡಿರುತ್ತದೆ. ಆದರೆ, ನದಿಯು ವಿಸ್ತಾರವಾಗುತ್ತ ಹರಿದಂತೆ ಅದರ ನೀರಿನ ಸ್ವಚ್ಛತೆ ಮತ್ತು ನೈರ್ಮಲ್ಯವು ಕಡಿಮೆಯಾಗುತ್ತ ಹೋಗುತ್ತದೆ. ಪ್ರಪಂಚದಲ್ಲಿ ಈ ಮಾದರಿಯು ನಮಗೆ ತೋರಿಬರುತ್ತದೆ. ಒಂದು ದೇಶದ ಜನಸಂಖ್ಯೆಯು ಹೆಚ್ಚುತ್ತ ಹೋದಂತೆ ಅಲ್ಲಿನ ಗುಣದಲ್ಲಿ ತುಸು ಹ್ರಾಸವಾಗುತ್ತ ಬರುತ್ತದೆ. ಗುಣಕ್ಕೆ ಪ್ರಾಶಸ್ತ್ಯವೀಯುತ್ತ ಹೋದರೆ, ಸಂಖ್ಯೆಯೂ ಇಳಿಮುಖವಾಗುತ್ತದೆ.

ಗುಣವರ್ಧನೆ ಹಾಗೂ ಸಂಖ್ಯಾವೃದ್ಧಿಗಳ ನಡುವೆ ಏನಾದರೂ ವಿರೋಧಭಾವನೆಯಿದೆಯೇ ಎಂಬುದನ್ನು ನಾನು ಆಲೋಚಿಸುತ್ತ ಇದ್ದೇನೆ. ಎಲ್ಲ ಚಿಂತನೆಯ ಮೂಲಾಧಾರವೂ ಪರಮಾದರ್ಶವೂ ಪರಮೇಶ್ವರನೇ ಆಗಿದ್ದಾನೆ. ಪರಮಾತ್ಮನತ್ತ ದೃಷ್ಟಿ ಹರಿಸಿದಾಗ, ಆತ ಪರಮ ಶುದ್ಧನೂ ಪರಮ ವ್ಯಾಪಕನೂ ಆಗಿರುವನೆಂದು ಕಂಡು ಬರುತ್ತಾನೆ. ಆತನಲ್ಲಿನ ಶುದ್ಧಿ ಮತ್ತು ವ್ಯಾಪಕತೆಗಳ ನಡುವೆ ಎಳ್ಳಷ್ಟೂ ವಿರೋಧವಿರುವುದಿಲ್ಲ. ವಿಶಾಲಾಕಾಶದತ್ತ ನಾವು ದೃಷ್ಟಿ ಹರಿಸುವುದಾದರೆ, ಅಲ್ಲಿಯೂ ವ್ಯಾಪಕತೆ ಹಾಗೂ ನಿರ್ಮಲತೆಗಳ ನಡುವೆ ವೈಮನಸ್ಯ ಲವಲೇಶವೂ ಇರುವುದಿಲ್ಲ. ಅದೂ ಅತ್ಯಂತ ನಿರ್ಮಲವೂ ಅತ್ಯಧಿಕ ವಿಶಾಲವೂ ಆಗಿರುತ್ತದೆ.

ನಮ್ಮ ಪರಿಸ್ಥಿತಿಯನ್ನು ಆಕಾಶದೊಡನೆ ತುಲನೆ ಮಾಡುವುದು ಎಂದಿಗೂ ಸಾಧ್ಯವಿಲ್ಲ; ಬದಲು, ಗಂಗೆಯೊಡನೆ ಹೋಲಿಸಬಹುದು. ನಾವು ಪರಮಾತ್ಮನ ಪ್ರತಿಮೆಗಳಾಗುವುದು ಸಾಧ್ಯವಿಲ್ಲ. ನಮ್ಮ ಜೀವನ ಹಾಗೂ ಅನುಭವಗಳ ತಾಳಮೇಳಗಳು ಪರಮಾತ್ಮನೊಡನೆ ಎಂದಿಗೂ ಕೂಡಿ ಬರುವುದಿಲ್ಲ.

ಈ ಕೊರತೆಯೇಕೆಂದು ದೀರ್ಘಾಲೋಚನೆ ಮಾಡುವಾಗ, ಒಬ್ಬ ದೇಶೀಯನಾಗಿದ್ದು ಶುದ್ಧನಾಗಿರಲು ಪ್ರಯತ್ನಪಡುತ್ತಿರುವನಾದರೆ, ಆತನ ಶುದ್ಧಿಯು ಸಂಕೀರ್ಣತೆಯೊಡನೆ ಒಡೆದಾಡಬೇಕಾಗುತ್ತದೆ. ಆದುದರಿಂದ ವ್ಯಾಪಕತೆ ಮತ್ತು ಶುದ್ಧಿಗಳ ನಡುವೆ ವಿರೋಧವು ಉತ್ಪಾದಿತವಾಗುತ್ತದೆ. ಯಾವ ರೀತಿಯಲ್ಲಿ ಯೋಚಿಸಿದರೂ ಇದು ಸತ್ಯವೇ ಎಂಬುದು ಗೊತ್ತಾಗುವುದು.

ನಮ್ಮ ಚಿಂತನೆಯು ಎಲ್ಲಿ ವರೆಗೆ ಮತ್ತು ಎಷ್ಟು ವ್ಯಾಪಕವಾಗಿ ನಡೆಯಬಲ್ಲದು ಎಂಬುದನ್ನು ನಾವು ಯೋಚಿಸಬೇಕು. ನಾವು ಒಂದನ್ನು ಎತ್ತಿ ಹಿಡಿಯ ಪ್ರಯತ್ನಿಸಿದರೆ, ಎರಡನೆಯದು ಜಾರಿ ಹೋಗುತ್ತದೆ; ಎರಡನೆಯದನ್ನು ಹಿಡಿಯಲೆಳಸಿದರೆ, ಮೊದಲನೆಯದು ತಪ್ಪಿ ಹೋಗುತ್ತದೆ. ಹೀಗೆ ಸಮಗ್ರತೆಯಲ್ಲಿ ವಿರೋಧವು ದೃಗ್ಗೋಚರವಾಗುತ್ತದೆ. ಹೀಗೆಲ್ಲಿಯಾದರೂ ಆಗುವುದಾದರೆ, ಏಕಾಗ್ರತೆಯಲ್ಲಿಯೂ ಅದರ ಕಲ್ಪನೆಯಲ್ಲಿಯೂ ಏನೋ ಒಂದು ದೋಷವಿದೆಯೆಂದೇ ಹೇಳಬೇಕಾಗಿದೆ. ಏಕಾಗ್ರತೆ ಮತ್ತು ಸಮಗ್ರತೆಗಳನ್ನು ಒಂದೆಡೆ ಕೂಡಿಸುವ ಒಂದು ಹೊಸ ವಿಧಾನವನ್ನು ನಾವು ಅರಸಿತೆಗೆಯಬೇಕಾಗಿದೆ.

ಭಕ್ತ ಮೀರೆಯ ಒಂದು ಉದಾಹರಣೆಯನ್ನು ತೆಗೆದುಕೊಳ್ಳಿರಿ. ನಿಜವಾದ ಸಾಧಕನು ಎಲ್ಲ ಜನರನ್ನೂ ಹಿಂದಕ್ಕಟ್ಟಿ, ಧ್ಯಾನಕ್ಕೋಸ್ಕರ ಏಕಾಂತವನ್ನು ಪಡೆಯುವ ಪ್ರಯತ್ನವನ್ನು ನಡೆಸುತ್ತಾನೆ. ಆದರೆ, ಮೀರಳು ಪ್ರಪಂಚದ ಎಲ್ಲ ಬಂಧನಗಳನ್ನು ಕಡಿದೊಗೆದು, ಜನತೆಯೆದುರು ಕುಣಿಯುತ್ತ, ನಾನು ಗಿರಿಧರನೆದುರು ಕುಣಿಯುತ್ತೇನೆ, ಎಂದು ಹೇಳುತ್ತಿದ್ದಳು. ಇದರಿಂದ ಆಕೆಯ ಸಮಗ್ರತೆ ಮತ್ತು ಏಕಾಗ್ರತೆಗಳು ಪರಸ್ಪರ ಬಾಧಕಗಳಾಗಿ ಪರಿಣಮಿಸಲಿಲ್ಲ. ಸಮಗ್ರತೆ ಮತ್ತು ಏಕಾಗ್ರತೆಗಳಲ್ಲಿ ವಿರೋಧವು ಕಾಣಿಸಿಕೊಂಡರೆ, ನಮ್ಮ ವಿಚಾರವೇ ಕುಂಠಿತವಾಗಿರುವುದೆಂದು ತಿಳಿಯಬೇಕು.

ಮಹಾತ್ಮಾಗಾಂಧಿಯವರ ಮರಣಾನಂತರ ಸೇವಾಗ್ರಾಮದಲ್ಲಿ ಸೇರಿದ್ದ ಪ್ರಥಮ ಸರ್ವೋದಯ ಸಮ್ಮೇಳನ ಕಾಲದಲ್ಲಿ ಒಂದು ಸಂಗತಿ ನಡೆಯಿತು. ಆ ಸಮಯ ನಮ್ಮ ಆಂದೋಲನಕ್ಕೆ ಯಾವ ಹೆಸರಿಡಬೇಕೆಂಬ ಚರ್ಚೆ ಎದ್ದಿತು. ಗಾಂಧೀಜಿಯವರ ಹೆಸರಿಡಬೇ[...]ದು ಕೆಲವರು ಹೇಳಿದರು. ಆಗ, ನಾ[...] ಹೇಳಿದೆ: ಸರ್ವೋದಯ ಶಬ್ದವು ಅ[...]ತ ಸುಂದರವಾದುದು. ಗಾಂಧೀಜಿ[...]ರೇ ನಮಗೆ ಕೊಟ್ಟಿದ್ದು. ಆದುದರಿಂ[...] ನಾವು ಇದೇ ಹೆಸರನ್ನು ಇಡುವುದು [...]ಕ್ತ. ಈ ಮಾತು ಆ ಜನರಿಗೂ ಸರಿಕ[...]ರಬೇಕು; ಇದರಿಂದ ನನ್ನ ಅಭಿಪ್ರಾಯ[...]ನ್ನು ಒಪ್ಪಿದರು. "ಸತ್ಯನಿಷ್ಠೆ ಮತ್ತು [...]ಹಿಂಸೆಗಳೇ ನಮ್ಮ ಉಪಾಸ್ಯ ದೇ[...] ಹಾಗೂ ಗಾಂಧೀಜಿಯವರೇ ನಮ್ಮ[...]ರು" ಎಂದನ್ನುವುದಾದರೆ, ನಾವು ಸ[...]ಚಾರದಲ್ಲಿ ಏಕ ದೇಶೀಯತೆಯನ್ನು [...] ಬಲ್ಲೆವು. ಇದರಿಂದಾಗಿ, "ಸಂಖ್ಯೆ [...]ಯುವುದು; ಗುಣ ಇಳಿಯುವುದು" [...]ಬ ಆಪತ್ತು ಬರಬಹುದು. ಆದರೆ, ನಾ[...] ಗಾಂಧೀಜಿಯವರ ಹೆಸರನ್ನು ನಮ್ಮ ಹೃ[...]ಯದಲ್ಲಿ ಇಟ್ಟು ಕೊಳ್ಳುತ್ತೇವೆ; ನಾ[...]ಗೆಯಲ್ಲಿ ಉಚ್ಚರಿಸುವುದಿಲ್ಲವಾ[...]ದರಿಂದ, ಈ ಆಪತ್ತು ಕಾಣಿಸಿಕೊಂಡರ[...] ದೂರಹರಿದಂತಾಯಿತು.

ನಮ್ಮ ಚಿಂತನೆಯಲ್ಲಿ ಏಕದೇಶೀಯ[...]ಯು ಕಾಣಿಸಿಕೊಂಡಾಗ, ಅಲ್ಲಿ ಗು[...] ಮತ್ತು ಸಂಖ್ಯೆಗಳ ನಡುವೆ ವಿರೋಧ[...] ಕಾಣಿಸಿಕೊಳ್ಳುವುದು. ಆದರೆ, ಏಕದೇ[...]ಯತೆಯಿಲ್ಲದಿರುವಲ್ಲಿ, ಈ ವಿಧಾನದ [...]ದರಿಕೆಯಿರಬುದಿಲ್ಲ.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 75/1959.

R. E. P. 788/1959

ಅರ್ಜಿದಾರ—N. ಮಾಧವ ರಾವ್,

ಎದ್ರಿರು— 1. T. ವೆಂಕಟ್ರಾವ್.
2. T. ಗೋಪಾಲ ರಾವ್.

ಕುಂದಾಪುರ ತಾಲ್ಕು ತೆಕ್ಕಟ್ಟೆ ಗ್ರಾಮದಲ್ಲಿರುವ ರಾಮಚಂದ್ರ ಯತ್ತಾರರ ಮಕ್ಕಳು T. ವೆಂಕಟ್ರಾವ್, T. ಗೋಪಾಲ ರಾವ್, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಸದ್ರಿ ವ್ಯವಹರಣೆಯಲ್ಲಿ ಎದ್ರಿರ ಪಕ್ಕಿನ ಸ್ಥಿರಾಸ್ತಿಯನ್ನು ಏಲಂಮಾಡುವ ಬಗ್ಗೆ ಅರ್ಜಿದಾರನು ದಾಖ್ಲುಮಾಡಿದ ಏಲಂ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸುವರೆ ತಾ. 8—2—1960ಕ್ಕೆ ಮೇಲಿನ ಕೋರ್ಟಿನಲ್ಲಿ ತಕ್ಕಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

N. S. Parameshwaraiha,
Advocate for Petr,
Coondapoor. Date 15—1—1960

ಭಾರತ್ ಇಂಡಸ್ಟ್ರಿಯಲ್ ಎಂಡ್ ಕೇನಿಂಗ್ ಕಂಪೆನಿ ಲಿ.
ಕಾಪು, ದ. ಕ.

ತಾ. 19—12—1959ರಲ್ಲಿ ಜರಗಿದ ಕಂಪೆನಿಯ ವಾರ್ಷಿಕ ಮಹಾಸಭೆಯಲ್ಲಿ ಈ ಕೆಳಗಿನ ವಿಶೇಷ ಠರಾವು ಮಂಜೂರಾಗಿರುವುದೆಂಬುದನ್ನು ಈ ಮೂಲಕ ಜಾಹೀರುಪಡಿಸಲಾಗಿದೆ.

ಈಗ ಮೆನೇಜಿಂಗ್ ಏಜಂಟರಾಗಿರುವ ವಿವೇಕಾನಂದ ಕಮರ್ಶಿಯಲ್ ಕೊಪೋರ್ರೇಶನ್ ಪ್ರೈವೇಟ್ ಲಿಮಿಟೆಡ್ ಇವರು ಪುನಃ 10 ವರ್ಷಗಳ ಅವಧಿಯವರೆಗೆ ಮೆನೇಜಿಂಗ್ ಏಜಂಟರಾಗಿ ತಿರುಗಿ ನೇಮಿಸಲ್ಪಟ್ಟಿದ್ದಾರೆ. ಆ ಬಗ್ಗೆ ಅವರಿಗೆ ಕಂಪೆನಿಯ ನೆಟ್ ಮುನಾಫೆಯಲ್ಲಿ ಶೇಕಡಾ 10ರಂತೆ ವೇತನ, ಯಾ ಇದು ರೂ. 3,600-00ಕ್ಕಿಂತ ಕಡಿಮೆಯಾದರೆ ವರ್ಷಕ್ಕೆ ಕನಿಷ್ಟವೇತನವಾಗಿ ರೂ. 3,600-00 ಕೊಡಲಾಗುವುದು. ಈ ಪುನರ್ನೇಮಕದ ಮಂಜೂರಾತಿಗಾಗಿ ಕೇಂದ್ರ ಸರಕಾರಕ್ಕೆ ಕಂಪೆನಿಯಿಂದ ಅರ್ಜಿಮಾಡಲ್ಪಟ್ಟಿದೆ.

ಸಹಿ. ಕೆ. ಸಂಜೀವ ಸೆಟ್ಟಿ
ಚೇರ್‌ಮೇನ್.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

In Tho High Court of Mysore at Banglore.

C. R. P. No. 65 of 19[...]

Yellappa Ajila —Petitioner

vs

Bhujabali Athikari —Respondent

To

N. Bhujabli Athikari,
S/O Devaraja Hegde,
Nallur village,
Karkala Taluk, South Kanara D[...]
—Responden[...]

Please take notice that the abov[e] civil Revision Petition has bee[n] filed by the above said petitione[r] against you in the High Court [of] Mysore at Bangalore, and you ar[e] directed to appear before th[e] Mysore High Court at Bangalor[e] either in person or through a[n] advocate within a week from th[e] date of publication of this notic[e] in the paper, failing which, th[e] above revision petition will b[e] heard exparte.

M. Gopalakrishna Shetty,
Counsel for petitione[r]

ಜೀವನದ ಬೇರೆ ಘಟನೆಗಳನ್ನು ಹೃದಯ[...]ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ[...]

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿ[...] ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ[್ನು]
ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಸಾಹಿತ್ಯ ಸಾಗರ:

ಪ್ರಗತಿಶೀಲ ಸಾಹಿತ್ಯ

ಕನ್ನಡ ಸಾಹಿತ್ಯ ಆದಿಯಿಂದಲೂ ಹಂತಹಂತಗಳಲ್ಲಿ ಪ್ರಗತಿಶೀಲವಾಗಿಯೇ ಬೆಳೆದು ಬಂದಿದೆ. ಪ್ರಗತಿಶೀಲವೇ ಇದರ ಜನ್ಮಗುಣ.

ಕನ್ನಡದಲ್ಲಿ 'ಪ್ರಗತಿಶೀಲ ಸಾಹಿತ್ಯ' ಎನ್ನುವುದು ಹೊಸದಾದ—ಕನ್ನಡದಿಂದ ಹೊರಗಾದ ವಿಚಾರವಲ್ಲ ಅಥವಾ ಇತರ ಭಾಷೆಗಳಿಗಿರದ, ಕನ್ನಡಕ್ಕೆ ಮಾತ್ರ ಇರುವ ವಾದವಲ್ಲ. ಗಿರಿ—ಕಂದರಗಳಲ್ಲಿ ಷ್ಟು, ಬತ್ತಲೆ ತಿರುಗುತ್ತಿದ್ದ ಮಾನವನಲ್ಲಿ ಎಂದಿನಿಂದ ವಿಚಾರ ವಿನಿಮಯವು ಬಂತೋ ಅಂದಿನಿಂದ ಈ ವಾದವು ಬೆಳೆದು ಬಂದಿದೆ. ಈಗ ಕನ್ನಡ ಜನ ಅದರ ಮೇಲೆ ನೋಡುವ ನೋಟದ ಕುರಿತು ಸ್ವಲ್ಪ ಯೋಚಿಸುವ:

ಕನ್ನಡ ಸಾಹಿತ್ಯವು ಬೆಳೆದಿಲ್ಲ. ಇಂದು ಕನ್ನಡ ಪುಸ್ತಕಗಳನ್ನು ಕ್ರಯಕೊಟ್ಟು ಕೊಂಡುಕೊಳ್ಳುವವರು ಬಹಳ ಕಮ್ಮಿ. ಕನ್ನಡದಲ್ಲಿ ಯಾವುದಾದರೊಂದು ಪುಸ್ತಕವು ಮೂರು ಯಾ ನಾಲ್ಕು ಸಾವಿರಕ್ಕಿಂತ ಹೆಚ್ಚು ಪ್ರತಿಗಳು ಮಾರಾಟವಾಗುವುದಿಲ್ಲ. ಕೆಲವು ಪುಸ್ತಕಗಳು ಪುನರ್ಮುದ್ರಣವನ್ನು ಕಾಣಬೇಕಾದರೆ ಹಲವಾರು ವರ್ಷಗಳನ್ನು ಕಳೆಯಬೇಕು. ರಷ್ಯಾ, ಅಮೇರಿಕಾ, ಬ್ರಿಟನಗಳಲ್ಲಿ ಒಂದೊಂದು ಪುಸ್ತಕದ ಪ್ರತಿಗಳು ಲಕ್ಷಗಟ್ಟಲೆಯಾಗಿ ಖರ್ಚಾಗಿ ಹೋಗುತ್ತಿವೆ. ಕನ್ನಡ ಹೊತ್ತಗೆಗಳು ಹೆಚ್ಚಾಗಿ ಮುದ್ರಿತವಾಗಬೇಕಾದರೆ ಪುಸ್ತಕ ಕೊಂಡುಕೊಳ್ಳುವವರ ಸಂಖ್ಯೆಯು ಬೆಳೆಯಬೇಕು.

ಇಂದು ನಮ್ಮ ಹೆಚ್ಚಿನವರು ಪುಸ್ತಕ ಓದುವುದು ಕೇವಲ ಮನೋರಂಜನೆಗಾಗಿ ಮಾತ್ರ. ಚಿಕ್ಕ ಕಥೆಯನ್ನಾಗಲೀ, ಕಾದಂಬರಿಯನ್ನಾಗಲೀ ಓದುವಾಗ ನಮ್ಮ ಸುಖ—ದುಃಖಗಳನ್ನು ಮರೆತು ಎರಡು—ಮೂರು ಗಂಟೆಗಳ ಕಾಲ ಕ್ಷಣಿಕ ಆನಂದವನ್ನೇ ಅನುಭವಿಸುತ್ತೇವೆ. ಈ ತರದ ಮನೋಭಾವವನ್ನು ಬಿಡಬೇಕು. ಕಾದಂಬರಿ ಅಥವಾ ಕಥೆಯು ಸಾಹಿತ್ಯದ ವಿಶಿಷ್ಟವಾದ ಅಂಗವೆಂಬ ದೃಷ್ಟಿಯಿಂದ ಓದಬೇಕು. ಜೀವನವನ್ನೇ ಒಂದು ಸಾಹಿತ್ಯವನ್ನಾಗಿ ಮಾಡಲು ಅರಿವಿನ ದೃಷ್ಟಿಯು ಬೆಳೆಯಬೇಕು. ತಿಳಿವಿನ ಹೆಚ್ಚಳವಾದಂತೆ ಜೀವನವು ಗುರಿಮುಟ್ಟುವಂತೆ ಯತ್ನಿಸಬೇಕು.

"ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಹೂ" ಎಂಬುದೊಂದು ವಾಡಿಕೆಯಲ್ಲಿರುವ ಮಾತಾಗಿದೆ. ಈ ಮಾತು ಇಂದಿನ ನಮ್ಮ ಜೀವನಕ್ಕೆ ಅಕ್ಷರಶಃ ಅನ್ವಯಿಸುತ್ತದೆ. ಮನುಷ್ಯನ ಜೀವನವು ಒಂದು ಸಮಸ್ಯೆಯಾಗಿದೆ. ಬಾಳ ನೌಕೆಯನ್ನು ಮುಂದುವರಿಸುವುದರೊಡನೆ ಈ ಸಮಸ್ಯೆಯನ್ನು ಬಿಡಿಸಲು ವೇಳೆಯಿಲ್ಲ. ಸಾಹಿತ್ಯ ಪ್ರಚಾರಕ್ಕೆ ಮುಖ್ಯವಾಗಿ ಅಡ್ಡಿ ಬರುವ ಇನ್ನೊಂದು ಪ್ರಶ್ನೆ ಹಣದ್ದು. ಹಣವು ಮನುಷ್ಯನ ಅನ್ನ, ಬಟ್ಟೆಗೆ ಸಾಲದೆಂದ ಮೇಲೆ ಸಾಹಿತ್ಯ ಪ್ರಚಾರವು ಹೇಗಾಗಬೇಕು? ಜನಾಂಗದ ಸಂಸ್ಕೃತಿಯ ಮಟ್ಟವನ್ನಳೆಯಲು ಅದರ ಹಿಂದಿನ ಸಂಸ್ಕೃತಿಯನ್ನು ಅರಿಯಬೇಕು. ಜನರ ಜೀವನವು ಕಾಲಕ್ಕನುಗುಣವಾಗಿ ಮಾರ್ಪಾಟಾದರೂ, ಅದು ಬೆಳೆಸಿಕೊಂಡು ಬಂದ ಹಿಂದಿನ ಚರಿತ್ರೆಯು ಸಾಂಸ್ಕೃತಿಕ ಮಟ್ಟವನ್ನಳೆಯಲು ಸಹಕಾರಿಯಾಗಿದೆ. ಈ ರೀತಿಯಲ್ಲಿ ಕನ್ನಡ ಸಾಹಿತ್ಯವನ್ನವಲೋಕಿಸಿದರೆ ಅದರ ಬೆಳವಣಿಗೆ ಕಂಡುಬರುವುದು.

ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಸಾಹಿತಿಗಳಾಗಬೇಕೆಂಬ ಬಯಕೆ ಉಳ್ಳವರು ತಮ್ಮ ದೃಷ್ಟಿಯನ್ನು ವಿಶಾಲಪಡಿಸಬೇಕು. ಎಲ್ಲವನ್ನೂ ಅರ್ಥಮಾಡಿಕೊಳ್ಳುವ ಬಯಕೆ ಇರಬೇಕು. ಇದು ನಿಷೇಧ—ಇದು ಸ್ವೀಕಾರ ಎಂಬ ಭೇದವಿಲ್ಲದೆ ವಸ್ತುಗಳ ಒಳಹೊಕ್ಕು ಪರಿಶೀಲಿಸಿ ಉತ್ತಮವಾದುದನ್ನು ಆಯ್ದುಕೊಳ್ಳಬೇಕು. ಹೀಗೆ ಸುತ್ತು—ಮುತ್ತಲಿನ ಜೀವನವನ್ನು ಅರ್ಥಮಾಡಿಕೊಂಡು ಕಂಡ ಅನುಭವಗಳನ್ನು ಸಂಗ್ರಹಿಸಬೇಕು. ವಿದ್ಯಾರ್ಥಿಗಳಲ್ಲಿರುವ ಸುಪ್ತಚೇತನವನ್ನು ಅನುಭವ ಅಗ್ನಿಕುಂಡದಲ್ಲಿಟ್ಟು ಕಲ್ಪನೆಯ ಸಾಣೆ ಹಿಡಿದಾಗ ನಿಜವಾದ ಸಾಹಿತ್ಯವು ಹೊರ ಬೀಳುವುದು. ವಾಸ್ತವಿಕ ಜೀವನದಲ್ಲಿ ಏನೇನಿದೆ ಅವೆಲ್ಲವನ್ನೂ ಸಹೃದಯತೆಯಿಂದ, ಸಹಾನುಭೂತಿಯಿಂದ ನೋಡಬೇಕು.

ಸಾಹಿತ್ಯವು—ಜೀವನವು ದುರ್ಬಲವಾದಾಗ ಶಕ್ತಿ ಪ್ರಧಾನವಾದುದೂ, ಬೆಳಕು ತೋರುವಂತಾದ್ದೂ ಆಗಿದೆ. ಹೀಗೆ ಉಚ್ಚಮಟ್ಟದಲ್ಲಿರುವ ಸಾಹಿತ್ಯವು ಆ ದೇಶದ ಕೀರ್ತಿಗೂ ಕಾರಣವಾಗಿದೆ. ಇಂದು ಗ್ರೀಸ್, ಬ್ರಿಟನ್—ಮೊದಲಾದ ದೇಶಗಳನ್ನು ಹೋಮರನ ನಾಡು, ಶೇಕ್ಸ್‌ಪಿಯರನ ನಾಡು ಎಂದು ಕರೆದು ಸನ್ಮಾನಿಸುತ್ತಾರೆ. ಕನ್ನಡ ಸಾಹಿತ್ಯವು ಅಂತಹ ಮೇಲ್ಮಟ್ಟವನ್ನು ಮುಟ್ಟಬೇಕಾದರೆ ಜನರಿಗೆ ಕನ್ನಡ ಸಾಹಿತ್ಯದ ಮೇಲೆ ಅಭಿಮಾನ ಹೆಚ್ಚಬೇಕು; ಸಾಹಿತಿಗಳಿಗೆ ಪ್ರೋತ್ಸಾಹವು ದೊರೆಯಬೇಕು.

ಒಂದು ಗಡಿಯಾರವಿದೆ ಎನ್ನೋಣ, ಒಬ್ಬ ಯಾಂತ್ರಿಕ ಕೆಲಸಗಾರನು ಬಂದು ಅದರಲ್ಲಿರುವ ಯಂತ್ರಕೌಶಲ್ಯಕ್ಕೆ ಮರುಳಾಗಿ ಅದನ್ನು ಹೊಗಳಬಹುದು. ಕಮ್ಮಾರನೊಬ್ಬನು ಅದರಲ್ಲಿರುವ ಕಬ್ಬಿಣವನ್ನಷ್ಟೇ ನೋಡುತ್ತಾನೆ. ಮತ್ತೊಬ್ಬ ಫ್ಯಾಶನಿನ ಮೇಲಿನ ಅಭಿರುಚಿಯುಳ್ಳವನು ಅದರ ನವೀನತೆಗಾಗಿ ಹೊಗಳಬಹುದು. ಹೀಗೆ ವ್ಯಕ್ತಿಗಳ ಮನೋಭಾವಕ್ಕನುಗುಣವಾದ ಅಭಿಪ್ರಾಯವನ್ನು ಹೇಳುತ್ತಾರೆ. ಅದೇ ರೀತಿ ಸಾಹಿತಿಯೋ ಜೀವನವನ್ನು ತನ್ನ ದೃಷ್ಟಿಯಿಂದ ಪರಿಶೀಲಿಸಿ ಸ್ವಾಭಿಪ್ರಾಯವನ್ನು ಹೇಳುತ್ತಾನೆ. ಇದರಿಂದ ಸಾಹಿತ್ಯವು ಹುಟ್ಟುತ್ತದೆ. ಆಗ ಮನುಷ್ಯನಿಗಾಗಿ ಸಾಹಿತ್ಯದ ನಿರ್ಮಾಣವಾಗುವುದು. ಆದರೆ ಸಾಹಿತ್ಯಕ್ಕಾಗಿ ಮನುಷ್ಯನಿರಲಾರ. ತಲೆಗಾಗಿಯೇ ಟೊಪ್ಪಿಯು ರಚಿಸಲ್ಪಡುತ್ತದೆ; ವಿನಹಾ ಟೋಪಿಗಾಗಿ ತಲೆಯನ್ನು ರಚಿಸಲಾಗುವುದಿಲ್ಲ.

ಸಾಹಿತ್ಯವು ಕಾಲ—ಧರ್ಮಕ್ಕನುಗುಣವಾಗಿ ವಿವಿಧ ರೀತಿಗಳಲ್ಲಿ ಸೃಷ್ಟಿಯಾಗಬಹುದು. ಆದರೆ ಜನರ ಪರಿಸ್ಥಿತಿಗನುಸಾರವಾಗಿ ಸಾಹಿತ್ಯದ ರಚನೆಯಾಗಿ ಅದು ಜೀವನಕ್ಕೆ ಮಾರ್ಗದರ್ಶನವಾಗುವುದು.

ಕನ್ನಡ ಸಾಹಿತ್ಯವನ್ನವಲೋಕಿಸಿದರೆ ಮೊತ್ತಮೊದಲು ದೊರೆಯುವ ಗ್ರಂಥ ನೃಪತುಂಗನ 'ಕವಿರಾಜ ಮಾರ್ಗ.' ಆ ಕಾಲದಲ್ಲಿ "ಗೋದಾವರಿಯಿಂದ ಕಾವೇರಿವರೆಗಿರ್ದ ಕನ್ನಡದ ನಾಡೋಳ್" ಜನರು ಓದದೆ ಪ್ರಯೋಗ ಪರಿಣತ ಮತಿಗಳಾಗಿದ್ದರೆಂದು ನೃಪತುಂಗ ಹೇಳಿದ್ದಾನೆ. ಆ ಮೇಲೆ ಬಂದ ಆದಿಕವಿ ಪಂಪನ ಕಾಲವು ಬಹಳ ಕಠಿಣವಾದ ವಿಚಾರಗಳಿಂದ ತುಂಬಿತ್ತು. ದೇವರೆಂದರೆ ಯಾರು? ಆವನೆಲ್ಲಿರುವನು?—ಇದ್ದಾನೋ, ಇಲ್ಲವೋ? ಇದ್ದರೆ ಆತನ ರೂಪ ಯಾವುದು?—ಇತ್ಯಾದಿ ಪ್ರಶ್ನೆಗಳು ಬಿಡಿಸಲಾರದ ಕಗ್ಗಂಟಾಗಿದ್ದುವು. ಪಂಪನು—ಮನುಷ್ಯನು ದೇವರಿಂದ ರಚಿಸಲ್ಪಟ್ಟ ಕೀಲು ಬೊಂಬೆ ಎಂಬ ವಿಚಾರವನ್ನು ಬಿಟ್ಟು, ತನ್ನ ಧರ್ಮವಾದ ಜನಧರ್ಮದ ಮೂಲಕ ಜೀವನವನ್ನು ಹೊಸ ದೃಷ್ಟಿಯಿಂದ ಅವಲೋಕಿಸಿದನು. ಆವನು ಭಾರತದಲ್ಲಿ ಚಿತ್ರಿಸಿದ ಕರ್ಣನ ಪಾತ್ರಕ್ಕೆ ಅವನ ಜೀವನವೇ ಚೌಕಟ್ಟಾಗಿದೆ. ಪಂಪನಲ್ಲಿದ್ದುದು ಸ್ವಾಮಿನಿಷ್ಠೆ. ದುರ್ಯೋಧನ ಯಾರನ್ನು ನಂಬಿದ್ದರೂ, ಕರ್ಣನಂತೂ ದುರ್ಯೋಧನನಿಗಾಗಿ ಪ್ರಾಣಾರ್ಪಣಕ್ಕೂ ಸಿದ್ಧನಾಗಿದ್ದ ಮಹಾ ಪುರುಷ. ಯುದ್ಧದ ಮೊದಲು ದಿವಸ ಪರಮಾತ್ಮನಾದ ಕೃಷ್ಣನು ಕರ್ಣನಲ್ಲಿಗೆ ಬಂದು "ಪಾಂಡವರೈವರು ನಿನ್ನ ತಮ್ಮಂದಿರು. ಕೌರವರನ್ನು ಬಿಟ್ಟು ಪಾಂಡವರನ್ನು ಸೇರಿದರೆ ಇಡೀ ರಾಜ್ಯವನ್ನೇ ನಿನ್ನ ಪದತಲಕ್ಕರ್ಪಿಸಿ ಚಕ್ರವರ್ತಿಯನ್ನಾಗಿ ಮಾಡುವೆನು" ಎಂದು ರಾಜ್ಯದಾಶೆಯನ್ನು ಹುಟ್ಟಿಸಿದಾಗಲೂ ಕರ್ಣನ ಮನಸ್ಸು ಚಲಿಸಲಿಲ್ಲ. ಕೊನೆಗೆ ಹೆತ್ತ ತಾಯಿಯೇ ಬಂದು ಕೇಳಿದಾಗಲೂ ಉಪ್ಪನ್ನವನ್ನಿತ್ತ ದುರ್ಯೋಧನನಿಗೆ ಕೇಡು ಬಗೆಯಬಾರದೆಂದು ಒಪ್ಪುವುದಿಲ್ಲ. ತನ್ನಿಂದಾಗಿ ಮಹಾಭಾರತ ಯುದ್ಧವೇ ನಡೆಯುವದೆಂದೂ, ಯುದ್ಧದ ಭೀಕರತೆ ಆತನಿಗೆ ತಿಳಿದಿದ್ದರೂ, ದುರ್ಯೋಧನನನ್ನು ಕೊನೆಯವರೆಗೂ ಕೈಬಿಡಲಿಲ್ಲ. ಪರಿಪೂರ್ಣವಾದ ಸ್ವಾಮಿನಿಷ್ಠೆಯಿಂದ ಕೂಡಿದ ಕರ್ಣನನ್ನು ಮೆಚ್ಚಿದ ಪಂಪನು "ಕರ್ಣರಸಾಯನ ಮಲ್ತೆ ಭಾರತಂ" ಎಂದಿದ್ದಾನೆ. ಅನಂತರ ಹೆಚ್ಚಿನ ಕವಿಗಳು ಪಂಪನ ಅನುಕರಣೆಯನ್ನೇ ಮಾಡಿದರಲ್ಲದೆ ಹೊಸದೇನನ್ನೂ ತಮ್ಮ ಕಾವ್ಯಗಳಲ್ಲಿ ತಂದಿಲ್ಲ.

ವೀರಶೈವರು ಸಾಹಿತ್ಯದಲ್ಲಿ ನೂತನ ಕ್ರಾಂತಿಯನ್ನಾರಂಭಿಸಿದರು. ಹರಿಹರ ಮತ್ತು ಆತನ ಶಿಷ್ಯ ರಾಘವಾಂಕ—ಇವರಿಬ್ಬರು ಕನ್ನಡ ಸಾಹಿತ್ಯದಲ್ಲಿ ಹೊಸದೊಂದು ವಿಚಾರವನ್ನು ಜನತೆಯ ಮುಂದಿಟ್ಟರು. ರಾಘವಾಂಕನು ತನ್ನ "ಸಿದ್ಧರಾಮ ಪುರಾಣ"ದಲ್ಲಿ ಸಿದ್ಧರಾಮನಿಗೂ, ಅಲ್ಲಮ ಪ್ರಭುವಿಗೂ ಆದ ಸಂಭಾಷಣೆಯನ್ನು ಬಹಳ ರಮ್ಯವಾಗಿ ಚಿತ್ರಿಸಿದ್ದಾನೆ. ಅಲ್ಲಮನು ಸೊನ್ನಲಿಗೆಗೆ ಬರಲು ಸಿದ್ಧರಾಮನು ಒಂದು ಕೆರೆ ಕಟ್ಟಿಸುವುದರಲ್ಲಿ ಪ್ರವೃತ್ತನಾಗಿದ್ದನು. ಅಲ್ಲಮನು ಸಿದ್ಧರಾಮನೊಡನೆ "ನೀನು ಲೌಕಿಕ ವ್ಯಾಪಾರಗಳಲ್ಲಿ ತೊಡಗಬಾರದು. ಜಡರ ಸಂಗದಿಂದ ನೀನು ಕಷ್ಟಪಡಬೇಡ" ಎಂದು ಬುದ್ಧಿ ಹೇಳಿದನು. ಅದಕ್ಕೆ "ಶಿವಯೋಗಿ ಲೋಕದಲ್ಲಿ ಸುಳಿದರೂ ನೀರ ನಡುವಿನ ತಾವರೆಯಂತಿರುತ್ತಾನೆ" ಎಂದು ಸಿದ್ಧನ ಉತ್ತರ. ಆಗ ಅಲ್ಲಮನು ಮತ್ತೊಂದು ಪ್ರಶ್ನೆ ಕೇಳಲು "ಸಾಕಾರ ನಿಷ್ಠೆ, ಸರ್ವಭೂತಗಳಲ್ಲಿ ದಯೆ—ಇದೇ ಪರಬ್ರಹ್ಮ" ಎಂದು ಸಿದ್ಧರಾಮನು ಹೇಳುತ್ತಾನೆ. ಈ ಸಂವಾದದಲ್ಲಿ ರಾಘವಾಂಕನು ಲೋಕಕ್ಕೊಂದು ಮಹತ್ತಾದ ಸಂದೇಶವನ್ನಿತ್ತಿದ್ದಾನೆ.

ಈ ರೀತಿ ಕನ್ನಡದಲ್ಲಿ ಹಿಂದಿನಿಂದಲೂ ಪ್ರಗತಿಶೀಲತೆಯು ಬೆಳೆದುಬಂದಿದೆ. ಕವಿ ತಾನು ಜೀವನದಲ್ಲಿ ಕಂಡ ಕಠೋರ ಸತ್ಯವನ್ನಾದರೂ ಹೇಳಲು ಹಿಂಜರಿಯುವುದಿಲ್ಲ. ಕವಿಯು ಜನರಿಗಾಗಿ, ಜನರ ಶ್ರೇಯಸ್ಸಿಗಾಗಿ ತಾನು ಕಂಡದ್ದನ್ನು ಅವರ ಮುಂದಿಡುತ್ತಾನೆ. ಜೀವನದ ಹೆಗ್ಗುರಿಯನ್ನು ನಿರೂಪಿಸುತ್ತಾನೆ. ನಮ್ಮ ಹಿಂದಿನ ಕವಿಗಳು "ಲೋಕಾಸ್ಸಮಸ್ತಾ ಸುಖಿನೋ ಭವಂತು" ಎಂದು ಹೇಳಿದ್ದಾರೆ. ಆ ತತ್ವವಾಣಿಯನ್ನು ಜನತೆ ತಿಳಿಯಬೇಕು; ಅದು ಬೆಳೆಯಬೇಕು.

[ಶ್ರೀ ತ. ರಾ. ಸುಬ್ಬರಾಯರ ಭಾಷಣ]
ಸಂಗ್ರಹಿಸಿ ಕಳುಹಿಸಿದವರು
—ನಾರಾಯಣ ಬಳ್ಳಾಳ, ಹಾಸನ

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಕುಮಾರಿ ಪಿಲ್ಸ್ (?) ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

NAVAYUGA REGD. NO. M. 3619 | **UDIPI, THURSDAY** 4–2–1960 | **LICENSE NO. 31** Licensed to Post without Prepayment

ಚಾರುಚಯನ:

ಭಾರತೀಯರ ಉದಾರತೆ

ಉದಾರ ಹೃದಯದ ಭಾರತೀಯರು ಸರ್ಪವನ್ನೂ ಮುತ್ತಿಡಲು ಹಿಂಜರಿಯಲಾರರಲ್ಲವೆ?

ರಶ್ಯನ್ ಅಧ್ಯಕ್ಷ ವೊರೋಶಿಲೋವರು ಬೊಂಬಾಯಿಯ ಸಾಂತಕ್ರೂಸ ವಿಮಾನ ನಿಲ್ದಾಣದಲ್ಲಿ ಇಳಿದೊಡನೆಯೇ ನೆರೆದಿದ್ದ ಜನಸ್ತೋಮ 'ಹಿಂದೂ ರಶ್ಯ ಭಾಯಿ ಭಾಯಿ' ಎಂದು ಉದ್ಘೋಷಿಸಿದರಂತೆ.

ಹಿಂದೊಮ್ಮೆ ಚೀನೀ ಪ್ರಧಾನಿ ಚೌ ಎನ್ ಲಾಯ್ ದೆಹಲಿಗೆ ಆಗಮಿಸಿದಾಗಲೂ ಇದೇ ಜನಸ್ತೋಮ ಹಿಂದೂ—ಚೀನಾ ಭಾಯಿ ಭಾಯಿ ಎಂಬ ಆಶಯ ವ್ಯಕ್ತಪಡಿಸಿಲ್ಲವೆ?

ಅದೇ ಚೀನ ಇಂದು ಚೀನಾ ಹಿಂದೂ ಭಾಯಿ ಭಾಯಿ ಎಂದು ಹಾಡಿಕೊಂಡೇ ಲಡಖ್, ನೇಫಾ ಪ್ರದೇಶಗಳಲ್ಲಿ ತಾಂಡವ ನೃತ್ಯವಾಡಲು ತೊಡಗಿರುವುದಿಲ್ಲವೆ?

ಯಾರು ಸಚ್ಚಾ ಭಾಯಿ ಯಾರು ಬುರಾ ಭಾಯಿಯೆಂಬ ನಿರ್ಧಾರ ಪ್ರಥಮ ಚುಂಬನದಲ್ಲಿಯೇ ಹೇಗೆ ಗೊತ್ತಾಗಬೇಕು?

ಇದರಿಂದಲೇ 'ಭಾರತೀಯ ಉದಾರತೆ' ವಿಶ್ವವಿದಿತವಾಗಿದ್ದರೂ ಇರಬಹುದೆಂದು ತರ್ಕಿಸಿದರೆ ಆಶ್ಚರ್ಯವಿಲ್ಲತಾನೆ?

ದ್ರಾವಿಡರು, ಆರ್ಯರು, ಮುಸಲ್ಮಾನರು, ಮೊಗಲರು ಮುಂದೆ, ಫ್ರೆಂಚರು ಡಚ್ಚರು ಎಲ್ಲರನ್ನೂ ಎರಡೂ ಕೈಯಿಂದೆತ್ತಿ ಸ್ವಾಗತಿಸಿದ ಹಿರಿಮೆ ಭಾರತದ್ದು.

ಅವರೆಲ್ಲರನ್ನೂ ಹಿಮ್ಮೆಟ್ಟಿಸಿ ಅಖಂಡ ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತೆಯನ್ನು ಮನಃಪೂರ್ವಕವಾಗಿ ಮೆಚ್ಚಿ ತೃಪ್ತಿಗೊಂಡ ಗೌರವ ಭಾರತದ್ದು.

ಕೆಲವೊಂದು ಪುಡಾರಿಗಳ ದೊಂಬಿಯಿಂದ ಹೆದರಿಹೋದ ಈಸ್ಟ್ ಇಂಡಿಯಾ ಕಂಪೆನಿ ಭಾರತಸತ್ತೆಯ ಅಧಿಕಾರವನ್ನು ಇಂಗ್ಲೆಂಡಿನ ಮಹಾರಾಣಿಯ ಕೈಗಳಿಗೊಪ್ಪಿಸಿದಾಗ, ಆಕೆಯ ಜಾಹೀರುನಾಮೆಯನ್ನು ಕೇಳಿಯೇ ಅತಿರೇಕಾನಂದವನ್ನು ತಾಳಿ, ಆನಂದ ಬಾಷ್ಪವನ್ನು ಸುರಿಸಿ, ಅವರ ಕೈಗೊಂಬೆಗಳಾಗಿರಲು ಸದಾಸಿದ್ಧರಾದ ಘನತೆ ಭಾರತೀಯರದ್ದು.

ಅನಂತರ, ತಮ್ಮಿಂದ ಆಳಿಕೆ ಅಸಾಧ್ಯವೆಂದು, ನೀವು ಸ್ವತಂತ್ರರು ಎಂದು ಬ್ರಿಟಿಷರು ಘೋಷಿಸಿ ಹೊರಟಾಗ, ಅದಕ್ಕೂ ಅಸ್ತುಹೇಳಿದ ಉದಾರತೆ ಭಾರತೀಯರದ್ದೇ ಅಲ್ಲವೆ?

ಯಾರೇ ಇರಲಿ, ನಮ್ಮ ಯೋಜನೆಗಳಿಗೆ ಯಾವುದೇ ವಿಧವಾದ ಸಹಾಯನೀಡಲು ಮುಂದೆಬಂದಾಗ "ನಿಶ್ಶರ್ತ"ವೆಂಬ ಮೂರಕ್ಷರಗಳನ್ನು ಖೇದಪೂರ್ವಕವಾಗಿ ಸೇರಿಸಿ, ಅದನ್ನು ಆತ್ಮಸಂತೋಷದಿಂದ ಸ್ವೀಕರಿಸುವ ಉದಾರತೆ ಇನ್ನಾರಿಗಿದೆ?

ಚೀನದ ಸುಖಸಾಮ್ರಾಜ್ಯದಲ್ಲಿರಲು ಇಷ್ಟಪಡದೆ ಹೊರ ಓಡಿಬಂದ ಟಿಬೇಟದ ಫಕೀರ ದಲ್ಯೈಲಾಮಾರಿಗೂ ಆಶ್ರಯವನ್ನು ಕೊಟ್ಟು ಅವರಿಗಾಗಿ ಲಕ್ಷಗಟ್ಟಲೆ ವೆಚ್ಚಮಾಡುವ ಉದಾರತೆ ಬರ್ಮಕ್ಕಾಗಲೀ ಪಾಕಿಸ್ತಾನಕ್ಕಾಗಲಿ ಎಲ್ಲಿಂದ ಬರಬೇಕು?

'ಉದಾರ ಚರಿತಾನಾಂ ವಸುಧೈವ ಕುಟುಂಬಕಂ' ಎಂದು ಸಾರಿದ ನಮ್ಮ ಪೂರ್ವಜರ ನುಡಿಮುತ್ತನ್ನು ಮರೆಯದೆ ಹಿಂದಿನಿಂದಲೂ ಬೇರೆ ಬೇರೆ 'ವಸುಧಾದೀಶರ' ಶೇಷಾನ್ನವನ್ನುಂಡ ಭಾರತೀಯರು ಈಗ ಚೀನವನ್ನು ಪ್ರತಿಭಟಿಸುವುದರಲ್ಲಿ ಯಾವ ಅರ್ಥವಿದೆ? ಹಿಂದೀ-ಚೀನಾ ಭಾಯಿ ಭಾಯಿ! ಅಣ್ಣತಮ್ಮಂದಿರ ಭೂಮಿಯಲ್ಲಿ ಪಾಲುಮಾಡಿಕೊಳ್ಳದೆ ಸಂಯುಕ್ತ ಕುಟುಂಬವಾಗಿ ಬಾಳೋಣವೆಂದು ಚೀನ ಹೇಳಿದರೆ, ಅದಕ್ಕೆ ಮುನಿಯುವುದು ಕಿಡಿಗೇಡಿತನವಲ್ಲವೆ?

ಭಾಯಿ–ಭಾಯಿಗಳಿಗೂ ಒಂದೊಂದು ಬೇರೆ ಬೇರೆ ಬಾಯಿಗಳಿರುವುದರಿಂದ, ಈಗ ಎದ್ದಿರುವ ವಿವಾದವಾದರೂ ಬಾಯಿ ಬಾಯಿಗಳದ್ದೇ ಆಗಿರಬಾರದೇಕೆ? ಭಾಯಿಗಳು ಒಮ್ಮತವಾಗಿದ್ದುಕೊಂಡರೆ ಬಾಯಿಗಳ ಅಸಹಾಯರಾಗುವುದಿಲ್ಲವೆ?

'ರೂಸಿ ಹಿಂದೂ ಭಾಯಿ ಭಾಯಿ' ಆದರೂ ಇದೇ ಪರಿಸ್ಥಿತಿ ಮರುಕೊಳಿಸಬಹುದೆ?

— ಗೋರಾ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಹೋಗುವುದು ಮಾತ್ರವಲ್ಲ, ಅಂತಿಮವೇಳೆಯಲ್ಲಿ ಪರಮಾಣುಯುದ್ಧವೂ ನಡೆಯಬೇಕಾಗಬಹುದು. ಮತ್ತು ಎರಡನೆಯದಾಗಿ ಅಂತಾರಾಷ್ಟ್ರೀಯ ವಿವಾದಗಳೆಲ್ಲವೂ ಸೌಹಾರ್ದಮಯವಾಗಿಯೇ ಪರಿಹಾರಗೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ. ಭಾರತವು ಪಂಚಶೀಲ ಸಿದ್ಧಾಂತಗಳನ್ನು ಹೊಂದಿಸಿಕೊಂಡು ಮುನ್ನಡೆಯಲು ಬಯಸುತ್ತಿದೆ. ಉಳಿದ ಕೆಲವು ದೇಶಗಳೂ ಅವನ್ನು ಸ್ವೀಕರಿಸಿರುವುದಾಗಿ ಘೋಷಿಸಿದ್ದುವು; ಆದರೆ, ಅವು ಸದಾ ಅವನ್ನು ಅನುಸರಿಸಿಲ್ಲ." ಎಂದು ನವದೆಹಲಿಯಲ್ಲಿ ಸೇರಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಭಾರತೀಯ ಪ್ರಧಾನಿ ಜವಾಹರಲಾಲರು ಆಡಿದ್ದ ಮಾತನ್ನು ನಾವು ನೆನಸಿಕೊಂಡರೆ, ಈ ವಿವಾದವು ವಿವಂಚನಾತ್ಮಕವಾಗಿದ್ದರೂ ಭಾರತವು ಸೌಮ್ಯ ಧೋರಣೆಯನ್ನೇ ಮುಂದೊತ್ತುತ್ತಿದೆಯೆಂದು ತಿಳಿಯಬಹುದು.

ಭಾರತ ಸರಕಾರದ ಈ ಅಚಲ ಧೋರಣೆಯು ಕೆಲವು ಭಾರತೀಯರಿಗೆ ಸರಿದೋರದಿರಬಹುದು. ಪಾಕಿಸ್ತಾನದೊಡನೆಯಾಗಲಿ ಇನ್ನಿತರ ದೇಶಗಳೊಡನೆಯಾಗಲೀ ಸೈನಿಕ ಒಪ್ಪಂದವನ್ನು ಮಾಡಿಕೊಳ್ಳಬೇಕೆಂಬ ಸೂಚನೆ ಕೊಡುವವರೂ ಕೆಲವರಿದ್ದಾರೆ. ಹಿಂದೊಮ್ಮೆ ಪಾಕಿಸ್ತಾನವು ಅಮೆರಿಕೆಯೊಡನೆ ಸೈನಿಕ ಒಪ್ಪಂದ ಮಾಡಿಕೊಂಡ ವೇಳೆ, ಭಾರತವು ರಶ್ಯದೊಡನೆ ಇಂತಹ ಒಪ್ಪಂದಮಾಡಿಕೊಳ್ಳಬೇಕೆಂಬ ಸೂಚನೆಯೊಂದು ಕಮ್ಯುನಿಸ್ಟ್ ಸದಸ್ಯರೊಬ್ಬರಿಂದ ಪಾರ್ಲಿಮೆಂಟಿನಲ್ಲಿ ಈಯಲ್ಪಟ್ಟಿತೆಂಬುದನ್ನು ಇಲ್ಲಿ ಸ್ಮರಿಸಬಹುದು. ಆದರೆ, ಹೀಗೆ ಮಾಡುವುದರಿಂದ ನಾವು ಇದು ವರೆಗೆ ರಕ್ಷಿಸಿಕೊಂಡು ಬಂದ ಪಂಚಶೀಲ ನೀತಿಯನ್ನು ಉಲ್ಲಂಘಿಸಿದಂತಾಗುವುದೆಂದೂ ಅಲ್ಲದೇ ಈ ಮಾದರಿಯ ಅನಾಕ್ರಮಣ ಸಂಧಿಗಳು ಅನಗತ್ಯವೆಂದೂ ಪ್ರಧಾನಿ ನೆಹರೂ ಹೇಳುತ್ತಾರೆ.

ಕಮ್ಯುನಿಸ್ಟ್ ಚೀನವು ಏಶ್ಯದಲ್ಲಿಯೇ ಎರಡನೆಯ ದೊಡ್ಡ ರಾಷ್ಟ್ರವಾಗುವುದೆಂದು ತನ್ನ ಅಮೆರಿಕೆಯ ಸಂಚಾರದಲ್ಲಿ ರಶ್ಯನ್ ಪ್ರಧಾನಿ ಕ್ರುಶ್ಚೇವರು ಭವಿಷ್ಯ ನುಡಿದಿದ್ದರು. ತನ್ನ ತಮ್ಮನಂತಿರುವ ಚೀನದ ಅಭ್ಯುತ್ಥಾನವನ್ನು ಬಯಸುವುದು ಸರಿಯೇ ಆದರೂ ಅದರ ಈ ರೀತಿಯ ಆಕ್ರಮಕ ಮನೋವೃತ್ತಿಯನ್ನು ಕಂಡೂ ಸುಮ್ಮನುಳಿಯುವುದು ರಶ್ಯಕ್ಕೆ ಶೋಭನೀಯವಲ್ಲ. ವಿಶ್ವಶಾಂತಿಗಾಗಿ ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡಲು, ಸೈನಿಕ ವೆಚ್ಚದಲ್ಲಿ ಕಡಿತಮಾಡಲು, ಪರಮಾಣು ವಿಶಾಸ್ತ್ರಗಳ ಪರಿಶೀಲನೆ ಮಾಡುವುದನ್ನು ನಿಲ್ಲಿಸಲು ಸದಾ ಸನ್ನದ್ಧನಾಗಿರುವುದೆಂದು ಹೇಳಿಕೊಳ್ಳುವ ರಶ್ಯವಾದರೂ ಈಗ ಮೌನಿಯಂತೆ ಕಾಣುತ್ತ, 'ಶಾಂತಿಯಿಂದ ಸಮಸ್ಯೆ ಬಗೆಹರಿಯಲಿ' ಎಂದು ಆಶಿಸುವುದರಿಂದ ಏನೂ ವಿಶೇಷ ಪ್ರಯೋಜನವಾಗುವುದೆಂಬ ಆಶೆಯುಳಿವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತ ಸಂದರ್ಶನ ಮಾಡಿದ ರಶ್ಯನ್ ಅಧ್ಯಕ್ಷರು ಚೀನಾದ ಆಕ್ರಮಣದ ಬಗ್ಗೆ ಭಾರತೀಯರ ನಿಲುಮೆಯೇನೆಂಬುದನ್ನು ಅವಶ್ಯ ಕಂಡುಕೊಂಡಿದ್ದಾರೆ. ಎಂತಲ್ಲೇ ಅವರ ಈ ಭೆಟ್ಟಿಯ ಪರಿಣಾಮವು ಈ ವಿವಾದದ ಮೇಲೆ ಒಂದಲ್ಪವಾದರೂ ಬೀಳದಿರುವುದು ಅಸ್ವಾಭಾವಿಕ.

ಚೀನವು ತನಗಿತ್ತ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿಗೆ ತೆರಳಲಿರುವ ಕೋಯಿರಾಲಾ ಭಾರತದಲ್ಲಿ ಕೆಲವೇದಿನವಿದ್ದು ಮರಳಿರುವರಾದರೂ ಚೀನೀ ಆಕ್ರಮಣವನ್ನು ಸಮಸ್ತ ಭಾರತೀಯರು ವಿರೋಧಿಸುತ್ತಿರುವರೆಂಬುದನ್ನು ಕಂಡುಕೊಂಡಿದ್ದಾರೆ. ಅವರು ಆದಾವ ಕಾರಣದಿಂದ ಪೇಕಿಂಗ್ ಯಾತ್ರೆ ಮಾಡಲಿ, ಅಲ್ಲಿ ನಡೆಯಬಹುದಾದ ಮಾತುಕತೆಗಳಲ್ಲಿ ಈ ವಿವಾದದ ವಿಷಯವೂ ಸಮಾವೇಶಗೊಳ್ಳುವುದು ಖಂಡಿತ. ಏಕೆಂದರೆ, ಸ್ವಯಂ ನೇಪಾಳದ ಮೇಲೆಯೇ ಆಕ್ರಮಣ ನಡೆದಿದೆ ಎಂಬ ವದಂತಿಯೂ ಇದೆ. ಬಾಯಿಯಲ್ಲಿ ಶಾಂತಿಪಾಠ ಬಗಲಲ್ಲಿ ಚೂರಿಯೆಂಬ ವರ್ತನೆಯನ್ನು ತೋರಿಸಿದುದರಿಂದ, ಚೀನವು ಭಾರತೀಯರ ಜಿಗುಪ್ಸೆಗೆ ಗುರಿಯಾಗಿದೆ ಅಲ್ಲದೇ ಅಲ್ಲಲ್ಲಿ ಹರಡಿಕೊಂಡಿದ್ದರೂ ಇದುವರೆಗೆ ಕಮ್ಯುನಿಜಂ ಅನ್ನು ಬೆಂಬಲಿಸುತ್ತಿದ್ದ ಕೆಲವು ಭಾರತೀಯರೂ ಇಂದು ಕಮ್ಯುನಿಸ್ಟರೆಂದರೆ ದೇಶದ್ರೋಹಿಗಳೆಂದು ಹೀಗಳೆಯಲು ತೊಡಗಿರುವರೆಂದು ಕೇಳುವಾಗ, ಕೇರಳದ ಮಧ್ಯಾವಧಿ ಚುನಾವಣೆಯ ಮೇಲೆಯೂ ಅದರ ಅಸರೆ ಬಲವಾಗಿ ಬಿದ್ದಿರುವಾಗ, ಭಾರತೀಯರ ಮನಸ್ಸು ಎಷ್ಟುನೊಂದಿರಬಹುದೆಂದು ಯಾರಿಗೂ ಬೇರೆ ಹೇಳಬೇಕಾಗಿಲ್ಲ.

ಎರಡು ಶತಕಗಳ ದಾಸ್ಯ ಶೃಂಖಲೆಯ ನೋವಿನ ಸವಿಯನ್ನುಂಡ ಭಾರತೀಯರು ತಾವು ಒಂದು ಶತಮಾನಕಾಲ ಹೋರಾಡಿ ಪಡೆದ ಈ ಸ್ವಾತಂತ್ರ್ಯವನ್ನು ಚೀನದ ಬಲಕ್ಕಂಜಿ ಅದಕ್ಕೆ ಒಪ್ಪಿಸಿಕೊಡುವಷ್ಟು ಬುದ್ಧಿಶೂನ್ಯರಲ್ಲ. ಅವರಲ್ಲೂ ಕೆಚ್ಚು ಇದೆ ಧೈರ್ಯ, ಶಕ್ತಿ, ಸಾಹಸ, ಪರಿಶ್ರಮಪಟುತ್ವ, ರಾಷ್ಟ್ರಪ್ರೇಮ, ರಾಷ್ಟ್ರಾಭಿಮಾನಗಳಿವೆಯೆಂಬುದನ್ನು ಪ್ರದರ್ಶಿಸಬೇಕಾದ ಒಂದು ಪರಿಣಾಮಕಾರಿ ಸಂಧಿಕಾಲದಲ್ಲಿ ಭಾರತವಿಂದು ನಿಂತಿದೆಯೆಂಬುದು ನಿಜ. ಈ ಸತ್ವಪರೀಕ್ಷೆಯ ಅಗ್ನಿಕುಂಡದಿಂದ ಪರಿಶುದ್ಧವಾಗಿ ಎದ್ದು ನಿಲ್ಲುವುದು ಮಾತ್ರ ಎಲ್ಲ ಭಾರತೀಯರ ಪರಮಕರ್ತವ್ಯವಾಗಿದೆ. ನಮ್ಮೆಲ್ಲ ಭಿನ್ನಾಭಿಪ್ರಾಯವನ್ನು ಐಕ್ಯಭಂಗವಾಗುವಂತೆ ಪ್ರಕಟಿಸದೆ, ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡಬೇಕಾದುದು, ರಾಷ್ಟ್ರೀಯ ಭಾವನೆಯನ್ನು ತಾಳಬೇಕಾದುದು ಸಮಸ್ತ ಭಾರತೀಯರ ಆದ್ಯ ಕರ್ತವ್ಯ.

ಹೆಚ್ಚಿನ ಜನರಿಗೆ ಹೆಚ್ಚಿನ ಸೇವೆಗೆ

—ಹೊಸ ಶಾಖೆಗಳು—

				ಪ್ರಾರಂಭ
1.	ಮಾತುಂಗ	....	ಬೊಂಬಾಯಿ	1–2–1960
2.	ರಾಜಮಂಡ್ರಿ	...	ಆಂಧ್ರ	1--2–1960
3.	ಇರೋಡು	....	ಮದ್ರಾಸು	1–2–1960
4.	ಸೇಲಂ	....	ಮದ್ರಾಸು	1–2–1960
5.	ಕೊಟ್ಟಾಯಮ್	...	ಕೇರಳ	1–2–1960
6.	ತ್ರಿವೆಂಡ್ರಮ್	...	ಕೇರಳ	8–2–1960

■ ಸಿಂಡಿಕೇಟ್ ಬ್ಯಾಂಕ್ ■

THE CANARA INDUSTRIAL & BANKING SYNDICATE LTD.,
H. O: UDIPI.

BUY ADVERTISED GOODS!

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ ಪೈಸೆ

ವರುಷ ೩೯. ವಾರ ೨೩. 11-2-1960 Vol. 39 No. 23.

ಪ್ರಚಲಿತ ಪ್ರಸಂಗ

ಅನಿವಾರ್ಯ ರಾಷ್ಟ್ರಸೇವೆ ಅವಶ್ಯ

ಡಾ। ದೇಶಮುಖ ಸಮಿತಿಯ ವರದಿಯ ಮೇಲೊಂದು ವಿವೇಚನಾತ್ಮಕ ವಿಹಂಗಮಾವಲೋಕನ.

ಕೇಂದ್ರ ಸರಕಾರದ ಶಿಕ್ಷಣ ಮಂತ್ರಿ ಶಾಖೆಯು ವಿಶ್ವವಿದ್ಯಾನಿಲಯ ಸಹಾಯಧನಾಯೋಗದ ಅಧ್ಯಕ್ಷ ಡಾ। ಸಿ ಡಿ ದೇಶಮುಖರ ಹಿರಿತನದಲ್ಲಿ ಒಂದು ಸಮಿತಿಯನ್ನು ರಚಿಸಿ, 'ರಾಷ್ಟ್ರೀಯ ಸೇವಾ ಸಮಿತಿ'ಯು ಪರಿಶೀಲನೆ ನಡೆಸಿ, ಇದೀಗ ತನ್ನ ವರದಿಯನ್ನು ಅರ್ಪಿಸಿದೆ.

ಈ ವರದಿಯ ಪ್ರಧಾನ ಸಿಫಾರಸು ಎಂದರೆ, ವಿಶ್ವವಿದ್ಯಾನಿಲಯ ಪ್ರವೇಶ ಮಾಡುವುದಕ್ಕೆ ಮೊದಲು ಪ್ರತಿಯೊರ್ವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯೂ ಅನಿವಾರ್ಯವಾಗಿ ರಾಷ್ಟ್ರ ಸೇವೆಯನ್ನು ಮಾಡಬೇಕು ಮತ್ತು ಇಂತಹ ಸೇವೆಯನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕು ಎಂಬಿತ್ಯಾದಿಗಳನ್ನು ನಿರ್ಣಯಿಸಲು ರಾಷ್ಟ್ರೀಯ ಸೇವಾಯೋಗವೊಂದನ್ನು ಸ್ಥಾಪಿಸಬೇಕು ಎಂಬುದಾಗಿದೆ

ಇಂದಿನ ಮಕ್ಕಳೇ ಮುಂದಿನ ಜನಾಂಗವಾದುದರಿಂದ ಪ್ರಚಲಿತ ವಿದ್ಯಾರ್ಥಿಗಳಿಗೆ ಸಮರ್ಪಕವಾದ ಸುಯೋಗ್ಯವಾದ ರೀತಿಯಲ್ಲಿ ಉತ್ತಮ ನಾಗರಿಕರಾಗುವಂತೆ ತರಬೇತಿಯನ್ನು ನೀಡುವುದು ಅವಶ್ಯವಾಗಿದೆ. ಆದರೆ, ಇಂದು ಉಚ್ಚಸ್ತರದ ವಿಶ್ವವಿದ್ಯಾಲಯಗಳಲ್ಲಿ ಕೂಡ ವಿದ್ಯಾರ್ಥಿಗಳು ಗುಲ್ಲೆಬ್ಬಿಸಿ, ಅಶಿಸ್ತು ಪ್ರದರ್ಶಿಸಿ ವಿಶ್ವವಿದ್ಯಾಲಯಕ್ಕೇನೇ ಅಗೌರವ ತಂದ ಘಟನೆಗಳು ಪದೇ ಪದೇ ನಮ್ಮ ದೇಶದಲ್ಲಿ ನಡೆಯುತ್ತಿವೆ. ಈ ದುರ್ಘಟನೆಗಳಿಗೆ ಯಾವುದೇ ಕಾರಣವಿರಲಿ, ಇಲ್ಲದಿರಲಿ, ವಿದ್ಯಾರ್ಥಿಗಳು ತಮ್ಮ ಮಿತಿಯನ್ನು ಮೀರಿ ನಿಂದಾಡಬಾರದು ಎಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಆದರೆ, ನಮ್ಮಲ್ಲಿಂದು ತಲೆದೋರಿರುವ ಪ್ರಶ್ನೆ ತೀರ ಜಟಿಲವಾಗಿದೆ. ದೇಶದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಕಂಡು ಬರುವಷ್ಟು ಶಿಸ್ತುಭಂಗ ಮತ್ತೆಲ್ಲಿಯೂ ತೋರುವುದಿಲ್ಲ. ಆದುದರಿಂದ, ಈ ವಿದ್ಯಾರ್ಥಿಗಳಲ್ಲಿ ಅನುಶಾಸನ ಶೀಲತೆಯ ಅಭ್ಯಾಸವನ್ನು ಬೆಳಸದೆ ಹೋದರೆ, ನಮ್ಮ ಭಾವಿ ಜನಾಂಗವು ನಿಜವಾಗಿಯೂ ದುರ್ಬಲವಾಗುವುದು.

ಉಚ್ಚ ವರ್ಗದ ವಿದ್ಯಾರ್ಥಿಗಳಲ್ಲಿ ಮುಖ್ಯವಾಗಿ ಮತ್ತು ಅತ್ಯವಶ್ಯವಾಗಿ ಇರಬೇಕಾದುದು ಶಿಸ್ತಿನ ಜೀವನ ಸ್ವಾವಲಂಬನ ಮತ್ತು ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಬೇಕಾದ ಅರ್ಹತೆಯೂ ಅಗತ್ಯವೇ. ಆದರೆ, ನಮ್ಮಲ್ಲಿ ಇಂದು ಕಾಣದೆ ಇರುವ ಅಂಶವಾದರೂ ಇವೇ. ಕಾಲೇಜಿನ ಮೆಟ್ಟಲು ಹತ್ತಿದನೆಂದ ಮಾತ್ರಕ್ಕೆ ಒಬ್ಬನ ವರ್ತನೆಗೂ ಆಚರಣೆಗೂ ಲಂಗುಲಗಾಮಿಲ್ಲದಂತಹ ಸ್ಥಿತಿಯಿಂದು ತಲೆದೋರಿದೆ. ಆತ್ಮನಿರ್ಭರತೆ ಮತ್ತು ಸ್ವಾವಲಂಬನೆಯ ಮಾತಂತೂ ಇಲ್ಲವೇ ಇಲ್ಲ. ವಿದೇಶಗಳಲ್ಲಿ ಉಚ್ಚ ವರ್ಗದ ವಿದ್ಯಾರ್ಥಿಗಳು ಒಂದುಕಡೆ ದುಡಿದು ಸಂಪಾದಿಸುತ್ತ ಮತ್ತೊಂದೆಡೆ ವಿದ್ಯಾಭ್ಯಯನ ನಡೆಸುವ ಕ್ರಮವಿದೆ. ನಮ್ಮಲ್ಲೂ ಕೆಲವೇ ಕೆಲವರು ಈ ರೀತಿಯಾಗಿ ಖಾಸಗಿ ಟ್ಯೂಶನ್ ಆದಿಗಳನ್ನು ಪೂರೈಸಿ ಅಭ್ಯಸಿಸುವವರು ಇದ್ದಾರೆ. ಆದರೆ ಇಂತಹರ ಸಂಖ್ಯೆ ಕೇವಲ ಕೈ ಬೆರಳೆಷ್ಟಿರುವುದರಿಂದ, ಹೆಚ್ಚಿನ ವಿದ್ಯಾರ್ಥಿಗಳು ಪರಾವಲಂಬಿಗಳಾಗಿ ತಮ್ಮ ಹೆತ್ತವರನ್ನೋ ಹಿರಿಯರನ್ನೋ ಹೊಂದಿಕೊಂಡಿರಬೇಕಾಗುತ್ತದೆ. ವಿಶ್ವವಿದ್ಯಾನಿಲಯಕ್ಕೆ ನೀಡುವ ಪ್ರವೇಶ ಕ್ರಮದಲ್ಲಿಯೂ ನಾನಾವಿಧದ ನಿಯಮಗಳಿದ್ದು ಇವುಗಳಿಂದಾಗಿ ಅರ್ಹತೆಯಿದ್ದವರೇ ಮುಂದೆ ಹೋಗುವುದು ಪ್ರಯಾಸವಾಗುತ್ತದೆ. ಸರಕಾರಗಳೂ ಈ ದಿಸೆಯಲ್ಲಿ ಸ್ವಲ್ಪ ಕಿರುಕುಳವೆಬ್ಬಿಸಲು ತಯಾರಾಗುತ್ತವೆ. ಆದರೆ, ವಿಶ್ವವಿದ್ಯಾಲಯಗಳಿಗೆ ಪ್ರವೇಶನೀಡುವಾಗ ಅರ್ಹತೆಯೊಂದನ್ನೇ ಮಾನದಂಡವಾಗಿ ಇಟ್ಟುಕೊಳ್ಳಬೇಕೇ ಹೊರತು ಜಾತಿಕೋಮುವಾದವನ್ನಲ್ಲ. ಉನ್ನತಶಿಕ್ಷಣವನ್ನು, ಅನನ್ನು ಅಧ್ಯಯನಮಾಡಿ ಅದರಿಂದ ತಾನು ಕಂಡುಕೊಂಡ ಅನುಭವಗಳ ಲಾಭವನ್ನು ಜನತೆಗೀಯಬಲ್ಲವರಿಗೆ ಮಾತ್ರ ಕೊಡುವಂತಾಗಬೇಕು. ಸೇವಾ ಭಾವನೆ, ವಿಶಾಲ ಮನಃಪ್ರವೃತ್ತಿಗಳು ಆತನಲ್ಲಿ ಅಂಕುರಿಸಿರಬೇಕು. ಹೀಗಿಲ್ಲವಾದರೆ, ಆ ವಿದ್ಯಾರ್ಥಿಗಳು ಸೊಕ್ಕಿ, ಅನಾಹುತಗಳಿಗೆ ಈಡಾಗುವುದು ನಾವು ಕೇಳುತ್ತೇವೆ

ಇದಕ್ಕಾಗಿ ಶ್ರೀ ದೇಶಮುಖ ಸಮಿತಿಯು ಮಾಡಿದ ಸೂಚನೆಯು ಸೂಕ್ತವಾಗಿದೆ. ಪ್ರಾಯರ್ ಸೆಕೆಂಡರಿ ಶಾಲೆಗಳ ಶಿಕ್ಷಣದ ನಂತರ ಅಥವಾ ವಿಶ್ವವಿದ್ಯಾಲಯ ಪೂರ್ವ ಶಿಕ್ಷಣಾನಂತರ ೯ ತಿಂಗಳುಗಳಿಂದ ಹಿಡಿದು ಒಂದು ವರ್ಷದ ವರೆಗೆ ಅನಿವಾರ್ಯವಾಗಿ ಪ್ರತಿಯೊಬ್ಬರಿಂದಲೂ ರಾಷ್ಟ್ರ ಸೇವೆಯನ್ನು ಮಾಡಿಸುವ ಸೂಚನೆಯು ಮನ್ನಣೆಯದಾಗಿದೆ. ಈ ಸೂಚನೆಯು ನ್ಯಾಯಬದ್ಧವೆಂದು ಹೇಳಬಹುದು. ದೇಶದ ಉನ್ನತಿಗಾಗಿ ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡುವ ನಮ್ಮ ಪ್ರಜೆಗಳಿಗೆ ಯುಕ್ತವಾದ ಮಾರ್ಗದರ್ಶನ ಮಾಡುವುದಕ್ಕೂ ದೇಶಕ್ಕೆ ಅಧಿಕಾರ ಇದೆ. ಆದ್ದರಿಂದ ದೇಶಕ್ಕೋಸ್ಕರ ತಮ್ಮ ಜೀವಮಾನದಲ್ಲಿ ಒಂದು ವರ್ಷದ ಅವಧಿಯನ್ನು ಮೀಸಲಾಗಿಟ್ಟರೆ, ಅದರಿಂದ ಚ್ಯುತಿಯೊದಗಲಾರದು

ಇಂದು ನಮ್ಮ ಜನತೆಯ ಮನೋಭಾವದ ಸ್ತರವು ತೀರ ಕುಂಠಿತವಾಗಿರುವುದು ಇದಕ್ಕೆ ಅವಿರತ ವಿದೇಶಿಯ ಶಾಸನವೇ ಕಾರಣವಾಗಿರಲೂ ಬಹುದು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ತಮ್ಮ ರಾಷ್ಟ್ರೋದ್ಧಾರ ಯೋಜನೆಗಳಲ್ಲಿ ತೊಡಗಿರುವಾಗ, ಮುಖ್ಯವಾಗಿ ಗ್ರಾಮ ಶುಚಿತ್ವ, ಸಾಮೂಹಿಕ ಭೋಜನಾದಿಗಳು, ಇವನ್ನು ರಾಷ್ಟ್ರ ಸೇವೆ ಎಂದು ಕರೆಯುವಷ್ಟರ ವರೆಗೂ ಮುಂದುವರಿದಿದ್ದ ಪ್ರಸಂಗದಲ್ಲೊಂದಿಷ್ಟು ನಾವು ಭಾರತೀಯರು ನಮ್ಮ ಸಂಕುಚಿತ ಮನೋವೃತ್ತಿಯ ಪ

(ಮುಂದಿನ ಪುಟ ನೋಡಿರಿ)

ವಿಶ್ವಶಾಂತಿಗಾಗಿ ದುಡಿಯುತ್ತಿರುವ ಯುಕ್ತರಾಷ್ಟ್ರ ಸಂಘದ ಎರಡು ಅಂಗಗಳು: ಮೇಲೆ ಭದ್ರತಾಮಂಡಳಿಯ ಸಭೆ ಕೆಳಗೆ ಸಾಮಾನ್ಯ ಸಭೆ.

ಕಥಾವಿಹಾರ

ಕೇಕಯೀ ಅಕ್ಕನ ಕತೆ

ಅನುಕ್ರಮಣಿಕೆಯಲ್ಲೇ ತೃಪ್ತಿಗೊಂಡು ಅಕ್ಕ ಸ್ಫೂರ್ತಿಗೆ ಸಮಾಧಾನ ತಂದುಕೊಂಡಳು.

ನಾನು ಹಿಂದೀ ಸಾಹಿತ್ಯದ ಮುಂದೆ ಉದಯಿಸಲಿಕ್ಕಿರುವ ಓರ್ವ ಬಡ ಛಾಯಾವಾದೀ ಕವಿ. ಕವಿ ಎಂದು ಹೇಳಿಸಿಕೊಳ್ಳುವ ಅಧಿಕಾರ ನನಗಿಲ್ಲ. ಕಾರಣ ಬೇರೇನೂ ಅಲ್ಲ; ನನ್ನ ದುರ್ಭಾಗ್ಯ, ಅಷ್ಟೇ! ಭಾವುಕತೆ ನನ್ನ ಹೃದಯದಲ್ಲಿ ನೆಲಸುವ ಬದಲು ಪುಸ್ತಕದಲ್ಲಿ ನೆಲೆಸಿಂತಿದೆ. ಒಂದುವೇಳೆ ಕವಿತೆಯಲ್ಲಿ ಭಾವನೆಗಳು ನನ್ನ ತಲೆಯಿಂದಲೇ ಹೊರಟುಬರುತ್ತವೆ ಎಂದರೂ ತಪ್ಪಾಗಲಾರದು.

"ಸೃಷ್ಟಿಯೊಂದಿಗೆ ಮನುಷ್ಯನ ರಾಗಾತ್ಮಕ (ಭಾವನಾತ್ಮಕ) ಸಂಬಂಧವನ್ನು ನಿರ್ವಹಿಸುವ ಸಾಧನವೇ ಕವಿತೆ" ಎಂದು ನಮ್ಮ ಹಿಂದಿನ ಮತ್ತು ಇಂದಿನ ಆಚಾರ್ಯರು ನಿರ್ಣಯಿಸಿ ಹೇಳಿರುತ್ತಾರೆ. ಅದನ್ನೇ ಇಂಗ್ಲೀಷ್ ಕವಿ ಮೆಥ್ಯೂ ಆರ್ನಲ್ಡ್ 'ಕವಿತೆ ಎಂಬುದು ಜೀವನದ ವಿಮರ್ಶೆ' ಎಂದಿದ್ದಾನೆ. ಆದರೆ ನನ್ನ ತಿಳುವಳಿಕೆಗೂ ಆಚಾರ್ಯರ ಈ ಕಾವ್ಯ ಪರಿಭಾಷೆಗೂ ಏನೇನೂ ಸಂಬಂಧವಿಲ್ಲ. ನನ್ನ ಮಟ್ಟಿಗೆ ಅದು ಜೀವನದ ವಿಮರ್ಶೆಯಾಗಿರದೇ ಕೇವಲ ಕವಿತಾ ಪುತ್ರಿಯಾಗಿದ್ದಾಳೆ. ಇದುವರೆಗೆ ನಾನು ನೂರಾರು ಕವಿತೆಗಳನ್ನು ಬರೆದಿದ್ದರೂ ಅವು ಯಾವನಾದರೊಬ್ಬ ಕವಿ ಅಥವಾ ಕವಯಿತ್ರಿಯ ಕವಿತೆಯ ಸ್ಫೂರ್ತಿಯ ನೆಳಲಿಯಿಂದಲೇ. ನಾನು ಹೇಳುವುದರ ಅರ್ಥ ನಿಮಗೆ ಆಗಿರಬಹುದು ಅಂದರೆ, ಯಾವನಾದರೊಬ್ಬ ಕವಿಯ ಕವಿತೆಯನ್ನು ಓದಿದಾಗ ಅದರ ಅರ್ಥವನ್ನು ಮನದಟ್ಟುಮಾಡಿಕೊಳ್ಳದಿದ್ದರೂ ಚಿಂತಿಲ್ಲ, ಅವುಗಳ ಧಾಟಿ ಮತ್ತು ಲಯ ನೋಡಿ ಒಂದು ಸ್ವಂತ ಕವಿತೆಯನ್ನು ಬರೆದುಬಿಡುತ್ತೇನೆ. ಆ ಮೇಲೆ ಇಂಪಾದ ದನಿಯಲ್ಲಿ ಹಾಡಿ ಹಾಡಿ ನನ್ನೆಲ್ಲ ಮಿತ್ರ—ಸಂಬಂಧಿಕರಿಗೆ ಓದಿ ಹೇಳುತ್ತೇನೆ. ಕವಿತೆಯನ್ನು ಆಲಿಸಿದವರು ನನ್ನನ್ನು ಕವಿಯೆಂದು ತಿಳಿದುಕೊಂಡರೂ ಹುಚ್ಚನಾಗದಿದ್ದರೆ ಸಾಕೆಂದು ಹೇಳುತ್ತಿದ್ದರು. ಅವರ ಮಾತುಗಳನ್ನು ಕೇಳಿದ ನಾನು ಅವರೆಲ್ಲ ನನ್ನ ಕವಿತೆ ಕೇಳಿಯೇ ಮೋಹಿತರಾಗಿದ್ದಾರೆಂದು ತಿಳಿದು ತುಂಬಾ ಅಭಿಮಾನಪಡುತ್ತಿದ್ದೆ.

ಆದರೆ, ನನ್ನ ಅಕ್ಕ ಕೇಕಯೀ ಇದ್ದಾಳಲ್ಲ, ನನ್ನ ಕವಿತೆಯ ಪ್ರಶಂಸೆ ಕೇಳಿದರೆ ಕೆಂಡವಾಗುತ್ತಾಳೆ. ಅವಳಿಗೂ ನನಗೂ ಆಗುವುದಿಲ್ಲ. ದಿನಾ ಯಾವುದಾದರೊಂದು ಪುಟ್ಟ ವಿಷಯದಲ್ಲಿ ನಮ್ಮಲ್ಲಿ ಜಗಳವಾಗುತ್ತದೆ. ಆದರೆ ಕೊನೆಗೆ ನಾನು ಚಿಕ್ಕವನಾದ ಪಾಪಕ್ಕೆ ಸೋಲಬೇಕಾಗುತ್ತದೆ ಅನ್ನಿ. ಅವಳಿಗೆ ಕವಿತೆ ಬರೆಯಲಿಕ್ಕೆ ತಿಳಿಯುವುದಿಲ್ಲ. ನಮ್ಮಿಬ್ಬರಲ್ಲಿ ಉಂಟಾಗುವ ಜಗಳಕ್ಕೆ ಕಾರಣ ಇದೇ ಕವಿತೆ. ಆದರೆ, ಅವಳು ಕತೆ ಬರೆಯುತ್ತಾಳೆ, ನಾನೂ ಅವಳಂತೆಯೇ ಅವಳ ಕತೆಗಳನ್ನು ಓದಿ ಅವಳನ್ನು ಗೇಲಿಮಾಡುತ್ತಿದ್ದೆ. ನನಗೆ ಕತೆಬರೆಯಲಿಕ್ಕೆ ಬರುತ್ತಿದ್ದಿಲ್ಲ. ಅವಳು ನನ್ನ ಕವಿತೆಗಳನ್ನು ಕೇಳಿ ನನ್ನನ್ನು ಕೆಣಕಿದರೆ ಅವಳ ಕತೆ ಓದಿ ಅವಳನ್ನು ಟೀಕಿಸುತ್ತಿದ್ದೆ. ಇದೇ ನಮ್ಮ ದಿನನಿತ್ಯದ ಕೆಲಸವಾಗಿತ್ತು.

ಅವಳನ್ನು ಸೋಲಿಸಲೇಬೇಕೆಂದು ಒಮ್ಮೆ ಒಂದು ಉಪಾಯವನ್ನು ಕಂಡುಹಿಡಿದೆ. ಅವಳಲ್ಲಿ ನಾನು ಹೀಗೆ ಹೇಳಿದೆ. 'ನಾನು ನಿನ್ನನ್ನು ಹಾಜೀ ಎಂದು ಕರೆದರೆ ನೀನು ನನ್ನನ್ನು ಕಾಜೀ ಅನ್ನುವಿಯಾ? ಅಂದರೆ ನಾನು ಕೇಕಯೀ ಅಕ್ಕನ ಕತೆ ಓದಿಹೇಳಿದಾಗ ಅವಳು ಹೊಟ್ಟೆತುಂಬ ಸಂತೋಷಪಡುವಂತೆ ಹೊಗಳಬೇಕು. ಅಂತೆಯೇ ಅವಳೂ ಕೂಡ ನನ್ನ ಕವಿತೆಗಳನ್ನು ಗೌರವಿಸಿ ನನ್ನನ್ನು ಸತ್ಕರಿಸಬೇಕು ನಾನೀ ರೀತಿಯಲ್ಲಿ ಚಿಂತಿಸುತ್ತ ಕೂತಿರುವಾಗಲೇ ಅಕ್ಕನ ಸವಾರಿ ಬಂತು. ನನ್ನಲ್ಲಿ ಹೇಳದೇ ಕೇಳದೇ ಅವಳು ತನ್ನ ಕತೆ "ಕಂಡೇವಾಲೀ" ಓದಿಹೇಳಲಿಕ್ಕೆ ಪ್ರಾರಂಭಿಸಿದಳು.

ಅವಳು ಕತೆಯನ್ನು ಓದಿ ಹೇಳುತ್ತಿರುವಾಗ ಮಧ್ಯಮಧ್ಯದಲ್ಲಿ ನಾನದನ್ನು ತುಂಬಾ ಹೊಗಳಿದೆ. ವಾಹ! ಎಷ್ಟು ಸುಂದರವಾಗಿದೆ! ಎಷ್ಟು ಚೆನ್ನಾಗಿದೆ; ಇತ್ಯಾದಿ ಅಂದವಾದ ಶಬ್ದಗಳಿಂದ, ವ್ಯಾಜಸ್ತುತಿಯಿಂದ, ಒಂದಕ್ಕೆರಡು ಅರ್ಥಕೊಟ್ಟು ಚೆನ್ನಾಗಿ ವಿಮರ್ಶಿಸಿದೆ.

ರಾತ್ರಿ ಗಂಟೆ ಎಂಟಾಗಿತ್ತು. ಕೇಕಯೀ ತನ್ನ ಕತೆಯ ಪ್ರಶಂಸೆ ಕೇಳಿಮನಸ್ಸಿನೊಳಗೇನೇ ಪ್ರಸನ್ನಳಾಗಿದ್ದಳು. ಆದರೆ ಅದನ್ನು ಪ್ರಕಟಗೊಳಿಸಲು ತಯ್ಯಾರಿರಲಿಲ್ಲ. ಇಂತಹ ಸುವರ್ಣ ಸಂದರ್ಭವನ್ನು ಕೇಳಿಕೊಳ್ಳಲು ನಾನೂ ಸಿದ್ಧನಾಗಿರಲಿಲ್ಲ. ಆದುದರಿಂದಲೇ ಹೇಳಿದೆ:—

"ನಿಜ ಹೇಳುವುದಾದರೆ ಈ ತರದ ಶ್ರೇಷ್ಠವಾದ ಕತೆ ಹಿಂದೀ ಸಾಹಿತ್ಯವೆಂದೇನು? ಭಾರತದ ಎಲ್ಲ ಭಾಷೆಗಳ ಸಾಹಿತ್ಯದಲ್ಲಿ, ರಷ್ಯನ್, ಇಂಗ್ಲಿಷ್, ಜಪಾನೀ ಮತ್ತು ಚೈನೀ ಸಾಹಿತ್ಯಗಳಲ್ಲೂ ಕೂಡ ನೋಡಲು ಸಿಗುವುದಿಲ್ಲ. ಅಷ್ಟು ಚೆನ್ನಾಗಿದೆ ನಿನ್ನ ಕತೆ. ಅಕ್ಕ, ತಿಳಿದೆಯಾ?"

"ನೀನಷ್ಟು ಭಾಷೆಗಳನ್ನೆಲ್ಲಿ ಕಲಿತಿದ್ದಿ ತಮ್ಮ? ಹಾಗೆಲ್ಲ ಹೇಳಲಿಕ್ಕೆ.

"ನಾನಷ್ಟು ಭಾಷೆಗಳನ್ನು ಕಲಿತಿಲ್ಲವೆಂಬುದು ನಿಜವಾದರೂ ಅವುಗಳ ಅನುವಾದ ಓದಿ ಅಂದಾಜು ಮಾಡುವಷ್ಟು ಶಕ್ತಿ ದೇವರು ನನ್ನ ಪಾಲಿಗೆ ಕೊಟ್ಟಿರುತ್ತಾನೆ. ಇದಕ್ಕೆ ಸರಿಸಾಟಿಯಾದ ಕತೆಯೇ ಇಲ್ಲವೆಂಬುದು ನನ್ನ ಅಭಿಪ್ರಾಯವಲ್ಲ, ಆದರೆ ಇಂತಹ ಕತೆ ನಾನಿದುವರೆಗೆ ಎಲ್ಲಿಯೂ ಓದಿಲ್ಲವೆಂಬುದು ನಿಜ."

ಹೀಗೆ ಭಾಷೆಗಳ ಗೊಂದಲದಿಂದ ಬಹು ಜಾಗ್ರತೆಯಾಗಿ ನಾನು ಹೊರ ಬಂದೆ. ಆದರೆ ಅಕ್ಕ ಕೇಕಯಿಯವರ ಅವಸ್ಥೆ ಏನೆಂದು ಹೇಳಲಿ? ಅವಳು ನನ್ನ ಮಾತುಗಳನ್ನು ಕೇಳಿ ಮತ್ತಷ್ಟು ಉಬ್ಬಿಕೊಂಡು ಹೀಗೆ ಹೇಳಿದಳು.

"ನೀನು ಹೇಳಿದುದು ನಿಜ ಇರಲೂಬಹುದು. ಆದರೆ ನನ್ನ ಕತೆ ಅಷ್ಟು ಒಳ್ಳೆಯದೆಂದು ತಿಳಿಯುವ ಬಗೆ ಹೇಗೆ?"

"ನಾನು ಹೇಳಿದರೆ ಸಾಕಾಗದೇ?" ಎಂದು ಅವಳಿಗೆ ಭರವಸೆಯನ್ನೀಯುತ್ತ "ನಿಜ ಹೇಳುವುದಾದರೆ ನಿನ್ನ ಕತೆ ಅತ್ಯುತ್ತಮವಾಗಿದೆ" ಎಂದು ಹೇಳಿದೆ.

"ಅದು ಪ್ರಕಾಶನಗೊಳಿಸುವಷ್ಟು ಚಂದವಾಗಿದೆಯೇ?"

"ಹೌದು. ಮುದ್ರಿಸಿದರೆ ಅದೇಕೆ ಬೆಳಕಿಗೆ ಬರಬಾರದು? ಸಂಪಾದಕ ಶತ್ರುವಾಗಿದ್ದರೂ ಕೂಡ ಅವರು ಈ ಕತೆಯನ್ನು ಛಾಪಿಸಲೇಬೇಕು. ಇಂತಹ ಕತೆಗಳು ಅವರ ಪತ್ರಿಕೆಗಳಿಗೆ ಸಿಗಬೇಕಲ್ಲ?"

ಅಕ್ಕ ಕೇಕಯೀ ತನ್ನ ಜೀವಮಾನದಲ್ಲಿ ಕೇವಲ 'ವಿಶಾರದ' ಉಪಾಧಿಯನ್ನು ಗಳಿಸಿದ್ದಾಳೆ. ಅದೂ ಕೂಡ ನೋಟ್ಸು ತಿರುವಿ ಹಾಕಿ. ಅವಳು ಬರೆದ ಯಾವ ಕತೆಯೂ ಯಾವುದೇ ಪತ್ರಿಕೆಯಲ್ಲಿ ಪ್ರಕಟವಾಗಲಿಲ್ಲ. ನಾನು ಮಾತ್ರ ಮನೆಯಿಂದ ಗುಟ್ಟಾಗಿ ಹಣ ಕದ್ದು ತೆಗೆದು ನನ್ನ ಕವಿತೆಗಳನ್ನು 'ಆರಾಧನಾ' ಪತ್ರಿಕೆಗೆ ಕಳುಹಿಸಿ ಕೊಡುತ್ತಿದ್ದೆ. ಕವಿತೆ ಇನ್ನು ಆ ಪತ್ರಿಕೆಯಲ್ಲಿ ಪ್ರಕಟವಾಗಿಲ್ಲವಾದರೂ ಪತ್ರ ಬರೆಯುವ ಕಲೆ ನನಗೆ ಹಸ್ತಗತವಾಗಿತ್ತು. ಕವಿತೆ ಪ್ರಕಾಶಿಸಲ್ಪಡದಿರಲು ಕಾರಣ ಕವಿತೆಯ ಅಯೋಗ್ಯತೆಯಾಗಿರಲಿಕ್ಕಿಲ್ಲ; ಸಂಪಾದಕನೇ ಕಂಜೂಸಾಗಿರಬೇಕೆಂದು ನನ್ನ ಅಭಿಪ್ರಾಯ. ಎಲ್ಲ ಪತ್ರಿಕೆಗಳ ವಿಳಾಸ ನಾನು ಬರಕೊಂಡಿದ್ದೆ. ಕೇಕಯಿ ಇದನ್ನೆಲ್ಲ ತಿಳಿದಿರುವುದರಿಂದಲೇ ನನ್ನಲ್ಲಿ ಹಾಗೆ ಕೇಳಿದ್ದು.

"ಇದನ್ನು ಮಾಡುವುದು ಹೇಗೆ? ಒಟ್ಟಿಗೊಂದು ಕಾಗದ ಸಹ ಬರೆಯಬೇಕು."

ನಾನು ನಾಟಕೀಯವಾಗಿ ಹೇಳತೊಡಗಿದೆ. "ವಿಶೇಷ ಕಷ್ಟವಿಲ್ಲ. ಸ್ವಲ್ಪ ಬುದ್ಧಿವಂತಿಕೆಯನ್ನು ಉಪಯೋಗಿಸಿದರೆ ಆಯಿತು. ಎಲ್ಲಕ್ಕಿಂತ ಮೊದಲು ರಜಿಸ್ಟರ್ ಸಾಯಿಜಿನ ಕಾಗದ ತಂದು ಅದರಲ್ಲಿ ಕಾಲಂಶ ಮಾರ್ಜನ್ ಬಿಟ್ಟು ಸುಂದರವಾದ ಸಾಹಿತ್ಯಿಕ ಅಕ್ಷರಗಳಲ್ಲಿ ಕತೆ ಬರೆಯುವುದು. ಎರಡನೆಯದಾಗಿ......"

"ಸಾಹಿತ್ಯಿಕ ಅಕ್ಷರ...?"

ಹೌದು, ಸಾಹಿತ್ಯಿಕ ಅಕ್ಷರವೇ. ಸರಿಯಾಗಿ ತಿಳಿದುಕೊಳ್ಳು. ಅಕ್ಷರಗಳು ಸಾಹಿತ್ಯಿಕವಾಗಿರದಿದ್ದರೆ ಅವು ಸಂಪಾದಕನ ಮೇಲೆ ತನ್ನ ಪ್ರಭಾವ ಬೀರಲಾರವು. ಸಂಪಾದಕನ ದೃಷ್ಟಿಯೇ ಆಕಡೆ ಹೊರಳದಂತಾಗಬಹುದು. ಅದ್ದರಿಂದ ಜಾಗ್ರತೆ"

"ಸಾಹಿತ್ಯಿಕ ಅಕ್ಷರಗಳು ಹೇಗಿರುತ್ತವೆ ಎಂದು ನನಗೆ ತಿಳಿದಿಲ್ಲವಲ್ಲ!"

"ಅವುಗಳು ಅಷ್ಟೇನೂ ವೈಶಿಷ್ಟ್ಯವುಳ್ಳವುಗಳಲ್ಲ. ಅಕ್ಷರಗಳನ್ನು ಸ್ವಲ್ಪ ಗೀಚಿದರಾಯಿತು. ಓದಲಿಕ್ಕೆ ಕಷ್ಟವಾಗಬೇಕು. ಸುಲಭವೂ ಇರಬೇಕು."

ಇಷ್ಟನ್ನು ಹೇಳುವಾಗ ಅಕ್ಕ ನಗಾಡಿಬಿಟ್ಟಳು. ಅವಳನ್ನು ಕಂಡು ನಾನೂ ನಗಾಡಿದೆ. ಆ ಮೇಲೆ ವಿಷಯ ಮುಂದರಿಸುತ್ತ ಹೇಳಿದೆ—

"ಎರಡನೆಯದಾಗಿ ಕಾಗದ ಬರೆಯುವಾಗ ಬಹಳ ಜಾಗ್ರತೆ ಇರಬೇಕು. ರಾಯ್ಟಿಂಗ್ ಪೇಡ್‌ನ ಒಂದು ಕಾಗದವ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪ್ರೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪ್ರೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೊಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕಿ: ಜಿನೇ ಇಯೇಟನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ. ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಾರವೀಚಿ

ಧನಾಧಿಪ ಕುಬೇರ ವೃತ್ತಾಂತ

ತಂದೆಯನ್ನು ವಂಚಿಸಿದ ಕುಬೇರ ತಮ್ಮನಿಂದ ಮುಖಭಂಗಿತನಾಗಿ ತನ್ನ ಉಚ್ಚ ಸ್ಥಾನದಿಂದಲೇ ಚ್ಯುತನಾಗಿಬಿಟ್ಟ. ಅದರ ರಮ್ಯ ಕಥೆ ಇಲ್ಲಿದೆ.

ಮಾನವರ ಜೀವನದಲ್ಲಿರುವಂತೆಯೇ ದೇವತೆಗಳ ಸ್ಥಾನಮಾನಗಳು ಹಾಗೂ ಮಹಿಮೆಯು ಕಾಲಗತಿಗನುಸಾರವಾಗಿ ಏರುಪೇರುಗಳಿಗೀಡಾಗುವುದು. ಇಂದು ಉತ್ತರ ದಿಶೆಯ ಅಧಿಪತಿಯೆನಿಸಿದ ಧನಾಧಿಪ ಕುಬೇರನು ಒಂದು ಕಾಲದಲ್ಲಿ ಅತ್ಯಂತ ಮಹತ್ವಪೂರ್ಣ ದೇವನಾಗಿದ್ದ. ಆದರೆ, ಇಂದು ಮಾತ್ರ ಆತ ದೇವಾಲಯಗಳ ಬಾಹ್ಯ ಭಿತ್ತಿಗಳಲ್ಲಿ ಸ್ಥಾನಪಡೆದಿರುವನೇ ಹೊರತು, ಗರ್ಭಗೃಹದಲ್ಲಿ ಆತನಿಗೆಂದೂ ಪ್ರವೇಶವಿಲ್ಲ.

ಯಕ್ಷಕುಲಾಧಿನಾಯಕ, ನವನಿಧಿಪತಿ, ಉತ್ತರ ದಿಕ್ಪಾಲಕನ ರೂಪದಲ್ಲಿ ನರವಾಹನ, ವೈಶ್ರವಣ, ಧನಪತಿ ಮೊದಲಾದ ಹೆಸರುಗಳಲ್ಲಿ ಕುಬೇರನ ಉಲ್ಲೇಖವು ನಮ್ಮ ಪುರಾಣಗಳಲ್ಲಿ ದೊರೆಯುತ್ತದೆ. ಈತ ಈಶ್ವರನ ಪರಮ ಮಿತ್ರ; ಕೈಲಾಸ ಪರ್ವತದ ತೊಡೆಯಲ್ಲಿರುವ ಅಲಕಾನಗರಿಯೇ ಈತನ ರಾಜಧಾನಿ. ಅಲಕೆಯ ಬಾಹ್ಯೋದ್ಯಾನದ ಒಂದು ಸುರಮ್ಯ ಭಾಗದಲ್ಲಿ ಶಿವನು ವಾಸಿಸುತಿದ್ದಾನೆ. ಶಿವನ ಜಟಾಜೂಟದಲ್ಲಿರುವ ಚಂದ್ರನ ಕಲೆಯಿಂದಾಗಿ, ಅಲಕೆಯಲ್ಲಿ ಯಾವಾಗಲೂ ಶುಕ್ಲಪಕ್ಷವೇ ಇರುವುದು—ಬಾಹ್ಯೋದ್ಯಾನಸ್ಥಿತ ಹರಶಿರಶ್ಚಂದ್ರಿಕಾಧೌತರಮ್ಯಾ.

ಪಾರ್ಥಿವ ಸಂಪತ್ತಿನ ಒಡೆಯನಾಗಿದ್ದರೂ ಕುಬೇರನು ರೂಪಸಂಪತ್ತಿನಿಂದ ವಂಚಿತನಾಗಿರುವನು. ಕುತ್ಸಿತ ಬೇರ (ಬೇರ=ಶರೀರ) ನಾಗಿರುವುದರಿಂದ ಈತನಿಗೆ 'ಕುಬೇರ' ಎಂಬ ಹೆಸರಾಯಿತು.

ಕುಬೇರನು ಮಂತ್ರಭಾಕ್ ದೇವತೆ. ತೈತಿರೀಯ ಆರಣ್ಯಕದಲ್ಲಿ "ರಾಜಾಧಿರಾಜಾಯ" ದಿಂದ ಮೊದಲಾಗುವ ಸೂಕ್ತವು ಕುಬೇರ ಮಂತ್ರವಾಗಿದೆ. ಇದು "ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ" ಎಂಬುದಾಗಿ ಕೊನೆಗೊಳ್ಳುತ್ತದೆ. ಈ ಮಂತ್ರವನ್ನು ಶಿವಾರಾಧನೆಯ ಸಂದರ್ಭದಲ್ಲಿ ಉಚ್ಚರಿಸುತ್ತಾರೆ. ರಾಜಮಹಾರಾಜರು, ಮಂತ್ರಿಗಳು, ಶ್ರೀಮಂತ ಗೌರವಸ್ಥರನ್ನು ಸ್ವಾಗತಿಸುವಾಗಲೂ ಪೂರ್ಣಕುಂಭದೊಡನೆ ವೈದಿಕ ಬ್ರಾಹ್ಮಣರು ಈ ಮಂತ್ರವನ್ನು ಹಾಡುವುದುಂಟು.

ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದಲ್ಲಿ ಕುಬೇರನ ಇತಿವೃತ್ತವನ್ನು ಈ ರೀತಿಯಾಗಿ ಹೇಳಿದೆ:

ಪುಲಸ್ತ್ಯನು ಬ್ರಹ್ಮದೇವನ ಮಾನಸಿಕ ಪುತ್ರರಲ್ಲೊಬ್ಬ. ಕವಿಪುತ್ರ ವೈಶ್ರವಣನೀತನ ಮಗ. ವೈಶ್ರವಣನು ತನ್ನ ಪಿತಾಮಹ ಬ್ರಹ್ಮನನ್ನು ಆರಾಧಿಸಿ, ಅಮರತ್ವವನ್ನೂ ಸಮಸ್ತ ಐಶ್ವರ್ಯದ ಒಡೆತನವನ್ನೂ ಪಡೆದನು; ಅದರೊಡನೆ ಲಂಕಾಪುರಿಯ ರಾಜಪದವೂ ಲಭಿಸಿತು. ತನ್ನನ್ನು ಮೀರಿ, ತನ್ನ ಮಗನು ಬ್ರಹ್ಮನ ಅನುಗ್ರಹಕ್ಕೆ ಪಾತ್ರನಾದುದನ್ನು ಕಂಡು ಪುಲಸ್ತ್ಯನಿಗೆ ವಿಪರೀತ ಕ್ರೋಧವು ಬಂದಿತು. ಇದರಿಂದಾಗಿ, ಪುಲಸ್ತ್ಯನು ತನ್ನ ಅಂಶದಿಂದ ವಿಶ್ರವಸನೆಂಬ ಹೆಸರಿನ ಅತ್ಯಂತ ಬಲಿಷ್ಠ ಪುತ್ರನನ್ನು ಉತ್ಪಾದಿಸಿ, ಆತನನ್ನು ತನ್ನ ಹಿರಿಯಮಗನಿಗೆದುರಾಗಿ ಎತ್ತಿ ಹಿಡಿದನು. ವಿಶ್ರವಸನು ತನ್ನ ಅಗ್ರಜ ಕವಿಪುತ್ರ ವೈಶ್ರವಣನನ್ನು ಅತೀವ ದ್ವೇಷಿಸ ತೊಡಗಿದನು. ಈ ಗೃಹಕಲಹ ಸರ್ವನಾಶದ ಕಾರಣವಾಗಿ ಪರಿಣಮಿಸೀತು ಎಂದು ಕಂಡುಕೊಂಡ ಚತುರನಾದ ವೈಶ್ರವಣನು ಪುಷ್ಪೋತ್ಕಟೆ, ಮಾಲಿನಿ, ರಾಕಾ ಎಂಬ ಹೆಸರಿನ ರೂಪಸಿಯರಾದ ಮೂವರು ರಾಕ್ಷಸಿ ಯುವತಿಯರನ್ನು ತನ್ನ ಪಿತಪುಲಸ್ತ್ಯನ ಸೇವೆಗಾಗಿ ನೇಮಿಸಿದನು. ಪುಷ್ಪೋತ್ಕಟೆಯಲ್ಲಿ ರಾವಣ ಮತ್ತು ಕುಂಭಕರ್ಣರು, ಮಾಲಿನಿಯಲ್ಲಿ ವಿಭೀಷಣ ಮತ್ತು ರಾಕೆಯಲ್ಲಿ ಖರನೆಂಬ ಮಗನೂ ಶೂರ್ಪಣಖೆಯೆಂಬ ಮಗಳೂ ಪುಲಸ್ತ್ಯನಿಗೆ ಜನಿಸಿದರು. ಆದರೆ, ಈ ರಾಕ್ಷಸಿಯ ಮಕ್ಕಳೂ ಕುಬೇರನನ್ನು ದ್ವೇಷಿಸ ತೊಡಗಿದರು. ಬ್ರಹ್ಮನನ್ನು ತಮ್ಮ ತಪಶ್ಚರ್ಯೆಯಿಂದ ಮೆಚ್ಚಿಸಿ, ಈ ರಾಕ್ಷಸೀ ಪುತ್ರರು ಅಜೇಯರಾದರು. ಅಜ್ಜನ ವರಬಲದಿಂದ ರಾವಣನು ಲಂಕೆಯನ್ನು ಆಕ್ರಮಿಸಿ ಅದನ್ನು ಗೆದ್ದುಕೊಂಡನು. ಅಂದಿನಿಂದ ಕುಬೇರನು ಗಂಧಮಾದನ ಪರ್ವತದಲ್ಲಿ ವಾಸಿಸತೊಡಗಿದನು.

ವರಾಹ ಪುರಾಣದಲ್ಲಿ ಕುಬೇರನ ಕಥೆಯು ಬೇರೊಂದು ಕ್ರಮದಲ್ಲಿದೆ. ಬ್ರಹ್ಮನು ಸೃಷ್ಟಿಕಾರ್ಯವನ್ನು ಆರಂಭ ಮಾಡಿದಾಗ, ಆತನ ಮುಖದಿಂದ ಬಹಳ ದೊಡ್ಡ ಬಿರುಗಾಳಿಯು ಹುಟ್ಟಲು ಅದರೊಡನೆ ಆಕಾಶದಿಂದ ಕಲ್ಲುಗಳ ಮಳೆಯೂ ಸುರಿಯಿತು. ಕೆಲಕಾಲಾನಂತರ, ಶಿಲಾವೃಷ್ಟಿಯು ನಿಲ್ಲಲು, ಬ್ರಹ್ಮನು ಆ ಕಲ್ಲುಗಳಿಂದ ಒಬ್ಬ ಪುರುಷನನ್ನು ನಿರ್ಮಿಸಿ, ಆತನಿಗೆ ಸಂಪತ್ತಿನ ರಾಜಪಟ್ಟವನ್ನು ಕಟ್ಟಿದನು.

ಆಗಮಗಳಲ್ಲಿ ಮತ್ತು ಶಿಲ್ಪ ಗ್ರಂಥಗಳಲ್ಲಿ ಕುಬೇರನ ರೂಪರಚನೆಯ ಬಗ್ಗೆ ವಿಸ್ತಾರವಾದ ವರ್ಣನೆಯಿದೆ. ವಿಭವೆ ಮತ್ತು ವೃದ್ಧಿ ಎಂಬವರು ಈತನ ಪತ್ನಿಯರೆಂದು ಉಲ್ಲೇಖಿಸಲಾಗಿದೆ. ಈ ದೇವಿಯರು ಒಂದು ಕೈಯಲ್ಲಿ ತಮ್ಮ ಪತಿಯನ್ನು ಆಲಿಂಗಿಸಿಕೊಳ್ಳುವುದೂ ಇನ್ನೊಂದರಲ್ಲಿ ರತ್ನಮಯ ಪಾತ್ರೆಗಳನ್ನು ಹಿಡಿದಿರುವುದೂ ಕೆತ್ತಲ್ಪಟ್ಟಿವೆ.

ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಕುಬೇರನ ಎಡಗಣ್ಣು ಪಿಂಗಲ ವರ್ಣದ್ದೆಂದೂ ಆತನ ಶರೀರದಲ್ಲಿ ಕವಚವಿರುವುದೆಂದೂ ಹೇಳಲಾಗಿದೆ. ಈತನ ಮೀಸೆ, ಹೊರಚಾಚಿದ ದೊಡ್ಡ ಹಲ್ಲು, ಇಳಿದ ಬೊಜ್ಜುಗಳು ಅವನಿಗೆ ವಿಶಿಷ್ಟ ವ್ಯಕ್ತಿತ್ವವನ್ನು ತಂದುಕೊಟ್ಟಿವೆ. ಕುಬೇರನ ವಾಹನದ ವಿಷಯದಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಕೆಲವು ಪುರಾಣಗಳಲ್ಲಿ ಪದ್ಮಪೀಠಾಕಾರದ ರಥವನ್ನು ಆತನ ವಾಹನವೆಂದು ಹೇಳಿದರೆ, ಇನ್ನು ಕೆಲವಲ್ಲಿ ಮನುಷ್ಯ ಸವಾರನಾಗಿ ಆತ ಕಂಡುಬರುತ್ತಾನೆ. "ಅಂಶುಭೇದಾಗಮ"ದಲ್ಲಿ ಕುರಿಯೇ ಇವನ ವಾಹನವೆಂದು ಉಲ್ಲೇಖಿಸಿದೆ. "ರೂಪ ಮಂಡನ" ವೆಂಬ ಗ್ರಂಥದಲ್ಲಿ ಆನೆಯನ್ನು ಆತನ ವಾಹನವೆಂದು ಬರೆಯಲಾಗಿದೆ. ಇನ್ನು, ಕೆಲವು ಶಿಲ್ಪಕೃತಿಯಲ್ಲಿ ಸಿಂಹದ ಮೇಲೆ ವಿರಾಜಿತನಾಗಿರುವ ಕುಬೇರನನ್ನು ನಾವು ಕಾಣುತ್ತೇವೆ. ಕುಬೇರನ ಇಕ್ಕೆಲಗಳಲ್ಲಿ ಶಂಖನಿಧಿ, ಪದ್ಮನಿಧಿ—ಐಶ್ವರ್ಯಗಳ ಅಧಿದೇವತೆಯರು ಮತ್ತು ಯಕ್ಷರು ಇರುವುದು ಆವಶ್ಯಕವಾಗಿದೆ.

ಪ್ರಾಚ್ಯ ವಸ್ತು ಸಂಶೋಧನೆಯಿಂದ ಹಿಂದಿನ ಕಾಲದಲ್ಲಿ ಕುಬೇರನ ದೇವಾಲಯಗಳಿದ್ದುವೆಂದೂ ಅವುಗಳಲ್ಲಿ ಶಿವ, ದುರ್ಗೆ, ವಿಷ್ಣು ಮೊದಲಾದವರಂತೆಯೇ ಆತನಿಗೆ ಪೂಜೆ ಸಲ್ಲುತ್ತಿತ್ತೆಂದೂ ತಿಳಿದುಬರುವುದು. ಇಂದಿಗೂ ದಕ್ಷಿಣೋತ್ತರ ಭಾರತದಲ್ಲಿ ಕೆಲವೊಂದು ವಿಶಿಷ್ಟ ಹಬ್ಬದ ದಿನ ಕುಬೇರನ ಪೂಜೆಯು ನಡೆಯುವುದನ್ನು ನಾವು ಸ್ಮರಿಸಿಕೊಳ್ಳಬಹುದು.

ಹಿಂದುಗಳಂತೆ ಜೈನರೂ ಕುಬೇರನನ್ನು ಆರಾಧ್ಯ ದೇವತೆಯೆಂದು ಗೌರವಿಸುತ್ತಾರೆ. ಜೈನ ಗ್ರಂಥಗಳಲ್ಲಿ ಕುಬೇರನನ್ನು ಹತ್ತೊಂಬತ್ತನೆಯ ತೀರ್ಥಂಕರ ನೇಮಿನಾಥನ ಯಕ್ಷ ದೇವತೆಯೆಂದು ಹೇಳಲಾಗಿದೆ. ಜೈನರ ಮತಾನುಸಾರ ಈತನಿಗೆ ನಾಲ್ಕು ತಲೆ ಮತ್ತು ಎಂಟು ಕೈಗಳಿರುತ್ತವೆ. ಹಾಗೂ ಅವನ ವಾಹನವು ಆನೆ.

ಬೌದ್ಧರ ಗ್ರಂಥಗಳಲ್ಲಿಯೂ ಕುಬೇರನ ಚಿತ್ರಣವು ದೊರೆಯುತ್ತದೆ. ಅವುಗಳಲ್ಲಿ ಕುಬೇರನಿಗೆ ಜಂಬಲ, ವಸ್ಸವಣ ಮೊದಲಾದ ಹೆಸರುಗಳಿದ್ದುದು ತಿಳಿಯುತ್ತದೆ. ಇಂದಿಗೂ ಲಂಕೆಯಲ್ಲಿ ಕುಬೇರನನ್ನು ಇದೇ ಹೆಸರಿನಿಂದ ಕರೆಯಲಾಗುತ್ತಿದೆ. ಬೌದ್ಧ ಮಾದರಿಯ ಮೂರ್ತಿಗಳಲ್ಲಿ ಕುಬೇರನ ತೊಡೆ ಅಥವಾ ಪಕ್ಕದಲ್ಲಿ ಒಂದು ಮುಂಗುಸಿ, ಬಲಕೈಯಲ್ಲಿ ಮಧುಪಾತ್ರ ಮತ್ತು ಬೆನ್ನಹಿಂದೆ ಪೂರ್ಣಘಟಗಳಿರುವುವು.

ಬೌದ್ಧ ಗ್ರಂಥಗಳಲ್ಲಿ ಕುಬೇರನ ಪತ್ನಿಯ ಹೆಸರು ಹಾರೀತಿ ಎಂದು ಬರೆದಿದೆ. ಆತನಿಗೆ ನಾಲ್ವರು ಮಕ್ಕಳಿರುವರು. ಹಾರೀತಿಯನ್ನು ಬೌದ್ಧರು ತಾಯಿಯ ಸ್ಥಾನಮಾನವಿತ್ತು ಪೂಜಿಸುತ್ತಾರೆ. ಆಂಧ್ರ ಪ್ರದೇಶದ ನಾಗಾರ್ಜುನಕೊಂಡದಲ್ಲಿ ಈ ದೇವಿಯ ಆರಾಧನೆಯ ಭಿತ್ತಿಚಿತ್ರವನ್ನು ನಾವು ಕಾಣಬಹುದು. ಇಲ್ಲಿನ ಅವಶೇಷಗಳಲ್ಲಿ ಹಾರೀತಿಗೆ ಪ್ರತ್ಯೇಕ ದೇವಾಲಯವಿದ್ದುದೂ ತಿಳಿದುಬರುತ್ತದೆ. ಸಂತಾನ ಬಯಸುವ ದಂಪತಿಗಳಿಗೆ ಹಾಗೂ ಮುಖ್ಯವಾಗಿ ಗರ್ಭಿಣಿ ಸ್ತ್ರೀಯ

(೧೦ನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಮೆರಿಕೆಯ ಮೇಳ

ಕೃಷಿಕರ ಉನ್ನತಿಯತ್ತ ಪ್ರಯತ್ನ

ಅಮೆರಿಕೆಯ ಈ ಕಾರ್ಯವಿಧಾನವನ್ನು ನಮ್ಮ ಕೃಷಿಕ್ಷೇತ್ರದಲ್ಲಿಯೂ ಹೊಂದಿಸಿಕೊಂಡರೆ, ರಾಷ್ಟ್ರದ ಆಹಾರ ಧಾನ್ಯೋತ್ಪಾದನೆ, ಸಂಪತ್ತುಗಳಲ್ಲಿ ಯಶಸಿಗದೆ?

ಅಮೆರಿಕದ ಸಣ್ಣ ರೈತರ ಭದ್ರತೆಯನ್ನೂ ಉತ್ಪನ್ನ ಸಾಮರ್ಥ್ಯವನ್ನೂ ಅಧಿಕಗೊಳಿಸಲು ೧೯೪೬ರಲ್ಲಿ ರೂಪುಗೊಂಡ ರೈತರ ಒಳಾಡಳಿತ ವಿಭಾಗ ಸಹಾಯ ನೀಡುತ್ತದೆ.

ರಾಷ್ಟ್ರದ ಭದ್ರತೆಗೂ ಸ್ಥಿರತೆಗೂ ಸಣ್ಣ ರೈತರು ಕಾಣಿಕೆಯನ್ನು ಸಲ್ಲಿಸಬೇಕಾದರೆ, ಅವರಿಗೆ ವಿಶೇಷ ರೀತಿಯ ಸಾಲ ಭ್ಯಗಳು ಅವಶ್ಯವೆಂದು ರಾಷ್ಟ್ರದ ಶಾಸಕರು ಭಾವಿಸಿದುದರಿಂದ ಅಮೆರಿಕದ ಕಾಂಗ್ರೆಸ್ಸು ಈ ವಿಭಾಗವನ್ನು ವ್ಯವಸಾಯ ಶಾಖೆಯ ಅಂಗವಾಗಿ ಸ್ಥಾಪಿಸಿತು.

ರೈತರ ಒಳಾಡಳಿತ ವಿಭಾಗಕ್ಕೆ ಇರುವ ಸಾಧನಗಳು ಎರಡು:—ತಮ್ಮ ನೆಲದಿಂದ ಉಪಕರಣಗಳಿಂದ ಮತ್ತು ಹಯನು ಬಲದಿಂದ ಗರಿಷ್ಠ ಪ್ರಮಾಣದ ಉತ್ಪನ್ನವನ್ನು ಪಡೆಯಲಾಗುವಂತೆ ಸಣ್ಣ ರೈತರಿಗೆ ಸಾಲದು ಹಾಗೂ ಮೇಲ್ವಿಚಾರಣೆಯ ಸಹಾಯವನ್ನು ನೀಡುವುದು.

ವ್ಯವಸಾಯದಲ್ಲಿ ಉತ್ತಮ ಆರಂಭ ದೊರಕುವ ಸಲುವಾಗಿ ತರುಣರಿಂದ ನಿವೃತ್ತ ಸೈನಿಕರೂ ಅವರ ಕುಟುಂಬದವರೂ ರೈತರ ಒಳಾಡಳಿತ ವಿಭಾಗದಿಂದ ನೆರವು ಪಡೆವವರಲ್ಲಿ ಅಧಿಕ ಸಂಖ್ಯಾಕರು.

ನಾನಾ ವಿಧವಾದ ಸಾಲಗಳು ಲಭ್ಯವಿವೆ. ಗೊಬ್ಬರ, ಹಯನು ಹಾಗೂ ಉಪಕರಣಗಳನ್ನು ಕೊಳ್ಳುವ ಸಲುವಾಗಿ ಸಾಲಗಳನ್ನು ಕೊಡಲಾಗುತ್ತದೆ. ವ್ಯವಸಾಯ ಕ್ಷೇತ್ರಗಳನ್ನು ಕೊಳ್ಳಲು ಅಥವಾ ಅಭಿವೃದ್ಧಿಪಡಿಸಲು, ಮಾಲಿಕರಾಗಲು ನೆರವು ನೀಡುವ ಸಾಲಗಳು ಲಭ್ಯವಿವೆ. ವ್ಯವಸಾಯೋತ್ಪನ್ನದ ಏರಿಕೆಗಾಗಿ ನೀರಾವರಿ ಮತ್ತು ನೀರಿನ ವ್ಯವಸ್ಥೆ ಅಗತ್ಯವಿರುವ ಪಶ್ಚಿಮದ ೧೭ ಸಂಸ್ಥಾನಗಳಿಗೆ ನೀರಿನ ಸೌಕರ್ಯದ ಸಾಲಗಳು ದೊರಕುತ್ತವೆ.

ತಮ್ಮ ಮನೆಯ ಅಥವಾ ಕ್ಷೇತ್ರದ ಕಟ್ಟಡಗಳನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಬೇರೆ ಕಡೆಗಳಿಂದ ಸಾಲವನ್ನು ಪಡೆಯಲಾರದ ರೈತರಿಗೆ ವಸತಿಯ ಸಾಲಗಳನ್ನು ಕೊಡಲಾಗುತ್ತದೆ. ಅತಿವೃಷ್ಟಿ, ಪ್ರವಾಹ ಅಥವಾ ಬಿರುಗಾಳಿಗಳಿಂದ ಹಾನಿಗೆ ಒಳಗಾದವರಿಗೆ ವ್ಯವಸಾಯವನ್ನು ಮುಂದುವರಿಸಲು ಸಾಲಗಳನ್ನು ಕೊಡಲಾಗುವುದು.

ರೈತರ ಒಳಾಡಳಿತದ ವಿಭಾಗದ ಮೇಲ್ವಿಚಾರಕರು ಸಾಲಪಡೆದ ಕುಟುಂಬಗಳೊಡನೆ ನೇರವಾಗಿ ಕೆಲಸಮಾಡುತ್ತಾರೆ. ಸುವ್ಯವಸ್ಥಿತ ವ್ಯವಸಾಯದ ಕ್ರಮವನ್ನು ಸಿದ್ಧಪಡಿಸಲು ರೈತರುಗಳಿಗೆ ಸಹಾಯ ಮಾಡುವುದಲ್ಲದೆ ಈ ರೈತರ ಕುಟುಂಬಗಳು ಇತರ ವ್ಯವಸಾಯದ ಸಂಸ್ಥೆಗಳಿಂದ ಪೂರ್ಣ ಸಹಾಯ ದೊರಕುವಂತೆ ನೋಡಿಕೊಳ್ಳುತ್ತಾರೆ.

ಈ ವಿಭಾಗಕ್ಕೂ ಸ್ಥಳೀಯ ಜನಕ್ಕೂ ಮಧ್ಯವರ್ತಿಯಾಗಿ ಕೆಲಸಮಾಡುವ ಬಲವಾದ ಅಂಗ ಮೂವರು ಸದಸ್ಯರ ಕೌಂಟಿ ಸಮಿತಿ. ಈ ಸಮಿತಿಯ ಇಬ್ಬರು ಸದಸ್ಯರೈತರು ಸ್ಥಳೀಯ ವ್ಯವಸಾಯವನ್ನು ಬಲ್ಲ, ಜವಾಬ್ದಾರಿಯುತರಾದವರೊಬ್ಬರು ಮತ್ತೊಬ್ಬ ಸದಸ್ಯರಾಗಿರುವರು, ಈ ಸಮಿತಿಯವರು, ಅರ್ಜಿದಾರರ ಅರ್ಹತೆಯನ್ನೂ, ಕೊಳ್ಳಲಾಗುವ ವ್ಯವಸಾಯ ಕ್ಷೇತ್ರದ ಬೆಲೆಯನ್ನೂ ಅಂದಾಜು ಮಾಡುವರು ಮತ್ತು ಸ್ಥಳೀಯ ರೈತನ ಅಗತ್ಯಗಳಿಗೆ ವ್ಯವಸಾಯ ಸಾಲದ ಕಾರ್ಯಕ್ರಮದಿಂದ ಸೂಕ್ತ ಸಹಾಯ ದೊರಕುವಂತೆ ಮಾಡುವರು.

ರೈತರ ಒಳಾಡಳಿತದ ವಿಭಾಗದಿಂದ ಅನುಕೂಲವನ್ನು ಪಡೆದ ಅನೇಕ ಅಮೆರಿಕದ ರೈತರು ದೆಹಲಿಯ ಅಮೆರಿಕೀ ಮೇಳದಲ್ಲಿ ಹಾಜರಿದ್ದು ತಮ್ಮ ಅನುಭವಗಳನ್ನು ವಿವರಿಸಿದರು

ಸಾಕಷ್ಟು ಸಾಲವೂ ತಾಂತ್ರಿಕ ಮಾರ್ಗದರ್ಶನವೂ ದೊರೆತಾಗ ಅಮೆರಿಕದ ರೈತ ಕುಟುಂಬಗಳು ಅವುಗಳನ್ನು ಹೇಗೆ ಉಪಯೋಗಿಸಿಕೊಂಡವೆಂಬ ನಿದರ್ಶನಗಳ ಕತೆಗಳು ಅಮೆರಿಕದ ಎಲ್ಲಾ ಕಡೆಗಳಲ್ಲೂ ಲಭ್ಯವಿವೆ ಟೆಕ್ಸಾಸಿನ ವರ್ನಾನಿನ ಗ್ಯಾಡಿಪ್ರೈನ್ ಕುಟುಂಬದವರಿಗೆ ೧೯೪೧ಕ್ಕೆ ಮುಂಚೆ ಸ್ವಂತವಾದ ಜಮೀನಿರಲಿಲ್ಲ. ೨೦೦ ಎಕರೆಗಳ ವ್ಯವಸಾಯ ಕ್ಷೇತ್ರವನ್ನು ಕೊಳ್ಳಲು ಅವರ ಅರ್ಜಿ ಹಾಕಿದಾಗ ಅವರಿಗಿದ್ದ ಆಸ್ತಿಪಾಸ್ತಿಗಳ ಬೆಲೆ ೨೦೦೦ ಡಾಲರುಗಳಿಗೂ ಕಮ್ಮಿಯಿತ್ತು.

ಸ್ವಂತ ಜಮೀನು ದೊರೆತೊಡನೆಯೇ ಅವರು ಕಷ್ಟಪಟ್ಟು ದುಡಿಯತೊಡಗಿದರು. ಬಹು ಎಚ್ಚರಿಕೆಯಿಂದ ಯೋಜನೆ ಹೂಡಿದರು.

ಕೌಂಟಿ ಮೇಲ್ವಿಚಾರಕ ಅವರಿಗೆ ನೆರವಾದ ವ್ಯವಸಾಯಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳ ದಾಖಲೆಗಳನ್ನು ಇಡುವುದರ ಪ್ರಯೋಜನಗಳನ್ನು ವಿವರಿಸಿದ ಒಳ್ಳೆಯ ವ್ಯವಸಾಯದ ವಿಧಾನಗಳನ್ನು ಅನುಸರಿಸಿದ ಫಲವಾಗಿ ಹಯನು, ಕೋಳಿ, ಹಂದಿ, ದನ, ಗೋಧಿ, ಹತ್ತಿ ಆಲ್ಫಾಲ್ಫ ಮತ್ತು ಸೋರ್ಘಂ ಧಾನ್ಯಗಳಿಂದ ಬರುತ್ತಿದ್ದ ಆದಾಯದಲ್ಲಿ ಶೀಘ್ರಗತಿಯಿಂದ ಏರಿಕೆಯುಂಟಾಯಿತು. ಕೇವಲ ಹತ್ತೇ ವರ್ಷಗಳಲ್ಲಿ ಮುಂಚಿನ ನಿರೀಕ್ಷೆಗಿಂತ ಮುವತ್ತು ವರ್ಷಗಳಿಗೆ ಮುಂಚೆ ವ್ಯವಸಾಯ ಕ್ಷೇತ್ರದ ಪೂರ್ಣ ಬೆಲೆಯನ್ನು ತೆತ್ತು ತಮ್ಮ ಆಸ್ತಿಯ ಬೆಲೆಯನ್ನು ಸುಮಾರು ೩೫,೦೦೦ ಡಾಲರುಗಳಿಗೆ ಈ ಕುಟುಂಬದವರು ಏರಿಸಿಕೊಂಡರು.

ಈಗವರ ಕ್ಷೇತ್ರದಲ್ಲಿ ಧಾರಣೆವಾಸಿಗಳು ಸ್ತಿಮಿತದಲ್ಲಿವೆ. ಸ್ಥಳೀಯ ವರ್ತಕರೊಂದಿಗೂ ವ್ಯಾಪಾರಿಗಳೊಂದಿಗೂ ವ್ಯಾಪಾರವನ್ನು ಕುದುರಿಸಿಕೊಂಡಿದ್ದಾರೆ, ಶಾಲೆಗಳು, ಚರ್ಚುಗಳು ಮತ್ತಿತರ ಸಮಾಜದ ಚಟುವಟಿಕೆಗಳಿಗೆ ಧಾರಾಳವಾಗಿ ವಂತಿಗೆ ನೀಡುತ್ತಿದ್ದಾರೆ.

ದ್ವಿತೀಯ ಪ್ರಪಂಚ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ ನೀಗ್ರೋ ಥಿಯೋಡರ್ ಮೆಕ್ಲಿನ್ನಿ ಸರಕಾರ ಏರ್ಪಡಿಸಿದ್ದ ವ್ಯವಸಾಯದ ಶಿಕ್ಷಣ ವ್ಯವಸ್ಥೆಯಿಂದಲೂ, ಮತ್ತು ರೈತರ ಒಳಾಡಳಿತದ ವಿಭಾಗದ ಸಾಲದಿಂದಲೂ ಹೇಗೆ ಸ್ವಂತ ವ್ಯವಸಾಯ ಕ್ಷೇತ್ರವನ್ನು ಸ್ಥಾಪಿಸಲು ಸಮರ್ಥನಾದನೆಂಬ ಸಂಗತಿ ಈ ಮಾತಿಗೆ ಇನ್ನೊಂದು ನಿದರ್ಶನ.

ನೌಕಾದಳದಲ್ಲಿದ್ದ ಮೆಕ್ಲಿನ್ನಿಗೆ ಸ್ವಂತ ಜಮೀನನ್ನು ಹೊಂದುವ ಬಯಕೆಯಿತ್ತು. ಸ್ವಂತದ್ದೆನ್ನುವುದೇನನ್ನೂ ಹೊಂದದೇ ಇದ್ದ ಈ ತರುಣ ಈಗ ತನ್ನ ೩೩ನೇ ವಯಸ್ಸಿನಲ್ಲಿ ಆಧುನಿಕ ಗೃಹ, ಅನೇಕ ಕಟ್ಟಡಗಳು, ಕೋಳಿಗಳು, ಹಂದಿಗಳು, ಕರೆವ ದನಗಳು, ತರಕಾರಿ ತೋಟ ಇವುಗಳ ಒಡೆಯನಾಗಿದ್ದಾನೆ. ಇವುಗಳ ಬೆಲೆ

(೯ನೇ ಪುಟ ನೋಡಿರಿ)

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ ರಾಮಕೃಷ್ಣನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

ನಾವು ಬೆಳೆದು ಬರಬೇಕಾದರೆ—
● ನಮ್ಮ ಜೀವನ ಉದಾತ್ತವಾಗಿರಬೇಕು,
● ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
● ನಮ್ಮ ಬದುಕು ಸರಳವಾಗಿರಬೇಕು
ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.
ಇದೀಗಸಿದ್ಧವಾಗಿದೆ.
ಭಾರತೀಯ ಮಹಾಪುರುಷರು
ಬರೆದವರು ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)
ಪುಟಗಳು. ೧೨೪. ಬೆಲೆರೂ. ೧-೫೦.
ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು
ಮೆನೇಜರ್, ನವಯುಗ, ಉಡುಪಿ

ನಮ್ಮೂರ ನಮ್ಮವರು

ಶ್ರೀ ಕೆ. ಆರ್. ಕೆ. ಭಟ್

ಸ್ವಪರಿಶ್ರಮದಿಂದಲೇ ಎಲ್ಲವೂ ಸಾಧ್ಯ ಎಂದು ಉಪದೇಶಿಸುತ್ತದೆ, ಇವರ ಚರಿತ್ರೆ.

ಕೆ. ಆರ್. ಕೆ. ಭಟ್ ಇದು ಇಂದು ಉಡುಪಿಯ ಜನರ ಮನೆಮಾತಾಗಿರುವ ಹೆಸರು. ಕಡು ಬಡವನಿಂದ ಹಿಡಿದು ಅತಿ ಶ್ರೀಮಂತನವರೆಗೆ ಎಲ್ಲರೂ ಶ್ರೀಯುತ ಕೆ. ಆರ್. ಕೆ. ಭಟ್ಟರನ್ನು ಬಲ್ಲರು. ಇಂದು ಉಡುಪಿಯ ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಅತ್ಯಾಸಕ್ತಿಯಿಂದ ಭಾಗವಹಿಸುತ್ತಿರುವ ಕೆ. ಆರ್. ಕೆ. ಭಟ್ ಸಂಗತಿಗಳು ಉಡುಪಿಗೆ ಅಗಮಿಸಿದ ಅತ್ಯಲ್ಪ ಕಾಲದಲ್ಲಿ ಉಡುಪಿಯ ನಾಗರಿಕರ ಆತ್ಮಾದರಗಳಿಗೆ ಪಾತ್ರರಾಗಿರುವರು. ಇಂದು ಸಮಾಜಸೇವೆಯ ಬಹುಮುಖ ಕ್ಷೇತ್ರಗಳಲ್ಲಿ ತಮ್ಮ ನಿಸ್ವಾರ್ಥ ಸೇವೆಯಿಂದ ಉಡುಪಿಯ ಜನರ ಪ್ರೀತ್ಯಾದರ ವಿಶ್ವಾಸಗಳಿಗೆ ಪಾತ್ರರಾದ ಶ್ರೀ ಭಟ್ಟರು ತಮ್ಮ ಉದ್ಯೋಗ ಕ್ಷೇತ್ರದಲ್ಲಿ ಉಡುಪಿಯನ್ನು ಅಗಲಿ ಹೈದರಾಬಾದಿಗೆ ಹೋಗಲಿರುವರು. ಅವರ ಈ ಅಗಲುವಿಕೆಯ ಸಂದರ್ಭದಲ್ಲಿ ಅವರ ಸಾರ್ವಜನಿಕ ಸೇವೆಗಳ, ಅವರ ಕಾರ್ಯಪಟುತ್ವದ, ಅವರ ಸಾಹಸಮಯ ಜೀವನದ ನೆನಹನ್ನು ಉಡುಪಿಯ ಜನತೆ ಮಾಡದಿದ್ದರೆ ಅದು ತಪ್ಪಾದೀತು.

ಐವತ್ತೊಂದು ವರ್ಷ ತುಂಬಿದ ಶ್ರೀಯುತ ಭಟ್ಟರು ನೀವು ಒಮ್ಮೆ ಕಂಡರೆ ಮರೆಯಲಾಗದ ವ್ಯಕ್ತಿಯಾಗಿರುತ್ತಾರೆ. ಐವತ್ತರ ಗಡಿ ದಾಟಿದರೂ ಇಪ್ಪತ್ತರ ಯುವಕರಲ್ಲಿರುವ ಅವರ ಸ್ಫೂರ್ತಿ, ಉತ್ಸಾಹ, ಕಾರ್ಯಕುಶಲತೆಗಳು ನೀವು ಮರೆಯಲಾರದಂತಹವುಗಳು. 1908 ಇಸವಿ ೫ರಲ್ಲಿ ಉಡುಪಿಯ ಕರ್ಮಭೂಮಿಯೇ ಭಟ್ಟರಿಗೆ ಜನನವಿತ್ತಿತು. ಧಾರ್ಮಿಕ ಕ್ಷೇತ್ರದಲ್ಲಿ ಮಧ್ವಾಚಾರ್ಯರು ಉಡುಪಿಗೆ ಅಗ್ರಗಣ್ಯ ಸ್ಥಾನ ಒದಗಿಸಿದಂತೆ ಶೈಕ್ಷಣಿಕ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿ ಡಾ|| ಮಾಧವ ಪೈಗಳು ಉಡುಪಿಯನ್ನು ಭಾರತದ ನಕಾಶೆಯಲ್ಲಿ ಭದ್ರವಾಗಿ ಬೇರೂರಿಸಿದಂತೆ, ರಾಷ್ಟ್ರೀಕೃತ ವಿಮೋದ್ಯಮದಲ್ಲಿ ಶ್ರೀಯುತ ಭಟ್ಟರು ಉಡುಪಿಗೆ ಅಖಿಲ ಭಾರತ ಮನ್ನಣೆಯನ್ನು ಗಳಿಸಿಕೊಟ್ಟಿರುವರೆಂದರೆ ಅದು ಅತಿಶಯೋಕ್ತಿಯಾಗಲಾರದು. ಉಡುಪಿಯ ಕುಂಜಿಬೆಟ್ಟಿನಲ್ಲಿ ಜನಿಸಿದ ಶ್ರೀ|| ಭಟ್ಟರು ಬಾಲ್ಯದಿಂದಲೂ ಸಾಹಸ ಮನೋವೃತ್ತಿಯವರು; ಕ್ರಾಂತಿ ಶೀಲರು. ಉಡುಪಿಯ ಅನಂತೇಶ್ವರ ಶಾಲೆಯಲ್ಲಿ ತನ್ನ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಶ್ರೀ ಭಟ್ಟರು ಬೋರ್ಡ್ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣವನ್ನು ಪಡೆದರು. ಜೀವನವೆಂಬುದು ಅವರ ಪಾಲಿಗೆ ಒಂದು ಸಾಹಸವಾಗಿತ್ತು. ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನಿಸಿದ ಶ್ರೀ ಭಟ್ಟರು ಇಂದು ವಿಮಾ ಕ್ಷೇತ್ರದಲ್ಲಿ ಒಂದು ಉಚ್ಚ ಸ್ಥಾನವನ್ನು ಗಳಿಸಿದ್ದರೆ ಅದು ಅವರ ವಿಚಲವಾದ ಪ್ರಯತ್ನದಿಂದ ಅದೃಷ್ಟವು ಅವರ ಪಾಲಿಗೆ ಜೀವನದ ಪ್ರಾರಂಭದಲ್ಲಿ ನಿರಾಶಾದಾಯಕವಾಗಿದ್ದರೂ, ಕಾರ್ಯಶೀಲರಾಗಿ ಮುಂದೊತ್ತುವ ಅವರ ಅಚಲತೆ, ಜೀವನದ ಕಷ್ಟಸುಖ, ಏರುಪೇರುಗಳನ್ನು ಸಮಾನತೆಯಿಂದ ಕಾಣುವ ಅವರ ದೃಷ್ಟಿ; ಹಿಡಿದ ಗುರಿ ತಲುಪುವ ವರೆಗೂ ಹಿಂದೆ ಕಾಲ್ತೆಗೆಯದ ಅವರ ಕ್ರಾಂತಿಕಾರಕ ಮನೋವೃತ್ತಿಗಳೇ ಅವರನ್ನು ಈ ಸ್ಥಾನಕ್ಕೆ ಒಯ್ದುವು. "The man is the maker of his own destiny" ಎಂಬ ಮಾತು ಸತ್ಯವೆನಿಸಿದ್ದರೆ, ಅದ. ಶ್ರೀ|| ಭಟ್ಟರಂತಹ ವ್ಯಕ್ತಿಗಳಿಂದ ತನ್ನಿಂದ ತಾನೇ ನಿರ್ಮಿಸಲ್ಪಟ್ಟ ವ್ಯಕ್ತಿಗಳು ಶ್ರೀ ಭಟ್ಟರು. ಜೀವಮಾನದಲ್ಲಿ ಸಡಬಾರದ ಕಷ್ಟಗಳನ್ನು ಪಟ್ಟರೂ ಕೆಚ್ಚೆದೆಯಿಂದ ಅದನ್ನು ಎದುರಿಸುವ ಧೈರ್ಯಶೀಲತೆ ಅವರಲ್ಲಿ ಹಾಸುಹೊಕ್ಕಾಗಿದೆ.

ಹೈಸ್ಕೂಲಿನಲ್ಲಿ ಅಭ್ಯಾಸನಡೆಸುತ್ತಿದ್ದ ಶ್ರೀ ಭಟ್ಟರಿಗೆ ಯಾಂತ್ರಿಕವಾದ ಶಿಕ್ಷಣವು ಒಗ್ಗಲಿಲ್ಲ. ಅವರದು ಕ್ರಾಂತಿಕಾರಕ ಮನೋವೃತ್ತಿ ಶಾಲಾ ಪಾಠಗಳ ನಿರಂತರ ಯಾಂತ್ರಿಕತೆಯು ಅವರಿಗೆ ಬೇಸರವನ್ನು ತರಿಸಿತು. ಹಾಗಾಗಿ ಭಟ್ಟರು, ತನ್ನ ಜೀವನದ ಪ್ರಾರಂಭದಲ್ಲೇ ಹೊಸ ಕ್ಷೇತ್ರ ಹಾಗೂ ವಿಚಾರಗಳತ್ತ ಧುಮುಕಿದರು. ಅವರ ಅಧ್ಯಯನವು ಶಾಲಾ ಪಾಠಪಟ್ಟಿಯ ಎಲ್ಲೆಯನ್ನು ಮೀರಿತು. ಹಿಂದೂ ಧರ್ಮದ ಅಧ್ಯಯನವನ್ನು ಅವರು ವಿದ್ಯಾರ್ಥಿಯಾಗಿದ್ದಾಗಲೇ ಆರಂಭಿಸಿದರು. ಹಿಂದೂಧರ್ಮದ ತಿರುಳನ್ನು, ವಿಚಾರಗಳನ್ನು, ವೈಶಿಷ್ಟ್ಯಗಳನ್ನು ತಿಳಿಯುವುದರಲ್ಲಿ ಅವರು ಮುಂದಾದರು. ಶಾಲಾಧ್ಯಯನವನ್ನು ಬಿಟ್ಟು, ಅವರ ಒಲವು ಧಾರ್ಮಿಕತೆಯತ್ತ ಹೊರಳಿ ಅವರು ಪತ್ರಿಕಾ ವ್ಯವಸಾಯವನ್ನು ಕೈಗೊಂಡರು. "ಸದ್ಗುರು ಪಾದಸೇವಾ" ಎಂಬ ಕನ್ನಡ ಮಾಸಪತ್ರಿಕೆಯನ್ನು ಅವರು ಆರಂಭಿಸಿದರು. ವಿವಿಧ ಧರ್ಮ ಹಾಗೂ ಸಾಮಾಜಿಕ ಸಮಸ್ಯೆಗಳ ನಿಜವಾದ ಕಲ್ಪನೆಯನ್ನು ಜನಸಾಮಾನ್ಯರಿಗೆ ಮಾಡಿಕೊಡುವುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. ಧರ್ಮ, ನೀತಿ, ನಿಯಮಗಳು ಕೇವಲ ಕೆಲವು ಆಚಾರ ಶಂಕರ ಸೊತ್ತಾಗಿದ್ದ ಕಾಲದಲ್ಲಿ, ಅವುಗಳು ಜನಸಾಮಾನ್ಯರಿಗೆ ಕೇವಲ ದೊಡ್ಡ ಸಮಸ್ಯೆಗಳಾಗಿಯೇ ಕಾಣುತ್ತಿದ್ದ ಆ ಕಾಲದಲ್ಲಿ ಜನರು ಅವುಗಳ ಸರಿಯಾದ ತಿಳುವಳಿಕೆಯನ್ನು ಮಾಡಿಕೊಳ್ಳಬೇಕೆಂಬ ಉದ್ದೇಶವು ಅವರಿಗಿತ್ತು. ಸಮಾಜದ ಅವಾಸ್ತವಿಕ ಕಟ್ಟುಕಟ್ಟಳೆಗಳನ್ನು ಅವರೆಷ್ಟು ನಿರ್ಲಕ್ಷಿಸುತ್ತಿದ್ದರು, ಅಂತೆಯೇ ವಾಸ್ತವಿಕ ಕಟ್ಟುಕಟ್ಟಳೆಗಳ ಕಡೆಗೆ ಅವರ ಪೂರ್ಣ ಲಕ್ಷ್ಯವಿತ್ತು.

ಭಾರತದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಆಂದೋಲನವು ಆರಂಭವಾಗಿದ್ದ ಕಾಲದಲ್ಲಿ ಶ್ರೀಯುತ ಭಟ್ಟರು ತರುಣರಾಗಿರುವಂತಹ ಭಾಗ್ಯಶಾಲಿಗಳಾಗಿದ್ದರು. ಅವರ ತಾರುಣ್ಯದ ಬಿಸಿನೆತ್ತರಿನ ಸ್ಫೂರ್ತಿಯ ಸೆಲೆ ಅವರನ್ನು ಈ ರಾಷ್ಟ್ರೀಯ ಆಂದೋಲನದಲ್ಲಿ ಧುಮುಕುವಂತೆ ಮಾಡಿತ್ತು. ರಾಷ್ಟ್ರೀಯ ಆಂದೋಲನದಲ್ಲಿ ಪ್ರವೇಶಿಸಿದ ಭಟ್ಟರು ಅಂದಿನ ಕಾಲದಲ್ಲಿ ಎಲ್ಲೆಲ್ಲೂ ಆರಂಭವಾಗುತ್ತಿದ್ದ 'ಗಾಂಧಿ ಶಾಲೆ'ಗಳ ಸ್ಥಾಪನೆಯಲ್ಲಿ ಅಭಿವೃದ್ಧಿಯಲ್ಲಿ ನಿರತರಾದರು ಈ ಶಾಲೆಗಳು ಆ ಕಾಲದಲ್ಲಿ ಯುವಕರಿಗೆ ರಾಷ್ಟ್ರೀಯ ವಿದ್ಯಾಭ್ಯಾಸವನ್ನೀಯುತ್ತಿದ್ದುವಲ್ಲದೆ, ರಾಷ್ಟ್ರ ಸೇವೆಯ ಬುದ್ಧಿ ಯುವಕರಲ್ಲಿ ಬೇರೂರುವಂತೆ ಮಾಡುತಿದ್ದುವು. ಅವರು ದಕ್ಷ ಕಾರ್ಯಕರ್ತರು, ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯಮಾಡಬಲ್ಲ ಕುಶಲ ಕಾರ್ಯಕರ್ತರೆಂಬುದು ಅದರಿಂದ ತಿಳಿದು ಬಂತು.

ಭಟ್ಟರ ಸಾಹಸಮಯ ಪ್ರವೃತ್ತಿ; ಸಂದಿಗ್ಧ ಸಂದರ್ಭದಲ್ಲಿ ಧೃತಿಗೆಡದ ಅವರ ಸಾಹಸಿ ಮನೋವೃತ್ತಿ 1928ರಲ್ಲಿ ಅವರನ್ನು ಬೊಂಬಾಯಿಗೆ ಒಯ್ದಿತು. ಬೊಂಬಾಯಿಯಲ್ಲಿ ಭಟ್ಟರು ಉದ್ಯೋಗ ನಿರತರಾದರು. ಬೊಂಬಾಯಿಯಲ್ಲಿ ಅವರು ಎಕೌಂಟೆಂಟರಾಗಿ, ಟೈಪಿಸ್ಟರಾಗಿ, ವೈಯಕ್ತಿಕ ಸಂಸ್ಥೆಗಳ ಪ್ರತಿನಿಧಿಯಾಗಿ ಹಲವಾರು ಸಂಸ್ಥೆಗಳಿಗೆ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸಿದರು. ವ್ಯವಹಾರ ಕುಶಲರಾದ ಜನರೊಡನೆ ಕೂಡಿ ಬೆರೆಯುವ ಮನೋವೃತ್ತಿಯ ಭಟ್ಟರಿಗೆ ಈ ಉದ್ಯೋಗಗಳೆಂದು ಅಷ್ಟಾಗಿ ಹಿಡಿಸಲಿಲ್ಲವೇನೋ?

1938—ಶ್ರೀಯುತ ಭಟ್ಟರ ಔದ್ಯೋಗಿಕ ಜೀವನದಲ್ಲಿ ಒಂದು ಮಹಾವರ್ಷ. ಈ ವರ್ಷವೇ ಅವರು ವಿಮಾಕ್ಷೇತ್ರವನ್ನು ಪ್ರವೇಶಿಸಿದರು. ಭಾರತದ ಸುಪ್ರಸಿದ್ಧ ವಿಮಾ ಕಂಪೆನಿಯಾದ ಓರಿಯೆಂಟಲಿನಲ್ಲಿ ಏಜಂಟರಾಗಿ ಅವರು ಸೇರಿದರು. ವಿವಿಧ ಕಾರ್ಯ ಕ್ಷೇತ್ರಗಳಲ್ಲಿ ದುಡಿದ ಭಟ್ಟರಿಗೆ ಕೊನೆಗೂ ಈ ವಿಮಾಕ್ಷೇತ್ರವೇ ಶಾಶ್ವತ ಕಾರ್ಯಕ್ಷೇತ್ರವಾಗಿ ಪರಿಣಮಿಸಿತು. ಅವರ ಆದರ್ಶ ವರ್ತನೆಗಳು, ಕರ್ತವ್ಯದ ಕಡೆಗಿರುವ ಜಾಗೃತಿ, ಶ್ರಮಪಡಿಸಿ ದುಡಿಯುವ ಮನೋವೃತ್ತಿ, ಹಾಗೂ ಕಾರ್ಯಕುಶಲತೆಗಳು ಅವರಿಗೆ ವಿಮಾಕ್ಷೇತ್ರದಲ್ಲಿ ಅಪಾರ ಯಶಸ್ಸನ್ನು ತಂದುಕೊಟ್ಟುವು. ಮುಂದೆ ಅವರು ಓರಿಯೆಂಟಲಿನ ಇನ್ಸ್‌ಪೆಕ್ಟರರಾಗಿ ಮಡಿಕೇರಿ, ಬೆಂಗಳೂರು ಮತ್ತು ಮಂಗಳೂರುಗಳಲ್ಲಿ ದುಡಿದರು. ಅವರ ಅಪ್ರತಿಮ ಕಾರ್ಯಚತುರತೆ, ಕರ್ತವ್ಯನಿಷ್ಠೆ; ಶ್ರಮಪೂರ್ವಕ ದುಡಿಮೆಗಳನ್ನು ಕಂಡ ಕಂಪೆನಿಯವರು 1950ರಲ್ಲಿ ಇವರನ್ನು ಮಧುರೆಯಲ್ಲಿ ಬ್ರಾಂಚ್ ಸೆಕ್ರೆಟರಿಯನ್ನಾಗಿ ಮಾಡಿದರು. ಜೀವವಿಮಾ ಕಂಪೆನಿಗಳ ರಾಷ್ಟ್ರೀಕರಣವಾಗುವ ವರೆಗೆ ಅಂದರೆ 1956ರ ವರೆಗೂ ಇವರು ಮಧುರೆಯಲ್ಲಿದ್ದು ಹಲವಾರು ಜನಸೇವಾ ಕಾರ್ಯಗಳಲ್ಲಿ ನಿರತರಾಗಿದ್ದರು. 1956ರಲ್ಲಿ ಜೀವವಿಮೆಯ ರಾಷ್ಟ್ರೀಕರಣವಾದ ಬಳಿಕ ಉಡುಪಿಯಲ್ಲಿ ಜೀವವಿಮಾ ಕಾರ್ಪರೇಶನಿನ ಡಿವಿಜನಲ್ ಆಫೀಸು ಸ್ಥಾಪಿಸಲ್ಪಟ್ಟಾಗ ಶ್ರೀಯುತ ಭಟ್ಟರು ಡಿವಿಜನಲ್ ಮೆನೇಜರರಾಗಿ ಉಡುಪಿಗೆ ಬಂದರು.

ರಾಷ್ಟ್ರೀಕೃತ ವಿಮೋದ್ಯಮದ ಯಶಸ್ಸಿನ ಕುರಿತು ವೇಳೆಯಲ್ಲೇ ಸಂದೇಹದಾಯಕ ಮನೋವೃತ್ತಿಯಿತ್ತು. ಮೊದಲಾಗಿ ಉಡುಪಿಯಲ್ಲಿ ಡಿವಿಜನಲ್ ಆಫೀಸು ಸ್ಥಾಪಿತವಾದಾಗ ಅದರ ಸುಭದ್ರ ಅಸ್ತಿತ್ವದ ಕುರಿತೇ ಹಲವರು ಸಂಶಯ ತಳೆದಿದ್ದರು. ಇಲ್ಲಿ ನಿರ್ದಿಷ್ಟಪಡಿಸಿತ ವ್ಯವಹಾರ ನಡೆಯಲು ಅಸಾಧ್ಯ ಎಂಬ ಸಂದೇಹ ಎಲ್ಲರಲ್ಲೂ ಬೇರೂರಿದ್ದಾಗ, ಕೆ. ಆರ್. ಕೆ. ಭಟ್ಟರು ಉಡುಪಿ ಡಿವಿಜನಿನ ಸಾರಥ್ಯವಹಿಸಿಕೊಂಡರು. ರಾಷ್ಟ್ರೀಕರಣವಾದ ಮೊದಲ ವರ್ಷದಲ್ಲಿ ಉಡುಪಿ ಡಿವಿಜನು ನಿರ್ದಿಷ್ಟಪಡಿಸಿದ ವ್ಯವಹಾರವನ್ನು ಭಾರತದಲ್ಲೇ ಮೊತ್ತಮೊದಲಾಗಿ ಪೂರೈಸಿತೆಂದರೆ, ಅದು ಶ್ರೀಯುತ ಭಟ್ಟರ ಕಾರ್ಯಕೌಶಲ್ಯ, ಅಸಾಧಾರಣ ದಕ್ಷ ಆಡಳಿತೆ, ಹಾಗೂ ವ್ಯವಹಾರ ಕುಶಲತೆಗಳಿಂದಲೇ ಎಂಬುದಕ್ಕೆ ಸಂದೇಹವಿಲ್ಲ. ಅಸ್ಥಿರವಾಗಿದ್ದ ಉಡುಪಿ ಡಿವಿಜನಿನ ಅಸ್ತಿ

(೮ನೇ ಪುಟ ನೋಡಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಪರರ ಸ್ವಾತಂತ್ರ್ಯವನ್ನು ಅಪಹರಿಸುವವರು ತಾವೂ ಬಹುಕಾಲ ಸ್ವತಂತ್ರರಾಗಿ ಉಳಿಯುವುದಿಲ್ಲ; ಇರು, ಇರಗೊಡು ಎಂಬುದೇ ಸ್ವಾಸ್ಥ್ಯ ಸಂಚಿಕ ಜೀವನಕ್ಕೆ ಸೋಪಾನ ಪಥ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೧-೨-'೬೦	೨೩

ಕಮ್ಯುನಿಸ್ಟ್ ಪರಾಜಯ

ಅತೀವ ಕುತೂಹಲದಿಂದ ಎಲ್ಲರೂ ನಿರೀಕ್ಷಿಸುತ್ತಿದ್ದ ಕೇರಳದ ಮಧ್ಯಾವಧಿ ಚುನಾವಣೆಗಳ ಫಲಿತಾಂಶವು ಪ್ರಕಟಗೊಂಡಿದ್ದು, ಸಂಯುಕ್ತರಂಗವು ೧೨೬ ರಲ್ಲಿ ೯೪ ಸ್ಥಾನಗಳನ್ನು ಪಡೆದು ಜಯಭೇರಿ ಬಾರಿಸಿದ್ದಾರೆ. ಸುಮಾರು ಆರು ತಿಂಗಳಿಗೆ ಮೊದಲು ಕೇರಳದಲ್ಲಿ ಸತ್ತಾರೂಢವಾಗಿದ್ದ ಕಮ್ಯುನಿಸ್ಟ ಸರಕಾರವನ್ನು ಪದಚ್ಯುತಗೊಳಿಸುವ ಮಹಾಕಾರ್ಯದಲ್ಲಿ ಯಶಸ್ವಿಯಾಗಿರುವ ಈ ಆಗಿನ ವಿರೋಧಿ ಪಕ್ಷಗಳು ಈಗ ತಮ್ಮ ಸರಿದಾರಿಯೆಂದು ಹೇಳಿಕೊಳ್ಳುವಂತಾಗಿದೆ. ಕಮ್ಯುನಿಸ್ಟರ ಮೇಲೆ ಬಹಳಷ್ಟು ದೋಷಗಳನ್ನು ಆರೋಪಿಸಿ, ಅವರು ಪದಚ್ಯುತಿಗೆ ಯೋಗ್ಯರೆಂದು ಶಿಫಾರಸು ಮಾಡಿ ಆ ಬಗ್ಗೆ ಭಗೀರಥ ಪ್ರಯತ್ನ ನಡೆಸಿ ಕೊನೆಗೆ ಯಶಸ್ವಿಯಾದ ಈ ಪಕ್ಷಗಳು ವಿಜಯಗಳಿಸಿದುದರಿಂದ, ಅವರ ಇಂದಿನ ಕೃತ್ಯಗಳಿಗೆ ಮನ್ನಣೆಯನ್ನು ಕೇರಳೀಯರು ಕೊಟ್ಟಂತಾಯಿತು. ಅಂತೂ ರಾಷ್ಟ್ರಾಧ್ಯಕ್ಷರು ಕೇರಳದ ಆಧಿಕಾರವನ್ನು ತನ್ನ ಕೈವಶ ಪಡಿಸಿಕೊಂಡುದು ಸರಿಯೆಂದು ಸಮಾಧಾನಪಡುವಂತಾಯಿತು.

ಕೇರಳದ ಜನತೆಯು ತುಂಬ ಬುದ್ಧಿವಂತರು. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಕಮ್ಯುನಿಸ್ಟರನ್ನು ಅಧಿಕಾರಕ್ಕೇರಿಸಿದ್ದರು. ಆದರೆ, ಕಾಲಕ್ರಮದಲ್ಲಿ ಕೇರಳದ ಜನತೆಯು ಬಹುದೊಡ್ಡ ಭಾಗವೊಂದು ಕಮ್ಯುನಿಸ್ಟರ ಆಡಳಿತೆಯಲ್ಲಿ ವಂಚನೆ ಹಾಗೂ ದೋಷಾದಿಗಳನ್ನು ಕಂಡುಕೊಂಡು ಸರಕಾರದ ವಿರುದ್ಧ ಗಲಭೆಯೆಬ್ಬಿಸತೊಡಗಿದರು. ಈ ಜನತಾ ವಿದ್ರೋಹವು ಸಂವಿಧಾನವನ್ನಯ ಮರ್ಯಾದಿತವಾಗಿರುವುದೆಂದು ಹೇಳುವುದು ಕಷ್ಟಸಾಧ್ಯವಾದರೂ ಜನತೆಯ ಅಭಿಪ್ರಾಯವನ್ನು ಕಂಡುಕೊಂಡು ಅದರಂತೆ ನಡೆಯುವುದು ಸರಕಾರದ ಕರ್ತವ್ಯವೇ ಆಗಿದೆ ಎಂಬುದಂತೂ ಸರಿಯೇ. ಆದರೆ, ತಾನು ಬಹು ಜನತೆಯ ವಿಶ್ವಾಸಕ್ಕೆ ಎರವಾಗಿದ್ದರೂ ಕಮ್ಯುನಿಸ್ಟರು ತಾವಾಗಿ ರಾಜಿನಾಮೆಯೀಯುವುದಕ್ಕಾಗಲೀ ತಮ್ಮ ನೇತೃತ್ವದಲ್ಲಿ ಮರುಚುನಾವಣೆ ನಡೆಸುವುದಕ್ಕಾಗಲೀ ಒಪ್ಪದೆ ಇದ್ದುದರಿಂದ, ಅಲ್ಲಿನ ಜನತೆಗೆ ಕಮ್ಯುನಿಸ್ಟ ಸರಕಾರದ ಮೇಲಿರಬೇಕಾಗಿದ್ದ ವಿಶ್ವಾಸವು ಸಂಪೂರ್ಣ ನಷ್ಟವಾಗಿ, ಅಲ್ಲಿನ ಪರಿಸ್ಥಿತಿಯು ತೀರ ವಿಕ್ಷೋಭಕ್ಷೋಭಾದುದರಿಂದ, ರಾಷ್ಟ್ರಾಧ್ಯಕ್ಷರು ಅನಿವಾರ್ಯವಾಗಿ ತನ್ನ ಆಡಳಿತೆಯನ್ನು ಘೋಷಿಸಬೇಕಾಗಿ ಬಂತು. ಅವರ ಈ ಕ್ರಮವು ಸರಿಯೆಂದು ಕೇರಳೀಯರು ಈಗ ಮತವಿತ್ತಿದ್ದಾರೆ.

ಇನ್ನು, ಕೇರಳದಲ್ಲಿ ಕಮ್ಯುನಿಸ್ಟರು ಬಹಳಷ್ಟು ಸ್ಥಾನಗಳಿಗೆ ಸ್ಪರ್ಧಿಸಿದ್ದರೂ ಅವರು ಗೆದ್ದ ಸ್ಥಾನಗಳು ತೀರ ಕಡಿಮೆ. ೧೯೫೭ರಲ್ಲಿ ೬೦ ಮಾತ್ರ, ೨೩ ಜನ ಸ್ವತಂತ್ರರಿಗೆ ಸಂಪೂರ್ಣ ಬೆಂಬಲವಿತ್ತಿದ್ದರೂ ಇವರಲ್ಲಿ ಮೂವರು ಮಾತ್ರ ಗೆದ್ದಿದ್ದಾರೆ. ಹೀಗೆ ೧೨೬ ಜನ ಸದಸ್ಯರಿರುವ ಕೇರಳ ವಿಧಾನ ಸಭೆಯಲ್ಲಿ ಕಮ್ಯುನಿಸ್ಟಪರರು ೨೯ ಎಂದತಾಯಿತು; ಎಂದರೆ, ಸೇ. ೨೩ ಮಾತ್ರ. ಕಮ್ಯುನಿಸ್ಟರು ಪ್ರಚಂಡ ಪರಾಭವವನ್ನು ಹೊಂದುವಂತೆಸಗಲು ಕೇರಳದ ಉಳಿದ ರಾಜಕೀಯ ಪಕ್ಷಗಳು, ಮುಖ್ಯವಾಗಿ ಕಾಂಗ್ರೆಸ್, ಪ್ರಸಪಾ ಮತ್ತು ಮುಸ್ಲಿಂ ಲೀಗ್‌ಗಳ ಸಂಯುಕ್ತರಂಗವೇ, ಕಾರಣವೆಂಬುದೂ ಅವು ಒಗ್ಗಟ್ಟಿನಿಂದ ಕಮ್ಯುನಿಸ್ಟರನ್ನು ಅಟ್ಟಲು ದುಡಿಯದಿರುತ್ತಿದ್ದರೆ, ಕಮ್ಯುನಿಸ್ಟರೇ ಪುನಃ ಗದ್ದುಗೆಗೇರುವ ಲಕ್ಷಣಗಳಿದ್ದುವೆಂದೂ ಹೇಳಬಹುದು. ಭಾರತದಲ್ಲಿ ಕಮ್ಯುನಿಜಂಗೆ ಭವಿಷ್ಯವಿಲ್ಲ ವೆಂಬುದನ್ನು ಕೇರಳದ ಜನತೆಯು ಈಗ ಇನ್ನೂ ಸರಿಯಾಗಿ ಒತ್ತಿ ಸಾರಿತು. ತಾವು ಖಂಡಿತ ಗೆದ್ದುಬರುವೆವೆಂದು ವಿಶ್ವಸತಾಳಿದ್ದ ಕಮ್ಯುನಿಸ್ಟ್ ಪ್ರಧಾನರು ತಮ್ಮ ಜಾಲದಿಂದ ಕೇರಳೀಯರು ಉರುಳಿ ಹೋಗುವಷ್ಟು ಬುದ್ಧಿವಂತರೆಂದು ಆಗ ತಿಳಿದುಕೊಳ್ಳಲಿಲ್ಲ. ಅಂತೂ ಭಾರತದ ಪ್ರಜಾಪ್ರಭುತ್ವಕ್ಕೆ ಉತ್ತಮ ಭವಿಷ್ಯವಿದೆಯೆಂಬುದನ್ನೂ ಕಮ್ಯುನಿಜಂನತ್ತ ಭಾರತವು ಎಂದಿಗೂ ಒಲಿದಿಲ್ಲವೆಂಬುದನ್ನೂ ಈ ಚುನಾವಣೆಗಳು ಜಗತ್ತಿಗೆ ಪ್ರದರ್ಶಿಸಿದುವು.

ಈಗ ಇರುವ ಪ್ರಶ್ನೆಯಿದೊಂದೇ. ಕಾಂಗ್ರೆಸ್ ಸ್ಥಾಪಿಸಿಕೊಂಡ ಸಂಯುಕ್ತರಂಗವು ಪ್ರಸಪಾ ಪಕ್ಷದೊಡನೆ ಜಾತೀಯವಾದಿಯಾದ ಮುಸ್ಲಿಂ ಲೀಗನ್ನೂ ತನ್ನಲ್ಲಿ ಸೇರಿಸಿಕೊಂಡಿದ್ದು, ಈ ಐಕ್ಯರಂಗದಿಂದ ಕಾಂಗ್ರೆಸ್ ಜಾತೀಯ ಭಾವನೆಗಳಿಗೆ ಪುಟಕೊಟ್ಟಂತಾಗಿದೆಯೆಂದು ಹೇಳಲಾಗುತ್ತದೆ. ಆದರೆ, ಜಾತೀಯತೆಯ ಭೂತವು ಭಯಂಕರವಾದುದೆಂದು ಒಪ್ಪಬೇಕಾದುದಾದರೂ ಕಮ್ಯುನಿಸ್ಟರನ್ನು ಸಂಪೂರ್ಣ ನಾಶಗೊಳಿಸುವ ಕಾರ್ಯವು ಮತ್ತಷ್ಟು ಅವಶ್ಯವಾದುದೆಂದು ಹೇಳಬಹುದು. ಈ ಜಾತೀಯವಾದಿ ಪಕ್ಷದ ಮೈತ್ರಿಯು ಎಷ್ಟು ದಿನ ಸರಸವಾಗಿ ಬಾಳೀತೆಂದು ಹೇಳಬರುವುದಿಲ್ಲ. ಅದೇನಿದ್ದರೂ, ಇಂದು ಸಂಯುಕ್ತರಂಗವು ಜಯಶೀಲವಾಗಿದೆ. ಅದು ಸಂಯುಕ್ತವಾಗಿ ಮಂತ್ರಿಮಂಡಳಿಯನ್ನು ರಚಿಸುತ್ತದೆ. ಈ ಮಂತ್ರಿಮಂಡಳಿಯಲ್ಲಿ ಭಿರುಕುಗಳೇಳದಂತೆ ನಡೆದುಕೊಳ್ಳುವುದು ಮಾತ್ರವಲ್ಲ, ಈ ಐಕ್ಯರಂಗವನ್ನು ಮುಂದುವರಿಸಿಕೊಂಡು, ಪ್ರಜಾಪ್ರಭುತ್ವದಲ್ಲಿ ಕೇರಳೀಯರಿಗೆ ಉಳಿದು ಅಳಿದ ವಿಶ್ವಾಸವನ್ನು ಪುನಃ ಸ್ಥಾಪಿಸುವ ಮಹಾಕರ್ತವ್ಯವನ್ನು ಕೈಗೊಳ್ಳಬೇಕಾಗಿದೆ. ಕೇರಳದ ಜನತೆಯು ಕಮ್ಯುನಿಸ್ಟ್ ವಿರೋಧೀಭಾವನೆಯನ್ನು ಮತ್ತಷ್ಟು ಬೆಳೆಸುವಂತೆ ಕೂಟ ನೀತಿಯನ್ನು ತೋರುವುದರಲ್ಲಿಯೇ ಮಾತ್ರ ಆಸಕ್ತಿವಹಿಸದೆ ಜನಹಿತ ಕಾರ್ಯಗಳನ್ನು ಅತಿ ಮುತುವರ್ಜಿಯಿಂದ ಪೂರೈಸಿ ಕೇರಳೀಯರ ಹೃನ್ಮನಗಳನ್ನು ಸದಾಕಾಲವೂ ತಮ್ಮತ್ತ ಸೆಳೆಯುವಂತಹ ರೀತಿಯಲ್ಲಿ ಅದು ಕಾರ್ಯಮಗ್ನವಾಗುವ ಆವಶ್ಯಕತೆಯಿದೆ. ಈ ಸಂಯುಕ್ತರಂಗವು ತನ್ನ ಈ ಪರಮಕರ್ತವ್ಯವನ್ನು ಮರೆಯದೆ ಸದಾ ಜಾಗ್ರತವಾಗಿ ಉಳಿಯುವುದೆಂದು ವಿಶ್ವಾಸವನ್ನು ವ್ಯಕ್ತಪಡಿಸಿದರೆ, ಅದು ಫಲಕಾರಿಯಾದೀತು.

ಲೋಕಸಭಾಧಿವೇಶನ

ಲೋಕಸಭೆಯ ಮುಂಗಡ ಪತ್ರದ ಅಧಿವೇಶನವು ಈಗತಾನೇ ಪ್ರಾರಂಭವಾಗಿದೆ. ಈ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಿರುವರು. ಭಾರತ ಚೀನಗಳ ನಡುವಣ ಸಂಬಂಧವನ್ನವರು ವಿವೇಚಿಸುತ್ತ ದೇಶದ ಸೀಮೆಯನ್ನೂ ಭದ್ರತೆಯನ್ನೂ ಉಳಿಸಿಕೊಳ್ಳಲು ಸರಕಾರ ಕಾರ್ಯವೆಸಗಿದೆಯೆಂದು ತಿಳಿಸಿ, ಚೀನವು ತನ್ನ ತಪ್ಪನ್ನು ತಿಳಿದು ಅದನ್ನು ತಿದ್ದಿಕೊಳ್ಳಲು ಬೇಗನೇ ಮುಂದೆ ಬರುವುದಾಗಿ ಹಾರೈಸಿದರು. ಕೇರಳದಲ್ಲಿ ಚುನಾವಣೆಗಳು ಮುಗಿದಿರುವುದರಿಂದ ಅಲ್ಲಿನ ತನ್ನ ಆಡಳಿತೆಯನ್ನು ಇನ್ನು ಕೆಲವೇ ದಿನಗಳಲ್ಲಿ ಹಿಂದೆಗೆದುಕೊಳ್ಳುವೆನೆಂದು ಮತ್ತು ಅಲ್ಲಿ ಘಟನಾತ್ಮಕವಾದ ಆಡಳಿತೆಯು ಪುನಃ ಪ್ರಾರಂಭವಾಗುವುದೆಂದು ತಿಳಿಸಿದರು. ೧೯೫೦-೫೧ರಲ್ಲಿದ್ದ ರಾಷ್ಟ್ರೀಯ ಆದಾಯವನ್ನು ಇಮ್ಮಡಿಗೊಳಿಸುವ ಉದ್ದೇಶವಿರುವ ತೃತೀಯ ಯೋಜನೆಯನ್ನು ಸರಕಾರವು ಪರಿಶೀಲಿಸುತ್ತಿದೆಯೆಂದೂ ನೆರೆರಾಷ್ಟ್ರ ಪಾಕಿಸ್ತಾನದೊಡನಿರುವ ಸಂಬಂಧವು ಈಗೀಗ ಉತ್ತಮವಾಗುತ್ತ ಸಾಗಿರುವುದೆಂದೂ ಅವರು ವಿವರಿಸಿದರು. ದ್ವಿಭಾಷಾ ಮುಂಬಯಿ ರಾಜ್ಯವನ್ನು ಏಕಘಟಕ ರಾಜ್ಯಗಳಾಗಿ ಒಡೆಯುವ ಬಗ್ಗೆ ವಿಧೇಯಕವೊಂದನ್ನು ಈ ಅಧಿವೇಶನದಲ್ಲಿ ಮಂಡಿಸಲಾಗುವುದೆಂದೂ ಮಾನ್ಯ ಅಧ್ಯಕ್ಷರು ಘೋಷಿಸಿದರು. ಸದ್ಯವೇ ಸೇರಲಿರುವ ವರಿಷ್ಠ ಸಮ್ಮೇಳನವು ಸೌಹಾರ್ದಯುತ ವಾತಾವರಣದಲ್ಲಿ ನಡೆಯುವುದೆಂದು ಹಾರೈಸಿ, ಅದರಿಂದ ವಿಶ್ವಶಾಂತಿ ಸಹಾಯಕವಾಗಲೆಂದು ಆಶಿಸಿದರು.

ಹೀಗೆ ದೇಶದ ಆಂತರಿಕ ಹಾಗೂ ವೈದೇಶಿಕ ನೀತಿ ನಿಲುಮೆಗಳ ಬಗ್ಗೆ ಅವರು ಉಲ್ಲೇಖಿಸುತ್ತ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದ್ದಾರೆ. ಭಾಷಣದಲ್ಲಿ ನಿರೂಪಿತವಾಗಿರುವ ಎಲ್ಲ ವಿಷಯಗಳೂ ಈಗಾಗಲೇ ನಿರ್ಧಾರಕ್ಕೆ ಬಂದಂತೆಯೇ ಆಗಿದ್ದು, ಇವೇನೂ ವಿಶೇಷವೆಂದು ಹೇಳುವಂತಿಲ್ಲ. ಸಾಮಾನ್ಯವಾಗಿ, ಚೀನದ ಸಂಬಂಧದ ಕುರಿತಾಡಿದ ಒಂದು ಸ್ಪಷ್ಟೋಕ್ತಿಯನ್ನುಳಿದರೆ, ಅವುಗಳ ಮೇಲೆ ನ್ಯಾಯ್ಯ ನಿಷ್ಪ್ರಯೋಜನವೇ. ಈ ವಿಚಾರವು ಭಾಷಣದ ಮೇಲೆ ನಡೆಯಬಹುದಾದ ಚರ್ಚೆಗಳ ವೇಳೆ ಸ್ವಯಂಸಿದ್ಧವಾಗುವುದು ಖಂಡಿತವೇ. ಆದರೂ ಸರಕಾರದ ನೀತಿಯನ್ನು ಪ್ರತಿನಿಧಿಗಳ ಮುಂದಿಡುವುದು ಅಧ್ಯಕ್ಷನ ಕರ್ತವ್ಯವಾಗಿರುವುದರಿಂದ ಈ ಭಾಷಣದ ಇತರ ವಿಷಯಗಳ ಬಗ್ಗೆ ಅಧಿಕ ಚರ್ಚೆ ನಡೆಯಲಾರದೆಂದು ಊಹಿಸಬಹುದೆ?

ಸಂಕ್ಷಿಪ್ತ ಸುದ್ದಿಗಳು

ಕೇರಳಕ್ಕೆ ಸಮ್ಮಿಶ್ರ ಸರಕಾರ

ಕೇರಳದಲ್ಲಿ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ವಿವಿಧ ಪಕ್ಷಗಳು ಗಳಿಸಿದ ಸ್ಥಾನಗಳು ಈ ರೀತಿಯಾಗಿವೆ.

(ಸಂಯುಕ್ತರಂಗ ೯೪)
ಕಾಂಗ್ರೆಸ್ ೬೩
ಪ್ರಸಪಾ ೨೦
ಮುಸ್ಲಿಂಲೀಗ್ ೧೧
ಕಮ್ಯುನಿಸ್ಟ್ ೨೬
ಕಮ್ಯುನಿಸ್ಟ್‌ಪರ ಸ್ವತಂತ್ರರು ೩
ಸ್ವತಂತ್ರರು ೧
ಕಾ. ಕಾ. ಸಮಾಜವಾದಿ ೧
ಕರ್ನಾಟಕ ಸಮಿತಿ ೧

ಸಂಯುಕ್ತರಂಗವು ಮಂತ್ರಿಮಂಡಳಿಯನ್ನು ರಚಿಸಲಿದ್ದು, ಈ ಬಗ್ಗೆ ವಿಚಾರವಿಮರ್ಶೆ ನಡೆಯುತ್ತಿದೆ. ಯಾರು ನಾಯಕರಾಗುವರೆಂದು ಈಗಲೇ ಹೇಳಬರುವುದಿಲ್ಲವಾದರೂ ಶ್ರೀಗಳಾದ ಪಟ್ಟಂ ಥಾನು ಪಿಳ್ಳೆ, ಚಾಕೊ ಮತ್ತು ಶಂಕರರಲ್ಲಿ ಯಾರಾದರೊಬ್ಬರು ಹೊರಿ ಹೊರುವ ನಿರೀಕ್ಷೆಯಿದೆ.

ಭಾರತೀಯ ವಿಜ್ಞಾನಿಗಳು

ನವದೆಹಲಿಯಲ್ಲಿರುವ ಜಾಗತಿಕ ಕೃಷಿ ಪ್ರದರ್ಶನದಲ್ಲಿರುವ ಭಾರತೀಯ ವಿಜ್ಞಾನಿಗಳು ಕೆಲವೊಂದು ಲೋಹಗಳನ್ನು ಅಣುವಿಕರಣದ ಸಹಾಯದಿಂದ ಬೇರೆ ಲೋಹಗಳನ್ನಾಗಿ ಪರಿವರ್ತಿಸುವ ಸಾಹಸದಲ್ಲಿ ತಲ್ಲೀನರಾಗಿದ್ದು ಈಗವರು ತಮ್ಮ ಸಾಧನೆಯಲ್ಲಿ ಜಯಶೀಲರಾಗುತ್ತ ಬರುತಿದ್ದಾರೆ. ಪ್ಲೇಟಿನಂ ಧಾತುವಿನಿಂದ ಬಂಗಾರವನ್ನು ಹೊರತೆಗೆದುದು ಅವರ ಮಹತ್ವದ ಸಾಧನೆಯಾಗಿದೆ. ಇದಕ್ಕೆ ಮೊದಲವರು ಗಂಧಕವನ್ನು ರಂಜಕವಾಗಿಯೂ ಅಲ್ಯುಮಿನಿಯಮನ್ನು ಸೋಡಿಯಮವಾಗಿಯೂ ಪರಿವರ್ತಿಸಿರುತ್ತಾರೆ.

ರಕ್ಷಣೆಯತ್ತ ಸಮೀಕ್ಷೆ

ಭಾರತದ ಮುಂದಿನ ಮುಂಗಡ ಪತ್ರದಲ್ಲಿ ಮತ್ತು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಕ್ಷಣಾ ಶಾಖೆಯ ಬಗ್ಗೆ ವಿಶೇಷ ಎಚ್ಚರಿಕೆ ವಹಿಸುವುದಾಗಿ ತಿಳಿಯುತ್ತದೆ. ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರಖಾನೆಗಳನ್ನು ಸ್ಥಾಪಿಸುವುದರ ಮೂಲಕ ಸ್ವರಕ್ಷಣೆಯ ಬಗ್ಗೆ ಭದ್ರಸೇನೆ ಸಜ್ಜುಗೊಳಿಸುವತ್ತ ಲಕ್ಷ್ಯವೀಯಲಾಗುವುದು. ಈ ವಿಭಾಗದಲ್ಲಿ ಮಿತವ್ಯಯವು ಎಂದೂ ಸಾಧಿಸಲಾರದು ಎಂದು ಪಂ. ನೆಹರೂ ಹೇಳಿರುತ್ತಾರೆ.

ಬ್ರಹ್ಮ ಚೀನ ಒಡಂಬಡಿಕೆ

ಭಾರತದ ನೆರೆರಾಜ್ಯ ಬ್ರಹ್ಮದೇಶ ಮತ್ತು ಚೀನಾಗಳ ನಡುವೆ ಒಂದು ಒಪ್ಪಂದವು ನಡೆದಿರುವುದಾಗಿ ತಿಳಿದು ಬಂದಿದೆ ಈ ಒಪ್ಪಂದದ ನ್ವಯ ಎರಡು ರಾಷ್ಟ್ರಗಳು ಅನಾಕ್ರಮಣ ಸಂಧಿಯನ್ನು ಮಾಡಿಕೊಂಡಿದ್ದು, ವ್ಯಾಪಾರಾದಿ ಸಂಬಂಧವನ್ನೂ ಬೆಳೆಸಿಕೊಂಡಂತಾಗಿದೆ. ಇತ್ತೀಚೆಗೆ ಬ್ರಹ್ಮದ ಪ್ರಧಾನಿ ಯುನೋರವರು ಪೇ

(ಆಚೆ ಪುಟದ ನಾಲ್ಕನೇ ಕಲಂ ನೋಡಿರಿ)

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿ ಲಾ ಕಾಲೇಜು ದಿನಾಚರಣೆಯು— ತಾ. 6ರಂದು ಮಂಗಳೂರಿನ ಸಬ್ ಜಡ್ಜ್ ಶ್ರೀ ಎ. ಜೆ. ಮಿರಾಂಜ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣಮಾಡಿ ಕಾಲೇಜಿನ ಆಗೀಗಿನ ವೃತ್ತಾಂತವನ್ನು ವಿವರಿಸಿದರಲ್ಲದೆ ಕಾಲೇಜಿನಿಂದ ತೇರ್ಗಡೆಯಾಗಿಬರುವ ತರುಣರು ಸರ್ವರ ಪ್ರಗತಿಗಾಗಿ ದುಡಿಯುವ ಗುರಿಯನ್ನಿರಿಸಿಕೊಳ್ಳಬೇಕೆಂದರು. ಯೂನಿಯನ್ ಅಧ್ಯಕ್ಷ ಶ್ರೀ ಎಸ್. ವಿ. ಹಾಯಸರು ಸಂದೇಶಗಳನ್ನೋದಿದರು. ಪ್ರಿನ್ಸಿಪಾಲ್ ಶ್ರೀ ಬಿ. ಎಲ್. ಎನ್. ಪೈಗಳು ಕಾಲೇಜಿನ ಪ್ರಗತಿಸೂಚಕ ವರದಿಯನ್ನೋದಿದರು. ಹಳೆವಿದ್ಯಾರ್ಥಿ ಶ್ರೀ ಎಸ್. ರಮಾನಂದ ಹೆಗ್ಡೆಯವರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಶಾಂತಾರಾಮ ಬಾಳಿಗರು ಉತ್ತರಿಸಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಭಾಷಣಮಾಡುತ್ತ ಉಡುಪಿಯನ್ನು ಒಂದು ಶಿಕ್ಷಣ ಕೇಂದ್ರವನ್ನಾಗಿ ರೂಪಿಸಿದ ಡಾ. ಮಾಧವ ಪೈಗಳ ಮುನ್ನೋಟ ಸಾಹಸ, ಪ್ರತಿಭೆಗಳನ್ನು ಶ್ಲಾಘಿಸಿ ವಕೀಲ ವೃತ್ತಿಯ ಹೊಣೆಗಾರಿಕೆಯನ್ನು ವಿವರಿಸಿದರು. ಶ್ರೀ ಗ್ರೇಸಿಯಸ್ ಸಿ. ರೇಗೋರವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಕನ್ನಡ—ಇಂಗ್ಲಿಷ್—ತುಳು ನಾಟಕಾದಿ ವಿವಿಧ ವಿನೋದಾವಳಿಗಳು ಸುಧೀರ್ಘವಾಗಿ ಜರಗಿದುವು.

ಮಾನಪತ್ರ—ಉಡುಪಿ ನಗರ ಸಭೆಯವರು ತಾ. 3ರಲ್ಲಿ ಮೈಸೂರು ಸುತ್ತೂರು ಸಂಸ್ಥಾನಾಧಿಪತಿಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರಿಗೆ ಮಾನ ಪತ್ರವನ್ನರ್ಪಿಸಿ ಸನ್ಮಾನಿಸಿದರು. ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರು ಕೌನ್ಸಿಲರರ ಪರಿಚಯ ಮಾಡಿದ ಮೇಲೆ ನಗರ ಸಭೆಯ ಪರವಾಗಿ ಮಾನಪತ್ರವನ್ನರ್ಪಿಸಿದರು. ಶ್ರೀ ಅದಮಾರು ಶ್ರೀಗಳವರು ಸಂದರ್ಭೋಚಿತ ಭಾಷಣ ಮಾಡಿದ ಮೇಲೆ ಅತಿಥಿ ಶ್ರೀ ರಾಜೇಂದ್ರ ಶ್ರೀಗಳವರು ಉಡುಪಿ ಕ್ಷೇತ್ರದ ಹಿಂದಿನ ಮಹಿಮೆ ಡಾ। ಮಾಧವ ಪೈಗಳಿಂದಾಗಿ ಆಗಿರುವ ಇಂದಿನ ಶಿಕ್ಷಣ ಕೇಂದ್ರದ ಹಿರಿಮೆ ಇವನ್ನು ಹೇಳಿ ನಾವು ಬೇರೆ ಬೇರೆ ಮತ ಸಂಪ್ರದಾಯದವರಾಗಿದ್ದರೂ ಪರಮಾತ್ಮನು ಒಬ್ಬನೇ ಆಗಿದ್ದಾನೆ ಎಂದು ಮಾರ್ಮಿಕವಾಗಿ ಹೇಳಿದರು. ಶ್ರೀ ... ಎನ್. ಕೃಷ್ಣಮೂರ್ತಿರಾಯರು ಅತಿಥಿಗಳಿಗೆ ಹಾರ, ಫಲಗಳನ್ನು ಒಪ್ಪಿಸಿದರಲ್ಲದೆ ಶ್ರೀ ಆರ್. ಆರ್. ಕುಂಜೂರರು ಧನ್ಯವಾದಗಳನ್ನರ್ಪಿಸಿದರು.

ಶಾಲಾ ವರ್ಧಂತಿ— ಉಡುಪಿ ಸರಕಾರಿ ಮೂಲ ಶಿಕ್ಷಣ ತರಬೇತಿ ಶಾಲೆಯ ವರ್ಧಂತಿಯು ತಾ. 7ರಂದು ಶ್ರೀ ಸಂಜೀವರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯೋಪಾಧ್ಯಾಯ ಶ್ರೀ ಕೇಶವಾಚಾರ್ಯ ಎಸ್. ಇವರು ವರದಿಯನ್ನೋದಿದರು. ಸ್ವಸ್ತಿವಾಚನ, ಬಹುಮಾನ ವಿತರಣೆ ಅಧ್ಯಕ್ಷರ ಭಾಷಣಗಳಾದ ಮೇಲೆ ನಾಟಕಾದಿ ಮನರಂಜನೆಯ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದುವು.

ಪಾರಿತೋಷ ವಿತರಣಾ ಸಮಾರಂಭ—ಉಡುಪಿ ಸೈಂಟ್ ಸಿಸಿಲೀಸ್ ಕಾನ್ವೆಂಟಿನ ಪಾರಿತೋಷಕ ವಿತರಣಾ ಸಮಾರಂಭವು ತಾ. 8ರಂದು ಮಂಗಳೂರಿನ ಬಿಶಪ್‌ರಾದ ರೈಟ್. ರೆ॥ ಆರ್. ಡಿಮೆಲ್ಲೊ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮದರ್ ಸುಪೀರಿಯರ್ ಎಂ. ಬೋನ, ಎ. ಸಿ. ಇವರ ಪರವಾಗಿ ಶ್ರೀಮತಿ ವತ್ಸಲಾ ನಾಯರ್ ಇವರು ಪ್ರಗತಿಪರವಾದ ಶಾಲಾ ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನಗಳನ್ನು ಹಂಚಿ ಶಾಲೆಯ ಉಚ್ಛ್ರಾಯ ಸ್ಥಿತಿಯನ್ನು ಮೆಚ್ಚಿ ಭಾಷಣವಿತ್ತರು. ನರ್ತನ ನಾಟಕ ಮೊದಲಾದ ಮನರಂಜನೆಯ ಕಾರ್ಯಕ್ರಮಗಳು ಜಯಶೀಲವಾಗಿ ಜರಗಿದುವು.

ಬುನಾದಿ ಶಿಕ್ಷಣ ಸಪ್ತಾಹ—ಉಡುಪಿಯ ಆಸುಪಾಸಿನ ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಕೂಡುವಿಕೆಯಿಂದ ಬುನಾದಿ ಶಿಕ್ಷಣ ಸಪ್ತಾಹದ ದಿನಾಚರಣೆಯು ಕಳೆದ ತಾ. 29ರಂದು ಉಡುಪಿ ಯು. ಬಿ. ಯು. ಸಿ. ಹಾ. ಎ. ಶಾಲೆಯಲ್ಲಿ ಶ್ರೀ। ಎನ್. ವಿಶ್ವನಾಥ್, ಬಿ. ಎ., ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ವಿದ್ಯಾಧಿಕಾರಿ ಶ್ರೀ। ಟಿ ಎಂ. ಕುದುಬಿಯವರು ಈ ಸಭೆಯಲ್ಲಿಉಪಸ್ಥಿತರಿದ್ದು ಬುನಾದಿ ಶಿಕ್ಷಣದ ಮಹತ್ವದ ಕುರಿತು ಮಾತುಗಳನ್ನಾಡಿದರು. ಶ್ರೀಗಳಾದ ಟಿ. ಕೆ. ಶ್ರೀನಿವಾಸರಾವ್, ಯಸ್. ಸದಾಶಿವರಾವ್, ಯಫ್. ದಾಂತಿ, ಯಾದವ ಸರಳಾಯ, ಕುಮಾರಿ ಪಿ ದೇವನ್ ಇವರು ವಿವಿಧ ವಿಷಯಗಳ ಮೇಲೆ ಉಪನ್ಯಾಸಗಳನ್ನಿತ್ತರು. ನೂಲುವಿಕೆ, ಸಂಗೀತ, ಹಾಗೂ ಭಾಷಣ ಸ್ಪರ್ಧೆಗಳು ಜರಗಿ ಜಯಶೀಲ ವಿದ್ಯಾರ್ಥಿಗಳಿಗೆ ಬಹುಮಾನ ಹಂಚಲಾಯಿತು.

ಭಾಷಣ ಸ್ಪರ್ಧೆ— ತಾ. 5—2—60ರಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಯ ಅಂಗವಾಗಿ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ಯು. ಪುಂಡಲೀಕ ಶೆಣೈಯವರು ವಹಿಸಿದ್ದರು.

ದುಃಖಸೂಚಕ ಸಭೆ— ತಾ. 28—1—60ರಲ್ಲಿ ಕುಂದಾಪುರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸಾಮಾನ್ಯ ಸಭೆಯು ಭವನದ ಗೌರವ ವಾರ್ಡನ್ ಶ್ರೀ ಜಿ. ಕುಶಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಎ. ಬಿ. ಸೆಟ್ಟರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯ ಮಾಡಲಾಯಿತು. ಶ್ರೀಗಳಾದ ಬಿ. ಕೊರಗಯ್ಯ ಸೆಟ್ಟಿ, ಕೆ. ಸಚ್ಚಿದಾನಂದ ಸೆಟ್ಟಿ ಇವರು ದಿವಂಗತರ ಗುಣಗಾನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಿವಂಗತ ಸೆಟ್ಟರು ಜಿಲ್ಲೆಯ ಹಾಗೂ ಪ್ರಾಂತ್ಯದ ಹಲವಾರು ಕ್ಷೇತ್ರಗಳಲ್ಲಿ ಮಾಡಿದ ಬಹುಮುಖ ಸೇವೆಯನ್ನು ಕೊಂಡಾಡಿದರು.

ಶ್ರೀ ಶಿವರಾಮ ಕಾರಂತರಿಗೆ ಸತ್ಕಾರ - ಯಕ್ಷಗಾನ ಬಯಲಾಟ ಗ್ರಂಥವನ್ನು ರಚಿಸಿ ಸಾಹಿತ್ಯ ಎಕೆಡೆಮಿಯಿಂದ ಬಹುಮಾನ ಪಡೆದ ಶ್ರೀ ಕೆ. ಶಿವರಾಮ ಕಾರಂತರನ್ನು ತಾ. 3ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ರಾಜ್ಯದ ಸಂಗೀತ ನಾಟಕ ಎಕೆಡೆಮಿಯ ಜಿಲ್ಲಾ ಶಾಖೆಯವರು ಮಂಗಳೂರು ಮೋಹಿನಿ ವಿಲಾಸದಲ್ಲಿ ಸತ್ಕರಿಸಿದರು.

ಅ. ಭಾ. ಸಂಬಾರ ಜೀನಸು ಮತ್ತು ಗೇರು ಕೃಷಿ ಪ್ರದರ್ಶನವೊಂದು ಮಂಗಳೂರಿನಲ್ಲಿ ಜಿಲ್ಲಾ ಬೋರ್ಡು ಆಫೀಸಿನ ಕಂಪೌಂಡಿನಲ್ಲಿ ಜನವರಿ 30ರಿಂದ ಫೆಬ್ರವರಿ 2ರ ತನಕ ಜರಗಿತು. ಮಾಜಿ ಮಂತ್ರಿ ಶ್ರೀ ವೈಕುಂಠ ಬಾಳಿಗರು ತಾ. 30ರಂದು ಪ್ರದರ್ಶನವನ್ನುದ್ಘಾಟಿಸಿದರು. ತಾ. 1ರಂದು ಶ್ರೀ ಕೆ. ಕೆ. ಸೆಟ್ಟಿ, ಎಂ. ಎಲ್. ಸಿ. ಯವರು ಉತ್ತಮ ಪ್ರದರ್ಶಕರಿಗೆ ಬಹುಮಾನವಿತರಣೆಮಾಡಿದರು

ಪಡುಬಿದ್ರೆ— ಪಡುಬಿದ್ರಿ ಪಂಚಾಯತ್ ಬೋರ್ಡಿನ ಅಧ್ಯಕ್ಷ ಶ್ರೀ ಪಿ. ಮಹಾಬಲ ಸೆಟ್ಟಿ ನೇತೃತ್ವದಲ್ಲಿ ನವೀನವಾಗಿ ರಚಿಸಲಾದ ಪಂಚಾಯತ್ ಆಫೀಸು ಕಟ್ಟಡದ ಉದ್ಘಾಟನೆಯನ್ನು ಕಳೆದ ತಾ. 25ರಂದು ಶ್ರೀ ಟಿ. ಎ. ಪೈಗಳು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಡಿಪ್ಯುಟಿ ಕಮಿಶನರರ ಎಡಿಶನಲ್ ಆಸಿಸ್ಟೆಂಟ್ ಶ್ರೀ ಕೆ. ಸೀನ ಸೆಟ್ಟಿಯವರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಮ. ಗಾಂಧಿ, ಸುಭಾಷಚಂದ್ರ ಬೋಸ್ ಮತ್ತು ಪಂಡಿತ್ ನೆಹರು ಇವರ ಭಾವಚಿತ್ರಗಳನ್ನು ಶ್ರೀ ವೈ. ಗೋಪಾಲ್ ಅವರು ಅನಾವರಣಮಾಡಿದರು.

ನಂದಳಿಕೆ—ಕವಿವರ ಮುದ್ದಣ ಜಯಂತಿಯು ಕಳೆದ ತಾ. 24, 25ರಂದು ಶ್ರೀಗಳಾದ ತಿಮ್ಮಪ್ಪಯ್ಯ, ಕು. ಶಿ. ಹರಿದಾಸ ಭಟ್ಟ ಇವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿಸಲ್ಪಟ್ಟಿತು.

ಕೆಂಜೂರು—ಉಡುಪಿ ತಾಲೂಕು ಕೆಂಜೂರು ಗ್ರಾಮದ ಬ್ರಾಂಚ್ ಪೋಸ್ಟಾಫೀಸನ್ನು ಮನೇಜರ್ ಶ್ರೀ ಕೆ. ತಿಮ್ಮಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ಕುಂದಾಪುರ ಸಬ್ ಡಿವಿಜನಿನ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಎ. ಎಮ್. ಪ್ರಭುಗಳು ಉದ್ಘಾಟಿಸಿದರು. ಬ್ರಾಂಚ್ ಪೋಸ್ಟುಮಾಸ್ತರರಾಗಿ ನೇಮಕಗೊಂಡ ಶ್ರೀ ಉಪೇಂದ್ರ ಎಚ್. ರವರು ಧನ್ಯವಾದ ಸಮರ್ಪಿಸಿದರು.

ಮಂದಾರ್ತಿ—ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಉತ್ಸವಾದಿ ಕಾರ್ಯಕ್ರಮಗಳು ತಾ. 10—2—1960ರಿಂದ 15—2 60ರ ವರೆಗೆ ಜರಗಲಿರುವುವ., ತಾ. 13. 2. 60ರಂದು ರಥೋತ್ಸವವು ನೆರವೇರುವುದು.

ಬೈಲೂರು—ಬೋರ್ಡ್ ಹೈಸ್ಕೂಲಿನ ಪ್ರಥಮ ವರ್ಧಂತ್ಯುತ್ಸವವು ತಾ. 6ರಂದು ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಎ. ಕೆ. ಎಲ್. ರಾಯರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಎನ್. ಆಚಾರ್ಯರು ವರದಿಯನ್ನೋದಿದರು. ಸ್ವಸ್ತಿವಾಚನ ಅಧ್ಯಕ್ಷರ ಭಾಷಣ ಶ್ರೀಮತಿ ಪೈರವರಿಂದ ಬಹುಮಾನ ವಿತರಣೆಯಾದ ಮೇಲೆ ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು.

ತಾ. 7ರಂದು ಕಲಾ ಮಂಟಪದ ಉದ್ಘಾಟನೆಯನ್ನು ಶ್ರೀ ಕೆ. ಬಿ. ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಪಿ. [illegible]ಯವರು ನೆರವೇರಿಸಿದರು.

ವಿವಾಹ ಸಮಾರಂಭಗಳು—ಶಂಕರನಾರಾಯಣದ ಶ್ರೀ ವಿಷ್ಣುಮೂರ್ತಿ ಅಡಿಗರ ಪುತ್ರ ಶ್ರೀ ಎಚ್. ರಾಮಕೃಷ್ಣ ಅಡಿಗರು ಕಾರ್ಕಳದ ನರಸಿಂಹ ಅಡಿಗರ ಪುತ್ರಿ ಶ್ರೀಮತಿ ಲಲಿತೆಯನ್ನು ತಾ. [illegible]ರಂದು ಆನೆಗುಡ್ಡೆ ಗಣಪತಿ ದೇವಾಲಯದಲ್ಲಿ ವಿವಾಹವಾದರು.

[illegible] ಡಿಪ್ಯುಟಿ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟಿ ಪುತ್ರ ಶ್ರೀ ವಿ. ಟಿ. [illegible] ಶ್ರೀ [illegible] ಮುದ್ದಣ್ಣ ಸೆಟ್ಟಿ ಪುತ್ರಿ ಕುಮಾರಿ [illegible]ಯನ್ನು ಕಳೆದ ತಾ. 1ರಂದು [illegible] ಹೈಸ್ಕೂಲ್ ಹಾಲಿನಲ್ಲಿ ವಿವಾಹವಾದರು.

ಶ್ರೀ [illegible] ಸೆಟ್ಟರ ಪುತ್ರ ಶ್ರೀ ಸತ್ಯರಂಜನದಾಸ್ ಇವರು [illegible]ರು ಮೂಡುಮನೆ ತಿಮ್ಮಪ್ಪ ಸೆಟ್ರ ಪುತ್ರಿ, [illegible]ಯನ್ನು ಕಳೆದ ತಾ. [illegible]ರಂದು ಉಡುಪಿ ಶ್ರೀ ರಾಮಕೃಷ್ಣ ಹೊಟೇಲಿನಲ್ಲಿ ವಿವಾಹವಾದರು.

ಬೈಲ ಪಣ್ಣಲವೂರು ಬಿ. ಅಂಕ್ಕ ಸೆಟ್ರ ಪುತ್ರ ಶ್ರೀ ಸೀತಾರಾಮ ಸೆಟ್ಟರು [illegible] ಇನ್ಸ್‌ಪೆಕ್ಟರ್ ಬಿ. ದುಗ್ಗಪ್ಪ ಸೆಟ್ರ ಪುತ್ರಿ ಕುಮಾರಿ ಶಾಂತಳನ್ನು ಕಳೆದ ತಾ. 22ರಂದು ಕಿನ್ನಿಕಂಬಳ ರಾಧಾಕೃಷ್ಣ ಭಜನಾ ಮಂದಿರದಲ್ಲಿ ವಿವಾಹವಾದರು. ನೂತನ ವಧೂವರರಿಗೆ ಶುಭಾಶಯಗಳು.

ತಾ. 19—12—59ರ ಸಾರಾಂಶ ಪ್ರಕಟಣೆ.

ತಾ. 31—12—1959ರ ಮೈಸೂರು ಗಜೆಟಿನ III—2 ಪುಟ 3357ರಲ್ಲಿ ಪ್ರಕಟಿಸಲ್ಪಟ್ಟ ತಾ. 19-12-59ರ ಈ ಆಫೀಸಿನ ವಿವರವಾದ ಪ್ರಕಟಣೆ No. Edn· 16/59-60 ಇದರ ಕಡೆ ಸಾರ್ವಜನಿಕರ ಲಕ್ಷ್ಯವನ್ನು ಸೆಳೆಯಲಾಗಿದೆ.

ಮಂಗಳೂರು ಮತ್ತು ಗುಲ್ಬರ್ಗಾ ವೆಟರ್ನರಿ ಆಸ್ಪತ್ರೆಗಳಲ್ಲಿ ವೆಟರ್ನರಿ ಕಂಪೌಂಡರರಾಗಿ ತರಬೇತಿ ಹೊಂದುವುದಕ್ಕಾಗಿ ಆಯ್ಕೆ ಮಾಡುವ ಸಲುವಾಗಿ ಎಲ್ಲಾ ಜಾತಿಗಳ ಪುರುಷ ಉಮೇದ್ವಾರರಿಂದ ಪುನಃ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಆಮಂತ್ರಿಸಲಾಗಿದೆ.

ಅರ್ಜಿಗಳನ್ನು ಈ ಆಫೀಸಿನಲ್ಲಿ ಸ್ವೀಕರಿಸುವ ಕೊನೆಯ ತಾರೀಕನ್ನು 15ನೇ ಫೆಬ್ರವರಿ 1960ರ ತನಕ ಮುಂದರಿಸಲಾಗಿದೆ.

ಸಹಿ/ ಕೆ. ಯಸ್. ಶೆಟ್ಟಿ,
ಡೈರೆಕ್ಟರ್,
ಮೈಸೂರಿನಲ್ಲಿಯ ಎನಿಮಲ್ ಹಸ್ಬೆಂಡ್ರಿ
ಮತ್ತು ವೆಟರ್ನರಿ ಸರ್ವಿಸಸ್,
ಬೆಂಗಳೂರು 1

(೬ನೇ ಪುಟದಿಂದ)

ಕೆಂಗಿಗೆ ಭೇಟ್ಟಿಯಿತ್ತ ಸಂದರ್ಭದಲ್ಲಿ ಈ ಬಗ್ಗೆ ಮಾತುಕತೆಗಳು ನಡೆದು ಅವು ಪಕ್ವಗೊಂಡಿದ್ದುವೆಂದು ತಿಳಿಯುತ್ತದೆ. ಚೀನವು ಭಾರತದ ಮೇಲೆ ಮಾತ್ರವಲ್ಲ ನೇಪಾಳ ಹಾಗೂ ಬ್ರಹ್ಮಗಳ ಉತ್ತರ ಸೀಮೆಯಲ್ಲೂ ಆಕ್ರಮಣ ನಡೆಸಿದೆಯೆಂಬ ಕ್ಷೀಣ ಸ್ವರವು ಈ ಮೊದಲು ಕೇಳಿ ಬರುತಿತ್ತು. ಆದರೆ ಈ ಒಪ್ಪಂದದ ಬಲದಿಂದಾಗಿ, ಬ್ರಹ್ಮವು ಚೀನೀಯ ಆಕ್ರಮಣದಿಂದ ಮುಕ್ತವಾಗಿದೆ ಇದೆಯೆಂದು ಊಹಿಸಿಕೊಳ್ಳಲು ಎಡೆಯಿದೆ; ಪರಂತು ನಂಬಲು ಆಸದಳವಲ್ಲವೆ? ಇಲ್ಲಿಯೂ ಇತ್ತೀಚೆಗೆ ಚುನಾವಣೆಗಳು ನಡೆದು ಶ್ರೀ ಯು. ನೂರವರಪಕ್ಷವು ಬಹುಮತಗಳಿಸಿದೆ.

ಯುದ್ಧ ನಿಷೇಧವಾಗಲಿ

ಪಾಕಿಸ್ತಾನ ಮತ್ತು ಭಾರತಗಳ ನಡುವೆಯೂ ಇವೇ ಮಾದರಿಯ ಅನಾಕ್ರಮಣ ಒಪ್ಪಂದ ನಡೆಯಬೇಕೆಂಬ ಕೆಲವು ಭಾರತೀಯ ಧುರೀಣರ ಮಾತನ್ನು ಪ್ರಧಾನಿ ನೆಹರು ತಿರಸ್ಕರಿಸಿರುವರಷ್ಟೆ? ಈಗ ಸರ್ವೋದಯ ನಾಯಕರಾಗಿರುವ ಶ್ರೀ ಜಯಪ್ರಕಾಶ ನಾರಾಯಣರು ಇದೇ ಮಾತನ್ನು ಪುನಃ ಎತ್ತಿದ್ದಾರೆ. ಆದರೆ, ಈ ಒಡಂಬಡಿಕೆಯಾಗುವುದಕ್ಕೆ ಮೊದಲು, ಎರಡೂ ರಾಷ್ಟ್ರಗಳು ಯುದ್ಧ ನಿಷೇಧಕ್ಕೆ ಮನ್ನಣೆಯೀಯಬೇಕೆಂದವರು ಶರ್ತ ಹೇರಿದ್ದಾರೆ. ಭಾರತ ಪಾಕ್‌ಗಳ ನಡುವಿರುವ ಹಲವಾರು ಪ್ರಶ್ನೆಗಳಲ್ಲಿ ಒಂದೊಂದೇ ಪರಿಹಾರಗೊಳ್ಳುತ್ತ ನಡೆಯುತ್ತಿರುವುದನ್ನು ಸ್ವಾಗತಿಸಿ ಕಾಶ್ಮೀರ ತಂಟೆ ಅಥವಾ ಇನ್ನಾವುದೇ ವಿವಾದಗಳು ಯಾವ ರೀತಿಯಲ್ಲೇ ಇರಲಿ, ಇವೆರಡು ಪರಸ್ಪರ ಯುದ್ಧಮಾಡುವುದಿಲ್ಲವೆಂಬುದನ್ನು ಮೊದಲು ಘೋಷಿಸಬೇಕು; ತದನಂತರ ಸಂಯುಕ್ತ ರಕ್ಷಣೆಗೆ ಸಂಧಿಯನ್ನು ಮಾಡಿಕೊಳ್ಳಬಹುದೆಂದು ಇವರ ಅಭಿಪ್ರಾಯ,

ಅಸ್ವಾನ ಅಣೆಕಟ್ಟು

ಸುಯೇಜ ಕಾಲುವೆಯ ತಂಟೆಗೆ ಮೂಲಕಾರಣೀಭೂತವಾಗಿದ್ದ ಅಸ್ವಾನ್ ಅಣೆಕಟ್ಟಿನ ಕೆಲಸವು ಭರದಿಂದ ಸಾಗುತ್ತಿದೆ. ಸೋವಿಯತ್ ರಶ್ಯ ಮತ್ತು ಅರಬ ಇಂಜನಿಯರುಗಳಿದರಲ್ಲಿ ದುಡಿಯುತ್ತಿದ್ದಾರೆ. ರಶ್ಯವು ಈ ಮೊದಲು 40ಕೋಟಿ ರೂಬಲ್‌ಗಳನ್ನು ಸಹಾಯವಾಗಿ ಇತ್ತಿದ್ದು ಈಗ ಪುನಃ ೧೨ಕೋಟಿ ಈಜಿಪ್ಶಿಯನ್ ಪೌಂಡುಗಳನ್ನು ಕೊಡುವುದಾಗಿ ಘೋಷಿಸಿದೆ. ಈ ಯೋಜನೆಗೆ ಮೊದಲು ೩೬೭ ಮಿಲಿಯ ಇಜಿಪ್ಶಿಯನ್ ಪವನುಗಳ ವೆಚ್ಚ ಬರುವುದೆಂದೂ, ೧೯೭೦ರ ಸುಮಾರಿಗೆ ಅಣೆಕಟ್ಟಿನ ಕೆಲಸ ಪೂರ್ಣವಾಗಬಹುದೆಂದೂ ಯೋಜಿಸಲಾಗಿದ್ದು, ಈಗ ಮೂರು ವರ್ಷ ಮೊದಲೇ ೩ ಕೋಟಿ ಇಜಿಪ್ಶಿಯನ್ ಪವನು ಕಡಿಮೆ ವೆಚ್ಚದಲ್ಲಿಯೇ ಇದು ಮುಗಿಯಬಹುದೆಂದು ತಿಳಿದು ಬಂದಿದೆ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಪುಸ್ತಕ ವಿಮರ್ಶೆ

ಸೇತುವೆಯಲ್ಲಿ ಮರಣಕಾದಿತ್ತು– ಮೂಲ: ಥಾರ್ನ್‌ಟನ್ ವೈಲ್ಡರ್. ಅನುವಾದ: ಸೇವ ನಮಿರಾಜ ಮಲ್ಲ. ಪ್ರಕಾಶಕರು: ಅಮೃತ ಪ್ರಕಾಶನ, ಮಂಗಳೂರು-೩. ಪುಟಗಳು: ಕ್ರೌನ್ ಅಷ್ಟದಳಾಕಾರದ ೧೩೦. ಬೆಲೆ: ರೂ. ೧–೨೫.

ಅಮೆರಿಕನ್ ಸಾಹಿತ್ಯ ಪ್ರಪಂಚದಲ್ಲಿ ಶ್ರೀ ಥಾರ್ನ್ಟನ್ ವೈಲ್ಡರರಿಗೆ ಗಣನೀಯ ಹಾಗೂ ಪೂಜನೀಯ ಸ್ಥಾನವನ್ನು ಪಡೆದುಕೊಟ್ಟ 'ಬ್ರಿಜ್ ಆಫ್ ಸಾನ್ ಲೂಯಿರೇ' ಕಾದಂಬರಿಯ ಕನ್ನಡಾನುವಾದವಿದು. ಪುಲಿಟ್ಜರ್ ಬಹುಮಾನವನ್ನೂ ಮೂಲಕೃತಿಯು ಪಡೆದಿದೆ. ೧೯೨೭ರಲ್ಲಿ ಮೊತ್ತಮೊದಲು ಪ್ರಕಾಶಗೊಂಡ ಈ ಮೂಲಕೃತಿಯನ್ನು ಮಿಲಿಯಗಟ್ಟಲೆಯ ಪಾಠಕರು ಓದಿ ಮೆಚ್ಚಿರುವುದರಿಂದ, ಇಂದಿಗೂ ಆಂಗ್ಲ ಸಾಹಿತ್ಯದಲ್ಲಿ ಅದ್ವಿತೀಯ ಸ್ಥಾನವನ್ನು ಗಳಿಸಿದೆ.

೧೭೧೪ರಲ್ಲಿ ಪೇರು ದೇಶದ ಸಾನ್ ಲೂಯಿರೇ ಎಂಬ ಪ್ರಸಿದ್ಧ ಸೇತುವೆಯೊಂದು ಮುರಿದು ಬಿದ್ದು, ಅದರೊಂದಿಗೆ ಐವರು ಉರುಳಿ ಪ್ರಾಣನೀಗಿದ್ದರು. ಇದನ್ನು ದೂರದಲ್ಲಿಯೇ ಕಂಡ ಸಾಧುವೊಬ್ಬನು ಇದರ ಕಾರಣವನ್ನೂ ಅದ್ಭುತಪರಿಣಾಮವನ್ನೂ ಸಂಶೋಧಿಸ ಹೊರಟನು. ಆತನ ಶೋಧನೆಯ ಫಲಿತಾಂಶವೇ ಈ ಕಾದಂಬರಿ. ಸೇತುವೆಯ ಮೇಲೆ ನಡೆಯುತ್ತಿದ್ದ ಮಾರ್ಕ್ವಿಸಾ ಡಿ ಮೊಂಟೆಮೊಯರ್ ಪೆಪಿಟಾ, ಎಸ್ತಬಾನ್ ಪಿಯೋನಾವ ಮತ್ತು ಡೋನ್ ಜೈಮ್ ಈ ಐವರ ಜೀವಮಾನದಲ್ಲಿ ಸಂಘಟಿಸಿದ್ದ ಸಂಘರ್ಷಣೆ ಮತ್ತು ಎಡತಾಕಿದ ಸನ್ನಿವೇಶಗಳ ದೃಷ್ಟಿಯಿಂದ, ಅವರಿಗೆ ಮರಣವೊದಗುವುದೇ ಶ್ರೇಯಸ್ಕರವಾಗಿತ್ತು. ಆದರೆ, ಅದೃಷ್ಟವು ಈ ಸತದೃಷ್ಟರನ್ನು ಸೇತುವೆಯನ್ನುರುಳಿಸಿಯೇ ಯಮನೂರಿಗಟ್ಟಿತು. ಮೊದಲೊಂದು ತೀರ ಆಕಸ್ಮಿಕವಾಗಿ ಕಂಡ ಈ ದುರ್ಘಟನೆ ಕೊನೆಗೆ ದೈವಪ್ರೇರಿತವೇ ಆಗಿತ್ತೆಂದು ನಾವು ಸಮಾಧಾನ ತಾಳುತ್ತೇವೆ.

ಕಾದಂಬರಿಯನ್ನು ಓದಿ ಮುಗಿಸಿದ ಬಳಿಕ, ನಮ್ಮ ಮನಸ್ಸಿನಲ್ಲಿ ಪ್ರಾಣಕ್ಕೆರವಾದ ಆ ಪಂಚ ಪಾಪಿಗಳ ಜೀವನಚಿತ್ರ ಕಣ್ಣೆದುರು ಕುಣಿಯತೊಡಗುತ್ತವೆ; ಅಜ್ಞಾತಿಯದ ಪ್ರಭಾವವನ್ನವು ನಮ್ಮ ಮೇಲೆ ಬೀರಲು ಸಮರ್ಥವಾಗಿವೆ. ಆಂಗ್ಲ ಸಾಹಿತ್ಯ ಕಮಲದ ಅನುಪಮ ಸುಮವೊಂದನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿರುವ ಶ್ರೀ ಸೇವ ನಮಿರಾಜ ಮಲ್ಲರ ಅನುವಾದವು ಸರಳಲಲಿತವಾಗಿದ್ದು ಉತ್ತಮವಾಗಿದೆ. ಈ ಗ್ರಂಥ ಪ್ರಕಟಣೆಗೆ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರು ನೆರವನ್ನಿತ್ತಿದ್ದಾರೆ. ಎಂತಲೇ ಬೆಲೆಯಲ್ಲಿ ಇಳಿತವಿದೆ. ರಕ್ಷಾಪತ್ರದ ಚಿತ್ರ ಆಕರ್ಷಕವಿದ್ದು ಕಾಗದ, ಮುದ್ರಣ ಉತ್ತಮವಿವೆ. ಕನ್ನಡದ ಜನರು ವಿದೇಶೀ ಸಾಹಿತ್ಯದತ್ತ ಆಸಕ್ತಿ ತಾಳುವಂತೆ ಈ 'ಸೇತುವೆಯಲ್ಲಿ ಮರಣಕಾದಿತ್ತು' ಎಂಬುದು ಪ್ರೇರೇಪಣೆ ನೀಡಲು ಸಮರ್ಥವಾಗಿದೆ.

ಮೃತ್ಯು ಮಂಥನ—ಬರೆದವರು: ಕೆ. ಎಲ್. ಅಣ್ಣಗೇರಿ. ಪ್ರಕಾಶಕರು: ಕನ್ನಡ ಸಾಹಿತ್ಯ ಪ್ರಕಾಶನ, ಕಿಲ್ಲೆ, ಗದಗ. ಪುಟಗಳು: ೧೦೪. ಬೆಲೆ: ರೂ. ೦–೭೫.

ಕಾದಂಬರಿಗಳ ಜಂಜಾವಾತಕ್ಕೆ ಸಿಕ್ಕು ಸಣ್ಣ ಕಥೆಗಳು ಬೆಳಕು ಕಾಣುವುದು ಅಪರೂಪವಾಗಿರುವಾಗ, ಮೃತ್ಯುಮಂಥನದಂತಹ ಕಿರು ಸಂಕಲನವಾದರೂ ಪ್ರಕಟಗೊಳ್ಳುವುದು ಸ್ವಾಗತಾರ್ಹವೆನ್ನಬೇಕಾಗಿದೆ. ಕಿರುಗತೆ ಮತ್ತು ಕಾದಂಬರಿಗಳಲ್ಲಿ ತುಂಬ ಅಂತರವಿದೆ. ಕಥೆಯಲ್ಲಿ ವಿವರಣೆ, ವರ್ಣನೆ ಘಟನಾವಳಿಗಳಿಗೆ ಆಸ್ಪದವಿರುವುದಿಲ್ಲ. ಒಂದು ಘಟನೆಯನ್ನೇ ಪ್ರಧಾನವಾಗಿಟ್ಟು ಅದಕ್ಕೆ ಪರಿಪೋಷಕವೆನಿಸುವ ಸನ್ನಿವೇಶಗಳನ್ನು ಚಿಕ್ಕದರಲ್ಲಿ ಚೊಕ್ಕವಾಗಿ ಕಲೆಹಾಕುವ ಮಹಾ ಸಾಹಸ ಕಾರ್ಯದಲ್ಲಿ ಎಲ್ಲರೂ ಜಯಶೀಲರಾಗುವುದು ಅಸಾಧ್ಯ. ಶ್ರೀ ಅಣ್ಣಗೇರಿಯವರು ತಮ್ಮ ಸಂಕಲನದಲ್ಲಿ ಪಂಚಕಥಾ ಪುಷ್ಪಗಳನ್ನು ಹೆಣೆದು ಕನ್ನಡಿಗರಿಗಿತ್ತಿದ್ದಾರೆ.

'ಮೃತ್ಯುಮಂಥನ' ಲಾರಿ ಅಘಾತಕ್ಕೀಡಾದ ನಿಷ್ಪಾಪಿ ಬಾಲಕನ ಕೊನೆಯ ದೃಶ್ಯವನ್ನು ಮರ್ಮಭೇದಕವಾಗಿ ಚಿತ್ರಿಸುತ್ತವೆ. "ಗುಟ್ಟಿನ ಗಿರಾಕಿ" ವ್ಯಾಪಾರದ ರಹಸ್ಯವನ್ನೂ ಚಾಣಾಕ್ಷತೆಯನ್ನೂ ಪ್ರತಿಬಿಂಬಿಸುವ ಕಥೆ. ವೇಷಭೂಷೆಯ ಪರಿಚಯದಿಂದಲೇ ಮೋಸ ಹೋದ ಸಾಹುಕಾರನ ವಿನೋದ ಚಿತ್ರ 'ಬಿಳಿ ಬುಷ್ ಶರ್ಟ್'ನಲ್ಲಿ ಠೇವಿಸಲಾಗಿದೆ. ಪತಿತೆಯರ ಜೀವನದ ಒಂದು ರಶ್ಮಿಯನ್ನು ಯಣ್ಣು ಮಾಯಿಸಿದಳಾ ತಾಯಿಯಲ್ಲಿ ನೋಡುತ್ತೇವೆ. 'ಸೌಂದರ್ಯದ ಸಾನ್ನಿಧ್ಯದಲ್ಲಿ' ಎಂಬುದು ಸಂಕಲನದ ದೊಡ್ಡ ಮತ್ತು ಹೃದಯಸ್ಪರ್ಶಿ ಕಥೆ. ಯುವಕನೊರ್ವನ ಸಾಮಾನ್ಯ ಜೀವನದ ಸ್ವರೂಪವನ್ನದು ತೋರಿಸುತ್ತದೆ. ಲೇಖಕನ ಕಲಾವಂತಿಕೆಯ ಪರಿಮಿತಿಯನ್ನು ನಾವೀ ಕಥೆಯಲ್ಲಿ ಕಾಣಬಹುದು.

ಸಾಹಿತ್ಯವು ನೀತಿಬೋಧಕವಾಗಿರಬೇಕೆಂಬುದು ಅಚಲಿತ ಸಿದ್ಧಾಂತವಲ್ಲ ಮಾತ್ರವಲ್ಲ ಸಮಾಜದ ಇದಮಿತ್ಥಂ ಚಿತ್ರವೂ ಅಲ್ಲ. ಇಲ್ಲಿನ ಕತೆಗಳಲ್ಲಿ ಅವೆರಡೂ ಆನುಷಂಗಿಕವಾಗಿ ಬಂದಿವೆ. ಸಮಾಜದ ಕುಂದುಕೊರತೆಗಳನ್ನು ಇವು ಎತ್ತಿ ತೋರಿಸುತ್ತವೆ; ಅಲ್ಲಲ್ಲಿ ಗಂಭೀರತೆಯೂ ಹಾಸ್ಯ ಚಟಾಕಿಗಳೂ ವಾಸ್ತವಿಕತೆಗೆ ಕಳೆಯನ್ನು ತಂದುಕೊಡುತ್ತವೆ. ಶ್ರೀ ಅಣ್ಣಗೇರಿಯವರ ಲೇಖನಿಯಲ್ಲಿ ಸಮಾಜಸುಧಾರಣೆಯ ಮಿಂಚನ್ನೂ ನಾವು ಕಾಣಬಹುದು. ಶ್ರೀಯುತರು ಉಜ್ವಲ ಭವಿಷ್ಯವನ್ನು ಪಡೆದು ಮುರುಟಿರುವ ಸಣ್ಣ ಕಥೆಗಳ ಸಾಹಿತ್ಯವಲ್ಲರಿಯನ್ನು ಪುನಃ ಚಿಗುರಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಮಂಜುನಾಥ ಕೃಪಾ ಪೋಷಿತ ನಾಟಕಸಭಾ (ರಿ) ಮಂಗಳೂರು-ಇದರ ರಜತ ಮಹೋತ್ಸವ ಸಂಚಿಕೆ(೧೯೫೯) ನಮ್ಮ ಕೈಸೇರಿದೆ. ೧೯೩೪ರಿಂದಲೂ ನಾಟಕ, ಸಂಗೀತ, ವಾಚನಾಲಯ ಹಾಗೂ ಪುಸ್ತಕ ಭಂಡಾರವೇ ಮೊದಲಾದ ಸಾರ್ವಜನಿಕ ಸೇವೆ ಹಾಗೂ ಕಲೆಗಳಲ್ಲಿ ಆಸಕ್ತಿ ವಹಿಸಿ ದುಡಿದು ಬಂದಿರುವ ಈ ನಾಟಕ ಸಭೆಯು ತನ್ನ ರಜತೋತ್ಸವದ ಸವಿನೆನಪಿಗಾಗಿ ಈ ಸಂಚಿಕೆಯನ್ನು ಹೊರಡಿಸಿದೆ. ಇದರಲ್ಲಿ ನಾಟಕ ರಂಗಕ್ಕೆ ಮಾತ್ರವಲ್ಲದೆ ಯಕ್ಷಗಾನ, ರಂಗಭೂಮಿಗಳತ್ತಲೂ ಗಮನ ಹರಿಸುವ ಲೇಖನಗಳಿವೆ. ಮಂಗಳೂರಿನ ವಿಖ್ಯಾತ ಯಕ್ಷಗಾನ ಸಂಘಗಳ ಕಲಾವಿದರ ನಾಮಾವಳಿಯೂ ಸೇರಿಕೊಂಡಿದ್ದು ಉಪಯುಕ್ತವಿವೆ. ಆದರೂ, ಈ ಬಗ್ಗೆ ಕೇವಲ ಮಂಗಳೂರಿನಲ್ಲಿಯೇ ಸೀಮೆಯನ್ನು ಅಂತ್ಯಗೊಳಿಸುವುದಕ್ಕಿಂತ ಜಿಲ್ಲೆಯ ಗಡಿಯವರೆಗಾದರೂ ಮುಂದುವರಿಸುತ್ತಿದ್ದರೆ, ಇವುಗಳ ಉಪಯುಕ್ತತೆ ಇನ್ನೂ ಹೆಚ್ಚುತ್ತಿತ್ತು. ಪಾರ್ವತಿಯು ಈಶ್ವರನನ್ನು ಸೇವಿಸುತ್ತಿರುವ ಮುಖಚಿತ್ರ ತೃಪ್ತಿಕರವಾಗಿ ರೂಪಿತವಾಗಿದೆ.

—ಗೋರಾ.

ನಮ್ಮೂರ ನಮ್ಮವರು

(೫ನೇ ಪುಟದಿಂದ)

ವಾರವು ಭದ್ರವಾಗಿ, ಅದು ತ್ವರಿತಗತಿಯ ಪ್ರಗತಿಯನ್ನು ಪಡೆಯುವಂತಾಯಿತು. ರಾಷ್ಟ್ರೀಕರಣದ ಮೊದಲು ಉಡುಪಿ ಡಿವಿಜನಿನ ವ್ಯವಹಾರ 4½ ಕೋಟಿಗಳಷ್ಟಿದ್ದರೆ, ರಾಷ್ಟ್ರೀಕರಣವಾದ 2 ವರ್ಷಗಳಲ್ಲೇ ಇಮ್ಮಡಿಯಾಗಿದೆಯೆಂದಮೇಲೆ, ಉಡುಪಿ ಡಿವಿಜನಿನ ಪ್ರಗತಿಯ ಪರಿಚಯವಾಗದಿರದು. 1959ರಲ್ಲಿ ಈ ವಿಮಾ ವ್ಯವಹಾರ 10 ಕೋಟಿಯನ್ನೂ ಮೀರಿದೆಯೆಂದರೆ, ಉಡುಪಿ ಡಿವಿಜನ್ ದೊಡ್ಡ ಡಿವಿಜನ್‌ಗಳಿಗೆ ಸಮಾನಸ್ಕಂದವಾಗಿ ನಿಂತಿದೆಯೆಂದು ಅರ್ಥ. ಉಡುಪಿ ಡಿವಿಜನಿನ ಅಸ್ತಿತ್ವವನ್ನು ಇಲ್ಲಿ ಭದ್ರಪಡಿಸಿದುದಲ್ಲದೆ, ಇಲ್ಲೇ ಮೂರು ಅಂತಸ್ತಿನ ಕಾರ್ಪೊರೇಶನಿನ ಸ್ವಂತ ಕಟ್ಟಡ ನಿರ್ಮಾಣದ ಕಾರ್ಯವು ಶ್ರೀಯುತ ಭಟ್ಟರ ಆಡಳಿತ ಕಾಲದಲ್ಲೇ ಆರಂಭವಾಯಿತು. ಈ ಕಟ್ಟಡ ಭಟ್ಟರು ಉಡುಪಿ ಡಿವಿಜನಿನಲ್ಲಿ ಮಾಡಿದ ಕಾರ್ಯಗಳ ಪ್ರತೀಕವಾಗಿ ನಿಲ್ಲಬಲ್ಲದು.

ಶ್ರೀಮತಿ ಭಟ್ಟರು ಕ್ರಾಂತಿಶೀಲರು. ಸಮಾಜದ ಮೂಢನಂಬಿಕೆಗಳಲ್ಲಿ ಅವರಿಗೆ ವಿಶ್ವಾಸವಿಲ್ಲ. ನೂತನ ಹಾಗೂ ಆಧುನಿಕ ವಿಚಾರಸರಣಿ ಅವರದು. ಸಮಾಜಸೇವೆಯಲ್ಲಿ ಶ್ರೀಯುತ ಭಟ್ಟರೂ ಅವರ ಸಹಧರ್ಮಿಣಿ ಆಶಾ ಭಟ್ಟರೂ ಜೊತೆಯಲ್ಲಿಯೇ ದುಡಿಯುತ್ತಿರುವರು. ಕೆ. ಆರ್. ಕೆ. ಭಟ್ ದಂಪತಿಗಳು ಎಲ್ಲೇ ಇರಲಿ, ಯಾವ ಸ್ಥಳದಲ್ಲೇ ಇರಲಿ, ಅಲ್ಲಿ ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ ಇಲ್ಲ. ಸಮಾಜಹಿತ ಕಾರ್ಯಗಳಲ್ಲಿ ಅವರು ಪಾಲುಗೊಳ್ಳದೆ ಇಲ್ಲ. ಶ್ರೀಯುತ ಭಟ್ಟರು ಭಗವದ್ಗೀತೆಯನ್ನು ಆಳವಾಗಿ ಅಧ್ಯಯನ ನಡೆಸಿರುವರು. ನೀತಿಯ ತಿರುಳನ್ನು ಜನಸಾಮಾನ್ಯರಿಗೂ ತಿಳಿಸಬೇಕೆಂಬ ಉದ್ದೇಶದಿಂದ ಅದರ ತತ್ವಗಳನ್ನು ಸರಳವಾಗಿ ಕನ್ನಡದಲ್ಲಿ ಲಾವಣಿರೂಪದಲ್ಲಿ ಬರೆದು ಅಚ್ಚು ಹಾಕಿಸಿರುವರು. ಇದೇ 'ಗೀತ ಲಾವಣಿ'. ಅಂತೆಯೇ ಗೀತೆಯ ಮುಖ್ಯ ಸಂದೇಶವನ್ನು ತಿಳುಹಿಸುವ 'ಗೀತೆ ತೋರಿದ ಬೆಳಕು' ಎಂಬ ಪುಸ್ತಕವನ್ನು ಬರೆದು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಹಂಚಿ ಅವರಲ್ಲಿ ಧಾರ್ಮಿಕ ಜಾಗೃತಿಯನ್ನುಂಟುಮಾಡಿರುವರು. ಸಾಹಿತ್ಯದಲ್ಲಿ ಇವರದು ತುಂಬಾ ಪಳಗಿದ ಕೈ. ಸಾಹಿತ್ಯ ಕಲೆಗಳಲ್ಲಿ ಅವರಿಗೆ ತುಂಬಾ ಆಸಕ್ತಿ.

ಶ್ರೀಯುತ ಭಟ್ಟರು ಉದಾರಿಗಳು. ಕೊಡುಗೈಶೂರರು. ತನ್ನ ಹುಟ್ಟೂರಿಗೆ ತಿರುಗಿಬಂದ ಅಲ್ಪ ಕಾಲದಲ್ಲೇ ಉಡುಪಿಯ ಹಲವಾರು ವಿದ್ಯಾಸಂಸ್ಥೆಗಳಿಗೆ ಅಪಾರ ದಾನವನ್ನಿತ್ತಿರುವರು. ಉಡುಪಿಯ ಎಂ. ಜಿ. ಎಂ. ಕಾಲೇಜಿಗೆ ಹುಡುಗಿಯರ ಹಾಸ್ಟೆಲಿನ ಕೊರತೆ ಇದ್ದಾಗ ತನ್ನ ಸ್ವಂತ ಮನೆಯನ್ನು ಅದಕ್ಕಾಗಿ ದಾನವಾಗಿ ಇತ್ತಿರುವರು. ಅಂತೆಯೇ ಇನ್ನಿತರ ವಿದ್ಯಾಸಂಸ್ಥೆಗಳಿಗೂ ಯಥೋಚಿತ ಸಹಾಯವನ್ನಿತ್ತಿರುವರು. ಶ್ರೀಯುತ ಭಟ್ಟರು ಉಡುಪಿಯಲ್ಲಿ ರೋಟರಿ ಕ್ಲಬ್ಬಿನ ಸ್ಥಾಪನೆಗೆ ಕಾರಣರಾಗಿದ್ದು ಅದರ ಉಪಾಧ್ಯಕ್ಷರಾಗಿರುವರು. ದೀರ್ಘಕಾಲ ಉಡುಪಿಯನ್ನಗಲಿ ಪರವೂರುಗಳಲ್ಲಿ ವಾಸಮಾಡಿದ್ದ ಭಟ್ಟರು ತಮ್ಮ ಹುಟ್ಟೂರಿಗೆ ಬಂದ ಅಲ್ಪ ಕಾಲದಲ್ಲೇ ರಸಿಕಗನಾರಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವುದು ಅವರ ಹಿರಿಯ ವ್ಯಕ್ತಿತ್ವದ ವೈಶಿಷ್ಟ್ಯ.

ಈ ಕಾಲ ಉಡುಪಿಯನ್ನಗಲಿ ಹೋಗಲಿರುವ ಕೆ. ಆರ್. ಕೆ. ಭಟ್ ದಂಪತಿಗಳು ಉಡುಪಿಯ ಸಾರ್ವಜನಿಕ ಕ್ಷೇತ್ರದಲ್ಲಿ ಗಣನೀಯ ಸ್ಥಾನಗಳಿಸಿರುವರು. ಉಡುಪಿಯ ಜನತೆ ಅವರನ್ನು, ಅವರ ಸೇವಾ ಕಾರ್ಯಗಳನ್ನು ಮರೆಯದು. ಹೈದರಾಬಾದಿಗೆ ತೆರಳಲಿರುವ ಶ್ರೀಯುತ ಭಟ್ ದಂಪತಿಗಳಿಗೆ ಉಡುಪಿಯ ಜನತೆ ಶುಭಾಶಯವನ್ನು ಕೋರಬೇಕಾದುದು ಅಗತ್ಯ. ಅವರ ಉದ್ಯೋಗನಿವೃತ್ತಿಯ ಬಳಿಕ ಶ್ರೀಯುತ ಭಟ್ಟರು ಪುನಃ ಉಡುಪಿಗೆ ಬಂದು, ಇಲ್ಲೇ ನೆಲೆನಿಂತು, ಪುನಃ ತಮ್ಮ ಸೇವೆಯ ಭಾಗ್ಯವನ್ನು ಉಡುಪಿಗೆ ಒದಗಿಸಬೇಕೆಂದು ಉಡುಪಿಯ ಜನತೆ ಹಾರೈಸಿದರೆ ತಪ್ಪೇನಿಲ್ಲ. ಅವರೂ ಅದಕ್ಕೆ ಹಿಂದಾಗಲಾರರು. ಶ್ರೀಯುತ ಭಟ್ ದಂಪತಿಗಳ ಸೇವಾ ಪ್ರವಾಹ ಸದಾ ಪ್ರವಹಿಸುತ್ತಿರಲೆಂದು ಹಾರೈಸುವುದು ಅಗತ್ಯ.

—ಸದಾಶಿವ ರಾವ್.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No· 466 N/50 date 2-12-1950 of the Director of public Instruction Madras·

BUY
ADVERTISED GOODS!

ಚಾರುಚರ್ಯನ

ಕೇರಳದ ಮಧ್ಯಾವಧಿ ಚುನಾವಣೆ

ಪ್ರಜಾಪ್ರಭುತ್ವದ ಹೆಸರಿನಲ್ಲಿ ಕೇರಳದ ಸಂಯುಕ್ತರಂಗವು ಜಾತೀಯತೆಯ ಭೂತವನ್ನು ಬಡಿದೆಬ್ಬಿಸಿದೆಯೆ?

ಕೇರಳದಲ್ಲಿ ಕಮ್ಯುನಿಸ್ಟರು ಪ್ರಬಲವಾದ ಪರಾಭವವನ್ನುಂಡರೆಂಬುದೀಗ ನಾಳಿಗೆ ಬಿಟ್ಟ ಕಸ್ತೂರಿಯಂತಾಗಿ, ಜಗತ್ತಿನ ಎಲ್ಲೆಡೆಗಳಲ್ಲೂ ಪ್ರತಿಧ್ವನಿಸುತ್ತಿದೆ.

ವಿಶ್ವದೆಲ್ಲ ರಾಷ್ಟ್ರಗಳೂ ಅತ್ಯಂತ ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದ ಈ ಕೇರಳದ ಚುನಾವಣೆಗಳು ಸಮಾಪ್ತವಾಗಿ, ಒಂದು ದೀರ್ಘಶ್ವಾಸವನ್ನು ಬಿಡಲು ಸ್ವಲ್ಪ ಅವಕಾಶಲಭಿಸುವಂತಾಯಿತು.

ಕಮ್ಯುನಿಸ್ಟರು ಸೋಲುವುದಕ್ಕೆ ಮುಖ್ಯಕಾರಣವೇನು ಎಂಬ ಪ್ರಶ್ನೆ ಮುಂದಕ್ಕೆ ಬಂದಿದೆ; ಅದಕ್ಕೆ ಉತ್ತರ ಬಹುಮುಖ್ಯವಾಗಿ ದೊರೆಯುಹತ್ತಿದೆ.

ಅತಿಹೆಚ್ಚು ಸ್ಥಾನಗಳಿಗೆ ಸ್ಪರ್ಧಿಸಿದ (೧೦೨) ಕಮ್ಯುನಿಸ್ಟರು ಅತಿಹೆಚ್ಚು ಮತಗಳನ್ನೂ ಗಳಿಸಿದ್ದಾರೆ;(೩೪,೯೬,೯೬೮) ಆದರೆ, ಇವರು ಪಡೆದ ಸ್ಥಾನಗಳುಮಾತ್ರ ಕೇವಲ ೪೬. ಕಮ್ಯುನಿಸ್ಟಪರ ಸ್ವತಂತ್ರರು ೨೩ ಸ್ಥಾನಗಳಲ್ಲಿ ಬರೇ ಮೂರು ಸ್ಥಾನಗಳನ್ನು ಗೆದ್ದು ಸೋತುಹೋಗಿದ್ದಾರೆ.

ಕಾಂಗ್ರೆಸ್ ೮೦ ಸ್ಥಾನಗಳಿಗೆ ಸ್ಪರ್ಧಿಸಿ ೩೮೩೪೪೮೧ ಮತ ಗಿಟ್ಟಿಸಿದ್ದಾರೆ. ಇದರಿಂದ ಕಾಂಗ್ರೆಸಿನ ಬಗ್ಗೆ ಜನತೆಯಲ್ಲಿ ವಿಶ್ವಾಸ ಬೆಳೆದಿದೆ ಎಂದು ಹೇಳಬಹುದಲ್ಲವೆ?

ಕಾಂಗ್ರೆಸ್, ಪ್ರಸೋಪಾ ಮತ್ತು ಮುಸ್ಲಿಂ ಲೀಗುಗಳ ಸಂಯುಕ್ತರಂಗವು ನೂರಕ್ಕೆ ೫೩ ಮತಗಳನ್ನು ಪಡೆದಿದ್ದರೆ, (ಇದರಲ್ಲಿ ಸೇ. ೩೪.೫ನ್ನು ಕಾಂಗ್ರೆಸ್ಸೊಂದೇ ಗಳಿಸಿದೆ) ಕಮ್ಯುನಿಸ್ಟರೂ ಅವರ ಸ್ವತಂತ್ರರೂ ಒಟ್ಟು ನೂರಕ್ಕೆ ೪೩ ಮತ ಗಿಟ್ಟಿಸಿದ್ದಾರೆ. (ಇದರಲ್ಲಿ ಕಮ್ಯುನಿಸ್ಟರು ಸಂಪಾದಿಸಿದ ಮತಗಳು ಸೇ. ೩೬).

ಇದರಿಂದ ಕಮ್ಯುನಿಜಂ ವಿರೋಧ ಭಾವನೆಯು, ಕೇರಳದಲ್ಲಿ ಬೆಳೆಯುತ್ತಿದೆ ಎಂಬುದನ್ನು ತಿಳಿಯಬಹುದೆ?

ಕೇರಳದ ಮಧ್ಯಾವಧಿ ಚುನಾವಣೆಗಳಲ್ಲಿ ಸೋತರೇನು, ಸೇ. ೪೩ ಓಟರ್ಲೀಯರ ತಮ್ಮ ಕಡೆಗಿದ್ದಾರೆಂದು ಕಮ್ಯುನಿಸ್ಟರು ತೃಪ್ತಿಪಡಬಹುದಲ್ಲವೆ? ಅಥವಾ, ಪ್ರಧಾನಿ ನೆಹರೂ ಹೇಳಿದಂದೇ ನಾವು ಮರುಚುನಾವಣೆಗೆ ಸಿದ್ಧರಾಗಿದ್ದರೆ ಇದಕ್ಕಿಂತ ಉತ್ತಮ ಫಲಿತಾಂಶ ಪಡೆಯಬಹುದಿತ್ತೆಂದು ಕೊರಗುತ್ತಾರೆಯೆ?

ಸಂಯುಕ್ತರಂಗದವರು ೯೪ ಸ್ಥಾನಗಳಿಸಿ ಸರಕಾರ ನಡೆಸುವುದು ಖಂಡಿತವೇ. ತಮ್ಮ ೪೯ ಸ್ಥಾನಗಳೊಡನೆ ಕಮ್ಯುನಿಸ್ಟರು ಪುನಃ ರಂಪಾಟವೆಬ್ಬಿಸುವುದಿಲ್ಲವೆಂದು ಹೇಗೆ ನಂಬುವ?

ಆಂಧ್ರದಲ್ಲಿಯೂ ತೆಲಂಗಾಣದಲ್ಲಿಯೂ ತಿಂದ ಕೊಡೆತವನ್ನು ಜೀರ್ಣಿಸಿಕೊಳ್ಳಲಾಗದ ಕಮ್ಯುನಿಸ್ಟರು ಈಗ ಕೇರಳದಲ್ಲಿಯೂ ಬಲವಾದ ಏಟನ್ನು ತಿಂದು ತಮ್ಮ ಸೊಂಟವನ್ನೇ ಮುರಿದುಕೊಂಡಂತಾಯಿತು. ಇನ್ನು ಬಂಗಾಳವೊಂದರಲ್ಲಿ ತಲೆಗೇನೇ 'ಜಕಂ' ಆಯಿತೆಂದರೆ, ಕಮ್ಯುನಿಜಂ ಭಾರತದಲ್ಲಿ 'ಇತಿಶ್ರೀ' ಆದಂತಾಗುವುದು.

ಕಮ್ಯುನಿಸ್ಟರ ಸೋಲು ನಿಜವಾಗಿ ಅವರ ಸೋಲಲ್ಲ. ಅವರು ಬಾಹ್ಯ ಸ್ವರೂಪದಲ್ಲಿ ಸಂಖ್ಯಾಬಲದಲ್ಲಿ ಸೋತಿರಬಹುದು; ಆದರೆ, ನೈತಿಕ ಬಲದಲ್ಲಿ ಗೆದ್ದಿದ್ದಾರಲ್ಲವೆ?

ಅಡಿಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ. ಎರಡನ್ನೂ ಕದ್ದವ ಮಾತ್ರ ದೊಡ್ಡ ಕದೀಮ! ಕಮ್ಯುನಿಸ್ಟರು ಈ ಮೂರರಲ್ಲಿ ಯಾವ ಪಂಗಡಕ್ಕೆ ಸೇರುತ್ತಾರೆ?

ಚೀನಾ-ಭಾರತಗಳ ನಡುವೆ ಸೀಮಾ ವಿವಾದವೊಂದಿರುತ್ತಿರಲಿಲ್ಲವಾದರೆ, ಕಮ್ಯುನಿಸ್ಟರು ಚುನಾವಣೆಗಳಲ್ಲಿ ಅವಶ್ಯ ಜಯಗಳಿಸುತಿದ್ದರು!

ಸತ್ತವನಿಗೆ ಆಯುಷ್ಯ ಬಲವೊಂದಿದ್ದರೆ, ಆತ ಯಮಲೋಕವನ್ನೇರುತಿದ್ದನೆ? ಎಂದಿಗೂ ಇಲ್ಲ.

ಮುಸ್ಲಿಂ ಲೀಗಿನಂತಹ ಜಾತೀಯ ಸಂಸ್ಥೆಯೊಡನೆ ಜಾತ್ಯತೀತ ಪಕ್ಷವೆನಿಸುವ ಕಾಂಗ್ರೆಸ್ ಸಂಯುಕ್ತರಂಗವನ್ನು ಸ್ಥಾಪಿಸಿ, ಅದಕ್ಕೆ ಬಲವನ್ನು ತಂಬುಕೊಟ್ಟಿದೆ. ಕಾಂಗ್ರೆಸ್ಸಿನ ಈ ನೀತಿ ಖಂಡನೀಯ ಮಾತ್ರವಲ್ಲ, ಇದರಿಂದ ಕಾಂಗ್ರೆಸ್ ತನ್ನ ಗೋರಿಯನ್ನು ತಾನೇ ನಿರ್ಮಿಸಿಕೊಂಡಿದೆ.

ರಾಜಕಾರಣದಲ್ಲಿ ನಿಷ್ಣಾತನಾದ ಚಾಣಕ್ಯನೀತಿಯೇ ಇದುತಾನೆ? ದುರುಳ ರಾವಣನನ್ನು ಕೊಲ್ಲುವುದಕ್ಕೆ ಚಪಲ ಕಪಿಗಳ ನೆರವನ್ನು ರಾಮನು ಪಡೆಯಲಿಲ್ಲವೆ? ಮೂರ್ಖ ಕಮ್ಯುನಿಜಂನ ಬೆನ್ನು ಮುರಿಯಲು ಕುಟಿಲ ರಾಜಕಾರಣವನ್ನು ಮರೆ ಹೋಗದೆ ಬೇರೆ ವಿಧಾನವಿಲ್ಲದಿರುವಾಗ, ಹೀಗೆ ಮಾಡಿದರೆ, ತಪ್ಪೇನು?

ಸಂಯುಕ್ತರಂಗವು ಗೆದ್ದರೂ ಅದು ಗೆದ್ದಂತಲ್ಲ. ಅದರ ಗೆಲುವು ಜಯಚಂದನ ಗೆಲುವಿನಂತೆ. ಘೋರಿ ಮಹಮ್ಮದ ಎಂದು ಗೋರಿ ಕಟ್ಟುವನೆಂದು ಹೇಳ ಬರುವಂತಿಲ್ಲ.

ಇದ್ದರೂ ಇರಬಹುದು: ಆದರೆ ಈ ಜಯಚಂದ ಮಗಳ ಗಂಡನನ್ನು ಕೊಲ್ಲಲು ಉಪಕ್ರಮಿಸಿಲ್ಲ; ಮಗಳ ಮೇಲೆ ಅತ್ಯಾಚಾರವೆಸಗಲು ಮುಂದೆ ಬಂದ ಪರಕೀಯರೊಡನೆ ಹೋರಾಡಿದ್ದಾನೆ. ಆದುದರಿಂದ ತನ್ನ ಮಗಳ ಮೇಲಿನ ಸ್ನೇಹ ಕಡಿಮೆಯಾದಂತಾಗಲಿಲ್ಲ; ಬದಲು ಬೆಳೆದಂತೆಯೇ ಆಯಿತು.

ಇರಲಿ, ಬರು ಭವಿಷ್ಯದ ಫಲವನುಣಲುಂಟು ತಾಳು!

ತಾಳುವಿಕೆಗಿಂತನ್ಯ ತಪವು ಬೇರಿಲ್ಲ!

—ಗೋರಾ.

ಸಂಯೋಜಕಾಲುವೆಯ ಒಂದು ದೃಶ್ಯ. ಬ್ರಿಟಿಷರು ಅಲ್ಲಿಂದ ಕಂಬಿಕೀಳಲು ಸನ್ನಾಹ ಮಾಡುತ್ತಿರುವ ಸನ್ನಿವೇಶದಲ್ಲಿ ತೆಗೆದ ಚಿತ್ರವಿದು.

ಅಮೆರಿಕೆಯ ಮೇಳ

(೪ನೇ ಪುಟದಿಂದ)

೧೫,೦೦೦ ಡಾಲರ್. ೧೯೪೪ರಲ್ಲಿ ಬ್ಯಾಂಕಿನಿಂದ೪,೦೦೦ ಡಾಲರುಗಳ ಸಾಲಪಡೆದು ೭,೫೦೦ ಡಾಲರುಗಳ ಬೆಲೆಯ ೨೧೪ ಎಕರೆಗಳ ವ್ಯವಸಾಯ ಕ್ಷೇತ್ರವನ್ನು ಕೊಂಡುಕೊಂಡನು. ಮನೆಯ ರಿಪೇರಿಗಾಗಿಯೂ, ಹೆಚ್ಚು ನೆಲವನ್ನು ಆಬಾದಿಗೆ ತರುವುದಕ್ಕಾಗಿಯೂ ಹೆಚ್ಚು ಹಣ ಬೇಕಾದುದರಿಂದ ರೈತರ ಒಳಾಡಳಿತ ವಿಭಾಗಕ್ಕೆ ಸಾಲದ ಅರ್ಜಿಯನ್ನು ಕಳಿಸಿದನು. ಇರುವ ಆಸ್ತಿ ಅಲ್ಪವಾದರೂ ವ್ಯವಸಾಯದಲ್ಲಿ ಸಮರ್ಥನಾದವನಿಗೆ ಅವನಿಗೆ ಬೇಕಾದಂತಹ ಸಾಲವನ್ನು— ಅವಶ್ಯವೆನಿಸಿದರೆ ಪಾವತಿಯ ಅವಧಿಯನ್ನು ೪೦ ವರ್ಷಗಳ ವರೆಗೆ ಹಿಗ್ಗಿಸಿ—ನೀಡಲಾಗುತ್ತದೆ.

ಒಳ್ಳೆಯ ಕಣಜವನ್ನೂ ಮತ್ತು ೧೦ ಅಂಗಣಗಳ ಹಂದಿಯ ಮನೆಯನ್ನೂ ಸ್ವಂತ ಹಣದಿಂದ ನಿರ್ಮಿಸಿ ಸರಕಾರದ ವ್ಯವಸಾಯದ ತರಬೇತಿಯನ್ನೂ ಪಡೆದಿದ್ದ ಮೆಕ್ಲೆನ್ನಿ ಸಾಲಕ್ಕೆ ಅರ್ಹನಾದವನೆಂದು ರೈತರ ಒಳಾಡಳಿತ ವಿಭಾಗದ ಅಧಿಕಾರಿಗಳು ಭಾವಿಸಿದರು. ೧೦,೮೦೦ ಡಾಲರುಗಳ ದೀರ್ಘಾವಧಿಯ ಅಭಿವೃದ್ಧಿ ಸಾಲವನ್ನು ಮತ್ತು ೧೯೫೩ರ ಕಾರ್ಯನಿರ್ವಹಣೆಗಾಗಿ ೧೭೫೦ ಡಾಲರುಗಳ ಅಲ್ಪಾವಧಿ ಸಾಲವನ್ನೂ ಮಂಜೂರು ಮಾಡಿದರು. ಅಲ್ಪಾವಧಿ ಸಾಲವನ್ನು ಮೆಕ್ಲೆನ್ನಿ ಪ್ರಚಲಿತ ವರ್ಷದ ನೆಲಗಡಲೆ ಬೆಳೆಯ ಮಾರಾಟದಿಂದ ತೀರಿಸಿದನು.

ಮೆಕ್ಲೆನ್ನಿ ಬ್ಯಾಂಕಿನ ೪,೦೦೦ ಡಾಲರುಗಳ ಸಾಲವನ್ನು ಮೊದಲು ತೀರಿಸಿ ಅನಂತರ ೩ ಎಕರೆ ಕಾಡನ್ನು ಆಬಾದಿಗೆ ತಂದು, ಕೃಷಿ ಪ್ರದೇಶದ ವಿಸ್ತಾರನ್ನು ೧೧೭ ಎಕರೆಗಳಿಗೆ ಹೆಚ್ಚಿಸಿದನು. ಸಾಲದ ಸ್ವಲ್ಪ ಭಾಗವನ್ನು ಮನೆಯ ರಿಪೇರಿಗೂ ಅಭಿವೃದ್ಧಿಗೂ ವಿನಿಯೋಗಿಸಿದನು. ಕಾರ್ಯಕಲಾಪಗಳ ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ಇಡುವುದರಿಂದ ವ್ಯವಸಾಯದ ಕ್ಷೇತ್ರದ ಯಶಸ್ಸಿಗೆ ಸಹಾಯವಾಗುತ್ತದೆ ಎನ್ನುತ್ತಾರೆ ರೈತರ ಒಳಾಡಳಿತದ ಮೇಲ್ವಿಚಾರಕ. ೧೯೫೪ರ ಜನವರಿಯ ಆರಂಭದ ಹೊತ್ತಿಗೆ ಮೆಕ್ಲೆನ್ನಿ ಕುಟುಂಬದವರು ೧೯೫೪ರ ವ್ಯವಸಾಯದ ಯೋಜನೆಯ ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದರು.

ವ್ಯವಸಾಯ ಕ್ಷೇತ್ರಗಳ ಅಭಿವೃದ್ಧಿಗೂ ಕೊಳ್ಳುವುದಕ್ಕೂ ಲಕ್ಷಾಂತರ ಮಂದಿ ರೈತರಿಗೆ ಕೋಟ್ಯಾಂತರ ಡಾಲರುಗಳ ಸಾಲವನ್ನು ಕೊಡಲಾಗಿದೆ. ಶ್ರಮದ ದುಡಿಮೆಯ ಹಾಗೂ ಹೊಸ ತಂತ್ರಗಳ ಫಲವಾಗಿ ಕುಟುಂಬಗಳು ಅಧಿಕ ಉತ್ಪನ್ನವನ್ನು ಸಾಧಿಸಿವೆ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ,ಉಡುಪಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕಲಾರಾಧನೆ

ಮೂರ್ತಿಕಲೆಯತ್ತ ತೀವ್ರಾಸಕ್ತಿ

ದಕ್ಷಿಣ ಭಾರತದ ಸುವಿಖ್ಯಾತಕಲೆ ಟೊಳ್ಳು ಮೂರ್ತಿ ಎರಕಹೊಯ್ಯುವ ವಿಧಾನವನ್ನು ಬೆಂಗಳೂರಿನ ಅಖಿಲ ಭಾರತ ಕುಶಲಕಲಾ ಮಂಡಳಿ ಕೇಂದ್ರವು ಕಲಿಸಿಕೊಡುತ್ತಿದೆ.

ದಕ್ಷಿಣ ಭಾರತದಲ್ಲಿ ದೇವಸ್ಥಾನಗಳ ನಿರ್ಮಾಣಕಾರ್ಯವು ಅತಿ ಪ್ರಾಚೀನವಾದುದು. ಹಾಗೆಯೇ ಮೂರ್ತಿಕಲೆಯೂ ಬಹಳ ಹಿಂದಿನ ಕಾಲದಿಂದಲೂ ನಡೆದು ಬಂದುದಾಗಿದೆ. ಎರಡನೆಯ ಶತಮಾನದ ತಮಿಳು ಗ್ರಂಥ 'ಶಿಲಪ್ಪದಿಕಾರಂ' ಎಂಬ ಪುಸ್ತಕದಲ್ಲಿ ಮೂರ್ತಿಕಲೆಯು ಆ ಕಾಲಕ್ಕೂ ಹಿಂದಿನದ್ದೆಂದು ಉಲ್ಲೇಖವಿದೆ. ಸ್ಥಾಪತ್ಯ ಕಲೆಯ ಉದಾಹರಣೆಯನ್ನು ಕ್ರಿ. ಶ. ಆರನೆಯ ಶತಮಾನದ ಪಲ್ಲವರ ಕಾಲದ ಅತ್ಯಪೂರ್ವವೂ ಅತಿ ಉತ್ಕೃಷ್ಟವೂ ಆದ ಕಂಚಿನ ಪ್ರತಿಮೆಗಳಲ್ಲಿ ಕಾಣಬಹುದು. ಪ್ರಾಚೀನಕಾಲದ ಸ್ಥಾಪತ್ಯ ಕಲಾ ಸಾಧನಗಳಲ್ಲಿ ಲೋಹದಲ್ಲಿ ಎರಕ ಹೊಯ್ದು ರಚಿಸಿದ ದೇವದೇವತೆಗಳು, ಸಂತರು ಮತ್ತು ರಾಜರುಗಳ ಪ್ರತಿಮೆಗಳು ಅತಿ ಸುಂದರವಾಗಿವೆ.

ಪರಂಪರಾಪ್ರಾಪ್ತವಾಗಿ ಬಂದಿರುವ ಕಲೆಗಳಲ್ಲಿ ಮೂರ್ತಿಕಲೆಯೂ ಒಂದಾಗಿದೆ. ತಂಜಾವೂರು, ಮಧುರೆ, ತಿರುನಲ್ವೇಲಿ ಮೊದಲಾದ ಕೆಲವು ನಗರಗಳಲ್ಲಿ ಇಂದಿಗೂ ಕೆಲವು ಕುಟುಂಬಗಳು ಮೂರ್ತಿ ನಿರ್ಮಾಣ ಕಾರ್ಯದಲ್ಲಿ ನಿರತವಾಗಿವೆ. ಲೋಕವಿಖ್ಯಾತವಾಗಿರುವ ತಂಜಾವೂರಿನ ನಟರಾಜ ಮತ್ತು ತಿಲ್ಲೈ ಮಗಂ ಡಮರ ಪ್ರತಿಮೆಗಳನ್ನು ನಿರ್ಮಿಸಿದ ಮಹಾ ಶಿಲ್ಪಿಯಾರೆಂಬುದಿನ್ನೂ ತಿಳಿದು ಬಂದಿಲ್ಲ.

ಭಾರತೀಯ ಶಿಲ್ಪ ಕಲೆಯಲ್ಲಿ ಸೌಂದರ್ಯೋಪಾಸನೆಯು ಅಗ್ರಗಣ್ಯ ಸ್ಥಾನವನ್ನು ಪಡೆದಿದೆ. ಒಬ್ಬ ಕಲಾವಿದನು ಗಳಿಸುವ ಯಶಸ್ಸು ಆತನು ಅನುಸರಿಸಿರುವ ಶಿಲ್ಪ ಶಾಸ್ತ್ರದನಿಯಮಗಳ ಕಟ್ಟುನಿಟ್ಟಾಗಿದೆ. ದಕ್ಷಿಣ ಭಾರತದ ಕಂಚಿನ ಪ್ರತಿಮೆಗಳು ಸೌಂದರ್ಯ ಹಾಗೂ ಕಲೆಗಳಿಗೆ ಪ್ರಖ್ಯಾತವಾಗಿವೆ. ಪಾಶ್ಚಾತ್ಯ ಶಿಲ್ಪಿಗಳಾದ ರೋಡಿನ್, ಬೋರ್ಡೆಲ್, ಎಪ್ಸ್‌ಟೀನ್ ಮುಂತಾದವರು ಈ ಶಿಲ್ಪಕಲಾ ಮೂರ್ತಿಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಸಾಮಾನ್ಯವಾಗಿ ಪ್ರಪಂಚದ ವಸ್ತು ಸಂಗ್ರಹಾಲಯಗಳೆಲ್ಲವೂ ಈ ಕಂಚಿನ ಪ್ರತಿಮೆಗಳನ್ನು ಕೊಳ್ಳಲು ಮುಂದಾಗಿವೆ. ಬೋಸ್ಟನ್ ನ್ಯೂಯೋರ್ಕ್, ಲಂಡನ್, ಪ್ಯಾರಿಸ್ ಬರ್ಲಿನ್ ಮೊದಲಾದ ಪಾಶ್ಚಾತ್ಯ ನಗರಗಳಲ್ಲಿ ಅತ್ಯುತ್ಕೃಷ್ಟ ಪ್ರತಿಮೆಗಳನ್ನು ನಾವು ಕಾಣಬಹುದು.

ಚೋಳ, ಚೇರ ಮತ್ತು ಪಾಂಡ್ಯರ ಸಮಯದ ಸುಪ್ರಸಿದ್ಧ ಶೈವದೇವಾಲಯಗಳ ಗರ್ಭಗುಡಿಗಳಲ್ಲಿ ಅತ್ಯಂತ ಅಪೂರ್ವವೂ ವಿನೂತನವೂ ಆದ ಪ್ರತಿಮೆಗಳಿವೆ. ತಂಜಾವೂರಿನ ಬೃಹದೀಶ್ವರ ದೇವಾಲಯದ ನಟರಾಜ, ಕುಂಭಕೋಣದ ನಾಗೇಶ್ವರ ದೇವಾಲಯದ ನಟರಾಜ, ಕೋಡು ಮುಡಿಯ ಕುಂಚಿತಪಾದ ನಟರಾಜ, ತಿಲ್ಲೈ ವಿಲಗಂನಂದಾಮುಸೀತಾ, ವೇದಾರಣ್ಯದ ಕಲ್ಯಾಣ ಸುಂದರ ಮೂರ್ತಿ, ಇತ್ತೀಚೆಗೆ ಸಂಶೋಧಿತವಾದ ಗಂಗೈಕೊಂಡ ಚೋಳಪುರಂ, ತಾಂಡೊನ್ ತೊಟ್ಟಂ ಮತ್ತು ಸಿರಕಾಳಿಯಲ್ಲಿನ ಕಂಚಿನ ಪ್ರತಿಮೆಗಳು, ಚೋಳರ ಅರಸಿ ಮತ್ತು ಅನ್ನಪೂರ್ಣ ಪ್ರತಿಮೆಗಳು ಅತ್ಯಂತ ಸುಂದರವಾಗಿದ್ದು ಮನಶ್ಚೇತೋಹಾರಿಗಳಾಗಿವೆ.

ಇತ್ತೀಚೆಗೆ ಮೂರ್ತಿಕಲೆಯ ಕಡೆಗೆ ಆಸಕ್ತಿಯು ಹರಿಯುತ್ತಿದೆ. ಅಖಿಲ ಭಾರತ ಕುಶಲಕಲಾವಸ್ತುಗಳ ಮಂಡಳಿಯು ಇತ್ತ ಗಮನವಿತ್ತಿದೆ; ಅದರ ಮಹತ್ತ್ವವನ್ನು ತಿಳಿದುಕೊಂಡಂತಿದೆ. ಬೆಂಗಳೂರಿನಲ್ಲಿನ ತನ್ನ ಮಾದರಿಕೇಂದ್ರವೊಂದರಲ್ಲಿ ಕಂಚಿನ ಎರಕ ಹೊಯ್ಯುವ ವಿಭಾಗವೊಂದನ್ನು ಕುಶಲಕಲಾವಸ್ತು ಮಂಡಳಿಯು ಪ್ರಾರಂಭಿಸಿತು. ಈ ಕೇಂದ್ರದಲ್ಲಿ ಮೈಸೂರು ಮತ್ತು ತಂಜಾವೂರುಗಳ ಹಲವಾರು ಸಿದ್ಧಹಸ್ತ ಕುಶಲಕರ್ಮಿಗಳನ್ನು ನೇಮಿಸಿಕೊಂಡು ಅವರ ಜ್ಞಾನವನ್ನು ಪಸರಿಸುವಂತೆ ನೋಡಿಕೊಳ್ಳಲಾಗಿದೆ. ಹಳೆಯ ಪ್ರತಿಮೆಗಳ ಪ್ರತಿರೂಪವನ್ನು ತಯಾರಿಸುವುದಲ್ಲದೆ ಎರಕ ಹೊಯ್ಯುವ ಸಲುವಾಗಿ ಹೊಸ ವಿಧಾನಗಳ ಸಂಶೋಧನೆಯೂ ಈ ಕೇಂದ್ರದಲ್ಲಿ ನಡೆಯುತ್ತಿದೆ. ನೇಪಾಳದಿಂದ ಆಗಮಿಸಿರುವ ಓರ್ವ ಕಂಚಿನ ಎರಕ ಹೊಯ್ಯುವ ಕುಶಲಕಲಾಗಾರರೊಬ್ಬರೂ ಈ ಕೇಂದ್ರದಲ್ಲಿ ದುಡಿಯುತ್ತಿರುವರು. ದಕ್ಷಿಣ ಭಾರತದಲ್ಲಿನ ಟೊಳ್ಳು ಮಾದರಿಯಲ್ಲಿ ಎರಕಹೊಯ್ಯುವುದನ್ನು ಇವರು ಪರಿಚಯಮಾಡಿಕೊಡುತಿದ್ದಾರೆ. ಆನೆಯ ದಂತದಲ್ಲಿ ಹಾಗೂ ಕಲ್ಲಿನಲ್ಲಿ ಕೆತ್ತುವ ಕೆಲಸಗಳಲ್ಲಿ ಬೆಂಗಳೂರು ಕೇಂದ್ರವು ಈಗಾಗಲೇ ಮಾರ್ಗದರ್ಶನವಿತ್ತಿದೆ. ಹಾಗೆಯೇ ಇನ್ನಲ್ಪಾವಧಿಯಲ್ಲೇ ಇದು ಟೊಳ್ಳು ಮಾದರಿಯ ಎರಕಹೊಯ್ಯುವ ವಿಧಾನವನ್ನೂ ಪ್ರಚಾರಪರಿಚಯ ಮಾಡಲು ಮುಂದಾಗುವುದು.

ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯು ಕುಶಲಕಲೆಗಳಲ್ಲಿ ತರಬೇತಿಯನ್ನೀಯುತ್ತಿರುವುದನ್ನು ನಾವು ಮರೆಯುವಂತಿಲ್ಲ. ಇದರೊಂದಿಗೆ ನಾಗಮಂಗಲದ ಉತ್ಪಾದನಾಕೇಂದ್ರವೂ ಕುಶಲ ಕರ್ಮಿಗಳ ತಯಾರಿಯಲ್ಲಿ ಮುಂದುವರಿಯುತ್ತಿದೆ. ಇದೇ ರೀತಿಯಲ್ಲಿ ಬೆಂಗಳೂರಿನ ಅಖಿಲಭಾರತ ಕುಶಲ ಕಲಾ ಮಂಡಳಿ ಕೇಂದ್ರವೂ ತನ್ನ ಸಾಹಸ ಹಾಗೂ ಕಾರ್ಯಾಚರಣೆಯಿಂದ ಕಲಾವಿದರ ಆಸಕ್ತಿಯನ್ನು ಕೆರಳಿಸಿ, ಕೀರ್ತಿಯ ಕಳೆದುಕೊಂಡ ತನ್ನ ಅಮರ ಸ್ಥಾನವನ್ನು ಪುನಃ ಪಡೆದು, ಮನೆ ಮನೆಯಲ್ಲಿ ಕಲಾರಾಧನೆ ನಡೆಯುವಂತಾಗಲು ಶ್ರಮಿಸುತ್ತಿದೆ ಎಂಬ ಸತ್ಯ ಸಂಗತಿಯನ್ನು ನಾವು ಮರೆಯುವಂತಿಲ್ಲ.

ವಿಚಾರವೀಚಿ

(೩ನೇ ಪುಟದಿಂದ)

ರಿಗೆ ಈ ಮಂದಿರಗಳು ಪುನೀತವಾದ ತೀರ್ಥಸ್ಥಾನವಾಗಿದ್ದುವು. ಹಾರೀತಿಯನ್ನು ಕುಲದೈವವಾಗಿ ಗೌರವಿಸಿದವರಲ್ಲಿ ದಕ್ಷಿಣ ಭಾರತದ ಕದಂಬ ಮತ್ತು ಪೂರ್ವ ಚಾಲುಕ್ಯ ಮನೆತನದವರು ಪ್ರಧಾನರು. ಈ ವಂಶಜರು "ಹಾರೀತ ಪುತ್ರ" ಎಂಬ ಬಿರುದನ್ನು ಅತೀವ ಅಭಿಮಾನದಿಂದ ಧರಿಸುತಿದ್ದರು.

ಇಂದು ದಕ್ಷಿಣ ಭಾರತದ ಶಿವ ಮಂದಿರಗಳಲ್ಲಿ ಸೋಮಾಸ್ಕಂದರ ಭವ್ಯಮೂರ್ತಿಗಳನ್ನು ನಾವು ನೋಡುತ್ತೇವೆ. ಇವನ್ನು ಕುಬೇರ-ಹಾರೀತಿಯರ ಮೂರ್ತಿಗೆ ಹೋಲಿಸಬಹುದು. ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ, ಪರಿವಾರ ದೇವತೆಯರ ಸಾಲಿನಲ್ಲಿ ಕುಬೇರ ದಂಪತಿಗೂ ಒಂದು ಸ್ಥಾನವನ್ನು ಪಡೆದಿದ್ದಾರೆ. ಕುಬೇರ ಪೂಜೆಯು ಕೇವಲ ಭಾರತದ ಮಾತ್ರವಲ್ಲ ಭಾರತೀಯ ಸಂಸ್ಕೃತಿ ಹರಡಿದ್ದ ಜಾವಾ ಮೊದಲಾದ ಸಮುದ್ರ ಗಡ್ಡೆಗಳಲ್ಲಿಯೂ ಪ್ರಾಚೀನ ಕಾಲದಲ್ಲಿ ನಡೆಯುತ್ತಿದೆ ಇಂದಿಗೂ ಅಲ್ಲಿ ಕುಬೇರನ ಮೂರ್ತಿಗಳು ಉಪಲಬ್ಧವಿವೆ.

ಪ್ರಾಚೀನ ಕಾಲದಲ್ಲಿ ಭಕ್ತ ಜನರು ಕುಬೇರನ ವಾಹನ ಮುಂಗುಸಿಯನ್ನು ಮನೆ ಮನೆಯಲ್ಲಿ ಸಾಕುತಿದ್ದರು. 'ಪಂಚತಂತ್ರ'ದ ಬ್ರಾಹ್ಮಣಿ ಮತ್ತು ನಕುಲ ಕಥೆ ಇದಕ್ಕೆ ಪ್ರಮಾಣವಾಗಿದೆ ಸುಪ್ರಸಿದ್ಧ ತಮಿಳು ಮಹಾಕಾವ್ಯ 'ಶಿಲಪ್ಪದಿಕಾರಂ'ನಲ್ಲಿಯೂ ಈ ಪದ್ಧತಿಯ ಉಲ್ಲೇಖವಿದೆ. ಮುಂಗುಸಿಯನ್ನು ಕೊಲ್ಲುವುದು ಮಹಾಪಾಪ ಕಾರ್ಯವೆಂದು ತಿಳಿಯಲಾಗುತಿತ್ತೆಂದು ಗೊತ್ತಾಗುತ್ತದೆ. ತಮಿಳಿನಲ್ಲಿ ಮುಂಗುಸಿಗೆ "ಕೀರಿ" ಎಂದೂ ಕುಬೇರನಿಗೆ "ಕೀರನ್" (ಕೀರಿ ಇರುವವನು) ಎಂದೂ ಹೇಳುತ್ತಾರೆ. ಮೊದಲು 'ಕೀರನ್' ಪದವು ತಮಿಳುನಾಡಿನಲ್ಲಿ ಬಹು ಪ್ರಸಿದ್ಧವಾಗಿತ್ತು. ಲಕ್ಷಾಧಿಪತಿ, ಕೋಟ್ಯಧಿಪತಿಗಳು ಮಾತ್ರವಲ್ಲ ವಿದ್ಯಾವೇತ್ತರೂ ತಮ್ಮ ಹೆಸರಿನ ಅಂತ್ಯದಲ್ಲಿ "ಕೀರನ್" ಎಂಬುದನ್ನು ಸೇರಿಸಿಕೊಳ್ಳುವುದರಿಂದ ಅಭಿಮಾನಪಡುತಿದ್ದರು ವಿಶೇಷತಃ ಪ್ರಕಾಂಡ ಪಂಡಿತರ ಮತ್ತು ಮಹಾ ಕವಿಗಳ ಹೆಸರಿಗೆ ಈ "ಕೀರನ್" ಜೋಡಿಸುವುದು ಒಂದು ಸಂಪ್ರದಾಯವೇ ಆಗಿ ಪರಿಣಮಿಸಿತ್ತು. ಕುಬೇರನ ಹೆಸರಿನೊಡನೆ 'ಕೀ... ಪುತ್ರ' ಎಂದಿರುವುದೂ ಇದಕ್ಕೆ ಕಾರಣವಾಗಿರಬಹುದು. ಆತನಿಗೆ ಈ ಹೆಸರು ಏಕೆ ಬಂತೆಂದು ಸರಿಯಾಗಿ ತಿಳಿಯುವುದಿಲ್ಲ. ಪ್ರಾಯಃ ಒಂದು ಕಾಲದಲ್ಲಿ ಆತನು ವಿದ್ಯಾಧಿದೇವತೆಯೂ ಆಗಿದ್ದಿರಬಹುದು. "ಕೀರನ್" ಪದವು ಅನೇಕ ಸ್ಥಾನಗಳ ಹೆಸರಿನೊಡನೆಯೂ ಕೂಡಿರುವುದು ನಮಗೆ ಇಂದೂ ಕಂಡುಬರುತ್ತದೆ ಉದಾಹರಣೆಗೆ, ಕೀರನೂರು, ಕೀರನಕುಡಿ, ಕೀರನ್‌ಪಾಕ್ಕಂ ಮತ್ತು ಕೀರನಕುನ್ನಮ್.

(ವಿವಿಧ ಮೂಲಗಳಿಂದ)

—ಗೋಪಿಚಂದ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಥಾವಿಹಾರ

(೩ನೇ ಪುಟದಿಂದ)

ನ್ನ ತಂದೆಯವರ ಟೇಬಲ್‌ನಿಂದ ಕದ್ದು ತಾ. ಆದರ ಮೇಲೆ ಒಂದಿಷ್ಟು ಪರಿಮಳದ ಅತ್ತರನ್ನು ನಾನು ಚೆಲ್ಲಿಬಿಡುವೆನು. ಆಮೇಲೆ ಸಂಪಾದಕನನ್ನು ಬಾಯಿ ತುಂಬ ಹೊಗಳಿ ಆವನನ್ನು ಭೇಟಿಯಾಗುವ ವಿಷಯವಾಗಿ ನಿನ್ನ ಅಭಿಲಾಷೆಯನ್ನು ವ್ಯಕ್ತಪಡಿಸಬೇಕು. ಗ್ರಾಹಕನಾಗಬೇಕಾದರೆ ಏನೆಲ್ಲ ಮಾಡಬೇಕೆಂಬುದನ್ನು ಕೇಳಲು ಮರೆಯಬಾರದು. ಹೀಗೆ ಬರೆದರೆ, ಅವನು ಎಂಥ ಕುಂಬಳಕಾಯಿಯೇ ಆಗಲಿ, ನಿನ್ನ ಕತೆಯನ್ನು ಖಂಡಿತವಾಗಿಯೂ ಪ್ರಕಾಶಿಸುವನು.

ಕೇಕಯಿ ಮುಗುಳ್ನಗೆಯನ್ನು ಬೀರುತ್ತ ತನ್ನ ಕತೆಯನ್ನು ಪ್ರೇಮಾರ್ದ್ರ ದೃಷ್ಟಿಯಿಂದ ನೋಡುತ್ತ ಹೇಳಲುಪಕ್ರಮಿಸಿದಳು— "ನೀನು ತುಂಬಾ ಚಾಲಾಕಿ ಇದ್ದಿ. ನಾನು ನಾಳೆ ಬರೆದು ಕೊಡುತ್ತೇನೆ. ನೀನು ಅದನ್ನು ಯಾವುದಾದರೊಂದು ಪತ್ರಿಕೆಗೆ ಅಗತ್ಯ ಕಳುಹಿಸಿಬಿಡು. ಯಾವ ಪತ್ರಿಕೆ ಆಗಬಹುದು? ನನ್ನ ಅಭಿಪ್ರಾಯದಲ್ಲಿ 'ಸರಸ್ವತಿ' ಆಗಬಹುದೆಂದು ತೋರುತ್ತದೆ."

"'ಸರಸ್ವತಿ"! ಇದೆಂಥದು ನೀನು ಹೇಳುವುದು? ಅದನ್ನೀಗ ಯಾರು ಓದುತ್ತಾರೆ? ಕೇಳುವವರು ಯಾರು? ಒಂದು ಕಾಲಕ್ಕೆ ಅದಕ್ಕೆ ತುಂಬಾ ಗೌರವವಿದ್ದಿತ್ತು ನಿಜ. ಆದರೆ ಇಂದು ಅದೂ ಹೇಳ ಹೆಸರಿಲ್ಲದಂತಾಗಿದೆ."

"ಹಾಗಾದರೆ 'ವಿಶಾಲ ಭಾರತ'ವಾದೀತಲ್ಲ."

"'ವಿಶಾಲ ಭಾರತ' ಕಲ್ಕತ್ತಾದಿಂದ ಹೊರಡುವುದು. ಪರಿಚಿತ ಮಿತ್ರರ ಲೇಖನವನ್ನು ಮಾತ್ರ ಸಂಪಾದಕ ಸ್ವೀಕರಿಸುತ್ತಾನೆ. ಅಂಥವರ ಲೇಖನಗಳು ಇಲ್ಲವಾದಲ್ಲಿ ಅಥವಾ ಕಮ್ಮಿಯಾದಲ್ಲಿ ಸರ್ಪ, ಹೇಳು, ಎಮ್ಮೆ, ದನ, ಗೆದ್ದಲು ಇತ್ಯಾದಿ ಲೇಖನ-ಪ್ರಬಂಧಗಳೂ ಕೆಲವೊಮ್ಮೆ ಅದರಲ್ಲಿ ಬರುವುದುಂಟು. ಆದುದರಿಂದ ವಿಶಾಲ ಭಾರತ' ನಮಗೆ ಹೇಳಿಸಿದ್ದಲ್ಲವೆಂದು ನನ್ನ ಅಭಿಮತ."

"ಹಾಗಾದರೆ "ಸುಧಾ" ಹೇಗೆ?

"ಅದರ ಸ್ಟೇಂಡಾರ್ಡ್ ಬಿದ್ದಿದೆಯಲ್ಲ?

"ಹಾಗಾದರೆ 'ವೀಣಾ" ಪತ್ರಿಕೆಗೆ ಕಳುಹಿಸುವುದು. ಅದರಲ್ಲಿ ಲೇಖಕನ ಭಾವಚಿತ್ರವನ್ನು ಕೂಡ ಮುದ್ರಿಸುತ್ತಾರೆ."

"ವೀಣಾ" ಪತ್ರಿಕೆಗೆ ಅಪ್ಪಿತಪ್ಪಿ ಕೂಡ ಕಳುಹಿಸಬಾರದು."

"ಅದೇನು?"

"ಸಂಪಾದಕ ಮಂಡಳವಿದೆಯಲ್ಲ, ಅದು ತುಂಬಾ ಅನ್ಯಾಯ ಮಾಡುತ್ತಲಿದೆ. ಅದು ಒಂದು ತರದ ಪತ್ರಿಕೆ. ನಿನಗೆ ಅವರಿಂದ ನಿನ್ನ ಲೇಖನ ಬಿಡು ಉತ್ತರ ಕೂಡ ಸಿಗಲಾರದು.'

"ಅವರಲ್ಲಿ ಮಾನವತೆ ಎಂಬುದೇ ಇಲ್ಲವೇನು? ಕತೆ ಪ್ರಕಾಶಿಸದಿದ್ದರೆ ಚಿಂತೆ ಇಲ್ಲ. ಒಂದು ಉತ್ತರವನ್ನಾದರೂ ಸರಿಯಾಗಿ ಸಮಯಕ್ಕೆ ಬರೆಯಬೇಕಲ್ಲ?'

"ಮಾನವತೆ?"

"ಹೌದು, ಮಾನವತೆಯೇ! ಅಲ್ಲ, ಅವರು ಹಾಗೆ ಮಾಡುವುದೆಂದರೆ ಅದಕ್ಕೇನು ಅರ್ಥ?"

"ನಮಗೇನು ಗೊತ್ತು? ಆದರೆ 'ಮಾನವತೆ' ಎಂಬ ಪತ್ರಿಕೆಯೇ ಇದೆ."

'ಅದಕ್ಕೆ ನನ್ನ ಕತೆ ಕಳುಹಿಸಿದರೇನು? ಅದರ ಸಂಪಾದಕರು ಒಳ್ಳೆಯವರು? ತುಂಬಾ ತಿಳಿದವರೂ ಆಗಿರಬಹುದು.'

"ಇಲ್ಲ. ಹಾಗೇನೂ ಇಲ್ಲ. ಅವರು ದೊಡ್ಡವರು. ತಿಳಿದವರು ನಿಜ. ಆದರೆ ಒಳ್ಳೆಯವರು ಮಾತ್ರ ಅಲ್ಲ. ಒಳ್ಳೇತನ ಎಂಬುದು ಅವರಲ್ಲಿ ಸೊನ್ನೆಯೇ. ಹೆಸರೇನೋ ದೊಡ್ಡದು. ಆದರೆ ವ್ಯಕ್ತಿತ್ವ ಅಷ್ಟು ಬೆಳೆದಿಲ್ಲ. 'ಮಾನವತೆ' ಎಂಬುದು ಬೋರ್ಡಿನಲ್ಲಿ ಮಾತ್ರ. ವ್ಯವಹಾರದಲ್ಲಿ ಎಲ್ಲ 'ಬ್ಲೇಕ್'. ಬ್ಲೇಕ್ ಅಂದರೆ ಕತ್ತಲೆ, ಅನ್ಯಾಯ ಎಂದರ್ಥ. ಮಾನವತೆಯ ಪ್ರಕಾಶವಿದ್ದರಲ್ಲವೇ ಆ ಕತ್ತಲೆಯಲ್ಲಿ ಅವರು ನಿನ್ನ ಕತೆ ಓದಲಾರರೆಂದ ಮೇಲೆ ನೀನೇನು ಹೇಳುವೆ?"

"ಹಾಗಾದರೆ ನಾನು ಕತೆಯನ್ನು ಯಾವ ಪತ್ರಿಕೆಗೆ ಕಳುಹಿಸಲಿ? ಸ್ವಲ್ಪ ಆಲೋಚಿಸಿ, 'ಆರಾಧನಾ' ಪತ್ರಿಕೆಯಲ್ಲಿ ಮುದ್ರಿತವಾಗಲಿಕ್ಕಿಲ್ಲವೇ?"

"ಅದರಲ್ಲಿ ಪ್ರಕಾಶಿಸಲ್ಪಡಬಹುದೆಂಬುದು ನಿಜ. ಆದರೆ ನೀನು ನಿನ್ನ ಹೆಸರಿನ ಮುಂದೆ 'ಗ್ವಾಲಿಯರ್' ಎಂದು ಬರೆಯಲು ಮರೆತರೆ ನಿನ್ನ ಕತೆ ಮುದ್ರಿಸಲ್ಪಡಲಿಕ್ಕಿಲ್ಲ. ಅದರ ಸಂಪಾದಕರಿಗೆ ಗ್ವಾಲಿಯರ ಅಂದರೆ ತುಂಬಾ ಪ್ರೇಮ. ನಾನು ಹಲವಾರು ಬಾರಿ ಕವಿತೆಗಳನ್ನು ಬರೆದು ಕಳುಹಿಸಿದೆ. ಅವುಗಳಲ್ಲೊಂದೂ ಪ್ರಕಾಶಿತವಾಗಲಿಲ್ಲ. ಕೊನೆಗೆ ನಾನು ಬೇರೆ ಹೆಸರಿಟ್ಟುಕೊಂಡು ಕಳುಹಿಸಿದೆ. "ಸರೋಜಕುಮಾರೀ 'ತಿತಲಿ" ಎಂಬ ಹೆಸರೂ ಕೂಡ ನನ್ನ ಕವಿತೆಗಳನ್ನು ಮುದ್ರಿಸಲಾರದಾಯಿತು. ಆದರೆ ಒಂದು ಉಪಕಾರ ಮಾತ್ರ ಮರೆಯಲಿಕ್ಕಿಲ್ಲ. ಅವರು ನನ್ನ ಕವಿತೆಗಳನ್ನು ಹಿಂದೆ ಕಳುಹಿಸಿ ಕೊಡುತ್ತಿದ್ದರು. ಒಮ್ಮೆ ಸುಮ್ಮನೇ ತಮಾಷೆಗೆಂದು 'ಮನಮೋಹನ ಗ್ವಾಲಿಯರೀ' ಎಂಬ ಹೆಸರನ್ನಿಟ್ಟುಕೊಂಡು ಕವಿತೆ ಕಳುಹಿಸಿದಾಗ ಅದು ಪ್ರಕಾಶನದ ಮುಖವನ್ನು ಕಂಡಿತು. ಕವಿತೆಯ ಹೆಸರು 'ನೀನು' ಎಂದಾಗಿತ್ತು. ಆದರೆ ಮುದ್ರಾರಾಕ್ಷಸ ಅದನ್ನು 'ಬಾನು' ಎಂದು ಮಾಡಿಸಿತ್ತು. ಆದರಿಂದ "ಸಿಡಿಮಿಡಿಗೊಂಡ ನಾನು ಈಗ ಅವರಿಗೆ ಕವಿತೆಗಳನ್ನು ಕಳುಹಿಸುವುದನ್ನೇ ಬಿಟ್ಟಿದ್ದೇನೆ."

"ಆ ಮೇಲೆ......."

"ಆದರೆ ಈಗ ಪುನಃ ಅದಕ್ಕೆ ಬರೆದು ಕಳುಹಿಸಬೇಕೆಂದೆನಿಸುತ್ತಿದೆ."

"ಸರಿ, ಒಳ್ಳೆಯದಾಯಿತು. ನಾನು ನನ್ನ ಹೆಸರಿನ ಮುಂದೆ ಶರ್ಮಾ, ವರ್ಮಾ ಇತ್ಯಾದಿಗಳ ಬದಲಿಗೆ 'ಗ್ವಾಲಿಯರೀ' ಎಂದೇ ಬರೆಯುತ್ತೇನೆ. ನಾಳೆ ನೀನೊಂದು ಕವರನ್ನು ಪೇಟೆಯಿಂದ ಬರುವಾಗ ಅಗತ್ಯವಾಗಿ ತರಬೇಕು."

"ಖಂಡಿತವಾಗಿಯೂ ತರುವೆನು. ಆದರೆ ಒಂದು ವಿಚಾರ......"

"ಅದೆಂಥದು?'

"ನಿನ್ನ ಹೆಸರಿನ ಮುಂದೆ ವಿಶಾರದ ಎಂದು ಬರೆದರೆ ಆಗಲಿಕ್ಕಿಲ್ಲ. ದೊಡ್ಡ ದೊಡ್ಡ ಡಿಗ್ರಿ M. A., L. C. P. ಪ್ರಭಾಕರ, ವಿದುಷೀ, ಸರ್ವದರ್ಶನಾಚಾರ್ಯ ಇತ್ಯಾದಿ ಉಪಾಧಿಗಳನ್ನು ಸುಮ್ಮ ಸುಮ್ಮನೇ ಬರೆದುಬಿಡು. ಸಂಪಾದಕರಿಗೆ ನೀನು ಏನೆಲ್ಲ ಪ್ಯಾಸುಮಾಡಿದ್ದಿ ಎಂದು ತಿಳಿಯುವುದಾದರೂ ಹೇಗೆ? ನೀನು ಡಿಗ್ರಿ ಸೇರಿಸಿಬಿಟ್ಟರೆ ಸಂಪಾದಕ ಖಂಡಿತವಾಗಿ ನಿನ್ನ ಕತೆ ಪ್ರಕಾಶನಗೊಳಿಸುವನು. ಅದೂ ಕೂಡ ಕವರ್ ಪೇಜಿನ ಮೇಲೆ"

ಗಂಟೆ 12 ಆದುದರಿಂದ ನನಗೆ ನಿದ್ರೆ ಬಂತು. ಆದರೆ ಅಕ್ಕ ಕೇಕಯಿಗೆ ಮಾತ್ರ ಹಾಗಾಗಲಿಲ್ಲ. ಅವಳಿಗೆ ಆಗ ಸಾಯಂಕಾಲವಾದಂತಿತ್ತು.

ಮರುದಿನ ಬೆಳಗ್ಗೆ ಎದ್ದು ನೋಡುವುದೇನನ್ನು? ತನ್ನ ಕತೆಯನ್ನು ಫೇರ್ ಮಾಡಿ ಅಕ್ಕ ಓದುತ್ತಿದ್ದಾಳೆ. ಕೈಯಲ್ಲಿ ನಾಟಕೀಯ ಭಂಗಿ, ಮುಖದಲ್ಲಿ ಹಾವಭಾವ. ನಾನು ಅವಳ ಸಮೀಪಕ್ಕೆ ಹೋಗುವಷ್ಟರಲ್ಲಿ ಅವಳ ಅಭಿನಯವೆಲ್ಲ ನಿಂತಿತು. ಕತೆ ನನಗೆ ಕೊಟ್ಟಳು.

ನಾನು ಕತೆ ತೆಗೆದುಕೊಂಡು ಪೋಸ್ಟ್ ಆಫೀಸಿಗೆ ಹೋದೆ. ಒಂದು ಕವರು ಕೊಂಡುಕೊಂಡೆ. ಕತೆಯೊಂದಿಗೆ ನನ್ನ ಕವಿತೆ "ಕಣ್ಣೀರ ಕೂಗು" ಯನ್ನು ಸೇರಿಸಿ ಅಂಚೆ ಪೆಟ್ಟಿಗೆಯಲ್ಲಿ ಹಾಕಿದೆ. "ಕಣ್ಣೀರ ಕೂಗು" ಕವಿತೆ 'ಪರ್ಮಾರ'ವರ ಭಾವಚೌರ್ಯ ಮತ್ತು 'ಕಾಮಾಯನಿ"ಯ ಕೃತಿಚೌರ್ಯದ ಫಲಿತಾಂಶವಾಗಿ ರೂಪುಗೊಂಡಿತ್ತು ಎಂದು ಹೇಳಿದರೆ ಗುಟ್ಟು ರಟ್ಟಾಗದಷ್ಟೇ!

ದಿನಗಳುರುಳಿದುವು. ತಿಂಗಳೂ ಮುಗಿಯುತ್ತ ಬಂದುದಾಯಿತು. ಆದರೆ ಅಕ್ಕ ಕೇಕಯಿಗೆ ಸಮಾಧಾನವಿಲ್ಲ. ರಾತ್ರೆ, ಹಗಲು ಕತೆಯದ್ದೇ ಚಿಂತೆ. ಅದೇ ಕಲ್ಪನೆ. ಕೊನೆಗೆ ತಿಂಗಳೂ ಕಳೆಯಿತು. 1, 2, 3, 4, ನೇ ತಾರೀಕೂ ದಾಟಿತು. ಕೇಕಯಿ ಮಾತ್ರ ಬೆಳಗ್ಗೆ ಮತ್ತು ಸಾಯಂಕಾಲ ಅಂಚೆಯವನ ದಾರಿ ಕಾಯುತ್ತ ಕೂರುವಳು. ಅವನು ಹೋದಮೇಲೆ ನಿರಾಶಳಾಗಿ ಏನೇನೋ ಶಪಿಸುತ್ತ ಹಿಂದಿರುಗುವಳು.

ಕೊನೆಗೊಂದು ದಿನ ಅಂಚೆಯವ ಕಿಟಕಿಯಿಂದ ಒಂದು ಭಾರೀದೊಡ್ಡ ಕವರನ್ನು ಒಳಗೆ ಬಿಸಾಡಿದ. ನಾವಿಬ್ಬರೂ ಹಾರಿ ಅದನ್ನು ಎತ್ತಿಕೊಂಡು ನೋಡತೊಡಗಿದೆವು. ಅದೇ ಪತ್ರಿಕೆ. ಅದನ್ನು ನೋಡಿದಾಗ ನಮಗಾದ ಸಂತೋಷಕ್ಕೆ ಮೇರೆ ಇರಲಿಲ್ಲ. ನಾವಿಬ್ಬರೂ ಸಂತೋಷಾತಿರೇಕದಿಂದ ಪತ್ರಿಕೆಯನ್ನು ಎಳೆಯತೊಡಗಿದಾಗ ಅದು ಹರಿದುಹೋಯಿತು.

ಹೇಗಾದರೂ ಮಾಡಿ ಹರಿದ ತುಂಡುಗಳನ್ನು ಜೋಡಿಸಿ ನೋಡಿದಾಗ ಅನುಕ್ರಮಣಿಕೆಯಲ್ಲಿ ಅಕ್ಕ ಕೇಕಯಿಯ ಕತೆಯ ಹೆಸರು ಬರೆದಿತ್ತು. ಕೇಕಯಿ ಅದನ್ನು ನೋಡಿ ಸಂತೋಷದಿಂದ ಹುಚ್ಚಳಂತೆ ಕುಣಿದಾಡಿದಳು. ನಾನು ನನ್ನ ಕವಿತೆ ಬಾರದ್ದರಿಂದ ತುಂಬಾ ಬೇಸರಪಟ್ಟುಕೊಂಡೆ. ಪೆಚ್ಚು ಮೋರೆ ಹಾಕಿ ಪತ್ರಿಕೆಯನ್ನು ನೋಡುತ್ತ ಕೂತೆ. ಕೇಕಯಿ ಬೇಗಬೇಗನೆ ಪತ್ರಿಕೆಯ ಪುಟತಿರುವಿದಳು. ಆದರಲ್ಲಿ ಎಲ್ಲಿಯೂ ಅವಳ ಕತೆ ಕಾಣಸಿಗಲಿಲ್ಲ. ಪುಟಸಂಖ್ಯೆಯನ್ನು ನೋಡಿಯಾಯಿತು. ಅನುಕ್ರಮಣಿಕೆಯಲ್ಲಿ ಹೆಸರಿದ್ದರೂ ಪತ್ರಿಕೆಯಲ್ಲಿ ಕತೆ ಇಲ್ಲ. ಅದನ್ನು ನೋಡಿ ನನಗೆ ನಗೆಯನ್ನು ತಡೆಯಲಾಗಲಿಲ್ಲ.

ಕೇಕಯಿ ಸಮಾಧಾನ ಹೇಳುತ್ತ 'ಚಿಂತಿಲ್ಲ, ಕತೆ ಬರದಿದ್ದರೇನಾಯಿತು? ಹೆಸರು ಬಂತಲ್ಲ. ಮುಂದಿನ ಸಂಚಿಕೆಯಲ್ಲಿ ಕತೆಯೂ ಬರುವುದು', ತನ್ನ ಕೆಲಸದ ನೆಪಮಾಡಿ ಹೋದಳು.

ಆದರೆ ಮುಂದೆ 'ಆರಾಧನಾ' ಪತ್ರಿಕೆಯ ಸಂಚಿಕೆ ಹೊರಡಲಿಲ್ಲವೆಂಬುದು ಬೇಸರದ ಸಂಗತಿ.

ಮೂಲ: ಡಾ| ಮಹೇಂದ್ರ ಭಟನಾಗರ
ಅನು: ಕೆ. ರಾಮಚಂದ್ರ ಭಟ್ಟ, ಬಿ.ಎ.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 439/1959.

ದಿ. ಪಾಂಗಾಳ ನಾಯಕ್ ಬೇಂಕ ಲಿಮಿಟೆಡ್ ಉಡುಪಿ ಇವರ ಟೌನ ಬ್ರಾಂಚ್ ಏಜಂಟ ಸಿ. ಪುರುಷೋತ್ತಮ ನಾಯಕ್—ವಾದಿ.

ಮತ್ತು

K. ಸದಾನಂದ ಕೂಡಾ — ಪ್ರತಿವಾದಿರು.

ಇವರೊಳಗೆ

1ನೇ ಪ್ರತಿವಾದಿ:- ಕೆ. ಸದಾನಂದ ಬಸವ ಪೂಜಾರಿ ಆಳಿಯ, ಉಡುಪಿ ಕಸ್ಬಾ ಶಿವಳ್ಳಿ ಗ್ರಾಮದ ತೆಂಕಪೇಟೆಯಲ್ಲಿರುವ Electrician ಇವರಿಗೆ—ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಿ ಬೇಂಕಿಗೆ ಪ್ರತಿವಾದಿರು ತಾ. 29-7-1958ರಲ್ಲು ರೂ. 2000/- ಬರೆಕೊಟ್ಟ ದಿಮಾಂಡು ನೋಟಿನ ಬಾಕಿ ಅಸಲು, ಬಡ್ಡಿ ರೂಪಾಯಿ 1334=50 ನ.ಪೈ.ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 18-2-60 ಕ್ಕೆ 1ನೇ ಪ್ರತಿವಾದಿಯು ಅಪ್ಪೈರು ನೋಟೀಸಿನ ಬಗ್ಗೆ ಸದ್ರಿ ಕೋರ್ಟಿನಲ್ಲಿ ಇತ್ಯರ್ಥವಾಗಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

By order of the court.

H. Ramanath Pai,
Advocate for Plaintiff.

ಉಡುಪಿ. Dated 2—2—60.

NAVAYUGA
REGD. NO. M. 3619

UDIPI, THURSDA'
11—2—1960

LICENSE No. 31
Licensed to Post without Prepayment

ಅಭಿಪ್ರಾಯ

ಕೈಮಗ್ಗ ಬಟ್ಟೆಗಳಲ್ಲಿ ಸುಧಾರಣೆ ತೀವ್ರವಾಗಲಿ

ಅದಿಲ್ಲದೆ, ಅದು ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದು
ಅಸಾಧ್ಯವಾಗಿ; ಸೋಲುಣ್ಣುತ್ತಿದೆ.

ದೇಶದ ಆದ್ಯಂತ ಕೈಮಗ್ಗ ವಾರವನ್ನು ಜನವರಿ ೩೧ರಿಂದ ಫೆಬ್ರುವರಿ ೬ರ ವರೆಗಿನ ಒಂದು ಸಪ್ತಾಹ ಆಚರಿಸುವುದು, ತನ್ಮೂಲಕ ಕೈಮಗ್ಗಗಳ ಬಟ್ಟೆಯನ್ನು ಅಧಿಕಾಧಿಕವಾಗಿ ಜನಪ್ರಿಯಗೊಳಿಸುವುದು ಈಗ ೬ ವರ್ಷಗಳಿಂದ ನಡೆದು ಬಂದ ಒಂದು ಸಂಪ್ರದಾಯವಾಗಿದೆ. ಮಾನವನು ತನ್ನ ಮರ್ಯಾದೆಯನ್ನುಳಿಸಲು ಬಟ್ಟೆಬರೆಗಳ ಆಸರೆಯನ್ನು ಪಡೆಯುತ್ತಾನೆ. ಅದು ಆಹಾರ ವಸತಿಗಳಂತೆಯೇ ಆತನ ಅತ್ಯಂತ ಆವಶ್ಯಕತೆಗಳಲ್ಲಿ ಒಂದಾಗಿದೆ. ಇಂದು ನಮ್ಮ ದೇಶದ ಕೆಲವೊಂದು ಮಹತ್ವಪೂರ್ಣ ಪ್ರಶ್ನೆಗಳಲ್ಲಿ ಬಟ್ಟೆಯದು ಗಣನೀಯ ಸ್ಥಾನ ಪಡೆದಿದೆ.

ದೇಶದಲ್ಲಿ ಗಿರಣಿಗಳ ಮೂಲಕ ಮಾತ್ರವಲ್ಲದೆ ಮಗ್ಗಗಳಲ್ಲಿಯೂ ಬಟ್ಟೆಯು ತಯಾರಾಗುತ್ತದೆ. ಇಂದು ಭಾರತದಲ್ಲಿ ಸುಮಾರು ಒಂದೂವರೆ ಕೋಟಿ ಜನರು ಕೈಮಗ್ಗಗಳಲ್ಲಿ ನೂತು ಜೀವನ ಸಾಗಿಸುತ್ತಾರೆ. ಇಷ್ಟೊಂದು ದೊಡ್ಡ ಮೊತ್ತದ ಜನರು ದುಡಿಯುತ್ತಿರುವರಾದರೂ ದೇಶೀಯರಿಗೆ ಸಾಕಷ್ಟು ಬಟ್ಟೆಯನ್ನು ಉತ್ಪಾದಿಸಲು ಇವರಿಂದ ಆಗುತ್ತಿಲ್ಲ. ಏಕೆಂದರೆ, ಈ ಜನರಲ್ಲಿ ಪೂರ್ಣ ಉದ್ಯೋಗವೆಂದು ತಿಳಿಯದೆ ಕೇವಲ ವಿರಾಮ ಸಮಯದ ಸದುಪಯೋಗವನ್ನು ಮಾಡಿಕೊಳ್ಳುವವರೂ ಹಲವರಿದ್ದಾರೆ. ಸಾಜೂಕಾದ ಕಂಗೊಳಿಸುವ ಗಿರಣಿ ಬಟ್ಟೆಗಳೆದುರು ಸ್ಪರ್ಧಿಸುವ ಶಕ್ತಿಯು ಭಾರತದ ಕೈಮಗ್ಗಗಳಿಗೆ ಇನ್ನೂ ಬಂದಿಲ್ಲ. ಇದರಿಂದಾಗಿ ಈ ವ್ಯವಸಾಯವು ಕುಂಟುತ್ತ ಸಾಗುತ್ತಿದೆ.

ಕೈಮಗ್ಗಗಳಿಗೆ ಪ್ರಾಶಸ್ತ್ಯವಿದ್ದ ಕಾಲವೊಂದಿತ್ತು. ಆದರೆ, ಅವುಗಳಲ್ಲಿ ಆವಶ್ಯಕ ಸುಧಾರಣೆಯಾಗದುದರಿಂದ, ಅವುಗಳು ಬೇಡಿಕೆಗನುವಾಗಿ ಪೂರೈಕೆ ಮಾಡದಿದ್ದುದರಿಂದ; ಹೊಸ ಸಾಧನಗಳ ಸಂಶೋಧನೆಗೆ ತೊಡಗಿ, ಕ್ರಮೇಣ ಗಿರಣಿಗಳನ್ನು ಸ್ಥಾಪಿಸಲಾಯಿತೆಂದು ನಾವು ತಿಳಿಯುತ್ತೇವೆ; ಕಾಲಕ್ರಮದಲ್ಲಿ ಮನೆಗೆ ಬಂದ ಸೊಸೆ ಅತ್ತೆಯನ್ನೇ ಹೊರಗಟ್ಟಿದಳೆಂಬಂತೆ ಕೈಮಗ್ಗದುದ್ದಿಮೆಯು ನಾಮಾವಶೇಷವಾಗುವ ದುಃಸ್ಥಿತಿಯೊದಗಿತು.

ಭಾರತದಂತಹ ಜನನಿಬಿಡ ರಾಷ್ಟ್ರವೊಂದರಲ್ಲಿ ನಿರುದ್ಯೋಗಸಮಸ್ಯೆ ಅತೀವ ಉಲ್ಬಣಾವಸ್ಥೆಗೇರಿತ್ತು. ಕೈಮಗ್ಗಗಳಲ್ಲಿ ದುಡಿಯುವುದರಿಂದ, ಇಂತಹ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಂತಾಗುವುದು. ಆದುದರಿಂದ, ಕೈಮಗ್ಗಗಳಿಗೆ ಪ್ರೋತ್ಸಾಹವು ಅವಶ್ಯ ಬೇಕಾಗಿದೆ.

ಆದರೆ, ಕೈಮಗ್ಗದ ಬಟ್ಟೆಯಲ್ಲಿ ಕೆಲವೊಂದು ಕೊರತೆಗಳಿವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ವಾಯುವೇಗದಲ್ಲಿ ಪರಿವರ್ತನಗೊಳ್ಳುವ ಇಂದಿನ ಜನತೆಯ ಅನುಮನಕೊಪ್ಪು ಮಾದರಿಯ ಬಟ್ಟೆಗಳನ್ನು ತಯಾರಿಸುವುದರಲ್ಲಿ ಈ ಕೈಮಗ್ಗಗಳು ಯಶಸ್ವಿಯಾಗಿಲ್ಲವೆಂಬುದನ್ನು ಅವಶ್ಯ ಗಮನಿಸಬೇಕು. ಇದಕ್ಕಾಗಿ ರಾಷ್ಟ್ರದ ಮೂಲೆ ಮೂಲೆಗಳಲ್ಲಿ ರಂಗೋಲೆ ಬಿಡಿಸುವ, ಬಣ್ಣಕೊಡುವ, ಚಮತ್ಕಾರಕವಾಗಿ ನೇಯುವ ಸಂಬಂಧದಲ್ಲಿ ಸುಧಾರಣೆಗಳೂ ಸಂಶೋಧನೆಗಳೂ ನಡೆಯುತ್ತಿವೆ. ದೇಶವಿದೇಶಗಳಲ್ಲಿಯೂ ಭಾರತೀಯ ಕೈಮಗ್ಗದ ಬಟ್ಟೆಯ ಕಡೆಗೆ ಸದ್ಭಾವನೆಯನ್ನುಂಟುಮಾಡುವಲ್ಲಿ ಭಾರತ ಸರಕಾರವು ತೀವ್ರಾಸಕ್ತಿಯನ್ನು ವಹಿಸಿದೆ. ಅಮೆರಿಕೆಯೇ ಮೊದಲಾದ ಪಾಶ್ಚಾತ್ಯ ರಾಷ್ಟ್ರದಲ್ಲಿಯೂ ಈ ಬಟ್ಟೆಗಳ ಮಳಿಗೆಗಳನ್ನು ತೆರೆಯಲಾಗಿದೆ. ಆದರೆ, ಇದುವರೆಗೆ ನಾವು ಶ್ರಮಪಟ್ಟರೂ ಭಾರತೀಯ ಮಗ್ಗಗಳು ಸ್ವಪಾದವನ್ನಾಧರಿಸಿ ನಿಲ್ಲುವುದು ಇನ್ನೂ ಅಸಾಧ್ಯವೇ ಆಗಿದೆ.

ಭಾರತಕ್ಕೇನೇ ಸಾಕಷ್ಟು ಬಟ್ಟೆಗಳನ್ನು ಒದಗಿಸಲು ಗಿರಣಿಗಳ ಸಹಾಯವನ್ನು ಯಾಚಿಸ, ಹೊರಟಿರುವ ನಾವು ಕೈಮಗ್ಗಗಳ ಬಟ್ಟೆಯತ್ತ ನಮ್ಮವರ ಗಮನವನ್ನು ತೀವ್ರವಾಗಿ ಹರಿಸುವುದರಲ್ಲಿ ನಾವು ಅಸಮರ್ಥರಾಗಿದ್ದೇವೆ ಇದಕ್ಕೆ ಕೆಲವೊಂದು ಕಾರಣಗಳಿವೆ. ಮೊದಲನೆಯದಾಗಿ, ಕೈಮಗ್ಗಗಳ ಬಟ್ಟೆಗಳು ನುಣುಪಾಗಿಯೂ ತೆಳುವಾಗಿಯೂ ಆಕರ್ಷಕವಾಗಿ ಇನ್ನೂ ತಯಾರಾಗುತ್ತಿಲ್ಲ. ಗಿರಣಿಗಳ ಬಟ್ಟೆ ಚಕಚಕನೆ ಹೊಳೆದು ಎಲ್ಲರ ಕಣ್ಣನ್ನೂ ಸೆಳೆಯುತ್ತದೆ. ಎರಡನೆಯದಾಗಿ, ಕೆಲವೊಂದು ಗಿರಣಿಗಳ ಬಟ್ಟೆಗಳು ಬೆಲೆಯಲ್ಲಿ ಕೈಮಗ್ಗ ಬಟ್ಟೆಗಳಿಗಿಂತ ಅಗ್ಗದಲ್ಲಿ ದೊರೆಯುತ್ತವೆ. ಮೂರನೆಯದಾಗಿ, ಕೈಮಗ್ಗಗಳ ಬಟ್ಟೆಗಳು ಕೆಲವೊಮ್ಮೆ ಬಣ್ಣ ಬಿಡುವುದೂ ಉಂಟು; ನಾಲ್ಕನೆಯದಾಗಿ, ಅವುಗಳಲ್ಲಿ ನಾನಾ ನಮೂನೆಗಳಿಲ್ಲದೆ ಮನಮೆಚ್ಚುವಂತೆ ಬಟ್ಟೆ ನಿರ್ಮಿತವಾಗುತ್ತಿಲ್ಲ.

ಇವಿಷ್ಟು ಪ್ರಧಾನವಾದ ದೋಷಗಳಾದರೆ, ಗೌಣದೋಷಗಳು ಬೇಕಾದಷ್ಟಿವೆ. ಔರಂಗಜೇಬನ ಕಾಲದ ವರೆಗೆ ಉನ್ನತೋನ್ನತ ಸ್ಥಾನವನ್ನಲಂಕರಿಸಿದ್ದ ಭಾರತೀಯ ಕೈಮಗ್ಗಗಳ ಮೇಲೆ ಮುಂದೆ ಕತ್ತಲು ಹರಡಿತು. ಆ ಕತ್ತಲನ್ನು ಹರಿದೋಡಿಸುವ ಪ್ರಕಾಶವನ್ನು ಬೀರುವುದು ದೇಶದ ಹಿತದೃಷ್ಟಿಯಿಂದ, ದೇಶವಾಸಿಗಳ ಉನ್ನತಿಯ ದೃಷ್ಟಿಯಿಂದ ಅವಶ್ಯವೆಂದು ಮತ್ತೆ ಹೇಳಬೇಕಾಗಿಲ್ಲ. ಕೈಮಗ್ಗಗಳು ತಮ್ಮಲ್ಲಿರುವ ಕೊರತೆಗಳನ್ನು ತುಂಬಿಸಿಕೊಂಡು ಸರ್ವಜನಾದರಣೀಯವಾಗುವುದು ಅಪೇಕ್ಷಣೀಯವಾಗಿದೆ. ಈ ಬಗ್ಗೆ ಈ ಸಪ್ತಾಹಾಚರಣೆಯು ಪ್ರಭಾವ ಬೀರಬಹುದೆ?

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ರಿಣಾಮವಾಗಿಯೇ ಅನ್ಯರ ಆಳಿಕೆಗೊಳಪಟ್ಟಿವೆಂಬುದನ್ನು ಹಿಂದಿನಿಂದಲೂ ಇತಿಹಾಸ ಸಾರಿ ಹೇಳುತ್ತಿರುವಾಗ, ನಾವು ಭೇದಭಾವನೆಗಳನ್ನು ದೂರೀಕರಿಸದೆ ಹೋದಲ್ಲಿ ಅದು ಎಂದಿಗೂ ಉದ್ಧಾರವಾಗದು.

ಯಾವ ದೇಶದ ಜನತೆಯು ಆಚಾರದ ಕಟ್ಟಿನೊಳಗೇನೇ ಬಿಗಿಯಾಗಿ ಬಂಧಿತರಾಗಿದ್ದಾರೊ, ಯಾವ ಜನತೆಯು ಪರಿವರ್ತನ ಶೀಲವಾಗಿರುವ ಈ ಪ್ರಪಂಚದ ಸನ್ನಿವೇಶಗಳಿಗನುಸಾರವಾಗಿ ತಮ್ಮ ಆಚಾರ-ವಿಚಾರಗಳನ್ನು ಬದಲಾಯಿಸದೆ ಇರುತ್ತಾರೆಯೋ ಅಂತಹ ಜನತೆ ಎಂದಿಗೂ ಉನ್ನತಿಪಡೆಯಲಾರದು. ನಮ್ಮ ಹಿಂದೂಧರ್ಮವು ಪವಿತ್ರವೆಂಬುದು ನಿಜ, ಆದರೆ, ಅದರಲ್ಲಿ ಕಾಲಗತಿಗೆ ಹೊಂದಿಕೊಂಡು ಆಚಾರ ಪರಿವರ್ತನೆಯಾಗದಿರುವುದರಿಂದ ಅದು ಇಂದು ಕೊಳೆತು ನಾರತೊಡಗಿದೆ. ನೀರು ಹರಿಯುತ್ತಿರುವಷ್ಟು ಸಮಯ ಪರಿಶುದ್ಧವಾಗಿರುತ್ತದೆ; ಆದರೆ, ಹರಿಯುವ ನೀರಿಗೆ ತಡೆಬಿದ್ದಿತೆಂದರೆ, ಆಗ, ಆ ನೀರು ಹುಳುಹುಪ್ಪಟೆಗಳ ಆವಾಸಸ್ಥಾನವಾಗುತ್ತದೆ.

ನಮ್ಮ ದೇಶ ಸ್ವತಂತ್ರವಾದರೂ ದೇಶದ ಪರಿಸ್ಥಿತಿ ಪರಿವರ್ತನೆಗೊಂಡರೂ ನಮ್ಮಲ್ಲಿ ವಿಚಾರ ಕ್ರಾಂತಿಯಾಗಿಲ್ಲ; ಆಚಾರ ಕ್ರಾಂತಿಯೆದ್ದಿಲ್ಲ. ಇಂದು ದೇಶದ ಎಲ್ಲೆಡೆಗಳಲ್ಲೂ ಸ್ವಾವಲಂಬನವನ್ನು ಶಕ್ತಿಗತಮಾಡುವ ಘನೋದ್ದೇಶದಿಂದ ಮೂಲಶಿಕ್ಷಣವನ್ನು ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಆದರೆ, ಇದರ ಆದರ್ಶಗಳು ಅದೆಷ್ಟೋ ಉದಾತ್ತವಾಗಿರಲಿ, ಜನತೆಯಿದನ್ನು ಮೆಚ್ಚುವುದಿಲ್ಲ. ಶಾಲಾ ಪರಿಸರ ಶುಚಿತ್ವ, ತೋಟದ ನೀರಾವರಿ, ಸಾರ್ವಜನಿಕ ನೈರ್ಮಲ್ಯಾದಿ ದೈನಂದಿನ ಕಾರ್ಯಕಲಾಪಗಳ ಬಗ್ಗೆ ಮಕ್ಕಳ ಹೆತ್ತವರಿಂದ ದೂರುಗಳು ಕೇಳಿಬರುವುದು ಸ್ವಾಭಾವಿಕವಾಗಿದೆ. ಆದರೆ, ಅಂತಹ ದೂರುಗಳನ್ನು ನಾವು ಕೆಳಗಿವಿಗೇಳಬಹುದು; ಇದ್ದರೂ ಜನತೆಯ ವಿಚಾರದಲ್ಲಿ ಕ್ರಾಂತಿಯಾಗದ ಹೊರತು ಹೊಸ ವಿಚಾರಕ್ಕೆ ಊರುಗೋಲು ದೊರೆಯಲಾರದೆಂಬುದನ್ನು ಅವಶ್ಯ ಗಮನಿಸಬೇಕು.

ಈ ದೃಷ್ಟಿಯಿಂದ, ಸದ್ಯ ಶ್ರೀ ದೇಶಮುಖ ಸಮಿತಿಯ ಶಿಫಾರಸುಗಳನ್ನು ನಾವು ಅವಲೋಕಿಸುವುದಾದರೆ, ಭಾವಿಜನಾಂಗದಲ್ಲಿ ಆತ್ಮನಿರ್ಭರತೆ, ಪರಿಶ್ರಮ ಪ್ರೇಮ, ಸ್ವಾವಲಂಬನ, ರಾಷ್ಟ್ರಭಕ್ತಿ, ಮಾನವತಾಸಕ್ತಿ ಮೊದಲಾದ ಅತ್ಯುನ್ನತ ಗುಣಗಳು ಸಮಾವೇಶವಾಗಬೇಕಾದರೆ, ಅವರಿಗೆ ಸುಯೋಗ್ಯ ಮಾರ್ಗದರ್ಶನದಲ್ಲಿ ರಾಷ್ಟ್ರ ಸೇವೆಯನ್ನು ಮಾಡುವುದು ಮಾತ್ರವಲ್ಲ, ತಮ್ಮ ಜೀವನವನ್ನೂ ಉದಾತ್ತವಾಗಿರಿಸಿಕೊಳ್ಳುವಂತೆ ಅವಕಾಶ ಕಲ್ಪಿಸುವುದು ಆವಶ್ಯವಾಗಿದೆ ಇಂತಹ ಸೇವೆಗೈಯುವುದರಿಂದ, ಇಂದು ವಿಶ್ವವಿದ್ಯಾಲಯಗಳಲ್ಲಿ ತೋರಿ ಬರುತ್ತಿರುವ ಗಲಭೆ, ಬೇಶಿಸ್ತು, ಕೇಟಿ ಮೊದಲಾದುವುಗಳಿಗೂ ಒಂದು ತಡೆಯುಂಟಾಗಿ ಅವರಲ್ಲಿ ಉತ್ತಮ ನಾಗರಿಕರೆಲ್ಲರ ಬೇಕಾದ ಸುಗುಣಗಳು ಒಟ್ಟು ಸೇರುವುದು ಸಾಧ್ಯವಾಗಿದೆ.

ರಾಷ್ಟ್ರಸೇವೆಯ ಕಾರ್ಯಕ್ರಮಗಳನ್ನು ರೂಪಿಸಲು ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಸೇವಾಯೋಗವು ರಾಷ್ಟ್ರದ ಆವಶ್ಯಕತೆಗಳತ್ತ ತೀವ್ರ ಗಮನ ಹರಿಸಿ ತನ್ನ ಕಾರ್ಯನಿರೂಪಣೆಯಿಂದ ರಾಷ್ಟ್ರದ ಪ್ರಜೆಗಳನ್ನು ಸರಿದಾರಿ ತಪ್ಪದಂತೆ ಮುಂದೊಯ್ಯಲೆಂದು ಬಯಸುವುದು ಪ್ರತ್ಯೇಕ ರಾಷ್ಟ್ರಪ್ರೇಮಿಯ ಕರ್ತವ್ಯವೇ ಆಗಿರುತ್ತದೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳು ಸಿಗುತ್ತವೆ.

ವಿಚಾರಿಸಿರಿ—

ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ.

ಹೆಚ್ಚಿನ ಜನರಿಗೆ ಹೆಚ್ಚಿನ ಸೇವೆಗೆ
—ಹೊಸ ಶಾಖೆಗಳು—

			ಪ್ರಾರಂಭ
1.	ಮಾತುಂಗೆ	ಬೊಂಬಾಯಿ	1—2—1960
2.	ರಾಜಮಂಡ್ರಿ ...	ಆಂಧ್ರ	1—2—1960
3.	ಇರೋಡು	ಮದ್ರಾಸು	1—2—1960
4.	ಸೇಲಂ	ಮದ್ರಾಸು	1—2—1960
5.	ಕೊಟ್ಟಾಯಮ್ ...	ಕೇರಳ	1—2—1960
6.	ತ್ರಿವೆಂಡ್ರಮ್...	ಕೇರಳ	8—2—1960

- ಸಿಂಡಿಕೇಟ್ ಬೇಂಕ್ -

THE CANARA INDUSTRIAL &
BANKING SYNDICATE LTD.,
H. O: UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ 6–25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬಿಡಿ 13 ನ ಪೈಸೆ

ವರುಷ ೩೯, ವಾರ ೨೪ | 18-2-1960 | Vol. 39 No 24

<u>ಪ್ರಚಲಿತ ಪ್ರಸಂಗ</u>

ಕನ್ನಡ ಸಾಹಿತ್ಯ ಸರ್ವಾಂಗಪೂರ್ಣವಾಗಲಿ

ಸರಸ್ವತಿಯ ಪವಿತ್ರ ರಾಜ್ಯದಲ್ಲಿ ಜಾತೀಯತೆಮತೀಯತೆಗಳ ಪ್ರಶ್ನೆ ಎಂದಿಗೂ ಸಲ್ಲದು; ವಿದ್ವತ್‌ಸಾಹಿತ್ಯ, ವಿಮರ್ಶಾಸಾಹಿತ್ಯ ಕನ್ನಡದಲ್ಲಿ ಏನೂ ಬೆಳೆದಿಲ್ಲ, ಇದಕ್ಕೆ ಸಂಶೋಧನಾಸಂಸ್ಥೆಯ ದುರವಸ್ಥೆಯೇ ಕಾರಣ

ನಮ್ಮವರ ಕನಸುಗಳು!

ಈ ಹಿಂದಿನ ವರ್ಷಗಳಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಬೆಳಗಿದ ಮಹಾನುಭಾವರನ್ನೂ ಅವರ ವಾಗಮೃತವನ್ನೂ ಸ್ಮರಿಸಿಕೊಂಡರೆ ಎಂಥವನಿಗಾದರೂ ರೋಮಾಂಚನವಾಗುತ್ತದೆ ಅವರ ನಾಡುನುಡಿಗಳ ಭಕ್ತಿ, ಅವರು ಸಲ್ಲಿಸಿರುವ ತ್ಯಾಗಮುಖವಾದ ಸೇವೆ, ಅವರು ನಿರ್ಮಿಸಿರುವ ಕೃತಿಗಳು, ಅವರು ಕೈಗೊಂಡಿರುವ ಯೋಜನೆಗಳು, ಅವರು ಕಂಡ ಕನಸುಗಳು ಇವೆಲ್ಲ ಇಂದಿಗೂ ಕನ್ನಡದ ಕೆಲಸಗಾರರಿಗೆ ಸ್ಫೂರ್ತಿಯನ್ನು ಕೊಡತಕ್ಕವು.

ಕನ್ನಡನಾಡಿನ ಏಕೀಕರಣ ಏಕರೂಪವಾದ ಆಡಳಿತವ್ಯವಸ್ಥೆ, ಬೇರೆ ಬೇರೆ ಪ್ರದೇಶಗಳ ಕನ್ನಡಿಗರಲ್ಲಿ ಪರಸ್ಪರ ಸೌಹಾರ್ದ ಸಾಧನೆ, ಎಲ್ಲ ಪ್ರದೇಶಗಳಿಗೂ ಸಮಾನವಾದ ಗ್ರಾಂಥಿಕ ವ್ಯಾವಹಾರಿಕ ಭಾಷೆಯ ನಿರ್ಮಾಣ, ಕನ್ನಡದ ಸ್ಥಾನಮಾನಗಳ ವಿಚಾರ, ಕನ್ನಡನಾಡಿನ ಭಾಷಾಸಮಸ್ಯೆಗಳು, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸುವುದು, ಹಳೆಯ ಸಾಹಿತ್ಯದ ರಕ್ಷಣೆ, ಉದ್ಧಾರ, ಪ್ರಚಾರ, ಹೊಸ ಸಾಹಿತ್ಯಕ್ಕೆ ಪ್ರೋತ್ಸಾಹ ಪಾಂಡಿತ್ಯರಸಿಕತೆಗಳ ಬೆಳವಣಿಗೆ, ಸಾಹಿತಿಗಳಿಗೆ ಸತ್ಕಾರ ಸಂಮಾನಗಳು, ಕನ್ನಡಿಗರ ರಾಜಕೀಯ ಸಾಮಾಜಿಕ ಧಾರ್ಮಿಕ ಇತಿಹಾಸದ ರಚನೆ ಮತ್ತು ಅದಕ್ಕಾಗಿ ನಡೆಯಬೇಕಾದ ಸಂಶೋಧನೆ, ಸುಪುಷ್ಟವೂ ಸಶಾಸ್ತ್ರೀಯವೂ ಆಗಿರುವ ಕನ್ನಡ ಬೃಹತ್ಕೋಶದ ನಿರ್ಮಾಣ, ವಿಶ್ವಕೋಶದ ರಚನೆ, ವೈಜ್ಞಾನಿಕ ಸಾಮಾಜಿಕ ಶಾಸ್ತ್ರೀಯ ಗ್ರಂಥಗಳ ರಚನೆ—ಹೀಗೆ ಒಂದೇ ಎರಡೇ ಅವರು ತಮ್ಮೆದುರಿಗೆ ಕಟ್ಟಿಕೊಂಡಿದ್ದ ಸ್ವಪ್ನ ಮಂದಿರಗಳು! ಇವೆಲ್ಲಕ್ಕೆ ಹಿನ್ನೆಲೆಯಾಗಿ, ಭಾರತದ ಸ್ವಾತಂತ್ರ್ಯ ಸಾಧನೆಯ ಮಹಾಕಾರ್ಯದಲ್ಲಿ ಹಿಮಾಚಲ ಸದೃಶರಾದ ಮಹಾತ್ಮಾಗಾಂಧಿಜಿಯವರು ಹರಿಯಬಿಟ್ಟಿದ್ದ ಶಕ್ತಿವಾಹಿನಿಯ ಅದಮ್ಯ ನಿರ್ಘೋಷ!

ನಮ್ಮ ಸಾಧನೆ

ಭಗವಂತನ ಅಪಾರ ಕರುಣೆಯಿಂದಲೂ ನಿರಂತರ ಪುರುಷ ಪ್ರಯತ್ನದಿಂದಲೂ ಬ್ರಿಟಿಷರ ಸ್ವಾಭಾವಿಕ ರಾಜಕೀಯ ಕೌಶಲದಿಂದಲೂ ಈ ಕನಸುಗಳಲ್ಲಿ ಬಹು ಮುಖ್ಯವಾದ ಕೆಲವು ನನಸಾಗಿ ಪರಿಣಮಿಸಿವೆ ಭಾರತಕ್ಕೆ ಸ್ವಾತಂತ್ರ್ಯ ಲಭ್ಯವಾಯಿತು. ಕನ್ನಡನಾಡು ಒಂದುಗೂಡಿ ಒಂದೇ ಆಧಿಪತ್ಯಕ್ಕೆ ಒಳಪಟ್ಟಿದೆ ಇನ್ನುಳಿದುವು ಕ್ರಮವಾಗಿ ಕಾರ್ಯರೂಪಕ್ಕೆ ತಿರುಗುತ್ತಲಿವೆ, ವಿಶಾಲ ಕರ್ನಾಟಕದ ಜನಮನದ ಬೆಸುಗೆ ಬಾಂಧವ್ಯಗಳು ವೃದ್ಧಿಗೊಳ್ಳುತ್ತಿವೆ. ಜನರ ಅಂತರಂಗದ ಶುದ್ಧೀಕರಣಕ್ಕೆ ಸಾಹಿತಿಗಳೂ ಧರ್ಮ ಪ್ರಚಾರಕರೂ ಮಾಡಬೇಕಾದ ಕೆಲಸ ಬಹಳವಿದೆ ಈ ದಿಕ್ಕಿನಲ್ಲಿ ನಮ್ಮ ಸಾಹಿತ್ಯ ಬೆಳೆಯಬೇಕಾದ ಆವಶ್ಯಕತೆ ಈಗ ಹೇರಳವಾಗಿದೆ ಲೌಕಿಕ ನೀತಿ ಧರ್ಮಗಳು ಎಷ್ಟು ಪವಿತ್ರವೋ ರಾಷ್ಟ್ರ ಶಾಸನಗಳೂ ಅಷ್ಟೇ ಪವಿತ್ರವೆಂಬ ತತ್ವವನ್ನೀಗ ಪ್ರಚಾರ ಮಾಡಬೇಕಾಗಿದೆ ಕತ್ತಿಯಿಂದ ಪ್ರಸಾರ ಮಾಡುವ ಕಾಲ ದೂರವುಳಿಯಿತು, ಕಲೆಯ ಮೂಲಕ ಮಾಡಿದರೆ, ಆ ಕಾರ್ಯ ಯಶಸ್ವಿಯಾಗಿ ನಡೆಯಬಲ್ಲದು ಆದುದರಿಂದ ಸಾಹಿತಿಯನ್ನು ಮುಂದಿಟ್ಟು ರಾಷ್ಟ್ರ ಸಂಚಾಲಕ ಹಿಂದಿದ್ದು ಕಾಲಕ್ಕೆ ತಕ್ಕ ಪ್ರೋತ್ಸಾಹ ಬಲಗಳನ್ನಿತ್ತು ಜನತೆಯ ಅಂತರಂಗ ಶುದ್ಧಿಯನ್ನು ಸಾಧಿಸಬಹುದು.

ಸಾಹಿತ್ಯವೇಕೆ ಜಡವಾಗಿದೆ?

ಆಚಾರ್ಯ ಶ್ರೀಯವರ ಇಂಗ್ಲಿಷ ಗೀತೆಗಳು ಪ್ರಕಟವಾದಂದಿನಿಂದಿಂದಿನ ವರೆಗೆ ಸುಮಾರು ೩೫ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆ ಯಾವ ಕನ್ನಡಿಗನಿಗೆ ಆನಂದವನ್ನೂ ಹೆಮ್ಮೆಯನ್ನೂ ತಂದೀಯದು! ಸಾಹಿತ್ಯ ರಚನೆಗೆ ಪ್ರೇರಕ ಶಕ್ತಿಗಳು ಹಿಂದೆ ಇದ್ದ ಹಾಗೆ ಇಂದು ಇಲ್ಲ ಅವುಗಳ ಪ್ರಭಾವ ವರ್ಷಗಳುರುಳಿದಂತೆ ತೆಳ್ಳಗಾಗುತ್ತ ಬರುತ್ತಿದೆ ಸಮಸ್ತ ಜನತೆಯನ್ನು ಸ್ಪರ್ಶಿಸುವ ದೊಡ್ಡ ಸಮಾರಂಭಗಳು ಕಡಿಮೆಯಾಗುತ್ತಲಿವೆ ಆಂತರಿಕ ಪ್ರೇರಣೆಯೊಂದನ್ನೇ ಈಗ ಸಾಹಿತಿ ಬಹುವಾಗಿ ಆಶ್ರಯಿಸಬೇಕಾಗಿದೆ. ಸ್ವಾತಂತ್ರ್ಯ ಲಭಿಸಿದ ಮೇಲೆ ಕರ್ನಾಟಕ ಏಕೀಕರಣವಾದನಂತರ ಯಾವುದಕ್ಕಾಗಿ ಜನಮನ ಒಂದಾಗಿ ಕೆಲಸಮಾಡಬೇಕು? ಯಾವುದನ್ನು ಉತ್ಸಾಹದಿಂದ ತುಂಬಬೇಕು? ಹಿಂದಿದ್ದ ಸ್ವಾರ್ಥ-ತ್ಯಾಗ ಇಂದೆಲ್ಲಿ ಹೋಯಿತು? ಭಗವದ್ಭಕ್ತಿಯೂ ಹಿರಿಯ ಆದರ್ಶಗಳನ್ನು ಸಾಧಿಸಬೇಕೆಂಬ ಹಂಬಲವೂ ಕುಗ್ಗಿರುವಂತೆ ತೋರುತ್ತಿಲ್ಲವೆ ಇಂದು? ದೇಶವನ್ನು ಸಂಪತ್ಸಂವೃದ್ಧವಾಗಿ ಮಾಡಬೇಕೆಂದು ಸರಕಾರದವರು ಕೈಗೊಂಡು ನಡೆಸುತ್ತಿರುವ ಮಹೋದ್ಯಮಗಳು ಸಾಹಿತ್ಯ ನಿರ್ಮಾತೃಗಳನ್ನು ಆವೇಶದಿಂದ ತುಂಬುವುದಿರಲಿ, ಏಕೆ ಅವರನ್ನು ಸೋಕಿಯೂ ಇಲ್ಲ? ಅವರು ಕಂಡ ಮತ್ತು ಕಾಣಬಯಸುವ ಕನಸುಗಳಿಗೂ ವಾಸ್ತವಿಕ ಕನಸುಗಳಿಗೂ ಹೊಂದಾಣಿಕೆಯಿಲ್ಲವೆ?— ಇವೇ ಮುಂತಾದ ಪ್ರಶ್ನೆಗಳು ಈಗ ಜನಮನವನ್ನು ಬಾಧಿಸುತ್ತಿರುವಂತೆ ತೋರುತ್ತವೆ. ಆದರೆ, ಅತಿಆಕಾಂಕ್ಷೆಗಳ ಪೂರ್ತಿಕೆ ನಿರೀಕ್ಷಿಸಿದ ಪ್ರಮಾಣದಲ್ಲಿ ನಡೆಯದಿರುವುದು ಉತ್ಸಾಹದ ಅವನತಿಗೆ ಕಾರಣವಾಗಿರಬಹುದು ಈಗಿನ ಕನ್ನಡ ಸಾಹಿತ್ಯ ಉಬ್ಬರವಿಳಿದು ಸ್ತಬ್ಧವಾಗಿ ಹರಿವ ಹೊಳೆಯಂತೆ ಆಗಿದೆ ಇದು ಹೀಗೆಯೇ ಬಹುಕಾಲ ಇರಲಾರದು. ಜನಜೀವನ ಸಮಗ್ರಸಾಧನವನ್ನು ಮಾಡುವ ಸಾಮಾಜಿಕ ಧಾರ್ಮಿಕ ಶಕ್ತಿಗಳು ಮತ್ತೆ ಉದ್ಬುದ್ಧವಾದಾಗಲೋ ಮಹಾಪ್ರತಿಭೆಯೊಂದರ ಅವತಾರವಾಗಿ ಅದು ಸುರಿಸುವ ಕಾವ್ಯ ವರ್ಷದಿಂದಲೋ ಮತ್ತೊಮ್ಮೆ ನಮ್ಮ ಸಾಹಿತ್ಯವಾಹಿನಿ ತುಂಬಿ ಬೋರ್ಗರೆಯುತ್ತ ಮುಂದಕ್ಕೆ ಹರಿಯಬೇಕಾಗಿದೆ.

ವಿದ್ವತ್ ಸಾಹಿತ್ಯ ಬೆಳೆದಿಲ್ಲ

ಹೊಸಗನ್ನಡ ಸಾಹಿತ್ಯ ಬೆಳೆದಿರುವಷ್ಟು ಪೂರವಾಗಿ ವಿದ್ವತ್ ಸಾಹಿತ್ಯ ಬೆಳೆದಿಲ್ಲವೆನ್ನಬೇಕಾಗಿದೆ. ತಂಮತಮ್ಮ ಕೃತಿ

(೧೨ನೇ ಪುಟ ನೋಡಿರಿ)



ಅಮೆರಿಕೆಯ ಸೇನಾವಿಭಾಗವು ಉಪಗ್ರಹವನ್ನು ಹಾರಿಸಲು ತಕ್ಕ ಪೂರ್ವಸಿದ್ಧತೆಯನ್ನು ಮಾಡುತ್ತಿದೆ

ಕಥಾವಿಹಾರ

ಆಶ್ರಮವಾಸಿಯ ಅಪರಾಧ

ಗುರು ಅನಿರೀಕ್ಷಿತವಾಗಿ ಸಮಾಜದ ಗುರುವಾಗಿ ಹೋದ. ಆದರೆ, ಆ ಗುರುಪಟ್ಟ ಆತನ ಕುತ್ತಿಗೆಗೆ ಹಾಕಿದ ನೇಣಾಗಿ ಪರಿಣಮಿಸಿತು. ಈ ಶಿಕ್ಷೆ ಯಾವ ಅಪರಾಧಕ್ಕಾಗಿ?

ಮಾಧವಾಚಾರ್ಯರು ಇದ್ದಕ್ಕಿದ್ದಂತೆ ಮಗನನ್ನು ಶಾಲೆ ಬಿಡಿಸಿದರು. "ಗುರೂ, ಇವತ್ತಿನಿಂದ ನೀನು ಶಾಲೆಗೆ ಹೋಗುವುದು ಬೇಡ"—ಹೋಗುವುದು ಬೇಡ ಎಂಬ ಮಾತಿಗೆ ಗುರುರಾಜ ಮಿಕಿ ಮಿಕಿ ತಂದೆಯ ಮುಖ ನೋಡುತ್ತಾ ನಿಂತುಕೊಳ್ಳಬಲ್ಲನೇ ಹೊರತು ಏನೂ ಹೇಳಲಾರದವನಾಗಿದ್ದ. ಯಾಕೆಂದು ಅರ್ಥವಾಗಿಲ್ಲ ಪಾಪ! ತಾಯಿಯ ಮುಖ ನೋಡಿದ. ಆಕೆಯ ಮುಖದಲ್ಲೂ ಹೆಚ್ಚಿನ ಬದಲಾವಣೆಯನ್ನು ಆತ ಕಾಣಲಿಲ್ಲ

ಆ ದಿನ ಗುರು ಮನೆಯಲ್ಲೇ ಉಳಿಯಬೇಕಾಯಿತು; ಅವನ ದೊಡ್ಡತಂದೆಯ ಮಗ, ಶಂಕರ ಮಾತ್ರ ಶಾಲೆಗೆ ಹೋಗಬೇಕಾಯಿತು. ಉಪಾಧ್ಯಾಯರೂ ಕೇಳಿದರು—.

"ಗುರುರಾಜ ಬರಲಿಲ್ಲವೇಕೆ?"

ಬಾರದವರನ್ನು ಪ್ರಯತ್ನಪೂರ್ವಕವಾಗಿ ಬರಿಸಿಕೊಂಡು ಶಾಲೆಯನ್ನು ಸಾಗಿಸಿಕೊಂಡು ಹೋಗುವ ಹಳ್ಳಿಯ ಮಾಸ್ತರರು ಅವರು. ಬಾರದವರನ್ನು ಸುಮ್ಮಗೆ ಬಿಡುವಂತಿರಲಿಲ್ಲ

"ತಂದೆ ಹೋಗುವುದು ಬೇಡ ಎಂದರು"—ಶಂಕರನೆಂದ.

ಮಾಸ್ತರರು ಬೇರೇನೂ ಹೇಳಲಿಲ್ಲ. ಕೇವಲ ಒಂದು ಮುಗುಳುನಗು ನಕ್ಕರು ಮಾತ್ರ! ಇದು ಕ್ಲಾಸಿನ ಎಲ್ಲಾ ಹುಡುಗರಿಗೂ ಆಶ್ಚರ್ಯವೆನಿಸಿತು. ಬೇರೆ ಸಂದರ್ಭದಲ್ಲಾಗಿದ್ದರೆ ಜನ ಕಳುಹಿಸಿ ಆಗ್ರಹದಿಂದ ಕರೆಸುತಿದ್ದರು ಗುರುರಾಜನನ್ನು. ಉಪಾಧ್ಯಾಯರ ಇಂದಿನ ತಾಟಸ್ಥ್ಯಕ್ಕೆ ಕಾರಣ ತಿಳಿಯದೆ ವಿದ್ಯಾರ್ಥಿಗಳೆಲ್ಲ ಕುತೂಹಲಿಗಳಾದರು. ಶಂಕರನಿಗೂ ಕುತೂಹಲವೆನಿಸಿತು.

ಆತ ಚಿಕ್ಕಂದಿನಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡಿದ್ದ. ತಂದೆಯ ತಮ್ಮನ—ಮಾಧವಾಚಾರ್ಯರ—ಆಶ್ರಯದಲ್ಲಿ ಬೆಳೆಯುತಿದ್ದ ಆತನಿಗೆ ಅವರೇ ತಂದೆಯಂತಿದ್ದರು.

ಶಾಲೆ ಮುಗಿಸಿ ಮನೆಗೆ ಬಂದ ಶಂಕರ ತನ್ನ ಚಿಕ್ಕಮ್ಮನಿದ್ದಲ್ಲಿಗೆ ನೇರಾಗಿ ನಡೆದ. ಆತನ ತಲೆಯಲ್ಲಿ ಏನೋ ತುಂಬಿಕೊಂಡಿತ್ತು. ತಲೆತುರಿಸುತ್ತಾ "ಅಮ್ಮಾ" ಎಂದ. ಚಿಕ್ಕತಂದೆಯ ಹೆಂಡತಿಯಾದರೂ ಶಂಕರನ ಪಾಲಿಗೆ ಆಕೆಯೇ "ಅಮ್ಮ" ಆಗಿದ್ದಳು.

"ಏನು ಶಂಕರೂ, ಶಾಲೆ ಬಿಟ್ಟಾಯಿತೇ?" ಆಕೆಯೂ ತನ್ನ ಸ್ವಂತ ಮಕ್ಕಳ ಮಮತೆಯನ್ನೇ ಶಂಕರನ ಮೇಲೂ ತೋರುತಿದ್ದಳು.

"ಅಮ್ಮಾ! ಗುರು ಶಾಲೆಗೆ ಏಕೆ ಬರಲಿಲ್ಲ ಅಮ್ಮಾ?"

ಈ ಪ್ರಶ್ನೆಗೆ ಆ ತಾಯಿ ನಕ್ಕುಬಿಟ್ಟಳು. ಶಂಕರನನ್ನು ಬರಸೆಳೆದು ತಲೆದಡವುತ್ತಾ, "ಶಂಕರೂ, ನಿನ್ನ ತಮ್ಮ ಇನ್ನು ಇಪ್ಪತ್ತು ದಿನಗಳಲ್ಲಿ ಸ್ವಾಮಿಯಾಗಿ ಬಿಡುತ್ತಾನೆ. ಗೊತ್ತೇ?" ಎಂದಳು.

ಶಂಕರನಿಗೆ ಅರ್ಥವಾಗಲಿಲ್ಲ. "ಸ್ವಾಮಿ ಅಂದರೆ?"

ತಾಯಿ ವಿವರಿಸಿದಳು. ಆಗ ಆತನಿಗೆ ತಿಳಿಯಿತು.

"ಅಮ್ಮ, ನಾವೆಲ್ಲ ಹೋಗಿ ಉದ್ದಂಡ ನಮಸ್ಕಾರ ಮಾಡುತ್ತೇವಲ್ಲ....ಹಣ್ಣು ಹಣ್ಣು ಮುದುಕರೂ ಕೂಡ ನಮಸ್ಕಾರ ಮಾಡುತ್ತಾರಲ್ಲ...ಅವರ ಹಾಗೇ ಆಗುತ್ತಾನೇನು?"

"ಹೂಂ. ಅವರಹಾಗೆ. ಇನ್ನು ಇಪ್ಪತ್ತು ದಿನಗಳ ಮೇಲೆ ನಮ್ಮ ಗುರುರಾಜನಿಗೆ ಅಂತಹ ಹಣ್ಣು ಮುದುಕರು ಕೂಡ ನಮಸ್ಕಾರ ಮಾಡಲೇ ಬೇಕು!"

ಶಂಕರನಿಗೆ ಏನು ಕಾಣಿಸಿತೋ, ಥಟ್ಟನೆ ಅಲ್ಲಿಂದ ಹೊರಟು ಗುರುವನ್ನರಸಿಕೊಂಡು ಓಡಿದ.

"ಗುರೂ.... ..., ಗುರೂ—"

ಗುರುವಿನ ಕಾಲುಬುಡಕ್ಕೆ ಮಠಾಧಿಪತ್ಯ ಉರುಳಿ ಬಂದಿತ್ತು. ಪುಡಿಗೋಟೆ ಶ್ರೀಮಠದ ರಕ್ತಾಂಬರ ಶ್ರೀಪಾದಂಗಳವರು ಪ್ರಾಣಾಂತಿಕ ಪರಿಸ್ಥಿತಿಯಲ್ಲಿದ್ದರು. ಅವರಿಗೆ ಒಬ್ಬ ಶಿಷ್ಯನನ್ನಾರಿಸಿಕೊಳ್ಳಬೇಕಿತ್ತು. ಆ ಮಠದ ವಿದ್ವಾಂಸರು—ಮಾಧವಾಚಾರ್ಯರ ಮಗ ಗುರುರಾಜನ ಪಾಲಿಗೆ ಆ ಭಾಗ್ಯ ಒದಗಿ ಬಂದಿತ್ತು. ಸಮಾಜ ಈಗಾಗಲೇ ಆ ಹುಡುಗನತ್ತ ಕಣ್ಣು ಹೊರಳಿಸುತಿತ್ತು. ಆ ಸಾವಿರ ಕಣ್ಣುಗಳಲ್ಲಿ ಹೊಳೆಯುವ ಭಾವ ಅರ್ಥವಾಗುತಿದ್ದಿಲ್ಲ ಗುರುರಾಜನಿಗೆ. ತಬ್ಬಿಬ್ಬಾಗಿ ಹೋಗಿದ್ದ.

"ಗುರೂ, ಗುರೂ!" ಗುರುರಾಜನನ್ನರಸಿ ಆತನ ತೋಳನ್ನು ಬಿಗಿಯಾಗಿ ಹಿಡಿದು ಅಲುಗಿಸುತ್ತಾ ಹೇಳಿದ ಶಂಕರ—

'ಗುರು, ನನಗೆ ನಮಸ್ಕಾರ ಮಾಡು!'

ಗುರು ತಬ್ಬಿಬ್ಬಾಗಿ ಕೇಳಿದ—"ಏಕಣ್ಣ?"

"ಏಕೆ ಅನ್ನುವುದು ಮತ್ತೆ. ಹಾಕು ನಮಸ್ಕಾರ!"

ಗುರು ಅಸಹಾಯನಾಗಿದ್ದ. ಏನೂ ತಿಳಿಯದೆ ಕೈಜೋಡಿಸಿದ. ಆದರೆ ಅದರಿಂದ ಶಂಕರನಿಗೆ ತೃಪ್ತಿಯೆನಿಸಲಿಲ್ಲ ಗುರುವಿನ ತೋಳು ಹಿಡಿದು ಕುಕ್ಕರಿಸುತ್ತಾ "ಉದ್ದಂಡ ನಮಸ್ಕಾರ ಮಾಡು" ಎಂದು ಬಲಾತ್ಕರಿಸಿದ. ಹಿಂದು ಮುಂದನ್ನರಿಯದೆ ಗುರು ತತ್ತರಿಸಿ ಹೋದ. 'ಅಣ್ಣಾ' ನಡುಗುವ ದೀನ ಸ್ವರದತ್ತ ಶಂಕರ ಗಮನ ಕೊಡಲಿಲ್ಲ ಆಗ್ರಹ ಪೂರ್ವಕ ನಮಸ್ಕಾರ ಮಾಡಿಸಿಕೊಂಡೇ ಬಿಟ್ಟ!

ಗುರುರಾಜನ ತಿಳಿಗಣ್ಣುಗಳಲ್ಲಿ ನೀರು ಹೊಳೆ ಹೊಳೆ ತುಂಬಿತು. ದುಂಡು ಕೆನ್ನೆಗಳ ಮೇಲಿನಿಂದ ಧಾರೆಗಟ್ಟಿ ಇಳಿಯತೊಡಗಿತು. "ಅಣ್ಣಾ" ಎಂದು ಅಳುದನಿಯಿಂದ ಶಂಕರನನ್ನು ತಬ್ಬಿಕೊಂಡು ಬಿಕ್ಕ ತೊಡಗಿದ. ಈಗ ಮಾತ್ರ ಏನೂ ಅರಿಯದ ಆ ಮುದ್ದು ಶಿಶುವಿನ ಬಗ್ಗೆ ಶಂಕರನ ಕಣ್ಣು ತೆರೆಯಿತು. ತಮ್ಮನ ಕಣ್ಣೀರೊರಸಿ ತಲೆಯನ್ನು ಸವರುತ್ತಾ—

"ಗುರೂ, ಅಳಬೇಡ. ನೀನು...... ಗುರೂ, ಇನ್ನು ಇಪ್ಪತ್ತು ದಿನಗಳ ನಂತರ ನಾನು ನಿನಗೆ ಉದ್ದಂಡ ನಮಸ್ಕಾರ ಮಾಡುತ್ತೇನೆ. ಗುರೂ, ನೀನು ಗುರುವಾಗಿತ್ತೀ" ಎಂದೇನೇನೋ ತನಗೆ ತಿಳಿದ ರೀತಿಯಲ್ಲಿ ಸಂತೈಸ ತೊಡಗಿದ.

ಆ ದಿನ ಪ್ರಾತಃಕಾಲದ ಮಂಗಲ ಭೇರೀರವದೊಡನೆ ಕಾರ್ಯಕ್ರಮ ಪ್ರಾರಂಭವಾಯಿತು. ಪುಡಿಗೋಟೆಯ ಧರ್ಮಪೀಠದಲ್ಲಿ ಏನೂ ಅರಿಯದ ಮುದ್ದು ಹಸುಳೆ ಗುರುರಾಜ ರಾರಾಜಿಸಿದ. ಗುರುರಾಜ ಗುರು ಪ್ರಭವಾನಂದ ಸ್ವಾಮಿಯಾಗಿದ್ದ. ಹಿರಿಯರು, ವಿದ್ವಾಂಸರು, ಹಣ್ಣು ಹಣ್ಣು ಮುದುಕರು—ಎಲ್ಲರಿಂದಲೂ ನಮಸ್ಕಾರವನ್ನು ಪಡೆದುಕೊಳ್ಳುತಿದ್ದ.

ಶಿಷ್ಯನಿಗೆ ಸನ್ಯಾಸ ಕೊಟ್ಟ ನಂತರ ಶ್ರೀರಕ್ತಾಂಬರ ಶ್ರೀಪಾದಂಗಳು ಬಹುಕಾಲ ಬದುಕಲಿಲ್ಲ. ಕೆಲವೇ ದಿನಗಳಲ್ಲಿ ವೃಂದಾವನಸ್ಥರಾದರು.

ಹೊಸ ಮಠಪತಿಗಳ ಆಶ್ರಯದಲ್ಲಿ ಎಲ್ಲವೂ ಸುಗಮವಾಗಿಯೇ ನಡೆಯುತಿತ್ತು. ಆ ಬಗ್ಗೆ ಮಾಧವಾಚಾರ್ಯರು ದಕ್ಷರು. ಅರಿಯದ ಬಾಲಕ ಪ್ರಾಯಪ್ರಬುದ್ಧನಾಗುವ ವರೆಗೆ ಸೂತ್ರಧಾರರು ಅವರೇ ಆಗಿದ್ದರು ಶಂಕರನ ವಿದ್ಯೆ ಮುಂದೆ ಸಾಗುತಿತ್ತು.

ಎಲಿಮೆಂಟರಿ--ಹೈಸ್ಕೂಲ್--ಕಾಲೇಜು—ತನ್ನ ಹಿಂದಿನ ಸ್ವಭಾವದಲ್ಲೇ ಶಂಕರ ರೂಪುಪಡೆಯುತಿದ್ದ.

'ಗುರೂ!'—ಶಂಕರನ ಪಾಲಿಗೆ ಗುರು ಪ್ರಭವಾನಂದರು ಇನ್ನೂ ಬಾಲ್ಯದ 'ಗುರು'ವೇ ಆಗಿದ್ದರು.

'ಯಾಕೆ?'—ಆದರೆ ಗುರು ಪ್ರಭವಾನಂದರಲ್ಲಿ ಮಾತ್ರ ಮೆಲ್ಲಮೆಲ್ಲನೆ ಗಂಭೀರ ಭಾವದ ಉದಯವಾಗುತಿತ್ತು. ಮೆಲ್ಲಮೆಲ್ಲ ಅಟ್ಟಕ್ಕೇರ ತೊಡಗಿದ್ದರು. ಪ್ರಾಯಃ ದಿನವೂ ಪಡೆಯುತಿದ್ದ ಸಾವಿರ ನಮಸ್ಕಾರಗಳ ಫಲ!

'ಗುರೂ, ವಿವೇಕಾನಂದರ ಹೆಸರು ಕೇಳಿದ್ದೀಯಾ, ವೇದಾಂತ ಕೇಸರಿ?'

"ಇಲ್ಲ. ಹಾಗೆಂದರೆ ಯಾರು?"

ತನ್ನ ಗುರು ಆದರ್ಶ ಗುರುವಾಗಬೇಕು, ವಿವೇಕಾನಂದರಂತೆ ದಿವ್ಯ ಪ್ರತಾಪಿಯೆನಿಸಿ ದಶ ದಿಕ್ಕುಗಳಲ್ಲೂ ತತ್ವಡಿಂಡಿಮವನ್ನು ಮೊಳಗಿಸಬೇಕು—ಎಂಬ ಅಭಿಲಾಷೆಯಿಂದಿದ್ದ ಶಂಕರನಿಗೆ ತೀರ ನಿರಾಶೆಯಾಯಿತು. ಜೊತೆಗೇ ಮುಖ ಗಂಭೀರವಾಯಿತು. ಆ ದಿನ ಅಲ್ಲಿ ಮತ್ತೇನೂ ಮಾತು ಬೆಳೆಯಲಿಲ್ಲ.

ಸಂಜೆ ಕಾಲೇಜು ಮುಗಿಸಿ ಮರಳುವಾಗ ಶಂಕರ ಎರಡು ಕಾದಂಬರಿಗಳನ್ನು ತಂದು ಗುರುವಿನ ಕೈಯಲ್ಲಿರಿಸಿದ. ವಿವೇಕಾನಂದರ ಮತ್ತು ಪರಮಹಂಸರ ಚರಿತ್ರೆಗಳು ಅವು.

ಮತ್ತೊಂದು ದಿನ ಸುಮ್ಮಗೆ ಏನೋ ಎಣಿಸಿಕೊಂಡು ಕೇಳಿದ—

"ಗುರೂ, ನಿಜವಾಗಿಯೂ ದೇವರಿದ್ದಾನಯೇ?"

ಗುರುವಿನಲ್ಲಿ ಸಿದ್ಧಪಡಿಸಿಕೊಂಡ ಉತ್ತರವಿರಲಿಲ್ಲ.

'ನಿನ್ನದೆಲ್ಲ ಇಂಥದೇ ವಿಚಿತ್ರ ಪ್ರಶ್ನೆ!'

ಈ ಉತ್ತರವನ್ನು ಶಂಕರ ಬಯಸಿರಲಿಲ್ಲ. ಆತನ ಹಿಡಿತ ತಪ್ಪಿತು. ಥಟ್ಟನೆ ಎದ್ದು ನಿಂತು ಹೇಳಿದ—

"ಗುರು, ನಿನ್ನ ಯೋಗದಂಡ ಹಿಡಿದುಕೊಂಡು ಹುಚ್ಚು ನಾಯಿಯನ್ನು ಅಟ್ಟಲಿಕ್ಕೆ ಹೋಗು. ಉದ್ಧಾರವಾಯಿತು!"

ಹೇಳಿ ಮಿಂಚಿನಂತೆ ಕಣ್ಮರೆಯಾದ. "ಅಬ್ಬಾ!" ಎಂದ ಕೊಂಡು ಗುರು. ಈ ರೀತಿಯ ಅವಮಾನವನ್ನು ಸಹಿಸಲಿಕ್ಕೆ ತಯಾರಿದ್ದಿರಲಿಲ್ಲ ಗುರು ಪ್ರಭವಾನಂದರು. ಘೋರಕ್ಕೇ ಅಪಮಾನ! ಈ ಬೆಂಕಿಯ ಚೂರನ್ನು ದೂರ ಹಾರಿಸಿ ಬಿಡಬೇಕೆಂದು ಮನಸ್ಸಿನಲ್ಲೆ ಹಂಚಿಕೆ ಹಾಕಿಕೊಂಡರು ಅವರು.

ಆದರೆ ಒಂದೆಡೆಯಿಂದ ಬಾಲ್ಯದ ಮಮತೆ ಸೆಳೆಯುತಿತ್ತು. 'ಅಣ್ಣಾ' ಎಂದು ಕುತ್ತಿಗೆಗೆ ಜೋತು ಬಿದ್ದಾಗ "ಗುರೂ" ಎಂದು ತಮ್ಮನನ್ನು ಪ್ರೀತಿಯಿಂದ ನೇವರಿಸಿದ ಕೈ ಇಂದಿಗೂ ನೆನಪಿಗೆ ಬರುತಿತ್ತು. ಹೃದಯದಲ್ಲೇ ಬಿಕ್ಕಳಿಸುತಿದ್ದರು ಗುರುಗಳು!

"ಗುರೂ, ನೀನು ನಿಜವಾಗಿಯೂ ಜಗದ್ಗುರುವಾಗಬೇಕು. ಹಿಂದೂ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕು. ತಾತ್ವಿಕ ತೇಜಸ್ಸಿನಿಂದ ಮೆರೆದು ಉದಾತ್ತದ ಹಾದಿಯನ್ನು ಜನತೆಗೆ ತಿಳಿಯಪಡಿಸಬೇಕು"— ಶಂಕರನ ಈ ಮಾತುಗಳನ್ನೆಲ್ಲ ಮೌನವಾಗಿ ಕುಳಿತು ಕೇಳುತಿದ್ದ ಗುರು. "ಗುರೂ, ಇದಕ್ಕಾಗಿಯೇ ನಿನಗೆ ಮಠಾಧಿಪತ್ಯ ಒದಗಿಬಂದಿದೆ. ಸಾರ್ಥಕ ಗೊಳಿಸಿಕೊ. ತಿಂದುಂಡು ಮಲಗುವುದಲ್ಲ; ಕಚ್ಚಾಡುವ ವಿದ್ವಾಂಸರನ್ನು ಪ್ರೋತ್ಸಾಹಿಸುವುದಲ್ಲ. ಆತ್ಮೋನ್ನತಿಯನ್ನು ಸಾಧಿಸಿಕೊ"

ಗುರುವಿಗೆ ಏನು ಅರ್ಥವಾಗುತಿತ್ತೋ, ಎಷ್ಟು ಅರ್ಥವಾಗುತಿತ್ತೋ ಯಾರಿಗೆ ಗೊತ್ತು? ಆದರೂ ಏಕಾಂತದಲ್ಲಿ ನಡೆ

(೧೧ನೇ ಪುಟ ನೋಡಿರಿ)

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆಃ 1906] [ಪ್ರಧಾನ ಕಚೇರಿಃ **ಉಡುಪಿ** (ದ. ಭಾರತ)

ವೈವಾಹಿಕ ಜೀವನ

ವಧೂವರರ ಆಯುಪ್ರಮಾಣ ಹೇಗೆ?

ಗಂಡಹೆಂಡಿರಲ್ಲಿ ಯಾರ ಪ್ರಾಯ ಹೆಚ್ಚಿರಬೇಕು ಎಂಬ ಗಡಸಿನ ಪ್ರಶ್ನೆಗೆ ಧರ್ಮಶಾಸ್ತ್ರದಲ್ಲಿ ಉತ್ತರ ದೊರೆಯುವುದಿಲ್ಲ. ಆದುದರಿಂದ ಅನುಭವವೇ ಈ ಬಗ್ಗೆ ಮಾರ್ಗದರ್ಶಕವೆನ್ನಬಹುದೆ?

ವಿವಾಹದ ವೇಳೆ ವಧೂವರರಲ್ಲಿ ಯಾರ ಪ್ರಾಯ ಹೆಚ್ಚಾಗಿರುವುದೆಂದು ತಿಳಿಸುಕೊಳ್ಳುವತ್ತ ನಮ್ಮ ಪೂರ್ವಜರು ವಿಶೇಷ ಗಮನ ಹರಿಸಿದಂತೆ ತೋರುತ್ತಿಲ್ಲ. ಜಾತಿ, ಕುಲಗಳ ಬಗ್ಗೆ ಸಾಕಷ್ಟು ವಾಗ್ವಾದವೆಬ್ಬಿಸಿದ್ದ ಹಿಂದೂ ಧರ್ಮಶಾಸ್ತ್ರಗಳು ವರವಧುಗಳ ಪ್ರಾಯ ತಾರತಮ್ಯದತ್ತ ಎಳ್ಳಷ್ಟೂ ಲಕ್ಷ್ಯ ಪೂರೈಸಿಲ್ಲವೆನ್ನಬೇಕು. ಧರ್ಮಶಾಸ್ತ್ರವು ತೆಪ್ಪಗೆ ಕುಳಿತಿರುವಾಗ ಅನುಭವ ಶಾಸ್ತ್ರವು ತನ್ನ ಪ್ರಭಾವ ಬೀರತೊಡಗುವುದು ಸ್ವಾಭಾವಿಕವೆ. ವರನಿಂದ ವಧುವು ಎಳೆಯಳಾದರೆ ಗೃಹಸೂತ್ರವು ಸುಸೂತ್ರವಾಗಿ ನಡೆಯುವುದೆಂದು ಅನುಭವವು ಪಾಠ ಹೇಳಿರಬಹುದು. ಜನ್ಮಪತ್ರಿಕೆಯನ್ನು ಬರೆದಿಡುವುದಕ್ಕೆ ಇದೂ ಒಂದು ಕಾರಣವಿರಬಹುದು. ಆದರೆ, ಹಿಂದೂ ಸಮಾಜದಲ್ಲಿಯೇ ಜಾತಿಭೇದಗಳನ್ನು ನೀಗಿಸಿಕೊಂಡ ದಂಪತಿಗಳು ಮಾತ್ರವಲ್ಲದೆ ವಧುವಿಗಿಂತ ವರನೇ ಎಳೆಯನಾಗಿರುವ ಕೆಲವೊಂದು ಜೋಡಿಗಳು ದೊರೆಯುತ್ತವೆ. ಮಹಾತ್ಮಾಗಾಂಧಿ ಮತ್ತವರ ಮಡದಿ ಕಸ್ತೂರ್ಬಾರವರನ್ನೇ ತೆಗೆದುಕೊಂಡರೆ, ಬಾ ಬಾಪೂಗಿಂತ ಆರು ತಿಂಗಳಷ್ಟು ದೊಡ್ಡವರು!

ಆದರೆ, ಈ ಬಗ್ಗೆ ಐತಿಹಾಸಿಕ ವಿವೇಚನೆಯು ಅವಶ್ಯವಿದ್ದರೆ, ಪುರಾಣಗಳನ್ನು ಈಕ್ಷಿಸಬೇಕಾಗುತ್ತದೆ. ಶ್ರೀಮದ್ಭಾಗವತದಲ್ಲಿ ಬಲರಾಮರೇವತಿಯರ ಕಥೆಯಿದೆ: ಕುಶಸ್ಥಳದ ರಾಜ ಕಕುದ್ಮಿಯು ತನ್ನ ಕನ್ಯೆ ರೇವತಿಯನ್ನು ಕರೆದುಕೊಂಡು ವರನಾರೆಂದು ವಿಚಾರಿಸಲು ಬ್ರಹ್ಮನ ಬಳಿಗೆ ಬಂದನು. ಆಗ, ಬ್ರಹ್ಮಲೋಕದಲ್ಲಿ ಸಂಗೀತ ಕಛೇರಿ ನಡೆಯುತಿತ್ತು. ಆದುದರಿಂದ ಇವರು ತುಸು ಕಾಯಬೇಕಾಯಿತು. ಆದರೆ, ದೇವತೆಗಳ ಒಂದು ಕ್ಷಣವೆಂದರೆ, ಮನುಷ್ಯರ ಹಲವಾರು ಯುಗಗಳಾಗುತ್ತವೆ ತಾನೆ! ಉತ್ಸವ ಅಂತ್ಯವಾದ ಮೇಲೆ, ಮಾತುಕತೆಗೆ ಅವಕಾಶವನ್ನು ಪಡೆದ ರಾಜನು ವಂದಿಸಿ, ತಾನು ಬಂದುದರ ಉದ್ದೇಶವನ್ನು ಸೃಷ್ಟಿಕರ್ತನಿಗೆ ವಿವರಿಸಿದನು. ಆಗ ಬ್ರಹ್ಮನು ನಕ್ಕು ಹೇಳಿದನು: ಎಲೆ, ರಾಜನೆ, ನಿನ್ನ ರೇವತಿಗೆ ಸರಿಯಾದವನು ಕಾಲಗರ್ಭದಲ್ಲಿ ಎಂದೋ ಅಡಗಿ ಹೋಗಿದ್ದಾನೆ. ಇಂದು ಅವನ ಪುತ್ರ ಪುತ್ರಿಯರ ಕತೆಯಲ್ಲಿ, ಅವರ ಕುಲಗೋತ್ರದವರೂ ಎಲ್ಲಿರುವರೆಂದು ತಿಳಿಯದು. ಈ ನಡುವೆ ಇಪ್ಪತ್ತೇಳು ಚತುರ್ಯುಗಗಳು ಉರುಳಿವೆ. ಆದರೂ ಇಂದು ಭಗವಾನ್ ನಾರಾಯಣನ ಅಂಶವಾದ ಬಲರಾಮನೆಂಬವನು ಪ್ರಪಂಚದಲ್ಲಿದ್ದಾನೆ, ಆತನಿಗೇನೇ ನಿನ್ನ ಕನ್ಯಾರತ್ನವನ್ನು ಅರ್ಪಿಸಬಹುದು" ರಾಜನು ತನ್ನ ಸರ್ವಾಂಗ ಸುಂದರ ಕನ್ಯೆಯನ್ನು ಬಲರಾಮನ ಕೈಗಳಿಗರ್ಪಿಸಿ ತಾನು ತಪಗೈಯ್ಯಲು ಘೋರಾರಣ್ಯಕ್ಕೆ ನಡೆದು ಬಿಟ್ಟನು.

ಇಲ್ಲಿ ಒಂದು ವಿಷಯವನ್ನು ಅವಶ್ಯ ಗಮನಿಸಬೇಕು. ೨೭ ಚತುರ್ಯುಗಗಳಷ್ಟು ದೊಡ್ಡವಳಾದ ಕನ್ಯೆ. ಆಕೆ ಆಕಾರದಲ್ಲಿ ಎಷ್ಟು ದೊಡ್ಡದಿದ್ದಿರಬಹುದು? ಈ ಸಂದರ್ಭದಲ್ಲಿ ಬಲರಾಮನ ಹಲಾಯುಧ ಉಪಯೋಗಕ್ಕೆ ಬಂತು. ಇಚ್ಛಾನುಸಾರ ಬೆಳೆಯುವ ಹಲಾಯುಧವನ್ನು ಬಲರಾಮನು ರೇವತಿಯ ಭುಜಗಳ ಮೇಲಿಟ್ಟು ಕೆಳಗೆಳೆಯತೊಡಗಿದನು. ರೇವತಿಯು ತನ್ನ ಭುಜಗಳಿಗಿಂತಗ ನಾಲ್ಕಾರು ಅಂಗುಲ ಕೆಳಗಾಗುವನಕ ಎಳೆದೇ ಬಿಟ್ಟನಾತ!

ಪ್ರೇಮೋಪಾಸನೆಯ ಮೂರ್ತಿ ರಾಧೆಯೂ ಪ್ರಾಯದಲ್ಲಿ ಕೃಷ್ಣನಿಗಿಂತ ಹಿರಿಯಳು. "ಗೀತಗೋವಿಂದ"ದಲ್ಲಿ ನಂದನು ರಾಧೆಯೊಡನೆ ರಾತ್ರಿಯಾದುದರಿಂದ ಹೆದರುವ ಕೃಷ್ಣನನ್ನು ಮನೆಗೆ ಮುಟ್ಟಿಸು ಎಂದು ಹೇಳಿದ ಉಲ್ಲೇಖವಿದೆ.

ಮಾಳವದ ಒಡೆಯ ಮುಂಜನು ಚಾಲುಕ್ಯ ರಾಜ ತೈಲಪದೇವನ ಮೇಲೆ ಆಕ್ರಮಣವನ್ನು ನಡೆಸಿದನು. ದುರ್ದೈವವಶದಿಂದಾತ ಪರಾಜಿತನಾದುದು ಮಾತ್ರವಲ್ಲ ಕೈದಿಯೂ ಆಗಿಬಿಟ್ಟನು. ಬಂದೀಗೃಹದಲ್ಲಿಯೇ ಆತ ಮತ್ತು ತೈಲಪದೇವನ ಸೋದರಿಯೂ ಶ್ರೀಪುರದ ಚಂದ್ರರಾಜನ ವಿಧವೆಯೂ ಆಗಿದ್ದ ಮೃಣಾಲವತಿಯರ ನಡುವೆ ಪ್ರೇಮಲತೆ ಅಂಕುರಿಸಿತು. ಮೃಣಾಲವತಿಯು ಮುಂಜನಿಯಿಂದ ಪ್ರಾಯದಲ್ಲಿ ಹಿರಿಯಳಿದ್ದಳು. ಆದರೆ, ಪ್ರೇಮಕ್ಕೆ ಚಿಕ್ಕದೊಡ್ಡದರ ಗಮನವೆಲ್ಲಿ? ಮೃಣಾಲೆಯು ಮುಂಜನಿಗೆ ಸುರಂಗಮಾರ್ಗವನ್ನು ತೋರಿಸಿ, ಓಡಿಹೋಗುವಂತೆ ಪ್ರೇರೇಪಿಸಿದಳು. ಆದರೆ, ಆ ವೇಳೆ, ತಾನು ಆತನಿಂದ ಪ್ರಾಯದಲ್ಲಿ ದೊಡ್ಡವಳಾದುದರಿಂದ ಮಾಳವಕ್ಕೆ ತೆರಳಿದನಂತರ ಆತನು ತನ್ನನ್ನು ಮರೆತೇಬಿಟ್ಟಾನೆಂದು ಅಂಜಿದಳು. ಈ ಚಿಂತೆಯಲ್ಲಿ ಆಕೆಯ ಮನಸ್ಸು ಕಲ್ಮಶಗೊಂಡಿತು. ಆಕೆ ಈರ್ಷ್ಯೆಯಿಂದ ಮುಂಜನು ಓಡಿಹೋಗಲು ತವಕಿಸುತ್ತಿರುವ ಸಂಗತಿಯನ್ನು ತನ್ನ ಸೋದರನಿಗೆ ನಿವೇದಿಸಿದಳು. ಇದರಿಂದಾಗಿ ತೈಲಪನು ಕಟುಕರಿಂದ ಆತನ ಕೊಲೆ ಮಾಡಿಸಿಬಿಟ್ಟನು.

ಇಸ್ಲಾಂ ಧರ್ಮ ಪ್ರವರ್ತಕರಾದ ಪೈಗಂಬರ ಮುಹಮ್ಮದರ ಪ್ರಥಮ ವಿವಾಹ ೨೫ನೆಯ ವರ್ಷದಲ್ಲಿ ೪೦ ವರ್ಷದ ಖತೀಜಾ ಎಂಬವಳೊಡನೆ ಆಯಿತು. ಆದರೆ, ಆನಂತರವೂ ೨೫ ೩೦ ವರ್ಷಗಳ ವರೆಗೆ ಅವರ ವೈವಾಹಿಕ ಜೀವನವು ಅತ್ಯಂತ ಸುಖಪೂರ್ಣಕವಾಗಿಯೇ ನಡೆಯಿತು.

ಸುಪ್ರಸಿದ್ಧ ಆಂಗ್ಲ ಲೇಖಕ ರಾಬರ್ಟ್ ಬ್ರೌನಿಂಗನು ಕವಯಿತ್ರಿ ಎಲಿಜಬೆತ್ ಬೆರೇಟಳ ಒಂದು ಕವಿತೆಯ ಮೇಲೆ ಮುಗ್ಧನಾಗಿ ಆಕೆಯನ್ನು ಪ್ರೀತಿಸಬಯಸಿದನು. ನರವು ತತ್ತರಿಸಲ್ಪಟ್ಟ ಅಸ್ವಸ್ಥ, ಅಸ್ಥಿಪಂಜರ ಮಾತ್ರ ಎಲಿಜಬೆತರ ಹತ್ತಿರವಿತ್ತು. ಬ್ರೌನಿಂಗನ ಪತ್ರಗಳು ಬಂದು ರಾಶಿ ಬಿದ್ದುವು. ನಾಲ್ಕು ಮಾಸಗಳ ವರೆಗೆ ಆಕೆ ಅವನ್ನು ಉತ್ತರಿಸಲೇ ಇಲ್ಲ. ಆ ಮೇಲೆ ಉತ್ತರಿಸಿದರೂ ಅದು ಅರ್ಧಾರ್ಧವೇ. ಆಕೆ ಬ್ರೌನಿಂಗನಿಂದ ಆರು ತಿಂಗಳು ದೊಡ್ಡವಳಿದ್ದಳು; ಅಲ್ಲದೇ ರೋಗಿ ಕೂಡ ಆಗಿದ್ದಳು. ಆದುದರಿಂದ, ಆಕೆ ಆತನಿಗೆ ಈ ಪ್ರೇಮ ವ್ಯವಹಾರದಲ್ಲಿ ಪ್ರೋತ್ಸಾಹ ಕೊಡಲು ನಿರಾಕರಿಸಿದ್ದಳು. ಬ್ರೌನಿಂಗ್ ಆಕೆಯನ್ನು ಭೆಟ್ಟಿಯಾದನು. ವಿವಾಹದ ಮಾತೆತ್ತಿದನು. ಆದರೆ, ಆಕೆ ಆತನನ್ನು ನಿರಾಶೆಗೊಳಿಸಿದಳು. ಬ್ರೌನಿಂಗ್ ಕವಿತೆ ಬರೆಯುವುದನ್ನೇ ನಿಲ್ಲಿಸಿ ಬಿಟ್ಟನು. ಆದರೆ ಮನಸ್ಸಿನ ಆವೇಗಪೂರ್ಣ ಭಾವಗಳನ್ನು ಛಂದೋಬದ್ಧಗೊಳಿಸಿ, ಎಲಿಜಬೆತಳತ್ತ ಕಳಿಸತೊಡಗಿದನು. ಎಲಿಜ ಅವನ್ನು ಮುದ್ರಿಸಲು ಪ್ರೆಸ್ಸಿಗೆ ಕೊಡುತ್ತಿದ್ದಳು. ಹೀಗೆ ೫೦ ಕವಿತೆಗಳು ಅಚ್ಚುಕಂಡ ನಂತರ ಆಕೆ ಬ್ರೌನಿಂಗನನ್ನು ತನ್ನ ತಂದೆಯ ನಿರಾಕರಣೆಯನ್ನೂ ಲೆಕ್ಕಿಸದೆ ಮದುವೆಯಾದಳು. ಮದುವೆಯಾದ ಸಮಯ ವಿವಾಹರಿಜಿಸ್ಟ್ರಿಯಲ್ಲಿ ಸಹಿ ಹಾಕುವಷ್ಟೂ ಆಕೆಯಲ್ಲಿ ಶಕ್ತಿಯಿರಲಿಲ್ಲ. ಮೂರು ಬಾರಿ ಪ್ರಯತ್ನ ನಡೆಸಿದರೂ ಆಕೆ ಅಸಮರ್ಥಳಾದಳು, ತುಸು ವಿಶ್ರಾಂತಿ ಪಡೆದು ಕೊಂಚ ನೀರು ಕುಡಿದನಂತರ ಆಕೆ ಹೇಗೆ ಹೇಗೋ ಮಾಡಿ ದಸ್ಕತ್ತು ಹಾಕಿದಳೆನ್ನಿ. ತಂದೆಯ ವಿರೋಧವಿತ್ತು. ವಿವಶನಾಗಿದ್ದ ಬ್ರೌನಿಂಗನು ರೋಗ ಜರ್ಜರಿತ ಶರೀರಿಯಾಗಿದ್ದ ಎಲಿಜಬೆತಳನ್ನು ಇಟಲಿಗೆ ಕರೆದುಕೊಂಡುಹೋದನು.

ವಿಖ್ಯಾತ ರಶ್ಯನ್ ಸಾಹಿತ್ಯಕಾರ ಗೋರ್ಕಿಯು ನೊವಿಗ್ರಾಡಿನಲ್ಲಿ ಪತ್ರಿಕಾ ಸಂಪಾದನೆಯ ಉದ್ಯೋಗದಲ್ಲಿದ್ದಾಗ, ಕೆಥರಾಯಿನ್ ಅನ್ನು ಭೆಟ್ಟಿಯಾದನು. ಆಕೆ ಗೋರ್ಕಿಯಿಂದ ೧೦ ವರ್ಷಕ್ಕೆ ಹಿರಿಯವಳು. ಆದರೆ, ಇವರಿಬ್ಬರ ನಡುವೆ ಪ್ರೇಮಬಳೆದು ಅವರು ವಿವಾಹಿತರಾಗಿಬಿಟ್ಟರು.

ರೋಮನ್ ವೀರ ಡೇಮಿಟ್ರಿಯಸನು ಪ್ರಸಿದ್ಧರಾಜ ಐಂಟಿಪೆಟರನ ಮಗಳು ಫೀಲಾಳನ್ನು ಮದುವೆಯಾದನು. ಆಕೆ ಆತನಿಗಿಂತ ದೊಡ್ಡವಳು. ಡೇಮಿಟ್ರಿಯಸನಿಗೆ ಲೇಮಿಯಾ ಎಂಬ ಪ್ರೇಯಸಿಯೊಬ್ಬಳಿದ್ದು ಆಕೆಯೂ ಆತಗಿಂತ ಬಹಳಷ್ಟು ಹಿರಿಯಳಿದ್ದಳು.

ನಮ್ಮಲ್ಲಿ ಸ್ತ್ರೀಯರ ವಿವಾಹವು ಕೌಮಾರ್ಯ ಅಥವಾ ಯೌವನ ಕಾಲದಲ್ಲಿಯೇ ಆಗುತ್ತದೆ. ನಲ್ವತ್ತರನಂತರ ವಿಧವಾ ವಿವಾಹಕೂಡಾ ಆಗುವುದಿಲ್ಲ. ಆದರೆ, ಕೆಲವು ತಿಂಗಳಿಗೆ ಮೊದಲು ಪಡವಾ ಗ್ರಾಮದ ೮೦ ವರ್ಷದ ಮುಸ್ಲಿಂ ಮಹಿಳೆಯೊಬ್ಬಳು ರಾಮಪುರದ ೬೫ ವರ್ಷದ ಮುದುಕನೊಬ್ಬನನ್ನು ವಿವಾಹವಾಡಿಕೊಂಡಳು!

ಈ ವಿವಾಹದಲ್ಲಿ 'ಪ್ರೇಮ'ವು ಯಾವ ಪಾತ್ರವನ್ನೂ ವಹಿಸಲಿಲ್ಲವೆಂಬುದನ್ನು ನಾವು ತಿಳಿದುಕೊಳ್ಳಬಹುದು. ಹಾಗಾದರೆ, ಇವರಿಬ್ಬರನ್ನು ಆಕರ್ಷಿಸಿದ ವಸ್ತುವಾವುದು ಎಂದರೆ, ನಿರ್ಮಲವಾದ ಸ್ನೇಹ ಮಾತ್ರ.

ಇಂದು ಕಾಲಸ್ಥಿತಿಯು ಪರಿವರ್ತನೆ ಹೊಂದುತ್ತ ನಡೆದಿದೆ. ನಮ್ಮ ದೇಶದಲ್ಲಿಯೇ ಇತ್ತೀಚೆಗೆ ಅಂತರ್ಜಾತೀಯ ವಿವಾಹಗಳು ಬಹಳ ಸಂಖ್ಯೆಯಲ್ಲಿ ನಡೆಯತೊಡಗಿವೆ. ಜಾತಿ ಅಥವಾ ಮತಗಳು ಕೇವಲ ಸಂಪ್ರದಾಯಗಳಷ್ಟೇ ಹೊರತು, ಅವುಗಳಿಂದ ಸಮಾಜದ ಪ್ರಗತಿಗೆ, ಉದ್ಧಾರಕ್ಕೆ ಯಾವ ಪ್ರಯೋಜನವೂ ಇಲ್ಲವೆಂಬುದು ದಿನೇ ದಿನೇ ಸಿದ್ಧವಾಗುತ್ತ ಬರುತ್ತಿದೆ. ಹೀಗಾಗಿ 'ನಿಸ್ವಾರ್ಥ ಪ್ರೇಮ'ವೇ ವೈವಾಹಿಕ ಜೀವನದ ಸುಖಸೋಪಾನವಾದುದರಿಂದ ಜಾತೀಯ ಅಂತರಗಳು ಕಡಿಮೆಯಾಗುತ್ತ ಬರುತ್ತಿರುವುದು ಭವ್ಯ ಭವಿಷ್ಯದ ಸೂಚನೆಯೆನ್ನಬೇಕು ತಾನೆ?

(ಸಂಗ್ರಹ)



ಶಿಸ್ತು ಸಂವರ್ಧನೆ

ವಿಶ್ವವಿದ್ಯಾಲಯಗಳ ನಿರುತ್ಸಾಹವೆ?

ಶಿಸ್ತು ಮಾನವ ಪ್ರಶ್ನೆ; ಆದುದರಿಂದ ಮಾನವವಿಧಾನಗಳಿಂದಲೇ ಇದನ್ನು ಉತ್ತರಿಸಬೇಕು. ಈ ಬಗ್ಗೆ ವಿಶ್ವವಿದ್ಯಾಲಯಗಳು ನಿರುತ್ಸಾಹನೆಂದಿಗೂ ತೋರಿಸಬಾರದು.

ವಿದ್ಯಾರ್ಥಿಗಳಲ್ಲಿ ಅಶಿಸ್ತು ಬೆಳೆದಿರುವುದು ಸಮಸ್ತಸಾಕ್ಷರ ಮನಸ್ಸನ್ನು ತೀವ್ರ ವಿವಂಚನೆಗೀಡುಮಾಡಿರುತ್ತದೆ. ಇತ್ತೀಚೆಗೆ ಉತ್ತರ ಪ್ರದೇಶದ ಎರಡು ವಿಶ್ವವಿದ್ಯಾಲಯಗಳನ್ನು ವಿದ್ಯಾರ್ಥಿಕೋಟಲೆಗಳಿಂದಾಗಿ ಮುಚ್ಚಲ್ಪಡಬೇಕಾಗಿ ಬಂದಿತು. ಕಳೆದ ಐದು ವರ್ಷಗಳಿಂದ ನಿರಾತಂಕವಾಗಿ ಸುಶಾಂತವಾಗಿ ನಡೆದುಬಂದ ಅಂತರ್ವಿಶ್ವವಿದ್ಯಾಲಯ ಯುವಜನೋತ್ಸವವೂ ಈ ವರ್ಷ ಮೈಸೂರಿನಲ್ಲಿ ಅನಪೇಕ್ಷಣೀಯ ವಾತಾವರಣವನ್ನುಂಟುಮಾಡಿತು. ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕಳೆದೈದು ವರ್ಷಗಳಲ್ಲಿ ನಾನಾರೂಪದ ತಂಟೆಗಳು ಎದ್ದಿದ್ದುವು. ವಿದ್ಯಾರ್ಥಿಗಳು ಪ್ರದರ್ಶನ ನಡೆಸುವುದರಿಂದ ಆದಾವ ಕಾರಣಕ್ಕೇ ಇರಲಿ, ಇದೇ ರೀತಿಯ ಪರಿಸ್ಥಿತಿ ಏಳುವುದು. ಶುಲ್ಕದಲ್ಲಿ ಇಳಿತ, ಸಾಂಸ್ಕೃತಿಕ ಪ್ರದರ್ಶನ ಹಾಗೂ ಆಟಗಳಿಗೆ ಉಚಿತ ನಿರಾತಂಕ ಪ್ರವೇಶ, ಅಯೋಗ್ಯ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶ, ಪ್ರಾಧ್ಯಾಪಕರ ನಿವೃತ್ತಿ, ಪ್ರಕಟಣೆಗಳ ಬಹಿಷ್ಕಾರ, ಪರೀಕ್ಷೆಗಳಲ್ಲಿ ಅಸಭ್ಯ ವರ್ತನೆಗೆ ಹೇರಿದ ದಂಡನೆ—ಮೊದಲಾದುವುಗಳ ಬಗ್ಗೆ ವಿದ್ಯಾರ್ಥಿಗಳು ಪ್ರದರ್ಶನ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳ ಕೇಳಿಕೆಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ತಿರಸ್ಕರಿಸಿದಾಗ, ಸತ್ಯಾಗ್ರಹ, ಅನ್ನಸತ್ಯಾಗ್ರಹ, ಮೆರವಣಿಗೆ, ಸಭೆಗಳನ್ನು ಏರ್ಪಡಿಸುತ್ತಾರೆ; ನ್ಯಾಯದ ನಿಯಮಗಳನ್ನು ಮೀರಿ ನಡೆಯುತ್ತಾರೆ. ಇದರಿಂದಾಗಿ ನಡುವೆ ಪೋಲೀಸರು ಬರುವುದೂ ಆವಶ್ಯಕವಾಗಿ ಪರಿಣಮಿಸಿರುವುದಲ್ಲದೆ, ಕೆಲವೊಮ್ಮೆ ವಿಶ್ವವಿದ್ಯಾಲಯವನ್ನೇ ಮುಚ್ಚುವ ಪ್ರಸಂಗಗಳು ಬಂದಿವೆ. ಈ ದುರಂತ ಕಥೆಯು ಮರುಕೊಳಿಸುತ್ತಿದೆ. ಈ ಘಟನೆಗಳು ವಿಶ್ವವಿದ್ಯಾಲಯಗಳಿಗೆ ಮಾತ್ರವಲ್ಲ, ವಿದೇಶೀಯ ವಿದ್ಯಾರ್ಥಿಗಳನ್ನು ಆಕರ್ಷಿಸುವ ಭಾರತಕ್ಕೂ ಕಲಂಕವನ್ನು ಹಚ್ಚಿವೆ. ದೇಶವು ಪುನಾರಚನೆಯ ಕಾರ್ಯಕ್ರಮದಲ್ಲಿ ತತ್ಪರವಾಗಿರುವ ಸಮಯದಲ್ಲಿ ಇವು ಸಂಘಟಿಸುತ್ತಿರುವುದು ತೀವ್ರ ಕಳವಳದ ಸಂಗತಿಯೆನ್ನಬೇಕು. ಭಾವಿ ಜನಾಂಗವು ಈ ವಿಶ್ವವಿದ್ಯಾಲಯಗಳಿಂದ ಹೊರಬರುತ್ತಿರುವವರನ್ನೇ ಹೊಂದಿಕೊಂಡಿರಬೇಕಾಗಿರುವುದರಿಂದ, ಈ ರೀತಿಯ ಅಸಂತೋಷವು ಬೆಳೆಯುತ್ತ ಸಾಗುವುದೆಂದರೆ, ದೇಶದ ತುಂಬ ದುಷ್ಪರಿಣಾಮವನ್ನು ಬೀರುವುದೆಂದು ಅರ್ಥವಾಗುವುದು. ನಮ್ಮ ರಾಷ್ಟ್ರೀಯ ಜೀವನವನ್ನೇ ನಷ್ಟಗೊಳಿಸುವ ಈ ದುರಾಚಾರಗಳನ್ನು ಅವಶ್ಯ ತಡೆಗಟ್ಟಬೇಕು.

ವಿದ್ಯಾಸಂಸ್ಥೆಗಳು ಹೊಸ ತತ್ವಗಳಿಗೆ ಆಸ್ಪದ ಕೊಡುವತ್ತ ವಿಶೇಷ ಗಮನ ಹರಿಸದಿರುವುದು; ತೀವ್ರ ಪರಿವರ್ತನೆಯ ಯುಗದಲ್ಲಿವು ಅನಾಸಕ್ತಿ ವಹಿಸುವುದು ಹಾಗೂ ಸದ್ಯದ ನಿರುದ್ಯೋಗ ಸಮಸ್ಯೆ ಕಾರಣದಿಂದ ಅದೃಢಮನದಿಂದ ಕೂಡಿದ ವಿದ್ಯಾರ್ಥಿಗಳ ಚಂಚಲತೆಯೂ ಈ ಅನಾಹುತಗಳಿಗೆ ಕಾರಣವಾಗುತ್ತವೆ. ಹೆತ್ತವರು ತಮ್ಮ ಮಕ್ಕಳ ಮೇಲೆ ಉಚಿತ ನಿಯಂತ್ರಣ ಹೇರಲು ಅಸಮರ್ಥರಾದುದರಿಂದ ಮತ್ತು ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳಿಂದ ಗೌರವ, ವಿಧೇಯತೆ, ವಿಶ್ವಾಸಗಳನ್ನು ಗಳಿಸಲಾರರಾದುದರಿಂದ ಈ ಸ್ಥಿತಿಯುಂಟಾಗಿದೆ. ಕೆಲವೆಡೆಯಲ್ಲಿ ಅಧ್ಯಾಪಕರೇ ಪ್ರದರ್ಶನಮಾಡುವಂತೆ ವಿದ್ಯಾರ್ಥಿಗಳನ್ನು ಹುರಿದುಂಬಿಸುವುದೂ ಇದೆ. ಇನ್ನು ಕೆಲವು ರಾಜಕಾರಣಿಗಳೂ ಇದ್ದಾರೆ. ಇವರು ಮೊದಲೇ ಕದಡಿದ ನೀರಲ್ಲಿ ಮೀನು ಹಿಡಿಯಬಯಸಿ, ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಅದರ ಉಪಯೋಗ ಪಡೆಯುತ್ತಾರೆ; ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನು ಅಸಭ್ಯ ವ್ಯವಹಾರಕ್ಕೆ ಇಳಿಯುವಂತೆ ಪ್ರೇರೇಪಿಸುವುದು ಮತ್ತು ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೋಸ್ಕರ ವಿದ್ಯಾರ್ಥಿಗಳ ಉಪಯೋಗಮಾಡಿಕೊಳ್ಳುವಷ್ಟು ನೀಚಮಟ್ಟದ ಅಪರಾಧ ಮತ್ತೊಂದಿಲ್ಲ. ಇದು ಕೇವಲ ಅಪರಾಧವಲ್ಲ, ಮೂರ್ಖತೆಯ ಪರಮಾವಧಿಯೂ ಹೌದು.

ರಾಜ್ಯಗಳು ಸ್ವತಂತ್ರ ವಾತಾವರಣದಲ್ಲಿ ಗೌರವಸ್ಥ ವಿದ್ವಾಂಸರ ಮಾರ್ಗದರ್ಶನದಿಂದ ತಮ್ಮ ವಿದ್ಯಾರ್ಥಿಗಳು ಅಭ್ಯಸಿಸಿ ಸತ್ಯಶೋಧನೆ ಮಾಡಿ ಜ್ಞಾನಗಳಿಸಬೇಕೆಂಬ ಇರಾದೆಯಿಂದ ವಿಶ್ವವಿದ್ಯಾಲಯಗಳನ್ನು ವಿಶಿಷ್ಟ ರೀತಿಯಲ್ಲಿ ಸ್ಥಾಪಿಸಿವೆ. ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರ ಸುಮಧುರ ಬಾಂಧವ್ಯದಲ್ಲಿಯೇ ಇವುಗಳ ಯಶಸ್ಸಿದೆ ಈ ಸಂಬಂಧವು ತಪ್ಪಿಹೋದಾದಲ್ಲಿ ವಿಶ್ವವಿದ್ಯಾಲಯದ ಗೌರವವು ಅಧಃಪತನವಾದಂತೆ. ಶಾಂತಿ ರಕ್ಷಣೆಗಾಗಿ ವಿಶ್ವವಿದ್ಯಾಲಯದ ವಠಾರದಲ್ಲಿ ಪೋಲೀಸು ತರುವುದು ಯಾರಿಗೂ ಮರ್ಯಾದೆಯದ್ದಲ್ಲ. ಅಧ್ಯಾಪಕರು ವಿದ್ಯಾರ್ಥಿಗಳ ಮೇಲಿನ ಹಿಡಿತವನ್ನು ಸಡಿಲಿಸಿದರೆ, ವಿದ್ಯಾರ್ಥಿಗಳು ಕಾನೂನನ್ನು ತಮ್ಮ ವಶಪಡಿಸಿಕೊಂಡರೆ, ಆಗ, ರಾಜ್ಯವು ವಿಶ್ವವಿದ್ಯಾನಿಲಯದ ಸಹಾಯಕ್ಕೆ ಧಾವಿಸಬೇಕಾಗುವುದು. ವಿಶ್ವವಿದ್ಯಾಲಯದಲ್ಲಿ ಪೋಲೀಸರು ಪ್ರವೇಶಿಸುವುದು ಎಂದೆಂದಿಗೂ ಸಲ್ಲಕ್ಷಣವಲ್ಲ. ಆದರೆ, ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರ ಅಧಿಕಾರವನ್ನು ಧಿಕ್ಕರಿಸಿದರೆ, ಅವರಿಂದ ಮಾರ್ಗದರ್ಶನ ಪಡೆಯುವುದನ್ನು ಬಿಟ್ಟು, ಅವರ ಗುಣನಡತೆಯನ್ನು ವಿಮರ್ಶಿಸತೊಡಗಿದರೆ, ಈ ಇರ್ವರ ನಡುವಣ ಸಂಬಂಧವು ಮಾಯವಾಗುವುದು; ಆಗಲೇ ವಿದ್ಯಾಜೀವನದ ಅಂತ್ಯಕಾಲವು ಕಾಣಿಸಿಕೊಳ್ಳುವುದು.

ವಿದ್ಯಾರ್ಥಿಗಳ ಕೇಳಿಕೆಗಳನ್ನು ಸಹಾನುಭೂತಿಪರವಾಗಿ ಪರಿಶೀಲಿಸುವಾಗ ವಿಶ್ವವಿದ್ಯಾಲಯಗಳ ಅಧಿಕಾರಿಗಳು ತುಸು ಕಠೋರವಾಗಿ ವರ್ತಿಸಬೇಕು. ಪ್ರತ್ಯಕ್ಷ ಕಾರ್ಯಕ್ರಮವನ್ನು ಕೈಗೊಳ್ಳಲು ಅವರು ಹಿಂದೆಮುಂದೆ ನೋಡಬಾರದು. ವಿದ್ಯಾರ್ಥಿಗಳ ಹಿತರಕ್ಷಣೆಯೂ ಅವರ ಪರಮ ಕರ್ತವ್ಯಗಳಲ್ಲಿ ಒಂದಾಗಿದೆ. ಸತ್ಯಾಗ್ರಹ, ಮೆರವಣಿಗೆ ಇತ್ಯಾದಿಗಳಿಂದ ವಿದ್ಯಾವಾತಾವರಣವು ಕಲ್ಮಷಗೊಳ್ಳುವುದು. ಅಲ್ಲದೇ ವಿಶ್ವವಿದ್ಯಾಲಯದ ವಿದ್ಯಾರ್ಥಿಜೀವನಕ್ಕೆ ಮೃತ್ಯುಪ್ರಾಯವೆನಿಸುವುದು. ವಿದ್ಯಾರ್ಥಿಸಂಘಗಳ ನೇತೃತ್ವದಲ್ಲಿ ಏರ್ಪಡಿಸಲಾಗುವ ಇಂತಹ ವಿಘಾತಕ ಚಟುವಟಿಕೆಗಳಿಗೆ ಎಂದಿಗೂ ಆಸ್ಪದ ನೀಡಬಾರದು. ಇವುಗಳಲ್ಲಿ ನಿರತರಾಗುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ದೊರೆಯಬಾರದಾದುದರಿಂದ ಅವರ ಮೇಲೆ ಶಿಸ್ತಿನ ಕಾರ್ಯಕ್ರಮ ತೆಗೆದುಕೊಳ್ಳಲು ಅಧಿಕಾರಿಗಳು ಸಂಕೋಚಪಟ್ಟುಕೊಳ್ಳಬಾರದು.

ವಿದ್ಯಾರ್ಥಿಗಳು ತಮ್ಮೆದುರು ತಿರುಗಿಬಿದ್ದ ಸನ್ನಿವೇಶದಲ್ಲಿ ಅಧ್ಯಾಪಕರು ಕರ್ತವ್ಯಚ್ಯುತರಾಗದಂತೆ ತಿಳಿಸಿಹೇಳುವುದು ವಿಶ್ವವಿದ್ಯಾಲಯಗಳ ಕೆಲಸ. ವಿದ್ಯಾರ್ಥಿಗಳು ಸಾಮೂಹಿಕವಾಗಿ ಅವರ ಮೇಲೆ ಏರಿಹೋಗಬೇಕಾದರೆ, ಅವರಲ್ಲಿಯೂ ಏನಾದರೂ ವಿಚಿತ್ರ ಕೊರತೆಯಿರಬೇಕಾದುದು ಸ್ವಾಭಾವಿಕವೇ. ಉತ್ತಮ ಆಡಳಿತೆಯ, ಜವಾಬ್ದಾರಿ ತಿಳಿದಿರುವ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಪೂರೈಸುತ್ತಿರುವ ಮತ್ತು ತಮ್ಮ ವಿದ್ಯಾರ್ಥಿಗಳನ್ನು ಪ್ರೀತಿಸುತ್ತಿರುವ ಅಧ್ಯಾಪಕರಿರುವ ವಿದ್ಯಾಸಂಸ್ಥೆಗಳಲ್ಲಿ ಅಶಿಸ್ತುವೆಂಬುದಿರುವುದಿಲ್ಲ. ಆಡಳಿತೆಯವರೂ ಅಧ್ಯಾಪಕರೂ ವಿದ್ಯಾರ್ಥಿಗಳ ಹಿತಕ್ಕಿಂತ ತಮ್ಮ ಸ್ವಾರ್ಥದೃಷ್ಟಿಯತ್ತ ಗಮನಹರಿಸುವಲ್ಲಿ, ವಿದ್ಯಾರ್ಥಿಗಳೊಡನೆ ವೈಯಕ್ತಿಕ ಸಂಬಂಧವಿಟ್ಟುಕೊಳ್ಳದೆ ತಮ್ಮ ಪ್ರತಿಷ್ಠೆ ಮತ್ತು ಲಾಭಕ್ಕಾಗಿ ಕೆಲಸಮಾಡುವಲ್ಲಿ, ತಮ್ಮ ಕರ್ತವ್ಯವನ್ನು ತ್ಯಜಿಸುವಲ್ಲಿ ಮಾತ್ರ ಈ ಅಶಿಸ್ತು ಬೀಜ ಅಂಕುರಿಸುವುದು. ಆದುದರಿಂದ ವಿಶ್ವವಿದ್ಯಾಲಯವು ಈ ಅಶಿಸ್ತನ್ನು ಆ ಮೂಲ ಕತ್ತರಿಸಬಯಸುವುದಾದರೆ ಇಂತಹ ಅಪ್ರಾಮಾಣಿಕ ಅಧ್ಯಾಪಕರತ್ತ ತುಸು ದೃಷ್ಟಿಹರಿಸಬೇಕಾಗುವುದು. ಅಧ್ಯಾಪಕ—ವಿದ್ಯಾರ್ಥಿ ಸಂಬಂಧವು ಬಿಗಿಯಾಗುವಂತೆ ಆವಶ್ಯಕ ಕ್ರಮ ಕೈಗೊಳ್ಳಬೇಕು. ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ಅಂಕೆಯಲ್ಲಿರಿಸುವುದು ಸಾಧ್ಯವಿಲ್ಲ. ಆದುದರಿಂದ ಚಿಕ್ಕ ಪುಟ್ಟ ಪಂಗಡಗಳನ್ನು ಮಾಡಿ, ಅವರನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಉತ್ತರದಾಯಿತ್ವವನ್ನು ಅಧ್ಯಾಪಕನಿಗೆ ಕೊಡಬೇಕು. ಅಧ್ಯಾಪಕರು ತಮ್ಮ ಪಂಗಡದವರ ವಿದ್ಯೆ, ಅಭ್ಯಾಸ ಮಾತ್ರವಲ್ಲ, ಜತೆಗೆ ಗುಣ ಆಚರಣೆಯತ್ತವೂ ವಿಶೇಷ ಗಮನ ಹರಿಸಬೇಕು. ವಿಶ್ವವಿದ್ಯಾಲಯಗಳು ಅಧ್ಯಾಪಕ—ವಿದ್ಯಾರ್ಥಿ ಸಂಬಂಧವನ್ನು ಅತಿನಿಕಟಗೊಳಿಸಲು

(೯ನೇ ಪುಟ ನೋಡಿರಿ)

Notice.

In the Court of the District Munsif of Karkala.

O. S. No. 518/1959

Between:—

Ammi alias Shridevi Amma — Plaintiff.

and

Deju Hengsu and others— Defendants.

3rd defendant Jaiappa, 4th defendant Nagamma—children of Deju Hengsu. Both are residing in Nithade village of Belthangady Taluk.

Whereas the above-named plaintiff has instituted the above suit for recovery of the mortgage amount of Rs. 2564=58 and costs etc. and the said suit stands posted to 2—3—1960, You are hereby informed that you are at liberty to appear before the said Court on the said date at 11 A. M. and plead your defence, if any, failing which the suit will be heard and decided in your absence.

H. P. A. Jain,
Pleader for Plaintiff.

Karkala, 10—2—1960.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

The Moolky Bank Ltd.,
Mulki.

NOTICE.

The 30th Annual General Meeting of the Bank will be held at the Registered Office of the Bank on Saturday the 5th March, 1960, at 10 A. M.

The Register of Members and Transfer Books of the Bank will be closed from 22—2—1960 to 7—3—1960 (both days inclusive).

(Sd.) M. R. H. Punja,
Manager.

ವಿಚಾರವೀಚಿ

ಭೂಮಿಯೂ ತೇಲುತ್ತಿರುವುದಂತೆ!

ಕಠಿಣವಾದ ನಾವು ವಾಸಿಸುವ ಈ ಪೃಥ್ವಿ ಗೋಲಾಕಾರವಾಗಿದೆ; ತಿರುಗುತ್ತಿದೆ ಸರಿಯೆ; ಅದು ತೇಲುತ್ತಿರುವುದೆಂಬ ವಿಜ್ಞಾನಿಗಳ ವಾದವನ್ನು ಅಭ್ಯಸಿಸುವಿರಾ?

ಅನೊಂದು ಕಾಲವಿತ್ತು. ಆಗ ನಾವು ಬಂಗಾಲದಿಂದ ಆಸ್ಟ್ರೇಲಿಯಾದ ವರೆಗೆ ಮತ್ತು ಬ್ರೇಜಿಲ್‌ನಿಂದ ಗೋಲ್ಡ್ ಕೋಸ್ಟಿನ ವರೆಗೆ ಯಾವುದೇ ಸಮುದ್ರವನ್ನು ದಾಟದೇನೇ ನಡೆದುಕೊಂಡು ಹೋಗಬಹುದಾಗಿತ್ತು. ಏಕೆಂದರೆ, ಆ ಸಮಯದಲ್ಲಿ ಈ ಎಲ್ಲ ಭೂಭಾಗಗಳೂ ಒಂದರೊಡನೊಂದು ಕೂಡಿಕೊಂಡಿದ್ದುವು. ಭೂಗೋಲದ ನಕ್ಷೆಯೂ ಅದಕ್ಕೆ ಸರಿಯಾಗಿತ್ತು. ಆದರೆ, ಕಾಲಾನುಕಾಲದಲ್ಲಿ ಏನೋ ಕಾರಣದಿಂದ ಪ್ರತ್ಯೇಕಿಸಿ ಹೋದ ಈ ಭಾಗಗಳು ಬಹಳಷ್ಟು ದೂರದಲ್ಲಿಯೇ ಸೇರಿಹೋದುವು. ಇದರ ಕಾರಣವನ್ನು ಬೇರೆ ಬೇರೆ ವಿಜ್ಞಾನಿಗಳು ಬೇರೆ ಬೇರೆ ರೀತಿಯಾಗಿ ವರ್ಣಿಸುತ್ತಾರೆ.

ಭೂಮಿಯು ಪ್ರಾರಂಭದಲ್ಲಿ ಉರಿಯುವ ಕಿರಣಗಳ ಪಿಂಡವಾಗಿತ್ತೆಂಬುದೀಗ ಎಲ್ಲರೂ ಒಪ್ಪಿಕೊಂಡಿರುವ ವಿಷಯ. ಕ್ರಮೇಣ ಈ ರಶ್ಮಿಗಳು ತಣ್ಣಗಾಗುತ್ತ ಮುದುಡುತ್ತ ಇಂದಿನ ರೂಪಧಾರಣೆ ಮಾಡಿತು. ತಣ್ಣಗಾಗುವ ಪ್ರಕ್ರಿಯೆಯಿಂದ ಭೂಮಿಯ ಮೇಲ್ ಹೊದಿಕೆ ಸಿದ್ಧವಾಯಿತು. ಆದರೆ, ಅದರೊಳಗಿನ ಭಾಗವು ಹಿಂದಿನಂತೆಯೇ ಬಿಸಿಯಾಗಿಯೂ ಮೆತ್ತಗಾಗಿಯೂ ಇತ್ತು.

ಪ್ರಸಿದ್ಧ ಭೂತತ್ತ್ವವೇತ್ತ ಶ್ರೀ ಲೋಥಿಯನ್ ಗ್ರೀನ್ ಎಂಬವನು ಹೀಗೆ ಅಭಿಪ್ರಾಯ ಪಡುತ್ತಾನೆ: "ಭೂಮಿಯ ಅಂತರಂಗವು ಈಗಲೂ ಉಷ್ಣ ಮತ್ತು ತರಲವಾಗಿದೆ. ಹೊರ ಹೊದಿಕೆ ನಿರ್ಮಾಣವಾದನಂತರ ಭೂಮಿಯ ಬಾಹ್ಯಭಾಗ ಸಂಕೋಚಗೊಳ್ಳುವುದು ಕಡಿಮೆ. ಆದರೆ, ಅದರ ಅಂತರಂಗವು ಹಿಂದಿನಂತೆಯೇ ಮುದುಡುತ್ತದೆ. ಈ ರೀತಿ ಒಮ್ಮೆ ಸಂಕುಚಿತವಾದಾಗ, ಗೋಲಾಕಾರವಾದ ಭೂಮಿಯ ಹೊರಭಾಗವು ಹೂತುಹೋಗಿ, ಅದರ ಆಕಾರವು ಒಂದು ಸಮತ್ರಿಭುಜದಂತಾಯಿತು. ಇದು ನಾಲ್ಕು ಸಮತ್ರಿಭುಜಗಳನ್ನು ಒಟ್ಟುಗೂಡಿಸಿದರೆ, ಆಗುತ್ತದೆ. ಒಂದು ತ್ರಿಭುಜ ಆಧಾರವಾಗುತ್ತದೆ, ಉಳಿದುವು ಅದರ ಮೇಲಿನ ಗೋಡೆಗಳಾಗಿರುತ್ತವೆ."

ಹೂತು ಹೋದ ಭೂಮಿಯ ತಳದ ಮೇಲೆ ನೀರು ತುಂಬಿ ಬಂತು; ಇವಕ್ಕೆ ಮಹಾಸಾಗರ ಎಂಬ ಹೆಸರಿಡಲಾಯಿತು. ಎದ್ದು ನಿಂತಿರುವ ಎರಡು ತ್ರಿಭುಜಗಳ ಕಿನಾರೆಯ ಭಾಗವನ್ನು ಮಹಾದ್ವೀಪವೆನ್ನಲಾಯಿತು. ತ್ರಿಭುಜಾಕಾರದ ಭಾಗಗಳಲ್ಲಿ ನೀರು ತುಂಬದುದರಿಂದ, ಭೂಮಿಯ ಆಕಾರವು ಪುನಃ ಗೋಲಾಕಾರವೇ ಆಯಿತು—ಇದನ್ನು ಟೆಟ್ರಹೇಡ್ರಲ್ ಸಿದ್ಧಾಂತವೆನ್ನುತ್ತಾರೆ; ಇಂದಿನ ಪ್ರಸಿದ್ಧ ಭೂತತ್ತ್ವ ವಿಶಾರದ ಜಿ. ಡಬ್ಲ್ಯು. ಗ್ರೆಗರಿಯವರು ಇದನ್ನು ಬಲವಾಗಿ ಸಮರ್ಥಿಸುತ್ತಾರೆ.

ಇನ್ನೊಬ್ಬ ಭೂತತ್ತ್ವವೇತ್ತ ಸುಯೇಸ್ ಎಂಬವನ ಅಭಿಪ್ರಾಯ ಇದರಿಂದ ಭಿನ್ನವಾಗಿದೆ. ಭೂಮಿಯ ಬಾಹ್ಯತಳವು ಎರಡು ಪ್ರಕಾರದ್ದಿದ್ದು, ಒಂದು ಸಂಕೋಚಗೊಳ್ಳುವುದು; ಇನ್ನೊಂದು ಸಂಕೋಚಗೊಳ್ಳದು. ಅಸಂಕುಚನಶೀಲ ಪ್ರದೇಶಗಳ ಬಂಡೆಗಳು ಕಠೋರವಾಗಿರುತ್ತವೆ. ಹೊಡೆತ ತಿಂದೊಡನೆ ಇವು ಒಡೆದುಹೋಗುವುವಾದರೂ ಪುಡಿಯಾಗುವುದಿಲ್ಲ. ಇಂತಹ ಭೂಖಂಡಗಳು ಈ ಕೆಳಗಿನವು: ೧. ಲಾರೇಶಿಯಾ (ಕೆನಡಾದ ರಾಕ್ಕಿ ಪರ್ವತದ ಪೂರ್ವದ ಬಹುಭಾಗ ಮತ್ತು ಪಶ್ಚಿಮ ಸ್ಕೋಟ್‌ಲೇಂಡ್) ೨. ಬಾಲ್ಟಿಕ್ ಪ್ರದೇಶ, ೩. ಅಂಗಾರಾ ಪ್ರದೇಶ (ಪೂರ್ವ ಸೈಬೀರಿಯಾ) ೪. ಗೊಂಡವಾನಾ ಪ್ರದೇಶ (ಬ್ರೇಜಿಲ್‌ನ ಪೂರ್ವ ಕಿನಾರೆ, ಆಫ್ರಿಕದ ಬಹಳಷ್ಟು ಭಾಗ, ಅರಬ, ಸಿರಿಯಾ, ದಕ್ಷಿಣ ಭಾರತ, ಆಸ್ಟ್ರೇಲಿಯಾದ ಪಶ್ಚಿಮ ಕಿನಾರೆ!

ಆದರೆ, ಈ ಅಸಂಕುಚನಶೀಲ ಭಾಗಗಳ ನಡುವಿನ ದಿನ್ನೆಗಳು ಸಂಕುಚನವಾಗಿದ್ದುವು. ಈ ಭಾಗಗಳನ್ನು 'ಜಿಯೊಸಿಂಕ್ಲಾಯಿನ್ಸ್' ಎಂಬ ಹೆಸರಿನಿಂದ ಕರೆಯುತ್ತಾರೆ. ಸಂಕುಚನಶೀಲ ದಿನ್ನೆಗಳೆಲ್ಲ ಪುಡಿಯಾಗಿ ಅಸಂಕುಚನಶೀಲ ದಿನ್ನೆಗಳು ಮುರಿದುಹೋಗಿ ಭೂಗರ್ಭದಲ್ಲಿ ಹೂತುಹೋದುವು. ಇದರಿಂದಾಗಿ ಆ ಭಾಗದಲ್ಲಿ ಹೊಂಡಗಳು ಕಾಣಿಸಿದುವು. ಇದರ ಕೆಳಗಡೆ ನೀರುತುಂಬಿಹೋಗಿ, ಮಹಾಸಾಗರವಾಯಿತು. ಉಳಿದುವು ಒಣಗಿಹೋಗಿ ಮಹಾದ್ವೀಪವಾಯಿತು ಎಂದು ಸುಯೇಸ್ ಹೇಳುತ್ತಾನೆ.

ಗೊಂಡವಾನಾ ಪ್ರದೇಶದಲ್ಲಿ ದಕ್ಷಿಣ ಅಮೆರಿಕೆ ಮತ್ತು ಆಫ್ರಿಕಾಗಳ ನಡುವಿನ ಅಸಂಕುಚನ ಪ್ರದೇಶದ ಹೊಂಡಕ್ಕೆ ಅಟ್ಲಾಂಟಿಕ ಸಾಗರವೆಂದು ಹೆಸರು. ಉತ್ತರ ಮತ್ತು ದಕ್ಷಿಣ ಗೋಲಾರ್ಧಗಳ ನಡುವಿನಲ್ಲಿ ಒಂದು ಸಂಕುಚನ ಶೀಲ ಪ್ರದೇಶವು ಸಮುದ್ರದಡಿಯಲ್ಲಿತ್ತು. ಸುಯೇಸನು ಇದನ್ನು ಥಿಟಿಸ್ ಸಾಗರವೆಂದು ಹೆಸರಿಸಿದನು. ಇಂದಿನ ಭೂಮಧ್ಯ ಸಾಗರವು ಅದರ ಅವಶೇಷವಾಗಿದೆ. ಉತ್ತರ ಮತ್ತು ದಕ್ಷಿಣದ ಅಸಂಕುಚನ ಪ್ರದೇಶಗಳ ಹೊಡೆದಾಟದಿಂದ ಥಿಟಿಸ್ ಸಾಗರದ ತಳದ ಮೇಲೆ ಅಲ್ಲಕಲ್ಲೋಲವೆದ್ದು, ಏಶ್ಯಾ ಮತ್ತು ಯುರೋಪದ ಪರ್ವತ ಶ್ರೇಣಿಗಳು ಉದಿತವಾದುವು.

ಅಣುವಿಕರಣದ ನಿಯಮಗಳನ್ವಯ ಸಾಗರ ಮತ್ತು ಮಹಾ ದ್ವೀಪಗಳ ರಚನೆಯ ವ್ಯಾಖ್ಯೆಯನ್ನು ಜಾಲೀ ಎಂಬವನು ಮಾಡಿದ್ದಾನೆ. ಆತನೆನ್ನುತ್ತಾನೆ: ಭೂಮಿ ಭಾಗವು "ಸಿಯಾಲ್"ನ ಖಂಡದಿಂದ ಮತ್ತು ಮಹಾ ಸಾಗರಗಳ ತಳವು "ಸೀಮಾ"ದಿಂದ ನಿರ್ಮಿತವಾಗಿದೆ. ಸೀಮ ವಸ್ತುಗಳಲ್ಲಿ "ಸಿಲಿಕಾ" ಮತ್ತು ಕಾಂತತ್ವಗಳು ಹೆಚ್ಚಿರುವುದರಿಂದ, ಅವು ಅಪರಿಮಿತವಾಗಿದೆ. ಮೇಲಿನ "ಸಿಯಾಲ್" ಪ್ರದೇಶವು "ಸಿಲಿಕಾ" ಮತ್ತು ಅಲ್ಯುಮಿನಿಯಂನಿಂದ ನಿರ್ಮಿತವಾಗಿರುವುದರಿಂದ ಅದು ಅಪ್ಲವಿಸುವುದು ಮಾತ್ರವಲ್ಲ; ಗಟ್ಟಿಯಾಗಿದೆ. ಮತ್ತು ಅದು 'ಸೀಮಾ'ದೊಳಗೆ ಮುಳುಗೇಳುತ್ತಇದೆ. 'ಸೀಮಾ' ಖಂಡದಲ್ಲಿ ಪದೇಪದೇ ಸಂಕೋಚ ಮತ್ತು ವಿಸ್ತಾರಗಳು ಆಗುವುದರಿಂದ, ಮೇಲಿರುವ 'ಸಿಯಾಲ್' ಭಾಗದಲ್ಲಿ ನೆರಿಬಿದ್ದು ಪರ್ವತಾದಿಗಳು ನಿರ್ಮಾಣಗೊಳ್ಳುತ್ತವೆ. ಹೀಗಾಗುತ್ತ ಇಂದಿನ ಈ ಭೂಮಿಯು ನಿರ್ಮಾಣಗೊಂಡಿದೆ."

ಆದರೆ, ಮಹಾದ್ವೀಪ ವಿಚಲನ ಸಿದ್ಧಾಂತವನ್ನು ಪ್ರಸಿದ್ಧ ಜರ್ಮನ್ ವಿಜ್ಞಾನಿ ಆಲ್‌ಫ್ರೆಡ್ ವೈಗ್ನರನು ಕಂಡುಹಿಡಿದಿದ್ದು ಅದೇ ಇಂದು ಪ್ರಚಲಿತವಿದೆ. ಈತನೂ ಜಾಲಿಯಂತೆಯೇ ಸಿಯಾಲ ಖಂಡವು ಸೀಮಾ ಖಂಡದಲ್ಲಿ ಈಜುತ್ತಿದೆ ಎನ್ನುತ್ತಾನೆ.

ಮಹಾದ್ವೀಪ ವಿಚಲನ ಸಿದ್ಧಾಂತದಂತೆ ಪ್ರಾಚೀನ ಕಾಲದಲ್ಲಿ ಎಲ್ಲ ಭೂಖಂಡಗಳೂ ದಕ್ಷಿಣ ಧ್ರುವದ ನಾಲ್ಕೂ ಕಡೆಗಳಲ್ಲಿ ಒಂದೇ ಮಹಾದ್ವೀಪದಂತೆ ಸೇರಿಕೊಂಡಿತ್ತು. ಈ ಭೂಖಂಡದ ಹೆಸರನ್ನು ವೈಗ್ನರನು "ಪೆಂಜಿಯಾ" ಎಂದು ಇಟ್ಟಿದ್ದನು. ಪೃಥ್ವಿಯ ಉಳಿದ ಭಾಗವೆಲ್ಲವೂ ವಿಸ್ತಾರ ಸಮುದ್ರದಿಂದ ಆವರಿಸಲ್ಪಟ್ಟಿತ್ತು. ಮುಂದೆ ಕಾಲಕ್ರಮದಲ್ಲಿ ಈ ಮಹಾ ದ್ವೀಪವು ಖಂಡಗಳಾಗಿ ವಿಂಗಡಿಸಲ್ಪಟ್ಟು ಬೇರೆ ಬೇರೆಯಾಗಿ ತೇಲಿ ಹೋದುವು. ಹೀಗೆ ಒಂದಾಗಿದ್ದ ಮಹಾದ್ವೀಪ 'ಪೇಂಜಿಯಾ" ಇಂದು ಆರು ಭೂಖಂಡಗಳಾಗಿ ಹಂಚಿ ಹೋಯಿತು.

ಪ್ರಾರಂಭದಲ್ಲಿ ವಿಚಲನೆಯ ಗತಿಯು ಉತ್ತರ ದಕ್ಷಿಣದಿಂದ ಪ್ರಾರಂಭವಾಗಿ ಭೂಮಧ್ಯ ರೇಖೆಯತ್ತ ಹೋಯಿತು. ಆದುದರಿಂದ ಗೊಂಡವಾನಾ ಪ್ರದೇಶದಿಂದ ಆಸ್ಟ್ರೇಲಿಯಾ ಮತ್ತು ದಕ್ಷಿಣ ಧ್ರುವ ಪ್ರದೇಶಗಳು ಎಳೆಯಲ್ಪಟ್ಟು ಈಜಾಡುತ್ತ ದಕ್ಷಿಣ ಆಫ್ರಿಕಾ ಮತ್ತು ಭಾರತದಿಂದ ಬೇರೆಯಾಗಿ ಬಹುದೂರ ಸರಿದು ಹೋದುವು. ಇದರ ನಂತರ ಎರಡನೆಯ ಬಾರಿಗೆ ಎಳೆತ ಪ್ರಾರಂಭವಾಯಿತು. ಇದರಲ್ಲಿ ಎರಡೂ ಅಮೆರಿಕಾ ಮಹಾದ್ವೀಪಗಳು ಹರಿದು ಯುರೋಪು ಮತ್ತು ಆಫ್ರಿಕದಿಂದ ಪಶ್ಚಿಮದ ಕಡೆಗೆ ಹರಿಯ ಹೋದುವು.

ಈ ಸಿದ್ಧಾಂತವನ್ನು ಪುಷ್ಟೀಕರಿಸುವ ಸಲುವಾಗಿ ಹಲವಾರು ವಿಷಯಗಳನ್ನು ಪ್ರಸ್ತಾಪಿಸಬಹುದು. ಒಂದು ಹರಿದ ಕಾಗದದ ಎಲ್ಲ ತುಂಡುಗಳೂ ನಮ್ಮೊಡನಿರುವುವಾದರೆ, ಅವೆಲ್ಲವನ್ನೂ ಒಂದುಸೇರಿಸಿ ಪುನಃ ಮೊದಲಿನ ಆಕಾರಕ್ಕೇನೇ ತಂದು ನಿಲ್ಲಿಸುವುದು ಸಾಧ್ಯತಾನೆ? ಹಾಗೆಯೇ ಈಗಿರುವ ಭೂಖಂಡಗಳ ಅಂಚುಗಳನ್ನು ಒಂದಾಗಿ ಸೇರಿಸಿ, ಅವಕ್ಕೆ ಒಂದೇ ಭೂಖಂಡದ ಆಕಾರ ಕೊಡುವುದು ಸಾಧ್ಯವೆಂದು ಹೇಳಲಾಗುತ್ತಿದೆ. ನೀವು ಬ್ರೆಜಿಲನ್ನು ಗಿನೀಕೊಲ್ಲಿಯಲ್ಲಿ, ಆಸ್ಟ್ರೇಲಿಯಾವನ್ನು ಬಂಗಾಳಕೊಲ್ಲಿಯಲ್ಲಿ, ಲಾರೇಂಶಿಯಾವನ್ನು ಬಾಲ್ಟಿಕ್ ಸಮುದ್ರದಲ್ಲಿ ಒಂದೇ ಭೂಖಂಡದಂತೆ ಸೇರಿಸಬಲ್ಲಿರಿ. ಅಲ್ಲದೇ ಈ ಪ್ರಮಾಣಗಳು ಈ ಸಿದ್ಧಾಂತವನ್ನು ಪುಷ್ಟೀಕರಿಸುತ್ತವೆ— ಮೊದಲು ಒಟ್ಟಿಗಿದ್ದು ಅನಂತರ ಬೇರೆಯಾದ ಮಹಾ

(೮ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪ್ರೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.**

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ತೆಂಗಿನ ತೋಟ ಮಾರಾಟಕ್ಕಿದೆ.

ಉಡುಪಿ ಪೇಟೆಯಿಂದ ಅರ್ಧ ಮೈಲಿನ ದೂರದಲ್ಲಿ, ರಸ್ತೆಗೆ ತೀರ ಸಮೀಪದಲ್ಲಿ, ಸುಮಾರು 57 ಸೆಂಟ್ಸ್ ವಿಸ್ತೀರ್ಣದ ತೆಂಗಿನ ತೋಟ ಮಾರಾಟಕ್ಕಿದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

× C/o **ನವಯುಗ**
ಉಡುಪಿ.

ನಿರ್ಣಯವೆಂಬುದು ಗಟ್ಟಿ ಬಂಗಾರವಿದ್ದಂತೆ. ಕಾರ್ಯರೂಪೀ ಅಗ್ನಿಯಲ್ಲಿ ಪರೀಕ್ಷೆಯಾಗದವರೆಗೆ ಅದರ ಗುಣಾವಗುಣಗಳು ಹೇಗೆ ಗೊತ್ತಾಗಬೇಕು ?

NAVAYUGA

Founder:—

Late Sri **A B SHETTY**,
Former Minister for Public Health
Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೬-೨-'೬೦	೨೪

ಅಚಲ ನಿಲುವೆಗೆ ಬೆಂಬಲ

ಲೋಕಸಭೆಯು ಅಧ್ಯಕ್ಷರ ಭಾಷಣದ ಮೇಲಿನ ಚರ್ಚೆಯನ್ನು ಮುನ್ನಡೆಸುತ್ತ ಬರುತ್ತಿರುವಾಗ, ಭಾರತ-ಚೀನಾ ಸೀಮಾವಿವಾದವೇ ಸರ್ವಪ್ರಧಾನ ಸ್ಥಾನವನ್ನು ಪಡೆಯಿತು. ಭಾರತದ ಸೀಮೆಯನ್ನು ಚೀನವು ಅತಿಕ್ರಮಿಸಿ ಮುಂದೆ ಬಂದಿರುವಾಗ, ಅದು ತಾಗೈದ ಆಕ್ರಮಣವನ್ನು ಹಿಂದೆಗೆದುಕೊಳ್ಳದೆ ಹೋದರೆ, ಸಂಧಾನ ಮಾಡುವುದರಿಂದ ನಿರುಪಯೋಗವೆಂದು ಸದಸ್ಯರು ಅಭಿಪ್ರಾಯಪಟ್ಟಿರುವರು. ಪ್ರಸವಾ ಪಕ್ಷದ ಅಧ್ಯಕ್ಷ ಶ್ರೀ ಅಶೋಕ ಮೆಹತ ಅವರು ಈ ಬಗ್ಗೆ ಖಂಡತುಂಡವಾದ ಮಾತಿನಲ್ಲಿಯೇ ತನ್ನ ಮತವನ್ನಿತ್ತಿರುವರು. ಇದೇ ರೀತಿಯಾಗಿ ಕಮ್ಯುನಿಸ್ಟೇತರ ಸದಸ್ಯರಲ್ಲೆಲ್ಲಾ ಚೀನದ ವರ್ತನೆಯ ಬಗ್ಗೆ ಜಿಗುಪ್ಸೆ ಮಾತ್ರವಲ್ಲ, ಅದು ನಡೆಸುತ್ತಿರುವ ಅನ್ಯಾಯದ ಕಡೆಗೆ ತಿರಸ್ಕಾರ ಭಾವನೆಯು ಉದ್ಭುದ್ಧವಾಗಿರುವುದು ಖಂಡಿತವೆ. ಕಾಂಗ್ರೆಸ್ ಸದಸ್ಯರು ಈ ಮೊದಲೇ ಸರಕಾರದ ನೀತಿಯನ್ನು ಬಲವತ್ತರವಾಗಿ ಸಮರ್ಥಿಸಿದರು.

ಇದೇ ಸಮಯದಲ್ಲಿ ಭಾರತ ಸಂದರ್ಶನಕ್ಕಾಗಮಿಸಿದ ರಶ್ಯನ್ ಪ್ರಧಾನಿ ಕ್ರುಶ್ಚೇವರು ಲೋಕ ಸಭೆಯನ್ನು ಉದ್ದೇಶಿಸಿಯೂ ಮಾತಾಡಿ ಬಿಟ್ಟರು. ಅವರು ಉಭಯ ಸಂಕಟಕ್ಕೆ ಸಿಲುಕಿದಂತಾದರೂ, ಎರಡೂ ರಾಷ್ಟ್ರಗಳು ತಮ್ಮೊಲ್ಲ ಪ್ರಶ್ನೆಗಳನ್ನು ಹಾರ್ದಮಯ ವಾತಾವರಣದಲ್ಲಿ ವಿಮರ್ಶಿಸಿ ಇರ್ವರಿಗೂ ನ್ಯಾಯ ದೊರಕಿಸಿಕೊಳ್ಳಬೇಕೆಂಬುದಾಗಿ ಹೇಳಿದರು. ಇದಕ್ಕಿಂತ ಹೆಚ್ಚಿನದನ್ನು ಶ್ರೀ ಕ್ರುಶ್ಚೇವರು ಅನ್ನುತಿದ್ದರೆಂದು ನಂಬುವುದಕ್ಕೂ ಸಾಧ್ಯವಿಲ್ಲ. ಭಾರತ—ಚೀನಗಳೆರಡೂ ರಶ್ಯದ ನಿಕಟ ಮಿತ್ರರು. ಹಾಗಿರುವಾಗ, ಅದು ಯಾರೊಬ್ಬನ ಪಕ್ಷವನ್ನೂ ಎತ್ತಿಕಟ್ಟಿ ಆಡುವುದು ಎಂದಿಗೂ ಯಾವ ಸಂದರ್ಭದಲ್ಲೂ ಸಾಧ್ಯವಾವುದಿಲ್ಲ ಪಾಪ, ನಿರುಪಾಯರಾದ ಅವರು ಮತ್ತೇನುಮಾಡಬೇಕು? ಅಂತೂ ಚೀನಾದ ಈ ಗತ್ತುಗಾರಿಕೆಯ ಹೆಚ್ಚುಗಾರಿಕೆಯಿಂದ ಅದು ತುಸು ಕಬ್ಬಿಬಾಗಿರುವಂತೆ ಭಾಸವಾಗುತ್ತದೆ ಭಾರತ ಮತ್ತು ಚೀನಗಳೆರಡರಲ್ಲಿ ಆಕ್ರಮಣಕಾರರು ಯಾರು ಎಂಬ ಪ್ರಶ್ನೆಯು ಈಗ ಮತ್ತಷ್ಟು ಸುಸ್ಪಷ್ಟವಾಗಿದೆ. ನ್ಯಾಯವಾಗಿ ಭಾರತದ ಭಾಗಗಳನ್ನು ಚೀನವು ಆಕ್ರಮಿಸಿದೆಯೆಂಬುದು ಸರ್ವಶ್ರುತ. ಚೀನೀ ಪ್ರಧಾನಿ ಶ್ರೀ ಚೌ ಎನ್. ಲಾಯ್ ಅವರು ಭಾರತ—ಸೀಮಾ ಗಡಿಯು ಇದುವರೆಗೂ ಸರಿಯಾಗಿ ಗುರುತಿಸಲ್ಪಟ್ಟಿಲ್ಲವೆಂದೂ ಆ ಬಗ್ಗೆ ವಿಚಾರವಿನಿಮಯಕ್ಕೆ ತಾನು ಸಿದ್ಧನಿರುವುದಾಗಿಯೂ ತಿಳಿಸಿ ಶಾಂತಿಯ ಮುಸುಕನ್ನು ಧರಿಸಿದ್ದಾರೆ. ಆದರೆ ಈ ಬಗ್ಗೆ ಭಾರತೀಯರ ನಿಲುವೆ ಅಚಲವಿದೆ. ಅದೆಂದೂ ತನ್ನ ಗತಿಯನ್ನು ಬಿಟ್ಟುಹೋಗಲಾರದು. ಅನಾದಿಯಿಂದಲೂ ಹಿಮಾಲಯವೇ ಎರಡು ರಾಷ್ಟ್ರಗಳ ಉತ್ತರ ಸೀಮೆಯಾಗಿರುತ್ತದೆ. ಮತ್ತು ಇದಕ್ಕೆ ಬೇಕಾದ ಐತಿಹಾಸಿಕ ಆಧಾರಗಳನ್ನೂ ಚೀನಕ್ಕೆ ಕೊಟ್ಟಿರುತ್ತದೆ. ಈ ಬಗ್ಗೆ ಚೀನವು ಸದಭಿಪ್ರಾಯ ತೋರಿಸುವ ಪ್ರಶ್ನೆ ದೂರವುಳಿಯಿತು. ಮೊನ್ನೆ ಮೊನ್ನೆ ಪ್ರಧಾನಿ ನೆಹರು ಅವರು ಈ ವಿಚಾರದ ಪತ್ರವ್ಯವಹಾರದ ಮಾಹಿತಿಯನ್ನು ಬಹಿರಂಗಗೊಳಿಸಿದ್ದಾರೆ "ಚೀನವು ತಾನು ಹಿಡಿದದ್ದೇ ಸರಿ ಎನ್ನುವ ತನ್ನ ವಾದವನ್ನೇ ಮುಂದೊತ್ತಿಕೊಂಡು ಬರುವುದಾದರೆ, ಅದರಿಂದ ಯಾವ ಪ್ರಯೋಜನವೂ ಆಗಲಾರದು. ಆದರೂ ಉಭಯ ಪ್ರಧಾನಿಗಳು ಒಂದೆಡೆ ಸೇರುವುದರಿಂದ, ಈ ಪ್ರಶ್ನೆಯನ್ನು ಲಘುವಾಗಿ ಬಿಡಿಸಲು ಸಹಾಯವಾಗಬಹುದು. ಆದುದರಿಂದ ನನ್ನ ಮುಂದಿರುವ ದ್ವೇಷದ ವಾತಾವರಣವನ್ನು ದೂರಮಾಡಿ ಮಾರ್ಚ ಮಾಹೆಯ ಉತ್ತರಾರ್ಧದಲ್ಲಿ ಹೊಸದಿಲ್ಲಿಗೆ ಬನ್ನಿರಿ" ಎಂದು ತಿಳಿಸಿ, ತಮಗೆ ಭಾರತವು ಆದರದ ಸ್ವಾಗತ ನೀಡುವುದೆಂಬ ಪ್ರಧಾನಿ ಲಾಯ್‌ಗೆ ವಿಶ್ವಾಸದಾನಮಾಡಿದ್ದಾರೆ.

ಚೀನದ ಹಿಂದಿನ ಪತ್ರ ಬಂದಂದಿನಿಂದ ಇಂದು ಪರಿಸ್ಥಿತಿ ತುಂಬ ಬದಲಾಯಿಸಿದೆ. ದಶಂಬರ ತಿಂಗಳಲ್ಲಿ ಭಾರತಕ್ಕೆ ಅಮೆರಿಕೆಯ ಅಧ್ಯಕ್ಷರು ಆಗಮಿಸಿದ್ದು, ಅವರೂ ಈ ಪ್ರಶ್ನೆಯನ್ನು ಔಪಚಾರಿಕವಾಗಿ ಚರ್ಚಿಸಿದ್ದರು. ಚೀನವು ಭಾರತದ ಮೇಲೆ ಯುದ್ಧವನ್ನು ಘೋಷಿಸಿಯೇ ಬಿಟ್ಟರೆ, ಆಗ ಅಮೆರಿಕೆಯು ಸುಮ್ಮನೆ ಕೂರುವಂತಿಲ್ಲ ಎಂಬ ಮಾತಿನಲ್ಲಿ ಅವರು ತಮ್ಮ ಭಾರತ ಪರವಾದ ನೀತಿಯನ್ನು ಹೊರಗೆಡಹಿದ್ದಾರೆ. ಇದು ಸಂಭವನೀಯವೆಂದನಿಸುವುದಿಲ್ಲವಾದರೂ, ಸಂದರ್ಭ ಬಂದಾಗ ಅಮೇರಿಕೆಯು ಭಾರತದ ಸಹಾಯಕ್ಕೆ ಧಾವಿಸುವುದು ನಿಶ್ಚಯವೆಂದಿದರಿಂದ ವ್ಯಕ್ತವಾಗುವುದು. ಈಗ, ರಶ್ಯನ್ ಅಧ್ಯಕ್ಷ ಹಾಗೂ ಪ್ರಧಾನಿಗಳೂ ಇಲ್ಲಿ ಸಮಾಗಮಿಸಿ ತಮ್ಮ ಸದಿಚ್ಛೆಯನ್ನು ಎರಡೂ ರಾಷ್ಟ್ರಗಳಿಗೆ ಅರ್ಪಿಸಿದ್ದಾರೆ. ಈ ವಿವಾದದ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿ, ಇದು ಶೀಘ್ರ ಮುಕ್ತಾಯಗೊಳ್ಳಲೆಂದು ಹಾರೈಸಿದ್ದಾರೆ. ಎಲ್ಲದಕ್ಕಿಂತ ಹೆಚ್ಚಿನದಾಗಿ, ಪ್ರಧಾನಿ ನೆಹರು ತಮ್ಮ ನೀತಿಯನ್ನು ತುಸು ಬಿಗಿ ಹಿಡಿದಿದ್ದಾರೆ ಚೀನೀಯರು ಆಕ್ರಮಣ ಹಿಂದೆಗೆಯದೆ ಸಂಧಿಯ ಮಾತುಕತೆಯಿಲ್ಲ ಎಂದವರು ಸಾರಿದ್ದಾರೆ ೪೦ ಕೋಟಿ ಭಾರತೀಯರ ಹೃದಯಪಾಳದಿಂದ ಹೊರಬಂದಿರುವ ನವನೀತವಿದು. ಆದುದರಿಂದ, ಇದಕ್ಕೆ ಜನತೆಯ ಸಂಪೂರ್ಣ ಬೆಂಬಲವಿರುವುದು ನಮ್ಮ ರಾಷ್ಟ್ರಾಧ್ಯಕ್ಷರೂ ಮತ್ತಿತರ ನಾಯಕ ಮಣಿಗಳೂ ಜನತೆಯಲ್ಲಿ ಐಕ್ಯದ ಬೀಜವನ್ನು ಬಿತ್ತುವ ಕಾರ್ಯದಲ್ಲಿ ತಲ್ಲೀನರಾಗಿದ್ದಾರೆ. ಅವಕಾಶ ಒದಗಿಬಂದರೆ, ರಾಷ್ಟ್ರರಕ್ಷಣೆಗೆ ಪ್ರಾಣ ಮುಡುಪಿಡುವಂತೆ ಕರೆಯೊಯುತ್ತಿದ್ದಾರೆ. ಭಾರತೀಯ ರಾಜಕಾರಣದಲ್ಲಿ ಇಂದು ಸಾಕಷ್ಟು ಪರಿವರ್ತನೆಗಳು ನಡೆಯುತ್ತ ಹೋಗುತ್ತಿವೆ. ಹಾಗಿರುವಾಗ, ಇದರ ಪರಿಣಾಮ ಚೀನದ ಮೇಲೆ ಶಿಲಮಾತ್ರವಾದರೂ ಸಾಕು, ಅದು ತನ್ನ ಅನ್ಯಾಯ್ಯ ನೀತಿಯನ್ನು ಬದಲಾಯಿಸುವ ಸೌಜನ್ಯ ತೋರಿಸಲು ಮುಂದೆ ಬಾರದಿರದು. ಈ ಸದಾಶಯದೊಂದಿಗೆ, ಚೌಎನ್ ಲಾಯ್ ಅವರು ವಾಸ್ತವಿಕವಾಗಿ ಶಾಂತಿಮಯ ವಾತಾವರಣದಲ್ಲಿ ಈ ಪ್ರಶ್ನೆ ಬಿಡಿಸಲು ಬಯಸುವುದಾದರೆ, ತನ್ನ ನಿಲುವೆಯನ್ನು ಬದಲಾಯಿಸಿ ನವದೆಹಲಿಗೆ ಆಗಮಿಸುವುದು ಅಗತ್ಯವಲ್ಲವೆ?

ಅದೃಷ್ಟ ಖುಲಾಯಿಸಲಿ

ಆರ್ಥಿಕ ಪರಿಸ್ಥಿತಿ ಏನೇನೂ ನೆಟ್ಟಗಿಲ್ಲದ ಉಡುಪಿ ನಗರಸಭೆಗೆ ಈ ವರ್ಷಕ್ಕೆ ೨೫ ವರ್ಷ ತುಂಬಿದುವು ಈ ಸವಿಸ್ಮರಣೆಗಾಗಿ ವಾಡಿಕೆಯಂತೆ ರಜತ ಮಹೋತ್ಸವವನ್ನು ಆಚರಿಸುವುದಕ್ಕೆ ತಕ್ಕ ಪೂರ್ವಸಿದ್ಧತೆಗಳು ನಡೆಯತೊಡಗಿವೆ ಈ ಬಗ್ಗೆ ವಿಚಾರವಿನಿಮಯ ನಡೆಸಲು ಕರೆದ ಒಂದು ಸಭೆಯಲ್ಲಿ, ೧೯೬೦ರ ನವಂಬರದಲ್ಲಿ ಈ ಉತ್ಸವವನ್ನು ಆಚರಿಸಲು ಮತ್ತು ಈ ಸಂದರ್ಭದಲ್ಲಿ ವಸ್ತುಪ್ರದರ್ಶನ, ಬೌದ್ಧಿಕ ಕ್ರೀಡೆಗಳು ಮತ್ತು ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಲು ಹಾಗೂ ರಜತೋತ್ಸವ ಸ್ಮಾರಕ ಸಂಚಿಕೆಯೊಂದನ್ನು ಪ್ರಕಟಿಸಲು ನಿರ್ಧರಿಸಲಾಯಿತೆಂದು ತಿಳಿಯುತ್ತದೆ. ಈ ರೀತಿಯಿಂದ ಸುಮಾರು ಒಂದು ಲಕ್ಷ ರೂಪಾಯಿಯನ್ನು ಸಂಗ್ರಹಿಸುವುದೆಂದೂ ಈ ಮೊತ್ತದಿಂದ ಇದುವರೆಗೂ ಬಾಡಿಗೆಯ ಕಟ್ಟಡದಲ್ಲಿಯೇ ತನ್ನ ಕಾರುಭಾರುಗಳನ್ನು ನಡೆಸಿಕೊಂಡು ಬರುತ್ತಿರುವ ನಗರಸಭೆಗೆ ಒಂದು ಕಾರ್ಯಾಲಯ ಮತ್ತು ಪುರಭವನಗಳನ್ನು ಒಂದೇ ಕಟ್ಟಡದಲ್ಲಿ ಕಟ್ಟಿಸುವ ಯೋಜನೆಯಿದೆಯೆಂದೂ ಗೊತ್ತಾಗುತ್ತದೆ. ನಗರ ಸಭೆಯ ಸ್ಥಿತಿಗತಿಗಳನ್ನು ನೋಡುವಾಗ, ವರ್ಷದಿಂದ ವರ್ಷಕ್ಕೆ ವೆಚ್ಚವು ಬೆಳೆಯುತ್ತ ಬರುವ ದಾಮಾಶಯದಲ್ಲಿಯೂ ಆದಾಯವು ಹೆಚ್ಚುತ್ತಿಲ್ಲವೆಂಬುದು ವೇದ್ಯವಾಗುವಾಗ, ನಗರಸಭಾಕಾರ್ಯಾಲಯ ಅಥವಾ ಪುರಭವನಗಳ ನಿರ್ಮಾಣದ ಬಗ್ಗೆ ಇಲ್ಲವೇ ಇನ್ನಾವುದೇ ಅಧಿಕ ವೆಚ್ಚ ಬರುವ ಯೋಜನೆಗಳಿಗೆ ಅದರೊಡನೆ ಹಣವೆಲ್ಲಿಂದ ಬರಬೇಕು? ಹಲವಾರು ವರ್ಷಗಳ ಹಿಂದೆಯೇ ನಗರ ಸಭೆಯ ಕಟ್ಟಡಕ್ಕಾಗಿ ಅಡಿಗಲ್ಲನ್ನು ಆಗಿನ ಮದ್ರಾಸದ ಮಂತ್ರಿಯೊಬ್ಬರು ಹಾಕಿದ್ದು ಅದಿದು ವರೆಗೆ ಪಡ್‌ಖುತು ದರ್ಶನವನ್ನು ಮಾಡುವುದರಲ್ಲೇ ತತ್ಪರವಾಗುವಂತಾಗಿದೆ. ಈ ರಜತಮಹೋತ್ಸವದ ನೆಪದಿಂದಲಾದರೂ ನಗರಕ್ಕೆ ಅತ್ಯವಶ್ಯವಾಗಿರುವ ಪುರಭವನದೊಡನೆ ನಗರ ಸಭೆಗೆ ಬೇಕಾದ ಕಾರ್ಯಾಲಯವೂ ಸಿದ್ಧವಾಗುವುದಾದರೆ, ಉಡುಪಿಯ ಅದೃಷ್ಟವೆಂದೇ ಹೇಳಬೇಕು. ನಗರಸಭೆಯು ನಾಗರಿಕರಿಂದ ಕರವಸೂಲು ಮಾಡಿ, ಅವರ ಸೇವೆಯನ್ನು ಮಾಡಬೇಕಾಗಿರುವಾಗ, ಕಟ್ಟಡ ಪುರಭವನಗಳಿಗೆ ನಾಗರಿಕರ ಮೇಲೆ ಪರೋಕ್ಷವಾಗಿ ಹೆಚ್ಚಿನ ಕರ ಹೇರುವುದು ನ್ಯಾಯವಲ್ಲವೆಂದು ಕೆಲವರು ಭಾವಿಸಬಹುದಾದರೂ ನಗರ ಸಭೆಯು ಸುದೃಢವಾಗುವಂತಾಗಲು, ಅದರ ಆಯವು ಹೆಚ್ಚಿ, ನಾಗರಿಕರಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತಾಗಲು ಈ ಯೋಜನೆಯು ಸಹಾಯಕವಾಗುವುದೆಂದು ತಿಳಿದು, ನಾಗರಿಕರೆಲ್ಲರೂ ಈ ಆಮೂರ್ತರೂಪವನ್ನು ಮೂರ್ತವಾಗಿಸುವಲ್ಲಿ ತೀವ್ರ ಆಸಕ್ತಿ ವಹಿಸುವುದು ಅವಶ್ಯವಿದೆ ರಾಜ್ಯ ಸರಕಾರವೂ ಈ ಸಮಯದಲ್ಲಿ ಈ ಭವನ ನಿರ್ಮಾಣಕ್ಕೆ ತನ್ನ ಪಾಲಿನ ಸಹಾಯದನವನ್ನೀಯುವುದು ಅಸಮಂಜಸವಾಗದು ನಗರಸಭಾಪತಿಗಳು ಮತ್ತು ರಜತೋತ್ಸವ ಸಮಿತಿಯವರಿಗೆ ಉಡುಪಿಯ ನಾಗರಿಕರು ತಮ್ಮ ಸಂಪೂರ್ಣ ಬೆಂಬಲವೀಯಬೇಕು

ಸಂಕ್ಷಿಪ್ತ ಸುದ್ದಿಗಳು

ಕೇರಳದಲ್ಲಿ ಮಂತ್ರಿಮಂಡಲ

ಕೇರಳದಲ್ಲಿ ಮಂತ್ರಿಮಂಡಳ ರಚಿಸುವ ವಿಚಾರದಲ್ಲಿ ಮಾತುಕತೆಗಳು ಬಿರುಸಿನಿಂದ ಮುಂದುವರಿಯುತ್ತಿವೆ ಶಾಸನ ಸಭಾ ಕಾಂಗ್ರೆಸ್ ಪಕ್ಷವು ಕೇರಳ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷರಾಗಿರುವ ಶ್ರೀ ಆರ್ ಶಂಕರನ್‌ರವನ್ನು ತನ್ನ ನಾಯಕರನ್ನಾಗಿ ಆರಿಸಿದೆ ಶಾಸನ ಸಭೆಯಲ್ಲಿ ಅತ್ಯಧಿಕ ಸ್ಥಾನಗಳಿಸಿರುವ ಈ ಪಕ್ಷದ ನಾಯಕರನ್ನೇ ಕರೆದು ರಾಜ್ಯಪಾಲರು ಮಂತ್ರಿ ಮಂಡಳಿರಚಿಸುವಂತೆ ಕೇಳಿ ಕೊಳ್ಳಬಹುದು. ಕಾಂಗ್ರೆಸ್, ಪ್ರಸವಾ ಮತ್ತು ಮುಸ್ಲಿಂಲೀಗ್‌ಗಳ ಸಂಯುಕ್ತ ಮಂತ್ರಿಮಂಡಳಿಯೇ ಸ್ಥಾಪಿತವಾಗುವುದೆಂಬುದು ಈಗ ನಿರ್ಧಾರವಾಗಿದೆ. ಯಾರಿಗೆ ಎಷ್ಟು ಪ್ರಾತಿನಿಧ್ಯವೀಯಬೇಕು ಎಂಬುದನ್ನೂ ಇತರ ವಿಚಾರಗಳನ್ನೂ ಚರ್ಚಿಸಲು ಮೂರು ಪಕ್ಷಗಳ ನಾಯಕರು ನವದೆಹಲಿಗೆ ಹೋಗಿದ್ದಾರೆ ಈ ನಡುವೆ ಪ್ರಸವಾ ನಾಯಕ ಶ್ರೀ ಪಟ್ಟಂತಾನು ಪಿಳ್ಳೆಯವರು ಮುಖ್ಯ ಮಂತ್ರಿಯಾಗುವಸಂಭವವಿದೆಯೆಂದೂ ಪಿಸುಮಾತು ಕೇಳಿಬಂದಿತ್ತು. ಹೊಸ ಮಂತ್ರಿ ಮಂಡಳಿಯು ಫೆಬ್ರವರಿ ೨೦ಕ್ಕೆ ಅಧಿಕಾರ ಸ್ವೀಕರಿಸುವ ನಿರೀಕ್ಷೆಯಿದೆ

ದರಗಳಲ್ಲಿ ಹೆಚ್ಚಳ

ಭಾರತದ ರೇಲ್ವೆಗಳ ಅಭಿವೃದ್ಧಿ ಸಾಧಿಸುವ ಕಾರ್ಯವು ಕ್ಷಿಪ್ರವಾಗಿ ನಾಗಬೇಕಾಗಿರುವುದರಿಂದ, ಅದರ ಆದಾಯವನ್ನು ಹೆಚ್ಚಿಸುವುದು ತೀರ ಅವಶ್ಯವೆಂದು ತಿಳಿದುಕೊಳ್ಳಲಾಗಿದೆ. ಇದಕ್ಕಾಗಿ ಲೋಕಸಭೆಯ ಈ ಮುಂಗಡಪತ್ರದ ಅಧಿವೇಶನದಲ್ಲಿ ರೇಲ್ವೆ ಮಂತ್ರಿಗಳು ರೇಲ್ವೆ ಮುಂಗಡ ಪತ್ರವನ್ನು ಮಂಡಿಸುವಾಗ, ರೇಲ್ವೆಯ ಸಾಗಿಗೆ ದರಗಳಲ್ಲಿ ತುಸು ಹೆಚ್ಚುವರಿಯನ್ನು ಸೂಚಿಸಲಿರುವರೆಂದು ವಿಶ್ವಸನೀಯವಾಗಿ ಈಗ ತಿಳಿದುಬಂದಿದೆ. ಹಾಗೆಯೇ ಅಂಚೆತಂತಿ ವಿಭಾಗದ ಆದಾಯವನ್ನೂ ಏರಿಸುವುದು ಅಗತ್ಯವಾಗಿ ಪರಿಣಮಿಸಿದುದರ ಕಾರಣವಾಗಿ, ಅಂಚೆ ಕಾರ್ಡಿನ ಬೆಲೆಯನ್ನು ೫ ನಯೇ ಪೈಸೆಗೆ ಏರಿಸಲಾಗುವುದೆಂದು ಗೊತ್ತಾಗಿದೆ. ಮೈಸೂರು ರಾಜ್ಯ ಸಾರಿಗೆ ಇಲಾಖೆಯೂ ತನ್ನ ಆದಾಯದಲ್ಲಿ ಹೆಚ್ಚುವರಿ ಸಾಧಿಸಲು ಸಾರಿಗೆ ದರವನ್ನು ಏರಿಸಿದೆ. ಹೀಗೆ ಸರಕಾರಿ ಕ್ಷೇತ್ರದ ಎಲ್ಲ ವಿಭಾಗಗಳೂ ತಮ್ಮ ಆದಾಯವನ್ನು ಹೆಚ್ಚಿಸಲು ಬಯಸುತ್ತಿವೆ.

ಅಲ್ಲಲ್ಲಿಯ ಸುದ್ದಿ ಸಾರ

ಮಹಾಶಿವ ರಾತ್ರಿ ಉತ್ಸವವು— ಮಂಗಳೂರಿನ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಫೆಬ್ರವರಿ ತಿಂಗಳ ತಾ. 20ರಿಂದ 26ರವರೆಗೆ ಜರಗುವುದು. ಸದ್ರಿ ಉತ್ಸವಕ್ಕೆ ವರ್ಕಳ ಶಿವಗಿರಿ ಮಠಾಧೀಶರಾದ ಸ್ವಾಮಿ ಶಂಕರಾನಂದಾಜೀಯವರು ಆಗಮಿಸುವರು. ಉತ್ಸವ ಕಾಲದಲ್ಲಿ ಸಾಂಸ್ಕೃತಿಕ ಕಲೋತ್ಸವ ಕಾರ್ಯಕ್ರಮಗಳೂ ಜರಗಿಸಲ್ಪಡುವುದು.

ಸತ್ಕಾರ ಸಮಾರಂಭ—ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನಿನ ಉಡುಪಿ ವಿಭಾಗದ ಸೀನಿಯರ್ ಡಿವಿಜನಲ್ ಮೆನೇಜರ್ ಆಗಿ ಅಧಿಕಾರವನ್ನು ವಹಿಸಿರುವ ಶ್ರೀ ಟಿ. ಆರ್. ಎ. ಪೈ ಇವರನ್ನು ಸ್ವಾಗತಿಸಿ, ಸತ್ಕರಿಸುವ ಸಲುವಾಗಿ ತಾ. 13ರಂದು ಬೊಂಬೆ ಲೈಫ್ ಕಟ್ಟಡದಲ್ಲಿ ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಇ. ಯು. ಜಕೋಬರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಏರ್ಪಡಿಸಿದ್ದರು. ಉಡುಪಿ ವಿಭಾಗದ ಮಾಜಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರು ತಾನು ಹೈದರಾಬಾದಿಗೆ ವರ್ಗವಾಗಿಹೋಗುವ ಈ ಸಂದರ್ಭದಲ್ಲಿ ಎರಡು ಮಾತನಾಡಲು ಅವಕಾಶ ಸಿಕ್ಕಿದುದಕ್ಕೆ ಆನಂದ ವ್ಯಕ್ತಪಡಿಸಿ, ಶ್ರೀ ಟಿ ಆರ್. ಎ. ಪೈಗಳು ಸ್ಥಳೀಯ ಕೆನರಾ ಮ್ಯೂಚುವಲ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಆಗಿ ಹಿಂದೆ ಸಲ್ಲಿಸಿದ್ದ ಸೇವೆಯು ಅತ್ಯುತ್ಕೃಷ್ಟವಾಗಿತ್ತೆಂದೂ ರಾಷ್ಟ್ರೀಕರಣದ ತರುವಾಯ ಬೆಂಗಳೂರು ಮತ್ತು ಮದ್ರಾಸಿನ ಸೀನಿಯರ್ ಡಿವಿಜನಲ್ ಮೆನೇಜರ್ ಆಗಿ ಶ್ರೀ ಪೈಗಳು ತೋರಿಸಿದ ಕಾರ್ಯಪಟುತ್ವವು ಶ್ಲಾಘನೀಯವೆಂದೂ ತಿಳಿಸಿ, ಶ್ರೀ ಪೈಗಳ ಸೇವೆಯನ್ನು ದೊರಕಿಸಿಕೊಂಡ ಉಡುಪಿ ವಿಭಾಗ ಭಾಗ್ಯಶಾಲಿಯಾಗಿದೆ ಎಂದರು. ಶ್ರೀಗಳಾದ ಜೆ. ಎಂ. ಸಿ. ಡಿಸೋಜ, ಯು. ಕೆ. ಶೆಣೈ, ಎನ್. ಎಸ್. ಪರ್ಕಳ, ಸಿ. ಎಚ್. ಎಚ್. ದಾಸ್, ಪಿ. ವಿ. ವೆಂಕಣ್ಣ, ಕೆ. ಆನಂದ ಗಾಣಿಗ ಮತ್ತು ಕೆ. ಸಂಜೀವ ಪೈಗಳು ಮಾತನಾಡುತ್ತಾ ಶ್ರೀ ಟಿ. ಆರ್. ಎ. ಪೈಗಳ ಕರ್ತೃತ್ವಶಕ್ತಿ ಮತ್ತು ನಿಷ್ಕಲಂಕ ವ್ಯಕ್ತಿತ್ವವನ್ನು ವರ್ಣಿಸಿ, ಜೀವವಿಮಾ ಕ್ಷೇತ್ರದಲ್ಲಿ ಮಾತ್ರವಲ್ಲದೆ ಪತ್ರಿಕೋದ್ಯಮ ಹಾಗೂ ಶೈಕ್ಷಣಿಕ ರಂಗದಲ್ಲಿ ಶ್ರೀ ಪೈ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ, ಸಿಬಂಧಿಯ ಸಂಪೂರ್ಣ ಸಹಕಾರದ ಭರವಸೆ ನೀಡಿದರು. ಸನ್ಮಾನ್ಯ ಅತಿಥಿಗಳು ತಮ್ಮ ಉತ್ತರದಲ್ಲಿ, ತನ್ನ ಬಗ್ಗೆ ವ್ಯಕ್ತಪಡಿಸಿದ ಪ್ರೀತಿಗೂ ಆಡಿದ ಪ್ರಶಂಸಾವಾಕ್ಯಗಳಿಗೂ ಆಭಾರ ಸೂಚಿಸಿ, ಈಗ ಎಲ್ಲರೂ ರಾಷ್ಟ್ರೀಕೃತ ವಿಮೋದ್ಯಮದ ಯಶಸ್ಸಿಗಾಗಿ ಅತ್ಯುತ್ಸಾಹ

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 426/1959.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ — ವಾದಿ.

ಮತ್ತು

ತಿಂಗು ಹೆಂಗ್ಸು ಕೂಡಾ—ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ—ಕೃಷ್ಣಪ್ಪ 3ನೇ ಪ್ರತಿವಾದಿ ಶೀನ— ನಾಗಪ್ಪನ ಮಗಿಂದಿರ್ರು ಉಡ್ಪಿ ಕಸಬಾ ಶಿಂಬೀಡು ಬಳಿ—

ಪ್ರತಿವಾದಿರು ವಾದಿ ಬೇಂಕಿಗೆ ರಿ. ನಿಶಿಂ ತಾರೀಕು 19-1-58ರಲ್ಲಿ ರೂಪಾಯಿ 750/-ಕ್ಕೆ ಬರಕೊಟ್ಟ ಕಂತು ಈಡು ದಸ್ತಾವೇಜಿನ ಬಾಬ್ತು ಪ್ರತಿವಾದಿರಿಂದ ವಾದಿಗೆ ಬಹಾ ಅಸಲು ಬಡ್ಡಿ ಕೂಡಾ ರೂಪಾಯಿ 881-54 ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ದಾವೆಯು ತಾರೀಕು 29-2—60 ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಆ ದಿವ್ಸ ಸದರಿ 2, 6ನೇ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಪಹರಿಸದೆಯಿದ್ರೆ ಅವರ ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು 2, 6ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damodar Kamath,

Advocate for Plff.

ತಾರೀಕು 15—2—60.

ದಿಂದ ದುಡಿಯಬೇಕಾಗಿದೆ ಎಂದು ಹೇಳಿ, ಪಾಲಿಸಿದಾರರ ಹಾಗೂ ಕಾರ್ಪೊರೇಶನಿನ ಶ್ರೇಯಸ್ಸಿಗಾಗಿ ಶಕ್ತಿಮೀರಿ ದುಡಿಯುವ ಆಶ್ವಾಸನೆಯಿತ್ತರು. ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ. ಎನ್. ನಂಬಿಯಾರರು ಧನ್ಯವಾದವಿತ್ತ ಬಳಿಕ ಸಭೆ ಕೊನೆಗೊಂಡಿತು.

ದುಃಖ ಸೂಚಕ ಸಭೆ— ತಾ. 11—2—60ರಂದು ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ ಬೆಳ್ಳಾರೆ ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿ ಮದ್ರಾಸಿನ ಮತ್ತು ಮೈಸೂರಿನ ಮಾಜಿ ಮಂತ್ರಿಗಳೂ ಸಮಾಜಾಭ್ಯುದಯಕ್ಕಾಗಿ ದುಡಿದವರೂ ಆದ ಶ್ರೀ ಎ. ಬಿ. ಶೆಟ್ಟರ ನಿಧನಕ್ಕಾಗಿ ದುಃಖ ಸೂಚಿಸುವ ನಿರ್ಣಯ ಮಾಡಲಾಯಿತು. ಶ್ರೀಗಳಾದ ಪಿ. ಎಸ್. ತಿಮ್ಮಪ್ಪ ಸೆಟ್ಟಿ, ಎನ್. ಎಮ್. ಅಡ್ಯಂತಾಯ, ಎ. ಶಂಕರ ಆಳ್ವ, ಸಿ. ರವೀಂದ್ರ ಹೆಗ್ಡೆ, ಕೆ. ಸುಂದರರಾಮ ಶೆಟ್ಟಿ, ಬಿ. ರಾಜೀವ ಸೆಟ್ಟಿ, ಡಾ. ಡಿ. ಆರ್. ಹೆಗ್ಡೆ ಮೊದಲಾದವರು ದಿವಂಗತ ಶ್ರೀ ಎ. ಬಿ. ಶೆಟ್ಟರ ಗುಣಗಾನಮಾಡಿದರು. ಅಧ್ಯಕ್ಷ ಶ್ರೀ ಶೇಕರು ದಿವಂಗತ ಎ. ಬಿ. ಶೆಟ್ಟರ ಗುಣಾದರ್ಶಗಳನ್ನು ವಿವರಿಸಿ, ಅವರ ಸ್ಮರಣೆಗಾಗಿ ಒಂದು ಯೋಗ್ಯ ಸ್ಮಾರಕವನ್ನು ಏರ್ಪಡಿಸುವುದು ಉಚಿತವೆಂದೂ ಅದಕ್ಕಾಗಿ ಸಮಿತಿಯೊಂದು ರಚಿಸಬೇಕೆಂದೂ ಸೂಚಿಸಿದರು.

ಮುಂಬಯಿಯ ಬಂಟರ ಯೂನೆ ನಾಡವರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯೊಂದು ಇತ್ತೀಚೆಗೆ ಮುಂಬಯಿಯಲ್ಲಿ ಶ್ರೀ ಎ. ಬಿ. ಶೆಟ್ಟರ ನಿಧನಕ್ಕಾಗಿ ಸಂತಾಪ ಸೂಚನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮುಂಬಯಿಗೆ ಬಂದಿದ್ದ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರನ್ನು ಸ್ವಾಗತಿಸಿ ಗೌರವಿಸಲಾಯಿತು.

ಟಪ್ಪಾಲು ಇಲಾಖಾ ಕೆಳ ನೌಕರರ ಯೂನಿಯನ್—ಇದರ ಉಡ್ಪಿ ಶಾಖೆಯ ನಾಲ್ಕನೆಯ ವಾರ್ಷಿಕ ಸಭೆಯು ಇದೇ ತಾ. 7ರಂದು ಉಡುಪಿ ಮೊಡರ್ನ್ ಹಾ. ಎ. ಶಾಲೆಯಲ್ಲಿ ಮದ್ರಾಸ್ ಸರಕಾರದ ರಿಟಾಯರ್ಡ್ ಡೆಪ್ಯುಟಿ ಸೆಕ್ರೆಟರಿಗಳಾದ ಶ್ರೀ ಎಮ್. ಬಿ. ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉಡ್ಪಿ ಯೂನಿಯನಿನ ಅಧ್ಯಕ್ಷ ಶ್ರೀ ಕೆ. ವರದರಾಯ ಪೈಗಳು ಸ್ವಾಗತ ಭಾಷಣ ಮಾಡಿದ ಮೇಲೆ ಕಾರ್ಯದರ್ಶಿ ಶ್ರೀ ಆರ್. ಗ. ಸೋನ್ಸರು ವರದಿಯನ್ನೊಪ್ಪಿಸಿದರು. ಶ್ರೀಗಳಾದ ಪಿ. ಯಸ್. ಕೆ. ಹೆಗ್ಡೆರ್, ಎನ್. ಸೀತಾರಾಮ ಕಾಮತ್, ರಘು ಶೆಟ್ಟಿ, ಶೇಕ್ ಅಲ್ಲಿ ಸಾಹೇಬ್, ಗ್ರೆಗರಿ ಡಿಸೋಜ, ಎಸ್. ಕೆ. ಹೊಳ್ಳ, ಎಸ್. ಎಲ್. ನಾರಾಯಣ ಭಟ್ ಮೊದಲಾದವರು ಮಾತನಾಡಿ ಸಲಹೆ ಸೂಚನೆಗಳನ್ನಿತ್ತರು ಅಧ್ಯಕ್ಷರ ಭಾಷಣವಾದ ಮೇಲೆ ಹೊಸ ವರ್ಷಕ್ಕೆ ಶ್ರೀ ಕೊಟ್ಟಾರ್ ವರದರಾಜ್ ಪೈ ಅಧ್ಯಕ್ಷ ಶ್ರೀಗಳಾದ ರಘು ಶೆಟ್ಟಿ ಮತ್ತು ಗ್ರೆಗರಿ ಡಿಸೋಜ ಉಪಾಧ್ಯಕ್ಷರು. ಬಿ. ಗುಂಡು ಕಾರ್ಯದರ್ಶಿ, ಕೆ. ಪುಂಡಲೀಕ ಸಹಾಯಕ ಕಾರ್ಯದರ್ಶಿ, ಐ. ಎಸ್. ಕುಂದರ್ ಕೋಶಾಧಿಕಾರಿ, ಶ್ರೀಗಳಾದ ಎಮ್. ಆನಂದ ಸೆಟ್ಟಿಗಾರ ಮತ್ತು ಶೇಕ್ ಅಲ್ಲಿ ಸಾಹೇಬ್ ಲೆಕ್ಕ ಪರಿಶೋಧಕರು. ಮತ್ತು ಕೆಲವರು ಸದಸ್ಯರಾಗಿ ಇರುವ ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿತು.

ಹೈಸ್ಕೂಲ್ ವರ್ಧಂತಿ —ಮಂಗಳೂರಿನ ರೊಸಾರಿಯೊ ಹೈಸ್ಕೂಲ್ ವರ್ಧಂತಿಯು ತಾ. 12ರಲ್ಲಿ ಶ್ರೀ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯೋಪಾಧ್ಯಾಯ ರೆ. ಫಾ. ಜೋಸೆಫ್ ಮತಾಯಿಸರು ವರದಿಯನ್ನೋದಿದರು. ಶ್ರೀಮತಿ ನೇತ್ರಾವತಿ ಕೆ. ಶೆಟ್ಟಿಯು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರು ವಿದ್ಯಾರ್ಥಿಗಳಲ್ಲಿ ಶಿಸ್ತಿನ ಅವಶ್ಯಕತೆಯ ಕುರಿತು ಭಾಷಣವಿತ್ತ ಮೇಲೆ ವಿವಿಧ ವಿನೋದಾವಳಿಗಳಾದವು.

ಬಾಳಕುದ್ರು— ಕುಂದಾಪುರ ಗ್ರಾಮೋದಯ ಖಾದಿ ಸಂಘದ ವತಿಯಿಂದ ಅಂಬರ್ ಪರಿಶ್ರಮಾಲಯವು ಶ್ರೀ ಅನಂತ ನಾರಾಯಣ ಐತಾಳರ ಅಧ್ಯಕ್ಷತೆಯಲ್ಲಿ ಶ್ರೀರಾಮ ಮಂದಿರದಲ್ಲಿ ತಾ. 30—1—60 ರಂದು ಶ್ರೀ ಬಿ. ಎಲ್. ಕೆದ್ಲಾಯರಿಂದ ಉದ್ಘಾಟಿಸಲ್ಪಟ್ಟಿತು. ಅಂಬರ್ ಶಿಕ್ಷಕ ವಿ. ಶಿವರಾಮ ಶೆಟ್ಟರು ಪರಿಶ್ರಮಾಲಯದ ಉದ್ದೇಶವನ್ನು ವಿವರಿಸಿ ಇದಕ್ಕೆ ಎಲ್ಲರ ಸಹಕಾರವನ್ನು ಕೋರಿದರು.

ಕೆಂಜೂರು—ವೀರೇಶ್ವರ ಹಾ. ಎ. ಶಾಲೆಯ ವಿದ್ಯಾರ್ಥಿಗಳು ಮುಖ್ಯಾಧ್ಯಾಪಕರ ನೇತೃತ್ವದಲ್ಲಿ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡು ಧರ್ಮಸ್ಥಳ, ಮೂಡಬಿದ್ರಿ, ವೇಣೂರು ಉಡುಪಿ ಮೊದಲಾದ ಪ್ರೇಕ್ಷಣೀಯ ಚಾರಿತ್ರಿಕ ಸ್ಥಳಗಳನ್ನು ತಾ. 11ರಂದು ಸಂದರ್ಶಿಸಿರುವರು.

ಪಡುಕಳತ್ತೂರು—ಹಾ. ಎ. ಶಾಲಾ ವರ್ಧಂತ್ಯುತ್ಸವವು ದಿನಾಂಕ 31-1-60ರಂದು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಬಿ. ಮಂಜುನಾಥ ಕುಡುಬಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಶ್ರೀ ಗೋಪಾಲಕೃಷ್ಣ ಪೈಯವರಿಂದ ಧ್ವಜಾರೋಹಣ ಜರಗಿತು. ಶ್ರೀ ಡಿ. ಕೆ. ಪ್ರಭುಗಳವರಿಂದ ಮಕ್ಕಳಿಗೆ ಸಿಹಿತಿಂಡಿ ಹಂಚೋಣವಿತ್ತು. ಸಂಜೆ ಸ್ವಾಗತ ಭಾಷಣ ವರದಿ ವಾಚನ, ಸ್ವಸ್ತಿವಾಚನ, ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳಾದುವು.

ಮಾಸಂಸಾಡಿ—ಇಲ್ಲಿಯ ಸಂಕವನ್ನು ಕೆಲವು ವರ್ಷಗಳಿಂದ ಕಟ್ಟಿಸದೆ ಇರುವುದರಿಂದ ಆಸುಪಾಸಿನ ಗ್ರಾಮಸ್ಥರಿಗೂ ಮಾಳ್ಯ ಹೈಸ್ಕೂಲಿಗೆ ಹೋಗಿ ಬರುವ ವಿದ್ಯಾರ್ಥಿಗಳಿಗೂ ಮಳೆಗಾಲದಲ್ಲಿ ತುಂಬಾ ತೊಂದರೆಯಾಗುತ್ತಿರುವುದೆಂದೂ ಸಂಬಂಧಪಟ್ಟ ಇಲಾಖೆಯವರು ಇನ್ನಾದರೂ ಈ ಕುರಿತು ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಮಹನೀಯರೊಬ್ಬರು ಬರೆಯುತ್ತಾರೆ.

ಮಣಿಪಾಲ್ ಇಂಜಿನಿಯರಿಂಗ್ ಕಾಲೇಜು ದಿನಾಚರಣೆ—ಯು ತಾ. 14ನೇ ಸಂಜೆ ಮೈಸೂರು ಸರಕಾರದ ಸಾರ್ವಜನಿಕ ಕಾಮಗಾರಿ ಮಂತ್ರಿಗಳಾದ ಶ್ರೀ ಯಚ್. ಎಮ್. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯಾರ್ಥಿ ಯೂನಿಯನಿನ ಅಧ್ಯಕ್ಷ ಶ್ರೀ ಕೆ. ನಾಗೇಶ್ವರರಾಯರು ಸ್ವಾಗತಿಸಿದರು. ಶ್ರೀ ಟಿ. ಎ. ಪೈಗಳು ಮಂತ್ರಿಗಳ ಪರಿಚಯ ಭಾಷಣಮಾಡಿ ಅವರು ಸಲ್ಲಿಸಿದ ಸೇವಾಕಾರ್ಯಗಳನ್ನು ವಿವರಿಸಿದರು. ಪ್ರಿನ್ಸಿಪಾಲ್ ಶ್ರೀ ಯಮ್. ಯನ್. ಕಾಮತರು ಕಾಲೇಜಿನ ಪ್ರಗತಿಪರ ವರದಿಯನ್ನೋದಿದರು ಶ್ರೀ ಕೆ. ಯಚ್. ನಾರಾಯಣ ಸ್ವಾಮಿಯವರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಎ. ಬಿ. ಆರ್. ರಾಯರು ಉತ್ತರವಿತ್ತರು. ಇಂಜಿನಿಯರಿಂಗ್ ಕಾಲೇಜ್ ಟ್ರಸ್ಟಿನ ಅಧ್ಯಕ್ಷ ಶ್ರೀ ಲೋಕಿ ಫೆರ್ನಾಂಡಿಸರು ಕಾಲೇಜ್ ಸ್ಥಾಪಕ ಡಾ. ಮಾಧವ ಪೈಗಳ ಛಾಯಾಚಿತ್ರವನ್ನು ಅನಾವರಣ ಮಾಡುವಂತೆ ಅಧ್ಯಕ್ಷರನ್ನು ಕೇಳಿಕೊಂಡು ಡಾ. ಪೈಗಳು ಮಾಡಿರುವ ಅನುಪಮ ಸೇವಾಕಾರ್ಯಗಳನ್ನು ಉಲ್ಲೇಖಿಸಿದರು. ಅಧ್ಯಕ್ಷ ಶ್ರೀ ಚೆನ್ನಬಸಪ್ಪನವರು ಡಾ. ಪೈಗಳ ಛಾಯಾಚಿತ್ರವನ್ನು ಅನಾವರಣಮಾಡಿ ಅವರ ಅದ್ವಿತೀಯ ಸೇವೆ, ಸ್ಫೂರ್ತಿ, ವಿಧಾಯಕ ಕಾರ್ಯಕ್ರಮಗಳ ಆದರ್ಶ ಮೊದಲಾದುವನು ಕೊಂಡಾಡಿದರು. ಈ ಸನ್ನಿವೇಶದಲ್ಲಿ ಉಪಸ್ಥಿತರಿದ್ದ ಡಾ. ಮಾಧವ ಪೈಗಳು ಮಾತನಾಡಿ ಮೈಸೂರು ಸರಕಾರದಿಂದ ದೊರೆತ ಪ್ರಶಸ್ತಿಯು ಎಳೆತನಕೆ ಸಲ್ಲತಕ್ಕುದೆಂದೂ, ಜನತಾ ಸಹಕಾರವೇ ಎಲ್ಲಕ್ಕೂ ಕಾರಣವೆಂದೂ ಹೇಳಿ ಏಳಿಗೆಯ ಮುಂದಿನ ಕಾರ್ಯಕ್ರಮಗಳನ್ನು ವಿವರಿಸಿದರು

ಅಧ್ಯಕ್ಷರು ಭಾಷಣನೀಯುತ್ತ ನಮ್ಮಲ್ಲಿ ದೈವದತ್ತ ಸಂಪತ್ತು ವಿಪುಲವಾಗಿರುವುದೆಂದೂ ಅದರ ಸದುಪಯೋಗ ಪಡೆಯಲು ಪ್ರತಿಯೊಬ್ಬರೂ ದುಡಿಯಬೇಕೆಂದೂ ಪರಿಶ್ರಮದಿಂದಲೇ ಸೌಕರ್ಯವೆಂದೂ ಇಂಜಿನಿಯರಾಗಿ ಕಾರ್ಯಪ್ರವೃತ್ತರಾಗುವವರಲ್ಲಿ ದಕ್ಷತೆ ಸೇವಾಕಾಂಕ್ಷೆ ಕರ್ತವ್ಯ ಶೀಲತೆ ಮೊದಲಾದ ಗುಣಗಳಿರಬೇಕೆಂದು ಜನತಾ ಸಂಪರ್ಕವನ್ನಿರಿಸಿಕೊಳ್ಳಬೇಕೆಂದೂ ವಿದ್ಯಾರ್ಥಿಗಳು ದೇಶದಲ್ಲಾಗುತ್ತಿರುವ ಯೋಜನೆಗಳ ಅನುಭವವನ್ನು ಪಡೆಯುತ್ತಿರಬೇಕೆಂದೂ ಇಂಜಿನಿಯರು ಶಿಸ್ತು ಸಂಯಮಗಳಿಂದ ಅನ್ಯರಿಗೆ ಮೇಲ್ಪಂಕ್ತಿಯಾಗಿರಬೇಕೆಂದೂ ಹೇಳಿದರು. ಯೂನಿಯನ್ ಕಾರ್ಯದರ್ಶಿ ಶ್ರೀ ಬಿ. ಪದ್ಮನಾಭನ್ ಧನ್ಯವಾದಗಳನ್ನರ್ಪಿಸಿದರು. ಬಳಿಕ ವಿವಿಧ ವಿನೋದಾವಳಿಗಳಾಗಿ ಮಂತ್ರಿಗಳಿಗೆ ಭೋಜನ ಸತ್ಕಾರ ನಡೆಯಿತು. ಆರಂಭದಲ್ಲಿ ಪ್ರೊ. ಪದ್ಮನಾಭನ್ ಅವರು ಸಂದೇಶಗಳನ್ನೋದಿದ್ದರು.

ಉದ್ಘಾಟನೆ—ಗಾಂಧಿ ಸ್ಮಾರಕ ನಿಧಿಯ ಕರ್ನಾಟಕ ಶಾಖೆಯಿಂದ ಪ್ರಕಟವಾದ ಜೀವನ ಶಿಕ್ಷಣವೆಂಬ ಗಾಂಧೀ ಗ್ರಂಥಮಾಲೆಯ ಪುಸ್ತಕವನ್ನು ತಾ. 7ರಲ್ಲಿ ಮಂಗಳೂರು ಕಸ್ತೂರ್‌ಬಾ ಮೆಡಿಕಲ್ ಕೊಲೇಜಿನ ರಂಗಮಂದಿರದಲ್ಲಿ ಶ್ರೀ. ಆರ್. ಎಸ್. ಮುಕ್ಕೇರಿಕರರ ಅಧ್ಯಕ್ಷತೆಯಲ್ಲಿ ಡಾ. ಟಿ. ಎಮ್. ಎ. ಪೈಗಳು ಉದ್ಘಾಟಿಸಿ ಗಾಂಧಿ ಸಾಹಿತ್ಯದ ಪ್ರಚಾರದ ಆವಶ್ಯಕತೆಯನ್ನು ವಿವರಿಸಿದರು.

ರಜತಮಹೋತ್ಸವದ ಸಿದ್ಧತೆ— ಉಡುಪಿ ನಗರಸಭೆಯ ರಜತ ಮಹೋತ್ಸವವನ್ನು ಬರುವ ನವಂಬರ ತಿಂಗಳಲ್ಲಿ ಯಾವ ರೀತಿಯಲ್ಲಿ ಆಚರಿಸಬಹುದೆಂಬುದನ್ನು ವಿಚಾರಿಸಲು ಪುರಜನರ ಸಭೆಯೊಂದು ತಾ. 10ರಲ್ಲಿ ಪ್ಯೆಸ್ ಶಾಲೆಯಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿ ಸಮಿತಿಯೊಂದು ರಚಿಸಲ್ಪಟ್ಟಿತು.

ಸಂತಾಪ ಸೂಚನೆ—ಉಡುಪಿ ನಗರ ಸಭೆಯು ತಾ. 8ರಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರ ನಿಧನಕ್ಕಾಗಿ ದುಃಖ ಸೂಚಿಸಿತು. ಇದೇ ಸಭೆಯಲ್ಲಿ ನಗರಸಭೆಯ ಹಿಂದಿನ ನೌಕರರಲ್ಲೊಬ್ಬರಾದ ಶ್ರೀ ಗೋಪಾಲಕೃಷ್ಣ ಬಲ್ಲಾಳರ ಅಕಾಲ ನಿಧನಕ್ಕೂ ಸಂತಾಪ ವ್ಯಕ್ತಪಡಿಸಲಾಯಿತು.

ಮದ್ರಾಸಿನಲ್ಲಿ ಮಧ್ವನವಮಿ ಮಹೋತ್ಸವವು— ಎಂದಿನಂತೆ ಶ್ರೀ ಸೀತಾರಾಮರಾಯರ ವಾಸ ಪ್ರಸಾದದಲ್ಲಿ ತಾ. 6 ಮತ್ತು 7ರಲ್ಲಿ ವಿಜೃಂಭಣೆಯಿಂದ ನೆರವೇರಿತು. ಡಾ. ಯು. ಕೃಷ್ಣರಾಯರು ಸ್ವಾಗತಿಸಿದರು. ಶ್ರೀ ಪಮುಗ್ರೀವಾಚಾರ್ಯರು ಭಾಷಣವಿತ್ತರು. ತಾ. 7ರಲ್ಲಿ ಶ್ರೀಗಳಾದ ಜಿ. ಬಿ. ಜೋಶಿ, ಯಚ್. ಎಸ್. ರಾಘವೇಂದ್ರ ಆಚಾರ್ಯ, ಮಳಗಿ ಸುಬ್ಬಣ್ಣಾಚಾರ್ಯ, ಯಸ್. ಗೋಪಾಲ್ ಕೃಷ್ಣ ಆಚಾರ್ಯ ಮೊದಲಾದವರು ಉಪನ್ಯಾಸವಿತ್ತರು.

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲು ವರ್ಧಂತಿಯು ತಾ. 16ರಂದು ಡಿ| ಮುನ್ಸಿಫ್ ಶ್ರೀ ಜಿ. ಎಸ್. ನಾಗನೋತಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಹೆ| ಮಾ| ಶ್ರೀ ಎ. ಜೋಸೆಫರವರು ಶಾಲಾಭಿವೃದ್ಧಿಯನ್ನು ಸೂಚಿಸುವ ವರದಿಯನ್ನೋದಿದರು. ಶ್ರೀ ಪಿ. ಸದಾನಂದ ತಂತ್ರಿಗಳು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ಶಾಲಾ ಚಟುವಟಿಕೆ, ಪ್ರಗತಿಯನ್ನು ಕೊಂಡಾಡಿ ಭಾಷಣವಿತ್ತರು. ಶ್ರೀಮತಿ ನಾಗನೋತಿಯವರು ಬಹುಮಾನ ವಿತರಣೆ ಮಾಡಿದರು. ಬಳಿಕ ವಿನೋದಾವಳಿ ರಾತ್ರಿ ನಾಟಕಾದಿ ಕಾರ್ಯಕ್ರಮಗಳಾದುವು.

ಉಡ್ಪಿ—ನ್ಯಾಯಗೇಣಿ ಕೋರ್ಟಿನಲ್ಲಿ

O. P. No. 21/60.

1. ಅಚ್ಚು ಹೆಂಗ್ಸು, 2. ವೆಂಕಪ್ಪ ಶೇರಿಗಾರ — ಅರ್ಜಿದಾರರು.

ಮತ್ತು

ಗೋಪಾಲಕೃಷ್ಣಯ್ಯ—ಯೆದ್ರಿ

(ಉಡುಪಿ ತಾಲ್ಕು ನಡ್ಸಾಲು ಗ್ರಾಮದಲ್ಲಿರುವವರು)

ಇವರೊಳಗೆ—

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಅರ್ಜಿದಾರರು ಯೆದ್ರಿ ವಳಗೆ ಚಾಲಗೇಣಿಗೆ ಅನುಭವ್ಸಿ ಬರುವ ಆಸ್ತಿಗಳ ಬಾಬಿನಲ್ಲಿ ನ್ಯಾಯ ಗೇಣಿ ನಿರ್ಣಯಿಸುವ ಬಗ್ಗೆ ಮೇಲ್ಕಂಡ ಅರ್ಜಿ ಕೊಟ್ಟು ಸದ್ರಿ ಅರ್ಜಿಯ ಯೆದ್ರಿಗೆ ಅವ್ರು ನೊಟೀಸಿನ ಬಗ್ಗೆ ತಾ. 3—3—60ಕ್ಕೆ ಇಟ್ಟಿರುತ್ತದ್ದಾಗಿಯೂ, ಆಕ್ಷೇಪಣೆಯಿದ್ರೆ ಆ ದಿವಸ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಬೇಕೆಂತಲೂ, ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಂತಲೂ ಈ ಮೂಲ್ಕ ತಿಳಿಸೋಣಾಗುತ್ತದೆ.

B. Jagannatha Hegde,

Advocate for Petitioner.

Udipi, Dated 16—2—60.

ವಿಚಾರವೀಚಿ

(೫ನೇ ಪುಟದಿಂದ)

ದ್ವೀಪಗಳ ಭಾಗಗಳ ಪರ್ವತಗಳೂ ವನಸ್ಪತಿಗಳೂ ಏಕರೂಪವಾಗಿದೆ. ಮತ್ತು ಅಲ್ಲಿಯ ಪ್ರಾಕೃತಿಕ ಪ್ರಾಣಿಗಳಲ್ಲಿಯೂ ನಾವು ಅನುರೂಪನೆಯನ್ನು ಕಾಣಬಹುದು.

ಪಶುಪಕ್ಷಿ ಹಾಗೂ ಇನ್ನಿತರ ಜೀವಿಗಳು ಸಮಯ ಸಮಯದಲ್ಲಿ ತಮ್ಮ ಸ್ಥಾನಗಳನ್ನು ಪರಿವರ್ತಿಸುತ್ತವೆಯೆಂದು ನಾವು ತಿಳಿದಿದ್ದೇವೆ. ಅವುಗಳ ಈ ಅಭ್ಯಾಸ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮುಂದುವರಿದು ಅದು ಸಂಸ್ಕಾರದ ರೂಪವಾಗಿ ಅಚ್ಚಳಿಯದೆ ನಿಲ್ಲುತ್ತವೆ. ಇಂದಿಗೂ ಸ್ಕೇಂಡಿನೇವಿಯಾ ಪರ್ಯಾಯ ದ್ವೀಪದ ಇಲಿಗಳು ವಿಶೇಷ ಸಮಯದಲ್ಲಿ ಉತ್ತರ ಪಶ್ಚಿಮದತ್ತ ವಲಸೆ ಹೋಗುವುದನ್ನು ಕಾಣುತ್ತೇವೆ. ಅಲ್ಲಿ ಅವು ಹಾರಿ ಸಮುದ್ರದಲ್ಲಿ ಮುಳುಗುತ್ತವೆ; ಆದರೂ ಅವುಗಳ ಈ ಅಭ್ಯಾಸ ಮಾತ್ರ ಬಿಟ್ಟು ಹೋಗುವುದಿಲ್ಲ ಇಂದು ಅಲ್ಲಿ ಸಮುದ್ರವಿದೆ. ಪ್ರಾಯಃ ಯಾವುದೋ ಒಂದು ಕಾಲದಲ್ಲಿ ಈ ಸ್ಥಳದಲ್ಲಿ ಭೂಭಾಗವಿದ್ದಿರಲೂ ಬಹುದು. ಈ ಭೂಭಾಗಕ್ಕೆ ಸ್ಕೇಂಡಿನೇವಿಯಾದ ಇಲಿಗಳ ಪೂರ್ವಜರು ವಲಸೆಹೋಗುತ್ತಿರಬಹುದು. ಈ ಭೂಭಾಗವು ಲಾರೆಂಶಿಯಾದ ಕರಾವಳಿಯೊಡನೆ ಸೇರಿಕೊಂಡಿರಬಹುದೆಂದು ವೆಗ್ನರ್ ಕಲ್ಪಿಸುತ್ತಾನೆ.

ಕೆಲವು ಭೂಖಂಡಗಳು ಇಂದಿಗೂ ತೇಲಾಡುತ್ತಿವೆ. ಉದಾಹರಣೆಗಾಗಿ, ಗ್ರೀನ್‌ಲೇಂಡ್ ಈಜುತ್ತ [ಪ್ರತಿವರ್ಷ ೩೬ಗಜ ಮುಂದುವರಿದು ಉತ್ತರ ಅಮೆರಿಕೆಯ ಕಡೆಗೆ ಸಾಗುತ್ತಿದೆ. ಆದರೆ, ಈ ಭಾಗವು ಪ್ರತ್ಯೇಕವೇಕಾಯಿತು ಎಂದು ಶ್ರೀ ವೆಗ್ನರ್ ಮಹಾಶಯನು ಸಂದೇಹಪಡುತ್ತಾನೆ.

ವಿಖ್ಯಾತ ಭಾರತೀಯ ಭೂವೇತ್ತನಾದ ಡಾ. ಕೆ. ಪಿ. ರೊಡೆ ಎಂಬವರು ಒಂದು ಹೊಸ ಸಿದ್ಧಾಂತವನ್ನು ಸಂಶೋಧಿಸಿದ್ದಾರೆ. ಮಧ್ಯಏಶ್ಯದ ಭಾಗದಲ್ಲಿ ಇಷ್ಟೀಟಿನ ಎಲೆಗಳ ರಾಶಿ ಸುಂತೆ ಪರ್ವತಗಳ ನೆರಿಗೆಯೇ ಬಿದ್ದುಕೊಂಡಿತ್ತಂತೆ. ಈ ಪರ್ವತತಗಳು ಜಗ್ಗಿಹೋಗಿ ಅತ್ತಿತ್ತ ಹರಡಿಹೋದುವಂತೆ ಮತ್ತು ಈ ರೀತಿ ಮಹಾದ್ವೀಪಗಳು ವಿಸ್ತಾರವಾಗಿ ಚೆಲ್ಲಿಹೋದುವಂತೆ!

(ವಿವಿಧ ಮೂಲಗಳಿಂದ)

—ಗೋಪೀಚಂದ.

ಸಂದರ್ಶನ ರಹಸ್ಯ

ಕ್ರುಶ್ಚೇವರ ಆಗಮನದ ಹಿನ್ನೆಲೆಯೇನು?

ಪ್ರತಿಕೂಲ ವಾತಾವರಣದಲ್ಲಿ ರಶ್ಯನ್ ಪ್ರಧಾನಿಯ ದೆಹಲಿ ಭೆಟ್ಟಿಯ ಹಿನ್ನೆಲೆ, ಪರಿಣಾಮಗಳನ್ನು ವಿಶ್ವಜನತೆ ನಿರೀಕ್ಷಿಸುತ್ತಿದೆಯಲ್ಲವೆ?

ಇದೀಗ ತಾನೇ ತನ್ನ ಭಾರತ ಸಂಚಾರವನ್ನು ಮುಕ್ತಾಯ ಪಡಿಸಿರುವ ಶ್ರೀ ಕ್ರುಶ್ಚೇವರು ಐದು ವರ್ಷಗಳಿಗೆ ಮೊದಲು ಭಾರತಕ್ಕೆ ಸಮಾಗಮಿಸಿದ್ದಾಗ ಪ್ರಧಾನ ಮಂತ್ರಿಯಾಗಿರಲಿಲ್ಲ. ಆಗಿನ ಪ್ರಧಾನಿ ಬುಲ್ಗಾನಿನರೊಡನೆ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದ ಇವರೂ ಭಾರತ ಯಾತ್ರೆಮಾಡಿದ್ದರು. ಇದಾದ ಮೂರೇ ವರ್ಷಗಳಲ್ಲಿ ಬುಲ್ಗಾನಿನರು ಪದಚ್ಯುತರಾದರು; ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿತ್ವದೊಡನೆ ರಾಷ್ಟ್ರದ ಪ್ರಧಾನಿಯ ಪದವಿಯನ್ನೂ ಶ್ರೀ ಕ್ರುಶ್ಚೇವರು ಅಲಂಕರಿಸಿದರು.

೧೯೫೫ರ ಕ್ರುಶ್ಚೇವ ಭಾರತ ಸಂದರ್ಶನದ ವೇಳೆ ಭಾರತ ಮತ್ತು ಯಾವುದೇ ಕಮ್ಯುನಿಸ್ಟ್ ರಾಷ್ಟ್ರಗಳ ನಡುವೆ ಜಗಳವೆಂಬುದಿರಲಿಲ್ಲ. ಇದರಿಂದಾಗಿ ಭಾರತ ಹಾಗೂ ಕಮ್ಯುನಿಸ್ಟ್ ರಾಷ್ಟ್ರಗಳ ನಡುವಿನ ಸಂಬಂಧವು ತುಸು ಬಿಗಿಯಾಗುತ್ತ ಹೋಗುವುದಕ್ಕೆ ಆ ಭೆಟ್ಟಿಯು ಕಾರಣವಾಗಿತ್ತು ಮಾತ್ರವಲ್ಲ, ಇದರಿಂದಾಗಿ, ಪಾಶ್ಚಾತ್ಯ ರಾಷ್ಟ್ರಗಳ ಮನಸ್ಸಿನಲ್ಲಿಯೂ ಒಂದು ವಿಧದ ಭಯವು ಹುಟ್ಟಿಕೊಳ್ಳುವಂತೆ ಮಾಡಿತ್ತು. ಆದರೆ, ಈ ಬಾರಿ ಅಂತಹ ಸ್ಥಿತಿಯಿರುವುದಿಲ್ಲ. ಹಂಗೇರಿಯ ವಿಷಯದಲ್ಲಿ ಭಾರತವು ಕಮ್ಯುನಿಜಂ ನಿರಸನ ಮಾಡಿತ್ತು; ಟಿಬೇಟಿನ ಸಂಬಂಧದಲ್ಲಿ ಅತೀವ ಅಸಂತೋಷವನ್ನು ಪ್ರಕಟಿಸಿತ್ತು; ಚೀನದ ಸೀಮಾತಿಕ್ರಮಣದಿಂದಾಗಿ ಭಾರತವು ಪುನಃ ತನ್ನ ನೀತಿಯನ್ನು ವಿಮರ್ಶಿಸಿಕೊಳ್ಳುವ ಅವಕಾಶ ಬಂದಿತು. ಒಂದೆಡೆ ಚೀನದ ಕಮ್ಯುನಿಸ್ಟರು ಭಾರತದ ಸೀಮೆಯನ್ನು ಆಕ್ರಮಿಸುತಿದ್ದಾರೆ; ಜತೆಗೆ, ಕೇರಳದಲ್ಲಿ ಭಾರತೀಯ ಕಮ್ಯುನಿಸ್ಟರು ಪರಿಣಾಮಕಾರಿ ಸೋಲನ್ನುಂಡಿದ್ದಾರೆ. ಇಂತಹ ಒಂದು ಪ್ರತಿಕೂಲ ಪರಿಸ್ಥಿತಿಯ ವೇಳೆ ಹಿರಿಯ ಕಮ್ಯೂನಿಸ್ಟ್ ರಾಷ್ಟ್ರದ ಪ್ರಧಾನಿ ಕ್ರುಶ್ಚೇವರು ಭಾರತಕ್ಕೆ ಆಗಮಿಸಿದ್ದಾರೆ.

ಶ್ರೀ ಕ್ರುಶ್ಚೇವರ ಆಗಮನದಿಂದ ಒಂದು ವಿಶಿಷ್ಟ ವರ್ಗದ ಭಾರತೀಯರು ಸಂತುಷ್ಟರಾಗಿದ್ದರು. ಅವರಿಗೆ ಶ್ರೀ ಕ್ರುಶ್ಚೇವರು ಭಾರತ ಚೀನಗಳ ಸೀಮಾ ವಿವಾದವನ್ನು ಬಿಡಿಸಬಹುದು ಎಂಬ ಆಸೆಯಿದೆ. ಆದರೆ, ಈ ವಿವಾದದೊಡನೆ ಸಂಬಂಧವಿರುವ ಒಂದು ಪಕ್ಷವು ಚೀನಿ ಕಮ್ಯುನಿಸ್ಟ್ ಆಗಿದ್ದು ಇವರು ಎರಡು ವರ್ಷಗಳಿಗೆ ಮೊದಲು ಶ್ರೀ ಕ್ರುಶ್ಚೇವರ ಉದಾರನೀತಿಯನ್ನು ಪ್ರತ್ಯಕ್ಷ ವಿರೋಧಿಸಿರುವುದು ಮಾತ್ರವಲ್ಲ, ಅವರನ್ನು ಪದಚ್ಯುತಗೊಳಿಸುವುದಕ್ಕು ಮೋಸ್ಕೋ ಸಂಘರ್ಷಣೆಯಲ್ಲಿ ಪರೋಕ್ಷರೂಪದಲ್ಲಿ ಭಾಗವಹಿಸಿದವರು. ಈ ಸಂಗತಿ ಯಾರಿಗೆ ಮರೆತುಹೋದರೂ ಶ್ರೀ ಕ್ರುಶ್ಚೇವರು ಮರೆತಿರಲಾರರು. ಆದರೂ ಸೀಮಾ ವಿವಾದದ ಬಗ್ಗೆ ಅವರು ಈವರೆಗೆ ಉದ್ಗರಿಸಿರುವ ಎರಡು ಮೂರು ಹೇಳಿಕೆಗಳಲ್ಲಿ ಅವರ ನಿಷ್ಪಕ್ಷಪಾತತನವೇ ತೋರಿಬರುತ್ತಿದೆ. ಇದರಿಂದಾಗಿ ಅವರ ಈ ಯಾತ್ರೆಗೆ ಪ್ರಾಧಾನ್ಯವಿದೆ. ಆದರೂ ಶ್ರೀ ಕ್ರುಶ್ಚೇವರು ಇಂದೂ ಚೀನದ ದೃಷ್ಟಿಪಾತ್ರವನ್ನು ಬದಲಾಯಿಸುವ ಶಕ್ತಿಶಾಲಿಗಳಾಗಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ.

ಕಳೆದೆಂಟು ವರ್ಷಗಳಿಂದ ಶ್ರೀ ಕ್ರುಶ್ಚೇವರು ಅಂತರರಾಷ್ಟ್ರೀಯ ರಾಜಕಾರಣಿಗಳೆಂಬ ಕೀರ್ತಿ ಗಳಿಸಿದ್ದಾರೆ ಶ್ರೀ ಸ್ಟೈಲಿನ್ನರ ನಿಧನಾನಂತರ ಸೋವಿಯತ್ ರಶ್ಯದ ಬಗ್ಗೆ ವಿಶ್ವದ ರಾಷ್ಟ್ರಗಳಲ್ಲಿ ಸದ್ಭಾವನೆಯನ್ನು ಹುಟ್ಟಿಸಿದ ಕೀರ್ತಿ ಇವರಿಗೇನೇ ಸಲ್ಲಬೇಕು. ಇದಕ್ಕಾಗಿ ಶ್ರೀ ಕ್ರುಶ್ಚೇವರು ಸ್ಟೈಲಿನರ ನೀತಿಯನ್ನು ಮೂಲಭೂತವಾಗಿ ಪರಿವರ್ತನೆ ಮಾಡಿದರು ಇವರು ಸ್ಟೈಲಿನ್ ನೀತಿಯನ್ನು ವಿರೋಧಿಸುತ್ತಿರುವರಾದರೂ ಆತನಲ್ಲಿ ಅಪಾರ ವಿಶ್ವಾಸವಿಟ್ಟವರು. ಆದುದರಿಂದ ಇಂದಿಗೂ ತನ್ನ ದೇಶದ ನಾಗರಿಕರಿಗೆ "ಶ್ರಮಿಕ ಹಿತಕ್ಕಾಗಿ ಸ್ಟೈಲಿನರಂತೆ ದುಡಿಯಬೇಕೆಂ"ದು ಅವರು ಉಪದೇಶಿಸುತ್ತಾರೆ

ಧರ್ಮವನ್ನು ಅಫೀಮಿಗೆ ಹೋಲಿಸುವ ಕಮ್ಯುನಿಸ್ಟರ ನಾಯಕ ಕ್ರುಶ್ಚೇವರಿಗೆ ದೇವರ ಹೆಸರಿನ ಮೇಲೆ ತಿರಸ್ಕಾರವಿಲ್ಲ ತನ್ನ ಅಂತರರಾಷ್ಟ್ರೀಯ ಪ್ರವಾಸದ ವೇಳೆಯಲ್ಲಿ ಹಲವರು ಬಾರಿ ಇವರು ವಿಶ್ವಶಾಂತಿಗಾಗಿ ದೇವರೊಡನೆ ಪ್ರಾರ್ಥಿಸಿಕೊಂಡದ್ದುಂಟು ಅಮೆರಿಕೆಯ ಸಂಚಾರಾವಧಿಯಲ್ಲಿ ಅವರೊಮ್ಮೆ "ಪರಮಾತ್ಮನು ಸೋವಿಯತ್ ಸಂಘದ ಕಡೆಗೆ ಒಲಿದಿದ್ದಾನೆ, ಆತ ಬುದ್ಧಿವಂತರಿಗೆ ಸಹಾಯ ಮಾಡುತ್ತಾನೆ" ಎಂದು ಹೇಳಿದ್ದರು.

ವಿರೋಧಿಗಳ ಮೇಲೆ ವಾಕ್‌ಪ್ರಹಾರ ಮಾಡುವುದರಲ್ಲಿ ಶ್ರೀ ಕ್ರುಶ್ಚೇವರು ನಿಸ್ಸೀಮರು. ಅಮೆರಿಕೆಯ ಯಾತ್ರಾನಂತರ ಅವರು ತಮ್ಮ ವಿಶಿಷ್ಟ ಭಾಷೆಯಲ್ಲಿ ಹೀಗಂದಿದ್ದರು–"ಅಮೆರಿಕೆಯ ಟೆಲಿವಿಜನ್‌ನಲ್ಲಿ ಮಾತಾಡುವಬಗ್ಗೆ ನಾನೇನೂ ಪಶ್ಚಾತ್ತಾಪಪಡುತ್ತಿಲ್ಲ; ಏಕೆಂದರೆ, 'ನಾನು ಹಾಗೆ ಮಾಡುವುದರಿಂದ ಅಮೆರಿಕೆ ದಿವಾಳಿಯಾಗಿ ಹೋದೀತು!" ಒಂದು ಪುಟ್ಟ ಮಾತನ್ನಾಡಿ ಶತ್ರುಗಳ ನಿದ್ರಾಭಂಗ ಮಾಡುವುದು ಕ್ರುಶ್ಚೇವರ ರಕ್ತಗುಣ.

ದಟ್ಟ ಪುಟ್ಟ ಶರೀರದ ಶ್ರೀ ಕ್ರುಶ್ಚೇವರೀಗ ೬೬ರ ಯುವಕ. ಇವರು ಲೆನಿನ್ನರ ಶಿಷ್ಯ; ಸ್ಟೈಲಿನ್ನರ ಸಹಚರ. ಟ್ರಾಟಸ್ಕಿ ಮತ್ತು ಸ್ಟೈಲಿನ್ನರ ನಡುವೆ ಜಗಳವಿದ್ದಾಗ ಇವರು ಸ್ಟೈಲಿನ್ನರ ಪಕ್ಷ ಹಿಡಿದರು ಸ್ಟೈಲಿನರ ಉತ್ತರಾಧಿಕಾರಿಗಳ ನಾಮಾವಳಿಯಲ್ಲಿವರ ಹೆಸರು ಇರಲಿಲ್ಲವಾದರೂ ನಿಯತಿಯ ಲಿಖಿತವೆಂಬಂತೆ ಕ್ರುಶ್ಚೇವರ ಅದೃಷ್ಟ ಖುಲಾಯಿಸಿತು.

೧೯೧೮ ರಿಂದ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿರುವ ಶ್ರೀ ಕ್ರುಶ್ಚೇವರು ಎಳವೆಯಲ್ಲಿ ಕುರಿ ಮೇಯಿಸುತಿದ್ದರೆಂದರೆ ನೀವು ವಿಸ್ಮಿತರಾಗಬಹುದು ೧೯೩೪ರಲ್ಲಿ ಕಮ್ಯುನಿಸ್ಟ್ ನಾಯಕರ ಸಾಲಿಗೆ ಸೇರಿದ ಇವರು ೧೯೫೩ರಿಂದ ಪಕ್ಷದ ಪ್ರಧಾನಕಾರ್ಯದರ್ಶಿಯಾದರು. ಮುಂದಿವರು ಸ್ಟೈಲಿನ್ನರ ಸಂಭಾವ್ಯ ಉತ್ತರಾಧಿಕಾರಿಗಳೊಡನೆ ಹೋರಾಡ ಬೇಕಾಗಿ ಬಂದಿತು ಶ್ರೀ ಕ್ರುಶ್ಚೇವರು ಎಲ್ಲರನ್ನೂ ತನ್ನ ದಾರಿಯಿಂದ ಅಡ್ಡಕ್ಕೆದೂಡಿ ಸೋವಿಯತ್ ರಶ್ಯಕ್ಕೆ ಹೊಸ ರೂಪವೊಂದನ್ನಿತ್ತರು.

ಪ್ರಕೃತಿ ಸೌಂದರ್ಯದ ನೆಲೆವೀಡು.

ಭಾರತದ ದಕ್ಷಿಣದ ತುತ್ತತುದಿ ಕನ್ಯಾಕುಮಾರಿಯಲ್ಲಿ ಸೂರ್ಯಾಸ್ತಮಯದ ಹೃದಯಾಕರ್ಷಕ ದೃಶ್ಯವಿದು. ಇದನ್ನು ಕಂಡಾಗ ಅಲ್ಲಿಗೆ ಹೋಗಿ ಪ್ರತ್ಯಕ್ಷ ಕಾಣುವ ಲವಲವಿಕೆ ತಲೆದೋರದಿರುವುದೆ?

ನವಯುಗವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಛಾರುಚೆಯನ

ಕನ್ನಡ ಸಾಹಿತ್ಯ ವಿಮರ್ಶೆ—ಬಹುಪರಾಕ್!

"ಪಾಪವಿದು ಪುಣ್ಯವಿದು" ಎಂದು ಮೊದಲಾದ ನಮ್ಮ ಸಾಹಿತ್ಯವಿಮರ್ಶೆ ಅದ್ಭುತ ಮನಮೋಹಕ ಹೃದಯಾಕರ್ಷಕ ರಸಮಯ ಪತ್ತೇದಾರಿ ಕಾದಂಬರಿಯಿದು" ಎಂಬ ರೂಪಧಾರಣೆ ಮಾಡಿದೆ!

"ಹೊಸಗನ್ನಡ ಸಾಹಿತ್ಯ ವಿಮರ್ಶೆ ಸರಿಯಾಗಿ ನಡೆದಿಲ್ಲ" ಎಂಬುದರ ಬಗ್ಗೆ ಕೆಲವರಿಗೆ ಅಸಮಾಧಾನವಿರುವುದೆಂದು ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟರು.

ಹೊಸಗನ್ನಡ ಸಾಹಿತ್ಯ ವಿಮರ್ಶೆಯಲ್ಲ, ನಡುಗನ್ನಡ ಹಳೆಗನ್ನಡ ಸಾಹಿತ್ಯ ವಿಮರ್ಶೆಯೂ ನಮ್ಮಲ್ಲಿ ಏನೇನೂ ಬೆಳೆದು ಬಂದಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ಹೆಚ್ಚೇಕೆ, ಕನ್ನಡ ಸಾಹಿತ್ಯದಲ್ಲೇ ವಿಮರ್ಶೆಯು ಬೆಳೆದು ಬಂದಿರುವುದಿಲ್ಲ.

ಕನ್ನಡದ ಕವಿಗಳ ಸಂಖ್ಯೆ ಮತ್ತು ವಿದ್ವಾಂಸರ ಸಂಖ್ಯೆಗಳ ದಾಮಾಶಯವು ತೃಪ್ತಿಕರವಾಗಿಲ್ಲ. ಕನ್ನಡದ ಕವಿಗಳು ವಿದ್ವಾಂಸರಾಗಿರಲಿಲ್ಲವೆಂದು ಈ ಮಾತಿನ ಅರ್ಥವಲ್ಲ.

ಹೇಳಿಸಿಕೊಳ್ಳುವ ವಿದ್ವಾಂಸ ಕವಿಗಳಿಲ್ಲವಾದುದರಿಂದಲೇ ಹಿಂದಿನ ಕಾಲದಲ್ಲಿ ಕನ್ನಡ ಸಾಹಿತ್ಯದ ಮೇಲೆ ಟೀಕೆ; ವಿಮರ್ಶೆಗಳು ಹುಟ್ಟಿಲ್ಲವೆಂದು ಹೇಳಬಹುದೆ?

ವಿದ್ವಾಂಸರಾಗಿದ್ದರೂ, ಜನತೆಯ ಭಾಷೆಯಲ್ಲಿಯೇ ಬರೆಯುವ ಅಭ್ಯಾಸವನ್ನು ಕವಿಗಳು ಇಟ್ಟುಕೊಂಡುದರಿಂದ, ಅವರ ಸಾಹಿತ್ಯ ಕೃತಿಗಳಿಗೆ ವಿಮರ್ಶೆ ಅಥವಾ ಟೀಕೆಗಳ ಆವಶ್ಯಕತೆಯಿರಲಿಲ್ಲವೆಂದೆನ್ನಬಹುದೆ?

ಕನ್ನಡ ಸಾಹಿತ್ಯ ಅನಾದಿಯಿಂದಲೂ ಪ್ರಗತಿಶೀಲವಾಗಿದೆ; ಇದರಿಂದ ಕನ್ನಡ ಸಾಹಿತ್ಯದ ಭಾಷೆ ಜನತೆಯ ಭಾಷೆ; ಪ್ರಗತಿವಾದದ ಪ್ರತಿಪಾದನೆ. ಪ್ರಗತಿ ಶೀಲ ಜನತೆಯು ಈ ಪ್ರಗತಿವಾದದ ಅರ್ಥವನ್ನು ಸುಸ್ಪಷ್ಟವಾಗಿ ಕಂಡುಕೊಂಡಿತ್ತು; ಹಾಗಿರುವಾಗ, ಆಂಗ್ಲೈ ನೋಡಲು ಕನ್ನಡಿಯು ಬೇಕೆ?

ಸಂಸ್ಕೃತದ ಪ್ರತಿ ಶ್ರೇಷ್ಠ ನಾಟಕ, ಕಾವ್ಯ, ಅಲಂಕಾರಾದಿ ಗ್ರಂಥಗಳಿಗೆಲ್ಲ ಟೀಕಸ್ತು ವಿವರವಾದ, ಪ್ರಗಲ್ಭವಾದ ವಿಮರ್ಶೆಗಳು ಹುಟ್ಟಿಕೊಂಡಿವೆ. ಕೆಲವೊಮ್ಮೆ ಮೂಲಕೃತಿಗಿಂತ ಅವುಗಳ ಮೇಲಿನ ವಿಮರ್ಶೆ, ಟೀಕೆ, ವಿವರಣೆಗಳೇ ಕ್ಲಿಷ್ಟವೆನಿಸುತ್ತವೆ.

ಕವಿಹೃದಯವನ್ನು ಸಾಮಾನ್ಯರಿಗೆ ತೆರೆದು ತೋರಿಸುವ ಮಾಧ್ಯಮನೇ ವಿಮರ್ಶಕ. ಈತನಿಲ್ಲದುಳಿದರೆ, ಕಾವ್ಯದ ನಿಜವಾದ ಪ್ರಯೋಜನವು ದೊರೆಯಲಾರದು.

"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ಕನ್ನಡಿಗರನ್ನು ಪ್ರಶಂಸಿಸಿದ ನೃಪತುಂಗ ಕನ್ನಡಿಗರು ವಿದ್ವತ್ತಿಲ್ಲದೇನೇ ಕಾವ್ಯ ಬರೆಯುತಿದ್ದಾರೆಂದು ವ್ಯಂಗ್ಯಬಾಣವೆಸೆದಿರಬಹುದೆ? ಹಾಗಾದರೆ, ಅದಕ್ಕೆ ವಿಮರ್ಶೆಯೇಕೆ ಬೇಕು? ಹೊಗಳಿದ್ದೇ ಆದರೆ, ಭ್ರಮರಕ್ಕೆ ಮಕರಂದ ರುಚಿಯನ್ನು ತೋರಿಸಿಕೊಡಬೇಕೆ?

ಕನ್ನಡಿಗರ ಪರಂಪರೆ ಅದ್ಭುತವಾದುದು; ಅಸಾಧ್ಯವಾದುದು. 'ಹನುಮನುದಿಸಿದ' ನಾಡು ಕನ್ನಡವೇ. ಅದುದರಿಂದ ಭಾರತದಲ್ಲಿಯೇ ಕನ್ನಡ ನೆಲದ ಸ್ಥಾನ ಮಹತ್ವಪೂರ್ಣವಾದುದು; ಅಂತೆಯೇ ಅವರಿಗೆ ಪ್ರಭಾವಶಾಲಿ ಪರಂಪರೆಯಿದೆ.

ಸಾಹಿತ್ಯ ವಿಮರ್ಶೆಯತ್ತ ನಿರ್ಲಕ್ಷ್ಯ ಮನೋಭಾವನೆಯು ಕನ್ನಡಿಗರಿಗೆ ಪರಂಪರಾ ಪ್ರಾಪ್ತವಾಗಿ ಬಂದುದಲ್ಲವೆ? ಹಾಗಿರುವಾಗ, ಇಂದಾದರೂ ಸಾಹಿತ್ಯ ವಿಮರ್ಶೆ ಏಕೆ ಬೇಕು?

ನಿಷ್ಪಕ್ಷಪಾತ ವಿಮರ್ಶೆಯನ್ನು ನಮ್ಮ ಇಂದಿನ ಸಾಹಿತಿಗಳೂ ಸಾಹಿತ್ಯ ಕೃತಿಗಳ ಪ್ರಕಾಶಕರೂ ಬಯಸುತಿದ್ದಾರೆ ಎಂಬುದರಲ್ಲಿ ಸಂದೇಹವಿದೆ. ವಿಮರ್ಶೆಯೆಂದರೆ, 'ಪ್ರಶಂಸೆ' ಎಂಬ ಸಂಕುಚಿತಾರ್ಥ ಪ್ರಚಾರವಾಗುವ ಸ್ಥಿತಿ ಬಂದುಮುಟ್ಟಿದೆ.

ಸ್ವತಂತ್ರ ವಿಮರ್ಶೆಗಳಲ್ಲವಾದರೂ ದಿನ, ವಾರ, ಮಾಸಪತ್ರಿಕೆಗಳಲ್ಲಿ ವಿಮರ್ಶಾವಿಭಾಗವೆಂದು ಪ್ರಕಟವಾಗುತ್ತಿದೆ. ಆದರೆ, ಈ ವಿಭಾಗ ನಿಷ್ಪಕ್ಷಪಾತ ವಿಮರ್ಶೆಯು ಆಗರವೆಂದು ಹೇಳಲಿಕ್ಕಾಗದು. ದೋಷಗಳನ್ನು ಎತ್ತಿಹೇಳುವ ವಿಮರ್ಶಕ ಸಾಹಿತಿಯ, ಪ್ರಕಾಶನ ಕಣ್ಣುಕಿತ್ತ ಅಪರಾಧಿಯಾಗುತ್ತಾನೆ!

ಆಂಗ್ಲೈತೋರಿಸಿ ಅವಲಕ್ಷಣವೇಕೆ ಹೇಳಿಸಿಕೊಳ್ಳಬೇಕು? ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ಎಂಬ ಲೋಕೋಕ್ತಿ ಪ್ರಕಾಶಕ ಮತ್ತು ವಿಮರ್ಶಕರಿಗೂ ಅನ್ವಯಿಸುವುದಿಲ್ಲವೆ?

ವಿಮರ್ಶಕನೂ ಒಬ್ಬ ವ್ಯಕ್ತಿ. ಕೃತಿಯ ಗಾಂಭೀರ್ಯ ಆ ವ್ಯಕ್ತಿಗೆಲ್ಲಿ ತಿಳಿದೀತು? ಅವನು ಕೃತಿಗಾರನ ಕಣ್ಣು, ಹೃದಯಗಳನ್ನು ಎಲ್ಲಿಂದತಾನೇ ಗಳಿಸಬಲ್ಲ?

ಇತ್ತೀಚೆಗೆ ತನ್ನ ಕೃತಿಯ ಬಗ್ಗೆ ತಾನೇ ನಾಲ್ಕು ವಿಮರ್ಶೆಯ ಮಾತನ್ನು ಬರೆಯುವ ಹವ್ಯಾಸ ಪ್ರಬಲವಾಗುತ್ತಿರುವುದಕ್ಕೆ ಇದೂ ಕಾರಣವಿರಬಹುದಲ್ಲವೆ? ಪಂಪರನ್ನ ಲಕ್ಷ್ಮೀಶರೂ ಈ ಅಭ್ಯಾಸಕ್ಕೆ ಬಲಿ ಬೀಳಲಿಲ್ಲವೆ? ವಿಮರ್ಶಕನಿಗೆ ಕಲಿಸುವ ಪ್ರಥಮ ಪಾಠವಿದೇ ತಾನೆ?

ವಿಮರ್ಶಕ ಕಟುವಾಗಿ ಲೇಖನಿ ಹರಿಸಿದನೆಂದರೆ, ಆತನನ್ನು ಲೇಖಕ—ಪ್ರಕಾಶಕರು ಸುಮ್ಮನೆ ಬಿಡುವರೆ? ಮಾರುದ್ದದ ಆಪಾದನಾಪತ್ರ ಬರೆದು, ವಿಮರ್ಶಕ ವಿಮರ್ಶಕನಲ್ಲ, ತಾವೇ ಲೇಖಕ—ಪ್ರಕಾಶಕರು ಮಾತ್ರವಲ್ಲ ವಿಮರ್ಶಕರೂ ಎಂದು ಹೇಳಿಕೊಳ್ಳುತ್ತಾರೆ!

ಹೆತ್ತವರಿಗೆ ಹೆಗ್ಗಣ ಮುದ್ದೇ ಆದರೆ, ಹೆಗ್ಗಣ ಮಾತ್ರ ಹೆಗ್ಗಣವೇ ತಾನೆ?

ತಾಯಿ ತನ್ನ ಮಗು ಹೆಗ್ಗಣವೆಂದು ಎಲ್ಲಿ ಯಾದರೂ ಯಾರಿಂದಾದರೂ ಹೇಳಿಸಿಕೊಳ್ಳಬಯಸುವುದುಂಟೆ?

ತಂದೆ ತನ್ನ ಮಗು ಹೆಗ್ಗಣವೆಂದು ಕರೆಯಿಸಿಕೊಳ್ಳುದರಿಂದ ಯಾವ ಪುರುಷಾರ್ಥವೂ ಇಲ್ಲವೆಂದು ತಿಳಿಯುವುದಿಲ್ಲವೆ?

ನೋಡುವವನೂ ಅದು 'ಮಗು' ಎಂದಷ್ಟೇ ಹೇಳಿ, ಅದರ ರೂಪ, ಅಲಂಕಾರ, ಗುಣದೋಷಗಳತ್ತ ತನ್ನ ಕ್ರೂರದೃಷ್ಟಿಯನ್ನು ಹರಿಸುವ ಗೋಜಿಗೆ ಹೋಗಿ ತಾನು ಆಪತ್ತಿಗೀಡಾಗಬಯಸುವುದೇಕೆ?

ಲೇಖಕನಿಗೆ ಬೇಕು ಬರೆದುದಕ್ಕೆ ಬೆಳಕು ತೋರಿಸುವ ಪ್ರಕಾಶಕರು!

ಪ್ರಕಾಶಕರಿಗೆ ಬೇಕು, ಪ್ರಕಟವಾದುದನ್ನು ದುಡ್ಡುಕೊಟ್ಟುಕೊಳ್ಳುವ 'ಪುಸ್ತಕಪ್ರಿಯ'ರು!

ಇದಕ್ಕೆ ತುಸು ಸಹಾಯಕ ಮಾಧ್ಯಮವಾಗಿರುವವರೇ ವಿಮರ್ಶಕರು! ವಿಮರ್ಶಕನಿಗೆ ಪುಕ್ಕಟೆ ಪ್ರತಿ ಸಿಕ್ಕಿದರೆ ಸಾಕು ತಾನೆ! ಯಾರನ್ನು ನಿಂದಿಸಿ ಏನಾಗಬೇಕಾಗಿದೆ! ಅದಕ್ಕಾಗಿ ಬಹುಪರಾಕ್ ಹೇಳಿಬಿಟ್ಟರೆ,

ಲೇಖಕನಿಗೂ ತೃಪ್ತಿ!
ಪ್ರಕಾಶಕನಿಗೂ ತುಷ್ಟಿ!
ವಿಮರ್ಶಕನಿಗೂ ಮುಕ್ತಿ!

ತೃಪ್ತಿಯ ಕವಡ್ಡಾನೆಯಲ್ಲಿ ಕ್ರಾಂತಿಯೆಲ್ಲಿಂದ ಬರಬೇಕು? ಕ್ರಾಂತಿಯಿಲ್ಲವಾದರೆ, ವಿಚಾರವಿಮರ್ಶೆ ಹೇಗೆ ಸಾಗಬೇಕು? ಸಾಹಿತ್ಯವಿಮರ್ಶೆ ಸರಿಯಾಗಿ ನಡೆಯುವುದು ಎಂತು? ನಡೆಯಬೇಕಾದರೂ ಏಕೆ? ಪರಂಪರಾಪ್ರಾಪ್ತವಾಗಿ ಬಂದಿರುವ 'ಬಹುಪರಾಕ್' ಮನೋಭಾವವನ್ನು ಬಿಟ್ಟುಗೊಡಬೇಕೆಂದು ಹೇಳುವುದು ಸಮಂಜಸವೆಂದು ಹೇಳಬಹುದೆ?

ಶಿಸ್ತು ಸಂವರ್ಧನೆ

(೪ನೇ ಪುಟದಿಂದ)

ವುದರಿಂದ ಮತ್ತು ಅವರ ನಡುವೆ ಸಮಂಜಸ ಬಾಂಧವ್ಯವನ್ನು ಬೆಸೆಯುವುದರಿಂದ ಮಾತ್ರ ಈ ಅಶಿಸ್ತಿನ ಭೂತವನ್ನು ಹೊಡೆದೋಡಿಸಲು ಸಶಕ್ತವಾಗುವುವು. ಶಿಸ್ತು ಎಂಬುದು ಒಂದು ಮಾನವ ಸಮಸ್ಯೆಯಾಗಿದ್ದು, ಇದನ್ನು ಮಾನವ ವಿಧಾನದಿಂದಲೇ ಬಗೆಹರಿಸುವುದು ಸಾಧ್ಯವಾಗಿದೆ.

ವಿದ್ಯಾರ್ಥಿಗಳು ಪರಿಣಾಮಕಾರಿ ಮಾರ್ಗದರ್ಶನವನ್ನು ಅಭ್ಯಾಸ ಮತ್ತು ಗುಣಗಳಲ್ಲಿ ಪಡೆಯಬೇಕಾದರೆ, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಿಸುವ ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿಯನ್ನು ಹೇರಬೇಕು. ವಿಶ್ವವಿದ್ಯಾಲಯ ಸಹಾಯಧನ ಆಯೋಗವು ಈ ಬಗ್ಗೆ ಕೆಲವೊಂದು ಸಲಹೆಯಿತ್ತಿರುವುದಾದರೂ ಅವುಗಳ ಕಡೆಗೆ ವಿಶೇಷ ಗಮನ ಹರಿಸಲಾಗಿಲ್ಲ. ಹೈಸ್ಕೂಲ್ ಓದನ್ನು ಪೂರ್ಣಮಾಡಿ ಹೊರಬರುವ ಅಸಂಖ್ಯ ವಿದ್ಯಾರ್ಥಿಗಳ ತಿಕ್ಕಾಟವನ್ನು ಕಡಿಮೆ ಮಾಡಿಲ್ಲ. ಉಚ್ಚ ಶಿಕ್ಷಣದಿಂದ ನಿಜವಾಗಿ ಲಾಭಪಡೆಯಬಹುದಾದ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ದೊರೆಯಬೇಕೆಂದು ಸಹಾಯಧನಾಯೋಗವು ಸೂಕ್ಷ್ಮ ಪರಿಶೀಲನೆಯಿಂದ ಸಲಹೆಯಿತ್ತಿದೆ. ಇಲ್ಲವಾದರೆ, ವಿದ್ಯಾರ್ಥಿಗಳಿಗೆ ಕೊಡಲಾಗುವ ಶಿಕ್ಷಣವೂ ಅವರಲ್ಲಿ ಬೆಳೆದು ಬರುವ ಗುಣ ಹಾಗೂ ಆಚರಣೆಯೂ ಉನ್ನತವಾಗುವುದು ಸಾಧ್ಯವಿಲ್ಲವೆಂದದು ಅಭಿಪ್ರಾಯಪಟ್ಟಿದೆ. ವಿಶ್ವವಿದ್ಯಾಲಯಗಳು ತಮಗೆ ನಿಯಂತ್ರಿಸಲು ಅಸಾಧ್ಯವೆನಿಸುವಷ್ಟು ವಿದ್ಯಾರ್ಥಿಗಳನ್ನು ಪ್ರವೇಶಿಸಿಕೊಂಡು, ದುರಾಪಳಿತೆಗೆ ಬಾಗಿಲು ತೆರೆದುಕೊಟ್ಟು, ಪರಿಶ್ರಮಿ ವಿದ್ಯಾರ್ಥಿಗಳ ಅಭ್ಯಾಸಕ್ಕೂ ತಡೆಯನ್ನು ತಂದುಹಾಕುವುದನ್ನು ಕಂಡು, ಸಹಾಯಧನಾಯೋಗವು ಕಣ್ಣುಮುಚ್ಚಿ ಕೂರುವುದು ಎಂದಿಗೂ ಸಾಧ್ಯವಿಲ್ಲ. ತನ್ನ ಸಲಹೆಯನ್ನು ಕಡೆಗಣಿಸಿ, ಅನಪೇಕ್ಷಿತ ಗೊಂದಲಗಳಿಗೆ ಅವಕಾಶ ಕಲ್ಪಿಸುವ ವಿಶ್ವವಿದ್ಯಾಲಯಗಳ ವರ್ತನೆಯು ನಿಂದಾರ್ಹ ಮಾತ್ರವಲ್ಲ, ಇಂತಹ ಪರಿಸ್ಥಿತಿಯಲ್ಲಿ ಅವಕ್ಕೆ ಸಹಾಯಧನ ನೀಡಬೇಕೇ ಎಂಬುದೂ ಆಲೋಚ್ಯ ಪ್ರಶ್ನೆಯಾಗಿದೆ. ಈ ತೆರದ ತೀವ್ರ ಪರಿಸ್ಥಿತಿಯು ಸಂಭವಿಸದಂತೆ ವಿಶ್ವವಿದ್ಯಾಲಯಗಳೂ ರಾಜ್ಯ ಸರಕಾರಗಳೂ ತಮ್ಮ ಸಹಕಾರ ಹಸ್ತವನ್ನು ನೀಡಲು ಮುಂದೆಬರುವುವೆಂದು ಆಶಿಸಬಹುದು. ಹೀಗಾದರೆ ಮಾತ್ರ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡಿಕೊಳ್ಳಬಹುದು.

(ಕೇಂದ್ರೀಯ ವಿದ್ಯಾಮಂತ್ರಿ ಶ್ರೀ ಶ್ರೀಮಾಲಿಯವರ ಭಾಷಣವೊಂದರಿಂದ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಆರೋಗ್ಯ ರಕ್ಷಣೆ

ಆಹಾರದಲ್ಲಿ ಪೌಷ್ಟಿಕಾಂಶಗಳು

ನಾವು ತಿನ್ನುವ ಆಹಾರದಲ್ಲಿ ಸಮಸ್ತ ಆಹಾರಾಂಶಗಳೂ ಕೂಡಿಕೊಂಡಿದ್ದರೆ ಮಾತ್ರ ಸುದೃಢ ಜನಾಂಗ ನಿರ್ಮಾಣವಾಗಬಲ್ಲುದು.

ಇಂದು ರಾಷ್ಟ್ರದ ಆರೋಗ್ಯ, ಅದರಲ್ಲಿಯೂ ಮುಖ್ಯವಾಗಿ ನಮ್ಮ ಮಕ್ಕಳ ಆರೋಗ್ಯ ಪೌಷ್ಟಿಕ ಆಹಾರದ ಅಭಾವದಿಂದಾಗಿ ತೀರ ಕೆಳಮಟ್ಟದಲ್ಲಿರುವುದು. ಈ ಪರಿಸ್ಥಿತಿಗೆ ಅನೇಕ ಅಂಶಗಳು ಕಾರಣವಾಗಿವೆ. ಜನತೆಯಲ್ಲಿ ಕೊಳ್ಳುವ ಶಕ್ತಿ ಕೆಳಮಟ್ಟದಲ್ಲಿದೆ, ದೇಶದಲ್ಲಿ ಆಹಾರದ ಗುಣಾಂಶ ಹಾಗೂ ಪ್ರಮಾಣಗಳೆರಡರಲ್ಲೂ ಅಭಾವ, ಪ್ರತಿವರ್ಷವೂ ಹೆಚ್ಚುತ್ತಿರುವ ಜನಸಂಖ್ಯೆ, ಕಲಬೆರಕೆಯಿಂದಾಗಿ ಆಹಾರ ವಸ್ತುಗಳಲ್ಲಿ ಶುದ್ಧತೆ ಕಡಿಮೆಯಿರುವುದು ಇವೇ ಮೊದಲಾದ ಅಂಶಗಳು ಅದಕ್ಕೆ ಕಾರಣವಾಗಿವೆ. ಆದರೂ ನಾವು, ಹೆಚ್ಚು ಹೆಚ್ಚು ಪೌಷ್ಟಿಕಾಂಶದ ಮಹತ್ವವನ್ನು ಅರಿಯುತ್ತಿದ್ದೇವೆ.

ನಾವು ತೆಗೆದುಕೊಳ್ಳುವ ಆಹಾರಕ್ಕೂ, ಜನತೆಯ ಆರೋಗ್ಯ ಮತ್ತು ದೇಹ ದಾರ್ಢ್ಯಕ್ಕೂ ಅವರ ದೈಹಿಕ ಹಾಗೂ ಮಾನಸಿಕ ರಕ್ಷಣೆಗೂ, ರೋಗ ನಿರೋಧಕ ಶಕ್ತಿ ಮತ್ತು ಆಯುಸ್ಸಿಗೂ ಪ್ರತ್ಯಕ್ಷವಾದ ಸಂಬಂಧವಿದೆಯೆಂಬುದನ್ನು ಪೌಷ್ಟಿಕ ಆಹಾರ ವಿಜ್ಞಾನವು ನಮಗೆ ತಿಳಿಸುತ್ತದೆ, ಆದರೆ ನಮ್ಮ ದಿನವಹಿ ಶಕ್ತಿಗೆ ಅಗತ್ಯವಾಗುವ ಕಾಲರಿಗಳಷ್ಟು ಆಹಾರವನ್ನು ನೀಡುವುದಕ್ಕೆ ಬೇಕಾದ ಆಹಾರ ಧಾನ್ಯಗಳು ನಮ್ಮ ದೇಶದಲ್ಲಿ ಇಂದು ಉತ್ಪತ್ತಿಯಾಗುತ್ತಿಲ್ಲ. ನಮ್ಮ ಆಹಾರಧಾನ್ಯಗಳ ಬಗೆಗೆ ನಾವು ಪರಿಪೂರ್ಣತೆಯನ್ನು ಪಡೆದಿದ್ದ ಕಾಲವಿತ್ತು. ದೇಶದಲ್ಲಿ ತರಕಾರಿ, ಹಣ್ಣು ಮತ್ತು ಹಾಲಿನ ಅಭಾವವಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ಪುನಃ ಸಾಧಿಸಲು ಕಾಲವೇನು ಮಿಂಚಿಹೋಗಿದೆಯೇ? ನಾವು ಆರೋಗ್ಯವಂತ ಹಾಗೂ ಉತ್ತಮ ರಾಷ್ಟ್ರಕ್ಕಾಗಿ ನಿಯೋಜನೆಯನ್ನೇಕೆ ಕೈಗೊಳ್ಳಬಾರದು? ಕ್ಷೀರಮಧುಗಳು ಹರಿಯುವ ರಾಷ್ಟ್ರವನ್ನಾಗಿ ಮಾಡಲು ನಾವೇಕೆ ಆಶಿಸಬಾರದು? ಒಂದು ಪ್ರಸಿದ್ಧ ಚೀಣಿ ಗಾದೆಯಿದೆ. "ನೀನು ಒಂದು ವರ್ಷ ಕಾಲಕ್ಕಾಗಿ ಯೋಜನೆ ಕೈಗೊಳ್ಳುವುದಾದರೆ, ಒಂದು ಹಸಿರು ಗಿಡ ನೆಡು; ಹತ್ತು ವರ್ಷಗಳಿಗಾಗಿ ಯೋಜನೆ ಕೈಗೊಳ್ಳುವುದಾದರೆ, ಮರಗಳನ್ನು ನೆಡು; ನೂರು ವರ್ಷಗಳಿಗಾಗಿ ಯೋಜನೆ ಕೈಗೊಳ್ಳುವುದಾದರೆ, ಜನತೆಯನ್ನು ದೃಢಗೊಳಿಸು" ಎಂದರೆ, ದೃಢಕಾಯರಾದ ಶಕ್ತಿಶಾಲಿಗಳಾದ ಸ್ತ್ರೀಪುರುಷರನ್ನುಳ್ಳ ರಾಷ್ಟ್ರವನ್ನು ನಿರ್ಮಿಸುವುದಕ್ಕಾಗಿ ಆಹಾರ ವಿಷಯಕ್ಕೆ ವಿಶೇಷ ಗಮನವನ್ನೀಯಬೇಕು.

ಆಹಾರ ಧಾನ್ಯಗಳು

ನಮ್ಮ ಆಹಾರದಲ್ಲಿ ಎಲ್ಲಾ ಪೋಷಕಾಂಶಗಳೂ ಸೇರಬೇಕು. ಕೇವಲ ಆಹಾರ ಧಾನ್ಯಗಳಷ್ಟೇ ದೇಹಪೋಷಣೆಗೆ ಸಾಕಾಗುವುದಿಲ್ಲ. ಉತ್ತಮ ಆರೋಗ್ಯಕ್ಕಾಗಿ ಆಹಾರ ಧಾನ್ಯಗಳ ಜೊತೆಗೆ, ಸಸಾರಜನಕ ಅಂಶಗಳುಳ್ಳ ಆಹಾರವನ್ನು ತೆಗೆದುಕೊಳ್ಳಬೇಕು. ಸಸಾರಜನಕಕ್ಕಾಗಿ ದ್ವಿದಳಧಾನ್ಯ, ಹಾಲು, ಮೊಟ್ಟೆ [illegible] ಜೀವಾಂಶಗಳಿಗಾಗಿ ಹಸಿರು ತರಕಾರಿ ಮತ್ತು ಹಣ್ಣುಗಳನ್ನು ಸೇವಿಸಬೇಕಾಗುತ್ತದೆ.

ಜೀವಸತ್ವಗಳ ಅಭಾವ

ಪೋಷಕ ಪದಾರ್ಥಗಳು ಆಹಾರದಲ್ಲಿ ರದಿದ್ದರೆ, ಅನಾರೋಗ್ಯಕ್ಕೆ ದಾರಿಯಾಗುತ್ತದೆ. ಗರ್ಭವತಿ ಸ್ತ್ರೀಯರು ಮತ್ತು ಮಕ್ಕಳಿಗೆ ಸಂಭವಿಸುವ ಅನೇಕ ರೋಗಗಳಿಗೆ ಮುಖ್ಯವಾದ ಕಾರಣವೆಂದರೆ: ಪೋಷಕ ಆಹಾರವಿಲ್ಲದಿರುವುದೇ ಆಗಿದೆ.

ಇಂತಹ ರೋಗಗಳಲ್ಲಿ ರಾತ್ರಿಯ ಕಾಲದಲ್ಲಿ ಅಂಧರಾಗುವುದು, ಸರ್ವೇಸಾಧಾರಣವಾಗಿರುವುದು. ಇದಕ್ಕೆ 'ಎ' ಜೀವಸತ್ವಗಳ ಅಭಾವವೇ ಕಾರಣವಾಗಿರುವುದು. ಹಸಿರು ಕಾಯಿಪಲ್ಯಗಳಲ್ಲಿ 'ಎ' ಜೀವಸತ್ವ ಹೇರಳವಾಗಿರುವುದು. ಇವಲ್ಲದೆ ಚಪ್ಪರ ಬದನೆ, ಕುಂಬಳ, ಕ್ಯಾರೆಟ್, ಪಪಾಯಿ ಮತ್ತು ಮಾವು ಇವೇ ಮೊದಲಾದ ಹಣ್ಣುಗಳಲ್ಲಿಯೂ 'ಎ' ಜೀವಸತ್ವ ಹೆಚ್ಚಾಗಿರುವುದು. ನೈಸರ್ಗಿಕ 'ಎ' ಜೀವಾಸತ್ವದ ಅಂಶವು ಮೊಟ್ಟೆ, ಷಾರ್ಕ್ ಮೀನಿನ ಎಣ್ಣೆ, ಹಸುವಿನ ಹಾಲು ಇವುಗಳಲ್ಲಿರುವುದು.

ಜೀವಸತ್ವ 'ಬಿ'ಯು ಕಡಿಮೆಯಾದರೆ, ಬಾಯಿ, ನಾಲಿಗೆ ಊದಿಕೊಳ್ಳುವುದು ಬಾಯಿಯಲ್ಲಿ ಗಾಯಗಳಾಗುವುದು ಕಂಡು ಬರುವುದು. ಚರ್ಮವು ಬಹಳ ಒಣಗಿಕೊಂಡು ತರಕಲಾಗುವುದು. ಪಾಲೀಷ್ ಮಾಡಲಾದ ಆಹಾರ ಧಾನ್ಯಗಳನ್ನು ಉಪಯೋಗಿಸುವುದರಿಂದ, ಹಾಲು, ಹಣ್ಣು ಮತ್ತು ತರಕಾರಿಗಳನ್ನು ಸಾಕಷ್ಟು ಉಪಯೋಗಿಸದೇ ಇರುವುದರಿಂದ ಈ ಅಭಾವವೇರ್ಪಡುವುದು.

ಹಣ್ಣು ಮತ್ತು ತರಕಾರಿಗಳನ್ನು ಬಹಳವಾಗಿ ಎರೆದು ತಿನ್ನುವುದರಿಂದ ನಮಗೆ ಅನೇಕ ಜೀವಾತುಗಳು ದೊರೆಯದೆ ನಷ್ಟವಾಗುವುದು. ಜೀವಾತು 'ಬಿ" ನಷ್ಟವಾಗದಂತೆ ಉಳಿಸಿಕೊಳ್ಳಲು ಉತ್ತಮ ವಿಧಾನವೆಂದರೆ, ಪಾಲೀಷ್ ಮಾಡದ ಅಕ್ಕಿಯನ್ನು ಅಥವಾ ಕುಸುಬಲು ಅಕ್ಕಿಯನ್ನು ಅಗತ್ಯ ಪ್ರಮಾಣದ ನೀರಿನಲ್ಲಿ ಇಂಗಿಸಿ ಉಪಯೋಗಿಸುವುದು, ಎಲ್ಲಾ ತರಕಾರಿಗಳನ್ನು, ಮುಚ್ಚಿದ ಪಾತ್ರೆಗಳಲ್ಲಿ ಬೇಯಿಸಬೇಕು. ಇದರಿಂದ ಅವುಗಳಲ್ಲಿರುವ 'ಬಿ" ಮತ್ತು 'ಸಿ" ಜೀವಸತ್ವಗಳು ನಷ್ಟವಾಗುವುದಿಲ್ಲ. ಅಡಿಗೆ ಸೋಡಾವನ್ನು ತರಕಾರಿಗಳಿಗೆ ಹಾಕಬಾರದು. ಅದು ಈ ಜೀವಸತ್ವಗಳನ್ನು ನಷ್ಟಪಡಿಸುವುದು. ಆಲೂಗಡ್ಡೆಯನ್ನು ಯಾವತ್ತೂ ಸಿಪ್ಪೆಯ ಸಮೇತ ಬೇಯಿಸಬೇಕು.

ಜೀವಸತ್ವ 'ಸಿ" ಕೊರತೆಯಾದರೆ, ಒಸಡಿನಲ್ಲಿ ರಕ್ತ ಸೋರುವುದು. ಈ ರೋಗಕ್ಕೆ ಸ್ಕರ್ವಿ ಎಂದು ಹೆಸರು, ಇದನ್ನೂ ಗುಣಪಡಿಸುವುದಕ್ಕಾಗಿ ಹಣ್ಣುಹಂಪಲು ಮತ್ತು ಹಸಿರು ಕಾಯಿಪಲ್ಯಗಳನ್ನು ಉಪಯೋಗಿಸಬೇಕು. ನೆಲ್ಲಿ ಕಾಯಿ (ಗೂಸ್‌ಬೆರಿ)ಯಲ್ಲಿ ಇದು ಹೇರಳವಾಗಿರುವುದರಿಂದ ಅದನ್ನು ಉಪಯೋಗಿಸಬಹುದು ನೆಲ್ಲಿ ಕಾಯಿಗೆ (ಗೂಸ್ ಬೆರಿಗೆ) ಉಪ್ಪು ಹಾಕಿದರೆ ಜೀವಸತ್ವ 'ಸಿ' ನಷ್ಟವಾಗುವುದಿಲ್ಲ. ಕಿತ್ತಳೆ, ನಿಂಬೆ ಹಣ್ಣುಗಳನ್ನು, ಸದಾ ಕಾಲದಲ್ಲಿಯಲ್ಲದಿದ್ದರೂ ಆಯಾಯ ಸುಗ್ಗಿಯಲ್ಲಿ ಅವುಗಳು ಅಗ್ಗವಾಗಿದ್ದಾಗ, ಉಪಯೋಗಿಸಬಹುದು. ದಿನವಹಿ 'ಸಲಾಡ್'ನ್ನು ಉಪಯೋಗಿಸುವುದು ಉತ್ತಮ.

ಜೀವಸತ್ವ 'ಡಿ' ಕೊರತೆಯಿಂದ ಮಕ್ಕಳ ಮೂಳೆಗಳು ವಿಕಾರಗೊಳ್ಳುವುವು. ಇದು ಮೊಟ್ಟೆ, ಮೀನಿನ ಎಣ್ಣೆಯಲ್ಲಿ ಇರುತ್ತದೆ ಬಿಸಿಲಿನಲ್ಲಿ ಬಹಳ ಕಾಲವಿರುವುದರಿಂದಲೂ ಶರೀರದಲ್ಲಿ ಇದು ಸೇರುವುದು. ಇದು ಜೀವಸತ್ವ 'ಡಿ'ಯನ್ನು ಪಡೆಯಲು ಅಗ್ಗದ ಹಾದಿಯಾಗಿದೆ.

ಸಸಾರ ಜನಕದ ಅಭಾವ

ನಮ್ಮ ದೇಶದಲ್ಲಿ ಮಕ್ಕಳಿಗೆ ಮುಖ್ಯವಾಗಿ ತಾಯಿಯ ಹಾಲನ್ನು ಬಿಡಿಸಿದ ನಂತರ ಸಸಾರಜನಕದ ಕೊರತೆಸಂಭವಿಸುವುದು. ಆದರಿಂದಾಗಿ, ಮಕ್ಕಳು ಅನೇಕ ರೋಗಗಳಿಗೆ ಗುರಿಯಾಗುವರು ಇದರ ಕೊರತೆಯಿಂದ, ಆರಂಭದಲ್ಲಿ ಮಕ್ಕಳು ಕೃಶರಾಗುವರು, ಅವರ ತೂಕ ಕಡಿಮೆಯಾಗುವುದು. ಅನಂತರ ಕ್ರಮೇಣ ಚರ್ಮದ ಮೇಲೆ ಗುಳ್ಳೆಗಳಾಗುವುವು. ಕೂದಲಿನ ಬಣ್ಣ ಬದಲಾಯಿಸುತ್ತಾ ಹೋಗುವುದು. ಹಾಲು ಅಥವಾ ಕೆನೆತೆಗೆದ ಹಾಲು ಹಾಗೂ ಉತ್ತಮ ಆಹಾರದಿಂದ ಈ ಕೊರತೆಯನ್ನು ಹೋಗಲಾಡಿಸಬಹುದು. ಹಾಲು ಕುಡಿಯುವ ಮಕ್ಕಳಿಗೆ ಹಾಲಿನ ಕೊರತೆಯಾದಾಗ, ಹಾಲಿನ ಪುಡಿಯನ್ನು ಉಪಯೋಗಿಸಬಹುದು, ಅರ್ಧ ಬೇಯಿಸಿದ ಮೊಟ್ಟೆ, ಬೇಯಿಸಿದ ಮೀನು ಇವುಗಳನ್ನು ಕೊಡಬಹುದು. ಅನೇಕ ಮಕ್ಕಳ ಆಹಾರಗಳನ್ನು ಮೈಸೂರಿನಲ್ಲಿರುವ ನಮ್ಮ ಆಹಾರ ಸಂಶೋಧನಾ ಪ್ರಯೋಗ ಶಾಲೆಗಳಲ್ಲಿ ತಯಾರಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾದುದು 'ರಾಗಿ ಮಾಲ್ಟ್'. ಹಸುವಿನ ಹಾಲಿನಿಂದ ತಯಾರಿಸಿದ 'ಬೇಬಿಫುಡ್'ಗಳನ್ನೂ ಉಪಯೋಗಿಸಬಹುದು. ೨ರಿಂದ ೫ ವರ್ಷಗಳವರೆಗಿನ ಮಕ್ಕಳಲ್ಲಿಯೂ ಸಸಾರಜನಕದ ಅಭಾವ ತಲೆದೋರಿದೆ. ಮೇಲೆ ಹೇಳಿದ ವಸ್ತುಗಳಲ್ಲದೆ ಅವಕ್ಕೆ ವನಸ್ಪತಿಯ ಸಸಾರಜನಕಗಳನ್ನೂ ಕೊಡಬೇಕು. ಈಗಿನ ಕಾಲದಲ್ಲಿ ಎಣ್ಣೆ ತೆಗೆದ ನೆಲಗಡಲೆ ಹಿಂಡಿ, ಹಾಗೂ ಹುರಿದ ಕಡಲೆಗಳಿಂದ ಜೀವಸತ್ವಯುಕ್ತವನ್ನಾಗಿ ಮಾಡಿದ ಆಹಾರವನ್ನು ಅಗ್ಗದ ದರದಲ್ಲಿ ಮಾರಲಾಗುತ್ತಿದೆ. ಇದನ್ನು ಮಕ್ಕಳಿಗೆ ವನಸ್ಪತಿ ಸಸಾರಜನಕಗಳಾಗಿ ತಿನ್ನಿಸಬಹುದು

ಆರೋಗ್ಯಸುಧಾರಣೆ ಯೋಜನೆಗಳು

ಮಕ್ಕಳ ಆರೋಗ್ಯವನ್ನು ಸುಧಾರಿಸಲು ಹಾಗೂ ಮಕ್ಕಳ ಸಾವಿನ ಸಂಖ್ಯೆಯನ್ನು ಕಡಿಮೆಮಾಡಲು ರೋಗಗಳನ್ನು ತಡೆಯುವುದು ಹಾಗೂ ಅವುಗಳಿಗೆ ಚಿಕಿತ್ಸೆ ನಡೆಸುವ ವ್ಯವಸ್ಥೆ ಜೊತೆಜೊತೆಯಲ್ಲಿಯೇ ನಡೆಯಬೇಕು. ಈಗ ಕೆಲವು ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯಸರಕಾರಗಳು ಗ್ರಾಮಗಳಲ್ಲಿ ಹಾಗೂ ನಗರಗಳಲ್ಲಿ ಆರೋಗ್ಯಕೇಂದ್ರ ಹಾಗೂ ಶಿಶು ಮತ್ತು ಮಾತೃಕಲ್ಯಾಣ ಕೇಂದ್ರಗಳನ್ನೂ ತೆರೆದಿವೆ.

ಈ ಕೇಂದ್ರಗಳಲ್ಲಿ ಮಕ್ಕಳ ಆರೋಗ್ಯಕ್ಕೆ ಗಮನಕೊಡುವುದರ ಜೊತೆಗೆ, ತಾಯಿಯರ ಆರೋಗ್ಯಸುಧಾರಣೆ ಕೆಲಸವನ್ನೂ ಕೈಗೊಳ್ಳಲಾಗುವುದು. ಸಸಾರಜನಕ ಮತ್ತು ಜೀವಾತುಗಳುಳ್ಳ ಕಡಿಮೆ ಬೆಲೆಯ ಆಹಾರ ಸೇವನೆಯ ವಿಷಯವಾಗಿಯೂ ಅವರಿಗೆ ತಿಳಿವಳಿಕೆಯನ್ನು ಈ ಕೇಂದ್ರಗಳಲ್ಲಿ ಕೊಡಲಾಗುವುದು.

ಕೇಂದ್ರ ಹಾಗೂ ರಾಜ್ಯಗಳ ಆರೋಗ್ಯ ಕೇಂದ್ರ ಹಾಗೂ ಶಿಶು ಮತ್ತು ಮಾತೃ ಕಲ್ಯಾಣ ಕೇಂದ್ರಗಳಲ್ಲಿ ಚಿಕ್ಕ ಮಕ್ಕಳು ಹಾಗೂ ಶಾಲೆಗಳಿಗೆ ಹೋಗುವ ಮಕ್ಕಳು ಮತ್ತು ಗರ್ಭವತಿ ಸ್ತ್ರೀಯರು, ಮಗುವಿಗೆ ಹಾಲು ಕುಡಿಸುವ ತಾಯಿಯರು ಇವರಿಗೆ ಹಾಲಿನಪುಡಿ, ಜೀವಸತ್ವ ಮಾತ್ರೆಗಳು, ಸಸಾರಜನಕ ಇರುವ ಆಹಾರ ಇತ್ಯಾದಿಗಳನ್ನು ಹಂಚುವ ವ್ಯವಸ್ಥೆಯನ್ನು ಮಾಡಲಾಗಿದೆ.

ಪೋಷಕ ಆಹಾರ ವ್ಯವಸ್ಥೆ

ಮಕ್ಕಳ ಆರೋಗ್ಯವನ್ನು ಸುಧಾರಿಸಲುವಾಗಿ, ಅಧಿಕ ಸಂಖ್ಯೆಯ ಶಾಲೆಗಳಲ್ಲಿ ಪೋಷಕ ಪದಾರ್ಥಗಳನ್ನು ಹಂಚುವ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಕೆಲಸಕ್ಕಾಗಿ ಶಾಲೆಗಳಲ್ಲಿ ಹಣ್ಣು ಮತ್ತು ತರಕಾರಿಗಳನ್ನೂ ಶಾಲೆಗಳ ಆವರಣದಲ್ಲಿ ಬೆಳೆಸುವ ಪ್ರಯತ್ನ ನಡೆಯಬೇಕು. ಹಾಲು, ಮೀನು, ಮತ್ತು ಮೊಟ್ಟೆಗಳನ್ನು ಹಂಚುವುದಕ್ಕೂ ವ್ಯವಸ್ಥೆಯಾಗಬೇಕು. ಈ ವಸ್ತುಗಳನ್ನು ಶಾಲೆಗಳಲ್ಲಿ ಮಕ್ಕಳ ಉಪಹಾರಕಾಲದಲ್ಲಿ ಕೊಡಬೇಕು.

ಇದರ ಜೊತೆಗೆ, ಜನತೆಗೆ ಆಹಾರವನ್ನು ಸರಿಯಾದ ರೀತಿಯಲ್ಲಿ ಬೇಯಿಸುವ ಕ್ರಮದ ಬಗೆಗೂ ತಿಳಿವಳಿಕೆಯನ್ನು ನೀಡುವುದು ಅಗತ್ಯ. ಅದಕ್ಕಾಗಿ ದೇಶಾದ್ಯಂತ ಪ್ರದರ್ಶನವೊಂದನ್ನು ವ್ಯವಸ್ಥೆಗೊಳಿಸಬೇಕು.

—ಡಾ| ರಾಧಾ ಕಾನ್ಪಾಡ್
ನವದೆಹಲಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಕಥಾವಿಹಾರ

(೩ನೇ ಪುಟದಿಂದ)

ಯುತ್ತಿರುವ ಇಂತಹ ಪ್ರಸಂಗಗಳನ್ನು ಪ್ರತಿಭಟಿಸುತ್ತಿರಲಿಲ್ಲ.

"ಅಭ್ಯಾಸದಿಂದ ಸಾಧ್ಯ ಗುರೂ, ಅನವರತ ಪರಿಶ್ರಮ ಬೇಕು. ದೇವಳದ ಶಂಭುವನ್ನು ಪೂಜಿಸಿದರೆ ಸಾಲದು; ನಿನ್ನ ಹೃದಯಾಂತರಾಳದ ಶಂಭುವನ್ನು ಆರಾಧಿಸಬೇಕು. ಪ್ರಪಂಚದ ಕೋಟಿ ಕೋಟಿ ಜೀವಗಳಲ್ಲಿ ಆ ಶಂಭುವನ್ನು ಕಾಣಬೇಕು. ಗುರೂ, ಆಗ ಮಾತ್ರ ನೀನು ಧನ್ಯನಾಗುವಿ. ಪ್ರಯತ್ನಿಸು; ಒದಗಿಬಂದ ಸುಸಂಧಿಯನ್ನು ಹಾಳುಮಾಡಿಕೊಳ್ಳಬೇಡ."

'ಹಾಳುಮಾಡಿಕೊಳ್ಳುವುದಂತೂ ಖಂಡಿತಾ ಇಲ್ಲ...."

"ಗುರೂ, ಅದೇನೂ ಅಷ್ಟು ಸುಲಭದ ಸೊತ್ತಲ್ಲ. ಎಂತಹ ವೈರಾಗ್ಯಸಂಪನ್ನರೂ ಕೂಡ ಬರಬರುತ್ತಾ ವಿಷಯ ಜಾಲಕ್ಕೆ ಜೋಲುಬೀಳುವರು. ನಿನ್ನ ಪಾಡೇನು ಮತ್ತೆ? ನೆರಗಿನಲ್ಲಿ ಗಂಟು ಹಾಕಿಕೊ, ಮೂರ್ಖ! ನೀನು ಇಂದಿನ ಪರಿಸ್ಥಿತಿಯಲ್ಲಿಯೇ ಹೀಗೆಯೇ ಮುಂದುವರಿದರೆ ನಾಯಿಗೂ ಬೇಡದ ಪಾಡು; ಸಂಪೂರ್ಣ ಅಧಃ ಪತನವಾದೀತು, ಜೋಕೆ!"

ಈ ಕೊನೆಯ ಮಾತನ್ನು ಹೇಳುತ್ತಿರುವಾಗಲೇ ಆ ಊರಿನ ಸುಪ್ರಸಿದ್ಧ ವ್ಯಕ್ತಿ ಶ್ಯಾಮರಾಯರು ಶ್ರೀಪಾದಂಗಳವರನ್ನು ನೋಡುವ ಉದ್ದೇಶದಿಂದ ಅಲ್ಲಿಗೆ ಬಂದವರು ಗುರು ಪ್ರಭವಾನಂದರಿಗೆ ಉದ್ದಂಡ ನಮಸ್ಕಾರ ಹಾಕಿ ನೆಲದಲ್ಲಿ ಕುಳಿತುಕೊಂಡರು. ಆ ಪ್ರತಿಷ್ಠಿತ ವ್ಯಕ್ತಿಯ ಇದಿರಿನಲ್ಲಿ ಶಂಕರನ ಬಾಯಿಂದ ತನಗೆ "ಮೂರ್ಖ" ಪದವಿ ದೊರಕಿದುದನ್ನು ಗುರುಗಳು ಸಹಿಸದಾದರು ಮುಖ ಗಂಭೀರವಾಯಿತು. ಕ್ಷಣಕಾಲ ಶಂಕರನನ್ನೇ ದಿಟ್ಟಿಸಿದರು. ಆ ಮೇಲೆ ಶ್ಯಾಮರಾಯರನ್ನೊಮ್ಮೆ ನೋಡಿದರು. ಬಲಾತ್ಕಾರಪೂರ್ವಕವಾಗಿ ನಗೆಯ ಮುಸುಕನ್ನು ಮುಖದಮೇಲೆಳೆದುಕೊಂಡು ಶ್ಯಾಮರಾಯರನ್ನು ಸ್ವಾಗತಿಸಿದರು. ಹೃದಯ ತಳಮಳಗೊಳ್ಳುತಿತ್ತು. ತಪ್ಪುಗಾರ ಶಂಕರನಾಗಿದ್ದ. ಸಿಟ್ಟು ಭುಗಿಲ್ಲೆಂದು ಪ್ರಜ್ವಲಿಸಿತು ತಟ್ಟನೆ ಎದ್ದುನಿಂತರು ಸ್ವಾಮಿಗಳು.

ಕೈಸನ್ನೆಯಿಂದ ಶಂಕರನನ್ನು ಕರೆದು ಅಲ್ಲಿಯೇ ಪಕ್ಕದಲ್ಲಿರುವ ಕಿರುಕೋಣೆಗೆ ಹೋದರು. ಶಂಕರನೂ ಹಿಂಬಾಲಿಸಿದ.

ಮುಖ ಉರಿಯುತಿತ್ತು. ಬೇರೆಲ್ಲ ಭಾವನೆಗಳೂ ಮರೆಯಾಗಿದ್ದುವು. ಕೆಲವೇ ಸಿಡಿ ಮಾತುಗಳು ಸ್ವಾಮಿಗಳ ಬಾಯಿಂದ ಹೊಟ್ಟಿದುವು.

"ಶಂಕರ, ನಿನಗೂ ಮಠಕ್ಕೂ ಸಂಬಂಧವಿಲ್ಲ. ಇನ್ನೊಂದು ಕ್ಷಣವೂ ಇಲ್ಲಿ ನಿಲ್ಲಬೇಡ. ಹೊರಟು. ಹೋಗಿಬಿಡು."

ಶಂಕರನಿಗೆ ಪರಿಸ್ಥಿತಿಯ ಅರಿವಾಯಿತು. ತನ್ನ ತಪ್ಪು ಗುರುವಿನ ಅರಿಪೂರ್ಣ ಹೃದಯ—ಎಲ್ಲವೂ ಅರ್ಥವಾಯಿತು ಆತನಿಗೆ. ಮುಗುಳುನಗುತ್ತಾ ಹೇಳಿದ—

"ಗುರೂ, ಹೊರಟೆ! ನೀನು ನೂಕಿಸುವ ಮುನ್ನವೇ ಹೊರಟುಬಿಟ್ಟೆ ಆದರೆ ನಿನ್ನಂತಹನನ್ನು ಧರ್ಮಪೀಠಕ್ಕೇರಿಸಿದರು.ಏನೂ ಅರಿಯದ ಮುದ್ದು ಹಸುಳೆಯ ತಲೆ ಬೋಳಿಸಿ ಮಾತಾಪತ್ಯಕ್ಕೆ ನೂಕಿದರು. ಈ ಬಗ್ಗೆ ನಾನು—ಸಾಮಾಜಿಕನು—ದುಃಖಿಸುತ್ತೇನೆ. ಗುರೂ, ಇದು ಸುಖದ ಸುಪತ್ತಿಗೆ ಎಂದು ತಿಳಿದಿರುವಿ. ನೆನಪಿಟ್ಟುಕೊ, ಇದು ನಿನಗೆ ನರಕ ಕೂಪ!"

ಮತ್ತಲ್ಲಿ ಆತ ನಿಲ್ಲಲಿಲ್ಲ. ತತ್ಕ್ಷಣವೇ ಮಠಬಿಟ್ಟು ಹೊರಟು ಹೋದ.

ಹೊರಟೇ ಹೋದನೆಂಬುದು ತಿಳಿದಾಗ ಗುರುವಿನ ಕಣ್ಣು ತೆರೆಯಿತು. ಹೆಜ್ಜೆ ಹೆಜ್ಜೆಯಲ್ಲೂ ಆತನ ಮಾತುಗಳು ಮರುಕೊಳಿಸತೊಡಗಿದುವು. ತನ್ನ ದೌರ್ಬಲ್ಯಕ್ಕೆ ತಾನೇ ನಾಚಿಕೊಂಡ. ತನ್ನ ಹೃದಯವನ್ನು ಕಿತ್ತು ಕೈಯಲ್ಲಿ ಹಿಡಿದು ಪರೀಕ್ಷಿಸತೊಡಗಿದ....

ಅಬ್ಬಾ ಪಿಶಾಚವೇ... ಆತ್ಮವಂಚನೆ!

ಕಂಡುಬಂತು, ತಾನೆಂತಹ ವಂಚಕನೆಂದು! ತಾನೆಂತಹ ದುರ್ಬಲನೆಂದು! ಮನದಲ್ಲೇ ಮರುಗಿದ.

ಆದರೆ ಕ್ಷಣಕಾಲ ಮಾತ್ರ. ಮತ್ತೆ ಮಾಯೆಯ ಮುಸುಕು! ಯಾವುದೋ ಸಂಘದವರು ಅರ್ಪಿಸಿದ ಮಾನಪತ್ರವನ್ನು ಓದಿ ಪುನಃ ಬಹುವಚನದ ಗುರು ಪ್ರಭವಾನಂದರಾಗಿ ಬಿಟ್ಟ.

ಮಠದ ಓರಣದ ಬೆಡಗಿಗೆ ಮನಸ್ಸು ಸೂರೆ ಹೋಯಿತು. ಶಂಭು ಲಿಂಗಾರ್ಚನೆಯ ಆಡಂಬರಕ್ಕೆ ಶಿಷ್ಯಮಂಡಲಿ ಹುಚ್ಚೆದ್ದು ಹೋಯಿತು. ವಿದ್ವಾಂಸ ಸನ್ಮಾನದಿಂದಾಗಿ ಮೆಚ್ಚಿಕೆಯ ಮಳೆಯ ನೆರೆ ತುಂಬಿ ಹೋಯಿತು. ಗುಣವನ್ನೇ ಗ್ರಹಿಸುವ ಶಿಷ್ಯ ಮಂಡಲಿ ಮಹಾ ತೇಜಸ್ವೀ ಗುರುಪ್ರಭವಾನಂದರ ಚರಣಕಮಲಗಳಲ್ಲಿ ಶಿರವನ್ನಿರಿಸಿತು. ಗುರುಗಳ ಅಮೃತ ಹಸ್ತದ ಆಶೀರ್ವಾದ ಅವರಿಗಾಗಿ ಕಾದಿತ್ತು.

ತೆರೆಯ ಮುಸುಕು ಸರಿಸಿದಾಗ—

ಗುರುಗಳ ಅಂತರಾತ್ಮವೇ ತತ್ತರಿಸಿ ಹೋಗುತಿತ್ತು. ಅನ್ಯಾಯವೇ?... ಅನ್ಯಾಯವಿರಬಹುದು. ಆದರೆ ನಾನೇನು ಮಾಡಲಿ? ನನಗೆ ಯಾವ ತಪ್ಪಿಗಾಗಿ ಈ ಶಿಕ್ಷೆ? ಯಾರು ಕೊಟ್ಟ ಶಿಕ್ಷೆಯಿದು?

ಹುಚ್ಚು! ಶಿಕ್ಷೆಯೇನು ಬಂತು, ಮಣ್ಣು! ಸಮಾಜ ಇನಿತ್ತ ಕಣ್ಣು ಹಾಯಿಸದು. ಗುರುಪ್ರಭವಾನಂದರು ಪ್ರಕೃತಿಯ ಸಹಜೋದ್ವೇಗವನ್ನು ಗೆಲ್ಲಲಾರದಾಗಿದ್ದರು. ಮಾರುಹೋದರು.

ಆಗ ಶಂಕರನ ಮಾತು ಝೇಂಕರಿಸಿತು!

ಅಂತರಾಳದಲ್ಲಿ ಗಲಿಬಿಲಿಯಾಯಿತು. ಗುರುಗಳು ಅಧೀರರಾದರು. ಆದರೂ ಮೆಲುದನಿಯಲ್ಲಿಯೇ ಸಮರ್ಥಿಸಿಕೊಂಡರು—

"ನೆರಳು ನೆರಳೊಡನೆ ಕ್ರೀಡಿಸಿದರೆ ಪರಿಶುದ್ಧವಾದ ಅಂತರಾತ್ಮನಿಗೆ ಹೊಲಸೆಂತು ಅಂಟಿಕೊಂಡೀತು?"

ಬ್ರಹ್ಮಚರ್ಯ ಪ್ರಕೃತಿ ವಿರುದ್ಧವಾದುದು. ಸಾಮಾನ್ಯರಿಗೆ ಅಸಾಧ್ಯವಾದುದು. ಬಾನಾಚೆಯ ಜ್ಯೋತಿರ್ಮಂದಿರ.

ಒಳಗಿನ ಹೊಲಸನ್ನು ಮುಚ್ಚಲೋಸುಗ ಶ್ರೀ ಮಠದ ಕಾರ್ಯಕಲಾಪಗಳ ಸ್ವರೂಪ ದ್ವಿಗುಣಿತವಾಯಿತು. ಮುಂಚೆಗಿಂತಲೂ ಆಡಂಬರಯ ಮೆಚ್ಚುಗಳು ಹೆಚ್ಚಿದುವು. ಮಠದ ಬೆಳ್ಳನೆಯ ಬೆಳಕು ಹತ್ತು ಕಡೆಗೂ ಚೆಲ್ಲಾಡಿತು. ನೂರಾರು ಸಾಧುಸಂತರ ವಿದ್ವಾಂಸರು ವಿವಿಧ ಸಂಘ ಸದಸ್ಯರು ಬಂದು ಹೋಗುವ ಬೀಡಾಯಿತು ಶ್ರೀಮಠ.

ಹಲವು ವರ್ಷಗಳ ಕಠಿಣ ಸಾಧನೆಯಿಂದ ಕಾಂತಿಗೊಂಡ ಸಾಧುವೊಬ್ಬ ಶ್ರೀಮಠಕ್ಕೆ ಬಂದು ಮೂರು ದಿನಗಳ ವರೆಗೆ ಉಳಿದುಕೊಂಡಿದ್ದ. ಮೂರನೆಯ ದಿನ ಶ್ರೀಪಾದಂಗಳವರನ್ನು ನೋಡಲು ಹೋದ.

ಕೋಣೆಯಲ್ಲಿ ಶ್ರೀಪಾದಂಗಳವರು ಮಾತ್ರ ಇದ್ದರು. ಮುಖದ ಮೇಲೆ ಕರಿಯ ರೇಖೆ ಮೂಡಿತ್ತು; ಏನೋ ಚಿಂತಿಸುತಿದ್ದರು.

ಸಾಧು ಪ್ರವೇಶಿಸುತ್ತಲೇ ಹೇಳಿದ—

"ಗುರೂ, ನೀನೊಬ್ಬ ದೊಡ್ಡ ಕೃತ್ರಿಮಿ! ಆತ್ಮವಂಚಕ. ಆತ್ಮವಂಚನೆಗಿಂತ ದೊಡ್ಡ ಪಾಪ ಇನ್ನೇನಿದೆ. ಅಃ! ನಿನ್ನ ವೇಷ, ನಿನ್ನ ವರ್ತನೆ. ಎಲ್ಲ ಬಲ್ಲೆ ಗುರೂ, ಹೋಗು ಕುತ್ತಿಗೆಗೆ ನೇಣು ಹಾಕಿಕೊ!"

ಗುರು ಬೆರಗಾದ. ಸಾಧುವನ್ನೇ ದಿಟ್ಟಿಸುತ್ತಾ "ಅಣ್ಣಾ" ಎಂದ. ಹಲವು ವರ್ಷಗಳ ಮೇಲಿನ ಅಣ್ಣನ ಆರೆಯಿದು!

ಸಾಧು ಮತ್ತಷ್ಟು ರೊಚ್ಚಿಗೆದ್ದವನಂತೆ ಸಿಡಿಯ ತೊಡಗಿದ.

"ಥೂ ಸುಮ್ಮನಿರು. ಗುರು, ನೀನಾರು ಎಂಬುದನ್ನರಿತುಕೊ. ನನ್ನಿಂದ ನಮಸ್ಕಾರ ಮಾಡಿಸಿಕೊ. ನಾನು ನಮಸ್ಕಾರ ಮಾಡುವಂತಹ ಯೋಗ್ಯತೆಯನ್ನು ಮುಟ್ಟು. ಗುರೂ, ಅದು ಸಾಧ್ಯವಾಗದಿದ್ದರೆ, ಏನೇನೂ ಆಶೆ ಬೇಡ, ಸನ್ಯಾಸಕ್ಕೆ ಸನ್ಯಾಸ ಕೊಟ್ಟುಬಿಡು. ಅದೂ ಇಲ್ಲವಾದರೆ ನಿನ್ನನ್ನು ನೀನೇ ಕೊಂದುಕೋ ಮೂರ್ಖ!" ಎಂದು ಹೇಳಿ ಹೊರಟೇ ಬಿಟ್ಟ.

ಆದರೆ ಗುರು ಆತನನ್ನು ಹೋಗಗೊಡಲಿಲ್ಲ. 'ಬಾ ಅಣ್ಣ' ಎಂದು ಹೇಳಿ ಕರೆತಂದು ಕುಳ್ಳಿರಿಸಿದ.

"ಯಾಕೆ, ಗುರೂ, ತೊಂದರೆ ಕೊಡುವಿ? ನಿನ್ನ ಚರಿತ್ರೆಯೆಲ್ಲ ಬಲ್ಲೆ. ನಿನ್ನ ರಾಸಕ್ತಿ ಹೆಜ್ಜೆಯೆಲ್ಲ ಗೊತ್ತು. ಬೇಕಾದ ಹಾಗೆ ಇದ್ದುಬಿಡು. ಕೆಂಪು ಕಾವಿಯ ಮೇಲೆ ಜನತೆಯಿರಿಸಿದ ಗೌರವವನ್ನು ಹಾಳು ಮಾಡಿಕೊಳ್ಳುತಿದ್ದೀ, ಅಷ್ಟೆ!"

ಗುರುವಿನ ಕಣ್ಣುಗಳಲ್ಲಿ ನೀರು ತುಳುಕಾಡುತಿತ್ತು. ಶಂಕರನ ಬಾಯಿಯಿಂದ ಸಿಡಿದ ಆ ಮಾತುಗಳನ್ನು ಇದಿರಿಸುವ ಸ್ಥೈರ್ಯ ಆತನಲ್ಲಿದ್ದಿಲ್ಲ. ಕುತ್ತಿಗೆ ಬಿಗಿದು ಬಂತು.

"ಅಣ್ಣ! ನೀನಿನ್ನೂ ನನ್ನ ಅಣ್ಣನೇ ಆಗಿದ್ದಿ. ಸಮಾಜ ನನಗೆ ಕೊಟ್ಟ ಶಿಕ್ಷೆಯಿದು. ಆತ್ಮವಂಚನೆಯಲ್ಲದೆ ಬೇರೆ ಗತಿಯೇ ಇಲ್ಲ ಅಣ್ಣ! ಅದು ಬಿಟ್ಟು ಆತ್ಮಹತ್ಯೆ ಮಾತ್ರ ಉಳಿದಿದೆ.'

ಮಾತು ಬಿಕ್ಕಳಿಸಿತು. ಹೃದಯ ಕರಗಿ ಕಣ್ಣಿನಿಂದ ಚಿಮ್ಮಿ ಬಂತು.

ಸಂಜೆಯ ಸೂರ್ಯ ಕಿರಣಗಳಿಗೆ ಆ ನೀರು ಬಂಗಾರದಂತೆ ಹೊಳೆಯುತಿತ್ತು. ಶಂಕರನ ಕಣ್ಣುಗಳೂ ಕರಗಿಹೋದುವು. ಕನಿಕರದಿಂದ—

"ಗುರೂ, ಬಲ್ಲೆ. ಇದರಲ್ಲಿ ನಿನ್ನ ತಪ್ಪಿಲ್ಲ. ನೀನು ಚಿಕ್ಕವನಿದ್ದಾಗ ನಿನಗೇನೂ ತಿಳಿಯದಿದ್ದಾಗ ನಿನ್ನನ್ನು ಈ ಪೀಠದಲ್ಲಿ ಕುಳ್ಳಿರಿಸಿದವರದೇ ತಪ್ಪು. ಏನು ಮಾಡಲಿ ತಮ್ಮ! ಆಗಲಿ, ಆಚರಣೆ ಪರಿಶುದ್ಧವಲ್ಲದಿದ್ದರೂ ಹೃದಯವಾದರೂ ಪುತ್ಥಳಿಯಾಗಿಯೇ ಇದೆಯಷ್ಟೆ! ಅಷ್ಟೋ ಸಮಾಧಾನವಾಯಿತು, ಬಿಡು!" ಎಂದು ಹೇಳಿ ಅಲ್ಲಿಂದ ಎದ್ದುಹೋದ. ಶಂಕರ ಶುದ್ಧ ತಪಸ್ವಿಯಾಗಿದ್ದ.

ಆದಿನ ಗುರುವಿಗೆ ಪ್ರಪಂಚವೇ ಮರೆತುಹೋಯಿತು. ರಾತ್ರಿ ಬಹುಕಾಲ ಜಾಗರಣೆಯಲ್ಲೇ ಜಾರಿತು.

ಇಲ್ಲಿಂದ ನನಗೆಂತು ಮುಕ್ತಿ?

ಅಃ! ಮುಕ್ತಿ!—ಒಂದೇ ದಿನ!

ಗುರು ಏನೋ ಒಂದು ದ್ರಾವಕವನ್ನು ಕೈಯಲ್ಲಿ ಹಿಡಿದುಕೊಂಡಿದ್ದ.

"ಅಣ್ಣಾ ಶಂಕರ! ನನ್ನಿಂದ ಹೊಲಸಾದ ಈ ಧರ್ಮಪೀಠವನ್ನು ನೀನೇರಿ ಕುಳಿತು ಪರಿಶುದ್ಧಗೊಳಿಸು. ಹೇ ಪರಮೇಶ್ವರ, ನನಗೆ ಈ ರೀತಿಯ ಮುಕ್ತಿಯನ್ನಾದರೂ ಕೊಡು."

ದ್ರಾವಕವನ್ನು ಗುರು ಕುಡಿದೇಬಿಟ್ಟ.

ಸೂರ್ಯೋದಯದಲ್ಲೇ ನಿನ್ನೆ ಬಂದ ಸಾಧುವನ್ನೊಮ್ಮೆ ನೋಡಬೇಕೆಂದು ಗುರು ಜನಕಳುಹಿಸಿದ. ಆದರೆ ಆ ಸಾಧು ಮಠಬಿಟ್ಟು ಎಲ್ಲಿಗೋ ಹೋಗಿಯಾಗಿತ್ತು ಎಂಬುದಾಗಿ ವಾರ್ತೆ ಸಿಕ್ಕಿತು.

ಗುರುವಿಗೆ ಆಶಾಭಂಗವಾಯಿತು. ಬಹಳವಾಗಿ ಹಾಸಿಗೆಯಲ್ಲಿ ಬಿದ್ದು ಚಡಪಡಿಸತೊಡಗಿದ. ನರ ನರಗಳೆಲ್ಲ ಸಿಡಿದುಬರುತಿತ್ತು. ತನ್ನ ಆಟ ಮುಗಿದು ಅಂಕದ ತೆರೆ ಸರಿಯುತ್ತಿರುವುದನ್ನು ಗಮನಿಸಿದ ಗುರು.

ನಾಲ್ಕಾರು ಜನರನ್ನು ಕರೆದು ಆ ಸಾಧುವನ್ನು ಹುಡುಕಿ ತನ್ನಿ ಎಂಬುದಾಗಿ ತಿಳಿಸಿ ಕಳುಹಿಸಿದ. ಅವರೆಲ್ಲ ಆ ಸಾಧುವಿನ ಅನ್ವೇಷಣೆಗೆ ತೆರಳಿದರು.

ಗುರುವಿನ ದೇಹ ಅರಸಿನದ ಕೊಂಬಿನಂತಾಗಿತ್ತು. ಮತ್ತೆರಡೇ ದಿನಗಳಲ್ಲಿ—ಸಂಪೂರ್ಣ ಕರಿಪರದೆ ಸಂದುಹೋಗಿತ್ತು. ಧರ್ಮಪೀಠ ಖಾಲಿಯಾಗಿತ್ತು.

ಮತ್ತಾವುದೋ ಎಳೆಯ ಬಾಲಕ ಆ ಪೀಠವನ್ನಲಂಕರಿಸಿದ.

ಎಂಟು ದಿನಗಳ ತರುವಾಯ ಗುರು ಪ್ರಭವಾನಂದರ ಹೊಸ ವೃಂದಾವನದ ಬಳಿ ನಿಂತು, ಆ ಸಾಧು ಶಂಕರನು ಕಣ್ಣೀರಿಳಿಸಿ, ನಿಟ್ಟುಸಿರು ಬಿಟ್ಟು, ಮಂದಗತಿಯಿಂದ ಹಿಮಾಲಯದತ್ತ ತೆರಳಿದ.

—ಯು. ಪದ್ಮನಾಭ ಭಟ್ಟ.



— ಕುಮಾರಿ ಬಿಲ್ಲೆಗಳು —

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: (1) ಶಾ ಕಂಪೆನಿ, ಮಂಗಳೂರು—1.

NAVAYUGA | **UDIPI, THURSDAY** | **LICENSE NO. 31**
REGD. NO. M. 3619 | **18—2—1960** | Licensed to Post without Prepayment

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ರಚನೆಗೆ ಬೇಕಾದ ಸಹಾಯಕ ಸಾಮಗ್ರಿಗಳನ್ನು ಒದಗಿಸಿಕೊಳ್ಳುವ ಕಾರ್ಯದಲ್ಲಿ ಈಗಿನ ಲೇಖಕರು ಗ್ರಂಥವ್ಯಾಸಂಗದಿಂದ ಪ್ರಯೋಜನಪಡೆದಿದ್ದಾರೆ. ಒಂದು ಐತಿಹಾಸಿಕ ಕಾದಂಬರಿ ರಚಿಸಬೇಕಾದರೆ, ಆ ಕಾಲದ ಚರಿತ್ರೆಯನ್ನೂ ಸಾಮಾಜಿಕ ಸ್ಥಿತಿಯನ್ನೂ ತಿಳಿಯುವ ಸಲುವಾಗಿ ಕಾದಂಬರೀಕಾರ ಆಳವೂ ವಿಸ್ತಾರವೂ ಆದ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಚರಿತ್ರೆ ಬರೆಯುವವನಿಗಿಂತ ಇವನ ಜ್ಞಾನವೇ ಮಿಗಿಲಾಗಿರುವುದೂ ಉಂಟು. ಓದುವವರೂ ಈ ಸಾಮಗ್ರಿಯ ಬಹುಭಾಗವನ್ನು, ಕಾದಂಬರಿಯನ್ನು ಸಮಗ್ರ ತಿಳಿದುಕೊಳ್ಳುವುದಕ್ಕಾಗಿ ಅವಲೋಕಿಸಬೇಕಾಗುತ್ತದೆ. ಹೀಗೆಯೇ ಇತರ ಸಾಹಿತ್ಯರೂಪಸೃಷ್ಟಿಗೂ ಈ ತೆರದ ವಿದ್ವತ್ತು ಅವಶ್ಯಕ. ಸಾಹಿತ್ಯ ವ್ಯಾಸಂಗ ಪರಿಪೂರ್ಣವಾಗಬೇಕಾದರೆ, ಅದಕ್ಕೆ ಅಂಗವಾಗಿರುವ ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರಗಳನ್ನೂ ಸಾಹಿತ್ಯ ಚರಿತ್ರೆಯನ್ನೂ ರಾಜಕೀಯ ಧಾರ್ಮಿಕ ಚರಿತ್ರೆಗಳನ್ನೂ ಇನ್ನೂ ಅನಿರ್ದಿಷ್ಟವಾದ ಇತರ ವಿಷಯಗಳನ್ನೂ ವ್ಯಕ್ತಿ ಕಷ್ಟಪಟ್ಟು ಕಲಿಯುವ ಅವಶ್ಯಕತೆಯಿದೆ. ಇವೆಲ್ಲದರಿಂದ ಬರುವ ಸಮಷ್ಟಿ ರೂಪವಾದ ಖಚಿತವಾದ ಜ್ಞಾನಕ್ಕೆ ಇಲ್ಲಿ "ವಿದ್ವತ್ತು" ಎಂದು ಕರೆದಿದೆ.

ಸಾಹಿತ್ಯದ ರಸಾನುಭವವನ್ನು ಸಾಂದ್ರತರವಾಗಿಸುವುದು ಸಾಮಾನ್ಯವಾದ ವಿದ್ವತ್ತಿನ ಕಾರ್ಯ. ಇದನ್ನು ಮೀರಿಸುವ ವಿದ್ವತ್ತನ್ನು ನಿರ್ಮಾಣಾತ್ಮಕ ವಿದ್ವತ್ತೆಂದು ಕರೆಯಬಹುದು. ಆಚಾರ್ಯ ಬಿ. ಎಂ. ಶ್ರೀ. ಅವರು ವೈದಿಕ ಲೌಕಿಕ ಸಂಸ್ಕೃತ, ತಮಿಳು, ತೆಲುಗು, ಕನ್ನಡ, ಇಂಗ್ಲಿಷ್, ಗ್ರೀಕ್—ಮುಂತಾದ ಸಾಹಿತ್ಯಗಳಿಗೆ ಸೇರಿದ ಛಂದಸ್ಸುಗಳನ್ನು ದೀರ್ಘಕಾಲ ಅಭ್ಯಾಸ ಮಾಡಿ, ಅವುಗಳ ರಹಸ್ಯವನ್ನು ಮನಗಂಡು, ಸಾರಭೂತವಾದ ಅಂಶಗಳನ್ನು ಆರಿಸಿ ಹೊಸಗನ್ನಡ ಕಾವ್ಯಕ್ಕೆ ನೂತನ ಛಂದಸ್ಸನ್ನು ನಿರ್ಮಾಣ ಮಾಡಿದ್ದು ಕನ್ನಡ ಕಾವ್ಯದ ಬೆಳವಣಿಗೆಗೆ ಕಾರಣವಾಯಿತು. ಇಂತಹ ವಿದ್ವತ್ತಿಗೆ ಶಾಸ್ತ್ರ ಪ್ರತಿಭೆ ಅವಶ್ಯಕ. ಕನ್ನಡ ಸಾಹಿತ್ಯ ಚರಿತ್ರೆಯನ್ನು ನೋಡಿದರೆ, ವಿದ್ವಾಂಸರ ಸಂಖ್ಯೆ ಕವಿ ಸಂಖ್ಯೆಗಿಂತ ಕಡಮೆಯಿರುವಂತೆ ಕಾಣುತ್ತದೆ; ಇದಕ್ಕೆ ಕಾರಣವೇನು? ಕವಿಗಿಂತ ವಿದ್ವಾಂಸನು ಅಪರೂಪವಾದ ಪದಾರ್ಥವೇ? ಇರಬಹುದು; ಯಾರು ಬಲ್ಲರು? ಏನೇ ಇರಲಿ, ವಿದ್ವತ್ತಿನ ಬೆಳವಣಿಗೆ ಇನ್ನೂ ಆಗ ಬೇಕಾದ ಪರಿಸ್ಥಿತಿ ಈಗಿದ್ದೆ.

ಕನ್ನಡಕ್ಕೆ ವಿಶಿಷ್ಟವಾದ ವಿದ್ವತ್ತಿನ ಪರಂಪರೆಯಿದ್ದರೂ ಅದರ ಬೆಳವಣಿಗೆಯನ್ನು ತೋರಿಸುವ ಸಾಮಗ್ರಿಯ ಅಭಾವ ತುಂಬ ಇದೆ. ಸಂಸ್ಕೃತದಲ್ಲಿರುವಂತೆ ಟೀಕೆ ವ್ಯಾಖ್ಯಾನಗಳು ಏಕೋ ರಚಿತವಾಗಿಲ್ಲ. ಎಷ್ಟೋ ವೇಳೆ ವ್ಯಾಖ್ಯಾನಗಾರರು ಮೂಲಗ್ರಂಥವನ್ನೂ ಮೀರಿಸಿರುವುದಕ್ಕೆ ಉದಾಹರಣೆಗಳು ಸಂಸ್ಕೃತದಲ್ಲಿದೆ. ಅಂತಹ ವಿದ್ವತ್ತು ಅಲ್ಲಿನದು. ನಾಗವರ್ಮ ಕೇಶಿರಾಜ ಭಟ್ಟಾಕಲಂಕರಂತಹ ವಿದ್ವಾಂಸರು ಕನ್ನಡದ ಪಾಂಡಿತ್ಯವನ್ನು ಬೆಳೆಸಿದ್ದಾರೆ. ಆದರೆ, ಅವರ ಪರಂಪರೆಯೊಂದು ಬೆಳೆದು ಬಂದಿಲ್ಲ. ಕನ್ನಡ ಭಾಷಾ ಚರಿತ್ರೆಯು ಇನ್ನೂ ಬಾಲ್ಯಾವಸ್ಥೆಯಲ್ಲಿದೆ; ಛಂದಸ್ಸಿನ ಶಾಸ್ತ್ರವೂ ಹೆಚ್ಚಾಗಿ ಬೆಳೆದಿಲ್ಲ. ಜನಪದ ಸಾಹಿತ್ಯವೂ ಪ್ರಾದೇಶಿಕ ಭಾಷೆಗಳೂ ಸ್ವತಂತ್ರವಾಗಿ ಸ್ವೇಚ್ಛೆಯಾಗಿ, ಬೇರಾವ ಪ್ರಭಾವಕ್ಕೂ ಒಳಗಾಗದಂತೆ ತಮ್ಮ ಪಾಡಿಗೆ ತಾವು ಬೆಳೆಯುವುದಕ್ಕೆ ಬಿಡಬೇಕು.

ಸಂಶೋಧನೆಯ ಶೋಚನೀಯ ಸ್ಥಿತಿ

ಕನ್ನಡ ವಿದ್ವತ್ತಿನ ಎಲ್ಲ ಶಾಖೆಗಳಿಗೂ ಬೇಕಾದ ಮೂಲ ಸಾಮಗ್ರಿಗಳನ್ನು ಕಾಲಕಾಲಕ್ಕೆ ಒದಗಿಸಿಕೊಡುವ ಕಾರ್ಯ ಪ್ರಾಚ್ಯ ಸಂಶೋಧನೆಯ ಇಲಾಖೆಯದು. ಮೈಸೂರಿನಲ್ಲಿರುವ ಇಲಾಖೆ ಈಗ ೮೦ ವರ್ಷಗಳ ಹಿಂದೆ ಶ್ರೀ ಬಿ. ಎಲ್. ರೈಸ್ ಅವರ ನೇತೃತ್ವದಲ್ಲಿ ಬೆಂಗಳೂರಲ್ಲಿ ಸ್ಥಾಪಿತವಾಯಿತು. ಅವರಾದನಂತರ ಬಂದ ಆರ್ ನರಸಿಂಹಾಚಾರ್ಯರಿಂದ ಅದರ ಕಾರ್ಯ ಮುಂದುವರಿಯಿತು. ಇವರಿಬ್ಬರು ನಡೆಸಿದ ಸಂಶೋಧನೆ, ಪ್ರಕಟಿಸಿದ ಶಾಸನಗಳೂ ದೇಶವಿದೇಶಗಳ ತಜ್ಞ ವಿದ್ವಾಂಸರ ಮನ್ನಣೆಗೂ ಪ್ರಶಂಸೆಗೂ ಪಾತ್ರವಾಗಿವೆ. ಇವರ ವಾರ್ಷಿಕವರದಿ ಪ್ರಕಟವಾಗುವುದನ್ನು ವಿದ್ವಲ್ಲೋಕ ಕುತೂಹಲದಿಂದ ಎದುರು ನೋಡುತಿತ್ತು.

ಆದರೆ, ೧೯೩೯ರಿಂದ ಈ ಇಲಾಖೆಯು ಸರಕಾರ—ವಿಶ್ವವಿದ್ಯಾಲಯ ಎಂಬ ಗೊಂದಲದಲ್ಲಿ ಸಿಕ್ಕಿಬಿತ್ತು. ಅದರ ಅವಸ್ಥೆ ಶೋಚನೀಯವಾಯಿತು. ೧೯೪೭ರಿಂದ ಅದರ ವರದಿಯೂ ಪ್ರಕಟವಾಗಿಲ್ಲ. ಪ್ರಾಚ್ಯಸಂಶೋಧನೆ ಸರಿಯಾಗದಿರ. ವಸ್ತುಕಾಲ ಕನ್ನಡದ ವಿದ್ವತ್ತು ಬೆಳೆಯಲಾರದು. ಆದುದರಿಂದ ಈ ಇಲಾಖೆಗೆ ಹೊಸ ಜೀವವನ್ನು ಕೊಡಬೇಕು. ಇದಕ್ಕಾಗಿ ಕೇಂದ್ರ ಸರಕಾರಕ್ಕೆ ಈ ಇಲಾಖೆಯನ್ನು ವಹಿಸಿಕೊಟ್ಟು ಕರ್ನಾಟಕಕ್ಕೆ ಪ್ರತ್ಯೇಕ ಪುರಾತತ್ವ ಸಂಶೋಧನಾಕೇಂದ್ರ ಸ್ಥಾಪಿಸಬೇಕು; ಅಥವಾ ಪ್ರಾಂತೀಯ ಸರಕಾರವೂ ಈ ಇಲಾಖೆಗೆ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಿ ಇಲಾಖೆಯನ್ನು ವಿಸ್ತರಿಸಬೇಕು.

ವಿಮರ್ಶೆ ದೋಷವಿದೂರವಿಲ್ಲ

ಹೊಸಗನ್ನಡದ ಸಾಹಿತ್ಯ ವಿಮರ್ಶೆ ಸರಿಯಾಗಿ ನಡೆದಿಲ್ಲವೆಂಬ ಅತೃಪ್ತಿ ಕೆಲವರಲ್ಲಿ ಇರುವುದು ಸಹಜವೇ. ಹೀಗೆ ಹೇಳುವವರು ತಾವೇ ಏಕೆ ಮುಂದೆ ಬಂದು ವಿಮರ್ಶೆ ಮಾಡಿ ಈ ಕೊರತೆಯನ್ನು ತುಂಬಬಾರದು? ಇತರರನ್ನು ಮಾಡಿರಿ ಎಂದು ಏಕೆ ಕೇಳಬೇಕು? ಇವೇ ಮೊದಲಾದ ಪ್ರಶ್ನೆಗಳು ಬರುತ್ತವೆ. ಹೀಗೆ ಹೇಳುವವರಿಗೆ ಉತ್ತರ—ಈಗಿನ ಮಾನಸಿಕ ಸಾಮಾಜಿಕ ವಾಯುಗುಣ ಸರಿಯಾಗಿಲ್ಲ, ಸರಿಯಾದ ಮೇಲೆ ಮಾಡೋಣ" ಎಂದು.

ಈಗ ಕೆಲವು ವರ್ಷಗಳಲ್ಲಿ ಸಾಹಿತ್ಯ ಪ್ರಪಂಚದಲ್ಲಿ ಬೇರೊಂದು ಮನೋಧರ್ಮದ ಪ್ರವೇಶವಾಗಿದೆ. ಜೀವನದ ಇತರ ಕ್ಷೇತ್ರಗಳಲ್ಲಿ ಹಬ್ಬಿರುವ ಜಾತಿಮತ ದೃಷ್ಟಿ ಸಾಹಿತ್ಯದೊಳಕ್ಕೂ ಕಾಲಿಟ್ಟಿದೆ. ಸಾಹಿತ್ಯನಿರ್ಮಾಣವಾಗಲಿ ವಿಮರ್ಶೆಯಾಗಲಿ ಸಂಶೋಧನೆಯಾಗಲಿ ಯಾವುದೂ ನಡೆಯುವುದಿಲ್ಲ, ಈ ದೃಷ್ಟಿ ಪ್ರಬಲವಾದರೆ ಒಂದು ವಿಶಿಷ್ಟ ಸಮಾಜದ ಮನ ನೋಯುವುದೆಂಬ ದೃಷ್ಟಿಯಿಂದ ಧರಣಿಪಂಡಿತನ "ಬಿಜ್ಜಳರಾಯ ಚರಿತ್ರೆ" ಮುದ್ರಿತವಾಗಿದ್ದರೂ ಹೊರಕ್ಕೆ ಬಾರದಾಯಿತು; "ಚೆನ್ನ ಬಸವ ನಾಯಕ" ಕಾದಂಬರಿಯ ಭಾಷಾಂತರದ ಪ್ರಚಾರಕ್ಕೆ ಅಡ್ಡಿಯಾಯಿತು; "ಸಿದ್ಧರಾಮ ಚಾರಿತ್ರ"ದ ಮುನ್ನುಡಿಯ ಕೆಲವಂಶಗಳ ಮೇಲೆ ಟೀಕೆ ಬಂತು. ಈ ದೃಷ್ಟಿ ಸರಿಯೆಂದು ವಾದಕ್ಕಾಗಿ ಒಪ್ಪಿಕೊಳ್ಳೋಣ. ಆಗ ಬಸವಣ್ಣನವರ ವಚನಗಳು, ಹರಿಹರ ಕವಿಯ ಬಸವರಾಜದೇವರ ರಗಳೆ ಮುಂತಾದ ಕೆಲವು ಕೃತಿಗಳು, ಉರಿಲಿಂಗಪೆದ್ದಿಯ ವಚನಗಳು—ಇವೇ ಮುಂತಾದ ಗ್ರಂಥಗಳಲ್ಲಿ ಇತರ ಸಮಾಜಗಳ ಕಟು ಟೀಕೆಯಿರುವುದರಿಂದ ಅವನ್ನು ಮುದ್ರಿಸಲೂ ಬಾರದು; ಪ್ರಕಟಿಸಲೂ ಬಾರದು ಎಂದು ಇತರ ಮತೀಯರು ಹೇಳಬಹುದಲ್ಲವೆ? ಒಬ್ಬರ ಆಕ್ಷೇಪಣೆ ಸರಿ, ಇನ್ನೊಬ್ಬರ ಆಕ್ಷೇಪಣೆ ತಪ್ಪು ಎಂದು ಹೇಳುವುದಕ್ಕಾಗುತ್ತದೆಯೆ? "ಅಂ ಮೂರ್ಖಂ, ತಾಂ ಮೂರ್ಖಂ" ಎಂದು ಕಾದಾಡಬಹುದು. ಕಾಲದ ಕೊನೆಯ ವರೆಗೂ ಪ್ರಯೋಜನವೇನೂ ಇಲ್ಲ; ಘರ್ಷಣೆ ಇನ್ನೂ ಮಿಗಿಲಾಗುತ್ತದೆ. ಅಷ್ಟೆ. ಎಲ್ಲ ಸಮಾಜದಲ್ಲಿಯೂ ಹುಳುಕುಗಳಿವೆ. ಕೆಲವಲ್ಲಿ ಹೆಚ್ಚು; ಕೆಲವಲ್ಲಿ ಕಡಿಮೆ ಇರಬಹುದು; ಬೇರೆ ಬೇರೆ ತೆರನಾಗಿಯೂ ಅವು ಇರಬಹುದು. ಯಾರಾದರೂ ಎತ್ತಿ ಆಡಿದಾಗ ಅದನ್ನು ಹಾಸ್ಯದೃಷ್ಟಿಯಿಂದ ನೋಡುವುದನ್ನು ಕಲಿಯಬೇಕು; ಇಲ್ಲವೇ 'ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ'' ಎಂದು ಉಪೇಕ್ಷಿಸಲೂ ಬರಬಹುದು.

ಸರಸ್ವತಿಯ ರಾಜ್ಯದಲ್ಲಿ ಹೊಲಸು ಸಲ್ಲ.

ಸರಸ್ವತಿಯ ರಾಜ್ಯದಲ್ಲಿ ಜಾತೀಯತೆ ಮತೀಯತೆಗಳಿಗೆ ಸ್ಥಾನವಿಲ್ಲ. ಅಲ್ಲಮಪ್ರಭು, ನಿಜಗುಣ ಶಿವಯೋಗಿ, ಸಪ್ತಕಾವ್ಯದ ಗುರು ಬಸವ—ಈ ಮಹನೀಯರಲ್ಲಿದ್ದ ಉದಾರವೂ ಸಹನಾಮಯವೂ ಮಾನವಪ್ರೇಮ ಕಂಪಿತವೂ ಆದ ದೃಷ್ಟಿ ಎಲ್ಲರಿಗೂ ಆದರ್ಶವಾಗಲಿ. ಒಟ್ಟಿನಲ್ಲಿ ಕವಿ, ವಿಮರ್ಶಕ, ಜಾತೀಯತೆ—ಈ ವಿಷಯಗಳಿಗೆ ಸಂಬಂಧಿಸಿದ ಮನಃ ಕಷಾಯಗಳು ಶುದ್ಧ ವಾಯುಗುಣ ನೆಲೆಗೊಂಡ ಹೊರತು ಕನ್ನಡ ಸಾಹಿತ್ಯವಿಮರ್ಶೆ ಬೆಳೆಯಲಾರದು.

— ಶ್ರೀ ಡಿ. ಎಲ್. ನರಸಿಂಹಾಚಾರ್ಯ

(ಬೀದರ ಸಾಹಿತ್ಯ ಸಮ್ಮೇಳದ ಅಧ್ಯಕ್ಷ ಭಾಷಣದಿಂದ)

ಉಡುಪಿ. ಡಿ. ಮು. ಕೋರ್ಟಿನಲ್ಲಿ

S. E. P. No. 561/1959

S. C. No. 692/1957.

ಕಲ್ಯಾಂಕ ವೆಂಕಟ್ರಾಯ ಪೈ & ಸನ್ಸ್—
—ಅರ್ಜಿದಾರ.

ಮತ್ತು

ರಾಮಪ್ಪ ಪೂಜಾರಿ. ಮುಲ್ಕಿ ಪಡುಕರೆ ಚಾಂಗ ಪೂಜಾರಿ ಮಗ ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಮುಲ್ಕಿ —ಎದ್ರಿ.

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರನು ಮೇಲ್ಕಂಡ ಡಿಕ್ರಿಯ ಅಮಲಜಾರಿ ಬಗ್ಗೆ ಈ ಕೋರ್ಟಿಗೆ ಅರ್ಜಿಮಾಡಿಕೊಂಡಿದ್ದಾನೆ. ಆದುದರಿಂದ ನಿಮ್ಮನ್ನು ಸಿವಿಲ್ ಬಂಧಿಖಾನೆಗೆ ಯಾಕೆ ರವಾನಿಸಕೂಡದು ಎಂಬುದಕ್ಕೆ ಸಬಾಬು ತೋರಿಸಲಿಕ್ಕೆ 1960ನೇ ಇಸವಿ ಮಾರ್ಚಿ ತಿಂಗಳು 1ನೇ ತಾರೀಕಿನಲ್ಲಿ ಈ ಕೋರ್ಟು ಮುಂದೆ ನೀವು ಹಾಜರಾಗ ಬೇಕೆಂತ ಇದರಿಂದ ನಿಮಗೆ ನೋಟೀಸು ಕೊಡಲಾಗುತ್ತದೆ.

P. V. Acharya
Vakil for Petitioner.

ಮೊಕ್ಕಾಂ. ಉಡುಪಿ. ತಾ. 12—2—60.

135 ಶಾಖೆಗಳು

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಗಳು.

ಮಾತುಂಗ	ವಿಳಾಸ: 3ಎ, ದಾದರ್ ಮಾತುಂಗ ಎಸ್ಟೇಟ್, ಬೋಂಬೆ—ಆಗ್ರಾ ರೋಡ್. ಮೆನೇಜರ್: ಪಿ. ವಿ. ಕಾಮತ್
ರಾಜಮಂಡ್ರಿ	ವಿಳಾಸ: 161332 ಹೊಸ್ಪಿಟಲ್ ರೋಡ್, ಮಾರ್ಕೇಟು ಬಳಿ. ಮೆನೇಜರ್: ಎಚ್. ರಮೇಶ ನಾಯಕ್.
ಇರೋಡು	ವಿಳಾಸ: 223, ಬ್ರೋ ರೋಡ್. ಮೆನೇಜರ್: ಎ. ಎಸ್. ಕಾಮತ್.
ಸೇಲಂ	ವಿಳಾಸ: 33—1108 ಲೋಂಗ್ಲಿ ರೋಡ್, ಶಿವಪೇಟೆ. ಮೆನೇಜರ್: ಐ. ಅಪ್ಪಾಜಿ ಪೈ.
ಕೊಟ್ಟಾಯಂ....	ವಿಳಾಸ: XI-B-16—ಈಸ್ಟ್. ಕಲಾಪಿಕಲ್ ಬಜಾರ್. ಮೆನೇಜರ್: ಓ. ಪಿ. ಚಾಂಡಿ.
ತ್ರಿವೆಂದ್ರಮ್....	ವಿಳಾಸ: ಟಿ ಸಿ 907—ಎಮ್. ಮೈನ್ ರೋಡ್. ಮೆನೇಜರ್: ಕೆ. ಪಿ. ಗೋಪಿನಾಥ್ ರಾವ್.

(ಪ್ರಾರಂಭ: ತ್ರಿವೆಂದ್ರಮ್ ಶಾಖೆ 8—2—1960ರಂದು ಮಿಕ್ಕೆಲ್ಲವೂ 1—2—1960ರಂದು)

— ಸಿಂಡಿಕೇಟ್ ಬ್ಯಾಂಕ್ —

The Canara Industrial & Banking Syndicate Ltd.,
H. O: Mukund Nivas, UDIPI.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೯. ವಾರ ೨೫ 25-2-1960 Vol. 39 No 25.

ಪ್ರಚಲಿತ ಪ್ರಸಂಗ

ಕೇರಳ ಸಚಿವಸಂಪುಟ ರಚನೆ

ಜಾತೀಯ ಪಕ್ಷ ಮುಸ್ಲಿಂ ಲೀಗಿಗೆ ಪ್ರಾತಿನಿಧ್ಯವಿಲ್ಲವೆಂದು ಕಾಂಗ್ರೆಸ್ ಹೇಳಿದರೆ, ಉಳಿದವರು ಇಲ್ಲದೆ ನಡೆಯದೆಂದರು; ಆದರೂ ಸದ್ಯ ಈ ಸಮಸ್ಯೆಯೊಂದು ಪರಿಹಾರ ಕಂಡಿತು

ಇಂಗ್ಲೆಂಡಿನ ಮಹಾರಾಣಿ ಎಲಿಜಬೆತರು ತಾ ೧೯ರಂದು ಗಂಡುಮಗುವೊಂದನ್ನು ಪ್ರಸವಿಸಿ ಮೂರು ಮಕ್ಕಳ ತಾಯಿಯೆನಿಸಿದರು.

ಕೇರಳದಲ್ಲಿ ಮಧ್ಯಾವಧಿ ಚುನಾವಣೆಗಳು ನಡೆದುವು, ಕಾಂಗ್ರೆಸ್, ಪ್ರಸವಾ ಮತ್ತು ಮುಸ್ಲಿಂ ಲೀಗ್‌ಗಳ ಸಂಯುಕ್ತ ರಂಗದೆದುರು ಮಾಜಿ ಕಮ್ಯುನಿಸ್ಟ ಸರಕಾರದ ಹಲವಾರು ಮಂತ್ರಿಗಳೊಡನೆ ಬಹಳಷ್ಟು ಕಮ್ಯುನಿಸ್ಟ ಉಮೇದ್ವಾರರು ಬಹಿರಂಗವಾಗಿ ಸೋಲುಂಡರು. ಸಂಯುಕ್ತರಂಗದ ಉದ್ದೇಶವೇನೋ ಪೂರ್ತಿಯಾಯಿತೆಂದು ತೋರಿಬಂದರೂ ತಾತ್ವಿಕವಾಗಿ ಅದರ ಕರ್ತವ್ಯಪೂರ್ತಿಯು ಬಹುಭಾಗ ಮುಂದೆ ಆಗಬೇಕಷ್ಟೆ. ಕೇರಳದಲ್ಲಿ ಸಾಕಷ್ಟು ಬಹುಮತವನ್ನು ಪಡೆದಿದ್ದ ಕಮ್ಯುನಿಸ್ಟರನ್ನು ಸೋಲಿಸುವ ಮಹಾ ಸಾಹಸದೊಡನೆಯೇ ಕಮ್ಯುನಿಸ್ಟೇತರ ಪಕ್ಷಗಳಲ್ಲಿ ಕೇರಳೀಯರು ಕಳೆದುಕೊಂಡಿದ್ದ ವಿಶ್ವಾಸವನ್ನು ಪುನಃ ಪಡೆದುಕೊಳ್ಳುವಂತೆ ನೋಡುವುದು, ಮತ್ತಿದರಿಂದ ಕಮ್ಯುನಿಸ್ಟರು ಕ್ರಮೇಣ ನಾಮಾವಶೇಷವಾಗುವಂತೆ ಮಾಡುವುದು ಈ ಸಂಯುಕ್ತರಂಗದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಏಕೆಂದರೆ, ಭಾರತದಂತಹ ಅನಭಿವೃದ್ಧ ರಾಷ್ಟ್ರ ಕಮ್ಯುನಿಜಂನ ಬಲೆಯೊಳಗೆ ಸಿಕ್ಕಿಬೀಳುವುದೇನೂ ಕಠಿನಪ್ರದವಾದ ಘಟನೆಯೆಂದು ಹೇಳಬರುವಂತಿಲ್ಲ. ಆದರೆ, ಭಾರತದ ಸನ್ನಿವೇಶ ಮತ್ತು ಪರಿಸ್ಥಿತಿಗಳಿಗೆ ಕಮ್ಯುನಿಜಂ ಎಂದಿಗೂ ಹೊಂದಿಕೊಳ್ಳಲಾರದು ಮತ್ತು ಬಾರದು ಎಂಬುದಾಗಿ ಮಹಾನೇತಾರರು ಅಭಿಪ್ರಾಯಪಡುತಿದ್ದಾರೆ. ಹಾಗಿರುವಾಗ, ಆ ಮೂಲಾಗ್ರ ಕಿತ್ತು ಬಿಸುಡಬೇಕಾದ ಕಮ್ಯುನಿಜಂನ ವಟವೃಕ್ಷವನ್ನು ಮತ್ತೆ ಬೆಳೆಯಗೊಡದಂತೆ ಆವಶ್ಯಕ ಕಾರ್ಯಕ್ರಮವನ್ನು ಕೈಗೊಳ್ಳುವುದು ಈ ಸಂಯುಕ್ತ ಪಕ್ಷಗಳ ಕರ್ತವ್ಯ

ಸಂಯುಕ್ತರಂಗದಲ್ಲಿ ಸೇರಿಕೊಂಡಿರುವ ಮೂರು ಪಕ್ಷಗಳೂ ತೋರಿಕೆಯ ಮಟ್ಟಿಗೆ ಪ್ರಜಾಪ್ರಭುತ್ವವಾದೀ ಪಕ್ಷಗಳು. ಕಾಂಗ್ರೆಸ್ ರಾಷ್ಟ್ರದ ಹಿರಿಯ ಪಕ್ಷವಾಗಿದೆಯಾದರೆ, ಪ್ರಸವಾವು ತೋರಮಟ್ಟಿಗೆ ಕಾಂಗ್ರೆಸಿನ ಧ್ಯೇಯ ಧೋರಣೆಗಳಿಗೇನೇ ಅಂಟಿಕೊಂಡಿರುವ ಪಕ್ಷ. ಉಳಿದ ಮುಸ್ಲಿಂ ಲೀಗಿನ ಬಗ್ಗೆ ಮಾತ್ರ ಇದೀಗ ತೀವ್ರ ತರದ ಮಾತುಕತೆಗಳು ನಡೆಯತೊಡಗಿವೆ. ಕೇರಳದ ಪ್ರಚಲಿತ ಪರಿಸ್ಥಿತಿಯಲ್ಲಿ ಏಕಪಕ್ಷೀಯ ಸರಕಾರ ಸ್ಥಾಪನೆಗಿಂತ ಸಂಯುಕ್ತ ಮಂತ್ರಿಮಂಡಳ ನಿರ್ಮಾಣವೇ ಶಮೌಷಧವೆಂಬುದಾಗಿ ಕೆಲವರು, ಕಾಂಗ್ರೆಸ್ ನಾಯಕರು ಕೂಡ, ಒಪ್ಪುತ್ತಾರೆ. ಆದರೆ, ಈಗ ಎದ್ದ ಪ್ರಶ್ನೆಯೆಂದರೆ, ಮುಸ್ಲಿಂ ಲೀಗಿಗೆ ಮಂತ್ರಿಮಂಡಲಿಯಲ್ಲಿ ಸ್ಥಾನವನ್ನು ಕೊಡಬೇಕೆ, ಅಥವಾ ಬೇಡ, ಎಂಬುದು

ಈ ಬಗ್ಗೆ ಕಾಂಗ್ರೆಸ್ಸು ಸಾಮಾನ್ಯವಾದ ಒಂದು ನೀತಿಯನ್ನು ಒಪ್ಪಿಕೊಂಡು, ತನ್ನ ನಿರ್ಧಾರವನ್ನು ಸಾರಿದೆ. ಮುಸ್ಲಿಂ ಲೀಗು ಎಷ್ಟಾದರೂ ಒಂದು ಜಾತೀಯ ಪಕ್ಷ. ಜನಸಂಘವೇ ಮೊದಲಾದುವನ್ನು ಸಂಕುಚಿತ ಮನೋಭಾವನೆಯ ಜಾತೀಯ ಪಕ್ಷವೆಂದು ಅಡ್ಡ ಹೆಸರಿನಿಂದ ಕರೆಯುವ ಕಾಂಗ್ರೆಸ್ಸು ಮುಸ್ಲಿಂ ಲೀಗನ್ನು ಸೇರಿಕೊಂಡು ಸಚಿವ ಸಂಪುಟವನ್ನು ಸ್ಥಾಪಿಸಿದ್ದೇ ಆದರೆ, ಅದರಿಂದ ಕಾಂಗ್ರೆಸ್‌ನ ನೀತಿಯು ಕೆಟ್ಟುಹೋಗುವುದು ಖಂಡಿತ. ಆದುದರಿಂದ ಲೀಗಿಗೆ ಮಂತ್ರಿಮಂಡಳಿಯಲ್ಲಿ ಸ್ಥಾನ ಬೇಡ, ವಿಧಾನಸಭೆಯ ಅಧ್ಯಕ್ಷಸ್ಥಾನ ಅವರಿಗಿರಲಿ ಎಂದು ವಾದ ಮುಂದೊಡ್ಡಿದರೆ ಪ್ರಸವಾ ಪಕ್ಷದ ನೀತಿಯೇ ಬೇರೆ. ಮುಸ್ಲಿಂಲೀಗು ಸ್ಥಾನಪಡೆಯಲಿಲ್ಲವಾದರೆ, ಕಾಂಗ್ರೆಸ್ಸಿಗೆ ತನ್ನ ಸಹಕಾರವೂ ಇಲ್ಲ ಎಂದದೀಗ ಢಣಾಢಂಗುರವಾಗಿ ಸಾರಿಹೇಳಿದೆ. ಇಂತಹ ದ್ವಿಮುಖದ ನಡುವೆ ಕೇರಳದ ಸ್ಥಿತಿ ಡೋಲಾಯಮಾನವಾಯಿತು

ಮುಸ್ಲಿಂ ಲೀಗಿನಂತಹ ಒಂದು ಜಾತೀಯ ಪಕ್ಷದೊಡನೆ ಸೇರಿಕೊಳ್ಳುವ ನಿರ್ಧಾರವನ್ನು ಮಾಡಿದೊಡನೆಯೇ ಇದರ ಪರಿಣಾಮವು ಮುಂದಕ್ಕೆ ನೆಟ್ಟಗಾಗದು ಎಂದು ಕೆಲವರು ಊಹಿಸಿಕೊಂಡಿದ್ದರು. ಇದೀಗ ಪ್ರತ್ಯಕ್ಷವಾಗಿ ಕಣ್ಣಿಗೆ ಕಂಡಿತು. ಪ್ರಸವಾ ಮತ್ತು ಲೀಗುಗಳು ಮಂತ್ರಿಮಂಡಳ ರಚಿಸುವಲ್ಲಿ ಕಾಂಗ್ರೆಸಿನ ನೀತಿಯನ್ನು ಒಪ್ಪಿಕೊಂಡಿಲ್ಲವಾದರೆ, ಕಾಂಗ್ರೆಸ್ಸೊಂದೇ ಸರಕಾರವನ್ನು ಸ್ಥಾಪಿಸಬೇಕಾಗುತಿತ್ತು. ಆದರೆ, ಹೀಗೆ ಮಾಡುವುದರಿಂದ ಕೆಲದಿನಗಳನ್ನು ದೂಡಬಹುದೇ ಹೊರತು ಶಾಶ್ವತವಾದ ಒಂದು ಸರಕಾರವನ್ನು ಸ್ಥಾಪಿಸುವುದಕ್ಕೆ ಸಾಧ್ಯವೆನಿಸುವುದು ಕಷ್ಟ. ಪ್ರಸವಾ ಮತ್ತು ಲೀಗುಗಳು, ಕಾಂಗ್ರೆಸ್ ಸರಕಾರ ಸ್ಥಾಪಿಸುವುದಾದರೆ, ತಾವದನ್ನು ಉರುಳಿಸಲು ಪ್ರಯತ್ನಿಸುವುದಿಲ್ಲವೆನ್ನುತಿದ್ದುದಾದರೂ ಈ ಮಾತಿನಲ್ಲಿ ಸಂಪೂರ್ಣ ವಿಶ್ವಾಸವನ್ನಿಡುವುದು ಕಷ್ಟವಾಗುತಿತ್ತು. ಕಾಂಗ್ರೆಸು ಅರ್ಧದಷ್ಟು ಸ್ಥಾನವನ್ನು ಶಾಸನಸಭೆಯಲ್ಲಿ ಪಡೆದಿರುವುದಾದರೂ ಅದಕ್ಕೆ ಸುಸ್ಪಷ್ಟ ಬಹುಮತವೆಂಬುದಿಲ್ಲ. ಅಲ್ಲದೇ ಚುನಾವಣೆಯಲ್ಲಿ ಗೆಲ್ಲುವವರೆಗೆ ಎಲ್ಲರ ಸಹಕಾರವನ್ನೂ ಯಾಚಿಸಿ, ತಮ್ಮ ಉದ್ದೇಶ ಪೂರೈಸಿದ ಮೇಲೆ, ಹಾಗಲ್ಲವೆಂದು ವಾದಿಸತೊಡಗಿದರೆ, ಜಗ, ಅದನ್ನು ಒಪ್ಪುವುದಕ್ಕೂ ಕೆಲವರು ಸಿದ್ಧರಿಲ್ಲ. ಕೇರಳದಲ್ಲಿ ಗೆದ್ದುದು ಕಾಂಗ್ರೆಸ್ಸಲ್ಲ, ಸಂಯುಕ್ತರಂಗ. ಅದು ಪಡೆದ ೬೩ ಸ್ಥಾನಗಳಲ್ಲಿ ಕಾಂಗ್ರೆಸ್ಸಿನ ಹುರಿಯಾಳುಗಳು ಯಶಸ್ವಿಯಾಗಿರುವರಾದರೂ ಅವರು ಪಡೆದ ಮತಗಳು ಸಂಯುಕ್ತರಂಗದ್ದು ಎಂದೂ ವಾದಿಸುವವರಿದ್ದಾರೆ. ಈ ವಿಚಾರವನ್ನೂ ಇಲ್ಲಿಗೇ ಬಿಟ್ಟುಕೊಡುವುದು ಉಚಿತವೆಂದು ಹೇಳುವಂತಿಲ್ಲ. ಹಾಗಿರುವಾಗ ಸಂಯುಕ್ತ ಮಂತ್ರಿಮಂಡಳವೇ ಕೇರಳದಲ್ಲಿ ಸ್ಥಾಪಿತವಾಗಬೇ

(೧೨ನೇ ಪುಟ ನೋಡಿರಿ)

ಕಥಾ ವಿಹಾರ

ಬೇಡುವ ಬಾಲಕರಿಬ್ಬರು!

ಸ್ವಾರ್ಥಮಯ ಪ್ರಪಂಚದಲ್ಲಿ ನಿಸ್ಸಹಾಯಕರಾದವರ ಅವಸ್ಥೆಯನ್ನು ಯಾರು ತಿಳಿಯಬೇಕು? ವ್ಯಕ್ತಿಯ ದುರ್ಬಲತೆಯ ಲಾಭಪಡೆಯುವ ಸ್ವಾರ್ಥಲಂಪಟರು ಎಲ್ಲಿ ತಾನೇ ಇಲ್ಲ?

ನಿಲ್ದಾಣದಲ್ಲಿ ರೈಲು ಬಂದು ನಿಂತಿತು. ಕೂಲಿಯಾಳುಗಳು ಅತ್ತಿಂದಿತ್ತ ಓಡಾಡತೊಡಗಿದರು. ಕೆಲವು ಕೂಲಿಯಾಳುಗಳು ಪ್ರಯಾಣಿಕರ ಸಾಮಾನುಗಳನ್ನು ಬೇಗನೇ ಇಳಿಸತೊಡಗಿದರೆ ಕೆಲವರು ಕೂಲಿಯ ಹಣದ ಬಗ್ಗೆ ಚರ್ಚಿಸತೊಡಗಿದರು. ಸಾಮಾನುಗಳನ್ನು ಹೊತ್ತುಕೊಂಡು ತಿರುಗುವ ವರ್ತಕರ ಕೂಗು ಮನಸೆಳೆಯುತ್ತಿತ್ತು. ಬಾಲಕರು ಮಿಠಾಯಿ ಬೇಕೆಂದು ಚಂಡಿ ಹಿಡಿಯುತ್ತಿದ್ದರು. ಆಲಸಿಗಳಾದ ಪ್ರಯಾಣಿಕರು ರೈಲನ್ನು ಹಿಡಿಯಲೆಂದು ಓಡೋಡಿ ಬರುತ್ತಿದ್ದರು. ಒಬ್ಬನಿಗೆ ರೈಲಿನಿಂದ ಇಳಿಯುವ ಆತುರವಾದರೆ ಇನ್ನೊಬ್ಬನಿಗೆ ರೈಲು ಹತ್ತುವ ಆತುರ ಎಲ್ಲರೂ ತಮ್ಮ ತಮ್ಮ ವಿಚಾರಗಳಲ್ಲೇ ಮಗ್ನರಾಗಿದ್ದರು.

ಪ್ರಯಾಣಿಕರ ಗುಂಪನ್ನು ದಾಟಿಕೊಂಡು ಇಬ್ಬರು ಬಾಲಕರು ನಾವಿದ್ದ ಡಬ್ಬಿಯನ್ನು ಏರಿದರು ಒಬ್ಬಾತನು ಸುಮಾರು ಹತ್ತು ವರ್ಷ ಪ್ರಾಯದವನಾಗಿದ್ದರೆ ಇನ್ನೊಬ್ಬ ಎಂಟು ವರ್ಷದವ. ಬಡತನವು ಅವರ ಪ್ರಾಯದ ಮೇಲೆ ಮುಸುಕೆಳೆದಿತ್ತು. ಇಬ್ಬರ ಶರೀರಗಳೂ ಕೃಶವಾಗಿದ್ದುವು. ಅವರಿಬ್ಬರೂ ಬರಿಯ ಲಂಗೋಟಿಯೊಂದನ್ನು ಸೊಂಟದಲ್ಲಿ ಸುತ್ತಿಕೊಂಡಿದ್ದರು. ಹಿಂದಕ್ಕೊತ್ತಿದ ಹೊಟ್ಟೆ, ಗುಳಿಬಿದ್ದ ಕಣ್ಣು ಮತ್ತು ಕೆನ್ನೆಗಳು, ಎಣ್ಣೆಗಾಣದೆ ಕೆಂಚಾದ, ಗಾಳಿಗೆ ಹಾರಾಡುವ ತಲೆಗೂದಲುಗಳು ಅವರ ಬಡತನದ ಪ್ರತೀಕಗಳಾಗಿದ್ದುವು.

ದೊಡ್ಡ ಹುಡುಗನು ಕುರುಡನಾಗಿದ್ದನು. ಆತನ ಕಣ್ಗೊಂಬೆಗಳ ಬಿಳುಪು ಅವನ ಮನದ ನೈರ್ಮಲ್ಯದ ಪರಿಚಯವನ್ನು ಕೊಡುತ್ತಿತ್ತು. ಕಿರಿಯವನು ಆತನ ಒಡಹುಟ್ಟಿದ ಸೋದರನಾಗಿದ್ದನು. ಆತನು ಭಿಕ್ಷೆ ಬೇಡುವುದರಲ್ಲೂ, ಬೇಡಿಸುವುದರಲ್ಲೂ ಬುದ್ಧಿವಂತನಾಗಿದ್ದನು. ಪ್ರಾಯಶಃ ಆ ವಿದ್ಯೆ ಅವನಿಗೆ ಪೈತೃಕದತ್ತವಾದುದು. ನೋಡುವಾಗ ಆತನು ಕುರುಡನಿಗೆ ಬರಿಯ ಆಧಾರಸ್ತಂಭವಾಗಿದ್ದನು ಆದರೆ ವಾಸ್ತವಿಕವಾಗಿ ಅವನೇ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದನು. ಅವನು ಭಿಕ್ಷೆ ಬೇಡುವ ರೀತಿಯು ಬಹಳ ವಿಚಿತ್ರವಾಗಿತ್ತು ಅವನು "ಅಪ್ಪಾ, ಅಮ್ಮಾ", ಎನ್ನುತ್ತಾ ಪ್ರಯಾಣಿಕರ ಕಾಲುಹಿಡಿಯುತ್ತಿದ್ದ ಮತ್ತು ಕುರುಡನಿಂದಲೂ ಹಿಡಿಸುತ್ತಿದ್ದ. ಭಿಕ್ಷೆದೊರೆವವರೆಗೆ ಆತನು ಕಾಲುಗಳನ್ನು ಬಿಡುತ್ತಿದ್ದಿರಲಿಲ್ಲ ಯಾರಾದರೂ ಅವನ ಈ ಕೃತ್ಯದಿಂದ ರೊಚ್ಚಿಗೆದ್ದು ಗದರಿಸಿದರೆ ಅವನು ಅತ್ತು ಬಿಡುತ್ತಿದ್ದ. ಕುರುಡನು ಕೂಡಾ ಅವನೊಂದಿಗೆ ಅಳುತ್ತಿದ್ದ ಇಷ್ಟಾದರೂ ಇಬ್ಬರು ಬಾಲಕರಲ್ಲಿ ಯಾರೊಬ್ಬನ ಕಣ್ಣುಗಳಿಂದಲೂ ಕಣ್ಣೀರು ಹರಿಯುತ್ತಿರಲಿಲ್ಲ. ಇದು ಅವರ ನಿತ್ಯವಿಧಿಯಾಗಿತ್ತು

ನಾವು ಕುಳಿತಿದ್ದ ಡಬ್ಬಿ ದೊಡ್ಡದಾಗಿತ್ತು. ಇಬ್ಬರೂ ತುಂಬಾ ಹಣಗಳಿಸಿದರು. ಎಲ್ಲ ಹಣವೂ ಸಣ್ಣವನ ಕೈಯಲ್ಲಿ ಇದ್ದಿತ್ತು ಇನ್ನೂ ಗಾಡಿ ಹೊರಟಿರಲಿಲ್ಲ. ಎದುರಿನಿಂದ ಇನ್ನೊಂದು ರೈಲು ಬರುತ್ತಿತ್ತು. ಈಗ ನನ್ನ ಸರದಿ ಬಂತು ಹುಡುಗರು ನನ್ನ ಕಾಲುಹಿಡಿಯುವರೆನ್ನುವಷ್ಟರಲ್ಲಿಯೇ ನಾನು ಕಾಲುಗಳನ್ನು ಮೇಲೆತ್ತಿಕೊಂಡೆ. ನನ್ನ ಪಕ್ಕದಲ್ಲಿ ಒಬ್ಬರು ಮಹಾಶಯರು ಕುಳಿತುಕೊಂಡಿದ್ದರು ಅವರು ನನ್ನ ಗಾಬರಿಯನ್ನು ನೋಡಿ ನಕ್ಕು ಬಿಟ್ಟರು. ಅವರು ಲಾಡು ತಿನ್ನುತ್ತಿದ್ದರು ಒಂದು ಲಾಡನ್ನು ಹುಡುಗನ ಕೈಯಲ್ಲಿಟ್ಟರು

ಸಣ್ಣವನು ಮೆಲ್ಲನೆ ಆ ಲಾಡನ್ನು ಚಿಂದಿ ಬಟ್ಟೆಯಲ್ಲಿ ಸುತ್ತಿ ಕಂಕುಳಲ್ಲಿ ಸಿಕ್ಕಿಸಿಕೊಂಡನು ಹಣದ ಬದಲಿಗೆ ಬೇರೇನೋ ದೊರೆತಿದೆಯೆಂದು ಕುರುಡನಿಗೂ ತಿಳಿಯಿತು. ಅದೇನೆಂದು ತಿಳಿದುಕೊಳ್ಳುವ ಹಂಬಲ ಅವನಲ್ಲಿ ಉತ್ಪನ್ನವಾಯಿತು ಆತನು ತನ್ನ ತಮ್ಮನ ಕೈಗಳನ್ನು ತಡಕಾಡತೊಡಗಿದ ಕಿರಿಯವನು ಕೈಗಳನ್ನು ಹಿಂದೆಸರಿಸಿಕೊಂಡ ಆದರೂ ಕುರುಡನು ತಡಕಾಡುತ್ತಲೇ ಇದ್ದ. ಸಣ್ಣವನು ಸಿಟ್ಟಿನಿಂದ ಅಣ್ಣನಿಗೆ ಗುದ್ದು ಹಾಕಿದನು. ಆದರೂ ದೊಡ್ಡವನು ತನ್ನ ಕೆಲಸವನ್ನು ಬಿಡಲಿಲ್ಲ ಸಣ್ಣವನು ತಪ್ಪಿಸಿಕೊಳ್ಳಲು ಬಹಳ ಪ್ರಯತ್ನಿಸಿದನು ಆದರೆ ಅವನ ಯತ್ನಗಳು ನಿರರ್ಥಕವಾದುವು ಕುರುಡನು ಚಿಂದಿ ಬಟ್ಟೆಯ ಗಂಟನ್ನು ಪಡೆದೇ ಬಿಟ್ಟ. ಆದರೆ ಅದನ್ನು ಅವನು ತೆರೆಯಲಿಲ್ಲ. ನಮ್ರತೆಯಿಂದ ತಮ್ಮನೊಡನೆ ಅದರೊಳಗೇನಿದೆಯೆಂದು ಕೇಳಿದನು. ಕಿರಿಯವನು ಅದನ್ನು ಬಲಾತ್ಕಾರದಿಂದ ಕಸಿದುಕೊಂಡು ಅಣ್ಣನಿಗೆರಡೇಟು ಹಾಕಿದನು. ಆತನಿಗೆ ನೋವು ತಗಲಿದುದರಿಂದ ಅಳತೊಡಗಿದನು ಆದರೂ ಆ ವಸ್ತುವನ್ನು ತನ್ನ ಕೈಗೆ ಕೊಡಬೇಕೆಂದು ತಮ್ಮನೊಡನೆ ಕೇಳಿಕೊಳ್ಳುತ್ತಲೇ ಇದ್ದ. ಪೆಟ್ಟು ತಿಂದರೂ ದೊಡ್ಡವನು ತನ್ನ ಹಟ ಬಿಡಲಿಲ್ಲ ಎಲ್ಲಾ ಪ್ರಯಾಣಿಕರೂ ಆ ನಿರ್ಮಮ ದೃಶ್ಯವನ್ನು ಎವೆಯಿಕ್ಕದೆ ನೋಡುತ್ತಾ ಕುಳಿತಿದ್ದರು. ಯಾರ ಬಾಯಿಂದಲೂ ಏನೂ ಹೊರಡಲಿಲ್ಲ ಆದರೆ ಆ ಅಂಧನ ಆರ್ತನಾದವು ಎಲ್ಲರ ಹೃದಯವನ್ನೂ ಕಂಪಿತಗೊಳಿಸುತ್ತು ಕಟ್ಟಕಡೆಗೆ ಮಹಾಶಯರೊಬ್ಬರು ಎದ್ದುನಿಂತು ಸಣ್ಣವನನ್ನು ಗದರಿಸತೊಡಗಿದರು ಆದರೆ ಅವರ ಗದರಿಕೆಯು ಅವನ ಮೇಲೇನೂ ಪರಿಣಾಮ ಬೀರಲಿಲ್ಲ. ಆ ಮಹಾಶಯರಿಗೆ ಸಿಟ್ಟು ನೆತ್ತಿಗೇರಿತು. ಅವರು ಕಿರಿಯವನನ್ನು ಹೊಡೆಯಲು ಕೈ ಮೇಲೆ ಮಾಡಿದರು. ಆಗ ಸಣ್ಣವನು ಧೈರ್ಯವಾಗಿ, "ನಿಮ್ಮ ಗಂಟೇನು ಮುಳುಗಿ ಹೋಗಿದೆ? ನಾನು ನನ್ನ ಅಣ್ಣನನ್ನು ಹೊಡೆದರೆ ತಮಗೇನು ಹಾನಿ?" ಎಂದು ಕೇಳಿಯೇ ಬಿಟ್ಟ. ಮಹಾಶಯರ ಕೈ ಹಿಂದೆಳೆಯಿತು; ಅವರು ಅವಾಕ್ಕಾಗಿ ನೋಡುತ್ತಾ ನಿಂತರು. ಈ ಸಂದರ್ಭದಲ್ಲಿ ಸಣ್ಣವನು ಗಾಡಿಯಿಂದಿಳಿದು ಹೊರಟನು. ಆತನು ಬೇಡ ಬೇಡೆಂದರೂ ದೊಡ್ಡ ಹುಡುಗನು ಕೂಡಾ ಅವನೊಂದಿಗೇ ಹೊರಟ.

ಕುರುಡನು ಅಳುತ್ತಾ ಮುನ್ನಡೆಯುತ್ತಿದ್ದ. ಪ್ರಾಯಶಃ ತಮ್ಮನ ಗುದ್ದು ಆತನ ಶರೀರಕ್ಕಿಂತಲೂ ಮನಸ್ಸನ್ನು ಹೆಚ್ಚಾಗಿ ಘಾಸಿಗೊಳಿಸಿರಬೇಕು. ಆತನ ಅವಸ್ಥೆ ನೋಡಿ ಅವನಿಗೆ ಲಾಡು ಕೊಟ್ಟ ಮಹಾಶಯರ ಕಣ್ಣುಗಳಿಂದ ಕಂಬನಿಗಳು ಉದುರಿದುವು ಅವರು ನನ್ನೊಡನೆ ಹೀಗೆಂದರು—ಅನಾಥರಿಗೆ ಈ ಜಗತ್ತಿನಲ್ಲಿ ಎಡೆಯಿಲ್ಲ ಮುಂದೆ ಈ ಕುರುಡನ ಮೇಲೇನು ನಡೆಯುವುದೋ ಯಾರು ಬಲ್ಲರು? ಯಾರು ಈತನ ಲಾಲನೆ—ಪಾಲನೆ ಮಾಡುವರು? ಇವನ ಕುರುಡನಿಂದ ಲಾಭ ಹೊಂದುತ್ತಿರುವವನೇ ಇವನ ಮೂಳೆ ಮುರಿಯುತ್ತಿರುವಾಗ .. ...

ಅವರ ವಿಚಾರಧಾರೆಯು ಹರಿಯುತ್ತಿದ್ದಂತೆ ಕುರುಡನ ಸ್ವರವು ನಮ್ಮ ಕಿವಿಗಳಿಗೆ ಬಿದ್ದಿತು ನಾವು ತಿರುಗಿನೋಡಿ, ನಿಶ್ಶಬ್ದರಾದೆವು. ಅವನು ತನ್ನ ಸೋದರನನ್ನು ಮುದ್ದಿಡುತ್ತಾ, ಸಂತೈಸುತ್ತಾ, ನಗಿಸುತ್ತಾ ಲಾಡನ್ನು ತುಂಡುಮಾಡಿ ಅವನ ಬಾಯಲ್ಲಿ ಇಡುತ್ತಾ ಇದ್ದನು ಚಿಕ್ಕವನು ಬಹಳ ಇಷ್ಟದಿಂದ ಅದನ್ನು ತಿನ್ನುತ್ತಿದ್ದ ಇಡಿಯ ಲಾಡು ಮುಗಿಯಿತು ಆದರೆ ಕುರುಡನು ಅದರೊಳಗಿಂದ ಸ್ವಲ್ಪವನ್ನೂ ತಿಂದಿರಲಿಲ್ಲ; ಸಣ್ಣವನು ತಿನ್ನೆಂದು ಹೇಳಿದ್ದೂ ಇಲ್ಲ. ಆಹಾ ಜಗತ್ತೇ .. ನೀನೆಂತಹ ಸ್ವಾರ್ಥಿ. ಎಲ್ಲರಿಗೂ ತಮ್ಮ ತಮ್ಮ ಚಿಂತೆಯೇ ಹೆಚ್ಚಾಗಿದೆ.

ಹಿಂದಿ ಮೂಲ: **ರಾಮಶೇಷಯ್ಯ.**

ಅನುವಾದ:

ಸಾ ಚಂದ್ರಶೇಖರ ಚಡಗ.

ಅಮೆರಿಕೆಯ ಮೇಳ

ಅಮೆರಿಕೆಯಲ್ಲಿ ವ್ಯವಸಾಯಾಭಿವೃದ್ಧಿ

ಅಮೆರಿಕೆಯ ಕೃಷಿ ಸಂಪತ್ತು ೨೦೦ ವರ್ಷಗಳ ಸಾಧನೆಯ ಫಲ ಇದರ ಸಹಾಯದಿಂದ ನಾವೂ ನಮ್ಮ ಕೃಷಿ ಸುಧಾರಣೆಯನ್ನು ಮಾಡಬಹುದೆ? ಯೋಚಿಸಬೇಕು.

ಅಮೆರಿಕ ಮತ್ತು ಭಾರತದ ವ್ಯವಸಾಯಗಳಲ್ಲಿ ಅನೇಕ ಸಾಮ್ಯಗಳಿವೆ. ಭಾರತದಂತೆ ಅಮೆರಿಕದಲ್ಲೂ ಬಹು ಭಾಗ ನೆಲ ವ್ಯವಸಾಯಕ್ಕೆ ಮೀಸಲು, ಬಹುವಾಗಿ ಬೇಸಾಯವು ಕುಟುಂಬಗಳ ಮಾಲಕತ್ವದ್ದು. ಹತ್ತಿ, ಹೊಗೆಸೊಪ್ಪು, ಗೋಧಿ, ಅಕ್ಕಿ, ಬಾರ್ಲಿ, ಜೋಳ, ನೆಲಗಡಲೆ—ಇವುಗಳನ್ನು ಅಮೆರಿಕದಂತೆ ಭಾರತವೂ ಅಧಿಕವಾಗಿ ಬೆಳೆಸುತ್ತದೆ.

ಹಾಗೆಂದು ವ್ಯತ್ಯಾಸಗಳೂ ಇಲ್ಲದಿಲ್ಲ. ಸಾಪೇಕ್ಷವಾಗಿ ಅಮೆರಿಕದ ಹವೆ ತಂಪಾದುದು. ಆದುದರಿಂದ ಉಷ್ಣವಲಯದ ನಡುತೋಪಿನ ಉತ್ಪನ್ನಗಳಿಂದ ಕಾಪಿ, ಟೀ, ರಬ್ಬರ್ ಇತ್ಯಾದಿಗಳನ್ನು ಅಲ್ಲಿ ಬೆಳೆಯುವುದಿಲ್ಲ ವ್ಯವಸಾಯ ಕ್ಷೇತ್ರಗಳು ದೊಡ್ಡವು. ಆದುದರಿಂದ ಯಂತ್ರಗಳ ಬಳಕೆ ಸಾಧ್ಯ. ಅಷ್ಟೇ ಅಲ್ಲ ಬಿತ್ತನೆ ಉಳುಮೆ, ಕುಯಿಲು—ಇತ್ಯಾದಿ ವ್ಯವಸಾಯ ಕಾರ್ಯಗಳಿಗೆ ಯಂತ್ರಗಳು ಬೇಕೇ ಬೇಕು. ರೈತರು ಗ್ರಾಮಗಳಿಗೆ ಬದಲು ತಮ್ಮ ವ್ಯವಸಾಯದ ಭೂಮಿಯಲ್ಲೇ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ.

ಕಳೆದ [illegible] ವರ್ಷಗಳಲ್ಲಿ ಅಮೆರಿಕದ ವ್ಯವಸಾಯದಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ, ಭೂಗೋಳೀಯ ಹಾಗೂ ತಾಂತ್ರಿಕ ಬದಲಾವಣೆಗಳಾಗಿರುವಂತೆ ನೆರೆಯವರೊಂದಿಗೂ, ವಿಶಾಲ ಪ್ರಪಂಚದೊಂದಿಗೂ ರೈತರು ಹೊಂದಿರುವ ಸಂಪರ್ಕದ ರೀತಿಯಲ್ಲೂ ಬದಲಾವಣೆಗಳಾಗಿವೆ

ಆದಿಕಾಲದ ವ್ಯವಸಾಯ

೧೭೭೦ನೇ ಇಸವಿಗೆ ಪೂರ್ವದಲ್ಲಿ ಜನರು ಬಹುವಾಗಿ ಅಪಲೇಚಿಯನ್ ಪರ್ವತಗಳಿಗೆ ಪೂರ್ವದ ಭಾಗದಲ್ಲಿ ಕೇಂದ್ರೀಕೃತವಾಗಿದ್ದರು, ಆದರೆ ೧೮೦೦ರ ಹೊತ್ತಿಗೆ ಓಹಿಯೋ ನದಿಯ ದಂಡೆಯುದ್ದಕ್ಕೂ ಮಿಸ್ಸಿಸಿಪಿ ನದಿಯ ಕೆಳಭಾಗದಲ್ಲೂ ವ್ಯವಸಾಯ ಕ್ಷೇತ್ರಗಳು ಅಧಿಕ ಸಂಖ್ಯೆಯಲ್ಲಿ ನೆಲೆಗೊಂಡಿದ್ದವು ೧೮೫೦ರ ಹೊತ್ತಿಗೆ ಸಂಯುಕ್ತ ಸಂಸ್ಥಾನಗಳ ಪೂರ್ವಾರ್ಧದಲ್ಲಿ ಜನ ನೆಲೆಗೊಂಡಿದ್ದರು. ಮಿಸ್ಸಿಸಿಪಿಯ ಪಶ್ಚಿಮದಲ್ಲಿ ಹೊಲ-ಮನೆಗಳ ನಿರ್ಮಾಣ ಶೀಘ್ರ ಗತಿಯಿಂದ ಸಾಗಿತು. ೧೮೯೦ರ ಹೊತ್ತಿಗೆ ದೇಶದ ಫಲವತ್ತಾದ ನೆಲವೆಲ್ಲವನ್ನೂ ಕೃಷಿಗೆ ಒಳಪಡಿಸಲಾಗಿತ್ತು ೧೯೨೦ರಿಂದೀಚೆಗೆ ವ್ಯವಸಾಯದ ನೆಲದಲ್ಲಿ ಕೆಲವು ಪ್ರಾದೇಶಿಕ ಬದಲಾವಣೆಗಳಾಗಿದ್ದರೂ, ಅಮೆರಿಕದ ಒಟ್ಟು ವ್ಯವಸಾಯ ಕ್ಷೇತ್ರದ ವಿಸ್ತಾರದಲ್ಲಿ ಆಗಿರುವ ಹೆಚ್ಚುಕಮ್ಮಿ ಅತ್ಯಲ್ಪ

ಕೈಗಾರಿಕಾಭಿವೃದ್ಧಿಗೆ ವ್ಯವಸಾಯವೇ ತಳಹದಿಯನ್ನು ಹಾಕಿತು. ಗಡಿ ಪಶ್ಚಿಮದ ಕಡೆ ಸರಿಯುತ್ತ ಹೋದಂತೆ ದೊಡ್ಡದೊಡ್ಡ ನಗರಗಳು ಬೆಳೆಯತೊಡಗಿದವು—ಪಿಟ್ಸ್‌ಬರ್ಗ್, ಸಿನ್ಸಿನಾಟಿ, ಚಿಕಾಗೋ, ಸೆಂಟ್ ಲೂಯಿ, ಡಲ್ಲಾಸ್ ಇವು ಇಂಥ ನಗರಗಳಲ್ಲಿ ಕೆಲವು—ಹುಟ್ಟಿಕೊಂಡ ಸಣ್ಣಪುಟ್ಟ ನಗರಗಳು, ಪಟ್ಟಣಗಳಂತೂ ನೂರಾರು. ದೇಶದ ಮಧ್ಯಭಾಗದಲ್ಲಿನ ಕೈಗಾರಿಕಾಕೇಂದ್ರಗಳು, ದೇಶದ ಗಡಿಗಳಲ್ಲಿನ ಅಂತಹುದೇ ಕೇಂದ್ರಗಳೊಡನೆ ಜೊತೆಗೂಡಿ, ಉತ್ಪನ್ನಕ್ಕೂ ಜೀವನಾನುಕೂಲಕ್ಕೂ, ಅಗತ್ಯವಾದ ಅನೇಕ ಕೈಗಾರಿಕೋತ್ಪನ್ನಗಳನ್ನು ವಿದ್ಯುಚ್ಛಕ್ತಿ, ಸಂಪರ್ಕವ್ಯವಸ್ಥೆಗಳು, ಸಾರಿಗೆ—ಇಂತಹ ಸೌಕರ್ಯಗಳನ್ನು ಒದಗಿಸತೊಡಗಿದವು

ಅಮೆರಿಕದಲ್ಲಿ ವ್ಯವಸಾಯಕ್ಕೂ—ಕೈಗಾರಿಕೆಗೂ ನಿಕಟ ಸಂಬಂಧವಿದೆ. ಆರೋಗ್ಯಕರವಾದ ಕೈಗಾರಿಕಾ ವ್ಯವಸ್ಥೆಯಿಂದ ವ್ಯವಸಾಯಕ್ಕೂ ಅನುಕೂಲವೇ, ಒಳ್ಳೆಯ ವೇತನವನ್ನು ಪಡೆವ ಕೈಗಾರಿಕಾ ಕೆಲಸಗಾರರು ಅನೇಕ ವ್ಯವಸಾಯೋತ್ಪನ್ನಗಳನ್ನು ಕೊಳ್ಳುತ್ತಾರೆ ಅದೇ ರೀತಿಯ

(೧೧ನೇ ಪುಟ ನೋಡಿರಿ)

ಸಂಸ್ಕೃತಿದರ್ಶನ

ಬೌದ್ಧರ ತೀರ್ಥಕ್ಷೇತ್ರ—ಸಾರಂಗನಾಥ

ಸಂಸ್ಕೃತಿ ಮತ್ತು ಧರ್ಮಬೋಧೆಯ ಪ್ರಬಲ ಕೇಂದ್ರವಾಗಿ ಇದು ಬೆಳೆದುಬರುತ್ತಿದೆ.

ಅಶೋಕ ಮತ್ತು ಸಾರನಾಥದ ಹೆಸರನ್ನು ತಿಳಿಯದ ಭಾರತೀಯರು ಯಾರೂ ಇರಲಾರರು. ಸಾರನಾಥವು ಕಾಶೀ ನಗರದಿಂದ ಎರಡು ಹರದಾರಿಯಷ್ಟು ಉತ್ತರದಲ್ಲಿದೆ. ಇದು ಬೌದ್ಧರ ತೀರ್ಥಸ್ಥಾನಗಳಲ್ಲಿ ಅತೀವ ಪ್ರಸಿದ್ಧವಾದುದು. ಬೌದ್ಧ ಧರ್ಮವು ಹುಟ್ಟಿಕೊಂಡದ್ದೂ ಇಲ್ಲಿಯೇ. ಬುದ್ಧನೆನಿಸಿದ ಗೌತಮನು ತಪಸ್ಸನು ಬಿಟ್ಟು ಮೊತ್ತಮೊದಲಿಗೆ ಧರ್ಮೋಪದೇಶಕ್ಕೆ ತೊಡಗಿದ ಅಮರ ಭೂಮಿಯೇ ಸಾರನಾಥ. ಪ್ರತಿವರ್ಷವೆಂಬಂತೆ, ಸಿಂಹಳ, ಚೀನ, ಬ್ರಹ್ಮ ಹಾಗೂ ಜಪಾನು ಮೊದಲಾದ ಹಲವಾರು ಬೌದ್ಧ ದೇಶಗಳಿಂದ ಈ ಪವಿತ್ರ ಸ್ಥಳವನ್ನು ಸಂದರ್ಶಿಸುವ ಸಲುವಾಗಿ ಸಾವಿರಾರು ಯಾತ್ರಿಕರು ಆಗಮಿಸುತ್ತಾರೆ.

ಸಾರನಾಥಕ್ಕೆ ಆ ಹೆಸರು ಬರುವುದಕ್ಕೆ ಒಂದು ಪ್ರಸಿದ್ಧವಾದ ಕಥೆಯೂ ಇದೆ. ಭಗವಂತನಾದ ಬುದ್ಧನು ತನ್ನ ಮೊದಲ ಜನ್ಮದಲ್ಲಿ ಇದೇ ಸ್ಥಳದಲ್ಲಿ ಜಿಂಕೆಗಳ ಸರದಾರನಾಗಿ ನೆಲಸಿದ್ದನಂತೆ. ಆ ಕಾಲದ ಕಾಶೀ ದೇಶದ ರಾಜನು ಬೇಟೆಗಾಗಿ ಹೊರಹೊರಟಾಗ ಬಹಳಷ್ಟು ಜಿಂಕೆಗಳು ಪ್ರಾಣವನ್ನು ನೀಗುತಿದ್ದುವು. ಮೃಗರೂಪೀ ಜಿಂಕೆ ಮತ್ತು ಕಾಶೀರಾಜರ ನಡುವೆ ಒಂದು ಒಪ್ಪಂದವಾಯಿತು. ಇದರನ್ವಯ, ಪ್ರತಿದಿನ ಒಂದೊಂದು ಜಿಂಕೆಯು ರಾಜನ ಭೋಜನಾಲಯದಲ್ಲಿ ಉಪಸ್ಥಿತವಿರಬೇಕಾಗಿ ಬಂತು. ಒಂದು ದಿನ ಒಂದು ಗರ್ಭಿಣಿ ಹರಿಣಿಯ ಸರದಿ ಬಂದಿತು. ಆ ಮೃಗಿಯು ತನಗಿಂದು ಕೊನೆಯ ದಿನವೆಂದು ಅತ್ತಿತು. ಎಲ್ಲರೂ ಈ ಗರ್ಭವತಿಯ ದೀನ ಸ್ಥಿತಿಯ ಬಗ್ಗೆ ಮರುಕ ತೋರಿಸಿದರೂ, ಅದರ ಬದಲಿಗೆ ಬೇರಾರೂ ರಾಜನಲ್ಲಿಗೆ ತೆರಳಲು ಒಪ್ಪಲಿಲ್ಲ. ಇದನ್ನು ಕಂಡ ಮೃಗರಾಜರೂಪೀ ಬುದ್ಧನು ರಾಜನಬಳಿಗೆ ಹೊರಟನು. ಇದರ ಪ್ರಭಾವವು ಕಾಶೀರಾಜನ ಮೇಲೆ ತೀವ್ರವಾಗಿ ಬಿದ್ದು, ಆತ ಮಾಂಸಭಕ್ಷ ಮಾಡುವುದನ್ನೇ ಬಿಟ್ಟುಬಿಟ್ಟನು. ಮೃಗರೂಪದಲ್ಲಿದ್ದ ಬುದ್ಧನ ಹೆಸರು ಸಾರಂಗನಾಥ ಎಂದಾಗಿತ್ತು. ಈ ಕಾರಣದಿಂದಾಗಿ ಆ ಸ್ಥಳಕ್ಕೆ ಸಾರಂಗನಾಥ ಎಂಬ ಹೆಸರು ಬಂತು. ಇದೇ ಮುಂದೆ ಪರಿವರ್ತನೆ ಹೊಂದಿ ಸಾರನಾಥ ಎಂದಾಯಿತು. ಈ ಊರಿನ ಸಮೀಪದಲ್ಲಿಯೇ ಇರುವ ಒಂದು ವಿಶಾಲ ಸರೋವರದ ಹೆಸರೂ 'ಸಾರಂಗ' ಎಂದಿರುವುದನ್ನು ನಾವು ಅವಶ್ಯ ಗಮನಿಸಬೇಕು.

ವರ್ಷಕ್ಕೊಂದು ಬಾರಿ ಗೌತಮ ಬುದ್ಧನು ಸಾರಂಗನಾಥವನ್ನು ಸಂದರ್ಶಿಸುತಿದ್ದನೆಂದು ತಿಳಿಯುತ್ತದೆ. ಆತನ ನಿರ್ಯಾಣಾನಂತರದಲ್ಲಿ ಇದೊಂದು ಪವಿತ್ರ ತೀರ್ಥಸ್ಥಳವಾಗಿ ಪರಿಣಮಿಸಿತು. ಆದರೆ, ಈ ಭಾಗದಲ್ಲಿ ನಡೆಸಿದ ಭೂಸಂಶೋಧನೆಗಳಲ್ಲಿ ಮೌರ್ಯಕಾಲಕ್ಕೆ ಮೊದಲಿನ ಯಾವ ಅವಶೇಷಗಳೂ ಕಂಡುಬರುವುದಿಲ್ಲ. ಮೊದಮೊದಲು ಭಿಕ್ಷುಗಳು ಅತಿ ಸರಳ ರೀತಿಯಲ್ಲಿ ಸಾಧಾರಣ ರೂಪದ ವಿಹಾರಗಳಲ್ಲಿ ವಾಸಿಸುತಿದ್ದರು. ಸಾಮ್ರಾಟ ಅಶೋಕನ ಕಾಲಕ್ಕೆ ಮೊದಲು ಧರ್ಮ ಪ್ರಚಾರದ ಪರಿಧಿಯು ತೀರ ಚಿಕ್ಕದಾಗಿತ್ತು. ಪ್ರಪಂಚದ ಬೇರೆ ಬೇರೆಡೆಯಲ್ಲಿ ಬೌದ್ಧ ಧರ್ಮದ ಪ್ರಚಾರವನ್ನು ಮಾಡಿದ ಸಂಪೂರ್ಣ ಯಶಸ್ಸು ಮೌರ್ಯ ಚಕ್ರಾಧಿಪತಿ ಅಶೋಕನಿಗೇನೇ ಸೇರಬೇಕಾದುದು. ಈತನೇ ಗೌತಮ ಬುದ್ಧನ ಅವಶೇಷಗಳನ್ನು ಒಂದು ಸಮಾಧಿಯಲ್ಲಿಟ್ಟು ಅದರ ಮೇಲೊಂದು ಸ್ತೂಪವನ್ನು ಕಟ್ಟಿಸಿದನು ಮಾತ್ರವಲ್ಲ, ಅದರ ನಿಕಟದಲ್ಲಿಯೇ ಒಂದು ಕಲ್ಲಿನ ಸ್ತಂಭವನ್ನೂ ನಿರ್ಮಿಸಿದನು.

ದಿನದಿಂದ ದಿನಕ್ಕೆ ಸಾರನಾಥದ ಕೀರ್ತಿ ಬೆಳೆಯಿತು. ಅಲ್ಲಿ ನಿತ್ಯ ನೂತನವಾದ ವಿಹಾರಗಳ ನಿರ್ಮಾಣಕ್ಕೆ ಮೊದಲಾಯಿತು. ಆ ಹರ್ಷವರ್ಧನನ ಕಾಲದಲ್ಲಿ ಹ್ಯೂವೆನ್ ತ್ಸಾಂಗನು ಚೀನದಿಂದ ಭಾರತಕ್ಕೆ ಬಂದಿದ್ದನಷ್ಟೆ? ಆತ ಸಾರನಾಥದಲ್ಲಿ ೧,೫೦೦ ಭಿಕ್ಷುಗಳು ಇರುತಿದ್ದರೆಂದು ಲಿಖಿಸಿದ್ದಾನೆ! "ಇಲ್ಲಿಒಂದು ವಿಶಾಲವಾದ ಬೌದ್ಧ ಮಂದಿರವಿದೆ. ಇದರಲ್ಲಿ ತಾಮ್ರದ ಬುದ್ಧ ಪ್ರತಿಮೆಯಿದೆ"—ಎಂದವನ ಉಲ್ಲೇಖವಿದೆ. ವಿಕ್ರಮಶಕ ಹದಿಮೂರನೆಯ ಶತಮಾನದಲ್ಲಿ ಕನೋಜದ ರಾಜ ಗೋವಿಂದ ಚಂದ್ರನ ಬೌದ್ಧ ರಾಣಿ ಕುಮಾರದೇವಿಯು ಬುದ್ಧನ ಒಂದು ಹೊಸ ಮಂದಿರವನ್ನು ಕಟ್ಟಿಸಿದಳು. ಆದರೆ, ಇದೇ ಶತಮಾನಾಂತ್ಯದಲ್ಲಿ ಸಾರಂಗನಾಥವು ಮುಸಲ್ಮಾನ ಆಕ್ರಮಣಕಾರರ ದುಷ್ಕೃತ್ಯಗಳಿಗೊಳಗಾಗಿ, ಅದು ಧ್ವಂಸಾವಶೇಷವಾಗಿ ಮಾತ್ರ ಉಳಿಯುವಂತಾಯಿತು.

ಮುಂದೆ, ಸುಮಾರು ೬೦೦ ವರ್ಷಗಳ ವರೆಗೆ ಸಾರನಾಥವು ವಿಸ್ಮೃತಿಯ ಗರ್ಭದಲ್ಲಿ ಹುದುಗಿಹೋಯಿತು. ವಿಕ್ರಮ ಶಕ ೧೮೫೦ರಲ್ಲಿ ಪುನಃ ಸಾರನಾಥದ ಕಡೆಗೆ ಜನತೆಯ ದೃಷ್ಟಿಯು ಇತ್ತ ಹರಿಯಿತು. ಈ ಬಗ್ಗೆಯೂ ಒಂದು ಮನೋರಂಜಕ ಕಥೆಯಿದೆ. ಬನಾರಸ ರಾಜ್ಯದ ದಿವಾನ ಜಗತ ಸಿಂಹನು ಕಾಶಿಯಲ್ಲಿ ತನ್ನ ಹೆಸರಿನ ಒಂದು ಕೇರಿಯನ್ನು ನಿರ್ಮಿಸುವಲ್ಲಿ ಆಸಕ್ತನಾದನು. ಇಂದು ಜಗತ ಗಂಜವೆಂದು ಕರೆಯುವ ಸ್ಥಳವೇ ಅದು. ಆತನು ಸಾರನಾಥದ ಸ್ತೂಪದ ಇಟ್ಟಿಗೆಯನ್ನು ಮುರಿದು ತಂದನು. ಸ್ತೂಪ ಉರುಳುತ್ತಿರುವಾಗ ಆತನಿಗೊಂದು ಪೆಟ್ಟಿಗೆ ದೊರೆಯಿತು. ಈ ಪೆಟ್ಟಿಗೆಯ ಆಧಾರದಿಂದ ಬನಾರಸ ರಾಜ್ಯದ ಆಗಿನ ರೆಸಿಡೆಂಟನು ಒಂದು ಲೇಖನ ಬರೆದು, ಈ ಪೆಟ್ಟಿಗೆಯು ಬೌದ್ಧರದ್ದಾಗಿರಬೇಕು. ಇಲ್ಲವಾಗಿದ್ದರೆ, ಇದನ್ನು ಗಂಗಾನದಿಯಲ್ಲಿ ವಿಲೀನಗೊಳಿಸುತಿದ್ದರು ಎಂದು ಬಹಿರಂಗಪಡಿಸಿದನು. ಮುಂದೆ, ಭಾರತೀಯ ಪ್ರಾಚ್ಯ ಸಂಶೋಧನಾ ವಿಭಾಗದವರು ಇಲ್ಲಿ ಅಗೆತದ ಕೆಲಸವನ್ನು ಕೈಗೊಂಡಾಗ, ಬೌದ್ಧ ಧರ್ಮದ ವೈಭವಪೂರ್ಣ ಕಾಲದ ಹಲವಾರು ವಸ್ತುಗಳು ದೊರೆತುವು. ಇವನ್ನು ಅಲ್ಲಿನ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ.

ಅಗೆದ ಸ್ಥಳದಿಂದ ಸುಮಾರು ಅರ್ಧ ಮೈಲು ದಕ್ಷಿಣದಲ್ಲಿ ಚೌಖಂಡೀ ಸ್ತೂಪವಿದೆ. ಈ ಸ್ತೂಪದ ಮೇಲೆ ನಿರ್ಮಿಸಿದ ಸ್ಮಾರಕದಿಂದಾಗಿ ಇದಕ್ಕೀ ಹೆಸರು ಬಂದಿದೆ. ಮೊಗಲ್ಸಾಮ್ರಾಟ ಅಕ್ಬರನು ತನ್ನ ತಂದೆಯು ಈ ಸ್ಥಳಕ್ಕೆ ಬಂದುದರ ನೆನಪಿಗಾಗಿ ನಿರ್ಮಿಸಿದ್ದನು. ಈ ಭಾಗದಿಂದ ನಿಂತು ನೋಡಿದರೆ, ಕಾಶಿಯ ರಮಣೀಯ ದೃಶ್ಯವು ಕಣ್ಣಿಗೆ ಕಟ್ಟುವುದು. ಸ್ತೂಪದೊಳಗಡೆ ಒಂದು ಬಾವಿಯಿದೆ. ಅಸ್ಥಿಯನ್ನು ಪಡೆಯುವ ಅಭಿಲಾಷೆಯಿಂದ ಇದನ್ನು ಕನಿಂಘಮನೆಂಬವನು ಅಗೆಸಿದ್ದನು; ಆದರೆ, ಆತನಿಗೇನೂ ದೊರೆಯಲಿಲ್ಲ. ಪ್ರಾಯಃ ಇದೇ ಸ್ಥಳದಲ್ಲಿ ಭಗವಂತ ಬುದ್ಧನು ತನ್ನ ಐವರ ಶಿಷ್ಯರಿಗೆ ಧರ್ಮಜ್ಯೋತಿಯನ್ನು ತೋರಿಸಿರಬೇಕು. ಇದರ ನವಿ ನೆನಪಿಗಾಗಿಯೇ ಈ ಸ್ತೂಪದ ರಚನೆಯಾಗಿರಬಹುದು.

ಭೂಸಂಶೋಧನೆಗಾಗಿ ಅಗೆದ ಭಾಗವು ಪ್ರೇಕ್ಷಕರನ್ನು ಆಕರ್ಷಿಸುವಂತಿಲ್ಲ. ಆದರೆ, ಐತಿಹಾಸಿಕ ಮಹತ್ವವು ಇದಕ್ಕೆ ತುಂಬ ಇರುವುದು. ಬೌದ್ಧ ವಿಹಾರಗಳನ್ನು ನೋಡುತ್ತ ನಾವು ಧರ್ಮರಾಜಿಕ ಸ್ತೂಪವನ್ನು ಸಮೀಪಿಸುತ್ತೇವೆ. ಇಲ್ಲಿ ಅಶೋಕನು ನಿರ್ಮಿಸಿದ ಸ್ತೂಪವೂ ಇತ್ತು. ಇದು ಮುಸಲ್ಮಾನ ಆಕ್ರಮಣಕಾರರಿಂದ ಹಾಳಾಗಿ ಹೋಯಿತು. ಉಳಿದುಳಿದ ಅವಶೇಷಗಳನ್ನ ಜಗತಸಿಂಹನು ಹಾರಿಸಿ ಬಿಟ್ಟನು. ಇಲ್ಲಿಂದ ತುಸು ಪಶ್ಚಿಮದಲ್ಲಿ ಅಶೋಕನ ಜಗದ್ವಿಖ್ಯಾತ ಸ್ತಂಭವೊಂದು ಮುರಿದು ಬಿದ್ದುದನ್ನು ನಾವು ಕಾಣಬಹುದು. ಅದರ ಮೇಲಿನ ಇಂದಿಗೂ ಮಾಯವಾಗದೆ, ಎಲ್ಲರ ದೃಷ್ಟಿಯೂ ಅತ್ತ ಸೆಳೆಯಲ್ಪಡುತ್ತದೆ. ಹ್ಯುವೆನ್ ತ್ಸಾಂಗನು ಇಲ್ಲಿಗೆ ಆಗಮಿಸಿದಾಗ ಇದು ಕನ್ನಡಿಯಂತೆ ಹೊಳೆಯುತಿತ್ತಂತೆ. ಇದರ ಸಿಂಹಗುರುತಿರುವ ಪೀಠವು ಸಂಗ್ರಹಾಲಯವನ್ನು ಸೇರಿದೆ. ಇಂದು ಭಾರತದ ರಾಜ್ಯ ಚಿಹ್ನೆಯಾಗಿ ಸ್ವೀಕರಿಸಲ್ಪಟ್ಟ ಸಿಂಹಪೀಠವೇ ಇದು. ಇನ್ನೂ ಮುಂದೆ ನೋಡುತ್ತ ಹೋಗುವುದಾದರೆ, ಮುರಿದ ಬೌದ್ಧ ಮಂದಿರಗಳ ಭಗ್ನಾವಶೇಷಗಳನ್ನು ನಾವು ಈಕ್ಷಿಸಬಲ್ಲೆವು. ಮತ್ತೂ ಸರಿದರೆ, ಕುಮಾರದೇವಿಯು ಕಟ್ಟಿಸಿದ ಬೌದ್ಧ ಮಂದಿರವಿದ್ದ ಪ್ರದೇಶಕ್ಕೆ ನಾವು ಬರುತ್ತೇವೆ.

ಅದೃಷ್ಟಬಲದಿಂದ ಧಮೇಖ ಸ್ತೂಪವು ಇಂದಿಗೂ ಕೆಡದೆ ನಿಂತಿರುವುದು. ಧಮೇಖದ ಹೆಸರು ಮೊದಲು ಧರ್ಮೇಕ್ಷಾ ಎಂದಿದ್ದಿತಂತೆ. ಧರ್ಮವನ್ನು ನೋಡುವುದು, ಅದನ್ನು ರಕ್ಷಿಸುವುದು ಎಂದು ಇದರ ಅರ್ಥವಾಗುವುದು. ಈ ಸ್ತೂಪವು ೧೪೩ ಅಡಿಗಳಷ್ಟು ಉನ್ನತವಾಗಿದೆ.

ಇಂದಿನ ಸಾರನಾಥದಲ್ಲಿ ಮೂಲಗಂಧ ಕುಟಿ ವಿಹಾರವು ಮಹತ್ವಪೂರ್ಣ ಮಂದಿರವಾಗಿದೆ. ಮಹಾಬೋಧಿ ಸಂಘದವರು ಇದನ್ನು ವಿಕ್ರಮ ಶಕ ೧೯೭೯ರಲ್ಲಿ ಕಟ್ಟಿಸಲು ಪ್ರಾರಂಭಿಸಿದ್ದರು. ಒಂಬತ್ತು ವರ್ಷಗಳ ವರೆಗಿನ ಅವಿರತ ಶ್ರಮದಿಂದ ಇದನ್ನು ರಚಿಸಲಾಗಿತ್ತು. ಒಂದೂವರೆ ಲಕ್ಷ ರೂಪಾಯಿಯು ವೆಚ್ಚವಿದಕ್ಕೆ ಬಂದಿತ್ತು; ಭಿತ್ತಿ ಚಿತ್ರಗಳಿಗೆ ರೂ.೬೫ ಸಾವಿರ ಬೇಕಾದುವು. ಮಂದಿರದಲ್ಲಿ "ವರಾಭಯ" ಮುದ್ರೆಯಲ್ಲಿ ಕುಳಿತ ಗೌತಮನ ಮೂರ್ತಿಯಿದೆ. ಇದರ ಕೆಳಗೆ ಬೇರೆಬೇರೆ ಸ್ಥಾನಗಳಲ್ಲಿ ಲಭಿಸಿದ ಬುದ್ಧನ ಅಸ್ಥಿಗಳಿವೆ. ಒಳಗೆ ಇರುವ ಭಿತ್ತಿ ಚಿತ್ರಗಳನ್ನು ಐದು ವರ್ಷಗಳ ನಿರಂತರ ಪರಿಶ್ರಮದಿಂದ ಜಪಾನಿನ ಸುವಿಖ್ಯಾತ ಕಲಾವಿದ ಕೊಸೇತ್ಸು ನೋಸೂ ಕೇ ಎಂಬವನು ನಿರ್ಮಿಸಿದ್ದಾನೆ. ಈ ಚಿತ್ರರಚನೆಯಲ್ಲಿ ಅಜಂತಾ ಕಲಾಶೈಲಿಯನ್ನು ಹೆಚ್ಚಿನ ಮಟ್ಟಿಗೆ ಅನುಸರಿಸಲಾಗಿದೆ. ಈ ಚಿತ್ರಮಾಲೆಯಲ್ಲಿ ಗೌತಮ ಬುದ್ಧನ ಜೀವನದ ಮಹತ್ವಪೂರ್ಣ ಘಟನಾವಳಿಯನ್ನು ಪೋಣಿಸಿ ಪ್ರದರ್ಶಿಸಲಾಗಿದೆ.

ನವಚೀನಾ ಬೌದ್ಧಮಂದಿರವು ತನ್ನ ಸರಳತೆಯಲ್ಲಿಯೂ ಭವ್ಯವಾಗಿದೆ. ಇದರ ಹತ್ತಿರದಲ್ಲಿಯೇ ಮಹಾಬೋಧಿ ಸಂಘದಿಂದ ಸಂಚಾಲಿತವಾಗುತ್ತಿರುವ ಪ್ರೌಢಶಾಲೆಯೊಂದಿದೆ. ಇಲ್ಲಿ ಪಾಳಿ ಭಾಷೆಯ ಮತ್ತು ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಬಹುದೊಡ್ಡ ಪುಸ್ತಕ ಸಂಗ್ರಹಾಲಯವಿದೆ. ಬೌದ್ಧ ಭಿಕ್ಷುಗಳಿಗೆ ಭಾರತೀಯ ದರ್ಶನ, ಪಾಳಿ, ಸಂಸ್ಕೃತ, ಸಿಂಹಲಿ, ಬ್ರಹ್ಮಿ ಭಾಷೆಗಳ ಶಿಕ್ಷಣವೀಯುವ ಸಂಘವಿದಾಗಿದೆ. "ಧರ್ಮದೂತ" ಎಂಬ ಹೆಸರಿನ ಮಾಸಪತ್ರಿಕೆಯೂ ಇಲ್ಲಿಂದ ಪ್ರಕಟವಾಗುತ್ತಿದೆ.

ಭಾರತದ ಇತಿಹಾಸದಲ್ಲಿ ಗಣನೀಯ ಸ್ಥಾನವನ್ನು ಪಡೆದಿರುವ ಬೌದ್ಧ ತೀರ್ಥಕ್ಷೇತ್ರಗಳಲ್ಲಿ ಸಾರನಾಥವು ಅಗ್ರಗಣ್ಯವಾಗಿದೆ. ಅದಿಂದು ಸಂಸ್ಕೃತಿ ಮತ್ತು ಧರ್ಮಬೋಧೆಯ ಸಮುನ್ನತ ಕೇಂದ್ರವಾಗಿ ಕೀರ್ತಿಶಿಖರವನ್ನೇರುತ್ತಲಿದೆ.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906 [ಪ್ರಧಾನ ಕಛೇರಿ: ಉಡುಪಿ (ದ. ಭಾರತ)

ಶಿವರಾತ್ರಿ ಸಮಿೂಪಿಸಿತು!

ಭಾರತೀಯ ಸಂಸ್ಕೃತಿಯಲ್ಲಿ ರುದ್ರ — ಶಿವ

ಅನಾರ್ಯರ ದೇವನಾಗಿದ್ದ ರುದ್ರ ಶಿವನಾಗಿ, ಆರ್ಯರ ದೇವನಾಗಿ ಪರಿವರ್ತನೆಗೊಂಡನು.

"ವೇದಾಂತೇಷು ಯಮಾಹುರೇಕ ಪುರುಷಂ
ವ್ಯಾಪ್ಯಸ್ಥಿತಂ ರೋದಸೀ ।
ಯಸ್ಮಿನ್ನೀಶ್ವರ ಇತ್ಯನನ್ಯ ವಿಷಯಃ
ಶಬ್ದೋಯಥಾರ್ಥಾಕ್ಷರಃ ।
ಅಂತರ್ಯಶ್ಚ ಮುಮುಕ್ಷುಭಿರ್ನಿಯ
ಮಿತ ಪ್ರಾಣಾದಿ ಭಿರ್ಮೃಗ್ಯತೆ
ಸ ಸ್ಥಾಣುಃ ಸ್ಥಿರಭಕ್ತಿಯೋಗ
ಸುಲಭೋನಿಃಶ್ರೇಯಸಾಯಾಸ್ತು ವಃ॥
— ಕಾಲಿದಾಸ.

ಇಲ್ಲಿ ಮಹಾಕವಿ ಕಾಲಿದಾಸನು ಶಿವನ ವರ್ಣನೆಯನ್ನು ಮಾಡಿದ್ದಾನೆ. ಸಾಹಿತ್ಯದ ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಮಾಡಿದ ವರ್ಣನೆಯ ವಿಕಸಿತ ರೂಪವನ್ನು ಕಾಲಿದಾಸನ ಈ ಶಿವಸ್ತುತಿಯಲ್ಲಿ ನಾವು ಕಾಣಬಹುದಾಗಿದೆ. ಋಗ್ವೇದದ ರುದ್ರನು ಇಲ್ಲಿ ಶಿವನಾಗಿ ಪರಿವರ್ತನೆಗೊಂಡಿರುವನು. ಈ ಪರಿವರ್ತನೆಯು ಸಂಮಿಶ್ರಣ ಸಮನ್ವಯ ಸ್ವರೂಪದ್ದಾಗಿದ್ದು ಭಾರತೀಯ ಸಂಸ್ಕೃತಿಯ ಮಹತ್ವಪೂರ್ಣ ಘಟನೆಯಾಗಿದೆ. ರುದ್ರನೆ ಶಿವನಾದನು. ಮಹಾದೇವನಾದನು. ಇದೊಂದು ಆಶ್ಚರ್ಯವನ್ನುಂಟುಮಾಡುವ ಸತ್ಯವಾಗಿದೆ.

ಇದು ಎರಡು ಜಾತಿಗಳ ಮಿಶ್ರಣದ ಫಲವಲ್ಲ. ಅನೇಕ ಜಾತಿಗಳ ಮಿಶ್ರಣದ ಫಲವಾಗಿದೆ. ಇದರ ತಿಳುವಳಿಕೆ ಮಹಾಭಾರತಕಾರನಿಗೆ ಮಾತ್ರವಿತ್ತು. ಮಹಾಭಾರತದಲ್ಲಿ ಹಿಮಾಲಯವಾಸಿ ಶಿವನ ವರ್ಣನೆಯನ್ನು ಈ ರೀತಿಯಾಗಿ ಮಾಡಲಾಗಿದೆ.

"ವ್ಯಾಘ್ರಚರ್ಮ ಪರಿಧಾನೋಗಜ ಚ
ಮೌತ್ತರಚ್ಛದಃ ।
ವ್ಯಾಲಯಜ್ಞೋಪವೀತೇಚ ಲೋಹಿ
ತಾಂಗದ ಭೂಷಿತಃ ॥"

ಈ ಶಿವನ ವರ್ಣನಾರೂಪವಾದ ಕೃತಿಗಳನ್ನು ನಾವಿಂದು ದೇವಮಂದಿರ ಮತ್ತು ಕೆಲೆಂಡರುಗಳಲ್ಲಿ ಕಾಣಬಹುದಾಗಿದೆ. ಆದರೆ ಮಹಾಭಾರತದಲ್ಲಿ ಶಿವನು ಸರ್ವಶ್ರೇಷ್ಠನೆಂದು ನಂಬಲಾಗಿತ್ತು. ಅವನು ವ್ಯಾಪಕ, ಅಜ, ಅವಿನಾಶಿ, ಯೋಗಿಗಳಿಗೂ ಅಗಮ್ಯ ಮತ್ತು ಸೃಷ್ಟಿರಚಯಿತನೂ ಆಗಿದ್ದನು.

ರಾಮಾಯಣದ ರಚಯಿತನಾದ ವಾಲ್ಮೀಕಿಯೂ ಕೂಡಾ ಶಿವನ ಈ ರೂಪ ಅನೇಕ ಪೂಜನೀಯ ದೇವತೆಗಳ ಸಂಮಿಲನದ ಫಲವೆಂದು ತಿಳಿದಿದ್ದನು. ವಿಶ್ವಾಮಿತ್ರನು ಕಿನ್ನರ ಮತ್ತು ಉರಗ ಸೇವಿತನಾದ ಮಹಾದೇವನ ಪೂಜೆಯನ್ನು ಮಾಡಿದ್ದನು.

ಋಗ್ವೇದದ ರುದ್ರನು ರಾಮಾಯಣ ಕಾಲದಲ್ಲಿ ಮಹಾದೇವನಾಗಿ ಪರಿವರ್ತನೆಯನ್ನು ಹೊಂದಿದನು. ಈ ವಿಕಾಸ ಹೇಗಾಯಿತು? ಈ ದೇಶದಲ್ಲಿ ಆರ್ಯರ ಬರುವಿಕೆ ಮತ್ತು ಹೋಗುವಿಕೆಯ ಬಗ್ಗೆ ಒಂದು ಕಥೆ ಪ್ರಚಲಿತವಿದೆ ಶ್ವೇತಾಶ್ವತರು ಅವನ ಪ್ರಶಂಸೆಯನ್ನು ಈ ರೀತಿಯಾಗಿ ಮಾಡಿದ್ದರೆ— "ಯಾರನ್ನು ಸರಿಯಾಗಿ ತಿಳಿದುಕೊಂಡರೆ ಮನುಷ್ಯರ ಬಂಧನಗಳಿಂದ ಬಿಡುಗಡೆ ಮಾಡಿಸುವನೊ ಅವನ ಪ್ರಶಂಸೆಯನ್ನಿಲ್ಲಿ ಮಾಡುವೆನು, ಅವನ ವಿರಾಟ ಸ್ವರೂಪವನ್ನು ನಾವಿಲ್ಲಿ ಕಾಣಬಹುದು...... ವಿಶ್ವಾಧಿಪೋರುದ್ರೋ ಮಹರ್ಷಿಃ" ರುದ್ರನು ಇಲ್ಲಿ ಎಲ್ಲಾ ದೇವರ ಸೃಷ್ಟಿಕರ್ತನೆಂದು ಹೇಳಲಾಗುತ್ತಿದೆ. ವೈದಿಕ ಕಾಲದಲ್ಲಿ ಆತನಿಗೆ ದೇವತೆಗಳೊಂದಿಗೆ ಸ್ಥಾನವೇ ಇರಲಿಲ್ಲ. ಆರ್ಯರು ಮೊದಲು ಈತನ ಪೂಜೆಯನ್ನು ಕೂಡಾ ಮಾಡುತ್ತಿರಲಿಲ್ಲ. ಅಂತಹ ಶಿವನು ದೇವಾಧಿದೇವನೆಂತಾದನೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವಲ್ಲವೆ?

ಋಗ್ವೇದದಲ್ಲಿ ಪ್ರಾಕೃತಿಕ ಶಕ್ತಿಗಳನ್ನು ಮಾನವೀಕರಿಸಿ ವರ್ಣಿಸಲಾಗಿದೆ. ಋಗ್ವೇದಕಾಲದ ರುದ್ರನು ಘನಮೇಘದ ಮಧ್ಯ ಮಿಂಚುವ ವಿದ್ಯುತ ಪ್ರಭೆಯ ಪ್ರತೀಕನಾಗಿದ್ದನು. ಮಿಂಚು ಮಿಂಚಿದ ತರುವಾಯ ಉಂಟಾಗುವ ಮೇಘ ಗರ್ಜನೆ ರುದ್ರನ ರವವಾಗಿತ್ತು. ಆದುದರಿಂದಲೇ ಆತನಿಗೆ ರುದ್ರನೆಂಬ ಹೆಸರಾಯಿತು. 'ರು' ಧಾತುವಿನ ಅರ್ಥ ಗರ್ಜನೆಯೆಂಬುದೇ ಆಗಿದೆ. ರುದ್ರ ಬಣ್ಣ ಕೆಲಬಾರಿ ಬೂದು. ಕೆಲಬಾರಿ ಬಿಳಿ, ಕೆಲಬಾರಿ ಸುವರ್ಣದಂತಿರುತ್ತಿತ್ತು. ಮೋಡಗಳಲ್ಲೂ ಕೂಡಾ ನಾವು ಮಳೆಗಾಲದಲ್ಲಿ ಈ ಬಣ್ಣವನ್ನು ಕಾಣಬಹುದಾಗಿದೆ. ರುದ್ರನಿಗೆ ಕಪರ್ದಿ, ಜಟಾಜೂಟಧಾರಿ ಎಂದು ಹೇಳುತ್ತಾರೆ. ರುದ್ರನನ್ನು ಅನೇಕರು 'ಕ್ಷಯದ್ವೀರ'ನೆಂದು ಹೇಳಿಯೂ ಸ್ತುತಿಮಾಡುತ್ತಾರೆ.

ಮೋಡಗಳ ಮಧ್ಯೆ ಮಿನುಗುವ ಮಿಂಚಿನ ಮರುಷೀಕರಣವೆ ರುದ್ರರೂಪವಾಗಿದೆ. ಈ ಮಾತನ್ನು ಅಥರ್ವಣವೇದವೂ ಪುಷ್ಟೀಕರಿಸುತ್ತದೆ. 'ರುದ್ರ ಜಲಾಷ ಭುಷಜ ನೀಲ ಶಿಖಂಡ ಕರ್ಮಕೃತ' ಎಂಬ ಅಥರ್ವಣ ವೇದದ ಉಕ್ತಿಖಂಡದಿಂದ ಇದುತನಕವೂ ರುದ್ರನು ದೇವತೆಗಳ ಸಮೂಹದಲ್ಲಿ ಕೂಡಿಲ್ಲವೆಂದು ತಿಳಿದುಕೊಳ್ಳಬಹುದು. ಆದರೆ ಅಥರ್ವಣ ವೇದದಲ್ಲಿ ರುದ್ರನ ಭಯಂಕರತೆ ಬಹು ಹೆಚ್ಚಾಗಿದೆ. ಆತನ ಬಾಲ ವಿಷಧರವಾಗಿದೆ. ಅದು ರೋಗಗಳನ್ನು ಹಬ್ಬಿಸುವಷ್ಟು ಸಮರ್ಥವಾಗಿದೆ. ಪ್ರಾಣಿಗಳು ಅವನಿಗೆ ತೀರ ಹೆದರುತ್ತವೆ. ಅವನು 'ಭೀಮಂ ರಾಜಾನಂ' (ಅಂತಕಕಾರಿ ನೃಪತಿ) ಮತ್ತು 'ಉಪಹಂತು' (ವಿನಾಶಕ) ಎಂದು ಕರೆಯಲ್ಪಡುತ್ತಾನೆ. ವೈದ್ಯಾನುಗಳಲ್ಲಿ ಮಿಂಚು ಬಿದ್ದೊಡನೆ ಅಗ್ನಿಯು ಎಲ್ಲವನ್ನೂ ನುಂಗಿಬಿಡುತ್ತಾನೆ. ಆರ್ಯರು ಈ ಸಮಯದಲ್ಲಿ ಗಂಗಾನದಿಮುಖಜಭೂಮಿಗೆ ಸಮಿೂಪಿಸಿರಬೇಕು. ರುದ್ರನ ಸಹಚರರಲ್ಲಿ ನಾಯಿಯ ವರ್ಣನೆಕೂಡಾ ಅಥರ್ವಣವೇದದಲ್ಲಿದ್ದನ್ನುವಾಗ ನಿಮ್ಮಲ್ಲಿ ಅನೇಕರು ನಗಬಹುದು.

ರುದ್ರನ ಸಹಚರರ ವರ್ಣನೆಯನ್ನು ಅಥರ್ವಣವೇದದಲ್ಲಿ ಮಾಡಲಾಗಿದೆ. ರುದ್ರನಸ್ತುತಿ ಈಗ ಭಯದ ಕಾರಣದಿಂದಲೇ ಆಗುತ್ತಿದೆ. ಆ ಸ್ತುತಿಯಿಂದ ರೋಗ ಹರಡಲಾರದು ಮತ್ತು ಪಶುಗಳ ರಕ್ಷಣೆಯಾಗುವುದೆಂದು ಜನರು ತಿಳಿದಿದ್ದರು. ಋಗ್ವೇದದ ಯಮನ ಇಲಾಖೆಯನ್ನು ಅಥರ್ವಣವೇದದಲ್ಲಿ ರುದ್ರನಿಗೆ ವರ್ಗಾಯಿಸಲಾಯಿತು.

ಯಜುರ್ವೇದದಲ್ಲಿ ರುದ್ರನ ರೌದ್ರರೂಪದ ಸಂಪೂರ್ಣ ವಿಕಾಸವಾಯಿತು. ಆತನನ್ನು ಇಲ್ಲಿ 'ಶಿವ' ಮತ್ತು 'ಪಾವಾರ್ತ್ಯ' ಎಂಬ ಹೆಸರುಗಳಿಂದ ಕರೆಯಲಾಯಿತು. ಆದರೆ ಆತನಲ್ಲಿ, ಆತನು ತನ್ನ ಭಕ್ತರನ್ನು ಘೋರಮಾರ್ಗದಲ್ಲಿ ಕೊಂಡೊಯ್ಯದೆ ಸಾದಾ ಮಾರ್ಗದಲ್ಲಿ ಕೊಂಡೊಯ್ಯಬೇಕೆಂದು ಕೇಳಿಕೊಳ್ಳಲಾಯಿತು. ಯಜುರ್ವೇದದ 'ತ್ರ್ಯಂಬಕ' ಹೋಮ 'ಶತರುದ್ರೀಯ' ಎಂಬೆರಡು ಸೂಕ್ತಗಳಲ್ಲಿ ರುದ್ರನಬದಲಾದ ವರ್ಣನೆಯನ್ನು ಮಾಡಲಾಗಿದೆ. ಅದುನಿಜವಾಗಿಯೂ ಅವನ ಪರಿವರ್ತಿತ ಸ್ವರೂಪವಾಗಿದೆ. ರುದ್ರನ ಸಹೋದರಿ "ಅಂಬಿಕೆ"ಯ ವರ್ಣನೆಯನ್ನು ಕೂಡಾ ಮೊದಲಾಗಿ ಆತನೊಂದಿಗೆ ಮಾಡಲಾಗಿತ್ತು. ಅದುವರೆಗೆ ಎಂದೂ ವೈದಿಕ ದೇವತೆಗಳೊಂದಿಗೆ ಸ್ತ್ರೀಯ ವರ್ಣನೆ ಮಾಡಿದ್ದಿಲ್ಲ. ಇದರಲ್ಲಿ ರುದ್ರನ ವಾಹನ ಮೂಷಕದ ಕುರಿತು ಕೂಡಾ ಚರ್ಚೆಯನ್ನು ಮಾಡಲಾಗಿದೆ. ರುದ್ರನಿಗೆ 'ಕೃತ್ತಿವಾಸಾ' ಎಂಬ ಹೆಸರು ಕೊಡಲಾಗಿದೆ,

ಇಂದು ನೋಡುವ ಆತನ ರೂಪವನ್ನು ನಾವು ಯಜುರ್ವೇದದಲ್ಲಿ ಕಾಣಬಹುದಾಗಿದೆ. ಅದರಲ್ಲಿ ಮೊದಲಾಗಿ ರುದ್ರನನ್ನು "ಶಿವ" "ಶಿವನರ" "ಶಂಕರ" ಎಂದು ಕರೆಯಲಾಯಿತು. "ನೀಲಶಿಖಂಡಿನ್" ಈಗ "ನೀಲಗ್ರೀವ"ನಾದನು. ರುದ್ರನ ಹೆಸರು ಇನ್ನೂ ಅನೇಕವಿವೆ— 'ಗಿರಿತ್ರ' 'ಗಿರೀಶ' 'ಗಿರಿಚಯ' 'ಗಿರಿಶಯ'. ಹೀಗಾಗಿ ಆತನು ಪರ್ವತವಾಸಿಗಳ ದೇವತೆಯಾದನು. ಪರ್ವತದ ಜಾತಿಗಳೊಂದಿಗೆ ಆರ್ಯರು ಆಗ ಸಂಬಂಧವನ್ನು ಮಾಡಿಕೊಳ್ಳುತ್ತಿದ್ದರು. ಆರ್ಯರಿಗೆ ಪರ್ವತೀಯ ಜಾತಿಯ ಮೇಲೆ ವಿಶ್ವಾಸವಿಲ್ಲದಿದ್ದರೂ ಅವರಲ್ಲಿ ಸಂಬಂಧವೆಸಗದಿರುವುದು ಅನಿವಾರ್ಯವಾಯಿತು. ಆಗ ಅವರು ರುದ್ರನನ್ನು ಪೂಜಿಸಲೇಬೇಕಾಗಿತ್ತು. ಏಕೆಂದರೆ ಈಗ ರುದ್ರನು "ವ್ರಾತ", "ತಕ್ಷಕ", "ರಥಕಾರ", "ಕ್ರೈಬಾಲ", "ಕರ್ಮಕಾರ", 'ನಿಷಾದ', "ಶ್ವನಿ" 'ಮೃಗಾದ್ರ' ಮೊದಲಾದುವುಗಳ ದೇವತೆಯಾಗಿದ್ದನು. ರುದ್ರನ ಪೂಜೆಯನ್ನು ಆರ್ಯರು ಮಾಡದಿದ್ದರೆ ಅವರ ಪರ್ವತೀಯ ಜಾತೀಯವರೊಂದಿಗಿನ ಮಿಲನವು ಸಂಪೂರ್ಣ ಅಯಶಸ್ವಿಯಾಗುತಿತ್ತು. ಆರ್ಯರ ರುದ್ರನು "ವನಾನಾಂ ಪತಿ" "ಕಾಡಿನ ಒಡೆಯ"ನಾಗಿದ್ದನು. ಆತನ ಹೆಸರು ರುದ್ರನೆಂದಿದ್ದರೂ ಆತನ ಸ್ವರೂಪ ಮಾತ್ರಾ ಬದಲಾವಣೆಯನ್ನು ಹೊಂದಿತು, ಕಾಡಿನೊಡೆಯನಾದ ಆತನ ಪೂಜೆಯನ್ನು ಬಿಲ್ವಪತ್ರ ಮತ್ತು ಧತೂರಪತ್ರದಿಂದ ಮಾಡುತಿದ್ದರು. ಆರ್ಯರು ಬೇರೆ ಜಾತಿಯವರೊಂದಿಗೆ ಸೇರಿ ದೇಶವ್ಯಾಪಿಯಾದಂತೆ ಈಶಿವಪೂಜೆಯು ದೇಶವ್ಯಾಪಿಯಾಯ್ತು.

ಸಿಂಧುನದಿಯ ದಡದ ನಾಗರಿಕರೊಂದಿಗೆ ಆರ್ಯರ ಸಂಪರ್ಕವಾದಾಗ ಶಿವಪೂಜೆಯಲ್ಲಿ ಲಿಂಗಪೂಜೆಯು ಸೇರಿಕೊಂಡಿತು. ಈ ಲಿಂಗಪೂಜೆಯನ್ನು 'ಶಿಶ್ನದೇವ' ಎಂದು ತಮಾಷೆ ಮಾಡುತ್ತಿದ್ದರು. ಆದರೆ ಕೊನೆಗೆ ಅನಿವಾರ್ಯವಾಗಿ ಲಿಂಗಪೂಜೆಯನ್ನು ಅವರು ಮಾಡಬೇಕಾಯಿತು. ಶಿವಪೂಜೆ ಲಿಂಗಪೂಜೆಯಾಗಿ ಬದ

(೯ನೇ ಪುಟ ನೋಡಿರಿ)

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳು ಸಿಗುತ್ತವೆ.

ವಿಚಾರಿಸಿರಿ—

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ.

ರೇಲ್ವೆ ಮುಂಗಡ ಪತ್ರ

ಪ್ರಶಂಸಾರ್ಹ ಪ್ರಗತಿಸಾಧನೆ

ಮೂರನೆಯ ವರ್ಗದ ಪ್ರವಾಸಿಗರಿಗೆ ಗಾಡಿಯಲ್ಲಿ ಮಲಗುವ ಸೌಕರ್ಯದ ಏರ್ಪಾಡು.



ರೇಲ್ವೆ ವಿಭಾಗದ ಮಂತ್ರಿ ಶ್ರೀ ಜಗಜ್ಜೀವನರಾಮರು ಲೋಕಸಭೆಯಲ್ಲಿ ೧೯೬೦—೬೧ನೆ ವರ್ಷದ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಇದರಲ್ಲಿ ಸಾಮಾನ್ಯ ಮುಂಗಡಪತ್ರಕ್ಕೆ ಕೊಡುವ ರೂ. ೫೬.೨೭ ಕೋಟಿಯನ್ನು ತೆಗೆದನಂತರ ರೂ. ೧೪.೪೩ರಷ್ಟು ನಿವ್ವಳ ಲಾಭವು ದೊರೆಯುವುದೆಂದೂ ಸೂಚಿಸಲಾಗಿದೆ.

ಭಾರತೀಯ ರೇಲ್ವೆಗಳಲ್ಲಿ ತೀವ್ರ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಮತ್ತು ವಿಭಾಗದಲ್ಲಿ ಹೆಚ್ಚುತ್ತಿರುವ ವೆಚ್ಚದ ಬಾಯಿಕೂಡಿಸುವುದಕ್ಕಾಗಿ ರೇಲ್ವೆ ದರಗಳಲ್ಲಿ ತುಸು ಏರಿಕೆಯನ್ನು ಮಾಡುವ ಸೂಚನೆಯು ಮುಂದೆಬಂದಿದೆ. ಆದರೂ ಪ್ರಯಾಣಿಕರ ಸಾರಿಗೆ ದರದಲ್ಲಿ ಯಾವುದೇ ಪರಿವರ್ತನೆಯನ್ನು ಸೂಚಿಸಲಾಗಿಲ್ಲ. ಸರಕುಗಳ ಸಾರಿಗೆಯಲ್ಲಿ ಮಾತ್ರ ರೂಪಾಯಿಗೆ ೫ ನಯೇ ಪೈಸೆಯಷ್ಟರ ಹೆಚ್ಚಳವನ್ನು ಮಾಡುವ ಯೋಜನೆಯಿದೆ. ಇದರಪಾಟವರೂ ಈ ಬಗ್ಗೆ ನೇಮಿಸಿದ್ದ ವಿಶೇಷ ಸಮಿತಿಯು ಶಿಫಾರಸು ಮಾಡಿದ್ದುದಕ್ಕಿಂತ ತೀರ ಕಡಿಮೆಯಾಗಿರುವುದರಿಂದ, ತುಸು ವ್ಯಥೆಗೀಡು ಮಾಡಿರುವುದಾದರೂ ಹೊರಲಾರದದೆಂತಹುದಲ್ಲವೆನ್ನಬಹುದು.

ಭಾರತೀಯರೇಲ್ವೆಗಳು ಇಂದು ತೀವ್ರಗತಿಯಿಂದ ಸುಧಾರಣೆ ಹೊಂದುತ್ತಿವೆ. ಭಾರತದಲ್ಲಿನ ರೇಲ್ವೆ ಇಂಜನ್ ಮತ್ತು ರೇಲ್ವೆಗಾಡಿಗಳ ಕಾರಖಾನೆಗಳಲ್ಲಿ ಉತ್ತಮಸ್ತರದ ಇಂಜನ್ ಮತ್ತು ಗಾಡಿಗಳು ಈಗ ನಿರ್ಮಾಣವಾಗ ತೊಡಗಿವೆ. ಇವುಗಳು ಗುಣದಲ್ಲಿಯೂ ಬಾಳಿಕೆಯಲ್ಲಿಯೂ ಉನ್ನತವಿರುವುದರಿಂದ, ವಿದೇಶೀಯ ಉಪಕರಣಗಳಷ್ಟೇ ಬಲಶಾಲಿಯಾಗಿವೆ. ಭಾರತವಿಂದು ಈ ಸಂಬಂಧದಲ್ಲಿ ಸ್ವಯಂಪರಿಪೂರ್ಣವಾಗುವ ಲಕ್ಷಣಗಳು ಗೋಚರವಾಗ ತೊಡಗಿವೆ; ಈ ಸಾಧನೆಯಿಂದ ವಿದೇಶವಿನಿಮಯ ನಾಣ್ಯಗಳ ಅಭಾವವು ತುಂಬಿ ಬಂದಿರುವುದೆಂದು ಹೇಳಬಹುದು.

ರೇಲ್ವೆಗಳಲ್ಲಿ ಕೈಗೊಳ್ಳಲಾದ ಸುಧಾರಣೆ ಹಾಗೂ ಸಾಧಿಸಿದ ಪ್ರಗತಿಗಳಿಂದಾಗಿ, ಸರಕು ಸಾಗಾಣಿಕೆಯು ಈಗ ವೇಗದಿಂದ ಆಗುವಂತಾಗಿದೆ. ಪ್ರಯಾಣಿಕರ ಗಾಡಿಗಳಲ್ಲಿ ಜನದಟ್ಟಣೆಯನ್ನು ತುಸು ಕಡಿಮೆಯಾಗುವಂತೆ ಆವಶ್ಯಕ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ದ್ವಿತೀಯ ಯೋಜನೆಯಲ್ಲಿ ನಿರೂಪಿತವಾಗಿದ್ದ ರೇಲು ಮಾರ್ಗಗಳ ಪೈಕಿ ಈಗಾಗಲೇ ೭೦೦ ಮೈಲುಗಳಷ್ಟನ್ನು ಜೋಡುಮಾರ್ಗವಾಗಿ ಪರಿವರ್ತಿಸಲಾಗಿದೆ. ೬೦೦ ಮೈಲುಗಳ ರೇಲ್ವೆದಾರಿ ನಿರ್ಮಾಣವು ಪೂರ್ತಿಗೊಂಡಿದೆ. ಹೊಸತಾಗಿ ೯೦೦ ಮೈಲುದ್ದದ ದಾರಿಯ ಪರಿಶೀಲನೆಯೂ ನಡೆಯುತ್ತಿದೆ.

ಭಾರತೀಯ ರೇಲ್ವೆಗಳ ಅಭಿವೃದ್ಧಿಗಾಗಿ ವಿದೇಶೀಯ ಸಹಾಯವನ್ನು ಪಡೆಯುವ ಕಾರ್ಯಕ್ರಮವನ್ನು ಮುಂದುವರಿಸುವ ಪ್ರಯತ್ನ ಸಾಗುತ್ತಿದೆ. ಅಮೆರಿಕೆಯ ಅಭಿವೃದ್ಧಿನಿಧಿಯಿಂದ ೪೦ ಕೋಟಿರೂಪಾಯಿಗಳನ್ನು ಪಡೆಯುವ ಬಗ್ಗೆ ಏರ್ಪಾಟುಗಳು ನಡೆದಿವೆ.

ಪ್ರಯಾಣಿಕರಿಗೆ ವಿಶೇಷ ಸವಲತ್ತುಗಳನ್ನು ನೀಡುವ ಕುರಿತು ವಿವೇಚನೆಯು ನಡೆದಿದೆ. ಮೂರನೆಯ ವರ್ಗದ ಪ್ರವಾಸಿಗಳಿಗೆ ಗಾಡಿಯಲ್ಲಿ ಮಲಗುವ ಸೌಕರ್ಯವೊದಗಿಸುವ ಬಗ್ಗೆ ಪರಿಶೀಲನೆಯನ್ನು ಕೈಗೊಳ್ಳಲಾಗಿದ್ದು ಅದನ್ನು ಸಾಧಿಸುವ ಬಗ್ಗೆ ಪ್ರಯತ್ನ ಮುನ್ನಡೆಯುತ್ತಿದೆ ಹಂತ ಹಂತವಾಗಿ ಇದನ್ನು ಕಾರ್ಯರೂಪಕ್ಕೆ ತರುವ ಯೋಜನೆಯಿದೆ.

ಸರಕು ಸಾಗಾಣಿಕೆಯಲ್ಲಿ ತೀವ್ರತೆಯನ್ನು ಸಾಧಿಸಲಾಗಿರುವುದರಿಂದ ವ್ಯಾಪಾರಿಗಳಿಗೆ ಅನುಕೂಲತೆಯನ್ನು ಕಲ್ಪಿಸಿದಂತಾಗಿದೆ ಈಗ ರೇಲ್ವೆಗಳಲ್ಲಿ ಸಾಗಾಣಿಕೆಯನ್ನು ಸುಭದ್ರ ರೀತಿಯಲ್ಲಿ ಅತಿ ಶೀಘ್ರವಾಗಿ ಸಾಧಿಸುವ ಯೋಜನೆಯು ಯಶಸ್ವಿಯಾಗುವುದರಲ್ಲಿದೆ.

೧೯೫೮—೧೯೬೦ರಲ್ಲಿ ಹೇಳಬಹುದಾದಂತಹ ಯಾವ ದೊಡ್ಡ ರೇಲ್ವೆ ಅಪಘಾತಗಳು ನಡೆಯದಿರುವುದು ನಿಜವಾಗಿಯೂ ಉಲ್ಲೇಖನೀಯವಿದೆ. ಇದರಿಂದಾಗಿ ಭಾರತೀಯ ರೇಲ್ವೆಗಳ ಸ್ಥಿತಿಯು ತುಂಬ ಸುಧಾರಿಸಿದೆಯೆಂದು ನಂಬಬಹುದು.

ಕೇಂದ್ರ ವೇತನ ಆಯೋಗದ ಶಿಫಾರಸುಗಳನ್ನು ಸ್ವೀಕರಿಸಿದುದರಿಂದಾಗಿ, ರೇಲ್ವೆವಿಭಾಗದ ನೌಕರರ ವೇತನದಲ್ಲಿಯೂ ಏರಿಕೆಯಾಗಲಿದ್ದು, ಈ ವಿಭಾಗದ ವೆಚ್ಚವೂ ಹೆಚ್ಚುವುದು. ನೌಕರರಿಗೆ ಸಾಕಷ್ಟು ಸೌಲಭ್ಯಗಳನ್ನು ಈಯುತ್ತಿರುವುದರಿಂದ ರೇಲ್ವೆ ಮತ್ತು ಕಾರ್ಮಿಕರ ನಡುವಣ ಸಂಬಂಧವು ಉತ್ತಮರೀತಿಯಲ್ಲೇ ಇದೆಯೆಂದು ಹೇಳಬಹುದು.

ರೇಲ್ವೆ ಮಂತ್ರಿ ಶ್ರೀ ಜಗಜೀವನರಾಮರು ಮಂಡಿಸಿದ ಈ ಮುಂಗಡಪತ್ರವನ್ನು ಕಾಣುವಾಗ, ರೇಲ್ವೆಶಾಖೆಯು ಪ್ರಗತಿ ಸಾಧಿಸುತ್ತಿದೆಂದು ತಿಳಿಯುವುದು. ಕೇಂದ್ರದಲ್ಲಿ ಉನ್ನತ ಸ್ಥಾನವೊಂದನ್ನು ಪಡೆದಿರುವ ಶ್ರೀ ಜಗಜೀವನರಾಮರ ಕೈಗೆ ಈ ವಿಭಾಗವು ಬಂದ ಗಳಿಗೆಯು

(೨ನೇ ಪುಟ ನೋಡಿರಿ)

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸಲು ವ ಬಡ್ಡಿಯನ್ನು ಈ ವರೆಗೆ ಕೊಡದೇ ಬಾಕಿಮಾಡಿಕೊಂಡಿರುವುದರಿಂದಲೂ ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕೆಲವರು ಮೃತಪಟ್ಟಿರುವರೆಂಬುದಾಗಿಯೂ ಕೆಲವರು ವಾಸಸ್ಥಳದಲ್ಲಿ ಇಲ್ಲನೆಂಬುದಾಗಿಯೂ ನಮಗೇನೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ತಾರೀಕು 10-3-1960ನೇ ಗುರುವಾರ ಅಪರಾಹ್ನ ಗಂಟೆ ೩ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31-12-59ರ ವರೆಗೆ ಬಡ್ಡಿ ಸಹಿತ ಮೊಬಲಗು
647/56	ಶೇಕ್ ಹಯಾತ್ ಸಾಹೇಬ, ಶೇಖ್ ಬುಡಾನ್ ಸಾಹೇಬರ ಮಗ, ಕಾರ್ಮಿಕೇರಿ, ಪೋಸ್ಟ್ ಕುಂದಾಪುರ, ದ. ಕ.	ರೂ. ನ. 40-30
289/57	ಹಿರಿಯ ಮೊಗವೀರ, ರಾಮ ಮೊಗವೀರನ ಮಗ, C/o ಕೊಳ್ಕೆಬೈಲು ರಾಮಣ್ಣ ಶೆಟ್ಟಿ, ಕೊಳ್ಕೆಬೈಲು ಹೊಸಮನೆ, ಪೋಸ್ಟ್ ಸಾಯ್ಬರಕಟ್ಟೆ, ದ. ಕ.	46-55
603/57	ಮಂಜಯ್ಯ ಶೆಟ್ಟಿ, ಸಂಕಪ್ಪ ಶೆಟ್ರ ಅಳಿಯ, ಹೊಸಮನೆ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ, ದ. ಕ.	16-30
604/57	ಮಂಜಯ್ಯ ಶೆಟ್ಟಿ, ಸಂಕಪ್ಪ ಶೆಟ್ರ ಅಳಿಯ, ಹೊಸಮನೆ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ, ದ. ಕ.	59-90
83/58	ಶಿವರಾಮ ಶೆಟ್ಟಿ, ತೇಜಪ್ಪ ಶೆಟ್ರ ಮಗ, ಕಿರಾಡಿ, ಅಮಾಸೆ ಗ್ರಾಮ, ಪೋಸ್ಟ್ ಹಿಲಿಯಾಣ, ದ. ಕ.	307-50

Office of the Vijaya Bank Ltd.,
Coondapoor, S. K.
Dated 20th February, 1960.

For the Vijaya Bank, Ltd.,
K. Bhojaraja Hegde.
Agent, Coondapoor.

ಹಾರ್ಮೋನಿಯಮ್ ಬೋಧನ ಕ್ರಮ

ಎಂಬ ಶ್ರೀ. ಎ. ರಾಮಕೃಷ್ಣನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕನ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ. ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಜಯಲಾಭದಿಂದ ಗರ್ವಿತನಾದವನೂ ದುಃಖಪ್ರಾಪ್ತಿಯಿಂದ ದಿಗ್ಭ್ರಮೆಗೊಳ್ಳದವನೂ ಯುದ್ಧರಂಗದಲ್ಲಿ ಬದ್ಧಾಂಜಲಿಯಾಗದವನೂ ನಿಜವಾದ ಮಾನವನು.

NAVAYUGA

Founder:—

Late Sri. **A. B. SHETTY,**
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೫-೨-'೬೦	೨೫

ಕೇರಳದ ಸಚಿವಸಂಪುಟ

೧೯೫೯ನೆಯ ಜುಲೈ ೩೧ನೆ ದಿನದಿಂದ ಅಧ್ಯಕ್ಷರ ಆಳಿಕೆಗೊಳಪಟ್ಟ ಕೇರಳದಲ್ಲಿ ಮಧ್ಯಾವಧಿ ಚುನಾವಣೆಗಳು ಮುಕ್ತಾಯವಾಗಿ, ಫಲಿತಾಂಶಗಳು ಪ್ರಕಟವಾಗಿ ಇಪ್ಪತ್ತು ದಿನಗಳ ನಂತರ ಸಂದಿಗ್ಧ ಪರಿಸ್ಥಿತಿಯು ನೀಗಿ ಒಂದು ಮಂತ್ರಿಮಂಡಳವು ನಿರ್ಮಿತವಾದುದರೊಡನೆ ಲೋಕತಂತ್ರ ವ್ಯವಹಾರವು ಅಲ್ಲಿ ಪುನರ್‌ಸ್ಥಾಪಿತವಾಯಿತು. ಸಾಮಾನ್ಯವಾಗಿ ಚುನಾವಣಾ ಫಲಿತಾಂಶಗಳು ಬಹಿರಂಗವಾದ ಏಳೆಂಟು ದಿನಗಳಲ್ಲಿ ನೂತನ ಸದಸ್ಯರು ಅಧಿಕಾರ ಗ್ರಹಣಮಾಡುವ ಪರಿಪಾಠವಿರುವುದು. ಕೇರಳದಲ್ಲಿಯೂ ಫೆಬ್ರವರಿ ೧೫ರೊಳಗೆ ಹೊಸ ಮಂತ್ರಿಮಂಡಳವು ಸ್ಥಾಪನೆಯಾಗುವುದೆಂದು ಮೊದಲು ಹೇಳಲಾಗಿದ್ದರೂ, ಅದು ೨೦ಕ್ಕೆ ಮುಂದುವರಿಯಿತಲ್ಲದೆ, ಆ ದಿನವೂ ದೂರ ನಿಂತಿತು. ಇದಕ್ಕೆ ಮುಖ್ಯ ಕಾರಣವೆಂದರೆ, ಮಂತ್ರಿಮಂಡಳವನ್ನು ಯಾವ ಪಕ್ಷಗಳು ಮಾಡಬೇಕು ಎಂಬುದರಲ್ಲಿದ್ದ ವಿಚಾರಣೀಯ ಅಂಶ ಮಾತ್ರ.

ಕೇರಳದ ಚುನಾವಣೆಯಲ್ಲಿ ಏಕತೆಯನ್ನುಳಿಸಿಕೊಂಡು ಹೋರಾಡಿದ ಪಕ್ಷಗಳಲ್ಲಿ ಮುಸ್ಲಿಂ ಲೀಗು ಒಂದಾಗಿದೆ. ಕಾಂಗ್ರೆಸ್ ಮುಸ್ಲಿಂ ಲೀಗಿಗೆ ಮಂತ್ರಿಸಂಪುಟದಲ್ಲಿ ಸ್ಥಾನವೀಯುವುದನ್ನು ವಿರೋಧಿಸಿತ್ತು. ಈ ವಿರೋಧವು ಸಮರ್ಥನೀಯವಾಗಿರುವುದಾದರೂ, ಅದು ವಿಶ್ವಾಸಘಾತವೂ ಆಗಬಹುದು. ಇಕ್ಕಡೆಯ ಧುರೀಣರ ನಡುವೆ ಮೊದಲೇ ಈ ಬಗ್ಗೆ ಮಾತುಕತೆ ನಡೆದಿದ್ದರೂ ಇರಬಹುದು. ಈ ಸಂಬಂಧದ ಆಶೆ, ನಿರಾಶೆ, ಹಠ, ನಿರ್ಧಾರಗಳ ಗುಂಗಿನಲ್ಲೇ ೨೦ ದಿನಗಳು ಉರುಳಿದುವು. ಕೊನೆಯ ಗಳಿಗೆಯಲ್ಲಿ ಮುಸ್ಲಿಂಲೀಗ್ ಒಂದು ತ್ಯಾಗಕ್ಕೆ ಸಿದ್ಧವಾಯಿತು; ಪ್ರಸವಾ ಪಕ್ಷ ಈ ತ್ಯಾಗದಿಂದ ಸ್ಫೂರ್ತಿಪಡೆಯಿತು; ಥಾನುಪಿಳ್ಳೆಯವರ ಹಿರಿತನದಲ್ಲಿ ೧೧ ಮಂತ್ರಿಗಳು ಅಧಿಕಾರವನ್ನು ಸ್ವೀಕರಿಸಿದರು. ಕೇರಳೀಯರು ಏಳುತಿಂಗಳ ಹಿಂದೆ ಕಮ್ಯೂನಿಸ್ಟರ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿದ್ದರೂ ನ್ಯಾಯರೀತಿಯಿಂದ ಈಗತಾನೇ ಬಂಧಮುಕ್ತರಾದರು.

ಕಾಂಗ್ರೆಸ್—ಪ್ರಸವಾಗಳ ಸಂಯುಕ್ತ ಸರಕಾರವು ಇಂದು ಗುರುತರವಾದ ಹೊಣೆಗಾರಿಕೆಯನ್ನು ಹೊರಬೇಕಾಗಿದೆ. ಕಮ್ಯೂನಿಸ್ಟ್ ಆಳಿಕೆಯಿಂದ ನೊಂದಿ ಹೋಗಿರುವ ಕೇರಳೀಯರು ಈಗ, ತಮ್ಮ ವ್ಯಾಧಿಯನ್ನು ಗುಣಪಡಿಸಿಕೊಳ್ಳಲು ಈ ಸರಕಾರವನ್ನು ಆಮಂತ್ರಿಸಿದ್ದಾರೆ. ಶ್ರಮಜೀವಿಗಳನ್ನಷ್ಟೆ ನಾಗರಿಕರೆಂದು ತಿಳಿದು, ಅವರತ್ತ ಮಾತ್ರ ವಿಶೇಷ ಗಮನವೀಯುತ್ತಿದ್ದ ಕಮ್ಯೂನಿಸ್ಟರ ನೀತಿಯಿಂದ ಕಂಗೆಟ್ಟಿದ್ದ ಎಲ್ಲ ವರ್ಗದ ಜನರತ್ತವೂ ದೃಷ್ಟಿ ಹಾಯಿಸುವುದು ಅಗತ್ಯವಿದೆ. ಅಲ್ಲಿ ಈ ಮೊದಲು, ಪ್ರಜಾಪ್ರಭುತ್ವ ಸ್ಥಾಪನೆಯಾದ ಮೇಲೆ, ಕಾಂಗ್ರೆಸ್ ಮತ್ತು ಪ್ರಸವಾ ಪಕ್ಷಗಳೂ ಸರಕಾರವನ್ನು ಸ್ಥಾಪಿಸಿದ್ದುವು. ಆದರೆ, ಅವೆಲ್ಲವೂ ದುರ್ಬಲವಾಗಿದ್ದು ನಡುದಾರಿಯಲ್ಲಿಯೇ ಕೊಚ್ಚಿ ಹೋದುವು. ದ್ವಿತೀಯ ಚುನಾವಣೆಯಲ್ಲಿ ಗೆದ್ದು ಬಂದ ಕಮ್ಯೂನಿಸ್ಟರಾದರೂ ಅಧಃಪತನಗೊಂಡರು. ಇದನ್ನೆಲ್ಲ ನೋಡುವಾಗ, ಕೇರಳದಲ್ಲಿ ಈ ಬಾರಿಯ ಮಂತ್ರಿಮಂಡಳವೂ ಸ್ಥಿರವಾಗಿ ನಿಲ್ಲುವುದೆಂದು ಹೇಳಬರುವುದಿಲ್ಲ. ಏಕೆಂದರೆ, ಕಾಂಗ್ರೆಸ್ಸಿಗೆ ಮಾತ್ರ ವಿಧಾನಸಭೆಯಲ್ಲಿ ನಿಚ್ಚಳ ಬಹುಮತವಿಲ್ಲ; ಅದು ಈಗ ಪ್ರಸವಾ ಪಕ್ಷವನ್ನು ಆಧಾರಕ್ಕೆ ತೆಗೆದುಕೊಂಡಿದೆ; ಈ ಎರಡರ ನಡುವೆ ಮೈತ್ರಿ ಸುಗಮವಾಗಿರುವವರೆಗೆ ಸರಿ, ಮುಂದೆ, ಸರಕಾರದ ನೀತಿಯ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಹುಟ್ಟಿಕೊಳ್ಳುವ ಪ್ರಸಂಗ ಬಂದರೆ...? ಒಂದು ಸಂತೋಷದ ಸಂಗತಿಯೇ ಕೇರಳದ ರಾಜಕೀಯ ಸ್ಥಿತ್ಯಂತರಗಳನ್ನು ಚೆನ್ನಾಗಿ ಅಭ್ಯಾಸಮಾಡಿದವರೆಲ್ಲರೂ ಇಂದು ಕಮ್ಯೂನಿಸ್ಟರು ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳಬೇಕೆನ್ನುತ್ತಾರೆ. ಇದಕ್ಕಾಗಿ, ಕಮ್ಯೂನಿಸ್ಟರ ಹೊಟ್ಟೆಯುಂತಿದ್ದ ಕೇರಳದಲ್ಲಿ ಅವರನ್ನು ಸಂಪೂರ್ಣವಾಗಿ ಹೊಡೆದೋಡಿಸುವಂತೆ ಮಾಡಬೇಕು. ಅಲ್ಲಿನ ಜನತೆಗೆ ಸರಿಯಾದ ಸಮರ್ಥವಾದ ಆಡಳಿತೆಯ ಮೂಲಕ ಸಂತುಷ್ಟರನ್ನಾಗಿ ಮಾಡಬೇಕು; ಇದನ್ನಿಂದು ಕೇರಳದ ಸಂಯುಕ್ತರಂಗವು ಅವಶ್ಯ ತಿಳಿದಿರಬೇಕು. ಕೇರಳದಲ್ಲಿನ ಪ್ರಜಾಪ್ರಭುತ್ವದ ಯಶಸ್ಸು ಸದ್ಯದ ಮಂತ್ರಿಮಂಡಳಿಯ ಜವಾಬ್ದಾರಿ ನಿರ್ವಹಣೆಯಲ್ಲಿ ಅಡಗಿದೆ. ಇದು ಉತ್ತಮ ಬೀಜವನ್ನು ಬಿತ್ತಿದರೆ, ಮುಂದಕ್ಕೆ ಉತ್ತಮ ಫಲ ದೊರೆತೀತು. ಥಾನುಪಿಳ್ಳೆಯವರ ಸಂಪುಟದ ಕಾರ್ಯನಿರ್ವಹಣಾ ವಿಧಾನವನ್ನು ಎಲ್ಲರೂ ಆತುರ ಕುತೂಹಲ ಚಿತ್ತದಿಂದ ನೋಡುತ್ತಾರೆ.

ಮಂತ್ರಿಮಂಡಳದ ೧೧ಜನ ಸದಸ್ಯರಲ್ಲಿ ಮೊದಲು ಮಂತ್ರಿಯಾಗಿ ಅನುಭವ ಪಡೆದಿರುವವರು ಮುಖ್ಯಮಂತ್ರಿ ಶ್ರೀ ಪಟ್ಟಂ ಥಾನುಪಿಳ್ಳೆಯವರು ಮಾತ್ರ. ಉಳಿದವರು ಮಂತ್ರಿಪದವಿಯಲ್ಲಿ ಅನನುಭವಿಗಳಾದರೂ ರಾಜಕಾರಣದಲ್ಲಿಯೂ ಖಾಸಗಿ ಆಡಳಿತೆಯಲ್ಲಿಯೂ ನುರಿತವರು ಎಂದು ತಿಳಿಯುತ್ತದೆ. ಕೇರಳದ ಜನಮನದ ಇಂಗಿತವನ್ನು ಕಂಡುಕೊಂಡು ಅವರ ಸುಖಕ್ಕಾಗಿ ಹೋರಾಡಿ ಗೆದ್ದಿರುವ ಇವರೆಲ್ಲ ಕೇರಳೀಯರಿಗೆ ಸುಖದ ಸತ್ಫಲಗಳನ್ನು ಉಣಿಸಲು ಹಿಂದೇಟು ಹಾಕುವುದಿಲ್ಲ ಎಂದು ನಂಬಬಹುದು. ಈ ಸಂದರ್ಭದಲ್ಲಿ ಮುಸ್ಲಿಂ ಲೀಗಿನ ಕುರಿತಾಗಿಯೂ ಒಂದು ಮಾತನ್ನು ಹೇಳಬೇಕಾಗುತ್ತದೆ. ವಸ್ತುತಃ ಇದೊಂದು ಜಾತೀಯ ಸಂಸ್ಥೆ. ಈ ಸಂಸ್ಥೆಯು ಹಿಂದೆಸಗಿದ ಪಾಪಕೃತ್ಯಗಳನ್ನು ಪುನಃ ಸ್ಮರಿಸಿಕೊಳ್ಳುವುದು ಅನವಶ್ಯ. ಇಂದದು ಕೇರಳದಲ್ಲಿ ಸ್ಥಾಪಿತವಾದ ಸರಕಾರಕ್ಕೆ ನಿಶ್ಶರ್ತವಾಗಿ ಸಹಾಯವನ್ನು ನೀಡಲು ಒಪ್ಪಿದೆ; ಸರಕಾರರಚನೆಯಲ್ಲಿ ತನ್ನ ತ್ಯಾಗ ದರ್ಶನವನ್ನು ಮಾಡಿದೆ, ಇದೇರೀತಿಯ ಭಾವನೆಯನ್ನು ಮತ್ತಷ್ಟು ಮುಂದುವರಿಸಿ, ಜಾತ್ಯತೀತ ಸರಕಾರವಿರುವ ಭಾರತದಲ್ಲಿ ಜಾತೀಯ ಪಕ್ಷಗಳ ಅವಶ್ಯಕತೆಯಿಲ್ಲವೆಂಬುದನ್ನು ಮನಗಂಡು, ಪ್ರಜಾಪ್ರಭುತ್ವವಾದಿ ಪಕ್ಷಗಳೊಡನೆ ವಿಲೀನಹೊಂದುವುದು ಉಚಿತವೆಂದು ಕಂಡುಕೊಳ್ಳಬಾರದೆ?

ಕೇರಳದಲ್ಲಿನ ನೂತನ ಸಂಪುಟವು ಜನತೆಯ ಆಶೆ ಆಕಾಂಕ್ಷೆಗಳನ್ನು ಯಥಾಯೋಗ್ಯವಾಗಿ ಪೂರೈಸಿ, ಅವರ ಪ್ರೀತ್ಯಾದರಗಳಿಗೆ ಪಾತ್ರವಾಗಿ ಡೋಲಾಯಮಾನ ಪರಿಸ್ಥಿತಿಯು ಇನ್ನು ಮುಂದಿಲ್ಲದಂತೆ ನೋಡಿಕೊಳ್ಳಲಿ.

ಸಾಹಿತಿ ಮತ್ತು ರಾಷ್ಟ್ರಸೇವೆ

ಬೀದರದಲ್ಲಿ ಸೇರಿದ್ದ ಕರ್ನಾಟಕ ಸಾಹಿತ್ಯ ಸಮ್ಮೇಳನವು ವಿಜೃಂಭಣೆಯಲ್ಲೇ ಮುಕ್ತಾಯವಾಯಿತು. ಬೀದರದಂತಹ ಒಂದು ಸ್ಥಳದಲ್ಲಿ ಸೇರಿದುದರಿಂದಲೋ ಏನೋ, ಅಲ್ಲಿ ಕಲೆಯ ಬೇಕಾದಷ್ಟು ಜನರೂ ಸಾಹಿತಿಗಳೂ ಸೇರಿರಲಿಲ್ಲವೆಂದು ಕೇಳುತ್ತೇವೆ. ಇದಕ್ಕೆ ಕಾರಣವೇನೆಂಬುದು ಊಹನಾತೀತವಿರುವುದಾದರೂ, ಹಿಂದೊಮ್ಮೆ ಇದೇ ಸ್ಥಳದಲ್ಲಿ ನಡೆಯುವುದೆಂದು ಸಾರಿದ್ದ ಸಮ್ಮೇಳನ ಮುಂದೆರಡು ಬಾರಿ ಮುಂದುವರಿಸುವುದಕ್ಕೆ ಕಾರಣವೇನಿರಬಹುದೋ ಅದೇ ಇಂತಹ ಶೋಚನೀಯ ಸ್ಥಿತಿಗೂ ಕಾರಣವೆನ್ನಬಹುದಾಗಿಗಿದೆ. ಸಾಹಿತ್ಯ ಸಮ್ಮೇಳನವಂತೂ ಮುಗಿಯಿತು. ಇಂತಹ ಕೊರತೆ ಇನ್ನು ಮುಂದಕ್ಕೆ ತೋರದಂತೆ ಪೂರ್ವಭಾವಿಯಾಗಿಯೇ ಎಚ್ಚರಿಕೆ ವಹಿಸುವುದು ಅವಶ್ಯ. ಸಮ್ಮೇಳನ ಎಲ್ಲ ಕಾರ್ಯಕ್ರಮಗಳೂ ಜರಗಿದುವು; ಕೆಲವೊಂದು ಗೊತ್ತುವಳಿಗಳೂ ಸ್ವೀಕೃತವಾದುವು. ಕರ್ನಾಟಕ ಏಕೀಕರಣಕ್ಕಾಗಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದ್ದ ಪರಿಷತ್ತೂ ತನ್ನ ಸೇವೆ ಸಲ್ಲಿಸಿದೆ. ಮಾನವನಿಗೆ, ಅವನು ರಾಷ್ಟ್ರಸೇವಿರಲಿ, ಮತ್ತಾವನೇ ಇರಲಿ, ಸಾಹಿತ್ಯದ ಆವಶ್ಯಕತೆಯಿದೆ. ಹಾಗಿರುವಾಗ, ಕರ್ನಾಟಕ ಸರಕಾರ ಸಾಹಿತ್ಯ ಪರಿಷತ್ತಿಗೆ ಧನವನ್ನು ಮಾತ್ರ ಸಹಾಯ ಮಾಡುವುದಲ್ಲದೆ, ಅದು ಸ್ವೀಕರಿಸಿದ ಗೊತ್ತುವಳಿಗಳತ್ತವೂ ಗಮನಹರಿಸಬೇಕಾಗಿದೆ. ರಾಜಕಾರಣದ ಕೃಪಾಛತ್ರದಲ್ಲಿಯೇ ಈಗೀಗ ಇಂತಹ ಸಮ್ಮೇಳನಗಳು ನಡೆಯುವುದೂ ಸಂಪ್ರದಾಯವಾಗಿಬಿಟ್ಟಿದೆ. ಸಾಹಿತ್ಯಶಕ್ತಿ ಅಪಾರವಾದುದು; ಅನಂತವಾದುದು; ಅದ್ಭುತವಾದುದು; ಅಚ್ಯುತವಾದುದು. ಅದರ ಬಲದಿಂದ ಹಿಂದೆ ರಾಜ್ಯ ಕಟ್ಟಿದ್ದಾರೆ; ಆಳಿದ್ದಾರೆ; ಅಳಿದುಹೋಗಿದ್ದಾರೆ. ಇಂದಿಗೂ ಭಾರತದ ಪ್ರಗತಿಗೆ ಅದರ ರಾಷ್ಟ್ರನಾಯಕರು ಇಟ್ಟುಕೊಂಡಿರುವ ಆಶೆ ಆಕಾಂಕ್ಷೆಗಳ ಪೂರೈಕೆಗೆ ಸಾಹಿತಿಗಳೂ ತಮ್ಮ ಪಾಲಿನ ಬೆಂಬಲವನ್ನು ನೀಡದುಳಿಯರು. ರಾಷ್ಟ್ರದ ಅಭಿವೃದ್ಧಿ ಯೋಜನೆಗಳನ್ನು ನೋಡಿಕೊಂಡು ಬರುವುದರಲ್ಲಿ ಸರಕಾರವು ಇವರಿಗೆ ಸಹಾಯಮಾಡಬೇಕೆಂಬ ಗೊತ್ತುವಳಿಯನ್ನು ಬೀದರ ಸಮ್ಮೇಳನವು ಸ್ವೀಕರಿಸಿದ್ದು ರಾಷ್ಟ್ರಸೇವೆಗೂ ಸಾಹಿತಿಗಳು ಸಿದ್ಧರಿದ್ದಾರೆಂಬುದನ್ನು ಪ್ರಕಟಿಸಿತು. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಇತ್ತ ಅವಶ್ಯ ಗಮನಹರಿಸಬೇಕಾಗಿದೆ. ಸಾಹಿತಿಯಿಂದ, ಸಾಹಿತ್ಯದಿಂದ ಆಗದ ಕೆಲಸವೊಂದೂ ಇರುವುದಿಲ್ಲವೆಂಬುದನ್ನವು ಅವಶ್ಯ ಗಮನಿಸಲಿ.

ಸಂಕ್ಷಿಪ್ತ ಸುದ್ದಿಗಳು

ಅಂಜದಿರು ಎಲೆ ಭಾರತ

ಫ್ರೆಂಚರು ಸಹರ ಮರುಭೂಮಿಯಲ್ಲಿ ಗೆಯ್ದ ಅಣುಸ್ಫೋಟನದ ವಿಕಿರಣಗಳು ಪೂರ್ವೋತ್ತರ ದಿಶೆಯತ್ತ ಸಂಚಲಿಸತೊಡಗಿರುವುದರಿಂದ ಅರಬದೇಶ ಹಾಗೂ ಭಾರತಗಳಿಗೆ ಹಾನಿ ತಟ್ಟುವುದೆಂದು ಅಮೆರಿಕನ್ ವಿಜ್ಞಾನಿಗಳು ಅಭಿಪ್ರಾಯಿಸಿದ್ದಾರೆ. ಆದರೆ, ಭಾರತದ ಅಣುಶಕ್ತಿ ಕೇಂದ್ರದ ಪ್ರಧಾನಾಧಿಕಾರಿ ಶ್ರೀ ಬಾಬಾರವರು ಭಾರತದ ಹತ್ತಿರಬರುವಾಗ ಈ ವಿಕಿರಣಗಳು ತೀರ ದುರ್ಬಲವಾಗುವುದೆಂದೂ ಇವುಗಳ ಪರಿಣಾಮವು ಏನೂ ಆಗಲಾರದೆಂದೂ ವಿಶ್ವಾಸ ತೋರಿಸಿದ್ದಾರೆ.

ಗೆದ್ದವರು ಯಾರು?

ಬೆಳಗಾವಿಯ ಸಮೀಪದ ಯೆಲ್ಲೂರಿನ ಗಡಿ ಸಂಬಂಧದ ಗಲಭೆ ಸಂಪೂರ್ಣ ಶಾಂತವಾದಂತಾಗಿದೆ. ಘರ್ಷಣೆಯು ನಡೆದಿದ್ದರೂ ಪ್ರಾಣಹಾನಿಯಾಗಿಲ್ಲ. ಸರಕಾರಕ್ಕೆ ತೆರಿಗೆ ಕೊಡಬಾರದೆಂದು ಜನತೆಯನ್ನು ಉಪದೇಶಿಸುವ ಮಹಾರಾಷ್ಟ್ರೀಯ ನಾಯಕರಲ್ಲಿ ಕೆಲವರನ್ನು ಬಂಧಿಸಲಾಗಿದೆ. ಈ ಘಟನೆಯ ವಿವರವನ್ನು ರಾಜ್ಯಸರಕಾರವು ಕೇಂದ್ರಕ್ಕೂ ತಿಳಿಸಿದೆಯಲ್ಲದೇ, ಈ ಗ್ರಾಮದಲ್ಲಿನ ಕರ ವಸೂಲಿ ಕಾರ್ಯವು ಭರದಿಂದ ಸಾಗುತ್ತಿದೆಯೆಂದೂ ಕರತೆರಲು ಬಂದ ನಾಗರಿಕರನ್ನು ಪ್ರತಿಪಕ್ಷೀಯರು ತಡೆದುದರಿಂದಲೇ ಈ ಘಟನೆ ಸಂಭವಿಸಿತೆಂದೂ ಕರ್ನಾಟಕ ಸರಕಾರವು ಹೇಳಿಕೆಯಿತ್ತಿದೆ.

ನಾವು ಶಾಂತಿ ಸೈನಿಕರಯ್ಯ

ಭಾರತದ ಶಾಂತಿಸಮರ್ಥನೆಯ ನೀತಿಯಂತೆ ಒತ್ತಾಯದ ಸೈನಿಕ ಶಿಕ್ಷಣವೀಯುವುದು ಸರಿಯಾಗಲಾರದು ಎಂದು ಸಂರಕ್ಷಣಾಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನೊನ್ನರು ಮದ್ರಾಸದಲ್ಲಿ ಹೇಳಿದರು. ಎನ್. ಸಿ. ಸಿ. ಮೊದಲಾದುವುಗಳ ಕಾರ್ಯಕ್ರಮಗಳನ್ನು ವಿಸ್ತರಿಸುತ್ತಿರುವೆವಾದರೂ ಇದರಿಂದ ಎಲ್ಲ ಯುವಕರಿಗೆ ಸೈನಿಕ ಶಿಕ್ಷಣವೀಯಲಾಗುವುದೆಂದು ತಿಳಿಯಬಾರದು ಎಂದವರು ಧೈರ್ಯಹೇಳಿ, ಆವಶ್ಯಕತೆಯೊದಗಿದಾಗ ಎನ್. ಸಿ. ಸಿ. ಮತ್ತು ಎ. ಸಿ. ಸಿ. ರೈಫಲ್ ಪಡೆಗಳು ಸಂರಕ್ಷಣೆಯ ಕಾರ್ಯ ಮತ್ತು ಕಾಯಿದೆ ವ್ಯವಸ್ಥೆಯನ್ನು ನೋಡಿಕೊಳ್ಳುವುದರಲ್ಲಿ ನೆರವಾಗಬಹುದೆಂದು ಆಶಿಸಿದರು.

ಆತ್ಮಕ್ಕೆ ಚಿರಶಾಂತಿಯಿರಲಿ

ಬ್ರಿಟಿಷ ಭಾರತದ ಕೊನೆಯ ವೈಸರಾಯಿ ಮತ್ತು ಸ್ವತಂತ್ರ ಭಾರತದ ಪ್ರಥಮ ಗವರ್ನರ ಜನರಲ್ ಶ್ರೀ ಮೌಂಟ್ ಬೇಟನ್ನರ ಪತ್ನಿ ಶ್ರೀಮತಿ ಮೌಂಟ್ ಬೇಟನ್ನರು ಬ್ರಿಟಿಷ ಬೋರ್ನಿಯೋದಲ್ಲಿ ನಿಧನರಾದರು. ಶ್ರೀಮತಿಯವರಿಗೆ ಮರಣಕಾಲದಲ್ಲಿ ೫೮ ವರ್ಷ ಪ್ರಾಯ. ನಾ

ಗಿತ್ತು. ಭಾರತದ ಹಿತೈಷಿಗಳಾದ ವಿದೇಶೀಯರಲ್ಲಿ ಲಾರ್ಡ್ ಮೌಂಟ್‌ಬ್ಯಾಟನ್ ದಂಪತಿಗಳು ಅಗ್ರಗಣ್ಯಸ್ಥಾನವನ್ನು ಪಡೆದಿದ್ದಾರೆ. ಪ್ರಧಾನಿ ನೆಹರು ಅವರ ನಿಕಟ ಮಿತ್ರರಲ್ಲಿ ಇವರು ಸೇರಿದ್ದಾರೆ. ಶ್ರೀಮತಿ ಬ್ಯಾಟನ್ನರು ವರ್ಷಕ್ಕೊಂದುಬಾರಿ ಭಾರತ ಸಂದರ್ಶಿಸುವ ಕಾರ್ಯಕ್ರಮವನ್ನೂ ಇಟ್ಟುಕೊಂಡಿದ್ದರು.

— —

ಅಲ್ಲಲ್ಲಿಯ ಸುದ್ದಿಸಾರ

ಶ್ರೀ ಕಾರಂತರಿಗೆ ಸತ್ಕಾರ—ಯಕ್ಷಗಾನ ಬಯಲಾಟ ಪುಸ್ತಕಕ್ಕೆ ಸಾಹಿತ್ಯ ಅಕೆಡೆಮಿಯಿಂದ ಬಹುಮಾನಿತರಾದ ಶ್ರೀ ಕೆ. ಶಿವರಾಮ ಕಾರಂತರ ಗೌರವಾರ್ಥವಾಗಿ ಇದೇ ತಾ. ೨೦ರಂದು ಮಂಗಳೂರು ಪತ್ರಿಕೋದ್ಯಮಿಗಳ ಸಂಘದವರು ಸತ್ಕಾರ ಕೂಟವೊಂದನ್ನು ಶ್ರೀ ಮುರಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಶ್ರೀ ಕೆ. ಎಸ್. ಉಪಾಧ್ಯಾಯರು ಸ್ವಾಗತಿಸಿದ ಬಳಿಕ ಶ್ರೀ ಕಾರಂತರ ಗುಣವಿಶೇಷಗಳನ್ನು ಪ್ರಶಂಶಿಸಿ ಶ್ರೀಗಳಾದ ಬಿ. ಶಂಕರ ಭಟ್, ರಾಮ ಮೊಳೆಯಾರ್, ಬಿ. ಎಮ್. ಇದಿನಬ್ಬ ಮತ್ತು ಅಧ್ಯಕ್ಷರು ಉಪನ್ಯಾಸವಿತ್ತರು. ಶ್ರೀ ಕಾರಂತರು ಲೇಖಕರು ಪ್ರತ್ಯಕ್ಷ ಅನುಭವಕ್ಕೆ ಪ್ರಾಧಾನ್ಯತೆ ಕೊಡಬೇಕೆಂದರು.

ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ— ಮಂಗಳೂರು ಬಿ. ಎಮ್. ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 21ರಲ್ಲಿ ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಘದ ಅಧ್ಯಕ್ಷ ಡಾ. ಬಿ. ಆರ್. ಹೆಗ್ಡೆಯವರು ಸ್ವಾಗತಿಸಿದ ಮೇಲೆ ವರದಿ ವಾಚನ ಬಹುಮಾನ ವಿತರಣೆ ಅಧ್ಯಕ್ಷರ ಭಾಷಣಗಳಾದವು.

ಮಣಿಪಾಲ ಪ್ರೌಢಶಾಲಾ ವರ್ಧಂತ್ಯುತ್ಸವವು ತಾ. 17ರಂದು ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಶ್ರೀ ಎಚ್. ರಾಮನಾಥ ಪೈ ವಕೀಲ್, ಇವರಿಂದ ಶಾಲಾ ಧ್ವಜವು ಅರಳಿಸಲ್ಪಟ್ಟಿತು. ಛದ್ಮವೇಷ ಸ್ಪರ್ಧೆ, ಮಕ್ಕಳಿಗೆ ಸಿಹಿತಿಂಡಿ ವಿತರಣೆಯು ನಡೆಯಿತು. ಅಪರಾಹ್ನ ಶಾಲಾ ಸಂಸ್ಥಾಪಕ ಡಾ. ಟಿ. ಎಮ್. ಎ. ಪೈಗಳು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಬಿ. ರಾಮರಾಯ ಶೆಟ್ಟರು ಸವಿಸ್ತಾರವಾದ ಶಾಲಾ ವರದಿಯಲ್ಲಿ ಶಾಲೆಯ ಆಂಗ್ಲಭಾಷೆಯ ಮಾಧ್ಯಮ ತಾಂತ್ರಿಕ ಶಿಕ್ಷಣ, ತೆರೆಯಲಿರುವ ಹಯರ್ ಸೆಕೆಂಡರೀ ವಿಭಾಗ ಮೊದಲಾದುವುಗಳ ಸದುಪಯೋಗವನ್ನು ಸಾರ್ವಜನಿಕರು ಪಡೆಯುವಂತೆ ಕರೆಯಿತ್ತರು. ಸಂದೇಶಗಳನ್ನು ಶ್ರೀ ಬಿ. ಆರ್. ಹೆಗ್ಡೆಯವರು ಓದಿದರು. ಕುಮಾರಿ ಪ್ರೇಮಲೀಲಾ ಪೈ, ಬಿ. ಎ; ಅವರು ಶಾಲಾ ಸ್ವಸ್ತಿವಾಚನ ಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರಪ್ರಥಮವಾಗಿ ಡಾ. ಟಿ. ಎಮ್. ಎ. ಪೈಗಳು ತಮ್ಮ ವಿದ್ಯಾಪ್ರಪಂಚದ ಚಟುವಟಿಕೆಗಳನ್ನು ಈ ಶಾಲೆಯಿಂದ ಪ್ರಾರಂಭಿಸಿದರು. ಶಾಲೆಯ ಪರಿಪೂರ್ಣತೆಯು ಅವರ ಉತ್ಸಾಹವನ್ನು ಹೆಚ್ಚಿಸಿ ಸದ್ಯ ಮಹಾತ್ಮಾ ಗಾಂಧಿ ಮೆಮೋರಿಯಲ್, ಕಸ್ತೂರ್ ಬಾ ಮೆಡಿಕಲ್, ಮಣಿಪಾಲ ಇಂಜಿನಿಯರಿಂಗ್, ಉಡುಪಿ ಲಾ ಇವೇ ಮೊದಲಾದ ದೊಡ್ಡ ದೊಡ್ಡ ಕೋಲೇಜುಗಳನ್ನು ಸ್ಥಾಪಿಸಲು ನಾಂದಿಯಾಯಿತು. ಈಗಲೂ ಅವರ ಭುಜಬಲಕ್ಕೆ ಕಾರಣ ಮಣಿಪಾಲ ಹೈಸ್ಕೂಲು ಎಂದೂ ''ಮಕ್ಕಳಲ್ಲಿ ಧರ್ಮಶ್ರದ್ಧೆಯು ಬೆಳೆದರೆ ಶಿಸ್ತಿನ ಸಮಸ್ಯೆಯು ಬರಲಾರದೆಂದೂ ಬೋಧಪ್ರದವಾಗಿ ವಿವರಿಸಿದರು. ಅನಂತರ ನಾಟಕಾದಿ ಮನರಂಜನೆ ಕಾರ್ಯಕ್ರಮಗಳಾದುವು.

ಶಿರ್ವ—ತಾ. 19.2.60ರಲ್ಲಿ ಶಿರ್ವ ಸಬ್ ಪೋಸ್ಟ್ ಆಫೀಸಿನಲ್ಲಿ ''ಪಬ್ಲಿಕ್ ಕಾಲ್ ಆಫೀಸ್'' ರೆ. ಫಾ. ಯಚ್. ಗೊನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಈ ಪ್ರಾಂತ್ಯದ ಮಾಜಿ ಮಿನಿಸ್ಟರ್, ಎಲ್. ಎ ಗಳಾದ ಶ್ರೀ ಟಿ. ಎ. ಪೈ ಇವರಿಂದ ಉದ್ಘಾಟಿಸಲ್ಪಟ್ಟಿತು. ಪಂಚಾಯತ್ ಬೋರ್ಡ್ ಅಧ್ಯಕ್ಷರಾದ ಡಾ. ಯು. ಕೆ. ಆಚಾರ್ ಇವರು ಅತಿಥಿಗಳನ್ನು ಸ್ವಾಗತಿಸಿದರು ಸಬ್ ಪೋಸ್ಟ್ ಮಾಸ್ಟರಾದ ಶ್ರೀ ಬಿ. ಎಲ್. ಎಸ್. ತಂತ್ರಿಯವರು ಸಮಯೋಚಿತ ಭಾಷಣವನ್ನಿತ್ತರು. ಶ್ರೀ ಪೈಯವರು ಪಬ್ಲಿಕ್ ಆಫೀಸನ್ನು ಉದ್ಘಾಟಿಸುತ್ತಾ ಶಿರ್ವ ಗ್ರಾಮವು ನಾಗರಿಕತೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಯಿತೆಂದೂ ಬೇರೆಬೇರೆ ಊರುಗಳಿಗೆ ನೇರವಾದ ಸಂಬಂಧ ಕಲ್ಪಿಸಿದಂತಾಯಿತೆಂದೂ ಅಂಚೆ ಇಲಾಖೆಯವರು ಇಲ್ಲಿಗೆ ಮೆಸೆಂಜರ್ ಸರ್ವಿಸ್ ಇಡುವಂತೆ ಮೇಲಧಿಕಾರಿಗಳನ್ನು ಒತ್ತಾಯಿಸಬೇಕೆಂದೂ ಹೇಳಿದರು. ಅಧ್ಯಕ್ಷರು ಮಾನ್ಯ ಪೈಯವರ ಕಾರ್ಯದಕ್ಷತೆ ಕುರಿತಾಗಿ ಪ್ರಶಂಸಿಸಿ ನಮ್ಮ ಗ್ರಾಮ ವಿದ್ಯುತ್ತೇ ಮೊದಲಾದ ಸೌಕರ್ಯಗಳನ್ನು ಪಡೆದು ಇನ್ನೂ ಮುಂದಕ್ಕೆ ಬರುವಂತಾಗಬೇಕೆಂದರು. ಡಾ. ಯು. ಕೆ. ಆಚಾರ್ಯರು ಧನ್ಯವಾದಗಳನ್ನಿತ್ತರು. ಊರ ಅನ್ಯ ಮಹನೀಯರು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಶಿರ್ವ ಸೈಂಟ್ ಮೇರೀಸ್ ಹೈಸ್ಕೂಲಿನ ವರ್ಧಂತಿಯು ತಾ. 15ರಂದು ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ವಿ. ಕೃಷ್ಣಯ್ಯನವರಿಂದ ಸ್ವಾಗತ ಭಾಷಣ, ಶ್ರೀ ಎಲ್. ಮೆಂಡೋನ್ಸ ಅವರಿಂದ ವರದಿವಾಚನವಾದ ಮೇಲೆ ಶ್ರೀಮತಿ ಶಾರದಾ ಎಂ. ಪೈಯವರು ಬಹುಮಾನ ವಿತರಣೆ ಮಾಡಿದರು. ಶ್ರೀ ಕೆ. ಶೇಷಪ್ಪಯ್ಯನವರಿಂದಸ್ವಸ್ತಿವಾಚನವಾದ ಮೇಲೆ ಅಧ್ಯಕ್ಷ ಡಾ. ಪೈಗಳು ಶಾಲಾ ಚಟುವಟಿಕೆಗಳನ್ನು ಶ್ಲಾಘಿಸಿ ಶಾಲೆಯ ಏಳಿಗೆಗೆ ಊರವರ ಸಹಕಾರ ಅಗತ್ಯವೆಂದರು. ಬಳಿಕ ಮನರಂಜನೆಯ ಕಾರ್ಯಕ್ರಮಗಳಾದುವು.

ಸೈಂಟ್ ಮೇರೀಸ್ ಹಾಗೂ ಡಾನ್ ಬಾಸ್ಕೋ ಶಾಲೆಗಳ ಹಳೆವಿದ್ಯಾರ್ಥಿ ದಿನಾಚರಣೆಯು ತಾ. 16ರಲ್ಲಿ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಮ್. ಕನ್. ಕಾಮತರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಶಂಕರನಾರಾಯಣ— ಸ್ಥಳೀಯ ಬೋರ್ಡ್ ಹೈಸ್ಕೂಲಿನ ವರ್ಧಂತಿಯು ತಾ. 18ರಲ್ಲಿ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಅವರು ರಂಗಮಂಟಪವನ್ನು ಉದ್ಘಾಟಿಸಿದರು. ದಿವಂಗತ ಕೃಷ್ಣರಾಯ ಕೊಡಗಿಯವರ ಮತ್ತು ಪಟೇಲ್ ನರಸಿಂಹ ಆಚಾರ್ಯರ ಭಾವಚಿತ್ರಗಳನ್ನು ಶ್ರೀ ಕೆ. ವೆಂಕಪ್ಪ ಶೆಟ್ಟರೂ ಶ್ರೀ ವೈ. ಮಂಜಯ್ಯ ಶೆಟ್ಟರ ಭಾವಚಿತ್ರವನ್ನು ಅಧ್ಯಕ್ಷ ಶ್ರೀ ಪೈಗಳೂ ಅನಾವರಣಮಾಡಿದರು. ಶಾಲಾ ಪತ್ರಿಕೆ ''ಬಾಲ ಪ್ರಭಾ''ವನ್ನು ಶ್ರೀ ಕು. ಶಿ. ಹರಿದಾಸ ಭಟ್ಟರು ಉದ್ಘಾಟಿಸಿದರು. ಅಧ್ಯಕ್ಷ ಶ್ರೀ ಪೈಗಳು ತಮ್ಮ ಭಾಷಣದಲ್ಲಿ ಹಳ್ಳಿಗಳನ್ನು ಪೇಟೆಗಳನ್ನಾಗಿ ಮಾರ್ಪಡಿಸಿ ಪೇಟೆಗಳ ಸೌಕರ್ಯಗಳನ್ನು ಹಳ್ಳಿಗರಿಗೆ ಒದಗಿಸುವುದೇ ಇಂದಿನ ಮುಖ್ಯ ಕಾರ್ಯವೆಂದರು.

ಪ್ರವಾಸದಲ್ಲಿ ದುರಂತ— ಉಡುಪಿ ಸರಕಾರಿ ಬುನಾದಿ ತರಬೇತಿ ಶಾಲೆಯ ವಿದ್ಯಾರ್ಥಿ ಅಧ್ಯಾಪಕರು ಶೈಕ್ಷಣಿಕ ಪ್ರವಾಸಕ್ಕಾಗಿ 18.2.1960ರ ಬೆಳಗ್ಗೆ ಹೊರಟು ಧರ್ಮಸ್ಥಳದ ಬಳಿ ನೇತ್ರಾವತಿ ನದಿಯ ಸ್ನಾನಘಟ್ಟವನ್ನು ಸುಮಾರು 10.50ಕ್ಕೆ ತಲಪಿದರು. ವಿದ್ಯಾರ್ಥಿಗಳು ಸ್ನಾನ ಮಾಡುತಿದ್ದಾಗ ಶ್ರೀ ಎಸ್. ಶ್ರೀಪತಿ ಶೇಟ್ ಎಂಬ ಎರಡನೆಯ ವರ್ಷದ ವಿದ್ಯಾರ್ಥಿಯು ಅನಿರೀಕ್ಷಿತವಾಗಿ ದುರಂತಕ್ಕೊಳಗಾದರು. ಪ್ರವಾಸ ಕಾರ್ಯವನ್ನು ನಿಲ್ಲಿಸಿ ವಿದ್ಯಾರ್ಥಿಗಳು 18ರ ರಾತ್ರಿಯೇ ಹಿಂದಿರುಗಬೇಕಾಯಿತು.

ಮರುದಿನ ಸರಕಾರಿ ಬುನಾದಿ ತರಬೇತಿ ಶಾಲೆಯಲ್ಲಿ ಅಧ್ಯಾಪಕರೂ ವಿದ್ಯಾರ್ಥಿಗಳೂ ಶೋಕ ಸಭೆ ಸೇರಿ ಮೃತರ ಆತ್ಮಕ್ಕೆ ಶಾಂತಿ ಕೋರಿದರಲ್ಲದೆ ಅಪಾರ ದುಃಖದಲ್ಲಿ ಮುಳುಗಿರುವ ಬಾಂಧವರಿಗೆ ದುಃಖವನ್ನೂ ಸಹಿಸುವ ಶಕ್ತಿಯನ್ನು ಕರುಣಿಸಲೆಂದೂ ಪ್ರಾರ್ಥಿಸಲಾಯಿತು.

ಕುಂಜಾರು—ಕುಂಜಾರು ಗಿರಿಜಾ ಹಾ| ಪ್ರಾ| ಶಾಲೆ ಮತ್ತು ಕುರ್ಕಾಲು ಶ್ರೀ ಗಣಪತಿ ಎಲಿಮೆಂಟರಿ ಶಾಲೆಗಳ ಸಂಯುಕ್ತ ವರ್ಧಂತ್ಯುತ್ಸವವು ತಾ. 17ರಂದು ಕಾಣಿಯೂರು ಮಠದ ಕಿರೀ ಸ್ವಾಮಿಗಳಾದ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ಬಹುಮಾನ ವಿತರಣೆ ಮಾಡಿದರು. ಶಾಲಾ ಮೆನೇಜರ್ ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟರು ಸ್ವಾಗತಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರುಗಳಾದ ಶ್ರೀ ಕೆ. ವಾಸು ಶೆಟ್ಟರೂ ಶ್ರೀ ಎಚ್. ಯು. ಅನಂತಯ್ಯನವರೂ ವರದಿವಾಚನ ಮಾಡಿದರು. ಉಡುಪಿ ರೋಯಲ್ ಮಹಲಿನ ಮಾಲಕ ಶ್ರೀ ಕೆ. ವೆಂಕಟರಮಣ ಭಟ್ಟರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳು ಜಯಶೀಲವಾಗಿ ಜರಗಿದವು ಬೆಳಿಗ್ಗೆ ಡಾ. ಎಂ. ಬಾಬುರಾಯರಿಂದ ಧ್ವಜಾರೋಹಣವಿತ್ತು. ಕುಂಜಾರು ಶಾಲಾ ವಿದ್ಯಾರ್ಥಿಗಳಿಗೆ ಶ್ರೀ. ಕೆ ನಾರಾಯಣ ಭಟ್ ಎಂ. ಎ. ಬಿ. ಟಿ. ಇವರೂ ಕುರ್ಕಾಲು ಶಾಲಾವಿದ್ಯಾರ್ಥಿಗಳಿಗೆ ಶ್ರೀ ಕೆ. ವೆಂಕಟರಮಣ ಭಟ್ಟರೂ ಸಿಹಿತಿಂಡಿಗಳನ್ನು ಹಂಚಿದ್ದರು

ಕಾಪು—ಮಜ್ಜೂರು—ತಾ. 18ರಲ್ಲಿ ಶ್ರೀ ದಿನಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಯುವಕ ಮಂಡಲದ ಸಭೆಯಲ್ಲಿ ಶ್ರೀ ಬಿ. ಎಲ್. ಆನಂದ ರೈಗಳು ಭಾಷಣವಿತ್ತರು. ಅದೇ ದಿನ ಪಂಚವಾರ್ಷಿಕ ಯೋಜನೆ ದಿನಾಚರಣೆಯು ಜರಗಿ ಶ್ರೀ ರೈಗಳ ಭಾಷಣವಾಯಿತು.

ಉಡುಪಿ ಮುನ್ಸಿಪಲ್ ಪಬ್ಲಿಕ್ ಹೆಲ್ತ್ ಮಜೂರರ ಸಭೆಯೊಂದು ತಾ. 21ರಲ್ಲಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಯೂನಿಯನ್ ಸ್ಥಾಪಿಸುವ ನಿರ್ಣಯವಾಗಿ ಕಮಿಟಿಯೊಂದು ರಚಿಸಲ್ಪಟ್ಟಿತು.

ಹೊಸಂಗಡಿ ಸೇತುವೆಯ ಉದ್ಘಾಟನೆಯು-ತಾ 15ರಲ್ಲಿ ಮಂತ್ರಿ ಶ್ರೀ ಎಚ್. ಎಮ್. ಚೆನ್ನಬಸಪ್ಪನವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಸುಪರಿಂಟೆಂಡೆಂಟ್ ಇಂಜಿನಿಯರ್ ಡಾ. ಎ. ಎಸ್. ಅಯ್ಯರವರು ಸ್ವಾಗತಿಸಿದರು. ಅಂತ್ಯದಲ್ಲಿ ಜಿಲ್ಲಾಧಿಕಾರಿ ಶ್ರೀ ಸಿ. ಎ. ಪದ್ಮನಾಭರು ಧನ್ಯವಾದಗಳನ್ನಿತ್ತರು.

ಅದೇದಿನ ಬೆಳಿಗ್ಗೆ ಮಂತ್ರಿಗಳು ಸಂಕದಗುಂಡಿ ಸೇತುವೆಯನ್ನು ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದಲ್ಲದೆ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸೀತಾನದಿ ಸೇತುವೆಗೂ, ಶ್ರೀ ಬಿ. ಶ್ರೀನಿವಾಸ ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಕೊಕ್ಕರಣೆ ಸೇತುವೆಗೂ ಶಂಕುಸ್ಥಾಪನೆಗೈದರು.

ಧರ್ಮಸ್ಥಳ — ಇದೇ ತಾ. 11ರಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದ ಶ್ರೀ ರತ್ನವರ್ಮ ಹೆಗಡೆ ಎಂ. ಎಲ್. ಎ ಅವರ ಬೀಡಿನ ಪ್ರವೇಶ ಸಮಾರಂಭವು ವಿಜೃಂಭಣೆಯಿಂದ ಯಥಾಸಾಂಗವಾಗಿ ನೆರವೇರಿತು.

ವಿವಾಹ ಸಮಾರಂಭಗಳು: ಶ್ರೀ. ಕೆ. ಆರ್. ಶೆಣೈ ಅವರ ಪುತ್ರಿ ಕುಮಾರಿ ಮೋಹಿನಿಯನ್ನು ಶ್ರೀ ಗುಂಡುರಾಯ ಭಟ್ಟ ಅವರ ಪುತ್ರ ಶ್ರೀ ತ್ರಿವಿಕ್ರಮ ಭಟ್ಟರು ತಾ. 18ರಂದು ಉಡುಪಿ ಕೆ ಟೆಂಪಲ್ ರೋಡಿನಲ್ಲಿರುವ ವಧುವಿನ ಗೃಹದಲ್ಲಿ ವಿವಾಹವಾದರು.

ಡಾ| ಟಿ. ಎಂ. ಎ. ಪೈಗಳ ಪುತ್ರಿ ಕುಮಾರಿ ಸುನೀತಿಯನ್ನು ಶ್ರೀ ಕೆ. ರಾಮುಲು ವೇಂದ್ರ ನಾಯ್ಡುರ ಪುತ್ರ ಶ್ರೀ ಪ್ರೇಮಾನಂದ ನಾಯ್ಡುರು ತಾ 20 ರಂದು ಉಡುಪಿಯ ವರವೇಂಕಟ್ರ ಕಲ್ಯಾಣಮಂದಿರದಲ್ಲಿ ವಿವಾಹವಾದರು,

ಶ್ರೀ ಟಿ. ಸಂಜೀವ ಪೈಗಳ ಪುತ್ರಿ ಕುಮಾರಿ ಮೀರಾಳನ್ನು ಶ್ರೀ ಎಂ. ಜಿ. ಶೆಣೈಯವರ ಪುತ್ರ ಶ್ರೀ ರಾಧಾಕೃಷ್ಣ ಶೆಣೈಯವರು ತಾ20 ರಂದು ಉಡುಪಿ ಅಜ್ಜರಕಾಡಿನ ವಧೂನಿವಾಸದಲ್ಲಿ ವಿವಾಹವಾದರು.

ಹಿಂದೀ ಪ್ರಚಾರ ಪರಿಷತ್ತು.''ಹಿಂದಿಯು' ಕೇವಲ ರಾಷ್ಟ್ರಭಾಷೆಮಾತ್ರವಲ್ಲ ಅದು ಅಂತಾರಾಷ್ಟ್ರೀಯ ಭಾಷೆಯ ರೂಪವನ್ನು ಪಡೆದಿದೆ ಪ್ರಪಂಚದಲ್ಲಿ ಇದಕ್ಕೆ ತೃತೀಯ ಸ್ಥಾನವು ಲಭಿಸಿದೆ. ಭಾರತದ ಐಕ್ಯ ಸಂಸ್ಥಾಪನೆಗೆ ಹಿಂದೀ ಭಾಷೆಯು ಮಾಧ್ಯಮವೇ ಅತೀ ಮುಖ್ಯವಾದ ಸಾಧನ. ಆದುದರಿಂದ ಎಲ್ಲ ಭಾರತೀಯರೂ ಹಿಂದಿ ಭಾಷೆಯನ್ನು ಅಭ್ಯಸಿಸಬೇಕು. ಇಂದು ಉತ್ತರ ಭಾರತದವರಿಗಿಂತ ದ. ಭಾರತದವರು ಹಿಂದಿ ಬರೆಯುವುದರಲ್ಲಿ ನಿಷ್ಣಾತರಾದರೂ ಆಡುವುದಕ್ಕೆ ಅಂಜುತ್ತಾರೆ. ಈ ದುರ್ಬಲತೆಗಳನ್ನು ದೂರೀಕರಿಸಿ, ಬರೆದಂತೆಯೇ ನುಡಿಯುವುದನ್ನು ಅವಶ್ಯ ಅಭ್ಯಸಿಸಬೇಕು, ಎಂದು ಮುಂತಾಗಿ ಕೊಡಿಗೆ ಸರಕಾರ ಬಿ. ಟಿ. ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ. ಎಸ್ ಕೃಷ್ಣಮೂರ್ತಿಯವರು ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ತಾ. ೨೨ರಂದು ಅಭಿಪ್ರಾಯ ಪಟ್ಟರು. ಅವರು ಮುಂಬರಿದು ಅಭ್ಯಾಸಬಲದಿಂದ ಒಂದು ಭಾಷೆಯನ್ನು ಅಧಿಕಾಧಿಕವಾಗಿ ಕಲಿಯಬಹುದು. ಚರ್ಚಾಕೂಟವೇ ಮೊದಲಾದುವುಗಳ ಮೂಲಕ ಭಾಷೆಯಲ್ಲಿ ಆಡುವ ಶಕ್ತಿಯು ಬರುವುದೆಂದೂ ಹೇಳಿದರು. ಪ್ರಾರಂಭದಲ್ಲಿ ಅತಿಥಿಗಳನ್ನು ಪರಿಷತ್ತಿನ ಪ್ರಧಾನರಾದ ಶ್ರೀ ಗೋಪೀಚಂದ ರಾಯರು ಎದುರ್ಗೊಂಡರು. ಶ್ರೀ ಕೆ. ನಾರಾಯಣ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ರಾಮರಾಯರು ಉಪನ್ಯಾಸಕರ ಅಭಿಪ್ರಾಯಗಳನ್ನು ಸಮರ್ಥಿಸಿದರು. ಎಸ್. ವಿಟ್ಠಲ ಶೆಟ್ಟಿಗಾರರು ಧನ್ಯವಾದವನ್ನಿತ್ತರು.

ಪೆರ್ಡೂರು: ಶ್ರೀ ಅನಂತ ಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ರಥೋತ್ಸವದ ಕಾರ್ಯಗಳು ತಾ. 11—3—60ರಿಂದ ತಾ. 18—3—60ರ ವರೆಗೆ ಜರಗಲಿರುವುದರಿಂದ ಭಕ್ತಾದಿಗಳು ಬಂದು ಶ್ರೀ ಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸಬೇಕೆಂದೂ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೋಲ್ಯಾರ್ ಭೋಜರಾಜ ಶೆಟ್ಟರು ಅಪೇಕ್ಷಿಸುತ್ತಾರೆ.

ದಿ| ಎ. ಬಿ. ಶೆಟ್ಟರ-ಪ್ರತಿಮೆಯೊಂದನ್ನು ಅವರ ಸಾರ್ವಜನಿಕ ಸೇವೆಯ ದ್ಯೋತಕವಾಗಿ ಮಂಗಳೂರಲ್ಲಿ ಸ್ಥಾಪಿಸಬೇಕೆಂಬುದಾಗಿ ಜಿಲ್ಲಾ ಸ್ವತಂತ್ರಪಕ್ಷವು ತಾ 13ರಲ್ಲಿ ಸೇರಿದ ಸಭೆಯಲ್ಲಿ ನಿರ್ಣಯಿಸಿದೆ.

— —

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ನೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ವಿತ್ತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಜ್ಞಾನದರ್ಶನ

ಅತ್ಯಮೂಲ್ಯ ರತ್ನಲಾಭ ಸುಲಭಸಾಧ್ಯವಲ್ಲ

ಅಭ್ಯಾಸ, ಪರಿಶ್ರಮ, ತತ್ಪರತೆ, ವಿವೇಕಗಳ ಸಮ್ಮಿಳನದಿಂದ ಮಾತ್ರ ಜ್ಞಾನೋದಯವಾಗುವುದು ಸಾಧ್ಯ.

ಗುರು ಗಂಭೀರವದನನಾಗಿ ತನ್ನ ನೆಚ್ಚಿನ ಶಿಷ್ಯನನ್ನು ಆಜ್ಞಾಪಿಸಿದನು: "ಎಲೆ ಶಿಷ್ಯ, ಇಂದು ನೀನು ನನ್ನೊಡನೆ ಯಾತ್ರೆಗೆ ಹೊರಡಬೇಕು." ಶಿಷ್ಯ ಇದೇಕೆ ಹೀಗೆ ಎಂದು ದಂಗುಬಡೆದು ನಿಂತನು. ಆದರೆ, ಹೀಗೇಕೆಂದು ಕೇಳುವ ಧೈರ್ಯ ಆತಗೆ ಬರಲಿಲ್ಲ; ಆದೇಕೆಂದು ನಿಲ್ಲಹೇಳಿದ ಗುರುವೂ ತಿಳಿಸಲಿಲ್ಲ.

ಮೂಡಲ ನಸುಗೆಂಪು ಮಾಸುತ್ತಿತ್ತು, ಗುರು ಶಿಷ್ಯರು ಆಹ್ನಿಕಾದಿಗಳನ್ನು ಪೂರೈಸಿ ಪ್ರಯಾಣ ಸನ್ನದ್ಧರಾದರು. ಅವರು ನಡೆನಡೆದು ನೇಸರು ನಾಲ್ಕು ಮಾರೆತ್ತರ ಬರುವಷ್ಟರಲ್ಲಿ ಒಂದು ಬಾವಿಯ ಬಳಿ ಸೇರಿದರು. ಅಲ್ಲಿ ಒಬ್ಬಾಕೆ ರೈತರ ಹೆಂಗಸು ಬಾವಿಯಿಂದ ನೀರು ಮೊಗೆ ಮೊಗೆದು ತೋಟಕ್ಕೆ ಹೊಯ್ಯುತ್ತಿರುವುದು ಕಂಡಿತು. ಆಕೆಯ ಬಟ್ಟೆ ತೊಯ್ದಿತ್ತು; ಹಣೆಯಿಂದ ಬೆವರು ನಿರಂತರವಾಗಿ ಸುರಿಯುತ್ತಲಿತ್ತು; ಮುಖ ಕೆಂಪೇರಿತ್ತು. ಆಯಾಸಗೊಂಡವಳಂತೆ ಆಕೆ ಕಾಣಬರುತ್ತಿದ್ದಳು. ಆದರೆ, ಆಕೆ ತನ್ನ ಕರ್ತವ್ಯದಲ್ಲಿಯೇ ತತ್ಪರಳಾಗಿದ್ದಳು. ಬಾವಿಯ ತಡಿಯಲ್ಲಿ ನಿಂತಿದ್ದ ಈ ಆಗಂತುಕ ರತ್ತ ಆಕೆಯ ದೃಷ್ಟಿ ಹರಿಯಲೇ ಇಲ್ಲ.

ಗುರುಶಿಷ್ಯರು ಈ ವಿಲಕ್ಷಣ ನಾರಿಯ ಆವಸ್ಥೆಯನ್ನು ನೆನೆಯುತ್ತ ಮುಂದೆ ಹೋದರು.

ಮಧ್ಯಾಹ್ನದ ಉರಿಬಿಸಿಲಲ್ಲಿ ಅವರೊಬ್ಬ ಕಮ್ಮಾರನಲ್ಲಿಗೆ ತಲಪಿದರು. ಅಲ್ಲಿ ಆತ ಕಬ್ಬಿಣವನ್ನು ಕಾಸಿ, ಅದರ ಮೇಲೆ ತೋಳೆತ್ತಿ ಸುತ್ತಿಗೆಯಿಂದ ಬಡೆಯುತಿದ್ದ. ಅವನ ಗುಂಡುಗುಂಡಾದ ಮೈಕೈಗಳಿಂದ ಸ್ವೇದಜಲ ಗಂಗಾಪ್ರವಾಹದಂತೆ ಹರಿಯುತಿತ್ತು. ಆಯಾಸದ ಲವಲೇಶವನ್ನೂ ತೋರಿಸದ ಆತ ಮತ್ತೂ ಮತ್ತೂ ಬಡಿಯುವುದರಲ್ಲೇ ತತ್ಪರನಾಗಿದ್ದ. ಅವನು ತನ್ನಲ್ಲಿಗೆ ಆಗಮಿಸಿರುವ ಈ ಅತಿಥಿಗಳನ್ನು ಈಕ್ಷಿಸುವ ಗೋಜಿಗೆ ಹೋಗಲಿಲ್ಲ; ಆತ ತನ್ನ ಕರ್ತವ್ಯವನ್ನೇ ಪೂರೈಸುತಿದ್ದನು.

ಗುರುಶಿಷ್ಯರು ಇದು ವಿಚಿತ್ರವೆನ್ನುತ್ತ ಮುಂದುವರಿದರು.

ಉರಿ ಬಿಸಿಲು ಇಳಿಯಿತು. ಗುರು ಶಿಷ್ಯರ ಕಾಲುಗಳು ನಡೆನಡೆದು ನೋಯುತಿದ್ದುವು. ಶಿಷ್ಯನಿಗೆ ಅಲ್ಲೇ ಕೂತು ಬಿಡೋಣ ಎಂದು ತೋರಿತು. ಆದರೆ, ಸಮೀಪ ಗುರುವಿರುವನಲ್ಲಾ!

ಗುರುಶಿಷ್ಯರು ಪಾದ ಮುಂದೂಡುತಿದ್ದರು.

ಸಂಧ್ಯಾಕಾಲದ ಪ್ರಶಾಂತ ವೇಳೆಯಲ್ಲಿ ಅವರು ಒಂದು ಅರವಟ್ಟಿಗೆಯನ್ನು ಸೇರಿದರು. ಅಲ್ಲಿ ಇವರಂತೆಯೇ ಪಥಶ್ರಾಂತರಾದ ಇತರ ಮೂವರು ಉಳಿದುಕೊಂಡಿದ್ದರು. ಗುರುಶಿಷ್ಯರು ಆ ರಾತ್ರೆ ಅಲ್ಲಿಯೇ ಕಳೆದರು. ಮರುದಿನ ಪುನಃ ಯಾತ್ರೆ ತೊಡಗುವುದರಲ್ಲಿತ್ತು; ಶಿಷ್ಯನ ಪಾದಗಳು ಊದಿ ಹೋಗಿದ್ದುವು; ಆತ ನಡೆಯಲಾರದವನಾಗಿದ್ದು ಎಂತಲೇ ಕೈ ಜೋಡಿಸಿ ಭಕ್ತಿವಿನಯ ಸಹಿತನಾಗಿ ಕೇಳಿದ: "ಗುರುಗಳೇ, ನಾನಿನ್ನು ನಡೆಯಲಾರೆ. ನೀವೇಕೆ ಹೀಗೆ ನಡೆಸುವಿರಿ?"

ಗುರು ಉತ್ತರಿಸಿದ: "ಶಿಷ್ಯನೆ, ನೀನು ಜ್ಞಾನಸಂಪಾದನೆಗಾಗಿ ನನ್ನಲ್ಲಿ ಬಂದಿದ್ದೀಯೆ! ನೀನು ಅದೆಷ್ಟೋ ಗ್ರಂಥಗಳನ್ನು ಓದಿದ್ದೀಯೆ? ನಿನಗೆಷ್ಟು ಜ್ಞಾನಬಂದಿತು? ಹೇಳು. ಓದುವುದರಿಂದ ಜ್ಞಾನವು ದಿಷಲಾರದು. ರೈತನಾರಿಯಂತೆ ಕರ್ತವ್ಯ ಮಾಡಬೇಕು; ಜ್ಞಾನವೃಕ್ಷಕ್ಕೆ ನೀರು ಸುರಿಯಬೇಕು; ಕಮ್ಮಾರನಂತೆ ಆ ಜ್ಞಾನದ ಮೇಲೆ ವಿವೇಕದೊಡನೆ ಬಡೆ ಬಡೆದು ಸತ್ಯ ಜ್ಞಾನವನ್ನು ಪಡೆಯತೊಡಗಬೇಕು; ಹೀಗೆ ಮಾಡಿದರೆ, ನೀನು ಸೇರಬೇಕಾದ ಗುರಿಯನ್ನು ಹೊಂದುವೆ. ಆಗ ನಿನ್ನ ಜ್ಞಾನ ನಿಶ್ಚಯ ಜ್ಞಾನವಾಗುವುದು. ಜ್ಞಾನವೆಂಬುದು ದಾರಿಯಲ್ಲಿ ಬಿದ್ದುಹೋದ ಕಲ್ಲಲ್ಲ; ಅದ. ಗಳಿಸುವವನ ಬಳಿಗೆ ಮಾತ್ರ ಬರಬಲ್ಲ ಅಮೂಲ್ಯ ರತ್ನ."

ಶಿಷ್ಯ ಗುರುವಿನ ಪಾದಗಳಿಗೆ ಸಾಷ್ಟಾಂಗವಂದಿಸಿ ಉದ್ಗರಿಸಿದ "ನನ್ನ ಜೀವನವನ್ನು ಪಾವನಮಾಡಿದೆ, ಗುರುವೇ." ಇಬ್ಬರ ಮುಖಗಳಲ್ಲಿಯೂ ಅವರ್ಣನೀಯ ತೇಜಸ್ಸೊಂದು ಮಿಂಚುತಿತ್ತು.

ಭಾರತದಲ್ಲಿ ಅತಿಥಿಗಳು



೧೯೫೯ರಲ್ಲಿ ಭಾರತಕ್ಕೆ ಅನೇಕ ವಿದೇಶೀಯ ಅತಿಥಿಗಳು ಆಗಮಿಸಿದ್ದು ಅವರಿಗೆ ಭವ್ಯ ಸ್ವಾಗತವನ್ನೀಯಲಾಯಿತು. ಈ ಚಿತ್ರದಲ್ಲಿ ಅಂತಹ ಕೆಲವು ಮಹನೀಯರನ್ನು ಕಾಣಬಹುದು.

ಮೇಲಿನಸಾಲ : ಮೊದಲನೆಯ ಚಿತ್ರ- ಯುಗೊಸ್ಲಾವಿಯಾದ ಅಧ್ಯಕ್ಷ ಟಿಟೊ ಮಧುರೆಯ ಮೀನಾಕ್ಷಿ ದೇವಾಲಯವನ್ನು ಸಂದರ್ಶಿಸಿದರು.

ಎರಡನೆ ಚಿತ್ರ: ಅಮೆರಿಕದ ಅಧ್ಯಕ್ಷ ಐಕರು ಮಹಾತ್ಮಾ ಗಾಂಧಿಯವರ ಸಮಾಧಿಗೆ ಹೂಮಾಲೆಯನ್ನು ಅರ್ಪಿಸಿದರು.

ನಡುವಣ ಸಾಲು: ಇಥಿಯೋಪಿಯಾದ ರಾಜಕುಮಾರ ರಾಜಕುಮಾರಿಯರು ಕಾಶ್ಮೀರ ಪ್ರದರ್ಶನಕ್ಕೆ ಭೇಟಿಯಿತ್ತರು.

ಎರಡನೆಚಿತ್ರ: ಪಾಕ್ ಸೈನಿಕ ಆಡಳಿತೆಯ ಅಧ್ಯಕ್ಷ ಅಯೂಬಖಾನ್ ಮತ್ತು ಪ್ರಧಾನಿ ನೆಹರು ಪಾಲಂ ವಿಮಾನ ನಿಲ್ದಾಣದಲ್ಲಿ ಎದುರ್ಗೊಂಡರು.

ಕೆಳಗಿನ ಸಾಲು: ಡ್ಯೂಕ್ ಆಫ್ ಎಡಿನ್ ಬರ್ಗರಿಗೆ ಭಾರತದ ಅಣುಕೇಂದ್ರದ ಅಧ್ಯಕ್ಷ ಡಾ| ಬಾಬಾ ಕೇಂದ್ರದ ಪರಿಚಯ ಮಾಡಿಸಿದರು.

ರೇಲ್ವೆ ಮುಂಗಡಪತ್ರ

(೫ನೇ ಪುಟದಿಂದ)

ಸುಧಾರಣಾಪರವಾಗಿರಬೇಕು. ಏಕೆಂದರೆ ಹಿಂದಿನ ರೇಲ್ವೆ ಮಂತ್ರಿ ಲಾಲ್‌ಬಹಾದೂರ ಶಾಸ್ತ್ರಿಯವರ ಕಾಲದಲ್ಲಿ ಬಹಳಷ್ಟು ಅಪಘಾತಗಳು ನಡೆದಿದ್ದುವು. ಅವರಿಂದ ಈ ಖಾತೆಯನ್ನು ಕಿತ್ತುಕೊಳ್ಳುವುದಕ್ಕೆ ಈ ಅಪಘಾತಗಳ ಪ್ರಭಾವವೇ ಕಾರಣವಾಗಿತ್ತು.

ನಾಗರಿಕ ಕ್ಷೇತ್ರದಲ್ಲಿ ರೇಲ್ವೆಗಳ ಪ್ರಮುಖತೆ ಅತ್ಯಧಿಕವಿದೆ. ಅದರಲ್ಲಿಯೂ ಅನಭಿವೃದ್ಧ ಭಾರತದಲ್ಲಿ ಅವುಗಳ ಪ್ರಾಧಾನ್ಯ ಹೇಳಲಾರದಷ್ಟು. ಆದರೂ, ರೇಲ್ವೆ ವಿಭಾಗವು ತನ್ನ ಗುರಿಯನ್ನು ನಿಯೋಜಿತ ವೇಳೆಯೊಳಗೇನೇ ಮುಟ್ಟುತ್ತಿರುವುದನ್ನು ಕಾಣುವಾಗ, ಅದರ ಕರ್ಮಚಾರಿಗಳನ್ನು ಅಭಿನಂದಿಸುವುದರೊಡನೆಯೇ ವಿಭಾಗದ ಘಟನಾತ್ಮಕ ಉತ್ತರದಾಯಿಯಾಗಿರುವ ಮಂತ್ರಿವರ್ಯರ ದಕ್ಷತೆಯನ್ನೂ ಪ್ರಶಂಸಿಸಬೇಕಾಗಿದೆ.

ಪ್ರಯಾಣಿಕರ ರೇಲ್ವೆಗಳಲ್ಲಿ ಅಕ್ರಮ ಪ್ರಯಾಣಗಳ ಸಂಖ್ಯೆ ಇಳಿದಿರುವುದೆಂದು ತಿಳಿಯುವುದಾದರೂ ಈ ಪದ್ಧತಿಯನ್ನು ಮೂಲಸಹಿತ ಉರುಳಿಸುವತ್ತ ನಮ್ಮ ರೇಲ್ವೆ ವಿಭಾಗವು ಗಮನ ಕೊಡಬೇಕಾದ ಆವಶ್ಯತೆ ತುಂಬ ಇದೆ. ರೇಲ್ವೆಗಳಲ್ಲಿ ಜನದಟ್ಟಣೆಗೆ ಮತ್ತು ಪ್ರವಾಸಿಗರ ಅಸೌಕರ್ಯಗಳಿಗೆ ಈ ಅನಧಿಕೃತ ಪ್ರವೇಶಿತರೇ ಬಹಳ ಹೊಣೆಗಾರರಾಗಿರುವುದರಿಂದ, ಪ್ರವಾಸಿಗಳಿಗೆ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನಿಸುವಾಗ ಇಂತಹ ತಿಳಿಗೇಡಿಗಳನ್ನು ಹತ್ತಿಕ್ಕುವತ್ತ ವಿಶೇಷ ಗಮನವನ್ನು ಹರಿಸುವುದು ಅವಶ್ಯವೆಂದು ಹೇಳಬಹುದು.

ಶಿವರಾತ್ರಿ ಸಮೀಪಿಸಿತು!

(೪ನೇ ಪುಟದಿಂದ)

ಲಾವಣೆಯನ್ನು ಹೊಂದಿದುದು ಈ ಕಾಲದಲ್ಲೇ.

ಸಿಂಧು ನದಿ ದಡದಲ್ಲಿ ಅಗೆದು ತೆಗೆದಾಗ ಸಿಕ್ಕಿದ ಅವಶೇಷಗಳಲ್ಲಿ "ಶೀಲ ಚಿತ್ರ"ವು ಕೂಡಾ ಸೇರಿದೆ. ಆ ಚಿತ್ರ ಈ ರೀತಿಯಾಗಿದೆ: ಒಂದು ಪುರುಷ ದೇವತೆಯ ಇಕ್ಕಡೆಗಳಲ್ಲಿ ಹುಲಿ ಮತ್ತು ಆನೆಯಿದೆ. ಒಂದು ಖಡ್ಗ ಮೃಗ ಒಂದು ಬಸವನ ಚಿತ್ರ ತೋರುತ್ತಿದೆ. (ವೈದಿಕ ರುದ್ರನು ಪಶುಪತಿಯಾಗಿದ್ದನು.) ಆ ಪುರುಷದೇವತೆಗೆ ಮೂರು ಮುಖಗಳಿವೆ. ಆ ಮೂರ್ತಿಯ ಜನನೇಂದ್ರಿಯವನ್ನು ಪ್ರತ್ಯೇಕಿಸಲು ಸಾಧ್ಯವಾಗುವಂತೆ ರಚಿಸಲಾಗಿದೆ. ಅಲ್ಲಿ ಅವರು ಮಾಡುತ್ತಿದ್ದ ಲಿಂಗಪೂಜೆಯ ಲಿಂಗ ಈ ದೇವತೆಯದ್ದಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ? ಎಂದು ಈ ದೇವತೆಯು ಶಿವನಲ್ಲಿ ಸಮಾವೇಶಗೊಂಡಿತೋ ಅಂದು ಲಿಂಗಪೂಜೆಯು ಶಿವನಲ್ಲಿ ಕೂಡಿಕೊಂಡಿತು. ಆರ್ಯರು ಈ ಲಿಂಗಪೂಜೆಯನ್ನು ಅನಿವಾರ್ಯವಾಗಿ ಮಾಡಲಾರಂಭಿಸಿದರು. ಈ ಲಿಂಗೋಪಾಸನೆಯನ್ನು ಮೇರುಪರ್ವತದಿಂದ ಜಪಾನಿನವರೆಗಿನ ಜನರು ಆ ಕಾಲದಲ್ಲಿ ಮಾಡುತ್ತಿದ್ದರು. ಫಲಸ್ವರೂಪವಾಗಿ ಶಿವಲಿಂಗಪೂಜೆಯು ಈ ದೇಶದ ನಿವಾಸಿಗಳ ಧರ್ಮವಾಯಿತು. ವಿಭಿನ್ನ ಜಾತಿಗಳ ಐಕ್ಯ ಮತ್ತು ಸಂಮಿಶ್ರಣವನ್ನು ಶಿವನಂತೆ ಯಾವ ದೇವತೆಗಳು ಮಾಡಿಲ್ಲ. ದೇಶದ ಭಾವನೆಗನುಸಾರವಾಗಿ ಕತೆಗಳು ಬೆಳೆಯತೊಡಗಿದವು. ಮಹಾದೇವನು ರಾಷ್ಟ್ರದ ಐಕ್ಯತೆಯ ಪ್ರತೀಕವಾದನು. ಮತ್ತು ದೇಶದ 'ಆದರ್ಶ ವೀರ'ನಾದನು. ನಮ್ಮ ದೇಶದ ಕವಿಗಳು ಆತನನ್ನು ಹೊಗಳಲಾರಂಭಿಸಿದರು. ಆದರಿಂದಲೆ ಧನ್ಯರಾದರು.

ಜಾವಾ, ಬಾಲಿ, ಚಂಪಾ ಮೊದಲಾದ ದ್ವೀಪಗಳಲ್ಲಿ ಶಿವನ ಈ ರೂಪದ ಪೂಜೆಯನ್ನೆ ಮಾಡುತ್ತಿದ್ದರು. ಹದಿನಾಲ್ಕನೆ ಶತಮಾನದ ಅನಂತರ ಆತನ ರೂಪದಲ್ಲಿ ಯಾವುದೆ ವಿಶೇಷ ಬದಲಾವಣೆಯಾಗಲಿಲ್ಲ. ಅವನ ಪೂಜೆಯು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಇದಕ್ಕಾಗಿ ನಮ್ಮ ಪೂರ್ವಜರಿಗೆ ನಾವು ಶ್ರದ್ಧಾಂಜಲಿಯನ್ನರ್ಪಿಸುವುದು ಅವಶ್ಯವಾಗಿದೆ.

ಈ ದೇಶದ ಜನರು ವ್ರತವನ್ನು ಕೈಕೊಳ್ಳುವುದು. ಉಪವಾಸಮಾಡುವುದು. ಆರಾಧ್ಯ ದೇವತೆಯನ್ನು ಉಪಾಸನೆಮಾಡುವುದರೊಂದಿಗೆ ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳುವುದು. ಇವುಗಳಲ್ಲಿ ಆಶ್ಚರ್ಯವೇನಿದೆ!

—(ನ. ಭಾ. ಟಾಯಿಮ್ಸ್‌ನಿಂದ).

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಚಾರುಚಯನ

ಕಾಸರಗೋಡು ಕರ್ನಾಟಕದ ದುರವಸ್ಥೆ

ಪ್ರಾಂತ್ಯಗಳ ಸೀಮಾನಿರ್ಧಾರನೀತಿಯಲ್ಲಿ ತುಸು ಪರಿವರ್ತನೆ ಆವಶ್ಯವೆನಿಸುವುದಿಲ್ಲವೆ? ಹೀಗಾದಲ್ಲಿ, ಕಾಸರಗೋಡು ಕನ್ನಡಿಗರು ವಿಮೋಚನೆಗೊಳ್ಳುವುದಿಲ್ಲವೆ?

ಕಾಸರಗೋಡು ಕರ್ನಾಟಕ ಸಮಿತಿಯು ಮಂಜೇಶ್ವರ ಮತ್ತು ಕಾಸರಗೋಡು ಮತದಾರ ಕ್ಷೇತ್ರಗಳಲ್ಲಿ ತನ್ನ ಹುರಿಯಾಳುಗಳನ್ನು ನಿಲ್ಲಿಸಿದರೂ ಕಾಸರಗೋಡಿನಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡಿತು.

ಹಾಗಾದರೆ, ಮಂಜೇಶ್ವರ ಮತದಾರ ಕ್ಷೇತ್ರ ಮಾತ್ರ ಮೈಸೂರಿಗೆ ಸೇರಬೇಕೆಂದು ಜನತೆಯ ಅಭಿಪ್ರಾಯವೆಂದಾಯಿತು.

ಹಾಗಲ್ಲ, ಚಂದ್ರಗಿರಿ ಹೊಳೆಯ ಉತ್ತರ ಭಾಗದಲ್ಲಿ ಸಮಿತಿಯ ಸ್ಪರ್ಧಾಳಿಗೆ ಉಳಿದವರಿಗಿಂತ ಹೆಚ್ಚಿನ ಮತಗಳು ದೊರೆತಿವೆ. ಹಾಗಿರುವುದರಿಂದ ಈ ಭಾಗವೆಲ್ಲವೂ ಮೈಸೂರಿನೊಡನೆ ಸೇರ್ಪಡೆಗೊಳ್ಳಬೇಕು.

ರಾಜ್ಯ ಪುನರ್ಘಟನೆಯ ವೇಳೆಯಲ್ಲಿ ತಾಲೂಕನ್ನೇ ಮೂಲಾಧಾರವನ್ನಾಗಿಟ್ಟುಕೊಳ್ಳಲಾಗಿದೆ. ಈ ಕಾರಣದಿಂದಷ್ಟೆ ಅದು ಕೇರಳದೊಡನೆ ಸೇರಿಹೋಗುವಂತಾಯಿತು. ಆದರೆ, ಗ್ರಾಮಗಳೇ ಘಟಕವಾಗಿರುವುದು ಸೂಕ್ತವೆಂದು ಇನ್ನು ಕೆಲವರ ವಾದ.

ಕರ್ನಾಟಕ ಸಮಿತಿಯು ಕಾಂಗ್ರೆಸ್‌ನೊಂದಿಗೆ ಸೇರಿಯೇ ಈ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿಶ್ಚಯಿಸಿದ್ದರೂ, ಕಾಂಗ್ರೆಸ್ಸು ಅಮಾನ್ಯ ಮಾಡಿದ್ದರಿಂದ ತನ್ನ ವಾದವನ್ನು ಬಲಪಡಿಸುವ ಸಲುವಾಗಿ ಚುನಾವಣೆಗೆ ನಿಲ್ಲಬೇಕಾಯಿತು.

ಮಂಜೇಶ್ವರ ಫಿರ್ಕವು ಮೈಸೂರಿಗೆ ಸೇರಬೇಕೆಂದು ಕಾಂಗ್ರೆಸ್ಸು ಬಯಸಿತ್ತು. ಆದ್ದರಿಂದಲೇ ಅದು ಅಲ್ಲಿ ತನ್ನ ಸ್ಥಾನಾರ್ಥಿಯನ್ನು ನಿಲ್ಲಿಸಲಿಲ್ಲ. ಆದರೆ, ಕಾಸರಗೋಡಿನಲ್ಲಿ ಕಾಂಗ್ರೆಸ್ಸು ಗೆದ್ದಿತು; ಕರ್ನಾಟಕ ಪ್ರಾಂತೀಕರಣ ಸಮಿತಿಯು ಸೋತುಹೋಯಿತು. ಇದರಿಂದ ಕಾಸರಗೋಡು ಕ್ಷೇತ್ರ ಮತದಾರರಿಗೆ ತಾವು ಕೇರಳದಲ್ಲಿಯೇ ಇರಬೇಕೆಂಬ ಇರಾದೆಯಿದೆಯೆಂದು ತಿಳಿಯುವುದಿಲ್ಲವೆ?

ಮಂಜೇಶ್ವರದಲ್ಲಿ ಸಮಿತಿಯ ಉಮೇದ್ವಾರರು ಉಳಿದ ಸ್ಪರ್ಧಿಗಳ ಮತಗಳ ಅರ್ಧಕ್ಕಿಂತಲೂ ಹೆಚ್ಚು ಮತಗಳನ್ನು ಪಡೆದು ವಿಜಯಿಯಾಗಿದ್ದಾರೆ. ಹಾಗಿರುವಾಗ ಈ ವಿಷಯದಲ್ಲಿ ಹೆಚ್ಚಿನ ವಿವಾದ ಅನಗತ್ಯ. ಅಲ್ಲದೇ, ಈ ಬಗ್ಗೆ ಯಾವ ರಾಜಕೀಯ ಪಕ್ಷವೂ ತನ್ನ ಪ್ರತ್ಯಕ್ಷ ವಿರೋಧವನ್ನು ಇದುವರೆಗೂ ತೋರಿಸಲಿಲ್ಲ. ಆದರೆ ಕಾಸರಗೋಡಿನ ಪ್ರಶ್ನೆ ಇದಕ್ಕಿಂತ ಭಿನ್ನವಾದುದು.

ಚಂದ್ರಗಿರಿನದಿಯ (ಈ ಕ್ಷೇತ್ರದ) ಉತ್ತರ ಭಾಗದಲ್ಲಿ ಮಾತ್ರ ಸಮಿತಿಯೇನೋ ಬಹುಮತ ಪಡೆದಿದೆ. ಆದರೆ, ಒಟ್ಟು ನೀಡಿದ ಮತಗಳ ಅರ್ಧದಷ್ಟೂ ಇಲ್ಲ. ಹಾಗಿರುವಾಗ, ಅಲ್ಲಿಯ ಜನತೆಯಲ್ಲಿ ಮೈಸೂರೀಕರಣಕ್ಕೆ ವಿರೋಧ ಭಾವನೆಯಿದೆ ಎಂದು ಊಹಿಸುವುದು ಸರಿಯೆ?

ಕಾಸರಗೋಡಿನ ಒಂದಂಗುಲ ಭೂಮಿಯನ್ನೂ ಬಿಟ್ಟುಕೊಡಲಾರೆವು ಎಂದು ಈ ಕ್ಷೇತ್ರದ ಚುನಾವಣಾ ವಿಜೇತ ಕಾಂಗ್ರೆಸ್ ಪ್ರತಿನಿಧಿ ಶ್ರೀ ನಂಬಿಯಾರರು ಉದ್ಘೋಷಿಸಿದ್ದಾರೆ. ಅದೇ ಮಾದರಿಯ ಘೋಷಣೆಯನ್ನು ಅಲ್ಲಿನ ಕನ್ನಡಿಗರೂ ಮೊದಲೇ ಮಾಡಿರಲಿಲ್ಲವೆ?

ಜನತೆಯ ಹಿತವನ್ನು ಅದರ ಅಭಿಲಾಷೆಯನ್ನರಿತು ಸಾಧಿಸುವುದು ಜನತಾ ಸರಕಾರದ ಕೆಲಸ. ಹಾಗಿರುವಾಗ, ಕಾಸರಗೋಡು ತಾಲೂಕನ್ನು ಮೈಸೂರಿಗೆ ಸೇರಿಸಬೇಕು, ಬೇಡ ಎಂಬ ವಿಷಯದಲ್ಲಿ ಬಹುಜನರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಗುತ್ತದೆ. ಆದರೆ, ತಾಲೂಕಿನ ಆಧಾರದಿಂದ ಅದು ಕೇರಳಕ್ಕೆ ಸೇರಬೇಕೆಂದು ಫಜಲ್ ಆಲಿ ಸಮಿತಿಯು ನಿರ್ಧರಿಸಿತ್ತು; ಲೋಕಸಭೆಯೂ ಅದನ್ನು ಮನ್ನಿಸಿತ್ತು. ಈಗ ಅದಕ್ಕೂ ಚಿಕ್ಕ ಘಟಕಗಳನ್ನು ಆಧಾರವಾಗಿಟ್ಟುಕೊಳ್ಳಬೇಕು ಎಂದು ಇನ್ನೊಂದು ವಾದ.

ಬೆಳಗಾವಿಯ ವಿಷಯದಲ್ಲಿ ಮರಾಠಿಗರು ಕೀಟಲೆಕೊಡುತ್ತಿರುವರು. ಅವರ ರಂಪಾಟಗಳನ್ನು ಉತ್ತರಿಸುತ್ತ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾತ್ರ ಬೊಂಬಾಯಿ—ಮೈಸೂರು ಗಡಿಯಲ್ಲಿ ಹೊಂದಾಣಿಕೆ ಮಾಡಬಹುದೆಂದು ಮುಖ್ಯಮಂತ್ರಿ ಶ್ರೀ ಜತ್ತಿಯವರೆನ್ನುತ್ತಾರೆ. ಅದೇ ಕಾಸರಗೋಡಿನ ಪ್ರಶ್ನೆಯಲ್ಲೂ ಚಿಕ್ಕ ಪುಟ್ಟ ಹೊಂದಾಣಿಗೆಯು ಆಗಬಹುದೆಂದರೆ, ಈ ಹೊಂದಾಣಿಕೆಗಳು ಯಾವುವು?

ಕೇವಲ ಬಹಳಷ್ಟು ವಿಶಾಲವಾಗಿರುವ ತಾಲೂಕನ್ನು ಘಟಕವಾಗಿಟ್ಟುಕೊಂಡರೆ ಗಡಿ ಪ್ರದೇಶದ ಜನತೆಗೆ ತೀವ್ರ ಅನ್ಯಾಯವಾಗುವುದೆಂಬುದು ಈಗಾಗಲೇ ಸಿದ್ಧವಾಗಿದೆ. ಈ ಅನ್ಯಾಯವನ್ನು ಶಾಂತ ವಿಧಾನಗಳಿಂದ ಸರಿಪಡಿಸುವುದು ಅವಶ್ಯ.

ಕೇರಳದ ಮಧ್ಯಾವಧಿ ಚುನಾವಣೆಯಲ್ಲಿ ಪ್ರಾಂತೀಕರಣ ಸಮಿತಿಯು ತನ್ನ ಆಶೆಯನ್ನು ತೋರಿಸಿದೆ; ಚಂದ್ರಗಿರಿ ಹೊಳೆಯ ಉತ್ತರ ಭಾಗದಲ್ಲಿ ಯಶಸ್ಸು ಗಳಿಸಿದೆ. ಆದುದರಿಂದ, ಈ ಭಾಗದಲ್ಲಿ ಮೈಸೂರಿನಲ್ಲಿ ಸೇರ್ಪಡೆ ಹೊಂದುವ ಅಭಿಲಾಷೆಯಿರುವುದು ಸುವ್ಯಕ್ತಪಟ್ಟಿತು.

ನೈಸರ್ಗಿಕ ಸೀಮೆ ಚಂದ್ರಗಿರಿ ಹೊಳೆಯನ್ನೇ ಕೇರಳ ಮೈಸೂರು ರಾಜ್ಯಗಳ ಗಡಿಯನ್ನಾಗಿ ಸ್ವೀಕರಿಸುವುದು ಉತ್ತಮ ಪಕ್ಷವಾಗಿದೆ. ಜನತೆಯ ಈ ಸಂದೇಶವನ್ನು ಸ್ವೀಕರಿಸಿ ಅದನ್ನು ಮನ್ನಿಸುವುದು ಜನತಾ ಸರಕಾರದ ಕರ್ತವ್ಯವಾಗಿದೆ.

ಹಿಂದೊಮ್ಮೆ, ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಮಂಜೇಶ್ವರದಲ್ಲಿ ಸಮಿತಿಯ ಪರವಾಗಿ ನಿಂತ ಶ್ರೀ ಉಮೇಶರಾಯರು ಅವಿರೋಧವಾಗಿ ಆರಿಸಲ್ಪಟ್ಟರು. ಈ ಬಾರಿ ಮಾತ್ರ ವಿರೋಧವಿತ್ತು. ಇದರಿಂದ ಇಲ್ಲಿ ಮೈಸೂರೀಕರಣಕ್ಕೆ ವಿರೋಧವಿದೆಯೆನ್ನಬಹುದೆ?

ಚುನಾವಣೆಗಳ ಉದ್ದೇಶ ಇಷ್ಟೆಂದು ಸಂಕುಚಿತವಾಗಿರುವುದಿಲ್ಲ. ಅದರಲ್ಲೂ ಕೇರಳದಲ್ಲಿ ಉತ್ಪನ್ನವಾದ ಸನ್ನಿವೇಶಗಳು ವಿಲಕ್ಷಣವಾಗಿರುವುದರಿಂದ ಕೇವಲ ಇದನ್ನೇ ಮಾನದಂಡವಾಗಿ ಸ್ವೀಕರಿಸುವುದು ಸಮಂಜಸವಲ್ಲ.

ಕಾಸರಗೋಡು ತಾಲೂಕಿನಲ್ಲಿ ಮೈಸೂರೀಕರಣಕ್ಕೆ ಪರರಾಗಿರುವವರು—ವಿರೋಧಿಗಳು ಎಷ್ಟು ಜನರೆಂದು ಮತಗಣನೆ ಮಾಡಿ, ಅದರ ತೀರ್ಮಾನವನ್ನು ಅಂಗೀಕರಿಸುವುದು ಸೂಕ್ತ; ಅಲ್ಲಿ ರಾಜಕಾರಣವು ಬೇಡವೆಂಬುದು ಇನ್ನೊಂದು ಸೂಚನೆ.

ಚಂದ್ರಗಿರಿ ಹೊಳೆಯ ಉತ್ತರದಲ್ಲಂತೂ ಮೈಸೂರೀಕರಣಕ್ಕೆ ಧಾರಾಳ ಬಹುಮತ ದೊರೆಯುವುದು ಖಂಡಿತವೇ. ಉಳಿದ ಭಾಗದ ಸ್ಥಿತಿ ನಮಗೆ ವೇದ್ಯವಾಗಬೇಕಾದರೆ, ಈ ವಿಧಾನವೇ ಸರಿಯಾಗಿದೆಯೆನಿಸುವುದಿಲ್ಲವೆ? ಆದರೆ, ಈ ವಿಧಾನವು ತಾಲೂಕನ್ನೇ ಘಟಕವಾಗಿರಿಸುವ ನೀತಿಗೆ ವಿರೋಧತಾನೆ?

ಈಗಾಗಲೇ ಹರಿಸಿದ ನಿರ್ಲಕ್ಷ್ಯವು ಕಾಸರಗೋಡಿನ ಬಗ್ಗೆ ತುಂಬ ಆಗಿದೆ. ಆದುದರಿಂದ, ಈ ಭಾಗದ ಮೈಸೂರೀಕರಣಕ್ಕೆ ತೀವ್ರ ಕಾರ್ಯಕ್ರಮಕೈಗೊಳ್ಳಲು ಇನ್ನಾದರೂ ಹಿಂದುಮುಂದೆ ನೋಡಬಾರದು.

—ಗೋರಾ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕವಿಪರಿಚಯ

ಪೇಜಾವರ ಸದಾಶಿವರಾಯರು

ಹೂ ಅರಳುವುದಕ್ಕೆ ಸಿದ್ಧತೆ ನಡೆಯುತ್ತಿರುವಷ್ಟರಲ್ಲಿಯೇ ಕಾಲಗರ್ಭದಲ್ಲಿ ವಿಲೀನರಾಗಿ ಹೋದ ಸಹಜ ಮಧುಭರಿತ ಸುಮವಿವರು!

ಪೇಜಾವರ ಸದಾಶಿವರಾಯರು ಉತ್ಸಾಹಿಗಳು. ಅವಕಾಶವೊದಗಿದಾಗ ಇಡಿ ಲೋಕವನ್ನೇ ಆಳಿಯಬಲ್ಲೆ ಎಂಬ ಧೈರ್ಯವೂ ಶಕ್ತಿಯೂ ಅವರಲ್ಲಿದ್ದುವು. ಕನ್ನಡದ ಮೇಲೆ ಅವರ ಅಭಿಮಾನವು ಅವರ ಸಹಜ ಶಕ್ತಿಯ ಅನುರೂಪವೆನಿಸಿದೆ; ಅಸಮಾನವಾಗಿದೆ; ಅದ್ವಿತೀಯವಾಗಿದೆ. ಅವರ ಮೇಲೆ ಅಚಲ ವಿಶ್ವಾಸವನ್ನು ತಾಳಿದ್ದ ಸ್ನೇಹಿತರೆಲ್ಲರೂ ಅವರ ಎಳವೆಯ ಸಾವಿನಿಂದಾಗಿ ಭಗ್ನ ಹೃದಯರಾದರು; ಕನ್ನಡ ಸಾಹಿತ್ಯಕ್ಕೆ ಅವರಿಂದ ಆದ ಕೆಲಸ ತೀರ ಅತ್ಯಲ್ಪ; ಆಗ ಬೇಕಾಗಿದ್ದ ಕೆಲಸ ಮೇರುವಿನಷ್ಟು. ಸಶಕ್ತರೆನಿಸಿದವರೂ ಸಾಭಿಮಾನಿಗಳೂ ಸಾಹಸಾಂಕುರರರೂ ಆಗಿದ್ದವರು ನಸುಗರಿವಿಟ್ಟದಂತೆ ನಮ್ಮೆದುರಿಂದ ಲುಪ್ತವಾಗುತ್ತಿರುವಾಗ ನಮ್ಮ ಕನ್ನಡದ ಭವಿಷ್ಯತ್ತಿನ ಬಗ್ಗೆ ವಿಧಿ ಕ್ರೂರ ಕಟಾಕ್ಷವನ್ನೇ ಪಸರಿಸಿದನೆಂದು ಸಮಾಧಾನಕ್ಕೆ ಸ್ಫೂರ್ತಿ ತಂದುಕೊಳ್ಳಬೇಕು ತಾನೆ?

ಸಾಹಿತ್ಯವೆಂಬುದನ್ನು ನಿಶ್ಚಿಂತರೂ ನಿರ್ತಾಪತ್ರಯಿಗಳೂ ಬೆಳೆಸಿಕೊಂಡು ಬರಬೇಕೆಂಬ ವಾದವೊಂದೆಡೆ ತಾಂಡವವಾಡುತಿತ್ತು. ಅಂತಹ ಜಟಿಲ ಸಮಯದಲ್ಲಿ ಶ್ರೀ ಪೇಜಾವರ ಸದಾಶಿವರಾಯರು ಕೆಲವು ಪದ್ಯಗಳನ್ನು ರಚಿಸಿ, ಅವಕ್ಕೆ ಅಚ್ಚಿನ ಮನೆ ಕಾಣಿಸುವ ಬಗ್ಗೆ ಕುತೂಹಲಚಿತ್ತರಾದರು. ಐವತ್ತು ಅಚ್ಚಿನ ಪುಟಗಳ ಕಿರುಹೊತ್ತಗೆಗೆ ಒಂದು ಪುಟ್ಟ ಮುನ್ನುಡಿಯನ್ನು ಬರೆದು, ಕವಿಯು ಪ್ರಳಯಾಂತಕನೆಂದು ಹಿಗ್ಗಿ, ನಾಡದೇವಿಗೆ ಹಾಡ ಮುಡಿಯನ್ನು ಕಟ್ಟಿದರು. ನವಯೌವನದ ನವ ಚೇತನ ನವೋತ್ಸಾಹದೊಡನೆ ತನ್ನ ಗೆಳೆಯರಿಗೆಲ್ಲ 'ಅಲರ್'ನ ಪ್ರತಿಗಳನ್ನು ಒಂದೇದಿನದಲ್ಲಿ, ಸುಮಾರು ೨೦೦ರಷ್ಟು, ಮಾರಿದರಂತೆ. ಒಂದೆರಡು ದಿನಗಳಲ್ಲಿಯೇ ಅದರ ಮೌಲ್ಯವೂ ಸಂಕಲಿತವಾಯಿತು. ಮುಂದೆ, ಈ ಕವನ ಸಂಗ್ರಹವು ವಿಶ್ವವಿದ್ಯಾಲಯದಲ್ಲಿಯೂ ಸ್ಥಾನ ಪಡೆಯುವ ಗೌರವಾದರಕ್ಕೆ ಪಾತ್ರವಾಯಿತು. ಇದಾದಾಗ, ತಮ್ಮ ನಾಡಿನ ಕವಿಗಳ ಪರಿಚಯ ದಕ್ಷಿಣ ಕನ್ನಡಿಗರಿಗೆ ಆಯಿತು. ಸಾಹಿತ್ಯ ಸೇವೆಯಲ್ಲಿ ತತ್ಪರರಾದ ಈ ಎಳವೆಯ ಹುಡುಗನೆಂದರೆ, ಎಲ್ಲರಿಗೂ ಅಭಿಮಾನವೆನಿಸತೊಡಗಿದರೆ, ಅಚ್ಚರಿಯಿಲ್ಲ.

ಅದವರ ಸುಗ್ಗಿಯ ಕಾಲ; ಕನ್ನಡ ಸಾಹಿತ್ಯದ ಭಾಗ್ಯದ ವಸಂತಕಾಲ. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಶ್ರೀ ಪೇಜಾವರರು ತಮ್ಮ ಸೇವಾಕ್ಷೇತ್ರಕ್ಕಿಳಿದರು; ಅದೇ ದೆಸೆಯಲ್ಲವರು ಮೃತ್ಯುಮುಖರಾದರು. ಅವರು ಲೇಖನಿ ಹಿಡಿಸಿದ್ದೆಲ್ಲವೂ ಒಂದಲ್ಲ ಒಂದು ಪ್ರಕಾರದ ಸಾಹಿತ್ಯವೆಂದೆನಿಸುತಿತ್ತು, ಅವರ ಲೇಖನವಿಲ್ಲದ ಕನ್ನಡ ಪತ್ರಿಕೆಯೇ ಆ ಸಮಯದಲ್ಲಿರಲಿಲ್ಲವೆಂದರೂ ಅತಿಶಯೋಕ್ತಿಯೆನಿಸದು. ಅವರಲ್ಲಿ ಸದಾ ಕಲಾದೃಷ್ಟಿಯು ಸವಾರಿಮಾಡುತಿತ್ತು. ತಮ್ಮ ಕವನ ಸಂಗ್ರಹ 'ಅಲರ್'ಗೆ ನಾಮಕರಣ ಮಾಡುವ ಸಂದರ್ಭದಲ್ಲಿ ಅವರ ಈ ದೃಷ್ಟಿ ಸುವ್ಯಕ್ತ ಪಟ್ಟಿತು, ಕನ್ನಡ ದೇವಿಯ ಆರಾಧನೆಗೋಸ್ಕರ ಕುಸುಮ ಮಧುಪರಾಗ ಭರಿತವಾದ ಅಲರನ್ನು ತರಗಿನಿಂದ ಕಿತ್ತುತಂದ ಪೂಜಾರಿ ಪೇಜಾವರ ಸದಾಶಿವರಾಯರಲ್ಲವೆ? ನವಯೌವನದ ಮುದದ ನಡುವೆಯಲ್ಲಿಯೆ ಕಿತ್ತ ಆ ಅಲರ್ ಪಕ್ವಪರಾಗಿತವಾಗದಿರಬಹುದು. ಆದರೆ, ಎಡೆದು ಮುಗ್ಗರಿಸಿ ಮುನ್ನಡೆಯುವುದರಲ್ಲಿ ಕುಂಟುತ್ತಿರುವ ಕನ್ನಡ ಸಾಹಿತ್ಯವಲ್ಲರಿಯಲ್ಲಿ ಮಗ ಮುಗಿಸಲು ತಲೆಯಿಣಿಕಿದ ಈ ಕಳೆಯು ಕನ್ನಡದ ಭವ್ಯ ಭವಿಷ್ಯತ್ತನ್ನು ಹೊರಗೆಡಹುವುದಿಲ್ಲವೆ? ಈ ಪ್ರೇರಣೆಯಿಂದ ತರುಣರೆಲ್ಲರೂ ಮುಂಬರಿದು ನೊಂದಸಾಹಿತ್ಯದಲ್ಲಿ ಪುನಃ ಜೀವಜ್ಯೋತಿಯನ್ನುರಿಸಲು ಬದ್ಧ ಕಂಕಣರಾದುದು ಕನ್ನಡಮ್ಮನ ಸೌಭಾಗ್ಯವೇ ಎನ್ನಬೇಕು.

• ಶ್ರೀ ಪೇಜಾವರರ ವ್ಯಕ್ತಿತ್ವ ಹೆಚ್ಚಿನದು. ಅದ್ವಿತೀಯವೆಂದರೂ ತಪ್ಪಾಗದು. ಅವನ ನೇತ್ರಗಳಲ್ಲಿ ಪ್ರಕೃತಿಯ ಸನ್ನಿವೇಶಗಳೇ ಸದಾ ಕುಣಿಯುತ್ತಿದ್ದವು; ಹೃದಯವು ಕಲ್ಪನಾಶಕ್ತಿಯ ನೆಲೆವೀಡಾಗಿತ್ತು. ತನ್ನ ಅಪಾರ ಕಲ್ಪನಾಶಕ್ತಿಯ ಮತ್ತು ಭಾವುಕ ಕವಿಹೃದಯಗಳ ಬಲದಿಂದ ಶಬ್ದಚಿತ್ರಗಳನ್ನು ಎಳೆದು ದಕ್ಷಿಣ ಕನ್ನಡದ ಕವಿಗಳಿಗೊಂದು ನೂತನ ಪಂಥವನ್ನು ದಿಗ್ದರ್ಶಿಸಿದರು.

ಶ್ರೀ ಪೇಜಾವರರು ಬರೆದಿದ್ದ ಮೂರು ನಾಟಕಗಳನ್ನು ಒಂದುಸೇರಿಸಿ "ಸರಪಣಿ" ಎಂಬ ಹೆಸರಿನಿಂದ ಮುದ್ರಿಸಲಾಗಿತ್ತು. ಆದರೆ, ಅದೇನು ಕಾರಣವೋ, ಈ ಸಂಗ್ರಹ ಮಾರುಕಟ್ಟೆಗೆ ಬರಲಿಲ್ಲವೆಂದು ತಿಳಿಯುತ್ತದೆ. ಮಂಗಳೂರಿನ ಮಿತ್ರಮಂಡಳಿಯ ಬೇರೆ ಬೇರೆ ಪ್ರಕಟಣೆಗಳಲ್ಲಿಯೂ ಕಥಾಂಜಲಿ ಮೊದಲಾದ ಮಾಸಪತ್ರಿಕೆಗಳಲ್ಲಿಯೂ ಇವರ ಕಥೆಗಳು ಅಚ್ಚಾಗಿದ್ದುವು. ಲಕ್ಕಣ, "ಆಟಿಯಹುಣ್ಣಿಮೆ", ಮೊದಲಾದ ಕವನಗಳು ಪಠ್ಯ ಪುಸ್ತಕಗಳನ್ನು ಅಲಂಕರಿಸುವ ಯಶವನ್ನೂ ಗಳಿಸಿದುವು; "ನಾಟ್ಯೋತ್ಸವ' ವೆಂಬುದೊಂದು ಚಿರಸ್ಥಾಯಿಯಾಗಿ ಉಳಿಯುವ ಕವನ.

"ಆಟಿಯ ಹುಣ್ಣಿಮೆ",ಯಲ್ಲಿ ಶ್ರೀ ಪೇಜಾವರರ ಸಹಜ ಸ್ವಾಭಾವಿಕ ಪ್ರಶಾಂತ ಚಿತ್ರ ಪ್ರದರ್ಶನವಾದರೆ, 'ಲಕ್ಕಣ'ವು ನಮ್ಮಲ್ಲಿ ನಮ್ಮ ನಾಡ ಬಗ್ಗೆ ಅಭಿಮಾನವನ್ನೂ ಕೆರಳಿಸಿ, ನಮ್ಮ ನಿರ್ಲಕ್ಷತೆಯನ್ನೂ ನಿಂದಿಸಿ, ನವ ಉತ್ಸಾಹವನ್ನು ಹುರಿದುಂಬಿಸುತ್ತದೆ. ತಾರುಣ್ಯ ಸಹಜವಾದ ವಿಲಾಸತೆಯು "ನಾಟ್ಯೋತ್ಸವ"ದಲ್ಲಿ ಮೂಡಿರುವುದು. ಹೃದಯಾಂತರಾಳದಿಂದ ಉಕ್ಕಿ ಹೊರಬಂದ ಭಾವಗಳು ನೈಜ ಶಬ್ದವಿಲಾಸದೊಡನೆ ಬಾಹ್ಯ ಹೃದಯವನ್ನು ಹೊಕ್ಕು ಕಾವ್ಯರಸಾನಂದವನ್ನು ಉತ್ಪಾದಿಸುವುದು. ಇದನ್ನೇ ಆಧುನಿಕ ವಿಮರ್ಶಕರು ಕಲಾಪಕ್ಷವೆನ್ನಬಹುದು. ಆದರಿದು ಕೇವಲ ಕಲಾಪಕ್ಷವಲ್ಲ; ಭಾವ, ವಿಭಾವ, ಕಲೆ ಎಲ್ಲವುಗಳೂ ಮುಪ್ಪುರಿಗೊಂಡು ಸುನ್ಯಥವಾದ ಭಾವಪ್ರಗ್ರಹ ಪಕ್ಷ ತಾನೆ!

ಆಟಿಯ ಹುಟ್ಟಿಮೆ"ಯ ಈ ಪದ್ಯವನ್ನು ನೋಡಿರಿ:

> ನಸುಕನು ಎತ್ತಿ, ಬೆಳಕನು ಬಿತ್ತಿ
> ಬಂದನು ರವಿ ಅರುಣಾಚಲ ಹತ್ತಿ
> ಉದಯದ ಗೀತ ಸುರಸಂಗೀತ
> ಕೇಳುತ ಬರುವುದು ಸುರಭಿಯವಾತ
> ಎಲರಿನ ಸೊಂಪು ಅಲರಿನ ಕಂಪು
> ಹರಿಸುತಲಿರುವುದು ಕಂಗಳೆ ಜೊಂಪು!
> ಮುಗುಳುಗಳ ಧರವನು–ದಿನಪನು
> ಚುಂಬಿಸಿ ಚದರುವನು.

ಇದರಲ್ಲಿ ಮುಂಜಾವದ ಸುಂದರ ವರ್ಣನೆಯು ಸರಳ ಪದಜಾಲದಲ್ಲಿ ಸುರಸಲಯದಲ್ಲಿ ನಿರರ್ಗಳವಾಗಿ ಭಾವ, ವಿಭಾವ, ಕಲೆಗಳ ಸಮ್ಮಿಳನದಿಂದ ಎಷ್ಟೊಂದು ಮನೋಜ್ಞವಾಗಿ ಬಂದಿದೆ! ನಮ್ಮ ಸಾಹಿತ್ಯದಲ್ಲಿ ಸೂರ್ಯೋದಯದ ವರ್ಣನೆಯು ಇದಕ್ಕಿಂತಲೂ ಪ್ರೌಢ ಪುಗಲ್ಭ ಭಾಷೆಯಲ್ಲಿದೆ, ಸರಿಯೆ; ಆದರೆ, ಆ ವರ್ಣನೆಯನ್ನು ಜೀರ್ಣಿಸುವ ಜ್ಞಾನೋದಯವಾಗದಿರುವವರಿಗವು ಗಗನಕುಸುಮವೇ ಅಲ್ಲವೆ? ಈ ಪದ್ಯದ ಪದಗಳು ಪ್ರಸಾದ ಮಾಧುರ್ಯ ಗುಣೋಪೇತವಾಗಿದ್ದು ಯಾವ ಮಹಾಕವಿಯ ಬಂಧಕ್ಕೆ ಕಡಿಮೆಯೆನಿಸುವೆ? ... ರೂಪವಾಂತು ನಮ್ಮ ಕಣ್ಮುಂದೆ ನಲಿಯುವಂತೆ ಭಾಸವಾಗುವುದಿಲ್ಲವೆ?

ಲಕ್ಷಣಯುಕ್ತವಾಗಿದ್ದ ಬಾರ್ಕೂರಿಂದು ಅವಲಕ್ಷಣಯುತವಾದುದನ್ನು ಕಂಡು ಕವಿಹೃದಯ ಮರುಗಿತು. ಬಾರ್ಕೂರಿನ 'ಗತ ವೈಭವಗಳ' ನೆನಪಿನ ಮಾಲೆ ಕವಿಮನಃಪಟಲದಲ್ಲಿ ಕುತ್ತಾಡಿತು. ಅಲ್ಲಿನ ಭಗ್ನಾವಶೇಷಗಳಿಂದ ಉದ್ರೇಕಗೊಂಡ ಕವಿಚಿತ್ತ, ಕವಿಯ ನೈಜ ಪ್ರತಿಭೆ ಮತ್ತು ಅಭ್ಯಾಸಬಲದಿಂದ ಕಾವ್ಯರಚನೆಗೇನೇ ತೊಡಗಿತು! ಬಾರ್ಕೂರಿನ ಗತ ವೈಭವಗಳನ್ನು ನೆನೆಯುತ್ತ, ಅದರ ಸಿರಿ ತುಂಬಿದ ಶುಭದಿನವನ್ನು ಸ್ಮರಿಸುತ್ತ ಕವಿ ನೋಯುತ್ತಾನೆ. ನಿರಾಶನಾಗುತ್ತಾನೆ. ಈ ನಿರಾಶೆಯಲ್ಲೂ ಆತನ ಸ್ಫೂರ್ತಿ ತಲೆಯೆತ್ತಿ ನಿಲ್ಲುತ್ತದೆ.

> ಕುಳವರ ಕೀರ್ತಿಯ ಭೇರಿಯು
> ಮೊಳಗಿದ
> ಬಾರ್ಕೂರೆಂಬುದು ಸುಡುಗಾಡೆ?

ಎಂದು ತನ್ನನ್ನು ತಾನೇ ಪ್ರಶ್ನಿಸಿ,

> ಮಮತೆಯಲಾಡಿಸಿ ಭಾಗ್ಯದಿ ಬೆಳಸಿದ
> ಸೀತೆಯ ಶಿಶುವಿಗೆ ಈ ಪಾಡೆ?
> ನಾಡಿನ ಸೋಲಿಗೆ ಈ ಬೀಡೆ?

ಎಂದು ಬಹುವಾಗಿ ಚಿಂತಿಸಿ,

> ಈ ಗತಿಯ
> ಅವನತಿಯ
> ಕಾಣುತ ಕಲಗಳು ಮರುಗುವರು
> ಕವಿಗಳು ಕೊರಗುವರು ||

ಎಂದು ತನ್ನ ಹೃದಯ ವೇದನೆಯನ್ನು ಕವಿ ಪ್ರಕಟಗೊಳಿಸಿದ್ದಾನೆ.

ಪತ್ರಿಕೆಯೊಂದನ್ನು ಹೊರಡಿಸುವ ಪೇಜಾವರರ ಕನಸು ಪ್ರಾಯಃ ಕೊನೆಯ ವರೆಗೂ ನನಸಾಗಲಿಲ್ಲ. ಮುಂದೆ, ಕಾರಣಾಂತರಗಳಿಂದ ರಾಶಿಗೆ ತೆರಳಿ, ಅಲ್ಲಿಂದ ಮರಳಿ ಬಂದ ಕೆಲಕಾಲದಲ್ಲಿಯೇ, ಅವರ ಬಾಳ ನೇಸರನ್ನು ಮಾರೆತ್ತರೇರುವುದಕ್ಕೆ ಮೊದಲೇ ಕಾಳ ಮೋಡವಾವರಿಸಿತು. ಆದರೆ, ಆ ಬಾಲಸೂರ್ಯನನ್ನು ಯಾರಾದರೂ ಮರೆಯುವಂತಿಲ್ಲ. ಆಧುನಿಕ ಕನ್ನಡ ಸಾಹಿತ್ಯದ ಯುಗ ಧರ್ಮಕ್ಕೆ ಓಗೊಟ್ಟು ಸಾಹಿತ್ಯದೇವಿಯನ್ನು ಎಳದಳಿರುಗಳ ನೈಸರ್ಗಿಕ ಶೃಂಗಾರ ಪ್ರಸಾದನಗಳಿಂದ ಅಲಂಕರಿಸಿದ ಶಾಶ್ವತ ಕೀರ್ತಿಗೆ ಶ್ರೀ ಸದಾಶಿವರಾಯ ಪಾತ್ರರಾಗಿದ್ದಾರೆ. ಆದರೆ, ನಮ್ಮ ದೌರ್ಭಾಗ್ಯವಶದಿಂದ ಅವರನ್ನು ನಾವು ಉಳಿಸಿಕೊಳ್ಳಲು ಅಸಮರ್ಥರಾದೆವು.

— ಗೋ.

ಉಡುಪಿ. ಡಿ. ಮು. ಕೋರ್ಟಿನಲ್ಲಿ

O. S. No. 79/1959.

ವಕೀಲ್ ಮಹಮ್ಮದ್ ಉಸ್ಮಾನ್ ಸಾಹೇಬ್
—ವಾದಿ.

ಮತ್ತು

ಯಿಫ್ರಿಸಿನ್ ಮರಿಯ ಕರ್ನೆಲಿಯೊ ಕೂಡಾ.
ಪ್ರತಿವಾದಿರು

ಯಾವರೊಳಗೆ

ಸದ್ರಿ ವ್ಯಾಜ್ಯದ 16ನೆ ಪ್ರತಿವಾದಿ, ಗೋಪಾಲ ಕೃಷ್ಣಭಟ್ಟ. ಸುಬ್ಬಣ್ಣ ಭಟ್ರ ಮಗ ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಕುಂಜಿಬೆಟ್ಟನಲ್ಲಿರುವವ ಯಾವರಿಗೆ

ವಾದಿಯು ಪ್ಲೈಂಟು ನಿವೃತ್ತಿ ಬಗ್ಗೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 27–2 1960 ಕ್ಕೆ ಈ ಕೋರ್ಟಿನ ಮುಂದೆ ತನಿಖೆ ಬಗ್ಗೆಯಿಟ್ಟಿರುವದಾಗಿಯೂ ನಿಮ್ಮ ಆಕ್ಷೇಪ ಯಿದ್ದಲ್ಲಿ ಸದ್ರಿ ದಿವಸ ಬೆಳಿಗ್ಯೆ 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬೇಕಾಗಿಯೂ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

By Order of the Court

K. Gururaja Rao.
Advocate for Plaintiff

Udipi Date 17—2—1960

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಮೆರಿಕೆಯ ಮೇಳ

(೨ನೇ ಪುಟದಿಂದ)

ಲ್ಲಿ, ತಮ್ಮ ಆದಾಯ ಅನುಕೂಲವಾಗಿದ್ದ ರೆ ರೈತರು, ವ್ಯವಸಾಯೇತರರು ಒದಗಿಸುವ ವಸ್ತುಗಳನ್ನು ಸೌಕರ್ಯಗಳನ್ನು ಕೊಳ್ಳುತ್ತಾರೆ.

ಬೆಳೆಗಳು ಮತ್ತು ಭೂಮಿ

ಮೊದಲಿಗರಿಂದ ಅಮೆರಿಕನ್ನರು ಪಡೆದ ವ್ಯವಸಾಯ ಭೌಗೋಳಿಕ ವೈಶಿಷ್ಟ್ಯಗಳಿಂದ ರೂಪದೆತ್ತಿದ್ದು. ಮಳೆ, ಉಷ್ಣಾಂಶ, ಮಣ್ಣು ಹಾಗೂ ಮತ್ತಿತರ ಅಂಶಗಳಿಂದ ನಿರ್ಧಾರವಾದದ್ದು. ಅಧಿಕ ಸ್ವೈರಿನ ಋತು ಬೇಕಾದ ಹತ್ತಿ ಬಹುವಾಗಿ ದಕ್ಷಿಣದ ಭಾಗದಲ್ಲಿ ಬೆಳೆಯುತ್ತದೆ. ಮಧ್ಯ ಪಶ್ಚಿಮದಲ್ಲಿ ಧಾನ್ಯಗಳು, ಪಶುಗಳೂ ಮುಖ್ಯ ಉತ್ಪನ್ನಗಳು ರಾಕಿ ಪರ್ವತ ಸ್ತೋಮಗಳಿಗೆ ಉತ್ತರದಲ್ಲಿರುವ ಪ್ರಸ್ಥ ಭೂಮಿಯ ಸಂಸ್ಥಾನಗಳಲ್ಲಿ ಗೋಧಿ ಪ್ರಧಾನ. ಉತ್ತರ ಮಧ್ಯದ ಹಾಗೂ ಈಶಾನ್ಯದ ಸಂಸ್ಥಾನಗಳಲ್ಲಿ ಕ್ಷೀರಾದಿ ವ್ಯವಸಾಯಕ್ಕೆ ವಿಶೇಷ ಪ್ರಾಮುಖ್ಯ. ಆದರೆ ಈ ವಿಭಜನೆಗಳು ಅತಿ ನಿಕರವಲ್ಲ. ಗಡಿ ಪ್ರದೇಶಗಳು ಅನುಕ್ರಮವಾಗಿ ನೆರೆಯೊಂದಿಗೆ ವಿಲೀನವಾಗುತ್ತ ಹೋಗುತ್ತವೆ.

ಇತ್ತೀಚಿನ ವರ್ಷಗಳಲ್ಲಿ ಅಮೆರಿಕದಲ್ಲಿ ಸುಮಾರು ೩೩೫ ದಶಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ಕೊಯ್ಲು ನಡೆದಿದೆ. ಕೆಲಕಡೆಗಳಲ್ಲಿ ಭಾರತ ವರ್ಷಕ್ಕೆ ಎರಡು ಬೆಳೆ ತೆಗೆಯುವುದರಿಂದ, ಭಾರತದ ಒಟ್ಟು ಬೆಳೆ ಪ್ರದೇಶವನ್ನು ಸರಿಸುಮಾರಾಗಿ ಅಮೆರಿಕದಷ್ಟೇ ಎನ್ನಬಹುದು.

ದೇಶದ ಪೂರ್ವಾರ್ಧದಲ್ಲಿ ಸಾಮಾನ್ಯವಾಗಿ ಮಳೆ ಅಧಿಕ, ಪಶ್ಚಿಮಾರ್ಧದಲ್ಲಿ ಶಾಂತಸಾಗರದ ತೀರದ ಪ್ರದೇಶವನ್ನು ಬಿಟ್ಟರೆ ಉಳಿದೆಡೆ ಅತ್ಯಲ್ಪ. ಶಾಂತಸಾಗರದ ತೀರದ ಒಳನಾಡಿನ ಕಣಿವೆಗಳಲ್ಲಿ ನೀರಾವರಿ ವ್ಯವಸಾಯವೇ ಹೆಚ್ಚು. ಹೂವರ್, ಗ್ರ್ಯಾಂಡ್ ಕೌಲಿ, ಬಾನ್‌ವಿಲ್ ಹಾಗೂ ತದಿತರ ಅಣೆಕಟ್ಟುಗಳಿಂದ ವ್ಯವಸಾಯಕ್ಕೆ ನೀರು ಒದಗುವುದಲ್ಲದೆ, ವ್ಯವಸಾಯ ಹಾಗೂ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಒದಗುತ್ತದೆ. ಕೆಲಭಾಗಗಳಲ್ಲಿ ಆಳವಾದ ಬಾವಿಗಳಿಂದ ವ್ಯವಸಾಯಕ್ಕೆ ನೀರು ಒದಗುತ್ತದೆ.

ವ್ಯವಸಾಯದ ಯಂತ್ರಗಳು

ವ್ಯವಸಾಯದ ಕ್ಷೇತ್ರಗಳು ದೊಡ್ಡದಾಗುವುದಕ್ಕೆ ವ್ಯವಸಾಯ ಯಂತ್ರಗಳ ಅಧಿಕ ಬಳಕೆ ಕಾರಣ. ಯಂತ್ರಗಳ ಫಲವಾಗಿ ಎಕರೆಯೊಂದರ ಕೃಷಿವೆಚ್ಚ ಕಮ್ಮಿಯಾಗುತ್ತದೆ. ಅಲ್ಪ ಆದಾಯದ ವ್ಯವಸಾಯ ಕ್ಷೇತ್ರಗಳನ್ನು ಉಳಿದರೆ ಟ್ರಾಕ್ಟರುಗಳೇ ಪ್ರಧಾನಶಕ್ತಿ ಮೂಲಗಳು. ವ್ಯವಸಾಯಕ್ಕೆ ಹೂಡಲ್ಪಟ್ಟಿರುವ ಕುದುರೆಗಳ, ಕಟ್ಟುಗಳ ಸಂಖ್ಯೆ ೩·೪ ದಶಲಕ್ಷವಾದರೆ ಟ್ರಾಕ್ಟರುಗಳ ಸಂಖ್ಯೆ ೪·೭ ದಶಲಕ್ಷ. ಇತರ ಬಗೆಯ ಯಂತ್ರಗಳ ಬಳಕೆ ಕೂಡ ಅಧಿಕವಾಗಿದೆ. ಕಂಬೈನುಗಳು, ಕಾರ್ನ್‌ಪಿಕರ್‌ಗಳು, ಸೈಡ್ ಡೆಲಿವರಿ ರೇಕುಗಳು ಮತ್ತು ದಕ್ಷಿಣದಲ್ಲಿ ಕಾಟನ್ ಪಿಕರ್‌ಗಳು— ಈ ಯಂತ್ರಗಳ ವಿಷಯದಲ್ಲಿ ಈ ಮಾತು ವಿಶೇಷತಃ ನಿಜ. ವಿಸ್ತಾರ ಪ್ರಮಾಣದಲ್ಲಿ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಿಂದ— ಈಗ ಶೇಕಡ ೯೫ರಷ್ಟು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ— ಮಿಲ್ಲಿಂಗ್ ಯಂತ್ರಗಳು, ಫೀಡ್ ಗ್ರೈಂಡರುಗಳು, ತಿನ್ನೇಯರುಗಳು, ಬ್ರೂಡರುಗಳು-ಇತ್ಯಾದಿ ವಿದ್ಯುತ್ ಸಾಧನಗಳ ಬಳಕೆ ಅಧಿಕವಾಗಿದೆ.

ಕುಟುಂಬ ವ್ಯವಸಾಯ ಪದ್ಧತಿಗೆ ಯಂತ್ರಗಳಿಂದ ತೊಂದರೆಯಾಗದೆ ಬಲಬಂದಿದೆ. ಕೂಲಿಯಾಳುಗಳು ದೊರಕದಿದ್ದಾಗಲೂ ಯಂತ್ರದ ಸಹಾಯದಿಂದ ಬಂಸೆಯುವರೇ, ಬಿತ್ತನೆ, ಉಳುಮೆ ಮತ್ತು ಕೊಯ್ಲುಗಳನ್ನು ನಿರ್ದಿಷ್ಟ ಸಮಯಾನುಸಾರವಾಗಿ ನಡೆಸಬಹುದು. ಹವೆ ಕೆಟ್ಟು ದೊರಕಬಹುದಾದ ಅನುಕೂಲದ ಅಲ್ಪ ಅವಧಿಗಳಲ್ಲಿ ತಮ್ಮ ಅವಶ್ಯಕ ಕೆಲಸಗಳನ್ನು ಮುಗಿಸಬಹುದು—ರಾತ್ರಿಯ ಹೊತ್ತು ಮುಖ ದೀಪಗಳನ್ನು ಹಾಕಿಕೊಂಡು ಟ್ರಾಕ್ಟರುಗಳನ್ನು ನಡೆಸಬಹುದು.

ವಿಜ್ಞಾನ ಮತ್ತು ವ್ಯವಸಾಯ

ಕಳೆದ ನೂರು ವರ್ಷಗಳಲ್ಲಿ ವ್ಯವಸಾಯದ ದಕ್ಷತೆ ಅಗಾಧ ಪ್ರಮಾಣದಲ್ಲಿ ಹೆಚ್ಚಿದೆ. ಇದರಲ್ಲಿ ಯಂತ್ರಗಳದು ಒಂದು ಮುಖಮಾತ್ರ. ಶೀಘ್ರಾಭಿವೃದ್ಧಿಯ ಈ ಅವಧಿಯೊಂದಿಗೆ ೧೮೬೨ರಲ್ಲಿ ನಿರ್ಮಿತವಾದ ಅಮೆರಿಕದ ವ್ಯವಸಾಯದ ಇಲಾಖೆಯ ಸಂಶೋಧನ ಚರಿತ್ರೆಯು ಹಾಸುಹೊಕ್ಕಾಗಿ ಬೆಳೆದುಬಂದಿದೆ. ಈ ಹೊಸ ವಿಭಾಗದ ಸ್ಥಾಪನ ಶಾಸನವನ್ನು ಅನುಮೋದಿಸಿದವರು ಅಮೆರಿಕಾಧ್ಯಕ್ಷ ಏಬ್ರಹಾಂ ಲಿಂಕನ್. ಇದಕ್ಕೆ ಒಂದು ವರ್ಷ ಮುಂಚೆ ಇವರು ಅಮೆರಿಕದಲ್ಲಿ ಗುಲಾಮಗಿರಿಯನ್ನು ತೊಡೆದು ಹಾಕಿದ ಮೊದಲ ಘಟ್ಟವಾದ ವಿಮೋಚನಾ ಘೋಷಣೆಯನ್ನು ಹೊರಡಿಸಿದರು.

ಅಂದಿನಿಂದೀಚೆಗೆ ಈ ವಿಭಾಗದ ಚಟುವಟಿಕೆಗಳು ಬಹುವಾಗಿ ವಿಸ್ತರಿಸಿದ್ದರೂ, ಸ್ಥಾಪನಾ ಕಾನೂನಿನ ರೀತ್ಯಾ, ಈ ವಿಭಾಗ ಈಗಲೂ ಕೂಡ "ಪ್ರಯೋಜಿತವಾದ ಮತ್ತು ವೈಜ್ಞಾನಿಕವಾದ ಪ್ರಯೋಗಗಳನ್ನು" ನಡೆಸುವ; "ಹೊಸದಾದ ಹಾಗೂ ಅಮೂಲ್ಯವಾದ ಬೀಜಗಳನ್ನು ಮತ್ತು ಸಸ್ಯಗಳನ್ನು ಪರೀಕ್ಷಿಸುವ ಹೊಣೆಗಾರಿಕೆಗಳನ್ನು ಹೊತ್ತಿದೆ. ಈ ವಿಭಾಗದ ಸಂಶೋಧಕ ಚಟುವಟಿಕೆಗಳಿಗೆ ವ್ಯವಸಾಯದ ವೈಜ್ಞಾನಿಕ ಕೇಂದ್ರಗಳೂ, ಕಾಲೇಜುಗಳೂ, ವಿಶ್ವವಿದ್ಯಾನಿಲಯಗಳೂ, ಕೈಗಾರಿಕಾ ಸಂಸ್ಥೆಗಳೂ, ಖಾಸಗಿ ಸಂಶೋಧಕ ಸಂಸ್ಥೆಗಳೂ ವ್ಯಕ್ತಿಗಳೂ ಬೆಂಬಲ ನೀಡುತ್ತ ಬಂದಿವೆ.

ಈ ವ್ಯವಸಾಯದ ಸಂಶೋಧನೆಗಳಿಂದ ಅಮೆರಿಕದಂತೆ ಇತರ ರಾಷ್ಟ್ರಗಳಿಗೂ ಅನುಕೂಲವಾಗಿದೆ. ಈ ಸಂಶೋಧನೆಯ ಫಲವಾಗಿಯೇ ಅಮೆರಿಕದ ಆಹಾರ ಪದಾರ್ಥಗಳನ್ನು, ದಾರದ ಪದಾರ್ಥಗಳನ್ನು ಇತರ ದೇಶಗಳಿಗೆ ರಫ್ತು ಮಾಡಲು ಸಾಧ್ಯವಾಗಿದೆ. ಇತರ ದೇಶಗಳ ರೈತರಿಗೆ ಅಮೆರಿಕ ತಾಂತ್ರಿಕ ಸಹಾಯವನ್ನು ಒದಗಿಸುವುದಕ್ಕೂ ಬಹುವಾಗಿ ಈ ಸಂಶೋಧನೆಯೇ ಮೂಲಾಧಾರ. "ಜ್ಞಾನದ ಪಾಲುಗಾರಿಕೆ ಅಮೆರಿಕದ ಪರಂಪರೆಯ, ವಿದೇಶಾಂಗ ನೀತಿಯ ಒಂದು ಭಾಗ, ಇತರ ರಾಷ್ಟ್ರಗಳಿಂದ ನಾವು ಕಲಿತಿರುವಂತೆ ಇತರರಿಗೂ ನಾವು ಸಂಗ್ರಹಿಸಿರುವ ಜ್ಞಾನದಲ್ಲಿ ಪಾಲು ಕೊಡುತ್ತೇವೆ" ಎಂಬುದಾಗಿ ಅಮೆರಿಕಾಧ್ಯಕ್ಷರು ನುಡಿದಿದ್ದಾರೆ.

ಸಂಶೋಧನಾ ಕ್ಷೇತ್ರ

ವಿಶಿಷ್ಟವಾದ ಅಧ್ಯಯನಗಳಿಂದ ಮಣ್ಣಿನ ಉತ್ಪನ್ನ ಸಾಮರ್ಥ್ಯವನ್ನು ಅಧಿಕಗೊಳಿಸುವ ಮಾರ್ಗಗಳನ್ನು ಕಂಡುಹಿಡಿಯಲಾಗಿದೆ. ಕಳೆದ ೨೦ ವರ್ಷಗಳಲ್ಲಿ ಅಮೆರಿಕದ ರೈತರು ರಸಾಯನಿಕ ಗೊಬ್ಬರದ ಉಪಯೋಗವನ್ನು ಮೂರುಪಟ್ಟು ಹೆಚ್ಚಿಸಿದ್ದಾರೆ. ಸತು, ತಾಮ್ರ, ಕೋಬಾಲ್ಟ್ ಇತ್ಯಾದಿ ಸಸ್ಯಪೋಷಕಗಳ ಪಾತ್ರವನ್ನು ಪರಿಚಯಮಾಡಿಕೊಂಡಿದ್ದಾರೆ. ಮಣ್ಣಿನ ಫಲಶಕ್ತಿಯನ್ನು ಮಣ್ಣಿನ ಕೊರೆತವನ್ನು ನಿರೋಧಿಸುವ ಮಾರ್ಗವನ್ನು ಸಂಶೋಧನೆ ತೋರಿಸಿಕೊಟ್ಟಿದೆ.

ಸಂಶೋಧನೆಯ ಮೂಲಕ ಉತ್ತಮ ಮಟ್ಟದ ಮಿಶ್ರತಳಿಯ ಬೆಳೆಗಳನ್ನು ಸಿದ್ಧಪಡಿಸಲಾಗಿದೆ. ಮಿಶ್ರತಳಿಯ ಜೋಳದ ಫಸಲು ಶೇಕಡ ೨೫ರಷ್ಟು ಹೆಚ್ಚಿದೆ. ಮಿಶ್ರತಳಿಯ ಹತ್ತಿಯದಾರ ಸಾಮಾನ್ಯ ಹತ್ತಿಯ ದಾರಕ್ಕಿಂತ ಶೇಕಡ ೫೦ ರಿಂದ ೭೫ರಷ್ಟು ಹೆಚ್ಚುಗಟ್ಟಿ. ಉತ್ತಮ ಗುಣಲಕ್ಷಣಗಳುಳ್ಳ ತಳಿಯ ಬೀಜಗಳನ್ನು ಸಿದ್ಧಪಡಿಸುವ ಸಲುವಾಗಿ ವಿದೇಶಗಳಿಂದ, ಭಾರತದಿಂದ ಕೂಡ, ಅನೇಕ ಸಸ್ಯಗಳನ್ನು ಬೀಜಗಳನ್ನು ತರಿಸಿಕೊಳ್ಳಲಾಗಿದೆ.

ಕ್ರಿಮಿನಾಶಕಗಳನ್ನು ಧಾರಾಳವಾಗಿ ಬಳಸಲಾಗುತ್ತದೆ. ಕಳೆಗಳ ನಾಶಕ್ಕಾಗಿ ಅಮೆರಿಕದ ೩೫ ದಶಲಕ್ಷ ಎಕರೆಗಳ ವ್ಯವಸಾಯ ಕ್ಷೇತ್ರದಲ್ಲಿ ಕಳೆನಾಶಕಗಳನ್ನು ಎರಚಲಾಗಿದೆ.

ಹಾಲುಕರೆವ ಹಸುಗಳ ತಳಿ ಅಭಿವೃದ್ಧಿ, ಆಹಾರ ವ್ಯವಸ್ಥೆ, ಮತ್ತು ನಿರ್ವಹಣೆಗಳಲ್ಲಿ ತೀವ್ರ ಪ್ರಗತಿಯಾಗಿದೆ. ಭಾರತದ ಹಸುಗಳ ಕೆಲವು ಉತ್ತಮ ಲಕ್ಷಣಗಳನ್ನು ಅಮೆರಿಕದ ಹಸುಗಳೊಂದಿಗೆ ಸೇರಿಸಲಾಗಿದೆ. ಹಸುವೊಂದರ ಹಾಲು ಕರೆಯುವಿಕೆ ವರ್ಷವೊಂದಕ್ಕೆ ೬೦೦೦ ಪೌಂಡುಗಳ ಮಟ್ಟಕ್ಕೆ ಏರಿದೆ. ಮೊಟ್ಟೆಯಿಡುವ ಕೋಳಿಯೊಂದರ ಉತ್ಪತ್ತಿ ವರ್ಷಕ್ಕೆ ೨೦೦ ಮೊಟ್ಟೆಗಳ ಮಟ್ಟಕ್ಕೆ ಏರಿದೆ. ತಿನ್ನುವ ಕೋಳಿಗಳ ಉತ್ಪನ್ನ ಕೂಡ ತೀವ್ರಗತಿಯಿಂದ ಬೆಳೆದಿದೆ.

ಬೇಡಿಕೆ ಮತ್ತು ಪೂರೈಕೆಗಳ ಸಮಸ್ಯೆಗಳು

ಉತ್ತಮ ತಾಂತ್ರಿಕ ಜ್ಞಾನದ ಫಲವಾಗಿ ಆಹಾರದ ಮತ್ತು ನೂಲು ತಯಾರಿಕೆಯ ವಸ್ತುಗಳನ್ನು ಅಲ್ಪಶ್ರಮದಿಂದ ಅಧಿಕವಾಗಿ ತಯಾರಿಸಬಲ್ಲ ಸಾಮರ್ಥ್ಯವನ್ನು ರೈತರು ಪಡೆದುಕೊಂಡಿದ್ದಾರೆ. ತಾನೂ ಸೇರಿ ತನ್ನ ದೇಶದ ನಾಲ್ವರಿಗೂ ವಿದೇಶಗಳ ೨೦ ಮಂದಿಗೂ ಅಂದರೆ ಒಟ್ಟು ೨೪ ಮಂದಿಗೆ ಅಗತ್ಯವಾದಷ್ಟನ್ನು ಅಮೆರಿಕದ ರೈತರು ಬೆಳೆಸುತ್ತಾರೆ.

ತಾಂತ್ರಿಕ ಜ್ಞಾನದ ಬೆಳವಣಿಗೆಯ ಫಲವಾಗಿ ಬೇಡಿಕೆ—ಪೂರೈಕೆಗಳ ಸಮಸ್ಯೆಗಳಿಗೆ ಹೆಚ್ಚಿನ ಮಹತ್ವಲಭಿಸಿದೆ. ೧೯೪೮ರಲ್ಲಿ೧೪೭ದಶಲಕ್ಷವಿದ್ದ ಅಮೆರಿಕದ ಜನಸಂಖ್ಯೆ ೧೯೫೮ರಲ್ಲಿ ೧೭೩ ದಶಲಕ್ಷಕ್ಕೆ ತ್ವರಿತಗತಿಯಿಂದ ಏರಿದ್ದರೂ, ವ್ಯವಸಾಯೋತ್ಪನ್ನ ಅದಕ್ಕೂ ತ್ವರಿತಗತಿಯಿಂದ ಏರಿದೆ. ತತ್ಫಲವಾಗಿ ಕೆಲವು ವಸ್ತುಗಳಲ್ಲಿ ಬೇಡಿಕೆಗಳಿಗಿಂತ ಪೂರೈಕೆ ಹೆಚ್ಚಾಗಿದೆ. ಗೋಧಿ ಮುಸುಕಿನ ಜೋಳ ಹಾಗೂ ಮತ್ತಿತರ ಧಾನ್ಯಗಳಲ್ಲಿ ಈ ಸಮಸ್ಯೆ ವಿಪರೀತವಾಗಿದ್ದರೂ, ಹೊಗೆಸೊಪ್ಪು ಹತ್ತಿ ಹಾಗೂ ಮತ್ತಿತರ ಉತ್ಪನ್ನಗಳು ಕೂಡ ಅಧಿಕ ಪ್ರಮಾಣದಲ್ಲಿ ದೊರಕುತ್ತಿವೆ. ಹೆಚ್ಚುವರಿ ಉತ್ಪತ್ತಿಯನ್ನು ತಡೆಗಟ್ಟಲು ಇಲಾಖೆ ಪ್ರಯತ್ನಿಸುತ್ತಿದೆ. ಕೆಲಬಗೆಯ ಬೆಳೆಗಳಿಗೆ ಮೀಸಲಿಡಬಹುದಾದ ಎಕರೆ ವಿಸ್ತಾರಗಳಿಗೆ ಪರಿಮಿತಿಯನ್ನು ಹಾಕಲಾಗುತ್ತಿದೆ. ಮಣ್ಣಿನ ಬ್ಯಾಂಕಿನ ಕಾರ್ಯಕ್ರಮದಿಂದ ಹೆಚ್ಚುವರಿ ಬೆಳೆಗೆ ಕಾರಣವಾಗ ಬಹುದಾಗಿದ್ದ ನೆಲವನ್ನು ಬಿತ್ತದೆ ಹಾಗೆ ಉಳಿಸಿದರೆ, ಹಾಗೆ ಉಳಿಸಲಾದ ನೆಲಕ್ಕೆ ಪರಿಹಾರದ ಹಣವನ್ನು ಕೊಡಲಾಗುವುದು. ಇಲಾಖೆ ಯಾವ ಯಾವ ಬೆಳೆಗಳ ಬೆಲೆಯನ್ನು ಸ್ಥಿರೀಕರಿಸುವುದೋ ಅಥವಾ ಬೆಳೆಗಳಿಗೆ ಬೆಂಬಲ ನೀಡುವುದೋ ಅಂತಹ ಸ್ಥಿರೀಕರಣದ ಅಥವಾ ಬೆಂಬಲ ಪಡೆದ ಅನೇಕ ಬೆಳೆಗಳ ಬೆಲೆಯ ಮಟ್ಟವನ್ನು ಇಳಿಸಲಾಗಿದೆ.

ರೈತರ ಸಹಕಾರ ಸಂಘಗಳು

ಅಮೆರಿಕದ ರೈತರು ತಮ್ಮ ಅನೇಕ ಅಗತ್ಯಗಳನ್ನು ಸಹಕಾರ ಸಂಘಗಳ ಮೂಲಕ ಪೂರೈಸಿಕೊಳ್ಳುತ್ತಾರೆ ತಮ್ಮ ವ್ಯವಸಾಯದ ಕಾರ್ಯ ನಿರ್ವಹಣೆಗಳಲ್ಲಿ ಒಂದೇ ಒಂದು ಮುಖ್ಯ ಸೌಕರ್ಯವನ್ನಾ



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4⅜%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ದರೂ ಅಮೆರಿಕದ ಶೇಕಡ ೭೦ ಮಂದಿ ರೈತರು ಸಹಕಾರಿ ಸಂಘಗಳ ಮೂಲಕ ಪಡೆಯುತ್ತಾರೆಂದು ಅಂದಾಜು ಮಾಡಲಾಗಿದೆ. ಅನೇಕ ಸಹಕಾರ ಸಂಘಗಳಲ್ಲಿ ಅಮೆರಿಕದ ಅಧಿಕ ಸಂಖ್ಯಾಕ ರೈತರು ಸದಸ್ಯರಾಗಿದ್ದಾರೆ.

ಈ ಸಂಘಗಳಲ್ಲಿ ವೈವಿಧ್ಯವಿದ್ದರೂ ಅವುಗಳೆಲ್ಲವನ್ನು ಒಂದುಗೂಡಿಸುವ ಒಂದು ಸಮಾನ ಸೂತ್ರವಿದೆ; ರೈತರೇ ಇವೆಲ್ಲವುಗಳ ವ್ಯವಸ್ಥಾಪಕರು, ಮಾಲಿಕರು, ನಿರ್ವಾಹಕರು, ನಿಯಂತ್ರಣಕಾರರು, ಅಮೆರಿಕದ ರಾಜಕೀಯ ಹಾಗೂ ಆರ್ಥಿಕ ಜೀವನದಲ್ಲಿ ಯಾವ ಪ್ರಜಾಸತ್ತಾತ್ಮಕ ವಿಧಾನಗಳು ಅಂತರ್ಗತವಾಗಿವೆಯೋ ಅವುಗಳ ರೀತಿಯಲ್ಲಿಯೇ ವ್ಯವಹಾರವನ್ನು ನಡೆಸುವರು.

ರಫ್ತು ಪೇಟೆಗಳು

ಅಮೆರಿಕದ ವ್ಯವಸಾಯೋತ್ಪನ್ನಗಳಿಗೆ ವಿದೇಶೀ ನಾಣ್ಯಗಳನ್ನು—ರುಪಾಯಿ ಫ್ರಾಂಕು, ಪೆಸೆಟೂಸ್, ಮತ್ತಿತರ ಬಗೆಯುವುಗಳನ್ನು ಅಂಗೀಕರಿಸುವ ಮೂಲಕ ರಫ್ತು ಪೇಟೆಯನ್ನು ವಿಸ್ತರಿಸಲಾಗಿದೆ. ಮಾರಾಟದಿಂದ ದೊರಕುವ ವಿದೇಶೀ ನಾಣ್ಯಗಳನ್ನು—ಆರ್ಥಿಕ ಅಭಿವೃದ್ಧಿ, ವಿದೇಶಗಳಲ್ಲಿ ಸಿದ್ಧವಾಗುವ ವ್ಯೂಹಪ್ರಾಧಾನವಾದ ಹಾಗೂ ಅತ್ಯಗತ್ಯದ ವಸ್ತುಗಳನ್ನು ಕೊಳ್ಳುವುದು, ಸೇವೆಗಳಿಗೆ ಹಣ ನೀಡುವುದು ಹೊರ ದೇಶಗಳಲ್ಲಿ ಅಮೆರಿಕ ಕೊಡಬೇಕಾಗುವ ಬಾಕಿಯನ್ನು ಸಲ್ಲಿಸುವುದು; ಪ್ರಪಂಚ ವ್ಯಾಪಕ ಆಸಕ್ತಿಯ ಸಂಶೋಧನೆಗಳಿಗೆ ಹಣ ನೀಡುವುದು. ಅಂತಾರಾಷ್ಟ್ರೀಯ ಶೈಕ್ಷಣಿಕ ವಿನಿಮಯದ ಚಟುವಟಿಕೆಗಳಿಗೆ ಹಣ ಒದಗಿಸುವುದು, ಅಮೆರಿಕದ ವ್ಯಾಪಾರಿಗಳ ಹಾಗೂ ಇತರ ತಂಡಗಳೊಂದಿಗೆ ಅಮೆರಿಕದ ವ್ಯವಸಾಯೋತ್ಪನ್ನಗಳಿಗೆ ಹೊಸ ಪೇಟೆಗಳನ್ನು ಅಭಿವೃದ್ಧಿಪಡಿಸುವುದು — ಇತ್ಯಾದಿ ನಾನಾ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವುದು.

ವ್ಯವಸಾಯದ ವಸ್ತುಗಳನ್ನು ಕೊಟ್ಟು ವಿದೇಶಗಳಿಂದ ಭಾರೀ ಪ್ರಮಾಣದಲ್ಲಿ ಅಗತ್ಯವಾದ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ಹತ್ತಿ, ಹೊಗೆಸೊಪ್ಪು, ಅಕ್ಕಿ, ಗೋಧಿ ಜೋಳ ಮತ್ತಿತರ ಮೇವು, ಸೋಯಾಬೀನ್ ಬೆಣ್ಣೆ, ಕೊಬ್ಬಿಲ್ಲದ ಹಾಲು ಇತ್ಯಾದಿಗಳನ್ನು ವಿದೇಶಗಳಿಗೆ ಕಳುಹಿಸಲಾಗಿದೆ. ಇವುಗಳಿಗೆ ಬದಲಾಗಿ ಮ್ಯಾಂಗನೀಸ್ ಫೆರೊಸತಂ, ಸೀಸ ಹಾಗೂ ಕೈಗಾರಿಕಾ ವಜ್ರಗಳು ಇವುಗಳನ್ನು ಸ್ವೀಕರಿಸಲಾಗಿದೆ.

ಆಹಾರದ ಅಗತ್ಯವಿರುವ ವಿದೇಶೀ ಜನರಿಗೆ ಆಹಾರ ವಸ್ತುಗಳನ್ನು ದಾನವಾಗಿ ಡಲಾಗಿದೆ. ಕೇರ್, ಅಮೆರಿಕನ್ ಫ್ರೆಂಡ್ಸ್ ಸರ್ವಿಸ್ ಮತ್ತು ಕ್ಯಾಥೋಲಿಕ್ ರಿಲೀಫ್ ಸರ್ವಿಸಸ್—ಇಂತಹ ಸಂಸ್ಥೆಗಳು ಹಂಚಿಕೆಯನ್ನು ನಿರ್ವಹಿಸಿದೆ.

ರಫ್ತು ನಿರ್ವಾಹದಲ್ಲಿ ಅಮೆರಿಕೆಯು ಮೂರು ತತ್ವಗಳನ್ನು ಅನುಸರಿಸುತ್ತ ಬಂದಿದೆ: (೧) ಅಮೆರಿಕ ಖಾಸಗಿ ವ್ಯಾಪಾರಕ್ಕೆ ಸಹಾಯ ಮಾಡಬೇಕೇ ಹೊರತು ಅದರ ಸ್ಥಾನವನ್ನು ಆಕ್ರಮಿಸಬಾರದು; (೨) ಅಮೆರಿಕದ ಧಾರಣೆಗಳು ಸ್ಪರ್ಧಾತ್ಮಕವಾಗಿರಬೇಕೇ ಹೊರತು ವಿದೇಶಿ ಮಿತ್ರ ರಾಷ್ಟ್ರಗಳ ಪೇಟೆಗಳನ್ನು ಹಾಳುಮಾಡಬಾರದು; ಮತ್ತು (೩) ಅಮೆರಿಕ ತನ್ನ ವ್ಯವಸಾಯೋತ್ಪನ್ನಗಳನ್ನು ಅವುಗಳ ಅರ್ಹತೆಯ ಮೇಲೆ ಮಾತ್ರಾ ಮಾರಾಟಮಾಡಬೇಕು.

In the Court of the Sub-Judge S K.

R. E. P. 55/59 (O. S. 97/53)

Between:—

Muthayya Shetty and others... Petitioners

and

Sanjiva Shetty and others ... Respondents

To

Respondents 3, 4, 6, 8 and 9.

3) Nandyappa Shetty, 4) Soorappa Shetty, 6) Hirianna Shetty —Children of Thungamma.

8) Dharma Ranjan, 9) Rajaprasanna— Minors by Grdn. 5th respondent, Rukku Shedthi. d/o Thungamma.

Respondents 3, 4, 6 are residing at Athradi of Vandse Village, Udipi Taluk.

Respondents 8 and 9 are residing with their guardian at —Do—

Please take notice that the above application is posted to 2—3—1960 for settling the terms of sale proclamation. You are required to appear on the above date at 11 A. M. either in person or thro' a Lawyer and state your objections if any, failing which the E. P. will be proceeded in your absence.

By Order of the Court.

K. Sundar Rama Shetty,
Advocate for Petitioners.

Mangalore, D. 15—2—60.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಕೆಂಬುದು ಈ ಪಕ್ಷದವರವಾದ ಜಾತೀಯ ಸಂಸ್ಥೆ ಲೀಗಿನೊಡನೆ ಒಪ್ಪಂದಮಾಡಿಕೊಂಡು ಗೆದ್ದ ಕಾಂಗ್ರೆಸು ಇದುವರೆಗೆ ಸುಖವನ್ನು ಅನುಭವಿಸುವುದರೊಡನೆ, ಲೀಗಿನ ಸಹವಾಸದ ಕಹಿ ಗುಳಿಗೆಯನ್ನೂ ಸಹಿಸುವ ಕಾಲವೀಗ ಬಂದಿದೆ. ಆದುದರಿಂದ ಒಳಿತಾಗಲಿ ಕೆಡುಕಾಗಲೀ ಸಂಯುಕ್ತರಂಗದ ಮೂರು ಪಕ್ಷಗಳೂ ಸೇರಿರುವ ಸಂಯುಕ್ತ ಮಂತ್ರಿಮಂಡಳವು ರಚನೆಯಾಗುವುದು ಅವಶ್ಯವೆನ್ನುತ್ತಾರೆ, ಇವರು.

ಕಮ್ಯುನಿಸ್ಟರು ಇಷ್ಟೊಂದು ಗಣನೀಯವಾದ ಸೋಲನ್ನು ಉಣ್ಣುತಿದ್ದರು ಎಂದು ಮೊದಲಿಗೇ ಗೊತ್ತಿರುತಿದ್ದರೆ ಪ್ರಾಯಃ ಸಂಯುಕ್ತರಂಗವು ಎಂದೆಂದಿಗೂ ಸ್ಥಾಪಿತವಾಗುತ್ತಿರಲಿಲ್ಲ. ಆದರೆ ದೈವವಶದಿಂದ ಅಲ್ಲಿ ಕಮ್ಯುನಿಸ್ಟರು ಸಂಪೂರ್ಣ ಸೋತುಹೋದರು ಇದರಿಂದಲೇ ಈ ಪ್ರಶ್ನೆಯೆದ್ದು ನಿಂತಿದೆ ಕೇರಳ ಪಿ.ಸಿ.ಸಿ. ಚುನಾವಣಾ ಸಮಿತಿಯ ಅಧ್ಯಕ್ಷ ಶ್ರೀ ಮನ್ನತ ಪದ್ಮನಾಭನ್ನರೊಡನೆ ಈ ಬಗ್ಗೆ ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಢೇಭಾರ ಮತ್ತು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಸಾದಿಕ್ ಆಲಿಯವರು ವಿಚಾರವಿನಿಮಯ ಮಾಡಿದರು. ಆದರೂ ಕಾಂಗ್ರೆಸ್ ತನ್ನ ನೀತಿಯನ್ನು ಎಂದಿಗೂ ಅನುಸರಿಸುವುದನ್ನು ಬಿಡಲಾರದಾಗಿರುವಾಗ, ಮುಸ್ಲಿಂಲೀಗಿಗೆ ಪ್ರಾತಿನಿಧ್ಯವಿಲ್ಲವಾದರೆ, ಅದು ಮಾತ್ರವಲ್ಲ, ತಮ್ಮ ಪಕ್ಷವೂ ಸಂಪುಟ ನಿರ್ಮಾಣದಲ್ಲಿ ಸಹಕರಿಸುವುದಿಲ್ಲವೆಂದು ಪ್ರಸವಾವು ಘೋಷಿಸಿತು. ಈ ಮಾತುಕತೆಗಳು ಮುಂದುವರಿದು, ಮುಸ್ಲಿಂಲೀಗು ತನಗೆ ಮಂತ್ರಿಮಂಡಳಿಯಲ್ಲಿ ಸ್ಥಾನಬೇಕೆಂಬ ವಾದವನ್ನು ನಿಶ್ಶರ್ತವಾಗಿ ಹಿಂದೆಗೆದು ಕೊಂಡುದರ ಪರಿಣಾಮವಾಗಿ ಕಾಂಗ್ರೆಸ್–ಪ್ರಸವಾಗಳು ಸಂಯುಕ್ತ ಮಂತ್ರಿ ಮಂಡಳಿಯನ್ನು ಸ್ಥಾಪಿಸಿದರು. ಪ್ರಸವಾ. ನಾಯಕ ಶ್ರೀ ಪಟ್ಟಂಥಾನು ಪಿಳ್ಳೆ ಮುಖ್ಯ ಮಂತ್ರಿಯಾಗುವರು. ಇದರಿಂದಾಗಿ ಎದ್ದಿರುವ ಪ್ರಶ್ನೆ ಸದ್ಯಕ್ಕೆ ಕೊನೆಗೊಂಡಂತಾಯಿತು.

ಇಲ್ಲಿ ಏಳುವ ಪ್ರಶ್ನೆಯೊಂದೆ: ಚುನಾವಣೆಯ ವೇಳೆ ಸಹಕಾರ ಭಾವನೆಯನ್ನು ಸ್ಥಾಪಿಸಿದ ಕಾಂಗ್ರೆಸ್ಸು ಚುನಾವಣಾನಂತರ ಈ ಭಾವನೆಯನ್ನು ಅಲ್ಲಗಳೆಯುವುದು ನ್ಯಾಯವೇ ಇಂದು ಕಮ್ಯುನಿಜಂನ್ನು ಹೊಡೆದೋಡಿಸಲು ಅದು ಮುಸ್ಲಿಂ ಲೀಗನ್ನು ತನ್ನೊಡನೆ ಸೇರಿಸಿಕೊಂಡಿತು ಇಲ್ಲಿ ಇದ್ದುದು ಉದ್ದೇಶವೊಂದೇ. ಆದರೆ, ಇಂದು ಕಾಂಗ್ರೆಸ್‌ನ ಉದ್ದೇಶ ಕೇರಳದಲ್ಲಿ ಸುಭದ್ರವಾದ ಸರಕಾರ ಸ್ಥಾಪನೆ ಮಾಡುವುದು. ಇದಕ್ಕಾಗಿ ಅದು ಜಾತೀಯವಾದಿಗಳನ್ನು ಕೂಡಿಕೊಳ್ಳುವುದು ಸಮಂಜಸವೆಂದು ಹೇಳಬರುವುದಿಲ್ಲ. ಮಂತ್ರಿಮಂಡಲಿಯಲ್ಲಿ ಸ್ಥಾನ ಕೊಡಲಿಲ್ಲವೆಂದೊಡನೆಯೇ ಸಹಕಾರಭಾವನ್ನು ಬಿಟ್ಟುಕೊಟ್ಟಿತೆಂದು ಅರ್ಥವಲ್ಲ; ಅದು ಮುಸ್ಲಿಂ ಲೀಗಿಗೆ ಶಾಸನಸಭಾಧ್ಯಕ್ಷತನವನ್ನು ಕೊಡಲು ಒಪ್ಪಿ, ಕಮ್ಯುನಿಜಂನನ್ನು ಎದುರಿಸುವ ಸಲುವಾಗಿ ಸಂಯುಕ್ತರಂಗವನ್ನು ಉಳಿಸಬಹುದೆಂದು ಹೇಳುತ್ತದೆ. ವ್ಯಾವಹಾರಿಕ ದೃಷ್ಟಿಯಿಂದ, ಸರಕಾರದ ಉದ್ದೇಶ ಕಮ್ಯುನಿಜಂ ತಡೆಗಟ್ಟುವುದಲ್ಲ; ಬದಲು ರಾಜ್ಯದ ಜನತೆಯನ್ನು ಉತ್ತಮರೀತಿಯಲ್ಲಿ ಆಳುವುದು; ಅವರಿಗೆ ಅನುಕೂಲತೆಗಳನ್ನು ಒದಗಿಸುವುದು. ಇಂತಹ ಕಾರ್ಯಕ್ರಮಗಳ ಕಾರ್ಯಾಚರಣೆಯಲ್ಲಿ, ಸಚಿವ ಸಂಪುಟದಲ್ಲಿ ಒಗ್ಗಟ್ಟಿರುವುದು ಅತಿ ಅವಶ್ಯ. ಸಂಯುಕ್ತರಂಗದ ಉದ್ದೇಶವು ಈ ಬಗ್ಗೆಯೂ ಇತ್ತೆಂದು ಹೇಳಬರುವುದಿಲ್ಲ. ಆದುದರಿಂದ ಮಂತ್ರಿಮಂಡಳಿಯಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿಕೊಳ್ಳದೆ ಆಡಳಿತೆಯು ಸುಸೂತ್ರವಾಗಿ ನಡೆಯುವಂತಾಗಬೇಕಾದರೆ, ಸಮಾನ ಲಕ್ಷ್ಯಗಳನ್ನಿಟ್ಟುಕೊಂಡ ಮತ್ತು ಸಮಾನ ವ್ಯವಹಾರ ಪ್ರಣಾಳಿಯ ಪಕ್ಷಗಳು ಮಾತ್ರ ಒಟ್ಟು ಸೇರಬಹುದು.

ಮುಸ್ಲಿಂಲೀಗು ಈ ಒಂದು ಮುಖ್ಯ ವಿಚಾರವನ್ನು ಮನವರಿಕೆ ಮಾಡಿಕೊಂಡು, ಕೇರಳದಲ್ಲಿ ಭದ್ರ ಸರಕಾರವನ್ನು ಸ್ಥಾಪಿಸುವುದಷ್ಟೇ ತನ್ನ ಗುರಿಯನ್ನಾಗಿಟ್ಟು, 'ಕಮ್ಯುನಿಜಂ' ನತ್ತ ಕೇರಳೀಯರು ಒಲಿವು ಹರಿಸದಂತೆ ಮಾಡಲು ಕಾಂಗ್ರೆಸ್ಸು ತನಗಿತ್ತ ಕೊಡುಗೆಯನ್ನು ಸ್ವೀಕರಿಸುವುದು ಸಂಗತವಾಗಿದೆ. ಪ್ರಸವಾವಾದರೂ ಅದೇ ರೀತಿಯಲ್ಲಿ ತನ್ನ ಹಠವನ್ನು ಬಿಟ್ಟುಬಿಟ್ಟರೆ ಕ್ಷೇಮಂಕರವಾಗಿದೆ. ಕೇರಳದಲ್ಲಿ ಕಮ್ಯುನಿಜಂ ಮಾಯವಾಗಬೇಕಾದರೆ, ಅಲ್ಲಿನ ಜನರಿಗೆ ಆದರ್ಶ ಆಳಿಕೆ ಬೇಕಾಗಿರುವುದರಿಂದ, ಅದನ್ನು ಕಲ್ಪಿಸಲು ಈ ಸಂಯುಕ್ತರಂಗವು ಪ್ರಯತ್ನಿಸಬೇಕೇ ಹೊರತು ಅನಾವಶ್ಯಕ ಪಾರಸ್ಪರಿಕ ಭಿನ್ನಾಭಿಪ್ರಾಯಗಳನ್ನು ಇನ್ನೂ ಇನ್ನೂ ಮುಂದುವರಿಸುವುದಲ್ಲ. ಈ ದಿಸೆಯಲ್ಲಿ ಎದ್ದ ಮಹಾಪ್ರಶ್ನೆ ಸಮಾಧಾನಕರವಾಗಿ ಮುಗಿದುದರಿಂದ ತುಸು ತೃಪ್ತಿಯ ನಿಟ್ಟುಸಿರೆಳೆಯಬಹುದು.

ಸಿಂಡಿಕೇಟ್ ಬ್ಯಾಂಕ್

ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಆರ್ಥಿಕ ಸೇವೆಯನ್ನು ನೀಡುವ ಆದರ್ಶ ಸಂಸ್ಥೆ: ವ್ಯವಹಾರ ಸಂಪತ್ತು ರೂ. ೨೨ ಕೋಟಿಗೂ ಮಿಕ್ಕಿದೆ.

ಸಿಂಡಿಕೇಟ್ ಬ್ಯಾಂಕ್

ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ (ಆಂಧ್ರ, ಕೇರಳ, ಮದರಾಸು, ಮುಂಬಯಿ ಮತ್ತು ಮೈಸೂರು ರಾಜ್ಯಗಳಲ್ಲಿ) ವಿಶಾಲವಾಗಿ ಹಬ್ಬಿರುವ ಸಂಸ್ಥೆ; ಒಟ್ಟು ೧೩೭ ಶಾಖೆಗಳಿವೆ.

ಉಳಿತಾಯಗಾರರ ಸನ್ಮಿತ್ರ

ಸಿಂಡಿಕೇಟ್ ಬ್ಯಾಂಕ್

ಉಳಿತಾಯಗಾರರ ಸನ್ಮಿತ್ರ— ಆಕರ್ಷಕ ಹಾಗೂ ಅತ್ಯುಪಯುಕ್ತ ಉಳಿತಾಯ ಯೋಜನೆಗಳಿಂದ ಜನಪ್ರಿಯವಾಗಿರುವ ಸಂಸ್ಥೆ: "ಪಿಗ್ಮಿ" ಮನೆಮಾತಾಗಿದೆ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, ಮೈಸೂರು ರಾಜ್ಯ; ಚೇರ್ಮನ್: ಡಾ॥ ಟಿ. ಎಂ. ಎ. ಪೈ; ಜನರಲ್ ಮೆನೇಜರ್: ಟಿ. ಎ. ಪೈ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೯ ವಾರ ೨೬ 3-3-1960 Vol 39 No 25

ಶಿಕ್ಷಣ ಕ್ಷೇತ್ರ

ನಮ್ಮ ಶೈಕ್ಷಣಿಕ ಸುಧಾರಣೆಗಳು

ಸರಕಾರದಿಂದ ಪಾರಪಟ್ಟಿ ತಯಾರಿ ನಡೆಯದೆ ಶಿಕ್ಷಣಕ್ಷೇತ್ರದ ಅಧ್ಯಾಪಕರಿಂದ ಸಿದ್ಧವಾಗಬೇಕು; ಪವಿತ್ರವಾದ ಈ ಕ್ಷೇತ್ರದಲ್ಲಿ ಅನಿಶ್ಚಿತತೆಯನ್ನು ತಂದು ಅಪವಿತ್ರಗೊಳಿಸಬಾರದು

ನಾಲ್ಕು ವರ್ಷಗಳನ್ನು ಒಂದೇ ಬಾರಿ ನೆಲದಲ್ಲಿ ಅಂದದ ಚರಕದಲ್ಲಿ ಕಾರ್ಯ ನಡೆಯುತ್ತಿದೆ

ಭಾರತವು ಸ್ವತಂತ್ರವಾದಂದಿನಿಂದ ಈ ಕೆಲವು ವರ್ಷಗಳಲ್ಲಿ ಭಾರತೀಯ ಜೀವನದ ವಿವಿಧ ಕ್ಷೇತ್ರಗಳಲ್ಲಿ ನೂರಾರು ಬದಲಾವಣೆಗಳಾಗಿವೆ ಇದೊಂದು ' ಪರಿವರ್ತನೆ ಯುಗ". ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಇತ್ಯಾದಿ ವಲಯಗಳಲ್ಲಿ ಪ್ರತಿಕ್ಷಣವೂ ಹೊಸತನದ ವಸ್ತ್ರ ಕಂಡುಬರುತ್ತದೆ, ಪ್ರಾಚೀನ ಸಂಪ್ರದಾಯಗಳ ನೆರಳಲ್ಲಿಯೇ ಬೆಳೆದು ಬಂದ ಹಲವಾರು ವಿಷಯಗಳು ಆಧುನಿಕ ಭಾರತೀಯನ ದೃಷ್ಟಿಯಲ್ಲಿ ಅಬಾಸವೆನಿಸತೊಡಗಿವೆ ನಮ್ಮ ಭವಿಷ್ಯವನ್ನು ನಾವೇ ನಿರ್ಧರಿಸಬಲ್ಲವರಾದ ನಾವು ಹಳೆಯುದನ್ನೇ ಏಕೆ ಹೊಂದಿರಬೇಕು? ನಮ್ಮ ಸ್ವಾಧಿಕಾರದ ಪರಿಣಾಮವಾಗಿ ನಾವು ಏಕೆ ಹೊಸತೊಂದು ಕ್ರಮವನ್ನು ರೂಢಿಗೊಳಿಸಬಾರದು? ಇವೇ ಪ್ರಶ್ನೆಗಳು ಇಂದು ನಮ್ಮ ಭಾರತೀಯ ಪ್ರಜಾಧಿಕಾರಿಗಳನ್ನು ಪರಿವರ್ತನಶೀಲರನ್ನಾಗಿ ಮಾಡಿದೆ ಎನ್ನಬಹುದು.

ಶೈಕ್ಷಣಿಕ ರಂಗದಲ್ಲಿ

ಹಳೆಯದೆಲ್ಲ ಹಾಳು; ಹೊಸತೆಲ್ಲ ಹೊನ್ನು— ಎನ್ನುವ ಮನೋಭಾವವು ಶಿಕ್ಷಣಕ್ಷೇತ್ರದಲ್ಲಿ ವ್ಯಾಪಕವಾಗಿದೆ. ಅಧ್ಯಾಪಕ-ವಿದ್ಯಾರ್ಥಿಗಳೊಳಗಿನ ಸಂಬಂಧ, ಶಿಕ್ಷಣದ ವಿಧಾನಗಳು, ಶಿಕ್ಷಣದಲ್ಲಿ ಉಪಯುಕ್ತವಾಗುವ ವಿಷಯಗಳು, ಉಪಕರಣಗಳು ಮತ್ತು ಪ್ರಯೋಗಗಳು ಇತ್ಯಾದಿ, ಹಲವಾರು ಮುಖಗಳಲ್ಲಿ ಹೊಸತನ ದಿನವೂ ಹೆಚ್ಚಾಗಿ ಕಂಡುಬರುತ್ತದೆ. ಎಲ್ಲೆಲ್ಲಿಯೂ ಸಭೆಗಳು, ಚರ್ಚಾಕೂಟಗಳು, ಭಾಷಣಗಳು ಇತ್ಯಾದಿಗಳು ಜರಗುತ್ತಿವೆ ಶಾಲೆಕಾಲೇಜುಗಳು ಹೊಸ ಹೊಸತಾಗಿ ರೂಪಿತವಾಗುತ್ತಿವೆ ಕಡ್ಡಾಯ ಶಿಕ್ಷಣ, ಧರ್ಮಾರ್ಥ ಊಟದ ವ್ಯವಸ್ಥೆ, ವೇತನ ಸಹಾಯ ಮೊದಲಾದುವುಗಳ ಮೂಲಕ ಶೈಕ್ಷಣಿಕ ಸೌಲಭ್ಯವನ್ನು ಅಖಿಲ ಭಾರತದಲ್ಲಿ ಆದಷ್ಟು ಮಟ್ಟಿಗೆ ವಿಸ್ತರಿಸುವ ಕೆಲಸವು ನಿರಂತರವಾಗಿ ನಡೆಯುತ್ತಿದೆ

ಆದರೆ ವಿದ್ಯಾಕ್ಷೇತ್ರಗಳಲ್ಲಿ ಸತತವಾಗಿ ನಡೆಯುವ "ಆಂತರಿಕ" ಸುಧಾರಣೆಗಳು ಎಷ್ಟು ಜಯಪ್ರದವಾಗಬಹುದು? ಅಥವಾ ಕೇವಲ ಆಂತರಿಕ ಸಮಸ್ಯೆಯಿಂದಲೇ ನಾವು ಕನಸುಕಂಡ ಹೊಸತನವು ಸಾಕ್ಷಾತ್ಕಾರವಾಗಬಹುದೆ? ಇಲ್ಲವೆ, ಅಧ್ಯಾಪಕರ ಸಭೆ, ಚರ್ಚಾಕೂಟಗಳಿಂದಲೇ ಶೈಕ್ಷಣಿಕ ಉನ್ನತಿಯನ್ನು ಸಾಧಿಸುವುದು ಸಾಧ್ಯವೇ? ಶೈಕ್ಷಣಿಕ—ವಿಧಾನಗಳಲ್ಲಿ ನೂತನ ಕ್ರಾಂತಿಯನ್ನು ಬಗೆಯುವುದು ಇದೊಂದೇ ರೀತಿಯಿಂದಲೇ? ಶಿಕ್ಷಣ ಕ್ಷೇತ್ರದಲ್ಲಿದ್ದು ಅನುಭವ ಪಡೆದ ಪ್ರತಿ ವ್ಯಕ್ತಿಯೂ ಈ ಪ್ರಶ್ನೆಗಳಿಗೆ ನಕಾರಾತ್ಮಕವಾಗಿಯೇ ಉತ್ತರಿಸುವುದರಲ್ಲಿ ಸಂದೇಹವಿಲ್ಲ ಹಾಗಾದರೆ ಶೈಕ್ಷಣಿಕ ವಲಯದಲ್ಲಿ ಪರಿವರ್ತನೆ ಬೇಕಾಗಿಲ್ಲವೇ? ಅಗತ್ಯವಾಗಿಯೂ ಬೇಕು ಅಂತಹ ಪರಿವರ್ತನೆಯನ್ನು ಬಗೆಯುವ ವಿಧಾನ ಮಾತ್ರ ತೀರ ಭಿನ್ನವಾಗಿದೆ

ಕ್ಷೇತ್ರದಲ್ಲಿ "ಸ್ವಾತಂತ್ರ್ಯ"?

ವಿದ್ಯಾಕ್ಷೇತ್ರದಲ್ಲಿ ಎಂತಹ ವಾತಾವರಣ ಬೇಕು? ರಾಜಕೀಯಕ್ಕೂ ವಿದ್ಯಾಭ್ಯಾಸಕ್ಕೂ ಎಂತಹ ಸಂಬಂಧವಿರಬೇಕು? ವಿದ್ಯಾಭ್ಯಾಸದ ಕ್ರಮ-ಪದ್ಧತಿಗಳಲ್ಲಿ ವ್ಯತ್ಯಾಸಗಳಾಗಬೇಕಾದರೆ, ಅಂತಹ ವ್ಯತ್ಯಾಸಗಳ ಕರಡು ಪ್ರತಿ ಎಲ್ಲಿ ಮತ್ತು ಯಾರಿಂದ ಸಿದ್ಧವಾಗಬೇಕು? ರಾಜಕೀಯ ಯಾ ಸರಕಾರದ ದುಂಡುಮೇಜುಗಳ ಪರಿಷತ್ತಿನಲ್ಲಿಯೇ? ಅಥವಾ, ಶಾಲೆ, ಕಾಲೇಜ್‌ಗಳಲ್ಲಿ ಪ್ರತಿಕ್ಷಣವೂ ಶಿಕ್ಷಣ ಸಮಸ್ಯೆಗಳನ್ನು ಎದುರಿಸುತ್ತಿರುವ ಅಧ್ಯಾಪಕರ ಚರ್ಚಾಗೋಷ್ಠಿಗಳಲ್ಲಿಯೇ? ಶಿಕ್ಷಣದ ರೀತಿ-ನೀತಿಗಳನ್ನು ಬದಲಾಯಿಸಿ, ಪ್ರಜಾಹಿತವನ್ನು ಬಗೆಯುವ ಹಕ್ಕು ಅಧ್ಯಾಪಕರಿಗೆ ಇರಬೇಕಲ್ಲದೆ, ಅವುಗಳು ಸರಕಾರದ ಕಟುಮೊಗಳಲ್ಲಿ ಸಿದ್ಧವಾಗಿ ಪಾರ, ಪಟ್ಟಿ-ನಿಯಮ, ನಿಬಂಧನೆಗಳ ಮೂಲಕ ಎರಕ ಹೊಯ್ಯಲ್ಪಡುವಂತಾಗಬೇಕಾದುದಕ್ಕ

ನಮ್ಮ ಇಂದಿನ ಶೈಕ್ಷಣಿಕ ಸುಧಾರಣೆಗಳು ಅಧ್ಯಾಪಕರಿಂದ ಪ್ರೇರಿತವಾಗಿ ಸರಕಾರದ ಸಮ್ಮತಿಯನ್ನು ಪಡೆದವುಗಳು ಎನ್ನುವುದಕ್ಕಿಂತ, ಸರಕಾರದಿಂದ ಹಾಕಲ್ಪಟ್ಟ ಶಿಕ್ಷಣವಲಯದ ಮೇಲೆ ಹೇರಲ್ಪಟ್ಟವುಗಳಾಗಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ಸರಕಾರದ ಕೆಲವು ಅಧಿಕಾರಿಗಳು ತಯಾರಿಸಿದ ಪಾರಪಟ್ಟಿಗಳು ಅಧ್ಯಾಪಕರ ಚರ್ಚಾಕೂಟಗಳಲ್ಲಿ ಚರ್ಚೆ-ಸಲ್ಪಡುತ್ತವೆ, ಅಧ್ಯಾಪಕರು ಅವುಗಳನ್ನು ವಿಮರ್ಶಿಸಿ, ಟೀಕಿಸಿ, ತಿದ್ದುಪಡಿಗಳನ್ನು ಸೂಚಿಸಿದರೂ ಆ ಸೂಚನೆಗಳು ಅಧಿಕಾರಿ ವರ್ಗಗಳನ್ನು ಸೇರುವ ವೇಳೆಗೆ, ಪಾರ ಪುಸ್ತಕಗಳು ಪ್ರಕಟವಾಗಿರುತ್ತವೆ ಶೈಕ್ಷಣಿಕ ವಿಧಾನಗಳನ್ನು ಸಂಸ್ಕಾರಗೊಳಿಸುವ ಹೊಸ ಆಂದೋಲನವು ಜನಪ್ರಿಯ ಮಾರ್ಗದಿಂದಾಗಬೇಕಾದರೆ, ಅದು ಮೊದಲು ಶಿಕ್ಷಣ ಕ್ಷೇತ್ರದಿಂದ ತೊಡಗಿ ಕೊನೆಗೆ ಸರಕಾರೀ ವಲಯಗಳಲ್ಲಿ ಸಮ್ಮತಿಯ ಮುದ್ರೆಯನ್ನು ಸಂಪಾದಿಸುವುದು ಸಾಧ್ಯವಾಗಬೇಕು ಯೋಗ್ಯ ಶೈಕ್ಷಣಿಕ ಕ್ರಾಂತಿಯು ಶಾಲೆ ಕಾಲೇಜುಗಳಿಂದ ಉಗಮವಾಗಿರಬೇಕಲ್ಲದೆ ಸರಕಾರದ ಕ್ಷೇತ್ರ ಭತ್ರದ ಕೇಗೆ ಉಂಟಾಗಬಾರದು

'ಜನಜೀವನದ ಯಾವುದೇ ರಂಗವನ್ನು ಪದೇ ಪದೇ ವ್ಯತ್ಯಾಸಗೊಳಿಸುತ್ತಿರಬಹುದು, ಆದರೆ ಶೈಕ್ಷಣಿಕ ರಂಗವು ಮಾತ್ರ ಅಂತಹ ವ್ಯತ್ಯಾಸಗಳಿಗೆ ಬಲಿಯಾಗಬಾರದು" ಎಂಬ ನಿಯಮವನ್ನು ನಾವು ಯಾವಾಗಲೂ ಉಲ್ಲಂಘಿಸಿ ಕೊಂಡು ಬರುತ್ತದೆ ಇಂಗ್ಲೀಷ್ ಭಾಷೆಯನ್ನು ಯಾವ ವರ್ಗದಿಂದ ಕಲಿಸಲು ತೊಡಗಬೇಕೆಂಬ ಸಮಸ್ಯೆಯು ಇಂದಿಗೂ ಸಂಪೂರ್ಣವಾಗಿ ಇತ್ಯರ್ಥವಾಗಿಲ್ಲ ಎನ್ನಬಹುದು. ಹಲವು ವರ್ಷಗಳ ಹಿಂದೆ, ಇದು ಬಾಲಕ ದರ್ಜೆಗಳಿಂದಲೇ ಕಲಿಸಲ್ಪಡುತ್ತಿತ್ತು ಸ್ವತಂತ್ರ ಭಾರತದಲ್ಲಿ ಒಂದು ಬಾರಿ ಐದನೆಯ ತರಗತಿಯಿಂದ ಇಂಗ್ಲೀಷ್ ಕಲಿಸಿದರೆ ಸಾಕು ಎಂದು ಮೊದಲೊಮ್ಮೆ ತೀರ್ಮಾನವಾಯಿತು; ಮರುವರ್ಷವೇ ಇದು ಆರನೆಯ ತರಗತಿಗೆ ಏರಿಸಲಾಯಿತು, ಮುಂದಿನ ವರ್ಷ

(೧೨ನೇ ಪುಟ ನೋಡಿರಿ)

ಕಥಾವಿಹಾರ:

ಮರಳಿ ಬರುವೆನೆಂದ ಕರುಳು

ದೇವಲೋಕದಿಂದ ತಾಯಿ ಬರುವಳೆಂದು ಕಾದುಕೊಂಡಿದ್ದಳು ರಾಗಿಣಿ. ಆಕೆ ಮುಂಜಾವದಿಂದ ಸಂಜಾವದ ವರೆಗೂ ಮಾತ್ರ ನಿರೀಕ್ಷೆಯಲ್ಲೇ ಇದ್ದಳು. ಆ ಮೇಲೆ..........?

ರಾಗಿಣಿಯ ಮುಖ ಪ್ರಫುಲ್ಲಿತವಾಯಿತು.

ತಂದೆ ಮಗಳನ್ನು ಸಮಾಧಾನಪಡಿಸಲು ಅದಾವುದೋ ಬಣ್ಣದ ಗೊಂಬೆಯೊಂದನ್ನು ಕ್ರಯಕೊಟ್ಟು ತಂದಿದ್ದರು. ಮನೆ ತುಂಬ ಓಡಾಡುತ್ತಿರುವ ನಾಲ್ಕು ವರ್ಷದ ಮಗಳು ರಾಗಿಣಿಯನ್ನು ಸಂತೈಸುವುದೇ ಅವರ ಈಗಿನ ನಿತ್ಯಕರ್ಮವಾಗಿತ್ತು.

“ಅಪ್ಪಾ, ಗೊಂಬಿ ಮಾತಾಡೋದಿಲ್ಲಪ್ಪ!” “ಪುಟ್ಟು ನಡೆಯುವುದಿಲ್ಲಪ್ಪ” ಎಂದು ಮುಂತಾದ ಪ್ರಶ್ನಮಾಲೆ ದಿನಂಪ್ರತಿಯೆಂಬಂತೆ ರಾಗಿಣಿಯ ಬಾಯಿಂದ ಹೊರಬರುತಿತ್ತು. ಒಂದು ದಿನ ರಾಯರು, “ಗೊಂಬಿ ಸತ್ತಿದೆ ಮಗೂ” ಅಂದರು. ಅಂದಿನಿಂದ ರಾಗಿಣಿಯು ‘ಸಾಯುವುದು’, ‘ಸತ್ತಿದೆ’ ಎಂಬ ಶಬ್ದವನ್ನೇ ಹೆಚ್ಚಾಗಿ ಬಳಸುತಿದ್ದಳು. ‘ಅಪ್ಪಾ, ಸಾಯುವುದು ಹೇಗಪ್ಪ?’—ರಾಗಿಣಿಯ ಮನಸ್ಸು ಚಿಕ್ಕದಾಗಿದ್ದರೂ ದೊಡ್ಡ ಸಮಸ್ಯೆಯನ್ನು ಹೊರ ತಳ್ಳುತಿತ್ತು. ಇಂತಹ ಮಾತುಗಳು ರಾಯರ ಹೃದಯವನ್ನು ಇರಿಯದೆ ಬಿಡುತ್ತಿರಲಿಲ್ಲ. ಅದಕ್ಕೆ ಕಾರಣವೂ ಸಾಕಷ್ಟಿತ್ತು.

ಸೀತಾರಾಮರಾಯರು ಚಿಕ್ಕ ಮಕ್ಕಳ ಶಾಲೆಯ ಅಧ್ಯಾಪಕರಾಗಿದ್ದರು. ಬಡವನೆಂದರೂ ಸರಿಯೇ; ದೊಡ್ಡವರೆಂದರೂ ಸರಿಯೆ! ಇದ್ದು ಬಿದ್ದ ಹತ್ತಾರು ಎಕ್ರೆ ತೋಟ, ಹೊಲ, ಮನೆ ಇವಿಷ್ಟು ಮಾತ್ರ ಇವೆ ಅವರಿಗೆ ತಂದೆತಾಯಿಗಳನ್ನು ಹುಟ್ಟಿ ಹತ್ತಾರು ವರ್ಷಗಳಲ್ಲೇ ಕಳೆದುಕೊಂಡಿದ್ದ ರಾಯರು ಯಾರದೋ ಮನೆಯಲ್ಲಿ ಬೆಳೆದು ತುಸು ವಿದ್ಯಾಭ್ಯಾಸವನ್ನು ಪೂರಯ್ಸಿ, ತಮ್ಮ ಜಮೀನು ಎಲ್ಲಿದೆ ಎಂದು ನೋಡುವಾಗ, ಅದು ಪೂರ್ತಿ ಕಾಡಾಗಿತ್ತು. ಹಾಗಾಗಿ ತನ್ನ ಹೊಲದ ಉತ್ಪತ್ತಿಯನ್ನು ಅಲ್ಲಿಗೇ ಹಾಕಿ ನಾಲ್ಕೆಂಟು ವರ್ಷ ಕಷ್ಟದಲ್ಲಿ ಕಳೆದ ರಾಯರಿಗೆ ಮನೆಗೊಬ್ಬಳು ಸ್ತ್ರೀಯಿಲ್ಲದಿದ್ದರೆ ಅದು ಮಸಣಕ್ಕೆ ಸಮಾನವೆಂದು ತಿಳಿದು ತನ್ನ ಮದುವೆಗಾಗಿ ಹೆಣ್ಣನ್ನು ಹುಡುಕಾಡಿದರು. ಆಗಿನ ಕಾಲದಲ್ಲಿ ಹೆಣ್ಣು ಗಟ್ಟಿದ ಮೇಲೆ ಕೊಡುವವರೂ ಅತ್ಯಲ್ಪವೇ; ಅಲ್ಲಿಯ ಜನರೆಂದರೂ ಅಷ್ಟೆ. ಜೀವನವನ್ನು ಕಷ್ಟದಲ್ಲಿ ನೂಕುವ ಸಂಸಾರವೊಂದರಿಂದ ಒಂದು ಹೆಣ್ಣು ಅವರ ಮದುವೆಗಾಗಿ ಸಿದ್ಧವಾಯಿತು. ಸಮಸ್ತ ಕರ್ಚು ರಾಯರ ತಲೆಯಮೇಲೆ ಬಿದ್ದು ಗೌರಿ ಅವರ ಗೃಹಲಕ್ಷ್ಮಿಯಾದಳು. ಅಂದಿನಿಂದ ಆ ಮನೆ ಶೋಭಾಯಮಾನವಾಗಿ ಬೆಳಗಲಾರಂಭಿಸಿತು. ಐಶ್ವರ್ಯವು ತುಂಬಿ ತುಳುಕಾಡುವಂತಾಯಿತು. ಮನೆಯ ಸಮೀಪ ಒಂದು ಧರ್ಮಾರ್ಥ ಪಾಠಶಾಲೆಯನ್ನು ತೆರೆದು, ಅಧ್ಯಾಪಕರ ಅಭಾವದಿಂದ, ತಾವೇ ಆ ಕೆಲಸ ನಿರ್ವಹಿಸಿದರು. ಎಲ್ಲರಿಗೂ ಬೇಕಾದವರಾಗಿ ಅವರ ಬಾಳು ಸಾಗುತ್ತಿದ್ದಂತೆ ಒಂದು ಚಿಂತೆಯೂ ಅವರನ್ನು ಕಾಡಿತು. “ಎಷ್ಟೆಂದರೂ ‘ಹೊಳೆಗೆ ಎರವಾದ ಮರ’ ನಲುವತ್ತು ದಾಟಿತು. ಒಂದು ಮಗು ಹುಟ್ಟಿದ್ದರೆ ನೋಡಬಹುದಿತ್ತು’ ಎಂದು ಆಗಾಗ ವ್ಯಥಿಸುತಿದ್ದರು. ಗೌರಿಗಿನ್ನೂ ಇಪ್ಪತ್ತು ದಾಟಿರಲಿಲ್ಲ. ಇಲ್ಲಿ ಬಂದೊಡನೆ ಗೌರಿ ಗುಣ, ನಡತೆ, ಕಾರ್ಯದಕ್ಷತೆ ಇವುಗಳಿಂದ ಗೌರಮ್ಮನೇ ಆದಳು. ಹಳೆಯುವನ ಕೈ ಹಿಡಿದ ನಲ್ಲ ಎಂಬ ಕೊರಗೊಂದು ಇದ್ದದ್ದೇ—ಹೇಗೂ ಇರಲಿ, ಅದೇನೂ ವ್ಯಕ್ತವಾಗುತ್ತಿರಲಿಲ್ಲ. ಸೀತಾರಾಮರಾಯರು ಸುಶಿಕ್ಷಿತರು; ಗೌರಮ್ಮ ನಿರಕ್ಷರ ಕುಕ್ಷಿ. ‘ಪತ್ರ ಬಂದಿದೆ’ ಎಂದರೆ ‘ನೀವೇ ಓದಿ ಹೇಳಿ’ ಎಂದು ಬಿಡುವಾಕೆ!

ಅಂತೂ ಗೌರಮ್ಮ ಗರ್ಭಿಣಿಯಾದಳೆಂದು ಸೀತಾರಾಮರಾಯರಿಗೆ ತಿಳಿಯಿತು. ತೌರೂರಿಗೂ ವರ್ತಮಾನ ಹೋಯಿತು. ಸರಿಯಾದ ಸಮಾರಂಭವಿಲ್ಲದೆ ನಡೆಯಲಾರದು ತಾನೆ? ತವರೂರಿಗೆ ಓಲೆ ಬರೆದು, ಆಪ್ತೇಷ್ಟರನ್ನು ಬರಮಾಡಿಕೊಂಡದ್ದಾಯಿತು. ಪುರೋಹಿತ ಶಾಂಭಟ್ಟರ ಹಿರಿತನದಲ್ಲಿ ಮಂಗಳಕಾರ್ಯ ನಿರ್ವಿಘ್ನವಾಗಿ ನಡೆದು ಆಶೀರ್ವಾದಗಳ ಸುರಿಮಳೆ ಸುರಿಸಿಕೊಂಡು ಗೌರಮ್ಮ ತುಂಬಿದ ಬಸುರಿಯಾಗಿ ತೌರೂರಿಗೆ ಹೊರಟು ನಿಂತಳು. ಗೌರಮ್ಮ ದೇವರಿಗೆ ತುಪ್ಪದ ದೀಪವಿಟ್ಟು, ಪತಿದೇವರಿಗೂ ನಮಸ್ಕರಿಸಿ ಗಾಡಿ ಹತ್ತಿದಳು. ಸೀತಾರಾಮರಾಯರು ಪುನಃ ಏಕಾಕಿಗಳಾದರು

ಏಕಾಕಿ ಜೀವನ ಬಲು ಬೇಸರ ಹೊತ್ತು ಹೋಗುವುದೇ ಪ್ರಯಾಸವೆನಿಸುತಿತ್ತು, ತೋಟಕ್ಕೆ ಸುತ್ತು ಹಾಕುವುದು, ಶಾಲೆ—ಮನೆಗಳ ನಡುವೆ ಓಡುವುದು, ಅಡಿಗೆಯುವನ ಕೈಯಡಿಗೆ ತಿಂದು ತೇಗುವುದು ಇಷ್ಟೆ ಅವರ ಕೆಲಸ. ಯಾರಾದರೂ ಅವರನ್ನು ‘ತಾವು ಉಪಾಧ್ಯಾಯರಾಗಿದ್ದೀರಾ? ಹಾಯೆಂದು ಮನೆಯಲ್ಲಿ ಬಿದ್ದಿರಬಾರದೆ?’ ಎಂದರೆ, ‘ದೇವರು ನನ್ನನ್ನು ಈ ಜಗತ್ತಿನಲ್ಲಿ ಏನಾದರೂ ಉಪಕಾರ ಮಾಡು ಎಂತ ಹುಟ್ಟಿಸಿದ್ದಾನೆ. ಅಲ್ಲಿ ಇಲ್ಲಿ ಕಲಿತಿದ್ದ ವಿದ್ಯೆಯನ್ನು ಮಕ್ಕಳಿಗೆ ಹೇಳಿಕೊಟ್ಟರೆ, ನನಗೆ ಬರುವ ಪಾಪವೇನು?’ ಎಂದು ತಟಕ್ಕನೆ ಉತ್ತರಿಸುತ್ತಾರೆ. ಮಲೆನಾಡಿನಲ್ಲಿ, ಅಜ್ಞಾನಿಗಳ ಕೊಂಪೆಯಲ್ಲಿ, ಪರವೂರ ಅಧ್ಯಾಪಕರಾರೂ ಮುಖ ತೋರಿಸಲು ಅಂಜುವಲ್ಲಿ ರಾಯರ ಸೇವೆಯೇ ಮೇಲಿನದಾಗಿತ್ತು. ಹೊಸ ಸ್ಫೂರ್ತಿ, ಹೊಸ ತೃಪ್ತಿಯನ್ನು ತಂದುಕೊಂಡು ಅವರು ಆ ಅಜ್ಞ ಮಕ್ಕಳಿಗೆ ಪಾಠ ಹೇಳುತಿದ್ದರು.

ಗೌರಿ ಹಡೆಯುವುದಕ್ಕೆ ಮೊದಲು ರಾಯರು ಎರಡು ಬಾರಿ ಘಾಟಿ ಇಳಿದು ಹತ್ತಿದ್ದಾರೆ. ಮೂರನೆಯ ಸಲ ಇಳಿಯಬೇಕೆನ್ನುವಷ್ಟರಲ್ಲಿ ಒಸಗೆ ಬಂದಿತು—ಸಂತಸದಿಂದಲೇ ರಾಯರ ಸವಾರಿ ಸ್ವಂತ ಗಾಡಿಯಲ್ಲಿ ಅತ್ತೆಮನೆ ಸೇರಿತು. ತನ್ನವರನ್ನು ಓರೆ ನೋಟದಿಂದ ಕಾಣುತ್ತ ಗೌರಿ ‘ಹೆಣ್ಣು’ ಎಂದು ಮುಖ ಕೆಳಮಾಡಿದಳು. ರಾಯರಿಗೆ ಎಲ್ಲಿಂದ ಆವೇಶ ಬಂದಿತೊ, ‘ಹೆಣ್ಣಾದರೇನಂತೆ? ನೀನೂ ಹೆಣ್ಣಲ್ಲವೆ? ಹೆಣ್ಣೇ ಆಗಬೇಕಿತ್ತು’ ಎಂದುಬಿಟ್ಟರು.

ನಾಮಕರಣದ ದಿನದ ಗಲಭೆ ತುಸು ವಿಚಿತ್ರವಾಯಿತು. ‘ರಾಗಿಣಿ’ ಹೆಸರು ಹಳಬರಿಗೆ ಇಷ್ಟವಾಗಲಿಲ್ಲ; ಆದರೆ, ಅವರ ಕಾವೇರಮ್ಮ- ಗಂಗಮ್ಮ ರಾಯರಿಗೆ ಸರಿತೋರಲಿಲ್ಲ. ಪಂಥದಲ್ಲಿ ಅಳಿಯನಿಗೆ ವಿರೋಧ ನಿಲ್ಲುವ ಶಕ್ತಿ ಅತ್ತೆಮಾವಂದಿರಿಗಿಲ್ಲವಾದುದರಿಂದ, ರಾಯರೇ ಗೆದ್ದರೆಂದು ಬೇರೆ ಹೇಳಬೇಕಾಗಿಲ್ಲ. ಆದರೂ ಮೂಗು ಮುರಿಯುವ ನಂಟರಿಗೂ ಕಡಿಮೆಯಿರಲಿಲ್ಲ.

ಸ್ಮಶಾನ ಸದೃಶವಾಗಿದ್ದ ರಾಯರ ಮನೆ ಮತ್ತೆ ಮೂರು ತಿಂಗಳಲ್ಲಿ ಅರಳಿ ಹಾಡಿತು. ದಿನಗಳು ಕಳೆಯುತಿದ್ದುವು. ರಾಗಿಣಿ ಪುಟ್ಟ ಹೆಜ್ಜೆಯಿಡುತ್ತಾಳೆ; ಎಡವುತ್ತಾಳೆ, ಬೀಳುತ್ತಾಳೆ, ಅಳುತ್ತಾಳೆ! ರಾಗಿಣಿಯು ಸೇವೆಗಾಗಿ ಒಬ್ಬಾಕೆ ಹುಡುಗಿ ಬಂದಳು; ಗೌರಮ್ಮನ ಕೆಲಸ ಮತ್ತಷ್ಟು ಹಗುರವಾಯಿತು. ಮುದ್ದುಮುದ್ದಾದ ಮುಖ, ಸದಾ ಕಿರು ಮಂದಹಾಸ, ಗುಂಗುರು ಗುಂಗುರು ಕೂದಲು, ಚಿಕ್ಕ ತೋರ ಕೈಕಾಲು, ಮಾಟವಾಗಿರುವ ದೇಹದ ರಾಗಿಣಿ ಎಲ್ಲರ ಕೈಮುದ್ದಾಗಿ ಬೆಳೆದಳು.

ಗೌರಮ್ಮ ವಿಷಮ ಜ್ವರದಿಂದ ನರಳುತ್ತಿರುವಾಗ, ರಾಗಿಣಿ “ಅಮ್ಮಾ” ಎನ್ನುತಿದ್ದಳು ಮಾತ್ರ. ಈ ಜ್ವರ ವಿಷಮಾವಸ್ಥೆಗೇರಿ, ಉಪಚಾರಕ್ಕೂ ಎಡೆಗೊಡದೆ, ಗೌರಿಯನ್ನು ಸಾವು ತನ್ನುಡಿಯಲ್ಲಿ ತುಂಬಿಕೊಂಡಿತು. ಸೀತಾರಾಮರಾಯರ ಶಿರದ ಮೇಲೆ ಆಕಾಶವೇ ಉರುಳಿಬಿತ್ತು!

೦ ೦ ೦

“ಸಾಯುವುದೆಂದರೇನಪ್ಪ?’ ತನ್ನ ಸಮಸ್ಯೆಯನ್ನು ತಂದೆಯೊಡನೆ ಬಿಚ್ಚಿದಳು ರಾಗಿಣಿ.

‘ಸಾಯುವುದೆಂದರೆ,....ನಮ್ಮ ಮುಂದೆ ಇಲ್ಲದಿರುವುದು ಮಗೂ.’

“ಈ ಗೊಂಬೆ ನನ್ನ ಕೈಯಲ್ಲಿದೆಯಲ್ಲಾ? ಸತ್ತಿಲ್ಲವೆ ಅದು?’

“ರಾಗಿ, ಮನುಷ್ಯರು ಮಾತ್ರ ಸಾಯುತ್ತಾರೆ.’

“ಮನುಷ್ಯರು ಮಾತ್ರ ಸಾಯುವುದಕ್ಕೆ ಅವರೇನು ತಪ್ಪು ಮಾಡಿದ್ದಾರೆ?”–ರಾಗಿಣಿಯ ಸಮಸ್ಯೆಗೆ ಪರಿಹಾರ ಸೂಚಿಸಲು ರಾಯರು ಅಸಮರ್ಥರಾದರು. ತನ್ನ ಸೋಲನ್ನವರು ಒಪ್ಪಿಕೊಂಡರು. ‘ದೇವರೊಡನೆ ಕೇಳಬೇಕು’

‘ದೇವರು ಎಲ್ಲಿದ್ದಾರೆ?’—ಯೋಚನೆಯಿಲ್ಲದೆ ಆಕೆ ಕೇಳಿದ ಪ್ರಶ್ನೆಯಿದಾಗಿರಬಹುದು. ಅಥವಾ ದೇವರು ಸಿಕ್ಕಿದ್ದರೆ ತನ್ನ ತಾಯಿಯೆಲ್ಲಿ ಎಂದು ಕೇಳುವ ಆಸೆಯಿತ್ತೇನೊ!

‘ಅವರು ನೋಡ ಸಿಗುವುದಿಲ್ಲ’

‘ಅಪ್ಪಾ, ದೇವರ ಪೂಜೆ ನಿತ್ಯ ಮಾಡುತ್ತಿಯಲ್ಲ? ಒಂದು ದಿನವೂ ನಿನಗೆ ಸಿಕ್ಕಿಲ್ಲವೆ? ಒಮ್ಮೆಯೂ ಆಡಲಿಲ್ಲವೆ?’

ರಾಯರು ದಿಙ್ಮೂಢರಾಗಿ ನುಡಿದರು “ನನ್ನ ಮೇಲೆ ಆತನಿಗೆ ಸಿಟ್ಟು!

‘ನನ್ನ ಮೇಲೆ?’

‘ನಿನ್ನ ಮೇಲೂ’ ರಾಯರ ಉತ್ತರ ಕೇಳಿ ರಾಗಿಣಿ ತನ್ನದೇನಪರಾಧವೆಂದು ಯೋಚಿಸುತ್ತಿರುವಂತೆ ನಟಿಸಿದಳು.

‘ಹೂಂ....ಹೌದಪ್ಪ, ನಾನು ತಪ್ಪು ಮಾಡಿದ್ದೇನೆ; ನಾಲ್ಕು ದಿನಗಳಿಂದಲ ಹೂ ಕೊಯ್ಯಲಿಲ್ಲ. ದೇವರೊಡನೆ ಕ್ಷಮೆ ಕೇಳಿ ತಪ್ಪನ್ನು ತಿದ್ದಿಕೊಳ್ಳುತ್ತೇನೆ.” ಎಂದವಳೇ ಒಳನಡೆದು ಉದ್ದಂಡ ನಮಸ್ಕರಿಸಿ ಹೊರಬಂದಳು.

“ಅಪ್ಪಾ, ದೇವರು ತಪ್ಪು ಮಾಡುತ್ತಾನೆಯಲ್ಲ?”

“ನಿನಗೆ ಹೇಗೆ ಗೊತ್ತು?”

“ನೀನೂ ಹೇಳುತ್ತೀಯಲ್ಲಾ?”

“ದೇವರು ಏನು ತಪ್ಪು ಮಾಡಿದ್ದಾರೆ?”

“ಮನುಷ್ಯರನ್ನು ಸಾಯಿಸುತ್ತಾನೆ. ಅಲ್ಲಪ್ಪ, ಸತ್ತವರೆಲ್ಲ ಎಲ್ಲಿ ಹೋಗುತ್ತಾರೆ?”

“ದೇವರ ಲೋಕಕ್ಕೆ ಮಗು.”

“ಹಾಗಾದರೆ, ದೇವರು ತಪ್ಪುಮಾಡುತ್ತಿಲ್ಲವೆ?”—ರಾಗಿಣಿಯ ಹಂತವಾದ ನಾಲಗೆಯಿಂದ ಹೊರಬಿತ್ತು—“ನನ್ನಮ್ಮನ್ನ ಕರೆದುಕೊಂಡು ಹೋದ ಅವನು ಒಮ್ಮೆಯೊದರೂ ನನ್ನ ನೋಡಿ ಬಾ ಎಂದು ಕಳಿಸಿದನೆ?”

ರಾಗಿಣಿಯ ತಾಯಿ ಸತ್ತಿದ್ದಾಳೆ. ದೇವಲೋಕದಲ್ಲಿ ಜೀವಂತಳಾಗಿದ್ದಾಳೆ. ದೇ

(೧೧ನೇ ಪುಟ ನೋಡಿರಿ)

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
“ಕೊರ್ಪೊರೇಶನ್” ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
“ಕೊರ್ಪೊರೇಶನ್” ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶಿಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕವಿಕಾವ್ಯ ಪ್ರಶಸ್ತಿ

ರಾಮಾಯಣದ ರಾಮಣೀಯತೆ

ಶಾಂತಿಯುಕ್ತ ಗೃಹಜೀವನವನ್ನು ಕರುಣಾರ್ದ್ರಹೃದಯದಿಂದ ಮುದ್ದಿಟ್ಟು ವೀರರಸಕ್ಕೆ ಪ್ರಾಧಾನ್ಯವಿತ್ತ ರಾಮಾಯಣದಲ್ಲಿ ವಿಶ್ವಮಾನ್ಯ ತತ್ತ್ವಗಳಿವೆ.

"ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ" ಎಂದುಕೊಂಡು ಮಹಾಭಾರತದ ಕಥನಕ್ಕೆ ಮನಸೋತಿದ್ದಾನೆ ಕನ್ನಡದ ನೆಚ್ಚಿನ ಕವಿ ಕುಮಾರವ್ಯಾಸ. "ಶತಕೋಟಿ ರಾಮಾಯಣಗಳೊಳವು" ಎಂಬ ಉಕ್ತಿಯು ಪ್ರಚಲಿತವಿರಬೇಕಾದರೆ, ಈ ಮಾತನ್ನು ನಾವು ಅಲ್ಲಗಳೆಯುವಂತಿಲ್ಲ. ರಾಮಾಯಣದ ರಾಮಣೀಯತೆ ಹಾಗೂ ಮಹತ್ತುಗಳ ಧಾರಾಳತನವೇ ಈ ರೀತಿಯ ಜನಪ್ರಿಯತೆಗೆ ಕಾರಣವೆನ್ನಬಹುದೆ?

ವಸ್ತುದೃಷ್ಟಿಯಿಂದ ಪ್ರಸಿದ್ಧ ಮತ್ತು ಕಾಲ್ಪನಿಕವೆಂಬುದಾಗಿ ಎರಡು ವಿಭಾಗಗಳನ್ನು ಕಾವ್ಯಗಳಲ್ಲಿ ಮಾಡಬಹುದು, ಇವುಗಳಲ್ಲಿ 'ಪ್ರಸಿದ್ಧ' ವಸ್ತುವಾದರೋ ಒಂದು ಸಂಪ್ರದಾಯವನ್ನು ಅನುಸರಿಸಿಕೊಂಡು ಬರುವುದು. ಕಾಲ್ಪನಿಕ ಅಥವಾ ಉತ್ಪಾದ್ಯವೆಂಬುದು ಕವಿಕಪೋಲ ಕಲ್ಪಿತ ವಿಷಯವಾಗಿದ್ದು ಈ ಕಾವ್ಯದಲ್ಲಿ ಕವಿಯು ತನ್ನ ಪ್ರತಿಭಾ ಬಲದಿಂದ ನಿಜ ಸುಖದುಃಖಗಳನ್ನೂ ನಿಜ ಕಲ್ಪನೆಗಳನ್ನೂ ನಿಜ ಜೀವನದ ಅನುಭವಗಳನ್ನೂ ಪ್ರಕಟಿಸಿ ಮಾನವ ಸಂಪ್ರದಾಯದ ಚಿರಂತನ ಹೃದಯ ವಿಕಾರ ಮತ್ತು ಹೃದಯ ರಹಸ್ಯಗಳನ್ನು ಹೊರಗೆಡಹುತ್ತಾನೆ. ಸಂಪ್ರದಾಯವಾದಿ ಕವಿಗಳು ತಮ್ಮ ಕೃತಿಗಳಿಂದ ಸಮಗ್ರದೇಶ ಅಥವಾ ಸಮಗ್ರ ಯುಗದ ಭಾವಗಳನ್ನೂ ಅನುಭವಗಳನ್ನೂ ಬಯಲಿಗೆ ತಂದು ಇವುಗಳನ್ನು ಮಾನವಗಣ ಸಂಪತ್ತನ್ನಾಗಿ ಮಾಡುತ್ತಾರೆ. ಈ ಮಾದರಿಯ ಕವಿಗಳನ್ನು ಮಹಾಕವಿ ಎಂಬುದಾಗಿ ಕರೆಯಬಹುದು. ದೇಶ ತುಂಬ, ಸಮಾಜ ತುಂಬ ಇವರ ಬಗ್ಗೆ ಗೌರವಾದರಗಳಿರುವುವು. ಇಂತಹರ ರಚನೆಯು ಸಾಮಾನ್ಯ ವ್ಯಕ್ತಿಯ ಕೃತಿಯಂತಿರುವುದಿಲ್ಲ. ಇದು ಮಹಾವೃಕ್ಷದಂತಿದ್ದು ತನ್ನಾಸರೆ ಬಯಸಿಬಂದವರಿಗೆಲ್ಲಾ ತನ್ನ ಸುವಿಶಾಲ ನೆರಳನಡಿಯಲ್ಲಿ ತಣ್ಪನ್ನೀಯುವುದು. ಕಾಳಿದಾಸನ ಶಾಕುಂತಲಾ ಇಲ್ಲವೇ ಕುಮಾರಸಂಭವಗಳಲ್ಲಿ ಈ ಮಾದರಿಯ ಚಿತ್ತಶಾಂತಿ ಲಭಿಸುವುದು ಖಂಡಿತವೇ. ಇದೇ ಮಾದರಿಯ ಇತರ ಹಲವಾರು ಕೃತಿಗಳು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ರಚಿತವಾಗಿವೆ; ಇತರ ಭಾರತೀಯ ಭಾಷೆಗಳಲ್ಲಿಯೂ ಸಾಕಷ್ಟಿವೆ. ಆದರೆ, ಭಾರತೀಯರಿಗೆಲ್ಲ ಅತಿಪ್ರಿಯವೆನಿಸಿದ ಮಹಾಕಾವ್ಯಗಳೆಂದರೆ, ರಾಮಾಯಣ ಮತ್ತು ಮಹಾಭಾರತಗಳು. ಇವುಗಳು ಮೂಲತಃ ಸಂಸ್ಕೃತದಲ್ಲಿರುವಾದರೂ ಪರಿಮಾಣದಲ್ಲಿ ಹಿರಿಯವೆನಿಸಿದರೂ ಇವುಗಳ 'ಅನುವಾದ'ಗಳು ಪ್ರಕಟವಾಗದ ಭಾರತೀಯ ಸಾಹಿತ್ಯಿಕ ಭಾಷೆಯೆಂಬುದಿಲ್ಲ. ಇವು ಹಿಮಾಲಯ ಸದೃಶವಾಗಿವೆ. ಮೇರುವನ್ನೂ ಮೀರಿಸುವ ಗುಣಭರಿತವಾಗಿವೆ. ಭಾರತೀಯ ಸಂಸ್ಕೃತಿಯ ಕಣಕಣಗಳಿಂದ ಕೂಡಿದ್ದು, ಇವು ಸರ್ವಜನಾದರಣೀಯವಾಗಿವೆ.

ವಾಲ್ಮೀಕಿ. ವ್ಯಾಸರು ಈ ಸುಮಹಾನ ಕೃತಿರಚನಕಾರರೆಂಬ ಪ್ರತೀತಿಯಿದೆ. ವಾಲ್ಮೀಕಿ ವ್ಯಾಸರೆಂಬುದು ಆ ಕವಿಗಳ ಹೆಸರಲ್ಲವೆಂಬುದು ವಿಶ್ಲೇಷಣೆಯಿಂದ ವೇದ್ಯವಾಗುವುದು ವಲ್ಮೀಕ (ಹುತ್ತ)ದಲ್ಲಿ ಹುದುಗಿ ಜ್ಞಾನ ಸಾಗರಸಿಕ್ತನಾದವನೇ ವಾಲ್ಮೀಕಿಯಲ್ಲವೆ? ಪುರಾಣಗಳನ್ನು ಯಥೋಚಿತವಾಗಿ ವಿಂಗಡಿಸಿದವನೇ ವ್ಯಾಸನಲ್ಲವೆ? ಹಾಗಾದರೆ, ಕವಿಗಳ ಹೆಸರೇನು? ಅದು ಕಾವ್ಯದಲ್ಲೆಲ್ಲಿಯೂ ಸುಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿಲ್ಲ. ಅವರಾರೇ ಇರಲಿ, ಭಾರತದಲ್ಲಿ ಮಾತ್ರವಲ್ಲ, ವಿಶ್ವದಲ್ಲಿಯೇ ಇಂದವರ ಕೀರ್ತಿಲತೆ ಹಬ್ಬಿದೆ. ಈ ಜಗತ್ತಿನಲ್ಲಿ ರಾಮಾಯಣಕ್ಕೆ ಆದಿಕಾವ್ಯವೆಂದೂ ಮಹಾಭಾರತಕ್ಕೆ ಮಹಾನ್ ಕಾವ್ಯವೆಂದೂ ಪಂಚಮ ವೇದವೆಂದೂ ಉಪನಾಮ ಬಂದಿದೆ.

ನಮಗೆ ರಾಮಾಯಣ ಮತ್ತು ಮಹಾಭಾರತಗಳು ಪರಮ ಪೂಜನೀಯ ಗ್ರಂಥಗಳಾಗಿರುವಂತೆ "ಇಲಿಯಡ್" ಎಂಬುದು ಪ್ರಾಚೀನ ಗ್ರೀಕರಿಗೆ ಆದರಣೀಯ ಗ್ರಂಥವಾಗಿತ್ತು. ಗ್ರೀಸಿನ ಎಲ್ಲ ಮನೆಯಲ್ಲೂ ಇಲಿಯಡ್ ತನ್ನ ಚಕ್ರಾಧಿಪತ್ಯವ ಸಂಸ್ಥಾಪಿಸಿಕೊಂಡಿದ್ದ ಒಂದು ಕಾಲವಿತ್ತು. ಇದರ ನಿರ್ಮಾತ ಕವಿ ಹೋಮರ್ ತನ್ನ ದೇಶಕಾಲದ ವಾಣಿಯಲ್ಲಿ ತನ್ನ ಭಾಷೆಯನ್ನು ಸುಸಫಲಗೊಳಿಸಿದ್ದಾನೆ ಆತನ ಕವಿಹೃದಯಾಂತರಾಳದಲ್ಲಿ ನೆಲೆನಿಂತ ಸರಸ್ವತಿಯ ನಿಸ್ವನವು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹಂದಾಡಿ, ಅದು ಬಹುಕಾಲ ಪ್ರತಿಧ್ವನಿತವಾಗುತಿತ್ತು.

ಆಧುನಿಕ ಕಾವ್ಯವು ಅದೆಷ್ಟೇ ಉತ್ತಮವಿದ್ದರೂ ಇಷ್ಟೊಂದು ವ್ಯಾಪಕವಾಗಿ ಎಂದೂ ಪರಿಣಮಿಸಲಾರದು. ಮಿಲ್ಟನ್ ಕವಿಯ "ಪೆರಡೈಸ್ ಲಾಸ್ಟ್" ಎಂಬ ಹೆಸರಿನ ಗ್ರಂಥದಲ್ಲಿ ಭಾಷಾ ಪ್ರಾಬಲ್ಯ, ಪ್ರಯುಕ್ತ ಛಂದಗಾಂಭೀರ್ಯ ಮತ್ತು ರಸಗಂಭೀರತೆಗಳ ಅಭಾವವಿರುವುದಿಲ್ಲವಾದರೂ ಅಖಂಡದೇಶದ ಧನವೆಂದು ಸ್ವೀಕೃತವಾಗಿಲ್ಲ ಅದು. ಇಂದಿಗೆ ಅದು ಪುಸ್ತಕಾಲಯಗಳಲ್ಲಿ ಆದರಪಡೆದ ಸಾಮಗ್ರಿಯಾಗಿ ಮಾತ್ರವುಳಿದಿರುವುದು.

ಆದುದರಿಂದ ಯಾವುದೇ ದೇಶದಲ್ಲಿಯೂ ಪ್ರಾಚೀನ ಕಾಲದ ಸಾಹಿತ್ಯಗಳಿಗೆ ಬೇರೆಯೇ ಆದ ಸ್ಥಾನವನ್ನು ಅವಶ್ಯ ಕಲ್ಪಿಸಿಕೊಡಬೇಕು. ಈ ಕಾವ್ಯಗಳು ಪ್ರಾಚೀನ ಕಾಲದಲ್ಲಿದ್ದರೆಂಬ ದೇವತೆ ಮತ್ತು ರಾಕ್ಷಸರಂತೆ ದೃಢಕಾಯವಾಗಿದ್ದವು; ಸುದೃಢವಾಗಿದ್ದವು, ಸುಮಹಾನ್ ಆಗಿದ್ದವು. ಇಂದಿನಕಾಲದ ಜನರ ಆಕಾರ, ಬಲಗಳೂ ಶಿಥಿಲವಾದಂತೆ ಕಾವ್ಯಗಳ ಅಲಂಕಾರಶಕ್ತಿ, ಗುಣಗಳೂ ಇಳಿಮುಖವಾಗಿವೆಯೆಂದು ಹೇಳಬಹುದು ಕೆಲವೆಡೆ ಇದಕ್ಕೆ ಅಪವಾದ ಕಂಡುಬರಬಹುದಾದರೂ ಸಾಮಾನ್ಯ ಯುಗಧರ್ಮವನ್ನು ಅಳೆಯುವಾಗ ಹೀಗೆ ಅಡಲೇಬೇಕಾಗಿದೆ.

ಮಧ್ಯ ಏಶ್ಯದಿಂದ ಪ್ರಾಚೀನ ಆರ್ಯರ ಒಂದು ಶಾಖೆಯು ಯುರೋಪನ್ನು ಸೇರಿತ; ಮತ್ತೊಂದು ಭಾರತಕ್ಕಾಗಮಿಸಿತೆಂಬ ಸಂಶೋಧಿತೇತಿಹಾಸವು ಅಭಿಪ್ರಾಯಪಡುತ್ತದೆ. ಈ ಎರಡೂ ಶಾಖೆಗಳವರಿಂದ ಎರಡೂ ಪ್ರದೇಶಗಳಲ್ಲಿ ಎರಡೆರಡು ಮಹಾಕಾವ್ಯಗಳು ನಿರ್ಮಾಣವಾದುವು. ಈ ಕೃತಿಗಳು ಅಮರವಾಗಿವೆ ಇವುಗಳಿಂದಲೇ! ಆ ಆರ್ಯ ಸಂಸ್ಕೃತಿ ಮತ್ತು ನಾಗರಿಕತೆಯ ಎರಡು ಮುಖಗಳು ನಮಗಿಂದು ತೋರುತ್ತವೆ; ಅವರ ಉತ್ಥಾನ ಪಥ ಪ್ರದರ್ಶನವಾಗುತ್ತವೆ. ಅವರ ಸಂಗೀತ ಶಿಕ್ಷಣೆಯಾಗುತ್ತಿದೆ.

ಗ್ರೀಸಿನ ಅಮರಕಾವ್ಯಗಳ ಗುಣಾವಗುಣಗಳನ್ನು ಪರಿಶೀಲಿಸುವುದು ನಮ್ಮ ಶಕ್ತಿಬಾಹಿರವಾಗಿದೆ. ಅವುಗಳಲ್ಲಿ ದೇಶಕಾಲಗಳ ಸಕಲ ಭಾವಗಳೂ ಪ್ರಕಟವಾಗಿವೆ ಎಂದು ನಾವು ಕೇಳಿದ್ದೇವೆ. ಆದರೆ, ಭಾರತ ವರ್ಷದ ಮೇರುಕೃತಿ ರಾಮಾಯಣ ಮತ್ತು ಮಹಾಭಾರತಗಳು ಪ್ರಕಾಶಪಡಿಸದ ಸಂಗತಿಯೆಂಬುದಿರುವುದಿಲ್ಲ. ಇದು ಶಿಲತಲಾಕ್ಷರದಷ್ಟು ಖಚಿತ. ಈ ಕಾರಣದಿಂದಲೇ ಶತಶತಮಾನಗಳುರುಳಿದರೂ ಭಾರತದಲ್ಲಿ ಈ ಗ್ರಂಥಗಳ ಬಗ್ಗೆ ತೀವ್ರ ಪ್ರಚಾರವಾಗಿದೆ. ಅವರ ಓದುಗರ ಸಂಖ್ಯೆ ಕಡಿಮೆಯಾಗಿಲ್ಲ; ಸತ್ವಹೀನವಾಗಿಲ್ಲ. ಪ್ರತಿ ದಿನ ಮನೆಮನೆಯಲ್ಲಿ ಅವುಗಳ ಪಠನ ನಡೆಯುತ್ತಿದೆ. ಎಲ್ಲೆಲ್ಲಿಯೂ ಆದರಣೀಯವಾಗಿವೆ. ಆ ಇಬ್ಬರು ಮಹಾ ಕವಿಗಳು ಧನ್ಯರಲ್ಲವೆ? ಅವರ ಹೆಸರೇನೋ ಕಾಲಗರ್ಭದಲ್ಲಿ ಹುದುಗಿ ಹೋಗಿದ್ದರೂ ಕವಿವಾಣಿಯು ಇಂದಿನವರೆಗೂ ಕೋಟ್ಯಂತರ ನರನಾರಿಯರ ಮನದಲ್ಲಿ ಭಕ್ತಿ ಮತ್ತು ಶಾಂತಿಯು ನೆಲಸುವಂತೆ ಮಾಡುತ್ತಿವೆ.

ರಾಮಾಯಣ ಮತ್ತು ಮಹಾಭಾರತಗಳು ಕೇವಲ ಮಹಾಕಾವ್ಯಗಳಲ್ಲ. ಅವು ಇತಿಹಾಸವೂ ಹೌದು. ಯಾವುದೇ ಕಾಲದ ಅಥವಾ ಯಾವುದೇ ಒಂದು ವಿಶೇಷ ಘಟನೆಯ ಇತಿಹಾಸವದಲ್ಲ. ಇತರ ಇತಿಹಾಸಗಳಲ್ಲಿ ಬೇರೆ ಬೇರೆ ರೀತಿಯ ಪರಿವರ್ತನೆಗಳಾಗಬಹುದು; ಆದರೆ, ಈ ಇತಿಹಾಸದಲ್ಲಿ ಪ್ರಾಣ ತಿದ್ದುಪಡಿಯೂ ಅನಗತ್ಯ. ಸಮಸ್ತ ಭಾರತೀಯರ ಸಕಲ ಸಾಧನೆ, ಆರಾಧನೆ ಮತ್ತು ಕಲ್ಪನೇತಿಹಾಸವು ಈ ಎರಡು ಮಹಾಕಾವ್ಯ ರೂಪಿಯಾದ ಪ್ರಾಸಾದಗಳಲ್ಲಿ ಚಿರಕಾಲ ರಾಷ್ಟ್ರೀ ಸಿಂಹಾಸನದಲ್ಲಿ ವಿರಾಜಮಾನವಾಗಿದೆ.

ಈ ಕಾರಣದಿಂದ ರಾಮಾಯಣ ಮಹಾಭಾರತಗಳನ್ನು ಕಾಣುವ ದೃಷ್ಟಿಯಲ್ಲಿ ಅಂತರವಿರಬೇಕಾಗುತ್ತದೆ. ರಾಮನು ಉಜ್ಜ್ವಲ ನೀತಿ; ಲಕ್ಷ್ಮಣನ ಚರಿತ್ರ ಆದರ್ಶ ಅಥವಾ ಸಿರಿಆದರ್ಶವೆಂದಿಷ್ಟೆ ಹೇಳಿದರೆ ಪ್ರಯೋಜನವಿಲ್ಲ. ಸಾವಿರಾರು ವರ್ಷಗಳಿಂದ ಈ ಎರಡು ಮಹಾಕಾವ್ಯಗಳನ್ನು ಭಾರತೀಯರು ಯಾವ ರೀತಿಯಿಂದ ವೀಕ್ಷಿಸಿಕೊಂಡು ಬಂದಿದ್ದಾರೆ ಎಂಬುವನ್ನು ನಾವು ಅವಶ್ಯ ನೋಡಬೇಕಾಗಿದೆ.

ರಾಮಾಯಣದ ನಮಗೀಯುವ ಸಂದೇಶವಾವುದು, ಇದು ಭಾರತೀಯರ ಮುಂದಿಡುವ ಆದರ್ಶ ಯಾವುದು ಎಂಬುದನ್ನು ನಾವು ವಿಚಾರಿಸಬೇಕು. ದೇಶಕಾಲಗಳನ್ನು ಹೊಂದಿಕೊಂಡು ಸಾಹಿತ್ಯ ಸೃಷ್ಟಿಯಾಗುವುದೆಂಬುದನ್ನು ನಾವು ಒಪ್ಪಬೇಕು. ಸಾಮಾನ್ಯವಾಗಿ ವೀರಾವೇಶ" ದ ಕಾಲದಲ್ಲಿ ಹುಟ್ಟಿಕೊಳ್ಳುವ ಸಾಹಿತ್ಯದಲ್ಲಿ ವೀರರಸಕ್ಕೆ ಪ್ರಾಧಾನ್ಯವಿರುತ್ತದೆ. ಎಲ್ಲ ದೇಶಗಳಲ್ಲೂ ಹೆಚ್ಚಾಗಿ ವೀರರಸವೇ ಅಗ್ರಗಣ್ಯ ಸ್ಥಾನ ಪಡೆಯುತ್ತದೆ. ರಾಮಾಯಣದ ಕಾಲದಲ್ಲಿ ಬೇಕಷ್ಟು ಯುದ್ಧಗಳಾದುವು; ನಾಯಕ— ಪ್ರತಿನಾಯಕರು ಸ್ವಯಂ ಬಲಶಾಲಿಗಳಾಗಿದ್ದರು. ಅನೇಕಾನೇಕ ಮಹಾ ವೀರರು ನಾನಾ ಹೊಂದಿದರು. ಇದರಿಂದ ರಾಮಾಯಣದ ಮುಖ್ಯರಸ ವೀರವೆಂದು ಹೇಳುವುದು ಸರಿಯೇ ಅವರೂ ವಾಸ್ತವಿಕತೆಗೆ ವಿರುದ್ಧವಿವೆ.

ಯಾವುದೇ ಒಂದು ದೇವತೆಯ ಅವತಾರ ವರ್ಣನೆಯಿದು ಎಂದೂ ನಾವು ಹೇಳುವಾತಿಲ್ಲ. ಕವಿ ವಾಲ್ಮೀಕಿಯು ರಾಮನನ್ನು ಅವತಾರವೆಂದು ಮನ್ನಿಸಿಲ್ಲ;

(೧೦ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ನಮ್ಮ ರಾಜ್ಯ

ಕೆಲವು ಪ್ರೇಕ್ಷಣೀಯ ಸ್ಥಳಗಳು

ಪ್ರವಾಸಿಯ ನಂದನವನವೆಂದು ಹೆಸರಾದ ಕರ್ನಾಟಕದ ಕ್ಷೇತ್ರಗಳ ಸೂಕ್ಷ್ಮ ಪರಿಚಯವನ್ನು ಕ್ರಮಶಃ ಇಲ್ಲಿ ನೀವು ನೋಡುವಿರಿ.

ಕರ್ನಾಟಕ ರಾಜ್ಯದಲ್ಲಿರುವ ಪ್ರವಾಸ ಕೇಂದ್ರಗಳು ಅಸಂಖ್ಯಾತವಾಗಿರುವುವಲ್ಲದೆ, ಪ್ರೇಕ್ಷಕರಿಗವು ಆಕರ್ಷಕವಾಗಿವೆ. ಉತ್ತಮ ಹವೆಯಿಂದ ಕೂಡಿದ ಈ ರಾಜ್ಯದಲ್ಲಿ ಪ್ರವಾಸಿಕರಿಗೆ ಮಾತ್ರವಲ್ಲ, ಯಾತ್ರಾರ್ಥಿಗಳಿಗೂ ವಿದ್ವಾಂಸರಿಗೂ ಉದ್ದಿಮೆದಾರರಿಗೂ ಮೋಹಕವಾದ ಎಡೆಗಳು ಬಹಳಷ್ಟಿವೆ. ಪ್ರಾಚೀನ ಕಾಲದ ರಾಜಧಾನಿಗಳು, ಐತಿಹಾಸಿಕ ಮಹಾಪುರುಷರ ಸ್ಮಾರಕಗಳು, ಕಲಾವೈಭವಗಳು ಪ್ರತಿಮೆ ವಿಗ್ರಹಗಳು, ಹೃದಯಾಕರ್ಷಕ ಸಮುದ್ರ, ಬಂದರಗಳು, ಪ್ರಾಕೃತಿಕ ಉದ್ಯಾನಗಳು, ಬೆಟ್ಟದೂರುಗಳು ಎಲ್ಲವೂ ಸಂದರ್ಶಕನನ್ನು ಮುಗ್ಧಗೊಳಿಸುವ ಶಕ್ತಿಯಿಂದ ಕೂಡಿವೆ. ಕರ್ನಾಟಕವು ಪ್ರವಾಸಿಯ ನಂದನವನವೆನ್ನಬಹುದು. ಪರಂಪರಾ ಪ್ರಾಪ್ತವಾದ ಅತಿಥಿ ಸತ್ಕಾರದ ಭಾವನೆಯಿಂದ ರಾಜ್ಯದ ಎಲ್ಲೆಡೆಯಲ್ಲೂ ಹೋಟೇಲುಗಳು, ಪ್ರವಾಸಿ ಮಂದಿರಗಳು, ವಿಶ್ರಾಮಧಾಮಗಳು ಇವೆ. ಇಲ್ಲಿ ಇಂತಹ ಕೆಲವು ಸಂದರ್ಶನಯೋಗ್ಯವಾದ ಸ್ಥಳಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಬಹುದು.

೧. ಬೆಂಗಳೂರು

ಬೆಂಗಳೂರು ರಾಜ್ಯದ ರಾಜಧಾನಿ. ಮತ್ತು ದೊಡ್ಡ ನಗರ. ೧೭ನೆಯ ಶತಮಾನದಲ್ಲಿ ಪಾಳೆಯಗಾರ ಕೆಂಪೇಗೌಡ ಎಂಬವನು ಇದನ್ನು ಸ್ಥಾಪಿಸಿದನು. ಭೌಗೋಳಿಕ ಸ್ಥಿತಿ ಮತ್ತು ಉತ್ತಮ ಹವಾಗುಣದ ಕಾರಣದಿಂದಾಗಿ, ಬೆಂಗಳೂರು ವ್ಯಾಪಾರ ಕೇಂದ್ರವಾಗಿ ಬೆಳೆಯಿತು. ೩೬ ಚದರ ಮೈಲು ವಿಸ್ತೀರ್ಣವುಳ್ಳ ಈ ನಗರದಲ್ಲಿ ೧೩ ಲಕ್ಷ ಜನಸಂಖ್ಯೆಯಿರುವುದು.

ಹಳೆಕೋಟೆ, ಟಿಪ್ಪುಸುಲ್ತಾನನ ಅರಮನೆ, ಲಾಲ್‌ಬಾಗ್, ಚಾಮರಾಜೇಂದ್ರ ಪಾರ್ಕ್, ಮಹಾರಾಜರ ಅರಮನೆ, ವಿಧಾನ ಸೌಧ, ರಜತೋತ್ಸವ ಟೆಕ್ನಿಕಲ್ ಸಂಸ್ಥೆ, ಒಕ್ಯುಪೇಶನಲ್ ಇನ್ಸ್ಟಿಟ್ಯೂಟ್, ಇಂಜನಿಯರಿಂಗ್ ಕಾಲೇಜ್, ಸೆಂಟ್ರಲ್ ಕಾಲೇಜ್, ಸರ್. ಕೆ. ಪಿ. ಪುಟ್ಟಣ್ಣ ಚೆಟ್ಟಿ ನಗರ ಭವನ, ಸಂಗ್ರಹಾಲಯ, ಮೇಯೋ ಭವನ, ವಿಮಾನ ನಿಲ್ದಾಣ, ಭಾರತೀಯ ವೈಜ್ಞಾನಿಕ ಸಂಸ್ಥೆ, ರಾಮನ್ ಸಂಶೋಧನಾಲಯ, ಅಖಿಲ ಭಾರತ ಮಾನಸಿಕಾರೋಗ್ಯ ಸಂಸ್ಥೆ ಮೊದಲಾದುವು ಸಂದರ್ಶನೀಯ ಸ್ಥಳಗಳು. ಬೆಂಗಳೂರಿನ ಆಸುಪಾಸುಗಳಲ್ಲಿಯೂ ಕೆಲವು ಪ್ರೇಕ್ಷಣೀಯ ಸ್ಥಾನಗಳಿದ್ದು, ಇವನ್ನು ದರ್ಶಕರು ಬಿಟ್ಟು ಬಿಡುವಂತಿಲ್ಲ.

೨. ನಂದೀ ಬೆಟ್ಟಗಳು

ಸುಪ್ರಸಿದ್ಧ ಆರೋಗ್ಯಧಾಮವಿದು. ಬೆಂಗಳೂರಿಂದ ೩೮ ಮೈಲು ದೂರವಿರುವ ನಂದಿಬೆಟ್ಟವನ್ನು ರೇಲು ಮೂಲಕ ಅಥವಾ ಬಸ್ಸು ಮೂಲಕ ತಲಪಬಹುದು. ಸಮುದ್ರ ಮಟ್ಟದಿಂದ ೪,೮೫೦ ಅಡಿಗಳಷ್ಟು ಎತ್ತರದಲ್ಲಿದೆ; ಗುಡ್ಡದ ತಲೆಯವರೆಗೂ ಮೋಟಾರು ರಸ್ತೆಯಿದ್ದು ಅಲ್ಲಿ ಸುವ್ಯವಸ್ಥಿತ ಬಂಗಲೆಗಳಿವೆ. ಇಲ್ಲಿನ ಕಲ್ಲಿನ ಕೋಟೆಯು ಇತಿಹಾಸದ ವಿದ್ಯಾರ್ಥಿಗಳಿಗೂ ಪ್ರೇಕ್ಷಕರಿಗೂ ಕೌತುಕವೆನಿಸುವುದು.

೩. ಕೋಲಾರದ ಚಿನ್ನದ ಗಣಿಗಳು

ರೇಲು ಅಥವಾ ಬಸ್ಸುಗಳಿಂದ ಸೇರಬಹುದಾದ ಇದು ಬೆಂಗಳೂರಿಂದ ಸುಮಾರು ೬೦ ಮೈಲುಗಳ ದೂರದಲ್ಲಿದೆ. ಪ್ರಪಂಚದ ಅತಿ ಆಳವಾದ ಚಿನ್ನದ ಗಣಿಗಳಲ್ಲಿ ಕೆಲವು ಇಲ್ಲಿವೆ. ಈ ಗಣಿಗಳು ಇತ್ತೀಚೆಗೆ ರಾಷ್ಟ್ರೀಕರಣಕ್ಕೆ ಒಳಪಟ್ಟಿದ್ದು, ಸಧ್ಯ ಅವು ನೇರವಾಗಿ ರಾಜ್ಯ ಸರಕಾರದ ಆಡಳಿತೆಯಲ್ಲಿವೆ.

೪. ಮೈಸೂರು

'ಉದ್ಯಾನಗಳ ನಗರ'ವೆಂಬ ಉಪನಾಮಕ್ಕೆ ಪಾತ್ರವಾದ ಮೈಸೂರು ಭಾರತದ ರಮಣೀಯ ನಗರಗಳಲ್ಲಿ ಒಂದಾಗಿದೆ. ಸಮುದ್ರ ಮಟ್ಟದಿಂದ ೨,೫೫೫ ಅಡಿ ಎತ್ತರದ ಮೈಸೂರು ಬೆಂಗಳೂರಿನಿಂದ ೮೬ ಮೈಲು ನೈಋತ್ಯ ದಿಕ್ಕಿನಲ್ಲಿದೆ. ಅಗಲವಾದ ರಸ್ತೆಗಳು, ಆಕರ್ಷಕ ಉದ್ಯಾನಗಳು, ಅರಮನೆ ಮತ್ತಿತರ ಭವನಗಳಿಂದ ಪ್ರೇಕ್ಷಕರ ಮನವನ್ನು ಸೆಳೆಯುವುದು.

ನವರಾತ್ರಿಯ ದಸರ ಹಬ್ಬದ ಸಮಯದಲ್ಲಿ ಭಾರತದ ಮೂಲೆ ಮೂಲೆಗಳ, ಮಾತ್ರವಲ್ಲ, ವಿದೇಶಗಳ ಜನ ಜಂಗುಳಿಯು ಇಲ್ಲಿ ಆಕರ್ಷಿಸಲ್ಪಡುತ್ತದೆ. ಒಂಬತ್ತು ದಿನಗಳ ನವರಾತ್ರಿ ಹಬ್ಬಗಳು ಹತ್ತನೆಯ ದಿನದ ಜಂಬೂಸವಾರಿ ಮೆರವಣಿಗೆಯೊಡನೆ ಕೊನೆಗಾಣುವುವು. ಹಿಂದೂ ಶಿಲ್ಪಕಲೆಗೂ ಈ ಸ್ಥಳವು ಸುಪ್ರಸಿದ್ಧವಾಗಿದೆ. ಜಗನ್ಮೋಹನ ರಾಜಭವನ, ಲಲಿತ ಮಹಲು, ಮೊದಲಾದ ಪ್ರೇಕ್ಷಣೀಯ ಸ್ಥಾನಗಳಿಲ್ಲಿವೆ. ಇಲ್ಲಿನ ಮೃಗಾಲಯ, ಚಾಮುಂಡಿ ಬೆಟ್ಟಗಳನ್ನು ಮರೆಯುವುದು ಸಾಧ್ಯವಿಲ್ಲ.

೫. ಶ್ರೀರಂಗಪಟ್ಟಣ

ಕಾವೇರಿನದಿಯ ಕವಲುಗಳ ನಡುವಿರುವ ನಡುಗುಡ್ಡೆಯೇ ಶ್ರೀರಂಗಪಟ್ಟಣ. ನಾಲ್ಕು ಮೈಸೂರು ಕದನಗಳ ಮತ್ತು ಕರ್ನಾಟಕದ ರಕ್ಷಣೆಗಾಗಿ ಹೋರಾಡಿದ ಮಹಾವೀರ ಟಿಪ್ಪುಸುಲ್ತಾನನ ಸ್ಮಾರಕವೆಂಬಂತಿದೆ, ಇದು. ಶ್ರೀ ರಂಗನಾಥ ಸ್ವಾಮಿಯ ದೇವಾಲಯ, ಟಿಪ್ಪುವಿನ ಬೇಸಗೆ ಅರಮನೆಯಾದ ದರಿಯಾ ದೌಲತ್ ಬಾಗ್ ಹಾಗೂ ಟಿಪ್ಪು ಮತ್ತಾತನ ಕುಟುಂಬದವರ ಸಮಾಧಿಸ್ಥಾನಗಳು ಇಲ್ಲಿ ನೋಡತಕ್ಕವಿವೆ. ಇತ್ತೀಚೆಗೆ ಇಲ್ಲೊಂ

(೬ನೇ ಪುಟ ನೋಡಿರಿ)



ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

1959ರಲ್ಲಿ, ಅಂದರೆ ತನ್ನ ಮೊದಲ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಲ್ಲಿ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ನು

428,00,00,000

ರೂಪಾಯಿಗಳಿಗೂ ಮೇಲ್ಪಟ್ಟಿರುವಷ್ಟು ಹೊಸ ವ್ಯವಹಾರವನ್ನು ಪೂರ್ತಿಗೊಳಿಸಿದೆ.

ದಿನ ಪ್ರತಿದಿನ ಬೆಳೆಯುತ್ತಲಿರುವ ರಾಷ್ಟ್ರದ ಸಂಪತ್ತಿಗೆ ಜೊತೆಯಾಗುವಂತೆ, ಕಾರ್ಪೊರೇಷನ್ನು ಸಹಾ ದೇಶದಾದ್ಯಂತ ಭಾಗಗಳಲ್ಲಿಯೂ ಆದಷ್ಟು ಹೆಚ್ಚು ಜನರಿಗೆ ಆರ್ಥಿಕ ಸ್ಥೈರ್ಯ ಮತ್ತು ವಿಮೆಯ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಡುವ ತನ್ನ ಗುರಿಯನ್ನು ಸಾಧಿಸಲು, ಸಾಕಷ್ಟು ವೇಗದಿಂದ ಹೆಜ್ಜೆ ಹಾಕುತ್ತಲಿದೆ.

ಮಕ್ಕಳ ಶಿಕ್ಷಣ ಮತ್ತು ಮದುವೆ ಖರ್ಚು, ಜೀವನೋದ್ಯೋಗಕ್ಕೆ ತೊಡಗುವ ಮೊದಲು ಬೇಕಾಗಬಹುದಾದ ಭಂಡವಲು, ವೃದ್ಧಾಪ್ಯದಲ್ಲಿ ಸುಖದಿಂದಿರಲು ಪಿಂಚಣಿ, ಅಥವಾ ಆಕಸ್ಮಾತ್ತಾದ ಪ್ರಸಂಗ ಒದಗಿ ತಾವಿಲ್ಲದೇ ಹೋದಾಗ ತಮ್ಮ ಕುಟುಂಬಕ್ಕೆ ಅತ್ಯವಶ್ಯವಾದ ನಿಯಮಿತ ವರಮಾನ— ಇದರಲ್ಲಿ ಯಾವುದನ್ನು ಒದಗಿಸುವದಕ್ಕೂ ಸಾಧನ ಒಂದೇ— **ಜೀವವಿಮೆ.**

ಜನತೆ ಸ್ವಾನುಭವದ ಮೂಲಕ ಒಂದು ಮಾತನ್ನು ಮನಗಂಡಿದೆ—

ಜೀವವಿಮೆಗೆ ಪ್ರತಿ ಇಲ್ಲ.

ದೇಶ ಪರಿಚಯ

ಪ್ರಗತಿಶೀಲ ಹಂಗೇರಿರಾಜ್ಯ

೨೦ ವರ್ಷಗಳಿಗೆ ಮೊದಲು ಯುರೋಪಿನ ತೀರ ಹಿಂದುಳಿದ ರಾಷ್ಟ್ರವೆಂದು ತನ್ನ ಕಾಯಕಪಲ್ಲಟನ ಕಾರ್ಯದಲ್ಲಿ ಯಶಸ್ವಿಯಾಗುತ್ತಿದೆ.

ಅಂದು ತೀರ ಕೆಳಮಟ್ಟದಲ್ಲಿದ್ದ ಹಂಗೇರಿ ರಾಷ್ಟ್ರವು ಇಂದು ಯುರೋಪ ಕ್ಷಿತಿಜದ ಮೇಲೆ ಧ್ರುವತಾರೆಯಾಗಿ ಬೆಳಗುತ್ತಿರುವದು. ದಿನದಿಂದಿನಕ್ಕೆ ಅಭ್ಯುದಯ ಹೊಂದಿರುತ್ತಲಿರುವ ರಾಷ್ಟ್ರಗಳಲ್ಲಿ ಹಂಗೇರಿಯೂ ಯುರೋಪಖಂಡದಲ್ಲಿ ಇತ್ತೀಚಿಗೆ ಒಂದು ಗಣನೀಯಸ್ಥಾನವನ್ನು ಪಡೆದಿರುವದು. ಈ ರೀತಿ ಹಂಗೇರಿಯು ವಿನೂತನ ರೂಪ ತಾಳಲಿಕ್ಕೆ ಅಲ್ಲಿಯ ನಿವಾಸಿಗಳೇ ಕಾರಣೀಭೂತರಾಗಿದ್ದಾರೆ. ಅವರಿಂದು ಸುಶೀಲರೂ, ಸುಸಂಪನ್ನರೂ, ನಿರೋದ್ಯೋಗಿಗಳೂ ಆಗಿರುವರು. ಹಂಗೇರಿಯು ಮಧ್ಯಯುರೋಪದ ಮೂಡುವ ದಿಕ್ಕಿಗಿರುವ ಒಂದು ಚಿಕ್ಕ ರಾಷ್ಟ್ರವಾಗಿದೆ. ಆದರೂ ಅದರ ಬೆಳಕು ಸಮಗ್ರ ಯುರೋಪಖಂಡದಲ್ಲಿ ಹಬ್ಬಿರುವದು. ಹಂಗೇರಿಯ ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದಾಗಿದೆ! ಸಧ್ಯ ಯುರೋಪಿಯನ್ನರ ತೀಕ್ಷ್ಣದೃಷ್ಟಿಕೋನವತ್ತ ಹೊರಳಿರುವದು.

ಈ ದೇಶದ ಭೂವಿಸ್ತಾರವು ಸುಮಾರು ೩೫,೯೧೨ ಚೌರಸ ಮೈಲು ಅದರ ಜನವಸತಿ ಸುಮಾರು ೯೮,೦೦,೦೦೦ ಇರುವದು. ದೇಶದ ಬಹುಭಾಗವು ಸಪಾಟಾಗಿದ್ದು ವಿಶಾಲ ಬೈಲುಪ್ರದೇಶವಾಗಿರುವದು ಇಲ್ಲಿಯೇ ಮಧ್ಯಯುರೋಪದ ಬಹುಸುಂದರ ಹಾಗೂ ರಮಣೀಯವಾದ ಬೃಹದ್ ಆಕಾರದ ಸರೋವರ ಇರುವದು. ಇದೊಂದು ಅಲ್ಲಿಯ ಪ್ರೇಕ್ಷಣೀಯ ಸ್ಥಳವಾಗಿದೆ. ಅನೇಕ ಜನರು ಈ ಸರೋವರದಲ್ಲಿ ಈಸಾಡುವಾಗ ಚಿಂತೆಯನ್ನೂ ದುಃಖವನ್ನೂ ಕ್ಷಣಾರ್ಧದಲ್ಲಿಯೇ ಮರೆತು ಬಿಡುವರು. ಈ ದೊಡ್ಡ ಸರೋವರವನ್ನು ಬೆಲೇಟೋನ್ ಎಂಬ ಹೆಸರಿನಿಂದ ಸಂಬೋಧಿಸುವರು. ಅದರ ಸುತ್ತಳತೆಯು ೨೩೩ ಚೌರಸ ಮೈಲು ಇದ್ದು ಆಳವೂ ಅಧಿಕ ಪ್ರಮಾಣದಲ್ಲದೆ. ಇದರ ದರ್ಶನ ಪಡೆಯಲು ಯುರೋಪಖಂಡದ ರಾಷ್ಟ್ರಗಳ ಜನರೂ ಅದರ ಸುತ್ತುಮುತ್ತಲಿನ ದೇಶದ ರಸಿಕರೂ ಗುಂಪು-ಗುಂಪಾಗಿ ಬಂದು ಸಂತೋಷಭರಿತರಾಗಿ ಹಿಂತಿರುಗುವರು. ಇಲ್ಲಿಯ ಅತಿದೊಡ್ಡ ನದಿಯೆಂದರೆ ಡ್ಯಾನ್ಯೂಬ್. ಈ ನದಿಯು ಸಮುದ್ರಕ್ಕೆ ಕೂಡಿರುವ ಸಮೀಪದ ಪಟ್ಟಣವೂ "ಡ್ಯಾನ್ಯೂಬ್". ಅಂತೂ ಹಂಗೇರಿಯ ಪ್ರಮುಖ ಪಟ್ಟಣಗಳಲ್ಲಿ ಈ ಡ್ಯಾನ್ಯೂಬ್ ನಗರ ಒಂದಾದರೆ ಇನ್ನೊಂದು ಹಂಗೇರಿ ದೇಶದ ರಾಜಧಾನಿಯಾದ "ಬುಡಾಪೆಸ್ಟ್" ಆಗಿದೆ. ದೊಡ್ಡ ಪಟ್ಟಣ ಅಷ್ಟೇ ಅಲ್ಲದೇ ರಾಷ್ಟ್ರದಲ್ಲಿಯೇ ಅತಿಜನ ನಿಬಿಡವಾದ ನಗರಗಳಾಗಿವೆ. ಯಾವಾಗಲೂ ಅವು ಜನರಿಂದ ತುಂಬಿಕೊಂಡಿರುವವು. ರಾಜಧಾನಿ ಬುಡಾಪೆಸ್ಟ್ ಇದು ಯುರೋಪಖಂಡದ ಒಂದು ಸೌಂದರ್ಯಮಯ ನಗರವಾಗಿದೆ. ಅಷ್ಟೇ ಅಲ್ಲ, ವಿಶ್ವದಲ್ಲಿರುವ ಕೆಲವೇ ಪ್ರಮುಖ ಪಟ್ಟಣಗಳೊಂದಿಗೆ ಈ ನಗರದ ಗಣನೆಯನ್ನು ಮಾಡುವರು.

ಹಂಗೇರಿ ದೇಶದ ಬಗ್ಗೆ ಎಲ್ಲರೂ ಪ್ರೀತಿಯನ್ನು ವ್ಯಕ್ತಪಡಿಸುವರು. ಅಲ್ಲಿರುವ "ನೀರಿನ ಬುಗ್ಗೆ" (ಝರಿ) ಜಗತ್ತಿನಲ್ಲಿಯೇ ಪ್ರಸಿದ್ಧವಾಗಿರುವವು. ಅಲ್ಲಿ ಅವು ಅನೇಕ ಕಡೆಗಳಲ್ಲಿ ನಮ್ಮ ಕಣ್ಣಿಗೆ ಬೀಳುವವು. ಈ ಝರಿಗಳ ತಂಪಾದ ನೀರಿನಲ್ಲಿ ಅನೇಕ ಪ್ರಕಾರದ ಪದಾರ್ಥಗಳು ಲಭಿಸುತ್ತವೆ. ಅವು ನಮ್ಮ ದೇಹದ ಆರೋಗ್ಯ ದೃಷ್ಟಿಯಿಂದ ಅಧಿಕ ಲಾಭಪ್ರದವಾಗಿವೆ. ಈ ಬುಗ್ಗೆಗಳ ನೀರನ್ನು ಕ್ಷಯರೋಗಿಗಳಿಗೆ ಪೂರೈಸಿದರೆ ತುಂಬಾ ಲಾಭವಾಗುವದಷ್ಟೇ ಅಲ್ಲ; ನೀರೋಗಿಗಳನ್ನಾಗಿಯೂ ಮಾಡಲು ಸಹಕಾರಿಯಾಗುವದು. ಈ ಪ್ರಕಾರದ ಝರಿಗಳು ಅಲ್ಲಿ ಹೇರಳವಾಗಿದ್ದು, ಹೃದಯ ರೋಗಿಗಳಿಗೆ ಸಹಾಯವನ್ನು ಮಾಡುವವು.

ನಮ್ಮ ವಿಶ್ವಕವಿ ರವೀಂದ್ರನಾಥ ಠಾಕುರರು ಸಹ ತಮಗೆ ಆದ ಹೃದಯ ರೋಗದ ಬಗ್ಗೆ ಉಪಚಾರಹೊಂದಲು ಹಂಗೇರಿಗೆ ಸನ್ ೧೯೨೬ನೇ ನವಂಬರ ತಿಂಗಳ ಅಂತ್ಯದಲ್ಲಿ ತೆರಳಿದ್ದರು. ಆ ದೇಶದಲ್ಲಿರುವ ಪ್ರಸಿದ್ಧ ಆಸ್ಪತ್ರೆಯಲ್ಲಿ ತಮ್ಮ ರೋಗದ ಚಿಕಿತ್ಸೆಯನ್ನು ಹೊಂದಿ, ಕೆಲ ಕಾಲ ಅಲ್ಲಿಯೇ ವಿಶ್ರಾಂತಿಯನ್ನು ಪಡೆದು ಮರಳಿ ಸ್ವದೇಶಕ್ಕೆ ಹಿಂತಿರುಗಿದರು. ಅಂದು ಅವರು ಚಿಕಿತ್ಸೆಪಡೆದ ಆಸ್ಪತ್ರೆಯ ಮುಂದೆ ಕವಿ ರವೀಂದ್ರನಾಥರ ಬೃಹದ್ ಆಕಾರದ ಮೂರ್ತಿಯು ಇಂದು ನಮಗೆ ನೋಡಲು ಸಿಗುವದು. ಇನ್ನೂ ತನಕ ಅಚ್ಚಳಿಯದೇ ಇರುವ ಆ ಪ್ರತಿಮೆಯನ್ನು ನೋಡಿದ ತಕ್ಷಣ ರವೀಂದ್ರರು ಇತ್ತ ಬಂದ ಉದ್ದೇಶವನ್ನು ನಮಗೆ ಜ್ಞಾಪಿಸಿ ಕೊಡುವದು.

ಹಂಗೇರಿಯನ್ನರು ತಮ್ಮ ರಾಜ್ಯ ಕಾರಭಾರವು ಸುರಳೀತ ಸಾಗಿಸಲು, ಹಂಗೇರಿಯನ್ನರು ಹತ್ತೊಂಬತ್ತು ವಿಭಾಗಗಳನ್ನು ಮಾಡಿ ಅಧಿಕಾರಿಸುವರು. ನಾವು ಜನೇವರಿ ೨೬ನೇ ದಿನವನ್ನು ಪ್ರಜಾರಾಜ್ಯ ದಿನವೆಂದು ಆಚರಿಸುವಂತೆ ಹಂಗೇರಿಯ ನಿವಾಸಿಗಳು ಆಗಷ್ಟ ತಿಂಗಳ ೨೦ ದಿನವನ್ನು ತಮ್ಮ ಸಂವಿಧಾನದ ವಾರ್ಷಿಕ ಹಬ್ಬವೆಂದು ಬಹು ಸಡಗರದಿಂದ ಆಚರಿಸುವರು. ಆ ದಿವಸಕ್ಕೆ ಹಂಗೇರಿಯನ್ನರು ಸಂಪೂರ್ಣವಾಗಿ ತಮ್ಮ ಹೊಸ ಪ್ರಜಾಸರಕಾರವನ್ನು ಪಡೆದರು. ಅಂದಿನ ದಿನವು ಅವರ ಗಣರಾಜ್ಯದ ಚಿರಸ್ಮರಣೆಯ ದಿನವಾಗಿದೆ.

ಈ ರಾಷ್ಟ್ರದಲ್ಲಿ ಸಮಾಜವಾದಿ ಶಾಸನ ಪದ್ಧತಿಯು ಕಳೆದ ಹತ್ತು ವರ್ಷಗಳ ಹಿಂದೆಯೇ ಪ್ರಾರಂಭವಾಗಿತ್ತು. ಈ ಹೊಸ ಪದ್ಧತಿಯು ಆರಂಭವಾಗುವ ಮುನ್ನ ಅಲ್ಲಿ ಯಾವದೇತರದ ಲಿಖಿತ ಶಾಸನ ಪದ್ಧತಿಯು ಇಲ್ಲವಾಗಿತ್ತು. ಅಂತೆಯೇ ಮೇಲಿಂದ ಮೇಲೆ ಆತ್ತ ಹೊಸ ಹೊಸ ರಾಯದೆ—ಕಾನೂನುಗಳನ್ನು ಜಾರಿಗೆಪಡಿಸುತ್ತಿದ್ದರು. ಇವರಿಂದ ಹಂಗೇರಿಯಲ್ಲಿ ಕೆಲಕಾಲವಾದರೂ ಒಂದು ಸ್ಥಿರವಾದ ಸರಕಾರ ಸ್ಥಾಪಿತಗೊಂಡಿದ್ದಿಲ್ಲ. ಹೊಸ ಬಗೆಯ ಕಾಯದೆಗಳಿಗನುಸಾರವಾಗಿ ಹಂಗೇರಿ ಶಾಸನವನ್ನು ನಡೆಸುತ್ತಿದ್ದರು. ಆದರೆ ಹಂಗೇರಿಯ ಇತಿಹಾಸದಲ್ಲಿಯೇ ಪ್ರಥಮಸಲ ಅಂದರೆ ಸನ್ ೧೯೪೯ರಿಂದು ಹಂಗೇರಿಯನ್ನರಿಗೆ ಒಂದು ಸುಸಂಪೂರ್ಣ ಸಾಮಾಜಿಕ ಹಾಗೂ ಹಣಕಾಸಿನ ವ್ಯವಸ್ಥೆಯನ್ನು ಸ್ಥಿರಗೊಳಿಸುವ ಸುಸಂವಿಧಾನ ಲಭಿಸಿತು. ಇದರಿಂದ ಹಂಗೇರಿಯ ನಿವಾಸಿಗಳು ಅದರ ಸದುಪಯೋಗವನ್ನು ಪಡೆಕೊಂಡರು ಮುಂದೆ ಈ ಪ್ರಯತ್ನವು ವಿದೇಶೀ ಶಕ್ತಿಗಳ ಬಲಾಬಲದಿಂದ ವಿಫಲಗೊಂಡಿತು. ಕೊನೆಗೆ ದ್ವಿತೀಯ ಜಾಗತಿಕ ಮಹಾಯುದ್ಧ ಕೊನೆಗೊಳ್ಳುವ ಸಮಯದಲ್ಲೂ ಹಾಗೂ ಹಿಟ್ಲರನ ಸರ್ವಾಧಿಕಾರ (ನಿರಂಕುಶ ಪ್ರಭುತ್ವ) ನಿರ್ನಾಮವಾಗುವ ಸಂದರ್ಭದಲ್ಲಿ ಕಳೆದುಹೋದ ಅಂದಿನ ಐತಿಹಾಸಿಕ ಲಾಭವು ಪುನಃ ಸಿಕ್ಕಿತು. ಹಾಗೂ ತಿರುಗಿ ಹಂಗೇರಿಯ ನಿವಾಸಿಗಳು ಅದರ ಉಪಯೋಗವನ್ನು ದೊರಕಿಸಿಕೊಂಡರು. ಇದಲ್ಲದೇ ಅವರು ಒಕ್ಕಟ್ಟಾಗಿ ತಮ್ಮ ಸ್ನೇಹಿತ ರಾಷ್ಟ್ರಗಳ ಭೌತಿಕ ಹಾಗೂ ನೈತಿಕ ಸಹಾಯದ ಬಲದಿಂದ ಅವಿಶ್ರಾಂತವಾಗಿ ಪ್ರಯತ್ನಿಸಿ ತಮ್ಮ ರಾಷ್ಟ್ರಕ್ಕೆ ನವನೂತನ ರೂಪವನ್ನು ತಂದು ಕೊಟ್ಟರು. ಅವರ ಆ ಪ್ರಯತ್ನದಿಂದಲೇ ಇಂದು ಹಂಗೇರಿಯು ಯುರೋಪ ಖಂಡದಲ್ಲಿ ಹೊಸ ರಾಷ್ಟ್ರವಾಗಿ ಉದಯಿಸುತ್ತಿರುವದು. ಇನ್ನು ಕೆಲವು ವರ್ಷಗಳಲ್ಲಿಯೇ ಅದೊಂದು ಬಲಾಢ್ಯ ರಾಷ್ಟ್ರವಾಗಲು ಕೆಲಮಾತ್ರ ಸಂದೇಹವಿಲ್ಲ. ಆದರೂ ಆ ರೀತಿಯಲ್ಲಿತಂದ ಕೊಡುವ ಭಾರ ಹಂಗೇರಿಯ ನಿವಾಸಿಗಳ ಮೇಲೆ ಒಜ್ಜೆಯಾಗಿ ಬಿದ್ದಿದೆ. ಹಂಗೇರಿಯ ಪುನರ್ನಿರ್ಮಾಣದ ಮೂಲಕ ಅಲ್ಲಿಯ ಗಣತಂತ್ರ ರಾಜ್ಯದ ಸರಕಾರ ಇನ್ನಿಷ್ಟು ಪ್ರಬಲವಾಗಿ ಬೆಳಗಿತು.

ಈ ಸಂವಿಧಾನದ ಹಿಂದೆ ಅಭೂತಪೂರ್ವ ಮಹತ್ವ ಅಡಗಿರುವದು ಯಾಕಂದರೆ, ಈ ಹೊಸ ಘಟನೆಯು ದೇಶದ ಉತ್ಪಾದನೆಯ ಕ್ಷೇತ್ರದಲ್ಲಿ ಒಂದು ಕ್ರಾಂತಿಕಾರಿ ಸ್ವರೂಪದ ಅಲ್ಲೋಲ-ಕಲ್ಲೋಲದ ಅಮರ ಸಂದೇಶವನ್ನು ನೀಡಿರುವದು. ಹಂಗೇರಿಯ ಹೊಸ ಘಟನೆಯು ಘೋಷಿಸಲ್ಪಟ್ಟಾಗ, "ಹಂಗೇರಿ ಜನತಂತ್ರವು ಕಾರ್ಮಿಕರ (ಕೂಲಿಕಾರರ) ಮತ್ತು ಕಿಸಾನ (ರೈತರ) ರಾಜ್ಯ'ವೆಂದು ಸಾರಿತು! ಆದರಿಂದ ರಾಜ್ಯ, ಜನರ ಶಿಕ್ಷಣ ಸಂಸ್ಥೆಗಳು, ಸಹಕಾರಿ ಸಂಘ-ಸಂಸ್ಥೆಗಳು ಹಾಗೂ ದೇಶದ ಉತ್ಪಾದನೆ ಇತ್ಯಾದಿಗಳೆಲ್ಲವೂ ಸಾಮಾಜಿಕ ಸಂಪತ್ತಿಗಳಾಗಿವೆ. ಹಂಗೇರಿಯಲ್ಲಿ ಶ್ರಮಕ್ಕೆ ಬೆಲೆಯುಂಟು. ಅದು ನಿಃಶುಲ್ಕವಾಗಿರುವದು. ಆತ್ಮ ವಿಶ್ವಾಸದಿಂದ ಅಲ್ಲಿಯ ಪ್ರತಿಯೊಬ್ಬ ಕಾರ್ಮಿಕನು

(೮ನೇ ಪುಟ ನೋಡಿರಿ)

ಸಮಾಜವಿಕಾಸಯೋಜನೆಯ ಮೂಲಕ ಗ್ರಾಮೀಣ ಪ್ರದೇಶದಲ್ಲಿ ವಸತಿ ಸೌಕರ್ಯಗಳನ್ನು ಕಟ್ಟಿಸುವ ಕಾರ್ಯ ನಡೆದಿದೆ. ಈ ಚಿತ್ರದಲ್ಲಿ ಹಾಗೆ ಕಟ್ಟಲಾದ ಎರಡು ಮನೆಗಳನ್ನು ಕಾಣಬಹುದು.

ಅಧಿಕ ಬಡ್ಡಿ ಸಂಪಾದಿಸಿರಿ

ಕೆನರಾ ಬ್ಯಾಂಕಿನಲ್ಲಿ ಹಣ ವಿನಿಯೋಗಿಸಿರಿ

ಕ್ಯಾಷ್ ಸರ್ಟಿಫಿಕೇಟುಗಳು

ಆಕರ್ಷಕ ದರದ ಬಡ್ಡಿಯನ್ನೀಯುವ 3 ವರ್ಷಗಳ ಮತ್ತು 5 ವರ್ಷಗಳ ಕ್ಯಾಷ್ ಸರ್ಟಿಫಿಕೇಟುಗಳನ್ನು ಪ್ರಾರಂಭಿಸಿದ್ದೇವೆಂದು ತಿಳಿಸಲು ಸಂತೋಷಪಡುತ್ತೇವೆ.

ವಿವರಗಳಿಗೆ ನಮ್ಮ 75ಕ್ಕೂ ಮೀರಿದ ಶಾಖೆಗಳಲ್ಲಿ ಯಾವುದಾದರೂ ಒಂದರೊಡನೆ ಸಂಪರ್ಕ ಬೆಳೆಸಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

— ಉತ್ತಮ ಬ್ಯಾಂಕಿಂಗ್‌ನಿಂದ — ಉತ್ತಮ ಜೀವನ ನಡೆಸಿರಿ —

> ಶ್ರೀಮಂತ ಮತ್ತು ವಿದ್ಯಾವಂತರ ಮಧ್ಯೆ ಒಂದೇ ಒಂದು ವ್ಯತ್ಯಾಸವಿದೆ: ಶ್ರೀಮಂತರ ಸಂಪತ್ತು ದಾನಮಾಡುವುದರಿಂದ ಅಲ್ಪವಾಗುತ್ತದೆ; ವಿದ್ಯಾವಂತರು ನೀಡುವ ವಿದ್ಯಾದಾನದಿಂದ ಅವರ ವಿದ್ವತ್ತು ಅಧಿಕವಾಗುತ್ತದೆ.

NAVAYUGA

Founder:—

Late Sri. **A. B. SHETTY,**
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ಎಕ್ಸ್ಪ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೩-೩-'೬೦	೨೬

ಮನ ತಿಳಿಯಾಗಲಿ

ಅತಿಥಿಗಳನ್ನು ಆಮಂತ್ರಿಸುವುದೇನೋ ಸುಲಭವೇ; ಆದರೆ, ಅವರ ಆತಿಥ್ಯದಲ್ಲಿ ಭಂಗವನ್ನು ತಂದುಕೊಳ್ಳದೆ ಮರ್ಯಾದೆಯಿಂದ ಬಂದಂತೆಯೇ ಮರಳಿ ಕಳುಹಿಸಿಕೊಡುವ ಕೆಲಸ ಮಾತ್ರ ಪ್ರಯಾಸಕರವಾದುದು. ಈ ಉಕ್ತಿಯ ಅನುಭವ ಮುಂದಿನ ತಿಂಗಳ ನಡುಭಾಗದಲ್ಲಿ ಜನಪ್ರಿಯ ಪ್ರಧಾನಿ ನೆಹರು ಅವರಿಗೆ ಆಗಬಹುದಾದ ಘಟನೆ ಘಟಿಸುವ ಸಂದರ್ಭಗಳೂ ಸನ್ನಿವೇಶಗಳೂ ಎಡತಾಕತೊಡಗಿವೆ. ಚೀನೀಯ ಪ್ರಧಾನಿ ಚೌರವರನ್ನು ನವದೆಹಲಿಗೆ ಬನ್ನಿರೆಂದು ಕರೆದ ನೆಹರೂ ಅವರು ತುಸು ಎಚ್ಚರಿಕೆಯಿಂದ ವರ್ತಿಸಿಕೊಳ್ಳಬೇಕಾಗಿದೆ. ಲೋಕದ ಜನತೆಗೆ ಪಂಚಶೀಲಗಳ ಅನುಪಮ ವಿದೇಶ ನೀತಿಯ ಅಮೋಘ ಕಾಣಿಕೆಯನ್ನಿತ್ತ ನೆಹರು ತನ್ನ, ತನ್ನ ದೇಶದ ಪರಂಪರೆಗನುಗುಣವಾಗಿ, ಈಗ ಎದ್ದಿರುವ ಗಡಿವಿವಾದಗಳನ್ನು ಕುರಿತು ವಿಚಾರ ವಿಮರ್ಶೆ ನಡೆಸಲು ಚೀನೀಯ ಪ್ರಧಾನಿ ಲಾಯರನ್ನು ನಿಮಂತ್ರಿಸಿದ್ದಾರೆ; ಸರಿಯೇ ಅವರೂ ಈ ಆಮಂತ್ರಣವನ್ನು ಸ್ವೀಕರಿಸಿ, ಎಪ್ರಿಲ್ ಮಾಸವನ್ನು ಆರಿಸಿಕೊಂಡಿದ್ದಾರೆ; ಭಾರತವಿತ್ತ ಆಮಂತ್ರಣವನ್ನು ನಿರಾಕರಿಸುವ ಗೋಜಿಗೇಕೋ ಹೋಗಲಿಲ್ಲ.

ಚೀನೀಯರು ಹಿಂದಿನಿಂದಲೂ ಹಿಡಿದುಕೊಂಡು ಅದನ್ನೇ ಅಂಟಿಕೊಂಡು ಬಂದಿರುವ ನೀತಿಯನ್ನು ನಾವು ಈಕ್ಷಿಸುವುದಾದರೆ, ಆಗ ಈ ನಿಯೋಜಿತ ಭೆಟ್ಟಿಯಿಂದ ಯಾವ ಪ್ರಯೋಜನವೂ ಇರುವುದಿಲ್ಲ ಎಂದು ನಿರ್ದಾಕ್ಷಿಣ್ಯದಿಂದ ಹೇಳಬೇಕಾಗುತ್ತದೆ. ತಾನು ಹಿಡಿದ ಹಟ್ಟನಿಂದ ತಿಲಮಾತ್ರ ಚಲಿಸಲು ಒಪ್ಪದಿರುವ ಚೌ ಅವರ ಭಾರತ ಸಂದರ್ಶನಕ್ಕೆ ಬೇರೆಯೇ ಒಂದು ಉದ್ದೇಶವಿರಲೂಬಹುದು; ಅದನ್ನೀಗ ಹೇಳುವಂತಿಲ್ಲ. ಭಾರತದ ಭೂಭಾಗವನ್ನು ತನ್ನದೆಂದು, ಎಂದೋ ಸಾಮಾನ್ಯವಾಗಿ ನಿರ್ಧಾರಿತವಾಗಿರುವ ಸೀಮೆಯನ್ನು ಅನಿರ್ಧಾರಿತವೆಂದು, ಮ್ಯಕಮಹೋನ ರೇಖೆಯನ್ನು ಚೀನವೆಂದೂ ಒಪ್ಪಿದ್ದಿಲ್ಲವೆಂದು ಹೇಳಿ ಭಾರತವನ್ನು ಕಬಳಿಸುವ ಸಂಚು ಹೂಡುತ್ತಿರುವ ಚೀನವು ಪ್ರಧಾನರ ಭೆಟ್ಟಿಯ ಪ್ರಭಾವದಿಂದ ತನ್ನ ಛಲವನ್ನು ಬಿಟ್ಟುಕೊಡುವುದೆಂದು ವಿಶ್ವಾಸವಿಲ್ಲ. ಆದರೂ ಭಾರತೀಯ ವೈದೇಶಿಕ ನೀತಿಯಂತೆ, ಶಾಂತಿಮಯ ವಾತಾವರಣದಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂಬ ಇರಾದೆಯಿಂದ ನೆಹರೂ ಅವರು ಚೌ ಅವರನ್ನು ಭಾರತಕ್ಕಾಮಂತ್ರಿಸಿದರು; ಚೌ ಅವರು ಇದನ್ನು ಸ್ವೀಕರಿಸಿದರು.

ಪ್ರಧಾನಿ ನೆಹರು ಅವರು ಸೀಮಾ ವಿವಾದದಲ್ಲಿ ಭಾರತದ ಪಾತ್ರವನ್ನು ಯಶಸ್ವಿಯಾಗಿ ಅಡಿಸೋರಿಸದಿದ್ದರೂ, ಈ ವಿವಾದದ ಬಗ್ಗೆ ಈಗೀಗ ತುಂಬ ಕಾಳಜಿ ತೆಗೆದುಕೊಳ್ಳುತಿದ್ದಾರೆ; ಸಮಸ್ತ ಭಾರತೀಯರು ಅವರ ಈ ಧೋರಣೆಗೆ ಪ್ರಬಲ ಬೆಂಬಲವೀಯುತಿದ್ದಾರೆ. ಫೆಬ್ರವರಿ ೨೯ರಂದು ಲೋಕಸಭೆಯಲ್ಲಿ ಮಂಡಿಸಿದ ಮುಂಗಡಪತ್ರದಲ್ಲಿಯೂ ಸಂರಕ್ಷಣ ಇಲಾಖೆಗೆ ಅಧಿಕ ಹಣವನ್ನು ಒದಗಿಸಲಾಗಿದೆಯೆಂದು ವಿತ್ತಮಂತ್ರಿ ಮುರಾರ್ಜಿಯವರು ಘೋಷಿಸಿದಾಗ, ಸಭೆಯ ಸದಸ್ಯರೆಲ್ಲರೂ ಹರ್ಷೋದ್ಗಾರಗಳ ಮೂಲಕ ಅದನ್ನು ಒಪ್ಪಿದರು. ಅಲ್ಲದೇ ಆವಶ್ಯಕತೆ ಬಿದ್ದರೆ, ವರ್ಷದ ಮಧ್ಯೆಯೂ ತಾನು ಈ ಬಗ್ಗೆ ಪುನಃ ಬೇಡಿಕೆಯನ್ನು ಮುಂದಿಡಬೇಕಾಗಬಹುದೆಂದು ತಿಳಿಸಿದಾಗಲೂ ಸದಸ್ಯರು ಸಂತೋಷವನ್ನು ವ್ಯಕ್ತಪಡಿಸಿದರು. ಇದರಿಂದ ದೇಶದ ಭದ್ರತೆಯ ಬಗ್ಗೆ, ಸಂರಕ್ಷಣೆಯ ಬಗ್ಗೆ ಎಲ್ಲರಲ್ಲಿಯೂ ಆಸಕ್ತಿಯಿರುವುದೆಂದೂ, ಈ ಬಗ್ಗೆ ಭಾರತೀಯ ಪ್ರಧಾನಿಯವರಿಗೆ ಸಮಸ್ತ ಭಾರತೀಯರ ನೆರವು ಬೆಂಗಾವಲಿದೆ ಎಂದೂ ನಿಸ್ಸಂಶಯವಾಗಿ ಹೇಳಬಹುದು. ಆದರೆ, ಚೌ ಅವರಿಗೆ ಇತ್ತ ಆಮಂತ್ರಣವನ್ನು ಮಾತ್ರ ಹೆಚ್ಚಿನ ರಾಜಕೀಯ ಪಕ್ಷಗಳು ಒಪ್ಪಿಕೊಂಡಿಲ್ಲ; ಕಮ್ಯುನಿಸ್ಟರನ್ನುಳಿದರೆ ಉಳಿದವರೆಲ್ಲರೂ ತಮ್ಮ ಅತೃಪ್ತಿಯನ್ನೇ ವ್ಯಕ್ತಪಡಿಸಿದ್ದಾರೆ. ಶತ್ರುವು ಮನೆಯ ಜಗಲಿಯನ್ನು ಪ್ರವೇಶಿಸಿರುವಾಗ, ಆತನನ್ನು ಎದುರಿಸುವುದು ಬಿಟ್ಟು ಮಾತುಕತೆಗೆ ತೊಡಗುವುದೆಂದರೆ ಹಾಸ್ಯಾಸ್ಪದವಾದ ವಿಚಾರವಲ್ಲವೆ ಎನ್ನುತ್ತಿವೆ; ಇವು. ಇದರಿಂದಾಗಿ ರೊಚ್ಚಿಗೆದ್ದ ಆಚಾರ್ಯ ಕೃಪಲಾನಿಯವರು ಚೌರವರ ವಿರುದ್ಧ ಚಳವಳಿ ಹೂಡುವಂತೆ ಕರೆಯಿತ್ತಿದ್ದಾರೆ. ಇದೇ ರೀತಿಯ ಪ್ರತಿಕ್ರಿಯೆಗಳು ಕೇವಲ ಭಾವಾವೇಶದಿಂದ ಬಹಿರಂಗಗೊಂಡುದಲ್ಲ, ನಿಯೋಜಿತ ಭೆಟ್ಟಿಯಿಂದ, ಮಾತುಕತೆಯಿಂದ ಭಾರತಕ್ಕಾವ ಲಾಭವೂ ದೊರೆಯಲಾರದು ಎಂಬುದನ್ನವರು ಹೊರಗೆಡಹಿದ್ದಾರೆ.

ಚೀನವು ಈ ಆಮಂತ್ರಣವನ್ನು ಸ್ವೀಕರಿಸಿದುದಕ್ಕೂ ಊಹಾಪೋಹಯ ಕಾರಣಗಳು ಕೇಳಿ ಬರುತ್ತವೆ. ಈಗಾಗಲೇ ಭಾರತದ ಭೂಭಾಗದಲ್ಲಿ ತಳವೂರಿರುವ ಚೀನೀಯ ಸೈನಿಕರು ಮತ್ತಷ್ಟು ಭದ್ರವಾಗಿ ನೆಲೆಯೂರುವಂತಾಗಲು, ಅವರಿಗೆ ಶಸ್ತ್ರಾಸ್ತ್ರಾದಿಗಳ ಪೂರೈಕೆಯಾಗಲು ಆ ದುರ್ಗಮ ಪ್ರದೇಶದಲ್ಲಿ ಇನ್ನೂ ಕೆಲಕಾಲಬೇಕಾಗುವುದೆಂದು ಊಹಿಸಬಹುದು. ಅಲ್ಲದೇ, ಎಪ್ರಿಲ್ ಮಾಸವೆಂದರೆ, ಬೇಸಗೆಕಾಲದ ಆರಂಭಕಾಲವೇ ಇದು ವರೆಗೆ ಅವರೆಲ್ಲ ಫಿತೂರಿಗಳೂ ಗಟ್ಟಿಯಾಗಿ ಮುಂದೆ ಬಲಾತ್ಕಾರ ಪ್ರಯೋಗವನ್ನು ಮಾಡಲಾರರೆಂದು ನಂಬಲು ಎಡೆಯಿರುವುದಿಲ್ಲ. ಚೌರವರ ಆಮಂತ್ರಣ ಸ್ವೀಕಾರದ ಹಿಂದೆ ದುರ್ಯೋಧನನ ಜಲಮಂತ್ರ ಪಠನದ ಸಮಯದೂಡುವ ಹಂಚಿಕೆಯೇಕಿರಬಾರದೆಂದು ಪ್ರಶ್ನಿಸುವುದೂ ಅನುಚಿತವಲ್ಲ. ಚೀನೀಯ ಸೈನಿಕರು ನಮ್ಮ ಬಹುಭಾಗವನ್ನು ಆಕ್ರಮಿಸಿಕೊಂಡನಂತರವೇ ಅದರ ಅರಿವು ನಮಗಾಗಿರುವಾಗ, ಎತ್ತರದ ಹಿಮಾಲಯದಲ್ಲಿ ಪ್ರತಿಘಟಿಕೆಯಲ್ಲಿ ಏನೇನಾಗುವುದೆಂದು ಹೇಗೆ ಹೇಳುವುದು ಸಾಧ್ಯ? ಆದುದರಿಂದ ಈ ಬಗ್ಗೆ ಎಲ್ಲರೂ ವಿಶೇಷ ಆಸಕ್ತಿಯಿಂದ ನೋಡಿಕೊಳ್ಳಬೇಕಾದ ಆಗತ್ಯವಿದೆ. ಚೌರವರನ್ನೇನೋ ಆಮಂತ್ರಿಸಿಯೂಯಿತು; ಇನ್ನು ನಮ್ಮ ಗೌರವಕ್ಕೆ ಕುಂದುತಾರದರೀತಿಯಲ್ಲಿ ಅವರನ್ನು ಆದರಿಸಿ, ಸತ್ಕರಿಸಿ, ಕಳುಹಿಸಿಕೊಡಬೇಕಾದುದು ನಮ್ಮ ಧರ್ಮ. ನಡುವೆ ಬರುವ ಮಾತುಕತೆಗಳು ಯಶಸ್ವಿಯಾಗಲಿ, ಅಯಶಸ್ವಿಯೇ ಆಗಲಿ ಅದೇನೂ ಅನಿರೀಕ್ಷಿತವಲ್ಲ. ಆದರೂ ಮಾತುಕತೆಯವೇಳೆ ಇನ್ನೂ ಪ್ರಶ್ನೆಗೆ ಉತ್ತರ ಕಂಡುಹಿಡಿಯಲು ಸಮಯ ವ್ಯರ್ಥಕಳೆಯದೆ ಈ ಬಾರಿಯೇ "ಪೆಟ್ಟೊಂದು ತುಂಡೆರಡು" ಮಾಡಿಬಿಡುವುದು ಭಾರತದ ಹಿತದೃಷ್ಟಿಯಿಂದ ಕ್ಷೇಮವಾಗಿದೆ. ಏಕೆಂದರೆ, ಈಗಾಗಲೇ ಈ ವಿಚಾರದಲ್ಲಿ ಬಹುಕಾಲ ಕ್ರಮಿಸಿದೆ; ಇನ್ನೂ ಹೊತ್ತು ಕೊಲ್ಲುವುದೆಂದರೆ, ಚೀನೀಯರ ಆಕ್ರಮಣ ನೀತಿಯನ್ನು ಪರೋಕ್ಷವಾಗಿ ಬೆಂಬಲಿಸುವುದೆಂದರ್ಥ. ಭಾರತದ ಒಂದಂಗುಲ ನೆಲವನ್ನೂ ಅನ್ಯಾಯವಾಗಿ ಪರದೇಶೀಯರಿಗೆ ಬಿಟ್ಟುಕೊಡಲು ಯಾರೂ ಮುಂದಿಲ್ಲ; ಇನ್ನು ಚೀನಾದ ಮಾತೆಲ್ಲಿ ಬಂತು? ಆದುದರಿಂದ, ಭಾರತ ಸರಕಾರ ತನ್ನಲ್ಲಿಗೆ ಬಂದಿರುವ ಅತಿಥಿ ಸತ್ಕಾರದ ಗುಂಗಿನಲ್ಲಿಯೇ ಅಮಲೇರಿ ತೂಕಾಡಿಸದೆ, ಹೊರವಲಯದಲ್ಲಿ ಶತ್ರುಗಳ ಹಾವಳಿ ಯಾವ ಘಟ್ಟಕ್ಕೆ ಬಂದು ನಿಂತಿದೆ ಎಂಬತ್ತಲೂ ದಿನದಿನದ ವಿದ್ಯಮಾನಗಳನ್ನು ಕೂಲಂಕಷವಾಗಿ ತಿಳಿಯುವತ್ತಲೂ ತೀವ್ರ ಗಮನ ಹರಿಸಬೇಕಾದ ಆವಶ್ಯಕತೆಯಿದೆ ಎಂದು ಹೇಳಬಹುದು. ಅಂತೆಯೇ, ಮನೆಗೆ ಬಂದಿರುವ ಅತಿಥಿಯನ್ನು ಮರ್ಯಾದೆಯಿಂದ ಬೀಳ್ಕೊಡುವುದೂ ನಮ್ಮ ಕರ್ತವ್ಯವೆಂಬುದನ್ನು ಮರೆಯಬಾರದೆಂದೂ ಸೂಚಿಸಬೇಕಾಗಿದೆ.

ಜನ್ಮದಿನದ ಮುಂಗಡ ಪತ್ರ

ಅರ್ಥಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ನಾಲ್ಕು ವರ್ಷಗಳಿಗೊಮ್ಮೆ ಬರುವ ತಮ್ಮ ಜನ್ಮದಿನದ ಕಾಣಿಕೆಯಾಗಿ ಲೋಕ ಸಭೆಯಲ್ಲಿ ೧೯೬೦-೬೧ರ ಮುಂಗಡ ಪತ್ರವನ್ನು ತಾ. ೨೯ರಂದು ಮಂಡಿಸಿದರು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದ ಈ ಮುಂಗಡ ಪತ್ರ ಈ ಹಿಂದಿನ ವರ್ಷಗಳದ್ದರಂತೆಯೇ ಕೊರತೆಯಿಂದಲೇ ಪ್ರಾರಂಭವಾಗಿ ಕೊರತೆಯಲ್ಲೇ ಅಂತ್ಯಗೊಳ್ಳುವಂತಾಗಿದೆ. ಮುಂಗಡ ಪತ್ರದಲ್ಲಿ ಸಮುದಿಸಿದಂತೆ ಮುಂದಿನ ವರ್ಷದಲ್ಲಿ೯೯೯·೪೫ ಕೋಟಿ ರೂಪಾಯಿಗಳ ಆದಾಯವಾಗಲಿದ್ದು, ೧೦೮೦,೩೫ ಕೋಟಿ ರೂಪಾಯಿಗಳು ವ್ಯಯವಾಗುವುವು. ಕೊರತೆಯನ್ನು ತುಂಬಿಕೊಳ್ಳುವ ಸಲುವಾಗಿ ಕೆಲವೊಂದು ಹೊಸ ಕರವನ್ನು ಸೂಚಿಸಲಾಗಿದೆ. ಆದರೂ ಇವುಗಳಿಂದ ಕೇವಲ ೨೩.೫೬ ಕೋಟಿ ರೂ.ಗಳನ್ನು ಮಾತ್ರ ತುಂಬಿಕೊಳ್ಳುವುದು ಸಾಧ್ಯವಾಗಿ, ಉಳಿದುದಕ್ಕೆ ಪೂಮ್ಮಲು ಕೊರತೆ ಧನವಿನಿಯೋಗವನ್ನೇ ಮರೆ ಹೋಗಬೇಕಾಗಿ ಬಂದಿದೆ. ಈ ವರ್ಷವಾದರೂ ರೂ. ೨೫೦ ಕೋಟಿಗಳನ್ನು ಸಾರ್ವಜನಿಕ ಸಾಲಗಳಿಂದ, ರೂ. ೯೦ ಕೋಟಿಯನ್ನು ಚಿಕ್ಕ ಉಳಿತಾಯ ಯೋಜನೆಯಿಂದ ಮತ್ತು ರೂ. ೩೬೨ ಕೋಟಿಯನ್ನು ವಿದೇಶೀಯ ಸಹಾಯಗಳಿಂದಲೇ ಭರ್ತಿಮಾಡಿಕೊಳ್ಳುವ ಆಶಯವನ್ನು ವ್ಯಕ್ತಪಡಿಸಲಾಗಿರುತ್ತದೆ. ಅಧಿಕ ಕರ ಹೇರುವಿಕೆಯಿಂದ ವಿಶೇಷ ಆದಾಯವೇನೂ ಬಂದಿರುವಂತೆ ತೋರುವುದಿಲ್ಲ. ಮೋಟಾರುಗಳು, ಸೈಕಲು, ರೇಷ್ಮೆ, ಅಲ್ಯುಮಿನಿಯಂ, ಕಬ್ಬಿಣ, ದಾನದಕರ ಇತ್ಯಾದಿಗಳು ಏರಲಿವೆ. "ಈ ಕರ ಸೂಚನೆಯನ್ನು ಮಾಡುವಾಗ, ಮುಂಬರುವ ವರ್ಷದ ತ್ವರಿತದ ಆವಶ್ಯಕತೆ ಮಾತ್ರ ನನ್ನ ಮನಸ್ಸಿನಲ್ಲಿದ್ದಿಲ್ಲ. ತೃತೀಯ ಪಂಚವಾರ್ಷಿಕ ಯೋಜನೆಯ ಆವಶ್ಯಕತೆಗಳನ್ನು ಲಕ್ಷಿಸಿ, ಈ ಸೂಚನೆಗಳನ್ನು ಸಿದ್ಧಗೊಳಿಸಲಾಗಿದೆ. ಪರಮಾವಧಿ ಆದಾಯವು ಬರುವಂತೆ ಪ್ರತ್ಯಕ್ಷ ಕರಗಳನ್ನು ಮೇಲೆ ಮೇಲೆ ವಿಮರ್ಶಿಸಲಾಗುತ್ತದಾದರೂ ಅಪ್ರತ್ಯಕ್ಷ ಕರದಿಂದಲೇ ಹೆಚ್ಚಿನ ಆದಾಯ ಬರಬೇಕಾಗಿದೆ ಎಂಬುದನ್ನು ಮರೆಯುವಂತಿಲ್ಲ" ಎಂದು ಅರ್ಥಮಂತ್ರಿಯವರು ತನ್ನ ಭಾಷಣದಲ್ಲಿ ಅಂದಿದ್ದಾರೆ.

ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷವಿದಾದುದರಿಂದ, ಯೋಜನೆಯನ್ನು ಸಂಪೂರ್ಣ ಕಾರ್ಯಕ್ಕೃತಗೊಳಿಸುವುದು ಉದ್ದೇಶವಾಗಿದೆ. ಸುಮಾರು ರೂ. ೧,೧೮೮ ಕೋಟಿ (ಇದರಲ್ಲಿ ಕೇಂದ್ರದ ಪಾಲು ರೂ. ೬೮೯ ಕೋಟಿ)ಯ ಗುರಿಯನ್ನು ಇದು ಮುಟ್ಟುವುದು. ದ್ವಿತೀಯ ವೇತನ ಆಯೋಗದ ವರದಿಯನ್ನು ಕಾರ್ಯಕಾರಿಗೊಳಿಸಲು ೪೪ರಿಂದ ೫೫ ಕೋಟಿ ರೂಪಾಯಿಗಳು ಬೇಕಾಗುವುದೆಂದು ತಿಳಿಯಲಾಗಿದೆ. ಅಲ್ಲದೇ ಸಂರಕ್ಷಣಾ ಇಲಾಖೆಯ ವೆಚ್ಚವೂ ಬೆಳೆಯಲಿದೆ. ಅಭಿವೃದ್ಧಿ ಸಾಧನೆಯ ಮಾರ್ಗದಲ್ಲಿ ಅಧಿಕ ಕರ ಹೇರುವಿಕೆಯೂ ಕೊರತೆಯ ಮುಂಗಡಪತ್ರವೂ ಸಾಮಾನ್ಯದ್ದಾಗಿರುವುದೆಂದು ತಿಳಿದು ಸಮ್ಮಿಶ್ರ ಭಾವದಿಂದಲೇ ಜನತೆಯಿದನ್ನು ಸ್ವಾಗತಿಸುತ್ತದೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳೂ ಸಿಗುತ್ತವೆ.

ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ಸಂಕ್ಷಿಪ್ತ ಸುದ್ದಿಗಳು

ಉಡುಪಿಯಲ್ಲಿ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಿನ ಸಮ್ಮೇಳನವು ೧೯೬೦ನೆ ದಶಂಬರದಲ್ಲಿ ಉಡುಪಿಯಲ್ಲಿ ನಡೆಯುವುದೆಂದು ತಿಳಿದು ಬಂದಿದೆ. ಇಂತಹ ಸಮ್ಮೇಳನಗಳಿಗೆ ಎಲ್ಲರೂ ಹಾಜರಾಗುವುದು ಅವಶ್ಯವಾಗಿರುವುದರಿಂದ, ಆ ಬಗ್ಗೆ ದಶಂಬರ ತಿಂಗಳಲ್ಲಿಯೇ ನೆರವೇರಿಸಲು ನಿರ್ಧರಿಸಲಾಗಿದೆಯೆಂದೂ ಗೊತ್ತಾಗಿದೆ. ಬೀಡರದಲ್ಲಿ ಸಮ್ಮೇಳನ ಸೇರಿಸಲಿದ್ದ ಉದ್ದೇಶವೆಂದರೆ, ಹಲವಾರು ವರ್ಷಗಳಲ್ಲಿ ಕನ್ನಡತನವನ್ನು ಮರೆತು ಬಿಟ್ಟ ಜನತೆಯಲ್ಲಿ ತಾವು ಕನ್ನಡಿಗರು ಎಂಬ ಅಭಿಮಾನವನ್ನು ಹುಟ್ಟಿಸುವುದು ಮಾತ್ರ ಎಂದೂ ಈಗ ಬಹಿರಂಗವಾಗಿದೆ. ಉಡುಪಿಯ ಮಠಾಧಿಪತಿಗಳು ಮತ್ತು ಇತರರಿಂದ ಸಮ್ಮೇಳನ ಸೇರಿಸುವ ಬಗ್ಗೆ ಆಹ್ವಾನ ಬಂದಿತ್ತೆಂದೂ ಅದನ್ನು ಪರಿಷತ್ತು ಸ್ವೀಕರಿಸಿದೆಯೆಂದೂ ತಿಳಿಯುತ್ತದೆ. ಉಡುಪಿಯಲ್ಲಿ ಮೊದಲನೆಯ ಬಾರಿಗೆ ಈ ಸಮ್ಮೇಳನವು ಸೇರುವುದಾಗಿದೆ.

ಪ್ರತಿಷೇಧ ಚಳವಳ

ಪ್ರಪಂಚದಲ್ಲಿ ವರ್ಣಭೇದ ಭಾವನೆಯಿರುವುದಕ್ಕೆ ದಕ್ಷಿಣ ಆಫ್ರಿಕೆಯು ಸಲ್ಲಿಸಿರುವಷ್ಟು ಸೇವೆಯನ್ನು ಮತ್ತಾವ ರಾಷ್ಟ್ರವೂ ಮಾಡಿಲ್ಲವೆಂಬುದು ಖಂಡಿತವೇ. ಅಲ್ಲಿರುವಷ್ಟು ವರ್ಣಗೊಂದಲ ವಿಶ್ವದ ಯಾವ ದೇಶದಲ್ಲಿಯೂ ನಾವು ಕಾಣಲಾರೆವು. ದಕ್ಷಿಣ ಆಫ್ರಿಕೆಯ ಈ ನೀತಿಗೆ ಇಂಗ್ಲೆಂಡಿನಲ್ಲಿ ಪ್ರತಿಭಟನೆಯನ್ನು ಸೂಚಿಸುವ ಪ್ರಯತ್ನವೀಗ ಮುಂದಾಗಿದೆ. ದಕ್ಷಿಣ ಆಫ್ರಿಕೆಯ ಎಲ್ಲ ವಸ್ತುಗಳನ್ನೂ ಬಹಿಷ್ಕರಿಸುವ ಮೂಲಕವಿದು ಮೊದಲಾಗಿದೆ. ಈ ಮತಪ್ರದರ್ಶನದ ನಾಯಕತ್ವವನ್ನು ಬ್ರಿಟಿಷ ಕೂಲಿಕಾರರ ಪಕ್ಷವು ವಹಿಸಿದೆ. ಇದರಲ್ಲಿ ಅತುಳ ಸಂಖ್ಯೆಯಲ್ಲಿ ಬಿಳಿಯರು ಭಾಗವಹಿಸುತಿದ್ದಾರೆ.

ಧವಳಗಿರಿಯ ಆರೋಹಣ

ಇದುವರೆಗೂ ಅಪರಾಜಿತವಾಗಿ ನಿಂತಿರುವ ಹಿಮಾಲಯ ಪರ್ವತಾವಳಿಯ 'ಧವಳಗಿರಿ' ಶಿಖರಾರೋಹಣದತ್ತ ಸ್ವಿಸ್ ಪರ್ವತಾರೋಹಿಗಳ ತಂಡದ ದೃಷ್ಟಿ ಹರಿದಿದೆ. ಈ ತಂಡವು ಪ್ರಾರಂಭಿಕ ಘಟ್ಟದಲ್ಲಿ ವಿಮಾನದ ಸಹಾಯವನ್ನು ಪಡೆದುಕೊಳ್ಳುವುದು. ಶಿಖರಾರೋಹಣದ ಮಧ್ಯೆ ಇರುವ ಆತಂಕವೆಂದರೆ, ಸುಮಾರು ೨೬,೮೧೦ ಅಡಿ ಎತ್ತರದ ಧವಳ ಹಿಮದ ಕೇರಿಯನ್ನು ಏರುವುದೇ ಆಗಿದೆ. ಈ ಭಾಗವನ್ನು ಹತ್ತಲು ಇದುವರೆಗೆ ಏಳು ಪ್ರಯತ್ನಗಳು ನಡೆದಿದ್ದು ಅನೆಲ್ಲವೂ ನಿಷ್ಫಲವಾಗಿವೆ. 'ಸಪ್ತಮಂ ದೈವಚಿಂತನಂ' ಎಂಬ ಉಕ್ತಿಯನ್ನು ಮೀರಿದ ಈ ಧವಳಗಿರಿಯನ್ನು ಆರೋಹಿಸಿದ ಧವಳ ಕೀರ್ತಿಮಾಲೆ ಆದಾರ ಕೊರಳನ್ನಲಂಕರಿಸುವುದೆಂದು ವಿಶ್ವವೇ ಕುತೂಹಲಚಿತ್ತದಿಂದ ನೋಡುತ್ತಿದೆ.

ಸೀಮಾವಿವಾದ-ಪ್ರತಿಧ್ವನಿ

ಯೆಳ್ಳೂರಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ-ಮುಂಬಯಿ ರಾಜ್ಯಗಳ ಸೀಮಾಕಲಹದಿಂದ ಗಡಿ ವಿವಾದಗಳಿಗೆ ಪುನಃ ಜೀವಬಂದಂತಾಗಿದೆ. ಲೋಕಸಭೆಯಲ್ಲೂ ಇದರ ಪ್ರತಿಧ್ವನಿ ಕೇಳದಿರಲಿಲ್ಲ. ಬೊಂಬಾಯಿಯ ಚವನರು ಈ ಪ್ರಶ್ನೆ ಮುಖ್ಯ ಮಂತ್ರಿಗಳಿಂದ ಬಗೆ ಹರಿಸುವುದ ಸಾಧ್ಯಕೆಂದು ಹೇಳಿದರೆ, ಕರ್ನಾಟಕದ ಮುಖ್ಯ ಮಂತ್ರಿ ಜತ್ತಿಯವರು ಹಾಗೇನಿಲ್ಲ ಎಂದಿದ್ದಾರೆ. ಈಗ, ಕೇಂದ್ರ ಗೃಹಮಂತ್ರಿ ಪಂತರು ಮಾರ್ಚಿ ತಿಂಗಳಲ್ಲಿ ಉಭಯ ಮುಖ್ಯ ಮಂತ್ರಿಗಳು ಸೇರುತ್ತಾರೆಂದು ಆಶ್ವಾಸನೆಯಿತ್ತಿದ್ದಾರೆ. ರಾಜ್ಯ ಪುನರ್ಘಟನೆಯಾಗಿ ವರ್ಷ ಮೂರೂವರೆ ಕಳೆಯುತ್ತ ಬಂದರೂ ಇಂದಿಗೂ ಈ ಅಂತರ್ ರಾಜ್ಯೀಯ ಸೀಮೆಗಳ ಬಗ್ಗೆ ಇದ್ದಿದ್ದ ವಿವಾದಗಳನ್ನು ಕೊನೆಗೊಳಿಸದಿರುವುದು ಖೇದನೀಯವಲ್ಲವೆ?

"ಗೋರಾ"ರ ವಿಕ್ರಮ

ಪಕ್ಷಾತೀತ ಪದ್ಧತಿಯ ಸರಕಾರದ ಮೇಲ್ಮೆಯನ್ನು ಆಂಧ್ರ ಪ್ರದೇಶ ವಿಧಾನ ಸಭೆಗೆ ಮನಗಾಣಿಸಿ ಕೊಡುವ ಪಣತೊಟ್ಟ ೫೮ ವರ್ಷದ ಸರ್ವೋದಯ ಧುರೀಣರಾದ ಶ್ರೀ ಜಿ. ರಾಮಚಂದ್ರರಾಯರು ಹಲ ದಿನಗಳ ತನ್ನ ಸಂಚಾರಾನಂತರ ರಾಜಧಾನಿ ಹೈದರಬಾದಿಗೆ ಸಮಾಗಮಿಸಿದ್ದಾರೆ. ಇವರು ತನ್ನ ಒಂದು ಕೈಯಲ್ಲಿ ಪಕ್ಷಾತೀತ ಧೋರಣೆಯ ದ್ಯೋತಕವಾಗಿ ಧ್ವಜರಹಿತ ಸ್ತಂಭವನ್ನೂ ಇನ್ನೊಂದರಲ್ಲಿ ಹನ್ನೊಂದೂ ರಾಜಕೀಯ ಪಕ್ಷಗಳ ಧ್ವಜಗಳ ಕಟ್ಟೊಂದನ್ನೂ ಹಿಡಿದುಕೊಂಡು ತಿರುಗುತಿದ್ದರು. ಶ್ರೀ ರಾಮಚಂದ್ರರಾಯರು ಆಂಧ್ರ ಪ್ರದೇಶದಲ್ಲಿ 'ಗೋರಾ" ಎಂಬ ಹೆಸರಿನಿಂದ ಸುವಿಖ್ಯಾತರಾಗಿದ್ದಾರೆ.

ಗ್ರಾಮೀಣ ಯೋಜನೆಗಳು

ಭಾರತೀಯ ಯೋಜನಾ ಆಯೋಗವು ರಾಷ್ಟ್ರದ ವಿವಿಧ ರಾಜ್ಯ ಸರಕಾರಗಳಿಗೆ ತೃತೀಯ ಪಂಚವಾರ್ಷಿಕ ಯೋಜನೆಯ ರೂಪರೇಷೆಯ ಕುರಿತಾಗಿ ಸೂಚನೆಯನ್ನು ಕಳಿಸಿದೆ. ಮಾನವಶಕ್ತಿಯ ಉಪಯೋಗವಾಗಬೇಕು; ಆರ್ಥಿಕ ಪರಿಸ್ಥಿತಿಯು ಸುಧಾರಣೆಗೊಳ್ಳಬೇಕು - ಈ ಗುರಿಯ ಆಧಾರದಿಂದ ಸ್ಥಳೀಯ ಅಭಿವೃದ್ಧಿ ಕಾಮಗಾರಿಗಳ ಕಾರ್ಯಕ್ರಮವನ್ನು ವಿಸ್ತರಿಸಬೇಕು; ಗ್ರಾಮ ಹಾಗೂ ಸಮಾಜಗಳಿಗೆ ಲಾಭವಾಗುವ ಆರ್ಥಿಕ ಮೌಲ್ಯದ ಸೊತ್ತುಗಳನ್ನು ನಿರ್ಮಿಸಬೇಕು ಮತ್ತು ಇದಕ್ಕೆ ಸಹಕಾರಿಯಾಗುವಂತೆ ಯೋಜನೆಯನ್ನು ರೂಪಿಸಬೇಕೆಂದದರಲ್ಲಿ ತಿಳಿಸಲಾಗಿದೆ.

ಪ್ರಧಾನಿತ್ರಯ ಮಿಲನ

ರಶ್ಯನ್ ಪ್ರಧಾನಿ ಶ್ರೀ ನಿಕಿಟಾ ಕ್ರುಶೇವರು ತನ್ನ ಇಂಡೊನೇಶ್ಯ ಸಂಚಾರ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರೈಸಿದರು. ಅವರು ರಂಗೂನಿಗೆ ಭೆಟ್ಟಿ ಕೊಡುವುದೆಂದು ಈ ಮೊದಲು ನಿರ್ಧಾರಿತವಾಗಿದ್ದರೂ ಅದು ನಿಂತು ಹೋಗಿದೆ. ಬದಲಿಗೆ, ಬ್ರಹ್ಮದ ಪ್ರಧಾನಿ ಯು-ನೂ ಅವರು ಕ್ರುಶೇವರ ಭೆಟ್ಟಿ ಮಾಡಲು ಕಲಕತ್ತೆಗೆ ಬಂದರು. ಇಲ್ಲಿ ಭಾರತೀಯ ಪ್ರಧಾನಿ ನೆಹರೂ ಅವರನ್ನು ಕೂಡಿದರು. ಪ್ರಧಾನಿತ್ರಯರು ವಿಶ್ವದ ರಾಜಕಾರಣ-ಅಂತಾರಾಷ್ಟ್ರೀಯ ಪರಿಸ್ಥಿತಿಗಳ ಕುರಿತು ಆಡಿಕೊಂಡಿರಬಹುದು. ಬ್ರಹ್ಮವು ಇತ್ತೀಚೆಗೆ ಚೀನದೊಡನೆ ಅನಾಕ್ರಮಣ ಒಪ್ಪಂದ ಮಾಡಿಕೊಂಡಿರುವುದನ್ನೂ ಇಲ್ಲಿ ಸ್ಮರಿಸಬಹುದು.

ಅಲ್ಲಲ್ಲಿಯ ಸುದ್ದಿಸಾರ

ಸಂಗೀತ ಕಚೇರಿ— ಉಡುಪಿಯಲ್ಲಿ ಸುಮಾರು 30 ವರ್ಷಗಳಿಂದ ಪಿಟೀಲುವಾದನ ಮತ್ತು ಶಿಕ್ಷಣನೀಯುವುದರ ಮೂಲಕ ಕಲಾಸೇವೆಮಾಡಿರುವ ಶ್ರೀ ಕೊಕ್ಕರಣೆ ಗಣಪತಿರಾಯರು ಉಡುಪಿಯನ್ನು ಬಿಟ್ಟು ಮುಂಬಯಿಗೆ ಹೋಗಿ ನೆಲೆಸುವ ನಿಮಿತ್ತ ತಾ. 22—2—60ರಲ್ಲು ಉಡುಪಿ ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ ಪರ್ಯಾಯ ಶ್ರೀ ಪಾಡಂಗಳವರ ಆಶ್ರಯದಲ್ಲಿ ಅವರ ಪಿಟೀಲು ಕಚೇರಿಯೊಂದು ನೆರವೇರಿತು. ಈ ಸಂದರ್ಭಗಳಲ್ಲಿ ಶ್ರೀ ಕೆ. ಜಗನ್ನಾಥ ನಾಯ್ಕರು ಶ್ರೀ ಗಣಪತಿರಾಯರ ಕಲಾಸೇವೆಯನ್ನು ವಿವರಿಸಿದರು. ಶ್ರೀಗಳವರೂ ಇತರ ನಾಗರಿಕರೂ ಶ್ರೀ ರಾಯರಿಗೆ ಉಡುಗರೆಗಳನ್ನಿತ್ತರಲ್ಲದೆ ಸಾರ್ವಜನಿಕರಿಂದ ಸಂಗ್ರಹಿಸಿದ ಒಂದು ನಿಧಿಯನ್ನೂ ಕೊಡಲಾಯಿತು.

ವಾರ್ಷಿಕ ಸಮಾರಂಭ—ಮಂಗಳೂರು ಕಸ್ತೂರ್ ಬಾ ಮೆಡಿಕಲ್ ಕೊಲೇಜಿನ ವಾರ್ಷಿಕ ಸಮಾರಂಭವು ತಾ. 26—2—60 ರಂದು ಮೈಸೂರಿನ ಆರೋಗ್ಯಮಂತ್ರಿ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕೊಲೇಜಿನ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣಮಾಡುತ್ತಾ ಖಾಸಗಿ ಪ್ರಯತ್ನದಲ್ಲಿ ಸ್ಥಾಪನೆಯಾದ ಈ ಕೊಲೇಜು ಪಾಶ್ಚಾತ್ಯ ರಾಷ್ಟ್ರಗಳ ಕೊಲೇಜುಗಳ ಮಟ್ಟವನ್ನು ಪಡೆದಿದೆಯೆಂದೂ ಇಂಥಾ ಅನೇಕ ಕೊಲೇಜುಗಳು ನಮ್ಮ ರಾಷ್ಟ್ರದಲ್ಲಿ ಸ್ಥಾಪನೆಯಾಗಲೆಂದೂ ಹಾರೈಸಿದರು.

ಸಂದೇಶವಾಚನ, ವರದಿವಾಚನಗಳಾದ ಮೇಲೆ ಅಧ್ಯಕ್ಷ ಡಾ. ಕೆ. ಹೆಗ್ಡೆಯವರು ಬಹುಮಾನ ವಿತರಣೆಮಾಡಿ ಭಾಷಣ ಮಾಡುತ್ತ ವೈದ್ಯರು ಸೇವಾಭಾವನೆಯಿಂದ ಗ್ರಾಮಗಳಿಗೆ ಹೋಗಿ ಅಲ್ಲಿಯ ರೋಗಿಗಳ ಸೇವೆಮಾಡಬೇಕೆಂದೂ ಇತರ ರಾಷ್ಟ್ರಗಳು ಅಣುವೇಗದಿಂದ ಪ್ರಗತಿ ಹೊಂದುತ್ತಿರುವಾಗ ನಾವು ಪರಿಶ್ರಮಿಸಿ ನಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕಾಗಿದೆಯೆಂದೂ ಹೇಳಿದರು. ಬಳಿಕ ಮನರಂಜನೆಯ ಕಾರ್ಯಕ್ರಮಗಳಾದುವು.

ಪಂದ್ಯಾಟಗಳು.—ಉಡುಪಿಯ ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಇವರ ವರ್ಷಾವಧಿ ಪಂದ್ಯಾಟಗಳು ತಾ. 15.2.60 ರಂದು ಮಂಗಳೂರು ನಗರಾಧ್ಯಕ್ಷ ಶ್ರೀ ಮಜೇರ್ ಶ್ರೀನಿವಾಸ ನಾಯ್ಕರಿಂದ ಉದ್ಘಾಟಿಸಲ್ಪಟ್ಟವು. ಮರುದಿನ ಮೈಸೂರು ಯುನಿವರ್ಸಿಟಿಯ ಪಬ್ಲಿಕ್ ಎಜುಕೇಶನ್ ಡೈರೆಕ್ಟರ್ ಶ್ರೀ ಪ್ರಸನ್ ಎಂ. ಜಿ. ವಿಜಯ ಸಾರಥಿಯವರು ಮುಕ್ತಾಯ ಸಮಾರಂಭದ ಅಧ್ಯಕ್ಷತೆ ವಹಿಸಿ ಬಹುಮಾನ ವಿತರಣೆ ಮಾಡಿದರು. ಪ್ರಿನ್ಸಿಪಾಲ್ ಯಚ್. ಸುಂದರರಾವ್ ಮತ್ತು ಪ್ರಿನ್ಸಿಪಾಲ್ ಎಮ್. ಎನ್. ಕಾಮತರು ಆರಂಭದಲ್ಲಿ ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಕೆ. ರಾಮದಾಸರು ಅತಿಥಿಗಳ ಪರಿಚಯ ಮಾಡಿದರು. ಶ್ರೀ ಪಿ. ಎನ್. ಸೋಮಸುಂದರರು ವರದಿವಾಚನ ಮಾಡಿ ಅಭಿನಂದನೆ ಸಲ್ಲಿಸಿದರು.

ಹೊಸ ಅಂಚೆ ಕಚೇರಿ—ಬೆಳ್ತಂಗಡಿ ತಾಲೂಕಿನ ಕಳಂಜ ಗ್ರಾಮದ ಕಾಯರ್ ಕಟ್ಟೆ ಎಂಬಲ್ಲಿ ತಾ. 25—2—60ರಲ್ಲಿ ಕಾರ್ಕಳ ರೇಂಜಿನ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಶಿವಶಂಕರ ರಾಯರು ಒಂದು ಬ್ರಾಂಚ್ ಪೋಸ್ಟು ಆಫೀಸನ್ನು ಉದ್ಘಾಟಿಸಿದರು. ಪೋಸ್ಟು ಮಾಸ್ಟರ್ ಶ್ರೀ ಎನ್. ವೆಂಕಪ್ಪಯ್ಯ ಗೌಡರು ಧನ್ಯವಾದಗಳನ್ನರ್ಪಿಸಿದರು.

ವಿವಾಹ—ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಭಂಡಾರ್ಕಾರರ ಪುತ್ರಿ ಕುಮಾರಿ ಕಸ್ತೂರಿಯನ್ನು ಉಡುಪಿಯ ಡಿ. ಕಲ್ಯಾಣ ವೆಂಕಟ್ರಾಯ ಪೈಯವರ ಪುತ್ರ ಶ್ರೀ ಕೆ. ಚಂದ್ರಕಾಂತ ಪೈ ಅವರು ತಾ. 28—2—60ರಂದು ಮಂಗಳೂರು ಉರ್ವದಲ್ಲಿರುವ ಹಿಲ್‌ಗ್ರೋವ್ ಎಂಬ ವಧೂನಿವಾಸದಲ್ಲಿ ವಿವಾಹವಾದರು.

ಹೆಬ್ರಿ—ತಾ. 27—2—60 ರಂದು ಮಂತ್ರಿ ಕೆ. ಕೆ. ಹೆಗ್ಡೆಯವರು ಇಲ್ಲಿಗೆ ಆಗಮಿಸಿದಾಗ ಸನಾತನಮಂದಿರದಲ್ಲಿ ಸೇರಿದ ಸಾರ್ವಜನಿಕ ಸಭೆಯೊಂದರಲ್ಲಿ ಅವರನ್ನು ಸ್ವಾಗತಿಸಿ ಶ್ರೀ ಎಚ್. ಭುಜಂಗ ಬಲ್ಲಾಳರು ಕೆಲವು ಕೋರಿಕೆಗಳನ್ನು ಸಚಿವರ ಮುಂದಿಟ್ಟರು. ಸಚಿವರು ಸೂಕ್ತ ಉತ್ತರವಿತ್ತು ಸ್ಥಳೀಯ ಆಸ್ಪತ್ರೆಯನ್ನು ಸಂದರ್ಶಿಸಿ ಕಾರ್ಕಳಕ್ಕೆ ತೆರಳಿದರು.

ನಮ್ಮ ರಾಜ್ಯ

(೪ನೇ ಪುಟದಿಂದ)

ದು ವಸ್ತು ಸಂಗ್ರಹಾಲಯವನ್ನೂ ಪ್ರಾರಂಭಿಸಲಾಗಿದೆ.

ಮೈಸೂರು—ಬೆಂಗಳೂರು ರಸ್ತೆಯಲ್ಲಿ ಸುಮಾರು ೧೦ ಮೈಲು ಹೋಗುವಷ್ಟರಲ್ಲಿಯೇ ಈ ಶ್ರೀರಂಗಪಟ್ಟಣ ಕಾಣಿಸುವುದು. ಕಾವೇರಿನದಿಗೆ ಸಂಕವನ್ನು ಕಟ್ಟಿ ಇಕ್ಕಡೆಗಳ ಸಂಬಂಧವನ್ನೂ ಒಳ ಪ್ರಪಂಚಕ್ಕೆ ಜೋಡಿಸಲಾಗಿದೆ. ಈ ಸಂಕವಾದರೂ ಹಳೆಯ ಮಾದರಿಯದಾಗಿರುವುದನ್ನು ನಾವು ಕಾಣಬಹುದು.

(ಕ್ರಮಶಃ)

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ದೇಶ ಪರಿಚಯ

(೫ನೇ ಪುಟದಿಂದ)

ತನಗಾಗಿ, ತನ್ನ ರಾಷ್ಟ್ರದ ಏಳ್ಗೆಗಾಗಿ ದುಡಿಯುವನು. ಈ ರೀತಿ ಮನಃಪೂರ್ವಕವಾಗಿ ಬೆವರು ಸುರಿಸಿದ ಪ್ರಮಾಣಕ್ಕೆ ಅನುಸಾರವಾಗಿ ಒಬ್ಬನಿಗೂ ತಪ್ಪದೇ ಪ್ರತಿಫಲ ದೊರಕುವದು.

ಆ ದೇಶದ ಯಾವತ್ತೂ ರಾಷ್ಟ್ರೀಯ ಆದಾಯವನ್ನೂ ಹಂಚುವರು. ಜನತೆಯ ಆಚಾರ-ವಿಚಾರ, ನಡೆ-ನುಡಿಯ ಮಟ್ಟವನ್ನು ಏರಿಸುವದರಲ್ಲಿಯೂ, ದೇಶದ ಉತ್ಪಾದನೆಯ ಕ್ಷೇತ್ರವನ್ನು ವಿಕಸಿತಗೊಳಿಸುವದರಲ್ಲಿಯೂ ಹಂಗೇರಿಯ ಪ್ರತಿಯೊಬ್ಬ ನಿವಾಸಿಯು ಹಗಲಿರುಳು ಮೈಮುರಿದು ಪ್ರಯತ್ನಿಸುತ್ತಲೇ ಇರುವನು. "ತಮ್ಮ ಪ್ರಯತ್ನದಿಂದಲೇ ದೇಶದ ಅಭ್ಯುದಯವಾಗುತ್ತದೆ' ಎಂಬ ದೇಶೋದ್ಧಾರದ ಭಾವನೆಯು ಹಂಗೇರಿಯನ್ನರಲ್ಲಿ ಚೆನ್ನಾಗಿ ಅಳವಡಿಸಿಕೊಂಡಿರುವದು. ರಾಷ್ಟ್ರ ಕಟ್ಟಿ ಅದಕ್ಕೆ ಹೊಸ ರೂಪ ತರುವ ಸಾಹಸ ಕಾರ್ಯದಲ್ಲಿ ಅವರು ಅಹೋರಾತ್ರಿ ದುಡಿಯುತ್ತಲಿರುವರು. "ಉತ್ಪಾದನೆಯ ವಿಷಯದ ಮೇಲೆ ಪ್ರಜೆಗಳ ಹಕ್ಕು ಇರುವದು; ಈ ಒಂದು ಮಾತನ್ನು ಅದು ಸ್ಪಷ್ಟಗೊಳಿಸುತ್ತದೆ. ಅದೆಂದರೆ— ಕೂಲಿಕಾರ ವರ್ಗದವು ಆರಿಸಿದ ಹುರಿಯಾಳುಗಳೇ ಅಲ್ಲಿಯ ರಾಜಕೀಯ ಶಕ್ತಿ ಹಾಗೂ ರಾಜಕೀಯ ಪ್ರಶಾಸನದ ಪ್ರತಿನಿಧಿಗಳಾಗಿ ಅಧಿಕಾರಿಸುವರು. ಕಾನೂನು ದೃಷ್ಟಿಕೋನದಿಂದ ಪರಿಶೀಲಿಸಿದರೆ, ಶತಮಾನಗಳ ಬಿರುಗಾಳಿ ಇತಿಹಾಸದ ತರುವಾಯ ಹಂಗೇರಿ ಸಧ್ಯ ಒಂದು ಗಣರಾಜ್ಯವಾಗಿರುವದು ಎಂದು ಅಭಿಪ್ರಾಯಪಡಬಹುದು. ಹಂಗೇರಿ ರಾಷ್ಟ್ರವಾದರೂ ಅಪಾರ, ಅದ್ವಿತೀಯ, ಅಸಾಮಾನ್ಯ ಜಿಗಿತಗಳನ್ನು ಹೊಡೆದು ಇಂದು ಮಾದರಿಯ ರಾಷ್ಟ್ರವಾಗಿ ಯುರೋಪ ಖಂಡದಲ್ಲಿ ಕೀರ್ತಿ ಹೊಂದುತ್ತಲಿದೆ. ಈ ಸಾಹಸದ ಘಟನೆಗೆ ಹಲವು ವಿಷಯಗಳು ಯೋಗ್ಯ ಸಾಕ್ಷಿಯನ್ನಡಿಯುವವು ಹಂಗೇರಿಯ ಇತಿಹಾಸದಲ್ಲಿ ಆ ವಿಷಯಗಳು ತೇಜಸ್ವಿಯಾಗಿ ಕಾಣುವವು.

ಹಂಗೆರಿಯಲ್ಲಿ ಇಂದಿಗೆ ಎತ್ತ ನೋಡಿದರೂ ನಿರೋದ್ಯೋಗದ ಸುದ್ದಿಯೇ ಕೇಳಲಾರದು. ಎಲ್ಲರೂ ಉದ್ಯೋಗಿ, ಅಷ್ಟೇ ಅಲ್ಲ; ಸತತೋದ್ಯೋಗಿಗಳಾಗಿರುವರು. ನಿರೋದ್ಯೋಗದ ಬಹು ಬಿಕ್ಕಟ್ಟಿ ಸಮಸ್ಯೆಯಿಂದ ಇಂದು ಹಂಗೇರಿಯು ಪಾರಾಗಿರುವದು. ಅಲ್ಲಿಯ ಪ್ರಜಾಸತ್ತಾತ್ಮಕ ಸರಕಾರವು, ಪ್ರತಿಯೊಬ್ಬ ಸ್ತ್ರೀ ಇಲ್ಲವೇ ಪುರುಷ ಕೆಲಸಗಾರನಿಗೆ ಒಂದಿಲ್ಲೊಂದು ಉದ್ಯೋಗವನ್ನು ದೊರಕಿಸಿಕೊಡುವದು. ಯಾವನು ಹೆಚ್ಚು ಬುದ್ಧಿವಂತ ಹಾಗೂ ಉಳಿತಾಯ ಸ್ವಭಾವದವನೋ, ಮತ್ತು ನವನವಿಷ್ಕಾರ ಮಾಡುವನೋ ಅಥವಾ ಅತ್ಯುತ್ತಮ ರೀತಿಯಲ್ಲಿ ಉಚ್ಚ ಕೋಟಿಯ ಕಾರ್ಯಮಾಡುವನೋ ಆತನು ಅಧಿಕ ಸಂಪಾದನೆಯಲ್ಲಿ ನಿರತನಾಗುವನು. ಅವನ ಆ ಸಂಪಾದನೆಯು ಕೇವಲ ಅವನ ಸುಖೋಪಭೋಗಕ್ಕಷ್ಟೇ ವೆಚ್ಚವಾಗದೇ ಅದರ ಕೆಲಂಶವು ದೇಶದ ಉದ್ಧಾರದ ಕಾರ್ಯಕ್ಕೆ ಸಹವ್ಯಯವಾಗುತ್ತದೆ. ಒಳ್ಳೆ ವ್ಯವಸ್ಥೆಯಲ್ಲಿರುವ ಕಾರಖಾನೆಗಳ ಕಾರ್ಮಿಕರು ಆ ಕಾರಖಾನೆಗಳ ಶೇರ್‌ದಾರರು, ಅಂದರೆ ಅದರ ಲಾಭದಲ್ಲಿ ಪಾಲುಗಾರರಾಗುವರು. ಅಲ್ಲಿ ಕೂಲಿಕಾರ, ಗಿರಣಿಯ ಮಾಲಿಕ ಎಂಬ ಭೇದಭಾವ ಇಲ್ಲ. ಕೂಲಿಕಾರನೇ ಕಾರಖಾನೆ ಮಾಲಿಕನಾದರೆ, ಮಾಲಿಕನೇ ಕಾರಖಾನೆಯಲ್ಲಿ ದುಡಿದು ಕೆಲಸಗಾರನಾಗುವನು. ಇದೊಂದು ವಿಶಿಷ್ಟ ಪದ್ಧತಿಯು ಹಂಗೇರಿಯಲ್ಲಿ ರೂಢಿಯಲ್ಲಿದೆ. ಹೆಚ್ಚು ಶ್ರಮದಿಂದ ಕೆಲಸ ಮಾಡುತ್ತಿರುವವನಿಗೆ ಆತನ ದುಡಿತದ ಪ್ರಮಾಣದಲ್ಲಿ ಲೆಕ್ಕಹಾಕಿ ರೋಖ ಹಣವನ್ನು ಕೊಡುವರು. ಇದರಿಂದ ಸ್ಪಷ್ಟವಾಗುವದೇನಂದರೆ—ಅತ್ರ ಹೆಚ್ಚು ದುಡಿಯುತ್ತಿರುವ ನೌಕರನಿಗೆ ಹೆಚ್ಚು ಸಂಬಳ ಮತ್ತು ಕಡಿಮೆ ಕೆಲಸ ಮಾಡುವವನಿಗೆ ಅಲ್ಪ ವೇತನವನ್ನು ನೀಡಲಾಗುವದು. ಆದರಿಂದ ದೊಡ್ಡ-ಸಣ್ಣ, ಬಡವ ಶ್ರೀಮಂತ ಎಂಬ ಈ ಬೇಧಭಾವಗಳಿಲ್ಲದೇ ಎಲ್ಲರೂ ರಾಷ್ಟ್ರ ಪ್ರಜೆಗಳಿದ್ದು, ಒಕ್ಕಟ್ಟಾಗಿ ತಮ್ಮ ದೇಶವನ್ನು ಕೀರ್ತಿ ಶಿಖರಕ್ಕೇರಿಸುವದೇ ಹಂಗೇರಿಯ ನಿವಾಸಿಗಳ ಒಂದು ಉಜ್ವಲ ಗುರಿಯಾಗಿ ಮಾರ್ಪಟ್ಟಿದೆ.

ಅಲ್ಲಿಯ ಪ್ರತಿಯೊಬ್ಬ ನೌಕರನಿಗೆ ಆತನಿಗೆ ಕೊಡುವ ಸಂಬಳದ ಜೊತೆಗೆ, ಅವನಿಗೆ ಬೇಕಾಗುವಷ್ಟು ರಜೆ ತೆಗೆದುಕೊಳ್ಳುವ ಅಧಿಕಾರ ಆ ನೌಕರರಿಗೆ ಕೊಟ್ಟಿರುವರು ಪ್ರತಿ ವರ್ಷಕ್ಕೊಮ್ಮೆ ಆ ದೇಶದ ಎಲ್ಲ ಕೆಲಸಗಾರರು ತಮ್ಮ ಹೆಸರಿನಲ್ಲಿ ಶಿಲ್ಕು ಉಳಿದಿರುವ ಎಲ್ಲ ರಜೆಯನ್ನು ಒಂದೇ ಸಲ ಪಡಕೊಂಡು, ಆ ರಜೆಯ ದಿನಗಳನ್ನು ದೇಶದ ವಿವಿಧ ಭಾಗಗಳಲ್ಲಿ ಹೋಗಿ ಅಲ್ಲಿರುವ ಹೊಟೇಲ್‌ಗಳಲ್ಲಿ ಸುಖದಿಂದ ಕಳೆಯುವರು. ಅಪಘಾತಕ್ಕೆ ಅಥವಾ ರೋಗಕ್ಕೆ ಗುರಿಯಾದರೆ ನೌಕರರು ಸರಕಾರಿ ಸಹಾಯವನ್ನು ಹೊಂದಲು ಬರುವದು. ಅಷ್ಟೇ ಅಲ್ಲದೇ ಅವರಿಗೋಸ್ಕರ ಉಚಿತ ಉಪಚಾರ ಹಾಗೂ ಔಷಧವನ್ನೂ ಕೂಡ ಕೊಡುವರು. ಇದಕ್ಕಾಗಿಯೇ ಪ್ರತ್ಯೇಕವಾಗಿ ಅಲ್ಲಲ್ಲಿ ಕೆಲವು ಆಸ್ಪತ್ರೆಗಳು ಸ್ಥಾಪಿತಗೊಂಡಿವೆ. ಈ ಆಸ್ಪತ್ರೆಗಳಲ್ಲಿ ಯಾವನೇನೊಬ್ಬ ಕೆಲಸಗಾರನು ಶುಶ್ರೂಷೆ ಹೊಂದುತ್ತಲಿರುವನು. ಕೆಲಸಗಾರರು ನಿವೃತ್ತರಾದ ಮೇಲೆ ಅವರಿಗೆ ವೃದ್ಧಾವಸ್ಥೆಯಲ್ಲಿ ಪಿಂಚಣಿ(ಪೆನ್ಶನ್)ಯನ್ನೂ ಸಕಾಲ ಕಾಲಕ್ಕೆ ಕೊಡುವ ವ್ಯವಸ್ಥೆಯೂ ಇರುವದು. ಆದನೆ ಇತ್ತೀಚೆಯಲ್ಲಿ ನಿವೃತ್ತಿ ಹೊಂದಿದ ನೌಕರರಿಗೆ ಪಿಂಚಣಿ ಕೊಡುವ ವ್ಯವಸ್ಥೆಯನ್ನು ಅಲ್ಲಿಯ ಸರಕಾರವು ಸಹಕಾರೀ ಕೃಷಿ ಸಂಸ್ಥೆಗಳ ಮುಖಾಂತರ ಮಾಡಿರುವದು. ಆ ಭಾಗದ ಸರಕಾರೀ ಕೃಷಿ ಸಂಸ್ಥೆಗಳು ತಮ್ಮ ಅಧೀನಕ್ಕೊಳಪಟ್ಟ ಕ್ಷೇತ್ರ ನೌಕರರಿಗಷ್ಟೇ ಕೊಡಲು ಬದ್ಧವಾಗಿರುವದು.

ಹಂಗೇರಿಯಲ್ಲಿ ಇಂದು ಅಲ್ಲಿಯ ಪ್ರತಿಯೊಬ್ಬ ನಾಗರಿಕನಿಗೆ ಸಂಸಮಾನವಾದ ಹಕ್ಕನ್ನು ಕೊಟ್ಟಿರುವರು. ಎಲ್ಲ ಜಾತಿಗಳ ರೈತರಿಗೂ, ಕೂಲಿಕಾರರಿಗೂ ಮತ್ತು ದೇಶದ ಯಾವದೇ ಜನಾಂಗದ ಸ್ತ್ರೀ-ಪುರುಷರಿಗೂ ಸಮಾನ ಅಧಿಕಾರವನ್ನು ಇಂದಿನ ಸರಕಾರ ಕೊಟ್ಟಿದೆ ಪ್ರತಿಯೊಬ್ಬರೂ ತಮಗೆ ಕೊಟ್ಟ ಅಧಿಕಾರದ ದುರುಪಯೋಗ ಮಾಡಿಕೊಳ್ಳದೇ ಅತ್ಯುತ್ತಮ ರೀತಿಯಲ್ಲಿ ಆ ಅಧಿಕಾರವನ್ನು ಕಾಯ್ದುಕೊಂಡು ಹೋಗುವರು. ಹಂಗೇರಿಯ ನಾಗರಿಕರಿಗೆ ೧೮ ವರ್ಷಗಳಾದ ಕೂಡಲೇ ಅವರಿಗೆ ರಾಜನೈತಿಕ ಅಧಿಕಾರವನ್ನು ನೀಡುವರು. ಹಾಗೂ ಅವರು ಆ ಅಧಿಕಾರದ ಸಂಪೂರ್ಣ ಉಪಯೋಗವನ್ನು ಪಡಕೊಳ್ಳುವರು. ಪ್ರತಿಯೊಬ್ಬ ನಿವಾಸಿಗೆ ಧಾರ್ಮಿಕ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ ಹಾಗೂ ವಾಕ್ ಸ್ವಾತಂತ್ರ್ಯವನ್ನೂ ಕೊಟ್ಟಿರುವರು. ಆದರೂ ಆ ಸ್ವಾತಂತ್ರ್ಯಗಳನ್ನು ಪಾಲಿಸಿಕೊಂಡು ಹೋಗುವದಲ್ಲಿ ಸರಕಾರವು ತಿಳಿಸಿದ ನಿಯಮಗಳಂತೆಯೇ ನಡೆಯಬೇಕಾಗುತ್ತದೆ. ಅಂತೂ ಕೆಲವು ಕಡೆಯಲ್ಲಿ ಸರಕಾರವು ಲಗಾಮುವನ್ನು ಹಿಡಿಯುತ್ತದೆ. ಕೆಲವು ಕ್ಷೇತ್ರಗಳಲ್ಲಿ ಹಂಗೇರಿಯನ್ನರ ರೀತಿ—ನೀತಿ ಇತರೇ ಪಾಶ್ಚಿಮಾತ್ಯ ದೇಶಗಳಂತಿರುವದು. ಇಲ್ಲಿಯ ಮಠ, ದೇವಸ್ಥಾನ ಹಾಗೂ ಧರ್ಮಗುರು (ಪಾದ್ರಿ)ಗಳಿಗೆ ಸಹ ಸರಕಾರದಿಂದ ಸಕಾಲದಲ್ಲಿ ಉದಾರ ಆರ್ಥಿಕ ಸಹಾಯ ದೊರಕುವದು. ಪ್ರತಿಸಲ ಅನೇಕ ವಿಧದಿಂದ ಹಣವನ್ನು ಕೊಟ್ಟು, ಧಾರ್ಮಿಕ ಕಾರ್ಯ ಇತ್ಯಾದಿಗಳಲ್ಲಿ ಸರಕಾರವು ಭಾಗವಹಿಸಿ ಹೆಚ್ಚಿನ ರೀತಿಯಲ್ಲಿ ಹೊಸರೂಪವನ್ನು ತಂದುಕೊಡುವದು. ಇದರಿಂದ ಧರ್ಮದ ಯಾವದೇ ವಿಷಯದಲ್ಲಿ ಸರಕಾರವು ಹಸ್ತಕ್ಷೇಪಗೊಳಿಸಲಿಲ್ಲ.

ಹಂಗೇರಿಯಲ್ಲಿ ಶಿಕ್ಷಣಕ್ಕೆ ಕೊಡುವಷ್ಟು ಮಹತ್ವ ಇನ್ನಾವದಕ್ಕೂ ಕೊಟ್ಟದ್ದು ಕಂಡುಬರಲಾರದು. ಇಂದಿನ ಸರಕಾರವು ಪ್ರತಿಯೊಬ್ಬ ಹುಡುಗ–ಹುಡುಗಿಯರಿಗೆ ತನ್ನ ವೆಚ್ಚದಿಂದಲೇ ಶಿಕ್ಷಣವನ್ನು ಕೊಡುತ್ತದೆ. ಅಲ್ಲಿ ೮ನೆಯ ಇಯತ್ತೆಯ ವರೆಗೆ ಕಡ್ಡಾಯ ಶಿಕ್ಷಣವನ್ನು ಕೊಡುವರು. ಇದರಿಂದ ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆಯಲು ಮುಂದಾಗುವರು. ಮುಂದೆ ಉಚ್ಚ ಶಿಕ್ಷಣ ಪಡೆಯುವ ಪ್ರತಿಭಾಶಾಲಿ ಯುವಕ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣವನ್ನು ಮುಂದುವರಿಸಲೂ ಹಲವು ತರದಿಂದ ಸರಕಾರವು ಸೌಕರ್ಯಗಳನ್ನು ದಯಪಾಲಿಸಿಕೊಡುವದು. ಇಂಥ ವಿದ್ಯಾರ್ಥಿಗಳು ಹೆಚ್ಚು ಕಲಿಯುವದರಲ್ಲಿಯೇ ನೋಡಬೇಕು ಹೊರತು, ಆರ್ಥಿಕ ವಿಷಯದಲ್ಲಿ ಎಳ್ಳಷ್ಟೂ ಹಿಂತಿರುಗಿ ನೋಡುವ ಆವಶ್ಯಕತೆ ಇಂದು ಹಂಗೇರಿಯಲ್ಲಿ ಇಲ್ಲವಾಗಿದೆ. ರಾಜ್ಯವು ನಾನಾತರದಿಂದ ತಾಯಿ ಮತ್ತು ಶಿಶುಗಳ ಪಾಲನೆಯನ್ನೂ, ರಕ್ಷಣೆಯನ್ನೂ ಮಾಡುವದು. ಶಿಶು ಜನ್ಮ ತಾಳುವವೇ ತಡ ಅದರ ಮುಂದಿನ ಯಾವತ್ತೂ ವಿಷಯದಲ್ಲಿ ಸರಕಾರವು ಕಾಳಜೀ ಪೂರ್ವಕವಾಗಿ ಲಕ್ಷ್ಯವನ್ನು ಪೂರೈಸುತ್ತದೆ ಇದರಿಂದ ತಂದೆ-ತಾಯಿಗಳ ಮೇಲೆ ತಮ್ಮ ಹುಡುಗರ ಭಾರ ಬೀಳಲಾರದು.

ಲಕ್ಷಗಟ್ಟಲೆ ಕೆಲಸಗಾರರು ಮನರಂಜನೆಯಲ್ಲಿ, ವಿನೋದದಲ್ಲೂ ಕಾಲವನ್ನು ಕಳೆಯುವರು. ಅವರಿಗೋಸ್ಕರ ಕಲೆ, ಸಾಹಿತ್ಯ, ಸಂಗೀತ, ಲಲಿತ ಕಲೆಗಳು, ನಾಟಕ-ಆಟ, ಸಿನೇಮಾ, ರೇಡಿಯೋ ಗ್ರಾಮೋಫೋನ್ ಮತ್ತು ಟೆಲಿವಿಜನ್ ಇತ್ಯಾದಿಗಳ ವ್ಯವಸ್ಥೆಯನ್ನೂ ಮಾಡಿಕೊಟ್ಟಿರುವದು. ಹಂಗೇರಿಯ ನಿವಾಸಿಗಳು ಯಾವ ಉದ್ದೇಶಕ್ಕಾಗಿ ತಮ್ಮ ಅಮೂಲ್ಯ ರಕ್ತವನ್ನು ಸುರಿಸಿದರೋ, ಬಲಿದಾನ ಕೊಟ್ಟರೋ ಆ ಪ್ರಮುಖ ವಿಷಯಗಳಿಗೆಲ್ಲ ಹಂಗೇರಿಯ ಹೊಸಸಂವಿಧಾನದಲ್ಲಿ ಉಚ್ಚಸ್ಥಾನವನ್ನು ಕೊಟ್ಟಿರುವರು. ಈ ವಿಷಯಗಳ ಮಾಹಿತಿಯನ್ನು ಕೆಲವು ಕಡೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಲಾಗಿದೆ. ಹಿಂದೆ ಒಂದು ಕಾಡು ಜನರ ಹಳ್ಳಿಯ ದೇಶವಾಗಿ ಇದ್ದ ಈ ಹಂಗೇರಿಯು ಇಂದು

ದಿ. ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ್ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸ್ಲು ವ ಬಡ್ಡಿಯನ್ನು ಈ ತನಕವೂ ಬಾಕಿಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರ್ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ. 14—3—60ನೇ ಸೋಮವಾರ ಪೂರ್ವಾಹ್ನ ಗಂಟೆ 11ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31—12—59ರ ವರೆಗಿನ ಬಡ್ಡಿ ಕೂಡಾ
78/57	ಮಹಾಲಿಂಗ ಸಟ್ಟಿ, ಎಲ್ಲು ಸಟ್ರ ಅಳಿಯ ಕಾಂಸುತೋಟ ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ.	68—98
539/57	ಸೀನ ಬಿ. ಸಾಲಿಯಾನ್, ಬೇಜ ಮರಕಾಲರ ಮಗ, ಪಡು ಗ್ರಾಮ, ಪೋಸ್ಟು ಕಾಪು.	134—30
769/57	ರಾಮ ಪೂಜಾರಿ, ಮುದರ ಪೂಜಾರಿಯವರ ಅಳಿಯ ಮಟ್ಟು ಗ್ರಾಮ, ಪೋಸ್ಟು ಕಟಪಾಡಿ.	93 71
165/58	ಲೋಕು ಸಟ್ಟಿ, ಕೊಡ್ಸರ ಸಟ್ರ ಮೊಮ್ಮಗ, ಮಡುಂಬು ದೊಡ್ಡಮನೆ, ಪೋಸ್ಟು ಇನ್ನಂಜೆ.	78—93
445/58	ವಾಸುದೇವ ನಾಯ್ಕ, ನರಸಿಂಹ ನಾಯ್ಕರ ಮಗ, ಪಡು ಗ್ರಾಮ, ಪೋಸ್ಟು ಕಾಪು.	106—37
604/58	ನಾರಾಯಣ ಮೆಂಡನ್, ಮೈಂದ ಸಾಲಿಯಾನರ ಮಗ, ಪೊಲಿಪು ಪಡುಗ್ರಾಮ, ಪೋಸ್ಟು ಕಾಪು.	69—99

The Vijaya Bank, Ltd.,
(Scheduled Bank)
KAUP.
26—2—1960

K. Sitharama Shetty,
Agent, Kaup.

ಮೆಲ್ಲಮೆಲ್ಲನೇ ವಿಕಾಸಹೊಂದಿ ಔದ್ಯೋಗಿಕ ರಾಷ್ಟ್ರವಾಗಿ ನಿರ್ಮಾಣಗೊಂಡಿದೆ. ಪ್ರಪಂಚದ ಜನರು ಆಶ್ಚರ್ಯಪಡುವಂತಹ ಸಾಹಸದ ಕಾರ್ಯಗಳನ್ನು ಅಲ್ಪಾವಧಿಯಲ್ಲಿಯೇ ಅಲ್ಲಿಯ ನಿವಾಸಿಗಳು ಮಾಡಿ ತೋರಿಸಿರುವರು. ನಿರಂತರವಾಗಿ ಔದ್ಯೋಗಿಕರಣದತ್ತ ಮುನ್ನಡೆಯುತ್ತಿರುವ ಹಂಗೇರಿಯು ಇನ್ನು ಕೆಲವೇ ವರ್ಷಗಳ ಅವಧಿಯಲ್ಲಿ ಒಂದು ಸುಸಂಪನ್ನ ರಾಷ್ಟ್ರವಾಗಿ, ಮಾನವನ ಸಾಹಸದ ಒಂದು ಹೆಗ್ಗುರುತಾಗಿ ತಲೆ ಎತ್ತಿ ನಿಲ್ಲುವದು!

ಸಮಗ್ರ ದೇಶದಲ್ಲಿಂದು ಹೊಸ ನಮೂನೆಯ ಕಾರಖಾನೆಗಳೂ, ಗಿರಣಿಗಳೂ, ಉದ್ಯೋಗಗಳೂ, ಹಳ್ಳಿಗಳೂ, ಪಟ್ಟಣಗಳೂ, ರಸ್ತೆಗಳೂ ಹಾಗೂ ರೇಲ್ವೆಯು ನಿರ್ಮಾಣವಾಗುತ್ತಲಿವೆ. ಅಂತೂ ಹಂಗೇರಿಯಲ್ಲಿ ಪ್ರಗತಿಯ ಗಾಳಿ ಸಧ್ಯದಿಂದಲೇ ಬೀಸುತ್ತಲಿದೆ. ೧೫—೨೦ ವರ್ಷಗಳ ಪೂರ್ವದಲ್ಲಿ ಹಂಗೇರಿ ದೇಶವನ್ನು ಕಣ್ಣಾರೆ ನೋಡಿದ ಮನುಷ್ಯನು, ಇಂದಿನ ನವ ಹಂಗೇರಿಯ ವಿನೂತನ ಅವತಾರವನ್ನು ಒಮ್ಮೆ ನೋಡಿದರೆ ಆತನು ಮುಗ್ಧನಾಗದೇ ಇರಲಾರನು. ತಾನು ಈಗ ನೋಡಿದ ದೇಶ ಹಂಗೇರಿಯಲ್ಲ. ಯಾವದೋ ಒಂದು ನೋಡಲಾರದ ಹೊಸ ರಾಷ್ಟ್ರವೆಂದು ಭಾವಿಸಿಕೊಳ್ಳುವನು. ಇಂದಿನ ಹಂಗೇರಿಯ ಹೊಸ ರೂಪಕ್ಕೆ ಅನೇಕ ವಿದೇಶೀ ಪ್ರವಾಸಿಗರು ಮರುಳಾಗಿರುವರು. ಹಿಂದೆ ಈ ದೇಶ ಯುರೋಪ ಖಂಡದಲ್ಲಿಯೇ ಅತಿ ಕೀಳುದರ್ಜೆಯದಾಗಿ ಉಳಿದಿತ್ತು. ಸಹಸ್ರಾರು ಭಿಕ್ಷುಕರು ಹಾಗೂ ರೋಗಿಗಳು ಜೀವಿಸುವ ಹೆಸರಾದ ಸ್ಥಳವೆಂದು ತಿಳಿಯುತ್ತಿದ್ದರು. ಆದರೆ ಹಂಗೇರಿಯ ಅಂದಿನ—ಇಂದಿನ ಪರಿಸ್ಥಿತಿಯನ್ನು ಹೋಲಿಸಿದರೆ ಅಜ-ಗಜಾಂತರವಿರುವದು.

ಹಂಗೇರಿಯ ರಾಜಧಾನಿ ಬುಡಾಪೆಸ್ಟ ಪಟ್ಟಣವು ಡೇನ್ಯೂಬ್ ನದಿಯ ಎರಡೂ ದಂಡೆಯ ಮೇಲೆ ಪಸರಿಸಿರುವದು. ಇದರಿಂದ ರಾಜಧಾನಿಯು ಇಬ್ಭಾಗವಾಗಿದೆ. ಒಂದು ಭಾಗದಲ್ಲಿ ಸರಕಾರದ ಎಲ್ಲ ಕಚೇರಿಗಳಿದ್ದರೆ, ಇನ್ನೊಂದು ದಂಡೆಯ ಮೇಲೆ ಜನತೆಯ ಎಲ್ಲ ಕೊಡಕೊಳ್ಳುವ ವ್ಯವಹಾರ ನಡೆಯುವದು. ನದಿಯ ಎರಡೂ ದಂಡೆಯ ಮೇಲಿರುವ ಪಟ್ಟಣವನ್ನು ಒಂದು ಉದ್ದವಾದ ಸೇತುವೆಯ ಮೂಲಕ ಒಂದೇ ಬುಡಾಪೇಸ್ಟ ನಗರವೆಂದು ಮಾಡಿರುವರು. ಇಲ್ಲಿಯ ಸಂಸದ ಭವನವನ್ನು ಆ ನದಿಯ ದಂಡೆಯ ಮೇಲೆಯೇ ಸ್ಥಾಪಿಸಿದ್ದಾರೆ. ಅಲ್ಲಿಯ "ಹೀರೋಇಕ್ಸ್ ಸ್ಕ್ವಾಯರ್" ಎಂಬ ಹೆಸರಿನ ವಿಶಾಲ ಮೈದಾನವನ್ನು ಸರಿಗಟ್ಟುವ ಮೈದಾನು ಇನ್ನೊಂದಿಲ್ಲ. ವಿಶೇಷತಃ ಯುರೋಪ ಖಂಡದಲ್ಲಿಯೇ ಆ ಬೃಹದ್ ಆಕಾರದ ಹಿರೋಇಕ್ಸ್ ಸ್ಕ್ವಾಯರ್ ಮೈದಾನದಷ್ಟು ವಿಶಾಲವಾದದ್ದು ಬೇರೊಂದು ನಮ್ಮ ದೃಷ್ಟಿಗೆ ಗೋಚರವಾಗದು.

ಆದೇಶದ ನಾಣ್ಯಗಳ ಹೆಸರು "ಫೋರಿಂಟ್" ಎಂದಿರುವದು. ಅಂದರೆ ನಮ್ಮ ಇಂದಿನ ಹೊಸ ದಶಾಂಶ ಪದ್ಧತಿಯ ನಾಣ್ಯಗಳಂತೆಯೇ ಇರುವದು. ನಾವು ಯಾವ ಪ್ರಕಾರ ಒಂದು ರೂಪಾಯಿಯಲ್ಲಿ ೧೦೦ ಭಾಗಗಳನ್ನು ಮಾಡಿರುವರೋ, ಅದೇ ರೀತಿಯಲ್ಲಿ ಅವರೂ ಸಹ ಫೋರಿಂಟ್ ನಾಣ್ಯವಲ್ಲಿ ಮಾಡಿದ್ದಾರೆ. ಹಂಗೇರಿಯಲ್ಲಿ ಬೆಳೆಯುವ ಹಣ್ಣುಹಂಪಲಗಳಲ್ಲಿ ದ್ರಾಕ್ಷಿಗಳು ಅಧಿಕ ಪ್ರಮಾಣದಲ್ಲಿ ಬೆಳೆಯುವವು. ಅಂತೆಯೇ ಅವುಗಳನ್ನೂ ಹಾಗೂ ದ್ರಾಕ್ಷಿಗಳಿಂದ ಮಾಡಿದ ಸರಾಯಿಯನ್ನೂ ವಿದೇಶಗಳಿಗೆ ನಿರ್ಯಾತ ಮಾಡುತ್ತಾರೆ. ಇಲ್ಲಿಯ ನಿವಾಸಿಗಳು ಈ ಸರಾಯಿಯನ್ನು ಸೇವಿಸುವದು ವಿಪರೀತವಾಗಿದೆ. ಆದರಿಂದ ಹಂಗೇರಿಯನ್ನರು ವಿಲಾಸಪ್ರಿಯರಾಗಿದ್ದಾರೆ ಅಲ್ಲದೇ ಸಂಗೀತ ಪ್ರೇಮಿಗಳೂ ಆಗಿರುವರು. ಚಿತ್ರಕಲೆಯಲ್ಲೂ ವಿಶೇಷ ಅಭಿರುಚಿ ಅವರಿಗಿದೆ. ಹಂಗೇರಿಯ ಭಾಷೆಯಲ್ಲಿ ಸುಮಾರು ೧೦ ಲಕ್ಷ ಶಬ್ದಗಳಿರುವವು. ಹಂಗೇರಿಯನ್ನರು ಸಾಮಾನ್ಯವಾಗಿ, ಯುರೋಪಿಯನ್ನರಂತೆ ತಿನ್ನುವ—ಉಣ್ಣುವ, ಆಚಾರ-ವ್ಯವಹಾರ, ರೀತಿ-ನೀತಿ, ನಡೆ-ನುಡಿ ಹಾಗೂ ವೇಷ-ಭೂಷಣ ವಿಷಯಗಳಲ್ಲಿ ಸರಿಸಮಾನರಾಗಿದ್ದಾರೆ. ಪಾಶ್ಚಾತ್ಯ ಆಧುನಿಕ ಸಂಸ್ಕೃತಿಯ ಪ್ರಭಾವ ಅಲ್ಲಿಯ ನಿವಾಸಿಗಳ ಮೇಲೆ ವಿಶೇಷ ಪ್ರಮಾಣ ಬಿದ್ದಿರುವದು.

—ರಾಮಕೃಷ್ಣ ಎ. ಪೈ, ಅಂಕೋಲೆ.
("ನವಭಾರತ ಟೈಂಮ್ಸ್"ದಿಂದ)

ಚಾರುಚಯನ

ಭಾರತೀಯರಿಗೆ ಉಗಾದಿಯ ಒಸಗೆ

ಒಂದು ವರ್ಷದ ಶುಭಾಶುಭಫಲಗಳು ಉಗಾದಿಯ ಒಂದು ವಾರದಲ್ಲಿಯೇ ತಿಳಿಯಲಿದೆ!

ಚೀನಾ-ಭಾರತಗಳ ನಡುವಿರುವ ಸೀಮಾ ವಿವಾದದ ಬಗ್ಗೆ ಮಾತುಕತೆ ನಡೆಸಿ ಪರಿಹಾರ ಮಾರ್ಗವನ್ನು ಕಂಡು ಹಿಡಿಯಲು ಭಾರತೀಯ ಪ್ರಧಾನಿ ಶ್ರೀ ನೆಹರು ಅವರು ಚೀನೀ ಪ್ರಧಾನಿ ಶ್ರೀ ಚೌ ಎನ್ ಲಾಯ್ ಅವರನ್ನು ಭಾರತಕ್ಕೆ ಆಮಂತ್ರಿಸಿದ್ದು ಈ ಆಮಂತ್ರಣವನ್ನು ಲಾಯ್ ಅವರು ಸ್ವೀಕರಿಸಿದರೆಂದು ವರದಿ ಪ್ರಾಪ್ತಿಸಿದೆ.

ಈ ಹಿಂದೊಮ್ಮೆ ಶ್ರೀ ಚೌ ಅವರು ಶ್ರೀ ನೆಹರು ಅವರನ್ನು ಒಂದು ವಾರದ ಬಿಡುವಿರುವಾಗ, ಇದೇ ಸಮಸ್ಯೆಯ ಬಗ್ಗೆ ವಿಚಾರಿಸಲು ರಂಗೂನಿಗೆ ಕರೆದಿದ್ದರು. ಆದರೆ, ಆ ಕರೆಯೋಲೆಯ ಭಾಷೆಯು ತುಸು ಪರುಷವಿದ್ದಿತೆಂದೂ ಬಿಡುವು ಕಡಿಮೆಯಾಯಿತೆಂದೂ ತಿಳಿದು ಪ್ರಧಾನಿ ನೆಹರು ತಿರಸ್ಕರಿಸಿದ್ದರು.

'ಮುಯ್ಯಿಗೆ ಮುಯ್ಯ್' ತೀರಿಸುವುದರಲ್ಲಿ ಅತೀಕ ಉತ್ಸಾಹಿತರಾಗಿರುವ ಕಮ್ಯುನಿಸ್ಟರು ಈ ಬಾರಿ ತುಸು ಪರಿವರ್ತನ ಶೀಲರಾದರೆ ಎಂಬ ಸಂದೇಹವೇಳುತ್ತದೆ. ಅಂತೂ ಚೌ ಬರುವರು; ನಿಶ್ಚಿತ ದಿನ ಮಾತ್ರ ಗೊತ್ತಾಗಬೇಕಷ್ಟೆ.

ಎಪ್ರಿಲ್ ತಿಂಗಳ ದ್ವಿತೀಯ ಸಪ್ತಾಹದಲ್ಲಿ ಈ ನಿಯೋಜಿತ ಬೆಟ್ಟಿಯಾಗಬಹುದೆಂದು ಲಾಬಿ ವರ್ಗಗಳ ಅಭಿಪ್ರಾಯ. ರಾಜಕಾರಣಿಗಳ ಈ ಊಹೆಗೆ ಚೀನೀ—ಭಾರತ ಪ್ರಧಾನಿಗಳ ಇತರ ಅತಿಥಿಗಳೇ ಕಾರಣರೆಂದು ನಿಸ್ಸಂದಿಗ್ಧವಾಗಿ ಹೇಳಬಹುದು.

ಆದರೆ, ಅದೆ ಜೋಯಿಸರ ಪಾದ ಬೇರೆಯೇ. ಎ (ಬಿ? ವ, ಬಗೆಳಲ್ಲಿ ಭೇದವಿಲ್ಲವಾದರೆ?) ಕಾರಿ ನಾಮ ಮತ್ತು ಶಾರ್ವರೀ ನಾಮ ಸಂವತ್ಸರಗಳ ತಾಕಲಾಟವೂ ಎಪ್ರಿಲ್ ದ್ವಿತೀಯ ವಾರದಲ್ಲಿಯೇ ಬರುವುದು ತಾನೆ? ಆ ಪರಸ್ಪರ ಜಗಜಟ್ಟಿಗಳ ಮುಖಾವಲೋಕನದ ಮನುಷ್ಯ ರೂಪವೇ ಚೌ—ನೆಹರೂ ಭೆಟ್ಟಿಯೆಂದವರು ಅರೆಗುಣಿಸಿ, ಇಡಿ ಭಾಗಿಸಿ ಕೂಡಿಸಿ ಕಳೆದು ಹೇಳಿಬಿಡುತ್ತಾರೆ—ಇದ್ದರೂ ಇರಬಹುದು, ಅಲ್ಲಾ?

ಚೀನೀಯ ಚೌರವರ ಈ ಪತ್ರದ ಭಾಷೆ ಸ್ವಲ್ಪ ಮೃದು ವಿನಯೋಪೇತವಾಗಿರುವುದೆಂದು ಪ್ರಕಟವಾಗಿದೆ. ಚೀನವು ಈ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ಅತ್ಯಂತಾಸಕ್ತಿ ತಾಳುತ್ತಿದೆಯೆಂದೂ ಸೌಹಾರ್ದಪೂರ್ಣ ವಾತಾವರಣದಲ್ಲಿದು ಪೂರಯಿಸಬೇಕೆಂದೂ ಅವರು ಸದಾಶಯ ವ್ಯಕ್ತಪಡಿಸಿದ್ದಾರೆ ಎಂದೂ ಹೇಳಲಾಗಿದೆ.

ಭಾರತೀಯರ ಅಭಿಲಾಷೆಯೂ ಇದೇ; ಬೇರೆ ಜಾನೇ ಏನು? ರಾಜಿಯ ಮಾತುಕತೆ ಸ್ನೇಹ ಶಾಂತಿ.........

ಅಮೆರಿಕೆಯ ಮತ್ತು ಸೋವಿಯತ್ ಪರಿಷ್ಕಾರ ಭಾರತ ಸಂದರ್ಶನದಿಂದಲೇ ಚೌರವರ ನಿಶಿತ ನಾಲಿಗೆ ತುಸು ಮೊಂಡಾಗಲು ಪ್ರಾರಂಭವಾಯಿತೆಂದು ಕೆಲ ಬಂಡರ ವಾದ.

ಜತೆಗೆ, ಕೇರಳದಲ್ಲಿ ಕಮ್ಯೂನಿಸ್ಟರನ್ನು ಮಟ್ಟಮಲಗಿಸಿದ ನಾವೇ ಚೌರವರ ಸ್ವಾಮ್ಯವರ್ತನೆಗೆ ಹೇತುವೆಂದಲ್ಲಿನ ಹಾಗೂ ಭಾರತದ ಕಮ್ಯುನಿಸ್ಟೇತರರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳಬಹುದು.

ತಾನು ಇಷ್ಟೊಂದು ಪೀಡಿಸಿ ಕಾಡಿಸಿದರೂ ಭಾರತ ಶಾಂತಿಮಂತ್ರ ಪಠನೆಯನ್ನು ನಿಲ್ಲಿಸದಿರಲು ಕಾರಣವಾದ ಅದರ 'ಸ್ಥಿತ ಪ್ರಜ್ಞತೆ'ಯೇ ಚೌರನ್ನು ಭಾರತದತ್ತ ಆಕರ್ಷಿಸಲು ಪ್ರೇರಕವಾಗಿರಲೂ ಬಹುದು.

ಅಂತೂ ಅದು ಏನೋ, ಏಕೋ, ಚೌರ ಭಾರತ ಸಂದರ್ಶನ ಸುನಿಶ್ಚಿತ ಉಗಾದಿಯ ಒಸಗೆ ಭಾರತೀಯರಿಗೆ ಶುಭತರುವುದೇ ಅಶುಭವನ್ನೇ ಎಂದು ಆರು ವಾರಗಳೊಳಗೆ ನೋಡಲಿದೆ, ಅದು ವರೆಗೆ ತಾಳಿಕೊಳ್ಳಿ.

— ಗೋರಾ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

Notice is hereby given that Share Certificate No. 258 issued by the Vijaya Bank Ltd., in respect of its 4 Shares numbured 1344 to 1347, standing in the name of late Sri Rajottu Muddu Shetty, S/o. Bommaya Shetty, Rajottu House, Miyar Village, Karkal Taluk, is reported to be lost and an application has been received from his widow, Mrs. Paddu Shedthy, residing in Kamblakodi in Kanthavar Village, for the issue of a fresh Share Certificate in lieu thereof, for the purpose of transmission of the said Shares to her name. Any person having any objection whatsoever for the issue of a fresh Share Certificate or for the transmission of the said Shares to the name of the applicant, should communicate immediately the same to the undersigned. If objection is not filed within 15 days from this date with the undersigned, fresh Share Certificate in the place of the original Share Certificate No. 258, will be issued and the transmission of the said Shares to the name of the applicant, will be registered in the books of the Bank.

The Vijaya Bank Limited,
Head Office, Mangalore-3.
Dated: 29—2—1960.

(Sd.) P. Jayarama Shetty,
Secretary.

Statement about ownership and other particulars about Newspaper: NAVAYUGA

FORM IV (Rule 8)

1.	*Place of Publication*	... UDIPI
2.	*Periodicity of its Publication*	... WEEKLY
3.	*Printers' Name*	... K. H. SHETTY
	Nationality	... INDIAN
	Address	... Navayuga Press, Palukote, Udipi, (S. K.)
4.	*Publishers' Name*	... K. H. SHETTY
	Nationality	... INDIAN
	Address	... Palukote, Udipi (S. K.)
5.	*Editor's Name*	... K. H. SHETTY
	Nationality	... INDIAN
	Address	... Palukote, Udipi (S. K.)
6.	*Names and addresses of individuals who own the news-paper and partners or shareholders holding more than one per cent of the total capital.*	K. H. SHETTY Palukote, Udipi (S. K.) (Prop.)

I, K. H. Shetty, hereby declare that the particulars given above are true to the best of my knowledge and belief.

Date 2-3-1960.

(Sd.) K. H. SHETTY,
Signature of Publisher.

ಕವಿಕಾವ್ಯ ಪ್ರಶಸ್ತಿ

(೩ನೇ ಪುಟದಿಂದ)

ರಾಮನು ನಮ್ಮಂತೆಯೇ ಸಾಧಾರಣ ಮಾನವನು ರಾಮಾಯಣದಲ್ಲಿ ಮಾನವ ಚರಿತ್ರವನ್ನು ಹೇಳದೆ ಅವತಾರ ಪುರುಷನ ಕತೆ ಬರೆಯುತಿದ್ದರೆ, ಗ್ರಂಥದ ಜನಾದರಣೆಗೂ ಗೌರವಕ್ಕೂ ಹ್ರಾಸ ಬರುತಿತ್ತೆಂದು ಖಂಡಿತವಾಗಿ ಹೇಳಬಹುದು ರಾಮಾಯಣವು [ಮಾನವ ಚರಿತ್ರೆಗಿಂತ ಭಿನ್ನವಾಗಿಲ್ಲದಿರುವುದರಿಂದಲೇ ಅದು ಜನಪ್ರಿಯವಾಗಿದೆ.

ವಾಲ್ಮೀಕಿಯು ನಾರದನೊಡನೆ ಸಕಲ ಸದ್ಗುಣಸಂಪನ್ನನಾದ ನಾಯಕನಾರೆಂದು ಕೇಳಿದಾಗ ಆತ ಉತ್ತರಿಸುತ್ತಾನೆ ದೇವತೆಗಳಲ್ಲಿ ಆತಹರಾರೂ ಇಲ್ಲ;ಮಾನವರಲ್ಲಿ ರಾಮನೊಡನೇ ಆ ರೀತಿಯವನು." ಇದರಿಂದ ರಾಮಕಥೆ ಕೇವಲ ನರಕಥೆಯೆಂದು'ನಾವು ಹೇಳಬಲ್ಲೆವು. ಯಾವನೇ ದೇವನು ಮಾನವನ ಅವತಾರ ಮಾಡಿಲ್ಲ; ಆದರೆ, ಮಾನವನೇ ತನ್ನ ಸದ್ಗುಣ ಮೂಲೆಗಳಿಂದ ದೇವತೆಯಾಗಿ ಹೋದನು. ಮಾನವ ಪರಮಾದರ್ಶ ಸ್ಥಾಪನೆ ಮಾಡುವುದಕ್ಕಾಗಿಯೇ ವಾಲ್ಮೀಕಿಯು ಈ ಕಾವ್ಯವನ್ನು ಬರೆದನು; ಇದರಿಂದಾಗಿಯೇ ಭಾರತೀಯರು ಈ ಗ್ರಂಥವನ್ನು ಆದರಿಸುತ್ತ ಬಂದಿದ್ದಾರೆ.

ಒಂದೇ ಮನೆಯ ಕಥೆಯು ಒಂದು ಬೃಹದ್ರೂಪದಲ್ಲಿ ರಾಮಾಯಣದಲ್ಲಿ ವರ್ಣಿತವಾಗಿದೆ. ಪಿತಾಪುತ್ರರಲ್ಲಿ, ಸಹೋದರ ಸಹೋದರರಲ್ಲಿ, ಪತಿಪತ್ನಿಯರಲ್ಲಿರುವ ಧರ್ಮಬಂಧನ, ಪ್ರೀತಿ ಮತ್ತು ಭಕ್ತಿಗಳು ಈ ಕಾವ್ಯದಲ್ಲಿ ಮನಮೋಹಕವಾಗಿ ನಿರೂಪಿಸಲ್ಪಟ್ಟಿವೆ. ಉಳಿದ ಎಲ್ಲಾ—ಮಹಾಭಾರತ ಕೂಡ—ಮಹಾಕಾವ್ಯಗಳಲ್ಲಿ ವರ್ಣನೆಗಾಗಿ ಯುದ್ಧ, ವಿಜಯ, ಶತ್ರುದಮನ, ಎರಡು ವಿರೋಧೀ ಪಕ್ಷಗಳ ನಡುವೆ ರಕ್ತಪಾತ ಮೊದಲಾದ ಘಟನೆಗಳು ಇರುತ್ತವೆ. ರಾಮಾಯಣದಲ್ಲಿಯೂ ರಣವರ್ಣನೆಯಿದೆ—ಏಕೆ? ರಾಮ ಮತ್ತು ಸೀತೆಯರ ದಾಂಪತ್ಯ ಪ್ರೇಮವರ್ಣನೆಗಾಗಿಯಲ್ಲವೆ? ಪಿತೃವಾಕ್ಯ ಪರಿಪಾಲನೆ, ಸಹೋದರಲ್ಲಿ ಆತ್ಮತ್ಯಾಗ, ಪತಿ ಪ್ರೇಮನಿಷ್ಠೆ, ಪ್ರಜೆ—ರಾಜರ ಪ್ರೀತಿ ಕರ್ತವ್ಯಗಳು ರಾಮಾಯಣದಲ್ಲಿ ನಿರೂಪಿತವಾಗಿವೆ. ಯಾವುದೇ ದೇಶದಲ್ಲಿ ಗಾರ್ಹಸ್ಥ ಜೀವನದ ವರ್ಣನೆಯು ಇಷ್ಟೊಂದು ಬಹುಮುಖವಾಗಿ ಹರಿಯುವುದನ್ನು ನಾವು ಕಾಣಲಾರೆವು.

ಮೇಲಿನ ವಿಚಾರಗಳಿಂದ ಕವಿಯ ಪರಿಚಯ ಮಾತ್ರವಲ್ಲ, ಭಾರತವರ್ಷದ ಪರಿಚಯವೂ ದೊರೆಯುತ್ತವೆ. ಭಾರತದಲ್ಲಿ ಗೃಹ ಮತ್ತು ಗೃಹಧರ್ಮಗಳು ಅತಿ ಮಹತ್ವದ್ದೆಂದು ತಿಳಿಯಲ್ಪಡುತಿದ್ದುವೆಂದು ನಮಗೆ ಗೊತ್ತಾಗುತ್ತದೆ. ಗೃಹಸ್ಥಾಶ್ರಮವು ಅತಿ ಉಚ್ಚಮಟ್ಟದಲ್ಲಿದೆಯೆಂದು ನಮಗೆ ತಿಳಿಯುತ್ತದೆ. ಗೃಹಸ್ಥಾಶ್ರಮವು ಸುಖಪ್ರದವಾಗಿದೆ; ಸಮಾಜವನ್ನು ಹೊರುವಂತಹುದು. ಮಾನವನ ಯಥಾರ್ಥ ಭಾವಗಳನ್ನು ದೀಪ್ಯಮಾನಗೊಳಿಸುವುದು. ಭಾರತೀಯ ಸಮಾಜದ ಬುನಾದಿಯೇ ಇದು. ಈ ಮಹತ್ವದ ಗೃಹಸ್ಥಾಶ್ರಮ ಮಹತ್ವವನ್ನು ತೋರಿಸುವ ಮಹಾಕಾವ್ಯ ರಾಮಾಯಣವಾಗಿದೆ. ಕಷ್ಟ ಮತ್ತು ವನವಾಸ ದುಃಖವನ್ನು ತೋರಿಸಿ ರಾಮಾಯಣವು ಈ ಗೃಹಸ್ಥಾಶ್ರಮದ ಹೆಚ್ಚುಗಾರಿಕೆಯನ್ನು ಪ್ರದರ್ಶಿಸಿದೆ. ಕೈಕೇಯಿ ಮತ್ತು ಮಂಥರೆಯ ಕುತಂತ್ರವು ಅಯೋಧ್ಯೆಯ ರಾಜಮಂದಿರವನ್ನು ಕಂಪಿಸಿತು. ಆ ವೇಳೆ ತೋರಿಬಂದ ದುರ್ಭೇದ ದೃಢತೆಯು ರಾಮಾಯಣದಲ್ಲಿ ಉತ್ತಮ ದಿಗ್ದರ್ಶನವನ್ನು ನೀಡಿದೆ. ಶಾರೀರಿಕ ಶಕ್ತಿ, ವಿಜಯಾಭಿಲಾಷೆ, ರಾಜನೀತಿಕ ಮಹತ್ವಗಳನ್ನು ರಾಮಾಯಣ ಹೇಳಿದಂತಿಲ್ಲ; ಆದರೆ, ಶಾಂತಿಯುಕ್ತ ಗೃಹಜೀವನವನ್ನು ರಾಮಾಯಣವು ಕರುಣಾರ್ದ್ರ ಹೃದಯದಿಂದ ಮುದ್ದಿಟ್ಟು ವೀರರಸವನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿತು; ಜನಪ್ರಿಯವಾಯಿತು.

— ಗೋಪೀಚಂದ.

ಅಮೆರಿಕೆಯ ಮೇಳ

ಕೋಳಿ ಸಾಕಣೆಯಿಂದ ಅಧಿಕ ಗಳಿಕೆ

ಅಮೆರಿಕದ ರೈತರು ಸುಲಭದಲ್ಲಿ ಕೋಳಿ ಸಾಕಿ ತಮ್ಮ ಆದಾಯ ಹೆಚ್ಚಿಸುತ್ತಾರೆ. ನಮ್ಮ ರೈತರೂ ಬಿಡುಸಮಯದ ಕೆಲಸವನ್ನಾಗಿ ಇದನ್ನು ಮಾಡಿಕೊಂಡರೆ, ಅವರ ಸ್ಥಿತಿಗತಿಯೂ ಸುಧಾರಿಸುವುದು. ತಾನೆ?

ಅಮೆರಿಕದ ಹೆಚ್ಚಿನ ಹೊಲಗಳಲ್ಲಿ ಮತ್ತು ತಕ್ಕ ಮಟ್ಟಿಗೆ ವಿಶಾಲ ಅಂಗಳಗಳಿರುವ ಅನೇಕ ಮನೆಗಳಲ್ಲಿ, ಆಹಾರಾರ್ಥವಾಗಿ ಮತ್ತು ಮೊಟ್ಟೆಗಳ ಮಾರಾಟದಿಂದ ಬರುವ ಹೆಚ್ಚಿನ ಆದಾಯಕ್ಕಾಗಿ ಕೋಳಿ ಮರಿಗಳನ್ನು ಬೆಳೆಸಲಾಗುತ್ತಿದೆ.

ಕೋಳಿಮರಿಗಳನ್ನು ಚೆನ್ನಾಗಿ ಸಾಕಿದರೆ ವ್ಯವಸಾಯದ ಇತರ ಶಾಖೆಗಳಿಂದ ಬರುವಷ್ಟೇ ಆದಾಯ ಈ ವಿಭಾಗದಿಂದಲೂ ಬರುವುದು ಎಂಬ ವಾಸ್ತವಾಂಶವನ್ನು ಹೆಚ್ಚಿನ ಅಮೆರಿಕನ್ನರು ಮನಗಂಡಿದ್ದಾರೆ. ತತ್ಪರಿಣಾಮವಾಗಿ ಅಮೆರಿಕದಲ್ಲಿ ಕೋಳಿ ಸಾಕಣೆಯಲ್ಲಿ ಆಸಕ್ತಿಯು ವಿಶಾಲವ್ಯಾಪಿಯಾಗಿದೆ.

ಕೋಳಿಸಾಕಣೆಯಿಂದ ಲಭಿಸುವ ಆದಾಯದ ಹೆಚ್ಚಿನಂಶವು ಮೊಟ್ಟೆಗಳಿಂದ ಲಭಿಸುತ್ತಿದೆ. ವಿಶೇಷವಾಗಿ ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಕರಾವಳಿಯ ಸಂಸ್ಥಾನಗಳಲ್ಲಿ ಈ ರೀತಿಯ ಆದಾಯವಿದೆ ಎಂದು ಇತ್ತೀಚಿನ ವರ್ಷಗಳಲ್ಲಿ ನಡೆಸಿದ ಪರೀಕ್ಷೆಗಳಿಂದ ವ್ಯಕ್ತವಾಗಿದೆ.

ಕೋಳಿಗಳ ಚಿಕ್ಕ ಗುಂಪುಗಳನ್ನು ಸಾಕಲು ಸುಲಭ, ಸ್ಥಳಾವಕಾಶ ಸ್ವಲ್ಪ ಸಾಕು ಮತ್ತು ದೊಡ್ಡ ಪ್ರಮಾಣದ ಕೂಡಿಕೆ ಅವಶ್ಯವಿಲ್ಲ. ವ್ಯವಸಾಯಕ್ಕೆ ಸಂಬಂಧಿಸಿದ ಎಲ್ಲ ಪ್ರಯತ್ನಗಳಂತೆ, ಕೋಳಿ ಸಾಕಣೆಯೂ, ತಜ್ಞರೀತಿಯ ವ್ಯವಸ್ಥಾ ವಿಧಾನಗಳನ್ನು ಅನುಸರಿಸಿದರೆ ಅತ್ಯುತ್ತಮ ಪ್ರತಿಫಲ ನೀಡುತ್ತದೆ.

ಸಾಮಾನ್ಯವಾಗಿ ಅಮೆರಿಕದ ಯಾವುದೇ ಚಿಕ್ಕ ಹೊಲದಲ್ಲೂ ಕೋಳಿಮರಿಗಳ ಒಂದು ಗುಂಪಿಗೆ ಸೌಕರ್ಯ ಒದಗಿಸಲು ಸಾಧ್ಯವಿದೆ, ಪ್ರಾರಂಭದಲ್ಲಿ ಕೇವಲ ೧೦ರಿಂದ ೨೫ರಷ್ಟು ಕೋಳಿಗಳಲ್ಲಿ ಹಣಹೂಡಿದರೆ ಸಾಕು.

ಅಮೆರಿಕದ ವ್ಯವಸಾಯದ ಇತರ ವಿಭಾಗಗಳಂತೆ ಕೋಳಿ ಸಾಕಣೆಯೂ ಒಂದು ವೈಜ್ಞಾನಿಕ ಉದ್ಯಮವಾಗಿರುತ್ತದೆ. ವರ್ಷಕ್ಕೆ ೨೫೦ ಮೊಟ್ಟೆಗಳನ್ನಿಡಬಲ್ಲ ಹೇಂಟೆಗಳನ್ನು ಸಿದ್ಧಗೊಳಿಸಲಾಗಿದೆ. ನವದೆಹಲಿಯಲ್ಲಿ ಡಿಸೆಂಬರ್ ೧೧ರಿಂದ ಫೆಬ್ರವರಿ ೧೪ರ ವರೆಗೆ ನಡೆದ ಪ್ರಪಂಚ ವ್ಯವಸಾಯ ಮೇಳದಲ್ಲಿ ಇಂಥ ಕೆಲವು ಬಹುಮಾನಯೋಗ್ಯ ಮಾದರಿಗಳು ಮತ್ತು ಕೋಳಿ ಸಾಕಣೆಯ ಆಧುನಿಕ ವಿಧಾನಗಳನ್ನು ಪ್ರದರ್ಶಿಸಲಾಯಿತು.

ಒಂದು ಚಿಕ್ಕ ಅಂಗಳದಲ್ಲಿ ಸಾಮಾನ್ಯ ಕುಟುಂಬಕ್ಕೆ ಬೇಕಾದಷ್ಟು ಮೊಟ್ಟೆಗಳನ್ನೊದಗಿಸಲು ಸಾಕಷ್ಟು ಸಂಖ್ಯೆಯ ಕೋಳಿಮರಿಗಳನ್ನು ಸಾಕಬಹುದು. ಕೋಳಿ ಗೂಡಿನ ಮತ್ತು ಅಂಗಳದ ಗೊಬ್ಬರವನ್ನು ತೋಟದಲ್ಲಿ ಉಪಯೋಗಿಸಿ ಗೊಬ್ಬರದ ವೆಚ್ಚವನ್ನು ಕಡಿಮೆಮಾಡಬಹುದು.

ಅನೇಕ ಕೋಳಿತಳಿಗಳು ಚಿಕ್ಕ ಹೊಲಗಳಿಗೆ ಉಪಯುಕ್ತವಾಗಿವೆ. ಮೊಟ್ಟೆಯ ಉತ್ಪಾದನೆ ಬೇಕಿದ್ದರೆ ಭಾರ ಕಡಿಮೆಯಿರುವ ಲೆಗ್ ಹಾರನ್‌ನಂಥ ತಳಿಯ ಕೋಳಿಗಳನ್ನು ಉಪಯೋಗಿಸಬಹುದು. ಉತ್ತಮ ದರ್ಜೆಯ ಅಡಿಗೆಗೆ, ರ್‍ಹೋಡ್ ಐಲೆಂಡ್ ರೆಡ್, ಪ್ಲಿಮತ್‌ರಾಕ್, ನ್ಯೂ ಹ್ಯಾಂಪ್‌ಶೈರ್ ಅಥವ ವ್ಯಾಂಡೊಟ್ಟೆ ಮುಂತಾದ ತಳಿಯ ಕೋಳಿಗಳನ್ನು ಉಪಯೋಗಿಸಬಹುದು.

ಕಾವು ಕೊಡುವ ಸಂಸ್ಥೆಗಳಿಂದ ಹುಟ್ಟಿ ಒಂದು ದಿನ ಕಳೆದಿರುವ ಕೋಳಿ ಮರಿಗಳನ್ನು ಖರೀದಿ ಮಾಡುವುದು, ಉತ್ತಮ ಗುಣದ ಕೋಳಿಗಳನ್ನು ಪಡೆಯುವ ದೃಷ್ಟಿಯಿಂದ ವ್ಯಾವಹಾರಿಕವಾಗಿರುತ್ತದೆ. ಎಂದು ಕೋಳಿ ಸಾಕಣೆಗಾರರಲ್ಲಿ ಹೆಚ್ಚಿನವರು ಮನಗಂಡಿದ್ದಾರೆ, ಚಿಕ್ಕ ಕೋಳಿ ಗುಂಪನ್ನು ಮಾಡಲು, ಬೆಳೆದ ಕೋಳಿಗಳನ್ನು ಪಡೆಯುವ ಮುಂಚಿನ ಕ್ರಮ ಈಗ ರೂಢಿಯಲ್ಲಿಲ್ಲ.

ಒಂದು ದಿನದ ಕೋಳಿಮರಿಗಳಿಗೆ ಕೃತಕ ರೀತಿಯಲ್ಲಿ ಕಾವು ಕೊಡಬೇಕು, ಕೆಲವು ಕೋಳಿ ಸಾಕಣೆಗಾರರು ಅಂಗಡಿಗಳಿಂದ ಕಾವಿನ ಯಂತ್ರಗಳನ್ನು ಖರೀದಿ ಮಾಡುತ್ತಾರೆ, ಕೆಲವರು ಮನೆಯಲ್ಲಿ ತಯಾರಿಸಿದ ಉಪಕರಣಗಳನ್ನು ಉಪಯೋಗಿಸುತ್ತಾರೆ.

ಒಂದು ಚಿಕ್ಕ ಗುಂಪನ್ನು ಸಾಕುವುದಾದರೆ ಸಾಮಾನ್ಯವಾಗಿ ಒಂದು ವರ್ಷಕ್ಕೆ ಪ್ರತಿಕೋಳಿಗೆ ೫೦ರಿಂದ ೭೫ ಪೌಂಡುಗಳಷ್ಟು ಆಹಾರವಸ್ತುಗಳನ್ನು ಖರೀದಿಮಾಡಬೇಕಾಗುತ್ತದೆ.

ಚಿಕ್ಕ ಪ್ರಮಾಣದಲ್ಲಿ ಕೋಳಿಗಳನ್ನು ಸಾಕಲು ಬಯಸುವವನು ಕೋಳಿ ಮರಿಗಳನ್ನು ಸ್ವತಃ ಉತ್ಪಾದನೆ ಮಾಡಲು ನಿರ್ಧರಿಸಿದರೆ, ಆತನು ಹೊಸದಾದ ಮಧ್ಯಮ ಗಾತ್ರದ ಬಲಿಷ್ಠ ಚಿಪ್ಪುಗಳುಳ್ಳ ಮೊಟ್ಟೆಗಳನ್ನು ಆಯ್ಕೆಮಾಡಬೇಕು, ಅವುಗಳನ್ನು ಐದು ದಿನಗಳಿಗೆ ಮೀರದಂತೆ ಒಂದು ತಂಪಾದ ಸ್ಥಳದಲ್ಲಿಡಬೇಕು. ಬಳಿಕ ಅವುಗಳನ್ನು ತನ್ನ ಇಂಕ್ಯುಬೇಟರ್‌ನಲ್ಲಿ ಅಥವಾ ಕಾವುಕೊಡುವ ಹೇಂಟೆಯಾಶ್ರಯದಲ್ಲಿ ಇಡಬೇಕು. ಹೇಂಟೆಯ ರೆಕ್ಕೆಯಡಿ ಇಡುವುದಾದರೆ ರೆಕ್ಕೆಯ ವ್ಯಾಪ್ತಿಗಿಂತ ಹೆಚ್ಚು ಮೊಟ್ಟೆಗಳನ್ನಿಡಬಾರದು ಸಾಮಾನ್ಯವಾಗಿ ೧೫ರಷ್ಟು ಇಡಬಹುದು ಆ ಹೇಂಟೆಗೆ ಪ್ರತ್ಯೇಕವಾಗಿ ಒಂದು ಗೂಡನ್ನಿತ್ತು ಸಮೀಪದಲ್ಲೇ ನೀರನ್ನು ಮತ್ತು ಆಹಾರವನ್ನು ಇಡಬೇಕು.

ಅನುಕೂಲತೆಗಾಗಿ ಮತ್ತು ಕೆಲವು ಬಾರಿ ಮಿತವ್ಯಯಕ್ಕಾಗಿ, ಕೋಳಿ ಸಾಕಣೆಗಾರರು ಕೋಳಿಗಳಿಗೆ ಸ್ವಂತ ಆಹಾರ ವಸ್ತುಗಳ ಬದಲು ಪೇಟೆಯಲ್ಲಿ ದೊರೆಯುವ ಆಹಾರ ವಸ್ತುಗಳನ್ನೇ ಅವಲಂಬಿಸಿರುತ್ತಾರೆ, ಏಕೆಂದರೆ ಪೇಟೆಯ ಆಹಾರ ಮಿಶ್ರಣದಲ್ಲಿ, ವಿಶೇಷ ವೆಚ್ಚವಿಲ್ಲದೆ, ಅನೇಕ ಹೊಸ ಆಂಟಿ—ಬಯೋಟಿಕ್‌ಗಳು ಮತ್ತು ವಿಟಮಿನ್‌ಗಳನ್ನು ಸೇರಿಸಲಾಗುವುದು. ಇದರಿಂದಾಗಿ ಕೋಳಿ ಮರಿಗಳು ಆರೋಗ್ಯದಿಂದ ಬೆಳೆಯುತ್ತವೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 23/1959

R. I. A. No. 197/1960

1. ಕಮಿಲ್ಲ್ ಅರೆಂಞಾ, 2. ಜೋನ್ ಅರೆಂಞಾ, 3. ಜೆರೋಮ್ ಅರೆಂಞಾ, 4. ಮೇರಿ ಅರೆಂಞಾ,

5. ಮಿಚೇಲ್ ಅರೆಂಞಾ, 6. ಹೆನ್ರಿ ಅರೆಂಞಾ, 7. ಕ್ಲೇರೆನ್ಸ್ ಅರೆಂಞಾ ಮೈನರರು, ಇವರ ಕ್ಷೇಮಚಿಂತಕ ಅಣ್ಣ 2ನೇ ಅರ್ಜಿದಾರ.

—ಅರ್ಜಿದಾರರು.

ಸದ್ರಿ ಅರ್ಜಿದಾರರ ತಂದೆ ಕಳೆದ ತಾ. 25–1–1959ರಲ್ಲು ಮೃತಪಟ್ಟ ಯಿಂತ್ರು ಅರೆಂಞಾ ಯೆಂಬವರಿಗೆ ವ, ಅರ್ಜಿದಾರರ ತಾಯಿ ಕಳೆದ ತಾ. 29-9–1959ರಲ್ಲು ಮೃತಪಟ್ಟ ಮಾರ್ಟಿನ್ ಅರೆಂಞಾ ಯಾನೆ ಲೋಬೋ ಬಾ ಯೆಂಬವರಿಗೆ ಸಹಾ ಸದ್ರಿ R. I. A. ಅರ್ಜಿಯಲ್ಲಿ ವಿವರಿಸಿರುವ The Canara Bank Ltd. Karkala Branch ಇಂದ್ಲೂ Catholic Bank Ltd. Coondapoor Branch ನಿಂದ್ಲೂ ಬಾಹಾ ಠೇವಣಿಗಳನ್ನು ವಸೂಲು ಪಡಿಯುವರೆ ಸದ್ರಿ ಅರ್ಜಿದಾರರ ಬಗ್ಗೆ 2ನೇ ಅರ್ಜಿದಾರನ ಹೆಸರಲ್ಲಿ extended Succession certificateನ್ನು ಕೊಡಬೇಕಾಗಿ ಸದ್ರಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 15–3–1960ಕ್ಕೆ ತನ್ಕಿಗೆ ಯಿಟ್ಟಿರುವದ್ರಿಂದ ಯಿದ ಕುರಿತು ಆಕ್ಷೇಪಣೆವುಳ್ಳವರು ಅವರವರ ಆಕ್ಷೇಪಣೆಗಳನ್ನು ಸದ್ರಿ ತಾರೀಕಿನಲ್ಲಿ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದೆಂಬ ಸಂಗ್ತಿಯನ್ನು ಕೋರ್ಟಿನ ಹುಕುಂ ಪ್ರಕಾರ ಯಿದ ಮೂಲಕ ಸರ್ವಜನರಿಗೂ ತಿಳಿಯಪಡಿಸೋಣಾಗುತ್ತದೆ.

L. PEREIRA,

Advocate for Petitioner.

ಕಾರ್ಕಳ, ತಾ. 29–2–1960

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಕಥಾವಿಹಾರ:

(೨ನೇ ಪುಟದಿಂದ)

ವರೇ ಕಳಿಸುವುದಿಲ್ಲವೆಂಬ ಅಚಲವಾಗಿ ನಂಬಿದ್ದಾಳೆ.ಮುಗ್ಧ ಮನೋಹರಿ ಬಾಲೆ ರಾಗಿಣಿಗೆ ತಾಯಿಯಿಲ್ಲದ ದುಃಖವೊಂದು; ದೇವರು ಮರಳಿ ಕಳಿಸಿಲ್ಲವೆಂಬ ಕೊರಗು ಬೇರೆ!

ದೇವರು ದಯಾಮಯನೆಂದರೆ ರಾಗಿಣಿ ಒಪ್ಪುತ್ತಿಲ್ಲ; ಭಕ್ತವತ್ಸಲನೆಂದರೆ ಆಕೆ ಅಲ್ಲವೆನ್ನುವಳು. ಇಷ್ಟಪ್ರದಾಯಕನೆಂದರೆ, ಕಷ್ಟ ಕೊಡುವವನೆಂದು ದೂರುವಳು. ದೇವರಿಗೆ ಕಣ್ಣಿಲ್ಲ, ಹೃದಯವಿಲ್ಲ, ಸನ್ಮನವಿಲ್ಲ ಎಂದ ಆವಳು ಕೊನೆಗೊಂದು ದಿನ ದೇವರೇ ಇಲ್ಲ ಎನ್ನತೊಡಗಿದಳು, ಆತನಿರುವನಾದರೆ. ತನ್ನ ಬಳಿಗೆ ತಾಯನ್ನು ಒಂದು ಬಾರಿಯಾದರೂ ಕಳಿಸದಿರುತ್ತಿರಲಿಲ್ಲ ಎಂಬ ವಿಚಿತ್ರ ವಾದ ಆಕೆಯದು.

"ಅಪ್ಪಾ, ದೇವರನ್ನು ಪೂಜೆ ಮಾಡುವುದೇಕೆ? ಆತನಿಗೆ ನಮ್ಮ ಮೇಲೆ ಎಳ್ಳಷ್ಟೂ ದಯೆಯಿಲ್ಲವೆಂದ ಮೇಲೆ ಅವನನ್ನು ಕಟ್ಟಿಕೊಂಡು ನಮಗೇನಾಗಬೇಕು?" ರಾಗಿಣಿಯ ಪ್ರಶ್ನೆ!

"ಹಾಗಲ್ಲ ಮಗೂ, ಒಂದು ದಿನ ಅವನು ನಿನ್ನ ತಾಯನ್ನು ನಿನ್ನ ಬಳಿಗೆ ಕಳಿಸುತ್ತಾನೆ. ಧೈರ್ಯದಿಂದಿರು' ಎಂದು ಆ ಮುಗ್ಧ ಬಾಲಿಕೆಯನ್ನು ಸಂತೈಸಿದರು ರಾಯರು ಒತ್ತಿಬರುವಕಣ್ಣೀರನ್ನು ಒರಸಿಕೊಂಡು.

೦ ೦ ೦

ಅಪ್ಪಾ:—ಪುಟ್ಟಿಗೆ ಅಮ್ಮ ಇದ್ದಾಳೆ. ಸರೋಜಳಿಗೂ ಇದ್ದಾರೆ. ನನಗೆ ಮಾತ್ರ ಇಲ್ಲವೇನಪ್ಪ? ನನಗೂ ಅಮ್ಮ ಬೇಕು'- ರಾಗಿಣಿಯು ಪಟ್ಟುಹಿಡಿದು ಕೂಗತೊಡಗಿದಳು. ಇದರಿಂದಾಗಿ ಸೀತಾರಾಮರಾಯರ ಮನಸ್ಸು ಚಂಚಲವಾಯಿತು. ಅವರಿಗೆ ದ್ವಿತೀಯ ಲಗ್ನ ಮಾಡಿಸುವ ಆತುರ ತುಂಬ ಮಂದಿಯಲ್ಲಿತ್ತು. ರಾಯರ ಮನಸ್ಸಿಗೆ ಇದೂ ಸರಿಯೆನಿಸಿತು.ಆದರಿಂದಲಾದರೂ ರಾಗಿಣಿ ತಾಯಿಯನ್ನು ಮರೆತು ಸುಖವಾಗುವಳಾದರೆ....? ಸರಿಯೆ. ದ್ವಿತೀಯ ವಿವಾಹವೂ ಆಯಿತೆನ್ನಿ. ಮಲತಾಯಿ ಮಲತಾಯಿಯೇ ತಾನೆ?

ರಾಗಿಣಿಯ ವರ್ತನೆ ಬದಲಾಗಲಿಲ್ಲ. ಆಕೆ ಅಳುತ್ತಲೇ ಇದ್ದಳು. 'ಏಕಳುವೆ' ಎಂದರೆ ಮಲತಾಯಿಗೆ 'ನೀ ಬಂದೆ; ಅಮ್ಮ ಬರಲಿಲ್ಲ' ಎನ್ನುತ್ತಾಳೆ! ಇದೇ ರೀತಿ ದಿನವೂ ನಡೆಯುತಿತ್ತು. ಮಲತಾಯಿಗೂ ಕೋಪ ನೆತ್ತಿಗೇರಿತು: ಒಂದು ದಿನ ಗದರಿಸಿ ಹೇಳಿಯೇಬಿಟ್ಟಳು: 'ತಾಯಿಯನ್ನು ನುಂಗಿ ಉಳಿದ ಪಿಶಾಚಿ' ಎಂದು! ತನ್ನ ತಾಯಿ ಸತ್ತಿದ್ದಾಳೆ; ದೇವರ ಲೋಕದಲ್ಲಿದ್ದಾಳೆ. ನಾನೆಲ್ಲಿ ನುಂಗಿದ್ದೇನೆ! ಪಿಶಾಚಿ ಯಾರೆ ತಾನು! ಎಂದು ರಾಗಿಣಿ ವಿಲಕ್ಷಣವಾಗಿ ಕೂಗ ತೊಡಗಿದಳು. ಅಪ್ಪ ಬರುವುದನ್ನೇ ಕಾದು ಕುಳಿತು ಪ್ರಶ್ನಿಸಿದಳು: "ಅಪ್ಪಾ, ನನ್ನ ಹೊಟ್ಟೆಯಲ್ಲಿ ಅಮ್ಮ ಇದ್ದಾಳೆಯೆ?"— ಕಣ್ಣುಗಳಲ್ಲಿ ಆತುರವಿತ್ತು.

ದಿಗ್ಭ್ರಮೆಗೊಂಡ ರಾಯರ ಕಣ್ಣುಗಳಲ್ಲಿ ನೀರೂರಿತು. ಅವರು ರಾಗಿಯನ್ನು ನೇವರಿಸಿ ಅಪ್ಪಿಕೊಂಡು, "ಇಲ್ಲ ಮಗು, ಹಾಗೆ ಹೇಳಿದವರಿಗೆ ನಾಲ್ಕು ಏಟು ಕೊಡುವ" ಎಂದು ಸಮಾಧಾನಪಡಿಸತೊಡಗಿದರು. ಮಡದಿಯನ್ನು ಕರೆದು ಬುದ್ಧಿಯೊರೆದರು. ರಾಗಿಣಿಗೆ ಧೈರ್ಯವಿತ್ತರು.

ಆದರೆ, ಒಡೆದ ಹೃದಯ ಮತ್ತೆ ಕೂಡಲಿಲ್ಲ. ಮಲತಾಯಿಯು ರಾಗಿಣಿಗೆ ರಾಕ್ಷಸಿಯಾಗಿಯೇ ತೋರಿಬಂದಳು. ದೇವರು ಈಕೆಯನ್ನಿಲ್ಲಿಗೆ ಕಳಿಸಿದುದೇಕೆ? ಬದಲಿಗೆ ತನ್ನಲ್ಲಿದ್ದ ಅಮ್ಮನನ್ನೇ ಮರಳಿ ಕಳಿಸಬಾರದಿತ್ತೆ ಎಂದಾಕೆ ಅಳುತಿದ್ದಳು; ದೇವರನ್ನು ನಿಂದಿಸುತಿದ್ದಳು. ರಾಗಿಣಿಯ ದಿನ ದುಃಖಮಯವಾಗಿಯೇ ಕಳೆಯುತಿತ್ತು. ಮಗಳ ದುಃಖದಲ್ಲಿ ರಾಯರೂ ಭಾಗಿಯಾಗುತಿದ್ದರು. ಮಲತಾಯಿಗೆ ಮಾತ್ರ ಏನೊಂದು ಹಚ್ಚಿಕೊಂಡಿದ್ದಾರೆ, ಇವರೆಲ್ಲಾ? ಎಂಬ ವಿಚಾರ ತಾಂಡವವಾಡುತಿತ್ತು.

೦ ೦ ೦

ಒಂದು ರಾತ್ರೆ. ತಂದೆ ಮಗಳು ಹಾಸಿಗೆಯಲ್ಲಿ ಮಲಗಿದ್ದರು. ರಾಗಿಣಿಗೆ ತಂದೆ ತಾಯಿ ದೇವರೆಲ್ಲಾ ತಂದೆಯೇ ತಾನೆ? ಹಾಸಿಗೆಯಲ್ಲಿ ಮಲಗಿದ್ದ ರಾಗಿಣಿ ನಗಲು ಪ್ರಕ್ರಮಿಸಿದಳು. ಮುಖವಿಕಸಿತವಾಗಿತ್ತು ಸಂತೋಷದಿಂದ ಹೃದಯ ತುಂಬಿ ಬಂದಿತ್ತು. "ಅಮ್ಮಾ, ಅಮ್ಮಾ' ಎಂದು ಕೂಗುತಿದ್ದಳಾಕೆ. ರಾಯರು ದೀಪಮಾಡಿ ಮಗಳ ಕನಸಿನ ಸಂತಸದ ಸವಿ ನೋಡಿದರು. ಆದರೆ....

ಬೆಳಗಾಯಿತು. ರಾಗಿಣಿ ಸಂತೋಷ ಚಿತ್ತದಿಂದಿದ್ದಳು. ಹರ್ಷದಿಂದ ಗಾತ್ರ ಪುಲಕಿತವಾಗಿತ್ತು. ಮುಖದಲ್ಲಿ ಮಂದಹಾಸ ಮಿಂಚುತಿತ್ತು. 'ಅಪ್ಪಾ, ಅಪ್ಪಾ, ನನಗೆ ಅಮ್ಮ ಸಿಕ್ಕಿದಳು' ಎಂದು ತಬ್ಬಿಕೊಂಡು ನುಡಿದಳು.

'ಪುನಃ ಅದೇ ಮಾತು. ಅಮ್ಮ ಮರಳಿ ಬರುವಂತಿಲ್ಲ; ಆಕೆಯನ್ನು ಮರೆತುಬಿಡು' ರಾಯರು ಒತ್ತಿದುಃಖವನ್ನು ಒಡಸಿಕೊಳ್ಳುತ್ತ ಅಂದರು.

"ಅಮ್ಮ ನನಗೆ ದೊರೆತಳು. ನಾಳೆ ಬರುವೆನೆಂದಳು. ನಿನ್ನ ಎತ್ತಿಕೊಳ್ಳುತ್ತೇನೆ ಎಂದು ಮಾತಿತ್ತಳು. ನನ್ನಮ್ಮ ಖಂಡಿತ ಕ್ಕೂ ಬರುತ್ತಾಳೆ" ರಾಗಿಣಿ ಈ ಭೂಮಿಯಲ್ಲಿರಲಿಲ್ಲ, ಆಕೆಗೆ ದೇವಲೋಕ ಗೋಚರವಾತ್ರ ದೂರವಾಗಿತ್ತು.ರಾಯರಿಗೆ ಇದರ ಕಾರಣ ತಿಳಿಯಿತು. ಆದರೆ, ಏನು ತಾನೇ ಮಾಡಬಲ್ಲರು? ಒಂದೆರಡು ದಿನ ಸುಪ್ರಸನ್ನಳಾಗಿರಲಿ ಎಂದು ಐಕ್ಯಸಿ ತಲೆ ನೇವರಿಸತೊಡಗಿದರು.

ರಾಗಿಣಿಗಿಂದು ಉತ್ಸವದ ದಿನ. ಎಲ್ಲರನ್ನೂ ಪೀಡಿಸಿ ಗೃಹಶೃಂಗಾರವಾಯಿತು ಹೂ ಕೊಯ್ದು ದೇವರ ಪೂಜೆಯೂ ಯಿತು. "ನನ್ನಮ್ಮನ್ನ ಕರೆದುಕೊಂಡು ತಪ್ಪದೇ ಬಾ" ಎಂದು ಪ್ರಾರ್ಥನೆಯೂ ಸಂದಿತು. ಸಿಕ್ಕವರಿಗೆಲ್ಲಾ, "ಇಂದು ನನ್ನಮ್ಮ ಬರ್ತಾಳೆ, ನೀನು ನೋಡಬಹುದು" ಎನ್ನುತ್ತಲೇ ಇದ್ದಾಳೆ. ಆದರೆ ಕೇಳಿದವರು ರಾಗಿಯ ನಗುವಿನಲ್ಲಿ ನೀರಡೆ ಮುಖ ಕಂಡುಮಾಡಿ ನಡೆಯುತ್ತಾರೆ. ಕೆಲವರು, "ಇರಬಹುದು, ಬರುತ್ತೇವೆ" ಎಂದರು. ಇನ್ನು ಕೆಲವರು, 'ಸತ್ತವರು ಮರಳಿ ಬರುತ್ತಾರೆಯೆ?' ಎಂದು ಪ್ರಶ್ನಿಸಿದರು. ದನದ ಕರು ಪುಟ್ಟು ಅಂಗಳದಲ್ಲಿ ಅಂಬೇ ಎನ್ನಲು, ಅದರ ಬಳಿ ಓಡಿ, "ಪುಟ್ಟೂ,ನನ್ನಮ್ಮ ಇಂದು ಬರುತ್ತಾಳೆ; ಇನ್ನು ನಿನ್ನನ್ನ ಚೆನ್ನಾಗಿನೋಡಿಕೊಳ್ಳುತ್ತಾಳೆ. ಈ ರಾಕ್ಷಸಿ ಕೈಯಿಂದ ಬಿಡುಗಡೆ ಮಾಡಿಸ್ತೇನೆ" ಎಂದು ಮುದ್ದಿಟ್ಟು ಸಮಾಧಾನ ಪಡಿಸುತ್ತಾಳೆ.

ಸೀತಾರಾಮರಾಯರು ಮನೆಗೆ ಮರಳಿ, ಮಗಳನ್ನು ಊಟಕ್ಕೆ ಕರೆದರು. ಆಕೆ ಓಡಿಬಂದು, "ಅಪ್ಪಾ, ಅಮ್ಮ ಬರುವಾಗ ಮಿಠಾಯಿತಂದರೆ, ಅದನ್ನು ತಿನ್ನಬೇಕು. ಈಗ ಬೇಡ, ಕೊನೆಗೇನೇ ಮಾಡೋಣ" ಎಂದು ಅವರ ಕೈ ಹಿಡಿದು ಬಾಗಿಲಬಳಿ ಕೂರಿಸಿದಳು. "ಅಪ್ಪಾ, ಅಮ್ಮ ಬರುವಾಗ ನೀನೂ ಇರಬೇಕು. ಆಕೆಗೆ ಬೇಸರವಾಗುವುದಿಲ್ಲವೆ? ನಿಲ್ಲು, ಶಾಲೆಗೆ ಇಂದು ಹೋಗಬೇಡ" ಎಂದಳು.

ರಾಗಿಣಿ ಬೆಳಗ್ಗಿನಿಂದಲೂ ಏನನ್ನೂ ಸೇವಿಸಿಲಿಲ್ಲ. "ಅಮ್ಮನನ್ನು ಬೇಗ ಕರೆದು ತಾ; ಹಸಿವೆಯಾಗುತ್ತಿದೆ; ಆಕೆಯೊಡನೆ ಉಣ್ಣಬೇಕು' ಎಂದಾಗಿ ನೂರು ಮೂರು ಬಾರಿ ದೇವರನ್ನು ಮೊರೆಯಿಟ್ಟಿದ್ದಳು. ಆದರೆ... ...

ರಾಗಿಣಿಯ ಬಾಳ ಜೀವನದಲ್ಲಿ ಇಂದು ಹೊಸ ಹಗಲು. ಆಕೆ ಕನಸನ್ನು ನನಸೆಂದು ನಂಬಿದ್ದಳು. ಪಾಪ, ಕನಸು ಸತ್ಯವಲ್ಲವೆಂದು ಆಕೆಗೇನು ಗೊತ್ತು? ತನ್ನ ಹೆತ್ತ ತಾಯಿಯ ಆಗಮನದ ನಿರೀಕ್ಷೆಯಲ್ಲಿ ರಾಗಿಣಿ ಶೃಂಗರಿಸಿಕೊಂಡು ಹೆಬ್ಬಾಗಿಲ ಹೊರಗೆ ಕಾದು ಸಂಜೆವರೆಗೆ ಸಂಭ್ರಮದಿಂದ ಕುಳಿತಿದ್ದಳು. ತನ್ನಮ್ಮ ಬರುವಳೆಂದು ದಾರಿಯನ್ನೇ ಆ ಪುಟ್ಟಬಾಲೆ ಇಣಿಕಿಣಿಕಿ ಕಣ್ಣೆವೆಯನ್ನು ಮುಚ್ಚದೆ ನೋಡುತಿದ್ದಾಳೆ. ಸೂರ್ಯದೇವ ಆಕೆಯ ನೊಂದ ಬಾಳುವೆಯನ್ನು ಕಂಡು ಏಳಿಯುತ್ತ ಕೆಂಗಣ್ಣ ದೃಷ್ಟಿ ಹರಿಸುತ್ತ ಮರೆಯಾಗಲು ಹವಣಿಸಿದನು. ರಾಗಿಣಿಯ ಮುಖ ಆನಂದಾಗ ಪೂರ್ಣವಾಗಿತ್ತು; ಆಕೆಯ ನೋಟ ತಾಯಿಯ ಮನಮೋಹಕ ಮೂರ್ತಿಯಲ್ಲಿ ಐಕ್ಯವಾಗಿತ್ತು; ಹೃದಯ ತಾಯಿಯ ಸ್ನೇಹಪೂರ್ಣ ಹೃದಯದೊಂದಿಗೆ ಕೂಡಿಕೊಂಡಿತ್ತು.

ಸೀತಾರಾಮರಾಯರು ಉಸ್ಸಪ್ಪ ಎಂದು ಬಾಗಿಲ ಬಳಿ ಬಂದಾಗ ಅವರ ದೇಹವನ್ನು ಕತ್ತಲು ವ್ಯಾಪಿಸಿ ಬಿಟ್ಟಿತ್ತು.ಅದು ಮತ್ತೆ ಬೆಳಕಾಗುವುದು ಸಾಧ್ಯವಿರಲಿಲ್ಲ.

ಶ್ರೀ ಎಚ್. ಆನಂದರಾವ್ ಅಡಿಗ,
೮ಂ. ನಾರಾಯಣ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939



ಎಸ್.ಆರ್.
ಬೀಡಿಗಳ
ಈ ಟ್ರೇಡ್‌ಮಾರ್ಕನ್ನು
ನೋಡಿದೊಡನೆಯೇ
ನಿಮಗೆ
ಅತ್ಯುತ್ತಮವಾದುದು
ದೊರೆತಿದೆಯೆಂಬುದು
ತಿಳಿಯುವುದು.

ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ.

S.R.BEEDI WORKS,
UDIPI, S. K.

ಶಿಕ್ಷಣ ಕ್ಷೇತ್ರ

(೧ನೇ ಪುಟದಿಂದ)

ಇದು ಏಳನೆಯ ತರಗತಿಗೆ ಏರಿತು; ಆದರ ನಂತರ ಪುನಃ ಆರನೆಯ ತರಗತಿಗೆ ಇದು ಇಳಿಯಿತು. ಈಗ ಪುನಃ ಐದನೆಯ ತರಗತಿಗೆ ಇದನ್ನು ಇಳಿಸಲಾಗಿದೆ. "ಬದಲಾವಣೆಯ ಗೊಂದಲ"ಕ್ಕೆ ಇದೊಂದು ಸಣ್ಣ ನಿದರ್ಶನ. ಈ ರೀತಿಯ ಅನಿಶ್ಚಿತ ಸುಧಾರಣೆಗಳು ವಿದ್ಯಾರಂಗದ ಶ್ರೇಷ್ಠತೆಗೆ ಅಪವಾದಗಳಾಗಿವೆ.

ಪ್ರೌಢ ಶಿಕ್ಷಣದಲ್ಲಿ

ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿಯೂ ಪರಿವರ್ತನೆಗಳು ಕಂಡು ಬರುತ್ತಿವೆ. ಕಾಲೇಜು ವಿದ್ಯಾಭ್ಯಾಸದ ಪರಿಸ್ಥಿತಿಗಳು ಇಂದು ಮೊದಲಿಗಿಂತ ತುಂಬ ಭಿನ್ನವಾಗಿದೆ. ಎರಡು ವರ್ಷ ಅವಧಿಯ 'ಇಂಟರ್‌ಮೀಡಿಯಟ್' ಅಭ್ಯಾಸವು ಇಂದು ಒಂದು ವರ್ಷದ ಅವಧಿಯದ್ದಾಗಿದೆ, ಇದರ ಬದಲಾಗಿ ಗ್ರಾಜ್ಯುವೇಟ್' ಅಭ್ಯಾಸದ ಅವಧಿ ಮಾತ್ರ ಎರಡರಿಂದ ಮೂರಕ್ಕೆ ಏರಿಸಲಾಗಿದೆ. ಸುಮಾರು ನಾಲ್ಕು ವರ್ಷಗಳಿಂದ ಈ ಹೊಸ ಪ್ರಯೋಗವು ನಡೆಯುತ್ತಲಿದೆ. ಪ್ರಾದೇಶಿಕ ಭಾಷೆಯಲ್ಲಿಯೇ ಅಭ್ಯಸಿಸಿದ ವಿದ್ಯಾರ್ಥಿಯು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿ ಕಾಲೇಜನ್ನು ಪ್ರವೇಶಿಸಿದಾಗ, ಅಲ್ಲಿನ ಇಂಗ್ಲೀಷ್ ಮಾಧ್ಯಮವು ಆತನಿಗೆ ಅತಿ ಕಷ್ಟದಾಯಕವಾಗಿ ಕಂಡು ಬರುವುದು; ಜತೆಗೆ, ವರ್ಷಾಂತ್ಯದಲ್ಲೇ ವಿಶ್ವವಿದ್ಯಾಲಯ ಪರೀಕ್ಷೆ ಬೇರೆಯಿರುವುದು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದು ಆತನಿಗೆ ಅತಿಪ್ರಯಾಸವಾಗಿ ಕಂಡುಬರುವುದರಲ್ಲಿ ಸಂದೇಹವಿಲ್ಲ. ಇಷ್ಟು ಪ್ರಯಾಸವಾದರೂ, ಆತನೇನಾದರೂ ಒಂದು ವರ್ಷ ಮೊದಲೇ ಪದವೀಧರನಾಗುವುದಾದರೂ ಸಾಧ್ಯವೇ? ಅದೂ ಸಾಧ್ಯವಿಲ್ಲ. ಪದವೀಧರನಾಗಬೇಕಾದರೆ ಆತ ಮೂರು ವರ್ಷ ಪುನಃ ಓದಬೇಕಾಗಿದೆ. ಈ ಹೊಸ ಸುಧಾರಣೆಯಿಂದ ಆಗುವ ಪ್ರಯೋಜನವೇನು? ಒಂದು ವರ್ಷದ ಇಂಟರ್‌ಮೀಡಿಯೆಟ್ ಪರೀಕ್ಷೆ ಮುಗಿಸಿದುದರಿಂದ ಆ ವಿದ್ಯಾರ್ಥಿಗೆ ಹೆಚ್ಚಿನ ಯೋಗ್ಯತೆ ಬಂದಿತೆಂದು ಯಾರೂ ಪರಿಗಣಿಸುವುದಿಲ್ಲ; ಅಥವಾ ಅದರಿಂದಾಗಿ ಆತನಿಗೆ ಉದ್ಯೋಗದೊರೆಯುವುದೂ ಇಲ್ಲ. ಇದಕ್ಕಿಂತ ಎರಡು ವರ್ಷಗಳಕಾಲ ಕಲಿತು ತೇರ್ಗಡೆ ಹೊಂದುವ ಹಳೆಯ ಇಂಟರ್‌ಮೀಡಿಯಟ್ ಪರೀಕ್ಷೆಯು ಎಷ್ಟೋ ಮಟ್ಟಿಗೆ ಉತ್ತಮವಾಗಿತ್ತು ಎಂದು ನಿಸ್ಸಂದೇಹವಾಗಿ ಹೇಳಬಹುದು. ಫೋರ್ಡ್ ಫೌಂಡೇಶನ್ ಎಂಬ ತಜ್ಞ ಸಂಸ್ಥೆಯ ಪರವಾಗಿ, ಈ ಕುರಿತು ಮಾಡಿದ ವರದಿಯ ಪ್ರಕಾರ, ನಮ್ಮ ದೇಶದಲ್ಲಿಯೂ ಅಮೇರಿಕದಲ್ಲಿರುವಂತೆಯೇ "ಜೂನಿಯರ್ ಕಾಲೇಜು"ಗಳನ್ನು ತೆರೆದು ಅಲ್ಲಿ ಎರಡು ವರ್ಷಗಳ ಇಂಟರ್‌ಮೀಡಿಯಟ್ ತರಗತಿಗಳನ್ನು ಒದಗಿಸಿ, ತೇರ್ಗಡೆಯಾದವರಿಗೆ ಎ. ಎ., ಎ. ಎಸ್‌ಸಿ. ಮೊದಲಾದ" "ಎಸೋಸಿಯೇಟ್" ಪದವಿಗಳನ್ನು ಒದಗಿಸಬಹುದಾಗಿತ್ತು. ನಾಲ್ಕು ವರ್ಷಗಳ ಕಾಲ ಕಾಲೇಜು ವಿದ್ಯಾಭ್ಯಾಸ ಮಾಡುವುದು ಸಾಧ್ಯವಾಗದ ವಿದ್ಯಾರ್ಥಿಗಳು, ಎರಡು ವರ್ಷಗಳಕಾಲ ಮಾತ್ರ ಕಲಿತು, ಚಿಕ್ಕದೊಂದು ಪದವಿಯನ್ನುಗಳಿಸುವ ಸೌಲಭ್ಯವನ್ನು ಅವರು ಪಡೆಯುವಂತೆ ನಮ್ಮ ದೇಶದಲ್ಲಿಯೂ ಮಾಡುತ್ತಿದ್ದರೆ, ಅದೆಷ್ಟೋ ಸಾರ್ಥಕವಾದ ಸುಧಾರಣೆಯೆನಿಸುತ್ತಿತ್ತು. ಆದರೆ, ಕಾರಣಾಂತರಗಳಿಂದ, ಇಂತಹ ಉತ್ತಮ ಯೋಜನೆಗೆ ಭಾರತದ ವಿದ್ಯಾಧಿಕಾರಿ ವರ್ಗವು ಗಮನಕೊಡುತ್ತಿಲ್ಲವೆನ್ನುವುದು ತುಂಬ ಶೋಚನೀಯ.

ಈಗ ಹೊಸತಾಗಿ ಹೈಯರ್ ಸೆಕೆಂಡರಿ ಶಾಲೆಗಳನ್ನು ಕಲ್ಪಿಸುವ ಯೋಜನೆ ಸಿದ್ಧವಾಗಿದೆ. ಇದರ ಪ್ರಕಾರ ಹೈಸ್ಕೂಲಿನ ಕೊನೆಯ ಹಂತವನ್ನು ಹೊಗ್ಗುವ ವಿದ್ಯಾರ್ಥಿಯು ಮೂರು ವರ್ಷಗಳ ಕಾಲವಾದರೂ ಮನಮೆಚ್ಚುವ ವಿಷಯಗಳಲ್ಲಿ ವಿಶೇಷಾಭ್ಯಾಸ ಮಾಡುವ ಸೌಕರ್ಯವನ್ನು ಒದಗಿಸಬೇಕೆಂಬ ಯೋಜನೆಯಿದೆ. ಇದು ಕಾರ್ಯಗತವಾದರೆ ಇದು ತುಂಬ ಮಟ್ಟಿಗೆ ಜನಪ್ರಿಯವಾಗಬಹುದು. ಆದರೆ, ಇಲ್ಲಿಯೂ ಸರಕಾರದ ಚಂಚಲ—ಮನೋವೃತ್ತಿಯು ಧಾಳಿ ಮಾಡಬಾರದಾಗಿದೆ. ಈ ಪ್ರಯೋಗವು ಕೆಲವು ವರ್ಷಗಳಾದರೂ ಯಶಸ್ವಿಯಾಗಿ ಜರಗಬೇಕು.

ಭಾಷಾ ಸಮಸ್ಯೆ......

ಶಿಕ್ಷಣ ಮಾಧ್ಯಮದ ಕುರಿತು ಹೊಸ ಬದಲಾವಣೆಗಳು ಈಗ ಆರಂಭವಾಗಿವೆ. ಅಧ್ಯಾಪಕರೂ, ವಿದ್ಯಾರ್ಥಿಗಳೂ ಸರಕಾರದ ನಿಯಮಗಳಿಂದ ಕಂಗೆಡುತ್ತಿದ್ದಾರೆ. ಭಾಷೆಯ ಮೇಲಿನ ಮಮತೆಯನ್ನು ಮಿತಿಗೆಟ್ಟು, ಮುಂದುವರಿಸುವುದು ಒಂದು "ಸುಧಾರಣೆ" ಎನಿಸಲಾರದು. ಭಾಷಾ ಸಮಸ್ಯೆಯ ಒಂದು ಸಣ್ಣ ರೂಪ ನಮ್ಮ ರಾಜ್ಯದಲ್ಲಿಯೂ ಕಂಗೊಳಿಸುತ್ತಿದೆ. ಹೈಸ್ಕೂಲ್‌ಗಳಲ್ಲಿ ಇಂಗ್ಲೀಷ್ ಮಾಧ್ಯಮವಿರಬಾರದೆಂದೂ, ಹಾಗೆ ಇರಿಸಿದರೆ, ಅಂತಹ ಹೈಸ್ಕೂಲ್‌ಗಳಿಗೆ ಸರಕಾರದ ಆರ್ಥಿಕ ಸಹಾಯವು ನಿಲ್ಲಿಸಲ್ಪಡುವುದೆಂದೂ ಸರಕಾರವು ತೀರ್ಮಾನಿಸಿದೆ. ವಿವಿಧ ಭಾಷೆಗಳನ್ನಾಡುವ ಜನರಿರುವ ಬೆಂಗಳೂರಿನಂತಹ ಮಹಾ ನಗರದಲ್ಲಿ ಇದರಿಂದಾಗಿ ಒದಗಿರುವ 'ಸಾಮಾಜಿಕ ಸಮಸ್ಯೆ'ಯು ಸರ್ವವಿದಿತವಾಗಿದೆ!

ಶೈಕ್ಷಣಿಕ ಕ್ಷೇತ್ರದಲ್ಲಿ "ಸುಧಾರಣೆ"ಗಳು ಅತ್ಯಾವಶ್ಯಕ. ಆದರೆ, ಅಂತಹ ಸುಧಾರಣೆಗಳ ರೂಪರೇಖೆಗಳು ಕೇವಲ ಸರಕಾರದಿಂದ ಪ್ರೇರಿತವಾಗದೆ ಜನರಿಂದ ಹಾಗೂ ಶೈಕ್ಷಣಿಕ ಕೇಂದ್ರಗಳಿಂದ ರೂಪಿತವಾಗಿದ್ದರೆ, ಅವುಗಳು ಕಾರ್ಯಗತವಾಗುವುದು ನಿಜವಾಗಿಯೂ ಅತಿ ಸುಲಭ ಸಾಧ್ಯವಾಗಲಾರದೇ? ಸುಧಾರಣೆಗಳು ಕೇವಲ ಸುಧಾರಣೆಗಳಿಗಾಗಿ ಮಾತ್ರವಿರದೆ, ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಂತ ಯೋಗ್ಯವೂ, ಅನಿವಾರ್ಯವೂ ಆದ ಪರಿವರ್ತನೆ ಎನಿಸಿದರೆ, ಅವುಗಳು ಜಯಪ್ರದವಾಗಲಾರವೇ? ಒಮ್ಮೆ ಕೈಗೊಂಡ ಕಾರ್ಯಗತವೆನಿಸಿದ ಸುಧಾರಣೆಯು ಅನಿಶ್ಚಿತೆಯ ತಕ್ಕಡಿಯಲ್ಲಿ ಓಲಾಡುತ್ತಿರುವುದರ ಬದಲು, ಅದು ಸಾಕಷ್ಟು ಕಾಲ ಶಾಶ್ವತವಾಗಿರುವುದಾದರೆ ಅದು ಹೆಚ್ಚು ಫಲಕಾರಿಯಾಗಲಾರದೇ? ಶೈಕ್ಷಣಿಕ ಸುಧಾರಣೆಗಳು ಅತ್ಯುತ್ತಮ ಹಾಗೂ ಸಮಯೋಚಿತವಾಗಿದ್ದರೆ, ಅವುಗಳು ದೇಶದ ಸರ್ವತೋಮುಖ ಅಭಿವೃದ್ಧಿಯ ಮಹಾದ್ವಾರವನ್ನೇ ತೆರೆಯಲಾರವೇ?

('ನವಭಾರತ'ದ ಕೃಪೆಯಿಂದ)

ಇದು ನಿಮಗೆ ಗೊತ್ತೆ?

ಕೇವಲ ಒಂದೇ ಒಂದು ಮಿನಿಟಿನಲ್ಲಿ....

ಕೇವಲ ಒಂದೇ ಒಂದು ಮಿನಿಟು. ಅರುವತ್ತು ಸೆಕೆಂಡುಗಳ ಒಂದು ಮಿನಿಟು; ಈ ಒಂದು ಮಿನಿಟಿನಲ್ಲಿ ಎಷ್ಟೊಂದು ಕಾರ್ಯಭಾರಗಳು ನಡೆಯುತ್ತವೆ ಗೊತ್ತೆ?

ಒಂದು ಮಿನಿಟಿನಲ್ಲಿ ಆರು ಲಕ್ಷ ಲೋಟೆಗಳಷ್ಟು ಚಹವನ್ನು ಜನರು ಕುಡಿದು ಖರ್ಚು ಮಾಡುತ್ತಾರೆ.

ಒಂದು ಮಿನಿಟಿನಲ್ಲಿ ಎರಡು ಸಾವಿರ ಇದ್ದಲು ಉರಿದು ಕೆಂಡವಾಗಿ ಬೂದಿಯಾಗುತ್ತದೆ.

ಒಂದು ಮಿನಿಟಿನಲ್ಲಿ ಕಾಲುರೊಟ್ಟಿಯ ಐದು ಲಕ್ಷ ಚೂರುಗಳನ್ನು ಜನರು ತಿನ್ನುತ್ತಾರೆ.

ಒಂದು ಮಿನಿಟಿನಲ್ಲಿ ಮೂರು ಸಾವಿರದ ಐನೂರು ಅಪರಾಧಿಗಳನ್ನು ಹಿಡಿಯಲಾಗುತ್ತದೆ.

ಒಂದು ನಿಮಿಷದಲ್ಲಿ ಭೂಮಿಯು ಸೂರ್ಯನ ಸುತ್ತ ಒಂದು ಸಾವಿರ ಮೈಲುದ್ದದ ಸುತ್ತನ್ನು ತಿರುಗುತ್ತದೆ.

ಒಂದು ಮಿನಿಟಿನಲ್ಲಿ ಐವತ್ತು ಸಾವಿರ ಮೊಟ್ಟೆಗಳನ್ನು ತಿಂದು ಖಾಲಿಮಾಡುತ್ತಾರೆ.

ಒಂದು ಮಿನಿಟಿನಲ್ಲಿ ಇಪ್ಪತ್ತು ಮಾನವರು ಮದುವೆಮಾಡಿಕೊಳ್ಳುತ್ತಾರೆ.

ಒಂದು ಮಿನಿಟಿನಲ್ಲಿ ಎಪ್ಪತ್ತೆರಡು ಮನುಷ್ಯರು ಸಾಯುತ್ತಾರೆ.

ಒಂದು ಮಿನಿಟಿನಲ್ಲಿ ತೊಂಬತ್ತು ಮಕ್ಕಳು ಈ ಪ್ರಪಂಚದಲ್ಲಿ ಜನಿಸುತ್ತವೆ.

ಒಂದು ಮಿನಿಟಿನಲ್ಲಿ ಹದಿನೈದು ಲಕ್ಷ ಪತ್ರಗಳು ಅಂಚೆ ಡಬ್ಬಿಗೆ ಬೀಳುತ್ತವೆ.

ಗೊತ್ತೆ?

ನೋಟಿಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

R. E. P. 174/59. S. C. 181/58.

ಎಡ್ವಿನ್ ಡಿ'ಸೋಜ — ಅರ್ಜಿದಾರ.

ಮತ್ತು

ಬಾಪ್ಟಿಸ್ಟ್ ಅಂದ್ರಾದೆ—ಜೋನ್ ಅಂದ್ರಾದೆರ ಮಗ—ಉಡುಪಿ ತಾಲ್ಕು ಪಡುತೋನ್ಸೆ ಗ್ರಾಮ — ಎದ್ರಿ.

ಇವರೊಳಗೆ

ಎದ್ರಿಗೆ ತಿಳಿಯಪಡಿಸುದೇನೆಂದರೆ—

ಮೇಲಿನ ಅಮಲ್‌ಜ್ಯಾರಿಯಲ್ಲಿ ದಾಖಲಾದ ಸ್ಥಿರಾಸ್ತಿ ಯಾಸ್ತಿಹಾರಿನ ಶರತುಗಳ ನಿರ್ಣಯದ ಬಗ್ಗೆ—ಮೇಲಿನ ಅರ್ಜಿಯನ್ನು ತಾ. 15-3-60ಕ್ಕೆ ಇಟ್ಟಿರುತ್ತದೆ.

P. R. Shenoy.
Advocate for Petitioner.

ಉಡುಪಿ, ತಾ. 26-2-60.

ಸಿಂಡಿಕೇಟ್ ಬ್ಯಾಂಕ್

ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಆರ್ಥಿಕ ಸೇವೆಯನ್ನು ನೀಡುವ ಆದರ್ಶ ಸಂಸ್ಥೆ: ವ್ಯವಹಾರ ಸಂಪತ್ತು ರೂ. ೨೩ ಕೋಟಿಗೂ ಮಿಕ್ಕಿದೆ.

ಸಿಂಡಿಕೇಟ್ ಬ್ಯಾಂಕ್

ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ (ಆಂಧ್ರ, ಕೇರಳ, ಮದರಾಸು, ಮುಂಬಯಿ ಮತ್ತು ಮೈಸೂರು ರಾಜ್ಯಗಳಲ್ಲಿ) ವಿಶಾಲವಾಗಿ ಹಬ್ಬಿರುವ ಸಂಸ್ಥೆ; ಒಟ್ಟು ೧೩೭ ಶಾಖೆಗಳಿವೆ.

ಉಳಿತಾಯಗಾರರ ಸನ್ಮಿತ್ರ

ಸಿಂಡಿಕೇಟ್ ಬ್ಯಾಂಕ್

ಉಳಿತಾಯಗಾರರ ಸನ್ಮಿತ್ರ—ಆಕರ್ಷಕ ಹಾಗೂ ಅತ್ಯುಪಯುಕ್ತ ಉಳಿತಾಯ ಯೋಜನೆಗಳಿಂದ ಜನಪ್ರಿಯವಾಗಿರುವ ಸಂಸ್ಥೆ: "ಪಿಗ್ಮಿ" ಮನೆಮಾತಾಗಿದೆ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, ಮೈಸೂರು ರಾಜ್ಯ; ಚೇರ್ಮನ್: ಡಾ॥ ಟಿ. ಎಂ. ಎ. ಪೈ; ಜನರಲ್ ಮೆನೇಜರ್: ಟಿ. ಎ. ಪೈ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಹಾರ್ಮೋನಿಯಮ್ ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೨೭. 10-3-1960 Vol. 39. No. 27.

ಪ್ರಚಲಿತ ಪ್ರಸಂಗ

ವಿಶ್ವಶಾಂತಿಯ ಪರದೆಯ ಹಿಂದೆ ಏನಿದೆ?

ಶಾಂತಿಮಂತ್ರಪಠನ ಪ್ರತಿಧ್ವನಿತಗೊಳ್ಳುತ್ತಿರುವಾಗ ಅದರ ಹಿನ್ನೆಲೆಯಲ್ಲಿ ದ್ವೇಷಾಸೂಯೆಗಳು ಧೂಮ್ರಜ್ವಾಲೆಯನ್ನು ಹರಡಿಸುವುದು ತೋರುತ್ತಿಲ್ಲವೆ?

ವಿಜ್ಞಾನದ ಪ್ರಪಂಚದಲ್ಲಿ ಪ್ರತಿಕ್ಷಣ ಅ...ಧ ಮತ್ತು ಅನಿರೀಕ್ಷಿತ ಪ್ರಗತಿಯನ್ನು ...ಧಿಸುತ್ತಿರುವ ಇಂದಿನ ಜಗತ್ತು ಕ್ಷೋಭಪೂರ್ಣವೇ ಆಗಿದೆಯೆಂಬುದನ್ನು ಯಾ...ೂ ಮರೆಯುವಂತಿಲ್ಲ. ವಿಜ್ಞಾನಕ್ಷೇತ್ರದ...ಯೂ ಇತರ ಎಲ್ಲ ವಿಭಾಗಗಳಲ್ಲಿಯೂ ಪ್ರಮುಖ ರಾಷ್ಟ್ರಗಳಾದ ಅಮೇರಿಕೆ ಮ...ು ರಶ್ಯಗಳು ಒಂದರೊಡನೊಂದು ...ರ್ಧೆಗೆ ನಿಂತು ಮುಂದುವರಿಯುತ್ತಿವೆ. ...ಶ್ವದ ಎಲ್ಲ ರಾಷ್ಟ್ರಗಳೂ ಈ ಸ್ಪರ್ಧೆ...ಯಲ್ಲಿ ಜಯಶೀಲರಾಗುವರು ಎಂಬು...ನ್ನು ಕುತೂಹಲದಿಂದ ನಿರೀಕ್ಷಿಸುತ್ತಿವೆ.

ಅಮೇರಿಕೆ ಮತ್ತು ರಶ್ಯಗಳ ನಡುವೆ ...ರುವ ಈ ಸ್ಪರ್ಧಾ ಮನೋಭಾವನೆಯು ...ಂದೆಡೆಯಲ್ಲಿ ಮುನ್ನಡೆಯುತ್ತಿರುವಾಗ, ...ತರ ರಾಷ್ಟ್ರಗಳು ಬೇಗುದಿಗೆ ಗುರಿ...ಯಾಗುತ್ತಿವೆ. ಈ ಭಾವನೆಯಿಂದ ವಿಜ್ಞಾ...ನ ಪ್ರಪಂಚಕ್ಕೆ ಅಪರಿಮಿತ ಲಾಭವಾಗಿ...ರುವುದೂ ಈ ಲಾಭವು ಮುಂದಕ್ಕೂ ...ಧಿಕವಾಗುತ್ತಿರುವುದೂ ಪ್ರಶಂಸನೀಯ...ವೇ. ಆದರೆ, ಈ ಪ್ರಗತಿಯ ಹಿನ್ನೆಲೆಯ...ಲ್ಲಿ ಸ್ಪರ್ಧೆಯ ಬೆನ್ನಲ್ಲಿ ಪರಸ್ಪರ ದ್ವೇಷಾ...ಸೂಯೆಗಳ ಹೊಗೆಯಾಡುತ್ತಿರುವುದೂ ...ಮಸಕ ಮಸಕಾಗಿ ಗೋಚರಿಸ ತೊಡಗು...ತ್ತಿರುವುದು ಸಲ್ಲಕ್ಷಣವೆಂದು ಹೇಳ ಬರು...ವಂತಿಲ್ಲ.

ಪಶ್ಚಿಮದ ರಾಷ್ಟ್ರಗಳು ಅಮೇರಿಕೆಯ ನಾಯಕತ್ವವನ್ನೂ ಸೂತ್ರ ಧಾರಿತ್ವವನ್ನೂ ಸ್ವೀಕರಿಸಿರುವುವು ಎಂಬುದು ಸರಿಯೆ. ಪೂರ್ವ ದೇಶಗಳು ಮಾತ್ರ ರಶ್ಯದ ನಾಯಕತನವನ್ನು ಒಪ್ಪಿಕೊಂಡಿಲ್ಲವೆಂಬುದನ್ನು ಮರೆಯಬಾರದು. ಈ ಎರಡು ಪ್ರಪಂಚದ ಪ್ರಬಲ ಶಕ್ತಿಗಳ ನಡುವೆ ತಟಸ್ಥ ರಾಷ್ಟ್ರಗಳ ಪುಟ್ಟ ಪಂಗಡವೊಂದೂ ಇದೆ; ಆದರೆ, ಇದಷ್ಟು ಬಲಯುಕ್ತ ಮಾತ್ರ ಆಗಿಲ್ಲ. ಅಮೇರಿಕೆ ಮತ್ತು ರಶ್ಯಗಳೆರಡೂ ತೋರಿಕೆಯ ಮಟ್ಟಿಗೆ 'ವಿಶ್ವಶಾಂತಿ'ಯ ಘೋಷಣೆಯನ್ನು ಎಬ್ಬಿಸುತ್ತ ತಮ್ಮ ತಮ್ಮ ಬಲಗಳಿಗೆ ವಿಶ್ವದ ರಾಷ್ಟ್ರಗಳ ಬಲವನ್ನು ಗಳಿಸಲು ಈಗೀಗ ಸಿದ್ಧತೆಯನ್ನು ನಡೆಸಿದಂತೆ ತೋರುತ್ತದೆ. ಕಳೆದ ನವಂಬರ-ದಶಂಬರ ತಿಂಗಳಲ್ಲಿ ಅಮೇರಿಕೆಯ ಅಧ್ಯಕ್ಷ ಐಸನ್ ಹಾವರು ಏಶಿಯಾಯಿ ರಾಷ್ಟ್ರಗಳನ್ನು ಸಂದರ್ಶಿಸಿ ಮರಳಿದರು; ಅಂತೆಯೇ ಇತ್ತೀಚೆಗೆ ರಶ್ಯದ ಪ್ರಧಾನಿ ನಿಕಿಟಾ ಕ್ರುಶ್ಚೇವರೂ ಈ ದೇಶಗಳಿಗೆ ಬೆಟ್ಟಿಯಿತ್ತರು. ಈ ಭೆಟ್ಟಿಯು ತೋರಿಕೆಗೆ ಸೌಹಾರ್ದಮಯ ವಾತಾವರಣವನ್ನು ನಿರ್ಮಿಸಲೆಂದಿದ್ದರೂ ಅದರ ಹಿಂದೆ ಯಾವ ದೇಶದ ಒಲವು ಎತ್ತ ಸರಿಯುತ್ತಿದೆಯೆಂಬುದನ್ನು ಕಂಡುಕೊಳ್ಳುವ ಆತುರವೂ ಇರಬಹುದೆಂದು ತೋರುತ್ತದೆ.

ಅಮೇರಿಕಾಧ್ಯಕ್ಷರು ಅನಭಿವೃದ್ಧದೇಶಗಳ ಅಭಿವೃದ್ಧಿಗಾಗಿ ಸಹಾಯಧನವನ್ನು ತಮ್ಮ ರಾಷ್ಟ್ರದಮೂಲಕ ನೀಡುತಿದ್ದಾರೆ; ಮುಖ್ಯವಾಗಿ ಏಶ್ಯನ್ ರಾಷ್ಟ್ರಗಳತ್ತ ಅವರ ಕೃಪಾದೃಷ್ಟಿಯು ಹರಿಯುತ್ತಿರುವುದು ದೃಗ್ಗೋಚರವಾಗುತ್ತಿದೆ. ಪಾಕಿಸ್ತಾನ, ಭಾರತ ಮೊದಲಾದ ದೇಶಗಳ ಬಗ್ಗೆ ಅವರ ಅಭಿಮಾನ ಆದರಗಳು ಅತೀ ಮಹನೀಯವಂತಿವೆ. ಇದೇ ಮಾದರಿಯ ಉದಾರತೆಯನ್ನು ಈಗೀಗ ರಶ್ಯವೂ ತೋರಿಸ ಹತ್ತಿರುವುದು. ಭಾರತದ ಭಿಲಾಯಿ ಉಕ್ಕಿನ ಕಾರಖಾನೆಯು ಈ ಯೋಜನೆಯ ಮೂರ್ತ ಸ್ವರೂಪವೆನಿಸಿದೆ. ಇಂಡೋನೇಶಿಯಾ, ಬ್ರಹ್ಮ, ಪಾಕಿಸ್ತಾನ ಮತ್ತು ಅಫಘಾನಿಸ್ಥಾನಗಳ ಸಂದರ್ಶನವನ್ನು ಮುಗಿಸಿದ ಕ್ರುಶ್ಚೇವರು ಅವುಗಳಿಗೆ ಸಹಾಯ ಧನವನ್ನೂ ಇನ್ನಿತರ ನೆರವನ್ನೂ ನೀಡಲು ಮುಂದು ಬಂದಿದ್ದಾರೆ.

ಅಫಘಾನಿಸ್ಥಾನದ ರಾಜಧಾನಿ ಕಾಬೂಲಿನಲ್ಲಿ ಶ್ರೀ ಕ್ರುಶ್ಚೇವರು ಮಾಡಿದ ಭಾಷಣವು ಈ ಸಂದರ್ಶನದ ಬಗ್ಗೆ ಅವರ ಅಭಿಪ್ರಾಯವನ್ನೂ ಅನುಭವವನ್ನೂ ವ್ಯಕ್ತಪಡಿಸುತ್ತದೆ: "ಈ ದೇಶಗಳಲ್ಲೆಲ್ಲಾ ಶಾಂತಿಯ ಬಗ್ಗೆ ಅತೀವ ತೃಷೆಯಿರುವುದು ಎಂದು ನಾನು ಕಂಡುಕೊಂಡಿದ್ದೇನೆ. ಶಕ್ತಿ ಮತ್ತು ಸೇನೆಗಳ ಬಲವನ್ನು ಆಧರಿಸಿ ಕೊಂಡಿರುವ ರಾಜಕಾರಣವನ್ನು ದೂರೀಕರಿಸಿ, ಶಾಂತಮಯ ರಾಜಕೀಯ ಪ್ರಪಂಚವನ್ನು ಸಂಸ್ಥಾಪಿಸಿಕೊಳ್ಳಬೇಕು ಎಂದವರು ಹೇಳಿದರು. ಇನ್ನೂ ಮುಂದುವರಿಯುತ್ತ ಅವರು "ಅಫಘಾನಿಸ್ತಾನ ಮತ್ತು ರಶ್ಯಗಳ ನಡುವೆ ಬಹುದೊಡ್ಡದಾದ ಪರ್ವತ ಶ್ರೇಣಿಗಳಿವೆ; ಆದರೆ, ಸ್ನೇಹವೆಂಬುದು ಎಲ್ಲಕ್ಕಿಂತಲೂ ಉನ್ನತವಾದ ಪರ್ವತವಾಗಿದೆ" ಎಂದರು. ಶ್ರೀ ಕ್ರುಶ್ಚೇವರ ಈ ಮಾತೇನೋ ಯಥಾರ್ಥವಾದುದೇ. ಸ್ನೇಹವೆಂಬುದನ್ನು ತಡೆಯಬಲ್ಲ ಶಕ್ತಿ ಯಾವುದಕ್ಕೂ ಇರುವುದಿಲ್ಲ. ಏಶ್ಯನ್ ರಾಷ್ಟ್ರಗಳ ಮತ್ತು ರಶ್ಯದ ರಾಜನೀತಿಯಲ್ಲಿ ಬಹಳಷ್ಟು ಅಂತರವಿರುವುದು ಸರಿಯೇ. ಆದರೆ, ರಾಜಕಾರಣದ ಧೋರಣೆಗೂ ಸ್ನೇಹ ಸಹಾಯ ಹಸ್ತಕ್ಕೂ ಏನೇನೂ ಸಂಬಂಧವಿಲ್ಲವೆಂಬುದನ್ನು ರಶ್ಯವು ತೋರಿಸಿಕೊಟ್ಟಿದೆ; ಅಮೇರಿಕೆ ಯಾವದೂ ತೋರಿಸಿಕೊಡುವುದಕ್ಕೆ ಪ್ರಯತ್ನಿಸುತ್ತಿದೆ.

ಹೀಗೆ ಐಕ್ ಮತ್ತು ಕ್ರುಶ್ಚೇವರಿಬ್ಬರ ಸಂದರ್ಶನದ ಹಿಂದೆಯೊಂದು ಅಸ್ಪಷ್ಟವಾದ ರಾಜಕಾರಣದ ಕರಿನೆರಳು ಹರಿದಾಡುತ್ತಿದ್ದಂತೆ ಭಾಸವಾಗುತ್ತಿದೆ. ಮುಂದಿನ ಮೇ ತಿಂಗಳಲ್ಲಿ ಜರಗಲಿರುವ ಪ್ರಪಂಚದ ಶೃಂಗ ಸಮ್ಮೇಲನದಲ್ಲಿ ಏಶ್ಯನ್ ರಾಷ್ಟ್ರಗಳಿಗೂ ಪ್ರಾತಿನಿಧ್ಯ ದೊರೆಯಬೇಕೆಂದು ಶ್ರೀ ಕ್ರುಶ್ಚೇವ್ ಅನ್ನುತ್ತಾರೆ. ಚೀನಾವನ್ನೂ ಆಮಂತ್ರಿಸಬೇಕೆನ್ನುತ್ತಾರೆ. ಆದರೆ, ಈ ನೀತಿಯು ಅದೆಷ್ಟು ಸಮಂಜಸವೆನ್ನುವಂತಿಲ್ಲ. ಏಕೆಂದರೆ ಮುಂದಿನ ಶೃಂಗ ಸಮ್ಮೇಲನದಲ್ಲಿ ಹಿಂದೆ ಅರ್ಧದಲ್ಲೇ ಮುಕ್ತಾಯ ಹೊಂದಿದ ಜರ್ಮನಿಯ ಪ್ರಶ್ನೆಯನ್ನು ಮಾತ್ರ ಮುಂದುವರಿಸಲಿರುವದರಿಂದ ಅದರಲ್ಲಿ ಏಶ್ಯದ ರಾಷ್ಟ್ರಗಳು ಭಾಗ ವಹಿಸಿ ಮಾಡುವುದೇನು ಎಂಬ ಪ್ರಶ್ನೆಯೇಳುತ್ತದೆ; ಇದಕ್ಕೆ ಸಮರ್ಪಕವಾದ ಉತ್ತರ ನಮಗೆ ದೊರೆಯುವಂತಿಲ್ಲ. ಆದರೆ, ಮುಂದೆ ಈ ಸಮ್ಮೇಳನವು ನಿಶ್ಶಸ್ತ್ರೀಕರಣ, ಅಣ್ವಸ್ತ್ರ ಪ್ರತಿಬಂಧನ ಮೊದಲಾದ ಸಮಸ್ಯೆಗಳ ಬಗ್ಗೆಯೂ ವಿಚಾರ ನಡೆಸಿ ಪ್ರಪಂಚದಲ್ಲಿ ಶಾಂತಿ ಸಂಸ್ಥಾಪಿಸಲು ನಿಯೋಜಿಸಿರುವುದು; ಈ ಸಮ್ಮೇಲನದಲ್ಲಿ ಮಾತ್ರ ಆಫ್ರೇಶ್ಯದ ಜನಾಂಗಗಳಿಗೆ ಉಚಿತ ಪ್ರಾತಿನಿಧ್ಯವನ್ನು ನೀಡುವ ಆವಶ್ಯಕತೆಯಿರುವುದು. ಇದುವರೆಗೆ ಪಶ್ಚಿಮ ರಾಷ್ಟ್ರಗಳೂ ರಶ್ಯವೂ ನಡೆಸಿದ ಅಣುಪರೀಕ್ಷೆಗಳ ಹಾನಿಗೆ ಮುಖ್ಯವಾಗಿ ಗುರಿಯಾದ ದೇಶಗಳೆಂದರೆ, ಆಫ್ರೇಶ್ಯ ರಾಷ್ಟ್ರಗಳು. ಬಹುಕಾಲದವರೆಗೆ ಪರಕೀಯರ ಮುಂಗಮುಷ್ಟಿಯಲ್ಲಿ ನರಳಿ ಕೃಶವಾಗಿ ಈಗತಾನೇ ಸ್ವತಂತ್ರ ವಾತಾವರಣದಲ್ಲಿ ಮುನ್ನಡೆಯಲು ತೊಡಗುತ್ತಿರುವಾಗ, ಅವುಗಳ ಮೇಲೆ ವಿಪರೀತ ಹಾನಿಯನ್ನು ಹೊರಿಸುವುದು ಉತ್ತಮವೆನ್ನಬಹುದಂತಿಲ್ಲ. ಪ್ರಪಂಚದ ಪ್ರಬಲ ಆವಶ್ಯಕತೆಯೆಂದರೆ, ನಿಶ್ಶಸ್ತ್ರೀಕರಣ. ರಶ್ಯದೊಡನೆ ಯುದ್ಧಾಸ್ತ್ರಗಳು ಅಗಣಿತವಿವೆ; ಅವರೂ ಅದು ಶಾಂತಿಸ್ಥಾಪನೆಗೆ ಮುಂದೆ ಬಂದಿದ್ದು, ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸ್ವಯಂ ಸಾಮ್ರಾಜ್ಯವಾದ ಮತ್ತು ಆರ್ಥಿಕ ಮುಗ್ಗಟ್ಟಿಗೆ ಗುರಿಯಾ

(೧೨ನೇ ಪುಟ ನೋಡಿರಿ)



ಚತುರ್ರಾಷ್ಟ್ರಗಳ ನಾಯಕರ ಭೆಟ್ಟಿ — ಎಡದಿಂದ ಬಲಕ್ಕೆ - ಬ್ರಿಟನಿನ ಪ್ರಧಾನಿ ಹೆರಾಲ್ಡ್ ಮೆಕ್‌ಮಿಲನ್, ಅಮೇರಿಕದ ಅಧ್ಯಕ್ಷ ಐಸನ್‌ಹೋವರ್, ಫ್ರಾನ್ಸಿನ ಅಧ್ಯಕ್ಷ ಚಾರ್ಲ್ಸ್ ದಿಗಾಲೆ, ಪಶ್ಚಿಮ ಜರ್ಮನಿಯ ಎಡೆನೋವರ.

ಕಥಾವಿಹಾರ:

ಸಮಾಧಿಯ ಸಮೀಪದಲ್ಲಿ

ಮಹಾತ್ಮಾ ಗಾಂಧಿಯವರು ಭಾರತದ ಅಭಿವೃದ್ಧಿಯನ್ನು ಕಂಡು ತನ್ನ ಕನಸಿನ ರಾಮರಾಜ್ಯ ನನಸಾಗುತ್ತಿದೆಯೆಂದು ಶಾಂತಿಶಾಲಿರಬಹುದೆಂದು ಯೋಚಿಸಿದ್ದರೆ, ನನ್ನ ಕಲ್ಪನೆಯ ಕಾಯವೇ ಪಲ್ಲಟಗೊಂಡಿತು!

ಸಂಜೆ ಗಂಟೆ ಏಳಾಗಿರಬಹುದು. ರಾಜ್‌ಘಾಟ್‌ನ ಗಾಂಧೀಜಿಯವರ ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಿಸಲೆಂದು ಹೋಗಿದ್ದೆ. ಅಂದು ನನ್ನ ಮನಸ್ಸಿಗದೇಕೋ ನೆಮ್ಮದಿಯಿದ್ದಿರಲಿಲ್ಲ. ಅದೇನೋ ಕೊರಗು ನನ್ನನ್ನು ಪೀಡಿಸುತಿತ್ತು. ನನ್ನ ಮನಸ್ಸು ಅದೇನೋ ಯೋಚಿಸುತಿತ್ತು ಆದರೆ ದಾರಿಗಾಣದೆ ನಾನು ಸೋತಿದ್ದೆ. ಇಂತಹ ವೇಳೆಯಲ್ಲಿ ಗಾಂಧೀಜಿಯವರ ಸಮಾಧಿಯ ಬಳಿಗೆ ಹೋಗಿ ಪುಷ್ಪಗುಚ್ಛವನ್ನು ಅರ್ಪಿಸಿ, ಪೂಜ್ಯ ಬಾಪೂಜಿಯವರನ್ನು ಸ್ಮರಿಸಬರುವುದು ಪೆಹಲಿಗೆ ಬಂದಂದಿನಿಂದ ನನ್ನದೊಂದು ವಾಡಿಕೆಯಾಗಿತ್ತು.

ಭಾರವಾದ ಕಾಲ್ಗಳಿಂದ ಮೆಲ್ಲ ಮೆಲ್ಲನೆ ಹೆಜ್ಜೆಯಿಡುತ್ತಾ ಗಾಂಧೀಜಿಯವರ ಸಮಾಧಿಯ ಬಳಿ ಬಂದು ಪುಷ್ಪಗುಚ್ಛವನ್ನು ಅರ್ಪಿಸಿ ಸಮಾಧಿಯ ಎದುರು ಉದ್ದಂಡ ನಮಸ್ಕಾರ ಮಾಡಿದ. ಆ ಮೇಲೆ ಸ್ವಲ್ಪ ಹೊತ್ತು ಯೋಚನಾಪರವಶನಾಗಿ ಅಲ್ಲಿಯೇ ನಿಂತುಕೊಂಡೆನು.

"ಊಂ, "ಊಂ ಊಂ"

ಯಾರೋ ಅಳುವ ಸದ್ದು ಕೇಳಿಬಂತು ಇದೇನೋ ನನ್ನ ಮನಸ್ಸಿನ ಭ್ರಾಂತಿಯೆಂದು ಸುಮ್ಮಗಾದೆ ಪುನಃ ಸಲ್ಪ ಗಟ್ಟಿಯಾಗಿಯೇ ಅಳುವ ಸದ್ದು ಕೇಳಿಬಂತು "ಅರೇ, ಇದೇನಾಶ್ಚರ್ಯ!" ವೆಂದು ಅತ್ತಿತ್ತ ತಿರುಗಿ ನೋಡಿದೆ-ಯಾರಾದರೂ ದುಃಖಿತರು ಬಂದು ಅಳುತ್ತಿರಬಹುದೆಂಬ ಯೋಚನೆಯಿಂದ ಆದರೆ ಯಾರೂ ಕಂಡ ಬರಲಿಲ್ಲ ಕತ್ತೆತ್ತಿ ಅತ್ತಿತ್ತ ತಿರುಗಿ ನೋಡಿದೆ. ಮನುಷ್ಯರ ಸುಳಿವೇ ಇರಲಿಲ್ಲ. ನನ್ನ ಎದೆ ಒಂದೇಸವನೆ ಡಬಡಬ ಬಡಿಯಲಾರಂಭಿಸಿತು. ಆದರೂ ಎದೆಗಟ್ಟಿಮಾಡಿಕೊಂಡು "ಯಾರದು"? ಎಂದು ಕೇಳಿದ

"ನಾನು .. . ಗಾಂಧಿ" ಎಂಬ ಉತ್ತರ ಕೇಳಿಬಂತು. ಆದರೆ ಅಲ್ಲಿಯಾರೂ ಕಂಡು ಬರಲಿಲ್ಲ. "ಅಲ್ಲ. ... ಬಾಪೂಜೀ ... ನೀವು ... ನೀವು ಇಲ್ಲ... ..ಸುಳ್ಳು, ಸುಳ್ಳು.. . ..ಗಾಂಧೀಜಿಯವರಿಗೆಂದೋ ಮೋಕ್ಷ ಸಿಕ್ಕಿದೆ ಅವರ ಆತ್ಮ ಚಿರಶಾಂತಿಯಲ್ಲಿ ಲೀನವಾಗಿದೆ... ..ಇನ್ನೆಲ್ಲಿಂದ ಗಾಂಧೀಜಿ ?... ಅದೂ ಗಾಂಧೀಜಿ ಅಳುವರೇ .. ...ಇಲ್ಲ, ಗಾಂಧೀಜಿ ಅಳುಬುರುಕರಾಗಿದ್ದವರಲ್ಲ. ಅವರೆಂದೂ ಕಣ್ಣೀರಕೋಡಿಹರಿಸಿದವರಲ್ಲ. ಅದೇಕೋ ನನ್ನ ಬುದ್ಧಿ ಭ್ರಮಣೆಯಾಗಿರಬೇಕು. ಇದರಿಂದಲೇ ಅದೇನೋ ಕೇಳಿಸುತ್ತಿದೆ. ಇದೆಲ್ಲಾ ಸುಳ್ಳು . ಸುಳ್ಳು" ಎಂದುಕೊಂಡೆ

"ಇಲ್ಲ ಬಾಳಾ, ನಿಜಕ್ಕೂ ನಾನು ಗಾಂಧಿ. ನಿನ್ನ ಕಣ್ಣಿಗೆ ಕಾಣಿಸಿಕೊಳ್ಳದಿದ್ದರೂ ನಾನು ಗಾಂಧಿ." ಎಂಬ ನುಡಿ ನನ್ನ ಕಿವಿಗಳಿಗೆ ಕೇಳಿಸಿತು.

"ಬಾಪೂ, ನಿಮ್ಮ ಆತ್ಮಕ್ಕೆ ಶಾಂತಿ ದೊರಕಿಲ್ಲವೇ?"-ಎಂದು ನಾನು ಕೇಳಿದೆ.

"ಶಾಂತಿ!. . ಹಂ!... ಶಾಂತಿ!.. . ಅಯ್ಯೋ, ನನ್ನ ಆತ್ಮಕ್ಕೆ ಶಾಂತಿ ನನಗೆ ಮೋಕ್ಷ.... ಬಾಳಾ, ಇದು ಕನ್ನಡಿಯೊಳಗಿನ ಗಂಟೆಂಬಂತೆ ಪ್ರತಿಭಾಸಿತವಾಗುತ್ತಿದೆ."

"ಅದೇಕೆ ಬಾಪೂ?" ಎಂದು ಕೇಳಿದೆ ನಾನು ಗಾಂಧೀಜಿಯವರ ಆತ್ಮವು ಸಮಾಧಿಯ ಬಳಿ ಸುತ್ತುತ್ತಿರಬೇಕೆಂಬ ವಿಶ್ವಾಸ ನನಗದಾಗಲೇ ಹುಟ್ಟಿತ್ತು

"ಬಾಳಾ, ನನ್ನಾಸೆ ತೀರುವಮುನ್ನ . ಭವ್ಯ ಭಾರತದ ನಿರ್ಮಾಣವನ್ನು ಕಣ್ಣಲ್ಲಿ ಕಾಣುವ ಮುನ್ನ...ಸರ್ವೋದಯರಾಜ್ಯದ ಸ್ಥಾಪನೆಯನ್ನು ಒಮ್ಮೆ ಕಣ್ತುಂಬ ಹಿಗ್ಗುವ ಮುನ್ನ ವಿಧಿನನ್ನನ್ನು ಪರಲೋಕಕ್ಕೆ ಕರೆದೊಯ್ಯಿತು ಇನ್ನೆಲ್ಲಿ ನನಗೆ ಮೋಕ್ಷ?" ಗದ್ಗದಕಂಠದಿಂದ ಗಾಂಧೀಜಿಯವರ ಸ್ವರ ಕೇಳಿಬಂದಂತಾಯಿತು

"ಬಾಪೂಜೀ, ಇದೇಕೆ ನೀವು ಈ ರೀತಿ ದುಃಖವಿಹ್ವಲರಾಗಿ ಮಾತನಾಡುವಿರಿ? ನೀವು ಇಹಲೋಕ ಯಾತ್ರೆ ಮುಗಿಸಿದರೂ ಭವ್ಯಭಾರತದ ನಿರ್ಮಾಣಕ್ಕೆ ನಿಮ್ಮ ಶಿಷ್ಯವರ್ಗವಿಲ್ಲವೇ? ನಿಮ್ಮ ಬಾಳು, ನಿಮ್ಮ ನಡೆ, ನುಡಿ, ಅವರಿಗೆ ಆದರ್ಶವಾಗಿಲ್ಲವೇ? ನೀವು ತೋರಿಸಿ ಕೊಟ್ಟ ಆ ಪಥದಲ್ಲಿ ಅವರು ನಡೆದು ಭಾರತವನ್ನು ರಾಮರಾಜ್ಯವಾಗಿ ಮಾಡರೇ ?" ಎಂದು ಕೇಳಿದೆ.

"ಹಂ' ಹಂ! ... ಹೌದು ... ಈ ಆಶೆ ... ಈ ಉನ್ನತ ಆಶೆ · ನನ್ನಲ್ಲಿಯೂ ಇದ್ದಿತು. .ಆದರೆ... ಆದರೆ.. ಇಂದು ನನ್ನ ಆಶೆಗಳೆಲ್ಲಾ ಗಾಳಿಪಾಲಾಗಿವೆ. ರಾಮರಾಜ್ಯದ ನಿರ್ಮಾಣ —ಅದು ಇಂದಿನ ಪರಿಸ್ಥಿತಿಯಲ್ಲಿ ಗಗನ ಕುಸುಮ ವೆಂಬಂತೆ ಕಂಡು ಬರುತ್ತಿದೆ ಆಂಗ್ಲರ ಆಸ್ವಕೆಯನ್ನು ಟೀಕಿಸಿದವರೇ ಇಂದು ದೇಶವನ್ನು ಆಳುತಿದ್ದಾರೆ. ಆದರೆ ಅವರ ರಾಜ್ಯಭಾರ ಇಲ್ಲ ಇಲ್ಲ ..ಇನ್ನೂ ನನ್ನ ಆತ್ಮವಿದನ್ನು ಸಹಿಸದು. ಹಾಯ್! ಇಂದು ನಮ್ಮವರ ಆಳ್ವಿಕೆಯ ಅಸ್ತಿಭಾರ ಲಂಚ . .ಲಂಚವಾಗಿದೆ ಲಂಚವಿಲ್ಲದೆ ಇಂದು ಯಾವ ಕೆಲಸವೂ ನಡೆಯಲಾರದ . ಬಡ ಗುಮಾಸ್ತನಿಂದ—ಮಂತ್ರಿಗಳವರೆಗೆ ಎಲ್ಲರೂ ಲಂಚಕ್ಕೆ ಕೈಯೊಡ್ಡುವವರೇ '

"ಬಾಪೂಜೀ, ಈ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿಲ್ಲವೇ?" ಎಂದು ನಾನು ಮೆಲ್ಲನೆ ಕೇಳಿದೆ

"ಅಯ್ಯೋ, ಇದಕ್ಕೆಲ್ಲಿ ಸುಧಾರಣೆ! ಬೇಲಿಯೇ ಹೊಲವನ್ನು ಮೇಯ್ದರೆ ಹೊಲದಲ್ಲಿ ಬೆಳೆ ಬೆಳೆದೀತೆ? ಲಂಚನಿವಾರಣೆಯ ಕುರಿತು ಎಲ್ಲರೂ ಮಾತನಾಡುವವರೇ. ..ಆದರೆ ಲಂಚನಿವಾರಣೆಯ ಕುರಿತು, ಗಂಟೆಗಟ್ಟಲೆ ಮಾತನಾಡಿದವರೇ ಲಂಚದ ಹೊರೆ ಹೊರೆಯನ್ನೇ ಸ್ವೀಕರಿಸುವರು ಲಂಚನಿವಾರಣೆಗೆ ಶಾಸನ....ಇದೆಂತಹ ಹುಚ್ಚು ಮಾತು! .. ಮದ್ಯಪಾನ ನಿಷೇಧ ಕಾಯಿದೆ ಎಷ್ಟು ಯಶಸ್ವಿಯಾಗಿದೆ? ಅಷ್ಟೇ ಯಶಸ್ಸು ಈ ಕಾಯಿದೆಗೆ ದೊರಕೀತು! ಕಾಯಿದೆಗಳಿಂದ ಕಾಸು ಕೆಲಸವೂ ಆಗದು. ಮೊದಲು ಜನರ ಹೃದಯ ಪರಿವರ್ತನೆಯಾಗಬೇಕು. ಶಾಸನ ಸಭೆಗಳಿಗೆ ಮದ್ಯಪಾನವನ್ನು ಮಾಡಿಕೊಂಡು ಹೋಗಿಯೇ ಸದಸ್ಯರು ಮದ್ಯಪಾನ ಕಾಯಿದೆಯ ಕುರಿತಾಗಿ ಮಾತನಾಡ ಹತ್ತಿರುವಂತೆ! ಮದ್ಯಪಾನ—ಇದು ಭಾರತೀಯ ಸಮಾಜಕ್ಕೆ ಕುಠಾರ ಪ್ರಾಯವಾದುದು. ನಮ್ಮ ಸಮಾಜವನ್ನು ಆರ್ಥಿಕ, ನೈತಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅಧಃಪತನದ ಪಥದಲ್ಲಿ ಕೊಂಡೊಯ್ಯುತ್ತಿದೆ ಮದ್ಯಪಾನ ಆದರೂ ಎಡೆಬಿಡದೆ ಈ ಕಾಯಿದೆಯನ್ನು ಭಂಗಿಸಿ ಅಸಂಖ್ಯಾತ ಜನರು ಮದ್ಯಪಾನಮಾಡುತ್ತಾರೆ . .'

"ಮೊನ್ನೆ ಒಬ್ಬ ಉಚ್ಚ ಅಧಿಕಾರದಲ್ಲಿರುವ ಅಧಿಕಾರಿ ಹಲವುಮಂದಿ ಇತರರೊಂದಿಗೆ ನನ್ನ ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಿಸಲು ಬಂದಿದ್ದನು.. ಅವನ ಬಾಯಿಯಿಂದ ದುರ್ಗಂಧಹೊರಡುತಿತ್ತು ಅದು ಮದ್ಯದ ವಾಸನೆಯಲ್ಲದೆ ಬೇರಿನ್ನೇನ? ...ಬಾಳಾ, ನನಗದು ಹೇಗೆತಿಳಿಯಿತೆಂದು ನಿನಗೆ ಆಶ್ಚರ್ಯವುಂಟಾಗಬಹುದು ನಾನಿಂದು ಶರೀರತಃ ಕಾಣಸಿಕೊಳ್ಳದಿದ್ದರೂ ಭಾರತದಲ್ಲಿ ಏನೇನು ನಡೆಯುತ್ತಿದೆ; ಇದೆಲ್ಲ ನನಗೆ ತಿಳಿಯುತ್ತದೆ"

"ಬಾಪೂಜೀ, ನಿಮಗೆ ಮೋಕ್ಷವೇಕೆ ದೊರೆಯಲಿಲ್ಲ" 'ಬಾಳಾ, ಇದು ನಾನು ನನ್ನ ಮೇಲೆ ತಂದುಕೊಂಡಿರುವಂತಹ ಆಪತ್ತು ಅಂದು ನನಗೆ ಸ್ವರ್ಗಕ್ಕೆ ಕರೆಬಂದಿತ್ತು. ಆದರೆ ನಾನು ಬೇಡ... ಇನ್ನು ಹದಿನೈದು ವರ್ಷಗಳೊಳಗೆ ನನ್ನ ಕನಸಿನ ಭಾರತವು ನನ್ನ ಶಿಷ್ಯರಿಂದ ಕಟ್ಟಲ್ಪಡುವುದು. ಅದೊಂದನ್ನು ಕಣ್ಣಿನಿಂದ ಕಂಡು ಹಿಗ್ಗಿ ಅನಂತರ ಬರುವೆನೆಂದು ವಿನಂತಿಸಿಕೊಂಡೆ ತನ್ನ ವಿನಂತಿ ಮನ್ನಿಸಲ್ಪಟ್ಟಿತು ಆದರೆ ಬಾಳಾ, ಇಂದು ನನ್ನ ಸ್ಥಿತಿ ದಾರುಣವಾಗಿದೆ... ನನ್ನೆದೆ ಒಡೆಯುತ್ತಿದೆ .. ಬಾಳಾ, ನಿಮಗೆಲ್ಲಿ ಎದೆ. ನಿಮಗೆಲ್ಲಿ ನೋವು ಎಂದು ನಿನಗೊಂದು ದೊಡ್ಡ ಸಮಸ್ಯೆಯಾಗಿದೆಯಲ್ಲವೇ?, ಹೌದು. ನಾನಿಂದು ನಿನ್ನ ಕಣ್ಣಿಗೆ ಗೋಚರಿಸದಿದ್ದರೂ ಜೀವಂತ ಮನುಷ್ಯನಂತೆ ಎಲ್ಲವನ್ನೂ ಅನುಭವಿಸುತ್ತಿರುವೆನು. ಭವ್ಯ ಭಾರತದ ನಿರ್ಮಾಣ ಮಾತ್ರವಿನ್ನೂ ಆಗಿಲ್ಲ ಆದರೆ ಮಂತ್ರಿಗಳು ಮತ್ತಿತರ ಅಧಿಕಾರಿಗಳು ತಮತಮಗೆ ಭವ್ಯವಾದ ಗೃಹಗಳನ್ನು ಕಟ್ಟಿಸಿಕೊಂಡರು ಆರುತಿಂಗಳು ಮಂತ್ರಿಪಟ್ಟದಲ್ಲಿದ್ದವನಿಗೆ ಸ್ವಂತದ ಫೀಯಟ್ ಕಾರು ಬಂದಿದೆ, ಅವನ ಅಳಿಯ ನೆಂಟ, ತಮ್ಮ, ಭಾವಎಲ್ಲರಿಗೂ ದೊಡ್ಡ

(೯ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್‌ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25)

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ. ರೂ. ಎರಡು

ವಿ ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಅನುಭವ

ಬರಿಗುಡ್ಡವಲ್ಲವಿದು ಸೌಂದರ್ಯರಾಶಿ!

ಪ್ರಕೃತಿಯ ಬಣ್ಣಬಣ್ಣದ ಚೆಲುವಿನ ರಾಶಿಯ ನಡುವೆ ಅದೆಂತಹ ವಿಕೃತಿಯಿದೆ! ಇದನ್ನೇ ಸಂಸ್ಕೃತಿ ಎನ್ನುವುದಲ್ಲವೆ?

ಅತಿ ನಿಕಟ ಬಂಧುವಿನ ಮನೆಗೆ ರಜಾದಿನದ ವಿಹಾರಕ್ಕೆಂದು ಹೊರಟ ನಾನು ಮಧ್ಯಾಹ್ನದ ಊಟ ಮುಗಿಸಿ ಜೋಂಪು ಹರಿಸುತ್ತಿದ್ದೆ. ವಿಶೇಷ ಸಂಭ್ರಮದ ದಿನ; ಇದುವರೆಗೂ ಹೊಗ್ಗದ ಕಾಣದ ಮನೆ; ಎಂದಾದ ಮೇಲೆ ಉಪಚಾರದ ವೈಭವವನ್ನು ಕೇಳಬೇಕಾಗಿಲ್ಲತಾನೆ? ತುಂಬಿದ ಹೊಟ್ಟೆ ಭಾರವಾಗಿದ್ದುದರಿಂದಲೋ ಏನೋ ಒರಗಿದಲ್ಲೇ ನಿದ್ರಾದೇವಿ ಆಲಿಂಗಿಸಿಬಿಟ್ಟಳು. ಮಟಮಟ ಮಧ್ಯಾಹ್ನದ ಹೊತ್ತು ಇಳಿಯತೊಡಗಿರಬೇಕು. ಬೆವರಿದ ಮೈ ಬೀಸತೊಡಗಿದ ತಂಗಾಳಿಯಿಂದ ತುಸು ಆರಿರಬೇಕು; ನಿದ್ರಾದೇವಿಯೂ ಕೇಳಿಯನ್ನು ಮುಗಿಸಿ, ತನ್ನ ದಾರಿಯರಸಿ ಹೊರಟು ಹೋಗುವ ಸಿದ್ಧತೆ ಮಾಡುತ್ತಿರುವಂತೆ ಭಾಸವಾಗತೊಡಗಿತು. ಅತ್ತಿತ್ತ ಹೊರಳತೊಡಗಿದ ನನ್ನ ಬೆನ್ನನ್ನು ತಟ್ಟಿ, ಎಬ್ಬಿಸಿದ, ಅತಿನಿಕಟ ಬಂಧು. "ಗೋಪಿ, ಹೊತ್ತು ಇಳಿಯಿತು; ಕಾಫಿ ತಯಾರಿದೆ." ಎಂದು ಎಚ್ಚರಿಸಿದ.

ಹಾಂ ಹೂಂ ಎನ್ನುತ್ತ ನಿಧಾನವಾಗಿ ಎದ್ದು ಕುಳಿತೆ. ಹೊಟ್ಟೆ ಸವರಿಕೊಂಡೆ ಕಡಿಗೆ ಹುಳಿಯ ನೀರಲ್ಲ ಸ್ವೇದಜಲವಾಗಿ ಹರಿದು ಹೋಗಿದ್ದುದರಿಂದ ಉದರ ಪ್ರಮಾಣ ಏಳಿಯದಾಗಿದ್ದುದು ನಿಜವಾದರೂ ಭಾರವೇನೋ ಇದ್ದಂತೆಯೇ ಇತ್ತು. ಆದರೂ ನಮ್ಮ ಮುಂದಿನ ಕಾರ್ಯಕ್ರಮಕ್ಕೆ ವಿಘ್ನ ತಂದುಕೊಳ್ಳಲು ಒಪ್ಪದೆ, ಭಾರವಾದ ಹೆಜ್ಜೆಯಿಕ್ಕಿ ಬಾವಿಕಟ್ಟೆಗೆ ತೆರಳಿ, ಮುಖಪ್ರಕ್ಷಾಳನಾದಿಗಳನ್ನು ಪೂರೈಸಿ ಕೋಣೆ ಸೇರುವಷ್ಟರಲ್ಲಿ ಬಿಸಿ ಬಿಸಿ ಕಾಫಿ ನನ್ನ ಕಾದಿತ್ತು. ಅದನ್ನು ಹೀರಿ, ಬಾಯಿ ಚಪ್ಪರಿಸಿ ಅಲಂಕಾರಕ್ಕೆ ತೊಡಗಿದೆ ಮನೆ ಬಿಟ್ಟು ಹೊರ ತೆರಳುವ ಸಿದ್ಧತೆಯೂ ನಡೆಯಿತೆನ್ನಿ.

ಪೇಟೆ, ಕಾಡುಗುಡ್ಡಗಳಲ್ಲಿ ಎತ್ತ ಸವಾರಿ ಎಂಬ ವಿಷಯ ತುಸು ಚರ್ಚೆಗೇನೇ ಎಡೆಗೊಟ್ಟಿತು. ನಾವಾರು ಮಂದಿಯಿದ್ದೆವು. ಅಂತೂ ದಿನನಿತ್ಯ ಡಾಮರು ರಸ್ತೆಗಳನ್ನು ಶತಪಥ ಹಾಕಿದ ನಾನು ಗುಡ್ಡದ ದಾರಿಯೇ ಲೇಸೆಂದೆ. ನನ್ನ ರಾಮು ಮತ್ತು ಆನಂದ ಅದಕ್ಕೆ ಸೈಗುಟ್ಟಿದರು. ಬಹುದಿನದಿಂದ ನನ್ನೊಳಲ್ಲಿ ಕಾಣುತ್ತಿದ್ದ ಕನಸು ನನಸಾಗುವ ಸಂದರ್ಭ ಬಂದಿತೆಂದು ನನ್ನ ಮನ ಹಿರಿಹಿರಿ ಹಿಗ್ಗಿತು. ನಾವು ಎಡಪಕ್ಕದಲ್ಲಿ ಕಾಣುವ ಎತ್ತರವಾದ ಗುಡ್ಡದ ದಾರಿಯನ್ನು ಹಿಡಿದೆವು.

ಮನೆಯ ಕೆಳಗಿನ ಎರಡು ತೋರೆಗಳ ಮಧ್ಯೆ ಹುಲುಸಾಗಿ ಬೆಳೆದ ಶಾಲಿವನವನ್ನು ದಾಟಿ ಮುಂದುವರಿದೆವು. ಬೆಟ್ಟದ ದಾರಿ ಸಿಕ್ಕಿತು. ನಮ್ಮಂತೆಯೇ ಹಲವಾರು ಜನ ಅತ್ತಿಂದತ್ತ ತಿರುಗುತ್ತಿದ್ದುದರಿಂದ ಬೆಟ್ಟದ ಬುಡದಲ್ಲಿ ಒಂದು ಹಸನಾದ ಹಿಂದಾರಿ ನಿರ್ಮಿತವಾಗಿತ್ತು. ಆದರೆ, ಮುಂದುವರಿದಂತೆ ನಮಗೊಂದು ಎತ್ತರವಾದ ಗುತ್ತು, ಗುಡ್ಡದ ಪಕ್ಕದಲ್ಲಿ ಮತ್ತೂ ಎತ್ತರವಾದ ಬಂಡೆ ದೃಗ್ಗೋಚರವಾಗಬೇಕೆ! ನಾನಂತೂ ಅಲ್ಲಿಗೇನೇ ಹೊಸಬ; ಎಂತಲೇ ಅವನ್ನು ಏರುವ ತಹತಹ ನನ್ನಲ್ಲಿ ಉದ್ಭವಿಸಿತು. ನನ್ನ ಜತೆಗಾರರು, ಅಲ್ಲಿಯವರೇ, ಅವರು ಪದೇ ಪದೇ ಆ ಕಲ್ಲನ್ನು ಹತ್ತಿ ಅಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದುದು ಮಾತ್ರವಲ್ಲದೇ, ಅದರ ಸುತ್ತು ಮುತ್ತಲಿನ ಪ್ರಕೃತಿಯ ಚೆಲುವನ್ನೂ ಕಂಡು ತಮ್ಮ ಭಾವುಕ ಹೃದಯವನ್ನು ತೆರೆಯುತ್ತಿದ್ದರು. ಅಂತಹ ಸೌಂದರ್ಯ ರಾಶಿಯನ್ನು ನನಗೂ ಉಣ್ಣಿಸುವ ಬುದ್ಧಿ ಅವರಿಗೂ ಹೊಳೆಯಿತು. ಎಂತಲೇ ನನ್ನನ್ನು ಆ ದಿಸೆಯತ್ತ ಕರೆದೊಯ್ದರು.

'ಆನೆನಡೆದುದೆ ದಾರಿ' ಎಂಬಂತೆ ನಾವು ಮೂವರು ಎಳೆ ಹರೆಯದ ಯುವಕರು ಮುಳ್ಳು ಕಲ್ಲುಗಳೆಡೆಯ ಮುಳಿಹುಲ್ಲುಗಳ ನಡುವೆ ಕಾಲೆಳೆದುಕೊಂಡು ಮೇಲೇರಿದೆವು. ಹದಿನೈದು ನಿಮಿಷಗಳಲ್ಲೇ ನಮ್ಮ ಗುರಿ ಮುಟ್ಟಿತು. 'ಅರೆಗಲ್ಲು' ನಮ್ಮ ಪದತಳದಡಿಯಲ್ಲಿ ಉಳಿಯಿತು. ನಾವು ಆ ಅಜೇಯವೆನಿಸುವ ಬಂಡೆಗಲ್ಲನ್ನು ಮೆಟ್ಟಿ ನಿಂತೆವು. ಸುತ್ತಮುತ್ತ ಈಕ್ಷಿಸಿದೆವು. ಸಮುದ್ರದಿಂದ ಸುಮಾರು ೨೦ ಮೈಲಿ ದೂರವಿರಬಹುದಾದ ಆ ಬಂಡೆಯಿಂದಲೂ ಅದರಲ್ಲಿ ಸಂಚಲಿಸುವ ವಾಂಡಿಯ ಹಾಯಿಗಳು ಮಸುಕು ಮಸುಕಾಗಿ ತೋರುತ್ತಿದ್ದುವು. ಪಶ್ಚಿಮ ಘಟ್ಟಗಳ ಕೊಟಶಾದ್ರಿ ಮತ್ತು ಕುದುರೆಮುಖ ಶಿಖರಗಳ ಛಾಯೆಗಳೂ ಅನತಿ ದೂರವೆಂಬಂತೆ ದೃಷ್ಟಿಗೋಚರವಾಗುತ್ತಿದ್ದುವು. ಅತ್ತಿತ್ತವೀಕ್ಷಿಸುವಾಗ, ಒಂದರ ಹಿಂದೊಂದರಂತೆ ಅತಿ ವಿಶಾಲವಾದ ಅತ್ಯುನ್ನತವಾದ ಮರಗಿಡ ಪೊದರುಗಳಿಂದ ಕೂಡಿದ ಗುಡ್ಡಗಳು ಕಂಡು ಬಂದುವು. ಅಲ್ಲಿಯೇ ಬಂಡೆಯ ದೊರಗು ಸಮತಳದಲ್ಲಿ ಮಂಡಿಸಿ ನಾವು ಪ್ರಕೃತಿಯ ಚೆಲ್ವನ್ನು ಆಸ್ವಾದಿಸಿದೆವು. ಅತಿ ಚಾಣಾಕ್ಷನಾದ ಕಲಾವಿದ ತನ್ನ ಕುಂಚದಿಂದ ಕಾಲ್ಪನಿಕ ಸೌಂದರ್ಯವನ್ನು ಎಳೆದು ಕಲಾಪ್ರಿಯರ ಹೃದಯವನ್ನು ಆಕರ್ಷಿಸಬಹುದು; ಅಥವಾ ಪ್ರಕೃತಿಯ ಒಂದು ದೃಶ್ಯವನ್ನೇ ತನ್ನ ಕರಕೌಶಲದಿಂದ ಚಿತ್ರಿಸಬಹುದು; ಆದರೆ, ಮಾನವನ ನೆರಳು ಎಂದೆಂದಿಗೂ ನೆರಳೇ ಅಲ್ಲವೆ? ಆ ನೆರಳಲ್ಲಿ ಪ್ರಾಕೃತಿಕ ಸೌಂದರ್ಯವೆಂದಾದರೂ ಮೂಡಬಲ್ಲವೆ? ಕಲಾವಿದನ ಕಲಾಪರಿಣತಿಯು ಪರಾಕಾಷ್ಠೆಯನ್ನು ಕಾಣಬಹುದಾದರೂ ಅದರ ಸೌಂದರ್ಯ ಕೃತಕವೇ ಅಲ್ಲವೆ? ಅದನ್ನು ಈಕ್ಷಿಸುವುದರಲ್ಲಿಯೇ ತತ್ಪರನಾದ ಸಹೃದಯನು ಒಂದು ಗಳಿಗೆ ತನ್ನನ್ನೇ ತಾನು ಮರುಗೊಳ್ಳಬಹುದು; ಮುಂದೆ ಅದು ಕೃತಕವೆಂಬ ಅರಿವು ಅತನಿಗಾಗುತ್ತದೆಯಲ್ಲ! ಆದರೆ, ಪ್ರಾಕೃತಿಕ ಸೌಂದರ್ಯಕ್ಕೆ ಅಳಿವೆಂಬುದಿಲ್ಲ. ಅದೆಷ್ಟು ಸಮಯ ಆ ರಮ್ಯ ಮನನೋಹರ ಹೃದಯಸ್ಪರ್ಶಿ ದೃಶ್ಯವನ್ನು ಕಂಡೆವೋ ನಾ ಹೇಳಲಾರೆ. ಭಗವಾನ್ ಭಾಸ್ಕರನು ಪಡುಗಡಲನ್ನು ಸಮೀಪಿಸುತ್ತಲಿದ್ದನೆಂಬುದು ನಿಜವೇ. ಆ ಸಮಯದಲ್ಲಿ ಅತನು ಹೊರಚೆಲ್ಲಿದ ವರ್ಣವಿವರ್ಣಗಳಿಂದ ಹೆಚ್ಚನೆಯ ಆ ದೃಶ್ಯ ಮತ್ತಷ್ಟು ರಮಣೀಯವೆನಿಸುತ್ತಿತ್ತು. ನಾವು ಮೂವರು ಕಲ್ಲಿನ ಮೂರ್ತಿಗಳಂತೆ ಪ್ರಕೃತಿಯ ಸ್ವಾಭಾವಿಕ ಸೌಂದರ್ಯವನ್ನು ಸವಿದು ಆನಂದೋನ್ಮತ್ತರಾಗಿದ್ದೆವು.

ಟ್ಯೂನಿಸಿಯಾದ ಅಧ್ಯಕ್ಷ ಹಬಿಬ್ ಬೋರ್ಗಿಬಾ ಮತ್ತು ಅಮೆರಿಕೆಯ ಅಧ್ಯಕ್ಷ ಐಸನ್‌ಹಾವರರು ಸಭೆಯಲ್ಲಿ ನಗಾಡುತ್ತಿರುವ ದೃಶ್ಯ.

ಹೊತ್ತು ಮುಳುಗಿತು. ನೇಸರನು ಅಡಗಿದನು. ಆಗ ನಮ್ಮ ಸಮಾಧಿಗೂ ಭಂಗವೊದಗಿತು. ನಾವು ಮನೆಯ ದಾರಿ ಹಿಡಿದೆವು. ಆನಂದ 'ಮೆಲ್ಲ ಮೆಲ್ಲ' ಎನ್ನ ತೊಡಗಿದ. 'ಅದೇಕೆ ಹಾಗೆ?' ಎಂಬ ಪ್ರಶ್ನೆ ನನ್ನಿಂದ ನನಗರಿವಿಲ್ಲದಂತೆಯೇ ಹೊರಬಂತು. ಆವರೆ, ಇದಕ್ಕೆ ಬಂದ ಆನಂದನ ಉತ್ತರ ನನ್ನ ಸಮಸ್ಯೆಯನ್ನು ಬಗೆಹರಿಸಿತು ಮಾತ್ರವಲ್ಲ; ಒಂದು ಅವ್ಯಕ್ತವಾದ ಅನುಭವವನ್ನೂ ಪಡೆಯಿತು.

ಅದು ಹತ್ತು ವರ್ಷಗಳ ಹಿಂದೆ ನಡೆದ ಒಂದು ಘಟನೆ; ದುರ್ಘಟನೆ ಎಂದಿಟ್ಟುಕೊಳ್ಳಿ; ಇಲ್ಲವೇ ಸದ್ಘಟನೆಯೆಂದೂ ಕರೆದುಕೊಳ್ಳಿ. ಆ ಭಾರ ನಿಮಗೇನೇ. ನಾನೇನೂ ಎದುರು ಆಡಲಾರೆ. ಆನಂದ ಶಾಲೆಯಲ್ಲಿ ಅಭ್ಯಸಿಸುತ್ತಿದ್ದ ಸಮಯವದು. ಅದೂ ಪ್ರಾಥಮಿಕ ಶಾಲೆಯಲ್ಲಿ. ಸೃಷ್ಟಿಯ ಸಮಷ್ಟಿ ಸೌಂದರ್ಯದ ನಡುವೆಯೇ ಬೆಳೆದು ಬಂದ ಅತ ಇಂದು ನಾವು ಕಂಡ ಆನಂದದ ರಸಾನುಭವವನ್ನು ತನ್ನ ಓರಗೆಯವರಿಗೂ ಮಾಡಿಸುವ ಅಭಿಲಾಷೆಯಿಂದ ಯುಕ್ತನಾದ. ಸರಿಯೇ, ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ತೆರಳುವುದನ್ನೇ ಪರಿಪಾಠವಾಗಿಟ್ಟುಕೊಂಡ ಆ ಹಳ್ಳಿಯ ಹುಡುಗರು ಏನೋ ವಿಶೇಷವಿರಬಹುದೆಂದುಕೊಂಡು ಮುಂದೆ ಬಂದರು. ಯಥಾವತ್ತಾಗಿ ಅರೆಗಲ್ಲ ಆರೋಹಣ ಕಾರ್ಯ ಸಾಂಗವಾಗಿ ನೆರವೇರಿತು. ಅತ್ತಿತ್ತ ಪ್ರತೀಕ್ಷಿಸಿದುದೂ ಆಯ್ತು. ಅದೇನು ಅವರಂದು ಕಂಡರೋ, ಅದೇನು ಆನಂದ ಅವರಿಗೆ ತೋರಿಸಿದನೋ ನಾನರಿಯೆ. ಪ್ರಕೃತಿಮಾತೆಯ ಗೋದಲಿಯಲ್ಲಿ ಬೆಳೆದುಬಂದ ಆ ಹಳ್ಳಿಯ ಬಾಲಕ ಬಾಲಿಕೆಯರು ಈ ಪ್ರದೇಶದಲ್ಲಿ ಅದಾವ ಹೆಚ್ಚುಗಾರಿಕೆಯನ್ನು ಕಂಡರೋ, ನಾನು ಹೇಳಲಾರೆ. ಅಂತೂ

(೧೦ನೇ ಪುಟ ನೋಡಿರಿ)

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನಮ್ಮ ರಾಜ್ಯ:

ಕೆಲವು ಪ್ರೇಕ್ಷಣೀಯ ಸ್ಥಳಗಳು

ವೃಂದಾವನದ ನಂದನ ವನ, ಮಡಿಕೇರಿಯ ಮೇಲೆ, ಶಿವ ಸಮುದ್ರದ ಸಮುದ್ರ ಸದೃಶ ಗಭೀರತೆ, ಹಳೆಬೀಡು ಬೇಲೂರುಗಳ ಕುಶಲ ಶಿಲ್ಪಕಲೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

೬. ಕೃಷ್ಣರಾಜ ಸಾಗರ

ಮೈಸೂರು ನಗರದ ೧೨ ಮೈಲು ವಾಯುವ್ಯದಲ್ಲಿನ ಕೃಷ್ಣರಾಜ ಸಾಗರದಲ್ಲಿ ಭಾರತದಲ್ಲಿ ದೊಡ್ಡದೆನಿಸುವ [ಅಣೆಕಟ್ಟುಗಳಲ್ಲಿ ಒಂದಾದ ಕಾವೇರಿ ನದಿಗೆ ಹಾಕಿದ ಕನ್ನಂಬಾಡಿಯಿದೆ. ಈ ಕಟ್ಟೆ ೧½ ಮೈಲು ಉದ್ದ ಮತ್ತು ೧೩೦ ಅಡಿ ಎತ್ತರವಾಗಿದೆ. ಇದರಲ್ಲಿ ೫೦ ಚದರ ಮೈಲು ವಿಸ್ತಾರದಲ್ಲಿ ನೀರು ಶೇಖರಣೆಯಾಗುತ್ತಿದೆ. ಕಟ್ಟೆಯ ಪಕ್ಕದಲ್ಲಿಯೇ ಚಿತ್ರ ವಿಚಿತ್ರದ 'ವೃಂದಾವನ'ವು ಕಂಗೊಳಿಸುತ್ತದೆ. ಮೈಸೂರು ರಾಜ್ಯದ ಅತಿ ಮನೋಹರವಾದ ಆಕರ್ಷಕವಾದ ಈ ವೃಂದಾವನದ ಸೌಂದರ್ಯವನ್ನು ಸವಿದು ನೋಡಬೇಕೇ ಹೊರತು ಬರೆದಲ್ಲ. ಹೋಟೆಲ್ ಕೃಷ್ಣರಾಜ ಸಾಗರದಲ್ಲಿ ಉಳಕೊಂಡು ವೃಂದಾವನದ ಉದ್ಯಾನಗಳ ಸೊಬಗನ್ನು ಕಾಣುವ ವ್ಯವಸ್ಥೆಯಿರುವುದು.

೭. ಸೋಮನಾಥಪುರ

ಶಿಲ್ಪಕಲೆಯಿಂದಾಗಿ ಸುವಿಖ್ಯಾತವಾದ ಸೋಮನಾಥ ಪುರಕ್ಕೆ ಮೈಸೂರಿನಿಂದ ೨೩ ಮೈಲಿಗಳಷ್ಟು ದೂರ. ಇಲ್ಲಿನ ಸೋಮನಾಥ ದೇವಾಲಯವು ಹೊಯ್ಸಳ ಶಿಲ್ಪಕಲೆಯಲ್ಲಿ ಕಟ್ಟಲ್ಪಟ್ಟಿದೆ. ಕಲೆಯಲ್ಲಿ ಅಭಿರುಚಿಯುಳ್ಳವರಿಗೆ ಸೋಮನಾಥ ದೇವಾಲಯವು ತೃಪ್ತಿಯನ್ನು ತಂದುಕೊಡಬಲ್ಲುದು.

೮. ಮಡಿಕೇರಿ

ಪಶ್ಚಿಮ ಘಟ್ಟಗಳ ೩,೯೦೦ ಅಡಿ ಎತ್ತರದ ಶಿಖರದಲ್ಲಿರುವ ಮಡಿಕೇರಿ ಹಸುರು ಹಾಸಿಗೆಯ ನಡುವೆ ಮೆರೆಯುತ್ತಿದೆ. ಸೃಷ್ಟಿಯ ಪ್ರಾಕೃತಿಕ ಸೌಂದರ್ಯವನ್ನು ಸವಿಯ ಬೇಕೆನ್ನುವವನಿಗೆ ಮಡಿಕೇರಿಯೊಂದು ಮನಮೋಹಕ ಸ್ಥಾನವಾಗಿದೆ. ಮೈಸೂರಿನಿಂದ ೭೫ ಮೈಲು ದೂರವಿರುವ ಮಡಿಕೇರಿ ಕರಾವಳಿಯ ಮಂಗಳೂರಿಗೆ ೮೪ ಮೈಲು ಅಂತರದಲ್ಲಿದೆ. ಸಂದರ್ಶಕನಿಗೆ ಸರ್ವಪ್ರಕಾರದ ಸಂತೋಷವನ್ನೂ ನೀಡುವ ಶಕ್ತಿ ಮಡಿಕೇರಿಗಿದೆ. ಕೊಡಗು ರಾಜ್ಯದ ರಾಜಧಾನಿಯೂ ಗಿದ್ದ ಇಲ್ಲಿ ಕೋಟೆಯಿದೆ; ಇತಿಹಾಸ ಪ್ರಸಿದ್ಧವಾದ ಎಡೆಗಳಿವೆ. ದೈವಭಕ್ತರಿಗೆ ಓಂಕಾರೇಶ್ವರ ದೇವಾಲಯವಿದೆ; ರಾಜಗದ್ದಿಗೆಯಿದೆ. ಈಗ ಒಂದು ಜಿಲ್ಲೆಯ ಮುಖ್ಯ ನಗರವಾಗಿ ಪರಿವರ್ತನೆ ಹೊಂದಿರುವುದಾದರೂ ಮಡಿಕೇರಿಯ ಉದ್ದವಾದ ಅಗಲ ಕಿರಿದಾದ ರಸ್ತೆ, ರಸ್ತೆಯ ಪಕ್ಕದಲ್ಲಿ ಒತ್ತೊತ್ತಾಗಿ ಸೇರಿಹೋದ ಮನೆಗಳನ್ನು ಬಿಟ್ಟರೆ, ಮತ್ತೆ ಸಿಗುವುದು ಘೋರ್ಣಿಸುವ ಘೋರಾರಣ್ಯವೇ. ಬೇಸಗೆಯ ಸಂಧ್ಯಾಕಾಲ ಅಥವಾ ಪ್ರಾತಃಕಾಲದಲ್ಲಿ ಸವಿಯಬೇಕು, ಮಡಿಕೇರಿಯ ಆ ಸೃಷ್ಟಿ ಸೌಂದರ್ಯವನ್ನು! ಯಾವಜ್ಜೀವವೂ ಇಲ್ಲೇ ನೆಲೆಸಿಬಿಡೋಣವೆನಿಸುತ್ತದೆ! ಅಲ್ಲಿನ ಶಾಶ್ವತ ನಿವಾಸಿಗಳ ಬಗೆಗೆ ಅಸೂಯೆ ಹುಟ್ಟುತ್ತದೆ!

೯. ಶಿವ ಸಮುದ್ರಂ

ಮಂಡ್ಯ ಮತ್ತು ಮೈಸೂರುಗಳಿಂದ ೫೦ ಮೈಲಂತರದಲ್ಲಿರುವ ಶಿವಸಮುದ್ರಂ ಅನ್ನು ಯಾರೂ ಮರೆಯಲಾರರು. ಇಲ್ಲಿ ಜಲವಿದ್ಯುತ್ ಕೇಂದ್ರವೊಂದಿದೆ. ಕಾವೇರಿ ನದಿಯು ಗಮಿಸುವಾಗ, ಎರಡು ಕವಲಾಗಿ ಹರಿಯುತ್ತದೆ; ಮುಂದೆ ಒಟ್ಟು ಸೇರುತ್ತದೆ. ಈ ರೀತಿಯಲ್ಲಿ ನದಿಯ ನಡುವೆ ಮೂರು ನಡುಗುಡ್ಡೆಗಳು ಆಗುತ್ತವೆ ಇವನ್ನು ಆದಿರಂಗಂ, ಮಧ್ಯರಂಗಂ ಮತ್ತು ಅಂತ್ಯರಂಗಂ ಎಂಬ ನಾಮಧೇಯದಿಂದ ಕರೆಯುವರಾದರೂ ಇವಕ್ಕೆ ಕ್ರಮವಾಗಿ, ಶ್ರೀರಂಗಪಟ್ಟಣ, ಶಿವಸಮುದ್ರ, ಶ್ರೀರಂಗಂ ಎಂದು ಹೇಳುತ್ತಾರೆ.



ದ್ರವ ಪದಾರ್ಥಗಳನ್ನು ಒಯ್ಯಲು ಅಮೇರಿಕೆಯು 'ಟೂತ್ ಪೇಸ್ಟ್ ಟ್ಯೂಬ್' ಮಾದರಿಯ ಸಾಧನಗಳನ್ನು ಕಂಡುಹಿಡಿದಿದೆ. ಇದರಿಂದ ಸಾಗಾಣಿಕೆಯು ಸುಲಭವಾಗುವ ನಿರೀಕ್ಷೆ ಇದೆ.

ಶಿವಸಮುದ್ರವು ಮಧ್ಯರಂಗಂ ಆಗಿದೆ. ಇಲ್ಲಿ ಸುಮಾರು ೨೦೦ ಅಡಿ ಎತ್ತರದ ಜಲಪಾತವು ಗಗನ ಚುಕ್ಕಿ ಮತ್ತು ಬರ ಚುಕ್ಕಿ ಎಂಬೆರಡು ಕವಲಾಗಿ ಬೀಳುತ್ತದೆ ಈ ಜಲಪಾತದ ಸುತ್ತ ಹಸುರು ತುಂಬಿದ ದಟ್ಟಡವಿಯು ಪ್ರಕೃತಿಯ ಚೆಲುವನ್ನೂ ನಮಗುಣ್ಣಿಸುತ್ತದೆ. ಇಲ್ಲಿನ ಜಲವಿದ್ಯುತ್ತು ರಾಜ್ಯದ ದಕ್ಷಿಣ ಭಾಗಕ್ಕೆ ಉಪಯೋಗಿಸಲ್ಪಡುತ್ತದೆ. ಪ್ರೇಕ್ಷಕನ ಹೃದಯ ತೃಪ್ತವಾಗುವಷ್ಟು ಸೌಂದರ್ಯವನ್ನಿಲ್ಲಿ ಆಸ್ವಾದಿಸ ಬಹುದು.

೧೦. ಬೇಲೂರು

ಹಾಸನದಿಂದ ೨೪ ಮೈಲು ದೂರದ ಬೇಲೂರಿನ ಹೆಸರನ್ನು ಕೇಳದವರಿಲ್ಲ. ಇಲ್ಲಿನ ಹೊಯ್ಸಳರಾಜನಾದ ವಿಷ್ಣುವರ್ಧನನು ಕಟ್ಟಿಸಿದ ಚೆನ್ನಕೇಶವ ದೇವಾಲಯವು ವಿಶ್ವವಿಖ್ಯಾತವಾಗಿದೆ. ಜಕಣಾಚಾರಿ ಮತ್ತು [ಆತನ ತಂದೆ (ಮಗ?) ಡಂಕಣಾಚಾರಿಯರು ಕೆತ್ತಿದ ಕೆತ್ತನೆಯ ಕೆಲಸವು ಸಂದರ್ಶಕನ ಹೃದಯವನ್ನು ಸೂರೆಗೊಳ್ಳುತ್ತದೆ. ಆತನ ಕಣ್ಣಿಗೆ ಶಿಲ್ಪದ ಹಬ್ಬವಾಗುತ್ತದೆ. ಇಲ್ಲಿ ಕೆತ್ತಿನ ಕೆತ್ತನೆಯ ಶಿಲಾ ಬಾಲಿಕೆಯರು ಕವಿಪರ್ಯರೊಬ್ಬರಿಗೆ ಕಾವ್ಯಸ್ಫೂರ್ತಿಯ ನೆಲೆಯನ್ನೇ ತಂದೀಯಿತೆಂಬಾಗ ಹೆಚ್ಚೇನು ಅನ್ನಬೇಕು?

೧೧. ಹಳೆ ಬೀಡು

ಬೇಲೂರಿನಿಂದ ಕೇವಲ ೧೦ ಮೈಲು ದೂರದಲ್ಲಿ ಶಿಲ್ಪದ ಹುಟ್ಟೂರು ಹಳೆಬೀಡು ಇರುವುದು. ಹೊಯ್ಸಳ ಅರಸರ ರಾಜಧಾನಿಯಾಗಿದ್ದ ಹೆಸರಾಂತ ದ್ವಾರಸಮುದ್ರವೆಂಬುದು ಇದೇ ಆಗಿದೆ. ಇಲ್ಲಿರುವ ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ದೇವಸ್ಥಾನಗಳು ಶಿಲ್ಪಕಲೆಯ ಬೀಡಾಗಿವೆ. ಭಾರತೀಯ ಶಿಲ್ಪಕಲೆಯ ರತ್ನಕಲಶವಾಗಿದ್ದು ಇಲ್ಲಿನ ಕಾರ್ಯಕುಶಲತೆಯು ಅನುಪಮವೂ ಅಸದೃಶವೂ ಆಗಿರುವುದು.

೧೨. ಶ್ರವಣ ಬೆಳಗೊಳ

"ಜೈನಕಾಶಿ" ಎಂಬ ಉಪಾಧಿಗೆ ಪಾತ್ರವಾದ ಶ್ರವಣ ಬೆಳಗೊಳವು ಹಾಸನದಿಂದ ೩೨ ಮೈಲುಗಳ ಅಂತರದಲ್ಲಿದೆ. ಇದು ಜೈನರಿಗೆ ಅತ್ಯಂತ ಪವಿತ್ರವಾದ ಯಾತ್ರಾಸ್ಥಳವಾಗಿದೆ, ಇಲ್ಲಿನ ೫೭ ಅಡಿ ಎತ್ತರದ ಗೋಮಟೇಶ್ವರನ ವಿಗ್ರಹವು ಭಾರತದ ವಿವಿಧ ಮೂಲೆಗಳ ಯಾತ್ರಾರ್ಥಿಗಳನ್ನು ತನ್ನತ್ತ ಆಕರ್ಷಿಸುವುದು ಕವಿರತ್ನ ರನ್ನನ ಗುರುವೆನಿಸಿದ ಚಾವುಂಡರಾಯನೆಂಬವನು ಕ್ರಿ. ಶ. ೯೮೩ರಲ್ಲಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದನೆಂದು ತಿಳಿದಿದೆ. ಡಾ. ಫರ್ಗ್ಯುಸನ್ ಎಂಬವರು ಇಂತಹ ಆಕರ್ಷಕ ವಿಗ್ರಹವನ್ನೆಲ್ಲಿಯೂ ನೋಡಿಲ್ಲ ಎಂದಿದ್ದಾರೆ. ಈ ಪ್ರತಿಮೆಯು ಕಲಾಪೂರ್ಣವಾಗಿಯೂ ಆಕರ್ಷಕವಾಗಿಯೂ ಕೆತ್ತಲ್ಪಟ್ಟಿದ್ದು ಮನೋಹರವೆನಿಸಿದೆ.

(ಕ್ರಮಶಃ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಯೋಜನೆಯ ಸಫಲತೆ

ಹಳ್ಳಿಗಳಲ್ಲಿ ಹೊಸ ಹುರುಪು ಬೇಕು

೧೯೬೬ರ ಸುಮಾರಿಗೆ ನಮ್ಮ ಜನತೆಯ ವಾರ್ಷಿಕ ಆದಾಯವನ್ನು ಇಮ್ಮಡಿಗೊಳಿಸುವ ಯೋಜನೆಗಳು ಮುಂದುವರಿಯುತ್ತಿವೆ ಈ ಬಗ್ಗೆ ನಮ್ಮ ರೈತರಲ್ಲಿ ಆಸಕ್ತಿ ತುಂಬಿ ಹರಿಯಬೇಕಾಗಿದೆ

ಸಾಮಾಜಿಕ ಮತ್ತು ಆರ್ಥಿಕ ವಿಕಾಸದಲ್ಲಿ ಬೇಸಾಯದ ಉತ್ಪಾದನೆಯು ಹೆಚ್ಚುವುದು ಆವಶ್ಯವಾಗಿದೆ ಎರಡನೆಯ ಪಂಚವಾರ್ಷಿಕ ಯೋಜನೆಯ ತಯಾರಿಯ ಸಮಯದಲ್ಲಿ ಯೋಜನಾ ಆಯೋಗವು ಹತ್ತು ವರ್ಷದಲ್ಲಿ ದೇಶದ ವ್ಯವಸಾಯೋತ್ಪನ್ನ ಎರಡು ಪಾಲಷ್ಟು ಹೆಚ್ಚಿಸುವ ಲಕ್ಷ್ಯವನ್ನಿಟ್ಟು ಕೊಂಡಿತ್ತು. ನಮ್ಮ ಆ ಲಕ್ಷ್ಯಕ್ಕನುಸಾರವಾಗಿ ನಮ್ಮಲ್ಲಿಯ ಪ್ರತಿಯೊಬ್ಬನ ಆದಾಯವು ೧೯೬೬ರಲ್ಲಿ ಎರಡು ಪಾಲಷ್ಟಾಗಬೇಕೆಂಬ ಅಭಿಲಾಷೆಯನ್ನಿಟ್ಟು ಕೊಳ್ಳಲಾಗಿದೆ ಅಂದು ಹಳ್ಳಿಹಾಗೂ ಪಟ್ಟಣಿಗರ ಆದಾಯವು ದ್ವಿಗುಣಿತವಾಗುವುದು

ಈ ಲೇಖನದಲ್ಲಿ ಎರಡು ಪ್ರಶ್ನೆಗಳನ್ನು ಉತ್ತರಿಸುವ ಬಯಕೆಯಿದೆ ೧೯೬೬ರಲ್ಲಿ ನಾವು ಹಳ್ಳಿಗರ ಆದಾಯವನ್ನು ದ್ವಿಗುಣಿತಗೊಳಿಸಲು ಸಾಧ್ಯವಿದೆಯೆ? ಸಾಧ್ಯವಿದ್ದರೆ ಅದನ್ನೆಂತು ಸಾಧಿಸಬಹುದು?

ನಾವು ನಮ್ಮ ಗುರಿಯನ್ನು ತಲಪುವೆವೆಂಬುದರಲ್ಲಿ ಸಂದೇಹವಿಲ್ಲ. ವಿಶ್ವಬ್ಯಾಂಕಿನ ವರದಿಯಲ್ಲಿ ಈ ರೀತಿಯಾಗಿ ಹೇಳಲಾಗಿದೆ—"ಬೇಸಾಯದ ಉಪಕರಣಗಳ ಉಪಯೋಗವನ್ನು ಹಿಂದೂದೇಶದಲ್ಲಿ ಜನರು ಮಾಡಿದರೆ, ಬೇಸಾಯದ ಸ್ಥಳಗಳನ್ನು ಹೆಚ್ಚಿಸಿದರೆ, ಭಾರತವು ತನ್ನ ವ್ಯವಸಾಯದಲ್ಲಿ ನಾಲ್ಮಡಿ ಯಾ ಐಮಡಿ ಉತ್ಪತ್ತಿಯನ್ನು ಪಡೆಯುವುದು. ಈ ಲೇಖನಕ್ಕೆ ಸಂಬಂಧಪಟ್ಟ ಅಂಕೆಸಂಖ್ಯೆಗಳನ್ನು ಲೇಖನದಲ್ಲಿ ಕೊಡಲಾಗಿದೆ. ಅವುಗಳನ್ನು ನಾವು ನೋಡುವುದರಿಂದ ಸ್ಥಾನೀಯ ಸರಾಸರಿ ಹೆಚ್ಚಿರುವುದೆಂದು ತಿಳಿದುಕೊಳ್ಳಬಹುದು. ಈಗಿನ ಸರಾಸರಿಗಿಂತ ನಮ್ಮಲ್ಲಿಯ ವ್ಯವಸಾಯ ಐದಾರು ಪಾಲಷ್ಟು ಹೆಚ್ಚಿದೆ. ಭಾರತದ ಅನೇಕ ಭಾಗಗಳಲ್ಲಿ ಸಹಕಾರಿ ವ್ಯವಸಾಯದಂತೆ ಹೆಚ್ಚು ಉತ್ಪತ್ತಿಯನ್ನೀಯುವ ಸ್ಥಳಗಳನ್ನು ನಾವು ಕಾಣಬಹುದಾಗಿದೆ.

ನಮ್ಮ ಬೇಸಾಯದ ಕ್ರಮ ಹಳೆಯದಾಗಿದೆ, ಹೊಸದನ್ನು ನಾವು ಸ್ವೀಕರಿಸಬಾರದೆಂದು ರೈತರು ತಿಳಿದುಕೊಳ್ಳಬಾರದು. ೧೮೯೩ರಲ್ಲಿ ಭಾರತ ಸರಕಾರವು ಡಾ. ವೇಲಕರ್‌ನನ್ನು ಭಾರತೀಯ ವ್ಯವಸಾಯದ ಕುರಿತು ಒಂದು ವರದಿಯನ್ನೀಯುವಂತೆ ಕೇಳಿಕೊಂಡಿತು. ದೇಶವಿಡಿ ಸುತ್ತಿದ ಆತನ ಈ ರೀತಿ ವರದಿಯನ್ನಿತ್ತನು—"ಒಳ್ಳೆಯ ಭಾರತೀಯ ವ್ಯವಸಾಯವು ಕೆಲವೆಡೆ ಬ್ರಿಟಿಷ್ ವ್ಯವಸಾಯದನ್ನು ಸಮನಾಗಿದೆ ಕೆಲವೆಡೆ ಕೆಳಮಟ್ಟದ್ದಾಗಿದೆ ಇಲ್ಲಿಯ ವ್ಯವಸಾಯದಲ್ಲಿ ಸುಧಾರಣಾ ಸಾಧನಗಳ ಅಭಾವವೆದ್ದು ಕಾಣುತ್ತಿದೆ. ರೈತರು ಯಾವ ದೇಶದಲ್ಲೂ ಇಲ್ಲಿಯ ರೈತರಷ್ಟು ಧೈರ್ಯದಿಂದ ಕೆಲಸವನ್ನು ನಿರ್ವಹಿಸಲಾರರು ಇಲ್ಲಿ ಉಪಕರಣಗಳು ಕಡಿಮೆಯಾದಂತೆ ಇಲ್ಲಿ ಅಣೆಕಟ್ಟುಗಳು ಕೂಡಾ ಕಡಿಮೆಯಾಗಿವೆ. ಹೊಸ ಸಾಧನಗಳನ್ನು ಇಲ್ಲಿಯ ರೈತನಿಗೆ ಕೊಟ್ಟರೂ ಅದನ್ನು ಅವನು ಸ್ವೀಕರಿಸಲು ಅತ್ಯಾತ್ತ ನೋಡ ತ್ತಾನೆಯಲ್ಲವ?"

ಹಿಂದಿನ ಅಭಿಪ್ರಾಯ ಇಂದಿನ ಪೀಳಿಗೆಯಲ್ಲಿರಲಾರದು ರೈತರಿಗೆ ಈಗ ವೈಜ್ಞಾನಿಕ ಸಾಧನಗಳನ್ನು ಕೊಟ್ಟರೆ, ಅವರು ಬೇಗನೆ ಸ್ವೀಕರಿಸದಿರಲಾರರು ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಬಗ್ಗೆ ಒಂದು ಸರ್ವಾಂಗ ಸುಂದರವಾದ ಕಾರ್ಯಕ್ರಮವನ್ನಾರಂಭಿಸಲಾಯಿತು. ೧೯೬೬ರರೊಳಗೆ ನಾವು ನಮ್ಮ ಯೋಜನೆಯ ಗುರಿಯನ್ನು ಮುಟ್ಟಲನುಕೂಲವಾಗುವಂತೆ ವೈಜ್ಞಾನಿಕ ಸಾಧನಗಳನ್ನು ರೈತರಿಗೆ ಅವಶ್ಯ ಒದಗಿಸಿಕೊಡಬೇಕಾಗಿದೆ. ಈ ಸಾಧನಗಳೊಂದಿಗೆ ಅಣೆಕಟ್ಟಿನ ಉಪಯೋಗವನ್ನು ರೈತರು ಮಾಡಿಕೊಳ್ಳುವಂತೆ ಒತ್ತಾಯಿಸುವುದವಶ್ಯವಾಗಿದೆ.

ಈ ಕಾರ್ಯಕ್ರಮಗಳನ್ನು ಈ ರೂಪದಲ್ಲಿ ನಾವು ವರ್ಗೀಕರಿಸಬಹುದಾಗಿದೆ

ಅಣೆಕಟ್ಟು ಮತ್ತು ಸಣ್ಣ ಸಣ್ಣ ಕಟ್ಟೆಗಳನ್ನು ಮಾಡಿಸುವುದು. ಭೂಮಿನಾಶವಾಗದಂತೆ ಯತ್ನಿಸುವುದು ಇತ್ಯಾದಿಯನ್ನು ಮೊದಲನೆಯ ವರ್ಗದಲ್ಲಿ ಸೇರಿಸಬಹುದು

ಉತ್ತಮ ಬೀಜಗಳನ್ನೀಯುವುದು, ರಸಾಯನಿಕ ಗೊಬ್ಬರಗಳನ್ನು ಮತ್ತು ಉತ್ತಮ ವೈಜ್ಞಾನಿಕ ಸಾಧನಗಳನ್ನೊದಗಿಸುವುದನ್ನು ಎರಡನೆಯವರ್ಗದಲ್ಲಿ ಸೇರಿಸಬಹುದು.

ಹಳ್ಳಿಯಲ್ಲಿರುವ ನಿಷ್ಪ್ರಯೋಜಕವಾದ ಜನಶಕ್ತಿಯನ್ನು ಉಪಯೋಗಿಸುವುದನ್ನು ಮೂರನೆಯ ವರ್ಗದಲ್ಲಿ ಸೇರಿಸಬಹುದು.

ಹಳ್ಳಿಯ ಇಲಾಖೆಯ ಹಾಳುಬಿದ್ದ ಹಾಗೂ ಲೆಕ್ಕಕ್ಕೆ ಸಿಗದೆ ಅಥವಾ ಅಳತೆಗೆ ಸರಿಯಾಗದ ಭೂಭಾಗಗಳ ವಿಚಾರದೆಡೆಗೆ ಲಕ್ಷ್ಯವನ್ನೀಯುವುದನ್ನು ಮೂರನೆಯ ವರ್ಗದಲ್ಲಿ ಸೇರಿಸಬಹುದು.

ಮೊದಲನೆಯ ವರ್ಗದ ವಿಚಾರದ ಕಡೆಗೆ ಸರಕಾರವು ವಿಶೇಷ ಹಾಗೂ ಪ್ರಥಮ ಗಮನವನ್ನು ಹರಿಯಿಸಿದೆ. ಮೊದಲನೆ ಮತ್ತು ಎರಡನೆಯ ಯೋಜನೆಯಲ್ಲಿ ಇದಕ್ಕಾಗಿ ೧೩೩೦ ಕೋಟಿ ರೂಪಾಯಿಗಳನ್ನು ವ್ಯಯಿಸಲಾಗಿದೆ. ಇವುಗಳ ಯೋಜನೆ ಪೂರ್ತಿಯಾದಾಗ ೩ ಕೋಟಿ ೮೦ ಲಕ್ಷ ಎಕ್ರೆ ಭೂಮಿಗೆ ನೀರುಸಿಗುವುದು. ಈ ಅಂಕೆ ಸಂಖ್ಯೆಯ ತುಲನೆಯನ್ನು ನಾವು ಭಾರತ ವಿಭಜನಾ ಕಾಲದ ಅಂಕೆ ಸಂಖ್ಯೆಗಳೊಂದಿಗೆ ಮಾಡಬಹುದು ಅಂದು ೨ ಕೋಟಿ ೭೫ ಲಕ್ಷ ಎಕ್ರೆ ಭೂಮಿಯ ಮೇಲೆ ಅಣೆಕಟ್ಟಿನ ನೀರು ಹರಿಯುತಿತ್ತು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ನಮ್ಮ ಸಾಧನ ಬಹುದೊಡ್ಡದೇ ಆಗಿದೆ ಲೆಕ್ಕ ಮಾಡಿನೋಡಿದಾಗ ನಮ್ಮ ವ್ಯಾವಸಾಯಿಕ ಉತ್ಪನ್ನವು ೧೯೬೬ರ ಸಮಯದಲ್ಲಿ ಸಾಧಾರಣ ಈ ಭೂಮಿಗಿಂತ ೧೦ರಿಂದ ೧೧ ಕೋಟಿ ಎಕ್ರೆಯಷ್ಟಾಗಬಹುದೆಂದು ನಿರೀಕ್ಷಿಸಬಹುದಾಗಿದೆ ಅಂತಹ ಅಣೆಕಟ್ಟಿನ ಯೋಜನೆಯ ಕಡೆಗೆ ಗಮನಹರಿಸಬೇಕಾಗಿದೆ ಅವನ್ನು ಕಾರ್ಯಾನ್ವಿತವನ್ನಾಗಿ ಮಾಡಬೇಕಾಗಿದೆ

ಚಿಕ್ಕ ಚಿಕ್ಕ ಅಣೆಕಟ್ಟುಗಳನ್ನು ಲೆಕ್ಕಹಾಕಿ ನೋಡಿದಾಗ ೧೯೬೬ರಲ್ಲಿ ಇದರಿಂದಾಗಿ ನೀರು ಒದಗಬಹುದಾದ ಭೂಮಿಯ ಎಕ್ರೆಗಳು ೯ರಿಂದ ೧೦ ಕೋಟಿಗಳಷ್ಟಾಗಬಹುದು. ಅಂತೂ ಈ ಅಣೆಕಟ್ಟುಗಳಿಂದಲೇ ೧೯೬೬ರ ಹೊತ್ತಿಗೆ ೨೦ ಕೋಟಿ ಎಕ್ರೆ ಭೂಮಿಗೆ ನೀರುಸಿಗುವಂತಾಗುವುದು.

ಕೆಲವು ಕಡೆಗಳಲ್ಲಿ ಭೂಮಿಯ ಸಂರಕ್ಷಣೆಯನ್ನು ಮಾಡುವ ಬಗ್ಗೆ ವಿಶೇಷ ಗಮನವನ್ನೀಯಬೇಕಾಗುವುದು. ಇದಕ್ಕಾಗಿ ಪ್ರತ್ಯೇಕ ಇಲಾಖೆಯನ್ನು ತೆರೆದು

(ಆನೇ ಪುಟ ನೋಡಿರಿ)



ಭಾರತದಲ್ಲಿ ಮೀನಿನ ವ್ಯವಸಾಯ.

ಭಾರತದ ಹಿರಿಯ ವ್ಯವಸಾಯಗಳಲ್ಲಿ ಒಂದಾದ ಮತ್ಸ್ಯವ್ಯವಸಾಯಕ್ಕೆ ಭಾರತ ಸರಕಾರವು ತೀವ್ರ ಗಮನಹರಿಸುತ್ತಿದೆ. ಇದರ ಅಭಿವೃದ್ಧಿಗಾಗಿ ಯೋಜನೆಗಳನ್ನು ಕೂಡ ರೂಪಿಸುತ್ತಿದೆ. ಇಲ್ಲಿರುವ ಮೇಲಿನ ಚಿತ್ರದಲ್ಲಿ ಪಶ್ಚಿಮ ಕರಾವಳಿಯ ಬೆಸ್ತರು ಕರಾವಳಿಯಲ್ಲಿ ತಮ್ಮ ಮಾಡಿಯನ್ನು ಸಮುದ್ರದ ನೀರಿಗಿಳಿಸುವುದರಲ್ಲಿ ಆಸಕ್ತರಾಗಿರುವುದನ್ನು ಕೆಳಗಿನ ಚಿತ್ರದಲ್ಲಿ ಆಳವಾದ ಸಮುದ್ರದಲ್ಲಿ ಮೀನು ಹಿಡಿಯಲು ಉಪಯುಕ್ತವಾದ ಆಧುನಿಕ ಸುಸಜ್ಜಿತ ದೋಣಿಗಳೆರಡನ್ನೂ ಕಾಣಬಹುದು.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪ ಬೆಲೆರೂ ೧-೫೦

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ. ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇತರರನ್ನು ಗೇಲಿಮಾಡಿ ನಗೆಗಡಲನ್ನು ಎಬ್ಬಿಸಬೇಡ; ಇತರರನ್ನು ವ್ಯಂಗ್ಯೋಕ್ತಿ ನುಡಿದು ಅವರ ಮನನೋಯಿಸಬೇಡ; ಇತರರನ್ನು ತಿರಸ್ಕರಿಸಿ ನೀನು ತಿರಸ್ಕೃತನಾಗಬೇಡ— ತಪ್ಪಿದರೆ, ನಿನ್ನ ಶತ್ರುಗಳು ಹೆಚ್ಚುವರು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೦-೩-'೬೦	೨೭

ವಿಲಕ್ಷಣ ಪ್ರಜಾಸತ್ತೆ

ಇಂಡೊನೇಶ್ಯವನ್ನು ರಶ್ಯನ್ ಪ್ರಧಾನಿ ಶ್ರೀ ಕ್ರುಶ್ಚೇವರು ಸಂದರ್ಶಿಸಿ ಹೊರಹೊರಟ ಕೆಲವೇ ದಿನಗಳಲ್ಲಿ ಅಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಇನ್ನೊಂದು ಮಹತ್ವದ ಸ್ಥಿತ್ಯಂತರವಾದುದನ್ನು ನಾವು ಕಾಣುತ್ತೇವೆ. ಅಲ್ಲಿಯ ಅಧ್ಯಕ್ಷ ಸುಕರ್ಣರು ಒಂದು ಘೋಷಣೆಯನ್ನು ಹೊರಡಿಸಿ, ದೇಶದ ಪಾರ್ಲಿಮೆಂಟನ್ನು ಮನೆಗೆ ಕಳಿಸಿದ್ದಾರೆ. ದೇಶದ ಸಂಪತ್ತು ಮತ್ತು ಸರಕಾರಗಳ ನಡುವೆ ಪರಸ್ಪರ ಸಹಾಯಕ ವಾತಾವರಣವನ್ನು ಸಾಧಿಸುವಲ್ಲಿ ಸದ್ಯದ ಪಾರ್ಲಿಮೆಂಟು ಸಂಪೂರ್ಣ ವಿಫಲವಾದುದನ್ನು ಮನಗಂಡು ತಾವದನ್ನು ವಿಸರ್ಜಿಸಿರುವುದಾಗಿಯೂ ಈಗಿನ ಪಾರ್ಲಿಮೆಂಟು ರಾಷ್ಟ್ರ, ಸರಕಾರ ಮತ್ತು ಜನತೆಯ ಐಕ್ಯಕ್ಕೆ ಗಂಡಾಂತರಕಾರಿಯಾಗುತ್ತಿರುವುದರಿಂದ ಮತ್ತು ಸಮೃದ್ಧ ಸಮಾಜವನ್ನು ಕಟ್ಟುವಲ್ಲಿ ವಿಳಂಬವನ್ನುಂಟು ಮಾಡಬಹುದಾದುದರಿಂದ, ಅದು ಮುಂದುವರಿಯುವ ಅಗತ್ಯವಿಲ್ಲ ಎಂದೂ ಶ್ರೀ ಸುಕರ್ಣರು ತಮ್ಮ ಘೋಷಣೆಯಲ್ಲಿ ಹೇಳಿದ್ದಾರೆ. ಆದರೆ, ಈ ಪಾರ್ಲಿಮೆಂಟಿನ ಅನುಕೂಲ ವಾತಾವರಣ ಮೂಡಿದೊಡನೆಯೇ ಪುನಃ ಊರ್ಜಿತಗೊಳಿಸುವುದಾಗಿಯೂ ಹೇಳಿದ್ದಾರೆ.

ಶ್ರೀ ಸುಕರ್ಣರ ಈ ಘೋಷಣೆಯಿಂದಾಗಿ, ೧೯೫೯ರ ಆಗಸ್ಟ್ ೧೭ರಂದು ಅವರು ಪ್ರಾರಂಭಿಸಿದ ನಿರಂಕುಶಾಧಿಕಾರವು ಈಗ ಸಂಪೂರ್ಣಗೊಂಡಂತಾಯಿತು. ಅಂದು ಅಧ್ಯಕ್ಷ ಸುಕರ್ಣರು ಒಂದು ಘೋಷಣೆಯ ಮೂಲಕ ಘಟನಾಸಮಿತಿಯನ್ನು ರದ್ದುಗೊಳಿಸಿ, ೧೯೪೫ರ ಸಂವಿಧಾನವನ್ನೇ ಪುನಃ ಊರ್ಜಿತದಲ್ಲಿರಿಸಿರುವುದಾಗಿ ಹೇಳಿ, ರಾಷ್ಟ್ರದ ರಾಜಕೀಯ ಪಕ್ಷಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ೧೯೬೦ರ ಜನವರಿ ೧೫ರಂದು ಹೇಳಿದ್ದರು. ಈ ನಿಯಂತ್ರಣದಂತೆ, ಅವರು ಸರಿಯೆಂದು ಕಂಡರೆ, ಪಕ್ಷವನ್ನೂ ವಿಸರ್ಜಿಸಿಬಿಡಬಹುದಾಗಿತ್ತು. ಇಂತಹ ಸರ್ವಾಧಿಕಾರ ಸ್ಥಾಪನೆಯ ಪ್ರಧಾನೋದ್ದೇಶವೆಂದರೆ, ಪ್ರಜಾಸತ್ತೆಯನ್ನು ವ್ಯವಸ್ಥಿತಗೊಳಿಸುವುದೆಂದೂ ಹೇಳಲಾಗಿದೆ. ಆದರೆ, ಪಾರ್ಲಿಮೆಂಟಿಗೆ ವಿಶ್ರಾಂತಿಯಿತ್ತು ಸರ್ವಾಧಿಕಾರದ ಛಾಯೆಯಡಿಯಲ್ಲಿ ಆದಾವ ವಿಧಾನದ ಪ್ರಜಾಸತ್ತೆಯು ಸ್ಥಾಪಿತವಾಗಿದೆ ಅಥವಾ ಮುಂದುವರಿಯುತ್ತಿದೆ ಎನ್ನುವುದನ್ನು ಸಂಪೂರ್ಣ ವಿಶ್ವವೇ ಕಾತರದೃಷ್ಟಿಯಿಂದ ಈಕ್ಷಿಸುತ್ತಿದೆ. ಇಂಡೊನೇಶ್ಯದ ಈ ರೀತಿಯ ಅನಪೇಕ್ಷಿತ ಸ್ಥಿತ್ಯಂತರಗಳಿಗೆ ಕಾರಣವೇನೆಂದು ಊಹಿಸುವುದು ಕಷ್ಟವೆ. ಅಧ್ಯಕ್ಷರ ಘೋಷಣೆಯ ಬಗ್ಗೆ ಅಲ್ಲಿನ ಪ್ರಮುಖ ರಾಜಕೀಯ ಪಕ್ಷಗಳ ನಾಯಕರು ಯಾವ ರೀತಿಯ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲವೆಂಬುದನ್ನೂ, ಈ ಘೋಷಣೆಯು ಸಚಿವ ಸಂಪುಟದ ಸಭೆಸೇರಿ, ಅದು ಮುಕ್ತಾಯಗೊಂಡ ಬೆನ್ನಲ್ಲೇ ಹೊರಟಿರುವುದೆಂಬುದನ್ನೂ ನಾವು ಅವಶ್ಯ ಗಮನಿಸಬೇಕು. ಬಹುದೀರ್ಘಕಾಲದ ವರೆಗೆ ಪರದಾಸ್ಯದ ಬವಣೆಯನ್ನುಂಡು ಕಂಗೆಟ್ಟ ಏಶ್ಯನ್ ರಾಷ್ಟ್ರಗಳು ಅತೀವ ಪ್ರಯಾಸದಿಂದ ಸ್ವಾತಂತ್ರ್ಯವನ್ನೇನೋ ಪಡೆದುವು; ಆದರೆ, ದಟ್ಟದರಿದ್ರರ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ಆವಶ್ಯವಾದ ಕಾರ್ಯವು ನಿರೀಕ್ಷಿತ ಪ್ರಮಾಣದಲ್ಲಿ ಎಲ್ಲಿಯೂ ಮುಂದುವರಿಯುತ್ತಿರುವುದಿಲ್ಲ. ಜತೆಗೆ ಸುಭದ್ರ ಸರಕಾರವನ್ನು ಸ್ಥಾಪಿಸಬಲ್ಲ ಸುದೃಢವಾದ ರಾಜಕೀಯ ಪಕ್ಷಗಳೂ ಹೆಚ್ಚಿನ ದೇಶಗಳಲ್ಲಿಲ್ಲ. ಈ ಎರಡು ಅಭಾವಗಳೊಂದಿಗೆ ಕಮ್ಯುನಿಸ್ಟ ಕೀಟಲೆಯೂ ಸೇರಿ ಮುಪ್ಪುರಿಗೊಂಡು, ಪ್ರಜಾಸತ್ತೆಯ ಹೃದಯಕ್ಕೇನೇ ಕುಠಾರ ಪ್ರಯೋಗ ಮಾಡುತ್ತಿರುವುದು ಅನುಭವವೇದ್ಯವೇ ಆಗಿದೆ. ಪ್ರಜಾಪ್ರಭುತ್ವದ ಇಂದಿನ ಯುಗದಲ್ಲಿಯೂ ಸರ್ವಾಧಿಕಾರಿಗಳು ಹುಟ್ಟಿಕೊಳ್ಳಲಿರುವ ಬಲವತ್ತರವೆನಿಸಿದ ಕಾರಣಗಳೆಂದರೆ, ಇವೇ ಸರಿ. ಆಯಾ ದೇಶದ ಪರಿಸ್ಥಿತಿ ಮತ್ತು ಸನ್ನಿವೇಶಗಳನ್ನು ಹೊಂದಿಕೊಂಡು ಅಲ್ಲಿನ ರಾಜಕಾರಣದಲ್ಲಿ ಪರಿವರ್ತನೆಯಾಗುವುದೇನೂ ಅನಪೇಕ್ಷಣೀಯವೇ ಎಂದು ಹೇಳುವಂತಿಲ್ಲ. ಆದರೂ ಪ್ರಜಾಪ್ರಭುತ್ವವಿಲ್ಲದ ಸರ್ವಾಧಿಕಾರದಲ್ಲಿ ಪ್ರಜಾಸತ್ತೆಯೆಲ್ಲಿಯದು ಎಂಬುದೇ ವಿಸ್ಮಯದ ವಿಷಯವಾಗಿದೆ. ಏಶ್ಯದ ನೂತನ ಸ್ವತಂತ್ರ ರಾಷ್ಟ್ರಗಳಲ್ಲಿ ಕೆಲವೆಡೆ ಇತ್ತೀಚೆಗೆ ಸರ್ವಾಧಿಕಾರಿಯ ಆಡಳಿತವೇ ತಳವೂರಿದೆ. ಇನ್ನು ಕೆಲವೆಡೆ ಅಭದ್ರವಾಗಿ ಸರಕಾರ ಡೋಲಾಯಮಾನ ಪರಿಸ್ಥಿತಿಯಲ್ಲಿ ನಿಂತಿವೆ. ಒಂದು ಸ್ಥಿರ ಸರಕಾರವನ್ನು ಸ್ಥಾಪಿಸಿಕೊಳ್ಳುವ ಬಲವಂತವಾದ ಪಕ್ಷ ಭಾರತವೊಂದನ್ನುಳಿದರೆ, ಇತರತ್ರ ತೋರುವುದಿಲ್ಲ. ಭಾರತದಲ್ಲಿಯೂ ಈ ಸರಕಾರದ ಮೇಲೆ ವಿರೋಧಿ ಪಕ್ಷಗಳ ತೀವ್ರ ಆಟೋಪ ಕವಿದರೂ ಅದು ಅತಿ ಹಿರಿಯದಾದುದರಿಂದ ಅಚಲವಾಗಿ ನಿಂತಿದೆ. ಆದರೂ ವಿರೋಧಿ ಪಕ್ಷಗಳು ಅವಕಾಶ ಲಭಿಸಿದಾಗಲೆಲ್ಲ ಈ ಆಡಳಿತೆಯನ್ನು ವಾಚಾಮಗೋಚರವಾಗಿ ಟೀಕೆಟಿಪ್ಪಣಿಗಳಿಗೆ ಗುರಿಮಾಡುತ್ತಿವೆ. ಅಜ್ಞಾನಿಗಳ, ದರಿದ್ರರ, ವಿಚಾರಶಕ್ತಿಹೀನರ ಈ ಏಶ್ಯನ್ ರಾಷ್ಟ್ರಗಳಲ್ಲಿ ಸರಕಾರದ ಪ್ರಾರ್ಥನೆಗಿಂತಲೂ ವಿರೋಧೀ ಪಕ್ಷಗಳ ಬಣ್ಣಬಣ್ಣದ ಮಾತುಗಳಿಗೆ ಜನ ಮಾರುಹೋಗುತ್ತಿರುವುದು ತೀರ ಸ್ವಾಭಾವಿಕವಾದುದರಿಂದ, ರಾಜಕೀಯ ತಿಕ್ಕಾಟವು ಸ್ವಾಭಾವಿಕವಾಗಿಯೇ ಇದೆ. ಇಂದು ಪಾಶ್ಚಾತ್ಯ ಮಾದರಿಯನ್ನು ಅನುಕರಿಸಿ, ಪೂರ್ವದ ಈ ದೇಶಗಳಲ್ಲಿ ಪಕ್ಷೀಯ ಪ್ರಶಾಸನ ಪ್ರಣಾಳಿಯನ್ನು ಸ್ವೀಕರಿಸಲಾಗಿದ್ದರೂ ಅದು ಸಂಪೂರ್ಣ ಯಶಸ್ವಿಯಾಗಿದೆಯೆಂದು ಹೇಳುವಷ್ಟು ಧೈರ್ಯ ಸಾಲದು. ಇದರ ಪರಿಣಾಮವಾಗಿಯೇ ಅಲ್ಲಲ್ಲಿ ಸರ್ವಾಧಿಕಾರಿಗಳು ಹುಟ್ಟಿಕೊಳ್ಳುವಂತಾಗಿದೆಯೋ ಏನೋ?

ಇಂಡೊನೇಶ್ಯದಲ್ಲಿ ಕಳೆದ ಎಂಟು ತಿಂಗಳಲ್ಲಿ ಆದ ಪರಿವರ್ತನೆಯು ಕೇವಲ ಆ ದೇಶದ ಸ್ಥಿತಿಯನ್ನು ಮಾತ್ರ ತೋರಿಸದೆ, ಏಶ್ಯನ್ ರಾಷ್ಟ್ರಗಳ ರಾಜಕೀಯದ ಮರ್ಮವನ್ನು ಭೇದಿಸುತ್ತದೆಯೆನ್ನಬಹುದು. ಸುವಿದ್ಯಾವಂತರಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಪಕ್ಷೀಯ ಪ್ರಶಾಸನವು ಯಶಸ್ವಿಯಾಗುವುದಕ್ಕೆ ಮೂಲಕಾರಣರೆಂದರೆ, ಅಲ್ಲಿನ ಪ್ರಜೆಗಳೇ ಸರಿ. ಈ ಪ್ರಜಾಜನರು ತಮ್ಮ ಕರ್ತವ್ಯವನ್ನು ಪೂರೈಸಿಬಿಟ್ಟು ಆಡಳಿತೆಯನ್ನು ಸುಗಮಗೊಳಿಸುತ್ತಾರೆ. ಆದರೆ, ಈ ಏಶ್ಯನ್ ರಾಷ್ಟ್ರಗಳಿಗೆ ಅಂತಹ ವಿಚಾರಶಕ್ತಿಯಿಲ್ಲದಿರುವುದರಿಂದ, ದೇಶದ ಆವಶ್ಯಕತೆಗಳನ್ನು ಕಂಡುಕೊಂಡು, ಅವನ್ನು ಉಚಿತ ರೀತಿಯಲ್ಲಿ ಪೂರೈಸುವುದಕ್ಕೆ ಸಾಧ್ಯವಿರುವುದಿಲ್ಲ. ಇದರಿಂದಾಗಿ ಆಡಳಿತೆಯ ಯಂತ್ರದಲ್ಲಿಯೇ ದೋಷಗಳು ಬಂದು, ಕಣ್ಮರೆಯಾಗುತ್ತವೆ, ಅಷ್ಟೆ. ಇದರಿಂದ ಪ್ರಜಾಸತ್ತೆಯನ್ನು ಶಾಶ್ವತಗೊಳಿಸುವ ಅಭಿಲಾಷೆಯುಳ್ಳ ಈ ಏಶ್ಯನ್ ರಾಷ್ಟ್ರಗಳ ಆಡಳಿತ ಪ್ರಣಾಳಿಯೇ ಬೇರೆಯಾಗುವ ಆವಶ್ಯಕತೆಗಳಿವೆ ಎಂದು ಹೇಳುವವರಿದ್ದಾರೆ. ಆದರೆ, ಈ ಆಡಳಿತೆಯು ಯಾವ ವಿಧವಾಗಬಹುದು? ಎಂಬತ್ತಲೂ ಗಮನಹರಿಸಬೇಕಾಗಿದೆ. ಭಾರತಾಭಿಮಾನಿಗಳು ಈ ಬಗ್ಗೆ ಸರ್ವೋದಯದ ತತ್ತ್ವವನ್ನಿಟ್ಟುಕೊಂಡಿದ್ದಾರೆ; ಈ ಪ್ರಣಾಳಿಯನ್ನು ಸ್ವೀಕರಿಸಿದರೆ, ಅದರಿಂದ ನಿಯೋಜಿತ ಗುರಿಯನ್ನು ಮುಟ್ಟುವುದೂ ಸಾಧ್ಯವೆನಿಸಬಹುದೆಂದವರ ಅಭಿಪ್ರಾಯವಾಗಿದೆ. ಪಕ್ಷ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯವಿಲ್ಲದ ಪ್ರಜಾಪ್ರಭುತ್ವದಲ್ಲಿ ಯಾವ ಕೆಲಸತಾನೇ ನಡೆದೀತು ಎಂಬುದು ಊಹೆಗೆ ನಿಲುಕದ ವಿಷಯವಾಗಿದೆ. ಆದುದರಿಂದಲೇ ಡಾ. ಸುಕರ್ಣರ ಸದ್ಯದ ಘೋಷಣೆಯ ಪರಿಣಾಮ ಮತ್ತು ಕಾರ್ಯಸಾಧನೆಯತ್ತ ವಿಶ್ವರಾಷ್ಟ್ರಗಳ ದೂರದೃಷ್ಟಿ ಹರಿಯತೊಡಗಿದೆ. ಅವು ಅದನ್ನೇ ಚಾತಕ ಪಕ್ಷಿಯಂತೆ ಇದಿರು ನೋಡಿಕೊಳ್ಳುವುದರಲ್ಲಿ ಉದ್ಯುಕ್ತವಾಗಿವೆ.

ಇದಕ್ಕಾರು ಹೊಣೆ?

ಮೈಸೂರು ವಿಧಾನ ಸಭೆಯಲ್ಲಿ ‘ಹಳೆಯ ಮೈಸೂರು ವಿಭಾಗ’ ದಿಂದ ಎಂತೆಂತಹ ಮನೋವೃತ್ತಿಯ ಜನರು ತಮ್ಮ ಜನತೆಯನ್ನು ಪ್ರತಿನಿಧಿಕರಿಸುತಿದ್ದಾರೆ ಎಂಬುದು ಈಗೀಗ ಪ್ರತ್ಯಕ್ಷಕ್ಕೆ ಅನುಭವವಾಗತೊಡಗಿದೆ. ಹಿಂದಿನ ಬಾರಿ ‘ಕರ್ನಾಟಕ’ವೆಂಬ ಪದದ ಮೇಲೆಯೇ ಸಾಕೆನ್ನಿಸುವಷ್ಟು ಕುಸ್ತಿ ನಡೆಯಿತು; ವಾಗ್ವಾದಗಳೆದ್ದುವು, ಅಂತೂ ಸದಸ್ಯರಿಗೆಲ್ಲಾ ಪುಕ್ಕಟೆ ಮನರಂಜನೆಯಾಯಿತು. ಈ ಸಲ ಪ್ರಾರಂಭದಲ್ಲಿಯೇ ಕಹಿ ಅನುಭವಗಳು ಎದ್ದುತೋರತೊಡಗಿವೆ. ಸದಸ್ಯರಾದ ಶ್ರೀ ಮುಕ್ಕಣ್ಣಪ್ಪನವರು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲೇ ರಾಜ್ಯವನ್ನು ಒಡೆಯಬೇಕೆನ್ನುವ ಹೇಯವಾದ ಅಭಿಪ್ರಾಯವನ್ನು ಹೊರಚೆಲ್ಲಿದ್ದಾರೆ. “ರಾಜ್ಯವು ಪುನರ್ಘಟನೆಯಾದ ಮೇಲೆ, ಹಳೆಯ ಮೈಸೂರಿನ ಅಭಿವೃದ್ಧಿಯಾಗಲಿಲ್ಲ; ವಿಲೀನಗೊಂಡ ಪ್ರದೇಶದ ಜನರ ಅಧಿಕಾರ ಹೆಚ್ಚಾಗಿದೆ, ಹಳೆ ಮೈಸೂರಿಗರನ್ನು ಕೇಳುವವರೇ ಇಲ್ಲ. ಪ್ರತಿಯೊಂದು ಕಛೇರಿಯಲ್ಲಿಯೂ ಹಳೆ ಮೈಸೂರಿಗರ ಬಗ್ಗೆ ಕೀಳುಭಾವನೆಯಿಂದ ವರ್ತಿಸಲಾಗುತ್ತಿದೆ. ವಿಲೀನಗೊಂಡ ಪ್ರದೇಶಗಳಿಗೇನೇ ಕಳೆದ ಮೂರು ವರ್ಷಗಳಲ್ಲಿಯೂ ವಿಶೇಷ ಹಣ ವೆಚ್ಚಮಾಡಲಾಗಿದೆ. ಶ್ರೀ ಚೆನ್ನಬಸಪ್ಪನವರು ಇತ್ತೀಚೆಗೆ ಮುಂಬಯಿ ಕರ್ನಾಟಕದಲ್ಲಿ ೨೫ ಸೇತುವೆಗಳಿಗೆ ಶಂಕುಸ್ಥಾಪನೆ ಮಾಡಿದ್ದಾರೆ. ಹೀಗೆ ಮಾಡುತ್ತ ಹೋದರೆ ಗತಿಯೇನು?” ಎಂಬ ನಿರಾಶೆಯನ್ನು ಶ್ರೀ ಮುಕ್ಕಣ್ಣಪ್ಪನವರು ಹೊರಗೆಡಹಿದ್ದಾರೆ. ಶ್ರೀಯುತರು ಹೇಳುವಂತೆ ಹಳೆ ಮೈಸೂರಿಗರ ಬಗ್ಗೆ ಕೀಳುಭಾವನೆಯನ್ನು ಉಳಿದ ಪ್ರದೇಶಗಳವರು ತೋರಿಸುತ್ತಿರುವರಾದರೆ, ಅದಕ್ಕೆ ಅಂತಹವರಲ್ಲಿರುವ ಶ್ರೀ ಮುಕ್ಕಣ್ಣಪ್ಪರಂತಹ ಮನೋಭಾವನೆಯೇ ಕಾರಣವಾಗಿದೆ. ಕನ್ನಡವಾಡುವ ಎಲ್ಲ ಪ್ರದೇಶಗಳೂ ಒಂದುಸೇರಿ ಏಕೈಕ ಕರ್ನಾಟಕವಾಗಬೇಕೆಂದು ಕನ್ನಡದ ಜನತೆ ಬಯಸಿತ್ತು. ಅದೀಗ ನನಸಾಗಿ ಪರಿಣಮಿಸಿದೆಯೇನೋ ನಿಜವೆ. ಆದರೆ, ‘ಹಳೆಯ ಮೈಸೂರು’ ‘ಹೊಸ ಮೈಸೂರು’ ಎಂಬ ಭೇದಭಾವನೆ, ‘ತಾವು ಮಾತ್ರ ಮೈಸೂರಿಗರು, ಉಳಿದವರು ವಿಲೀನಗೊಂಡ ಪ್ರದೇಶದವರು” ಎಂಬ ದುರಭಿಪ್ರಾಯ, ಜತೆಗೆ ತಮ್ಮ ಮಲತಾಯಿ ಧೋರಣೆಯಿಂದ ಮೊದಲೇ ಕಂಗೆಟ್ಟು ಹೋಗಿದ್ದ ಬೊಂಬಾಯಿ, ಮದ್ರಾಸ, ಹೈದರಾಬಾದ ಕರ್ನಾಟಕ ಭಾಗಗಳನ್ನು ಸುಲಿದು, ತಮ್ಮ “ಹಳೆ” ಮೈಸೂರಿನ ಹೊಟ್ಟೆ ತುಂಬಿಸುವ ಯೋಚನೆ—ಮುಖ್ಯವಾಗಿ ಸಂಕುಚಿತ ಮನೋವೃತ್ತಿ—ಇರುವ ವರೆಗೆ ಕರ್ನಾಟಕ ರಾಜ್ಯವು ಏಳಿಗೆ ಹೊಂದುವಂತಿಲ್ಲ. ಮುಕ್ಕಣ್ಣನವರು ವಿಲೀನಗೊಂಡವರ ಬಗ್ಗೆ ಇರಿಸಿಕೊಂಡ ಕಹಿ ಅನುಭವ ಮತ್ತು ಕಹಿ ಅಭಿಪ್ರಾಯಗಳಿಗೆಲ್ಲ ಅವರ ವರ್ತನೆ, ಅಸಭ್ಯತೆ ಮತ್ತು ಅಜ್ಞಾನಗಳೇ ಕಾರಣವೆನ್ನಬೇಕಾಗಿದೆ. ಶ್ರೀ ಮುಕ್ಕಣ್ಣನವರಂತಹ ಜವಾಬ್ದಾರಿಯುತ ವ್ಯಕ್ತಿ ರಾಜ್ಯವಿಧಾನಸಭಾಸದಸ್ಯಸ್ಥಾನದಿಂದ ಇಂತಹ ಅವಹೇಳನದ ಅಸಂಗತವಾದ ಮಾತನ್ನು ವಿಧಾನಸಭೆಯ ಜನತಾ ಪ್ರತಿನಿಧಿಗಳೆದುರು ಆಡುವುದಾದರೆ, ಹಳೆಯ ಮೈಸೂರಿಗರ ಬಗ್ಗೆ ಉಳಿದವರಲ್ಲಿ ಯಾವ ಅಭಿಪ್ರಾಯ ಹುಟ್ಟಬೇಕು? ಆದರೂ ಒಂದು ಸಂತೋಷ. ಶ್ರೀ ಮುಕ್ಕಣ್ಣಪ್ಪನವರು ಒಂದು ಮಾತು ಆಡಲು ತಪ್ಪಿದರು ‘ಈಗ ಹಳೆಯ ಮೈಸೂರಿಗರೆಲ್ಲಾ ಹಳೆಯ ಹುಲಿಗಳಾಗಿದ್ದಾರೆ’ ಎಂದು. ಇದಕ್ಕೆ ಮುಂದಿನ ಅಧಿವೇಶನದಲ್ಲಿ ಅವಕಾಶ ಕಲ್ಪಿಸಿಕೊಳ್ಳುವುದು ವಿಹಿತವೆಂದವರು ತಿಳಿದುಕೊಂಡಿರಬಹುದು

ಸಂಕ್ಷಿಪ್ತ ಸುದ್ದಿಗಳು

ದುರ್ದೈವೀ ನಗರವಿದು!

ಮೊರೊಕ್ಕೋವಿನ ಅಗಾಡೀರವೆಂಬಲ್ಲಿ ತೀವ್ರವಾದ ಭೂಕಂಪಗಳು ಪದೇ ಪದೇ ಸಂಭವಿಸಿದುದರ ಪರಿಣಾಮವಾಗಿ ಅದೊಂದು ದುರದೃಷ್ಟ ನಗರವೆಂಬ ಉಪನಾಮಕ್ಕೆ ಗುರಿಯಾಗಿದೆ. ಇಲ್ಲಿನ ಅನಾಹುತಕ್ಕೆ ಈಡಾದವರು ಸುಮಾರು ೧೪ ಸಾವಿರ ಜನರು. ಇವರಲ್ಲಿ ೬-೭ ಸಾವಿರ ಮಂದಿ ಅಸುದೊರೆದಿದ್ದಾರೆ. ೨೫ ಸಾವಿರ ಮಂದಿ ಊರುಬಿಟ್ಟು ಓಡಿಹೋಗಿದ್ದಾರೆ. ಮತ್ತೂ ಸೌಮ್ಯರೂಪದ ಭೂಕಂಪ ನಡೆಯುತ್ತಲಿದೆಯೆಂಬ ವರದಿಗಳು ಬಂದಿವೆ.

ಭೂಕಂಪಪೀಡಿತ ನಿರಾಶ್ರಿತರಿಗೆ ವಿಶ್ವದ ಬೇರೆ ಬೇರೆ ರಾಷ್ಟ್ರಗಳು ತಮ್ಮ ಉದಾರ ಹಸ್ತದ ದಾನವನ್ನೀಯಲು ನಿರ್ಧರಿಸಿವೆ. ಅಖಿಲಭಾರತ ಕಾಂಗ್ರೆಸ್ ಸಮಿತಿಯು ಉಣ್ಣೆಯ ಅರಿವೆಗಳನ್ನು ಕಳಿಸುವ ಸಿದ್ಧತೆ ಮಾಡಿರುತ್ತದೆ.

ಅಯೂಬ ನೆಹರೂ ಭೆಟ್ಟಿ

ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಭಾರತಗಳ ನಡುವಣ ಕೆಲವಾರು ಪ್ರಶ್ನೆಗಳು ಶಾಂತಯುತವಾಗಿ ಬಗೆಹರಿದಂತೆ ಉಳಿದುವನ್ನೂ ಕೊನೆಗಾಣಿಸಲು ಎರಡು ರಾಷ್ಟ್ರಗಳೂ ಉತ್ಸುಕವಾಗಿವೆ. ಮುಂದಿನ ಮೇ ತಿಂಗಳಲ್ಲಿ ಸೇರಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಿ ಪರಿಷತ್ತಿನ ಸಂದರ್ಭದಲ್ಲಿ ಲಂಡನ್ನಿನಲ್ಲಿ ನೆಹರೂ-ಅಯೂಬ ಖಾನರು ಪುನಃ ಭೆಟ್ಟಿಯಾಗಲಿದ್ದು, ಈ ಸಂದರ್ಭದಲ್ಲಿಯೂ ಅವರು ಮಾತುಕತೆ ಮುಂದುವರಿಸುವ ನಿರೀಕ್ಷೆಯಿರುವುದು.

ಪರ್ವತದೊಡನೆ ಸಂಬಂಧ

ಹಿಮಾಲಯದ ಅತಿ ಎತ್ತರ ಶಿಖರ ಗೌರಿಶಂಕರವನ್ನೇರಲು ಭಾರತೀಯ ತಂಡವೊಂದು ಶ್ರೀ ಜ್ಞಾನಸಿಂಗರ ಮುಖಂಡತನದಲ್ಲಿ ತನ್ನ ಸಾಹಸಕ್ಕೆ ತೊಡಗಿತು. ಗೌರಿಶಂಕರಾರೋಹಣಕ್ಕೆ ಹಿಮಾಲಯ ಪರ್ವತಾವಳಿಯು ಭಾರತ ಮತ್ತು ನೇಪಾಳಗಳ ಪರಂಪರಾಪ್ರಾಪ್ತವಾದ ಆಸ್ತಿಯಾಗಿದ್ದು, ಅದರ ಪರಿಚಯ ಮಾಡಿಕೊಂಡು ಸಂಬಂಧವನ್ನು ಬೆಳೆಸಿಕೊಳ್ಳುವುದೇ ಮೂಲಕಾರಣವೆಂದು ಶ್ರೀ ಸಿಂಗರು ಅಂದಿದ್ದಾರೆ. ಈಗ ಹೊರಟಿರುವ ಪ್ರಥಮ ತಂಡದಲ್ಲಿ ೧೬ ಸದಸ್ಯರು ಮತ್ತು ೩೦೦ ಶೆರ್ಪಾಗಳಿದ್ದಾರೆ. ಎರಡನೆಯ ತಂಡದಲ್ಲಿ ನಾಲ್ವರು ಸದಸ್ಯರು ಮತ್ತು ೩೦೦ ಶೆರ್ಪಾ ಜನರಿದ್ದಾರೆ. ಗೌರಿಶಂಕರ ವಿಜೇತರಾದ ಶ್ರೀ ತೇನಸಿಂಗರು ಈ ಭಾರತೀಯ ಪರ್ವತಾರೋಹಿಗಳನ್ನು ಆಶೀರ್ವದಿಸಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಭುವನೇಂದ್ರ ಕೋಲೇಜು ಕಟ್ಟಡದ ಶಂಕುಸ್ಥಾಪನಾ ಸಮಾರಂಭ— ಎಕೆಡೆಮಿ ಆಫ್ ಜನರಲ್ ಎಜುಕೇಶನ್ ಇದರ ನೇತೃತ್ವದಲ್ಲಿ ಕಾರ್ಕಳದಲ್ಲಿ ಪ್ರಾರಂಭವಾಗಲಿರುವ ಶ್ರೀ ಭುವನೇಂದ್ರ ಕೋಲೇಜು ಕಟ್ಟಡದ ಶಂಕುಸ್ಥಾಪನಾ ಸಮಾರಂಭವು ತಾ. 2ರಂದು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಾಶೀ ಮಠಾಧೀಶರಾದ ಶ್ರೀ ಮತ್ಸುಧೀಂದ್ರ ತೀರ್ಥ ಶ್ರೀ ಪಾದಂಗಳವರಿಂದ ಶಾಸ್ತ್ರೋಕ್ತವಾಗಿ ನೆರವೇರಿಸಲ್ಪಟ್ಟಿತು. ಎಕೆಡಮಿಯ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣ ಮಾಡುತ್ತಾ ಈ ಕೊಲೇಜಿನ ಸ್ಥಾಪನೆಯಿಂದ ಕಾರ್ಕಳ ಮತ್ತು ಸುತ್ತುಮುತ್ತಲ ವಲಯಗಳ ಸರ್ವತೋಮುಖ ಅಭಿವೃದ್ಧಿಗೆ ಅವಕಾಶ ಒದಗುವುದೆಂದೂ ಈ ಮಹತ್ಕಾರ್ಯಕ್ಕೆ ಜನರು ಕೊಡುಗೈಯ ಸಹಾಯ ಮಾಡಬೇಕೆಂದೂ ಈಗಾಗಲೇ ಶ್ರೀ ವೆಂಕಟರಮಣ ದೇವಸ್ಥಾನದವರು 18 ಎಕ್ರೆ ಸ್ಥಳವನ್ನೂ ಒಂದು ಲಕ್ಷ ರೂಪಾಯಿ ಸಾಲವನ್ನೂ ಶ್ರೀಗಳಾದ ಕೆ. ಪಿ. ಮುಕುಂದ ಪ್ರಭು, ಮಂಜುನಾಥ ಶೆಣೈ ಅವರು ರೂ. 25,000ದಂತೆ ಕೊಡಕೊಪ್ಪಿ ರೂ. 10,000. ರೂ. 5,000 ವನ್ನು ಅನುಕ್ರಮವಾಗಿ ಇಷ್ಟರಲ್ಲಿಯೇ ಕೊಟ್ಟಿರುವರೆಂದೂ ಹೇಳಿದರು. ಶ್ರೀ ಸ್ವಾಮಿಯವರು ಕೊಲೇಜಿನ ಶಂಕುಸ್ಥಾಪನಾ ಶಿಲೆಯ ಅನಾವರಣ ಮಾಡಿ ಡಾ. ಪೈಗಳು ಕೈಗೊಳ್ಳುವ ಯಾವತ್ತೂ ಕಾರ್ಯಗಳು ಜಯಶೀಲವಾಗುತ್ತವೆಂದೂ ಈ ಕೊಲೇಜು ಕೂಡ ಸರ್ವರ ಸಹಕಾರ ದೊರೆತು ಯಶಸ್ವಿಯಾಗಲೆಂದೂ ಆಶೀರ್ವದಿಸಿದರು. ಶ್ರೀ ಟಿ. ರಮೇಶ ಯು. ಪೈಗಳು ಸರ್ವರಿಗೂ ಕೃತಜ್ಞತೆಗಳನ್ನರ್ಪಿಸಿದರು.

ಉಡುಪಿ ನಗರಸಭಾ ರಜತೋತ್ಸವ—ಸಮಿತಿಯ ಕಾರ್ಯನಿರ್ವಾಹಕ ಕಮಿಟಿಯ ಸಭೆಯೊಂದು ನಗರಸಭಾ ಕಚೇರಿಯಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ತಾ. 1—3—60ರಲ್ಲಿ ಜರಗಿ ಇದೇ ಡಿಸೆಂಬರ 29ರಿಂದ 1961ನೇ ಜನವರಿ 17ರ ಅವಧಿಯ 3 ವಾರಗಳಲ್ಲಿ ವಸ್ತುಪ್ರದರ್ಶನ ಒಂದನ್ನು ಏರ್ಪಡಿಸುವ ನಿರ್ಧಾರವಾಯಿತಲ್ಲದೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ವಿಚಾರವಿಮರ್ಶೆ ನಡೆಯಿತು.

ಶ್ರೀ ಕೊಚ್ಚಿಕಾರ್ ರಮಾನಾಥ ಪೈಗಳ ನಿಧನ—ತಾ 2—3 60ರಂದು ಉಡುಪಿಯ ಪ್ರಸಿದ್ಧ ಹಿರಿಯ ವಕೀಲ್ ಶ್ರೀ ಕೊಚ್ಚಿಕಾರ್ ರಮಾನಾಥ ಪೈಗಳು ತಮ್ಮ 79ನೇ ವರ್ಷದಲ್ಲಿ ಹೃದಯಸ್ತಂಭನದಿಂದ ನಿಧನಹೊಂದಿದರು. ದಿವಂಗತರು ದಕ್ಷ ವಕೀಲರಾಗಿಯೂ ಸಾರ್ವಜನಿಕ ಕಾರ್ಯಕರ್ತರಾಗಿಯೂ ಸೇವೆ ಸಲ್ಲಿಸಿ ಜನಾನುರಾಗ ಗಳಿಸಿದ್ದರು.

ಡಾ| ಯು. ಕೃಷ್ಣರಾಯರಿಗೆ ಸತ್ಕಾರಕೂಟ-ಮದರಾಸಿನ ಮಾಜಿ ಮಂತ್ರಿಗಳೂ, ಮದ್ರಾಸ್ ಎಸೆಂಬ್ಲಿಯ ಸ್ಪೀಕರರೂ ಆದ ಡಾ. ಯು. ಕೃಷ್ಣರಾಯರಿಗೆ ತಾ 5ರಂದು ಉಡುಪಿ ನಗರ ಸಭೆಯವರು ಸತ್ಕಾರಕೂಟವನ್ನೇರ್ಪಡಿಸಿ ಸನ್ಮಾನಿಸಿದರು. ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರು ಸ್ವಾಗತಿಸಿದರು. ಡಾ. ಪಿ. ಜಿ. ಆಚಾರ್ಯರು ಅತಿಥಿಗಳ ಸಾರ್ವಜನಿಕ ಜೀವನದ ಪರಿಚಯ ಮಾಡಿಕೊಟ್ಟರು. ಡಾ ಟಿ. ಎಂ. ಎ. ಪೈ, ಶ್ರೀ ಟಿ. ಎ. ಪೈ ಅವರು ಶ್ರೀ ಡಾ. ಕೃಷ್ಣರಾಯರ ಕಾರ್ಯದಕ್ಷತೆ, ಸತ್ಯಪ್ರಿಯತೆ ಮೊದಲಾದ ಸದ್ಗುಣಗಳನ್ನು ಕೊಂಡಾಡಿ ಮಾತನಾಡಿದರು. ಡಾ. ಕೃಷ್ಣರಾಯರು ಉತ್ತರವಿತ್ತು ನಗರಸಭೆಯ ರಜತೋತ್ಸವವು ಜಯಶೀಲವಾಗಲೆಂದರು. ಡಾ. ಐತಾಳರು ಕೃತಜ್ಞತೆಗಳನ್ನರ್ಪಿಸಿದರು.

ಶ್ರೀ ಶಿವರಾಮ ಕಾರಂತರಿಗೆ ಸನ್ಮಾನ—ಎಕೆಡಮಿ ಆಫ್ ಜನರಲ್ ಎಜ್ಯುಕೇಶನ್, ಕರ್ನಾಟಕ ಸಂಘ, ರೋಟರಿ ಕ್ಲಬ್ ಮತ್ತು ಎಂ. ಜಿ. ಎಮ್. ಕೊಲೇಜ್ ಭಾಷಾ ಸಂಘದ ಸಂಯುಕ್ತ ಆಶ್ರಯದಲ್ಲಿ ತಾ. 6ರಂದು ಸಾಹಿತ್ಯ ಎಕೆಡೆಮಿಯ ಪಾರಿತೋಷಕವನ್ನು ಪಡೆದ ಶ್ರೀ ಶಿವರಾಮ ಕಾರಂತರನ್ನು ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ಎಂ. ಜಿ. ಎಮ್. ಕೊಲೇಜ್ ಕಟ್ಟಡದಲ್ಲಿ ಸನ್ಮಾನಿಸಲಾಯಿತು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸ್ವಾಗತಿಸಿದ ಮೇಲೆ ಡಾ. ಕೆ. ಎಲ್. ಐತಾಳರು ಸನ್ಮಾನ ಪತ್ರವನ್ನು ಓದಿ ಸಮರ್ಪಿಸಿದರು. ಶ್ರೀಗಳಾದ ಕೆ. ನರಸಿಂಹ ಮೂರ್ತಿ, ನಾರಾಯಣ ಅಯ್ಯಂಗಾರ್, ಶ್ರೀಪತಿ ಆಚಾರ್, ರಾಮಚಂದ್ರ ಮೂರ್ತಿ, ಟಿ. ಎ. ಪೈ ಇವರು ಶ್ರೀ ಕಾರಂತರ ಕುರಿತು ಮಾತನಾಡಿದರು. ಶ್ರೀ ಕಾರಂತರು ಸೂಕ್ತ ಉತ್ತರವಿತ್ತ ಮೇಲೆ ಅಧ್ಯಕ್ಷ ಡಾ. ಪೈಗಳು ಶ್ರೀ ಕಾರಂತರ ಶಕ್ತಿ, ಪ್ರತಿಭೆಗಳನ್ನು ಕೊಂಡಾಡಿ ಮಾತನಾಡಿದರು. ಈ ಸಮಾರಂಭದ ವ್ಯವಸ್ಥೆಗಾಗಿ ಶ್ರಮಿಸಿದ ಶ್ರೀ ಕು. ಶಿ. ಹರಿದಾಸ ಭಟ್ಟರು ಧನ್ಯವಾದಗಳನ್ನಿತ್ತರು.

ರೋಟರೀ ಕ್ಲಬ್ಬಿನಲ್ಲಿಯೂ ಶ್ರೀ ಕಾರಂತರನ್ನು ಅದೇ ದಿನ ರಾತ್ರಿ ಗೌರವಿಸಿ ಸನ್ಮಾನಿಸಲಾಯಿತು. ಅಧ್ಯಕ್ಷ ಡಾ. ಟಿ. ಎಂ. ಎ ಪೈಗಳು ಸ್ವಾಗತಿಸಿದ ಬಳಿಕ ಡಾ. ಸಿ. ಆರ್. ನಾಯ್ಕರು ಹಿತವಚನಗಳನ್ನಾಡಿದರು. ಶ್ರೀ ಟಿ. ಎ ಪೈಗಳು ಶ್ರೀ ಕಾರಂತರ ಪರಿಚಯ ಭಾಷಣ ಮಾಡಿದರು. ಶ್ರೀ ಕಾರಂತರು ಇಂಗ್ಲಿಷ್‌ನಲ್ಲಿ ಕನ್ನಡದಂತೆಯೇ ಮನನೀಯ ಭಾಷಣ ಮಾಡಿದರು. ಅಧ್ಯಕ್ಷರ ಸಮಾರೋಪ ಭಾಷಣವಾದ ಬಳಿಕ ಕಾರ್ಯದರ್ಶಿ ಸಿ. ರಮೇಶ ಪೈಗಳು ಧನ್ಯವಾದವಿತ್ತರು.

ಉಡುಪಿಯ ಸರಕಾರಿ ಆಸ್ಪತ್ರೆಗೆ-ಮಂಗಳೂರು ಕಾರ್ಕಳದಂತೆ ಒಬ್ಬರು ಪಾರ್ಟ್ ಟೈಮ್ ದಂತ ವೈದ್ಯರನ್ನು ನೇಮಿಸಿದರೆ ಬಡ ಬಗ್ಗರಿಗೆ ಚಿಕಿತ್ಸೆಯ ಸೌಕರ್ಯವನ್ನು ಒದಗಿಸಿದಂತಾಗುವುದೆಂದೂ ಈ ಕುರಿತು ಸರಕಾರ ಯೋಗ್ಯಕ್ರಮ ಕೈಗೊಳ್ಳಬೇಕೆಂದೂ ಮಹಾನೀಯರೊಬ್ಬರು ತಿಳಿಸುತ್ತಾರೆ.

ಮೆನೇಜರ ಸಂಘದ ಸಭೆ- ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಆಡಳಿತ ಮಂಡಳಿಯ ಸಭೆಯು ತಾ. 27—2—60ರಲ್ಲಿ ಜರಗಿ ಇಲಾಖಾಧಿಕಾರಿಗಳು ಶಿಷ್ಟಮಂಡಳಕ್ಕೆ ಬೆಂಗಳೂರಲ್ಲಿ ಆಶ್ವಾಸನೆ ಕೊಟ್ಟಮೇರೆಗೆ ತಾ. 31-5-59ರ ಹಿಂದೆ ಕೆಲಸಕ್ಕೆ ಸೇರಿದ್ದು ಅನಂತರ ಯಾವ ಕಾರಣದಿಂದಲಾದರೂ ತಡೆಯಲ್ಪಟ್ಟ ಅಧ್ಯಾಪಕರ ಗ್ರಾಂಟನ್ನು ಫೈನಲ್ ಗ್ರಾಂಟಿನಲ್ಲಿ ಕೂಡಿಸುವರೇ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಕೂಡಲೇ ಹುಕುಂ ಕಳಿಸುವಂತೆ ಸಂಘದ ಪ್ರಸಿಡೆಂಟರು ಡೈರೆಕ್ಟರರಿಗೆ ಬರೆಕೊಳ್ಳಬೇಕೆನ್ನುವ ಇತ್ಯಾದಿ ನಿರ್ಣಯಗಳಾದವು.

ವಾರ್ಷಿಕೋತ್ಸವಗಳು— ನಿಟ್ಟೂರು ಹಿರಿಯ ಬುನಾದಿ ಮತ್ತು ಪ್ರೌಢ ಪ್ರಾಥಮಿಕ ಶಾಲೆಯ ವರ್ಷಾಂತ್ಯೋತ್ಸವವು ತಾ. 28ರಂದು ಶ್ರೀ ಪಿ. ಎನ್. ಕೃಷ್ಣಮೂರ್ತಿರಾಯರ ಹಿರಿತನದಲ್ಲಿ ನಡೆಯಿತು. ಶಾಲೆಯ ವರದಿಯನ್ನು ಮುಖ್ಯೋಪಾಧ್ಯಾಯರು ವಾಚಿಸಿದರು. ಅಧ್ಯಕ್ಷರು, ಶಾಲೆಯು ಸಾಧಿಸಿದ ಪ್ರಗತಿಯನ್ನು ಕೊಂಡಾಡಿ, ಮಾತನಾಡಿದರು. ಶ್ರೀ ಪಿ. ಹಯವದನ ಭಟ್ಟರು ಸ್ವಸ್ತಿವಾಚನವನ್ನು ಮಾಡಿದರು.

ಮರುದಿನ, ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಉಡುಪಿ ಸಂಸ್ಕೃತ ಕಾಲೇಜಿನ ಸಾಹಿತ್ಯ ಪ್ರಾಧ್ಯಾಪಕರಾದ ಶ್ರೀ ಕೆ. ಹರಿದಾಸ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯದರ್ಶಿ ಶ್ರೀ ಎಫ್. ಎಕ್ಸ್ ಕರ್ನೇಲಿಯೊ ಅವರು ವರದಿ ಓದಿದರು. ಶ್ರೀ ಎ. ವರದರಾಜ ಬಲ್ಲಾಳರು ಶುಭಕೋರಿ ಮಾತಾಡಿದರು. ಎರಡೂ ದಿನ ವಿವಿಧ ವಿನೋದಾವಳಿ ಮತ್ತು ನಾಟಕಗಳು ಅಭಿನಯಿಸಲ್ಪಟ್ಟುವು.

ಎಂ. ಜಿ. ಎಂ. ಕಾಲೇಜು ದಿನಾಚರಣೆಯು—ಇದೇ ತಾ. 3ರಲ್ಲಿ ಲೈಫ್ ಇನ್ಶೂರೆನ್ಸ್ ಕೊರ್ಪೋರೇಶನಿನ ಉಡುಪಿ ಡಿವಿಜನಿನ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಕರೆಸ್ಪೋಂಡೆಂಟ್ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣಮಾಡಿದ ಬಳಿಕ ಶ್ರೀ ಎಚ್. ವಾಸು ಶೆಟ್ಟರು ಮಾಡಿದ ಸ್ವಸ್ತಿವಾಚನಕ್ಕೆ ಪ್ರೊ. ಎಚ್. ಕೆ ರಾಮಚಂದ್ರ ಮೂರ್ತಿಯವರು ಉತ್ತರಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ಕೋಲೇಜಿನ ಅಭಿವೃದ್ಧಿಪರ ವರದಿಯನ್ನು ಓದಿದರು. ಶ್ರೀಮತಿ ಟಿ. ಆರ್. ಎ. ಪೈಗಳು ಬಹುಮಾನ ಹಂಚಿದರು. ಅಧ್ಯಕ್ಷರು ಉತ್ತಮ ವ್ಯಕ್ತಿತ್ವ, ರಚನಾತ್ಮಕ ಕೆಲಸ, ಕರ್ತವ್ಯನಿಷ್ಠತೆಯ ಕುರಿತು ಭಾಷಣವಿತ್ತರು.

ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ತಾ. 28—2—60ರಲ್ಲಿ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ದಿವಂಗತ ಎ. ಬಿ. ಶೆಟ್ಟರ ಸ್ಮಾರಕ ರಚನೆಗಾಗಿ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಗೆ ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟರನ್ನೂ ಕೆ. ಶಂಕರಾಳ್ವರನ್ನೂ ವ್ಯವಸ್ಥಾಪಕರನ್ನಾಗಿ ಚುನಾಯಿಸಲಾಯಿತು. ತಾ. 3-4-60ಕ್ಕೆ ಸಂಘದ ಮಹಾಸಭೆಯನ್ನು ಪುತ್ತೂರಲ್ಲಿ ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದಾಯಿತು. ಶಿರ್ವ ಹಿಂದೂ ಹೈಸ್ಕೂಲನ್ನು (ಸಂಘಕ್ಕೆ ತೆಗೆದುಕೊಳ್ಳುವ ಕುರಿತು ವಿಷಯ ಪರಿಶೀಲನೆಗಾಗಿ ಉಪಸಮಿತಿಯೊಂದನ್ನು ರಚಿಸಲಾಯಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. I. A. No. 50/60.
O. S. No. 278/56.

ಬಿಪಾತುಮ್ಮ — ಅರ್ಜಿದಾರಳು.
ಪಾತುಂಞಿ ಕೂಡಾ — ಎದ್ರಿರು.
1ನೇ ಎದ್ರಿ ಪಾತುಂಞಿ, ಪಿಲಿಗುಂಡಿ ಬ್ಯಾರಿಯ ವಿಧವೆ.
2ನೇ ಎದ್ರಿ ಹಸನಾರ ಬ್ಯಾರಿ. 3ನೇ ಎದ್ರಿ— ಮಮ್ಮುಂಞಿ ಬ್ಯಾರಿ ಪಿಲಿಗುಂಡಿ ಬ್ಯಾರಿಯ ಮಕ್ಕಳು — ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಜಾಲಗದ್ದೆ ಎಂಬಲ್ಲಿ.

—ಇವರಿಗೆ ತಿಳಿಯಪಡಿಸುವುದೇನೆಂದರೆ ಡಿಕ್ರಿಗೆ ಜವಾಬ್ದಾರಿ ಇರುವ ಆಸ್ತಿಯನ್ನು ಏಲಂ ಪಡಿಸುವರೇ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರಳು ದಾಖಲು ಮಾಡಿದ ಈ ಅರ್ಜಿಯು ತಾ 16—3—60ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿ ಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao.
Vakil for Petitioner.
ಪುತ್ತೂರು ತಾ. 28-2-60

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—
ನ ವ ಯು ಗ ಪ್ರೆಸ್, ಉ ಡು ಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಾರುಚಯನ

ಧ್ರುವ ಏಕೀಭವನ

ಮಂತ್ರಿ ಮತ್ತು ಅಧಿಕಾರಿಗಳ ಸಚ್ಚರಿತ್ರಪಾಲನೆಗೊಂದು "ಅನುಚಿತ ವ್ಯವಹಾರ ಪರಿಶೀಲನಾಸಮಿತಿ" ರೂಪಧಾರಣೆ ಮಾಡುವುದರಲ್ಲಿದೆ.

ಮಂತ್ರಿಗಳು ಮತ್ತಿತ್ತರ ಉಚ್ಚವರ್ಗದ ಅಧಿಕಾರಿಗಳ ವಿರುದ್ಧವಾಗಿ ಬರಬಹುದಾದ ಅಪವಾದನೆಗಳ ಬಗ್ಗೆ ವಿಚಾರಣೆ ನಡೆಯಬೇಕೆಂದು ಲೋಕಸಭೆಯ ಕಾಂಗ್ರೆಸ್ ಪಕ್ಷ ಒತ್ತಾಯ ಹೇರಿತಂತೆ.

ಆ ಸಮಿತಿಯು ಅಪಾದನೆಗಳನ್ನು ಪರಿಶೀಲಿಸಿ ಪ್ರಧಾನಿಯವರಿಗೆ ಉಚಿತವಾದ ಸಲಹೆ ನೀಡಬೇಕೆಂದು ಅಭಿಪ್ರಾಯಪಡಲಾಯಿತಂತೆ. ಮಂತ್ರಿಗಳು ಯಾವರೀತಿ ನಡೆದುಕೊಳ್ಳಬೇಕು ಎಂಬುದನ್ನೆಲ್ಲಾ ವಿವರಿಸುವ ನಿಯಮಗಳನ್ನೂ ಪ್ರಧಾನಿಯವರು ಮಾಡಬೇಕೆಂದು ಪಕ್ಷವು ಕೇಳಿಕೊಂಡಿತಂತೆ.

ಹೀಗೆ ಮಾಡುವುದರಿಂದ ಮಂತ್ರಿಗಳು ಸಚ್ಚರಿತ್ರರೂ ಉಚ್ಚ ಅಧಿಕಾರಿಗಳು ಸಜ್ಜನರೂ ಆಗುವರೆಂದು ಕಾಂಗ್ರೆಸ್ ಪಕ್ಷ ವಿಶ್ವಾಸಕಾಳಿರುವುದೆಂಬುದು ನೂರು ನಯೇಪೈಸೆ ಸತ್ಯ.

ಸುಮಾರು ಎರಡು ವರ್ಷಗಳಿಗೆ ಮೊದಲು ಶ್ರೀ ಸಿ. ಡಿ. ದೇಶಮುಖರು ಲಂಚ ನಿರೋಧ ಸಮಿತಿಯನ್ನು ಸ್ಥಾಪಿಸಬೇಕೆಂದು ಸೂಚಿಸಿದಾಗ ಪಥ್ಯವಾಗದೆ ಹೋದರೂ ಒಂದು ಸಣ್ಣ ಸಮಿತಿಯನ್ನಾದರೂ ನೇಮಿಸಿ ಅದಕ್ಕೆ ಈಯೆಲ್ಲ ವಿಚಾರವನ್ನು ಪಕ್ಷದ ಹಿನ್ನಲೆಯಲ್ಲಿ ಪರಿಶೀಲಿಸುವ ಅಧಿಕಾರವನ್ನು ನೀಡುವುದು ಪರ್ಯಾಲೋಚನೀಯ ವಿಷಯವೆಂದು ಪ್ರಧಾನಿ ನೆಹರೂ ಮೊದಲು ಘೋಷಿಸಿದರು; ತದನಂತರ ಕಾಂಗ್ರೆಸ್ ಅಧ್ಯಕ್ಷರೂ ತಲೆದೂಗಿದರು.

ಮಂತ್ರಿಗಳ ನಡವಳಿಕೆಯ ಬಗ್ಗೆ ನಿಯಮಾವಳಿ ರಚಿಸಬಹುದಾದರೂ ಅದರಲ್ಲಿ ಎಲ್ಲವನ್ನೂ ಸೇರಿಸುವುದು ಕಷ್ಟಸಾಧ್ಯವೆಂದು ಶ್ರೀ ನೆಹರು ಹೇಳಿದ್ದಾರೆ.

'ನಿಯಮಾವಳಿ' ಯಿರುವ ಸಂಘ ಸಂಸ್ಥೆಗಳೆಲ್ಲವೂ ನಿಯಮಗಳ ಮೇಲೆಯೇ ಕುಸ್ತಿ ಮಾಡುತ್ತಿರುವುದೂ ಅವುಗಳಿಂದ ಜಾರಿಸಿಕೊಳ್ಳಲು ಪ್ರಯತ್ನಿಸುವುದೂ ಸಂಘಗಳ ಅಭಿವೃದ್ಧಿಗಿಂತ ನಿಯಮಕ್ಕೆ ಧಕ್ಕೆ ತಗಲದಂತೆ ತಮ್ಮ ಜೇಬು ತುಂಬಿಸುವ ನವನವೋಪಾಯವನ್ನು ಸಂಶೋಧಿಸುವುದರಲ್ಲೇ ತಮ್ಮ ಮಿದುಳು ಶಕ್ತಿಯನ್ನು ವೆಚ್ಚ ಮಾಡುತ್ತಿರುವುದೂ ಅನುಭವ ವೇದ್ಯ.

ರಾಜ್ಯ ಸರಕಾರಗಳ ಲಂಚ ನಿರ್ಮೂಲನಾ ಸಮಿತಿಯ ಕಾರ್ಯಕಲಾಪ, ಮದ್ಯಪಾನ ನಿಷೇಧ ಕಾನೂನಿನ ಕಾರ್ಯಪ್ರಣಾಳಿ, ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಯೋಜನೆ, ಸಾರ್ವಜನಿಕ ಅಭಿವೃದ್ಧಿ ಯೋಜನೆಗಳು ಇತ್ಯಾದಿ ಇತ್ಯಾದಿಗಳು ಯಶಸ್ವಿಯಾಗಿ ಕಾರ್ಯಸಾಧಿಸಿವೆಯೆಂದ. ಸರಕಾರಿ ವಲಯಗಳಷ್ಟೆ ಅಭಿಪ್ರಾಯ ವ್ಯಕ್ತಪಡಿಸಬೇಕೇ ಹೊರತು ಬೇರೆಯವರಲ್ಲ

ಮದ್ಯಪಾನ ನಿಷೇಧ ಕಾಯಿದೆಯು ವ್ಯವಹಾರದಲ್ಲಿದ್ದಂತೆಯೇ 'ಗುಡಿಕೈಗಾರಿಕೆ'ಯ ರೂಪದಲ್ಲಿ ದಿನೇ ದಿನೇ ಬಲಯುತ್ತಿರುವ ಮದ್ಯ ವ್ಯವಹಾರ ಅನಧಿಕೃತ ಲೈಸನ್ಸಿನ ಆಧಾರದಿಂದ ಬೃಹತ್ ರೂಪಧಾರಣೆಯನು ಮಾಡಿವೆಯೆಂದು ಕಣ್ಣಿಗೆ ಕಾಣುತ್ತದೆ.

ಆದರೂ ರಾಜ್ಯದಲ್ಲಿಯೂ ದೇಶದಲ್ಲಿಯೂ ವ್ಯವಸ್ಥಾಪನೆ ಪ್ರತಿಬಂಧವು ಯಶಸ್ವಿಯ ಪಥದಲ್ಲಿದೆ—ಈ ಬಗ್ಗಿನ ಅಧಿಕಾರಿಗಳು ಸಂತುಷ್ಟರಾಗಿದ್ದಾರೆ.

'ದುರ್ಮಿಶ್ರೀಕರಣ'ವೂ ಅಂಕೆಸಂಖ್ಯೆಗಳಲ್ಲಿ ಇಳಿದಿವೆ. ಜನತೆಯು ಸಜ್ಜನವಾಗುತ್ತ ಬರುತ್ತಿದೆ ಎನ್ನಬೇಕಲ್ಲವೆ? ಇದೇ ಮುಂದುವರಿದು, ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ಭಾರತ—ಎಲ್ಲೆಲ್ಲಿಯೂ ಸಸ್ಯ ಸಂಪತ್ತು, ನದಿಗಳಿಗೆ ಅಣೆಕಟ್ಟು, ಸಂಕಗಳು, ಊರಲ್ಲಿ ಅಂಬರಚರಕ, ಕಾರಖಾನೆಗಳು, ತೀರ್ಥಕ್ಷೇತ್ರಗಳಲ್ಲಿ ಪ್ರವಾಸಿಮಂದಿರಗಳು, ನಿರ್ವಂಚಕ ವ್ಯಾಪಾರಿಗಳು, ಸಾಧು ಸಶೀಲ ಸಜ್ಜನರಾದ ಪ್ರಜೆಗಳು, ಸೇವಾನಿರತರಾದ ಅಧಿಕಾರಿಗಳು, ಕಳ್ಳಕಾಕರ, ಧರೋಡೆಗೋರರ ನಾಮಾವಶೇಷ......ಇತ್ಯಾದಿ ಇತ್ಯಾದಿಗಳು ಕಾಣಿಸಿಕೊಂಡು ಸ್ವತಂತ್ರಭಾರತದ ಸುವರ್ಣಯುಗವು ಸ್ಥಾಪನೆಗೊಳ್ಳುವುದೆಂದು ಭವಿಷ್ಯ ಹೇಳಬಹುದು. ಆಗ ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ಕಂಡಿದ್ದ ಕನಸಿನ ರಾಮರಾಜ್ಯ ನನಸಾಗಿ ಪರಿವರ್ತಿತವಾಗದುಳಿದೀತೆ?

ನಿಯಮಗಳನ್ನೂ ಕಾನೂನುಗಳನ್ನೂ ಮಾಡುವುದು ಸುಲಭವೇ. ಆದರೆ, ಅವುಗಳನ್ನು ವ್ಯವಹಾರಕ್ಕೆ ತರುವಲ್ಲಿ ಸರಕಾರಗಳೇ ಸೋಲುಂಡಿವೆ. ಇನ್ನು ಈ ಪಕ್ಷಗಳು, ರಾಜಕಾರಣದ ಗುಂಗಿನಲಿ ಉಸಿರಾಡ ಹವಣಿಸುವ ಪಕ್ಷಗಳು—ತಮ್ಮ ಅಧಿಕಾರಿಗಳ ಮೇಲೆ ಈ ನಿಯಮಗಳನ್ನು ಹೇರಿ ಅವರನ್ನು ಸಚ್ಚರಿತ್ರರನ್ನಾಗಿ ಮಾಡುವುದು ಪರಿಶೀಲನಾರ್ಹವೆ? ಕಾರ್ಯಕ್ಷಮತಾರ್ಹವೆ?

ಶಿವನೊಲಿದರೆ ಕೊರಡು ಕೊನರುವುದಯ್ಯ, ಶಿವನೊಲಿದರೆ ಬರಡುಹಯನ ಹುದಯ್ಯ ಶಿವನೊಲಿದರೆ ಧ್ರುವಸಂಗಮವಹುದಯ್ಯ, ಶಿವನೊಲಿದರೆ ಮಂತ್ರಿಗಳೂ ಸಚ್ಚರಿತ್ರರಹರಯ್ಯ.
ಆದರೆ, ಶಿವನೊಲಿವನೆ? —ಗೋ.

[illegible]

ಯೋಜನೆಯ ಸಫಲತೆ

(೫ನೇ ಪುಟದಿಂದ)

ಅದನ್ನು ಕಾರ್ಯಾನ್ವಿತವನ್ನಾಗಿ ಮಾಡಬೇಕಾಗುವುದು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ವೈಜ್ಞಾನಿಕ ಸಾಧನೋತ್ಪನ್ನಗಳ ಬಗ್ಗೆ ವಿಶೇಷ ಗಮನವನ್ನೀಯಲಾಗಿದೆ. ರಸಾಯನಿಕ ಗೊಬ್ಬರಗಳನ್ನು ರೈತರಿಗೆ ಸಾಕಷ್ಟು ಒದಗಿಸುವುದರೊಂದಿಗೆ ಬೆಳೆಗಳಿಗೆ ಬರುವ ರೋಗಗಳನ್ನು ತಡೆಗಟ್ಟುವ ಔಷಧೋಪಕರಣಗಳನ್ನು ತೃತೀಯ ಪಂಚವಾರ್ಷಿಕ ಯೋಜನಾಂತ್ಯದೊಳಗೆ ನಾವು ಪಡೆಯಲು ಸಮರ್ಥರಾಗುವೆವು. ಗದ್ದೆಯ ಹೊರತು ಹಳ್ಳಿಗಳಲ್ಲಿ ಔದ್ಯಮಿಕ ರೀತಿಯಲ್ಲಿ ವಿಶೇಷ ಪ್ರಗತಿಯುಂಟಾಗಲಿಲ್ಲ ಮತ್ತು ಹಳ್ಳಿಯ ಜೀವನ ಮಟ್ಟವೇರುವ ವಿಶೇಷ ಗಮನವೀಯಲಾಗಿಲ್ಲ.

೧೯೭೬ರೊಳಗೆ ಹಳ್ಳಿಗಳಲ್ಲಿ ಪ್ರತಿವ್ಯಕ್ತಿಯ ಆದಾಯವು ದ್ವಿಗುಣಿತವಾಗುವುದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಇದರ ಬಗ್ಗೆ ನಾವು ರಚಿಸಬೇಕಾದ ಕಾರ್ಯಕ್ರಮವನ್ನಿಲ್ಲಿ ನಾವು ವಿವರಿಸಿದ್ದೇವೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ವರ್ಷ ೧೭೦ ಕೋಟಿ ರೂಪಾಯಿಗಳನ್ನು ಹಳ್ಳಿಗಳ ಕಾರ್ಯಕ್ರಮಕ್ಕಾಗಿ ಪ್ರತ್ಯೇಕಿಸಿಡಲಾಗುತಿತ್ತು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಣದ ಮೊತ್ತ ೨೨೦ ಕೋಟಿಗೇರಿತು. ಹಳ್ಳಿಗಳಿಗೊದಗಿಸಿದ ವಿದ್ಯುತ್ ರಸಾಯನಿಕ ಗೊಬ್ಬರ ಇತ್ಯಾದಿಗಳ ಲೆಕ್ಕವನ್ನು ಇನ್ನೂ ಮಾಡಿಲ್ಲ. ಮೂರನೆಯ ಮತ್ತು ಅನಂತರದ ಯೋಜನೆಗಳಲ್ಲಿ ಈ ಹಣದ ಮೊತ್ತವು ಇನ್ನೂ ಹೆಚ್ಚಾಗದಿರಲಾರದು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಕ್ಕಿ ಮತ್ತು ಧಾನ್ಯಗಳ ಬೆಳೆಯ ಬಗ್ಗೆ ತೀವ್ರ ಲಕ್ಷ್ಯವನ್ನೀಯಲಾಗುವುದು. ನಾಲ್ಕನೆಯ ಮತ್ತು ಐದನೆಯ ಯೋಜನೆಗಳಲ್ಲಿ ಸಂರಕ್ಷಣಾತ್ಮಕ ಗೊಬ್ಬರ, ಎಣ್ಣೆಬೀಜಗಳು, ತೋಟದ ಬೆಳೆಗಳ ಉದ್ಯೋಗಕ್ಕೆ ಬೇಕಾದ ಕಚ್ಚಾವಸ್ತುಗಳ ಬಗ್ಗೆ ವಿಶೇಷ ಗಮನವನ್ನೀಯಲಾಗುವುದು.

ನಮ್ಮ ಮಹತ್ವಾಕಾಂಕ್ಷಾಪೂರ್ಣ ಗುರಿಯು ನಮ್ಮ ಆರ್ಥಿಕ ವ್ಯವಸ್ಥೆಯ ಬಗ್ಗೆ ತೀಪ್ರಾವಶ್ಯಕವಾಗಿದೆ. ಜಿಲ್ಲೆಯಲ್ಲಿ ಪ್ರಶಾಸನ ವಿತರಣೆಯಂತಹ ಒಂದು ಪದ್ಧತಿಯ ಸಂಘಟನೆಯನ್ನು ಮಾಡಲಾಗುವುದು. ಅವರ ಮೂಲಕವಾಗಿ ಆವಶ್ಯಕ ವಸ್ತುಗಳನ್ನು ಹಳ್ಳಿಗರಿಗೆ ಒದಗಿಸಿಕೊಡಲಾಗುವುದು. ಸರಕಾರಿ ಮತ್ತು ಸರಕಾರೇತರ ಜನರು ಹೆಗಲಿಗೆ ಹೆಗಲೇರಿಸಿ ನಮ್ಮ ಯೋಜನೆಯು ಪೂರ್ಣಯಶಸ್ವಿಯಾಗುವಂತೆ ಯತ್ನಿಸಬೇಕು. ಜನರು ತಮ್ಮದೇ ಯೋಜನೆಯೆಂದು ತಿಳಿದುಕೊಳ್ಳುವುದವಶ್ಯವಾಗಿದೆ.

ನಾವಿಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ವರ್ಷ ೨೦೦ ಕೋಟಿ ರೂಪಾಯಿಗಳ ಉತ್ಪತ್ತಿ ನಮಗೆ ಬರುವಂತಾಗಬೇಕೆಂಬ ಸೂಚನೆಯನ್ನೀಯುವೆವು. ಇದರ ಅಭಿಪ್ರಾಯವೇನೆಂದರೆ ಹಳ್ಳಿಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ವ್ಯಕ್ತಿಯು ೫೦೦ ರೂಪಾಯಿಗಳ ಉತ್ಪತ್ತಿಯನ್ನು ಮಾಡಬೇಕೆಂಬುದೇ ಆಗಿದೆ. ಬಡತನವನ್ನು ನಮ್ಮಿಂದ ದೂರೀಕರಿಸಲು ಸಾಮಾಜಿಕ ಉನ್ನತಿಯಾಗಬೇಕೆಂಬುದೇ ಲೋಕ ತಾಂತ್ರಿಕ ಯೋಜನಾ ನಿರ್ಮಾಣದ ಸಾರವಾಗಿದೆ. ನಮ್ಮ ದೇಶದ ಮುಂದೊದಗಿದ ಕಠಿಣ ಪರಿಸ್ಥಿತಿಯನ್ನೆದುರಿಸುವ ಕೆಲಸವನ್ನು ಬಹುಃಪ್ರಯಾಸದಿಂದಲೇ ನಾವು ಮಾಡಬೇಕಾಗಿದೆ.

—ಯೋಜನಾ

NAVAYUGA WEEKLY
(Estd in 1921)
ADVERTISEMENT RATES
Display Advertisements:— Rs. 2-8/ per column inch for contracts of 100" or more and Rs. 3/-per column inch for casual advertisements.
Classified Advertisements:— As. 8/- per line (minimum 8 lines).
For rates for advertising in colours and special positions please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಕಥಾವಿಹಾರ:

(೩ನೇ ಪುಟದಿಂದ)

ದೊಡ್ಡ ಸರಕಾರೀ ಹುದ್ದೆಗಳು ದೊರಕಿವೆ ತಮ್ಮ ತಮ್ಮ ಹೆಂಡಂದಿರ ಕೊರಳಿಗೆ ಮಂತ್ರಿಗಳು ಚಿನ್ನಾಭರಣ ಮಾಡಿಸಿ ಹಾಕಿರುವರು. ನನ್ನ ಅನೇಕಾನೇಕ ಶಿಷ್ಯರ ಮೇಲೆ ನನಗಿದ್ದ ನಂಬಿಕೆ ಹಾರಿಹೋಗಿದೆ... ಹೆಚ್ಚಿನವರೆಲ್ಲಾ ಸ್ವಾರ್ಥಿಗಳು. ಇಂದು ಅಧಿಕಾರಿಗಳು ಬಡ ಜನತೆಯೊಂದಿಗೆ ಬೆರೆಯದೆ ಪ್ರತ್ಯೇಕವಾಗಿದ್ದಾರೆ. ತಮ್ಮ ಅಧಿಕಾರ ಮದ ಇವರೆಲ್ಲರನ್ನು ಅಂಧರನ್ನಾಗಿ ಮಾಡಿದೆ." ಗಾಂಧೀಜಿಯವರ ವಾದಸರಣಿ ನಿರಾತಂಕವಾಗಿ ಒಂದೇಸಮನೆ ಹರಿಯತೊಡಗಿತು. ನಾನು ಮಂತ್ರಮುಗ್ಧನಂತೆ ಕೇಳುತ್ತಾ ಇದ್ದಿದ್ದೆ. ನಡುವೆ ಒಮ್ಮೆ ಬಾಯಿಹಾಕಿ, "ಗಾಂಧೀಜಿ, ನೀವು ನಮ್ಮ ಸ್ವತಂತ್ರ ಸರಕಾರದ ಹುಳುಕುಗಳನ್ನು ಮಾತ್ರ ಎತ್ತಿತೋರಿಸುತ್ತಿರುವಿರಿ. ನಮ್ಮ ಸರಕಾರ ಎರಡು ಯೋಜನೆಗಳನ್ನು ತಯಾರಿಸಿ ದೇಶದಲ್ಲಿ ವ್ಯಾವಸಾಯಿಕ ಹಾಗೂ ಔದ್ಯೋಗಿಕ ಪ್ರಗತಿಯನ್ನು ಸಾಧಿಸಿಲ್ಲವೇ?" ಎಂದು ಕೇಳಿದೆನು.

"ಹಂ! ಹಂ! ಇದೆಂತಹ ಪ್ರಗತಿ? ಪಂಚವಾರ್ಷಿಕ ಯೋಜನೆಗಳ ಹೆಸರಿನಲ್ಲಿ ದೇಶದ ಹಣದ ದುರ್ವ್ಯಯ ನಡೆದಿದೆ. ಮಂತ್ರಿಗಳ, ಅಧಿಕಾರಿಗಳ ಕಿಸೆ ತುಂಬಿದೆ. ಬಾಳಾ, ಹತ್ತು ರೂಪಾಯಿ ಖರ್ಚಾಗುವಲ್ಲಿ ನೂರು ರೂಪಾಯಿ ಖರ್ಚುಮಾಡಿ, ಅಲ್ಪ ಸ್ವಲ್ಪ ಕೆಲಸ ನಡೆದರೆ ಅದು ಪ್ರಗತಿಯೇ? ಉಳಿದ ಹಣವೆಲ್ಲಿಹೋಯಿತು? ಕಂಟ್ರಾಕ್ಟದಾರರ ಕಿಸೆಗಲ್ಲವೇ? ಕಂಟ್ರಾಕ್ಟದಾರರು ಲಕ್ಷಾಧಿಪತಿಗಳಲ್ಲದೆ ಇನ್ನಾರು? ಇಂದು ಶ್ರೀಮಂತರು ಮತ್ತಿಷ್ಟು ಶ್ರೀಮಂತರಾಗುತಿದ್ದಾರೆ. ಬಡವರು ಇನ್ನಷ್ಟು ಬಡವರಾಗುತಿದ್ದಾರೆ. ಮಧ್ಯಮ ವರ್ಗ ಸಂಪೂರ್ಣ ನಾಶವಾಗುತ್ತಿದೆ."

"ಇಂದಿನ ಶಾಸಕರಲ್ಲಿ ಹೆಚ್ಚಿನವರು ಸ್ವಾರ್ಥ ಸಾಧಕರು. ಚುನಾವಣೆಯಲ್ಲಿ ಜಯಿಸಲು ತರತರದ ಸೋಗನ್ನು ಹಾಕಿಕೊಳ್ಳುತ್ತಾರೆ. ನನ್ನ ಹೆಸರಿನ ಅನುಚಿತ ಲಾಭವನ್ನು ಪಡೆಯುತ್ತಾರೆ. ಜನರಿಗೆ ತರತರದ ಆಶ್ವಾಸನೆಗಳನ್ನು ಕೊಟ್ಟು ಅವರ ಓಟನ್ನು ಗಿಟ್ಟಿಸಿಕೊಂಡು, ಚುನಾವಣೆಯಲ್ಲಿ ಗೆದ್ದ ಬಳಿಕ ಮತದಾರರ ಮುಖಾವಲೋಕನ ಕೂಡಾ ಮಾಡುವುದಿಲ್ಲ. ಬಡ ಜನತೆಯೆಂದರೆ ಮೂಗುಮುರಿವ ಇವರು, ಅವರನ್ನು ಇನ್ನಷ್ಟು ಮೆಟ್ಟಿ ಕೆಳ ತುಳಿಯುವ ಇವರು, ಚುನಾವಣೆಯ ಕಾಲದಲ್ಲಿ ಬಡವರ ಬಂಧುಗಳೆಂದು ಕರೆದುಕೊಳ್ಳುತ್ತಾರೆ. ಜಯಗಳಿಸಿದನಂತರ ತಾವು ಕೊಟ್ಟ ಆಶ್ವಾಸನೆಗಳ ನೆನಪೇ ಇವರಿಗಿರುವುದಿಲ್ಲ. ಹಣವನ್ನು ಕೊಟ್ಟು ಮತಗಳಿಸುವವರ ಸಂಖ್ಯೆಯೂ ಇಂದು ಕಡಿಮೆಯಿಲ್ಲ. ಶಾಸನಸಭೆಗಳಿಗೆ ಆರಿಸಲ್ಪಟ್ಟವರು ತಮ್ಮ ಸಂಬಳವನ್ನು ಏರಿಸಿಕೊಳ್ಳುವ ಯತ್ನ ನಡೆಸುವರಲ್ಲದೆ ತಮಗಿಂತ ಅದೆಷ್ಟೆಷ್ಟೋ ಕಡಿಮೆ ಸಂಬಳ ಪಡೆದು ಜೀವನ ನಿರ್ವಹಣೆಯೇ ಕಷ್ಟವಾಗಿ ಒದ್ದಾಡುತ್ತಿರುವ ಬಡ ಅಧ್ಯಾಪಕರ, ಗುಮಾಸ್ತೆಯರ, ಕೂಲಿಕಾರರ ಸಂಬಳವೇರಿಸಲು ಇವರು ಯತ್ನಿಸುವುದಿಲ್ಲ. ಎಲ್ಲರೂ ವೇಷಧಾರಿಗಳೇ. ಖಾದಿಯ ಅಂಗಿ ಧರಿಸಿ, ಒಳಗಿನಿಂದ ಸಿಲ್ಕಿನ ಬನಿಯನ್ ಧರಿಸುವ ಕಪಟಿಗಳ ಸಂಖ್ಯೆ ಅದೆಷ್ಟಿಲ್ಲ! ಇವರು ನನ್ನ ಶಿಷ್ಯರೆಂದು ತಮ್ಮನ್ನು ತಾವೇ ಕರೆದುಕೊಳ್ಳುತಿದ್ದಾರೆ. ಇವರು ಮಾಡದ ಅನ್ಯಾಯ, ಅತ್ಯಾಚಾರಗಳಾವುವಿವೆ? ಇದು ನನ್ನ ಹೆಸರಿಗೆ ಅಪಚಾರವಲ್ಲವೇ? ಇಂತಹ ಶಾಸಕರ ಕೈಯಲ್ಲಿರುವ ಭಾರತದ ಭವಿಷ್ಯವೇನಾಗುವುದೆಂದು ಹೇಳಲಾರೆ....

"ಬಾಳಾ ಸ್ವತಂತ್ರ ಭಾರತವು ಅವನತಿಯ ಪಥದಲ್ಲಿ ಮುನ್ನಡೆಯುತ್ತಿದೆಯೆಂಬುದಕ್ಕೆ ಸಾವಿರಗಟ್ಟಲೆ ನಿದರ್ಶನಗಳನ್ನು ಕೊಟ್ಟು ಗಂಟೆಗಟ್ಟಲೆ ಮಾತನಾಡಬಹುದು. ಆದರೆ.... ಈ ದೋಷಗಳನ್ನು ದೂರ ಮಾಡುವ ಬಗೆ ಎಂತು? ನನಗೊಂದೂ ಹೊಳೆಯದು. ಭಾರತದ ಭವಿಷ್ಯದ ಕುರಿತು ಚಿಂತಿಸಿದಂತೆಲ್ಲಾ ಕತ್ತಲೆಯೇ ಕಾಣಬರುವುದು." ಎಂದು ಹೇಳಿದಾಗ ನಿಟ್ಟುಸಿರೊಂದು ಕೇಳಿಬಂತು.

"ಬಾಪೂ, ನೀವಿಷ್ಟು ನಿರಾಶಾವಾದಿಗಳೇಕಾಗಿದ್ದೀರಿ? ಕತ್ತಲನ್ನು ದೂರೀಕರಿಸುವ ಸೂರ್ಯ ಮೂಡಿಯೇ ಮೂಡುತ್ತಾನೆ. ನಿಸ್ಸಾರ್ಥಮನಸ್ಸಿನಲ್ಲಿ ಕವಿದ ನಿರಾಶೆಯ ಕಾರ್ಮೋಡಗಳನ್ನು ಚದುರಿಸುವ ಮಾರುತ, ಬೀಸಲಿದೆ. ಹಗಲು—ರಾತ್ರಿ, ಕತ್ತಲು—ಬೆಳಕು, ಇವು ಇದ್ದೇ ಇವೆ ಅಂತೆಯೇ ಒಂದು ಜನಾಂಗದ ಜೀವನದಲ್ಲಿ ಉನ್ನತಿ ಅವನತಿಗಳೆರಡೂ ಇದ್ದೇ ಇವೆ'. ಎಂದು ಧೈರ್ಯ ಮಾಡಿ ಹೇಳಿಯೇ ಬಿಟ್ಟೆ.

"ಬಾಳಾ, ನಿನ್ನಷ್ಟು ಆಶಾವಾದಿಯಾಗಿ ನಾನು ಉಳಿದಿಲ್ಲ. ಇಂದಿನ ಪರಿಸ್ಥಿತಿ ನೋಡುವಾಗ —....ಅಯ್ಯೋ, ಏನು ಹೇಳಲಿ.... ಭಾರತದ ಭಾಗ್ಯವಿಧಾತನು ಕಣ್ತೆರೆಯಲೆಂದೇ ಹಾರೈಸುತ್ತಿದ್ದೇನೆ. ನೀನಿನ್ನು ಹೋಗು.......ಹೋಗಿ ಭಾರತದಾದ್ಯಂತ ಸಾರು....ಗಾಂಧೀಜಿಯ ಆತ್ಮಕ್ಕೆ ಶಾಂತಿ ದೊರೆಯಲಿಲ್ಲ.......ಅವರಾತ್ಮವಿಂದು ದು:ಖವಿಹ್ವಲವಾಗಿದೆ. ಅವರ ಜನ್ಮದಿನ, ಪುಣ್ಯತಿಥಿಗಳನ್ನು ಸಂಭ್ರಮದಿಂದ ಆಚರಿಸಿ ಅವರಾತ್ಮಕ್ಕೆ ಶಾಂತಿ ಕೋರಿದರೆ, ಅವರಾತ್ಮಕ್ಕೆ ಶಾಂತಿ ದೊರೆಯದು. ಅವರ ಆದರ್ಶಗಳ ಪರಿಪಾಲನೆಯನ್ನು ಮಾಡಿ ಅವರ ಭವ್ಯಭಾರತದ ನಿರ್ಮಾಣದ ಕನಸನ್ನು ನೆನಸುಮಾಡಿದರೆ ಮಾತ್ರ ಅವರಾತ್ಮಕ್ಕೆ ಶಾಂತಿ ದೊರಕೀತು. ಇಲ್ಲದಿದ್ದರೆ ನನ್ನಾತ್ಮಕ್ಕೆ ಶಾಂತಿಯಿಲ್ಲ. ನೀನಿನ್ನು ಹೋಗು ಬಾಳಾ, ನಾನು ಹೇಳಿದಂತೆ ಮಾಡು."

"ಆಗಬಹುದು ಬಾಪೂ", ಎಂದು ನಾನು ಸಮಾಧಿಗೆ ಅಡ್ಡಬಿದ್ದು ನಮಸ್ಕಾರ ಮಾಡಿದೆ. ಅಷ್ಟರಲ್ಲಿ 'ಧಡಾಲ್' ಎಂಬ ಶಬ್ದವಾಯಿತು. ನಾನು ಮಂಚದಿಂದ ಕೆಳಗೆ ಬಿದ್ದಿದ್ದೆ. ಆದರೆ ಪುಣ್ಯವಶಾತ್ ವಿಶೇಷ ಪೆಟ್ಟೇನೂ ಆಗಿರಲಿಲ್ಲ. ಆಗಲೇ ನನಗೆ ನಾನು ಸ್ವಪ್ನ ಪ್ರಪಂಚದಲ್ಲಿ ವಿಹರಿಸುತಿದ್ದುದೆಂದು ತಿಳಿದದ್ದು.

—ಶ್ರೀ ಪಾ. ಚಂದ್ರಶೇಖರ ಚಡಗ,
ಪಾಂಡೇಶ್ವರ.

ಶಿಸ್ತು ಸಂವರ್ಧನೆ

ರಾಷ್ಟ್ರೀಯ ಶಿಸ್ತುಸಂವರ್ಧನಾಯೋಜನೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರದ ಆಸಕ್ತಿಯುತ ಕಾರ್ಯಕ್ರಮ.

ವಿದ್ಯಾರ್ಥಿಗಳಲ್ಲಿ ಶಿಸ್ತು ಅಳಿದಿದೆ, ಅದನ್ನು ಸಂವರ್ಧಿಸಿಕೊಳ್ಳಬೇಕು ಎಂಬ ಮಾತು ಇತ್ತೀಚಿಗೆ ಭಾರತದಲ್ಲಿ ಸರ್ವಸಾಮಾನ್ಯವಾಗಿಬಿಟ್ಟಿದೆ. ಆದರೆ, ಬೆಕ್ಕಿನ ಕುತ್ತಿಗೆಗೆ ಗಂಟೆ ಕಟ್ಟುವವರಾರು ಎಂಬುದು ಅನಿರ್ಧಾರ ಸ್ಥಿತಿಯಲ್ಲೇ ಅವಸಾನಗೊಂಡಂತೆ ಶಿಸ್ತು ಬೆಳೆಯಬೇಕಾದರೆ ಏನು ಮಾಡಬೇಕು ಎಂಬುದನ್ನು ಸಂಪೂರ್ಣವಾಗಿ ನಾವು ತಿಳಿದುಕೊಂಡಿಲ್ಲ. ವಿದ್ಯಾರ್ಥಿಗಳಲ್ಲಿ ಅಶಿಸ್ತು ಕಾಣಿಸಿಕೊಂಡಿರುವುದಕ್ಕೆ ವಿದ್ಯಾಸಂಸ್ಥೆಗಳ ವ್ಯವಸ್ಥಾಪಕರೂ ಅಧ್ಯಾಪಕರೂ ಜತೆಗೆ ವಿದ್ಯಾರ್ಥಿಗಳ ಹೆತ್ತವರೂ ಕೂಡಿಯೇ ಕಾರಣರಾಗುತ್ತಾರೆ ಇವರು ಮೂವರು ಏಕಮನಸ್ಕರಾದರೆ, ವಿದ್ಯಾರ್ಥಿಗಳನ್ನು ಒಂದು ಉತ್ತಮ ಆದರ್ಶದತ್ತ ಕೊಂಡೊಯ್ಯುವುದು, ಆ ಗುರಿಯನ್ನು ಅವರು ಮುಟ್ಟುವಂತೆ ನೋಡಿಕೊಳ್ಳುವುದು ಖಂಡಿತಕ್ಕೂ ಸಾಧ್ಯವಿದೆ.

ಆದರೆ, ಇದಕ್ಕೆ ತುಂಬ ಪ್ರಯಾಸವಿದೆ. ಈ ಮೂರು ಮುಖಗಳೂ ಒಂದೆಡೆ ನೋಡುವಕಾಲ ಬಹುದೂರವಿದೆಯೆಂಬುದು ಭಾಸವಾಗುತ್ತದೆ. ಆದರೂ ಶಿಸ್ತು ವರ್ಧನೆಯ ಪ್ರಧಾನ ಕಾರ್ಯವನ್ನು ನಾವು ಇನ್ನೂ ಹೆಚ್ಚುಕಾಲ ಮರೆತುಬಿಡುವಂತಿಲ್ಲ. ಇದಕ್ಕಾಗಿ ಭಾರತ ಸರಕಾರದವರು ತುಂಬ ಪರಿಶ್ರಮ ಪಡುತಿದ್ದಾರೆ. ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ಶಿಸ್ತು ಸಂವರ್ಧನೆಯ ಒಂದು ಯೋಜನೆಯನ್ನು ಸೇರಿಸಲಾಗಿದ್ದು, ತನ್ಮೂಲಕ ಎಳೆಯ ಮಕ್ಕಳಿರುವಾಗಲೇ ಅವರಿಗೆ ಉತ್ತಮವಾದ ನಾಗರಿಕ ಪದ್ಧತಿಯ ತರಬೇತಿಯನ್ನು ನೀಡುವ ಕೆಲಸ ಭರದಿಂದ ಸಾಗುತ್ತಿದೆ.

ರಾಜಸ್ಥಾನ, ಬಿಹಾರ, ಬೊಂಬಾಯಿ ಪಂಜಾಬರಾಜ್ಯಗಳು, ಮತ್ತು ಡಿಲ್ಲಿ ಪ್ರದೇಶದಲ್ಲಿರುವ ೨೬೬ ಶಾಲೆಗಳ ಸುಮಾರು ೨,೬೦,೦೦೦ ವಿದ್ಯಾರ್ಥಿಗಳಿಗೆ ಈ ಯೋಜನೆಯನ್ವಯ ಅವಶ್ಯಕ ತರಬೇತಿಯನ್ನು ೧೯೫೯-೬೦ರಲ್ಲಿ ಕೊಡಲಾಗುತ್ತಿದೆ. ಈ ಮೊದಲು ಬೊಂಬಾಯಿ, ಪಶ್ಚಿಮ ಬಂಗಾಳ, ಪಂಜಾಬ, ಜಮ್ಮು ಮತ್ತು ಕಾಶ್ಮೀರ ಮಧ್ಯ ಪ್ರದೇಶ, ಉತ್ತರ ಪ್ರದೇಶ, ದಿಲ್ಲಿಗಳ ೨,೬೦,೦೦೦ ವಿದ್ಯಾರ್ಥಿಗಳಿಗೆ ಇಂತಹ ತರಬೇತಿಯನ್ನು ನೀಡಲಾಗುತ್ತಿದೆ.

ಇದೇ ರೀತಿಯಲ್ಲಿ ಇನ್ನು ಮುಂದಕ್ಕೂ ವಿದ್ಯಾರ್ಥಿಗಳಿಗೆ ಪ್ರಾರಂಭಿಕ ವೇಳೆಯಲ್ಲಿಯೇ ನಾಗರಿಕ ಶಿಕ್ಷಣವನ್ನಿತ್ತು, ಅವರು ಶಿಸ್ತಿನಿಂದ ಕೂಡಿಕೊಂಡು ರಾಷ್ಟ್ರದ ಯಶಸ್ಸಿಗೆ ಕಾರಣರಾಗುವಂತೆ ಮಾಡುವ ಯೋಜನೆಯು ಎ. ಸಿ. ಸಿ. ಮತ್ತು ಕಾಲೇಜುಗಳಲ್ಲಿನ ಎನ್. ಸಿ. ಸಿ. ಗಳ ಉದ್ದೇಶವೂ ಇದೇ ಆಗಿದೆ. ಇದೇರೀತಿಯಲ್ಲಿ ಈ ರಾಷ್ಟ್ರೀಯ ಶಿಸ್ತು ಯೋಜನೆಯನ್ನು ದಕ್ಷಿಣ ಭಾಗಕ್ಕೂ ಅನ್ವಯಿಸುವ ಆಲೋಚನೆಯಿರುವುದು. ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಮುನ್ನಡೆದ ಪಕ್ಷದಲ್ಲಿ, ವಿದ್ಯಾರ್ಥಿಗಳಲ್ಲಿ ಈಗ ಕಾಣಬರುವ ಅಶಿಸ್ತು ದೂರವಾಗಬಹುದೆಂದು ನಿರೀಕ್ಷಿಸಲಾಗುತ್ತಿದೆ.

ನವದೆಹಲಿಯ ಶಾಲೆಯೊಂದರಲ್ಲಿ ಪ್ರಾತ:ಕಾಲದ ವ್ಯಾಯಾಮದಲ್ಲಿ ವಿದ್ಯಾರ್ಥಿಗಳು ನಿರತರಾಗಿದ್ದಾರೆ.

ಅನುಭವ

(೩ನೇ ಪುಟದಿಂದ)

"ಜನಮರುಳೋ ಜಾತ್ರೆಮರುಳೋ" ಎಂಬಂತೆ ಹತ್ತಿದರು, ನೋಡಿದರು; ಆಡಿದರು. ಮುಂದೆ ಓದುವ ಪ್ರಸಂಗ ತಾನೆ? ಅದಕ್ಕೂ ತೊಡಗಿತು. ಈ ಭರಾಟೆಯಲ್ಲಿ ಪಾಪದ ಹುಡುಗಿಯೊಬ್ಬಳು ಅದರ ಕಹಿಯನುಭವಗಳನ್ನು ಅನುಭವಿಸಬೇಕಾಗಿ ಬಂದಿತು.

ಆ ಹುಡುಗಿ ಶಾರದೆಯೆಂಬಾಕೆ. ಎಲ್ಲರೂ ಸಮಾನ ಕಕ್ಷೆಯವರು ಆದುದರಿಂದಲೇ ಸಮವಯಸ್ಕರೆಂದು ಬೇರೆ ಹೇಳಬೇಕಾಗಿಲ್ಲ. ಆಕೆಯ ಪ್ರಕೃತಿಯೆಂತಿತ್ತೆಂದು ನಾನರಿಯೆನು. ಆದರೆ, ನಡೆದ ಘಟನೆಯ ಆಧಾರದಿಂದ ಹೇಳುವುದಾದರೆ, ಆಕೆ ತುಸು ಸಂಶೋಧಕಬುದ್ಧಿಯವಳಿರಬಹುದು; ಇಲ್ಲವೇ ದುಡುಕಿನವಳಿರಲೂ ಸಾಕು. ಆಕೆ ಬಂಡೆಕಲ್ಲಿನ ಒಂದು ಪಕ್ಕಕ್ಕೆ ಹೋದಳು; ಮೆಲ್ಲನೆ ಇಣಿಕಿ ನೋಡಿದಳು. ಅಲ್ಲೇನಿದೆ? ಶುದ್ಧ ಪ್ರಪಾತದಂತೆ ಕಡಿದಾಗಿದೆ ಬಂಡೆ! ಅಲ್ಲಲ್ಲಿ ನಡುನಡುವೆ ಅಸ್ತಿತಪ್ಪಿ ಬೆಳೆದಿದ್ದ ಮುಳ್ಳಿನ ಗಿಡಗಳು! ಮೇಲ್ಗಡೆಯಿಂದ ದುರ್ದೈವವಶದಿಂದ ಉರುಳಿಬಿದ್ದ ಪಕ್ಷದಲ್ಲಿ, ಆತನ ಎಲುಬುಗಳು ಕೂಡ ಪುಡಿ ಪುಡಿ ಯಾಗುವಷ್ಟು ಆಳವಾದ ಇಳಿ! ಈ ರೀತಿಯ ಭಯಾನಕ ಸನ್ನಿವೇಶಗಳು ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಇರಬಹುದು; ಇಲ್ಲವೆಂದನ್ನುವಂತಿಲ್ಲ; ಆದರೆ, ಅಂತಹ ಎಡೆಗಳಲ್ಲಿ ಜಾಗರೂಕತೆಯನ್ನು ವಹಿಸುವುದರಿಂದ ನಡೆಯ ಬಹುದಾದಿ ದುರ್ಘಟನೆಗಳನ್ನು ತಪ್ಪಿಸಬಹುದು

ಶಾರದೆ ತಾನೀ ವಿಲಕ್ಷಣ ದೃಶ್ಯವನ್ನು ಕಂಡುದು ಮಾತ್ರವಲ್ಲದೇ, ತನ್ನ ಸ್ನೇಹಿತೆಯರಿಗೂ ಅದರ ಪ್ರಪಾತತೆಯನ್ನು ತೋರಿಸುವ ಕುತೂಹಲದಿಂದ ಅವರ ಕೈ ಹಿಡಿದು ಎಳೆದುಕೊಂಡು ಬಂದಳು. ಅದೇನು ಆಕೆಯ ದುರದೃಷ್ಟವೊ,ಅಥವಾ ಕರೆದುತಂದಆನಂದನು ಹತಭಾಗ್ಯನೋ,ಶಾರದೆಯ ಕಾಲು ಉರುಳಿಯೇ ಬಿಟ್ಟಿತು. ಕೈ ಕೊಸರಿಕೊಂಡ ಜತೆಯಾಕೆ'ಅಯ್ಯಯ್ಯೋ' ಎಂದು ಅರಚಿದಳು. ವಿಲಕ್ಷಣ ಕೂಗನ್ನು ಆಲಿಸಿದ ಆನಂದ ಸಮೀಪಕ್ಕೆ ಧಾವಿಸಿ ಬಂದು ಇಣಿಕಿ ನೋಡುತ್ತಾನೆ, ಶಾರದೆ ಪ್ರಪಾತದ ಕೆಳಗಿನ ಕಲ್ಲುಮುಳ್ಳುಗಳ ನಡುವೆ ಉರುಳಿ ಹೋಗುತಿದ್ದಾಳೆ; ಮಾಡುವುದೇನು? ನೋಡುವುದೇನು? ಆನಂದನಿಗೆ ಆ ಬಂಡೆ ಹೊಸತಾಗಿರಲಿಲ್ಲ; ಎಲ್ಲಿ ಹೋದರೆ, ಏನಿದೆಯೆಂಬುದರ ಸಂಪೂರ್ಣ ಅರಿವಿದ್ದವ. ಆತ ಒಂದರೆಕ್ಷಣದಲ್ಲಿಯೇ ಪಕ್ಕಕ್ಕೆ ತಿರುಗಿ, ಹುಡುಗಿಯ ರಕ್ಷಣೆಗಾಗಿ ಧಾವಿಸಿದನಂತೆ ಅದು ಹೇಗೆ ಹೋದನೋ ಸ್ವತಃ ಆವನಿಗೂ ತಿಳಿದಿರಲಾರದು; ಹುಡುಗಿಯ ಕೈ ಒಂದೆರಡು ಬಾರಿ ಆತನಿಗೆ ಸಿಕ್ಕಿ ಜಾರಿತು; ಮುಳ್ಳಿನೆಡೆ ಸಿಕ್ಕಿದ್ದ ಉಡೆಯೂ ಕೈಗೆ ಬಂದಿತು; ಕೊನೆಗೆ ಆದು ಹೇಗೋ ಏನೋ ಹುಡುಗಿಯ ಲಂಗದ ಆಧಾರದಿಂದ, ಅದೂ ಹರಿದು ಹೋಗಿತ್ತು, ಆಕೆ ಆನಂದರ ಕೈಯೊಳಗೆ ಮುಳ್ಳಿನ ಗಿಡದೆಡೆಯಲ್ಲಿ ಸಿಕ್ಕಿ ಬಿದ್ದಳು. ಮುಂದೆ ಜಾಗ್ರತೆಯಾಗಿ ಆಕೆಯನ್ನು ಎತ್ತಿತಂದರೆ, ಪಾಪ, ಅವಳ ತಲೆ, ಕೈ ಮೈಯೆಲ್ಲವೂ ನೆತ್ತರಿಂದ ತೊಯ್ದು ಹೋದಿತ್ತು. ಇದನ್ನು ಕಂಡ ಆನಂದನ ಜೀವವು ಹಾರಿಹೋದಂತಾಯಿತು. ತನ್ನ ಕೈಯಾರೆ ಇಂತಹ ಅಪರಾಧವಾಯಿತೆಂದಾತ ಮರುಗಿದ; ಆದರೆ, ಏನು ಮಾಡುವುದು ತಾನೇ ಸಾಧ್ಯವಿತ್ತು? ಆದುದು ಆಗಿಹೋಯ್ತು; ನಿಜವೇ; ಮುಂದಿನ ಪರಿಣಾಮದ ಬಗ್ಗೆ ಯೋಚಿಸಿದರೆ, ಮೈ ನವಿರೇಳುತಿತ್ತು.

ಹುಡುಗಿಯೇನೋ ಸದ್ಯ ಬದುಕಿ ಉಳಿದಳು. ಆನಂದನಿಗೆ ಅದೇ ಒಂದು ಆನಂದವಾಗಿತ್ತು. ಆದರೆ, ರಾತ್ರೆಯ ಹೊತ್ತು ಆನಂದನ ಮೈ ಬಿಸಿಯೇರಿತು; ತಲೆಯ ಕಾವು ಅತಿಯಾಯಿತು; ಆತ ಹಾಸಿಗೆಯಲ್ಲೇ ಹುಚ್ಚುಚ್ಚಾರೆ ಆಡತೊಡಗಿದ. ಈ ಬಗ್ಗೆ ಪರಿಶೋಧನೆಯನ್ನು ಮನೆಯವರು ನಡೆಸಿದರು. ನಡೆದ ಘಟನೆ ಅವರಿಗೂ ತಿಳಿಯಿತು, ಅದಾವ ಉಪನಾಮಗಳನ್ನು ಆತನಿಗವರು ಅಂಟಿಸಿದ್ದರೋಆನಂದನಿಗರಿಯದು.ಅಂತೆಯೇ ಶಾರದೆಯ ತಾಯ್ತಂದೆಯರೂ ಆಕೆಯೊಡನೆ ಆನಂದನನ್ನೂ ಅಂದುಕೊಂಡಿರಬೇಕು. ಮಕ್ಕಳ ಮನಸ್ಸು ಸದಾ ಚಂಚಲವಾದುದು. ಇರ್ವರಿಗೂ ತಮ್ಮ ಮೈಯಪರಿವೆಯಿದ್ದಂತೆ ತೋರಲಿಲ್ಲ. ಒಬ್ಬಾಕೆ ನಿಜವಾಗಿ ದುರ್ಘಟನೆಗೆ ಗುರಿಯಾದರೆ ಇನ್ನೊಬ್ಬ ಆದರ ಪಾಪದ ಫಲವನ್ನು ಅನುಭವಿಸುತಿದ್ದ.

ಒಂದು ವಾರದ ತರುವಾಯ ಅವರಿಬ್ಬರೂ ಪುನಃ ಶಾಲೆಯಲ್ಲಿ ಭೆಟ್ಟಿಯಾದರು. ಆದರೆ, ಅವರ ನಡವಳಿಕೆಯಲ್ಲಿ ಭಿನ್ನತೆಯು ಗೋಚರಿಸ ತೊಡಗಿತ್ತು. ಈ ಮೊದಲುಅನ್ಯೋನ್ಯರಾಗಿದ್ದ ಅವರಿಬ್ಬರನ್ನು ಈ ಘಟನೆಯು ಸಂಪೂರ್ಣವಾಗಿ ಪ್ರತ್ಯೇಕಿಸಿಯೇ ಬಿಟ್ಟಿತು. ಅಂದು ಕಡಿದುಹೋದ ಅವರ ಸಂಬಂಧ ಮತ್ತೆ ಕುದುರಲು ಪುನಃ ಎಳೆಂಟು ವರ್ಷಗಳು ಕಳೆಯಬೇಕಾಯಿತು.

ಶಾರದೆಯು ಬೆಳೆದು ದೊಡ್ಡವಳಾದಳು ಆಕೆಯ ವಿವಾಹದ ದಿನವೂ ನಿಶ್ಚಿತವಾಯಿತು. ಅವಳು ಪತಿಗೃಹಕ್ಕೆ ಹೊರಟು ನಿಂತಳು. ಆಕೆಯ ಕಣ್ಣುಗಳು ಯಾರನ್ನೋ ಅರಸುವಂತಿದ್ದುವು. ಅದನ್ನು ತಿಳಿದ ಆನಂದ ಪಕ್ಕದಿಂದ ಸರಿದು ಮುಂದೆ ನಿಂತ. ಶಾರದೆ ಆತನ ಪಾದಗಳಿಗೆ ಬಿದ್ದು ಗೋಣಾಗಿದಳು ಮುಗ್ಧ ಕಂಠ ಸ್ನಿಗ್ಧ ನೇತ್ರಗಳಿಂದ—"ಅಣ್ಣ, ಅಂದು ನೀನಿಲ್ಲದಿರುತಿದ್ದರೆ, ನಾನು ಇಂದು ಇರುತ್ತಿರಲಿಲ್ಲವೆನ್ನಿಸುತ್ತದೆ. ಸಾವಿನ ದವಡೆಯಿಂದ ನನ್ನ ಮರಳಿ ತಂದ ನಿನ್ನ ನಾನು ಯಾವಜ್ಜನ್ಮವೂ ಮರೆಯಲಾರೆ".

ಆನಂದ ತುಂಬಿಬರುತಿದ್ದ ಲೋಚನಗಳನ್ನು ಒತ್ತಿ ಉತ್ತರಿಸಿದ.'ಶಾರದೆ,ಅಂದು ನಾನಿಲ್ಲದಿರುತಿದ್ದರೆ, ನೀನು ಆ ಘಟನೆಗೆ ತುತ್ತಾಗುತ್ತಲೂ ಇರಲಿಲ್ಲ." ಇವರಿಬ್ಬರ ಮಾತುಕತೆ ಸಾಗುತಿದ್ದಂತೆಯೇ ಶಾರದೆಯ ತಾಯ್ತಂದೆಯರೂ ಅಲ್ಲಿ ಕಾಣಿಸಿಕೊಂಡರು. ವಿಷಯವನ್ನು ಅರ್ಥಮಾಡಿಕೊಂಡ ಇವರು ಆನಂದನತ್ತ ಕೃತಜ್ಞತೆಯ ಭಾವವನ್ನು ಹರಡಿದರು. ಎಂದೋ ಸಲ್ಲಬೇಕಾಗಿದ್ದ ಅದು ಇಂದು ಸಂದಾಯವಾಯಿತು.

ಪ್ರಕೃತಿಯ ಮಡಿಲಲ್ಲಿ ಆದೆಷ್ಟೊ ಘಟನೆಗಳು ನಡೆಯುತ್ತವೆ. ಮೇರು ಹಿಮಾಲಯಗಳನ್ನು ಏರಹೋಗಿ ಸಾವಿಗೀಡಾದ ಅನೇಕಾನೇಕ ವೀರ ಪರ್ವತಾರೋಹಿಗಳನ್ನು ಪ್ರಪಂಚವಿಂದು ಮರೆತುಬಿಟ್ಟಿದೆ. ವಿಶಾಲ ಸಾಗರದಲ್ಲಿ ಅಪಘಾತಕ್ಕೀಡಾಗಿ ಅದೆಷ್ಟೊ ನಾವಿಕರು ಕಾಲಗರ್ಭದಲ್ಲಿ ಲೀನರಾಗಿದ್ದಾರೆ. ಅನಂತಾಕಾಶಯಾನದಲ್ಲಿಪರಂಧಾಮವನ್ನೈದಿದ, ಬಹುಮಂದಿಯಿದ್ದಾರೆ, ಅವರಲ್ಲಿ ಬದುಕುಳಿದವರೂ ಇಲ್ಲವೆಂದಲ್ಲ. ನಾನು ತಿಳಿದುಕೊಂಡ ಈ ಘಟನೆಯೊಂದು ಅಸಮಾನವಾದುದು ಎಂದು ಹೇಳುವಂತಿಲ್ಲ. ಆದರೆ, ಪ್ರಕೃತಿಯ ಸವಿ ಚೆಲುವಿನೆಡೆಯಲ್ಲಿ ಅದೆಂತಹ ಭಯಾನಕತೆಯಿರುವುದೆಂಬುದನ್ನು ತಿಳಿಸುವ ಸಲುವಾಗಿ ಹೇಳಿದೆನಷ್ಟೆ, "ದೂರವಿರುವ ಬೆಟ್ಟವೆಲ್ಲ ತೋರುತಿಹವು ನುಣ್ಣಗೆಂದು" ಎಂಬ ಮಾತು ಅದೆಷ್ಟು ಅರ್ಥಪೂರ್ಣವಾಗಿದೆ!

ಆನಂದ— ಶಾರದೆಯರ ಅದೃಷ್ಟ ನೆಟ್ಟಗಿತ್ತು. ಅವರು ಕಾಲನ ದವಡೆಯಿಂದ ಉರುಳಿ ಬದುಕಿ ಬಂದರು. ಇಲ್ಲವಾದರೆ, ಆ ಗಿರಿಗಳ್ಲಿನ ಪ್ರಪಾತದ ನಡುವಿನ ಅನಂತಾವಕಾಶದಲ್ಲಿ ಎಂದೋ ಐಕ್ಯರಾಗಿ ಹೋಗುತಿದ್ದರು!

ಇದನ್ನು ಹೇಳಿದ ಆನಂದ ನನಗೆ ಮಾರ್ಗದರ್ಶನ ಮಾಡುತ್ತ ಮುಂದುವರಿದ. ನಾವೂ ಎಚ್ಚರವಾಂತು ಅವನನ್ನು ಹಿಂಬಾಲಿಸಿದೆ. ನಿಜವಾಗಿಯೂ ನನ್ನ ಆ ಸಂದರ್ಶನ ಅನಿರೀಕ್ಷಿತವಾಗಿತ್ತು; ಅದು ನನ್ನ ಮೇಲೆ ಅನಿರೀಕ್ಷಿತ ಪರಿಣಾಮವನ್ನೂ ಬೀರಿತು. ಸೃಷ್ಟಿಯ ವೈಚಿತ್ಯದ ಒಂದು ಮುಖದ ಪರಿಚಯವನ್ನೂ ಮಾಡಿಕೊಟ್ಟಿತು. ಜೀವನ ನಶ್ವರವಿರಬಹುದು; ಸೌಂದರ್ಯ ನಶ್ವರವೆನಿಸಬಹುದು; ಆದರೆ, ನಾಕಂಡ ಆ ಸೃಷ್ಟಿಸೌಂದರ್ಯ, ಪಡೆದ ಅನುಭವ ಅಲೌಕಿಕವಾದುದು; ಸುಶಾಶ್ವತವಾದುದು ಎಂದು ಖಂಡಿತ ಹೇಳಬಲ್ಲೆ.

— ಗೋರಾ.



ಪರ್ವತ ಪ್ರದೇಶದಲ್ಲಿ ಭೂ ಸೇನೆಗಳಿಗೆ ಸಹಾಯನೀಡಬಲ್ಲ ನೂತನ ಮಾದರಿಯ ಪರೀಕ್ಷೆಗೆ ಒಳಪಟ್ಟ ಬ್ರಿಟಿಷ ಹೆಲಿಕಾಪ್ಟರ್‌ವೊಂದು ಆಕಾಶೋಡ್ಡಾಣದಲ್ಲಿ ನಿರತವಾಗಿದೆ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಹರಟೆ:

ಹೂ ಮತ್ತು ನಾನು

'ಅರ್ಧಾಂಗ'ನಾಗಿದ್ದಾಗ ಹೂವೆಂದರೆ ದ್ವೇಷಿಸುತ್ತಿದ್ದ ನನ್ನ ಮನೋಭಾವ 'ಅರ್ಧಾಂಗಿ' ಸಹಿತನಾದ ಮೇಲೆ ಒಂದು ದಿನ ಬದಲಾಯಿಸಿತು.

ಹೂ ಎಂದರೆ ಹುಂಕರಿಸುವವನು ನಾನು. ಕೆಂಪು ಹೂ ಆದರೆ ನನ್ನ ಕಣ್ಣು ಅದಕ್ಕಿಂತ ಹೆಚ್ಚು ಕೆಂಪಾಗುತ್ತಿತ್ತು. ಬಿಳಿ ಹೂವಾದರೆ ಕಟಕಟಕಟಾಂತ ನನ್ನ ಬಿಳೀ ಹಲ್ಲನ್ನು ಚೆನ್ನಾಗಿ ಕಡಿದು ಕೋಪಕಾರುತ್ತಿದ್ದೆ. ಹೂವಿನ ಹೆಸರು ಕೇಳಿದರೇ ನನಗೆ ಎಲ್ಲಿಲ್ಲದ ಕೋಪಬರುತ್ತಿತ್ತು. ಕುರಿ ಮಾನವರು ಹೂವಿಗೆ ಕೊಡುವ ಮರ್ಯಾದೆ ನೋಡಿ, ಕವಿಗಳು ಇಲ್ಲದ್ದೆಲ್ಲ ಕೂಡಿಸಿ ಹೂಗಳನ್ನು ಬಣ್ಣಿಸುವ ಬಗೆಯನ್ನು ಓದಿ ನನಗೆ ಬರುತ್ತಿದ್ದ ಸಿಟ್ಟು ಅಷ್ಟಿಷ್ಟಲ್ಲ; ಹುಲ್ಲಿಗಿಂತಲೂ ಕೀಳು ಹೂವಿನ ಬಾಳು. ಒಂದೆರಡು ಗಂಟೆಯೊಳಗೇ ಬಾಡಿಬಿದ್ದು ಮಣ್ಣು ಪಾಲಾಗಿ ಹೋಗುವ ಆ ಹೂವಿನಿಂದ ನಮಗೇನು ಪ್ರಯೋಜನಾ ಅಂತ? ಹುಲ್ಲಾದರೂ ಪಶುಗಳ ಹಸಿವನ್ನು ನೀಗಿಸಿ ಸಾರ್ಥಕವಾಗುತ್ತದೆ. ಹೂವಿಗೆ ಅಂತಹ ಸ್ಥಾನವೂ ಇಲ್ಲ. ಏನೋ ಪಾಪಾಂತ ಅವುಗಳ ಪಾಡಿಗೆ ಅವುಗಳನ್ನು ಬಿಡುವುದು ಬಿಟ್ಟು, ಹರಿದು ಹಾರಮಾಡಿ ತಲೇ ಮೇಲಿಟ್ಟು ದೇವರಿಗೇರಿಸಿ— ಚಿಃ ಚಿಃ! ಇಲ್ಲದ ಮಹತ್ವಕೊಟ್ಟು ಹೂವನ್ನು ಆಕಾಶಕ್ಕೇರಿಸಿದ್ದಾರೆ ಮಾನವರು! ಯಾವ ಮಹಾರಾಯ ಆದರ್ಶನಾದನೋ! ಈ ಕುರಿ ಮಾನವರಿಗೆ ವಿಜ್ಞಾನಿಯನ್ನು ಕೇಳಿ; ಹೂಗಳು ಅವುಗಳ ಪಾಡಿಗೆ ಅವುಗಳ ವಂಶವೃದ್ಧಿಗೆ ಪ್ರಕೃತಿ ದೇವಿ ಹುಟ್ಟಿಸುತ್ತಾಳೆಯೇ ಹೊರತು ನಮಗಾಗಿ ಅಲ್ಲವೇ ಅಲ್ಲ. ತಮ್ಮ ಬೇರೆ ಬೇರೆ ಬಣ್ಣಗಳಿಂದ, ಪರಿಮಳಗಳಿಂದ ಜೇನುನೊಣಗಳನ್ನು ಆಕರ್ಷಿಸಿ, ಆ ಮೂಲಕವಾಗಿ ಹೂಗಳು ವನಸ್ಪತಿಗಳ ವಂಶಾಭಿವೃದ್ಧಿ ಮಾಡಿಕೊಳ್ಳುತ್ತವೆ. ಬೇಕಾದರೆ ನಾವು ಮಾನವರು ಅವುಗಳನ್ನು ದೂರದಿಂದಲೇ ನೋಡಿ ಸಂತೋಷಪಟ್ಟರಾಯಿತಲ್ಲ! ಕ್ಷಣಿಕ ಭ್ರಾಂತಿಗಾಗಿ ಅವುಗಳ ಕೊಲೆಯನ್ನು ನಾವು ಕೈಯಾರೆ ಮಾಡಬಹುದೆ? ಅಹಿಂಸಾತತ್ವಕ್ಕೂ ಇದು ವಿರೋಧವಲ್ಲವೆ?

ಇದನ್ನು ಕೇಳಿ ನನ್ನ ಮೇಲೆ ಹರಿಹಾಯ್ದುಬೀಳುವ ಭಕ್ತಾದಿಗಳಿಗೆ 'ನೀವೆಲ್ಲಾ ಮೂಢಭಕ್ತರೆಂದೇ' ನಾನು ಮೇಜುಗುದ್ದಿ ಹೇಳಬಲ್ಲೆ. ಎಲ್ಲರೂ ಜ್ಞಾನಿಗಳೆಂದೊಪ್ಪುವ ಪುರಂದರ ದಾಸರೇ ಹೇಳಿದ್ದಾರೆ: 'ಹೂ ಅರಳಿದಕೂಡಲೇ ವಾಯು ದೇವರು ಅದರ ವಾಸನೆಯನ್ನು ದೇವರಿಗೊಯ್ದು ಮುಟ್ಟಿಸುತ್ತಾನೆ', ಎಂದು. ಅಂದ ಮೇಲೆ ನಾವು ದೇವರಿಗೆ ಪುಷ್ಪಾರ್ಚನೆ ಮಾಡುವುದರಲ್ಲಿ ಅರ್ಥವಿದೆಯೆ? ನಮ್ಮಿಂದಲೇ ದೇವರು ಹೂಗಳ ಸುಖವನ್ನು ಅನುಭವಿಸಬೇಕೆಂದು ನಂಬುವುದು ದೇವರನ್ನೇ ಕೀಳ್ತರಗತಿಗೆ ತಂದಹಾಗಾಗುವುದಿಲ್ಲವೆ?

ನನಗೆ ಬುದ್ಧಿ ತಿಳಿದಂದಿನಿಂದಲೇ ನಾನು ಹೂವಿನ ವಿಷಯದಲ್ಲಿ ಕಣ್ಣಿಟ್ಟಿದ್ದೇನೆ. ಯೋಜನೆ ಮಾಡತೊಡಗಿದ್ದೇನೆ. ಅಂತೆಯೇ ಚಿಕ್ಕಂದಿನಿಂದಲೂ ನಾನು 'ಹೂಗೊಲೆ' ಪಾಪಮಾಡಿದವನಲ್ಲ. ಮಾಡಿದ್ದರೂ ಅದಕ್ಕೆ ನಾನು ಜವಾಬ್ದಾರಿಯಲ್ಲ. ನನ್ನ ಅಕ್ಕ ಒಂದಾಣೆ ಕೊಟ್ಟು 'ಹೋಗಿ ಹೂ ತಾರೊ' ಎಂದು ನನ್ನನ್ನು ಅಟ್ಟಿದ್ದುಂಟು. ಅಣ್ಣನೂ ಪೂಜೆಗೆ ಹೂ ನನ್ನಿಂದ ತರಿಸಿದ್ದುಂಟು. ಆಗೆಲ್ಲಾ ನನಗೆ ಅವರ ಮೇಲೆಯೂ ಹೂವಿನ ಮೇಲೆಯೂ ಕೂಡಿಯೇ ಸಿಟ್ಟುಬರುತ್ತಿತ್ತು.

ನೋಡಿ, ನಿಮ್ಮ ಹಾಗೇ ನಾನೂ ಬೆಳೆದಿದ್ದೇನೆ. ಹೂಗಳನ್ನು ದ್ವೇಷಿಸಿಕೊಂಡೇ ಬೆಳೆದಿದ್ದೇನೆ ಒಂದೇ ಒಂದು ಎಸಳು ಹೂ ಕೂಡಾ ನಾನು ದೇವರಿಗೇರಿಸಿದವನಲ್ಲ. ಆದರೂ ದೇವರೇನೂ ನನ್ನ ಮೇಲೆ ಕೋಪಿಸಿದಂತೆ ಕಾಣಲಿಲ್ಲ. ಬದಲಾಗಿ ಸಂತೋಷಪಟ್ಟಿದ್ದಾನೆ. ನಾನು ಪ್ರತಿವರ್ಷವೂ ಪಾಸಾಗಿದ್ದೇನೆ. ಉನ್ನತ ವಿದ್ಯೆಯನ್ನು ಸಂಪಾದಿಸಿದ್ದೇನೆ. ನಮ್ಮ ಕಾಲೇಜಿನಲ್ಲಿ ನಾನೇ ಫಸ್ಟ್‌ಗ್ರೇಡ್ ಪಾಸಾದವ. ಮತ್ತೀಗ ನಾನು ದೊಡ್ಡ ಅಧಿಕಾರಿಯಾಗಿರುವ ವಿಷಯವಂತೂ ನಿಮಗೆಲ್ಲಾ ಗೊತ್ತೇ ಇದೆ.

ಅಧಿಕಾರಿಗಳಿಗೆ ಹೂಮಾಲೆ ಹಾಕುವುದೊಂದು ಹಾಳಾದ ಪರಿಪಾಟಿ. ನನ್ನ ಹತ್ತಿರ ಅದೆಲ್ಲಾ ನಡೆಯಲಿಲ್ಲ ಬಿಡಿ. ನಾನೂ ಭಾಷಣಕಾರನಾಗಿದ್ದೇನೆ. ಅಧ್ಯಕ್ಷ ಪದವಿ ಅಲಂಕರಿಸಿದ್ದೇನೆ. ತುಂಬಿದ ಸಭೆಯು ಹೂಮಾಲೆ ಹಾಕಲು ಬಂದವರನ್ನು ಹಾಗೆಯೇ ತಡೆದು ನಿಲ್ಲಿಸಿಬಿಟ್ಟಿದ್ದೇನೆ ಆ ಸಭೆಯಲ್ಲಿ ನಾನು ಕೊಡಬೇಕಾದ ಭಾಷಣದ ಬದಲಿಗೆ 'ಹೂಗೊಲೆ'ಯ ವಿಷಯವಾಗಿಯೇ ಭಾಷಣ ಜಡಿದೆ. ಹೂಮಾಲೆಯ

ಪ್ರಖ್ಯಾತ "ಜಾಜ್" ಕ್ಲಾರಿನೆಟ್ ವಾದನಗಾರ ಗುಡ್‌ಮೇನ್ ಮತ್ತು ಪಿಯೋನೋವಾದಕಿಯಾದ ಆತನ ಮಗಳನ್ನೂ ಈ ಚಿತ್ರದಲ್ಲಿ ಕಾಣಬಹುದು.

ವೈಯರ್ಥ್ಯದ ನನ್ನ ಭಾಷಣ ಕೇಳಿ ಎಷ್ಟೋ ಕರಗತ ಮಾಲಾಕಾರರು ಗಡಗಡ ನಡುಗಿಹೋಗಿದ್ದಾರೆ.

ಯಾಕೆ ಕೇಳ್ತೀರಿ—ನನ್ನ ಮದುವೆಯಲ್ಲಿ ಕೂಡಾ ಈ ಹೂ ಮಾಲೆಯ ಅವಾಂತರ ಬಂತೇಬಂತು. ಪುರೋಹಿತರು ನನ್ನ ಕೈಯಲ್ಲಿಯೂ ಹುಡುಗಿಯ ಕೈಯಲ್ಲಿಯೂ ಒಂದೊಂದು ಹೂ ಮಾಲೆಯನ್ನು ಕೊಟ್ಟು ಪರಸ್ಪರ ಹಾಕಿಕೊಳ್ಳಲು ಹೇಳಿದಾಗಲು ನಾನು ಪ್ರತಿಭಟನೆ ಹೂಡಿದೆ. "ಇದಕ್ಕೇನಯ್ಯಾ ಅರ್ಥ ಪುರೋಹಿತರೆ, ಹೂ ಗಳ ಹಾಗೆಯೇ ನಮ್ಮ ದಾಂಪತ್ಯ ಅಲ್ಪಕಾಲ ಬಾಳಬೇಕೆಂದೋ ನಿಮ್ಮ ಅಭಿಪ್ರಾಯ?" ಎಂದು ವಾದ ಮಾಡಿದೆ. ಹೇಗೋ ಒಂದು ರೀತಿಯಾಗಿ ಮದುವೆಯೂ ಮುಗಿತಲ್ಲ.

ಮದುವೆಯಾಯಿತು. ಎಷ್ಟೋ ಆನಂದವನ್ನು ನನ್ನ ಪ್ರಿಯ ಮಡದಿಯಿಂದ ಸೂರೆಮಾಡಬೇಕೆಂದು ಭಾವಿಸಿದೆ. ಏಕೋ ಅವಳ ಮುಖ ಬಾಡಿಕೊಂಡಿತ್ತು. ಬೇಕು ಬೇಕಾದ ಉಡುವ ವಸ್ತು ವಸ್ತ್ರಗಳಿತ್ತರೂ ಅವಳ ಮುಖ ಬಾಡಿಕೊಂಡಿದ್ದಿದ್ದು ಯೇಕೋ?

ಆಕಸ್ಮಿಕವಾಗಿ ಒಂದು ದಿನ ಭಗವಂತ ನನ್ನ ಮನೆಯಲ್ಲೊಂದು ಬಾಂಬು ಸಿಡಿಸಿದ—ಅಲ್ಲಲ್ಲ, ನನ್ನ ಹೃದಯದಲ್ಲಿ ಸಿಡಿಸಿದ. ಆ ದಿನ ನಾನು ಆಕಸ್ಮಿಕವಾಗಿ ಆಫೀಸಿನಿಂದ ಮನೆಗೆ ಬಂದಿದ್ದೆ. ಆಗ ನನ್ನ ಮಡದಿ ತಲೆ ತುಂಬ ಹೂ ಮುಡಿದು ಕೊಂಡು ಅತ್ಯುತ್ಸಾಹದ ಅರಳ್ಮೊಗದಿಂದ ಕನ್ನಡಿನೋಡಿಕೊಂಡು ತಲ್ಲೀನಳಾಗಿದ್ದಳು. ಅವಳ ಕೈಯಲ್ಲಿಯೂ ಹೂ ಗಳಿದ್ದವು. ಅವಳ ಆಗಿನ ಆನಂದದ ಮುಖ, ನನ್ನನ್ನು ಹಾಗೇ ಆಗಸಕ್ಕೆ ಹಾರಿಸಿ ಬಿಟ್ಟಿತು. ಹೃದಯದ ಸಮಸ್ಯೆಯೊಡೆದು ವಿಚಿತ್ರ ಪ್ರಕಾಶ ಬೀರಿತು. ಅವಳ ಹೊರಚೆಲುವೂ ಒಳಚೆಲುವೂ ಸಮರಸವಾಗಿರುವ ನೋಟ. ಸಾಕ್ಷಾತ್ ಭೂಲೋಕ ರಂಭೆ! ನಾನು ಸದ್ದು ಮಾಡದೆ ಹೋಗಿ ಅವಳನ್ನು ... ...

ಕೂಡಲೇ ಅವಳು ಹೆದರಿ ಹೂ ವನ್ನು ದೂರ ಬಿಸುಟಳು. ತಲೆಯ ಹೂದಂಡೆಯನ್ನು ಕಿತ್ತು ಕಿತ್ತು ಒಗೆದಳು. 'ಬೇಡ ಚೇತ! ಮುಡಿ ಮುಡಿ! ನಿನ್ನ ಆನಂದ, ನಿನ್ನಿಂದ ನನ್ನ ಹೃದಯ ಬಯಸುವ ಆನಂದ ಸುಖ ಎಲ್ಲವೂ ಈ ಹೂ ಗಳಲ್ಲಿ ಅಡಗಿರುವುದೆಂದು ಈಗ ತಿಳಿಯಿತು ನೀನು ಹೂ ಮುಡಿಯಲು ಇನ್ನು ನನ್ನ ಅಂಜಿಕೆ ಬೇಡ." ಎಂದೆ. ನಾನೇ ಅವಳ ತಲೆಗೆ ಹೂ ಮುಡಿಸಿದೆ. ಆಗ ಅವಳು ನನ್ನ ಮುಖವನ್ನು ನೋಡಿದ್ದು, ಅವಳ ಸಹಜ ಆನಂದವು ಉಕ್ಕಿದ್ದು ಅದರ ಚೆಲುವನ್ನು ನಾನು ಸವಿದದ್ದು ಹೇಳಲಿಕ್ಕಾಗದು ಬಿಡಿ.

ಅವಳೇ ನನ್ನನ್ನು ದೇವಾಲಯಕ್ಕೆ ಕರೆದೊಯ್ದು ನನ್ನ ಕೈಯಿಂದಲೇ ದೇವರ ಮೇಲೆ ಹೂ ಏರಿಸಿದಳು. "ಓ ದೇವರೆ! ಪ್ರತಿನಿತ್ಯವೂ ಹೂಗಳನ್ನರಳಿಸಿ ಬಾಡಿಸಿ ಮತ್ತೆ ಎಡೆಬಿಡದೆ ಅರಳಿಸುವಂತೆಯೇ ನಮ್ಮನ್ನೂ ನಡೆಸು!' ಎಂದು ಬೇಡಿಕೊಂಡೆ.

ಕ್ಷಮಿಸಿಬಿಡಿ. ಮೊದಲು ನಾನು ಹೇಳಿದ್ದೆಲ್ಲಾ ಅರ್ಧಾಂಗನಾಗಿದ್ದಾಗಿನ ಕ್ರಾಂತಿಕಾರೀ ಪರಿಸ್ಥಿತಿಯಲ್ಲಿ. 'ಅರ್ಧಾಂಗಿ' ಯೊಂದಿಗೆ ಪೂರ್ಣಾಂಗನಾದ ಮೇಲೆ ನಾನೂ ನಿಮ್ಮ ಸಾಲಿಗೇ ಸೇರಿದವನಾದೆ.

—"ನವಗಿರಿನಂದ"

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣದ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪ್ರೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ. ಕಂಪೆನಿ, ಮಂಗಳೂರು—1.

NAVAYUGA REGD. NO. M. 3619 | **UDIPI, THURSDAY** 10—3—1960 | **LICENSE NO. 31** Licensed to Post without Prepayment

<u>ಪರಿಚಯ</u>

ಮಾನವರೆಲ್ಲರ ಕವಿ—ಚೆಕೋವ್

ಮಾನವ ಹೃದಯಸಂವೇದಿ ಸಾಹಿತ್ಯದಿಂದ ವಿಶ್ವಸಾಹಿತಿಗಳ ಗಣನೆಗೆ ಸಂದವನೀತ; ಶಾ, ಟಾಲ್‌ಸ್ಟಾಯ್ ಕೂಡ ಇವನಿಗೆ ತಲೆವಾಗಿದ್ದರು ಎಂದಾಗ ನಾವು.......?

"ನರಳಿದವರೇ ಅರಳಿಯಾರು" — ಎಂದೊಬ್ಬ ಉರ್ದು ಕವಿ ಹಾಡಿದ್ದಾನೆ. ಕಳೆದ ತಿಂಗಳಲ್ಲಿ ಪ್ರಪಂಚದ ಅದ್ಯಂತ ಚೆಕೋವ್‌ರವರ ಶತಮಾನೋತ್ಸವವನ್ನು ಆಚರಿಸಲಾಯಿತು. ಈತ ತನ್ನ ಎಳೆಯ ವಯಸ್ಸಿನಲ್ಲಿಯೇ ಮೃತ್ಯುಮುಖನಾದ. ಆದರೆ, ಈತನ ಅಲ್ಪ ಜೀವಿತಾವಧಿಯು ಅತ್ಯುತ್ತಮ ರೀತಿಯಲ್ಲಿಯೇ ವ್ಯತೀತವಾಗಿತ್ತು. ಓರ್ವ ಕಿರಾಣಿ ಅಂಗಡಿಯೊಡೆಯನ ಮಗನೂ ನೆಲದ ಮಗನ ಮೊಮ್ಮಗನೂ ಆದ ಈತ ಬಡತನವೆಂದರೇನೆಂದು ಸಂಪೂರ್ಣ ಅರಿತಿದ್ದ. ತನ್ನ ವಿದ್ಯಾಭ್ಯಾಸಕ್ಕಾಗಿ ಈತ ನಗೆ ಚಟಕೆಗಳನ್ನು ಬರೆಯಬೇಕಾಗಿತ್ತು. ವೈದ್ಯಕೀಯಲ್ಲಿ ಪದವೀಧರನಾದರೂ ತನಗೆ ಬರವಣಿಗೆಯೇ ಬಟ್ಟೆಯೆಂದಾತ ಕಂಡುಕೊಂಡ. ಆತನು ಬರೆದ ಮೊದಲ ನಾಟಕ ಅಯಶಸ್ವಿಯೆನಿಸಿತು; ಆದರೆ, ಇದೇ ನಾಟಕವನ್ನು ಎರಡನೆಯ ಬಾರಿ ಪ್ರಯೋಗಿಸಿದಾಗ, ಅದು ಯಶಸ್ವಿಯಾಯಿತು ಮಾತ್ರವಲ್ಲ, ಆತನನ್ನು ಲೇಖಕರ ಸಾಲಿನಲ್ಲಿ ಸೇರಿಸುವುದಕ್ಕೂ ಅರ್ಹವಾಯಿತು. ಒಬ್ಬಾಕೆ ಅಭಿನಯ ಕುಶಲಿಯನ್ನು ಆತ ಮದುವೆನಿಂದನು. ಮುಂದೆ, ರಶ್ಯನ್ ಅಕೆಡೆಮಿಯ ಸದಸ್ಯನಾಗಿ ಆಯ್ಕೆಗೊಂಡನು. ಆ ಮೇಲೆ, ಕ್ಷಯ ರೋಗಕ್ಕೆ ಈಡಾಗಿ, ಪಶ್ಚಿಮ ಜರ್ಮನಿಯ ಬ್ಲಾಕ್ ಫಾರೆಸ್ಟ್ ಎಂಬಲ್ಲಿ ಸತ್ತು ಹೋದನು.

ಶೇಕ್ಸ್‌ಪಿಯರನನ್ನು ಮೆಚ್ಚುವವರಲ್ಲಿ ಇಂಗ್ಲಿಷರು ಪ್ರಥಮ ಸ್ಥಾನವನ್ನು ಪಡೆದರೆ, ರಶ್ಯನರು ದ್ವಿತೀಯ ಸ್ಥಾನಕ್ಕೆ ಅರ್ಹರೆಂದು ಹೇಳಲಾಗುತ್ತದೆ. ಚೆಕೋವ್‌ರವರು ಉಳಿದ ರಶ್ಯನರಿಗಿಂತ ಆಂಗ್ಲೇಯರೊಡನೆ ನಿಕಟ ಸಂಬಂಧವಿಟ್ಟುಕೊಂಡಿದ್ದನು. ಶೇಕ್ಸ್‌ಪಿಯರನೆದುರು ಕಿರಿದಾಗಲು ನಿರಾಕರಿಸಿದ ಶಾ ಅಂದಿದ್ದರು: "ನಿನಗಾಗಿ ಒಬ್ಬ ನಾಟಕ ಕುಶಲಿಯಿದ್ದಾನೆ.... ಆತ ನನ್ನನ್ನು ಪ್ರಾರಂಭಿಕನೆಂದು ತಿಳಿದುಕೊಳ್ಳುವಂತೆ ಮಾಡುತ್ತಾನೆ!" ಈತನ ವಶೀಕರಣಕ್ಕೆ ಗುರಿಯಾದವರಲ್ಲಿ ಗಾಲ್ಸ್‌ವರ್ದಿಯೂ ಒಬ್ಬನು. ಈತನು ಮೋಪಸಾಂಟ್ ಮತ್ತು ಒ ಹೆನ್ರಿಯರಂತೆ ಪ್ರಪಂಚದ ಎಲ್ಲ ಭಾಷೆಗಳ ಕಥಾ ಲೇಖಕರಲ್ಲಿ ಅಗ್ರಗಣ್ಯ ಸ್ಥಾನವನ್ನು ಗಳಿಸಿದವನು.

ವಿಶ್ವಸಾಹಿತ್ಯಕ್ಕೆ ಚೆಕೋವ್ ಸಲ್ಲಿಸಿದ ವಿಲಕ್ಷಣ ಸೇವೆಯಾವುದು? ಹಾಸ್ಯ ಮತ್ತು ಮಾನವತೆಗಳಲ್ಲದೇ ಆತನ ಕ್ರೋಢೀಕರಣ, ಅಲಿಪ್ತತೆ, ಪರಿಪುಷ್ಟತೆಗಳು ತಮ್ಮ ಸ್ಥಾನವನ್ನು ಭದ್ರಪಡಿಸಿವೆ. ನಿಜವಾಗಿಯೂ ಚೆಕೋವನದು ಶೀಘ್ರವೇದಿ ಮನಸ್ಸು. ಮಾನವಕುಲದ ಬಗ್ಗೆ ಆತನಲ್ಲಿ ಅಪಾರ ಪ್ರೇಮವಿತ್ತು. ಆದುದರಿಂದ ಆತ ಕುಪಿತನಾಗಿ ಎಲ್ಲಿಯೂ ಉಪದೇಶಿಸಿದ್ದಿಲ್ಲ; ನಿಂದಿಸಿದ್ದಿಲ್ಲ; ಸಾಮಾನ್ಯ ಮಾನವನು ವಿಪತ್ತಿನಲ್ಲಿರುವಾಗ, ಆತನೆಂದೂ ಭಾವನಾಪ್ರಧಾನವಾದ ಕೂಗನ್ನು ಎತ್ತಿದ್ದಿಲ್ಲ. ಬರವಣಿಗೆಗಾರ ಮತ್ತು ಆತನ ವಿಷಯಗಳ ನಡುವೆ ಚೆಕೋವ್ ಸರಿಯಾದ ಪ್ರಭೇದವನ್ನು ಮಾಡಿದ್ದಾನೆ. ಆತ ಒಂದು ಪತ್ರದಲ್ಲಿ "ಜನರಿಗೆ ನೀನು ಜನತೆಯನ್ನು ನೀಡಬೇಕು, ನಿನ್ನನ್ನಲ್ಲ" ಎಂದು ಬರೆದಿದ್ದಾನೆ.

"ಮಾನವನು ಉತ್ತಮನು, ಜೀವನವು ಬದುಕಲು ಯೋಗ್ಯವಾದುದು" ಎಂದಾತ ಸಂಪೂರ್ಣ ವಿಶ್ವಾಸ ತಾಳಿದ್ದ. ಇದರಿಂದಾಗಿಯೇ ಆತನ ವೇದನಾಮಯ ಜೀವನದಲ್ಲಿಯೂ ನಗೆಯ ತೆರೆ ಹರಿದಾಡುತಿತ್ತು. ಮಾನವ ಪ್ರಕೃತಿಯನ್ನು ಯಾವ ಕಡೆ ಮಾತುಗಳನ್ನೂ ಹೇಳದೆ ಆತ ಸುಂದರವಾಗಿ ಹಾಸ್ಯಮಾಡಬಲ್ಲವನಿದ್ದನು.

ಚೆಕೋವ್ ಸದಾ ಹಾಸಪ್ರಿಯನಾಗಿದ್ದನೆಂದಿಲ್ಲ. ಆತ ಕೆಲವಾರು ದುಃಖಾಂತ ಕೃತಿಗಳನ್ನು ಬರೆದಿದ್ದಾನೆ; ಆದರೆ, ಆತನ ಪ್ರತಿಭೆಯು ಈ ದುಃಖಾಂಶಗಳನ್ನೂ ಸಹನಾ ಯೋಗ್ಯವನ್ನಾಗಿ ಮಾಡಿದೆ. ಜೀವನವು ಸುಖ ಅಥವಾ ದುಃಖಗಳಿಗಿಂತಲೂ ಭಿನ್ನವಾದುದೆಂದೂ ಹಿರಿಯದೆಂದೂ ಈತ ಸಾರಿರುವುದರಿಂದ, ಅದು ಒಬ್ಬನ ಹೃದಯವೊಡೆದರೆ, ಅದನ್ನು ಕಡೆಯುವುದಕ್ಕೆ ಎಂದೂ ಬರುವುದಿಲ್ಲ.

ಚೆಕೋವನ ನಾಯಕರು ಇಲ್ಲವೇ ನಾಯಿಕೆಯರು ನಗರ ಅಥವಾ ಗ್ರಾಮಗಳ ಸಾಮಾನ್ಯ ಜನರಾಗಿದ್ದು, ಅವರು ನರಳಬೇಕು; ನರಳಿ ಉಳಿಯಬೇಕು. ಇದರಿಂದವರು ಶಕ್ತಿ ಪಡೆಯಬೇಕು. ಸಂಪತ್ತು, ಅಧಿಕಾರ ಅಥವಾ ಸಾಫಲ್ಯಗಳೇ ಜೀವನದ ಸರ್ವಸ್ವವೆಂದು ತಿಳಿದಿರುವವರನ್ನು ಈತ ತುಸು ಕೈಬಿಟ್ಟಿದ್ದಾನೆ. ಅವರ ವಿಶಿಷ್ಟ ಆಧಾರ ಒಂದುಬಾರಿ ತಪ್ಪಿಹೋಯಿತೆಂದರೆ, ಅವರು ನಾಶವಾದರೆಂದೇ ಚೆಕೋವ್ ಅನ್ನುತ್ತಾನೆ. ಆದರೂ ಕವಿ ಅವರ ಬಗ್ಗೆ ಕರುಣೆ ತೋರುತ್ತಾನೆ, ಅವರು ಆ ರೀತಿಯಾಗಿರುತ್ತಾರೆ, ಸೀಮಿತರಾಗಿರುತ್ತಾರೆ, ಎಂತಲೇ ಹಾಗಾಗುತ್ತಾರೆ.

ಚೆಕೋವ್ ಎಲ್ಲರ ಆದರಕ್ಕೂ ಪಾತ್ರನಾದವನು ಆತನು ರಶ್ಯನ್ ಇರಬಹುದು, ಆದರೆ, ಆತನ ಮನೋವೃತ್ತಿ ಮಾನವತೆಯ ತುತ್ತತುದಿಯನ್ನು ಮುಟ್ಟನಿಂತಿದೆ. ಆದುದರಿಂದಲೇ ಟಾಲ್‌ಸ್ಟಾಯ್ ಹೇಳುವಂತೆ ಚೆಕೋವ್ ರಶ್ಯನರ ಕವಿಯಲ್ಲ; ಆತ ಮಾನವರೆಲ್ಲರ ಕವಿಯಾಗಿದ್ದಾನೆ.

—ಗೋರಾ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದ ರಶ್ಯವು ಇಂತಹ ನವೋದಿತ ರಾಷ್ಟ್ರಗಳ 'ಬಹುದೊಡ್ಡ ಮಿತ್ರ' ಎಂದು ಮುಂತಾಗಿ ಶ್ರೀ ಕ್ರುಶ್ಚೇವರಂದರು. ಇದೇ ಮಾದರಿಯ ಮಾತುಗಳನ್ನು ಅಮೆರಿಕೆಯ ಐಕರೂ ಆಡಿದ್ದಾರೆ; ಸದಾಶಯ ವ್ಯಕ್ತಪಡಿಸಿದ್ದಾರೆ.

ಅಮೆರಿಕೆ ಮತ್ತು ರಶ್ಯಗಳ ಬಲವೆಷ್ಟೆಂಬುದು ಇನ್ನೂ ಊಹನೆಯಲ್ಲೇ ಪರ್ಯವಸಾನಗೊಂಡಿದೆ. ಇದರಿಂದಲೇ ಇರಬಹುದು; ಶಾಂತಿಯ ಮಾತು ಇತ್ತಂಡೆಯಿಂದಲೂ ಹೊರಬಿದ್ದು ವಿಶಾಲ ಪ್ರಪಂಚದಲ್ಲಿ ಪ್ರತಿಧ್ವನಿಸ ಹತ್ತಿದೆ. ಮುರಿದು ಹೋದ ಮಾತುಕತೆಗಳೂ ಪುನಃ ಪ್ರಾರಂಭವಾಗುತ್ತಿವೆ. ಜರ್ಮನಿಯ ಪ್ರಶ್ನೆಯೊಂದು 'ಇತ್ಯರ್ಥ'ವೆಂದಾದ ಮೇಲೆ ಪ್ರಾಪಂಚಿಕ ಸಮಸ್ಯೆಗಳ ಕುರಿತಾಗಿ ಪರಿಷತ್ ಸಮ್ಮೇಳನವು ಸೇರುವ ಅವಕಾಶವಿದೆ. ಇದರಲ್ಲಿ ಪಶ್ಚಿಮ ರಾಷ್ಟ್ರಗಳು ಮಾತ್ರವಲ್ಲ ಆಫ್ರೇಶ್ಯಾ ರಾಷ್ಟ್ರಗಳೂ ಭಾಗವಹಿಸಬೇಕೆಂದು ಭಾರತವೂ ಆಶಿಸುತ್ತದೆ. ಏಕೆಂದರೆ, ಮುಖ್ಯವಾಗಿ ಅಣ್ವಸ್ತ್ರ ಸ್ಫೋಟನ'ದ ದುಷ್ಪರಿಣಾಮಗಳಿಗೆ ಬಲಿಯಾದ ರಾಷ್ಟ್ರಗಳೆಂದರೆ, ಇವೇ. ಸುದೀರ್ಘಕಾಲಪರ್ಯಂತ ವಿದೇಶೀಯರ ಪಾದದಲಿತರಾಗಿ ನೊಂದವರೂ ಇವೇ. ಇಂದು ತಮ್ಮ ಅಭಿವೃದ್ಧಿಯನ್ನು ಸಾಧಿಸಲು ಅಹೋರಾತ್ರಿ ಶ್ರಮಿಸುವವರೂ ಇವೇ. ಆದುದರಿಂದ, ವಿಶ್ವಶಾಂತಿಯ ಆವಶ್ಯಕತೆ, ನಿಶ್ಶಸ್ತ್ರೀಕರಣ, ಅಣ್ವಸ್ತ್ರ ಸ್ಫೋಟನ ನಿಷೇಧ, ಸಹ ಅಸ್ತಿತ್ವ ಮೊದಲಾದುವುಗಳ ಬಗ್ಗೆ ಅಧಿಕಾರಯುತವಾಗಿ ಪ್ರಭಾವಶಾಲಿಯಾಗಿ ವಾದಿಸಲು ನಿಜವಾದ ಉತ್ತರಾಧಿಕಾರಿ ಎಂದರೆ ಇವೇ. ಈ ವಿಷಯವೇನೋ ಸದ್ಯ ಪರಿಶೀಲನೆಯಲ್ಲಿದೆ, ಇರಲಿ. ಮೇ ತಿಂಗಳ ಶಿಖರ ಸಮ್ಮೇಳನ ಯಶಸ್ಸುಕಂಡರೆ ಮಾತ್ರ ಮುಂದಿನ ಮಾತುಕತೆ ತಾನೆ?

ಆಫ್ರೇಶ್ಯನ್ ರಾಷ್ಟ್ರಗಳ ಮಿತ್ರತ್ವವನ್ನೂ ಬೆಂಬಲವನ್ನೂ ಪಡೆಯುವುದರಲ್ಲಿ ಇಬ್ಬರು ನಾಯಕರೂ ಪ್ರಯತ್ನಪಡುತಿದ್ದಾರೆ. ಶ್ರೀಕೃಷ್ಣನನ್ನು ಒಳಗುಮಾಡುವ ಉದ್ದೇಶದಿಂದ ಕೌರವ ಪಾಂಡವರು ದ್ವಾರಕೆಗೆ ತೆರಳಿದಂತೆ ವಿಶ್ವಪರ್ಯಟನೆಯಲ್ಲಿ ತೊಡಗಿದ್ದಾರೆ. ಇದರ ಪರಿಣಾಮ ಫಲಿತಾಂಶ ಈಗಲೇ ಹೇಳಬಾರದು. ಮಹಾಭಾರತ ಸಮರದ ಪೂರ್ವಸಿದ್ಧತೆ ಮಾತ್ರ ಇದಲ್ಲವೆಂಬುದು ನಿಜವಾದರೆ, ವಿಶ್ವಪ್ರಜೆಗಳು ತುಸು ಸಮಾಧಾನದ ನಿಟ್ಟುಸಿರನ್ನು ಬಿಡುವುದು ಸಾಧ್ಯವಾಗಬಹುದು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಿಂಡಿಕೇಟ್ ಬ್ಯಾಂಕ್
ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಆರ್ಥಿಕ ಸೇವೆಯನ್ನು ನೀಡುವ ಆದರ್ಶ ಸಂಸ್ಥೆ: ವ್ಯವಹಾರ ಸಂಪತ್ತು ರೂ. ೨೨ ಕೋಟಿಗೂ ಮಿಕ್ಕಿದೆ.

ಸಿಂಡಿಕೇಟ್ ಬ್ಯಾಂಕ್
ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ (ಆಂಧ್ರ, ಕೇರಳ, ಮದರಾಸು, ಮುಂಬಯಿ ಮತ್ತು ಮೈಸೂರು ರಾಜ್ಯಗಳಲ್ಲಿ) ವಿಶಾಲವಾಗಿ ಹಬ್ಬಿರುವ ಸಂಸ್ಥೆ; ಒಟ್ಟು ೧೩೭ ಶಾಖೆಗಳಿವೆ.

ಉಳಿತಾಯಗಾರರ ಸನ್ಮಿತ್ರ

ಸಿಂಡಿಕೇಟ್ ಬ್ಯಾಂಕ್
ಉಳಿತಾಯಗಾರರ ಸನ್ಮಿತ್ರ—ಆಕರ್ಷಕ ಹಾಗೂ ಅತ್ಯುಪಯುಕ್ತ ಉಳಿತಾಯ ಯೋಜನೆಗಳಿಂದ ಜನಪ್ರಿಯವಾಗಿರುವ ಸಂಸ್ಥೆ: "ಪಿಗ್ಮಿ" ಮನೆಮಾತಾಗಿದೆ.

ಸಿಂಡಿಕೇಟ್ ಬ್ಯಾಂಕ್
ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, ಮೈಸೂರು ರಾಜ್ಯ; ಚೇರ್ಮನ್: ಡಾ|| ಟಿ. ಎಂ. ಎ. ಪೈ; ಜನರಲ್ ಮೆನೇಜರ್: ಟಿ. ಎ. ಪೈ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

Edited, Printed & Published by K. H, Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ ಪೈಸೆ.

ವರುಷ ೩೯ ವಾರ ೨೮ 17-3-1960 Vol. 39 No. 28.

ಪ್ರಚಲಿತ ಪ್ರಸಂಗ

ತೃತೀಯ ಯೋಜನೆಗೆ ವಿದೇಶೀಯ ಸಹಾಯ

ನಮಗೆ ಬೇಕಾದ ೨,೧೦೦ ಕೋಟಿ ರೂಪಾಯಿಗಳಲ್ಲಿ ಸುಮಾರು ಅರ್ಧ ದಷ್ಟನ್ನು ಅಮೆರಿಕೆಯಿಂದಲೇ ನಿರೀಕ್ಷಿಸಬೇಕು ಉಳಿದುದನ್ನು ಬ್ರಿಟನ್, ಫ್ರಾನ್ಸ್, ಪಶ್ಚಿಮ ಜರ್ಮನಿ, ರಶ್ಯ ಮೊದಲಾದುವು ನೀಡಬಹುದು

ಭಾರತವು ತನ್ನ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ಹಂತವನ್ನು ಮುಟ್ಟುತ್ತಲಿರುವಂತೆಯೇ ಅತ್ತ ತೃತೀಯ ಯೋಜನೆಯ ಕರಡೂ ಸಿದ್ಧವಾಗತೊಡಗಿದೆ ಮೊದಲನೆಯ ಯೋಜನೆಗಿಂತ ಎರಡನೆಯದು ಪ್ರಮಾಣದಲ್ಲಿ ಇಮ್ಮಡಿಯಾಗಿದ್ದರೆ, ಈಗ ಮೂರನೆಯದು ಎರಡನೆಯದರ ಎರಡು ಪಾಲಷ್ಟು ಆಗುವ ನಿರೀಕ್ಷೆಯಿದೆ ಈ ಬಗ್ಗೆ ಕೊನೆಯ ರೂಪರೇಷೆ ಮಾತ್ರ ಎಳೆಯಲ್ಪಡಬೇಕಾಗಿದೆ.

ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಲು ಬೇಕಾಗುವ ಹಣವು ಸುಮಾರು ೧೦ ಸಾವಿರ ಕೋಟಿಯ ಮಿತಿಗಿಂತ ವಿಶೇಷ ಕಡಮೆಯಿರುವುದಿಲ್ಲ ಅಲ್ಲದೇ ಈ ಮೊಬಲಗು ಯಾವ ರೀತಿಯಲ್ಲಿ ಕೂಡುವುದು ಎಂಬುದರ ಬಗ್ಗೆಯೂ ಆಲೋಚನೆ ಮುಂದುವರಿದಿದೆ. ಈ ಬಾರಿ ಕೇಂದ್ರದ ಮುಂಗಡ ಪತ್ರವನ್ನು ಮಂಡಿಸುತ್ತ ಅರ್ಥಮಂತ್ರಿ ಶ್ರೀ ಮುರಾರ್ಜಿಯವರು ಮುಂದಿನ ವರ್ಷ ಪ್ರಾರಂಭವಾಗಲಿರುವ ತೃತೀಯ ಯೋಜನೆಗೆ ಹಣದ ಪೂರೈಕೆಯಾಗುವ ದೂರದೃಷ್ಟಿಯನ್ನೂ ಇಟ್ಟುಕೊಂಡು ಸದ್ಯದ ಮುಂಗಡಪತ್ರವನ್ನು ತಯಾರಿಸಿರುವುದಾಗಿ ಅಂದಿದ್ದಾರೆ. ಆಂತರಿಕ ಸಂಪತ್ತನ್ನು ಸಾಧ್ಯವಾದಷ್ಟು ಬಳಸಿಕೊಂಡರೂ ನಮ್ಮ ದೇಶದಿಂದ ವಿದೇಶಗಳಿಗೆ ರಫ್ತಾಗುವ ಸಿದ್ಧ ಪದಾರ್ಥಗಳ ಮೌಲ್ಯವನ್ನು ಉಳಿದು ನಮಗೆ ಮೂರನೆಯ ಯೋಜನೆಯು ಪೂರ್ತಿಗೊಳ್ಳುವುದಕ್ಕೆ ೨,೧೦೦ ಕೋಟಿ ರೂಪಾಯಿಗಳು ವಿದೇಶಗಳಿಂದ ಬರಬೇಕಾಗಿದೆ ಎಂದೀಗ ಸರಿಯಾಗಿ ತಿಳಿದು ಬಂದಿದೆ ಸದ್ಯ ಭಾರತದ ನೆರವುಗಾರ ದೇಶಗಳ ಸರಕಾರ ಮತ್ತು ಭಾರತ ಸರಕಾರಗಳ ನಡುವೆ ಈ ಬಗ್ಗೆ ಉಚ್ಚ ಮಟ್ಟದಲ್ಲಿ ಮಾತುಕತೆಗಳು ನಡೆಯುತ್ತಲಿದ್ದು, ಅದು ಪೂರ್ಣಗೊಂಡನಂತರವೇ ಈ ಮೊತ್ತವೆಷ್ಟೆಂದು ಮತ್ತು ಯಾರು ಯಾರಿಂದ ಎಷ್ಟೆಷ್ಟು ಲಭಿಸುವುದೆಂದು ತಿಳಿಯಬೇಕಷ್ಟೆ ಆದರೂ ಮಹತ್ವದ ಈ ಪ್ರಶ್ನೆ ರಾಜಕೀಯ ವಲಯದಲ್ಲಿ ಮಾತುಕತೆಗೆ ಅವಕಾಶ ಕಲ್ಪಿಸಿದೆ

ಇತ್ತೀಚಗೆ ಭಾರತವನ್ನು ಸಂದರ್ಶಿಸಿದ ರಶ್ಯನ್ ಪ್ರಧಾನಿ ಕ್ರುಶ್ಚೇವರು ಹಲವಾರು ಬಾರಿ ತನ್ನ ಭಾಷಣದಲ್ಲಿ ಸುಮಾರು ೧೮ ಕೋಟಿ ರೂಪಾಯಿಗಳ ಸಹಾಯವನ್ನು ಭಾರತದ ತೃತೀಯ ಯೋಜನೆಗೆ ನೀಡುವುದಾಗಿ ಹೇಳಿದರು ಅಲ್ಲದೇ ಮೊತ್ತವನ್ನು ಇದಕ್ಕಿಂತಲೂ ಹೆಚ್ಚಿಸುವುದಾಗಿಯೂ ಅಂದರು ಈ ಮಾತಿನ ಅರ್ಥವೇನೆಂಬುದು ಸರಿಯಾಗಿ ತಿಳಿಯಲಾರದಾದರೂ ಎಲ್ಲ ರೂಪಗಳಿಂದಲೂ ರಶ್ಯದಿಂದ ಸಾಮಾನ್ಯ ರೂ ೪೦೦ ಕೋಟಿಗಿಂತ ಮಿಕ್ಕಿ ದೊರೆಯುವುದೆಂಬ ಆಸೆಯುಂಟು. ಭಾರತ ಸರಕಾರವು ಸ್ಥಾಪಿಸಲಿರುವ ದ್ವಿತೀಯ ಅಣು ಶಕ್ತಿ ಕೇಂದ್ರಕ್ಕೆ ಉಚಿತ ರೀತಿಯಲ್ಲಿ ಪಾಶ್ಚಾತ್ಯ ನೆರವು ದೊರೆಯುವ ನಿರೀಕ್ಷೆಯಿಲ್ಲವಾದ ದರಿಂದ ಈ ಕೇಂದ್ರವನ್ನು ರಶ್ಯನ್ ಸಹಾಯದಿಂದಲೇ ಕಟ್ಟುವುದಕ್ಕೆ ಭಾರತ ಸರಕಾರವು ಯೋಚನೆ ಮಾಡತೊಡಗಿವೆ. ಇದು ಕೈಗೂಡಿದರೆ, ಯೋಜನೆಗೆ ರಶ್ಯದ ಸಹಾಯವು ರೂ. ೪೦೦ ಕೋಟಿ ಯಾದರೂ ಆಗಬಹುದು

ಹಾಗಿರುವಾಗ, ಉಳಿದ ರೂ ೧,೭೦೦ ಕೋಟಿಗಳು ಪಾಶ್ಚಾತ್ಯ ರಾಷ್ಟ್ರಗಳಿಂದಲೇ ಲಭಿಸಬೇಕಾಗಿದೆ ಎಂದರೆ ೩,೫೦೦ ಮಿಲಿಯ ಡಾಲರುಗಳು. ಇದರಲ್ಲಿ ವರ್ಷವೊಂದಕ್ಕೆ ೪೦೦ ಮಿಲಿಯ ಡಾಲರ ಗಳಂತೆ ಒಟ್ಟು ೨,೦೦೦ ಡಾಲರ್ ಅಮೆರಿಕೆಯ ಅಭಿವೃದ್ಧಿ ಋಣ ನಿಧಿಯಿಂದ ದೊರೆಯುವುದೆಂದೂ ಊಹಿಸಲು ಆಧಾರಗಳಿವೆ. ಅಮೆರಿಕೆಯಾದರೂ ಭಾರತಕ್ಕೆ ಈ ನಿಧಿಯ ಸೇಕಡಾ ೪೦ರಷ್ಟನ್ನು ಕೊಡಮಾಡುವ ಮತ್ತು ಇದೇ ಧೋರಣೆಯನ್ನು ಮುಂದುವರಿಸುವ ಉದಾರತೆಯನ್ನು ತೋರಿಸಬಹುದು ಇನ್ನುಳಿದ ೧,೫೦೦ ಮಿಲಿಯಗಳು ಮುಖ್ಯವಾಗಿ ಬ್ರಿಟನ್, ಫ್ರಾನ್ಸ್, ಇಟಲಿ ಪಶ್ಚಿಮ ಜರ್ಮನಿ, ಜಪಾನ್ ಮತ್ತು ಪೂರ್ವ ಯುರೋಪಿನ ಕೆಲವು ರಾಷ್ಟ್ರಗಳಿಂದಲೇ ದೊರೆಯಬೇಕು

ತೃತೀಯ ಯೋಜನಾವಧಿಯಲ್ಲಿ ಜಾಗತಿಕ ಬ್ಯಾಂಕಿನಿಂದ ೫೦೦ ಮಿಲಿಯ ಡಾಲರ್‌ಗಳ ಮೌಲ್ಯದಷ್ಟು ಸಾಲವನ್ನು ಪಡೆಯಬಹುದೆಂದು ತಿಳಿದು ಬಂದಿಲ್ಲ ಅಲ್ಲದೇ ಬ್ರಿಟನ್ನಿನ ಪ್ರಧಾನಿ ಮೆಕ್‌ಮಿಲನರು ಮನಸ್ಸು ಮಾಡಿದರೆ, ಅಲ್ಲಿಂದಲೂ ೫೦೦ ಮಿಲಿಯ ಡಾಲರ್ ಸಹಾಯ ದೊರೆಯುವ ಸಂಭವವಿದೆ. ಉಳಿದ ೫೦೦ ಮಿಲಿಯ ... ಪಶ್ಚಿಮ ಜರ್ಮನಿಯ ... ಅಲ್ಲದೇ ಈ ಮೊತ್ತಗಳು ಸರಿಯಾಗಿ ಪೂರಯಿಸದಿದ್ದರೆ ... ಅಭಿವೃದ್ಧಿ ... ಸಹಾಯ ದೊರೆಯುವುದು. ಆರಂಭದಲ್ಲಿ, ಈಗ, ನಮ್ಮ ಆವಶ್ಯಕತೆಗಿಂತ ೫೦೦ ಮಿಲಿಯ ಡಾಲರುಗಳಷ್ಟು ಅಧಿಕ ಸಹಾಯವು ಜನಿಯಾಗಬಹುದು ಇದರಿಂದ ಅನಿರೀಕ್ಷಿತ ವ್ಯಯ ಅಥವಾ ದೊಡ್ಡ ಮೊತ್ತಗಳಲ್ಲಿ ಕಂಡುಬರುವ ಕೊರತೆಯನ್ನು ತುಂಬಿಕೊಳ್ಳುವುದು ಸಾಧ್ಯವೆನಿಸುವ.

ವಿದೇಶಗಳಿಂದ ಈ ರೀತಿಯ ಸಹಾಯವನ್ನು ಪಡೆಯುವಾಗಲೂ ನಾವು ವಿಶೇಷವಾಗಿ ಎರಡು ವಿಷಯಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳಬೇಕಾಗಿದೆ ಮೊದಲನೆಯದಾಗಿ, ವಿದೇಶಗಳಿಂದ ಬರುವ ಹಣವೆಲ್ಲವೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮಾತ್ರ ವಿನಿಯೋಗಿಸಲ್ಪಡಬೇಕು; ಮತ್ತು ಎರಡನೆಯದಾಗಿ ವ್ಯವಹಾರಮಾಡುವಾಗ ಅವಕ್ಕೆ ಬೇಕಾದ ವಿದೇಶ ವಿನಿಮಯ ನಾಣ್ಯಗಳನ್ನು ಭಾರತವು ತುಂಬಿಸಿಕೊಳ್ಳಬೇಕು ಇದರಿಂದ ಮುಖ್ಯವಾಗಿ ವಿದೇಶಗಳಿಂದ ಕಚ್ಚಾ ಪದಾರ್ಥಗಳನ್ನು ಆಯಾತಗೊಳಿಸುವಾಗ ಅವು 'ಅಭಿವೃದ್ಧಿ ಯೋಜನೆ'ಗಳಿಗೇನೇ ಹೋಗುವುದೆಂಬ ವಿಶ್ವಾಸ ಮಾತ್ರ ಮಾಡುವುದು ಮಾತ್ರವಲ್ಲ, ಅದಕ್ಕೆ ಹೋಗುವಂತೆ ಅವಶ್ಯ ನೋಡಿಕೊಳ್ಳಬೇಕು ಅಲ್ಲದೇ ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ತನ್ನ ವ್ಯಾಪಾರ ವಹಿವಾಟಿನ ನಡುವೆ ಭಾರತವು ವಿದೇಶ ವಿನಿಮಯ ಗಳಿಕೆಯತ್ತಲೂ ಗಮನ ಹರಿಸಬೇಕು.

ಇಷ್ಟನ್ನು ಸಾಧಿಸಿಕೊಂಡರೆ, ಬಾಹ್ಯ ಸಹಾಯತೆಯು ಸಾಧ್ಯವೆನಿಸಬಹುದು. ಇನ್ನು ಆಂತರಿಕ ಸಹಾಯದತ್ತವೂ

(೧೨ನೇ ಪುಟ ನೋಡಿರಿ)

ಅಮೆರಿಕೆಯ ಕೃಷಿತಜ್ಞನೊಬ್ಬನು ಭಾರತೀಯ ರೈತರೊಡನೆ ಪಶುವಿನ ಸಂಬಂಧದಲ್ಲಿ ಸಮಾಲೋಚನೆ ನಡೆಸುತ್ತಿದ್ದಾನೆ

ಕಥಾವಿಹಾರ

ಚಾರುಚಂಚುರ ಚಂದ್ರೋದಯ

ಹೋಳಿಹುಣ್ಣಿಮೆಯ ದಿನ ಬೂದನಿಗೆಂದೇನು, ಆ ಊರವರೆಲ್ಲರಿಗೂ ಹೊಸ ಹುರುಪಿನಿಂದ ಜೀವನ ಸಾಗಿಸುವ ಅಮರ ಸಂದೇಶವಿತ್ತಿತು.

ಸಂಧ್ಯಾಸಮಯ. ಸೂರ್ಯನು ಪಶ್ಚಿಮ ಸಾಗರದಲ್ಲಿ ಅಸ್ತಂಗತನಾಗುವ ಸಿದ್ಧತೆಯಲ್ಲಿದ್ದನು. ವರ್ಷಾಕಾಲದ ದಿನವಾದರೂ ಆಗಸದ ದಟ್ಟವಾದ ಮುಗಿಲುಗಳು ಕಳೆದ ಹದಿನೈದು ದಿನಗಳಲ್ಲಿ ಎಡೆಬಿಡದೆ ತಮ್ಮ ಪ್ರಭಾವವನ್ನು ಪ್ರದರ್ಶಿಸಿದ್ದುದರಿಂದ ಅಂದು ವಿರಳವಾಗಿ ಹಂಚಿ ಹಂಚಿ ಹರಿಯುತಿದ್ದುವು. ಮುಳುಗುವ ನೇಸರನ ಹೊಂಬಣ್ಣ ತುಂಬಿ ಹರಿಯುವ ನದಿಯ ಕೆನ್ನೀರಿನಲ್ಲಿ ಬಿದ್ದು ಶೋಭಾಯಮಾನವಾಗಿ ಕಾಣುತಿತ್ತು; ಚಿನ್ನ ಮತ್ತು ಹವಳಗಳು ಒಂದೆಡೆ ಸೇರಿ ಬರೆದ ರಂಗವಲ್ಲಿಯನ್ನು ಸ್ಮರಣೆಗೆ ತರುವಂತಿತ್ತು. ನದಿಯ ಇಕ್ಕಡೆಯ ವಿಶಾಲವಾದ ಗದ್ದೆಗಳು ನೆರೆಗೆ ತುತ್ತಾಗಿ ಹೋಗಿ ಈಗ ಕೇವಲ ಬಟ್ಟಬಯಲಾಗಿದ್ದುವು. ನಾಟಿದ ಅಗೆಯೆಲ್ಲವೂ ಕೊಚ್ಚಿಹೋಗಿ, ಕಳೆಗಳು ಜಮೆಯಾಗಿದ್ದುವು. ಅಲ್ಲಲ್ಲಿ, ದೂರದೂರದಲ್ಲಿದ್ದ ಮುರುಕು ಗುಡಿಸಲುಗಳು, ಮುರಿದು ಬಿದ್ದಿದ್ದುವು. ಉಕ್ಕಿ ಹರಿದ ನದಿಯ ಪ್ರವಾಹದಿಂದ ಪೀಡಿತರಾಗಿ ಆ ಊರಿನ ಎಲ್ಲ ರೈತರೂ ನೊಂದು ಹೋಗಿದ್ದರು.

ಭಾರವಾದ ಹೃದಯವನ್ನು ಹೊತ್ತ ಬೂದ ಎಡವುತ್ತ ನದಿ ದಂಡೆಯಲ್ಲಿ ಬಂದು ನಿಂತ. ಅದಕ್ಕೂ ಶಕ್ತಿ ಸಾಲದೆ ಆತ ಅಲ್ಲೇ ಬಂಡೆಗಲ್ಲಿನ ಮೇಲೆ ಕುಕ್ಕರಿಸಿದ. ಆತನ ತಲೆ ಭಾರವಾಗಿತ್ತು, ಮುಖ ಮುದುಡಿತ್ತು, ದೃಷ್ಟಿ ಶೂನ್ಯವಾಗಿತ್ತು, ಕಿವಿ ಕಿವುಡಾಗಿತ್ತು, ಬಾಯಿಯೂ ಬೀಗ ಮುದ್ರೆಗೀಡಾಗಿತ್ತು. ಕೈಕಾಲುಗಳು ನೋಯುತಿದ್ದುವು. ಆತ ಒಂದು ಬಾರಿ ತನ್ನ ವಿಶಾಲವಾದ ಗದ್ದೆಗಳತ್ತ ದೃಷ್ಟಿ ಹರಿಸಿದ; ಆದರೆ, ಅದು ಎಲ್ಲೆಲ್ಲೂ ಶೂನ್ಯತೆಯನ್ನು ಕಂಡು ಮರಳಿ ಆತನಲ್ಲಿ ಕೂಡಿತು. ಅವನ ನೊಂದ ಮನ ಮರುಗತೊಡಗಿತು. ತನ್ನ ಪೈರು ಮಾತ್ರವಲ್ಲ, ಕೋಣ, ದನಕರುಗಳು ಮನೆಮಾರು ಎಲ್ಲವನ್ನೂ ಕಳೆದುಕೊಂಡ ಹತಭಾಗ್ಯರಲ್ಲಿ ಬೂದನೂ ಒಬ್ಬನಾಗಿದ್ದ! ನೆರೆಯೇನೊ ಊರಲ್ಲಿ ಪ್ರತಿವರ್ಷವೂ ಬರುತ್ತದೆ; ಆದರೆ, ಈ ವರ್ಷದಂತೆ ಬಿರುಸಾಗಿ ಬಂದ ನೆರೆಯೊ ಹಿಂದೆಂದೂ ಬಂದಿರಲಿಲ್ಲ. ಬಂದರೂ ಇಷ್ಟು ದಿನ ನಿಂತಿರಲಿಲ್ಲ. ಆದರೆ, ಈ ಬಾರಿಯ ಸೃಷ್ಟಿವೈಚಿತ್ರ್ಯದಿಂದಾಗಿ ಅದರ ವಿಕರಾಳ ಪ್ರಭಾವದಿಂದಾಗಿ ಇಂತಹ ದುಸ್ಥಿತಿ ಊರ ರೈತರಿಗೆಲ್ಲ ಬಂದೊದಗಿತ್ತು.

ಇದನ್ನೆಲ್ಲಾ ಯೋಚಿಸಿದ ಬೂದನ ತಲೆ ಮತ್ತಷ್ಟು ಭಾರವಾಯಿತು. ಬಡವನ ಕುತ್ತಿಗೆಯಲ್ಲಿ ನೆಟ್ಟಗೆ ನಿಲ್ಲಲು ಕೇಳಲಿಲ್ಲ. ಆತ ತನ್ನ ತೊಡೆಗಳೆಡೆಯಲ್ಲಿ ತಲೆಯನ್ನು ಅಡಗಿಸಿಟ್ಟು, ಅಳತೊಡಗಿದನು. ಈ ಅಳುವೇ ತುಸು ಗಟ್ಟಿಯಾಗಿ, ಸುತ್ತಮುತ್ತ ಅಲೆಅಲೆಯಾಗಿ ವ್ಯಾಪಿಸಿತು. ಸೂರ್ಯನಾದರೂ ನದೀನೀರಿನೊಡನೆ ತನ್ನ ಕಿರಣಗಳಿಂದ ಕೇಳಿಯಾಡಿಯಾಡಿ ಸೋತು ಪಡುಗಡಲಲ್ಲಿ ಮುಳುಗಿಬಿಟ್ಟ.

ಹುಣ್ಣಿಮೆಯ ಚಂದ್ರ ಮೂಡಲಲ್ಲಿ ಮೂಡಿ ಏರುತ್ತ ಬಂದ. ನಸುತಿಳಿ ಮೋಡದಿಂದ ಆಚ್ಛಾದಿತನಾಗಿದ್ದ ಚಂದ್ರ ಬಿಂಬದ ಚಂದವನ್ನು ಸವಿಯುವ ಸಹೃದಯತೆ ಆ ಊರ ಜನತೆಗಿರಲಿಲ್ಲ. ಅವರ ಹೃದಯ ತುಂಬ ನಿರಾಶೆಯ ಕಾರ್ಮೋಡವೇ ತುಂಬಿ ಹರಿಸಿತ್ತು. ಆದರೆ, ಸೃಷ್ಟಿ ಯಾರನ್ನೂ ಕಾಯುವುದಿಲ್ಲ. ಅದು ತನ್ನ ಪಥದಲ್ಲಿ ನಡೆದೇ ನಡೆಯುತ್ತದೆ. ಚಂದ್ರನ ಮುಗುಳು ನಗೆ ಆ ಬಂಜರಾಗಿದ್ದ ಭೂಮಿಯನ್ನೂ ನಗಿಸುತಿತ್ತು. ಅಲ್ಲಿ ಕೂಡಿದ್ದ ಕಳೆಯೊಡನೆಯೂ ಚಂದ್ರಿಕೆ ಚಲ್ಲಾಟವಾಡುತಿತ್ತು. ತಾನು ಒಳ್ಳೆಯವನಾದರೆ ಊರು ಒಳ್ಳೆಯದು ಎನ್ನುತ್ತಾರಲ್ಲಾ, ಹಾಗೆ.

ದೂರದಲ್ಲಿ ಸ್ನಿಗ್ಧ ಮನೋಹರ ಹೃದಯಾಕರ್ಷಕವಾದ ವೇಣುಗಾನವೊಂದು ದೂರದಲ್ಲಿ ಕೇಳಿಸ ತೊಡಗಿತ್ತು. ಅದು ಕ್ರಮೇಣ ಸಮೀಪವೆನಿಸುತ್ತ ಬರುವಂತೆ ಭಾಸವಾಯಿತು. ಬೂದನೂ ತಲೆಯೆತ್ತಿ ಈ ಸ್ಮಶಾನದಲ್ಲೂ ಆನಂದ ಪಡುವ ಕಡು ಮೂರ್ಖ ಬೇತಾಳನಾರು ಎಂದು ಊಹಿಸ ತೊಡಗಿದನು. ಹೌದು, ಆ ವೇಣುವಾದಕ ಮುರಲಿ ನುಡಿಸುತ್ತ ಹಾಲು ತಿಂಗಳ ಬೆಳಕಿನಲ್ಲಿ ತನ್ನತ್ತ ಕಡೆಗೆ ಬರುತ್ತಿರುವುದು ಗೋಚರವಾಯಿತು. ಅದು ಯಾರಿರಬಹುದು ಎಂದು ಯೋಚಿಸುವಷ್ಟರಲ್ಲಿಯೇ ಮುರಲೀನಾದ ತನ್ನ ಬೆನ್ನ ಹಿಂದೆಯೇ ಕೇಳಬರತೊಡಗಿತು.

"ಏನಯ್ಯಾ, ಬೂದ, ತಲೆಗೆ ಕೈಯಿಟ್ಟು ಕೂತಿದ್ದಿಯಲ್ಲಾ?"

"ಮತ್ತೇನು ಮಾಡಬೇಕು? ನಿನ್ನ ಜತೆಗೆ ತಾಳಹಾಕಿ ಕುಣಿಯಬೇಕಿತ್ತೆ?" ಬೂದ ತುಸು ಕುಪಿತನಾಗಿಯೇ ಮರುಸವಾಲು ಹಾಕಿದನು.

"ಹಾಗಲ್ಲ, ಇನ್ನು ಶೋಕಿಸಿ ಪ್ರಯೋಜನವೇನ? ಆದುದೆಲ್ಲಾ ಆಯಿತು. ಮುಂದೆ ಬಾಳುವ ವಿಧಾನವಾವುದೆಂದು ಯೋಚಿಸದೆ ಸುಮ್ಮನೆ ದುಃಖಿಸಿ ಕೂತರೆ, ಅದರಿಂದ ಸಾಧಿಸುವುದೇನು?"— ವ್ಯಕ್ತಿ ಕೇಳಿತು

"ನೀನನ್ನುವುದೂ ಸರಿಯೇ. ಆದರೆ ನೋಡು, ಇನ್ನೂರು ರೂಪಾಯಿಕೊಟ್ಟು ಹೊಸತಾಗಿ ತಂದ ಜೋಡು ಆ ನೆರೆಯ ನೀರಿನಲ್ಲಿ ಹೊಯ್ದು ಹೋಗುತ್ತಿರುವುದು ಇನ್ನೂ ನನ್ನ ಕಣ್ಣ ಮುಂದೆ ನಲಿಯುವಂತಿದೆ! ಅಯ್ಯೊ, ಆ ಕಾಳಿಯ ಕರು ತಾಯಿ ಹೋದ ಮರುಕದಿಂದ ಜೀವ ಬಿಡುವಾಗ 'ಅಂಬಾ' ಎಂದ ಮೂಕ ವೇದನೆಯನ್ನು ಹೇಗೆ ಮರೆಯಲಿ ಹೇಳು!" ಹೀಗೆ ಹೇಳುತಿದ್ದಂತೆ ಬೂದ ಭಾವಾವೇಶಗೊಂಡವನಂತಾಗಿದ್ದುದು ಕಂಡು ಬಂತು.

"ಏನಯ್ಯೊ, ಈಗ ಏನು ಮಾಡಬೇಕೆಂದಿರುವೆ?"

"ಮಾಡುವುದೇನು ನಮ್ಮ ದುರದೃಷ್ಟಕ್ಕಾಗಿ ಅಳುವುದು."

"ಹಾಗಾದರೆ, ಅದಕ್ಕಿಂತ ಉತ್ತಮವಾದ ಕಾರ್ಯವೊಂದನ್ನು ಮಾಡು..." ವ್ಯಕ್ತಿ ತುಸು ನಿಶ್ಚಿತ ಧ್ವನಿಯಲ್ಲೇ ಅಂದಿತು

ಬೂದ ಆತುರದಿಂದ ಪ್ರಶ್ನಿಸಿದ. "ಏನದು?"

"ಅಲ್ಲ, ಎಲ್ಲಿಯಾದರೂ ಕುತ್ತಿಗೆಗೆ ಭಾರವಾದ ಕಲ್ಲೊಂದನ್ನು ಕಟ್ಟಿ ನದಿಗೆ ಹಾರಿಬಿಡು."

ಬೂದನ ಕಪಾಲಕ್ಕೆ ಯಾರೋ ಹೊಡೆದಂತಾಯಿತು. ಅದು ಬೇರಾರೂ ಅಲ್ಲ; ಸದಾ ದುಃಖ ಜೀವಿಯಾಗಿ ಹೊಟ್ಟೆಗಾಗಿ ಯಾರ್ಯಾರ ಮುಂದೆ ಕೈ ಚಾಚುವ ಲಿಂಗನೇ ಆಗಿದ್ದನು. ಅದೇ ಲಿಂಗ ಅದೆಷ್ಟೋ ಬಾರಿ ಬೂದನ ಮನೆ ಬಾಗಿಲನ್ನು ಊಟದ ಹೊತ್ತು ಕಂಡಿದ್ದ; ಬೂದನಾದರೊ ಅವನಿಗೆ ಕಾಲಿಗೆ ನೀರಿತ್ತು ಅನ್ನದಾನ ಮಾಡಿದ್ದ. ಆದರೆ, ಇಂದು ಅಂತಹ ತಿರುಕೂಳಿ ಇಷ್ಟೊಂದು ಗಡದ್ದಿನಲ್ಲಿ ಕೊಳಲೂದುತ್ತ ಸಮಾಧಾನ ಪಡಿಸುತಿದ್ದಾನಲ್ಲಾ, ಇದಕ್ಕೇನು ಕಾರಣ?

ಬೂದ ತನ್ನ ಸಮಸ್ಯೆಯನ್ನು ಒಂದು ಬದಿಗಿಟ್ಟು ಲಿಂಗನನ್ನು ಪ್ರಶ್ನಿಸಿದ— ಅಲ್ಲ ಲಿಂಗ, ಸಾಯುವುದಕ್ಕೆ ಇಷ್ಟೆಲ್ಲಾ ನೀನು ಹೇಳಬೇಕೆ? ಅಂದೇ ಎಲ್ಲಾ ಹೋಗಿತ್ತು ಆಗಲೇ ಸಾಯುತಿದ್ದೆ. ಆದರೆ, ದೇವರು ನಿಷ್ಕರುಣಿ. ನನ್ನನ್ನುಳಿಸಿ ಎಲ್ಲವನ್ನೂ ಕೊಚ್ಚಿಕೊಂಡು ಹೋದ. ಇರಲಿ, ನಿನಗೇನು, ಪಶ್ಚಿಮದಲ್ಲಿ ಸೂರ್ಯೋದಯವಾದಂತಾಗಿದೆ"

"ಅಹ್ಹಹ್ಹ, ಅದೇ ಸಮಾಚಾರ ಹೇಳೋಣಾಂತ ನಿನ್ನ ಮನೆಕಡೆ ತೆರಳಿದ್ದೆ; ಅಲ್ಲಿ ಯಾರಿದ್ದಾರೆ' ಭೂತವೂ ಇಲ್ಲ ಇತ್ತ ನದಿಯನ್ನಾದರೂ ಕಾಣೋಣ ಎಂತ ಒಂದರೆ, ನಿನ್ನ ಅಳು ಕೇಳಿಸಿಬಿಟ್ಟು ಬಂದುಬಿಟ್ಟೆ. ನೋಡು, ಈ ನದಿಗೆ ನೇಮ ಕಂಬಳದ ಪಕ್ಕದಲ್ಲೇ ಒಂದು ಅಣೆಕಟ್ಟು ಕಟ್ಟಿಸುತ್ತಾರಂತೆ. ಅದಕ್ಕೆ ಕೂಲಿಗಳು ಬೇಕಾಗಿದ್ದಾರಂತೆ. ನಾನು ಇಂದು ಹೋಗಿ ಸೇರಿಕೊಂಡು ಬಿಟ್ಟೆ. ದಿನಾ ಎರಡು ರೂಪಾಯಿ ಮಜೂರಿ. ಹಾಗಾದರೆ, ನೀನೇ ಹೇಳು, ನನ್ನ ಭಾಗ್ಯದ ಚಂದ್ರೋದಯವಾಗಿಲ್ಲವೆ?"

ಬೂದ ತಲೆ ಮೇಲೆತ್ತಿ ನೋಡಿದ. ಆಗಸದಲ್ಲಿ ಚಂದ್ರ ನಸುಬಿಳಿಯ ಮೋಡದ ಹೊದಿಕೆ ಹೊದ್ದುಕೊಂಡು ಮುಗುಳ್ನಗುತಿದ್ದ. ಬೂದನ ತುಟಿಗಳು ತಮಗರಿವಿಲ್ಲದಂತೆಯೇ ತೆರೆದುವು; ಮೌನವಾಗಿ ಮಂದಸ್ಮಿತವೊಂದು ಅವುಗಳಿಂದ ಹೊರಬರುತ್ತಿದ್ದುದು ಲಿಂಗನ ಕಣ್ಣುಗಳಿಗೆ ಕಾಣಿಸಿತು.

೨

ದಿನಗಳು ಕಳೆಯುತ್ತ ಬಂದುವು. ಸುಗ್ಗಿಯ ಕಾಲವೂ ಕಾಣಿಸಿತು. ಬೂದ ತನ್ನ ಮನೆಯತ್ತ ಸಾಗುವವನಿದ್ದ. ದಾರಿಯಲ್ಲೇ ಊರ ಶಿವಮಂದಿರದ ಸುತ್ತ ನೂರಾರು ಜನರು ಸೇರಿದ್ದುದು ಕಂಡುಬಂತು. ಅದೇನಿರಬಹುದೆಂಬ ಕುತೂಹಲದಿಂದ ಬೂದನ ಕಾಲುಗಳತ್ತ ನಡೆದುವು.

ದೇವಾಲಯವೆಂದರೆ, ತೀರ ಜೀರ್ಣ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧) (ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಅಮೇರಿಕೆಯ ಮೇಳ

ವ್ಯವಸಾಯದ ಮೇಲೆ ವಿಜ್ಞಾನದ ಪ್ರಭಾವ

ಸಸ್ಯ ಮತ್ತು ಪ್ರಾಣಿಗಳ ಮೇಲೆ ಸೂರ್ಯನ ಬೆಳಕು ಬೀರುವ ಪರಿಣಾಮಗಳನ್ನು ವಿಜ್ಞಾನವು ಸಂಶೋಧಿಸಿಕೊಟ್ಟಿದೆ.

ಅಮೇರಿಕನ್ ವ್ಯವಸಾಯಕ್ಕೆ ಬಹುಮಟ್ಟಿಗೆ ವಿಜ್ಞಾನ ಮತ್ತು ಸಂಶೋಧನೆಗಳು ಆಧಾರವಾಗಿರುತ್ತವೆ. ಸಸ್ಯಗಳ ಮತ್ತು ಪ್ರಾಣಿಗಳ ಬೆಳವಣಿಗೆಯ ಮೇಲೆ ಬೆಳಕಿನ ಪರಿಣಾಮಗಳನ್ನು ಅಭ್ಯಸಿಸುತ್ತಿರುವ ಅಮೇರಿಕನ್ ವಿಜ್ಞಾನಿಗಳು, ಒಂದು ವರ್ಷದಲ್ಲಿ ಎರಡು ಅಥವಾ ಮೂರು ಸಾರಿ ಬೆಳೆಯಬಲ್ಲ ಬೆಳೆಗಳನ್ನು ಮತ್ತು ಹೆಚ್ಚು ಮೊಟ್ಟೆಗಳನ್ನಿಡಬಲ್ಲ ಹೇಂಟೆಗಳನ್ನು ಅಭಿವೃದ್ಧಿಗೊಳಿಸಿದ್ದಾರೆ.

ಮಣ್ಣು ಮತ್ತು ಹವೆಯಂತೆ, ದಿನದ ಅವಧಿಯೂ, ಒಂದು ಪ್ರದೇಶದಲ್ಲಿನ ಸಸ್ಯಗಳ ಹೊಂದಾಣಿಕೆಯ ಮೇಲೆ ಪರಿಣಾಮ ಬೀರುತ್ತದೆ. ಎಂಬ ವಿಷಯವು ಸುಮಾರು ೩೦ ವರ್ಷಗಳಿಗೂ, ಮುಂಚೆನಿಂದ ಅಮೇರಿಕದ ವ್ಯವಸಾಯ ಇಲಾಖೆಯ ವಿಜ್ಞಾನಿಗಳಿಗೆ ತಿಳಿದ ವಿಷಯವಾಗಿರುತ್ತದೆ. ೧೯೩೦ರಲ್ಲಿ ಹೊಗೆಸೊಪ್ಪಿನ ಗಿಡಗಳ ಸ್ವಭಾವದ ಬಗೆಗೆ ಪರಿಶೋಧನೆಗಳನ್ನು ಮಾಡುತ್ತಿದ್ದಾಗ ಈ ಪ್ರಕೃತಿ ನಿಯಮವನ್ನು ಕಂಡುಹಿಡಿಯಲಾಯಿತು.

ಹಲವಾರು ವರ್ಷಗಳಿಂದ ವಿಜ್ಞಾನ ಮತ್ತು ಸಂಶೋಧನೆಗಳು ಅಮೇರಿಕದ ರೈತನಿಗೆ ಸಹಾಯ ನೀಡಿವೆ. ಅಮೇರಿಕದ ಕೃಷಿ ಉತ್ಪಾದನೆ ಈಗ ೧೯೭೦ರಲ್ಲಿದ್ದ ಉತ್ಪಾದನೆಗಿಂತ ಸುಮಾರು ಏಳು ಪಾಲು ಅಧಿಕವಾಗಿದೆ. ನವದೆಹಲಿಯ ಪ್ರಪಂಚ ವ್ಯವಸಾಯ ಮೇಳದಲ್ಲಿನ ಅಮೇರಿಕನ್ ಪ್ರದರ್ಶನವಾಗಿರುವ ಅಮೇರಿಕೇ ಮೇಳದಲ್ಲಿ ಅಮೇರಿಕನ್ ವ್ಯವಸಾಯದ ಮಹಾ ಸಾಹಸವನ್ನು ಮತ್ತು ಸಂಶೋಧನೆ ಮತ್ತು ವಿಜ್ಞಾನ ವಹಿಸಿರುವ ಪಾತ್ರವನ್ನು ಸಚಿತ್ರವಾಗಿ ವಿವರಿಸಲಾಗಿದೆ.

ಗ್ರೀನ್ ಹೌಸ್‌ನಲ್ಲಿರುವ ಹೊಗೆಸೊಪ್ಪಿನ ಗಿಡಗಳು ಚಳಿಗಾಲದಲ್ಲಿ ಬೇಗನೆ ಹೂ ಬಿಡುತ್ತವೆ ಎಂಬಂಶ ೧೯೩೦ರಲ್ಲಿ ಗಮನಕ್ಕೆ ಬಂತು. ಆದರೆ ವಸಂತ ಋತು ಬಂದಾಗ ಇವು ಹೂ ಬಿಡದ ಸ್ಥಿತಿಗೆ ಪರಿವರ್ತಿತವಾದುವು. ಈ ವಿದ್ಯಮಾನ ಮಣ್ಣು ಮತ್ತು ಉಷ್ಣಮಾನಕ್ಕೆ ಸಂಬಂಧಿಸಿಲ್ಲ ಎಂದು ದೀರ್ಘಕಾಲದ ಅಧ್ಯಯನಗಳಿಂದ ವ್ಯಕ್ತವಾಯಿತು. ಸಸ್ಯಗಳಿಗೆ ಎಂಟು ಗಂಟೆಗಳ ಹಗಲಿನ ಬೆಳಕನ್ನು ಮತ್ತು ೧೬ ಗಂಟೆಗಳ ಕತ್ತಲನ್ನು ಒದಗಿಸಿದಾಗ ಅವು ಹೂ ಬಿಟ್ಟವು, ಇದರಿಂದ ದಿನ—ರಾತ್ರಿಯ ಚಕ್ರವು ನಿಯಾಮಕ ಅಂಶ ಎಂದು ಸ್ಪಷ್ಟವಾಯಿತು.

ಈ ಸಂಶೋಧನೆಗೆ ಫೋಟೋ ಪಿರಿಯಾಡಿಸಂ ಎಂದು ಹೆಸರು ಇಂದು ಪ್ರಪಂಚದ ಇತರ ಅನೇಕ ಭಾಗಗಳಲ್ಲಿ ಈ ವಿಷಯವನ್ನು ಅಭ್ಯಸಿಸಲಾಗುತ್ತಿದೆ. ಜರ್ಮನಿಯ ವಿಜ್ಞಾನಿಗಳು ಬೀಟ್‌ಗಳ ಬೆಳವಣಿಗೆಯ ಮೇಲೆ ಬೆಳಕಿನ ಪರಿಣಾಮವನ್ನು ಅಭ್ಯಸಿಸುತ್ತಿದ್ದಾರೆ. ಜಪಾನಿನಲ್ಲಿ ಭತ್ತದ ಬೆಳೆಗೆ ಫೋಟೋ ಪಿರಿಯಾಡಿಸಮನ್ನು ಅನ್ವಯಿಸಲಾಗುತ್ತಿದೆ, ಮತ್ತು ಪ್ಯೂರ್ಟೋ ರಿಕೋ ಮತ್ತು ಹವಾಯ್‌ಯಲ್ಲಿ ಕಬ್ಬಿನ ಬೆಳೆಗೆ ಈ ವಿಜ್ಞಾನವನ್ನು ಅನ್ವಯಿಸಲಾಗುತ್ತಿದೆ, ಇಂಗ್ಲೆಂಡಿನಲ್ಲಿ, ನೆದರ್‌ಲೇಂಡ್ಸ್‌ನಲ್ಲೂ ಪ್ರಯೋಗಗಳನ್ನು ಮಾಡಲಾಗುತ್ತಿವೆ.

ಕೃತಕ ಬೆಳಕಿನ ಉಪಯೋಗದಿಂದಾಗಿ, ಸಸ್ಯ ಬೆಳೆಸುವವರಿಗೆ, ವರ್ಷಕ್ಕೆ ಎರಡು ಬಾರಿ ಬೆಳೆಯುವ ಬೆಳೆಗಳನ್ನು ಸಿದ್ಧಗೊಳಿಸಲು ಸಾಧ್ಯವಾಗಿದೆ. ಡಾಲ್ಲಿಸ್ ಹುಲ್ಲು ಇದಕ್ಕೆ ಒಂದು ಉದಾಹರಣೆ ಇದು ಅಮೇರಿಕದ ದಕ್ಷಿಣ ಭಾಗದ ಬೇಸಿಗೆ ಕಾಲದ ಮುಖ್ಯ ಹುಲ್ಲುಗಳಲ್ಲೊಂದು. ನಿಯಂತ್ರಿತ ಬೆಳಕನ್ನು ಉಪಯೋಗಿಸಿ ವಿಜ್ಞಾನಿಗಳು ಎರ್ಗಟ್ ರೋಗದ ವಿರುದ್ಧ ನಿರೋಧಕ ಶಕ್ತಿಯುಳ್ಳ ಅಥವಾ ಬಹಳ ಪ್ರತಿಭಟನಾಶಕ್ತಿಯುಳ್ಳ ಸಸಿಗಳನ್ನು ಪಡೆಯಲು ಗಿಡಗಳನ್ನು ಕಸಿಮಾಡಿದರು. ಎರ್ಗಟ್ ರೋಗದಿಂದಾಗಿ ಅಮೇರಿಕದಲ್ಲಿ ಸಸ್ಯೋತ್ಪಾದಕ ಬೀಜಗಳ ಉತ್ಪಾದನೆಯೇ ಅಸಾಧ್ಯವಾಗಿತ್ತು. ಅಮೇರಿಕದಲ್ಲಿ ನೆಟ್ಟ ಡಾಲೀಸ್ ಹುಲ್ಲಿನ ಬೀಜವನ್ನು ಯಾವಾಗಲೂ ಬಹಳ ವೆಚ್ಚದಿಂದ ಆಸ್ಟ್ರೇಲಿಯದಿಂದ ಆಮದುಮಾಡಲಾಗುತಿತ್ತು. ಕಸಿಮಾಡುವಿಕೆಗಳಿಂದಾಗಿ— ಇದು ನಿಯಂತ್ರಿತ ಬೆಳಕಿನಿಂದ ಮಾತ್ರ ಸಾಧ್ಯ— ಅಮೇರಿಕಕ್ಕೆ ಕ್ರಮೇಣ ಎರ್ಗಟ್‌ರೋಗದ ವಿರುದ್ಧ ಪ್ರತಿಭಟನಾ ಶಕ್ತಿಯುಳ್ಳ ಹುಲ್ಲಿನ ಜಾತಿಗಳನ್ನು ಬೆಳೆಸಲು ಸಾಧ್ಯವಾಗಬಹುದು.

ಚಳಿಗಾಲದಲ್ಲಿ ಮೊಟ್ಟೆಯ ಉತ್ಪಾದನೆಯನ್ನು ಹೆಚ್ಚಿಸಲು ಕೋಳಿ ಗೂಡುಗಳಲ್ಲಿ ಕೃತಕ ಬೆಳಕನ್ನೊದಗಿಸುವ ಕ್ರಮ ಅನೇಕ ವರ್ಷಗಳಿಂದ ರೂಢಿಯಲ್ಲಿದೆ. ಮೊಟ್ಟೆಗಳ ಅಧಿಕ ಉತ್ಪಾದನೆಯು, ಹೆಚ್ಚು ಅವಧಿಯ ವರೆಗೆ ಬೆಳಕಿರುವುದರಿಂದ ಆ ಸಮಯದಲ್ಲಿ ಕೋಳಿಗಳು ಹೆಚ್ಚು, ತಿನ್ನುವುದರ ಫಲಿತಾಂಶ ಎಂದು ಭಾವಿಸಲಾಗಿತ್ತು. ಆದರೆ ಪುನರುತ್ಪಾದನೆಯನ್ನು ಮತ್ತು ಮೊಟ್ಟೆಯಿಡುವಿಕೆಯನ್ನು ಉತ್ತೇಜಿಸಬಲ್ಲ ಯಾವುದೋ ಒಂದು ಇತರ ಅಂಶವನ್ನು ಬೆಳಕು ಒದಗಿಸುತ್ತಿದೆ ಎಂದೀಗ ತಿಳಿದು ಬಂದಿದೆ.

ಸುಮಾರು ಎರಡು ವರ್ಷಗಳ ಹಿಂದೆ ಮೊಟ್ಟೆಯಿಡುವ ಸ್ಥಳಗಳಲ್ಲಿ ಅಲ್ಟ್ರಾವಯಲೆಟ್ ಸೂಕ್ಷ್ಮಾಣು ನಾಶಕ ದೀಪಗಳ ಉಪಯೋಗವನ್ನು ಪರೀಕ್ಷಿಸಲಾಯಿತು. ಐದು ವರ್ಷಗಳ ಅವಧಿಯ ವರೆಗೆ ವಿಸ್ತರಿಸಿದ ಇಂಥ ಅನೇಕ ಪ್ರಯೋಗಗಳಲ್ಲಿ ಕೃತಕ ಪ್ರಕಾಶವಿರುವ ಕೋಣೆಯಲ್ಲಿ, ಸೂರ್ಯ ಪ್ರಕಾಶದಿಂದ ದೂರವಾಗಿ ಇಟ್ಟ ಮತ್ತು ಸಂತತವಾಗಿ ಅಲ್ಟ್ರಾವಯಲೆಟ್ ಕಿರಣ ಪ್ರಸಾರಕ್ಕೆ ಗುರಿಪಡಿಸಿದ ಹೇಂಟೆಗಳು, ಇದೇ ಪರಿಸ್ಥಿತಿಯಲ್ಲಿ ಆದರೆ ಅಲ್ಟ್ರಾವಯಲೆಟ್ ಬೆಳಕು ಇಲ್ಲದ ಸ್ಥಳದಲ್ಲಿ ಇಟ್ಟ ಹೇಂಟೆಗಳಿಗಿಂತ ಶೇಕಡ ೧೦ರಿಂದ ೧೯ರಷ್ಟು ಹೆಚ್ಚು ಮೊಟ್ಟೆಗಳನ್ನಿಟ್ಟವು. ಮುಂಚೆ, ಅಲ್ಟ್ರಾವಯಲೇಟ್ ಬೆಳಕಿನಿಂದ ಕೋಳಿಗಳಲ್ಲಿ 'ಡಿ' ಜೀವಾತು ಉತ್ಪಾದನೆಯಾಗುವ ಪರಿಣಾಮ ಮಾತ್ರ ತಿಳಿದಿತ್ತು. ತಮ್ಮ ಆಹಾರದಿಂದ ಧಾರಾಳ 'ಡಿ' ಜೀವಾತು ಪಡೆದ ಕೋಳಿಮರಿಗಳಲ್ಲಿ ಈ ಹೊಸ ಪರಿಣಾಮವನ್ನು ಗಮನಿಸಲಾಯಿತು.

ಫೋಟೋ ಪಿರಿಯಾಡಿಸಂನ ಜ್ಞಾನದಿಂದಾಗಿ ವಿಜ್ಞಾನಿಗಳಿಗೆ, ಆಯಾಯ ಸ್ಥಳಗಳಿಗೆ ಹೊಂದಿಕೊಳ್ಳಬಲ್ಲ ಸಸ್ಯಗಳನ್ನು ರೂಢಿಗೊಳಿಸಲು ಸಾಧ್ಯವಾಗಿದೆ. ಅವರು ಅಮೇರಿಕದ ಅನೇಕ ಭಿನ್ನಪ್ರದೇಶಗಳಲ್ಲಿ ಬೆಳೆಯಲು ಸಮರ್ಪಕವಾದ ಸೋಯಾಬೀನ್ ಜಾತಿಗಳನ್ನು ಸಿದ್ಧಗೊಳಿಸಿದ್ದಾರೆ. ಸ್ವೀಟ್ ಸ್ಪಾನಿಶ್ ಮತ್ತು ಸೌತ್‌ಪೋರ್ಟ್ ಗ್ಲೋಬ್ ನೀರುಳ್ಳಿಗಳು ದಕ್ಷಿಣದ ಸಂಸ್ಥಾನಗಳಲ್ಲಿ ಬೆಳೆಯುವುದಿಲ್ಲ, ಏಕೆಂದರೆ, ಇಲ್ಲಿ ಹಗಲು ಬಹಳ ಚಿಕ್ಕದಾಗಿದ್ದು ಗೆಡ್ಡೆಗಳಿಗೆ ಬೆಳೆಯಲು ಸಾಕಷ್ಟು ಸಮಯವಿಲ್ಲ ಎಂದು ಅವರು ಕಂಡುಹಿಡಿದಿದ್ದಾರೆ,

ಕೆಲವು ಜಾತಿಯ ಹೊಗೆಸೊಪ್ಪು ಮತ್ತು ಕಾಫಿ ಗಿಡಗಳು ಬೆಳಕಿನ ತೀವ್ರತೆಗೆ ಬೇಗನೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತವೆ. ಇದರ ಪರಿಣಾಮವಾಗಿ ಈಗ ಈ ಜಾತಿಯ ಗಿಡಗಳು, ಬೆಳೆಯುವ ಕೆಲವು ಪ್ರದೇಶಗಳಲ್ಲಿ, ಬಟ್ಟೆಯ ಪರದೆಗಳಿಂದ ಅಥವಾ ತೆಳುವಾದ ಇತರ ರಕ್ಷೆಗಳಿಂದ ಹೊಗೆಸೊಪ್ಪಿನ ಮತ್ತು ಕಾಫಿಯ ಹೊಲಗಳಿಗೆ ಬಿಸಿಲಿನಿಂದ ರಕ್ಷಣೆ ನೀಡುವ ಕ್ರಮ ರೂಢಿಗೆ ಬಂದಿದೆ.

ಗ್ರೀನ್‌ಹೌಸ್ ಆಪರೇಟರರು, ಕೃತಕ ಬೆಳಕು ಮತ್ತು ಕೃತಕ ಕತ್ತಲೆಯನ್ನು ಉಪಯೋಗಿಸಿ ಪ್ರತಿ ಎರಡು ವಾರಗಳಿಗೊಮ್ಮೆ ಮಾರಾಟಕ್ಕೆ ಸೇವಂತಿಗೆಗಳನ್ನು ಉತ್ಪಾದಿಸುತ್ತಿದ್ದಾರೆ. ವಿಶೇಷ ರಾಷ್ಟ್ರೀಯ ರಜಾದಿನಗಳಲ್ಲಿ ಅರಳಿಕೊಂಡಿರುವ ಸೇವಂತಿಗೆಗಳು ದೊರೆಯುವಂತೆ ಕೆಲವು ತೋಟಗಾರರು ಬೆಳಕನ್ನು ಹತೋಟಿಯಲ್ಲಿಡುತ್ತಾರೆ.

ಪ್ರಾಣಿಗಳ ಮೇಲೆ ಬೆಳಕಿನ ಪರಿಣಾಮಗಳ ಬಗೆಗೆ ಇನ್ನೂ ಸಂಶೋಧನೆ ನಡೆದಿಲ್ಲವಾದರೂ, ಬೆಳಕಿನ ಕಿರಣವನ್ನು ಹೀರುವಿಕೆಯು ಕ್ಷೀರೋತ್ಪಾದಕ ಪ್ರಾಣಿಗಳ ಉತ್ಪಾದನೆಗೆ ಮತ್ತು ಸಂತಾನ ಶಕ್ತಿಗೆ ಬಹಳ ಮುಖ್ಯ ಎಂದು ತಿಳಿದು ಬಂದಿವೆ.

ದಿ ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನಂದರೆ, ಈ ಕೆಳಗೆ ಕಾಣಿಸಿದ ಋಣಸ್ಥರು ನಮ್ಮ ಬೇಂಕಿನಿಂದ ಚಿನ್ನಾಭರಣದ ಅಡವಿನಲ್ಲಿ ಸಾಲ ಪಡಕೊಂಡು ದೀರ್ಘಕಾಲದಿಂದ ಅಸಲು-ಬಡ್ಡಿಯನ್ನು ಬಾಕಿಮಾಡಿರುವುದರಿಂದ, ರಿಜಿಸ್ಟ್ರ್ ನೋಟೀಸು ಕೊಟ್ಟಲ್ಲೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರ ನಗಗಳನ್ನು ತಾರೀಕು 31—3—1960ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಮತ್ತು ತದನಂತರ ಯುಕ್ತ ಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹಿಲಾಂ ಮಾಡಲಾದೀತು. ತಿಳಿದಿರಲಿ

ಲೋನು ನಂಬ್ರ	ಹೆಸರು ಮತ್ತು ವಿಳಾಸ	ತಾ. 31-12-1959ರ ವರೆಗಿನ ಬಡ್ಡಿ ಸಮೇತ ಬಾಕಿ
710/55	ಕೆ. ಅಬ್ದುಲ್ ಖಾದರ್ S/o ಅಬ್ದುಲ್ ರಹಿಮಾನ್ ಸಾಹೇಬ್, ಕೋಟಿಕೇರಿ, ಮುಲ್ಕಿ	34-19
589/57	ಜಾರಪ್ಪ ಬಂಗೇರ S/o ನೋಣ್ತ್ರ ಪೂಜಾರಿ, ಕಲ್ಲಸಂಕ, ಕಾರ್ನಾಡು, ಮುಲ್ಕಿ.	40-44
1091/57	ಬೋಜ ಪುತ್ರನ್ S/o ಐತಪ್ಪ ಸಾಲ್ಯಾನ್, ಕೋಡಿ ಹೆಜಮಾಡಿ.	13-49
1094/57	ಚಿನ್ನಮ್ಮ W/o ದೇಜು, ಚಿತ್ರಾಪು ಮುಲ್ಕಿ.	23-47
1122/57	ಶಾನು ಶೆಟ್ಟಿ S/o ಕೊರಗ ಶೆಟ್ಟಿ, ಕರ್ನಿರೆ.	71-18
1402/57	ಬಾಬು ಪೂಜಾರಿ S/o ಕಾಂತಪ್ಪ ಪೂಜಾರಿ, ಕೊಲ್ನಾಡು, ಪಳೆಯಂಗಡಿ.	87-59
140/58	ಯಂ. ಕೆ. ಮೈದಿನ್ ಕುಟ್ಟಿ S/o ಅಬ್ದುಲ್ ಬ್ಯಾರಿ, ಕೊಲಚಿಕಂಬಳ, ಮುಲ್ಕಿ.	7?-40
177/58	ರಾಮ ಪೂಜಾರಿ C/o ದೇವು ಪೂಜಾರಿ, ಹೆಜಮಾಡಿ ಶಾಲೆಯ ಬಳಿ, ಹೆಜಮಾಡಿ.	18-64
536/58	ವಿಟ್ಠಲ ಶೆಟ್ಟಿ S/o ಮುದರ ಶೆಟ್ಟಿ, ಶಿಲ್ಪಾಡಿ ಬಂಟಸಾಲೆ, ಮುಲ್ಕಿ.	109-55
540/58	ಸುಂದರ ಶೆಟ್ಟಿ S/o ಸ್ಕಂದ ಶೆಟ್ಟಿ, ಮುಂಡ್ಕೂರ್ ದೊಡ್ಡ ಮನೆ, ಮುಂಡ್ಕೂರ್.	265-87
814/58	ಪಾಂಡು S/o ಬಿಗ್ರ, ಚಿತ್ರಾಪು, ಮುಲ್ಕಿ.	13-36
1182/58	ಯಚ್. ನಾಗೋಜಿ ಕೊಟ್ಯಾನ್ S/o ರಾಮ ಮೆಂಡನ್ ಹೆಜಮಾಡಿ.	39-76

ಮುಲ್ಕಿ
ತಾ. 8—3—1960

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್. ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ

ಸತ್ಯೇತಿಹಾಸ

ಶಿಲಾಲೇಖಗಳಿಂದ ಇತಿಹಾಸಲೇಖನ

ದೇಶದ ಇತಿಹಾಸ ಬರೆಯಲು ಶಿಲಾಲೇಖಗಳ ನೆರವು ಅಪಾರವಾಗಿದೆ. ನಮ್ಮ ದೇಶದಲ್ಲಿ ಮಹತ್ವದ ಶಿಲಾಲೇಖಗಳನ್ನು ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ.

ಯಾವುದೇ ರಾಷ್ಟ್ರದ ಇತಿಹಾಸ ನಿರ್ಧಾರಕ್ಕೆ ಆ ದೇಶದ ಒಂದು ಪರಂಪರೆ, ಸಾಹಿತ್ಯ ಮತ್ತು ಪ್ರಾಚೀನ ವಸ್ತುಶಾಸ್ತ್ರ ಇವುಗಳನ್ನು ಆದರಿಸಿ ರೂಪುಗೊಳ್ಳುತ್ತದೆ. ಪರಂಪರೆ ಅಥವಾ ಐತಿಹ್ಯವೆಂಬುದು ಒಬ್ಬರು ಇನ್ನೊಬ್ಬರಿಗೆ ಹೇಳಿ ಅವರು ಮತ್ತೊಬ್ಬರಿಗೆ ಹೇಳಿ, ಹೀಗೆ ಬಾಯಿಂದ ಬಾಯಿಗೆ ಹೋಗುತ್ತಾ ಕೊನೆಗೆ ತೀರ ಭಿನ್ನವಾಗಲಹುದಾದ ಕಾರಣ ಅವನ್ನು ಆಧಾರವಾಗಿಟ್ಟುಕೊಂಡು ಇತಿಹಾಸ ನಿರ್ಧರಿಸುವುದು ಯುಕ್ತವಾಗಲಾರದು. ಪರಂಪರೆ ಅಥವಾ ಐತಿಹ್ಯ ಲೇಖನಿಯ ಮೂಲಕ ಇಳಿದು ಉಳಿದಾಗ ಅದೇ ಇತಿಹಾಸ ತಿಳಿಯಲು ಒಂದು ಆಧಾರವಾಗುತ್ತವೆ ಸಾಹಿತ್ಯವಾಗುತ್ತದೆ. ಸಾಹಿತ್ಯವೆಂಬುದನ್ನು ಇಲ್ಲಿ ಒಂದು ವಿಶಾಲ ಅರ್ಥದಲ್ಲಿ ನೋಡಬೇಕು. ಒಂದು ದೇಶದಲ್ಲಿ ಬರಹದ ರೂಪದಲ್ಲಿ ಎಷ್ಟು ವಸ್ತು ಲಭ್ಯವಿದೆಯೋ ಅದೆಲ್ಲ ಸಾಹಿತ್ಯವೇ. ಘಟನಾವಳಿಗಳು, ಧರ್ಮಗ್ರಂಥಗಳು, ಕಥಾನಕಗಳು, ಆಯಾಕಾಲದ ತತ್ವಬೋಧೆಗಳು, ಉದ್ಗ್ರಂಥಗಳು, ಕವನಗಳು, ನಾಟಕಗಳು, ಕಥೆಕಾದಂಬರಿಗಳು, ಇತ್ಯಾದಿಗಳೆಲ್ಲ ಇತಿಹಾಸ ತಿಳಿಯಲು ಆವಶ್ಯಕವಾದ ವಸ್ತುವನ್ನು ಒದಗಿಸುತ್ತವೆ.

ಇಷ್ಟಾದರೂ ಇವುಗಳನ್ನಷ್ಟೇ ಆಧರಿಸಿ ಇತಿಹಾಸ ನಿರ್ಧರಿಸಲು ಸಂಪೂರ್ಣವಾಗಿ ಸಾಧ್ಯವಾಗುತ್ತದೆಯೆಂದು ತಿಳಿಯುವುದು ತಪ್ಪಾಗುತ್ತದೆ. ಈ ವಸ್ತು ಒಂದು ದೃಷ್ಟಿಯಿಂದ ಎಲ್ಲದರ ಕಲಸುಮೇಲೋಗರವೂ ಹೌದು. ಕಟ್ಟುಕಥೆಗಳೂ ಅದರಲ್ಲಿರುತ್ತವೆ, ನಿಜವಾದ ಘಟನೆಗಳೂ ಇರುತ್ತವೆ ಈ ಕಲಸು ಮೇಲೋಗರ ಎಷ್ಟೋ ವೇಳೆ ಸರಿದಾರಿ ತೋರಿಸುವ ಬದಲು ಗೊಂದಲಕ್ಕೀಡುಮಾಡುವುದೂ ಉಂಟು. ಎಷ್ಟೋ ವೇಳೆ ಸಾಹಿತ್ಯದಲ್ಲಿ ನಿಜಘಟನೆಗಳೇ ವರದಿಯಾಗಿದ್ದರೂ ಅವುಗಳನ್ನು ನಂಬುವುದು ಕಷ್ಟವಾಗುತ್ತದೆ. ಹೀಗಾಗಿ ಇತಿಹಾಸಕಾರನಿಗೆ ಸಾಹಿತ್ಯಪೂರ್ಣವಾಗಿ ಆಧಾರವಾಗಲಾರದು. ಅಷ್ಟೇ ಅಲ್ಲ ಸಾಹಿತ್ಯದಲ್ಲಿ ಇನ್ನೊಂದು ದೋಷವಿದೆ. ಸಾಹಿತ್ಯಕಾರ ಮೂಲ ವಾಕ್ಯಗಳಿಗೆ ತನ್ನದೇ ಬಣ್ಣಕೊಟ್ಟು ಬರೆಯುವುದೂ ಉಂಟು. ಅಂತೆಯೇ ಸಾಹಿತ್ಯ ಕೃತಿಗಳಲ್ಲಿ ಬರುವ ಘಟನೆಗಳು ಇತಿಹಾಸಕ್ಕೆ ಆಧಾರವಾಗಲಾರವು.

ಪ್ರಾಚೀನ ವಸ್ತು ಶಾಸ್ತ್ರದ ಮಾತು ಬೇರೆ. ಇತಿಹಾಸಕಾರನಿಗೆ ಪ್ರಾಚೀನ ವಸ್ತುಶಾಸ್ತ್ರ ಒಂದು ಮುಖ್ಯ ಆಧಾರ. ಅದನ್ನು ನಂಬಿಯೇ ಆತ ತನ್ನ ಕಾರ್ಯವನ್ನು ಬಹುಮಟ್ಟಿಗೆ ನಿರ್ವಹಿಸುತ್ತಾನೆ.

ಹಳೆಯ ಕಾಲದ ಕಲ್ಲಿನ ಆಯುಧವನ್ನೇ ತೆಗೆದುಕೊಳ್ಳಿ, ಉಪಕರಣಗಳನ್ನೇ ತೆಗೆದುಕೊಳ್ಳಿ, ಅವು ಒಂದೊಂದೂ ಇತಿಹಾಸಕಾರನಿಗೆ ಬೇರಾದ ಒಂದೊಂದು ಕಥೆ ಹೇಳುತ್ತದೆ. ಭೂಮಿಯನ್ನು ಅಗೆದಾಗ ಸಿಗುವ ಮಣ್ಣಿನ ಪಾತ್ರೆಗಳು, ಆಟದ ಸಾಮಾನುಗಳು, ನಾಣ್ಯಗಳು, ಮೆಡಲ್‌ಗಳು, ಶಿಲಾಶಾಸನಗಳು, ಮೂರ್ತಿಗಳು, ಶಿಲ್ಪಕೃತಿಗಳು, ದೊಡ್ಡದೊಡ್ಡ ಕಂಭಗಳು, ಹಾಳುಬಿದ್ದ ಭವನಗಳು, ಮರದ ಕೆತ್ತನೆ ಕೆಲಸದ ದಾಖಲೆಗಳು, ಇವುಗಳೆಲ್ಲ ಆಯಾಕಾಲದಮಾನವನ ಕ್ರಿಯಾ ಶಕ್ತಿಯನ್ನೂ ಕಾರ್ಯಚಟುವಟಿಕೆಗಳನ್ನೂ ಸೂಚಿಸುತ್ತವೆ. ಅವುಗಳೇ ಇತಿಹಾಸಕಾರನಿಗೆ ತನ್ನ ಕಾರ್ಯನಿರ್ವಹಿಸಲು ಒಂದು ಮುಖ್ಯ ಸಾಧನ; ಆಧಾರ ವಸ್ತು ಅವುಗಳನ್ನು ಪೂರ್ಣನಂಬಿ ಆತನು ಕಾರ್ಯದಲ್ಲಿ ಮುನ್ನಡೆಯಬಹುದು.

ಆದರೆ ಇವುಗಳ ಪೈಕಿ ಅತ್ಯಂತ ಮುಖ್ಯವಾದವು ಎಂದರೆ ಶಿಲಾಶಾಸನಗಳು. ಅವುಗಳನ್ನು ಸಂಪೂರ್ಣ ನಂಬಬಹುದು ಅವು ಸತ್ಯಕ್ಕೆ ಚ್ಯುತಿತಾರವು. ಇಲ್ಲಿ ಊಹೆಗೆ ಸ್ಥಾನವಿಲ್ಲ ಕಲ್ಲಿನ ಮೇಲೆ ಅಥವಾ ಕಲ್ಲಿನಷ್ಟು ಗಟ್ಟಿ ವಸ್ತುವಿನ ಮೇಲೆ ಕೊರೆದು ಬರೆದಿರುವ ಶಿಲಾ ಲೇಖಗಳ ಅಧ್ಯಯನವೇ ಒಂದು ಪ್ರತ್ಯೇಕ ಶಾಸ್ತ್ರ. ಹಳೆಯ ಲಿಪಿಗಳ ಪರಿಚಯ, ಅವುಗಳ ಮೂಲ ಮತ್ತು ಬೆಳೆವಣಿಗೆ, ಪದಗಳನ್ನು ಬರೆಯುವ ರೀತಿ, ಇವುಗಳನ್ನೆಲ್ಲ ಗಮನಿಸಿ ಆ ಕಾಲದ ಇತಿಹಾಸ ನಿರ್ಧರಿಸುವುದು ಒಂದು ಶಾಸ್ತ್ರ. ಅಂತೆಯೇ ನಾಣ್ಯಗಳು ಸಹ ಒಂದು ವಿಶಿಷ್ಟ ಅಧ್ಯಯನಕ್ಕೆ ಆಧಾರವಾಗಿವೆ.

ಭಾರತದಲ್ಲಿ ಶಿಲಾ ಲೇಖಗಳಿಗಂತೂ ಒಂದು ವಿಶಿಷ್ಟ ಸ್ಥಾನವಿದೆ. ಪ್ರಾಚ್ಯ ವಸ್ತುಗಳ ಆಧಾರದ ಮೇಲೆ ಬರೆಯಲ್ಪಟ್ಟಿರುವ ಇತಿಹಾಸದ ಬಹುಭಾಗ ಈ ಶಿಲಾ ಲೇಖನಗಳನ್ನೇ ಆಧರಿಸಿಕೊಂಡಿದೆ. ಶಿಲಾ ಲೇಖಗಳು ಇಲ್ಲದೆ ಹೋಗದಿದ್ದರೆ ಪ್ರಾಯಶಃ ನಮ್ಮ ದೇಶದ ಇತಿಹಾಸ ತಿಳಿಯಲು ಆಧಾರವೇ ಸಿಗುತ್ತಿರಲಿಲ್ಲವೇನೋ!

ಭಾರತದಲ್ಲಿ ಶಿಲಾ ಲೇಖ ಸಂಪತ್ತು ಅಪಾರವಾಗಿರುವುದು ಸುದೈವವೆನ್ನಬೇಕು ಇತಿಹಾಸದ ದಾಖಲೆಗಳು ಸಂಗ್ರಹಿಸಲ್ಪಟ್ಟಿರುವ ದೊಡ್ಡ ದೊಡ್ಡ ಪತ್ರಾಗಾರಗಳು ನಮ್ಮ ದೇಶದಲ್ಲಿಲ್ಲದಿರುವ ಭಾರಿ ಕೊರತೆಯೊಂದನ್ನು ಪೂರೈಸುತ್ತವೆಯೆಂದು ಹೇಳಬಹುದು. ಈಗಿನ ತನಕ ಲಭಿಸಿರುವ ಸಾವಿರಾರು ಶಿಲಾಲೇಖಗಳ ಸಂಗ್ರಹವೇ ನಮ್ಮ ದೇಶದ ಭಾರಿ ಐತಿಹಾಸಿಕ ಸಂಪತ್ತಾಗಿದೆ. ಅಷ್ಟೇ ಅಲ್ಲ. ಪ್ರತಿ ವರ್ಷ ಹೊಸ ಹೊಸ ನೂರಾರು ಶಿಲಾ ಲೇಖಗಳೂ ಪುರಾತನ ನಿವೇಶನಗಳನ್ನು ಅಗೆದಂತೆಲ್ಲ ಲಭಿಸುತ್ತಿವೆ.

ಶಿಲಾ ಲೇಖಗಳನ್ನು ಬರೆದವರು ಅದು ಇತಿಹಾಸ ತಿಳಿಯಲು ಆಧಾರವಾಗಲಿ ಎಂದು ಬರೆಯಲಿಲ್ಲ. ಇದರಿಂದ ಅನುಕೂಲವೂ ಉಂಟು, ಅನನುಕೂಲವೂ ಉಂಟು. ಯಾವುದೇ ಪಕ್ಷಪಾತವಿಲ್ಲದೆ ಪ್ರಾಸಂಗಿಕವಾಗಿ ಅವುಗಳನ್ನು ಬರೆದಿರುವುದರಿಂದ ಅವು ಸತ್ಯಕ್ಕೆ ಚ್ಯುತಿತಾರವು. ಇದರಿಂದಾಗಿ ಒಂದು ಅನನುಕೂಲವೇನೆಂದರೆ ಇತಿಹಾಸಕ್ಕೆ ಇವು ಆಧಾರವಾಗಲಿ ಎಂಬ ದೃಷ್ಟಿ ಇದ್ದರೆ ಅವು ಹೆಚ್ಚು ವಿವರಗಳಿಂದ ಕೂಡಿರುತ್ತಿದ್ದುವು.

ಅಂತೆಯೇ ಇದೀಗ ಈ ಶಿಲಾ ಲೇಖಗಳಿಂದ ನಮಗೆ ಬೇಕಾದ ವಸ್ತುವನ್ನು ಆರಿಸಲು ತುಂಬಾ ಶ್ರದ್ಧೆ ಹಾಗೂ ಶ್ರಮ ವಹಿಸಬೇಕಾಗುತ್ತದೆ. ನಮಗೆ ಬೇಕಾದ ವಸ್ತುವನ್ನು ಕಣ್ಣಲ್ಲಿ ಕಣ್ಣಿಟ್ಟು ಹುಡುಕಿ ಆರಿಸಿ ಒಂದಕ್ಕೊಂದು ಸಂಬಂಧ ಕಲ್ಪಿಸಿ ವಿಷಯ ತಿಳಿಯಬೇಕಾಗುತ್ತದೆ. ಇಷ್ಟು ಶ್ರಮ ನಿರರ್ಥಕವೇನಲ್ಲ. ಕಾರಣ ಹಾಗೆ ಸಂಗ್ರಹಿಸುವ ವಸ್ತುವಿಗೆ ಒಂದು ನಿರ್ದಿಷ್ಟ ಆಧಾರವಿದ್ದು ನಂಬಲರ್ಹವಾಗುತ್ತದೆ. ಸಾಹಿತ್ಯದಲ್ಲಿ ನಮ್ಮ ಗಮನಕ್ಕೆ ಬರುವ ಘಟನೆಗಳಿಗೆ ಅದು ಪುಷ್ಟಿಕೊಡುತ್ತದೆ. ಐತಿಹ್ಯಕ್ಕೆ ಅಂಗೀಕಾರ ಮುದ್ರೆ ನೀಡುತ್ತದೆ.

ಅಂದ ಮಾತ್ರಕ್ಕೆ ಶಿಲಾ ಲೇಖದ ರೂಪದಲ್ಲಿ ದೊರಕುವ ವಸ್ತುವಿನ ಬಗ್ಗೆ ಬೇರೆ ವಾದವೇ ಇಲ್ಲವೆನ್ನುವಂತಿಲ್ಲ. ಒಂದು ಲೇಖಕ್ಕೆ ಹಲವರು ಹಲವು ಬಗೆಯ ಅರ್ಥಕೊಡಬಹುದು. ಕೆಲವು ವಿನಾಯಿತಿಗಳನ್ನು ಬಿಟ್ಟರೆ ಶಿಲಾಲೇಖ ಒಟ್ಟಿನಲ್ಲಿ ನಂಬಲರ್ಹವಾದ ದಾಖಲೆಯಾಗುತ್ತದೆ.

ಸಾಮಾನ್ಯವಾಗಿ ಕಲ್ಲಿನ ಮೇಲೆ ಇಲ್ಲವೇ ಲೋಹಪೀಠದ ಮೇಲೆ ಶಿಲಾ ಲೇಖಗಳು ಇರುವುದು ಕಂಡುಬರುತ್ತದೆ. ಲೇಖಗಳಿರುವ ಕಲ್ಲುಗಳು ಬಂಡೆಗಳ ರೂಪದಲ್ಲಾದರೂ ಇರಬಹುದು, ಗುಹೆಗಳ ಗೋಡೆಗಳ ರೂಪದಲ್ಲಾದರೂ ಇರಬಹುದು, ಕಂಭಗಳು, ಚಪ್ಪಡಿಗಳು, ಮೂರ್ತಿಗಳು, ನೆನಪಿನ ದಾಖಲೆಗಳು, ಹೀಗೆ ಹಲವು ವಸ್ತುಗಳ ರೂಪದಲ್ಲಿರಬಹುದು. ಲೋಹದ ಮಟ್ಟಿಗೆ ಹೇಳುವುದಾದರೆ ಹಿತ್ತಾಳೆ, ತಾಮ್ರ, ಕಂಚು ಇವುಗಳಿಂದ ತಯಾರಿಸಿದ ಪಾತ್ರೆಗಳ ಮೇಲೋ, ಮೂರ್ತಿಗಳ ಮೇಲೋ, ತಟ್ಟೆಗಳ ಮೇಲೋ ಲೇಖಗಳಿರುವುದು ಸಾಮಾನ್ಯ. ಚಿನ್ನದ ಹಾಗೂ ಬೆಳ್ಳಿಯ ತಗಡಿನ ಮೇಲೂ ಲೇಖಗಳಿರುವುದೂ ಉಂಟು. ಕಬ್ಬಿಣದ ಮೇಲೂ ಲೇಖಗಳು ಇಲ್ಲದಿಲ್ಲ. ದೆಹಲಿಯ ಬಳಿ ಮೆಹರೌಲಿಯಲ್ಲಿರುವ ಕಬ್ಬಿಣದ ಕಂಭ ಇದಕ್ಕೊಂದು ಉತ್ತಮ ಉದಾಹರಣೆ. ಇದರ ಮೇಲೆ ಬಹು ಸುಂದರವಾದ ಲೇಖವಿದೆ. ಕ್ರಿಸ್ತಶಕ ೩೭೫ರಿಂದ ೪೧೩ರ ವರೆಗೆ ರಾಜ್ಯವಾಳಿದ ದ್ವಿತೀಯ ಚಂದ್ರಗುಪ್ತನ ವಿಜಯ ಯಾತ್ರೆಗಳ ವರ್ಣನೆ ಆ ಲೇಖದಲ್ಲಿದೆ. ಇಟ್ಟಿಗೆ, ಮಣ್ಣಿನ ಪಾತ್ರೆಗಳು, ಮಣ್ಣಿನ ಪೀಠಗಳು ಮತ್ತು ಮರದ ಹಲಗೆ ಇತ್ಯಾದಿಗಳ ಮೇಲೆ ಲೇಖಗಳಿರುವುದೂ ಕಂಡು ಬಂದಿದೆ.

ಶಿಲಾ ಲೇಖಗಳು ಎಂದರೆ ಸಾಮಾನ್ಯವಾಗಿ ಅವು ಕೆತ್ತಲ್ಪಟ್ಟಿರುತ್ತವೆ. ಆದರೆ ಅಚ್ಚಿನ ಹಾಗೂ ಲಿಖಿತ ದಾಖಲೆಗಳೂ ಇಲ್ಲದಿಲ್ಲ. ಆದರೆ ಯಾವುದು ಕೆತ್ತಲ್ಪಟ್ಟಿದೆಯೋ ಅದನ್ನು ಮೂಲವೆಂದು ನಾವು ಪರಿಗಣಿಸಬಹುದು.

ಭಾರತದಲ್ಲಿ ದೊರೆತಿರುವ ಅತ್ಯಂತ ಹಳೆಯ ಲೇಖಗಳೆಂದರೆ ಹರಪ್ಪಾ ಮತ್ತು ಮೊಹೆಂಜದಾರೋ (ಇವು ಈಗ ಪಶ್ಚಿಮ ಪಾಕಿಸ್ತಾನದಲ್ಲಿವೆ) ಲೇಖಗಳಂತೂ ಜಗತ್ಪ್ರಸಿದ್ಧವಾಗಿವೆ. ಸೌರಾಷ್ಟ್ರದಲ್ಲಿರುವ ಲೊಥಾಲ್ ಮತ್ತು ಪೂರ್ವ ಪಂಜಾಬಿನಲ್ಲಿರುವ ರೂಪಾರ್‌ಗಳಲ್ಲೂ ಇಂತಹ ಲೇಖಗಳು ಗೋಚರವಾಗಿವೆ. ಆದರೆ ಇಲ್ಲಿ ದೊರೆತಿರುವ ಸಣ್ಣ ಸಣ್ಣ ಲೇಖಗಳು ಇನ್ನೂ ಪರಿಪೂರ್ಣವಾಗಿಲ್ಲ. ಆದರೆ ಈ ಲೇಖಗಳ ಲಿಪಿಬ್ರಾಹ್ಮಿಲಿಪಿಗೂ ಹಿಂದಿನದು ಎಂಬುದಂತೂ ಸ್ಪಷ್ಟವಾಗಿದೆ.

ಸುಲಭಗ್ರಾಹ್ಯ ಶಿಲಾ ಲೇಖಗಳು ದೊರೆತಿರುವುದು ಅಶೋಕನ ಕಾಲದ ಶಿಲಾ ಲೇಖಗಳಿಂದೀಚೆಗೆ ಮಾತ್ರ ಎಂದೂ ಹೇಳಬಹುದು ಅಶೋಕನ ಕಾಲದ ಲೇಖಗಳು ೧೫೦ಕ್ಕೂ ಹೆಚ್ಚು ದೊರಕಿದೆ.

ಭಾರತದಲ್ಲಿ ಸಾಮಾನ್ಯವಾಗಿ ಶಿಲಾ ಲೇಖಗಳು ಬ್ರಾಹ್ಮಿ ಲಿಪಿಯಲ್ಲಿ ಇದ್ದು ಪ್ರಾಕೃತ ಭಾಷೆಯಲ್ಲಿವೆ.

ಸಾಮ್ರಾಟ್ ಅಶೋಕನ ಬಗ್ಗೆ ನಮಗೆ ಕರಾರುವಾಕ್ಕಾಗಿ ತಿಳಿದಿರುವುದೆಲ್ಲ ಈ

(೮ನೇ ಪುಟ ನೋಡಿರಿ)

ಏಲಂ ನೋಟೀಸು

ದಿ. ಕೆಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ಟ್ರ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದೆ ಇರುವುದರಿಂದ, ಸದ್ರಿಯವರು ಆದಿಟ್ಟ ಚಿನ್ನಾಭರಣಗಳನ್ನು ತಾರೀಕು 12—4—1960ರೊಳಗೆ ಬಿಡಿಸದಿದ್ದಲ್ಲಿ ತಾರೀಕು 20—4—1960ನೇ ಬುಧವಾರ ದಿನ ಮಧ್ಯಾಹ್ನ ಘಂಟೆ ಎರಡಕ್ಕೆ ಸರಿಯಾಗಿ ಸದ್ರಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಮೇಲ್ಕಾಣಿಸಿದ ತಾರೀಕಿಗೆ ಏಲಂ ಮಾಡಲು ಅಸಾಧ್ಯವಾದಲ್ಲಿ ಪುನಃ ನೋಟೀಸು ಕೊಡದೆನೇ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಏಲಂ ಮುಂದುವರಿಸಲಾದೀತು.

ತಾರೀಕು ಮತ್ತು ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
31—3—'58 34/112	ನರಸಿಂಹ ಖಾರ್ವಿ S/o ನಾಗಪ್ಪ ಖಾರ್ವಿ, ಕಾಸಿನ ಫೆರ್ರಿ ರಸ್ತೆ, ಕುಂದಾಪುರ ಪೋಸ್ಟು.	ರೂ. 20_00
22—1—'59 35/128	ನಾರಾಯಣ ಸೇರಿಗಾರ S/o ನಾಗಪ್ಪ ಸೇರಿಗಾರ, ವಾಸು ಸೇರಿಗಾರ ಮನೆ, ಉಪ್ಪಿನಕುದ್ರು ಪೋಸ್ಟು.	ರೂ. 17_00
10—2—'59 35/220	ಎ. ನಾರಾಯಣ ಸೆಟ್ಟಿ S/o ಎ. ನಂದ್ಯಪ್ಪ ಸೆಟ್ಟಿ, ವಕೀಲ್ ಕ್ಲಾರ್ಕ್, ಕುಂದಾಪುರ ಪೋಸ್ಟು.	ರೂ. 25_00
11—2—'59 35/282	ರಘುರಾಮ ಸೆಟ್ಟಿ N/o ವಿ. ಸೀನಪ್ಪ ಸೆಟ್ಟಿ, ಟೀಚರ್, ಸ್ಯೆಂಟ್ ಮೇರೀಸ್ ಹಾಯರ್ ಎಲಿಮೆಂಟರಿ ಸ್ಕೂಲ್, ಕುಂದಾಪುರ ಪೋಸ್ಟು.	ರೂ. 30_00
21—3—'59 35/403	ಕೆ. ಕೆಂಚ S/o ದುರ್ಗಿ ಹೆಂಗ್ಸು ಕುಂದೇಶ್ವರರ ಕುಂದಾಪುರ ಪೋಸ್ಟು.	ರೂ. 35 00

Office of the Catholic Bank Ltd.,
COONDAPOOR.
9—3—1960.

(Sd.) N. Fernandes
Ag. Agent.

ಪರರಿಗೆ ಸುಖ ದೊರಕಿಸುವುದೆಂದರೆ, ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳುವುದು. ತನುಮನಧನಗಳಿಂದ ತನ್ನೊಡನೆ ಪರರ ಉನ್ನತಿಯನ್ನೂ ಹಾರೈಸುವವನು ಮುಂದೆಂದೂ ಪಶ್ಚಾತ್ತಾಪಪಡಬೇಕಾಗಿ ಬರುವುದಿಲ್ಲ; ಆತ ತನ್ನ ಬದುಕನ್ನು ಸಾರ್ಥಕವಮಾಡಿಕೊಂಡಿರುತ್ತಾನೆ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೭-೩-'೬೦	೨೮

ಕೇಂದ್ರ ಶೈಕ್ಷಣಿಕ ಯೋಜನೆ

ಕೇಂದ್ರ ಶಿಕ್ಷಣ ಮಂತ್ರಿ ಶಾಖೆಯು ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಕೈಗೊಳ್ಳಬೇಕಾದ ಶೈಕ್ಷಣಿಕ ಅಭಿವೃದ್ಧಿ ಯೋಜನೆಯು ಕರಡನ್ನೀಗ ಬಹಿರಂಗ ಪಡಿಸಿದೆ. ಈ ಯೋಜನೆಯಲ್ಲಿ ರೂ. ೪೮೦.೦೭ ಕೋಟಿ ವೆಚ್ಚದ ಕಾರ್ಯಕ್ರಮಗಳ ವಿವರಣೆಯನ್ನು ಕೊಡಲಾಗಿದೆ ಎರಡನೆಯ ಮತ್ತು ಮೊದಲನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಈ ವಿಭಾಗಕ್ಕೆ ನಿಗದಿಗೊಳಿಸಿದ ಹಣಕ್ಕಿಂತ ಈ ಮೊತ್ತವು ಬಹಳಷ್ಟು ಹೆಚ್ಚಿದೆ ಎಂಬುದು ನೋಡುವಾಗಲೇ ತಿಳಿಯುತ್ತದೆ. ಆದುದರಿಂದ, ಶೈಕ್ಷಣಿಕ ಕ್ಷೇತ್ರಕ್ಕೆ ನಿಜವಾಗಿ ಕೊಡಬೇಕಾಗಿರುವ ಗಮನವೀಗತಾನೆ ದೊರೆಯಲು ಪ್ರಾರಂಭವಾಗುತ್ತಿದೆಯೆನ್ನಬಹುದು.

ನಮ್ಮ ಸಂವಿಧಾನದಲ್ಲಿ ಮೂಲತಃ ೧೯೬೦ರ ಒಳಗೆ ೬ರಿಂದ ೧೪ ವರ್ಷ ಪ್ರಾಯದ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣವೀಯಬೇಕೆಂಬ ಪರಿಚ್ಛೇದವೊಂದಿದ್ದುದನ್ನೂ ಅದನ್ನು ಇತ್ತೀಚೆಗೆ ತಿದ್ದುಪಡಿಸಿ ೧೯೬೫ಕ್ಕೆ ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಿಗೆಂದು ಮಾಡಿಕೊಂಡಿರುವುದನ್ನೂ ನಾವು ಗಮನಿಸಿದರೆ, ನಮ್ಮ ಮೂಲಧ್ಯೇಯ ಮತ್ತು ಯೋಜನೆಗಳಲ್ಲಿ ಆದಕ್ಷಿತ್ರ ಪ್ರಾಶಸ್ತ್ಯಗಳು ಸರಿಯಾಗಿ ಹೊಂದಿಕೊಂಡಿಲ್ಲವೆಂದು ತಿಳಿಯಬಹುದು. ಇದಕ್ಕೆ ಹಲವಾರು ಕಾರಣಗಳೂ ಇಲ್ಲವೆನ್ನುವಂತಿಲ್ಲ. ಆದರೂ ನಿರಕ್ಷರಸ್ಥರೂ ಅಜ್ಞಾನಿಗಳೂ ತುಂಬಿರುವ ನಮ್ಮ ದೇಶದಲ್ಲಿ ವಿದ್ಯಾ ಪ್ರಚಾರವು ತೀವ್ರವಾಗುವ ಆವಶ್ಯಕತೆಯಿದೆಯೆಂಬುದನ್ನು ಅವಶ್ಯ ಒಪ್ಪಬೇಕು. ಅಶನ, ವಸನ ಮತ್ತು ವಸತಿಗಳ ಸಮಸ್ಯೆಗಳನ್ನು ಬಗೆಹರಿಸಿ ಈ ಶಿಕ್ಷಣ ಪ್ರಸಾರದ ಕಾರ್ಯಕ್ಕೆ ಕೈಹಾಕುವುದು ಯುಕ್ತವೇ ಆಗಿದೆ. ನಮ್ಮ ಮೊದಲೆರಡು ಯೋಜನೆಗಳಲ್ಲಿ ದೇಶದ ಅಂತರಿಕ ಸಂಪತ್ತನ್ನು ಹೆಚ್ಚಿಸುವತ್ತ ಹೆಚ್ಚಿನ ಗಮನವನ್ನು ಕೊಡಲಾಗಿದೆಯೆಂಬುದನ್ನು ಒಪ್ಪುವುದು ತಪ್ಪಲ್ಲ. ನಮ್ಮ ಆಹಾರ ಸಮಸ್ಯೆ ವಸನ ಮತ್ತು ವಸತಿ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ನಾವು ಕಂಡುಕೊಂಡಿರುವೆವೆಂದು ಹೇಳುವಷ್ಟು ಧೈರ್ಯ ಸಾಲದು. ಆದರೂ ಹಿಂದಿಗಿಂತ ನಾವು ಸುಧಾರಿಸಿಕೊಂಡಿದ್ದೇವೆ ಎಂದು ಮಾತ್ರ ಹೇಳಬಹುದು. ಹಾಗಿರುವಾಗ ಶೈಕ್ಷಣಿಕ ಕ್ಷೇತ್ರದತ್ತ ತೀವ್ರಗಮನ ಹರಿಸುವ ಕಾಲ ಪರಿಪಕ್ವವಾಗಿದೆಯೆನ್ನುವುದು ಸಾಧ್ಯವಿಲ್ಲವಾದರೂ ಅಕಾಲವೆನ್ನುವಂತಿಲ್ಲ. ಆದುದರಿಂದ ಈ ತೃತೀಯ ಯೋಜನೆಯಲ್ಲಿ ೨೫೦ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿದುದು ಸ್ವಾಗತಾರ್ಹವೇ ಎನ್ನಬೇಕು.

ದೇಶದಲ್ಲಿ ೬ರಿಂದ ೧೧ ವರ್ಷದೊಳಗಿನ ಎಲ್ಲ ಮಕ್ಕಳಿಗೂ ಒತ್ತಾಯದ ಪ್ರಾಥಮಿಕ ಶಿಕ್ಷಣವೀಯುವುದು, ಶಿಕ್ಷಣರಂಗದ ಎಲ್ಲ ವಿಭಾಗಗಳಲ್ಲಿಯೂ ಹೆಚ್ಚು ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಈ ಯೋಜನೆಯ ಅತಿ ಪ್ರಧಾನವಾದ ಅಂಗವಾಗಿದೆ. ಹಾಗೆಯೇ ಪ್ರಾಥಮಿಕ ಶಿಕ್ಷಕರ ವೇತನ ಪ್ರಮಾಣವನ್ನು ರಾಷ್ಟ್ರೀಯ ಕನಿಷ್ಠ ಪ್ರಮಾಣವಾದ ಮಾಸಿಕ ತರಬೇತಿ ಪಡೆಯದವರಿಗೆ ರೂ. ೪೦ ಮತ್ತು ಪಡೆದವರಿಗೆ ರೂ. ೫೦ಕ್ಕೆ ಏರಿಸುವ ಸೂಚನೆಯೂ ಇದೆ. ಇಂದಿಗೂ ಭಾರತದ ಕೆಲವೆಡೆಯಲ್ಲಿ ಈ ಕನಿಷ್ಠ ಮಿತಿಗಿಂತಲೂ ಕಡಿಮೆ ವೇತನ ಪಡೆಯುವ ಅಧ್ಯಾಪಕರು ಮೂರು ಲಕ್ಷದಷ್ಟಿದ್ದಾರೆ. ಇವರೆಲ್ಲರ ವೇತನವನ್ನು ಹೆಚ್ಚಿಸಲು ೧೦ ಕೋಟಿ ರೂಪಾಯಿಗಳು ಬೇಕಾಗುವುವು. ರಾಜ್ಯ ಸರಕಾರದ ಕಕ್ಷೆಯಲ್ಲಿ ವಿದ್ಯಾಭ್ಯಾಸ ಇಲಾಖೆಯಿದೆಯೆನ್ನೀ ನಿಜವೇ. ಆದರೆ, ರಾಜ್ಯ ಸರಕಾರಗಳು ರಾಜ್ಯದ ಶಿಕ್ಷಕರೆಂಬ ಉತ್ತಮ ಆದರ್ಶ ಸೇವೆಯನ್ನು ನಿರೀಕ್ಷಿಸುತ್ತವೆಯಷ್ಟೇ ಹೊರತಾಗಿ, ಅವರ ಜೀವನಸ್ತರವನ್ನು ಎತ್ತರಿಸಲು ಆಸಕ್ತಿಯನ್ನು ಮಾತ್ರ ತೋರಿಸುತ್ತವೆಯಷ್ಟೆ. ಇತರ ವಿಭಾಗಗಳ ಸಮಾನ ಯೋಗ್ಯತೆಯ ನೌಕರರ ವೇತನವನ್ನೂ ಶಿಕ್ಷಕರಿಗೆ ಕೊಡುವಷ್ಟು ಉದಾರತೆ ಅದರಲ್ಲುಳಿದಿಲ್ಲ. ದೇಶದಲ್ಲಿ ಭಾವಿ ಜನಾಂಗವಾದ ಮಕ್ಕಳನ್ನು ತರಬೇತಿಗೊಳಿಸಿ, ಅವರಲ್ಲಿ ಗುಣ ಮತ್ತು ದಕ್ಷತೆಯನ್ನು ಬಿತ್ತುವ ಮಹಾಕಾರ್ಯವು ಅತೃಪ್ತ ಅಧ್ಯಾಪಕರಿಂದ ಎಂದಿಗೂ ಆಗದೆಂಬುದನ್ನು ಮರೆಯಬಾರದು. ಅಧ್ಯಾಪಕ ವರ್ಗವು ತನ್ನ ವೃತ್ತಿಯ ಘನತೆಯನ್ನು ಉಳಿಸಿಕೊಳ್ಳಬೇಕು; ತಮ್ಮಿಂದ ಜ್ಞಾನದಾನ ಪಡೆಯುವ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ನಿರ್ಮಿಸಬೇಕು; ತನ್ಮೂಲಕ ದೇಶದ ಪುನಾರಚನೆಯಲ್ಲಿ ಅವರು ಅಮೂಲ್ಯ ಪಾತ್ರ ವಹಿಸಬೇಕು— ಇದಕ್ಕಾಗಿ ಅವರ ಜೀವನಮಟ್ಟವನ್ನು ಉತ್ತಮಗೊಳಿಸುವುದು ಅವಶ್ಯವಿದೆ. ಮುಂದಿನ ಯೋಜನೆಯಲ್ಲಿ ಈ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಯೋಜಿಸಿದ್ದು, ಅವುಗಳ ಕಾರ್ಯಾಚರಣೆಗೆ ರಾಜ್ಯಸರಕಾರಗಳ ಸಹಕಾರವೂ ಆವಶ್ಯವಾಗಿದೆ. ಆದುದರಿಂದ ಈ ಬಗ್ಗೆ ಇವುಗಳೂ ಆಸಕ್ತಿವಹಿಸುವುದು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ,

ಯೋಜನೆಯಲ್ಲಿ ನಿರೂಪಿಸಿದಂತೆ ರೂ. ೩೫೦-೪೬ ಕೋಟಿಗಳಷ್ಟು ಪ್ರಾಥಮಿಕ ವಿದ್ಯಾಭ್ಯಾಸಕ್ಕೂ, ೩೧೩ ಕೋಟಿ ರೂಪಾಯಿಗಳು ಶಾಲಾಭವನ, ಆಡಳಿತ ವೆಚ್ಚ, ಶಾಲಾ ಉಪಕರಣಗಳ ಸಲುವಾಗಿಯೂ ಒದಗಿಸಲಾಗಿದೆ. ದೇಶದಲ್ಲಿ ಒಟ್ಟು ಐದುಕೋಟಿ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುವ ಸವಲತ್ತುಗಳನ್ನು ಒದಗಿಸಬೇಕಾಗುವುದೆಂದೂ, ಇವರಲ್ಲಿ ೨ ಕೋಟಿ ಜನರು ಹೆಚ್ಚಾಗಿ ಶಾಲೆಗೆ ಸೇರುವವರೆಂದೂ ಇವರಿಗಾಗಿ ೪ ಲಕ್ಷ ಅಧಿಕ ಶಿಕ್ಷಕರನ್ನು ತಯಾರಿಸಬೇಕೆಂದೂ ಯೋಜನೆಯು ಹೇಳಿದೆ. ಅಂತೂ ಕೇಂದ್ರ ಶಿಕ್ಷಣ ಶಾಖೆಯು ಯೋಜನಾ ಆಯೋಗದ ಮುಂದಿಟ್ಟಿರುವ ಈ ಕರಡು ಕಾರ್ಯರೂಪಕ್ಕೆ ಬಂದರೆ, ಆಗ, ದೇಶದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಪ್ರಗತಿಯು ಹೆಚ್ಚೊಂದು ಕಾಣಿಸುವುದು ನಿಶ್ಚಯ.

ಇಲ್ಲಿ ಒಂದು ವಿಷಯವನ್ನು ಪ್ರಸ್ತಾವಿಸಬಹುದು. ದೇಶದಲ್ಲಿ ಶಿಕ್ಷಣವು ಸಮರ್ಪಕವಾಗಿ ದೊರೆಯಬೇಕಾದರೆ, ಯೋಗ್ಯರಾದವರನ್ನೇ ಶಿಕ್ಷಕರ ಸ್ಥಾನಕ್ಕೆ ಆಕರ್ಷಿಸುವುದು ಅವಶ್ಯವಾಗಿದೆ. ಆದರೆ, ಈಗೀಗ ನಿಜವಾದ ಯೋಗ್ಯತಾವಂತರು ತಾಂತ್ರಿಕ ಕ್ಷೇತ್ರದತ್ತ ತಿರುಗುತ್ತಿರುವರಲ್ಲದೇ ಶಿಕ್ಷಣಕ್ಷೇತ್ರಕಲ್ಲ. ಎಂದರೆ, ಈ ಕ್ಷೇತ್ರದಲ್ಲಿ ಯೋಗ್ಯರಾರೂ ಇಲ್ಲವೆಂದು ಅರ್ಥವಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಅವರಿಲ್ಲ; ಇದ್ದರೂ ಅವರ ಯೋಗ್ಯತಾ ಪ್ರದರ್ಶನಕ್ಕೆ ಸರಿಯಾದ ಸಂದರ್ಭ ದೊರೆಯುತ್ತಿಲ್ಲ. ಆದುದರಿಂದ ಉತ್ತಮರನ್ನೇ ಈ ಕ್ಷೇತ್ರದತ್ತ ಒಲಿಸಿ, ಅವರಿಂದ ಅವರವರ ಶಕ್ತಿಯ ಸದುಪಯೋಗ ಮಾಡಿಸಿಕೊಳ್ಳುವುದಕ್ಕೆ ಶಿಕ್ಷಕರ ವೇತನವನ್ನೂ ಆಕರ್ಷಕವಾಗಿ ಮಾರ್ಪಡಿಸುವುದು ಆವಶ್ಯವಿದೆ. ನಮ್ಮ ರಾಜ್ಯ ಅಥವಾ ಕೇಂದ್ರ ಸರಕಾರಗಳು ಇತರ ವಿಭಾಗಗಳ ನೌಕರವರ್ತ್ತಕೀಯುವ ಗಮನದ ಒಂದು ಭಾಗವನ್ನು ಶಿಕ್ಷಕರತ್ತವೂ ಹರಿಸುತ್ತಿದ್ದರೆ, ನಮ್ಮ ಶಿಕ್ಷಕರ, ಮುಖ್ಯವಾಗಿ ಪ್ರಾಥಮಿಕ ಶಿಕ್ಷಕರ ಪಾಡು ಶೋಚನೀಯವಾಗಿ ಎಂದಿಗೂ ಇರುತ್ತಿರಲಿಲ್ಲ. ಆದುದರಿಂದ ನಮ್ಮ ಸರಕಾರಗಳ ಕಣ್ಣು ಇತ್ತ ಹರಿಯುವ ಲಕ್ಷಣಗಳು ಇದೀಗ ಮೊದಲನೆಯ ಬಾರಿಗೆ ಗೋಚರವಾಗುತ್ತಿರುವುದು ಆನಂದನೀಯವೆನ್ನಬೇಕು. ಇದೇ ಯೋಜನೆ ಕ್ರಮೇಣ ಮುಂದುವರಿಯಲೆಂದು ಹಾರೈಸುತ್ತೇವೆ.

ರಾಜಕೀಯ ಜ್ವರ!

ಮಲೇರಿಯಾ, ನಿಮೋನಿಯಾ ಮೊದಲಾದ ಜ್ವರಗಳು ಕೀಟಾಣುಗಳಿಂದಾಗಿ ಪಸರಿಸುವುವು. ವಿದ್ಯಾರ್ಥಿಗಳಿಗೆ ಪರೀಕ್ಷಾ ಜ್ವರವು ಕಾಣಿಸಿಕೊಳ್ಳುವ ಕಾಲವೀಗ ತಾನೇ ಸನ್ನಿಹಿತವಾಗಿದೆ. ರಾಜ್ಯ ಸುಖವನ್ನು ಸನ್ನಿಪಾತ ನಿದ್ರೆಗೆ ಹೋಲಿಸಿದ ಕವಿವರೇಣ್ಯರು ಎಲ್ಲಿಯಾದರೂ 'ರಾಜಕೀಯ ಜ್ವರ'ವೆಂಬ ಶಬ್ದವನ್ನು ತಪ್ಪಿಯಾದರೂ ಬಳಸಿಕೊಳ್ಳಲಿಲ್ಲ. 'ರವಿ ಕಾಣದುದನು ಕವಿ ಕಂಡ'ನೆಂಬುದರಿಂದ ಈ ರಾಜಕೀಯ ಜ್ವರವನ್ನು ರವಿ ಕಂಡಿಲ್ಲವೆಂಬುದು ತೀರ ಸಹಜವೇ. ಆದರೂ ಕವಿ ರವಿ ಕಾಣದುದೆಲ್ಲವನ್ನೂ ಕಂಡನೆಂಬರ್ಥ ಬಾರದುಳಿಯುವುದರಿಂದ ಇಲ್ಲಿ ಕವಿಯ ಅಪರಾಧವಿಲ್ಲವೆನ್ನಬಹುದು. ರಶ್ಯನ್ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರಿಗೆ ದೇಹಾರೋಗ್ಯ ಸರಿಯಿಲ್ಲವೆಂದೂ ಅವರೀಗ "ಫ್ಲೂ"ವಿನಿಂದ ಬಳಲುತ್ತಿರುವರೆಂದೂ ಮಾಸ್ಕೊ ರೇಡಿಯೋ ಸಾರಿ ಬಿಟ್ಟದ್ದರಿಂದ ಈ 'ರಾಜಕೀಯ ಜ್ವರ'ವೆಂಬ ನೂತನ ರೋಗವು ಸಂಶೋಧಿತವಾಗಿರುವುದು. ಶ್ರೀ ಕ್ರುಶ್ಚೇವರು ಈ ಸಮಯದಲ್ಲಿ ಫ್ರಾನ್ಸನ್ನು ಸಂದರ್ಶಿಸಿ ಅಲ್ಲಿ ಅಧ್ಯಕ್ಷ ಮೋ| ಜ| ಡಿಗಾಲೆಯವರೊಡನೆ ಪರಸ್ಪರ ಪಮ್ಮೋಳನದ ಪೂರ್ವಭಾವಿ ಮಾತುಕತೆ ನಡೆಸಲಿದ್ದರು. ಆದರೆ ಅವರ ಅನಾರೋಗ್ಯದಿಂದಾಗಿ, ಈ ಭೇಟಿಯನ್ನು ಮುಂದೆ ಹಾಕಲಾಗಿದೆ. ಇದರಿಂದಾಗಿ ಪಾಶ್ಚಾತ್ಯ ರಾಷ್ಟ್ರಗಳು "ಇದು ಫ್ಲೂ ಅಲ್ಲ; ರಾಜಕೀಯ ಜ್ವರ" ಎಂಬುದಾಗಿ ಶೋಧಿಸಿವೆ. ಇದ್ದರೂ ಇರಬಹುದು; ಏಕೆಂದರೆ, ದೊಡ್ಡ ದೊಡ್ಡ ಶಾಲೆಗಳ ದಡ್ಡ ದಡ್ಡ ವಿದ್ಯಾರ್ಥಿಗಳು ತಮ್ಮ ಬದುಕಿನುದ್ದಕ್ಕೂ ಓದಿದ ವಿಷಯವನ್ನು ನೆನಪಿಡುವುದು ಅಸಾಧ್ಯವೆಂದು ಮನಗಂಡು ವಾರ್ಷಿಕ ಪರೀಕ್ಷಾ ಸಮಯದಲ್ಲಿ ಅನಿರೀಕ್ಷಿತ ಪರೀಕ್ಷಾಜ್ವರಕ್ಕೆ ಪಕ್ಕಾಗುವುದೂ, ಪರೀಕ್ಷೆ ಮುಗಿದೊಡನೆಯೇ ವೈದ್ಯಕೀಯ ಪ್ರಶಸ್ತಿ ಪತ್ರವನ್ನು ಪ್ರಧಾನಾಧ್ಯಾಪಕರಿಗಿತ್ತು ಪ್ರಮೋಶನ್ ಗಿಟ್ಟಿಸಿಕೊಳ್ಳುವುದೂ ಇದೆ. ಅಂತೆಯೇ ಜಗತ್ತಿನ ದೊಡ್ಡ ರಾಷ್ಟ್ರವೊಂದರ ನಾಯಕರ ಈ "ರಾಜಕೀಯ ಜ್ವರ"ದೊಳಗೊಂದು ರಹಸ್ಯವಿದ್ದರೂ ಇರಬಹುದು. ಶ್ರೀ ಕ್ರುಶ್ಚೇವರ ಖಾಯಿಲೆಯನ್ನು ಕಂಡುಹಿಡಿದ ಪಾಶ್ಚಿಮಾತ್ಯ ರಾಜಧಾನಿಗಳು ಈ ಖಾಯಿಲೆಯ ರಹಸ್ಯೋದ್ಘಾಟನೆ ಮಾಡಿ, ಉಚಿತ ಲಸಿಕೆಯನ್ನು ಸಂಶೋಧಿಸುವುದಕ್ಕೆ ಏನು ಮೋಸ ನೋಡಲಾರರಲ್ಲವೆ?

ಸಂಕ್ಷಿಪ್ತ ಸುದ್ದಿಗಳು

ಶುಕ್ರಗ್ರಹಕ್ಕೆ ಉಪಗ್ರಹ

ಅಮೇರಿಕೆಯ ಕೇಪ ಕೆನೆವರಾಲದಲ್ಲಿನ ಅಸ್ತ್ರ ಪ್ರಯೋಗ ಕೇಂದ್ರದಲ್ಲಿ ಭೂಮಿ ಮತ್ತು ಶುಕ್ರಗ್ರಹಗಳ ನಡುವೆ ಭ್ರಮಿಸುವ ಒಂದು ಉಪಗ್ರಹವನ್ನು ಹಾರಿಸಲಾಯಿತು. ಶುಕ್ರಗ್ರಹದತ್ತ ಇದನ್ನು ಹಾರಿಸಿರುವುದಾದರೂ, ಅದು ಗ್ರಹದಿಂದ ಹಲವಾರು ಲಕ್ಷ ಮೈಲಿ ದೂರದಲ್ಲಿದೆಯೆಂದು ತಿಳಿಯುತ್ತದೆ. ಸೆಕುಂಡಿಗೆ ೬ ಮೈಲುಗಳ ವೇಗದಲ್ಲಿ ಹಾರುವ ಈ ಉಪಗ್ರಹವು ಭೂಮಿಯಿಂದ ೫ ಕೋಟಿ ಮೈಲು ದೂರದಲ್ಲಿ ಅಂತರಿಕ್ಷ ಪ್ರದಕ್ಷಿಣೆ ಬರುತ್ತಿದ್ದು ಸಂಕೇತಗಳನ್ನು ರವಾನಿಸುತ್ತದೆ.

ಘಾನಾಕ್ಕೆ ಸಂವಿಧಾನ

ಆಫ್ರಿಕೆಯ ಘಾನಾ ಸ್ವತಂತ್ರ ರಾಷ್ಟ್ರದ ಸಂವಿಧಾನವು ಈಗತಾನೇ ಸಿದ್ಧವಾಗಿದ್ದು, ಇದರಲ್ಲಿ ಇತರ ಆಫ್ರಿಕನ್ ರಾಷ್ಟ್ರಗಳೂ ಸೇರಿಕೊಂಡು ಒಕ್ಕೂಟ ರಾಷ್ಟ್ರ ಸ್ಥಾಪಿಸುವ ಅವಕಾಶವನ್ನು ಒದಗಿಸಲಾಗಿದೆ. ಸಾಮಾನ್ಯವಾಗಿ, ಅಮೇರಿಕೆಯ ಘಟನೆಯನ್ನು ಈ ಅನುಚ್ಛೇದದಲ್ಲಿದು ಹೋಲುತ್ತದೆ.

ವಿದೇಶೀ ಪ್ರಧಾನರು

ಎಪ್ರಿಲ್ ಪೂರ್ವಾರ್ಧದಲ್ಲಿ ಸಂಯುಕ್ತ ಅರಬ ರಾಷ್ಟ್ರದ ಅಧ್ಯಕ್ಷ ಗಮಾಲ ನಾಸ್ಸೇರರು ಭಾರತವನ್ನು ಸಂದರ್ಶಿಸಲಿರುವರು. ಎಪ್ರಿಲ್ ಮೂರನೆ ವಾರದಲ್ಲಿ ಚೀನೀಯ ಪ್ರಧಾನಿ ಚೌ ಎನ್ ಲಾಯ್ ನವದೆಹಲಿಯಲ್ಲಿ ಪ್ರಧಾನಿ ನೆಹರೂ ಅವರನ್ನು ಕಾಣುವರು. ಭಾರತ—ಚೀನೀ ವಿವಾದಗಳ ಬಗ್ಗೆ ವಿಚಾರವಿನಿಮಯ ಮಾ

(೬ನೇ ಪುಟ ನೋಡಿರಿ)

THE MOOLKY BANK, LIMITED, MULKI.

(INCORPORATED IN INDIA. LIABILITY OF SHAREHOLDERS LIMITED)

BALANCE SHEET AS AT 31st DECEMBER 1959.

31st Dec. 1958 Rs. nP.	CAPITAL & LIABILITIES	Rs. nP.	Rs. nP.
	1. Capital:		
2,00,000 - 00	Authorised Capital:- 8.000 Shares of Rs. 25/- each ...		2,00,000 - 00
1,00,000 - 00	Issued Capital:- 4,000 Shares of Rs. 25/- each ...		1,00,000 - 00
79,850 - 00	Subscribed Capital:- 3,194 Shares of Rs. 25/- each ...		79,850 - 00
	Called-Up and Paid-Up Capital:- 3,194 Shares of Rs. 25/- each at Rs. 15/- per Share	47,910 - 00	
49,110 - 00	*Add:* Calls in Advance	1,600 - 00	49,510 - 00
	2. Reserve Fund and other Reserves:		
	Statutory Reserve (Under Section 17)	17,000 - 00	
16,600 - 00	Other Reserves:	1,600 - 00	18,600 - 00
	3. Deposits and other Accounts:		
	Fixed Deposits	2,50,140 - 13	
	Savings Bank Deposits	34,269 - 06	
2,30,667 - 33	Current Accounts, Contingency Accounts etc. ...	12,064 - 68	2,96,473 - 87
	4. Borrowings from other Banking Companies, Agents etc:		
	i) In India	Nil	
Nil	ii) Outside India	Nil	Nil
	Particulars:		
	i) Secured (by Fixed Deposits)	Nil	
	ii) Unsecured.	Nil	Nil
Nil	5. Bills Payable:		Nil
	6. Bills for Collection being Bills Receivable as per contra:		
	i) Payable in India	738 - 17	
Nil	ii) Payable Outside India	Nil	738 - 17
	7. Other Liabilities:		
	Unclaimed Dividends	1,329 - 86	
9,084 - 88	Other Liabilities:	11,041 - 94	12,371 - 80
Nil	8. Acceptances, Endorsements and other obligations as per contra:		Nil
	9 Profit and Loss:		
	As per last Balance Sheet	2,033 - 04	
	Less Appropriations: Dividends	1,916 - 40	
	Bonus to Staff	—	
	Provision for Income-tax ...	—	
		116 - 64	
	Add Profit for the year brought from the Profit & Loss A/c...	3,506 - 73	
		3,623 - 37	
	Less: Proposed Appropriations:		
	Statutory Reserve Fund ... 2,000/-		
2,033 - 04	Provision for Income-tax ... 1,400/-	3,400 - 00	223 - 37
Nil	10. Contingent Liabilities:		Nil
3,07,495-25	Total ...		3,77,917-21

31st Dec. 1958 Rs. nP.	PROPERTY & ASSETS	Rs. nP.	Rs. nP.
	1. Cash:		
26,555 - 14	In hand and with Reserve Bank and State Bank: ...		29,544 - 84
	2. Balances with other Banks:		
	i) In India— On Current Account	13,413 - 99	
	On Fixed Deposits	30,000 - 00	
32,112 - 87	ii) Outside India	Nil	43,413 - 99
Nil	3. Money at call and Short Notice		Nil
	4. Investments at Cost:		
	i) Securities of the Central and State Govts. and other Trustee Securities of the face value of Rs. 45,500/- ...	45,348 - 12	
	ii) Shares: Fully paid-up preference Shares ...	19,731 - 50	
	iii) Debentures or Bonds	Nil	
55,079 - 62	iv) Other Investments v) Gold	Nil	65,079 - 62
	5. Advances: (Other than bad and doubtful debts for which provision has been made to the satisfaction of the Auditor)		
	(1) Loans. Cash Credits, Overdrafts, etc.,		
	i) In India	2,31,166 - 32	
	ii) Outside India	Nil	
	(2) Bills Discounted and Purchased: (Excluding Treasury Bills of the Central & State Govts.)		
	i) Payable in India	Nil	
1,88,145 - 16	ii) Payable Outside India	Nil	2,31,166 - 32
	Particulars of Advances: (See Schedule 1)		
	6. Bills Receivable being Bills for Collection, as per contra:		
	i) Payable in India	738 - 17	
Nil	ii) Payable Outside India	Nil	738 - 17
Nil	7 Constituents' Liabilities, Acceptances, Endorsements and other obligations: per contra:		Nil
Nil	8. Premises less Depreciation:		Nil
	9. Furniture and Fixtures: (at cost)	1,744 - 78	
	Add: Additions during the year	647 - 75	
		2,392 - 53	
	Less: Sale	65 - 00	
		2,327 - 53	
	Depreciation:		
	Up to last Balance Sheet ... 1,014 - 78		
730 - 00	During the year ... ... 121 - 75	1,136 - 53	1,191 - 00
	10. Other Assets (including Silver):		
	Interest Receivable	3,066 - 22	
4,572 - 46	Advance Income Tax	3,717 - 05	6,783 - 27
Nil	11. Non-Banking Assets acquired in satisfaction of claims:		Nil
3,07,495-25	Total ...		3,77,917-21

OFFICE OF THE BANK.
MULKI.
Date: 24—1—1960.

(Sd.) P. S. HEGDE
" M. SHANKER SHETTY
" KRISHNA M. SALIAN
(Sd.) K. SANJIVA SHETTY
" A. DODDANNA SHETTY
} Directors.

(Sd.) N. M. ADYANTHAYA.
President.

(Sd.) M. R. H. PUNJA.
Manager.

8,372 - 15	1. Interest paid on Deposits, Borrowings, etc.	11,234 - 78
4,081 - 00	2. Salaries and Allowances and Provident Fund. (Includes salary of Rs. 2,220/- paid to the Manager)	5,053 - 00
111 - 00	3. Directors' and Local Committee Members' fees and allowances ...	224 - 00
513 - 58	4. Rent, Taxes, Insurance and Lighting	1,465 - 86
Nil	5. Law Charges	300 - 50
284 - 47	6. Postage, Telegrams and Stamps	265 - 00
125 - 00	7. Auditor's Fees	125 - 00
66 - 05	8. Depreciation on and repairs to the Banking Company's property ...	121 - 75
884 - 90	9. Stationery, Printing, Advertisement, etc.	733 - 11
Nil	10. Loss from sale of or dealing with non-banking assets	Nil
884 - 46	11. Other expenditure ... ... — ...	924 - 55
6,460 - 08	12. Balance of Profit	3,506 - 73
21,782-69	Total ...	23,954-28

	(Less provision made during the year for Bad and doubtful debts and other usual or necessary provisions.)	
16,603 - 74	1. Interest and Discount	19,918 - 92
3,804 - 49	2. Commission, Exchange and Brokerage	2,259 - 90
Nil	3. Rents	Nil
Nil	4. Net Profit on sale of Investments, Gold and Silver, Land, Premises and other assets (Not credited to reserves or any particular Fund or Account)	Nil
Nil	5. Net Profit on revaluation of Investments, Gold and Silver, Land, Premises and other Aassets (Not credited to reserves or any particular Fund or Account)	Nil
Nil	6. Income from non-banking assets and profit from sale of or dealing with such assets	Nil
1,374 - 46	7. Other receipts	1,775 - 46
21,782-69	Total ...	23,954-28

OFFICE OF THE BANK,
MULKI.
Date: 24—1—1960.

(Sd.) P. S. HEGDE
" M. SHANKER SHETTY
" KRISHNA M. SALIAN
(Sd.) K. SANJIVA SHETTY
" A. DODDANNA SHETTY
Directors.

(Sd.) N. M. ADYANTHAYA,
President.

(Sd.) M. R. H. PUNJA,
Manager.

SCHEDULE—1.

31st Dec. 1958 Rs. nP.	PARTICULARS OF ADVANCES	Rs. nP.
1,72,854 - 57	i) Debts considered good in respect of which the Banking Company is fully secured	2,06,101 - 76
Nil	ii) Debts considered good for which the Banking company holds no other security than the debtor's personal security	Nil
15,290 - 59	iii) Debts considered good secured by the personal liabilities of one or more parties in addition to the personal security of the Debtors ...	25,964 - 56
Nil	iv) Debts considered doubtful or bad not provided for ...	Nil
10,750 - 91	v) Debts due by Directors or Officers of the Banking Company or any of them either severally or jointly with any other persons ...	7,508 - 98
Nil	vi) Debts due by Companies or Firms in which the Directors of the Banking Company are interested as Directors, Partners or Managing Agents or in case of Private Companies as members ...	Nil
10,750 - 91	vii) Maximum total amount of Advances including temporary Advances made at any time during the year to Directors or Managers or Officers of the Banking Company or any of them either severally or jointly with any other persons	8,247 - 46
Nil	viii) Maximum total amount of Advances including temporary advances granted during the year to the Companies or Firms in which the Directors of the Bank are interested as Directors, Partners or Managing Agents or in the case of Private Companies, as members ...	Nil
Nil	ix) Due from Banking Companies	Nil

AUDITOR'S CERTIFICATE

I have audited the annexed Balance Sheet of Moolky Bank Ltd., as on 31—12—1959 and also the annexed Profit and Loss Account of the Bank for the year ending on that date and I report that:

(*a*) I have obtained all the information and explanations which to the best of my knowledge and belief, were necessary for the purpose of my audit and have found them to be satisfactory;

(*b*) The transactions of the Bank which have come to my notice, have been within the powers of the Bank;

(*c*) In my opinion, proper books of account as required by law have been kept by the Bank so far as appears from my examination of those books;

(*d*) The Bank's Balance Sheet and Profit and Loss Account dealt with by this report are in agreement with the books of Account:

(*e*) In my opinion, and to the best of my informotion, and according to the explanations given to me, the said accounts give the information required by the Companies Act 1956 in the manner so required for Banking Companies and on such basis, the said Balance Sheet gives a true and fair view of the state of affairs of the Bank as on 31—12—1959 and the Profit and Loss Account gives a true and fair view of the profit for the year ending on that date.

MANGALORE,
26—1—1960.

(*Sd.*) *V. M. Shetty,*
Chartered Accountant.

ಸತ್ಯೇತಿಹಾಸ

(೪ನೇ ಪುಟದಿಂದ)

ಶಿಲಾ ಲೇಖಗಳ ಮೂಲಕವೇ ಎಂದೂ ಹೇಳಬಹುದು ಜೈನ ಮತ್ತು ಬೌದ್ಧ ಪುರಾಣಗಳಲ್ಲಿ ಅಶೋಕನ ಬಗ್ಗೆ ನಮಗೆ ದೊರಕುವ ಅಲ್ಪ ಸ್ವಲ್ಪ ವಸ್ತು ಇತಿಹಾಸದ ದೃಷ್ಟಿಯಿಂದ ಅಷ್ಟು ಅಂಗೀಕಾರಾರ್ಹವಾಗಿಲ್ಲ.

ಅಶೋಕನ ಕಾಲಕ್ಕೆ ಹಿಂದಿನ ಶಿಲಾ ಲೇಖಗಳು ನಮಗೆ ಅಷ್ಟಾಗಿ ದೊರಕಿಲ್ಲ ಎಂಬುದೂ ಗಮನಾರ್ಹ. ಅಶೋಕನ ಕಾಲಕ್ಕೂ ಹಿಂದಿನ ಶಿಲಾ ಲೇಖಗಳಾಗಲಿ ಅಶೋಕನ ಕಾಲದ ಹಾಗೂ ಅನಂತರದ ಶಿಲಾ ಲೇಖಗಳೇ ಆಗಲಿ ಅವು ಪ್ರಾಕೃತ ಭಾಷೆಯಲ್ಲಿವೆ. ವೇದಗಳು ಪುರಾಣಗಳು, ರಾಮಾಯಣ, ಮಹಾಭಾರತ ಇವೇ ಮೊದಲಾದ ಧರ್ಮ ಗ್ರಂಥಗಳು ಎಷ್ಟು ಪುರಾತನ ಎಂಬುದನ್ನು ಗಮನಿಸಿದಾಗ ಶಿಲಾ ಲೇಖಗಳಲ್ಲಿ ಸಂಸ್ಕೃತಕ್ಕೆ ಹೇಗೆ ಪ್ರಾಮುಖ್ಯತೆ ದೊರಕದೆ ಹೋಯಿತು ಎಂಬುದು ಊಹೆಗೆ ಎಟುಕದ ವಿಷಯವೇ ಆಗಿದೆ. ಕ್ರಿಸ್ತ ಪೂರ್ವ ಕಾಲಕ್ಕೆ ಸಂಬಂಧಿಸಿದಂತೆ ನಮಗೆ ದೊರೆತಿರುವ ಶಿಲಾ ಲೇಖಗಳ ಪೈಕಿ ಒಂದೆರಡು ಮಾತ್ರ ಸಂಸ್ಕೃತ ಭಾಷೆಯಲ್ಲಿವೆ. ಅವೂ ಸಹ ಅಷ್ಟು ಮುಖ್ಯವಾದುವಲ್ಲ. ಆದರೆ ಕ್ರೈಸ್ತನ ತರುವಾಯ ಮೂರನೆಯ ಶತಮಾನದಿಂದೀಚೆಗೆ ದೊರೆತಿರುವ ಶಿಲಾ ಲೇಖಗಳಲ್ಲೆಲ್ಲ ಪ್ರಾಕೃತಕ್ಕೆ ಬದಲು ಸಂಸ್ಕೃತವೇ ವಿಶೇಷವಾಗಿರುವುದು ಕಂಡು ಬರುತ್ತದೆ.

ಭಾರತದ ಅತ್ಯಂತ ಹಳೆಯ ಐತಿಹಾಸಿಕ ಲಿಪಿಯಾದ ಬ್ರಾಹ್ಮಿಯ ಮೇಲೆ ಬೆಳಕು ಚೆಲ್ಲಿದ ಕೀರ್ತಿ ಜೇಮ್ಸ್ ಪ್ರಿನ್ಸೆಸ್ ಅವರಿಗೆ ಸಲ್ಲುತ್ತದೆ. ಅಶೋಕನ ಕಾಲದ ಶಿಲಾ ಲೇಖಗಳನ್ನು ಓದಿ ತಿಳಿಸುವ ದೊಡ್ಡ ಕಾರ್ಯವನ್ನು ಅವರು ಮಾಡಿದರು. ಮರೆತು ಹೋಗಿದ್ದ ಬ್ರಾಹ್ಮಿ ಲಿಪಿಗೆ ಹೀಗಾಗಿ ಒಂದು ಜೀವ ಕಳೆ ಬಂತು. ಅವರ ಪ್ರಯತ್ನವೊಂದು ಇಲ್ಲದೆ ಹೋಗಿದ್ದರೆ ಹಳೆಯ ಶಿಲಾ ಲೇಖಗಳೆಲ್ಲ ಪ್ರಯೋಜನಕ್ಕೆ ಬಾರದೆ ಹೋಗುತ್ತಿದ್ದುವು.

ಭಾರತದ ಆಧುನಿಕ ಲಿಪಿಗಳಿಗೆಲ್ಲ ಬ್ರಾಹ್ಮಿ ಲಿಪಿಯೇ ಮೂಲವಾಗಿದೆಯೆಂಬುದು ಕಂಡು ಬರುತ್ತದೆ.

ಭಾರತದ ಇತಿಹಾಸದಲ್ಲಿ ಸ್ವರ್ಣ ಯುಗದ ದಾಖಲೆ ದೊರೆತಿರುವುದು ಈ ಶಿಲಾ ಲೇಖಗಳ ಆಧಾರದ ಮೇಲೆ ಎಂದ ಮೇಲೆ ಈ ಶಿಲಾ ಲೇಖಗಳ ಪ್ರಾಮುಖ್ಯ ಸ್ವಯಂ ಸ್ಪಷ್ಟವಾಗುತ್ತದೆ.

ಅಲಹಾಬಾದಿನಲ್ಲಿರುವ ಸಮುದ್ರಗುಪ್ತನ ಕಾಲದ ಶಿಲಾಸ್ತಂಭದ ಮೇಲಿನ ಲೇಖಗಳು ಆತನ ಸಾಹಸ ಕಾರ್ಯಗಳು ಮತ್ತು ಕಲಾ ಸಾಧನೆಗಳ ವರ್ಣನೆಯಿಂದ ಕೂಡಿದ್ದು ಭಾರತದ ಇತಿಹಾಸದಲ್ಲಿ ಸ್ವರ್ಣಯುಗದ ಪರಿಚಯಕ್ಕೆ ಉತ್ತಮ ಆಧಾರ ವಸ್ತುವನ್ನು ಒದಗಿಸುತ್ತದೆ.

ಗುಪ್ತರ ಕಾಲದ ಶಿಲಾ ಲೇಖಗಳು ಮತ್ತು ನಾಣ್ಯಗಳು ಯಾವುದೇ ಸಾಹಿತ್ಯದಲ್ಲಿ ಲಭಿಸಲು ಸಾಧ್ಯವಿಲ್ಲದಷ್ಟು ಇತಿಹಾಸ ವಸ್ತುವನ್ನು ಒದಗಿಸುತ್ತದೆ.

ಅದೇ ರೀತಿಯಲ್ಲಿ ದಕ್ಷಿಣ ಭಾರತದ ಆಂಧ್ರ, ಇಕ್ಷ್ವಾಕು, ಕದಂಬ, ಪಲ್ಲವ ಹಾಗೂ ಗಂಗರಸರ ಕಾಲದ ಇತಿಹಾಸ ದಾಖಲೆಗಳನ್ನು ಒದಗಿಸುವ ಶಿಲಾಲೇಖಗಳೂ ಇವೆ. ಈ ಹಲವು ರಾಜವಂಶಗಳ ಕಾಲದಲ್ಲಿ ಆರ್ಯನ್ ಸಂಸ್ಕೃತಿಯ ಪ್ರಭಾವವು ಭಾರತದ ಗಡಿಯನ್ನು ದಾಟಿ ಹೊರದೇಶಗಳು ಹಬ್ಬಿತ್ತು.

ಹಳೆಯ ಕಾಲದ ಶಿಲಾಲೇಖಗಳನ್ನು ಹುಡುಕುವ ಕಾರ್ಯ ಮಾತ್ರ ನಿರಂತರವಾಗಿ ನಡೆಯುತ್ತಿದೆ. ಭಾರತದ ಇತಿಹಾಸ ತಿಳಿಯಲು ಹೊಸದಾಗಿ ಹೀಗೆ ದೊರಕುವ ಶಿಲಾ ಲೇಖಗಳು ತುಂಬಾ ಸಹಕಾರಿಯಾಗುತ್ತವೆ; ನಮ್ಮ ಜ್ಞಾನ ಸಂಪತ್ತು—ಇತಿಹಾಸದ ಅರಿವು ಹೀಗಾಗಿ ಹೆಚ್ಚುತ್ತಾ ಹೋಗುತ್ತವೆ. ಹೊಸದಾಗಿ ಒಂದೊಂದು ಪುರಾತನ ನಿವೇಶನ ಆಗೆದಾಗಲೆಲ್ಲ ಇಂತಹ ಲೇಖಗಳ ಹಾಗೂ ನಾಣ್ಯಗಳ ಒಂದು ಭಂಡಾರವೇ ಸಿಗುತ್ತದೆ ಭಾರತದ ಇತಿಹಾಸದ ಬಗ್ಗೆ ಈ ತನಕ ಇರುವ ಅರಿವನ್ನು ತಿದ್ದುವುದಕ್ಕೂ ಅಥವಾ ಅಭಿವೃದ್ಧಿ ಗೊಳಿಸುವುದಕ್ಕೂ ದೃಢಪಡಿಸುವದಕ್ಕೂ ಅದು ಸಹಕಾರಿ.

ಒಂದೇ ಮಾತಿನಲ್ಲಿ ಹೇಳುವುದಾದರೆ ಶಿಲಾ ಲೇಖಗಳು ಇತಿಹಾಸ ನಿರ್ಣಯಕ್ಕೆ ತುಂಬಾ ಮುಖ್ಯ ಆಧಾರ. ಭಾರತದಲ್ಲಂತೂ ಅದೇ ಇತಿಹಾಸದ ಜೀವನಾಡಿ.

—ಡಾ| ಬಹದೂರಚಂದ ಛಬ್ರಾ

ಅಲ್ಲಲ್ಲಿಯ ಸುದ್ದಿಸಾರ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ದಿನಾಂಕ ೪ರಂದು ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಅರೂರರು ಶಾಲೆಯ ಹಳೆವಿದ್ಯಾರ್ಥಿ ಸಂಘದವರು ಕಟ್ಟಿಸುತ್ತಿರುವ ಮಹಿಷಮರ್ದಿನೀ ಕಲಾಮಂದಿರಕ್ಕೆ ದಾನವಾಗಿತ್ತ ವಿದ್ಯುದ್ದೀಪಗಳನ್ನು ಶ್ರೀ ರಂಗನಾಥ ಶೆಣೈ ಅವರು ಉದ್ಘಾಟಿಸಿದರು. ಮುಖ್ಯೋಪಾಧ್ಯಾಯ ಶ್ರೀ ಪಿ. ಗುರುರಾಜ ಭಟ್ಟರು ಶಾಲೆಯ ಪ್ರಗತಿಪರ ವರದಿಯನ್ನು ಓದಿದನಂತರ ಶ್ರೀ ಕೆ. ದಾಮೋದರ ಐತಾಳರು ಸ್ವಸ್ತಿವಾಚನವನ್ನು ಮಾಡಿ ಶಾಲೆಯು ಹಾಯರ್ ಸೆಕೆಂಡರಿ ಶಾಲೆಯಾಗಬೇಕೆಂದು ಹಾರೈಸಿ ಈ ಬಗ್ಗೆ ಹಳೆ ವಿದ್ಯಾರ್ಥಿ ಸಂಘ ಮತ್ತು ಊರವರು ನೆರವೀಯುವಂತೆ ಕೇಳಿಕೊಂಡರು. ರಾತ್ರಿ ವಿದ್ಯಾರ್ಥಿಗಳಿಂದ 'ನಾರದ ವಿನೋದ' ವೆಂಬ ಸಂಗೀತ ನಾಟಕವು ಅಭಿನಯಿಸಲ್ಪಟ್ಟಿತು. ಅಂದು ಮುಂಜಾನೆ ಶ್ರೀ ಪಿ. ಗುರುರಾಜ ಭಟ್ಟರು ಶಾಲಾಧ್ವಜವನ್ನರಳಿಸಿದ್ದರು ಶ್ರೀ ಕೆ. ಚಂದ್ರಕಾಂತ ಪೈ ಅವರು ಶಾಲಾಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿದ್ದರು.

ಕಡಿಯಾಳಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. ೬ರಂದು ಶ್ರೀ ಎಂ. ರಾಜಗೋಪಾಲ ಆಚಾರ್ಯರ ಹಿರಿತನದಲ್ಲಿ ನೆರವೇರಿತು. ಸಂಘದ ಅಧ್ಯಕ್ಷ ಶ್ರೀ ಕೆ. ಕಮಲಾಕ್ಷ ಪೈ ಅವರು ಸ್ವಾಗತಿಸುತ್ತ ಸಂಘದ ಕಾರ್ಯಸಾಧನೆಗೆ ನೆರವಾದವರನ್ನು ಸ್ಮರಿಸಿಕೊಂಡರು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾವ್ ಅವರು ವರದಿಯನ್ನು ಓದಿದರು. ಇದರಲ್ಲಿ ಸಂಘವು ಸ್ಥಾಪಿತವಾದ ಹಳೇ ವರ್ಷಗಳಲ್ಲಿ ಶಾಲಾಭವನದ ವಿದ್ಯುತ್ತೀಕರಣ ಮತ್ತು ಮಹಿಷಮರ್ದಿನೀ ಕಲಾ ಮಂದಿರಗಳನ್ನು ಒದಗಿಸಿಕೊಡುವ ಸಾಹಸವನ್ನು ಮಾಡಿದೆಯೆಂದು ಮುಂತಾಗಿ ಹೇಳಲಾಗಿತ್ತು. ಶ್ರೀ ಪಿ. ಕೃಷ್ಣಾಚಾರ್ಯರೂ, ಅಧ್ಯಕ್ಷರೂ ಪ್ರಾಥಮಿಕ ಶಾಲೆಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಹಳೆಯ ವಿದ್ಯಾರ್ಥಿ ಸಂಘವು ಸಂಪೂರ್ಣ ಯಶಸ್ವಿಯಾಗಿದೆಯೆಂದೂ ಈ ಸಂಘವು ಉಳಿದ ಸಂಘಗಳಿಗೆ ಮಾದರಿಯಾಗಿದೆಯೆಂದೂ ಹೇಳಿದರು. ಕೊನೆಯಲ್ಲಿ ಹಳೆಯ ವಿದ್ಯಾರ್ಥಿಗಳು 'ಮಕ್‌ಮಲ್ ಟೋಪಿ' ಎಂಬ ಸಂಗೀತ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು.

ಕುರುಕಾಲು— ಇತ್ತೀಚೆಗೆ ಕುಂಜಾರಿನಲ್ಲಿ ಜರಗಿದ ಗಿರಿಜಾ ಹಾ| ಎ| ಶಾಲೆ ಮತ್ತು ಕುರುಕಾಲು ಗಣಪತಿ ಎಲಿಮೆಂಟರಿ ಶಾಲೆಗಳ ವರ್ಧಂತ್ಯುತ್ಸವದ ವೇಳೆ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ತಮ್ಮ ಸ್ವಾಗತ ಭಾಷಣದಲ್ಲಿ ಏರುತ್ತಿರುವ ಮಕ್ಕಳ ಸಂಖ್ಯೆಗನುಸರಿಸಿ ಶಾಲಾಕಟ್ಟಡಗಳನ್ನು ಆಗಾಗ ವಿಸ್ತರಿಸಿದ್ದರೂ ತಿರುಗಿ ಸ್ಥಳಾವಕಾಶದ ಕೊರತೆ ತಲೆದೋರಿರುತ್ತದೆಂದೂ ಅಲ್ಲದೆ ಶ್ರೀ ಮಧ್ವಾಚಾರ್ಯರ ಜನ್ಮಸ್ಥಳವಾಗಿದ್ದು ಹಲವು ಪುಣ್ಯ ಸ್ಥಳಗಳನ್ನೊಳಗೊಂಡಿರುವ ಈ ಕ್ಷೇತ್ರವು ವರ್ಷಂಪ್ರತಿ ಸಾವಿರಾರು ಪ್ರವಾಸಿಗಳನ್ನು ಯಾತ್ರಿಕರನ್ನೂ ತನ್ನೆಡೆಗೆ ಆಕರ್ಷಿಸುತ್ತಿದ್ದರೂ ಇದ್ದೊಂದು ಯೋಗ್ಯ ಪ್ರವಾಸೀ ಮಂದಿರವು ಇಲ್ಲದಿರುವುದರಿಂದ ಹೆಚ್ಚಿನ ಅನಾನುಕೂಲತೆಯಾಗುತ್ತಿದೆಯೆಂದೂ ಸೂಚಿಸಿದ್ದಕ್ಕೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕಾಣಿಯೂರು ಮಠದ ವಿದ್ಯಾವಾರಿಧಿ ಶ್ರೀ ಪಾದಂಗಳವರು ತಮ್ಮ ಭಾಷಣದಲ್ಲಿ ಶ್ರೀ ಶೆಟ್ಟರು ಮಾಡುತ್ತಿರುವ ಸಾರ್ವಜನಿಕ ಸೇವೆಯನ್ನು ಕೊಂಡಾಡಿದ್ದಲ್ಲದೆ ಈ ಕ್ಷೇತ್ರದಲ್ಲಿ ಅಗತ್ಯವುಳ್ಳ ಪ್ರವಾಸೀ ಮಂದಿರವನ್ನು ತಾವು ಕಟ್ಟಿಸಿಕೊಡುವುದಾಗಿ ಆಶ್ವಾಸನೆಯಿತ್ತುದು ಶ್ಲಾಘನೀಯವಿದೆ.

ಜಿಲ್ಲೆಯಲ್ಲಿ ಪ್ರಕೃತ ಜರಗುವ ಪಂಚಾಯತು ಬೋರ್ಡು ಮೆಂಬರರ ಚುನಾವಣೆಯಲ್ಲಿ, ಎಲ್ಲೆಡೆಗಳಲ್ಲಿಯೂ ಪ್ರತಿಸ್ಪರ್ಧಿಗಳ ಘರ್ಷಣೆಗಳಿದ್ದರೂ, ಮುಖ್ಯವಾಗಿ ಶ್ರೀ ಕುರುಕಾಲು ಗಣಪಯ್ಯ ಶೆಟ್ರಿ ಮತ್ತು ಪಟೇಲ್ ವಾಸು ಶೆಟ್ರಿ, ರಾಜಿತೀರ್ಮಾನದ ನಿರ್ಧಾರದ ಮೇರೆಗೆ ಕುರುಕಾಲು ಪಂಚಾಯತ ಬೋರ್ಡಿನ ಎಲ್ಲಾ ಮೆಂಬರರ ಸ್ಥಾನಗಳೂ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟದ್ದು ಸ್ತುತ್ಯಕರವಾಗಿದೆ.

ಸುಬ್ರಹ್ಮಣ್ಯ—ದಿನಾಂಕ 11-3-60 ರಂದು ಇಲ್ಲಿನ ವಾಗೀಶ್ವರೀ ಸಂಗೀತ ಪಾಠಶಾಲೆಯ ರಂಗಭೂಮಿಯಲ್ಲಿ — ನಾಣಾಜೆ ಅರ್ಪಿತವು ಬಾಲ ಸುಬ್ರಹ್ಮಣ್ಯ ಯಕ್ಷಗಾನ ಸಂಘದ ಕಲಾವಿದರಿಂದ ಮತ್ತು ಅತಿಥಿ ಕಲಾವಿದರಿಂದ, ಸಂಸ್ಥಾನದ ಶ್ರೀ ಶ್ರೀ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ "ಕರ್ಣಪರ್ವ" ಎಂಬ ಕಥಾಭಾಗದ ಯಕ್ಷಗಾನ ಕೂಟವು ಯಶಸ್ವಿಯಾಗಿ ಜರಗಿತು. ಕಾರ್ಯವರ್ತಿಗಳಾದ ಅನಂತರಾಮ ಉಳಿತ್ತಾಯರು ಧನ್ಯವಾದವಿತ್ತರು. ಶ್ರೀಮಾನ್ ಬಿ ಶಂಕರ ಒಳಿತ್ತಾಯರು (ಸಂಘದ ಪ್ರಾರಂಭ ಸಂಸ್ಥಾಪಕರು) ತಮ್ಮ ಸಂಘದ ಮತ್ತು ಸದ್ರಿ ಕಾರ್ಯಕ್ರಮದ ಕುರಿತು ಭಾಷಣವಿತ್ತಮೇಲೆ, ಶ್ರೀ ಸ್ವಾಮೀಜಿಯವರು ಕಲಾವಿದರಿಗೆ ಅಭಿವೃದ್ಧಿಯನ್ನು ಸೂಚಿಸಿ, ಹಾರೈಸಿದರು.

ಅದಮಾರು—ಅದಮಾರು ಹಿಂದೂ ಪ್ರೌಢ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ಶ್ರೀ ಬಿ. ಯಂ. ಕುಡುಂಬಿಯವರ ಅಧ್ಯಕ್ಷತೆಯಲ್ಲಿ ತಾ 5ರಲ್ಲಿ ಜರಗಿತು. ಶಾಲಾ ಆಡಳಿತೆದಾರರು ಸ್ವಾಗತ ಭಾಷಣಗೈದರು. ಮುಖ್ಯೋಪಾಧ್ಯಾಯರು ಶಾಲಾ ವರದಿ ವಾಚನವನ್ನೂ ಹಳೆ ವಿದ್ಯಾರ್ಥಿನಿ ಕುಮಾರಿ ಭಾಗೀರಥಿಯವರು ಸ್ವಸ್ತಿವಾಚನವನ್ನೂ ಮಾಡಿದರು. ಪೈ ಗೋಪಾಲರು ಬಹುಮಾನ ವಿತರಣೆ ಮಾಡಿದರು ಧನ್ಯವಾದ ಅರ್ಪಣೆಯ ನಂತರ ವಿವಿಧ ವಿನೋದಾವಳಿಯ ಅಂಗವಾಗಿ ವಿವಿಧ ಚಟುವಟಿಕೆಗಳೂ, 'ಮಧ್ಯಮ ವ್ಯಾಯೋಗ' ಕನ್ನಡ ನಾಟಕವು ಬಾಲಕರಿಂದಲೂ, 'ಜ್ವಾಲೆಯ ಪ್ರತೀಕಾರ' ಎಂಬ ಕನ್ನಡ ನಾಟಕವು ಬಾಲಿಕೆಯರಿಂದಲೂ, ಕಲ್ಪದ ಕತೆ ಎಂಬ ತುಳು ನಾಟಕವೂ ಅಭಿನಯಿಸಲ್ಪಟ್ಟಿತು.

ಶಾಲಾ ವರ್ಧಂತ್ಯುತ್ಸವ— ಕುತ್ಪಾಡಿ ಕಿರಿಯ ಬುನಾದಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ. 13ರಲ್ಲು ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ದಿ. ಎಸ್. ನಾಗಮೋತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಾಂಗಾಳ ರಾಮದಾಸ ನಾಯ್ಕರಿಂದ ಸ್ವಾಗತಭಾಷಣ, ಶಾಲಾ ಹೆಡ್ಮಾಸ್ತರ ಶ್ರೀ ಸದಾನಂದ ಸೆಟ್ಟರಿಂದ ವರದಿವಾಚನ, ಶ್ರೀ ಅಬ್ದುಲ್ ಹಮೀದ್ ಬಾಶಾ ಸಾಹೇಬರಿಂದ ಸ್ವಸ್ತಿವಾಚನಗಳಾದುವು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಭಾಷಣಮಾಡುತ್ತಾ ಊರ ಜನರೆಲ್ಲರೂ ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಿ ಶಾಲಾಭಿವೃದ್ಧಿಗೆ ಸಹಕರಿಸಬೇಕೆಂದರು. ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಯಾದ ಬಳಿಕ ಶಾಲಾ ಬಾಲಕರಿಂದ 'ಕೋಟಿ ಚೆನ್ನಯ್ಯ', ಬಾಲಿಕೆಯರಿಂದ 'ನೃಪತುಂಗ', ಹಳೆ ವಿದ್ಯಾರ್ಥಿಗಳಿಂದ "ಚಂದ್ರಹಾಸ"ವೆಂಬ ನಾಟಕಗಳು ಯಶಸ್ವಿಯಾಗಿ ಜರಗಿದುವು.

ಔಷಧಾಲಯದ ಉದ್ಘಾಟನೆ— ಡಾ| ಟಿ. ಎಸ್. ಕನ್ನನ್ ನಂಬಿಯಾರ್ ಮತ್ತು ಅವರ ಪತ್ನಿ ಡಾ| ಶ್ರೀದೇವಿ ಕೆ. ನಂಬಿಯಾರ್ ಇವರ ನಂಬಿಯಾರ್ಸ್ ಚೈಲ್ಡ್ ಎಂಡ್ ವಿಮೆನ್ಸ್ ಕ್ಲಿನಿಕ್ ಎಂಬ ಔಷಧಾಲಯದ ಪ್ರಾರಂಭೋತ್ಸವವು ಉಡುಪಿಯ ಕೋಳದಪೇಟೆ ಜಂಕ್ಷನ್‌ನಲ್ಲಿ ತಾ. 14ರಂದು ಡಾ| ಟಿ. ಎಂ. ಎ. ಪೈಯವರಿಂದ ನೆರವೇರಿಸಲ್ಪಟ್ಟಿತು. ವರದೇಂದ್ರ ಕಲಾಮಂದಿರದಲ್ಲಿ ಡಾ| ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಡಾ| ಟಿ. ಎಸ್. ಕನ್ನನ್ ನಂಬಿಯಾರ್‌ರಿಂದ ಸ್ವಾಗತ ಭಾಷಣವಾಯಿತು. ಡಾ| ಪೈಗಳು ಮಾತನಾಡಿ ಹೊಸ ಔಷಧಾಲಯವು ಜಯಪ್ರದವಾಗಲೆಂದರು. ಡಾ| ವಿ. ಕೆ. ಬಲ್ಲಾಳರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಡಾ| ಶ್ರೀದೇವಿ ಕೆ. ನಂಬಿಯಾರರು ಧನ್ಯವಾದಗಳನ್ನರ್ಪಿಸಿದರು.

ಮಳೆ— ತಾ. 14ನೇ ರಾತ್ರಿ ಉಡುಪಿ ಮತ್ತು ಆಸುಪಾಸುಗಳಲ್ಲಿ ಗುಡುಗು ಮಿಂಚು ಸಹಿತ ಅಲ್ಪಸ್ವಲ್ಪ ಮುಂಗಾರುಮಳೆ ಸುರಿದಿರುವುದು ಅದೇ ರೀತಿ ತಾ. 13ರಲ್ಲಿ ಮಂಗಳೂರು ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಮಳೆ ಬಿದ್ದಿರುವುದು.

ವಾರ್ಷಿಕೋತ್ಸವಗಳು — ಉಡುಪಿಯ ಮೋಡರ್ನ್ ಸ್ಕೂಲ್ ಆಫ್ ಕೋಮರ್ಸ್ ಇದರ ವಾರ್ಷಿಕೋತ್ಸವವು ತಾ. 12ರಲ್ಲಿ ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ವರದೇಂದ್ರ ಕಲಾಮಂದಿರದಲ್ಲಿ ಯಥಾಸಾಂಗವಾಗಿ ನೆರವೇರಿತು.

ಪಣಿಯೂರಿಯ ಎಚ್. ಪಿ. ಟಿ. ಎಸ್. ಕಿರಿಯ ಬುನಾದಿ ಶಾಲೆಯ ವಾರ್ಷಿಕೋತ್ಸವವು ತಾ. 11ರಂದು ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾವಾರಿಧಿ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿಯೂ ಹಳೆ ವಿದ್ಯಾರ್ಥಿ ಸಂಘದ ವರ್ಧಂತಿಯು ಮರುದಿನ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿಯೂ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

(೫ನೇ ಪುಟದಿಂದ)

ದಲು ಶ್ರೀ ಚೌ ಅವರು ಶ್ರೀ ನೆಹರುಗಳ ಆಮಂತ್ರಣದ ಮೇಲೆ ಇಲ್ಲಿ ಬರುವುದಾಗಿದೆ.

ಪೇಕಿಂಗದಲ್ಲಿ ಕೋಯಿರಾಲಾ

ಸದ್ಯ ಚೀನಾದಲ್ಲಿ ತಿರುಗಾಡುತ್ತಿರುವ ನೇಪಾಳದ ಪ್ರಧಾನಿ ಶ್ರೀ ಬಿ. ಪಿ. ಕೋಯಿರಾಲಾ ಮತ್ತು ಚೀನೀ ಪ್ರಧಾನಿ ಚೌ-ಎನ್-ಲಾಯ್ ಅವರು ಭಾರತ ಮತ್ತು ಚೀನೀ ಪ್ರಧಾನಿಗಳ ಭೆಟ್ಟಿಯು ಸುಖಕರವಾಗಿ ಪರಿಣಮಿಸಲೆಂದು ಹಾರೈಸಿದ್ದಾರೆ. ಇತರ ರಾಷ್ಟ್ರಗಳೊಡನೆ ಶಾಂತಿಯುತ ಸಂಬಂಧ ಹಾಗೂ ತಟಸ್ಥ ವಿದೇಶಧೋರಣೆಯ ನೇಪಾಳಕ್ಕೆ ಚೀನೀ ಪ್ರಧಾನರು ತಮ್ಮ ಸಹಕಾರವನ್ನು ನೀಡುವರೆಂದು ಗೊತ್ತಾಗಿದೆ.

ಗಂಗಾವಳಿಗೆ ಸೇತುವೆ

ಕುಂದಾಪುರದಲ್ಲಿ ಗಂಗಾವಳಿ (ಗಂಗೊಳ್ಳಿ ನದಿಗೆ ಸೇತುವೆಯನ್ನು ಕಟ್ಟಲು ೧೩ ಲಕ್ಷ ರೂಪಾಯಿ ವೆಚ್ಚಬರುವ ಕೊನೆಯ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೆಂದೂ ಪ್ರಶಾಸನ ವರ್ಗದ ಅಂತಿಮಾನುಮೋದನೆ ಬಂದೊಡನೆಯೇ ಟೆಂಡರುಗಳನ್ನು ಕರೆಯಲಾಗುವುದೆಂದೂ ಮಂತ್ರಿ ಶ್ರೀ ಚೆನ್ನಬಸಪ್ಪನವರು ವಿಧಾನಸಭೆಯಲ್ಲಿ ಶ್ರೀ ವಿ ಶ್ರೀನಿವಾಸ ಶೆಟ್ಟರ ಪ್ರಶ್ನೆಯೊಂದನ್ನು ಉತ್ತರಿಸುತ್ತ ಹೇಳಿದರು.

ನಮ್ಮ ರಾಜ್ಯ

ಕೆಲವು ಪ್ರೇಕ್ಷಣೀಯ ಸ್ಥಳಗಳು

ಜೋಗಿನ ಗಂಭೀರತೆ, ಹಂಪೆಯ ಚಿಂತೆ, ತುಂಗಭದ್ರೆಯ ಭದ್ರ ಜಲಾಗಾರ, ಮಂಗಳೂರಿನ ಸರ್ವಋತು ಬಂದರ, ಮೂಡಬಿದಿರೆಯ ನವನಾರೀ ಕುಂಜರ, ಕಾರಕಳದ ಗೋಮಟ ಮತ್ತು ಉಡುಪಿಯ ಮುದ್ದು ಶ್ರೀ ಬಾಲಕೃಷ್ಣರನ್ನು ಕಾಣಿರಿ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

೧೩. ಗೇರುಸೊಪ್ಪೆ (ಜೋಗು)

ಪ್ರಪಂಚದ ಅತಿ ಮನೋಹರವಾದ ಸೃಷ್ಟಿ ಸೌಂದರ್ಯದ ರಾಶಿಯು ಗೇರುಸೊಪ್ಪೆಯಲ್ಲಿದೆ. ಶರಾವತಿ ನದಿಯಲ್ಲಿ ಧುಮುಕುವ ಈ ಜಲಪಾತ ಪ್ರೇಕ್ಷಕರ ಕಣ್ಮನಗಳನ್ನು ಸೂರೆಗೊಳಿಸುವುದು; ಜತೆಗೆ ಕಿವಿಯನ್ನೂ ಕಿವುಡಾಗಿಸುವುದು. ಕಲ್ಲು ಬಂಡೆಗಳ ನಡುವೆ ಹರಿಯುವ ಶರಾವತಿಯು ಇಲ್ಲಿ ೯೦೦ ಅಡಿ ಆಳದ ಹಾಸಿಗೆಯ ಮೇಲೆ ಮಲಗಲವ್ವಳಿಸುತ್ತಾಳೆ. ನೀರು ನಾಲ್ಕು ಕವಲುಗಳಾಗಿ ಹಂದು ಮುಗ್ಗುಗೊಳಿಸುವ ಅವ್ಯಕ್ತ ಶಕ್ತಿಯುಕ್ತವಾಗಿರುವುದು. ಈ ಹರಿಯುವ ನೀರನ್ನು ವ್ಯರ್ಥವಾಗಗೊಡದೆ ಜಲವಿದ್ಯುತ್ ಶಕ್ತಿ ಉತ್ಪಾದಿಸುವ ಪ್ರಯತ್ನ ನಡೆದಿದೆ. ಇಂದು ಮೈಸೂರಿನ ಪಶ್ಚಿಮ ಭಾಗಕ್ಕೆಲ್ಲಾ ಈ ಜೋಗಿನ ಮಹಾತ್ಮಾಗಾಂಧಿ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ್ ಈ ಕೆಲಸವನ್ನು ಮಾಡುತ್ತಿದೆ. ಜೋಗು ತಾಳಗುಪ್ಪೆ (ಬಿರೂರು ತಾಳಗುಪ್ಪೆ ರೇಲ್ವೆಯ ಕೊನೆಯ ನಿಲ್ದಾಣ) ಯಿಂದ ಹತ್ತು ಮೈಲುಗಳಷ್ಟು ದೂರವಿದ್ದು, ಬಸ್ಸುಗಳಮೂಲಕ ಇದನ್ನು ಸೇರಬಹುದು. ಪ್ರಕೃತಿಯ ವೈಚಿತ್ರ್ಯ ಮತ್ತು ಅದರ ಸೌಂದರ್ಯ, ಇದನ್ನು ಮಾನವನು ಯಾವ ರೀತಿಯಲ್ಲಿ ತನ್ನ ಉಪಯೋಗಕ್ಕೋಸ್ಕರ ಬಳಸಿಕೊಳ್ಳಬಹುದೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿ ಈ ಜೋಗಾಗಿದೆ.

೧೪ ಹಂಪೆ

ಕರ್ನಾಟಕವನ್ನು ಅತ್ಯುದಾತ್ತ ರೀತಿಯಲ್ಲಿ ಆಳಿ ಕೀರ್ತಿ ಶೇಷರಾದ ವಿಜಯನಗರದ ಅರಸರ ಭಗ್ನಾವಶೇಷಗಳು ಹಂಪೆಯಲ್ಲಿವೆ. ಹೊಸಪೇಟೆ ರೇಲ್ವೆ ನಿಲ್ದಾಣದಿಂದ ಏಳು ಮೈಲೂ ಬಳ್ಳಾರಿಯಿಂದ ೬೦ ಮೈಲೂ ದೂರದಲ್ಲಿದೆ, ಹಂಪೆ. ಹಂಪೆಯು 'ವಿಜಯ ನಗರ' ಎಂಬ ಬಿರುದಿಗೆ ಪಾತ್ರವಾಗಿ, ಅವಿಸ್ಮರಣೀಯ ವಿಜಯ ನಗರ ಸಾಮ್ರಾಜ್ಯದ ಕೀರ್ತಿವಂತ ರಾಜಧಾನಿಯಾಗಿ ಬೆಳೆದು ಬಂದಿತ್ತು.

೧೪೪೩ರಲ್ಲಿ ಭಾರತದಲ್ಲಿನ ಪರ್ಶಿಯನ್ ರಾಯಭಾರಿ ಶ್ರೀ ಅಬ್ದುಲ್ ರಜಾಕನೆಂಬವನು ಈ ಸಾಮ್ರಾಜ್ಯದ ಬಗ್ಗೆ ಈ ರೀತಿ ಬರೆದಿದ್ದಾನೆ: "ಇಂತಹ ಸ್ಥಳವನ್ನು ಪ್ರೇಕ್ಷಣೀಚಕ್ಷುವು ಎಂದೂ ಕಂಡದ್ದಿಲ್ಲ. ಶ್ರವಣೇಚ್ಛುವು ಇದಕ್ಕಿಂತ ಸುಂದರವಾದುದೊಂದಿದೆಯೆಂದು ಕೇಳಲಿಲ್ಲ."

ಆದರೆ, ವಿಜಯನಗರದ ಪತನದೊಡನೆ ರಾಜಧಾನಿಯೂ ಪತಿತವಾಯಿತು. ಆದರೂ ಒಂದು ಉತ್ತಮ ಆದರ್ಶ ರಾಜ್ಯದ ರಾಜಧಾನಿಯು ಯಾವರೀತಿಯಲ್ಲಿತ್ತು ಎಂಬುದನ್ನು ನಾವರಿಯಬೇಕಾದರೆ, ಹಂಪೆಗೇನೇ ಶರಣುಹೋಗಬೇಕು. ಹಂಪೆಯ ಪ್ರತಿ ಅಡಿ ಸ್ಥಳವೂ ನಮಗೆ ನಮ್ಮ ಪೂರ್ವ ವೈಭವವನ್ನು ಸ್ಮರಣೆಗೆ ತಂದು ಕೊಡುವುದು; ವಿದೇಶೀಯರನ್ನು ದಂಗುಬಡಿಸುವುದು. ಇಂದಿದ 'ಹಾಳು ಹಂಪೆ' ಎಂಬ ಉಪನಾಮಕ್ಕೆ ಪಕ್ಕಾಗಿರುವುದಾದರೂ ಇದು ನಮ್ಮ ರಾಜಧಾನಿಯ ಭಗ್ನಾವಶೇಷ.

೧೫. ತುಂಗಭದ್ರಾ ಅಣೆಕಟ್ಟು

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಮೂರು ಮೈಲು ದೂರದಲ್ಲಿ ಹರಿಯುವ ತುಂಗಭದ್ರಾನದಿಗೆ ಅಡ್ಡವಾಗಿ ಒಂದು ಬೃಹದ್ರೂಪದ ಅಣೆಕಟ್ಟನ್ನು ಹಾಕಲಾಗಿದೆ. ಇಲ್ಲಿ ಸ್ಥಾಪಿತವಾಗುತ್ತಿರುವ ವಿದ್ಯುತ್ಕೇಂದ್ರದಿಂದ ೭೨ ಸಾವಿರ ಕಿಲೋವ್ಯಾಟ್‌ಗಳಷ್ಟು ವಿದ್ಯುತ್ತನ್ನೂ ಉತ್ಪಾದಿಸಲಾಗುವುದು. ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಬಹಳ ವಿಸ್ತಾರವಾದ ಭೂಮಿಗೆ ಈ ಕಟ್ಟೆಯ ನೀರನ್ನು ಬಳಸಿಕೊಳ್ಳಲಾಗುತ್ತದೆ. ದಕ್ಷಿಣ ಭಾರತದ ಅತಿ ದೊಡ್ಡ ಅಣೆಕಟ್ಟು ಎಂದರೆ, ತುಂಗಭದ್ರಾ. ಅಣೆಕಟ್ಟಿನ ಕೃತಕ ಸೌಂದರ್ಯ, ಸುತ್ತುಮುತ್ತಲಿನ ಪ್ರಾಕೃತಿಕ ಸೌಂದರ್ಯ ಮತ್ತು ನೆಲೆನಿಂತ ವಿಶಾಲನೀರಿನ ಅನುಪಮ ಸೌಂದರ್ಯದನ್ನು ಸವಿಯಲು ಬಯಸುವ ಪ್ರೇಕ್ಷಕರಿಗೆ ಅನುಕೂಲವಾಗುವಂತೆ ಇಲ್ಲಿ ವೈಕುಂಠ ಮತ್ತು ಕೈಲಾಸವೆಂಬ ಹೆಸರಿನ ಎರಡು ಎತ್ತರವಾದ ಗೋಪುರಗಳನ್ನು ಕಟ್ಟಿಸಿದ್ದಾರೆ.

೧೬. ಮಂಗಳೂರು

ಮಂಗಳೂರಿಗೆ ಕೂಡಲ ಅಥವಾ ಕೊಡಿಯಾಳ ಎಂಬ ಉಪನಾಮಗಳಿವೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ದೊಡ್ಡ ಮತ್ತು ಪ್ರಧಾನ ನಗರವಾಗಿದೆ. ಪಶ್ಚಿಮ ಕರಾವಳಿಯಲ್ಲಿನ ಉತ್ತಮ ರೇವುಗಳಲ್ಲಿ ಇದೊಂದಾಗಿದ್ದು ದಕ್ಷಿಣದ ಪ್ರಧಾನ ನಗರಗಳೊಡನೆ ರೇಲ್ವೆ ದಾರಿಯೊಡನೆ ಸಂಬಂಧ ಜೋಡಿಸಲ್ಪಟ್ಟಿದೆ. ನೇತ್ರಾವತಿ ಮತ್ತು ಗುರುಪುರ ನದಿಗಳ ಹಿನ್ನೀರಿನಿಂದ ಕೂಡಿದ ಮಂಗಳೂರು ಈಗ ಸರ್ವಋತು ಬಂದರವಾಗಿ ರೂಪುಗೊಳ್ಳುತ್ತಿದೆ. ಮಂಗಳೂರಿನ ಹಂಚು ಅತಿ ವಿಖ್ಯಾತವಾಗಿರುವುದನ್ನು ಬೇರೆ ಹೇಳಬೇಕಾಗಿಲ್ಲ. ಕಾಫಿ ಹುರಿಯುವ ಮತ್ತು ಗೇರು ಬೀಜ ಶುದ್ಧೀಕರಿಸುವ ಹಲವಾರು ಕಾರಖಾನೆಗಳೂ ಇಲ್ಲಿವೆ.

ಮಂಗಳೂರಿನ ೧೦ ಮೈಲು ದೂರದಲ್ಲಿ ಬಜಪೆ ಎಂಬ ಸಾಮಾನ್ಯ ಹಳ್ಳಿಯಿದೆ. ಇಲ್ಲಿ ವಿಮಾನ ನಿಲ್ದಾಣವು ಇದ್ದು ಯಾತ್ರಿಕರಿಗೆ ಅನುಕೂಲವಾಗಿದೆ. ಮಂಗಳೂರು ಜಿಲ್ಲೆಯ ನಾರಿಗೆ ಸಂಪರ್ಕವು ಹೆಚ್ಚಾಗಿ ಖಾಸಗಿ ಆಡಳಿತೆಯವರ ಕೈಯಲ್ಲಿದ್ದು ಸರ್ವಪ್ರಶಸ್ತವಾಗಿ ನಡೆಯುತ್ತಿದೆ. ಮಂಗಳಾದೇವಿಯ ದೇವಾಲಯ ಕದ್ರಿ ಗುಡ್ಡಗಳು, ಬಾವುಟ ಗುಡ್ಡಗಳಲ್ಲದೇ ಹಲವಾರು ಕಾಲೇಜು, ಪೊಲಿಟೆಕ್ನಿಕ್, ಶೈಕ್ಷಣಿಕ ಸಂಸ್ಥೆಗಳೂ ಇವೆ. ಭಾರತ ಪ್ರಸಿದ್ಧಿ ಪಡೆಯುತ್ತಲಿರುವ ಕೆನರಾ ಸ್ಪ್ರಿಂಗ್ ಮಂಗಳೂರಿನ ಕಾರಖಾನೆಯಲ್ಲಿಯೇ ತಯಾರಾಗುತ್ತಿದೆ. ಮಂಗಳೂರು, ಸರ್ವಕ್ಷೇತ್ರದಲ್ಲಿಯೂ ಪ್ರಗತಿಪಥದತ್ತ ಧಾವಿಸುತ್ತಿರುವ ಒಂದು ನಗರವಾಗಿದೆ; ಪ್ರೇಕ್ಷಣೀಯವೆನಿಸಿದೆ.

೧೭. ಮೂಡಬಿದರೆ

ದಕ್ಷಿಣ ಕನ್ನಡದಲ್ಲಿ ಎರಡು ಬಿದಿರೆಗಳಿವೆ, ಒಂದು ಮಂಗಳೂರು-ಉಡುಪಿ ಕರಾವಳಿ ಮಾರ್ಗದಲ್ಲಿದ್ದು ಇದನ್ನು ಪಡುಬಿದಿರೆ ಎನ್ನುತ್ತಾರೆ. ಮಂಗಳೂರು—ಕಾರ್ಕಳ ರಸ್ತೆಯಲ್ಲಿ ೩೪ ಮೈಲುಗಳಲ್ಲಿ ಮೂಡಬಿದಿರೆಯು ಇರುವುದು. ಮೂಡಬಿದಿರೆಯು ಜೈನರ ಪ್ರಸಿದ್ಧ ಯಾತ್ರಾಸ್ಥಳವಾದರೆ, ಉಳಿದವರಿಗೆ ಕಲಾಧಾಮವಾಗಿದೆ. ಮನಮೋಹಕ ಪ್ರಕೃತಿಯ ನಡುವಿರುವ ಈ ಮೂಡಬಿದಿರೆಯಲ್ಲಿ ಹಲವಾರು ಬಸದಿಗಳಿದ್ದು ಸಾವಿರ ಕಂಬದ ಬಸದಿಯು ಎಲ್ಲರನ್ನೂ ತನ್ನತ್ತ ಆಕರ್ಷಿಸುವುದು. ಇಲ್ಲಿ 'ನವನಾರೀಕುಂಜರ' ಎಂಬ ಅಕ್ಕಮೋಘ ಶಿಲ್ಪಕಲಾ ಚಾತುರಿಯು ಕಲಾಪ್ರೇಮಿಗಳಿಗೊಂದು ರಸದೌತಣವೇ ಸರಿ. ಒಂಬತ್ತು ನಾರಿಯರು ನಾನಾ ಹಾವಭಾವಗಳನ್ನು ಪ್ರದರ್ಶಿಸುತ್ತಿರುವಾಗಲೇ ಅವರ ಸಾಮೂಹಿಕ ರೂಪವೊಂದು ಆನೆಯ ರೂಪವನ್ನು ತೋರಿಸುವಂತೆ ಇಲ್ಲಿ ಶಿಲ್ಪಿಯ ಕರಕೌಶಲ ಕೆಲಸಮಾಡಿದೆ. ಬೇಲೂರು, ಹಳೆಬೀಡುಗಳ ಶಿಲ್ಪಕಲೆಗೆ ಯಾವ ವಿಧದಲ್ಲಿಯೂ ಕಡಿಮೆಯಾಗದ ಈ ಮೂಡಬಿದರೆಯು ದಕ್ಷಿಣಕನ್ನಡದ ಒಂದು ಇತಿಹಾಸಪ್ರಸಿದ್ಧ ಸ್ಥಳವೂ ಆಗಿದೆ.

೧೮. ಕಾರ್ಕಳ

ಮಂಗಳೂರಿನಿಂದ ೩೧ ಮೈಲು, ಉಡುಪಿಯಿಂದ ೨೫ ಮೈಲು ದೂರದಲ್ಲಿರುವ ಪಟ್ಟಣ ಕಾರ್ಕಳ. ಹೆಸರೇ ಹೇಳುವಂತೆ ಕಾರ್ಕಳದಲ್ಲಿ ತುಂಬ ಕರಿಯ ಕಲ್ಲುಗಳೇ ಹೆಚ್ಚು. ಈ ಕಲ್ಲುಗಳಿಂದಲೇ ಕಾರ್ಕಳವು ಹೆಸರು ಪಡೆಯಿತು. ಇಲ್ಲಿನ ಸಮೀಪದ ಒಂದು ಎತ್ತರವಾದ ಬಂಡೆಕಲ್ಲಿನ ಮೇಲೆ ೪೨ ಅಡಿ ಎತ್ತರದ ಗೋಮಟೇಶ್ವರನ ಸುಂದರ ಪ್ರತಿಮೆಯಿರುವುದು ಹಿಂದೆ ಇಲ್ಲಿ ಜೈನರ ಪ್ರಾಬಲ್ಯವಿತ್ತು. ಬೆಟ್ಟಗಳ ಪಕ್ಕದಲ್ಲಿಯೇ ಕೆಳಗೆ ರಾಮಸಮುದ್ರವೆಂದ ಸುವಿಶಾಲವಾದ ಕೆರೆಯು ತುಂಬಿದ ಹಳ್ಳವೂ ನಮಗೆ ತೋರುತ್ತದೆ. ಈಗ ಇಲ್ಲಿ ಕೆಲವಾರು ಹಿಂದೂ ದೇವಾಲಯಗಳೂ ಇವೆ.

೧೯. ಉಡುಪಿ

ಉಡುಪಿಯು ಚಿಕ್ಕದಾದರೂ ಮುದ್ದು ಕೃಷ್ಣನ ಊರು ಎಂತಲೇ ಅದು ಚೊಕ್ಕವಾಗಿದೆ. ಭಾರತದ ಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಉಡುಪಿಯೂ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ದೇಶದ ನಾಲ್ಕೂ ದಿಕ್ಕಿನಲ್ಲಿ ವಾಸಿಸುವ ಭಗವಾನ್ ಶ್ರೀ ಕೃಷ್ಣನ ಭಕ್ತರು ಇಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯೋತ್ಸವದ ಸಮಯ ಅಥವಾ ವರ್ಷಾವಧಿಯ ಸಪ್ತೋತ್ಸವದ ವೇಳೆ ಕಿಕ್ಕಿರಿದು ಸೇರುತ್ತಾರೆ. ಅಲ್ಲದೇ ವರ್ಷದ ಎಲ್ಲ ಕಾಲದಲ್ಲೂ ಉಡುಪಿಯು ಯಾತ್ರಿಕರ ಬೀಡಾಗಿರುವುದು.

ಸಮುದ್ರಕರಾವಳಿಯಿಂದ ಮೂರು ಮೈಲು ದೂರವಿರುವ ಉಡುಪಿಯ ಪ್ರಶಾಂತ ಹವೆ, ಸುಸಂಸ್ಕೃತ ಜನರು ಯಾತ್ರಿಕರ ಮೇಲೆ ಒಳ್ಳೆಯ ಮುದ್ರೆಯೊತ್ತಲು ಸಮರ್ಥರು. ಶ್ರೀ ಮಧ್ವಾಚಾರ್ಯರು ತಮ್ಮ ದ್ವೈತ ಸಿದ್ಧಾಂತವನ್ನು ಜಗತ್ತಿಗೆ ದಾನವಾಗಿತ್ತ ನಲ್ಮೆಯ ಊರು ಉಡುಪಿ ಎಂತಲೇ ಇದರ ಕೀರ್ತಿ ದಶದಿಶೆಗಳಲ್ಲಿ ಹಬ್ಬಿದೆ. ಪುರಾತನವಾದ ಅನಂತೇಶ್ವರ, ಚಂದ್ರೇಶ್ವರ ದೇವಾಲಯಗಳಲ್ಲದೆ ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಶ್ರೀ ಕೃಷ್ಣಪುರ ಮತ್ತು ಅಷ್ಟಮಠಗಳೂ ರಥಬೀದಿಯ ಸುತ್ತಲಿವೆ. ಧಾರ್ಮಿಕವಾಗಿ ಮಾತ್ರವಲ್ಲ, ಶೈಕ್ಷಣಿಕವಾಗಿಯೂ ವ್ಯಾವಹಾರಿಕವಾಗಿಯೂ ಉಡುಪಿ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಮೂರು "ಕೆನರಾ" ಬೇಂಕುಗಳಲ್ಲಿ ಎರಡು ರೂಪುಗೊಂಡುದು ಉಡುಪಿಯಲ್ಲಿ. ಮೆಡಿಕಲ್, ಇಂಜಿಯರಿಂಗ್, ಆರ್ಟ್ಸ್. ಸಂಸ್ಕೃತ, ಲಾ ಮತ್ತು ಆಯುರ್ವೇದ ಕಾಲೇಜುಗಳು ಉಡುಪಿಯಲ್ಲಿವೆ. ಯಾತ್ರಾರ್ಥಿಗಳಿಗೆ ಪರ್ಯಾಯ ಮಠದ ವತಿಯಿಂದ ಉಚಿತ ಭೋಜನ ಮತ್ತು ವಸತಿಯ ಸೌಕರ್ಯಗಳೆಲ್ಲ ಲಭಿಸುತ್ತವೆ.

ಉಡುಪಿಯಿಂದ ಮೂರು ಮೈಲು ಪಶ್ಚಿಮದಲ್ಲಿ ಸ್ವಾಭಾವಿಕ ಬಂದರವೆಂದು ಹೆಸರುಪಡೆದ ಮಲ್ಪೆ ಇದೆ. ಸಮುದ್ರದ ಗಾಂಭೀರ್ಯವನ್ನೂ ಪ್ರಕೃತಿ ರಕ್ಷಿತ ರೇವನ್ನೂ ಕಾಣಬೇಕಾದರೆ ಇಲ್ಲಿಗೇನೇ ತೆರಳಬೇಕು. ಇಲ್ಲಿ ಈಗ "ಕೊರೆನೆಟ್ ಕ್ಯಾನಿಂಗ್ ಕಂಪೆನಿಯು" ಸ್ಥಾಪಿತವಾಗಿದೆ. ರಾಜ್ಯ ಮತ್ತು ಕೇಂದ್ರಸರಕಾರಗಳು ಪ್ರಾಕೃತಿಕರೇವು ಮಲ್ಪೆಗೆ ಅಭಿವೃದ್ಧಿಗೊಳಿಸುವ ಸಂಚು ನಡೆಸುತ್ತಿರುವರಾದರೂ ಮಲ್ಪೆಯ ಸ್ವಾಭಾವಿಕ ಸೌಂದರ್ಯದಿಂದ ಅದು ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುವುದು ನಿಶ್ಚಯ. ಇಲ್ಲೇ ಸಮೀಪದಲ್ಲಿ ಮಧ್ವಾಚಾರ್ಯರಿಂದ ಸ್ಥಾಪನೆಗೊಂಡ ಬಲರಾಮ ದೇವಾಲಯವಿರುವುದು.

(ಕ್ರಮಶಃ)

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ "ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!

"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ— ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಪುಸ್ತಕ ವಿಮರ್ಶೆ

ಯಾರು ಲಕ್ಷಿಸುವರು?—ಮೂಲ: ದಿ. ಹರಿನಾರಾಯಣ ಆಪ್ಟೆ. ಅನುವಾದ: ಲೀಲಾ ಕಾರಂತ ಮತ್ತು ಶಿವರಾಮ ಕಾರಂತ. ಪ್ರಕಾಶಕರು: ಸಾಹಿತ್ಯ ಅಕಾಡೆಮಿಯ ಕೃಪೆಯಿಂದ ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು: ಕ್ರೌನ್ ಅಷ್ಟದಳಾಕಾರದ ೧೦+೫೯೧. ಬೆಲೆ: ರೂ. ೬-೦೦

ನೆರೆಪ್ರಾಂತ ಮಹಾರಾಷ್ಟ್ರದ ಸುಪ್ರಸಿದ್ಧ ಕಾದಂಬರಿ ಲೇಖಕರಾದ ದಿವಂಗತ ಹರಿನಾರಾಯಣ ಆಪ್ಟೆಯವರ “ಪಣ ಲಕ್ಷ್ಯಾಂತ ಕೋಣ ಘೇತೋ?” ಎಂಬುದನ್ನು ಭಾರತದ ಸಾಹಿತ್ಯ ಅಕಾಡೆಮಿಯು ಎಲ್ಲ ಭಾರತೀಯ ಭಾಷೆಗಳಲ್ಲೂ ಅನುವಾದಿಸಿ ಪ್ರಕಟಿಸಲು ಆರಿಸಿದ್ದು, “ಯಾರು ಲಕ್ಷಿಸುವರು?” ಎಂಬುದಿದರ ಕನ್ನಡದ ರೂಪಾಂತರವಾಗಿದೆ. ಕನ್ನಡದಲ್ಲಿ ಕಾದಂಬರಿಗಳು ಅಪರೂಪವಾಗಿದ್ದಾಗ, ಮರಾಠಿ ಮತ್ತು ಬಂಗಾಳಿ ಲೇಖಕರಿಂದಲೇ ಸ್ಫೂರ್ತಿ ಪಡೆದು ಕನ್ನಡಿಗರು ಕಾದಂಬರಿ ಪ್ರಪಂಚದಲ್ಲಿ ಪಾದಾರ್ಪಣಮಾಡಿದರೆಂದು ಎಲ್ಲರೂ ಬಲ್ಲರು. ಅಂತಹ ಸ್ಫೂರ್ತಿ ಚಿಮ್ಮಿಸಬಲ್ಲ ಮರಾಠಿ ಕಾದಂಬರಿಗಳಲ್ಲಿ ಇದೂ ಒಂದೆಂದು ಹೇಳಲು ಯಾವ ಅಡ್ಡಿಯೂ ಇರುವುದಿಲ್ಲ.

ಮಧ್ಯಮ ವರ್ಗದ ಗೌರವಸ್ಥರ ಉನ್ನತ ಕುಟುಂಬವೊಂದರ ಜೀವನ ಚಿತ್ರದ ನಡುವೆ ಬಾಲ ವಿಧವೆಯೊಬ್ಬಳ ರೋಮಾಂಚನಕಾರಿ ಶಬ್ದಚಿತ್ರವನ್ನು ನಾವೀ ಕಾದಂಬರಿಯಲ್ಲಿ ಕಾಣುತ್ತೇವೆ. ಕಥಾನಾಯಿಕೆ ಯಮುನೆಯು ತನ್ನ ಬಾಲ್ಯದಿಂದಾರಂಭಿಸಿ ಕೊನೆಯ ಗಳಿಗೆಯ ವರೆಗಿನ ಕಥಾನಕವನ್ನು ಬರೆದಿಡುವಂತೆ ಕಾದಂಬರಿಯು ರಚಿತವಾಗಿದೆ. ಎಳೆಯ ಮಕ್ಕಳ ಬಾಲಮನಸ್ಸು, ಬಾಲ್ಯದ ಆಟ ವಿನೋದಗಳು, ವಿವಾಹ, ವೈವಾಹಿಕ ಜೀವನ, ಪತಿಯ ಮರಣ ಮತ್ತು ತದನಂತರದ ವಿಧವಾ ಜೀವನಗಳ ಹಲವಾರು ಘಟನೆಗಳು ಹೃದಯ ಸ್ಪರ್ಶಿಯಾಗಿವೆ. ಕಾದಂಬರಿಯು ಪೂನೆಯ ಒಂದು ದೊಡ್ಡ ಕುಟುಂಬದ ಸುತ್ತ ಹರಿದಾಡುವುದಾದರೂ ಆನುಷಂಗಿಕವಾಗಿ ಬಂದ ಹತಭಾಗ್ಯೆ ದುರ್ಗಿಯ ರೋಚಕ ಪರಿಚಯ; ಶಂಕರ ಮಾಮಯ್ಯನ ಡಂಬಾಚಾರ, ಗಣಪತಿ ಮತ್ತಾತನ ಮಡದಿಯರ ವಿರಸ, ರಾಮಕೃಷ್ಣನ ಅನಿರೀಕ್ಷಿತ ಮರಣ ಮೊದಲಾದ ಸನ್ನಿವೇಶಗಳು ಮೂಲ ಕಥೆಗೆ ಪುಷ್ಟಿಯನ್ನು ತಂದೀಯುತ್ತವೆ. ಬೊಂಬಾಯಿಯಲ್ಲಿ ಸುಖದಿಂದ ಜೀವಿಸುತ್ತಿದ್ದ ಯಮುನೆ ಆಕೆಯ ಪತಿ ರಘುನಾಥ ಕೈತುಂಬ ಸಂಪಾದಿಸುವುದಕ್ಕೆ ಮೊದಲೇ ಇಹಲೋಕವನ್ನಗಲಿ ಯಮುನೆ ಬಾಲ ವಿಧವೆಯಾಗಿ, ಅಣ್ಣನ ಆಶ್ರಯದಲ್ಲಿ ಬಳಿದು ಬರಬೇಕಾದ ಪ್ರಸಂಗ ಉದ್ಭವಿಸುತ್ತದೆ. ಧರ್ಮದ ಹೆಸರಿನಲ್ಲಿ ಚಿಕ್ಕ ಪುಟ್ಟ ಬಾಲೆಯರ ಮೇಲೆಯೂ ಅನಾಥ ಸ್ತ್ರೀಯರ ಮೇಲೆಯೂ ಅನ್ಯಾಯವನ್ನು ಹೊರಿಸುವ ಸಮಾಜದ ದುಷ್ಟ ಪದ್ಧತಿಗಾಗಿ ಜುಗುಪ್ಸೆ ಹುಟ್ಟುವುದು.

ಆಧುನಿಕತೆ ಮತ್ತು ಪ್ರಾಚೀನತೆಗಳ ಸಂಧಿಕಾಲದಲ್ಲಿ ನಡೆದ ಘಟನೆಯು ಚಿತ್ರವೀ ಕಾದಂಬರಿಯಲ್ಲಿ ವರ್ಣಿತವಾಗಿದೆ. ಇದಕ್ಕೆ ಶಂಕರ ಮಾಮಯ್ಯನೇ ಸಾಕ್ಷಿಯಾಗಿದ್ದಾನೆ. ಗೋಮುಖ ವ್ಯಾಘ್ರನಂತಿದ್ದ ಇವರು “ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿಯೇ ಹಿರಿಯರ ಮರ್ಯಾದೆ ತೆಗೆಯುವುದಕ್ಕೆ ಕಲಿತುಕೊಂಡ” ಎನ್ನುತ್ತಾರೆ. ಜನರೂಢಿಯನ್ನು ಬಿಟ್ಟು ಒಂದಿಷ್ಟು ಅಚೀಚೆ ಸರಿದರೆ, ಪ್ರಪಂಚವೇ ಮುಳುಗಿತು ಎಂದು ಬೊಬ್ಬಿರಿಯುತ್ತಾರೆ. ಧರ್ಮದ ಹೆಸರಿನಲ್ಲಿ ಮೂಗಿನಿಂದಲೇ ನೀರುಳ್ಳಿಯ ಸಿಪ್ಪೆ ಸುಲಿಯುವವರಿವರು! ಅಣ್ಣನಿಲ್ಲದ ವೇಳೆಯನ್ನರಸಿ, ಬಾಲವಿಧವೆಯ ಕೇಶಮುಂಡನವನ್ನು ಬಲಾತ್ಕಾರದಿಂದ ಮಾಡಿಸಿ, ತಾವು ಪುಣ್ಯ ಕಟ್ಟಿಕೊಂಡ ಪುಣ್ಯಾತ್ಮರಿವರು! ಇಂತಹ ಗೊಡ್ಡು ವೇದಾಂತಿಗಳು ಬಾಹ್ಯಾಡಂಬರ ಪ್ರಿಯರು ಮಾತ್ರರಿದ್ದು ಸಮಾಜಕ್ಕೆ ಅಪಾರ ಹಾನಿಯನ್ನು ತಂದೀಯುತ್ತಾರೆ. ಶಂಕರಯ್ಯ ಸಮಾಜದ ಒಂದು ವಿಭಾಗದ ಪ್ರತಿನಿಧಿಯಾಗಿ ಇಲ್ಲಿ ಕಾಣಿಸಿಕೊಂಡು, ಜನತೆಯ ಮನೋಭಾವನೆಯಲ್ಲಿ ಪರಿವರ್ತನೆಯಾಗುವ ಆವಶ್ಯಕತೆಯಿದೆಯೆಂದು ಗೂಢವಾಗಿ ಸಾರುತ್ತಾನೆ.

ದುರ್ಗಿ ಮತ್ತಾಕೆಯ ಪತಿಯರ ಒಂದು ಚಿತ್ರ ಒತ್ತಟ್ಟು; ಗಣಪತಿ ಮತ್ತಾತನ ಪತ್ನಿಯರ ಚಿತ್ರ ಒತ್ತಟ್ಟು. ವಿಧಿಗಂಟು ಹಾಕಿದ ಅಸಾಮಾನ್ಯ ಜೋಡಿಗಳಿವು. ದುರ್ಗಿಯ ಪತಿ ಸ್ತ್ರೀಯೆಂದರೆ ಕೇವಲ ಭೋಗ ವಿಲಾಸದ ಸಾಮಗ್ರಿಯೆಂದು ತಿಳಿದಿದ್ದು ಅದರಂತೆ ವರ್ತಿಸಿದರೆ, ಗಣಪತಿ ತನ್ನ ಪತ್ನಿಯು ಸುಶಿಕ್ಷಿತಳಿರಬೇಕೆಂದೂ ಪುರುಷರಂತೆಯೇ ಮುಂದುವರಿಯಬೇಕೆಂದೂ ಬಯಸುತ್ತಾನೆ. ಇವರೂ ಸಮಾಜದ ಎರಡು ಮುಖಗಳನ್ನು ಪ್ರತಿನಿಧೀಕರಿಸುತ್ತಾರೆ. ಇವರ ನಡುವೆ ರಘುನಾಥ ಯಮುನೆಯರ ದಾಂಪತ್ಯ ಜೀವನ ಬುದ್ಬುದದಂತೆ ಪಸಂದಾಗಿ ತೋರಿ ಮಾಯವಾಗುತ್ತದೆ. ಸಮಾಜದ ರೂಢಿಯ ಹೆಸರಿನಲ್ಲಿ ಹೆಂಗಸಿನ ಅಳಲನ್ನು ಕೇಳುವಷ್ಟು ತಾಳ್ಮೆಯು ಯಾರಿಗೂ ಇರುವುದಿಲ್ಲ.

ಇದು ಕೇವಲ ಕಥೆಯಲ್ಲ; ಒಬ್ಬಾಕೆಯ ಜೀವನೇತಿಹಾಸ; ನಡೆದ ಸತ್ಯ ಘಟನೆ. ಕರುಣಾಭರಿತ ಕಾದಂಬರಿ. ಸಮಾಜದ ಲೋಪದೋಷಗಳ ಪರಿಣಾಮವಾಗಿ ಮಣ್ಣುಗೂಡಿದ ಕೆಲವು ಜೀವಗಳ ಸತ್ಯ ಕಥನ; ಎಂತಲೇ ಇದರಲ್ಲಿ ಅತಿರಂಜನೆಯಿಲ್ಲ; ಅನಾವಶ್ಯಕ ವರ್ಣನೆಗಳೂ ಇಲ್ಲ. ಬೇಸರ ತರಿಸುವಂತಹ ಘಟನೆಗಳ ಉಲ್ಲೇಖಗಳೂ ಇಲ್ಲ. ಇಂತಹ ಅಮೋಘ ಕಾದಂಬರಿಯು ಸಾಹಿತ್ಯ ಅಕಾಡೆಮಿಯ ಆಶ್ರಯದಿಂದ ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದಿತವಾಗುವುದು ಸಂತೋಷದ ಸಂಗತಿಯಾಗಿದೆ. ಪ್ರಕಟವಾದ ಅನುವಾದಗಳಲ್ಲಿ ಮೊತ್ತಮೊದಲನೆಯದು ಕನ್ನಡದ್ದೆಂದೇ ತಿಳಿಯುತ್ತದೆ. ಇದಕ್ಕೆ ಅನುವಾದಕರಾದ ಕಾರಂತ ದಂಪತಿಗಳನ್ನು ಅಭಿನಂದಿಸಬೇಕು. ಸುಲಭ ಸರಳವಾಗೂ ಮನೋಹರವಾದ ಕನ್ನಡದ ಶೈಲಿ ಕಾದಂಬರಿ ತುಂಬ ಬಂದಿದ್ದು ಓದುವಾಗ ವಾಚಕರನ್ನು ಉತ್ಸಾಹಭರಿತರಾಗಿಸುತ್ತದೆ. ಶುದ್ಧ ಬಿಳಿ ಕಾಗದದಲ್ಲಿ ಉತ್ತಮ ಮುದ್ರಣದೊಂದಿಗೆ ಅಚ್ಚುಕಟ್ಟಾದ ಹೊದಿಕೆಯೊಡನೆ ಪ್ರಕಾಶಪಡಿಸಿದ ಪ್ರತಿಭಾ ಗ್ರಂಥ ಮಾಲೆಯವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀ ಕೆ. ಕೆ. ಹೆಬ್ಬಾರರ ಕಲಾಕೃತಿ ಮುಖ ಪೃಷ್ಠದಲ್ಲಿ ಕಾಣಿಸಿಕೊಂಡು ಎಲ್ಲರ ಲಕ್ಷ್ಯವನ್ನೂ ತನ್ನತ್ತ ಆಕರ್ಷಿಸುತ್ತದೆ. ಅನುವಾದಿತ ಕಾದಂಬರಿಯಾದರೂ ಮೂಲ ಕಾದಂಬರಿಯ ಓಟವಿದೆ; ಸಹಜತೆಯಿದೆ; ಮಾಧುರ್ಯವೂ ಇದೆ. ಈ ಕಾರಣದಿಂದ, ಕನ್ನಡಿಗರೆಲ್ಲರೂ ಅವಶ್ಯ ಸಂಗ್ರಹಿಸಬೇಕಾದ ಹೊತ್ತಗೆಗಳಲ್ಲಿ “ಯಾರು ಲಕ್ಷಿಸುವರು” ಎಂಬುದು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆಯೆಂಬುದು ನಿಸ್ಸಂದೇಹ.

—ಗೋರಾ.

BUY
ADVERTISED
GOODS!

ಲಘುಬರಹ

ಪುಸ್ತಕಪ್ರಿಯ ಟಿಪ್ಪು ಸುಲ್ತಾನ

ಶ್ರೀರಂಗ ಪಟ್ಟಣದ ಟಿಪ್ಪು ಸುಲ್ತಾನ ವಸ್ತು ಸಂಗ್ರಹಾಲಯದಲ್ಲಿ ಆತನ ಅಮೂಲ್ಯ ಪುಸ್ತಕಗಳನ್ನೂ ಸಂಗ್ರಹಿಸುವ ಪ್ರಯತ್ನ ನಡೆಯಬೇಕು.

ಮೈಸೂರಿನ ಕೊನೆಯ ಸ್ವತಂತ್ರ ಅರಸನಾದ ಟಿಪ್ಪು ಸುಲ್ತಾನನು ಸಮಾಧಿಗೊಂಡು ೧೬೦ಕ್ಕೂ ಮಿಕ್ಕಿದ ವರ್ಷಗಳು ಸಂದಿರುವುದಾದರೂ ಆತನ ಹೆಸರನ್ನು ಸ್ಮರಿಸುವ ಅಲ್ಪಾವಕಾಶವಾದರೂ ಭಾರತೀಯರ ಪಾಲಿಗೆ ಉಳಿದಿದೆಯೆನ್ನಬೇಕು. ಕಳೆದ ದಶಂಬರ ೨೫ರಲ್ಲಿ ಕಾವೇರಿ ನದಿಯ ನಡುಗಡ್ಡೆಯಾದ ಶ್ರೀರಂಗ ಪಟ್ಟಣದಲ್ಲಿ ಟಿಪ್ಪು ಸುಲ್ತಾನ ವಸ್ತುಸಂಗ್ರಹಾಲಯವೊಂದನ್ನು ತೆರೆಯುವ ಸಮಾರಂಭವು ನಡೆಯಿತು. ವಿಜೇತರಾದ ಆಂಗ್ಲರು ಬರೆದ ಇತಿಹಾಸದಲ್ಲಿ ಟಿಪ್ಪು ಸುಲ್ತಾನನ ಬಗೆಗೆ ತೀವ್ರವಾದ ಅನ್ಯಾಯವನ್ನು ತೋರಿಸಲಾಗಿದೆ. ಆತನು ಉನ್ನತ ಗುಣಶಾಲಿಯೂ ಸತ್ವಯುತನೂ ಧೈರ್ಯಶಾಲಿಯೂ ಆಗಿದ್ದು “ಮೈಸೂರಿನ ಹುಲಿ” ಎಂಬ ಹೆಸರಿಗೆ ಪಾತ್ರನಾಗಿದ್ದನು. ತನ್ನ ಕಾಲದ ನಿಜಾಮ, ಮರಾಠ, ಬ್ರಿಟಿಷ ಮತ್ತಿತರ ಯೌರೋಪ್ಯ ಸಾಹಸಿಗರಿಗಿಂತಲೂ ಟಿಪ್ಪುವಿನ ಕೈ ಒಂದು ತೂಕ ಬಲವೇ ಆಗಿತ್ತೆಂಬುದು ನಿರ್ವಿವಾದ.

ಟಿಪ್ಪುವಿನ ಜೀವನಕ್ಕೆ ಇತಿಹಾಸವು ಕೇವಲ ಎರಡೇ ಮಾರ್ಗಗಳನ್ನು ತೆರೆದು ಕೊಟ್ಟಿತು. ಅವುಗಳಲ್ಲಿ, ಆಗಾಗಲೇ ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸಲು ಹವಣಿಸಿದ್ದ ಬ್ರಿಟಿಷರೊಡನೆ ಹೋರಾಡುತ್ತ ಸ್ವತಂತ್ರನಾಗಿರುವುದೊಂದು; ಅವರ ಸೇವಕನಾಗಿ ಶಾಂತಿಯಿಂದ ಬದುಕುವುದಿನ್ನೊಂದು. ಆ ಕಾಲದ ರಾಜಕೀಯ ಪ್ರಪಂಚದಲ್ಲಿ ಶಾಂತಿಮಯ ಸಹಜೀವನವು ದುಸ್ತರವಾಗಿತ್ತು. ಟಿಪ್ಪುವು ಅದು ತನ್ನಯೆಂದು ತಿಳಿದಿದ್ದರೂ ಸ್ವಾತಂತ್ರ್ಯವನ್ನೇ ಬಯಸಿದನು. ಇಂತಹ ಸ್ವಾತಂತ್ರ್ಯ ಪ್ರೇಮಿಗೆ ನಿಜವಾದ ಗೌರವಾರ್ಪಣೆಯೆಂದರೆ ಶ್ರೀರಂಗ ಪಟ್ಟಣದ ಶಾಶ್ವತವಾದ ವಸ್ತು ಸಂಗ್ರಹಾಲಯವಾಗಿದೆ.

ಟಿಪ್ಪು ಸುಲ್ತಾನನು ಶ್ರೇಷ್ಠ ಸುಧಾರಕನೆಂದೂ, ದಕ್ಷ ಆಡಳಿತದಾರನೆಂದೂ ಹೆಚ್ಚಿನವರು ತಿಳಿದಿಲ್ಲ. ಇಂದು ನಾವು ಮಾಡುತ್ತಿರುವ ಹಲವಾರು ಕೆಲಸಗಳನ್ನು ಅಂದು ಟಿಪ್ಪುವೇ ಮಾಡಿದ್ದನು. ಈತ ಒಂದು ಹೊಸ ಸೌರ ಪಂಚಾಂಗದೊಡನೆ ಮುಸ್ಲಿಂ ಪಂಚಾಂಗವನ್ನು ವ್ಯವಹಾರಕ್ಕೆ ತಂದನು. ಭಾರತದ ನಾಣ್ಯ ಪದ್ಧತಿಯಲ್ಲಿಯೇ ಅತ್ಯಂತ ಆಕರ್ಷಕವಾದ ನಾಣ್ಯಗಳನ್ನು ಚಲಾವಣೆಗೆ ತಂದನು. ಅಳತೆಯ ಮತ್ತು ತೂಕದ ಹೊಸ ವಿಧಾನವನ್ನು ವ್ಯವಹೃತಗೊಳಿಸಿದನು. ಸೂಳೆಗಾರಿಕೆಯನ್ನು ನಾಶಮಾಡಿ ಅಮಲು ಪದಾರ್ಥ ಸೇವನೆಯನ್ನು ನಿಷೇಧಿಸಿದನು. ಪಾಶ್ಚಾತ್ಯ ಮಾದರಿಯಲ್ಲಿ ಸರಕಾರವನ್ನೂ ಸೈನ್ಯವನ್ನೂ ಪುನಾರಚಿಸುವ ಪ್ರಯತ್ನಮಾಡಿದನು. ‘ಸ್ವದೇಶೀಯನ್ನೇ ಕೊಳ್ಳಿರಿ’ ಎಂಬ ಪದ್ಧತಿಯನ್ನು ತೊಡಗಿಸಿ, ತನ್ನ ಸರಕಾರದ ಅಧಿಕಾರಿಗಳೂ ರಾಜ್ಯದ ಪ್ರಜೆಗಳೂ ಮೈಸೂರಲ್ಲಿ ತಯಾರಾದ ಪದಾರ್ಥಗಳನ್ನು ಮಾತ್ರವೇ ಕೊಂಡುಕೊಳ್ಳುವಂತೆ ವಿಧಿಸಿದನು. ಕಾರಖಾನೆಗಳನ್ನು ಸಂಸ್ಥಾಪಿಸಿ, ವಿದೇಶ ವ್ಯಾಪಾರವನ್ನು ಹೆಚ್ಚಿಸಿದನು.

ಟಿಪ್ಪುವಿಗೆ ಪುಸ್ತಕಗಳೆಂದರೆ ಬಹಳ ಅಚ್ಚುಮೆಚ್ಚು; ಮಾತ್ರವಲ್ಲ, ಆತನು ಸ್ವಯಂ ಲೇಖಕನೂ ಹೌದು. ಈತನ “ಜಬರ್‌ಜಾದ್” ಎಂಬ ಜ್ಯೋತಿಷ ಗ್ರಂಥ ಮತ್ತು ಸುಂದರ ಲಿಪಿಯ ಪರಿಚಯ ಎಲ್ಲರಿಗೂ ಇದೆ. ಶ್ರೀರಂಗ ಪಟ್ಟಣವನ್ನು ಬ್ರಿಟಿಷರು ಮುತ್ತಿಗೆ ಹಾಕಿದಾಗ, ಟಿಪ್ಪುವಿನ ಅಮೂಲ್ಯ ಪುಸ್ತಕ ಭಂಡಾರವು ಬ್ರಿಟಿಷರ ಪಾಲಿಗೆ ಸೇರಿತು. ಲಾರ್ಡ್ ವೆಲ್ಲೆಸ್ಲಿಯು ಕೆಲವು ಪುಸ್ತಕಗಳನ್ನು ಬಂಗಾಳದ ಏಸ್ಯಾಟಿಕ್ ಸೊಸೈಟಿಗೂ ಇನ್ನು ಕೆಲವನ್ನು ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಿಗೂ ಕೊಟ್ಟನು. ಉಳಿದುವು ಈಸ್ಟ್ ಇಂಡಿಯಾ ಕಂಪೆನಿಯ ಪುಸ್ತಕಾಲಯದಲ್ಲಿ ಸೇರಿಸಲ್ಪಟ್ಟುವು. ಟಿಪ್ಪುವಿನ ಭಂಡಾರದಲ್ಲಿದ್ದ ಕೆಲವು ಅಮೂಲ್ಯ ಹಸ್ತಪ್ರತಿಗಳು ೧೮೦೦ರಲ್ಲಿ ಫೋರ್ಟ್ ವಿಲ್ಲಿಯಂ ಕಾಲೇಜನ್ನು ಸೇರಿದುವು. ಈ ಕಾಲೇಜು ೧೮೩೦ರಲ್ಲಿ ಅಳಿದ ನಂತರ ಅವನ್ನು ಭಾರತ ಮತ್ತು ಇಂಗ್ಲೆಂಡಿನ ಕೆಲವು ಪುಸ್ತಕಾಲಯಗಳ ನಡುವೆ ಹಂಚಲಾಯಿತು.

ಸದ್ಯ ಶ್ರೀರಂಗ ಪಟ್ಟಣದಲ್ಲಿ ಟಿಪ್ಪು ಸುಲ್ತಾನನ ಚಿರಸ್ಮಾರಕವೊಂದು ನಿರ್ಮಾಣವಾಗಿದೆ. ಈ ಸಂಗ್ರಹಾಲಯದಲ್ಲಿ ಟಿಪ್ಪುವಿನ ಪುಸ್ತಕಾಲಯದ ಹಲವಾರು ಅಮೂಲ್ಯ ಪುಸ್ತಕಗಳನ್ನೂ ಪಡೆದು ಸಂಗ್ರಹಿಸುವ ಕೆಲಸವೂ ನಡೆಯುವುದು ಆವಶ್ಯವೆಂದು ಅನಿಸುವುದಿಲ್ಲವೆ?

—ಯೋಜನಾ.



ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಕಥಾವಿಹಾರ

(೨ನೇ ಪುಟದಿಂದ)

ದ ಒಂದು ಗುಡಿ. ಊರ ಪೂಜಾರಿ ಮನೆಯೊಂದನ್ನು ಬಿಟ್ಟರೆ, ಆ ಪೂರಿ ಕೆದೆಲ್ಲ ಮನೆಗಳೂ ಶಿವಗುಡಿಯಂತೆ ೯ ಇದ್ದುವು. ಮೊದಲು ಬೂದ ತನ್ನ ಸೆಯಿಂದ ಹೊರಟಾಗ ಇಲ್ಲವೇ ಮನೆ ತುರಳುವಾಗ ಈ ಶಿವನಿಗೆ ಭಕ್ತಿಪೂರ ವಾಗಿ ಕೈಮುಗಿಯುತ್ತಿದ್ದ. ಹಬ್ಬ ಹರಿ ಗಳಲ್ಲಿ ಹಣ್ಣುಕಾಯಿನ್ನೂ ಒಪ್ಪಿಸ್ಯ . ಆದರೆ, ಈಗ ಆತನ ಪಾಲಿಗೆ ದೇ ರೂ ಇಲ್ಲ, ದಿಂಡರೂ ಇಲ್ಲ. ಇಡಿ ಗ್ರಾ ಕ್ಕೆ ಗ್ರಾಮವೇ ನೆರೆಯಲ್ಲಿ ಕೊಚ್ಚಿ ೆಗುತ್ತಿರುವುದನ್ನು ಕಣ್ಣಾರೆ ಕಂಡೂ ಟ್ಟಿ ಕುಳಿತಿದ್ದ ಈ ದೇವನ ಮೇಲೆ ದನಿಗೆ ಎಳ್ಳನಿತು ವಿಶ್ವಾಸ ಅಥವಾ ಯು ಉಳಿದಿರಲಿಲ್ಲ. ಆತನ ಪಾಲಿಗೆ ವರೂ ದೇವಿಯರೊಂದಿಗೆ ಅದೇ ಕೆ ರಲ್ಲಿ ಕೊಚ್ಚಿಹೋಗಿದ್ದರು.

ಇಂದು ಬೂದ ಅತ್ತ ತೆರ ದುದ್ದು, ಶಿವನಿಗೆ ನಮಸ್ಕರಿಸು ಕ್ಕಲ್ಲ; ಆ ಜನ ಜಂಗುಳಿ ಏಕೆ ಸೇರಿ ಎಂಬುದನ್ನು ಕಂಡುಕೊಳ್ಳಲು. ಅಲ್ಲಿ ಜಾರಿ ಮತ್ತು ಒಬ್ಬ ಸರಕಾರಿ ಅಧಿ ರಿಗಳ ನಡುವೆ ಮಾತುಕತೆ ನಡೆಯು . ಅಧಿಕಾರಿ ಹೇಳುತಿದ್ದ—"ದೇವಾ ಯ ಹೇಗೂ ಜೀರ್ಣವಾಗಿದೆ. ಹಾಗಿ ಾಗ, ಅದನ್ನು ಇಲ್ಲಿಂದ ಸ್ಥಳಾಂತರಿಸಿ ಸ ದೂರದಲ್ಲಿ ಹೊಸತಾಗಿ ಕಟ್ಟಿದರೆ, ನಯೇನು?"

ಪೂಜಾರಿ ದುರುಗುಟ್ಟಿ ಆತನನ್ನೇ ೋಡುತ್ತ ಉರಿಕಾಯ್ದು ಹೇಳಿದ—"ಏ ದೆ. ಶಿವನನ್ನು ಕೀಳುವುದೆ? ಗ್ರಾಮ ವನೆಯಲ್ಲಿ ಗ್ರಾಮ ರಕ್ಷಕನನ್ನು ದೂ ಡಿಸುವುದೆ? ಅನ್ಯಾಯ, ಅಪರಾಧ, ವದ್ರೋಹ!....ಆ ಪ್ಯಾ ಶೂಲಧಾರಿ, ತಹ ಅವಾಚ್ಯವಾಕ್ಯಗಳನ್ನು ಆಲಿಸು ಈ ಕರ್ಣಗಳನ್ನು ಕಿವುಡಾಗಿಸು. ಆಡು ಈ ಮೂರ್ಖನಾಸ್ತಿಕನ ನಾಲಿಗೆಯ ೆಬಿಡು.

ಅಧಿಕಾರಿ ಸಮಾಧಾನದಿಂದಲೇ ಹೇಳಿ -"ಸ್ವಾಮಿ, ಊರ ದೇವಾಲಯ ಯಬೇಕೆಂದು ನಾವನ್ನುತ್ತಿಲ್ಲ. ಹೇ ಮುಂದಿದೆ. ಉತ್ತಮವಾದ ರೀತಿ ಲ್ಲಿ ಬೇರೊಂದನ್ನು ತುಸು ಬಡಗು ಯಲ್ಲಿ ಕಟ್ಟಿಸುವರಂತೆ. ಇದರಿಂದೇ ನಿಮ್ಮ ದೇವನಿಗೆ ಸಿಟ್ಟು ಬರಲಾರ ಆತನಿಗೇನು, ಉಳಿಯಲೊಂದು ಗು ಯಿದ್ದರೆ ಸಾಕಾತಾನೆ?"

ಪೂಜಾರಿ ತೀಕ್ಷ್ಣವಾಗಿ ಒನ್ನೆ ಜೀ ಬಿಂಬವನ್ನೂ ಇನ್ನೊಮ್ಮೆ ನೆರೆದ ಜ ನ್ನೂ ಮತ್ತೊಮ್ಮೆ ಆ ಅಧಿಕಾರಿಯ ನೋಡುತ್ತ ಹೇಳಿದ—"ನೋಡಿರಿ, ಈತನು ನಾಸ್ತಿಕನಿರುವಂತೆ ಕಾಣಿಸು ತ್ತಾನೆ! ಊರ ರಕ್ಷಕನಾದ ಈತನನ್ನು ಉಚ್ಚಾಟನೆ ಮಾಡಲು ಅನ್ನುತ್ತಾನೆ! ಹಿಡಿಯಿರಿ, ಕಟ್ಟಿಹಾಕಿರಿ, ಒಡೆಯಿರಿ."

ಜನರು ಮುಂದುವರಿದು ಬರುತ್ತಿರು ವುದನ್ನು ಕಂಡ ಅಧಿಕಾರಿ ಕೇಳಿದ— 'ಸ್ವಾಮಿ, ಗ್ರಾಮ ರಕ್ಷಕನಾದ ಈತ ಮಳೆಗಾಲದಲ್ಲಿ ಊರನ್ನು ನೆರೆಯಿಂದೇ ಕೆ ರಕ್ಷಿಸಲಿಲ್ಲ?"

ಪೂಜಾರಿ. "ನಾಸ್ತಿಕ, ನಾಸ್ತಿಕ! ದೈವದ್ರೋಹಿ" ಎಂದು ಕೂಗಿದ. ಉಳಿದವರು ಆತನನ್ನು ಅನುಕರಿಸಿದರು. ಬೂದ ಮಾತ್ರ, "ಹೌದು, ಈ ಶಿವ ಗ್ರಾಮ ರಕ್ಷಕನಲ್ಲ; ಗ್ರಾಮಭಕ್ಷಕ" ಎಂದು ಕೊಂಡು ತನ್ನ ಮನೆಯ ದಾರಿ ಹಿಡಿದು ನಡೆದೇಬಿಟ್ಟ. ಇಲ್ಲಿ ಪೂಜಾರಿ ಅಧಿಕಾರಿ ಗಳ ದ್ವಂದ್ವ ಮುಂದುವರಿದಿತ್ತು.

೩

ಇನ್ನೂ ಕೆಲವು ದಿನಗಳು ಕಳೆದುವು. ಒಂದು ದಿನ ಸೂರ್ಯೋದಯದ ವೇಳೆ, ಬೂದ ತನ್ನ ಮನೆಯಂಗಳದಲ್ಲಿ ಸುತ್ತಾಡುತಿದ್ದ. ಆಗ, ದೂರದ ನದಿ ಪಕ್ಕದ ತನ್ನ ಗದ್ದೆಯಲ್ಲಿ ಅದಾರೋ ತಿರುಗಾಡುತ್ತಿರುವುದು ಗೋಚರಿಸಿತು. ಇವರಾರಿರ ಬಹುದು? ಈ ಮುಂಜಾವದ ವೇಳೆಯಲ್ಲಿ ಇವರಿಗಲ್ಲೇನು ಕೆಲಸ ಎಂದುಕೊಂಡು ಆತ ಮೆಲ್ಲನೆ ಗದ್ದೆಯತ್ತ ನಡೆದ. ಅಲ್ಲಿ ಕೆಲವು ಸರಕಾರಿ ಅಧಿಕಾರಿಗಳು ದುರ್ಬೀನು, ಟೇಪುಗಳನ್ನು ಹಿಡಿದು ಏನನ್ನೋ ನೋಡುತಿದ್ದರು. ಬೂದ ಕುತೂಹಲದಿಂದ ಅವರೊಡನೆ ಕೇಳಿದ—"ನೀವಿಲ್ಲಿ ಏನು ಮಾಡುತ್ತಿರುವಿರಿ?"

"ಇಲ್ಲೊಂದು ನದಿಗೆ ಅಣೆಕಟ್ಟು ಕಟ್ಟುವ ಕೆಲಸ ನಡೆಯುತ್ತದೆಯಲ್ಲ? ಕಟ್ಟೆಯ ನೀರು ನಿಂತು ಸುತ್ತ ವ್ಯಾಪಿಸುವಾಗ, ಅದು ಎಲ್ಲಿವರೆಗೆ ನಿಂತೀತೆಂದು ಅಳೆಯುತಿದ್ದೇವೆ."

"ಎಂದರೆ, ಈ ಗದ್ದೆಯ ಮೇಲೂ ನೀರು ನಿಲ್ಲುವುದೆ?"

"ನಿಂತರೂ ನಿಲ್ಲಬಹುದು; ಹೆಚ್ಚಿನಂಶ, ಈ ಗದ್ದೆಯಲ್ಲೂ ಐದಡಿ ನೀರು ನಿಲ್ಲುವುದು."

"ಹಾಗಾದರೆ, ಕೃಷಿಬೆಳೆ...?"

"ಅದಕ್ಕೇನು? ಕೆಲವೊಂದು ಗದ್ದೆ ನೀರಲ್ಲಿ ಮುಳುಗಿದರೆ, ಸಾವಿರಾರು ಎಕ್ರೆ ಜಮೀನಿಗೆ ನೀರು ದೊರೆತು ತಂತಾಗುವುದಲ್ಲಾ?"

ಬೂದ ಯೋಚಿಸಿ, ಕೊನೆಗೆ ಕೇಳಿದ- "ಒಂದು ವೇಳೆ, ಈ ಗದ್ದೆಯ ಯಜಮಾನ ಇದರಲ್ಲಿ ನೀರು ನಿಲ್ಲಲು ಬಿಡದೆ ಹೋದರೆ"?

ಅಧಿಕಾರಿ ನಕ್ಕು ಹೇಳಿದ— 'ಅಯ್ಯಯ್ಯೊ ಎಂತಹ ಮಾತಾಡುತ್ತಿರುವಿರಿ? ಈ ಗದ್ದೆ ಹೋದರೇನು? ಗದ್ದೆಯ ಯಜಮಾನನಿಗೆ ಬೇರೆಡೆ ಇದೇ ರೀತಿಯ ಗದ್ದೆ ದೊರೆಯಬಹುದು; ಇಲ್ಲವೇ ತಕ್ಕ ಪರಿಹಾರ ಕೊಡಲ್ಪಡುವುದು ಆತನಿಗೇನೂ ಚಿಂತೆಯಿರಲಾರದು."

"ನನಗೆ ನಿಮ್ಮ ಗದ್ದೆಯೂ ಬೇಡ; ಪರಿಹಾರವೂ ಬೇಡ. ನನ್ನ ಗದ್ದೆಯಲ್ಲಿ ನೀರು ನಿಲ್ಲುವುದೂ ಬೇಡ"–ಶೂನ್ಯ ಮನಸ್ಕನಾಗಿ ಹೇಳಿದ ಬೂದ.

ಅಧಿಕಾರಿಗೆ ಆಗ ತಿಳಿಯಿತು, ಈತ ಈ ಗದ್ದೆಯ ಯಜಮಾನನೆಂದು. ಆತ ಬೂದನಿಗೆ ಅಣೆಕಟ್ಟು ಕಟ್ಟುವುದರಿಂದ ಯಾವ ಯಾವ ಲಾಭಗಳಿವೆಯೆಂಬುದನ್ನು ವಿವರಿಸಿದ: ನೆರೆಗಳನ್ನು ಅದು ಹೇಗೆ ತಡೆಗಟ್ಟಬಲ್ಲುದು, ನೀರಾವರಿಯ ಸೌಕರ್ಯದಿಂದ ಅದೆಷ್ಟು ಬಂಜರು ಭೂಮಿ ಹಸನಾಗುವುದು, ಇದರಿಂದ ದೇಶದ ಸಂಪತ್ತು ಹೇಗೆ ಹೆಚ್ಚಬಲ್ಲುದು ಎಂದು ಮುಂತಾಗಿ. ತಿಳಿದ ಬೂದ ಮರುಮಾತಾಡದೆ ಮನೆಯತ್ತ ತೆರಳಿದ. ಅವನ ತಲೆಯಲ್ಲಿ, ಮನಸ್ಸಿನಲ್ಲಿ, ಹೃದಯದಲ್ಲಿ ಒಂದು ಕ್ರಾಂತಿಯ ನೆಲೆ ಕಾಣಿಸಿತು.

ನಾಲ್ಕು ವರ್ಷಗಳನಂತರದ ಮಾತು. ಬೂದನಿಂದು ವೈವಾಹಿಕ ಜೀವನದಲ್ಲಿ ಕಾಲಿಟ್ಟಿದ್ದಾನೆ. ರಾಧಾ ಬೂದನಿಗೊಪ್ಪುವ ಮಡದಿ. ಮನೆತುಂಬ ಕಾಳುಕಡ್ಡಿಗಳು ತುಂಬಿವೆ. ಹೋಳಿ ಹುಣ್ಣಿಮೆಯ ವಿಶೇಷ ಅಡಿಗೆ ಮುಗಿಸಿ, ರಾಧಾ ಮನೆಯಲ್ಲಿ ಕೂರಿದ್ದಾಳೆ, ಪತಿಯ ನಿರೀಕ್ಷಣೆಯಲ್ಲಿ. ಸಂಧ್ಯಾಕಾಲ ಜಾರಿತು. ಮೂಡಲಲ್ಲಿ ಚಂದ್ರನು ಪೂರ್ಣರೂಪದಿಂದ ಮೂಡಿ ಮೇಲೇರತೊಡಗಿದ. ಶಿಶಿರ ಋತುವಾದರೂ ಶಿವರಾತ್ರಿಯು ಆಗಾಗಲೇ ಕಳೆದಿದ್ದುದರಿಂದ ಹಿಮ ದೂರವಾಗತೊಡಗಿತ್ತು; ಮೋಡಗಳು ಹರಡಿದ್ದರೂ ಅದು ಅತ್ಯಲ್ಪವಾಗಿದ್ದುವು, ಶರತ್ಕಾಲದ ಮೇಘರಾಶಿಯನ್ನವು ತುಸುಮಟ್ಟಿಗೆ ಹೋಲುತಿದ್ದುವು. ಚಂದ್ರನೊಂದು ಬಾರಿ ತನ್ನ ಮುಖವನ್ನು ಮೋಡದೊಳಗೆ ಅಡಗಿಸಿ ತೆಳುವಾದ ಪರದೆಯೊಳಗಿನಿಂದ ಕಿಲಕಿಲ ನಗುತಿದ್ದ, ಇನ್ನೊಮ್ಮೆ ತೆರೆಯಿರುಳಿನಿಂದ ಹೊರಬಂದು ಭೂಮಾತೆಯನ್ನು ಆಲಿಂಗಿಸುತಿದ್ದ. ಈ ಚಿನ್ನಾಟವನ್ನು ಕಾಣುತ್ತ, ಬೀಸುವ ತಂಗಾಳಿಗೆ ಮೈಯೊಡ್ಡುತ್ತ, ಅಂಗಳದಲ್ಲಿ ಟ್ಟಿದ್ದ ಪಡಿಮಂಚದಲ್ಲಿ ಕುಳಿತ ರಾಧೆ ತನ್ನನ್ನು ಯಾರೋ ಕೂಗಿದಂತಾಗಿ ಎದ್ದು ನಿಂತಳು.

"ರಾಧೂ...."

ಹೌದು, ಇದು ಪರಿಚಿತ ಧ್ವನಿಯೇ. ತನ್ನ ಪತಿದೇವನದು. ಆ ಬೆಳದಿಂಗಳ ರಾತ್ರಿಯಲ್ಲಿ ಬೂದ ಚಿಗರಿಯಂತೆ ಹಾರು ಹಾರುತ್ತ ತನ್ನತ್ತ ಬರುತ್ತಿರುವುದು ಕಾಣಿಸಿತು. ಎದ್ದುನಿಂತು, ಸೀರೆ ಸೆರಗ ಸರಿಪಡಿಸಿ, ಪತಿಯ ಕೈಹಿಡಿದು, "ಇದೇನಿದು ಇಷ್ಟೊಂದು ಉನ್ಮಾದಾವಸ್ಥೆಯಲ್ಲಿದ್ದೀರಿ?" ಎಂದಳಾ ಮುಗ್ಧೆ.

"ಮೊದಲು ಹೊರಡು; ಆ ಮೇಲೆ ಮಾತು."

"ಅಯ್ಯೋ, ಎಲ್ಲಿಗೇಂದ್ರೆ? ಊಟ ಮಾಡಿಯಾದ್ರೂ ಹೊರಡಿ."

"ಊಟ ಗೀಟ ಎಲ್ಲ ಮತ್ತೆ. ಈಗ ಬಾ" ಎಂದ ಬೂದ ರಾಧೆಯ ಕೈಹಿಡಿದು ಎಳೆದುಕೊಂಡೇ ಹೊರಟ.

ಅವರಿಬ್ಬರು ಸೇರಿದುದು ವಿಶಾಲವಾದ ಅಣೆಕಟ್ಟಿನ ಸ್ಥಳವನ್ನು. ಕಲ್ಲು ಸಿಮೆಂಟುಗಳಿಂದ ಕಟ್ಟಿದ ಕಟ್ಟೆ. ಮುಂದುಗಡೆ ಸಾಕಷ್ಟು ವಿಸ್ತಾರವಾಗಿ ನೀರು ನಿಂತಿದೆ. ಬೀಸುವ ತಂಗಾಳಿಯಿಂದ ತುಂಬಿದ ನೀರು ತೆರೆಯೆಬ್ಬಿಸುತಿದೆ. ಚಂದ್ರದ ಬಿಂಬ ಅದರ ನಡುವೆ ನಗುತ್ತಿದೆ! ಚಂದ್ರಿಕೆಯಿಂದ ಹರಡಿದ ನೀರು ಸುವರ್ಣಮಯವಾಗಿರುವಂತೆ ಭಾಸವಾಗುತ್ತದೆ. ಅಣೆಕಟ್ಟೆಯ ಕೆಳಗೆ ದೊಡ್ಡ ತೂಬುಗಳಿಂದ ನೀರು ಬೋರ್ಗರೆಯುತ್ತ ಹರಡುತ್ತಿದೆ. ಎಂತಹ ಗಂಭೀರತೆ! ಏನು ಸುಂದರತೆ! ಎಂತಹ ಮನ ಮೋಹಕತೆ! ಪತಿ ಬೂದ ಸತಿ ರಾಧೆಗೆ ಇವನ್ನು ತೋರಿಸಿದ. ಈ ಚಿನ್ನದ ನೀರಿನಿಂದ ನಮ್ಮ ಬಯಲು ಚಿನ್ನದ ಬಯಲಾಯಿತು ಎಂದು ಆಕೆಯ ಕರವನ್ನು ಮೆಲ್ಲನೆ ಪ್ರೇಮಲವಾಗಿ ಅದುಮಿದ. ಆಕೆಯೂ ಅದರಗಳನ್ನು ಅರೆತೆರೆದು ಮೃದು ಮಂದಹಾಸವನ್ನು ಬೀರಿ ಬೂದನ ಕೈಯನ್ನು ತನ್ನ ಹೃದಯಕ್ಕೆ ಒತ್ತಿ ಇಟ್ಟುಕೊಂಡಳು. ಅಲ್ಲೇ ಅನತಿ ದೂರದಲ್ಲಿ ನೂತನವಾಗಿ ಕಟ್ಟಿಸಿದ ಶಿವ ಮಂದಿರದಲ್ಲಿ ಹೋಳಿಹಬ್ಬದ ಸಂಭ್ರಮ ನಡೆದಿತ್ತು. ಮನ್ಮಥನ ಅನುಪಮ ಗುಣವನ್ನು ನಾನಾ ಪರಿಯಾದ ಗೀತೆಗಳಿಂದ ಹಾಡಿ ಹೊಗಳುತಿದ್ದರು. ಈ ಗೀತೆಗಳೂ ದೂರದ ಬೆಟ್ಟಗಳಿಗೆ ಬಡಿದು ಅಲ್ಲೇ ಪ್ರತಿಧ್ವನಿಸಿ ಗುಯ್‌ಗುಟ್ಟುವುದು ಹಿಮ್ಮೇಳವೊದಗಿಸಿದಂತಾಗಿತ್ತು.

ಬೂದ—ರಾಧೆಯರು ಆನಂದೋನ್ಮಾದದಲ್ಲಿ ಕಾಲುವೆಗಳನ್ನು ದಾಟಿ ನೇರಾಗಿ ಮಂದಿರದಂಗಳದಲ್ಲಿ ಕಾಲಿಟ್ಟರು. ಅಷ್ಟರಲ್ಲೇ ಊರಜನವೆಲ್ಲವೂ ಬಂದುಸೇರಿತ್ತು. ಹಾಡು ಮುಂದೆ ಸಾಗುತಿತ್ತು. ಬೂದ ರಾಧೆಯರೂ ಅದಕ್ಕೆ ಧ್ವನಿಗೂಡಿಸಿದರು: "ಜಯ ಜಯ ಕರುಣಾಬ್ಧೇ ಶ್ರೀ ಮಹಾದೇವ ಶಂಭೋ"

ಜಯ ಜಯಕಾರ ಹಾಕುತ್ತ ಎಲ್ಲರೂ ನಲಿದರು. ಶಿವ ಜಟಾ ಜೂಟ ಚಂದ್ರ ಪೂರ್ಣ ಚಂದ್ರನಾಗಿ ಇದನ್ನು ಆಲಿಸುತ್ತ ಹಾಡಿನಲ್ಲೇ ತನ್ಮಯನಾಗಿ ಮಂದಹಾಸ ಬೀರುತಿದ್ದ; ತನ್ನೊಡೆಯನ ಕರುಣಾಪ್ರವಾಹವನ್ನು ತೆರೆದಿಟ್ಟಿದ್ದ!

—ಗೋಪೀಚಂದ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್‌ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEEE & Co. (M. I.) CALCUTTA—40

ಸ್ಟಾಕಿಸ್ಟರು: (1) ಸಾ ಕಂಪೆನಿ, ಮಂಗಳೂರು—1.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No 466 N/50 date 2-12-1950 of the Director of public Instruction Madras.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA
REGD. NO. M. 3619

UDIPI, THURSDAY
17–3–1960

LICENSE NO. 31
Licensed to Post without Prepayment

ಮುಂಗಡಪತ್ರ

ಮಧ್ಯಾವಧಿ ಪರಿಹಾರದ ಕೊಡುಗೆ

ರಾಜ್ಯದ ಅನಿಶ್ಚಿತ ಆರ್ಥಿಕ ಪರಿಸ್ಥಿತಿ ದೂರವಾಗುತ್ತಲಿದ್ದು ಅದು ದಿನೇ ದಿನೇ ನಿಶ್ಚಿತ ರೂಪಧಾರಣೆ ಮಾಡುತ್ತಿದೆ.

ಮೈಸೂರು ರಾಜ್ಯದ ೧೯೬೦–೬೧ನೆ ವರ್ಷದ ಮುಂಗಡ ಪತ್ರವನ್ನು ಅರ್ಥ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಶಾಸನ ಸಭೆಯ ಮುಂದಿಟ್ಟಿದ್ದಾರೆ. ಮುಂಗಡ ಪತ್ರದಲ್ಲಿ ೧೦೬.೮೩ ಲಕ್ಷ ರೂಪಾಯಿಗಳು ಉಳಿತಾಯವೆಂದು ತೋರಿಸಲಾಗಿದ್ದರೂ ಸರಕಾರಿ ನೌಕರರಿಗೆ, ರೂ. ೩೦೦ಕ್ಕಿಂತ ಕಡಿಮೆ ವೇತನ ಪಡೆಯುವವರ ತುಟ್ಟಿಭತ್ತೆಯಲ್ಲಿ ರೂ. ೫ನ್ನು ಮಧ್ಯಾವಧಿ ಪರಿಹಾರವೆಂದು ಕೊಡಮಾಡಿರುವುದರಿಂದ, ಇದಕ್ಕೆ ರೂ. ೧೫೦ ಲಕ್ಷ ಬೇಕಾಗಬಹುದಾದುದರಿಂದ ರೂ. ೪೩ ಲಕ್ಷ ಕೊರತೆಯೇ ತೋರಿಬರುವುದು. ಆದರೂ ಅರ್ಥ ಮಂತ್ರಿಯವರು ಯಾವ ಹೊಸ ಕರವನ್ನೂ ಸೂಚಿಸಿಲ್ಲವೆಂಬುದನ್ನು ಅವಶ್ಯ ಗಮನಿಸಬೇಕು.

ಮುಂಗಡಪತ್ರದಲ್ಲಿ ಕಾಣಿಸಿದಂತೆ ರಾಜ್ಯದ ಆಯವು ೬೩೭೦.೯೭ ಲಕ್ಷ ರೂಪಾಯಿಯಾದರೆ, ವ್ಯಯವು ೬,೪೬೩.೧೪ ಲಕ್ಷ ರೂಪಾಯಿ ಯಾಗಿರುವುದು. ವೆಚ್ಚದಲ್ಲಿ ಬಹು ದೊಡ್ಡ ಭಾಗ, ಎಂದರೆ, ರೂ. ೧,೩೪೧.೪೭ ಲಕ್ಷಗಳು ವಿದ್ಯಾಭ್ಯಾಸಕ್ಕಾಗಿ ವೆಚ್ಚವಾಗುವುದು. ಇನ್ನು, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ರೂ. ೫೪೩.೪೮ ಲಕ್ಷ, ಕೃಷಿಗೆ ರೂ. ೧೯೫.೭೯ ಲಕ್ಷ, ಸಮಾಜ ಕಲ್ಯಾಣಕ್ಕೆ ರೂ. ೧೩೦.೭೯ ಲಕ್ಷ, ಪಶುಸಂಗೋಪನೆಗೆ ರೂ. ೧೦೪.೧೧ ಲಕ್ಷ, ನೀರಾವರಿ ಮತ್ತು ನಾಗರಿಕ ಕಾಮಗಾರಿಗೆ ರೂ. ೭೧೧.೪೮ ಲಕ್ಷ, ಸಹಕಾರಕ್ಕೆ ರೂ. ೯೪.೪೯ ಲಕ್ಷ, ತಾಲೂಕು ಬೋರ್ಡು ಮತ್ತು ಗ್ರಾಮ ಪಂಚಾಯತುಗಳಿಗೆ ರೂ. ೪೪೦.೦೦ ಲಕ್ಷಗಳನ್ನು ತೆಗೆದಿರಿಸಲಾಗಿದೆ.

ನಿಮ್ನ ವರ್ಗದ ಸರಕಾರಿ ನೌಕರರಿಗೆ ಕೊಡಮಾಡಿದ ಮಧ್ಯಾವಧಿ ಪರಿಹಾರವನ್ನು ರೂ. ೩೦೦ಕ್ಕಿಂತ ಕಡಿಮೆ ವೇತನ ಪಡೆಯುವ ಎಲ್ಲ ಸರಕಾರಿ ನೌಕರರಿಗೆ ಮಾತ್ರವಲ್ಲ, ಸ್ಥಳೀಯ ಸಂಸ್ಥೆಗಳು, ಸಹಾಯಧನ ಪಡೆಯುವ ವಿದ್ಯಾಸಂಸ್ಥೆಗಳು, ಸರಕಾರಿ ಔದ್ಯೋಗಿಕ ಸಂಸ್ಥೆಗಳು ಮತ್ತು ಮೈಸೂರು ತುಟ್ಟಿಭತ್ತೆಯ ಪ್ರಮಾಣವನ್ನು ಅಂಗೀಕರಿಸಿದ ಇತರ ಸಹಾಯಧನ ಪಡೆದ ಸಂಸ್ಥೆಗಳ ನೌಕರರಿಗೂ ಅನ್ವಯಿಸುವುದು. ಎಪ್ರಿಲ್ ೧ನೆ ದಿನಾಂಕದಿಂದ ಈ ಪರಿಹಾರವನ್ನು ನಗದಿ ರೂಪದಲ್ಲಿಯೂ ಅವರ ಹಿಂದಿನದನ್ನು ರಾಷ್ಟ್ರೀಯ ಯೋಜನಾ ಪತ್ರಗಳ ಮೂಲಕ ಅಥವಾ ಕೇಂದ್ರ ಸರಕಾರದ ಬಹುಮಾನ ಪತ್ರಗಳ ಮೂಲಕವಾಗಿಯೂ ಕೊಡಲಾಗುವುದು.

ಮುಂಗಡ ಪತ್ರದಲ್ಲಿ, ವಾರ್ಷಿಕ ರೂ. ೧,೨೦೦ಕ್ಕಿಂತ ಕಡಿಮೆ ಆದಾಯವಿರುವ ಎಲ್ಲ ನಾಗರಿಕರ ಮಕ್ಕಳಿಗೂ ಎಸ್. ಎಸ್. ಎಲ್. ಸಿ. ವರೆಗೆ ಉಚಿತ ಶಿಕ್ಷಣವನ್ನು ನೀಡುವ ಯೋಜನೆಯನ್ನು ಮುಂದಿಡಲಾಗಿದೆ. ಸರಕಾರದ ನೌಕರರ ವೇತನ ಮಟ್ಟವನ್ನು ಪುನರ್ವಿಮರ್ಶಿಸಲು ಹಾಗೂ ಹೊಸ ಕರ ಹೇರುವ ಸಾಧನಗಳನ್ನು ಕಂಡು ಹಿಡಿಯಲು ಒಂದೊಂದು ಸಮಿತಿಯನ್ನು ನೇಮಿಸುವ ಆಲೋಚನೆಯೂ ಇದೆಯೆಂದು ತಿಳಿದು ಬಂದಿದೆ.

ದ್ವಿತೀಯ ಯೋಜನೆಯ ಕೊನೆಯ ವರ್ಷದಲ್ಲಿ ರೂ. ೪೧ ಕೋಟಿಯನ್ನು ಯೋಜನೆಗಾಗಿ ವ್ಯಯಿಸುವುದೆಂದೂ ಇದರಲ್ಲಿ ೧೭೫೦ ಲಕ್ಷ ಕೇಂದ್ರದಿಂದ ಸಹಾಯವಾಗಿ ಲಭಿಸುವುದೆಂದೂ ಸೂಚಿಸಲಾಗಿದೆ. ಅಲ್ಲದೇ ಮುಂದಿನ ವರ್ಷದಲ್ಲಿ ೫.೫೦ ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ನಗದಿಯಾಗಿ ಸಾಲವೆತ್ತುವ ಹಂಚಿಕೆಯೂ ಇರುವುದು. ರಾಜ್ಯದ ಮೂರನೆಯ ಪಂಚವಾರ್ಷಿಕ ಯೋಜನೆಯು ರೂ. ೨೭೯ ಕೋಟಿ ರೂಪಾಯಿಗಳದ್ದಿರುವುದರಿಂದ ಇದಕ್ಕಾಗಿ, ಆದಾಯದ ಅನ್ಯದಾರಿಯನ್ನು ಹುಡುಕಬೇಕಾಗಿದೆ ಯೆಂಬ ಸೂಚನೆಯಿದೆ.

ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ, "ನಮಗೆ ಕೇವಲ ಹಣಮಾತ್ರ ಬೇಕಾಗಿರುವುದಲ್ಲ; ಜನತೆಯ ಅಗಾಧ ಪ್ರಯತ್ನದ ಆವಶ್ಯಕತೆಯೂ ಇರುವುದು. ಪ್ರಗತಿ ಪಥದಲ್ಲಿ ನಾವು ನಡೆಯುವಾಗ, ಇನ್ನೂ ಹೆಚ್ಚಿನ ತ್ಯಾಗಕ್ಕೆ ಸಿದ್ಧರಾಗಬೇಕಾಗಿದೆ. ಈ ಮಾತು ಶಾಸನ ಸಭೆಯ ಸದಸ್ಯರ ಮತ್ತು ರಾಜ್ಯದ ಜನತೆಯ ಹೃದಯದಲ್ಲಿ ಪ್ರತಿಧ್ವನಿಸುವುದೆಂದು ನಾನು ನಂಬುವೆ. ಈ ಸುಂದರ ನಾಡಿನ ಜನತೆ ಇದನ್ನು ಮರೆಯಲಾರದೆಂದು ಹಾರೈಸುವೆ" ಎಂದು ಅಂದರು.

ರಾಜ್ಯವು ಪುನಾರಚನೆಗೊಂಡಾಗಿದ್ದ ರಾಜ್ಯದ ಅನಿಶ್ಚಿತ ಆರ್ಥಿಕ ಸ್ಥಿತಿಯೇನೂ ಇಂದಿಲ್ಲ. ೧೯೫೯—೬೦ರ ಪುನರ್ವಿಮರ್ಶಿತ ಅಂದಾಜು ಪಟ್ಟಿಯು ತುಂಬ ಉಳಿತಾಯವನ್ನು ತೋರಿಸಿದೆ. ಇದಕ್ಕೆ ಕರಶಿಕರಣೆಯಲ್ಲಿ ಏಕ ರೂಪತೆಯನ್ನು ಸಾಧಿಸಿರುವುದೂ ವೆಚ್ಚದಲ್ಲಿ ತುಸು ಇಳಿತವಾದುದೂ ಕಾರಣವಾಗಿವೆ. ಏಕರೂಪತೆಯ ಕಾರ್ಯವು ಇನ್ನೂ ಪೂರ್ಣವಾಗದೆ ಇರುವುದರಿಂದ, ರಾಜ್ಯದ ಮುಂಗಡ ಪತ್ರವು ಕೊರತೆಯನ್ನೆಸಿದರೂ ಅದು ತುಂಬಿ ಬರುವುದೆಂದು ಹಾರೈಸಬಹುದು. ಅಂತೂ ಮೈಸೂರಿನ ಆರ್ಥಿಕಸ್ಥಿತಿ ತೀರ ಕೆಳ ಮಟ್ಟದಲ್ಲಿಲ್ಲವೆಂಬುದನ್ನು ನಾವು ಕಂಡು ಕೊಳ್ಳಬಹುದು.

— —

ಇತ್ತೀಚೆಗೆ ಭಾರತವನ್ನು ರಶ್ಯನ್ ಪ್ರಧಾನಿ ಶ್ರೀ ಕ್ರುಶ್ಚೇವರು ಸಂದರ್ಶಿಸಿದರು. ಪಾಲಂ ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಿ, ರಾಷ್ಟ್ರಪತಿ ಭವನಕ್ಕೆ ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದ ಮತ್ತು ಪ್ರಧಾನಿ ನೆಹರೂ ಅವರು ಕಾರಿನಲ್ಲಿ ಕರೆದುಕೊಂಡು ಬಂದರು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ನಾವು ದೃಷ್ಟಿ ಹರಿಸಿದರೆ ಇಲ್ಲಿಯೂ ತುಸು ಗಡಿಬಿಡಿಯಿರುವುದು ಕಂಡು ಬರುತ್ತದೆ. ಯೋಜನಾವಧಿಯಲ್ಲಿ ದೇಶದೊಳಗೂ ಸಾರ್ವಜನಿಕ ಸಾಲವನ್ನು ಎತ್ತುವ ಯೋಚನೆಯಂತೂ ಇದ್ದೇ ಇದೆ. ಆದರೆ, ಭಾರತದ ಬಡ್ಡಿ ದರವು ಉಳಿದ ದೇಶಗಳಿಗಿಂತ ಕೆಳಮಟ್ಟದ್ದಿರುವುದರಿಂದ, ಹೆಚ್ಚಾಗಿ ಧನ ಒಟ್ಟುಗೂಡುವುದು ತುಸು ಪ್ರಯಾಸವೆನಿಸಬಹುದು. ಸರಕಾರದ ಸಾಲಪತ್ರಗಳಲ್ಲಿ ಹಣ ತೊಡಗಿಸುವುದಕ್ಕಿಂತ ಇತರತ್ರ ತೊಡಗಿಸುವುದು ತುಂಬ ಲಾಭದಾಯಕವಾಗಿರುವಾಗ, ಆಕರ್ಷಕ ಬಡ್ಡಿದರವನ್ನು ಘೋಷಿಸದ ಹೊರತು ಸಾಲವು ಕೂಡುವುದು ಕಷ್ಟವೆಂದು ಹೇಳಲಾಗುತ್ತದೆ. ಏಕೆಂದರೆ, ಬೇಂಕ್ ಬಡ್ಡಿದರವು ಇತ್ತೀಚೆಗೆ ವಿದೇಶಗಳಲ್ಲಿ ಇನ್ನೂ ಮೀರಿರುವಾಗ ಭಾರತದಲ್ಲಿ ಆ ಗಡಿಯನ್ನೂ ಮುಟ್ಟಿಲ್ಲ. ವ್ಯವಹಾರದಲ್ಲಿ ಈಗಾಗಲೇ ತೋರಿಬಂದಿರುವ ಅತಿಪ್ರಸರಣದಿಂದಾಗ ಅಗ್ಗದರದ ಹೆಚ್ಚು ಸಾಲವೆತ್ತುವ ನೀತಿಯನ್ನು ವ್ಯಾಪಾರಿ ಪ್ರಪಂಚವು ಬೆಂಬಲಿಸಬಹುದು. ಆದರೆ, ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಸರಕಾರದ ಸಾಲ ಪತ್ರಗಳಲ್ಲಿ ಹಣ ಸುರಿಯಬೇಕಾದರೆ, ಬಡ್ಡಿ ದರವನ್ನೂ ಏರಿಸಬೇಕಾದ ಪ್ರಮೇಯವೊದಗಬಹುದು.

ಹೀಗೆ, ಮಹತ್ವಾಕಾಂಕ್ಷಾಯುತವಾದ ಭಾರತದ ತೃತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಧನ ಸಂಗ್ರಹದ ಮಾರ್ಗಗಳು ನಿಯೋಜಿತವಾಗಿದ್ದು, ಅವುಗಳು ವಿಮರ್ಶೆಗೆ ಗುರಿಯಾಗಿವೆ. ಭಾರತ ಸರಕಾರದವರಾದರೂ ಯೋಜನೆಯು ಸಂಪೂರ್ಣ ಯಶಸ್ವಿಯಾಗುವಂತೆ ಮಾಡಲು ಬದ್ಧ ಕಂಕಣವಾದುದರಿಂದ, ಧನ ಸಂಗ್ರಹದಲ್ಲಿ ಎಡತಾಕುವ ಕಂಟಕಗಳನ್ನೂ ಅಡೆತಡೆಗಳನ್ನೂ ದೂರೀಕರಿಸಿ, ದಾರಿಯನ್ನು ಸುಗಮಗೊಳಿಸುವ ಪ್ರಯಾಸ ವಹಿಸುವುದರಲ್ಲಿ ಉತ್ಸುಕವಾಗದಿರಲಾರರು.

ಸಿಂಡಿಕೇಟ್ ಬ್ಯಾಂಕ್

ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಆರ್ಥಿಕ ಸೇವೆಯನ್ನು ನೀಡುವ ಆದರ್ಶ ಸಂಸ್ಥೆ: ವ್ಯವಹಾರ ಸಂಪತ್ತು ರೂ. ೨೨ ಕೋಟಿಗೂ ಮಿಕ್ಕಿದೆ.

ಸಿಂಡಿಕೇಟ್ ಬ್ಯಾಂಕ್

ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ (ಆಂಧ್ರ, ಕೇರಳ, ಮದರಾಸು, ಮುಂಬಯಿ ಮತ್ತು ಮೈಸೂರು ರಾಜ್ಯಗಳಲ್ಲಿ) ವಿಶಾಲವಾಗಿ ಹಬ್ಬಿರುವ ಸಂಸ್ಥೆ: ಒಟ್ಟು ೧೩೭ ಶಾಖೆಗಳಿವೆ.

ಉಳಿತಾಯಗಾರರ ಸನ್ಮಿತ್ರ

ಸಿಂಡಿಕೇಟ್ ಬ್ಯಾಂಕ್

ಉಳಿತಾಯಗಾರರ ಸನ್ಮಿತ್ರ— ಆಕರ್ಷಕ ಹಾಗೂ ಅತ್ಯುಪಯುಕ್ತ ಉಳಿತಾಯ ಯೋಜನೆಗಳಿಂದ ಜನಪ್ರಿಯವಾಗಿರುವ ಸಂಸ್ಥೆ: "ಪಿಗ್ಮಿ" ಮನೆಮಾತಾಗಿದೆ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, ಮೈಸೂರು ರಾಜ್ಯ; ಚೇರ್ಮನ್: ಡಾ|| ಟಿ. ಎಂ. ಎ. ಪೈ; ಜನರಲ್ ಮೆನೇಜರ್: ಟಿ. ಎ. ಪೈ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರ್ಷ ೩೯. ವಾರ ೨೯. 24-3-1960 Vol. 39. No. 29.

ಚಲಿತ ಪ್ರಸಂಗ

ಶಾಸಕರ ಒಮ್ಮತವೇ ರಾಜ್ಯದ ಶಕ್ತಿ

ಕೊಚ್ಚಿನದಲ್ಲಿ ದ್ವಿತೀಯ ನೌಕಾಂಗಣವನ್ನು ಕಟ್ಟುವ ಯೋಜನೆಯನ್ನು ಕೇಂದ್ರ ಸರಕಾರ ಒಪ್ಪಿ, ತೃತೀಯ ಯೋಜನೆಯಲ್ಲಿ ಸೇರಿಸಿದೆ; ಮೈಸೂರಿನ ಶಾಸಕರಿಗೆ ನೆರೆರಾಜ್ಯ ಕೇರಳವು ಶಾಸಕರ ಒಮ್ಮತದ ಬೆಲೆಯನ್ನು ತೋರಿಸಿಕೊಟ್ಟಿತು.

ಭಾರತದಲ್ಲಿ ಸ್ಥಾಪಿತವಾಗಲಿರುವ ದ್ವಿತೀಯ ನೌಕಾಂಗಣವು ಪಶ್ಚಿಮ ಕರಾವಳಿಯಲ್ಲಿ ಸ್ಥಾಪನೆಯಾಗಬೇಕೆಂದೂ ಸರ್ವಸಾಮಾನ್ಯವಾಗಿ ಈ ಬಗ್ಗೆ ಪರಿಶೀಲನೆ ನಡೆಸಿದ್ದ ಬ್ರಿಟಿಷ ಸಮಿತಿಯು ಕೇರಳ ರಾಜ್ಯದ ಕೊಚ್ಚಿಯು ಈ ನೌಕಾಂಗಣಕ್ಕೆ ಉತ್ತಮವಾದ ಸ್ಥಳವೆಂದು ಅಭಿಪ್ರಾಯಪಟ್ಟಿರುವುದೆಂದೂ ಈ ಮೊದಲೇ ತಿಳಿದುಬಂದಿದೆ. ಕೊಚ್ಚಿಯಲ್ಲಿ ಇದನ್ನು ಸಂಸ್ಥಾಪಿಸುವ ಸಲುವಾಗಿ ಆ ಕಾಲದ ಕಮ್ಯುನಿಸ್ಟ ಸರಕಾರವೂ ಸಾಕಷ್ಟು ಪ್ರಯತ್ನಗಳನ್ನು ಮಾಡಿತ್ತು. ಮುಂದೆ, ಈ ವಿಚಾರವು ಕೇಂದ್ರ ಸರಕಾರದ ಪರಿಶೀಲನೆಗೆ ಒಳಪಟ್ಟು ಅದನ್ನು ತೃತೀಯ ಯೋಜನೆಯ ಕರಡಿನಲ್ಲಿ ಸೇರಿಸಲಾಗಿರುವುದಾಗಿ ವರದಿಗಳು ಬಂದಿದ್ದುವು.

ಮೊನ್ನೆ ಮೊನ್ನೆ, ಯೋಜನಾ ಆಯೋಗದ ಅಭಿಪ್ರಾಯವು ಈ ಬಗ್ಗೆ ವ್ಯತಿರಿಕ್ತವಾಗಿರುವುದೆಂದು ತಿಳಿದುಬಂತು. ಇದಕ್ಕೆ ಕೊಚ್ಚಿಯ ಅನುತ್ತಮತೆಯೇನೂ ಕಾರಣವಾಗಿರಲಿಲ್ಲ; ಅಥವಾ ಕೊಚ್ಚಿಯಲ್ಲಿ ಬೇಡವೆಂಬ ನಿಲುಮೆಯೂ ಹೇತುವಾಗಿರಲಿಲ್ಲ. ತೃತೀಯ ಯೋಜನಾವಧಿಯಲ್ಲಿ ಹಡಗು ಸಾಗೆಯ ಅಭಿವೃದ್ಧಿಗಾಗಿ ರೂ. ೫೫ ಕೋಟಿಗಳಷ್ಟನ್ನು ಮಾತ್ರ ತೆಗೆದಿರಿಸಲಾಗುವುದು. ಇದರಲ್ಲಿ ನೌಕಾಂಗಣದ ಸ್ಥಾಪನೆಗಾಗಿ ವೆಚ್ಚಮಾಡುವುದಕ್ಕಿಂತ ನಮ್ಮ ಹಡಗು ಪಡೆಯ ಶಕ್ತಿ ಸಂವರ್ಧನೆಯನ್ನು ಮಾಡುವುದು, ಇದಕ್ಕಾಗಿ ಹೊಸ ಹಡಗಗಳನ್ನು ಕೊಂಡುಕೊಳ್ಳುವುದಕ್ಕಾಗಿ ಅಧಿಕ ಹಣವನ್ನು ವ್ಯಯಿಸುವುದು ಉತ್ತಮವೆಂದು ಯೋಜನಾ ಆಯೋಗದ ಅಭಿಪ್ರಾಯವಿತ್ತೆಂದು ತಿಳಿಯುತ್ತದೆ. ಮಾತ್ರವಲ್ಲದೇ ಈ ವಿಭಾಗಕ್ಕೆ ಕೊಡಲಾಗುವ ಹಣದಿಂದ ನೌಕಾಂಗಣ ರಚನೆಯ ಕಾರ್ಯವು ಸಾಧ್ಯವಾಗಲಾರದೆಂದೂ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಹಡಗನಿರ್ಮಾಣದ ಉದ್ಯಮವು ಇಳಿಮುಖವಾಗುತ್ತಿರುವುದರಿಂದ ನಮ್ಮ ದೇಶದಲ್ಲಿ ಹೊಸತೊಂದು ನಿರ್ಮಾಣ ಕೇಂದ್ರವನ್ನು ಸ್ಥಾಪಿಸುವುದರಿಂದ ಪ್ರಯೋಜನವು ಅತ್ಯಲ್ಪವಾಗಬಹುದೆಂದೂ ಈ ಯೋಜನಾ ಆಯೋಗದ ವಿಚಾರವಿತ್ತೆಂದು ಗೊತ್ತಾಗಿತ್ತು.

ಕೇರಳ ವಿಧಾನಸಭೆಯಲ್ಲಿ ವಿರೋಧೀ ಪಕ್ಷದ ನಾಯಕ ಶ್ರೀ ನಂಬೂದರಿ ಪಾದರು "ಕೊಚ್ಚಿನದಲ್ಲಿ ದ್ವಿತೀಯ ನೌಕಾಂಗಣವನ್ನು ಸ್ಥಾಪಿಸಲೇಬೇಕು" ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ಮತ್ತು ಕೇಂದ್ರ ಸರಕಾರದೊಡನೆಯೂ ಯೋಜನಾ ಆಯೋಗದೊಡನೆಯೂ ಈ ಯೋಜನೆಯನ್ನು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯೊಂದನ್ನು ಮಂಡಿಸಿದರು. ಇದರ ಬಗ್ಗೆ ಮಾತಾಡುತ್ತ ಧನಾಭಾವದ ವ್ಯಾಜವನ್ನು ಮುಂದೊಡ್ಡಿ ಈ ಯೋಜನೆಯನ್ನು ಕಾರ್ಯಕೃತಗೊಳಿಸದಿರುವುದಕ್ಕೆ ಪ್ರಯತ್ನ ನಡೆಯುತ್ತಿದೆಯೆಂದು ತಿಳಿದು ಬಂದಿರುವುದಾಗಿಯೂ ಅವರು ಹೇಳಿದರು. ಶ್ರೀಮತಿ ಕೆ. ಆರ್. ಗೌರಿಯವರು ಭಾಷಣ ಮಾಡಿ, ಕೊಚ್ಚಿಯಲ್ಲಿ ನಿರ್ಮಾಣವಾಗಲಿದ್ದ ನೌಕಾಸೇನಾ ಪಡೆಯೊಂದು ಆಕಸ್ಮಿಕವಾಗಿ ಟುಟಿಕೋರಿನ್‌ಗೆ ಸ್ಥಳಾಂತರವಾಯಿತೆಂದೂ ಅದೇ ರೀತಿಯ ದುರವಸ್ಥೆಯು ನೌಕಾಂಗಣಕ್ಕೆ ಒದಗಬಾರದೆಂದೂ ಬಯಸಿದರು. ಸರ್ವಸಾಮಾನ್ಯವಾಗಿ ಯಾವ ಸದಸ್ಯರೂ ಈ ಗೊತ್ತುವಳಿಯನ್ನು ವಿರೋಧಿಸಲಿಲ್ಲ.

"ಈ ಗೊತ್ತುವಳಿಯ ಹಿಂದೆ ಕೇರಳದ ಜನತೆಯ ಸ್ವರಭಾರವಿದೆಯೆಂದು ನಾನು ತಿಳಿಯುತ್ತೇನೆ; ನೌಕಾಂಗಣ ರಚನೆಯೆಂದರೆ ಬಂಡವಾಳ ವಿನಿಯೋಗಿಸುವುದೆಂದರ್ಥ. ಈ ಯೋಜನೆಯಿಂದ ಸುಮಾರು ೩೦,೦೦೦ ಜನರಿಗೆ ಪ್ರತ್ಯಕ್ಷವಾಗಿಯೂ ಇದರ ಇಮ್ಮಡಿಯಷ್ಟು ಜನರಿಗೆ ಅಪ್ರತ್ಯಕ್ಷವಾಗಿಯೂ ಕೆಲಸ ಲಭಿಸುವುದು. ಇದಕ್ಕೆ ಪ್ರಾಶಸ್ತ್ಯ ನೀಡದಿರಲು ನನಗೇನೂ ಕಾರಣ ತೋರುತ್ತಿಲ್ಲ." ಎಂದು ಉಪಮುಖ್ಯಮಂತ್ರಿ ಶ್ರೀ ಆರ್. ಶಂಕರರು ಅಭಿಪ್ರಾಯಿಸಿದರು. ಗೊತ್ತುವಳಿಯು ಅವಿರೋಧವಾಗಿ ಮಂಜೂರಾಯಿತು.



ಟರ್ಕಿಯ ರಾಜಧಾನಿ ಅಂಕಾರಾಕ್ಕೆ ಅಧ್ಯಕ್ಷ ಐಕರ ಸಂದರ್ಶನದ ವೇಳೆಯಲ್ಲಿ ಅಲಂಕರಿಸಿದ ನಗರದ ದೃಶ್ಯ.

ಮರುದಿನವೇ ಲೋಕಸಭೆಯಲ್ಲೂ ಇದರ ಪ್ರತಿಧ್ವನಿ ಕೇಳದಿರಲಿಲ್ಲ. ಸಾರಿಗೆ ಮತ್ತು ಸಂಪರ್ಕ ಶಾಖೆಯ ಮಂತ್ರಿ ಶ್ರೀ ಪಿ. ಸುಬ್ಬರಾಯನ್ನರು ದ್ವಿತೀಯ ನೌಕಾಂಗಣವನ್ನು ಕೊಚ್ಚಿನದಲ್ಲಿ ರಚಿಸುವ ಬಗ್ಗೆ ಅಂತಿಮ ನಿರ್ಣಯವಾಗಿರುವುದೆಂದೂ ಈ ವಿಚಾರವು ಇನ್ನೂ ಯೋಜನಾ ಆಯೋಗದ ಪರಿಶೀಲನೆಯಲ್ಲಿರುವುದೆಂದೂ ತಿಳಿಸಿದರು. ಆಯೋಗವು ಕಾರ್ಯಕ್ರಮಕ್ಕೆ ಪ್ರಾಶಸ್ತ್ಯವನ್ನು ನೀಡುವಾಗ; ಅದು ಆಂತರಿಕ ಮತ್ತು ವಿದೇಶೀ ಸಾಧನ ಸಂಪತ್ತುಗಳ ಅಂಕೆಗಳನ್ನೂ ಗಮನಿಸಬೇಕಾಗುತ್ತದೆ. ಈ ನೌಕಾಂಗಣದ ಬಗ್ಗೆ ಆಗತ್ಯವಿದ್ದ ತಾಂತ್ರಿಕ ಹಾಗೂ ಆರ್ಥಿಕ ಸಹಕಾರವನ್ನು ಪಡೆದುಕೊಳ್ಳುವ ಬಗ್ಗೆ ಮತ್ತು ಆವಶ್ಯಕ ವಿದೇಶೀ ವಿನಿಮಯಗಳ ಬಗ್ಗೆ ಕೇಂದ್ರ ಸರಕಾರವು ಯೋಗ್ಯ ಕ್ರಮವನ್ನು ಕೈಗೊಳ್ಳುವುದೆಂದವರು ಹೇಳಿ, ತೃತೀಯ ಯೋಜನಾವಧಿಯಲ್ಲಿ ಆ ನೌಕಾಂಗಣವು ನಿರ್ಮಾಣಗೊಳ್ಳುವುದಾಗಿ ಸಾರಿದ್ದರು. ಕೇರಳದ ಸಂಸತ್ ಸದಸ್ಯರು ಸಮಾಧಾನದ ನಿಟ್ಟುಸಿರುಬಿಟ್ಟರು.

ರಾಜ್ಯದ ಶಾಸಕರಲ್ಲಿ ಒಗ್ಗಟ್ಟಿದ್ದರೆ, ಕೇಂದ್ರ ಸರಕಾರದ ಗಮನವನ್ನು ತಮ್ಮ ಆವಶ್ಯಕತೆಯತ್ತ ಹರಿಯುವಂತೆ ಮಾಡುವುದೂ ತನ್ಮೂಲಕ ರಾಜ್ಯದ ಅಭಿವೃದ್ಧಿ ಸಾಧಿಸುವುದೂ ಅಸಾಧ್ಯವೆಂದು ಹೇಳಬರುವುದಿಲ್ಲ. ಆದರೆ, ನಮ್ಮ ಮೈಸೂರು ಶಾಸಕರಲ್ಲಿನ ಕುಂದುಕೊರತೆಗಳ ಕಾರಣಗಳಿಂದಾಗಿಯೇ ನಮ್ಮಲ್ಲಿ ಯೋಜನೆಗಳೂ ಒಂದೊಂದಾಗಿ ಕೈಬಿಡುವ ದಾರಿ ಕಾಯುತ್ತಿರುವುದನ್ನು ಕಾಣುವಾಗ ವ್ಯಥೆಯೆನಿಸುತ್ತದೆ!

ನಮ್ಮ ಶಾಸನಸಭೆಯ ಎಲ್ಲ ಸದಸ್ಯರ ಒಮ್ಮತದ ಪ್ರಶ್ನೆಯಂತೂ ದೂರವಿರಲಿ, ಆಡಳಿತೆಯ ಸೂತ್ರವನ್ನು ಹಿಡಿದ ಕಾಂಗ್ರೆಸ್ಸ್ ಪಕ್ಷದ ಸದಸ್ಯರೇ ಏಕಮತದಿಂದ ರಾಜ್ಯದ ಹಿತಸಾಧಿಸಲು ಹಿಂದೆಮುಂದೆ ಎಣಿಸುತ್ತಿರುವುದು ಈಗೀಗ ಸುಸ್ಪಷ್ಟವೆನಿಸಿದೆ. ಮೈಸೂರು ಕಾಂಗ್ರೆಸ್ಸಿನಲ್ಲಿ ಒಡಕು—ಬಿರುಕುಗಳು ಇಂದು ನಿನ್ನೆಯವುಗಳಲ್ಲ. ಪ್ರಾಯಃ ಮೈಸೂರು ಜನ್ಮವೆತ್ತಿದಂದೇ ಈ ಭಿನ್ನಾಭಿಪ್ರಾಯವೂ ಜನ್ಮಸಿದ್ಧ ಗುಣವಾಗಿ ಬಂದಿರಬೇಕು. ಹುಟ್ಟುಗುಣ ಗಟ್ಟ ಹತ್ತಿದರೂ ಬಿಡದು ಎಂಬಂತೆ ಮೈಸೂರಿನ ಕಾಂಗ್ರೆಸ್ಸಿನ ಬಿರುಕು ಮುಚ್ಚುವುದೇ ಇಲ್ಲ. ಆಗಾಗ, ಬಿರುಕನ್ನು ಮುಚ್ಚಿ ಒಮ್ಮತವನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿವೆಯೆಂದು ಹೇಳಲಾಗುತಿದ್ದರೂ ಆ ಪ್ರಯತ್ನಗಳು ಎಳ್ಳಷ್ಟಾದರೂ ಯಶಸ್ವಿಯಾಗುವ ಸಲ್ಲಕ್ಷಣಗಳು ಗೋಚರವಾಗುತ್ತಿಲ್ಲ. ಕಳೆದ ಆಗಸ್ಟ ತಿಂಗಳಲ್ಲಿ ನಿರ್ಮಿತವಾದ

(೧೨ನೇ ಪುಟ ನೋಡಿರಿ)

ಕಥಾವಿಹಾರ

ಒಡೆದು ಬೆಸೆದ ಗಡಿಗೆ

ಸ್ನೇಹವೆಂಬುದು ಸರ್ವಾರ್ಥ ಸಾಧನ. ಸ್ನೇಹರಸಪಾಕವನ್ನು ಸವಿಯುವುದಕ್ಕೂ ಭಾಗ್ಯ ಬೇಡವೆ? ಈ ಭಾಗ್ಯದೇವತೆಯಾವರೂಪದಲ್ಲಿರುವನೆಂದು ಯಾರಿಗೆ ಗೊತ್ತು?

ಡಂಯ್....ಡಂಯ್....ಡಂಯ್.... ಶಾಲೆಯ ಅವಧಿ ಸೂಚಿಸುವ ಗಂಟೆ ಮೂರು ಬಾರಿಸಿತ್ತು. ಆ ಐನೂರು ಮಕ್ಕಳ ಶಾಲೆಯ ತುಂಬ ವಿದ್ಯಾರ್ಥಿಗಳ ಗಜಬಜವು ಪ್ರತಿಧ್ವನಿಸತೊಡಗಿತ್ತು—ಮಾಡಿನ ಹಂಚೇ ಹಾರಿ ಹೋಗುವಂತೆ. ಎಂಟನೆಯ ತರಗತಿಯಿಂದ ಹೊರಬಿದ್ದ ಗೋಪಾಲ ಮಾಸ್ತರರು ನೇರಾಗಿ ಆಫೀಸುಕೋಣೆಯನ್ನು ಹೊಕ್ಕರು. ತನ್ನ ಕಪಾಟಿನಲ್ಲಿ ಏನನ್ನೊ ಅರಸುವಂತೆ ಅತ್ತಿತ್ತ ಕೈಹಾಕಿದರು. ಕೊನೆಗೆ, ನಿರಾಶೆಯ ಮುಖವಾಡವನ್ನು ಧರಿಸಿ ಹೊರ ಜಗಲಿಯ ಪಕ್ಕದಲ್ಲಿ ನಿಂತು ತರಗತಿಯಿಂದ ಹೊರಬರುವ ವಿದ್ಯಾರ್ಥಿಗಳತ್ತ ಈಕ್ಷಿಸತೊಡಗಿದರು. ಅವರ ಮುಖ ಛಾಯೆಯಿಂದ ಯಾರನ್ನೋ ಯಾವುದೋ ಉದ್ದೇಶಕ್ಕಾಗಿ ಪ್ರತೀಕ್ಷಿಸುವಂತೆ ಕಂಡುಬರುತಿತ್ತು. ಅಗಲೇ ಓಡುತಿದ್ದ ಬಾಲಕನೊರ್ವನನ್ನು ಕೂಗಿದರವರು: "ರಾಜೂ..."

ಆಟದ ಬಯಲತ್ತ ತೀವ್ರ ವೇಗದಿಂದ ಕಾಲೋಡಿಸುತಿದ್ದ ರಾಜು ಮಾಸ್ತರರ ಕರೆಯು ಕರ್ಣಪಟಲಕ್ಕೆ ಬಡಿದೊಡನೆಯೇ ಅರೆಕ್ಷಣ ನಿಸ್ತಬ್ಧನಾದ. ಆತನಿಗೆ ಯಾರು ಕೂಗಿದರು, ಏಕೆ ಕೂಗಿದರು ಎಂಬುದರ ಅರಿವೇ ಆಗಿರಲಿಲ್ಲ. ಎಂತಲೇ ಸುತ್ತ ನೋಡಿದ. ದೂರದಲ್ಲಿ ಮಾಸ್ತರರ ಮುಖ ಕಂಡುಬಂದುದರಿಂದ ಆಟದತ್ತ ಓಲಾಡುತಿದ್ದ ತನ್ನ ಮನಸನ್ನು ಬಿಗಿಹಿಡಿದು, ಮೆಲ್ಲಮೆಲ್ಲನೆ ಅಂಜುತಂಜುತ್ತ ಸಮೀಪ ಬಂದು ನಿಂತ.

"ನೋಡು, ಆ ಮಂಜುನಾಥನನ್ನು ಬರಹೇಳು." — ಅಧ್ಯಾಪಕರ ಆಜ್ಞೆಯಿದು.

ರಾಜಗೋಪಾಲ ಸುಮ್ಮನೆ ನಿಂತ. ಆತ ಏನೂ ಮಾತಾಡಲಿಲ್ಲ; ಆದರೆ, ಅಧ್ಯಾಪಕರ ಆಜ್ಞೆಯನ್ನು ಪಾಲಿಸುವುದಕ್ಕೂ ಆತ ಪಾದಕೀಳಲಿಲ್ಲ. ಮಾಸ್ತರರು ತನ್ನ ಆಜ್ಞೆಯನ್ನು ಮರಳಿ ಉಚ್ಚರಿಸಿದರು. ರಾಜು ಅವರ ಮುಖವನ್ನೊಮ್ಮೆ ನೋಡಿ, ತಲೆಕೆಳಗೆ ಹಾಕಿದ. ದಿಙ್ಮೂಢರಾದ ಅಧ್ಯಾಪಕರು ವಿವರವನ್ನು ತಿಳಿಯಲೆಳಸುವವರಂತೆ ಕೇಳಿದರು: "ಏನಪ್ಪಾ, ಮಂಜು ಶಾಲೆಗೆ ಬಂದಿದ್ದಾನಲ್ಲಾ?"

"ಹೌದು...."

"ಆತನನ್ನು ಇಲ್ಲಿ ಬರಹೇಳು...."

ರಾಜು ಮೌನ.

"ಏನಪ್ಪಾ ಅದು? ಯಾಕೆ ಮಾತಾಡುವುದಿಲ್ಲ? ಹೊರಡು. ಬೇಗನೆ ಬರ ಹೇಳು."

"ಸಾರ್..." ರಾಜು ಏನೋ ಹೇಳಬಯಸುವವನಂತೆ ತೋರಿಸಿಕೊಂಡು ಮತ್ತೆ ನಿರುತ್ತರನಾದ.

"ಏನೋ ಅದು?" ಕುತೂಹಲದಿಂದ ಪ್ರಶ್ನಿಸಿದರು ಅಧ್ಯಾಪಕರು.

"ಅವನು ನನ್ನೊಡನೆ ಮಾತಾಡುವುದಿಲ್ಲ....ಸಾರ್. ಆದುದರಿಂದ ನಾನೂ..."

ಅಧ್ಯಾಪಕರಿಗೆ ಆಶ್ಚರ್ಯವೆನಿಸಿತು. ರಾಜು ಮತ್ತು ಮಂಜು ಒಂದೇ ತರಗತಿಯಲ್ಲಿ ಓದುತ್ತಿರುವವರು. ಪ್ರಾಯಃ ಒಂದನೆ ವರ್ಗದಿಂದ ಎಂಟನೆಯವರೆಗೂ ಅವರಿಬ್ಬರೂ ಒಟ್ಟೊಟ್ಟಾಗಿಯೇ ಅಭ್ಯಸಿಸಿಕೊಂಡು ಬಂದವರು. ಹಿಂದಿನ ಕೆಲ ವರ್ಷ ಇವರು ಒಂದೇ ಬೆಂಚಿನಲ್ಲಿಯೂ ಕೂರಿದ್ದರು. ಹಾಗಿರುವಾಗ, ಈ ರೀತಿಯ ದ್ವೇಷಭಾವ ವೇತಕ್ಕೆ? ಎಂಬ ಸಂದೇಹ ಅವರನ್ನು ಕಾಡಿತು. ಆದರೆ, ಅಲ್ಲಿ ಚಿಂತಿಸಲು ವೇಳೆಯಿರಲಿಲ್ಲ. ಏನನ್ನೂ ಮಾಡುವುದಕ್ಕೆ ಅವಕಾಶವೂ ಇದ್ದಿಲ್ಲ. ಮತ್ತೊಬ್ಬ ಹುಡುಗನನ್ನು ಕರೆಸಿ ತನ್ನ ಕೆಲಸವನ್ನವರು ಪೂರಯಿಸಿಕೊಂಡರು.

ರಾಜಗೋಪಾಲ ತುಸು ಬುದ್ಧಿವಂತ ಹುಡುಗ ನೋಡಲು ಚುರುಕು. ಪಾಠದಲ್ಲಿ ಮಾತ್ರವಲ್ಲ, ಆಟ, ನಾಟಕ ಇತ್ಯಾದಿಗಳಲ್ಲೂ ಆತನ ಅಭಿರುಚಿ ಬಹಳ. ಶಾಲಾ ವರ್ಧಂತ್ಯುತ್ಸವದ ವೇಳೆಯಲ್ಲಿ ನಾಟಕ ಪ್ರಾಕ್ಟೀಸಿಗೆ ನಾಯಕನೇ ರಾಜು. ಗೋಪಾಲಂತಹ ಮಕ್ಕಳ ನಡುವೆ ತಾನು ರಾಜನಾಗಿ ಅವರನ್ನು ಸರಿಯಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವ ಅಪೂರ್ವ ಶಕ್ತಿ ಗೋಪಾಲನಲ್ಲಿತ್ತು. ಆದರೆ, ಮಂಜುನಾಥ ತೀರ ಪ್ರಶಾಂತನೇ. ಚಂದ್ರನಂತೆ ಸದಾ ಕೂರುತ್ತಲೇ ಇರುವವ; ಹಾಗೆಂದು ಆತನಿಗೂ ಶುಕ್ಲಪಕ್ಷವೆಂಬುದಿದೆ ತಾನೆ? ಈತನ ಶುಕ್ಲಪಕ್ಷ ಪರೀಕ್ಷಾ ವೇಳೆ ಮಾತ್ರ. ಆಟ-ಓಟವೆಂದರೆ ಮಾರುದ್ದ ಹಿಂದೆ ಹಾರುವ ಜೀವಿಯಾತ. ಎಂತಲೇ ರಾಜು ಶಾಲೆಯ ರಾಜನಾಗಿದ್ದರೆ, ಮಂಜು ಮಂಜಿನಂತೆ ಮುಸುಕಾಗಿರುತಿದ್ದ.

ಗೋಪಾಲಯ್ಯ ಅಂದು ಶಾಲೆಯಿಂದ ಮನೆಗೆ ಬಂದರು. ಒಂದು ಶಾಲೆಯ ಮಕ್ಕಳೆಲ್ಲರೂ ಒಂದೇ ತಾಯಿಯ ಪುತ್ರಪುತ್ರಿಯರಂತೆ ಅನ್ಯೋನ್ಯವಾಗಿರಬೇಕು ಎಂಬ ವಾದ ಅವರದ್ದು. ಇದನ್ನು ಯಾರೂ ಅಲ್ಲಗಳೆಯಲಾರರೆಂಬುದು ನಿಜವಾದರೂ ಅದು ಎಷ್ಟರ ಮಟ್ಟಿಗೆ ಸಾಧನೀಯವೆಂಬುದನ್ನು ಹೆಚ್ಚಿನವರು ಸಂದೇಹ ದೃಷ್ಟಿಯಿಂದಲೇ ನೋಡುತ್ತಾರೆ. ಗೋಪಾಲಯ್ಯನವರ ಮನಃಪಟಲದಲ್ಲಿ ಈ ರಾಜು—ಮಂಜುರವರ ವೈಮನಸ್ಯದ ಬೀಜವೆಲ್ಲಿ ಬಿತ್ತಲ್ಪಟ್ಟಿತೆಂದು ತಿಳಿಯುವ ಆತುರ ಹುಟ್ಟಿತು. ಅಂದಿನಿಂದ ಅವರು ತಮ್ಮ ಸಂಶೋಧನೆಯನ್ನು ತೊಡಗಿದರು.

ಕೆಲದಿನಗಳಲ್ಲಿ ಅವರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾದರು. ಮೂರು ವರ್ಷಗಳ ಹಿಂದೊಮ್ಮೆ ರಾಜು-ಮಂಜು ಆಟದ ಬಯಲಿನಲ್ಲಿ ಚೆಂಡಾಟವಾಡುತಿದ್ದ ವೇಳೆ ದೂರ ಹಾರಿಬರುತಿದ್ದ ಚೆಂಡನ್ನು ಹಿಡಿಯಲು ಪ್ರಯತ್ನಿಸಿದರೆಂದೂ ಚೆಂಡು ಇಬ್ಬರ ಕೈಗಳ ನಡುವೆ ಸಿಕ್ಕಿಬಿದ್ದಿತೆಂದೂ ನನಗೆ-ತನಗೆ ಎಂಬ ವಾದವಿವಾದವೆದ್ದು, ಅದುವೇ ಅವರ ಮೈತ್ರಿಯನ್ನು ಕೆಡಿಸಿಬಿಡಲು ಕಾರಣವಾಯಿತೆಂದೂ ತಿಳಿದುಕೊಂಡರವರು. ಇದೇ ದ್ವೇಷ ಅಥವಾ ವೈರತ್ವದ ಮೂಲಕ್ಕೆ ಬೀಜವಾಗಿ ಪರಿಣಮಿಸಿ, ಅಂದಿನಿಂದ ಪರಸ್ಪರ ಕೊಕ್ಕು ಬಳಕೆಗಳನ್ನೂ ಸಂಪೂರ್ಣ ಬಿಟ್ಟುಕೊಂಡರೆಂಬ ರಹಸ್ಯವನ್ನು ಉಪಾಯಾಂತರದಿಂದ ಭೇದಿಸಿಬಿಟ್ಟರು. ಒಡೆದ ಕನ್ನಡಿಯನ್ನು ಕೂಡಿಸುವ ಜಾದುವನ್ನು ಅವರಿಗೀಗ ಅಭ್ಯಸಿಸಬೇಕಾಗಿತ್ತು.

ವಿದ್ಯಾರ್ಥಿಗಳೆಂದಾಕ್ಷಣ ಅವರಲ್ಲಿಯೇ ಪರಸ್ಪರ ಹೊಗಳಿಕೆ ತೆಗಳಿಕೆಗಳು, ಮಿತ್ರತ್ವ-ಶತ್ರುತ್ವಗಳು ಒಂದುಕ್ಷಣ ಬರುತ್ತವೆ; ಹೋಗುತ್ತವೆ. ಅದು ಸಾಮಾನ್ಯ ವಿಷಯವಾಯಿತು. ಆದರೆ, ಒಂದು ಕ್ಷುಲ್ಲಕ ಕಾರಣವನ್ನು ಮುಂದಿಟ್ಟು ಕೌರವ—ಪಾಂಡವರಿಗಿಂತಲೂ ಬಲವಾದ ದ್ವೇಷವು ಮಂಜು—ರಾಜುರವರ ನಡುವೆ ಇದ್ದಿತೆಂದು ಪರಿಶೀಲನೆಯಿಂದ ವೇದ್ಯವಾಯಿತು. ಗರುಡನನ್ನು ಕಾಣುವ ಹಾವಿನಂತೆ ಇಬ್ಬರೂ ಒಬ್ಬರನ್ನೊಬ್ಬರು ಕಂಡು ತಲೆತಗ್ಗಿಸುತಿದ್ದರು. ಈ ಸಂಗತಿ ಹೆಚ್ಚಿನ ಅಧ್ಯಾಪಕರಿಗೂ ತಿಳಿಯದಿರಲಿಲ್ಲ. ಅದೇಕೋ ಗೋಪಾಲ ಮಾಸ್ತರರ ಗಮನಕ್ಕೆ ಬಂದಿರಲಿಲ್ಲ. ಒಮ್ಮತದೊಳೇಕ ಪಂಥವ ಹಿಡಿದು ಸಾಗಬೇಕಾದ ಈ ಭ... ಭಾರತದ ನಾಗರಿಕರು ಎಳೆತನದಲ್ಲಿ... ಮಾತ್ಸರ್ಯದ ಬೀಜವನ್ನು ಬಿತ್ತಿಸಿಕೊ... ರೆ, ಅದರಿಂದ ಹಾನಿ ಸುನಿಶ್ಚಿತವೆಂಬು... ಅನ್ಯ ಪ್ರಮಾಣ ಅನಗತ್ಯ. ಇದರಿಂದ... ಬಿರಿದಿದ್ದ ಬೆಸುಗೆಯನ್ನು ಮರು ಬೆಸೆ... ಲೇ ಬೇಕಾಗಿತ್ತು.

ಸೂರ್ಯ ಉದಯಿಸುತ್ತಾನೆ; ಹಾ... ಯೇ ಅಸ್ತಮಿಸುತ್ತಾನೆ. ಭೂಮಿ ಸುತ್ತುತ್ತಿರುಗುತ್ತದೆ; ರಾತ್ರಿ-ಹಗಲುಗಳು ಮ... ಕೊಳಿಸುತ್ತವೆ. ಅವು ಯಾರನ್ನೂ ಕಾ... ಲಾರವು. ಕೆಲವಾರು ದಿನಗಳು ಇ... ರೀತಿ ಗತಿಸಿದುವು. ಅವುಗಳನ್ನು ಯಾ... ಬ್ಬನೂ ವಿಶೇಷವಾಗಿ ಗಮನಿಸಲಿ... ರಾಜು-ಮಂಜುರವರ ನಡುವೆ ಬೆಳೆದಿ... ತೆರೆಯು ಅತ್ತಿತ್ತ ಚಲಿಸಲಿಲ್ಲ ಅದು ... ಗಯೇ ಅಚಲವಾಗಿ ಹರಡಿಕೊಂಡಿತ್ತು... ತೆರೆಯನ್ನು ಸರಿಸುವ ಲಘು ಪ್ರಯ... ಗಳೇನೋ ನಡೆದಿದ್ದುವು; ಆದರೆ, ಅ... ಯಶಸ್ವಿಯಾಗುವ ಸಲ್ಲಕ್ಷಣಗಳು ದೂ... ವಾಗಿದ್ದುವು.

ಎಂಟನೆ ವರ್ಗದ ಸರಕಾರಿ ಪರೀ... ಯು ಸಮೀಪಿಸಿತ್ತು. ವಿದ್ಯಾರ್ಥಿಗಳು ... ರಿಶ್ರಮಪೂರ್ವಕವಾಗಿ ಅಭ್ಯಸಿಸತೊಡ... ದರು—ಆಗತಾನೇ ತಮ್ಮ ನಿಪ್ರಿಯ... ಎಚ್ಚರವಾದಂತೆ ಪರಸ್ಪರ ವಿಚಾರ... ಮಯವೂ ನಡೆಯತೊಡಗಿತು. ಆದರೆ, ರಾಜು-ಮಂಜು ಒಂದಾಗಲಿಲ್ಲ. ... ವರವರ ಮರ್ಜಿಗೆ ಅವರವರು ದೃಢ... ಗಿ ಅಂಟಿಕೊಂಡಿದ್ದರು. ಇಬ್ಬರಲ್ಲ... ಓದಿನ ಬಗ್ಗೆ ಸ್ಪರ್ಧೆ ನಡೆ... ತ್ತಿರುವಂತೆ ಭಾಸವಾಗತೊಡಗಿ...

ರಾಜು—ಮಂಜುರವರು ಒಂದೇ ... ರಿನವರು ಮಾತ್ರವಲ್ಲ; ನೆರೆ ಮನೆ... ರು. ಮನೆಯಿಂದ ಒಂದೇ ದಾರಿಯಲ್ಲಿ ... ರುತ್ತಿರುವವರು; ಅದೇ ಕಿರುದಾರಿಯ... ಮರಳುವವರು. ಆದರೆ, ಒಬ್ಬರೊಡನೆ... ನ್ನೊಬ್ಬರು ಕಳೆದ ಮೂರು ವರ್ಷಗಳ... ಚಕಾರವನುಡಿಯುತ್ತಿದವರಲ್ಲ. ಆಕಸ್ಮಿ... ವಾಗಿ ಎಲ್ಲಿಯಾದರೂ ಎದುರೆದುರಾಗುವ ... ಪ್ರಸಂಗ ಬಂದರೆ, ಅವರು ಹಾವು ಕಪ್ಪೆ... ವರಂತೆ ನಿಶ್ಚೇಷ್ಟಿತರಾಗುತಿದ್ದರು! ಗೋ... ಪಾಲ ಮಾಸ್ತರರಿಗೆ ಇದನ್ನೆಲ್ಲಾ ಕೇಳಿ ಕಂಡು ವಿಚಿತ್ರವೆನಿಸಿತು. ಆ ದುರ್ದಿನಕ್ಕೆ ಮೊದಲು ಅನ್ಯೋನ್ಯರಾಗಿ ನಡೆಯುತ್ತಿ... ದ್ದ ಅವರನ್ನು ಈ ರೀತಿಯಾಗಿ ಬೇರ್ಪಡಿ... ಸುವ ಆ ಚೆಂಡು ಅದೆಷ್ಟು ಪ್ರಭಾವಶಾಲಿ... ಯಾಗಿರಬೇಡ ಎಂದವರು ಮೂಗಿನ ... ದಿಗೆ ಬೆರಳೇರಿಸಿದರು. ಈ ರೀತಿಯ ವಿ... ನೆಯನ್ನು ತಡೆಯಬೇಕು ಎಂಬ ಆಸ್ಪ... ಪ್ರೇರಣೆಯು ಅವರಲ್ಲಿ ಉಂಟಾಯಿತು.

ಗೋಪಾಲಯ್ಯನವರ ಮನಸ್ಸು ದೃ... ವಾದುದು. ಹಿಡಿದ ಕೆಲಸವನ್ನು ಪೂರಯ...

(೧೧ನೇ ಪುಟ ನೋಡಿರಿ)

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ "ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ— ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಸಂಸ್ಮರಣೆ

ಗುರುಶಿಷ್ಯರ ಸ್ನೇಹಸಂಬಂಧ

ಅರ್ಧಶತಮಾನದ ಹಿಂದೆ ಹರಿಯುತಿದ್ದ ಗುರುಶಿಷ್ಯ ಸ್ನೇಹಗಂಗೆಯಿಂದು ತಡೆದು ವಿದ್ಯಾಲಯಗಳು ಅಶಿಸ್ತಿನ ತವರ್ಮನೆಯಾಗಿವೆ. ಅದನ್ನು ಪುನಃ ಪ್ರವಹಿಸುವುದೇ ಇದಕ್ಕೆ ತಾರಕವಾಗದೆ?

ನಾನು ಸಂಸ್ಕೃತ ಓದುತ್ತಿದ್ದಾಗ, ಚತುಷ್ಪಾಠೀ ಪದ್ಧತಿಯಿತ್ತು. ಶ್ರೀಮಂತರು ಇಲ್ಲವೇ ದೇವಾಲಯಗಳ ಆಶ್ರಯದಿಂದ ನಡೆಯುತ್ತಿದ್ದ ಆ ವಿದ್ಯಾಲಯಗಳಲ್ಲಿ ಚತುರ್ವೇದ ಮತ್ತು ಷಟ್ ಶಾಸ್ತ್ರಗಳ ಶಿಕ್ಷಣ ಲಭಿಸುತಿತ್ತು. ಬಂಗಾಳದ ಗುರುಗೃಹವೇ ಒಂದು ವಿಧದಲ್ಲಿ ಚತುಷ್ಪಾಠಿ ಎನಿಸಿತ್ತು. ಶಿಷ್ಯರು ಗುರುಗಳ ಮನೆಯಲ್ಲೇ ಅವರ ಮಕ್ಕಳಂತೆಯೇ ಇರುತಿದ್ದು ಓದುತಿದ್ದರು. ಈ ಸಾಮೂಹಿಕ ಜೀವನದಲ್ಲಿ ಭೌತಿಕ ಸುಖ—ಸೌಕರ್ಯಗಳು ಕಡಿಮೆಯಿದ್ದುವೇನೋ ನಿಜವೇ; ಆದರೆ, ಸ್ನೇಹ ಸದ್ಭಾವ ಮಾತ್ರ ತುಂಬಿರುತಿತ್ತು. ಗುರು ಮತ್ತು ಗುರು ಪತ್ನಿಯರು ತಮ್ಮ ಮಕ್ಕಳು ಮತ್ತು ಶಿಷ್ಯರಲ್ಲಿ ಯಾವ ಭೇದಭಾವವನ್ನೂ ಕಲ್ಪಿಸುತ್ತಿರಲಿಲ್ಲ. ಗುರುವು ಎಲ್ಲರೊಡನೆ ಊಟಕ್ಕೆ ಕೂರುತಿದ್ದನು; ಗುರು ಪತ್ನಿ ಬಡಿಸುತಿದ್ದರು ಮತ್ತು ಯಾರಾದರೂ ಕಡಿಮೆ ಉಂಡರೆ, ಆಕೆ ನೊಂದುಕೊಳ್ಳುತಿದ್ದರು. ಈ ಆತ್ಮೀಯತೆಯಿಂದಾಗಿ ಗುರು ಶಿಷ್ಯರ ನಡುವಣ ಸಂಬಂಧ ಕೆಲವು ತಲೆಮಾರುಗಳವರೆಗೂ ಉಳಿಯುತಿತ್ತು.

ವಿಕ್ರಮಪುರದ ಒರ್ವ ಅಧ್ಯಾಪಕರ ಪತ್ನಿಯ ಸ್ಮರಣೆ ನನಗಿನ್ನೂ ಇದೆ. ಶ್ರೀಮಂತ ಕುಟುಂಬದಲ್ಲಿ ಬೆಳೆದು ಬಂದಾಕೆ ಚತುಷ್ಪಾಠೀ ಕ್ರಮವನ್ನು ಮೆಚ್ಚಲಿಲ್ಲ. ಹೊಸತಾಗಿ ಬಂದವಳೇ ಒಂದು ದಿನ ಶಿಷ್ಯರ ಮೇಲೆ ಉರಿಕಾರಿದಳು ಆಗ ಅಧ್ಯಾಪಕರ ಮುದಿತಾಯಿ ಹೇಳಿದಳು—“ಮಗಳೆ, ತಮ್ಮ ತಾಯ್ತಂದೆಯರನ್ನಗಲಿ ಇವರಿಲ್ಲಿ ಬಂದಿದ್ದಾರೆ. ಸದ್ಯ ಇದೇ ಅವರ ಮನೆ. ಆದುದರಿಂದ ಈ ಮನೆಯವರಂತೆಯೇ ಇವರನ್ನು ಕಾಣಬೇಕು.”

ಇದೇರೀತಿ ಕಾಶಿಯ ಪ್ರಸಂಗವೊಂದು ಕೂಡ. ಅಲ್ಲಿ ಕೇಶವಶಾಸ್ತ್ರಿ ಎಂಬ ಮಹಾರಾಷ್ಟ್ರೀಯ ಪಂಡಿತರೊಬ್ಬರಿದ್ದರು. ಅವರು ನಿಸ್ಸಂತಾನಿಗರು ಮಾತ್ರವಲ್ಲ, ವಿಧುರರೂ ಹೌದು. ಮನೆವಾಳ್ತೆಯನ್ನು ಅವರ ಸೋದರಿ ನೋಡುತಿದ್ದಳು. ಆಕೆಯೇ ಶಿಷ್ಯರ ಯಜಮಾನಿಯಾಗಿದ್ದಳು. ಗುರುಗಳ ಕೀರ್ತಿ ದಶದಿಶೆಯಲ್ಲಿ ಹಬ್ಬಿದ್ದುದರಿಂದ ಪ್ರತಿನಿತ್ಯ ಹಲವಾರು ಭಕ್ತರು ಹಣ್ಣು ತಿಂಡಿಗಳೊಡನೆ ಅವರನ್ನು ಕಾಣಬರುತಿದ್ದರು. ಶಿಷ್ಯರು ಮಾತ್ರ ಈ ತಿಂಡಿಗಳನ್ನು ಮುಟ್ಟುತ್ತಿರಲಿಲ್ಲ. ಆಗ ಯಜಮಾನಿ ತನ್ನ ಅಣ್ಣನೊಡನೆ ಹೇಳಿ ಅಳುತಿದ್ದಳು: “ಈ ಮಕ್ಕಳು ತಿಂಡಿಯೆಂದರೆ ದೂರ ಓಡಿಹೋಗುತ್ತವೆ. ಅವಕ್ಕೇಕೆ ಬಯಕೆಯಿಲ್ಲವೊ? ಕೊಟ್ಟರೂ ಕೊಂಡು ತಿನ್ನಲಾರದವುಗಳು!”

ಇಂತಹ ಸ್ನೇಹಜಲಧಾರೆ ಅಂದು ಎಲ್ಲ ಗುರುಗಳ ಮನೆಮುಂದೆಯೂ ಹರಿಯುತಿತ್ತು. ಕಾಶಿಯಿಂದ ನಾನು ಮರಳಿದ ನಂತರದ ಘಟನೆಯಿದು: ಅದು ಹೇಗೋ ನಾನು ಮೃತ್ಯುಮುಖನಾದೆ ಎಂಬ ವರ್ತಮಾನ ಕಾಶಿಯಲ್ಲಿ ಹರಡಿತು. ಅದು ನಿರಾಧಾರವೆಂದು ತಿಳಿದುಬಂದನಂತರವೂ ನನ್ನ ಒಬ್ಬ ಗುರುಗಳ ಮನಸ್ಸು ಶಾಂತವಾಗಲಿಲ್ಲ, “ಅವರು “ಕೂಡಲೇ ಕಾಶಿಗೆ ಬಾ” ಎಂಬ ಆದೇಶ ಕಳಿಸಿದರು. ನಾನವರ ಮನೆಮುಟ್ಟಿದಾಗ ಅವರಿಗೆ ಅದೆಷ್ಟು ಸಂತೋಷವಾಗಲಿಲ್ಲ? ಆ ಮಧುರ ಸ್ಮೃತಿಯನ್ನು ನಾನು ಎಂದಿಗೂ ಮರೆಯಲಾರೆ. ನಾನು ಬಂದ ಸುದ್ದಿ ಮುಟ್ಟಿತೋ ಇಲ್ಲವೋ ಎಲ್ಲ ಅಧ್ಯಾಪಕರು ಬಂದು ನನ್ನ ಸುತ್ತುವರಿದರು. ವಾತ್ಸಲ್ಯಾತಿರೇಕದಿಂದ ಎಲ್ಲರೂ ನನ್ನ ಮುಂದಲೆಯನ್ನು ಮೂಸಿದರು; ಅಸೀಮ ಸ್ನೇಹಾಶೀರ್ವಾದಗಳಿಂದ ನನ್ನನ್ನು ಹರಸಿದರು.

ಮಮತೆಯ ಈ ಭಾವದಲ್ಲಿಯೂ ಕರ್ತವ್ಯಜ್ಞಾನವು ಎಚ್ಚರಾಗುತಿತ್ತು. ವಿಶ್ವವಿಖ್ಯಾತ ಪಂಡಿತ ಗಂಗಾಧರ ಶಾಸ್ತ್ರಿಯ ಮಗ ಡುಂಡಿರಾಮ ಎಂಬವನು ಎಲ್ಲ ವಿದ್ಯಾರ್ಥಿಗಳಿಗೆ ನೆಚ್ಚಿನವನಾಗಿದ್ದ. ಕಿಂಚಿತ್‌ಕಾಯಿಲೆಯಿಂದಲೇ ಆತನ ಆತ್ಮ ಅನಂತದಲ್ಲಿಲೀನವಾಗಿಯೋಯಿತು. ಪಾಠ ಸಮಾಪ್ತವಾದನಂತರ ನಾವು ಆತನನ್ನು ಕರೆದೆವು. ಆಗ ಪಂಡಿತರು ಹೇಳಿದರು— “ಅವನು ನಿಮ್ಮ ಸ್ವರವು ಕೇಳಿಸದಷ್ಟು ದೂರ ತೆರಳಿಹೋಗಿದ್ದಾನೆ.” ಮೊದಲು ನಾವೀ ನುಡಿಯನ್ನು ಅರ್ಥವಿಸಿಕೊಳ್ಳಲಾರದಾದೆವು. ಆದರೆ, ಮುಂದೆ ಸತ್ಯಾಂಶ ತಿಳಿದುಕೊಂಡೆವು. ಪಂಡಿತರು ಅಂದೂ ಪಾಠ ಮಾಡಿದ್ದರು. ಅವರ ಮುಖದಲ್ಲಿ ಉದಾಸೀನತೆ ಹಾಗೂ ಗಂಭೀರತೆಯೇನೋ ಇತ್ತು. ಆಗ ಒಬ್ಬ ವಿದ್ಯಾರ್ಥಿ ಉದ್ಗರಿಸಿದ—“ಆಚಾರ್ಯರೇ, ಈ ಆಳವಾದ ದುಃಖದಲ್ಲಿಯೂ ತಾವು ಪಾಠಮಾಡಿದ್ದೀರಲ್ಲಾ?”

“ಮತ್ತೇನು ಮಾಡಬೇಕಿತ್ತು ಮಗೂ?” ಪಂಡಿತರು ತಡೆತಡೆದು ಸ್ಥಿರಕಂಠದಿಂದ ಮುಂದುವರಿಸಿದರು: ‘ನೀವು ಹುಡುಗರು ಎಷ್ಟೆಷ್ಟೋ ದೂರದಿಂದ ಬಂದಿದ್ದೀರಿ. ನಾನು ನಿಮ್ಮ ಒಂದು ದಿನವನ್ನು ಹೇಗೆ ನಷ್ಟಗೊಳಿಸಲಿ? ಪುತ್ರಶೋಕವೆಂಬುದು ನನಗೊಬ್ಬನಿಗೆ ಸಂಬಂಧಪಟ್ಟುದು. ಜ್ಞಾನಾರಾಧನೆಯ ಸಂಬಂಧ ಎಲ್ಲಕ್ಕಿಂತಲೂ ದೃಢವಾದುದು, ಎಲ್ಲರಿಗೂ ಸೇರಿದುದು. ಅದರಲ್ಲಿ ವಿಘ್ನವನ್ನು ತಂದೊಡ್ಡಿ ನಿಮ್ಮ ಪ್ರಗತಿಯಲ್ಲಿ ನಾನೆಂತು ತಡೆಹಿಡಿಯಲಿ? ಹಾಗೆ ತಡೆಯುವುದು ನನಗೆ ಉಚಿತವಾದೀತೆ?” ಈ ರೀತಿ ಅವಿಚಲ ಕರ್ತವ್ಯನಿಷ್ಠೆಯಿಂದ ಎಲ್ಲರೂ ಮೌನವಾದರು; ಅವರ, ಅವರೆಲ್ಲರ ನಯನಗಳಿಂದ ಉದುರುತಿದ್ದ ಕಣ್ಣೀರನ್ನು ಒರಸಲು ಹೊದ್ದ ಬಟ್ಟೆಯ ತುದಿ ಮೇಲೇರಿತು.

ಹೀಗಿರುವಾಗ, ಶಿಷ್ಯರಲ್ಲಿಯೂ ಗುರುನಿಷ್ಠಾಭಾವನೆಯಿದ್ದರೆ, ಅದರಲ್ಲಿ ಆಶ್ಚರ್ಯವೇನು? ಒಂದು ದಿನ ನಾವು ವರ್ಗದ ಕೋಣೆಯಲ್ಲಿ ಕುಳಿತು, ‘ಗಂಗಾಧರ ಶಾಸ್ತ್ರಿಗಳ ಆಗಮನವನ್ನು ನಿರೀಕ್ಷಿಸುತಿದ್ದೆವು. ಆಗ ಒಬ್ಬ ಅಪರಿಚಿತ ವೃದ್ಧ ಪಂಡಿತರು ಆಗಮಿಸಿದರು. ಮರ್ಯಾದೆಯನ್ನು ಮೀರದೆ ನಾವವರ ಪಾದ ತೊಳೆದು ಆಸನದಲ್ಲಿ ಕೂರಿಸಿದೆವು. ಅಷ್ಟರಲ್ಲಿ ಗಂಗಾಧರ ಶಾಸ್ತ್ರಿಗಳೂ ಬಂದು, ಅತಿಥಿಗಳನ್ನು ಕಂಡು ನಮಸ್ಕರಿಸಲು ತಲೆತಗ್ಗಿಸತೊಡಗಿದರು. ಆಗಂತುಕರು ತಡೆದರು: “ತುಸು ತಡೆಯಿರಿ. ನಾನು ನಿಮ್ಮ ಪ್ರಣಾಮವನ್ನು ಸ್ವೀಕರಿಸುವ ಸ್ಥಿತಿಯಲ್ಲಿರುವೆನೇ ಇಲ್ಲವೇ ಮೊದಲು ನೋಡಿಕೊಳ್ಳಿರಿ. ತಮ್ಮ ತಂದೆ ಮತ್ತು ನಾನು ಸಹಾಧ್ಯಾಯಿಗಳು. ಪರಿಸ್ಥಿತಿಯ ಒತ್ತಡಗಳಿಂದ ನಾನು ಅರ್ಧದಲ್ಲೇ ಜಲಾಂಜಲಿಯೀಯಬೇಕಾಯಿತು. ಇದೀಗ ನಾನು ಉಳಿದಿರುವ ಅಭ್ಯಾಸವನ್ನು ಪೂರ್ಣಗೊಳಿಸುವುದಕ್ಕಾಗಿ ಬಂದಿದ್ದೇನೆ. ತಮ್ಮನ್ನುಳಿದರೆ ಯೋಗ್ಯ ಅಧ್ಯಾಪಕರು ನನಗೆ ದೊರೆಯಲಾರರು. ತಮ್ಮ ತಂದೆಯ ಸಹಪಾಠಿಯಾದುದರಿಂದ ನಾನು ನಿಮಗೆ ವಂದನೀಯನು ಸರಿಯೇ; ಆದರೆ, ಸದ್ಯ ನಿಮ್ಮ ಶಿಷ್ಯನಾಗಿರುವ ನಾನು ತಮ್ಮಿಂದ ಎಂತು ನಮಸ್ಕರಿಸಿಕೊಳ್ಳಲಿ?”

ಗಂಗಾಧರ ಶಾಸ್ತ್ರಿಗಳು ಹೇಳಿದರು—ತಂದೆಯವರು ಬಹುದಿನಗಳ ಹಿಂದೆಯೇ ಪರಂಧಾಮವಾಗಿದ್ದಾರೆ. ತಾವು ಅವರ ಗುರು-ಸೋದರರು; ನನಗೆ ಪಿತೃತುಲ್ಯರು; ಈಗ ಇಲ್ಲಿ ಆಗಮಿಸಿದ್ದೀರಿ. ಶ್ರದ್ಧಾವನತನಾಗುವ ಸೌಭಾಗ್ಯವನ್ನು ನಾನು ಹೇಗೆ ಕಳೆದುಕೊಳ್ಳಲಿ? ಮೊದಲು ಮೂರು ದಿನ ತಾವು ನನ್ನ ಅತಿಥ್ಯವನ್ನು ಸ್ವೀಕರಿಸಿರಿ ಅನಂತರ, ತಾವೇನು ಆಜ್ಞಾಪಿಸುವಿರೋ ಹಾಗೆಯೇ ಆಗಲಿ.” ಮೂರು ದಿನಾನಂತರ, ನಾಲ್ಕನೆಯ ದಿನ ಆ ಆಗಂತುಕರು ಇತರ ವಿದ್ಯಾರ್ಥಿಗಳಂತೆ ವರ್ಗಕೋಣೆಗೆ ಕಾಲಿಟ್ಟಾಗ, ಅವರಲ್ಲಿ ವಿನಮ್ರತೆ ಮತ್ತು ಶ್ರದ್ಧಾಭಾವವಿತ್ತು. ಗುರುಸಮ್ಮಾನದ ಆ ಸ್ವಚ್ಛಚಿತ್ರ ಇಂದಿಗೂ ನನ್ನ ಸ್ಮೃತಿಪಟಲದಲ್ಲಿ ಅಂಕಿಸಲ್ಪಟ್ಟಿದೆ.

ಚತುಷ್ಪಾಠಿ ಮತ್ತು ಗುರುಗೃಹಗಳ ವಾತಾವರಣ ಸಂಪೂರ್ಣ ಸರಳವಾಗಿರುತ್ತದೆ. ಅಪ್ಪಿತಪ್ಪಿಯಾದರೂ ಗುರುಜನರಿಂದ ಒಂದೇ ಒಂದು ಅಪಶಬ್ದ ಹೊರಬರುತ್ತಿರಲಿಲ್ಲ. ಒಂದು ವೇಳೆ ಬಾಯಿಬಿಟ್ಟರೆ, ಕಲಿಸುವುದನ್ನು ನಿಲ್ಲಿಸಿ ಮಾನಸಿಕವಾಗಿ ಪ್ರಾಯಶ್ಚಿತ್ತಮಾಡಿಕೊಂಡು, ಆತ್ಮಶುದ್ಧಿ ಪಡೆಯುತಿದ್ದರು.

ವಿಕ್ರಮಪುರದ ಪಂಡಿತ ಕಾಲೀ ಶಿರೋಮಣಿಯವರ ನೆನಪು ನನಗಾಗುತ್ತಿದೆ. ಅವರ ಶಾಸ್ತ್ರ ಪಾಂಡಿತ್ಯ ಅದ್ಭುತವಿತ್ತು. ವರ್ಗಕೋಣೆಯ ಹಿಂಬಾಗಿಲಿನಿಂದ ಅವರು ಒಳಬರುತ್ತಿರುವಾಗ ವಿದ್ಯಾರ್ಥಿಗಳು ಆಡಿದ ಒಂದೆರಡು ಕೆಟ್ಟ ಪದಗಳು ಅವರ ಕಿವಿ ಸೇರಿದುವು. ತರಗತಿಯೊಳಗೆ ಬಂದಾಗ ಅಲ್ಲೊಂದು ನಾಯಿಯೂ ಇದ್ದಿತ್ತು. ಅದನ್ನು ಸಂಬೋಧಿಸುತ್ತ ಗುರುಗಳು ಹೇಳಿದರು—“ಮಹಾಶಯರೆ, ದಯಮಾಡಿ ಒಳಬರಲು ನನಗೆ ಅನುಮತಿ ನೀಡುವಿರಾ?” ಇದನ್ನು ಕೇಳುತ್ತಿದ್ದಂತೆಯೇ ವಿದ್ಯಾರ್ಥಿಗಳೂ ಜತೆಗೆ ನಾಯಿಯೂ ಹೊರನಡೆದರು. ಅಂದು ಅವರ ಮುಖ ವಿಸ್ಮಯಚಕಿತ ರೇಖೆಗಳಿಂದ ಕೂಡಿತ್ತು. ಅದನ್ನು ಕಂಡು ಹೇಳಿದರು—“ನಾಯಿಯನ್ನು ನಿಂದಿಸಿ ಹೊರ ಅಟ್ಟಬಹುದು; ಇದರಿಂದ ನಾಯಿಗಳ ಮರ್ಯಾದೆಯೇನೂ ಹೋಗುವುದಿಲ್ಲ. ಆದರೆ, ನನ್ನ ನಾಲಿಗೆ ಮಾತ್ರ ಅಪಶಬ್ದವನ್ನಾಡಿ ಭ್ರಷ್ಟವಾಗುತಿತ್ತು. ಸಮಯ-ಕುಸಮಯವೆಂಬ ಪರಿಜ್ಞಾನವಿಲ್ಲದೆ ದುಷ್ಟವಾಕ್ಕುಗಳು ಹೊರಡುತಿರುವುವು. ಬಾಣವು ಗುರಿಯನ್ನು ಮುಟ್ಟಿತು. ವಿದ್ಯಾರ್ಥಿಗಳ ಮುಖವೆಲ್ಲವೂ ಲಜ್ಜಾವನತವಾದುವು.

ಇಂತಹ ಉದ್ಬೋಧಕ ವಾತಾವರಣ! ಒಂದೆಡೆ ಸ್ನೇಹದ ಗಂಗೆ ಹರಿಯುತಿತ್ತು; ಇನ್ನೊಂದೆಡೆ ಶ್ರದ್ಧೆಯ ಯಮುನೆ. ಆ ದಿನದ ಸಂಸ್ಮರಣೆಯೊಡನೆಯೇ ಮೈಯೆಲ್ಲಾ ಆನಂದೋನ್ಮಾದದಿಂದ ರೋಮಾಂಚನಗೊಳ್ಳುತ್ತದೆ, ಇಂದಿಗೂ.

(ಕ್ಷಿತಿಮೋಹನ ಸೇನರ ಸಂಸ್ಮರಣೆಯೊಂದರ ರೂಪಾಂತರ)

ಹೆಚ್ಚು ಬಡ್ಡಿ ಸಂಪಾದನೆಗೆ
ಕೆನರಾ ಬ್ಯಾಂಕಿನ ಕ್ಯಾಶ್ ಸರ್ಟಿಫಿಕೇಟುಗಳನ್ನು ಕೊಳ್ಳಿರಿ.
ಆಕರ್ಷಕ ಬಡ್ಡಿಯನ್ನೀಯುವ
3 ವರ್ಷಗಳ ಮತ್ತು 5 ವರ್ಷಗಳ—ಕ್ಯಾಶ್ ಸರ್ಟಿಫಿಕೇಟ್— ಉಳಿತಾಯದ ಹೊಸ ಯೋಜನೆಗಳನ್ನು ಪ್ರಾರಂಭಿಸಿದ್ದೇವೆಂದು ತಿಳಿಸಲು ಹರ್ಷಿಸುತ್ತೇವೆ.
—: ವಿವರಗಳಿಗೆ :—
ನಮ್ಮ 75ಕ್ಕೂ ಮೀರಿದ ಶಾಖೆಗಳಲ್ಲೊಂದಕ್ಕೆ ಬರೆಯಿರಿ
ಕೆನರಾ ಬ್ಯಾಂಕ್ ಲಿಮಿಟೆಡ್
(ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿರುವ ಷೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದು)

ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಮಾನವ ಸಾಧನೆ

ಲಂಡನ್ನಿನ ಕ್ಯೂ ಉದ್ಯಾನಗಳು

ವಿಸ್ತಾರ ಭೂಮಿಯನ್ನು ಸಸಾರವಾಗಿಸಿ ನಿರ್ಮಿಸಿದ ಪ್ರಪಂಚದ ಗಣನೀಯ ಸಸ್ಯೋದ್ಯಾನಗಳಲ್ಲಿ ಕ್ಯೂ ಅಗ್ರಗಣ್ಯವಾಗಿದೆ.

ಒಂದು ಉದ್ಯಾನವನವು ಅದೆಷ್ಟು ಮನೋಹರವಾಗಿರಬಹುದು ಎಂದು ಪ್ರಶ್ನಿಸುವವರಿಗೆ "ಕ್ಯೂ ಉದ್ಯಾನಗಳಿಗೆ ಹೋಗಿ ನೋಡಿಬನ್ನಿ" ಎಂಬುದೇ ಸಲಹಾರೂಪವಾದ ಉತ್ತರ. ಲಂಡನ್ ನಗರದಿಂದ ಅನತಿದೂರದಲ್ಲಿರುವ ಕ್ಯೂ ವೈಶಾಖಕಾಲದ ವಿಚಿತ್ರ ಭೂಮಿ. ಮೋಟಾರು, ಕಾರು, ರೇಲು, ಗಾಡಿ, ದೋಣಿ ಮೊದಲಾದ ವಾಹನಗಳ ಮೂಲಕ ಜನರು ಮಿಲಿಯಗಟ್ಟಲೆಯಲ್ಲಿ ಪ್ರತಿವರ್ಷವೂ ಕ್ಯೂವಿಗೆ ತೆರಳುತ್ತಾರೆ.

ಸಂದರ್ಶಕನ ಆಲಸಿ ಮನವನ್ನು ಸಚೇತಗೊಳಿಸುವುದಕ್ಕಾಗಿಯೇ ನಿರ್ಮಿಸಲಾದ ಕ್ಯೂವಿನ "ರಾಯಲ್ ಬೊಟಾನಿಕ್ ಗಾರ್ಡನ್ಸ್" ವೈಜ್ಞಾನಿಕ ಪ್ರಯೋಗಗಳಿಗೂ ಆಸರೆಯಾಗುತ್ತದೆ. ಕಳೆದ ಎರಡು ಶತಮಾನಗಳಿಂದಲೂ ಪ್ರಪಂಚದ ಆರೋಗ್ಯ ಪರಿಸ್ಥಿತಿಯ ಮೇಲೆ ಸಂಶೋಧನೆ, ಅಧ್ಯಯನ ನಡೆಸುವುದರಲ್ಲಿ ಕ್ಯೂ ಗಾರ್ಡನ್ಸ್ ತನ್ನ ಮಹತ್ವಪೂರ್ಣ ಸೇವೆಯನ್ನು ಸಲ್ಲಿಸುತ್ತಿವೆ.

ಪೂರ್ವದೇಶಗಳಲ್ಲಿ ಪ್ರಚಲಿತವಿದ್ದ ರಬ್ಬರ್ ಗಿಡಗಳ ನಾಟಿಕೆಯಿಂದ ಕ್ಯೂ ಉದ್ಯಾನಗಳು ಪ್ರಾರಂಭವಾಗಿದ್ದುವು. ಭಾರತಕ್ಕೆ ಕ್ವಿನಿನ್ ಬಂದುದು ಮೊದಲು ಕ್ಯೂವಿನಿಂದ. ಅಲ್ಲದೇ, ಅನಾನಾಸು, ಪೈನ್ ಆಪಲ್, ಕಾಫಿ, ಬ್ರೆಡ್‌ಫ್ರುಟ್ ಮೊದಲಾದ ಫಲಗಳನ್ನು ಮೊದಲು ಅವನ್ನು ಬೆಳಸದ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಕ್ಯೂ ತನ್ನ ದೇಣಿಗೆಯಾಗಿ ಇತ್ತಿತು.

ಮಾರ್ಗದರ್ಶಕರಾದ ಡಾ. ಜಾರ್ಜ್ ಟೈಲರರ ನೇತೃತ್ವದಲ್ಲಿ ಸಂಶೋಧನೆಗಳು ಇಲ್ಲಿ ಮುಂದುವರಿಯುತ್ತಿವೆ. ಕ್ಯೂ ಸೈಪ್ರೆಸ್, ಇರಾಕ್ ವಿಷುವದ್ರೇಖಾ ಪ್ರದೇಶದ ಪೂರ್ವ ಆಫ್ರಿಕೆಗಾಗಿ ಒಂದು ಯೋಜನೆಯನ್ನು ತಯಾರಿಸುತ್ತಿದೆ. ಹಾಗೆಯೇ ಪಶ್ಚಿಮ ಆಫ್ರಿಕೆಯ ಯೋಜನೆಯನ್ನೂ ಪುನರ್ಪರಿಶೀಲಿಸುತ್ತಿದೆ. ಇತ್ತೀಚೆಗೆ ಕೊಕ್ಕೋ, ಅನಾನಾಸುಗಳ ಸುಧಾರಿತ ಜಾತಿಗಳನ್ನು ನಿರ್ಮಿಸುವ ಮತ್ತು ಅದನ್ನು ಪ್ರಚಾರಮಾಡುವ ಹಾಗೂ ಈ ಜಾತಿಯ ಗಿಡಗಳನ್ನು ಸಿಲೋನ್, ಘಾನಾ, ಮಲಯ, ನೈಜೀರಿಯಾ ಮತ್ತು ಫಿಜಿ ಮೊದಲಾದ ರಾಷ್ಟ್ರಗಳಿಗೆ ಕಳಿಸಿಕೊಡುವ ಕಾರ್ಯ ನಡೆಯುತ್ತಿದೆ. ಪಶ್ಚಿಮ ಆಫ್ರಿಕ, ಟ್ರಿನಿಡಾಡ್ ಮತ್ತು ಪಶ್ಚಿಮ ಆಸ್ಟ್ರೇಲಿಯಾಗಳಿಗೆ ಒಂದು ವಿಧದ ಅನಾನಾಸನ್ನು ಕೊಡಲಾಗಿದೆ.

ಪ್ರತಿವರ್ಷ ಹನ್ನೆರಡು ಸಾವಿರ ಹೊರೆಗಳಷ್ಟು ವಿವಿಧ ಬೀಜ ಮತ್ತು ಸಸ್ಯಗಳು ಪ್ರಪಂಚದ ಬೇರೆ ಬೇರೆ ಮೂಲೆಗಳಿಗೆ ಕ್ಯೂ ಉದ್ಯಾನಗಳಿಂದ ಹೋಗುತ್ತವೆ. ಈ ಉದ್ಯಾನಗಳಲ್ಲಿ ಕಾಮನ್‌ವೆಲ್ತ್‌ನ ಸಸ್ಯವಿಜ್ಞಾನಿಗಳು ಹಾಗೂ ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಪರವಾಗಿ ಬರುತ್ತಾರೆ.

ವಿದ್ಯಾರ್ಥಿಗಳು ೮॥ ಮಿಲಿಯ "ಶೀಟು"ಗಳ ಸಸ್ಯ ಮಾತೃಕೆಗಳ ಮೂಲಿಕಾ ಸಂಗ್ರಹದ ಉಪಯೋಗವನ್ನು ಇಲ್ಲಿ ಸಂಪೂರ್ಣ ಮಾಡಿಕೊಳ್ಳುತ್ತಾರೆ. ಇನ್ನು ಸಮೀಪದ ೫೫,೦೦೦ ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಂಪುಟಗಳೂ, ೮೦,೦೦೦ ಪುನರ್ಮುದ್ರಿತ ಪುಸ್ತಕ ಮತ್ತು ಪತ್ರಿಕೆಗಳೂ, ೧,೫೦,೦೦೦ ಚಿತ್ರಗಳೂ ಕೂಡಿರುವ ಪುಸ್ತಕಾಲಯದ ಸದುಪಯೋಗವನ್ನು ಇವರು ತೆಗೆದುಕೊಳ್ಳುತ್ತಾರೆ.

ಬ್ರಿಟಿಷ ರಾಜ ಮೂರನೆಯ ಜಾರ್ಜನ ತಾಯಿಯಾದ ರಾಜಕುಮಾರಿ ಸಕ್ಸೆ-ಗೋಥಾದ ಆಗಸ್ಟಾ ಎಂಬಾಕೆ ೧೭೫೯ರಲ್ಲಿ ಈ ಉದ್ಯಾನವನ್ನು ಸ್ಥಾಪಿಸಿದಳು. ಒಂಬತ್ತು ವರ್ಷಾನಂತರ, ಸರ್ ಜೋಸೆಫ್ ಬೇಂಕ್ಸ್ ಎಂಬವನು, ಕೇಪ್ಟನ್ ಕುಕ್ಕನೊಡನೆ ಸಾಗರ ಪ್ರಯಾಣಮಾಡಿ, ಆಸ್ಟ್ರೇಲಿಯಾದ ಕರಾವಳಿಯ ಒಂದು ಭಾಗದಲ್ಲಿ ಕಾಲೂರಿದನು. ಅಲ್ಲಿ, ಮನಮೋಹಕವಾದ ಆತನು ನೋಡಿರದ ಹಲವಾರು ಬಗೆಯ ಸಸ್ಯಗಳಿದ್ದುವು. ಇದರಿಂದಾಗಿ ಆತನು ತಂಗಿದ ಆ ಕರಾವಳಿಯ ಸಮುದ್ರವನ್ನು ಸಸ್ಯ ಕೊಲ್ಲಿ (ಬೊಟನಿ ಬೇ) ಎಂಬ ಹೆಸರಿನಿಂದ ಕರೆದನಲ್ಲದೇ ಮುಂದೆ, ತಾನು ಕ್ಯೂ ಉದ್ಯಾನಗಳ ಮಾರ್ಗದರ್ಶಕನಾದಾಗ, ಇಂತಹ ಅಪೂರ್ವದೃಷ್ಟ ಸಸ್ಯಗಳನ್ನು ಸಂಗ್ರಹಿಸುವ, ವಿನಿಮಯಿಸುವ ಕಾರ್ಯಕ್ಕೆ ತೊಡಗಿದನು. ಈ ಕೆಲಸವು ಇಂದಿಗೂ ಮುಂದುವರಿಯುತ್ತಿದೆ.

ಕ್ಯೂವಿನ ಸಂಶೋಧಕನೂ ಉದ್ಯಾನಗಾರನೂ ಆದ ನೆಲ್ಸನ್ ಎಂಬವನು ಕೇಪ್ಟನ್ ಬ್ಲಿಗ್‌ರೊಡನೆ ಶಾಂತಸಾಗರವನ್ನು ಒಮ್ಮೆ ಹಾಯ್ದನು. ಆದರೆ, ಬ್ಲಿಗ್ ಇಲ್ಲಿನ ಡಚ್ಚ ದ್ವೀಪ ಟಿಮೋರದಲ್ಲಿ ಮಡಿದು ಹೋದನು. ನೆಲ್ಸನ್ ತನ್ನ ಸಂಗಾತಿಗಳೊಡನೆ ಒತ್ತಾಯಿಸಿ ಸೌತ್ ಸೀ ದ್ವೀಪಗಳ 'ಬ್ರೆಡ್ ಫ್ರುಟ್'ನ್ನು ಪಶ್ಚಿಮ ಇಂಡಿಯಾ ದ್ವೀಪಗಳಲ್ಲಿ ನಾಟಿಸಿದನು. ಹಾಗೆಯೇ ಕ್ರಿಸ್ಟೊಫರ ಸ್ಮಿತ್ ಎಂಬವನು ಜಮೈಕದಲ್ಲಿಯೂ ೩೦೦ ಗಿಡಗಳನ್ನು ನಾಟಿದನು.

ಅಮೆಜಾನ ನದೀದ್ರೋಣದ ಪಾರಾ-ರಬ್ಬರ್ ಗಿಡಗಳನ್ನು ಮಲಯಾಕ್ಕೆ ಸ್ಥಳಾಂತರಿಸಿ, ಅದನ್ನು ಪ್ರಪಂಚದ ಅತಿದೊಡ್ಡ ಉದ್ಯಮವನ್ನಾಗಿಸಿದುದು ಕ್ಯೂವಿನ ಅವಿಸ್ಮರಣೀಯ ಕಾರ್ಯ. ೧೮೭೬ರಲ್ಲಿ ಸುಮಾರು ೭೦,೦೦೦ ಬೀಜಗಳನ್ನು ಬ್ರೇಜಿಲ್‌ನಿಂದ ಕ್ಯೂವಿಗೆ ತರಲಾಯಿತು. ಇವುಗಳಿಂದ ೧,೦೦೦ ಗಿಡಗಳನ್ನು ತಯಾರಿಸಿ ಅವನ್ನು ಸಿಲೋನ್ ಮತ್ತು ಮಲಯಾ ದೇಶಗಳಿಗೆ ಕಳಿಸಲಾಯಿತು. ಮುಂದೆ, ಸಿಲೋನ್‌ನಲ್ಲದು ಬೆಳೆಯಲಿಲ್ಲ; ಮಲಯದಲ್ಲಿ ಉದ್ದಿಮೆಯು ಯಶಸ್ವಿಯಾಯಿತು.

೧೮೪೧ರಲ್ಲಿ ರಾಜಾಧಿಕಾರದಿಂದ ಕ್ಯೂವು ಕಾಡು ಮೇಡುಗಳ ಕಮಿಶನರರಿಗೆ ಹಸ್ತಾಂತರಿತವಾಯಿತು. ಸಸ್ಯ ವಿಜ್ಞಾನದಲ್ಲಿ ಅಂತಾರಾಷ್ಟ್ರೀಯ ಕಾರ್ಯ ಪ್ರವೃತ್ತವಾದ ಸರಕಾರಿ ಸಂಸ್ಥೆಯಿದು. ಗ್ಲಾಸ್ಗೋ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ಪ್ರಾಧ್ಯಾಪಕರಾದ ಸರ್ ವಿಲ್ಲಿಯಂ ಹುಕ್ಕರರು ಪ್ರಥಮ ವೇತನ ಪಡೆವ ಮಾರ್ಗದರ್ಶಕರಾಗಿ ನೇಮಕಗೊಂಡರು.

೧೯೦೩ರಲ್ಲಿ ಪುನಃ ಒಂದು ಪರಿವರ್ತನೆ ನಡೆದು ಈ ಉದ್ಯಾನವು ಕಾಮಗಾರಿ ಶಾಖೆಯಿಂದ ಕೃಷಿ, ಮೀನು ಮತ್ತು ಆಹಾರ ಮಂತ್ರಿಶಾಖೆಗೆ ಸಂಯೋಜಿಸಲ್ಪಟ್ಟಿತು. ಆಡಳಿತೆಯಲ್ಲಿ ಪರಿವರ್ತನ ನಡೆಯುತ್ತ ಬಂದರೂ ಕ್ಯೂ ತನ್ನ ವೈಶಿಷ್ಟ್ಯಗಳನ್ನು ಹಿಂದಿನಂತೆಯೇ ಉಳಿಸಿಕೊಂಡಿದೆ. ಗಾಜಿನ ಮನೆಯೇ ಮೊದಲಾದ ಅಲ್ಲಿನ ಕಟ್ಟಡಗಳು ಅನ್ಯಾನ್ಯ ಸಸ್ಯಗಳು, ಬೇರೆಬೇರೆ ಸಂಗ್ರಹಾಲಯಗಳು, ಜೊಡ್ರೆಲ್ ಲೆಬೊರಟರಿ, ಓರೇಂಜರಿ ಮತ್ತು ಪಗೊಡಾಗಳು ಮೊದಲಾದುವುಗಳಿಗೆ ಮೀಸಲಾಗಿವೆ. ಕ್ಯೂವಿನ ಆವರಣದೊಳಗೆ ೪೦,೦೦೦ ಕ್ಕೂ ಮಿಕ್ಕಿದ ಸಸ್ಯ ಜಾತಿಗಳು, ಅವುಗಳ ವಿಧಗಳು, ಬಳ್ಳಿ, ಬೇರುಗಳು ಬೆಳೆಯುತ್ತವೆ. ಒಂದೊಂದು ಜಾತಿಗೆ ಬೇರೆಬೇರೆ ಅಂಕಣಗಳಿದ್ದು ಇವು ಪ್ರೇಕ್ಷಕರನ್ನು ಆಕರ್ಷಿಸುತ್ತವೆ.

ದುರದೃಷ್ಟವಶದಿಂದ ಕ್ಯೂ ಉದ್ಯಾನಗಳ ಭೂಮಿ ಸಾರಭರಿತವಾಗಿಲ್ಲ. ಮಣ್ಣು ಕೆಳಮಟ್ಟದ್ದು. ಗೊಬ್ಬರಗಳ ಬಳಕೆಯಿಂದಾಗಿ ಅದನ್ನು ಸಾರವತ್ತಾಗಿ ಮಾಡಲಾಗಿದೆ. ಈ ಉದ್ಯಾನಗಳ ದ್ವಿಶತಮಾನೋತ್ಸವವು ಇತ್ತೀಚೆಗೆ ವೈಭವಯುಕ್ತವಾಗಿ ಬ್ರಿಟಿಷ ರಾಣಿಯವರ ನೇತೃತ್ವದಲ್ಲಿ ನಡೆಯಿತು. ಸಸ್ಯಸಂಗ್ರಹಾಲಯವೂ ಸೌಂದರ್ಯರಾಶಿಯೂ ಆದ ಈ ಉದ್ಯಾನವು ಕಾಮನ್‌ವೆಲ್ತ್‌ನಲ್ಲಲ್ಲ ವಿಶ್ವದಲ್ಲೇ ಗಣನೀಯ ಸ್ಥಾನಪಡೆಯುತ್ತದೆ.



ಎನ್. ಸಿ. ಸಿ. ಯ ಹುಡುಗಿ ಕಡೆಟ್ ಒಬ್ಬಳು ತರಬೇತಿ ಪಡೆಯುತ್ತಿದ್ದಾಳೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 504/59.

ಕುಕ್ಕಪ್ಪ ಗೌಡ —ವಾದಿ.

1 ನಾರ್ಣಪ್ಪ ಗೌಡ. ಚನ್ನಪ್ಪ ಗೌಡರ ಮಗ 2 ಮ್ಯಾನರ ಬೆಳಿಯಪ್ಪ 12ವರ್ಷ- ನಾರ್ಣಪ್ಪ ಗೌಡರ ಮಗ ಗಾರ್ಡಿಯನ್ 1)/ ತಂದೆ ನಾರ್ಣಪ್ಪ ಗೌಡ. ಬಾರ್ಕ ಗ್ರಾಮದ ಆಂಬ್ಯ ಪುತ್ತೂರು ತಾಲ್ಕು postಬೊಬ್ಬೆಕೇರಿ, ದ. ಕ. —ಇವರೀಗೆ

ವಾದಿಯು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ 30-3-೬೦ಕ್ಕೆ ವಿಚಾರಕ್ಕೆ ಇರುವುದರಿಂದ ನೀವು ಆ ದಿನ ಬೆಳಿಗ್ಗೆ 10 ಗಂಟೆಗೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸಿ ಕೊಳ್ಳದಿದ್ದಲ್ಲಿ ನಿಮ್ಮನ್ನು ಶಿಕ್ಷೆಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(By Order of the Court)

Sripati Rao B.

Advocate for Plaintiff

ಪುತ್ತೂರು 5-3-60

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

ನಮ್ಮ ರಾಜ್ಯ

ಕೆಲವು ಪ್ರೇಕ್ಷಣೀಯ ಸ್ಥಳಗಳು

ಕರ್ನಾಟಕದ ಐತಿಹಾಸಿಕ ಕಾಲದ ಸುಪ್ರಸಿದ್ಧ ಅವಶೇಷಗಳು ಬಿಜಾಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಗುಲ್ಬರ್ಗ, ಬೀದರಗಳಲ್ಲಿವೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

೨೦. ಕಾರವಾರ

ರಾಜ್ಯದ ಕರಾವಳಿಯ ಉತ್ತರದ ಮೂಲೆಯಲ್ಲಿರುವ ಸಮುದ್ರದಂಡೆಯ ಊರು ಕಾರವಾರ. ಗೋವೆಯಿಂದ ಕೇವಲ ೫೦ ಮೈಲು ದಕ್ಷಿಣದಲ್ಲಿದು ಇರುವುದು. ಬೊಂಬಾಯಿಯಿಂದ ಮಂಗಳೂರಿಗೆ ತೆರಳುವ ಹಡಗವು ಇಲ್ಲಿ ನಿಲ್ಲುತ್ತದೆ. ಒಳಪ್ರದೇಶಗಳಿಂದ ಇಲ್ಲಿಗೆ ಬಸ್ಸುದಾರಿಗಳಿವೆ. ಉತ್ತರ ಕನ್ನಡ ಜಿಲ್ಲೆಯ ಪ್ರಧಾನ ನಗರವಾದ ಕಾರವಾರವು ಉತ್ತಮ ಭವಿಷ್ಯವುಳ್ಳ ಬಂದರುಸ್ಥಳವೂ ಹೌದು. ಕಾರವಾರದ ಸಮುದ್ರ ಕರಾವಳಿ ಮತ್ತು ಆಸುಪಾಸಿನ ಪ್ರಕೃತಿ ಮನೋಹರ ದೃಶ್ಯಗಳು ಪ್ರೇಕ್ಷಕರ ದೃಷ್ಟಿಯಿಂದ ಮರೆಯಲಾರದವು. ಸಮುದ್ರದಲ್ಲಿ ನಡುಗುಡ್ಡೆಗಳ ಸಮುದಾಯವಿದ್ದು ಇಲ್ಲಿ ದೀಪಸ್ತಂಭವೊಂದಿದೆ. ನವಂಬರ ಮತ್ತು ಮಾರ್ಚ ತಿಂಗಳುಗಳ ಮಧ್ಯಾವಧಿಯಲ್ಲಿ ಇಲ್ಲಿನ ಹವೆ ಉತ್ತಮವಾಗಿರುತ್ತವೆ. ಸಮೀಪದಲ್ಲಿಯೇ ಕಾಳಿ ನದಿಯ ಅಳಿವೆಯು ಇರುವುದು. ಸೂರ್ಯಾಸ್ತಮಾನದ ಕಾಲದಲ್ಲಿ ಇಲ್ಲಿನ ದೃಶ್ಯ ಅವರ್ಣನೀಯವಾದುದು.

೨೧. ಬಿಜಾಪುರ

ಬೆಂಗಳೂರಿಂದ ಸುಮಾರು ೪೧೪ ಮೈಲುಗಳ ದೂರದಲ್ಲಿ ವಿಜಯಗಳ ಪುರವೆಂಬ ಬಿಜಾಪುರವಿದೆ. ಆದಿಲಶಾಹಿ ವಂಶದ ಅರಸರ ಕಾಲದಲ್ಲಿ ಬಿಜಾಪುರವು ಕಲಾಕ್ಷೇತ್ರದ ಆಗರವಾಗಿತ್ತು. ಇಲ್ಲಿ ಇತಿಹಾಸ ಪ್ರಸಿದ್ಧವಾದ ಹಲವಾರು ಕಲಾಪೂರ್ಣ ಕಟ್ಟಡಗಳಿವೆ. ಇವುಗಳಲ್ಲಿ 'ಗೋಳ ಗುಂಬಜ'ವು ಅಗ್ರಗಣ್ಯವಾಗಿದೆ. ೧೬೨೬ರಿಂದ ೧೬೫೬ರ ವರೆಗೆ ಆಳಿದ್ದ ಮಹಮ್ಮದ ಆದಿಲ ಶಹನ ಸಮಾಧಿಯಿದಾಗಿದೆ. ವಿಚಿತ್ರರೂಪದ ಹೃದಯ ಮನಾಕರ್ಷಕವಾದ ಈ ಗುಂಬಜವು ಒಟ್ಟು ೧೮,೦೦೦ ಚದರ ಅಡಿಗಳಷ್ಟು ವಿಸ್ತಾರವಾಗಿದೆ. ಇದರಲ್ಲಿ ಪ್ರತಿಧ್ವನಿಸುವ ಸ್ತಂಭವೊಂದಿದೆ. ಇದೇ ಅಲ್ಲದೆ ಬಾಹಮನಿ ಸುಲ್ತಾನರ ರಾಜಧಾನಿಯಾಗಿ ಮೆರೆದಾಡಿ ಕೊನೆಗೆ ಸೋಲುಂಡ ಬಿಜಾಪುರದಲ್ಲಿಯೂ ಅದರ ಸುತ್ತಮುತ್ತಲೂ ಹಲವಾರು ಇತಿಹಾಸಪ್ರಸಿದ್ಧ ಸ್ಥಳಗಳಿದ್ದು ಅವನ್ನು ಪ್ರೇಕ್ಷಕರು ಸುಮ್ಮನೆ ನೋಡದೆ ಬಿಡುವಂತಿಲ್ಲ

೨೨. ಬಾದಾಮಿ

ಬಾದಾಮಿಯ ಚಾಲುಕ್ಯರ ಹೆಸರನ್ನು ಕೇಳದ ಭಾರತೀಯನಿರಲಾರನು. ಕರ್ನಾಟಕದ ಅರಸರಲ್ಲಿ ಈ ಮನೆತನದವರ ಸ್ಥಾನ ಭದ್ರವಾದುದು. ಬಿಜಾಪುರದಿಂದ ೭೫ ಮೈಲಿ ದೂರದ ಬಾದಾಮಿಯು ಪ್ರಸಿದ್ಧ ಗವಿದೇಗುಲಗಳಿಗೆ ಹೆಸರಾಗಿದೆ. ಉತ್ತರ ಭಾರತದ ಸಾಮ್ರಾಟನಾಗಿದ್ದ ಹರ್ಷವರ್ಧನನನ್ನು ಸೋಲಿಸಿದ ಎರಡನೆ ಪುಲಿಕೇಶಿಯ ರಾಜಧಾನಿಯಾಗಿದ್ದ ಈ ಬಾದಾಮಿಯು ಶಿಲ್ಪಕಲೆಯ ಬೀಡಾಗಿದೆ. ಈ ನಗರವು ಎರಡು ಬೆಟ್ಟಗಳ ನಾಲಿನ ಪಾದದಲ್ಲಿರುವುದು. ಇಕ್ಕಡೆಯ ಬೆಟ್ಟಗಳಲ್ಲಿ ಕೆತ್ತಿರುವ ಗವಿದೇವಾಲಯಗಳಲ್ಲಿ ಒಳಗಡೆಯೂ ಕುಸುರಿ ಕೆಲಸ ಕಣ್ಮನಗಳನ್ನು ಸೂರೆಗೊಳ್ಳುತ್ತದೆ.

೨೩. ಐಹೊಳೆ

ಬಾದಾಮಿಯ ಸಮೀಪದಲ್ಲಿರುವ ಐಹೊಳೆಯು ದೊಡ್ಡ ವಿದ್ಯಾಕೇಂದ್ರವಾಗಿತ್ತು. ನಡುವಿರುವ ಮಲಪ್ರಭಾ ನದಿಗೆ ಅಡ್ಡ ಸೇತುವೆಯಿಲ್ಲದಿರುವುದರಿಂದ ಸಂದರ್ಶಕರು ಐಹೊಳೆಯನ್ನು ಸೇರಬೇಕಾದರೆ ಬಹಳ ದೂರವನ್ನು ಕ್ರಮಿಸಬೇಕಾಗುವುದು. ಬಾದಾಮಿಯಿಂದ ಕೇವಲ ೧೬ ಮೈಲು ದೂರದಲ್ಲಿರುವುದು. ಇಲ್ಲಿ ನೂರಕ್ಕೂ ಮಿಕ್ಕಿದ ದೇವಾಲಯಗಳಿದ್ದು ಹೆಚ್ಚಿನವುಗಳಲ್ಲಿ ಉತ್ತಮ ಕೆತ್ತನೆಯ ಕೆಲಸವಿದೆ; ಈ ಕಲಾಗಾರಿಕೆಯಲ್ಲಿ ನೈಪುಣ್ಯವಿದೆ; ಸೌಂದರ್ಯವಿದೆ. ಇದರ ಅವಶೇಷಗಳು ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಿವೆ.

೨೪. ಪಟ್ಟದ ಕಲ್ಲು

ಬಿಜಾಪುರ ಜಿಲ್ಲೆಯ ಸುಪ್ರಸಿದ್ಧ ಸ್ಥಾನಗಳಲ್ಲಿ ಪಟ್ಟದ ಕಲ್ಲೂ ಒಂದಾಗಿರುವುದು. ಬಾದಾಮಿಯಿಂದ ಕೇವಲ ಒಂಬತ್ತೇ ಮೈಲು ಪ್ರಯಾಣಮಾಡಿದರೆ ಪಟ್ಟದ ಕಲ್ಲು ಸೇರಬಹುದು. ಈ ಪ್ರದೇಶವನ್ನು ಬಹುಕಾಲ ಆಳಿದ್ದ ಎರಡನೆ ಪುಲಕೇಶಿಯ ಪಟ್ಟಾಭಿಷೇಕಕ್ಕೂ ಸ್ಥಳದ ಹೆಸರಿಗೂ ಸಂಬಂಧವಿದೆಯೆನ್ನುತ್ತಾರೆ. ಕ್ರಿ. ಶ. ೭ ಮತ್ತು ೮ನೆಯ ಶತಮಾನದಲ್ಲಿ ಕಟ್ಟಿಸಲಾದ ಚಾಲುಕ್ಯ ಮತ್ತು ದ್ರಾವಿಡ ಶಿಲ್ಪಕಲಾ ಪದ್ಧತಿಯ ಹಲವಾರು ಗುಡಿಗೋಪುರಗಳು ಇಲ್ಲಿವೆ. ಚಾಳುಕ್ಯ ವಂಶದ ಅರಸರೆಲ್ಲರೂ ಈ ಸ್ಥಳದಲ್ಲಿ ಪಟ್ಟಾಭಿಷಿಕ್ತರಾಗುವ ಪದ್ಧತಿಯೂ ಇತ್ತೆಂದು ತಿಳಿದುಬರುತ್ತದೆ.

೨೫. ಗುಲ್ಬರ್ಗ

ಗುಲ್ಬರ್ಗ ವಿಭಾಗದ ಕೇಂದ್ರವೇ ಗುಲ್ಬರ್ಗ. ಚಾರಿತ್ರಿಕ ಸಂಬಂಧವು ಇಲ್ಲಿ ಅಪರಿಮಿತ. ೧೫ ಗೋಪುರಗಳಿಂದ ಕೂಡಿದ ಗುಲ್ಬರ್ಗ ಕೋಟೆಯನ್ನು ಮೊದಲಿಗೆ ಕಟ್ಟಿಸಿದವನು ರಾಜಾ ಗುಲಚಂದನು. ಇದರೊಳಗೆ ೨೧೬ ಅಡಿ ಉದ್ದ ೧೭೬ ಅಡಿ ಅಗಲದ ಒಂದು ದೊಡ್ಡ ಮಸೀದಿಯಿದೆ. ಸ್ಪೈನಿನ ಕಾರ್ಡೋವ ಮಸೀದಿಯ ಮಾದರಿಯಲ್ಲಿ ನಿರ್ಮಿತವಾದ ಈ ತೆರನ ಮಸೀದಿ ಭಾರತದಲ್ಲಿ ಬೇರೆಲ್ಲಿಯೂ ಇರುವುದಿಲ್ಲ. ನಗರದ ಪೂರ್ವದಿಶಾಭಾಗದಲ್ಲಿ ಗುಲ್ಬರ್ಗದ ಅರಸರ ಮೊತ್ತ ಚೌಕಾಕಾರದ ಸಮಾಧಿಗಳು ಗುಂಬಜಗಳಿಂದ ಕೂಡಿ ಕಂಗೊಳಿಸುತ್ತವೆ. ಖ್ವಾಜಾ ಬಂದನವಾಜನ ಸಮಾಧಿಯ ಬಳಿಯಲ್ಲಿ ಒಂದು ಮಸೀದಿ, ಒಂದು ಸರಾಯ್ ಮತ್ತೊಂದು ಕಾಲೇಜ. ಇವು ಇವನ್ನು ೧೬೮೭ರಲ್ಲಿ ಔರಂಗಜೇಬನು ಕಟ್ಟಿಸಿದನು. ಕೋಟೆಯ ಈಶಾನ್ಯ ಭಾಗದಲ್ಲಿ ಗುಲ್ಬರ್ಗದ ಹಳೆಯ ಕೋಟೆಯಿದೆ. ಇಲ್ಲಿರುವ ಶರಣ ಬಸವೇಶ್ವರ ದೇವಾಲಯಕ್ಕೆ ಪ್ರತಿವರ್ಷ ಹಲವಾರು ಭಕ್ತರು ದರ್ಶನವೀಯುತ್ತಾರೆ.

೨೬. ಬೀದರ

ಇತಿಹಾಸದಲ್ಲಿ ಬೀದರವು ಮಹತ್ವಪೂರ್ಣ ಸ್ಥಾನ ಪಡೆಯುತ್ತದೆ. ಮುಂದಿನ ಚಾಲುಕ್ಯ ಸಾಮ್ರಾಜ್ಯದೊಳಗೆ ಈ ಬೀದರವು ಸೇರಿಕೊಂಡಿತ್ತು. ಬಾಹಮನಿ ರಾಜ್ಯದ ರಾಜಧಾನಿಯಾಗಿಯೂ ಬೀದರವು ಕೆಲಕಾಲ ಮೆರೆದಾಡಿಕೊಂಡಿತ್ತು. ಇಲ್ಲಿನ ಹಳೆ ಮತ್ತು ಹೊಸಕೋಟೆಗಳು ಪ್ರೇಕ್ಷಕರನ್ನು ಸೆಳೆಯುವುವು. ಹಳೆಯ ಕೋಟೆಯು ತೀರ ಚಿಕ್ಕದಾಗಿದ್ದು, ಹೊಸಕೋಟೆಯು ಆವರಣದೊಳಗಿದೆ. ಈ ಕೋಟೆಯು ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಯಿತೆಂದು ನಂಬಲಾಗಿದೆ. ಹೊಸ ಕೋಟೆಯ ನಿರ್ಮಾಣಕಾಲ ೧೩೪೧.

ಹಳೆಕೋಟೆಯ ಸುತ್ತಳತೆ ಮೂರು ಮೈಲುಗಳು. ಬಾಹಮನಿ ಆಡಳಿತೆಯ ಮಹತ್ವದ, ಬಲವಾದ ಮತ್ತು ಸುರಕ್ಷಿತವಾದ ಸ್ಮಾರಕವೇ ಇದು. ರಂಗೀನ್ ಮಹಲ್, ಚೀನೀ ಮಹಲ್ ಮತ್ತು ತರ್ಕಿಷ್ ಮಹಲ್ ಎಂಬ ಮೂರು ಅರಮನೆಗಳು ಈ ಕೋಟೆಯೊಳಗಿವೆ. ಮದರಸ ಮಹಮ್ಮದ ಗವಾನ, ಬಾಹಮನಿ ಮತ್ತು ಬರಿಧಿ ಸಮಾಧಿಗಳು ಮತ್ತು ನರಸಿಂಹನ ಗವಿದೇವಾಲಯಗಳು ಉಳಿದ ಪ್ರಸಿದ್ಧ ಕಟ್ಟಡಗಳು. ಮದರಸ ಮಹಮ್ಮದ ಗವಾನವು ೧೪೭೨ರಲ್ಲಿ ಖಾನೆ ಬಹಾನ್ ಎಂಬ ವಜೀರನಿಂದ ನಿರ್ಮಿತವಾಯಿತು. ಇದರಲ್ಲಿ ಮನೋಹರ ಮತ್ತು ಆಕರ್ಷಕವಾದ ಮೂರ್ತಿಗಳಿವೆ. ಮಧ್ಯಯುಗದ ಕಲಾಗಾರಿಕೆಗೆ ನರಸಿಂಹ ದೇವಾಲಯವು ಒಂದು ಉನ್ನತ ಉದಾಹರಣೆಯಾಗಿದೆ. ಬೀದರದ ಕಲಾಕುಶಲತೆಯು ಪಾತ್ರೆಪಗಡಿಗಳಲ್ಲಿಯೂ ವ್ಯಕ್ತಪಡುತ್ತವೆ.

೨೭. ಕಲ್ಯಾಣ

ಹುಮ್ನಾಬಾದದಿಂದ ೧೪ ಮೈಲು ದೂರದಲ್ಲಿ ಕಲ್ಯಾಣವಿದೆ. ಮಧ್ಯಾವಧಿಯಲ್ಲಿ ದಕ್ಷಿಣದ ಮನೋಹರವಾದ ನಗರಗಳಲ್ಲಿ ಒಂದಾಗಿತ್ತು. ಉತ್ತಮ ನ್ಯಾಯಶಾಸ್ತ್ರ ಪಂಡಿತನಾದ ವಿಜ್ಞಾನೇಶ್ವರ, ಕಾಶ್ಮೀರೀ ಪಂಡಿತ ಬಿಲ್ಹಣ, ವೀರಶೈವ ಮತಪುನರುದ್ಧಾರಕ ಮತ್ತು ರಾಜಕಾರಣಿ ಬಸವೇಶ್ವರರು ಬಾಳಿದ ಪುಣ್ಯಕರ ನಗರವಿದು.

ಈ ಲೇಖನದಲ್ಲಿ ಕರ್ನಾಟಕ ರಾಜ್ಯದ ಕೆಲವೊಂದು ಸ್ಥಳಗಳ ಸೂಕ್ಷ್ಮ ಪರಿಚಯವನ್ನು ಸಂದರ್ಶಕರ ಉಪಯೋಗಾರ್ಥವಾಗಿ ಸಂಗ್ರಹಿಸಿಕೊಡಲಾಗಿದೆ. ಇದನ್ನು ಬರೆಯುವಲ್ಲಿ ಮೈಸೂರ್ ಸರಕಾರದ ವಾರ್ತಾಶಾಖೆಯ ಪತ್ರಿಕೆ 'ಮೈಸೂರ್ ಇನ್‌ಫರ್ಮೇಶನ್'ನ ಸಹಾಯವನ್ನು ಸಾಕಷ್ಟು ಪಡೆದುಕೊಳ್ಳಲಾಗಿದೆ. ಕರ್ನಾಟಕದಲ್ಲಿರುವ ನೋಡಬೇಕಾದ ಸ್ಥಳಗಳು ಇಷ್ಟೇ ಅಲ್ಲ, ಇನ್ನೂ ಇವೆ. ಅವುಗಳ ಪರಿಚಯವನ್ನೂ ಕ್ರಮೇಣ ಮಾಡಿಕೊಡುವ ಪ್ರಯತ್ನ ನಡೆಸುವೆವು.

(ಮುಗಿದುದು) ಗೋ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 28/60.

ರಾಮಪ್ಪಯ್ಯ ಕೂಡಾ —ವಾದಿರು.

ಮತ್ತು

ಶೇಷಪ್ಪಯ್ಯ ಕೂಡಾ —ಪ್ರತಿವಾದಿರು.

ಇವರೊಳಗೆ.

1. ಶೇಷಪ್ಪಯ್ಯ-ಪುಟ್ಟಣ್ಣಯ್ಯನ ಮಗ ಜನರಲಿಸ್ಟ್. 2. ಲಕ್ಷ್ಮಿ ಅಮ್ಮ ಶೇಷಪ್ಪಯ್ಯನ ಹೆಂಡ್ತಿ. ಉಡುಪಿ ತಾಲೂಕು ಅಲೆವೂರು ಗ್ರಾಮ.

ಮೇಲಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಪ್ರತಿವಾದಿರು ವಾದಿರಿಗೆ ರಿ. ೩೦೦ ತಾ 15-6-1952ರಲ್ಲು ರೂ. 4250-ಕ್ಕೆ ಬರ್ರಿ ಕೊಟ್ಟ ಯೂಡು ದಸ್ತಾವೇಜಿನ ಅಸ್ಲು ಬಡ್ಡಿ ಆ್ಯವೆಜು ವಸೂಲಿಗೆ ದಾಖಲು ಮಾಡಿದ ಮೇಲಿನ ದಾವೆಯು ನಿಮಗೆ ಮೇಲಿನ ದಾವೆಯು ಸಮನ್ಸ್ ಜಾರಿ ಬಗ್ಗೆ ತಾ. 6-4-1960ಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉಜಾರು ಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

(By Order of the Court)

P. R. Shenoy.

Advocate for Plffs.

ಉಡುಪಿ, ತಾ. 16-3-60.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M O one copy will be sent by B. P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ಮಾನವ ಹೃದಯು ವಿದ್ವೇಷ ಮತ್ತು ಪ್ರತಿದ್ವಂದ್ವತೆಯ ಅವಸಾನವಾಗಿದೆ. ಪ್ರೇಮ ಮತ್ತು ಪ್ರತಿಷ್ಠೆಯೆಂಬ ಸಂಪತ್ತಿನಲ್ಲಿ ತನಗಿಂತ ಅಧಿಕನಾದ ಬೇರೊಬ್ಬನನ್ನು ಕಾಣಲು ಅದು ಎಂದೆಂದಿಗೂ ಬಯಸುವುದಿಲ್ಲ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೪-೩-'೬೦	೨೯

ವಿರೋಧೀ ಪಕ್ಷಗಳು

ಉತ್ತರ ಭಾರತದ ಪಾಟ್ನಾದಲ್ಲಿ ಭಾರತೀಯ ಸ್ವತಂತ್ರ ಪಕ್ಷದ ಸಮ್ಮೇಳನವು ನಡೆಯಿತು. ರಾಜಕಾರಣದಿಂದ ಒಂಬು ಬಾರಿ ತುಸು ವಿರಾಮವನ್ನು ಪಡೆದ ರಾಜಾಜಿಯವರು ಸುಮ್ಮನುಳಿಯಲಾರದೆ ಈ ಸ್ವತಂತ್ರ ಪಕ್ಷವನ್ನು ಸ್ಥಾಪಿಸುವ ಮನಸ್ಸು ಮಾಡಿದರು. ಕಾಂಗ್ರೆಸ್ಸಿನ ನೀತಿಯನ್ನು ಮುಖ್ಯವಾಗಿ ಅದರ ಸಮಾಜವಾದ ಮಾದರಿಯ ಸಮಾಜವನ್ನು ಕಟ್ಟುವ ಕಾರ್ಯ ವಿಧಾನವನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷವನ್ನೇ ಗುರಿಯಿಡುವ ಪ್ರಧಾನೋದ್ದೇಶದಿಂದ ಈ ಪಕ್ಷವು ರೂಪುಗೊಂಡಿದೆ ಎಂಬುದು ನಿರ್ವಿವಾದವೇ. ಇದುವರೆಗೆ ಸ್ವತಂತ್ರ ಪಕ್ಷದ ನಿಲುಮೆಯಲ್ಲಿ ಪ್ರಧಾನ ಪಾತ್ರ ವಹಿಸಿದುದೂ ಇದೇ. ಕಾಂಗ್ರೆಸ್ಸು ಸ್ವೀಕರಿಸಿದ ಭೂಸುಧಾರಣಾ ಪ್ರಣಾಳಿ, ಅದಕ್ಕಾಗಿ ಹೇರುವ ಅಧಿಕ ಮಿತಿಯಿಂದ ಅತೃಪ್ತರಾದ ಕಾಂಗ್ರೆಸಿಗರೂ ಈ ಸ್ವತಂತ್ರಪಕ್ಷವನ್ನು ಬೆಂಬಲಿಸತೊಡಗಿದ್ದಾರೆ. ದೇಶವನ್ನು ಕಾಂಗ್ರೆಸ್ ವಿನಾಶದತ್ತ ಕೊಂಡೊಯ್ಯುತ್ತಿದೆ; ರಾಷ್ಟ್ರವನ್ನು ದಿವಾಳಿ ಗೈಯುತ್ತಿದೆ ಎಂಬ ಉದ್ಗಾರಗಳು ಈ ಪಕ್ಷದ ನಾಯಕರಿಂದ ಪದೇ ಪದೇ ಹೊರಡುತ್ತಿವೆ. ಪ್ರಜಾತಂತ್ರದಲ್ಲಿ ಭಿನ್ನಾಭಿಪ್ರಾಯಗಳಿರುವುದು ಸ್ವಾಭಾವಿಕವೆಂದೂ ರಾಷ್ಟ್ರವನ್ನು ಮುನ್ನಡೆಸುವ ಕಾರ್ಯಪ್ರಣಾಳಿಯಲ್ಲಿ ವಿಭಿನ್ನತೆಯು ಗೋಚರವಾಗುವುದು ವಾಸ್ತವವೆಂದೂ ಒಪ್ಪಲೇ ಬೇಕು. ಅಭಿಪ್ರಾಯ ಪ್ರಕಟಣಾ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಮೂಲಗುರಿಯಾಗಿರುವಾಗ, ಹತ್ತರೊಡನೆ ಹನ್ನೊಂದಾಗಿ ಹುಟ್ಟಿ ಬೆಳೆದುಬರುತ್ತಿರುವ ಈ ಸ್ವತಂತ್ರ ಪಕ್ಷದ ಸ್ಥಾಪನೆ ಮತ್ತು ಬೆಳವಣಿಗೆಯನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಆದರೆ, ಕಾಂಗ್ರೆಸ್ಸು ಇಟ್ಟುಕೊಂಡಿರುವ ರಚನಾತ್ಮಕ ಕಾರ್ಯಕ್ರಮಗಳನ್ನು ಕೇವಲ ವಿರೋಧಿಸುವುದೇ ತಮ್ಮ ಪಕ್ಷದ ಉದ್ದೇಶವೆಂದು ಇತರ ಪಕ್ಷಗಳು ತಿಳಿದುಕೊಳ್ಳಬಾರದು. ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ದೇಶದ ಮುಂದಿದ್ದ ಉದ್ದೇಶವೊಂದೇ; ಎಂತಲೇ ಆ ಕಾಲದಲ್ಲಿ ಕಾಂಗ್ರೆಸ್ಸನ್ನು ಸಮಸ್ತ ಭಾರತೀಯರೂ ಬೆಂಬಲಿಸಿದ್ದರು. ಇಂದು ಮುಖ್ಯವಾಗಿದ್ದ ಆ ಉದ್ದೇಶ ಪೂರ್ಣವಾಗಿರುವುದರಿಂದ, ದೇಶವನ್ನು ಸಮರ್ಥ ನಾಯಕತ್ವದಲ್ಲಿ ಅಭಿವೃದ್ಧಿಯ ದಾರಿಯಲ್ಲಿ ಮುನ್ನಡೆಸಿ ರಾಷ್ಟ್ರದಲ್ಲಿ ಸುಖ ಶಾಂತಿ ಸುಭಿಕ್ಷೆಗಳು ನೆಲಸುವಂತೆ ಮಾಡುವುದು ಅಗತ್ಯವಿದೆ. ಸಾಂವಿಧಾನಿಕವಾಗಿ ನಡೆದ ಚುನಾವಣೆಗಳಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷ ಕಾಂಗ್ರೆಸ್ಸು ತನ್ನ ಧ್ಯೇಯಧೋರಣೆಗಳಂತೆ ರಾಷ್ಟ್ರವನ್ನು ಮುನ್ನಡೆಸುವ ಗುರುತರ ಹೊಣೆಗಾರಿಕೆಯನ್ನು ಸಾಧ್ಯವೆನಿಸಿದಷ್ಟು ಸಮರ್ಥ ರೀತಿಯಲ್ಲಿ ನಿರ್ವಹಿಸುತ್ತಿದೆ. ಆದರೆ, ಸ್ವತಂತ್ರ ಪಕ್ಷವು ಇಂತಹ ರಚನಾತ್ಮಕ ಕಾರ್ಯಪ್ರಣಾಳಿಯನ್ನು ಬಿಗುವಾಗಿ ಟೀಕಿಸಿ ಈ ಯೋಜನೆಗಳಿಂದ ರಾಷ್ಟ್ರವು ಸರ್ವನಾಶವಾಗುತ್ತಿದೆ ಎಂಬ ಅಭಿಪ್ರಾಯವನ್ನು ಜನತೆಯಲ್ಲಿ ಪ್ರತಿಬಿಂಬಿಸತೊಡಗಿದೆ. ಅಧಿವೇಶನದಲ್ಲಿ ಮಾತನಾಡುತ್ತ ಶ್ರೀ ರಾಜಾಜಿಯವರು, "ಜನತೆಯು ಅಧಿಕ ಸಂಖ್ಯೆಯಲ್ಲಿ ಒಂದುಗೂಡುವವರೆಗೆ ಕಾಂಗ್ರೆಸಿಗೆ ವಿರುದ್ಧವಾದ ಪಕ್ಷದ ಸಂಘಟನೆಯಾಗಲಾರದು. ಅಧಿಕ ಪೀಡಿತರಾದ ಜನತೆ ಸ್ವತಂತ್ರ ಪಕ್ಷವನ್ನು ಬೆಂಬಲಿಸಲು ಅಂಜುತ್ತಿದೆ. ಇಲ್ಲಿ ಸೇರಿರುವ ಜನರು ಭಯರಹಿತರಿದ್ದಾರೆ. ಇದೇ ಮಾದರಿಯ ಸಾಹಸವನ್ನು ಅಧಿಕಾಧಿಕ ಜನರು ಮಾಡುವರೆಂದು ನಂಬುತ್ತೇನೆ. ಜನತೆ ಉಪದ್ರವವನ್ನು ಅನುಭೋಗಿಸಬೇಕೆಂದು ನಾನು ಬಯಸುವುದಿಲ್ಲ. ಜನರು ವಿಚಾರಶೀಲ ಮತ್ತು ಸಾಹಸಿಯಾಗಬೇಕೆಂದು ಅಪೇಕ್ಷಿಸುತ್ತೇನೆ. ಅದು ಸಂಪತ್ತಿಯು ನಾಶವಾಗುವುದೆಂಬ ಹೆದರಿಕೆಯಿಂದ ಮಾತಾಡುವ ಸಾಹಸ ಮಾಡುವುದಿಲ್ಲ. ಕಾಂಗ್ರೆಸ್ ನೀತಿಯು ಜನತೆಯ ಕುತ್ತಿಗೆಯಲ್ಲಿ ಬಾಣವನ್ನು ಚುಚ್ಚಿದೆ. ನೀವು ಮೊದಲು ನಿಮ್ಮ ಪಕ್ಷವನ್ನು ಸುಸಂಘಟಿತಗೊಳಿಸಿರಿ; ಆ ಮೇಲೆ ನಾವೂ ನಿಮ್ಮ ಪಕ್ಷದಲ್ಲಿ ಸೇರುತ್ತೇವೆ ಎಂದು ಅನ್ನುತ್ತಿದೆ. ಇದು ಗುರಿಮುಟ್ಟಿದನಂತರ ಗಾಡಿ ಹೊಡೆಯುವ ಮಾತಾಡುತ್ತಿರುವಂತಿದೆ" ಎಂದರು. ಅವರು ಮತ್ತೂ ಮುಂದುವರಿದು, ಕಾಂಗ್ರೆಸ್ಸನ್ನು ಮಗುವಿಗೆ ಹಾಲುಣಿಸಿ ಸಾಕದ ತಾಯಿ ಎಂದು ಉಲ್ಲೇಖಿಸಿದರು. ಕಾಂಗ್ರೆಸ್ಸು, ಪ್ರಜಾ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಪಕ್ಷಗಳಲ್ಲಿ ಯಾವ ಅಂತರವೂ ಇರುವುದಿಲ್ಲ ಎಂದು ಅಂದರು.

ಶ್ರೀ ರಾಜಾಜಿಯವರ ಈ ಉದ್ಗಾರಗಳು ಹೊಸತೇನಲ್ಲ. ಇದೇ ಮಾದರಿಯ ಮಾತುಗಳನ್ನು ಇದಕ್ಕೆ ಮೊದಲೂ ಅವರು ಬೇರೆ ಬೇರೆಡೆಯಲ್ಲಿ ಅಂದಿದ್ದರು. ರಾಜಕೀಯ ಪಕ್ಷಗಳು ಬೆಳೆಯಬೇಕಾದರೆ, ಜನತೆಯ ಹಾರ್ದಿಕ ಬೆಂಬಲ ಬೇಕೆಂಬುದು ಸರ್ವವಿದಿತ. ದಕ್ಷಿಣ ಭಾರತದಲ್ಲಿ ತಮ್ಮ ಪಕ್ಷವನ್ನು ಬಲಪಡಿಸದೆ ಉತ್ತರ ಭಾರತಕ್ಕೆ ಪಾದಾರ್ಪಣ ಮಾಡಲಾರೆ ಎಂದು ಪ್ರತಿಜ್ಞೆತೊಟ್ಟ ರಾಜಾಜಿಯವರು ಇದೀಗ ಉತ್ತರ ಭಾರತದಲ್ಲಿ ಕಾಲಿಟ್ಟುದರಿಂದ, ಪಕ್ಷವು ದಕ್ಷಿಣದಲ್ಲಿ ದೃಢವಾಯಿತೆಂದವರು ಹೇಳಿದಂತಾಯಿತು. ರಾಜಾಜೀಯವರು ನಮ್ಮ ಭಾರತದ ಅಗ್ರಗಣ್ಯ ನಾಯಕರಲ್ಲಿ ಒಬ್ಬರು. ಅವರ ಮೇಲೆ ಎಲ್ಲರಿಗೂ ವಿಶ್ವಾಸವಿದೆ; ಗೌರವ ಭಾವನೆಯಿದೆ. ಆದರೂ ಇಂದು ಶ್ರೀ ರಾಜಾಜಿಯವರು ಕೈಗೊಂಡಿರುವ ಕಾರ್ಯಕ್ರಮ, ಅವರು ಆಡುತ್ತಿರುವ ಮಾತುಗಳು ಕೆಲವೊಮ್ಮೆ ಮೇರೆ ಮೀರಿತೆಂದು ತೋರುತ್ತವೆ. ಇದುವರೆಗೆ ಕಾಂಗ್ರೆಸ್ಸು ದೇಶದಲ್ಲಿ ಅನಭಿಷಿಕ್ತ ಚಕ್ರವರ್ತಿಯಾಗಿ ಮೆರೆದಾಡಿದೆ. ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ, ಸರಕಾರಿ ಪಕ್ಷಕ್ಕೆ ಪ್ರಬಲವಾದ ವಿರೋಧ ಪಕ್ಷವೊಂದಿರುವುದು ಅತ್ಯವಶ್ಯವೆಂದೆಲ್ಲರೂ ಒಪ್ಪುತ್ತಾರೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಿಲ್ಲವೆಂದು ಯಾರಾದರೂ ಅನ್ನುವುದಾದರೆ, ಇದಕ್ಕೆ ಸಮರ್ಥ ವಿರೋಧೀ ಪಕ್ಷದ ಕೊರತೆಯೂ ಒಂದು ಕಾರಣವೆಂಬುದು ನಿರ್ವಿವಾದ. ಆದರೆ, ವಿರೋಧೀಪಕ್ಷಗಳು ಸರಕಾರದ ಕಾರ್ಯಕ್ರಮಗಳನ್ನು ಟೀಕಿಸುವುದರಲ್ಲಿಯೇ ತೃಪ್ತಿಪಟ್ಟುಕೊಳ್ಳದೆ, ರಚನಾತ್ಮಕ ಕಾರ್ಯಕ್ರಮಗಳನ್ನಿಟ್ಟುಕೊಂಡು ಸರಕಾರವು ಮಾಡುವ ತಪ್ಪುಗಳನ್ನು ತಿದ್ದುವುದು ಆವಶ್ಯಕವೇ. ಹೊರತು, ಗುರಿಯಿಲ್ಲದೆ ಸರಕಾರವನ್ನು ನಿಂದಿಸುತ್ತ ಕುಳಿತರೆ ಅವುಗಳಲ್ಲಿ ಜನತೆಗೆ ವಿಶ್ವಾಸವಾದರೂ ಎಂತು ಹುಟ್ಟಬೇಕು? ಈ ದಿಸೆಯಲ್ಲಿ ಸ್ವತಂತ್ರ ಪಕ್ಷವೂ ಇತರ ಪಕ್ಷಗಳೂ ಬೆಳೆದುಬಂದಲ್ಲಿ, ಕಾಂಗ್ರೆಸ್ಸಿಗೂ ತನ್ನ ಧ್ಯೇಯಧೋರಣೆಗಳನ್ನು ವ್ಯವಸ್ಥಿತಗೊಳಿಸುವಾಗ ಗಂಭೀರವಾಗಿ ಯೋಚಿಸಿ ಕಾರ್ಯೋನ್ಮುಖವಾಗುವ ಆವಶ್ಯಕತೆಯು ಎದ್ದುತೋರಿ ಜನಸ್ತೋಮಗಳ ರಾಷ್ಟ್ರಾಭ್ಯುದಯಕ್ಕೆ ಸಹಾಯವಾಗುವುದು. ಆದುದರಿಂದ, ಕಾಂಗ್ರೆಸ್ಸು ತನ್ನ ಕಾರ್ಯವಿಧಾನವನ್ನು ಯಶಸ್ವಿಯಾಗಿ ನಿರ್ವಹಿಸುವತ್ತ ತೀವ್ರ ಗಮನ ಹರಿಸುವುದು ಅಗತ್ಯ ಮತ್ತು ಸ್ವತಂತ್ರ ಪಕ್ಷವಾದರೂ ದೇಶದ ಅಭಿವೃದ್ಧಿಯನ್ನು ಹಾರೈಸಿ ರಚನಾತ್ಮಕ ಕಾರ್ಯಕ್ರಮಗಳತ್ತ ಲಕ್ಷ್ಯವಿಡುವುದು ಆವಶ್ಯ.

ಸಿಂಹಳದಲ್ಲಿ ಚುನಾವಣೆ

ಸಿಂಹಳದ ಪ್ರಧಾನಿಯಾಗಿದ್ದ ಭಂಡಾರ ನಾಯಕೆಯವರ ಮರಣಾನಂತರ, ಜೋಪಾಸನಾ ಸರಕಾರದ ಪ್ರಧಾನಿಯಾಗಿದ್ದ ಶ್ರೀ ವಿಜಯಾನಂದ ದಹನಾಯಕೆಯವರೂ ಅವರ ಅನುಚರರೂ ಇತ್ತೀಚೆಗೆ ನಡೆದಿದ್ದ ಚುನಾವಣೆಯಲ್ಲಿ ಪ್ರಚಂಡ ಸೋಲನ್ನುಂಡರು. ಪಾರ್ಲಿಮೆಂಟಿನ ೧೫೭ ಸ್ಥಾನಗಳಲ್ಲಿ ಆರು ಸ್ಥಾನಗಳನ್ನು ನಾಮಕರಣದ ಮೂಲಕ ತುಂಬಿಸಬೇಕಾಗಿದ್ದು ಉಳಿದ ೧೫೧ ಸ್ಥಾನಗಳಲ್ಲಿ ೯೯ ಸ್ಥಾನಗಳಿಗೆ ದಹನಾಯಕೆಯವರ ಲಂಕಾ ಪ್ರಜಾತಂತ್ರವಾದಿ ಪಕ್ಷವು ಹುರಿಯಾಳುಗಳನ್ನು ನಿಲ್ಲಿಸಿದ್ದರೂ ಕೇವಲ ೪ ಸ್ಥಾನಗಳನ್ನಷ್ಟೆ ಗಳಿಸಿದುದಲ್ಲದೆ ೭೯ ಹುರಿಯಾಳುಗಳು ತಮ್ಮ ಇಡುಗಂಟನ್ನೇ ಕಳೆದುಕೊಂಡಿದ್ದು ಶ್ರೀ ದಹನಾಯಕೆಯವರು ಸಿಂಹಳದ ರಾಜಕೀಯ ಕ್ಷೇತ್ರದಲ್ಲಿ ಜೀವಮಾನದಲ್ಲಿಯೇ ಅಪರೀಕ್ಷಿತ ಪರಾಜಯವನ್ನು ಪಡೆದರು. ಹಿಂದೆ ಪ್ರಧಾನಿಯಾಗಿದ್ದ ಡಡ್ಲಿ ಸೇನಾನಾಯಕೆಯವರ ಯುನೈಟೆಡ್ ನೇಶನಲ್ ಪಕ್ಷವು ಪಾರ್ಲಿಮೆಂಟಿನಲ್ಲಿ ಅತ್ಯಧಿಕ ಬಲವನ್ನು ಪಡೆದಿದ್ದು ೫೦ ಸ್ಥಾನಗಳನ್ನು ಗಳಿಸಿದೆ. ಮಾಜಿ ಪ್ರಧಾನಿ ಭಂಡಾರನಾಯಕೆಯವರ ಶ್ರೀಲಂಕಾ ಫ್ರೀಡಂ ಪಕ್ಷವು ೪೬ ಸ್ಥಾನಗಳನ್ನು ಗಿಟ್ಟಿಸಿಕೊಂಡಿದೆ. ಹೀಗೆ ಯಾವುದೇ ಪಕ್ಷವು ಸಂಪೂರ್ಣ ಬಹುಮತವನ್ನು ಪಡೆಯದೆ ಇರುವುದರಿಂದ, ಅಲ್ಲಿ ಶಾಶ್ವತ ಸರಕಾರ ಸ್ಥಾಪನೆಯಾಗುವುದು ಅತೀವ ಪ್ರಯಾಸವೇ ಎನ್ನಬಹುದು. ಆದರೂ ಸದ್ಯ ಯುನೈಟೆಡ್ ನೇಶನಲ್ ಪಕ್ಷದ ನಾಯಕ ಶ್ರೀ ಡಡ್ಲಿ ಸೇನಾನಾಯಕೆಯವರು ಗವರ್ನರ ಜನರಲ ಶ್ರೀ ಗುಣತಿಲಕೆಯವರೊಡನೆ ಮಾತುಕತೆ ನಡೆಸಿ, ಪ್ರಧಾನಿಸ್ಥಾನವನ್ನು ಅಲಂಕರಿಸಿದರು. ಆದರೆ, ಇವರು ಬಹುಮತವನ್ನು ಗಳಿಸುವ ಸಲುವಾಗಿ ಇತರ ಕೆಲವು ಪಕ್ಷಗಳೊಡನೆ ಒಪ್ಪಂದವನ್ನು ಮಾಡಿಕೊಳ್ಳಬೇಕಾದ ಆವಶ್ಯಕತೆಯಿದೆ. ಶ್ರೀ ಸೇನಾನಾಯಕೆಯವರು ಪ್ರಮಾಣ ವಚನವನ್ನು ಸ್ವೀಕರಿಸಿದೊಡನೆಯೇ ಒಂದು ಹೇಳಿಕೆಯನ್ನು ಹೊರಡಿಸಿದ್ದು, ಅದರಲ್ಲಿ ಸಿಂಹಳದಲ್ಲಿರುವ ಭಾರತೀಯರ ಸಮಸ್ಯೆಗಳ ಬಗ್ಗೆ ಭಾರತೀಯ ಪ್ರಧಾನಿ ನೆಹರ ಅವರೊಡನೆ ವಿಚಾರವಿನಿಮಯಮಾಡಿ ಕೋಟೆವಾಲ—ನೆಹರು ಒಪ್ಪಂದವನ್ನು ವ್ಯವಸ್ಥಿತಗೊಳಿಸುವ ಸಾಧ್ಯತೆಗಾಗಿ ಪ್ರಯತ್ನಿಸುವುದಾಗಿಯೂ ಎಸ್ಟೇಟ್‌ಗಳನ್ನು ರಾಷ್ಟ್ರೀಕರಣ ಮಾಡುವುದಕ್ಕೆ ತನ್ನ ಪಕ್ಷವು ವಿರೋಧವಿರುವುದಾಗಿಯೂ ಘೋಷಿಸಿದರು. ಸಿಂಹಳವು ಸ್ವತಂತ್ರವಾದ ಮೇಲೆ ಆರನೆಯ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಸೇನಾನಾಯಕೆಯವರ ಸರಕಾರದ ಸ್ಥಿರತೆಯು ಮಾತ್ರ ಬೆಕ್ಕಿನ ತಲೆಯ ಮೇಲಿನ ದೀಪದಂತಾಗಿದೆ; ಅಷ್ಟೆ.

ಸಂಕ್ಷಿಪ್ತ ಸುದ್ದಿಗಳು

ಸಂದರ್ಶನ

ಚೀನಾದ ಪ್ರಧಾನಿ ಶ್ರೀ ಚೌ ಎನ್ ಲಾಯ್ ಅವರು ಚೀನಾ-ಭಾರತ ಸೀಮಾ ವಿವಾದದ ಬಗ್ಗೆ ಮಾತುಕತೆಯಾಡುವ ಸಲುವಾಗಿ ಹೊಸದಿಲ್ಲಿಗೆ ಎಪ್ರಿಲ್ ತಾ. ೧೯ರಂದು ಬರಲು ಒಪ್ಪಿಕೊಂಡಿರುವರು. ಇವರು ಇಲ್ಲಿ ಎಪ್ರಿಲ್ ೨೫ರ ವರೆಗೆ ಉಳಿದುಕೊಳ್ಳುವ ನಿರೀಕ್ಷೆಯಿದೆ. ಚೀನೀ ಪ್ರಧಾನಿಯವರ ಆಗಮನವನ್ನು ಸಹಿಸದ ಕೆಲವು ಪಕ್ಷಗಳು ಈ ಸಂದರ್ಶನದ ಬಗ್ಗೆ ವಿರೋಧವನ್ನೂ ಪ್ರಕಟಿಸತೊಡಗಿರುವುವು.

ಕೇಂದ್ರದ ಆದೇಶ

ಸ್ಟೇಟ್ ಬೇಂಕ್ ಆಫ್ ಇಂಡಿಯಾದ ನೌಕರರಸಂಪು ಮುಂದುವರಿಯುವುದನ್ನು ಕೇಂದ್ರ ಸರಕಾರವು ನಿಷೇಧಿಸಿದೆ. ಎಲ್ಲ ಬೇಂಕ್ ತಂಟೆಗಳನ್ನು ನಿವಾರಿಸಲು ರಾಷ್ಟ್ರೀಯ ನ್ಯಾಯ ಮಂಡಳವೊಂದನ್ನು ರಚಿಸಿರುವುದರಿಂದ, ಸ್ಟೇಟ್ ಬೇಂಕಿನ ನೌಕರರ ತಂಟೆಯನ್ನೂ ಈ ಮಂಡಳಕ್ಕೆ ಒಪ್ಪಿಸಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ. ಮಂಡಳದ ವರದಿಯು ಬರಲು ಅಧಿಕ ಕಾಲಾವಧಿ ಬೇಕಾಗಿರುವುದರಿಂದ ಮಧ್ಯಾವಧಿ ಪರಿಹಾರ ನೀಡುವ ಭರವಸೆ ಬಂದರೆ, ತಾವು ಸಂಪನ್ನು ನಿಲ್ಲಿಸಲು ಕರೆಯೀವುದಾಗಿ ಸ್ಟೇಟ್ ಬೇಂಕಿನ ನೌಕರರ ಸಂಘದ ಅಧ್ಯಕ್ಷರ ಹೇಳಿಕೆಯಿರುವುದು.

ಕೇರಳದ ವಿದ್ಯಾಕಾಯದೆ

ಕೇರಳದ ಮುಖ್ಯಮಂತ್ರಿ ಶ್ರೀ ಪಟ್ಟಂ ಥಾನು ಪಿಳ್ಳೆಯವರು ನವದೆಹಲಿಯಲ್ಲಿ

(೭ನೇ ಪುಟ ನೋಡಿ)

ಅಲ್ಲಲ್ಲಿಯ ಸುದ್ದಿಸಾರ

ಲಾಯನ್ಸ್ ಕ್ಲಬ್‌ನ ಉದ್ಘಾಟನೆ ಉಡುಪಿಯ ವಿದ್ಯಾವಂತ ಯುವಕರಿಂದ ಸಂಘಟಿಸಲ್ಪಟ್ಟ ಲಾಯನ್ಸ್ ಕ್ಲಬ್ ಎಂಬ ನೂತನ ಕ್ಲಬೊಂದು ತಾ. 22-3-60 ರಂದು ಮುಂಬಾಯಿಯ ಲಾಯನ್ಸ್ ಗವರ್ನರ್ ಪಂಡಿತೆಯವರಿಂದ ಮುಕುಂದ ನಿವಾಸದಲ್ಲಿ ಉದ್ಘಾಟಿಸಲ್ಪಟ್ಟಿತು. ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ರೋಟರಿ ಕ್ಲಬ್ಬಿನ ಪರವಾಗಿ ಅದರ ಅಧ್ಯಕ್ಷ ಡಾ| ಟಿ. ಎಂ. ಎ. ಪೈಗಳು ಶುಭ ಸಂದೇಶ ಭಾಷಣ ಇತ್ತರು. ಕಾರ್ಯದರ್ಶಿ ಶ್ರೀ ಬಿ. ಜಗನ್ನಾಥ ಶೆಟ್ಟಿಯವರು ಧನ್ಯವಾದಗಳನ್ನಿತ್ತರು.

ದ. ಕ. ಜಿಲ್ಲಾ ಕೊಂಗ್ರೆಸ್ ಸಮಿತಿಯ ಮಹಾಸಭೆಯು—ಹೊಸ ಜಿಲ್ಲಾ ಕಾಂಗ್ರೆಸಿನ ಅಧಿಕಾರಿ ವರ್ಗಗಳನ್ನು ಆರಿಸುವ ಮಂಗಳೂರು ಜಿಲ್ಲಾ ಕೊಂಗ್ರೆಸ್ ಕಚೇರಿಯಲ್ಲಿ 27-3-60ನೇ ಆದಿತ್ಯವಾರ ಅಪರಾಹ್ನ ಮೂರು ಗಂಟೆಗೆ ಜರಗಲಿರುವುದು. ಶ್ರೀ ಟಿ. ಎ. ಪೈಗಳೂ ಶ್ರೀ ಎ. ಶಂಕರ ಆಳ್ವರೂ ಅಧ್ಯಕ್ಷ ಪದವಿಗೆ ಉಮೇದ್ವಾರಿಗಳೆಂದು ತಿಳಿದುಬರುತ್ತದೆ.

ಅವಿರೋಧ ಆಯ್ಕೆ— ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಡೈರೆಕ್ಟರರಾಗಿ ಜಿಲ್ಲೆಯ ಕೈಗಾರಿಕಾ ಸೊಸೈಟಿಗಳ ಪರವಾಗಿ ಶ್ರೀ ರೋಕ್ಕಿ ಫೆರ್ನಾಂಡಿಸರು ಅವಿರೋಧ ಆಯ್ಕೆ ಹೊಂದಿರುವರು.

ಚುನಾವಣೆಯ ಫಲಿತಾಂಶ—ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕಿಗೆ ಉಡುಪಿ ತಾಲೂಕಿನ ಕೋಪರೇಟಿವ್ ಸೊಸೈಟಿಗಳ ಪ್ರತಿನಿಧಿಗಳಿಂದ ಡೈರೆಕ್ಟರರಾಗಿ ಆರಿಸಲ್ಪಡಲಿಕ್ಕಿದ್ದ 2 ಸ್ಥಾನಗಳಿಗೆ 6 ಮಂದಿ ಉಮೇದ್ವಾರರು ಸ್ಪರ್ಧಿಸಿದ್ದರು. ಆ ಬಗ್ಗೆ ತಾ. 17-3-60ರಲ್ಲು ಉಡ್ಪಿ ಯೂನಿಯನ್ ಆಫೀಸಿನಲ್ಲಿ ಚುನಾವಣೆಯಾಗಲು ಶ್ರೀಗಳಾದ ಕುರುಕಾಲು ಗಣಪಯ್ಯ ಶೆಟ್ಟರಿಗೆ 40, ವಕೀಲ್ ಪಿ. ವಿ ಆಚಾರ್ಯರಿಗೆ 33, ಡಾ. ಯು. ರುನ್ ಕಲ್ಕೂರರಿಗೆ 26, ಕೆ. ಜನಾರ್ಧನ ಹೆಗ್ಡೆಯವರಿಗೆ 20, ಯಚ್. ಕೆ. ಗಣಪಯ್ಯ ಶೆಟ್ಟರಿಗೆ 15, ಯಂ. ವಾಮನ ಭಟ್ಟರಿಗೆ 7 ಮತಗಳು ದೊರೆತು ಇವರ ಪೈಕಿ ಅತ್ಯಧಿಕ ಮತಗಳನ್ನು ಪಡೆದ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರೂ, ವಕೀಲ್ ಶ್ರೀ ಪಿ. ವಿ. ಆಚಾರ್ಯರೂ ಸೆಂಟ್ರಲ್ ಕೋಪರೇಟಿವ್ ಬೇಂಕಿನ ಡೈರೆಕ್ಟರರಾಗಿ ಆರಿಸಲ್ಪಟ್ಟರು. ಉಡ್ಪಿ ತಾಲೂಕಿನ 86 ಸೊಸೈಟಿಗಳ ಪೈಕಿ, 6 ಸೊಸೈಟಿಗಳಿಂದ ಅಧಿಕೃತ ಮತದಾರರು ಹಾಜರಾಗಿದ್ದು ತಮ್ಮ ಮತಗಳನ್ನಿತ್ತರು. ಈ ಪೈಕಿ 6 ಮತಗಳು ಅಸಿಂಧುವಾಗಿದ್ದವು. 5 ಮಂದಿ ಸಿಂಗಲ್ ಓಟುಗಳನ್ನಿತ್ತಿದ್ದರು.

ಕೃತಜ್ಞತಾಸಮರ್ಪಣೆ

ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕಿಗೆ ಉಡುಪಿ ತಾಲೂಕಿನ ಸಹಕಾರೀ ಸಂಘಗಳಿಂದ ಆರಿಸಲ್ಪಡಲಿಕ್ಕಿದ್ದ 2 ಸ್ಥಾನಗಳಿಗೆ ನಾನು ಕೂಡಾ 6 ಮಂದಿ ಉಮೇದ್ವಾರರಾಗಿದ್ದು, ಇದೇ ತಾ. 17-3-60 ರಲ್ಲು ಉಡುಪಿ ಯೂನಿಯನ್ ಆಫೀಸಿನಲ್ಲಿ ಚುನಾವಣೆಯಾಗಲು ನನಗೆ ಎಲ್ಲರಿಗಿಂತಲೂ ಅಧಿಕ ಮತಗಳನ್ನಿತ್ತು ಸದ್ರಿ ಬೇಂಕಿನ ಡ್ಯಾರೆಕ್ಟರನಾಗಿ ಆರಿಸಿದ ಉಡುಪಿ ತಾಲೂಕಿನ ಸೊಸೈಟಿಗಳ ಪ್ರತಿನಿಧಿಗಳಿಗೂ ಈ ರೀತಿ ಅಧಿಕ ಮತಗಳು ನನಗೆ ದೊರೆಯುವರೆ ಸಹಕರಿಸಿ ಪ್ರಯತ್ನಿಸಿದ ನನ್ನ ಎಲ್ಲಾ ಬಂಧುಮಿತ್ರರಿಗೂ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಸಹಕಾರೀ ಸಂಘಗಳ ಅಭ್ಯುದಯದ ಬಗ್ಗೆ; ಸೆಂಟ್ರಲ್ ಕೋಪರೇಟಿವ್ ಬೇಂಕಿನಿಂದ ದೊರೆಯತಕ್ಕ ವಿವಿಧ ಸೌಕರ್ಯಗಳ ಕುರಿತು ನನ್ನಿಂದ ಸಾಧ್ಯವಾದಷ್ಟು ಸೇವೆಯನ್ನು ಸಲ್ಲಿಸುತ್ತೇನಾಗಿ ಈ ಮೂಲಕ ಆಶ್ವಾಸನೆಯನ್ನು ನೀಡುತ್ತೇನೆ.

ಕುರುಕಾಲು ಗಣಪಯ್ಯ ಶೆಟ್ಟಿ,
ಅಧ್ಯಕ್ಷ,
ಕುರುಕಾಲು ಸಹಕಾರಿ ಸಂಘ.
ಕುಂಜಾರ್‌ಗಿರಿ, 18—3—60.

ನಿಧನ ಪುತ್ತೂರಿನ ಪ್ರಸಿದ್ಧ ವಕೀಲರ ಬ್ಲೊಬ್ಬರಾದ ಶ್ರೀ ಎಂ ಸದಾಶಿವರಾಯರ ಪುತ್ರ ಶ್ರೀ ಎಂ. ರಾಧಾಕೃಷ್ಣರಾಯರು ತಾರುಣ್ಯದಲ್ಲಿಯೆ ಕಳೆದ ಆದಿತ್ಯವಾರ ನಿಧನ ಹೊಂದಿರುವುದು ವಿಷಾದಕರವಿದೆ. ಶ್ರೀಯುತರು ಚಿಕ್ಕಪ್ರಾಯದಲ್ಲಿಯೇ ಮೇಧಾವಿ ವಕೀಲರೆನಿಸಿಕೊಂಡು ಸರ್ವರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದರು.

ಎಂ. ಪಿ. ಸಿ. ಸಿ.ಗೆ ಆಯ್ಕೆ—ದ. ಕ. ಜಿಲ್ಲೆಯಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೆ ೧೪ ಮಂದಿ ಪ್ರತಿನಿಧಿಗಳನ್ನು ಆರಿಸಬೇಕಾಗಿದ್ದು, ಇವರಲ್ಲಿ ಈ ಕೆಳಗಿನ ೧೩ ಮಂದಿ ಅವಿರೋಧವಾಗಿ ಆಯ್ಕೆಹೊಂದಿರುವರು. ಬೈಂದೂರು— ಶ್ರೀ ವ್ಯಾ. ಮಂಜಯ್ಯ ಶೆಟ್ಟಿ, ಕುಂದಾಪುರ— ಶ್ರೀ ಎಸ್. ಎಸ್. ಕೊಳ್ಕೆಬೈಲು; ಬ್ರಹ್ಮಾವರ— ಶ್ರೀ ಎ. ನಾರಾಯಣ ಹೆಗ್ಡೆ; ಉಡುಪಿ— ಶ್ರೀ ಕೆ. ಕೆ. ಸೆಟ್ಟಿ; ಕಾಪು— ಶ್ರೀ ಟಿ ಎ. ಪೈ; ಕಾರ್ಕಳ— ಶ್ರೀ ಬಿ. ಎಸ್. ಭಾಸ್ಕರ ರೈ; ಮೂಡಬಿದ್ರೆ— ಶ್ರೀ ಎಸ್. ಡಿ. ಸಾಮ್ರಾಜ್ಯ; ಸುರತ್ಕಲ್— ಶ್ರೀ ಬಿ ರಾಜೀವ ಭಂಡಾರಿ; ಮಂಗಳೂರು ೧— ಶ್ರೀ ಕೆ. ಸೂರ್ಯನಾರಾಯಣ ಅಡಿಗ; ಮಂಗಳೂರು ೨— ಶ್ರೀ ಎ. ಶಂಕರ ಆಳ್ವ; ಪಾಣೆಮಂಗಳೂರು— ಡಾ. ಕೆ. ನಾಗಪ್ಪ ಆಳ್ವ; ಬೆಳ್ತಂಗಡಿ— ಶ್ರೀ ಯು. ಶ್ರೀನಿವಾಸ ಮಲ್ಯ; ಪುತ್ತೂರು ೧—(ವಿಟ್ಲ) ಶ್ರೀ ಬಿ. ವಿಠಲದಾಸ ಶೆಟ್ಟಿ.

ಪುತ್ತೂರಿನ ೨ನೆ ಸೀಟಿಗೆ ಚುನಾವಣೆ ನಡೆಯಲಿದ್ದು ಶ್ರೀಗಳಾದ ಕೆ. ಜತ್ತಪ್ಪ ರೈ ಮತ್ತು ಎ. ಭೀಮ ಭಟ್ಟರು ಸ್ಪರ್ಧಿಸುತ್ತಿರುವರು.

ಸಾಹಿತ್ಯೋತ್ಸವ— ಉಡುಪಿ ಬೋರ್ಡ್ ಹೈಸ್ಕೂಲಿನ ಸಾಹಿತ್ಯೋತ್ಸವವು ತಾ. 14ರಂದು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ ಮಾಸ್ಟರ್ ಶ್ರೀ ಬೆಳ್ಳೆ ಅನಂತಕೃಷ್ಣ ಸಾಮಕರು ಸ್ವಾಗತ ನೀಡಿದರು. ಕವಿ ಲಕ್ಷ್ಮೀಶ; ಜವಾಹರಲಾಲ ನೆಹರು, ಸುಭಾಷ್ಚಂದ್ರ ಬೋಸ್, ಪಂಡಿತ ತಾರಾನಾಥ, ಶ್ರೀ ಕೆ. ಸಂಜೀವ ಶೆಟ್ಟಿ, ಶ್ರೀ ಕೆ. ಶಿವರಾಮ ಕಾರಂತ ಇವರ ತೈಲಚಿತ್ರಗಳನ್ನು ಅನುಕ್ರಮವಾಗಿ ಶ್ರೀಗಳಾದ ಕೆ. ಸುಬ್ರಾಯ ಆಚಾರ್ಯ, ಯು. ಎಲ್. ಆಚಾರ್ಯ, ಪಿ. ಶಿವಾಜಿ ಶೆಟ್ಟಿ, ಎನ್. ಎಸ್. ನಾಗೇಶ ರಾವ್, ಪಿ. ರವೀಂದ್ರ ನಾಯಕ್, ಕು. ಲೀಲಾ ಭಟ್ ಇವರು ಅನಾವರಣ ಮಾಡಿದರು. ವಿದ್ಯಾರ್ಥಿ ನಾಯಕ ಶ್ರೀ ಶ್ರೀಪತಿ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಡಾ| ಪೈಗಳಿಗೆ ಸತ್ಕಾರ—ತಾ 16ರಲ್ಲಿ ಡಾ. ಟಿ. ಎಂ ಎ. ಪೈಗಳಿಗೆ ಬ್ರಹ್ಮಾವರದಲ್ಲಿ ಸತ್ಕಾರ ಕೂಟವೊಂದು ಶ್ರೀ ಟಿ. ಗೋಪಾಲ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಬಿ. ಪದ್ಮನಾಭ ಪೈಗಳು ಸ್ವಾಗತಿಸಿದ ಮೇಲೆ ಶ್ರೀಗಳಾದ ಕೆ. ಆರ್. ಹಂದೆ, ಬೈಕಾಡಿ ವೆಂಕಟಕೃಷ್ಣ ರಾವ್ ಇವರು ಡಾ. ಪೈಗಳ ಕುರಿತು ಮಾತನಾಡಿದರು. ಡಾ. ಪೈಗಳು ನಮ್ಮ ಜನರು ಶಿಸ್ತಿನಿಂದ ಪ್ರಾಮಾಣಿಕವಾಗಿ ದೇಶಕಲ್ಯಾಣಕ್ಕಾಗಿ ದುಡಿಯಬೇಕೆಂದರು. ಡಾ. ಕೆ. ನಾರಾಯಣ ಪೈಗಳು ವಂದನೆಗಳನ್ನಿತ್ತರು.

ಹಿರಿಯ ಪ್ರಾಥಮಿಕ ಶಾಲೆ ಬೇಕು—ದೇಲಂಪಾಡಿ ಗ್ರಾಮವು ಎರಡೂವರೆ ಸಾವಿರಕ್ಕೂ ಮಿಕ್ಕಿ ಜನಸಂಖ್ಯೆಯಿರುವ ಗ್ರಾಮವಾಗಿದ್ದು ಪ್ರಕೃತ ಮೂರು ಪ್ರಾಥಮಿಕ ಶಾಲೆಗಳು ನಡೆಸಲ್ಪಡುತ್ತಿವೆ. ಈ ಗ್ರಾಮದ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸವೊಂದಲು ಸಮೀಪ ಹಿರಿಯ ಪ್ರಾಥಮಿಕ ಶಾಲೆಗಳಿಲ್ಲದೆ ತೊಂದರೆಯಾಗುತ್ತಿದೆ. ಹತ್ತಿರವಿರುವ ಒಂದೇ ಒಂದು ಶಾಲೆಯೆಂದರೆ ದೇಲಂಪಾಡಿಯಿಂದ ಐದಾರು ಮೈಲು ದೂರವಿರುವ ಪುತ್ತೂರು ತಾಲೂಕಿನ ಪಾಳ್ಯತ್ತಡ್ಕ ಶ್ರೀ ಗಜಾನನಹಾಯರಲಿಮೆಂಟರಿ. ದೇಲಂಪಾಡಿಯಿಂದ ಪಾಳ್ಯತ್ತಡ್ಕಕ್ಕೆ ಹೋಗಲು ಹಳ್ಳಗಳನ್ನು ದಾಟಬೇಕಾಗಿರುವುದರಿಂದಲೂ ಮಕ್ಕಳಿಗೆ ಹೋಗಿಬರಲು ದೂರವಾಗುವುದರಿಂದಲೂ ಅನುವಿಶೇಷ ಪ್ರಯೋಜನವಿಲ್ಲವಾಗಿದೆ. ಬರುವ ವರ್ಷದಿಂದ ಕೇರಳದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು IVನೇ ಕ್ಲಾಸಿನ ವರೆಗೆ ಮಾತ್ರವೆಂದೂ ಕೇಳಿಬರುತ್ತದಾದ್ದರಿಂದ ಈ ಗ್ರಾಮಕ್ಕೊಂದು ಹಿರಿಯ ಪ್ರಾಥಮಿಕ ಶಾಲೆಯು ಅಗತ್ಯವಿದೆ ಎಂದು ಶ್ರೀ ಕೀ. ವ. ಕೇಶವ ಇವರು ಬರೆಯುತ್ತಾರೆ.

ನಿಧಿ ಸಮರ್ಪಣೆ—ಉಡುಪಿ ಸರಕಾರಿ ಬುನಾದಿ ತರಬೇತಿ ಶಾಲೆಯಲ್ಲಿ ಆಕಸ್ಮಿಕವಾಗಿ ಅಪಘಾತಕ್ಕೀಡಾಗಿ ನಿಧನಗೊಂಡಿದ್ದ ಶಾಲಾ ವಿದ್ಯಾರ್ಥಿ ಶ್ರೀ ಎಸ್ ಶ್ರೀಪತಿ ಶೇರ್ವೆಗಾರರವರ ನೊಂದ ಗೌರವಾನ್ವಿತ ಬಡ ಕುಟುಂಬದವರಿಗೆ ಪರಿಹಾರ—ನಿಧಿಯನ್ನು ಅರ್ಪಿಸುವ ಸಮಾರಂಭವು ತಾ. 15ರಂದು ಜರುಗಿತು.

ಉಜಿರೆ ಸರಕಾರಿ ಬುನಾದಿ ತರಬೇತಿ ಶಾಲೆಯವರು ಮಾಡೆಲ್ ಶಾಲಾ ಕೇಂದ್ರದವರು ಹಾಗೂ ಉಡುಪಿ ಬುನಾದಿ ತರಬೇತಿ ಶಾಲೆಯವರಿಂದ ಒಟ್ಟು ಸಂಗ್ರಹಿಸಲ್ಪಟ್ಟ 611-68 ರೂ. ಗಳ ನಿಧಿಯನ್ನು ಶ್ರೀ ಬೈಲೂರ್ ವಾಸುದೇವ ರಾವ್ ರವರ ಅಧ್ಯಕ್ಷತೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಕೇಶವಾಚಾರ್ಯರವರು ಅರ್ಪಿಸಿದರು.

ಹಿಂದೀ ಅಧ್ಯಾಪಕ ಶ್ರೀ ಬಿ. ಎಸ್. ರಾಮರಾವ್‌ರವರಿಂದ ವರದಿವಾಚನವಾದ ನಂತರ ಶ್ರೀಗಳಾದ ಎಂ. ಕೇಶವರಾವ್, ಕೃಷ್ಣಪ್ಪ ಶೆಟ್ಟಿ ಮೊದಲಾದವರು ಮಾತನಾಡಿ ಮೃತರ ಆತ್ಮಕ್ಕೆ ಶಾಂತಿಯನ್ನೂ, ಬಂಧುಗಳಿಗೆ ಉತ್ತಮ ಭವಿಷ್ಯವನ್ನೂ ಕೋರಿದರು. ಅಧ್ಯಕ್ಷರು ಮಾತನಾಡುತ್ತಾ—ಉತ್ತಮ ಗುಣಶಾಲಿಗಳಾದ ತಂದೆಯವರಂತೆಯೇ ಮಗನಿದ್ದನೆಂದೂ ಅಸಹಾಯ ಸಂಸಾರಕ್ಕೆ ಆಧಾರಸ್ತಂಭವಾಗಿದ್ದರೆಂದೂ, ಜೀವಂತವಾಗಿರುತ್ತಿದ್ದರೆ ಆದರ್ಶ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರೆಂದೂ ಹೇಳಿ, ಆತ್ಮಕ್ಕೆ ಶಾಂತಿಯನ್ನು ಕೋರಿದರು.

(೬ನೇ ಪುಟದಿಂದ)

ಸುದ್ದಿಗಾರರೆ ಇಡನೆ ಮಾತಾಡುತ್ತ, ಕೇರಳ ವಿದ್ಯಾ ಮಸೂದೆಯಲ್ಲಿನ ವಿವಾದಾಸ್ಪದ ಅನುಚ್ಛೇದಗಳ ಬಗ್ಗೆ ಸಂಬಂಧಿತರೊಡನೆ ವಿಚಾರವಿನಿಮಯವನ್ನು ಮಾಡಿ ಅವನ್ನು ತಿದ್ದಲಾಗುವುದು ಎಂದೂ ಈ ಬಗ್ಗೆ ಕಮ್ಯುನಿಸ್ಟರು ವಿರೋಧ ಸೂಚಿಸಿದರೂ ತಾವು ಗಮನಿಸುವುದಿಲ್ಲನೆಂದೂ ಹೇಳಿದರು. ಕೇರಳದಲ್ಲಿಯ ಮುಸ್ಲಿಂ ಲೀಗು ಅಷ್ಟು ಗಂಡಾಂತರಕಾರಿಯಲ್ಲವೆಂದೂ ಮಂತ್ರಿಮಂಡಳಿಯಲ್ಲಿ ಒಡಕಿರುವುದಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು.

ಪಂತರ ಮಧ್ಯಸ್ಥಿಕೆ?

ಬೊಂಬಾಯಿ—ಮೈಸೂರ ಗಡಿವಿವಾದದ ಬಗ್ಗೆ ಕೇಂದ್ರ ಗೃಹಮಂತ್ರಿ ಶ್ರೀ ಪಂತರೆದುರು ಮಾತುಕತೆ ನಡೆಯಿತು. ಆದರೆ, ಈ ಮಾತುಕತೆಯಲ್ಲಿ ಯಾವ ಪ್ರಗತಿಯೂ ಕಂಡುಬರಲಿಲ್ಲ. ಮೈಸೂರ ಮುಖ್ಯಮಂತ್ರಿ ಶ್ರೀ ಜತ್ತಿಯವರು ರಾಜ್ಯದ ಗಡಿಗಳಲ್ಲಿ ಮಹತ್ವದ ಬದಲಾವಣೆಯನ್ನು ಮಾಡಲು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರೂ ಸಣ್ಣ ಪುಟ್ಟ ಹೊಂದಾಣಿಕೆಯನ್ನು ಮಾಡಿಕೊಳ್ಳಲು ತಾವು ಸಿದ್ಧರಿರುವರೆಂಬ ಮೊದಲಿನ ನಿಲುಮೆಯನ್ನು ಪುನರುಚ್ಚರಿಸಿದರು. ಈ ಸೀಮಾ ವಿವಾದದ ಬಗ್ಗೆ ತನ್ನ ನಿಲುಮೆಯನ್ನು ತಿಳಿಸಿ ಪಂಡಿತ ಪಂತರ ಕೈಗೆ ಇದನ್ನು ಒಪ್ಪಿಸಿರುವುದಾಗಿ ಬೊಂಬಾಯಿಯ ಮುಖ್ಯಮಂತ್ರಿ ಚವನರೆಂದಿದ್ದಾರೆ.

ಉಚಿತ ಮಾಧ್ಯಮಿಕ ಶಿಕ್ಷಣ

ಮೈಸೂರು ಸರಕಾರವು ೧೯೬೦-೬೧ ನೆಯ ಶೈಕ್ಷಣಿಕ ವರ್ಷದಿಂದ ವಾರ್ಷಿಕ ರೂ. ೧,೨೦೦ಕ್ಕಿಂತ ಕಡಿಮೆ ಆದಾಯವಿರುವ ಎಲ್ಲರ ಮಕ್ಕಳಿಗೂ ಉಚಿತ ಮಾಧ್ಯಮಿಕ ಶಿಕ್ಷಣವನ್ನು ನೀಡುವ ಆಸೇಶವಿತ್ತಿದೆ. ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನೂ ನೀಡಲಾಗುವುದು. ಸರಕಾರದಿಂದ ಸಹಾಯಧನ ಪಡೆಯುವ ಶಾಲೆಗಳಿಗೆ ಇದರಿಂದಾಗುವ ನಷ್ಟವನ್ನು ಸರಕಾರವು ಪರಿಹಾರವಾಗಿ ನೀಡುವುದೆಂದೂ ರಾಜ್ಯದ ವಿವಿಧ ವಿಭಾಗಗಳಲ್ಲಿ ಈಗ ವ್ಯವಹಾರದಲ್ಲಿರುವ ಇತರ ಶುಲ್ಕ ರಿಯಾಯತಿಗಳನ್ನು ೬೦-೬೧ನೆ ಶೈಕ್ಷಣಿಕ ವರ್ಷದಿಂದ ಹಿಂತೆಗೆದುಕೊಳ್ಳಬೇಕಾಗಿಯೂ ಆದೇಶದಲ್ಲಿ ಹೇಳಲಾಗಿದೆ.

ವಿಶ್ವವಿದ್ಯಾಲಯ ಹೊಂದಾಣಿಕೆ

ಮೈಸೂರು ವಿಶ್ವವಿದ್ಯಾನಿಲಯದ ಆಡಳಿತೆಯಲ್ಲಿರುವ ೨೦ ಕಾಲೇಜುಗಳಲ್ಲಿ ಒಂದೊಂದು ಆರ್ಟ್ಸ್, ವಿಜ್ಞಾನ ಮತ್ತು ಇಂಜನಿಯರಿಂಗ್ ಕಾಲೇಜುಗಳನ್ನು ಬಿಟ್ಟು ಉಳಿದ ೧೭ ಕಾಲೇಜುಗಳ ಆಡಳಿತೆಯನ್ನು ಸರಕಾರವು ವಹಿಸಲು ನಿರ್ಧರಿಸಿದೆಯೆಂದು ತಿಳಿಯುತ್ತದೆ. ರಾಜ್ಯದ ಎರಡು ವಿಶ್ವವಿದ್ಯಾಲಯಗಳ ಆಡಳಿತೆ, ಅಭ್ಯಾಸಕ್ರಮ ಮೊದಲಾದುವುಗಳಲ್ಲಿ ಏಕರೂಪತೆಯನ್ನು ತರುವ ಪ್ರಯತ್ನಗಳು ನಡೆಯುತ್ತಿವೆಯೆಂದೂ, ವಿಶ್ವವಿದ್ಯಾನಿಲಯಗಳ ಸೀಮೆಯಲ್ಲೂ ತುಸು ಪರಿವರ್ತನೆಯಾಗುವ ಸಂಭವ ವಿರುವುದೆಂದೂ ತಿಳಿಯುತ್ತದೆ.

ಆರ್ಥಿಕ ಸ್ಥಿತಿಯೇ ಮಾನದಂಡ

ಹಿಂದುಳಿದವರ ಪಟ್ಟಿಯನ್ನು ಸಿದ್ಧಪಡಿಸಲು ನೇಮಿಸಲ್ಪಟ್ಟ ನಾಗನಗೌಡ ಸಮಿತಿಯು ಜಾತಿಯನ್ನು ಮಾನದಂಡವಾಗಿಟ್ಟುಕೊಳ್ಳದೆ ಆರ್ಥಿಕ ಪರಿಸ್ಥಿತಿಯನ್ನು ಆಧಾರವಾಗಿಟ್ಟು ತಯಾರಿಸಬೇಕೆಂದು ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಶ್ರೀ ಎಫ್. ಎಚ್. ಮೊಹಸೀನರು ಹೇಳಿದರು. ವಾರ್ಷಿಕ ಒಂದುಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವವರು ಹಿಂದುಳಿದವರೆಂದು ಘೋಷಿಸಬೇಕೆಂದವರು ಅಭಿಪ್ರಾಯಪಟ್ಟರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O. S. 16/60.

ಶ್ರೀನಿವಾಸ ಉಡ್ಪ —ವಾದಿ.
ಮತ್ತು
ಸಂಣಯ್ಯ ಅಡಿಗ ಕೂಡಾ—ಪ್ರತಿವಾದಿರು.

ಶಿವೊಗ್ಗಾ ಜಿಲ್ಲಾ ಹೊಸನಗರ ತಾಲೂಕು ಹುಮ್ಮ ಹೋಬಳಿ ಕಾರಗಡಿ ಗ್ರಾಮದಲ್ಲಿರುವ ಜಾಂಬಳಿ ನಾಗಪ್ಪ ಅಡಿಗರ ಮಗ ಸಂಣಯ್ಯ ಅಡಿಗ 1 ಇವರ ಮಗ ರಾಮಕೃಷ್ಣ ಅಡಿಗ 1 ಕೂಡಾ ಸದ್ರಿ 2ಜನ ಪ್ರತಿವಾದಿರಿಗೆ ತಿಳಿಸಿದ್ದು.

ನೀವು ಇಬ್ಬರೂ ಸೇರಿ ನಿಮ್ಮಗಳ ಕುಟುಂಬದ ನ್ಯಾಯವಾದ ಪ್ರಯೋಜನ ವ್ಯಗರ್ಜಿನ ಬಗ್ಗೆ ಪ್ರತಿಫಲ ಪಡಕೊಂಡು ವಾದಿಗೆ ತಾರೀಕು 17—5—53ರಲ್ಲು ರೂ. 1000-00 ಕ್ಕೆ ಬರಕೊಟ್ಟ ದಿವಸಂದು ನೋಟಿನ ಪೂರಾ ಅಸಲು ಬಡ್ಡಿ ರೂ. 1090 ಕ್ಕೆ ಆವರು ನಿಮ್ಮ ಮೇಲೆ ಮೇಲಿನ ದಾವಾ ಮಾಡಿರುತ್ತಾರೆ. ವ ಸದ್ರಿ ದಾವೆಯನ್ನು ಅಖೈರ ಫಡಿಚಾ ಬಗ್ಗೆ ತಾ. 4—4—60ಕ್ಕೆ ಇತೋಲಾಗಿಯದೆ. ಆ ಕುರಿತು ಉಜುರಿಸುವುದಿದ್ದರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟ ಸಮಿವೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

A. V. N. Hebbar.
Vakil for Plaintiff.
ಕುಂದಾಪುರ ತಾ. 21—3—60.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಮನೆಮಾತು

ಬೊಂಬಾಯಿಯ ರಾಜ್ಯಪಾಲ—ಶ್ರೀ ಶ್ರೀ ಪ್ರಕಾಶ

ಸಂವಿಧಾನದಲ್ಲಿ ರಾಜ್ಯಪಾಲರಿಗಿತ್ತ ಅಧಿಕಾರವನ್ನು ಪ್ರಪ್ರಥಮವಾಗಿ ಪ್ರಯೋಗಿಸಿದುದರಿಂದ ಇವರ ಜೀವನದಲ್ಲಿ ಕ್ರಾಂತಿಯ ಕಿಡಿಯೊಂದು ಸಿಡಿದಂತಾಯಿತು.

ಅಧಿಕಾರಕ್ಕಿಂತ ಅಧಿಕವಾಗಿ ತನ್ನ ಕರ್ತವ್ಯದತ್ತ ಗಮನಹರಿಸುವ, ಸದ್ಯ ಬೊಂಬಾಯಿಯ ರಾಜ್ಯಪಾಲರಾದ ಶ್ರೀ ಶ್ರೀಪ್ರಕಾಶರು ಇತ್ತೀಚೆಗೆ ಕೊಲೆಯ ಅಪರಾಧದ ಮೇಲೆ ಜೀವಾವಧಿ ಶಿಕ್ಷೆಗೆ ಗುರಿಯಾದ ಭಾರತೀಯ ನೌಕಾ ಸೇನೆಯ ಅಧಿಕಾರಿ ಕಮಾಂಡರ ನಾನಾವತಿಯವರ ಸಂಬಂಧದಲ್ಲಿ ಹಸ್ತಕ್ಷೇಪ ನಡೆಸಿ, ಕೆಲ ದಿನಗಳವರೆಗೆ ಶಿಕ್ಷೆಯನ್ನು ಸ್ಥಗಿತಗೊಳಿಸುವುದು ತನ್ನ ಕರ್ತವ್ಯವೆಂದು ತಿಳಿದು, ಸಂವಿಧಾನದಲ್ಲಿ ತನಗೆ ನೀಡಲಾಗಿರುವ ಅಧಿಕಾರವನ್ನು ಉಪಯೋಗಿಸಿಕೊಂಡೊಡನೆಯೇ ದೇಶವಿಡಿ ಗುಲ್ಲು ಏಳುವುದಕ್ಕೆ ಆರಂಭವಾಯಿತು. ಅನ್ಯರಿಗೆ ಮಾತ್ರವಲ್ಲ ದೇಶದ ಸಂವಿಧಾನದ ಕಾರ್ಯಾನ್ವಯ ಇತಿಹಾಸದಲ್ಲಿಯೇ ಒಂದು ಹೊಸ ಪರಂಪರೆಯನ್ನು ಹಾಕಿಕೊಡುವ ಅವಕಾಶವು ಬಂದೊದಗಿದುದರಿಂದ ಶ್ರೀ ಶ್ರೀಪ್ರಕಾಶರಿಗೇನೇ ಇದೊಂದು ಅಸಾಧಾರಣ ಅನುಭವವೆಂದು ಹೇಳಬಹುದು.

ಶ್ರೀಪ್ರಕಾಶರನ್ನು ತಿಳಿದವರು ಅಸಾಧಾರಣಕಾರ್ಯಗಳನ್ನು ಮಾಡಿ,ಅಸಾಮಾನ್ಯ ಜನಪ್ರಿಯತೆಯನ್ನು ಪಡೆಯುವ ಸ್ವಭಾವ ಅವರದಲ್ಲವೆಂದು ಕಂಡುಕೊಂಡಿದಾರೆ. ದೇಶದ ರಾಜಕಾರಣ ನೇತಾರರ ಸಾಲಿನಲ್ಲಿ ಶ್ರೀ ಪ್ರಕಾಶರು ಗಣಿಸಲ್ಪಡುವವರಾದರೂ, ರಾಜಕೀಯ ನಾಯಕರಲ್ಲಿರಬೇಕಾದ ಸಾಧಾರಣ ವ್ಯಕ್ತಿಗಳನ್ನು ಅರಿವಿಲ್ಲದಂತೆ ಆಕರ್ಷಿಸುವ ಒಂದು ಗುಣ ಅವರಲ್ಲಿಲ್ಲ. ಶ್ರೀ ಪ್ರಕಾಶರು ಪ್ರಧಾನ ಮಂತ್ರಿ ನೆಹರು ಅವರ ನೆಚ್ಚಿನ ಸ್ನೇಹಿತರು. ಭಾರತೀಯ ಸ್ವಾತಂತ್ರ್ಯಾಂದೋಲನದಲ್ಲಿ ಇವರು ಭಾಗವಹಿಸಿದ್ದರು. ಆದರೆ, ಸ್ಫೂರ್ತಿಯುತ ಭಾಷಣಗಳನ್ನು ಮಾಡಿ, ಆಂದೋಲನಕಾರರಲ್ಲಿ ಉತ್ಸಾಹವನ್ನು ಹುರಿದುಂಬಿಸುವ ಕಾರ್ಯವು ಅವರಿಂದಾಗಲಿಲ್ಲ. ಕೆಲವೊಮ್ಮೆ ಕಾಣುವಾಗ, ಏನೋ ಒಂದು ವಿಚಿತ್ರ ಸನ್ನಿವೇಶದಲ್ಲಿ ಅವರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರು ಎಂದು ಭಾಸವಾಗುತ್ತದೆ. ಏಕೆಂದರೆ, ಅವರಲ್ಲಿ ರಾಜನೀತಿಗಿಂತಲೂ ಸಮಾಜನೀತಿಯು ಬಹಳ ಪರಿಣಾಮ ಮಾಡಿದೆ.

ರಾಜಕೀಯ ಆಂದೋಲನ ವೇಳೆಯಲ್ಲಿಯೂ ಶ್ರೀಪ್ರಕಾಶರು ತುಂಬ ಬರೆಯುತ್ತಿದ್ದರು. ಆದರೆ, ಅವರ ಲೇಖನಗಳಲ್ಲಿ ರಾಜನೀತಿಗಿಂತ ಸಮಾಜನೀತಿಯೇ ಪ್ರಾಧಾನ್ಯ ಪಡೆಯುತಿತ್ತು. ಅವರು ಆಡುತಿದ್ದುದೂ ಹಾಗೆಯೇ. ಭಾರತವು ಸ್ವತಂತ್ರವಾಗುವುದಕ್ಕೆ ಮೊದಲೇ ಅವರು ಸ್ವತಂತ್ರ ಭಾರತದಲ್ಲಿ ಉತ್ತಮ ನಾಗರಿಕತೆಯನ್ನು ಪ್ರಚಾರಿಸುವ ಆವಶ್ಯಕತೆಯನ್ನು ಪ್ರತಿಪಾದಿಸ ತೊಡಗಿದ್ದರು. ಉಚ್ಚ ನಾಗರಿಕತೆಗಿಂತ ಮೇಲಿನದನ್ನಿಲ್ಲವೆಂದವರ ಅಭಿಮತ. ಅವರು ಯಾವಾಗಲೂ ಶಾಂತಿಮಯ ಮತ್ತು ಸಂಯಮಿತ ಜೀವನ ನಡೆಸುವ ನಾಗರಿಕತೆಯ ಕನಸನ್ನೇ ಕಾಣುತಿದ್ದುದರಿಂದ, ಅಶಾಂತಿಮಯ ಕಾರ್ಯಗಳಲ್ಲಿ ಅಭಿರುಚಿಹೀನರಾಗಿದ್ದರು. ಅಸಾಧಾರಣ ಪ್ರವೃತ್ತಿಯು ಅವರನ್ನು ಎಂದೂ ಆಕರ್ಷಿಸಲಿಲ್ಲ; ಆದುದರಿಂದಲೇ ತಮ್ಮ ರಾಜಕೀಯ ಜೀವನದಲ್ಲಿ ಅಸಾಧಾರಣ ಕಾರ್ಯಗಳನ್ನು ಮಾಡಿ ಪ್ರಶಂಸೆಯನ್ನಾಗಲೀ ಕೀರ್ತಿಯನ್ನಾಗಲೀ ಅವರು ಪಡೆಯಲಿಲ್ಲ.

ಕೇಂಬ್ರಿಜ್‌ನಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಶ್ರೀ ಶ್ರೀ ಪ್ರಕಾಶರು ಆಂಗ್ಲೇಯರಲ್ಲಿರುವ ಉಚ್ಚ ನಾಗರಿಕರಲ್ಲಿ ಆವಶ್ಯಕವಾಗಿರಬೇಕಾದ ಎಲ್ಲ ಗುಣಗಳನ್ನೂ ಸ್ವೀಕರಿಸಿದರು. ಸಮಯದ ಬೆಲೆಯನ್ನವರು ಸರಿಯಾಗಿ ಅರಿತಿದ್ದಾರೆ. ತನ್ನ ಜೀವನದಲ್ಲಿ ಪಾಶ್ಚಾತ್ಯ ಮುದ್ರೆಯನ್ನು ಮಾತ್ರ ಅವರು ಒತ್ತಿಸಿಕೊಂಡಿಲ್ಲ. ನಿಜವಾದ ಭಾರತೀಯರಂತೆ ಕುಟುಂಬ ಮತ್ತು ಮನೆಗಳನ್ನು ಸಮಾಜದ ಪಂಚಾಂಗವೆಂದವರು ತಿಳಿಯುತ್ತಾರೆ. "ಸಫಲ ಗೃಹಸ್ಥನಾಗುವುದು ಸಫಲ ರಾಷ್ಟ್ರಪತಿಯಾಗುವುದಕ್ಕಿಂತ ಕಠಿನ" ಎಂದವರು ಹೇಳುತ್ತಾರೆ. ಸಾಮಾಜಿಕ ವಿಚಾರಗಳಲ್ಲಿ ಅವರ ಮಾರ್ಗವು ಎಂದೂ ಕ್ರಾಂತಿಕಾರಿಯೆನಿಸಿರುವುದಿಲ್ಲ.

ಶ್ರೀ ಶ್ರೀಪ್ರಕಾಶರು

ವೈಚಾರಿಕ ಸಂತುಲನೆ ಮತ್ತು ಸಂಯಮಗಳು ಶ್ರೀ ಪ್ರಕಾಶರ ಸರ್ವಮಾನ್ಯ ವೈಶಿಷ್ಟ್ಯಗಳಾಗಿವೆ. ದೇಶದ ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಇವರ ... ನಿಕಟ ಸ್ನೇಹಿತರಿದ್ದಾರೆ. ಈ ಗುಣಗಳಿಂದಲೇ ಮೊದಲವರು ಪಾಕಿಸ್ತಾನದಲ್ಲಿ ಭಾರತದ ಪ್ರತಿನಿಧಿಯಾಗಿ ನಿಯುಕ್ತರಾದರು. ವಿಭಿನ್ನ ವಿಚಾರಧಾರೆಗಳ ನಡುವಣ ಘರ್ಷಣೆಯನ್ನು ನೀಗಿಸುವ ಅವರ ದಕ್ಷತೆಯಿಂದಾಗಿ ಮದ್ರಾಸ ಮತ್ತು ಅನಂತರ ದ್ವಿಭಾಷಾ ರಾಜ್ಯ ಬೊಂಬಾಯಿಯ ರಾಜ್ಯಪಾಲರಾಗಿ ನೇಮಿತರಾಗಿದ್ದರು.

ರಾಜ್ಯಪಾಲರಾಗಿ ಶ್ರೀ ಪ್ರಕಾಶರು ತಮ್ಮ ಕಾರ್ಯಸಾಧನೆಯಲ್ಲಿ ಸಫಲರಾಗಿದ್ದಾರೆ. ಬೊಂಬಾಯಿಯ ಶ್ರೀ ಪ್ರಕಾಶರನ್ನು ಎಂದಿಗೂ ಮರೆಯಲಾರದು. ವ್ಯಾಯಾಮವಾಡುವ ಅಭ್ಯಾಸವುಳ್ಳ ಅವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿಯೂ ಕಾರ್ಯ ಕುಶಲರಾಗಿದ್ದಾರೆ. ಇವರ ಜನ್ಮಸ್ಥಾನ ಕಾಶಿ. ರಾಜಕಾರಣಕ್ಕೆ ಇಳಿಯುವುದಕ್ಕೆ ಮೊದಲು ಇವರು ಪತ್ರಿಕಾ ಪ್ರಪಂಚ ಮತ್ತು ಶಿಕ್ಷಣ ಕ್ಷೇತ್ರಗಳಿಗೂ ತಮ್ಮ ಸೇವೆಯನ್ನು ಸಲ್ಲಿಸಿದ್ದರು. ೩೪ ರಿಂದ ೪೫ರ ವರೆಗೆ ಇವರು ಕೇಂದ್ರೀಯ ಎಸೆಂಬ್ಲಿಯ ಸದಸ್ಯರಾಗಿದ್ದರು. ಬೇರಿಸ್ಟರರಾದ ಶ್ರೀ ಪ್ರಕಾಶರಿಗೂ ಕಾಂಗ್ರೆಸ್ಸಿಗೂ ೧೯೧೭ರಿಂದ ಅನತಿದೂರದ ಸಂಬಂಧವಿದೆ.

ಇಂದೀಗ ರಾಜ್ಯಪಾಲರಾಗಿ ಸಂವಿಧಾನದಲ್ಲಿ ತನಗಿತ್ತ ಅಧಿಕಾರವನ್ನು ಉಪಯೋಗಿಸುವ ಸಾಹಸವನ್ನು ಮಾಡಿದುದರಿಂದ (ಇದಕ್ಕೆ ಕೇಂದ್ರದ ಸಲಹೆಯು ಕಾರಣವಾಗಿದ್ದರೂ ಸಾಂವಿಧಾನಿಕವಾಗಿ ಇವರೇ ಹೊಣೆಗಾರರು) ಆಕಸ್ಮಿಕವಾಗಿ ಇವರ ಹೆಸರು ಬಹಳಷ್ಟು ಕೇಳಿಬರತೊಡಗಿದೆ. ಶ್ರೀ ಶ್ರೀಪ್ರಕಾಶರ ಶಾಂತಿಮಯ ಜೀವನದಲ್ಲಿ ಕ್ರಾಂತಿಯ ಕಿಡಿಯೊಂದು ಹಾರಿದಂತಾಯಿತು.

ಭಾರತದಲ್ಲಿ ವಿದ್ಯುದುತ್ಪಾದನೆ



ಜಲವಿದ್ಯುತ್ತನ್ನು ಉತ್ಪಾದಿಸುವ ಕಾರ್ಯಕ್ರಮವು ಭಾರತದಲ್ಲಿ ಸ್ವಾತಂತ್ರ್ಯಪ್ರಾಪ್ತಿಯಾದನಂತರ ಮಾತ್ರವೇ ಸಾಧ್ಯವಾಯಿತು. ಆದರೆ, ನಮ್ಮ ವಿದೇಶ ವಿನಿಮಯವು ಸೀಮಿತವಾಗಿರುವುದರಿಂದ, ನಾವೆಣಿಸಿದಷ್ಟು ಶೀಘ್ರದಲ್ಲಿ ಪ್ರಗತಿ ಸಾಧಿಸುವುದು ಅಸಾಧ್ಯವಾಗಿತ್ತು. ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಾರಂಭಕಾಲದಲ್ಲಿ ೨.೩ ಮಿಲಿಯ ಕಿಲೋವಾಟ್ ವಿದ್ಯುತ್ತು ದೊರೆಯುತಿತ್ತು. ಎರಡನೆಯ ಯೋಜನೆಯ ಮೊದಲಿನದು ೩.೪ ಮಿಲಿಯ ಕಿಲೋವಾಟ್‌ಗಳಿಗೇರಿತು. ಎರಡನೆ ಯೋಜನೆಯಲ್ಲಿ ೩.೪ ಮಿಲಿಯ ಕಿಲೊವಾಟ್‌ಗಳಷ್ಟನ್ನು ಇದಕ್ಕೆ ಸೇರಿಸಲಾಗುವುದು. ಇನ್ನು ಮೂರನೆಯ ಯೋಜನೆಯಲ್ಲಿ ಮತ್ತೂ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿಯಾಗುವ ನಿರೀಕ್ಷೆಯಿದೆ. ಡಿ. ವಿ. ಸಿ., ಹಿರಾಕುಡ್, ಭಾಕ್ರ-ನಂಗಲ್, ಕೊಯನಾ, ಚಂಬಲ್, ನಾಗಾರ್ಜುನಸಾಗರ, ರಿಹಂದ, ಶರಾವತಿ ಮೊದಲಾದ ದೊಡ್ಡದೊಡ್ಡ ಯೋಜನೆಗಳು ಜಲವಿದ್ಯುತ್ ತಯಾರಿಸಲು ಉದ್ಯುಕ್ತವಾಗಿವೆ. ಇನ್ನು ಕೆಲವು ಆಗಲಿವೆ. ಮುಚುಕುಂದ, ಮೋಯಾರ, ಬೊಕಾರೊ ಪತ್ರಿಯೋಜನೆಗಳು ಚಿಕ್ಕವಾಗಿದ್ದು ಈಗಾಗಲೇ ಕಾರ್ಯ ಕಾರಿಗೊಂಡಿವೆ.

ಈ ಚಿತ್ರದಲ್ಲಿ ಬೊಕಾರೊ ಥರ್ಮಲ್ ವಿದ್ಯುತ್ ಕೇಂದ್ರದ ಸಾಮಾನ್ಯ ದೃಶ್ಯವೊಂದನ್ನು ನೀವು ಕಾಣುವಿರಿ.

ಆಧುನಿಕಕಾಲದ ಬಲಭೀಮನೆನಿಸುವ ಈ ವಿದ್ಯುತ್ ಶಕ್ತಿ ದೇಶದ ಪುನಾರಚನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಎಂದು ಎಲ್ಲರೂ ತಿಳಿದಿರುವರು.

BUY
ADVERTISED GOODS!

ನಮ್ಮ ಭಾರತ

ಮಲ್ಲಿಗೆಗಿಂತ ಅಣಬೆಗೆ ಪ್ರಾಶಸ್ತ್ಯ

ಭಾರತೀಯ ಅರ್ಥಶಾಸ್ತ್ರಜ್ಞರ ಬಗ್ಗೆ ಬ್ರಿಟಿಷ ಅರ್ಥಶಾಸ್ತ್ರಜ್ಞೆಯ ಅಭಿಪ್ರಾಯ.

"ನಮ್ಮ ಎಲ್ಲ ಅರ್ಥಶಾಸ್ತ್ರಜ್ಞರೂ ತಮ್ಮ ಉದ್ಯೋಗದಿಂದ ಹೊರನಡೆದರೆ, ದೇಶಕ್ಕೆ ಏನೂ ಆಘಾತ ಸಂಭವಿಸಲಾರದು."

ಇದು ಒರ್ವ ಸಾಮಾನ್ಯನೆಂಟ ಮಾತಲ್ಲ; ಪ್ರಸಿದ್ಧ ಅರ್ಥಶಾಸ್ತ್ರಜ್ಞನ ಮುಖದಿಂದಲೇ ಹೊರಬಂದುದು. "ನಾನಾದರೂ ಈ ಉದ್ಯೋಗ ತ್ಯಜಿಸಿದರೆ, ಒಂದು ಪೆಟ್ರೋಲ್ ಪಂಪನ್ನು ತೆರೆದು ಇದಕ್ಕಿಂತ ವಿಶ್ವಾಸಾರ್ಹ ವ್ಯಾಪಾರವನ್ನು ತೊಡಗುವೆ" ಎಂದಾತ ಮುಂದುವರಿಸಿ ಹೇಳಿದ್ದಾನೆ.

ದಶಮಾನ ವಿಜ್ಞಾನವನ್ನು ಶಾರ್ಲಿಲೆಯು ವ್ಯವಹೃತಗೊಳಿಸುವುದಕ್ಕೂ ಮೊದಲು ಅರ್ಥಶಾಸ್ತ್ರಜ್ಞರು ಟೀಕೆ ಟಿಪ್ಪಣಿಗಳ ಆಟವಾಡುತಿದ್ದರು. ಆದರೆ, ಇವರಲ್ಲಿ "ನಾಯಿಯು ನಾಯಿಯನ್ನು ತಿನ್ನುವುದಿಲ್ಲ" ಎಂಬ ಇನ್ನೊಂದು ಉದ್ಯೋಗಕ್ಕೆ ಸಂಬಂಧಿಸಿದ ನಿಯಮವನ್ನು ಮೀರಿದವರು ಮಾತ್ರ ವಿರಳ.

ಭಾರತವು ಪ್ರಪಂಚದಲ್ಲೆಲ್ಲಾ ಅಭಿವೃದ್ಧ ಅರ್ಥಶಾಸ್ತ್ರಜ್ಞರಿಗೆ ಫಲಭರಿತ ಪ್ರಯೋಗಶಾಲೆಯೆಂಬ ರೂಪಕ್ಕೆ ಬರುವಾಗ,ನಮ್ಮವರಿಂದ ಏನಾದರೂ ಸೈದ್ಧಾಂತಿಕ ನಿಯಮಗಳು ಉತ್ಪಾದಿತವಾಗಿದ್ದುವೇ ಎಂಬುದು ಸಂದೇಹಾಸ್ಪದ. ಅವಶ್ಯಕ ಪತ್ರಗಳೆಲ್ಲಾ ಪ್ರಕಟಗೊಂಡುವೇನೋ ನಿಜವೇ. ಆದರೆ, ಈ ದತ್ತಾಂಶಗಳಿಂದ ಸಿದ್ಧಾಂತ ರೂಪಿಸುವವನು ಸಾಮಾನ್ಯವಾಗಿ ಒಬ್ಬ ವಿದೇಶೀಯ. ಈ ವಿದೇಶೀಯ ತಜ್ಞರನ್ನು ನಾವು ಆದರಿಸುತ್ತೇವೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳ ಜನರನ್ನು ಒಂದೇ ಸಮವಾಗಿ ಗೌರವಿಸುತ್ತೇವೆ ಎಂಬ ಅಭಿಮಾನವನ್ನೂ ಪಟ್ಟುಕೊಳ್ಳುತ್ತೇವೆ. ನಮ್ಮ ಕೆಲವಾದರೂ ಅರ್ಥಶಾಸ್ತ್ರಜ್ಞರ ವೈಯಕ್ತಿಕ ಪ್ರತಿಭೆಯನ್ನು ನಾವು ಎಂದಿಗೂ ಅಲ್ಲಗಳೆಯುವುದಸಾಧ್ಯ. ಆದರೆ, ನಮ್ಮ ಅರ್ಥಶಾಸ್ತ್ರಜ್ಞರು ತಮಗೆ ದೊರೆತ ಅವಕಾಶವನ್ನು ಸಂಪೂರ್ಣ ಯಶಸ್ವಿಯಾಗಿ ಬಳಸಿಕೊಂಡರೆಂದು ಹೇಳಬರುವುದಿಲ್ಲ.

ನಮ್ಮ ಅರ್ಥಶಾಸ್ತ್ರಜ್ಞರಲ್ಲಿ ಮೂಲತಃ ಏನಾದರೂ ಕೊರತೆಯಿರುವುದೆ? ಇತ್ತೀಚಿಗೆ ಬ್ರಿಟಿಷ ಅರ್ಥಶಾಸ್ತ್ರಜ್ಞೆಯಾದ ಶ್ರೀಮತಿ ಜೇನ್ ರಾಬಿನ್ಸನ್‌ರವರು ಬರೆದ ಒಂದು ಲೇಖನವು ಈ ಪ್ರಶ್ನೆಗೆ ಉತ್ತರವನ್ನು ಹೇಳಲು ನಮಗೆ ಸಹಾಯಕವಾಗುವುದು.

"ಭಾರತದ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆಗಾಗಿ ಆರಿಸಲ್ಪಟ್ಟ ಪುಸ್ತಕಗಳು ಮತ್ತು ವಿಷಯಗಳು ಇಗ್ಲಿಷ್ ಅಧ್ಯಾಪನದ ಮುದ್ರೆಯನ್ನೊಳಗೊಂಡಿವೆ." (ಭಾರತದ ಕಲ್ಯಾಣ ರಾಷ್ಟ್ರದ ಯಂತ್ರ ಸಾಮಗ್ರಿಗಳು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನಿಂದ ತಯಾರಿಸಲ್ಪಟ್ಟವು ಎಂದೊಬ್ಬರು ಅಂದಿದ್ದರು.) ಈ ಬ್ರಿಟಿಷ ಮೂಲವು ಉತ್ತಮತೆಗಿಂತಲೂ ಹಾನಿಯನ್ನೇ ಅಧಿಕಮಾಡುವುದೇ ಎಂದು ಶ್ರೀಮತಿ ರಾಬಿನ್ಸನರು ಆಶ್ಚರ್ಯಪಡುತ್ತಾರೆ.

ಬ್ರಿಟಿಷ ಅರ್ಥಶಾಸ್ತ್ರ ಅಧ್ಯಾಪನದ ಕೇಂದ್ರಗಳ ಪ್ರಣಾಳಿಯು ಭಾರತದ ನೈಜತೆಯಿಂದ ಎಷ್ಟು ದೂರವಿದೆಯೆಂದಾಕೆ ಎತ್ತಿ ತೋರಿಸುತ್ತಾರೆ. ಇವರ ಮೇಲಿನ ದೃಷ್ಟಿಗಿಂತಲೂ ಪರೀಕ್ಷಾಪದ್ಧತಿಯ ಬಗ್ಗೆ ಆಕೆಯ ದೃಷ್ಟಿಕೋಣ ಬಹಳ ರಮ್ಯವಾದುದು.

ಅರ್ಥಶಾಸ್ತ್ರಜ್ಞೆಯೂ ಅಧ್ಯಾಪಿಕೆಯೂ ಆಗಿರುವ ಅನುಭವದಿಂದ ಆಕೆ ಈ ರೀತಿ ಹೇಳುತ್ತಾಳೆ: "ಹೆಚ್ಚಿನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮತ್ತು ಪದವೀಧರರಾಗುವ ಗುರಿಯಿಂದಲೇ ಓದನ್ನು ಮುಂದುವರಿಸುತ್ತಾರೆ. (ಇದೇನೂ ನೈಸರ್ಗಿಕ ಪ್ರತಿಭೆಯನ್ನು ಕಡೆಗಣಿಸಿದಂತಲ್ಲ. ಅಭ್ಯಾಸ ಮತ್ತು ಪರಿಸ್ಥಿತಿಯ ದೃಷ್ಟಿಯಿಂದ ಬರೆದುದು. ನೈಸರ್ಗಿಕ ಪ್ರತಿಭೆಯಿರುವವರು ಇದರಿಂದ ದೂರವಿಂಬಹುದು. ಅಲ್ಪ ಬುದ್ಧಿವಂತರು ತುಸು ಗಂಭೀರರಾಗಬಹುದು.) ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವವರು "ನಿರೀಕ್ಷಕ"ರೆಂದು ಹೇಳುವ ಉಪಾಯವನ್ನು ಕಲಿಯುತ್ತಾರೆ. ಅವರು ಏನನ್ನುತ್ತಾರೆಂದು ಅವರೊಡನೆಯೇ ಕೇಳಬಾರದು (ಏಕೆಂದರೆ, ಅದು ಕೀಟಲೆ ತರುವಂತಹುದು ಮತ್ತಿದರಿಂದ ದೊರೆವ ಅಂಕಗಳೂ ಕಡಿಮೆಯಾದಾವು). ಯಾವುದೋ ಒಂದು ಸೂತ್ರವನ್ನು ಗಿಳಿಪಾಠ ಮಾಡಿಕೊಂಡಿರುತ್ತಾರೆ. ಇದು ಪ್ರತಿ ಪ್ರಶ್ನೆಗೂ ಉತ್ತರವೇ ಎಂಬಷ್ಟು ಆಸಕ್ತರಾಗುತ್ತಾರೆ. ಭಾರತದಲ್ಲಿ ಮುಖ್ಯವಾಗಿ ಶಬ್ದ ಸಾಮರ್ಥ್ಯದಲ್ಲಿ ವಿಶ್ವಾಸವಿರುವಲ್ಲಿ, ಇದು ಸ್ವಾಭಾವಿಕವಿರುತ್ತದೆ. ಪರೀಕ್ಷಾ ಉತ್ತೀರ್ಣರು ಉತ್ತಮರಾದರೆ ಮುಂದೆ, ಪರೀಕ್ಷಕರೂ ಆಗಬಲ್ಲರು. ಅಷ್ಟರಲ್ಲಿ ಅವರು ಎದುರಿಸಬೇಕಾದ ಸಂದೇಹಗಳೆಲ್ಲವನ್ನೂ ಕಳೆದುಕೊಂಡಿರುತ್ತಾರೆ.

ವಿದ್ಯೆಯೆಂದರೆ ಇದೇ ಎಂದವರು ದೃಢನಿಶ್ಚಯ ಮಾಡಿಕೊಂಡಿರುತ್ತಾರೆ. ಹೀಗೆಯೇ ಈ ಪದ್ಧತಿಯು ತಾನಾಗಿಯೇ ಬೆಳೆದು ಬರುತ್ತದೆ."

ಆಲೋಚನೀಯ ವಾಕ್ಯಗಳಿವು. ಒಬ್ಬ ನಿಜವಾದ ಅಧ್ಯಾಪಕನಷ್ಟೇ ಅಧ್ಯಯನ ಎಂದರೆ ಆಚಾರ ಗುಣವೆಂದೂ ಕೇವಲ ಪ್ರತಿಭೆ ಮಾತ್ರವಲ್ಲವೆಂದೂ ಹೇಳಬಲ್ಲ.

ನಮ್ಮ ದೇಶದ ತೊಂದರೆಯೆಂದರೆ, ಆಸಕ್ತಿಗಿಂತ ಪ್ರತಿಭೆಗೆ ಮನ್ನಣೆ; ಆಳಕ್ಕಿಂತ ಒಣಹೆಮ್ಮೆಗೆಕೊಡುವ ಗೌರವ ಎಂದು ಹೇಳಬಹುದು. —ಯೋಜನಾ.

ತಾಮ್ರದ ತಗಡಿಗಾಗಿ ಹೊಸಬಗೆಯ ಮಾದರಿಯ ಡಿಸ್ಕನು ನಿರ್ಮಿತವಾಗುತ್ತದೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 12/1960

1. ಅಂಜಲಿನಾ ಕೋಸ್ತಾ ಬ್ಯಾ ಲೋರೆಸ್ ಮಿನೇಜಸರ ವಿಧವೆ:—

2. ಮಿಂಗೆಲ್ ಮಿನೇಜಸ್. 3. ಮೌರಿಸ್ ಮಿನೇಜಸ್. 4. ಸಾಲ್ವದೋರ್ ಮಿನೇಜಸ್ 5. ಫ್ಲೋರಿನ್ ಬ್ಯಾ ಕೂಡಾ ಲೋರೆಸ್ ಮಿನೇಜಸರ ಮಕ್ಕಳು.

6. ಸೆವೆರಿನ್ ಗೋಮ್ಸ್ ಬ್ಯಾ. ಮೊಜೆಪಿನಾ ಬ್ಯಾ ಮಗಳು.

1 ರಿಂದ 4ನೇ ವರೇಗಿನ ಅರ್ಜಿದಾರರು ಕಾರ್ಕಳ ತಾಲೂಕು ಕಲ್ಲ ಬೆಟ್ಟು ಗ್ರಾಮದಲ್ಲಿಯೂ, 5ನೇ ಅರ್ಜಿದಾರಳು ಹೊಸಬೆಟ್ಟು ಗ್ರಾಮದಲ್ಲಿಯೂ 6ನೇ ಅರ್ಜಿದಾರಳು ಇರುವೈಲು ಗ್ರಾಮದಲ್ಲಿರುವವರು-ಅರ್ಜಿದಾರರು.

1ನೇ ಅರ್ಜಿದಾರಳ ಗಂಡ, 2ರಿಂದ 5ನೇ ವರೇಗಿನ ಅರ್ಜಿದಾರರ ತಂದೆ, ವ 6ನೇ ಅರ್ಜಿದಾರಳ ಅಜ್ಜ ಮೃತಪಟ್ಟ ಲೋರೆಸ್ ಮಿನೇಜಸರಿಗೆ ಈ ಕೋರ್ಟ S. C. S. 91/1959ನೇ ಡಿಕ್ರಿ ಪ್ರಕಾರ ಬರತಕ್ಕ ಅಸ್ಲು ಬಡ್ಡಿ ವ, ಕೋರ್ಟು ಖರ್ಚು ಕೂಡಾ ರೂ. 193.18ನ್ನು ವಸೂಲು ಪಡಿಯುವರೆ ಅರ್ಜಿದಾರರ ಬಗ್ಗೆ 2ನೇ ಅರ್ಜಿದಾರನ ಹೆಸರಿಗೆ ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯ ನೋಟೀಸಿನ ಬಗ್ಗೆ ತಾರೀಕು 7-4-1960ಕ್ಕೆ ಇಟ್ಟಿರುವುದರಿಂದ ಅಕುರಿತು ಯಾರಿಗಾದರೂ ಆಕ್ಷೇಪ ಇದ್ದಲ್ಲಿ ಸದ್ರಿ ತಾರೀಕಿನಲ್ಲಿ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿಯಲ್ಲಿ ಕೇಳಿದಂತೆ 2ನೇ ಅರ್ಜಿದಾರನ ಹೆಸರಿಗೆ ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಲ್ಪಡುವುದು ಎಂತ ಈ ಮೂಲಕ ಕೋರ್ಟಿನ ಹುಕುಂ ಪ್ರಕಾರ ಪ್ರಕಟಿಸಿಯದೆ.

Baikadi Vasudeva Rao.
Advocate for Petitioners.
Karkal. 17—3—60.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಲು ವ ಬಡ್ಡಿಯನ್ನು ಈವರೆಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು, ಕೆಲವರು ಮೃತಪಟ್ಟಿರುವರೆಂಬುದಾಗಿಯೂ, ಕೆಲವರು ವಾಸಸ್ಥಳದಲ್ಲಿ ಇಲ್ಲವೆಂಬುದಾಗಿಯೂ ನಮಗೇನೇ ವಾಪಾಸು ಬಂದಿರುವುದರಿಂದ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 31—3—1960ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31—12—59ರ ವರೆಗೆ ಬಡ್ಡಿ ಸಹಿತ ಮೊಬಲಗು
203/57	ಶ್ರೀ ಸದಾಶಿವ ಶೆಟ್ಟಿ, ಅಚ್ಚು ಸೆಟ್ರ ಮಗ, C/o ಯುಜ್. ಟಿ. ಕೋ. ಲಿಮಿಟೆಡ್, ಕಾರ್ಕಳ.	69=55
845/57	ಶ್ರೀ ಕೆ. ದರ್ಮರಾಜ ಪಡಿವಾಳ, ಸಿದ್ದಪ್ಪ ಪಡಿವಾಳರ ಮಗ, ಹೊಸಮನೆ, ಕೆರ್ವಾಸೆ ಗ್ರಾಮ, ಪೋಸ್ಟ್ ನೂರ.	7=88
89/58	— do — — do —	245=11
270/58	— do — — do —	88=37
447/58	— do — — do —	293=57
936/57	ಶ್ರೀ ನಾರಾಯಣ ಬೋಂಟ್ರ, ವೆಂಕಪ್ಪ ಬೋಂಟ್ರರ ಮಗ, ಪರಾರಿ ಮನೆ, ಕಾಂತಾವರ ವಲ್ಕ ಗ್ರಾಮ, ಪೋಸ್ಟ್ ನಿಟ್ಟೆ.	423=00
1107/57	ಶ್ರೀ ಪದ್ಮರಾಜ ಶೆಟ್ಟಿ, ಶಂಕರ ಮುಲ್ಲರ ಮೊಮ್ಮಗ, ಅರಿಬೆಟ್ಟು, ನೆಲ್ಲೂರು, ಪೋಸ್ಟ್ ನೆಲ್ಲಿಕಾರ್.	36=93
827/58	ನೇಮು, ಕೃಷ್ಣನವರ ಮಗ, ಮಂಜನ ಕೇರಿ, ಮಾರ್ಕೆಟ್ ರೋಡ್, ಕಾರ್ಕಳ.	81=01

Office of the Vijaya Bank Ltd., Karkal, S. K.
Date 15—3—1960.

B S S. Hegde.
Agent

ಅಮೆರಿಕೆಯ ಮೇಳ

ಭಾರತೀಯ ವ್ಯವಸಾಯಕ್ಕೆ ಅಮೆರಿಕೆಯ ನೆರವು

ಭಾರತದ ಬೇರೆಬೇರೆ ರಾಜ್ಯಗಳಲ್ಲಿ ಅಮೆರಿಕೆಯ ಐದು ವಿದ್ಯಾಲಯಗಳ ತಾಂತ್ರಿಕ ಸಹಕಾರ ನಿಯೋಗಗಳು ವ್ಯವಸಾಯ ಸಂಬಂಧಿ ಸಲಹೆ ನೀಡುತ್ತಿವೆ.

೧೯೦೦ರಲ್ಲಿ ಅಮೆರಿಕದಲ್ಲಿ ಒಬ್ಬ ವ್ಯವಸಾಯ ಕಾರ್ಮಿಕನು ತನಗೆ ಮತ್ತು ಬೇರೆ ಏಳು ಜನರಿಗೆ ಬೇಕಾದಷ್ಟು ಆಹಾರ ಮತ್ತು ಬಟ್ಟೆಯನ್ನು ಉತ್ಪಾದಿಸಬಲ್ಲವನಾಗಿದ್ದನು. ೧೯೫೮ರಲ್ಲಿ ಆತನು ತನಗೆ ಮತ್ತು ಇತರ ೨೫ ಜನರಿಗೆ ಸಾಕಾಗುವಷ್ಟು ಉತ್ಪಾದಿಸುತ್ತಾನೆ.

ಚತುರ್ಥಾಂಶ ಎಂದು ಜನರಿಗೆ ಪರಿಚಿತವಾಗಿರುವ, ತಾಂತ್ರಿಕ ಸಹಕಾರದ ಅಂತಾರಾಷ್ಟ್ರೀಯ ಕಾರ್ಯಕ್ರಮಗಳ ಅಭಿವೃದ್ಧಿಯಲ್ಲಿ, ಒಂದು ರಾಷ್ಟ್ರದಲ್ಲಿ ವ್ಯವಸಾಯದ ದಕ್ಷತೆಯನ್ನು ಹೆಚ್ಚಿಸಲು ನೆರವಾದ ಶಕ್ತಿಗಳನ್ನು ಇತರ ರಾಷ್ಟ್ರಗಳ ಪ್ರಯೋಜನಕ್ಕೆ ಉಪಯೋಗಿಸಬೇಕಾಗಿದೆ.

ಅಮೆರಿಕದ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನರು ೧೯೪೯ನೇ ಜನವರಿಯಲ್ಲಿ ತನ್ನ ಉದ್ಘಾಟನಾ ಭಾಷಣವನ್ನು ಮಾಡಿದಾಗ, ಅವರು ಅಮೆರಿಕದ ವೈಜ್ಞಾನಿಕ ಮುನ್ನಡೆಗಳಲ್ಲಿ ಮತ್ತು ಕೈಗಾರಿಕಾ ಪ್ರಗತಿಯಲ್ಲಿ ಇತರ ರಾಷ್ಟ್ರಗಳೊಡನೆ ಪಾಲುಗೊಳ್ಳುವುದನ್ನು ತನ್ನ ಭಾಷಣದಲ್ಲಿ ಚತುರ್ಥಾಂಶ ಎಂದು ಕರೆದುದರಿಂದ ಈ ಕಾರ್ಯಕ್ರಮಕ್ಕೆ ಚತುರ್ಥಾಂಶ ಕಾರ್ಯಕ್ರಮ ಎಂದು ಹೆಸರು ಬಂತು.

ಮೂರು ಶಕ್ತಿಗಳು ಅಮೆರಿಕದ ವ್ಯವಸಾಯಾಭಿವೃದ್ಧಿಯ ಮೇಲೆ ಬಹಳ ಪರಿಣಾಮಮಾಡಿವೆ. ಈ ಶಕ್ತಿಗಳು ಬಹಳ ಪರಸ್ಪರ ಸಂಬಂಧಿಗಳಾಗಿರುವುದರಿಂದ, ಇವುಗಳನ್ನು ವ್ಯವಹಾರದಲ್ಲಿ ಒಂದೇ ಎಂದು ಭಾವಿಸಬಹುದು. ಸಂಶೋಧನೆ, ಸಂಶೋಧನೆಯ ಫಲಿತಾಂಶಗಳನ್ನು ರೈತರಲ್ಲಿ ಪ್ರಸಾರ ಮಾಡುವುದು, ಮತ್ತು ವ್ಯವಸಾಯದಲ್ಲಿ ಸಂಶಕ್ತಿತ ಉತ್ಪಾದಕರು ಮತ್ತು ಮುಖಂಡರು ಇರುವಂತೆ ಶಿಕ್ಷಣ ಕೊಡುವಿಕೆ, ಇವೇ ಆ ಮೂರು ಶಕ್ತಿಗಳು. ನವದೆಹಲಿಯಲ್ಲಿ ಡಿಸೆಂಬರ್ ೧೧ರಿಂದ ಫೆಬ್ರುವರಿ ೧೪ರ ವರೆಗೆ ನಡೆದ ಪ್ರಪಂಚ ವ್ಯವಸಾಯ ಮೇಳದ ಅಮೆರಿಕೀ ಮೇಳದಲ್ಲಿ ಈ ಮೂರು ಶಕ್ತಿಗಳನ್ನು ತೋರಿಸಲಾಗಿತ್ತು. ಉಚ್ಚ ಶಿಕ್ಷಣದ ಲ್ಯಾಂಡ್ ಗ್ರ್ಯಾಂಟ್ ಸಂಸ್ಥೆಗಳು ಅಮೆರಿಕದಲ್ಲಿ ಆ ಶಕ್ತಿಗಳ ಬಳಕೆಯಲ್ಲಿ ಮುಂದಾಳಾಗಿರುತ್ತವೆ. ೧೦೦ ವರ್ಷಗಳಿಂದೀಚೆಗೆ ಪ್ರಾರಂಭವಾದ ಈ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಅಮೆರಿಕದ ವ್ಯವಸಾಯ ಪ್ರಗತಿಯಲ್ಲಿ ನೇತೃತ್ವ ವಹಿಸಿವೆ. ಅಮೆರಿಕದ ೧೬ನೇ ಅಧ್ಯಕ್ಷ ಅಬ್ರಹಾಂ ಲಿಂಕನ್‌ರು ಮೊರ್ರಿಲ್ ಶಾಸನಕ್ಕೆ ಸಹಿಹಾಕಿದಾದ ಲ್ಯಾಂಡ್ ಗ್ರ್ಯಾಂಟ್ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಈ ಶಾಸನವು, ಸಾರ್ವಜನಿಕ ಆವಶ್ಯಕತೆಯ ಪೂರೈಕೆಗೆ ಮುಡಿಪಾಗಿರುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಬೇಕಾದ ಹಣ ದೊರಕಿಸಿಕೊಳ್ಳಲು ಅನುಕೂಲ ಮಾಡಿಕೊಡಲು ಪ್ರತಿಯೊಂದು ಸಂಸ್ಥಾನಕ್ಕೆ ಸರಕಾರಿ ಭೂಮಿಯನ್ನು ದಾನಮಾಡಿತು. ಈ ಶಾಸನವು ವ್ಯವಸಾಯದ ಮತ್ತು ಯಾಂತ್ರಿಕ ವಿದ್ಯೆಗಳ ಶಿಕ್ಷಣಕ್ಕೆ ವಿಶೇಷ ಮಹತ್ವ ಕೊಟ್ಟಿತು.

ಅಖಿಲ ಮಾನವರಿಗಾಗಿ ಉತ್ತಮ ಪ್ರಪಂಚವನ್ನು ನಿರ್ಮಿಸಲು ಅಂತರರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸಬೇಕೆಂದು ಅಧ್ಯಕ್ಷ ಟ್ರೂಮನ್‌ರು ಕೇಳಿಕೊಂಡ ಒಡನೆಯೇ, ಆಗ ಲ್ಯಾಂಡ್ ಗ್ರ್ಯಾಂಟ್ ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯಗಳ ಸಂಘದ ಅಧ್ಯಕ್ಷರಾಗಿದ್ದ, ಮಿಚಿಗನ್ ಸ್ಟೇಟ್ ಕಾಲೇಜಿನ ಡಾ। ಜಾನ್ ಎ. ಹನ್ನಾರವರು ಈ ಅವಕಾಶವನ್ನು ಸ್ವಾಗತಿಸಿದರು ಮತ್ತು ಅಧ್ಯಕ್ಷರು ವಿವರಿಸಿದ ಕಾರ್ಯಕ್ರಮದ ಸಾಧನೆಗೆ ತನ್ನ ಹೃತ್ಪೂರ್ವಕ ಬೆಂಬಲದ ವಾಗ್ದಾನವನ್ನಿತ್ತರು.

ಲ್ಯಾಂಡ್‌ಗ್ರ್ಯಾಂಟ್ ಸಂಸ್ಥೆಗಳ ಈ ನೀಡಿಕೆಯನ್ನು ಸ್ವೀಕರಿಸಲಾಯಿತು. ತಾಂತ್ರಿಕ ಸಹಕಾರ ಕಾರ್ಯಕ್ರಮಗಳಿಗೆ ಈ ಸಂಸ್ಥೆಗಳ ಮುಖ್ಯ ಸೇವೆಗಳು, ಈ ನಾಲ್ಕು ಮೂಲಭೂತ ಕಾರ್ಯಗಳ ಮೂಲಕ ಜರಗಿವೆ:

೧. ವ್ಯವಸಾಯವನ್ನು ಅಭ್ಯಸಿಸಲು ಇತರ ದೇಶಗಳಿಂದ ಅಮೆರಿಕಕ್ಕೆ ಹೋಗಿರುವ ತಂತ್ರಜ್ಞರಿಗೆ ಮತ್ತು ಮುಖಂಡರಿಗೆ ತರಬೇತಿ ಕೊಡುವುದು.



ಹಾರಿಸುವ ಆಕಾಶಬಾಣಗಳ ವೇಗವನ್ನು ಹೆಚ್ಚಿಸುವ „ವೇಫರ್" ಗಳನ್ನು ನೂತನವಾಗಿ ಅಮೆರಿಕೆಯು ಸಂಶೋಧಿಸಿತು. ಈ ವೇಫರ್‌ಗಳನ್ನು ಚಿತ್ರದಲ್ಲಿ ಕಾಣಬಹುದು.

೨. ಅಮೆರಿಕದ ತಂತ್ರಜ್ಞರಿಗೆ ಇತರ ದೇಶಗಳಲ್ಲಿನ ತಾಂತ್ರಿಕ ಸಹಕಾರ ಕಾರ್ಯಕ್ರಮಕ್ಕೆ ಅರ್ಹತೆ ನೀಡುವಂಥ ತರಬೇತಿ ಒದಗಿಸುವುದು.

೩. ಇತರ ದೇಶಗಳ ತಾಂತ್ರಿಕ ಸಹಕಾರ ಯೋಜನೆಗಳಿಗೆ ಸ್ಟಾಫ್ ಸದಸ್ಯರ ಸೇವೆಗಳನ್ನು ಒದಗಿಸುವುದು.

೪. ಇತರ ದೇಶಗಳಲ್ಲಿ ತಾಂತ್ರಿಕ ಸಹಕಾರ ಯೋಜನೆಗಳನ್ನು ನಡೆಸುವ ಕಾರ್ಯದಲ್ಲಿ ನೇರ ಹೊಣೆಗಾರಿಕೆ ವಹಿಸುವುದು.

ಚತುರ್ಥಾಂಶ ಕಾರ್ಯಕ್ರಮದ ಮೇರೆಗೆ ಪ್ರತಿವರ್ಷ ಇತರ ದೇಶಗಳಿಂದ ಸಾವಿರಾರು ತರುಣ–ತರುಣಿಯರು, ವ್ಯವಸಾಯದಲ್ಲಿ ವಿಶೇಷ ತರಬೇತಿ ಪಡೆಯಲು ಅಮೆರಿಕಕ್ಕೆ ಬರುತ್ತಾರೆ. ಇವರಿಗೆ ಸಹಾಯಮಾಡುವ ಹೊಣೆಗಾರಿಕೆಯ ಹೆಚ್ಚಿನಂಶವನ್ನು ಲ್ಯಾಂಡ್‌ಗ್ರ್ಯಾಂಟ್ ಸಂಸ್ಥೆಗಳು ವಹಿಸಿಕೊಂಡಿವೆ.

ಅಲ್ಲದೆ ಅನೇಕ ತಂತ್ರಜ್ಞರೂ ತಜ್ಞರೂ ಇತರ ದೇಶಗಳಿಗೆ ಕೆಲಸಮಾಡಲು ಹೋಗುತ್ತಾರೆ.

ಕೆಲವು ವರ್ಷಗಳ ಹಿಂದೆ ಭಾರತ-ಅಮೆರಿಕ ತಾಂತ್ರಿಕ ಸಹಕಾರ ಒಡಂಬಡಿಕೆಗೆ ಸಹಿಯಾದಾಗ ಭಾರತಕ್ಕೆ ಚತುರ್ಥಾಂಶ ಕಾರ್ಯಕ್ರಮದ ಮೇರೆಗೆ ಸಾಕಷ್ಟು ಯಂತ್ರಗಳು ಮತ್ತು ಸಹಾಯ ಲಭಿಸಿದವು.

ಭಾರತದ ವ್ಯವಸಾಯ ಶಿಕ್ಷಣ ಮತ್ತು ಸಂಶೋಧನೆಯನ್ನು ಬಲಪಡಿಸಲು ತಾಂತ್ರಿಕ ಸಹಕಾರ ನಿಯೋಗವು ಐದು ಲ್ಯಾಂಡ್‌ಗ್ರ್ಯಾಂಟ್ ಸಂಸ್ಥೆಗಳೊಡನೆ ಒಂದು ಒಡಂಬಡಿಕೆ ಮಾಡಿಕೊಂಡಿತು. ಈ ಐದು ಸಂಸ್ಥೆಗಳು ತಮ್ಮ ಜನ ಮತ್ತು ಸಾಮಗ್ರಿಗಳೊಡನೆ, ಉತ್ತರದ ಕಾಶ್ಮೀರದಿಂದ ದಕ್ಷಿಣದ ಕೇರಳದವರೆಗೆ ಇರುವ ಈ ವಿಶಾಲ ದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇಲಿನಾಯ ವಿಶ್ವವಿದ್ಯಾನಿಲಯದ ತಂತ್ರಜ್ಞರು ಮತ್ತು ತಜ್ಞರು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ೧೧ ಕಾಲೇಜುಗಳಿಗೆ ಸಹಾಯಮಾಡುತ್ತಿದ್ದಾರೆ.

ಪಂಜಾಬ್, ರಾಜಸ್ಥಾನ, ಮತ್ತು ಹಿಮಾಚಲ ಪ್ರದೇಶಗಳು ಓಹಿಯೋ ಸ್ಟೇಟ್ ವಿಶ್ವವಿದ್ಯಾನಿಲಯದ ಸಹಾಯ ಪಡೆಯುತ್ತಿವೆ. ಈ ವಿಶ್ವವಿದ್ಯಾನಿಲಯವು ಐದು ಸಂಸ್ಥೆಗಳಿಗೆ ಸಹಾಯಮಾಡುತ್ತಿದೆ.

ಅಸ್ಸಾಂ, ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳ ಒಂಭತ್ತು ಕಾಲೇಜುಗಳಿಗೆ ಮಿಸ್ಸೌರಿ ವಿಶ್ವವಿದ್ಯಾನಿಲಯ ಸಹಾಯಮಾಡುತ್ತಿದೆ.

ಕಾನ್ಸಾಸ್ ಸ್ಟೇಟ್ ಕಾಲೇಜ್ ಆಂಧ್ರಪ್ರದೇಶ ಮತ್ತು ಬೊಂಬಾಯಿಯಲ್ಲಿ ೧೧ ಸಂಸ್ಥೆಗಳಿಗೆ ಸಹಾಯಮಾಡುತ್ತಿದೆ.

ಮೈಸೂರು, ಮದ್ರಾಸು ಮತ್ತು ಕೇರಳಗಳ ಒಂಭತ್ತು ಕಾಲೇಜುಗಳಿಗೆ ಟೆನ್ನೆಸೀ ವಿಶ್ವವಿದ್ಯಾನಿಲಯದಿಂದ ಸಹಾಯ ಲಭಿಸುತ್ತಿದೆ.

(„ಫಾರೈನ್ ಎಗ್ರಿಕಲ್ಚರ್" ಪತ್ರಿಕೆಯಿಂದ

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S No 107/53.
R. S P. No 49/60.

ಸೌಡ ರಾಮಚಂದ್ರ ದೇವರು—ಅರ್ಜಿದಾರರು

ಮತ್ತು

ದೇವಮೂನೆ ಲಕ್ಷ್ಮಣ ಬಟ್ಟ ಕೂಡಾ— ಎದ್ರಿರು.

ಇವರೊಳಗೆ

3 ರಾಮ ಬಟ್ಟ 4 ಸದಾನಂದ ಬಟ್ಟ 5 ನರಸಿಂಹ ಬಟ್ಟ 6 ವಿಠಲ ಬಟ್ಟ 7 ವಾಸ್ತೆನ ಬಟ್ಟ 8 ಪುಂಡರೀಕ ಬಟ್ಟ 9 ಜನರ್ದಾನ ಬಟ್ಟ.—ಕಾಪು ಅಪ್ಪಣ್ಣ ಬಟ್ಟರ ಮಕ್ಕಳು ಉಡ್ಪಿ ತಾಲ್ಕು ಮಲ್ಲಾರು ಗ್ರಾಮ—

ಮೇಲ್ಕಂಡ ಅನ್ಲುಜ್ಯಾರಿಯಲ್ಲಿ ಸದ್ರಿ ಯದ್ರಿಗೆ ಆಗತಕ್ಕ 22ನೇ ರೂಲು ಕೊಟ್ಟ ತಾರೀಕು 26—8—60ಕ್ಕೆ ಯಿಟ್ಟಿರುವುದರಿಂದ ಸದ್ರಿ ಯದ್ರಿರು ತಮ್ಮ ಆಕ್ಷೇಪ ಹೇಳುವುದನ್ನು ಅದಿನ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao.
Vakil for Petitioner
ಉಡ್ಪಿ, ತಾ. 16—3—60.

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 42/60.

ನಾಗ ನಾಯ್ಕ — ಅರ್ಜಿದಾರ

ಮತ್ತು

ಲಕ್ಷ್ಮೀನಾರಾಯಣ ರಾವ್ — ಪ್ರತಿವಾದಿ.

ಯಿವರೊಳಗೆ

ಪ್ರತಿವಾದಿ:—ಲಕ್ಷ್ಮೀನಾರಾಯಣ ರಾವ್, ಶೀತಾರಾಮಯ್ಯನವರ ಮಗ ಉಡ್ಪಿ ತಾಲ್ಕು ಬೆಳ್ಳೆ ಗ್ರಾಮದ ಮೂಡು ಬೆಳ್ಳೆಯಲ್ಲಿರುವವರು ಯಿವರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ —

ವಾದಿಗೆ ಪ್ರತಿವಾದಿಯಿಂದ ಬರಾ ಅಸ್ಲು ಬಡ್ಡಿ ಕೂಡಾ ರೂ. 334—50ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ವ್ಯಾಜ್ಯವು ಪ್ರತಿವಾದಿಯು ಹಾಜರು ನೋಟೀಸಿನ ಬಗ್ಗೆ ತಾರೀಕು 30—3—60ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಯಿಟ್ಟಿರುತ್ತದೆ ಎಂಬ ಸಂಗ್ತಿ ಪ್ರತಿವಾದಿಗೆ ಈ ಮೂಲಕ ತಿಳಿಸೋಣಾಗುತ್ತದೆ.

B. Ananda Shetty.
Advocate for Plaintiff
ಉಡುಪಿ. ತಾ. 16—3—60

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ

ಕಥಾವಿಹಾರ

(೨ನೇ ಪುಟದಿಂದ)

ದೆ ಅವರೆಂದೂ ಸುಮ್ಮನುಳಿದವರಲ್ಲ. ಈ ಸಹಾಧ್ಯಾಯಿಗಳ ಭಿನ್ನಾಭಿಪ್ರಾಯ ಸಮಸ್ಯೆಗೆ ಉತ್ತರವರಿಸುವುದರಲ್ಲೇ ಅವರು ಚಿಂತಿಸತೊಡಗಿದರು. ಒಡೆದ ಗಡಿಗೆ ಮಣ್ಣಿನದ್ದಾಗಿದ್ದರೆ, ಅದನ್ನು ಕೂಡಿಸುವುದು ಎಂದಿಗಾದರೂ ಸಾಧ್ಯವೆ? ಸರ್ವಥಾ ಅಸಾಧ್ಯ. ಆದರೂ 'ಸಾಧಿಸಿದರೆ ಸಬಳ ನುಂಗಬಹುದು' ಎಂದವರ ಅಂತರಾತ್ಮ ನುಡಿಯುತಿತ್ತು. ಈ ಸಾಧನೆ ನಡೆಬೇಕಾದ ದಾರಿಯಾದರೂ ಯಾವುದು? ಗೋಪಾಲಯ್ಯನವರ ತಲೆಯಲ್ಲಿ ಒಂದು ವಿಚಿತ್ರ ಭೂತ ಸಂಚರಿಸುವುದಕ್ಕೆ ತೊಡಗಿತು.

ಪರೀಕ್ಷೆಗಳಿಗೆ ಬಹಳಷ್ಟು ದಿನಗಳುಳಿದಿಲ್ಲವೆಂದಾಗ ವಿದ್ಯಾರ್ಥಿಗಳು ಅಧ್ಯಾಪಕರನ್ನು ಸತ್ಕರಿಸಿ, ತಾವು ಪರೀಕ್ಷೆಗಳಲ್ಲಿ ಯಶಸ್ವಿಯಾಗುವಂತೆ ಆಶೀರ್ವದಿಸಬೇಕೆಂದೂ ಇದುವರೆಗೆ ಮಾಡಿರಬಹುದಾದ ಅಪರಾಧಗಳನ್ನು ಕ್ಷಮಿಸಬೇಕೆಂದೂ ಕೇಳಿಕೊಳ್ಳುವುದು; ಅಧ್ಯಾಪಕರು ಸಂತುಷ್ಟರಾಗಿ ಅವರ ಕೇಳಿಕೆಗಳನ್ನು ಮನ್ನಿಸಿರುವುದಾಗಿ ಹೇಳಿ ಶುಭಕಾಮನೆಗಳನ್ನು ಅರ್ಪಿಸುವುದು ಸತ್‌ಸಂಪ್ರದಾಯವಾಗಿ ಬಂದಿರುವ ಸಮಾರಂಭ. ಈ ವರ್ಷವೂ ಈ ಮಾದರಿಯ ಸಭೆಯೊಂದು ನಡೆಯಬೇಕೆಂದು ನಿರ್ಧಾರವಾಗಿತ್ತು. ಎಂದರೆ, ಅನುರಾಗಕ್ಕಿಂತ ಸಂಪ್ರದಾಯ ಮುರಿಯಬಾರದು ಎಂಬ ಕಾರಣದಿಂದ. ಅದಕ್ಕೆ ದಿನವೂ ನಿಶ್ಚಿತವಾಗಿತ್ತು. ಅಧ್ಯಾಪಕರಿಗೆಲ್ಲ ಸಕ್ಕರೆಯ ಕರೆಯೋಲೆ ಸುತ್ತೋಲೆಯ ರೂಪದಲ್ಲಿ ಹೊರಟಿತ್ತು. ರಾಜುವೇ ಕಾರ್ಯಕ್ರಮ ಸಂಯೋಜಕನ ಪಾತ್ರವಹಿಸಿದ್ದ.

ರಾಜು ಗೋಪಾಲಯ್ಯನವರ ಬಳಿಗೆ ಬಂದು ನಮಸ್ಕರಿಸಿ, ಸುತ್ತೋಲೆಯನ್ನವರ ಕೈಗಿಟ್ಟ. ಮಾಸ್ತರರು ಅದನ್ನು ಒಂದರೆಕ್ಷಣದೊಳಗೆ ಓದಿ, ರಾಜುವಿನ ಮುಖವನ್ನೇ ನೋಡತೊಡಗಿದರು. ಆತ ತಲೆತಗ್ಗಿಸಿದ—ಆ ತೀಕ್ಷ್ಣನೋಟದ ಉರಿಯನ್ನು ತಾಳಲಾರದೆ. ಸುತ್ತೋಲೆ ತನ್ನ ಕೈಗೆ ಒಂದುಬಾರಿ ಬಂದಿದ್ದರೆ, ಮುಂದೆ ಬೆಟ್ಟಿಗೆ ಇಳಿದು ದೂರ ಹೋಗಬಹುದಿತ್ತು. ಆದರೆ, ಅದಿನ್ನೂ ಅಧ್ಯಾಪಕರ ವಶದಲ್ಲಿಯೇ ಇರುವುದು. ರಾಜು ತಬ್ಬಿಬ್ಬಾದ.

ಗೋಪಾಲಯ್ಯನವರು ರಾಜುವನ್ನು ಪ್ರಶ್ನಿಸಿದರು—"ನೀವು ಯಾರೆಲ್ಲಾ ಸೇರಿ ಈ ಸಮಾರಂಭವನ್ನು ಏರ್ಪಡಿಸುತ್ತೀರಿ?"

"ಎಲ್ಲ ವಿದ್ಯಾರ್ಥಿಗಳೂ ಒಟ್ಟುಸೇರಿ."

"ಮಂಜುನಾಥ ಕೂಡ ಇದ್ದಾನೆಯೆ?"

"ಹೌದು."

ರಾಜುವಿನ ಕೈಗೆ ಸುತ್ತೋಲೆಯಿತ್ತು ಅವರು ತಲೆಯಾಡಿಸಿದರು. ಆತಗೆ ಸಾವಿನ ದವಡೆಯಿಂದ ಮರಳಿ ಬಂದಷ್ಟು ಆನಂದವಾಯಿತು. ಗೆದ್ದೆನೆಂಬ ಒಣಹೆಮ್ಮೆಯಿಂದ ಅವನು ಮುಂದುವರಿದ.

ಸತ್ಕಾರದ ಹಿಂದಿನ ದಿನ ಯಾರೋ ಒಬ್ಬ ವಿದ್ಯಾರ್ಥಿ ಗೋಪಾಲ ಮಾಸ್ತರರು ರಾಜುವನ್ನು ಕರೆಯುತ್ತಾರೆ ಎಂದು ಹೇಳಿಹೋದ. ರಾಜು ಮಾಸ್ತರರೊಡನೆ ಮಾತಾಡಿ ಹೊರಬಂದ, ಆತನ ಮುಖ ಕಾಣುವಾಗ ಒಂದು ಸಮಸ್ಯೆಯು ತಲೆಹೊಕ್ಕಿದಂತೆ ಭಾಸವಾಯಿತು. ಆದರೆ, ಅದೇನೆಂದು ಕೇಳುವ ಶಕ್ತಿ ಯಾರಲ್ಲೂ ಇರಲಿಲ್ಲ. ಮತ್ತೂ ತುಸು ಹೊತ್ತಾದನಂತರ ಮಂಜುನಾಥನಿಗೆ ಆಫೀಸ್ ರೂಮಿನಿಂದ ಕರೆಬಂತು. ಆತನೂ ತೆರಳಿ ಮರಳಿದ. ಅವನ ಛಾಯೆಯೂ ವಿವರ್ಣಗೊಂಡಂತಿತ್ತು. ಏನೆಂದು ಅವನಿಗೂ ತಿಳಿಯದು.

ತರಗತಿ ತುಂಬ ಗುಲ್ಲು. ರಾಜು ಮತ್ತು ಮಂಜುಗಳಿಗೆ ಏನೋ ಗದರಿಸಿದರೆಂದು. ಇದೇನೂ ಹೆಚ್ಚಿನದಲ್ಲ ಆಫೀಸ್ ಕೋಣೆಯೊಳಗೆ ಪೆಟ್ಟು ತಿನ್ನುವುದಕ್ಕಾಗಿಯೇ ಹೋಗುವುದೆಂದು ವಿದ್ಯಾರ್ಥಿಗಳ ತರ್ಕವಾದ. ಅದು ಸೆರೆಮನೆ, ನ್ಯಾಯಾಲಯ ದಂಡನಾಲಯವೂ ಹೌದು.

ಅಂದು ಸಂಜೆ, ಗೋಪಾಲ ಮಾಸ್ತರರ ಮನೆಯ ಎದುರಿನ ಬಯಲು. ಬೇಸಗೆಯಾದುದರಿಂದ ಕೇವಲ ಒಣಗದ್ದೆಗಳು. ತೆವರಿಯಲ್ಲಿ ನಡೆಯುವ ಬೇಸಾಯಕಾಲವಲ್ಲವಾದುದರಿಂದ ನಡುಗದ್ದೆಯಲ್ಲಿ ಬಿಳಿಯಾದ ದಾರಿ ನಿರ್ಮಾಣಗೊಂಡಿತ್ತು. ಒಬ್ಬ ಗಿಡ್ಡ ಹುಡುಗ ಅದೇ ದಾರಿಯಲ್ಲಿ ಮಾಸ್ತರರ ಮನೆಯನ್ನು ಸೇರಿದ. ಮಾಸ್ತರರು ಮನೆಯಲ್ಲಿಲ್ಲವಾದುದರಿಂದ ಅಲ್ಲೇ ಜಾವಡಿಯ ಬೆಂಚೊಂದರಲ್ಲಿ ಕುಳಿತ—ಆದೇಶದಂತೆ.

ತುಸು ಹೊತ್ತಿನ ನಂತರ, "ಮಾಸ್ತರರಿದ್ದಾರೆಯೇ?" ಎಂಬ ಒಂದು ಸ್ವರ ಬಾಗಿಲಿನ ಹೊರಗೆ ಕೇಳಿಸಿತು. ಆ ಬಾಲಕನಿಗೆ ಈ ಸ್ವರವನ್ನು ಎಲ್ಲಿಯೋ ಕೇಳಿದ್ದ ನೆನಪಾಗುತಿತ್ತು. ಆದರೆ ಎಲ್ಲಿ ಎಂದು ಮಾತ್ರ ಸ್ಮರಣೆಗೆ ಬರಲಿಲ್ಲ. "ಇಲ್ಲ" ಎಂದು ಬಿಟ್ಟು ಹಿಂದೆಮುಂದೆ ನೋಡದೆ. ಬೆನ್ನಲ್ಲಿಯೇ ಯಾರೆಂದು ಕಾಣುವ ಆತುರದಿಂದ ಆತ ಬಾಗಿಲು ಬಳಿಗೆ ಬರುತ್ತಿದ್ದ. ಅಷ್ಟರಲ್ಲಿಯೇ ಹೊರಗಿದ್ದ ವ್ಯಕ್ತಿ ಪುನಃ ಕೇಳಿತು—"ಎಲ್ಲಿ ಹೋಗಿದ್ದಾರೆ? ಬರಲು ತಡವಾದೀತೆ?" ಈ ಮಾತಿನ ಅಲೆಗಳು ಆತನ ಕಿವಿ ಹೊಗುವುದರಲ್ಲಿಯೇ ಬಾಗಿಲ ಬಳಿ ಸಮೀಪಿಸಿದ್ದ. ಆತ ನೋಡುತ್ತಾನೆ! ತನ್ನ ಮುಂದೆ ಬಾಗಿಲು ಮರೆಯಲ್ಲಿ ಮಂಜುನಾಥ ನಿಂತಿದ್ದಾನೆ. ಒಂದುಕ್ಷಣ ಇಬ್ಬರಿಗೂ ಧೃತಿತಪ್ಪಿತು. ಮುಂದೇನು ಮಾಡಬೇಕೆಂದು ಅವರಿಬ್ಬರೂ ಅರಿಯದಾದರು. "ಮಂಜೂ....ನೀನು....ಇಲ್ಲಿ..." ಎಂಬ (ಮೂರು ಮಾತ್ರೆಯ ಮೂರು ನುಡಿಗಳು ಅವನ ಬಾಯಿಂದ ಆತನಿಗರಿವಿಲ್ಲದಂತೆ ಹೊರಬಿದ್ದುವು. "ರಾಜೂ" ಎಂಬ ನುಡಿ ನಾಲ್ಕುಮಾತ್ರೆಯದಾಗಿ ಮಂಜುವಿನ ಕಂಠಗಳ ಕದವನ್ನು ತೆರೆದು ಗಾಳಿಯಲ್ಲಿ ತೇಲಿಬಂದುವು.

"ಬಾ, ಒಳಗೆ ಬಾ. ಈಗ ಬಂದಾರು."—ರಾಜುವಿನ ಉತ್ತರ.

"ರಾಜು, ನೀನೂ ಇಲ್ಲಿಗೆ ಬಂದಿರುವೆಯಲ್ಲ?"

"ಮಾಸ್ತರರು ಬರಲು ಹೇಳಿದ್ದರು. ಬಂದೆ. ಆವರಿಲ್ಲ ಎಂದರೆ ಮನೆಯವರು. ಕೂತೆ. ಅಷ್ಟರಲ್ಲಿ...."

"ನನಗೂ ಬರುವಂತೆ ಆದೇಶಿಸಿದ್ದರು. ಇಲ್ಲಿ ಬಂದರೆ...." ಮಂಜುವಿನ ನಾಲಗೆ ತಡವರಿಸಿತು.

"ಉತ್ತರ ದಕ್ಷಿಣ ಧ್ರುವ ಸಂಗಮವಾಯಿತು" ಎಂದಾವಾಕ್ಯವನ್ನು ಪೂರ್ಣಗೊಳಿಸುತ್ತ ಗೋಪಾಲ ಮಾಸ್ತರರು ಹಟ್ಟಿಯ ಬಾಗಿಲಿನಿಂದ ಜಾವಡಿಗೆ ಬಂದು ನಿಂತರು.

ಪಡುಗಡಲ ನೀರಿನೊಡನೆ ಓಕುಳಿಯಾಡುತ್ತಿದ್ದ ಭಾಸ್ಕರದೇವ ದಣಿದು ಮರೆಯಾದನು. ಆಕಾಶದಲ್ಲಿ ಅನಂತ ನಕ್ಷತ್ರಗಳು ಕಾಣಿಸಿಕೊಂಡುವು. ಮಾಸ್ತರರು ರಾಜು ಮಂಜುರವರೊಡನೆ ಏನೇನೆಲ್ಲಾ ಆಡಿದರೋ ಆ ಮೂವರಿಗೂ ತಿಳಿದಿರಬಾರದು. ರಾತ್ರಿ ಗೋಪಾಲ ಮಾಸ್ತರರು ಅವರಿಬ್ಬರನ್ನೂ ಅವರವರ ಮನೆಗಳಿಗೆ ಕಳಿಸಿಬಂದು ಸಮಾಧಾನದ ನಿಟ್ಟುಸಿರು ಬಿಡುತ್ತಿರುವುದು ಮಾತ್ರ ಆ ಮಧುಮಾಸ ಪ್ರಾರಂಭದಲ್ಲಿ ಕಳೆದುಕೊಂಡ ಕಾಡಲನ್ನು ಪಡೆದ ವಿರಹಿಯ ನಾಸಾಪುಟದಿಂದ ಹೊರಬರುವ ಸಮಾಧಾನದ ನಿಟ್ಟುಸಿರಂತೆ ಅನಂತದಲ್ಲಿ ಲೀನವಾಯಿತು.

ರಾತ್ರಿ ಬೆಳಗಾಯಿತು. ಬೆಳಗುಕಳೆದು ಮಧ್ಯಾಹ್ನ, ಅದೂ ದಾಟಿ ಸಂಜೆ. ಶಾಲೆಯಲ್ಲಿ ಸಡಗರ. ಮೂರು ವರ್ಷಗಳಿಂದ ಮುಖ ತಿರುಗಿಸಿಕೊಳ್ಳುತ್ತಿದ್ದ ಮಂಜು—ರಾಜುರವರ ಇಂದಿನ ಸಹಚರತ್ವವೆಲ್ಲರನ್ನೂ ಅಚ್ಚರಿಗೊಳಿಸಿತು. ರಾತ್ರಿ ಬೆಳಗಾಗುವುದರೊಳಗೆ ಇಷ್ಟೊಂದು ಅದ್ಭುತ ನಡೆಯಿತು! ಸಮಾರಂಭದಲ್ಲಿ ಮಾತನಾಡಿದ ರಾಜು ಹೇಳಿದ—"ಆಫೀಸು ಕೋಣೆಗೆ ಹೋಗುವುದೆಂದರೆ ಎಲ್ಲರ ಕೈಕಾಲುಗಳೂ ನಡುಗುತ್ತವೆ. ಪ್ರಾಯಃ ಇದಕ್ಕೆ ಕಾರಣ ನಾವು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಹೋದುದು. ಅದು ಜೇಲಲ್ಲ; ದಂಡನಾಲಯವೂ ಅಲ್ಲ. ಅದು ಪರಮ ಪವಿತ್ರವಾದ "ನ್ಯಾಯಾಲಯ" ಈ ಮಾತನ್ನು ನನ್ನ ಅನುಭವದಿಂದ ಹೇಳುತಿದ್ದೇನೆ. ಇಂತಹ ಆದರ್ಶ ನ್ಯಾಯಾಲಯವನ್ನು ಪಡೆದ ನಮ್ಮ ಶಾಲೆಯನ್ನೂ, ನ್ಯಾಯಾಧೀಶರ ಸದ್ಗುಣ ಅಮರ ಪಾಠವನ್ನು ನಾನೆಂದಿಗೂ ಮರೆಯಲಾರೆ."

ಮಂಜು ಎದ್ದು ಕಣ್ಣೊರಸಿಕೊಂಡು ನುಡಿದ: "ಈಗ, ನನ್ನಮಿತ್ರ ರಾಜು (ಎಲ್ಲರಿಗೂ ಆಶ್ಚರ್ಯ!) ಹೇಳಿದ ಮಾತನ್ನು ಅಕ್ಷರಶಃ ಒಪ್ಪುತ್ತೇನೆ. ನನ್ನ ಜೀವನದಲ್ಲಿ ಮಹತ್ವದ ಪಾಠವಿತ್ತು ನನ್ನ ಬದುಕಿಗೆ ಆದರ್ಶವನ್ನು ಹಾಕಿಕೊಟ್ಟ ಈ ಶಾಲೆಯನ್ನು, ಅದರಲ್ಲೂ ಅದಕ್ಕೆ ಪ್ರೇರಕವಾದ ಆಫೀಸು ಕೋಣೆಯನ್ನು ಸದಾ ಸ್ಮರಿಸುವೆ."

ವಿದ್ಯಾರ್ಥಿಗಳೂ ಅಧ್ಯಾಪಕರೂ ಚಕಿತಚಿತ್ತರಾಗಿ ಆಲಿಸುತಿದ್ದರು. ಮೂವರು ಮಾತ್ರ ಕಣ್ಣೀರು ಸುರಿಸುತಿದ್ದರು. ಈ ತ್ರಿಮೂರ್ತಿಗಳು ಬೇರಾರೂ ಆಗಿರದೆ ಗೋಪಾಲ ಮಾಸ್ತರರು ರಾಜು ಮತ್ತು ಮಂಜು ಆಗಿದ್ದರು. ಅವರು ಸುರಿಸುತ್ತಿದ್ದುದು ಪ್ರೇಮರಸಪಾಕದಿಂದ ಜಿನುಗಿದ ಸೋನೆಗಳಾಗಿದ್ದುವು. ಉಕ್ಕಿನತೆರೆ ಪಕ್ಕಕ್ಕೆ ಸರಿದುಹೋಗಿತ್ತು.

—ಗೋಪೀಚಂದ, ಉಡುಪಿ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು.
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್. ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ... ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ ಸಿಗುತ್ತವೆ.

ವಿಚಾರಿಸಿರಿ—

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ

NAVAYUGA
REGD. NO. M. 3619

UDIPI, THURSDAY
24-3-1960

LICENSE NO. 31
Licensed to Post without Prepayment

ಚಾರುಚಯನ

ಸುಮುಹೂರ್ತ ಬರಲು ಸಾವಧಾನ ಬೇಕು

ಯೋಜನೆಯ ಪರಿಶೀಲನೆ ನಾವು ಮಾಡುತ್ತಿದ್ದಂತೆಯೇ ಆ ಯೋಜನೆಯನ್ನು ಬೇರೆಯವರು ಕಿತ್ತುಕೊಂಡರು!

ಮೈಸೂರು ರಾಜ್ಯದಲ್ಲಿ ಒಂದು ಅಲ್ಯುಮಿನಿಯಂ ಕಾರಖಾನೆ ಸ್ಥಾಪಿಸುವ ಕುರಿತು ಅವಶ್ಯಕ ಸರ್ವೆ ಕೆಲಸಗಳೆಲ್ಲ ಮುಗಿದು ಕೆಲಕಾಲ ಕಳೆದಿರುವಾಗ, ಈ ಕಾರಖಾನೆಯು ಮಹಾರಾಷ್ಟ್ರದ ಕೊಯಿನಾದಲ್ಲಿ ಆಗುವುದು ಎಂಬ ವರ್ತಮಾನ ಪಿಸುಪಿಸುವಾಗಿ ಕೇಳಿಬರತೊಡಗಿದೆ,

ವಿಧಾನ ಸೌಧದಲ್ಲಿ ಈ ಬಗ್ಗೆ ಪ್ರಶ್ನೋತ್ತರ ನಡೆದಾಗ, ಮುಖ್ಯಮಂತ್ರಿ ಜತ್ತಿಯವರು ಕೊಟ್ಟ ಉತ್ತರ ಇದು: "ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಗೋಕರ್ಣದಲ್ಲಿ ಒಂದು ಅಲ್ಯುಮಿನಿಯಂ ಕಾರಖಾನೆ ಸ್ಥಾಪಿಸುವ ಸೂಚನೆಯಿತ್ತು; ಮತ್ತದು ಸರಕಾರದ ಪರೀಕ್ಷೆಯೊಳಗಿದೆ."

ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಮುಖ್ಯಮಂತ್ರಿಯವರು, "ಈ ಬಗ್ಗೆ ಸರ್ವೆ ನಡೆದಿತ್ತು, ಇದರಲ್ಲಿ ಅಲ್ಯುಮಿನಿಯಂ ಕಾರಖಾನೆಗೆ ಅವಶ್ಯವಾದ ಬೋಕ್ಸೈಟ್ ದೊರೆಯುವ ಪ್ರದೇಶಗಳಾವುವೆಂದು ಪ್ರಕಟವಾಗಿತ್ತು. ಭಾರತ ಸರಕಾರದಿಂದ ಕಳಿಸಲ್ಪಟ್ಟ ಶ್ರೀ ಲಿಂಗಡೆ ಎಂಬವರು ಗೋಕರ್ಣದಲ್ಲಿ ಈ ಕಾರಖಾನೆಯನ್ನು ಪ್ರಾರಂಭಿಸಬಹುದೆಂದು ಮೈಸೂರು ಸರಕಾರಕ್ಕೊಂದು ಯೋಜನೆಯನ್ನು ಕಳಿಸಿದರು. ಆದರೆ, ಅವರ ಯೋಜನೆಯು ಒಂದು ನಿಶ್ಚಿತರೂಪವನ್ನು ಪಡೆಯಲಿಲ್ಲ. ಜರ್ಮನ್ ಸಂಸ್ಥೆಯು ರಾಜ್ಯದಲ್ಲಿ ಅಲ್ಯುಮಿನಿಯಂ ಕಾರಖಾನೆ ಪ್ರಾರಂಭವಾಗಬೇಕೆಂಬ ಯೋಜನೆಯನ್ನು ಸೂಚಿಸಿಲ್ಲ" ಎಂದರು

ಈ ಕಾರಖಾನೆಯು ಸ್ಥಾಪನೆಯಾದರೆ, ರಾಜ್ಯದ ೨೦ ಸಾವಿರ ಜನಕ್ಕೆ ಉದ್ಯೋಗ ಸಿಗುತಿತ್ತು; ರಾಜ್ಯಸರಕಾರಕ್ಕೆ ಐದು ಕೋಟಿ ರೂಪಾಯಿ ವಾರ್ಷಿಕ ನಿವ್ವಳ ಲಾಭವಾಗುತಿತ್ತು. ಇದರಿಂದ ರಾಜ್ಯದ ನಿರುದ್ಯೋಗ ಸಮಸ್ಯೆಯೂ ಆರ್ಥಿಕ ಸಮಸ್ಯೆಯೂ ಬಹಳಷ್ಟು ಹಗುರವಾಗುತಿತ್ತು.

ಆದರೆ, ನಮ್ಮ ಸರಕಾರ ಈ ಯೋಜನೆಯನ್ನು ಇನ್ನೂ ಪರಿಶೀಲಿಸುತ್ತಿದೆ; ಅತ್ತ ಮರಾಠಿಗರು ಆ ಯೋಜನೆಯನ್ನು ತಮ್ಮದಾಗಿಸಿಯೇ ಬಿಟ್ಟರು!

ನಮ್ಮ ರಾಜ್ಯಸರಕಾರ ಕೇಳುವುದರಲ್ಲೆಲ್ಲಾ ಮುಂದೆಯಿದೆ. ಇತ್ತೀಚೆಗೆ ತೃತೀಯ ಯೋಜನೆಯಲ್ಲಿ ನಾಲ್ಕು ಮೆಡಿಕಲ್ ಕಾಲೇಜುಗಳನ್ನು ಕೇಳಿದೆ; ಅಲ್ಯುಮಿನಿಯಂ ಕಾರಖಾನೆಯನ್ನು ಕೇಳಿದೆಯೋ ಇಲ್ಲವೋ ತಿಳಿದಿಲ್ಲವಾದರೂ ಯೋಜನೆ ಕೈಸೇರಿದೆ. ಹೀಗೆಯೇ.......

ಆದರೆ, ನಮ್ಮ ರಾಜ್ಯದ ಮೆಡಿಕಲ್ ಕಾಲೇಜುಗಳಲ್ಲಿ ಅತಿ ಪುರಾತನವಾದ ಎರಡಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಮನ್ನಣೆ ನೀಡುತ್ತಿರುವುದೇ ಅಪರೂಪ! ನಮಗೊಂದು ಸರಕಾರವಿದೆ; ಆದರೆ, ಆದರ ಕೆಲಸಮಾತ್ರ ಸಾವಧಾನ! ಕೈಗೆ ಬೆಣ್ಣೆ ಬೇಕೆಂದು ಕೇಳುತ್ತೇವೆ; ಬಂದ ಬೆಣ್ಣೆಯನ್ನು ಪರಿಶೀಲಿಸುವುದರಲ್ಲೇ ತಲ್ಲೀನರಾಗಿ ನಮ್ಮನ್ನು ನಾವೇ ಮರೆಯುತ್ತೇವೆ; ಅಷ್ಟರಲ್ಲಿ ಆ ಬೆಣ್ಣೆ ಕರಗಿ ನೀರಾಗಿ ಇತರರ ಬಾಯಿ ಸೇರಿದನಂತರ ವಿಲಿವಿಲಿ ಹಂದಾಡುತ್ತೇವೆ!

ಇದು ನಮ್ಮ ಸರಕಾರದ ಕಾರ್ಯವಿಧಾನ! ಆರ್ಥಿಕವಾಗಿ, ಸಾಂಪತ್ತಿಕವಾಗಿ ನಾವು ಹಿಂದುಳಿದಿಲ್ಲ; ಹಿಂದುಳಿದ ರಾಜ್ಯವೂ ನಮ್ಮದಲ್ಲ; ಆದರೆ ಬೌದ್ಧಿಕವಾಗಿ ನಾವು ಬಹಳ ಹಿಂದುಳಿದವರು! ಎಂತಲೇ ನಮ್ಮದಿನ್ನೂ ಹಿಂದುಳಿದವರ ರಾಜ್ಯವಾಗಿ ಉಳಿದಿದೆ.

ನಮ್ಮಿ ಹಿಂದುಳಿಕೆಯ ಲಾಭವನ್ನು ಇತರ ಮುಂದುವರಿದವರು ಪಡೆದುಕೊಳ್ಳುತಿದ್ದಾರೆ; ನಾವಾಗ ಕೈಕಟ್ಟಿ ಕುಳಿತುಕೊಳ್ಳದೆ ಮತ್ತೇನು ಮಾಡಬಲ್ಲೆವು?

ನಮ್ಮ ಸರಕಾರವು ಜನತೆಯ ಹಿತವನ್ನು ಸಾಧಿಸುವುದಕ್ಕಿಂತ ತಮ್ಮ ಹಿತಸಾಧಿಸುವುದಕ್ಕೆ ಹೆಚ್ಚು ಗಮನಹರಿಸುತ್ತದಂತೆ; ಪ್ರತಿನಿಧಿಗಳು ರಾಜ್ಯದ ಹಿತಮಾಡುವುದರ ಬದಲು ರಾಜ್ಯವೆಷ್ಟರಮಟ್ಟಿಗೆ ತಮ್ಮ ಹಿತಸಾಧಿಸೀತೆಂದು ಚಿಂತಿಸುತ್ತಾರಂತೆ!

ಆಗ ಕರತೆರುವ ಪ್ರಜೆಯಾರನ್ನು ನಂಬಬೇಕು? ತನ್ನ ತಲೆಗೆ ತನ್ನ ಕೈಯೇ ಆಸರೆಯಲ್ಲವೆ?

ಆವರವರ ಚಿಂತೆಯೇ ಆವರವರಿಗೆ ಹೆಚ್ಚಿರುವಾಗ ಬೇರೆಯವರತ್ತ ಗಮನವೇಕೆ ಹರಿಯಬೇಕು? ರಾಜ್ಯ ಶಾಸಕರಾದರೂ ಇದಕ್ಕೇಕೆ ಅಪವಾದವಾಗಬೇಕು?

— ಗೋರಾ.



ನ್ಯೂಯೋರ್ಕ್ ಬಂದರಿನಲ್ಲಿ ಅಮೆರಿಕೆಯ ವಾಯುದಳದ ವಿಮಾನ ಒಯ್ಯುವ ನೂತನ ಮಾದರಿಯ ಯುದ್ಧನೌಕೆಯೊಂದನ್ನು ಇಲ್ಲಿ ಕಾಣಬಹುದು.

ಪ್ರಚಲಿತ ಪ್ರಸಂಗ

(೧ನೇ ಪುಟ ದಿಂದ)

ಸೌಹಾರ್ದ ನಿರ್ಮಾಣ ಸಮಿತಿಯು ಈ ಆರು ತಿಂಗಳಲ್ಲಿ ಯಾವುದೇ ಸಾಧನೆಯನ್ನು ಮಾಡದಿರುವುದನ್ನು ಕಾಣುವಾಗ, ಮೈಸೂರು ಕಾಂಗ್ರೆಸ್ಸು ಒಂದಾಗುವುದೇ ಇಲ್ಲವೇ ಎಂಬ ಭ್ರಮೆಯು ಹುಟ್ಟುತ್ತದೆ.

ವಿವಿಧ ಆಡಳಿತೆಯಲ್ಲಿದ್ದ ಬೇರೆಬೇರೆ ಭಾಗಗಳು ಒಂದುಸೇರಿ ರಚಿತವಾದ ಕರ್ನಾಟಕವು 'ಒಂದೇ ರಾಜ್ಯ' ಎಂಬ ಭಾವನೆಯು ಇದುವರೆಗೂ ನಮ್ಮ ಶಾಸಕರ ಮನಸ್ಸಿನಲ್ಲಿ ಮೂಡಿಬಂದಂತಿಲ್ಲ. ವಿಧಾನ ಸಭೆಯಲ್ಲಿಯೂ ಇದೇ ಮಾದರಿಯ ಪ್ರದರ್ಶನಗಳು ನಡೆಯುತ್ತಿರುವುದು ಕಂಡುಬರುತ್ತದೆ. ಮನವೊಂದಾಗದೆ ಹೋದಲ್ಲಿ ಯಾವ ಕಾರ್ಯವನ್ನು ಜತೆಯಾಗಿ ಸಾಧಿಸಲು ಸಾಧ್ಯವಿದೆ? ಇಬ್ಬರ ಜಗಳ ಮೂರನೆಯವನಿಗೆ ಆಯಿತೆಂಬಂತೆ ಆಡಳಿತ ಪಕ್ಷದ ಭಿನ್ನಾಭಿಪ್ರಾಯಗಳ ದುರ್ಲಾಭವನ್ನು ವಿರೋಧಿ ಪಕ್ಷಗಳು ಪಡೆಯುತ್ತಿರುವುದನ್ನು ನಾವು ಕಾಣುತ್ತೇವೆ. ಆಡಳಿತ ಪಕ್ಷವು ಪೂರ್ಣ ಶಕ್ತಿಯನ್ನು ಸೋಲುತ್ತಿರುವುದರಿಂದ ಸರಕಾರದ ಬಲವೂ ಹ್ರಾಸವಾಗುತ್ತದೆ; ಅವರ ಧ್ವನಿಯೂ ಕ್ಷೀಣವಾಗುತ್ತದೆ. ಬಾಯಿಯಿದ್ದ ಮಗನು ಮಾತ್ರ ಗೆಲ್ಲುವ ಈ ಕಾಲದಲ್ಲಿ ನಮ್ಮ ರಾಜ್ಯದ ಕ್ಷೀಣಸ್ವರದತ್ತ ಕಿವಿಗೊಡುವವರಾದರೂ ಯಾರು? ಎಂತಲೇ ನಮ್ಮಲ್ಲಿ ಸ್ಥಾಪನೆಯಾಗಬೇಕಾಗಿದ್ದ ಅಲ್ಯುಮಿನಿಯಂ ಕಾರಖಾನೆಯು ಮಹಾರಾಷ್ಟ್ರೀಯರ ಕೈಸೇರಿತು; ಮಂಗಳೂರು— ಕಾರವಾರ— ಮಲ್ಪೆಗಳಗೊಂದಲದಲ್ಲಿ ಪ್ರಬುದ್ಧ ಬಂದರದ ಪ್ರಶ್ನೆ ಹಿಂದೆಯೇ ಉಳಿಯಿತು ೨೦೦ಮೈಲುದ್ದದ ಸಂಪನ್ನ ಕರಾವಳಿಯಲ್ಲಿ ಮೊದಲಿದ್ದ ಮೂರು ಮೈಲು ರೈಲುದಾರಿ ನಿರ್ಮಾಣವಾಗಲಿಲ್ಲ. ಇದೇ ಮಾದರಿಯ ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದು.

ನಾವು ಅಲ್ಪತೃಪ್ತರು. ನಿಮಗಿಷ್ಟವಿದ್ದಷ್ಟು ನಮಗೆ ಕೊಡಿ ಎನ್ನುತ್ತೇವೆ; ಕೊಟ್ಟದ್ದನ್ನು ಸ್ವೀಕರಿಸಿ, ತೃಪ್ತಿಯ ಮಂದಹಾಸವನ್ನು ಬೀರುತ್ತೇವೆ. ಕವಡೆಯನ್ನು ಪಡೆದು, ಅದನ್ನೇ ಪವನೆಂದು ತಿಳಿಯುತ್ತೇವೆ. ಹೀಗಾದರೆ, ನಮ್ಮ ರಾಜ್ಯದ ಉದ್ಧಾರ ಹೇಗಾಗಬೇಕು ? ಶಾಸಕರ ವೈಯುಕ್ತಿಕ ಉದ್ಧಾರದ ಪ್ರಶ್ನೆಯತ್ತವೇ ಸಾಕಷ್ಟು ಗಮನ ಹರಿಸಲು ಅವಕಾಶವಿಲ್ಲದಿರುವಾಗ, ರಾಜ್ಯದತ್ತ ಲಕ್ಷ್ಯ ಪೂರೈಸುದೆಂತು " ಮೊದಲು ಮನೆಯಲ್ಲಿ ಮುಂದೆ ಮಸೀದಿಯಲ್ಲಿ" ಎಂಬ ಉಕ್ತಿಯನ್ನು ನಮ್ಮ ಶಾಸಕರು ಅಕ್ಷರಶಃ ಪಾಲಿಸುತಿದ್ದಾರೆಂದು ನಾವೂ ಸಂತುಷ್ಟರಾಗಬೇಕೆ? ಏಕೆ ?

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: ೧೯೨೫

ಅಧಿಕೃತ ಭಂಡವಾಳ	....	ರೂ.	1,00,00,000
ತೆತ್ತ ಮತ್ತು ಪಾಲು ಭಂಡವಾಳ	....	ರೂ.	50,00,000
ಪಾವತಿಯಾದ ಭಂಡವಾಳ	....	ರೂ.	47,02,166
ಕ್ಷೇಮ ನಿಧಿ	....	ರೂ.	34,00,000

(31—12—1959ರಂದು)

ಠೇವಣಾತಿ ರೂ. ೧೭ ಕೋಟಿಗೂ ಮಿಕ್ಕಿದೆ.
ಒಟ್ಟು ವ್ಯವಹಾರ ಸಂಪತ್ತು ರೂ. ೨೨ ಕೋಟಿಗೂ ಮಿಕ್ಕಿದೆ.
ಶಾಖೆಗಳು: ೧೩೭

ಟಿ. ಎ. ಪೈ
ಜನರಲ್ ಮೆನೇಜರ್

ಡಾ| ಟಿ. ಎಂ. ಎ. ಪೈ
ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd.,
H. O: UDIPI.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ.

ವರುಷ ೩೯. ವಾರ ೩೦ 31-3-1960 Vol. 39 No. 30.

ಪ್ರಚಲಿತ ಪ್ರಸಂಗ

ದಕ್ಷಿಣ ಆಫ್ರಿಕೆಯಲ್ಲಿ ಮಾನವ ಮೇಧ

ನಾಗರಿಕ ಪ್ರಪಂಚದಲ್ಲಿ ಮಾನವತೆಗೆ ಪಂಥಾಹ್ವಾನವಿತ್ತ ಆಫ್ರಿಕೆಯ ಪ್ರಧಾನಿ ಶ್ರೀ ವೆರ್‌ವಾಲ್ಡರ ವರ್ಣಭೇದ ನೀತಿಯು ಖಂಡಿತಕ್ಕೂ ಖಂಡನಾರ್ಹ.

ಪ್ರಪಂಚದಲ್ಲಿ ವರ್ಣಭೇದ ನೀತಿಯನ್ನು ಬಿಗಿಯಾಗಿ ಆಧರಿಸಿಕೊಂಡು ಇದನ್ನೇ ಬಲವಾಗಿ ಅಂಟಿಕೊಂಡಿರುವ ದಕ್ಷಿಣ ಆಫ್ರಿಕೆಯತ್ತ ವಿಶ್ವದ ಎಲ್ಲ ರಾಷ್ಟ್ರಗಳ ಗಮನವೀಗ ಹರಿದಿದೆ. ವರ್ಣಭೇದ ಪಾಸು ಪದ್ಧತಿಯನ್ನು ವಿರೋಧಿಸಿ ಪಾನ್ ಆಫ್ರಿಕನ್ ಪಕ್ಷದವರು ತೊಡಗಿದ್ದ ಚಳವಳವನ್ನು ಎದುರಿಸಲು ಸರಕಾರವು ತನ್ನ ಬಲ ಪ್ರಯೋಗವನ್ನೇ ಮಾಡಬೇಕಾಗಿ ಬಂತು. ಈ ಮರ್ದನ ಕಾರ್ಯಕ್ರಮದಲ್ಲಿ ಸಾವಿರಾರು ಜನರು ಗಾಯಗೊಂಡಿರುವುದು ಮಾತ್ರವಲ್ಲ, ನೂರಾರು ಜನರು ಕೊಲೆಯಾಗಿರುವರು ಶರ್ಪೆವಿಲ್ಲ ಮತ್ತು ಲಂಗಾಗಳಲ್ಲಿ ನಡೆದಿರುವ ಹತ್ಯಾಕಾಂಡವು ಮಾನವತೆಯನ್ನೂ ನಾಗರಿಕ ಪ್ರಪಂಚವನ್ನೂ ಅಹ್ವಾನಿಸುವ ಮಾದರಿಯದ್ದಿದೆ. ಇಂತಹ ಅಮಾನುಷವೆನಿಸಿದ ರಾಕ್ಷಸೀ ಕೃತ್ಯವನ್ನು ಕೇವಲ ವರ್ಣಭೇದ ನೀತಿಯನ್ನು ಆಧರಿಸಿಕೊಂಡು, ಇಂದಿನ ಕಾಲದಲ್ಲೂ ದಕ್ಷಿಣ ಆಫ್ರಿಕೆಯು ಗೈದುದನ್ನು ಕಾಣುವಾಗ, ಕೇಳುವಾಗ ಸಾಮಾನ್ಯ ನಾಗರಿಕನೊಬ್ಬನು ಲಜ್ಜಾವನತನಾಗಲೇ ಬೇಕಾಗಿದೆ.

ದಕ್ಷಿಣ ಆಫ್ರಿಕೆಯ ಪ್ರಧಾನ ಮಂತ್ರಿಯವರು ಇನ್ನೂ ತಮ್ಮ ನೀತಿಯನ್ನು ಸಡಿಲುಗೊಳಿಸುವ ಯೋಜನೆಯನ್ನು ಮಾಡದೆ, ಚಳವಳವನ್ನು ಮುಂದುವರಿಸುವ ಪಾನ್ ಆಫ್ರಿಕನ್ ಪಕ್ಷವೇ ಮೊದಲಾದ ಆಫ್ರಿಕನರ ಗುಂಪುಗಳನ್ನು ಒಡೆಬಡಿಯುವ ಸಲುವಾಗಿಯೇ ಪ್ರಯತ್ನವನ್ನು ಮುಂದುವರಿಸುತ್ತಿರುವರು ಎಂಬುದು ಶ್ರೀ ವೆರ್‌ವಾರ್ಡರು ಮಾನವತೆಯನ್ನು ತಿರಸ್ಕೃತ ದೃಷ್ಟಿಯಿಂದ ಕಾಣುತ್ತಿರುವರೆಂಬುದಕ್ಕೊಂದು ಬಲವಾದ ನಿದರ್ಶನವಾಗಿದೆ. ಮೂಲತಃ ಆಫ್ರಿಕನರ ದೇಶದಲ್ಲಿ ಬಿಳಿಯರು ಅನ್ಯದೇಶದಿಂದ ಬಂದು, ನೆಲಸಿದುದು ಮಾತ್ರವಲ್ಲ, ಆಫ್ರಿಕನರ ಮೇಲೆ ಪ್ರಭುತ್ವವನ್ನೂ ಜಮಾಯಿಸಿಕೊಂಡ, ಈಗ ಅಂತಹ ಮೂಲ ದೇಶಸ್ಥರ ತಲೆಯ ಮೇಲೆ ಏರಿ ಕೂರಿ ಸವಾರಿಮಾಡುತ್ತಿರುವುದು ಇಂದಿನ ಯುಗಧರ್ಮಕ್ಕೆ ಎಂದೆಂದಿಗೂ ಶೋಭೆಯನ್ನು ತಂದೀಯಲಾರದು. ದಕ್ಷಿಣ ಆಫ್ರಿಕೆಯು ಸದ್ಯ ತನ್ನ ವರ್ತನೆಯಿಂದ ವಿಶ್ವದ ಮಾನವತಾವಾದಿ ರಾಷ್ಟ್ರಗಳ ತಿರಸ್ಕಾರವನ್ನು ಕಟ್ಟಿಕೊಳ್ಳುವುದು ಖಂಡಿತವೇ.

ಬಿಳಿಯರು-ಕರಿಯರು ಎಂದು ಮಾನವರನ್ನು ವರ್ಣದ ಆಧಾರದಿಂದ ವಿಭಜಿಸುವ ಕಾಲವೀಗ ಸಂದು, ವಿಶ್ವ ಕುಟುಂಬತನದ ಭಾವನೆ ಬಲವಾಗಿ ಬೆಳೆಯುತ್ತಿದೆ. ಮಾನವತೆಯೆಂಬುದು ಒಂದು ಜಾತಿಗಾಗಲಿ, ಮತಕ್ಕಾಗಲಿ, ಬಣ್ಣಕ್ಕಾಗಲೀ ದೇಶಕ್ಕಾಗಲಿ ಮೀಸಲಾಗಿರುವುದಲ್ಲ, ಸಮಸ್ತ ವಿಶ್ವದ ಎಲ್ಲ ನಾಗರಿಕರಿಗೂ ಸಮಾನತೆಯಿರುವುದೆಂದು ಮುಂದುವರಿದ ಜಗತ್ತು ಒಪ್ಪಿಕೊಂಡಿದೆ. ಈ ವಿಶ್ವಮಾನ್ಯ ತತ್ವವನ್ನಳಿದು ತಮ್ಮ ಹಳೆಯ ನೀತಿಯನ್ನೇ ಮುಂದುವರಿಸಿಕೊಂಡೊಯ್ಯುವ ಘೋರ ಹಟವೆಂದರೆ ಹೇಯವಾದುದು. ದಕ್ಷಿಣ ಆಫ್ರಿಕೆಯ ವಿರುದ್ಧವಾಗಿ ಎದ್ದ ಚಳವಳವು ನ್ಯಾಯೋಚಿತವಾದುದು. ಇದರ ಹಿಂದೆ ಆಫ್ರಿಕೆಯ ಹಾಗೂ ಇತರ ದೇಶಗಳ ಮಾನವತಾ ಪ್ರೇಮಿಗಳ ಸಹಕಾರ ಹಸ್ತವಿದೆ ಎಂತಲೇ ಈ ಚಳವಳವನ್ನು ಪ್ರಶಂಸಿಸುವ, ಸಮರ್ಥಿಸುವ ಹೇಳಿಕೆಗಳು ಹೊರಟಿವೆ.

ಭಾರತದ ಲೋಕಸಭೆಯಲ್ಲೂ ದಕ್ಷಿಣ ಆಫ್ರಿಕೆಯ ವರ್ಣವಿರೋಧಿ ನೀತಿಯನ್ನು ಖಂಡಿಸುವ ಚಳವಳದ ಪ್ರತಿಧ್ವನಿ ಕೇಳಿಬಾರದುಳಿಯಲಿಲ್ಲ. ಪ್ರಧಾನಿ ನೆಹರೂ ಅವರು ಅಲ್ಲಿ ನಡೆದ ಕಗ್ಗೊಲೆಯನ್ನು, ಸರಕಾರದ ಅಮಾನುಷ ನೀತಿಯನ್ನು ಖಂಡಿಸಿ, ಈ ಪ್ರಕರಣವನ್ನು 'ಜಾಲಿಯನ್ ವಾಲಾಬಾಗ್' ಘಟನೆಗೆ ಹೋಲಿಸಿದರು. ಕರಿಯರು—ಬಿಳಿಯರು ಎಂಬ ಭೇದಭಾವವನ್ನು ನಾವಿಟ್ಟುಕೊಂಡಿರುವಷ್ಟು ಕಾಲ ಎಲ್ಲರೂ ಒಂದೇ ಆಗುವುದೆಂತು ಎಂದು ಪ್ರಶ್ನಿಸಿ, ಭಾರತದ ಸಹಾನುಭೂತಿಯನ್ನು ಪ್ರದರ್ಶಿಸಿದರು.



ಆಕಾಶವಾಣಿ ಎಟ್ಲಾಸ್‌ಗೆ ಮೂರನೆಯ ಯಂತ್ರ ಸ್ತೋಮವನ್ನು ಜೋಡಿಸಿ ಆಕಾಶದಲ್ಲಿ ಅಮೇರಿಕೆಯು ಹಾರಿಸಿತು.

ಈ ಚಳವಳದ ಉದ್ದೇಶವಾದರೂ ಏನು? ಆಫ್ರಿಕನರು ಯುರೋಪಿಯನ್ ನಾಗರಿಕತೆಯನ್ನು ಸ್ವೀಕರಿಸಿಬಿಟ್ಟಿರುತ್ತಾರೆ. ಆದರೆ, ಬಿಳಿಯರು ಅವರಿಗೆ ಯಾವ ನಾಗರಿಕಾಧಿಕಾರವನ್ನೂ ನೀಡಲು ಸಿದ್ಧರಾಗಿಲ್ಲ. ಚಳವಳದ ನಾಯಕರು ಬರೆಯುವ ಮಾತುಗಳಲ್ಲಿಯೇ ಹೇಳುವುದಾದರೆ, ನಾವು ನಿಮ್ಮನ್ನು ಇಲ್ಲಿಂದ ಓಡಿಸಲು ಬಯಸುವುದಿಲ್ಲ. ನಿಮ್ಮ ಸೋದರಿಯರನ್ನು ಮದುವೆ ನಿಲ್ಲುವ ಆಸೆಯೂ ಇಲ್ಲ. ನಮ್ಮದೇ ಆದ ದೇಶದಲ್ಲಿ ನಾವು ಸದ್ಭಾವ ಹಾರೈಸಿ ಕೈಗೊಳ್ಳಲು ಅಪೇಕ್ಷಿಸುತ್ತೇವೆ. ವರ್ಣವಿದ್ವೇಷಿಗಳಲ್ಲಿ ಒಂದು ಸರಿಯಾದ ತಿಳುವಳಿಕೆ ಮೂಡದೆ ಹೋದರೆ, ಈ ಕಲಹ ಯಾವ ರೀತಿ ಕೊನೆಗಾಣುವುದೆಂದು ಹೇಳಬರುವುದಿಲ್ಲ. ಇಂದು ದಕ್ಷಿಣ ಆಫ್ರಿಕೆಯ ಪ್ರಧಾನಿಗಳ ಮನಸ್ಸಿನಲ್ಲಿರುವುದೆಲ್ಲವನ್ನೂ ಅವರು ಕಾರ್ಯಕೃತಗೊಳಿಸಬಹುದು, ಚಳವಳವನ್ನವರು ಒಂದು ಬಗೆಗೆ ದಮನಗೊಳಿಸಲೂ ಸಮರ್ಥರೂ ಆಗಬಹುದು, ಆದರೆ, ಈ ರಕ್ತ-ಕಣ್ಣೀರಿನಿಂದ, ಮನುಷ್ಯನೂ ಸಮಾನ ವರ್ಣನೀತಿವಿರೋಧ ಚಳವಳದ ಘಟನೆಯಿಂದ ತುಸು ವಿಚಲಿತಗೊಂಡಿರುವನೆಂದೂ, ಇದರಿಂದ ಸುಧಾರಿತ ನೀತಿಯನ್ನು ಅನುಸರಿಸಬಹುದೆಂದೂ ಊಹಿಸಲು ಅವಕಾಶವಿದೆ. ಏಕೆಂದರೆ, ಆಫ್ರಿಕದ ಬಿಳಿಯರಿರಲಿ ಕರಿಯರಿರಲಿ, ತಮ್ಮ ವರ್ಣಭೇದವನ್ನು ತೊರೆಯದ ಹೊರತು ಉನ್ನತಿಗೇರುವುದು ಅಸಾಧ್ಯ.

ಈ ಹತ್ಯಾಕಾಂಡವನ್ನು ಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯಲ್ಲಿ ಚರ್ಚಿಸಲು ಆಫ್ರೋ-ಏಷ್ಯಗಳ ೨೯ ರಾಷ್ಟ್ರಗಳು ಮನವಿಮಾಡಿಕೊಂಡಿವೆ. ಸದ್ಯ ಮಂಡಳಿಯ ಅಧ್ಯಕ್ಷರಾದ ಅಮೇರಿಕೆಯ ಶ್ರೀ ಹೆನ್ರಿ ಕಾಬಟ್ ಲಾಜರು ಇದಕ್ಕೆ ಸಮ್ಮತಿಸಿದ್ದಾರೆ. ಇಷ್ಟರಲ್ಲಿಯೇ ಹತ್ಯಾಕಾಂಡದ ಬಗ್ಗೆ ಬೇರೆ ಬೇರೆ ರಾಷ್ಟ್ರಗಳು ಭದ್ರತಾ ಸಮಿತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ. ಅಮೇರಿಕವೂ ದರೂ ತನ್ನ ಇದುವರೆಗಿನ ನೀತಿಯಂತೆ ದಕ್ಷಿಣ ಆಫ್ರಿಕದ ಅಮಾನುಷ ಕೊಲೆಯ ಪ್ರಕರಣಗಳನ್ನು ಖಂಡಿಸುವುದೆಂದೂ ತಿಳಿಯುತ್ತದೆ. ಆದರೆ, ಇಲ್ಲಿ ಏಳುವ ಪ್ರಶ್ನೆಯೊಂದೇ: ಶ್ರೀ ವೆರ್‌ವಾಲ್ಡರು ಹೇಳುವಂತೆ ವರ್ಣವಿರೋಧ ಚಳವಳ ಅಥವಾ ಹತ್ಯಾಕಾಂಡಗಳು ದಕ್ಷಿಣ ಆಫ್ರಿಕೆಯ

(೬ನೇ ಪುಟ ನೋಡಿರಿ)

ಕಥಾವಿಹಾರ

ಒಗಟು ಬಿಡಿಸ ಹೊರಟಾಗ...!

ತನ್ನ ಜೀವನದ ಕಥೆಯನ್ನು ಜನರಿಂದ ರಮೆ ಮರೆಮಾಚಿದರೂ ವರ್ತನೆಯಿಂದ ತಿಳಿಸಿದಳೆಂದು ಸಮಾಜ ತೃಪ್ತಿಗೊಂಡಿತು; ಆದರೆ ನಾನು ...?

ನಡೆನಡೆದು ಕಾಲುಗಳು ಸೋತಿದ್ದುವು. ಜೊತೆಯಲ್ಲಿ ರಮೆಯಾದರೂ ಇದ್ದಿದ್ದರೆ, ಕಾಲಿನ ನರಳಾಟವೇ ಕೇಳಿಸದು. ಆದರೆ, ಇಂದು ಒಬ್ಬಂಟಿಗನಾಗಿ ಆಫೀಸಿಗೆ ಹೊರಟಿದ್ದೆ. ಕೆಲಸಕ್ಕೆ ಸೇರಿ ಇನ್ನೂ ತಿಂಗಳು ಮೀರಿಲ್ಲ; ಸೈಕಲು ಕೊಳ್ಳುವಷ್ಟು ಹಣ ನನ್ನಲ್ಲಿ ಎಲ್ಲಿಂದ ಬರಬೇಕು? ಮನೆಯಿಂದ ಒಂದೆರಡು ಚೌಕ ದಾಟಿದರೆ, ಮತ್ತೂ ಉಳಿಯುತ್ತದೆ—ಅರ್ಧ ಮೈಲು! ಅಷ್ಟನ್ನೂ ಕಾಲೆಳೆದುಕೊಂಡೇ ಹೋಗಬೇಕು. ಕೆಲಸ ಸಿಕ್ಕದೇ ಒಂದೆರಡು ತಿಂಗಳು ಬೇಂಕು, ಕಛೇರಿ, ಆಫೀಸು ಎಂದು ಹತ್ತಿ ಇಳಿದು "ನೋ ವೇಕೆನ್ಸಿ" ಎನ್ನಿಸಿಕೊಂಡು ಅಲೆದದ್ದು ನನ್ನ ಜೀವನದ ಸುದೀರ್ಘ ಪ್ರಯಾಣವಾಗಿತ್ತು. ದಿನವೂ ನಾವಿಬ್ಬರು ಒಟ್ಟಿನಿಂದಲೇ ಹೋಗಿ ಒಡನೊಡನೆಯೇ ಮನೆ ಸೇರುತಿದ್ದೆವು ರಮೆಯು ನನಗಿಂತಲೂ ಒಂದು ವರ್ಷ ಮೊದಲು ಗುಮಾಸ್ತೆಯಾದಾಕೆ. ದಿನವೂ ನಮ್ಮಲ್ಲಿಗೆ ಬಂದು ನನ್ನನ್ನು ಕರೆದುಕೊಂಡು ಹೋಗುತಿದ್ದಾಕೆ ಇಂದು ತಡಮಾಡಿಯೂ ಬಂದಿರಲಿಲ್ಲ; ನನ್ನಲ್ಲಿಯೂ ಉತ್ಸಾಹವಿರಲಿಲ್ಲ. ರಮೆಗಾಗಿ ಕಾದೆ.... ಕಾದೆ.... ಸಮಯ ಸರಿಯುತಿತ್ತು. ಇನ್ನು ಓಡುತ್ತ ಏದುತ್ತ ಹೋದರೂ ಆಫೀಸಿಗೆ ಲೇಟ್. ದಣ್ಣಗಿಳಿದೆ. ಮಾರ್ಗಗಾಮಿಯಾದೆ. ಆದರೆ, ತಲೆಯಲ್ಲಿ ಹುಳವೊಂದು ಕೊರೆಯುತಿತ್ತು: "ರಮೆ ಯೇಕೆ ಬರಲಿಲ್ಲ?" ತಿರುವು ಮುರುವುಗಳನ್ನೆಲ್ಲಾ ರಭಸದಿಂದಲೇ ದಾಟಿ ಆಫೀಸು ಕಟ್ಟಡ ಮಸಕುಮಸಕಾಗಿ ಕಾಣಿಸುತ್ತಿರುವಾಗ ಸಿಕ್ಕುವುದು ಡಾ| ಶ್ಯಾಮರಾಯರ ದವಾಖಾನೆ.

"ಮಿ| ಶೇಖರ್, ನಾನು...." —ಹೆಂಗಸಿನ ಸ್ವರ, ಅದೂ ಚಿರಪರಿಚಿತ! ಆದುದರಿಂದ ತಿರುಗಿ ನೋಡಿದೆ. ಶ್ಯಾಮರಾಯರ ಮೇಜಿನ ಮುಂದೆಕ್ಕೆ ನಿಂತಿದ್ದ ರಮೆಯ ಬೆನ್ನ ಪಕ್ಕ ಕಾಣಿಸಿತು. ನಾನು ಮುಖದತ್ತ ತಿರುಗಿದೆ. ಹೌದು, ಆಕೆ ರಮೆಯೇ. ಮುಖದಲ್ಲಿ ಎಂದಿರುವ ಮಂದಹಾಸವಿಲ್ಲ; ಮುಂಗುರುಳು ಮಲಿನವಾಗಿ ಮುಖದ ಮೇಲೆ ಜೋಕಾಲಿಯಾಡುತಿದ್ದುವು. ಸಾದಾ ಸೀರೆಯಲ್ಲೇ ಆಕೆ ಬಂದಿದ್ದಳು. ಏಕಾಗಿ? ಇನ್ನುಳಿದುದು ಕೇವಲ ಐದೇ ನಿಮಿಷ. ಅದರೊಳಗೆ ಆಫೀಸಿನ ಕುರ್ಚಿಯಲ್ಲಿ ಮಂಡಿಸದಿದ್ದರೆ, ಹಕ್ಕಿನ ರಜೆಯೂ ಜಾರಿಹೋಗುತಿತ್ತು. ಅದಕ್ಕೂ ನಗೆ ಹೆದರಿಕೆ. ಶಾಮರಾಯರ ಪ್ರಶ್ನೆಗಳಿಗೆ ಆಕೆ ನಿಧಾನವಾಗಿ ಉತ್ತರಿಸುತಿದ್ದುದು ಕೇಳುತಿತ್ತು. ಅಸ್ಪಷ್ಟವಾಗಿತ್ತದು. ನಾನು ರಸ್ತೆಯ ಪಕ್ಕದಲ್ಲಿ ನಿಂತಿದ್ದೆ.

ರಮೆ ಕೈಗಡಿಯಾರ ನೋಡಿ "ಶೇಖರ್, ನಿಮಗೆ ಆಫೀಸಿಗೆ ತಡವಾಗದೆ? ನಾನಂತೂ ಇಂದು ರಜೆ; ನಾಳೆ ಬರುತ್ತೇನೆ" ಎಂದಳು. ನನಗೂ ಅಲ್ಲಿಂದ ಕಂಬಿ ಕೀಳಬೇಕಾಗಿತ್ತು ಎನ್ನಿ. ಶಿರಿಯೆಂದು ತಲೆಯಾಡಿಸಿ ಧಾವಿಸಿದೆ, ಮುಂದೆ. ಸೇದೆ ರಮೇಶ ನಗುತ್ತ ಹೇಳಿದ ಆಫೀಸು ಬಾಗಿಲಲ್ಲಿ—"ತಾವೊಬ್ಬರೇ ಬಂದೀರಲ್ಲಾ?" ಆಕೆಯನ್ನು ಅಕ್ಕನೆಂದು ಸಂಬೋಧಿಸಿ ಆತ್ಮೀಯತೆಯನ್ನು ತಂದುಕೊಂಡು ಅವಳೊಡನೆಯೇ ಬಂದು, ಆಕೆಯೊಡನೆಯೇ ಮರಳುತಿದ್ದ ನನ್ನೊಡನೆ ಆತ ಹಾಗೆಂದುದರಲ್ಲಿ ವಿಶೇಷವೇನೂ ಇರಲಿಲ್ಲ. "ಎಷ್ಟು ಕೆಲಸವೋ ಅಷ್ಟು ಮಾಡು" ಎಂದು ಅಂದು ನಾನತ್ತ ಹಾರಿದುದೇ ಆತ, "ಬೇಡವಪ್ಪಾ ನಗುಮುಖದವರು ಕೋಪಿಸ್ತಾರು" ಎಂದಂದು ನಡೆದುಬಿಟ್ಟ. ರಮೆಗೆ ನಮ್ಮ ಮನೆಯವರ ಪರಿಚಯು ಸಾಕಷ್ಟಿತ್ತು. ಆದರೆ, ಆಕೆಯದು? ಅದೊಂದು ಸಮಸ್ಯೆಯೇ. ಆಕೆ ಅದನ್ನು ಯಾಕಾಗಿ ಮರೆಮಾಚುವಳು? ಇಂದು ಔಷಧಿಯೆಂದು ಕೊಂಡು ಹೋದಳಲ್ಲಾ, ಯಾರಿಗಾಗಿರಬಹುದು? ತಾಯಿಗಿರಬಹುದೆ? ಪತಿಯಂತೂ ಇಲ್ಲವೇ ಇಲ್ಲ—ಆಕೆ ಹಾಗೆಂದಿದ್ದಳು. ಆದರೂ ಯಾರಿಗೆ? ಏನಾಗಿದೆ?

ನನ್ನ ಕೆಲಸ ಮಾತ್ರವಲ್ಲ, 'ಅಕ್ಕ'ನ ಕೆಲಸವೂ ಅಂದು ನನ್ನ ಪಾಲಿಗೆ ಬಂದಿತು. ಎಲ್ಲರೂ ನನ್ನೊಡನೆ ಕೇಳುವವರೇ: "ರಮೆಯೇಕೆ ಬರಲಿಲ್ಲ?" ನಮ್ಮಿಬ್ಬರ ಸಂಮಿಳನ ಕಂಡವರು ಕೇಳಿದರೂ ತಪ್ಪೇನು? ಆದರೂ ಇದಕ್ಕೆ ಉತ್ತರ ನನಗರಿತಿದ್ದರೆ ತಾನೆ? ನಮ್ಮಲ್ಲಿಲ್ಲದುದನ್ನು ಪರರಿಗೆ ಎಂತು ಕೊಟ್ಟೇವು? ನನ್ನ ತಲೆ ಸರಿಯಲೇ ಇಲ್ಲ. ಆದರೂ ನಾಳೆ ಆಕೆ ಬರುವಳು; ಎಲ್ಲ ವಿಚಾರವನ್ನೂ, ಇದುವರೆಗೆ ಮರೆಮಾಚಿದ ಸಂಗತಿಗಳನ್ನೂ ಕೇಳಿ ತಿಳಿದುಕೊಳ್ಳೋಣವೆಂದು ಸುಮ್ಮಗಾದೆ. ಮನೆ ತಲಪುವಾಗಲೂ ತಡವಾಗಿತ್ತು. ನನ್ನ ತಾಯಿ ಕೇಳಿದರು: "ಶೇಖರ, ಇಂದೇನು ತಡ? ರಮೆಯೆಲ್ಲಿ?" ಇದಕ್ಕೇನೆನ್ನಲಿ? ಕಾಫಿ ಕುಡಿದು ದಿನಪತ್ರಿಕೆ ನುಗುಚುವ ಸಮಯ ಸಂದಿತು. ವಿಷಯ ಮಾತ್ರ ಪತ್ರಿಕೆಯಲ್ಲೇ ಉಳಿಯಿತು. ಮಧ್ಯೆ 'ರಮೆಯೇಕೆ ಬರಲಿಲ್ಲ?' ಎಂಬ ಉದ್ಗಾರ ಬಿಸಿಯುಸಿರೊಡನೆ ಬರುತಿತ್ತು. ದೀಪ ಹೊತ್ತಿಸಿದೆ. ಕೋಣೆಯಲ್ಲಿ ಬೆಳಕು ತುಂಬಿತು. ಹೊರಗಿನಿಂದ ಕೂಗಿದ ಸದ್ದು! "ಶೇಖರ ಇದ್ದಾರೆಯೆ?"

ಛೇ, ರಮೆಯೇ ಬಂದಿದ್ದಳು ನಮ್ಮ ಮನೆ ಬಾಗಿಲಿಗೆ "ಏನಕ್ಕಾ, ನೀನು ... ಇಲ್ಲಿ?" ಹಾಹಾಕಾರ ಕೇಳಿದೆ. ಅದೇ ಭಾವ! ಅದೇ ರೀತಿ! ಅದೇ ದೈನ್ಯ! ಏನು ಬದಲಾಯಿಸಿದ್ದಾಳೆ ರಮೆ! ಅದೇ ಮಲಿನ ಸೀರೆ. ತಲೆಗಿನ್ನೂ ಬಾಚಣಿಗೆ ತಾಗಿದಂತಿಲ್ಲ "ಶೇಖರ, ಅಣ್ಣನೆಂದರೂ ನೀವೇ; ತಮ್ಮನೆಂದರೂ ನೀವೇ. ಒಮ್ಮೆ ನನ್ನ ಮನೆಯತ್ತ ಬಂದು ಹೋಗಲಾರಿರಾ? ..." ಅಳುತ್ತ ಮುಖ ಕೆಳಗೆ ಮಾಡಿ ಕೇಳಿದಳು. ತಾಯಿಯೊಡನೆ ಈಗ ಬಂದೆ ... ವ. ಅಂದು ಆಕೆಯ ಬೆನ್ನ ಹಿಂದೆ ... ಟೆ. ರಮೆಗೆ ಮದುವೆಯಾಗಿರಬಹುದೆ ... ಮಗುವಿಗೆ ಬೇನೆಯಿರಬಹುದೇ?... ... ದು ಮುಂತಾದ ಹುಚ್ಚು ಲಹರಿಗಳ ... ಯಾಟ ನಡೆಯುತಿತ್ತು, ನನ್ನ ಮ... ಮಂಡಳದಲ್ಲಿ.

ಓಣಿಯ ಪಕ್ಕದಲ್ಲೇ ಆಕೆಯ ಮನೆ ... ಮನೆಯೆಂದರೇನು? ಒಂದು ಕೋಣೆ ... ದನ್ನೇ ... ದ್ದಳಾಕೆ. ನನ್ನನ್ನು ಒಂದು ಕುರ್ಚಿಯ ... ಕುಳ್ಳಿರಿಸಿ ಒಳಕ್ಕೆ ಹೋದಳಾಕೆ. ಕೋಣೆ ... ಯನ್ನೆಲ್ಲಾ ಪರೀಕ್ಷಿಸಿದೆ—ಒಂದು ... ರಮೆಯೊಡನೆ ಯಾರೋ ನಿಂತ ... ತೂಗುತಿತ್ತು. ಖಂಡಿತವಾಗಿ ಆಕೆ ವಿ... ಹಿತೆಯಿರಬೇಕು. ನನಗದು ಅನಿರೀಕ್ಷಿ... ವಾಗಿತ್ತು. ಕಾಫಿಯೊಡನೆ ಬಂದು ... ಜೇಡನೆಂದರೂ ಕೇಳದೆ '... ಯಾಕಾಗಿ ಅಕ್ಕನಮನೆಗೆ ಬಂದಿರಿ?' ... ದು ಬೋಟವಿತ್ತಳು. ಕಾಫಿ ಕುಡಿದ ... ನಂತರ ನನ್ನನ್ನ ಕರೆದುಕೊಂಡು ಒಳ... ಹೋದಳು. ಜಮಗೆ ಮನೆಯ ಪಕ್ಕ... ತೇಕುವ ಅಸ್ಥಿಪಂಜರದ ಮುಂದೆ ನ... ನ್ನು ನಿಲ್ಲಿಸಿ ಆಕೆ ಗೋಳೋ ಎಂದು ಅ... ಳು. ಮರಣಶಯ್ಯೆಯಲ್ಲಿ ಮಲಗಿದ್ದ ... ರುಷ ಆಕೆಯ ಪತಿಯಂತೆ! 'ರಮ... ಯಾರಿವರು?' ಎಂದು ಕೇಳಿದರು ... ಕೊಂಡಿದ್ದರಂತಲೇ. "ಇವರು ... ನನ್ನ ತಮ್ಮನಂತಿರುವವರು" —ನನ್ನ ಪ... ಚಯವನ್ನು ಚುಟುಕಿನಲ್ಲಿ ಅವರಿಗೆ ಹೇ... ದಳು. ನಾನು ದಿಕ್ಕೇಕಾಣದೆ ವಿಸ್ಮ... ನೇತ್ರನಾಗಿ ನಿಂತುಕೊಂಡಿದ್ದೆ.

"ಭಾವ ಕೊನೆಯುಸಿರು ಎಳೆಯು... ತ್ತಿರುವುದನ್ನು ನೋಡಬಂದರೆ?"—ಆ... ನ ಹೃದಯಾಘಾತದ ಪ್ರತಿಧ್ವನಿಯಿ... "ಇಲ್ಲವೆನ್ನು ಅಕ್ಕಾ" ನನಾಕೆಗೆ ಧೈ... ರ್ಯದುಂಬುವ ಪ್ರಯತ್ನ ಮಾಡಿದೆ. ಆ... ನೆರಗನ್ನು ಮುಖಕ್ಕೆ ಅತ್ತುಹಿಡಿದು ... ಳು. ಆ ಅಳುವಿನ ಹಿಂದೆ "ಇವರನ್ನು ... ಳಿಸಲಾರೆಯಾ?" ಎಂಬ ಪ್ರಶ್ನೆ ... ದ್ದಂತೆ ತೋರಿತು. ರಮೆಯ ಗಂಡ ಬ... ಕು ಸಾವುಗಳ ನಡುವೆ ಉಯ್ಯಾಲೆ... ತಿದ್ದ. ಸಾವಿನ ದವಡೆಯಲ್ಲಿದ್ದವನನ್ನು ... ರದ ನಾನು ತುಸು ಅಂಜಿದೆ; ಅಳುಕಿದೆ. ನಿಸ್ತೇಜವಾಗಿ ನಿರಾಧಾರವಾಗಿ, ನಿಂ... ವಾದಿಯಾಗಿ, ನೀರ ಮೇಲಣ ಬುದ್ಬುದ... ವಾಗಿ ಹೊಯ್ದಾಡುತ್ತಿರುವ ಆತ ಈ... ಲೋ ಮತ್ತೆಯೋ ಎಂಬಂತಿದ್ದ. ರಮೆ... ನಾನೊಬ್ಬ ಆಧಾರವೆಂದು ಕಂಡುಬಂದಿ... ಬೇಕು. ಆದರೆ, ಸಾಗರದಲ್ಲಿ ಮುಳುಗ...

(೧೧ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಸುಖನಿದ್ರೆ

ಶರೀರದ ಸ್ವಾಭಾವಿಕ ಯಾಚನೆ—ಸುಖನಿದ್ರೆ

ನಿಮ್ಮ ಜೀವನದಲ್ಲಿ ಈ ಹದಿಮೂರು ಸೂತ್ರಗಳನ್ನು ವ್ಯವಹೃತಗೊಳಿಸಿಕೊಂಡರೆ, ನಿಮ್ಮನ್ನು ನಿದ್ರಾದೇವಿಯು ಸಂತೋಷದಿಂದ ಆಲಂಗಿಸುವಳು.



ಚಿಕಾಗೋದಿನ ಮಿಚಿಗನ್ ಸರೋವರದಲ್ಲಿ ನೀರಹಾರಾಟವನ್ನು ಅಭ್ಯಸಿಸುತ್ತಿರುವ ಶ್ರೀ ಬಸ್ಟರ್ ಮೆಕಲಾ.

ಸುಖನಿದ್ರೆಯನ್ನು ಬಯಸದಿರುವವರಾರು? ಎಲ್ಲರಿಗೂ ನಿದ್ರೆ ಮಾತ್ರವಲ್ಲ, ಸುಖನಿದ್ರೆ ಬೇಕು. ಆದರೆ, ಈ ಸುಖ ಸುಷುಪ್ತಿಯನ್ನು ಹೇಗೆ ಪಡೆಯಬಹುದು?

ನೀವು ಒಳ್ಳೆಯ ನಿದ್ರೆಯನ್ನು ಬಯಸುವಿರಾದರೆ, ನಿಯಮಿತ ಸಮಯಕ್ಕೆ ಸರಿಯಾಗಿ ಮಲಗುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಕೆಲವರು ಆಯಾಸಗೊಂಡು ಶರೀರ ದಣಿಯುವ ವರೆಗೂ ಕೆಲಸ ಮಾಡುತ್ತಾರೆ; ಓದುತ್ತಾರೆ; ಬರೆಯುತ್ತಾರೆ. ಇದರಿಂದಾಗಿ ಅವರ ಮೆದುಳು ಯಾವುದೋ ಒಂದು ವಿಷಯದ ಸುತ್ತ ತಿರುಗುತ್ತಿರುತ್ತದೆ. ಮಲಗಿದರೂ ಶೀಘ್ರ ನಿದ್ರೆ ಬಂದರೂ ಅವರು ಬಹು ಬೇಗನೇ ಜಾಗ್ರತರಾಗುತ್ತಾರೆ. ಆದುದರಿಂದ ಸುಲಭದಲ್ಲಿ ಸುಖನಿದ್ರೆಯಲ್ಲಿ ಮೈಮರೆಯಬೇಕಾದರೆ, ನೀವು ಈ ತ್ರಯೋದಶಸೂತ್ರಗಳನ್ನು ಅವಶ್ಯ ಪಾಲಿಸಬೇಕು.

೧. ಮಲಗುವುದಕ್ಕೆ ಮೊದಲು ಮನೆಯ ಬಾಗಿಲು; ಪೆಟ್ಟಿಗೆ ಇತ್ಯಾದಿಗಳಿಗೆ ಕೊಂಡಿ ಸಿಕ್ಕಿಸಿದೆಯೇ, ಬೀಗ ಜಡಿದಿದೆಯೇ ಎಂದು ನೋಡಿಕೊಳ್ಳಿರಿ. ನೀರಿನ ನಳ್ಳಿ, ವಿದ್ಯುದ್ದೀಪಗಳನ್ನು ಮುಚ್ಚಿಬಿಡುವುದು ಅಥವಾ ಚಿಮಣಿ ದೀಪಗಳನ್ನು ನಂದಿಸುವುದು ಕೊಡಪಾನಾದಿಗಳನ್ನು ಒಳಗೆ ಮಡಗುವುದಕ್ಕೆ ಮರೆಯಬೇಡಿರಿ. ತಿನ್ನುವ ಪದಾರ್ಥಗಳು, ಓದುವ ಪುಸ್ತಕಾದಿಗಳು ಯೋಗ್ಯ ರೀತಿಯಲ್ಲಿ ಇಟ್ಟಿವೆಯೋ ಎಂದು ನೋಡಿಕೊಳ್ಳಿರಿ.

೨. ಹಗಲು ಹೊತ್ತಿನಲ್ಲಿ ಹೆಚ್ಚಿನ ಕೆಲಸವನ್ನು ಮುಗಿಸಿಬಿಡಬೇಕು. ಅವಶ್ಯವಾಗಿ ಉಳಿದ ಕಾರ್ಯಗಳನ್ನು ರಾತ್ರೆ ಹತ್ತು ತಾಸಿಗೆ ಮೊದಲು ಕೊನೆಗೊಳಿಸಿ ಅನಂತರ ಸುಖವಾಗಿ ನಿದ್ರಿಸಲು ತೊಡಗಿರಿ.

೩. ಮಲಗುವುದಕ್ಕೆ ಕಡಿಮೆ ಪಕ್ಷ ಒಂದು ತಾಸು ಮೊದಲಾದರೂ ರಾತ್ರೆಯ ಊಟವನ್ನು ಪೂರೈಸಬೇಕು. ನಿದ್ರಿಸುವುದಕ್ಕೆ ಅರ್ಧ ಘಂಟೆ ಮೊದಲು ಒಂದು ಲೋಟಾ ಬಿಸಿ ನೀರು ಅಥವಾ ಬಿಸಿ ಹಾಲು ಕುಡಿಯುವುದರಿಂದ ನಿದ್ರೆ ಬರುವುದಕ್ಕೆ ಸಹಾಯವಾಗುತ್ತದೆ.

೪. ನೀವು ಬಹಳಷ್ಟು ಆಯಾಸಗೊಂಡಿರುವಿರಾದರೆ, ಮಲಗುವುದಕ್ಕೆ ಮೊದಲು ಒಂದು ಬಾಲ್ದಿಯಲ್ಲಿ ಬಿಸಿನೀರನ್ನಿಟ್ಟು ಅದರಲ್ಲಿ ಪಾದವಿಳಿಸಿ ಮೆಲ್ಲ ಮೆಲ್ಲನೆ ತೊಳೆಯಿರಿ. ಇದರಿಂದ ಆಯಾಸವು ದೂರವಾಗುವುದು ಮಾತ್ರವಲ್ಲ ರಕ್ತವು ತಲೆಯಿಂದ ಪಾದದತ್ತ ಇಳಿಯುವುದರಿಂದ, ತಲೆಯು ಹಗುರವಾಗಿ, ನಿದ್ರೆಯು ಬಹು ಬೇಗನೆ ಬರುವುದು.

೫. ಮಲಗುವುದಕ್ಕೆ ಮೊದಲು ಉತ್ತೇಜನಪ್ರದ ಪುಸ್ತಕಗಳನ್ನು ಓದಬೇಡಿರಿ; ಸಿಟ್ಟು ಅಥವಾ ಸಮಸ್ಯಾಪೂರ್ಣವಾದ ಚರ್ಚೆಯಲ್ಲಿ ಭಾಗವಹಿಸಬೇಡಿರಿ. ಸಾಮಾನ್ಯವಾಗಿ ಕಥೆ ಕೇಳುವುದು, ಸಂಗೀತ ಆಲಿಸುವುದು ಒಳ್ಳೆಯದು. ಇದರಿಂದ ನಾಡಿಗಳ ಬಳಲಿಕೆಯು ಇಳಿಯುವುದು.

೬. ಮಂಚ ಅಥವಾ ನೆಲವನ್ನು ಗುಡಿಸಿ, ಚಾಪೆ ಹಾಸಿರಿ. ಹಾಸಿಗೆ ಆರಾಮದಾಯಕವಾಗಿರಲಿ; ನೊಣ, ನುಸಿ, ಇರುವೆ ಮೊದಲಾದುವುಗಳ ಉಪದ್ರವವಿರದಂತೆ ನೋಡಿಕೊಳ್ಳಿರಿ. ಪ್ರಕಾಶವು ಕ್ಷೀಣವಾಗಿರುವಲ್ಲಿ, ಗಲಭೆ ಕಡಿಮೆಯಿರುವಲ್ಲಿ ಮತ್ತು ತುಸು ಏಕಾಂತತೆಯಿರುವಲ್ಲಿ ಮಲಗಿರಿ.

೭. ಮಲಗುವುದಕ್ಕೆ ಪೂರ್ವದಲ್ಲಿ ದಂತ ಮುಖಗಳನ್ನು ತೊಳೆದು, ಹಗುರ ಮತ್ತು ಲಘುವಾದ ಉಡುಗೆಗಳನ್ನು ತೊಡಿರಿ. ಭಾರವಾದ ಬಟ್ಟೆಗಳಿಂದ ದೇಹವೂ ಭಾರವಾಗುವುದು. ಹಾಸಿಗೆಯಲ್ಲಿ ಪವಡಿಸಿ, ಅಂಗಾಂಗಗಳಿಗೆ ಹೊದಿಕೆ ಎಳೆದುಕೊಳ್ಳಿರಿ. ಮನಸ್ಸಿನಲ್ಲಿ ಸಾತ್ವಿಕ ವಿಚಾರಗಳನ್ನು ತುಂಬೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿಕೊಳ್ಳಿರಿ. ಆರಾಮವಾಗುವ ರೀತಿಯಲ್ಲಿ ಮಲಗಿ, ದೇವರ ಸ್ಮರಣೆಯನ್ನು ಮಾಡುತ್ತ, ಇಲ್ಲವೇ ಯಾವುದಾದರೂ ಪ್ರಿಯ ಸ್ಮೃತಿಯನ್ನು ಮೆದುಳಲ್ಲಿ ಜೋಡಿಸಿಕೊಳ್ಳುತ್ತ ಕಣ್ಣುಗಳನ್ನು ಮುಚ್ಚಿ ಸುಖವಾಗಿ ಮಲಗಿರಿ.

೮. ಮಲಗುವಾಗ ತುಸು ತಡಮಾಡುವುದು ಕೆಲವು ಜನರ ಅಭ್ಯಾಸವಾಗಿದೆ. ಈ ಸಮಯದಲ್ಲಿ ಭಯಾನಕವಾದ ಅಥವಾ ಮೆದುಳನ್ನು ಉತ್ತೇಜಿಸುವ ಯಾವುದೇ ಪುಸ್ತಕಗಳನ್ನು ಓದಲೇ ಬಾರದು. ಯಾವುದಾದರೂ ಧಾರ್ಮಿಕ ಪುಸ್ತಕ ಇಲ್ಲವೇ ವರ್ತಮಾನ ಪತ್ರ ಅಥವಾ ಲಘು ಸಾಹಿತ್ಯ ಕೃತಿಗಳನ್ನು ಪಠಿಸುವುದೇ ಸೂಕ್ತ. ಕಣ್ಣುರೆಪ್ಪೆ ಭಾರವಾಗತೊಡಗಿದೊಡನೆಯೇ ಪುಸ್ತಕವನ್ನು ಮುಚ್ಚಿ ದೀಪ-ನಂದಿಸಿ ಸುಖದಿಂದ ಮಲಗಿ ಬಿಡಿರಿ. ಓದುವಾಗ ಬೆಳಕು ನಿಮ್ಮ ಬೆನ್ನಹಿಂದಿನಿಂದ ಬರುವಂತೆ ದೀಪವನ್ನು ಇಟ್ಟುಕೊಳ್ಳಿರಿ.

೯. ಕೆಲವೊಮ್ಮೆ ಜೀರ್ಣಶಕ್ತಿ ಕುಂಠಿತವಾಗಿ ಮಲಮೂತ್ರಗಳು ಸರಿಯಾಗಿ ಹೋಗದಿರುವುದರಿಂದಲೂ ನಿದ್ರೆಗೆ ಹಾನಿ ತಟ್ಟುತ್ತದೆ. ಮೂಗು, ಕುತ್ತಿಗೆಗಳ ಆರೋಗ್ಯ ನೆಟ್ಟಗಿಲ್ಲದಿರುವುದರಿಂದಲೂ ನಿದ್ರೆ ಬರುವುದಿಲ್ಲ. ಇದಕ್ಕೆ ತಕ್ಕ ಸರಳ ಔಷಧಿಗಳನ್ನು ಸೇವಿಸಿಯೇ ಮಲಗುವುದು ಒಳ್ಳೆಯದು.

೧೦. ನಿದ್ರೆ ಸರಿಯಾಗಿ ಬಾರದಿರುವುದಕ್ಕೆ ಶಾರೀರಿಕ ಅಥವಾ ಮಾನಸಿಕ ಕಾರಣಗಳಿರಬಹುದು. ಶಾರೀರಿಕ ದೋಷಗಳನ್ನು ಉಪಚಾರದಿಂದಲೂ ಮಾನಸಿಕ ದೋಷಗಳನ್ನು ತಿಳುವಳಿಕೆಯಿಂದಲೂ ದೂರೀಕರಿಸಿಕೊಳ್ಳಬಹುದು. ನಿದ್ರೆ ಅವಶ್ಯ ಬರುವುದೆಂದು ವಿಶ್ವಾಸ ತಾಳಿಕೊಂಡೇ ಮಂಚದತ್ತ ಸರಿಯಿರಿ. ನಿದ್ರೆಯೆಂಬುದು ಶರೀರದ ಸ್ವಾಭಾವಿಕ ಬೇಡಿಕೆಯಾಗಿದೆ. ಒಂದು ದಿನ ನಿದ್ರೆ ಬಾರದುಳಿದರೂ ಮರುದಿನ ಖಂಡಿತ ಬಂದೇ ತೀರುವುದು. ನಿದ್ರೆ ಬರುವುದಿಲ್ಲ ಎಂದು ನೀವು ಅಶಾಂತರಾದರೆ, ನಿದ್ರಾದೇವಿ ನಿಮ್ಮನ್ನು ಬಿಟ್ಟು ಹಾರದಾರಿ ದೂರ ಓಡುವಳು.

೧೧. ರಾತ್ರೆ ನಿದ್ರೆ ಕಡಿಮೆ ಬರುವವರು ಹಗಲು ನಿದ್ದೆ ಮಾಡಬಾರದು. ಅವರು ತಮ್ಮ ದಿನಚರ್ಯೆಯನ್ನು ನಿಯಮಿತಗೊಳಿಸಿ, ಆಹಾರ-ವಿಹಾರಗಳಲ್ಲಿ ಒಂದು ಕ್ರಮವನ್ನು ತಂದುಕೊಂಡರೆ, ಪ್ರಾತಃಕಾಲ ಮತ್ತು ಸಂಧ್ಯಾಕಾಲ ವಾಯುಸೇವನೆಗೆ ಹೊರಟರೆ, ಮಿತ್ರರು ಮತ್ತು ಮಕ್ಕಳೊಡನೆ ಸ್ವಲ್ಪ ಸಮಯ ಮನೋವಿನೋದಕ್ಕಾಗಿ ಮಾತಾಡಿದರೆ, ಅವರ ಅಂಗ ಮತ್ತು ಸ್ನಾಯುಗಳು ಆರೋಗ್ಯವಂತವಾಗುವವು. ನಿದ್ರೆ ಬಾರದಿರುವವರು ಕಾಫಿ, ಚಾ, ಕೊಕ್ಕೊ ಮೊದಲಾದುವನ್ನು ಸೇವಿಸಲೇಬಾರದು. ಆರೋಗ್ಯ ಮತ್ತು ನಿದ್ರೆಗೆ ಬಹಳ ಸಮೀಪ ಸಂಬಂಧವಿದೆ, ಆರೋಗ್ಯ ಉತ್ತಮವಾಗಿರುವವನಿಗೆ ಹಸಿವೂ ಹೆಚ್ಚುವುದು; ಪರಿಶ್ರಮ ಮಾಡುವ ಮನಸ್ಸಾಗುವುದು; ಸುಖನಿದ್ರೆಯೂ ಬರುವುದು.

೧೨. ನೀವು ನಿಮ್ಮ ಅಂತರಾತ್ಮನ ವಿರುದ್ಧವಾಗಿ ಯಾವ ಕೆಲಸವನ್ನೂ ಮಾಡಬೇಡಿರಿ. ಅಪರಾಧಿ, ದರೋಡೆಗೋರ, ಅನ್ಯಾಯ ಮತ್ತು ಅತ್ಯಾಚಾರಿಗಳಿಗೆ ಎಂದಿಗೂ ಸುಖನಿದ್ರೆಯೆಂಬುದಿರುವುದಿಲ್ಲ.

೧೩. ಅರ್ಧನಿದ್ರೆಯಲ್ಲೇ ಯಾವುದಾದರೂ ಕಾರಣದಿಂದ ನಿಮಗೆ ಎಚ್ಚರವಾದರೆ, ಶಾಂತಮನಸ್ಸಿನಿಂದ, ಏನಾದರೊಂದು ಒಳ್ಳೆಯ ವಿಚಾರವಾಗಿ ಚಿಂತಿಸಿರಿ. ಆಗ ನಿದ್ರೆ ಅವಶ್ಯ ಬಂದೇ ಬರುತ್ತದೆ. ಒಂದು ವೇಳೆ ಬಾರದೆ ಹೋದರೂ ಕಣ್ಣಿನಲ್ಲಿ ಜೊಂಪು ಹಿಡಿದು, ಆಯಾಸವು ಇಳಿದು ಶರೀರದ ದಣಿವು ಖಂಡಿತ ಕಡಿಮೆಯಾಗುವುದು.

(ಸಂಗ್ರಹಿತ)

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ್

ಹೆಚ್ಚೆಚ್ಚು ಸ್ಥಳಗಳಲ್ಲಿ
ಹೆಚ್ಚೆಚ್ಚು ಜನರ ಸೇವೆಗಾಗಿ
ಸದ್ಯದಲ್ಲೇ ಈ ಕೆಳಗಣ ಸ್ಥಳಗಳಲ್ಲಿ
7 ಹೊಸ ಶಾಖೆಗಳನ್ನು
ನಾವು ತೆರೆಯಲಿದ್ದೇವೆ.

ಕಾರವಾರ ಮಲ್ಲೇಶ್ವರಂ (ಬೆಂಗಳೂರು) ಕುಶಾಲನಗರ	ಮೈಸೂರು ರಾಜ್ಯ
ಈರೋಡ್	ಮದರಾಸು ರಾಜ್ಯ
ನಂದ್ಯಾಲ್ ತಾಡಪತ್ರಿ ಚೀರಾಲಾ	ಆಂಧ್ರ ಪ್ರದೇಶ

ದಿ. ಕೆನರಾ ಬೇಂಕಿಂಗ್
ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ಪ್ರಧಾನ ಕಚೇರಿ — ಉಡುಪಿ (ದ. ಭಾರತ)

ಸಂಸ್ಕೃತಿದರ್ಶನ

ಭಾರತ-ಐಗುಪ್ತಗಳ ಸ್ನೇಹಸಂಬಂಧ

ನೆಹರೂ ನಸ್ಸೇರ ಭೆಟ್ಟಿಯು ಉಭಯ ರಾಷ್ಟ್ರಗಳ ಪ್ರಾಚೀನ ಹೊಂದಾಣಿಕೆಯನ್ನು ಮತ್ತೂ ಬೆಳೆಸಲಿ.

ಪರಸ್ಪರ ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜನೀತಿಕ ಸಂಬಂಧಗಳಂತೆಯೇ ನಾಗರಿಕತೆಯಲ್ಲಿ ಅತಿ ಪ್ರಾಚೀನ ಬಾಂಧವ್ಯವಿರುವ ರಾಷ್ಟ್ರಗಳಲ್ಲಿ ಈಜಿಪ್ತ ಮತ್ತು ಭಾರತಗಳು ವಿಶ್ವದಲ್ಲಿಯೇ ಅಗ್ರಗಣ್ಯ ಸ್ಥಾನವನ್ನು ಪಡೆಯುತ್ತವೆ. ಇಂದು ಧರ್ಮ, ಭಾಷೆ ಮತ್ತು ಜಾತಿಯಲ್ಲಿ ವಿಭಿನ್ನತೆಯಿರುವುದಾದರೂ ಈಜಿಪ್ತ ಮತ್ತು ಭಾರತಗಳ ನಡುವಿರುವ ಅಭಿನ್ನತೆಯು ದೃಷ್ಟಿಗೋಚರವಾಗುವುದಕ್ಕೆ ಎರಡೂ ರಾಷ್ಟ್ರಗಳ ಪ್ರಾಚೀನ ಸಂಬಂಧವೂ ಒಂದು ಕಾರಣವಾಗಿದೆ. ಇದರಿಂದಾಗಿಯೇ ಪ್ರಾಚೀನ ಐಗುಪ್ತ ಜೀವನದ ಮೇಲೆ ಭಾರತೀಯ ಪ್ರಭಾವವು ಪರ್ಯಾಪ್ತರೂಪದಲ್ಲಿ ತೋರಿಬರುತ್ತಿತ್ತು ಮಾತ್ರವಲ್ಲ, ಅನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಾಮ್ಯಗಳು ಇಂದಿಗೂ ತೋರಿಬರುತ್ತಿವೆ.

ಭೌಗೋಲಿಕ ಸತ್ಯಾಂಶಗಳಿಂದ ಐಗುಪ್ತ ಮತ್ತು ಭಾರತಗಳ ನಡುವೆ ಈಗಿರುವಂತೆ ಹಿಂದೆ ಅಸಂಬದ್ಧ ಸಂಬಂಧವಿರಲಿಲ್ಲವೆಂದೂ, ಭೂಮಾರ್ಗದಲ್ಲಿ ಸುಸಂಬದ್ಧತೆ ಇತ್ತೆಂದೂ ತಿಳಿದುಬರುತ್ತದೆ. ಭಾರತ ಮತ್ತು ಐಗುಪ್ತಗಳ ನಡುವೆ ಇರುವ ಹಿಂದೂ ಮಹಾಸಾಗರದಲ್ಲಿ ಸಯ್ಯೂಮ್ರಿಯಾ ಎಂಬ ಒಂದು ದ್ವೀಪವಿದ್ದು, ಇದು ಎರಡು ದೇಶಗಳನ್ನೂ ಒಂದುಗೂಡಿಸುತಿತ್ತು. ಕಾಲಾಂತರದಲ್ಲಿ ಈ ದ್ವೀಪವು ಸಾಗರಗರ್ಭದಲ್ಲಿ ವಿಲೀನಗೊಂಡಿತು. ದ್ವಾರಕಾ ನಗರಿಯ ಬಹುಭಾಗವನ್ನು ಕಬಳಿಸಿದ ಮಹಾ ಪ್ರಳಯಕಾಲದಲ್ಲಿಯೇ ಸಯ್ಯೂಮ್ರಿಯಾವು ನಷ್ಟವಾಯಿತೆಂದು ಹೇಳುತ್ತಾರೆ. ಸೌರಾಷ್ಟ್ರ ಮತ್ತು ಸಯ್ಯೂಮ್ರಿಯಾಗಳ ಪ್ರಾಚೀನ ಸಂಬಂಧ ಮತ್ತು ನಾಗರಿಕತೆಯ ಪ್ರದರ್ಶಿಕೆಗಳನ್ನು ಪುರಾತತ್ವವೇತ್ತರು ಸಂಶೋಧಿಸಿರುತ್ತಾರೆ.

ಪ್ರಾಚ್ಯ ವಸ್ತು ಸಂಶೋಧನೆಯನ್ನು ಮಾಡಿದ ಅನೇಕ ದೇಶ—ವಿದೇಶಗಳ ವಿದ್ವಾಂಸರು ಐಗುಪ್ತ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಕೊಡುಗೆಯೆಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಪ್ರೊ| ಹಿರೇನ್ ಮತ್ತಿತರ ವಿದೇಶೀಯ ವಿದ್ವಾಂಸರು ಈಜಿಪ್ತದಲ್ಲಿ ದೊರೆತ ಪ್ರಾಚೀನ ಕಾಲದ ಮಾನವ ಮುಂಡಗಳನ್ನೂ ಭಾರತೀಯ ಮಾನವ ಮುಂಡಗಳನ್ನೂ ತುಲನೆಮಾಡಿ, ಐಗುಪ್ತದ ಆದಿಮ ಜನಾಂಗವು ಸ್ವಯಂ ಭಾರತೀಯರೇ ಆಗಿದ್ದರೆಂದು ನಿಷ್ಕರ್ಷಿಸಿದ್ದಾರೆ. ಇನ್ನು ಕೆಲವರು ಐಗುಪ್ತವು ಭಾರತದ ವಸಾಹತು ಎಂದು ಹೇಳುತ್ತಾರೆ. ಈ ಬಗ್ಗೆ ಪ್ರಸಿದ್ಧ ವಿದ್ವಾಂಸರಾದ ಕರ್ನಲ್ ಅಲ್ಕಾಟರು ಈ ರೀತಿ ಬರೆಯುತ್ತಾರೆ: "ಇಂದಿಗೆ ಸುಮಾರು ಎಂಟು ಸಾವಿರ ವರ್ಷಗಳಿಗೆ ಮೊದಲು ಭಾರತೀಯ ವಲಸೆಗಾರರ ಒಂದು ತಂಡವು ಇಂದು ನಾವು ಈಜಿಪ್ತವೆಂದು ಕರೆವ ದೇಶಕ್ಕೆ ತಮ್ಮ ಕಲೆ ಮತ್ತು ಸಂಸ್ಕೃತಿಯೊಡನೆ ವಲಸೆಹೋಯಿತು ಎಂದು ತಿಳಿಯುವುದಕ್ಕೆ ಸಾಕಷ್ಟು ಆಧಾರಗಳಿವೆ."

"ಪುಂಟ್" ದೇಶದಿಂದ ತಮ್ಮ ಪೂರ್ವಜರು ಬಂದಿರುವರೆಂದು ಪ್ರಾಚೀನ ಐಗುಪ್ತವಾಸಿಗಳ ಹೇಳಿಕೆಯಿದೆ. ಇದಕ್ಕೆ ನಮ್ಮ ವಿದ್ವಾಂಸರು, "ಪುಂಟ್ ದೇಶವೆಂದರೆ, ಪಾಂಡವರ ದೇಶವಾದ ಭಾರತವೇ" ಎಂದೆನ್ನುತ್ತಾರೆ. ಪುಂಟ್ ದೇಶದ ಪರಿಚಯವೆಲ್ಲವೂ ಭಾರತಕ್ಕೆ ಅನ್ವಯಿಸುವುದರಿಂದ, ಈ ವಾದಕ್ಕೆ ಪುಷ್ಟಿಯೂ ದೊರೆಯುತ್ತದೆ. ಪುರಾಣದಂತಹ ಅತ್ಯಂತ ಪ್ರಾಚೀನ ಗ್ರಂಥಗಳಲ್ಲಿ ಕೂಡ ಐಗುಪ್ತದ ನೀಲನದಿಯ ಉದ್ಗಮಸ್ಥಾನವು ಕುಶದ್ವೀಪವೆಂಬ ಉಲ್ಲೇಖವಿದೆ. ಕೇಪ್ಟನ್ ಸ್ಪೇಕನು ಅತೀವ ಪರಿಶ್ರಮಪಟ್ಟು, ಈ ಸ್ಥಾನವು ನ್ಯೂಬಿಯಾದಲ್ಲಿದೆ ಎಂದು ಹೇಳಿದ್ದಾರೆ.

ಈಜಿಪ್ತದಲ್ಲಿ ಹಿಂದೆ, ಪಶುಪಾಲಕರು ಮತ್ತು ಕೃಷಿ ಕರ್ಮಚಾರಿಗಳು ಹೆಚ್ಚಾಗಿ ವಾಸಿಸುತಿದ್ದುದರಿಂದ, 'ಈಜಿಪ್ತ' ಎಂಬುದು "ಗೋಪಥ" ಎಂಬ ಹೆಸರಿನ ರೂಪಾಂತರವೆಂದು ಪ್ರಸಿದ್ಧ ಮಹಾರಾಷ್ಟ್ರೀಯ ಸಂಶೋಧಕ ಶ್ರೀ ರಾಜಾರಾಮ ಶಾಸ್ತ್ರಿಯವರು ವಾದಿಸುತ್ತಾರೆ. ಇದಕ್ಕೆ ಇನ್ನೊಂದು ಹೆಸರು 'ಮಿಸ್ರ' ಎಂಬುದು ಸಂಸ್ಕೃತದ 'ಮಿಶ್ರ' ಎಂಬುದರ ಅಪಭ್ರಂಶವಾಗಿದೆ ಎಂದು ಬೇರೆ ಕೆಲವರ ಮತ. ಈ ಹೆಸರನ್ನು ವಿಶ್ವಪ್ರಸಿದ್ಧ ಪಿರಾಮಿಡ್‌ಗಳ ನಿರ್ಮಾತರಾದ ಫಾರೋಹ ಅರಸರು ಇಟ್ಟಿದ್ದರು. ಈ ರಾಜವಂಶದವರು ಭಾರತೀಯ ವಂಶಜರೇ ಆಗಿದ್ದರು. ಈ ಅರಸರ ಹೆಸರುಗಳೂ ಸಾಮಾನ್ಯವಾಗಿ ಭಾರತೀಯ ವಿಧಾನದಲ್ಲಿಯೇ ಇದ್ದುವು. ಉದಾಹರಣೆಗಾಗಿ, ರೇಮಿಸೆಸ್=ರಾಮ; ಸೂರ್ಯೋಸಿಸ್=ಸೂರ್ಯ ಇತ್ಯಾದಿ. ಆ ಕಾಲದಲ್ಲಿ ಐಗುಪ್ತದಲ್ಲಿ ಪರಸ್ಪರ ಹೋರಾಡುತಿದ್ದ ಅನಾಗರಿಕ ಜನರು ನೆಲಸುತಿದ್ದರು. ಫಾರೋಹ ವಂಶಸ್ಥರು ಇವರೆಲ್ಲರನ್ನೂ ಒಂದುಗೂಡಿಸಿ, ಮಹಾರಾಷ್ಟ್ರವೊಂದನ್ನು ನಿರ್ಮಾಣಮಾಡಿ, ಅದಕ್ಕೆ 'ಮಿಶ್ರ' ಎಂಬ ಹೆಸರನ್ನು ಕೊಟ್ಟರು.

ಇಂದು ಐಗುಪ್ತವು ಸಂಪೂರ್ಣ ಇಸ್ಲಾಮೀ ಸಂಸ್ಕೃತಿಯ ಪ್ರತಿರೂಪವಾಗಿರುವುದಾದರೂ ಇಲ್ಲಿಯ ಬೇರೆಬೇರೆ ಕಲೆ ಮತ್ತು ವಸ್ತುಗಳಲ್ಲಿ ಭಾರತೀಯತೆಯ ಮುದ್ರೆಯು ಸುಸ್ಪಷ್ಟವಾಗಿ ದೃಷ್ಟಿಗೋಚರವಾಗುತ್ತಿದೆ. ಇಲ್ಲಿನ ವಿಸ್ತಾರವಾದ ಮಂದಿರಗಳು ದಕ್ಷಿಣ ಭಾರತದ ದೇವಾಲಯಗಳ ಮಾದರಿಯಲ್ಲಿವೆ. ಅವುಗಳ ದ್ವಾರವು ಗೋಪುರಗಳದ್ದೇ ಪ್ರತಿರೂಪವಾಗಿದೆ. ಕೆಲವರ್ಷ ಪೂರ್ವದಲ್ಲಿ ಪುರಾತತ್ವ ಅನ್ವೇಷಕರಾದ ಸರ್ ಎ. ಪೆಟ್ರಿ ಅವರ ನಾಯಕತ್ವದಲ್ಲಿ ಮೇಂಫಿಸ್‌ನ ಅಗೆತವು ನಡೆದಿತ್ತು. ಈ ಭೂಖನನದಲ್ಲಿ ಭಾರತೀಯ ವಿಧಾನದ ಹಲವಾರು ಮೂರ್ತಿಗಳು ಸಿಕ್ಕಿದ್ದುವೆಂದವರು ಬರೆದಿದ್ದಾರೆ. ಸಂಖ್ಯೆ ೩೫೮ರ ಮೂರ್ತಿಯು ಟಿಬೇಟಿನ ಮಾದರಿಯದು; ಆದರೆ, 'ಇಂತಹುದೇ ವಿಗ್ರಹವು ಒಡಿಸ್ಸಾದಲ್ಲಿಯೂ ದೊರೆತಿದೆ; ಮತ್ತು ಸಂಖ್ಯೆ ೩೩, ೩೮ ಮತ್ತು ೬ ರ ಮೂರ್ತಿಗಳು ಶುದ್ಧ ಭಾರತೀಯ ಗಿವೆ ಎಂದು ಅಂದಿದ್ದಾರೆ.

ಶ್ರೀ ಪೀಕಾಕ್ ಮಹಾಶಯರು ನ್ನೂ ಕೆಲವು ವಿಷಯಗಳತ್ತ ದೃಷ್ಟಿಹ ಭಾರತೀಯ ಸಂಸ್ಕೃತಿಯೇ ಐಗುಪ್ತ ತ್ತು ಎಂದು ಸಾಧಿಸಿದ್ದಾರೆ. ಅವರ ಕೆಯಂತೆ, ಹಲವಾರು ಐಗುಪ್ತ ನದಿ ಮತ್ತು ಪ್ರದೇಶಗಳ ಹೆಸರುಗಳೂ ಭಾ ತೀಯವೇ ಆಗಿವೆ. ರಾಜರ ಹೆಸರಿ ಯೂ ಸಮಾನತೆಯಿದೆ. ಮೂರ್ತಿ ಮತ್ತು ಭವನ ನಿರ್ಮಾಣ ಕಲೆಯಲ್ಲಿಯೂ ಕ ಅಂತರವಿರುವುದಿಲ್ಲ. ದೇವತೆಗಳ ಹೆ ರಿನಲ್ಲಿಯೂ ಹೊಂದಾಣಿಕೆಯಿರುವುದು ಉದಾಹರಣೆಗಾಗಿ, ಹುರ = ಹರ; ಸೇ ಶಿವ; ಅಮುನ್ = ಓಶ್ಮ; ನೈಕ = ವಿಷ್ಣು ಈಸಿಸ್ = ಈಶ; ಹುರಸ್ = ಸೂರ್ಯ ಸಖಿತ = ಶಕ್ತಿ ಮೊದಲಾದುವು. ಇಷ್ಟೇ ಅಲ್ಲದೆ, ಭಾಷೆಯಲ್ಲಿಯೂ ಪರ್ಯಾ ಸಾಮ್ಯವಿರುವುದು ತೋರಿಬರುತ್ತದೆ. ಗುಪ್ತ ಭಾಷೆಯಲ್ಲಿ ಮೂಲತಃ ಸಂಸ್ಕೃತ ಭಾಷೆಯ ಶಬ್ದಗಳು ತುಂಬ ಇದ್ದು, ಅ ಗಳ ಅರ್ಥ ಕೂಡ ಮೂಲ ಸಂಸ್ಕೃತ ಪದಗಳದ್ದೇ ಆಗಿದೆ.

ಈಜಿಪ್ತದ ಪ್ರಾಚೀನ ಸಾಮಾಜಿ ಜೀವನದ ಮೇಲೆಯೂ ಭಾರತೀಯ ಪ್ರ ಭಾವವು ಬಿದ್ದಿತು. ಇಲ್ಲಿನ ವರ್ಣ ವ್ಯ ಸ್ಥೆಯೂ ಭಾರತೀಯ ವ್ಯವಸ್ಥೆಯಂ ಯೇ ಇದ್ದಿತ್ತು. ಸಮಾಜದಲ್ಲಿ ಪುರೋ ತರು ಮತ್ತು ಪೂಜಾರಿಗಳಸ್ಥಾನವು ವೇ ಪ್ರಮುಖವಾಗಿತ್ತು. ಅವರಿಗೆ ಲ್ಲೆಲ್ಲಿಯೂ ಗೌರವ ದೊರೆಯುತಿತ್ತು. ಈಜಿಪ್ತದ ನಿವಾಸಿಗಳ ಯುದ್ಧನೀತಿಯು ದರೂ ಭಾರತೀಯರದಂತೆಯೇ ಇದ್ದಿತು. ಶರಣು ಬೇಡಿ ಬಂದವರು ಮತ್ತು ಶಸ್ತ್ರ ಹೀನರು ಮೊದಲಾದವರಿಗೆ ಅಭಯ ದಾನ ಮಾಡಲಾಗುತಿತ್ತು. ಯುದ್ಧಕ್ಕೆ ಳಸಿಕೊಳ್ಳಲಾಗುತಿದ್ದ ಅಸ್ತ್ರ ಶಸ್ತ್ರ ಳೂ ಭಾರತೀಯ ಮಾದರಿಯ ವಾಗಿದ್ದ ಬಿಲ್ಲು ಬಾಣ, ಡಾಲು, ಖಡ್ಗ, ರಥ ಮೊ ದಲಾದುವನ್ನು ಉದಾಹರಣೆಗಾಗಿ ಕೊ ಬಹುದು.

ಶಿಷ್ಟಾಚಾರ ಪದ್ಧತಿಯೂ ಎರಡ ರಾಷ್ಟ್ರಗಳಲ್ಲಿ ಏಕರೂಪವಾಗಿತ್ತು. ದಾ ಯಲ್ಲಿ ಯಾರಾದರೂ ಹಿರಿಯರು ತರು ರಿಗೆ ದೊರೆತರೆ, ಆಗ ಕಿರಿಯರು ವೆ ಣಕಾಲೂರಿ ಅವರಿಗೆ ಪ್ರಣಾಮಸಲ್ಲಿ ತಿದ್ದರೆಂದೂ ತರುಣರಲ್ಲಿಗೆ ವೃದ್ಧರು ಆಗಮಿಸಿದಾಗ, ಅವರು ಆಸನವನ್ನು ಬಿಟ್ಟು ಎದ್ದು, ಅವರನ್ನು ಸನ್ಮಾನಿಸು ದ್ದನೆಂದು ತಿಳಿದು ಬರುತ್ತದೆ.

ಭಾರತದಂತೆಯೇ ಈಜಿಪ್ತದಲ್ಲಿಯು ಧಾರ್ಮಿಕ ರೂಢಿ ವಾದವು ಪ್ರಚಲಿತ ತ್ತು. ಯಾವುದೇ ಶುಭಕಾರ್ಯವ ಆರಂಭಿಸುವುದಕ್ಕೆ ಮೊದಲು ಗ್ರಹ, ನ ಕ್ಷತ್ರ ಮೊದಲಾದುವನ್ನು ನೋಡಲಾಗು ತ್ತು. ಪ್ರಸಿದ್ಧ ಪಂಡಿತನಾದ ನೈಜ ಎರಡೂ ದೇಶಗಳಲ್ಲಿರುವ ಸೃಷ್ಟಿ ಮತ್ತು ಪ್ರಳಯಗಳಿಗೆ ಸಂಬಂಧಿಸಿದ ಸಿದ್ಧಾಂತ ಗಳಲ್ಲಿಯೂ ಸಾಕಷ್ಟು ಸಮಾನತೆಯಿರು ದೆಂದು ಕಂಡುಹಿಡಿದಿದ್ದಾನೆ. 'ಮೇನಸ ತಮ್ಮ ಮೊತ್ತಮೊದಲ ರಾಜನೆಂದು ಐ ಪ್ತವಾಸಿಗಳ ದೃಢ ವಿಶ್ವಾಸವಿದೆ; ಈ ಪ

(೯ನೇ ಪುಟ ನೋಡಿರಿ)

40 ವರ್ಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟು ಗಳಲ್ಲಿ ಠೇವಣೆ ಮಾಡಿರಿ. ಬಡ್ಡಿ ಸೇಕಡಾ 5ರಂತೆ

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಸೇಕಡಾ 4½ರ ವರೆಗೆ.
ದೊಡ್ಡ ಠೇವಣಿಗಳ ಮೇಲೆ ಹೆಚ್ಚಿನ ಬಡ್ಡಿ.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸ್ಥಾಪನೆ : 1920

ತನ್ನ ಭೋಗಸಾಧನಗಳನ್ನು ಬೆಳೆಸಿಕೊಳ್ಳುವುದಕ್ಕಿಂತ ಅವನ್ನು ...ಳಿಸಿಕೊಳ್ಳುವುದರಿಂದಲೇ ಮಾನವನು ತೃಪ್ತಜೀವಿಯೆನಿಸುತ್ತಾನೆ.

NAVAYUGA

Founder:—

Late Sri. A. B. SHETTY,
...rmer Minister for Public Health
...vt. of Madras & Govt. of Mysore

ನವಯುಗ

ಜನಪ್ರಿಯ ...ಷ್ಟ್ರೀಯ ವಾರಪತ್ರಿಕೆ

...ಪುಟ	ಉಡುಪಿ	ವಾರ
೯	೩೧-೩-'೬೧	೩೦

ಸಮಸ್ಯೆಗೆ ಸಮಾಧಾನ

ಭಾರತದಲ್ಲಿ ಭಾಷಾನುಗುಣವಾಗಿ ರಾ...ವಿಭಜನೆ ಮಾಡುವ ತತ್ವವನ್ನು ಆಧಾ...ರವಾಗಿಟ್ಟು, ಜತೆಗೆ ಆಡಳಿತೆಯ ವ್ಯವಸ್ಥೆ...ಯನ್ನೂ ಗಮನಿಸಿ ರಾಜ್ಯಪುನರ್ವಿಂಗಡ...ಯನ್ನು ಮಾಡಿ ನಾಲ್ಕು ವರ್ಷಗಳು ಕ...ದರೂ ಈ ನವೋದಿತ ರಾಜ್ಯಗಳ ಗಡಿ...ವಾದವು ಇನ್ನೂ ಮುಕ್ತಾಯಗೊಂಡಿಲ್ಲ...ಬುದು ಖೇದನೀಯವಾಗಿದೆ. ಮುಖ್ಯ...ಗಿ ಮೈಸೂರು-ಬೊಂಬಾಯಿ ಗಡಿ ಸ...ಸ್ಯೆಯು ಬೇಧವಾದ ಗೊಂದಲಗಳನ್ನು ...ಷ್ಟಿಸಿ ಸೀಮಾ ಪ್ರದೇಶದ ಶಾಂತಿಯ...ನ್ನು ಕಲಕಿಬಿಟ್ಟಿತು. ಇತ್ತೀಚೆಗೆ ಬೆಳ...ವಿ ಮತ್ತು ದರ ಆಸುಪಾಸಿನಲ್ಲಿ ನಡೆದ ...ಂಬಿಯ ದುಷ್ಪರಿಣಾಮವನ್ನು ನಾವು ...ಂದಿಗೂ ಮರೆಯುವಂತಿಲ್ಲ. ಅಲ್ಲಿನ ಜ...ತೆಯು ತಾವು ಕನ್ನಡಿಗರಾದುದರಿಂದ ...ರ್ನಾಟಕದಲ್ಲಿಯೇ ಉಳಿಯಬೇಕು ಎಂ... ಬಯಸಿದರೆ, ಅದಕ್ಕೆ ವಿರೋಧವಾಗಿ ...ಲ್ಲಿನ ಕೆಲ ಹಾಗೂ ಹೊರ ಪ್ರದೇಶದ ...ರಾಠಿಯವರು ಕೆಲವೊಂದು ಜನರನ್ನು ...ನ್ನಡಿಗರಿಗೆ ಎದುರಾಗಿ ಎತ್ತಿಕಟ್ಟಿ ಪುಂ...ಡಾಟಿಕೆಯನ್ನು ಪ್ರದರ್ಶಿಸಿ, ಜನತೆಯ ...ಜೀವಸಂಪತ್ತುಗಳಿಗೆ ಹಾನಿಯನ್ನೊದಗಿ... ಅನಪೇಕ್ಷಣೀಯವಾದ ದುಷ್ಪ್ರೇರಣೆ...ಯಿಂದ ಜನತೆಯ ನಿಷ್ಕಲ್ಮಷ ಮನಸ್ಸಿ...ನಲ್ಲಿ ಕಲಂಕದ ಬೀಜವನ್ನು ಬಿತ್ತಲು ...ವಣಿಸಿದುದೂ ಅದರಿಂದ ಕೆಲವೊಂದು ...ನಾಹುತಗಳು ಸಂಭವಿಸಿದುದೂ ಯಾ...ರಿಗೂ ಕೀರ್ತಿ ತರುವ ಕುರುಹುಗಳಲ್ಲ. ...ದುದರಿಂದ, ಇನ್ನು ಮುಂದಾದರೂ ...ಂತಹ ದುರ್ಘಟನೆಗಳಿಗೆ ಆಸ್ಪದ ನೊ...ಯದಂತೆ, ಈ ಸೀಮಾ ವಿವಾದಗಳನ್ನು ...ದಷ್ಟು ಶೀಘ್ರವಾಗಿ ಕೊನೆಗಾಣಿಸುವು... ಅತ್ಯವಶ್ಯವೆಂದು ಒಪ್ಪಿಕೊಳ್ಳಲೇ ...ಕಾಗಿದೆ.

ಒಂದು ರಾಜ್ಯದಲ್ಲಿ ಕೇವಲ ಒಂದೇ ...ಷೆಯನ್ನಾಡುವ ಜನರು ಮಾತ್ರ ನೆಲೆ...ಸುವಂತೆ ಮಾಡುವುದು ಎಂದಿಗೂ ಸಾಧ್ಯ...ವಾಗುವುದಿಲ್ಲ. ಎಂತಲೇ ಪ್ರತಿ ರಾಜ್ಯದಲ್ಲಿ...ಯೂ ರಾಜ್ಯೇತರ ಭಾಷೆ ಆಡುವ ಕೆಲ...ವೊಂದು ಜನರಾದರೂ ಅವಶ್ಯ ಇದ್ದೇ ಇರುತ್ತಾರೆ. ರಾಜ್ಯಪುನರ್ಘಟನಾ ...ಸನದಲ್ಲಿಯೂ ಹೀಗೆ ಉಳಿಯುವ ...ಷಾ ಅಲ್ಪಸಂಖ್ಯಾಕರಿಗೆ ಉಚಿತ ವ್ಯ...ಸ್ಥೆಯನ್ನು ಮಾಡಿಕೊಡುವುದಾಗಿ ನ...ಮೂದಿಸಲಾಗಿದೆ. ಇವೆಲ್ಲವಿದ್ದರೂ ರಾಜ್ಯ...ಗಳ ಗಡಿಗಳಲ್ಲಿ ಸಣ್ಣಪುಟ್ಟ ಹೊಂದಾಣಿ...ಕೆಗಳನ್ನು ಮಾಡಿಕೊಂಡು ಸೀಮೆಯನ್ನು ...ಷ್ಟೀಕರಗೊಳಿಸಿ, ಇನ್ನು ಮುಂದೆ ಸೀಮಾ ವಿವಾದಗಳೇಳದಂತೆ ನೋಡಿಕೊಳ್ಳುವುದು ಅವಶ್ಯವೇ. ಆದರೆ, ಇಂತಹ ಸೀಮೆಗಳನ್ನು ನಿರ್ದಿಷ್ಟಗೊಳಿಸತಕ್ಕವರು ಯಾರು? ಎಂಬುದಕ್ಕೆ ರಾಜ್ಯ ಮುಖ್ಯಮಂತ್ರಿಗಳನ್ನು ಕೇಂದ್ರ ಗೃಹಮಂತ್ರಿಗಳನ್ನು ಇದುವರೆಗೆ ತೋರಿಸಲಾಗುತಿತ್ತು. ಇತ್ತೀಚೆಗೆ ಮುಂಬಯಿಯ ಮುಖ್ಯಮಂತ್ರಿ ಶ್ರೀ ವೈ. ಬಿ. ಚವನರು ಬೊಂಬಾಯಿ–ಮೈಸೂರು ರಾಜ್ಯಗಳ ಸೀಮಾ ವಿಷಯದಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರೊಡನೆ ಮಾತುಕತೆಗಳನ್ನು ನಡೆಸಿ, ಅದು ವಿಫಲಗೊಂಡಾಗ, ಕೇಂದ್ರ ಗೃಹಮಂತ್ರಿ ಶ್ರೀ ಪಂತರಿಗೆ ಈ ವಿಷಯವನ್ನು ಒಪ್ಪಿಸಿರುವುದಾಗಿ ಹೇಳಿದರು. ಆದರೆ, ಜತ್ತಿಯವರೇನೂ ಈ ರೀತಿ ಹೇಳದೆ, ಕರ್ನಾಟಕದ ಜನತೆಯ ನಿಜವಾದ ಅಭಿಪ್ರಾಯವನ್ನೇ ಅವರ ಮುಂದಿಟ್ಟರೆಂದು ಹೇಳಿದ್ದಾರೆ. ಆದರೂ ಜನತೆಯಲ್ಲಿ ಅಸಮಾಧಾನ ಹುಟ್ಟದಂತೆ ಶ್ರೀ ಪಂತರು ಅಂತಾರಾಜ್ಯ ಸೀಮೆಗಳನ್ನು ಆಯಾ ರಾಜ್ಯಗಳವರೇ ಮೊದಲಾಗಿ ಒಪ್ಪಿಕೊಂಡಲ್ಲದೆ ಅದಕ್ಕೆ ಕೇಂದ್ರವು ಮನ್ನಣೆ ನೀಡಲಾರದು ಎಂದು ಡಣಾಡಂಗುರವಾಗಿ ಹೇಳಿರುವರು. ಇದರಿಂದ, ಬೆಳಗಾವಿ ವಲಯದ ಮರಾಠಿಗರ ಕೆಚ್ಚು ಯಾವುದಕ್ಕೂ ಪ್ರಯೋಜನವಿಲ್ಲವೆಂದಾಯಿತು. ಶ್ರೀ ಚವನರಾದರೂ ತಾವು ಒಂದು ಬಾರಿ ಒಪ್ಪಿಸಿಕೊಟ್ಟುದನ್ನು ಮರಳಿ ಪಡೆದುಕೊಳ್ಳಬೇಕಾಯಿತು. ಬೆಳಗಾವಿ ವಲಯದಲ್ಲಿನ ಮರಾಠಿಜನರ ಹಿಂಸಾಚರಣೆಗಳು ಇತ್ತೀಚೆಗೆ ಯೆಳ್ಳೂರೇ ಮೊದಲಾದೆಡೆಗಳಲ್ಲಿ ನಡೆಸಿದ ಅತ್ಯಾಚಾರಗಳನ್ನೂ ಅವುಗಳ ಪರಿಣಾಮಗಳನ್ನು ಯಾವ ಕನ್ನಡಿಗನೂ ಮರೆಯಲಾರ. ಅಥವಾ ನಮ್ಮ ರಾಜ್ಯದ ಇಲ್ಲವೇ ಬೇರೆ ರಾಜ್ಯದ ಗಡಿಯಲ್ಲಿ ಈ ರೀತಿಯ ಭಯಾನಕ ಪುಂಡಾಟಿಕೆಗಳು ನಡೆಯಲಿಲ್ಲ. ಬೆಳಗಾವಿಯ ಕೆಲ ಮರಾಠಿಗರು ತಮ್ಮ ಕೆಚ್ಚು ಪ್ರದರ್ಶನಕ್ಕಾಗಿಯೇ ಇಂತಹ ಅನಾಹುತಗಳಿಗೆ ಕೈಹಾಕಿದರೆಂದು ಹೇಳುವುದು ನಿಸ್ಸಂದೇಹ. ಆದರೆ, ಈ ಮಾನಸರಿಯ ಕ್ರೂರಕೃತ್ಯಗಳಿಂದ ತಮ್ಮ ಬೇಳೆ ಬೇಯಲಾರದು ಎಂದವರು ಇನ್ನು ಮುಂದಾದರೂ ತಿಳಿದುಕೊಳ್ಳುವುದೂ, ನ್ಯಾಯೋಚಿತ ರೀತಿಯಲ್ಲಿ ನಡೆದುಕೊಳ್ಳುವುದೂ ಅವಶ್ಯವೇ ಸರಿ.

ಅಂತಾರಾಜ್ಯ ಸೀಮೆಗಳ ನಿರ್ಧಾರವು ಶೀಘ್ರದಲ್ಲಿಯೇ ಆಗಬೇಕಾದುದೆಂದು ಒಪ್ಪುತ್ತೇವೆ. ಆದರೆ, ಅವಸರದಿಂದ ಒಮ್ಮೆಯೇ ಈ ನಿರ್ಧಾರಕ್ಕೆ ಬರುವುದೂ ಕಷ್ಟಸಾಧ್ಯವೇ. ಮಹಾರಾಷ್ಟ್ರ, ಆಂಧ್ರ ಪ್ರದೇಶ, ಮದ್ರಾಸ ಮತ್ತು ಕೇರಳಗಳಿಂದ ಪರಿವೇಷ್ಟಿತವಾಗಿರುವ ಕರ್ನಾಟಕ ರಾಜ್ಯದ ಸೀಮಾ ವಿವಾದಗಳು ಎಲ್ಲ ರಾಜ್ಯಗಳೊಡನೆಯೂ ಇವೆ. ಈ ವಿವಾದಗಳನ್ನು ಬಗೆಹರಿಸಲು ಪರಸ್ಪರ ವಿಚಾರವಿನಿಮಯಗಳನ್ನೂ ಕೆಲವೊಮ್ಮೆ ಮಾಡಿಕೊಳ್ಳಬೇಕಾಗಿದೆ. ಬೆಳಗಾವಿಯ ಕೆಲ ಮರಾಠಿಗರು ಮಾತ್ರ ಬೆಳವಲ ಹೊಡಬಲ್ಲವರೆಂದೂ ಕಾಸರಗೋಡು, ಮಡಕಶಿರ ಮೊದಲಾದ ಕನ್ನಡ ಪ್ರದೇಶದ ಬಹುಸಂಖ್ಯಾಕ ಕನ್ನಡಿಗರು ಅಂತಹ ರೀತಿಯ ಕಾರ್ಯಾಚರಣೆಗೆ ಅಂಜುವವರು ಎಂದು ಯಾರೂ ತಿಳಿಯಬಾರದು. ಆದರೂ ಪ್ರಜಾಪ್ರಭುತ್ವ ಮತ್ತು ಶಾಂತಿಯಲ್ಲಿ ವಿಶ್ವಾಸವಿಟ್ಟ ಕನ್ನಡಿಗರು ತಮ್ಮ ಆಕಾಂಕ್ಷೆಯನ್ನು ನ್ಯಾಯೋಚಿತ ವಿಧಾನಗಳಲ್ಲಿ ಮುಂದಿಟ್ಟಿರುವರೇ ಹೊರತು, ಉದ್ರೇಕೋದ್ವೇಗದಿಂದ ವರ್ತಿಸಿಲ್ಲ. ಆದುದರಿಂದ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಸಂಬಂಧಪಟ್ಟ ಮುಖ್ಯಮಂತ್ರಿಗಳೊಡನೆ ಮಾತನಾಡಿ, ಗಡಿ ವಿವಾದಗಳಿರುವಲ್ಲಿ ನ್ಯಾಯವನ್ನು ಮುಂದಿಟ್ಟುಕೊಂಡು, ಸಣ್ಣ ಪುಟ್ಟ ಹೊಂದಾಣಿಕೆಗಳನ್ನು ಮಾಡಬೇಕು. ಈ ಸಮಯದಲ್ಲಿ ಕೆಲವೊಂದು ಭಾಗವನ್ನು ಕೊಡಬೇಕಾಗಿ ಬರಬಹುದು; ಕೆಲವನ್ನು ತೆಗೆದುಕೊಳ್ಳಬೇಕಾಗಲೂ ಬಹುದು. ಕೊಡಕೊಳ್ಳುವ ವಿಚಾರದಲ್ಲಿ ಅತೀವ ಎಚ್ಚರಿಕೆಯಿಂದ ವರ್ತಿಸುವುದು ಮತ್ತು ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುವುದು ಮುಖ್ಯವೆಂದು ಹೇಳಿ ಈ ಸಮಸ್ಯೆಗೊಂದು ಸಮಾಧಾನವನ್ನು ಆದಷ್ಟು ಶೀಘ್ರದಲ್ಲಿಯೇ ಕಂಡುಹಿಡಿಯಲೆಂದು ಬಯಸುತ್ತೇವೆ. ಕಾಲಹರಣ ಮಾಡುವುದು ರಾಜಕಾರಣದಲ್ಲಿ ಲಾಭದಾಯಕವೆನಿಸಿದರೂ ಶಾಂತಿಯನ್ನದು ಕೆದಕುತ್ತಿರುವುದು ಖಂಡಿತ.

ರಾಜಕೀಯ ಧ್ವನಿ

ಸದ್ಯ ಉತ್ತರ ಭಾರತದಲ್ಲಿ ಸಂಚರಿಸುತ್ತಿರುವ ಸ್ವತಂತ್ರ ಪಕ್ಷದ ನಾಯಕ ಶ್ರೀ ಸಿ. ರಾಜಗೋಪಾಲಾಚಾರ್ಯರು ಲುಧಿಯಾನಾದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಲು ತೆರಳುತ್ತಿರುವಾಗ, ಅವರ ವಿರುದ್ಧ ಕೆಲವರು ಮತ ಪ್ರದರ್ಶನ ನಡೆಸಿದರು, ಪೋಲೀಸರ ಸಹಾಯದಿಂದ ವೇದಿಕೆಯನ್ನೇರಿ ಅಕಾಲಿ ದಳದ ನಾಯಕ ಶ್ರೀ ತಾರಾಸಿಂಗರನ್ನು ಅವರು ಕೂಡಿಕೊಂಡರು. ಉತ್ತಮ ಸರಕಾರಕ್ಕಾಗಿ ನಾವೆಲ್ಲರೂ ತ್ಯಾಗ ಮಾಡಿದೆವು ಆದರೆ, ಪ್ರಕೃತದ ಸರಕಾರ ಉತ್ತಮ ಸರಕಾರವಲ್ಲ. ಸಾಧ್ಯವಾದಷ್ಟು ಬೇಗನೇ ನೀವು ಸ್ವತಂತ್ರ ಪಕ್ಷದ ಸದಸ್ಯರಾಗುವುದರಿಂದ ಉತ್ತಮ ಸರಕಾರ ಸ್ಥಾಪನೆಯಾಗುವುದು ಸಾಧ್ಯ. ಉಪ್ಪುನೀರಿನ ಬಾವಿಯ ಸುತ್ತು ಕುಳಿತು ಶುದ್ಧನೀರಿಗಾಗಿ ಬೊಬ್ಬಿಟ್ಟರೆ, ನಿಮಗೆ ಉತ್ತಮ ನೀರು ದೊರೆಯಲಾರದು; ಶುದ್ಧ ನೀರು ದೊರಕಲಿ, ಎಂದು ಘೋಷಿಸುವುದರ ಮೂಲಕವೂ ಬರಲಾರದು. ಒಂದು ಬಾವಿಯನ್ನು ತೋಡಲು ನೀವೆಲ್ಲರೂ ಜತೆ ಸೇರಬೇಕು. ಎಂದು ಮುಂತಾಗಿ ಹೇಳಿದರಂತೆ. ಮಂದಿಗಳು ಬಂದಿವೆ. ಪ್ರಜಾಪ್ರಭುತ್ವದಲ್ಲಿ ಪ್ರಬಲ ವಿರೋಧೀಪಕ್ಷವೊಂದು ಅತ್ಯವಶ್ಯವೆಂದವರು ಹೇಳಿ, ಪಕ್ಷದ ಸರ್ವಾಧಿಕಾರಿತನಕ್ಕಿಂತ ವ್ಯಕ್ತಿಯ ಸರ್ವಾಧಿಕಾರತ್ವ ಸಹನೀಯವೆಂದರು. ಕಾಂಗ್ರೆಸ್ಸು ಇಂದು ದೇಶದಲ್ಲಿ ಸರ್ವಾಧಿಕಾರಿ ಘೋರಣೆಯಿಂದ ವರ್ತಿಸುತ್ತಿದೆ ಎಂದವರು ಆರೋಪಿಸಿ, ಈ ರೀತಿಯಾಗಿ ಉದ್ಗರಿಸಿರಬಹುದು. ಇಲ್ಲವೇ, ತಮಗೇನೇ ದೇಶದ ಸರ್ವಾಧಿಕಾರವನ್ನು ಕೊಟ್ಟುಬಿಟ್ಟರೆ, ಕಾಂಗ್ರೆಸ್ ಆಳುವುದಕ್ಕಿಂತ ಉತ್ತಮರೀತಿಯಲ್ಲಿ ತಾನು ಮುಂದುವರಿದೇನು ಎನ್ನುವ ಧ್ವನಿಯಿದ್ದರೂ ಇರಬಹುದು. ರಾಜಕಾರಣದಲ್ಲಿ ಸಾಕಷ್ಟು ಪಳಗಿದ ಶ್ರೀ ರಾಜಾಜಿಯವರ ಮಾತು 'ರಾಜಕೀಯ ಧ್ವನಿ' ಯಿಂದ ಕೂಡಿಕೊಂಡಿರುವುದೇನೂ ಅಸಂಭವವಲ್ಲ. ಆದರೆ, ಪಕ್ಷಪದ್ಧತಿಯ ಆಡಳಿತಕ್ರಮದಲ್ಲಿ ಪಕ್ಷದ ಸರ್ವಾಧಿಕಾರವೇ ಸಾಮಾನ್ಯವಾಗಿ ನಡೆಯುತ್ತಿರುವುದೆಂದು ತಿಳಿ ತಿಳಿದೂ ಜನತೆ ಪಕ್ಷಪದ್ಧತಿಯನ್ನೇ ಆದರಿಸುತ್ತದೆ! ಇದಕ್ಕೆ ರಾಜಾಜೀ ಏನು ಹೇಳುತ್ತಾರೆ?

ಸಂಕ್ಷಿಪ್ತ ಸುದ್ದಿಗಳು

ಒಡಂಬಡಿಕೆ ಮುಖ್ಯ

ಸಂಬಂಧಿಸಿದ ರಾಜ್ಯಗಳೊಳಗಣ ಒಡಂಬಡಿಕೆಯೇ ರಾಜ್ಯಗಳ ಗಡಿತಂಟೆಯ ಪರಿಹಾರದ ಮೂಲತತ್ವವಾಗಿದೆಯೆಂದು ಕೇಂದ್ರ ಗೃಹ ಸಚಿವರಾದ ಪಂಡಿತ ಗೋವಿಂದ ವಲ್ಲಭ ಪಂತರು ತಾ. ೨೫ರಂದು ಲೋಕಸಭೆಯಲ್ಲಿ ಸಾರಿರುತ್ತಾರೆ. ರಾಜ್ಯ ಪುನರ್ಘಟನಾ ಆಯೋಗವು ನಿರ್ದಿಷ್ಟಪಡಿಸಿದ ಮೂಲತತ್ವಗಳಿಗೆ ಸರಕಾರವು ಬದ್ಧವಿದೆ. ಯಾವ ಸಂದರ್ಭದಲ್ಲೂ ಅದನ್ನು ಬದಲಾಯಿಸಲಾಗುವುದಿಲ್ಲ. ಆದರೆ ಸಂಬಂಧಿಸಿದ ಪಕ್ಷಗಳು ಒಡಂಬಡಿಕೆಗೆ ಬಂದರೆ ಮಾತ್ರ ಕೇಂದ್ರವು ಅದನ್ನು ಅಂಗೀಕರಿಸುವುದೆಂದೂ ಅವರು ಹೇಳಿರುವರು. ಇದರಿಂದ ಮುಂಬಯಿ ಮೈಸೂರು ಗಡಿ ತಂಟೆಯಿಂದ ಬೆಳಗಾವಿಯ ಜನತೆಯಲ್ಲಿದ್ದ ಚಂಚಲ ವಾತಾವರಣವು ಸಂತಸದ ವಾತಾವರಣವಾಗಿ ಬದಲಾಗಿದೆ.

ಸಂಧಾನ ಮುರಿಯಿತು

ಮಾರ್ಚ್ ೨೪ರಿಂದ ಆರಂಭವಾಗಿದ್ದ ಭಾರತ ಮತ್ತು ಪಾಕಿಸ್ತಾನಗಳ ಅರ್ಥ ಮಂತ್ರಿಗಳೊಳಗಣ ಆರ್ಥಿಕ ಮಾತುಕತೆಗಳು ವಿಫಲಗೊಂಡವೆಂದು ತಿಳಿದುಬಂದಿದೆ. ವಿವಾದದ ಕೆಲವು ಅಂಶಗಳ ಬಗ್ಗೆ ಒಮ್ಮತ ಸಾಧಿಸಲಾಯಿತಾದರೂ ಮುಖ್ಯವಾಗಿ ವಿಭಜನೆಯ ದೆಸೆಯಿಂದ ಎರಡೂ ರಾಷ್ಟ್ರಗಳು ಪರಸ್ಪರರಿಗೆ ಕೊಡಬೇಕಾದ ಸಂರಕ್ಷಣ ಶಾಖೆ ಬಂಡವಳ, ಕಾಮಗಾರಿಗಳ ವೆಚ್ಚ ಮತ್ತು ಹಂಚಿಕೊಳ್ಳಬೇಕಾದ ಆದಾಯಕರ ಮೌಲ್ಯಗಳ ಬಗ್ಗೆ ಭಿನ್ನಾಭಿಪ್ರಾಯ ಹುಟ್ಟಿಕೊಂಡಿದೆ. ಮಾತ್ರವಲ್ಲ ರಾಷ್ಟ್ರಗಳು ಒಂದಕ್ಕೊಂದು ಕೊಡಬೇಕಾದ ಹಣವನ್ನು ಮರಳಿ ಮುಟ್ಟಿಸುವ ವಿಧಾನಗಳ ಬಗೆಗೂ ಮಂತ್ರಿದ್ವಯರಲ್ಲಿ ಅಭಿಪ್ರಾಯ ಭೇದ ತಲೆದೋರಿದೆ. ಪುನಃ ಸದ್ಯವೇ ಮಂತ್ರಿದ್ವಯರ ಭೇಟಿ ನಡೆಯಬಹುದಾದರೂ ಆ ಕಾಲ ನಿಶ್ಚಿತವಾಗಿ ತಿಳಿದುಬಂದಿಲ್ಲ.

ನೀತಿಗೆ ಪ್ರಬಲ ವಿರೋಧ

ವರ್ಣಭೇದ ನಡೆಸಿದ ದಕ್ಷಿಣ ಆಫ್ರಿಕಗೆ ಜಗತ್ತಿನ ಎಲ್ಲ ರಾಷ್ಟ್ರಗಳು ಸಾಮೂಹಿಕ ಬಹಿಷ್ಕಾರ ಹಾಕುವ ಸಂಭವವು ಎದ್ದು ತೋರುತ್ತದೆ. ಭದ್ರತಾಮಂಡಲದಲ್ಲಿ ಈ ವಿಷಯದ ಚರ್ಚೆಯೂ ಈಗಾಗಲೇ ಬರಲಿದೆ. ಈ ಕಾಲ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು ದಕ್ಷಿಣ ಆಫ್ರಿಕೆಯೊಡನೆ ರಾಯಭಾರಿ ಸಂಬಂಧ ಕಡಿದುಕೊಳ್ಳುವಂತೆ ಶಿಫಾರಸು

(೬ನೇ ಪುಟ ನೋಡಿರಿ)

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಆಂತರಿಕ ಘಟನೆಯಾಗಿರುವುದು. ಅದನ್ನು ಭದ್ರತಾ ಸಮಿತಿಯು ಚರ್ಚಿಸಿಕೊಳ್ಳಬಹುದಷ್ಟೇ ಹೊರತು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುವುದು ಸಾಧ್ಯವೆನಿಸದು. ಆದಗೂ ಬೆರಳಿನಿಂದ ಮುರಿದುಬಿಡುವಷ್ಟು ಸರಳವಾದ ಘಟನೆಯಿದಲ್ಲವಾದುದರಿಂದ, ಮಾನವತೆಯನ್ನೇ ಅಪಮಾನಿಸುವಂತಹ ಮಾನವಭೇದವಾದುದರಿಂದಎಲ್ಲ, ಮುಖ್ಯವಾಗಿ ಆಫ್ರೀಸ್ಯನ ರಾಷ್ಟ್ರಗಳು, ಚಿಂತಿಸಲೇ ಬೇಕಾದ ವಿಚಾರವಿದು.

ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ ಹಮ್ಮರ ಶೀಲ್ಡರು "ಮಾನವೀಯ ದೃಷ್ಟಿಯಿಂದ ನೋಡುವುದಾದರೆ, ನನ್ನ ಪ್ರತಿಕ್ರಿಯೆ ಮತ್ತು ಭಾವನೆಗಳ ಬಗ್ಗೆ ಯಾವ ಸಂದೇಹ ಪಡಬೇಕಿಲ್ಲ, ಖಂಡಿತವಾಗಿಯೂ ಈ ವರ್ಣಭೇದವು ಖಂಡನೀಯವೇ. ಆದರೆ, ಸಂ. ರಾ. ಸಂಸ್ಥೆಯಾಗಲೀ ಅದರ ಪ್ರಧಾನ ಕಾರ್ಯದರ್ಶಿಯಾಗಲೀ ಕೈಗೊಳ್ಳಬಹುದಾದ ಕ್ರಮಗಳಿಗೆ ಒಂದು ಮಿತಿಯನ್ನು ಜಾಗತಿಕ ತಾಮ್ರಪಟವು ಹಾಕಿರುತ್ತದೆ, ಎಂದಿದ್ದರು.

ಗ್ರೇಟ್ ಬ್ರಿಟನು ಇದುವರೆಗೆ ದಕ್ಷಿಣ ಆಫ್ರಿಕೆಯ ಕಡೆಗೆ ಆಸಕ್ತಿ ತೋರಿಸುತ್ತಿದರೂ ಪ್ರಚಲಿತ ಘಟನೆಯನ್ನು ಮೆಚ್ಚಿದಂತೆ ತೋರಿಬರುವುದಿಲ್ಲ. ಆದುದರಿಂದ ಅದೂ ಇನ್ನು ಮುಂದೆ ಈ ವರ್ಣವಿಭೇದ ನೀತಿಗೆ ಪ್ರೋತ್ಸಾಹ ನೀಡಲಾರದು ಎಂದು ವಿಶ್ವಾಸವಿದೆ. ರಶ್ಯ, ಪೋಲಾಂಡ್, ಟ್ಯುನೀಸಿಯಾ, ಸಿಂಹಳಗಳು ಈ ಪ್ರಶ್ನೆಯನ್ನು ಚರ್ಚಿಸಲು ತಮ್ಮ ಮತವನ್ನಿತ್ತಿದ್ದು, ಘಾನಾ, ಭಾರತ ಮೊದಲಾದ ಕೆಲ ಆಫ್ರೀಸ್ಯನ್ ರಾಷ್ಟ್ರಗಳೂ ಬೆಂಬಲನೀಡಬಹುದು.

In the Court of the District Munsif of Kundapur

O. P. 10/1960

1. Panduranga Pai, S/o Ramachandra Pai
2. Madhav Pai } Sons of Padmanabha Pai
3. Keshav Pai }
residing in Hallady Harkady village, Coondapoor Taluk —Petitioners

No respondent.

To Whomsoever it may consume

NOTICE

Whereas the Petitioners have applied to this court for the grant to the 2nd Petr. of a Succession Certificate for and on behalf of all the petitioners—in respect of the sum of Rs. 431-07 being the amount deposited through the District Judge's court, Mangalore in P. O. S. B. Account No. 62060/ Mangalore—by the late Ramachandra Pai, in the matter of O. P. 40/1944. Notice is hereby given that anyone interested in opposing the Petitioners' claim is at liberty to appear before this court with his objection either in person or by pleader at 11 a.m. on 31—5—1960.

By order of the Court.

K Ramappaiya.
Advocate for Petrs.

Coondapoor, 26—3—1960.

(೫ನೇ ಪುಟದಿಂದ)

ಮಾಡಬೇಕೆಂದು ಭದ್ರತಾಮಂಡಲದ ಮನವೊಲಿಸಲು ಸಂಯುಕ್ತ ರಾಷ್ಟ್ರ ಸಂಘದ ಲಾಬಿಯಲ್ಲಿ ಆಲೋಚಿಸಲಾಗುತ್ತಿದೆ. ಜಗತ್ತಿನ ಹೆಚ್ಚಿನ ರಾಷ್ಟ್ರಗಳು ದ. ಆಫ್ರಿಕದ ಈ ಕ್ರಿಯೆಯನ್ನು ಪ್ರಬಲವಾಗಿ ವಿರೋಧಿಸಿವೆ,

ತಾಂತ್ರಿಕ ಶಿಕ್ಷಣಾಭಿವೃದ್ಧಿ

ಭಾರತದ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗಾಗಿ ಕೇಂದ್ರದ ವೈಜ್ಞಾನಿಕ ಸಂಶೋಧನೆ ಹಾಗೂ ಸಾಂಸ್ಕೃತಿಕ ಮಂತ್ರಿಯ ಶಾಖೆಯು ಯೋಜನಾ ಆಯೋಗಕ್ಕೆ ೧೭೭ ಕೋಟಿ ರೂ. ವೆಚ್ಚದ ಕಾರ್ಯಕ್ರಮವನ್ನು ಸೂಚಿಸಿದೆ. ಇದರ ಪ್ರಕಾರ ಈ ಯೋಜನಾವಧಿಯಲ್ಲಿ ರಾಜ್ಯಸರಕಾರಗಳು ೧೫ ಎಂಜಿನಿಯರಿಂಗ ಕಾಲೇಜುಗಳನ್ನೂ, ೩೫ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನೂ ಸ್ಥಾಪಿಸುವುವು. ಈ ಕಾರ್ಯಕ್ರಮದನ್ವಯ ಬುದ್ಧಿವಂತ ವಿದ್ಯಾರ್ಥಿಗಳಿಗೆ ಅಭ್ಯಾಸ ಮುಂದುವರಿಸಲು ಸಾಲ, ಶಿಷ್ಯವೃತ್ತಿಯ ಹೊಸ ಯೋಜನೆಯೂ ಇದೆ.

ಅದೇನೇ ಇದ್ದರೂ ಇಂದಿನ ನಾಗರಿಕ ಪ್ರಪಂಚದಲ್ಲಿ ಕ್ಷೋಭೆಯ ವಾತಾವರಣವನ್ನುಂಟುಮಾಡಿ, ಎಲ್ಲರೂ ಪರಿತಾಪವನ್ನೂ ಕಳವಳವನ್ನೂ ಪಡುವಂತೆಸಗಿದ ಈ ಅನಪೇಕ್ಷಣೀಯ ದುರ್ಘಟನೆಯು ಸರ್ವಥಾ ಖಂಡನಾರ್ಹ. ಅಮೇರಿಕೆಯಲ್ಲಿ ಲಿಂಕನ್ನರ ಕಾಲದಲ್ಲಾದ 'ವರ್ಣ ವಿದ್ವೇಷ'ದ ದುಷ್ಪರಿಣಾಮಗಳನ್ನು ನಾವಿನ್ನೂ ಮರೆತಿಲ್ಲ. ಆದುದರಿಂದ, ಆಧುನಿಕ ಪ್ರಗತಿಪರ ರಾಜಕೀಯ ನೀತಿಗಳಿಗೆ ಮನ್ನಣೆಯಿತ್ತು ದ. ಆಫ್ರಿಕನ್ ಸರಕಾರವು ವರ್ಣಭೇದವನ್ನು ಕಿತ್ತುಹಾಕಿ, ಆಫ್ರಿಕನರಿಗೆ ಸ್ವದೇಶದಲ್ಲಿ ಸಂಪೂರ್ಣ ನಾಗರಿಕಾಧಿಕಾರ ಒದಗಿಸುವುದು ಅತ್ಯವಶ್ಯವಾಗಿದೆ. ಇದಕ್ಕೆ ತಪ್ಪಿದರೆ, ಈ ಚಳವಳದ ಸ್ವರೂಪ ಮತ್ತಷ್ಟು ಉಗ್ರವಾಗಿ ಪ್ರಳಯಂಕರವೆನಿಸಬಹುದು.

ಕುಂದಾಪುರ ಅಸಿಸ್ಟಾಂಟ್ ಕಮಿಶನರರವರ ಕೋರ್ಟಿನಲ್ಲಿ

Eviction O P. 265/1959.

ತೇಜಪ್ಪ ಹೆಗ್ಡೆ —ಅರ್ಜಿದಾರ.

ಮತ್ತು

1. ಎಲ್ಲು ಶೆಟ್ಟಿ. 2. ಕಾಡ್ಯ ಶೆಟ್ಟಿ. ಉಡುಪಿ ತಾಲೂಕು ಶಿರ್ವ ಗ್ರಾಮದ ಕುತ್ತಿನೂರು— ಎಂಬಲ್ಲಿರುವವರು. —ಎದುರು.

ಸದ್ರಿ ಎದುರೀಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರನ ಕುಟುಂಬದ ಬಾಬ್ತು ಅರ್ಜಿಯಲ್ಲಿ ಕಾಣಿಸಿದ ಆಸ್ತಿಗಳನ್ನು ಎದುರು ಅರ್ಜಿದಾರನ ಕುಟುಂಬದ ಮುಂಬರರಾಗಿದ್ದ ನಾರಾಯಣ ಹೆಗ್ಡೇರಿಗೆ ಬರೆಕೊಟ್ಟ ಚಾಲಗೇಣಿ ಎದ್ರುಪುಡಿ ಮೇರೆಗೆ ಚಾಲಗೇಣಿಗೆ ಅನುಭವಿಸಿ ಬರುವುದರಿಂದಲೂ, ಅರ್ಜಿದಾರನ ಕುಟುಂಬದಲ್ಲಾದ ಎಗ್ರಿಮೆಂಟು ಮೇರೆಗೆ ಅರ್ಜಿದಾರನು ಸದ್ರಿ ನಾರಾಯಣ ಹೆಗ್ಡೇರ ಕಾಲದ ನಂತರ ಗೇಣಿವಸೂಲಿ ಮಾಡುವರೇ ಹಕ್ಕುದಾರನಾಗಿರುವುದರಿಂದಲೂ ವಿಳಂಬಿ ಸಂರದ ಲಾಗಾಯ್ತಿನ ಗೇಣಿ ಬಾಕಿಮಾಡಿಕೊಂಡಿರುವುದರಿಂದಲೂ ಸದ್ರಿ ಚಾಲಗೇಣಿಗೆ ಕಾರಣವಾದ ಅರ್ಜಿಯಲ್ಲಿ ಕಾಣ್ಸಿದ ಆಸ್ತಿ ಸ್ವಾಧೀನತೆ ಮಾಡಿಕೊಡಿಸಬೇಕಾಗಿ ಅರ್ಜಿದಾರನು ಕೊಟ್ಟ ಮೇಲ್ಕಂಡ ಅರ್ಜಿಯು ಯುದ್ರಿರ ಅಪೈರ್‍ಯ ನೋಟೀಸು ಬಗ್ಗೆ ತಾ. 7-4-60 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಉಡ್ಪಿ ಕೇಂಪಿನಲ್ಲಿ ಇಡೋಣಾಗಿರುತ್ತದೆ ಆಗಿಯೂ ಆಕ್ಷೇಪಣೆ ಹೇಳುವಂತದ್ದು ಇದ್ರ ಸದ್ರಿ ದಿನ ಹಗಲು 10 ಗಂಟೆಗೆ ಕೋರ್ಟ ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

B. Ananda Shetty.
Advocate forPetitioner.

Udipi. Dated 25—3—60.

ಚಾಮರಾಜರ ದ್ವಿತೀಯ ಆವರ್ತ

ಅಮೇರಿಕಾ ಮತ್ತು ಆಫ್ರಿಕಾಗಳಲ್ಲಿ ತಮ್ಮ ಉಪನ್ಯಾಸ ಸಂಚಾರ ಪೂರ್ತಿಗೊಳಿಸುವುದಕ್ಕೋಸ್ಕರ ವಾಗಿ ಮೈಸೂರಿನ ರಾಜ್ಯಪಾಲರು ಎಪ್ರಿಲ್ ೧೬ರಂದು ಬೆಂಗಳೂರಿನಿಂದ ಪ್ರಯಾಣ ಬೆಳೆಸಲಿದ್ದಾರೆ. ತನ್ನ ಸಂಚಾರಕಾಲ ರಾಜ್ಯಪಾಲರು ಕೈರೋ, ಘಾನಾ, ನ್ಯೂಯಾರ್ಕ್‍ಗಳನ್ನು ಸಂದರ್ಶಿಸಿ ಭಾರತೀಯ ತತ್ವಜ್ಞಾನ ಮತ್ತು ಸಂಸ್ಕೃತಿಗಳ ಬಗ್ಗೆ ಉಪನ್ಯಾಸವೀಯಲಿರುವರು. ತಾತ್ಕಾಲಿಕ ಗವರ್ನರರಾಗಿ ಕಳೆದಬಾರಿಯಂತೆ ಶ್ರೀ ಮಂಗಲದಾಸ ಪಕ್ವಾಸರನ್ನೇ ನೇಮಿಸಬಹುದೆಂಬ ಊಹೆ ಇದೆ.

ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು

ಮೈಸೂರು ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಆಡಳಿತೆಯಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ಎಲ್ಲಾ ವರ್ಗದ ಶಾಲೆಗಳ ಆಡಳಿತವನ್ನು ಹೊಸತಾಗಿ ರಚಿಸಲಾಗುವ ತಾಲೂಕು ಬೋರ್ಡುಗಳಿಗೆ ಒಪ್ಪಿಸಲು ಸರಕಾರವು ನಿರ್ಧರಿಸಿದೆ ಎಂದು ತಿಳಿದು ಬಂದಿದೆ. ಇದಕ್ಕಾಗಿ ಸಂಬಂಧಿಸಿದ ವಿವರಿಸಿದ್ಧಪಡಿಸಲು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಗಿದೆ ಎಂದೂ ತಿಳಿದುಬಂದಿದೆ. ಈ ಸಂಬಂಧದ ವಿಧೇಯಕವು ವಿಧಾನ ಸಭೆಯ ಮುಂದೆ ಬರುವುದು.

ದಂತ ವೈದ್ಯಕೀಯ ಕಾಲೇಜು

ಬೆಂಗಳೂರಿನ ದಂತ ವೈದ್ಯಕ ಕಾಲೇಜಿಗೆ ಸ್ವಂತ ಕಟ್ಟಡ ವಿಲ್ಲದ ದೆಸೆಯಿಂದಾಗಿ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು ಅಸಾಧ್ಯವಾಗಿದೆ. ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಉದ್ದೇಶದಿಂದ ಸರಕಾರವು ಕಾಲೇಜಿಗೆ ಹೊಸ ಕಟ್ಟಡ ಕಟ್ಟಿಸುವುದಕ್ಕಾಗಿ ೧೫ ಲಕ್ಷ ರೂ ಗಳ ವೆಚ್ಚವನ್ನು ಮಂಜೂರು ಮಾಡಿದೆ ಎಂದು ತಿಳಿದುಬಂದಿದೆ. ಇದರ ಜೊತೆ ಎರಡುವರೆ ಲಕ್ಷದ ಕಟ್ಟಡದ ಯೋಜನೆಯನ್ನು ಬಿಟ್ಟು ಬಿಡಲಾಗಿದೆ.

ಇಟೆಲಿಗೆ ಹೊಸ ಸರಕಾರ

ಚುನಾವಣೆಯ ಬಳಿಕ ಇಟೆಲಿಯಲ್ಲಿ ಹೊಸ ಮಂತ್ರಿಮಂಡಲವು ಅಧಿಕಾರ ಸ್ವೀಕರಿಸಿದೆ. ಕ್ರಿಶ್ಚನ್ ಡೆಮೊಕ್ರಾಟಿಕ್ ಪಕ್ಷದ ಮಂತ್ರಿಮಂಡಲವು ಅಧಿಕಾರ ಸ್ವೀಕರಿಸಿದೆ. ಶ್ರೀ ಸಿನಾರ ಫರ್ಡಿನಾಂಡೊ ಪಾಂಬ್ರೊನಿ ಇವರು ಪ್ರಧಾನಮಂತ್ರಿಗಳಾಗಿರುವ ಹೊಸ ಮಂತ್ರಿಮಂಡಲ ರಚನೆಯಾಗಿದೆ. ಈ ಮಂತ್ರಿಮಂಡಲದಲ್ಲಿ ನಾಲ್ವರನ್ನು ಬಿಟ್ಟರೆ ಉಳಿದವರೆಲ್ಲ ಹಿಂದಿನ ಮಂತ್ರಿಮಂಡಲದ ಸದಸ್ಯರೇ ಆಗಿರುವರು.

"ಕುಂದಾ"ದ ಉದ್ಘಾಟನೆ

ಮದರಾಸು ರಾಜ್ಯದ ನೀಲಗಿರಿಯ ಕುಂಧ ಜಲವಿದ್ಯುಚ್ಛಕ್ತಿ ಯೋಜನೆಯ ಪ್ರಾರಂಭೋತ್ಸವವನ್ನು ಪ್ರಧಾನ ಮಂತ್ರಿ ನೆಹರೂರವರು ನೆರವೇರಿಸಿದರು. ೩೫ ಕೋಟಿ ರೂ. ವೆಚ್ಚದ ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ಅನೇಕ ಉದ್ಯಮಗಳಿಗೆ ಹಾಗೂ ಸಾವಿರಾರು ಮನೆಗಳಿಗೆ ಪೂರೈಸಲಾಗುವುದು.

ಅಲ್ಲಲ್ಲಿಯ ಸುದ್ದಿಸಾರ

ದ. ಕ. ಜಿಲ್ಲಾ ಕಾಂಗ್ರೆಸ" ಸಮಿತಿ —ಇದರ ಮಹಾಸಭೆಯು ತಾ. 27-3-60 ರಂದು ಜರಗಲಿದ್ದುದು ಪುನಃ ತಾ 3-4-60 ನೇ ಆದಿತ್ಯವಾರಕ್ಕೆ ಮುಂದುವರಿಸಲ್ಪಟ್ಟಿದೆ. ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಅಪರಾಹ್ನ 3 ಗಂಟೆಗೆ ಜರಗುವ ಈ ಸಭೆಯಲ್ಲಿ ಹೊಸ ಜಿಲ್ಲಾ ಕಾಂಗ್ರೆಸಿನ ಅಧಿಕಾರಿ ವರ್ಗಗಳನ್ನು ಆರಿಸಲಾಗುವುದು

ದಿವಂಗತ ಶ್ರೀ ಎ. ಬಿ. ಶೆಟ್ಟರ ಮೆಮೋರಿಯಲ್ ಕಮಿಟಿ— ಇದರ ಪ್ರಥಮ ಸಭೆಯು ತಾ. 3—4—60 ನೇ ಆದಿತ್ಯವಾರ ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಜರಗಲಿರುವುದು. ಈ ಸಭೆಯಲ್ಲಿ ಮುಂದಿನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗುವುದಲ್ಲದೆ ಒಂದು ಕಾರ್ಯಕಾರೀ ಸಮಿತಿಯನ್ನು ಕೂಡಾ ಆರಿಸಲಾಗುವುದು.

ಭಾವಚಿತ್ರ ಅನಾವರಣ— ದ. ಕ. ಸೆಂಟ್ರಲ್ ಬೇಂಕಿನ ಅಧ್ಯಕ್ಷರಾಗಿದ್ದು ಈಗ ಅಸೌಖ್ಯದ ಕಾರಣದಿಂದ ನಿವೃತ್ತರಾಗಲಿರುವ ಶ್ರೀ ಮೊಂತೇರೊ ಅವರ ಭಾವಚಿತ್ರ ಅನಾವರಣ ಸಮಾರಂಭವು ತಾ. 24ರಂದು ಶ್ರೀ ಎಮ್. ಎಸ್. ಚಾಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮೊಳಹಳ್ಳಿ ಶಿವರಾಯರು ಭಾವಚಿತ್ರವನ್ನು ಅನಾವರಣ ಮಾಡಿದರು.

ಉದ್ಘಾಟನೆ— ಕುನಾರದು ಬೋರ್ಡ್ ಹೈಸ್ಕೂಲಿಗೆ ಮುಡಿಪು ವಿದ್ಯಾವರ್ಧಕ ಸಂಘದವರು ಕಟ್ಟಿಸಿಕೊಟ್ಟ ಹೊಸ ಕಟ್ಟೋಣದ ಉದ್ಘಾಟನೆಯು ತಾ. 18ರಂದು ಶ್ರೀ ಬಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಗಳಿಂದ ನೆರವೇರಿಸಲ್ಪಟ್ಟಿತು

ವಾರ್ಷಿಕೋತ್ಸವ— ಮಂಗಳೂರು ಕ್ರೈಸ್ತ ಮಹಿಳೆಯರ ಸಂಘದ ವಾರ್ಷಿಕೋತ್ಸವವು ತಾ. 25ರಲ್ಲಿ ಶ್ರೀಮತಿ ಸಿ. ಎಲ್. ಕುಲಾಸೋ ಇವರ ಅಧ್ಯಕ್ಷತೆಯಲ್ಲಿ ಕೆಥೋಲಿಕ್ ಕ್ಲಬ್ಬಿನಲ್ಲಿ ನೆರವೇರಿತು.

ಯಕ್ಷಗಾನ ಕಾರ್ಯಕ್ರಮ— ತಾ. 27-3-60ರಲ್ಲಿ ಅಂಬಲಪಾಡಿಯ ಲಕ್ಷ್ಮೀಜನಾರ್ಧನ ಯಕ್ಷಗಾನ ಕಲಾಮಂಡಳಿಯವರಿಂದ ಸ್ಥಳೀಯ ಕಿರಿಯ ಬುನಾದಿ ಶಾಲೆಯಲ್ಲಿ ಕಾರ್ತವೀರ್ಯಾರ್ಜುನ ಕಾಳಗವೆಂಬ ಯಕ್ಷಗಾನ ಕಾರ್ಯಕ್ರಮವು ಪಟೇಲ್ ಶ್ರೀ ಎ. ಜಗನ್ನಾಥ ಸೆಟ್ರ ಆಶ್ರಯದಲ್ಲಿ ಜರಗಿತು. ಶ್ರೀ ಕೆ. ಆನಂದ ಗಾಣಿಗರು ಧನ್ಯವಾದವಿತ್ತರು.

ಕೊರಂಗ್ರಪಾಡಿ ಪಂಚಾಯತ್ ಚುನಾವಣೆ— ಶ್ರೀಗಳಾದ ಕೆ. ಬಾಲಕೃಷ್ಣ ಶೆಟ್ಟಿ, ಅಂತಯ ಪೂಜಾರಿ, ಗುರುವ ಕೆ. ಬಿ. ಸೀನ ಶೆಟ್ಟಿ, ಡನಿಯಲ್ ಕರ್ಕಡ, ಎ. ನರಸಿಂಹಯ್ಯ, ತಿಮ್ಮಪ್ಪ ಶೆಟ್ಟಿ, ತುಕ್ರು ಸೇರಿಗಾರ, ಕೆ. ಮಹಾಬಲ ಶೆಟ್ಟಿ, ರಾಜಗೋಪಾಲ ಆಚಾರ್ಯ, ಪದ್ಮ ಶೆಟ್ಟಿ, ಶ್ರೀಮತಿ ಸುಂದರಿ ಶೆಡ್ತಿ ಇವರು ಬಹುಮತದಿಂದ ಆರಿಸಲ್ಪಟ್ಟಿರುತ್ತಾರೆ. ಶ್ರೀಗಳಾದ ವಿಠಲ ಆಚಾರ್ಯ, ಗೋಪಾಲಕೃಷ್ಣ ತಂತ್ರಿ ಇವರು ಇದುಗಂಟನ್ನು ಕಳೆಕೊಂಡಿರುತ್ತಾರೆ. ಮಹಿಳಾ ಸ್ಥಾನಕ್ಕೆ ಶ್ರೀಮತಿ ಗಂಗಮ್ಮ ಹೆಗ್ಗಡ್ತಿಯವರು ಅವಿರೋಧ ಆಯ್ಕೆಗೊಂಡಿರುವರು.

ಯುಗಾದಿ ಉತ್ಸವ— ನಗರ ಸಭಾಪತಿ ಶ್ರೀ ಮುಚೇಲ್ ಶ್ರೀನಿವಾಸ ನಾಯ್ಕರು ಏರ್ಪಡಿಸಿದ ಸಾರ್ವಜನಿಕ ಯುಗಾದಿ ಉತ್ಸವವು ತಾ. 29ರಂದು ಮಂಗಳೂರಿನ ಉರ್ವ ಕೆನರಾ ಹೈಸ್ಕೂಲಿನಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು.

ಸೂಚನೆ—

ಈ ಸಂಚಿಕೆಯಲ್ಲಿ ಪುಟಸಂಖ್ಯೆ ೧೨ರಂತೆ ಪ್ರಿಂಟಾಗಿದ್ದರೂ ಕೆಲವು ಅನಾನುಕೂಲತೆಗಳಿಂದಾಗಿ ಬರೇ ೧೦ ಪುಟಗಳನ್ನು ಮಾತ್ರ ಕೊಡಲಾಗಿದೆ. ೭—೮ನೇ ಪುಟಗಳನ್ನು ಲೋಪಪಡಿಸಲಾಗಿದೆ. ವಾಚಕರು ದಯವಿಟ್ಟು ಗಮನಿಸಬೇಕಾಗಿ ಸೂಚಿಸುತ್ತೇವೆ.

—ಮೆನೇಜರ್.

ಸಂಸ್ಕೃತಿ ದರ್ಶನ

(೪ನೇ ಪುಟದಿಂದ)

ನರ್ಸ್‌ನು ಭಾರತೀಯರ ಸೃಷ್ಟಿ ಪುರುಷನಾದ ರಾಜ ಮನುವೇ ಆಗಿರುವನೆಂದು ಕೆಲವು ವಿದ್ವಾಂಸರ ಅಭಿಪ್ರಾಯವಿರುವುದು.

ಗೋವುಗಳಿಗೂ ಐಗುಪ್ತದಲ್ಲಿ ಭಾರತದಂತೆಯೇ ಮಹತ್ವಸ್ಥಾನವಿದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಇಲ್ಲಿ ಗೋಪೂಜೆ ಮತ್ತು ಗೋ ಸಮ್ಮಾನಗಳು ನಡೆದು ಬರುತ್ತಿವೆ. ಹಥೋರ ಎಂಬ ದನವೇ ಐಗುಪ್ತದೇಶದ ಜನರ ಪ್ರಧಾನ ಆರಾಧ್ಯ ದೇವತೆಯಾಗಿದೆ. ಇಲ್ಲಿನ ನೀಲನದಿಯನ್ನು ದುಧಾರೂ ಎಂಬ ದನದೊಡನೆ ಹೋಲಿಸಲಾಗುತ್ತದೆ. ನೀಲನದಿಯ ತಟದಲ್ಲಿ ಏಳು ವಿಧದ ದೇವತೆಗಳ ಮೂರ್ತಿಗಳಿವೆ. ಈ ನದಿಯಲ್ಲಿ ನೆರೆಯು ಬರುವಾಗ, ಈ ದೇವತೆಗಳಿಗೆ ಪೂಜೆಸಲ್ಲಿಸುತ್ತಿದೆ; ಆಗ ಗೋವುಗಳ ಮೆರವಣಿಗೆಯನ್ನು ಏರ್ಪಡಿಸುತ್ತಾರೆ. ಐಗುಪ್ತದವರು ಹಥೋರ್ ದನದಂತೆಯೇ ಆಪಿಸ್ ಎಂಬ ಎತ್ತನ್ನೂ ಆರಾಧಿಸುತ್ತಾರೆ. ಇಲ್ಲಿನ ಪಿರಮಿಡ್ ಮತ್ತು ಭೂ ಉತ್ಖನನ ಕಾರ್ಯಗಳನ್ನು ಪರಿಶೀಲಿಸುವಾಗ, ಐಗುಪ್ತದ ನಾಗರಿಕತೆಯು ಕ್ರಿ. ಪೂ. ೫ ಸಾವಿರ ವರ್ಷಗಳಿಗೆ ಮೊದಲಿನದೆಂದೂ ಆ ಕಾಲದಿಂದಲೂ ಗೋವು ಮತ್ತು ವೃಷಭಗಳನ್ನು ಪೂಜಿಸುತಿದ್ದರೆಂದೂ ಗೊತ್ತಾಗುತ್ತದೆ. ಅಲ್ಲಿ ಗೋ ಹತ್ಯೆಯಾಗುತಿದ್ದಿಲ್ಲ ಒಂದುವೇಳೆ, ಗೋಹತ್ಯೆ ಮಾಡಿದರೆ, ವಧಕನಿಗೆ ಶಿಕ್ಷೆ ದೊರೆಯುತಿತ್ತು.

ಮರಣಾನಂತರ ಮಾನವನು ದನದ ಬಾಲವನ್ನು ಹಿಡಿದುಕೊಂಡು ವೈತರಣೀ ನದಿಯನ್ನು ದಾಟುವನೆಂದು ಭಾರತೀಯರ ಕಲ್ಪನೆಯಿದೆ. ಅಂತೆಯೇ ಈಜಿಪ್ತದವರೂ ಪ್ರಾಣನು ದನದ ಬಾಲವನ್ನು ಆಧರಿಸಿಯೇ ನೀಲನದಿಯನ್ನು ಈಜುವನೆಂಬ ವಿಶ್ವಾಸವಿಟ್ಟಿದ್ದಾರೆ. ಈಜಿಪ್ತದ ಜನರು ಎತ್ತುಗಳನ್ನು ಕೆಲವೇಳೆ ಕೊಲ್ಲುದುಂಟು; ಆದರೆ, ದನಗಳ ವಧೆಯೆಂದೂ ನಡೆಯುತ್ತಿಲಿಲ್ಲ ಎಂದು ರೊಡೋಟ್ಸನ್ ಎಂಬವನ್ನು ಬರೆಯುತ್ತಾನೆ.

ಇನ್ನು ಕೆಲವು ವಿದ್ವಾಂಸರು ತಮ್ಮ ಗಂಭೀರ ಅನ್ವೇಷಣೆಯ ಆಧಾರದಿಂದ ಪ್ರಾಚೀನ ಈಜಿಪ್ತದಲ್ಲಿ ಶಿವಲಿಂಗದ ಪೂಜೆಯು ನಡೆಯುತಿತ್ತು ಎಂದು ಹೇಳುತ್ತಾರೆ.

ಸ್ವಾತಂತ್ರ್ಯನಂತರವೂ ಈಜಿಪ್ತ ಮತ್ತು ಭಾರತಗಳ ಮೈತ್ರಿಯ ಸಂಬಂಧದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಇಂದು ಎರಡೂ ರಾಷ್ಟ್ರಗಳ ಸ್ನೇಹವು ವಿಶ್ವದ ಪ್ರಚಲಿತ ರಾಜಕೀಯದಲ್ಲಿ ಒಂದು ಮಹತ್ವದ ಅಧ್ಯಾಯವಾಗಿ ಪರಿಣಮಿಸಿದೆ.

ಎಪ್ರಿಲ್ ತಿಂಗಳ ಪೂರ್ವಾರ್ಧದಲ್ಲಿ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರು ಭಾರತವನ್ನು ಸಂದರ್ಶಿಸಲಿರುವರು, ಅವರ ಈ ಭೇಟಿಯಿಂದಾಗಿ ಎರಡು ರಾಷ್ಟ್ರಗಳ ಪ್ರಾಚೀನ ತಮವಾದ ಸಂಬಂಧವು ಮತ್ತಷ್ಟು ದೃಢವಾಗುವುದು ಎಂದು ನಂಬಬಹುದು. ಸದ್ಯ(ವಿಶ್ವದ ತ್ವೇಷಮಯ ವಾತಾವರಣದಲ್ಲಿ ನಸ್ಸೇರ ನೆಹೂರೂ ಭೆಟ್ಟಿಯು ತನ್ನದೇ ಆದ ಸ್ಥಾನವನ್ನು ಗಳಿಸಿದೆಯೆಂಬುದು ನಿರ್ವಿವಾದ.

(ವಿವಿಧ ಮೂಲಗಳಿಂದ)

—ಗೋರಾ.

ಶುದ್ಧ ಹರಟೆ

ಮಾನವನ ಮಹಾಗುಣ – ಮರವು

ಮರೆವಿನಿಂ ಮೇಲಿಲ್ಲ; ತಿಳಿವಿನಿಂ ಕೀಳಿಲ್ಲ; ಮರೆವಿನಿಂದಧಿಕ ಸುಖವಿಲ್ಲ;
ಜಗದೊಳಗೆ ಮರವೆ ತಾನಮರ ಕೇಳಯ್ಯಾ ||

"ಯಾವನೇ ಒಬ್ಬ ಮನುಷ್ಯನಿರಲಿ, ಅವನು ತೀರ ಕೆಟ್ಟವನಲ್ಲ, ಅವನಲ್ಲಿ ಒಂದಲ್ಲ ಒಂದು ಗುಣ ಇದ್ದೇ ಇರುತ್ತೆ. ಒಬ್ಬೊಬ್ಬ ವ್ಯಕ್ತಿಯಲ್ಲಿ ಒಂದೊಂದು ಶಕ್ತಿ ಇರುವುದು' ಎಂದು ಬಲ್ಲವರು ಹೇಳಿದ್ದಾರೆ. ಈ ಮಾತು ನೂರಕ್ಕೆ ನೂರು ನಯೇ ಪೈಸೆಗಳಷ್ಟು ಸತ್ಯವೆಂದು ನಂಬಿ ನನ್ನಲ್ಲಿ ಯಾವ ಗುಣವಿದೆಯೆಂದು ಬಹಳ ಯೋಚಿಸಿದೆ. ಎಷ್ಟು ತಲೆ ಕೆರೆದುಕೊಂಡರೂ ನೆನಪೇ ಬರಲಿಲ್ಲ. ಇದು ನನ್ನಲ್ಲಿ ಒಂದು ತರದ ಹಟವನ್ನುಂಟುಮಾಡಿತ್ತೆನ್ನಿ.

ಅದೊಂದು ದಿನ ಬೆಳಿಗ್ಗೆ ನಾನು ಆರಾಮ ಕುರ್ಚಿಯಲ್ಲಿ ಕುಳಿತು ತಲೆಗೆ ಕೈಕೊಟ್ಟು, ನನ್ನಲ್ಲಿರುವ ಶಕ್ತಿ ಯಾವುದೆಂದು ಬಹಳ ಯೋಚಿಸುತಿದ್ದೆ. ಅಷ್ಟರಲ್ಲಿ ನನ್ನ ಪುಟ್ಟ ತಮ್ಮ ಶ್ರೀಧರ ಬಂದು ಪೆಪ್ಪರ್‌ಮಿಂಟು ಬೇಕೆಂದು ಹಟಮಾಡತೊಡಗಿದ. "ಈಗಿಲ್ಲ. ಹೋಗು ಸಂಜೆ ತಂದು ಕೊಡುವೆನು. ಈಗ ನಾನೊಂದು ದೊಡ್ಡ ಕೆಲಸದಲ್ಲಿದ್ದೇನೆ" ಎಂದು ಗದರಿಸಿ ಹೇಳಿದರೂ ಅವನು ಪೆಪ್ಪರ್‌ಮಿಂಟ್ ಬೇಕೆಂದು ಹಟ ಹಿಡಿದು ಅಳತೊಡಗಿದನು. ನನ್ನ ಸಿಟ್ಟು ನೆತ್ತಿಗೇರಿತು. "ಸುಮ್ಮ ಸುಮ್ಮನೆ ಅಳಬೇಡ, ಎರಡು ಪೆಟ್ಟು ತಿಂದು ಅಳು" ಎಂದು ನನ್ನ ಪ್ರೀತಿಯ ತಮ್ಮನ ಬೆನ್ನಿಗೆ ರಪೇಟು ಕೊಟ್ಟೆ. ಇದರಿಂದ ಅವನ ಅಳು ಇನ್ನೂ ಗಟ್ಟಿಯಾಯಿತು. ಒಳಗೆ ಅಡಿಗೆ ಮನೆಯನ್ನು ಗುಡಿಸುತಿದ್ದ ನಮ್ಮಮ್ಮ ಕಸಬರಿಗೆ ಹಿಡಿದು ಕೊಂಡೇ ಬಂದಳು. ಆದರೆ ಆ ಕಸಬರಿಗೆ ನನನ್ನು ಹೊಡೆಯಬೇಕೆಂದು ತಂದುದಲ್ಲವೆನ್ನಿ. ಮುಖದಲ್ಲಿ ಮಿಾಸೆಮೂಡಿದ ಮೇಲೆ ಅವಳು ನನಗೇನೂ ಹೊಡೆಯಲಾರಳು ಎನ್ನುವ ದೃಡವಿಶ್ವಾಸ ಮೂಡಿತ್ತು. 'ಏನೋ ಚಂದ್ರು ಮಗೂಗೇಕೆ ಹೊಡೆವೆಯೋ? ಕೋಣನಂತೆ ಬೆಳೆದಿದ್ದರೂ ನಿನ್ನ ತಲೆಯಲ್ಲಿ ಬೈಹುಲ್ಲೇ ಸರಿ. ಆ ಚಿಕ್ಕ ಮಗುವಿಗೆ ಹೊಡೆಯಲಿಕ್ಕೆ ನಾಚಿಕೆ ಯಾಗುವುದಿಲ್ಲವೇ ? ಎಂದಿಷ್ಟೇ ಹೇಳಿ ಹೊರಟು ಹೋದಳು. ಅವಳಾಡಿದ ಮಾತುಗಳು ನನ್ನೆದೆಗೆ ನಾಟಿತ್ತು.

'ಮಾಡಿದ್ದುಣ್ಣೋ ಮಹರಾಯ" ಎನ್ನುವಂತೆ ಹೊಡೆದ ಪ್ರಾಯಶ್ಚಿತ್ತಕ್ಕೆ ತಮ್ಮನನ್ನು ಪೇಟೆಗೆ ಕರೆದುಕೊಂಡು ಹೋಗಿ ಪೆಪ್ಪರ್ ಮಿಂಟು ತೆಗೆಸಿಕೊಡಬೇಕಾಗಿ ಬಂತು ಪೇಟೆಯಲ್ಲಿ ಕಾಲಿರಿಸುತ್ತಲೇ ನನ್ನ ಗೆಳೆಯ ಸುಬ್ಬು ನನ್ನನ್ನು ನೋಡಿ ಬಿದ್ದು ಬಿದ್ದು ನಗತೊಡಗಿದನು. "ಅಯ್ಯೋ ಇದೇನು ಪ್ರಾರಬ್ಧವಪ್ಪಾ' ಎಂದುಕೊಂಡು "ಸುಬ್ಬೂ, ಇದೇಕೆ ನಗ್ತಿಯೋ? ಎಂದುಕೇಳಿದರೆ "ಏಕಿಲ್ಲ' ವೆಂದಿಷ್ಟೇ ಹೇಳಿ ಆ ಖದೀಮ ಮೆಲ್ಲನೆ ಕಾಲುಕೀಳಬೇಕೇ?

ಸ್ವಲ್ಪ ಮುಂದೆ ಹೋಗ್ತೀನೆ, ನನ್ನ ಎಲಿಮೆಂಟರಿ ಶಾಲೆಯ ಮೇಷ್ಟ್ರುಬ್ಬರು ನನ್ನನು ನೋಡಿ ನಗುತ್ತಾ "ಇದೇನು ಅವತಾರಪ್ಪೋ ಎಂದು ಕೇಳಿದರು. ಅದಕ್ಕೆ ನಾನು, "ಏನು, ಏನಾಯ್ತು ಸಾರ್" ಎಂದು ಕೇಳಿದೆ. ಅದಕ್ಕೆ ಅವರು, "ಒಮ್ಮೆ ನಿನ್ನನ್ನೇ ಚೆನ್ನಾಗಿ ನೋಡಿಕೊಳ್ಳು "ಎಂದರು. ಕೂಡಲೇ ನನ್ನನ್ನೇ ನಾನು ನೋಡಿಕೊಂಡೆ. ಜೀವ ಹಾರಿಹೋಯಿತು. ಬರಿಯ ಅಂಡರ್‌ವೇರ್ ಮತ್ತು ಹರಕು ಬನಿಯನ್ನು ಮಾತ್ರ ನನ್ನ ದೇಹದ ಮೇಲಿದ್ದಿತ್ತು. ಪೇಟೆಗೆ ಬರುವಾಗ ಮುಂಡುಟ್ಟು ಅಂಗಿ ಹಾಕಿಕೊಂಡು ಬರಲು ಮರೆತೇಹೋಗಿತ್ತು. ನಾಚಿಕೆಯಿಂದ ನನ್ನ ಮೈಯೆಲ್ಲಾ ಬೆವಂತು, ಬೆವರನ್ನುಜ್ಜಿಕೊಳ್ಳೋಣವೆಂದರೆ ಕರವಸ್ತ್ರವೆಲ್ಲಿತ್ತು? ಅದನ್ನೂ ಮನೆಯಲ್ಲೇ ಬಿಟ್ಟು ಬಂದಿದ್ದೆನೆನ್ನಿ. "ಹೇ ಭಗವಾನ್! ನೀನೇ ಗತಿ" ಎಂದು ಕೈಯಲ್ಲೇ ಮುಖ ಘಜ್ಜಿಕೊಂಡು ಕೈಯನ್ನು ನೋಡಿಕೊಳ್ಳುತ್ತೇನೆ. ಕೈಯಲ್ಲಾ ಮಸಿಯಾಗಿತ್ತು. ಅಯ್ಯೋ! ನನ್ನ ಮುಖಕ್ಕೆ ಮಸಿಬೇರೆ ಬಳಿದುಕೊಂಡಿತ್ತೆಂದು ನನಗಾಗ ತಿಳಿಯಿತು. ನನ್ನ ಆಗಿನ ವೇಷ ಹಾಗೂ ಅವಸ್ಥೆ ಹೇಗಿದ್ದಿರಬಹುದೆಂದು ನೀವೇ ಊಹಿಸಿಕೊಳ್ಳಿ.

ಆ ಸುಬ್ಬು ನನ್ನನ್ನು ಕಂಡು ನಕ್ಕದ್ದೇಕೆಂದು ಆಗ ನನಗೆ ಹೊಳೆಯಿತು. ಇನ್ನೂ ಮುಂದೆ ಅದೇವೇಷದಲ್ಲಿ ಹೋದರೆ ಜನರು ನನ್ನನ್ನು ಹುಚ್ಚನೆಂದು ಎಣಿಸಿಯಾರು ಎಂದು ಮನೆಗೆಮರಳಿದೆ. ಅರ್ಧದಾರಿ ಬಂದಿದ್ದೇನೆ, ತಮ್ಮ ಶ್ರೀಧರ "ಅಣ್ಣಾ, ಪೆಪ್ಪರ್‌ಮಿಂಟು" ಎಂದನು. "ಅಯ್ಯೋ ಮಹಾರಾಯ, ನೀನು ಪೇಟೆಯಲ್ಲಿ ನೆನಪು ಮಾಡಬಹುದಿತ್ತಲ್ಲ! ಈಗ ನೆನಪು ಮಾಡುವುದೇ? ಇನ್ನು ಪುನಃ ಈ ಬಟ್ಟೆಯಲ್ಲಿ ಪೇಟೆಗೆ ಹೋಗುವುದಿಲ್ಲ." ಎಂದೆನು. ಶ್ರೀಧರ ಅಳತೊಡಗಿದನು. ಹೇಗೋ ಹೇಗೋ ಅವನನ್ನು ಮನೆಯವರೆಗೆ ಕರೆದುಕೊಂಡು ಬಂದೆ. ಮನೆಯಲ್ಲಿ ನಮ್ಮಮ್ಮ ನಡೆದದ್ದೆಲ್ಲಾ ಕೇಳಿ, 'ಇಷ್ಟು ಬೇಗನೆ ನಿನಗೆ ಈ ರೀತಿ ಮರೆವು ಬಂದರೆ ಹೇಗಪ್ಪಾ? ' ಎಂದಾಗಲೇ ನನಗೆ ಥಕ್ಕನೆ ನನ್ನಲ್ಲಿರುವ ಅದ್ಭುತಶಕ್ತಿ "ಮರೆವು" ಎಂಬುದು ನೆನಪಿಗೆ ಬಂತು. ಪುನಃ ಡ್ರೆಸ್ ಮಾಡಿಕೊಂಡು ಪೇಟೆಗೆ ಹೋಗಿ ಶ್ರೀಧರನಿಗೆ ಪೆಪ್ಪರ್‌ಮಿಂಟ್ ತೆಗೆಸಿಕೊಟ್ಟೆನೆನ್ನಿ.

ಮರೆವು ಒಂದು ಅದ್ಭುತ ಶಕ್ತಿಯೆಂದೆನಲ್ಲವೇ? ನಿಮಗಿದು ಕೊಂಚವಿಚಿತ್ರವಾಗಿ ಕಂಡಿರಬಹುದು. ಆದರೆ ನನಗೆ ಮಾತ್ರ ಮರೆವು ಒಂದು ಅದ್ಭುತ ಶಕ್ತಿಯೆಂದು ಖಂಡಿತಗೊತ್ತು. ಹಾಗೂ ನನ್ನಷ್ಟು ಈ ಶಕ್ತಿಯನ್ನು ಗಳಿಸಿಕೊಂಡವರೂ ಮತ್ತಾರು ಇಲ್ಲವೆಂದು ಹೇಳಿ ಮಿಾಸೆ ತಿರುವಿಸಿಕೊಳ್ಳ ಬಲ್ಲೆ (ಆದರೆ ವಸ್ತುತಃ ನಾನು ಮಿಾಸೆ ಇಟ್ಟು ಕೊಳ್ಳಲೇ ಇಲ್ಲವೆನ್ನಿ.) ನೋಡಿ, ಈ ಮರೆಯುವ ಶಕ್ತಿ ಇಲ್ಲದಿದ್ದರೆ ನನ್ನ ಬಾಲ್ಯ ಅಷ್ಟೊಂದು ಆನಂದದಲ್ಲಿ ಕಳೆಯುತ್ತಲೇ ಇರಲಿಲ್ಲ. ತಾಯಿ, ತಂದೆ, ಶಾಲೆಯಲ್ಲಿ ಮೇಷ್ಟ್ರು, ನೆರೆಮನೆಯವರು ನನ್ನ ಪುಂಡಾಟಿಕೆಗಾಗಿ ನನ್ನನ್ನು ಚೆನ್ನಾಗಿ ಬಯ್ಯುತಿದ್ದರು. ಜೊತೆಗೆ ಕೆಲವರು ಒಂದೆರಡು ಬಾರಿ ಏಟೂ ಕಾಯಿಸಿದ್ದರೆನ್ನಿ. ಆದರೆ ಅವರು ಬೆಳಿಗ್ಗೆ ಬೈದರೆ, ನನಗೆ ಸಂಜೆಗೆ ಅದರ ನೆನಪೇ ಇರುತ್ತಿರಲಿಲ್ಲ. ಆದುದರಿಂದ ಅವ್ಯಾಹತವಾಗಿ ನನ್ನ ಪುಂಡಾಟಿಕೆ ಬಾಲ್ಯದಾದ್ಯಂತವಾಗಿತ್ತು. ಬೈದರೆ ಬಯಲಿಗೆ, ಹೊಡೆದರೆ ಬೆನ್ನಿಗೆ ಎನ್ನುವ ಸಿದ್ಧಾಂತವು ಕೂಡಾ ನನ್ನನು ಸಂತುಷ್ಟನಾಗಿಯೇ ಇರಿಸುವುದರಲ್ಲಿ ಸಹಾಯ ಮಾಡಿತ್ತೆನ್ನಿ. ನನ್ನ ಈ ಅದ್ಭುತ ಶಕ್ತಿಯ ಮಹತ್ವವನ್ನು ನನ್ನ ಅಕ್ಕನೊಂದಿಗೆ ನನ್ನನು ಹೋಲಿಸಿದಾಗ ತಿಳಿಯಬಹುದು. ನನ್ನ ಅಕ್ಕ ನನ್ನಂತೆ ಕಿಡಿಗೇಡಿಯಾಗಿರಲಿಲ್ಲ, ಅವಳು ತಪ್ಪು ಮಾಡುವುದೆಂತೇ ಇರಲಿಲ್ಲ. ಆದರೆ ಅಪ್ಪಿ ತಪ್ಪಿ ತಪ್ಪುಮಾಡಿದಾಗ ತಂದೆ ಅಥವಾ ತಾಯಿಯೇನಾದರೂ ಹೇಳಿದರೆ ಮೂರು ದಿನ ಊಟಬಿಟ್ಟು ಹಾಸಿಗೆ ಮೇಲೆ ಬಿದ್ದು ಕಣ್ಣು ಮುಚ್ಚಿ ಅಳುತ್ತಾ ಕುಳಿತುಕೊಳ್ಳುತ್ತಿದ್ದಳು. ಅವಳ ಕಣ್ಣುಗಳಿಂದ ಹರಿವ ಕಣ್ಣೀರಧಾರೆಯನ್ನು ಕಂಡು ಅವಳಿಗೆ " ಭಾಗೀರಥಿ " ಎಂಬ ಅಡ್ಡ ಹೆಸರನ್ನೂ ಇಟ್ಟಿವೆ. ನನ್ನಂತೆ ಒಂದು ಕಿವಿಗಳಿಂದ ಬೈಗಳನ್ನು ಕೇಳಿ ತಕ್ಷಣ ಅದನ್ನು ಇನ್ನೊಂದು ಕಿವಿಯಿಂದ ಹೊರಗೆಡಹಿ ಬಿಡಬಲ್ಲವರೆಷ್ಟು ಮಂದಿಯಿದ್ದಾರೆ.

ನೋಡಿ ನನ್ನ ಮರೆವಿನ ಶಕ್ತಿಯ ಪ್ರಭಾವದಿಂದಲೇ ನನ್ನ ಹೈಸ್ಕೂಲ್ ವಿದ್ಯಾಭ್ಯಾಸ ಬಲು ಉದ್ದವಾಗಿದ್ದು ತುಂಬಾ ಆನಂದ ಮಯವಾಗಿತ್ತು. ನಿಜವಾಗಿಯೂ ವಿದ್ಯಾರ್ಥಿ ಜೀವನದಷ್ಟು ಸುಖಕರವಾದ ಜೀವನ ಬೇರೊಂದಿಲ್ಲವೆಂದು ಎಲ್ಲರೂ ಹೇಳುತ್ತಾರೆ. ಆದುದರಿಂದ ಅತೀ ಉದ್ದವಾದ ವಿದ್ಯಾರ್ಥಿ ಜೀವನವನ್ನು ಮಾಡಿದ

(೧೨ನೇ ಪುಟ ನೋಡಿರಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವಿಜ್ಞಾನ ವಿಸ್ಮಯ

ಬೆಲ್ಟ್ಸ್‌ವಿಲ್‌ನ ವ್ಯವಸಾಯ ಸಂಶೋಧನಾ ಕೇಂದ್ರ

ಇಲ್ಲಿ ವ್ಯವಸಾಯ ಮತ್ತು ಪಶುಸಂಗೋಪನೆಯ ಬಗ್ಗೆ ೨,೦೦೦ ಜನರು ಸಂಶೋಧನಾತತ್ಪರರಾಗಿದ್ದು ಪ್ರಪಂಚಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ೭೫ ವರ್ಷಗಳಲ್ಲಿ ಮಾನವನು ವ್ಯವಸಾಯ ವಿಜ್ಞಾನದಲ್ಲಿ ಕಳೆದ ೭೫೦೦ ವರ್ಷದಲ್ಲಾದದಕ್ಕಿಂತಲೂ ಹೆಚ್ಚು ಪ್ರಗತಿಯನ್ನು ಸಾಧಿಸಿದ್ದಾನೆ.

ಕಳೆದ ೭೫ ವರ್ಷಗಳಲ್ಲಿ ವಿಜ್ಞಾನವು ರೈತನಿಗೆ ಮಿಶ್ರಜಾತಿಯ ಜೋಳ ಮುಂತಾದ ಶ್ರೇಷ್ಠ ನೂತನ ವಸ್ತುಗಳನ್ನು ಒದಗಿಸಿದೆ; ರೋಗಗಳನ್ನು ನಿರೋಧಿಸುವ ಬೆಳೆಗಳನ್ನು ಬೆಳೆಸುವುದು ಹೇಗೆ, ಕೀಟಗಳನ್ನು ಮತ್ತು ಕಳೆಗಳನ್ನು ಹತೋಟಿಯಲ್ಲಿಡುವುದು ಹೇಗೆ ಎಂಬುದನ್ನಾತ ವಿಜ್ಞಾನದಿಂದ ಕಲಿತಿದ್ದಾನೆ. ವಿಜ್ಞಾನವು ಆತನಿಗೆ ಹೆಚ್ಚು ಶೀಘ್ರವಾಗಿ ಬೆಳೆಯುವ, ಹೆಚ್ಚು ಮೊಟ್ಟೆಗಳನ್ನಿಡುವ ಕೋಳಿಮರಿಗಳನ್ನು; ಹೆಚ್ಚು ಹಾಲನ್ನು ಮತ್ತು ಬೆಣ್ಣೆಯನ್ನು ಕೊಡುವ ದನಗಳನ್ನು ಒದಗಿಸಿದೆ. ತನ್ನ ನೆಲವನ್ನು ಮತ್ತು ಕಾಡುಗಳನ್ನು ಹೆಚ್ಚು ಬುದ್ಧಿವಂತಿಕೆಯಿಂದ ಉಪಯೋಗಿಸಲು ಮತ್ತು ತಾನು ಮಾರಾಟಮಾಡಬೇಕೆಂದಿರುವ ವಸ್ತುಗಳನ್ನು ಮುಂಚಿಗಿಂತ ಚೆನ್ನಾಗಿ ಮಾರಾಟಮಾಡಲು ಆತನು ಕಲಿತಿದ್ದಾನೆ. ವಿಜ್ಞಾನವು ಆತನಿಗೆ, ತನಗೆ ಮತ್ತು ಪ್ರಪಂಚಕ್ಕೆ ಹೆಚ್ಚು ಆಹಾರ ಬೆಳೆಸಲು ಕಲಿಸಿದೆ.

ಇಂತಹ ಅನೇಕ ವೈಜ್ಞಾನಿಕ ಮುನ್ನಡೆಗಳನ್ನು ರಾಜಧಾನಿ ವಾಷಿಂಗ್‌ಟನ್ನಿನ ಸಮೀಪದ ಮೇರಿಲ್ಯಾಂಡ್‌ನ ಬೆಲ್ಟ್ಸ್‌ವಿಲ್‌ನಲ್ಲಿರುವ ಅಮೆರಿಕದ ವ್ಯವಸಾಯ ಸಂಶೋಧನಾ ಕೇಂದ್ರದ ಪ್ರಯೋಗಾಲಯಗಳಲ್ಲಿ ಮತ್ತು ತಳಿ ಅಭಿವೃದ್ಧಿ ಕೇಂದ್ರಗಳಲ್ಲಿ ಸಾಧಿಸಲಾಗಿದೆ. ಆದರೆ ಇಲ್ಲಿ ಪ್ರತಿ ದಿನ ವಿಕಾಸಗೊಳ್ಳುತ್ತಿರುವ ಪ್ರಗತಿಯು ಕೇವಲ ಬೆಲ್ಟ್ಸ್‌ವಿಲ್‌ನ ಅಥವಾ ಅಮೆರಿಕದ ಕತೆಯಷ್ಟೇ ಆಗಿರದೆ ಅನೇಕ ದೇಶಗಳ ಕತೆಯಾಗಿರುತ್ತದೆ. ಅನೇಕ ದೇಶಗಳು ಸಸ್ಯಗಳು ಮತ್ತು ಪಶುಗಳು ಸಂಶೋಧನೆಗೆ ನೆರವಾಗಿವೆ.

ಲ್ಯಾಟಿನ್ ಅಮೆರಿಕದ ಪೆರು ದೇಶದ ಚಿಕ್ಕ ಹಸಿರು ಟೊಮೇಟೋ ಹಣ್ಣಿನ ಕತೆ ಇದಕ್ಕೆ ಒಂದು ನಿದರ್ಶನ, ೧೯೩೦ನೇ ದಶಕದ ಮಧ್ಯಭಾಗ ಕಳೆಯುವುದರೊಳಗೆ ಟೊಮೇಟೋ ಅಮೆರಿಕದ ಅತಿಮುಖ್ಯ ಬೆಳೆಯಾಗಿತ್ತು. ದೊಡ್ಡ ರುಚಿಕರವಾದ ಟೊಮೇಟೋಗಳನ್ನು ಬೆಳೆಸಲಾಗುತಿತ್ತು. ಸುಮಾರು ೪,೦೦,೦೦೦ ಎಕರೆಗಿಂತ ಹೆಚ್ಚು ಜಮೀನನ್ನು ಈ ಹಣ್ಣಿನ ಬೆಳೆಗೆ ಮೀಸಲಿಡಲಾಗಿತ್ತು. ಆದರೆ ವಿಲ್ಟ್ ಮತ್ತು ಲೀಫ್ ಮೋಲ್ಡ್ ಮುಂತಾದ ಟೊಮೇಟೋ ಸಸಿಯ ರೋಗಗಳು ವರ್ಷ ಕಳೆದಂತೆ ಹೆಚ್ಚು ವ್ಯಾಪಕವಾಗುತ್ತಿದ್ದವು. ಬೆಲ್ಟ್ಸ್‌ವಿಲ್‌ನ ಸಸ್ಯ ಪರಿಶೋಧಕರು ದೇಶೀಯ ಟೊಮೇಟೋದೊಡನೆ ಕಸಿಮಾಡಲು ಗಡುಸಾದ ಬಿರುಸಾದ ಟೊಮೇಟೋವನ್ನು ಹುಡುಕತೊಡಗಿದರು.

ಅವರ ಶೋಧನೆ ಕೊನೆಗೆ ಪೆರುವಿನಲ್ಲಿ ಕೊನೆಗೊಂಡಿತು. ಅವರು ಅಲ್ಲಿ ಕಂಡ ಚಿಕ್ಕ ಗಟ್ಟಿಯಾದ ಹಸಿರು ಟೊಮೇಟೋ ತಿನ್ನಲು ಅಯೋಗ್ಯವಾಗಿತ್ತು, ಆದರೆ ಬಲಿಷ್ಠವಾಗಿತ್ತು. ಅದನ್ನು ಬೆಲ್ಟ್ಸ್‌ವಿಲ್‌ಗೆ ತಂದು, ರೋಗಕಾರಿಗಳನ್ನು ಕೃತಕವಾಗಿ ತುಂಬಿಸಿದ ಮಣ್ಣಿನಲ್ಲಿ ಇತರ ಜಾತಿಯ ಟೊಮೇಟೋಗಳೊಡನೆ ನೆಡಲಾಯಿತು. ಬೇಗನೆ ಇತರ ಜಾತಿಗಳು ಬಾಡಿ, ಕಂದು ಬಣ್ಣಕ್ಕೆ ತಿರುಗಿದವು, ಆದರೆ ಚಿಕ್ಕ ಪೆರುವಿಯನ್ ಸಸ್ಯ ವಜ್ರದಂತೆ ಸ್ಥಾಯಿಯಾಗಿತ್ತು.

ಬೆಲ್ಟ್ಸ್‌ವಿಲ್ ಕೇಂದ್ರದವರು ತಿಳಿಯಲು ಬಯಸಿದುದು ಇದನ್ನೇ. ಅವರು ಪೆರುವಿನ ಚಿಕ್ಕ ಟೊಮೇಟೋವನ್ನು ಕೆಲವು ದೊಡ್ಡ, ಅಧಿಕಫಲದಾಯಕವಾದ ದೇಶೀಯ ಟೊಮೇಟೋಗಳೊಡನೆ ಕಸಿಮಾಡುವ ದೀರ್ಘಕಾಲಿಕ ಜಟಿಲಕಾರ್ಯಕ್ಕೆ ತೊಡಗಿದರು. ಸುಮಾರು ೩೦,೦೦೦ ಕಸಿ ಪ್ರಯೋಗಗಳ ಅನಂತರ, ಅವರು ಕೊನೆಗೆ, ರೋಗ ನಿರೋಧಕ ಬಳ್ಳಿಯುಳ್ಳ ಒಂದು ಶ್ರೇಷ್ಠ ಟೊಮೇಟೋವನ್ನು ಉತ್ಪಾದಿಸಿದರು. ಇದಕ್ಕೆ ಪಾನ್ ಅಮೆರಿಕನ್ ಎಂದು ಹೆಸರಿಟ್ಟರು.

ಇದೇ ರೀತಿ ಪ್ರಾಣಿಗಳಲ್ಲೂ ಪ್ರಯೋಗಗಳನ್ನು ನಡೆಸಲಾಗಿದೆ. ಬೆಲ್ಟ್ಸ್‌ವಿಲ್‌ನವರು ಭಾರತಕ್ಕೆ ಹೋಗಿ, ಬಿಸಿಲಿನ ತಾಪವನ್ನು ತಡೆಯುವ ಶಕ್ತಿಯಿರುವ ಕೆಂಪು ಸಿಂಧಿ ಜಾತಿಯ ಗೂನ-ಬೆನ್ನಿನ ಬ್ರಹ್ಮಾದನವನ್ನು ಅಮೆರಿಕಕ್ಕೆ ತಂದು ದೇಶೀಯ ಜೆರಿಸಿ ದನಗಳೊಡನೆ ಮಿಶ್ರಗೊಳಿಸಿ ಹೊಸತಳಿಯನ್ನು ಅಭಿವೃದ್ಧಿಗೊಳಿಸಿದ್ದಾರೆ. ಈ ಜೆರಿಕೆಯಿಂದ ಜೆರೆಸೀ ದನದ ಕ್ಷೀರೋತ್ಪಾದನ ಸಾಮರ್ಥ್ಯವುಳ್ಳ ಮತ್ತು ಕೆಂಪು ಸಿಂಧಿಯ ಉಷ್ಣ ಸಹಿಷ್ಣುತೆಯುಳ್ಳ ಸಂತತಿ ಉತ್ಪನ್ನವಾದೀತೆಂದು ಬೆಲ್ಟ್ಸ್‌ವಿಲ್‌ನ ವಿಜ್ಞಾನಿಗಳು ನಿರೀಕ್ಷಿಸುತ್ತಾರೆ.

ದೂರದೇಶಗಳಿಂದ ವಿಶೇಷ ರೀತಿಯ ಹುಲ್ಲುಗಳನ್ನು ಮತ್ತು ಮೇವಿನ ಸಸ್ಯಗಳನ್ನು ಬೆಲ್ಟ್ಸ್‌ವಿಲ್‌ಗೆ ತರಲಾಗಿದೆ. ಇವುಗಳಲ್ಲಿ ಅನೇಕ ಸಸ್ಯಗಳು, ಶುಷ್ಕವಾದ ಕಲ್ಲುಬಂಡೆಗಳಿರುವ ಪ್ರದೇಶಗಳಲ್ಲಿರುವ ಪಶುಪಾಲಕರಿಗೆ ವರಪ್ರಸಾದವಾಗಿವೆ. ಆಳವಾಗಿ ಬೇರುಗಳನ್ನು ಬಿಡುವ ಬಹುಕಡಿಮೆ ತೇವದಲ್ಲೂ ಬೆಳೆಯಬಲ್ಲ ಅನೇಕ ಹುಲ್ಲುಗಳನ್ನೂ, ಸಸ್ಯಗಳನ್ನೂ ತಂದು ಕೃಷಿಮಾಡಲಾಗಿದೆ.

ಬೆಲ್ಟ್ಸ್‌ವಿಲ್‌ನ ವ್ಯಾವಸಾಯಿಕ ಸಂಶೋಧನಾ ಕೇಂದ್ರವು ಸುಮಾರು ೧೧,೦೦೦ ಎಕರೆ ಸ್ಥಳವನ್ನು ಒಳಗೊಂಡಿದೆ. ಪ್ರಾಯೋಗಿಕ ಹುಲ್ಲುಗಾವಲುಗಳು, ಹಣ್ಣಿನ ತೋಟಗಳು, ಉದ್ಯಾನಗಳು ಕ್ಷೇತ್ರಗಳು, ಮರಮುಟ್ಟುಗಳ ಹಾಡಿಗಳು ಮತ್ತು ಮಣ್ಣಿನ ಸಂಶೋಧನೆಯ ಸ್ಥಳಗಳಷ್ಟೇ ಅಲ್ಲದೆ ಬೆಲ್ಟ್ಸ್‌ವಿಲ್ ಕೇಂದ್ರದಲ್ಲಿ ವಿಶೇಷ ರೀತಿಯ ಸಂಶೋಧನೆಗಳಿಗಾಗಿ ಅಥವಾ ಅಲ್ಲಿ ಕೆಲಸಮಾಡುವ ೨,೦೦೦ ಜನರಿಗೆ ಸ್ಥಳಾವಕಾಶ ಒದಗಿಸಲು ೯೫೦ ಕಟ್ಟಡಗಳೂ ಇವೆ. ಕೆಲಸಮಾಡುವ ಇಷ್ಟು ಜನರ ಪೈಕಿ ಸುಮಾರು ಅರೆವಾಸಿ ಜನರು ವಿಜ್ಞಾನಿಗಳು ಮತ್ತು ತಂತ್ರಜ್ಞರು ಉಳಿದವರು ಗುಮಾಸ್ತಿಕೆ ಕೆಲಸದವರು, ರಿಪೇರಿ ಕೆಲಸದವರು ಮತ್ತು ರೈತ ಕಾರ್ಮಿಕರು.

ಈ ಜನರು ಮತ್ತು ಸೌಕರ್ಯಗಳು ಎಲ್ಲ ರೀತಿಯ ವ್ಯಾವಸಾಯಿಕ ಪ್ರಯೋಗಗಳಿಗೆ ಮೀಸಲಾಗಿರುವವರು; ತಳಿ ಮಿಶ್ರಣವು ಅನೇಕ ಪ್ರಯೋಗಗಳಲ್ಲಿ ಒಂದಷ್ಟೇ. ಆಂಟಿಬಯೋಟಿಕ್‌ಗಳ ವಿಭಾಗದಲ್ಲಿ ಉತ್ತಮ ಕಾರ್ಯವನ್ನು ಮಾಡಲಾಗುತ್ತಿದೆ. ಈ ವಿಭಾಗದಲ್ಲಿ ಪ್ರಾಣಿಗಳ ಮತ್ತು ಮನುಷ್ಯರ ರೋಗಗಳ ಚಿಕಿತ್ಸೆಗೆ ಸಸ್ಯಗಳಿಂದ ಹಲವು ಅಂಶಗಳನ್ನು ತೆಗೆಯಲಾಗುತ್ತಿದೆ. ಅಪೇಕ್ಷಣೀಯ ಸಸ್ಯಗಳಿಗೆ ಹಾನಿಮಾಡದೆ ಕಳೆಗಳನ್ನು ಕೊಲ್ಲುವಂತಹ, ಅಥವಾ ರೈತನು ಕೊಯ್ದುಕೊಳ್ಳಲು ಸಿದ್ಧವಾಗುವ ಮೊದಲೇ ಸೇಬಿನ ಹಣ್ಣುಗಳು ಭೂಮಿಗೆ ಬೀಳುವುದನ್ನು ಸಿದ್ಧಗೊಳಿಸಲಾಗಿದೆ. ಡಿ.ಡಿ.ಟಿ.ಯ ಬಗೆಗೆ ವಿಶೇಷ ಸಂಶೋಧನೆ ನಡೆದುದು ಬೆಲ್ಟ್ಸ್‌ವಿಲ್‌ನಲ್ಲೇ.

ಇಷ್ಟೇ ಅಲ್ಲದೆ ಬೆಲ್ಟ್ಸ್‌ವಿಲ್‌ನ ಗೃಹ ಅರ್ಥಶಾಸ್ತ್ರ ಬ್ಯೂರೋವು ಮಹತ್ವದ ಕಾರ್ಯನಿರ್ವಹಿಸುತ್ತಿದೆ. ಕ್ಯಾನಿಂಗ್, ಆಹಾರ ಶೇಖರಣೆ, ಆಹಾರ ಕ್ರಮ ಮತ್ತು ಪೋಷಣೆ, ಆಹಾರದ ಆಯವ್ಯಯ ಪಟ್ಟಿ, ಉಡುಪು ತಯಾರಿಕೆ, ಮನೆವಾರ್ತೆ ಮತ್ತು ಗೃಹಯೋಜನೆ ಮುಂತಾದ ಗೃಹಿಣಿಗೆ ಮಹತ್ವವಿರುವ ಕಾರ್ಯಗಳನ್ನು ನಿರ್ವಹಿಸುತ್ತದೆ.

ಬೆಲ್ಟ್ಸ್‌ವಿಲ್‌ನ ಕಾರ್ಯಗಳಿಗೆ ಅಮೆರಿಕದ ಸರಕಾರ ಧನಸಹಾಯಮಾಡುತ್ತದೆ. ಅಮೆರಿಕದ ರೈತರಿಗೆ ಸೇವೆಸಲ್ಲಿಸುವುದು ಈ ಕೇಂದ್ರದ ಮುಖ್ಯ ಉದ್ದೇಶವಾದರೂ, ಇದರಿಂದ ಲಭಿಸುವ ಜ್ಞಾನದ ಪ್ರಯೋಜನವನ್ನು ಎಲ್ಲೆಡೆಗಳ ರೈತರೂ ಪಡೆಯಬಹುದು. ವಾಸ್ತವವಾಗಿ ಪ್ರತಿದಿನ ಪ್ರಪಂಚದ ಎಲ್ಲ ಭಾಗಗಳಿಂದ ಸಂದರ್ಶಕರು, ಅಧ್ಯಯನ ಮಾಡಲು ಮತ್ತು ಪರಿಶೀಲಿಸಲು ಬೆಲ್ಟ್ಸ್‌ವಿಲ್‌ಗೆ ಬರುತ್ತಾರೆ. ಇವರಲ್ಲಿ ಕೆಲವರು ರೈತರು, ಕೆಲವರು ಸರಕಾರೀ ಅಧಿಕಾರಿಗಳು, ಕೆಲವರು ವಿಜ್ಞಾನಿಗಳು ಮತ್ತು ತಂತ್ರಜ್ಞರು.

ಅಮೆರಿಕದಲ್ಲಿ ಮತ್ತು ಪ್ರಪಂಚದಾದ್ಯಂತ ಬೆಲ್ಟ್ಸ್‌ವಿಲ್‌ನ ಮತ್ತು ತದ್ರೀತಿಯ ಇತರ ಸಂಶೋಧನಾ ಕೇಂದ್ರಗಳ ಕಾರ್ಯವು ನಮ್ಮ ಕಾಲದ ಅತಿ ಮುಖ್ಯ ಕಾರ್ಯಗಳಲ್ಲೊಂದು. ಒಬ್ಬ ಮನುಷ್ಯನಿಗೆ ಸಾಕಷ್ಟು ಊಟ ಮತ್ತು ಬಟ್ಟೆ ಒದಗಿಸಲು ವರ್ಷಕ್ಕೆ ೨½ ಎಕರೆ ಭೂಮಿಯ ಉತ್ಪಾದನೆ ಬೇಕಾಗುತ್ತದೆ. ಪ್ರಪಂಚದಲ್ಲೀಗ ಸುಮಾರು ೪ ಬಿಲಿಯ ಎಕ್ರೆ ಕೃಷಿಯೋಗ್ಯ ಭೂಮಿಯಿದೆ. ಮಾನವ ಸಂಖ್ಯೆ ಈಗಾಗಲೇ ಸುಮಾರು ಮೂರು ಬಿಲಿಯದಷ್ಟಿದೆ ಮತ್ತು ಈ ಸಂಖ್ಯೆ ವರ್ಷಕ್ಕೆ ೨೦ ದಶಲಕ್ಷದಷ್ಟು ಹೆಚ್ಚುತ್ತಿದೆ.

ಇದರಿಂದ ಆಹಾರವನ್ನು ಉತ್ಪಾದಿಸಲು ನೂತನ ಮತ್ತು ಉತ್ತಮ ವಿಧಾನಗಳನ್ನು ಕಂಡುಹಿಡಿಯಬೇಕಾದ ಆವಶ್ಯಕತೆ ಬಹಳ ಇದೆಯೆಂದು ಸ್ಪಷ್ಟವಾಗುತ್ತದೆ. ವೈಜ್ಞಾನಿಕ ಸಂಶೋಧನೆಯು ಬೆಳೆದು ವ್ಯವಸಾಯದ ಮೇಲೆ ಅಧಿಕಾಧಿಕ ಪ್ರಭೆಯಿಂದ ಬೆಳಗುತ್ತ, ಈ ನೂತನ ವಿಧಾನಗಳು ಸಂಶೋಧಿತವಾಗುತ್ತಿವೆ.

ಪಶು ಸಂಗೋಪನೆ

ಭಾರತದ ಅಭಿವೃದ್ಧಿ ಯೋಜನೆಗಳಲ್ಲಿ ಪಶುಸಂಗೋಪನೆಯತ್ತವೂ ಗಮನಹರಿಸಲಾಗುತ್ತಿದೆ. ಪಶುಗಳ ಆರೋಗ್ಯವನ್ನು ಕೆಡಿಸಿ, ಅವುಗಳ ಜೀವನವನ್ನೂ ಪ್ರಯೋಜನವನ್ನೂ ನಿರರ್ಥಕಗೊಳಿಸುವ ರೋಗಗಳಿಂದ ಅವನ್ನು ಉಳಿಸುವ ಸಲುವಾಗಿ ಉತ್ತರ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ತುರುಸು ಕೀಟ ನಿರೋಧಕ್ಕಾಗಿ ಇಂಜೆಕ್ಷನ್ ಕೊಡುವ ಕೇಂದ್ರಗಳು ಸ್ಥಾಪನೆಯಾಗಿವೆ. ಉಳಿದೆಡೆಗಳಲ್ಲಿ ಇಂತಹ ಕೇಂದ್ರಗಳನ್ನು ತೀವ್ರದಲ್ಲಿಯೇ ತೆರೆಯುವ ನಿರೀಕ್ಷೆಯಿದೆ. ಮೇಲಿನ ಚಿತ್ರದಲ್ಲಿ ಇಂತಹ ಕೇಂದ್ರವೊಂದರಲ್ಲಿ ಚುಚ್ಚುಮದ್ದನ್ನು ಚುಚ್ಚುತ್ತಿರುವುದನ್ನು ಕಾಣಬಹುದು.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ಪುಸ್ತಕ ವಿಮರ್ಶೆ

ಉಡುಪಿ ಸಂದರ್ಶನ—ಲೇಖಕರು: ಶ್ರೀ ಆರ್. ಆರ್ ಕುಂಜೂರು. ಪ್ರಕಾಶಕರು: ವಂದನಾ ಪ್ರಕಾಶನ, ಉಡುಪಿ. ಪುಟಗಳು: ೬೩. ಬೆಲೆ: ರೂ. ೦–೫೦.

ದಕ್ಷಿಣ ಭಾರತದ ಸುಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಒಂದಾದ, ದ್ವೈತ ತತ್ವ ಪ್ರತಿಪಾದಕ ಶ್ರೀ ಮಧ್ವಾಚಾರ್ಯರ ಕಾರ್ಯಕ್ಷೇತ್ರವಾದ, ಶ್ರೀಕೃಷ್ಣನ ಸಾನ್ನಿಧ್ಯವಾದ ಉಡುಪಿಯಿಂದು ಧಾರ್ಮಿಕ ಪ್ರಸಿದ್ಧಿಯನ್ನು ಮಾತ್ರ ಪಡೆದಿಲ್ಲ; ಬದಲು ಶೈಕ್ಷಣಿಕ, ವ್ಯಾವಹಾರಿಕ ಕ್ಷೇತ್ರಗಳಲ್ಲೂ ಅದು ಮುಂದುವರಿದಿದೆ. ಇಂತಹ ಉಡುಪಿಯನ್ನು ಸಂದರ್ಶಿಸುವವರಿಗೊಂದು ಕೈಪಿಡಿಯೋಪಾದಿಯಲ್ಲಿ ಈ ಪುಸ್ತಕವನ್ನು ಶ್ರೀ ಕುಂಜೂರ್ ಅವರು ಬರೆದಿದ್ದಾರೆ. ಉಡುಪಿಯ ಪರಿಚಯ ಮಾಡಿಸುವ ಇತರ ಹಲವಾರು ಪುಸ್ತಕಗಳು ಕನ್ನಡದಲ್ಲಿಯೂ, ಇಂಗ್ಲಿಷ್ ಮೊದಲಾದ ಇತರ ಒಂದೆರಡು ಭಾಷೆಗಳಲ್ಲಿಯೂ ಇವೆ. ದಿನೇದಿನೇ ಅಭಿವೃದ್ಧಿ ಹೊಂದುತ್ತಿರುವ ಒಂದು ಸ್ಥಳದ ಪರಿಚಯ ಮಾಡಿಕೊಡುವುದೂ ತುಸು ಪ್ರಯಾಸವೇ. ಪ್ರಕೃತದ ಈ ಪುಸ್ತಕದಲ್ಲಿ ಉಡುಪಿಯ ಎಲ್ಲ ಕ್ಷೇತ್ರಗಳ ಸಂಪೂರ್ಣ ಪರಿಚಯವಿದೆಯೆನ್ನುವುದು ಕಷ್ಟವೇ. ಆದರೂ ಸಾಕಷ್ಟು ವಿಸ್ತಾರವಾದ ಹಲವಾರು ಸಂಗತಿಗಳ ಸಂಗ್ರಹವನ್ನಿಲ್ಲಿ ನಾವು ಕಾಣಬಹುದು. ಇಂತಹ ಪರಿಚಯ ಪುಸ್ತಕದಲ್ಲಿ ನಗರದ ಪ್ರಸಿದ್ಧ ಸ್ಥಳಗಳನ್ನು ಗುರುತಿಸಿರುವ ನಗರ ನಕ್ಷೆಯೊಂದಿರುತ್ತಿದ್ದರೆ, ಸಂದರ್ಶಕರಿಗೆ ತುಂಬ ಉಪಕಾರವೆನಿಸುತ್ತಿತ್ತು ಎಂದು ತೋರುವುದಿಲ್ಲವೆ?

ಶ್ರೀ ಶಿವಾನಂದ ಕೀರ್ತನ-ತರಂಗ —ಲೇಖಕರು ಮತ್ತು ಪ್ರಕಾಶಕರು: ಶ್ರೀ ಬಿ. ಕೆ. ಹೊಳ್ಳ, ವಿದ್ವಾನ್, ಕುಂದಾಪುರ. ಪುಟಗಳು: ೨೬+೩೦ ಬೆಲೆ: ರೂ. ೦–೪೦. "ಇದೊಂದು ನೈತಿಕ ಹಾಗೂ ಭಕ್ತಿಪರವಾದ ಕೀರ್ತನೆಯ ಪುಸ್ತಕ. ನೂರೆಂಟು ಕಂದಗಳಿಂದ ಕೂಡಿದ ಕುಂದೇಶ್ವರ ಶತಕವೂ ಇದರೊಡನಿವೆ. ಶಿವ, ಶಕ್ತಿ, ಜ್ಞಾನ ಸಂಬಂಧವಾದ ಕೀರ್ತನೆಗಳಿವೆ. ವಿವಿಧ ದೇವದೇವಿಯರ ಹಲವಾರು ಕೀರ್ತನಾ ಪದ್ಯಗಳಿದ್ದು ಭಜನೆಯ ವೇಳೆ ಹಾಡಲು ಉಪಯುಕ್ತವಾಗಿದೆ. ಉಳಿದ ಕುಂದೇಶ್ವರ ಶತಕವು ಜ್ಞಾನ, ನೀತಿ ಬೋಧಕವಾದ ಕಂದಸಹಿತವಾಗಿದ್ದು, ಸಾಹಿತ್ಯಾಭ್ಯಾಸಿಗಳಿಗೆ ಮತ್ತು ಸಾಹಿತ್ಯಾಭಿರುಚಿಯುಳ್ಳವರಿಗೆ ಉಪಾದೇಯವಿರುತ್ತದೆ. ಎಲ್ಲ ಕೀರ್ತನೆ ಪದ್ಯಗಳೂ ಸ್ವತಿರೂಪವಾಗಿರುವುವು.

ದೊಂಬನ ಡೋಲು — (ಶಿಶುಗೀತೆಗಳು ಮತ್ತು ಅಭಿನಯ ಗೀತೆಗಳು) ಲೇಖಕರು ಮತ್ತು ಪ್ರಕಾಶಕರು: ಶ್ರೀ ಕಳಕಳ ಸೀತಾರಾಮ ಭಟ್ಟ, ಶಿಶು ಸಾಹಿತ್ಯಮಾಲೆ, ಮತ್ತಬೈಲ್, ದ. ಕ. ಪುಟಗಳು: ೩೦. ಬೆಲೆ: ರೂ. ೦–೪೦.

ಪ್ರಾಥಮಿಕ ಶಾಲೆಗಳ ೧ರಿಂದ ೩ನೆ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಹಾಡಲು ಮತ್ತು ಅಭಿನಯಿಸಲು ಅನುಕೂಲವಾಗುವಂತೆ ರಚಿಸಿ ಕೆಲವೊಂದು ಗೀತೆಗಳನ್ನು ನಾವಿಲ್ಲಿ ಕಾಣಬಹುದು. "ಕೂಲಿಗಳು", "ಬತ್ತಿ" ಎಂಬ ಕೆಲವೊಂದು ಪದ್ಯಗಳನ್ನುಳಿದರೆ, ಉಳಿದುದರಲ್ಲಿ ಹೊಸ ವಸ್ತುವನ್ನಾಗಲಿ, ಭಾವವನ್ನಾಗಲೀ ನಾವು ಕಾಣಲಾರೆವು. "ಹಳೆಯ ಮದ್ದನ್ನೇ ಹೊಸ ಬಾಟಲಿಯಲ್ಲಿ ಈಯುವಂತೆ" ತೋರುವ ಕೆಲವು ಗೀತೆಗಳೂ ಇರುತ್ತವೆ. ಕಾಲವು ಪರಿವರ್ತನೆ ಹೊಂದಿದಂತೆ, ಎಳೆಯ ಮಕ್ಕಳು ತಿಳಿದುಕೊಳ್ಳಬೇಕಾದ ವಿಷಯಗಳಲ್ಲೂ ಪರಿವರ್ತನೆಯಾಗುವುದೂ ಅವನ್ನು ತಿಳಿದುಕೊಳ್ಳಲು ಅವು ತವಕಪಡುವುದೂ ಸಹಜವೇ. ದಾತೆ, ಗಾಳಿಪಟ, ತುತ್ತೂರಿ ಮೊದಲಾದುವುಗಳ ಬಗ್ಗೆ ಈಗಾಗಲೇ ಹಲವಾರು ಗೀತೆಗಳು ಪ್ರಚಲಿತವಿವೆ. ಹೊಸ ವಿಚಾರವನ್ನು ಅದರಿಸಿ ಅವನ್ನು ಮಕ್ಕಳಿಗೆ ಮುಂಬಟ್ಟಾಗುವಂತೆ ಗೀತೆಯ ರೂಪಕ್ಕೆ ತರುವುದರಿಂದ ತುಂಬ ಉಪಕಾರವಾಗುವುದು.

ಇನ್ನು ಅಚ್ಚಿನ ಬಗ್ಗೆಯೂ ಒಂದು ಮಾತನ್ನು ಆಡಲೇ ಬೇಕೆನ್ನಿಸುತ್ತದೆ. ಪದಗಳನ್ನು ನಡುವೆ ಒಡೆದು ಅಚ್ಚುಮಾಡುವುದು ಅದರಲ್ಲೂ ಎಳೆಯ ಮಕ್ಕಳಿಗೆ ಅವಶ್ಯವಾದ ಪುಸ್ತಕಗಳಲ್ಲಿ, ಮಹಾಪರಾಧವೆನ್ನಬಹುದು. ಏಕೆಂದರೆ, ಕಂಡುದನ್ನು ಗ್ರಹಿಸುವ ಮಕ್ಕಳು ಅದನ್ನೇ ಶುದ್ಧವೆಂದು ತಿಳಿಯಬಹುದು. "ಬುಗರಿ ತಿರುಗುತಿರುವುವನ್ನು" ಎಂಬುದನ್ನು "ಬುಗರಿ ತಿರುಗು ತಿರುವುದನ್ನು" ಎಂದು (ಪುಟ ೮) ಮುದ್ರಿಸಲಾಗಿದೆ. ಇಂತಹ ತಪ್ಪು ಹಲವಾರಿವೆಯಿವೆ. ಗೀತೆಯ ಅಭ್ಯಾಸದೊಡನೆ ಭಾಷೆಯ ಶುದ್ಧತೆಯನ್ನೂ ಕಾಯ್ದುಕೊಳ್ಳದೆ ಹೋದರೆ, "ಬಿಡುವಾಣ, ಕಾಂತಹೀನು" ಎಂಬಂತಾದೀತು. ಶಿಶುಸಾಹಿತ್ಯದ ಬಗ್ಗೆ ಈಗಾಗಲೇ ಸಾಕಷ್ಟು ಸೇವೆಸಲ್ಲಿಸುತ್ತಿರುವ ಶ್ರೀ ಭಟ್ಟರು ಹೊಸ ಹೊಸ ವಿಷಯಗಳನ್ನು ಆಯ್ದುಕೊಂಡಲ್ಲಿ ಅವರಿಂದ ಶಿಶುಸಾಹಿತ್ಯದ ಜರಿ ತುಂಬಿ ಶ್ರೋತವಾಗಿ ಹರಿಯುವುದೆಂಬುದನ್ನು ಅವರು ಈಗಾಗಲೇ ತೋರಿಸಿಕೊಟ್ಟಿದ್ದಾರೆ.

ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗ:— ಪಂಚಾಂಗ ಕರ್ತರು: ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರೀ, ಹೆಬ್ಬಾಳ, ಸುರಪುರ. ಪ್ರಕಾಶಕರು: ಆರ್ಯವೈಶ್ಯ ಸಂಘ, ರಂಗಂಪೇಟೆ ಸುರಪುರ. ಬೆಲೆ ರೂ. 0—85.

ಶಾರ್ವರೀನಾಮ ಸಂವತ್ಸರದ ಬೃಹತ್ ಪಂಚಾಂಗವಿದು. ಇದರಲ್ಲಿ ದೈನಂದಿನ ಪಂಚಾಂಗವಲ್ಲದೆ, ದ್ವಾದಶ ರಾಶಿಗಳವರ ವರ್ಷ ಭವಿಷ್ಯ, ಭಾರತ, ಪಾಕಿಸ್ತಾನ ಮೊದಲಾದ ರಾಷ್ಟ್ರಗಳ ಭವಿಷ್ಯ, ವರ್ಷ ಫಲ, ಇತ್ಯಾದಿಗಳೂ ವಿವಾಹಾದಿ ಮುಹೂರ್ತಗಳೂ ಮತ್ತಿತರ ಜ್ಯೋತಿಷ್ಯ ಸಂಬಂಧಿ ವಿಚಾರಗಳೂ ಸವಿಸ್ತಾರವಾಗಿ ಸಂಗ್ರಹಿತವಾಗಿವೆ. ಕರ್ನಾಟಕದ ಜನತೆಗೆ ಇದರ ಸಂಪೂರ್ಣ ಪ್ರಯೋಜನವು ದೊರೆಯುವುದು ಖಂಡಿತವೆ. ಉತ್ತರ ಕರ್ನಾಟಕ ದವರಿಗಂತೂ ಇದು ಸಮೀಪವರ್ತಿ, ಜ್ಯೋತಿಷ್ಯ ಬನ್ನ ಹಿಂದಿದ್ದಂತೆಯನ್ನಬಹುದು. ವಿದ್ವಾಂಸರಾದ ಪಂಚಾಂಗಕರ್ತರು ಜ್ಯೋತಿಷ್ಯದ ಸಾರಸರ್ವಸ್ವವನ್ನು ಎಂದಿನಂತೆಯೇ ಸಂಗ್ರಹಿಸಿ ಮಹದುಪಕಾರವೆಸಗಿದ್ದಾರೆ. ಈ ಪಂಚಾಂಗವನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ.

—ಗೋರಾ.

ಕಥಾವಿಹಾರ

(೨ನೇ ಪುಟದಿಂದ)

ವನನು ಹುಲ್ಲುಕಡ್ಡಿ ಹಿಡಿದರೆ ಏನು ಪ್ರಯೋಜನವೆಂದಾಕೆಯ ಮನಸ್ಸಿಗೆ ಹೊಳೆಯಲೇ ಇಲ್ಲ.

"ಕಾಯಿಲೆಗೆ ಔಷಧಿಯಿಲ್ಲವೇ? ಏಕಿಷ್ಟು ಹೆದರುವೆ?" ಎಂದು ಧೈರ್ಯಕೊಡಬಯಸಿದೆ.

ರಮೆಯು ಮ್ಲಾನವದನೆಗಳಾಗಿದ್ದಳು. ಔಷಧಿಯನ್ನು ಕುಡಿಯುತ್ತಿದ್ದರು ಅವರು.

"ಇನ್ನು ಒಂದೆರಡು ದಿನಗಳಲ್ಲಿ ಗುಣವಾಗಬಹುದು."

"ಗುಣವಾ! ನನ್ನ ಜೀವನದಲ್ಲಿಯೇ ಅಂತಹ ಸುಖವಿಲ್ಲವಣ್ಣಾ– ಗುಣವಾಗುವಂತಹ ಆಸೆಯೂ ಇಲ್ಲ. ಇನ್ನೇನು? ಇನ್ನಾರು ಗತಿ ನನಗೆ?' ಆವೇಶಪೂರಿತಳಾಗಿ ಆಕೆ ಹೇಳುತ್ತಿದ್ದಳು ಇದಕ್ಕೆ ನಾನೇನು ಉತ್ತರಕೊಡಲಿ?

ಒಂದು ವರ್ಷದಿಂದಲೂ ರಮೆಯ ಗಂಡನಿಗೆ ಅಸ್ವಸ್ಥ ಇತ್ತಂತೆ ಡಾ! ಶ್ಯಾಮರಾಯರಿಗೇನೇ ಗೊತ್ತು. ಡಾಕ್ಟರ ಫೀಸು, ಮನೆಯ ಖರ್ಚು-ಇದನ್ನು ತಡೆದುಕೊಳ್ಳಲಾರದೆ ಆಕೆ ಗುಮಾಸ್ತೆಯ ಕೆಲಸಕ್ಕೆಸಿಂತು ಟೈಪಿಸ್ಟ್ ಆದಳು. ಆಕೆ ತನ್ನ ಬಾಳಿನ ಗೋಳನ್ನು ಯಾರೊಡನೆಯೂ ತೋಡಿಕೊಂಡಿರಲಿಲ್ಲ. ಅವಳ ಜೀವನದ ಮೊದಲ ಪಲ್ಲವಿಯೇ ದುಃಖಮಯವಾಗಿತ್ತು. ಅದನ್ನಾಕೆ ತಾಳಿಕೊಂಡು ಇದುವರೆಗೆ ಬಾಳಿದ್ದೂ ಆಶ್ಚರ್ಯದ ಸಂಗತಿ.

"ಅಕ್ಕಾ, ಆಫೀಸಿಗೆ ನಾಲ್ಕು ದಿನ ರಜಾ ಬರೆಯಿರಿ. ನಾನು ಡಾಕ್ಟರರಿಂದ ಮದ್ದು ತರುತ್ತೇನೆ."

"ಬೇಡ ಶೇಖರ, ನೀವು ನನ್ನ ಬಗ್ಗಾಗಿ ಏನೂ ಮಾಡಬೇಡಿ. ಈ ಪಾಪಿ ಜೀವವನ್ನು ಮರೆತು ಬಿಡಿ. ನನ್ನವರೆಂಬವರು ನೀವು ಮಾತ್ರ. ಹಾಗಾಗಿ ಈ ಮಾತನ್ನು ಅನ್ನುತ್ತಿದ್ದೇನೆ. ನನ್ನ ಬಗ್ಗೆ ಒಂದಿಷ್ಟು ವ್ಯಥಿಸಬೇಡಿ. ಯಾವ ಪಾಪಕರ್ಮದ ಫಲವಾಗಿದ್ದೇನೋ ಅದಕ್ಕಾಗಿ ನಾನಿಂದು ದುಃಖದೂಟವನ್ನು ಉಣ್ಣುತ್ತಿರುವೆ. ದಿನಾ ಆಫೀಸಿನಿಂದ ಮರಳುವವರು ಒಮ್ಮೆ ಬಂದುಹೋಗಿ"—ನಾವು ಮೂವರೂ ಅತ್ತೆವು. ರೋಗಿಗಳೆದುರು ನಾವು ಧೈರ್ಯಗೆಡುವುದು. ನನಗೆ ಸಂದೋರವಿಲ್ಲ. ನಾನು ಹೊರಬಂದೆ. ಒಳಗೆ ಕೆಮ್ಮುವುದು ಕೇಳಿಸುತಿತ್ತು. ರಮೆ ಅವರನ್ನು ಸರಿಯಾಗಿ ಮಲಗಿಸಿ ಹೊರಬಂದಳು. ನಾನಂದೆ— "ಅಕ್ಕಾ, ನಾನಿನ್ನು ಹೋಗಿಬರುತ್ತೇನೆ"

"ಹ್ಞೂಂ...." ಉದ್ಗಾರ! ನೀರಸ ಜೀವನವನ್ನು ದಾಟಬಯಸಿದ ಮೃದು ಹೃದಯದ ಹೆಣ್ಣಿನ ಗೋಳಿನ ಸ್ವರ ಮಾವಧಿಯಲ್ಲಿ ಹೊರಟ ಉದ್ಗಾರ!

ಹಿಂದು ಮುಂದು ನೋಡದೆ ಹೊರಟೆ. ಹೆಜ್ಜೆ ಭಾರವಾಗಿತ್ತು. ನಡಿಗೆಯೂ ನಿಧಾನವಾಗಿತ್ತು. ಮನೆಮುಟ್ಟಿದಾಗ ರಾತ್ರಿಯೇ ಆಗಿತ್ತು.

ಮರುದಿನ ಸಂಜೆ ಹೋಗಬಂದೆ. ಏನು ಹೇರೇನೂ ಕಾಣಲಿಲ್ಲ. ಅದೇ ದುಃಖ ಪೂರ್ಣ ಸ್ವಾಗತ. ನಿಸ್ತೇಜತೆಯ ನೀರದ ಧಿಯಲ್ಲಿ ಆಕೆಯ ಬಾಳು ಮುಳುಗಿತ್ತು.

ಮೂರನೇ ದಿನ ಸಂಜೆ ನಾನು ಓಣಿಯಲ್ಲಿ ತಿರುಗಿ ರಮೆಯ ಮನೆಯಂಗಳದಲ್ಲಿ ನಿಂತೆ. ಬಾಗಿಲು ತೆರೆದಿರಲಿಲ್ಲ. ಬೀಗ ಮುದ್ರೆಯಿತ್ತು! 'ರಮಕ್ಕಾ"..."ಶೇಖರ ಬಂದಿದ್ದಾನೆ" ಏನೆಂದರೂ ಯಾರೂ ಬರಲಿಲ್ಲ. ಹಿಂದೆರಳಿದೆ. ಚಿಂತೆಯೇ.

ನಾಲ್ಕನೆಯ ದಿನ ಆಫೀಸಿನ ವಿಳಾಸದಲ್ಲಿ ನನಗೊಂದು ಪತ್ರ: "ಶೇಖರ, ಯಾವುದಕ್ಕಾಗಿಯೋ ಬಾಳಲು ಇಷ್ಟು ದೂರ.......ಬಹು ದೂರ ಬಂದಿದ್ದೇನೆ. ನಾಳೀಗ ಶಾಸ್ತ್ರ. ನಿನ್ನನ್ನ ಮರೆತು ಬಿಡಬೇಕೆಂದರೂ ನನ್ನಾತ್ಮ ಜಗ್ಗಿಸದು. ಪುನಃ ಯಾವುದಾದರೊಂದು ನಿರ್ದಿಷ್ಟ ಸ್ಥಳ ಸೇರಿ ಬರೆಯುವೆ. ಮತ್ತೆ ಈಗ ಏನೆಂದು ಹೇಳಲಿ ಇತಿ ನಿನ್ನ ಅಕ್ಕ-ರಮಾ."

ರಮೆಯ ಪತಿಯ ಗತಿ ಯೇನಾಯಿತೆಂದು ಯೋಚಿಸ ಬೇಕಾಗಿಲ್ಲ. ಆಗಬಹುದಾಗಿದ್ದುದೇ ಆಯಿತು. ಆದರೆ, ರಮೆಯು ಈ ತರಹದ ವರ್ತನೆಯು ಮಾತ್ರ ಏಕೆ? ಇದರ ಪರಿಣಾಮವೇನು ಎಂಬುದನ್ನು ತಿಳಿಯುವುದು ಸಾಧ್ಯವಿರಲಿಲ್ಲ. ರಮೆಯ ಜೀವನವೇ ವಿಚಿತ್ರವಾಗಿತ್ತು. ಆಕೆಯ ಬಾಳಿಂದು ಬಿಡಿಸಲಾರದ ಒಗಟಾಗಿತ್ತು. ಇದನ್ನು ಯೋಚಿಸುತ್ತ ತಲೆಕೆರೆದುಕೊಂಡೆ ನಾನಂತೂ ಆಕೆಯನ್ನು ಮರೆತುಬಿಡುವ ಪ್ರಯತ್ನ ನಡೆಸಿವೆ, ಆದರೆ, ಆಕೆ ಆಗಾಗ್ಗೆ ತನ್ನ ನೆನಪನ್ನು ನನಗೆ ಕೊಡುತ್ತ ಇದ್ದಾಳೆ ರಮೆಯ ಜೀವನವೊಂದು ಸಂಪೂರ್ಣ ಸಮಸ್ಯೆಯಾಗಿಯೇ ನನಗೆ ತೋರುತ್ತಿದೆ. ಇದಕ್ಕೆ ಹೇಳಬಹುದಾದ ಉತ್ತರ ನನೂಜನೊಡನೆ ಇವೆ, ಆದರೆ, ನನ್ನೊಡನೆ ಮಾತ್ರ ಇಲ್ಲ.

—ಎಚ್ ಆನಂದ ರಾಮ ಅಡಿಗ,
ಕಂ. ನಾರಾಯಣ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939


ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶಲ್), ರೂ. 8/- (ಎಕ್ಸ್ಟ್ರಾ ಸ್ಪೆಶಲ್) ದರದಲ್ಲಿ ವಿಕ್ರಯಿಸಲ್ಪಡುತ್ತವೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ವಿಠಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶುದ್ಧ ಹರಟೆ

(೧ನೇ ಪುಟದಿಂದ)

ವನು ಪುಣ್ಯಶಾಲಿ. ನಾನು ಆ ಪುಣ್ಯಶಾಲಿಗಳ ಶ್ರೇಣಿಯಲ್ಲಿ ಅಗ್ರಗಣ್ಯನೆಂದು ಎದೆತಟ್ಟಿ ಹೇಳಬಲ್ಲೆ. (ಗಟ್ಟಿಯಾಗಿ ಎದೆ ತಟ್ಟಿಕೊಂಡರೆ ಹಾರ್ಟ್‌ಫೈಲ್ ಆದೀತೆಂಬ ಭಯ ನನಗುಂಟೆಂಬುದು ಗುಟ್ಟಾಗಿಯೇ ಇರಲಿ.) S. S. L. C. ಪರೀಕ್ಷೆಯನ್ನು 23ನೆಯ ವಯಸ್ಸಿನಲ್ಲಿ ಮುಗಿಸಿದ ಧೀರ, ವೀರ, ಗಂಭೀರ ನಾನಲ್ಲವೇ? ನನ್ನ ಹಳೆಯ ಸಹಪಾಠಿಯೇ ನನಗೆ ಗುರುವಾಗಿ ಬಂದಾಗ ತರಗತಿ ಬಿಟ್ಟೊಡನೆ ಅವನ ಹೆಗಲಮೇಲೆ ಕೈಹಾಕಿಕೊಂಡು ಕಾಫಿ ಹೋಟೆಲಿಗೆ ಕರೆದೊಯ್ಯುತಿದ್ದ ಪುಣ್ಯಶಾಲಿ ನಾನೇ ತಾನೇ?, ಇದಕ್ಕೆ ನನ್ನ ಅಸ್ಪಷ್ಟವಾದ ಮರೆವಿನ ಯಾ ನೆನಪಿನ ಶಕ್ತಿಯೇ ಕಾರಣವಾಗಿತ್ತೆನ್ನಿ. ಎಲ್ಲಾ ವಿಷಯಗಳನ್ನೂ ಚೆನ್ನಾಗಿ ಓದಿ, ಎಲ್ಲವೂ ನನಗೆ ಕಂಠಸ್ಥವಾಗಿದೆಯೆಂಬ ಸಂಪೂರ್ಣ ವಿಶ್ವಾಸದಿಂದ ಪರೀಕ್ಷಾಭವನವನ್ನು ಪ್ರವೇಶಿಸಿ ಕುತೂಹಲದಿಂದ ಪ್ರಶ್ನೆ ಪತ್ರಿಕೆಯನ್ನು ಕೈಗೆತ್ತಿಕೊಂಡು ಉತ್ತರ ಬರೆಯಬೇಕೆಂದು ಲೇಖನಿ ಹಿಡಿದಾಗ ಎಲ್ಲಾ ಪ್ರಶ್ನೆಯ ಉತ್ತರಗಳೂ ಮರೆತು ಹೋಗಿ ಪರೀಕ್ಷೆಯಲ್ಲಿ ಒಂದು ದೊಡ್ಡ ಗುಂಬಳ ಕಾಯಿ (0) ಯನ್ನು ಪಡೆಯಬೇಕಾದರೆ ನನ್ನ ಮರೆವಿನ ಶಕ್ತಿ ಅದೆಷ್ಟು ಅದ್ಭುತವೆಂದು ನೀವೇ ಊಹಿಸಿಕೊಳ್ಳಿ.

ಇದಕ್ಕಿಂತಲೂ ಸೋಜಿಗದ ಸಂಗತಿ ಕೇಳುತ್ತೀರಾ? ನನ್ನ S. S L. C. ಪರೀಕ್ಷೆಗೆ ಮೂರನೆಯ ಸಾರಿ ಕುಳಿತುಕೊಳ್ಳಬೇಕಾಗಿದ್ದ ದಿನ ಬೆಳಗ್ಗೆ ಒಂಬತ್ತು ಗಂಟೆಗೆ ಎದ್ದು (ನಾನಷ್ಟು ಬೇಗ ಹೇಗೆ ಹಾಸಿಗೆ ಬಿಟ್ಟೆದ್ದೆ ಎಂದು ಆಶ್ಚರ್ಯಪಡಬೇಡಿ.) ಮುಖ ತೊಳೆದು, ಕಾಫಿಕುಡಿದು ಮೋರ್ನಿಂಗ್ ಶೋ ಸಿನೇಮಾಕ್ಕೆ ಹೋಗಿದ್ದೆ. ಸಿನೇಮಾದಲ್ಲಿ ನನ್ನ ಪರಿಚಯದವರೊಬ್ಬರು, "ಹಲೋ ಶೇಖರ್, ಇವತ್ತು S. S L. C. ಪರೀಕ್ಷೆ ಎಂದು ಹೇಳಿದ್ದೆಯಲ್ಲ" ಎಂದಾಗಲೇ ನಾನು ಕಟ್ಟಬೇಕಾಗಿದ್ದ ಪರೀಕ್ಷೆಯ ನೆನಪು ಉಂಟಾಯಿತು. ಆನರೇನು ಮಾಡೋಣ? ಆಗಲೇ ಪರೀಕ್ಷೆ ಆರಂಭವಾಗಿತ್ತು. ಹೋಗಲಿ ಬಿಡಿ, ಪರೀಕ್ಷಾ ಬೋರ್ಡಿಗಾದರೂ 15 ರೂಪಾಯಿ ಲಾಭವಾಯಿತೆನ್ನಿ.

ನನ್ನ ಅದ್ಭುತವಾದ ಈ ಶಕ್ತಿಯಿಂದ ನನಗಾಗ ಆಗುತಿದ್ದ ಲಾಭದ ಕುರಿತು ಇನ್ನೂ ಒಂದೆರಡು ಉದಾಹರಣೆ ಕೊಡುತ್ತೇನೆ. ನಾನು ಖರ್ಚಿಗೆ ಹಣವಿಲ್ಲದಾಗ ಆಗಾಗ ನನ್ನ ಮಿತ್ರರಿಂದ ನಾಲ್ಕಾಣೆ, ಎಂಟಾಣೆಯಿಂದ 5–10 ರೂಪಾಯಿಗಳ ವರೆಗೂ ಕೈಗಡ ಕೇಳಿ ಪಡೆಯುವುದೂ ಉಂಟು. ಆ ಹಣ ತೆಗೆದುಕೊಂಡನಂತರ ಅದರ ನೆನಪೇ ನನಗೆ ಇಲ್ಲದಿರುವುದರಿಂದ ಹಣವನ್ನು ವಾಪಾಸುಕೊಡುವ ಚಿಂತೆ ಮಾಡಬೇಕಾದ ಪ್ರಮೇಯವೇ ಬರುವುದಿಲ್ಲವೆನ್ನಿ. ನನ್ನ ಮಿತ್ರರು "ಇಂದು ಕೊಟ್ಟಾನು, ನಾಳೆ ಕೊಟ್ಟಾನು" ಎಂದು ಯೋಚಿಸುತ್ತಾ ಇರುವಾಗಲೇ ತಿಂಗಳು ಗಟ್ಟಲೆ ಕಳೆದುಹೋಗುವುದರಿಂದ ಅವರಿಗೂ ಆ ಹಣದ ವಿಷಯ ಮರೆತು ಹೋಗುತ್ತೆ ಅನ್ನಿ. ಅನಂತರ ಪುನಃ ಕೈಗಡ ಕೇಳಲಿಕ್ಕೆ ತೊಂದರೆ ಏನು? "ಮೋಸಕ್ಕೆ ಮೋಸವಿಲ್ಲ" ನೆಂಬ ಗಾದೆಯೇ ಇದೆ. ಆದುದರಿಂದ ಮರೆತು ಹೋಗಿ, ಕೊಟ್ಟ ಹಣ ವಾಪಾಸು ಕೊಡದಿದ್ದರೂ ಸ್ವರ್ಗದಲ್ಲೊಂದು ಸೀಟು ನಮ್ಮ ಬಗ್ಗೆ "ರಿಸರ್ವ್" ಆಗಿಯೇ ಇರುತ್ತೆನ್ನಿ. ನಾನು ಮಿತ್ರರಿಗೆ ಆಪತ್ಕಾಲದಲ್ಲಿ ಕೈಗಡ ಕೊಡುವ "ದುಶ್ಚಾಳಿ"ಯನ್ನು ಇಟ್ಟುಕೊಂಡಿಲ್ಲವಾದುದರಿಂದ ನನ್ನ ಹಣ ಕಳೆದುಕೊಳ್ಳುವ ಪ್ರಸಂಗ ಬರುವುದಿಲ್ಲವೆನ್ನಿ.

ನೋಡಿ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಪ್ರೊಫೆಸರರಿಗೆ ಮರವು ಜಾಸ್ತಿ ಎಂದು. ಆಧುನಿಕಯುಗದ ಸರ್ವಮಾನ್ಯ ಸಿದ್ಧಾಂತವಾಗಿದೆ (ಈ ಸಿದ್ಧಾಂತ ಕೇವಲ ನೂರಕ್ಕೆ 2ರಷ್ಟು ಕಡೆ ಮಾತ್ರ ಸತ್ಯವಾಗುತ್ತೆ ಎಂಬ ಹೊಸ ಸಿದ್ಧಾಂತವನ್ನಿಂದು ಕಂಡುಹಿಡಿಯಲ್ಪಡಲಿದೆ.) ಈ ಸಿದ್ಧಾಂತವು ವಿಲೋಮವೂ (conversely) ಸತ್ಯವಾದಲ್ಲಿ, ಅಂದರೆ ಮರವು ಹೆಚ್ಚಾದವರೆಲ್ಲ ಕಾಲೇಜುಗಳ ಪ್ರಾಧ್ಯಾಪಕರಾಗಿರುತ್ತಾರೆ ಎಂಬುದೂ ಒಂದು ಸಿದ್ಧಾಂತವೆಂದೂ ಪ್ರಮಾಣೀಕರಿಸಲ್ಪಟ್ಟರೆ, ನಾನೂ ಪ್ರಾಧ್ಯಾಪಕ (Professor)ರ ಸಾಲಿಗೇ ಸೇರಿದೆ ಅನ್ನಿ. ಹಿಂದೊಮ್ಮೆ ನಿಜಕ್ಕೂ ಒಬ್ಬಾತ ನನ್ನ ಅದ್ಭುತ ಮರೆವಿನ ಶಕ್ತಿಗೆ ಬೆರಗಾಗಿ ನಾನೊಬ್ಬ ಪ್ರಾಧ್ಯಾಪಕನೇ ಇರಬೇಕೆಂಬ ನಿರ್ಧಾರಕ್ಕೆ ಬಂದು "ಪ್ರೊಫೆಸರರೇ" ಎಂದು ಸಂಬೋಧಿಸಿದ್ದನು. ಪುಕ್ಕಟೆಯಾಗಿ ನನಗೆ ಸಿಕ್ಕಿದ ಸನ್ಮಾನ ನೋಡಿ ನಾನು ಹಿರಿಹಿರಿ ಹಿಗ್ಗಿ ಗುಂಬಳಕಾಯಿಯಾದೆ.

ಶಾಲೆಯಲ್ಲಿ ಕಲಿಯುವಾಗಲೇ ನನಗೆ ಮಗ್ಗಿಯನ್ನು ಸಂಪೂರ್ಣ ಕಂಠಸ್ಥ ಮಾಡಿಕೊಳ್ಳಲು 10 ವರ್ಷ ಹಿಡಿದಿತ್ತು. ಶಾಲೆ ಬಿಟ್ಟ ಮೇಲೆ ಮಗ್ಗಿಯೆಲ್ಲ ಮರೆತು ಹೋಗಿತ್ತು. ಒಮ್ಮೆ ನನ್ನ ತಮ್ಮ ಏನೋ ಲೆಕ್ಕ ಮಾಡುತಿದ್ದ. ನನ್ನೊಡನೆ ಥಕ್ಕನೆ 17× 9 ಅಂದರೆ ಎಷ್ಟೆಂದು ಕೇಳಿಬಿಟ್ಟ. ಅಯ್ಯೋ ಗ್ರಹಚಾರವೇ! ಏನು ಮಾಡಲಿ? ನಿಜವಾಗಿಯೂ ನನಗೆ 17×19 ಅಂದರೆ ಎಷ್ಟೆಂದು ತಿಳಿದಿರಲಿಲ್ಲ (ಈಗಲೂ ಗೊತ್ತಿಲ್ಲವೆಂಬುದು ಗುಟ್ಟಿನ ವಿಷಯ). ಆದರೂ ತಮ್ಮನ ಎದುರಿಗೆ ದಡ್ಡನೆಂದೆನಿಸಿಕೊಳ್ಳುವುದೇ ಎಂದು, "ಏನೋ ಕಳ್ಳ, ನಿನಗೆ ಮಗ್ಗಿ ಕಲಿಯಲಿಕ್ಕೆ ಸೋಮಾರಿತನ ಬಿಡೋದಿಲ್ಲ. ಆದುದರಿಂದ ನನ್ನೊಡನೆ ಕೇಳುತಿದ್ದೆಯಲ್ಲ ?" ಎಂದು ಅಬ್ಬರಿಸಿದಾಗ ಅವನು ತೆಪ್ಪಗಾದ. ನನ್ನ ಗುಟ್ಟು ಅವನಿಗೆ ತಿಳಿದಿರಲಿಕ್ಕಿಲ್ಲವೆಂಬುದು ಹದಿನಾರಾಣೆ ಸತ್ಯ. (ಅಯ್ಯೋ ನೋಡಿ ಇಲ್ಲಿ ಕೂಡಾ ನಾನು ಮರೆತುಬಿಟ್ಟೆ. ಈಗೆಲ್ಲಾ ನಯೇ ಪೈಸೆಗಳ ಕಾಲ ಆಗಿರುವಾಗ ಹದಿನಾರಾಣೆ ಸತ್ಯ ಎನ್ನುವುದು ಅಷ್ಟು ಉಚಿತವಲ್ಲವಷ್ಟೆ!)

ಇನ್ನೊಂದು ದಿನದ ಕಥೆ. ಸಂಜೆಯ ಸಮಯ, ನಾನು ನಮ್ಮೂರ ನಾರಾಯಣ ಪ್ರಭುಗಳ ಅಂಗಡಿಯಲ್ಲಿ ಕುಳಿತು ಹರಟೆ ಕೊಚ್ಚುತಿದ್ದೆ. ಪ್ರಭುಗಳು ಹಳೆಯ ಕಾಲದ ಜನ. ವ್ಯಾಪಾರ ಮಾಡುತಿದ್ದಾಗ ಥಕ್ಕನೆ 18 ರೂಪಾಯಿಗಳಂತೆ 18 ಮುಡಿ ಅಕ್ಕಿಗೇನಾಗುತ್ತೆ ಅಂತ ಕೇಳಿದರು. ಅಯ್ಯೋ, ಈ ಪ್ರಭುಗಳಿಗೀಬುದ್ಧಿ ಯೆಲ್ಲಿಂದ ಬಂತು ಎಂದು ಅವರನ್ನು ಮನಸ್ಸಿನೊಳಗೇ ಶಪಿಸಿದೆ. ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕಾಯಿತಲ್ಲಾ! ಆದುದರಿಂದ ಕೇಳಿದರೂ ಕೇಳದವನಂತೆ ಕುಳಿತೆ. ಅಷ್ಟು ಹೊತ್ತಿಗೆ ಸರಿಯಾಗಿ ನನ್ನ ಗೆಳೆಯ ಗೋಪು ರಸ್ತೆಯಲ್ಲಿ ಹೋಗುತಿದ್ದನು. ನನ್ನನ್ನು ಅವನು ಕರೆದುದರಿಂದ ಪ್ರಭುಗಳ ಪ್ರಶ್ನೆಗೆ ಉತ್ತರಕೊಡದೆ ಜಾರುವವನಿದ್ದೆ. ಆದರೆ ಪ್ರಭುಗಳು ಗೋಪುವಿನ ಎದುರಿಗೇ ನನ್ನೊಡನೆ 18×18 ಎಂದರೆ ಎಷ್ಟೆಂದು ಕೇಳಬೇಕೆ? ನಾನು ಉತ್ತರ ಕೂಡಲೇ ಹೇಳದಿದ್ದರೂ ಗೋಪು ತಟಕ್ಕನೆ ತೆಗೆದಬಾಯಿಗೆ ಅದೆಷ್ಟೆಂದು ಹೇಳಿದ. ಅವನು ಎಷ್ಟೆಂದು ಹೇಳಿದ ಎಂದು ನನಗೀಗ ನೆನಪಿಲ್ಲ. ಅಂತೂ ನಾನು ಗೆದ್ದೆನೆಂದು ಒಂದು ಉಸಿರುಬಿಟ್ಟೆ.

ನಿತ್ಯವೂ ಪೇಟೆಗೆ ತರಕಾರಿ ತರಬೇಕೆಂದು ಹೋಗಿ ಅಂಗಡಿಯ ಮುಂದೆ ಬಂದು ನಿಂತಾಗ ನಾನೇಕೆ ಬಂದೆನೆಂಬುದು ನೆನಪಾಗದೆ ಏನೇನೋ ತೆಗೆದುಕೊಂಡು ಮನೆಗೆ ಬಂದಾಗ ತಾಯಿ ಪುನಃ ನೆನಪು ಮಾಡಿದಾಗ ಪುನಃ ಪೇಟೆಗೆ ಓಡಿ ಪೇಟೆಗೆ ಹೋದ ಮೇಲೆ ನಾನೇಕೆ ಬಂದೆ ಎಂಬುದು ಮರೆತು ಹೋಗುವುದು ನನ್ನ ಪಾಲಿಗೆ ಸಾಮಾನ್ಯ ವಿಷಯ. ಇದಕ್ಕೆ ನಾನು ಪೇಟೆಗೆ ಹೋಗುವಾಗ ಏನು ತರಬೇಕೆಂದು ಚಿಕ್ಕ ಕಾಗದದ ತುಂಡೊಂದರಲ್ಲಿ ಬರೆದುಕೊಂಡು ಯೋಚಿಸಿ ಕಾಗದದಲ್ಲಿ ಬರೆದಿಡುತಿದ್ದೆ. ಆದರೆ ಪೇಟೆಗೆ ಹೋದ ಮೇಲೆಯೇ ನಾನು ಬರೆದಿಟ್ಟ ಚೀಟಿಯನ್ನು ಮನೆಯಲ್ಲೇ ಬಿಟ್ಟುಬಂದಿದ್ದೆನೆಂಬುದು ನೆನಪಿಗೆ ಬರುವುದು. ಇದರಿಂದೇನೂ ವಿಶೇಷ ನಷ್ಟವಿಲ್ಲವೆನ್ನಿ. ತರಕಾರಿಗೆಂದು ಖರ್ಚು ಮಾಡುವ ಹಣ ಉಳಿಯಿತೆನ್ನಿ.

ಅಂತೂ ನನಗೆ ತಿಳಿದ ಮಟ್ಟಿಗೆ ಮರೆವು ನನ್ನೊಬ್ಬನ ಸಂಪತ್ತು (Monopoly) ಹಾಗೂ ಜೀವನದುದ್ದಕ್ಕೂ ಇದರಿಂದ ನನಗೆ ಲಾಭವೇ ಲಾಭ ಆಗಿದೆ.

—ಪಾ. ಚಂದ್ರಶೇಖರ ಚಡಗ,
ಪಾಂಡೇಶ್ವರ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
... ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: ೧೯೨೫

ಅಧಿಕೃತ ಭಂಡವಾಳ	....	ರೂ.	1,00,00,000
ತೆತ್ತ ಮತ್ತು ಸಾಲು ಭಂಡವಾಳ	....	ರೂ.	50,00,000
ಪಾವತಿಯಾದ ಭಂಡವಾಳ	....	ರೂ.	47,02,166
ಕ್ಷೇಮ ನಿಧಿ	....	ರೂ.	34,00,000

(31–12–1959ರಂದು)

ಠೇವಣಾತಿ ರೂ. ೧೭ ಕೋಟಿಗೂ ಮಿಕ್ಕಿದೆ.
ಒಟ್ಟು ವ್ಯವಹಾರ ಸಂಪತ್ತು ರೂ. ೨೨ ಕೋಟಿಗೂ ಮಿಕ್ಕಿದೆ.
ಶಾಖೆಗಳು: ೧೩೭

ಟಿ. ಎ. ಪೈ
ಜನರಲ್ ಮೆನೇಜರ್

ಡಾ| ಟಿ. ಎಂ. ಎ. ಪೈ
ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd.,
H. O: UDIPI.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈ

ವರುಷ ೩೯. ವಾರ ೩೧ 7-4-1960 Vol. 39. No. 31

ಪ್ರಚಲಿತ ಪ್ರಸಂಗ

ಪಾಕಿಸ್ತಾನದ ವಕ್ರಮಾರ್ಗಗಮನ

ನೀರು ಬಿದ್ದರೆ ಕರಗಿ ಹೋಗುವ ಮಣ್ಣುಹಂಟೆಯಲ್ಲ; ನೀರಕೊಯ್ಲಿಗೂ ಬಗ್ಗದ ಬಂಡೆಕಲ್ಲು ಭಾರತ ಎಂದು ಪಾಕ್ ನಾಯಕರು ತಿಳಿಯಲಿ.

ಯಂ ಜಿ ಯಂ. ಅವರ "ಹಕ್ಲ್ ಬರಿ ಫಿನ್" ಚಿತ್ರದಲ್ಲಿ ಆರ್ಚಿ-ಮೂರೆ ಮತ್ತು ಎಡ್ಡಿ ಹೋಡ್ಜಸ್‌ರವರು ಸರಸ ಸನ್ನಿವೇಶದಲ್ಲಿ ತನ್ಮಯರಾಗಿದ್ದಾರೆ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇದ್ದಿದ್ದ ಹಲವಾರು ಸಮಸ್ಯೆಗಳಲ್ಲಿ ಕೆಲವೊಂದು ಸೌಹಾರ್ದಮಯ ವಾತಾವರಣದಲ್ಲಿ ಉಭಯ ಸರಕಾರಗಳ ಪ್ರತಿನಿಧಿಗಳ ನಡುವಣ ವಿಚಾರ ವಿಮರ್ಶನದ ಸತ್ಪರಿಣಾಮವಾಗಿ ಫಲಕಾರಿಯಾದಾಗ, ಈ ಎರಡು ರಾಷ್ಟ್ರಗಳ ಸಂಬಂಧದ ನಡುವಣ ಅಂತರವು ಕಡಿಮೆಯಾಗುತ್ತ ಬರುತ್ತಿದೆ ಎಂಬ ವಿಶ್ವಾಸ ಎಲ್ಲರಲ್ಲೂ ಉದ್ಭವಿಸಿತ್ತು. ಆದರೆ, ಇತ್ತೀಚೆಗೆ ಈ ಸಂಬಂಧದಲ್ಲಿ ಹೊಸ ಕಂಟಕಗಳನ್ನು ಅನವಶ್ಯವಾಗಿ ತಂದು ಹಾಕಿಕೊಳ್ಳುವ ದುಷ್ಕೃತ್ಯಗಳಿಂದ ಈ ವಿಶ್ವಾಸವನ್ನೇ ಹಾರಿಸಿ ಬಿಟ್ಟಂತಾಗಿದೆ. ಮುಖ್ಯವಾಗಿ ಭಾರತ-ಪಾಕ್‌ಗಳ ಸೀಮಾ ಪ್ರದೇಶದಲ್ಲಿ ದಿನನಿತ್ಯವೆಂಬಂತಾಗುತಿದ್ದ ಗುಂಡುಗಳ ಸುರಿಮಳೆಯು ಸೀಮಾ ನಿರ್ಣಯ ಮಾತುಕತೆಗಳಿಂದ ನಿಂತುಹೋಗಿದ್ದು ನೆಮ್ಮದಿಯ ಸನ್ನಿವೇಶವನ್ನು ಒದಗಿಸಿ ಕೊಟ್ಟಿತ್ತು. ಕಾಲುವೆ ನೀರಿನ ಹಂಚಿಕೆಯ ವಿಷಯದಲ್ಲೂ ವಿಶ್ವ ಬ್ಯಾಂಕಿನ ನೇತೃತ್ವದಲ್ಲಿ ಒಂದು ಸಾಮಾನ್ಯವಾದ ಒಡಂಬಡಿಕೆ ಆಗುವ ಸಲ್ಲಕ್ಷಣಗಳು ಗೋಚರವಾಗುತಿದ್ದುವು. ಭಾರತದ ಉತ್ತರದ ಗಡಿಯಲ್ಲಿ ನಡೆದ ಚೀನೀಯ ಧಾಳಿಯ ಪರಿಣಾಮವಾಗಿ ಭಾರತದೊಡನಿರುವ ತನ್ನ ಸಂಬಂಧವನ್ನು ಅತಿನಿಕಟಗೊಳಿಸುವ ಆವಶ್ಯಕತೆಯು ಪಾಕ್ ನಾಯಕರಿಗೆ ತೋರಿ ಬಂದಿತೆನ್ನಬಹುದು. ಇದಕ್ಕೋಸ್ಕರವಾಗಿಯೇ ಪಾಕ್ ಅಧ್ಯಕ್ಷ ಶ್ರೀ ಅಯೂಬ್ ಖಾನರು ಪರಸ್ಪರ ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವಂತೆಯೂ ಭಾರತಕ್ಕೆ ಕರೆಯಿತ್ತಿದ್ದರು ಆದರೆ, ಯಾವುದೇ ವಿಧದ ಸೈನಿಕ ಒಡಂಬಡಿಕೆಗಳು ನಿಷ್ಪ್ರಯೋಜಕವೆಂದು ತಿಳಿಯುವ ಭಾರತವು ಇದಕ್ಕೆ ಪ್ರತಿಕೂಲಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಪಾಕ್ ಧುರೀಣರಿ ಸಂಬಂಧವನ್ನು ಬೆಳೆಸಿಕೊಳ್ಳುವ ತಮ್ಮ ಅಭಿಲಾಷೆಯನ್ನು ಬಿಟ್ಟುಕೊಡಲಿಲ್ಲ. ಅಲ್ಲದೇ ತಮ್ಮ ಮೊಂಡುತನವನ್ನು ಕುಸು ಕಡಮೆ ಮಾಡಿ ನೇರ ಮಾರ್ಗದಲ್ಲಿ ನಡೆಯುವುದಕ್ಕೂ ಅವರು ಸಿದ್ಧರಾಗಿದ್ದರು.

ಭಾರತ-ಪಾಕ್‌ಗಳು ವಿಭಜನೆಗೊಂಡ ಸಮಯದಿಂದಲೂ ಬೆಳೆದುಬಂದಿರುವ ಆರ್ಥಿಕ ಪ್ರಶ್ನೆಯನ್ನು ಬಗೆಹರಿಸುವ ಇರಾದೆಯಿಂದ ಉಭಯ ಸರಕಾರದ ಪ್ರತಿನಿಧಿಗಳು ಇತ್ತೀಚೆಗೆ ಒಂದುಸೇರಿ ಮಾತುಕತೆ ನಡೆಸಿದ್ದರು. ಕೊನೆಯಲ್ಲಿ ಈ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯ ಬಂದುದರಿಂದ ಈ ವಿಮರ್ಶೆಯನ್ನು ಅರ್ಧದಲ್ಲಿಯೇ ನಿಲ್ಲಿಸಿ ಅದನ್ನು ಕೂನೆಗೊಳಿಸಬೇಕಾಗಿ ಬಂದುದು ಖೇದನೀಯ. ಈ ಬಗ್ಗೆ ಆದಷ್ಟು ಶೀಘ್ರದಲ್ಲಿಯೇ ಪುನಃ ಮಾತುಕತೆ ಪ್ರಾರಂಭವಾಗುವ ಆಶಯವು ವ್ಯಕ್ತಪಟ್ಟಿರುವುದಾದರೂ ಕೆಲವೊಂದು ಮೂಲಭೂತ ಆರ್ಥಿಕ ತತ್ವಗಳಲ್ಲಿ ಒಮ್ಮತವಾಗುವ ಸದವಕಾಶವಿನ್ನೂ ಸನ್ನಿಹಿತವಾಗಿರುವಂತೆ ತೋರುವುದಿಲ್ಲ. ಅಥವಾ ಈ ಮರುಭೆಟ್ಟಿ ಎಂದು ಆದೀತೆಂದೂ ಗೊತ್ತಾಗುವುದಿಲ್ಲ ಎರಡೂ ರಾಷ್ಟ್ರಗಳು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಉತ್ಸುಕತೆಯನ್ನು ಪ್ರದರ್ಶಿಸಿದರೂ ಈ ಪರಿಹಾರ ಮಾರ್ಗವಾವುದೆಂಬುದರಲ್ಲಿಯೇ ಮತಭೇದವೇಳುತ್ತಿರುವುದು ಶುಭಸೂಚನೆಯೆನ್ನುವಂತಿಲ್ಲ.

ಇದು ಹಳೆಯ ಪ್ರಶ್ನೆಯಾದರೆ, ಸದ್ಯ ಇನ್ನೊಂದು ಹೊಸ ಸಮಸ್ಯೆಯನ್ನು ಪಾಕಿಸ್ತಾನವು ಮುಂದೆ ತಂದುಹಾಕಿ, ತನ್ನ ಸ್ನೇಹಲತೆಗೆ ತಾನೇ ಕೊಡಲಿ ಹಾಕಿಕೊಳ್ಳುವ ಪ್ರಯತ್ನ ನಡೆಸಿದಂತಿದೆ ಭಾರತದ ಅಂಕಿತದಲ್ಲಿರುವ ಜಮ್ಮೂ-ಕಾಶ್ಮೀರ, ಜುನಾಗಡ ಮತ್ತು ಮಾನವದಾರ ಪ್ರದೇಶಗಳನ್ನು ತನ್ನವೆಂದು ತೋರಿಸಿ ಪಾಕಿಸ್ತಾನದ ಅಂಚೆ ಮತ್ತು ತಂತಿ ಶಾಖೆಯು ಇತ್ತೀಚೆಗೆ ಅಂಚೆ ಚೀಟುಗಳನ್ನು ಪ್ರಸಿದ್ಧಿಸುವ ದುಸ್ಸಾಹಸ ಮಾಡಿತು ಅಂತಾರಾಷ್ಟ್ರೀಯ ಅಂಚೆ ನಿಯಮಗಳನ್ವಯ ಯಾವುದೇ ದೇಶವು ತನಗೆ ಬೇಕಾದ ಅಂಚೆಚೀಟಿಗಳನ್ನು ಹೊರಡಿಸಬಲ್ಲುದು. ಆದರೆ, ಇಂತಹವುಗಳನ್ನು ಬೆಳಕಿಗೆ ತರುವಾಗ, ಒಂದು ರಾಷ್ಟ್ರದ ಭಾಗವನ್ನು ತನ್ನದೆಂದು ತೋರಿಸುವುದು ಸಂಭಾವಿತಗಿರಿಯೆಂದು ಯಾರೂ ಹೇಳಲಾರರು ಪಾಕ್ ಅಂಚೆ ತಂತಿ ಕಚೇರಿಯು ಇಂತಹ ಚೀಟಿಗಳನ್ನು ಪ್ರಸಿದ್ಧಿಸುವಾಗ, "ಜಮ್ಮು ಕಾಶ್ಮೀರದ ಸ್ವತಂತ್ರ ಸಾರ್ವತ್ರಿಕ ಮತಗಣನೆಯ ವಿಷಯವು ಕಳೆದ ಹನ್ನೆರಡು ವರ್ಷಗಳಿಂದ ಜಗತ್ತಿನೆದುರು ಇದೆ ಭಾರತ-ಪಾಕಿಸ್ತಾನಗಳ ಸಂಬಂಧದಲ್ಲಿ ಜಮ್ಮೂ-ಕಾಶ್ಮೀರದ ಸ್ಥಾನವೇನೆಂಬುದನ್ನು ಪಾಕಿಸ್ತಾನದ ಅಂಚೆ ತಂತಿ ಶಾಖೆಯು ಈ ಅಂಚೆ ಚೀಟಿಗಳಲ್ಲಿ ತೋರಿಸಿದೆ ಜುನಾಗಢ ಮತ್ತು ಮಾನವದಾರಗಳ ನಿಜವಾದ ಸ್ಥಾನವಾವುದೆಂಬುವನ್ನೂ ಈ ತಿಕೇಟುಗಳಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ" ಎಂದು ಹೇಳಿದೆ.

ಪಾಕಿಸ್ತಾನವು ಕಾಶ್ಮೀರ ಸಂಬಂಧದಲ್ಲಿ ತನ್ನ ನಿಲುವೆಯೇನೆಂಬುದನ್ನು ಇದೀಗ ಮೊತ್ತಮೊದಲ ಬಾರಿಗೆ ಹೇಳುವುದಲ್ಲ. 'ಕಾಶ್ಮೀರ'ವೆಂಬುದು ಸಮಸ್ಯೆಯೇ ಅಲ್ಲದಾಗಿರುವಾಗ ಪಾಕಿಸ್ತಾನವು ಮತ್ತೂ ಮತ್ತೂ ತನ್ನ ನಿಲುವೆಯನ್ನು ಹೊರಗೆಡಹುವುದು ವ್ಯರ್ಥ ಕಂಠಶೋಷಣೆಯಾಗಿದೆ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷರಾದ ನೇ| ಜ| ನಸ್ಸೇರರೊಡನೆ ಪತ್ರಿಕಾ ಪ್ರತಿನಿಧಿಗಳ ಕಾಶ್ಮೀರ ಸಮಸ್ಯೆಯ ಬಗ್ಗೆ ಅವರ ಭಾವನೆ ತಿಳಿಯ ಬಯಸಿದಾಗ, ಅವರು "ಅದಿನ್ನೂ ಸಮಸ್ಯೆಯಾಗಿ ಉಳಿದಿದೆಯೆ? ಎಂದ ಮರು ಸವಾಲು ಹಾಕಿ ತಮ್ಮ ಐಕ್ಯವನ್ನು ಪ್ರಕಟಿಸಿದ ಒಂದು ಘಟನೆಯೇ ಕಾಶ್ಮೀರದಲ್ಲಿ ಪಾಕಿಸ್ಥಾನವು ತಲೆಹಾಕಬೇಕಾದ ಅಗತ್ಯತೆಯಿಲ್ಲ, ಅದು ಭಾರತದ ಅಂಗವೇ ಆಗಿದೆ ಎಂಬುದನ್ನು ಜಗತ್ತಿಗೇನೇ ಸಾರಿಹೇಳುತ್ತದೆ. ಆದರು ಪಾಕಿಸ್ತಾನವು ಮತ್ತೂ ಮತ್ತೂ ನಡುವೆ ಮೂಗು ಹಾಕುತ್ತಾ ಅದರಬಗ್ಗೆ ತನ್ನ ಅಧಿಕಾರವಿದೆಯೆಂದು ಗೋಳಿಡುತ್ತಿರುವುದರಿಂದ ಎರಡೂ ರಾಷ್ಟ್ರಗಳ ಸ್ನೇಹಮಯ ವಾತಾವರಣವನ್ನು ಕಲುಷಿತ ಗೊಳಿಸುವ ಪ್ರಯತ್ನವೆಂದೇ ಹೇಳಬೇಕಾಗುತ್ತದೆ. ಪಾಕಿಸ್ಥಾನವು ತನ್ನ ಅಂಚೆ ಚೀಟಿಗಳಲ್ಲಿ ಅದನ್ನು ತನ್ನ ಭಾಗವೆಂದು ತೋರಿಸಿ, ಅದನ್ನೇ ದೊಡ್ಡ ಪ್ರಚಾರ ಸಾಧನವಾಗಿ ಇಟ್ಟುಕೊಂಡಂತೆ ತೋರುವುದಾದರ ಈ ಸಾಹಸವು ನಿಷ್ಪ್ರಯೋಜಕವಾಗುತ್ತದೆ ಎಂದು ಹೇಳಲು ಸುಖವಾಗುತ್ತದೆ. ಪುನಃ ಪಾಕಿಸ್ತಾನವು ಕುಪಥಗಮನಕ್ಕೆ ಮನವೊಲಿದುದ

(೩ನೇ ಪುಟ ನೋಡಿರಿ)

ಕಥಾವಿಹಾರ

ದಿವ್ಯಜ್ಯೋತಿಯ ಬೆನ್ನಹಿಡಿದು...

ಜ್ಞಾನಜ್ಯೋತಿ ಬೆಳಗುವುದಕ್ಕೆ ಪರಿಶ್ರಮವೇ ತೈಲವಾಗಿದೆ. ಪರಿಶ್ರಮದ ಸಾರ್ಥಕರೂಪವೇ ಜ್ಞಾನ.

ಗಾಢಾಂಧಕಾರ. ಎಲ್ಲೆಲ್ಲಿಯೂ ಕತ್ತಲೆಯ ರಕ್ಕಸನ ತಾಂಡವನೃತ್ಯ. ಅತಿನಿಕಟವಿರುವ ವಸ್ತುವಾದರೂ ಏನೆಂದು ಕಾಣುವ ಶಕ್ತಿ ಕಣ್ಣುಗಳಿಗಿಲ್ಲ. ಅದು ನೋಡುವುದಾದರೂ ಕತ್ತಲೆಯ ಸೆರಗನ್ನು ಮಾತ್ರ. ಕೃಷ್ಣಪಕ್ಷದ ಚತುರ್ದಶಿಯ ರಾತ್ರಿಯಂತೆ ನಿಶಾಸುರನ ಸಾಮ್ರಾಜ್ಯವೆಲ್ಲೆಲ್ಲಿಯೂ ಸ್ಥಾಪಿತವಾಗಿತ್ತು.

ದೂರದಲ್ಲಿ, ಬಹುದೂರದಲ್ಲಿ, ಒಂದೇ ಒಂದು ನಕ್ಷತ್ರ ದೃಗ್ಗೋಚರವಾಗುತಿತ್ತು. ತನ್ನ ಕಿರಿಯ ಶಿಖೆಯಿಂದ ಪ್ರಜ್ವಲಿಸಿ ತನ್ನ ಸುತ್ತ ಪ್ರಕಾಶ ಬೀರುತಿತ್ತು. ಕತ್ತಲೆಯ ಪ್ರಪಂಚದಲ್ಲಿದ್ದ ಆ ದಿವ್ಯಜ್ಯೋತಿಯ ಅಸ್ತಿತ್ವವು ಕಣ್ಣಪಾಪೆಗಳಲ್ಲಿ ಪ್ರತಿಫಲಿತವಾಗುತಿತ್ತು. ಅದೇ ನಕ್ಷತ್ರ ಧ್ರುವ, ಅಚಂಚಲ, ಸ್ಥಿರ. ಆ ಧ್ರುವ ನಕ್ಷತ್ರದ ದಿವ್ಯ ಪ್ರಕಾಶದ ಆಸರೆಯನ್ನೆ ಪಡೆಯಬೇಕೆಂಬ ಅಭಿಲಾಷೆ ನನ್ನಲ್ಲಿ ಮೂಡಿತ್ತು. ಆದರೆ, ಅದಕ್ಕೂ ನನಗೂ ನಡುವಿನ ಅಂತರವೆಷ್ಟು? ಯಾರು ಬಲ್ಲರು? ಆ ಅಂತರವನ್ನು ದಾಟುವ ಮಾರ್ಗವಾದರೂ ಯಾವುದು? ಆ ಲೋಕದ ದಾರಿಯಲ್ಲಿ ಅದೆಷ್ಟು ಗುಡ್ಡಗಳಿವೆ, ಅದೆಷ್ಟು ನದಿಗಳಿವೆ, ಅದೆಷ್ಟು ಜರಿಗಳಿವೆ ಯಾರು ತಿಳಿದಿರುವರು? ಆದರೂ ಆ ದೂರದ ನಕ್ಷತ್ರದ ಆಕರ್ಷಣೆ ಕಡಿಮೆಯಾಗಲಿಲ್ಲ. ಆ ಕಾಂಕ್ಷೆಯನ್ನು ಬಹುದಿನ ತಡೆಹಿಡಿದರೂ ಅದನ್ನು ಅಳಿಸಿಬಿಡುವುದು ಅಸಾಧ್ಯವೇ ಆಯಿತು. ಕೊನೆಗೊಮ್ಮೆ ಆ ಗುರಿಯತ್ತ ಹೊರಡುವ ದೃಢನಿಶ್ಚಯಗೆಯ್ದು, ಹೊರಡಲಣಿಯಾದೆ.

ಅದಾವ ದಾರಿಯಲ್ಲಿ ನಡೆದೆನೊ, ಅದಾವ ನದಿಯನ್ನು ತೇಲಿದೆನೋ, ಅದಾವ ಜರಿಯನ್ನು ನೆಗೆದೆನೋ ಮತ್ತದಾವ ಗುಡ್ಡವನ್ನೇರಿದೆನೋ ಎಲ್ಲವೂ ಅವ್ಯಕ್ತ. ನೋಟಗಳಿಂದ ಕವಿದಿದ್ದ ಕಾಳಿಲ ಅಂಧಕಾರಮಯವೆನಿಪ ದಾರಿಯಲ್ಲಿ ಘನ ಘೋರಾರಣ್ಯಗಳ ನಟ್ಟನಡುವೆ, ಸುವಿಶಾಲ ನೀಲ ಕಡಲುಗಳ ನಡುವೆ ವಿಸ್ತಾರ ಹಸುರು ಬಯಲುಗಳ ನಡುವೆ ಹಾದು ಅನಿಶ್ಚಿತ ಗುರಿಯ ಲಕ್ಷ್ಯವನ್ನಿಟ್ಟು ಮುನ್ನಡೆಯತೊಡಗಿದೆ. ಅಜ್ಞಾನ, ಅನಾದಿ, ಅನಂತ, ಅನಾಮಧೇಯ ಅಂಧಕಾರಮಯ ಪಥದಲ್ಲಿ ಧಾವಿಸುತಿದ್ದಂತೆ ನನ್ನ ಮುಂದುಗಡೆ ಒಂದು ಛಾಯಾರೂಪವೂ ನಡೆಯುತ್ತಿರುವುದು ತೋರಿಬಂತು. ಕತ್ತಲೆಯೊಳಗಲ್ಲೂ ಈ ಛಾಯೆಯು ತೋರಿಬರಬೇಕಾಗಿದ್ದರೆ, ಅದಕ್ಕೆ ಆ ದಿವ್ಯಜ್ಯೋತಿಯ ಮಂದ ಪ್ರಕಾಶವೇ ಕಾರಣವಾಗಿರಬಹುದೆಂದು ಊಹಿಸಿದೆ. ಅದು ನನ್ನದೇ ನೆರಳಿದ್ದರೂ ಇರಬಹುದು; ಹೌದು, ಅದು ನನ್ನನ್ನೇ ಹೋಲುತಿದ್ದಂತೆ ಭಾಸವಾಯಿತು. ಆದರೆ, ನನ್ನ ಮುಖದ ವಿಕರಾಳತೆಯಿರಲಿಲ್ಲ, ಪ್ರಕ್ಷುಬ್ಧತೆಯಿರಲಿಲ್ಲ ಅಶಾಂತತೆಯಿರಲಿಲ್ಲ. ಅತೃಪ್ತಿಯಿರಲಿಲ್ಲ, ಮನೋವಿಕಾರದ ಸುಳಿವೂ ಇರಲಿಲ್ಲ. ನಿತ್ಯ ತೃಪ್ತ, ನಿತ್ಯ ಪ್ರಶಾಂತ, ನಿತ್ಯ ಸ್ಥಿರವಾದ ಭಾವಗಳೇ ಅದರಲ್ಲಿ ತುಂಬಿ ಹೋಗಿದ್ದುವು. ಎಂತಲೇ ಅದು ನನ್ನ ಛಾಯೆಯಾಗುವುದು ಸರ್ವಥಾ ಸಾಧ್ಯವಿರಲಿಲ್ಲ. ಹಾಗಾದರೆ, ಅದೇನು?

ಕತ್ತಲೆಯಲ್ಲಿ ಹುದುಗಿದ್ದ ನನ್ನ ಮನಸ್ಸಿಗೆ ಇದಕ್ಕೆ ಉತ್ತರ ಹೊಳೆಯಲಿಲ್ಲ. ಯಾರಾದರೇನು, ಅದರ ಚಿಂತೆಯಾದರೂ ನಮಗೇಕೆ ಬೇಕು ಎಂದು ಅನ್ಯ ಮನಸ್ಕನಾಗಿ, ಪರಿವರ್ತಿತಗೊಂಡರೂ ಅದು ಮುಂದರಿದ ದಾರಿಯನ್ನೇ ನಾನೂ ಮೆಚ್ಚಿದೆ; ಅದೇಕೆ ಹಾಗೆ ಗೆಯ್ದೆ ಎಂಬುದರ ಅರಿವು ನನಗಿರಲಿಲ್ಲ. ಜತೆಯಿದ್ದ ಸಂಗಾತಿಯೆಂತು, ಅಂತು, ನಾನೂ ಆ ಛಾಯೆಯನ್ನು ಹಿಂಬಾಲಿಸಿದೆ.

ಕೆಲಸಮಯದ ದಾರಿಯನ್ನು ನಡೆದಾಗ, ಒಂದು ವಿಶಾಲ ಬಯಲು ಗೋಚರಕ್ಕೆ ಬಂದಿತು. ಅಲ್ಲಿ ಮಂದ ಪ್ರಕಾಶ ಬೀರುತಿತ್ತು. ಒಬ್ಬ ರೈತನು ಬಯಲ ಮಧ್ಯವಿದ್ದ ಆಳವಾದ ಬಾವಿಯೊಂದರಿಂದ ನೀರನ್ನು ಮೊಗೆಮೊಗೆದು ತನ್ನ ಗದ್ದೆಗೆರೆಯುತಿದ್ದನು. ನೀರು ಕಾಣದ ಆ ಬೆಂಗಾಡು ಹೊಯ್ದುದೆಲ್ಲವನ್ನೂ ಕುಡಿದು ಬಿಟ್ಟು ಮತ್ತೂ ಬೇಕೆಂಬಂತೆ ಬಾಯಿ ತೆರೆದು ಕಾತಿತ್ತು. ರೈತನಾದರೋ ಎಡೆಬಿಡದೆ ನೀರು ಎರೆಯುತ್ತಲೇ ಇದ್ದ. ಎರೆದ ನೀರು ಆರುತ್ತಲೇ ಇತ್ತು.

ನನಗೆ ಮಾರ್ಗದರ್ಶಕವಾಗಿ ಮುಂದಿದ್ದ ಛಾಯೆ ನಾಲ್ಕು ಕ್ಷಣ ಅಲ್ಲೇ ನಿಂತಂತಾಯಿತು. ನಾನೂ ನಿಂತುಕೊಂಡೆ. ನೀರೆರೆಯುವುದರಲ್ಲಿ ತನ್ಮಯನಾದ ರೈತ ತನ್ನತ್ತ ದೃಷ್ಟಿಯನ್ನೂ ಹರಿಸಿರಲಿಲ್ಲ; ಇನ್ನು ಮಾತಾಡಿಸುವ ವಿಚಾರವೆಲ್ಲಿ! ಆ ದೃಶ್ಯವನ್ನೇ ನೋಡುತ್ತ ನಾನು ಸ್ತಬ್ಧನಾದೆ. ಅದಾವ ಆಸಕ್ತಿಯಿಂದ ಆ ರೈತ ನೀರೆರೆಯುತ್ತಾನೆ! ಅವನ ಮೈ ಕೈಗಳಿಂದ ಬೆವರು ನದಿಯಾಗಿ ಹರಿಯುತಿತ್ತು. ಮುಖವನ್ನು ಗಳಿಗೆಗೆ ನಾಲ್ಕು ಬಾರಿ ಒರಸಿಕೊಳ್ಳುತಿದ್ದನವನು. ರಟ್ಟೆಯಲ್ಲಿ ಎದ್ದುತೋರುವ ನಾಡಿ ಆ ಶರೀರದ ದಣಿವನ್ನು ಸೂಚಿಸುತಿತ್ತು. ಆದರೂ ರೈತ ತನ್ನ ಕೆಲಸವನ್ನು ಬಿಡಲಿಲ್ಲ; ನನ್ನನ್ನೂ ಕಾಣಲಿಲ್ಲ.

ಛಾಯೆ ಮುಂದುರಿಯಿತು; ನಾನೂ ಅದನ್ನು ಹಿಂಬಾಲಿಸಿದೆ. ಮತ್ತೂ ಬಹಳಷ್ಟು ದೂರ ಹೋದಾಗ ಒಂದು ಕಮ್ಮಾರಸಾಲೆ ಎದುರಾಯಿತು. ಅಲ್ಲಿ ಒಬ್ಬ ಕಮ್ಮಾರ ಕಾದ ಕಬ್ಬಿಣವನ್ನು ತನ್ನ ತಲೆಬುರುಡೆಗಿಂತಲೂ ದೊಡ್ಡದಾದ ಸುತ್ತಿಯೊಂದರಿಂದ ಬಡಿಯುತಿದ್ದ. ಅವನ ಹಣೆ ಬೆವತಿತ್ತು; ತೋಳುಗಳು ಗಟ್ಟಿಮುಟ್ಟಾಗಿದ್ದರೂ ಈಗ ತಮ್ಮ ಶಕ್ತಿಯನ್ನು ಕಳೆದುಕೊಂಡಂತೆ ಭಾಸವಾದುವು. ಆದರೂ ಕಮ್ಮಾರ ಎರಡೂ ಕೈಗಳಿಂದ ಸುತ್ತಿಗೆಯನ್ನು ಧರಿಸಿ, ಕಬ್ಬಿಣ ಬಡೆಯುವುದರಲ್ಲಿಯೇ ನಿರತನಾಗಿದ್ದ. ಕಬ್ಬಿಣವಾದರೂ ಆ ಪೆಟ್ಟನ್ನು ಸಹಿಸಿಕೊಳ್ಳಲಾರದೆ, ತನ್ನ ಘನರೂಪವನ್ನು ತ್ಯಜಿಸುತಿತ್ತು; ಆಗಾಗ ಕೆಂಗಿಡಿಗಳನ್ನೂ ಕಾರುತಿತ್ತು. ನಾನು ನೋಡುತ್ತ ನಿಂತೆ. ಛಾಯೆಯೂ ನಿಂತಿತ್ತೆಂದು ಬೇರೆ ಹೇಳಬೇಕಾಗಿಲ್ಲ ತಾನೆ? ಆ ಕಮ್ಮಾರ ನಮ್ಮನ್ನು ತಲೆಯೆತ್ತಿ ಕಂಡ; ಆದರೆ ನಮ್ಮೊಡನೆ ನಾಲಿಗೆ ಬಿಚ್ಚಲೇ ಇಲ್ಲ. ನಾನಾಗಿಯೇ ಮಾತಾಡಿಸೋಣವೆಂದೆನಿಸಿದರೂ ನನ್ನ ದು ಕೊರಡಿನಂತೆ ಭಾಸವಾಗತೊಡಗಿತು; ಅದು ಅಚಲವೆಂಬಂತಿತ್ತು. ಆದುದರಿಂದ ತುಟಿ ಪಿಟಕ್ಕೆನ್ನದೆ ಕಾಲು ತಾಸು ಆ ಕಮ್ಮಾರನನ್ನೇ ಮಿಕಿಮಿಕಿ ನೋಡುತ್ತ ಮುಂದುವರಿದೆವು

(೭ನೇ ಪುಟ ನೋಡಿರಿ)



ಭೂಲೋಕದಲ್ಲೇ ಅತಿದೊಡ್ಡದಾದ ಅಮೆರಿಕದ ರೇಡಿಯೋ ದೂರದರ್ಶಕ ಯಂತ್ರ

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ
ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧) (ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಕುಂದಾಪುರ ಅಸಿಸ್ಟೆಂಟ್ ಕಮಿಸನರ
ಕೋರ್ಟಿನಲ್ಲಿ

O. P. No 13/1960

ಪದ್ಮನಾಭ ಭಟ್ಟ, —ಅರ್ಜಿದಾರ
1. ಮಹಾಲಿಂಗ ಹಾಂಡ. 2. ಮೆಣ್ಕು ಹೆಂಗ್ಸು, ಉಡುಪಿ ತಾಲ್ಕು ಪೆರ್ಣೂರು ಗ್ರಾಮದಲ್ಲಿರುವವರು ಎದ್ರಿರು.

ಅರ್ಜಿದಾರನು ಮತ್ತು ಎದ್ರಿರು ತಾರೀಕು 15—9—56ರಲ್ಲು ಮಾಡಿಕೊಂಡ ಚಾಲಗೇಣಿ ಚೀಟಿನಲ್ಲಿ ವಿವರಿಸಿದ ಆಸ್ತಿ ಸ್ವಾಧೀನತೆ ಬಗ್ಗೆ ಅರ್ಜಿದಾರನು ಸದ್ರಿ ಕೋರ್ಟಿನಲ್ಲಿ ಮಾಡಿರುವ ಅರ್ಜಿಯು 1ನೇ ಎದ್ರಿಯು ಹಾಜರಾಗುವ ಬಗ್ಗೆ ತಾ. 12—4—60ಕ್ಕೆ ಇಟ್ಟಿರುತ್ತದೆ. ಆ ದಿವಸ 1ನೇ ಎದ್ರಿಯನ್ನು ಕೋರ್ಟು ಮುಂದೆ ಉಡುಪಿ ಮೊಕ್ಕಾಮಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗ ತಕ್ಕದ್ದು. ಇದಕ್ಕೆ ತಪ್ಪಿದ್ರೆ ಅವರ ಗೈರ್ ಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾದೀತು.

K. L. Aithal.
Vakil for Petitioner'
26—3—60.

ಸಫಲ ಜೀವನ

ಫಾದರ್ ಡೇಮಿಯನ್

ಮಲಕ್ಕಾ ದ್ವೀಪಗಳಲ್ಲಿನ ಕುಷ್ಟರೋಗಿಗಳಿಗಾಗಿ ತಾನೂ ಒಬ್ಬ ಕುಷ್ಟರೋಗಿಯಾಗಿ ದುಡಿದ ಮಹಾನುಭಾವ.

ಎಂಭತ್ತು ವರ್ಷಗಳ ಹಿಂದಿನ ಕತೆಯಿದು. ಚಿಕಿತ್ಸಾಶಾಸ್ತ್ರಗಳಲ್ಲಿ ಪ್ರಗತಿ, ಸಂಶೋಧನೆಗಳು ಆಗಾಗಲೇ ಆರಂಭವಾಗಿದ್ದ ಕಾಲವದು. ಆ ಕಾಲ ರೋಗನಿವಾರಣೆಯೆಂಬುದು ದೀರ್ಘಕಾಲದ ಪರಿಶ್ರಮದ ಪ್ರತಿಫಲವಾಗಿತ್ತು. ಈಗಿನಂತೆ ಚುಚ್ಚುಮದ್ದುಗಳಾಗಲೀ, ಶಸ್ತ್ರಚಿಕಿತ್ಸೆಗಳಾಗಲೀ ಆಗ ಬಳಕೆಗೆ ಬಂದಿರಲಿಲ್ಲ. ಇಂತಹ ಕಾಲ ನೂರಾರು ಕುಷ್ಟರೋಗಿಗಳ ಸೇವೆ ಮಾಡಿ, ಅವರಲ್ಲಿ ಒಬ್ಬನಾಗಿ ದುಡಿದ ಮಹಾ ಸಾಹಸಿ ಫಾದರ್ ಡೇಮಿಯನ್.

ಫಾದರ್ ಡೇಮಿಯನ್ ದಕ್ಷಿಣ ಸಮುದ್ರ ದ್ವೀಪದಲ್ಲಿ ಒಬ್ಬ ಕ್ರೈಸ್ತ ಪಾದ್ರಿಯಾಗಿದ್ದನು: ಒಬ್ಬ ಬಿಶಪನ ಮೇಲ್ವಿಚಾರಣೆಯಲ್ಲಿ ಹಲವಾರು ಜನ ಪಾದ್ರಿಗಳು ದಕ್ಷಿಣ ಸಮುದ್ರ ದ್ವೀಪಗಳಲ್ಲಿ ವಾಸಿಸುತ್ತಿದ್ದರು. ಬಿಶಪರು ಒಂದು ದಿನ ಮಾತನಾಡುವಾಗ ಮಲಕ್ಕಾ ದ್ವೀಪಗಳಲ್ಲಿನ ನೂರಾರು ಕುಷ್ಟರೋಗಿಗಳ ಕರುಣಾರ್ದ್ರ ಕಥೆಯನ್ನು ಹೇಳಿದರು ಮಲಕ್ಕಾ ದ್ವೀಪಗಳಲ್ಲಿ ವಾಸಿಸುತಿದ್ದ ಕುಷ್ಟರೋಗಿಗಳ ಸ್ಥಿತಿ ಅತಿ ದಾರುಣವಾಗಿತ್ತು. ಅವರು ಕುಷ್ಟರೋಗದಿಂದ ಅತಿಯಾಗಿ ನರಳುತಿದ್ದರು. ನಾಲ್ಕು ಸುತ್ತಿನಲ್ಲೂ ಸಮುದ್ರದಿಂದ ಆವರಿಸಲ್ಪಟ್ಟ ಆ ದ್ವೀಪದಲ್ಲಿದ್ದ ರೋಗಿಗಳ ಸಹಾಯಕ್ಕೆ ಹೋಗುವವರೂ ಒಬ್ಬರೂ ಇದ್ದಿರಲಿಲ್ಲ. ಕುಷ್ಟರೋಗಿಗಳಿಗಾಗಿಯೇ ಮೀಸಲಾಗಿರಿಸಿಟ್ಟ ದ್ವೀಪ ಅದಾಗಿತ್ತು. ಅವರು ನಿರ್ಗತಿಕರಾಗಿದ್ದರು; ಬಡವರಾಗಿದ್ದರು; ಏಕಾಂತವಾಸಿಗಳಾಗಿದ್ದರು.

ಅವರ ಜೀವನವು ತೀರಾ ನಿಕೃಷ್ಟವಾಗಿತ್ತು. ಅವರ ಸಹವಾಸ ಕುಷ್ಟರೋಗಿಗಳ ಜೊತೆಗೆ. ಬೆಳೆಯುವವರೂ ರೋಗಿಗಳು; ಅಡುಗೆ ಮಾಡುವವರೂ ರೋಗಿಗಳು. ದಿನನಿತ್ಯದ ಎಲ್ಲಾ ಕಾರ್ಯಗಳನ್ನೂ ಅವರೇ ಪೂರೈಸಬೇಕಾಗಿತ್ತು. ಹೀಗಾಗಿ ರೋಗಿಗಳ ಸಾಮ್ರಾಜ್ಯವೇ ಅದಾಗಿತ್ತು. ಹಾಗಿರುವಾಗ ಚಿಕಿತ್ಸೆ, ಶುಶ್ರೂಷೆಗೆ ಅವಕಾಶವೆಲ್ಲಿಂದ ಬಂತು? ರೋಗಿ ಮಾ ರೋಗಿಯ ಶುಶ್ರೂಷೆ ಮಾಡಲು ಸಾಧ್ಯವೆ? ಮಾಡಿದರೂ ಅದರಿಂದ ನಿರೀಕ್ಷಿಸಿದ ಫಲ ಲಭಿಸೀತೆ?

ರೋಗಪೀಡಿತರಾದ ಆ ಮಾನವ ಹೃದಯಗಳು ಶೂನ್ಯವಾಗಿದ್ದುವು. ಪ್ರಪಂಚದ ಮಿಲಿಯಗಟ್ಟಲೆ ಜನರಲ್ಲಿ ತಮಗಾಗಿ ಅನುತಾಪಪಡುವ ದಯಾಳುಗಳು ಯಾರೂ ಇಲ್ಲವಲ್ಲಾ ಎಂದು ಅವರು ಪರಿತಪಿಸುತಿದ್ದರು. ಬೀದಿಯ ನಾಯಿಗಳಿಗಿಂತಲೂ ಕಳಪೆಯಾದ ತಮ್ಮ ಬಾಳಿನಲ್ಲಿ ಅವರಿಗೆ ಜಿಗುಪ್ಸೆ ಹುಟ್ಟಿತ್ತು. ಆ ಮಾನವ ಹೃದಯಗಳ ಕೂಗು ಸಮುದ್ರದ ತರಂಗಗಳ ಹೊಡೆತವನ್ನು ದಾಟಿ ಕೇಳಿಸದಂತಾಗಿತ್ತು. ಆದರೂ ಸಾಯುವವರೆಗೆ ಬದುಕಬೇಕು: ರೋಗಿಗಳಾಗಿಯೇ ಬದುಕಬೇಕು. ಇಂತಹ ಬದುಕೊಂದು ಬದುಕೆ? ಎಂದು ಅವರು ಭಾವಿಸಿದರು.

ಒಂದು ದಿನ ಬಿಶಪರು ಎಲ್ಲಾ ಪಾದ್ರಿಗಳನ್ನೂ ಕೂಡಿಸಿ ಮಲಕ್ಕಾ ದ್ವೀಪದ ರೋಗಿಗಳ ಕರುಣಾಜನಕ ಕತೆಯನ್ನು ಹೇಳಿದರು. "ನೀವು ಮಾನವರು. ನಿಮ್ಮಂತೆ ಮಾನವರಾಗಿರುವ, ಆದರೆ ರೋಗಿಗಳಾಗಿರುವ ಆ ಕುಷ್ಟರೋಗಿಗಳ ಸೇವೆ ಮಾಡಿ, ಅವರ ಸ್ಥಿತಿ ಸುಧಾರಿಸುವುದು ಮಾನವತೆ. ಮನುಷ್ಯನು ಮನುಷ್ಯನಿಗೆ ನೆರವಾಗಬೇಕಲ್ಲದೆ ಮರವಲ್ಲ. ನಿಮ್ಮಲ್ಲಿ ಮಾನವತೆ ಇದೆ ಆ ರೋಗಿಗಳ ಸ್ಥಿತಿಯನ್ನು ಊಹಿಸಿಕೊಳ್ಳಿ. ಅವರು ನರಿನಾಯಿಗಳ ಬಾಳ್ವೆಯನ್ನು ಬಾಳುವುದು ಯೋಗ್ಯವೆ? ಅವರು ಆ ಜೀವಮಾನ ರೋಗಿಗಳಾಗಿಯೇ ಬಾಳಬೇಕೆ? ಕೂಡದು. ಆದುದರಿಂದ, ನಾನು ನಿಮ್ಮಲ್ಲಿ ಕೆಲವರನ್ನು ಆ ರೋಗಿಗಳ ಸೇವೆಗಾಗಿ ಕಳುಹಿಸಲಿಚ್ಛಿಸುತ್ತೇನೆ. ಆದರೆ, ಯಾರನ್ನು ಕಳುಹಿಸಲಿ?" ಬಿಶಪರು ಮಾತು ನಿಲ್ಲಿಸಿ ಸ್ತಬ್ಧರಾದರು.

ಪಾದ್ರಿಗಳು ಒಬ್ಬರ ಮುಖವನ್ನೊಬ್ಬರು ನೋಡಿದರು. ಯಾರೊಬ್ಬನೂ ಮಲಕ್ಕಾ ದ್ವೀಪಕ್ಕೆ ಹೋಗಲು ಇಚ್ಛಿಸಲಿಲ್ಲ. ಆ ನರಕವನ್ನು ಜೀವಂತವಿರುವಾಗಲೇ ಅನುಭವಿಸಬೇಕೇ ಎಂದು ಅವರು ಭಾವಿಸಿದರು. ಬಿಶಪರು ಚಿಂತೆಗೀಡಾದರು. ಬಿಶಪರ ಮಾತು ಕೇಳಿದ ಡೇಮಿಯನನ ಹೃದಯ ಕರಗಿತು. ನೂರಾರು ಘಾಸಿ ಹೊಂದಿದ ಮಾನವ ಹೃದಯ ಕೂಗಿದೆ ಈತನ ಮಾನವ ಹೃದಯ ಓಗೊಟ್ಟಿತು! "ದಯಮಾಡಿ ನನ್ನನ್ನು ಕಳುಹಿಸಿರಿ" ಡೇಮಿಯನ್ ಎದ್ದು ನಿಂತು ಬಿಶಪರಲ್ಲಿ ಕೇಳಿಕೊಂಡ. ಪಾದ್ರಿಗಳು ಬೆಕ್ಕಸಬೆರಗಾದರು! ಡೇಮಿಯನನ ಈ ದಿಟ್ಟತನವನ್ನು ಕಂಡವರು ಸ್ತಂಭೀಭೂತರಾದರು. ಬಿಶಪರ ಕಣ್ಣುಗಳಿಂದ ಆನಂದ ಬಾಷ್ಪ ಹರಿಯಿತು.

ಮರುದಿನವೇ ಡೇಮಿಯನ್ ಮಲಕ್ಕಾ ದ್ವೀಪಗಳ ಪ್ರಯಾಣಕ್ಕೆ ಸಿದ್ಧನಾದನು. ಬಿಶಪರು ಆನಂದದಿಂದ ಅವನನ್ನು ಅಪ್ಪಿ ಬೀಳ್ಕೊಟ್ಟರು. "ನಿನ್ನ ಕಾರ್ಯದಲ್ಲಿ ದೇವರು ನಿನಗೆ ಜಯವನ್ನು ಕರುಣಿಸಲಿ" ಎಂದವರು ಹರಸಿದರು. ಅವರ ಶುಭಸಂದೇಶವನ್ನು ಹೊತ್ತು ಡೇಮಿಯನ್ ಮಲಕ್ಕಾ ದ್ವೀಪದತ್ತ ಸಾಗಿದನು.

ಮಲಕ್ಕಾಯಲ್ಲಿ ಡೇಮಿಯನನ ಜೀವನವೇ ಬೇರಾಯಿತು! ಅವನು ಆ ರೋಗಿಗಳ ಜೊತೆಗೇ ವಾಸಿಸಲಾರಂಭಿಸಿದನು. ಅವರಿಗಾಗಿ ಹಲವಾರು ಉಪಯುಕ್ತ ಕಾರ್ಯಗಳನ್ನು ಮಾಡಿದನು. ಅನಾರೋಗ್ಯದ ತವರುಮನೆಯಾಗಿದ್ದ ಅವರು ಕೊಳಕು ಗುಡಿಸಲುಗಳನ್ನು ನಿರ್ಮೂಲ ಮಾಡಿ ಅವರಿಗಾಗಿ ಹೊಸ ಮನೆಗಳನ್ನು ಡೇಮಿಯನನು ಕಟ್ಟಿಸಿದನು. ಒಂಟಿ ಬಾಳಿನಿಂದ ಬೇಸತ್ತ ಅವರ ಮನಸ್ಸಿನಲ್ಲಿ ಉಲ್ಲಾಸದ ಕಳೆ ಮೂಡುವುದಕ್ಕಾಗಿ, ಡೇಮಿಯನ್ ಶತಪ್ರಯತ್ನ ಮಾಡಿದ. ಅವರು ಹಸನ್ಮುಖಿಗಳಾಗಿ ಕಾಣುವಂತೆ ಆತ ಪ್ರಯತ್ನಿಸಿದ. ಜೀವನದಲ್ಲಿ ಜಿಗುಪ್ಸೆಗೊಂಡ ಅವರ ಮನಸ್ಸಿನಲ್ಲಿ ದೇವರ ಭಕ್ತಿಯನ್ನು ಹುಟ್ಟಿಸಿದ. ಅದಕ್ಕಾಗಿ ಒಂದು ಇಗರ್ಜಿಯನ್ನು ಕಟ್ಟಿಸಿ ಅಲ್ಲಿ ಅವರು ಪ್ರಾರ್ಥನೆ ಸಲ್ಲಿಸುವಂತೆ ಮಾಡಿದ. "ದೇವರೇ, ನಮ್ಮ ಪಾಪಗಳನ್ನು ಕ್ಷಮಿಸಿ ಬೇಗನೇ ನಮ್ಮನ್ನು ಈ ನರಕದಿಂದ ಪಾರು ಮಾಡ." ಎಂದು ಅವರೆಲ್ಲರೂ ಪ್ರಾರ್ಥಿಸುತ್ತಿದ್ದರು. ಅವರು ಉಪಯೋಗಿಸುತ್ತಿದ್ದ ನೀರು ಕೊಳಚೆ ನೀರಾಗಿತ್ತು. ಅದಕ್ಕಾಗಿ ಉತ್ತಮ ಹಾಗೂ ಶುದ್ಧ ನೀರು ಪಡೆಯುವ ಏರ್ಪಾಡನ್ನು ಮಾಡಿದನು. ರೋಗದಿಂದ ಅತಿಪೀಡೆಗೊಳಗಾದವರ ಶುಶ್ರೂಷೆಯನ್ನು ತಾನೇ ಮಾಡಲಾರಂಭಿಸಿದನು. ಗಾಯಗೊಂಡ, ಕೀವು ತುಂಬಿದ ಅವರ ದೇಹವನ್ನು ತೊಳೆದು ಆತ ಅದಕ್ಕೆ ಪಟ್ಟಿಯನ್ನು ಹಾಕುತ್ತಿದ್ದನು. ದಿನಾ ರಾತ್ರಿ ಬಿಡದೆ ರೋಗಿಗಳ ಬಳಿಯಲ್ಲಿ ಕುಳಿತು ಅವರ ಸೇವೆಮಾಡಲಾರಂಭಿಸಿದನು. ಅವರಲ್ಲಿ ಬದುಕಿನ ಕುರಿತು ಆಸ್ಥೆ, ಆಸಕ್ತಿ, ಸದಾಶೆಯು ಮೊಳೆಯುವಂತೆ ಮಾಡಿದನು. ಬರಡಾಗಿದ್ದ ಅವರ ಬಾಳನ್ನು ಹಸನಾಗಿಸಲು ಶತಪ್ರಯತ್ನ ಮಾಡಿದನು. ಡೇಮಿಯನನಲ್ಲಿ ರೋಗಿಗಳು ತಾಯಿಯ ಮಮತೆಯನ್ನು ದೇವತೆಯ ವಾತ್ಸಲ್ಯವನ್ನು ತಂದೆಯ ಕೃಪಾದೃಷ್ಟಿಯನ್ನು ಕಂಡರು. ತಾಯಿ ತನ್ನ ಮಕ್ಕಳನ್ನು ಪ್ರೀತಿಸುವ ತರದಲ್ಲಿ ಆತ ರೋಗಿಗಳನ್ನು ಪ್ರೀತಿಸಲಾರಂಭಿಸಿದ.

ಇಂದು ಕುಷ್ಟರೋಗದ ಕುರಿತು ಜನರಿಗೆ ಹೆಚ್ಚಿನ ತಿಳುವಳಿಕೆ ಇದೆ. ಚಿಕಿತ್ಸಾಕ್ರಮದಲ್ಲಿ ಪ್ರಗತಿಯಾಗಿ, ಡಾಕ್ಟರರು ಈಗ ಈ ರೋಗವನ್ನು ವಾಸಿಮಾಡಬಲ್ಲರು. ಈ ರೋಗಿಗಳ ಶುಶ್ರೂಷೆ ಮಾಡುವ ರೀತಿಯೂ ಡಾಕ್ಟರರಿಗೆ ತಿಳಿದಿವೆ. ಮಾತ್ರವಲ್ಲ ಆ ರೋಗ ತಮಗೆ ತಗಲದ ರೀತಿ ಹೇಗೆ ಚಿಕಿತ್ಸೆ ಮಾಡಬಹುದೆಂದು ಅವರು ಈಗ ತಿಳಿದಿದ್ದಾರೆ. ಆದರೆ ಡೇಮಿಯನನು ಈ ಕಾರ್ಯ ಕೈಕೊಂಡುದು ಎಂಭತ್ತು ವರ್ಷಗಳ ಹಿಂದೆ!

ಒಂದು ದಿನ ಒಬ್ಬ ರೋಗಿಯ ಗಾಯ ತೊಳೆದ ಬಿಸೀ ನೀರನ್ನು ಆತ ಒಯ್ಯುತಿದ್ದ. ಅಕಸ್ಮಾತ್ ಆ ನೀರು ಆತನ ಪಾದದ ಮೇಲೆ ಬಿತ್ತು! ಅದು ಆತನಿಗೆ ಯಾವ ನೋವನ್ನೂ ಉಂಟುಮಾಡಲಿಲ್ಲ. ಆತನು ಅದನ್ನು ಲಕ್ಷ್ಯಕ್ಕೇ ತಂದುಕೊಳ್ಳಲಿಲ್ಲ. ಕೆಲವು ದಿನಗಳ ಬಳಿಕ ಆತ ಡಾಕ್ಟರರಲ್ಲಿಗೆ ಹೋಗಿ ವಿಚಾರಿಸಿದ "ನಾನು ಕುಷ್ಟ ರೋಗಕ್ಕೀಡಾಗಿರುವೆನೆ?" ಡಾಕ್ಟರರ ಬಾಯಿಯಿಂದ 'ಹೌದು' ಎಂಬ ಉತ್ತರ ಬಂತು!

ಈ ಉತ್ತರದಿಂದ ಡೇಮಿಯನನು ದುಃಖಿಯಾಗಲಿಲ್ಲ ಅಥವಾ ಹೆದರಲಿಲ್ಲ. ಆತ ಇನ್ನಷ್ಟು ಆನಂದಭರಿತನಾದ. ಕಾರಣ ತಾನು ಇನ್ನು ಒಬ್ಬ ಕುಷ್ಟರೋಗಿಯಾಗಿಯೇ ಈ ರೋಗಿಗಳ ಸೇವೆಯನ್ನು ಹೆಚ್ಚು ಹೆಚ್ಚಾಗಿ ಮಾಡಬಹುದಲ್ಲಾ ಎಂದು. ಈಗ ಆತ ಆ ರೋಗಿಗಳಲ್ಲೊಬ್ಬನಾದ! ಈಗ ಆ ರೋಗಿಗಳು ಆತನ ಬಳಿ ಬರಲು ನಾಚುತ್ತಿರಲಿಲ್ಲ. ಕಾರಣ ಆತನೂ ಅವರಂತೆ ಒಬ್ಬ ಕುಷ್ಟರೋಗಿ. ಆತನು ಈಗ ಈಗ ಕುಷ್ಟರೋಗಿಗಳ ಕುರಿತು ಮಾತಾಡಲು ಅಧಿಕಾರಹೊಂದಿದವನಾದ. ಕಾರಣ ಅವನೂ ಒಬ್ಬ ಕುಷ್ಟರೋಗಿ.

ಜನರು ಫಾದರ್ ಡೇಮಿಯನನ ಜೀವನವನ್ನು ಒಂದು ಸಾರ್ಥಕ ಜೀವನವೆಂದು ಭಾವಿಸಿದರು. ಆತನು ಮಾಡಿದ ಕಾರ್ಯವು ಒಂದು ಅಪೋಘ ಕಾರ್ಯವಾಗಿತ್ತು. ಅವನ ಜೀವನವು ಜನಸೇವೆಯಿಂದಾಗಿ ಜನಾರ್ಧನನ ಮೆಚ್ಚುಗೆ ಪಡೆಯಿತು. ಸಫಲ ಜೀವನವನ್ನು ಬಾಳಿದ ಡೇಮಿಯನ್ ಒಬ್ಬ ಮಹಾಸಾಹಸಿಯೆನಿಸಿದ.

ಕೆಲವು ಬಾರಿ ಜನರು ಸ್ವಲ್ಪ ಸಮಯದ ವರೆಗೆ ಧೈರ್ಯಶಾಲಿಗಳಾಗಿರುತ್ತಾರೆ. ಆದರೆ ಡೇಮಿಯನನು ವರ್ಷಗಟ್ಟಲೆ ಧೈರ್ಯಶಾಲಿಯಾಗಿದ್ದನು. ಕೆಲವರು ಇತರರೊಡನೆ ಹೋರಾಡುವ ಪ್ರಸಂಗ ಬಂದಾಗ ಧೈರ್ಯಶಾಲಿಗಳಾಗಿರುತ್ತಾರೆ; ಇರಬೇಕಾಗುತ್ತದೆ. ಆದರೆ ಡೇಮಿಯನನು ಧೈರ್ಯಶಾಲಿಯಾಗಿದ್ದ. ಕಾರಣ, ಆತನು ಅನಾರೋಗ್ಯ, ವೇದನೆ ಹಾಗೂ ಒಂಟಿತನಗಳ ವಿರುದ್ಧ ಹೋರಾಡಿದ್ದ. ಜೀವರಹಿತ ವಿಷಯಗಳ ವಿರುದ್ಧ ಹೋರಾಡಿದ ಆತನ ಧೈರ್ಯ ಅದು ಮಹಾಧೈರ್ಯ. ರೋಗಿಗಳಿಗಾಗಿ ರೋಗಿಯಾಗಿ ದುಡಿದ ಆತನ ಜೀವನ ಸುವರ್ಣ ಜೀವನ; ಸಫಲ ಜೀವನ.

—ಶ್ರೀ. ಯಸ್. ಸದಾಶಿವ ರಾವ್,
ಕಡಿಯಾಳಿ, ಉಡುಪಿ.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು
ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ
ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ
ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. ೧-೨೫ ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರೇಮವೆಂಬುದು ವಿವಾದಾಸ್ಪದ ವಸ್ತುವಲ್ಲ; ಅದು ಏನನ್ನೂ ತೆಗೆದುಕೊಳ್ಳಲಾರದು; ಎಲ್ಲವನ್ನೂ ಧಾರೆಯೆರೆಯುವ ಉದಾರವರ್ತನ ಶೀಲವಾದುದು. ಪ್ರೇಮವು ಎಲ್ಲವನ್ನೂ ಸಹಿಸಬಲ್ಲುದು; ಏನನ್ನೂ ವಿರೋಧಿಸದು, ಪ್ರತೀಕಾರವೆಂಬುದನ್ನು ಎಂದಿಗೂ ಅರಿಯದು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೭-೪-'೬೦	೩೧

ಮಾನವತೆಗೆ ಆಹ್ವಾನ

ಪ್ರಪಂಚದ ಎಲ್ಲ ರಾಷ್ಟ್ರಗಳೂ ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ಒಂದಕ್ಕೊಂದು ಅತಿ ನಿಕಟವಾಗುವ ಮನೋವೃತ್ತಿಯು ಬೆಳೆದುಬರುತ್ತಿರುವಾಗ, ಜಾತೀಯತೆ, ದೇಶೀಯತೆ, ವರ್ಣೀಯತೆಗಳ ಬಗ್ಗೆ ವಿಶೇಷ ಗಮನವನ್ನು ಹರಿಸದೆ ಸರ್ವ ಸಮಾನತೆ, ಸೋದರತೆ ಮತ್ತು ಸ್ವತಂತ್ರತೆಗಳಲ್ಲಿ ವಿಶ್ವದ ಜನತೆ ವಿಶ್ವಾಸವನ್ನಿಟ್ಟು ಮುಂಬರಿಯಲು ತೊಡಗಿರುವಾಗ, ದಕ್ಷಿಣ ಆಫ್ರಿಕದಲ್ಲಿ ನಡೆದ ನರಯಜ್ಞವು ಮಾನವತೆಗಿತ್ತ ಪಂಥಾಹ್ವಾನವೆಂದು ಎಲ್ಲ ಮಾನವ ಜಗತ್ತು ತಿಳಿದುಕೊಂಡಿದೆ. ಬಹುಕಾಲದಿಂದಲೂ ಬಿಳಿಯರು—ಕರಿಯರು ಎಂಬ ಭೇದಭಾವನೆಯನ್ನು ಬೆಳೆಸಿಕೊಂಡು ಬಂದು ಅದನ್ನು ಇಂದಿಗೂ ಉಳಿಸಿಕೊಂಡಿರುವ, ಮತ್ತದನ್ನು ಆಚಂದ್ರಾರ್ಕವಾಗಿ ಸ್ಥಿರೀಕರಿಸುವ ಗುರಿಯನ್ನಿಟ್ಟುಕೊಂಡಿರುವ "ಸುಸಂಸ್ಕೃತ ಸರಕಾರ" ದಕ್ಷಿಣ ಆಫ್ರಿಕೆಯಲ್ಲಿ ಆಡಳಿತೆ ನಡೆಸುತ್ತಿದೆ. ಈ ಸರಕಾರದ ನೀತಿಯನ್ನು ವಿರೋಧಿಸಿ ವರ್ಣ ಭೇದಭಾವವನ್ನು ಮುಂದೊಡ್ಡದೆ ತಮ್ಮ ದೇಶದಲ್ಲಿ ತಮಗೆ ಸ್ವತಂತ್ರವಾಗಿ ತಲೆಯೆತ್ತಿ ನಿಲ್ಲುವ ಅಧಿಕಾರ ಬೇಕು ಎಂಬ ವಾದವನ್ನು ಇಟ್ಟು ಚಳವಳಿ ಹೂಡಿದ ದಕ್ಷಿಣ ಆಫ್ರಿಕದ ನಿವಾಸಿಗಳ ಬಗ್ಗೆ ವಿಶ್ವದ ಮಾನವತಾ ಪ್ರೇಮಿಗಳೆಲ್ಲರೂ ಒಕ್ಕೊರಲಿನಿಂದ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಸ್ವಯಂ ಬಿಳಿಜನಾಂಗವಾದ ಅಮೇರಿಕೆ, ಬ್ರಿಟನ್‌ಗಳ ಜನತೆಯೂ ಈ ಚಳವಳಿಕ್ಕೆ ಬೆಂಬಲವನ್ನಿತ್ತಿದ್ದಾರೆ ಎಂದಾಗ, ಉಳಿದವರ ಸಹಕಾರ ಹಸ್ತವಿದ್ದೇ ಇದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಕಳೆದ ೨೦ ದಿನಗಳಿಂದ ಗುರುತು ಚೀಟಿಯನ್ನು ಹಿಡಿದುಕೊಂಡು ಸಂಚರಿಸಬೇಕೆಂಬ ನಿಯಮವನ್ನು ಪ್ರತಿಭಟಿಸಿದ ದ. ಆಫ್ರಿಕದ ಶ್ವೇತವರ್ಣೇತರರು ಚಳವಳಿಯನ್ನು ಹೂಡಿದ್ದು ಅದನ್ನು ನಿರೋಧಿಸಲು ದ. ಆಫ್ರಿಕೆಯ ಸರಕಾರವು ತಾಳಿದ ಮತ್ತು ತಳೆದ ದಮನ ನೀತಿಯಿಂದಾಗಿ ಐವತ್ತೂ ಮಿಕ್ಕಿದ ಕೊಲೆಗಳು ಮತ್ತು ಹಲವಕ್ಕೂ ಮೀರಿದ ಬಂಧನಗಳಾಗಿದ್ದು ಎಲ್ಲ ನಾಗರಿಕ ಪ್ರಪಂಚದಲ್ಲೂ ಜಿಗುಪ್ಸೆಯ ಗಾಳಿಯನ್ನು ಹರಡಿತು. ಇದರಿಂದ ಪ್ರಭಾವಿತವಾದ ಆಫ್ರೋ ಏಶ್ಯನ್ ರಾಷ್ಟ್ರಗಳು ಭದ್ರತಾಸಮಿತಿಯ ಸಭೆಯೊಂದನ್ನು ಕರೆದು ಅದರಲ್ಲಿ ಈ ನೀತಿಯ ಬಗ್ಗೆ ಚರ್ಚಿಸಬೇಕೆಂದು ಕೇಳಿಕೊಂಡ ಮೇರೆಗೆ ಸಮಿತಿಯು ಸೇರಿ, ಒಂದು ಮಹತ್ವದ ಗೊತ್ತುವಳಿಯನ್ನು ಅಂಗೀಕರಿಸಿದೆ. ಈ ಗೊತ್ತುವಳಿಯಲ್ಲಿ ವರ್ಣ ದ್ವೇಷ ಮತ್ತು ವರ್ಣ ಪ್ರತ್ಯೇಕತೆಯ ತನ್ನ ಧೋರಣೆಯನ್ನು ದ. ಆಫ್ರಿಕೆಯ ಸರಕಾರವು ತತ್‌ಕ್ಷಣ ಬಿಟ್ಟುಕೊಡಬೇಕೆಂದೂ ವರ್ಣ ಸೌಹಾರ್ದತೆಯನ್ನು ಸಾಧಿಸಲು ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ದ. ಆಫ್ರಿಕನ್ ಸರಕಾರವನ್ನು ಕೇಳಿಕೊಂಡಿರುವುದು ಮಾತ್ರವಲ್ಲ; ಈ ಬಗ್ಗೆ ದ. ಆಫ್ರಿಕೆಯ ಸರಕಾರದೊಂದಿಗೆ ಮಾತುಕತೆ ನಡೆಸಿ, ದ. ಆಫ್ರಿಕೆಯಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ತಾಮ್ರಪಟದ ಉದ್ದೇಶ ಹಾಗೂ ತತ್ತ್ವಗಳನ್ನು ಎತ್ತಿಹಿಡಿಯಲು ಸಹಾಯವಾಗುವಂತಹ ವಾಸ್ತವಿಕ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅವಶ್ಯವೆನಿಸಿದಾಗ ಭದ್ರತಾ ಮಂಡಳಿಕ್ಕೆ ವರದಿ ಸಲ್ಲಿಸಬೇಕು ಎಂದು ಸಂ. ರಾ. ಸಂಘದ ಪ್ರಧಾನಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ್ ಶೀಲ್ಡರನ್ನೂ ಕೇಳಿಕೊಂಡಿದೆ. ದ. ಆಫ್ರಿಕೆಯ ಸರಕಾರವು ಚಳವಳಿಯನ್ನು ಕೊನೆಗೊಳಿಸಲು ಕೈಗೊಂಡ ದಮನೋಪಾಯಗಳು ತೀವ್ರ ಉಗ್ರಸ್ವರೂಪದವಾಗಿವೆ. ರಾಷ್ಟ್ರದ ಬಹಳೆಡೆಗಳಲ್ಲಿ ಗಂಡಾಂತರದ ಪರಿಸ್ಥಿತಿಯನ್ನು ಸಾರಲಾಗಿದೆ. ಚಳವಳಿಗೆ ಪ್ರೋತ್ಸಾಹನೀಡುವ ಪಾನ್ ಆಫ್ರಿಕನ್ ಕಾಂಗ್ರೆಸ್, ದ. ಆಫ್ರಿಕನ್ ನೇಶನಲ್ ಕಾಂಗ್ರೆಸ್ ಮೊದಲಾದ ಸಂಸ್ಥೆಗಳನ್ನು ಆಕ್ರಮಗೊಳಿಸುವ, ಸೈನಿಕರ ದಿಗ್ಬಂಧನ ಹೇರುವ ಹಲವಾರು ಕಾರ್ಯಕ್ರಮಗಳು ವ್ಯವಹೃತವಾಗುತ್ತಿವೆ. ಆದರೂ ಚಳುವಳಿಯನ್ನು ಬಗ್ಗು ಬಡೆಯುವುದರಲ್ಲಿ ವೆರ್‌ವರ್ಡ್ ಸರಕಾರವು ಸಮರ್ಥವಾಗಲಿಲ್ಲವೆಂಬಾಗ, ಚಳುವಳಿಯ ರಾಕ್ಷಸ ರೂಪವನ್ನು ಊಹಿಸಿಕೊಳ್ಳಬಹುದು.

ಭದ್ರತಾ ಮಂಡಳಿಯಲ್ಲಿ ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾದೊಡನೆಯೇ, ದ. ಆಫ್ರಿಕೆಯು ತನ್ನ ನಿಯಮಗಳನ್ನು ತುಸು ಸಡಿಲಗೊಳಿಸಿವೆಯೆಂದು ತಿಳಿದುಬರುತ್ತದೆ. ಗುಲಾಮಗಿರಿಯನ್ನು ಹೋಗಲಾಡಿಸಲು ಅಂತಯುದ್ಧವನ್ನು ಮಾಡಿ, ನೀಗ್ರೋಗಳನ್ನೂ ಸಮಾನತೆಯ ಹಂತಕ್ಕೇರಿಸಿದ ಅಮೆರಿಕೆ ಮಾತ್ರವಲ್ಲ, ಸ್ವಯಂ ಬ್ರಿಟನ್ನಿನ ವಿದೇಶಮಂತ್ರಿವರ್ಯರೂ ಈ ವರ್ಣ ಭೇದವನ್ನು ಬಹಿರಂಗವಾಗಿ ತೆಗಳಿ, ದ. ಆಫ್ರಿಕೆಯ ಸರಕಾರದ ನೀತಿಯನ್ನು ಖಂಡಿಸಿದ್ದಾರೆ. ಬ್ರಿಟಿಷ ಪತ್ರಿಕೆಗಳಂತೂ ಈ ನೀತಿಯನ್ನು ಸ್ಪಷ್ಟೋಕ್ತಿಗಳಲ್ಲಿ ಮಾನವ ಜನಾಂಗದ ಅವಹೇಳನವೆಂದು ಸಾರಿರುತ್ತದೆ. ದ. ಆಫ್ರಿಕವನ್ನು ಸರಕಾರವು ಎರಡನೆಯ ಅಲ್ಜೀರಿಯಾವನ್ನಾಗಿ ಮಾರ್ಪಡಿಸುತ್ತಿವೆಯೆಂದು ದೂರಿವೆ. ಭಾರತ, ಚೀನಾ ಮೊದಲಾದ ಏಶ್ಯನ್ ರಾಷ್ಟ್ರಗಳೂ ಘಾನವೇ ಮೊದಲಾದ ಆಫ್ರಿಕನ್ ರಾಷ್ಟ್ರಗಳೂ ತಮ್ಮ ಪ್ರತಿಭಟನೆಯನ್ನೂ, ವಿಷಂಚನೆಯನ್ನೂ ಸೂಚಿಸಿವೆ. ವಿಶ್ವದ ಮತವನ್ನು ಕ್ರೋಢೀಕರಿಸುವಾಗ ಅದು ದ. ಆಫ್ರಿಕೆಗೆ ವಿರುದ್ಧವಾಗಿಯೇ ಇದೆಯೆಂದು ಬೇರೆ ಹೇಳಬೇಕಾಗಿಲ್ಲ. ದ. ಆಫ್ರಿಕದಲ್ಲಿ ವಾಸಿಸುತ್ತಿರುವ ಜನತೆಯು ಬಿಳಿಯರೊಂದಿಗೆ ಹೊಂದಿಕೊಂಡು, ಅವರ ಉತ್ತಮಾದರ್ಶಗಳನ್ನು ಅನುಸರಿಸಲು ಮುಂದೆ ಬರುವ ತವಕದಲ್ಲಿರುವಾಗ, ವರ್ಣೀಯತೆಯನ್ನು ಮುಂದಿಟ್ಟು ಅವರ ಮನೆಯಲ್ಲಿಯೇ ಮಾನಗೆಡಿಸುವ ಮಾನಗೇಡಿನ ಸನ್ನಿವೇಶವನ್ನು ದ. ಆಫ್ರಿಕನ್ ಸರಕಾರ ಮುಂದುವರಿಸುತ್ತಿರುವುದು ಕೇವಲ ಆಫ್ರಿಕನ್ ಜನತೆಗಿತ್ತ ಪಂಥಾಹ್ವಾನವಲ್ಲ; ಸಮಗ್ರ ಜಗತ್ತಿನ ಮಾನವತಾ ವಾದಿಗಳಿಗಿತ್ತ ರಣನಿಯಂತ್ರಣವೆಂದು ಹೇಳಬೇಕು. ವರ್ಣನೀತಿಯು ತನ್ನ ಆಂತರಿಕ ವಿಷಯವೆಂದೂ ಅದರಲ್ಲಿ ಸಂ. ರಾ. ವು ಕೈ ಹಾಕಬಾರದೆಂದೂ ದ. ಆಫ್ರಿಕೆಯು ವಾದಿಸುತ್ತಿರುವುದಾದರೂ ಈ ಮಾನವ ಮೇಧದ ದುರ್ಘಟನೆಯು ಅಂತಾರಾಷ್ಟ್ರೀಯ ಘರ್ಷಣೆಯನ್ನು ಎಳಸಿದೆಯೆಂಬ ಸತ್ಯಾಂಶವನ್ನು ನಾವು ಮರೆಯುವಂತಿಲ್ಲ. ಅಂಧಕಾರದಲ್ಲಿ ವಿಚ್ಛಿದ್ರಶೂನ್ಯರಾಗಿ ನರಳುತ್ತಿದ್ದ ಆಫ್ರೋಏಶ್ಯ ರಾಷ್ಟ್ರಗಳಲ್ಲಿ ಈಗೀಗ ನವಚೇತನ ಕೋಡಿಹರಿಯತೊಡಗಿದೆ ಎಂಬುದನ್ನು ದ. ಆಫ್ರಿಕನ್ ಸರಕಾರವು ಕಣ್ಣುತೆರೆದುಕೊಂಡರೂ ಕುರುಡನಂತೆ ತೋರಿಸಿಕೊಳ್ಳುತ್ತಿದೆ ಯೆಂದುದರಿಂದಲೇ ಇಷ್ಟೆ ನಿಜ ಆಫ್ರಿಕನ್ನರ ಮೂಲಭೂತ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ಸಾಹಸಗಳು ನಡೆಯುತ್ತಿವೆಯೆಂದರೆ ಅದು ಅತಿಶಯೋಕ್ತಿಯಲ್ಲ. ಆದರೆ, ಅತಿ ತೀವ್ರಗತಿಯಲ್ಲಿ ಭ್ರಮಿಸುತ್ತಿರುವ ಕಾಲಚಕ್ರವನ್ನು ಪರಿಶೀಲಿಸಿ, ತನ್ನ ನೀತಿಯಲ್ಲಿ ಅವಶ್ಯಕ ಪರಿವರ್ತನೆಯನ್ನು ಮಾಡಿಕೊಂಡು, ಸಮಾನತೆಯ ತತ್ತ್ವಗಳನ್ನು ಅಳವಡಿಸಿಕೊಳ್ಳುವುದು ವಿಶ್ವದ ದೃಷ್ಟಿಯಿಂದ ಮಾತ್ರವಲ್ಲ; ಸ್ವಯಂ ದ. ಆಫ್ರಿಕದ ಹಿತದೃಷ್ಟಿಯಿಂದಲೂ ವಾಂಛನೀಯವಾಗಿದೆ. ಅದುದರಿಂದ ಇನ್ನಾದರೂ ದ. ಆಫ್ರಿಕೆಯು ತನ್ನ ಮೊಂಡುತನವನ್ನು ಬಿಟ್ಟು, ಸನ್ಮಾರ್ಗ ಗಮನ ನಿರತವಾಗುವುದೆಂದು ನಂಬಿ ಎಲ್ಲರೂ ಕಣ್ಣರಳಿಸಿ ನಿರೀಕ್ಷಿಸುತ್ತಿದ್ದಾರೆ.

ಕರ್ತವ್ಯ ಪರಿಜ್ಞಾನ

ಮನೆಗೆ ಬಂದವನು ಬೇಕಾದರೆ ಶತ್ರುವೇ ಇರಲಿ, ಆತನನ್ನು ಸನ್ಮಾನಿಸಿ ಗೌರವದಿಂದ ಮರಳಿ ಕಳಿಸಿಕೊಡುವುದು ಗೃಹಸ್ಥನ ಧರ್ಮ. ಆಮಂತ್ರಣವನ್ನು ಮನ್ನಿಸಿ ದೇಶಕ್ಕೆ ಬರುವ ವಿದೇಶೀಯರನ್ನು ಆದರಿಸಿ, ಅವರು ಪ್ರಸನ್ನಮುಖರಾಗಿ ಹಿಂದೆ ಮರಳುವಂತೆ ಮಾಡುವುದೂ ನಾಗರಿಕ ಧರ್ಮ. ಸದ್ಯ ಈ ಮಾಸ ಮಧ್ಯಾವಧಿಯಲ್ಲಿ ನಮ್ಮ ಪ್ರಧಾನಿಯವರ ಆಮಂತ್ರಣವನ್ನು ಸ್ವೀಕರಿಸಿ, ಭಾರತ ಸಂದರ್ಶನವೀಯುವ ಚೀನೀ ಪ್ರಧಾನಿಯನ್ನು ಗೌರವಾಭಿಮಾನದಿಂದ ಸ್ವಾಗತಿಸಿ ಉಪಚರಿಸುವುದೂ ನಮ್ಮ ಧರ್ಮವಾಗಿದೆ. ಆದರೆ, ಶ್ರೀ ಚೌ‌ರವರ ವಿರುದ್ಧ ಮತ ಪ್ರದರ್ಶನಾದಿಗಳನ್ನು ನಡೆಸುವ ಸಂಚು ಕೆಲವೊಂದು ವಿರೋಧೀಪಕ್ಷಗಳಿಂದ ನಡೆಯುತ್ತದೆ ಎಂಬ ವರದಿಗಳು ಬರುತ್ತಿವೆ. ಪ್ರಧಾನಿ ನೆಹರೂರವರು ಭಾರತೀಯರಿಗೆ ತಮ್ಮ ಘನತೆಯನ್ನೂ ಹಿರಿಮೆಯನ್ನೂ ಉಳಿಸಿಕೊಂಡು, ಮತಪ್ರದರ್ಶನವನ್ನು ಮಾಡುವ ದುಷ್ಪ್ರವೃತ್ತಿಯಲ್ಲಿ ತೊಡಗಬಾರದೆಂದು ಹೇಳಿ ನಮ್ಮಲ್ಲಿಗೆ ಬರುವ ಅತಿಥಿಗಳ ಮನಸ್ಸಿಗೆ ಬೇಸರವಾಗದಂತೆ ನಡೆದುಕೊಂಡು, ನಮ್ಮ ನಡುವಣ ವಿವಾದವನ್ನು ಬಗೆಹರಿಸುವ ಬಗ್ಗೆ ಮಾತುಕತೆಯಾಡಲು ಅವಕಾಶ ಕಲ್ಪಿಸಿಕೊಡುವಂತೆ ವಿನಂತಿಸಿದ್ದಾರೆ. ತೆಂಗಿನ ಮರವನ್ನು ಹತ್ತಿ ಕಳ್ಳತನವನ್ನು ಮೆಲ್ಲಗೆ ಇಳಿಯಲೇಬೇಕು ಹೊರತು ದುಮುಕುವುದು ಸಾಧ್ಯವಿಲ್ಲ; ಮೇಲೆ ಕುಳಿತಿರುವಾಗಲೋ, ಭದ್ರವಾಗಿಯೇ ಇದ್ದರೂ ನೈಮರಿಯಂತಿಲ್ಲ. ನಾವು ನ್ಯಾಯಪರರೆಂದು ಮಾತ್ರ ಹೇಳಿ ಮನೆಗೆ ಬರುವವರನ್ನು ಅವಹೇಳನ ಮಾಡಿದರೆ ಅದರಿಂದ ನಮ್ಮ ಮಾನಕ್ಕೇನೇ ಕುಂದು ಹೊರತು ಬಂದವರಿಗಲ್ಲ. ಈ ಮಾತನ್ನು ನಾವು ಅವಶ್ಯ ಗಮನಿಸಬೇಕು. ಅನವಶ್ಯಕವೂ ಅನಪೇಕ್ಷಣೀಯವೂ ಆದ ಪ್ರದರ್ಶನಾದಿಗಳನ್ನು ನಡೆಸದೆ ಆದರದಿಂದ ಬರಮಾಡಿಕೊಂಡು ಸದಭಿಮಾನದೊಡನೆ ಮರಳಿಸುವಂತಹ ಹೊಣೆಯನ್ನು ನಾವು—ಭಾರತೀಯರು ಹೊರಲು ಅವಶ್ಯ ಸನ್ನದ್ಧರಾಗಬೇಕು. ಇಲ್ಲವಾದರೆ, ಭಾರತದ ಘನತೆಗೇನೇ ಕೊರತೆಯೊದಂತಾಗುವುದು. ಮುಂದೆ ನಡೆಯುವ ಮಾತುಕತೆಗಳು ಯಶಸ್ವಿಯಾಗುತ್ತವೆಯೆಂಬುದು ಅಸಿಮ್ಯುದಲ್ಲ; ಅವರೂ ವಿಚಾರ ವಿಮರ್ಶೆ ಮಾಡುವುದಕ್ಕೆ ಆತಂಕವೇನು? ಇದರಿಂದಾಗ, ಭಾರತೀಯ ವಿರೋಧೀ ಪಕ್ಷಗಳು ತುಸು ಜಾಗ್ರತವಾಗಿ, ತಮ್ಮ ಪ್ರದರ್ಶನಾದಿಗಳಿಂದ ಅತಿಥಿಗಳ ಮನಸ್ಸೋಯಿಸದೆ ಪ್ರಸನ್ನವದನರಾಗಿ ಮರಳುವಂತೆಸಗುವುದರಲ್ಲಿ ಕರ್ತವ್ಯಬಾಹಿರರಾಗಬಾರದಲ್ಲವೆ?

ನಾಯಕ್ ಬೇಂಕಿನ ಪ್ರಗತಿ

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್‌ನ ೧೯೫೯-೬೦ಕ್ಕೆ ಅಂತ್ಯವಾಗುವ ೪೦ನೆಯ ವರ್ಷದ ಸಾಲ ಮೂಲ ಮತ್ತು ಆಯವ್ಯಯದ ಪಟ್ಟಿಯು ನಮ್ಮ ಹಸ್ತಗತವಾಗಿದೆ. ಈ ವರದಿಯನ್ನು ಅವಲೋಕಿಸುವಾಗ, ಬೇಂಕು ತೀವ್ರಗತಿಯಿಂದ ಪ್ರಗತಿಪಥದಲ್ಲಿ ಮುನ್ನಡೆಯುತ್ತಿದೆಯೆಂದು ತಿಳಿಯುತ್ತದೆ. ಬೇಂಕಿನ ಒಟ್ಟು ವ್ಯವಹಾರವು ಈ ವರ್ಷ ಒಂದು ಕೋಟಿ ರೂಪಾಯಿಗೂ ಮಿಕ್ಕಿದ್ದು ಹಿಂದಿನ ವರ್ಷಕ್ಕಿಂತ ನೇಕಡಾ ೪೦ರಷ್ಟು ಹೆಚ್ಚುವರಿಯನ್ನಿದು ತೋರಿಸುತ್ತದೆ. ಸದ್ಯ ಬೇಂಕಿನ ಪಾಲು ಬಂಡವಾಳವು ರೂ. ೪,೫೦,೦೦೦ ಇದ್ದು ಕ್ಷೇಮನಿಧಿಯು ರೂ. ೧,೬೫,೦೦೦ ಇವೆ. ಬೇಂಕಿನಲ್ಲಿಟ್ಟ ಠೇವಣಾತಿಯು ರೂ. ೫೪ ಲಕ್ಷವಿದ್ದು ಇದೂ ೧೯೫೮ರಿಂದ ನೇಕಡಾ ೫೦ರಷ್ಟು ಹೆಚ್ಚಿದೆ. ಇದರಿಂದ ಬೇಂಕು ದಿನೇ ದಿನೇ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆಯೆಂಬುದು ನಿಸ್ಸಂಶಯ. ಇದೇರೀತಿಯಲ್ಲಿ ಬೇಂಕು ಪ್ರತಿ ವಿಭಾಗದಲ್ಲಿಯೂ ಉನ್ನತಿಯನ್ನು ಸಾಧಿಸಿದೆ. ಬೇಂಕಿನ ಲಾಭಾಂಶವು ೧೯೫೯ರಲ್ಲಿ ೬೭,೦೦೦ ರೂಪಾಯಿಯಾಗಿದ್ದರೆ, ೫೯ರಲ್ಲಿ ಅದು ೬೯ ಸಾವಿರವಿದೆ. ಬಂದಿ ವರ್ಷದಲ್ಲಿ ಹುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಒಂದು ಶಾಖೆಯನ್ನು ತೆರೆದಿ

ಸಂಕ್ಷಿಪ್ತ ಸುದ್ದಿಗಳು

ಬಾಂಡುಂಗ ಭಾವನೆ ಬೆಳೆಯಲಿ

ಸದ್ಯ ಭಾರತ ಸಂದರ್ಶನದಲ್ಲಿ ತೊಡಗಿರುವ ಸಂಯುಕ್ತ ಅರಬ ರಾಷ್ಟ್ರಗಳ ಅಧ್ಯಕ್ಷ ಶ್ರೀ ಅಬ್ದುಲ್ ಗಮಾಲ್ ನಸ್ಸೇರ್ ಇಲ್ಲಿನ ಹಲವಾರು ಸ್ಥಳಗಳನ್ನೂ ಅಭಿವೃದ್ಧಿಯೋಜನಾ ಕೇಂದ್ರಗಳನ್ನೂ ನೋಡಿದರು. ಚೀನಾ-ಭಾರತಗಳ ನಡುವಿನ ಸೀಮಾವಿವಾದವನ್ನು ಕುರಿತು ಬೇಗನೇ ದಿನಗಳಲ್ಲಿ ಭಾರತಕ್ಕೆ ಆಗಮಿಸಲಿರುವ ಶ್ರೀ ಚೌ-ಎನ್-ಲಾಯ್‌ರವರೊಡನೆ ಉಪಯುಕ್ತ ಚರ್ಚೆಗಳನ್ನು ನಡೆಸಿ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಬೇಕೆಂದೂ, ಏಶ್ಯ ಆಫ್ರಿಕ ಖಂಡಗಳ ರಾಷ್ಟ್ರಗಳು ತಮ್ಮತಮ್ಮೊಳಗಿನ ಎಲ್ಲ ಸಮಸ್ಯೆಗಳನ್ನು ಶಾಂತಯುತವಾಗಿ ಬಗೆಹರಿಸಿಕೊಳ್ಳಬೇಕೆಂದು ಬಾಂಡುಂಗ ಪರಿಷತ್ತಿನಲ್ಲಿ ತೀರ್ಮಾನವಾಗಿದೆಯೆಂಬುದನ್ನು ನೆನಪಿಸಿ, ಪ್ರತಿಯೊಂದು ರಾಷ್ಟ್ರದಲ್ಲಿಯೂ ಬಾಂಡುಂಗ ಭಾವನೆಯು ಮೂಡಿರ...

ಸದ್ಯ ಮೈಸೂರು ರಾಜ್ಯದಲ್ಲಿ ೧೯ ಮತ್ತು ಕೇರಳದಲ್ಲಿ ೩, ಹೀಗೆ ಒಟ್ಟು ೧೭ ಶಾಖೆಗಳಿವೆ. ೧೯೫೮ರಲ್ಲಿ ನೇಕಡಾ ೪ (ಆದಾಯ ತೆರಿಗೆ ವಿರಹಿತ) ಡಿವಿಡೆಂಡು ಕೊಟ್ಟಿದ್ದರೆ, ಈ ವರ್ಷದಲ್ಲಿ ನೇಕಡಾ ೫ (ಆದಾಯ ತೆರಿಗೆಗೆ ಒಳಪಟ್ಟು) ಕೊಡಮಾಡಿದೆ. ಬ್ಯಾಂಕಿನ ಪ್ರಗತಿಯನ್ನು ಕಾಣುವಾಗ, ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಲಾಭಾಂಶವನ್ನು ಪಡೆಯಲು ಶಕ್ತವಾಗಬಲ್ಲುದೆಂದು ನಂಬಬಹುದು. ಬ್ಯಾಂಕಿನ ಪಾಲು ಬಂಡವಾಳವು ಇನ್ನೂ ತುಸು ಏರಿಕೆಯಾಗಿ ಇದು, ಶೆಡ್ಯೂಲ್ಡ್ ಬ್ಯಾಂಕಾಗಿ ಪರಿಣಮಿಸಲೆಂದು ಹಾರೈಸುತ್ತೇವೆ. ಬ್ಯಾಂಕಿನ ಸೌಮ್ಯ ಕಾರ್ಯಸಾಧನೆಗೆ ಕಾರಣರಾದ ಡೈರೆಕ್ಟರರ ಮಂಡಳಿಯನ್ನೂ ಜನರಲ್ ಮೆನೇಜರ ಶ್ರೀ ಕೆ. ಎಸ್. ಕಾಮತರನ್ನೂ ಅಭಿನಂದಿಸಿ ಬ್ಯಾಂಕು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಬಯಸುತ್ತೇವೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 41/1960

ಅಕ್ಕಮ್ಮ ಮರಕಾಲ್ತಿ — ವಾದಿ.

ಮತ್ತು

ಅಣ್ಣು ಮರಕಾಲ ಕೂಡಾ— ಪ್ರತಿವಾದಿರು.

ಇವರೊಳಗೆ

1ನೇ ಪ್ರತಿವಾದಿ ಅಣ್ಣು ಮರಕಾಲ ತಂಗು ಮರಕಾಲ್ತಿ ಮಗ ಉಡುಪಿ ತಾಲೂಕು ಉಪ್ಪೂರು ಗ್ರಾಮ — ಇವರಿಗೆ.

ವಾದಿ ಮತ್ತು ನಿಮ್ಮ ಕುಟುಂಬದ ಮೇಲೆ ಮಂಜುನಾಥ ಭಕ್ತರು ಪಡೆದ ಉಡುಪಿ ಡಿ. ಮು. ಕೋರ್ಟಿನ O.S. 442/1955 ನೇ ಡಿಕ್ರಿ ಹಣವನ್ನು ವಾದಿಯು ಸಲ್ಲಿಸಿದ್ದರಲ್ಲಿ ವಾದಿಯ ಅಂಶವು ಹೋಗುತ್ತಾ ನಿಮ್ಮಿಂದ By way of Contribution ಆಗಿ ಬರತಕ್ಕ ಐವೇಜನ್ನು ವಸೂಲು ಮಾಡಿ ಕೊಳ್ಳುವರೆ ವಾದಿಯು ದಾಖಲುಮಾಡಿದ ಮೇಲ್ಕಂಡ ದಾವೆಯು ತಾ. 16—4—60ಕ್ಕೆ ಇಟ್ಟಿದೆ. ಉತ್ತರಿಸುವಂತಾದ್ದು ಇದ್ದರೆ ಆ ದಿವಸ ಪೂರ್ವಾಹ್ನ 10ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುದು.

K. Ramakrishna Rao
Vakil for Plaintiff.

Udipi. Dated 5—4—1960.

ಬೇಕು ಎಂದೂ ಅಂದರು. ಕಾಶ್ಮೀರದ ಸಮಸ್ಯೆಯಿನ್ನೂ ಸಮಸ್ಯೆಯಾಗಿ ಉಳಿದಿಲ್ಲ ಎಂದವರು ಅಭಿಪ್ರಾಯಪಟ್ಟರು.

ಹಿಂದುಳಿದವರ ನಿಗದಿ

ಹಿಂದುಳಿದವರು ಯಾರೆಂದು ನಿರ್ಧರಿಸುವ ಸಲುವಾಗಿ ಮೈಸೂರು ವಿಧಾನ ಸಭೆಯಲ್ಲಿ ಹಲವಾರು ಸೂಚನೆಗಳು ಬಂದಿವೆ. ಜಾತಿ ಮತಗಳನ್ನು ಆಧಾರವಾಗಿ ಬಿಡದೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ನಿಜವಾಗಿ ಹಿಂದುಳಿದವರನ್ನೇ ಹಿಂದುಳಿದ ವರ್ಗಗಳಲ್ಲಿ ಸೇರಿಸಬೇಕೆಂದು ಹೆಚ್ಚಿನವರ ಅಭಿಪ್ರಾಯ. ವಾರ್ಷಿಕ ರೂ. ೧,೨೦೦ ಕ್ಕಿಂತ ಕಡಿಮೆ ಆದಾಯವುಳ್ಳವರೆಲ್ಲರೂ ಹಿಂದುಳಿದವರೆಂದು ಘೋಷಿಸಲು ಸರಕಾರವನ್ನು ಕೇಳಿಕೊಂಡವರೂ ಇದ್ದಾರೆ. ಜಾತೀಯ ಆಧಾರದ ಮೇಲೆ ಹಿಂದುಳಿದವರು ಯಾರೆಂದು ನಾವು ನಿರ್ಧರಿಸಿದರೆ, ನಮ್ಮ ಗೋರಿಯನ್ನು ನಾವೇ ಕಟ್ಟಿಕೊಂಡಂತೆ ಎಂದೊಬ್ಬ ಸದಸ್ಯರು ಉದ್ಘೋಷಿಸಿದರು. ಈ ಬಗ್ಗೆ ಆವಶ್ಯಕ ಅಂಕೆ ಸಂಖ್ಯೆಗಳನ್ನು ೧೯೫೧ರ ಜನಗಣತಿಯ ಆಧಾರದಿಂದ ಪಡಕೊಂಡುದು ತಪ್ಪು ಎಂಬ ಭಾವನೆಗಳೂ ವ್ಯಕ್ತಪಟ್ಟುವು. ಸದ್ಯ, ಎಂದು ಮೂರು ವರ್ಷಗಳಿಗಾಗಿ ತಾತ್ಕಾಲಿಕ ಯಾದಿಯೊಂದನ್ನು ರಚಿಸಿ,೧೯೬೧ನೆ ಜನಗಣನೆಯ ಅಂಕೆಗಳು ಉಪಲಬ್ಧವಾದ ಕೂಡಲೇ ಮುಂದಿನ ಯಾದಿಯನ್ನು ತಯಾರಿಸಬೇಕು ಎಂಬುದೂ ಒಂದು ಸಲಹೆ. ಇವುಗಳಲ್ಲಿ ಯಾವುದನ್ನು ಸ್ವೀಕರಿಸಬೇಕು ಮತ್ತಾವುದನ್ನು ತಿರಸ್ಕರಿಸಬೇಕು ಎಂಬುದು ಸರಕಾರಕ್ಕೆ ಸೇರಿದ ವಿಷಯ.

ಪ್ರಮುಖ ಪ್ರಶ್ನೆ—ನಿಶ್ಶಸ್ತ್ರೀಕರಣ

ತನ್ನ ಕಾಡಿದ 'ಫ್ಲೂ'ನಿಂದ ಚೇತರಿಸಿದ ರಶ್ಯನ್ ಪ್ರಧಾನಿ ಕ್ರುಶ್ಚೇವರು ಫ್ರಾನ್ಸದ ಸಂದರ್ಶನವನ್ನೂ ಮುಗಿಸಿಬಂದರು. ಉಭಯ ರಾಷ್ಟ್ರನಾಯಕರು ತಮ ಸಂದರ್ಶನಾಂತ್ಯದಲ್ಲಿ ವಾಡಿಕೆಯಂತೆ ಒಂದು ಜಂಟಿ ಹೇಳಿಕೆಯನ್ನು ಹೊರಡಿಸಿದ್ದಾರೆ. ಇಂದಿನ ಪ್ರಮುಖ ಸಮಸ್ಯೆಗಳಲ್ಲಿ ನಿಶ್ಶಸ್ತ್ರೀಕರಣವು ಪ್ರಧಾನವಾಗಿವೆಯೆಂದೂ ಇದನ್ನು ತ್ವರಿತಗತಿಯಲ್ಲಿ ಪರಿಹರಿಸಬೇಕೆಂದೂ ಇಬ್ಬರೂ ಒಪ್ಪಿದ್ದಾರೆ. ಜಿನೇವಾದಲ್ಲಿ ಹತ್ತು ರಾಷ್ಟ್ರಗಳ ನಡುವೆ ನಡೆಯುತ್ತಿರುವ ನಿಶ್ಶಸ್ತ್ರೀಕರಣ ಮಾತುಕತೆಗಳಿಂದ ಸಮರ್ಥ ಅಂತರಾಷ್ಟ್ರೀಯ ನಿಯಂತ್ರಣದಲ್ಲಿ ನಿಶ್ಶಸ್ತ್ರೀಕರಣ ಸಾಧಿಸುವ ಪ್ರಶ್ನೆಗೆ ತುಸುವಾದರೂ ಪರಿಹಾರ ದೊರೆಯಲೆಂದು ಹಾರೈಸಿದ್ದಾರೆ. ಮೈತ್ರಿ ಮತ್ತು ಸಹಕಾರದಿಂದ ರಾಷ್ಟ್ರಗಳು ಪರಸ್ಪರ ಸಂಬಂಧ ಬೆಳೆಸಿದ್ದಾದರೆ, ಇದರಿಂದ ಅಂತಾರಾಷ್ಟ್ರೀಯ ಒಡಕನ್ನು ಕಡಿಮೆಮಾಡಲು ಮತ್ತು ಜಾಗತಿಕ ಶಾಂತಿಯನ್ನು ನೆಲೆಗೊಳಿಸಲು ನೆರವಾಗುವದೆಂದು ಉಭಯ ಧುರೀಣರೂ ಒಪ್ಪಿದ್ದಾರೆ. ಪ್ರಧಾನಿ ಕ್ರುಶ್ಚೇವರು ಅಧ್ಯಕ್ಷ ಡಿಗಾಲೆಯವರನ್ನು ರಶ್ಯಕ್ಕೆ ಆಮಂತ್ರಿಸಿದ್ದು, ಈ ಆಮಂತ್ರಣವನ್ನು ಶ್ರೀ ಡಿಗಾಲೆಯವರು ಸ್ವೀಕರಿಸಿರುವರೆಂದೂ ಸಂದರ್ಶನದ ದಿನವನ್ನು ಕ್ರಮೇಣ ಗೊತ್ತುಪಡಿಸಲಾಗುವುದೆಂದೂ ವರದಿಗಳು ಬಂದಿವೆ.

ಕರ್ನಾಟಕಕ್ಕೆ ಅಂಚೆವಲಯ

ಕರ್ನಾಟಕದ ಬಹುಕಾಲದ ಬೇಡಿಕೆಗಳಲ್ಲಿ ಒಂದಾಗಿದ್ದ ಕರ್ನಾಟಕಕ್ಕೆ ಪ್ರತ್ಯೇಕ ಅಂಚೆವಲಯವು ಏಪ್ರಿಲ್ ಮೊದಲಿಂದ ಆರಂಭವಾಗಿದೆ. ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಈ ವಲಯವನ್ನು ಉದ್ಘಾಟಿಸಿದರು. ಈ ವಲಯವನ್ನು ಆಡಳಿತೆಯ ದೃಷ್ಟಿಯಿಂದ ಏಳು ಉಪವಿಭಾಗಗಳಾಗಿ ಒಡೆಯಲಾಗಿವೆ. ದಕ್ಷಿಣ ಕನ್ನಡದ ಪಡಾರದ ಶ್ರೀ ಕೆ. ವಿ. ಪೈ ಅವರು ಈ ವಲಯದ ಡೈರೆಕ್ಟರರೆಂದು ಅಧಿಕಾರ ಸ್ವೀಕರಿಸಿದ್ದರು. ಈ ಸಂದರ್ಭದಲ್ಲಿ ಮಾತಾಡಿದ ಶ್ರೀ ಜತ್ತಿಯವರು ಅಂಚೆ ತಂತಿ ಸಂಪರ್ಕ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರಿಂದ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲಸುವಾಗುವಂತೆ ಈ ಹೊಸ ಅಂಚೆ ತಂತಿ ವಲಯದ ಅಧಿಕಾರಿಗಳು ಅಲ್ಪಾವಧಿಯಲ್ಲಿ ಶೀಘ್ರವಾಗಿ ಅಂಚೆ-ತಂತಿ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವರೆಂದು ಆಶಿಸಿದರು.

ಗೌರೀಶಂಕರ ಚೀನದ್ದೇ?

ಇತ್ತೀಚೆಗೆ ಚೀನಾ ಪ್ರಧಾನಿ ಭೇಟಿಯನ್ನು ಮುಗಿಸಿ ಬಂದ ನೇಪಾಳದ ಪ್ರಧಾನಿ ಶ್ರೀ ಬಿ. ಪಿ. ಕೊಯಿರಾಲಾ ಅವರು ತಮ್ಮ ಮಾತುಕತೆಯ ಅವಧಿಯಲ್ಲಿ ಶ್ರೀ ಲಾಯರು ಪ್ರಪಂಚದ ಅತ್ಯುನ್ನತ ಗೌರಿ ಶಂಕರವು ತನ್ನದೆಂದು ವಾದಿಸಿದರೆಂದು ಹೊರಗೆಡಹಿದ್ದಾರೆ. ಈ ಶಿಖರಕ್ಕೆ 'ಚೋಮೊಲುಂಗಮಾ' ಪ್ರಾಚೀನ ಹೆಸರೆಂದೂ, ಇದು ಚೀನೀಯ ನಾಮಧೇಯವೆಂದೂ 'ಸಾಗರಮಾತ'ವೆಂಬ ಈಗಿನ ನೇಪಾಲೀ ನಾಮವು ಅರ್ವಾಚೀನವೆಂದೂ ಅವರು ವಾದಿಸಿದರಂತೆ. ಈ ವಿಚಿತ್ರ ವಾದವು ಇತ್ಯರ್ಥಗೊಂಡಿಲ್ಲವೆಂದೂ ನವದೆಹಲಿಯಿಂದ ಮರಳುವಾಗ ಶ್ರೀ ಲಾಯ್ ಅವರು ಕಟಮಂಡುವಿಗೂ ತೆರಳಲಿರುವರೆಂದೂ, ಆಗ, ಈ ವಿಷಯ ಹೆಚ್ಚಿನ ಚರ್ಚೆ ನಡೆಯುವುದೆಂದೂ ತಿಳಿದುಬಂದಿದೆ.

ನಾನಾವತಿ ಪ್ರದರ್ಶನ

ಕಮಾಂಡರ ನಾನಾವತಿಯವರ ವಿರುದ್ಧವಾಗಿ ಜೀವಾವಧಿ ಶಿಕ್ಷೆ ಮತ್ತು ಪೋಲೀಸು ಬಂಧನಗಳನ್ನು ಮುಂದಿಟ್ಟ ಮುಂಬಯಿ ಹೈಕೋರ್ಟಿನ ವಿಧಿಯ ನಡುವೆ ರಾಜ್ಯಪಾಲರು ಪ್ರವೇಶಿಸಿ ಅದನ್ನು ತಾತ್ಕಾಲಿಕವಾಗಿ ತಡೆಹಿಡಿದಿದ್ದರು. ಸುಪ್ರೀಂಕೋರ್ಟಿನ ಪೂರ್ಣ ಬೆಂಚು ಈ ಬಗ್ಗೆ ವಿಚಾರಣೆ ನಡೆಸಿ, ರಾಜ್ಯಪಾಲರ ತಡೆಯಾಜ್ಞೆಯು ಸಂವಿಧಾನಕ್ಕೆ ವಿರುದ್ಧವಲ್ಲವೆಂದು ತೀರ್ಮಾನವಿತ್ತಿತು. ರಾಜ್ಯಪಾಲರು ನ್ಯಾಯಾಂಗದ ನಡುವೆ ಪ್ರವೇಶಿಸುವುದು ಅನುಚಿತ, ಅಭೂತಪೂರ್ವ ಎಂಬ ಮುಂತಾದ ಅಭಿಪ್ರಾಯಗಳು ಅಲ್ಲಲ್ಲಿ ಪ್ರಕಟವಾಗಿವೆ.

ಬ್ರಹ್ಮಕ್ಕೆ ನಚಿನ ಸಂಪುಟ

ನೆರೆರಾಷ್ಟ್ರ ಬ್ರಹ್ಮದಲ್ಲಿ ಸಾರ್ವತ್ರಿಕ ಚುನಾವಣೆಗಳು ಇತ್ತೀಚೆಗೆ ಮುಕ್ತಾಯಗೊಂಡಿದ್ದುವು. ಒಟ್ಟು ಸ್ಥಾನಗಳಲ್ಲಿ ಮೂರರಲ್ಲಿ ಎರಡರಷ್ಟು ಬಹುಮತವಿರುವ ಯುನೂರವರ ಪಕ್ಷವು ಯುನೂರ ನಾಯಕತ್ವದಲ್ಲಿ ಸರಕಾರವನ್ನು ಸ್ಥಾಪಿಸಿತು. ಪ್ರಧಾನಿಮಂತ್ರಿಯಾಗಿ ಯುನು ಆಯ್ಕೆಗೊಂಡುದನ್ನು ಪಾರ್ಲಿಮೆಂಟ ಸದಸ್ಯರು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಮಂತ್ರಿಮಂಡಳಿಯಲ್ಲಿ ಪ್ರಧಾನಿಯವರನ್ನು ಬಿಟ್ಟು ಒಂಬತ್ತು ಸದಸ್ಯರಿರುವರು.

ಅಲ್ಲಲ್ಲಿಯ ಸುದ್ದಿಸಾರ

ಮೆಡಿಕಲ್ ಕಾಲೇಜಿಗೆ ಗ್ರಾಂಟು

ಕಸ್ತೂರ್ ಬಾ ಮೆಡಿಕಲ್ ಕೊಲೇಜಿಗೆ ಕೇಂದ್ರ ಸರಕಾರದವರು ೫ಲಕ್ಷ ರೂಪಾಯಿಗಳ ಗ್ರಾಂಟು ಕೊಟ್ಟಿರುವುದಾಗಿ ತಿಳಿದುಬರುತ್ತದೆ ಈ ಗ್ರಾಂಟಿನ ನಿಯಮದಂತೆ ಕೇಂದ್ರ ಸರಕಾರವು ಆರಿಸುವ ಐದು ವಿದ್ಯಾರ್ಥಿಗಳಿಗೆ ವರ್ಷಂಪ್ರತಿ ಸಹಾಯಧನ ವಿಲ್ಲದೇನೇ ಕಾಲೇಜಿಗೆ ಪ್ರವೇಶ ಕೊಡಬೇಕಾಗಿರುತ್ತದೆ. ಆದರೆ ವಿದ್ಯಾರ್ಥಿಗಳು ಕೊಲೇಜು ಫೀಸನ್ನು ಕೊಡಲು ಬದ್ಧರಿರುತ್ತಾರೆ.

ಟಿ. ಎ. ಪಿ ಶೆಟ್ಟಿರ ಸ್ಮಾರಕ ಸಮಿತಿ: ಯ ಸಭೆಯು ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ. ೩ರಲ್ಲಿ ಶ್ರೀ ಕೆ.ಬಿ. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ಸ್ಮಾರಕ ಸ್ಥಾಪನೆಯ ಕುರಿತು ಹಲವರು ಮಾತನಾಡಿದ ಮೇಲೆ ಕಾರ್ಯಕಾರೀ ಸಮಿತಿಯೊಂದು ರಚಿಸಲ್ಪಟ್ಟಿತು.

ಇನ್‌ವೆಸ್ಟರ್ಸ್ ಏಜನ್ಸೀ ಡಿಪಾರ್ಟ್‌ಮೆಂಟ್—ಎಂಬ ಹೊಸ ಮತ್ತು ವಿಶಿಷ್ಟ ತರದ ಸೇವಾ ವಿಭಾಗವನ್ನು ಈ ವರ್ಷದಿಂದ ಸಿಂಡಿಕೇಟು ಬ್ಯಾಂಕಿನವರು ತೆರೆಯಲಿರುವುದರ ವಿವರವನ್ನು ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ. ಟಿ. ಎಂ. ಎ. ಪೈಗಳು ಕಳೆದ ತಾ. ೩೧ರಲ್ಲಿ ಪತ್ರಿಕೋದ್ಯೋಗಿಗಳ ಸಭೆಯ ಮುಂದಿಟ್ಟರು ಸಾಮಾನ್ಯವಾಗಿ ವ್ಯಕ್ತಿಯೊಬ್ಬನು ತನ್ನ ಉಳಿಕೆಯಲ್ಲಿ ವರ್ಷಕ್ಕೆ ಒಂದು ಸಾವಿರ ರೂಪಾಯಿಯಂತೆ ಠೇವು ಮಾಡುತ್ತ ಬಂದರೆ ಅದು ಹೇಗೆ ಅದ್ಭುತ ಮೊತ್ತವಾಗುವುದೆಂಬುದನ್ನು ವಿವರಿಸಿದರು.

ಕೊಪ್ಪ ಮೆಡಿಕಲ್ ಹಾಲ್ :— ಎಂಬ ಚಿಕಿತ್ಸಾಲಯವನ್ನು ಡಾ. ಎ. ಪದ್ಮನಾಭ ಶೆಟ್ಟರು ತಾ. 29—3—60 ರಂದು ಕೊಪ್ಪ ಬಸ್ ಸ್ಟೇಂಡಿನ ಸಮೀಪ ಪ್ರಾರಂಭಿಸಿರುತ್ತಾರೆ.

ವಿವಾಹ ಸಮಾರಂಭ — ಸಿಂಡಿಕೇಟಿನ ಡಿವಿಜನಲ್ ಮೆನೇಜರ್ ಶ್ರೀ ಟಿ. ಜಿ. ಎಂ ಪೈಯವರ ಪುತ್ರಿ ಕುಮಾರಿ ಸೀತಾರತ್ನ ಮತ್ತು ಶ್ರೀ ಕುಂಜಾಲು ಅಣ್ಣಯ್ಯ ಪೈಯವರ ಪುತ್ರ ಶ್ರೀಧರ ಪೈ ಇವರ ವಿವಾಹೋತ್ಸವವು ಇದೇ ತಾ ೩ರಂದು ಉಡುಪಿ ವರದೇಂದ್ರ ಕಲಾಮಂದಿರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ
ಕಳಿಸಬಹುದು.
ನವಭಾರತ ಬುಕ್ ಡಿಪೋ, ಉಡುಪಿ.

ಕಲಾಕ್ಷೇತ್ರ

ಶ್ರೀ ಉದಯಶಂಕರರಿಗೆ ಗೌರವಾರ್ಪಣೆ

ಸಂಗೀತನಾಟಕ ಅಕಾಡೆಮಿಯು ತನ್ನ ನೃತ್ಯ ಪಾರಿತೋಷಕವನ್ನು ಈ ವರ್ಷ ಶ್ರೀ ಉದಯಶಂಕರರಿಗಿತ್ತು ಸನ್ಮಾನಿಸಿತು.

ಪಶ್ಚಿಮ ಇಂಡಿಯಾ ದ್ವೀಪಗಳಿಗೆ ಬ್ರಿಟನ್ ಕಟ್ಟಿಸಿಕೊಟ್ಟ ಆರು ಜನಾವಕಾಶವಿರುವ ಕಿರುಹಡಗವೊಂದು.

ಸುಮಾರು ಮೂವತ್ತು ವರ್ಷಗಳಿಗೂ ಮೀರಿದ ಕಾಲಾವಧಿಯಲ್ಲಿ ಶ್ರೀ ಉದಯಶಂಕರರು ಭಾರತೀಯ ನೃತ್ಯಕಲೆಯ ಸರ್ವೋಚ್ಚ ಕಲಾಗಾರರೆಂದು ಗಣಿಸಲ್ಪಡುತ್ತಾರೆ. ನೃತ್ಯಕಲಾಕ್ಷೇತ್ರದ ಆಚಾರ್ಯರಲ್ಲಿ ಇವರೂ ಒಬ್ಬರೆಂದು ಲೋಕವಿಂದು ಒಪ್ಪುತ್ತಿದೆ. ಸಂಗೀತ ನಾಟಕ ಅಕಾಡೆಮಿಯು ಈ ವರ್ಷದ ನೃತ್ಯ ಪುರಸ್ಕಾರವನ್ನು ಶ್ರೀ ಉದಯಶಂಕರರಿಗಿತ್ತು ನೃತ್ಯಕಲಾ ಸಂವರ್ಧನೆಗಾಗಿ ಇವರು ಸಲ್ಲಿಸಿದ ಸೇವೆಗೆ ಸರಿಯಾದ ಗೌರವವನ್ನು ಅರ್ಪಿಸಿ ಸನ್ಮಾನಿಸಿತು.

ನಾನಾ ಪ್ರಕಾರದ ಬಾಧೆಗಳನ್ನೂ ಬಗೆಬಗೆಯ ಸಂಕಟ ವಿಘ್ನ ವಿಡಂಬರಗಳನ್ನೂ ಸಹಿಸಿ ಶ್ರೀ ಉದಯಶಂಕರರು ನೃತ್ಯಕಲೆಯನ್ನು ಲೋಕಪ್ರಿಯಗೊಳಿಸುವುದರಲ್ಲಿ ಮಾತ್ರವಲ್ಲ, ತಮ್ಮ ಸಾಹಸದಿಂದ ವಿದೇಶಗಳಲ್ಲಿಯೂ ಭಾರತೀಯ ನೃತ್ಯಕಲೆಯ ಬಗ್ಗೆ ಮೆಚ್ಚುಗೆಯು ದೊರೆಯುವಂತೆ ಸಗೈದರು. ನೃತ್ಯಕಲಾ ಸಂಬಂಧಿಯಾದ ಕೆಲವು ತಪ್ಪು ತಿಳುವಳಿಕೆಗಳನ್ನು ತೊಲಗಿಸಲು ಶ್ರೀಯುತರು ಪರಿಶ್ರಮ ಪಡಬೇಕಾಗಿ ಬಂದಿತ್ತು; ಆದರೆ, ಇದರ ಪರಿಣಾಮವಾಗಿಯೇ ಇಂದು ಉತ್ತಮ ಕುಲೀನವಂಶದ ಯುವಕ ಯುವತಿಯರೂ ನೃತ್ಯಕಲೆಯನ್ನು ಶಾಸ್ತ್ರೀಯವಾಗಿ ಅಭ್ಯಸಿಸುವ ಧೈರ್ಯ ತೋರುತಿದ್ದಾರೆನ್ನಬಹುದು.

ಶ್ರೀ ಉದಯಶಂಕರರು ನೃತ್ಯಕಲಾವಿದರಾಗುವುದಕ್ಕೆ ಮೊದಲು ಚಿತ್ರಕಾರರಿದ್ದರು. ಆಗ ಭಾವ-ಭಂಗಿಗಳ ಮೂಲಕ ವಿವಿಧ ಭಾವನೆಗಳನ್ನು ಸ್ಪಷ್ಟರೂಪವಾಗಿ ಪ್ರಕಟಿಸುವುದರಲ್ಲಿ ಇವರು ಸಫಲರಾಗಿದ್ದರು. ಶರೀರದ ವಿಭಿನ್ನ ಪ್ರಕಾರದ ಮುದ್ರೆಗಳ ಮೂಲಕ ಮನೋಭಾವವನ್ನು ಅಭಿವ್ಯಕ್ತಪಡಿಸುವ ಪ್ರವೃತ್ತಿಯೇ ಶ್ರೀಯುತರನ್ನು ನೃತ್ಯಕಲೆಯತ್ತ ಆಕರ್ಷಿಸಿತು. ಇದರಿಂದಾಗಿ ೧೯೨೧ರಲ್ಲಿ ಶ್ರೀ ಉದಯಶಂಕರರು ನೃತ್ಯಕಲಾಕ್ಷೇತ್ರಕ್ಕೆ ಪಾದಾರ್ಪಣ ಮಾಡಿದರು.

ಎರಡು ವರ್ಷಗಳಿಗೆ ಮೊದಲು ಅವರು ಒಂದೆಡೆ "ನಾನೀಗ ೫೮ ವರ್ಷದವನಿದ್ದೇನೆ. ೬೦ ವರ್ಷದ ವರೆಗೆ ನಾನು ನೃತ್ಯವನ್ನು ಮಾಡಬಲ್ಲೆ" ಎಂದು ವಿಶ್ವಾಸದಿಂದ ನುಡಿದಿದ್ದರು.

ಈಗೀಗ ಶ್ರೀ ಉದಯಶಂಕರರು ಛಾಯಾ ನಾಟಕಗಳಲ್ಲಿ ಅಭಿರುಚಿ ತೋರಿಸುತ್ತಿರುವರು. "ರಾಮಲೀಲಾ" ಮತ್ತು "ಭಗವಾನ್ ಬುದ್ಧ" ಎಂಬಿವರ ಛಾಯಾನಾಟಕಗಳು ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಪ್ರಶಂಸಿತವಾಗಿವೆ. ಯುರೋಪು ಮತ್ತು ಅಮೆರಿಕೆಯ ಲಕ್ಷಾಂತರ ಜನರು ಶ್ರೀಯುತರ ನೃತ್ಯಕೌಶಲವನ್ನು ಕಂಡು ತಲೆದೂಗಿರುವರು.

ಉದಯಪುರದಲ್ಲಿ ೧೯೦೦ರ ದಶಂಬರ ೮ರಂದು ಶ್ರೀ ಉದಯಶಂಕರರ ಜನ್ಮವಾಯಿತು. ಇವರ ತಂದೆ ಡಾ| ಶ್ಯಾಮ ಶಂಕರರು ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ಇವರ ಅಜ್ಜಮನೆಯು ಬನಾರಸದ ಸಮೀಪದ ನಸರತಪುರವೆಂಬಲ್ಲಿತ್ತು. ಇದೇ ಗ್ರಾಮದಲ್ಲಿ ಶ್ರೀ ಉದಯಶಂಕರರ ಬಾಲ್ಯಕಾಲ ಕಳೆಯಿತು. ಇಲ್ಲೇ ಮಾತಾದೀನನೆಂಬ ಚಮ್ಮಾರನಿದ್ದನು. ಈ ಮಾತಾದೀನನು ಆಗಾಗ ಸಾಮೂಹಿಕ ಗೀತೆಯನ್ನು ಹಾಡುತ್ತ ನರ್ತಿಸುತಿದ್ದನು. ಶ್ರೀ ಉದಯಶಂಕರರಾದರೂ ಅವನನ್ನು ಅನುಕರಿಸುತಿದ್ದರು.

ಶ್ರೀ ಉದಯಶಂಕರರಿಗೆ ನೃತ್ಯಕಲೆಯ ಪ್ರಾಥಮಿಕ ಅಭ್ಯಾಸ ಚಮ್ಮಾರ ಮಾತಾದೀನನಿಂದಾಯಿತು.

೧೯೨೦ರ ವರೆಗೆ ಶ್ರೀ ಉದಯಶಂಕರರು ಬೊಂಬಾಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಮತ್ತು ಗಂಧರ್ವ ಸ್ಕೂಲ್ ಆಫ್ ಮ್ಯೂಸಿಕ್‌ನಲ್ಲಿ ಕ್ರಮವಾಗಿ ಚಿತ್ರಕಲೆ ಮತ್ತು ವಾಯಲಿನ್ ವಾದನವನ್ನು ಕಲಿತರು. ಇದನನಂತರ ಲಂಡನ್ನಿನ ರಾಯಲ್ ಕಾಲೇಜ್ ಆಫ್ ಆರ್ಟ್ಸ್‌ಗೆ ಸೇರಿಕೊಂಡರು. ಈ ಕಾಲೇಜಿಗೆ ಸೇರಿದ ಭಾರತೀಯ ವಿದ್ಯಾರ್ಥಿಗಳಲ್ಲಿ ಶ್ರೀ ಉದಯಶಂಕರರು ಪ್ರಪ್ರಥಮರು.

ಶ್ರೀ ಉದಯಶಂಕರರು ರಶ್ಯನ್ ನರ್ತಕಿ ಅನ್ನಾ ಪೆವಲೋವಾಳೊಡನೆ ಮೊದಲ ಬಾರಿಗೆ 'ರಾಧಾಕೃಷ್ಣ' ನೃತ್ಯವನ್ನು ಅಭಿನಯಿಸಿದರು. ಮುಂದೆ ಆಕೆಯೊಡನೆ ಅಮೆರಿಕೆಗೂ ಹೋಗಿ, ಅಲ್ಲಿಯೂ ಇದೇ ನೃತ್ಯವನ್ನು ಹಲವು ಬಾರಿ ಪ್ರದರ್ಶಿಸಿದರು. ಆರ್ಥಿಕಾಭಾವವಿದ್ದರೂ ಶ್ರೀಯುತರು ನೃತ್ಯಕಲೆಯಲ್ಲಿ ಹೊಸತನ್ನು ಸಂಶೋಧಿಸಿದರು; ಹೊಸ ಕಲ್ಪನೆಗಳ ನೃತ್ಯವನ್ನು ಸಂಯೋಜಿಸಿದರು. ಫ್ರಾನ್ಸಕ್ಕೂ ತೆರಳಿ ಅಲ್ಲಿ ಬಹುವಿಧದ ಕಾರ್ಯಕ್ರಮಗಳನ್ನು ಏರ್ಪಡಿಸಿದರು.

ಒಂಬತ್ತು ವರ್ಷಾನಂತರ ಶ್ರೀ ಉದಯಶಂಕರರು ಸ್ವದೇಶಕ್ಕೆ ಮರಳಿಬಂದು, ಇಲ್ಲಿ ವಿಭಿನ್ನ ಭಾಗಗಳಲ್ಲಿ ಸಂಚರಿಸಿ ಬೇರೆ ಬೇರೆ ಪ್ರಕಾರದ ನೃತ್ಯಗಳನ್ನು ಅಭ್ಯಸಿಸಿದರು. ೧೯೩೧ರಲ್ಲಿ ತನ್ನ ಪರಿವಾರದ ಬಾಲಕ ಬಾಲಿಕೆಯರನ್ನು ಕರೆದುಕೊಂಡು ಪುನಃ ಪೇರಿಸ್‌ಗೆ ತೆರಳಿದರು. ಅಲ್ಲಿ ತಾಂಡವ, ಇಂದ್ರ, ಕಾಳಿಯಮರ್ದನ, ಖಡ್ಗಾವಾಡಿಗ ಮೊದಲಾದ ನೃತ್ಯಗಳನ್ನು ಪ್ರದರ್ಶಿಸಿ, ಅಖಂಡ ಯುರೋಪನ್ನೇ ವಿಸ್ಮಯಗೊಳಿಸಿದರು. ಐದು ವರ್ಷಗಳ ಸಂಚಾರವನ್ನು ಮುಗಿಸಿ ಭಾರತಕ್ಕಾಗಮಿಸಿದ ಶ್ರೀ ಉದಯಶಂಕರರು ಮಲಬಾರು, ಮಣಿಪುರ, ತಂಜಾವೂರು, ಗುಜರಾತ ಮತ್ತು ರಜಪುತಾನದ ನೃತ್ಯಕಲಾಚಾರ್ಯರಿಂದ ಶಾಸ್ತ್ರೀಯ ಮತ್ತು ಸಾಮೂಹಿಕ ನೃತ್ಯಗಳ ಅಭ್ಯಾಸಮಾಡಿದರು. ಇದಾದನಂತರ ಅವರು ತಮ್ಮ ಪತ್ನಿ ಶ್ರೀಮತಿ ಅಮಲಾ ಶಂಕರರೊಡನೆ ಹಲವಾರು ಬಾರಿ ವಿದೇಶಯಾತ್ರೆಗೈದು ಅಲ್ಲಿ ತಮ್ಮ ನೃತ್ಯಗಳನ್ನು ಪ್ರದರ್ಶಿಸಿ ಯಶಸ್ವಿಗಳಾಗಿ ಮರಳಿರುತ್ತಾರೆ.

೧೯೪೮ರಲ್ಲಿ ಶ್ರೀ ಉದಯಶಂಕರರು "ಕಲ್ಪನಾ" ಎಂಬ ಹೆಸರಿನ ಒಂದು ಚಲಚ್ಚಿತ್ರವನ್ನೂ ತಯಾರಿಸಿದ್ದರು ಇದು ಯುರೋಪು, ಅಮೆರಿಕಾ ಮತ್ತು ಸೋವಿಯತ್ ರಷ್ಯಗಳಲ್ಲಿ ಪ್ರದರ್ಶಿಸಲ್ಪಟ್ಟು ಕೀರ್ತಿ ಪಡೆದಿದೆ.

ಸ್ವದೇಶಕ್ಕಿಂತಲೂ ವಿದೇಶಗಳಲ್ಲಿ ಕೀರ್ತಿಶಾಲಿಯಾದ ಶ್ರೀ ಉದಯಶಂಕರರು ಭಾರತದ ಕಲಾಕ್ಷೇತ್ರದಲ್ಲಿ ಮಹತ್ಸಾಕೃತಿ ಮಾಡಿದ ಅತ್ಯುತ್ತಮ ಕಲಾವಿದರು. ಅವರಿಗೆ ಸದ್ಯ ದೊರೆತ ಗೌರವವು ಭಾರತೀಯ ನೃತ್ಯಕಲೆಯ ಪುನರುದ್ಧಾರಕ್ಕೆ ಹೇತುವಾಗಬಲ್ಲುದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O S. 384/57 R E.P 660/59

ಉಪ್ಪೂರು ಶ್ರೀ ವಿನಾಯಕ ದೇವಸ್ಥಾನದ ಟ್ರಸ್ಟಿ ಯು. ಕೆ. ಶೇಷಪ್ಪಯ್ಯ-ಅರ್ಜಿದಾರ.

ಮತ್ತು

ತುಂಗಮ್ಮ ಸೆಡ್ತಿ ಕೂಡಾ —ಎದುರು.

ಇವರೊಳಗೆ

11ನೆ ಎದುರು ಶಿವರಾಮ ಶೆಟ್ಟಿ. ಸಂಜೀವಿ ಶೆಡ್ತಿ ಮಗ ಉಡುಪಿ ತಾಲೋಕು ಕೊರಂಗ್ರಪಾಡಿ ಗ್ರಾಮದ ಕೆಂಮ್ಮಣ್ಣು—ಇವರಿಗೆ ತಿಳಿಸುವುದೇನೆಂದರೆ

ಮೇಲ್ಕಂಡ ಅಮಲ್‌ಜಾರಿಯು ಡಿಕ್ರಿಗೆ ಜವಾಬ್ದಾರಿಯಿರುವ ಆಸ್ತಿ ಯಲಂ ಬಗ್ಗೆ ಹಾಜ್ರುಪಡ್ಸಿದ ಯಲಂ ಯಸ್ಟ್ಯಾಮಿಗೆ ಯಲಂ ಶರ್ತ ನಿರಣಯಿಸುವರೆ ತಾ. 13—4—60ಕ್ಕೆ ಯಿಡೋಣಾಗಿಯದೆ ಆ ಕುರಿತು 11 ನೆ ಯದುರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidyoor

Advocate for Petitioner.

ಉಡುಪಿ. 1—4—60.

ಕುಂದಾಪುರ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O. P. 39/60

ಉಡ್ಪಿ ಶ್ರೀ. ಸೋಧ ಮಠ. —ಅರ್ಜಿದಾರ

ಶೀನ ಶೆಟ್ಟಿ ಕೂಡಾ —ಎದುರು

1ನೆ ಎದುರು ಶೀನ ಸೆಟ್ಟಿ ತೇನಾಡಿ ಅಂಗಡಿಮನೆ ಭದ್ರ ಶೆಟ್ರ ಅಳಿಯ ಕುಂದಾಪುರ ತಾಲ್ಲೂಕು ಅನೋಡು ಗ್ರಾಮದ ಮಾವಿನಕೆರೆ ಯಲ್ಲಿರುವ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ಕೂಡಾ 2ಜನರ ಮೇಲೆ ಅರ್ಜಿದಾರನು ಮೇಲೆ ಕಾಣಿಸಿದ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲೆ ಕಾಣಿಸಿದ ಅರ್ಜಿಯು ತಾ 14—4—60ಕ್ಕೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ತನ್ಕಿಗೆಯಿಟ್ಟಿರುತ್ತದೆ. ಆದರಿಂದ ಸದ್ರಿ ತನ್ಕಿ ದಿವಸ ಪೂರ್ವಾಹ್ನ 11ಗಂಟೆಯೊಳಗೆ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಸದ್ರಿ ಕೋರ್ಟು ಮುಂದೆ ಹಾಜರಾಗಿ ನ್ಯಾಯವನ್ನು ತಕ್ಕದ್ದು ತಪ್ಪಿದ್ರೆ ನಿಮ್ಮನ್ನು ಎಕ್ಸಪಾರ್ಟಿ ಮಾಡಿ ಮೇಲ್ಕಾಣಿಸಿದ ಅರ್ಜಿಯು ತನ್ಕಿಯಿಂದ ತೀರ್ಮಾನ ಮಾಡಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸಿಯದೆ.

By order

K. Soorappa Shetty.

Advocate Coondapoor

Camp. Coondapoor 2/4/60.

ಕುಮಾರಿ ಬಿಳ್ತಿಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸ್ಥಳಪರಿಚಯ

ಯುರೇನಿಯಂ ನ ಮೇರಿ ಕೆಥೆಲೀನ್

ಆರು ವರ್ಷಗಳ ಹಿಂದೆ ಅಜ್ಞಾತವಾಗಿದ್ದ ಈ ಓಯೆಸಿಸ್ ಈಗ ಉತ್ತಮ ಸಮಾಜವೊಂದರ ಆವಾಸಸ್ಥಾನವಾಗಿದೆ.

ಆಸ್ಟ್ರೇಲಿಯಾದ ವಾಯುವ್ಯ ಕ್ವೀನ್ಸ್‌ಲೇಂಡಿನ ಎತ್ತರದ ಭಾಗವೊಂದರಲ್ಲಿ "ಮೇರಿ ಕಥೆಲೀನ" ಎಂಬ ನಗರದಲ್ಲಿ ಉತ್ಕರ್ಷ ಯುರೇನಿಯಮಿನ ಗನಿಗಳಿವೆ. ೩೩ ಮಿಲಿಯ ಆಸ್ಟ್ರೇಲಿಯನ್ ಡಾಲರುಗಳ ವೆಚ್ಚದಿಂದ ನಿರ್ಮಿಸಲಾದ ಒಂದು ಓಯಸಿಸ್ ಇದು. ಇಲ್ಲಿ ಯುರೇನಿಯಂ ಆಕ್ಸೈಡನ್ನು ಅಣುಶಕ್ತಿ ಕೇಂದ್ರಗಳಿಗಾಗಿ ಉತ್ಪಾದಿಸಲಾಗುತ್ತದೆ.

ವಿಸ್ತಾರವಾದ ಶುಷ್ಕ ರಕ್ತವರ್ಣದ ಈ ಗನಿಯ ಸುತ್ತುಮುತ್ತಲಿನ ಪ್ರದೇಶವು ಕುರಚಲು ಗಿಡಗಳು, ಬಂಧದ ಮರಗಳು ಹಾಗೂ 'ಟರ್ಪೆಂಟೈನ್' ಎಂಬ ಹೂವಿನ ಗಿಡಗಳಿಂದ ಕೂಡಿದ್ದು ಅವುಗಳಿಂದ ಪ್ರತ್ಯೇಕಿತವಾಗಿದೆ. ಸಸ್ಯಗಳಿರುವುದಾದರೂ ಅದು ಮಾನವರು ಹಸಿವು ತೃಷೆಗಳಿಂದ ಜೀವ ಬಿಡಬಹುದಾದ ಒಂದು ಸ್ಥಳ. ದಶಂಬರ ಮತ್ತು ಫೆಬ್ರುವರಿ ತಿಂಗಳುಗಳ ನಡುವಣ ಕಾಲದಲ್ಲಿ ಇಲ್ಲಿನ ಉಷ್ಣವು ೧೨೦ ಡಿಗ್ರಿ ಫೆರನ್‌ಹೈಟ್‌ಗಳಷ್ಟು ಏರುವುದು. ಆದೇನೇ ಇದ್ದರೂ ಇದೊಂದು ಈಗ ಸ್ನೇಹಭೂಮಿಯಾಗಿದೆ.

ಶ್ರೀ ಕ್ಲೆಮ್ ವಾಲ್ಟನ್ ಮತ್ತು ಶ್ರೀ ನಾರ್ಮನ್ ಮೆಕ್ ಕೊನಚಿಯವರ ನಾಯಕತ್ವದಲ್ಲಿದ್ದ ೮ ಜನರ ನಿಯೋಗವೊಂದು ೧೯೫೪ರಲ್ಲಿ ಆಕಸ್ಮಿಕವಾಗಿ ಈ ಯುರೇನಿಯಂ ನಿಕ್ಷೇಪವನ್ನು ಸಂಶೋಧಿಸಿತು. ಇದಕ್ಕಿಂತ ಕೆಲಕಾಲ ಹಿಂದೆ ಗತಿಸಿಹೋಗಿದ್ದ ಶ್ರೀಮತಿ ಮೆಕ್ ಕೊನಚಿಯವರ ಹೆಸರಿನ ಸ್ಮಾರಕವಾಗಿ ಈ ನಿಕ್ಷೇಪ ಸ್ಥಳವನ್ನು 'ಮೇರಿ ಕಥೆ ಲೀನ್' ಎಂಬುದಾಗಿ ಕರೆಯಲಾಯಿತು.

ಇಲ್ಲಿ ದೊರೆಯಬಹುದಾದ ನಿಕ್ಷೇಪದ ಪ್ರಮಾಣದ ಬಗ್ಗೆ ಸಾಕಷ್ಟು ವಿಶ್ವಾಸವನ್ನು ತಾಳಿದನಂತರ ಯುರೇನಿಯಂಗೆ ಆವಶ್ಯಕ ಮಾರುಕಟ್ಟೆಯನ್ನು ಕಂಡುಹಿಡಿಯುವುದು ಬಹು ಶೀಘ್ರದ ಕೆಲಸವಾಗಿತ್ತು. ೧೯೫೬ನೆಯ ಫೆಬ್ರುವರಿಯಲ್ಲಿ ಗ್ರೇಟ್ ಬ್ರಿಟನ್ನಿನ ಅಣುಶಕ್ತಿ ವಿಭಾಗಕ್ಕೆ ೪,೫೦೦ ಸಣ್ಣ ಟನ್ ಯುರೇನಿಯಂ ಆಕ್ಸೈಡನ್ನು ಒದಗಿಸುವ ಬಗ್ಗೆ ಒಂದು ಒಡಂಬಡಿಕೆಯಾಯಿತು. ಇದರಿಂದ ೪೦ ಮಿಲಿಯ ಆಸ್ಟ್ರೇಲಿಯನ್ ಡಾಲರುಗಳ ಆದಾಯವಾಗುವುದೆಂಬ ನಿರೀಕ್ಷೆಯಿದೆ.

ಸಮೀಪದ ಬಂದರ ಟೌನ್ಸ್‌ವಿಲ್ಲರಿಂದ ಮೇರಿ ಕೆಥೆಲೀನ್ ಐನೂರು ಮೈಲಿಗೂ ಹೆಚ್ಚು ದೂರವಿದೆ. ಇಲ್ಲಿಂದ ೪೫ ಮೈಲು ದೂರದಲ್ಲಿ ಟೌನ್ಸ್‌ವಿಲ್ಲ-ಕ್ಲೋಂಕರಿ ರೇಲ್ವೆದಾರಿಯು ಕೊನೆಮುಟ್ಟುವುದು. ಇಲ್ಲಿ ಒಂದು ನಗರವನ್ನು ಕಟ್ಟುವುದು ಮತ್ತು ೧,೦೦೦ ಜನರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡುವತ್ತ ಪ್ರಥಮ ಪ್ರಾಶಸ್ತ್ಯವನ್ನು ನೀಡಲಾಯಿತು. ಗನಿಗಳಿಂದ ನಾಲ್ಕು ಮೈಲುಗಳ ಅಂತರದಲ್ಲಿ ಉಷ್ಣವನ್ನು ಕಡಿಮೆಯಾಗಿಸುವಂತೆ ಕಟ್ಟಲಾದ ಮನೆಗಳಿವೆ. ಆಸ್ಪತ್ರೆ, ಅಂಗಡಿಗಳು, ಕ್ರೀಡಾಂಗಣ, ಈಜುಕೊಳ, ಸಿನೆಮಾ ಮತ್ತು ಬಹಿರುದ್ಯಾನಗಳೆಲ್ಲವೂ ಇಲ್ಲಿ ಇವೆ. ಇಲ್ಲಿರುವ ಬೇಂಕುಗಳು, ಅಂಚೆಮನೆ, ಎರಡು ಇಗರ್ಜಿಗಳು, ಶಾಲೆ ಮತ್ತು ಪೋಲಿಸ್ ನಿಲ್ದಾಣಗಳನ್ನು ಬಿಟ್ಟು ಉಳಿದ ಎಲ್ಲ ಕಟ್ಟಡಗಳೂ ಯುರೇನಿಯಂ ಕಂಪೆನಿಯ ಅಂಕಿತದಲ್ಲಿರುತ್ತವೆ. ಮಾರುಕಟ್ಟೆ ಹಾಗೂ ತೋಟಗಳು ಇಲ್ಲಿನವರಿಗೆ ತರಕಾರಿಗಳನ್ನೂ ಹಣ್ಣುಹಂಪಲುಗಳನ್ನೂ ಒದಗಿಸುತ್ತವೆ.

ಇಲ್ಲಿನ ಭೂಮಿಯನ್ನು ಸಮೃದ್ಧವಾಗಿಸುವುದಕ್ಕೆ ನೀರಾವರಿ ಸೌಕರ್ಯ ಮತ್ತು ಗೊಬ್ಬರಗಳ ಆವಶ್ಯಕತೆಯಿರುವುದು. ವಿಪರೀತ ಮಳೆ ಬಂದಾಗ ತುಂಬಿ ಹರಿಯುವ, ಒಣಕಾಲದಲ್ಲಿ ಒಣಗಿಹೋಗುವ ಕೊರೆಲ್ಲಾ ನದಿಗೆ ಅಣೆಕಟ್ಟನ್ನು ಹಾಕಿ ನೂರು ವರ್ಷಗಳವರೆಗೆ ಎಲ್ಲ ಉದ್ದೇಶಗಳಿಗೂ ನೀರನ್ನು ಒದಗಿಸುವಂತೆ ಕಟ್ಟಲ್ಪಟ್ಟಿದೆ. ಸಮೀಪದ ವಿದ್ಯುದಾಗಾರವು ಔದ್ಯಮಿಕ ಕ್ಷೇತ್ರಕ್ಕೆ ಮಾತ್ರವಲ್ಲದೆ ಗೃಹೋಪಯೋಗಕ್ಕೂ ವಿದ್ಯುಚ್ಛಕ್ತಿಯನ್ನು ಒದಗಿಸುತ್ತದೆ. ನಗರ, ಗನಿ, ಕಾರ್ಖಾನೆ ಮತ್ತು ಅಣೆಕಟ್ಟುಗಳೆಲ್ಲವೂ ಕೇವಲ ಎರಡೂವರೆ ವರ್ಷಗಳಲ್ಲಿಯೇ ನಿರ್ಮಾಣವಾದುವು. ೧೯೫೮ರ ಜೂನ್ ೩ರಂದು ಕಾರಖಾನೆಯು ಕೆಲಸಕ್ಕೆತೊಡಗಿ, ೧೯ನೆಯ ದಿನಾಂಕವೇ ಪ್ರಥಮ ಆಕ್ಸೈಡು ಉತ್ಪಾದಿತವಾಯಿತು.

ಇಲ್ಲಿನ ಜನಸಂಖ್ಯೆ ಕೇವಲ ಒಂದು ಸಾವಿರ. ಇವರಲ್ಲಿ ೧೪ ವರ್ಷಕ್ಕೆ ಕಡಿಮೆ ಪ್ರಾಯದ ಮಕ್ಕಳು ೬೩೦. ಈ ಮಕ್ಕಳಲ್ಲಿ ೧೫೨ ಮಕ್ಕಳು ಶಾಲೆಗೆ ಹೋಗುತ್ತಾರೆ. ೩೦೦ ಒಂಟಿ ಯುವಕರು; ೧೫೦ ದಂಪತಿಗಳು. ಅವಿವಾಹಿತ ಸ್ತ್ರೀಯರು ಬೆರಳೆಣಿಕೆಯಷ್ಟು ಮಾತ್ರ. ಆಟಗಳು, ಕ್ಲಬ್‌ಗಳು ಇಲ್ಲಿವೆ.

ಮೇರಿ ಕೆಥೆಲೀನದಲ್ಲಿ ಸಮಾಜ ಸಂತುಷ್ಟವಾಗಿದೆ. "ಈ ಪರ್ವತಗಳ" ಫೂಟ್‌ಬಾಲ್ ಸಂಗಡವಲ್ಲಿ ಬಂದಿದ್ದಾಗ ನಗರದಲ್ಲಿ ಪೋಲೀಸು ಕಾರ್ಯಾಚರಣೆ ನಡೆದಿತ್ತು. ನಗರದ ಐದು ವಾರ್ಡುಗಳಲ್ಲಿಯೂ ಮಕ್ಕಳಿಗೆ ಆಡಲು ಬೇರೆ ಬೇರೆ ಆಟದ ಬಯಲುಗಳಿವೆ. ಆಸ್ಟ್ರೇಲಿಯನ್ ಇನ್‌ಲೇಂಡ್ ಮಿಶನಿನವರು ನಡೆಸುತ್ತಿರುವ ೮ ಹಾಸಿಗೆಗಳ ಆಸ್ಪತ್ರೆಯಲ್ಲಿ ಮೂವರು ದಾದಿಗಳಿದ್ದಾರೆ. ತಿಂಗಳಿಗೆ ಮೂರು ಮಗುಗಳು ಜನಿಸುವ ಒಂದು ಪ್ರಸೂತಿಶಾಲೆಯೂ ಇಲ್ಲಿರುವುದು.

ಮನೆಗಳೆಲ್ಲವೂ ಸುಯೋಜಿತವಿವೆ. ಮೂರು ಹಾಸಿಗೆಯ ಕೋಣೆಗಳಿಗೆ ವಾರಕ್ಕೆ ೩.೧ ಡಾಲರ್ ಮತ್ತು ಎರಡು ಹಾಸಿಗೆಯವಕ್ಕೆ ೨.೧ ಡಾಲರ್ ಬಾಡಿಗೆ. ಇವರಲ್ಲಿ ವಿದ್ಯುದ್ದೀಪ, ರಿಫ್ರಿಜರೇಟರ್ ಎಲ್ಲವೂ ಸ್ಥಾಪಿತವಾಗಿದೆ. ಸೂರ್ಯನ ಬಿಸಿಲಿನಿಂದ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಮನೆಗಳೆಲ್ಲವನ್ನೂ ಉತ್ತರಾಭಿಮುಖವಾಗಿಯೇ ಕಟ್ಟಿದ್ದಾರೆ. ಮನೆಗಳ ಮುಂದೋಟದ ಅಭಿವೃದ್ಧಿಗಾಗಿ ಆಗಾಗ ಸ್ಪರ್ಧೆಗಳು ನಿಯೋಜಿತವಾಗಿವೆ. ಅಲ್ಲದೇ ವನ ಮಹೋತ್ಸವಕ್ಕೂ ಇಲ್ಲಿ ಪ್ರಾಧಾನ್ಯ ನೀಡಲಾಗುತ್ತಿದೆ.

ಇಂದು ಮೇರಿ ಕೆಥೆಲೀನ್ ಎಂಬುದು ಯುರೇನಿಯಂ ಕಾರಖಾನೆಗಿಂತ ಭಿನ್ನವಾಗಿದೆ. ಒಂದು ಕಾಲದಲ್ಲಿ ಜನನಿವಾಸಕ್ಕೆ ನಿರುಪಯೋಗಿಯಾದ ಇದು ಇಂದು ಉತ್ತಮ ಸಮಾಜವೊಂದರ ಆವಾಸಸ್ಥಾನವಾಗಿ ರೂಪಿತಗೊಳ್ಳುತ್ತಿದೆ.

ಕಥಾವಿಹಾರ

(೩ನೇ ಪುಟದಿಂದ)

ಮೂಡಲಲ್ಲಿ ನೇಸರುದಿಸುವ ಮುನ್ಸೂಚನೆಗಳು ತೋರಬತೊಡಗಿದವು. ದೂರದ ಮೋಡುಗಳ ಕೋಡಿನಿಂದ ದಿನಪ ನುದಿಸಲು ಅಣಿಮಾಡುತ್ತಿದ್ದನು. ಕೆಂಬಣ್ಣ ಓಕುಳಿ ಆಡುತಿತ್ತು. ನಸು ಬೆಳಕಿನಿಂದ ಭೂಮಿಯು ಬೆಳಗುತಿತ್ತು. ನಾವು ಅದೇ ಮುಂಜಾವದ ತಂಗಾಳಿಗೆ ಮೈಯೊಡ್ಡಿ ಆ ಬೆಳಕಿನಲ್ಲಿ ಮುನ್ನಡೆಯ ತೊಡಗಿದೆವು. ಅಷ್ಟರಲ್ಲಿಯೇ ನನ್ನ ಮುಂದೆ ಒಂದು ಕಟ್ಟೆಯು ಕಾಣಿಸಿತು. ನಾನು ಅಂಥ ಕಾರದಲ್ಲಿ ಅದೆಷ್ಟು ದೂರ ನಡೆದ ಬಂದಿರುವೆನೋ ನಾನರಿಯೆ. ಕಾಲುಗಳು ಸೋತು ಹೋಗಿದ್ದವು; ಮೈನೋಯುತಿತ್ತು, ನರಗಳು ಸೆಳೆಯತೊಡಗಿದವು. ಆ ನಸು ಬೆಳಕಿನಲ್ಲೂ ಕಟ್ಟೆಯ ದೀಪವೊಂದು ಜಾಜ್ವಲ್ಯಮಾನವಾಗಿ ಬೆಳಗುತಿತ್ತು. ನಾನು ಆ ಅಂಧಾಕಾರದ ನಡುವೆ ಕಂಡ ಆ ದಿವ್ಯ ಜ್ಯೋತಿಯಿಂದೇ ಆಗಿತ್ತು. ನನ್ನ ಗುರಿಯೂನೋ ಲಭಿಸಿತ್ತು. ಆದರೆ, ನನಗಿಂತಲೂ ಮೊದಲು ಬೇರೆ ಮೂವರು ಆ ಕಟ್ಟೆಯನ್ನು ಸೇರಿ ಬಿಟ್ಟಿದ್ದರು.

ನಾನು ಆನಂದೋತ್ಸಾಹದಿಂದ ಕುಣಿದಾಡ ತೊಡಗಿದೆ. ನನ್ನ ಹೃದಯದಲ್ಲಿ ಆ ಸ್ವಕಾಂತನಂದವು ಮಂದ ಮಂದವಾಗಿ ಹೊರಸೂಸ ತೊಡಗಿತ್ತು. ಒಂದರೆಕ್ಷಣ, ನಾನಾವ ಲೋಕದಲ್ಲಿದ್ದೇನೆ. ಏನು ಮಾಡುತ್ತಿದ್ದೇನೆ; ಏಕೆ ಇಲ್ಲಿ ಬಂದಿದ್ದೇನೆ, ಎಂಬಿತ್ಯಾದಿ ಮಹಾ ಸಮಸ್ಯೆಗಳತ್ತ ಮನಹರಿಸ ಹೊರಟು ದಿಗ್ಭ್ರಾಂತನಾದೆ. ನಾನು ಸಂತೋಷ ವಿಸ್ಮಯಗಳ ಸಂತುಲನದಿಂದ ಕಕ್ಕಾಬಿಕ್ಕಿಯಾದೆ

ಅಷ್ಟರಲ್ಲಿ ನನ್ನ ಮುಂದಿದ್ದ ಛಾಯೆ ಮಾಯವಾದಂತಾಯಿತು. ನಾನು ಸುತ್ತಲೂ ನೋಡಿದೆ; ಇಲ್ಲ, ಎಲ್ಲಿಯೂ ಇರಲಿಲ್ಲ. ಸೂರ್ಯನ ಪ್ರಕಾಶದಲ್ಲಿ ಆ ಛಾಯೆಯು ಎಲ್ಲೋ ಅಡಗಿಹೋಗಿತ್ತು. ಕಟ್ಟೆಯ ದೀಪವೂ ಮಂದಮಂದವೆನಿಸುತಿತ್ತು. ನಾನು ದಿಙ್ಮೂಢನಾಗಿ ನೋಡುತ್ತಿದ್ದಂತೆಯೇ ಎಲ್ಲಿಂದಲೋ ಮಾತುಗಳು ಕೇಳಬಂದುವು: "ಗುರಿ ಮುಟ್ಟಬೇಕಾದರೆ, ಅದೆಷ್ಟು ಪರಿಶ್ರಮ ಪಡಬೇಕೆಂಬುದನ್ನು ನೀನು ಪ್ರತ್ಯಕ್ಷ ಕಂಡಿರುವೆತಾನೆ? ರೈತನು ತನ್ನ ಮನಸ್ಸು ಮತ್ತು ಪ್ರಾಣವನ್ನು ಪಣವಾಗಿಟ್ಟು ಬೆಂಗಾಡಿಗೆ ನೀರೆರೆಯುತ್ತಾನೆ; ಹಾಗೆ ಮಾಡಿದರೆ ಮಾತ್ರ ಆ ಬೆಂಗಾಡು ಫಲವತ್ತಾಗುತ್ತದೆ. ಕಮ್ಮಾರನು ತನ್ನ ದೇಹವೆಲ್ಲವನ್ನೂ ಒಣಗಿಸುತ್ತಾನೆ; ಆಗಲೇ ಕಬ್ಬಿಣವೂ ಅಧೀನವಾಗುತ್ತದೆ. ಯಾತ್ರಿಕರು ತಮ್ಮ ಜೀವನವನ್ನೇ ಗುರಿ ಮುಟ್ಟಲು ಸವೆಯಿಸುತ್ತಾರೆ; ಇಲ್ಲವಾದರೆ, ಅವರು ಎಂದೋ ನಾಶವಾಗಿ ಹೋಗುತಿದ್ದರು. ನೀನೂ ಜ್ಞಾನ ಭಂಡಾರದ ಹಲವಾರು ಪುಸ್ತಕಗಳನ್ನು ಓದಿರುವೆ ತಾನೆ? ಆದರೆ, ನೀನು ಗಳಿಸಿದ ಜ್ಞಾನವೆಷ್ಟು? ಏನೇನೂ ಇಲ್ಲ! ಜ್ಞಾನವೆಂಬುದು ಸಂಪಾದನೆಯಿಂದ ಲಭ್ಯವಾಗುವುದು. ಪರಿಶ್ರಮದಿಂದ ಜ್ಞಾನದ ಗಿಡಕ್ಕೆ ನೀರೆರೆ; ಜೀವನದಲ್ಲಿ ಜ್ಞಾನ ಧಾತುವನ್ನು ಸಿದ್ಧಗೊಳಿಸು; ಮಾರ್ಗದಲ್ಲಿ ಆಯಾಸ ಪರಿಶ್ರಮಗಳನ್ನು ಲಕ್ಷಿಸದೆ ಜ್ಞಾನ ಸೋಪಾನವನ್ನೇರು. ಜ್ಞಾನವೆಂಬುದು ತಾನಾಗಿಯೇ ಬಂದು ಸೇರುವ ದಿವ್ಯಾನುಗ್ರಹವಲ್ಲ; ಅದು ಪರಿಶ್ರಮ ರೂಪದಿಂದ ಗಳಿಸಬಲ್ಲವನಿಗೆ ಮಾತ್ರ ಕೈಸೇರುವ ವಸ್ತು."

ನಾನು ಕಿವಿಗೊಟ್ಟು ಆಲಿಸುತ್ತಿದ್ದೆ. ಮಾತು ಮುಗಿಯಿತು. ಕಣ್ಣರಳಿಸಿ ನೋಡುವಾಗ ಬೆಳ್ಳಂಬೆಳಗಾಗಿತ್ತು; ನನ್ನ ತಲೆಯೂ ಹಗುರವೆನಿಸುತಿತ್ತು.

—ಗೋರಾ.

ನೋವುಗಳ ಅತ್ಯುತ್ತಮ ಸಂಹಾರಿಣಿ



ಸಾಹಿತ್ಯ ಕ್ಷೇತ್ರ

......ವಿದ್ವಾನ್ ಸರ್ವತ್ರ ಪೂಜತೇ

ಈ ಘಾಲಿಬರ ಕೃತಿಗಳು ಸ್ವದೇಶದಲ್ಲಿಯೂ ಜನಾದರಣೆ ಪಡೆದಿರುವುದಿಲ್ಲವೇ?

ಉರ್ದೂ ಸಾಹಿತ್ಯ ಪ್ರೇಮಿಗಳು ಇತ್ತೀಚಿಗೆ ದೆಹಲೀ ವಿಶ್ವವಿದ್ಯಾಲಯದವರ ವರ್ತನೆಗಿಂತ ಉತ್ತಮವೆನಿಸಿದುದನ್ನು ಕೇಳಿರಲಾರರು. ಹಿಂದಿನ ಕವಿಗಳ ಬಗ್ಗೆ ಮಾತಾಡುವ ಇಂದಿನ ಉತ್ತಮ ವಕ್ತಾರರಾದ ಜಾಕೀರ ಹುಸೇನರಿಂದ ಘಾಲಿಬರ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿದುದು ಒಂದು ಅಪೂರ್ವ ಸಂದರ್ಭವೆನ್ನಬೇಕು. ಘಾಲಿಬರ ಬಗ್ಗೆ ತಾವು ತಿಳಿದಿರುವುದನ್ನು ಅಥವಾ ತಾವು ಯೋಚಿಸಿರುವುದನ್ನು ಬಹಿರಂಗವಾಗಿ ವ್ಯಕ್ತಪಡಿಸಲು ವಿದೇಶೀಯರನ್ನೂ ಆಮಂತ್ರಿಸಿರುವುದು ಸಮುಚಿತ ಆಲೋಚನೆಯಾಗಿದೆ. ಇಂಗ್ಲಿನ ರಷಿಯಾ ಮತ್ತಿತರ ೧೨ ರಾಷ್ಟ್ರಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಇವರಲ್ಲಿ ಹೆಚ್ಚಿನವರೆಲ್ಲರೂ ಘಾಲಿಬರ ಬಗ್ಗೆ ಲೇಖನವನ್ನು ಬರೆದಿದ್ದರೇನೋ ನಿಜವೇ. ಆದರೂ ಮೂರು ತಾಸುಗಳ ನಂತರವೂ ಈ ಕಾರ್ಯಕ್ರಮವು ಮತ್ತಷ್ಟು ಸಮಯ ಮುಂದುವರಿಯುವಂತೆ ತೋರಿಬಂತು. ಜರ್ಮನಿಯ ಸಾಂಸ್ಕೃತಿಕ ಪ್ರತಿನಿಧಿಯು ತನ್ನ ಚಿಕ್ಕ ಆದರೂ ಆಕರ್ಷಕ ಭಾಷಣದಲ್ಲಿ ಘಾಲಿಬರು ಪಾಪ ಮತ್ತು ದುಃಖವೆಂದರೇನೆಂಬುದನ್ನು ಅರಿತಿದ್ದುದರಿಂದಲೇ ಶ್ರೇಷ್ಠರಾದರೆಂದು ಅಂದರು. ಅವರು ಘಾಲಿಬರ ಪ್ರ ಪ್ರಥಮ ಕೈ ಹೊತ್ತಗೆಯು ಇಪ್ಪತ್ತೈದು ವರ್ಷ ಪೂರ್ವದಲ್ಲಿ ಜರ್ಮನಿಯಲ್ಲಿ ಪ್ರಕಾಶಗೊಂಡಿತ್ತು ಎಂಬುದನ್ನು ಸಭ್ಯರ ಸ್ಮರಣೆಗೆ ತಂದುಕೊಟ್ಟರು. ಘಾಲಿಬರ ಕವಿತೆಗಳ ಚೆಕ್ ಅನುವಾದವು ಸಿದ್ಧವಾಗಿದ್ದು ಅದು ಕೆಲವೇ ಕಾಲದಲ್ಲಿ ಪ್ರಕಟಗೊಳ್ಳುವುದೆಂಬ ಘೋಷಣೆಯು ಪೂರ್ವ ಯುರೋಪಿನ ದೇಶಗಳು ಉರ್ದು ಮತ್ತು ಹಿಂದೀ ಭಾಷೆಗಳಲ್ಲಿ ಆಸಕ್ತಿ ತೋರಿಸುತ್ತಿರುವರೆಂಬುದನ್ನು ದೃಢೀಕರಿಸುತ್ತದೆ. ರಶ್ಯನ್ ಯುವಕರೊಬ್ಬರು ಉರ್ದೂಭಾಷೆಯಲ್ಲೇ ಮಾತನಾಡಿ ರಶ್ಯದೇಶದಲ್ಲಿ ಆಡಲ್ಪಡುವ ಸುಮಾರು ಆರು ಭಾಷೆಗಳಲ್ಲಿ ಘಾಲಿಬರ ಕೃತಿಗಳು ಮುಂದಿನ ವರ್ಷದಲ್ಲಿ ದೊರೆಯುವುವು ಎಂದು ಹೇಳಿದರು. ಕಾಳಿದಾಸ ಮತ್ತು ರವೀಂದ್ರನಾಥ ಟಾಗೋರರನ್ನು ಬಿಟ್ಟರೆ ಬೇರಾವ ಭಾರತೀಯ ಕವಿಯೂ ಇಂತಹ ಮಟ್ಟಕ್ಕೆ ಬಂದಿಲ್ಲವೆಂದೇ ಹೇಳಬೇಕು.

ಆದರೆ, ಈ ಸಂಗತಿಯೇನೂ ಸೋಜಿಗವೆನ್ನುವಂತಿಲ್ಲ. ಉರ್ದೂ ಸಾಹಿತ್ಯವನ್ನು ಅಭ್ಯಸಿಸುವ ಮನವಿದ್ದವನು ಘಾಲಿಬರನ್ನು ತೊರೆದರೆ, ಆತನ ಕೆಲಸ ಪೂರ್ತಿಯಾಗಲಾರದು. ಅಲ್ಲದೇ ಈ ಗೌರವವು ಒಂದು ಸುಸಂಸ್ಕೃತ ಹಾಗೂ ಮಧುರ ಭಾಷೆಗೆ ಈಯುವ ನ್ಯಾಯೋಚಿತ ಪ್ರಶಸ್ತಿಯೂ ಆಗುವುದು.

ವಿದೇಶೀಯರು ಘಾಲಿಬರ ಬಗ್ಗೆ ಇಷ್ಟೊಂದು ಆದರಾಭಿಮಾನವನ್ನು ನೀಡುತ್ತಿರುವಾಗ, ಸ್ವದೇಶದಲ್ಲಿ ನಾವು ಅವರ ಪರವಾಗಿ ಯಾವರೀತಿಯ ಭಾವನೆಯನ್ನು ಪ್ರದರ್ಶಿಸುತ್ತೇವೆ? ಕೆಲವರ್ಷಗಳಿಗೆ ಮೊದಲು ಘಾಲಿಬರಿಗೊಂದು ಸುಯೋಗ್ಯವಾದ ಸಮಾಧಿಕೂಡ ಇರಲಿಲ್ಲ. ಅದುವರೆಗೆ ಒಂದು ಸಾಮಾನ್ಯ ಗೋರಿಮಾತ್ರವಿತ್ತು! ಇಂದಿಗೂ ಅವರ ಸ್ಮಾರಕದ ಚಂದ್ರಕಾಂತ ಶಿಲೆಯ ಮೇಲೆ ಪೆನ್ಸಿಲಿನ ಗುರುತುಗಳನ್ನು ನಾವು ಕಾಣುತ್ತೇವೆ. ಘಾಲಿಬರ ಭಕ್ತರು ಅವರ ಸಮಾಧಿಯನ್ನು ಸಂದರ್ಶಿಸಿದ ತಮ್ಮ ಹೆಸರು, ವಿಳಾಸ ಮತ್ತು ಸಂದರ್ಶನದ ದಿನಾಂಕವನ್ನು ದಾಖಲುಮಾಡುವುದು ಸ್ವಪ್ರತಿಷ್ಠೆಗೆ ಅತ್ಯವಶ್ಯ ಎಂದು ತಿಳಿಯುತ್ತಾರೆ.

ನಮ್ಮ ಲೇಖಕರು ಘಾಲಿಬರನ್ನು ಯಾವರೀತಿ ಕಾಣುತ್ತಾರೆಂದು ನಾವು ತಿಳಿಯಲು ಉತ್ಸುಕರಾಗಿದ್ದೇವೆ. ಅವರ ಯಾವುದಾದರೂ ಗ್ರಂಥವು ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿತವಾದುದಿದೆಯೆ? ತೆಲುಗು ಮಾತಾಡುವ ಜನರು ಘಾಲಿಬರ ಆದರ್ಶವನ್ನೂ, ಉರ್ದೂ ಭಾಷಾಭ್ಯಾಸಿಗಳು ಪುರಂದರದಾಸರನ್ನೂ ಗೌರವಿಸಬೇಕೆಂದು ನಾವು ಯಾವ ನಾಲಿಗೆಯಿಂದ ಅನ್ನಬಹುದು? ಬೇರೆ ಬೇರೆ ಭಾಷೆಗಳ ಅತ್ಯುತ್ತಮ ಲೇಖಕರ ಕೃತಿಗಳ ಪರಿಚಯವನ್ನು ಮಾಡಿಕೊಳ್ಳುವುದರಿಂದ ನಮ್ಮ ಜ್ಞಾನವೂ ಹೆಚ್ಚುವುದಿಲ್ಲವೇ?

೧೯೬೯ರಲ್ಲಿ ಘಾಲಿಬರ ಶತಮಾನೋತ್ಸವವು ನೆರವೇರುವುದು. ಈ ಸಮಯದಲ್ಲಾದರೂ ಘಾಲಿಬರ ಎಲ್ಲಾ ಕೃತಿಗಳ ಸಂಗ್ರಹಣ ಕಾರ್ಯ ಮತ್ತು ಭಾರತದ ಹೆಚ್ಚಿನ ಪ್ರಾದೇಶಿಕ ಭಾಷೆಗಳಲ್ಲಿ ಅವುಗಳ ಅನುವಾದದ ಕಾರ್ಯವು ಪೂರ್ಣಗೊಳ್ಳುವುದೆಂದು ಡಾ| ಜಾಕೀರ ಹುಸೇನರು ಹಾರೈಸಿದರು. ಮತ್ತು ಇವರ ಹಾರೈಕೆಯೊಡನೆ ಎಲ್ಲರ ಧ್ವನಿಯೂ ಸೇರುವುದು ಆವಶ್ಯ.

ಉತ್ತಮ ಸಾಹಿತ್ಯಕ್ಕೆ ಭಾಷೆ, ದೇಶಗಳು ಅಡ್ಡ ಬರಲಾರವು ಪವಿಯು ಆದರ್ಶ ಸಾಹಿತ್ಯ ಕೃತಿಗಳಿಂದ ಆತನನ್ನು ಬಂಧಿಸುವ ಭಾಷೆ ದೇಶಗಳು ದೂರ ಜಾರಿ ಆತ ವಿಶ್ವ ಕವಿಯಾಗುತ್ತಾನೆ. ಘಾಲಿಬರೂ ವಿಶ್ವಕವಿಗಳ ಸಾಲಿನಲ್ಲಿ ನಿಲ್ಲಬಲ್ಲ ಯೋಗ್ಯತೆಯಿರುವವರು, ಅವರ ಕೃತಿಗಳ ಅಧ್ಯಯನದಿಂದ ಇದರ ಯಥಾರ್ಥತೆಯು ಅರಿವಾಗುವುದು. ತಮ್ಮವರನ್ನು ತಾವು ಗೌರವಿಸುವ ಸಾಹಸವನ್ನು ಭಾರತೀಯರು ಇದು ವರೆಗೂ ಮಾಡಿಲ್ಲವೆಂದು ಇನ್ನು ಮುಂದಕ್ಕಾದರೂ ಕೈಕಟ್ಟಿ ಕೂರುವುದು ಸಮಂಜಸವಲ್ಲ.

—ಯೋಜನಾ

ಕುಂದಾಪುರ ಅಸಿಸ್ಟಾಂಟ್ ಕಮಿಶನರರವರ ಕೋರ್ಟಿನಲ್ಲಿ

O P. No 49/1960

ಸಂಜೀವ ಯಾನೆ ಪದ್ಮಾವತಿ ಅಮ್ಮ—
—ಅರ್ಜಿದಾರಳು.

ಹೊನ್ನಯ್ಯ ಮೂಲ್ಯ, ಕೂಶ್ರ ಮೂಲ್ಯನ ಮಗ ಮತ್ತು ದೋಗು ಮೂಲ್ಯನ ಅಳಿಯ. ಕಾರ್ಕಳ ತಾಲ್ಲೂಕು ಸಾಣೂರು ಗ್ರಾಮದ ಪೆಲತೋಡಿ ಎಂಬಲ್ಲಿರುವವ —ಎದ್ರಿ.

ಎದ್ರಿ ಆದ ನಿಮಗೆ ಈ ಮೂಲಕ ತಿಳಿಸುವುದೇನೆಂದ್ರೆ —

ನೀವು ಅರ್ಜಿದಾರಳ ವಳಗೆ ಚಾಲಗೇಣಿ ಯಕ್ತಿನಿಂದ ಅನುಭವಿಸಿ ಬರುವ ಸಾಣೂರು ಗ್ರಾಮದ ಆಸ್ತಿಯನ್ನು ಸ್ವಾಧೀನತೆ ಕೇಳಿ ಅರ್ಜದಾರಳು ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 9-4-60ಕ್ಕೆ ನಿಮ್ಮ ಹಾಜ್ರಾತಿಯ ಬಗ್ಗೆ ಕಾರ್ಕಳ ಮೊಕ್ಕಾಂ ನಲ್ಲಿ ಯಿಟ್ಟಿದೆ. ನಿಮ್ಮ ಆಕ್ಷೇಪ ಇದ್ರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಕಾರ್ಕಳ ಮೊಕ್ಕಾಮಿನಲ್ಲಿ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದೆ.

K. V. Kamath
Advocate for Petrs.

ಕಾರ್ಕಳ 31—3—60.

೮ ಸಾವಿರಗಳಿಂದ
೨೨ ಕೋಟಿಗಳಿಗೆ

೧೯೨೫ರಲ್ಲಿ ಕೇವಲ ೮ ಸಾವಿರ ರೂಪಾಯಿಗಳ
ವ್ಯವಹಾರ ನಿಧಿಯಿಂದ ಆರಂಭಗೊಂಡ

ಸಿಂಡಿಕೇಟ್ ಬೇಂಕ್

೧೯೫೯ನೇ ವರುಷಾಂತ್ಯದಲ್ಲಿ ೨೨ ಕೋಟಿ ರೂಪಾಯಿಗಳಿಗೂ
ಮಿಕ್ಕಿದ ವ್ಯವಹಾರ ಸಂಪತ್ತಿನಿಂದ ಕೂಡಿ ಮುನ್ನಡೆಯುತ್ತಿರುವುದು.

**ಬಡವ ಬಲ್ಲಿದರೆಂಬ ತಾರತಮ್ಯವಿಲ್ಲದೆ ಸಕಲರಿಗೂ
ಬೇಂಕಿಂಗ್ ಸೇವೆಯ ಸೌಲಭ್ಯಗಳನ್ನು ಒದಗಿಸುವುದು
ಸಿಂಡಿಕೇಟ್ ಬೇಂಕಿನ ವೈಶಿಷ್ಟ್ಯಗಳಲ್ಲೊಂದಾಗಿದೆ.**

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್ ಲಿ.
ಪ್ರಧಾನ ಕಚೇರಿ: ಉಡುಪಿ.

The Canara Industrial &
Banking Syndicate Ltd.
Head Office: UDIPI.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಶೋಚನೀಯವಾಗಿದೆ.

ಭಾರತದ ಬಗ್ಗೆ ಅಪಪ್ರಚಾರ ಮಾ ವುದರಲ್ಲೇ ತಲ್ಲೀನವಾಗಿದ್ದ ಕಾಲ ಸ್ಥಾನದಲ್ಲಿ ಒಂದಿತ್ತು. ಆದರೂ ಕಲ ಯದಿಂದ ಕಲುಷಿತ ವಾತಾವರಣ ಸು ತಿಳಿಯಾದಂತೆ ಕಂಡುಬಂದಿತ್ತು. ಗ ಪುನಃ ತನ್ನ ಕುಕೃತ್ಯಗಳಿಗೆ ಅಂಟಿ ಳ್ಳಲು ಹವಣಿಸುವ ಪಾಕ್ ವರ್ತನೆ ನ್ನಾರ್ಗ ಗಮನಕ್ಕೆ ಬಾರಾವು ಗಾ ದು ಮಾತ್ರವಲ್ಲ; ಅದನ್ನು ಮತ್ತ ಹಿಂದಕ್ಕೆ ಜಗ್ಗಿದಂತಾಗಿದೆ. ಈ ರೀತಿ ಅವಿವೇಕಯುತ ನೀತಿಯಿಂದ ಪಾಕಿ ನ ಗಳಿಸಬಹುದಾದ ಸೌಗಂಧವೇ ಉಳಿದಿಲ್ಲ. ಆದರೂ ಅನಪೇಕ್ಷಣೀ ವಾಗಿ ಹೊಸ ಹೊಸ ಪ್ರಶ್ನೆಗಳನ್ನು ರ್ಮಾಣ ಮಾಡುವುದರಲ್ಲಿ ತಲೆಕೆಡಿ ಅದು ತನ್ನ ಶಕ್ತಿಯ ದುರುಪಯೋ ಮಾಡುತ್ತಿರುವುದನ್ನು ಕಂಡು, ಅ ಕೋ, ನಗಬೇಕೋ ಗೊತ್ತಾಗುವುದಿ ಭಾರತಕ್ಕಾದರೂ ಈ ತರಹದ ಅ ಚಾರವು ಹೊಸತೇನಲ್ಲ. ನೀರು ಬಿದ್ ಕರಗಿ ಹೋಗುವ ಮಣ್ಣು ಹೆಂಟೆ ಭ ತವಲ್ಲ; ನೀರಿನ ಹೊಯ್ಲಿಗೆ ಬಗ್ಗದ ಡೆಕಲ್ಲು ಎಂದು ಪಾಕಿಸ್ತಾನ ಇನ್ನಾದ ಕಂಡುಕೊಳ್ಳುವುದರಿಂದ ಅದಕ್ಕೂ ಮ, ಉಳಿದವರಿಗೂ ನೆಮ್ಮದಿ.

ಉಡುಪಿ ಕರ್ನಾಟಕ ಸಂಘ
ಒಂದೊಂದು ರೂಪಾಯಿ ಬೆಲೆಂ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾ
(ಯು.ರಾಘವೇಂದ್ರ ಆಚಾರ್ಯ,ಎಂ.ಎ

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎ
ಜನರಿಗೆ ತಗಲುವ ಹಲವಾರು ಸಾಮಾ
ರೋಗಗಳ ಹುಟ್ಟು, ಕಾರಣ ಮತ್ತು ನಿವಾ
ಣೋಪಾಯಗಳನ್ನು ಸೂಚಿಸುವ ಉಪಯು
ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ



Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6–25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ.

ವರುಷ ೩೯. ವಾರ ೩೨ 14-4-1960 Vol. 39 No 32

ಪ್ರಚಲಿತ ಪ್ರಸಂಗ

ತೃತೀಯ ಯೋಜನೆ ಮತ್ತು ಖಾಸಗಿ ಕ್ಷೇತ್ರ

ಸರಕಾರಿ ಮತ್ತು ಖಾಸಗಿ ಕ್ಷೇತ್ರಗಳು ಪರಸ್ಪರ ಹೊಂದಿಕೊಂಡು ದೇಶದ ಆರ್ಥಿಕ ವ್ಯವಸ್ಥೆಯನ್ನು ಸುದೃಢಗೊಳಿಸಬೇಕಾಗಿದೆ

ಭಾರತೀಯ ವಾಣಿಜ್ಯೋದ್ಯಮ ಸಂಘದ ಮೂವತ್ತಮೂರನೆಯ ವಾರ್ಷಿಕ ಅಧಿವೇಶನವು ಇತ್ತೀಚಿಗೆ ನಡೆಯಿತು. ಈ ಅಧಿವೇಶನದಲ್ಲಿ ನೀತಿ ವಿಷಯಕವಾದ ದೊಡ್ಡ ವಿವಾದಗಳೇನೂ ಏಳಲಿಲ್ಲ. ಉದ್ಯಮರಂಗದ ಪ್ರತಿನಿಧಿಗಳು ದೇಶದ ಆರ್ಥಿಕ ವಿಕಾಸ ಕ್ಷೇತ್ರದಲ್ಲಿ ಸರಕಾರ ಮತ್ತು ಖಾಸಗಿ ಉದ್ಯಮಗಳನಡುವೆ ಪಾರಸ್ಪರಿಕ ಸಹಯೋಗದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಪ್ರಧಾನಿ ನೆಹರು ಅವರು ಕೂಡ ಈ ವಿಷಯದಲ್ಲಿ ವಿವಾದಾಸ್ಪದ ಮಾತನ್ನಾಡಲಿಲ್ಲ. ಆದರೆ, ಅವರು ಸ್ವತಂತ್ರ ಪಕ್ಷದ ಬಗ್ಗೆ ಮಾತಾಡಿದಷ್ಟು ವಿಭಿನ್ನ ಆರ್ಥಿಕ ಸಮಸ್ಯೆಯ ಕುರಿತಾಗಿ ಹೇಳಲಿಲ್ಲ ಎಂಬುದು ಮಾತ್ರ ಸ್ವಲ್ಪ ವಿಸ್ಮಯಜನಕವಾಗಿದೆ.

ಔದ್ಯಮಿಕ ಅಧಿವೇಶನಗಳಲ್ಲಿ ರಾಜನೀತಿಯ ಚರ್ಚೆಗೆ ಸ್ಥಾನವಿಲ್ಲವೆನ್ನುವುದಾದರೂ ಇಂದಿನ ಯುಗದಲ್ಲಿ ಹಿಂದುಳಿದ ಒಂದು ದೇಶವು ವಿಶೃಂಖಲಿತ ವಿಧಾನದಲ್ಲಿ ನಡೆದರೆ, ಆರ್ಥಿಕ ಉನ್ನತಿಯನ್ನು ಹೊಂದಲಾರದೆಂದು ಖಂಡಿತ ಹೇಳಬಹುದು. ಸ್ವತಂತ್ರ ಪಕ್ಷದ "ಆರ್ಥಿಕ ಸ್ವಾತಂತ್ರ್ಯವೆಂಬುದು "ಆರ್ಥಿಕ ವಿಶೃಂಖಲತೆ"ಯೇ ಆಗಿದೆಯೆಂದು ತಿಳಿಯಬಹುದು. ಸಂಘವು ದೇಶದ ಸುವ್ಯವಸ್ಥಿತ ಆರ್ಥಿಕ ವಿಕಾಸ ವಿನ್ಯಾಸದಲ್ಲಿ ತನಗೆ ಭಿನ್ನಾಭಿಪ್ರಾಯವಿಲ್ಲವೆಂಬುದನ್ನೊಂದು ಗೊತ್ತುವಳಿಯಲ್ಲಿ ಸಮರ್ಥಿಸಿದೆ. ಆರ್ಥಿಕ ಆಯೋಜನೆಯು ಇಂದಿನ ಆವಶ್ಯಕತೆಗಳಲ್ಲಿ ಒಂದು ಎಂಬುದನ್ನಿದು ಒತ್ತಿಹೇಳಿದೆ. ಆದರೆ, ಆರ್ಥಿಕ ಪ್ರಗತಿಯ ಮಹಾಕಾರ್ಯದ ಸ್ವರೂಪ ಹೇಗಿರಬೇಕು, ರಾಜ್ಯಶಾಸನ ಮತ್ತು ವ್ಯಕ್ತಿ ಸಮುದಾಯಗಳು ಎಷ್ಟರ ವರೆಗೆ ಒಂದಾಗಿ ನಡೆಯಬಲ್ಲವು ಎಂಬುದೇ ಚರ್ಚನೀಯವಾಗಿದೆ.

ಈ ವಿಚಾರದಲ್ಲಿ ಪರಿಶೀಲಿಸುವಾಗ, ಸಂಘದ ಗೊತ್ತುವಳಿಗಳಲ್ಲಿ ನೂತನ ನೀತಿ ವ್ಯಕ್ತವಾದಂತೆ ಗೋಚರಿಸುವುದಿಲ್ಲ. ಭಾರತದ ಉದ್ಯಮರಂಗವು ಮುಂದಿನ ವರ್ಷಗಳಲ್ಲಿ ಯಾವ ಹೆಜ್ಜೆಯನ್ನಿಡುವುದು ಎಂಬುದೂ ಸ್ಪಷ್ಟವಾಗುವುದಿಲ್ಲ. ಉದಾಹರಣೆಗಾಗಿ, ಸಂಘವು ರಾಷ್ಟ್ರೀಯ ಸಂರಕ್ಷಣೆಯ ಬಗ್ಗೆ ಕೈಗೊಂಡ ಗೊತ್ತುವಳಿಯು ಅಸಾಮಯಿಕವಾದುದು. ಸಂರಕ್ಷಣೆ-ಉದ್ಯಮಗಳಲ್ಲಿ ಸರಕಾರೇತರ ಕ್ಷೇತ್ರವು ಕೈಹಾಕುವುದನ್ನು ಸಂಸತ್ತು ಒಪ್ಪುವುದಿಲ್ಲ. ನಮ್ಮ ಉತ್ತರ ಸೀಮೆಯಲ್ಲಿ ಉಂಟಾದ ಅಪಾಯ ಮತ್ತು ಅದರ ಸಂಭಾವ್ಯ ಪರಿಣಾಮದ ದೃಷ್ಟಿಯಿಂದ ಸಂರಕ್ಷಣಾ ವಿಭಾಗದ ರಹಸ್ಯ ಗೋಪನೀಯವಾಗಿರಬೇಕಾದುದು ಅವಶ್ಯವಿದೆ. ಆದರೂ ಖಾಸಗಿ ಉದ್ಯಮರಂಗ ಮತ್ತು ಸರಕಾರಗಳು ಸಹಕರಿಸಬೇಕಾದ ಕೆಲವೊಂದು ಉದ್ಯೋಗಗಳಿವೆ ಯೆಂಬುದು ನಿಜ. ಸಂರಕ್ಷಣಾ ಸಂಬಂಧದಲ್ಲಿಯೂ ಕೆಲವೊಂದು ಉದ್ಯಮಗಳು ಗುಟ್ಟಾಗಿರಬೇಕಾಗಿಲ್ಲ, ಅವನ್ನು ಖಾಸಗಿಕ್ಷೇತ್ರಕ್ಕೆ ಒಪ್ಪಿಸಿ ಕೊಡಬಹುದು

ಮೂರನೆಯ ಯೋಜನೆಯ ಬಗ್ಗೆ ಸಂಘದ ಗೊತ್ತುವಳಿಯಲ್ಲಿ ವಿಶೇಷ ಮತಭೇದವಿರುವುದಿಲ್ಲ ಆದರೂ ಗೊತ್ತುವಳಿಯಲ್ಲಿ ಅಡಕವಾದ ಒಂದು ಸೂಚನೆ ಮಾತ್ರ ಸ್ವೀಕಾರಾರ್ಹವೆನ್ನುವಂತಿಲ್ಲ ವ್ಯಕ್ತಿಯು ಉಳಿಸಿದ ಉಳಿತಾಯವನ್ನು ಉಪಯೋಗಿಸುವ ಹೊಣೆಗಾರಿಕೆಯನ್ನು ವ್ಯಕ್ತಿಗೇನೇ ಕೊಡಬೇಕೆಂದು ಗೊತ್ತುವಳಿಯಲ್ಲಿ ಸಂಕೇತಿಸಲಾಗಿದೆ ಈ ವಿಚಾರವಂತರು ಹಿಂದಿನ ಮತ್ತು ಇಂದಿನ ಅರ್ಥವ್ಯವಸ್ಥೆಯಲ್ಲಿ ತುಂಬ ಅಂತರವಿದೆಯೆಂಬ ಸತ್ಯಾಂಶವನ್ನು ಮರೆತಂತೆ ತೋರುತ್ತದೆ. ರಾಷ್ಟ್ರೀಯ ಆರ್ಥಿಕ ಸಂಪತ್ತು ಇಂದು ಅತ್ಯಧಿಕ ವಿಸ್ತಾರವಾಗಿ ಹರಡಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ರಚನಾತ್ಮಕ ಸೂಚನೆಗಳ ದೃಷ್ಟಿಯಿಂದ ಸಂಘದ ಐದನೆಯ ಮತ್ತು ಆರನೆಯ ಗೊತ್ತುವಳಿಗಳು ಉಲ್ಲೇಖನೀಯವಾಗಿವೆ. ಐದನೆಯದರಲ್ಲಿ ವ್ಯಾಪಾರ ವಿಭಾಗಗಳ ಸಂಚಾಲನೆ ಮತ್ತು ಆರನೆಯದರಲ್ಲಿ ಕೃಷಿ ವಿಕಾಸದ ವಿಚಾರವಾಗಿ ಸಲಹೆಗಳನ್ನು ನೀಡಲಾಗಿದೆ. ವಿತರಣೆ ಮತ್ತು ಕೃಷಿ ಉತ್ಪಾದನೆಯ ಸಂಬಂಧದಲ್ಲಿ ವ್ಯಾಪಾರೀ ವರ್ಗವು ಮಹತ್ವಪೂರ್ಣ ಸಹಯೋಗ ನೀಡಬಲ್ಲುದೆಂದು ಈ ಗೊತ್ತುವಳಿಗಳು ಸಾರಿಹೇಳುತ್ತವೆ. ವ್ಯಾಪಾರೀವರ್ಗವು ತನ್ನ ಉಪಯೋಗಿತೆಯನ್ನು ಉತ್ತಮ ವಿಧಾನದಲ್ಲಿ ಪ್ರಾಮಾಣಿತಗೊಳಿಸುವುದರಲ್ಲಿ ಸಫಲವಾಗಲು ಕಾರಣವಿಲ್ಲ. ಆದರೆ ವಿತರಣೆಯ ಕೊರತೆಗಳಿಂದಾಗಿ ಸರಕಾರೀ ಕ್ಷೇತ್ರವು ಇದನ್ನು ಸರಿಯಾಗಿ ನಿರ್ವಹಿಸಲಾರದ ನಿಯಂತ್ರಿತ ವಸ್ತು ವಿತರಣೆ ವ್ಯವಸ್ಥೆಯ ಕಠಿಣತೆಗಳನ್ನು ನಾವು ನೋಡುವಾಗ ಈ ವಿಷಯ ಗೋಚರವಾಗುವುದು.

ಇದಕ್ಕಿಂತಲೂ ಕೃಷಿ ಸಂಬಂಧದ ಗೊತ್ತುವಳಿಯು ಮಹತ್ವಪೂರ್ಣವಾಗಿದೆ. ಸಿದ್ಧಾಂತಗಳಲ್ಲಿ ಎಂದೆಂದಿಗೂ ಸಲ್ಲದೇ ಬಹು ಉದ್ದೇಶದ ಯೋಜನೆಗಳನ್ನು ಬೇಗನೆ ಕಾರ್ಯಗತಗೊಳಿಸಬೇಕೆಂದಿದು ಹೇಳುತ್ತದೆ. ತಿಳುವಳಿಕೆಯುಳ್ಳ ಕೃಷಿಕನು ತನ್ನ ಉತ್ಪಾದನೆಯನ್ನು ಮತ್ತು ತನ್ನ ಉತ್ಪನ್ನದ ಉತ್ಕೃಷ್ಟತೆಯನ್ನು ಹೆಚ್ಚಿಸಲು ಸ್ವಯಂ ಪ್ರಯತ್ನಶೀಲನಾಗುತ್ತಾನೆ. ಆತನು ಶಕ್ತಿಯನ್ನು ಬೆಳೆಸುವನಾದರೆ, ಉತ್ತಮ ಫಸಲಿಗಾಗಿ ಉಪಯುಕ್ತ ಉಪಕರಣಗಳ ವ್ಯವಸ್ಥೆಯನ್ನು ತಾನಾಗಿಯೇ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಆತ ಸರಕಾರದ ಆಹ್ವಾನವನ್ನಾಗಲೀ ಉಪದೇಶವನ್ನಾಗಲೀ ನಿರೀಕ್ಷಿಸುವುದಿಲ್ಲ. ಎಂದರೆ, ಕೃಷಿಕರಿಗೆ ಆಧುನಿಕ ವ್ಯಾವಸಾಯಿಕ ಕ್ರಮದ ಬಗ್ಗೆ ಆಸಕ್ತಿ ಹುಟ್ಟುವಂತೆ ಮಾಡುವುದೇ ಇಂದಿನ ಮುಖ್ಯ ಕೆಲಸವಾಗಿದೆ. ನಿರ್ದಿಷ್ಟ ಸ್ಥಾನಗಳಲ್ಲಿ ನಿರ್ದಿಷ್ಟ ಕಾರ್ಯಗಳಿಗೆ ಸಾಧನಗಳನ್ನೊದಗಿಸುವುದರಲ್ಲಿ ಖಾಸಗಿ ಕ್ಷೇತ್ರವು ಮಹತ್ವಪೂರ್ಣ ಪಾತ್ರವನ್ನು ಕೊಡಬಲ್ಲುದು.

ಈ ಸಂಬಂಧದಲ್ಲಿ ಇನ್ನೊಂದು ಸಮಸ್ಯೆಯಿದೆ. ಯಾವ ವಸ್ತು ಎಷ್ಟು ಬೇಕಾಗುವುದು, ಇದರಿಂದ ಉತ್ಪಾದಕನಿಗೆ ಏನು ಹಿತವಾಗಬಹುದು ಎಂಬುದೂ ರೈತನಿಗೆ ಅವಶ್ಯ ತಿಳಿದಿರಬೇಕು. ರೈತನಿಗೆ ಯಾವ ವಸ್ತುವನ್ನು ಬೆಳೆಸುವುದರಿಂದ ತನಗೆ ಲಾಭವಿದೆ ಎಂಬುದು ಖಚಿತವಾದರೆ, ಆತ ಅದನ್ನೇ ವಿಶೇಷ ಉತ್ಸಾಹದಿಂದ ಉತ್ಪಾದಿಸುತ್ತಾನೆ. ಆದರೆ, ಈ ವಿಚಾರವಾದ ವಿಷಯಗಳನ್ನು ಸಂಗ್ರಹಿಸಿ ಅವನ್ನು ರೈತ ಜನರಿಗೆ ಮುಟ್ಟಿಸುವ ಹೊಣೆ ಸರಕಾರಿ ಕ್ಷೇತ್ರಕ್ಕೆ

(೧ನೇ ಪುಟ ನೋಡಿರಿ)



ತನ್ನ ಲೇಟಿನ್ ಅಮೇರಿಕಾ ಯಾತ್ರೆಯಲ್ಲಿ ಅಮೇರಿಕೆಯ ಅಧ್ಯಕ್ಷ ಐಸನ್ ಹಾವರರು (ಎಡ) ಸಾಂತಿಯಾಗೋವಿನಲ್ಲಿ ಚಿಲಿಯ ಅಧ್ಯಕ್ಷ ಜಾರ್ಜ್ ಅಲೆಸ್ಸಾಂಡ್ರಿಯವರೊಡನೆ (ಬಲ) ಮಾತುಕತೆ ನಡೆಸಿದರು. ಉಭಯ ಅಧ್ಯಕ್ಷರ ಹಿಂದೆ ಅವರವರ ಮಧ್ಯವರ್ತಿಗಳಿದ್ದಾರೆ.

ಕಥಾವಿಹಾರ

ರಜಪೂತರ ರಾಜಸೀ ರಕ್ತ

ರುಂಡದಿಂದ ಬೇರ್ಪಟ್ಟ ಮುಂಡ ನೂರಾರು ಯೋದ್ಧರನ್ನು ಚೆಂಡಾಡಿತು; ಸ್ವರ್ಗಾಗ್ರನನ್ನೇರಿದ ಪತಿಯ ಶವವನ್ನು ತೊಡೆಯಲ್ಲಿ ಮಲಗಿಸಿ ವೀರಸತಿ ಸತೀ ಹೋದಳು– ಕೇವಲ ಪರೀಕ್ಷೆಗಾಗಿ!

ಚಕ್ರವರ್ತಿ ಶಹಜಹಾನನು ಒಮ್ಮೆ ದರ್ಬಾರು ನಡೆಯುವಾಗ ತನ್ನ ದರ್ಬಾರಿನ ಸದಸ್ಯರಲ್ಲಿ ತನ್ನ ಮನಸ್ಸಿನಲ್ಲಿ ಹೊಳೆದ ವಿಚಾರವಿನಿಮಯವೊಂದಾಗಬೇಕೆಂದನು. ಆ ಸಮಯದಲ್ಲಿ ಹಿಂದುಗಳು ಹಾಗೂ ಮೊಗಲರು ತಾವು ತಾವೆಂದು ದಿಲ್ಲಿಯ ಸಿಂಹಾಸನದ ಬಗ್ಗೆ ತಮ್ಮ ಶೌರ್ಯ ಹಾಗೂ ಪರಾಕ್ರಮ ತೋರಿಸುತ್ತಿದ್ದರು. ಕೆಲವೇಳೆ ಹಿಂದು ಮತ್ತು ಮೊಗಲರಲ್ಲಿ ಕಾಳಗಗಳೂ ನಡೆಯುತ್ತಿದ್ದವು. ತನ್ನ ಸದಸ್ಯಮಂಡಳಿಯನ್ನುದ್ದೇಶಿಸಿ, "ನಮ್ಮ ಮಂಡಳಿಯಲ್ಲಿ ಹಿಂದುಗಳ ಸಂಖ್ಯೆ ೭೨ ಮತ್ತು ಮೊಗಲರ ಸಂಖ್ಯೆ ೭೦ ಇರಲು ಕಾರಣವೇನು?" ಎಂದನು.

ಸಭಿಕರೆಲ್ಲ ಒಬ್ಬರ ಮುಖವನ್ನೊಬ್ಬ ನೋಡುವಂತಾಯಿತು. ಚಕ್ರವರ್ತಿಯ ಪ್ರಶ್ನೆಗೆ ಉತ್ತರವನ್ನೀಯುವ ಸಮರ್ಥ ಜನರಾರೂ ಇರಲಿಲ್ಲ. ಕೊನೆಗೆ ಡೆಕ್ಕನ್‌ದ ಸುಲ್ತಾನನಾದ ಮೀರಝಾನನು ಚಕ್ರವರ್ತಿಗೆ ನಮಸ್ಕರಿಸುತ್ತ, "ಸ್ವಾಮಿ, ಅನ್ಯಥಾ ಭಾವಿಸದಿದ್ದಲ್ಲಿ, ನನಗೆ ತಿಳಿದ ಮಾತನ್ನು ಈ ವಿಷಯದಲ್ಲಿ ತಿಳಿಸಬೇಕೆಂದಾಶಿಸುತ್ತೇನೆ. ನಮ್ಮ ಹಳೆಯವರು ಹೇಳುತ್ತ ಬಂದಂತೆಯೂ ನನಗೆ ನಿದರ್ಶನಕ್ಕೆ ಬಂದಂತೆಯೂ ಹಿಂದುಗಳು ನಮಗಿಂತ ಎರಡು ವಿಧದಲ್ಲಿ ಉಚ್ಚ ಸ್ಥಾನದಲ್ಲಿದ್ದಾರೆ. ಮೊದಲನೆಯದಾಗಿ, ಹಿಂದೂ ಯೋಧನೊಬ್ಬನ ರುಂಡವು ಮುಂಡದಿಂದ ಬೇರ್ಪಡಿಸಲ್ಪಟ್ಟಾಗ್ಯೂ ರುಂಡರಹಿತವಾಗಿದ್ದ ಮುಂಡವು ಯುದ್ಧವನ್ನು ಅವಿಶ್ರಾಂತವಾಗಿ ಮಾಡುತ್ತಲೇ ಇರುವದು, ಎರಡನೆಯದಾಗಿ ಆ ಯೋಧನ ಪತ್ನಿಯು ಯುದ್ಧದಲ್ಲಿ ಮಡಿದ ಪತಿಯ ಶವದೊಡನೆ ಸಂತಸದಿಂದ ಸತಿ ಹೋಗುವಳು! ಮೀರಝಾನನು ಇನ್ನೂ ಮುಂದುವರಿದು-- "ಹಿಂದುಗಳಲ್ಲಲ್ಲದೆ ಇನ್ನಾವ ಜನಾಂಗವೂ ಹೀಗೆ ಮಾಡಲು ಸಮರ್ಥರಿರುವರೆಂದು ನಾನು ತಿಳಿಯುವುದಿಲ್ಲ!"

ಚಕ್ರವರ್ತಿಗೂ ಹಿಂದುಗಳು ಪರಾಕ್ರಮಿಗಳೆಂದು ಗೊತ್ತಿತ್ತು. ಶಹಾಜಹಾನ ಚಕ್ರವರ್ತಿ ತನ್ನೀ ಪ್ರಶ್ನೆಗೆ ಉತ್ತರ ಸಿಗುವಂತಿಲ್ಲವೆಂದೂ ತಾನು ಸಹಜವಾಗಿ ಆ ಹೆಚ್ಚಿನ ಹಿಂದುಗಳ ಎರಡು ಸ್ಥಳಗಳನ್ನು ಕಡಿಮೆ ಮಾಡಬಹುದೆಂದು ತಿಳಿದಿದ್ದ, ಆದರೆ ಆ ಮೀರಝಾನನ ಉತ್ತರ ಕೇಳಿದೊಡನೆ— ಹಿಂದುಮುಂದಾಲೋಚಿಸದೆ— "ಸರಿ! ಹಾಗಾದರೆ ಈ ಬಗ್ಗೆ ನಿದರ್ಶನವನ್ನು ನಾನೇ ನೋಡಬೇಕಾಗಿದೆ. ನಾನು ನಿನಗೆ ಆರು ತಿಂಗಳುಗಳ ಅವಧಿ ಕೊಡುತ್ತೇನೆ. ಈ ಅವಧಿಯಲ್ಲಿ ನೀನು ನಿದರ್ಶನ ತೋರಿಸಲಸಮರ್ಥನಾದಲ್ಲಿ ಸಲ್ತನತಾ (ಸಿಂಹಾಸನ)ದ ಮುಂದೆ ಸುಳ್ಳುಹೇಳಿದ ಅಪರಾಧದ ಮೇಲೆ ನಿನ್ನ ಶಿರಚ್ಛೇದ ಮಾಡಲಾದೀತು" ಎಂದನು.

ಶಾಹಜಹಾನನ ಭೀಕರ ಆಜ್ಞೆಯಿಂದಾಗಿ ಅಂಜಿದ ಮೀರಝಾನ ಏನು ಮಾಡುವದೆಂದು ತಿಳಿಯದಂತಾದನು. ಆ ಸಮಯದಲ್ಲಿ ಜೋಧಪುರದ ರಜಪೂತರು ಪರಾಕ್ರಮದಲ್ಲಿ ಹೆಸರಾಗಿದ್ದರು. ಸಭೆ ಸೇರಿದ್ದ ನಂತರ ಇಳಿಮೋರೆಯಲ್ಲಿದ್ದ ಮೀರಝಾನನಿಗೆ— ಧೈರ್ಯವನ್ನೀಯುತ್ತ ಜೋಧಪುರದ ರಜಪೂತ ರಾಜನು ತನ್ನೊಡನೆ ಕರೆದೊಯ್ದನು! ಅವನಿಗೆ ರಜಪೂತರ ಸಹಾಯನೀಡುವ ಭರವಸೆಯಿತ್ತು ತನ್ನ ರಾಜಧಾನಿಗೆ ಹೋಗಿ ಸಭೆ ಕೂಡಿಸಿ ವಿಷಣ್ಣ ಹಾಗೂ ಗಂಭೀರಭಾವದಿಂದ ಚಕ್ರವರ್ತಿಯ ಇಚ್ಛೆಯನ್ನು ತಿಳಿಸುತ್ತಾ "ನಾಲ್ಕು ತಿಂಗಳುಗಳೊಳಗಾಗಿ ಹಿಂದುಗಳ ಪರಂಪರಾಗತವಾಗಿ ಬಂದ ಹೆಸರನ್ನುಳಿಸುವ ಒಬ್ಬ ವೀರನೂ, ಪಾತಿವ್ರತ್ಯ ಜೀವಿತವನ್ನು ನೆಚ್ಚಿ ಪತಿಯನಂತರ ಸತಿ ಹೋಗುವ ರಮಣೀಮಣಿಯೂ ಎಲ್ಲಿರುವರೆಂಬದನ್ನು ತಿಳಿಸಬೇಕೆಂದ." ತಿಳಿಸಿದನು....ದೇಶದ ಮೂಲೆ ಮೂಲೆಯಲ್ಲೆಲ್ಲ ಈ ಸುದ್ದಿ ಹೊರಟಿತು.

ಕಹಳೆಯನಾದ ಕೇಳಿ ಪಡೆಯ ಮಧ್ಯದಲ್ಲಿಯ ವೀರ ಯೋದ್ಧನು ಯಾವನೆಂದು ಹುಡುಕುವದು ಸುಲಭ! ರುಂಡಮುಂಡಗಳು ಬೇರ್ಪಡುತ್ತಿದ್ದಾಗ ಕಾದಾಡುವ ಸಮರ್ಥ ಮುಂಡವನ್ನು ಹುಡುಕಬಹುದು! ಆದರೆ ತಿಂಗಳಾದರೂ ಯಾರೂ ಮುಂದಾಗಲಿಲ್ಲ. ತಿಂಗಳು ನಾಲ್ಕಾದರೂ ಯಾರೂ ಮುಂದಕ್ಕೆ ಬರದಾದರು!-ಕೊನೆಗೆ— ಮಹಾರಾಜನು ರಜಪೂತ ಯೋದ್ಧರನ್ನೊಂದುಗೂಡಿಸಿ-ಅವರನ್ನು ವಿಷಾದಪೂರ್ವಕವಾಗಿ ಉದ್ದೇಶಿಸಿ! ಇಂದು ರಜಪೂತರ ಶೌರ್ಯಪರಾಕ್ರಮಗಳು ನಷ್ಟವಾಯಿತೆಂದೆಣಿಸಬೇಕಾಗಿದೆ! ರಜಪೂತರ ಯೋಗ್ಯತೆ—ನೆಲಸಮನಾಗಿ ತುಳಿಯಲ್ಪಟ್ಟಾಗ ನನ್ನೀ ರಾಜ್ಯದಲ್ಲಿ ವೀರವರನಾದ ಒಬ್ಬ ಯೋದ್ಧನೂ ಜನಾಂಗದ ಹೆಸರನ್ನುಳಿಸಲು ಜೀವಿತವನ್ನು ಬಲಿಕೊಡಲಾರನೇ? ಇಂತಹ ಸಣ್ಣ ಕಾರ್ಯಕ್ಕೆ ಜೋಧಪುರ ಮಹಾರಾಜರ....ಎನ್ನುತ್ತಿರುವಾಗಲೇ—ಹದಿನಾರು ವರ್ಷದ "ತೋಗಾ" ಎಂಬ ಹೆಸರಿನ ರಾಠೋರ ಯುವಕನೊಬ್ಬನು ಮುಂದೆಬಂದು, "ಮಹಾರಾಜ, ನಾನು ಪ್ರತಿಜ್ಞೆಮಾಡಿ ಹೇಳುತ್ತೇನೆ.— ನನ್ನ ರುಂಡವಳಿದರೂ ಮುಂಡವು ಯುದ್ಧಮಾಡಲು ಸಮರ್ಥವು. ಆದರೆ ತಮ್ಮ ಎರಡನೇ ಆಣತಿಗೆ ಮಾತ್ರ ವಿವಶನಾಗಿದ್ದೇನೆ. ಯಾಕಂದರೆ ನನಗಿನ್ನೂ ವಿವಾಹವಾಗಿರುವದಿಲ್ಲ! ಎಂದು ವಂದಿಸಿ ಕುಳಿತುಕೊಂಡನು.

ಈ ಯೋದ್ಧನ ನುಡಿಕೇಳಿ ಸಂತುಷ್ಟನಾದ ರಾಜನು ಉಳಿದ ಎರಡನೇ ಆಣತಿಯ ಪರಿಹಾರವನ್ನು ಕುರಿತು ವಿಚಾರ ಮಾಡುತ್ತಾ ಇತರರ ಮೋರೆ ನೋಡುತ್ತಿರುವಾಗಲೇ- ಸರದಾರನೊಬ್ಬನು ಮುಂದೆ ಬಂದು ನಮಸ್ಕರಿಸಿ ತನ್ನ ಮಗಳನ್ನು ತೋಗಾನಿಗೆ ಲಗ್ನ ಮಾಡಿಕೊಡುವದಾಗಿ ಒಪ್ಪಿಕೊಂಡನು.

ಮರುದಿನವೇ ಲಗ್ನ ಸಮಾರಂಭವೂ ಆಯಿತು. ರಾಜನೇ ಮೊದಲಾಗಿ ಕೆಲವು ವೀರರು ತೋಗಾನನ್ನು ಮುಂದಿಟ್ಟುಕೊಂಡು ಆಗ್ರಾಕ್ಕೆ ಹೊರಟರು. ಎಲ್ಲರೂ ರಾಠೋರನ ಶೌರ್ಯದ ನಿದರ್ಶನದಲ್ಲಿ ಕುತೂಹಲವುಳ್ಳವರಾಗಿದ್ದರು.

ಶಾಹಜಹಾನ ಚಕ್ರವರ್ತಿ ಈ ಸುದ್ದಿ ಕೇಳಿ ಚಕಿತನಾದನು. ಕೆಲವೇಳೆಯು ತನಗೆ ಏನು ಮಾಡುವುದೆಂತಲೂ ಅವನಿಗೆ ತಿಳಿಯಲಿಲ್ಲ. ಮೀರಝಾನನೊಡನೆ ತಿಳಿಸಿದಂತೆ ಹಿಂದುಗಳು ಸಮರ್ಥನೆ ಮಾಡಲು ಮುಂದುವರಿದು ಬಂದಾರೆಂದು ಚಕ್ರವರ್ತಿಯು ಭಾವಿಸಿರಲಿಲ್ಲ.

ಅವನೊಂದು ಷಡ್ಯಂತ್ರವನ್ನು ಹೂಡಿದ! ತನ್ನೊಬ್ಬ ವಿಶ್ವಸ್ತ ಸರದಾರನನ್ನು ಕರೆದು ಹಿಂದುಗಳಂತೆ ವೇಷಧರಿಸಿ ತೋಗಾನನ್ನು ನಿರ್ನಾಮಗೊಳಿಸುವಂತೆ ಆಜ್ಞೆಯನ್ನಿತ್ತ! ಹಾಗೂ ಜೋಧಪುರದ ರಾಜನಿಗೆ ಆಹ್ವಾನವೀಯುತ್ತ ತೋಗಾನನ್ನು ದರ್ಬಾರಕ್ಕೆ ಕಳಿಸುವದೆಂತಲೂ ರಜಪೂತರ ವಿರುದ್ಧ ಯುದ್ಧಕ್ಕೆ ಸಿದ್ಧತೆಯಾಗಿದೆಯೆಂತಲೂ ತಿಳಿಸಿ ಕಳಿಸಿದ.

ರಾಠೋರ ತೋಗಾನಿಗೆ ಆಹ್ವಾನ ದೊರೆತೊಡನೆ ಇದರಲ್ಲೇನೋ ಕಣ್ಣುಮುಚ್ಚಾಲೆ ನಡೆಸಿದ್ದಾನೆ-ಚಕ್ರವರ್ತಿ ಎಂದು ಆವನು ಭಾವಿಸಿಯೇ ಇದ್ದ. ಆದರೆ ಶಾಹಿ ಹುಕುಮಿನಂತೆ ಅವನು ಅಲ್ಲಿಗೆ ಹೋಗಲೇಬೇಕಾಗಿತ್ತು.

ನಿಯಮಿತ ವೇಳೆಗೆ ದರ್ಬಾರದ ದಿನ ಇತರರೊಡನೆ ತೋಗಾ ರಾಠೋರನು ಶಾಹೀ ದರ್ಬಾರವನ್ನು ಸೇರಿದ! ಅವನಿಗಾಗಿ ಪ್ರತ್ಯೇಕ ಆಸನವನ್ನಿಟ್ಟಿದ್ದರು. ದರ್ಬಾರದವರೆಲ್ಲ ಸಂತುಷ್ಟರಾಗಿದ್ದರು. ನರ್ತಕಿಯರ ನರ್ತನೆಯೊಡನೆ.. ಸುರಾಪಾನ ಪ್ರಾರಂಭವಾಗಿತ್ತು. ತನ್ಮಧ್ಯೆ ಶಾಹಜಹಾನನಿಂದ ನಿಯೋಜಿತನಾದ ಮೊಗಲ ಸರದಾರನು ತನ್ನ ಕರ್ತವ್ಯ ಪರಿಪಾಲನೆಗಾಗಿ ತೋಗಾ ರಾಠೋರನನ್ನು ಸಮೀಪಿಸಲು ಸಂಧಿ ಸಾಧಿಸುತ್ತಿದ್ದ!

ಶಾಹಜಹಾನನ ಸಂಕೇತದಂತೆ ಮೊಗಲ ಸರ್ದಾರನು ಅತ್ತ ಹೆಚ್ಚುವ ನಿಮಿತ್ತದಿಂದ ತೋಗಾ ರಾಠೋರನನ್ನು ಸಮೀಪಿಸಿದವನೇ ತನ್ನ ಕತ್ತಿಯನ್ನು ಒರೆಯಿಂದ ಹೊರಗೆಳೆದ! ಆದರೆ ಆ ಸಮಯ ಏನಾಯಿತೆಂದು ಅಂದಾಜು ಮಾಡುವ ಪೂರ್ವದಲ್ಲಿಯೇ— ಆ ಮೊಗಲ ಸರ್ದಾರನ ರುಂಡವು ಮುಂಡದಿಂದ ಬೇರಾಗಿ ಎರಡು ತೋಗಾನ ಬಲಕ್ಕೆ ಕೆಡವಿ ಬಿದ್ದಿತ್ತು! ಅಷ್ಟೇ ಅಲ್ಲದೆ— ತೋಗಾ ರಾಠೋರನ ರುಂಡರಹಿತವಾದ ಶರೀರವು ಕೈಯಲ್ಲಿ ಕತ್ತಿ ತಿರುಹುತ್ತಾ ನಿಂತಿತ್ತು! ನೆರೆದವರೆಲ್ಲ ಕೆಳಗೆ ಬಿದ್ದ ತೋಗಾನ ಶಿರಸ್ಸನ್ನು ಬಂಗಾರದ ಹರಿವಾಣದಲ್ಲಿ ಎತ್ತಿಕೊಳ್ಳುವ ದೃಶ್ಯವನ್ನು ನೋಡಿ ಆಶ್ಚರ್ಯಗೊಂಡರು.

ವಾಸ್ತವ ಸಂಗತಿ ಹೀಗಿತ್ತು: ಮೊಗಲ ಸರದಾರನ ವರ್ತನೆಯ ರೀತಿಯಲ್ಲಿ ಮೋಸವನ್ನು ಮೊದಲೇ ಊಹಿಸಿದ್ದ ತೋಗಾ ಅವನು ಸಮೀಪಿಸುತ್ತಲೇ—ತನ್ನ ಕತ್ತಿ ಹಿರಿದು—ತನ್ನ ತಲೆ ತಾನೇ ಕತ್ತರಿಸಿ (ಮೊಗಲರಿಂದ ಸಾಯಬಾರದೆಂಬ ಆತ್ಮಾಭಿಮಾನದಿಂದ) ಕೆಂಡು ಅದೇ ಕತ್ತಿಯಿಂದ ಆ ಒಬ್ಬನಾದ ಮೊಗಲ ಸರದಾರನನ್ನೂ ಉರುಳಿಸಿ ಯುದ್ಧಕ್ಕೆ ಶಿರ ಕಳೆದುಕೊಂಡ ದೇಹದಿಂದಲೇ ನಿಂತಿದ್ದ!

ರಜಪೂತರೆಲ್ಲ ಆ ಶಿರಸ್ಸಿಗೆ ನಮಸ್ಕರಿಸಿದರು. ರೊಚ್ಚಿಗೆದ್ದು—ಆ ತೋಗಾ ರಾಠೋರನ ರುಂಡರಹಿತ ದೇಹವನ್ನೇ ಮುಂದುಮಾಡಿಕೊಂಡು ಯುದ್ಧ ಸನ್ನದ್ಧರಾದರು.

ಶಾಹಜಹಾನನು ಈ ದೃಶ್ಯವನ್ನು ಕಂಡು ನಡುಗಿದನು! ತನ್ನ ವಿಶ್ವಸ್ತನಾದ ಸರದಾರನು ಮರಣಹೊಂದಬಹುದೆಂದು ಅವನು ಭಾವಿಸಿರಲಿಲ್ಲ. ರಾಠೋರನ ಶರೀರವು ಒಬ್ಬೊಬ್ಬರಾಗಿ ಮೊಗಲರನ್ನುರುಳಿಸು

(೧೧ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

PHONE 203



ESTD 1926

FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ವ್ಯಕ್ತಿ ಪರಿಚಯ

ತಂದೆಯ ಶಿಷ್ಯ— ನ್ಯಾಯಾಧೀಶ ಚಯನಾನಿ

ಬೊಂಬಾಯಿ ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರಾದ ಶ್ರೀ ಚಯನಾನಿಯವರು ನ್ಯಾಯಕ್ಷೇತ್ರದಂತೆಯೇ ವಿದ್ಯಾಕ್ಷೇತ್ರದಲ್ಲೂ ಆಸಕ್ತಿ ವಹಿಸುತ್ತಿದ್ದಾರೆ.

"ನ್ಯಾಯಾಧೀಶನ ದೃಷ್ಟಿಕೋಣವು ಯಾವಾಗಲೂ ಮಾನವೀಯವಾಗಿರಬೇಕು; ಜನರ ಮನೋಸ್ಥಿತಿಯನ್ನು ಆತ ಸರಿಯಾಗಿ ತಿಳಿದುಕೊಂಡಿರಬೇಕು. ಆತನು ಜನರ ಮನಸ್ಸನ್ನು ಸರಿಯಾಗಿ ಕಂಡುಕೊಳ್ಳುವ ವರೆಗೆ ವಾಸ್ತವಿಕ ನ್ಯಾಯದಾನವನ್ನು ಮಾಡಲಾರನು"— ಎಂದು ಬೊಂಬಾಯಿಯ ಮುಖ್ಯ ನ್ಯಾಯಾಧೀಶ ಶ್ರೀ ಹಶಮತರಾಯ ಖೂಬಚಂದ ಚಯನಾನಿಯವರು ನ್ಯಾಯದಾನದಲ್ಲಿ ರಾಜ್ಯಪಾಲರ ಹಸ್ತಕ್ಷೇಪದ ಸಂಬಂಧದಲ್ಲಿ ಮಹತ್ವಪೂರ್ಣ ನಿರ್ಣಯವೀಯುತ್ತ ಹೇಳಿದರು.

ತನ್ನ ನಿರ್ಭಯತೆ, ನಿಷ್ಪಕ್ಷಪಾತತನ ಮತ್ತು ಸ್ಪಷ್ಟತೆಯ ಬಗ್ಗೆ ಬೊಂಬಾಯಿ ಉಚ್ಚ ನ್ಯಾಯಾಲಯವು ಆರಂಭದಿಂದಲೂ ಸುಪ್ರಸಿದ್ಧವಾಗಿದೆ. ಶ್ರೀ ಚಯನಾನಿಯವರು ಕಮಾಂಡರ್ ನಾನಾವತಿಯವರ ಪ್ರಕರಣದಲ್ಲಿ ನಡೆದ ರಾಜ್ಯಪಾಲರ ಹಸ್ತಕ್ಷೇಪದ ಕುರಿತಾಗಿ ಇತ್ತ ನಿರ್ಣಯದಲ್ಲೂ ಅದೇ ನಿರ್ಭಯತೆ, ನಿಷ್ಪಕ್ಷತೆ ಮತ್ತು ಸುಸ್ಪಷ್ಟತೆಯು ಅಭಿವ್ಯಕ್ತಪಟ್ಟಿದೆ.

"ಸಂವಿಧಾನದ ೧೬೧ನೆಯ ಅನುಚ್ಛೇದದಲ್ಲಿ ಉಲ್ಲೇಖವಾಗಿರುವ ಅಧಿಕಾರಗಳು ಅನಿಯಂತ್ರಿತವೂ ವ್ಯಾಪಕವೂ ಆಗಿವೆ. ಆದುದರಿಂದ, ಅವುಗಳನ್ನು ಸ್ವಚ್ಛಂದತೆಯಿಂದಲ್ಲ, ಪರ್ಯಾಪ್ತ ಮತ್ತು ಉಚಿತ ಕಾರಣಗಳಿಗಾಗಿಯೇ ಉಪಯೋಗಿಸಿಕೊಳ್ಳಬೇಕು. ಈ ಅಧಿಕಾರಗಳು ವ್ಯಾಪಕವಾಗಿರುವುದೇ ಅವು ಬಹಳ ಕಡಿಮೆ ಮತ್ತು ಅತ್ಯಧಿಕ ನಿಯಂತ್ರಣದಲ್ಲಿ ಉಪಯೋಗಿಸಲ್ಪಡಬೇಕೆಂದು ಸಾರುತ್ತದೆ. ಕಾನೂನಿನ ಮಾರ್ಗದಲ್ಲಿ ಅಡ್ಡಬರುವುದಕ್ಕಲ್ಲ. ಸಂವಿಧಾನದಿಂದ ಅಧಿಕಾರ ಪಡೆದವರು ಅದನ್ನು ಬುದ್ಧಿಮತ್ತೆಯೊಡನೆ ಬಳಸಿಕೊಂಡು ನ್ಯಾಯದಾನದ ಮಾರ್ಗದಲ್ಲಿ ಎಡರು ತರಲಾರರೆಂದು ಆಶಿಸುತ್ತೇನೆ" ಎಂದು ಶ್ರೀ ಚಯನಾನಿಯವರು ವ್ಯಕ್ತಪಡಿಸಿದರು.

ನೌಕಾಸೇನೆಯ ಒಬ್ಬ ಅಧಿಕಾರಿಯ ಶಿಕ್ಷೆಯನ್ನು ಸ್ಥಗಿತಗೊಳಿಸುವ ಬೊಂಬಾಯಿ ರಾಜ್ಯಪಾಲರ ಆದೇಶವನ್ನು ಮುಖ್ಯ ನ್ಯಾಯಾಧೀಶರು ವಿವೇಚಿಸಿದರು. 'ಈ ಸಂಬಂಧದ ಆದೇಶವು ಅಸಾಧಾರಣ ಮತ್ತು ಅಪರಂಪರಾಗತವಾಗಿದೆ. ಇಂತಹ ಘಟನೆಗಳಿಂದ ಒಬ್ಬ ವಿಶೇಷ ವ್ಯಕ್ತಿಯೊಡನೆ ವಿಶೇಷ ಪ್ರಕಾರವಾಗಿ ವ್ಯವಹರಿಸಲಾಗುವುದೆಂಬ ಸಂದೇಹ ಹುಟ್ಟಬಹುದಾಗಿದೆ. ಇದರಿಂದ ನ್ಯಾಯದಾನದ ನಿಷ್ಪಕ್ಷಪಾತತನದಲ್ಲಿ ಜನತೆಯು ವಿಶ್ವಾಸವನ್ನು ಕಳೆದುಕೊಳ್ಳುವ ಸಂಭವವಿದೆ" ಎಂದವರು ಉದ್ಗರಿಸಿದರು.

೧೯೩೫ರಲ್ಲಿ ಭಾರತ ಸರಕಾರದ ಅಧಿನಿಯಮದಲ್ಲಿ ಅಂತರ್ಗತವಾದ ಬೊಂಬಾಯಿ ವಿಧಾನ ಸಭೆಯ ನಿಯಮಗಳ ಪ್ರಾರಂಭಿಕ ರೂಪವನ್ನು ತಯಾರಿಸಿದ ಮತ್ತು ೧೯೩೭ರಲ್ಲಿ ಕಾಂಗ್ರೆಸ್ ಮಂತ್ರಿಮಂಡಳದ ಕಾನೂನು ನಿಯಮಗಳ ರಚನೆಯಲ್ಲಿ ಕೈಹಾಕಿದ ಒಬ್ಬ ವ್ಯಕ್ತಿ ಇಂದು ಬೊಂಬಾಯಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿರುವುದು ಸಂಯೋಗವಶವೆಂದು ಹೇಳಬೇಕು. ಶ್ರೀ ಚಯನಾನಿಯವರು ಸಿಂಧ ಪ್ರಾಂತ್ಯದ ಹೈದರಬಾದಿನವರು. ಅವರ ತಂದೆಯು ಅಲ್ಲಿನ ಒಂದು ಶಾಲೆಯ ಪ್ರಧಾನಾಧ್ಯಾಪಕರಾಗಿದ್ದರು. "ನಾನು ನನ್ನ ತಂದೆಯ ಶಿಷ್ಯ" ಎಂದು ಶ್ರೀ ಚಯನಾನಿಯವರು ಇಂದಿಗೂ ಮಂದಹಾಸ ಬೀರುತ್ತ ಹೇಳುತ್ತಾರೆ.

ಸಿಂಧ ಕಾಲೇಜಿನಲ್ಲಿ ಇಂಟರ್–ಸಾಯನ್ಸ ಪರೀಕ್ಷೆಯನ್ನು ಉತ್ತೀರ್ಣಗೊಳಿಸಿ ಶ್ರೀ ಚಯನಾನಿಯವರು ಓದನ್ನು ಮುಂದುವರಿಸುವುದಕ್ಕೋಸ್ಕರ ಇಂಗ್ಲೆಂಡಿಗೆ ತೆರಳಿ, ಕೇಂಬ್ರಿಜ್ ವಿಶ್ವವಿದ್ಯಾಲಯವನ್ನು ಸೇರಿದರು. ೧೯೨೬ರ ಐ. ಸಿ. ಎಸ್. ಪರೀಕ್ಷೆಯಲ್ಲಿ ಅವರು ಭಾರತೀಯ ವಿದ್ಯಾರ್ಥಿಗಳಿಗೆಲ್ಲಾ ಪ್ರಪ್ರಥಮರಾಗಿ ತೇರ್ಗಡೆ ಹೊಂದಿದರು.

ಶೋಲಾಪುರದ ಅಸಿಸ್ಟೆಂಟ್ ಕಲೆಕ್ಟರಾಗಿ ಶ್ರೀ ಚಯನಾನಿಯವರು ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದರು. ಬೊಂಬಾಯಿ ಸರಕಾರದ ಕಂದಾಯ, ನ್ಯಾಯ ಮತ್ತು ಕಾನೂನು ವಿಭಾಗದ ಉಪಕಾರ್ಯದರ್ಶಿ ಇಲ್ಲವೇ ಜತೆ ಕಾರ್ಯದರ್ಶಿಯಾಗಿಯೂ ಇದ್ದರು. ಭಾರತ ಸರಕಾರದ ಸ್ವರಾಷ್ಟ್ರ ವಿಭಾಗದಲ್ಲೂ ಇವರು ಕಾರ್ಯದರ್ಶಿಯಾಗಿದ್ದರು. ೧೯೪೮ರಲ್ಲಿ ಬೊಂಬಾಯಿಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿಯುಕ್ತರಾದರು. ಇದಕ್ಕೆ ಮೊದಲು ಅವರು ಅಹಮದಾಬಾದ, ಪೂನಾ ಮತ್ತು ಶೋಲಾಪುರಗಳಲ್ಲಿ ಜಿಲ್ಲಾ ಮತ್ತು ಸೆಶನ್ ನ್ಯಾಯಾಧೀಶರಾಗಿ ಕಾರ್ಯವೆಸಗಿದರು. ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ನೇಮಿತರಾದ ಪ್ರಪ್ರಥಮ ಐ. ಸಿ. ಎಸ್. ಅಧಿಕಾರಿಗಳು ಶ್ರೀ ಚಯನಾನಿಯವರಾಗಿದ್ದಾರೆ. ೧೯೫೮ರಲ್ಲಿ ಇವರು ಬೊಂಬಾಯಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದರು.

ಅಮೇರಿಕದ ಸಂಯುಕ್ತ ಸಂಸ್ಥಾನದ ಸೆಕ್ರೆಟರಿ
ಫ್ರೆಡರಿಕ್ ಎಚ್. ಮುಲ್ಲರ್.

ಶ್ರೀ ಚಯನಾನಿಯವರಿಗೆ ಶಿಕ್ಷಣವು ಮೆಚ್ಚುಗೆಯ ವಿಷಯವಾಗಿದೆ. ಇವರು ಬೊಂಬಾಯಿ ನಗರದ ಮೂರು ಕಾಲೇಜುಗಳೊಡನೆ ಸಂಪರ್ಕವಿರಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಕಲ್ಯಾಣಪ್ರದ ಕಾರ್ಯಗಳಲ್ಲವರ ಅಭಿರುಚಿ ಅತ್ಯಧಿಕವಾಗಿದೆ. ಇವರ ಪ್ರೇರಣೆಯಿಂದಾಗಿಯೇ ಸಂಬಂಧಿತ ಕಾಲೇಜುಗಳ ವಿದ್ಯಾರ್ಥಿ ಮತ್ತು ಅಧ್ಯಾಪಕರ ಪ್ರಯೋಜನಾರ್ಥವಾಗಿ ಆರೋಗ್ಯ ಕೇಂದ್ರಗಳು ಸ್ಥಾಪನೆಗೊಂಡಿವೆ. ಇಂದಿನ ಶಿಕ್ಷಣ ವಿಧಾನದಲ್ಲಿ ಪರಿವರ್ತನೆಯಾಗಬೇಕೆಂದು ಶ್ರೀ ಚಯನಾನಿ ಅಭಿಪ್ರಾಯಪಡುತ್ತಾರೆ. ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದನಂತರ ಸಫಲಜೀವನವನ್ನು ಬದುಕುವಂತೆ ಮತ್ತು ರಾಷ್ಟ್ರಕ್ಕಾಗಿ ಸ್ವಾರ್ಥತ್ಯಾಗವೆಸಗುವಂತೆ ಆತನ ಮೆದುಳು, ಹೃದಯ ಮತ್ತು ಹಸ್ತಗಳು ವಿಕಸಿತವಾಗುವಂತಹ ಶಿಕ್ಷಣ ಬೇಕು ಎನ್ನುತ್ತಾರೆ ಇವರು.

ಶಿಕ್ಷಣದಲ್ಲಿ ಮಾತ್ರವಲ್ಲ ಸಮಾಜಸೇವೆಯ ಬೇರೆ ಕ್ಷೇತ್ರಗಳಲ್ಲೂ ಇವರಿಗೆ ಅಭಿರುಚಿಯಿದೆ. ನಿಮ್ನ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಉತ್ತಮ ವಸತಿ ಯೋಜನೆಯನ್ನು ಕಲ್ಪಿಸುವ ಕಾರ್ಯದಲ್ಲಿಯೂ ಶ್ರೀ ಚಯನಾನಿ ಕಾರ್ಯವೆಸಗುತ್ತಿದ್ದಾರೆ.

ಶ್ರೀ ಚಯನಾನಿಯವರು ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ವಿಜರ್‌ಲೇಂಡ್‌ಗಳ ಯಾತ್ರೆಯನ್ನು ಮಾಡಿ ಮುಗಿಸಿದ್ದಾರೆ. ಟೆನ್ನಿಸ್ ಮತ್ತು ಬ್ರಿಜ್ ಆಟಗಳಲ್ಲಿ ಆಸಕ್ತಿ ತೋರಿಸುತ್ತಾರೆ. ಆದರೆ, ಇಂದು ತಮ್ಮ ಪ್ರಾಯ ಮತ್ತು ಕಾರ್ಯಭಾರಗಳಿಂದ ಅವರಿಗೆ ಆಡಲು ಸಮಯವೇ ದೊರೆಯುತ್ತಿಲ್ಲ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA' WEEKLY. is in the list of periodicals and Newspapers approved for use in Secondary School as per proceedings ooc· No· 466 N/50 date 2-12-1950 of the Director of public Instruction Madras·

ಚಾರುಚರ್ಯನ

ರಾಜಾಜೀಯವರಿತ್ತ ಗಾಢಾಲಿಂಗನ

ನಾಯಕದ್ವಯರ ಪರಸ್ಪರಾವಲೋಕನವಾಗಲು ಅವರು ವಿರುದ್ಧ ಪಥಭ್ರಮಣ ಮಾಡಬೇಕಾಯಿತು.

ಸ್ವತಂತ್ರ ಪಕ್ಷದ ನಾಯಕರಾದ ರಾಜಾಜಿ ಉತ್ತರ ಭಾರತದಲ್ಲಿ ಸಂಚರಿಸುತ್ತ ನವದೆಹಲಿಯನ್ನು ಸೇರಿ, ಅಲ್ಲಿ ತಮ್ಮ ಪುತ್ರಿ ಶ್ರೀಮತಿ ಲಕ್ಷ್ಮೀ ದೇವದಾಸರ ಮನೆಯಲ್ಲಿ ತಂಗಿದ್ದರು.

ಕಾಂಗ್ರೆಸ್ ನಾಯಕಮಣಿ ಪಂಡಿತ ಜವಾಹರಲಾಲ ನೆಹರು ಅವರು ಶ್ರೀ ರಾಜಾಜಿಯವರನ್ನು ಕಾಣುವಸಲುವಾಗಿ ಶ್ರೀಮತಿಯವರ ನಿವಾಸಸ್ಥಾನಕ್ಕೆ ತೆರಳಿದ್ದರು.

ತನ್ನನ್ನು ನೋಡುವುದಕ್ಕಾಗಿ ತನ್ನಲ್ಲಿಗೆ ಆಗಮಿಸಿದ ನೆಹರುಗಳನ್ನು ರಾಜಾಜಿಯವರು ಆಲಿಂಗಿಸಿಕೊಂಡು ಸ್ವಾಗತಿಸಿದರಂತೆ.

ಆಗ ನೆಹರೂ 'ನೀವೆಷ್ಟು ತರುಣರಾಗಿದ್ದೀರಿ ಎಂಬುದನ್ನು ನೋಡಲಿಕ್ಕೆ ಬಂದಿದ್ದೇನೆ' ಎಂದು ಉದ್ಗರಿಸಿದರಂತೆ. ಮುಂದೆ ಅವರಿಬ್ಬರ ನಡುವೆ ಇಪ್ಪತ್ತು ಮಿನಿಟುಗಳ ಸಮಯ ಮಾತುಕತೆ ನಡೆಯಿತಂತೆ.

ಇಂದು ರಾಜಾಜಿಯೇನೋ ಸ್ವತಂತ್ರ ಪಕ್ಷದ ಜನ್ಮದಾತರು ಮಾತ್ರವಲ್ಲ, ಅದರ ನಾಯಕರೂ ಆಗಿದ್ದಾರೆ. ಆ ಒಂದು ಕಾಲದಲ್ಲಿ-ಅದೇನೂ ಬಹಳ ಹಿಂದಿನದಲ್ಲ-ರಾಜಾಜೀಯವರು ಕಾಂಗ್ರೆಸ್ ಪಕ್ಷದ ನಾಯಕರಲ್ಲೊಬ್ಬರಾಗಿದ್ದರು. ಮದ್ರಾಸದ ಮುಖ್ಯಮಂತ್ರಿಗಳಾಗಿದ್ದರು; ಬಂಗಾಳದ ರಾಜ್ಯಪಾಲರಾಗಿದ್ದರು; ಕೇಂದ್ರ ಸಚಿವರಾಗಿದ್ದರು; ಅಲ್ಲದೇ ಭಾರತದ ಗವರ್ನರ ಜನರಲ್ಲರೂ ಆಗಿದ್ದರು.

ಭಾರತವು ಸ್ವಾತಂತ್ರ್ಯವನ್ನು ಪಡೆದೊಡನೆಯೇ ಆಗ ವೈಸರಾಯಿಯಾಗಿದ್ದ ಲಾರ್ಡ್ ಮೌಂಟ್ ಬೇಟನ್ನರೇ ಸ್ವತಂತ್ರ ಭಾರತದ ಪ್ರಥಮ ಗವರ್ನರ ಜನರಲ್ ಆಗಿ ನಿಯುಕ್ತರಾಗಿದ್ದರೂ ಇವರು ನಿವೃತ್ತರಾದನಂತರ ಆ ಆಸನವೇರಿದ ಏಕಮೇವ ಭಾರತೀಯ ಎಂದರೆ ರಾಜಾಜಿ.

ಇದರಿಂದಾಗಿ, ರಾಜಾಜಿಯವರಿಗೆ ಇಂದಿಗೂ ರಾಷ್ಟ್ರನಾಯಕರ ಶ್ರೇಣಿಯಲ್ಲಿ ಗಣನೀಯ ಸ್ಥಾನವಿದೆ. ಇಂದಿಗೂ ಅವರು ಗವರ್ನರ ಜನರಲ್ಲ ಪದವಿಯ ನಿವೃತ್ತವೇತನವನ್ನು ಪಡೆಯುತಿದ್ದಾರೆ.

ರಾಜಾಜಿ ರಾಜಕಾರಣದಿಂದ ದೂರ ನಿಂತುಕೊಂಡಿದ್ದರು. ಅವರು ಮದ್ರಾಸದಲ್ಲೀ ಒಂದು ವಿಧದ ಸನ್ಯಾಸಜೀವನವನ್ನು ಬಾಳುತಿದ್ದರು. ಕ್ರಮೇಣ ನೆಹರೂ ಸರಕಾರ ಹಾಗೂ ಕಾಂಗ್ರೆಸ್‌ನ ಒಂದೊಂದು ಕಾರ್ಯಕ್ರಮಗಳಿಗೆ ಬಲವಾದ ಚಾಟಯೇಟು ಯಿಾಯುವ ಹವ್ಯಾಸಕ್ಕವರು ಅಂಟಬಿದ್ದರು.

ಅದೇನೂ ಅವರ ತಪ್ಪು ಎನ್ನುವಂತಿಲ್ಲ. ಸಮರ್ಥರ ಮನಸ್ಸು ಸದಾ ಮುಂದೆ ಸಾಗುತ್ತಿದೆ. ಅವರಿಗೆ ತಮ್ಮ ಶಕ್ತಿಯ ಉಪಯೋಗಕ್ಕೆ ಉಚಿತ ಅವಕಾಶ ದೊರೆಯದೆ ಹೋದರೆ, ಅದು 'ಅನುಚಿತ' ಮಾರ್ಗವನ್ನಾದರೂ ಅನುಸರಿಸಬೇಕಾಗುತ್ತದೆ. ಇದರಿಂದ, ರಾಜಾಜಿಯವರ ಪಥಭ್ರಮಣ ಪಂಡಿತಜೀಯವರಿಗೆ ವಿರುದ್ಧ ದಿಕ್ಕಿನಲ್ಲಿ ನಡೆಯತೊಡಗಿತು.

ಈ ಅವಧಿಯಲ್ಲಿ ಶ್ರೀ ನೆಹರು ಹಲವಾರು ಬಾರಿ ಮದ್ರಾಸಕ್ಕೆ ಆಗಮಿಸಿದ್ದರು ರಾಜ್ಯಪಾಲರು! ಅಥವಾ ಮತ್ತಿತರರು ಪಂಡಿತಜೀಯವರಿಗೆ ಹಲವಾರು ಸತ್ಕಾರಕೂಟಗಳನ್ನೋ ಭೋಜನಕೂಟವನ್ನೋ ಏರ್ಪಡಿಸಿದ್ದರು.

ಈ ಸಂದರ್ಭಗಳಲ್ಲಿ ಪ್ರಧಾನಿ ನೆಹರೂರವರಿಗೆ ನಿವೃತ್ತ ಗವರ್ನರ ಜನರಲ್ಲರ ಟೀಕೆ ಟಿಪ್ಪಣಿಗಳಿಂದಾಗಿ ಬೇಸರ ಬಂದಿರಬಹುದು.

ಎಂತಲೇ ಪಂಡಿತಜೀ ರಾಜಾಜೀಯವರನ್ನು ಒಂದು ಬಾರಿಯಾದರೂ ಕಾಣುವ ಅಭಿಲಾಷೆ ಪಡಲಿಲ್ಲ. ಪ್ರಾಯಃ 'ಮುದುಕರು ತರುಣರಾಗುವುದಿದೆಯೇ?' ಎಂದುಕೊಂಡವರು ದೂರವುಳಿದಿರಬಹುದು. ಕೂಟಗಳ ವ್ಯವಸ್ಥಾಪಕರಿಗೆ ನೆಹರೂಜೀಯವರ ಮುಂಗೋಪದ ಅರಿವಿಲ್ಲದುಂಟೆ? ಇದಕ್ಕಾಗಿಯೇ ಅವರು ಹೆದರಿ, ನೆಹರೂ ಸನ್ಮಾನ ಕೂಟಕ್ಕೆ ರಾಜಾಜಿಯವರನ್ನೂ ಇತರ ಗಣನೀಯ ವ್ಯಕ್ತಿಗಳೊಂದಿಗೆ ಆಮಂತ್ರಿಸುವ ಧೈರ್ಯವನ್ನೂ ಕಳೆದುಕೊಂಡರು.

ಅಂತೂ ಐದು ವರ್ಷ ದಕ್ಷಿಣೋತ್ತರ ಧ್ರುವಗಳಂತೆ ದಕ್ಷಿಣ ಭಾರತದ ರಾಜಾಜಿ, ಉತ್ತರ ಭಾರತದ ಪಂಡಿತಜಿ ಒಬ್ಬರನ್ನೊಬ್ಬರನ್ನು ಕಾಣಲಿಲ್ಲ.

ವಿಧಿಯ ಲೀಲೆ ವಿಚಿತ್ರವೆಂಬ ವಾದವೊಂದಿದೆ. ಇದರಿಂದಾಗಿಯೇ ಇದೀಗ ಈ ಉಭಯತರರಲ್ಲಿ ಬಹು ದೀರ್ಘಕಾಲದ ವಿರಹದ ನಂತರ ಮಿಳನವಾದುದು. ಅದೂ, ರಾಜಾಜಿಯ ತಾರುಣ್ಯವನ್ನು ಪರೀಕ್ಷಿಸಲು ನೆಹರೂ ಬಂದುದು!

ಸ್ವತಂತ್ರ ಪಕ್ಷದ ಧ್ಯೇಯಧೋರಣೆಗಳ ರೂಪಣೆ ಮತ್ತು ಕಾಂಗ್ರೆಸ್ ನೀತಿಯ ಪ್ರತಿಭಟನೆಯನ್ನು ಮಾಡುವ ರಾಜಾಜಿ ಮುದುಕರಲ್ಲ; ಅವರು ದಿನಗಳೆದಂತೆ ತರುಣರೇ ಆಗಿ ಪರಿವರ್ತಿಸುತಿದ್ದಾರೆ. ಹೀಗಾದರೆ ಮುಂದೇನು ಎಂದು ಪಂಡಿತಜಿ ಚಿಂತಿಸಿರಬಹುದೆ?

ರಾಜಾಜಿಯವರೂ ತನ್ನ ತಾರುಣ್ಯದ ಶಕ್ತಿಯೆಲ್ಲವನ್ನೂ ಕೇಂದ್ರೀಕರಿಸಿ ನೆಹರೂವರನ್ನು ಆಲಿಂಗಿಸಿದರು. ಈ ಆಲಿಂಗನ ಮೃದುವಾಗಿತ್ತೆ, ಅಲ್ಲ ಪರುಷವಾಗಿತ್ತೆ ನೆಹರು ಮಾತ್ರ ಬಲ್ಲರು. ಉಳಿದವರಿಗೆ ತಿಳಿದುಬಂದಿಲ್ಲ. ರಾಜಾಜಿಯವರ ಶಕ್ತಿಯೆಷ್ಟು, ಅವರು ಎಷ್ಟರ ಮಟ್ಟಿಗೆ ತರುಣರಾಗುತಿದ್ದಾರೆ ಎಂಬುದರ ಪರೀಕ್ಷೆಯು ನೆಹರೂಗಳಿಗೆ ಆಗದುಳಿಯದು.

ಮುದುಕರು ಮಾತಿಗೆ ಕೂತರೆ ಹೊತ್ತು ಹೋದುದೇ ತಿಳಿಯದು. ಅವರ ಹರಟೆ ತಾಸುಗಟ್ಟಲೆ ನಡೆಯುವುದು ಸಂಪ್ರದಾಯ. ಆದರೆ, ಸದ್ಯ ಈ ಇರ್ವರು ಹಳೆಯ ತರುಣರ ನಡುವೆ ಕೇವಲ ಇಪ್ಪತ್ತೇ ಮಿನಿಟು ಮಾತುಕತೆ ನಡೆಯಿತೆನ್ನುವಾಗ ಇರ್ವರಲ್ಲೂ ತಾರುಣ್ಯದ ಶಕ್ತಿ ತಾಂಡವಾಡುತ್ತಿದೆಯೆನ್ನಬೇಕು.

ತನ್ನ ನೂರು ಮಕ್ಕಳನ್ನೂ ಕೊಂದ ಭೀಮನನ್ನು ತನ್ನ ಶೋಕವ(?)... ಳಿಂದ ಬಿಗಿದಪ್ಪಿ ಪುಡಿಗೈಯ್ಯಲಿಚ್ಛಿಸಿದನಂತೆ ಕುರುವಂಶದ ಅಧಿಪತಿ ಧೃತರಾಷ್ಟ್ರ. ಆದರೆ, ಶ್ರೀಕೃಷ್ಣ ಆತನ ತೆಕ್ಕೆಗೆ ಕಬ್ಬಿಣದ ಮೂರ್ತಿಯೊಂದನ್ನಿರಿಸಿ ಅದನ್ನು ಪುಡಿಯಾಗಿಸಿ, ಭೀಮನನ್ನುಳಿಸಿದನೆಂದು ಮಹಾಭಾರತದ ಕಥೆ.

ರಾಜಾಜಿಯವರು ಕೋ... ನೆಹರು ಅವರನ್ನು ಆಲಿಂಗಿಸಿದರು ನಿಜವೇ; ಆದರೆ, ಈ ಗಾಢಾಲಿಂಗನ ನೆಹರೂ ಮೇಲೆ ಯಾವ ಪರಿಣಾಮ ಬೀರುವುದೆಂದು ಈಗಲೇ ಊಹಿಸುವುದು ಕೇವಲ ಊಹೆಯಾಗಬಹುದು; ಸತ್ಯಕ್ಕೆ ವಿರೋಧವಾಗಲೂ ಬಹುದು.

ಉಭಯ ನಾಯಕರ ಆಕಸ್ಮಿಕ ಮಿಲನವು ಆಕಸ್ಮಿಕ ಪರಿಣಾಮವೇನನ್ನಾದರೂ ಹೊರಗೆಡಹುವ ಸಂಭವವಿಲ್ಲವೆಂಬುದು ನಿಜವೇ. ದೇಶಮಿಲನವೊಡನೆ ಮನಸ್ಸೂ ಮಿಲನವಾಗುವುದೆಂದು ವಿಶ್ವಾಸತಾಳಿದರೆ, ಅದು ಕೇವಲ ಕುಹಕವೇ(?); ಆದರೂ ವಿಧಿಲೀಲೆಯೇನಿದೆಯೆಂದು ಹೇಗೆ ತಿಳಿಯಬೇಕು?

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನೆ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.

ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ಅಂಗವಿಕಲರಾಗಿ ತಮ್ಮ ಜೀವನವು ಪತಿತವಾಯಿತೆಂದು ದುಃಖಿಸುವವರಿಗೂ ಸುಯೋಗ್ಯ ಜೀವನಾಧಾರವನ್ನು ಕಲ್ಪಿಸುವ ಯೋಜನೆಗಳನ್ನು ಭಾರತವು ಕೈಗೊಂಡು, ಅವರಲ್ಲೂ ತಾವಾರಿಗೂ ಕಡಿಮೆಯವರಲ್ಲ ಎಂಬ ಭಾವನೆಯ ಹುಟ್ಟುವಂತೆ ಮಾಡಿದೆ. ಈ ಚಿತ್ರದಲ್ಲಿ ಕುರುಡಿಯರಾದ ಇರ್ವರು ಮಹಿಳೆಯರು ಕಾರ್ಪೆಟುಗಳನ್ನು ನೇಯುತ್ತಿರುವುದನ್ನು ನೀವು ಕಾಣಬಹುದು.

ನಾವು ಬಹು ಮೌಲ್ಯವುಳ್ಳ ಕಾರ್ಯವೊಂದನ್ನು ಮಾಡಬಯಸುವುದಾದರೆ, ಅದಕ್ಕೆ ಮೊತ್ತಮೊದಲು ನಮ್ಮ ಹೃದಯವನ್ನೂ ಮನಸ್ಸನ್ನೂ ಬಹುಮೌಲ್ಯವುಳ್ಳ ಭಾವಗಳಿಂದ ತುಂಬಿಸಿಕೊಳ್ಳಬೇಕು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ವಾರ
...೪	೧೪-೪-'೬೦	೩ ೨

ಜಯಮೂಲ ಯಾವುದು?

ಮಾನವತಾವಾದಿ ರಾಷ್ಟ್ರಗಳ ಜನತೆ...ಯ ದೃಷ್ಟಿಯು ಕತ್ತಲೆಯ ಭೂ ಖಂಡ...ವ ಉಪನಾಮಕ್ಕೆ ಗುರಿಯಾದ ಆಫ್ರಿ...ಕದತ್ತ ಹರಿಯಲು ದಕ್ಷಿಣ ಆಫ್ರಿಕೆಯ ಪ್ರಧಾನರಾದ ಶ್ರೀ ಹೆಂಡ್ರಿಕ್ ವೆರ್‌ವಾ...ರ್ಡರೇ ಮೂಲ ಕಾರಣರು. ಅವರು ಜಗ...ದ ಜನಮತವನ್ನು, ಮಾನವತೆಯನ್ನು, ...ಆಧುನಿಕ ಯುಗದ ನವಸಂದೇಶವನ್ನು ನೆ...ಲಸಮ ಮಾಡಿ, ವರ್ಣಭೇದ ನೀತಿಯ...ನ್ನು ಆದಿಯಿಂದಲೂ ಪುರಸ್ಕರಿಸಿಕೊಂಡು ...ಬರುವವರು ಮಾತ್ರವಲ್ಲ, ಆಫ್ರಿಕನರನ್ನು ...ತಮ್ಮ ಆಡಳಿತೆಯ ಯಂತ್ರದಲ್ಲಿ ಪದದಲಿ...ತರನ್ನಾಗಿ ಮಾಡುತ್ತಿದ್ದು, ಇದಕ್ಕೆ ಪರಿ...ಪೋಷಕವಾಗುವ ವಿವಿಧ ಕಾರ್ಯಕ್ರಮ...ಗಳನ್ನು ಮುಂದೊತ್ತಿಕೊಳ್ಳುತ್ತ ಬಂದಿರು...ವರು. ಕತ್ತಲೆಯೊಳಗಿನಲ್ಲಿ ಹುದುಗಿಹೋದ ...ಕಪ್ಪು ಜನರ ತಾಯ್ನಾಡಿನಲ್ಲಿ ತಮ್ಮ ...ಶ್ವೇತವರ್ಣವನ್ನು ಪ್ರಸರಿಸಿ, ಆ ಕಾಲ...ಭೂಮಿಯನ್ನು ಪ್ರಕಾಶಮಯ ಭೂಮಿ...ಯನ್ನಾಗಿ ಮಾಡುವ ಭರದಲ್ಲಿ ಸ್ಥಳೀಯ...ರನ್ನು ಪಶುಹೀನವಾಗಿ ಕಂಡುದರಿಂದ ಶ್ರೀ ವೆರ್‌ವಾರ್ಡರು ಆಡಳಿತೆಯ ಯಂತ್ರ...ದ ಒಂದು ತಿರುಪು ಮೊಳೆಯನ್ನೇ ಕಿತ್ತು ಬಿಟ್ಟರೆಂದು ಹೇಳಬಹುದು. ಮತ್ತು ಇದ...ರಿಂದಾಗಿಯೇ ದಕ್ಷಿಣ ಆಫ್ರಿಕೆಯಲ್ಲಿ ಹತ್ಯಾಕಾಂಡವು ಪ್ರಾರಂಭವಾಗಿ, ಅದು ಅತ್ಯಂತ ಉಲ್ಬಣಾವಸ್ಥೆಗೇರಿದೆಯೆಂದು ಹೇಳಬಹುದು.

ತಮ್ಮ ನ್ಯಾಯವಾದ ಕೇಳಿಕೆಗಳನ್ನು ಮನ್ನಿಸದೆ ತಮ್ಮ ಮನೆಯಲ್ಲಿಯೇ ತಮ್ಮನ್ನು ಅಂಕುಶದೊಳಗಿಡುವ ಸಾಧನವನ್ನು ವಿರೋಧಿಸಿ ದಕ್ಷಿಣ ಆಫ್ರಿಕದ ಶ್ವೇತೇತರರು ಚಳವಳವನ್ನು ಹೂಡಿದ್ದು, ಅದು ಪರಾಕಾಷ್ಠೆಯನ್ನು ಹೊಂದಿದುದು, ಅಲ್ಲಿ ನರಮೇಧ ನಡೆದುದು, ಸರಕಾರವು ಚಳವಳವನ್ನು ಅಣಗಿಸಲು ದಿಗ್ಬಂಧನ ಹೇರಿದ್ದು ಎಲ್ಲವೂ ಇಂದು ಜನಜನಿತವಿದೆ. ಆದರೆ, ಒಂದೆಡೆ ಸರಕಾರವು ಕಪ್ಪು ವರ್ಣೀಯರ ಮೇಲೆ ನೃಶಂಸರೂಪೀ ಕಾರ್ಯಾಚರಣೆಯನ್ನು ಹೂಡುತ್ತಿರವಾಗಲೇ ಎದುರು ಪಕ್ಷದವರಿಂದಲೂ ಇದೇ ಮಾದರಿಯ ರುದ್ರಕ್ರಿಯೆಯೊಂದು ನಡೆದು ಅಲ್ಲಿನ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ. ಇದೇ ಮಾದರಿಯಲ್ಲಿ ಹಿಂಸೆ—ಪ್ರತಿಹಿಂಸೆಗಳು ನಡೆಯುತ್ತ ಹೋಗುವುದಾದರೆ ಇದಕ್ಕೆ ಅಂತ್ಯವೆಲ್ಲಿ ಎಂದು ಹೇಳಬರುವುದಿಲ್ಲ. ವಿಶ್ವಶಾಂತಿಯ ಮಂತ್ರವನ್ನು ಮೊಳಗು ಹಾಕುತ್ತ, ಅದಕ್ಕಾಗಿ ಪ್ರಯತ್ನಶೀಲವಾಗಿ ಕೆಲವು ರಾಷ್ಟ್ರಗಳು ಶ್ರಮಿಸುತ್ತಿರುವಾಗಲೇ ಈ ಮಾದರಿಯ ಅಮಾನುಷ ಕೃತ್ಯಗಳಿಂದ ವಿಶ್ವಶಾಂತಿಯ ಸಾಧ್ಯತೆಯನ್ನು ಮತ್ತಷ್ಟು ದೂರಕ್ಕಟ್ಟುವ ಅವಿವೇಕತನವನ್ನು ಇಂದಿನ ನಾಗರಿಕ ಜಗತ್ತು ಮನ್ನಿಸಲಾರದು. ದಕ್ಷಿಣ ಆಫ್ರಿಕೆಯ ಪ್ರಧಾನಿಯವರು ಕೃಷಿ ಪ್ರದರ್ಶನದಲ್ಲಿ ಭಾಗವಹಿಸಲು ವೇದಿಕೆಯ ಮೇಲೆ ಮಂಡಿಸಿರುವಾಗಲೇ ಅವರನ್ನು ಗುಂಡಿಕ್ಕಿ ಕೊಲ್ಲುವ ಸಾಹಸವನ್ನು ಆ ಪ್ರದರ್ಶನದ ವ್ಯವಸ್ಥಾಪಕ ಮಂಡಳಿಯ ಒಬ್ಬ ಸದಸ್ಯನೇ ಮಾಡಿದನೆಂದೂ ದೈವವಶದಿಂದ ಆತನ ಮನಃಕಾಮನೆಯು ಪೂರ್ತಿಗೊಳ್ಳಲಿಲ್ಲವೆಂದೂ ಬಂದ ವರದಿಯು ರೋಮಾಂಚನಕಾರಿಯಾಗಿದೆ. ವರ್ಣಭೇದ ನೀತಿಯಿಂದಾಗಿ ಶ್ರೀ ವೆರ್‌ವಾರ್ಡರು ದಕ್ಷಿಣ ಆಫ್ರಿಕೆಯ ಶ್ವೇತೇತರರೆಲ್ಲರ ಮತ್ತು ಕೆಲವು ಶ್ವೇತವರ್ಣೀಯರ ಸಹಾನುಭೂತಿಯನ್ನು ಕಳೆದುಕೊಂಡಿರುವುದು ನಿಜವೇ. ಅವರು ಚಳುವಳಿಯನ್ನು ಹತ್ತಿಕ್ಕಲು ದಂಡಪ್ರಯೋಗಿಸಿದರೆಂಬುದೂ ಸತ್ಯವೇ. ನಾಗರಿಕ ಜಗತ್ತಿನ ಯುಗವಾಣಿಯನ್ನು ಮರೆತು ತಮ್ಮ ಹಿಂದಿನ ನೀತಿಯನ್ನೇ ಮತ್ತಷ್ಟು ಬಲಪಡಿಸುವ ಯೋಚನೆ ಮಾಡುತ್ತಿದ್ದಾರೆಂಬುದೂ ಸಮವೇ. ಆದರೆ, 'ಶಠಂ ಪ್ರತಿ ಶಾಠ್ಯಂ' ತತ್ವ ಅದು ಬಹಳ ಪ್ರಾಚೀನ ಕಾಲಕ್ಕೆ ಸೇರಿದ ಮಾತು. ಇಂದು ಜಗತ್ತು ಬಹಳಷ್ಟು ಮುಂದುವರಿದಿದೆ; ವಿಶ್ವದ ಪ್ರಮಾಣ ಸಂಕುಚಿತವಾಗುತ್ತಿದೆ; ದೇಶ ದೇಶಗಳು ದಿನೇ ದಿನೇ ನಿಕಟವಾಗುತ್ತಿವೆ. ಒಬ್ಬರನ್ನೊಬ್ಬರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಪ್ರಯತ್ನಗಳು ಸುಸೂತ್ರವಾಗಿ ಸಾಗುತ್ತಿವೆ. ಹೀಗಿರುವಾಗ, ಒಂದೇ ರಾಷ್ಟ್ರದೊಳಗಿನ ಈ ಸಂಬಂಧದ ಬಗ್ಗೆ ಇಂತಹ ಉಗ್ರ ಭಯಾನಕ ಸನ್ನಿವೇಶಗಳನ್ನು ಒದಗಿಸಿಕೊಳ್ಳುವುದು ವೆರ್‌ವಾರ್ಡರಿಗೂ ಅವಶ್ಯವಿದ್ದಿರಲಿಲ್ಲ; ಅವರು ಮಾಡಿದರೂ 'ಹಿಂಸೆಯನ್ನು ಅಹಿಂಸೆಯಿಂದ ಗೆಲ್ಲು' ಎಂಬ ೨೦ನೆ ಶತಮಾನದ ಯುಗವಾಣಿಯನ್ನು ಮರೆಯದೆ, ವೆರ್‌ವಾರ್ಡರಿಗೆ ಗುಂಡಿಡುವ ಯೋಚನೆಯನ್ನು ವಿರೋಧಿಗಳು ಮಾಡಬಾರದಿತ್ತು. ಶಾಂತ ವಿಧಾನಗಳಿಂದಲೇ ಸತ್ಯಾಗ್ರಹವನ್ನು ಮುನ್ನಡೆಸಿಕೊಂಡು ನ್ಯಾಯವಾದ ವಿಧಾನಗಳಿಂದಲೇ ಒಗಟನ್ನು ಬಗೆಹರಿಸಬಹುದಿತ್ತು. ಆದರೆ, ಅದು ಹಾಗಾಗಲಿಲ್ಲ; ಗುಂಡು ಸಿಡಿಯಿತು; ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸುವ ದುರ್ವರ್ತನೆ ನಡೆಯಿತು. ಪುಣ್ಯವಶದಿಂದ ಗುರಿಯು ಜೀವಕ್ಕೆ ಹಾನಿಯೊದಗಲಿಲ್ಲ ಇದರಿಂದ, ವಿರೋಧಭಾವನೆಯವರಿಗೆ ತಮ್ಮ ಶ್ರಮ ವ್ಯರ್ಥವಾಯಿತೆಂಬ ಕೊರಗು ಇರಬಹುದು; ಆದರೆ, ಮಾನವತಾವಾದಿಗಳು ಸಮಾಧಾನದ ಉಸಿರು ಬಿಡುತ್ತಾರೆ; ಶ್ರೀ ವೆರ್‌ವಾರ್ಡರು ಬೇಗನೇ ಗುಣಮುಖರಾಗಿ, ತನ್ನ ಆಡಳಿತೆಯ ಕರ್ತವ್ಯಪಾಲನೆಯನ್ನು ನೆರವೇರಿಸಲು ಸಮರ್ಥರಾಗಲಿಯೆಂದು ಹಾರೈಸುತ್ತಾರೆ. ಜತೆಗೆ ಚಳುವಳಿದಾರರು ಇನ್ನು ಮುಂದಕ್ಕಾದರೂ ಹಿಂಸೆಗೆ ಪ್ರಚೋದನೆ ನೀಡದೆ ನಿರುದ್ವೇಗದಿಂದ ಶಾಂತರೀತಿಯಲ್ಲಿ ನಡೆದು ತಮ್ಮ ಅಭಿಲಾಷೆಯನ್ನು ಪೂರೈಸಿಕೊಳ್ಳಲಿ ಎಂದೂ ಬಯಸುತ್ತಾರೆ.

ಇಲ್ಲಿ, ದಕ್ಷಿಣ ಆಫ್ರಿಕೆಯ ಸರಕಾರಕ್ಕೂ ಒಂದು ಹಿತವಾದನನ್ನು ಹೇಳಬಹುದು. ಅವಾರವಾದವು ಅದೆಷ್ಟೇ ಆಂತರಿಕವಾಗಿದ್ದರೂ ವಿಶ್ವಶಾಂತಿಯ ದೃಷ್ಟಿಯಿಂದ ಅಲ್ಲಿ ನಡೆದ ಹತ್ಯಾಕಾಂಡಕ್ಕೆ ಪ್ರಾಧಾನ್ಯವಿದೆ. ವಿಶ್ವದ ಪ್ರಾತಿನಿಧಿಕ ಸಂಸ್ಥೆಯಾದ ಸಂ. ರಾ. ಸಂಘದ ಭದ್ರತಾ ಸಮಿತಿಯು ಅವಿರೋಧವಾಗಿ ಅಲ್ಲಿನ ಮಾನವಮೇಧವನ್ನು ವಿರೋಧಿಸಿದೆ. ಶುದ್ಧ ಶ್ವೇತವರ್ಣೀಯ ರಾಷ್ಟ್ರವಾದ ಅಮೆರಿಕೆ ಮತ್ತು ಬ್ರಿಟನ್‌ಗಳಾದರೂ ದ. ಆಫ್ರಿಕನ್ ಸರಕಾರದ ವರ್ಣನೀತಿಯನ್ನು ಖಂಡಿಸುತ್ತವೆ. ಜಗತ್ತಿನ ಬೇರೆ ಬೇರೆ ದೇಶಗಳೂ ಪ್ರತ್ಯಕ್ಷವಾಗಿಯೇ ದ. ಆಫ್ರಿಕನ್ ಸರಕಾರವನ್ನು ಟೀಕಿಸುತ್ತಿದೆ. ಹಾಗಿರುವಾಗ, ಶ್ರೀ ವೆರ್‌ವಾರ್ಡರು ಈ ವಿಶ್ವದ ಕೂಗಿನತ್ತ ತುಸು ಕಿವಿಗೊಡುವ ಆವಶ್ಯಕತೆಯಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೇ ದೇಶದ ಶಾಂತಿಯನ್ನು ರಕ್ಷಿಸುವ ಜವಾಬ್ದಾರಿಯನ್ನದು ಹಿಂಸ್ರ ವಿಧಾನಕ್ಕಿಂತ ಶಾಂತ ವಿಧಾನದಲ್ಲಿಯೇ ಉತ್ತಮವಾಗಿ, ಯಶಸ್ವಿಯಾಗಿ ನಿರ್ವಹಿಸಬಲ್ಲದೆಂದು ಹೇಳಬಹುದು. ಒಂದು ವರ್ಗದವರನ್ನು ಇನ್ನೊಂದು ವರ್ಗದವರಿಗೆ ಎತ್ತಿಕಟ್ಟುವ ಹವ್ಯಾಸ ಸರ್ವಥಾ ಇಂದಿನ ಆಧುನಿಕ ನಾಗರಿಕತೆಗೂ ಸಂಸ್ಕೃತಿಗೂ ಸೇರಿದ ಮಾತಲ್ಲ. ಆದುದರಿಂದ, ತನ್ನ ಕಾಲವರ್ಣ ವಿರೋಧೀ ನೀತಿಯನ್ನು ಅಲ್ಲಿಗೇ ಬಿಟ್ಟುಕೊಟ್ಟು ಅವರನ್ನೂ ತಮ್ಮಂತೆಯೇ ಕಂಡುಕೊಳ್ಳುವುದು; ಇವರೂ ಒಂದಾಗಿ ರಾಷ್ಟ್ರಹಿತ ಹಾಗೂ ಜಗತ್ಕಲ್ಯಾಣ ಸಾಧಿಸುವುದು ದಕ್ಷಿಣ ಆಫ್ರಿಕದ ಹಿತದೃಷ್ಟಿಯಿಂದ ಮಾತ್ರವಲ್ಲ, ವಿಶ್ವದ ಉನ್ನತಿಯ ದೃಷ್ಟಿಯಿಂದಲೂ ಅಪೇಕ್ಷಣೀಯವಾಗಿದೆ. ಶ್ರೀ ವೆರ್‌ವಾರ್ಡರು ಶೀಘ್ರ ಗುಣಮುಖರಾಗಿ ತಮ್ಮ ನೀತಿಯನ್ನು ಸರಿಪಡಿಸಿ ಜಗತ್ತಿನ ಜನರೆಲ್ಲರ ಆದರಾಭಿಮಾನಕ್ಕೆ ಪಾತ್ರರಾಗಲಿ.

ಕುರುಡನ ಬಡಿಗೆ

"ಕುರುಡ ಹಿಡಿದದ್ದೇ ಬಡಿಗೆ" ಎಂಬ ಉಕ್ತಿ ಬಹು ಹಿಂದಿನ ಕಾಲದಿಂದ ಇಂದಿಗೂ ತನ್ನ ಸತ್ಯತೆಯನ್ನುಳಿಸಿಕೊಂಡು ಬಂದಿದೆ. ಭಾರತ—ಚೀನಗಳ ನಡುವಿನ ಸೀಮಾವಿವಾದದ ಬಗ್ಗೆ ಚೀನೀ ಸರಕಾರ ತಾಳಿರುವ ನೀತಿಯನ್ನೂ ಕುರುಡನ ಬಡಿಗೆಯನ್ನೂ ನಾವು ಅನ್ಯೋನ್ಯಾಲಂಕಾರವಾಗಿ ಉಲ್ಲೇಖಿಸಬಹುದು. ನೇಪಾಳೀಯ ಪ್ರಧಾನಿ ಶ್ರೀ ಕೊಯಿರಾಲಾರೊಡನೆ ಗೌರೀಶಂಕರ ಶಿಖರವು ತನ್ನದೆಂದು ವಾದಿಸುವ ಮೂಲಕ ಚೌ-ಎನ್-ಲಾಯ್ ಇಡಿ ಹಿಮಾಲಯವೇ ತಮ್ಮದು ಎಂದು ಹೇಳುವುದರ ನಾಂದಿಯಿಟ್ಟಿದ್ದಾರೆನ್ನಬಹುದು. ಇತ್ತೀಚೆಗೆ ಚೀನೀ ಪ್ರಧಾನರು ಪಂ. ನೆಹರೂಗೆ ಬರೆದ ಪತ್ರದಲ್ಲಿ ಚೀನವು ಭಾರತದ ಯಾವ ವಾದವನ್ನೂ ಒಪ್ಪಲಾರದೆಂದು ಮತ್ತೊಮ್ಮೆ ಸ್ಪಷ್ಟಪಡಿಸಿರುವರು. ತಾವು ಡಿಸೆಂಬರ ತಿಂಗಳಲ್ಲಿ ಕಳಿಸಿದ ಪತ್ರದಲ್ಲಿರುವಂತೆ, ಭಾರತ—ಚೀನಾ ಗಡಿಯು ಯಾವ ಕಾಲದಲ್ಲೂ ಗುರುತಿಸಲಿಲ್ಲ; ಮ್ಯಾಕಮಹೋನ ರೇಖೆಯನ್ನು ಮನ್ನಿಸುವುದಿಲ್ಲ; ಸಿನ್ಜಿಯಾಂಗ ಅಧೀನತನದಲ್ಲಿ ಆಗಿನ ಬ್ರಿಟಿಷ್ ಇಂಡಿಯಾ ಸರಕಾರ ಮತ್ತು ಟಿಬೇಟು ಸರಕಾರಗಳ ನಡುವಾದ ಒಪ್ಪಂದವು ಟಿಬೇಟಕ್ಕೆ ಸ್ವಯಂ ಸಾರ್ವಭೌಮಾಧಿಕಾರವಿಲ್ಲದಿರುವುದರಿಂದ ಅಸಿಂಧುವಾಗಿದೆ ಎಂದು ಮುಂತಾಗಿ ವಾದಿಸಿ, ಭಾರತವು ಮಾಡಿದ್ದ ಎಲ್ಲ ಪ್ರತಿಸೂಚನೆಯನ್ನೂ ತಿರಸ್ಕರಿಸಿದ್ದಾರೆ. ಹಾಗಿದ್ದರೂ ಮಾತುಕತೆಗಳ ಮೂಲಕ ಸಂಧಾನ ನಡೆಸಲು ಸಾಧ್ಯವಾಗುವಂತೆ ತಾನು ಭಾರತವನ್ನು ಸಂದರ್ಶಿಸುವುದಾಗಿ ಹೇಳಿದ್ದಾರೆ. ಈ ಮಾತುಗಳಿಂದ ಚೌ-ಎನ್—ಲಾಯರ ಭಾರತ ಸಂದರ್ಶನದಿಂದ ಯಾವ ಲಾಭವೂ ಆದೀತು ಎಂದು ನಿರೀಕ್ಷಿಸಬರುವಂತಿಲ್ಲ. ಏಕೆಂದರೆ, ಭಾರತದ ಯಾವುದೇ ಮಾತನ್ನು ಒಪ್ಪುವಷ್ಟು ಸೌಜನ್ಯವನ್ನೂ ಅವರು ಪತ್ರ ತೋರಿಸಲ್ಲವೆಂದಾಗ, ಬರಿಯ ಮಾತಿನಿಂದೇನು ಸಾಧಿಸೀತು? ಚೀನಾದ ಈ ತರದ ವರ್ತನೆಯಿಂದಾಗಿ ಭಾರತವು ಮತ್ತಷ್ಟು ಚಿಂತಿಸಬೇಕಾಗಿ ಬಂದಿದೆ. ಸದ್ಯ ಆಗಮಿಸುವ ಲಾಯರನ್ನು ಸ್ವಾಗತಿಸುವುದೇನೋ ನಿಜವೇ. ಈ ಅವಧಿಯಲ್ಲಿ ಅವರ ಕಣ್ಣಿಗೆ ಸತ್ಯಸಂಗತಿಯನ್ನು ಎದುರಿಸುವ ಸಾಹಸವನ್ನೇನೋ ಮಾಡಬಹುದು. ತನ್ನ ವಾದದಿಂದ ಒಂದಂಗುಲ ಆತ್ತಿತ್ತ ಚಲಿಸಲೊಲ್ಲದ ಪರ್ವತ ಸದೃಶ ಚೌ—ಎನ್—ಲಾಯರು ಭಾರತದ ನೀತಿಯನ್ನು ಕಾಣದೆ ತಮ್ಮ 'ಬಡಿಗೆ'ಯನ್ನೇ ಬಳಸುವರೆಂಬುದು ಸ್ವಯಂ ಸಿದ್ಧವೇ. ತಮ್ಮ ಕುರುಡುಕಣ್ಣಿನಿಂದ ಅವರು ಈಕ್ಷಿಸುವಾಗ, ಎಲ್ಲೆಲ್ಲಿಯೂ ಅವರಿಗೆ ಚೀನದ ನೆಲಭಾಗವೇ ಗೋಚರಿಸಿದರೆ, ವಿಸ್ಮಿತರಾಗಬೇಕಾಗಿಲ್ಲ. ಆದರೂ ಮನೆಗೆಬಂದ ಅತಿಥಿಯ ಮರ್ಯಾದೆಯನ್ನುಳಿಸಿ, ಆತನನ್ನು ಆದರೋಪಚಾರಗಳಿಂದ ಸಮಾಧಾನಪಡಿಸುವುದು ಅವಶ್ಯವಾಗಿದೆ. ಭಾರತೀಯರು ತಮ್ಮ ಆಶೆ ಈಡೇರಬಹುದೆಂದು ನಂಬಿಕೊಳ್ಳುವುದರೊಂದಿಗೆ ಅತಿಥಿಗಳೊಡನೆ ಮರ್ಯಾದೆಯಿಂದಲೇ ವರ್ತಿಸಬೇಕೆಂದು ಧಾರಾಳವಾಗಿ ಹೇಳಬಹುದು.

ಸಂಕ್ಷಿಪ್ತ ಸುದ್ದಿಗಳು

ಕರ್ನಾಟಕಕ್ಕೆ ಅನ್ಯಾಯವಾಗಿದೆ

ಗಡಿನಾಡು ಕನ್ನಡಿಗರ ಸಮ್ಮೇಳನವು ಬೆಂಗಳೂರಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಜ. ಮಹಮ್ಮದ ಇಮಾಮರ ಅಧ್ಯಕ್ಷತೆಯಲ್ಲಿ ನೆರವೇರಿತು. ರಾಜ್ಯ ಪುನರ್ಘಟನಾ ಕಾಯಿದೆಯನ್ವಯ ಕನ್ನಡ ನಾಡಿನಿಂದ ಹೊರಗುಳಿದ ಕಾಸರಗೋಡು, ಅಕ್ಕಲಕೋಟ, ಮಡಕಸಿರಾ, ತಲವಾಡಿ ಮೊದಲಾದ ಗಡಿಪ್ರದೇಶವು ಕನ್ನಡಕ್ಕೆ ಬರಬೇಕು ಎಂದು ಅಧ್ಯಕ್ಷರು ಕೇಳಿ, ಬೆಳಗಾವಿಯಲ್ಲಿ ಮರಾಠಿಗಳು ನಡೆಸುತ್ತಿರುವ ಅನುಚಿತ ವರ್ತನೆಯನ್ನು ಖಂಡಿಸಿದರು. ಬೆಳಗಾವಿ, ಕಾರವಾರ ಮೊದಲಾದುವುಗಳಿಗೆ ಪಾಟಸ್ಕರ ಸೂತ್ರವನ್ನು ಅನ್ವಯಿಸಿಕೊಂಡರೆ, ಆಗ ಬೆಂಗಳೂರನ್ನೂ ವಿಭಜಿಸಬೇಕಾಗುತ್ತದೆ. ಆದುದರಿಂದ, ಆಯಾ ಪ್ರದೇಶದ ಜನತೆಯ ಅಭಿಲಾಷೆಗೆ ಅನ್ಯಾಯ ಮಾಡದೆ, ಗಡಿನಾಡ ಕನ್ನಡ ಪ್ರದೇಶಗಳನ್ನು ಶೀ

(೬ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿಸಾರ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಟಿ. ಎ. ಪೈಗಳ ಆಯ್ಕೆ— ಇದೇ ತಾ. 10ರಂದು ಮಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ (1) ಜಿಲ್ಲಾ ಚುನಾವಣಾಧಿಕಾರಿ ಶ್ರೀ ಪಿ. ಎಫ್. ರೊಡ್ರಿಗಸರ ನೇತೃತ್ವದಲ್ಲಿ ಜರಗಿದ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಟಿ. ಎ. ಪೈ ಮತ್ತು ಶ್ರೀ ಎ. ಶಂಕರ ಆಳ್ವ ಇವರೊಳಗೆ ಸ್ಪರ್ಧೆ ನಡೆದು ಶ್ರೀ ಟಿ. ಎ. ಪೈಗಳು 39 ಬಹು ಮತಗಳಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ ಪೈಗಳಿಗೆ 67 ಮತಗಳೂ ಶ್ರೀ ಆಳ್ವರಿಗೆ 28 ಮತಗಳೂ ದೊರಕಿದ್ದುವು.

ಶ್ರೀ ಪೈಗಳು ತನ್ನನ್ನು ಅಧ್ಯಕ್ಷರನ್ನಾಗಿ ಆರಿಸಿದ ಬಗ್ಗೆ ಕೃತಜ್ಞತೆಗಳನ್ನರ್ಪಿಸಿ ಭಾಷಣವಿತ್ತರು. ಶ್ರೀ ಕೆ ಕೆ. ಶೆಟ್ಟಿ ಎಂ. ಎಲ್. ಸಿ., ಕೆ. ಶಂಕರ ಆಳ್ವ, ಬಿ. ವೈಕುಂಠ ಬಾಳಿಗ ಎಂ. ಎಲ್. ಎ., ಶ್ರೀ ಎಫ್. ಎಫ್. ಜಿ. ಪಿಂಟೊ ಎಂ. ಎಲ್. ಎ., ಡಾ. ನಾಗಪ್ಪ ಆಳ್ವ, ಎಂ. ಎಲ್. ಎ. ಮೊದಲಾದವರು ಹೊಸ ಅಧ್ಯಕ್ಷರನ್ನು ಅಭಿನಂದಿಸಿದರು. ಹೊಸ ಕಾರ್ಯಕಾರೀ ಸಮಿತಿಯನ್ನು ರಚಿಸಲು ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು. ಆರಂಭದಲ್ಲಿ ಹಿಂದಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಅವರು ಎರಡುವರೆ ವರ್ಷಗಳ ಸಂಕ್ಷಿಪ್ತ ವರದಿಯನ್ನು ವಿವರಿಸಿ ಶ್ರೀ ಎ. ಬಿ. ಶೆಟ್ಟಿ ಮತ್ತು ಶ್ರೀ ಅನಂತ ರೈ ಇವರ ನಿಧನಕ್ಕಾಗಿ ಸಭೆಯ ಮುಂದಿಟ್ಟ ಸಂತಾಪ ಸೂಚಕ ಠರಾವು ಮೌನ ಪ್ರಾರ್ಥನೆಯೊಂದಿಗೆ ಮಂಜೂರಾಯಿತು.

ಜಾಗತಿಕ ಆರೋಗ್ಯ ದಿನಾಚರಣೆಯು ತಾ. 7ರಲ್ಲಿ ಉಡುಪಿ ಸರಕಾರೀ ಆಸ್ಪತ್ರೆಯ ವಠಾರದಲ್ಲಿ ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಆಶ್ರಯದಲ್ಲಿ ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಸಿ. ಆರ್. ನಾಯಕ್, ಡಾ. ಪಿ. ಅನಂತ ರಾವ್, ಡಾ. ಆರ್. ಪಿ. ಕೊಪ್ಪಿಕರ್, ಡಾ. ವಿ. ಎಲ್. ಪಂಡಿತ್, ಶ್ರೀ ಎ. ಜೆ. ಆಳ್ವ ಇವರು ಸಂದರ್ಭೋಚಿತವಾಗಿ ಮಾತನಾಡಿದ ಮೇಲೆ ಅಧ್ಯಕ್ಷರ ಭಾಷಣವಾಯಿತು. ಬಳಿಕ್ಕೆ ಮಲೇರಿಯಾ ನಿರ್ಮೂಲನ ವಸ್ತು ಪ್ರದರ್ಶನವೊಂದನ್ನು ಡಾ. ಕೆ. ಎಲ್. ವಾತಾಳರು ಉದ್ಘಾಟಿಸಿದರು.

ಸಾಹಿತಿಗಳಿಗೆ ಸನ್ಮಾನ— ತಾ. 28 - 3 — 60ರಲ್ಲಿ ಬ್ರಹ್ಮಾವರ ಕರ್ನಾಟಕ ಸಂಘದವರು ಶ್ರೀ ವೆಂಕಟರಮಣ ದೇವಸ್ಥಾನದ ಉಪ್ಪರಿಗೆಯಲ್ಲಿ ಶ್ರೀ ವಿ. ಎಸ್. ಕುಡುವರ ಅಧ್ಯಕ್ಷತೆಯಲ್ಲಿ ನಿರ್ವಹಿಸಿದ ವಸಂತ ಸಾಹಿತ್ಯೋತ್ಸವ ಸಮಾರಂಭದಲ್ಲಿ ಸಾಹಿತ್ಯ ಎಕಡಮಿಯ ಬಹುಮಾನ ಪಡೆದ ಶ್ರೀ ಶಿವರಾಮ ಕಾರಂತರಿಗೂ ಹಿರಿಯ ಪತ್ರಿಕೋದ್ಯಮಿ ಶ್ರೀ ಹುರುಳಿ ಭೀಮರಾಯರಿಗೂ ಮಾನಪತ್ರ ಮತ್ತು ಉಡುಗೊರೆಗಳನ್ನಿತ್ತು ಸನ್ಮಾನಿಸಿದರು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಜಿ. ಶ್ರೀನಿವಾಸ ರಾವ್, ಶ್ರೀಶ ಬಲ್ಲಾಳ ಇವರು ಕವಿತಾವಾಚನ ಮಾಡಿದರು. ಶ್ರೀ ಯು. ಎಲ್. ಆಚಾರ್ಯರು ಶಬ್ದದ ಕುರಿತಾಗಿ ಭಾಷಣವಿತ್ತರು. ಅತಿಥಿಗಳು ಸಂದರ್ಭೋಚಿತ ಉತ್ತರವಿತ್ತ ಬಳಿಕ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಕುಂಬಳೆ—ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಶಾಖೆಯ ಸ್ವಂತ ಕಟ್ಟಡದ ಉದ್ಘಾಟನೆಯು ತಾ. 3ರಲ್ಲಿ ಡಾ. ಪಿ. ವೆಂಕಟರಾಯರಿಂದ ನೆರವೇರಿಸಲ್ಪಟ್ಟಿತು. ಡಾ. ಟಿ. ಎಂ. ಎ. ಪೈಗಳು ಬ್ಯಾಂಕಿನ ಪ್ರಗತಿಯನ್ನು ಪ್ರಸ್ತಾಪಿಸಿ ಸ್ವಾಗತ ಭಾಷಣ ಮಾಡಿದರು. ಬ್ಯಾಂಕಿನ ಉತ್ತಮ ಕಾರ್ಯಗಳನ್ನು ಸಭಿಕರಲ್ಲಿ ಕೆಲವರು ಕೊಂಡಾಡಿ ಮಾತನಾಡಿದರು. ಬ್ಯಾಂಕಿನ ಸಾರ್ವಜನಿಕ ಸಂಪರ್ಕ ವಿಭಾಗದ ಶ್ರೀ ಎಂ. ಜನಾರ್ಧನ ಅವರು ಧನ್ಯವಾದಗಳನ್ನಿತ್ತರು

ಹಂಗಾರಕಟ್ಟೆ— ತಾ. 29-3-60 ರಂದು ಸ್ಥಳೀಯ ಕರ್ನಾಟಕ ಸಂಘದವರು ಶ್ರೀ ಕೋಟ ಶಿವರಾಮ ಕಾರಂತರಿಗೆ ಸನ್ಮಾನ ಪತ್ರವನ್ನಿತ್ತು ಗೌರವಿಸಿದರು.

ಉಚ್ಚಿಲ— ಇಲ್ಲಿ ಪ್ರತಿಷ್ಠಿಸಲ್ಪಟ್ಟಿರುವ ಮೊಗವೀರ ಮಹಾಜನ ಸಂಘದ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಇದೇ ತಾ. 11ಕ್ಕೆ ವಾರ್ಷಿಕ ಪೂರ್ಣಮೋತ್ಸವವು ಜರಗಲಿರುವುದು.

ಸುರತ್ಕಲ್— ಮುಕ್ಕ ಮಿತ್ರ ಪಟ್ಟಣ ಗಂಗಯ ಸ್ಮಾರಕ ಫಂಡಿನವರು ನಡೆಯಿಸಿಕೊಂಡು ಬರುವ ಶ್ರೀ ರಾಮ ಭಜನಾ ಮಂಡಳಿಯ ವಾರ್ಷಿಕ ನಗರ ಸಂಕೀರ್ತನೆಯು ಇದೇ ತಾ. 4ರಿಂದ 9ರ ತನಕ ವಿಜೃಂಭಣೆಯಿಂದ ಜರಗಿತು.

ಮಲ್ಪೆ— ಸ್ಥಳೀಯ ಯು. ಬಿ. ಎಂ. ಸಿ. ಕಿರಿಯ ಬುನಾದಿ ಶಾಲಾ ಮಕ್ಕಳ ಹಾಜರಿ ಸ್ಕಾಲರ್‌ಶಿಪ್ ವಿತರಣ ಸಮಾರಂಭವು ತಾ. 6—4—60ರಂದು ಶ್ರೀಮತಿ ಸಾರಾ ಯಸ್. ಅಮೀನ್ ಬಿ. ಎ., ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಪ್ರಧಾನ ಅಧ್ಯಾಪಕರಾದ ಶ್ರೀ ಜಿ ಎಸ್. ಕರ್ಕಡರು ಹಾಜರಿ ಸ್ಕಾಲರ್‌ಶಿಪ್ಪಿನ ಉದ್ದೇಶವನ್ನು ವಿವರಿಸಿ ಭಾಷಣವಿತ್ತರು. ಅಧ್ಯಕ್ಷೆಯರ ಸಮಯೋಚಿತ ಭಾಷಣದ ತರುವಾಯ ಧನ್ಯವಾದ, ರಾಷ್ಟ್ರಗೀತೆಯೊಂದಿಗೆ ಸಭೆಯು ಅಂತ್ಯಗೊಂಡಿತು.

ಯಡ್ತಾಡಿ ಪಂಚಾಯತು ಚುನಾವಣೆಯಲ್ಲಿ – ಶ್ರೀ ರಾಮಣ್ಣ ಸೆಟ್ಟಿ ಪಟೇಲ, ಶ್ರೀಮತಿ ಪ್ರಭಾವತಿ ಸೆಡ್ತಿ, ಕುಡುಬಿ ಸುಬ್ಬ, ಲಕ್ಷ್ಮೀ ಸೆಡ್ತಿ, ನರಸಿಂಹ ಜೋರ್ವ, ಸುಬ್ಬಣ್ಣ ಹೆಗ್ಡೆ, ಶೀನಪ್ಪ ಹೆಗ್ಡೆ, ವಿಠಲ ಹೆಗ್ಡೆ ಮತ್ತು ಹಿರಿಯಣ್ಣ ಸೆಟ್ಟಿ ಇವರು ತಮ್ಮ ಪ್ರತಿ ಸ್ಪರ್ಧಿಪಕ್ಷದ ಒಂಬತ್ತು ಜನರನ್ನೂ ಸೋಲಿಸಿ ಅತ್ಯಧಿಕ ಬಹು ಮತಗಳಿಂದ ಚುನಾಯಿತರಾಗಿರುವರು.

ಸಾಬ್ರಕಟ್ಟೆ— ಶಿರಿಯೂರ ಪಂಚಾಯಿತಿಗೆ ಶ್ರೀಗಳಾದ ವಿಠಲ ಸೆಟ್ಟಿ ಪಟೇಲ್, ಆನಂದ ಸೆಟ್ಟಿ, ರಾಮಣ್ಣ ಸೇರ್ವೆಗಾರ, ಹರಿಜನ ಜಟ್ಟ, ವೆಂಕಟರಮಣ ಅಡಿಗ, ಅಂತಯ್ಯ ಸೆಟ್ಟಿ, ಮೋನಪ್ಪ ಸೆಟ್ಟಿ, ಅಂತಯ್ಯ ಸೆಟ್ಟಿ, ತಿಮ್ಮಪ್ಪ ಸೆಟ್ಟಿ, ಚಂದ್ರಶೇಖರ ಸೆಟ್ಟಿ, ಶ್ರೀಮತಿಯರಾದ ಮುಕಾಂಬು ಅಮ್ಮ ಮತ್ತು ಗುಲಾಬಿ ಸೆಡ್ತಿ ಇವರು ಅವಿರೋಧವಾಗಿ ಚುನಾಯಿಸಲ್ಪಟ್ಟಿದ್ದಾರೆ.

ಹಾಜರಿ ವೇತನ ವಿತರಣಾ ಸಮಾರಂಭ ಕಡಿಯಾಳಿ ಸರಕಾರದಿಂದ ಹೆಣ್ಣು ಮಕ್ಕಳಿಗೆ ಉತ್ತಮ ಹಾಜರಿಯ ಬಗ್ಗೆ ಕೊಡಲ್ಪಟ್ಟ ಹಾಜರಿ ವೇತನ ವಿತರಣೆ ಮತ್ತು ಸಾಮಾನ್ಯವೇತನ ವಿತರಣಾ ಸಮಾರಂಭವು ಕಳೆದ ತಾ 9ರಂದು ಶ್ರೀ ವಿ. ಶ್ರೀನಿವಾಸ ಭಟ್, ಬಿ. ಎ., ಬಿ. ಟಿ., ವಿದ್ವಾನ್, ಪ್ರವೀಣ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಗುರುರಾಜ ಭಟ್ಟರು ಸ್ವಾಗತಿಸಿದರು ಮನರಂಜನೆಯ ಕಾರ್ಯಕ್ರಮವಾದ ಬಳಿಕ ಹಲವಾರು ವಿದ್ಯಾರ್ಥಿಗಳು ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆಯ ಕುರಿತು ಮಾತನಾಡಿದರು. ಅಧ್ಯಾಪಕರಲ್ಲಿ ಶ್ರೀಮತಿ ಸೀತಾರತ್ನ ಮತ್ತು ವಾಸು ಸೇರಿಗಾರರು ಮಾತನಾಡಿ ಸರಕಾರದ ಈ ಉಪಕ್ರಮವನ್ನು ಕೊಂಡಾಡಿದರು ೨೨ ಮಂದಿ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ವೇತನ ವಿತರಣೆ ಮಾಡುತ್ತಾ ಸರಕಾರವು ಬಡ ವಿದ್ಯಾರ್ಥಿಗಳ ಹಿತಾಸಕ್ತಿಗಾಗಿ ಕೈ ಗೊಂಡ ಯೋಜನೆಯನ್ನು ಶ್ಲಾಘಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಗುರುರಾಜ ಭಟ್ಟರು ಧನ್ಯವಾದವಿತ್ತರು.

(ಸನೇ ಪುಟದಿಂದ)

ಘ್ರದಲ್ಲಿಯೇ ಕರ್ನಾಟಕಕ್ಕೆ ಸೇರಿಸಬೇಕೆಂದವರೆಂದರು. ದಕ್ಷಿಣ ಕನ್ನಡದ ಎಂ. ಪಿ. ಶ್ರೀ ಕೆ. ಆರ್. ಆಚಾರ್ಯರು ಈ ಸಮ್ಮೇಳನವನ್ನು ಉದ್ಘಾಟಿಸಿದ್ದರು. ಈ ಸಭೆಯನ್ನು ಮೈಸೂರಿಗೆ ಅನ್ಯಾಯ ಮಾಡಿದ ಫಜಲಿ ಅಲಿ ಆಯೋಗದವರು ಅಂದೇ ಉದ್ಘಾಟಿಸಿದ್ದಾರೆಂದವರು ವಿನೋದ ಮಾಡಿದರು.

ಕೇಂದ್ರಕ್ಕೆ ಸಲಹೆ

ಮೈಸೂರು ರಾಜ್ಯದಲ್ಲಿ ಹೊಸ ರೈಲು ದಾರಿಯನ್ನು ಹಾಕುವುದಕ್ಕೆ ಕೇಂದ್ರ ಸರಕಾರದ ಮೇಲೆ ಒತ್ತಾಯ ಹೇರುವುದು ಆವಶ್ಯವೆಂದು ರಾಜ್ಯ ಶಾಸನಸಭೆ ತಿಳಿದಂತೆ ಕಾಣುತ್ತದೆ. ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಮಂಡಿಸಿದ ಹಾಸನ— ಮಂಗಳೂರು, ಹುಬ್ಬಳ್ಳಿ—ಕಾರವಾರ, ಕೊಟ್ಟೂರು—ಹರಿಹರ, ಬೆಂಗಳೂರು— ಸೇಲಂ, ಬೆಂಗಳೂರು—ವಿರಾಜಪೇಟೆ ಹಾಗೂ ಗದಗ—ರಾಯಚೂರು ರೇಲ್ವೆ ದಾರಿಯನ್ನು ರಚಿಸುವ ಬಗ್ಗೆ ಕೇಂದ್ರ ಸರಕಾರಕ್ಕೆ ಸಲಹೆ ಮಾಡಬೇಕು ಎಂಬ ಗೊತ್ತುವಳಿಯು ಮಂಗಳೂರು ಮತ್ತು ಕಾರವಾರ ಬಂದರುಗಳು ಅಭಿವೃದ್ಧಿಯಾಗಲಿರುವುದರಿಂದ ಹಾಸನ-ಮಂಗಳೂರು, ಹುಬ್ಬಳ್ಳಿ-ಕಾರವಾರ ದಾರಿಯನ್ನಾದರೂ ರಚಿಸಬೇಕು ಎಂಬ ಡಾ| ನಾಗಣ್ಣ ಗೌಡರ ತಿದ್ದುಪಡಿಯೊಡನೆ ವಿಧಾನ ಸಭೆಯಲ್ಲಿ ಸ್ವೀಕಾರವಾಯಿತು. ಈ ಬಗ್ಗೆ ನಡೆದ ಚರ್ಚೆಗೆ ಮಂತ್ರಿ ಕಡಿದಾಳ ಮಂಜಪ್ಪನವರು ಉತ್ತರಿಸಿ, ಸರಕಾರಕ್ಕೆ ಈ ಗೊತ್ತುವಳಿಯ ಬಗ್ಗೆ ಸಂಪೂರ್ಣ ಸಹಾನುಭೂತಿಯಿರುವುದೆಂದೂ ಇದನ್ನು ಒಪ್ಪಿಕೊಳ್ಳುವಾಗಿಯೂ ಹೇಳಿದರು.

ಪ್ರಾಥಮಿಕ ಶಿಕ್ಷಣ ವ್ಯವಸ್ಥೆ

ಪ್ರಾಥಮಿಕ ಶಿಕ್ಷಣದ ಆಡಳಿತವನ್ನು ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸಿಕೊಡಬೇಕೆಂಬುದನ್ನು ಮೈಸೂರು ರಾಜ್ಯ ಸರಕಾರವು ತಾತ್ವಿಕವಾಗಿ ಒಪ್ಪಿಕೊಂಡಿವೆ. ಆದರೆ, ಶಿಕ್ಷಕರ ನೇಮಕಗಳು ಯೋಗ್ಯ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳ ಪ್ರಾಥಮಿಕ ಶಿಕ್ಷಣ ವಿಧೇಯಕವನ್ನು ತಯಾರಿಸುವಾಗ, ಅದರಲ್ಲಿ ಅವಕಾ ವನ್ನು ಕಲ್ಪಿಸಿ, ಅವರ ವರ್ಗಾವಗಿ ಸೇವಾನಿಯಮಗಳು, ಆವಶ್ಯಕ ಹಿತರಕ್ಷಣೆ ಮೊದಲಾದುವನ್ನೂ ವಿಧೇಯಕ ಲ್ಲೇ ಕಾಣಿಸುವ ಯೋಜನೆಯಿದೆ. ಇ ಕ್ಕಾಗಿ ಸರಕಾರವು ಒಂದು ಸಮಿತಿಯ ನ್ನು ರಚಿಸಿದ್ದಾರೆ: ಇದರಲ್ಲಿ ಸರಕಾರ ಮುಖ್ಯ ಕಾರ್ಯದರ್ಶಿ, ಶಿಕ್ಷಣ, ಸ್ಥಾ ಕ ಸ್ವರಾಜ್ಯ ಮತ್ತು ಸಾರ್ವಜನಿಕ ರೋಗ್ಯ, ಯೋಜನೆ ಮತ್ತು ಅಭಿವೃ ಆರ್ಥಿಕ ಶಾಖೆಗಳ ಕಾರ್ಯದರ್ಶಿಗ ಮತ್ತು ರಾಜ್ಯದ ಶಿಕ್ಷಣ ಶಾಖೆಯ ಮ ರ್ಗದರ್ಶಕರು ಸದಸ್ಯರಾಗಿರುವರು. ರಾ ಜ್ಯದಲ್ಲಿ ಈ ವರ್ಷಾರಂಭದಿಂದಲೇ ಏ ವರ್ಷಗಳ ಪ್ರಾಥಮಿಕ ಶಿಕ್ಷಣವು ವ್ಯ ಹಾರಕ್ಕೆ ಬರಲಿರುವುದೆಂದೂ ಈ ಬಗ್ ಪರಿಶೀಲನೆ ನಡೆಯುತ್ತಿದೆಯೆಂದೂ ದ್ಯಾಮಂತ್ರಿಗಳು ತಿಳಿಸಿದ್ದಾರೆ.

ನಸ್ಸೇರರ ಮಧ್ಯಸ್ಥಿಕೆ

ಭಾರತದ ಸಂದರ್ಶನವನ್ನು ಯಶಸ್ವಿಯಾಗಿ ಮುಗಿಸಿ, ಪಾಕಿಸ್ತಾನಕ್ಕೆ ತೆರಳ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರು ಭಾರತ ಮತ್ತು ಪಾ ಸ್ತಾನಗಳು ಅವಶ್ಯವೆಂದು ಮನಗಂಡರೆ ತಾನು ಇವುಗಳ ನಡುವಿರುವ ಕಾಶ್ಮೀ ಪ್ರಶ್ನೆಯ ಮಧ್ಯೆ ಪ್ರವೇಶಿಸುವೆನೆಂದ ಅಂದಿದ್ದಾರೆ. ಇದಕ್ಕೆ ಪಾಕ್ ಅಧ್ಯಕ್ಷ ಆಯೂಬಖಾನರು ತನ್ನ ಒಪ್ಪಿಗೆಯನ್ ಸೂಚಿಸಿದ್ದಾರೆ. ಭಾರತ ಚೀನ ಪ್ರಶ್ನೆಯ ಬಾಂಡುಂಗ ತತ್ವಗಳಿಗನ್ವಯವಾಗಿ ಬಗೆ ರಿಯ ಬೇಕೆಂದವರು ನುಡಿದು ಚಾ-- ಹರೂ ಭೆಟ್ಟಿಯು ಫಲಕಾರಿಯಾಗಲೆಂದ ಹಾರೈಸಿದರು. ಇಂದಿನ ಸಂಕುಚಿತ ಜ ತ್ತಿನಲ್ಲಿ ಯಾರೂ ಧಾಳಿ ನಡೆಸಬಹುದು ಆದರೆ, ಅದರ ಪರಿಣಾಮವೇನು ಎಂಬ ದನ್ನು ಮಾತ್ರ ಹೇಳುವುದು ಸಾಧ್ಯವಿಲ್ಲ ಎಂದವರು ಅಂದರು ಭಾರತವು ಪ್ರಗತಿ ಪಥದತ್ತ ಧಾವಿಸುತ್ತಿರುವುದಕ್ಕೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು.

ಸಿಂಹಳದಲ್ಲಿ ಹೊಸಮಂತ್ರಿ ಶಾಖೆ

ಸಿಂಹಳ ಸರಕಾರವು ಇತ್ತೀಚೆಗೆ ಆಂ ರಿಕ ಭದ್ರತಾ ಮಂತ್ರಿಶಾಖೆ ಎಂಬ ಒ ದು ಮಂತ್ರಿಶಾಖೆಯನ್ನು ತೆರೆದಿದೆ. ಪರ್ಮಿಟ್ ಅವಧಿಗಿಂತ ಹೆಚ್ಚುಕಾಲ ಸಿಂ ಹಳದಲ್ಲಿ ಉಳಿದುಕೊಂಡಿರುವ ಭಾರತೀ ಯರನ್ನೂ ಇನ್ನಿತರ ವಿದೇಶೀಯರನ್ನೂ ಕಂಡುಹಿಡಿದು ಅವರನ್ನು ದೇಶದಿಂದ ಹೊರಗೆ ಕಳಿಸುವುದೇ ಈ ಮಂತ್ರಿಶಾಖೆ ಯ ಕೆಲಸವಾಗಿದೆಯೆಂದು ತಿಳಿಯುತ್ತದೆ

ಸೂಚನೆ

ಕಾರಣಾಂತರಗಳಿಂದ ಕಳೆದವಾರ 8 ಪುಟ ಗಳನ್ನಷ್ಟೇ ಕೊಡಲಾಗಿತ್ತು. ಈ ವಾರ 1 ಪುಟಗಳನ್ನು ಮಾತ್ರ ಕೊಡಲಾಗಿದೆ. 7 ಮತ್ತು 8ನೇ ಪುಟಗಳನ್ನು ಲೋಪ ಪಡಿಸಬೇಕಾ ಬಂದುದಕ್ಕೆ ವಿಷಾದಿಸುತ್ತೇವೆ.

'ಮೆನೇಜರ್'

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

...ಷಿ ಕ್ಷೇತ್ರ

ಅಮೆರಿಕೆಯಲ್ಲಿ ಕೌಟುಂಬಿಕ ವ್ಯವಸಾಯ

ಪ್ರಪಂಚದಲ್ಲಿ ಅತ್ಯಲ್ಪ ಜನರು ದುಡಿದು ಅತ್ಯಧಿಕ ಉತ್ಪಾದನೆ ಮಾಡುವ ದೇಶ ಅಮೆರಿಕೆಯಲ್ಲಿ ಕೌಟುಂಬಿಕ ವ್ಯವಸಾಯ ಪ್ರಣಾಳಿಯೇ ವ್ಯವಹೃತವಿದೆ.

ಅಮೆರಿಕದ ವ್ಯವಸಾಯ ಕ್ಷೇತ್ರದಲ್ಲಿ ...ಹತ್ತರವಾದ ಬದಲಾವಣೆಗಳಾಗಿದ್ದ..., ಮೊದಲಿನಿಂದಲೂ ಇದ್ದಂತೆ ಈಗ ... ಅದು ಕುಟುಂಬದ ಉದ್ಯೋಗವೇ ...ಗಿದೆ.

ಮೊದಮೊದಲಲ್ಲಿ ಅಮೆರಿಕದಲ್ಲಿ ವ್ಯವ...ಯಕ್ಕೆ ಅನೇಕ ಅನುಕೂಲಗಳಿದ್ದವು. ...ಂದೆಂದೂ ನಿವಾಸ ಮಾಡದ ವಿಸ್ತಾರ...ದ ಹುಲ್ಲುಗಾವಲುಗಳೂ, ಅರಣ್ಯ ಪ್ರ...ಶಗಳೂ ವ್ಯವಸಾಯಕ್ಕೆ ಲಭ್ಯವಿದ್ದವು. ...ಲ್ಲಿನಿಂದಲೂ ಮರಗಿಡಗಳಿಂದಲೂ ತೇ...ರಕ್ಷಿತವಾಗಿ ಮಣ್ಣಿನ ಸವೆತಕ್ಕೆ ಅವ...ಕಾಶವಿರಲಿಲ್ಲ.

ಜನ ನಿಬಿಡವಾಗಿದ್ದ ಪ್ರದೇಶಗಳಲ್ಲಿ ...ಣ್ಣಿನ ಹೊರಪಿಗೆ ಮಾಡಬೇಕಾದ ಪ್ರ...ಯತ್ನಗಳ ಅಗತ್ಯವಿರಲಿಲ್ಲ. ಒಂದೆಡೆ ಮ...ಣ್ಣು ನಿಸ್ಸಾರವಾದರೆ ಅಲ್ಲಿಯ ರೈತ ಇ...ನ್ನೊಂದೆಡೆಗೆ ಸಾಗಬಹುದಿತ್ತು. ಸಾಮೂ...ಗಳ ಸಾಗಾಟವಾಗಲಿ, ಪುನರ್ವ್ಯವಸ್ಥೆ...ಗಲಿ ಹೆಚ್ಚು ಎನ್ನಿಸುತ್ತಿರಲಿಲ್ಲ. ಸರ...ವಾದ ಉಪಕರಣಗಳು ಮತ್ತು ಬೀಜಗ... ಜೊತೆಗೆ ಕಷ್ಟಪಟ್ಟು ದುಡಿಯಲು ಸಿದ್ಧ...ದ್ದ ರೈತ ಹೊಸಮನೆ ಕಟ್ಟಿ ಹೊಸ ಭೂ...ಯನ್ನು ಸುಲಭವಾಗಿ ಆಬಾದಿಗೆ ತರ...ಹುದಿತ್ತು.

ಆಳವಾದ ಹೊರವಾದ ಮಣ್ಣಿದ್ದರೂ ...ೈತ ತನಗೂ ತನ್ನ ಕುಟುಂಬಕ್ಕೂ ಅಗ...ತ್ಯವಾದುದಕ್ಕಿಂತ ಹೆಚ್ಚು ಆಹಾರವನ್ನು, ಬೆಳೆಯಲಾಗುತ್ತಿರಲಿಲ್ಲ. ೧೮೨೦ರಲ್ಲಿ ಅ...ಮೆರಿಕದ ಪ್ರತಿ ರೈತನ ಬೆಳೆ ನಾಲ್ಕು ಜನ...ಕ್ಕೆ ಮಾತ್ರ ಸಾಕಾಗುತಿತ್ತು.

ಆದರೆ ಇಂದು ಅಮೆರಿಕದ ಪ್ರತಿಯೊಬ್ಬ ರೈತ ೨೪ ಮಂದಿಗೆ ಅಗತ್ಯವಾದಷ್ಟು ಆಹಾರವನ್ನು ಬೆಳೆಯುತ್ತಿದ್ದಾನೆ. ಒಳ್ಳೆಯ ನೆಲಕ್ಕೆ ಈಗ ಒಳ್ಳೆಯ ಬೆಲೆಯಿದೆ, ಬೆಲೆಯಲ್ಲಿ ಏರಿಕೆಯೂ ಆಗುತ್ತಿದೆ ವಿಸ್ತಾರವಾದ ಜಮೀನುಗಳ ಬಯಕೆ ಹೆಚ್ಚುತ್ತಿದೆ.

ಎಷ್ಟೇ ಪ್ರಯಾಸಪೂರ್ಣವಾದರೂ ಯಶಸ್ಸನ್ನು ಗಳಿಸಬೇಕೆನ್ನುವ ಅಮೆರಿಕದ ರೈತ ನೆಲವನ್ನು ಕೊಳ್ಳುವುದಕ್ಕೆ ಮಾತ್ರವಲ್ಲ ವ್ಯವಸಾಯದ ಯಂತ್ರೋಪಕರಣಗಳು, ಉತ್ತಮವಾದ ಬೀಜಗಳು, ಹಯನು, ಗೊಬ್ಬರ, ಕ್ರಿಮಿನಾಶಕಗಳು, ಮಣ್ಣಿನ ರಕ್ಷಣೆ, ನೀರಾವರಿ, ತಾಂತ್ರಿಕ ಹಾಗೂ ಆಡಳಿತದ ತರಬೇತಿ ಇವುಗಳಿಗೆ ಸಾಕಷ್ಟು ಹಣವನ್ನು ಹಾಕಬೇಕು. ಆತನ ಉತ್ಪನ್ನದ ಏರಿಕೆ ಇತರರ ಕೆಲಸಗಳನ್ನು ಅವಲಂಬಿಸಿದೆ— ರಾಸಾಯನಿಕ, ಯಾಂತ್ರಿಕ ವಿದ್ಯುತ್ತಿನ, ಸ್ವಯಂ ಚಾಲಕಗಳ ಮತ್ತಿತರ ಕೈಗಾರಿಕೆಗಳಲ್ಲಿ ಸಿದ್ಧಪಡಿಸಲಾದ ಉತ್ಪನ್ನಗಳು ಮತ್ತು ಸಾಧನಗಳು, ಖಾಸಗಿ ಹಾಗೂ ಸಾರ್ವಜನಿಕ ಸಂಶೋಧನಾಲಯಗಳಲ್ಲಿನ ಹೊಸ ಶೋಧನೆಗಳು, ಹೊಸ ಹೊಸ ವಿಧಾನಗಳನ್ನೂ ತಂತ್ರಗಳನ್ನೂ ತಿಳಿಸಿ ಕೊಡುವವರು— ಇವರೆಲ್ಲರ ಸಾಧನಗಳನ್ನು ಅವಲಂಬಿಸಿದೆ. ಒಂದು ಮಾತಿನಲ್ಲಿ ಹೇಳುವುದಾದರೆ ವ್ಯವಸಾಯ ಸಹಕಾರಿ ಸಾಹಸ.

ವ್ಯವಸಾಯದ ಉತ್ಪನ್ನ ಸಾಮರ್ಥ್ಯದಲ್ಲಾದ ಏರಿಕೆಯೂ ಮತ್ತು ವ್ಯವಸಾಯ ಕ್ಷೇತ್ರದ ಹೂಡಿಕೆಗಳ ಮತ್ತು ಶೀಘ್ರವಾದ ತಾಂತ್ರಿಕ ಅಭಿವೃದ್ಧಿಗಳೂ ಕಾಕ ತಾಳೀಯದಂತೆ ಸಂಭವಿಸಿವೆ.

೧೯೪೦ರ ಆದಿಗಿಂತ ಇಂದು ಅಮೆರಿಕದ ಬಹುಪಾಲು ಬೆಳೆಗಳ ಎಕರೆಯೊಂದರ ಉತ್ಪನ್ನ ಹೆಚ್ಚಿದೆ. ಎಕರೆಯೊಂದರ ಉತ್ಪನ್ನಕ್ಕಿಂತಲೂ ದುಡಿಮೆಯ ರೈತನ ತಲೆಯೊಂದರ ಉತ್ಪನ್ನದಲ್ಲಿ ಗಣನಾರ್ಹ ಏರಿಕೆಯಾಗಿದೆ. ೧೯೪೦ರಿಂದೀಚೆಗೆ ಒಂದು ತಲೆಮಾರಿನಲ್ಲಿ ಅಮೆರಿಕದ ರೈತ ವ್ಯಕ್ತಿಯ ಗಂಟೆಯೊಂದರ ಉತ್ಪನ್ನದ ಏರಿಕೆ ಇನ್ನೂ ಗಣನಾರ್ಹವಾದುದು.



ಜಗತ್ತಿನ ಅತಿದೊಡ್ಡ ರೇಡಿಯೋ ಟೆಲಿಸ್ಕೋಪ್ ಒಂದನ್ನು ಕೆಲಿಫೋರ್ನಿಯಾದ ಸಾನಡಿಯಾಗೋವಿನಲ್ಲಿ ಅಮೆರಿಕೆಯು ಸ್ಥಾಪಿಸುತ್ತಿದೆ. ಸ್ವಯಂಚಾಲಿತ ಲೇಖನಿಯು ವಿಷಯಗಳನ್ನು ನಿರೂಪಿಸುವ ವ್ಯವಸ್ಥೆಯಿದರಲ್ಲಿದೆ.

ಪ್ರಪಂಚದ ವ್ಯವಸಾಯಗಾರರ ಸಂಖ್ಯೆಯಲ್ಲಿ ಅಮೆರಿಕನ್ನರು ಸೇಕಡ ಎರಡಕ್ಕೂ ಕಮ್ಮಿ. ಆದರೆ ಅವರ ಉತ್ಪನ್ನ ಪ್ರಪಂಚದ ವ್ಯವಸಾಯೋತ್ಪನ್ನದ ಶೇಕಡ ೨೦ ರಷ್ಟು

ತಲೆಯೊಂದರ ಅಥವಾ ಎಕರೆಯೊಂದರ ಉತ್ಪನ್ನ, ವ್ಯವಸಾಯ ಕ್ಷೇತ್ರದ ವಿಸ್ತಾರ, ತಲೆಯೊಂದರ ಅಥವಾ ಎಕರೆಯೊಂದರ ಉತ್ಪನ್ನ, ಹೂಡಿಕೆಯ ಪ್ರಮಾಣ, ರೈತರ ಅಥವಾ ಇತರರ ಜೀವನಮಟ್ಟ — ಹೀಗೆ ಯಾವ ಮಟ್ಟದಿಂದ ನೋಡಿದರೂ ಇತ್ತೀಚಿನ ವರ್ಷಗಳಲ್ಲಿ ಅಮೆರಿಕದ ವ್ಯವಸಾಯ, ಬೃಹತ್ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಹೊಂದಿದೆ.

ಇಷ್ಟೆಲ್ಲ ಬೃಹತ್ ಬದಲಾವಣೆಗಳಾಗಿದ್ದರೂ ಅಮೆರಿಕದ ವ್ಯವಸಾಯದ ಒಂದು ಮೂಲಭೂತ ಲಕ್ಷಣದಲ್ಲಿ ಮಾತ್ರ ಬದಲಾವಣೆಯಾಗಿಲ್ಲ. ಅಮೆರಿಕದಲ್ಲಿ ಸಾಂಪ್ರದಾಯಿಕವಾದ ಕುಟುಂಬ ವ್ಯವಸಾಯ ಪದ್ಧತಿ ಈಗಲೂ ಪ್ರಧಾನವಾಗಿದೆ.

ಕುಟುಂಬ ವ್ಯವಸಾಯ ಪದ್ಧತಿ ಮತ್ತಾವುದೇ ವ್ಯವಸಾಯ ಪದ್ಧತಿಗಿಂತಲೂ ಹೆಚ್ಚಿನ ಪ್ರೋತ್ಸಾಹವನ್ನು ಸ್ವಪ್ರಯತ್ನಕ್ಕೆ ನೀಡುವುದರಿಂದ ಈ ವಿಧಾನವು ಬಹು ಪ್ರಯೋಜನಕರವಾದುದು ತಾಂತ್ರಿಕ ಪ್ರಗತಿಯಲ್ಲಿ ಅಮೆರಿಕದ ರೈತನಿಗಿರುವ ಆಸಕ್ತಿ ಕೂಡ ಹೊಸದಲ್ಲ.

ವ್ಯವಸಾಯ, ಸಂಶೋಧನೆ, ಶಿಕ್ಷಣ ಮತ್ತು ಸಾಮರ್ಥ್ಯಗಳಿಗೆ ಕೇಂದ್ರ ಹಾಗೂ ಸಂಸ್ಥಾನ ಸರಕಾರಗಳು ಕಳೆದ ನೂರು ವರ್ಷಗಳಿಂದಲೂ ಸಹಾಯ ನೀಡುತ್ತ ಬಂದಿವೆ ವ್ಯವಸಾಯವೃತ್ತಿಯ ಕಾಲೇಜುಗಳಲ್ಲಿ ಪ್ರಯೋಗ ಕೇಂದ್ರಗಳಲ್ಲಿ ರೈತರಿಗೆ ವಂಶ ಪರಂಪರೆಯಿಂದ ಹೆಚ್ಚು ಶೈಕ್ಷಣಿಕ ಅವಕಾಶಗಳು ದೊರೆಯುತ್ತ ಬಂದಿವೆ. ಸರಕಾರಿ ತಜ್ಞರುಗಳಿಂದಲೂ, ರೈತರ ಉತ್ಪನ್ನಗಳನ್ನು ಕೊಂಡು ಅವರ ಅಗತ್ಯಗಳನ್ನು ಪೂರೈಸುವ ವರ್ತಕರುಗಳಿಂದಲೂ ಸಹಾಯ ದೊರೆತಿದೆ. ವ್ಯವಸಾಯದ ನಾನಾ ಅಭಿವೃದ್ಧಿಯ ಘಟ್ಟಗಳನ್ನು ಕುರಿತ ಪುಸ್ತಕಗಳೂ ಪತ್ರಿಕೆಗಳೂ ಉಚಿತವಾಗಿ ಅಥವಾ ಬಹು ಅಗ್ಗವಾಗಿ ದೊರೆತಿವೆ.

ಇವೆಲ್ಲವುಗಳ ಫಲವಾಗಿ ಉತ್ಪನ್ನ ಸಾಮರ್ಥ್ಯವೂ ಲಾಭವೂ ವ್ಯವಸಾಯ ಕುಟುಂಬಗಳಿಗೆ ತೃಪ್ತಿಕರ ಪ್ರಮಾಣದಲ್ಲಿ ದೊರೆತಿವೆ.

Life Insurance Corporation of India

(Western Zone)

Notice having been given of the loss of Policy numbered 78054243 on the life of Shri Sooda Padu Manjal Deju Shetty, issued by the Bombay Life Assurance Company' Duplicate Policy will be issued unless objection is lodged with us within one month from this date.

V. H. Vora,
Zonal Manager.

Udipi, Dated 9—4—'60.

ಲ್ಯಾಫ್ ಇನ್ಶ್ಯೂರೆನ್ಸ್ ಕೊರ್ಪೊರೇಶನ್ ಆಫ್ ಇಂಡಿಯಾ

(ವೆಸ್ಟರ್ನ್ ಜೋನ್)

ಶ್ರೀ ಸೂಡ ಪಡುಮಂಜಲ್ ದೇಜು ಶೆಟ್ಟರ 78054243ನೇ ನಂಬ್ರದ ಬೊಂಬೆ ಲ್ಯಾಫ್ ಇನ್ಶ್ಯೂರೆನ್ಸ್ ಕಂಪೆನಿಯ ಪಾಲಿಸಿಯು ಕಳೆದು ಹೋಗಿರುವುದಾಗಿ ನೋಟೀಸು ಬಂದಿರುವುದರಿಂದ ಈ ತಾರೀಕಿನಿಂದ ಒಂದು ತಿಂಗಳೊಳಗಾಗಿ ಆಕ್ಷೇಪಣೆಗಳು ದಾಖಲಾಗದಿದ್ದರೆ ಡುಪ್ಲಿಕೇಟ್ ಪೊಲಿಸಿಯು ಕೊಡಲ್ಪಡುವುದು.

ವಿ. ಎಚ್. ವೋರಾ,
ಜೋನಲ್ ಮೆನೇಜರ್.

ಉಡುಪಿ, ತಾ. 9-4-60.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು.
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ನಿದ್ರೆಯ ರಹಸ್ಯ

ನಿದ್ರಾದೇವಿಯು ಒಮ್ಮೆಗೇ ಆಲಿಂಗಿಸುವುದಿಲ್ಲ

ಮಲಗಿದ ನಮಗೆ ಹಂತಹಂತವಾಗಿ ಮೈಯ ಸ್ಮರಣೆ ತಪ್ಪಿ ನಿದ್ರೆ ಬರುವುದು; ಇಷ್ಟಾಗಬೇಕಾದರೆ, ಒಂದು ತಾಸಿನಷ್ಟು ಕಾಲಾವಧಿ ಬೇಕಾಗುವುದು!

ಅರುವತ್ತು ವರ್ಷಪ್ರಾಯದ ಒಬ್ಬ ಮನುಷ್ಯನು ಸಾಮಾನ್ಯವಾಗಿ ಇಪ್ಪತ್ತು ವರ್ಷಗಳಷ್ಟನ್ನು ನಿದ್ರೆಯಲ್ಲೇ ಕಳೆಯುತ್ತಾನೆ ಎಂದರೆ ನೀವು ವಿಸ್ಮಯಪಡುವ ಅಗತ್ಯವಿಲ್ಲ. ಏಕೆಂದರೆ, ದಿನದ ೨೪ ತಾಸುಗಳಲ್ಲಿ ೮ ಗಂಟೆಗಳನ್ನು ನಿದ್ರಾಕಾಲಕ್ಷೇಪದಲ್ಲೇ ನಾವು ಉಪಯೋಗಿಸುವುದಿಲ್ಲವೆ? ಹಾಗಾದರೆ, ನಮ್ಮ ಜೀವಮಾನದಲ್ಲಿ ನಿದ್ರೆಗಾಗಿ ನಾವು ಮೂರರಲ್ಲೊಂದಂಶವನ್ನು ಮೀಸಲಿಡುತ್ತೇವೆ ಎಂದಂತಾಯಿತು. ಜೀವಿಯ ಜೀವನಾವಶ್ಯಕತೆಗಳಲ್ಲಿ ಒಂದಾದ ಈ ನಿದ್ರೆಯ ಬಗ್ಗೆ ನಿಮಗೇನು ತಿಳಿದಿದೆ?

ಯಾರೇ ಆಗಲಿ ಮರದ ಕೊರಡಿನಂತೆ ಎಂದೂ ಮಲಗಿ ಗೊರಕೆ ಹೊಡೆಯುವುದಿಲ್ಲ. ರಾತ್ರಿ ದೀರ್ಘಕಾಲ ನಿದ್ರಿಸುವವರನ್ನು ಪರಿಶೀಲನೆ ನಡೆಸಿದ ಕೆಲವು ವಿಜ್ಞಾನಿಗಳು ಮರುಳು ರೋಗಿಯೊಬ್ಬನು ಮಾತ್ರ ಸುಮಾರು ಏಳು ತಾಸುಗಳ ವರೆಗೆ ಸುಷುಪ್ತಿಯಲ್ಲಿದ್ದನೆಂದು ಕಂಡುಕೊಂಡಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಬ್ಬನೂ ನಿದ್ರಿಸುತ್ತಿರುವಾಗ ಪಕ್ಷವನ್ನು ನಾವು ತಿಳಿದಿರುವುದಕ್ಕಿಂತ ಹೆಚ್ಚಾಗಿಯೇ ಬದಲಾಯಿಸುತ್ತಾನೆ. ಪುರುಷರು ಸರಾಸರಿ ೧೧.೮ ನಿಮಿಷಗಳಿಗೊಮ್ಮೆ ಚಲಿಸಿದರೆ, ಸ್ತ್ರೀಯರು ೧೦-೫ ಮಿನಿಟುಗಳಲ್ಲಿಯೇ ಅಂಗಾಂಗಗಳನ್ನು ಚಲಿಸುತ್ತಾರೆ. ಅಂಗಚಲನೆಯ ನಡುವಿರುವ ಅತಿ ದೀರ್ಘಕಾಲವೆಂದರೆ, ಪುರುಷರಲ್ಲಿ ೩೫.೫ ನಿಮಿಷ ಮತ್ತು ಸ್ತ್ರೀಯರಲ್ಲಿ ೧೪.೪ ನಿಮಿಷಗಳು ಮಾತ್ರವೆಂದು ಪರಿಶೀಲನೆಯಿಂದ ತಿಳಿದುಬಂದಿದೆ.

ಮಾನವನು ಮಲಗಿದೊಡನೆಯೇ ನಿದ್ರಾದೇವಿಯು ಆತನನ್ನು ಆಲಿಂಗಿಸುವುದಿಲ್ಲ. ತಾವು ದಿಂಬಿನ ಮೇಲೆ ತಲೆಯಿಟ್ಟೊಡನೆಯೇ ನಿದ್ರಾದೇವಿಯೊಲಿಯುವಳೆಂದು ಕೆಲವರನ್ನುವುದುಂಟು; ಆದರೆ, ಸತ್ಯ ಸಂಗತಿಯನ್ನು ಅವರು ಅರಿತಿಲ್ಲವಾದುದರಿಂದ, ಅವರೆನ್ನುವುದು ನೂರಕ್ಕೆ ನೂರರಷ್ಟು ಸುಳ್ಳೇ ಆಗಿದೆ. ನಿದ್ರೆಯು ನಮ್ಮನ್ನು ಹಂತಹಂತವಾಗಿ ಬಂದು ಅಪ್ಪಿಕೊಳ್ಳುವುದು.

ಮೆದುಳಿನ ತೀವ್ರ ಚಟುವಟಿಕೆಯನ್ನು ಕಂಡುಕೊಳ್ಳುವ ಇಲೆಕ್ಟ್ರೋನ್ಸ್ ಫಲೋಗ್ರಫಿಯ ಮೂಲಕ ನಿದ್ರೆಯ ವಿಧಾನವನ್ನು ತಿಳಿಯಬಹುದು. ಈ "ಇಇಜಿ" ವಿಜ್ಞಾನದಿಂದ ಮೆದುಳಿನ ಚಟುವಟಿಕೆಗಳನ್ನು ಕಂಡುಹಿಡಿದು ನಿದ್ರೆಯ ವಿಭಿನ್ನ ಅವಸ್ಥೆಗಳನ್ನು ನಾವು ಕಂಡುಕೊಳ್ಳಬಹುದು. ಹಾಸಿಗೆಯಲ್ಲಿ ನಿದ್ರಾಸಕ್ತನಾದವನು ಕ್ರಮವಾಗಿ, ತೂಕಡಿಕೆ, ಜೊಂಪು, ಹಗುರ ನಿದ್ರೆ, ಸಾಮಾನ್ಯ ನಿದ್ರೆಗಳ ಹಂತಗಳನ್ನು ದಾಟಿ ಕೊನೆಗೆ ಗಾಢನಿದ್ರೆಯನ್ನು ಹೊಂದುವನು. ಇಷ್ಟಾಗಬೇಕಾದರೆ, ಸುಮಾರು ಒಂದುತಾಸಿನ ಸಮಯ ಬೇಕಾಗಬಹುದು. "ಇ ಇ ಜಿ"ಯು ಪ್ರತಿಯೊಂದು ಅವಸ್ಥೆಯಲ್ಲಿ ನಮ್ಮ ಮೆದುಳು ಪಡೆಯುವ ಶಕ್ತಿಹೀನತೆಯನ್ನು ಗುರುತಿಸಬಲ್ಲುದು.

ನಿದ್ರೆಯೂ ವಿಚಿತ್ರವಾಗಿದೆ. ರೇಲು ಗಾಡಿಯ ಗಡಗಡ ಸದ್ದು, ಅಥವಾ ಅತ್ಯಧಿಕ ವಾಹನ ಸಂಚಾರದ ಗುಲ್ಲು ಅಥವಾ ಇನ್ನಾವುದೇ ವಿಶೇಷ ಧ್ವನಿಯೇಳುತ್ತಿರುವಂತೆಯೇ ನಾವು ನಿದ್ರಿಸುವ ಅಭ್ಯಾಸವನ್ನು ಹೊಂದಿದವರಿರಬಹುದು; ಒಂದು ಮರದ ಕೊಂಬೆಯು ಗಾಳಿಯಲ್ಲಿ ಗಿರಿಕ್ ಎಂದಾಗ, ನಮಗೆ ಎಚ್ಚರವಾಗಲೂ ಬಹುದು. ಸೈನಿಕರು ಯುದ್ಧರಂಗದ ನಡುವಿನ ಡೇರೆಯಲ್ಲಿ ಸುತ್ತಮುತ್ತಲಿನ ಗಲಭೆಯಲ್ಲೂ ಸುಖನಿದ್ರೆ ಮಾಡುತ್ತಾರೆ; ಅಂತೆಯೇ ಯಾರಾದರೂ ತಮ್ಮ ಕಿವಿಯಲ್ಲಿ ತಮ್ಮ ಹೆಸರನ್ನು ಪಿಸುಗುಟ್ಟಿದೊಡನೆಯೇ ಅವರು ಕಣ್ಣುಜ್ಜಿ ಏಳುವರು.

ನಿದ್ರೆಯೆಂಬುದು ನಮ್ಮ ಶರೀರದ ಬಾಹ್ಯ ಬೇಡಿಕೆಯಲ್ಲ; ಆಂತರಿಕ ಆವಶ್ಯಕತೆಯಾಗಿದೆ. ಮಲಗುವವನು ಇಷ್ಟಬಂದಾಗ ಏಳುವ ಅಭ್ಯಾಸವಿರುವುದು ಒಳ್ಳೆಯದು. ವೈಜ್ಞಾನಿಕವಾಗಿ ನಿದ್ರಾವಸ್ಥೆಯಲ್ಲಿ ಮಾನವ ಶರೀರದಲ್ಲಿ ಮೂರು ಬಗೆಯ ಗುಣಧರ್ಮಗಳು ಕಾಣಿಸುವುವು. ಮನುಷ್ಯನ ರಕ್ತದ ಒತ್ತಡವು ಇಳಿಯುವುದು; ಶ್ವಾಸೋಚ್ಛ್ವಾಸದ ವೇಗವೂ ಕಡಿಮೆಯಾಗುವುದು. ಮೂತ್ರಪಿಂಡಗಳ ಕಾರ್ಯ ನಿಧಾನವಾಗುವುದು; ಮಾಂಸ ಖಂಡಗಳು ಶಿಥಿಲವಾಗುತ್ತವೆ. ಮೆಟಬೋಲಿಕ್ ಪ್ರಮಾಣವು ನೂರಕ್ಕೆ ೧೦ರಿಂದ ೧೫ರಷ್ಟು ಕಡಿಮೆಯಾಗುವುದು.

ನಿದ್ರೆಯು ಏತರಿಂದ ಬರುತ್ತದೆ ಎಂಬುದನ್ನು ವಿಜ್ಞಾನಿಗಳು ಚಿಂತಿಸಿದಷ್ಟೂ ವಿಸ್ಮಿತರಾಗಿದ್ದಾರೆ. ಉಸಿರಾಟದ ಅಂಗಗಳು ಮಾನವನನ್ನು ಉಸಿರಾಡಲು ಪ್ರೇರೇಪಿಸುವಂತೆಯೇ ಮೆದುಳಿನ ಒಂದು ಭಾಗವು ಆತನನ್ನು ನಿದ್ರಿಸಲು ಹೇಳುತ್ತದೆ ಎಂದು ಒಂದು ಸಿದ್ಧಾಂತದ ಅಭಿಪ್ರಾಯಪಡುತ್ತದೆ. ಮೆದುಳಿನ ಉದ್ದೀಪನ ಶಕ್ತಿಯು ಹ್ರಾಸವಾದುದರ ಪರಿಣಾಮವಾಗಿ ನಿದ್ರೆ ಬರುವುದೆಂದು ಇನ್ನೊಂದು ಅಭಿಮತವಿದೆ. ಆದುದರಿಂದ ನಿದ್ರಾನಾಶದಿಂದ ನರಳುವವರಿಗೆ ವಿಜ್ಞಾನಿಗಳು ಈಯುವ ಒಂದೇ ಒಂದು ಔಷಧವೆಂದರೆ "ವಿಶ್ರಾಂತಿ".

ಶರೀರ ಆಯಾಸಗೊಂಡಾಗ ಮೆದುಳಿನ ಉದ್ದೀಪನ ಶಕ್ತಿಯೂ ಕುಂಟುತ್ತದೆ. ಆಗ ನಮ್ಮ ಮೆದುಳು ಕಾರ್ಯಪ್ರವೃತ್ತವಾಗುವ ಗುಣವನ್ನೂ ಕಳೆದುಕೊಳ್ಳುತ್ತದೆ. ಇದರಿಂದಾಗಿ ನಮ್ಮ ಕಾರ್ಯದಲ್ಲಿ ವ್ಯತ್ಯಯ ವುಂಟಾಗುತ್ತದೆ. ಅದಕ್ಕಾಗಿ ಮೆದುಳಿಗೆ ವಿಶ್ರಾಂತಿಯಿತ್ತರೆ, ಮುಂದದು ಕಳೆದುಕೊಂಡ ತನ್ನ ಶಕ್ತಿಯನ್ನು ಮರಳಿ ಪಡೆದು ಉತ್ಸಾಹದಿಂದ ಕಾರ್ಯಪ್ರವೃತ್ತವಾಗುತ್ತದೆ. ಆದುದರಿಂದಲೇ ನಿದ್ರೆ ಶರೀರದ ಆಂತರಿಕ ಯಾಚನೆ; ಆ ಯಾಚನೆಯನ್ನು ನಾವು ತಿರಸ್ಕರಿಸಲಾರೆವು.

(ವಿವಿಧ ಮೂಲಗಳಿಂದ)

ರಾಜಪಥ ಮುಖದ್ವಾರ

ಭಾರತದ ಪ್ರಜಾಪ್ರಭುತ್ವದ ದಶವಾರ್ಷಿಕ ದಿನಾಚರಣೆಯನ್ನು ರಾಜಧಾನಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಉತ್ಸವದಲ್ಲಿ ಸುಮಾರು ೬೦ ಲಕ್ಷ ಜನರು ಭಾಗವಹಿಸಿದರು. ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಸಶಸ್ತ್ರ ಸೇನೆಯ ಗೌರವ ರಕ್ಷೆಯನ್ನು ಸ್ವೀಕರಿಸಿದರು. ರಷ್ಯದ ಅಧ್ಯಕ್ಷರು, ನೇಪಾಲದ ಪ್ರಧಾನಿ, ಸಿಕ್ಕಿಂನ ಮಹಾರಾಜಕುಮಾರ ಮೊದಲಾದವರು ಆದಿನದ ವಿಶೇಷ ಅತಿಥಿಗಳಾಗಿದ್ದರು. ಈ ಉತ್ಸವದಲ್ಲಿ ಭಾಗವಹಿಸಿದ ವಾಯುಪಡೆಯ ಜೆಟ್ ವಿಮಾನಗಳು ರಾಜಧಾನಿಯ ರಾಜಪಥದ ಸುಂದರವಾದ ಮುಖದ್ವಾರವನ್ನು ದಾಟಿಹೋಗುವುದನ್ನು ಕಾಣಬಹುದು.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ

ಸಿಗುತ್ತವೆ.

ವಿಚಾರಿಸಿರಿ—

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ

ಕನ್ಮನಿಗೆ ಓಲೆ

ಭೌತಿಕವಾದಿ ವಿಜ್ಞಾನಿ, ಭಾವವಾದಿ ಕವಿ

ಮಾನವನೂ ಪ್ರಕೃತಿಯ ಒಂದಂಶವೆಂದು ವಿಜ್ಞಾನಿಯೆಂದರೆ, ಆತ ಪರಮಾತ್ಮನ ಅಂಶವೆಂದು ಕವಿ ತಿಳಿಯುತ್ತಾನೆ.

ಕಾವ್ಯದ ಯಥಾರ್ಥ ಪರಿಭಾಷೆಯನ್ನು ನೀಡುವುದರಲ್ಲಿ ಮಹಾ ಆಚಾರ್ಯರಲ್ಲಿಯೇ ಮತಭೇದಗಳು ಎದ್ದಿರುವುದರಿಂದ ಅಸಾಧ್ಯವಾಗಿದೆ. ಆದರೂ ಮಾನವನ ಹೃದಯದಲ್ಲಿ ಕಾವ್ಯ ಉದಯಿಸುವುದು; ಮಾನವ ಹೃದಯವನ್ನು ಪ್ರಭಾವಿತಗೊಳಿಸಿ, ಅದರಲ್ಲಿ ಆನಂದವನ್ನು ಉತ್ಪಾದಿಸುವುದು ಎಂದು ಹೇಳಬಹುದು. "ಕಾವ್ಯವೆಂದರೇನು?" ಎಂಬುದೂ ಸಮಸ್ಯಾತ್ಮಕವಾದ ಪ್ರಶ್ನೆಯಾಗಿದೆ. ಇದನ್ನಾದರೂ, ಇತರ ವಿಷಯಗಳೊಂದಿಗೆ ಮಾನವನ ಭಾವಾತ್ಮಕ ಸಂಬಂಧವನ್ನು ಜೋಡಿಸುವ ಆನಂದಪ್ರದಾಯಕವಾದ ಸುಂದರ ಶಬ್ದಮಯವಾದ ಅಭಿವ್ಯಕ್ತಿಯನ್ನು ಕಾವ್ಯವೆನ್ನುತ್ತಾರೆ ಎಂದು ಉತ್ತರಿಸಬಹುದು. ಕಾವ್ಯವು ಭಾವಪ್ರಧಾನವಾಗಿದೆ. ಅತ್ಯಲ್ಪ ಸಾಧನಗಳಿಂದ ಅತ್ಯಧಿಕ ಭಾವಗಳನ್ನು ವ್ಯಂಜಿತಗೊಳಿಸುವುದು ಕಾವ್ಯದ ಬಾಹ್ಯ ಲಕ್ಷಣ.

ಕವಿತೆಗೂ ಮಾನವ ಜೀವನಕ್ಕೂ ಅತಿ ನಿಕಟ ಸಂಬಂಧವಿದೆ. ಅದರ ದೃಷ್ಟಿಕೋಣವೂ ಮಾನವೀಯವಾಗಿದೆ. ಮನುಷ್ಯರಲ್ಲಿ ಭಾವಾತ್ಮಕ ಸಂಬಂಧವಿರುವ ಅನುಭವಗಳನ್ನಷ್ಟೇ ಕಾವ್ಯವು ತೆಗೆದುಕೊಳ್ಳುವುದು. ವಿಜ್ಞಾನ ಮತ್ತು ಕಾವ್ಯಗಳ ನಡುವಿರುವ ಅಂತರವು ಸ್ಪಷ್ಟವಾದರೆ, ಈ ವಿಷಯವೂ ಮನದಟ್ಟಾಗುವುದು. ವಿಜ್ಞಾನವು ಕಂಡ ವಸ್ತುವನ್ನು ಇದ್ದಕ್ಕಿದ್ದಂತೆಯೇ ಹೇಳುತ್ತದೆ. ಅದಕ್ಕೆ ಸುಂದರ-ಅಸುಂದರ ಎಂಬ ಭಾವವೇ ಇರುವುದಿಲ್ಲ. ನೀರು ಜಲಜನಕ ಮತ್ತು ಆಮ್ಲಜನಕಗಳ ಮಿಶ್ರಣವೆನ್ನುತ್ತದೆ ವಿಜ್ಞಾನ. ಇದರಲ್ಲಿ ಅದಕ್ಕೆ ಆನಂದವೂ ಇಲ್ಲ; ವಿಷಾದವೂ ಇಲ್ಲ. ಹೂವನ್ನು ಕಂಡು ಅದರಲ್ಲಿ ಇಷ್ಟು ದಳಗಳಿವೆ; ಇಷ್ಟು ತಂತುಗಳಿವೆ; ಅದು ಅಂಗಾರ ಮತ್ತು ಜಲಜನಕ ಮೊದಲಾದುವುಗಳಿಂದ ನಿರ್ಮಿತವಾಗಿದೆ ಎನ್ನುತ್ತದೆ. ಆದರೆ ಕವಿಯಾದವನು ಹೂವನ್ನು ಹೃದಯನೇತ್ರಗಳಿಂದ ನೋಡುತ್ತಾನೆ. ಅದನ್ನು ವೀಕ್ಷಿಸುವಾಗ ಕವಿಹೃದಯದ ಮೇಲಾಗುವ ಪ್ರಭಾವವನ್ನು ಆತ ಹೇಳುತ್ತಾನೆ. ಕವಿ ಪುಷ್ಪದಲ್ಲಿ ಸೌಂದರ್ಯವನ್ನು ಕಾಣುತ್ತಾನೆ. ಅದು ನಗುನಗುತ್ತಿರುವಂತೆ ನಲಿನಲಿಯುತ್ತಿರುವಂತೆ ಆತನಿಗೆ ಭಾಸವಾಗುವುದು. ಪ್ರಕೃತಿದೇವಿಯ ಪ್ರಸನ್ನತೆಯು ದ್ಯೋತಕವಾಗಿ ಗೋಚರಿಸುವುದು. ಅದು ಆತನ ಪ್ರಿಯತಮನಾದ ಪರಮಾತ್ಮನಲ್ಲಿಗೆ ಪ್ರೇಮ ಸಂದೇಶವನ್ನು ಹೊರುವ ವಾಹಕವಾಗುವುದು. ಬಿಚ್ಚಿದ ಎಲೆಗಳ ನಡುವೆ ಮುಗಿಯುವ ನನೆ ಮಲಯಾನಿಲದೊಡನೆ ಪ್ರೇಮಾಲಾಪ ಮಾಡುವಂತೆ ಕವಿ ತಿಳಿಯುತ್ತಾನೆ.

ಕವಿಯು ವಿಶಾಲ ಸೃಷ್ಟಿಯನ್ನು ಮಾನವೀಯ ರೂಪದಿಂದ ವೀಕ್ಷಿಸುತ್ತಾನೆ; ಅದರಲ್ಲಿ ಮಾನವೀಯ ಭಾವಗಳನ್ನು ಆರೋಪಿಸಿ, ತನ್ನ ಸಹಾನುಭೂತಿಯ ಪರಿಮಿತಿಯನ್ನು ವಿಸ್ತರಿಸುತ್ತಾನೆ. ವೈಜ್ಞಾನಿಕನು ವಸ್ತುವಿನ ನೈಜತೆಯನ್ನು ಹೇಳಬಲ್ಲ; ಕವಿ ತನ್ನ ಹೃದಯದ ಮೇಲಾದ ಪ್ರಭಾವವನ್ನು ನಿಜಸ್ವರೂಪದಲ್ಲಿ ಆಡಬಲ್ಲ. ಮಾನವನೂ ಭೌತಿಕ ತತ್ವಗಳಿಂದ ಸಂಘಟಿತನಾಗಿ, ಭೌತಿಕ ತತ್ವಗಳಿಂದ ನಿಯಂತ್ರಿತನಾಗಿ ವಿಜ್ಞಾನಿಗೆ ತೋರುತ್ತಾನೆ. ಆದರೆ. ಮನುಷ್ಯ ಈಶ್ವರನ ಅಂಶ; ಆತನಲ್ಲಿ ಹೃದಯವನ್ನು ಪ್ರಭಾವಿತಗೊಳಿಸಬಲ್ಲ ಜೀವಂತ ಜಾಗ್ರತ ಭಾವಗಳಿವೆ; ಕರ್ತವ್ಯ ಮತ್ತು ಲಕ್ಷ್ಯಗಳನ್ನು ಇಟ್ಟುಕೊಂಡಿರುವ ಒರ್ವ ಜೀವಿಯಾಗಿ ಕವಿಗೆ ಕಾಣುತ್ತಾನೆ. ಕವಿಯ ದೃಷ್ಟಿಯಿಂದ ಮಾನವ ಸ್ವತಂತ್ರ; ಆತನ ಆತ್ಮವು ಭೌತಿಕ ನಿಯಮಗಳ ಬಂಧನಕ್ಕಿಂತ ದೂರವುಳಿದಿದೆ; ಆತನ ಭಾವಗಳು ನದಿಯ ಪ್ರವಾಹದಂತೆ ಸ್ವಚ್ಛಂದ ಗತಿಯಿಂದ ಹರಿಯುತ್ತದೆ; ಮನುಷ್ಯ ಸ್ವಯಂ ಸುಂದರನಾಗಿದ್ದಾನೆ; ಮತ್ತು ಆತ ಸೌಂದರ್ಯದ ಉತ್ಪಾದಕನೂ ಆಗಿದ್ದಾನೆ.

ವೈಜ್ಞಾನಿಕನಿಗೆ ಮನುಷ್ಯನೂ ಪ್ರಕೃತಿಯ ಒಂದು ಅಂಗಮಾತ್ರ, ಎಂದೂ ಆತನಲ್ಲಿ ಯಾವುದೇ ವಿಶೇಷತೆಯಿರುವುದಿಲ್ಲವೆಂದೂ ಮತ್ತು ಕವಿಗೆ ಪ್ರಕೃತಿಯೂ ಮಾನವೀಯ ರೂಪವನ್ನು ಧರಿಸಿ ತೋರುವುದೆಂದೂ ಮೇಲಿನ ವಿವೇಚನೆಯಿಂದ ವ್ಯಕ್ತವಾಗುವುದು. ವಿಜ್ಞಾನಿಯೂ ಪ್ರಕೃತಿಯನ್ನು ಮಾನವನ ಅನುಚರಿಯನ್ನಾಗಿ ಮಾಡಿ ಅದರ ಉಪಯೋಗವನ್ನು ಮಾನವೀಯ ಹಿತಕ್ಕಾಗಿ ಮಾಡಿಕೊಳ್ಳುವನಾದರೂ ಆತನ ದೃಷ್ಟಿಯಲ್ಲಿ ಪ್ರಕೃತಿಗೆ ಪ್ರಾಧಾನ್ಯವಿರುವುದು. ಆತನು ಮಾನವನನ್ನೂ ಪ್ರಾಕೃತಿಕ ನಿಯಮಗಳಲ್ಲಿ ಬಂಧಿಸುತ್ತಾನೆ; ಆತನನ್ನು ಪ್ರಾಕೃತಿಕ ದೃಷ್ಟಿಕೋಣದಿಂದ ವೀಕ್ಷಿಸುತ್ತಾನೆ; ಇದಕ್ಕೆ ವ್ಯತಿರಿಕ್ತವಾಗಿ, ಕವಿಯು ಪ್ರಕೃತಿಯನ್ನು ಮಾನವೀಯ ದೃಷ್ಟಿಯಿಂದ ನೋಡುತ್ತಾನೆ. ಆದುದರಿಂದಲೇ ಕಾವ್ಯ ಮತ್ತು ಮಾನವ ಜೀವನಗಳ ನಡುವೆ ವಿಶೇಷ ಸಂಬಂಧವಿದೆ.

ಇದೀಗ ಸಾಧಾರಣ ಸಿದ್ಧಾಂತ ಮತ್ತು ದೃಷ್ಟಿಕೋಣದ ಪರಿವೀಕ್ಷಣವಾಯಿತು. ಕಾವ್ಯ ಮತ್ತು ಮಾನವ ಜೀವನಗಳ ನಡುವೆ ಇನ್ನಿತರ ಪ್ರಕಾರಗಳಿಂದಲೂ ಸಂಬಂಧವಿದೆ. ಮೊತ್ತಮೊದಲಾಗಿ, ಮನುಷ್ಯನ ಮುಖ್ಯೋದ್ದೇಶವಾದ ಆನಂದವನ್ನೇ ಕಾವ್ಯವು ಕೊಡುತ್ತದೆ. ಕಾವ್ಯಾನಂದವನ್ನು ಬ್ರಹ್ಮಾನಂದ ಸಹೋದರ ಎಂದು ಕರೆಯುತ್ತಾರೆ. ಮಾನವ ಜೀವನದಲ್ಲಿ ಎಲ್ಲೆಲ್ಲೂ ಸಂಘರ್ಷಣೆಗೆ ಗುರಿಯಾಗಿ ವಿಮೂಢನಾಗಿದ್ದಾಗ, ಆತನ ಜೀವನದಲ್ಲಿ ಸಾಮ್ಯವನ್ನುಳಿಸಲು ಕಾವ್ಯವೇ ಸಹಾಯಕವಾಗುವುದು. ಈ ಕಾವ್ಯವೇ ಆತನ ಮನವನ್ನು ಹಗುರಗೊಳಿಸುವುದು ಕಾವ್ಯದ ಮೂಲಕ ಮಾನವನ ಸಹಾನುಭೂತಿಯು ಬೆಳೆಯುವುದು. ಮಾನವ ತನ್ನ ಸಂಕುಚಿತ ಆವರಣದಿಂದ ಹೊರಬರಬಲ್ಲನು. ಭಾವಸಾಮ್ಯ ಬಲದಿಂದ ಆತ ಎಲ್ಲ ಮಾನವಸಮೂಹವನ್ನೂ ಒಂದೇ ಪರಿವಾರವೆಂಬ ರೂಪದಲ್ಲಿ ಕಾಣಬಲ್ಲನು. ಉತ್ತಮ ಲೇಖಕನೆನಿಸಿದವನಿಗೆ ಮಾನವರೆಲ್ಲರೂ ಸಮಾನರು. ಕಾಲಿದಾಸನಲ್ಲಿ ಕಾಣುವ ಭಾವವನ್ನೇ ಶೇಕ್ಸ್‌ಪಿಯರನಲ್ಲಿಯೂ ನಾವು ಕಾಣಬಹುದು. 'ಟೆಂಪೆಸ್ಟ್'ನ ಏಕಾಂತವಾಸಿನೀ ನಾಯಿಕೆಯಾದ ಮಿರಿಂಡಾಳಲ್ಲಿ ತಪೋವನ ವಿಹಾರಿಣೀ ಶಕುಂತಳೆಯ ರೂಪವನ್ನು ನೋಡುವುದು ಸಾಧ್ಯ. ಜಾತಿಭೇದಗಳ ಭೂತವು ದೂರವಾಗುವುದಕ್ಕೆ ಸಾಹಿತ್ಯಕ ಜೀವಿಗಳೇ ಹೋರಾಡಬೇಕೆಂಬುದಾಗಿ ಹೇಳಬಹುದು. ಕವಿ ಸಾಮ್ರಾಟರಾದ ರವೀಂದ್ರನಾಥ ಟಾಗೋರರು ಸ್ವಯಂ ಸಾಹಿತಿ-ಕವಿಯಾದುದರಿಂದಾಗಿಯೇ ಅವರು ಸ್ಥಾಪಿಸಿದ ವಿಶ್ವಭಾರತೀ ಸಂಸ್ಥೆಯು ಮಾನವತೆಯನ್ನೇ ತನ್ನ ಉದ್ದೇಶವಾಗಿಟ್ಟುಕೊಂಡು ಮುಂದುವರಿದು ಬಂದಿದೆ.

ಇದರಿಂದಾಗಿಯೇ ಹಿಂದಿನ ಕಾಲದಿಂದಲೂ ಕವಿಗಳು ಸಾಹಿತ್ಯಕಾರರು ಜಂನಾಗದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ. "ವಿದಿತಂ ಪ್ರಾತೀತಿಕಂ ಕೋಮಲಮತಿಸುಭಗಂ ಸುಂದರ ಸೂಕ್ತಿಗರ್ಭಂ ಮೃದು ಸಂದರ್ಭಂ ವಿಚಾರಕ್ಷಮ ಮುಚಿತಪದಂ ಪ್ರವ್ಯನವ್ಯತುಲಂ ವ್ಯಸ್ತದಿಗಂತಂ ಕಾವ್ಯಂ" ಎಂದು ಆದಿ ಕವಿ ಪಂಪನು ತನ್ನ ಕವಿತೆಯ ಪರವಾಗಿ ಎಂದುಕೊಂಡ ಮಾತು ಕಾವ್ಯಕ್ಕೂ ಅನ್ವಯಿಸುವುದರಿಂದಲೇ ಕಾವ್ಯದ ಹಿರಿಮೆಯೂ ಅದು ಜನಾದರಣೆ ಪಡೆಯಲಿರುವ ಕಾರಣವೂ ನಮಗೆ ವೇದ್ಯವಾಗುವುದಿಲ್ಲವೆ?

— ಗೋರಾ.

— —

ಕಥಾವಿಹಾರ

(೨ನೇ ಪುಟದಿಂದ)

ತ್ತಾ ಮುಂದುವರಿದು ಮಿಂಚಿನಂತೆ ಬರುತ್ತಿತ್ತು! ತಲೆಯಿಲ್ಲದ ದೇಹವು ಕೈಯಲ್ಲಿ ಕತ್ತಿ ಹಿಡಿದು ದರ್ಬಾರದ ಕಾವಲಿಗರನೇಕರನ್ನುರುಳಿಸಿದಾಗ ಶಹಾಜಹಾನನು ಹೆದರಿ ಅಂತರ್ಗೃಹಕ್ಕೆ ಓಡಿದನು!

ರಜಪೂತ ರಾಜನ ಹೇಳಿಕೆಯಂತೆ (ವಿನಂತಿಯಂತೆ) ರಾಠೋರನ ಶರೀರವು ದರ್ಬಾರದ ಹೊರಬಂದಿತು! ರಾಠೋರನ ಪತ್ನಿಯು ಸಂತುಷ್ಟವದನಳಾಗಿ ಅವನ ಶಿರವನ್ನೂ–ಶರೀರವನ್ನೂ ಪೂಜಿಸಿದಳು! ರಜಪೂತರಿಗೂ ಮೊಗಲರಿಗೂ ಯುದ್ಧವು ಪುನಃ ಪ್ರಾರಂಭವಾಯಿತು!

ಎರಡು ಹಗಲು ಎರಡು ರಾತ್ರಿ ಸತತವಾಗಿ ಆ ಶರೀರವು ಮೊಗಲರೊಡನೆ ಹೋರಾಡುತ್ತಲೇ ಇತ್ತೆಂದು ಹೇಳುತ್ತಾರೆ! ಎರಡು ದಿನಗಳಲ್ಲಿ ಸಾವಿರಾರು ಮೊಗಲ ಪಟು ಭಟರು ನಾಶವಾದ ಸುದ್ದಿ ಕೇಳಿದ ನಂತರ ಶಾಹಜಹಾನನು ಜೋಧಪುರದ ರಾಜನಿಗೆ ವಿನಂತಿ ಕಳಿಸಿ ಯುದ್ಧವನ್ನು ನಿಲ್ಲಿಸಲು ಪ್ರಾರ್ಥಿಸಿದನಂತರ ರಾಜನಿಂದಾದಿಯಾಗಿ ರಜಪೂತರೆಲ್ಲ ಸೇರಿ ಆ ರಾಠೋರನ ಶರೀರಕ್ಕೆ ವಂದಿಸಿ ಇನ್ನು ಹತ್ಯಾಕಾಂಡ ತೀರಲಿ ಎಂತ ಹೇಳಿದಾಗಲೇ ತನ್ನ ಪ್ರತಿಜ್ಞೆ ನೆರವೇರಿದನಂತರ ಸಂತುಷ್ಟವಾದ ಆ ಶರೀರವು ಸ್ತಬ್ಧವಾಗಿ ನಿಂತಿತು! ಕೈಯಲ್ಲಿದ್ದ ಕತ್ತಿ ಕೆಳಗೆಬಿದ್ದಿತು! ಭೀಕರ ರಣಾಂಗಣದಲ್ಲಿ ರಾಠೋರನ ಶರೀರ ಬೀಳುವ ಪೂರ್ವ ಜೋಧಪುರದ ರಾಜನು ಅದನ್ನು ಹಿಡಿದನು!

ನಿಶ್ಚೇಷ್ಟವಾದ, ಮೃತಪಟ್ಟ ಆ ರಾಠೋರನ ಶವವನ್ನು ಯಮುನಾನದಿಯ ದಂಡೆಯಲ್ಲಿ ಗಂಧದ ಕಟ್ಟಿಗೆಯ ಮೇಲೆ ಇಟ್ಟು, ಪೂಜಿಸಿ, ದಹನಮಾಡಲಾಯಿತು. ಶವವನ್ನು ಕಾಲಮೇಲೆ ಮಲಗಿಸಿಕೊಂಡು ರಾಠೋರನ ಪತ್ನಿಯೂ ಚಿತೆಯನ್ನೇರಿದಳು! ಅವನದೊಂದು ಘೋರಿಯನ್ನಲ್ಲಿ ನಿರ್ಮಿಸಿ ವಿಗ್ರಹವೊಂದನ್ನು ನಿಲ್ಲಿಸಲಾಯಿತು!

ಕೆಲವರ್ಷಗಳಲ್ಲಿ ಜೋಧಪುರದ ರಾಜನು ಮೃತಹೊಂದಿದ ನಂತರ ಅವನ ಅಂತ್ಯಕರ್ಮವನ್ನೂ ರಾಠೋರನ ಮಗ್ಗುಲಲ್ಲೇ ಮಾಡಿದರು. ಇಂದಿಗೂ ಆಗ್ರಾದಲ್ಲಿ "ತೋಗಾ ರಾಠೋರನ" ಘೋರಿಯು ಶೋಭಿಸಿ ರಜಪೂತ ವೀರರನ್ನು ಎಚ್ಚರಿಸುತ್ತಿದೆ!

— ಸಿರಿಪತಿ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ, ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1923


ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ). ರೂ. 5/- (ಸ್ಪೆಶಲ್), ರೂ. 8/- (ಎಕ್ಸ್ಟ್ರಾ ಸ್ಪೆಶಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಜಮಾ ಮಾಡಬಹುದಾಗಿದೆ. ಏಜಂಟರುಗಳು, ಜಾಹೀರಾತುದಾರರುಗಳು ಕೂಡ ಇದೇ ರೀತಿ ಹಣ ಜಮಾ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

NAVAYUGA **UDIPI, THURSDAY** **LICENSE NO. 31**
REGD. NO. M. 3619 **14–4–1960** Licensed to Post without Prepaymen

ವಿಚಾರವಿಮರ್ಶೆ

ವಿದ್ಯಾರ್ಥಿಗಳು ಅನುಪಸ್ಥಿತರಾಗುವುದೇಕೆ?

ಅಪರಾಹ್ನದ ಸಿನೆಮಾ ದೇಖಾವೆಗಳಲ್ಲಿ ಶಾಲಾಬಾಲಕರಿಗೆ ಪ್ರವೇಶ ನಿರ್ಬಂಧಿಸುವ ಮಹಾಸಾಹಸವನ್ನು ದೆಹಲಿಯಲ್ಲಿ ತೋರಿಸಿದ್ದಾರೆ!

ಶಾಲೆಗೆ ಹೋಗುತ್ತಿರುವ ಬಾಲಕ ಬಾಲಿಕೆಯರು ಶಾಲೆಗೆ ತಪ್ಪಿಸಿಕೊಳ್ಳುವುದಕ್ಕೆ ಕಾರಣವಾದರೂ ಏನು? ಶಾಲೆಯ ಮೆಟ್ಟಲೇರಿದೊಡನೆಯೇ ತಮ್ಮ ಮೈ ಜುಂ ಎನ್ನುವುದೇಂದೆ? ತಮ್ಮ ದೇಹದ ಅನಾರೋಗ್ಯದ ಕಾರಣದಿಂದಲೆ? ಅಥವಾ ಸಿನೆಮಾ ದೇಖಾವೆಗಳ ವಶೀಕರಣ ಶಕ್ತಿಯಿಂದಲೆ?

ದೆಹಲಿಯ ವಿದ್ಯಾಂಗದ ಡೈರೆಕ್ಟರರ ಕಛೇರಿಯು ಈ ಬಗ್ಗಿರುವ ಸತ್ಯಾಂಶವನ್ನು ಸಂಶೋಧಿಸಿ ಕಂಡುಕೊಳ್ಳಲು ಎರಡು ವರ್ಷಗಳಿಗೆ ಮೊದಲು ಪರಿಶೀಲನೆಯೊಂದರಲ್ಲಿ ತೊಡಗಿದ್ದರು. ಅಲ್ಲಿನ ೩೩೬ ಶಾಲೆಗಳ ಅಧಿಕಾರಿಗಳನ್ನು ಈ ಬಗ್ಗೆ ಅವಶ್ಯಕ ವಿವರಣೆಯನ್ನು ನೀಡುವಂತೆ ಕೇಳಿಕೊಂಡಾಗ ಕೇವಲ ೭೨ ಶಾಲೆಗಳವರು ಮಾತ್ರ ಎಲ್ಲವನ್ನೂ ಒದಗಿಸಿದರಂತೆ. ಉಳಿದವರಲ್ಲಿ ಕೆಲವರು ನಿರಾಕರಿಸಿದರು. ಮತ್ತುಳಿದವರು ಅಪೂರ್ಣ ಅಂಕೆಸಂಖ್ಯೆಗಳನ್ನಿತ್ತುದರಿಂದ ಅವು ನಿಷ್ಪ್ರಯೋಜಕವೆನಿಸಿದುವು. ಸಂಗ್ರಹಿಸಿದ ಅಂಕೆಸಂಖ್ಯೆಗಳಿಂದ ಪ್ರತಿದಿನ ನೂರಕ್ಕೆ ಏಳರಷ್ಟು ವಿದ್ಯಾರ್ಥಿಗಳು ಅನುಪಸ್ಥಿತರಾಗುವರೆಂದು ತಿಳಿದುಬಂತು.

ಹೊರನೋಟಕ್ಕೆ ಇದೇನೂ ದೊಡ್ಡ ಪ್ರಮಾಣವೆನ್ನುವಂತಿಲ್ಲ. ಆದರೂ ದೆಹಲಿಯಂತಹ ನಗರ ಪ್ರದೇಶಗಳಲ್ಲಿಯೇ ಇಷ್ಟು ಗೈರುಹಾಜರಿಯಿರುವಾಗ ಭಾರತದ ವಿವಿಧ ಹಳ್ಳಿಯಲ್ಲಿರುವ ಶಾಲೆಗಳ ವಿದ್ಯಾರ್ಥಿಗಳ ಸ್ಥಿತಿ ಹೇಗಿರಬಹುದು? ಅಲ್ಲದೇ ಪರಿಶೀಲನೆಯಲ್ಲಿ ವಿರಾಮವನ್ನು ಪಡೆಯದೆ ಶಾಲೆಗೆ ಬಾರದುಳಿದವರ ಸಂಖ್ಯೆಯೇ ಅಧಿಕವಾಗಿತ್ತು ಎಂಬುದು ಮಾತ್ರ ಆಲೋಚನೀಯ ವಿಷಯವಾಗುವುದಿಲ್ಲವೆ?

ಹೆಚ್ಚಿನ ವಿದ್ಯಾರ್ಥಿಗಳ ರಕ್ಷಕರು ತಮ್ಮ ಮಕ್ಕಳತ್ತ ಗಮನಹರಿಸುವುದಿಲ್ಲ; ಮತ್ತು ಅಧಿಕ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನು ತರಗತಿಗಳಲ್ಲಿ ನಿಯಂತ್ರಿಸಿಕೊಳ್ಳುವುದರಲ್ಲಿ ಅಶಕ್ತರಾಗಿದ್ದಾರೆ ಎಂದು ವರದಿ ಹೇಳುತ್ತದೆ. ಶಾಲೆಯ ದೊಣ್ಣೇರಾಯರು ಅಜ್ಞಾತವಾಸಕ್ಕೆ ತೆರಳಿದರೇ ಹೇಗೆ ಎಂದು ನೀವು ಪ್ರಶ್ನಿಸಬಹುದು. ಆದರೂ ಒಂದು ಮಾತು ನಿಜ: ನೂತನವಾದರೂ ಅಧ್ಯಾಪಕ ಎಂದೆಂದಿಗೂ ಬೆತ್ತವನ್ನು ಕೈಗೆತ್ತಿಕೊಳ್ಳಬಾರದು ಎಂದು ಮೊದಲಿಗೆ ಕಲಿತಿರುತ್ತಾನೆ. 'ದಂಡಂ ದಶಗುಣಂ ಭವೇತ್' ಆಗಿದ್ದರೂ ಈಗ ಬೆತ್ತದ ಬಳಕೆಯಿಲ್ಲವೆನ್ನಬಹುದು.

ಇನ್ನೊಂದು ಕಾರಣವೆಂದರೆ, ಶಾಲೆಗಳಲ್ಲಿ ಆಸನಾದಿ ವ್ಯವಸ್ಥೆಯು ಅಸಮರ್ಪಕವಾಗಿರುವುದು. ದಿಲ್ಲಿಯ ಪಾಠಶಾಲೆಗಳಲ್ಲಿಯೇ ಹೆಚ್ಚಿನವುಗಳಿಗೆ ತಗಡುಗಳ ಮಾಡುಗಳು; ಕುಳಿತುಕೊಳ್ಳುವುದಕ್ಕೆ ಸಾಕಷ್ಟು ಬೆಂಚುಗಳಿಲ್ಲವಂತೆ! ಹಳ್ಳಿಯ ಶಾಲೆಗಳಲ್ಲಿ ಹಂಚು ಕಂಡವುಗಳು ಕೇವಲ ಪರಿಮಿತವೇ. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿಯೇ ಒಂದು ಪ್ರಾಥಮಿಕ ಶಾಲೆಯಿದೆ; ಅದರ ಮಾಡು, ಗೋಡೆಗಳು ಕೂಡಾ ತೆಂಗಿನ ಮಡಲುಗಳಿಂದ ನಿರ್ಮಿತವಾದುದು. ಇರುವ ಬೆಂಚುಗಳಾದರೂ ಸರಿಯಾಗಿವೆಯೆ? ಶಾಲಾಭವನದ ನೆಲ ಸಿಮೆಂಟು ಕಂಡಿವೆಯೆ? ಗೋಡೆ ಸಾರಣೆ ಕಾರಣೆ ನೋಡಿವೆಯೆ? ಯಾರಿಗೆ ಗೊತ್ತು? ಹಾಗಿರುವಾಗ ವಿದ್ಯಾರ್ಥಿಗಳಿಗೆ ಶಾಲಾಭವನಕ್ಕಿಂತ ಆಟದ ಬಯಲಲ್ಲೇ ಆರಾಮವೆನಿಸಿದರೆ, ಆಶ್ಚರ್ಯವೇನು?

ಸದ್ಯ ತಯಾರಿಸಿದ ವರದಿಯನ್ನು ಆಧಾರವಾಗಿಟ್ಟುಕೊಂಡು ದೆಹಲಿಯಲ್ಲಿ ವಿದ್ಯಾರ್ಥಿಗಳಲ್ಲಿ ಶಾಲೆಗೆ ಗೈರಾಗುವ ಮನೋಭಾವವನ್ನು ಇಳಿಸಿ ಹಾಜರಿಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ಹಲವಾರು ಸಲಹೆಗಳನ್ನು ಮಾಡಲಾಗಿದೆ. ವಿದ್ಯಾರ್ಥಿಗಳ ಹೆತ್ತವರು ಮತ್ತು ಅಧ್ಯಾಪಕರ ಸಂಬಂಧ ಅತಿ ನಿಕಟವಿರುವಂತೆ ನೋಡಿಕೊಳ್ಳುವುದೂ ಈ ಸಲಹೆಗಳಲ್ಲಿ ಒಂದಾಗಿದೆ. ಶಾಲೆಗಳನ್ನು ಆಕರ್ಷಕ ಕೇಂದ್ರವನ್ನಾಗಿ ಮಾಡಬೇಕು ಎಂಬುದು ಇನ್ನೊಂದು. ಇದೇ ಮಾದರಿಯ ಇನ್ನೂ ಕೆಲವಾರು ಇದ್ದುವು ಎನ್ನಿ. ಇವಾವುವೂ ಹೊಸವಲ್ಲ. ದೆಹಲಿಯಲ್ಲಿ ಕೈಗೊಂಡ ಒಂದು ವಿಶೇಷ ಕಾರ್ಯಕ್ರಮವೆಂದರೆ, ಶಾಲಾ ದಿನಗಳಲ್ಲಿ ಅಪರಾಹ್ನದ ಸಿನೆಮಾ ದೇಖಾವೆಗಳಲ್ಲಿ ಎಳೆಯರಿಗೆ ಪ್ರವೇಶ ದೊರೆಯದಂತೆ ನಿರ್ಬಂಧ ಹೇರಿದುದು!

ಈ ನಿಯಮವು ಕಳೆದ ಒಂಬತ್ತು ತಿಂಗಳುಗಳಿಂದ ಅಲ್ಲಿ ವ್ಯವಹೃತವಿದೆ. ಈ ಮಧ್ಯೆ ಕೈಗೊಂಡ ಉಪಾಯದಿಂದಾಗಿ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತೆ, ಅಥವಾ ತಮ್ಮ ಕಾರ್ಯಕ್ರಮದ ಬಗ್ಗೆ ನಿರಭಿರುಚಿಯ ರೋಗವನ್ನು ಗುಣಪಡಿಸಿತೇ ಎಂಬುದು ಇನ್ನೂ ತಿಳಿದು ಬಂದಿಲ್ಲ.

ಭಾರತದ ಇತರ ಸ್ಥಳಗಳಲ್ಲಿಯೂ ದಾಖಲಾಗಿರುವ ಮತ್ತು ಉಪಸ್ಥಿತರಿರುವ ವಿದ್ಯಾರ್ಥಿಗಳ ದಾಮಾಶಯವು ಸಾಕಷ್ಟು ತೃಪ್ತಿಕರವಾಗಿರುವುದಿಲ್ಲ. ಕೆಲವೆಡೆ ಶೇಕಡಾ ೭೫ರಷ್ಟೂ ಹಾಜರಿಯಿರುವುದಿಲ್ಲ—ಒಂದು ಸಾಮಾನ್ಯ ದಿನದಲ್ಲಿ. ಇದರ ಕಾರಣವನ್ನು ಆಳವಾಗಿ ಸಂಶೋಧಿಸಿ ಪರಿಹಾರೋಪಾಯವನ್ನು ಕಂಡುಕೊಳ್ಳುವುದನ್ನು ಎಂದಾದರೂ ಮರೆಯುವುದು ಸಾಧ್ಯವೆ?

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಸೇರಿದುದು; ಎಂದರೆ, ಸರಕಾರ ಮತ್ತು ಖಾಸಗಿ ವಿಭಾಗಗಳು ಶ್ರಮವನ್ನು ವಿಭಜಿಸಿಕೊಂಡು ಕಾರ್ಯಪ್ರವೃತ್ತವಾಗಬೇಕಾಗಿದೆ.

ಪ್ರಜಾಪ್ರಭುತ್ವ ಅರ್ಥವ್ಯವಸ್ಥೆಯಲ್ಲಿ ವ್ಯಕ್ತಿಶಕ್ತಿಯ ಮಹತ್ವವನ್ನು ಸರಕಾರವು ಮೊದಲಿಗಿಂತ ಇಂದು ಅಧಿಕವಾಗಿ ತಿಳಿದುಕೊಳ್ಳಲು ತೊಡಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯು ರೂಪರೇಖೆಯೇ ಈ ಮಾತನ್ನು ಪುಷ್ಟೀಕರಿಸು[illegible]ದೆ. ಖಾಸಗಿ ವಿಭಾಗಗಳಿಗೆ ಈ ಯೋಜನೆಯಲ್ಲಿ ಮೊದಲಿನೆರಡರಲ್ಲಿ ಕೊಟ್ಟುದ[illegible]ತ ಅಧಿಕ ಪ್ರಾಧಾನ್ಯವನ್ನು ಕೊಡಲಾ[illegible]ದೆ. ಕೃಷಿ ಮತ್ತು ಸಾಮುದಾಯಿಕ[illegible] ಕಾಸಕ್ಕಾಗಿ ಇದರಲ್ಲಿ ಮೊದಲಿಗಿಂತ [illegible]ಮ್ಮಡಿ, ೧೦ ಅರಬ ರೂಪಾಯಿ[illegible]ಯ[illegible]ನ್ನು ತೆಗೆದಿರಿಸಲಾಗಿದೆ. ವ್ಯಕ್ತಿಗಳ [illegible]ಯನ್ನು ಹೆಚ್ಚಾಗಿ ಬಳಸಿಕೊಳ್ಳುವ [illegible]ಲೋಚನೆಯಿದ ಎಂದಿವರಿಂದ ತಿಳಿ[illegible]ಯಬಹುದು. ಆದರೆ, ಉತ್ಪಾದನಾ[illegible]ಯ ಮತ್ತು ಮೌಲ್ಯದಲ್ಲಿ ಸ್ಥಿರತೆ[illegible]ನ್ನು ಕಾಯ್ದುಕೊಂಡಲ್ಲಿ ಮಾತ್ರ ಈ ಗು[illegible]ಗಳು ವಾಸ್ತವಿಕವಾಗಿ ಪೂರ್ಣಗೊ[illegible] ಬಲ್ಲುವೆಂಬುದನ್ನು ಮರೆಯಬಾರ[illegible] ಕಂಪೆನಿಯ ಕರ ವಿಷಯಕವಾದ ಸ[illegible]ದ ಗೊತ್ತುವಳಿಯು ಈ ದೃಷ್ಟಿಯಲ್ಲಿ [illegible] ಹತ್ವದ್ದಿದೆ.

ಉಬ್ಬರವನ್ನು ನಿಯಂತ್ರಿಸುವ ಸ[illegible]ವಾಗಿ ನಿರಾಕರಣೆಯನ್ನು ತಿರಸ್ಕರಿ[illegible] ಸಾಧ್ಯವಿಲ್ಲವಾದರೂ ಕರಭಾರದಿಂದ[illegible] ವೈಯುಕ್ತಿಕ ಹಾಗೂ ಸಾರ್ವಜನಿಕ[illegible]ಳತಾಯ ಪ್ರವೃತ್ತಿಗೆ ಭಾದಕ ವಾಗ[illegible]ರದು ಎಂಬ ಮಾತನ್ನು ಒಪ್ಪಬೇ[illegible] ಮೂರನೆಯ ಪಂಚವಾರ್ಷಿಕ ಯೋಜ[illegible]ಯಲ್ಲಿ ೧೭॥ ಅರಬ ರೂಪಾಯಿ.[illegible] ಹೊಸಕರವನ್ನು ಹೇರುವ ಸರಕಾರದ [illegible]ಚಾರವು ವಿವೇಕ ಶೀಲತೆಯ ದೃಷ್ಟಿ[illegible]ದ, ಸಂಶಯ ಹುಟ್ಟಿಸುತ್ತದೆ. ರೇಲು[illegible]ರಣೆ ಭೂಕಂದಾಯಗಳಲ್ಲಿ ಹೆಚ್ಚಳ [illegible]ಗೂ ಅನ್ಯ ಪ್ರಕಾರದ ಕರಗಳ ಹೇರಿ[illegible]ಳಿವ ಇವನ್ನು ತುಂಬಿಕೊಳ್ಳುವ ಯೋ[illegible]ಚನೆಯಿದೆ. ರೇಲು ಧಾರಣೆ [illegible]ಗೂ ಭೂಕಂದಾಯದ ಹೆಚ್ಚುವರಿಯ[illegible] ಉತ್ಪಾದನಾ ವ್ಯಯವನ್ನು [illegible]ಸುವುದೆಂದು ಬೇರೆ ಹೇಳಬೇಕಾಗಿಲ್ಲ. [illegible]ನ್ಯಪ್ರಕಾರದ ಕರಗಳ ಬಗ್ಗೆ ವಿಶೇಷ [illegible]ಚಾರಗಳನ್ನೂ ತಿಳಿದುಬಂದಿಲ್ಲ. ಆದ[illegible] ಕರ ಹೇರುವ ವಿಷಯದಲ್ಲಿ ವಾಣಿಜ್ಯ [illegible]ದ್ಯಮ ಸಂಘವು ಸ್ವೀಕರಿಸಿದ ಗೊತ್ತುವ[illegible]ಯನ್ನು ಸರಕಾರವು ಉಚಿತ ರೀತಿಯಿಂ[illegible] ಪರಿಶೀಲಿಸುವುದೆಂದು ಆಶಿಸಬಹುದು.

ದೇಶದ ಆರ್ಥಿಕ ಉತ್ಥಾನವು ಸರ[illegible]ರೀ ಕ್ಷೇತ್ರವೊಂದರಿಂದಾಗಲೀ ಕೇವ[illegible] ಖಾಸಗಿ ಕ್ಷೇತ್ರದಿಂದಾಗಲೀ ಅಸಾಧ್ಯ[illegible]ದ ಮಾತು. ಆದುದರಿಂದ ಎರಡು ವಿಭಾ[illegible]ಗಗಳೂ ಪರಸ್ಪರ ಸಂಪರ್ಕವನ್ನಿಟ್ಟುಕೊ[illegible]ಡು ಅರ್ಥವ್ಯವಸ್ಥೆಯನ್ನು ಸುದೃಢಗೊ[illegible]ಸುವುದು ಅತ್ಯಂತಾವಶ್ಯಕವಾಗಿದೆ. ಭಾ[illegible]ತ ಸರಕಾರ ಮತ್ತು ಭಾರತೀಯ ವಾ[illegible]ಜ್ಯೋದ್ಯಮ ನಿರತರು ಈ ಬಗ್ಗೆ ವಿಶೇ[illegible] ಕಳಕಳಿ ವಹಿಸುವುದು ದೇಶದ ಅಭ್ಯುತ್[illegible]ನದೃಷ್ಟಿಯಿಂದ ಅಗತ್ಯವಿದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

೮ ಸಾವಿರಗಳಿಂದ
೨೨ ಕೋಟಿಗಳಿಗೆ

೧೯೨೫ರಲ್ಲಿ ಕೇವಲ ೮ ಸಾವಿರ ರೂಪಾಯಿಗಳ
ವ್ಯವಹಾರ ನಿಧಿಯಿಂದ ಆರಂಭಗೊಂಡ

ಸಿಂಡಿಕೇಟ್ ಬೇಂಕ್

೧೯೫೯ನೇ ವರುಷಾಂತ್ಯದಲ್ಲಿ ೨೨ ಕೋಟಿ ರೂಪಾಯಿಗಳಿಗೂ
ಮಿಕ್ಕಿದ ವ್ಯವಹಾರ ಸಂಪತ್ತಿನಿಂದ ಕೂಡಿ ಮುನ್ನಡೆಯುತ್ತಿರುವುದು.

**ಬಡವ ಬಲ್ಲಿದರೆಂಬ ತಾರತಮ್ಯವಿಲ್ಲದೆ ಸಕಲರಿಗೂ
ಬೇಂಕಿಂಗ್ ಸೇವೆಯ ಸೌಲಭ್ಯಗಳನ್ನು ಒದಗಿಸುವುದು
ಸಿಂಡಿಕೇಟ್ ಬೇಂಕಿನ ವೈಶಿಷ್ಟ್ಯಗಳಲ್ಲೊಂದಾಗಿದೆ.**

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.
ಪ್ರಧಾನ ಕಚೇರಿ: ಉಡುಪಿ.

The Canara Industrial & Banking Syndicate Ltd.
Head Office: UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ

ರುಷ ೩೯. ವಾರ ೩೩. 21-4-1960 Vol. 39 No. 33.

ಪ್ರಚಲಿತ ಪ್ರಸಂಗ

ವರಿಷ್ಠ ಸಮ್ಮೇಳನದ ಮೇಲೆ ಮೇಘಛಾಯೆ

ಪಾಶ್ಚಾತ್ಯ ತ್ರಿರಾಷ್ಟ್ರಗಳಲ್ಲಿ ತೀವ್ರ ಬಿಕ್ಕಟ್ಟು ತೋರಿಬಂದಿರುವುದರಿಂದ ವರಿಷ್ಠ ಸಮ್ಮೇಳನದ ಫಲಶ್ರುತಿ ಆಶಾದಾಯಕವಾಗಿ ಗೋಚರಿಸುವುದಿಲ್ಲ

ಮುಂದಿನ ತಿಂಗಳ ೧೬ನೆ ದಿನಾಂಕದಿಂದ ಪೇರಿಸ್ ನಗರದಲ್ಲಿ ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ರಶ್ಯಗಳ ನಾಯಕರ ಶಿಖರ ಸಮ್ಮೇಳನವು ನಡೆಯುವುದು. ಈ ವರಿಷ್ಠರ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಎಪ್ರಿಲ್ ತಿಂಗಳ ೧೩ರಿಂದ ಪಾಶ್ಚಾತ್ಯ ಮಹಾರಾಷ್ಟ್ರಗಳ ವಿದೇಶಮಂತ್ರಿಗಳ ಸಭೆಯು ಮೂರು ದಿವಸಗಳ ತನಕ ಮುಂದುವರಿದು ಮುಕ್ತಾಯಗೊಂಡಿತು. ಶಿಖರ ಸಮ್ಮೇಳನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಯಾವ ನಿಲುಮೆಯನ್ನು ತಾಳಬೇಕು, ಮುಖ್ಯವಾಗಿ ನಿಶ್ಶಸ್ತ್ರೀಕರಣ ಮತ್ತು ಬರ್ಲಿನ್ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು, ನಡೆಯುವ ಸಮ್ಮೇಳನದಲ್ಲಿ ಒಮ್ಮತವನ್ನು ಸಾಧಿಸಿ, ಒಂದು ನಿರ್ದಿಷ್ಟ ಒಪ್ಪಂದವನ್ನು ಕೈಗೊಳ್ಳಬೇಕಾದರೆ ಏನು ಮಾಡಬೇಕು ಎಂದು ಮುಂತಾದ ಪ್ರಮುಖ ಉದ್ದೇಶಗಳಿಂದ ಈ ಮೂವರು ವಿದೇಶ ಮಂತ್ರಿವರ್ಯರು ವಾಶಿಂಗಟನ್ನಿನಲ್ಲಿ ಸಭೆಸೇರಿದ್ದರು ಆದರೆ, ದುರ್ದೈವವಶದಿಂದ ಈ ಮೂವರಲ್ಲಿಯೇ ಕೆಲವೊಂದು ವಿಷಯಗಳಲ್ಲಿ ಹೊಂದಾಣಿಕೆಯು ಕಾಣಿಸಿಕೊಳ್ಳಲಿಲ್ಲವೆನ್ನುವಾಗ, ಮುಂದಿನ ಶಿಖರ ಸಮ್ಮೇಳನವು ಹೇಗೆ ಯಶಸ್ವಿಯಾದೀತೆಂದು ಹೇಳುವುದು ಸಾಧ್ಯವಿಲ್ಲ.

ಶಿಖರ ಸಮ್ಮೇಳನದ ಪರಿಣಾಮವಾಗಿ ಪ್ರತಿನಿಧಿಗಳು ಏನನ್ನು ಬಯಸುತ್ತಾರೆ, ಅಥವಾ ಸಮ್ಮೇಳನದಿಂದ ಸಾಧಿಸಿಕೊಳ್ಳಬೇಕಾದುದೇನು ಎಂಬುದರಲ್ಲಿಯೂ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿವೆಯೆಂದು ತಿಳಿಯುತ್ತದೆ. ಬ್ರಿಟನ್ನಿನ ವಿದೇಶ ಮಂತ್ರಿ ಶ್ರೀ ಸೆಲ್ವಿನ್ ಲಾಯ್ಡರು ಈ ಶಿಖರ ಸಮ್ಮೇಳನವು ಯಶಸ್ವಿಯಾಗಬಹುದೆಂದು ಆಶಿಸುತ್ತಾರೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಹಿಂದಿನ ವರ್ಷದಲ್ಲಿ ನಡೆದ ಜಿನೇವಾ ಸಮ್ಮೇಳನದಲ್ಲಿ ಮುಂದಿರಿಸಿದ ಶರ್ತಗಳಿಗನುಸಾರವಾಗಿ, ಪಶ್ಚಿಮ ಜರ್ಮನಿಯು ಪಶ್ಚಿಮ ಬರ್ಲಿನ್‌ನೊಡನೆ ಮಧ್ಯಾವಧಿ ಒಪ್ಪಂದವನ್ನು ಮಾಡಲು ಒಪ್ಪಿಗೆ ದೊರೆತಿತ್ತು. ಪಶ್ಚಿಮ ಬರ್ಲಿನ್‌ನಲ್ಲಿ ಪಶ್ಚಿಮ ರಾಷ್ಟ್ರಗಳ ಸೇನೆಯನ್ನು ಕಡಿಮೆ ಮಾಡುವುದು, ಪಶ್ಚಿಮ ಬರ್ಲಿನನ್ನು ಅಣುಕೇಂದ್ರವನ್ನಾಗಿ ಉಪಯೋಗಿಸದಿರುವುದು ಈ ಎರಡು ಶರ್ತಗಳ ಬೆಂಬಲದಿಂದ ರಶ್ಯದೊಡನೆ ಸಮಾಧಾನಕರ ಸಂಧಿಯನ್ನು ಮಾಡಿಕೊಳ್ಳಬಹುದು ಎಂದವರು ತಿಳಿದಿದ್ದಾರೆ.

ಆದರೆ, ಇದಕ್ಕೆ ವಿಪರೀತವಾದ ಅಭಿಪ್ರಾಯವನ್ನು ಅಮೆರಿಕೆಯ ಶ್ರೀ ಕ್ರಿಶ್ಚಿಯನ್ ಹರ್ಟರ್ ತಾಳಿದ್ದಾರೆ ಅವರಿಗೆ ಸೋವಿಯತ್ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರ ಇರಾದೆಯೇನು ಎಂಬುದೇ ತಿಳಿಯುವುದಿಲ್ಲವಂತೆ ಶ್ರೀ ಕ್ರುಶ್ಚೇವರು ಯಾವ ಯೋಚನೆಯನ್ನಿಟ್ಟುಕೊಂಡು ಶಿಖರ ಸಮ್ಮೇಳನದಲ್ಲಿ ಭಾಗವಹಿಸುವರು ಎಂಬುದವರ ತಲೆಗೆ ಹೊಳೆಯುವುದಿಲ್ಲ. ಮೂರು ದಿನಗಳಲ್ಲಿಯೂ ಬಹಳಷ್ಟು ಮಾತುಕತೆಗಳು ನಡೆದರೂ ಯಾವುದೇ ನಿಷ್ಕರ್ಷೆಗೆ ಬರುವುದು ಸಾಧ್ಯವಾಗಲಿಲ್ಲವೆಂಬ ವರದಿಗಳನ್ನು ಕಾಣುವಾಗ, ಈ ವಿದೇಶ ಮಂತ್ರಿಗಳಲ್ಲಿ ಭಿನ್ನಾಭಿಪ್ರಾಯದ ಬೇರು ಗಾಢವಾಗಿ ಬಿಟ್ಟಿರಬೇಕು ಎಂಬುದು ವಿದಿತವಾಗುತ್ತದೆ.

ಪೌರ್ವಾತ್ಯ ಅಥವಾ ಪಾಶ್ಚಾತ್ಯ ರಾಷ್ಟ್ರಗಳು ಆಫ್ರಿಕನ್ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಕಳಿಸಬಾರದ, ಎಂದು ಫ್ರಾನ್ಸ್ ಬಯಸುತ್ತದೆ. ಶಿಖರ ಸಮ್ಮೇಳನದಲ್ಲಿ ಈ ಪ್ರಶ್ನೆಯನ್ನೂ ಮುಂದೂಡಬೇಕೆಂಬ ಆಶಯ ಅದಕ್ಕಿರುವಂತೆ ತೋರುತ್ತದೆ. ಆದರೆ, ಸದ್ಯ ನಡೆದ ತ್ರಿರಾಷ್ಟ್ರ ಸಮ್ಮೇಳನದಲ್ಲಿ ಫ್ರಾನ್ಸದ ಈ ಗೊತ್ತುವಳಿಗೆ ಯಾರಿಂದಲೂ ಸಮರ್ಥನೆ ದೊರೆಯಲಿಲ್ಲ. ಇದರಿಂದ ಫ್ರಾನ್ಸವು ನಿರಾಶವಾಗಬೇಕಾಯಿತು.

ಅನಭಿವೃದ್ಧ ದೇಶಗಳ ಯೋಜನೆಗಳಿಗೆ ಸಹಾಯವೀಯುವ ಸಮನ್ವಿತ ಕಾರ್ಯಕ್ರಮ ಕೈಗೊಳ್ಳುವ ಗೊತ್ತುವಳಿಯು ಬೆಂಬಲವನ್ನೇನೋ ಗಳಿಸಿತು. ಆದರೆ, ಈ ಬಗ್ಗೆ ರಶ್ಯ ಒಪ್ಪಿಗೆ ಸೂಚಿಸುವುದು ಸರ್ವಥಾ ಅಸಾಧ್ಯವೆಂದು ಹೇಳಬಹುದು. ರಶ್ಯ ಮತ್ತು ಅಮೆರಿಕೆಗಳು ಒಂದಾಗಿ ಈ ಯೋಜನೆಯನ್ನು ಕಾರ್ಯಾನ್ವಿತಗೊಳಿಸಲು ಇಚ್ಛಿಸಲಾರವು; ಏಕೆಂದರೆ ಪ್ರತಿಸ್ಪರ್ಧಿ ಪ್ರತ್ಯೇಕವಾಗಿ ಸಹಾಯ ನೀಡುವುದರಿಂದಲೇ ಉಭಯ ರಾಷ್ಟ್ರಗಳಿಗೂ ಲಾಭವಿರುವಾಗ ಅವನ್ನೇಕೆ ಕಳೆದುಕೊಳ್ಳಬೇಕು?





ಉಪಗ್ರಹಗಳಲ್ಲಿ ಬಳಸಲು ಉಪಯುಕ್ತವಾದ ಯಂತ್ರದ ಮಾದರಿಗಳು. ಇವನ್ನು ಅಮೆರಿಕೆಯ ಓಹಿಯೋ ಸಂಶೋಧನಾಲಯಗಳು ರಚಿಸುತ್ತಿವೆ. ಇವುಗಳ ಬಲದಿಂದ ತಾಸಿಗೆ ೨ ಲಕ್ಷ ಮೈಲುಗಳ ವೇಗದಲ್ಲಿ ಅಂತರಿಕ್ಷಗಮನ ಮಾಡಬಹುದು.

ಅಮೆರಿಕೆಯು ಮುಂದಿನ ಶಿಖರ ಸಮ್ಮೇಳನದ ಬಗ್ಗೆ ತಾಳಿದ ನಿಲುಮೆಯು "ನ್ಯೂಯಾರ್ಕ್ ಟಾಯಮ್ಸ್" ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಅಭಿವ್ಯಕ್ತವಾಗಿದೆ. ಈ ನಿಯೋಜಿತ ಸಮ್ಮೇಳನದಲ್ಲಿ ಯಾವ ಒಪ್ಪಂದವೂ ಆಗುವ ಆಶೆಯನ್ನು ಅಮೆರಿಕೆ ಇಟ್ಟುಕೊಂಡಿಲ್ಲ. ಸಾಮಾನ್ಯ ಸಿದ್ಧಾಂತಗಳಲ್ಲಿ ಮಾತ್ರ ಒಡಂಬಡಿಕೆಗಳಾಗಬಹುದು ಎಂದು ಅದು ಭಾವಿಸುತ್ತದೆ. ಅನೇಕ ಪ್ರಶ್ನೆಗಳ ಬಗ್ಗೆ ಪಾಶ್ಚಾತ್ಯ ತ್ರಿರಾಷ್ಟ್ರಗಳಲ್ಲಿಯೇ ಬಹುಮತ ದೊರೆಯದಿರುವಾಗ, ರಶ್ಯದೊಡನೆ ಸಂಧಾನವು ಹೇಗೆ ಸಾಧ್ಯನಿದೀತು ಎಂಬುದೇ ಅಮೆರಿಕೆ ಹಾಕುವ ಸವಾಲು. ಇದೇ ಪ್ರಕೃತವಿರುವ ಜಟಿಲ ಪ್ರಶ್ನೆ.

ಅಮೆರಿಕೆಯಿಂದ ಮರಳಿ ಲಂಡನಕ್ಕೆ ಬಂದ ಲಾಯ್ಡರು ವಿಮಾನ ನಿಲ್ದಾಣದಲ್ಲಿ ಮಾತಾಡುತ್ತ ಪೂರ್ವ ಮತ್ತು ಪಶ್ಚಿಮಗಳ ಸಹ ಅಸ್ತಿತ್ವಕ್ಕಾಗಿ ಎರಡೂ ಪಂಗಡಗಳಿಗೆ ಕೆಲವು ನಿಯಮಗಳನ್ನು ನಿರ್ಧರಿಸಬೇಕು. ಶಿಖರ ಸಮ್ಮೇಳನದಲ್ಲಿ ಮೊತ್ತಮೊದಲು ನಿಶ್ಶಸ್ತ್ರೀಕರಣದ ಬಗ್ಗೆಯೇ ವಿಚಾರ ನಡೆಯಬಹುದು ಎಂದು ಹೇಳಿದರಂತೆ. ಅಲ್ಲದೆ ನಿಯೋಜಿತ ಮಹಾರಾಷ್ಟ್ರ ಪರಿಷತ್ತಿಗೆ ಮೊದಲು ಪೇರಿಸ್ ಮತ್ತು ಇಸ್ತಾಂಬೂಲಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ವಿದೇಶ ಮಂತ್ರಿಗಳು ಪುನಃ ಕಲೆಯುವ ನಿರೀಕ್ಷೆಯಿರುವುದು.

ಅಮೇರಿಕ ಮತ್ತು ಬ್ರಿಟನ್‌ಗಳು ಫ್ರೆಂಚ ಗೊತ್ತುವಳಿಯನ್ನು ಸಮರ್ಥಿಸದೆ ಇ

(೧೨ನೇ ಪುಟ ನೋಡಿರಿ)

ಕಥಾವಿಹಾರ

ಹೊಟ್ಟೆ ತಣ್ಣಗಿರಬೇಕಾದರೆ......

ಉದರನಿಮಿತ್ತಂ ಬಹುಕೃತವೇಶಂ — ನಿರುದ್ಯೋಗಿ ಕಿಟ್ಟು ಉದರ ನಿರ್ವಹಣೆಗಾಗಿ ವೇ. ಭೀ. ನ ವೇಶ ಹಾಕಿದನು; ಆದರೆ, ಇದು ರಹಸ್ಯವಾಗಿ ಉಳಿಯಲಿಲ್ಲ; ಉಳಿಯಬೇಕಾದ ಅಗತ್ಯವೂ ಇಲ್ಲ.

'ಜಗನ್ಮೋಹನ' ಕಾಫಿ ಹೋಟೆಲಿನಲ್ಲಿ ಸಂಜೆಯ ಕಾಫಿಯನ್ನು ಕುಡಿದು ರಸ್ತೆಯಲ್ಲಿ ಕಾಲಿರಿಸುತಿದ್ದಾಗಲೇ, "ಶೇಖರ್, ಶೇಖರ್" ಎಂಬ ಕೂಗು ನನ್ನ ಕಿವಿಗೆ ಕೇಳಿಸಿತು. ಯಾವುದೋ ಯೋಚನೆಯಲ್ಲಿ ಮಗ್ನನಾಗಿದ್ದ ನನ್ನನ್ನು ಆ ಕೂಗು ಹೊಡೆದೆಬ್ಬಿಸಿತು. ತಿರುಗಿ ನೋಡುತ್ತೇನೆ, ಒಬ್ಬಾತ ನನ್ನನ್ನೇ ಕರೆಯುತಿದ್ದಾನೆ. "ಶೇಖರ್" ಎಂಬ ನಲುಮೆಯ ಹೆಸರಿನಿಂದ ನನ್ನನ್ನು ಕರೆದವರಾರು? ನನ್ನ ನೆಂಟರಿಷ್ಟರೂ, ಹಳೆಯ ಗೆಳೆಯರೂ ಅಲ್ಲದೆ ಮತ್ತಾರೂ ಆ ಹೆಸರಿನಿಂದ ನನ್ನನ್ನು ಕರೆಯುವುದೆಂದಿಲ್ಲ. ನನ್ನನ್ನು ಕರೆದವನು ಒಂದು ಖಾದಿಯ ಮುಂಡನ್ನುಟ್ಟು, ಖಾದಿಯ ಅಂಗಿಯನ್ನು ಹಾಕಿಕೊಂಡು, ಮತ್ತೆ ತಲೆಯ ಮೇಲೆ ಖಾದಿಯದೇ ಟೊಪ್ಪಿಯನ್ನಿಟ್ಟುಕೊಂಡಿದ್ದನು. ಅರ್ಧ ಅಡಿ ಉದ್ದದ ಗಡ್ಡ ಮುಖದಲ್ಲಿ ಬೆಳೆಸಿಕೊಂಡಿದ್ದನು. ಉಟ್ಟ ಪಂಚೆ ಶುಭ್ರವಾಗಿರದೆ ಕೆಂಬಣ್ಣವನ್ನು ತಾಳಿತ್ತು. "ಏನೋ ಶೇಖರ್, ನನ್ನ ಗುರುತು ಸಿಗಲೇ ಇಲ್ಲವೇ?" ಎಂದು ಕೇಳಿ ಆ ವ್ಯಕ್ತಿ ಮೂವತ್ತೆರಡು ಹಲ್ಲುಗಳನ್ನು ಬಿಟ್ಟು ದೇಶಾವರಿ ನಗೆ ಬೀರಿದ ಮೇಲೆಯೇ ಅವನು ನನ್ನ ಹಳೆಯ ಗೆಳೆಯ ಕಿಟ್ಟು ಎಂದು ನನಗೆ ತಿಳಿದದ್ದು.

ನನಗೆ ಕಿಟ್ಟುವಿನ ಗುರುತು ಹತ್ತದಿರಲು ಅವನ ಉಡುಗೆ-ತೊಡುಗೆಯಲ್ಲಿ ಆದ ವಿಚಿತ್ರ ಪರಿವರ್ತನೆಯೇ ಕಾರಣ. ಅದೂ ನಾನು ಕಿಟ್ಟುವನ್ನು ಕಾಣದೆ ಹಲವಾರು ವರ್ಷಗಳಾಗಿದ್ದುವು. ಶಾಲೆಯನ್ನು ಬಿಟ್ಟ ಮೇಲೆ ನಾನೂ ಕಿಟ್ಟು ಭೆಟ್ಟಿಯಾದದ್ದು ಶಾಲೆಬಿಟ್ಟ ಮರುವರ್ಷ ಅವನ ಅಕ್ಕ ರುಕ್ಮಿಣಿಯ ಮದುವೆಯಲ್ಲಿ. ಕಿಟ್ಟು ಬರಬೇಕೆಂದು ಬಹಳ ಆಗ್ರಹ ಮಾಡಿದುದರಿಂದ ನಾನು ಅವನ ಮನೆಗೆ ಹೋಗಿದ್ದೆನು. ಅಂದಿನ ಕಿಟ್ಟು ಮತ್ತು ಇಂದಿನ ಕಿಟ್ಟು ಒಬ್ಬನೇ ಎಂದು ಥಕ್ಕನೆ ಹೇಳುವಂತಿರಲಿಲ್ಲ. ಕಿಟ್ಟು ಶಾಲೆಯಲ್ಲಿ ಕಲಿಯುತಿದ್ದಾಗ ಬಹಳ ಉತ್ತಮತರದ ಉಡುಪನ್ನೇ ಧರಿಸುತಿದ್ದನು. ಇಸ್ತ್ರಿ ಹಾಕಿದ ಮಣಿಲಾ ಶರಟು, ಬಿಳಿಯ ಫೇಂಟು ಕಿಟ್ಟುವಿನ ನಿತ್ಯದ ಉಡುಪಾಗಿತ್ತು. ಅವನ ಕ್ರಾಪು ವಿಶಿಷ್ಟರೀತಿಗೆ ಸೇರಿದ್ದಾಗಿತ್ತು. ಆಗ ಅವನಿಗೆ ಕ್ರಾಪು ಬಾಚಲು ಒಂದು ತಾಸು ತಗಲುತಿತ್ತೆಂದು ನಾವೆಲ್ಲ ಕುಚೋದ್ಯ ಮಾಡುತಿದ್ದೆವು. ಅಂತೂ ಕಿಟ್ಟು ಕಲಿಯುವಾಗ ಬಹಳ "ಗಮ್ಮತ್ತಿ"ನಲ್ಲೇ ಇದ್ದನೆನ್ನಿ. ತರಗತಿಯ ಹುಡುಗಿಯರನ್ನು ನೋಡಿ ಕಣ್ಣು ಮಿಟುಕಿಸುವುದರಲ್ಲಿ, ಬಾರದ ಕೆಮ್ಮನ್ನು ಬಲಿಸಿ ಗಟ್ಟಿಯಾಗಿ ಕೆಮ್ಮುವುದರಲ್ಲಿ, ಅಪರನ್ನು ಕುಚೋದ್ಯ ಮಾಡಿ ನಗುವುದರಲ್ಲಿ ಕಿಟ್ಟು ಅಗ್ರಗಣ್ಯನಾಗಿದ್ದನು.

ಆಗಿನ ಕಿಟ್ಟು ಒಬ್ಬ ಸಾಧು ವಿನಂತೆ ಕಾಣುತಿದ್ದನು. ಅವನ ಉಡುಪು ಮೊದಲಿನ ಉಡುಪಿಗಿಂತ ತೀರಾ ಭಿನ್ನವಾಗಿತ್ತು. ತಲೆಯಿಂದ ಪಾದದ ವರೆಗೆ ಖಾದಿಯೇ ಕಾಣಿಸುತಿತ್ತು. ಬಟ್ಟೆಗೆ ಇಸ್ತ್ರಿಯಂತೂ ಇಲ್ಲವೇ ಇಲ್ಲ. ಬಟ್ಟೆಯ ಬಣ್ಣ ನಮ್ಮ ಹಳ್ಳಿಯಲ್ಲಿ ನಮ್ಮ ಮನೆಯ ಮುಂದುಗಡೆ ಇರುವ ಕೆರೆಯ ನೀರಿನಂತೆ ಕೆಂಧೂಳಿನ ಬಣ್ಣವನ್ನೇ ಹೋಲುತಿತ್ತು. ತಲೆಯ ಮೇಲೆ ಖಾದಿ ಟೊಪ್ಪಿಯೊಂದು ಬೇರೆ ಇದ್ದಿತ್ತು. ಇದನ್ನು ಕಂಡು ನನಗೆ ನನ್ನ ಶಾಲೆಯ ಹಳೆಯ ದಿನಗಳ ನೆನಪು ಮರುಕಳಿಸಿತು. ನಮ್ಮೂರ ಸುಬ್ಬಾ ಶಾಸ್ತ್ರಿಗಳ ಮಗ ಸೀತಾರಾಮ ನಮ್ಮ ಸಹಪಾಠಿಯಾಗಿದ್ದನು. ಅವನು ತಂದೆಯ ಬೆದರಿಕೆಗೆ ಒಳಗಾಗಿಯೋ, ಅಥವಾ ಸ್ವಂತ ಪ್ರೇರಣೆಯಿಂದಲೋ ಜುಟ್ಟನ್ನು ಇಟ್ಟುಕೊಂಡು ತಲೆಯ ಮೇಲೆ ಟೊಪ್ಪಿಯೊಂದನ್ನೂ ಇಟ್ಟುಕೊಂಡಿದ್ದನು. ಕಿಟ್ಟುವಿಗೆ ಸೀತಾರಾಮನ ಟೊಪ್ಪಿಹಾರಿಸಿ ಜುಟ್ಟನ್ನು ಹಿಡಿದೆಳೆಯುವುದೆಂದರೆ ಬಲು ಪ್ರೀತಿ. ಆದರೆ ಸೀತಾರಾಮನಿಗೆ ಇದರಿಂದ ತುಂಬಾ ವ್ಯಥೆಯಾಗುತಿತ್ತು. ಕಿಟ್ಟು ಅವನ ಜುಟ್ಟೆತ್ತಿದೊಡನೆ ನಾವೆಲ್ಲ ಕೈ ಚಪ್ಪಾಳೆ ತಟ್ಟಿ ಗೊಳ್ಳೆಂದು ನಕ್ಕುಬಿಡುತಿದ್ದೆವು. ಆಗ ಸೀತಾರಾಮನ ಮುಖ ನಾಚಿಕೆಯಿಂದ ಕೆಂಪಾಗುತಿತ್ತು. ಆದರೆ ಕಿಟ್ಟು ಬಲು ಬಲಶಾಲಿಯಾಗಿದ್ದನು. ನಮ್ಮ ಹೆಡ್‌ಮಾಸ್ತರರು ಅವನಿಗೊಮ್ಮೆ 'ಭೀಮ'ನೆಂಬ ನಾಮಧೇಯವನ್ನು ದಯಪಾಲಿಸಿದ್ದರು. ಸೀತಾರಾಮ ಕಿಟ್ಟುವಿಗೆ ಹೆದರುತಿದ್ದನು. ಅಧ್ಯಾಪಕರ ಬಳಿ ತನ್ನ ಜುಟ್ಟು ಎಳೆದ ಬಗ್ಗೆ ದೂರುಕೊಟ್ಟರೆ ಕಿಟ್ಟು ಮನೆಗೆ ಮರಳುವಾಗ ತನ್ನ ಬೆನ್ನೆಲುಬುಗಳನ್ನು ಉಳಿಯಗೊಡುವುದಿಲ್ಲವೆಂಬ ಭಯದಿಂದ ಸೀತಾರಾಮನು ಕಿಟ್ಟು ಜುಟ್ಟೆಳೆವಾಗಲೂ ಸುಮ್ಮನಿರುತಿದ್ದನು. ನನ್ನ ಇನ್ನೊಬ್ಬ ಗೆಳೆಯ ಶಶಿಧರ ಕಿಟ್ಟುವಿನ ಕೆಲಸದಿಂದ ಸ್ಫೂರ್ತಿಪಡೆದು ತಾನೂ ಸೀತಾರಾಮನ ಟೊಪ್ಪಿಹಾರಿಸಿ, ಜುಟ್ಟೆಳೆದು, ಅಧ್ಯಾಪಕರಿಂದ ಪೆಟ್ಟು ತಿಂದು ದವಡೆ ಬಾತಿಸಿಕೊಂಡಿದ್ದನು. ಸರ್ವೋತ್ತಮನೆಂಬ ನನ್ನ ಇನ್ನೊಬ್ಬ ಸಹಪಾಠಿ ತರಗತಿಗೆಲ್ಲಾ ಆದರ್ಶ ವ್ಯಕ್ತಿಯಾಗಿದ್ದನು. ಅವನಿಗೆ ಗಾಂಧೀಜಿಯವರ ಮೇಲೆ ಅಪಾರ ಭಕ್ತಿ. ಅವನೂ ಖಾದಿ ಟೊಪ್ಪಿ ಇಟ್ಟುಕೊಂಡಿದ್ದನು. ಕಿಟ್ಟು ಯಾವಾಗಲೂ ಸರ್ವೋತ್ತಮನ ಖಾದಿ ಟೊಪ್ಪಿಯನ್ನು ಹಾರಿಸಿ ಅವನನ್ನು ಗೇಲಿಮಾಡುತಿದ್ದನು. ಖಾದಿ ಟೊಪ್ಪಿ ಹಾಕಿಕೊಳ್ಳುವವರೆಲ್ಲಾ ಶುದ್ಧ ಖದೀಮರೆಂಬುದು ಕಿಟ್ಟುವಿನ ಸಿದ್ಧಾಂತವಾಗಿತ್ತು.

ಅಂತಹ ಕಿಟ್ಟು ನೂರಕ್ಕೆ ನೂರು ನಯೇಪೈಸೆ ಖಾದಿಯ ಉಡುಪಿನಲ್ಲಿ ನನ್ನೆದುರಿಗೆ ಕಾಣಿಸಿದಾಗ, ಅದೂ ಹಲವು ವರ್ಷಗಳಿಂದ ಅವನನ್ನು ನಾನು ಕಾಣದೆ ಇರುವಾಗ, ಅವನ ಗುರುತು ಹತ್ತಲಿಲ್ಲವೆಂದರೇನು ಆಶ್ಚರ್ಯ?

"ಓಹೋ, ನೀನು, ಕಿಟ್ಟು, ಈಗ ತಿಳಿಯಿತು. ಯಾವಾಗ ಬಂದೆ ಕಿಟ್ಟು? ಈಗ ಏನು ಮಾಡುತ್ತಿರುವೆ? ಎಲ್ಲಿಂದ ಬಂದುದು? ಯಾವ ಬಸ್ಸಿನಲ್ಲಿ ಬಂದೆ?" ಎಂದು ಅವನಮೇಲೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದೆನು. ಕಿಟ್ಟು ಮಾತ್ರ ಪ್ರಶಾಂತ ಚಿತ್ತನಾಗಿ ಮೆಲ್ಲನೆ, "ಈಗತಾನೆ ಬಂದೆ" ಎಂದನು. ಬಳಿಕ "ಶೇಖರ್, ನಾನೀಗ ಬಸ್ಸಿನಲ್ಲಿ ತಿರುಗಾಡುವುದೇ ಇಲ್ಲ. ನಡೆದುಕೊಂಡೇ ಪ್ರಯಾಣ ಬೆಳೆಸುವುದು. ನಿನಗಿನ್ನೂ ಪಾದಯಾತ್ರೆಯ ಮಹಿಮೆ ತಿಳಿದಿರಲಿಕ್ಕಿಲ್ಲ." ಎಂದನು.

"ಕಿಟ್ಟೂ, ಬಾ, ಮೊದಲು ಜಗನ್ಮೋಹನದಲ್ಲಿ ಒಂದು ಸಿಂಗಲ್ ಕಾಫಿ ಕುಡಿದು ಆ ಮೇಲೆ ಧ್ಯಾನವಾಗಿ ಅಡ್ಡಾಡುತ್ತಾ ಮಾತಾಡೋಣವಂತೆ" ಎಂದೆನು.

"ಏನೂ, ಹೋಟೇಲಿಗೋ? ಇಲ್ಲಪ್ಪಾ, ನಾನು ಒಳಹೊಗದೆ ಇಲ್ಲಾ, ಹೋಟೆಲಿನಲ್ಲಿ ಕಾಫಿ ಕುಡಿಯದೆ ವರ್ಷ ಮೂರಾಯ್ತು" ಎಂದನು.

"ಸಿಗರೇಟು ಸೇದುವಿಯೇನು? ತೆಗೆಸಿಕೊಡಲೇ?" ಎಂದು ಕೇಳಿದೆನು.

"ಏನು, ಸಿಗರೇಟೇ? ನಮ್ಮಂತಹವರು ಸಿಗರೇಟು ಸೇದುವರೇನೋ?" ಎಂದನು.

'ಅದೇನು?" ಎಂದು ನಾನು ಕೇಳಿದೆನು. "ಆಯ್ಯೋ ಮಹಾರಾಯಾ! ನಾನೀಗ ಮೊದಲಿನ ಕಿಟ್ಟುವೇ ಅಲ್ಲ ಈಗ ಹದಿನಾರಾಣೆ ವಿನೋಬಾಭಕ್ತನು ನಾನು. ನೋಡು, ನಾನುಟ್ಟ ಖಾದಿಯ ಉಡುಗೆ, ಮೋರೆಯಲ್ಲಿ ಬೆಳೆದ ಅರ್ಧ ಅಡಿ ಉದ್ದದ ಗಡ್ಡ, ಇವಿಷ್ಟು ನಿನಗೆ ನಾನು ವಿನೋಬಾ ಭಕ್ತನೆಂದು ಸಾರುವುದಿಲ್ಲವೇ?" ಎಂದು ಕೇಳಿದನು

"ಕಿಟ್ಟೂ, ನೀನು ಶಾಲೆಯಲ್ಲಿರುವಾಗ ಖಾದಿ ಧರಿಸಿದವರೆಲ್ಲಾ ಅಪ್ಪಟ ಖದೀಮರೆನ್ನುತಿದ್ದೆಯಲ್ಲಾ" ಎಂದು ಮೆಲ್ಲನೆ ಅವನನ್ನು ಕೆಣಕಿದೆನು

ಆದರೆ ಕಿಟ್ಟು ಸಾವಧಾನಚಿತ್ತನಾಗಿ ಮುಖಭಾವದಲ್ಲಿ ಒಂದಿನಿತೂ ಬದಲಾವಣೆಯನ್ನು ತೋರಿಸದೆ, "ಅಯ್ಯೋ, ಅದೆಲ್ಲಾ ಹಿಂದಿನ ಮಾತು, ಇಂದು ನನ್ನಲ್ಲಿ ಜ್ಞಾನೋದಯವಾಗಿದೆ. ನಾವಿಂದು ರಾಮರಾಜ್ಯವನ್ನು ಕಟ್ಟಬೇಕಾದರೆ ಖಾದಿಯೊಂದೇ ಹಾದಿ. ನೀನು ಗಾಂಧೀಜಿಯವರ ಲೇಖನಗಳನ್ನು ಓದಿಲ್ಲವೇ? ವಿನೋಬಾರ ಭಾಷಣಗಳನ್ನು ಕೇಳಿಲ್ಲವೇ?' ಎಂದು ಹೇಳಿ ಖಾದಿಯ ಮಹಿಮೆಯ ಕುರಿತು ವ್ಯಾಖ್ಯಾನವೊಂದನ್ನು ಕೊಟ್ಟೇಬಿಟ್ಟನು. ಕಲ್ಪಂಕದಿಂದ ಮೆಲ್ಲನೆ ನಾವು ಮುಂದೆ ಸಾಗುತಿದ್ದೆವು. ಅದರೊಂದಿಗೆ ಕಿಟ್ಟುವಿನ ವ್ಯಾಖ್ಯಾನವೂ ಸಾಗುತಿತ್ತು;

"ಇಂದು ನಮ್ಮ ದೇಶದ ಮುಂದೆ ಹಲವಾರು ಸಮಸ್ಯೆಗಳು ಬೃಹದಾಕಾರ ತಾಳಿನಿಂದಿವೆ. ಇವುಗಳಲ್ಲಿ ವಸ್ತ್ರದ ಸಮಸ್ಯೆಯು ಕೂಡಾ ಒಂದು. ಅಂಬರಚರಕ ಪೊಂದೇ ಇದಕ್ಕೆ ಪರಿಹಾರನೀಡಬಲ್ಲುದು. ಮನೆಮನೆಗಳಲ್ಲಿ ಅಂಬರಚರಕ ತಿರುಗಬೇಕು. ಪ್ರತಿಯೊಬ್ಬನೂ ತನ್ನ ಬಟ್ಟೆಗೆ ಬೇಕಾದಷ್ಟು ನೂಲನ್ನು ತಾನೇ ನೂಲಬೇಕು. ಇಗೋ, ನೋಡು ನಾನೀಗ ಉಟ್ಟ ಬಟ್ಟೆ ನಾನು ಕೈಯಲ್ಲಿ ನೂತ ನೂಲಿನದ್ದೇ. ನಮ್ಮ ಜನತೆ ಬಿಡುವಿನ ಸಮಯವನ್ನು ಸದುಪಯೋಗಗೊಳಿಸಬೇಕಾದರೆ ಚರಕವನ್ನುಪಯೋಗಿಸಿ ನೂಲು ನೂಪಬೇಕು. ಈಗ ನಮ್ಮ ಮನೆಯಲ್ಲಿ ಒಂದು ಚರಕವಿದೆ. ಅದರಿಂದ ಮನೆಯವರೆಲ್ಲರೂ ನೂಲುತ್ತಾರೆ. ಎಲ್ಲರಿಗೂ ಅವರವರ ಬಟ್ಟೆಗೆ ಬೇಕಾದಷ್ಟು ನೂಲು ತಯಾರಾಗಿ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] (ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4½%
5 ,, 12	,,	4¾%
13 ,, 24	,,	4⅞%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ತಮ್ಮನಿಗೆ ಓಲೆ–೨

ಸಾಹಿತ್ಯಾಭ್ಯಾಸದಿಂದ ಪ್ರಯೋಜನ

ವ್ಯಕ್ತಿ ಸಮಾಜವನ್ನು ಪರೋಕ್ಷವಾಗಿ ತಿಳಿದುಕೊಳ್ಳಲು ಸಾಧನವೇ ಸಾಹಿತ್ಯ. ಇದರಿಂದ ವ್ಯಕ್ತಿ ಜೀವನವು ಪರ್ಯಾಪ್ತ ಸುಖಮಯವಾಗುವುದು.

ಕಾವ್ಯ ಮತ್ತು ವಿಜ್ಞಾನ ಹಾಗೂ ಕವಿ ಮತ್ತು ವಿಜ್ಞಾನಿಗಳಲ್ಲಿರುವ ವ್ಯತ್ಯಾಸವನ್ನು ಹಿಂದಿನ ಪತ್ರದಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ್ದೇನೆ. ಕಾವ್ಯಾನುಶೀಲತೆಯಿಂದ ಯಾವ ಪ್ರಯೋಜನಗಳಿವೆ ಎಂಬುದನ್ನು ನಿರೂಪಿಸುವ ಪ್ರಯತ್ನವನ್ನು ಇಲ್ಲಿ ಮಾಡುತ್ತೇನೆ.

ಮಾನವ ಹೃದಯವನ್ನು ಕಾವ್ಯಾನುಶೀಲತೆಯು ವಿಕಾಸಗೊಳಿಸುತ್ತದೆ. ಅಖಂಡ ಪ್ರಪಂಚದಲ್ಲಿ ಸರ್ವಕಾಲದಲ್ಲಿ ಮಾನವ ಹೃದಯದ ಸಮಸ್ಯಾತ್ಮಕ ವಿಷಯಗಳತ್ತ ಮನುಷ್ಯನು ಆಸಕ್ತಿವಹಿಸುತ್ತಾನೆ. ಇದು ಚಿರಂತನ ಸತ್ಯ. ಕಾವ್ಯದಲ್ಲಿ ನಾವು ಕಾಣುವ ವರ್ಣನೆಯು ಕಾಲ ದೇಶಗಳ ಎಲ್ಲೆಯನ್ನು ಮೀರಿದುದು. ಶಕುಂತಳೆಯನ್ನು ಬೀಳ್ಕೊಡುವ ದೃಶ್ಯ ಪ್ರತಿಗೃಹಸ್ಥನ ಮನೆಯಲ್ಲೂ ನಡೆಯುವುದು. ಮಾಲತೀ ಮಾಧವರ ಪ್ರೇಮವು ಕೇವಲ ಅವರಿಬ್ಬರಿಗೆ ಮಾತ್ರ ಸೇರಿದುದಲ್ಲ; ಆ ಪರಿಸ್ಥಿತಿಯಲ್ಲಿರುವ ಎಲ್ಲ ಪ್ರೇಮಿಗಳಿಗೂ ಅದರಲ್ಲಿ ಅಧಿಕಾರವಿದೆ. ಕಾವ್ಯಶಾಸ್ತ್ರ ಪರಿಭಾಷೆಯಲ್ಲಿ ಅನ್ನುವುದಾದರೆ, ಕಾವ್ಯಗಳಲ್ಲಿ ಸಾಧಾರಣೀಕರಣದ ಸನ್ನಿವೇಶಗಳು ವರ್ಣಿತವಾಗುತ್ತವೆ.

ಕಾವ್ಯಾಭ್ಯಾಸದಿಂದ ಸಹಾನುಭೂತಿ ಮಾತ್ರವಲ್ಲ, ವ್ಯವಹಾರ ಕೌಶಲವೂ ಬೆಳೆಯುತ್ತದೆ. ಮಾನವ ಜನಾಂಗದ ಅನುಭವಗಳು ದಟ್ಟವಾಗಿ ಸೇರಿ ಕಾವ್ಯಗಳಲ್ಲಿ ಚಿರಸ್ಥಾಯಿಯಾಗಿರುತ್ತವೆ. ಕಾವ್ಯವರ್ಣಿತ ವ್ಯಕ್ತಿಗಳ ಸಾಫಲ್ಯ ಅಥವಾ ಅಸಾಫಲ್ಯಗಳಿಂದ ನಮ್ಮ ಹಿತವನ್ನು ಸಾಧಿಸಿಕೊಳ್ಳಬಲ್ಲೆವು. ಕಾವ್ಯವು ಮಾನವ ಸಮೂಹದ ಸಾಮೂಹಿಕ ಸ್ಮೃತಿಯಾಗಿದೆ. ಧರ್ಮಪ್ರವೃತ್ತಿಗಳು ವ್ಯಕ್ತಿಯ ಜೀವನದಲ್ಲಿ ವಹಿಸುವ ಪಾತ್ರವನ್ನು ಕಾವ್ಯಗಳು ಸಮಾಜ ಜೀವನದಲ್ಲಿ ನಿರ್ವಹಿಸುತ್ತವೆ. ಪ್ರಾಚೀನ ಸತ್ಕೃತಿಗಳನ್ನು ನಮ್ಮ ಸ್ಮರಣೆಗೆ ಬರುವಂತೆ ಮಾಡಿ, ನಮ್ಮ ಹೃದಯದಲ್ಲಿ ಉತ್ಸಾಹ ಮತ್ತು ಕರ್ಮಣ್ಯತೆಯನ್ನು ಹುರಿದುಂಬಿಸುತ್ತವೆ. ಆತ್ಮ ಗೌರವ, ಸ್ವಾಭಿಮಾನಗಳು ಹುಟ್ಟುವಂತೆ ಪ್ರೇರೇಪಿಸುತ್ತವೆ. ಬೇರೆ ಬೇರೆ ದೇಶಗಳ ಬೇರೆ ಬೇರೆ ಜನಗಳ ಪರಿಚಯವನ್ನು ನಮಗೆ ಮಾಡಿಕೊಡುತ್ತವೆ. ಅವರ ವ್ಯವಹಾರಗಳನ್ನು ತಿಳಿಸುತ್ತದೆ. ವ್ಯಕ್ತಿ, ವ್ಯಕ್ತಿಗತ ಜೀವನದಲ್ಲಿ ಪಡೆಯದ ಅನುಭವಗಳನ್ನು ಆತ ನಾಟಕಗಳಿಂದ ಕಾವ್ಯಾಭ್ಯಾಸದಿಂದ ಪಡೆಯಬಲ್ಲನು. ಮಾನವನ ಮನಸ್ಸಿನ ಮೇಲೆ ಇವು ಸಾಕಷ್ಟು ಪರಿಣಾಮವನ್ನು ಬೀರಿ, ಆತನಲ್ಲಿ ವ್ಯವಹಾರ ಕುಶಲತೆಯನ್ನು ತುಂಬಿಸುವುದು.

ಕಾವ್ಯದಿಂದ ನಮ್ಮ ಭಾವ ಮತ್ತು ಮನಸ್ಸು ಶುದ್ಧವಾಗುವುವು; ಪುಷ್ಟಿಗೊಳ್ಳುವುದು. ನಮ್ಮ ಭಾವನಾಶಕ್ತಿಗೆ ಹೊಸ ಸಾಮಗ್ರಿಗಳು ದೊರೆಯದೆ ಹೋದರೆ, ಅದು ಹ್ರಾಸವಾಗುವುದು. ಶರೀರದ ಪ್ರತಿಯೊಂದು ಇಂದ್ರಿಯ ಮತ್ತು ಶಕ್ತಿಗೆ ವ್ಯಾಯಾಮವು ಆವಶ್ಯವಿದೆ. ನಮ್ಮ ಭಾವನಾಶಕ್ತಿಗೆ ಕಾವ್ಯದಲ್ಲಿ ಒಂದು ವಿಧದ ವ್ಯಾಯಾಮವು ಬಹು ಸುಲಭದಲ್ಲಿ ಲಭಿಸುತ್ತದೆ. ವಾಸ್ತವಿಕ ದುಃಖಾನುಭವದಿಂದ ಆಗುವ ದುಃಖವು ನಮ್ಮ ಮನಸ್ಸನ್ನು ಪವಿತ್ರಗೊಳಿಸಬಲ್ಲುದು. ನಮ್ಮ ಜೀವನದಲ್ಲಿ ಎಲ್ಲ ಪ್ರಕಾರದ ಭಾವಗಳು ಪರಿಪುಷ್ಟವಾಗುವ ಸಂದರ್ಭಗಳು ಒದಗಲಾರವು. ಆದರೆ, ಕಾವ್ಯಗಳಲ್ಲಿ ಇವೆಲ್ಲವೂ ದೊರೆಯುತ್ತವೆ. ಕಾವ್ಯ ಮತ್ತು ಶಾಸ್ತ್ರೀಯ ಗ್ರಂಥಗಳನ್ನು ಓದುವುದರಿಂದ, ಭಾವಗಳಿಗೆ ಬಾಹ್ಯ ವ್ಯಂಜಕಗಳೂ ಪರಿಪೋಷಕವಾಗಬಲ್ಲುದು. ನಾವು ಕೋಪೋದ್ರಿಕ್ತರಾದಾಗ, ನಮ್ಮ ನಾಸಿಕಾಗ್ರಭಾಗವು ಕೆಂಪಾಗುವುದು; ಮುಖ ಕೆಂಪೇರುವುದು, ಕೈಗಳು ಕಂಪಿಸುವುವು, ಭುಜಗಳು ಮೇಲೇಳುವುವು ಎಂದು ಬಲ್ಲೆವು. ಈ ಭಾವಗಳಿಂದ ನಾವು ಅಂತಹ ಆಂತರಿಕ ಭಾವಗಳನ್ನು ಕಂಡುಕೊಳ್ಳಬಲ್ಲೆವು; ಮತ್ತು ಆ ಕೋಪದಿಂದ ಉಳಿದುಕೊಳ್ಳುವ ಮಾರ್ಗವನ್ನು ಅರಸುವೆವು. ಮಾನವನ ವಿವಿಧ ಭಾವಗಳನ್ನು ಗ್ರಹಿಸುವ ಕೌಶಲವನ್ನು ಎಲ್ಲರೂ ಪಡೆದಿದ್ದಾರೆನ್ನುವುದು ಅಸಾಧ್ಯವಾದರೂ ಸಾಮಾನ್ಯವಾಗಿ ಅರಿತಿರುವರು ಎಂದು ಹೇಳಬಹುದು. ಮಾನವನು ತನ್ನ ಮನೋಭಾವಕ್ಕನುಗುಣವಾದ ಪದಗಳನ್ನೇ ಪ್ರಯೋಗಿಸುವುದನ್ನು ಕಂಡಿರುವೆವು. ಒಬ್ಬನು ಸುಖ ಸಂತೋಷದಲ್ಲಿರುವಾಗ ಆಡುವ ಮಾತಿಗೂ ದುಃಖಿತನಾಗಿರುವಾಗ ನುಡಿಯುವ ಮಾತಿಗೂ ಅಂತರವಿರುವುದು. ಹಾಸ್ಯ, ವ್ಯಂಗ್ಯಗಳಿಂದ ಎಲ್ಲಿ ಕಾರ್ಯಸಾಧಿಸಬೇಕು, ಎಲ್ಲಿ ಗಾಂಭೀರ್ಯದಿಂದ ನುಡಿಯಬೇಕು ಎಂಬುದನ್ನು ಹೆಚ್ಚಿನವರು ತಮಗರಿವಿಲ್ಲದಂತೆಯೇ ತಿಳಿದುಕೊಂಡಿರುವರು.

ಸಮಾಜದಲ್ಲಿ ಆಗಾಗ ಜಗಳಗಳು ನಡೆಯುವುದುಂಟು. ಇವುಗಳಿಗೆ ಭಿನ್ನಾಭಿಪ್ರಾಯಕ್ಕಿಂತಲೂ ಪರಸ್ಪರ ತಿಳುವಳಿಕೆ ಕಡಿಮೆಯಾದುದೇ ಕಾರಣವಾಗಿದೆ. ಒಬ್ಬರನ್ನು ಇನ್ನೊಬ್ಬರು ಅರಿತುಕೊಳ್ಳುವುದರಿಂದ ತಮ್ಮ ಹೀನತೆ ಪ್ರಕಟಿಸಿದಂತೆ ಎಂಬ ಅಶಂಕಾಭಾವದಿಂದಾಗಿಯೇ ಇಂತಹ ಗೊಂದಲಗಳು ಹುಟ್ಟಿಕೊಳ್ಳುತ್ತವೆ. ಆದರೆ, ಸಾಹಿತ್ಯಾಭ್ಯಾಸದಿಂದ ಪರರನ್ನು ತಿಳಿದುಕೊಳ್ಳುವ ಶಕ್ತಿಯು ನಮ್ಮಲ್ಲಿ ಬೆಳೆಯುತ್ತದೆ. ಕಾವ್ಯಾಭ್ಯಾಸಿಗೆ ಶಬ್ದಶಕ್ತಿಯು ಅರಿವಾಗುವುದು. ಯಾವ ಪದಗಳಿಂದ ಯಾವ ವಿಷಯವನ್ನು ಸುವ್ಯಕ್ತಪಡಿಸಬಹುದು ಎಂದು ಆತ ತಿಳಿದಿರುವನು. ಆತ ಬೇರೆಯವರ ಮಾತುಗಳನ್ನೂ ಸಮುಚಿತವಾಗಿ ಅರ್ಥಮಾಡಿಕೊಳ್ಳಬಲ್ಲನು. ಆತ ಮಾನವನ ಹೃದಯವನ್ನು ಸರಿಯಾಗಿ ತಿಳಿದಿರುತ್ತಾನೆ. ಅವನ ದೃಷ್ಟಿಕೋನವು ಸುವಿಶಾಲವಾಗಿರುತ್ತದೆ; ಏಕೆಂದರೆ, ಆತನು ಒಂದೇ ವಸ್ತುವನ್ನು ಅನ್ಯಾನ್ಯ ದೃಷ್ಟಿಯಿಂದ ಕಾಣಬಲ್ಲನು.

ಕಾವ್ಯವನ್ನು ಅಭ್ಯಸಿಸುವುದರಿಂದ ವ್ಯಕ್ತಿಯ ಸಮಯವು ವ್ಯರ್ಥವಾಗುವುದಿಲ್ಲ. ಆತ ತನ್ನ ಅನುಭವ ಮತ್ತು ಜ್ಞಾನ ಸಂಪತ್ತಿಯನ್ನು ಬೆಳೆಸುತ್ತಾನೆ. ತನ್ನ ಮನೋಭಾವನೆಯನ್ನು ವಿಸ್ತರಿಸಿ, ಎಲ್ಲರನ್ನೂ ಎಲ್ಲವನ್ನೂ ಅರ್ಥಮಾಡಿಕೊಳ್ಳುವ ಶಕ್ತಿಯುಕ್ತನಾಗುತ್ತಾನೆ. ಇದರಿಂದಾಗಿ ಅವನು ಸಮಾಜದಲ್ಲಿಯೂ ಸರ್ವಮಾನ್ಯನಾಗುತ್ತಾನೆ. "ಕಾವ್ಯಶಾಸ್ತ್ರ ವಿನೋದೇನ ಕಾಲೋಗಚ್ಛತಿ ಧೀಮತಾಂ| ವ್ಯಸನೇನ ಚ ಮೂರ್ಖಾಣಾಂ ನಿದ್ರಯಾ ಕಲಹೇನವಾ" ಎಂದು ಹಿತೋಪದೇಶದಲ್ಲಿ ಒಂದು ಶ್ಲೋಕವಿದೆ. "ಜ್ಞಾನಿಗಳು ಕಾವ್ಯ ಮತ್ತು ಶಾಸ್ತ್ರಾಭ್ಯಾಸದಲ್ಲಿಯೇ ತಮ್ಮ ಸಮಯವನ್ನು ಕಳೆಯುತ್ತಾರೆ; ಮೂರ್ಖರು ನಿದ್ರೆ, ಕಲಹ ಮತ್ತು ದುರ್ವ್ಯಸನಗಳಲ್ಲಿ ಆಸಕ್ತರಾಗಿ, ಕಾಲವನ್ನು ವ್ಯರ್ಥಗೊಳಿಸುತ್ತಾರೆ".

ಮನುಷ್ಯರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯಬೇಕಾದರೆ, ಅವರಿಗೆ ಸಮಾಜದ ನಾನಾ ಮುಖಗಳ ಪರಿಚಯ ಬೇಕಾಗುವುದು. ಈ ಜ್ಞಾನವನ್ನು ಸ್ವಾನುಭವದಿಂದ ಪಡೆಯುವುದು ಎಂದೆಂದಿಗೂ ಅಸಾಧ್ಯವೇ. ಆದರೆ, ಸಾಹಿತ್ಯಾಭ್ಯಾಸದಿಂದ, ಆತನಿದನ್ನು ಪಡೆಯಬಹುದು. ಎಂತಲೇ ಅಕ್ಷರಸ್ಥನಾದವನು ಸಾಹಿತ್ಯವನ್ನು ಓದುವ ಮತ್ತು ಅಭ್ಯಸಿಸುವ ಯೋಜನೆಯೊಂದನ್ನಿಟ್ಟುಕೊಳ್ಳಬೇಕಾಗುವುದು. ಕಾವ್ಯಗಳ ಸಮೂಹವಾದ ಸಾಹಿತ್ಯವು ಒಬ್ಬ ಸಾಮಾನ್ಯ ಮಾನವನನ್ನು ಜ್ಞಾನದ ಗೌರೀಶಂಕರಕ್ಕೆ ಒಯ್ಯುವಷ್ಟು ಶಕ್ತಿಶಾಲಿಯಾಗಿದೆ. "ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಿಂ ನೋಡುತಂ" ನರನು ಸರ್ವಜ್ಞನಾಗಬಲ್ಲನಲ್ಲವೆ!

—ಗೋರಾ.

ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರವೊಂದರಲ್ಲಿ ವೈದ್ಯರು ಕಾರ್ಯನಿರತರಾಗಿದ್ದಾರೆ

ಉಳಿತಾಯದಿಂದ ಶ್ರೀಮಂತರಾಗಿರಿ!
ಕೆನರಾ ಬ್ಯಾಂಕಿನ
3 ವರ್ಷಗಳ
ಮತ್ತು
5 ವರ್ಷಗಳ
ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿ
ಹೆಚ್ಚು ಬಡ್ಡಿ ಸಂಪಾದಿಸಿರಿ
81/- ರೂ.ಗಳು 5 ವರ್ಷಗಳಲ್ಲಿ 100 ರೂ.ಗಳಾಗುತ್ತವೆ.
88.75/- ರೂ ಗಳು 3 ವರ್ಷಗಳಲ್ಲಿ 100 ರೂ.ಗಳಾಗುತ್ತವೆ.
: ವಿವರಗಳಿಗೆ :
ನಮ್ಮ 75ಕ್ಕೂ ಮಿಕ್ಕಿದ ಶಾಖೆಗಳಲ್ಲೊಂದಕ್ಕೆ ಬರೆಯಿರಿ.
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
(ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿರುವ ಷೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದು)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ವಿಚಿತ್ರವಾದರೂ ಸತ್ಯ

ಸಾಗರ ಸಂಚಾರಿ ಸಂದೇಶವಾಹಕ ಕಾಚಪಾತ್ರೆ

ನಾನಾ ಪ್ರಕಾರದ ಸಂದೇಶಗಳನ್ನು ಹೊತ್ತು ಸಾಗರದಲ್ಲಿ ಸಂಚರಿಸಿ ವಿಸ್ಮಯಜನಕ ಪರಿಣಾಮ ಬೀರುವ ಈ ಬಾಟಲಿಗಳ ಬಗ್ಗೆ ನಾವೂ ಅವಶ್ಯ ತಿಳಿದಿರಬೇಕು.



ಅಮೇರಿಕೆಯು ಕೊಲಂಬಿಯಾ ನದಿಗೆ ಒಂದು ದೊಡ್ಡ ಅಣೆಕಟ್ಟನ್ನು ಹಾಕಿತು. ಈ ಯೋಜನೆಯಿಂದ ೧೧ ಲಕ್ಷ ಕಿಲೊವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು. ಅಣೆಕಟ್ಟಿನ ಹೆಸರು ಡಲ್ಲೆಸ್.

ಸಮುದ್ರಸ್ನಾನ ಮಾಡುವ ವೇಳೆ ನಿಮ್ಮ ಪಾದಗಳಿಗೆ ಬಾಟಲಿಗಳು ತಾಗಿದರೆ, ಅಥವಾ ಸಾಗರ ತಟದಲ್ಲಿ ವಿಶ್ರಮಿಸುವ ಸಮಯ ಮರಳರಾಶಿಯಲ್ಲಿ ಬಾಟಲಿಯು ದೃಗ್ಗೋಚರವಾದರೆ, ಅವನ್ನು ಉಪೇಕ್ಷಿಸಬೇಡಿರಿ. ಸುಂದರಿಯಾದ ಜೀವನ ಸಂಗಾತಿಯನ್ನು ಪಡೆಯುವ ನಿಮ್ಮ ಚಿರಸಂಚಿತ ಅಭಿಲಾಷೆಯನ್ನು ಈ ಬಾಟಲಿಯು ಪೂರ್ಣಮಾಡುವ ಸಂಭವವಿದೆ. ಇದೇನೂ ಪರಿಹಾಸವಲ್ಲ; ವಿನೋದವಲ್ಲ; ಈ ಬಾಟಲಿಗಳೇ ಇಷ್ಟರವರೆಗೆ ಅಸಂಖ್ಯ ವಿವಾಹಗಳನ್ನು ಮಾಡಿಸಿವೆ; ನಿಮಗೆ ಗೊತ್ತೆ?

ಐದು ವರ್ಷಗಳ ಹಿಂದಿನ ಮಾತಿದು. ೧೯೫೫ರ ಚಳಿಗಾಲದಲ್ಲಿ ಸ್ವೀಡನ್ನಿನ ಆರ್ಕೆವಾಯಿ ಕಿಂಗ್ ಎಂಬ ನಾವಿಕನು ಒಂದು ಬಾಟಲಿಯಲ್ಲಿ ಸಂದೇಶವನ್ನು ತುಂಬಿ ಭೂಮಧ್ಯಸಾಗರದಲ್ಲಿ ಹಾಕಿಬಿಟ್ಟನು." ೨೪ ವರ್ಷದ ಆರೋಗ್ಯವಂತ ಸುಂದರ ಸ್ವೀಡನ್ ವಾಸಿ ನಾವಿಕನನ್ನು ವಿವಾಹವಾಗಬಯಸುವ ೧೮ರಿಂದ ೨೦ ವರ್ಷ ಪ್ರಾಯದ ಹುಡುಗಿ ಬೇಕಾಗಿದೆ. ಪತ್ರವ್ಯವಹಾರವನ್ನು ಮಾಡಿರಿ" ಎಂದು ಸಂದೇಶ ಬರೆದು ವಿಳಾಸ ಕೊಡಲಾಗಿತ್ತು. ಈ ರೀತಿಯಿಂದ ಎಲ್ಲಾದರೂ ವಿವಾಹವಾಗುವುದಿದೆಯೇ ಎಂದು ನೀವು ಕುಚೋದ್ಯ ಮಾಡಬಹುದು. ಆದರೆ, ಈ ನಾವಿಕನಿಗಂತೂ ಆಗಿದೆ. ಈ ಬಾಟಲಿಯು ಸಿಸಿಲಿ ದ್ವೀಪದ ಸೆಬಸ್ತಿಯಾನಾ ಎಂಬಾಕೆಗೆ ಸಿಕ್ಕಿತು. ಈಕೆಗೆ ಹಲವಾರು ಅವಿವಾಹಿತ ಹುಡುಗೆಯರಿದ್ದರು. ಆಕೆ ತನ್ನ ೧೮ ವರ್ಷದ ಮಗಳು ಪಾವಲೀನಾಳ ಪಟವನ್ನು ಬಾಯಿಕಿಂಗನಿಗೆ ರವಾನಿಸಿದಳು. ಮುಂದೆ ನಾಲ್ಕಾರು ಪತ್ರವ್ಯವಹಾರಗಳು ನಡೆದು ಕೆಲವೇ ತಿಂಗಳಲ್ಲಿ ಮದುವೆಯೂ ಮುಗಿದು ಹೋಯಿತು.

ನೀವು ವಿವಾಹಿತರಾಗಿದ್ದರೆ ಅಥವಾ ನಿಮಗೆ ವಿವಾಹಯೋಗ್ಯ ಮಕ್ಕಳಿಲ್ಲವಾದರೂ ಅಂತಹ ಬಾಟಲಿಗಳನ್ನು ಉಪೇಕ್ಷಿಸಬೇಡಿರಿ. ಆ ಬಾಟಲಿಯಲ್ಲಿ ನಿಮ್ಮ ಅದೃಷ್ಟದ ಕೀಲಿಕೈ ಇರುವುದೂ ಉಂಟು. ಎಜೋರ್ಸ್ ಎಂಬಲ್ಲಿನ ಒಬ್ಬ ಮಜೂರನಿಗೆ ಒಂದು ತೇಲುವ ಬಾಟಲಿ ಸಿಕ್ಕಿತು, ನಾಲ್ಕು ವರ್ಷಗಳಿಗೆ ಮೊದಲು. ಅದರಲ್ಲಿ ಒಂದು ಕಾಗದದ ಕಟ್ಟಿತ್ತು. ಅದನ್ನು ಬಿಚ್ಚಿದಾಗ ಒಂದು ವಿಳಾಸವಿತ್ತು; ಆ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಿದರೆ ಒಂದು ಸಾವಿರ ಡಾಲರ್ ಬಹುಮಾನ ಕೊಡಲಾಗುವುದೆಂದೂ ನಿರ್ದೇಶಿಸಲಾಗಿತ್ತು. ಮಜೂರನು ಆ ನಿರ್ದೇಶವನ್ನು ಪಾಲಿಸಿದ; ಕೂಡಲೇ ಸಾವಿರ ಡಾಲರ್ ಸಂಪಾದಿಸಿದ! ಈ ಬಾಟಲಿಯನ್ನು ಒಂದು ರೇಡಿಯೋ ಕಂಪೆನಿಯು ಪ್ರಚಾರಕ್ಕಾಗಿ ನೀರಲ್ಲಿ ಎಸೆದಿತ್ತು!

ಧನಪ್ರಾಪ್ತಿ ಮಾತ್ರವಲ್ಲ, ಮಿತ್ರಪ್ರಾಪ್ತಿಯೂ ಈ ಬಾಟಲಿಗಳಿಂದ ಸಾಧ್ಯ. ೨೫ ವರ್ಷಗಳಿಗೆ ಮೊದಲು ಡಾಯಲ್ ಬ್ರೆಂಸ್‌ಕಮ್ ಎಂಬವನು ತನ್ನ ಚಿತ್ರವನ್ನು ತುಂಬಿಸಿದ ಬಾಟಲಿಯನ್ನು ಅರ್ಕನ್ಸಾಸ್ ರಾಜ್ಯದ ನದಿಯೊಂದರಲ್ಲಿ ತೇಲಬಿಟ್ಟನು. ಕಳೆದ ವರ್ಷ ಇದು ಫ್ಲೋರಿಡಾದ ಸಾಗರ ತಟದಲ್ಲಿ ಬಿಲ್ ಹೆಡ್‌ಸ್ಟ್ರೀಮ್ ಎಂಬವನ ಕೈಸೇರಿತು. ಬಾಟಲಿಯ ಚಿತ್ರ ಕಂಡವನೇ ಡಾಯಲ್‌ನಿಗೆ ಪತ್ರ ಬರೆಯತೊಡಗಿದನು. ಇವರಿಬ್ಬರೂ ಹಳೆಯ ಮಿತ್ರರಾಗಿದ್ದರು. ಇವರಿಬ್ಬರ ಬಾಲ್ಯವೂ ಅರಕನ್ಸಾಸ್‌ನಲ್ಲಿ ಒಟ್ಟಿಗೆ ಕಳೆದಿತ್ತು. ಆದರೆ, ಕಾಲಕ್ರಮದಲ್ಲಿ ಅವರು ಒಬ್ಬರನ್ನೊಬ್ಬರು ಅಗಲಬೇಕಾಯಿತು. ೩೫ ವರ್ಷಗಳ ವರೆಗೆ ಅವರ ಪತ್ತೆಯೇ ಉಳಿಯಲಿಲ್ಲ. ಬಿಲ್‌ನಿಗೆ ಈ ಬಾಟಲಿ ದೊರೆಯದೆ ಹೋಗಿದ್ದರೆ, ಜೀವಿತಾಂತ್ಯದ ವರೆಗೂ ಇವರು ದೂರ ದೂರವಾಗಿಯೇ ಉಳಿಯುತ್ತಿದ್ದರು.

ಕಳೆದು ಕೊಂಡಮಿತ್ರರನ್ನು ತಂದು ಕೊಡುವುದೂ ಅಲ್ಲ, ಪ್ರಕೃತಿಯ ಗಂಭೀರ ರಹಸ್ಯಗಳನ್ನೂ ಈ ಬಾಟಲಿಗಳು ಸಂಶೋಧಿಸಿ ತೆಗೆಯಬಲ್ಲುವು. ಕಳೆದ ಅನೇಕ ವರ್ಷಗಳಿಂದ ವೈಜ್ಞಾನಿಕರು ಸಮುದ್ರದ ತೆರೆ ಮತ್ತು ಗಾಳಿಯ ಕಡೆಯ ಅಧ್ಯಯನಕ್ಕಾಗಿ ಬಾಟಲಿಗಳನ್ನು ಬಳಸುತಿದ್ದರು. ಇಂತಹ ಬಾಟಲಿಗಳಿಂದಲೇ ಬೆಂಜಮಿನ್ ಫ್ರೇಂಕ್ಲಿನ್ ಎಂಬವನು ಗಲ್ಫ್ ಸ್ಟ್ರೀಮ್‌ನ ನಕ್ಷೆಯನ್ನು ತಯಾರಿಸಿದನು. ಇಂದಿಗೆ ೨,೨೦೦ ವರ್ಷಗಳಿಗೆ ಹಿಂದೆಯೇ ಪ್ರಕೃತಿ ನಿರೀಕ್ಷಕನಾಗಿದ್ದ ಥಿಯೋ ಫ್ರಾಸ್ತಸ್ ಎಂಬವನು ಸಮುದ್ರದಲ್ಲಿ ಬಾಟಲಿಗಳನ್ನು ತೇಲಿಬಿಟ್ಟು, ಭೂಮಧ್ಯ ಸಾಗರಕ್ಕೆ ಅತ್ಲಾಂತಿಕ ಮಹಾಸಾಗರದ ನೀರು ಹರಿಯುತ್ತದೆ ಎಂದು ಸಿದ್ಧಮಾಡಿದನು. ಸಮುದ್ರ ಪ್ರವಾಹ ಪರೀಕ್ಷಣ ಸಂಸ್ಥೆಗಳೂ ಬಾಟಲಿಗಳನ್ನು ತೇಲಬಿಡುತ್ತವೆ. ಈ ಬಾಟಲಿಯಲ್ಲಿ ಅದನ್ನು ತೇಲಿಸಿದ ಸ್ಥಳ ಮತ್ತು ದಿನಗಳನ್ನು ಅಂಕಿಸುತ್ತಾರೆ. ಜತೆಗೆ ಒಂದು ಚೀಟಿಯನ್ನಿಟ್ಟು ಈ ಬಾಟಲಿ ದೊರೆತವರು ಅದು ಸಿಕ್ಕಿದ ಸ್ಥಾನ ಮತ್ತು ತಾರೀಕಿನೊಂದಿಗೆ ತಮಗೆ ಕಳಿಸಬೇಕೆಂದೂ ಬರೆಯುತ್ತಾರೆ. ಮಾಸಗಳನಂತರ, ಕೆಲವೊಮ್ಮೆ ವರ್ಷಗಳನಂತರ ಈ ಬಾಟಲಿಗಳು ಯಾರು ಯಾರಿಗೋ ಪ್ರಪಂಚದ ಯಾವ ಯಾವ ಮೂಲೆಯಲ್ಲಿಯೋ ದೊರೆತು, ಹೊಸ ರಹಸ್ಯಗಳನ್ನು ಭೇದಿಸುವಲ್ಲಿ ಸಹಾಯಕವಾಗುವುವು.

ಇಂತಹ ಬಾಟಲಿಗಳಲ್ಲಿ ಗುಪ್ತಧನ ಅಥವಾ ನೀಲುನಾಮೆಗಳಿರುವುವೆಂದೂ ಜನರು ಹೇಳುತ್ತಾರೆ. ಆದರೆ, ಅಂತಹವು ಇವುಗಳ ವೈಜ್ಞಾನಿಕ ಮಹತ್ವವನ್ನು ತಿಳಿಯಲಾರರು. ಅಂತಹ ಒಂದು ಬಾಟಲಿ ದೊರೆತರೆ, ಹಣ ಸಂಪಾದನೆಯೊಂದೇ ಅವರ ಆಸೆ. ಸಮುದ್ರದ ತೆರೆಗಳ ಅಧ್ಯಯನಕಾರರು ಪ್ರಾರಂಭದಲ್ಲಿ ಬಹುಮಾನ ಘೋಷಿಸುವ ಚೀಟಿಯನ್ನೂ ಇಡುತ್ತಿದ್ದರಂತೆ; ಎಂದರೆ, ಅದನ್ನು ಪಡೆದವರು ತಮಗೆ ಅವಶ್ಯ ತಿಳಿಸಬೇಕೆಂಬುದೇ ಅವರ ಆಶಯ. ಆದರೆ, ಇತ್ತೀಚೆಗೆ ಇಂತಹ ಬಹುಮಾನಗಳನ್ನು ಕೊಡುವುದಿಲ್ಲವಾದುದರಿಂದ ತಲಪಿದ ಬಗ್ಗೆ ಚೀಟಿಗಳೂ ಅಧ್ಯಯನಕಾರರ ಕೈಸೇರುವುದು ಕಡಿಮೆಯಾಗಿದೆ.

ಕೆಲವರ್ಷ ಹಿಂದಿನ ಮಾತು. ಒಂದು ಸಾಗರ ಸಂಶೋಧನಾಲಯದವರು ಹಿಂದೂ ಮಹಾಸಾಗರದಲ್ಲಿ ಒಂದು ಬಾಟಲಿಯನ್ನು ಬಿಟ್ಟರು. ಇದು ಬ್ರಿಟಿಷ ಸೋಮಾಲೀ ಲೇಂಡಿನ ಒಬ್ಬ ರೈತ ಮುಹಮ್ಮದ ನುಸ್ತಫಾ ಎಂಬವನ ಕೈಸೇರಿತು. ಆತನು ಪ್ರಸನ್ನವದನನಾಗಿ ಅದರಲ್ಲಿದ್ದ

(೯ನೇ ಪುಟ ನೋಡಿರಿ)

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ವ್ಯಕ್ತಿತ್ವವಿಕಾಸ

ದಾನವತೆಯಿಂದ ದೈವಿಕತೆಯ ವರೆಗೆ

ಮಾನವನ ವ್ಯಕ್ತಿತ್ವವೊಂದು ಉದ್ಯಾನ. ಇದರ ನಿರಂತರ ಕೆಲಸ ಸದಾ ನಡೆಯುತ್ತಿರಬೇಕು; ಕಳೆ ಕೀಳಬೇಕು. ಇದು ಹೇಗೆ ಎಂದು ಅಮೇರಿಕೆಯ ಜೀವನದ್ರಷ್ಟಾರ ಶ್ರೀ ವಿಲ್ ಡ್ಯುಂಟರ ವಿವೇಚನೆಯು ನಮಗೆ ತಿಳಿಸುತ್ತದೆ.

ಯಾವುದರ ಕೊರತೆಯೂ ಇಲ್ಲದೆ ಬದುಕುವುದೇ ನಮೆಲ್ಲರ ಸರ್ವಪ್ರಥಮ ಕರ್ತವ್ಯವಾಗಿದೆ. ಆರೋಗ್ಯವಂತರಾಗಿರುವುದು ಮುಖ್ಯವಾಗಿ ನಮ್ಮನಮ್ಮನ್ನೇ ಹೊಂದಿಕೊಂಡಿದೆ. ರೋಗಿಯಾಗುವುದು ಒಂದು ಬಗೆಯ ಪಾಪ. ನೀವು ಶರೀರಕ್ಕೆ ಏನಾದರೂ ಅಪಚಾರವನ್ನೆಸಗಿದರೆ, ಆಗ ಪ್ರಕೃತಿಯು ನಿಮ್ಮನ್ನು ಬಿಡದೆ ಎಚ್ಚರಿಸುವುದು. ಪ್ರಕೃತಿಯ ಸಕ್ರಿಯ ಭಾವನೆಯು ನಿಮಗೆ ಪೀಡೆ ಮತ್ತು ಕಷ್ಟಗಳ ರೂಪದಲ್ಲಿ ವ್ಯಕ್ತವಾಗುವುದು. ಈ ಪೀಡೆಯಿಂದ ಉಳಿಯುವ ಏಕಮೇವ ಉಪಾಯವೆಂದರೆ, ಆರೋಗ್ಯವಂತರಾಗಿ ಬಾಳುವುದು. ವ್ಯಾಯಾಮ ಮಾಡುವುದಕ್ಕೆ ಒಂದು ನಿಶ್ಚಿತ ಸಮಯವನ್ನು ಕಾಯ್ದಿರಿಸಿರಿ. ಜತೆಗೆ ಆಹಾರದಲ್ಲಿಯೂ ನಿಯಂತ್ರಣವನ್ನು ಹೇರಿಕೊಂಡಿರಿ.

ಆವಶ್ಯಕತೆಗಿಂತ ಹೆಚ್ಚಾಗಿ ಉಣ್ಣುವುದೇ ಇಂದು ಜನರಿಂದಾಗುವ ಮಹಾಪರಾಧ. ಆರಾಮ ಮತ್ತು ಆಲಸಮಯವಾಗಿ ಬದುಕಿ ಅವಶ್ಯಕತೆಗಿಂತ ಅಧಿಕ ತಿನ್ನುವುದು ಶರೀರದ ಮೇಲೆ ಎಸಗಿದ ಅತ್ಯಾಚಾರವಾಗಿದೆ. ಆಯಾಸವನ್ನು ನಿಯಂತ್ರಣಕ್ಕಿಂತ ಹೆಚ್ಚಾಗಿಸಿ ಶರೀರದ ಅಂಗಾಂಗಗಳಿಗೆ ಉಪದ್ರವ ಕೊಡುವವರಿಂದಲೇ ಇಂದು ಆಸ್ಪತ್ರೆಗಳು ತುಂಬಿ ಹೋಗಿವೆಯೆನ್ನಬಹುದು. ಪ್ರತಿದಿನವೂ ಶಾರೀರಿಕ ಶ್ರಮವೆಸಗಿರಿ. ಪ್ರಕೃತಿಯು ನಮಗೆ ಶಾರೀರಿಕ ಶಕ್ತಿಯನ್ನಿತ್ತಿದೆ; ಮಾನಸಿಕ ಶಕ್ತಿಯನ್ನೂ ಕೊಟ್ಟಿದೆ. ಮಾನಸಿಕ ಶಕ್ತಿಯು ಸ್ಥಾನವನ್ನು ಶಾರೀರಿಕ ಶಕ್ತಿಯು ಎಂದೂ ಪಡೆಯಬಾರದು; ಶರೀರವು ಶ್ರಮಶೀಲವಾಗದ ಹೊರತು, ಕೇವಲ ಮಾನಸಿಕ ಶ್ರಮವೆಂಬುದು ರೋಗಜನಕವೇ ಸರಿ.

ಹಸಿವೆಯನಂತರ ನಮ್ಮ ಉಗ್ರತಮ ಸಮಸ್ಯೆ ಎಂದರೆ, ಕಾಮಭಾವನೆ. ಪ್ರಕೃತಿ ಸದಾ ಸಂಚಾರಿಯಾಗಿರುತ್ತದೆ. ಅದು ಸ್ತ್ರೀಗೆ ರೂಪವನ್ನೂ ಪುರುಷನಿಗೆ ಬಲವನ್ನೂ ಕೊಟ್ಟು, ಪಾರಸ್ಪರಿಕ ಆಸಕ್ತಿಯನ್ನುಂಟುಮಾಡಿದೆ. ಇಂದು ಸ್ತ್ರೀಯರನ್ನು ಹುಚ್ಚರಂತೆ ಹಿಂಬಾಲಿಸುವಷ್ಟು ಪುರುಷರ ದುಸ್ಥಿತಿ ಬಂದಿದೆ. ಕಾಮವಾಸನೆಯು ರಕ್ತವನ್ನು ಅಗ್ನಿಜ್ವಾಲೆಯಾಗಿಸುತ್ತದೆ. ಇದರಿಂದ ನಮ್ಮ ವ್ಯಕ್ತಿತ್ವವೆಲ್ಲಾ ಉದ್ವೇಲಿತವಾಗುವುದು. ನಾವು ಕರ್ತವ್ಯ ಮತ್ತು ಕಾಮನೆಗಳಲ್ಲಿ ಸಮನ್ವಯವನ್ನು ಸ್ಥಾಪಿಸಿಕೊಂಡರೆ, ವ್ಯಕ್ತಿತ್ವವು ಶ್ರೇಷ್ಠವಾಗುವುದು. ಪತಿ ಪತ್ನಿಯರು ಒಬ್ಬರಿನ್ನೊಬ್ಬರಿಗೆ ಸಹಾಯಕರಾಗದೆ ಹೋದರೆ, ವಿವಾಹವು ಕೇವಲ ಆಮೋದ ಪ್ರಮೋದದ ಸಾಧನ ಮಾತ್ರವಾದರೆ, ಅದು ಸಂಪೂರ್ಣ ಅಸಫಲವೇ ಸರಿ.

ವಿವಾಹ ಪದ್ಧತಿಯು ಕೇವಲ ಸಂಪತ್ತಿನ ರಕ್ಷಣೆ ಮತ್ತು ಮಕ್ಕಳ ಪಾಲನೆ ಪೋಷಣೆಗಳಿಗಾಗಿ ಮಾತ್ರ ಆರಂಭವಾದುದಲ್ಲ. ಮನುಷ್ಯನ ಕಾಮವಾಸನೆಯ ಅಮಾನುಷಿಕ ಪ್ರದರ್ಶನವನ್ನು ತಡೆಗಟ್ಟುವುದಕ್ಕಾಗಿಯೂ ಪ್ರಚಲಿತವಾಗಿದೆ. ವಿವಾಹಾನಂತರ ಸ್ವೇಚ್ಛಾನುಸಾರ ಕಾಮ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬಹುದೇನೋ ನಿಜವೇ; ಅದು ಸೀಮಿತವಾಗಿಯೂ ಇರಬಲ್ಲುದು ಮತ್ತು ಸಮಾಜದ ಅಭಿರುಚಿಗೆ ಅನುಕೂಲವಾಗಿಯೂ ಉಳಿಯಬಲ್ಲುದು. ವಿವಾಹಾನಂತರ ನಾವು ವಿವಿಧ ವಿಷಯಗಳಲ್ಲಿ ಸರಿಯಾಗಿ ವಿಚಾರಿಸಲು ಸಾಮರ್ಥ್ಯ ಪಡೆಯುತ್ತೇವೆ; ಯಥಾರ್ಥವಾಗಿ ವಯಸ್ಕರಾಗುತ್ತೇವೆ. ಆದುದರಿಂದ ಸಮರ್ಥರಾಗಿದ್ದರೂ ವಿವಾಹ ಬಂಧನದಲ್ಲಿ ಉಳಿದುಕೊಂಡೇ ಕಾಮಭೋಗವನ್ನು ನಮ್ಮಿಂದದೂರನಿಲ್ಲಿಸಬೇಕು. ಹೆಚ್ಚು ಕಡಿಮೆ ಯಾವನೇ ಅಥವಾ ಯಾವಳೇ ವ್ಯಕ್ತಿ ತನ್ನ ಪತಿ ಅಥವಾ ಪತ್ನಿಯನ್ನು ಆರಿಸುವ ಯೋಗ್ಯತೆ ಪಡೆದಿರುವುದಿಲ್ಲ. ತಾಯ್ತಂದೆಯರು ತಮ್ಮ ಮಕ್ಕಳು ವಿವಾಹ ಬಂಧಿತರಾಗುವಂತೆ ನೋಡಿಕೊಳ್ಳಬೇಕು. ತಮ್ಮ ಸಂಪರ್ಕ ಮತ್ತು ಅನುಭವಪೂರ್ಣ ವಿಚಾರಗಳಿಂದ ಪುತ್ರಪುತ್ರಿಯರ ವಿಳಿಗೆಯನ್ನು ಕಾರ್ಯ್ಯಸಬೇಕು.

ವಿವಾಹದ ಸಂಕಷ್ಟಗಳು ವಿವಾಹದಿಂದ ಲಭಿಸುವ ಸುಖಗಳೊಡನೆ ಹೋಲಿಸಿದರೆ ತೀರ ಅತ್ಯಲ್ಪ. ಪತ್ನಿಯ ಒಂದು ಮಂದಹಾಸ ಮತ್ತು ಮಗುವಿನ ಒಂದು ತೀರಗೆಯ ಆಲಿಂಗನವು ಜೀವನವನ್ನು ಸ್ವರ್ಗಸಮವಾಗಿ ಮಾಡಬಲ್ಲುದು. ತಾನು ಜೀವನದಲ್ಲಿ ಸಾರ್ಥಕ್ಯವನ್ನು ಪಡೆದಿರುವುದಾದರೆ, ಮಕ್ಕಳ ಪ್ರೀತಿಯಿಂದಾಗಿ ಎಂದು ಫ್ರಾನ್ಸಿನ ಸುಪ್ರಸಿದ್ಧ ರಾಜ ನೆಪೋಲಿಯನ್ ಅಂದಿದ್ದಾನೆ.

ಸದಾ ದಯಾಳುವಾಗಿರುವವನೇ ಸಭ್ಯ ಮನುಷ್ಯ ಎಂದು ಹೇಳಬಹುದು. ಸದಯ ವಚನವು ಅಮೂಲ್ಯವಾಗಿದೆ. ನಿಮ್ಮ ಪ್ರತಿ ಸತ್ಕಾರ ವಚನವು ನಿಮ್ಮ ಬಳಿಗೇನೇ ಒಂದುದಿನ ಮರಳಿ ಬರುತ್ತದೆ ಮಾತ್ರವಲ್ಲ, ನಿಮ್ಮ ಜೀವನದಲ್ಲಿ ದೊಡ್ಡ ಕಂಠಕವಾಗಿ ಕಾಣಿಸಿಕೊಳ್ಳುತ್ತದೆ. ಬೇರೆಯವರಿಗೆ ಕೆಡುಕು ಹಾರೈಸುವುದು ಅವಿಶ್ವಸ್ತತೆಯಿಂದ ಆತ್ಮಪ್ರಶಂಸೆ ಮಾಡಿಕೊಂಡಂತೆಯೇ ಸರಿ.

ಕುಟುಂಬ ಮತ್ತು ಗುರುವಿನಂತೆಯೇ ಧರ್ಮವೂ ಚರಿತ್ರ ನಿರ್ಮಾಣದಲ್ಲಿ ಒಂದು ದೊಡ್ಡ ಸಾಧನವಾಗಿದೆ. ಸುಮಾರು ೫೦ ಸಾವಿರ ವರ್ಷ ಅಥವಾ ಅದಕ್ಕೂ ಹಿಂದೆ ಕೃಷಿಯನ್ನು ಕಂಡುಹಿಡಿದ ಮಾನವ ಮೊದಲು ಬೇಟೆಗಾರನಾಗಿದ್ದನು. ಭೋಜನದ ಅನಿಶ್ಚಿತತೆ ಮತ್ತು ಅಸಮಾನತೆಗಳಿಂದಾಗಿ ಆ ಕಾಲದ ಮಾನವ ಅತಿ ಬಯಕೆಗಾರನಾಗಿದ್ದನು. ಆಹಾರಕ್ಕಾಗಿ ಆತ ಹೊಡೆದಾಡುತ್ತಿದ್ದನು; ಆತನ ಕಾಮುಕತೆಯ ಹಿಂದೆ ಜನಸಂಖ್ಯಾವೃದ್ಧಿಯ ಕಲ್ಪನೆಯೇ ಪ್ರಧಾನವಾಗಿತ್ತು. ಇದರಿಂದ ಅಧಿಕ ಸಂಗಮವಾಗಿಯೇ ತನ್ನ ಉದರಪೂರ್ತಿಯಾಗುತಿತ್ತು.

ಕೃಷಿ ಪದ್ಧತಿಯು ವ್ಯವಹೃತವಾದಾಗ, ಜೀವನ ಸುಲಭವಾಗಿ ನಡೆಯತೊಡಗಿತು. ಜನರಿಗೆ ಸಮಾಜದಲ್ಲಿ ಆಸಕ್ತಿ ಹುಟ್ಟಿತು. ಅವರು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡರು. ಜೀವನ ನಿರ್ವಾಹದ ಮೇಲೆ ನಿಯಮ ಹೇರುವುದರಿಂದ ಮತ್ತು ವಿವಿಧ ಸದಾಚಾರಗಳ ರೂಪದಲ್ಲಿ ಸ್ವೇಚ್ಛಾವಿಚಾರದ ಮೇಲೆ ಅಂಕುಶವನ್ನು ಹೇರತೊಡಗಿತು. ತಂದೆ ತಾಯ್ರು, ಗುರು, ಹಿರಿಯರ ಮೂಲಕ ಈ ಅಂಕುಶವು ಪ್ರಭಾವಶಾಲಿಯಾಯಿತು. ಕ್ರಮೇಣ ಇವೇ ಪರಂಪರಾಗತವಾದುವು. ಈ ಪ್ರತಿಬಂಧಕ ನಿಯಮಗಳು ಮೊದಮೊದಲು ಶರೀರಕ್ಕೆ ತಾಪದಾಯಕವಾಗಿದ್ದುವು. ಅವರೂ ಇವುಗಳನ್ನು ಪಾಲಿಸಲಾಯಿತು. ಗುರುಮುಖದಿಂದ್ಲ ಈ ನಿಯಮಗಳಲ್ಲಿ ಆಸಕ್ತಿ ತೋರಿಸಲಾದರೂ ಮುಖ್ಯವಾಗಿ ಇವುಗಳ ನಿರ್ಮಾತೃವು ಸರ್ವಶಕ್ತ ಭಗವಂತನೆಂಬುದರಿಂದ ಇದಕ್ಕೆ ಮತ್ತಷ್ಟು ಬಲಬಂದಿತು. ಆತ ಪ್ರತಿ ಸತ್ಕಾರ್ಯದಲ್ಲಿ ಪುರಸ್ಕಾರ ನೀಡುತ್ತಾನೆ; ಕುಕರ್ಮಗಳಲ್ಲಿ ದಂಡನೆಯನ್ನೀಯುತ್ತಾನೆ. ಧರ್ಮವು ಸಮಾಜದ ಮೇಲೆ ಇಂತಹ ಮನೋಭಾವವನ್ನು ಪ್ರಕಟಿಸದೆ ಉಳಿದಿದ್ದರೆ, ಮಾನವ ಸಮಾಜದ ನಾಗರಿಕತೆಯು ಇಂತಹ ಘನತೆಗೇರುತ್ತಿರಲಿಲ್ಲ.

ವಿಜ್ಞಾನ ಪ್ರಪಂಚದ ಆಧುನಿಕ ಮುದುಕರುಗಳನ್ನು 'ಧರ್ಮ'ವು ಅಷ್ಟು ತೀವ್ರವಾಗಿ ಹೊಗಳಲಾರದು. ಇದಕ್ಕೆ ನ್ಯೂಟನ್ ಪಾಶ್ಚರರಂತಹ ಅನುಭೂತಿ ಬೇಕಾಗುತ್ತದೆ. ರೂಸೊ ಮತ್ತು ಪಾಸ್ಕಲರಂತೆ ಅದರಲ್ಲಿ ವಿಶ್ವಾಸವಿಡಬೇಕಾಗುತ್ತದೆ. ಕೇವಲ ಬುದ್ಧಿಯನ್ನೇ ಹೊಂದಿಕೊಂಡೇ ಮಾನವ ಜೀವಿಸುತ್ತಿಲ್ಲ; ಎಂದಿವರನ್ನುತ್ತಾರೆ. ಈ ಸುವಿಶಾಲವಾದ ಸೃಷ್ಟಿಯಲ್ಲಿ ನಾವು ಅತಿ ಎಳೆಯದಾದ ಒಂದು ಕಣ. ಹಾಗಿರುವಾಗ ಅಖಂಡ ಸೃಷ್ಟಿಯನ್ನು ನಾವು ಅರ್ಥಮಾಡಿಕೊಳ್ಳುವುದಾದರೂ ಸಾಧ್ಯವೆ? ಆದುದರಿಂದ ಇಂದ್ರಿಯ ಜನ್ಯ ಅನುಭೂತಿಗೂ ನಿರಿದುರೊಂದಿದೆ ಎಂದು ತಿಳಿದುಕೊಳ್ಳುವುದೇ ಶ್ರೇಯಸ್ಕರವಾದುದು.

ಧನದ ಜೀವನದ ಸಾಫಲ್ಯಕ್ಕಾಗಿ ಅವಶ್ಯಕವೇ. ಆದರೆ, ರೊಟ್ಟಿ ಚೂರಿಗಾಗಿ

(ಆನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಟಪಾಲು ಖರ್ಚು ಬೇರೆ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M O one copy will be sent by B. P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ಅರಸನಾದವನು ತಪ್ಪಿ ನಡೆದರೆ ಅಧಿಕಾರಿಗಳು ಅವನನ್ನು ತಡೆಯುವುದಿಲ್ಲ; ಅಧಿಕಾರಿಗಳು ತಪ್ಪಿ ನಡೆದರೆ ಜನ ಅವರನ್ನು ಎದುರಿಸುವುದಿಲ್ಲ ಈ ಸ್ಥಿತಿಯಲ್ಲಿರುವ ಜನತೆ ಮುಂದುವರಿಯುವುದು ಸಾಧ್ಯವಿಲ್ಲ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೧-೪-'೭೦	೩೩

ಸೂಕ್ತ ಸಲಹೆ

"ಸರಕಾರಿ ಕೆಲಸಗಳಿಗೆ ನೇಮಕವನ್ನು ಮಾಡಿಕೊಳ್ಳುವಾಗ ಹರಿಜನರಿಗೆ ಮತ್ತು ಗಿರಿಜನರಿಗೆ ಕೆಲವೊಂದು ಸ್ಥಾನಗಳನು ಕಾಯ್ದಿರಿಸುವುದರಿಂದ ಆ ವರ್ಗಕ್ಕೆ ಸೇರಿದ ಜನತೆಯ ಕಲ್ಯಾಣವಾಗಲಾರದು, ಆ ಸಮಸ್ಯೆಯೂ ಬಗೆಹರಿಯಲಾರದು" ಎಂದು ಪ್ರಧಾನಿ ನೆಹರೂ ಇತ್ತೀಚೆಗೆ ಒಂದು ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಅಂದಿದ್ದಾರೆ. ಈ ಮಾತಿಗೆ ಪುಷ್ಟಿಯೀಯುವಂತೆ, ಶಿಕ್ಷಣ, ಉದ್ಯೋಗ ಮತ್ತು ನ್ಯಾಯಾಲಯಗಳ ಕಾರ್ಯ ಕಲಾಪಗಳಿಗೆ ಸಂಬಂಧಿಸಿದ ಅರ್ಜಿಗಳು ಮತ್ತು ದಾಖಲೆಗಳಲ್ಲಿ ಜಾತಿಯ ಹೆಸರನ್ನು ಅಂಕಿಸಬಾರದು ಎಂದು ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಈಗ ಸಲಹೆಯಿತ್ತಿರುವುದು. ಈ ಸಲಹೆಯನ್ನು ರಾಜ್ಯ ಸರಕಾರಗಳು ತಾತ್ವಿಕವಾಗಿ ಒಪ್ಪಿಕೊಂಡಿದ್ದರೂ ಅದನ್ನು ಕಾರ್ಯರೂಪಕ್ಕೆ ಇಳಿಸಲು ಎಷ್ಟು ಸಮಯ ತೆಗೆದುಕೊಳ್ಳುವುವೆಂದು ಈಗ ಹೇಳುವುದು ಸಾಧ್ಯವಿಲ್ಲ. ಆದರೂ ಕೇಂದ್ರದ ಈ ಸಲಹೆಯು ನ್ಯಾಯೋಚಿತ ಮತ್ತು ಸಮಯೋಚಿತವಾಗಿದೆ ಎಂದು ಹೇಳಿದರೆ ಅತ್ಯುಕ್ತಿಯಾಗಲಾರದು.

ಇಂದು ಜಾತಿಗಳ ಪ್ರಾಬಲ್ಯ, ಅವುಗಳು ಸಾಧಿಸುವ ಕೆಲಸಗಳನ್ನು ನಾವು ಊಹಿಸುವಾಗ ಬುದ್ಧಿವಂತರಾದವರಿಗೆ ಯಾವ ಸ್ಥಾನವೂ ಸುಲಭ ಪ್ರಯಾಸದಲ್ಲಿ ದೊರೆಯುವಂತಿಲ್ಲ ಎಂಬುದು ಸರ್ವವೇದ್ಯವೇ. ಸರಕಾರಿ ಕಛೇರಿಗಳಲ್ಲಿ ಈ ಜಾತಿಯ ಭೂತದ ಕೀಟಲೆಯು ತಾಂಡವವಾಡುತಿದ್ದು, ಅನೇಕಾನೇಕ ಬುದ್ಧಿವಂತರ ಮೆದುಳಿನ ಉಪಯೋಗ ದೇಶಕ್ಕೆ ದೊರೆಯದಂತಹ ಸಂಚನ್ನು ಹೂಡುತ್ತಿದೆ. ಇದರಿಂದಾಗಿ, ಸರಕಾರದ ಕಾರ್ಯಕಲಾಪಗಳು ಕುಂಠಿತವಾಗುವುದು ಮಾತ್ರವಲ್ಲ, ಬುದ್ಧಿವಂತರಲ್ಲಿ ಹರಡಿದ ನಿರಾಸೆಯ ಕಾರ್ಮೋಡಗಳಿಂದಾಗಿ, ಅವರ ವ್ಯಕ್ತಿತ್ವವನ್ನೇ ಹಾಳುಗೆಡಹಿದ ಉದಾಹರಣೆಗಳು ಸಾಕಷ್ಟಿವೆ. ಶಿಕ್ಷಣದಲ್ಲಿ, ಮುಖ್ಯವಾಗಿ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ ರಂಗದಲ್ಲಿ ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಥಾನಗಳು ದೊರೆಯುವುದಿಲ್ಲ. ರಾಜ್ಯಸರಕಾರಗಳು ಜಾತಿಯ ಆಧಾರದಿಂದ ಹಿಂದುಳಿದವರ ಯಾದಿಯೊಂದನ್ನು ತಯಾರಿಸಿ, ಅವರಿಗೆ ಸ್ಥಾನಗಳನ್ನು ಕಾಯ್ದಿರಿಸುತ್ತವೆ; ನೌಕರಿಗಳಿಗೆ ಸೇರಿಸಿಕೊಳ್ಳುವಾಗಲೂ ಇದೇ ನೀತಿಯನ್ನು ಅನುಸರಿಸುತ್ತವೆ. ಇದರಿಂದಾಗಿ ದೇಶದ ಭವಿಷ್ಯತ್ತು ಅಂಧಕಾರಮಯವಾಗುತ್ತ ಬರುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ದಟ್ಟಣೆಯೇರುವುದಕ್ಕೂ ವಿದ್ಯೆಯ ಮಟ್ಟವು ಇಳಿಯುವುದಕ್ಕೂ ಸರಕಾರದ ಈ ನೀತಿಯೂ ಒಂದು ಕಾರಣವೆಂದು ಹೇಳಬಹುದು. ಜಾತೀಯ ಭೇದಭಾವನೆಯು ಭಾರತದಲ್ಲಿ ಮೊದಲೇ ಇದ್ದಂತಿಲ್ಲ. ಇಂದು ನಾವು ಹೆಸರಿಸುವ ಜಾತಿಗಳೆಲ್ಲವೂ ವೃತ್ತಿಯನ್ನೇ ಅನುಸರಿಸಿಕೊಂಡು ಬಂದುವೆಂದು ಆಯಾ ಜಾತಿಗಳ ಹೆಸರುಗಳೂ ಅವರವರ ಪೂರ್ವಜರ ಇತಿಹಾಸವೂ ಸಾರಿಹೇಳುತ್ತವೆ. ಇದೇ ರೀತಿಯಲ್ಲಿ ನಾವು ಜಾತಿಗಳನ್ನು ಬೆಳೆಸುತ್ತ ಹೋದರೆ, ಇನ್ನೂ ಕೆಲವು ವರ್ಷಗಳು ಕಳೆದ ಮೇಲೆ, ವಕೀಲ, ಡಾಕ್ಟರ, ಪೇದೆ ಮೊದಲಾದ ಜಾತಿಗಳೂ ಸ್ವಾಭಾವಿಕವಾಗಿ ಉದ್ಭವವಾದಾವು. ಆದರೆ, ಇದು ನ್ಯಾಯೋಚಿತವೆಂದು ಹೇಳುವುದು ಸರ್ವಥಾ ಅಸಾಧ್ಯ. ಸಮಾಜದಲ್ಲಿ ನಿಜವಾಗಿಯೂ ಹಿಂದುಳಿದವರಿಗೆ ಕೆಲವೊಂದು ವಿಶೇಷ ಸೌಕರ್ಯಗಳನ್ನು ಒದಗಿಕೊಡುವ ಪ್ರಶ್ನೆಯನ್ನು ಯಾರೂ ಅಲ್ಲಗಳೆಯಲಾರರು. ಮತ್ತು ಹೀಗೆ ಅವರ ಉನ್ನತಿಯನ್ನು ಸಾಧಿಸಲು ನೆರವಾಗುವುದು ಅವಶ್ಯವೆಂದೂ ಹೇಳಬೇಕಾಗುತ್ತದೆ. ಆದರೆ, ರಾಜ್ಯಸರಕಾರಗಳು ಈ ಕುಂಟು ಪಟ್ಟಿಯ ಆಧಾರದಿಂದ ಹಿಂದುಳಿದವರ ಯಾದಿಯನ್ನು ಬೆಳೆಸುತ್ತ ಬಂದಲ್ಲಿ, ಜಾತೀಯ ತಳಹದಿಯಲ್ಲಿ ಹಿಂದುಳಿದವರನ್ನು ನಿರ್ಧರಿಸುವುದಾದಲ್ಲಿ ಅದು ಉಳಿದ ಜಾತಿಯ ಜನತೆಯ ಪ್ರಗತಿಯಲ್ಲಿ ಆತಂಕವನ್ನೊಡ್ಡಿದಂತೆಯೇ ಸರಿ ಇಂದು ಜಾತೀಯ ತಳಹದಿಯಲ್ಲಿಯೇ ನಮ್ಮ ಆಡಳಿತೆ ಯಂತ್ರವು ಮುನ್ನಡೆಯುತ್ತ ಹೋಗುತ್ತಿರುವುದು ನಿಜ; ಆದರೆ, ಸರ್ವರಿಗೂ ಸಮಾನಾವಕಾಶವನ್ನು ಒದಗಿಸುವ ನಮ್ಮ ಸಂವಿಧಾನದಲ್ಲಿ ಕೊಡಮಾಡಿದ ನಾಗರಿಕಾಧಿಕಾರವನ್ನು ಸಮಂಜಸವಾಗಿ ಉಪಯೋಗಿಸಿಕೊಳ್ಳುವುದು ಮಾತ್ರ ಸಾಧ್ಯವಿಲ್ಲ. ಈ ದೃಷ್ಟಿಯಿಂದ, ಜಾತೀಯವಾದಕ್ಕೆ ಪ್ರತ್ಯಕ್ಷದಲ್ಲಿ ಮಾತ್ರವಲ್ಲ; ಪರೋಕ್ಷದಲ್ಲಿಯಾದರೂ ಪ್ರೋತ್ಸಾಹನೀಡುವ ಯೋಚನೆಯು ದೇಶದ ಪ್ರಗತಿಮಾರ್ಗದಲ್ಲೆದುರಾಗುವ ಕಂಟಕವೆಂದು ಬೇರೆ ಹೇಳಬೇಕಾಗಿಲ್ಲ. ಜಾತ್ಯತೀತ ಮತ್ತು ವರ್ಗರಹಿತ ಸಮಾಜವನ್ನು ಸ್ಥಾಪಿಸುವ ಸಂವಿಧಾನವನ್ನು ದುರುಪಯೋಗಪಡಿಸುವುದು ಅಸಹನೀಯವೇ ಸರಿ. ಇಂದು ಜಾತೀಯತೆಯ ದೃಷ್ಟಿಯಿಂದ ಸ್ಥಾನಗಳ ಕಾಯ್ದಾಟ ನಡೆಯುವುದರಿಂದಾಗಿ, ಎಲ್ಲ ಜಾತಿಯವರೂ ಹಿಂದುಳಿಯುವ ಪ್ರಯತ್ನ ನಡೆಸುತಿದ್ದಾರೆ; ಹಿಂದುಳಿದವರಾದರೂ ಚಿಂತೆಯಿಲ್ಲ; ಸೌಕರ್ಯ ಲಭಿಸಲಿ ಎಂದಿವರು ಯೋಚಿಸುತ್ತಾರೆ ಹೀಗಾದಲ್ಲಿ ನಿಜವಾದ ಯೋಗ್ಯತಾವಂತನಲ್ಲಿ ನಿರಾಶೆ ಕವಿಯದೆ ಬೇರೇನಾಗಬೇಕು?

ಯೋಗ್ಯತೆಯಿದ್ದವನಿಗೆ, ಜಿಜ್ಞಾಸುವಾದವನಿಗೆ ಶಿಕ್ಷಣ ಪಡೆಯಲು ಅಡ್ಡಿಯಿರಬಾರದು; ಅರ್ಹತೆ ಮತ್ತು ಸಾಮರ್ಥ್ಯವಿರುವವನಿಗೆ ಉದ್ಯೋಗ ದೊರೆಯದಿರಬಾರದು. ಇದರಿಂದ ಸರಕಾರ ಶಿಕ್ಷಣ ಸಂಸ್ಥೆಗಳಿಗೆ ಮಾಡುವ ವೆಚ್ಚವು ಸದುಪಯೋಗವಾಗಿ, ರಾಷ್ಟ್ರದ ಕಲ್ಯಾಣವಾಗುವುದು; ಸರಕಾರದ ಕೆಲಸಗಳೂ ಯಥಾಯೋಗ್ಯವಾಗಿ ನಿರ್ವಹಿಸಲ್ಪಡುವುವು. ರಾಷ್ಟ್ರಕ್ಕೆ ಬೇಕಾದುದು ಸಮರ್ಥ ಆಡಳಿತೆ; ಇದಕ್ಕೆ ಕಾರಣರು ಸಮರ್ಥ ನೌಕರರು. ಸಾಮರ್ಥ್ಯವುಳ್ಳ ನೌಕರರ ಅಭಾವವಿದ್ದಲ್ಲಿ ದುರ್ಬಲ ಕುದುರೆಗಾಡಿಯಂತೆ ಕಾರ್ಯಕಲಾಪಗಳು ನಿಧಾನವಾಗುವುವು. ಇದರಿಂದಾಗಿ ಆಡಳಿತದ ಯಂತ್ರ ಸುಮ್ಮನೆ ಕಿರಿಕಿರಿ ಗುಟ್ಟುವುದೇ ಹೊರತು ತೀವ್ರವಾಗಿ ಚಲಿಸಲಾರದು. ಗ್ಯಾಸು ಬಸ್ಸುಗಳಂತೆ ಇಂತಹ ಸರಕಾರಗಳೂ ಜನಪ್ರಿಯವಾಗಲಾರವು. ಆದುದರಿಂದ, ಎಲ್ಲ ರಾಜ್ಯ ಸರಕಾರಗಳೂ ತಮಗೆ ಬಂದ ಸಲಹೆಯನ್ನು ಕಾರ್ಯಗತಗೊಳಿಸಬೇಕು; ಜಾತೀಯವಾದವನ್ನು ಅದರಿಂದಾಗಬಹುದಾದ ಹಾನಿಯನ್ನು ಕಂಡುಕೊಂಡ ಮೇಲಾದರೂ ಜಾತೀಯ ತಳಹದಿಯನ್ನು ಬಿಟ್ಟುಕೊಟ್ಟು ಆರ್ಥಿಕ ತಳಹದಿಯ ಮೇಲೆಯೇ ಹಿಂದುಳಿದವರನ್ನು ನಿರ್ಧರಿಸಬೇಕು. ಜಾತೀಯ ವಿಷಬೀಜವನ್ನು ಬಿತ್ತಿಯೇ ಬ್ರಿಟಿಷಸತ್ತೆ ಭಾರತದಲ್ಲಿ ಪ್ರಭುತ್ವನಡೆಸಿತು, ಜಾತೀಯವಾದದಿಂದಲೇ ಅಖಂಡ ಭಾರತ ವಿಭಜನೆ ಹೊಂದಿತು; ಜಾತೀಯವಾದವೇ ಸ್ವತಂತ್ರ ಭಾರತದ ಅಧಃಪತನವನ್ನು ಮಾಡುವುದು. ಜಾತಿಗಳು ಅಂತಸ್ಥವಾಗಿ ವೈಯಕ್ತಿಕವಾಗಿರಬಹುದು; ಅಲ್ಲದೇ ಸಾಮೂಹಿಕವಾಗಿ ಎಂದೆಂದಿಗೂ ಪ್ರಕಟಗೊಳ್ಳಬಾರದು. ಆದುದರಿಂದ, ಆರ್ಥಿಕ ಮಾನದಂಡವನ್ನೇ ಮೂಲಾಧಾರವಾಗಿಟ್ಟುಕೊಂಡು ಹಿಂದುಳಿದವರು ಯಾರೆಂದು ನಿರ್ಧರಿಸುವುದು ವ್ಯಾವಹಾರಿಕವಾಗಿದೆ. ಕೇಂದ್ರ ಸರಕಾರ ಈ ಬಗ್ಗೆ ತುಸು ತಡವಾಗಿಯಾದರೂ ರಾಜ್ಯ ಸರಕಾರಗಳಿಗೆ ಒಂದು ವಿಧದ ಎಚ್ಚರಿಕೆಯಿತ್ತುದು ಸಮಂಜಸ. ಈ ಸಲಹೆ ಕೇವಲ ಸಲಹಾರೂಪದಲ್ಲಿರದೆ ಮೃದುಮಾತುಗಳಲ್ಲಿ ಕೊಟ್ಟ ಆಜ್ಞೆಯೆಂದು ಭಾವಿಸಿ, ಜಾತೀಯವಾದಕ್ಕೆ ರಾಜ್ಯಸರಕಾರಗಳು ಬೆಂಬಲವನ್ನು ಯಾವ ರೀತಿಯಲ್ಲೂ ನೀಡದೆ ವರ್ಗರಹಿತ ಆರ್ಥಿಕಸ್ವಾತಂತ್ರ್ಯಪೂರ್ಣ ಮತ್ತು ಜಾತ್ಯತೀತ ರಾಷ್ಟ್ರವನ್ನು ಕಟ್ಟಲು ಬದ್ಧಕಂಕಣವಾಗಲೆಂದು ಆಶಿಸಿದರೆ ಎಂದಿಗೂ ತಪ್ಪಾಗಲಾರದು.

ಕೆನರಾ ಬೇಂಕ್

೩೧-೧೨-೬೯ಕ್ಕೆ ಅಂತ್ಯವಾಗುವ ಕೆನರಾ ಬೇಂಕಿನ ಆಯುವ್ಯಯ ಮತ್ತು ಸಾಲಮೂಲಗಳ ಲೆಕ್ಕಪತ್ರವು ನಮ್ಮ ಕೈಸೇರಿದೆ. ಬೇಂಕಿನ ಒಟ್ಟು ಠೇವಣಾತಿಯು ೨೮೯.೩ ಕೋಟಿಗಳಿಗೇರಿವೆ. ಇದು ಹಿಂದಿನ ವರ್ಷಕ್ಕಿಂತ ಸೇ. ೨೧.೮ ಹೆಚ್ಚಳವನ್ನು ಸೂಚಿಸುತ್ತದೆ. ೫೦ ಲಕ್ಷ ರೂಪಾಯಿಯು ತೆತ್ತ ಬಂಡವಾಳವಿರುವಾಗ, ಅಷ್ಟೇ ಕ್ಷೇಮನಿಧಿಯೂ ಇರುವುದು ಬೇಂಕಿನ ಭದ್ರತೆಯ ದ್ಯೋತಕವೆನಿಸಿದೆ. ೧೮ ಲಕ್ಷದಷ್ಟು ಪಡೆದ ಲಾಭದಲ್ಲಿ ಸೇ. ೧೫ ರಂತೆ ಲಾಭಾಂಶವನ್ನು ಹಂಚುವ ಮತ್ತು ನೌಕರರಿಗೆ ಬೋನಸ್ ಕೊಡುವ ಯೋಜನೆಯನ್ನೂ ಮಾಡಲಾಗಿದೆ. ವರದಿ ವರ್ಷದಲ್ಲಿ ಬೇಂಕು ೮ ಹೊಸ ಶಾಖೆಗಳನ್ನು ತೆರೆದಿದೆ. ಮಧ್ಯಮ ವರ್ಗದ ಜನತೆಗೂ ಸಾಲದ ಸೌಕರ್ಯವನ್ನು ಒದಗಿಸುವ ಸಲುವಾಗಿ ಸೈಕಲು ಕೊಳ್ಳಲು, ವೈದ್ಯಕೀಯ ಡಿಸ್ಪೆನ್ಸರಿಗಳನ್ನು ತೆರೆ ಲು, ಶಿಕ್ಷಣ ಮುಂದುವರಿಸಲು ವಿದೇಶಗಳಲ್ಲಿ ಅಧ್ಯಯನಕ್ಕೆ ರಳಲು, ಸಾಲದ ಸೌಕರ್ಯ ಮೊದಲಾದ ಹಲವು ಯೋಜ ಗಳನ್ನು ಬೇಂಕು ತೊಡಗಿಸಿದೆ. ಸದ್ಯ ಸೌಲಭ್ಯಗಳು ಕೆಲವೇ ಶಾಖೆಗಳಲ್ಲಿ ವಾದರೂ ಕ್ರಮೇಣ ಬೇಂಕಿನ ಎಲ್ಲ ಖೆಗಳಿಗೂ ಇದನ್ನು ವಿಸ್ತರಿಸುವರೆಂದು ಶಿಸಬಹುದು. ಬೇಂಕಿನ ಉನ್ನತ ಪದಾ ಕಾರಿಗಳು ವಿದೇಶಗಳಲ್ಲಿ ಮುಖ್ಯವಾಗಿ ಮೆರಿಕ ಮತ್ತು ಯುರೋಪುಗಳಲ್ಲಿ ಭೇಟಿ ಹೊಂದಿಬಂದವರಾಗಿದ್ದು ಭಾರತದಲ್ಲಿ ಸಭದ್ರ ಆರ್ಥಿಕಸ್ತರವನ್ನು ಉಳಿಸಿಕೊಳ್ಳಲು ತನ್ನ ಸೇವೆಯನ್ನೂ ಯ ಥೋಚಿತವಾಗಿ ಸಲ್ಲಿಸುತ್ತಿರುವುದು ಅ ನಂದನಾರ್ಹವಾಗಿದೆ. ಭಾರತದ ವಿವಿಧ ಗಳಲ್ಲಿ ಹರಡಿರುವ ಬೇಂಕಿನ ೭೭ ಶಾಖೆ ಗಳಿರುವುದು ಮಾತ್ರವಲ್ಲದೇ ಪ್ರಪಂಚದ ಚ್ಚಿನ ದೇಶಗಳೊಡನೆಯೂ ವ್ಯವಹಾ ನಡೆಸಲು ಅನುಕೂಲವಾದ ಸಂಬಂಧ ನ್ನೂ ಪ್ರತಿನಿಧಿತ್ವವನ್ನೂ ಬೇಂಕು ಪ ದಿದೆ. ಇದರಿಂದಾಗಿ ದೇಶದ ಆರ್ಥಿಕ ನಾರಚನೆಯಲ್ಲಿ ಮಹತ್ವದ ಸೇವೆ ಸಲ್ಲಿಸು ತ್ತಿರುವ ಕೆನರಾ ಬೇಂಕಿನ ಸಮುನ್ನತಿಯನ್ನು ಹಾರೈಸುತ್ತೇವೆ.

ಒಡಕು ಬಗೆಹರಿಯಲಿ

ನಲುವತ್ತರ ಗಡಿಯನ್ನು ದಾಟದ ಕರ್ತೃತ್ವಶಕ್ತಿಯು ಸಂಪೂರ್ಣವಾಗಿರು ಉತ್ಸಾಹಿಗಳಾದ ಶ್ರೀ ಟಿ. ಎ. ಪೈ ಅ ರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ ಅಧ್ಯಕ್ಷಸ್ಥಾನಕ್ಕೆ ಬಹುಮತದಿಂದ ಆರಿ ಬಂದಿರುವುದು ಸಂತೋಷವನ್ನುಂಟುಮಾ ಡುತ್ತದೆ. ಪ್ರಾಯಶಃ ದ. ಕ. ಜಿಲ್ಲಾ ಕಾಂ ಗ್ರೆಸ್‌ನ ಇತಿಹಾಸದಲ್ಲಿಯೇ ಇಷ್ಟೊಂದ ಎಳೆಯ ಪ್ರಾಯದವರು ಅಧ್ಯಕ್ಷರಾದುದಿ ಲ್ಲ. ಶ್ರೀ ಪೈಯವರ ಆಯ್ಕೆಯು ನಿರೀಕ್ಷಿ ತವೆಂದೇ ಹೇಳಬಹುದು. ದ. ಕ ಜಿಲ್ಲೆ ಯು ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭ ದ್ರ ಕೋಟೆಯಂತಿದ್ದರೂ ಕಾಲಕ್ರಮದ ಲ್ಲಿ ಪಕ್ಷದ ಒಳಗಿನ ದೋಷಗಳಿಂದಾಗಿ ಗುಂಪು ರಾಜಕಾರಣದ ದೌರ್ಬಲ್ಯದಿಂ ದಾಗಿ ವಿರೋಧೀ ಪಕ್ಷಗಳು ಹೆಡೆಯೆತ್ತ ತೊಡಗಿದುವು. ಇದರ ದುಷ್ಪರಿಣಾಮ ವು ಕಾಂಗ್ರೆಸ್‌ನ ಸಂಘಟನಾಶಕ್ತಿಯ ಮೇಲೆ ಬೀರಿ ಅದು ಕ್ಷೀಣವಾಗುತ್ತ ಬಂ ದಿತ್ತು. ಸದ್ಯ ಯಾವ ಕಾರ್ಯವನ್ನೂ ಕೈಯಳಿಸಿದನಂತರ ಪೂರ್ಣ ಮಾಡುವ ಆ ತ್ಮವಿಶ್ವಾಸವುಳ್ಳ, ಅರ್ಹತೆ ಮತ್ತು ಸಾ

ಸಂಕ್ಷಿಪ್ತ ಸುದ್ದಿಗಳು

ಸದಸ್ಯರಿಗೆ ವಿಶೇಷ ಭತ್ತೆ

ಮೈಸೂರು ವಿಧಾನ ಸಭೆಯು ತನ್ನ ಹಿಂದಿನ ಅಧಿವೇಶನದಲ್ಲಿ ಸ್ವೀಕರಿಸಿದ ಒಂದು ಖಾಸಗಿ ಗೊತ್ತುವಳಿಯಂತೆ ಶಾಸನ ಸಭಾಸದಸ್ಯರಿಗೆ ಅಧಿಕ ಪ್ರತಿಫಲ ನೀಡಿಯಲು ಅನುವು ಮಾಡಿಕೊಡುವ ಸಲುವಾಗಿ ಒಂದು ಮಸೂದೆಯನ್ನು ರಾಜ್ಯ ಸರಕಾರವು ಮಂಡಿಸಿತು. ಇದರನ್ವಯ ಸದಸ್ಯರು ಈಗ ಪಡೆಯುತ್ತಿರುವ ಮಾಸಿಕ ರೂ. ೧೫೦ರ ವೇತನ ಮಾತ್ರವಲ್ಲದೆ ಜತೆಗೆ ರೂ. ೧೦೦ ರ ವಿಶೇಷ ಭತ್ತೆಯನ್ನೂ ಪಡೆಯುತ್ತಾರೆ. ಇದರಿಂದ ರಾಜ್ಯ ಸರಕಾರಕ್ಕೆ ವಾರ್ಷಿಕ ಮೂರು ಲಕ್ಷ ರೂಪಾಯಿ ಅಧಿಕ ವೆಚ್ಚ ಬರುವುದೆಂದು ತಿಳಿದುಬಂದಿದೆ.

ಸಾರಿಗೆ ದರ ಇಳಿಯಬೇಕು

ಮೈಸೂರು ಸರಕಾರವು ಇತ್ತೀಚೆಗೆ ತನ್ನ ಬಸ್ ಸಾರಿಗೆ ದರವನ್ನು ಏರಿಸಿದ ಪ್ರಕರಣವು ಶಾಸನ ಸಭೆಯಲ್ಲಿ ತೀವ್ರ ಚರ್ಚೆಗೆ ಗುರಿಯಾಯಿತು. ಸದಸ್ಯರೆಲ್ಲರೂ ಈ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಿದರು. ನೂರಕ್ಕೆ ೩೦ರಷ್ಟು ಸಾರಿಗೆ ದರವು ಏರಿದೆಯೆಂದೂ ಇದನ್ನು ಇಳಿಸಬೇಕೆಂದೂ ಸರಕಾರವನ್ನು ಹೆಚ್ಚಿನ ಸದಸ್ಯರು ಕೇಳಿಕೊಂಡರು. ಸರಕಾರವು ಈದರವನ್ನು ಎಷ್ಟರಮಟ್ಟಿಗೆ ಇಳಿಸುವುದು ಸಾಧ್ಯವೆಂದು ಪರಿಶೀಲಿಸುವ ಭರವಸೆಯಿತ್ತಿದೆ.

ತಾತ್ಕಾಲಿಕ ರಾಜ್ಯಪಾಲರು

ಮೈಸೂರಿನ ರಾಜ್ಯಪಾಲರಾದ ಶ್ರೀ

ಮರ್ಥ್ಯವಿರುವ, ಕಾರ್ಯಕುಶಲರಾಗಿರುವ, ಎಲ್ಲರನ್ನೂ ಎಲ್ಲವನ್ನೂ ಸಮದೃಷ್ಟಿಯಿಂದ ಕಾಣುವ ಶ್ರೀ ಪೈಯವರು ಈ ಪೀಠವನ್ನು ಏರಿದುದರಿಂದ, ಜಿಲ್ಲೆಯ ಕಾಂಗ್ರೆಸ್‌ನಲ್ಲಿ ನವಚೇತನ, ನವೋತ್ಸಾಹಗಳು ತುಂಬಿತುಳುಕಾಡುವುವೆಂದೂ ಕಾಂಗ್ರೆಸ್‌ನ ಶಕ್ತಿಯನ್ನು ಭದ್ರಪಡಿಸಿ ಉಚಿತ ರೀತಿಯಲ್ಲಿ ಅದನ್ನು ಹರಿಸುವ ಸದವಸರ ಬಂದೀತೆಂದೂ ವಿಶ್ವಾಸ ತಾಳಬಹುದು. ಕಾಂಗ್ರೆಸ್ ಕಛೇರಿಗೊಂದು ಸ್ವಂತ ಕಟ್ಟಡ, ಸಂಸ್ಥೆಯ ಕಛೇರಿಯಲ್ಲಿ ಸುವ್ಯವಸ್ಥ ವ್ಯವಹಾರಕ್ರಮದ ಏರ್ಪಾಡು ಕಾಂಗ್ರೆಸ್‌ಶಕ್ತಿಯನ್ನು ಕುಂಠಿತಗೊಳಿಸುವ ಕುಪ್ರವೃತ್ತಿಗಳ ದೂರೀಕರಣ, ಕಾರ್ಯಾಲಯದ ಸಕ್ರಮವಾದ ಆಡಳಿತ. ಜನತೆಯಲ್ಲಿ ಕಾಂಗ್ರೆಸ್‌ನ ಧ್ಯೇಯಧೋರಣೆಗಳ ಬಗ್ಗೆ ಆದರ ಮನೋಭಾವ, ಜನಸಂಪರ್ಕ–ಮೊದಲಾದ ಕಾರ್ಯಗಳು ಶ್ರೀ ಪೈಯವರ ಅಧ್ಯಕ್ಷತನದ ಅವಧಿಯಲ್ಲಿ ಕಾರ್ಯಗತವಾಗಬಹುದೆಂದು ನಾವು ನಿರೀಕ್ಷಿಸಬಹುದು. ಕಾಂಗ್ರೆಸ್ಸಿಗರು ಕಾಂಗ್ರೆಸ್ ತತ್ವಗಳನ್ನು ಮರೆಯದೆ ತಮ್ಮ ಪಕ್ಷವನ್ನು ಬಲಪಡಿಸುವಂತೆ ಹಿಂದಿನಿಂದಲೂ ಶ್ರೀ ಪೈಯವರು ಕೇಳಿಕೊಳ್ಳುತಿದ್ದಾರೆ. ಸದಾ ಕರ್ತವ್ಯನಿರತರಾದ ಶ್ರೀ ಟಿ. ಎ. ಪೈ ಅವರು ಜಿಲ್ಲೆಯ ಕಾಂಗ್ರೆಸ್ ಸಂಸ್ಥೆಯನ್ನು ಸರ್ವಜನಾದರಣೀಯವಾಗಿ ಪುನಾರಚಿಸುವುದರಲ್ಲಿ ಶಕ್ತರಾಗಲೆಂದೂ, ಅವರಿಗೆ ಈ ಕಾರ್ಯಗಳಲ್ಲಿ ಕಾಂಗ್ರೆಸಿಗರೆಲ್ಲರೂ ಹೃತ್ಪೂರ್ವಕ ಸಹಾಯಕರಾಗಿ ನಿಲ್ಲಲೆಂದೂ ಆಶಿಸುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಕಾರ್ನಾಡು ಸದಾಶಿವ ರಾವ್ ಸ್ಮಾರಕ ಸೇವಾಶ್ರಮ ಮುಲ್ಕಿ— ಡೇನಿಶ್ ಮೈಸೂರು ಪ್ರಾಜೆಕ್ಟ್ ಲೀಡರ್ ಮಿಸ್ಟರ್ ರಿಕಾರ್ಡ್ ಫೆಡರಿಕ್ಸನರವರು ಇದೇ ತಾ. ೩೦ರಂದು ತಮ್ಮ ಸಂಸಾರದೊಂದಿಗೆ ಸೇವಾಶ್ರಮಕ್ಕೆ ಸಂದರ್ಶನವಿತ್ತರು ಕಮ್ಯುನಿಟಿ ರಿಕ್ರಿಯೇಶನ್ ಸೆಂಟರಿನಲ್ಲಿ ಡಾ| ಕೆ ಬಾಬು ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಅತಿಥಿಗಳು ಡೆನ್ಮಾರ್ಕ್ ದೇಶದ ಪ್ರಗತಿಯನ್ನು ವಿವರಿಸಿ ಭಾಷಣವಿತ್ತರು. ಇವರ ಭಾಷಣವನ್ನು ಶ್ರೀ ರಾಜೀವನವರು ಕನ್ನಡಿಸಿದರು ಸಭಾರಂಭದಲ್ಲಿ ಡಾ| ಸಂಜೀವ ನಾಥರು ಅತಿಥಿಗಳ ಪರಿಚಯ ಭಾಷಣ ಮಾಡಿದರು. ಶ್ರೀ ಜಿ. ಮಹಾಬಲ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ಅತಿಥಿಗಳು ಕಾಟಿನ ಕೆನರಾ ನಸರಿ ಭಾರತ ಕ್ಯಾನಿಂಗ್ ಫೇಕ್ಟರಿ, ಉಡುಪಿ

ಜಯಚಾಮರಾಜ ಒಡೆಯರರು ಅಮೆರಿಕ ಮತ್ತು ಘಾನಾಗಳಿಗೆ ಸಂಸ್ಕೃತಿಪ್ರಚಾರ ಉಪನ್ಯಾಸ ಮಾಡಲು ತೆರಳಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಈ ಹಿಂದೊಮ್ಮೆ ತಾತ್ಕಾಲಿಕ ರಾಜ್ಯಪಾಲರಾಗಿದ್ದ ಶ್ರೀ ಮಂಗಲದಾಸ ಪಕ್ವಾಸರು ಆ ಸ್ಥಾನಕ್ಕೆ ನೇಮಿತರಾಗಿದ್ದು ಅವರು ಪ್ರತಿಜ್ಞಾವಿಧಿಯನ್ನೂ ಅಧಿಕಾರವನ್ನೂ ಸ್ವೀಕರಿಸಿದ್ದಾರೆ

ಪ್ರಾದೇಶಿಕ ಕಾಂಗ್ರೆಸ್‌ನಲ್ಲಿ ಸಂಧಾನ

ಮೈಸೂರು ಕಾಂಗ್ರೆಸಿನ ಗುಂಪು ರಾಜಕೀಯದಿಂದಾಗಿ ಹೊಲಸು ಈಗ ನಾರತೊಡಗಿದೆ. ಅಧ್ಯಕ್ಷ ಚುನಾವಣೆಯು ಇನ್ನೂ ಮುಂದುವರಿದಿದೆ ಈ ಮಧ್ಯೆ ಈ ಗುಂಪುಗಳನ್ನು ಹೋಗಲಾಡಿಸಿ, ಪಕ್ಷದ ವಿವಿಧ ನಾಯಕರಲ್ಲಿ ಸಾಮರಸವನ್ನುಂಟು ಮಾಡಲು ದೆಹಲಿಯಿಂದ ಪ್ರೇಷಿತರಾದ ಶ್ರೀ ಯು. ಎಸ್. ಮಲ್ಯ ಮತ್ತು ಕೆ. ಸಿ. ರೆಡ್ಡಿಯವರು ಮಾತುಕತೆ ನಡೆಸಿ ಯಾವ ನಿರ್ಧಾರವನ್ನೂ ಮಾಡಲು ಅಸಫಲರಾದರು. ಇನ್ನು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಶ್ರೀ ಯು. ಎನ್. ಢೇಭರರು ಸಂಧಾನ ಕಾರ್ಯಕ್ಕೆ ಆಗಮಿಸುವರೆಂದು ಕಿಂವದಂತಿಯಿದೆ. ಇದೂ ಕೃಷ್ಣಸಂಧಾನವೇ ಆದರೆ, ಮುಂದೆ ಕುರುಕ್ಷೇತ್ರ ಕಟ್ಟಿಟ್ಟದ್ದೆ.

ಶ್ರೀಕೃಷ್ಣ ದೇವಾಲಯ, ಮಣಿಪಾಲ ಮೆಡಿಕಲ್ ಕಾಲೇಜು ನೋಡಲಾದುವನ್ನು ಸಂದರ್ಶಿಸಿ ಸಂತೋಷವನ್ನು ವ್ಯಕ್ತಪಡಿಸಿದರು.

ಹೊಸ ಡೈರೆಕ್ಟರರು — ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರರಾಗಿ ಡಾ| ಕೊಚ್ಚಿ ಕ್ರಿಶ್ಚರ್ ಮೋಹನ್‌ದಾಸ ಪೈ, ಡಾ| ಕೆ. ಎಲ್. ಏಕಾಂಕ, ಶ್ರೀ ನಾರಾಯಣ್ ಇವರು ಹೊಸ ಡೈರೆಕ್ಟರರಾಗಿ ಆಯ್ಕೆಗೊಂಡಿರುವರು.

ಉದ್ಘಾಟನಾ ಸಮಾರಂಭ—ಉಡುಪಿ ತಾಲೂಕು ಸಹಕಾರೀ ವ್ಯವಸಾಯಕ ಉತ್ಪನ್ನ ಮಾರಾಟ ಸಂಘದ ಉದ್ಘಾಟನೆಯು ತಾ 12ರಲ್ಲಿ ಶ್ರೀ ಸೊಳಪಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಡಾ| ಕೆ. ಎಲ್. ಏಕಾಳರಿಂದ ನೆರವೇರಿಸಲ್ಪಟ್ಟಿತು. ಸಂದರ್ಭೋಚಿತ ಭಾಷಣಗಳಾದ ಮೇಲೆ ಶ್ರೀ ಕುಕ್ಕಾಲು ಗಣಪಯ್ಯ ಶೆಟ್ಟರು ಧನ್ಯವಾದಗಳನ್ನಿತ್ತರು. ಅನಂತರ ಸಂಘದ ಆಡಳಿತಾ ಮಹಾಸಭೆಯು ಶ್ರೀ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಆಡಳಿತಾ ಮಂಡಳಿಯನ್ನು ಚುನಾಯಿಸಲಾಯಿತು. ಶ್ರೀಗಳಾದ ಎಡ್ವಕೇಟ್ ಬಿ ಜಗನ್ನಾಥ ಹೆಗ್ಡೆ, ಕುಕ್ಕಾಲು ಗಣಪಯ್ಯ ಶೆಟ್ಟಿ, ಬಿ ಮಾಧವ ರಾವ್, ಡಾ| ಯು ಎಸ್. ಕಲ್ಕೂರ, ಬಿ. ಸುಬ್ಬಯ್ಯ ಹೆಗ್ಡೆ, ವೈ. ಲಕ್ಷ್ಮಣ, ಪಿ. ರಂಗನಾಥ ಶೆಣೈ, ವಿ. ವಿಠಲ ಶೆಟ್ಟಿ ಇವರು ಡೈರೆಕ್ಟರರಾಗಿ ಆರಿಸಲ್ಪಟ್ಟರು. ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ಅಧ್ಯಕ್ಷರಾಗಿಯೂ ಆಯ್ಕೆಗೊಂಡರು.

ಬಂಟರಯಾನೆ ನಾಡವರ ಸಂಘದ ಕಾರ್ಯಕಾರೀ ಸಮಿತಿ ಸಭೆಯು ಇದೇ ತಾ. 16 ರಂದು ಮಂಗಳೂರು ಶಿರ್ವಹಿಂದೂ ಹೈಸ್ಕೂಲು ಮತ್ತು ಇತರ ಶಾಲೆಗಳ ಆಡಳಿತವನ್ನು ವಹಿಸಿಕೊಳ್ಳಬೇಕೆಂಬ ನಿರ್ಣಯವಾಗಿ ಆಬಗ್ಗೆ ಒಂದು ಪ್ರತ್ಯೇಕ ವಿದ್ಯಾಂಗ ಸಮಿತಿಯನ್ನು ರಚಿಸಿ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರನ್ನು ಕರೆಸ್ಪೊಂಡೆಂಟರನ್ನಾಗಿ ನೇಮಿಸಿ ಸಂಘದಿಂದ ಇದಕ್ಕಾಗಿ ಹತ್ತುಸಾವಿರ ರೂಪಾಯಿಯನ್ನು ಮಂಜೂರು ಮಾಡಲಾಯಿತು.

ದಿ. ಎ. ಬಿ ಶೆಟ್ಟರ ಸ್ಮಾರಕ ಸಮಿತಿ—ಸಭೆಯು ಮಂಗಳೂರಿನಲ್ಲಿ ತಾ. 13ರಲ್ಲಿ ಜರಗಿ ದಿವಂಗತರ ಸ್ಮಾರಕಾರ್ಥವಾಗಿ ಕೈಗಾರಿಕೋದ್ಯಮ ಶಾಲೆಯನ್ನು ತೆರೆಯುವ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ದಿವಂಗತರ ಶಿಲಾಪ್ರತಿಮೆಯೊಂದನ್ನು ಇರಿಸುವ, ದಿವಂಗತರ ಹೆಸರಲ್ಲಿ ಎಂಡೋಮೆಂಟ್ ಉಪನ್ಯಾಸಗಳನ್ನು ಏರ್ಪಡಿಸುವ, ಹೆರಿಗೆ ಮತ್ತು ಶಿಶುಪಾಲನಾ ಆಸ್ಪತ್ರೆಯನ್ನು ಸ್ಥಾಪಿಸುವ, ಗೃಹ ವಿಜ್ಞಾನ ಕಾಲೇಜೊಂದನ್ನು ತೆರೆಯುವ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು. ಇದಕ್ಕಾಗಿ 5 ಲಕ್ಷ ರೂಪಾಯಿಯನ್ನು ಸಂಗ್ರಹಿಸುವ ನಿರ್ಧಾರವಾಗಿ ಸ್ಮಾರಕ ನಿಧಿಗಾಗಿ ಕಳುಹಿಸುವ ಹಣ ಸ್ವೀಕರಿಸಲು ಸಮಿತಿಯ ಕೋಶಾಧಿಕಾರಿ ಶ್ರೀ ಪಿ. ಎಮ್. ಹೆಗ್ಡೆ, ಕೊಡಿಯಾಲ್ ಬೈಲ್ ಮಂಗಳೂರು-3, ಇವರಿಗೆ ಅಧಿಕಾರ ಕೊಡಲಾಯಿತು. ಜಿಲ್ಲಾ ಮೆಡಿಕಲ್ ಆಫೀಸರ್ ಡಾ| ತಿಮ್ಮಪ್ಪಯ್ಯನವರು ಸೂಚಿಸಿದಂತೆ ವೆನ್‌ಲಾಕ್ ಆಸ್ಪತ್ರೆಯಲ್ಲಿ ದಿ. ಶೆಟ್ಟರ ಭಾವಚಿತ್ರವನ್ನು ಇರಿಸಲು ಸಮಿತಿಯು ನಿರ್ಧರಿಸಿ ಮುಂದಿನ ಕಾರ್ಯಕ್ರಮ ಕೈಗೊಳ್ಳಲು ಡಾ| ಕೆ. ಬಾಳಪ್ಪ ಶೆಟ್ಟರನ್ನು ನೇಮಿಸಲಾಯಿತು.

ಊಟದ ವಜ್ರೋತ್ಸವ — ಮದ್ರಾಸಿನ ಹೋಟೆಲ್ ದಾಸ್‌ಪ್ರಕಾಶದ ಮಾಲಿಕರಾದ ಶ್ರೀ ಕೆ. ಸೀತಾರಾಮರಾಯರು ಪ್ರತಿ ತಿಂಗಳು ನಡೆಸಿಕೊಂಡು ಬರುವ ವಿಶೇಷ ಊಟಗಳ ವಜ್ರೋತ್ಸವವು ಇದೇ ತಾ. ೬ರಂದು ಬಹಳ ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಡಾ| ಸಿ. ಪಿ. ರಾಮಸ್ವಾಮಿ ಅಯ್ಯರವರು ಮುಖ್ಯ ಅತಿಥಿಗಳಾಗಿಯೂ ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೆಸಿಡೆಂಟರಾದ ಡಾ| ಪಿ. ವಿ. ಚೆರಿಯನ್‌ರವರು ಅಧ್ಯಕ್ಷ ಪದವಿಯುತರಾಗಿಯೂ ಆಮಂತ್ರಿತರಾಗಿದ್ದರು. ಮತ್ತು ಆಮಂತ್ರಿತರಾಗಿದ್ದ 400 ಮಂದಿ ಇನ್ನೂ ಅತಿಥಿಗಳು ಆಗಮಿಸಿದ್ದರು. ಸಂದರ್ಭೋಚಿತ ಭಾಷಣಗಳಾದ ಮೇಲೆ ಮೆನೇಜರ್ ಶ್ರೀ ಪಿ. ಆನಂದರಾಯರು ಧನ್ಯವಾದವಿತ್ತರು.

ಮಣಿಪಾಲ — ಸ್ಥಳೀಯ ಬುನಾದಿ ಪ್ರಾಥಮಿಕ ಶಾಲೆಯ ಪ್ರಥಮ ವರ್ಧಂತ್ಯುತ್ಸವವು ದಿನಾಂಕ 13 ರಂದು ಕಸ್ತೂರಿ ಬಾ ಮೆಡಿಕಲ್ ಕಾಲೇಜಿನ ಸಭಾಂಗಣದಲ್ಲಿ ಡಾ| ಕೆ. ಎಲ್. ಏಕಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಮುಖ್ಯೋಪಾಧ್ಯಾಯರು ವರದಿವಾಚನ ಮಾಡಿದರು. ಮನರಂಜನ ಕಾರ್ಯಕ್ರಮಗಳಾದ ಮೇಲೆ ಶ್ರೀ ಬಿ. ಕೃಷ್ಣಯನವರು ಬಹುಮಾನ ವಿತರಣೆ ಮಾಡಿದರು. ಶ್ರೀ ವಿಠಲ ನಾಯಕ ಉಪಾಧ್ಯಾಯರಿಂದ ಧನ್ಯವಾದ ಸಮರ್ಪಿಸಿದರು.

ಕುಕ್ಕಿಕಟ್ಟೆ—ಬುನಾದಿ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವವು ತಾ. ೬ರಂದು ಉಡುಪಿ ಟಿ. ಮುನ್ಸಿಪಲ್ ಶ್ರೀ ಜಿ. ಎಸ್. ನಾಗವೇಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾಧ್ಯಾಪಕ ಶ್ರೀ ಶಿವರಾಮ ಶೆಟ್ಟರು ಸ್ವಾಗತಿಸಿ ಶಾಲಾ ವರದಿಯೊಪ್ಪಿಸಿದರು. ಶ್ರೀ ಪುರುಷೋತ್ತಮ ಭಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀಮತಿ ನಾಗವೇಣಿಯವರು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣ, ಮನರಂಜನೆಯ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಕೊನೆಗೊಂಡಿತು

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು „	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು ಶಿ. ಹರಿದಾಸ ಭಟ್)	2	0
ನೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ „	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.

ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 461/59

ನಾಗಯ್ಯ ಶೆಟ್ಟಿ —ವಾದಿ.

ಚಿಕ್ಕಯ್ಯ ಶೆಟ್ಟಿ ಸಹಾ —ಪ್ರತಿವಾದಿರು.

ಸದ್ರಿ ವಾದಿಕಡೆಯಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ

ಪ್ರತಿವಾದಿರು: — 1. ಚಿಕ್ಕಯ್ಯ ಶೆಟ್ಟಿ—ಸಾಲಾಡಿ ಅಮ್ಮಕ್ಕ ಶೆಡ್ತಿ ಮಗ, 2. ಕೃಷ್ಣಪ್ಪ ಶೆಟ್ಟಿ 3 ಮೈನರ್ ಕನಕಮ್ಮ ಸದಿಯಮ್ಮ ಶೆಡ್ತಿ ಮಕ್ಕಳು ಕುಂದಾಪುರ ತಾಲ್ಲೂಕು ಚಿತ್ತೂರು ಗ್ರಾಮದ ಕೈಲಾಡಿ.

ವಾದಿಯು ಪೂರ್ವಾಧಿಕಾರಿ ಸುಬ್ಬಯ್ಯ ಶೆಟ್ರಿಗೆ ಪ್ರತಿವಾದಿರು ಮೇಲ ಖರ್ಚಿನ ಬಗ್ಗೆ ಕೊಡತಕ್ಕ ಪಕ್ಕನ್ನು ವಾದಿಯು ಟ್ರಾನ್ಸ್ಫರ್ ಪಡೆದ ಮೇರೆಗೆ ವಾದಿಗೆ ಪ್ರತಿವಾದಿರಿಂದ ಬರತಕ್ಕ ಬಹಾ ರೂ. 184–76ಕ್ಕೆ ದಾವಾ ದಾಕ್ಲು ಮಾಡಿದ್ದಾರೆ. ಆ ಕುರಿತು ನಿಮ್ಮ ದೇನಾದರೂ ಉಜ್ರಹರಣೆಯಿದ್ದರೆ ತಾರೀಕು 31—5—60ನೇ ದಿವಸ ಹಗಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ದಾಕ್ಲು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದುದೆಂಬ ಸಂಗ್ತಿ ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

M. A. Shetty
Advocate for Plaintiff

Coondapoor. Date 11—4—60.

ಚಾರುಚೆಯನ

ನಿರ್ವಂಚಕ ರಾಜನೀತಿಯ ಬಯಕೆ

ಮಾನವತೆ ಮತ್ತು ರಾಜನೀತಿಗಳ ನಡುವೆ ಸಮರಸ ಸಂಬಂಧವನ್ನು ಕಲ್ಪಿಸಬಲ್ಲ ಸಾಧನಸಂಶೋಧನೆ ಸಾಧ್ಯವೆ?

ಓದುತಿದ್ದಂತೆಯೇ ಯುರೋಪಿನ ಚಾಣಕ್ಯರೆಂದು ಹೆಸರಾಂತ ಶ್ರೀ ಮೇಕಿಯಾವಾಲಿಯವರ ಒಂದು ಸೂತ್ರವು ಕಾಣಿಸಿತು. ಇದು ಮನಸ್ಸಿನಲ್ಲಿ ಸದಾ ನಾಟಿಕೊಂಡಿರುವುದು. ಅಲ್ಲದೇ ವಿಚಾರಗಳ ಜಂಜಾವಾತವನ್ನೇ ಎಳಸುವುದು. ಅಂತಹ ಮಹತ್ವದ ಸೂತ್ರ ಯಾವುದು?

"ದಯಾಳು, ವಿಶ್ವಸನೀಯ, ಮಾನವೀಯ, ನಿಷ್ಕಪಟ ಮತ್ತು ಧಾರ್ಮಿಕನಾಗಿ ತೋರಿಸಿಕೊಳ್ಳುವುದು ಒಳ್ಳೆಯದೇ; ಆಗಿರುವುದು ಬಹಳ ಉತ್ತಮವೇ; ಆದರೆ, ಸಂದರ್ಭ ಒದಗಿದಾಗ ಈ ಗುಣಗಳಿಗೆ ವಿರುದ್ಧವಾಗಿ ವರ್ತಿಸಲೂ ಸಿದ್ಧರಾಗಿರುವುದು ಮತ್ತೂ ಅವಶ್ಯಕ" ಎಂಬುದೇ ಈ ಸೂತ್ರರತ್ನ.

ಅವಕಾಶ ಕಂಡುಬಂದಾಗ, ಮನುಷ್ಯನು ಕ್ರೂರ, ವಂಚಕ, ಅಮಾನುಷಿಕ, ಕಪಟಿಯಾಗಲು ತಯಾರಾಗಿರಬೇಕೆಂದು ಈ ಸೂತ್ರದ ಅರ್ಥವಲ್ಲವೆ?

ಈ ಅರ್ಥವೇನೋ ಸುಸ್ಪಷ್ಟವಿದೆ. ಆದರೂ ಮನುಷ್ಯ ಸದ್ಗುಣಿಯಾಗಿದ್ದು ದುರ್ಗುಣಿಯಾಗಿರಲು ಸಿದ್ಧನಾಗಿರಬೇಕು; ಅಂದರೆ, ಮಾನವನು ತನ್ನ ದುರ್ಗುಣಗಳನ್ನು ನಾಶಮಾಡಿಕೊಳ್ಳಬಾರದು, ಅವಶ್ಯವೆನಿಸಿದಾಗ, ಈ ತನ್ನ ದುರ್ಗುಣಗಳಿಂದ ಆತ ತನ್ನನ್ನು ಉಳಿಸಿಕೊಳ್ಳಬೇಕು ಎಂದೇ ಈ ಸೂತ್ರದ ಧ್ವನ್ಯರ್ಥವಾಗಿ ತೋರುವುದಿಲ್ಲವೆ?

ಜೀವನದ ಅನುಭವಗಳು ಶ್ರೀ ಮೇಕಿಯಾವಲಿಯವರ ಸೂತ್ರವು ನ್ಯಾಯೋಚಿತವಾದುದು ಎಂದು ಸಾರಿ ಹೇಳುತ್ತವೆ. ವಿಷಮ ಪರಿಸ್ಥಿತಿಯಲ್ಲೂ ಸರಳವಾಗಿ ನಾವು ವರ್ತಿಸಿಕೊಂಡರೆ, ಅದರ ದುಷ್ಪರಿಣಾಮವನ್ನು ಅನುಭವಿಸಬೇಕಾಗುವುದು; ನಮ್ಮ ಕಾರ್ಯ ಕೆಲವೊಮ್ಮೆ ಕೈಗೂಡದು; ಅಲ್ಲದೇ ಹಲವುಬಾರಿ ನಾವು ನಷ್ಟಕ್ಕೆ ಈಡಾಗಿ ಹೋಗಬೇಕಾಗಿ ಬರಬಹುದು. ಅಂತಹ ಗಂಡಾಂತರಗಳಿಂದ ಪಾರಾಗದೆ ಉಳಿಯಲು ಯಾರು ತಾನೇ ಬಯಸುತ್ತಾನೆ?

ಮಾನವನು ಸಫಲನಾಗುತ್ತಾನೆ; ಆದರೆ, ಈ ಸಾಫಲ್ಯಕ್ಕೆ ಹೆಚ್ಚಿನಂಶ ಆತನ ಹೀನ ಪ್ರವೃತ್ತಿಗಳೇ ಕಾರಣವಾಗಿರುತ್ತವೆ. ಇದು ಮಾನವ ಜೀವನದ ಒಂದು ಚಿರಂತನ ಸತ್ಯ. ಆದರೂ ಇನ್ನೊಂದು ಮಹತ್ವದ ಪ್ರಶ್ನೆಯೆಂದರೆ, ಮಾನವ ಸಫಲನಾಗಬೇಕಾದರೆ, ಆತ ತನ್ನ ಮಾನವೀಯ ಗುಣಗಳನ್ನು ಮಾರಿಕೊಂಡು ಕುಪ್ರವೃತ್ತಿಗಳ ಮರೆ ಹೋಗಲೇಬೇಕೆ? ಇಲ್ಲವಾದರೆ, ಆತನು ಎಂದಿಗೂ ವಿಜಯಿಯಾಗಲಾರನೆ? ಇದು ನಿಜವೆಂದಾದರೆ, ಈ ನಾವನ್ನುವ ಮಾನವ ಗುಣಗಳು ಕೇವಲ ಹಬ್ಬಹರಿದಿನಗಳಲ್ಲಿ ತೊಟ್ಟುಕೊಂಡು, ಒಳಗೆ ಪೆಟ್ಟಿಗೆಯಲ್ಲಿ ಭದ್ರವಾಗಿಡುವ ಒಟ್ಟೆ ಬರೆಗಳಂತೆಯೇ ಎನ್ನಬೇಕೆ?

ಇದರೊಂದಿಗೆ ಇನ್ನೊಂದು ಪ್ರಶ್ನೆಯೂ ಏಳುವುದು. ಸಫಲತೆ ಮತ್ತು ಅಸಫಲತೆ ಎಂದರೇನು? ಇವುಗಳ ರೂಪರೇಷೆಗಳಾವುವು?

ಪೃಥ್ವೀರಾಜನು ತನ್ನ ದಂಡೆತ್ತಿಬಂದ ಶತ್ರುಗಳ ಮೇಲೆ ಉದಾರನಾಗಿ ವರ್ತಿಸಿ, ಸೆರೆಹಿಡಿದು ಕ್ಷಮಿಸಿ ಬಿಟ್ಟುಬಿಟ್ಟನು. ಮುಂದೆ ಆತನ ಈ ಉದಾರತೆಯಿಂದಲೇ ದುರ್ಗತಿಯನ್ನು ಹೊಂದಬೇಕಾಯಿತು. ಅವನು ಸರ್ವನಾಶಹೊಂದಿದನು. ಈಗ, ಏಳುವ ಪ್ರಶ್ನೆಯಿದು: ನೂರಾರು ವರ್ಷಗಳ ಮೇಲೆ ಇತಿಹಾಸಕಾರರು ಆತನ ಇತಿಹಾಸವನ್ನು ಬರೆದಿರುತ್ತಾರೆ. ಆದರೆ, ಇತಿಹಾಸಕಾರರನ್ನು ತನ್ನತ್ತ ಆಕರ್ಷಿಸಿದ ವಸ್ತು ಯಾವುದು? ಪೃಥ್ವೀರಾಜನ ಉದಾರತೆಯೋ, ಅಥವಾ ಆತನ ಶತ್ರುಗಳ ಕ್ರೂರತೆಯೊ? ಅಸಫಲನಾದ ರಾಜನ ಕ್ಷಮಾಗುಣವೆ? ಸಫಲ ಶತ್ರುಗಳ ರುದ್ರತೆಯೆ? ಯುಗ ಯುಗಾಂತರದ ತನಕ ಉಳಿಯುವ ಇತಿಹಾಸವು ತನ್ನ ಮುಂದಿನ ಪೀಳಿಗೆಯವರಿಗೆ ಯಾರ ಶ್ರೇಷ್ಠತೆಯನ್ನು ತೋರಿಸಿಕೊಡುವುದು?

ಈ ಮಹಾ ಪ್ರಶ್ನೆಗೊಂದೆರಡು ಉಪಪ್ರಶ್ನೆಗಳಿವೆ. ಮೊದಲನೆಯದಾಗಿ, ನಾವು ತಾತ್ಕಾಲಿಕ ಸಾಫಲ್ಯಕ್ಕಾಗಿ ಮಾನವೀಯ ಗುಣಗಳನ್ನು ತ್ಯಜಿಸಿಬಿಡಬೇಕೆ? ಅಥವಾ ತನ್ನ ಹಾಗೂ ಸಮಗ್ರ ಮಾನವತೆಯ ಶಾಶ್ವತ ಸಫಲತೆಗಾಗಿ ತನ್ನ ಮಾನವೀಯ ಗುಣಗಳನ್ನು ರಕ್ಷಿಸಿಕೊಂಡೇ ಸದ್ಯದ ಕಷ್ಟ ಮತ್ತು ಅಸಫಲತೆಗಳನ್ನು ತಾಳಿಕೊಂಡಿರುವುದನ್ನೇ ಉಚಿತವೆಂದು ಕಂಡುಕೊಳ್ಳಬೇಕೆ?

ಇವಕ್ಕೆ ಉತ್ತರವನ್ನು ಕೊಡುವವರು ಯಾರು?

ಆದರೂ ಅನುಭವ ಬಲದಿಂದ ಈ ಪ್ರಶ್ನೆಗಳನ್ನು ಉತ್ತರಿಸುತ್ತ, ಮೇಕಿಯಾವಲಿಯವರ ಸೂತ್ರವನ್ನು ಹೀಗೆ ವ್ಯಾಖ್ಯಾನಿಸಬಹುದು: ಮೇಕಿಯಾವಲಿಯವರ ಮೇಲಿನ ಸೂತ್ರವು ರಾಜತಂತ್ರದಲ್ಲಿ ಮೂಲಮಂತ್ರವೆಂದು ಹೇಳಲ್ಪಡಬಹುದು; ಆದರದು ಜೀವನದ ಮೂಲಮಂತ್ರವೆಂದೆಂದೂ ಆಗಲಾರದು. ವಿಶ್ವದ ಮಾನವತೆಯ ಮೂಲಮಂತ್ರವಿದು: "ವಂಚಿತ ರಾಜನೀತಿಯಿಂದ ಈ ಪ್ರಪಂಚವೆಂದು ಮುಕ್ತವಾದೀತು?"

ರಾಜನೀತಿ ಮತ್ತು ಮಾನವತೆಗಳ ನಡುವೆ ಬಹಳಾಂತರವಿದೆ. ರಾಜನೀತಿಯಲ್ಲಿ ಮಾನವತೆಯನ್ನು ಪ್ರದರ್ಶಿಸುವುದು ಅಪಾಯಕರವಾಗಿದೆ. ಮಾನವತಾವಾದಿಯು ಸಫಲ ರಾಜಕಾರಣಿಯಾಗಲಾರನೆಂದು ಇತಿಹಾಸವೂ ಸಾರಿ ಹೇಳುತ್ತಿದೆ. ವಿಶ್ವವಿಂದು ನಿರ್ವಂಚಕ ರಾಜನೀತಿಯನ್ನು ಬಯಸುತ್ತಿದೆ; ಆದರೆ, ಇದು ಗಗನ ಕುಸುಮವಾಗಲಾರದೆ?

ಮೇಲಿನ ಚಿತ್ರದಲ್ಲಿ ದೆಹಲಿಯ ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿಯು ಉದ್ಯೋಗಕ್ಕೆ ತೆರಳಲಿರುವ ಅಂಗವಿಕಲರಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಿರುವುದನ್ನು ಕಾಣಬಹುದು.

ವ್ಯಕ್ತಿತ್ವ ವಿಕಾಸ

(೫ನೇ ಪುಟದಿಂದ)

ಗೂಡಿಗೆ ಬೀಳುವ ಇಲಿಯಂತೆ ನಾವಾಗಬಾರದು. ಧನಾರ್ಜನೆಯೂ ಪ್ರವೃತ್ತಿಯಂತೆಯೇ ಅಸಂಯತ, ... ಮಿತ ಭಾವನೆಗಳ ಮೂಲಕ ನಮ್ಮ ... ವನವನ್ನೇ ಕೆಡಿಸಿಬಿಡಬಲ್ಲುದು. ಜೀ... ಬಂಡಿಯ ಸಾರಥಿ ನಾನೇ ಎಂಬ ... ಅಭಿಮಾನ ಪಟ್ಟುಕೊಳ್ಳದಿರಿ; ... ಮಡದಿಗೂ ಅದರಲ್ಲಿ ಭಾಗವಹಿಸಲು ಅವಕಾಶವೀಯಿರಿ. ಉತ್ಪಾದಕ ಶಕ್ತಿ... ನ್ನ ವಿಕಸಿತಗೊಳಿಸುವಲ್ಲಿ ಆಕೆಯು ... ಲೂ ಸೇರಲಿ. ನೀವು ಭಾರವಾಹಕ... ಯಾಗಿರಿ; ಆಕೆಯೇ ಸಾರಥಿಯಾಗಿ... ನೀವು ನಿಮ್ಮ ಕೆಲಸಗಾರರ ಮೇಲೆ ... ರಿಸಿದ ಸದ್ವ್ಯವಹಾರಗಳಿಂದಲೇ ... ರೂಪಾಯಿಯನ್ನು ಲಕ್ಷ ಮಾಡಬ... ಶಿಖಂಡಿ ವಿಲಾಸಪೂರ್ಣ ಜೀವನ... ಮತ್ತು ಪ್ರಪಂಚಕ್ಕೆ ನಾವು ಕೊಟ್ಟ... ಕ್ಕಿಂತ ಹೆಚ್ಚು ಕೊಳ್ಳುವ ಹಂಚಿಕೆ... ವು ಉತ್ತಮತೆಯ ಲಕ್ಷಣಗಳೆಂದು ... ಳಬರುವುದಿಲ್ಲ.

ರಾಷ್ಟ್ರಗಳ ನಡುವಣ ಪರಸ್ಪ... ರ್ಧೆಯು ಯಾವುದೇ ಒಂದು ವಿಷ... ಲ್ಲಿ ಗಾಢವಾದ ಅಧ್ಯಯನ ನಡೆಸ... ಹಕಾರಿಯಾಗಿದೆ. ವಿಜ್ಞಾನದ ಅಕಸ... ಯನ್ನು ನಾವು ಕಾಣುವಾಗ, ಇಂದ... ದ್ಯಾಲಯಗಳಲ್ಲಿ ಸಾಹಿತ್ಯ, ಇತಿಹಾ... ದರ್ಶನ, ಸಂಗೀತ ಹಾಗೂ ಕಲೆಗ... ಸರಿಯಾದ ಗಮನ ನೀಡಲಾಗುತ್ತಿಲ್ಲ... ತ್ತು ಅವನ್ನು ಅಭ್ಯಸಿಸಲಾಗುತ್ತಿಲ್ಲ ಎ... ಹೇಳಬಹುದು. ನಾವು ಕೂಪ ಮಂ... ಕಗಳಾಗಬಾರದು. ವಿದ್ಯಾಭ್ಯಾಸವು ... ರ್ಣಗೊಂಡ ಮೇಲೆಯೂ ಪ್ರತಿದಿನ ... ದೆರಡು ತಾಸು ಸಾಹಿತ್ಯೋಧ್ಯಾನದ... ಹರಿಸುವ ಪರಿಪಾಠವನ್ನಿಟ್ಟುಕೊಳ್ಳಿರಿ ... ಪಂಚದ ಪ್ರಸಿದ್ಧ ಕವಿಗಳ ಪರಿಚ... ನ್ನು ಮಾಡಿಕೊಳ್ಳಿರಿ; ವಿಶ್ವದ ಉತ್ಕೃ... ಕಲೆಗಳನ್ನು ಪರೀಕ್ಷಿಸಿರಿ. ಕಲೆ ಮ... ಸಾಹಿತ್ಯಗಳ ರಸಕಲಶಗಳಿಂದ ಮಾ... ಲ್ಲ, ಜೀವನದ ರಸ ಗಂಗೆಯಲ್ಲಿ ಮು... ಳುಗಿ ಸ್ನಾನಮಾಡಿರಿ; ಮತ್ತು ದಿನಂ... ಮಾಡುವ ಅಭ್ಯಾಸಮಾಡಿಕೊಳ್ಳಿರಿ. ... ಲೇ ಜೀವನವು ಪರಿಪೂರ್ಣವಾ... ಆಗಲೇ ಮಾನವನು ದಾನವೀ ಪ್ರ... ಯಿಂದ ವಿಮುಕ್ತನಾಗಿ ದೈವಿಕ ... ವನ್ನು ಕಂಡುಕೊಳ್ಳುವ ಅಸಮಾದೃಷ್ಟಿ... ಯನ್ನು ಪಡೆಯುವನು.

ಹಾರ್ಮೋನಿಯಮ...

ಬೋಧನ ಕ್ರ...

ಎಂಬ ಶ್ರೀ. ಎ. ರಾಮಪ್ಪನವ...
ರಚಿತವಾದ

ಕನ್ನಡ ಸಂಗೀತ ಪುಸ್ತಕ...

ನಮ್ಮಲ್ಲಿ ದೊರೆಯುತ್ತದೆ

ಬೆಲೆ ರೂ. 2. V. P. ಮಾಡುವು...
ರೂ. 2=50 ಕಳಿಸಿದರೆ ಒಂದು...
ಯನ್ನು ಬುಕ್ ಪೋಸ್ಟಿನಿಂದ
ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡು...

ವಿಚಿತ್ರವಾದರೂ ಸತ್ಯ

(೩ನೇ ಪುಟದಿಂದ)

ರ್ಮನ್ನು ಓದುಬರಹ ಬಲ್ಲವನಿಗೆ ತೋರಿಸಿ, ಭರ್ತಿಮಾಡಿ, ಅದರ ವಾಶಿಂಗ್ಟನ್ ವಿಳಾಸಕ್ಕೆ ಕಳಿಸಿದನು. ಎರಡೂ ತಿಂಗಳನಂತರ ಅಲ್ಲಿಂದ ಅವನಿಗೊಂದು ಉದ್ದಗಲದ ಪತ್ರ ಬಂದಾಗ ಅವನ ಕೋಪಕ್ಕೆ ಪಾರವೇ ಉಳಿಯಲಿಲ್ಲ. ಅದನ್ನು ಬೇಂಕ್ ಡ್ರಾಫ್ಟ್ ಎಂದು ತಿಳಿದುಕೊಂಡು, ತನ್ನ ಬೇಂಕಿಗೆ ತೆರಳಿದ. ಆದರೆ, ಅಲ್ಲಿ ಅದನ್ನು ಸ್ವೀಕರಿಸಲಿಲ್ಲ. ಅಮೆರಿಕಾ ಸರಕಾರದ ಹಣ ಈಗ ಕಡಿಮೆಯಾಗಿರಬೇಕು, ಅದಕ್ಕೆ ಅವರ ಡ್ರಾಫ್ಟ್ ಬೇಂಕು ತೆಗೆದುಕೊಳ್ಳುವುದಿಲ್ಲ ಎಂದು ದೂರಿದನು. ಆದರೆ, ಬಂದುದು ಆ ಬಾಟಲಿಯ ದೀರ್ಘ ಪ್ರಯಾಣದ ಮಾರ್ಗ ತೋರಿಸುವ ನಕ್ಷೆಯೆಂದು ಆತ ಎಂತು ಬಲ್ಲನು?

ಹಡಗುಗಳು ಮುಳುಗುವ ಸೂಚನೆಯನ್ನು ಬಾಟಲಿಗಳ ಮೂಲಕ ಕಳಿಸುವ ಪದ್ಧತಿ ಪ್ರಾಚೀನವಾದುದು. ಸಂಕಟ ಪರಿಸ್ಥಿತಿ ಬಂದೊದಗಿದೊಡನೆಯೇ ನಾವಿಕರು ತಮ್ಮ ಸಂದೇಶವನ್ನು ಬಾಟಲಿಯಲ್ಲಿ ತುಂಬಿಸಿಬಿಡುತ್ತಾರೆ. ಕಳೆದ ವರ್ಷ ನೇರ್ವೆಜೋರ್ಶಾದಲ್ಲಿ ಇಂತಹ ಒಂದು ಬಾಟಲಿ ಸಿಕ್ಕಿತ್ತು. ಹದಿನೈದು ವರ್ಷಗಳಿಗೆ ಮೊದಲು ಇಬ್ಬರು ಜರ್ಮನ್ ನಾವಿಕರು ಕಳಿಸಿದ ಸಂದೇಶ ಅದರಲ್ಲಿತ್ತು. ಅದರಲ್ಲಿ "ಆಗಸ್ಟ್ ೧೯೪೩. ಎಸ್ಪಿರಿಟು ಸಾಂಟೊ ದ್ವೀಪದ ದಕ್ಷಿಣದಲ್ಲಿ ಹಡಗು ಮುಳುಗುತ್ತಿದೆ. ಹಿಟ್ಲರ್‌ನಿಗೆ ಜಯವಾಗಲಿ" ಎಂದು ಬರೆದಿತ್ತು. ಹಡಗವನ್ನು ಹುಡುಕಲು ಮಾಡಿದ್ದ ಎಲ್ಲ ಪ್ರಯತ್ನಗಳೂ ವ್ಯರ್ಥವಾಗಿದ್ದಾಗ, ಈ ಬಾಟಲಿಯು ದೊರವಾಯಿತು.

ಇದೇ ರೀತಿಯ ಒಂದು ಬಾಟಲಿ ಕೆಲ ವರ್ಷಗಳಿಗೆ ಮೊದಲು ಉತ್ತರಧ್ರುವ ಸಾಗರದ ರಶ್ಯನ್ ತಟದಲ್ಲಿ ಒಬ್ಬ ಮೀನುಗಾರನಿಗೆ ಸಿಕ್ಕಿತ್ತು. ಅದರಲ್ಲಿ ನಾರ್ವೇಜಿಯನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹೀಗೆ ಬರೆದಿತ್ತು: "ಐದು ಹೆಂಗುದುರೆಗಳು ಮತ್ತು ೧೫೦ ನಾಯಿಗಳು ಇನ್ನು ಉಳಿದಿದೆ. ಹುಲ್ಲು, ಮೀನು ಮತ್ತು ೩೦ ಸ್ಲೇಜ್ ಗಾಡಿಗಳು ಬೇಕು. ಆಗಸ್ಟ್ ಆರಂಭದಲ್ಲಿ ಬಂಡಿತಕ್ಕೂ ಮರಳುತ್ತೇವೆ. ಸಂಕಟದಲ್ಲಿದ್ದೇವೆ." ಈ ಬಾಟಲಿಯನ್ನು ೪೫ ವರ್ಷಗಳಿಗೆ ಮೊದಲು ಉತ್ತರಧ್ರುವ ಯಾತ್ರೆಗೆ ಹೊರಟಿದ್ದ ವಾಲ್ಡವಿನ್ ಬಿಟ್ಟಿದ್ದನು. ಬಾಟಲಿಯೇನೋ ತನ್ನ ಸಂದೇಶವನ್ನು ಮುಟ್ಟಿಸಲು ತಡಮಾಡಿತು. ಸೌಭಾಗ್ಯವಶದಿಂದ ಬಾಲ್ಡವಿನ್ ಸಕುಶಲವಾಗಿ ಎಂದೋ ಮರಳಿಬಂದಿದ್ದನು.

ಕೆಲವೊಮ್ಮೆ ಹೀಗೆ ತೇಲಬಿಟ್ಟ ಬಾಟಲಿಗಳು ಮಾಯವಾಗಿ ಸಂದೇಶಗಳು ದೊರೆಯದಿರುವುದೂ ಉಂಟು. ಪೂರ್ವ ಭಾಂತ ದ್ವೀಪಗಳ ಬಳಿ ತೇಲಿಸಿದ ಬಾಟಲಿಯೊಂದು ಇದುವರೆಗೂ ದೊರೆತಿಲ್ಲ. ಕೊಲಂಬಸನು ತಾನು ತೇಲಬಿಟ್ಟ ಈ ಬಾಟಲಿಯ ವಿಚಾರವನ್ನು ತನ್ನ ಪುಸ್ತಕದಲ್ಲಿ ಬರೆದಿಟ್ಟಿರುವುದರಿಂದ, ಈ ಸಂಗತಿ ತಿಳಿಯಿತು. ಈ ಸಂದೇಶದಲ್ಲಿ ಹಡಗವು ವಿನಾಶಗೊಳ್ಳುವ ಭಯವನ್ನು ವ್ಯಕ್ತಪಡಿಸಿದ್ದನು. ಈ ಬಾಟಲಿಯು ದೊರೆತರೆ ಇತಿಹಾಸ ಲೇಖಕರಿಗೆ ಬಹಳ ಸಂತೋಷವಾಗಬಹುದು.

ಸಾಗರಸಂಚಾರಿ ಬಾಟಲಿಗಳಲ್ಲಿ ಹಳೆಯದಾದ ಇನ್ನೊಂದನ್ನು ಇಲ್ಲಿ ಉಲ್ಲೇಖಿಸಬಹುದು. ಇದನ್ನು ನೂರಾರು ವರ್ಷ ಮೊದಲು, ಉತ್ತರ ಸಮುದ್ರದಲ್ಲಿ ದಾರಿ ತಪ್ಪಿದ ಹಡಗವೊಂದರ ನಾವಿಕ ತೇಲಿಸಿಬಿಟ್ಟಿದ್ದನು. ಇದುವರೆಗೆ ಈ ಬಾಟಲಿಯು ಬಹು ಬಾರಿ ಪ್ರಪಂಚ ಪರ್ಯಟನೆ ಮಾಡಿತು. ಇತ್ತೀಚೆಗೆ ಅದು ಸಮುದ್ರ ಶಾಸ್ತ್ರಜ್ಞರ ಕೈಸೇರಿತು ಪತ್ರಿಕೆಗಳ ಚರ್ಚೆಯ ವಿಷಯವಾಯಿತು. ಇದರ ಯಾತ್ರಾಮಾರ್ಗಾಧ್ಯಯನದಿಂದ ಹಲವು ರಹಸ್ಯಗಳೂ ಹೊರಗೆಡಹಲ್ಪಟ್ಟವು. ಮತ್ತೆ ಪುನಃ ಈ ಬಾಟಲಿಯನ್ನು ತೇಲಿಬಿಟ್ಟರು.

ಇಂತಹ ಬಾಟಲಿಗಳ ಮಾರ್ಗಭ್ರಮಣವನ್ನು ಸಂಶೋಧಿಸುವ ಒಂದು ಅಂತಾರಾಷ್ಟ್ರೀಯ ಸಂಸ್ಥೆಯಿದೆ. ಪ್ರಪಂಚದ ಬೇರೆ ಬೇರೆ ಭಾಗಗಳ ಸಾವಿರಾರು ನಾವಿಕರಿದರ ಸದಸ್ಯರಾಗಿದ್ದಾರೆ. ಅತ್ಲಾಂತಿಕ ಮಹಾಸಾಗರವನ್ನು ದಾಟಿ ಅಮೆರಿಕೆಯಿಂದ ಯುರೋಪಿಗೆ ಪ್ರಯಾಣಿಸಲು ಈ ಬಾಟಲಿಗಳಿಗೆ ಹನ್ನೆರಡು ತಿಂಗಳುಗಳು ಬೇಕಾಗುವುವೆಂದೂ, ಮೆಕ್ಸಿಕೋದ ಪಶ್ಚಿಮ ದಡದಿಂದ ಫಿಲಿಪ್ಪಾಯಿನ್ಸ್‌ಗೆ ಬರಲು ಹದಿನೆಂಟು ಮಾಸಗಳು ತಗಲುವುವೆಂದೂ ತಿಳಿದುಬಂದಿದೆ.

ಸಾಗರ ಬಾಟಲಿ ಸಂಶೋಧನಾಲಯಗಳಲ್ಲಿ ನ್ಯೂಯಾರ್ಕಿನ ನೌಕಾಸೇನೆಯ ಸಾಗರ ವಿಭಾಗ ಕಾರ್ಯಾಲಯವು ಸುಪ್ರಸಿದ್ಧವಾಗಿದೆ, ಇದು ಪ್ರತಿವರ್ಷ ವಿಭಿನ್ನ ಸಮುದ್ರ ಭಾಗದಲ್ಲಿ ಬಾಟಲಿಗಳನ್ನು ಹಾಕುತ್ತದೆ. ಈ ಬಾಟಲಿಯಲ್ಲಿ ಎಂಟು ಭಾಷೆಗಳಲ್ಲಿ ಅಚ್ಚಿಸಿದ ಒಂದು ಫಾರ್ಮ್ ಇರುತ್ತದೆ. ಇದನ್ನು ಪಡೆದವನು ತುಂಬಿಸಿ, ತನಗೆ ಸಮೀಪದ ಅಮೆರಿಕನ್ ರಾಯಭಾರಿ ಇಲ್ಲವೇ ವ್ಯಾಪಾರದೂತನಿಗೆ ಅದನ್ನು ಒಪ್ಪಿಸಬೇಕೆಂಬ ವಿನಂತಿಯಿದೆ. ಮುಂದೆ ಇದು ವಾಶಿಂಗಟನ್ನಿಗೆ ಹೋಗುತ್ತದೆ; ಆಮೇಲೆ ಗವೇಷಣವು ಪ್ರಾರಂಭವಾಗುತ್ತದೆ.

ಬಾಟಲಿಗಳನ್ನು ಧರ್ಮಪ್ರಚಾರಕ್ಕೂ ಉಪಯೋಗಿಸಿಕೊಳ್ಳಬಹುದು. ಅಮೆರಿಕೆಯ ಪಶ್ಚಿಮ ಕರಾವಳಿಯ ಒಬ್ಬ ಧರ್ಮೋಪದೇಶಕ ಕಳೆದ ಮೂವತ್ತು ವರ್ಷಗಳಿಂದಲೂ ಖಾಲಿ ಬಾಟಲಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಬೈಬಲಿನ ಸಂದೇಶಗಳನ್ನಿಟ್ಟು ಸಮುದ್ರದಲ್ಲಿ ತೇಲಿಬಿಡುತ್ತಿದ್ದಾನೆ. ಇದುವರೆಗೆ ಅವನು ಹದಿನೈದು ಸಾವಿರ ಬಾಟಲಿಗಳನ್ನು ಸಮುದ್ರರಾಜನಿಗೆ ಅರ್ಪಣೆ ಮಾಡಿರುವನಾದರೂ ಕೇವಲ ಎರಡು ಸಾವಿರ ಮಾತ್ರ ನೊರೆತ ಸೂಚನೆಗಳು ಬಂದಿವೆಯಂತೆ.

ಪೇರಿಯುವರನ್ನು ಮೂರ್ಖರೆಂದು ಗೇಲಿಮಾಡಲೂ ಕೆಲವರು ಬಾಟಲಿಗಳನ್ನು ಉಪಯೋಗಿಸುವುದಿದೆ. ಅವರು ಸುಮ್ಮಸುಮ್ಮನೆ ಹಡಗಗಳು ಗಂಡಾಂತರ ಸ್ಥಿತಿಯಲ್ಲಿವೆ ಎಂದು ಬರೆದು ಮುಳುಗಿಸುತ್ತಾರೆ. ಆದರೆ, ಇಂತಹ ಮಿಥ್ಯಸಂದೇಶಗಳಿಂದ ಹೆದರಬೇಕಾಗುವ ಪ್ರಸಂಗವಿಲ್ಲ. ಏಕೆಂದರೆ, ಈ ಸಂದೇಶ ಮುಟ್ಟುವುದಕ್ಕೆ ಬಹಳ ಸಮಯಾವಕಾಶ ಹೋಗುತ್ತದೆ. ಅಲ್ಲದೆ ಕೆಲವೊಮ್ಮೆ ಆಪತ್ತಿಗೆ ಗುರಿಯಾದ ಸ್ಥಳಗಳು ಎತ್ತರವಾದ ಪರ್ವತ ಶಿಖರಗಳೋ ನವದೆಹಲಿ ಮಾಸ್ಕೋ ಮೊದಲಾದ ಒಳಪ್ರದೇಶಗಳೋ ಆಗಿರುತ್ತವೆ.

ಸಾಗರ ಸಂಚಾರೀ ಸಂದೇಶವಾಹಕ ಬಾಟಲಿಗಳ ಮನೋಹರ ಕಥೆಗಳೂ ಪ್ರಯೋಗಗಳೂ ಚಿತ್ರವಿಚಿತ್ರವಾಗಿವೆಯಲ್ಲವೆ?

(ಸಂಗ್ರಹಿತ)

ಮೇಲಿನ ಚಿತ್ರದಲ್ಲಿ ಹಿಂದಿನ ರಜಪುತಾನದ ಜೋಧಪುರ, ಬಿಕಾನೀರ ಮತ್ತು ಜೈಸಲಮೀರ್ ರಾಜ್ಯಗಳ ೧೩ ಜನ ಸಶಸ್ತ್ರ ಅಶ್ವಾರೋಹಿಗಳು ದೆಹಲಿಯಲ್ಲಿ ೧೯೬೦ನೇ ಜನವರಿ ೨೬ರಂದು ಸವಾರಿ ಮಾಡುತ್ತಿರುವುದನ್ನು ಕಾಣಬಹುದು.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಕುಂದಾಪುರ ಅಸಿಸ್ಟ್ಯಾಂಟ್ ಕಮಿಶನರ ಕೋರ್ಟಿನಲ್ಲಿ

O. P 218/1960.

H. ಅನಂತಯ್ಯ —ಅರ್ಜಿದಾರ.

1 ರುಕ್ಕು ಹೆಂಗ್ಸು ದೇವಡಿಗ ತಿಮ್ಮಿ ಹೆಂಗ್ಸಿನ ಮಗಳು 2 ನರಸ ರುಕ್ಕು ಹೆಂಗ್ಸಿನ ಮಗ ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದಲ್ಲಿರುವವರು. --ಎದ್ರಿರು.

ಸದ್ರಿ ಎದ್ರಿರಿಗೆ ತಿಳಿಯಪಡಿಸುವುದೇನೆಂದರೆ–

ಮೇಲಿನ ಅರ್ಜಿಯಲ್ಲಿ ಕಾಣಿಸಿದ ಸ್ಥಳಗಳನ್ನು ಅರ್ಜಿದಾರನ ಸ್ವಾಧೀನ ಬಿಡಿಸಿಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅರ್ಜಿಯನ್ನು ತಾ. 30–4–1960 ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಯಿದ್ದರೆ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಯಕ್ಸ್ ಪಾರ್ಟಿ ಮಾಡಲಾದೀತೆಂತ ಕೋರ್ಟು ಹುಕ್ಕುಂ ಮೇರೆಗೆ ತಿಳಿಸಿರುತ್ತದೆ.

By order of the Court

Y. Tejappa Shetty.

Advocate for Petitioner.

Coondapoor 17—4—1960.

ಕಲಾದರ್ಶನ

ವಿರಾಟನಗರಿಯ ಅಸಂಖ್ಯ ಕಲಾಮೂರ್ತಿಗಳು

ಪಾಂಡವವಂಶದ ರತ್ನಸೇನನು ಕಟ್ಟಿಸಿದ ಆರುನೂರು ಮಠಗಳ
ಸಾವಿರಾರು ಹಿಂದೂ-ಜೈನ ಮೂರ್ತಿಗಳು ಇಲ್ಲಿ
ದಾತಾರರಿಲ್ಲದೆ ಕೊಳೆಯುತ್ತಿವೆ!

ಇಂದು ನಿನ್ನೆಯ ಘಟನೆಗಳನ್ನು ಸಂಸ್ಮರಿಸಿಕೊಂಡು ಹಲವಾರು ಕಥೆಗಳು ಹುಟ್ಟಿಕೊಂಡಿವೆ. ನಾಳೆಯದನ್ನು ಕಲ್ಪನಾ ಸಾಮ್ರಾಜ್ಯದಲ್ಲಿ ವರ್ಣಿಸಿರುವುದನ್ನೂ ನಾವು ಕಾಣುತ್ತೇವೆ. ದಿನವಾಂರಾದಿಗಳ ವಿವರಜೋಡಣೆಯಿರುವ ಕಥೆಗೆ ಇತಿಹಾಸವೆಂದು ಕರೆಯುತ್ತಾರೆ. ಸಮಯ ಸಾಗರದಲ್ಲಿ ಅದೆಷ್ಟು ಕಥೆಗಳು ಕಳೆದು ಹೋಗಿವೆಯೋ ದರೂ ಜನನಾಲಿಗೆಯಲ್ಲಿ ಈ ಕಥೆಗಳ ಆಭಾಸ ಕಿಂಚಿತ್ತಾದರೂ ಇರುವುದುಂಟು. ಇನ್ನು ಕೆಲವು ಎಂದೋ ಮಾಯವಾಗಿ ಹೋಗಿವೆ. ಇತಿಹಾಸ ಸಂಗ್ರಹಿಸ ಬೇಕಾದುದು ಸಾಗರದಷ್ಟು; ಸಾಧಿಸಿದುದು ತಂಬಿಗೆಯಷ್ಟೂ ಇಲ್ಲ. ಜಿಜ್ಞಾಸೆ, ಆಸಕ್ತಿ, ಅಧ್ಯವಸಾಯಗಳು ಮಾನವನನ್ನು ಆ ವಿಶಾಲ ಸಾಗರದತ್ತ ಹೋಗಲು ಪ್ರೇರೇಪಿಸುತ್ತವೆ. ಅಲ್ಲಿನ್ನು ಮುಳುಗು ಹಾಕಿದಲ್ಲಿ ಕೆಲವಾದರೂ ಮುತ್ತುಗಳು ದೊರೆಯಬಹುದು; ಅವನ್ನೇ ನಾವು ಸಂಶೋಧನೆಯೆನ್ನುತ್ತೇವೆ. ಆದರೆ, ಹೀಗೆ ಸಮಯ ಸಾಗರದಲ್ಲಿ ಸಂಶೋಧನಾಕಾರ್ಯವೆಸಗುವುದೇನೂ ಸುಲಭಕಾರ್ಯವಲ್ಲ. ಸಂಶೋಧನೆಗಳಿಂದ ಇತಿಹಾಸದ ಮೇಲೆ ಹೊಸ ಬೆಳಕು ಬೀಳುವುದು ಇದು ಮಾತ್ರ ನಿಶ್ಚಯ.

ನಮ್ಮ ಪುರಾಣಗಳ ಕಥೆಗಳಾದರೋ ತುಸು ಇದೇ ಮಾದರಿಯವು. ಕಥೆಯ ಮೆಟ್ಟಿಲುಗಳು ನಮಗೆ ದೊರೆಯುತ್ತವೆ; ಇತಿಹಾಸಲಿಖಿಸುವುದು ಮಾತ್ರ ನಮ್ಮ ಕೆಲಸ. ಈ ಉದ್ದೇಶದಿಂದ ನಾವು ಕೆಲವರು ವಿರಾಟನಗರ ಯಾತ್ರೆ ಕೈಗೊಂಡೆವು. ಅಲ್ಲಿನವರು ಈ ನಗರವನ್ನು ಬರಹಟಾ ಅಥವಾ ಬರೈಠಾ ಎನ್ನುತ್ತಾರೆ. ನಮಗೆ ದಾರಿಯಲ್ಲೇನೂ ಕಷ್ಟಗಳು ಒದಗಲಿಲ್ಲ. ಜೀಪನ್ನು ಅಂಗಿತೊಟ್ಟ ಎತ್ತಿನ ಗಾಡಿಯೆಂದು ಕರೆಯುವವರಲ್ಲಿ ನಾನೂ ಒಬ್ಬ ಆದು ಕೆಲವೆಡೆ ತನ್ನ ಪ್ರತಾಪ ಪ್ರದರ್ಶಿಸಿತು. ಆದರೂ ಒಂದು ಧೈರ್ಯ ನಮಗೆ—ಜೀಪಿನ ಡ್ರೈವರ ಸಾಹೇಬ ಆಕ್ಸಿಡೆಂಟ್ ಎಕ್ಸ್‌ಪರ್ಟ್ (ಅಪಘಾತ ಪಂಡಿತ) ಎಂದು. ಕೆಲವೇ ದಿನಗಳಿಗೆ ಮೊದಲು ಆತ ಮೂರು ಕುಲಟೆಯರನ್ನು ಆಹುತಿ ತೆಗೆದುಕೊಂಡೂ ಜೀಪಿನ ಮಾಲಿಕನನ್ನು ಮನೆಮುಟ್ಟಿಸಿದ್ದ!

ನಾವು ಎಂಟು ಜನರು ವಿರಾಟನಗರವನ್ನು ಸೇರಿದೆವು. ಅಲ್ಲಿ ನಮ್ಮೊಡನೆ ಒಬ್ಬರು ಕೂಡಿಕೊಂಡರು. ಇವರಿಲ್ಲದಿರುತ್ತಿದ್ದರೆ, ನಮ್ಮ ಸಂಶೋಧನಾ ಪ್ರವಾಸವು ವಿಹಾರಕೂಟ ಮಾತ್ರವಾಗುತಿತ್ತು.

ಜೀಪ್‌ಗಾಡಿ ಮಾಡಿಲ್ಲದ ಒಂದು ಭಗ್ನಾವಶೇಷದ ಮಂದಿರದಲ್ಲಿ ಹೋಗಿ ನಿಂತಿತು. ಅಲ್ಲಿ ಅನೇಕ ಮೂರ್ತಿಗಳಿದ್ದುವು. ಇವುಗಳಲ್ಲಿ ಹೆಚ್ಚಿನವು ಜೈನ ವಿಗ್ರಹಗಳು. ಶಂಕರ ಮತ್ತು ಗಣೇಶರ ಮೂರ್ತಿಗಳೂ ಅಲ್ಲಿದ್ದುವು. ಕೆಲವು ಸಾಧುಗಳು ಎಲ್ಲೆಲ್ಲೋ ಸೀರುಕುಡಿಯುತಿದ್ದ ವಿಗ್ರಹಗಳನ್ನು ತಂದು ಇಲ್ಲಿ ರಾಶಿಹಾಕಿದ್ದರೆಂದು ಹೇಳುತ್ತಾರೆ. ಅವಶೇಷಗಳ ಪಕ್ಕದಲ್ಲಿ ಒಬ್ಬ ಕುಂಬಾರನ ಮನೆಯಿದೆ. ಈ ಮನೆ ಬಾಗಿಲಲ್ಲಿ ಎರಡು ಮೂರ್ತಿಗಳಿವೆ. ಆ ಮನೆಯ ಗೃಹಿಣಿಯು ಮನೆಯ ಗೋಡೆಯಲ್ಲಿ ಒಂದು ವಿಗ್ರಹವಿರುವುದೆಂದೂ ಅದು ಪ್ರತಿರಾತ್ರಿಯೂ ಸ್ವಪ್ನದಲ್ಲಿ ತನ್ನನ್ನು ಹೊರತೆಗೆಯುವಂತೆ ಪ್ರಾರ್ಥಿಸುವುದೆಂದೂ ಧನಾಭಾವದಿಂದಾಗಿ ಅದನ್ನು ಹೊರಗೆ ತೆಗೆದಿಲ್ಲವೆಂದೂ ಹೇಳುತ್ತಾಳೆ. ನಮ್ಮೊಡನೆ ಅಲ್ಲಿ ಸೇರಿಕೊಂಡ ವಿಶಾರದರು ಈಸ್ಟ್ ಇಂಡಿಯಾ ಕಂಪೆನಿಯು ಇಲ್ಲಿನ ಅನೇಕ ಮೂರ್ತಿಗಳನ್ನು ಮಾರಿತ್ತೆನ್ನುತ್ತಾರೆ. ಕೆಲವೊಂದು ಅಲ್ಲಿನ ಅವಶೇಷಗಳನ್ನು ಬೇರೆ ಬೇರೆಡೆಗಳಿಗೆ ಒಯ್ಯಲಾಗಿತ್ತೆಂದೂ ತಿಳಿಯುತ್ತದೆ. ನರಸಿಂಹಪುರದ ವಸ್ತು ಸಂಗ್ರಹಾಲಯದಲ್ಲಿ ಇಲ್ಲಿನ ಕೆಲವು ಮೂರ್ತಿಗಳಿವೆ. ಸಿಂಹಪುರದ ಲಕ್ಷ್ಮೀನಾರಾಯಣ ದೇವಾಲಯದಲ್ಲಿನ ಪರುಷಗಲ್ಲಿನ ಒಂದು ಮೂರ್ತಿಯೂ ಇಲ್ಲಿನದ್ದಾಗಿದೆ. ಇದನ್ನು ಬಿಲ್ಹೇರಿಯ ಮಹಾರಾಣಿ ಕತ್ತಿಸಿದ್ದಳೆಂದು ಹೇಳುತ್ತಾರೆ. ಇಲ್ಲಿನ ಒಂದು ವಿಷ್ಣುಮೂರ್ತಿಯನ್ನು ಬರ್ಲಿನ್ ನಗರಕ್ಕೂ ಒಯ್ಯಲಾಗಿತ್ತೆಂದೂ ಗೊತ್ತಾಗುತ್ತದೆ.

ಇಲ್ಲಿ ಲಭ್ಯವಿರುವ ಮೂರ್ತಿಗಳ ಬಗ್ಗೆ ಅನೇಕ ತಿಳುವಳಿಕೆಗಳು ಇವೆ. ಗ್ರಾಮದ ಪ್ರತಿ ಮನೆಯಲ್ಲಿಯೂ ನಾಲ್ಕಾರು ಮೂರ್ತಿಗಳನ್ನಿಟ್ಟುಕೊಂಡು ಗೃಹಸ್ಥರು ಅವನ್ನು ಪೂಜಿಸುತ್ತಿರುತ್ತಾರೆ. ಆದರೆ, ಆ ಮೂರ್ತಿಗಳ ಬಗ್ಗೆ ಅವರಿಗೇನೂ ತಿಳಿದಿರವುದಿಲ್ಲ. ಜೈನ ತೀರ್ಥಂಕರ ಪಾರ್ಶ್ವನಾಥನ ಮೂರ್ತಿಯು ಶೇಷನಾಗನಾಗಿ ಪೂಜೆ ಪಡೆಯುತ್ತದೆ. ಜೈನ ಸತಿ ರಾಜುಲ್ದೇವಿಯದನ್ನು ದ್ರೌಪದಿಯೆನ್ನುತ್ತಾರೆ. ಕೆಲ ವಿಗ್ರಹಗಳಿಗೆ ಕುಂಕುಮವನು ಲೇಪಿಸುತ್ತಾರೆ. ಕೆಲವಕ್ಕೆ ಮ್ಮ ತ್ತಿಕೆ ಹಚ್ಚಿದ್ದಾರೆ. ವಿರಾಟನಗರದಿಂದ ತುಸು ದೂರದಲ್ಲಿ 'ಪುತಲೀ ಖೋಹ್' ಎಂಬ ಸ್ಥಳವನ್ನು ನಾವು ಕಂಡೆವು. ಇದು ಮೂರ್ತಿ ಶಿಲ್ಪಕಾರರ ಆವಾಸಸ್ಥಾನವಾಗಿದ್ದಂತೆ ತಿಳಿಯುತ್ತದೆ. ಹೆಸರೂ ಈ ಮಾತನ್ನು ಸ್ಪಷ್ಟೀಕರಿಸುತ್ತದೆ. 'ಪಾಪನಗಂಗಾಕುಂಡ' ಎಂಬ ಇನ್ನೊಂದು ಸ್ಥಳವೂ ಸಮೀಪದಲ್ಲಿದೆ. ಒಂದು ಚಿಕ್ಕ ಕೊಂಡದ ಸುತ್ತ ಮುತ್ತ ದೇವಾಲಯಗಳಿದ್ದು ಇವುಗಳಲ್ಲಿ ನರಸಿಂಹ, ಗರುಡ ಮತ್ತು ಸೂರ್ಯರ ಮೂರ್ತಿಗಳಿವೆ. ಈ ಕುಂಡದ ನೀರು ಕಬ್ಬಿಣ ಮುಳುಗಿದ ನೀರಿನಂತೆ ಕಂಡುಬರುವುದರಿಂದ, ಇದರಲ್ಲಿ ಹಳೆಯ ಆಯುಧಗಳು ಮುಳುಗಿರಬಹುದು.

ವಿರಾಟನಗರ ಮತ್ತು ಪುತಲೀಖೋಹಗಳ ನಡುವೆ ಒಂದು ಗುಡ್ಡವಿದ್ದು ಅದರ ಡಿ ಮಾನವ ಕರಕೌಶಲವು ತೋರಿಬರುತ್ತದೆ. ಮಧ್ಯಪ್ರದೇಶದಲ್ಲಿ ಒಂದು ಸ್ತೂಪವಿದ್ದಿತೆಂದು ಅಂಬೋಣವಿದೆ. ಈ ಬೆಟ್ಟವನ್ನು ಅಗೆದಲ್ಲಿ ಆ ಭೂಗತ ಸ್ತೂಪದ ಅಸ್ತಿತ್ವದ ಮೇಲೆ ಪ್ರಕಾಶ ಬೀಳಬಹುದು. ಸಮೀಪದಲ್ಲಿಯೇ ಒಂದು ಕಾಲುವೆ ತೋಡಲು ಅಗೆದಾಗ ಐದು ನರಮುಂಡ, ಅಷ್ಟಧಾತುನಿರ್ಮಿತವಾದ ಒಂದು ವಿಗ್ರಹ ಮೊದಲಾದುವು ದೊರೆತಿವೆಯೆಂದೂ ಈ ಮೂರ್ತಿಯನ್ನು ಒಬ್ಬ ಸನ್ಯಾಸಿ ಕೊಂಡು ಹೋಗಿರುವನೆಂದೂ ತಿಳಿಯುತ್ತದೆ. ಹಾಗೆಯೇ ಐವತ್ತು ವರ್ಷಗಳಿಗೆ ಮೊದಲು ಇಬ್ಬರು ವ್ಯಕ್ತಿಗಳು ಒಂದು ನಕ್ಷೆಯನ್ನು ಹಿಡಿದುಕೊಂಡು ಬಂದು, ಯಜ್ಞಕ್ಕಾಗಿ ದ್ವಾಪರದ ಇಟ್ಟಿಯನ್ನು ಕೊಂಡುಹೋದರೆಂದೂ ಹೇಳಲಾಗುತ್ತಿದೆ. ಕೆಂಪು ಬಣ್ಣದ ಒಂದು ಮೊಳ ಉದ್ದ, ಒಂದಡಿ ಅಗಲ ಮತ್ತು ಆರಂಗುಲ ದಪ್ಪದ ಇಂತಹ ಇಟ್ಟಿಗೆಗಳು ಈಗಲೂ ಇಲ್ಲಿವೆ. ಈ ಪ್ರದೇಶವನ್ನು ಅಗೆಯುವುದರಿಂದ ಮತ್ತೂ ಹೆಚ್ಚಿನ ಜ್ಞಾನ ಸಾಧನಗಳನ್ನು ನಾವು ಪಡೆಯಬಹುದೆಂದು ತೋರುತ್ತದೆ.

ಜೈನ ಮತ್ತು ಹಿಂದೂ ಸಂಸ್ಕೃತಿಗಳು ಕಲ್ಲುಗಳ ಮೂಲಕ ಆಲಿಂಗನ ಪಡೆದಿರುವುದು ಇಲ್ಲಿ ದೃಗ್ಗೋಚರವಾಗುವುದರಿಂದ "ನಗಛ್ಛೇತ್ ಜೈನ ಮಂದಿರ" ಉದ್ಘೋಷಣೆ ಕೊಡುವುದಕ್ಕೆ ಮೊದಲಿನ ಕಾಲದ ಶಿಲ್ಪಕಲೆಯಿದೆಂದು ನಿಸ್ಸಂದೇಹ. ರಾಜ ರತ್ನಸೇನನ ಕಾಲಕ್ಕೂ ಈ ಕಲಾಮಾದರಿಯ ಕಾಲಕ್ಕೂ ಊದಂತ ಕಥೆಗಳು ಸಂಬಂಧ ಜೋಡಿಸುತ್ತವೆ. ರತ್ನಸೇನನ ರಾಜ್ಯ ವಿಲಾಸಪುರದಿಂದ ವಿರಾಟನಗರದವರೆಗೆ ಹರಡಿತ್ತಂತೆ. ವಿಲಾಸಪುರದ ಸಮೀಪವಿರುವ ರತ್ನಪುರವನ್ನು ಈತನೇ ನಿರ್ಮಿಸಿದನೆನ್ನುತಾರೆ. ಪಾಂಡವವಂಶದ ಈ ರಾಜನ ರಾಜ್ಯವು ಬಿಂದುಸಾರನ ಸಾಮ್ರಾಜ್ಯದಲ್ಲಿ ಅಂತರ್ಗತವಾಗಿತ್ತು. ಮಹಾವೀರ ಸ್ವಾಮಿಯ ಪ... ಶರಣದಲ್ಲಿ ಈ ಬಿಂದುಸಾರನು ರಾಜ ... ಣಿಕನೆಂಬ ಹೆಸರಿನಿಂದ ಪ್ರಸಿದ್ಧನಾಗಿ... ನೆಂದು ಜೈನರ ಅಂಬೋಣವಿದೆ. ರತ್ನ ಸೇನನು ಆರುನೂರು ಮಠಗಳನ್ನು ಕಟ್ಟಿಸಿದನೆಂದೂ ತಿಳಿಯುತ್ತದೆ. ಆದು... ದ, ವಿರಾಟನಗರದಲ್ಲಿ ತೋರಿಬರುವ ... ಅವಶೇಷಗಳು ಈ ಮಠಗಳದ್ದೆಂದು ... ಕೊಂಡರೆ, ಅದು ತಪ್ಪೆನಿಸದು. ಇಲ್ಲಿ ... ಗೆ ಹಿಂದೂ ಮೂರ್ತಿಗಳಿರುವುದರಿಂದ ರತ್ನ ಸೇನನು ಪಾಂಡವವಂಶದ ಕ್ಷತ್ರಿಯನಾ... ದುದೂ ಕಾರಣವಿರಬಹುದೆಂದು ತೋರುತ್ತದೆ. ಈ ಪ್ರದೇಶದಲ್ಲಿ ಇಂದಿಗೂ ... ಕೆಲವು ಕ್ಷತ್ರಿಯ ವಂಶಜರು ವಾಸವಾ... ರುವುದೂ ಅವರು ತಮ್ಮನ್ನು ಕೌರವ... ಶದವರೆಂದು ಹೇಳಿಕೊಳ್ಳುವುದೂ ಇದಕ್ಕೆ ಸಂವಾದಿಯಾಗಿದೆ.

ಇದರಿಂದ ಈ ಶಿಲ್ಪಕಲೆಯ ಕಾಲ... ದ್ವಾಪರಯುಗದ ಕಾಲಕ್ಕೆ ಹೋಗುತ್ತದೆ. ದ್ವಾಪರಯುಗದ ಚಿತ್ರವೂ ಮು... ಬರುತ್ತದೆ. ಚಾಂದೇರಿಯು ಶಿಶುಪಾಲ... ರಾಜಧಾನಿಯಾಗಿತ್ತು. ದ್ರೌಪದೀ ... ಯಂವರದ ಸಮಯದಲ್ಲಿ ಕರ್ಣನು ಕ್ಷ... ಯನಲ್ಲವೆಂಬ ಪ್ರಶ್ನೆ ಉದ್ಭೂತವಾಗ... ಆತನು ಮುಂದೆ ಅಂಗಾಧಿಪತಿಯಾದ... ಷ್ಟೆ? ಅಂಗದೇಶದ ಸೀಮೆಯು ಒರಿಸ್ಸಾ... ಸಂಬಲಪುರ ಮತ್ತು ಛೋಟಾನಾಗಪುರದ ನಡುವೆಯಿತ್ತು ಎಂದು ಹೇಳುತ್ತಾರೆ. ಪಾಂಡವರು ತಮ್ಮ ವನವಾಸಕಾಲವನ್ನು (ವರ್ತಮಾನ ಖಂಡವಾ ಜಿಲ್ಲೆ) ಖಾ... ವನದಲ್ಲಿ ಕಳೆದಿದ್ದರು. ಮುಂದವರು ಅಜ್ಞಾತವಾಸವನ್ನು ವಿರಾಟನಗರಿಯಲ್ಲಿ ಕಳೆದರಲ್ಲವೆ? ಈ ನಗರದ ಸುತ್ತುಮುತ್ತಣ ನಿಸೃಷ್ಟಿ ಸೌಂದರ್ಯವನ್ನು ಯಾರೂ ಮ... ಯಲಾರರು. ಸಿಹಿನೀರಿನ ಕಲಕಲನಾದ ಸಹಿತವಾಗಿ ಹರಿಯುವ ನಿರ್ಝರಿಗಳು, ಫಲಪುಷ್ಪಗಳಿಂದ ತುಂಬಿದ ವನಸ್ಪತಿಗಳು ಪಾಂಡವರಿಗೆ ಬೆಚ್ಚಗಿನ ಸ್ವಾಗತವನ್ನು ನೀಡಿರಬಹುದು. ವಿರಾಟನು ತ್ರಿಗರ್ತನೆಂಬ ಭಿಲ್ಲರಾಜನಿಂದ ಗೆದ್ದುಕೊಂಡು ಇಲ್ಲಿ ರಾಜ್ಯವಾಳುತಿದ್ದನು. ಧರ್ಮರಾಜ ಯುಧಿಷ್ಠಿರ ಇಲ್ಲಿಯೇ ಪುರೋಹಿತನಾಗಿರಬಹುದು, ಭೀಮಸೇನನ ಸುಗಂಧಯುಕ್ತ ಪಾಕ ಪರಿಮಳ ಇಲ್ಲಿಯೇ ಹರಡಿರಬಹುದು. ದುಷ್ಟ ಕೀಚಕನು ಇಲ್ಲೇ ಯಾವುದೇ ಬಂಡೆಗೆ ಬಡಿಯಲ್ಪಟ್ಟು ಜೀವ ಬಿಟ್ಟಿರಬಹುದು. ದ್ರೌಪದಿಯು ಭೀಮನ ಪರಾಕ್ರಮವನ್ನು ಸಂತೋಷದಿಂದ ಕಂಡು ನಿಂತಿದ್ದಿರಬಹುದು. ಗಾಂಡೀವಧಾರಿ ಅರ್ಜುನನು ಬೃಹನ್ನಳೆಯಾಗಿ ಗೆಜ್ಜೆಯನಾದದಿಂದ ಈ ಬಾಲೆಯನ್ನು ಪ್ರತಿಧ್ವನಿತಗೊಳಿಸಿರೆ, ಬಹುಮಾ... ತನ್ವಂಗಿ ಉತ್ತರೆಯ ದೇಹಲತೆಯು ತಾ... ದಕ್ಕೆ ಸರಿಯಾಗಿ ಇಲ್ಲೇ ಬಳುಕಾಡಿರಬೇಕು.

ಇಂತಹ ಅವಶೇಷಗಳ ಬಗ್ಗೆ ಇನ್ನು ಹೆಚ್ಚಿನ ಸಂಶೋಧನೆ ನಡೆದರೆ, ಕಾಲಗರ್ಭದಲ್ಲಿ ಅಡಗಿದ ಇತಿಹಾಸವು ಸುಸ್ಪಷ್ಟವಾಗಲು ಸಹಾಯವಾಗುವುದು.

(ರಾಜೇಂದ್ರ ಅನುರಾಗಿಯವರ ಹಿಂದೀ ಲೇಖನ ವೊಂದರಿಂದ)

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತವೆ.
P. DEVEE & CO. (M. I.) CALCUTTA—40
ಸ್ಟಾಕಿಸ್ಟರು: (1) ಪಾ ಕಂಪೆನಿ, ಮಂಗಳೂರು—1.

ನವಯುಗವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿ

ಕಥಾವಿಹಾರ

(೨ನೇ ಪುಟದಿಂದ)

ಾಟಕ್ಕೆ ಕೂಡಾ ನೂಲು ಸಿಗುತ್ತದೆ. ಆದಷ್ಟು ಸರಳವಾದ ಉಡಿಗೆ, ಗೆಯನ್ನು ಧರಿಸಬೇಕು. ನಾನು ಆ ದ ಬಟ್ಟೆಯನ್ನುಟ್ಟರೆ ಆದ ಪಂ ದೇಶದ ಬಟ್ಟೆಯ ಧಾರಣೆಯ ಮೇಲೆ ತ್ತದೆ ಎಂಬುದನ್ನು ಪ್ರತಿಯೊಬ್ಬರೂ ಬೇಕು. ಚಳಿಗಾಲದಲ್ಲಿ ಹೊದೆದು ಲು ಒಂದು ತುಂಡು ಬಟ್ಟೆ ಕೂ ಇಲ್ಲದೆ ಒದ್ದಾಡುವ ಅದೆಷ್ಟು ಜನ ಈ ದೇಶದಲ್ಲಿಲ್ಲ! ಇದಕ್ಕೆ ಸಿರಿವಂತ ಬಟ್ಟೆಯನ್ನು ಹೆಚ್ಚು ಹೆಚ್ಚು ಕೊಂ ಬಟ್ಟೆಯ ಧಾರಣೆಯನ್ನು ಏರಿಸುವು ಕಾರಣವಲ್ಲವೇ? ನಮ್ಮ ದೇಶವನ್ನು ೇದಯ ರಾಜ್ಯವಾಗಿ ಮಾಡಬೇಕು. ತೆಯ ಜೀವನದಲ್ಲಿ ಶಾಂತರೀತಿಯ ಂತಿಯಾಗಬೇಕಾಗಿದೆ. ಸಹಕಾರ ತ ದ ಮಹಿಮೆಯನ್ನಿನ್ನೂ ಜನರು ಕ ಬೇಕಾಗಿದೆ'' ಎಂದು ಕಿಟ್ಟು ಒಂ ಭಾಷಣ ಬಿಗಿದೇಬಿಟ್ಟನು.

'ಅದಿರಲಿ ಕಿಟ್ಟು, ನೀನೀಗ ನೂರಕ್ಕೆ ರು ನಯೇಪೈಸೆ ಗಾಂಧಿ—ವಿನೋಬಾ ಷ್ಯನಾದುದೇನೋ ಹೌದು. ಆದರೆ ಕಡೆ ಅಕಸ್ಮಾತ್ ಏನು ಕಾಲಿಟ್ಟು ್ಟಿ?'' ಎಂದು ಕೇಳಿದೆನು.

''ನಾನು ನಮ್ಮ ಅಕ್ಕಪಕ್ಕದ ಊ ಗಳಲ್ಲಿ ಗ್ರಾಮೋದ್ಧಾರಕ ಸಂಘ ರಚನೆಯ ಕಾರ್ಯವನ್ನು ಗೊಂಡಿದ್ದೇನೆ. ಅದಕ್ಕೆ......'' ಎಂದು ಳಿ ತನ್ನ ಮಾತನ್ನು ಅರ್ಧದಲ್ಲಿಯೇ ನಿ ಸಿದನು.

''ಅದಕ್ಕೇನು'' ಎಂದು ನಾನು ಕೇಳಿ ನು.

''ಅದಕ್ಕೆ ಆರ್ಥಿಕ ಸಹಾಯ ಬೇಕಾ. ಆದುದರಿಂದ ಈ ಪಟ್ಟಣವನ್ನು ಸುತ್ತಿ ಣ ಒಟ್ಟುಮಾಡಿಕೊಂಡು ಹೋಗೋ ಎಂದು ಬಂದೆ. ನೀನಂತೂ ಸಿಕ್ಕಿದೆ. ಹಳ ಒಳ್ಳೆಯದೇ ಆಯಿತೆನ್ನು''. ಎಂದು ೇಳಿದನು.

''ಕಿಟ್ಟೂ, ನನ್ನ ಸ್ಥಿತಿಗತಿ ನಿನಗೆ ಗೊ ರಬಹುದು. ನಾನೊಬ್ಬ ಬಡ ಲೇಖಕ, ತ್ರಿಕೋದ್ಯಮಿ. ಈಗಿನ ಕಾಲದಲ್ಲಿ ಲೇಖಕರ ಆರ್ಥಿಕ ಸ್ಥಿತಿಯ ಕುರಿತು ನಿನಗೆ ತಿಳಿದಿದೆಯಲ್ಲ'' ಎಂದೆನು.

''ಅಯ್ಯೋ ಮಂಕರಾಯಾ, ನಿನ್ನೊಡನೆ ಹಣ ಯಾರು ಕೇಳಿದ್ದಾರೆ? ನಿನಗಂತೂ ಈ ನಗರದಲ್ಲಿ ಹಲವಾರು ಮಂದಿ ಸಿರಿವಂತರ ಪರಿಚಯವಿದೆ. ಅವರ ಬಳಿ ನನ್ನನ್ನು ಕರಿದೊಯ್ದು ನನಗೆ ಹಣ ಸಹಾಯ ದೊರಕಿಸಿಕೊಟ್ಟರೆ ಸಾಕು'' ಎಂದು ಕಿಟ್ಟು ಹೇಳಿದನು.

''ಅದಕ್ಕೇನು? ನನಗೆ ಕೊಡುವ ಶಕ್ತಿಯಿಲ್ಲದಿದ್ದರೂ ಕೊಡುವವರನ್ನು ತೋರಿಸಿಕೊಡಲಾರೆನೇ?' ಎಂದೆನು.

ಕಿಟ್ಟು ''ನನಗೆ ನೀನು ಮಾಡುವ ಉಪಕಾರ ಆಜನ್ಮಪರ್ಯಂತರವೂ ಮರೆಯಲಾರೆನ್ದು' ಎಂದು ಹೇಳಿದನು. ಅಂದು ಸಂಜೆಯಲ್ಲಾ ನನ್ನ ಪರಿಚಯದ ಶ್ರೀಮಂತರ ಬಳಿಗೆ ಕಿಟ್ಟುವನ್ನು ಕರೆದೊಯ್ದು ಅವರಿಗೆ ಅವನ ಪರಿಚಯ ಮಾಡಿಸಿಕೊಟ್ಟೆನು. ಕಿಟ್ಟುವೂ ಅವರಿಗೆ ತನ್ನ ಗ್ರಾಮೋದ್ಧಾರಕ ಸಂಘದ ಕಾರ್ಯಕಲಾಪಗಳನ್ನು ರಸವತ್ತಾಗಿ ಬಣ್ಣಿಸಿದನು. ಹಲವರು ಆತನ ಮಾತಿಗೆ ಮರುಳಾಗಿ, ಇನ್ನು ಕೆಲವರು ನನ್ನ ಸಂಪಾದಕತ್ವದಲ್ಲಿ ಹೊರಡುವ 'ರಂಗಭೂಮಿ' ವಾರಪತ್ರಿಕೆಯಲ್ಲಿ ತಮ್ಮ ಉದಾರದಾನದ ವಿವರಣೆ ಬರುವುದೆಂದು, ಮತ್ತೆ ಕೆಲವರು ನನ್ನ ದಾಕ್ಷಿಣ್ಯಕ್ಕೆ ಕಟ್ಟುಬಿದ್ದೋ ಹಣವನ್ನಂತೂ ಕೊಟ್ಟರು. ಕಿಟ್ಟುವಿಗೆ ತುಂಬಾ ಆನಂದವಾಯಿತು. ಅವನು ಅಂದು ರಾತ್ರಿ ನಮ್ಮ ಬಿಡಾರದಲ್ಲೇ ಉಳಿದುಕೊಂಡನು. ''ಕಿಟ್ಟೂ, ಸೆಕೆಂಡ್ ಶೋ ಸಿನೆಮಾಕ್ಕೆ ಹೋಗೋಣವೇ?'' ಎಂದು ನಾನು ಕೇಳಿದರೆ, ''ಸಿನೇಮಾವೇ? ನನ್ನಂತಹ ವಿನೋಬಾ ಶಿಷ್ಯರು ಸಿನೇಮಾ ನೋಡುವುದುಂಟೇ? ಸಿನೇಮಾ ನೋಡಿ ಹಾಳುಮಾಡುವ ಹಣವನ್ನು ಹೊಟ್ಟೆಗಿಲ್ಲದೆ ನರಳುವ ಬಡವನಿಗೆ ಕೊಟ್ಟರಾಗದೇ?'' ಎಂದನು. ರಾತ್ರಿ ತುಂಬಾ ಹೊತ್ತಿನವರೆಗೆ ಅವನು ಖಾದಿಯ ಮಹತ್ವ, ಸರ್ವೋದಯ ಸಮಾಜ ಸ್ಥಾಪನೆ, ಸಮಾಜವಾದ ಮೊದಲಾದವುಗಳ ಕುರಿತಾಗಿ ತುಂಬಾ ಮಾತನಾಡಿದನು. ಕೊನೆಗೆ ನನಗೆ ನಿದ್ದೆಹತ್ತಿದ ಮೇಲೆಯೇ ಅವನ ಭಾಷಣ ಮುಗಿದದ್ದೆಂದು ಕಾಣುತ್ತೆ.

ಮರುದಿನ ಬೆಳಗ್ಗೆ ಕಿಟ್ಟು ಊರಿಗೆ ಹೋಗುವೆನೆಂದು ಹೇಳಿ ನಮ್ಮಲ್ಲಿಂದ ಹೊರಟನು. ಅಂದು ಆದಿತ್ಯವಾರವಾಗಿತ್ತು. ಮಧ್ಯಾಹ್ನ ರಾಮಕೃಷ್ಣಾ ಥಿಯೇಟರಿನಲ್ಲಿ ಮೆಟಿನಿ ಇದ್ದಿತ್ತು. ನಾನೂ ನನ್ನ ಗೆಳೆಯ ಗೋಪೂ ಸಿನೇಮಾಕ್ಕೆ ಹೋಗಿದ್ದೆವು. ಗೋಪು ನನ್ನ ಇನ್ನೊಬ್ಬ ಹಳೆಯ ಸಹಪಾಠಿ. ಈಗವನು ಹಲವು ವರ್ಷಗಳಿಂದ ಮಂಗಳೂರಿನಲ್ಲಿ ಇದ್ದಾನೆ. ಏನೋ ಒಂದು ಕೆಲಸದ ನಿಮಿತ್ತವಾಗಿ ಉಡುಪಿಗೆ ಬಂದವನು ನನ್ನನ್ನು ಭೆಟ್ಟಿಯಾಗಿ ಹೋಗೋಣವೆಂದು ಬಂದಿದ್ದನು. ನಾನೂ ಅವನೂ ಕೂಡಿ ಸಿನೇಮಾಕ್ಕೆ ಹೊರಟೆವು. ಸಿನೇಮಾವನ್ನು ನೋಡಿದುದಾಯಿತು. ಸಿನೇಮಾ ಬಿಟ್ಟು ಹೊರಬರುವಾಗ ಸಿನೇಮಾ ನೋಡಿ ಮರಳುವವರ ಗುಂಪಿನಲ್ಲಿ ಒಬ್ಬಾತನನ್ನು ನೋಡಿ ನಾನು ಬೆಚ್ಚಿಬಿದ್ದೆ. ಅವನು ಬೇರಾರೂ ಆಗಿರದೆ ವಿನೋಬಾರ ಶಿಷ್ಯನೆಂದು ಹೇಳಿಕೊಳ್ಳುವ, ಗ್ರಾಮೋದ್ಧಾರಕ ಸಂಘ ಸ್ಥಾಪಕನೆಂದು ಕರೆದುಕೊಳ್ಳುವ ನನ್ನ ಹಳೆಯ ಗೆಳೆಯ ಕಿಟ್ಟು. ಇಂದು ಆತನ ಮುಖದಲ್ಲಿ ಅರ್ಧ ಅಡಿ ಉದ್ದದ ಗಡ್ಡವಿಲ್ಲ. ದೇಹದಲ್ಲಿ ಖಾದಿಯ ಬಟ್ಟೆಯಿಲ್ಲ. ಬದಲಿಗೆ ಚೆನ್ನಾಗಿ ಇಸ್ತ್ರಿ ಹಾಕಿದ ಪೇಂಟನ್ನೂ, ಅಂಗಿಯನ್ನೂ ಹಾಕಿಕೊಂಡಿದ್ದನು. ಬಾಯಿಯಲ್ಲಿ ಸಿಗರೇಟೂ ಇದ್ದಿತ್ತು. ನನ್ನ ಕಣ್ಣುಗಳನ್ನೇ ನಾನು ನಂಬಲಾರದಾದೆನು.

ಅಬ್ಬಾ! ಇದೆಂತಹ ಆಶ್ಚರ್ಯ! ಕಿಟ್ಟುವೂ ಒಬ್ಬ ವೇಷಧಾರಿಯಾದನೇ? ಕೈಯಲ್ಲಿ ಕಾಸಿಲ್ಲದಾಗ ದೇಶಸೇವಕರ ಸೋಗನ್ನು ಹಾಕಿ ಜನರನ್ನು ವಂಚಿಸಿ ಹಣ ಸೆಳೆಯುವ ದುಷ್ಕೃತ್ಯವನ್ನು ಕಿಟ್ಟುವೂ ಆರಂಭಿಸಿದನೇ? ಎಂದು ವಿಚಾರಮಂಥನಕ್ಕೊಳಗಾದೆನು. ಥಕ್ಕನೆ ''ಕಿಟ್ಟೂ'' ಎಂದು ಕರೆದೆನು. ಆದರೆ ಅವನು ತಿರುಗಿ ಹಿಂದೆ ನೋಡಲಿಲ್ಲ. ಸರಸರನೆ ನಡೆದು ಆ ಗುಂಪಿನಲ್ಲಿ ಎಲ್ಲೋ ಮಾಯವಾದನು.

ಗೆಳೆಯ ಗೋಪುವಿನೊಡನೆ ನಡೆದುದನ್ನು ಹೇಳಲು ಅವನು—''ಅಬ್ಬಾ! ಇಲ್ಲಿಗೂ ಬಂದು ನಿಮ್ಮನೆಲ್ಲಾ ವಂಚಿಸಿದನೇ? ಕಳೆದ ವರ್ಷ ಮಂಗಳೂರಿಗೆ ಬಂದು ನನ್ನ ಕೂಡೆ ಹಲವುಮಂದಿ ಶ್ರೀಮಂತರ ಬಳಿಗೆ ಹೋಗಿ ಗ್ರಾಮಸುಧಾರಕನೆಂದು ಹೇಳಿಕೊಂಡು ಹಣ ಪಡೆದು ಹೋಗಿದ್ದನು. ಆದರೆ ಅಂದೇ ಸಂಜೆ ಕ್ಲಬ್ಬೊಂದರಲ್ಲಿ ಹಣವಿಟ್ಟು ಇಸ್ಪೀಟಾಡುತಿದ್ದನೆಂದು ನನ್ನೊಬ್ಬ ಗೆಳೆಯ ತಿಳಿಸಿದನು. ಆಗಲೇ ನನಗೆ ಕಿಟ್ಟುವಿನ ಗುಟ್ಟು ತಿಳಿದದ್ದು'' ಎಂದನು. ಇದನ್ನು ಕೇಳಿ ನಾನೊಂದು ನಿಟ್ಟುಸಿರುಬಿಟ್ಟೆ.

ಗೋಪು ಪುನಃ ನನ್ನೊಡನೆ, ''ಕಿಟ್ಟುವಿನ ತಂದೆ ರಾಮರಾಯರು ಸಾಯುವಾಗ ಇದ್ದ ಆಸ್ತಿಯನ್ನೆಲ್ಲಾ ಕಳೆದೇ ಸತ್ತಿದ್ದರಂತೆ. ಕಿಟ್ಟು ಜೀವನ ನಿರ್ವಹಣೆಗೆ ಯಾವುದಾದರೂ ಉದ್ಯೋಗ ದೊರೆಯುವುದೋ ಎಂದು ಬಹಳ ಹುಡುಕಿದನಂತೆ. ಆದರೆ ಯಾವ ಉದ್ಯೋಗವೂ ದೊರೆಯದಿರಲು ಈ ದೇಶಸೇವಕನ ಸೋಗು ಹಾಕಿರಬೇಕು' ಎಂದು ಹೇಳಿದನು.

ಇದನ್ನು ಕೇಳಿದ ಮೇಲಂತೂ ನನಗೆ ಬಹಳ ದುಃಖವಾಯಿತು. ಕಿಟ್ಟುವು ಹೀಗೆ ಊರೂರೂ ತಿರುಗಿ ಜನರನ್ನು ವಂಚಿಸಿ ಹಣ ಗಳಿಸಿ ಅದನ್ನು ತನ್ನ ಸುಖಕ್ಕಾಗಿ ಹಾಳುಮಾಡುವನಲ್ಲಾ ಎಂದು ವ್ಯಥೆಪಟ್ಟೆ. ಜೊತೆಗೆ ಇವನೆಂತಹ ವೇಷಧಾರಿಯೆಂಬ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟೆ!

(ಇದು ಕೇವಲ ಕಾಲ್ಪನಿಕ. ಯಾವ ವ್ಯಕ್ತಿಯನ್ನೂ ಕುರಿತಾಗಿ ಬರೆದುದಲ್ಲ.)

—ಪಾ. ಚಂದ್ರಶೇಖರ ಚಡಗ,
ಪಾಂಡೇಶ್ವರ.



ರೆಕ್ಕೆಗಳಿಲ್ಲದೇನೇ ಪ್ರೊಪೆಲ್ಲರುಗಳ ಸಹಾಯದಿಂದ ಹಾರಬಲ್ಲ ಏರೋಡೈನ್ ವಿಮಾನದ ಮಾದರಿಯಿದು. ಅಮೆರಿಕೆಯ ನೌಕಾಸೇನೆಯು ತಯಾರಿಸಿದ ಈ ಮಾದರಿಯ ವಿಮಾನಗಳು ಈ ವರ್ಷದಲ್ಲಿಯೇ ಪ್ರಯೋಗಿಸಲ್ಪಡುವುವು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 522/1956

R. E. P. 739/1959

B. ಕೃಷ್ಣದಾಸ ಭಟ್ಟ —ಅರ್ಜಿದಾರ.

ಮತ್ತು

ಚಂದ್ರಾವತಿ ಕೂಡಾ —ಎದ್ರಿರು.

1ನೆ ಎದ್ರಿರು ಚಂದ್ರಾವತಿ ಲಕ್ಷ್ಮಣರಾವ್ ರ ಪತ್ನಿ ಉಡುಪಿ ತಾಲ್ಲೂಕು ಕೆಳಾರ್ಕಳಬೆಟ್ಟು ಗ್ರಾಮ—

ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ

ಮೇಲ್ಕಂಡ ಅಮಲಜಾರಿಯಲ್ಲಿ ಅರ್ಜಿದಾರನ ಕಡೆ ಡಾಕ್ಲಾದ ಸ್ಥಿರಾಸ್ತಿ ಯೇಲಂ ಇಸ್ತ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ತಾ. 2—6—1960ಕ್ಕೆ ಯಿಟ್ಟಿರುವದ್ರಿಂದ ಆ ಕುರಿತು 1ನೇ ಎದ್ರಿಳಿಗೇನಾದ್ರೂ ಆಕ್ಷೇಪವಿದ್ದಲ್ಲಿ ಅದನ್ನು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವ್ಸ ಹಗಲು ಗಂಟೆ 11ಕ್ಕೆ ಹಾಜರ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಿಯದೆ.

K. Varadaraya Pai,
Advocate for Petitioner.

ಉಡುಪಿ ತಾ. 13—4—1960

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

NAVAYUGA
REGD. NO. M. 3619

UDIPI, THURSDAY
21-4-1960

LICENSE NO. 31
Licensed to Post without Prepayme

ವಿಚಾರವರ್ಷ

ವಸಾಹತುವಾದಕ್ಕೆ ಅಂತ್ಯಕಾಲ ನಿಕಟವಾಯಿತು

ಪೋರ್ಚುಗಾಲ-ಭಾರತಗಳ ನಡುವಣ ವಿವಾದಗಳ ಮೇಲೆ ಜಾಗತಿಕ ನ್ಯಾಯಾಲಯವಿತ್ತ ತೀರ್ಪು ಪೋರ್ಚುಗಾಲದ ವಸಾಹತುವಾದಕ್ಕೆ ಸಂಹಾರಪ್ರಾಯವಾಯಿತು.

ಭಾರತದಲ್ಲಿ ತನ್ನ ವಸಾಹತುಗಳನ್ನು ಇನ್ನೂ ಇಟ್ಟುಕೊಂಡಿರುವ ಪೋರ್ಚುಗಾಲವು ಅವನ್ನು ಭಾರತಕ್ಕೆ ಬಿಟ್ಟುಕೊಡಬೇಕು ಎಂದು ಬ್ರಿಟನ್ನಿನ ಪತ್ರಿಕೆ 'ಮೆಂಚೆಸ್ಟರ್ ಗಾರ್ಡಿಯನ್" ಅಗ್ರಹಪಡಿಸಿದೆ. ಎಪ್ರಿಲ್ ೧೨ರಂದು ಜಾಗತಿಕ ನ್ಯಾಯಾಲಯವು ಪೋರ್ಚುಗಾಲ ಮತ್ತು ಭಾರತಗಳ ನಡುವಿನ ವಿವಾದದ ಬಗ್ಗೆ ತನ್ನ ನಿರ್ಣಯವನ್ನು ಪ್ರಕಟಿಸಿದ್ದು ಇದರನ್ವಯ ಮರ್ಯಾದೆಯಿಂದ ತನ್ನ ಹಠಮಾರಿತನವನ್ನು ಬಿಟ್ಟು ಭಾರತದಲ್ಲಿನ ತನ್ನ ವಸಾಹತುಗಳನ್ನು ಭಾರತ ಒಕ್ಕೂಟದ ಅಂಗವಾಗಿ ಅನ್ನಿಸಿಕೊಳ್ಳಲು ಬಿಡಬೇಕೆಂದದು ಹೇಳಿದೆ.

೧೯೫೪ರಲ್ಲಿ ಪೋರ್ಚುಗೀಸ ವಸಾಹತುಗಳಾದ ದಾದ್ರ ನಗರ ಹವೇಲಿಗಳಲ್ಲಿ ಆಂತರಿಕ ಕ್ರಾಂತಿಯೆದ್ದಂದಿನಿಂದ ಪೋರ್ಚುಗಾಲವು ಅವುಗಳ ಮೇಲಿನ ತನ್ನ ಅಧಿಕಾರವನ್ನು ಕಳೆದುಕೊಂಡಿದೆ. ಅಲ್ಲಿಗೆ ಸೈನ್ಯವನ್ನು ಕೊಂಡೊಯ್ಯುವ ಅಧಿಕಾರ ತನಗಿದೆಯೆಂದು ಪೋರ್ಚುಗಾಲವು ಜಾಗತಿಕ ನ್ಯಾಯಾಲಯಕ್ಕೆ ದೂರಿಕೊಂಡಿತ್ತು. ಆದರೆ, ಭಾರತವು ಈ ವಾದವನ್ನು ಅಲ್ಲಗಳೆದಿದೆ ಮಾತ್ರವಲ್ಲದೇ ಜಾಗತಿಕ ನ್ಯಾಯಾಲಯಕ್ಕೆ ಈ ಸಂಬಂಧದಲ್ಲಿ ತೀರ್ಮಾನವೀಯುವ ಅಧಿಕಾರವಿಲ್ಲ ಎಂದೂ ವಾದಿಸಿದೆ. ಆದರೆ, ಜಾಗತಿಕ ನ್ಯಾಯಾಲಯವು ತನಗೆ ತೀರ್ಪುಕೊಡುವ ಅಧಿಕಾರವಿದೆಯೆಂದು ಹೇಳಿ, ಪೋರ್ಚುಗೀಸ ವಸಾಹತುಗಳಿಗೆ ಭಾರತವನ್ನು ಹಾದು ಹೋಗಬೇಕಾಗಿರುವುದರಿಂದ, ಭಾರತದ ಅನುಮತಿ ಮತ್ತು ನಿಯಂತ್ರಣಗಳಿಗೊಳಪಟ್ಟು ಸಾಮಾನ್ಯ ಜನರನ್ನು ಮಾತ್ರ ಒಯ್ಯುವ ಅಧಿಕಾರ ಪೋರ್ಚುಗಾಲಿಗಿರುವುದೆಂದೂ ಪೋಲೀಸು ಮತ್ತು ಸೈನ್ಯ ಅಥವಾ ಶಸ್ತ್ರಾಸ್ತ್ರಗಳನ್ನು ಒಯ್ಯಲು ಅದಕ್ಕೆ ಅಧಿಕಾರವಿಲ್ಲವೆಂದೂ ಈ ತೀರ್ಪಿನಲ್ಲಿ ಹೇಳಿರುವುದರಿಂದ, ಈ ಪ್ರಶ್ನೆಯ ಮೇಲೆ ತುಂಬ ಪರಿಣಾಮವಾಗಿರುವುದು.

ದಾದ್ರಾ ನಗರ ಹವೇಲಿಗಳಲ್ಲಿ ಸದ್ಯ ಅಲ್ಲಿನ ನಾಗರಿಕರದ್ದೇ ಸರಕಾರವಿದ್ದು, ಅದನ್ನು ಅಂತಾರಾಷ್ಟ್ರೀಯ ನ್ಯಾಯಾಲಯವು ಪರ್ಯಾಯವಾಗಿ ಮನ್ನಿಸಿದಂತಾಗಿದೆ. ಹೀಗಾಗಿ ೧೯೫೪ರಿಂದ ಪೋರ್ಚುಗೀಸರ ಅಂಕೆಯಲ್ಲಿದ್ದ ಅವು ಅವರ ಕೈಯಿಂದ ಸಂಪೂರ್ಣ ತಪ್ಪಿಹೋದಂತೆಯೇ ಎಂದು ಹೇಳಬಹುದು. ಆದುದರಿಂದ ಅಲ್ಲಿನ ನಾಗರಿಕರ ಅಪೇಕ್ಷೆಯಂತೆ ಭಾರತದೊಡನೆ ವಿಲಯನಗೊಳಿಸುವ ಅಥವಾ ಅಲ್ಲಿಗೆ ಹಿಂದಿನ ಫ್ರೆಂಚ ವಸಾಹತುಗಳಲ್ಲಿರುವಂತೆಯೇ ಪ್ರತ್ಯೇಕ ಸರಕಾರವನ್ನು ನಿರ್ಮಿಸುವ ಆದೇಶವನ್ನು ಭಾರತವು ನೀಡುವ ಉಚಿತಾನುಚಿತತೆಯನ್ನು ಪರ್ಯಾಲೋಚಿಸಬಹುದು.

ಭಾರತವು ಅಂತಾರಾಷ್ಟ್ರೀಯ ಕಾಯದೆಯನ್ನು ಮುರಿದಿದೆಯೆಂದು ಪೋರ್ಚುಗಲವು ದೂರಿಕೊಂಡಿತ್ತು. ತನಗೆ ಅಲ್ಲಿಗೆ ಶಸ್ತ್ರಾಸ್ತ್ರಾದಿಗಳನ್ನು ಒಯ್ಯಲು ಬಿಡದಿದ್ದುದರಿಂದ. ಆದರೆ, ಸದ್ಯ, ನ್ಯಾಯಾಲಯದ ತೀರ್ಮಾನದಲ್ಲಿ ಶಸ್ತ್ರಾಸ್ತ್ರಾದಿಗಳನ್ನು ಸಾಗಿಸುವ ಅಧಿಕಾರವೇ ಪೋರ್ಚುಗಲಿಗಿಲ್ಲವೆಂದು ಸುಸ್ಪಷ್ಟವಾಗಿ ಹೇಳಿರುವುದರಿಂದ, ಭಾರತವು ನ್ಯಾಯದ ದಾರಿಯನ್ನು ತಪ್ಪಿ ನಡೆದಿಲ್ಲ ಎಂಬುದು ಜಗಜ್ಜನಿತವಾದಂತಾಯಿತು.

ಇನ್ನು ಉಳಿದ ಗೋವಾ, ದಮನ್ ಮೊದಲಾದ ಪುಟ್ಟ ಪೋರ್ಚುಗಾಲದ ವಸಾಹತುಗಳ ಮೇಲೂ ಈ ತೀರ್ಮಾನದ ಪ್ರಭಾವ ಬೀರದಿರುವುದು ಸಾಧ್ಯವಿಲ್ಲ ಅಲ್ಲಿನ ಜನತೆಯು ತಮ್ಮ ಮೇಲಿರುವ ಪೋರ್ಚುಗೀಸ ಆಧಿಪತ್ಯವು ಕೊನೆಗೊಳ್ಳಬೇಕೆಂದು ಹಿಂದಿನಿಂದಲೂ ಬಯಸಿ ಅದಕ್ಕಾಗಿ ಹೋರಾಡುತ್ತಿದೆ. ಭಾರತವಾದರೂ ಈ ಹೋರಾಟಕ್ಕೆ ಸಹಾನುಭೂತಿಯನ್ನು ತೋರಿಸುತ್ತಿರುವುದಾದರೂ ಪೋರ್ಚುಗಾಲ ಬಂಧನವನ್ನು ಕಡಿದೊಗೆಯುವುದು ಅಲ್ಲಿನ ಭಾರತೀಯರ ಇಷ್ಟವಾದುದರಿಂದ ಪ್ರತ್ಯಕ್ಷ ಕ್ರಮ ಕೈಗೊಳ್ಳುವುದು ತುಸು ಕಷ್ಟವಾಗಿದೆ. ಆದರೂ ಪೋರ್ಚುಗೀಸರಿಗೆ ಶಸ್ತ್ರಾಸ್ತ್ರಾದಿಗಳನ್ನು ಭಾರತವನ್ನು ಹಾದುತರುವ ಸೌಕರ್ಯವಿಲ್ಲವೆಂದು ಈಗ ವ್ಯಕ್ತಪಟ್ಟಿರುವುದರಿಂದ ಅಲ್ಲಿನ ಆಂತರಿಕ ಅಶಾಂತಿಯು ಇನ್ನೂ ಬಲಿತು ವಿಮೋಚನಾ ಚಳವಳಿಯು ಅಲ್ಲಿ ಹೊಸ ರೂಪ, ನವಚೇತನವನ್ನು ಪಡೆಯಬಹುದೆಂದು ನಿರೀಕ್ಷಿಸಬಹುದು.

ಆದರೂ, ಇಷ್ಟೆಲ್ಲ ಅನಾವಶ್ಯಕ ಗೊಂದಲಗಳನ್ನು ಎಬ್ಬಿಸಿ ಅಪ್ರಿಯ ವಾತಾವರಣವನ್ನುಂಟುಮಾಡಿ ತನ್ನದಲ್ಲದ ದೇಶದಲ್ಲಿನ ವಸಾಹತನ್ನು ಬಿಟ್ಟುಕೊಡುವುದಕ್ಕಿಂತ ಫ್ರೆಂಚರ ವರ್ತನೆಯನ್ನು ಅನುಕರಿಸಿ ಪೋರ್ಚುಗಾಲವೂ ಮರ್ಯಾದಿತವಾಗಿ ತನ್ನ ವಸಾಹತುಗಳನ್ನು ತಾನಾಗಿಯೇ ಭಾರತದಲ್ಲಿ ವಿಲೀನಗೊಳ್ಳಲು ತೆರವು ಮಾಡಿ ಹೊರಟರೆ, ಅದರಿಂದ ಅದಕ್ಕೂ ಕೀರ್ತಿ, ಗೌರವ. ಇಲ್ಲವಾದರೆ. ಈಗಾಗಲೇ ಜನಾದರಣೆಗೆ ಎರವಾದ ಪೋರ್ಚುಗಾಲವು ಮತ್ತಷ್ಟು ಅಪ್ರಿಯವಾಗುವುದು ಖಂಡಿತವೆಂದು ಹೇಳಬಹುದು. ವಸಾಹತುವಾದವು ಕೊನೆಗೊಳ್ಳಬೇಕು ಎನ್ನುವ ೨೦ನೆ ಶತಮಾನದ ಉತ್ತರಾರ್ಧದ ಯುಗವಾಣಿಗೆ ಓಗೊಟ್ಟು, ವಿವೇಕಯುತವಾಗಿ ನಡೆಯುವುದರಿಂದ ಇಕ್ಕಡೆಯವರಿಗೂ ಕ್ಷೇಮ. ಇಲ್ಲವಾದರೆ, ಗೊಂದಲ, ಗಲಭೆ ಅಷ್ಟೇ. ಭಾರತದ ಅಂಗಗಳಾದ ಈ ವಸಾಹತುಗಳು ಸದ್ಯ ಅನ್ಯರ ಅಧೀನವಿದ್ದರೂ ಕೆಲವೇ ಸಮಯದೊಳಗೆ ಭಾರತದಲ್ಲಿ ಸೇರಿಹೋಗುವುದು ಮಾ[illegible] ನಿಶ್ಚಯವೇ. ಆ ಸುದಿನ ಇನ್ನೂ ಹೆ[illegible] ದೂರವಿರಲಾರದು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದ್ದುದರಿಂದ ಫ್ರಾನ್ಸ್ ನಿರುತ್ಸಾಹಿತವಾಯಿತು. ನವೋದಿತ ರಾಷ್ಟ್ರಗಳಿಗೆ ಪರಿಮಿತ ಪರಿಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ನೀಡುವುದು ಸಮಂಜಸವೆಂದು ಬ್ರಿಟನ್ ಮತ್ತು ಅಮೆರಿಕೆಗಳು ಅಭಿಪ್ರಾಯಪಟ್ಟುದರಿಂದ ಫ್ರಾನ್ಸ್ ದುಃಖಿತವಾಯಿತು. ಫ್ರಾನ್ಸ್ ಮುಂದಿಟ್ಟ ಗೊತ್ತುವಳಿಯು ಇದರಿಂದ ಭಗ್ನವಾಗಿ ಹೋದಂತಾಯಿತು. ಪಾಶ್ಚಾತ್ಯ ರಾಷ್ಟ್ರಗಳ ಸಂರಕ್ಷಣಾ ಪ್ರಣಾಳಿಯಲ್ಲಿ ವಿದೇಶಗಳಿಗೆ ಶಸ್ತ್ರಾಸ್ತ್ರವನ್ನು ನೀಡುವ ಯೋಜನೆಯು ಪ್ರಮುಖ ಪಾತ್ರ ವಹಿಸುವುದರಿಂದ, ಈ ಯೋಜನೆಯನ್ನು ಬಿಟ್ಟುಕೊಡುವುದು ಅದಕ್ಕೆ ಸಾಧ್ಯವಿಲ್ಲ. ಶಸ್ತ್ರಾಸ್ತ್ರ ಸಹಾಯದ ಪ್ರಮಾಣವನ್ನು ನೋಡುವುದಾದರೆ, ರಶ್ಯದ ಭಾಗವು ಈ ದೃಷ್ಟಿಯಲ್ಲಿ ಏನು ಕಡಿಮೆಯೇ. ಹೀಗೆ ಪಾಶ್ಚಾತ್ಯ ರಾಷ್ಟ್ರ ಪ್ರಮುಖರಲ್ಲಿ ಈ ರೀತಿಯ ಬಿಕ್ಕಟ್ಟು ಕಾಣಿಸಿಕೊಂಡಿರುವಾಗ, ಮುಂದಿನ ಫಲ ಯಾವ ಪ್ರಕಾರದ್ದಾಗಬಹುದು ಎಂದು ಈಗಲೇ ಹೇಳುವಂತಿಲ್ಲವಾದರೂ ಅಪೇಕ್ಷೆಯು ಹೇಳುವಂತೆ ಯಾವುದೇ ಪರಿಣಾಮಕರ ನಿರ್ಧಾರಗಳು ಯಶಸ್ವಿಯಾಗಿ ಕಾರ್ಯಕೃತವಾಗುವುವು ಎಂದು ಹೇಳಲು ಆಧಾರಗಳು ಸಾಲವು.

ಮೇ ೧೬ರಂದು ಈ ತ್ರಿರಾಷ್ಟ್ರಗಳ ಪ್ರಧಾನರು ಪೇರಿಸಿನಲ್ಲಿ ಒಂದುಸೇರುವರೆಂದೂ, ಅಲ್ಲಿ ಸಾಧ್ಯವೆನಿಸಿದರೆ ಒಂದು ನಿರ್ಧಾರಕ್ಕೆ ಬರುವರೆಂದೂ ಆ ಮೇಲೆ ಶ್ರೀ ಕ್ರುಶ್ಚೇವರೊಡನೆ ಮಾತುಕತೆಯನ್ನು ಪ್ರಾರಂಭಿಸಿರುವರೆಂಬೂ ಬಹಿರಂಗವಾಗಿರುವುದು. ಅಂತೂ ಶಿಖರ ಸಮ್ಮೇಲನದ ಯಶಸ್ವಿಯ ಮೇಲೆ ಕಾರ್ಮೋಡದ ಛಾಯೆಗಳು ಈಗಾಗಲೇ ಸುಳಿಯತೊಡಗಿವೆ. ಅದು ಹಾರಿ ಹರಿದು ಹೋಗುವ ಸಂಭವ ತೀರ ಕಡಿಮೆ.

ಕುಂದಾಪುರ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O. P. 130/1960.

ಸತ್ಯಮ್ಮ — ಅರ್ಜಿದಾರಳು.

1 ಬಿಲ್ಲ ಬಚ್ಚ. 2 ಬಿಲ್ಲ ಮಾಸ್ತಿ. 3 ಮಾಕಿ ಹೆಂಗ್ಸು. — ಎದ್ರಿರು.

ಕುಂದಾಪುರ ತಾಲೂಕು ಕುಂಭಾಶಿ ಗ್ರಾಮದ ಕೊರವಡಿಯಲ್ಲಿರುವ ಬಿಲ್ಲ ಯಂಕು ಹೆಂಗ್ಸಿನ ಮಕ್ಕಳು ಬಿಲ್ಲ ಬಚ್ಚ 1 ಬಿಲ್ಲ ಮಾಸ್ತಿ 1 ಮಾಕಿ ಹೆಂಗ್ಸು 1 ಕೂಡಾ ಮೂರು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಎದ್ರಿರಿಂದ ಅರ್ಜಿದಾರಳಿಗೆ ಬರತಕ್ಕ ಗೇಣಿ ಬಾಕಿ ಬರಮಾಡಿಕೊಳ್ಳುವ ಬಗ್ಗೂ, ಭೂಮಿಸ್ವಾಧೀನತೆ ಬಗ್ಗೂ ಅರ್ಜಿದಾರಳು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 30-4-1960ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಕಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿರುತ್ತದೆ.

N. S Parameshwariah
Advocate for Petr.

Coondapoor. Date 15-4-60

ಚಿನ್ನಾಭರಣಗಳ ಭದ್ರತೆಯ ಮೇಲೆ ಸಣ್ಣ ಸಾಲಗಳು

- ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾದ ಸಿಂಡಿಕೇಟ್ ಬೇಂಕು, ದೊಡ್ಡ ಸಂಸ್ಥೆಯಾಗಿ ಬೆಳೆಯುತ್ತಾ ಮುಂದುವರಿಯುತ್ತಿದ್ದರೂ ಇದರ ವಿಸ್ತೃತ ಸೇವೆಯು ಚಿಕ್ಕಪುಟ್ಟ ಜನಸಾಮಾನ್ಯರಿಗೂ ಸದಾ ಸಿದ್ಧವಾಗಿಯೇ ಇದೆ
- ಚಿನ್ನಾಭರಣಗಳ ಭದ್ರತೆಯ ಮೇಲೆ ಸುಲಭ ಮತ್ತು ಆಕರ್ಷಕ ಶರ್ತಗಳಲ್ಲಿ ಚಿಕ್ಕ ಮೊಬಲಗುಗಳ ಸಾಲಗಳನ್ನು ಸಹಾ ಒದಗಿಸಿ, ಎಲ್ಲಾ ವರ್ಗದ ಜನರಿಗೂ ಬೇಂಕಿಂಗ್ ಸೌಲಭ್ಯಗಳು ದೊರಕುವಂತೆ ಮಾಡುವ ಸೌಕರ್ಯಗಳನ್ನೂ ಈಗ ನೀಡಲಾಗಿದೆ.

ನಿಮಗೆ ಸಮೀಪವಿರುವ ನಮ್ಮ 137 ಶಾಖೆಗಳಲ್ಲೊಂದರಲ್ಲಿ ವ್ಯವಹರಿಸಿರಿ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

ಕುಂದಾಪುರ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O. P. 131/1960.

K. H. ವಂಕಟಾಚಲಯ್ಯ — ಅರ್ಜಿದಾರ.
ಸೂರ — ಎದ್ರಿ.

ಕುಂದಾಪುರ ತಾಲ್ಕು ಬೀಜಾಡಿ ಗ್ರಾಮದಲ್ಲಿರುವ ದೇವಡಿಗ ಸೋಮನ ಅಳಿಯ ಸೂರನಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ.

ಎದ್ರಿಯಿಂದ ಅರ್ಜಿದಾರಗೆ ಬರತಕ್ಕ ಗೇಣಿ ಬಾಕಿ ಬಗ್ಗೂ ಅಸ್ತಿ ಸ್ವಾದೀನತೆ ಬಗ್ಗೂ ಅರ್ಜಿದಾರನು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾ. 30-4-1960ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಕಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwariah
Advocate for Petr.

Coondapoor Date 15—4—60

Edited, Printed & Published by K. H. Shetty, at the Navayuga Press, Udipi, S. India,

ನವಯುಗ

ವಾ. ಚಂದಾ ರೂ. 6–25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೯, ವಾರ ೩೪ 28-4-1960 Vol. 39 No. 34.

ಪ್ರಚಲಿತ ಪ್ರಸಂಗ

ಸತ್ವಕ್ಕೆ ಉಳಿಗಾಲವಿದೆಯೆ, ಇಲ್ಲವೆ?

ಲಾಯ್–ನೆಹರು ಸಂದರ್ಶನ, ವಿಚಾರವಿನಿಮಯಗಳ ಪರಿಣಾಮ ಸಕಾರಾತ್ಮಕವೆ, ಅಥವಾ ನಕಾರಾತ್ಮಕವೆ?

ಚೀನೀಯ ಪ್ರಧಾನಿ ಶ್ರೀ ಚೌ ಎನ್ ಲಾಯ್‌ಯವರು ಭಾರತದ ಆಮಂತ್ರಣವನ್ನು ಮನ್ನಿಸಿ ತಾ. ೧೯ರಿಂದ ಭಾರತ ಸಂದರ್ಶನವನ್ನು ಕೈಗೊಂಡಿದ್ದಾರೆ. ಭಾರತಕ್ಕೆ ಅವರು ಆಗಮಿಸಿದ ಮೂಲ ಕಾರಣವನ್ನು ಇಂದು ಜಗತ್ತಿಗೆ ಜಗತ್ತೇ ತಿಳಿದುಕೊಂಡಿದೆ; ಮತ್ತು ಈ ಭೆಟ್ಟಿಯು ಯಾವ ರೀತಿಯಲ್ಲಿ ಪರಿಣಾಮ ಬೀರೀತು ಎಂಬುದನ್ನೂ ಕುತೂಹಲಾತುರಗಳಿಂದ ವೀಕ್ಷಿಸುತ್ತಿದೆ. ಭಾರತ ದೇಶದ ಜನರು ಮಾತ್ರ ಈ ಸಂದರ್ಶನದ ಬಗ್ಗೆ ದ್ವಿಮುಖ ಭಾವವನ್ನು ಪ್ರದರ್ಶಿಸುತ್ತಾರೆ. ಇಲ್ಲಿನ ನಾಗರಿಕರಲ್ಲಿ ಒಂದು ವರ್ಗದವರು ಚೀನೀಯ ಪ್ರಧಾನಿಯವರು ಇಲ್ಲಿಗೆ ಬರುವುದನ್ನೂ ಭಾರತೀಯ ಪ್ರಧಾನಿ ನೆಹರುರವರೊಡನೆ ಸೀಮಾಸಮಸ್ಯೆಯನ್ನು ಕುರಿತಾಗಿ ಮಾತುಕತೆ ನಡೆಸುವುದನ್ನೂ ವಿರೋಧಿಸಿದರೆ, ಇನ್ನೊಂದು ವರ್ಗವು ನಿರಾಸಕ್ತಿಯೋಗವನ್ನೇ ಪ್ರಕಟಿಸುತ್ತಾರೆ. ಎಂದರೆ, ನಿಯೋಜಿತ ಮಾತುಕತೆಗಳು ಗಂಭೀರ ಸಮಸ್ಯೆಯ ಕುರಿತಾಗಿರುವುದು ನಿಜವೇ ಆಗಿದ್ದರೂ ಅದರಿಂದ ಯಾವ ಪರಿಣಾಮವೂ ಆಗಲಾರದು ಎಂದು ದೃಢವಾಗಿ ನಂಬಿಕೊಂಡಂತಿದೆ. ಆದರೂ ಮಾತುಕತೆಯ ಬಾಗಿಲನ್ನು ಸದಾ ತೆರೆದಿಡುವ, ಸಮಸ್ಯೆಗಳನ್ನು ಶಾಂತವಾದ ವಿಚಾರ ವಿನಿಮಯದಿಂದಲೇ ಬಗೆಹರಿಸುವ ಭಾರತದ ಧೋರಣೆಗೆ ವ್ಯತ್ಯಯ ಬರಬಾರದೆಂದು ಕೇವಲ ಕೆಲವೇ ಮಂದಿಯು ಈ ಬಗ್ಗೆ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿಲ್ಲವೆಂದು ಒಪ್ಪಬೇಕು.

ನಿಯೋಜಿತ ಕಾರ್ಯಕ್ರಮದಂತೆ ಆರು ದಿನಗಳ ಮಾತುಕತೆಗಳು ಈಗಾಗಲೇ ಪೂರ್ಣವಾಗುತ್ತಿವೆ. ಆದರೆ, ಈ ಮಾತುಕತೆಗಳು ಸಮಾಧಾನಕರವಾದ ವಾತಾವರಣದಲ್ಲಿಯೇ ನಡೆದಿರುವ ಒಂದು ವಿಷಯವನ್ನುಳಿದರೆ, ಮತ್ತೇನೂ ಹೇಳಬಹುದಾದ ಪ್ರಯೋಜನ ನಮಗೆ ದೊರೆತಂತಿಲ್ಲ; ಅಥವಾ ಪ್ರಶ್ನೆಯು ಬಗೆಹರಿದಂತಾಗಲಿಲ್ಲ. ಭಾರತವಾಗಲೀ ಚೀನವಾಗಲೀ ಈ ಪ್ರಶ್ನೆಯನ್ನು ಚರ್ಚಿಸಿ ಒಂದು ನಿರ್ಧಾರಕ್ಕಲ್ಲವಾದರೂ ಸಾಮಾನ್ಯವಾದ ಒಮ್ಮತದ ಅಭಿಪ್ರಾಯಕ್ಕೆ ಬರಬೇಕೆಂಬ ಆಶಯದಿಂದ ಕೂಡಿಕೊಂಡಿದ್ದುವು. ಆದರೆ, ಈ ಆಶಯ ಅದೆಷ್ಟರ ಮಟ್ಟಿಗೆ ಫಲಕಾರಿಯಾಗಿದೆಯೆಂದು ಹೇಳುವುದು ಸದ್ಯ ಸಾಧ್ಯವಿಲ್ಲ.

ಚೀನೀ ಪ್ರಧಾನರೊಡನೆ ಭಾರತೀಯ ಪ್ರಧಾನಿಗಳು ಗಡಿ ತಂಟೆಯ ಕುರಿತು ಚರ್ಚೆ ನಡೆಸುವ ಸಂಬಂಧದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರೂ ಶ್ರೀ ನೆಹರೂರವರಿಗೆ ಸಲಹೆಯಿತ್ತಿದ್ದು, ಅದರಲ್ಲಿ ಮಾತುಕತೆಯ ವೇಳೆ, ಭಾರತೀಯ ಜನತೆಯ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ತಿಳಿದುಕೊಂಡು, ತನ್ನ ನಿಲುವಿಗೆ ದೃಢವಾಗಿ ಅಂಟಿಕೊಂಡಿರಬೇಕೆಂದು ಕೇಳಿಕೊಂಡಿದ್ದಾರೆ. ಚರ್ಚೆಯ ವೇಳೆಯಲ್ಲಿ ತಮಗೆ ಸಲಹೆಗಾರರಾಗಿ ಸಂರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನ್ನರನ್ನು ಜತೆ ಸೇರಿಸಬಾರದೆಂದೂ ಗೃಹಮಂತ್ರಿ ಪಂಡಿತ ಪಂತರ ನೆರವನ್ನವರು ಪಡೆಯಬೇಕೆಂದೂ ಹೇಳಿದ್ದರು. ಈ ಸಲಹೆಯನ್ನು ನೆಹರೂರವರು ಸಾಮಾನ್ಯವಾಗಿ ಸ್ವೀಕರಿಸಿದ್ದಾರೆ. ಇದರ ಪರಿಣಾಮವಾಗಿಯೇ ಭಾರತ ಮತ್ತು ಚೀನಾಗಳ ನಡುವಿರುವ ಸುಮಾರು ೨,೫೦೦ ಮೈಲುದ್ದದ ಸೀಮೆಯು ಈ ಮೊದಲು ಎಂದಾದರೂ ಗುರುತಿಸಲ್ಪಟ್ಟಿದೆಯೇ ಇಲ್ಲವೇ ಎಂಬ ಮೂಲಭೂತ ಪ್ರಶ್ನೆಯೇ ಇತ್ಯರ್ಥವಾಗುವ ಸಲ್ಲಕ್ಷಣಗಳು ಗೋಚರಿಸಲಿಲ್ಲ. ಇದೇ ಬಗೆ ಹರಿಯದಿದ್ದರೆ, ಉಳಿದ ಪ್ರಶ್ನೆಗಳ ಬಗ್ಗೆ ಎಂತಹ ಬಗೆಯ ಮಾತುಕತೆ ಅಥವಾ ವಿಚಾರ ವಿನಿಮಯಗಳು ನಡೆದಿರಬಹುದಾದರೂ ಅವುಗಳಿಂದ ಶಿಲಾಂಶವಾದರೂ ಪ್ರಯೋಜನವನ್ನು ನಾವು ನಿರೀಕ್ಷಿಸುವುದು ಅಸಾಧ್ಯವೇ ಸರಿ.

'ಪ್ರಧಾನಿದ್ವಯರು ಶಾಂತರೀತಿಯಲ್ಲಿ ಮಾತುಕತೆ ನಡೆಸಿದರು; ಅದು ನಾಳೆಗೆ ಮುಂದುವರಿಯುವುದು" ಎಂಬ ಸಂಕ್ಷಿಪ್ತ ಪತ್ರಿಕಾ ಪ್ರಕಟಣೆಯನ್ನುಳಿದರೆ, ಚರ್ಚೆಯ ದಿನಗಳಲ್ಲಿ ಬೇರಾವ ವಿಷಯವೂ ಬಹಿರಂಗಗೊಳ್ಳಲಿಲ್ಲ. ಅವರ ಬೇರೆ ಕಾರ್ಯಕ್ರಮಗಳ ವರದಿಗಳು ಪ್ರಕಟಗೊಂಡರೂ ಮಾತುಕತೆಯು ಮುಂದುವರಿದ ಬಗೆ ಯಾವ ತೀವ್ರತೆಯೂ ಉಂಟಾಗಿಲ್ಲ. ಈ ವಿಷಯವನ್ನು ನಾವು ಗಮನಿಸುವುದಾದರೆ, ಮಾತುಕತೆಯಲ್ಲಿ ಯಾವುದೇ ಪ್ರಗತಿಯು ಕಂಡುಬಂದಿಲ್ಲವೆಂದೂ ಮೂಲ ಪ್ರಶ್ನೆಗೆ ಉಭಯ ಪಕ್ಷದವರಿಗೂ ಸ್ವೀಕಾರಾರ್ಹವಾದ ಉತ್ತರವು ದೊರೆತಿಲ್ಲವೆಂದೂ ಊಹಿಸಬಹುದು. ಮಾತ್ರವಲ್ಲದೇ ಪ್ರಧಾನಿದ್ವಯರ ಈ ಮಹತ್ವಪೂರ್ಣವೆನಿಸಿದ ಚರ್ಚೆ ಅಥವಾ ವಿಚಾರವಿನಿಮಯವು ನಡೆಯುವ ಸಮಯದಲ್ಲಿ ದುಭಾಷಿಗಳನ್ನುಳಿದರೆ ಇತರರಾರೂ ಜತೆಗಿರಲಿಲ್ಲವೆಂಬುದನ್ನೂ ಕೋಣೆಯ ಬಾಗಿಲುಗಳು ಮುಚ್ಚಲ್ಪಡುತ್ತಿದ್ದುವೆಂಬುದನ್ನೂ ನೋಡುವಾಗ ರಹಸ್ಯಮಯ ವಾತಾವರಣದಲ್ಲಿಯೇ ಇದು ಮುಂದುವರಿಯಿತೆಂದು ತಿಳಿಯುತ್ತದೆ.

ಮ್ಯಾಕಮಹೋನ ರೇಖೆಯನ್ನು ಆಧಾರವಾಗಿಟ್ಟು, ಚೀನಾ—ಭಾರತಗಳ ಗಡಿಯ ಬಹುಭಾಗದಲ್ಲಿ ರೇಖಿತವಾಗಿರುವುದೆಂದೂ, ಚೀನವು ಭಾರತದ ಪ್ರದೇಶಗಳನ್ನು ಆಕ್ರಮಿಸಿದೆಯೆಂದೂ ಭಾರತೀಯ ಜನತೆಯ ಅಭಿಪ್ರಾಯವನ್ನು ಭಾರತವು ಸ್ಪಷ್ಟವಾಗಿ ಅವಲಂಬಿಸಿದ್ದರೆ ಚೀನವು ಈ ರೇಖೆಯನ್ನು ಒಪ್ಪುವುದಿಲ್ಲ ಮಾತ್ರವಲ್ಲ ಸೀಮೆಯು ಯಾವ ಕಾಲದಲ್ಲಿಯೂ ಅಂಕಿತ ಗೊಳ್ಳಲಿಲ್ಲ ಎಂದು ತನ್ನ ವಾದವನ್ನು ಮುಂದಿಡುತ್ತಲಿದ್ದು, ಈ ನೆಲೆಯಲ್ಲಿಯೇ, ಪ್ರಧಾನಿದ್ವಯರ ವಿಚಾರ ವಿನಿಮಯವು ಮುಂದುವರಿದುದೆಂದೂ ಇದರಿಂದಾಗಿ ಸ್ವೀಕಾರಾರ್ಹವಾದ ಸಂಧಾನವಾಗುವುದು ಅಸಾಧ್ಯವಾಯಿತೆಂದೂ ಹೇಳಬಹುದು. ಚೀನೀ ಪ್ರಧಾನರು ತಾವು ದಶಂಬರ ಮಾಸದಲ್ಲಿ ನೆಹರೂಗೆ ಬರೆದಿದ್ದ ಒಂದು ಸುದೀರ್ಘ ಪತ್ರದ ಚೀನೀಯ ಸ್ಪಷ್ಟಾಭಿಪ್ರಾಯವನ್ನು ವ್ಯಕ್ತಪಡಿಸುವುದರಿಂದ, ಅದರಲ್ಲಿ ನಿರೂಪಿತವಾದ ವಾದಗಳನ್ನು ಬಿಟ್ಟು ಕಿಂಚಿತ್ ಚಲಿಸಲು ಸಿದ್ಧರಿಲ್ಲವೆಂದು ಇತ್ತೀಚೆಗೆ ತಿಳಿಸಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು. ಇಬ್ಬರೂ ತಾವು ಹಾಕಿದ ಗೆರೆಯನ್ನು ದಾಟದೆ ಒಬ್ಬರನ್ನೊಬ್ಬರು ನೋಡುತ್ತ ಕುಳಿತಿರುವಾಗ, ಏಕಮತಕ್ಕೆ ಬರುವ ದಾರಿಯಾದರೂ ಯಾವುದು?

ಸಪ್ತಾಹದ ಮಾತುಕತೆಗಳು ಮುಖ್ಯವಾಗಿ ಪ್ರಧಾನಿದ್ವಯರ ನಡುವಿನದಾದರೂ, ಪ್ರಧಾನಿ ನೆಹರು, ಅವರ ಸಲಹೆಯ ಮೇರೆಗೆ ಭಾರತೀಯ ಸರಕಾರದ ಉಚ್ಚ ವರ್ಗದ ಮಂತ್ರಿಗಳೂ ಚೀನೀಯ ಪ್ರಧಾನಿ ಚೌ ಎನ್ ಲಾಯ್ ಹಾಗೂ ಅವರ ಸಹಚರರೊಡನೆ ಈ ಸಮಸ್ಯೆಯ ಕುರಿತು ಮಾತನಾಡಿದರೆಂದೂ ಗೊತ್ತಾಗಿದೆ. ಇದು ಪ್ರಾಯಃ ಭಾರತೀಯ ಇತಿಹಾಸದಲ್ಲಿಯೇ ಮೊತ್ತಮೊದಲು ಅನುಸರಿಸಿದ ಕ್ರಮವಾಗಿದೆ. ಪ್ರಸ್ತುತವಿರುವ ವಿವಾದವು ಅತಿ ಗಂಭೀರ ಸ್ವರೂಪದ್ದಿರುವುದೂ ಭಾರತದ ಎಲ್ಲ ಪಕ್ಷಗಳ ನಾಗರಿಕರಲ್ಲಿಯೂ ಚೀನೀಯ ವರ್ತನೆಯ ಬಗ್ಗೆ ಅಸಮಾಧಾನವು ಮೂಡಿತೋರುತ್ತಿದ್ದುದೂ ಚೀನೀಯರ ನಿಲುವೆಯು ಅನ್ಯಾಯ ಮತ್ತು ಮಿತ್ರದ್ರೋಹದ ಪರಮಾವಧಿ ಎಂಬ ಅಭಿಪ್ರಾಯವು ವ್ಯಕ್ತವಾಗಿರುವುದೂ ಇದರಿಂದ, ಪ್ರಧಾನಿಯೊಬ್ಬರೇ ಈ ಮಾತುಕತೆಯ ಹೊಣೆಗಾರಿಕೆಯನ್ನು ನಿರ್ವಹಿಸಲು ಮತ್ತು ಹೊರಲು ಅಂಜುತ್ತಿದ್ದುದೂ ಈ ವ್ಯವಸ್ಥೆಗೆ ಕಾರಣ

(೯ನೇ ಪುಟ ನೋಡಿರಿ)

ಕಥಾವಿಹಾರ

ಹೆತ್ತ ಕರುಳಿನ ಬಯಕೆ

ಜೀವನಕ್ಕಾಧಾರನಾಗಬೇಕೆಂದು ಆಶೆಯಿಂದ ಸಾಕಲ್ಪಟ್ಟ ಮಗ ಮಾತ್ರ ತಾಯನ್ನು ಕೊನೆಯವರೆಗೂ ಮರೆತೇಬಿಟ್ಟ. ಇದಕ್ಕೆ ಕಾರಣವೇನಿರಬಹುದು?

ವೆಂಕಮ್ಮ ನಿಟ್ಟುಸಿರು ಬಿಟ್ಟರು. ಗತಿಸಿಹೋದ ಗತಜೀವನವನ್ನು ಮನಸ್ಸೆಂಬ ಗ್ರಂಥದ ಪುಟಗಳನ್ನು ತಿರುವಿ ತಿರುವಿ ನೋಡಿ ಎಣಿಸುತ್ತಾ ಕುಳಿತಿದ್ದರು. ಹಾಗೆಯೇ ಕುಳಿತುಕೊಂಡು ಅದೆಷ್ಟು ಸಮಯವಾಗಿತ್ತೋ—ಅವರಿಗೇನೇ ಅರಿವಿಲ್ಲ.

ಹದಿನಾರರ ಹೊಸ್ತಿಲನ್ನು ದಾಟುವಾಗಲೇ ವೆಂಕಮ್ಮನವರಿಗೆ ಮದುವೆಯಾಯಿತು. ಗಂಡ ಶ್ರೀನಾಥರಾಯರು ಕಾರ್ಖಾನೆಯ ಕರಣೀಕರು. ವೆಂಕಮ್ಮ ಆದೆಷ್ಟ ಆಸೆಗಳನ್ನು ಹೊತ್ತುಕೊಂಡು ಗಂಡನ ಮನೆಗೆ ಪ್ರವೇಶಮಾಡಿದರೋ, ಶ್ರೀನಾಥರಾಯರ ತೀಕ್ಷ್ಣ ದೃಷ್ಟಿ ಅವರ ಬಯಕೆಯನ್ನೆಲ್ಲಾ ನಿರ್ನಾಮಗೊಳಿಸಿತು. ಸಿಂಹದಗುಹೆಯಲ್ಲಿ ಜಿಂಕೆ ಸಿಲುಕಿದಂತೆ ವೆಂಕಮ್ಮನವರ ಪಾಡಾಯಿತು. ಶ್ರೀನಾಥರಾಯರು ಬಂದ ಹಣವನ್ನು ಅಪವ್ಯಯ ಮಾಡುವುದರಲ್ಲಿ ಅಗ್ರಗಣ್ಯರಾಗಿದ್ದರು. ಮನೆ ಖರ್ಚಿಗೆ ಏನಾದರೂ ಅಲ್ಪ ಸ್ವಲ್ಪ ಇಟ್ಟುಕೊಂಡು ಮಿಕ್ಕಿದ್ದನ್ನೆಲ್ಲಾ ತನ್ನ ಪ್ರೀತಿಯ ಪ್ರೇಯಸಿ 'ಸೂಳೆ'ಗಾಗಿ ಅರ್ಪಿಸಿ ಬರಿಗೈಯಿಂದಲೇ ಮನೆಗೆ ಬರುತ್ತಿದ್ದರು ಶ್ರೀನಾಥರಾಯರು. ಶ್ರೀನಾಥರಾಯರಿಗೆ ವ್ಯಭಿಚಾರದೊಟ್ಟಿಗೆ ಕುಡಿಯುವ ಅಭ್ಯಾಸ ಗಂಟು ಬಿದ್ದದ್ದೇನೂ ಹೆಚ್ಚಲ್ಲ. ತಿಂಗಳ ಮೊದಲಿನಲ್ಲಿಯೇ ಸಂಬಳ ಬಂದೊಡನೆ 'ಸೂಳೆ' ಕಿಸೆಗೆ ಕೈಹಾಕಿ ತೆಗೆದುಕೊಂಡರೂ ಶ್ರೀನಾಥರಾಯರು ತುಟಿಪಿಟಿಕ್ ಎನ್ನುತ್ತಿರಲಿಲ್ಲ. ಎಷ್ಟು ದಿನದಿಂದ ಶ್ರೀನಾಥರಾಯರು ಈ ಸಂಸಾರವನ್ನು ತೂಗಿಸಿಬಂದಿದ್ದರೋ ಮಧ್ಯೆ ವೆಂಕಮ್ಮ ಬಂದುನಿಂತರು.

ಚೆನ್ನಾಗಿ ಕುಡಿದು ಮದೋನ್ಮತ್ತರಾಗಿ ಶ್ರೀನಾಥರಾಯರು ಒಮ್ಮೆ ಮನೆಗೆ ಬಂದರೆಂದರೆ ವೆಂಕಮ್ಮ ಎಣಿಸದಿದ್ದಷ್ಟು ಪೆಟ್ಟಿನ ಹೊಡೆತ. ವಿನಾಕಾರಣ ಬೀಳುತ್ತಿದ್ದ ಪೆಟ್ಟಿನ ಹೊಡೆತವನ್ನು ಸಹಿಸಿಕೊಂಡು 'ಪತಿಯೇ ಪರದೈವ'ವೆಂದು ನಂಬಿ ಅವರ ಯಾವ ಪ್ರಕೋಪಕ್ಕೂ ಪ್ರತಿ ಕೋಪಿಸದೇ 'ಪಾಲಿಗೆಬಂದ ಪಂಚಾಮೃತ'ವೆಂದು ಬೆಳಗಿನವರೆಗೂ ಕಾಲು ತಿಕ್ಕುತ್ತಿರುವರು ವೆಂಕಮ್ಮ. ಹೀಗೆ ದಿನ ದಿನವೂ ಪೆಟ್ಟಿನ ಕಂತೆ ಹೆಚ್ಚುತ್ತಾ ಹೋದಹಾಗೆ ವೆಂಕಮ್ಮ ತಾಳಲಾರದೆ ಮೂರ್ಛಿತರಾಗಿ ಬಿದ್ದುಬಿಡುತ್ತಿದ್ದರು. ಅದನ್ನೂ ಗಣಿಸದೇ ಶ್ರೀನಾಥರಾಯರು ಸಂತೋಷವನ್ನುಂಟುಮಾಡುವ, ಮನಸ್ಸಿಗೆ ನೆಮ್ಮದಿಯನ್ನು ಈಯುವ, ಜೀವಕ್ಕೆ ಉಲ್ಲಾಸವನ್ನು ಕೊಡುವ ಮದಿರಾ ದೇವಿಯನ್ನು ಆರಾಧಿಸಲು ಸೂಳೆಯ ಮನೆಗಾಗಿ ತೆರಳುತ್ತಿದ್ದರು. ವೆಂಕಮ್ಮ ಎಚ್ಚರಗೊಂಡು ನೋಡಿದಾಗ ಪತಿದೇವನಿರುತ್ತಿರಲಿಲ್ಲ. ಗಂಡನ ಮಾತಿಗೆ ಪ್ರತಿ ಮಾತನಾಡುವ ಎದೆಗಾರಿಕೆಯಿಲ್ಲದ ವೆಂಕಮ್ಮ ದೇವರಲ್ಲಿ ಹೀಗೆಂದು ಬೇಡುತ್ತಿರುವರು: "ದೇವರೇ, ಪತಿದೇವರಿಗೆ ನನ್ನನ್ನು ಹೊಡೆಯುವಂಥಹ ಬುದ್ಧಿಯನ್ನು ಕೊಡಬೇಡ."—ತುಪ್ಪದ ದೀಪವನ್ನು ಹಚ್ಚಿಟ್ಟು ನಮಸ್ಕಾರ ಮಾಡುತ್ತಿದ್ದರು. ಅಂದಿನ ರಾತ್ರಿ ಪೆಟ್ಟಿನ ಸುರಿಮಳೆ ವಿಪರೀತ. ಆದುದರಿಂದ ವೆಂಕಮ್ಮನ ಪಾಲಿಗೆ ದೇವರಿಲ್ಲವೆಂಬಂತಾಯಿತು.

ವಿರಸದ ಸಂಸಾರದ ಮಧ್ಯೆ ಕ್ಷಣವು ವರ್ಷವಾಗಿ ಉರುಳಿ ವರ್ಷವೊಂದು ಕಳೆಯಿತೆನ್ನುವಾಗ ಶ್ರೀನಾಥರಾಯರು ದೇಹವನ್ನು ಕ್ಷೀಣಿಸಿಕೊಂಡಿರುವರು. ಮಾತ್ರವಲ್ಲ, ಬುದ್ಧಿಯನ್ನೂ ಭ್ರಮಿಸಿಕೊಂಡು ಕೆಲಸವನ್ನು ಕಳೆದುಕೊಂಡರು. ಈಗ ವೆಂಕಮ್ಮನವರಿಗೆ ಹಗಲೂ ವಿನಾಕಾರಣದ ಹೊಡೆತ. 'ಅಯ್ಯೋ' ಎನ್ನುವವರೂ ಇಲ್ಲದ ಊರಿನಲ್ಲಿ ನಾವೇಕಿರಬೇಕಾಗಿತ್ತು? ಎಂದು ವೆಂಕಮ್ಮ ಆಲೋಚಿಸುತ್ತಿರುವರು.

ಸಂತೋಷ ಸುದಿನದ ಒಂದು ರಾತ್ರಿ ವೆಂಕಮ್ಮ ಪತಿದೇವರಲ್ಲಿ ಬೇಡಿಕೊಂಡರು— ಮದುವೆಯಾಗಿ ಒಂದೆರಡು ವರ್ಷವಾದರೂ ದೇವರು ಒಂದು ಮಗುವನ್ನು ಕರುಣಿಸಲಿಲ್ಲ—ಆದಕ್ಕಾಗಿ ದೇವರಿಗೆ ಏನಾದರೂ ಹರಕೆಯನ್ನು ಸಲ್ಲಿಸೋಣವೆಂದಾಗ "ಈ ಮಾರಿಯನ್ನು ಕಟ್ಟಿಕೊಂಡು ಕೆಲಸವನ್ನು ಕಳೆದುಕೊಂಡೆ. ಈಗ ಹೊಟ್ಟೆ ಹೊರೆಯುವುದೇ ಕಷ್ಟವಾಗಿದೆ—ಬದಲು ವರ್ಷಕ್ಕೆರಡು ಮಕ್ಕಳಾದರೆ ನನ್ನ ಗತಿ ದೇವರಿಗೆ ಹೇಳಬೇಕು." ಎಂದು ಸಿಟ್ಟಿನ ಆವೇಶದಲ್ಲಿ ವೆಂಕಮ್ಮನವರಿಗೆ ಕೆನ್ನೆಗೊಂದು 'ಫಳೀರನೆ' ಕೊಟ್ಟು ಹುಚ್ಚು ಹುಚ್ಚಾಗಿ ನಗುತ್ತಾ ಇನ್ನೊಂದು ಬಾರಿಲಿನಿಂದ 'ಸಂತೋಷ ಶಯ್ಯೆ'ಗೆ ತೆರಳಿದರು. ಅಂತಹ ಪೆಟ್ಟನ್ನು ಎಷ್ಟೋ ಸಾರಿ ಸಹಿಸಿಕೊಂಡಿದ್ದ ವೆಂಕಮ್ಮ ಈ ಪೆಟ್ಟನ್ನು ತಾಳಲಾರದೆ ನೆಲಕ್ಕೆ ಬಿದ್ದರು. ಪುನಃ ಚೇತರಿಸಿ ಎದ್ದು ಕುಳಿತಾಗ ಪತಿದೇವ ಹೊರಟು ಹೋಗಿಯಾಗಿತ್ತು. 'ನನ್ನಿಂದಾಗಿ ಎಷ್ಟು ನೊಂದುಕೊಂಡರೋ ಎಂದು ರಾತ್ರಿಯಿಡೀ ಅತ್ತು ಅತ್ತು ಬೆಳಕು ಕಂಡರು.

ಗಗನ ಕುಸುಮದಂತೆ, ಅರಣ್ಯರೋದನದಂತೆ ವೆಂಕಮ್ಮನ ಬಾಳಾಯಿತು. ಅವರ ಹಿರಿಯಾಸೆಯನ್ನು ಯಾರೊಡನೆಯೂ ಹೇಳಿರಲಿಲ್ಲ.

ವೆಂಕಮ್ಮನ ಆಸೆಗೆ ದೇವರು ಕಲ್ಲಾಗಲಿಲ್ಲ. ಆರು ತಿಂಗಳ ಬಸುರಿಯಾದಾಗ ವೆಂಕಮ್ಮನನ್ನು ನೆರಮನೆಯ ಸಾಂತಜ್ಜಿ ಬಂದು ಮೆಲ್ಲಗೆ ಕೇಳಿದರು:

"ವೆಂಕೂ ಬಸುರಿಯಾಗಿ ಅದೆಷ್ಟು ತಿಂಗಳಾಯಿತು?....

ಅದೇನೋ ನಾಚಿಕೆ ವೆಂಕಮ್ಮನವರಿಗೆ. ಅಲ್ಲದೇ ಎಲ್ಲಿಯಾದರೂ ಗಂಡನ ಕಿವಿಗೆ ಮುಟ್ಟಿದರೆ ಪೆಟ್ಟಿನ ಹೊಡೆತ. ಅದಕ್ಕಾಗಿ ಮೆಲ್ಲನೆ ವೆಂಕಮ್ಮ—

'ಇಲ್ಲ...ಶಾಂತಜ್ಜಿ...(ಸಾಂತಜ್ಜಿ) ಎಲ್ಲೋ ನಾಲ್ಕಾರು ತಿಂಗಳಾಗಿರಬೇಕು.'

'ಆಗಲಿ, ದೇವರು ದೊಡ್ಡವನು.' ಆತನಿಗೇ ಕಷ್ಟ! ಎಂದು ಸಾಂತಜ್ಜಿ ವೆಂಕಮ್ಮನಿಗೆ ಹರಸಿಬಿಟ್ಟರು.

ಶ್ರೀನಾಥರಾಯರು ಸೂಳೆಯಿಂದ ಪರಿತ್ಯಕ್ತರಾಗಿ ಮದಿರಾದೇವಿಯ ಆ ಜನ್ಮ ಭಕ್ತರಾಗಿ ಹಲವು ದಿನಗಳನ್ನು ಕಳೆದು ಮಹಾರೋಗಕ್ಕೆ ತುತ್ತಾಗಿ, ಒಂದು ದಿನ ದಾರಿಯ ಮೇಲೆ ಬಿದ್ದು ಸತ್ತಾಗ, ವೆಂಕಮ್ಮ ಅತ್ತು ಅತ್ತು ದೇಹವನ್ನು ದಂಡಿಸಿ, ಮಾಂಗಲ್ಯಹರಿದು, ಕುಂಕುಮ ಒರೆಸಿ, ಬಳೆಗಳನ್ನು ಒಡೆದು, ತಲೆಯನ್ನು ನೆಲಕ್ಕೆ ಕುಟ್ಟಿಕೊಳ್ಳುತ್ತಾ 'ನನ್ನ ದೇವರಿಲ್ಲವಲ್ಲಾ' ಎಂದು ಗೋಳಾಡಿ ಅತ್ತರು. ಹೊಟ್ಟೆಯಲ್ಲಿರುವ ಭ್ರೂಣವೇ ತಂದೆಗೆ ಕಂಟಕವಾಗಿರಬೇಕೆಂದು ಎಣಿಸಿದರು ವೆಂಕಮ್ಮ. ನಿಷ್ಕರುಣೆಯ ನೀರಧಿಯಲ್ಲಿ ಮುಳುಗಿ ಹೋಗಿದ್ದ ವೆಂಕಮ್ಮನಿಗೆ 'ಬಾ' ಎನ್ನುವ ಸಾಂತಜ್ಜಿಯಲ್ಲದೇ ಬೇರಿನ್ಯಾರೂ ಇರಲಿಲ್ಲ...

'ಸಾಂತಜ್ಜಿ, ನಾನಿನ್ನು ಏಕಿರಬೇಕು? ಅವರಂತೆ ನಾನೂ ಬಿದ್ದು ಸಾಯಬಾರದೆ?' ಎಂದು ಸಾಂತಜ್ಜಿಯ ಕಾಲು ಹಿಡಿದು ಅತ್ತರು.

ದುಃಖಿಗಳ ಜೀವವನ್ನು ತಣಿಸಿದ ಸಾಂತಜ್ಜಿ—'ವೆಂಕೂ, ಅವನ ತಾಡನದಿಂದ ನಿನ್ನ ನೋವೆಲ್ಲಾ ಬಾತಿರಬೇಕು. ನಿನ್ನಲ್ಲಿ ಬೆಳೆದಿರುವ ಭ್ರೂಣಕ್ಕಾಗಿಯಾದರೂ ಬಾಳು.'—

'ಇದಕ್ಕಿಂತಲೂ ಆದೇ ಸುಖ ಸಾಂತಜ್ಜಿ!' ನಿಶ್ಚಲವಾದ ವೆಂಕಮ್ಮನವರ ಪತಿಸೇವೆ ಲೋಕಕ್ಕೆ ಮಾದರಿಯಾಯಿತು. ಗಂಡನ ಅಂತ್ಯಕ್ರಿಯೆ ಹೇಗೋ ಪೂರೈಸಿ ತನ್ನ ಜೀವನವನ್ನು ಸಾಗಿಸಲು ಸಮೀಪದ ವಕೀಲರಲ್ಲಿ ಅಡುಗೆಗಾಗಿ ನಿಂತರು ವೆಂಕಮ್ಮ.

ಹತ್ತಾರು ದಿನಗಳಿಂದ ನೊಂದು ಒಂದು ದಿನ ಗಂಡುಮಗುವನ್ನು ವೆಂಕಮ್ಮ ಹಡೆದಾಗ ಸಾಂತಜ್ಜಿಗಾದ ಉತ್ಸಾಹ, ತಿಳಿಸಲಸಾಧ್ಯ. ವಕೀಲರೂ ಡಾಕ್ಟರನ್ನು ಕರೆತರುವ ಖರ್ಚನ್ನೂ ಕೊಟ್ಟಿದ್ದರು. ಸುಖದಿಂದಲೇ ಹಡೆಯುವಂತಾದರು ವೆಂಕಮ್ಮ. ಊಟಕ್ಕೂ ಅಕ್ಕಿಯಿಲ್ಲದೇ ಉಡಲೂ ವಸ್ತ್ರವಿಲ್ಲದೇ ಕಾಲಕಳೆಯುವಂತಾಯಿತಲ್ಲಾ ಎಂದು ಅತ್ತು ಸಾಲಮಾಡಿದರು. ಸಾಲವೇ ಜೀವನಕ್ಕೆ ಶೂಲವೆನ್ನುವ ಮಾತನ್ನು ಮರೆಯದೇಯಿದ್ದರೂ ಹೊಟ್ಟೆಯು ತಾಂಡವವಾಡುತ್ತಿರುವಾಗ ತನ್ನ ಮುಂದಿನ ಗತಿಯನ್ನು ಎಣಿಸಲಾರದಾದರು ವೆಂಕಮ್ಮ.

ಮಳೆಗಾಲ ಕಳೆದು ಬೇಸಿಗೆ ಕಾಲಿಟ್ಟಿತು. ವೆಂಕಮ್ಮನವರ ಜೀವನದಲ್ಲೂ ಒಮ್ಮೆ ವಸಂತಮಾಸ ಬಂದಿತು. ಶ್ರೀನಾಥರಾಯರು ಮುಂಚೆ ಜೀವವಿಮೆಕ್ಕೆ ಹಣ ಕಟ್ಟಿದ್ದರು ಇಂದು ಸ್ವರ್ಗಸ್ಥರಾಗಿ ನಾಲ್ಕಾರು ತಿಂಗಳಾಗಿದೆ. ಅದು ಒಂದು ಸಾವಿರ ರೂಪಾಯಿ ಹೆಂಡತಿ ವೆಂಕಮ್ಮನವರಿಗೆ ಬಂದಾಗ 'ದೇವರೇ ಕಳುಹಿಸಿರಬೇಕೆಂ'ದು ವೆಂಕಮ್ಮ ತಿಳಿದುಕೊಂಡರು. ಮನಸಾರೆ ದೇವರನ್ನು ಕೊಂಡಾಡಿದರು.

ಪೂರ್ಣಚಂದ್ರನ ತಂಬೆಳಕಿನಲ್ಲಿ ವಿಹರಿಸುತ್ತಿರುವ ಪ್ರಣಯಿಗಳು ಚಂದ್ರನಿಗೆ ರಾಹುಗ್ರಹಣವಾದರೆ ಎಷ್ಟು ಪರಿಯಲ್ಲಿ ಸಂತಾಪಗೊಳ್ಳುವರೋ ಹಾಗೆಯೇ ಆಯಿತು.

ಜೀವವಿಮಾ ಹಣ ಬಂದಿದೆಯೆಂತ ಸುದ್ದಿಯಿಂದ ಸಾಲಕೊಟ್ಟರಾಯರು ಕೇಳಿದೊಡನೆಯೇ ಬಂದು (ಹಿಂದೆಂದೂ ಎಂತಹ ಕಷ್ಟದಲ್ಲಿಯೂ ಬಂದಿದ್ದ ಮಹಾನುಭಾವರಲ್ಲ) 'ವೆಂಕಮ್ಮ—ನನಗೆ ಕೊಡಬೇಕಾಗಿದ್ದ ರೂಪಾಯಿಗಳನ್ನು ನನಗೆ ಕೊಟ್ಟುಬಿಡಿ. ನಿಮಗೆ ವಿಮಾ ಹಣ ಬಂದಿದೆಯಲ್ಲ' ಎಂದರು. ವೆಂಕಮ್ಮ ಲೆಕ್ಕಮಾಡಿ ಕೊಡಬೇಕಾಗಿದ್ದ ಹಣವನ್ನು ರಾಯರ ಕೈಯಲ್ಲಿಟ್ಟಾಗ, "ನಿಮ್ಮ ಈ ಸರಕಲು ಕೋಣೆಯಲ್ಲಿ ಅಷ್ಟು ಹಣವಿಟ್ಟುಕೊಳ್ಳುವುದು ಒಳ್ಳೇಯದಲ್ಲ. ಈಗಂತೂ ಕಳ್ಳ

(೧೧ನೇ ಪುಟ ನೋಡಿರಿ)



ಬ್ಯಾಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬ್ಯಾಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎದುರಿಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇವರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)



ಸಾಹಿತ್ಯ ರಸದೌತಣ

ಕಾಮಿನೀ ರಾಮಾನುಜ ಸಂವಾದ

ಹಿಂದೀ ಸಾಹಿತ್ಯ ಸಾಮ್ರಾಟ ಡಾ| ಮೈಥಿಲೀಶರಣ ಗುಪ್ತರ 'ಪಂಚವಟಿ" ಖಂಡಕಾವ್ಯದ ಒಂದು ರಸಭರಿತ ಸಂವಾದವಿದು.

ರಾಮಾಯಣದ ಕಥೆ ಯಾರಿಗೆ ತಾನೆ ಗೊತ್ತಿಲ್ಲ? ವಿದ್ಯಾವಂತರಿಂದ ಹಿಡಿದು, ಹಳ್ಳಿ ಕೊಂಪೆಗಳಲ್ಲಿರುವ ಅವಿದ್ಯಾವಂತರಿಗೆ ಕೂಡ ಈ ಕಥೆ ಗೊತ್ತಿಲ್ಲದಿಲ್ಲ. ಆದರೆ, ಐತಿಹಾಸಿಕ ಸತ್ಯಕ್ಕೆ ವಿರೋಧವಾಗದಂತೆ, ಆ ಕಥೆಯನ್ನು ಹೇಳುವ ರೀತಿ ನವನವೀನವಾಗಿದ್ದರೆ, ಕಥೆ ಸ್ವಾರಸ್ಯವಾಗಿ, ಅದನ್ನು ಓದುವ ಅಭಿರುಚಿ ಹೆಚ್ಚುತ್ತದೆ; ಕೇಳುವ ಕುತೂಹಲ ಕೆರಳುತ್ತದೆ! ಮನಸ್ಸಿಗೆ ಆನಂದವಾಗುತ್ತದೆ! ಅಷ್ಟು ಮಾತ್ರವಲ್ಲ; ವಿವಿಧ ವಿಚಾರಗಳ ಕುರಿತು ಅನುಭವವೂ ಉಂಟಾಗುವುದು.

ಹಿಂದೀ ಸಾಹಿತ್ಯಕ್ಷೇತ್ರದಲ್ಲಿ ರಾಷ್ಟ್ರಕವಿ ಶ್ರೀ ಮೈಥಿಲಿ ಶರಣಗುಪ್ತರ ಸ್ಥಾನ ಶ್ರೇಷ್ಠವಾದುದು. ಅವರು ತಮ್ಮ 'ಪಂಚವಟಿ" ಎಂಬ ಖಂಡ ಕಾವ್ಯದ ಮೂಲಕ, ತಮ್ಮ ಕಲಾಪ್ರತಿಭೆಯನ್ನು ಸಾಹಿತ್ಯದ ರಸದೌತಣವಾಗಿ ತುಂಬಿತುಂಬಿ ನೀಡಿರುವರು. ನರ, ನಾರಿಯರ ಧರ್ಮ ಕಾಮ-ಪ್ರೇಮಗಳ ಸ್ವರೂಪ ಇತ್ಯಾದಿ ಎಷ್ಟೋ ವಿಷಯಗಳು ಇದರಲ್ಲಿ ಸಮಾವೇಶಗೊಂಡಿವೆ. ಇಂತಹ ಉಚ್ಚ ಮಟ್ಟದ ಖಂಡ ಕಾವ್ಯದಿಂದ, ರಸವತ್ತಾದ ಅಲ್ಪ ಭಾಗವನ್ನು ಮಾತ್ರ ಇಲ್ಲಿ ಕನ್ನಡಿಸಿ ಕನ್ನಡದ ರಸಿಕರಿಗಾಗಿ ನೀಡಲಾಗಿದೆ!

ಯೋಗಿಯಂತೆ ಕಾಣುವ, ಧನುರ್ಧಾರಿಯಾದ ಲಕ್ಷ್ಮಣನು, ಪಂಚವಟಿಯಲ್ಲಿ ಸೀತಾರಾಮರ ಪರ್ಣಕುಟೀರದ ಮುಂದೆ ಕಾವಲುಗಾರನಂತೆ ಕುಳಿತಿದ್ದಾನೆ. ರಾತ್ರಿಯ ಮೂರು ಜಾವಗಳು ಕಳೆದಿವೆ. ಸ್ವಚ್ಛವೂ ಶುಭ್ರವೂ ಆದ ಹಾಲ ಬೆಳುದಿಂಗಳ ಆ ರಾತ್ರಿ! ಎಲ್ಲೆಲ್ಲೂ ನೀರವತೆಯೇ ತುಂಬಿಕೊಂಡಿದೆ! ಸುಗಂಧಮಿಶ್ರಿತವಾದ ಮಂದಮಾರುತ ನಾಲ್ದೆಸೆಗಳಿಂದಲೂ ತಡೆತಡೆದು ಬೀಸುತ್ತಿರಲು, ಜನಮನಗಳಿಗೆ ಆನಂದವನ್ನೀಯುತ್ತಿರಲು, ಪ್ರಕೃತಿ ನಟಿಯು ಈ ಪರಿಯ ಶಾಂತವೂ ಸೌಮ್ಯವೂ ಆದ ನರ್ತನದಿಂದ, ಮೃಗಪಕ್ಷಿಗಳೇನು, ತೃಣವೂ ಆನಂದದಿಂದ ರೋಮಾಂಚನವನ್ನು ಅನುಭವಿಸುತ್ತಿರುವುದೋ ಎಂಬಂತೆ, ಚಿಗುರಿದ್ದ ಹಸಿರು ಹುಲ್ಲು ತಲೆಯೆತ್ತಿ ನಿಂದಿರಲು, ಆ ಹುಲ್ಲಿನ ಹಾಸಿಗೆಯ ಮೇಲೆ, ನಿಶಾದೇವಿಯು ಮುತ್ತಿನ ಮಳೆಗರೆದು, ಶೃಂಗರಿಸಿರ್ಪಳೋ! ಎಂಬಂತೆ ಭಾಸವಾಗುತ್ತಿದ್ದ ಮಂಜಿನ ಹನಿಗಳು ರಂಜಿಸುತ್ತಿದ್ದುವು!

ಇಂತಹ ಸೌಮ್ಯ ಸುಂದರವಾದ ವಾತಾವರಣದಲ್ಲಿ ಓರ್ವನೇ ಕುಳಿತಿದ್ದ ಸೌಮಿತ್ರಿಯು, ಹಿಂದಿನ ಘಟನೆಗಳನ್ನೂ ವರ್ತಮಾನ ಕಾಲದ ಸ್ಥಿತಿಗತಿಗಳನ್ನೂ ತನ್ನಲ್ಲಿ ತಾನೆ ಯೋಚಿಸಿಕೊಳ್ಳುತ್ತ ಕುಳಿತಿದ್ದನು. ಎಂತಹ ಗಂಭೀರವಾದ ಶಾಂತ ವಾತಾವರಣದಲ್ಲೂ ಮಾನವನ ಮನಸ್ಸು ತನ್ನ ಆಗುಹೋಗುಗಳ ಕುರಿತು ಯೋಚಿಸದಿರಬಲ್ಲುದೇ? ಅಂತೆಯೇ ಲಕ್ಷ್ಮಣನು, ಸೀತಾರಾಮರು ವನವಾಸಕ್ಕೆ ತೆರಳುವ ಮೊದಲ್ಗೊಂಡು, ಒಂದೊಂದೇ ಘಟನೆಗಳನ್ನು ಸ್ಮರಿಸುತ್ತ ಆಳವಾಗಿ ಆಲೋಚಿಸುತ್ತಿರಲು, ಥಕ್ಕನೆ ಆತನಿಗೆ ತನ್ನ ಪ್ರಿಯ ಪತ್ನಿ ಊರ್ಮಿಳೆಯ ನೆನಪಾಯಿತು. ಆಕೆಯ ನೆನಪಾದುದೇ ತಡ—"ಅಯ್ಯೋ! ಊರ್ಮಿಳೆಯೀಗ, ಎಷ್ಟು ಹಂಬಲಿಸುತ್ತ ದುಃಖಿಸುತ್ತಿರುವಳೋ? ಎಂದುಕೊಂಡ ಲಕ್ಷ್ಮಣನು, ಒಂದು ನಿಮಿಷ ಕಣ್ಮುಚ್ಚಿ ವಿರಹಿಣಿ ಊರ್ಮಿಳೆಯ, ಅವಸ್ಥೆಯ ದೃಶ್ಯವನ್ನು ಮನದ ಮೂಲಕವೇ ಕಲ್ಪಿಸತೊಡಗಿದನು. ಇದೆಲ್ಲ ಒಂದೇ ಒಂದು ಚಣದೊಳಗೆ ನಡೆದುಹೋಯಿತು.

ಆ ಬಳಿಕ, ಲಕ್ಷ್ಮಣನು ಕಣ್ಣುಬಿಟ್ಟು ನೋಡುತ್ತಾನೆ! ಏನು? ಏನನ್ನು? ತನ್ನ ಮನದ ಕಲ್ಪನೆಯೇ ಸಜೀವವಾಗಿ ರೂಪುಗೊಂಡಿತೋ? ತನ್ನೆದುರಿಗಿರುವುದೇನು? ಎಂಬಂತೆ, ವಿಭ್ರಾಂತನಾದ ಲಕ್ಷ್ಮಣನು, ಚೇತರಿಸಿಕೊಳ್ಳಬೇಕಾದರೆ, ಮತ್ತೊಂದು ಕ್ಷಣವೇ ಬೇಕಾಯಿತು. ತನ್ನೆದುರು ನಿಂತುಕೊಂಡಿರುವ, ಅಪೂರ್ವವಾದ ರೂಪಲಾವಣ್ಯದ ಜ್ವಾಲೆಯನ್ನು ಕಂಡ ಆತನು ವಿಸ್ಮಿತನಾದನು.

ಮಿಂಚಿನೋಪಾದಿಯಲ್ಲಿ ಮಿಂಚಿ ನಿಂತ, ಈ ಲಾವಣ್ಯವತಿಯನ್ನು ಕಂಡ, ರಾಮಾನುಜನ ಕಣ್ ಕುಕ್ಕಿದಂತಾಯಿತು.

ಲಜ್ಜೆಯನ್ನು ತೊರೆದು ಮುಗುಳುನಗೆಯನ್ನು ಬೀರುತ್ತಿದ್ದ ಆ ತರುಣಿಯ ಅಂಗಾಂಗಗಳು ರತ್ನಾಭರಣಗಳಿಂದ ಶೃಂಗರಿಸಲ್ಪಟ್ಟಿದ್ದುವು. ಆ ಶೃಂಗಾರದ ವೈಭವವೆಂದರೆ, ಚಿಗುರಿದ ಪುಷ್ಪಶೋಭಿತೆಯಾದ ಲತೆಯ ಮೇಲೆ, ಜಗಮಗಿಸುವ ಸಹಸ್ರಾರು ಮಿಂಚುಹುಳುಗಳು ಏಕಪ್ರಕಾರವಾಗಿ ಕಾಂತಿಯನ್ನು ಬೀರುತ್ತಿರುವಂತೆ ತೋರುತ್ತಿದ್ದಿತು! ಆಕೆಯ ಚಂಚಲ ನೋಟ ಮತ್ತು ದೃಷ್ಟಿ ವಿಭ್ರಮದಿಂದ ಆಕೆಯ ಮನೋಭಾವನೆ ಸ್ಪಷ್ಟವಾಗಿ ತಿಳಿದು ಬರುತ್ತಿತ್ತು. ಅಗಲವಾದ ಅವಳ ನಯನಗಳು ಅತೃಪ್ತ ಕಾಮವಾಸನೆಯನ್ನು ಸೂಚಿಸುತ್ತಿದ್ದುವು. ಈ ಪಕೆಯಿಂದ 'ಕಾಮಿನಿ' ಎಂಬ ಹೆಸರು ಈಕೆಗೊಪ್ಪುವಂತಿತ್ತು.

ಪಥಭ್ರಷ್ಟಳಾದ ರಮಣಿಯು ಸುತ್ತಿ ಸುತ್ತಿ ಬಳಲಿ ಕೊನೆಗೆ, ತನ್ನ ಸ್ವಸ್ಥಾನವನ್ನು ತಲುಪಿ ಸಂತೋಷವನ್ನು ಸೂಚಿಸುವಂತೆ, ಸುಂದರಾಂಗಿಯಾದ ಆಕೆ, ತಾನು ಗುರಿಮುಟ್ಟಿದೆನೆಂಬ ಭಾವದಿಂದ—ತನ್ನ ಒಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡು ಮತ್ತೊಂದು ಕೈಯಲ್ಲಿ ಮದನನ ಧನುಸ್ಸಿನಂತಿರುವ, ಪುಷ್ಪ ಮಾಲಿಕೆಯನ್ನು ಹಿಡಿದಿದ್ದಳು!

ಇಂತು ವಿಚಿತ್ರವಾಗಿ ತೋರುತ್ತಿರುವ ಆ ರಮಣಿಯನ್ನು ನೋಡುತ್ತಿದ್ದ ಲಕ್ಷ್ಮಣನು, ಸಂದೇಹ ಆಶ್ಚರ್ಯಗಳೊಡನೆ, ಆಲೋಚನಾಮಗ್ನನಾಗಿರಲು, ಲಕ್ಷ್ಮಣನನ್ನೇ ದಿಟ್ಟಿಸುತ್ತಿದ್ದ ಆ ಕಾಮಿನಿಯು ತಾನೆ ಮೊದಲು ಮಾತನಾಡಿಸಿದಳು.

ಅಮೆರಿಕೆಯ ಸಂರಕ್ಷಣಾ ಕಾರ್ಯದರ್ಶಿ ಶ್ರೀ ಥಾಮಸ್ ಎಸ್. ಗೇಟ್ಸ್.

"ಓ! ಸುಂದರಾಂಗನೇ! ನೀವು ಧೀರವೀರರಾಗಿಯೂ ಸಹ, ಈ ಅಬಲೆಯನ್ನು ನೋಡಿ, ಬಳಲಿಹೋದಂತೆ ತೋರುವುದಲ್ಲ? ನನ್ನ ಸಹಜ ಸೌಂದರ್ಯವನ್ನು ನೋಡಿ, ನೀವು ಹೀಗೆ ಗಾಬರಿಪಡುತ್ತಿರುವುದೇಕೆ? ನನ್ನನ್ನು ನೋಡಿದ ಮೇಲೆ ನೀವೇ ಮೊದಲು ಮಾತನಾಡಿಸಬೇಕಾಗಿತ್ತು! ಆದರೆ ನೀವು ಮಾತನಾಡಿಸಲಿಲ್ಲ! ಪುರುಷರು ಹೃದಯಶೂನ್ಯರಾಗಿರುತ್ತಾರೆಂಬುದಕ್ಕೆ, ಇದೊಂದು ನಿದರ್ಶನವಾಯಿತೀಗ! ಕೊನೆಗೂ ನಾನೇ ಮೊದಲು ಮಾತನಾಡಬೇಕಾಯಿತು" ಎಂದಳು.

ಕಾಮಿನಿಯ ಈ ಮಾತುಗಳನ್ನಾಲಿಸಿದ ಲಕ್ಷ್ಮಣನು, ಜಾಗೃತನಾಗಿ, ಅವಳ ಮಾತಿಗೆ ನಸು ನಕ್ಕು ಮತ್ತೆ ಗಂಭೀರ ಭಾವದಿಂದ ಹೇಳಿದನು—"ಸುಂದರೀ... ಬೆಳಗಿನ ಜಾವದ— ಈ ವೇಳೆಯಲ್ಲಿ ಆಕಸ್ಮಿಕವಾಗಿ ನನ್ನೆದುರು ಬಂದು ನಿಂತ ಏಕಾಂಗಿನಿಯಾದ, ತರುಣಿ ಯಾರಿವಳೆಂದು, ನಾನು ನಿಜವಾಗಿಯೂ, ಆಶ್ಚರ್ಯಭರಿತನಾಗಿದ್ದೇನೆ! ನೀನು ಅಬಲೆಯೆಂದು ಹೇಳಿಕೊಳ್ಳುತ್ತಿರುವೆಯಾದರೂ, ನಿನ್ನ ಮಾತುಗಳಿಂದ ನೀನು ಚತುರೆಯೆಂದು ತಿಳಿಯುವುದು. 'ಪುರುಷರು ಹೃದಯಶೂನ್ಯರು, ಎಂಬ ನಿನ್ನ ಮಾತು, ಕೆಲವರಮಟ್ಟಿಗೆ ಸರಿಯಾಗಿರಲೂ ಬಹುದು. ಆದರೆ, ಪರನಾರಿಯಾದ—ನಿನ್ನೊಡನೆ, ನಾನು ಒಂದು ವೇಳೆ ಪ್ರಥಮವಾಗಿ ಮಾತನಾಡುತ್ತಿದ್ದರೆ, ಪುರುಷರ ನಿಯಮ, ಧರ್ಮಪರಾಯಣತೆ, ಶಿಥಿಲವಾಗುತ್ತಿತ್ತು. ಆದರೆ, ನೀನು ಹೇಳಿದ ಮಾತು ನನ್ನಮಟ್ಟಿಗೆ ಸರಿಯಾಗಿದೆ! ಏ...ಚಂಡೀ ನಿನ್ನಮಟ್ಟಿಗೆ ನನ್ನ ಮಮತೆ, ಎಷ್ಟು ಸಾರಗರ್ಭಿತವಾಗಿದೆಯೆಂಬುದನ್ನು—ನಾನು ಏನು ಹೇಳಲಿ? ತಂದೆ, ತಾಯಿ, ಮನೆ ಮಠ—ಭೂಮಿ, ಮೊದಲಾದುವುಗಳ ಕುರಿತು, ನನಗೆ ಸ್ವಲ್ಪವೂ, ಮಮತೆಯಿಲ್ಲ. ಜೀವನದ ಚಿಂತೆಯಾಗಲೀ ಮಮತೆಯಾಗಲೀ ಯಾವುದೂ ನನಗಿಲ್ಲ. ಆದರೆ...ಒಂದು...(ಲಕ್ಷ್ಮಣನ ಹೃದಯದಲ್ಲಿ ಅದೇನೋ ಒಂದು ಹೇಳಲಾರದ ಚಿಂತೆಯಡಗಿದೆ! ಅವಕ್ಕೆಂವೇ ಅದನ್ನು ಹೇಳಲಾರದೆ, ಹೀಗೆ....ತನ್ನ ಮಾತನ್ನು ಅರ್ಧದಲ್ಲಿ ನಿಲ್ಲಿಸುತ್ತಾನೆ.) ಅವುದೂ ಇರಲಿ! ಅದರಿಂದೇನು? ಅಂತೂ ನಾನೀಗ ಪರಮ ಸುಖಿಯಾಗಿದ್ದೇನೆ. ಹೇ! ರಮಣೀ...ಮಮತೆಯೆಂಬುದು,

(೧೦ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಅಂಚೆ ಖರ್ಚಿಗಾಗಿ 0=25 N P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ವ್ಯಕ್ತಿ ಪರಿಚಯ

ಆದರ್ಶ ವಿಜ್ಞಾನಿ - ಆಯಿನ್‌ಸ್ಟೈನ್

ಬಾಲಾವಸ್ಥೆಯಲ್ಲಿ ನಿಷ್ಪ್ರಯೋಜಕನೆಂದು ಗಣಿಸಲ್ಪಟ್ಟ ಹುಡುಗ ಬೆಳೆದುಬಂದಾಗ ಜಾಗತಿಕ ವಿಜ್ಞಾನಿಯಾಗುವನೆಂದು ಯಾರು ಬಗೆದಿದ್ದರು?

ಆರೇಳು ವರ್ಷದ ಓರ್ವ ತೆಳ್ಳಗಿನ ಬಾಲಕನನ್ನು ಮಾನಸ ಶಾಸ್ತ್ರಿಗಳ ಮುಂದೆ ಕರೆತರಲಾಯಿತು. ಆತನೊಡನೆ ಹಲವು ಪ್ರಶ್ನೆಗಳನ್ನು ಕೇಳಲಾಯಿತು. ಆ ಹುಡುಗ ಅಂಜುತಂಜುತ್ತ ತಡೆದ ನಾಲಿಗೆಯಿಂದ ಅವನ್ನು ಉತ್ತರಿಸಿದನು. ಅರ್ಧತಾಸಿನ ನಂತರ ಮಾನಸ ಶಾಸ್ತ್ರಿಯು "ಈತನ ಮೆದುಳಲ್ಲಿ ವಿಕಾಸವಾಗುವ ಸಂಭಾವನೆಯು ಕಡಿಮೆಯಿದೆ" ಎಂದು ತನ್ನ ತೀರ್ಮಾನವನ್ನು ಕೊಟ್ಟುಬಿಟ್ಟನು.

ಕಲಿಸುತ್ತ ಓದಿಸುತ್ತ ಸೋತಿದ್ದರು ಅಧ್ಯಾಪಕರು. ಮಾತಾಪಿತರು ನಿರಾಶರಾಗಿದ್ದರು. ಸಹಾಧ್ಯಾಯಿಗಳು 'ಪೆದ್ದು' ಎಂಬ ಪದವಿಯನ್ನೂ ಉದಾರ ಮನಸ್ಸಿನಿಂದ ಕೊಟ್ಟುಬಿಟ್ಟಿದ್ದರು. ಈ ಹುಡುಗನಾರು? ಇದೇ ಬಾಲಕ ಒಂದು ದಿನ ಆಧುನಿಕ ಯುಗದ ಸರ್ವಶ್ರೇಷ್ಠ ವಿಜ್ಞಾನಿ ಹಾಗೂ ಗಣಿತಜ್ಞನಾಗುವನೆಂದು ಯಾರು ತಾನೇ ತಿಳಿದಿದ್ದರು? ಅಲ್ಬರ್ಟ್ ಐನ್‌ಸ್ಟೀನರ ಹಿರಿಮೆಯು ಅವರ ಬಾಲ್ಯದಲ್ಲಿ ಗೋಚರವಾಗುತ್ತಿರಲಿಲ್ಲ; ಆದರೆ, ಮುಂದೆ ಮಾತ್ರ ಅವರು ವಿಶ್ವಮಾನ್ಯರಾಗಿಬಿಟ್ಟರು.

ಹದಿನಾಲ್ಕು ವರ್ಷ ಪ್ರಾಯದ ಹೊಸ್ತಿಲನ್ನು ದಾಟಿದೊಡನೆಯೇ ಐನ್‌ಸ್ಟೀನನು ತನ್ನನ್ನು ಅದುವರೆಗೂ ಅಪ್ರಯೋಜಕನೆಂದು ದೂರಿ ದೂರಿ ನಾಲಿಗೆ ಬಣಿಯಿಂದ ಅಧ್ಯಾಪಕರನ್ನು ದಂಗುಬಡಿಸಿಬಿಟ್ಟನು. ಆತನು ಗಣಿತಶಾಸ್ತ್ರದ ಕಠಿನ ಪಾಠಗಳನ್ನು—ಅದು ಉಚ್ಚ ತರಗತಿಯವರಿಗೂ ಕಷ್ಟಪ್ರದವೆನಿಸುತಿತ್ತು—ತನಗೆ ತಾನಾಗಿಯೇ ಕಲಿತುಕೊಂಡನು. ಹೀಗಿದ್ದರೂ ಈ ಹುಡುಗ ಪ್ರವೇಶ(Entrance) ಪರೀಕ್ಷೆಯಲ್ಲಿ ಅನುತ್ತೀರ್ಣನೇ ಆದನು. ಪ್ರಾಯಃ ಈ ಸೋಲು ಆ ಹುಡುಗನ ಕೊನೆಯದಾಗಿರಬೇಕು. ಏಕೆಂದರೆ, ಆ ಮೇಲೆ ಆತ ಓದುತ್ತೋದುತ್ತ ಮುಂದುವರಿದನು; ಪ್ರಪಂಚವನ್ನೇ ಕಲಿಸುವುದಕ್ಕೆ ಪ್ರಾರಂಭವಾಗುವವರೆಗೆ ಆತ ಕಲಿತನು. ನ್ಯೂಟನ್ನನ ಗುರುತ್ವಾಕರ್ಷಣ ಸಿದ್ಧಾಂತವು ಒಂದು ಸೀಮಿತ ಪರಿಧಿಯೊಳಗೆ ಮಾತ್ರವಿರುವುದೆಂದು ವೈಜ್ಞಾನಿಕರೆದುರು ಮಂಡಿಸಿದನು. ಸೂರ್ಯ, ಚಂದ್ರ, ಭೂಮಿ ಮೊದಲಾದ ಗ್ರಹಗಳ ಸಂಬಂಧವಿರುವಲ್ಲಿ ಒಂದೇ ಸಿದ್ಧಾಂತವು ಅನ್ವಯಿಸುವುದು ಎಂದೂ ತೋರಿಸಿಕೊಟ್ಟನು.

ತಮ್ಮ ೨೬ನೆಯ ವಯಸ್ಸಿನಲ್ಲಿ ಆಯಿನ್‌ಸ್ಟೀನರು ಮೂರು ಸಿದ್ಧಾಂತಗಳನ್ನು ಆವಿಷ್ಕರಿಸಿ ಪ್ರಪಂಚದೆದುರಿಟ್ಟರು. ಇವುಗಳಲ್ಲಿ ಸುಪ್ರಸಿದ್ಧ, ಮಹತ್ವಪೂರ್ಣ ಹಾಗೂ ಉಲ್ಲೇಖನೀಯವಾದುದೆಂದರೆ, ಸಾಪೇಕ್ಷವಾದ ಅಥವಾ 'ಥಿಯೆರಿ ಆಫ್ ರಿಲೇಟಿವಿಟಿ' ಎಂಬುದು. ಈ ಸಾಪೇಕ್ಷವಾದವೆಂದರೇನೆಂದು ಎಲ್ಲರೂ ಅರಿತಿರಲಾರರು. ಕೇವಲ ಹನ್ನೆರಡೇ ಜನರು ಈ ಸಿದ್ಧಾಂತವನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ಸ್ವಯಂ ಆಯಿನ್‌ಸ್ಟೀನರು ಹೇಳುತ್ತಿದ್ದರು. ಮಹಾ ವೈಜ್ಞಾನಿಕರು ಸಾಪೇಕ್ಷವಾದದ ವಿವರಣೆಯನ್ನು ಹೀಗೆ ಮಾಡುತ್ತಾರೆ:

"ತಾವು ಯಾರಾದರೂ ಒಬ್ಬಾಕೆ ಸುಂದರಿಯೊಡನೆ ಕೂತುಕೊಂಡು ಒಂದು ತಾಸು ಮಾತುಕತೆಯನ್ನು ಮಾಡುತ್ತ ಕುಳಿತರೆ, ಅದು ಕೆಲವೇ ಮಿನಿಟುಗಳಲ್ಲಿ ಮುಕ್ತಾಯವಾಯಿತೆಂದು ನಿಮಗೆ ಭಾಸವಾಗುವುದು. ಆದರೆ ನಿಮಗೆ ಬಿಸಿಯಾದ ಕಬ್ಬಿಣದ ಹಲಗೆಯ ಮೇಲೆ ಕೆಲವೇ ಮಿನಿಟು ಕೂರಬೇಕಾಗಿಬಂದರೂ ಅದು ಬಹುದೀರ್ಘ ಸಮಯದಂತೆ ಗೋಚರವಾಗುವುದು. ಸಾಪೇಕ್ಷವಾದ ಎಂದರೆ, ಇದೇ ಆಗಿದೆ, ನಿಮಗೆ ಈ ವಿಷಯದಲ್ಲಿ ಏನಾದರೂ ಸಂದೇಹವಿರುವುದಾದರೆ, ಪ್ರಯೋಗ ಮೂಲಕ ಕಂಡುಕೊಳ್ಳಿರಿ. ನಿಮಗೆ ಬಿಸಿ ಕಬ್ಬಿಣದ ಹಲಗೆಯ ಮೇಲೆ ಕೂರುವುದೇ ಹಿತವೆಂದು ಕಂಡುಬಂದರೆ, ನಾನು ಯಾರಾದರೂ ಸುಂದರಿಯೊಡನೆ ಕೂರಲು ಸಿದ್ಧನಿದ್ದೇನೆ."

ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಹೀಗೆನ್ನಬಹುದು— ಪ್ರಪಂಚದ ಪ್ರತಿ ಪದಾರ್ಥದ ಪ್ರತಿ ಕಣದಲ್ಲಿಯೂ ಅಸೀಮ ಶಕ್ತಿಯಿದೆ. ಪದಾರ್ಥವನ್ನು ತುಂಡುತುಂಡರಿಸಿ ಅಣುಗಳಾಗಿ ವಿಂಗಡಿಸಿದಂತೆ ಅದರ ಶಕ್ತಿಯು ಹೆಚ್ಚುತ್ತ ಹೋಗುವುದು. ಈ ವಿಷಯದಲ್ಲಿ ಆಯಿನ್‌ಸ್ಟೀನರು ನಾವು ಯಾವುದೇ ಒಂದು ವಸ್ತುವನ್ನು ಅಳೆಯುವಾಗ, ಅದರ ಉದ್ದ, ಅಗಲ ಮತ್ತು ಎತ್ತರ ಅಥವಾ ಆಳಗಳನ್ನುಳಿದ ನಾಲ್ಕನೆಯದೊಂದು ಮಹತ್ವಪೂರ್ಣ ವಿಷಯವನ್ನು ಗಣನೆಗೆ ತರುವುದಿಲ್ಲ ಈ ನಾಲ್ಕನೆಯದೇ ಸಮಯ. ಎಂದರೆ, ಪ್ರತ್ಯೇಕ ವಸ್ತುವಿನ ಮೂಲ್ಯದಲ್ಲಿ ಅದು ಅಸ್ತಿತ್ವದಲ್ಲಿರುವ ಸಮಯವೂ ಜತೆ ಸೇರುತ್ತದೆ ಎಂದು ಹೇಳುತ್ತಾರೆ.

ಈ ಸಂಬಂಧದಲ್ಲಿ ಮೂರನೆಯದೊಂದು ತಥ್ಯಾಂಶವನ್ನವರು ತಿಳಿಸಿದ್ದಾರೆ. ಪದಾರ್ಥ ಮತ್ತು ಶಕ್ತಿಗಳು ಎರಡು ಬೇರೆ ಬೇರೆ ವಸ್ತುಗಳಲ್ಲ. ಪ್ರಪಂಚದಲ್ಲಿ ಒಂದೇ ಒಂದು ಪದಾರ್ಥವಿದೆ; ಅದು ಶಕ್ತಿ. ಪದಾರ್ಥ ಇಲ್ಲವೇ ಪ್ರಕೃತಿಯು ಈ ಶಕ್ತಿಯದೇ ಒಂದು ರೂಪಾಂತರ. ವಸ್ತು ಪರಮಾಣುವಿನ ರೂಪದಲ್ಲಿರುವಾಗ, ಇನ್ನೂ ಅದನ್ನು ವಿಭಜಿಸುವುದು ಅಸಾಧ್ಯವೆನಿಸಿದಾಗ, ಅದನ್ನು ಒಡೆಯುವುದರಿಂದ ಅದು ಯಾವುದರ ಸಂಯುಕ್ತರೂಪವೋ ಆ ಶಕ್ತಿಯು ಉತ್ಪನ್ನವಾಗುವುದು.

ಹೀಗೆ ಆಯಿನ್‌ಸ್ಟೀನರು ಪರಮಾಣು ಯುಗದ ದ್ವಾರವನ್ನು ಉದ್ಘಾಟಿಸಿದರು. ಆಣವಿಕ ಪ್ರಸ್ಫುರಣೆಯ ಸೈದ್ಧಾಂತಿಕ ಆಧಾರವು ಅವರ ಬುದ್ಧಿಯಿಂದ ದೊರೆತುದಾಗಿದೆ. ಈ ಮೊದಲ ಆವಿಷ್ಕಾರವನ್ನು ಮೊದಮೊದಲು ವಿಜ್ಞಾನಿಗಳು ಒಪ್ಪದೆ ಹೋದರೂ ೧೯೨೧ರಲ್ಲಿ ಇದಕ್ಕಾಗಿಯೇ ಅವರಿಗೆ ನೊಬೆಲ್ ಪಾರಿತೋಷಕ ಲಭಿಸಿತು. ಇದನ್ನವರು ದಾನಮಾಡಿಬಿಟ್ಟಿದ್ದರು.

ವಿಶ್ವದ ಈ ಮಹಾನ್ ಬೌದ್ಧಿಕ ಜ್ಞಾನಿಯು ಸಿದ್ಧಾಂತ ಮಾತ್ರವಲ್ಲ, ವಿಜ್ಞಾನಿಯು ಕೂಡಾ ವಿಚಿತ್ರ ತರದವರಿದ್ದರು. ಸ್ನಾನ ಮಾಡುವುದಕ್ಕೆ ಮತ್ತು ಕ್ಷೌರ ಮಾಡುವುದಕ್ಕವರು ಒಂದೇ ಸಾಬೂನನ್ನು ಉಪಯೋಗಿಸುತಿದ್ದರು. ಸೀಟಿ ಬಾರಿಸುವುದು, ಗಾಯನ ಹಾಡುವುದು ಎಂದರವರಿಗೆ ಇಷ್ಟವಾಗಿತ್ತು. ವಾಯಲಿನ್ ನುಡಿಸಲು ಅವರಿಗೆ ಬರುತ್ತಿರಲಿಲ್ಲ; ಆದರೂ ಬಾರಿಸಿದುದರಲ್ಲಿಯೇ ಸಂತುಷ್ಟರಾಗಿದ್ದರು. ಅವರು ಆಲೋಚನೆ ಮತ್ತು ವಿಚಾರ ಮಾಡುವುದರಲ್ಲಿ ನಿಯಮಿತಗಾಗಿದ್ದರೂ ಇಂತಹ ಅವಕಾಶ ಅವರಿಗೆಂದೂ ಬಂದಿರಲಿಲ್ಲ. ಏನನ್ನು ಬಯಸುತ್ತಾರೆಯೋ ಅದನ್ನೇ ಆಶಿಸುತಿದ್ದರು; ಅದನ್ನು ಅದೇ ಸಮಯದಲ್ಲಿ ಮಾಡುತಿದ್ದರು. ಯಾವುದೇ ನಿಯಮವನ್ನು ರಚಿಸಬೇಡಿರಿ; ಬೇರೆಯವರ ವಿಚಾರಗಳಲ್ಲಿ ಸ್ವಯಂ ಸ್ವತಂತ್ರರಾಗಿರಿ ಎಂಬುವೇ ಅವರ ಎರಡು ನಿಯಮಗಳಾಗಿದ್ದುವು.

ಒಂದು ಬಾರಿ ಯಾರೋ ಒಬ್ಬರು ಸಾಫಲ್ಯದ ರಹಸ್ಯವನ್ನು ತಿಳಿಯಬಯಸಿದಾಗ, ಪ್ರೊ| ಐನ್‌ಸ್ಟೀನರು ಹೀಗೆ ವಿವರಿಸಿದರು—"'ಕ' ವೆಂಬುದನ್ನು ಸಫಲತೆಯೆನ್ನುವುದಾದರೆ, 'ಕ' ವೆಂಬುದು ಖ + ಗ + ಘ ಎಂಬುದಕ್ಕೆ ಸಮವಾಗಿದೆ. ಇಲ್ಲಿ ಖ = ಕೆಲಸ ಮತ್ತು ಗ = ಆಟ."

"ಮತ್ತು 'ಘ' ಎಂದರೇನು?" ಪ್ರಶ್ನೆ ಎದ್ದಿತು.

"'ಘ' ಎಂದರೆ ನಾಲಿಗೆಯ ಮೇಲೆ ಲಗಾಮು ಹೊಂದುವುದು!"

ಒಂದು ದಿನ ಬರ್ಲಿನ್‌ನಲ್ಲಿ ಆಯಿನ್‌ಸ್ಟೀನರು ಟ್ರೇಮಿನಲ್ಲಿ ಪ್ರಯಾಣಿಸುತಿದ್ದರು. ಅವರಲ್ಲಿ ಸರಳತೆಯಿತ್ತು. ಸಾಮಾನ್ಯವಾಗಿ ಹಳೆಯದಾದ ಧೂಳುತುಂಬಿದ ಇಸ್ತ್ರಿ ಕಾಣದ ಬಟ್ಟೆಬರೆಗಳೇ ಅವರ ಮೈಮೇಲೆ ಇರುತಿತ್ತು. ಪಾದಗಳಲ್ಲಿ ಮಾಮೂಲು ಚಪ್ಪಲಿ. ಪ್ರಸಿದ್ಧ ಲೇಖಕ ಲೂಯಿ ಫಿಷರ್ ಹೀಗೆ ಬರೆದಿದ್ದಾನೆ— "ಆಯಿನ್‌ಸ್ಟೀನರ ಮನೆ ಸಾಧಾರಣತರದ್ದಾಗಿರುವುದನ್ನು ಕಂಡಿದ್ದೇನೆ. ಹೆಚ್ಚಿನ ಜನರು ಈ ಮಹಾವಿಜ್ಞಾನಿ ರಾಜಮಂದಿರದಂತಹ ಮನೆಯಲ್ಲಿ ನೆಲಸುತ್ತಿರಬಹುದೆಂದು ತಿಳಿದಿದ್ದಾರೆ. ಆದರೆ, ಅವರದು ಒಂದು ಎಳೆಯ ಮನೆ; ಅದೂ ಸಾಮಾನುಗಳಿಂದ ತುಂಬಿದೆ; ನೋಡುವಾಗ ಅಲ್ಪವೇತನ ಪಡೆಯುವ ಒಬ್ಬ ಕರ್ಮಚರನ ಗುಡಿಸಲಿನಂತಿದೆ."

ಆಯಿನ್‌ಸ್ಟೀನರು ೧೮೭೯ರಲ್ಲಿ ಜರ್ಮನಿಯ ಒಂದು ಯೆಹೂದೀ ಕುಟುಂಬದಲ್ಲಿ ಜನಿಸಿದ್ದರು. ಜರ್ಮನಿಯಲ್ಲಿ ಹಿಟ್ಲರನು ಅಧಿಕಾರಾರೂಢನಾದಾಗ ಇತರ ಯೆಹೂದಿಯರಂತೆ ಇವರೂ ದೇಶಬಿಟ್ಟು ಓಡಿಹೋಗಬೇಕಾಗಿ ಬಂದಿತ್ತು. ಅವರನ್ನು ರಾಷ್ಟ್ರದ್ರೋಹಿಯೆಂದು ಕರೆಯಲಾಯಿತಲ್ಲದೆ ಹಿಡಿದುಕೊಟ್ಟವರಿಗೆ ಸಾವಿರಾರು ನಾಣ್ಯಗಳ ಬಹುಮಾನವನ್ನೂ ಘೋಷಿಸಲಾಗಿತ್ತು. ಸ್ವದೇಶವನ್ನಗಲಿದ ಅವರು ಅಮೆರಿಕೆಗೆ ಹೋದರು. ಅಲ್ಲಿ ಅವರಿಗೆ ಕೀರ್ತಿಯೂ ಸಮ್ಮಾನವೂ ಲಭಿಸಿದುವು.

೧೯೩೯ರಲ್ಲಿ ಆಯಿನ್‌ಸ್ಟೀನರು ಅಮೆರಿಕೆಯ ರಾಷ್ಟ್ರಪತಿ ರೂಸವೆಲ್ಟರಿಗೊಂದು ಐತಿಹಾಸಿಕ ಪತ್ರವನ್ನು ಬರೆದು, ಅದರಲ್ಲಿ ಜರ್ಮನಿಯು ಪರಮಾಣು ಬಾಂಬು ತಯಾರಿಸುತ್ತಿರುವುದರ ಸೂಚನೆಯಿತ್ತರು. ಅದರಲ್ಲಿ ಬಾಂಬಿನ ವಿನಾಶಕಾರೀ ಗುಣಗಳನ್ನು ತಿಳಿಸಿದ್ದರು. ೧೯೪೫ರಲ್ಲಿ ಅಮೆರಿಕೆಯು ಹಿರೋಶಿಮಾ ಮತ್ತು ನಾಗಸಾಕಿಗಳ ಮೇಲೆ ಪರಮಾಣು ಬಾಂಬುಗಳನ್ನು ಸುರಿದನಂತರ, ಅವುಗಳ ಮೇಲೆ ಅಂತಾರಾಷ್ಟ್ರೀಯ ನಿಯಂತ್ರಣವಿರಬೇಕೆಂಬ ಅಭಿಪ್ರಾಯವನ್ನು ಮೊತ್ತಮೊದಲಿನ ವ್ಯಕ್ತಿಯೂ ಆಯಿನ್‌ಸ್ಟೀನರೇ ಆಗಿದ್ದಾರೆ.

ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸೈನ್ಯೀಕರಣಗಳ ನಡುವೆ ಮಹದಂತರವಿದೆಯೆನ್ನುತ್ತಾರೆ, ಆಯಿನ್‌ಸ್ಟೀನ್. ಸೈನ್ಯೀಕರಣದಿಂದ ವಿಶ್ವದಲ್ಲಿ ಎಲ್ಲಿಯಾದರೂ ಉಳಿದಿದ್ದ ಸ್ವಾತಂತ್ರ್ಯವೂ ನಷ್ಟವಾಗಿ ಹೋಗುವುದು ಎಂಬುದವರ ಅಂಬೋಣ. ಆದುದರಿಂದ ಸಮಸ್ತ ವಿನಾಶಕಾರಿ ಶಸ್ತ್ರಾಸ್ತ್ರಗಳ ಮೇಲೆ ನಿಯಂತ್ರಣ ಹೇರಬೇಕೆ

(೯ನೇ ಪುಟ ನೋಡಿರಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

> ಅಳುತ್ತಿರುವ ಮಗುವನ್ನೆತ್ತಿ ತೊಡೆಯಲ್ಲಿಟ್ಟುಕೊಂಡು, ಅದನ್ನು ಸಾಂತ್ವನ ಪಡಿಸುವುದೇ ತಾಯಿಯಾದವಳ ಆದ್ಯ ಮತ್ತು ಪರಮ ಕರ್ತವ್ಯವಾಗಿದೆ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೮-೪-'೬೦	೩೪

ನೂತನ ರಾಜ್ಯಗಳು

ದ್ವಿಭಾಷಾ ಬೊಂಬಾಯಿ ರಾಜ್ಯವನ್ನು ಮಹಾರಾಷ್ಟ್ರ ಮತ್ತು ಗುಜರಾತ ಎಂಬ ಎರಡು ಏಕಭಾಷಾ ಘಟಕಗಳಾಗಿ ವಿಭಜಿಸುವ ಮತ್ತುವನ್ನು ಮೇ ಮೊದಲನೆ ದಿನಾಂಕದಂದು ಉದ್ಘಾಟಿಸುವ ಬಗ್ಗೆ ಅಂತಿಮ ನಿರ್ಧಾರವನ್ನು ಭಾರತೀಯ ಸಂಸತ್ತು ಒಮ್ಮತದಿಂದ ಕೈಕೊಂಡಿತು. ಈ ಬಗ್ಗೆ ಸ್ವೀಕರಿಸಿದ ವಿಧೇಯಕಕ್ಕೆ ರಾಷ್ಟ್ರಪತಿಗಳು ಇಷ್ಟರಲ್ಲಿಯೇ ಅಂಕಿತ ಹಾಕಲಿರುವರು. ರಾಜ್ಯ ಪುನರ್ಘಟನಾ ಮಸೂದೆಯನ್ನು ೧೯೫೬ರಲ್ಲಿ ...ಯೇ ಚರ್ಚಿಸುತ್ತಿರುವಾಗ, ಮುಂಬಯಿ ನಗರದ ಪ್ರಶ್ನೆಯು ಜಟಿಲವಾಗಿ ಹಲವಾರು ಅನಾಹುತಗಳಿಗೆ ಎಡೆಕೊಟ್ಟುದರಿಂದ, ಸಂಸತ್ತು ಬೊಂಬಾಯಿಯನ್ನು ದ್ವಿಭಾಷಾ ರಾಜ್ಯವಾಗಿಡಲು ನಿರ್ಧರಿಸಿತ್ತು. ಆದರೆ, ಆ ರಾಜ್ಯದ ಜನತೆಯಲ್ಲಿ ...ದು ಉದ್ರೇಕ ಭಾವನೆಯನ್ನು ಉಂಟುಮಾಡಿತ್ತೆಂಬುದನ್ನು ನಾವು ಮರೆಯುವಂತಿಲ್ಲ. ಇದರಿಂದಾಗಿ ಸಂಯುಕ್ತ ಮಹಾರಾಷ್ಟ್ರ ಸಮಿತಿ ಮತ್ತು ಮಹಾಗುಜರಾತ ಪರಿಷತ್ತುಗಳು ಹುಟ್ಟಿಗೊಂಡು, ಕಾಂಗ್ರೆಸ್ ಪಕ್ಷವನ್ನು ವಿರೋಧಿಸಿ ಕಾರ್ಯವೆಸಗಿದುವೆಂಬುದನ್ನೂ ದ್ವಿತೀಯ ಸಾರ್ವತ್ರಿಕ ಚುನಾವಣೆಯ ವೇಳೆಯಲ್ಲಿ ಇವುಗಳು ಪ್ರತ್ಯೇಕ ರಾಜ್ಯಸ್ಥಾಪನೆಯ ಘೋಷಣೆಯನ್ನು ಮುಂದಿಟ್ಟು ಸ್ಪರ್ಧಿಸಿದುವೆಂದೂ ಇದರಿಂದಾಗಿ ಕಾಂಗ್ರೆಸ್ ಕೆಲವೊಂದು ಸ್ಥಾನಗಳನ್ನು ಕಳೆದುಕೊಳ್ಳಬೇಕಾಯಿತೆಂದೂ ನಾವೆಲ್ಲರೂ ತಿಳಿದಿದ್ದೇವೆ. ಅಂದಿನಿಂದಲೂ ಜನತೆಯ ತೀವ್ರೇಚ್ಛೆಯು ಯಾವುದೆಂದು ತಿಳಿದುಕೊಂಡು, ಅದನ್ನು ಅತಿ ಶೀಘ್ರದಲ್ಲಿಯೇ ಕೈಗೊಳ್ಳುವತ್ತ ವಿಶೇಷ ಗಮನವನ್ನು ಹರಿಸಬೇಕಾಗಿ ಬಂದುದು ನಿಜವೇ. ಆದರೂ ಈ ವಿಭಜನೆಯು ಎರಡೂ ಪಂಗಡಗಳ ಒಮ್ಮತದಿಂದಾಗಬೇಕಾದುದು ಅತ್ಯಾವಶ್ಯವಾದುದರಿಂದ ಈ ವಿಷಯದಲ್ಲಿ ...ಸು ವಿಳಂಬವೇ ಆಯಿತೆನ್ನಬೇಕು. ಆದರೂ ಮಹಾರಾಷ್ಟ್ರೀಯರ ಮತ್ತು ಗುಜರಾತಿಗಳ ಮನೋಭಿಲಾಷೆಯು ತಡವಾಗಿಯಾದರೂ ಈಡೇರಿದುದು ಸಂತೋಷಾಸ್ಪದವಾಗಿದೆ.

ಮೊದಲು, ಬೊಂಬಾಯಿ ನಗರವು ತಮ್ಮದೆಂದು ಹೋರಾಡಿ ಅನಪೇಕ್ಷಣೀಯವಾದ ವಿಪತ್ತಿಗೆ ಕಾರಣರಾದ ಉಭಯ ಸಮಿತಿಗಳ ಬೆಂಬಲಿಗರಲ್ಲಿ ಗುಜರಾತಿಗಳು ಅದರ ಮೇಲಿನ ತಮ್ಮ ಅಭಿಲಾಷೆಯನ್ನು ಬಿಟ್ಟುಕೊಡಲು ಒಪ್ಪಿದುದರಿಂದಾಗಿಯೇ ಶಾಂತರೀತಿಯಲ್ಲಿ ಸಮಸ್ಯೆ ಬಗೆಹರಿಯುವುದು ಸಾಧ್ಯವಾಯಿತು. ಅಹಮ್ಮದಬಾದ ಸಮೀಪದಲ್ಲಿ ವಲ್ಲಭಭಾಯಿ ನಗರದಲ್ಲಿ ಗುಜರಾತದ ನೂತನ ರಾಜಧಾನಿಯನ್ನು ಕಟ್ಟಲು ಬೊಂಬಾಯಿಯು ಹಣವನ್ನು ಮಂಜೂರು ಮಾಡಲು ಒಪ್ಪಿರುವುದೂ ಇದಕ್ಕೊಂದು ಕಾರಣವಾಯಿತೆನ್ನಬಹುದು. ರಾಜ್ಯದ ಸಾಲ ಮೂಲಗಳ ವಿತರಣೆ ಹಾಗೂ ಸೀಮಾ ನಿರ್ಧಾರದಲ್ಲಿ ಎಳ್ಳಷ್ಟು ಭಿನ್ನಾಭಿಪ್ರಾಯವು ಇದೀಗ ತೋರಿ ಬಂದಿರುವುದಾದರೂ ಕ್ರಮೇಣ ಅದೂ ಶಾಂತರೀತಿಯಲ್ಲಿಯೇ ಪರಿಹಾರಗೊಳ್ಳುವುದೆಂದು ನಿರೀಕ್ಷಿಸುವುದು ಸಾಧ್ಯವಿದೆ. ದ್ವಿಭಾಷಾ ಬೊಂಬಾಯಿಯನ್ನು ಪ್ರತ್ಯೇಕಿಸುವ ಸಮಯದಲ್ಲಿಯೇ ವಿದರ್ಭ ರಾಜ್ಯದ ಬೇಡಿಕೆಯ ಬಗ್ಗೆಯೂ ಪರಿಶೀಲನೆ ನಡೆಸುವುದು ಅಗತ್ಯವೆಂದು ನಾವು ಈ ಮೊದಲೊಮ್ಮೆ ಅಭಿಪ್ರಾಯಪಟ್ಟಿದ್ದೆವು. ಈ ಪ್ರಶ್ನೆಯನ್ನು ಸಂಬಂಧಿತರು ಪರಿಶೀಲಿಸಿ, ವಿದರ್ಭದ ಉತ್ಥಾನ ಹಾಗೂ ಪ್ರಗತಿಯ ಹಿತದೃಷ್ಟಿಯಿಂದ ಅದು ಸದ್ಯ ಮಹಾರಾಷ್ಟ್ರದಲ್ಲಿಯೇ ಉಳಿಯುವುದು ಕ್ಷೇಮವೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಈ ಅಭಿಪ್ರಾಯಕ್ಕೆ ವಿದರ್ಭದವರು ಅದೆಷ್ಟರಮಟ್ಟಿಗೆ ಬದ್ಧರಾಗಿರುವರೆಂದು ಹೇಳಬರುವುದಿಲ್ಲ. ನಾಗಪುರದಲ್ಲಿ ಉಚ್ಚ ನ್ಯಾಯಾಲಯದ ಬೆಂಚೊಂದನ್ನು ಮತ್ತಿತರ ಕೆಲವು ಕಾರ್ಯಾಲಯಗಳನ್ನು ಸ್ಥಾಪಿಸುವ ಆಶೆಯನ್ನು ತೋರಿಸಿ, ವಿದರ್ಭೀಯರ ಒಲವನ್ನು ಪಡೆಯುವ ಪ್ರಯತ್ನ ಸದ್ಯ ನಡೆದಂತೆ ಕಾಣುತ್ತದೆ. ಈ ಪ್ರಯತ್ನವು ಅದೆಷ್ಟು ಕಾಲದವರೆಗೆ ಯಶಸ್ವಿಯಾಗುವುದೆಂದೂ ಈ ಕೊಡುಗೆಯಿಂದ ವಿದರ್ಭೀಯರು ಎಷ್ಟರ ಮಟ್ಟಿಗೆ ತೃಪ್ತರಾಗಿರುವರೆಂದೂ ಸದ್ಯದಲ್ಲೇ ಹೇಳುವುದು ಕಷ್ಟ! ಮೂಲತಃ ಗುಜರಾತವನ್ನುಳಿದ ರಾಜ್ಯವನ್ನು ಬೊಂಬಾಯಿಯೆಂದು ಹೆಸರಿಸುವ ಸೂಚನೆಯು ತಿದ್ದುಪಡಿ ಹೊಂದಿ ಅದನ್ನು 'ಮಹಾರಾಷ್ಟ್ರ'ವೆಂದು ಕರೆಯಬೇಕೆಂಬ ನಿರ್ಧಾರವಾಯಿತು. ಈ ಒಂದು ಮಹತ್ವದ ಬದಲಾವಣೆಯನ್ನುಳಿದರೆ, ಮೂಲ ಪ್ರಸ್ತಾಪವು ಇದ್ದಕ್ಕಿದ್ದಂತೆಯೇ ಮಂಜೂರಾದಂತಾಯಿತು. ಈ ಹೊಸ ರಾಜ್ಯಗಳು ಉನ್ನತಿ ಪಥದತ್ತ ಸರಿಯುವುವೆಂದು ಆಶಿಸುತ್ತೇವೆ.

ಬೊಂಬಾಯಿಯ ವಿಭಜನೆಯಿಂದ ಒಂದು ಸಮಸ್ಯೆ ಬಗೆಹರಿಯಿತು; ಕಾಂಗ್ರೆಸ್ಸಿನ ಶಕ್ತಿಯೂ ಇದರಿಂದ ಹೆಚ್ಚುವ ಸಂಭವವಿದೆ; ಜನತೆಯ ಅಭಿಲಾಷೆಯೂ ಕೈಗೂಡಿದಂತಾಯಿತು. ಅದೇ ರೀತಿಯಲ್ಲಿ ಉಳಿದ ರಾಜ್ಯಗಳ ನಡುವಿರುವ ಪ್ರಶ್ನೆಗಳೂ ಬಹುಬೇಗನೇ ತೀರ್ಮಾನಗೊಳ್ಳುವ ಆವಶ್ಯಕತೆಯಿದೆ. ಭಾಷಾತಳಹದಿಯಲ್ಲಿ ರಾಜ್ಯಗಳನ್ನು ಪ್ರತ್ಯೇಕಿಸುವಾಗ, ೧೯೫೬ರಲ್ಲಿ ಆಗಿದ್ದ ಕೆಲವೊಂದು ಅನ್ಯಾಯಗಳು ಇನ್ನೂ ಸರಿಯಾಗಿಲ್ಲದಿರುವುದು ಶೋಚನೀಯವೇ. ಮಹಾರಾಷ್ಟ್ರ—ಕರ್ನಾಟಕ; ಕರ್ನಾಟಕ—ಕೇರಳಗಳ ಸೀಮಾ ಸಮಸ್ಯೆ ಗಡಿಪ್ರದೇಶದ ನಾಗರಿಕರನ್ನು ಕಷ್ಟನಷ್ಟ ಮತ್ತು ಅಶಾಂತಚಿತ್ತರನ್ನಾಗಿ ಮಾಡಿದೆ. ಈ ವಿಷಯದಲ್ಲಿ ಕನ್ನಡ ಮಾತಾಡುವವರಿಗೆ ತುಂಬ ಅನ್ಯಾಯವಾಗಿದೆ. ಇವನ್ನು ಇನ್ನಾದರೂ ಸರಿಪಡಿಸುವತ್ತ ರಾಜ್ಯ ಸರಕಾರಗಳು ಕೇಂದ್ರದ ಸಲಹೆಯಿಂದ ತೀವ್ರ ಕ್ರಮಕೈಗೊಳ್ಳುವ ಆವಶ್ಯಕತೆಯಿದೆ; ಇತ್ತ ಸಂಬಂಧಿತರ ಗಮನ ಹರಿಯಬೇಕು. ಮೊದಲು ತುರುಸಿನ ವಾತಾವರಣದಲ್ಲಿ ಕಾದೇರಿದ್ದ ಮರಾಠಿ ಮತ್ತು ಗುಜರಾತಿಗಳು ಇಂದೀಗ ಸಮಾಧಾನಕರವಾಗಿ ಒಡಂಬಡಿಕೆಗೆ ಬಂದಿರುವುದನ್ನು ಕಾಣುವಾಗ, ಈ ಅಂತಾರಾಜ್ಯೀಯ ಸೀಮಾ ವಿವಾದವೂ ಇದೇ ರೀತಿಯಲ್ಲಿ ಬಗೆಹರಿಯಬಹುದೆಂದು ಆಶಿಸಿದರೆ ತಪ್ಪಾಗಲಾರದು. ಬೊಂಬಾಯಿಯ ವಿಭಜನೆಯಿಂದ ಕನ್ನಡಿಗರು ಇನ್ನೊಂದು ಪಾಠವನ್ನೂ ಕಲಿಯಬೇಕಾಗಿದೆ. ಭಾಷಾತಳಹದಿಯಲ್ಲಿ ರಾಜ್ಯಗಳು ವಿಂಗಡಿತವಾದಾಗ, ಸಾಮಾನ್ಯವಾಗಿ, ಆ ಭಾಷೆಯ ಸಂಬಂಧದ ಹೆಸರನ್ನೇ ರಾಜ್ಯಕ್ಕೆ ಕೊಡಲಾಗಿತ್ತು. ನಮ್ಮ ರಾಜ್ಯವನ್ನು ಕರ್ನಾಟಕವೆಂದೇ ಮೊದಲು ಹೆಸರಿಸಲಾಗಿತ್ತು. ಆದರೆ, ಕೆಲವೊಂದು ರಾಜಕೀಯೋದ್ದೇಶಗಳಿಂದ ಮೈಸೂರು ಎಂಬ ಒಂದು ಭಾಗದ ಹೆಸರನ್ನೇ ಇಡಿ ರಾಜ್ಯಕ್ಕೂ ಅನ್ವಯಿಸಲಾಯಿತು. ಈ ಬಗ್ಗೆ ಪ್ರತಿಬಾರಿಯೂ ಪ್ರತಿಭಟನೆ ನಡೆಯುತ್ತಾ ಇದೆ. ಆದರೂ ನಮ್ಮ ಶಾಸಕರ ಲಕ್ಷ್ಯ ನಿರ್ದೋಷಪೂರಿತವಾಗಿಲ್ಲ. ನಿಯೋಜಿತ ಮಹಾರಾಷ್ಟ್ರವನ್ನು ಬೊಂಬಾಯಿಯೆಂದು ಕರೆಯಲು ಮೂಲ ವಿಧೇಯಕದಲ್ಲಿ ಹೇಳಿದ್ದರೆ ಜನತೆಯ ಅಭಿಮತದಂತೆ ಅದನ್ನು ಭಾಷಾ ತಳಹದಿಯಲ್ಲೇ ಮಹಾರಾಷ್ಟ್ರ ಎಂದು ಹೆಸರಿಸಲಾಯಿತು. ಹಾಗೆಯೇ ನಮ್ಮ ರಾಜ್ಯದ ಹೆಸರು ಕರ್ನಾಟಕವೆಂದೇ ಇರಬೇಕೆಂದು ಹೆಚ್ಚಿನ ಕನ್ನಡಿಗರು ಬಯಸುತ್ತಾರೆ; ಜನಾಭಿಪ್ರಾಯ ಪ್ರಕಟಿಸುವ ಪತ್ರಿಕೆಗಳಲ್ಲಿ ಅಧಿಕಾಂಶ ಇದಕ್ಕೆ ಪರವಾಗಿವೆ; ಆದರೂ ಈ ಬಗ್ಗೆ ರಾಜ್ಯಸರಕಾರ ಏನೇನೂ ಗಮನ ಹರಿಸುತ್ತಿಲ್ಲ. ಆದುದರಿಂದ ಸರಕಾರಿ ನೌಕರರ ವೇತನ ಪುನರ್ವಿಮರ್ಶೆಯ ಬಗ್ಗೆ ಮದ್ರಾಸ ವೇತನ ಸುಧಾರಣಾ ಸಮಿತಿಯ ವರದಿಯನ್ನು ಕಾಯುತ್ತಿರುವ ನಮ್ಮ ಸರಕಾರ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದಿರಿಸಲು ಮುಂಬಯಿ ರಾಜ್ಯ ವಿಭಜನಾ ಮಸೂದೆಯಿಂದಾದರೂ ಸ್ಫೂರ್ತಿ ಪಡೆದು, ಕನ್ನಡ ಜನತೆಯ ಆಕಾಂಕ್ಷೆಯನ್ನು ಈಡೇರಿಸಿಕೊಡಬಾರದೆ? ಎನ್ನಿಸುತ್ತದೆ.

ಮಾತುಕತೆಯ ಫಲ?

ಭಾರತ ಸಂದರ್ಶನದ ಆರುದಿನಗಳಲ್ಲಿ ಸುಮಾರು ೨೦ ತಾಸುಗಳ ಕಾಲ ಭಾರತ-ಚೀನಾ ಸೀಮಾ ವಿವಾದದ ಬಗ್ಗೆ ಪರಿಹಾರ ಕಂಡುಹಿಡಿಯಲು ಮಾತುಕತೆ ನಡೆಸಿಯೂ ಯಾವುದೇ ನಿರ್ಧಾರಕ್ಕೆ ಬಾರದೆ ಚೀನೀ ಪ್ರಧಾನಿ ಚಾ ಭಾರತದಿಂದ ಮರಳಿಹೋದ ವರ್ತಮಾನ ಯಾರನ್ನೂ ದಂಗುಬಡಿಸುವಂತಿಲ್ಲ. 'ಇದು ಹೀಗೆಯೇ ಆಗಬಹುದು' ಎಂದು ಊಹಿಸಿಕೊಂಡಿದ್ದವರು ಈಗ 'ಇದು ಹಾಗೆಯೇ ಆಯಿತು' ಎಂದು ಉಸಿರು ಬಿಡಬಹುದಷ್ಟೆ. ಮೂಲ ಪ್ರಶ್ನೆಯ ಬಗ್ಗೆನೇ ಅಭಿಪ್ರಾಯದಲ್ಲಿ ಒಮ್ಮತಕ್ಕೆ ಬರಲಾಗಲಿಲ್ಲವೆಂಬಾಗ, ಉಳಿದ ಪ್ರಶ್ನೆಗಳ ಮಾತು ಹೇಳಬೇಕಾದರೂ ಏಕೆ? ಚೀನಾ ಆಕ್ರಮಣ ಮಾಡಿದೆ; ಮ್ಯಾಕಮೋಹನ ರೇಖೆಯನ್ನು ಮನ್ನಿಸಲಾಗಿದೆ ಎಂಬುದಕ್ಕೆ ಶ್ರೀ ಚಾ ಸಮ್ಮತರಿಲ್ಲ. ಇನ್ನು, ಈ ಬಗ್ಗೆ ಎರಡೂ ರಾಷ್ಟ್ರಗಳ ಮಂಡಳಗಳು ಪ್ರಶ್ನೆಯನ್ನು ಅಭ್ಯಸಿಸಿ ತಂತಮ್ಮ ರಾಷ್ಟ್ರಗಳಿಗೆ ವರದಿಯೊಪ್ಪಿಸಬೇಕೆಂದೂ ಅನಂತರ ಪೇಕಿಂಗದಲ್ಲಿ ಈ ಮಾತುಕತೆ ಮುಂದುವರಿಯಬೇಕೆಂದೂ, ಅದುವರೆಗೆ ಸೀಮಾ ಪ್ರದೇಶದಲ್ಲಿ ಗಲಭೆಯೇಳದಂತೆ, ಶಾಂತಿ ನೆಲಸುವಂತೆ ಆದಷ್ಟು ಪ್ರಯತ್ನ ನಡೆಸಬೇಕೆಂದೂ ಸಾಮಾನ್ಯ ನಿರ್ಧಾರವಾಯಿತು. ಉಭಯ ಪ್ರಧಾನಿಗಳು ತಂತಮ್ಮ ರಾಷ್ಟ್ರಗಳ ನಿಲುಮೆಯನ್ನು ಈ ಮೊದಲೇ ಪತ್ರವ್ಯವಹಾರದಲ್ಲಿ ವ್ಯವಹರಿಸಿದ್ದರೆ, ಸದ್ಯ ಬಾಯ್ದೆರೆಯಾಗಿ ಮತ್ತೊಮ್ಮೆ ವಿವರಿಸಿದ ಸಂಗತಿಯನ್ನುಳಿದರೆ; ಮತ್ತೇನೂ ಹೆಚ್ಚಿನ ಲಾಭ ಇಬ್ಬರಿಗೂ ಆದಂತಿಲ್ಲ. ಶಾಂತ ವಿಧಾನದಲ್ಲಿಯೇ ಸಮಸ್ಯೆ ಬಗೆಹರಿಯುದು ಸಾಧ್ಯವಿದೆ ಎಂಬ ಉದ್ಗಾರ ಮಾತ್ರವಲ್ಲದೆ ಮತ್ತಾವ ಫಲ ಈ ಭೆಟ್ಟಿಯಿಂದ ದೊರೆಯಿತು?

ಸಂಕ್ಷಿಪ್ತ ಸುದ್ದಿಗಳು

ನಿಷ್ಫಲ ಸಮ್ಮೇಳನ?

ಮೇ ತಿಂಗಳಲ್ಲಿ ಸೇರಲಿರುವ ಪರಿಷತ್ ಸಮ್ಮೇಳನದಲ್ಲಿ ಮುಖ್ಯವಾಗಿ ಜರ್ಮನಿಯ ಪ್ರಶ್ನೆ ಮತ್ತು ನಿಶ್ಶಸ್ತ್ರೀಕರಣದ ಪ್ರಶ್ನೆಗಳು ಚರ್ಚೆಗೀಡಾಗುವುವೆಂದು ತಿಳಿಯುತ್ತದೆ. ಬರ್ಲಿನ್ ನಗರದ ಭವಿಷ್ಯತ್ತನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳದಿದ್ದರೂ, ಜರ್ಮನಿ ಪ್ರಶ್ನೆಯಲ್ಲಿಯೇ ಅದು ಅಡಕವಾಗಿರುವುದರಿಂದ ಈ ವಿಷಯದ ಬಗ್ಗೆಯೂ ಮಾತುಕತೆ ನಡೆಯುವುದು. ಆದರೆ, ನಿಯೋಜಿತ ಸಮ್ಮೇಳನದಿಂದ ಬಗೆಹರಿಯುವ ಸಾಧ್ಯತೆಯಿಲ್ಲವೆಂದು ಫ್ರಾನ್ಸದ ಅಧ್ಯಕ್ಷ ಮೇ| ಜ| ಡಿಗಾಲೆಯವರ ಖಚಿತಾಭಿಪ್ರಾಯವಿದೆ. ಸದ್ಯ ಅಮೆರಿಕೆಯ ಸಂದರ್ಶನ ಮಾಡುತ್ತಿರುವ ಜ| ಡಿಗಾಲೆಯವರು ಪಾಶ್ಚಾತ್ಯ ಕಮ್ಯುನಿಸ್ಟ ರಾಷ್ಟ್ರಗಳಲ್ಲಿ, ಮುಖ್ಯವಾಗಿ ಅಮೆರಿಕೆ ಮತ್ತು ರಶ್ಯಗಳಲ್ಲಿ ತೀವ್ರ ಸ್ಪರ್ಧೆಯಿರುವುದು ಅಸಹಜವಲ್ಲವೆಂದೂ ಸುಖಶಾಂತಿಗಳತ್ತ ಮಾನವನನ್ನು ಕೊಂಡೊಯ್ಯುವ ಸಲುವಾಗಿ ಪ್ರಯತ್ನಿಸಬೇಕೆಂದೂ ಹೇಳಿದರು.

ರಾಜಕೀಯ ಅನಿಶ್ಚಿತತೆ

ಸುಮಾರು ಒಂದು ತಿಂಗಳ ಹಿಂದೆ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದ ಸಿಂಹಳದ ಪಾರ್ಲಿಮೆಂಟನ್ನು ಗವರ್ನರ ಜನರಲ್ ವಿಸರ್ಜಿಸಿದ್ದಾರೆ. ಗವರ್ನರ ಜನರಲ್ಲರ ಉದ್ಘಾಟನಾ ಭಾಷಣದ ಬಗ್ಗೆ ಧನ್ಯವಾದ ಸಮರ್ಪಿಸುವ ಶ್ರೀ ಡಡ್ಲಿ ಸೇನಾನಾಯಕೆಯವರ ಸರಕಾರದ ಮೊತ್ತಮೊದಲ ಗೊತ್ತುವಳಿಯೇ ಪ್ರಬಲ ಬಹುಮತದಿಂದ ಬಿದ್ದುಹೋದುದೇ ಇದಕ್ಕೆ ಕಾರಣವಾಗಿದೆ. ಮುಂದಿನ ಜುಲೈ ತಿಂಗಳಲ್ಲಿ ಮರು ಚುನಾವಣೆ ನಡೆದು, ಆಗಸ್ಟ ಐದರಂದು ಹೊಸ ಸರಕಾರ ಸ್ಥಾಪಿತವಾಗಲಿರುವುದೆಂದೂ ಅದುವರೆಗೆ ಸದ್ಯದ ಸೇನಾನಾಯಕೆಯವರ ಮಂತ್ರಿಮಂಡಳಿಯು ಮಧ್ಯಾವಧಿ ಸರಕಾರ ಕೆಲಸಗಳನ್ನು ನಿರ್ವಹಿಸುವುದೆಂದೂ ಗವರ್ನರ ಜನರಲ್ ಆದೇಶ

(೬ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿ ಸಾರ

ತೈಲ ಚಿತ್ರಗಳ ಅನಾವರಣ ಸಮಾರಂಭ:—ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನಿನ ಮಾಜಿ ಅಧ್ಯಕ್ಷ ದಿ. ಡಾ| ಯು. ಸುಂದರ ರಾವ್ ಪೈ, ಮತ್ತು ಮಾಜೀ ಡೈರೆಕ್ಟರ್ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈ ಇವರ ತೈಲ ಚಿತ್ರಗಳನ್ನು ಅನಾವರಣ ಮಾಡುವ ಸಮಾರಂಭವು ತಾ. 24ರಂದು ಬ್ಯಾಂಕಿನ ವಠಾರದಲ್ಲಿ ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಡೈರೆಕ್ಟರರಲ್ಲೊಬ್ಬರಾದ ಶ್ರೀ ಬಿ. ವಿ. ಬಾಳಿಗ ಎಂ. ಎಲ್. ಎ. ಇವರು ಸ್ವಾಗತ ಭಾಷಣಮಾಡಿ ದಿ. ಡಾ| ಪೈಗಳು ಮತ್ತು ಶ್ರೀ ಪದ್ಮನಾಭ ಪೈಗಳು ಬ್ಯಾಂಕಿನ ಪ್ರಗತಿಗಾಗಿ ಸಲ್ಲಿಸಿದ ಸೇವೆಯನ್ನೂ ಅವರ ಗುಣಾದರ್ಶಗಳನ್ನೂ ವಿವರಿಸಿದರು. ಕೆನರಾ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎ. ದಾಮೋದರ ಪೈಗಳು ಡಾ| ಪೈಗಳ ಮತ್ತು ಶ್ರೀ ಪೈಗಳ ಕಾರ್ಯದಕ್ಷತೆಯನ್ನು ಕೊಂಡಾಡಿ ಶ್ರೀ ಕೆ. ವಾಸುದೇವ ನಾಯ್ಕರು ಚಿತ್ರಿಸಿದ ತೈಲಚಿತ್ರಗಳನ್ನು ಅನಾವರಣ ಮಾಡಿದರು. ಶ್ರೀ ಬಿ. ಶೀನಪ್ಪ ಹೆಗ್ಡೇರೂ, ಶ್ರೀ ಜೆ. ಸಿ. ರೇಗೋರವರೂ ಅತಿಥಿಗಳ ಪರವಾಗಿ ಸಂದರ್ಭೋಚಿತ ಭಾಷಣವಿತ್ತರು. ಅಧ್ಯಕ್ಷ ಡಾ| ಪೈಗಳು ದಿ. ಡಾ| ಸುಂದರ ರಾವ್ ಪೈಗಳೂ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳೂ ಬ್ಯಾಂಕಿಂಗ್, ಇನ್ಶೂರೆನ್ಸ್, ವಿದ್ಯಾಕ್ಷೇತ್ರಗಳಲ್ಲಿ ಸಾಧಿಸಿದ ಕೆಲಸಗಳನ್ನೂ ಆಧುನಿಕ ಉಡುಪಿಯ ನಿರ್ಮಾಣಕ್ಕಾಗಿ ಸಲ್ಲಿಸಿದ ಸೇವೆಯನ್ನೂ ವಿವರಿಸಿ ಭಾಷಣ ಮಾಡಿದರು. ಕೊನೆಗೆ ಡೈರೆಕ್ಟರರಲ್ಲೊಬ್ಬರಾದ ಶ್ರೀ ಬಿ. ಅನಂದ ಮಲ್ಯರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಜನರಲ್ ಮೆನೇಜರ್ ಶ್ರೀ ವಿ. ಆರ್. ಕಾಮತರು ಸಂದೇಶಗಳನ್ನೋದಿದರು.

ಯುವಕ ಕಾಂಗ್ರೆಸಿನ ವಾರ್ಷಿಕೋತ್ಸವ—ಮಂಗಳೂರು ಯುವಕ ಕಾಂಗ್ರೆಸ್ಸಿನ ವಾರ್ಷಿಕೋತ್ಸವವು ತಾ. 24ರಲ್ಲಿ ಕೇಂದ್ರ ಮೈದಾನಿನಲ್ಲಿ ಮೈಸೂರಿನ ಮಾಜಿ ಗೃಹಮಂತ್ರಿ ಶ್ರೀ ಎಂ. ವಿ. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಉತ್ಸವದ ಉದ್ಘಾಟನೆಗೈದರು. ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಅವರು ಸ್ವಾಗತಿಸಿದ ಮೇಲೆ ಶ್ರೀ ಜಯಾನಂದ ದೇವಾಡಿಗರು ವರದಿಯನ್ನೋದಿದರು. ಶ್ರೀಗಳಾದ ಎಂ. ರಘುನಾಥ, ಬಿ. ಬಿ ಶೆಟ್ಟಿ, ಎಸ್. ಎನ್. ಪೊಳ್ಯ, ಮೊದಲಾದವರ ಭಾಷಣವಾದ ಮೇಲೆ ಜಿಲ್ಲಾ ಕಾಂಗ್ರೆಸಿನ ಸಂಘಟನಾ ಕಾರ್ಯದರ್ಶಿ ಶ್ರೀ ನಾರಾಯಣ ನಾಯ್ಕರು ಧನ್ಯವಾದಗಳನ್ನಿತ್ತರು.

ಡಾ| ಮಥಾಯಿಯವರಿಗೆ ಸತ್ಕಾರ

ನವದೆಹಲಿಯ ಯುನಿವರ್ಸಿಟಿ ಗ್ರಾಂಟ್ ಕಮಿಶನಿನ ಕಾರ್ಯದರ್ಶಿಗಳಾದ ಪ್ರೊ| ಸಾಮುವೇಲ್ ಮಥಾಯಿಯವರು ತಾ. 20ರಂದು ಉಡುಪಿಗೆ ಆಗಮಿಸಿ ಇಲ್ಲಿಯ ಕಾಲೇಜುಗಳನ್ನು ಸಂದರ್ಶಿಸಿದರು. ತಾ. 21ರಂದು ಎಂ. ಜಿ. ಎಂ. ಕಾಲೇಜಿನಲ್ಲಿ ಇವರಿಗೆ ಉಪಾಹಾರ ಸತ್ಕಾರ ನಡೆಯಿತು. ಶ್ರೀ ಟಿ ಎ. ಪೈಗಳು ಸ್ವಾಗತಿಸಿದರು. ಪ್ರೊ. ಮಥಾಯಿಯವರು ಭಾಷಣವಿತ್ತ ಬಳಿಕ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಧನ್ಯವಾದಗಳನ್ನಿತ್ತರು.

ಬಹು ಎವಾರ್ಡುಗಳು—ಸ್ಥಳೀಯ ಗವರ್ನ್‌ಮೆಂಟ್ ಫಿಶರೀಸ್ ಹಾ ಎ. ಶಾಲಾ ವರ್ಧಂತ್ಯುತ್ಸವವು ತಾ 20ರಂದು ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಡಾ| ಎಂ. ರಾಯಪ್ಪ ಕಾಮತರು ಬಹುಮಾನ ವಿತರಣೆ ಮಾಡಿದರು.

ಸುಬ್ರಹ್ಮಣ್ಯ—ಸುಬ್ರಹ್ಮಣ್ಯ ಮಠದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ. 5—5—60 ರಿಂದ ತಾ 12—5—60ರ ವರೆಗೆ ಜರಗಲಿರುವುದು.

ಪುತ್ತೂರು—ಉಡುಪಿ ಸಮೀಪದ ಪುತ್ತೂರು ಸರಕಾರೀ ಹರಿಜನ ವೆಲ್‌ಫೇರ್ ಕಿರಿಯ ಬುನಾದಿ ಶಾಲೆಯ ವರ್ಧಂತ್ಯುತ್ಸವವು ತಾ. 19ರಂದು ಕುಂದಾಪುರ ಅಸಿಸ್ಟೆಂಟ್ ಕಮಿಶನರ್ ಶ್ರೀ ಕೆ. ನರಸಿಂಹ ಮೂರ್ತಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಹನುಮಾಚಾರ್ಯರಿಂದ ಶಾಲಾ ಮಕ್ಕಳಿಗೆ ಉಡುಪು ವಿತರಣೆಯಾಯಿತು. ಶ್ರೀಗಳಾದ ಎಸ್. ಸದಾಶಿವ ರಾವ್, ರೈಮಂಡ್ ಮಾರ್ಟಿಸ್, ಬನ್ನಂಜೆ ರಾಮಾಚಾರ್ಯ ಇವರ ಭಾಷಣವಾದ ಮೇಲೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಭಾಷಣವಿತ್ತರು.

ಅಂಬಲಪಾಡಿ— ಸ್ಥಳೀಯ ಕಿರಿಯ ಬುನಾದಿ ಶಾಲೆಯ ವರ್ಧಂತಿಯು ತಾ. 12 ರಲ್ಲಿ ಶ್ರೀ ಎ. ಜೆ. ಆಲ್ಸೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ವ್ಯವಸ್ಥಾಪಕ ಶ್ರೀ ಕೆ. ಮುಖ್ಯಪ್ರಾಣ ಉಪಾಧ್ಯಾಯರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ರಾಮಚಂದ್ರ ರಾಯರು ವರದಿಯನ್ನೋದಿದರು. ಶ್ರೀ ಎಸ್. ಕೆ. ಆಚಾರ್ಯರು ಸ್ವಸ್ತಿವಾಚನ ಮಾಡಿದರು. ಶ್ರೀ ಕೆ. ರಾಮ ಭಟ್ಟರು ಪೂಜಾರಿ ವೇತನ ಮತ್ತು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮನರಂಜನೆಯ ಕಾರ್ಯಕ್ರಮಗಳಾದುವು. ಶ್ರೀ ಎ. ರಾಘವೇಂದ್ರ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು. ಬೆಳಿಗ್ಗೆ ಮುನ್ಸಿಪಲ್ ಕೌನ್ಸಿಲರ್ ಶ್ರೀ ಇರವಿನ್ ಆಂದ್ರಾದೆಯವರು ಧ್ವಜಾರೋಹಣ ಮಾಡಿದ್ದರು.

"ರಾಜಾಪುರ ಸಾರಸ್ವತ ಸಂಘ", ಮುಂಬಾಯಿ – ಇದರ ಮಹಾಸಭೆಯು ತಾ. 5–4–60 ರಲ್ಲಿ ಶ್ರೀ ಕೆ. ವಿ. ನಾಯಕ್, ಬಿ. ಎ., ಬಿ. ಕೋಮ್. ಇವರ ಅಧ್ಯಕ್ಷತೆಯಲ್ಲಿ ಫೋರ್ಬಸ್ ಹೋಲಿನಲ್ಲಿ ಯಶಸ್ವಿಯಾಗಿ ಜರಗಿತು. ಗೌ. ಕಾರ್ಯದರ್ಶಿ ಶ್ರೀ ಡಿ. ಡಿ ಪ್ರಭುಗಳವರಿಂದ ಗತವರ್ಷದ ವರದಿ ವಾಚನವಾದ ಬಳಿಕ ಗೌ. ಕೋಶಾಧಿಕಾರಿ ಶ್ರೀ ಯಸ್. ಯಸ್. ನಾಯಕ್‌ರವರು ಸಂಘದ ಲೆಖ್ಖಪತ್ರಗಳನ್ನು ಸಭೆಯ ಮುಂದಿಟ್ಟು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ವರ್ಷಂಪ್ರತಿ ಕೊಡುವ ವಿದ್ಯಾರ್ಥಿ ವೇತನದ ಬಗ್ಗೆ ಚರ್ಚೆ ನಡೆದು ಕೋಲೇಜುಗಳಲ್ಲಿ ಅಭ್ಯಸಿಸುತ್ತಿರುವ ಸಮಾಜದ ಬಡ ವಿದ್ಯಾರ್ಥಿಗಳಿಗೆ ಮತ್ತು ಹೈಸ್ಕೂಲಿನ 9, 10, 11 ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೈಕಿ ಕೇವಲ ಮುಂಬಯಿಯಿಂದ ಕಾಲಕ್ಷೇಪ ಮಾಡುತ್ತಿರುವವರ ಮಕ್ಕಳಿಗೆ ಮಾತ್ರ ವಿದ್ಯಾರ್ಥಿ ವೇತನವನ್ನು ಮರುಪಾವತಿ ಶರ್ತದ ಮೇರೆಗೆ ಕೊಡಬೇಕಾಗಿಯೂ ಮತ್ತು ಹೈಸ್ಕೂಲಿನ 9, 10, 11 ಈ ತರಗತಿಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿನಿಯರಿಂದ ಬಂದ ಅರ್ಜಿಗಳ ಪೈಕಿ ಅತಿ ಹೆಚ್ಚು ಗುಣಗಳನ್ನು ಪಡೆದು ಉತ್ತೀರ್ಣರಾದ ಮೂವರಿಗೆ ಧರ್ಮಾರ್ಥ ವಿದ್ಯಾರ್ಥಿವೇತನವನ್ನು ಕೊಡಬೇಕಾಗಿಯೂ, ಕೆ. ನೀರೆ ಶ್ಯಾಮ ನಾಯಕ್‌ರವರ ಸ್ಮರಣಾರ್ಥವಾಗಿ ಸಂಗ್ರಹಿಸಲ್ಪಟ್ಟ ನಿಧಿಯಿಂದ ದೊರೆಯುವ ಬಡ್ಡಿಯ ಹಣವನ್ನು ಸಮಾಜಸ್ಥರಿಂದ ಸಂಸ್ಕೃತ, ಪೌರೋಹಿತ್ಯ ಯಾ ಜೋತಿಷ್ಯವನ್ನು ಕಲಿಯುವರೆ ಧನಸಹಾಯಕ್ಕಾಗಿ ಬರುವ ಅರ್ಜಿಗಳ ಪೈಕಿ ಯೋಗ್ಯರೆಂದು ಕಂಡುಬಂದವರಿಗೆ ಕೊಡಬೇಕಾಗಿಯೂ ಇದಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳು ಜುಲಾಯಿ 15 ರ ವಳಗೆ ಶಿಫಾರಸು ಪತ್ರಗಳಿಂದೊಡಗೂಡಿದ ತಮ್ಮ ಅರ್ಜಿಗಳನ್ನು ಸಂಘದ ಕಾರ್ಯಾಲಯಕ್ಕೆ ತಲಪುವಂತೆ ರವಾನಿಸಬೇಕಾಗಿಯೂ ನಿಶ್ಚಯಿಸಲಾಯಿತು.

(೫ನೇ ಪುಟದಿಂದ)

ವಿತ್ತಿದ್ದಾರೆ. ಈ ಘಟನೆಯಿಂದಾಗಿ, ಸಿಂಹಳದ ರಾಜಕೀಯ ಕ್ಷೇತ್ರದಲ್ಲಿ ಪುನಃ ಅನಿಶ್ಚಿತತೆ ಪ್ರಕಟವಾಯಿತು. ಶ್ರೀ ಸೇನಾನಾಯಕೆ ಮುಂದಿನ ಜೂನ್‌ನಲ್ಲಿ ಸೇರಲಿರುವ ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿನಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಯುತ್ತದೆ.

ಪ್ರಾಯೋಗಿಕ ಕೇಂದ್ರಗಳು

ಭಾರತದಲ್ಲಿ ಪ್ರಾಣಿಜನ್ಯ ಅನಿಲ ಹಾಗೂ ಗೊಬ್ಬರಗಳನ್ನು ಉತ್ಪಾದಿಸುವ ಕಾರಖಾನೆಗಳನ್ನು ಸ್ಥಾಪಿಸುವ ಬಗ್ಗೆ ಭಾರತ ಸರಕಾರವು ಹಂಗೆರಿಯ ರಾಸಾಯನಿಕ ವಸ್ತುಗಳ ವಿದೇಶ ವ್ಯಾಪಾರೀ ಸಂಸ್ಥೆಯ ಕೆಮೊಲಿ ಪೆಕ್ಸ್ ನೊಡನೆ ಒಂ... ಒಪ್ಪಂದವನ್ನು ಮಾಡಿಕೊಂಡಿತು. ಈ ಒಪ್ಪಂದದನ್ವಯ ಭಾರತಕ್ಕೆ ... ರಖಾನೆಗಳನ್ನು ಸ್ಥಾಪಿಸಲು ಅದು ತಾಂತ್ರಿಕ ಮಾಹಿತಿ ಮತ್ತು ನಕ್ಷೆಗಳನ್ನು ... ಗಿಸುವುದಲ್ಲದೇ ಸಾಕಷ್ಟು ತಾಂತ್ರಿಕ ... ಬ್ಬಂದಿಯನ್ನೂ ಕೊಡುವುದು. ಪ್ರಾರಂ... ದಲ್ಲಿ ಈ ಬಗ್ಗೆ ಪ್ರಾಯೋಗಿಕ ಕೇಂದ್ರ... ನ್ನು ಕಾನಪುರ ರಾಷ್ಟ್ರೀಯ ಸಕ್ಕರೆ ... ಸ್ಥೆ ಮತ್ತು ಡಿಲ್ಲಿಯ ಒಕ್ಕಲತನ ಸಂಶೋ... ಧನಾ ಸಂಸ್ಥೆಗಳಲ್ಲಿ ಸ್ಥಾಪಿಸಲಾಗುವು... ಈ ಕೇಂದ್ರಗಳು ಯಶಸ್ವಿಯಾದರೆ ಇಂ... ಹ ಇತರ ಕಾರಖಾನೆಗಳನ್ನು ಸ್ಥಾಪಿಸ... ಯೋಜನೆಯಿದೆ.

ಜಿಲ್ಲಾ ಕಾಂಗ್ರೆಸ್ಸಿನ ಹೊಸ ಕಾರ್ಯಕಾರೀ ಸಮಿತಿ— ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಹೊಸ ಕಾರ್ಯಕಾರೀ ಸಮಿತಿಗೆ ಈ ಕೆಳಗಿನಂತೆ ನೇಮಕ ಮಾಡಿರುವರು—

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. (ಉಪಾಧ್ಯಕ್ಷ), ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಯೋಜನೆ ಮತ್ತು ಅಭಿವೃದ್ಧಿ ಕಾರ್ಯದರ್ಶಿ), ಶ್ರೀ ಬಿ ನಾರಾಯಣ ನಾಯಕ (ಸಂಘಟನಾ ಕಾರ್ಯದರ್ಶಿ) ಮತ್ತು ಶ್ರೀ ರಾಮನಾಥ (ಆಫೀಸು ಕಾರ್ಯದರ್ಶಿ).

ಕಾರ್ಯಕಾರೀ ಸಮಿತಿಯ ಸದಸ್ಯರು — ಶ್ರೀಗಳಾದ ಎ. ಶಂಕರ ಆಳ್ವ, ಮಣೇಲ ಶ್ರೀನಿವಾಸ ನಾಯಕ್, ಎಸ್. ಎಸ್. ಕೊಳ್ಕೆಬೈಲ್, ಅಳಂಗಾರ್ ನಾರಾಯಣ ಹೆಗ್ಡೆ, ಕೆ. ದೂಮಪ್ಪ ಎಂ ಎಲ್. ಎ., ಎಸ್. ಡಿ. ಸಾಮ್ರಾಜ್ಯ, ಮೂಡಬಿದ್ರೆ, ವಿಟ್ಠಲ್‌ದಾಸ್ ಶೆಟ್ಟಿ, ವಿಟ್ಲ ಮತ್ತು ಕೇಶವ ಕುಡ್ವಾ, ಪಾಣೆ ಮಂಗಳೂರು.

ಶ್ರೀಮತಿ ಒಕ್ಲೇವಿಯಾ ಅಲ್ಬುಕರ್ಕರನ್ನು ಕೋಶಾಧಿಕಾರಿ ಮತ್ತು ಮಹಿಳಾವಿಭಾಗದ ಕಾರ್ಯದರ್ಶಿಯಾಗಿಯೂ, ಶ್ರೀ ರಾಮರಾಜ ಕಿಣಿಯವರನ್ನು ಯುವಕ ಕಾಂಗ್ರೆಸ್ಸಿನ ಸಂಘಟಕರಾಗಿ ಕಾರ್ಯಕಾರೀ ಸಮಿತಿಯಲ್ಲಿ ಸೇರಿಸಲು ನಿಶ್ಚೈಸಲಾಗಿದೆ.

ಈ ಕೆಳಗಿನವರು ಕಾರ್ಯಕಾರೀ ಸಮಿತಿ ಸಭೆಗಳಿಗೆ ಖಾಯಂ ಆಮಂತ್ರಿತರಾಗಿರುವರು.

ಶ್ರೀಗಳಾದ ರಾಮರಾಜ ಕಿಣಿ, ಜಯಾನಂದ ದೇವಾಡಿಗ, ಸಂಜೀವ ಬಂಗೇರ, ಜನಾರ್ಧನ ಶೆಟ್ಟಿ, ಬಂಟ್ವಾಳ, ರಾಮ ಕೋಟ್ಯಾನ್, ಬಿ. ಮಾಧವ ಸುವರ್ಣ, ಶ್ರೀಮತಿ ಸಂಜೀವಿ ಬೋಳಾರ್, ಶ್ರೀಮತಿ ಲೀಲಾಬಾಯಿ ಬಾಳಿಗ, ಶ್ರೀಮತಿ ಒಕ್ಲೇವಿಯಾ ಅಲ್ಬುಕರ್ಕ, ಎಚ್. ಕೆ. ತಿಂಗಳಾಯ, ಡಾ. ಎಂ. ಎಂ. ಸಾಲಿ, ಎಚ್. ಸಿ. ಸೋಮಸುಂದರ್, ಜೆ. ಎ. ಬ್ರಿಟೊ, ಸಿ. ಎಫ್. ರೊಡ್ರಿಗಸ್, ವೈ. ಸಂಜೀವ ಶೆಣೈ ಪುತ್ತೂರು, ಆನಂದ ರೈ ಪಾಣೆಮಂಗಳೂರು, ಶ್ರೀಮತಿ ಮನೋರಮಾ ಸಂಪಿಗೆತ್ತಾಯ ಕಾರ್ಕಳ, ಶ್ರೀಮತಿ ಮನೋರಮಾ ಮಧ್ವರಾಜ್ ಮಲ್ಪೆ, ಶ್ರೀಮತಿ ನಾರಾಯಣ ರಾವ್ ಕುಂದಾಪುರ, ಶ್ರೀಮತಿ ದೇವಕಿ ಕೆ. ಸಾಲಿಯಾನ್, ಟಿ. ಎಂ. ಸೋನ್ಸ್ ಉಚ್ಚಿಲ, ಸುಬ್ರಹ್ಮಣ್ಯ ಗೌಡ ಪುತ್ತೂರು, ವೈ. ಲಕ್ಷ್ಮಣ ಎಮರ್ಸನ್ ಮತ್ತು ಶ್ರೀ ಪಿ. ಆನಂದ ಬೆಳ್ವಾರೆ.

ಕೇಂದ್ರ ಸರಕಾರದ ಮನ್ನಣೆ

ಬೆಂಗಳೂರಿನ ಮೈಸೂರು ಹಿಂದೀ ... ಚಾರ ಪರಿಷತ್ತು ನಡೆಸುತ್ತಿರುವ 'ಪ್ರ... ಶ' ಪರೀಕ್ಷೆಯು ಮೆಟ್ರಿಕ್ಕಿಗೂ 'ಉ... ಮಾ'ವು ಇಂಟರಿಗೂ 'ಹಿಂದೀ ರತ್ನ'... ಬಿ. ಎ. ಗೂ ಸರಿಸಮವೆಂದು, ಮದ್ರಾ... ನ ದಕ್ಷಿಣ ಭಾರತ ಹಿಂದೀ ಪ್ರಚಾರ ... ಭೆಯವರ 'ಪ್ರವೇಶಿಕಾ'ವು ಮೆಟ್ರಿಕ್ಕಿಗ... 'ವಿಶಾರದ'ವು ಇಂಟರಕ್ಕೂ 'ಪ್ರವೀ... ವು ಬಿ. ಎ. ಗೂ ಸರಿಸಮವೆಂದು ಕೇ... ದ್ರ ಸರಕಾರವು ಮನ್ನಿಸಿದೆ. ಮೈಸೂ... ಹಿಂದೀ ಪ್ರಚಾರ ಪರಿಷತ್ತಿಗಿತ್ತ ಮನ್ನ... ಯು ೧೯೬೩ರ ವರೆಗೂ ದ. ಭಾ. ಹಿ... ದೀ ಪ್ರಚಾರ ಸಭೆಗಿತ್ತ ಮನ್ನಣೆಯ... ೧೯೬೦ರ ವರೆಗೂ ಊರ್ಜಿತವಾಗಿರುವುದು. ಕೇ... ದ್ರ ಹಿಂದೀ ಶಿಕ್ಷಾ ಸಮಿತಿಯ ಸಲ... ಹೆಯಂತೆ ಕೇಂದ್ರ ಸರಕಾರವು ಈ ಮನ್ನ... ಣೆಯನ್ನು ನೀಡಿದೆ.

ಕರಗಳಿಂದ ಮುಕ್ತತೆ

ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪ... ೧೯೬೦-೬೧ರ ಮುಂಗಡಪತ್ರದ ಮೇ... ನಡೆದ ಚರ್ಚೆ ಮತ್ತು ಸದಸ್... ಅಭಿಪ್ರಾಯಗಳಿಗೆ ಮನ್ನಣೆಯಿತ್ತು... ರ್ಥಮಂತ್ರಿ ಶ್ರೀ ಮುರಾರ್ಜಿ ದೇಸಾ... ಯವರು ಕರಾಕರಣೆಯಲ್ಲಿ ಕೆಲವೊಂ... ರಿಯಾಯಿತಿಯನ್ನು ಒದಗಿಸಿರುವರು. ... ಬದಲಾವಣೆಯಿಂದ ಆದಾಯಕ್ಕೆ ಹೆ... ಹೆಚ್ಚಿನ ಕೊರತೆಯಾಗುವುದಿಲ್ಲವೆಂದು ... ಳಲಾಗಿದೆ. ಸೈಕಲ್, ಫ್ರೀವೀಲ್, ರಿ... ಕೆಲವೊಂದು ತರದ ಇಲೆಕ್ಟ್ರಿಕ್ ಮೋ... ಟಾರುಗಳ ಮೇಲೆ ಪಾಕ್ಷಿಕವಾಗಿಯ... ಒಕ್ಕಲುತನಕ್ಕೆ ಉಪಯೋಗಿಸುವ ಟ್... ಕ್ಟರುಗಳನ್ನು ಸಂಪೂರ್ಣವಾಗಿಯೂ ... ರಿದ ಆಬಕಾರಿ ಸುಂಕದಿಂದ ಮುಕ್ತ... ಳಿಸಲಾಗುವುದು. ಅಲ್ಲದೇ ಇನ್ನೂ ಕೆ... ವೊಂದು ಬಗೆಯ ಸೌಲಭ್ಯಗಳು ದೊ... ತಿವೆ.

ಗಾಂಧೀ ಜೀವನದ ಅಧ್ಯಯನ

ಮೈಸೂರಿನ ಕಂದಾಯ ಶಾಖಾ ಮ... ತ್ರಿ ಶ್ರೀ ಕಡಿದಾಳ ಮಂಜಪ್ಪನವ... ಪ್ರಾಥಮಿಕ ಮತ್ತು ಪ್ರೌಢ ಶಾಲೆಗ... ಗಾಂಧೀ ಜೀವನ ಚರಿತ್ರೆಯನ್ನು ಖ... ಯವಾಗಿ ಪಠ್ಯಪುಸ್ತಕವಾಗಿರುವಂತೆ ... ಮ ಮಾಡಬೇಕೆಂದು ಶಿಕ್ಷಣವೇತ್ತ... ಮನವಿ ಮಾಡಿರುವರು.

ಮೈಸೂರು ವಿಧಾನ ಪರಿಷತ್ತು ಚುನಾವಣೆ

ದಕ್ಷಿಣ ಕನ್ನಡ, ಶಿವಮೊಗ್ಗ ಚಿಕಮಗಳೂರು, ಚಿತ್ರದುರ್ಗ ಈ 4 ಜಿಲ್ಲೆಗಳ
ಸ್ಥಳೀಯ ಆಡಳಿತ ಸಂಸ್ಥೆಗಳಿಂದ ತಾ. 1—5—60ರಂದು
ಚುನಾವಣೆಯಾಗತಕ್ಕ ಸ್ಥಾನಕ್ಕೆ ಕೊಂಗ್ರೆಸ್ ಪಕ್ಷವು

ಶ್ರೀ ಯಸ್. ನರ್ಸಪ್ಪಯ್ಯ, ಬಿ.ಎ, ಬಿ.ಎಲ್., ಎಂ.ಎಲ್.ಸಿ.

ಇವರನ್ನು ಉಮೇದ್ವಾರರಾಗಿ ನಿಲ್ಲಿಸಿರುತ್ತದೆ. ಸ್ಥಳೀಯ ಆಡಳಿತ ಸಂಸ್ಥೆಗಳ
ಸದಸ್ಯರಾದ ಎಲ್ಲಾ ಮತದಾರರು, ದಯವಿಟ್ಟು
ಕೊಂಗ್ರೆಸ್ ಹುರಿಯಾಳಾದ ಶ್ರೀ ಯಸ್. ನರ್ಸಪ್ಪಯ್ಯನವರಿಗೆ
ಮತಕೊಟ್ಟು ಅವರನ್ನು ಪ್ರಚಂಡ ಬಹುಮತದಿಂದ
ಆರಿಸಬೇಕಾಗಿ ವಿನಂತಿ.

ನವಯುಗ ವಾರ ಪತ್ರಿಕೆ...
ಚಂದಾದಾರರಾಗಿ ಪ್ರೋತ್ಸಾಹ...

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ವೆಂದು ಊಹಿಸಲಾಗಿದೆ. ಚೀನದೊಡನೆ ನಡೆಸುವ ಪ್ರಚಲಿತ ಚರ್ಚೆಯು ಸಫಲವಾಗದೆ ಹೋದರೆ, ಮುಂದೇನು ಮಾಡಬೇಕು, ಯಾವರೀತಿ ನಮ್ಮ ನ್ಯಾಯವನ್ನು ನಾವು ಪಡೆಯಬೇಕು ಎಂಬುದನ್ನು ಮಂತ್ರಿಮಂಡಳಿಯು ಸಾಮೂಹಿಕ ಉತ್ತರದಾಯಿತ್ವದಲ್ಲಿ ನಿರ್ಣಯಿಸಬೇಕಾಗಿರುವುದರಿಂದ, ಇದೇನೂ ಅವ್ಯವಹಾರ್ಯವೆನ್ನಬರುವಂತಿಲ್ಲ. ಹಾಗೆಂದೇ ಸಂರಕ್ಷಣಾ ಮಂತ್ರಿ ಕೃಷ್ಣಮೆನನ್, ಗನಿ, ಉರುವಲು ಶಾಖೆಯ ಮಂತ್ರಿ ಸರ್ದಾರ ಸ್ವರಣ ಸಿಂಗ, ಅರ್ಥಮಂತ್ರಿ ಮುರಾರ್ಜಿ ದೇಸಾಯಿ ಮೊದಲಾದವರು ಪ್ರತಿಪ್ರತ್ಯೇಕವಾಗಿ ಔಪಚಾರಿಕವಾಗಿ ಮಾತುಕತೆ ನಡೆಸಿದರು. ಆದರೂ ಈ ಭೆಟ್ಟಿಯ ಫಲಶ್ರುತಿಯು ಏನೆಂದು ಈಗಲೇ ಹೇಳುವಂತಿಲ್ಲ.

ಶ್ರೀ ಚೌ ಎನ್ ಲಾಯ್ ಅವರು ಸದ್ಯದ ಸಂದರ್ಶನದ ಮೊದಲ ಭಾಷಣದಲ್ಲಿ ತಾನು ಪಂಚಶೀಲ ತತ್ವಗಳಿಗನುಗುಣವಾಗಿ ಎರಡುದೊಡ್ಡ ಏಶ್ಯನ್ ರಾಷ್ಟ್ರಗಳ ನಡುವೆ ಉದ್ಭೂತವಾಗಿರುವ ಸಮಸ್ಯೆಗೆ ಏನಾದರೂ ಪರಿಹಾರ ಕಂಡುಹಿಡಿಯುವ ಆಶೆಯಿಂದಲೇ ಬಂದುದಾಗಿ ತಿಳಿಸಿದ್ದಾರೆ ಎಂಬುದೇನೋ ನಿಜವೇ; ಆದರೆ, ನಡೆದ ಚರ್ಚೆಯ ಪರಿಣಾಮವನ್ನು ಕಾಣುವಾಗ, ಸಮಸ್ಯಾಪರಿಹಾರಕ್ಕಾಗಿ, ಇಲ್ಲಿಗೆ ಅವರು ಬಂದಿರುವರೇ ಅಥವಾ ತಾವು ಮಾತುಕತೆಗೆ ಒಪ್ಪಿದೆವು ಎಂದು ಹೇಳಿಸಿಕೊಳ್ಳುವುದಕ್ಕಾಗಿ ಮಾತ್ರ ಸಮಾಗಮಿಸಿರುವರೇ ಎಂಬ ಸಂದೇಹ ಬಲವತ್ತರವಾಗುತ್ತಿದೆ. ಅದೇನೇ ಇದ್ದರೂ ಭಾರತೀಯರು ಶಾಂತ ವಿಧಾನಗಳಿಂದಲೇ ಅವರನ್ನು ಸ್ವಾಗತಿಸಿದರು; ಶಾಂತರೂಪವಾದ ಮತಪ್ರದರ್ಶನವೊಂದನ್ನುಳಿದರೆ, ಮತ್ತಾವ ದುರ್ಘಟನೆಯೂ ಸಂಭವಿಸಲಿಲ್ಲ ಎಂಬುದೊಂದು ಮಾತ್ರ ಸಂತೋಷ. ಭಾರತೀಯರ ಜನಮತವನ್ನು ಅನುಲಕ್ಷಿಸಿಯೇ ಸದ್ಯ ಅವರಿಗಿತ್ತ ಸ್ವಾಗತವಾದರೂ ವಿಶೇಷ ವಿಜೃಂಭಣೆಯಿಂದ ಕೂಡಿರದೆ ಸೌಮ್ಯವಾಗಿತ್ತು ಎಂದು ತಿಳಿಯುತ್ತದೆ. ಅವರನ್ನು ಸ್ವಾಗತಿಸುವಾಗಲಾದರೂ ಭಾರತೀಯರ ಜನಮತ ಯಾವರೀತಿಯಿದೆ ಎಂಬುದನ್ನು ಅಲ್ಲಿ ನೆರೆದಿದ್ದ ಭಾರತೀಯ ಮುಖಗಳೇ ಪ್ರದರ್ಶಿಸಿರಬೇಕು. ಆದರೂ ತನ್ನ ವ್ಯರ್ಥಾಭಿಮಾನವನ್ನು ಮುಂದಿಟ್ಟು 'ತಾನು ಹಿಡಿದದ್ದೇ ಬಡಿಗೆ' ಎನ್ನುವ ಹವ್ಯಾಸವನ್ನು ಚೀನವು ಬಿಟ್ಟುಕೊಡಲು ಸಿದ್ಧವಿಲ್ಲ ಎಂಬ ಬಗ್ಗೆ ವ್ಯಥೆಯೆನಿಸುತ್ತದೆ.

ಭಾರತ ಮತ್ತು ಚೀನಗಳ ಸಂಬಂಧವು ಪ್ರಾಗೈತಿಹಾಸಿಕ ಕಾಲದಿಂದಲೂ ಇತ್ತು. ಆದರೆ, ಸದ್ಯದ ವಿವಾದದಿಂದ ಮಾತ್ರ ಅದು ಕೆಡಲು ಆರಂಭವಾಗಿದೆ. ಪ್ರಪಂಚದ ಬಹು ದೊಡ್ಡ ಪ್ರಮಾಣದ ಜನಮತವನ್ನು ಪಡೆದಿರುವ ಈ ಉಭಯ ರಾಷ್ಟ್ರಗಳು ಮುಂದೆಯೂ ಸ್ನೇಹ, ಸೌಹಾರ್ದಮಯ ವಾತಾವರಣದಲ್ಲಿ ಮುಂದುವರಿಯುವುದರಿಂದ ದೇಶಗಳಿಗೆ ಮಾತ್ರವಲ್ಲ, ವಿಶ್ವಕಲ್ಯಾಣಕ್ಕೂ ಶುಭಪ್ರದವಾಗಿದೆ. ಎಂತಲೇ ಈ ವಿವಾದವು ಶೀಘ್ರದಲ್ಲಿ ಬಗೆಹರಿಸಬೇಕು ಎಂದು ವಿಶ್ವದ ವಿವಿಧ ರಾಷ್ಟ್ರಗಳ ಅಭಿಪ್ರಾಯವಿದೆ. ಆದರೆ, ಈ ಆಶೆಯು ಈಡೇರುವ ಬದಲು ಪ್ರಶ್ನೆಯ ಮೇಲೆ ಕಾರ್ಮೋಡವು ಆಚ್ಛಾದಿತವಾಗಿರುವುದನ್ನು ಕಾಣುವಾಗ ನಿರಾಸೆಯೇ ಸ್ಫುಟವಾಗಿ ತೋರುತ್ತದೆ. ಇಂತಹ ಕರ್ತೀಕ್ರಮುಖ ಸ್ಥಿತಿಯಿಂದ ಬಿಡುಗಡೆಯೆಂಬುದೇ ಇಲ್ಲವೆ? "ವಿನಾಶಕಾಲೇ ವಿಪರೀತ ಬುದ್ಧಿಃ" ಮತ್ತು "ಸತ್ಯಕ್ಕೆ ಉಳಿಗಾಲವಿಲ್ಲ; ಇದು ಕಲಿಕಾಲ" ಎಂಬೆರಡು ವಾದಗಳಲ್ಲಿ ಯಾವುದು ಮೇಲಾಗುವುದು?

ನವದೆಹಲಿಯ ರಾಜಪಥದಲ್ಲಿ ಪ್ರಜಾಪ್ರಭುತ್ವದಿನಾಚರಣೆಯಂದು ಶಾಲಾವಿದ್ಯಾರ್ಥಿಗಳು ಪಥಃಚಲನ ಮಾಡಿದ ದೃಶ್ಯವಿದು

ವ್ಯಕ್ತಿ ಪರಿಚಯ

(೪ನೇ ಪುಟದಿಂದ)

ಒಂದು ಸಂಸ್ಥೆ ಸ್ಥಾಪಿತವಾಗಬೇಕು ಎಂದವರ ಅಭಿಪ್ರಾಯವಾಗಿತ್ತು. ೧೯೪೮ರಲ್ಲಿ ಪ್ರಪಂಚದ ಬುದ್ಧಿಜೀವಿಗಳಿಗೆಲ್ಲಾ ಇದೇ ಸೂಚನೆಯನ್ನು ತುಸು ಒತ್ತಾಯಪೂರ್ವಕವಾಗಿ ಇತ್ತಿದ್ದರು.

ದ್ವಿತೀಯ ಲೋಕಯುದ್ಧದಲ್ಲಿಯೇ ಪರಮಾಣು ಬಾಂಬು ಪ್ರಯೋಗಿಸಲ್ಪಟ್ಟರೆ, ಮೂರನೆಯ ಯುದ್ಧದಲ್ಲಿ ಎಂತಹ ಅಸ್ತ್ರಗಳು ಉಪಯೋಗಿಸಲ್ಪಡುವುವು ಎಂದು ಯಾರೋ ಒಬ್ಬರು ಆಯಿನ್‌ಸ್ಟೀನರನ್ನು ಕೇಳಿದ್ದರು.

ಆಗ ಅವರು ಉತ್ತರಿಸಿದ್ದರು- "ಮೂರನೆಯ ಯುದ್ಧದ ವಿಷಯದಲ್ಲಿ ಏನನ್ನೂ ಹೇಳುವುದು ಸಾಧ್ಯವಿಲ್ಲ; ಆದರೆ, ನಾಲ್ಕನೆಯುದರಲ್ಲಿ ಮಾತ್ರ ಕಲ್ಲುಗಳನ್ನು ಎಸೆದುಕೊಂಡೇ ಯುದ್ಧ ನಡೆಯುವುದು'

ಮಹಾತ್ಮಾ ಗಾಂಧಿಯವರ ಪಾಶ್ಚಾತ್ಯ ಭಕ್ತ ಪ್ರಶಂಸಕ ವರ್ಗದವರಲ್ಲಿ ಆಯಿನ್‌ಸ್ಟೀನರು ಸರ್ವಪ್ರಥಮರಾಗಿದ್ದಾರೆ. ೧೯೩೯ರಲ್ಲಿ ಗಾಂಧೀಜಿಯವರಿಗೆ ಅವರ ೭೦ನೆ ಜನ್ಮದಿನದ ಸಂದರ್ಭದಲ್ಲಿ ಬರೆದೊಂದು ಪತ್ರದಲ್ಲಿ ಅವರ ಬಗ್ಗೆ ಇದ್ದ ಭಾವನೆಯು ಯಾವುದೆಂದು ತಿಳಿಯುವುದು:—"ಅವರು ಯಾವುದೇ ಬಾಹ್ಯಶಕ್ತಿಯ ಆಧಾರವಿಲ್ಲದ ಒಬ್ಬ ಜನನಾಯಕರಾಗಿದ್ದಾರೆ. ಸಫಲತೆಯ ಕುಟಿಲತೆ, ಅಥವಾ ರಾಜಕೀಯ ಏರುಪೇರುಗಳಲ್ಲಿರದೆ ತಮ್ಮ ಪ್ರಭಾವಶಾಲೀ ವ್ಯಕ್ತಿತ್ವಶಕ್ತಿಯಲ್ಲಿಯೇ ಅಡಗಿರುವ ಒಬ್ಬ ರಾಜನೀತಿಜ್ಞ. ಅವರು ಶಕ್ತಿಪ್ರಯೋಗವನ್ನು ಸದಾ ದ್ವೇಷಿಸುವ ಒಬ್ಬ ವಿಜಯಶಾಲಿಯಾದ ಸೈನಿಕ. ಅವರು ವಿವೇಕಶೀಲರೂ ಮಾನವಪ್ರಿಯರೂ ದೃಢನಿಶ್ಚಯಿಯೂ ಆಗಿದ್ದಾರೆ. ತಮ್ಮ ಸಂಪೂರ್ಣ ಶಕ್ತಿಯನ್ನು ತನ್ನ ಜನತೆಯ ಏಳಿಗೆ ಮತ್ತು ಅವರ ಕಲ್ಯಾಣಕ್ಕಾಗಿ ಸಮರ್ಪಿಸಿದ್ದಾರೆ. ಯುರೋಪಿನ ನಿರ್ದಯತೆಯನ್ನು, ಜನಸಾಧಾರಣರ ಪ್ರತಿಷ್ಠೆಯೊಡನೆ ಎದುರಿಸಿದ ವ್ಯಕ್ತಿಯವರು. ಇದರಲ್ಲಿ ಸದಾ ವಿಜಯಿಗಳಾದವರು. ಭಾವಿ ಜನಾಂಗವು ಎಲುಬು ಮಾಂಸಗಳ ಇಂತಹ ಮಾನವನು ಪ್ರಪಂಚದಲ್ಲಿ ಆವಿರ್ಭವಿಸಿದನೆಂದು ಊಹಿಸುವುದೂ ಕಷ್ಟವೇ.'

ಆಲ್ಬರ್ಟ್ ಆಯಿನ್‌ಸ್ಟೀನರು ತನ್ನ ಸಂಪೂರ್ಣ ಜೀವನವನ್ನು ಮಾನವಕಲ್ಯಾಣಕ್ಕಾಗಿ ಮೀಸಲಿಟ್ಟರು. ೧೯೫೫ನೆ ಎಪ್ರಿಲ್ ೧೮ರಂದವರು ಇಹಲೀಲೆಯನ್ನು ಮುಗಿಸಿದರು. ಅವರ ಅಪೇಕ್ಷೆಯಂತೆ ಮೃತ್ಯುಮುಖರಾದ ಮೇಲೆ ಅವರ ಮೆದುಳು ಮತ್ತು ಶರೀರದ ಬೇರೆ ಬೇರೆ ವಿಶಿಷ್ಟ ಭಾಗಗಳು ವೈದ್ಯರ ಅನುಸಂಧಾನ ಮತ್ತು ಅಧ್ಯಯನಕ್ಕಾಗಿ ಇಡಲ್ಪಟ್ಟುವು.

ಆಯಿನ್‌ಸ್ಟೀನ್ ಮತ್ತು ಗಾಂಧೀಜಿಯವರಂತಹ ಮಹಾ ಪುರುಷರು ಪದೇ ಪದೇ ಜನಿಸುವರು. ಪ್ರಪಂಚವು ಸದ್ಯ ಆತ್ಮವಿನಾಶದತ್ತ ವಾಲುತ್ತಿರುವುದಾದರೂ ಭೀಷಣ ಪರಮಾಣು ಅಸ್ತ್ರಗಳಿಂದಾಗಿ ಅದರ ಭವಿಷ್ಯ ಅಂಧಕಾರಮಯವಾದರೂ ಯಾವಾಗ ಮತ್ತು ಯಾವರೀತಿಯಲ್ಲಿ ಮುಕ್ತಿಯ ಜ್ಯೋತಿ ಗೋಚರಿಸುವುದೆಂದು ಯಾರಿಗೆ ಹೇಗೆ ಗೊತ್ತು? ಅಂತಹ ಸಮಯ ಬಂದಾಗ, ಆಲ್ಬರ್ಟ್ ಆಯಿನ್‌ಸ್ಟೀನರ ಹೆಸರು ಆದರಪೂರ್ವಕವಾಗಿ ಉದ್ಗರಿಸಲ್ಪಡುವುದು ಖಂಡಿತ.

(ನ. ಭಾ. ಟಾಯಿಮ್ಸ್‌ನಿಂದ)

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸೋಣಾಗುತ್ತದೆ.

—ಮೆನೇಜರ್

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ಸಾಹಿತ್ಯ ರಸದೌತಣ

(೩ನೇ ಪುಟದಿಂದ)

ಮಹಿಳೆಯರಲ್ಲಿಯೇ ಇರುವಂಥಹುದು. ನೀನು ನನ್ನನ್ನು ಧೀರ ವೀರನೆಂದು ಹೇಳಿ ಮತ್ತೆ ಭಯಭೀತನೆಂದೂ, ಹೇಳುತ್ತಿರುವುದರಿಂದ, ನಿನ್ನ ಸೂಕ್ಷ್ಮಬುದ್ಧಿಯು, ಇದಿಷ್ಟರಿಂದಲೇ ವ್ಯಕ್ತವಾಗುವುದು. ನಿನ್ನ ರೂಪ ಹಾವ ಭಾವಗಳನ್ನು ನೋಡಿ, ನಿನ್ನ ನುಡಿಗಳನ್ನಾಲಿಸಿದ ನನಗೆ, ಹೆದರಿಕೆಯೂ ಗುತ್ತಿರುವುದು ನಿಜ. ನಿನ್ನನ್ನು ಮಾನವಿಯೆನ್ನಲೇ? ನಿನ್ನಲ್ಲಿರುವ, ಈ ಲಜ್ಜೆ, ಈ ವೈಯ್ಯಾರ ನೋಡಿದರೇ ಹಾಗೆ ಹೇಳಲಾರೆ! ದಾನವಿಯೆನ್ನಲೇ? ರಾಕ್ಷಸಿಯರಲ್ಲಿ ಇಂತಹ ಸೌಂದರ್ಯವೆಲ್ಲಿಂದ ಬರಬೇಕು. ನೀನು ಚತುರೆಯಾಗಿರುವುದರಿಂದ, ವನದೇವಿಯೆಂದೂ ಹೇಳಲಾರೆ! ರಹಸ್ಯಪೂರ್ಣಳಾಗಿರುವ ರಮಣಿ, ನೀನು ಯಾರೆಂಬುದನ್ನು ನೀನೇ ತಿಳಿಸು".

ರಾಮಾನುಜನ ಮಾತಿಗೆ ಕಾಮಿನಿ ಹೇಳುತ್ತಾಳೆ-"ಹೇ ಕಠೋರ ಹೃದಯನಾದ ಕಾಂತ! 'ನೀನು ಯಾರು?' ಎಂದು, ಇಷ್ಟು ಮಾತ್ರ, ನೀವು ಕೇಳುತ್ತಿದ್ದೀರಲ್ಲ?'ರಮಣೀ ನಿನಗೇನು ಬೇಕಾಗಿತ್ತು?' ಎಂದು ನೀವು ಕೇಳಿದ್ದರೆ, ನನ್ನ ಮನದಿಚ್ಛೆಯನ್ನು ನಾನು ನಿಮ್ಮ ಮುಂದೆ ಮನಬಿಚ್ಚಿ ಹೇಳುತ್ತಿದ್ದೆ. ಅಂತು ನಾನು ಯಾವ ಅಪೇಕ್ಷೆಯಿಂದ ಇಲ್ಲಿಗೆ ಬಂದೆನೋ, ಅದು ಬಹುಶಃ ನಿಮ್ಮಿಂದ ಈಡೇರುವುದಿಲ್ಲ! ನನ್ನ ಅಶಾಂತವಾದ ಮನಸ್ಸಿಗೆ, ಶಾಂತಿ ದೊರೆಯುವುದಿಲ್ಲ! ಎಂಬಹಾಗೆ ನನಗೀಗ ತೋರುತ್ತಿದೆ. ಆದರೆ ನಾನು ಯಾವಾಗ, ಒಂದು ಆಸೆಯನ್ನಿಟ್ಟುಕೊಂಡು ಇಲ್ಲಿಗೆ ಬಂದೆನೆಂದಬಳಿಕ, ನಾನದನ್ನು ಪೂರೈಸಿಕೊಳ್ಳದೆ, ಹೋಗುವವಳೇ ಅಲ್ಲ! ನೀವು ನನ್ನನ್ನು ನಿಮ್ಮ ಅತಿಥಿಯೆಂದೇ ಭಾವಿಸಿ ನನಗೆ ಅತಿಥಿ ಸತ್ಕಾರವನ್ನು ನೀಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ಅಯ್ಯೋ! ಎಷ್ಟು ಹೇಳಿದರೂ, ನಿಮ್ಮ ಹೃದಯ ಕರಗುವುದಿಲ್ಲವಲ್ಲ? ನಾನು, ಹೀಗೆ ಹೇಳುವಾಗ ಕಲ್ಲಾದರೂ ಕರಗೀತು! ಆದರೆ ನಿಮ್ಮ ಹೃದಯವೆಂದರೆ ಪಾಷಾಣ ಹೃದಯ!" ಎನ್ನುತ್ತ ಆಕೆ, ಥಕ್ಕನೆ ತೀಕ್ಷ್ಣಳಾದವಳಂತೆ, ಹಲ್ಕಡಿದುದನ್ನು ನೋಡಿದ ರಾಮಾನುಜನು, ಮತ್ತೂ ವಿಸ್ಮಿತನಾದನು! ಆದರೂ ನಸು ನಗುತ್ತಲೇ ಆತನು ಉತ್ತರವಿತ್ತನು—

"ಹೇ ಮಾಯಾವಿನೀ....ನೀನು ಮಹಾ ಶಕ್ತಿ ಸಂಪನ್ನೆಯಾಗಿ, ಅತುಲವಾದ ಸಾರಿವೈಭವಗಳ ಒಡತಿಯಾಗಿರುವೆ! ಆದರೆ ನಾನು ನಿರ್ಧನನಾಗಿದ್ದೇನೆ!; ವನವಾಸಿಯಾಗಿದ್ದೇನೆ! ಇಂತು ಸಾಮಾನ್ಯ ವ್ಯಕ್ತಿಯಾದ ನಾನು, ನಿನಗೆ ಅತಿಥಿ ಸತ್ಕಾರವನ್ನೆಂತುಮಾಡಲಿ?"

"ಆಹಾ! ನಾನು ನಿಮ್ಮ ಮನೋವ್ಯಥೆಯನ್ನು ತಿಳಿಯಲಾರೆನೇ? ನಿಮ್ಮ ಮನಸ್ಸಿನ ಭಾವನೆ ನನಗೆ ತಿಳಿಯದೇ? ಆಹಾ! ನಾನೇನು ಹೇಳಲಿ? ಸೃಷ್ಟಿಕರ್ತನು. ನಿಮಗೆ ಕೊಟ್ಟಿರುವ, ಈ ಯೌವನ, ಈ ರೂಪ! ಈ ಮಹಾಧನವನ್ನು ಆತನು ದೇವತೆಗಳಿಗೂ, ಕೂಡ ಕೊಟ್ಟಿಲ್ಲ! ಆಹಾ!" ಎಂದಳು. ಒಂದು ಚಣ, ಸುಮ್ಮನಿದ್ದು, ಪುನಃ ಹೇಳಲು ಪ್ರಾರಂಭಿಸಿದಳು—

"ಓ....ಸುಂದರಾಂಗನೇ, ಇಂತಹ ಅನುಪಮ, ಯೌವನ, ಸೌಂದರ್ಯಗಳಿದ್ದುಕೊಂಡೂ ಸಹ, ನೀವು ತ್ಯಾಗಿಯಾಗಿ ವೈರಾಗ್ಯವನ್ನು ಹೊಂದಿರುವಿರೆಂದಬಳಿಕ, ನಿಮ್ಮಂತಹ ಭಾಗ್ಯಶಾಲಿಗಳಿದುರು, ಈಗಲೇ ನನ್ನೀ ವಜ್ರಾಭರಣಗಳನ್ನು ತೆಗೆತೆಗೆದು ಬಿಸುಟು-ನನ್ನ ಇಂದ್ರಿಯ ಸುಖಭೋಗದ ತೃಪ್ತಿಗಾಗಿ, ನಾನೂ ಸಹ ನಿಮ್ಮಂತೆಯೇ, ವೈರಾಗ್ಯವನ್ನು ಹೊಂದಬಲ್ಲೆ! ಆದರೆ ಹಾಗೆ ಮಾಡುವ ಅಗತ್ಯವಿಲ್ಲ-ಏಕೆಂದರೆ, ನನ್ನ ಮತ್ತು ನಿಮ್ಮ ಸಂಯೋಗಕ್ಕೆ ಯಾವ ವಿಘ್ನಗಳೊದಗಿಬಂದರೂ, ನಾನು ನಿವಾರಿಸಬಲ್ಲೆ! ಛಲಬಲ, ಯುಕ್ತಿಗಳಿಂದ, ನಾನು, ಎಂತಹ ಸಮಸ್ಯೆ ಬಂದೊದಗಿದರೂ, ನಿವಾರಿಸಬಲ್ಲೆನೆಂದ ಬಳಿಕ, ನಿಮ್ಮೊಡನೆ ಕೂಡಿ ಸುಖಿಸಲು ನಾನು ವೈರಾಗ್ಯವನ್ನು ತಳೆಯುವ ಅಗತ್ಯವೇನಿದೆ? ಎನ್ನುತ್ತ ಆ ಕಾಮಿನಿ ಪುನಃ ಪ್ರಶ್ನಿಸಿದಳು. "ನೀವು ಹೀಗೆ ವಿರಾಗಿಗಳಾಗಲು, ಕಾರಣವಾದರೂ ಏನು? ಯಾವುದಾದರೂ, ಅಪೇಕ್ಷೆಯ ಸಿದ್ಧಿಗಾಗಿ, ನೀವು ವೈರಾಗ್ಯವನ್ನು ಹೊಂದಿರುವಿರಾದರೆ, ನನ್ನೊಡನೆ ಹೇಳಿರಿ! ನಾನು ನಿಮ್ಮ ಎಂತಹ ಅಪೇಕ್ಷೆಯನ್ನೂ ಚಣಮಾತ್ರದಲ್ಲಿ—ಪೂರ್ಣಗೊಳಿಸಬಲ್ಲೆ! ಹೇ ಕಾಂತಾ! ನೀವು ಈ ವೈರಾಗ್ಯವನ್ನು ಬಿಟ್ಟು ಸ್ವರ್ಗಭೂಮಿಯಂತಿರುವ ನನ್ನ ಸಾಮ್ರಾಜ್ಯದ ದೊರೆಯಾಗಿ ಮೆರೆಯಬೇಕು! ನಿಮ್ಮ ವೈರಿಗಳ ನಾಶಕ್ಕಾಗಿ, ಈ ವೈರಾಗ್ಯ ಧಾರಣೆಯಾಗಿದ್ದರೆ, ನನಗೆ ಆಜ್ಞೆ ಕೊಡಿ! ನಾನೀಗಲೇ ಅವರನ್ನು ನನ್ನ ಕೋಪಾಗ್ನಿಗೆ ಬಲಿಗೊಟ್ಟು ಬರುತ್ತೇನೆ ಅಥವಾ ನೀವು ಯಾವಳಾದರೂ, ಪ್ರಮದೆಯ ಪ್ರೇಮ ಸಂಪಾದನೆಗಾಗಿ, ಹೀಗೆ ಯೋಗಿಯಾಗಿ ಕುಳಿತಿರುವಿರಾದರೆ, ಛೀ ನಿಮಗೆ ಸ್ವಲ್ಪವೂ ತಿಳುವಳಿಕೆಯಿಲ್ಲ! ಎಂದು ನಾನು ಹೇಳಬೇಕಾಗುತ್ತದೆ. ಯಾಕೆಂದರೆ, ನೀವು ಸಿಕ್ಕದಿರುವ ಒಂದು ವಸ್ತುವಿಗಾಗಿ, ತನುಮನಗಳನ್ನು ದಣಿಸುತ್ತಿರುವುದು ನಿಮಗೆ ಶೋಭಿಸಲಾರದು. ಆಹಾ! ನೀವು, ಯಾವಳಾದರೂ ಪ್ರಮದೆಗಾಗಿಯೇ ಇಷ್ಟು ಕಷ್ಟಪಡುತ್ತಿರುವಿರೆನ್ನಲೇ? ಛೀ ಎಂದೆಂದಿಗೂ ಸಾಧ್ಯವಿಲ್ಲ. ಏಕೆಂದರೆ, ಇಂತಹ ಅಪೂರ್ವ ಯೌವನವನ್ನು ಕಂಡ ಬಳಿಕ, ಯಾವ ಪ್ರಮದೆಯಾದರೂ ಸ[illegible] ಈ ಯೌವನದ ಭೋಗಕ್ಕಾಗಿ, ತ[illegible] ಪ್ರಾಣವನ್ನರ್ಪಿಸಲೂ ಹಿಂಜರಿಯಲಾಳು. ಓ! ಮನ್ಮಥರೂಪನೇ! ನಿಮ್ಮ [illegible] ತುಂಬಿದ ಯೌವನ ಧನವನ್ನು ಇದೇ ಹೀಗೆ ವ್ಯರ್ಥವಾಗಿ ನಷ್ಟಗೊಳಿಸುತ್ತಿ[illegible]ರಿ? ಬೇಡ! ಹೀಗೆ ಮಾಡಬೇಡಿ! ಇನ್ನು ರಕ್ಷಿಸಿಕೊಂಡು ಸುಖಭೋಗವನ್ನು ಪಡೆಯಿರಿ! ಏನಾದರೂ ಕಾರಣಾಂತರಗಳಿಂದ, ನಿಮಗೆ ಈ ಸಂಸಾರ ಸುಖವು ನೀರಸವಾಗಿ ಕಂಡುಬಂದು, ನೀವು ಇಂ[illegible] ವೈರಾಗ್ಯವನ್ನು ತಳೆದಿರುವಿರಾದರೆ—[illegible] ಕೇಳ್ಳಿ! ಇಲ್ಲಿ ನೋಡಿ! ನೀವು ಒಂದು ಸಲ ನನ್ನೊಡನೆ ಕೂಡಿನೋಡಬಾರದೇ ಹೀಗೆ ನೀವು ಒಮ್ಮೆ ಕೂಡಿ ನೋಡುವಿರಾದರೆ, ಆಗ ನಿಮಗೆ ಈ ಸಂಸಾರದ ಎಂತಹ ಸುಖವಿದೆ! ಎಷ್ಟು ಆನಂದವಿದೆ ಎಂಬುದು ತಿಳಿದೀತು! ಅಯ್ಯೋ! [illegible] ತುಂಬಿದ ಯೌವನಕ್ಕೆ ಈ ಒಂಟಿ ಜೀ[illegible]ನ! ನಿಸ್ಸಂದೇಹವಾಗಿಯೂ, ಎಷ್ಟು ಯ[illegible]ತನಾಮಯ!"

(ಕ್ರಮಶಃ)

ಕೆ. ಎಸ್. ಭಟ್, ಶಿರಾಡಿಪಾಲ್

ಗ್ರಾಮಗಳಿಗೆ ವಿದ್ಯುತ್ ಪೂರಯ್ಕೆ



ಆಧುನಿಕ ಯುಗದ ಬಲಭೀಮನಾದ ವಿದ್ಯುತ್ ಮಾಡದ ಕೆಲಸವಿಲ್ಲ. ನಮ್ಮ ದೇಶದಲ್ಲಿ ಹೇರಳವಾದ ಪ್ರಮಾಣದಲ್ಲಿ ಜಲವಿದ್ಯುತ್ತನ್ನು ತಯಾರಿಸಬಹುದು. ಸ್ವಾತಂತ್ರ್ಯಪ್ರಾಪ್ತಿಯ ನಂತರ, ವಿದ್ಯುದುತ್ಪಾದನೆ ಮತ್ತು ಅವುಗಳ ವಿತರಣೆಯತ್ತ ತೀವ್ರ ಗಮನಹರಿಸಲಾಗಿದೆ. ಸದ್ಯ ಗ್ರಾಮೀಣ ಪ್ರದೇಶಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವ ಕಾರ್ಯ ಭರದಿಂದ ನಡೆಯುತ್ತಿದೆ. ಭಾಕ್ರನಂಗಲ್ ಅಣೆಕಟ್ಟು ಕೇಂದ್ರದಲ್ಲಿ ಉತ್ಪಾದಿಸಿದ ಜಲವಿದ್ಯುತ್ತಿನ ಬಲದಿಂದ, ಧಾನ್ಯಗಳನ್ನು ಬೀಸುವುದು, ಮರ ಸಿಗಿಯುವುದು ಮೊದಲಾದ ಉಪಯುಕ್ತ ಉದ್ದಿಮೆಗಳಿಗೆ ಬಳಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA' WEEKLY is in the list of periodical and Newspapers approve or use in Secondary School as per proceeding Roc· No· 466 N/50 dat 2-12-1950 of the Directo of public Instructio Madras·

ಕಥಾವಿಹಾರ

(೨ನೇ ಪುಟದಿಂದ)

ಕರ ಗಲಾಟೆ ನಿನಗೆ ಪ್ರಿಬೇಕಾದಾಗ ಗಿದುಕೊಂಡು ಹೋಗಬಹುದು." ರಾ ರಿಂದ ಮಾತಿಗೆ ವೆಂಕಮ್ಮನವರು ಅನು ಮೋದನೆಯಿತ್ತು 'ಅದೂ ಸರಿ!' ಎಂದು ಳಿದ ೪೫೦ ರೂಪಾಯಿಗಳನ್ನು ರಾಯ ಒಪ್ಪಿಸಿದಾಗ ಲೆಕ್ಕಿಸದೇ ನಿಮಿಷವೂ ನಿ ಲ್ಲದೇ ರಾಯರು ಹೊರಟು ಹೋದರು.

ಮಗನ ಲಾಲನೆ, ಪಾಲನೆಯಲ್ಲಿ ವೆಂ ಕಮ್ಮ ಹಣತಂದು ಜೀವನ ಸಾಗಿಸುವ ಪ್ರಯತ್ನ ಪಟ್ಟರು. ಹೀಗೆ ಕೆಲವು ತಿಂಗ ಳು ಸಂದಹಾಗಾದೊಡನೆ ವೆಂಕಮ್ಮನಿಗೆ- ನಿನ್ನ ಹಣವೆಲ್ಲ ಖರ್ಚಾಯಿತು, ಎಂದು ಸುಳ್ಳು ಲೆಕ್ಕವನ್ನು ಮಂಡಿಸಿ ವೆಂಕಮ್ಮನ ನ್ನು ಬರಿಗೈಯಿಂದಲೇ ಕಳುಹಿಸಿಬಿಟ್ಟರು ರಾಯರು. ಇಂತಹ ಅದೆಷ್ಟೋ ಪಾಪಜೀ ವಿಗಳ ಹಣವನ್ನು-ಆಸ್ತಿಯನ್ನು 'ಗಬಕ್ಕ ನೆ' ನುಂಗಿ ಜೀರ್ಣಿಸಿಕೊಂಡಿದ್ದ ಐಶ್ವ ರ್ಯವಂತರ ಸಾಲಿನಲ್ಲಿ ನಿಂತ ರಾಯರಿ ಗೆ ವೆಂಕಮ್ಮನವರ ಹಣ ಜೀರ್ಣಿಸಿಕೊ ಳ್ಳುವುದು ಕಷ್ಟವಾಗಲಿಲ್ಲ. ವೆಂಕಪ್ಪಯ್ಯ ನವರು ರಾಯರಾದದ್ದೂ ಇಂತಹ ಕೃತಿ ಯಿಂದಲೇ.

ಮಗ ರಾಜು ಬೆಳೆದು ಎಲಿಮೆಂಟರಿ ಶಾಲೆಯನ್ನು ತುಳಿಯುತ್ತಲಿದ್ದಾನೆ. ವೆಂಕಮ್ಮ ವಕೀಲರಲ್ಲಿ ಅಡುಗೆಮಾಡಿಟ್ಟು, ತನ್ನ ಗುಡಿಸಲಿಗೆ ಬಂದು 'ರಾಜೂ, ನೀನು ವಿದ್ಯಾವಂತನಾಗಿ ಯಾವುದಾದರೂ ಕೆಲ ಸಕ್ಕೆ ಸೇರಿ ಒಳ್ಳೆಯವನಾಗಬೇಕೆಂ ದು ಬುದ್ಧಿವಾದ ಹೇಳುತ್ತಿದ್ದರು. ಐದನೇ ಕ್ಲಾಸು ಮುಗಿಸಿದ ರಾಜು ತಾಯಿ ಹೇಳಿ ದ ಮಾತಿಗೆ 'ಹೂಂ'ಗುಟ್ಟುತ್ತಲಿದ್ದನೇ ಏನಾ ಮನಸ್ಸಿಗೆ ತೆಗೆದುಕೊಳ್ಳುತ್ತಿರಲಿ ಲ್ಲ—'ಘೋರಕಲ್ಲ ಮೇಲೆ ಮಳೆಗರೆದಂ ತಾಯಿತು'. ಇದೆಲ್ಲ ವೆಂಕಮ್ಮನವರಿಗೆ ತಿಳಿಯುತ್ತಿರಲಿಲ್ಲ.

ದಿನದ ದುಡಿಮೆ ಮಿತಿಮೀರಿತ್ತು. ವ ಕೀಲರಲ್ಲಿ ಎರಡು ಹೊತ್ತು ಅಡುಗೆ ಮಾ ಡಿಟ್ಟು ಮನೆಯಲ್ಲಿ ರಾತ್ರಿ ಅಡುಗೆ ಮಾಡ ಬೇಕು. ಮುದ್ದು ಮಗುವಿಗೆ ಬುದ್ಧಿವಾದ ವನ್ನು ದಿನವೂ ಹೇಳುತ್ತಿರುವರು—'ತಂ ದೆಯಂತಾಗದಿರು ಕಂದ!' ಎಂದು. ತಂ ದೆಯ ಕಥೆಯನ್ನು ತಾಯಿಯ ಬಾಯಿ ಯಿಂದ ಕೇಳಿದ ರಾಜು ಮುಟನೆಗೆದು ಹಾರಿದ. ವಿದ್ಯಾಭ್ಯಾಸವು ತಾಯಿಯ ಒ ತ್ತಾಯಕ್ಕಲ್ಲದೇ ಅತನಿಗೆ ಬೇಕಾಗುತ್ತಿರ ಲಿಲ್ಲ.

ವಕೀಲರ ಮನೆಯ ಚಿಕ್ಕ ಮಗು ಸ ರೋಜ, ಶಾಲೆಗೆ ಹೋಗಿ ಮನೆಗೆ ಬಂ ದು ಪಾಠ ಓದುತ್ತಿರುವಾಗ ಮೂಲೆಯ ಲ್ಲಿ ನಿಂತು ವೆಂಕಮ್ಮ ಕೇಳುತ್ತಿರುವರು. ಮಕ್ಕಳ ತೊದಲು ಓದುವಿಕೆ ವೆಂಕಮ್ಮ ನವರಿಗೆ ಮೃಷ್ಟಾನ್ನ ಭೋಜನದಂತೆ ಆ ಗುತಿತ್ತು. ತನ್ನ ಮಗನಿಂದ ಒಳ್ಳೊಳ್ಳೆ ಯ ಕಥೆಗಳನ್ನು ಓದಿಸಿ ಕೇಳಬೇಕೆಂಬ ಆಶೆ. ಅದಕ್ಕಾಗಿ ಕೆಲವು ಪುಸ್ತಕಗಳನ್ನು ವಕೀಲರ ಮನೆಯಿಂದ ಎರವಲು ತರು ತ್ತಿದ್ದರು. ಮನೆಗೆ ಬಂದವರೇ ಬೇಗನೆ ಅಡುಗೆ ಮಾಡಿ ಮಗನಿಗೆ ಊಟವಿಕ್ಕಿ ತಾನುಂಡು ಹೊರಗೆ ಜಗುಲಿಯ ಮೇಲೆ ಕುಳಿತು ಹಣತೆ ದೀಪವಿಟ್ಟುಕೊಂಡು ಮಗ ರಾಜನನ್ನು ಕರೆದು ಕಥೆ ಓದು ಮಗೂ 'ಜೆನ್ನಾಗಿದೆಯಂತೆ' ಅನ್ನುವಾಗ ಲೇ 'ಅಮ್ಮಾ ನನಗೆ ನಿದ್ರೆ ಬರುತ್ತಿದೆ, ಮಲಗಿಕೊಳ್ಳುತ್ತೇನೆ' ಎಂದು ಮಲಗಿ ಯೇ ಬಿಡುತ್ತಿದ್ದ ರಾಜು. ನಿರಕ್ಷರಕುಕ್ಷಿ ಯಾದ ವೆಂಕಮ್ಮ ಪುಸ್ತಕ ಹಾಳೆ ಯನ್ನು ಮಗುಚುತ್ತಾ ಕ್ಷಣಕಾಲ ಸಂ ತೋಷಿಸಿ ತಾವೂ ಮಲಗುತ್ತಿದ್ದರು.

ರಾಜುವು ಹೈಸ್ಕೂಲು ವಿದ್ಯಾರ್ಥಿಯಾ ದ. ತಿಂಗಳೊಂದಕ್ಕೆ ೩ ರೂಪಾಯಿಯಂತೆ ಸಂಬಳ ಕೊಡಬೇಕು. ತಾಯಿಗೆ ಬರುವ ಆರು ರೂಪಾಯಿ ಯಲ್ಲಿ ಮಗನು ಮೂರು ರೂಪಾಯಿಯನ್ನು ತಪ್ಪದೇ ಕೇಳುತ್ತಿದ್ದ. ಉಳಿದ ಮೂರು ರೂಪಾಯಿಗಳಲ್ಲೇ ವೆಂ ಕಮ್ಮ ಬಾಳ ನೌಕೆಯನ್ನು ಬಿರುಗಾಳಿ ಗೊಡ್ಡದೇ ನಡೆಸಿಕೊಂಡು ಹೋಗುತ್ತಿ ದ್ದರು.

ವೆಂಕಮ್ಮನ ಲೆಕ್ಕದಲ್ಲಿ ರಾಜುವು ಹೈ ಸ್ಕೂಲು ಸೇರಿ ನಾಲ್ಕು ವರ್ಷವಾಯಿತು. ಆದರೆ ಮಗನು ಶಾಲೆಗೆ ಹೋಗಿ ಶಾಲೆ ಬಿಟ್ಟಾಗ ಮನೆಗೆ ಬರುತ್ತಿದ್ದ. 'ಮುಂದೆ ತನ್ನ ಮಗನು ವಿದ್ಯಾವಂತನಾಗಿ ಯಾವು ದಾದರೂ ಕೆಲಸಕ್ಕೆ ಸೇರಿ ಹಣ ಸಂಪಾದ ನೆ ಮಾಡಿ ತನ್ನ ತಾಯಿಯನ್ನು ಪ್ರೀತಿ ಯಿಂದ ನೋಡುವನು'. ಎಂದು ದಿನವೂ ಮಗನಿಗಾಗಿ ಸಂತೋಷಿಸಿ, ದೇವರಲ್ಲಿ ಬೇ ಡಿ, ತುಪ್ಪದ ದೀಪವನ್ನು ತಪ್ಪದೇ ಹಚ್ಚು ವರು.

ರಾಜು ನಾಲ್ಕು ವರ್ಷಗಳಿಂದಲೂ ಶಾಲೆಯತ್ತ ಹೋಗದೇ ಪೇಟೆಯ ಮೂ ಲೆಯ ಹಾಳು ದೇವಸ್ಥಾನಕ್ಕೆ ಹೋಗುತ್ತಿ ದ್ದ. ಪುಂಡರ ತಂಡವೊಂದು ದಿನವೂ ಬಂದು ನೆರೆದ. ಅಂದಿನ ಕಾರ್ಯಕಲಾಪ ವನ್ನು ನಿಶ್ಚೈಸಿ ಮುಂದಿನ ಕಾರ್ಯಗಳಿ ಗಾಗಿ ತೆರಳುತ್ತಿದೆ. ಅಂತಹ ಸಂಸ್ಥೆಗೆ ರಾ ಜುವು ನಾಲ್ಕು ವರ್ಷಗಳಿಂದಲೂ ಆಜೀ ವ ಸದಸ್ಯನಾಗಿದ್ದುಕೊಂಡು ಇಂದು ಆದ ರ ಅಧ್ಯಕ್ಷನಾಗಿದ್ದಾನೆ. ದಿನದ ದುಡಿಮೆ ಸಾಲದೇ ಕಳ್ಳರ ಗುರುವಾದಾಗಲೇ ರಾ ಜುವು ಶಾಲೆಗೆ ಹೋಗುವುದಿಲ್ಲವೆಂದು ವ ಕೀಲರ ಮನೆಯವರಿಗೆ ತಿಳಿಯಿತು. ಸಣ್ಣ ಕಳ್ಳನಾಗಿದ್ದು ಹಲವು ಕಳ್ಳತನದಲ್ಲಿ ಶ್ರೀ ಯಸ್ಸುಗಳಿಸಿ, ಇಂದು ದೊಡ್ಡ ಪಕ್ಕಾ ಕಳ್ಳ ನಾದ ರಾಜು ಎಂದಿನಂತೆ ಶಾಲೆ ಬಿಟ್ಟೊಡನೆಯೆ ಮನೆಗೆ ಬರುವ ಸಂಪ್ರದಾಯ ವಾಗಿತ್ತು. ಇದರಿಂದ ವೆಂಕಮ್ಮನವರಿಗೆ ಯಾವ ಅನುಮಾನವೂ ತೋರುತ್ತಿರಲಿಲ್ಲ. ವಕೀಲರ ಮನೆಯ ಮಕ್ಕಳೂ ಸಹಾ ಹೇಳಿರಲಿಲ್ಲ.

ಮನೆಗೆ ಬಂದ ರಾಜು "ಅಮ್ಮ ನನಗೆ ಮೂರು ರೂಪಾಯಿ ಹೆಚ್ಚಿಗೆ ಬೇಕು. ಈ ತಿಂಗಳು ಪಬ್ಲಿಕ್ ಪರೀಕ್ಷೆಗೆ ಹಣ ಕಟ್ಟ ಬೇಕಂತೆ!" ರಾಜುವಿನ ಯಾವ ಮಾತೂ ವೆಂಕಮ್ಮನವರಿಗೆ ವೇದ್ಯವಾಗುತ್ತಲಿತ್ತು. ಮಗನ ವಿದ್ಯಾಭ್ಯಾಸಕ್ಕಾಗಿ ತನ್ನ ಹೊ ಟ್ಟೆಯನ್ನು ಕಟ್ಟಿ ರಟ್ಟೆಯನ್ನು ಬಡಿದು ಕಷ್ಟಪಟ್ಟು ಹಣಗಳಿಸುತ್ತಿರುವ ತಾಯಿ ಗೆ ಪ್ರೀತಿಯ ಮಗನು ವಂಚಿಸುತಲಿದ್ದಾ ನೆ. ತಿಂಗಳ ಸಂಬಳ ಕೊಟ್ಟಾಗಿ ಇನ್ನೂ ಹದಿನೈದು ದಿನವಾಗಿರಲಿಲ್ಲ—ವೆಂಕಮ್ಮ ನವರಿಗೆ ಸಿಕ್ಕಿದ ಆರು ರೂಪಾಯಿಗಳು ಎಂದೋ ಒಕ್ಕಿ ಖರ್ಚಾಗಿ ಹೋಗಿತ್ತು. ಇನ್ನು ಸಂಪಾದಿಸುವುದು ಕಷ್ಟವಾಗಿತ್ತು. ವೆಂಕಮ್ಮನವರಲ್ಲಿ ಆಪತ್ತಿಗೆಂದು ಉಳಿದ ದ್ದು ಮಾಂಗಲ್ಯವೊಂದೆ! ಎಂತಹ ಕಷ್ಟಗ ಳಿದ್ದರೂ ಪೆಟ್ಟಿಗೆಯಿಂದ ಮಾಂಗಲ್ಯ ತೆ ಗೆದು ಮಾರಲು ಮನಸ್ಸು ಕೊಡದೇ ಇ ದ್ದ ವೆಂಕಮ್ಮನವರಿಗೆ ಈಗ ಅದನ್ನು ಮಾರಾಟ ಮಾಡಿಯಾದರೂ ಮಗನಿಗೆ ಹಣತಂದು ಕೊಡುವ ಮನಸ್ಸಾಯಿತು. ವಕೀಲನಲ್ಲಿ ಅಡವಿಟ್ಟರೆ ಬೇರೆ ಏನಾದ ರೂ ತಿಳಿದಾರೆಂದು ಬೇರೊಬ್ಬರ ಮನೆ ಯಲ್ಲಿ ಅಡವಿಟ್ಟು ಮಗನ ಪರೀಕ್ಷೆಯ ಶುಲ್ಕವನ್ನು ತಂದುಕೊಟ್ಟು ಹರಸಿ ಕಳು ಹಿಸಿದರು. ರಾಜು ಆಶೀರ್ವಾದ ಮುಗಿ ಯುವಾಗಲೇ ಕೇಕೆ ಹೊಡೆದು ಹೊರಟು ಹೋಗಿದ್ದ. "ನನಗೇನೂ ಕಷ್ಟಬಂದರೂ ಚಿಂತೆಯಿಲ್ಲ. ಹೇಗಾದರೂ ಮಗನು ವಿ ದ್ಯಾವಂತನಾಗಿ ಯಾವುದಾದರೂ ಸರಕಾ ರೀ ಕೆಲಸಕ್ಕೆ ಸೇರಿ ಹಣ ಸಂಪಾದಿಸಿ, ತ ನ್ನ ತಾಯಿಯ ಮುದಿತನದಲ್ಲಾದರೂ ಸುಖ ಕೊಡಲಾರನೆ?" ಎಂದು ಸಂತೋ ಷಪಟ್ಟುಕೊಂಡರು. ದೇವರ ಮುಂದೆ ದೀಪ ಹಚ್ಚಿ ಮನಸಾರೆ "ದೇವರೇ ನನ್ನ ಮಗನನ್ನು ಪಾಸು ಮಾಡು"ಎಂದು ಬೇ ಡಿಕೊಂಡರು.

ಮಗನ ರೀತಿಯೇ ಬೇರೆಯಾಯಿತು. ತಾ ಯಿಯ ನೋರೆಯಿಂದ ದೇವರು ಇಷ್ಟು ದಿನ ರಾಜನನ್ನು ಎಂತಹ ವಿಪತ್ತಿನಿಂದ ಲೂ ಉಳಿಸಿದರು, ದೊಡ್ಡ ಕಳ್ಳನಾಗಿ ಪ ರಾಫ್ ಅಂಗಡಿಯಿಂದ ಚಿನ್ನದ ಸರವನ್ನು ಕದ್ದಾಗ ದೇವರಿಗೂ ಬೇಸರವಾಗಿ ಪೋ ಲೀಸರ ಕೈಗೆ ಸಿಕ್ಕುಬಿದ್ದ ರಾಜು. ಉಳಿದ ಗೆಳೆಯರೆಲ್ಲಾ ದಿಕ್ಕುಪಾಲಾಗಿ ಓಡಿಹೋ ದರು.

ವೆಂಕಮ್ಮ ಸಂತೋಷದಿಂದಲೇ ವಕೀ ಲರ ಮನೆಗೆ ಬಂದಾಗ ಚಿಕ್ಕ ಮಗು ಸ ರೋಜಾ, ಏನೋ ತಾಯಿಯಲ್ಲಿ ಗುಪ್ತ ವಿಚಾರವನ್ನು ಹೇಳುತ್ತಿದ್ದುದು ಕೇಳಿಸಿ ತು. 'ರಾಜುವು ಪೋಲೀಸರ ಕೈಗೆ ಸಿಕ್ಕು ಬಿದ್ದ ನಾಲ್ಕು ವರ್ಷದಿಂದಲೂ ಕಳವು ಮಾಡುತ್ತಿದ್ದಾನೆ. ಶಾಲೆಗೆ ಹೋಗುವುದಿ ಲ್ಲವಂತೆ.' ವೆಂಕಮ್ಮನವರಿಗೆ ಇಷ್ಟನ್ನೂ ಕೇಳಿದಾಗ ಹುಚ್ಚು ಹಿಡಿದಂತಾಗಿ ಮೈಯಲ್ಲಿ ರೋಮಾಂಚನವಾಯಿತು. ಹಾಗೆಯೆ ಮ ನೆಗೆ ಬಂದರು. ಇಷ್ಟು ವರ್ಷ ಹೆತ್ತು ಹೊತ್ತು ಸಾಕಿ ಸಲಹಿದ ಮಗನ ಮೇಲೆ ಸಿಟ್ಟಾಗಲಿಲ್ಲ. ಕೆಲವು ವರ್ಷಗಳಿಂದ ಹಣ ವನ್ನು, ಮಾಂಗಲ್ಯವನ್ನು ವಂಚಿಸಿದ ಮ ಗನ ಮೇಲೆ ಸಿಟ್ಟಾಗಲಿಲ್ಲ. ತನ್ನ ವಿಧಿಗಾ ಗಿ ಹಣೆ ಹಣೆ ಚುಚ್ಚಿಕೊಂಡರು. ಮಗನ ಬಿಡುಗಡೆಗಾಗಿ ಯಾರೊಡನೆಯೂ ಬೇ ಡಲಿಲ್ಲ. ದೇವರ ಮುಂದೆ ತುಪ್ಪದ ದೀಪ ವನ್ನು ಹಚ್ಚಬಾರದೆಂದೆಣಿಸಿ ಪುನಃ ಹ ಚ್ಚಿದರು. ಆ ಜ್ಯೋತಿ ಕಾರ್ಗತ್ತಲನ್ನು ದೂಡಿ ಬಹುದೂರದ ವರೆಗೂ ಪ್ರಕಾಶ ಬೀರಿತ್ತು. ದೀನವದನೆಯಾಗಿ ಪ್ರಶ್ನಾಬದ್ಧ ವಾತಾವರಣದಲ್ಲಿಯೂ ವೆಂಕಮ್ಮ ಬೇ ಡುತ್ತಿದ್ದರು: 'ದೇವರೇ, ಇಷ್ಟರವರೆಗೆ ನಾನು ಮಗನಿಗಾಗಿ ದುಡಿದು ದೇಹವನ್ನು ಸವೆಯಿಸಿದೆ. ಇನ್ನೂ ನಾನು ಯಾರಿಗಾಗಿ ಬಾಳಲಿ?'—ವೆಂಕಮ್ಮ ಹಚ್ಚಿದ ತುಪ್ಪದ ದೀಪ ಬೀಸುಗಾಳಿಗೆ ಪಟಪಟನೆ ನಂದಿ ಹೋಯಿತು. ಯಾವುದಕ್ಕೂ ಉತ್ತರ ದೊರೆವೆ ಪ್ರತಿಮೆಯಂತೆ ಕುಳಿತಿದ್ದರು ವೆಂಕಮ್ಮ. ಅವರು ಕಟ್ಟಿದ್ದ ಆಶಾಗೋ ಪುರ ಒಮ್ಮೆಲೆ ಬಿರುಗಾಳಿಗೆ ಆಹುತಿಯಾ ಗಿ ನುಚ್ಚುನೂರಾಯಿತು.

—ಎಚ್. ಆನಂದರಾವ ಅಡಿಗ,
ಕಂ. ನಾರಾಯಣ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ
ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಶಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ
ದ ಮೇಲೆ ಮತ್ತು ಇತರ ರೀತಿಯಲ್ಲಿ
ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ
ರೋಗಗಳ ಹುಟ್ಟು, ಕಾರಣ ಮತ್ತು ನಿವಾರ
ಣೋಪಾಯಗಳನ್ನು ಸೂಚಿಸುವ ಉಪಯುಕ್ತ
ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕುಮಾರಿ ಬ್ರಿಲ್ಲಿಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & CO. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
28-4-1960

LICENSE NO. 31
Licensed to Post without Prepayment

ಕಿರಿಯರ ಕಿನ್ನರಿ

ಮದ್ಯಪಾನಕ್ಕೆ ಪ್ರತಿಬಂಧ ಎಂತು?

ಸಮಾಜದ ಅಧಃಪತನವೆಸಗುವ ಮದ್ಯಪಾನವನ್ನು ಮಾಡದಂತೆ, ತಂದೆ ಇಟ್ಟ ಸಂಕದಲ್ಲಿ ಮಕ್ಕಳೂ ನಡೆಯುವುದಕ್ಕೆ ಮೊದಲೇ ಎಚ್ಚರಿಕೆ ವಹಿಸಬೇಕು.

ಮೊನ್ನೆ ರಾತ್ರಿ ಸಿನೇಮಾದಿಂದ ಒಬ್ಬನೇ ಬರುತ್ತಿದ್ದೆ. ಗಾಢಾಂಧಕಾರ ಎಲ್ಲೆಲ್ಲೂ. ನಿರಭ್ರ ನೀಲಾಕಾಶದಲ್ಲಿ ತಾರೆಗಳ ಸುಳಿವಿಲ್ಲ; ಚಂದಿರನ ಹೊಳಪಿಲ್ಲ. ಬೀದಿಯ ದೀಪಗಳಂತೂ ತಮ್ಮ ಕೈಲಾದಷ್ಟು ಪ್ರಕಾಶವನ್ನು ಬೀರಿ ನಮ್ಮಂತವರಿಗೆ ಉಪಕಾರ ಬೀರಿದರೆ ಕಳ್ಳಕಾಕರಿಗೆ ಕುಠಾರಪ್ರಾಯವಾಗಿಯೇ ಇರುತ್ತಿದ್ದುವು. ನಾನು ಮುಂದೆ ಮುಂದೆ ನಡೆಯುತ್ತಿದ್ದಂತೆ ನನ್ನ ನೆರೆಮನೆಯ ಚಂದ್ರು ಇದಿರಾದ. ಅವನನ್ನು ಕುಶಲವೇ ಎಂದು ಪ್ರಶ್ನಿಸಲಾಗಿ, "ನಿಮ್ಮ.... ಮ....ಗ... ನಿ....ೕೕಸು..." ಏನೇನೊ ಉತ್ತರಗೊಟ್ಟ. ಆತನ ಮಾತು ಅಸ್ಪಷ್ಟವಾಗಿತ್ತು. ನಡೆಯೂ ಇದೇ ರೀತಿ; ಬಲದ ಹೆಜ್ಜೆ ಎಡಕ್ಕೆ, ಎಡದ ಹೆಜ್ಜೆ ಬಲಕ್ಕೆ ಬೀಳುತ್ತಿತ್ತು. ನಾನೊಮ್ಮೆ ನಾಲ್ಕು ವರುಷ ಹಿಂದಿನ ಆತನ ಚಿತ್ರಣವನ್ನು ಮನಸ್ಸಿನಲ್ಲಿ ಮಾಡಿದೆನು. ತುಂಬಿದ ಮೈಕಟ್ಟು, ಉಬ್ಬಿದ ಗಲ್ಲ, ಕಬ್ಬಿಣದಂತಹ ಗಟ್ಟಿಯಾದ ರಟ್ಟೆ. ಅಂತೂ ದೃಢಕಾಯಿಯಾಗಿದ್ದ. ಆದರೆ ಇಂದು? ಜೋಲುಬಿದ್ದ ಗಲ್ಲ, ಹೂತುಹೋದ ಕಣ್ಣುಗುಡ್ಡೆ, ನೆರೆತ ಕೂದಲು! ಅಂತೂ ಆತ ಆತನಲ್ಲ, ಅದು ಅಸ್ಥಿಪಂಜರವೇ ಸೈ! ಇದೇನಾಗಿರಬಹುದು? ಅದು ಮದ್ಯಪಾನದ ದೆಸೆಯಿಂದಲೇ ಹಾಗಾಯಿತು. ಚಂದ್ರು ಮೊದಮೊದಲು ಕಾರ್ಯಚತುರನಾಗಿದ್ದ. ತನು ಬಗ್ಗಿಸಿ, ಕಾಯ ಕುಗ್ಗಿಸಿ, ದೇಹ ಜಗ್ಗಿಸಿ ಕಾರ್ಯಗಳನ್ನು ಮಾಡುತ್ತಿದ್ದ. ಮೊದಮೊದಲು ಆಯಾಸ ಪರಿಹಾರಕ್ಕೆಂದು ಅದರ ಸೇವನೆಮಾಡಿದ. ಆದರೆ ಮದ್ಯದಷ್ಟು ಮನಮೋಹಕ ವಸ್ತು ಜಗತ್ತಿನಲ್ಲಿ ಬೇರೆಯಿಲ್ಲ. ಮೊದಮೊದಲು 'ಆಯಾಸ ಪರಿಹಾರಾರ್ಥವಾಗಿ ಸೇವನೆ' ಎಂಬ ಭಾವನೆ ತೊಲಗಿ ಮುಂದೆ ಬಾಳಿನ ಬಡತನ, ಕಷ್ಟ; ಸಂಕಷ್ಟ, ಎಡರು; ತೊಡರು-ಇವೇ ಇತ್ಯಾದಿಗಳ ನಿವಾರಣೆಯಾಗುವುದೆಂದೂ, ಆದರಿಂದ ಮರುದಿನದ ಕೆಲಸಕ್ಕೆ ನವಚೇತನ ದೊರೆಯುವುದೆಂದೂ ತಿಳಿದು ಅದನ್ನು ಪುನಃ ಪುನಃ ಸೇವನೆಮಾಡಿದ. ಇದು ಚಂದ್ರೂಗೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಜಗತ್ತಿನಲ್ಲಿ ಮಾನವರೆಂದು ಹೇಳಿಸಿಕೊಳ್ಳುವ ಎಲ್ಲರಿಗೂ ಅನ್ವಿ. ಆದರೆ ದೊರೆವ ಸುಖ ಕ್ಷಣಿಕ, ದೊರೆವ ದುಃಖ ಅಪಾರ. ಕ್ಷಯ, ಅರ್ಬುದವೇ ಮೊದಲಾದುವುಗಳಲ್ಲದೆ ಪಿತ್ಥಕೋಶದ ರೋಗರುಜೆಗಳು ಬರುತ್ತವೆ. ಇದರಿಂದ ಮುಂದೆ ಆ ಕುಡುಕನ ಅಧಃ ಪತನವಾದೀತು. ಹೀಗೆ ದಿನನಿತ್ಯವೆಂಬಂತೆ ನಾವು ನಮ್ಮ ಪ್ರಜ್ಞೆ ಕಳೆದುಕೊಂಡಲ್ಲಿ ಮುಂದೆ ಪರಿಸ್ಥಿತಿ ತೀರ ಹದಗೆಡುವ ಸಂದರ್ಭ ಬಾರದೆ ಇಲ್ಲ.

ಹೇಗೆ ತಡೆಗಟ್ಟಬಹುದು:-ಹಾಗಾದರೆ ಏನಾದರೊಂದು ಬಗೆಯ ಕಾರ್ಯಕ್ರಮವನ್ನು ಕೈಗೊಂಡು ಇದನ್ನು ನಿಲ್ಲಿಸುವುದು ಅಗತ್ಯ. ಆದಕ್ಕಾಗಿ ನಾವೂ ನೀವೆಂದಲ್ಲದೆ ದೇಶದ ಪ್ರಜೆಗಳೂ ಭಾಗವಹಿಸಬಹುದು. ಪ್ರತಿಯೊಂದು ಖಾತೆಯವರೂ ಇದನ್ನು ಹಿಡಿದು ತಡೆಗಟ್ಟುವುದಕ್ಕಾಗಿ ಒಂದೊಂದು ವಿಧದ ಕಾರ್ಯಕಲಾಪಗಳನ್ನು ಕೈಗೊಳ್ಳುವುದು ಅವಶ್ಯ, ಅತ್ಯವಶ್ಯ.

೧. ಈಗಿನ ಈ ಸ್ಪೂಟ್ನಿಕ್ ಯುಗದಲ್ಲಿ ಏನೇನೂ ಕಾರ್ಯಕಲಾಪಗಳು ನಡೆಯುತ್ತಿಲ್ಲ? ಎಲ್ಲಾ ಸಾಧ್ಯತೆ ನಮ್ಮಲ್ಲಿರುವಾಗ ಈಯೊಂದು ದುಃಸ್ಥಿತಿಯನ್ನು ನಿವಾರಿಸುವಂತಹ ಶಕ್ತಿ ನಮಗೆ ಬಾರದಿದ್ದುದು ಶೋಚನೀಯ. ಕೆಲವರು ಅನ್ನುವರು 'ಅದು ಅಸಾಧ್ಯವೇ ಸರಿ, ಅಂತಹ ಶಕ್ತಿ ನಮಗಿಲ್ಲ' ಎಂದು. ಅವರಾದರೂ 'Awake, arise stop not till the goal is reached' ಎಂಬ ವಿವೇಕಾನಂದರ ವಾಣಿಯಿಂದ ಸ್ಫೂರ್ತಿಗೊಳ್ಳಲಿ.

ಇದನ್ನು ನಿವಾರಿಸಲೋಸುಗ ನಿರ್ದೇಶಕ, ನಿರ್ಮಾಪಕರಾದರೂ ಮದ್ಯಪಾನದಿಂದಾಗುವ ಹಾನಿ, ಅನರ್ಥವನ್ನು ಕಥಾವಸ್ತುವಾಗಿಟ್ಟುಕೊಂಡು ಹೃದಯಂಗಮವಾಗಿ ದಾರುಣ ಚಿತ್ರವೊಂದನ್ನು ತಯಾರಿಸಿ ಜನರ ಮುಂದಿಡತಕ್ಕದ್ದು. ಅದು ಅವರ ಮನಸ್ಸಿನ ಮೇಲೆ ಒಂದಿಷ್ಟಾದರೂ ಪರಿಣಾಮವನ್ನುಂಟು ಮಾಡತಕ್ಕಂತಹದಿದ್ದರೆ ಎಷ್ಟೋ ಒಳಿತಿತ್ತು. ಆದರೆ ನಿರ್ದೇಶಕ ನಿರ್ಮಾಪಕರಿಗೆ ಅದರತ್ತ ಗಮನವೇ ಇಲ್ಲದಿದ್ದಾಗ...... ಏನು ಮಾಡಲು ಸಾಧ್ಯವಾದೀತು? ಅವರು ತಯಾರಿಸುವ ಚಿತ್ರವೆಲ್ಲ ಪ್ರಣಯ ಚಿತ್ರಗಳೇ ಆಗಿರುತ್ತವೆ. ಇನ್ನು ನಾಟಕ ಮಂಡಲಿಯವರೂ ಇದೇ ರೀತಿಯ ವಿಷಯವನ್ನು ಎತ್ತಿಕೊಂಡು ನಾಟಕವನ್ನಾಡಿದರೆ ಎಷ್ಟೋ ಉಪಕಾರವಾಗುತ್ತಿತ್ತು.



ಭೂಮಿ ಅಥವಾ ನೀರಿನಿಂದ ಆರರಿಂದ ಹನ್ನೆರಡು ಅಂಗುಲ ಎತ್ತರದಲ್ಲಿ ಓಡಾಡಬಲ್ಲ ವಾಯು-ಕಾರು. ೨೧ ಅಡಿ ಉದ್ದ ೮ ಅಡಿ ಅಗಲವಿರುವ ಇದು ೧,೭೦೦ ರಾತಲು ಭಾರವಿರುವುದು; ನಾಲ್ಕು ಯಾತ್ರಿಕರನ್ನು ಒಯ್ಯುವುದು. ಅಮೆರಿಕೆಯು ಈ ಮಾದರಿಯ ಕಾರುಗಳನ್ನು ಉತ್ಪಾದಿಸಲು ತೊಡಗಿವೆ.

ಆದರೆ ಅವರಿಗೆ ಆಸ್ಥೆಯಿಲ್ಲ, ಇನ್ನಾದರೂ ಬರಲಿ!

೨. ಎರಡನೆಯದಾಗಿ ಪೋಲಿಸ್ ಖಾತೆಯವರು ಗಮನಿಸಬೇಕಾದ ಕರ್ತವ್ಯ. ಲಂಚಕ್ಕೆ ದಾಸರಾಗಿರುವ ಈ ಪೋಲಿಸರು ಕುಡುಕರಿಂದೆಲ್ಲ ಲಂಚ ಸ್ವೀಕರಿಸಿ ಅವರನ್ನು ಹಿಂದೆ ಕಳುಹಿಸಿಕೊಡುವರೆಂದು ಪ್ರತೀತಿ. ಇದು ಸರಿಯೆ? 'ಬೇಲಿಯೇ ಹೊಲಮೇಯ್ದಂತೆ'. ಅವರಿಂದೆಲ್ಲ ರಾಷ್ಟ್ರ ಬೆಳೆದೀತೆ? ಒಮ್ಮೆ ಹೀಗಾಯಿತೆಂದರೆ ಮುಂದೆ ಕುಡುಕರು ಪೋಲೀಸರನ್ನೇ ಕಂಡಾಕ್ಷಣ, ಕೂಡಲೇ ಅವರಿಗೆ ಒಂದಿಷ್ಟನ್ನು ಕೊಡುವರು; ಬಿಡುಗಡೆ ಹೊಂದುವರು. ಆದ್ದರಿಂದ ಮದ್ಯಪಾನವು ನಿರೋಧಿಸಲ್ಪಡಬೇಕು ಎಂಬ ಹೆಬ್ಬಯಕೆ ಸರಕಾರಕ್ಕಿದ್ದರೆ ಅವರು ಇಂತಹ ಲಂಚಕೋರ ಆಳುಗಳನ್ನು ಕೆಲಸದಿಂದ ತೆಗೆದುಹಾಕಬೇಕು. ಕೆಲವೊಮ್ಮೆ ಪೋಲೀಸರೇ ಕುಡಿದು ಗುಡ್ಡೆಯಾಗಿ ಬಿದ್ದುಕೊಂಡಿರುವ ದೃಶ್ಯ ನಮಗೆಲ್ಲ ಸಾಮಾನ್ಯವೇ ಆಗಿದೆ. ಬೋಧಕನೇ ತನ್ನ ಬೋಧನೆಗೆ ಸರಿಯಾಗಿ ನಡೆಯದಿದ್ದಲ್ಲಿ ಉಳಿದ ಶಿಷ್ಯರುಗಳ ಗತಿ? ಆದುದರಿಂದ ಸರಕಾರ ಇಂತಹ ಲಂಚಕೋರ, ಕುಡುಕ ಆಳುಗಳನ್ನು ಹೊರದಬ್ಬಿ, ಗೌರವಸ್ಥ ಆಳುಗಳನ್ನು ನೇಮಿಸತಕ್ಕದು.

ಚಿನ್ನಾಭರಣಗಳ ಭದ್ರತೆಯ ಮೇಲೆ ಸಣ್ಣ ಸಾಲಗಳು

- ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾದ ಸಿಂಡಿಕೇಟ್ ಬೇಂಕು, ದೊಡ್ಡ ಸಂಸ್ಥೆಯಾಗಿ ಬೆಳೆಯುತ್ತಾ ಮುಂದುವರಿಯುತ್ತಿದ್ದರೂ ಇದರ ವಿಸ್ತೃತ ಸೇವೆಯು ಚಿಕ್ಕಪುಟ್ಟ ಜನಸಾಮಾನ್ಯರಿಗೂ ಸದಾ ಸಿದ್ಧವಾಗಿಯೇ ಇದೆ
- ಚಿನ್ನಾಭರಣಗಳ ಭದ್ರತೆಯ ಮೇಲೆ ಸುಲಭ ಮತ್ತು ಆಕರ್ಷಕ ಶರ್ತಗಳಲ್ಲಿ ಚಿಕ್ಕ ಮೊಬಲಗುಗಳ ಸಾಲಗಳನ್ನು ಸಹಾ ಒದಗಿಸಿ, ಎಲ್ಲಾ ವರ್ಗದ ಜನರಿಗೂ ಬೇಂಕಿಂಗ್ ಸೌಲಭ್ಯಗಳು ದೊರಕುವಂತೆ ಮಾಡುವ ಸೌಕರ್ಯಗಳನ್ನೂ ಈಗ ನೀಡಲಾಗಿದೆ.

ನಿಮಗೆ ಸಮೀಪವಿರುವ ನಮ್ಮ
137 ಶಾಖೆಗಳಲ್ಲೊಂದರಲ್ಲಿ ವ್ಯವಹರಿಸಿರಿ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,
ಉಡುಪಿ

೩. ಕುಡುಕನು ಇನ್ನೊಮ್ಮೆ ಕುಡಿಯಬಾರದು, ಹಾಗಾಗಬೇಕಾದರೆ ಅವನ ಮೇಲೆ 'ದಂಡನೆ' ತೆರಿಗೆ ಹೊರಿಸಲ್ಪಡಬೇಕು. ಇಲ್ಲದಿದ್ದಲ್ಲಿ ಅವನಿಗೆ ಕಾರಾಗೃಹವಾಸವನ್ನೇ ವಿಧಿಸಬೇಕು. ಇದರಿಂದ ಕುಡುಕನು ಹೆದರುವಂತಾಗುತ್ತದೆ. ಆದ್ದರಿಂದ ಪ್ರತಿಯೊಂದು ಹಳ್ಳಿಗೆ ಅಗಾಗ್ಯ ಸುರಕ್ಷಿತ ಪೋಲಿಸುತಂಡವನ್ನು ಕಳುಹಿಸಿ ಕುಡುಕರನ್ನೆಲ್ಲ ಹಿಡಿದು ತರಬೇಕು. ಆದರೆ ಸರಕಾರಕ್ಕೆ ತಕ್ಕಂತೆಯೇ ಹುರುಪು, ಉತ್ಸಾಹ, ಹುಮ್ಮಸ್ಸು, ಶಕ್ತಿ, ಸಾಮರ್ಥ್ಯ ಬೇಕು.

೪. ೧೮೫೩ರಲ್ಲಿ ಇದ್ದ ಜೆ. ಥ್ಯಾಕರೆ ಅಂದಿದ್ದರು, "ಉತ್ತಮ ವರ್ಗದವರ ನಡವಳಿಗಳು ಕೆಳವರ್ಗದವರ ರೀತಿ ನೀತಿಯ ಮೇಲೆ ಪ್ರಭಾವ ಬೀರುವವು. ಮದ್ಯಪಾನದ ವಿಚಾರದಲ್ಲಿ ಪ್ರತ್ಯಕ್ಷ ಶಾಸನ ಕಟ್ಟಳೆಗಳ ತಡೆಗಿಂತ ಸಂಭಾವಿತ ಜನರು ಕುಡಿತವನ್ನು ಕಡೆಗಣಿಸುವುದರಿಂದ ಉಂಟಾದ ಪರಿಣಾಮವೇ ಇತರರನ್ನು ಅದರ ಗೋಜಿಗೆ ಹೋಗದಂತೆ ಮಾಡುತ್ತದೆ." ಎಂದು. 'ಇಂದಿನ ಮುದ್ದು ಮಕ್ಕಳೇ ಭವಿತವ್ಯದ ಮುದ್ದು ಜನಾಂಗ' ವಾದುದರಿಂದ ಇಂದಿನ ಹಿರಿಯರು ತಮ್ಮ ಮಕ್ಕಳ ವಾತಾವರಣವನ್ನು ಶುಭ್ರಗೊಳಿಸಲೆತ್ನಿಸಬೇಕು. ಏಕೆಂದರೆ ಗಿಡವಾಗಿ ಬಗ್ಗದು ಮರವಾಗಿ ಬಗ್ಗೀತೆ? ಇಲ್ಲ. ಮತ್ತೆ, ಮಕ್ಕಳ ಮನಸ್ಸು ಕಡೆದಂತೆ ಆಕಾರವಾಗಬಲ್ಲದು. ಆದುದರಿಂದ 'ನಾಟಕ ಮಂಡಲಿ' ಇತ್ಯಾದಿಯವರು ನಾಟಕವನ್ನು ಮಕ್ಕಳು ನೋಡುವಂತೆ ಎಡೆಗೊಡಬೇಕು. ಇದರಿಂದವರು 'ನಾನೇದೂ ಹೀಗಾಗೆ' ಎಂದು ಪಣತೊಟ್ಟಲ್ಲಿ ನಾಳಿನ ಭವಿತವ್ಯ ಭದ್ರ, ಸುಭದ್ರವಾದೀತು. ಕಾವ್ಯವಿನ್ನೂ ಮಿಂಚಿಲ್ಲ. ಇನ್ನೂ ಸಾಕಷ್ಟು ವಿಧದಿಂದ ಈಗಿನ ಮಕ್ಕಳ ವಾತಾವರಣವನ್ನು ಕಲ್ಮಶಗೊಳಿಸದಂತೆ ಜಾಗ್ರತೆವಹಿಸಬಹುದು. ಇಲ್ಲದಿದ್ದಲ್ಲಿ 'ತಂದೆ ಇಟ್ಟ ಸಂಕದಲ್ಲಿ ಮಗ ನಡೆದ' ಎಂಬಂತಾದೀತು.

ಎಲ್ಲಕ್ಕೂ ಪ್ರತಿಯೊಬ್ಬ ಪ್ರಜೆಯ ಸಹಕಾರ ಸರಕಾರಕ್ಕಿಲ್ಲದಿದ್ದಲ್ಲಿ ಇದನ್ನು ತಡೆಗಟ್ಟುವುದೊಂದು ಬೃಹತ್ ಸಮಸ್ಯೆಯಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಸರಕಾರವು ಪ್ರಜೆಗಳಿಗೀವ ಸೌಕರ್ಯವನ್ನು ಸ್ಮರಿಸಿ ಅದಕ್ಕೆ ಸರಿಯಾಗಿ ಪ್ರಜೆ ತನ್ನ ಸಹಕಾರ ಸರಕಾರಕ್ಕಿತ್ತರೆನೇ ಪ್ರಜಾಪ್ರಭುತ್ವದ ನೀತಿ ಒಡೆದುತೋರೀತ.

-ರಮೇಶ ಶೈ, ಕೆ. ಉಡುಪಿ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ 6–25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ.

ವರುಷ ೩೯. ವಾರ ೩೫ 5-5-1960 Vol 39 No 35

ಪ್ರಚಲಿತ ಕರ್ತವ್ಯ

ಸಂರಕ್ಷಣಾ ಮನೋಭಾವ ಬೆಳೆಯಬೇಕು

ನೆಹರೂ–ಚೌ ಮಾತುಕತೆಯು ವಿಫಲಗೊಂಡುದರಿಂದ ಭಾರತೀಯರ ಜವಾಬ್ದಾರಿಯು ಹೆಚ್ಚಾಗಿದೆ

ಜಗತ್ತಿನಾದ್ಯಂತ ಜನತೆಯು ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಭಾರತ ಪ್ರಧಾನಿ ನೆಹರೂ ಮತ್ತು ಚೀನೀ ಪ್ರಧಾನಿ ಚೌ-ಎನ್-ಲಾಯಿಯವರ ಮಾತುಕತೆಗಳು ಕೊನೆಗೊಳ್ಳುವಾಗ ಯಾವೊಂದು ಒಪ್ಪಂದಕ್ಕೆ ಬಾರದೆ ವಿಫಲಗೊಂಡುವು. ವಿವಾದದ ವಿಷಯಗಳು ಯಾವೊಂದು ಒಪ್ಪಂದಕ್ಕೆ ಬಾರದೆ, ಪರಸ್ಪರ ಮುಂದಟ್ಟಾಗದೆ ಬಾಕಿಯಾಗಿಯೇ ಉಳಿದಿವೆಯೆಂಬುದು ಕೂಡಾ ತೀರಾ ವಿಷಾದದ ಸಂಗತಿಯಾಗಿದೆ. ಏಷ್ಯಾ ಖಂಡದ ಎರಡು ರಾಷ್ಟ್ರಗಳ ಮಿತ್ರ ಜನತೆಯು ಪ್ರತಿನಿಧಿ ನಾಯಕರ ಮಾತುಕತೆಗೆ ಜಗತ್ತಿನಲ್ಲಿ ಮಹತ್ವದ ಸ್ಥಾನ ಇದ್ದಿತು. ಜಗತ್ತಿನ ಶಾಂತಿಪ್ರಿಯ ರಾಷ್ಟ್ರಗಳು ಈ ಮಾತುಕತೆಗಳಿಂದ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಿದ್ದವು. ಆದರೆ ಇದೀಗ ಅವರೆಲ್ಲರಿಗೂ ನಿರಾಶೆಯನ್ನುಂಟುಮಾಡುವ ಪ್ರತಿಫಲವು ದೊರಬಿದ್ದಿದೆ. ಯಾವುದೇ ಬಗೆಯ ಆಶಾದಾಯಕ ಒಪ್ಪಂದವಾಗದೆ ನಾಯಕರ ಮಾತು-ಕತೆಗಳು ಕೊನೆಗೊಂಡಿವೆ.

ಇದರ ಪರಿಣಾಮವಾಗಿ ಭಾರತದ ಎಲ್ಲೆಡೆಗಳಲ್ಲೂ ನಿರಾಶೆಯ ವಾತಾವರಣ ಕವಿದಿದೆ. ಗಡಿಯಲ್ಲಿನ ದುರ್ಘಟನೆಗಳು ಭಾರತೀಯರನ್ನು ಬಹಳಷ್ಟು ವಿವಂಚನೆಗೊಳಪಡಿಸಿದ್ದುವು. ಚೀನಾದ ಆಕ್ರಮಣವು ಶಾಂತಿಪ್ರೇಮಿ ಭಾರತೀಯರ ತಾಳ್ಮೆಯ ಪರೀಕ್ಷೆಯನ್ನೇ ಮಾಡಿದುವು. ಆದರೂ ಪಂಚಶೀಲದ ತತ್ವವನ್ನಪ್ಪಿಕೊಂಡ ಭಾರತವು ಎಲ್ಲಾ ಬಗೆಯ ಭಿನ್ನಾಭಿಪ್ರಾಯಗಳನ್ನೂ ಮಾತುಕತೆಯ ಮೂಲಕವೇ ಸಂಧಾನ ಮಾರ್ಗದಲ್ಲಿ ಬಗೆಹರಿಸಬೇಕೆಂದೇ ಬಯಸಿದ್ದಿತು. ಭಾರತದ ಜನತೆ ಇತ್ತ ಸ್ನೇಹಹಸ್ತದ ಕರೆಗೆ ಚೀನಾವು ಓಗೊಟ್ಟು ಭಾರತಕ್ಕೆ ಚೌ-ಎನ್-ಲಾಯಿ ಎಂದರೂ ಭಾರತೀಯರನ್ನಾಗಲೀ, ಶಾಂತಿಪ್ರಿಯರನ್ನಾಗಲೀ ಸಂತುಷ್ಟಗೊಳಿಸುವ ಯಾವ ಆಶಯ ಸುಳಿಯೂ ಮಾತುಕತೆಗಳಿಂದ ಮೂಡಿಬಂದಿಲ್ಲ.

ಈ ಕುರಿತು ಲೋಕಸಭೆಯಲ್ಲಿ ನಮ್ಮ ಪ್ರಧಾನಿ ಮಂತ್ರಿಗಳು ಹೇಳಿಕೆಯನ್ನೀಯುತ್ತಾ ಚೀನಾದೊಡನೆ ಯಾವುದೇ ಬಗೆಯ ಒಪ್ಪಂದದ ಭರವಸೆಯಿಲ್ಲ ಎಂದು ನುಡಿದರು ಮಾತ್ರವಲ್ಲ ಚೀನಾವು ಆಕ್ರಮಿಸಿದ ಭಾಗಗಳಿಂದ ಚೀನೀಯರನ್ನು ಹೊರದಬ್ಬಲು ಯಾವುದಾದರೊಂದು ಕಾರ್ಯವನ್ನು ಭಾರತ ಸರಕಾರ ಎಸಗುವಂತಿಲ್ಲವೇ ಎಂದೊಬ್ಬರು ಪ್ರಶ್ನಿಸಿದಾಗ ನೆಹರೂರವರು ಒಂದೇ ನಾವು ಸಂಗ್ರಾಮ ಹೂಡಬೇಕು ಇಲ್ಲವೆ ಯಾವುದಾದರೊಂದು ರೀತಿಯ ಸಮಾಲೋಚನೆ ನಡೆಸಬೇಕು ಎಂದಿರುವರು. ಭಾರತದ ಮುಂದಿರುವ ಮಾರ್ಗಗಳೆಂದರೆ ಬರೇ ಎರಡು. ಮೊದಲನೆಯದು ಸಮಾಲೋಚನೆ ತಪ್ಪಿದರೆ ಎರಡನೆಯದು ಸಂಗ್ರಾಮ. ಆದರೆ ಎರಡನೇ ಮಾರ್ಗವು ನಿಜಕ್ಕೂ ಲೋಕದ ಶಾಂತಿಗೆ ಭಂಗತರುವ ಶಾಂತಿಪ್ರಿಯ ರಾಷ್ಟ್ರಗಳು ಅಪೇಕ್ಷಿಸದ ಕಾರ್ಯವಾಗಿದೆ.

ಹಾಗೆಂದು ಭಾರತವು ದೇಶ ರಕ್ಷಣೆಯನ್ನು ಕಡೆಗಣಿಸುವಂತಿಲ್ಲ. ದೇಶರಕ್ಷಣೆಗೆ ವಿದೇಶೀ ಸೈನ್ಯ ಸಹಾಯವನ್ನಪೇಕ್ಷಿಸುವುದು ಅಥವಾ ಯಾವುದೇ ಬಗೆಯ ಒಪ್ಪಂದವನ್ನು ನಡೆಸುವುದು ಭಾರತದ ಶಾಂತಿಯುತ ಧೋರಣೆಗೆ ವ್ಯತಿರಿಕ್ತವಾದುದರಿಂದ ಅಂತಹ ಸಹಾಯವನ್ನು ಇಂದು ನಾವು ನಿರೀಕ್ಷಿಸಲಾಗುವುದಿಲ್ಲ. ರಾಜಾಜಿಯವರಂತಹ ಮುತ್ಸದ್ದಿಗಳೂ ಕೂಡಾ ಭಾರತವು ಕಮ್ಯೂನಿಸಂನ ವಿರುದ್ಧ ರಾಷ್ಟ್ರಗಳ ಸಹಕಾರವನ್ನು ಅಪೇಕ್ಷಿಸಿ ಅವುಗಳೊಡನೆ ಮೈತ್ರಿಯನ್ನು ಬೆಳೆಸಿಕೊಳ್ಳುವುದು ಇಂದಿನ ಗಂಡಾಂತರ ಪರಿಸ್ಥಿತಿಯಲ್ಲಿ ಅಗತ್ಯ ಎಂದಿರುವರು. ಆದರೆ ಪಂಚಶೀಲ ತತ್ವಸಾರಿದ ನೆಹರೂರವರು ಈ ಮಾತನ್ನು ಸರ್ವಥಾ ಒಪ್ಪಲಾರರು. ನಮ್ಮ ಕಾಲ ಮೇಲೆಯೇ ನಾವು ನಿಲ್ಲಬೇಕೆಂದು ಅವರು ಹೇಳುತ್ತಾ ಬಂದಿರುವರು. ಭಾರತವು ದೇಶದ ರಕ್ಷಣೆಗೆ ವಿದೇಶೀ ಸಹಾಯವನ್ನಪೇಕ್ಷಿಸದೆ ಇರುವಾಗ ಭಾರತ ಸರಕಾರದ ಮೇಲೆ ಭಾರತೀಯರ ಮೇಲೆ ಇಂದು ವಿಶೇಷ ಜವಾಬ್ದಾರಿ ಬಿದ್ದಿದೆ.

ಈ ಕಾಲ ಪಂಡಿತ ನೆಹರೂರವರು ಹೊಸದಿಲ್ಲಿಯಲ್ಲಿ ಸಂರಕ್ಷಣೆ ಮಹಾವಿದ್ಯಾಲಯದ ಉದ್ಘಾಟನಾ ಕಾಲದಲ್ಲಿ ಆಡಿದ ಮಾತುಗಳನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಅವರ ತನ್ನ ಉದ್ಘಾಟನಾ ಭಾಷಣದಲ್ಲಿ ಭಾರತದ ಗಡಿಗಳಲ್ಲಿ ದೀರ್ಘಕಾಲ ಮುಂದುವರಿಯಬಹುದಾದ ಹೊಸ ಗಂಡಾಂತರಗಳು ತಲೆಯೆತ್ತಿರುವುದರಿಂದ ಅವುಗಳನ್ನೆದುರಿಸಲು ಹೆಚ್ಚು ವ್ಯಾಪಕವಾದ ಸಂರಕ್ಷಣಾ ತಂತ್ರಗಳನ್ನು ರೂಪಿಸುವುದು ಅಗತ್ಯವಾಗಿದೆ ಎಂದಿರುವರು. ಭಾರತವು ಯುದ್ಧವನ್ನಪೇಕ್ಷಿಸದ ಶಾಂತಿಪ್ರಿಯ ರಾಷ್ಟ್ರವಾಗಿದ್ದರೂ ಸಹ, ದೇಶದ ರಕ್ಷಣೆಗೆ ಅದು ಪರಿಪೂರ್ಣ ಸಿದ್ಧವಿರುವುದು ಇಂದಿನ ಪರಿಸ್ಥಿತಿಯಲ್ಲಿ ಅಗತ್ಯವೆನಿಸಿದೆ. ಭಾರತವು ಸ್ವಾತಂತ್ರ್ಯಗಳಿಸಿದಾಗಿನಿಂದಲೇ ಗಡಿತಂಟೆಗಳನ್ನೆದುರಿಸುತ್ತ ಬಂದಿರುವುದರ ಫಲವಾಗಿ ಅಂದಿನಿಂದ ಇಂದಿನವರೆಗೆ ವಿಶೇಷ ಎಚ್ಚರಿಕೆಯನ್ನು ವಹಿಸಿಕೊಂಡು ಬಂದಿದೆ ಎಂಬುದೂ ಸಹಜವಾಗಿದೆ. ಆದರೆ ನೆಹರೂರವರು ಹೇಳಿರುವಂತೆ ಕಳೆದ ಒಂದು ವರ್ಷದಿಂದ ನಾವು ಹೊಸ ಮತ್ತು ದೊಡ್ಡ ಸ್ವರೂಪದ ಗಂಡಾಂತರಗಳನ್ನು ಎದುರಿಸಬೇಕಾಗಿದ್ದೇವೆ. ಇಂತಹ ಗಂಡಾಂತರ ಪರಿಸ್ಥಿತಿಯು ಕೊನೆಗೊಳ್ಳದೆ ಇನ್ನೂ ಮುಂದರಿಯುವ ಸಂಭವ ಹೆಚ್ಚೆಂಬುದು ಇತ್ತೀಚಿನ ವಾತಾವರಣದಿಂದ ತಿಳಿದು ಬರುತ್ತದೆ. ಚೀನಾದೊಡನೆ ಸಂಗ್ರಾಮ ಇಲ್ಲವೆ ಸಮಾಲೋಚನೆ ಎಂಬಾಗ ಸಮಾಲೋಚನೆಯ ದಾರಿ ಇಂದು ತುಸು ಬಳಸು ದಾರಿಯಾಗಿಯೇ ಕಾಣುತ್ತದೆ. ಚೀನಾವು ತಾನು ಆಕ್ರಮಿಸಿದ ಭಾರತದ ಭಾಗಗಳನ್ನು ಬಿಟ್ಟು ಹಿಂದೆ ಸರಿಯುವಂತಿಲ್ಲ. ಹಾಗಿರುವಾಗ ಆಕ್ರಮಣಕ್ಕೊಳಗಾದ ಭಾರತವು ನ್ಯಾಯವನ್ನು ಪಡೆಯುವ ಬಗೆ ಹೇಗೆ?

ಉತ್ತರದ ಗಡಿಯ ಸಂರಕ್ಷಣೆಯು ಹೋಣೆ ಇಂದು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಹೀಗಾಗಿ ಸರಕಾರದ ಸಂರಕ್ಷಣಾ ಜವಾಬ್ದಾರಿಯು ಇಂದು ತೀರಾ ಹೆಚ್ಚಾಗಿದೆ. ಜೊತೆಗೆ ಭಾರತೀಯರಲ್ಲಿಯೂ ಸಂರಕ್ಷಣಾ ಮನೋವೃತ್ತಿಯು ಬೆಳೆಯುವ ಅವಶ್ಯಕತೆಯಿದೆ. ಇಂದು ಶಕ್ತಿಯುತ ಚೀನಾದ ಆಕ್ರಮಣವು ನೈತಿಕ ದೃಷ್ಟಿಯಲ್ಲಿ ತಪ್ಪೆನಿಸಿದರೂ ಭಾರತವು ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳುವಲ್ಲಿ ಹಿಂದಾಗಬಾರದು. ದೇಶದ ಮುಂದೆ ಬಂದು ನಿಂತಿರುವ ಈ ಭೀಕರ ಸಮಸ್ಯೆಯನ್ನು ಧೈರ್ಯದಿಂದ ಎದುರಿಸುವ ಎದೆಗಾರಿಕೆ ಭಾರತೀಯರಲ್ಲಿ ಮೊಳೆಯಬೇಕು. ಭಾರತದ ರಕ್ಷಣೆಯ ಜವಾಬ್ದಾರಿ ಅದು ಕಠಿಣವು. ಈ ದಿಸೆಯಲ್ಲಿ ಸರಕಾರದ ಕರ್ತವ್ಯಗಳು ದ್ವಿಗುಣಿತವಾದಂತೆ ಜನತೆಯ ಕರ್ತವ್ಯವೂ ಹೆಚ್ಚಾಗಿದೆ. ಭಾರತೀಯರಲ್ಲಿ ಬೆಳೆದು ಬರಬೇಕಾದ ರಾಷ್ಟ್ರಪ್ರೇಮ, ದೇಶನಿಷ್ಠೆ, ದೇಶರಕ್ಷಣಾ ಭಾವನೆ ಬೇಕಾದಷ್ಟು ಬೆಳೆದುಬಂದಿಲ್ಲ. ಚೀನಾದ ಆಕ್ರಮಣವನ್ನು ನ್ಯಾಯವೆಂದು ಸಾರುವ, ಭಾರತೀಯರೆನಿಸಿಕೊಂಡವರೂ ಇಲ್ಲಿರುವರೆನ್ನುವಾಗ ಭಾ

(೧೨ನೇ ಪುಟ ನೋಡಿರಿ)

ವಿಜ್ಞಾನಿ ಬಿಲ್ ಟಿಷ್‌ವೆನ್‌ರವರು ಬೀಜ, ಗೆಡ್ಡೆ ಮೊದಲಾದುವುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು

ಕಥಾವಿಹಾರ

ಛಲೇ ಬೇಟಿಗಾರ!

ಜಯಭೂಷಣ ಚೌಧುರಿಗೆ ಹೆಚ್ಚಾಗಿ ಮನಿಆರ್ಡರ್ ಬರುತಿತ್ತು; ಆತ ಖ್ಯಾತನಾಮಾ ಹಿಂದೀ ಲೇಖಕ. ಆತನ ರಹಸ್ಯ ಭೇದಿಸಹೊರಟ ವೇಣುಗೋಪಾಲ ಶರ್ಮ ಅವನ ಬುದ್ಧಿವಂತಿಕೆಗೇ ತಲೆದೂಗಬೇಕಾಯಿತು!

ಮನುಷ್ಯ ತೀರಾ ಹಗುರೆಂದು ಅವನು ಕುಳಿತುಕೊಳ್ಳುವ ಆ ಕುರ್ಚಿಗೆ ಬಾಯಿಯಿರುತ್ತಿದ್ದರೆ ಅದು ಹೇಳುತಿತ್ತು. ಘನ ಶಾಲಿಗಳನ್ನು ಭರಿಸಿಕೊಳ್ಳುವಂತಹ ಆ ದೊಡ್ಡಗಲವಾದ ಕುರ್ಚಿಯಲ್ಲಿ ಆ ಮನುಷ್ಯ ಕುಳಿತಿದ್ದರೆ ಮನುಷ್ಯನಿರುವುದೇ ಕಾಣಿಸುತ್ತಿರಲಿಲ್ಲ. “ಬಾಬೂ” ಎಂದು ಆ ಕುರ್ಚಿಯಿಂದ ಆಫೀಸು ಬಾಯ್‌ಯನ್ನು ಕರೆಯುವ ಕೀಚುಧ್ವನಿ ಹೊರಟಾಗಲೇ ಅದರೊಳಗೆ ಆತ ಕುಳಿತಿರುವನೆಂದು ಗೊತ್ತಾಗುತ್ತದೆ.

ಹೆಚ್ಚಾಗಿ ಯಾರೊಡನೆಯೂ ಮಾತಾಡುವವನಲ್ಲ ಆತ. ಆದರೆ ಟೆಲಿಫೋನಿನಲ್ಲಿ ಹೆಚ್ಚಾಗಿ ಮಾತಾಡುತ್ತಾನೆ—ಹಿಂದಿಯಲ್ಲಿ. ಹಾಗೆಂತ ಆವ ಹಿಂದೀಯನಲ್ಲವಂತೆ; ಅದಕ್ಕಿಂತ ಒಂದು ಪಡಿ ಮೇಲಾದ ಹಿಂದೀ ಸಾಹಿತಿಯಂತೆ, ಅವನ ಹೆಸರು ಕೇಳಿದರೆ ಈ ಹೆಸರು ಇವನದಲ್ಲವೇನೋ ಎನಿಸೀತು. ಜಯಭೂಷಣ ಚೌಧುರಿ. ಸಾಕ್ಷಾತ್ ಉತ್ತರಾಪಥದ ಹೆಸರು. ನಿಜಕ್ಕೂ ದಕ್ಷಿಣಾತ್ಯನಾದ ಆತ ಭವಿಷ್ಯದಲ್ಲಿ ಉತ್ತರಾಪಥದ ಸಾಹಿತ್ಯರಂಗದಲ್ಲಿ ಮಂದಾವಾತವೋ ಜಂಝಾಮಾರುತವೋ ಆಗುವನೆಂದು ನಿಪುಣ ಜೋಯಿಸನು ಆ ಬಗೆಯ ಹೆಸರಿಟ್ಟನೋ ಅಲ್ಲ ಅವನೇ ತನ್ನ ಮುಂದಿನ ಮಾರ್ಗಕ್ಕೆ ತಕ್ಕ ಜ್ಯೋತಿಯಾಗುವಂತೆ ಆ ಹೆಸರನ್ನಿಟ್ಟುಕೊಂಡನೋ ತಿಳಿಯದು.

ಅವನನ್ನು ಕಂಡಕೂಡಲೇ ಆಗುವ ಅರ್ಥವೊಂದು; ಮತ್ತೆ ತಿಳುವಳಿಕೆಗೆಬರುವ ಅರ್ಥ ಬೇರೊಂದು. ಸ್ವಲ್ಪ ದೂರದಿಂದ ಅವನನ್ನು ನೋಡಿದರೆ ೨೫ ವಯಸ್ಸಿನ ತರುಣನಂತೆ ಕಾಣಿಸುತ್ತಾನೆ. ಕೆಂಚು ಕೆಂಚು ಕೂದಲಿನ ಕರ್ಲಿಂಗ್ ತುಂಬಿದ ಕಬ್ಬಿಯ ಕಾಡಿನಂತಹ ತಲೆ. ಕಪ್ಪು ಕನ್ನಡಕ. ಮುಖದಲ್ಲೆರಡು ಮೂಗಿನ ಬದಿಗಳಿಂದ ಹೊರಟ ಗೆರೆಗಳು. ಸಾದಾ ಷರಟು; ಪಾಯಿಜಾಮಾ. ಕೈಯಲ್ಲೊಂದು ಬ್ಯಾಗು. ಥಕ್ಕನೆ ನೋಡಿದರೆ ಈ ಹುಡುಗುಪ್ರಾಯದವನೊಬ್ಬ ಈ ಮಧ್ಯಮ ವಯಸ್ಸಿನವರ ಮಧ್ಯಕ್ಕೆ ಹೇಗೆ ಬಂದನಪ್ಪಾ ಅನಿಸೀತು. ಆ ಆಫೀಸಿನಲ್ಲಿರುವವರೆಲ್ಲರೂ ೬೦ ವಯಸ್ಸು ಮೀರಿದವರೇ. ಅಂತೆಯೇ ಜೆ. ಬಿ ಚೌಧುರಿಗೆ ಕೂಡಾ ನಿಜಕ್ಕೂ ೬೨ ವಯಸ್ಸಾಗಿದೆಯಂತೆ. ಮೂವರು ಮಕ್ಕಳು ಇದ್ದಾನಂತೆ; ಇನ್ನು ಮೇಲೆ ಮಕ್ಕಳಾಗದ ಹಾಗೆ ಆಪರೇಷನ್ ಬೇರೆ ಮಾಡಿಸಿಕೊಂಡಿದ್ದಾನಂತೆ. ಇದರಿಂದಲೇ ಆತ ಬಹಳ ಮುಂದಾಲೋಚನೆಯುಳ್ಳವನೆಂದು ಹೊಳೆಯುತ್ತದಲ್ಲವೆ? ಅವನೂ ವಿದ್ಯಾವತಿಯಾದ ಅವನ ಹೆಂಡತಿಯೂ ವಿರಾಮ ವೇಳೆಯಲ್ಲೆಲ್ಲಾ ಹಿಂದೀ ಸಾಹಿತ್ಯರಂಗದಲ್ಲಿ ವಿಹಾರಮಾಡುವ ಧನ್ಯ ಜೀವಿಗಳು.

ಆತನಿಗೆ ದಾಕ್ಷಿಣಾತ್ಯ ಭಾಷೆಗಳೆಲ್ಲವೂ ಸ್ವಲ್ಪ ಸ್ವಲ್ಪ ಗೊತ್ತಿತ್ತು. ಆತನ ಮಾತೃಭಾಷೆ ತೆಲುಗೋ ತಮಿಳೋ ಹೇಳುವುದು ಕಷ್ಟ. ಆಫೀಸಿನಲ್ಲಿ 'ಆಫೀಸು ಕೆಲಸ ಅಂತ ಇರುವುದು ಸ್ವಲ್ಪ ಮಾತ್ರ. ಉಳಿದ ವೇಳೆಯಲ್ಲೆಲ್ಲಾ ಆತ ಏನೋ ಬರೆಯುತ್ತಲೇ ಇರುತ್ತಾನೆ. ಬಾಬುವನ್ನು ಆಗಾಗ ಪೋಸ್ಟಾಫೀಸಿಗೆ ಓಡಿಸಿ ಅದೂ ಇದೂ ಕಳುಹಿಸುತ್ತಾ ಇರುತ್ತಾನೆ. ಈ ಆಫೀಸಿಗೆ ಪೋಸ್ಟ್ ಮ್ಯಾನ್ ಬಂದನೆಂದರೆ ಜೆ. ಬಿ. ಚೌಧುರಿಯನ್ನೆ ವಿಚಾರಿಸುವುದು ಹೆಚ್ಚು. ಆತನಿಗೆ ಮನಿಯಾರ್ಡರೋ ರಜಿಸ್ಟರೋ ಬಂದಿರುತ್ತದೆ. ಮನಿಯಾರ್ಡರು ಪಡೆದುಕೊಂಡಾಗಲೆಲ್ಲಾ ಚೌಧುರಿ ಇತರ ಸಹೋದ್ಯೋಗಿಗಳನ್ನು ನೋಡಿ ಮುಗುಳು ನಗುತ್ತ “ಏನಿಲ್ಲ; ಹಿಂದೀ ಜಯಕೇಶರಿಗೆ ಒಂದು ಆರ್ಟಿಕಲ್ ಕಳಿಸಿದ್ದೆ. ಟೊಂಟೀಫ್ಯಾ-ರಿಮ್ಯುನ್ರೇಷನ್ ಬಂತು” ಎನ್ನುತ್ತಿದ್ದ. ಎಲ್ಲರ ಅಭಿನಂದನೆ ಗಳಿಸುತ್ತಿದ್ದ. ಈ ಬಗೆಯಾಗಿ ದಿನಗಳೆದಂತೆ ತಿಂಗಳು ಸಂದಂತೆ ಆತನ ಗೌರವದ ತೂಕ ಹೆಚ್ಚಿಕೊಂಡು ಬರುತಿತ್ತು. ಮೈತೂಕ ಮಾತ್ರ ಆ ಕುರ್ಚಿಯೊಳಗೇ ಹುದುಗಿಕೊಂಡಿರುತಿತ್ತು.



ಭಿಲ್ಯಾ ಕಾರಖಾನೆಯಲ್ಲಿ ಎರಡನೆ ಕೋಕ್ ಭಟ್ಟಿಯಿಂದ ಮೂರನೆಯ ಭಟ್ಟಿಗೆ ೬೦೦ ಟನ್ ಭಾರದ ಚಕ್ರಗಳ ಕಟ್ಟಡವೊಂದನ್ನು ಸ್ಥಳಾಂತರಿಸುತ್ತಿರುವುದನ್ನು ಕಾಣಬಹುದು.

ಆ ಡಿಪಾರ್ಟ್‌ಮೆಂಟಿನಲ್ಲಿಯೇ ನಮ್ಮ ಕನ್ನಡ ಸಾಹಿತಿಗಳಾದ ವೇಣುಗೋಪಾಲ ಶರ್ಮರೂ ಇದ್ದರು. ಅವರ ಹೆಸರು ತಿಳಿಯದ ಕನ್ನಡಿಗರಿಲ್ಲವಷ್ಟೆ? ಅವರ ಕವನಗಳನ್ನೋ ಕತೆಗಳನ್ನೋ ಪ್ರಕಟಿಸದ ಕನ್ನಡ ಪತ್ರಿಕೆಯಾದರೂ ಯಾವುದಿದೆ? ಆ ಡಿಪಾರ್ಟ್‌ಮೆಂಟಿನಲ್ಲಿ ವೇಣುಗೋಪಾಲ ಶರ್ಮರ ಮೇಲೂ ಒಂದುಬಗೆಯ ಗೌರವವಿತ್ತು ಎಲ್ಲರಿಗೂ. ಪೋಸ್ಟಿನಲ್ಲಿ ಬರುವ ಕನ್ನಡ ಪತ್ರಿಕೆಗಳೆಲ್ಲ ಅವರಿಗೇ.

. ಆದರೆ ದಿನಹೋದಹಾಗೆ, ಜೆ. ಬಿ. ಚೌಧುರಿಯ ಗೌರವದ ಭಾರ ಹೆಚ್ಚುತ್ತಾ ಹೋದ ಹಾಗೆ, ವೇಣುಗೋಪಾಲ ಶರ್ಮರ ಮುಖ ಚಿಕ್ಕದಾಗುತ್ತಾ ಬಂತು. ಜೆ. ಬಿ. ಚೌಧುರಿಗೆ ಪೋಸ್ಟುಮ್ಯಾನ್ ಮಣಿಯಾರ್ಡರು ತಂದುಕೊಟ್ಟಾಗಲೆಲ್ಲ, ಆ ಚೌಧುರಿ ಮಣಿಯಾರ್ಡರು ಪಡೆದುಕೊಂಡು ಶರ್ಮರ ಮುಖವನ್ನೊಮ್ಮೆ ನೋಡಿ ನಗುತಿದ್ದ.

ಒಂದು ದಿನ ಆಫೀಸು ಸಹೋದ್ಯೋಗಿಗಳಿಬ್ಬರು ಕೇಳಿಯೇ ಬಿಟ್ಟರು. “ಅಲ್ಲಾ ಮಿಸ್ಟರ್ ಶರ್ಮರೇ, ನಿಮಗೆ ಪತ್ರಿಕೆಗಳೇ ಬರುವುದು ಕಾಣುತ್ತದಲ್ಲದೆ ಏನೂ ಮಣಿಯಾರ್ಡರು ಬರುವುದು ಒಮ್ಮೆ ಕೂಡಾ ಕಂಡಿಲ್ಲವಲ್ಲಾ!”

“ಮನಿಯಾರ್ಡರೆಂಬುದು ಕನ್ನಡ ಸಾಹಿತಿಗಳಿಗೆ ಬಹಳ ಅಪರೂಪದ ದರ್ಶನವಲ್ಲವೆ?” ಅಂದರು ಇನ್ನೊಬ್ಬರು.

“ದೇವರ ದರ್ಶನವಾಗಬೇಕಾದರೆ ತಪಸ್ಸು ಸಿದ್ಧಿಸಬೇಕು. ನಾನಿನ್ನೂ ತಪಸ್ವಿ ಮಾತ್ರ” ಎಂದರು ಶರ್ಮ.

“ಹಣದ ವಿಷಯದಲ್ಲಿ ಭಾವುಕ ಮಾತು ಪ್ರಯೋಜನವಿಲ್ಲವಯ್ಯ ಸ್ಪಷ್ಟವಾಗಿ ಕೇಳಬೇಕು ನೀವು” ಎಂದರು ಮೊದಲು ಮಾತಾಡಿದವರು.

“ಅದೊಂದು ಗೌರವಧನವಾಯಿತಲ್ಲಾ. ಕೇಳುವುದು ಅಗೌರವವಲ್ಲವೆ?” ಶರ್ಮರೆಂದರು.

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] (ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ತಮ್ಮನಿಗೆ ಓಲೆ–೩

ಚಿತ್ರಕಲೆ ಮತ್ತು ಕಾವ್ಯಕಲೆಗಳು

ಭೌತಿಕ ವಸ್ತುಗಳ ಸಹಾಯ ಪಡೆಯದ ಕಾವ್ಯಕಲೆಯೇ ಶ್ರೇಷ್ಠವಾಗಿದೆ;
ಎಂತಲೇ ಅದು ಅರುವತ್ತನಾಲ್ಕು ಕಲೆಗಳಲ್ಲೂ ಅಗ್ರಗಣ್ಯವಾಗಿದೆ.

ಆನಂದದಿಂದ ಪ್ರಕಟವಾದ ಆತ್ಮದ ಅಭಿವ್ಯಂಜನೆಯೇ ಕಲೆ. ಆತ್ಮವು ಆನಂದ ತುಂದಿಲಗೊಂಡು, ಹೃದಯಾಂತರಾಳದಿಂದ ಬಾಹಿರದಲ್ಲಿ ಪ್ರಕಾಶಗೊಳ್ಳಲು ಬಯಸುವಾಗಲೇ ಕಲೆಯ ಉತ್ಪತ್ತಿಯಾಗುವುದು.

"ಕಂಡೆ ಕರುಣ ನಿಧಿಯಾ ಗಂಗೆಯ
ಮಂಡೆಯೊಳಿಟ್ಟಾ ಧೊರೆಯಾ
ರುಂಡಮಾಲೆ ಸಿರಿಯಾ ಕೊರಳೊಳು
ಕೆಂಡಗಣ್ಣಿನ ಬಗೆಯಾ"

ಎಂದು ಶ್ರೀ ಪುರಂದರ ದಾಸರು ಆನಂದ ನಿಮಗ್ನರಾಗಿ ಹಾಡಲು ತೊಡಗಿದಾಗ, ಅವರ ಆತ್ಮವು ಸಂಗೀತ ರೂಪದಲ್ಲಿ ಪ್ರಕಟವಾಗಲಾರಂಭಿಸಿತು. ಇದೇ ನೈಜ ಕಲೆ. ಮಾನವ ತನ್ನ ಆತ್ಮವನ್ನು ಶಿಲಾ ಮೂರ್ತಿಗಳ ರೂಪದಲ್ಲಿ, ಚಿತ್ರಗಳ ರೂಪದಲ್ಲಿ, ಲೇಖನ ಅಥವಾ ಕಾವ್ಯಗಳ ರೂಪದಲ್ಲಿ ಪ್ರಕಟಿಸುತ್ತಾನೆ. ಕೆಲವೊಮ್ಮೆ ಆತನ ಆನಂದವು ನೃತ್ಯಾಭಿನಯಗಳ ರೂಪದಲ್ಲಿ ಅಥವಾ ತನ್ನ ಶರೀರವನ್ನೇ ಅಲಂಕರಿಸುವ ಮೂಲಕವಾಗಿ ಅಭಿವ್ಯಕ್ತವಾಗಬಹುದು. ಇವೂ ಕಲೆಯೇ. ನಮ್ಮ ಭಾರತದಲ್ಲಿ ಅಳಿ ಶಾಸ್ತ್ರ, ಶೈವ ಶಾಸ್ತ್ರ, ಶಿಲ್ಪ ಶಾಸ್ತ್ರವೇ ಮೊದಲಾದ ಅರುವತ್ತನಾಲ್ಕು ಕಲೆಗಳವೆಯೆಂದು ಅನಾದಿಯಿಂದಲೂ ಒಪ್ಪಿಕೊಂಡು ಬರಲಾಗಿದೆ. ಆದರೆ, ವಾಸ್ತವವಾಗಿ ಕಲೆಗಳು ಅನಂತವಿವೆ. ಆತ್ಮದ ಅಭಿವ್ಯಂಜನೆಯು ಭೌತಿಕ ಸಾಮಗ್ರಿಗಳಿಂದಾಗುವುದು. ಭೌತಿಕ ಪದಾರ್ಥಗಳ ಮೇಲೆ ಆತ್ಮವು ತನ್ನ ಮುದ್ರೆಯನ್ನು ಬಲವಾಗಿ ಒತ್ತುತ್ತದೆ. ಕೆಲವೊಂದು ಕಲೆಗಳಲ್ಲಿ ಭೌತಿಕ ವಸ್ತುವು ಅಧಿಕವಾಗಿರುತ್ತದೆ; ಇನ್ನು ಕೆಲವಲ್ಲಿ ಕಡಿಮೆಯಿರುವುದು. ಆತ್ಮದ ಪ್ರಭಾವ ಅತ್ಯಧಿಕವಿದ್ದು ಭೌತಿಕ ಸಾಮಗ್ರಿಯನು ಅತ್ಯಲ್ಪವಿದ್ದ ಕಲೆಯೇ ಸರ್ವೋತ್ತಮ ಹಾಗೂ ಶ್ರೇಷ್ಠಕಲೆಯೆನ್ನುತ್ತಾರೆ. ಈ ಒರಗಲ್ಲಿನಿಂದಲೇ ತಿಕ್ಕಿ ಕಲೆಗಳಲ್ಲಿ ಉಚ್ಚ ನೀಚ ಭೇದವನ್ನು ಮಾಡುತ್ತೇವೆ. ಭವನ ನಿರ್ಮಾಣ ಕಲೆಯಲ್ಲಿ ವಸ್ತು ಪ್ರಧಾನವಾಗಿರುವುದರಿಂದ ಅದರ ಸ್ಥಾನ ಕೆಳಗೆ. ಸಂಗೀತ ಮತ್ತು ಕಾವ್ಯಗಳು ಧ್ವನಿಯೊಡನೆ ಸಂಬಂಧವಿರಿಸಿಕೊಂಡಿವೆ. ಸಂಗೀತವು ಕೇವಲ ಧ್ವನಿಗೆ ಪ್ರಾಧಾನ್ಯವೀಯುತ್ತದೆ; ಕಾವ್ಯವು ಶಬ್ದ, ಧ್ವನಿಗಳೆರಡಕ್ಕೂ ಅಗ್ರಗಣ್ಯ ಸ್ಥಾನವನ್ನು ಕೊಡುತ್ತದೆ; ಎರಡರಲ್ಲೂ ಪರಸ್ಪರ ಅನುಕೂಲತೆಯನ್ನೂ ಕಲ್ಪಿಸಿಕೊಳ್ಳಲಾಗಿದೆ. ಆದುದರಿಂದ ಕಾವ್ಯವು ಸಂಗೀತಕ್ಕಿಂತ ಶ್ರೇಷ್ಠವಾದುದು ಎಂದು ತಿಳಿಯಲಾಗುತ್ತದೆ.

ಚಿತ್ರಕಲೆ ಮತ್ತು ಕಾವ್ಯಕಲೆಗಳೆರಡು ಪ್ರಧಾನ ಕಲೆಗಳು. ಮೊದಲನೆಯದು ಬಣ್ಣ ಮತ್ತು ರೇಖೆಗಳೊಡನೆ ಸಂಬಂಧವಿಟ್ಟುಕೊಂಡಿದ್ದರೆ, ಎರಡನೆಯದು ಶಬ್ದಗಳೊಡನೆ ಮೈತ್ರಿಯಿಟ್ಟುಕೊಂಡಿದೆ. ಭಾರತದಲ್ಲಿ ಅನಾದಿಯಿಂದಲೂ ಈ ಕಲಾದ್ವಯವನ್ನು ಆದರದಿಂದ ಕಾಣಲಾಗುತ್ತಿದೆ. ಕಾವ್ಯಶಾಸ್ತ್ರಗಳಿಗನುಸಾರವಾಗಿ ಬರೆಯಲ್ಪಟ್ಟ ಕಾವ್ಯಗಳಲ್ಲಿ ಚಿತ್ರದರ್ಶನವೂ ಪೂರ್ವಾನುರಾಗ(ನಾಯಕನಾಯಿಕೆಯರು ವಾಸ್ತವಿಕವಾಗಿ ಮಿಲನಗೊಳ್ಳುವುದಕ್ಕೆ ಮೊದಲಿನ ಅನುರಾಗ)ಕ್ಕೆ ಕಾರಣವೆಂದು ತಿಳಿಯಲಾಗಿದೆ. ಪುರಾಣಗಳಲ್ಲಿಯೂ ಚಿತ್ರಲೇಖೆಯೇ ಮೊದಲಾದ ಕುಶಲ ಚಿತ್ರಕರ್ತೃಗಳ ಉಲ್ಲೇಖಗಳು ದೊರೆಯುತ್ತವೆ. ದೂರ ದೇಶಗಳ ವಧೂವರರ ನಡುವೆ ಚಿತ್ರಗಳ ಮೂಲಕವೇ ವಿವಾಹದ ಮಾತುಕತೆಗಳು ನಡೆಯುತಿದ್ದುವು. ನಾಟಕದ ನಾಯಕರು ಆನಂದ ಮತ್ತು ಪ್ರೇಮ ಪ್ರಕಾಶನಾರ್ಥವಾಗಿ ತಮ್ಮ ಪ್ರೇಯಸಿಯರ ಚಿತ್ರಗಳನ್ನು ಬಿಡಿಸುತಿದ್ದರೆಂದೂ ಅದನ್ನು ತಮ್ಮ ಪಟ್ಟದ ರಾಣಿಯರಿಂದ ಅಡಗಿಸುತಿದ್ದರೆಂದೂ ಓದುತ್ತೇವೆ. 'ಅಭಿಜ್ಞಾನ ಶಾಕುಂತಲಾ' ನಾಟಕದ ಧೀರ ಲಲಿತ ನಾಯಕ ದುಷ್ಯಂತನು ಕುಶಲ ಚಿತ್ರಗಾರನಾಗಿದ್ದನು. ಶಕುಂತಲೆಯ ಕೈಯಿಂದ ಜಾರಿ ನೀರಿನಲ್ಲಿ ಬಿದ್ದಿದ್ದ ಮುದ್ರಿಕೆಯು ಅರಸನಿಗೆ ದೊರೆತಾಕ್ಷಣದಿಂದಲೇ ಆತನ ಸ್ಮೃತಿಯಲ್ಲಿ ಶಕುಂತಳೆಯ ರೂಪವು ಜಾಗ್ರತವಾಗಿತ್ತು. ವಿರಹ ವಿಹ್ವಲನಾದ ದುಷ್ಯಂತನು ಬಿಡಿಸಿದ್ದ ಆ ಚಿತ್ರವನ್ನು ಕಂಡು ಶಕುಂತಳೆಯ ಸಖಿ ಮಿಶ್ರಕೇಶಿಯೇ ದಂಗುಬಡೆದು ನಿಂತಳು; ದುಂಬಿಗಳೂ ವಂಚಿತವಾದುವು! ಇದೇ ರೀತಿಯಲ್ಲಿ ವೈದಿಕ ಕಾಲದಿಂದಲೂ ಕಾವ್ಯದ ಬಗೆಗೆ ಆದರ ಭಾವವು ಪ್ರಕಟವಾಗಿದೆ. ಭಗವದ್ಗೀತೆಯಲ್ಲಿ ಪರಮಾತ್ಮನ ವರ್ಣನೆಯನ್ನು ಕವಿ ಮಾಡಿದ್ದಾನೆ—"ಕವಿಂ ಪುರಾಣ ಮನುಶಾಸಿತಾರಂ" ಎಂದು. ಇಲ್ಲಿ 'ಕವಿ' ಶಬ್ದಕ್ಕೆ ಸರ್ವಜ್ಞ ಎಂಬ ಅರ್ಥವನ್ನು ಮಾಡಿಕೊಳ್ಳಲಾಗಿದೆ. ಆದುದರಿಂದಲೇ ಕವಿಗೆ ಗೋಚರಿಸದುದಿಲ್ಲ; ಆತ ಅರಿಯದುದಿಲ್ಲ. ನಮ್ಮ ದೇಶದ ಕಾವ್ಯಕಲೆಯಾದರೋ ವಾಲ್ಮೀಕಿ ರಾಮಾಯಣದ ಕಾಲದಿಂದಲೂ ಬೆಳೆಯುತ್ತ ಬಂದಿದೆ. ಕಾಲಿದಾಸ ಮತ್ತು ಭವಭೂತಿಯರ ಕಾವ್ಯಗಳು ಇಂತಿಗೂ ಅದ್ವಿತೀಯವೆನಿಸಿಕೊಂಡಿವೆ

ಚಿತ್ರಕಲೆ ಮತ್ತು ಕಾವ್ಯಕಲೆಗಳಲ್ಲಿ ಹಾಗೂ ಉಳಿದ ಕಲೆಗಳಲ್ಲಿರದ ಯಾವ ವಿಶೇಷತೆಗಳಿವೆ, ಚಿತ್ರ ಮತ್ತು ಕಾವ್ಯಗಳ ನಡುವಣ ಅಂತರಗಳಾವುವು ಎಂಬುದನ್ನು ತಿಳಿಯಬೇಕು. ಕಟ್ಟಡ ನಿರ್ಮಾಣ ಕಲೆ ಮತ್ತು ಮೂರ್ತಿ ಕೆತ್ತನೆಯ ಕಲೆಗಳಲ್ಲಿ ಭೌತಿಕ ವಸ್ತುಸಂಚಯ ಕಡಿಮೆಯಿದ್ದು ಆತ್ಮಾಭಿವ್ಯಕ್ತಿ ಹೆಚ್ಚಿದೆ. ಮೂರ್ತಿಯಲ್ಲಿ ಉದ್ದ, ಅಗಲ, ದಪ್ಪವಿರುತ್ತದೆ; ಚಿತ್ರವು ಉದ್ದಗಲದ ಸಮತಳದಲ್ಲಿ ಮಾತ್ರ ಬಿಡಿಸಲ್ಪಡುತ್ತದೆ. ಆದರೂ ಈ ಸಮತಳದಲ್ಲಿಯೇ ಎತ್ತರ, ಇಳಿ, ಆಳ ಮೊದಲಾದುವನ್ನು ತೋರಿಸುತ್ತೇವೆ. ಕಾವ್ಯದಲ್ಲಿ ಭೌತಿಕ ಸಾಮಗ್ರಿಗಳು ಇಲ್ಲವೇ ಇಲ್ಲ ಎಂದು ಹೇಳಬಹುದು; ಇದರಿಂದಾಗಿ ಅದು ಆತ್ಮದ ಆಟವಾಗಿಯೇ ಇರುತ್ತದೆ. ಆದುದರಿಂದ, ಈ ದೃಷ್ಟಿಯಿಂದ ಕಾವ್ಯಕಲೆಯೇ ಸರ್ವಶ್ರೇಷ್ಠವಾಗಿದೆ.

ಚಿತ್ರ ಮತ್ತು ಕಾವ್ಯಕಲೆಗಳಲ್ಲಿ ಈ ಒಂದು ಭೇದವಲ್ಲದೆ ಇನ್ನು ಕೆಲವಿವೆ; ಜತೆಗೆ ಕೆಲವೊಂದು ಸಮಾನತೆಗಳೂ ಇವೆ. ಸಮಾನತೆಯಿಲ್ಲವಾದರೆ ಅಸಮಾನತೆಯೂ ಇರುವುದು ಸಾಧ್ಯವಿಲ್ಲ. ಕಾವ್ಯದಲ್ಲಿ ವರ್ಣನೆಯಿರುವಷ್ಟರ ಮಟ್ಟಿಗೆ ಅದು ಚಿತ್ರಕಲೆಯನ್ನು ಹೋಲುತ್ತದೆ. ಚಿತ್ರಕಲೆಯು ಬಣ್ಣ ಮತ್ತು ಗೀಟುಗಳಿಂದ ವರ್ಣಿಸಿದರೆ, ಕಾವ್ಯಕಲೆಯು ಪದಪುಂಜಗಳಿಂದ ವಿವರಿಸುತ್ತದೆ. ಕಾವ್ಯಗಳಲ್ಲಿನ ಒಂದು ಪ್ರಕಾರವಾದ 'ಚಿತ್ರಕಾವ್ಯ'ವೆಂಬುದು ಕೇವಲ ಶಬ್ದರೂಪದ ಚಿತ್ರ; ಅದನ್ನು ಕಾವ್ಯವೆನ್ನುವುದಕ್ಕೆ ಅಲಂಕಾರಿಕರು ಉತ್ಸಾಹ ತೋರಿಸುವುದಿಲ್ಲ. ಶಬ್ದಗಳ ಮೂಲಕ ಕಲ್ಪನಾಪಟಲದಲ್ಲಿ ಅಂಕಿತವಾದ ಕಾವ್ಯದ ಒಂದು ಚಿತ್ರವನ್ನು ನೋಡಿರಿ:

ತೊಟ್ಟ ಹೊಸ ಯಜ್ಞೋಪವೀತದ
ಮಟ್ಟೆ ನೊಸಲಲಿ, ಕಾಸೆ ಮುಸಲಡಿಗೆ
ಕಟ್ಟಿಯಿರುಕಿದ ಕಕ್ಷೆ ಬೆರಳಲಿ ಮುರಿದ
ದರ್ಭೆಗಳ
ಉಟ್ಟ ಭಾಸರ ಬಳಲುಗಚ್ಚೆಯ
ನಟ್ಟ ಹಾಸದ ಜನದ ನಗೆಗಳ
ನಟ್ಟವಿಗನೋಸರಿಸಿ ಸಭೆಯಲಿ ಮೆಲ್ಲನೈ
ತಂದ ||

ತನ್ನನ್ನು ಗೇಲಿ ಮಾಡುತ್ತಿರುವ ವಿಪ್ರ ಸಭೆಯ ನಡುವಣಿಂದ ಬ್ರಾಹ್ಮಣವೇಶದ ಅರ್ಜುನ ಶಿವಧನು ಮುರಿಯಲು ಏಳುವ ಈ ಸನ್ನಿವೇಶ ವರ್ಣನೆ ಚಿತ್ರವತ್ತಾಗಿಲ್ಲವೆ? ಅಲ್ಲದೆ ಇದೇ ಭಾವವನ್ನು ಎಂತಹ ಕುಶಲ ಕಲಾವಿದನಾದರೂ ಚಿತ್ರಕಲೆಯಲ್ಲಿ ಇಷ್ಟೊಂದು ಪರಿಣತನಾಗಿ ಪ್ರದರ್ಶಿಸಲಾರನು. ಇನ್ನೊಂದು ಚಿತ್ರವನ್ನು ನೋಡಿರಿ. 'ಕವಿಕುಂಜರ ಲೀಲಾವತಿ'ಯಲ್ಲಿನ ಜಿಂಕೆ ನೀರು ಕುಡಿಯುವ ದೃಶ್ಯ ವರ್ಣನೆಯಿದು:

"ನಿಮಿರ್ದಕೊರಲ್, ಮರಲ್ದು ಮಣಿದೂರಿದ ಮುಂದಣಕಾಲ್ಗಳ್, ಇರ್ದ ಪಕ್ಷಿಪುಕನು, ಜೋಲ್ದ ಉರಂ, ಪೆರಗಂ ಅಪ್ಪಿದಕೊಂಬುಗಳ್, ಆಲಿಸುತ್ತೆ ವಿಶ್ರಮಿಸುವ ಕರ್ಣಗಳ್ ಮುಗುಳ್ದಕಣ್, ಮಿಡುಕೋಡುವ ಕಂಠನಾಳಂ ಅಂದಂ ಅಡರ್ದಿರೆ ನೀರಂ ಉಂಬ ಎರಲೆಯಂಬರ ಲೊಲ್ಲದೆ ನೋಡಿದಂ ನೃಪಂ."

ಇದು ಕೇವಲ ವರ್ಣನೆ ಮಾತ್ರವಲ್ಲ, ಬಾಯಾರಿದ ಜಿಂಕೆ ವಾಸ್ತವವಾಗಿ ನೀರು ಕುಡಿಯುವ ಸನ್ನಿವೇಶ. ಇದನ್ನೇ ಆಧಾರವಾಗಿಟ್ಟುಕೊಂಡು ರೇಖಾಚಿತ್ರವೊಂದನ್ನೂ ಎಳೆಯುವುದು ಸಾಧ್ಯವೆನಿಸುವುದಿಲ್ಲವೆ? ಆದುದರಿಂದಲೇ ಚಿತ್ರ ಮತ್ತು ಕಾವ್ಯಕಲೆಗಳು ಹೋಲಿಕೆಯಲ್ಲಿ ಅತಿ ನಿಕಟವಿವೆ. ಆದರೆ, ಮುಂದುವರಿದಂತೆ ಕಾವ್ಯವು ಚಿತ್ರಕಲೆಯನ್ನೂ ಮೀರಿಸಿ ಬಿಡುವುದು. ಅದು ಹೇಗೆ ಎಂಬುದನ್ನು ಮುಂದಿನ ಬಾರಿ ವಿವೇಚಿಸುವ,

—ಗೋರಾ.

ನಮ್ಮ ಬ್ಯಾಂಕಿನ
ಕೊಚ್ಚಿನ್ ಶಾಖೆಯ
ಹೊಸ ಕಟ್ಟಡವು

ಇದೇ ಮಾಹೆ 9ನೇ ತಾರೀಖು ತೆರೆಯಲ್ಪಡುವುದೆಂದು ತಿಳಿಸಲು ತುಂಬಾ ಹರ್ಷಿಸುತ್ತೇವೆ.

ನಿಮ್ಮ ಸೇವೆಗಾಗಿ "ಸೇಫ್ ಡಿಪಾಸಿಟ್ ಲಾಕರ್ಸ್" ಅಳವಡಿಸಲಾಗಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

(ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿರುವ ಷೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದು)

– ವಿಪುಲ ಸಂಪತ್ತು — ಅಪಾರ ಸೇವೆ –

ಹಾರ್ಮೋನಿಯಮ್
ಬೋಧನ ಕ್ರಮ

ಎಂಬ ಶ್ರೀ. ಎ. ರಾಮಕೃಷ್ಣನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಸಾಹಿತ್ಯದ ರಸದೌತಣ

ಕಾಮಿನೀ ರಾಮಾನುಜ ಸಂವಾದ

ಪ್ರೇಮವು ದಿವ್ಯವಾದ ಅಮೃತದಂತಿರುವುದು; ಕಾಮವು ವಿಷಮಿಶ್ರಿತವಾದ ಮಧುವಿನಂತಿರುವುದು—ಎಂದ ರಾಮಾನುಜನು ಕಾಮಿನಿಗೆ ಪ್ರೇಮ-ಕಾಮಗಳ ಅಂತರವನ್ನು ವಿವರಿಸಿದನು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕಾಮಿನಿಯ ನುಡಿಗಳನ್ನು ಕೇಳಿದ ಲಕ್ಷ್ಮಣನು ಗಾಂಭೀರ್ಯದಿಂದ ಹೇಳಿದನು—

"ರಮಣೀ, ನಿನ್ನ ಸಹಾನುಭೂತಿಗಾಗಿ ಧನ್ಯವಾದಗಳು. ಹೂಂ, ಸಾಮಾನ್ಯಳಾದ ಓರ್ವ ಯುವತಿಯು ಇಂತು ಮೋಸವಾಡಬಲ್ಲಳೆ? ಇದೋ ಕೇಳು—ನನಗೆ ಯಾವುದೇ ರೀತಿಯ ಅಭಾವ ಅಥವಾ ಚಿಂತೆಯಿಲ್ಲ, ತಿಳಿದುಕೋ" ಇದಕ್ಕೆ ಆಕೆ,

"ಹಾಗಾದರೆ ನೀವು ಈ ವಯಸ್ಸಿನಲ್ಲಿ ಇದೇಕೆ ಹೀಗೆ ವ್ಯರ್ಥವಾಗಿ ತಪಸ್ಸೆಯ್ಯುತ್ತಿದ್ದೀರಿ? ನಿಮ್ಮ ಗೃಹಸ್ಥಾಶ್ರಮ ಧರ್ಮವನ್ನು ಬಿಟ್ಟು ಆಚರಿಸುತ್ತಿರುವ ಈ ನಿಮ್ಮ ಆಚರಣೆಯಿಂದ ನಿಮಗೆ ಪಾಪ ತಟ್ಟದಿರುವುದೆ? ನೀವು ಮಾಡುತ್ತಿರುವ ತಪಸ್ಸು ಖಂಡಿತವಾಗಿಯೂ ನಿಷ್ಕಾಮ ತಪವಲ್ಲ! ಈ ತಪಸ್ಸಿನ ಫಲ ನಿಮಗೆ ಸಿಕ್ಕಿದ ಮೇಲೂ, ನೀವು ಅದನ್ನು ಪಡೆದು, ಅನುಭವಿಸದೆ ಇರುವುದೆಂದರೆ, ಇದು ಸರಿಯೇ? ನೀವು ದೊರೆತ ಫಲವನ್ನು ಖಂಡಿತ ತ್ಯಜಿಸಲಾರಿರಿ! ಈ ಜಗತ್ತಿನಲ್ಲಿ ಎಷ್ಟೋ ಮಂದಿ, ಸಸಿಯನ್ನು ನೆಟ್ಟು ಸಾಕುತ್ತಾರೆ. ಅದು ಮರವಾಗಿ ಫಲ ಕೊಟ್ಟಾಗ— ಅದನ್ನವರು ತ್ಯಜಿಸುತ್ತಾರೆಯೇ?" ಎಂದಳು.

ಆಗ ರಾಮಾನುಜನು ನಗುನಗುತ್ತ ಹೇಳಿದನು—"ನಾನು ತಪಸ್ಸು ಮಾಡದೆಯೇ 'ತಾಪಸ' ಎಂಬ ಬಿರುದನ್ನು ನಿನ್ನಿಂದ ಪಡೆದಂತಾಯಿತು. ನಾನು ತಪಸ್ಸಿನಿಂದಾಗಿ ಫಲವನ್ನು ಪಡೆದುದೇ ಆದರೆ, ಅದನ್ನು ಖಂಡಿತ ಉಪಭೋಗಿಸಲಾರೆ! ಆ ಫಲವನ್ನು ನಿನ್ನಂಥವರಿಗಾಗಿಯೇ ಮೀಸಲಾಗಿರಿಸುತ್ತೇನೆ" ಎಂದಾಗ—ಆಕೆ, ಕಿಲಕಿಲನೆ ನಗುತ್ತ—

"ಒಂದು ವೇಳೆ ನಿಮ್ಮ ತಪಸ್ಸಿನ ಫಲವೇ ನಾನಾಗಿದ್ದೇನೆಂದಾದರೆ, ನಾನೇ ಭಾಗ್ಯಶಾಲಿ! ಅಂತಾದರೆ, ನೀವೇ ಹೇಳಿ, ಆಗ ನಾನೇನು ಮಾಡಬಹುದು? ಅದಕ್ಕಾಗಿಯೇ ಈ ಅಪೂರ್ವ ಸಂದರ್ಭವನ್ನು ಹಾಗೆಯೇ ಬಿಟ್ಟುಬಿಡಲಾರೆ" ಎಂದಳು.

ಆಗ ಸೌಮಿತ್ರಿಯೂ ನಗುತ್ತ— "ಒಂದು ವೇಳೆ, ನೀನೇ ನನ್ನ ತಪಸ್ಸಿನ ಫಲವಾಗಿ ಬಂದಿರುವೆಯಾದರೆ, ಈ ಫಲರೂಪವಾದ ನಿನ್ನನ್ನು ಸ್ವೀಕರಿಸಲು ಯೋಗ್ಯನಾದ ವರನನ್ನು ನಾನೇ ಹುಡುಕಬಲ್ಲೆ! ಆದರೆ, ಈ ಕೆಲಸ ಸುಲಭವಾದುದಲ್ಲ!" ಎಂದಾಗ—ಆ ವಿಚಿತ್ರ ನಾರಿ--

"ನಾನೇ ಅಂತಹ ಯೋಗ್ಯ ವರನನ್ನು ಹುಡುಕಿದ್ದೇನೆ! ಅವನು ನನ್ನೆದುರಿಗೇ ಇದ್ದಾನೆ! ಆದರೆ ಅವನ ಹೆಸರು ಮಾತ್ರ ನನಗೆ ಗೊತ್ತಿಲ್ಲ" ಎಂದಳು.

ಆಗ ರಾಮಾನುಜನು ಬೆಚ್ಚಿಬಿದ್ದವನಂತೆ ನುಡಿದನು – "ಏನು? ಯಾರು? ಯಾರು?" ಆಗ ಆ ರಮಣಿಯು "ನೀವು" ಎಂದಿಷ್ಟೇ ಹೇಳಿ, ತುಸು ಸುಲಜ್ಜೆಯಾದಂತೆ, ನಟಿಸಿದಳು.

ಈ ಅವಾಚ್ಯ ಶಬ್ದಗಳನ್ನು ಕೇಳಲಾರದ ಲಕ್ಷ್ಮಣನು, 'ಶಾಂತಂ ಪಾಪಂ, ಶಾಂತಂ ಪಾಪಂ' ಎನ್ನುತ್ತ ಕಿವಿಗಳನ್ನು ಮುಚ್ಚಿಕೊಂಡು ಹೇಳಿದನು— "ಏ.... ಮನಸ್ಸಿಗೆ ಬಂದಂತೆ ಹರಟುತ್ತಿರುವ ರಮಣೀ........ ನಾನು ವಿವಾಹಿತನಾಗಿದ್ದೇನೆ"

"ಆದರೂ ತಾನೆ ಏನಾಯಿತು? ಪುರುಷರು ಎರಡೆರಡು ಪತ್ನಿಯರನ್ನು ಮಾಡಿಕೊಂಡಿರುವುದಿಲ್ಲವೇ? ಪುರುಷರು ರಚಿಸಿದ, ಆ ಶಾಸ್ತ್ರ ಪದ್ಧತಿಯಲ್ಲಿ ತಮಗೆ ಬೇಕಾದ ಹಾಗೆ, ಬಹುಪತ್ನೀ ನಿಯಮವನ್ನು ಇಟ್ಟುಕೊಂಡಿದ್ದಾರೆ. ಆದರೆ ಸ್ತ್ರೀಯರಿಗೆ ಮಾತ್ರ ಅಂತಹ ಅವಕಾಶವೇ ಇಲ್ಲದಂತೆ ಮಾಡಿ, ಅವರನ್ನು ಏಕಪತ್ನೀ ವ್ರತರಸ್ಥರನ್ನಾಗಿ ಜೀವಿಸುವಂತೆ, ನಿಯಮಕ್ಕೊಳಪಡಿಸಿದ್ದಾರೆ. ಇಂತಹ ಪುರುಷರು ಸ್ತ್ರೀಯರ ಸುಖವನ್ನೇ ಕಡೆಗಣಿಸುತ್ತಾರೆ!" ಎಂದಳು.

ಆಗ ಸೌಮಿತ್ರಿಯು– "ಹಾಗಾದರೆ, ಸ್ತ್ರೀಯರೇ ಶಾಸ್ತ್ರನಿಯಮಗಳನ್ನು ಮಾಡಿ ತಮಗೆ ಬಹು ಪತಿಗಳನ್ನು ಹೊಂದುವ, ಅಧಿಕಾರವನ್ನಿಡಬೇಕಾಗಿತ್ತು' ಎಂದು ನೀನು ಹೇಳುತ್ತಿರುವೆಯಾದರೆ, ಇದನ್ನು ನೀನು ಮೊದಲು ತಿಳಿದುಕೊಳ್ಳಬೇಕು. ಯಾವ ಸ್ತ್ರೀಯು, ಪತಿವ್ರತೆಯಾಗಿರುತ್ತಾಳೋ, ಅಂತಹಳನ್ನು ದೇವಿಯಂತೆ ತಿಳಿದು, ಪುರುಷರೂ ಅವಳ ಗುಣಗಾನ ಮಾಡುತ್ತಾರೆ! ನಮ್ಮ ಶಾಸ್ತ್ರಗಳು ಹೇಗೂ ಇರಲಿ, ಆದರೆ ನಮ್ಮ ಆಚರಣೆ ನಮ್ಮ ಅಂತರಾತ್ಮನಿಗೆ ತೃಪ್ತಿಕೊಡುವಂಥದಾಗಿರಬೇಕು. 'ನಮ್ಮ ಆಚರಣೆಯ ಉಚಿತ ಅನುಚಿತಗಳನ್ನು ಅಂತಃಕರಣ ಶುದ್ಧಿಯಿಂದಲೇ ಅರಿತುಕೊಳ್ಳಬೇಕು. ಧರ್ಮ ಅಧರ್ಮ ಪಾಪ ಪುಣ್ಯ ಇವುಗಳನ್ನು ತಿಳಿದುಕೊಳ್ಳಲು, ನಮ್ಮ ಆತ್ಮವೇ ಒಂದು ಸಾಧನವಾಗಿದೆಯೆಂದು, ನಾನು ಅಭಿಪ್ರಾಯಪಡುತ್ತೇನೆ. ಯಾವ ಆದರ್ಶವು ಸ್ತ್ರೀಯರಲ್ಲಿರುವುದೋ ಅದೇ ಆದರ್ಶವು ಪುರುಷರಲ್ಲೂ ಇರಬೇಕೆಂದು, ನಾನು ಅಪೇಕ್ಷಿಸುತ್ತೇನೆ! ಹೇ ಭದ್ರೆ! ಕ್ಷಮಿಸು! ನೀನು ಯಾವನಾದರೂ ಭಾಗ್ಯಶಾಲಿಯನ್ನು ವರಿಸಿ, ನಿನ್ನ ಉನ್ಮಾದವನ್ನು ತಣಿಸಿಕೋ! ನನ್ನೊಡನೆ ನಿನ್ನ ಬೇಳೆ ಬೇಯಲಾರದು!" ಎಂದನು. ಆಗ ಕಾಮಿನಿಯು—

"ಅರೆ! ನೀವು ಚೆನ್ನಾಗಿ ಹೇಳಿದಿರಿ! ನನ್ನ ಮನಸ್ಸನ್ನು ನೀವೇ ಅಪಹರಿಸಿಬಿಟ್ಟಿದ್ದೀರಿ! ಇನ್ನು ನಾನು, ಯಾವ ಮನಸ್ಸಿನಿಂದ ಬೇರೊಬ್ಬನನ್ನು ವರಿಸಲಿ?" ಎಂದಾಗ ಲಕ್ಷ್ಮಣನು—"ಆಃ ಚೆನ್ನಾಯಿತು. ಈ ಅಪರಾಧವನ್ನು ನನ್ನ ಮೇಲೆ ಹೊರಿಸುತ್ತಿರುವೆಯಾ!" ಎಂದನು. ಆಗ ಆಕೆ, "ಇಲ್ಲ...ಇಲ್ಲ ಅದು ಹಾಗಿಲ್ಲ. ನಿಜವಾಗಿ ಹೇಳುವುದಾದರೆ-ನಿಮ್ಮನ್ನು ನೋಡಿದಬಳಿಕ, ನನ್ನ ಮನಸ್ಸು ಪೂರ್ಣ ಸೋತಿತು! ಸೋತು ಸುಸ್ತಾದ ಮನಸ್ಸು ನನ್ನಿಂದ ಹೊರಟು ಹೋಗಿಯೇ ಬಿಟ್ಟಿದೆ! ನಾನು ಎಷ್ಟೋ ಪ್ರಯತ್ನಪಟ್ಟರೂ, ನನ್ನ ಮನಸ್ಸು ನನ್ನ ಅಧೀನದಲ್ಲಿ ಉಳಿಯಲು ಒಪ್ಪಲೇ ಇಲ್ಲ! ಹಾಗಾದುದೂ ಸರಿಯೇ ಎಂದು ನನಗೆ ಸಂತೋಷವಾಗಿದೆ! ಕಾರಣ ನಿಮ್ಮನ್ನು ನೋಡಿ, ನಾನೇ ಮೋಹಗೊಂಡಿದ್ದೇನೆ. ಆದರೆ ಇದು, ನನ್ನ ತಪ್ಪು ಮಾತ್ರವಲ್ಲ! ತಪ್ಪಾದರೆ, ನಿಮ್ಮದೂ, ಇದರಲ್ಲಿ ಸ್ವಲ್ಪ ಭಾಗ ಉಂಟು. ಹೇಗೆಂದರೆ—ಚಂದ್ರನನ್ನು ನೋಡಿದ ಚಕೋರಿಯು ಮೋಹಗೊಳ್ಳುತ್ತದೆ. ಹಾಗಾದರೆ ಇದಕ್ಕೆ ಚಂದ್ರನ ಹೇಗೆ ಕಾರಣನಾಗುತ್ತಾನೆ? ಎಂದು ನೀವು ಕೇಳಬಹುದು. ಆದರೆ ಅದಕ್ಕೆ ನಾನು ಹೇಳುವುದಿಷ್ಟೆ. ಚಂದ್ರನು ಚಕೋರಿಯತ್ತ ತನ್ನ ಸುಂದರ ಕಿರಣಗಳನ್ನೇಕೆ ಬೀರಿದ? ಅದು ಚಂದ್ರನ ಮೌನರೂಪವಾದ ಆಹ್ವಾನವಲ್ಲದಿದ್ದರೆ ಮತ್ತೇನು? ಇದೇ ರೀತಿಯಾಗಿ ದೀಪಜ್ಯೋತಿಯು ತನ್ನ ಕಾಂತಿಯನ್ನು ಬೀರದೆ ಇರುತ್ತಿರುವುದಾಗಿದ್ದರೆ, ಆಗ ಪತಂಗವು ಅದರ ಕಡೆ ಆಕರ್ಷಿತವಾಗುವ ಸಂಭವವೇ ಇರುತ್ತಿರಲಿಲ್ಲ. ನಿಜವಾಗಿಯೂ, ಯೋಚಿಸಿನೋಡಿ. ಇದೇ ರೀತಿ ನಿಮ್ಮ ಸೌಂದರ್ಯವು ನನ್ನನ್ನು ನಿಮ್ಮ ಕಡೆ, ಸೂಜಿಗಲ್ಲಿನಂತೆ, ತಾನಾಗಿಯೇ ಎಳೆದುಕೊಂಡಿರುವುದಲ್ಲದಿದ್ದರೆ, ನಾನೇಕೆ ನಿಮ್ಮ ಮೇಲೆ ಮೋಹಪರವಶಳಾಗುತ್ತಿದ್ದೆ? ನೀವೇ ಹೇಳಿ, ನಿಮ್ಮಲ್ಲಿ ಇಂತಹ ಅಪೂರ್ವ ಯೌವನ— ತುಂಬಿಕೊಂಡಿರುವಾಗ— ನೀವು ನನ್ನನ್ನೇಕೆ ಹೀಗೆ ಪೀಡಿಸುತ್ತಿರುವಿರಿ? ಅಬ್ಬಾ! ನಿಮ್ಮ ಹೃದಯವು ಎಷ್ಟು ಕಠೋರವಪ್ಪಾ! ಅಯ್ಯೋ ನನ್ನನ್ನೇಕೆ ಹೀಗೆ ಬಳಲಿಸುತ್ತಿರುವಿರಿ? ಪ್ರಭಾತ ಸಮಯ! ಮಂದಮಾರುತನ ಬೀಸುವಿಕೆಯಿಂದ, ಮುಗುಳು ಅರಳದಿರುತ್ತದೆಯೇ? ನಿಮ್ಮ—ರೂಪ— ಯೌವನವನ್ನು ಕಂಡ ಬಳಿಕ, ನನ್ನ ಆಶಾಪುಷ್ಪ ಅರಳಿ ಸುಗಂಧವನ್ನು ಸೂಸದಿರುತ್ತದೆಯೇ?" ಎನ್ನುತ್ತ ವೈಯ್ಯಾರದೊಡನೆ, ಲಕ್ಷ್ಮಣನನ್ನೇ ದಿಟ್ಟಿಸುತ್ತಿದ್ದ ಆ ಮೋಹನಾಂಗಿಯನ್ನು ತಡೆದು, ಲಕ್ಷ್ಮಣನು ಉತ್ತರವಿತ್ತನು—

"ಏ...ಕಾಮಿನೀ....ನೀನು ಯಾರ ರೂಪದ ವ್ಯರ್ಥವಾದ ಪ್ರಶಂಸೆ ಮಾಡುತ್ತಿರುವೆಯೋ, ಅಂಥವರ ಕುಲಶೀಲ ಗೌರವವನ್ನಾದರೂ,ನೀನು ಯೋಚಿಸಬೇಡವೇ? ಅವರು ಯಾರು? ಯಾವವಂಶಕ್ಕೆ ಸೇರಿದವರು? ಅವರ ನಿಯಮ ಸಿದ್ಧಾಂತಗಳೇನು? ಇದನ್ನಾದರೂ ನೀನರಿತಿರುವೆಯಾ? ಇದೊಂದನ್ನೂ ತಿಳಿಯದೆ ಓರ್ವ ಸಾಮಾನ್ಯ ವ್ಯಕ್ತಿಯೊಡನೆ, ಮಾತನಾಡುತ್ತಿರುವಂತೆ, ನೀನು ಚಾತುರ್ಯದಿಂದ ಮಾತನಾಡುತ್ತಿರುವುದು ಸರಿಯಲ್ಲ. ತಿಳಿಯಿತೇ?" ಎಂದಾಗ ಕಾಮಿನಿಯು ಕಾಮೋನ್ಮಾದ, ಪೂರ್ಣವಾಗಿ ಏರಿ, ಅಂತಿಮ

(೯ನೇ ಪುಟ ನೋಡಿರಿ)

ಅಮೆರಿಕೆಯ ಅಧ್ಯಕ್ಷ ಐಸನ್‌ಹಾವರರನ್ನು ಅವರ ದಕ್ಷಿಣ ಅಮೆರಿಕೆಯ ಸಂಚಾರಕಾಲದಲ್ಲಿ ಉರುಗ್ವೆಯ ಅಧ್ಯಕ್ಷ ಬನೆಟೊ ನರ್ಡೋನರು (ಬಲಕ್ಕೆ) ಸ್ವಾಗತಿಸಿದರು.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಸ್ವಪ್ನಲೋಕ

ಕನಸುಗಳಲ್ಲಿ ನಿಯಮಿತತೆಯಿದೆಯೆ?

ಸ್ವಪ್ನಶಾಸ್ತ್ರವೇತ್ತರು ಇದೆಯೆನ್ನುತ್ತಾರೆ; ತಮ್ಮ ಅಭಿಪ್ರಾಯಕ್ಕೆ ಅವರು ಪ್ರಯೋಗಗಳ ಆಧಾರವನ್ನೂ ಕೊಡುತ್ತಾರೆ.

ಕನಸು ಮತ್ತು ನಿದ್ದೆಯ ಬಗ್ಗೆ ಮಾತೆತ್ತಾಗ, 'ನನಗಾದರೋ ಸ್ವಪ್ನವೇ ಗೋಚರಿಸುವುದಿಲ್ಲ' ಎಂಬ ಮಾತು ಯಾರಾದರೊಬ್ಬನ ಬಾಯಿಯಿಂದ ಹೊರಬರಬಹುದು. ಗಮನಪೂರ್ವಕವಾಗಿ ಆಲೋಚಿಸುವುದಾದರೆ, ಈ ಮಾತು ಅಭಿಮಾನದೊಡನೆ ಹೇಳಲ್ಪಟ್ಟು ಪ್ರಶಂಸಾಭಾವದೊಡನೆ ಕೇಳಲ್ಪಡುತ್ತದೆ. ಸ್ವಪ್ನಗಾಣದಿರುವುದು ಉತ್ತಮ ಆರೋಗ್ಯದ ದ್ಯೋತಕವಾಗಿದೆ. ಆದರೆ, ಆಧುನಿಕ ವಿಜ್ಞಾನದಂತೆ ಇದು ಉದ್ದಿಷ್ಟ ಆರೋಗ್ಯದ ಲಕ್ಷಣವಲ್ಲ; ಸ್ಮೃತಿಶಕ್ತಿಯ ಅಭಾವದ ಕುರುಹಾಗಿದೆ.

ವಾಸ್ತವಿಕವಾಗಿ ಹೇಳುವುದಾದರೆ, ಪ್ರತಿಯೊಬ್ಬನೂ ಪ್ರತಿ ದಿನವೂ ಎಷ್ಟೋ ಕನಸುಗಳನ್ನು ಕಾಣುತ್ತಾನೆ. ಆದರೆ, ಕೆಲವು ವ್ಯಕ್ತಿಗಳು ಜಾಗ್ರತಾವಸ್ಥೆಯನ್ನು ಪಡೆದೊಡನೆಯೇ ಈ ಕನಸುಗಳನ್ನು ಮರೆತುಬಿಡುತ್ತಾರೆ. ಅವರ ಸ್ಮರಣಶಕ್ತಿಯು ಕ್ಷಮತಾ ಪೂರ್ಣವಾಗಿರುವುದೇ ಇದಕ್ಕೆ ಕಾರಣವಾಗಿದೆ. ಮಕ್ಕಳು ಕೆಲವೊಮ್ಮೆ ತಮ್ಮ ಬೆರಳನ್ನು ಕಚ್ಚುತ್ತಾರೆ; ಆದರೆ, ಸ್ವಲ್ಪ ಸಮಯಾನಂತರ ತಾವು ಅದೇಕೆ ಹಾಗೆ ಮಾಡಿದೆವೆಂದು ಅವಕ್ಕೆ ತಿಳಿಯುವುದಿಲ್ಲ. ಹಾಗೆಯೇ ಸ್ವಪ್ನಗಳನ್ನು ಮರೆಯುವುದೂ ಒಂದು ವಿಧದಲ್ಲಿ ಮೆದುಳಿನ ಅಶಕ್ತತೆಯಾಗಿದೆ.

"ಆರು ತಾಸುಗಳ ನಿರಂತರ ನಿದ್ರಾವಸ್ಥೆಯಲ್ಲಿ ನಾವು ೬೪ ನಿಮಿಷಗಳ ಕಾಲ ಸ್ವಪ್ನ ಕಾಣುತ್ತೇವೆ; ಎಂಟು ಅಥವಾ ಅದಕ್ಕಿಂತ ಹೆಚ್ಚಿನ ನಿದ್ರಾಸಮಯದಲ್ಲಿ ಒಂದೂವರೆಯಿಂದ ಎರಡು ಘಂಟೆಗಳ ಕಾಲ ಕನಸುಕಾಣುತ್ತೇವೆ" ಎಂದು ನಿದ್ರೆಯ ರಹಸ್ಯವನ್ನು ಭೇದಿಸುವ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಒಂದು ಸ್ವಪ್ನವು ಕೊನೆಗೊಂಡು ಇನ್ನೊಂದು ಪ್ರಾರಂಭವಾಗುವುದರ ನಡುವೆ ನಿಶ್ಚಿತಾವಧಿಯ ವಿರಾಮವೆಂಬುದಿರುವುದಿಲ್ಲ. ಕೆಲವೊಮ್ಮೆ ಶೀಘ್ರದಲ್ಲಿಯೇ ಹೊಸ ಕನಸು ಕಾಣಬಹುದು; ಇನ್ನು ಕೆಲವೊಮ್ಮೆ ಬಹು ಸಮಯದವರೆಗೂ ಅದು ಗೋಚರಿಸದಿರಬಹುದು. ಈ ಸ್ವಪ್ನಗಳು ೮-೯ ಮಿನಿಟುಗಳಿಂದ ಹಿಡಿದು ೩೦ ನಿಮಿಷಗಳ ಕಾಲವನ್ನು ಆಕ್ರಮಿಸಬಹುದು.

ಮೆದುಳಿನ, ಮನಸ್ಸಿನ ಮತ್ತು ದೇಹದ ವಿಕ್ಷೋಭಗಳಿಂದಲೇ ಸ್ವಪ್ನಗಳು ಗೋಚರಿಸುವುವೆಂದು ಈಗ ಎಲ್ಲರೂ ಒಪ್ಪುತ್ತಾರೆ. ಈ ತೆರದ ವಿಕ್ಷೋಭಗಳು ಕನಸುಗಳ ಮೇಲೆಯೂ ಪರ್ಯಾಪ್ತ ಪ್ರಭಾವವನ್ನು ಬೀರುವುದು. ವಸ್ತುತಃ ಸ್ವಪ್ನವೆನ್ನುವುದು ನಿದ್ರೆ ಮತ್ತು ಜಾಗ್ರತಾವಸ್ಥೆಗಳ ಸಮ್ಮಿಶ್ರಣವಾಗಿದೆ. ಸ್ವಪ್ನಾವಸ್ಥೆಯಲ್ಲಿ ಎಲ್ಲಾ ಕೆಲಸಗಳು ಶೀಘ್ರಗತಿಯಲ್ಲಿ ನಡೆಯುತ್ತವೆಂದು ತಿಳಿಯಲಾಗುತ್ತಿದ್ದರೂ ನಿಜವಾಗಿ ಹೇಳುವುದಾದರೆ, ಜಾಗ್ರತಾವಸ್ಥೆಯಲ್ಲಿ ತಗಲುವಷ್ಟೇ ಸಮಯವನ್ನು ಸ್ವಪ್ನದಲ್ಲಿಯೂ ಅವು ತೆಗೆದುಕೊಳ್ಳುತ್ತವೆ. ಮಲಗಿದ ವ್ಯಕ್ತಿ ಕೈಕಾಲುಗಳನ್ನು ಎಳೆದಾಡುತ್ತ, ಪಕ್ಕ ಬಗಲಾಯಿಸುತ್ತ ಇರುವಾಗ ಸ್ವಪ್ನ ತೋರುತ್ತದೆ ಎಂದು ಹೇಳಲಾಗುತ್ತದೆ. ಆದರೆ, ಹತ್ತರಲ್ಲಿ ಒಂಬತ್ತು ಜನರು ಸ್ವಪ್ನಾವಸ್ಥೆಯಲ್ಲಿ ಶಿಥಿಲ ಅಂಗಧಾರಿಗಳಾಗುತ್ತಾರೆಂದು ಪ್ರಯೋಗಗಳಿಂದ ಸಿದ್ಧವಾಗಿದೆ. ಕೆಲವು ವ್ಯಕ್ತಿಗಳು ಸ್ವಪ್ನದಲ್ಲಿ ಶಾರೀರಿಕ ದೃಷ್ಟಿಯಿಂದ ಅತ್ಯಧಿಕ ಸಕ್ರಿಯರಾಗಿರುವುದು ನಿಜವೇ. ರಾತ್ರಿಯಲ್ಲಿ ನಿದ್ರೆಯಿಂದೆದ್ದು ತಿರುಗುವವರನ್ನು ಈ ಸಾಲಿಗೆ ಸೇರಿಸಬಹುದು.

ಸಂಗೀತದಲ್ಲಿ ಲಯ ಮತ್ತು ತಾಳಗಳಿರುವಂತೆ ಸ್ವಪ್ನವೂ ನಿದ್ರೆಯೊಡನೆ ಲಯವಾಗಿ ಜತೆಗೂಡುತ್ತದೆ ಎಂದು ಅತ್ಯಾಧುನಿಕ ಸಂಶೋಧನೆಗಳು ಸಿದ್ಧಮಾಡಿಕೊಟ್ಟಿವೆ. ಓರ್ವನು ಆರು ತಾಸು ನಿದ್ರೆ ಮಾಡಿದರೆ, ಆದರಲ್ಲಿ ಸಂಪೂರ್ಣ ನಿರ್ವಿಕಲ್ಪ ನಿದ್ರಾವಧಿ ಅತ್ಯಲ್ಪವಾಗಿದೆ. ಅನಂತರ ಆತ ನಿದ್ರೆಯ ಒಂದು ಸಾಮಾನ್ಯ ಅವಸ್ಥೆಯನ್ನು ಹೊಂದುತ್ತಾನೆ. ತದನಂತರ, ನಿದ್ರೆ ಮತ್ತು ಸ್ವಪ್ನಗಳ ತರಂಗಗಳು ಒಂದರಹಿಂದೊಂದು ಎಡತಾಕುತ್ತವೆ. ಪ್ರತಿಯೊಬ್ಬನ ನಿದ್ರಾಕಾಲದಲ್ಲಿ ಒಂದು ನಿಶ್ಚಿತ ಭಾಗವು ಸ್ವಪ್ನಕಾಣುವುದರಲ್ಲಿಯೇ ಕಳೆಯುತ್ತದೆ. ಅಧಿಕ ಉತ್ಸಾಹಿಗಳೂ ರುಚಿ ವೈಚಿತ್ರ್ಯವುಳ್ಳವರೂ ಅಧಿಕ ಉತ್ತೇಜನಾಮಯವಾದ ಸ್ವಪ್ನಗಳನ್ನೇ ಕಾಣುತ್ತಾರೆ. ಅವರ ಜೀವನದ ರುಚಿ ವೈಚಿತ್ರ್ಯ ಜಾಗ್ರತಾವಸ್ಥೆಯಂತೆಯೇ ಸ್ವಪ್ನಾವಸ್ಥೆಯಲ್ಲಿಯೂ ಅವರಿಗೆ ಅನುಭೂತಿಯ ವಿಶಾಲ ಕ್ಷೇತ್ರವನ್ನು ಒದಗಿಸಿಕೊಡುತ್ತದೆ. ಸ್ತ್ರೀಯರಿಗೆ ಮತ್ತು ಕಲಾತ್ಮಕ ಪ್ರಕೃತಿಯುಳ್ಳವರಿಗೆ ಅಧಿಕ ಪ್ರಮಾಣದಲ್ಲಿ ಸ್ವಪ್ನಗಳು ಬೀಳುತ್ತವೆ ಎಂಬುದು ಮಾತ್ರ ನಿರ್ಮೂಲ ವಿಷಯವಾಗಿದೆ.

ಅದೆಷ್ಟೋ ಜನರು ಬಹುಪ್ರಕಾರದ ಸ್ವಪ್ನಗಳನ್ನು ವರ್ಣಿಸುತ್ತಾರೆ. ವರ್ಣವರ್ಣದ ಕನಸುಗಳನ್ನು ಕೇವಲ ಕೆಲವೇ ಮಂದಿ ಕಾಣುತ್ತಾರೆ. ಆತ್ಮಹತ್ಯೆ ಪ್ರಾಯಃ ಪ್ರಾಕೃತಿಕ ದೃಶ್ಯಗಳೊಡನೆ ಸಂಬದ್ಧವಾಗಿರುತ್ತವೆ; ಅವೆಲ್ಲವೂ ಸಾಮಾನ್ಯವಾಗಿ ನಸುನೀಲಿ, ಗುಲಾಬಿ ಅಥವಾ ಹಸುರು ಬಣ್ಣಗಳಲ್ಲಿ ತೋರುವುವು. ಆದರೆ, ಇಂತಹ ಸ್ವಪ್ನಗಳು ಬಹಳ ವಿರಳ.

ಮೇಲೆ ಹೇಳಿದ ಪರಿಣಾಮಗಳೆಲ್ಲವೂ ಚಿಕಾಗೋವಿನ ನಿದ್ರಾಪ್ರಯೋಗ ಶಾಲೆಯಲ್ಲಿ ನಡೆಸಿದ ಪರೀಕ್ಷಣೆಗಳಿಂದ ವ್ಯಕ್ತವಾದುವುಗಳು. ಈ ಶಾಲೆಯು ಚಿಕಾಗೊವಿನ ದಕ್ಷಿಣದಲ್ಲಿರುವ ಏಬಟ್ ಹಾಲಿನಲ್ಲಿರುವುದು. ಇದಕ್ಕೆ ಪ್ರಯೋಗ ಶಾಲೆಯೆನ್ನುವುದಕ್ಕಿಂತ ಶಯನಗೃಹವೆಂದು ಕರೆಯುವುದು ಒಳ್ಳೆಯದು. ಇಲ್ಲಿ ಜನರಿಗೆ ಮಲಗುವ ಸೌಕರ್ಯಗಳಿವೆ. ಪ್ರಯೋಗಗಳಲ್ಲಿ ಆಸಕ್ತಿ ತೋರಿಸುವ ವೈಜ್ಞಾನಿಕರು ಮತ್ತು ಆವಶ್ಯಕತೆಯಿರುವ ವಿದ್ಯಾರ್ಥಿಗಳು ಅಥವಾ ಅನ್ಯ ವ್ಯಕ್ತಿಗಳನ್ನು ಇಲ್ಲಿಗೆ ನಿದ್ರಿಸಲು ಆಮಂತ್ರಿಸುತ್ತಾರೆ. ಒಂದು ರಾತ್ರಿ ಇಲ್ಲಿ ನಿದ್ರಿಸಿದರೆ, ಮೂರು ಡಾಲರುಗಳ ಪ್ರತಿಫಲವನ್ನು ಕೊಡುತ್ತಾರೆ.

ಮಲಗುವುದಕ್ಕೆ ಮೊದಲು ಪರೀಕ್ಷಾರ್ಥಿಗಳ ಹಣೆ, ಕಣ್ಣೆ, ಬೆನ್ನು, ರೆಪ್ಪೆ, ಎದೆಗಳ ಮೇಲೆ ಸಂವೇದನಗ್ರಾಹಿ ಇಲೆಕ್ಟ್ರೋಡ್‌ಗಳನ್ನು ಜೋಡಿಸುತ್ತಾರೆ. ಅವರ ತಲೆಯನ್ನು ಕೆಂಪು, ಹಳದಿ, ಹಸುರು ಮತ್ತು ನೀಲಿ ಬಣ್ಣಗಳ ತಂತಿಗಳ ಮೂಲಕ ಪಕ್ಕದ ಕೋಣೆಗಳಲ್ಲಿಟ್ಟಿರುವ ಯಂತ್ರಗಳಿಗೆ ಜೋಡಿಸುತ್ತಾರೆ. ಇವುಗಳಲ್ಲಿ ಒಂದು ಯಂತ್ರವನ್ನು ಕಾರ್ಡಿಯೊಟಿಕೋಮೀಟರ್ ಎನ್ನುತ್ತಾರೆ. ಇದು ಅವರ ಹೃದಯದ ಬಡಿತವನ್ನು ಗ್ರಹಿಸುತ್ತದೆ. ಇಲೆಕ್ಟ್ರೋ ಎನ್ಸಿ ಫೈಲೊಗ್ರಾಫ್ ಎಂಬ ಯಂತ್ರವು ಮಲಗಿದವರ ಮೆದುಳಿನ ಅತಿಸೂಕ್ಷ್ಮ ವಿದ್ಯುತ್ ತರಂಗಗಳನ್ನು ಹಲವು ಲಕ್ಷ ಪಾಲು ವಿಸ್ತೃತವಾಗಿರಿಸಿ ಒಂದು ಹಲಗೆಯಲ್ಲಿ ಗುರುತಿಸುತ್ತದೆ.

ಈ ಉಪಕರಣಗಳ ಮೂಲಕ ವೈಜ್ಞಾನಿಕರು ನೂರಾರು ಜನರ ನಿದ್ರಾವಸ್ಥೆಯ

(೮ನೇ ಪುಟ ನೋಡಿರಿ)

ಅಮೇರಿಕೆಯ ಅಧ್ಯಕ್ಷ ಐಕರು ಬ್ರೆಜಿಲ್‌ಗೆ ಭೇಟಿಯಿತ್ತಾಗ, ಅಲ್ಲಿನ ಅಧಿಕಾರಿಗಳು ಅವರನ್ನು ಸ್ವಾಗತಿಸಿದರು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

ಕ್ರಮನಂಬ್ರ 50|1960.

...ತನ್ನ — ವಾದಿ.

ಮತ್ತು

...ದುರ್ಗಾಪರಮೇಶ್ವರಿ ದೇವರ ಭಂಡಾರ - ದವುಬೆಟ್ಟು ಅಜ್ಜಿಬೆಟ್ಟು ಗ್ರಾಮ-ಪ್ರತಿವಾದಿ.

ಯಿದರ 3ನೇ ಟ್ರಸ್ಟಿ ಶ್ರೀ ರಾಮ ಕೃಷ್ಣ ...ಬಂಜ ಶಿವಪ್ಪ ಪೂಂಜರ ಮಗ ಬೆಳ್ತಂಗಡಿ ತಾಲೂಕು ಅಜ್ಜಿಬೆಟ್ಟು ಗ್ರಾಮ-

ಸದ್ರಿ ಪ್ರತಿವಾದಿ ದೇವರ ಭಂಡಾರದ ಆಗತ್ಯ ವ. ನ್ಯಾಯವಾದ ಗರ್ಜಿನ ಪ್ರಯೋಜನದ ಬಗ್ಗೆ ವಾದಿಳಿಂದ ಪಡದ ಪ್ರತಿಫಲದ ರುಪ್ಯಾ 900|-ಕ್ಕೆ ಕಳೆದ ತಾ. 4-5-1944 ಲ್ಲಿ ಪ್ರತಿವಾದಿ ದೇವರ ಭಂಡಾರದ ಆಗಿನ ಟ್ರಸ್ಟಿಗಳು ೨. ನಿಶೀ ಬರಕೊಟ್ಟ ಸ್ಥಿರಾಸ್ತಿಯ ದಸ್ತವೇಜು ಪ್ರಕಾರ ವಾದಿಳಿಗೆ ಬಹಾಲು ರೂಪಾಯಿ 900|- ಮತ್ತು ತಾರೀಕು .5-1950 ಕ್ಕೆ ಒಹಾ ಬಡ್ಡಿ ಮತ್ತು ಲೋಯರ್ಸ್ ರಿ. ನೋಟೀಸುಗಳ ಖರ್ಚು ರೂಪ್ಯಾ .00 ಕೂಡಾ ರೂ. 940-62ನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲ್ಕಂಡ ದಾವೆಯಲ್ಲಿ 3ನೇ ಟ್ರಸ್ಟಿಯು ತಾರೀಕು -6-1960 ರಲ್ಲು ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉತ್ತರಿಸದಿದ್ದರೆ ಆತನ ಗೈರು ಹಾಜರಿಯಲ್ಲಿ ಸದ್ರಿ ದಾವಾ ತೀರ್ಮಾನಿಸಲಾದೀತು. ಎಂತ ಕೋರ್ಟು ಹುಕ್ಮಂ ಪ್ರಕಾರ 3ನೇ ಟ್ರಸ್ಟಿಗೆ ತಿಳಿಸೋಣಾಗಿದೆ.

V. V. Upadhyaya

ವಾದಿಳಕಡೆ ಎಡ್ವಕೇಟ್

ಕಾರ್ಕಳ ತಾ 20 4—60.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೫-೫-'೬೦	೩೫

ಕಾಮನ್‌ವೆಲ್ತ್ ಸಮ್ಮೇಳನ

ಮಂಗಳವಾರದಂದು ಲಂಡನಿನಲ್ಲಿ ಸಮಾವೇಶಗೊಂಡ ಕಾಮನ್‌ವೆಲ್ತ್ ಪ್ರಧಾನ ಮಂತ್ರಿಗಳ ಪರಿಷತ್ತಿನ ದೆಸೆಯಿಂದ ಲಂಡನ್‌ನಲ್ಲಿ ರಾಜಕೀಯ ಚಟುವಟಿಕೆಗಳು ಹೆಚ್ಚಾಗಿವೆ. ಮಂಗಳವಾರದಿಂದ ಮೊದಲ್ಗೊಂಡು ಹತ್ತು ದಿನಗಳ ತನಕ ನಡೆಯಲಿರುವ ಈ ಪರಿಷತ್ತು ಜಗತ್ತಿನ ದೃಷ್ಟಿಯಲ್ಲಿ ಮಾತ್ರವಲ್ಲ ಭಾರತದ ದೃಷ್ಟಿಯಲ್ಲಿಯೂ ಒಂದು ಮಹತ್ವಪೂರ್ಣ ಸ್ಥಾನಗಳಿಸಿದೆ ಎಂದರೆ ತಪ್ಪಲ್ಲ. ಕಾಮನ್‌ವೆಲ್ತ್ ರಾಷ್ಟ್ರಗಳ ನಾಯಕರು ಈಗಾಗಲೇ ಲಂಡನ್ ಸೇರಿದ್ದು ಹಲವಾರು ಜಾಗತಿಕ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳೊಳಗಿನ ಸಮಸ್ಯೆಗಳ ಕುರಿತು ವಿಚಾರವಿನಿಮಯ ನಡೆಸಲಿರುವರು. ಕಾಮನ್‌ವೆಲ್ತ್ ಎಂಬುದು ಸ್ವತಂತ್ರ ರಾಷ್ಟ್ರಗಳ ಒಂದು ಗುಂಪಾಗಿದ್ದು ಪರಸ್ಪರ ಹಿತಾಸಕ್ತಿಯುಳ್ಳ ವಿಷಯಗಳು ಇಲ್ಲಿ ಚರ್ಚೆಗೆ ಬರುವುದು ವಾಡಿಕೆಯಾಗಿದೆ.

ಈ ಬಾರಿಯ ಕಾಮನ್‌ವೆಲ್ತ್ ಅಧಿವೇಶನದಲ್ಲಿ ಪ್ರಾಮುಖ್ಯವಾಗಿ ಪೂರ್ವ ಪಶ್ಚಿಮ ರಾಷ್ಟ್ರಗಳೊಳಗಿನ ಸಂಬಂಧದ ವಿಮರ್ಶೆ ಹಾಗೂ ಮೇ ೧೬ರಂದು ಪ್ಯಾರಿಸದಲ್ಲಿ ಸಮಾವೇಶಗೊಳ್ಳಲಿರುವ ವರಿಷ್ಠ ಸಮ್ಮೇಲನದ ಫಲಶ್ರುತಿಯ ಬಗ್ಗೆ ಚರ್ಚೆಗೆ ಅವಕಾಶನೀಡಲಾಗಿದೆಯೆಂದು ತಿಳಿದು ಬಂದಿದೆ. ಪೂರ್ವ ಪಶ್ಚಿಮ ರಾಷ್ಟ್ರಗಳೊಳಗಿನ ಸಂಬಂಧವು ಇತ್ತೀಚೆಗೆ ಸುಧಾರಿಸುತ್ತಾ ಬರುತ್ತಿದ್ದು, ಪರಸ್ಪರ ಉತ್ತಮ ಅಭಿಪ್ರಾಯ ಇಕ್ಕಡೆಯ ರಾಷ್ಟ್ರಗಳಲ್ಲೂ ಮೂಡಿಬಂದಿರುವುದು. ಅಂತೆಯೇ ಪ್ಯಾರಿಸಿನಲ್ಲಿ ಜರಗಲಿರುವ ವರಿಷ್ಠ ಸಮ್ಮೇಲನದ ಫಲಶ್ರುತಿಯ ಬಗ್ಗೆಯೂ ಕಾಮನ್‌ವೆಲ್ತ್ ರಾಷ್ಟ್ರನಾಯಕರು ಚರ್ಚಿಸುವುದು ತೀರಾ ಸಮಂಜಸವಾಗಿದೆ. ಜಾಗತಿಕ ಹಿತಾಸಕ್ತಿಯಿಂದ ಒಂದುಗೂಡಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ನಾಯಕರು ಈ ಸಂಬಂಧದ ಚರ್ಚೆ ನಡೆಸಿ ಉತ್ತಮ ಅಭಿಪ್ರಾಯ ಪ್ರಕಟಪಡಿಸುವರೆಂದು ನಿರೀಕ್ಷಿಸಿದರೆ ತಪ್ಪೇನಿಲ್ಲ.

ಈ ಎರಡು ವಿಷಯಗಳಲ್ಲದೆ ಇನ್ನೂ ಹಲವಾರು ವಿಷಯಗಳು ಪರಿಷತ್ತಿನಲ್ಲಿ ಚರ್ಚೆಗೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಅವುಗಳಲ್ಲಿ ಪರಿಣಾಮಕಾರಿ ಅಂತರಾಷ್ಟ್ರೀಯ ನಿಯಂತ್ರಣದಲ್ಲಿ ಸಂಪೂರ್ಣ ಹಾಗೂ ಸಾರ್ವತ್ರಿಕ ನಿಶ್ಶಸ್ತ್ರೀಕರಣ ಸಾಧಿಸುವ ಸಮಸ್ಯೆ; ಅಣ್ವಸ್ತ್ರ ಪ್ರಯೋಗನಿರ್ಬಂಧದ ಬಗ್ಗೆ ಬ್ರಿಟನ್, ಅಮೇರಿಕ, ರಶ್ಯಾಗಳೊಳಗೆ ನಡೆದಿರುವ ಮಾತುಕತೆಗಳ ವಿಮರ್ಶೆ; ಸ್ಟರ್ಲಿಂಗ್ ಪ್ರದೇಶದ ಆರ್ಥಿಕ ಸಮಸ್ಯೆಗಳು ಹಾಗೂ ಯುರೋಪಿಯನ್ ಪ್ರಾದೇಶಿಕ ವ್ಯಾಪಾರಿ ಗುಂಪುಗಳ ವರದಿ, ಕಾಮನ್‌ವೆಲ್ತಿನಲ್ಲಿರುವ ಘಟನಾತ್ಮಕ ಸುಧಾರಣೆಗಳು ಹಾಗೂ ವಸಾಹತುಗಳಿಗೆ ಸ್ವಯಂ ಆಡಳಿತ ನೀಡುವ ಕಾರ್ಯದಲ್ಲಿ ಸಾಧಿಸಿದ ಪ್ರಗತಿ—ಇವುಗಳ ಕುರಿತು ಪರಿಷತ್ತು ಚರ್ಚಿಸುವುದು. ಈ ವಿಷಯಗಳು ಜಗತ್ತಿನ ಹಿತಾಸಕ್ತಿಯ ದೃಷ್ಟಿಯಿಂದ ಪ್ರಾಮುಖ್ಯವಿದ್ದು, ಇವುಗಳ ಕುರಿತಾದ ಚರ್ಚೆಯೂ ಉತ್ತಮ ರೀತಿಯಲ್ಲಿ ನಡೆಯಬಹುದೆಂದು ನಿರೀಕ್ಷಿಸಬಹುದು.

ಇವೆಲ್ಲವುಗಳಿಗಿಂತ ಮುಖ್ಯವಾಗಿ ಈ ಬಾರಿಯ ಕಾಮನ್‌ವೆಲ್ತ್ ಪರಿಷತ್ತು ಭಾರತದ ದೃಷ್ಟಿಯಲ್ಲಿ ಮಹತ್ವದ ಪಾತ್ರ ವಹಿಸಬೇಕಾಗಿದೆ. ಭಾರತದ ಪ್ರಕೃತ ಪರಿಸ್ಥಿತಿಯಲ್ಲಿ, ಭಾರತವು ಎದುರಿಸುತ್ತಿರುವ ಪ್ರಾಮುಖ್ಯ ಸಮಸ್ಯೆಗಳ ಕುರಿತೂ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಪ್ರಸ್ತಾಪ ಬಂದೀತೆಂದು ನಿರೀಕ್ಷಿಸಲಾಗಿದೆ. ಮಾತ್ರವಲ್ಲ ದಕ್ಷಿಣಾಫ್ರಿಕದ ವರ್ಣಭೇದದ ಪ್ರಶ್ನೆಯನ್ನು ಅಲ್ಲಿ ಚರ್ಚೆಗೆತ್ತುವ ಆತುರವು ಕೆಲವು ರಾಷ್ಟ್ರಗಳಲ್ಲಿವೆ. ಭಾರತ ಪ್ರಧಾನಿ ನೆಹರೂರವರು ಲಂಡನಿನಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಾ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ವರ್ಣಭೇದವು ಚರ್ಚೆಗೆ ಬರುವ ಸಾಧ್ಯತೆ ಇದೆ ಎಂದು ಹೇಳಿರುತ್ತಾರೆ. ಆದರೆ ದಕ್ಷಿಣ ಆಫ್ರಿಕವು ಮಾತ್ರ, ಈ ರೀತಿಯ ಚರ್ಚೆಯನ್ನು ಆಕ್ಷೇಪಿಸಿದೆಯಲ್ಲದೆ, ಅಂತಹ ಚರ್ಚೆ ಬಂದರೆ ತಾನು ಸಮ್ಮೇಲನದಿಂದಲೇ ಹೊರಬರುವೆನೆಂದು ಬೆದರಿಕೆ ಹಾಕಿದೆ. ಅಂತೂ ಪರಸ್ಪರ ವಿರುದ್ಧಾಭಿಪ್ರಾಯದ ರಾಷ್ಟ್ರಗಳು ಒಂದು ಸೂತ್ರದಿಂದ ಹೆಣೆಯಲ್ಪಟ್ಟಿರುವಾಗ ಇಲ್ಲಿ ಈ ಕುರಿತಾದ ಚರ್ಚೆ ಹೇಗೆ ನಡೆಯುವುದೋ ಎಂಬುದು ಎಲ್ಲರ ಮನಸ್ಸನ್ನು ಕೆರಳಿಸಿದೆ.

ಕಾಮನ್‌ವೆಲ್ತ್ ಸಂಸ್ಥೆಗೆ ಸದಸ್ಯರಾಷ್ಟ್ರಗಳ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿಲ್ಲವಾದುದರಿಂದ ಅದು ದಕ್ಷಿಣ ಆಫ್ರಿಕದ ವರ್ಣಭೇದದ ಕುರಿತು ಚರ್ಚಿಸಲಾಗದೆಂದು ದಕ್ಷಿಣ ಆಫ್ರಿಕದ ವಾದ. ಆದರೆ ಕಾಮನ್‌ವೆಲ್ತ್ ಸಂಸ್ಥೆಗೆ ತಾನು ಯಾವುದಾದರೊಂದು ವಿಷಯದ ಚರ್ಚೆ ನಡೆಸಿ ಅಭಿಪ್ರಾಯ ಪ್ರಕಟಿಸುವ ಸ್ವಾತಂತ್ರ್ಯ ಇದ್ದೇ ಇದೆ. ಅದು ತನ್ನ ನಿರ್ಧಾರವನ್ನು ಹೇರುವ ಅಧಿಕಾರವನ್ನು ಮಾತ್ರ ಪಡೆದಿಲ್ಲ ಅಷ್ಟೆ. ಹಾಗಿರುವಾಗ ವರ್ಣಭೇದದಂತಹ ಸಂಯುಕ್ತ ರಾಷ್ಟ್ರಸಂಘದ ತಾಮ್ರಪಟಕ್ಕೆ ವ್ಯತಿರಿಕ್ತವಾದ ಪದ್ಧತಿಯು ಇನ್ನೂ ದಕ್ಷಿಣ ಆಫ್ರಿಕದಲ್ಲಿ ಬೆಳೆದು ಬರುತ್ತಿದೆಯಾದರೆ ಅದನ್ನು ಚರ್ಚಿಸುವ ಅಧಿಕಾರ ಕಾಮನ್‌ವೆಲ್ತ್ ಸಂಘಕ್ಕಿಲ್ಲ ಎಂಬ ವಾದಕ್ಕೆ ಬೆಲೆ ಬರುವುದಿಲ್ಲ. ದಕ್ಷಿಣ ಆಫ್ರಿಕದ ಕಾನೂನಿಗನುಗುಣವಾಗಿ ಏನನ್ನೇ ಮಾಡಲಿ, ಅದನ್ನು ಬದಲಿಸಬೇಕೆಂಬ ಸೂಚನೆಯನ್ನು ಯಾರೂ ಕೊಡಲಾರರು; ಕೊಡಲು ಸಾಧ್ಯವೂ ಇಲ್ಲ. ಆದರೆ, ಮಾನವೀಯತೆಗೇನೇ ಕಳಂಕಪ್ರಾಯವಾದ ವರ್ಣಭೇದದ ಉಚ್ಚಾಟನೆಯಾಗಬೇಕೆಂಬ ಆತುರವು ಎಲ್ಲಾ ರಾಷ್ಟ್ರಗಳಲ್ಲಿರುವಾಗ ಈ ಕುರಿತು ಚರ್ಚಿಸಿ ತನ್ನ ಅಭಿಪ್ರಾಯ ಪ್ರಕಟಿಸುವುದು ಕಾಮನ್‌ವೆಲ್ತ್ ಸಂಘದ ಕರ್ತವ್ಯವಾಗಿದೆ ಎಂದರೆ ಹೆಚ್ಚೆನಿಸದು. ವರ್ಣಭೇದವೆಂಬುದು ಮಾನವೀಯತೆಗೆ ಸಂಬಂಧಿಸಿದ ಪ್ರಶ್ನೆ. ಸಂಯುಕ್ತ ರಾಷ್ಟ್ರಸಂಘದ ತಾಮ್ರಪಟಕ್ಕೆ ತೀರಾ ವಿರುದ್ಧವಾದ ಸಮಸ್ಯೆ. ನಾಗರಿಕ ಜಗತ್ತಿನ ಜನತೆಯನ್ನು ವಿವಂಚನೆಗೊಳಪಡಿಸಿದ ಘಟನೆ. ಇದರ ಕುರಿತು ಕಾಮನ್‌ವೆಲ್ತ್ ಚರ್ಚಿಸುವುದು ಆಂತರಿಕ ಹಸ್ತಕ್ಷೇಪ ಎಂದಿಗೂ ಆಗಲಾರದು. ಈ ಕುರಿತು ಕಾಮನ್‌ವೆಲ್ತ್ ರಾಷ್ಟ್ರನಾಯಕರು ಚರ್ಚಿಸಿ, ತಮ್ಮ ಅಭಿಪ್ರಾಯ ಪ್ರಕಟಗೊಳಿಸುವುದರ ಮೂಲಕ ಮಾನವೀಯತೆಯ ಆರಾಧನೆಯನ್ನು ಮಾಡಬೇಕಾದುದು ಪ್ರಕೃತ ಪರಿಸ್ಥಿತಿಯಲ್ಲಿ ಅತ್ಯವಶ್ಯವೆನಿಸಿದೆ. ಇದು ನ್ಯಾಯಸಮ್ಮತವೂ ಹೌದು. ಕಾಮನ್‌ವೆಲ್ತಿನ ಇರುವಿಕೆಯನ್ನು ತೋರಿಸುವ ಸಾಧನವೂ ಹೌದು. ಈ ಕುರಿತು ನಾಯಕರು ವಿಶಾಲ ದೃಷ್ಟಿಯಿಂದ ನೋಡಬೇಕಾದ ಅವಶ್ಯಕತೆಯಿದೆ.

ಭಾರತವು ಸ್ವಾತಂತ್ರ್ಯಗೊಂಡಂದಿನಿಂದ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವಾಗಿದ್ದು ತನ್ನ ಹಿತಾಸಕ್ತಿಗಳ ಕುರಿತು, ಸದಸ್ಯ ರಾಷ್ಟ್ರಗಳ ಹಿತಾಸಕ್ತಿಯ ಕುರಿತು ಆಸ್ಥೆ ತಾಳುತ್ತಾ ಬಂದಿದೆ. ಇಂತಹ ಸಂದರ್ಭದಲ್ಲಿ ಭಾರತವು ತನ್ನ ವಿಶಿಷ್ಟ ಸಮಸ್ಯೆಗಳ ಕುರಿತು ಕೂಡಾ ಈ ಪರಿಷತ್ತಿನಲ್ಲಿ ಚರ್ಚಿಸಬಹುದೆಂದು ತೋರುತ್ತದೆ. ಉತ್ತರದ ಗಡಿಯ ದುರ್ಘಟನೆಗಳಿಂದ, ಭಾರತ ಚೀನಾ ಸಂಬಂಧವು ತೀರಾ ಹದಗೆಟ್ಟಿದ್ದು, ನೆಹರೂ ಚೌ ಮಾತುಕತೆಗಳು ನಿಷ್ಫಲಗೊಂಡುದರ ಪರಿಣಾಮವಾಗಿ ಭಾರತವು ಇಂದು ಗಂಡಾಂತರ ಪರಿಸ್ಥಿತಿಯಲ್ಲಿದೆ. ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವಾದ ಭಾರತವು ಎದುರಿಸುತ್ತಿರುವ ಈ ಚೀನಾ ಸಮಸ್ಯೆಯ ಕುರಿತು ಕಾಮನ್‌ವೆಲ್ತ್ ನಾಯಕರು ಚರ್ಚಿಸುವುದು ಅಪ್ರಸ್ತುತವೇನಲ್ಲ. ಕಾಮನ್‌ವೆಲ್ತಿನ ಒಂದು ಪ್ರಧಾನ ರಾಷ್ಟ್ರವಾದ ಭಾರತದ ಹಿತ ಚಿಂತನೆ ಮಾಡುವುದು ಸದಸ್ಯ ರಾಷ್ಟ್ರಗಳ ಕರ್ತವ್ಯವೂ ಹೌದು. ಮೇಲಾಗಿ ಕಮ್ಯುನಿಸ್ಟ್ ಚೈನಾದ ದುರಾಕ್ರಮಣವು ಕಮ್ಯುನಿಸಂ ವಿರೋಧಿ ರಾಷ್ಟ್ರಗಳು ಅವಶ್ಯ ಗಮನಿಸಬೇಕಾದ ವಿಷಯವಾಗಿದೆ. ಚೀನಾದಿಂದ ಭಾರತಕ್ಕೊದಗಿದ ಗಂಡಾಂತರವು ಕಾಮನ್‌ವೆಲ್ತಿಗೆ ಸಂಬಂಧಿಸಿರದಿದ್ದರೂ, ಅಥವಾ ಭಾರತದ ಆಂತರಿಕ ವಿಷಯವೆನಿಸಿದರೂ ಭಾರತದ ವಿದೇಶ ಧೋರಣೆಯ ಮೇಲೆ ವಿಶೇಷತಃ ಪ್ರಭಾವ ಬೀರುವುದಾಗಿರುತ್ತದೆ. ತನ್ನ ಭೂಭಾಗಗಳು ಆಕ್ರಮಣಕ್ಕೊಳಗಾಗಿದ್ದರೂ ಭಾರತವು ತಾಳ್ಮೆ ಸಹನೆ ಹಾಗೂ ಶಾಂತಿಯಿಂದಲೇ [illegible] ತೀರಿಸಿ ಜಾಗತಿಕ ಶಾಂತಿಗೆ ನೆರವಾಗಿದೆಯೆಂಬುದು ಕಾಮನ್‌ವೆಲ್ತ್ ಪ್ರಧಾನಿಗಳು ಕೊಂಡಾಡಬೇಕಾದ ಸಂಗತಿ. ಜೊತೆಗೆ ತಮ್ಮ ಒಂದು ರಾಷ್ಟ್ರವಾದ ಭಾರತದ ಈ ಪರಿಸ್ಥಿತಿಯ ಕುರಿತು ಚರ್ಚಿಸಿ, ತಮ್ಮ ಅಭಿಪ್ರಾಯ ಪ್ರಕಟಪಡಿಸುವುದು ಕೂಡಾ ಸಮಯೋಚಿತವಾಗಿದೆ. ಶಾಂತಿಯುತ ಸಹಜೀವನವನ್ನೇ ನೆಚ್ಚಿಕೊಂಡ ಭಾರತದ ಈ ಶಾಂತಿಯುತ ಧೋರಣೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿ, ಸಮಸ್ಯೆಯ ಶಾಂತಯುತ ಪರಿಹಾರವನ್ನು ಕಾಮನ್‌ವೆಲ್ತ್ ಪರಿಷತ್ತು ಹಾರೈಸಿದರೆ ಅದು ಪ್ರಸ್ತುತ ಸ್ಥಿತಿಯಲ್ಲಿ ಸಮಯೋಚಿತವಾದ ಕಾರ್ಯವಾದೀತು. ಕಾಮನ್‌ವೆಲ್ತ್ ಪರಿಷತ್ತು ಈ ದಿಸೆಯಲ್ಲಿ ಕಾರ್ಯ ಪ್ರವೃತ್ತವಾಗದಿರಲಾರದು. ಅದು ತನ್ನ ಸದಸ್ಯ ರಾಷ್ಟ್ರಗಳ ಯೋಗಕ್ಷೇಮಗಳ ವಿಚಾರಣೆಯಲ್ಲಿ ಹಿಂದಾಗಲಾರದೆಂದು ಹಾರೈಸುತ್ತೇವೆ. ಹಾಗೂ ಕಾಮನ್‌ವೆಲ್ತ್ ಸಮ್ಮೇಳನ ಪ್ರಕೃತ ಜಾಗತಿಕ ಸ್ಥಿತಿಯ ಕುರಿತು ವಿಚಾರವಾದ, ನಿಷ್ಪಕ್ಷಪಾತವಾದ ಅಭಿಪ್ರಾಯ ಈಯಬಹುದೆಂದು ನಂಬುತ್ತೇವೆ.

ದಿ. ವಿಜಯ ಬೇಂಕ್ ಲಿಮಿಟೆಡ್, ಬೈಂದೂರು.

ಲಿಲಾಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಜಿಸ್ತ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು–ವ–ಬಡ್ಡಿ ಯಾವುದನ್ನೂ ಈ ತನಕ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಅಲ್ಲದೆ ಕೆಲವರಿಗೆ ಬಿಟ್ಟಿರುವ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ಮೇ ತಿಂಗಳ ತಾರೀಕು 21ನೇ ಶನಿವಾರ ಅಪರಾಹ್ನ ಗಂಟೆ 2–00ಕ್ಕೆ – ಯಾ – ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ದರ್ಬಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಜಂಬ್ರಾ ನಂಬ್ರ	ಹೆಸರು ಮತ್ತು ವಿಳಾಸ.	ಮೊಬಲಗು ರೂ. ನ.ಪೈ
1) 187/57	ಮುಲ್ಲಾ ಮೊಗೇರ, ಕುಪ್ಪನ ಅಳಿಯ, ಕುದ್ರು ಹಿತ್ಲು, ಯಡ್ತರೆ ಗ್ರಾಮ, ಬೈಂದೂರು.	13—6
2) 480/57	ನೆಲ್ಯಾಡಿ ವಿಠಲ ಸೆಟ್ಟಿ, ನಾಗಯ್ಯ ಸೆಟ್ರ ಅಳಿಯ, ತಗ್ಗರ್ಸೆ ಗ್ರಾಮ, ಮ್ಯೆಯಾಡಿ.	67—3
3) 600/57	ತುಂಬಿಗದ್ದೆ ಮಂಜುನಾಥ ಸೇರೆಗಾರ, ನಾಗಪ್ಪ ಸೇರೆಗಾರರ ಮಗ, ಬಾಡ, ಬೈಂದೂರು, ಮ್ಯೆಯಾಡಿ.	31—0
4) 1371/57	ಶಿರೂರು ಸುಬ್ಬಯ್ಯ ಸೆಟ್ರ ಮನೆ ಪಮ್ಮ ಸೆಟ್ಟಿ, ರಾಮಯ್ಯ ಸೆಟ್ರ ಅಳಿಯ, ಕಾಲ್ತೋಡು ಗ್ರಾಮ, ಕಾಲ್ತೋಡು.	133—2
5) 1542/57	ನಾರಾಯಣ ಸೇರೆಗಾರ, ಸುಬ್ರಾಯ ಸೇರೆಗಾರರ ಮಗ, ಹಾಡಿಮನೆ, ಪಡುವರಿ.	9—2
6) 1011/57	ಉಗ್ರಾಣಿ ನಾರಾಯಣ ಗಾಣಿಗ, ಉಗ್ರಾಣಿ, ಶಿರೂರು.	53—3
7) 937/57	ಕೆ ಮಂಜಯ ಸೆಟ್ಟಿ, ಕೃಷ್ಣಪ್ಪ ಸೆಟ್ರ ಅಳಿಯ, ಕಾರೆಕಟ್ಟೆ, ಬೈಂದೂರು.	305—4

The Vijaya Bank, Ltd.,
BYNDOOR.
2nd May, 1960.

K. Sitharama Shetty
Agent.

ನಗರ ಸಭೆಗೊಂದು ಸೂಚನೆ

ಉಡುಪಿ ಮುನಿಸಿಪಾಲಿಟಿಯವರು ಈ ವರ್ಷ ಮನೆ ತೆಂಗೆಯನ್ನು ಪುನರ್ವಿಮರ್ಶಿಸಿ ಹೆಚ್ಚು ಪ್ರಮಾಣದಲ್ಲಿ ತೆಂಗೆಯನ್ನು ಹೊರಿಸಿರುತ್ತಾರೆ. ತೆಂಗೆಯ ಪುನರ್ವಿಮರ್ಶೆಯನ್ನು ನಡೆಸಿ ಹೆಚ್ಚಿನಂಶ ಎಲ್ಲಾ ಮನೆಗಳಿಗೂ ತೆಂಗೆಯನ್ನು ಏರಿಸಿರುವುದು ನಾಗರಿಕರಿಗೆ ತಿಳಿದಿರುವ ವಿಷಯವಾಗಿದೆ. ನಗರಸಭೆಯ ಅಧಿಕಾರಿಗಳು ತೆಂಗೆಯ ಪುನರ್ವಿಮರ್ಶೆಯನ್ನು ಯಾವ ಆಧಾರದ ಮೇಲೆ ಮಾಡಿರುವರೋ ತಿಳಿಯದಾಗಿದೆ. ನಗರಸಭೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟುದುದರ ದೆಸೆಯಿಂದ ತೆಂಗೆಯನ್ನು ಹೆಚ್ಚಿಸುವುದು ಅನಿವಾರ್ಯವಾದರೂ, ನಾಗರಿಕರಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿಯೂ ನಗರಸಭೆ ಮುಂದಾಗಬೇಕಾದುದು ಅಗತ್ಯವಾಗಿದೆ.

ಬಾಡಿಗೆಯ ಮನೆಗಳಿಗೆ ವರ್ಷಂಪ್ರತಿ ವಸೂಲಾಗುವ ಬಾಡಿಗೆಯ ಆಧಾರದ ಮೇಲೆ ತೆಂಗೆ ಹೊರಿಸಲಾಗುತ್ತಿದೆ. ಆದರೆ ಈ ಸಂದರ್ಭ ಮನೆಯ ನಿಜವಾದ ಬಾಡಿಗೆಯನ್ನು ನಗರಸಭೆಯ ಅಧಿಕಾರಿಗಳು ಹೇಗೆ ತಿಳಿಯುವರೆಂಬುದೇ ಸಮಸ್ಯೆಯಾಗಿದೆ. ಹಲವಾರು ಜನರು ಹೆಚ್ಚು ಬಾಡಿಗೆ ವಸೂಲು ಮಾಡುತ್ತಾ ಕಡಿಮೆ ಬಾಡಿಗೆಯ ಲೆಕ್ಕ ಕೊಟ್ಟು ನಗರ ಸಭೆಯನ್ನು ವಂಚಿಸುತ್ತಿದ್ದಾರೆ. ಈ ಕಡೆ ನಗರ ಸಭೆಯವರು ದೃಷ್ಟಿ ಹರಿಸಿದಂತೆ ಕಾಣುತ್ತಿಲ್ಲ. ಆದರೆ ತಮ್ಮ ಸ್ವಂತ ಮನೆಗಳಲ್ಲಿ ವಾಸ್ತವ್ಯ ಮಾಡಿಕೊಂಡಿರುವವರ ಮನೆಗೂ ಈ ಬಾರಿ ಸರಾಗವಾಗಿ ತೆರಿಗೆಯನ್ನು ಏರಿಸಲಾಗಿದೆ. ತಾವು ಸ್ವಂತ ಮನೆ ಕಟ್ಟಿ ವಾಸಮಾಡಿ, ಆ ಮನೆಯಿಂದ ಯಾವ ಬಾಡಿಗೆಯೂ ವಸೂಲಾಗದಿರುವಾಗ ಅಂತಹ ಮನೆಗಳಿಗೂ ತೆರಿಗೆಯನ್ನು ಏರಿಸಿರುವುದು ಸಮಂಜಸವಲ್ಲ. ಬಾಡಿಗೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗಬಹುದು. ಆದರೆ ಸ್ವಂತ ವಾಸ ಮಾಡುವವರ ಮನೆಯು ವರ್ಷದಿಂದ ವರ್ಷಕ್ಕೆ ದೊಡ್ಡದಾಗಲಾರದು. ಆದುದರಿಂದ ಅಂತಹವರ ಮನೆಗಳಿಗೂ ತೆರಿಗೆಯನ್ನು ಹೆಚ್ಚಿಸಿರುವುದು ನ್ಯಾಯವಲ್ಲ ಎಂದು ಹೇಳಬೇಕಾಗಿದೆ.

ಈ ಬಗ್ಗೆ ತೆರಿಗೆಯ ರಿಯಾಯತಿಯ ಅರ್ಜಿಯನ್ನು ಸ್ವೀಕರಿಸುತಿದ್ದಾರೆ. ಆ ಅರ್ಜಿಗಳ ತಪಾಸಣೆ ನಡೆಸುವ ಕಾಲ ನಗರ ಸಭೆಯವರು ಈ ಕುರಿತು ಪರ್ಯಾಲೋಚಿಸಬೇಕೆಂದು ವಿನಂತಿಸಬಯಸುತ್ತೇವೆ. ರಿಯಾಯತಿಯ ಬಗ್ಗೆ ಮಾಡಿರುವ ಅರ್ಜಿಗಳ ಕುರಿತು ಸರಿಯಾದ ವಿಚಾರಣೆ ನಡೆಸಿ ತೆರಿಗೆಯ ಹೊರೆಯನ್ನು ತುಸುವಾದರೂ ಕಡಿಮೆ ಮಾಡಿ ನಾಗರಿಕರ ಹಿತವನ್ನು ಕಾಯ್ದುಕೊಳ್ಳಬೇಕಾಗಿ ಸೂಚಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ರ್ಹೀಯವರ ನಿರ್ಗಮನ

ದಕ್ಷಿಣ ಕೊರಿಯಾದ ಅಧ್ಯಕ್ಷರಾಗಿದ್ದ ಡಾ. ಸಿಂಗ್ಮನ್ ರ್ಹೀಯವರು ಸ್ವದೇಶದಲ್ಲಿ ಜನತೆಯ ಮತ್ತು ವಿದೇಶಗಳಿಂದ ರಾಜಕಾರಣಿಗಳ ಒತ್ತಾಯಕ್ಕೊಳಗಾಗಿ ತನ್ನ ಅಧ್ಯಕ್ಷಪದಕ್ಕೆ ರಾಜೀನಾಮೆ ಇತ್ತಿರುವರು. ಪ್ರಕೃತ ರ್ಹೀಯವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ದಕ್ಷಿಣ ಕೊರಿಯಾದ ಮಂತ್ರಿ ಮಂಡಲದ ಹಿರಿಯ ಸದಸ್ಯರಾದ ಶ್ರೀ ಹುಚುಂಗರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವರೆಂದು ತಿಳಿದು ಬಂದಿದೆ.

ನೇಪಾಳ-ಚೀನಾ ಮಾರ್ಗ

ಭಾರತ ಸಂದರ್ಶನದ ಬಳಿಕ ನೇಪಾಳಕ್ಕೆ ಸಂದರ್ಶನಾರ್ಥ ತೆರಳಿದ್ದ ಚೀನೀ ಪ್ರಧಾನಿ ಚೌ-ಎನ್-ಲೈಯವರು ಕಾಟ್ಮಂಡುವಿನಲ್ಲಿ ನೇಪಾಳಿ ವ್ಯಾಪಾರಿಗಳು ಏರ್ಪಡಿಸಿದ ಸಮಾರಂಭದಲ್ಲಿ ಮಾತನಾಡುತ್ತಾ ನೇಪಾಳ ಚೀನಾಗಳ ನಡುವೆ ಬೇಗನೆ ನೇರ ರಸ್ತೆ ರಚಿಸಲಾಗುವುದೆಂದೂ ಅವುಗಳ ನಡುವಿನ ನೇರ ಸಂಪರ್ಕ ಆರಂಭವಾಗುವುದೆಂದೂ ಹೇಳಿರುವರು. ನೇಪಾಳ ಟಿಬೇಟುಗಳ ನಡುವೆ ಮಾತ್ರವಲ್ಲದೆ ನೇಪಾಳ ಚೀನಾಗಳ ನಡುವೆ ವ್ಯಾಪಾರ ಹೆಚ್ಚಿಸುವ ಸಲುವಾಗಿ ಈ ಕಾರ್ಯ ಕೈಗೊಳ್ಳಲಾಗುವುದೆಂದೂ ಹೇಳಲಾಗಿದೆ.

ಅಮೇರಿಕೆಯಿಂದ ಆಹಾರ

ಮುಂದಿನ ನಾಲ್ಕು ವರ್ಷಗಳಲ್ಲಿ ಅಮೆರಿಕೆಯಿಂದ ಭಾರತವು ೧೭ ದಶ ಲಕ್ಷ ಟನ್ ಆಹಾರ ಧಾನ್ಯವನ್ನು ಕೊಂಡುಕೊಳ್ಳುವುದೆಂದು ಸಂಬಂಧಪಟ್ಟ ವಲಯಗಳಿಂದ ತಿಳಿದುಬಂದಿದೆ. ಅಮೆರಿಕದಲ್ಲಿ ಸಂಚರಿಸುತ್ತಿರುವ ಭಾರತದ ಆಹಾರ ಮಂತ್ರಿ ಶ್ರೀ ಎಸ್. ಕೆ. ಪಾಟೀಲರು ಈ ಕುರಿತು ವಿಚಾರ ವಿನಿಮಯ ನಡೆಸಿರುವರೆಂದೂ ಈ ಒಪ್ಪಂದಕ್ಕೆ ಅಮೆರಿಕದ ಪರವಾಗಿ ಅಧ್ಯಕ್ಷ ಐಸೆನ್‌ಹಾವರರೇ ಸಹಿ ಹಾಕುವರೆಂದೂ, ಭಾರತದ ಪರವಾಗಿ ಆಹಾರ ಮಂತ್ರಿ ಪಾಟೀಲರು ಸಹಿ ಹಾಕುವರೆಂದೂ ಹೇಳಲಾಗಿದೆ.

ಭಾರತ-ಚೀನಾ ವಿವಾದ

ಚೀನೀ ಪ್ರಧಾನಿ ಚೌರವರೊಡನೆ ಮಾತುಕತೆಗಳ ಬಳಿಕ ಭಾರತ ಪ್ರಧಾನಿ ನೆಹರೂರವರು ಸಂಸತ್ತಿನ ಎರಡು ಸಭೆಗಳಲ್ಲಿ ಮಾತನಾಡುತ್ತಾ ಭಾರತವು ಶಾಂತ ವಿಧಾನಗಳಿಂದ ಸಮಸ್ಯೆಯ ಪರಿಹಾರಕ್ಕೆ ಇನ್ನು ಕೂಡಾ ಯತ್ನಿಸುವುದು. ಸಂಧಾನ ಮಾರ್ಗವನ್ನು ಎಂದೆಂದಿಗೂ ತ್ಯಜಿಸುವುದಿಲ್ಲ ಎಂದಿರುವರು. ಇದೇ ಕಾಲ ಯಾವ ಗಂಡಾಂತರ ಬಂದರೂ ಎದುರಿಸುವಂತೆ ದೇಶವನ್ನು ಸನ್ನದ್ಧಗೊಳಿಸುವುದೂ ಭಾರತ ಸರಕಾರದ ಚೀನ ಧೋರಣೆಯಾಗಿದೆ ಎಂದಿರುವರು.

ಅಲ್ಲಲ್ಲಿಯ ಸುದ್ದಿಸಾರ

ಎಕೆಡಮಿಯ ಸ್ಥಾಪಕರ ದಿನಾಚರಣೆ:—ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನಿನ ಸ್ಥಾಪಕರ ದಿನಾಚರಣಾ ಸಮಾರಂಭವು ತಾ 30—4—60 ರಂದು ಮಂಗಳೂರಿನ ಸ್ಯೆಂಟ್ ಎಲೋಸಿಯಸ್ ಕಾಲೇಜಿನ ರೆಕ್ಟರ್ ಮತ್ತು ಪ್ರಿನ್ಸಿಪಾಲರಾದ ರೆ| ಎಸ್. ಮೊಂತೇರೋ ಅವರ ಅಧ್ಯಕ್ಷತೆಯಲ್ಲಿ ಮುಕುಂದ ನಿವಾಸದ ಪಠಾರದಲ್ಲಿ ಜರಗಿತು. ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸಿ ಎಕೆಡೆಮಿಯ ಸ್ಥಾಪಕ ಡಾ| ಟಿ. ಎಂ. ಎ. ಪೈಗಳಿಗೆ ಹಲವಾರು ಸಂಸ್ಥೆಗಳ ಕಡೆಯಿಂದ ಹಾರ ತುರಾಯಿಗಳನ್ನು ಅರ್ಪಿಸಿದ ಮೇಲೆ ಶುಭ ಸಂದೇಶಗಳನ್ನು ಓದಿದರು. ಶ್ರೀ ಕೋಟ ಶಿವರಾಮ ಕಾರಂತರೂ ಶ್ರೀ ಜಿ.ಸಿ ರೇಗೋರವರೂ ಡಾ| ಮಾಧವ ಪೈಗಳು ಸಾಧಿಸಿದ ಮಹತ್ಕಾರ್ಯಗಳನ್ನು ವಿವರಿಸಿ ಅವರ ಅಸಾಧಾರಣ ವ್ಯಕ್ತಿತ್ವವನ್ನು ಕೊಂಡಾಡಿದರು. ಶ್ರೀ ಆದ್ಯ ರಂಗಾಚಾರ್ಯರು ಭಾಷಾಂತರಿಸಿದ 'ಅಷ್ಟಾಂಗ ಹೃದಯ' ಪುಸ್ತಕದ ಮುದ್ರಿತ ಪ್ರತಿಯನ್ನು ಅವರ ಪರವಾಗಿ ಕವಿರಾಜ ಎಂ. ಜಿ. ಶೆಣೈಯವರು ಡಾ| ಪೈಗಳಿಗೆ ಸಮರ್ಪಿಸಿದರು. ಡಾ| ಪೈಗಳು ಮಾತಾಡುತ್ತಾ ತಾನು ಸ್ಥಾಪಿಸಿದ ಸಂಘ ಸಂಸ್ಥೆಗಳ ಬೆಳವಣಿಗೆಗೆ ಜನತಾ ಸಹಕಾರವೇ ಕಾರಣವೆಂದೂ ಪರಸ್ಪರ ಸಹಕಾರದಿಂದ ಎಂತಹ ಕಾರ್ಯಗಳನ್ನು ಸಾಧಿಸ ಬಹುದೆಂದೂ ಹೇಳಿದರು. ಅಧ್ಯಕ್ಷರು ಮಾತಾಡುತ್ತಾ ಡಾ. ಪೈಗಳು ಬೇಂಕಿಂಗ್ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾಡಿರುವ ಕ್ರಾಂತಿಯನ್ನು ಶ್ಲಾಘಿಸಿದರು. ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನರ್ಪಿಸುತ್ತ ಡಾ. ಪೈಗಳ ಸಫಲ ಜೀವನದ ಕೆಲ ರಹಸ್ಯಗಳನ್ನಿತ್ತರು.

ಅದೇ ದಿನ ಬೆಳಿಗ್ಗೆ ಎಕೆಡೆಮಿಯ ಸುಪ್ರೀಂಗವರ್ನಿಂಗ್ ಬೋರ್ಡಿ ಸಭೆ ಜರಗಿ ಆಡಳಿತ ವರ್ಗವನ್ನು ಆರಿಸಲಾಯಿತು ಡಾ. ಮಾಧವ ಪೈಗಳು ಶ್ರೀ ಬಿ ಬಿ. ಶೆಟ್ಟಿ, ಶ್ರೀ ಟಿ. ಎ. ಪೈಗಳು ಹಲವು ಸೂಚನೆಗಳನ್ನಿತ್ತು ಮಾತನಾಡಿದರು. ಶ್ರೀ ಟಿ. ರಮೇಶ ಪೈಗಳು ಧನ್ಯವಾದಗಳನ್ನಿತ್ತರು.

ಇನ್ ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್—ಎಂಬ ಸಿಂಡಿಕೇಟು ಬೇಂಕಿನವರು ಹೊಸತಾಗಿ ಆರಂಭಿಸಿರುವ ವಿಭಾಗದ ಉದ್ಘಾಟನೆಯು ಕಳೆದ ತಾ 30ರಂದು ಮುಕುಂದ ನಿವಾಸದಲ್ಲಿ ಶ್ರೀಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥಶ್ರೀ ಪಾದಂಗಳವರಿಂದ ನೆರವೇರಿಸಲ್ಪಟ್ಟಿತು. ಡಾ ಮಾಧವ ಪೈಗಳು ಈ ಯೋಜನೆಯ ವಿವರಗಳನ್ನಿತ್ತರು ಶ್ರೀ ಕೆ ಕೆ ಪೈಗಳು ಸಂದೇಶಗಳನ್ನೋದಿದರು ಪ್ರೊ| ಕಲ್ಯಾಣರು ಯೋಜನೆಯ ಕುರಿತು ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಮಾತನಾಡಿದರು. ಶ್ರೀಪಾದಂಗಳವರು ಉಳಿತಾಯ ಯೋಜನೆಯ ಅವಶ್ಯಕತೆಯನ್ನೂ ಡಾ. ಪೈಗಳು ತೊಡಗಿರುವ ನವೀನ ಯೋಜನೆಯು ಯಶಸ್ವಿಯಾಗಲೆಂದು ಹರಸಿದರು. ಶ್ರೀ ಟಿ. ಎ. ಪೈಗಳು ವಂದನಾರ್ಪಣ ಮಾಡಿದರು.

ಬಂಟರ ಯೂನೆ ನಾಡವರ ಸಂಘ ಇವರ ವಾರ್ಷಿಕ ಮಹಾಸಭೆಯು ತಾರೀಕು 22—5—60ರಂದು ಶ್ರೀ ಹಿ. ಎಸ್ ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಪುತ್ತೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದೆಂದೂ ತಾವು ಸಭೆಗೆ ಬರಬೇಕೆಂದೂ ಕಾರ್ಯದರ್ಶಿ ಶ್ರೀ ಕೆ. ಸುಂದರಾಮ ಶೆಟ್ಟರು ವಿನಂತಿಸುತ್ತಾರೆ.

ವಿದಾಯ ಸತ್ಕಾರ - ಉಡುಪಿ ನಗರ ಸಭೆಯ ಆರೋಗ್ಯಾಧಿಕಾರಿಗಳಾಗಿದ್ದ ಡಾ| ವಿ. ಎಲ್. ಪಂಡಿತರಿಗೆ ಬಿಜಾಪುರಕ್ಕೆ ವರ್ಗವಾದುದರಿಂದ ತಾ19.4.60 ರಂದು ಕೌನ್ಸಿಲರ ಪರವಾಗಿ ವಿದಾಯ ಸತ್ಕಾರ ಕೂಟವೊಂದು ನಗರ ಸಭಾಪತಿ ಡಾ| ಕೆ. ಎಲ್. ಐತಾಳ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರೂ ಶ್ರೀ ರಂಗನಾಥ ಶೆಣೈಯವರೂ ಮಾತನಾಡಿದ ಮೇಲೆ ಡಾ. ಪಂಡಿತರು ಉತ್ತರವಿತ್ತರು ಶ್ರೀ ಎಸ್. ಸೀತಾರಾಮ ಕಾಮತರು ಧನ್ಯವಾದಗಳನ್ನಿತ್ತರು.



ಹಿಂದುಸ್ತಾನ ಅಟಮೊಬೈಲ್ಸ್

ಮೇಲಿನ ಸಾಲು: ೧ನೆ ಚಿತ್ರ—ಪಿಂಪ್ರಿಯ ಆಟೊಮೊಬೈಲ್ ಕಾರ್ಖಾನೆ.
೨ನೆ ಚಿತ್ರ - ಪೆನ್ಸಿಲಿನ್ ಕಾರಖಾನೆಯಲ್ಲಿ ನಡೆಯುವ ಶುದ್ಧೀಕರಣ ಕ್ರಿಯೆ.

ಕೆಳಗಿನ ಸಾಲು: ೧ನೆ ಚಿತ್ರ—ಪೆನಿಸಿಲಿನ್ ಪ್ರಾಣಿಗಳ ಮೇಲೆ ಪ್ರಯೋಗಿಸಿದಾಗ ಬೀರುವ ಪ್ರಭಾವ ಪರಿಶೀಲನಾಲಯ.
೨ನೆ ಚಿತ್ರ—ಕಾರಖಾನೆಯ ಹೊದಿಕೆ ಧರಿಸಿರುವ ಸಮವಸ್ತ್ರಧಾರಿಗಳಾದ ಕರ್ಮಚಾರರು.



ಬೆಂಗಳೂರಿನ ಹಿಂದುಸ್ತಾನ ಮೆಶಿನ್ ಟೂಲ್ ಕಾರಖಾನೆಯಲ್ಲಿ ಸ್ಕ್ರೂಗಳನ್ನು ತಯಾರಿಸುವ ಯಂತ್ರವಿದು

ಸ್ವಪ್ನಲೋಕ

(೫ನೇ ಪುಟದಿಂದ)

ನ್ನು ನಿರೀಕ್ಷಿಸಿದ್ದಾರೆ. ಸ್ವಪ್ನ ಸಂಬಂಧದ ಈ ಸಂಶೋಧನಾ ಕಾರ್ಯವು ೧೯೫೩ರಿಂದ ಚಿಕಾಗೋ ವಿಶ್ವವಿದ್ಯಾಲಯದ ಶರೀರ ಕ್ರಿಯಾ ವಿಜ್ಞಾನದ ಪ್ರಾಧ್ಯಾಪಕ ಡಾ| ನೈಥಾನೀಲ ಕ್ಲೀಟ್‌ಮನ್‌ರವರ ಹಿರಿತನದಲ್ಲಿ ನಡೆದು ಬರುತ್ತಿದೆ. ಈ ನಿದ್ರಾವಿಷಯಕ ಪ್ರಯೋಗಗಳಿಂದ ಅವರು ಸುಪ್ರಸಿದ್ಧರಾಗಿರುವುದರಿಂದ ಅವರನ್ನು ಜನತೆ ಡಾ| ಸ್ಲೀಪ್ ಎಂದು ಕರೆಯುತ್ತಾರೆ.

ವಸ್ತುತಃ ಈ ಪ್ರಯೋಗಗಳ ಪ್ರಾರಂಭವು ಡಾ| ಕ್ಲೀಟ್‌ಮೆನ್ನರ ಒಬ್ಬ ಯುವಕ ಸಹಚರರಾದ ಡಾ| ಯೂಜೀನ್ ಎಸೆರಿಂಸ್ಕೀ ಎಂಬವರ ಎಚ್ಚರಿಕೆಯಲ್ಲಿ ನಡೆಯಿತು. ಒಂದು ದಿನ ಎಸೆರಿನ್ಸ್ಕಿ ಪ್ರಯೋಗಶಾಲೆಯಲ್ಲಿ ಒಬ್ಬ ಮಲಗಿದ್ದ ವ್ಯಕ್ತಿಯ ಗತಿವಿಧಿಗಳ ನಿರೀಕ್ಷಣೆಯನ್ನು ಮಾಡುತ್ತಿದ್ದರು. ನಿದ್ರಾಗತನ ಕಣ್ಣುಗಳ ಪಾಪೆಯ ಆಂದೋಲನ ಆಸಿಲೋಸ್ಕೋಪಿನ ಮೇಲೆ ಅಂಕಿಸುತ್ತ ಹೋಗುತಿತ್ತು. ಇಷ್ಟರಲ್ಲಿ ಎಸರಿಸ್ಕಿರವರು ಆ ಸಿಲೋಸ್ಕೋಪಿನತ್ತ ದೃಷ್ಟಿಸಿದರು. ಆಗ, ಗಣ್ಣುಗೊಂಬೆಗಳ ಚಲನೆಯನ್ನು ಸೂಚಿಸುವ ವಿದ್ಯುತ್ ರೇಖೆಗಳು ಅತ್ಯಂತ ವಕ್ರವಾಗಿ ಮತ್ತು ಚಂಚಲವಾಗಿ ತೋರಿತ್ತು. ಈ ಚಂಚಲಾವಸ್ಥೆಯು ಸುಮಾರು ೨೦ ಮಿನಿಟು ಮುಂದುವರಿದು ಶಾಂತವಾಯಿತು. ಮತ್ತೆ, ಒಂದೆರಡು ತಾಸುಗಳನಂತರ ಪುನಃ ಪ್ರಾರಂಭವಾಯಿತು. ಇದೇ ರೀತಿ ರಾತ್ರಿಹೊತ್ತಿನಲ್ಲಿ ಹಲವು ಬಾರಿ ಕೆಲಕೆಲವು ಮಿನಿಟುಗಳವರೆಗೆ ಈ ರೀತಿ ಪುತ್ಥಳಿಗಳು ಚಂಚಲವಾದುವು. ಈ ವಿಚಾರವನ್ನು ಅವರು ಕ್ಲೀಟ್ ಮೆನ್ನರಿಗೆ ತಿಳಿಸಿದಾಗ, ಅವರು ಈ ಚಂಚಲತೆ ಮತ್ತು ಸ್ವಪ್ನಗಳನಡುವೆ ಸಂಬಂಧವಿದೆ ಎಂದು ಹೇಳಿದರು. ಇಂತಹ ಚಂಚಲತೆಯ ರೇಖೆಗಳನ್ನು ಕಂಡೊಡನೆಯೇ ನಿದ್ರಿಸಿದವರನ್ನು ಎಬ್ಬಿಸಿ; ಅವರು ಸ್ವಪ್ನಕಾಣುತಿದ್ದಾರೆಯೋ ಎಂದು ವಿಚಾರಿಸಲಾಯಿತು. ಆಗ, ೨೭ ಜನರಲ್ಲಿ ೨೦ ವ್ಯಕ್ತಿಗಳು ಅಹುದೆಂದು ಉತ್ತರಿಸಿದ್ದರು.

ಇದರಿಂದ ನಿದ್ರಾರಂಭವಾದ ಸ್ವಲ್ಪ ಸಮಯದವರೆಗೆ ಸ್ಮೃತಿಯು ಸಕ್ರಿಯವಾಗಿರುತ್ತದೆ. ವಸ್ತು ಮತ್ತು ಆಕೃತಿಗಳು ಕಣ್ಣಮುಂದೆ ಹರಿದಾಡುತ್ತವೆ. ಈ ಚಿತ್ರಗಳು ನೀರಲ್ಲಿರುವಂತೆ ಮಸಕು ಮಸಕಾಗಿ ತೋರುತ್ತವೆ. ಆದರೆ, ವಸ್ತುತಃ ಇದು ಸ್ವಪ್ನವಲ್ಲ. ಅನಂತರ ನಮ್ಮ ನಿದ್ರೆಯ ದ್ವಿತೀಯ ಅವಸ್ಥೆಯು ಬರುತ್ತವೆ. ಈ ದ್ವಿತೀಯಾವಸ್ಥೆಯು ಎಂಟು ತಾಸುಗಳವರೆಗಿರಬೇಕೆಂದು ಇದುವರೆಗೆ ತಿಳಿಯಲಾಗಿತ್ತು. ಆದರೆ, ಈಗ ಇದು ಕೇವಲ ೩೦ ಮಿನಿಟುಗಳವರೆಗೆ ಮಾತ್ರ ಇರುವುದೆಂದು ಗೊತ್ತಾಗಿದೆ. ಇದಾದನಂತರ ತೃತೀಯ ಹಂತವು ಬರುವುದು. ನಿದ್ರೆತೊಡಗಿದ ೭೦ ನಿಮಿಷಗಳ ನಂತರವೇ ಇದು ಕಾಣಿಸುವುದು. ಈ ಅವಸ್ಥೆಯಲ್ಲಿ ನಿದ್ರೆಯು ಸಂಪೂರ್ಣ ರೂಪದಲ್ಲಿರುವುದಿಲ್ಲ; ಆದುದರಿಂದಲೇ ನಾವು ಈ ಸ್ಥಿತಿಯಲ್ಲೇ ಕನಸುಕಾಣುತ್ತೇವೆ.

ಮೊದಲನೆಯ ಬಾರಿಗೆ ನಾವೀ ಅವಸ್ಥೆಗೆ ಬರುವಾಗ ೯ ಮಿನಿಟುಗಳವರೆಗಿನ ಕಾಲ ಕನವರಿಸಬಹುದು. ಅನಂತರ ನಾವು ಪ್ರಗಾಢ ನಿದ್ರಾವಸ್ಥೆಯನ್ನು ಮುಟ್ಟುತ್ತೇವೆ. ಆದರೆ, ಸ್ವಪ್ನತರಂಗಗಳಿದ್ದನಂತರದ ನಿದ್ರೆ ಅಷ್ಟು ಆಳವಾಗಿರುವುದಿಲ್ಲ. ಎರಡೂವರೆ ತಾಸುಗಳನಂತರ ನಾವು ಪುನಃ ಕನಸುಕಾಣುತ್ತೇವೆ. ಇದು ಸುಮಾರು ೧೯ ನಿಮಿಷಗಳವರೆಗಿರುವುದು. ತದನಂತರವೂ ೨೪ ಮಿನಿಟುಗಳಕಾಲದ ಸ್ವಪ್ನ ಕಾಣಿಸುವುದು. ಈ ಮೂರು ಸ್ವಪ್ನಾವಧಿಯನಂತರ ನಿದ್ರೆಯ ಏಳನೆಯ ಗಂಟೆಯು ಗತಿಸಿದ ಮೇಲೆ ಮರಳಿ ೨೮ ಮಿನಿಟುಗಳ ಸ್ವಪ್ನ ಗೋಚರಿಸುವುದು. ಇದು ಸ್ವಪ್ನಾವಸ್ಥೆಯ ಅಂತಿಮಾವಧಿಯಾಗಿದೆ. ನಾವು ಆ ವೇಳೆಯೂ ಹಾಸಿಗೆ ಬಿಡದಿದ್ದರೆ, ಏಳುವವರೆಗೂ ಏನೇನೋ ಕನಸು ಕಾಣುತ್ತಿರುವೆವು.

ಸ್ವಪ್ನವು ಚಲಚ್ಚಿತ್ರಗಳಂತೆ ನಮ್ಮ ಕಣ್ಮುಂದೆ ಚಲಿಸುತ್ತಿರುವುದು. ನಾವು ಸ್ವಪ್ನನೋಡುವುದಕ್ಕೆ ಪ್ರಾರಂಭ ಮಾಡಿದೊಡನೆಯೇ ನಮ್ಮ ಕುತ್ತಿಗೆ ಮತ್ತು ಶರೀರದ ಅಂಗಾಂಗಗಳನ್ನು ಹಾಸಿಗೆಯ ಮೇಲೆ ತುಸು ವ್ಯತ್ಯಸ್ಥ ವಿಧಾನದಲ್ಲಿ ಹರಡಿಸುವುದು ಅವಶ್ಯವಾಗುತ್ತದೆ. ಸಿನೆಮಾ ನೋಡುವಾಗ, ನಾವು ಯಾವ ರೀತಿಯಲ್ಲಿರುತ್ತೇವೆಯೋ ಸಾಮಾನ್ಯವಾಗಿ ಹಾಗೆಯೇ. ಈ ಸ್ವಪ್ನಾವಸ್ಥೆಯಲ್ಲೂ ಇರುತ್ತೇವೆಯೆಂದು ವಿಜ್ಞಾನಿಗಳು ಹೇಳುತ್ತಾರೆ. ಅಲ್ಲದೇ ಕನಸು ಕಾಣುತ್ತಿರುವಾಗ, ನಮ್ಮ ಶರೀರದ ಅಂಗಾಂಗಳು ಅಚಂಚಲವಾಗಿರುವುವೆಂದೂ ಕೇವಲ ಕಣ್ಣುಪಾಪೆಯು ಮಾತ್ರ ದೃಶ್ಯಗಳನ್ನು ನೋಡುವ ಸಲುವಾಗಿ ಅತ್ತಿಂದಿತ್ತ ಚಲಿಸುತ್ತಿರುವುದೆಂದೂ ಹೇಳುತ್ತಾರೆ.

ಆದರೆ, ಸ್ವಪ್ನಾವಸ್ಥೆಯಲ್ಲಿ ಹೊಡೆದಾಟ, ಬಡಿದಾಟ, ಓಡಾಟ, ನೆಗೆದಾಟ ಮೊದಲಾದುವುಗಳನ್ನು ಕಂಡರೂ ನಮ್ಮ ಅಂಗಾಂಗಗಳು ಅಲ್ಲಾಡದೆ ಸುಮ್ಮನಿರುವುವೇಕೆ ಎಂದು ಪ್ರಶ್ನಿಸಬಹುದು. ಶರೀರದ ಅಂಗಾಂಗಗಳನ್ನು ಪ್ರೇರೇಪಿಸುವ ಮೆದುಳಿನ ತಂತುಗಳು ಸ್ವಪ್ನಾವಸ್ಥೆಯಲ್ಲಿ ಶಿಥಿಲವಾಗಿರುವುದೇ ಹೀಗಾಗಲು ಕಾರಣವಾಗಿದೆ.

ಸ್ವಪ್ನವು ಮಾನವನ ಇಚ್ಛೆಗೆ ಅನುಸಾರವಾಗಿ ಬರುವುದೇ ಎಂಬುದಿನ್ನೊಂದು ಪ್ರಶ್ನೆ. ನಾವು ಸ್ವಪ್ನಗಳನ್ನು ನಿಯಂತ್ರಿಸಬಹುದು; ಅದರೊಡನೆ ಬಾಹ್ಯ ಉಪಾದಾನಗಳ ಸಹಾಯದಿಂದ ಸ್ವೇಚ್ಛಾನುಸಾರ ಅವುಗಳ ಸಂಚಾಲನೆಯನ್ನೂ ಮಾಡಬಲ್ಲೆವು ಎಂದು ವಿಜ್ಞಾನಿಗಳು ಹೇಳುತ್ತಾರೆ. ಸ್ವಪ್ನ ಕಾಣುತ್ತಿರುವವನ ಬೆನ್ನ ಮೇಲೆ ನೀರಹನಿಯನ್ನು ಚಿಮುಕಿಸಿದರೆ, ಆ ಮನುಷ್ಯನಿಗೆ ತಾನು ಕುಳಿತಿದ್ದ ಮನೆಯ ಮಾಡು ಸೋರುತ್ತಿರುವಂತೆ ಭಾಸವಾಗುವುದು. ಹಡಗದಲ್ಲಿ ಸಂಚಾರಮಾಡುವ ಕನಸು ಕಾಣುವವನ ಕಿವಿಯಲ್ಲಿ ಏನಾದರೂ ಸದ್ದು ಮಾಡಿದರೆ, ಆತನಿಗೆ ಹಡಗ ವಿಸ್ಫೋಟಗೊಂಡ ದುರ್ಘಟನೆಯ ಕನಸಾಗಿ ಅದು ಗೋಚರಿಸುವುದು.

ಸ್ವಪ್ನ ಮುಂದುವರಿಯುತ್ತಿರುವಂತೆ ಒಬ್ಬ ಮನುಷ್ಯನನ್ನು ಎಬ್ಬಿಸಿ, ಅದರ ಅನುಭೂತಿ ಮತ್ತು ಸ್ಮೃತಿಯನ್ನು ಬರಹರೂಪದಲ್ಲಿ ಲಿಖಿಸಿದರೆ, ಅದು ಆತನ ಮನೋರೋಗದ ಚಿಕಿತ್ಸೆಯಲ್ಲಿ ನೆರವಾಗುವುದು. ವಿಕ್ಷಿಪ್ತ ವ್ಯಕ್ತಿಗಳು ಮತ್ತು ವಿಭಕ್ತ ವ್ಯಕ್ತಿತ್ವವುಳ್ಳ ರೋಗಿಗಳ ಮನೋದಶೆಯನ್ನು ಅಭ್ಯಸಿಸುವಲ್ಲಿ ಈ ಚಿತ್ರಗಳು ಅತ್ಯಂತ ಉಪಯೋಗಿಯಾಗಿವೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕುಂದಾಪುರ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

Camp: ಉಡುಪಿ O. P. 172/60.

ರಿಸೀವರ್ ಶ್ರೀ ಸಿ. ನಾಯಕ್ —ಅರ್ಜಿದಾರ
ಮತ್ತು
ಅನಂತರಾಮ ಬಟ್ಟ —ಎದುರು.
ಇವರೊಳಗೆ

ಎದುರು- ಅನಂತರಾಮ ಬಟ್ಟ - ಕೃಷ್ಣ ಬಟ್ಟರ ಮಗ ಉಡುಪಿ ತಾಲೂಕು ಹಿರೇ ಬೆಟ್ಟು ಗ್ರಾಮ ಹಿರಿಯಡ್ಕ P. O.

ಪಿಳಂಬಿ ಸಂ|ರದ ಬ್ಯಾಲನ್ಸಿನ ಗೇಣಿ ಅರ್ಜಿದಾರರಿಗೆ ಎದುರುಕೊಡದೆಯಿದ್ದ ಪ್ರಯುಕ್ತ ಗೇಣಿಗೆ ಕಾರಣವಾದ ಸರ್ವಾದಿ ಆಸ್ತಿ ಸ್ವಾಧೀನತೆ ಬಗ್ಗೆ ಅರ್ಜಿದಾರರು ಎದುರು ಮೇಲೆ ದಾಖಲು ಮಾಡಿದ ಮೇಲಿನ ಅರ್ಜಿಯು ತಾರೀಕು 12-5-60ಕ್ಕೆ ಇಟ್ಟಿರುವುದರಿಂದ ಮೇಲಿನ ಅರ್ಜಿಯಲ್ಲಿ ಸಾಧಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ವಾದಿಯು ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತವೆ.

Y. C. S. Hegde
Advocate for Petitioner.
Udipi, 29-4-1960.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ಸಾಹಿತ್ಯದ ರಸದೌತಣ

(೪ನೇ ಪುಟದಿಂದ)

ವಸ್ಥೆಗೆ ತಲುಪಿತು. ಆಗ ಆಕೆ ತನ್ನ ಉದ್ರೇಕಕವಾದ ಅಂಗಗಳನ್ನು ಪ್ರದರ್ಶಿಸುತ್ತ ಓರೆ ನೋಟದಿಂದ ನೋಡುತ್ತ ಮುಗುಳುನಗೆಯ ಮೋಹನಾಸ್ತ್ರವನ್ನು ಬೀರುತ್ತ, ವೈಯ್ಯಾರದೊಡನೆ, ಹೇಳಿದಳು—

“ಅರೆ! ನನ್ನ ಹೃದಯವನ್ನೇ ನೀವು ಪೂರ್ಣವಾಗಿ ಸೂರೆಮಾಡಿದ್ದೀರಿ! ಮತ್ತೆ ನೀವೇ ಹೀಗೂ ಹೇಳುತ್ತಿದ್ದೀರಿ! ನಿಮ್ಮ ಪರಿಚಯವಾಗುವ ಮೊದಲೇ ನಾನು ನಿಮ್ಮಕಡೆ ಆಕರ್ಷಿತಳಾಗಿದ್ದೇನೆ. ಈಗ ನನ್ನನ್ನು ಉದ್ಧರಿಸುವ ಭಾರ ನಿಮ್ಮದಾಗಿದೆ! ನಾನೇನು ತಾನೆ ಮಾಡಬಲ್ಲೆ? ಪ್ರೇಮಕ್ಕೆ ಕಣ್ಣಿಲ್ಲವೆಂಬ ಗಾದೆಯಂತೆ, ಪ್ರೇಮಬಂಧನಕ್ಕೊಳಪಟ್ಟ ಮೇಲೆ, ಅಲ್ಲಿ ಕುಲಶೀಲಗಳ ಪ್ರಶ್ನೆಯೇ ಇಲ್ಲ. ಪ್ರೇಮಪಾಶದಲ್ಲಿ ಬದ್ಧ ಪ್ರೇಮಿಗಳು, ‘ನಾವು ಯಾರು? ಏನುಮಾಡುತ್ತಿದ್ದೇವೆ’, ಎಂಬುದನ್ನು ನೋಡಿಕೊಳ್ಳುವ ಕ್ರಮವೇ ಇಲ್ಲ. ಏಕೆಂದರೆ, ಪ್ರೇಮವು ಪವಿತ್ರವಾದುದು. ಇಂತಹ ಪವಿತ್ರ ಪ್ರೇಮದಿಂದ ಕೂಡಿದ, ನಮ್ಮ ಪ್ರೇಮಕ್ಕೆ ಅರ್ಹನಾದವನಾಗಿದ್ದಮೇಲೆ, ಅಂಥವನ ಕುಲಶೀಲಗಳನ್ನು ನಾವೇಕೆ ವಿಚಾರಿಸುತ್ತೇವೆ? ಕುಲ, ಶೀಲ, ಹೇಗೂ ಇರಲಿ, ಪ್ರೇಮವೇ ಮುಖ್ಯವಲ್ಲವೇ? ಅಯ್ಯೋ! ಸುಮ್ಮನೆ ಮಾತನಾಡುತ್ತ ನನ್ನನ್ನೇಕೆ ಬಳಲಿಸುತ್ತೀರಿ? ರಾತ್ರಿ ಕಳೆದು ಬೆಳಗಾಗುತ್ತಿದೆ! ಕಾಂತ! ಇಂತಹ ಅಪೂರ್ವವಾದ ಈ ವೇಳೆಯಲ್ಲಿ ಮಧುರವಾದ ನೀರಸ ಸಂಭಾಷಣೆಯಿಂದ, ನನ್ನನ್ನು ಪ್ರಸನ್ನಗೊಳಿಸಬೇಕು. ಪ್ರೇಮ ಭಿಕ್ಷೆಯನ್ನು ಬೇಡುತ್ತ ನಿಮ್ಮ ಮನೆಯಬಾಗಿಲಲ್ಲಿ ಅತಿಥಿಯೊಬ್ಬಳು ನಿಂತಿದ್ದಾಳೆ! ಅವಳು ಅಂಜಲಿಯೊಡ್ಡಿ ನಿಮ್ಮೊಡನೆ ಪ್ರೇಮ ಭಿಕ್ಷೆಯನ್ನು ಬೇಡುತ್ತಿದ್ದಾಳೆ! ನಿಮ್ಮ ಹೃದಯವನ್ನು ತೆರೆದು, ಪ್ರೇಮಭಿಕ್ಷುಕಿಯಾದ ನನಗೆ, ಸ್ಥಾನವನ್ನು ಕೊಟ್ಟು ಪ್ರೇಮದಾನವನ್ನು ನೀಡಿ ರಕ್ಷಿಸಬೇಕು” ಎಂದು ಪ್ರಾರ್ಥಿಸಿದಳು.

ಉಭಯಸಂಕಟಕ್ಕೊಳಗಾದ ಲಕ್ಷ್ಮಣನು ಹೇಳಿದನು—“ಹೇ ನಾರೀ.. ನಿನಗೆ ಬುದ್ಧಿಯಿಲ್ಲ! ನೀನು ಹೇಳುತ್ತಿರುವುದು ಅದು ಪ್ರೇಮವಲ್ಲ. ಅದು ಕೇವಲ ಮೋಹ! ಇಂದ್ರಿಯ ಸುಖ ಭೋಗದ. ವಿಷಯ ವಾಸನೆ! ಇದು, ನಿನ್ನ ಮನದ ಚಂಚಲತೆಯೇ ಹೊರತು, ಆತ್ಮಪ್ರೇಮವಲ್ಲ. ನಿನ್ನ ಈ ಪ್ರೇಮವು ವಿಷ ತುಂಬಿದ ಹಾವಿನಂತಿರುವುದು! ಅಮೃತ ಸದೃಶವಾದ ಶುದ್ಧ ಪ್ರೇಮವು ಬೇರೆಯೇ ಇದೆ. ಇದೋ ನೋಡು! ಇದು ನೀತಿಯಲ್ಲ! ರೀತಿಯಲ್ಲ! ಕಾಮವು ವಿಷಮಿಶ್ರಿತವಾದ ಮಧುವಿನಂತಿರುವುದು. ಪ್ರೇಮವು ದಿವ್ಯವಾದ ಅಮೃತದಂತಿರುವುದು. ಕಾಮವು ಕೇವಲ ಇಂದ್ರಿಯ ತೃಪ್ತಿಯನ್ನು ಮಾತ್ರ ಕ್ಷಣಿಕವಾಗಿ ನೀಡುವುದು. ಪ್ರೇಮವು ಶಾಶ್ವತವಾದ ತೃಪ್ತಿಯನ್ನೂ ಆನಂದವನ್ನೂ ನೀಡುವುದು. ಕಾಮವು ಖಂಡವಾಗಿದೆ. ಪ್ರೇಮವು ಅಖಂಡವಾಗಿದೆ! ಕಾಮವು ಕ್ಷಯಗುಣಪೂರ್ಣವಾದುದು. ಪ್ರೇಮವು ಅಕ್ಷಯಗುಣಪೂರ್ಣವಾದುದು. ಹೇ! ರಮಣೀ....ಕಾಮ-ಪ್ರೇಮಗಳ ವ್ಯತ್ಯಾಸವು ಈ ಪರಿಯಿಂದಿರುವುದು. ನೀನು ನಿನ್ನ ಯೌವನ ಮದದಿಂದ, ಅವಿವೇಕಿಯಾಗಿ, ಅಧೋಗತಿಗಿಳಿಯುತ್ತಿರುವೆ! ನಿನ್ನ ಈ ಕಾಮ ತೃಷೆ ಮರಳುಗಾಡಿನಲ್ಲಿ ನೀರನ್ನು ಹುಡುಕುವಂತೆ! ನನಗೆ ಇದರಿಂದ ಶಾಂತಿಯಿಲ್ಲ! ನಿನಗೆ ಇದರಿಂದ ಕೇಡುಂಟಾಗಬಹುದು. ಏ... ನಾರೀ.... ಗಾಳಿಯಲ್ಲಿ ಸಿಲುಕಿದ ಗಾಳಿಪಟದಂತೆ, ನಿನ್ನ ಮನಸ್ಸನ್ನು ಹರಿಯಗೊಡಬೇಡ! ಎಚ್ಚರಿಕೆ! ನಾನು ಪುರುಷನಾಗಿದ್ದೇನೆ! ನಾನೆಂದಿಗೂ ನಿನ್ನವನಾಗಲಾರೆ! ನಿನ್ನ ತುಚ್ಛ ವಿಚಾರಗಳನ್ನು ಬಿಟ್ಟು ಬೇಗನೆ ಇಲ್ಲಿಂದ ಹೊರಡು!” ಎಂದನು.

“ಇಹೀ ಸಮಯ ಪ್ರಘಟೇ
ಪೂರ್ವಮ್ ಫಲಟ್ಬಾಪ್ರಕೃತಿನಟೀ ಕಾರಂಗ!
ಕಿರಣಕಂಟಕೋಂಪೆ
ಶ್ಯಾಮಾಂಬರಫಟಾದಿನಾಕೆದಮುಕೆ ಅಂಗ!”

ಇಂತು ಕಾಮಿನೀ ರಾಮಾನುಜ ಸಂವಾದ ನಡೆಯುತ್ತಿರಲು— ಪೂರ್ವ ದಿಸೆಯಲ್ಲಿ ಅರುಣೋದಯವಾಯಿತು. ಪ್ರಕೃತಿಯ ಬಣ್ಣ ಬದಲಾಯಿಸಿತು! ಸೂರ್ಯನ ಕಿರಣರೂಪವಾದ ಮುಳ್ಳುಗಳಿಂದ, ಕಾಳರಾತ್ರಿಯ ಕಪ್ಪು ಬಟ್ಟೆ ಹರಿದುಹೋಯಿತು! ಕತ್ತಲೆಯೋಡಿತು. ಅರುಣೋದಯದ ಕಾಂತಿ ಪಸರಿಸಿತು! ಇಂತಹ ಅಪೂರ್ವವಾದ ವೇಳೆಯಲ್ಲಿ ಅರುಣೋದಯದ ಕಾಂತಿಯನ್ನೂ ಸಹ, ನಾಚಿಸುವಂತಹ, ಸಹಜ ಕಾಂತಿಯಿಂದೊಪ್ಪಿದ ಸೌಂದರ್ಯನಿಧಿಯಾದ ಸೀತಾದೇವಿಯು, ಪಂಚವಟಿಯ ಕುಟೀರದ ಬಾಗಿಲನ್ನು ತೆರೆದು— ಕಾಮಿನೀ ರಾಮಾನುಜರನ್ನು ನೋಡಿದಳು!

—ಕೆ. ಎಸ್. ಭಟ್, ಶಿರಾಡಿಪಾಲ್.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭವ

ಸ್ವಾಮಿ—ಸೇವಕ ಸಂಬಂಧ

ಆದೇಶಗಳನ್ನು ಪರಿಶೀಲಿಸುವ ಬದಲಿಗೆ ಅವನ್ನು ಪರಿಪಾಲಿಸುವತ್ತ ವಿಶೇಷ ಗಮನ ಹರಿಸಬೇಕು; ಆದರೆ, ಇದು ನಿತ್ಯ ಸಾಧ್ಯವೆನಿಸುವುದೇ?

ಒಂದು ಗ್ರಾಮದಲ್ಲಿ ನಡೆದ ಘಟನಾತ್ಮಕ ಕಥೆಯಿದು. ಕೆಲವು ವರ್ಷಗಳಿಗೆ ಮೊದಲು ತಾನೇ ಬಂದ ತರುಣ ಪ್ರಾಯದ ಗ್ರಾಮ ಸೇವಕನೊಬ್ಬನಿಗೆ ಕೆಲಸ ಮಾಡುವುದೆಂದರೆ ಬಹಳ ಅಭಿರುಚಿ. ಎಷ್ಟೆಂದರೂ ಹೊಸಬನಲ್ಲವೇ? ಕೇಂದ್ರದಿಂದ ಆದೇಶ ಬರುವುದೇ ತಡ, ಆತ ಅದನ್ನು ಚಾಚೂ ತಪ್ಪದೆ ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದ್ದ. ‘ಈ ತಾರೀಕಿನಿಂದ ಈ ತಾರೀಕಿನ ವರೆಗೆ ಈ ಸಪ್ತಾಹವನ್ನು ಆಚರಿಸಬೇಕು’ ಎಂಬ ಆಜ್ಞೆಗಳೇ ಧಾರಾಳವಾಗಿ ಬರುತಿದ್ದರೂ, ಆತ ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು, ಅವೆಲ್ಲವನ್ನೂ ಯಥಾಯೋಗ್ಯವಾಗಿ ನಿರ್ವಹಿಸುವುದರಲ್ಲಿ ಕೃತಕೃತ್ಯನೆನಿಸುತಿದ್ದ. ಆತನಿಗೆ ಬರುತ್ತಿದ್ದ ಆದೇಶಗಳಲ್ಲಿ ಹೇಳಲಾಗುವ, ವನ್ಯಮೃಗ ರಕ್ಷಣಾ ಸಪ್ತಾಹ, ಬಾಲ ಸಪ್ತಾಹ, ಅಗ್ನಿ ನಿರೋಧಕ ಸಪ್ತಾಹ, ಗಾಂಧೀಜಯಂತಿ ಸಪ್ತಾಹ, ಸರ್ವೋದಯ ಸಪ್ತಾಹ, ಕೈಮಗ್ಗಗಳ ಸಪ್ತಾಹ, ವೃದ್ಧರ ಸಪ್ತಾಹ... ಹೀಗೆಯೇ ಒಂದೇ ಎರಡೇ? ಹಲವಾರು ಸಪ್ತಾಹಗಳು!

ಗ್ರಾಮ ಸೇವಕ ಅವೆಲ್ಲವನ್ನೂ ಅತ್ಯುತ್ತಮ ರೀತಿಯಲ್ಲೇ ಆಚರಿಸುತಿದ್ದ. ಆದರೆ, ಎತ್ತಿನ ಕಾಲು ಮುರಿದರೆ ಗಾಡಿ ಎಳೆದರೂ. ನಿಧಾನವಾದುದರಿಂದ ಬಾರಕೋಲು ತನ್ನ ಪ್ರಯೋಗವನ್ನು ಪ್ರತ್ಯಕ್ಷಮಾಡುವುದು ತಾನೆ? ಹಾಗೆ, ಮೇಲಿನಧಿಕಾರಿಗಳಿಂದ ಒಂದು ಆರೋಪಣಾ ಪತ್ರ ಬಂದಿತು—“ಈ ವರ್ಷ ಇತ್ತಿರುವ ಆದೇಶಗಳಲ್ಲಿ ಕಾಣಿಸಲಾಗಿದ್ದ ಸಪ್ತಾಹಾಚರಣೆಗಳಲ್ಲಿ ಈ ಏಳು ಸಪ್ತಾಹಗಳನ್ನು ನೀನು ಆಚರಿಸಲಿಲ್ಲ. ಈ ರೀತಿಯ ಬೇಜವಾಬ್ದಾರಿತನಕ್ಕೆ ತತ್‌ಕ್ಷಣವೇ ಸ್ಪಷ್ಟೀಕರಣ ಕೊಡತಕ್ಕದ್ದು”

ಗ್ರಾಮಸೇವಕ ಕಂಗಾಲಾದ. ಆತನಿಗೆ ತಿಳಿದಂತೆ ವರ್ಷದ ೫೨ ವಾರಗಳಲ್ಲೂ ಒಂದಲ್ಲ ಒಂದು ಸಪ್ತಾಹವನ್ನು ಆಚರಿಸಿದ್ದ. ಆದರೂ ಈ ಏಳು ಸಪ್ತಾಹಗಳ ಆಚರಣೆ ಏಕಾಗಲಿಲ್ಲ ಎಂದವನಿಗೆ ತಿಳಿಯಲೇ ಇಲ್ಲ. ಆತ ದಿಙ್ಮೂಢನಾಗಿ ಕೇಂದ್ರದಿಂದ ಬಂದಿರುವ ಆದೇಶಗಳನ್ನೂ ತಾನು ಆಚರಿಸಿದ್ದ ಸಪ್ತಾಹಗಳ ವರದಿಯ ಪ್ರತಿಗಳನ್ನೂ ಜತೆಗೂಡಿಸಿ ಪರಿಶೀಲಿಸತೊಡಗಿದ. ಆಗ ಸತ್ಯ ಸಂಗತಿ ತಿಳಿದು ಬಂತು. ಆತ ಉತ್ತರರೂಪದಲ್ಲಿ ಸ್ಪಷ್ಟೀಕರಣವಿತ್ತ — ತಮ್ಮೆಲ್ಲ ಆದೇಶಗಳನ್ನೂ ಕಲೆ ಹಾಕಿ ಕಾಣುವಾಗ, ೫೯ ಸಪ್ತಾಹಗಳನ್ನು ಆ ವರ್ಷದಲ್ಲಿ ಆಚರಿಸಬೇಕೆಂದು ತಿಳಿಯುತ್ತದೆ. ಆದರೆ, ಒಂದು ವರ್ಷದಲ್ಲಿ ಕೇವಲ ೫೨ ವಾರಗಳು ಮಾತ್ರವಿರುವುದರಿಂದ, ಉಳಿದ ಏಳು ಸಪ್ತಾಹಗಳನ್ನು ಆಚರಿಸುವುದು ಸಾಧ್ಯವಾಗಲಿಲ್ಲ. ಇದಕ್ಕಾಗಿ ಕ್ಷಮೆಯನ್ನು ದಯಪಾಲಿಸಬೇಕಾಗಿ ವಿನಮ್ರನಾಗಿ ಬೇಡಿಕೊಳ್ಳುತ್ತೇನೆ.’

ಕೆಲಸಮಯದನಂತರ ಗ್ರಾಮ ಸೇವಕನಿಗೊಂದು ರಿಜಿಸ್ಟರ್ಡ್ ಪತ್ರ ಬಂದಿತು. ಆತ ಕುತೂಹಲದಿಂದಲೇ ಒಡೆದು ನೋಡಿದ. ತನ್ನ ಕೇಂದ್ರ ಕಾರ್ಯಾಲಯದಿಂದ ಬಂದುದು. ಅದರಲ್ಲಿ ಬರೆದಿತ್ತು— “ನೀನು ಕಳೆದ ವರ್ಷದಲ್ಲಿ ಇತ್ತ ಆದೇಶಗಳನ್ನು ಸರಿಯಾಗಿ ಪಾಲಿಸದಿರಲು ಕೊಟ್ಟ ಸ್ಪಷ್ಟೀಕರಣವು ತೃಪ್ತಿಕರವಾಗಿಲ್ಲ. ಆದರೂ ವಿಶೇಷ ಸಂದರ್ಭವೆಂದು ನಿನ್ನ ಅಪರಾಧವನ್ನು ಕ್ಷಮಿಸಲಾಗಿದೆ. ಇನ್ನು ಮುಂದೆ ಇಂತಹ ತಪ್ಪುಗಳು ಆಗದಂತೆ ಎಚ್ಚರಿಕೆಯಿಂದ ಕೆಲಸಮಾಡಬೇಕು. ಆದೇಶಗಳ ಪರಿಶೀಲನೆ ಮಾಡುವ ಬದಲು, ಅವನ್ನು ಪರಿಪಾಲಿಸುವತ್ತ ವಿಶೇಷ ಗಮನವೀಯಬೇಕು. ಮುಂದಾದರೂ ಜಾಗ್ರತೆಯಾಗಿ ಹೇಳಿದಂತೆ ಕಾರ್ಯನಡೆಸುವುದು ಅಗತ್ಯ.”

ಗ್ರಾಮಸೇವಕ ಪತ್ರವನ್ನೋದಿ, ನಿಟ್ಟುಸಿರೊಂದನ್ನು ಬಿಟ್ಟು ಎರಡೂ ಕೈಗಳನ್ನು ತಲೆಗೆ ಆನಿಸಿಕೊಂಡು ಒರಗಿ ಕುಳಿತ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಚಿಕ್ಕ ಕೈಗಾರಿಕೆಗಳು

ಭಾರತವು ಸ್ವತಂತ್ರವಾದ ಮೇಲೆ ಸಣ್ಣ ಕೈಗಾರಿಕೆಗಳಿಗೆ ವಿಶೇಶವಾದ ಪ್ರೋತ್ಸಾಹವನ್ನು ನೀಡುವ ಯೋಜನೆಯನ್ನು ಕೈಗೊಳ್ಳಲಾಯಿತು. ಮೇಲಿನ ಚಿತ್ರದ ಎಡಪಕ್ಕದಲ್ಲಿ ಮೆಟ್ಟಿನ ಹಿಮ್ಮಡಿ ತಯಾರಿಯಲ್ಲಿ ಚಿಕ್ಕ ಯಂತ್ರಗಳನ್ನು ಹೇಗೆ ಉಪಯೋಗಿಸಬಹುದು ಎಂದು ಚಮ್ಮಾರರಿಗೆ ಒಬ್ಬ ನುರಿತವ ಹೇಳುತ್ತಿರುವುದನ್ನೂ ಬಲಪಕ್ಕದಲ್ಲಿ ಚರ್ಮದ ಶುದ್ಧೀಕರಣಕಾರ್ಯವು ತೀವ್ರವಾಗಿ ನಡೆಯುತ್ತಿರುವುದನ್ನೂ ನಾವು ಕಾಣಬಹುದು.

ವಿದೇಶೀಯ

ಸಿಂಹಳದಲ್ಲಿ ಮರುಚುನಾವಣೆಯ ಘೋಷಣೆ

ಸರಕಾರದ ಪ್ರಪ್ರಥಮ ಗೊತ್ತುವಳಿಯ ಬಗ್ಗೆಯೇ ಪ್ರಧಾನಿ ಸೇನಾನಾಯಕೆಯವರ ಮೇಲೆ ಅವಿಶ್ವಾಸ ಪ್ರದರ್ಶನದಿಂದ ರಾಜಕೀಯ ವಾತಾವರಣ ಸುಧಾರಿಸಿದಂತಿಲ್ಲ.

ಮೊನ್ನೆ ಮಾರ್ಚ ೧೯ರಂದು ಸಿಂಹಳದಲ್ಲಿ ನಡೆದ ಚುನಾವಣೆಗಳಲ್ಲಿ ಅತ್ಯಧಿಕ ಸ್ಥಾನ (೧೫೧ರಲ್ಲಿ ೫೦) ಗಳನ್ನು ಪಡೆದಿದ್ದ ಶ್ರೀ ಡಡ್ಲಿ ಸೇನಾನಾಯಕೆಯವರ ಯುನೈಟೆಡ್ ನೇಶನಲ್ ಪಾರ್ಟಿಗೆ ಆರಂಭದಲ್ಲಿಯೇ ಅಪಶಕುನವು ಎದ್ದುತೋರಿತ್ತು. ಚುನಾವಣೆಗಳು ಮುಗಿದು, ಫಲಿತಾಂಶ ಪ್ರಕಟವಾದ ಕೆಲವೇ ದಿನಗಳಲ್ಲಿ ಚುನಾಯಿತ ಪ್ರತಿನಿಧಿಯೊಬ್ಬನು ಮರಣಗೊಂಡ ವಾರ್ತೆ ಬಂದಿತ್ತು. ಅದು ಸುವಾರ್ತೆಯೋ ದುರ್ವಾರ್ತೆಯೋ ಎಂಬ ಸಂದೇಹ ಆಗ ಬಂದಿದ್ದರೂ ಸದ್ಯದ ರಾಜಕೀಯ ಪರಿಸ್ಥಿತಿಯಿಂದ ಅದು 'ಸು' ಅಲ್ಲ 'ದುರ್'ನ ದ್ಯೋತಕವೆಂದು ವ್ಯಕ್ತವಾಯಿತು.

ಗವರ್ನರ ಜನರಲ್ಲರ ಭಾಷಣದ ಬಗ್ಗೆ ಅವರಿಗೆ ಧನ್ಯವಾದ ಸಮರ್ಪಿಸುವ ಗೊತ್ತುವಳಿಯೊಂದು ಸರಕಾರದಿಂದ ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟಿತು. ಆದರೆ ಈ ಗೊತ್ತುವಳಿಯು ಅಲ್ಲಿ ಸೋತು ಬಿದ್ದುಹೋದುದರಿಂದಾಗಿ, ಸೇನಾನಾಯಕೆಯವರ ಸರಕಾರದ ಮೇಲೆ ಅವ್ಯಕ್ತವಾಗಿ ಅವಿಶ್ವಾಸ ಪ್ರದರ್ಶನವಾದಂತಾಯಿತು. ಇದರ ಪರಿಣಾಮವಾಗಿ ಅವರು ಅನ್ಯ ಪಕ್ಷೀಯರ ಬೆಂಬಲವನ್ನು ಗಳಿಸಿಕೊಂಡು ಬಹುಮತವನ್ನು ಪಡೆಯಬೇಕು; ಇಲ್ಲವೇ ರಾಜಿನಾಮೆ ಕೊಡಬೇಕಾಗಿ ಬಂತು. ಆದರೆ, ಶ್ರೀ ಸೇನಾನಾಯಕೆಯವರು ಆರಂಭದಲ್ಲಿಯೇ ಅಧಿಕಾರದಲ್ಲಿ ಉಳಿಯುವ ಸಲುವಾಗಿ ತಾನು ಇತರ ಪಕ್ಷದವರೊಡನೆ ಒಪ್ಪಂದವನ್ನು ಮಾಡಿಕೊಳ್ಳುವುದಿಲ್ಲ ಎಂದು ಘೋಷಿಸಿದ್ದು, ಪ್ರಚಲಿತ ಸಂದಿಗ್ಧ ಸನ್ನಿವೇಶದಲ್ಲಿಯೂ ಅವರು ಇದೇ ನೀತಿನಂತೆ ನಡೆದುಕೊಂಡು ತ್ಯಾಗಪತ್ರ ಇತ್ತುಬಿಟ್ಟರು. ಹೀಗಾಗಿ ಪುನಃ ಸಿಂಹಳದ ರಾಜಕೀಯ ಕ್ಷೇತ್ರದಲ್ಲಿ ಗೊಂದಲವೆದ್ದಂತಾಯಿತು.

ಸೇನಾನಾಯಕೆಯವರು ರಾಜಿನಾಮೆಯಿತ್ತ ಮೇಲೆ, ಉಳಿದ ಪಕ್ಷಗಳ ನಾಯಕರನ್ನು ಸುಭದ್ರ ಸರಕಾರ ರಚಿಸಲು ಗವರ್ನರ ಜನರಲ್ಲರು ಕರೆಯಬಹುದೆಂಬ ಆಶೆಯಿತ್ತು. ಆದರೆ, ಉಳಿದೆಲ್ಲಾ ಪಕ್ಷಗಳಿಗೆ ಪಾರ್ಲಿಮೆಂಟಿನಲ್ಲಿ ಪ್ರತ್ಯೇಕ ಬಹುಮತವೇ ಇಲ್ಲವಾದುದರಿಂದ ಹಾಗೆ ಮಾಡದೆ, ಪಾರ್ಲಿಮೆಂಟನ್ನೇ ರದ್ದುಗೊಳಿಸಿ ಮುಂದಿನ ಜುಲೈ ೨೦ರಂದು ಹೊಸ ಚುನಾವಣೆಗಳನ್ನು ಏರ್ಪಡಿಸುವ ಘೋಷಣೆಯನ್ನು ಹೊರಡಿಸಿದರು. ಹೊಸ ಪಾರ್ಲಿಮೆಂಟು ಆಗಸ್ಟ ೫ರಂದು ಅಧಿಕಾರಗ್ರಹಣ ಮಾಡುವುದೆಂದೂ ಅವರೆಗೆ ಶ್ರೀ ಸೇನಾನಾಯಕೆಯವರ ಸರಕಾರವೇ ಜೋಪಾಸನಾಸರಕಾರವಾಗಿ ಉಳಿಯುವುದೆಂದೂ ಅವರು ಘೋಷಿಸಿದ್ದಾರೆ.

ಪ್ರಧಾನಿ ಭಂಡಾರನಾಯಕೆಯವರು ಸಪ್ಟಂಬರ ೨೫, ೧೯೫೯ರಂದು ಕೊಲೆಯಾದನಂತರ ಪ್ರಧಾನಿ ಪಟ್ಟವೇರಿದ ವಿಜಯಾನಂದ ದಹನಾಯಕೆಯವರ ಕಾಲದಲ್ಲಿ ಸಿಂಹಳದ ರಾಜಕಾರಣವು ಕೆಟ್ಟುಹೋಗಿತ್ತು; ರಾಜಕೀಯ ವಾತಾವರಣವು ಅನಿಶ್ಚಿತವಾಗಿತ್ತು. ಭಂಡಾರನಾಯಕೆಯವರ ಕೊಲೆಗೂ ರಾಜಕೀಯ ದುರುದ್ದೇಶವೇ ಕಾರಣವೆನ್ನಲಾಗುತ್ತಿತ್ತಾದುದರಿಂದ ಅಂತಹ ಪರಿಸ್ಥಿತಿ ಶಾಂತಗೊಳ್ಳುವ ಸಲ್ಲಕ್ಷಣಗಳು ಗೋಚರವಾಗದಿರುವುದರಿಂದ, ಮರುಚುನಾವಣೆಯನ್ನೇ ಮಾಡುವುದು ವಿಹಿತವೆಂನು ಗವರ್ನರ ಜನರಲ್ಲರು ಅಭಿಪ್ರಾಯಪಟ್ಟರು. ಆದರೆ, ಮುಂದಿನ ಚುನಾವಣೆಯಿಂದಲೂ ಈ ಅನಿಶ್ಚಿತತೆ ದೂರವಾಗುವುದೆಂಬ ನಿರೀಕ್ಷೆಯಿಲ್ಲವೆಂದೇ ಹೇಳಬೇಕು.

ಸಿಂಹಳವು ಸ್ವತಂತ್ರವಾದ ಮೇಲೆ ಅಸ್ತಿತ್ವಕ್ಕೆ ಬಂದ ಪಾರ್ಲಿಮೆಂಟುಗಳಲ್ಲಿ ಈಗ ರದ್ದಾದುದು ನಾಲ್ಕನೆಯದು. ಸಿಂಹಳದ ಇತಿಹಾಸದಲ್ಲಿಯೇ ಅತ್ಯಲ್ಪ ಆಯುಸ್ಸಿನ ಪ್ರತಿನಿಧಿ ಸಭೆಯೆಂದರೆ ಇದೇ. ಮಾರ್ಚ ೧೯ರಂದು ಚುನಾವಣೆ ನಡೆದಿದ್ದರೂ ಇದು ಅಧಿಕಾರಗ್ರಹಣ ಮಾಡಿದ್ದು ಮಾರ್ಚ ೩೦ರಂದು. ಆ ಮೇಲೆ ಮೂರೇ ವಾರಗಳಲ್ಲಿ ವಿಸರ್ಜಿತವಾಯಿತು. ಡಡ್ಲಿ ಸೇನಾನಾಯಕೆಯವರ ಸರಕಾರದ ಪ್ರಪ್ರಥಮ ಗೊತ್ತುವಳಿಯೇ ವಿಶೇಷ ಬಹುಮತದಿಂದ ಬಿದ್ದುಹೋಯಿತು! ಪ್ರಾಯಃ ವಿಶ್ವದ ಇತಿಹಾಸದಲ್ಲಿಯೇ ಇಷ್ಟೊಂದು ಅಲ್ಪಕಾಲದ ಪಾರ್ಲಿಮೆಂಟು ಬೇರಿರಲಿಲ್ಲವೆನ್ನಬಹುದು. ತಾನು ಅಸ್ತಿತ್ವದಲ್ಲಿದ್ದ ೨೪ ದಿವಸಗಳಲ್ಲಿ ಇದು ಆರು ದಿನ ಸಭೆಸೇರಿತ್ತು ಎಂಬುದೇ ಸಮಾಧಾನದ ಸಂಗತಿಯಾಗಿದೆ.

ಮರು ಚುನಾವಣೆಯ ಘೋಷಣೆಯಿಂದ ರಾಜಕೀಯ ವಲಯಗಳಲ್ಲಿ ತೀವ್ರ ಉತ್ಸಾಹವು ಸಂಚಾರವಾಗುವುದು ಖಂಡಿತವೇ. ಅಲ್ಲದೇ ಈ ಬಾರಿ ಪಕ್ಷಭೇದವನ್ನು ಆದಷ್ಟು ದೂರವಾಗಿಸಿ, ಸಂಯುಕ್ತರಂಗ ನಿರ್ಮಾಣ ಅಥವಾ ಸ್ಪರ್ಧೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಪ್ರಾಧಾನ್ಯವೀಯುವ ಸಂಭವವು ಅಧಿಕವಿದೆ. ಮಧ್ಯಾವಧಿ ಸರಕಾರದ ಪ್ರಧಾನಿ ಸೇನಾನಾಯಕೆಯವರು ತನ್ನ ಪಕ್ಷದ ಸದಸ್ಯರಿಗೆಲ್ಲಾ ಮುಂದಿನ ಚುನಾವಣೆಯಲ್ಲಿ ಉತ್ತೇಜಿತರಾಗಿ ಕಾರ್ಯಪ್ರವೃತ್ತರಾಗಬೇಕೆಂದು ಆಗಲೇ ಕೇಳಿಕೊಂಡಿದ್ದಾರೆ. ಮುಂದೆ ಏನಾಗುವುದೆಂದು ಸದ್ಯವೇ ಏನಾದರೂ ಅನ್ನುವುದು ಸರಿಯಲ್ಲ.



Notice

ಕುಂದಾಪುರ ಆಸಿಸ್ಟಂಟ್ ಕಮಿಶನರ ಕೋರ್ಟಿನಲ್ಲಿ

O. P. No. 140/1960

U. ದಾಮೋದರ ಭಟ್ — ಅರ್ಜಿದಾರ

ಮತ್ತು

ಚೋಂಗ್ಲ ಪೂಜಾರಿ ಕೂಡಾ— ಎದ್ರಿಯರು

ಉಡ್ಪಿ ತಾಲೂಕು ಕೆಳಾರ್ಕಳ ಬೆಟ್ಟು ಗ್ರಾಮದಲ್ಲಿರುವ ನಾಗಿ ಪೆಂಗ್ಸಿನ ಮಗ ಚೋಂಗ್ಲ ಪೂಜಾರಿ ಮತ್ತು ಮೇಲಿನ ಅರ್ಜಿಯಲ್ಲಿ 1 ನೇ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—ಅರ್ಜಿದಾರರು ನೀವು ಕೂಡಾ 2 ಜನರ ಮೇಲೆ ವಿಳಂಬಿ ಮತ್ತು ವಿಕಾರಿ ಸಂವತ್ಸರಗಳ ಗೇಣಿ ಬಾಕಿ ಮಾಡಿಕೊಂಡ ಕಾರಣದಿಂದ, ನಿಮ್ಮ ಬಾಲಗೇಣಿಗೆ ಕಾರಣವಾದ ಆಸ್ತಿ ಸ್ವಾಧೀನತೆ ಕೇಳಿ ಮಾಡಿದ ಅರ್ಜಿಯು ಮೇಲಿನ ಕೋರ್ಟಿನಲ್ಲಿ ತಾ. 12—6—1960ಕ್ಕೆ ತನ್ಕಿಗೆ ಇಟ್ಟಿರುವುದರಿಂದ ಆ ದಿನ ಬೆಳಿಗ್ಗೆ ಹತ್ತು ಗಂಟೆಗೆ ಸದ್ರಿ ಕೋರ್ಟಿನ ಉಡ್ಪಿ ಕ್ಯಾಂಪಿನಲ್ಲಿ ನೀವು ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ತಕ್ಕ ಉದಾಹರಣೆ ಕೊಡದಿದ್ದರೆ ಸದ್ರಿ ಅರ್ಜಿಯು ನಿಮ್ಮ ಗೈರುಹಾಜರಿಯಲ್ಲಿ ತನ್ಕಿ ನಡಿಸಲಾಗುವುದು ಎಂತ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

By Order

N. Ramachandra Bhat,

Advocate for Petitioner.

Udipi, 28—4—1960.

ಕಥಾವಿಹಾರ

(೨ನೇ ಪುಟದಿಂದ)

"ಹಾಗಂತ ಪೋಸ್ಟು ಖರ್ಚು ಕೂ ... ಮಾಡಿ ಸಾಹಿತ್ಯ ಸೇವೆ ಮಾಡುವಾ ... ಪತ್ರಿಕೆಯವರು ಸ್ವಲ್ಪವಾದರೂ ಕಳು ... ಸಬೇಡವೇನು?"

"ಹಾಗೆ ಅಲ್ಪಸ್ವಲ್ಪ ಕೊಡುವುದು ಪ ... ಕೆಯ ಘನತೆಗೂ ಕುಂದಾಗುತ್ತದೆ ... ರೀ!" ಅಂದರು ಶರ್ಮ!

"ಇದೊಳ್ಳೆ ವಿಷಚಕ್ರವೇ ಸರಿ!" ಎಂ ... ಎಲ್ಲರೂ ನಕ್ಕರು.

ಈ ಸಂಭಾಷಣೆಗಳನ್ನು ಆಲಿಸುತ್ತಾ ... ರ್ಚಿಯೊಳಗೆ ಕುಳಿತಿದ್ದ ಕರೀಕನ್ನಡಕ ... ರಿ ಜೆ. ಬಿ. ಚೌಧುರಿ ತನ್ನ ಕೀಚು ... ನಿಯಲ್ಲಿ ಹೇಳಿದ: "ಭೇಷ! ಭೇಷ್! ... ಭಯರ ಗೌರವರಕ್ಷಣಾರ್ಥವಾಗಿ ... ಂಚನಗಂಗಾ ತಟಸ್ಥಳಾದಳು."

ಎಲ್ಲರೂ ಮತ್ತೊಮ್ಮೆ ನಕ್ಕರು. ಆದರೆ ... ಚೌಧುರಿ ಮಾತ್ರ ನಗದೇ ತನ್ನ ಕುರ್ಚಿ ... ಯೊಳಗೇ ತನ್ನ ಪಾಡಿಗೆ ಕುಳಿತು ಬರೆ ... ಯುತ್ತಲೇ ಇದ್ದ.

o o o

ತನಗೂ ಹಿಂದೀ ಬರುತಿದ್ದರೆ ಎಷ್ಟು ... ಳ್ಳೇದಿತ್ತು! ಎಂದು ಶರ್ಮರು ಸಂಕಟ ... ಪಡುತ್ತಿರುವುದಕ್ಕೂ ಅವರ ಮೇಜಿಯ ... ಬಳಿಗೆ ಜೆ. ಬಿ. ಚೌಧುರಿ ಬಂದು ನಿಲ್ಲು ... ವುದಕ್ಕೂ ಸರಿಯಾಯಿತು.

ಚೌಧುರಿ ಶರ್ಮರಕಡೆಗೆ ಬಾಗಿ ಗುಟ್ಟಾಗಿ ಕೇಳಿದ: "ಮಿಸ್ಟರ್ ಶರ್ಮ! ನಿಮ್ಮದೊಂದು ಕೃತಿಯನ್ನು ನನಗೆ ಸಂಕ್ಷೇಪವಾಗಿ ಬರೆ ದುಕೊಡಿ. ನಾನು ಅದನ್ನು ಹಿಂದಿಯಲ್ಲಿ ಬರೆದು, ದುಡ್ಡು ಬರುವಂಥ ಕೆಲವು ಪತ್ರಿಕೆಗಳುಂಟು; ಅದಕ್ಕೆ ಕಳುಹಿಸುತ್ತೇನೆ. ನಾಲ್ಕು ಪುಟದ ಒಂದು ಲೇಖನಕ್ಕೆ ಇ ಪ್ಪತ್ತು ಇಪ್ಪತ್ತೈದು ಹೀಗೆ ಸಿಕ್ಕುತ್ತದೆ. ಅರ್ಧ ನಿಮಗೆ ಅರ್ಧ ನನಗೆ; ಯಾಕೆ ಪ್ರಯತ್ನ ಮಾಡಬಾರದು?"

ಶರ್ಮರು ಒಪ್ಪಿಕೊಂಡರು.

ಅಂದಿನಿಂದ ಶರ್ಮರಿಗೂ ಚೌಧುರಿ ಗೂ ಗುಸುಗುಸು ಮಾತುಗಳು ಆಗಾಗ ನಡೆದುವು. ಶರ್ಮರ ಕೈಯ ಅನೇಕ ಕಾ ಗದ ಪತ್ರಗಳು ಚೌಧುರಿಯ ಕೈಗೆ ಹೋ ದುವು.

ದಿನಗಳು, ವಾರಗಳು, ತಿಂಗಳುಗಳು ಕಳೆದುವು. ಒಂದು ದಿನ ಚೌಧುರಿ ಶರ್ಮ ರನ್ನು ಕುರಿತು "ನಿಮ್ಮ ಕಥೆ ಒಂದು ಪತ್ರಿ ಕೆಯಲ್ಲಿ ಬಂತು. ಆದರೆ ಅದು ದುಡ್ಡು ಕೊಡುವ ಪತ್ರಿಕೆಯಲ್ಲ. ನನಗಾಗಿ ಐದು ರೂಪಾಯಿ ಕಳುಹಿಸಿದರು. ಇದು ತೆಗೆದು ಕೊಳ್ಳಿ" ಎಂದು ಎರಡೂವರೆ ರೂಪಾ ಯಿಯನ್ನು ಶರ್ಮರಿಗೆ ಕೊಟ್ಟು— "ನಿಮ್ಮ ಇನ್ನೊಂದು ಕಥೆಯನ್ನು ಬೇ ರೊಂದು ಪತ್ರಿಕೆಗೆ ಕಳಿಸಿದ್ದೇನೆ. ಸಂಬಿಕೆ ಯುಂಟು" ಎಂತಲೂ ಹೇಳಿದ.

ಮತ್ತೆ ನಾಲ್ಕಾರು ತಿಂಗಳು ಕಳೆದುವು. ಈ ಅವಧಿಯಲ್ಲಿ ಶರ್ಮರ ಕೈಯಿಂದ ೮—೧೦ ಕೃತಿಗಳ ಸಾರಾಂಶಗಳನ್ನು ಚೌಧುರಿ ಪಡೆದುಕೊಂಡಿದ್ದನು.

ಚೌಧುರಿಗೆ ಮಣಿಯಾರ್ಡರು ಬಂದಾಗಳೆಲ್ಲಾ ಶರ್ಮರ ಹೃದಯದಲ್ಲಿ ಆಶೆಯ ಕುಡಿ ಚಿಗುರುತಿತ್ತು. ಅದು ಶರ್ಮರ ಸ ಬಂಧದಲ್ಲವೆಂದು ತಿಳಿದು ಆ ಕುಡಿ ಬಾಡಿ ಹೋಗುತಿತ್ತು. ಮಾತ್ರವಲ್ಲ, ಒಂದು ಬಗೆ ಯ ಸಂದೇಹವೂ ಶರ್ಮರನ್ನಾಕ್ರಮಿಸಿ ತು. ಹೊರಗಿಂದ ಹೊರಗೇ ಏನೋ ಶೋ ಧ ನಡೆಸಿದರು. ಒಂದು ಪತ್ರಿಕೆಯಲ್ಲಿ ಚೌಧುರಿಯ ಹೆಸರಿನಲ್ಲಿ ಪ್ರಕಟವಾದ ಹಿಂದೀ ಲೇಖನವನ್ನು ಯಾರಿಂದಲೋ ಓದಿಸಿ ಕೇಳಿದಾಗ, ಅದು ತನ್ನದೇ ಲೇಖ ನವೆಂದು ಶರ್ಮರಿಗೆ ಗೊತ್ತಾಯಿತು.

ಕೂಡಲೇ ಅವರು ಚೌಧುರಿಯೊಡನೆ ಆ ಲೇಖನದ ಪ್ರಸ್ತಾಪ ಮಾಡಿ, "ಅದು ನಾನು ಕೊಟ್ಟ ಲೇಖನ ತಾನೇ?" ಎಂ ದು ಕೇಳಿದರು.

"ಛೇ ಛೇ! ಮಿಸ್ಟರ್ ಶರ್ಮ. ಅದು ನಾನು ಎರಡು ವರ್ಷಗಳ ಹಿಂದೆ ಕಳುಹಿ ಸಿದ್ದ ಲೇಖನ. ಒಂದೇ ಜೀವನ ವಾತಾ ವರಣದಲ್ಲಿರುವವರೊಳಗೆ ಒಂದೇ ಬಗೆ ಯ ಐಡಿಯಾ ಬರುವುದು ಅಪೂರ್ವವೇ ನಲ್ಲವಷ್ಟೆ? ನಿಮ್ಮ ಲೇಖನಕ್ಕೂ ಅದ ಕ್ಕೂ ಅಜಗಜಾಂತರ." ಎಂದು ಹಾರಿಸಿ ಬಿಟ್ಟ ಚೌಧುರಿ.

ಸಹೋದ್ಯೋಗಿಯಾದ ಆತನೊಡನೆ ಹೆಚ್ಚು ವಾದಿಸಲು ಇಷ್ಟವಿಲ್ಲದೆ, ನೊಂದ ಶರ್ಮರು ಸುಮ್ಮನಾದರು.

ಆದರೆ ಚೌಧುರಿಗೆ ಅಷ್ಟ ಕ್ಕೇ ಮರ್ಯಾದೆ ಹೋದಂತಾಯಿತು. "ಆದರೆ ಮಿಸ್ಟರ ಶರ್ಮ, ನಿಮ್ಮಲ್ಲಿ ಯಾವಾಗ ಸಂದೇಹ ಹೊಕ್ಕಿತೋ, ಹೀಗೇ ಬಿಟ್ಟರೆ ನಮ್ಮ ಸ್ನೇಹಕ್ಕೂ ಭಂಗಬರುವ ಹಾಗಾದೀತು. ಆದುದರಿಂದ ನಿಮ್ಮ ಲೇಖನ ಪೂರಾ ನಿಮ್ಮ ಕೈಗೇ ಕೊಟ್ಟುಬಿಡುತ್ತೇನೆ ಇವುಗಳನ್ನು ನಾನು ಇನ್ನೂ ಓದಿಯೇ ಇಲ್ಲ." ಎಂದು ಹೇಳಿ ಡ್ರಾಯರಿನೊಳಗಿನಿಂದ, ಶರ್ಮರ ಎಲ್ಲಾ ಕಾಗದಗಳನ್ನೂ ತೆಗೆದು ಅವರಿಗೆ ಕೊಟ್ಟು ಬಿಟ್ಟ. ಇನ್ನೂ ಇರುವ ಸಂದೇಹಕೂಡಾ ಅವನೇ ಹೇಳಿದ. "ನಾನಿವನ್ನು ಬರೆದಿಲ್ಲ ಎಂದರೂ ನಿಮಗೆ ಸಂದೇಹವಾದೀತು. ಅಸಲು ನನ್ನ ಕೆಲಸವೇ ನನಗೆ ನೈತಿಕ ಬಾಲ ಇದೆ. ನಿಮ್ಮ ಲೇಖನದಿಂದಲೇ ನನ್ನ ವ್ಯವಸಾಯ ನಡೆಯುವುದೆಂದು ತಿಳಿಯ ಬೇಡಿ. ಹಾಗೇನಾದರೂ ಸಂದೇಹವಿದ್ದರೆ ನನ್ನನ್ನು ಕೇಳಿ. ಇಲ್ಲಿಯೇ ಇದ್ದೇನಲ್ಲಾ!" ಎಂದು ಒಜಾಯಿಸಿ ಶರ್ಮರು ಉಸಿರೆತ್ತದಂತೆ ಮಾಡಿದ.

ಆತನ ವ್ಯವಸಾಯದ ಗುಟ್ಟೇನೋ ಶರ್ಮರಿಗೆ ಗೊತ್ತೇ ಆಯಿತು. ಆ ಚೌಧು ರಿ ಇದೇರೀತಿಯಾಗಿ ಅನೇಕರ ಬರೆಹಗಳ ನ್ನು ಸಂಗ್ರಹಿಸಿಕೊಳ್ಳುತ್ತಾ ಹಿಂದೀಕರಿ ಸುತ್ತಾ ತನ್ನ ಕೆಲಸ ಸಾಗಿಸಿಕೊಂಡೇ ಇ ದ್ದಾನೆ. ಮಣಿಯಾರ್ಡರು ಬರುತ್ತಲೂ ಇರುತ್ತವೆ. ಯಾರಿಗೋ ಸ್ವಲ್ಪ ಸ್ವಲ್ಪ ಮ ಣಿಯಾರ್ಡರು ಕಳುಹಿಸುತ್ತಲೂ ಇದ್ದಾ ನೆ. ಅದು ಪರಿಂತು ದೊಡ್ಡ ಮೀನನ್ನು ಹಿ ಡಿಯಲು ಹಾಕುವ ಚಿಕ್ಕ ಗಾಳ ಇರಬೇಕೆಂದು ಶರ್ಮರು ಊಹಿಸಿದ ರು. ಆ ಚೌಧುರಿಗೆ ಯಾರಿಂದಲೋ ಬಂ ದು, ಅವನು ಓದಿ ಹರಿದು ಬುಟ್ಟಿಗೆ ಹಾ ಕಿದ ಒಂದೆರಡು ಪತ್ರದ ಚೂರು ಶರ್ಮ ರ ಕೈಗೆದೊರಕಿತ್ತು.

"ಮಾನ್ಯ ಜೆ. ಬಿ ಚೌಧುರಿಯವರೆ, ನೀವು ಕಳಿಸಿದ ರೂಪಾಯಿ ಎರಡು ಸಿಕ್ಕಿದೆ. ಇಷ್ಟಾದರೂ ಕೊಡಿಸುವ ನಿಮ್ಮ ಹಿಂದೀ ಉಪಕಾರವನ್ನು ನಾನೆಂದೂ ಮ ರೆಯಲಾರೆ. ಇನ್ನೊಂದು ಲೇಖನ ಬೇಗ ದಲ್ಲಿಯೇ........"

"ಹಿಂದೆ ನೀವು ಹತ್ತು ರೂಪಾಯಿ ಕಳು ಹಿಸುವುದಾಗಿ ಹೇಳಿದಿರಿ........ ಕತೆ ಪ್ರಕ ಟವಾದುದಕ್ಕೆ ಸಂತೋಷ........ ನನಗೆ ಹೆಸರು ಮುಖ್ಯವಲ್ಲ ಹಣ ಮುಖ್ಯ........ ಎದುರುನೋಡುತ್ತಿದ್ದೇನೆ."

ಇತ್ಯಾದಿ ವಿವಿಧ ಪತ್ರಗಳನ್ನು ಆಗಾಗ ಹರಿದು ಬುಟ್ಟಿಗೆ ಹಾಕುತ್ತಾ ಇರುತ್ತಾನೆ ಜೆ. ಬಿ. ಚೌಧುರಿ ಮಹಾಶಯ. ಇಂತ ಹ ಸಾಮರ್ಥ್ಯವು ತನಗಿಲ್ಲವಲ್ಲ! ಪರಸಾ ಹಿತ್ಯವನ್ನು ಸ್ವಂತ ಸಾಹಿತ್ಯವೆಂತೆ ಕತ್ತರಿ ಸಿಕೊಳ್ಳುವಷ್ಟು ತನ್ನ ಲೇಖನಿ ಹರಿತ ವಾಗಿಲ್ಲವಲ್ಲಾ ಎಂದು ಶರ್ಮರಿಗೆ ಪಶ್ಚಾ ತ್ತಾಪವಾಯಿತು. ಆದರೆ ಕನ್ನಡದಲ್ಲಿ ಹಾಗೆ ವ್ಯವಸಾಯ ಸಾಗಿಸಿದರೂ ಲಾಭ ವೇನೂ ಇಲ್ಲ ಎಂಬುದನ್ನು ನೆನೆದು ಸ ಮಾಧಾನದ ನಿಟ್ಟುಸಿರನ್ನೂ ಬಿಟ್ಟು ಕೊಂಡರು.

—"ನವಗಿರಿನಂದ"



ಆಧುನಿಕ ಮಾದರಿಯ ಎರಡು ಇಂಜಿನಿನ ಬ್ರಿಟಿಷ ಹೆಲಿಕಾಪ್ಟರ.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಕುಮಾರಿ ಚಿಕ್ಕಿಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತವೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ: ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
REGD. NO. M. 3619

UDIPI, THURSDAY
5—5—1960

LICENSE NO. 31
Licensed to Post without Prepayment

ವಿಚಾರವರ್ಷ

ಅತ್ಯದ್ಭುತ ಮಹತ್ವಪೂರ್ಣ ಸಾಧನೆ

ವಿಷಮ ಪರಿಸ್ಥಿತಿಯಲ್ಲಿ ಭಗ್ನವಾಗದೆ ತನ್ನ ಅಸ್ತಿತ್ವವನ್ನುಳಿಸಿಕೊಂಡು ಬಂದಿರುವುದೇ ಸಂ. ರಾ. ಸಂಘದ ಮಹಾನ್ ಸಾಧನೆ.

"ಸಂಯುಕ್ತ ರಾಷ್ಟ್ರಸಂಘವು ಖಂಡ ಖಂಡವಾಗಿ ಹರಿದು ಹೋಗದಿರುವುದೇ ಅದರ ಅತಿ ದೊಡ್ಡ ಯಶಸ್ಸು" ಎಂದು ಭಾರತೀಯ ಸಂರಕ್ಷಣಾಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನ್ನರು ಒಂದು ಸಂದರ್ಭದಲ್ಲಿ ಸಂತೋಷ ವ್ಯಕ್ತಪಡಿಸಿದರು.

ಜೀವನವಿರುವುದು ಒಂದಲ್ಲ ಒಂದು ಕಾರ್ಯಕ್ಕಾಗಿ, ಯಾವುದೋ ಒಂದು ಗುರಿಯ ಸಾಧನೆಗಾಗಿ. ಈ ಗುರಿಯು ಸಾಧಿಸಲ್ಪಡದೆ ಉಳಿದರೆ, ಸಾಯುವುದೇ ಶ್ರೇಯಸ್ಕರ—ಗುರಿಮುಟ್ಟದೆ,ಕಾರ್ಯವೆಸಗದೆ ಬದುಕುವುದು ಒಂದು ವಿಧದ ವಿಡಂಬನೆ! —ಎಂಬ ಪ್ರತಿಕ್ರಿಯೆ ಥಟ್ಟನೆ ವ್ಯಕ್ತವಾಯಿತು.

ಪ್ರತಿಕ್ರಿಯೆಯ ಬಿಸಿ ಆರಿತು. ಆಗ ಯೋಚಿಸುವಾಗ ಪರಿಸ್ಥಿತಿಯೇ ಬೇರೆ!— ಜೀವನವು ಒಂದು ಗುರಿಯಲ್ಲ. ಗುರಿಯನ್ನು ಮುಟ್ಟುವ ಸಾಧನ ಮಾತ್ರ. ಲಕ್ಷ್ಯವು ಮುಖ್ಯವೆಂದೇ ತಿಳಿಯೋಣ; ಆದರೆ, ನಾವು ಸಾಧನವಾದ ಜೀವನವನ್ನು ಉಪೇಕ್ಷಿಸಿ ಸಾಧ್ಯವನ್ನು ಪಡೆಯುವುದು ಅಸದಳವೇ ತಾನೆ? ಆದುದರಿಂದ ಸಾಧ್ಯವನ್ನು ಮರೆತುಬಿಟ್ಟು ಸಾಧನವನ್ನೇ ಸರ್ವಸ್ವವೆಂದು ತಿಳಿಯುವುದು ಅವಶ್ಯ!

ಆಗ ಮನಸ್ಸಿಗೆ ಹೊಳೆಯಿತು—ವಿರೋಧ ಪರಿಸ್ಥಿತಿಗಳಲ್ಲಿ ಸಂಘರ್ಷಣೆಯಲ್ಲಿ, ಅಸ್ತಿತ್ವವನ್ನು ಉಳಿಸಿಕೊಳ್ಳುವುದೂ ಒಂದು ದೊಡ್ಡ ಸಫಲತೆ. ಅಸ್ತಿತ್ವದ (ಈ ಬಾಗಿಲಲ್ಲೇ ವ್ಯಕ್ತಿತ್ವದ— ಗುರಿಯುಳ್ಳ ಜೀವನದ—ಪ್ರತಿಷ್ಠೆಯೂಗುವುದು. ವ್ಯಕ್ತಿ, ಸಂಘ ಅಥವಾ ರಾಷ್ಟ್ರಗಳು ತನ್ನ ಅಸ್ತಿತ್ವವನ್ನು ಎಂದೂ ಮರೆಯಬಾರದು; ಹಾಗೆಂದು ಅಸ್ತಿತ್ವವನ್ನೇ ಸರ್ವಸ್ವವೆಂದೂ ತಿಳಿಯಬಾರದು. ಆದರೂ ಅಸ್ತಿತ್ವರಕ್ಷಣೆಗಾಗಿ ಸದಾ ಜಾಗರೂಕರಾಗಿರಬೇಕು.

ಸಂಯುಕ್ತ ರಾಷ್ಟ್ರಸಂಘವು ಸದ್ಯ ವಿಶ್ವ ಸಂಘಟನೆಯ ಮಹಾ ಲಕ್ಷ್ಯವನ್ನು ಇಟ್ಟುಗೊಂಡಿದೆ. ಈ ಸಾಧ್ಯವನ್ನು ಸಾಧಿಸಲು ಅದಕ್ಕೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು ತಾನೆ? 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬ ಲೋಕೋಕ್ತಿಯಾದರೂ ಇದನ್ನೇ ಸಾರಿ ಹೇಳುವುದಿಲ್ಲವೆ? ಅಸ್ತಿತ್ವವೇ ಉಳಿಯದ ವ್ಯಕ್ತಿ, ಸಂಘ, ರಾಷ್ಟ್ರಗಳು ಯಾವ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಏನು ತಾನೇ ಪ್ರಯೋಜನ? ಜೀವವೇ ಉಳಿಯದೆ ಹೋದರೆ ಸಾಧಿಸುವುದು ಏನನ್ನು? ಆದುದರಿಂದ, ಸರ್ವಕ್ಕೂ ಮೊದಲು ಅಸ್ತಿತ್ವ ಅತ್ಯವಶ್ಯ.

ಅಸ್ತಿತ್ವವನ್ನುಳಿಸಿಕೊಂಡನಂತರ, ದೇಹವನ್ನು ರೋಗಾಣುಗಳು, ಷಡ್ವೈರಿಗಳು, ತಾಪತ್ರಯಗಳು ಬಾಧಿಸುತ್ತಿರುವಂತೆಯೇ ಸಂಘ, ರಾಷ್ಟ್ರಗಳನ್ನೂ ಪರಿಸ್ಥಿತಿಯು ಕಾಡುತ್ತಿರುವುದು. ಅನುಕೂಲ ಸನ್ನಿವೇಶಗಳಿಗಿಂತಲೂ ಅನನುಕೂಲ ಸನ್ನಿವೇಶಗಳು ಎಡತಾಕುವುದೇ ಹೆಚ್ಚಾಗಿದೆ. ಹಾಗಿರುವಾಗ ಸಂಯುಕ್ತರಾಷ್ಟ್ರಸಂಸ್ಥೆಯಾದರೂ ವಿಷಮ ಪರಿಸ್ಥಿತಿಗಳನ್ನು ತಾಳ್ಮೆಯಿಂದ ಎದುರಿಸಿಕೊಂಡು ಎಲ್ಲರನ್ನೂ ಹೊಂದಿಸಿಕೊಂಡು ಮುಂದುವರಿದು ಬರುತ್ತಿರುವುದೂ ಒಂದು ಸಾಹಸದ ಕೆಲಸವಲ್ಲವೆ? ಹಟ್ಟಿ ದರಿದ್ರನೊಬ್ಬನು ಹಸಲಾರದ ಬವಣೆ ಯನ್ನುಣ್ಣುತ್ತ ಆದರ್ಶ ಜೀವನವನ್ನು ಬದುಕುವ ಗುರಿ ಸಾಧಿಸದೆ ಹೋದರೂ, ತನ್ನ ಬದುಕನ್ನು ಸಾಗಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿರುವುದಾದರೆ, ಆತನ ಜೀವಮಾನದ ಬಹು ದೊಡ್ಡ ಸಫಲತೆ ಅದೇ ಎನ್ನಬೇಕು. ವಿಶಾಲ ಸಾಗರದಲ್ಲಿ ದಡಮುಟ್ಟುವ ಹಂಚಿಕೆಯಿಂದ ಹೊರಟ ಹಡಗವೊಂದು ಪ್ರಯಾಣಾವಧಿಯಲ್ಲಿ ಬಿರುಗಾಳಿಗೆ ಸಿಕ್ಕು ತೊಂದರೆಗೀಡಾದಾಗ, ಅದು ದಡಸೇರದೆ ಹೋದರೂ ನೆಮ್ಮದಿಯಿಂದ ಸಾಗರ ಮಧ್ಯೆ ಮುಗುಚಿಬೀಳದೆ ಉಳಿದರೆ ಅದೇ ಮಹತ್ವದ ಸಾಧನೆ.

ಅಂತೆಯೇ ವಿಷಮ ಪರಿಸ್ಥಿತಿಯಲ್ಲಿ ಭಗ್ನವಾಗದೆ ಇನ್ನೂ ಒಂದಾಗಿ ಉಳಿದಿರುವುದು ಮಾತ್ರ ಸಂ. ರಾ. ಸಂಘದ ಒಂದು ಮಹತ್ವದ ಸಾಧನೆಯಾಗಿದೆ; ಇದರಲ್ಲಿ ಅನುಮಾನವಿಲ್ಲ.

ಜೀವನದ ಜೇರಿ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ,ಉಡುಪಿ.



ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯ ಒಂದು ದೃಶ್ಯ.

ಪ್ರಚಲಿತ ಕರ್ತವ್ಯ

(೧ನೇ ಪುಟದಿಂದ)

ರತಪ್ಪ ವಿದೇಶದ ಶತ್ರುಗಳ ಜೊತೆಗೆ ಸ್ವದೇಶದ ದೇಶಘಾತುಕರ ಬಗೆಗೂ ಎಚ್ಚರ ವಹಿಸಬೇಕಾಗಿದೆ. ದೇಶದ ಹೊರಗಿನ ಶತ್ರುಗಳಂತೂ ದೇಶದ ಸ್ವಾತಂತ್ರ್ಯಾಪಹಾರವನ್ನು ಮಾಡುವ ಹಂಚಿಕೆಯಲ್ಲಿರುವಾಗ ಈ ವಿದೇಶೀ ಏಜಂಟರ ರಾಷ್ಟ್ರಘಾತುಕತನವು ಅದಕ್ಕೂ ಮಿಗಿಲಾದ ಗಂಡಾಂತರವಾಗಿದೆ. ಚೀನಾವು ತನ್ನ ದುರಾಗ್ರಹವನ್ನು ಬಿಟ್ಟುಕೊಡದೆ ಹಿಡಿದ ಪಟ್ಟನ್ನೇ ಇನ್ನೂ ಹಿಡಿದು ಕುಳಿತಿರುವುದನ್ನು ನೋಡುವಾಗ ನಮ್ಮ ದೇಶಕ್ಕೆ ಇನ್ನು ಗಂಡಾಂತರ ತಪ್ಪಿದ್ದಲ್ಲ ಎಂದೆನಿಸುವುದು. ಹೀಗಿರುವಾಗ ಭಾರತೀಯರಾದ ನಾವು ದೇಶರಕ್ಷಣೆಗೆ ಮುಂದಾಗಬೇಕಾಗಿದೆ.

ದೇಶದ ರಕ್ಷಣೆಯ ಪ್ರಶ್ನೆ ಬರುವಾಗ ಇದರಲ್ಲಿ ರಾಜಕೀಯ ಮನೋಭಾವವನ್ನು ಎಲ್ಲಾ ಪಕ್ಷಗಳೂ ಬಿಟ್ಟುಕೊಡುವುದು ಅತಿ ಅಗತ್ಯವೆನಿಸಿದೆ. ದೇಶಕ್ಕೆ ದೇಶವೇ ಈ ದಿಸೆಯಲ್ಲಿ ಒಂದಾಗಿ ಒಮ್ಮುಖದಿಂದ ದುಡಿಯಬೇಕಾಗಿದೆ. ಚೌ-ಎನ್-ಲಾಯ್ ಯವರೊಡನೆ ಮಾತುಕತೆಯ ವೇಳೆ ನೆಹರೂರವರು ತಾಳಿದ ದೃಢ ಧೋರಣೆಯನ್ನು ಭಾರತದ ಬಹ್ವಂಶ ರಾಜಕೀಯ ಪಕ್ಷಗಳು ಮೆಚ್ಚಿರುವುವು. ಅವರ ದೃಢ ನಿಲುಮೆಗೆ ತಮ್ಮ ಬೆಂಬಲವನ್ನು ಇತ್ತಿರುವುವು. ಇದೇ ಬಗೆಯ ಬೆಂಬಲ, ಸಹಾಯ ಮುಂದೆಯೂ ನೆಹರೂ ಧೋರಣೆಗೆ ಕೊಡುವುದು ಭಾರತೀಯರ ಕರ್ತವ್ಯ.

ರಾಷ್ಟ್ರರಕ್ಷಣೆಗೆ ಭಾರತೀಯರು ಮುಂದಾಗಬೇಕೆನ್ನುವಾಗಇಲ್ಲಿ ಇನ್ನು ಸಂಗ್ರಾಮವೊಂದೇ ಉಳಿದ ಮಾರ್ಗ ಎಂದು ಯಾರೂ ಭಾವಿಸಲಾಗದು. ಎಲ್ಲಾ ಪರಿಹಾರದ ಮಾರ್ಗಗಳಲ್ಲಿ ಮುಂದುವರಿದು ಪರಿಹಾರ ದೊರೆಯದಿದ್ದಾಗಲೇ ದಂಡಾಸ್ತ್ರದ ಬಳಕೆಯಾಗಬೇಕಲ್ಲದೆ ಅವೇಶಭರಿತರಾಗಿ ದುಡುಕುವುದರಿಂದ ಈಗ ಪರಿಸ್ಥಿತಿ ವಿಕೋಪಕ್ಕೆ ತಲಪಬಹುದು. ನಾವು ಇಂದಿನ ಸೂಕ್ಷ್ಮ ಪರಿಸ್ಥಿತಿಯಲ್ಲಿ ವ್ಯಾಪಕವಾದ ದೃಷ್ಟಿಯಲ್ಲಿ ವಿಚಾರಿಸಬೇಕಲ್ಲದೆ ಆತ್ಮ ತೃಪ್ತಿಯ ಮನೋಭಾವನೆಯನ್ನಾಗಲೀ ಕೋಪವನ್ನಾಗಲೀ ಕಾಣಿಸಿ ಆವೇಗದಿಂದ ಮುಂದುವರಿಯಬಾರದು. ಇವರಿಂದ ಸಮಸ್ಯೆಯ ಪರಿಹಾರ ಕಂಡು ಹುಡುಕತೊಡಗಿ ಇನ್ನಷ್ಟು ಸಮಸ್ಯೆಗಳನ್ನು ಕಾಲಬಳಿ ಎಳೆದುಕೊಂಡಂತಾದೀತು. ತಾಳ್ಮೆಯಿಂದ ಮತ್ತು ಜಾಗೃತದೃಷ್ಟಿಯಿಂದ ನಾವು ಸಮಸ್ಯೆಯನ್ನು ಇನ್ನು ಕೂಡಾ ನೋಡಬೇಕಾದುದು ಅವಶ್ಯವೆನಿಸಿದೆ.

ಅಂತೂ ಭಾರತ ಚೀನಾ ಗಡಿ ತಂಟೆಯು ದೀರ್ಘ ಕಾಲ ಮುಂದುವರಿಯುವ ಒಂದು ಸಮಸ್ಯೆಯಾಗಿ ಉಳಿಯುವುದು. ಹಾಗಾಗಿ ಭಾರತೀಯರಲ್ಲಿ ರಾಷ್ಟ್ರೀಯ ಮನೋಭಾವದ ಹೆಚ್ಚುವಿಕೆಯು ಇಂದು ಅವಶ್ಯವೆನಿಸಿದೆ. ದೇಶದ ಸುರಕ್ಷಿತ ಆಡಳಿತೆಯ ಮುನ್ನಡೆಯ ದೃಷ್ಟಿಯಿಂದ ನೆಹರೂ ಸರಕಾರದ, ನೆಹರೂರವರ ನಿಲುಮೆ ಧೋರಣೆಗಳಿಗೆ ಪ್ರತಿಯೊಬ್ಬರೂ ಬೆಂಬಲ ನೀಡುವುದು ತೀರಾ ಅವಶ್ಯವಾಗಿದೆ. ಇದರಿಂದ ಭಾರತದ ದುರ್ಬಲತೆಯ ಪ್ರದರ್ಶನವಾಗುವುದೆಂದು ಭಾವಿಸುವುದು ಅವಿವೇಕದ ಪರಮಾವಧಿಯಾದೀತು. ಅಂತೂ ಪರಿಣಾಮಗಳನ್ನು ಜಾಗ್ರತರಾಗಿ ನಿರೀಕ್ಷಿಸಿ ಜಾಗೃತರಾಗಿರುವುದು ಭಾರತೀಯರ ಪಾಲಿನ ಹೊಣೆಯಾಗಿದೆ.

ಸಿಂಡಿಕೇಟ್ ಬೇಂಕ್

"ಅತ್ಯುತ್ತಮ ಬೇಂಕಿಂಗ್ ಸೇವೆ"

* ೧೩೭ ಶಾಖೆಗಳು,
* ೨೩ ಕೋಟಿ ರೂ.ಗಳ ಸಂಪತ್ತು,
* ೩೫ ವರುಷಗಳ ಅನುಭವ,
* "ಪಿಗ್ಮಿ"ಯೇ ಮೊದಲಾದ ಉಳಿತಾಯ ಯೋಜನೆಗಳಿಂದ ನಿಮ್ಮ ಆರ್ಥಿಕ ಅವಶ್ಯಕತೆಗಳನ್ನು ದಕ್ಷತೆಯಿಂದ ಪೂರೈಸಬಲ್ಲ,

ವಿಶಾಲ ಸಂಸ್ಥೆಯಾಗಿದೆ

The Canara Industrial & Banking Syndicate Ltd.,
UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೩೬. 12-5-1960 Vol. 39 No. 36.

ಮೈಸೂರು ಕಾಂಗ್ರೆಸು

ಸದಸ್ಯರು ಒಮ್ಮತದಿಂದ ದುಡಿಯಬೇಕು

ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸು ಜಯ ಗಳಿಸಲು ಇದೊಂದೇ ಮಾರ್ಗ.

ಬಹಳ ಸಮಯದಿಂದ ಮುಂದೂಡಲ್ಪಡುತ್ತಿದ್ದ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಕಳೆದ ತಾ. ೭ರಂದು ನಡೆದು ಮೈಸೂರಿನ ಹಿರಿಯ ಕಾಂಗ್ರೆಸ್ ನಾಯಕರೂ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ, ಮಾಜಿ ಮುಖ್ಯ ಮಂತ್ರಿಗಳೂ ಆದ ಶ್ರೀ ಎಸ್. ನಿಜಲಿಂಗಪ್ಪನವರು ಬಹುಮತದಿಂದ ಅಧ್ಯಕ್ಷ ಸ್ಥಾನಕ್ಕೆ ಆರಿಸಿಬಂದಿರುವರು. ಮೈಸೂರ್ ಕಾಂಗ್ರೆಸ್‌ನೊಳಗಿನ ವಿವಿಧ ಪಕ್ಷ ಪಂಗಡಗಳ, ಗುಂಪುಗಳ ದೆಸೆಯಿಂದ ಕಳೆದ ಐದು ವರ್ಷಗಳಿಂದಲೂ ಕಾಂಗ್ರೆಸ್ ಸಂಸ್ಥೆಯ ಸ್ಥಿತಿ ತೀರಾ ಕೆಟ್ಟಿತ್ತು. ೧೯೫೭ರ ಮಹಾ ಚುನಾವಣೆಯ ಕಾಲ ಮೈಸೂರಲ್ಲಿ ಕಾಂಗ್ರೆಸ್ ಬಹುಮತದಿಂದ ಗೆದ್ದುಬಂದೂ ಅಧಿಕಾರವನ್ನು ನಡೆಸಲು ಶಕ್ತವಾದರೂ, ಅಂದಿನಿಂದ ಇಂದಿನವರೆಗೆ ಕಾಂಗ್ರೆಸ್‌ನ ಯಂತ್ರ ಸರಿಯಾಗಿ ಚಾಲನೆಗೊಳ್ಳುತ್ತಿಲ್ಲ ಎಂದು ಹೇಳಬಹುದು.

ಮಹಾ ಚುನಾವಣೆಯ ಬಳಿಕ ಅಧಿಕಾರಾರೂಢವಾದ ಶ್ರೀ ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲವು ಕಾಂಗ್ರೆಸ್ ಸದಸ್ಯರ ಗುಂಪು ಧೋರಣೆಯ ದೆಸೆಯಿಂದ ಉರುಳುವಂತಾಗಿ, ಜತ್ತಿ ಮಂತ್ರಿಮಂಡಲವು ಅಧಿಕಾರಕ್ಕೆ ಬಂತು. ಇನ್ನಾದರೂ ಕಾಂಗ್ರೆಸ್ ನಾಯಕರೊಳಗಣ ಕಚ್ಚಾಟದ ಪ್ರವೃತ್ತಿ ಕೊನೆಗೊಂಡು ಸುಭದ್ರ ಸರಕಾರವು ಆಡಳಿತೆ ನಡೆಸಬಹುದೆಂದು ಜನ ಹಾರೈಸಿದ್ದರು. ಆದರೆ ಇದೀಗ ಕೆಲವು ತಿಂಗಳುಗಳಿಂದ ಜತ್ತಿ ಮಂತ್ರಿಮಂಡಲವನ್ನು ಉರುಳಿಸುವ ಪ್ರಯತ್ನಗಳು ಅವ್ಯಾಹತವಾಗಿ ಸಾಗುತ್ತಿವೆ ಎಂದು ತಿಳಿದುಬಂದಿದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ, ಮಂಡಲ ಕಾಂಗ್ರೆಸ್‌ನ ಚುನಾವಣೆ ಇತ್ಯಾದಿಗಳು ಕಾಂಗ್ರೆಸ್ ಅಧಿವೇಶನದ ದೆಸೆಯಿಂದ ಮುಂದೂಡಲ್ಪಟ್ಟು ಇದೀಗ ಆ ಕಾರ್ಯವೂ ನಡೆದುಹೋಗಿದೆ.

ಮೈಸೂರಿನ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಲ್ಲಿ ಒಮ್ಮತವಿಲ್ಲದುದರ ದೆಸೆಯಿಂದ ಈ ಬಾರಿ ಸ್ಪರ್ಧೆಯು ಅನಿವಾರ್ಯವಾಯಿತು: ಸದಸ್ಯರಲ್ಲಿ ಒಮ್ಮತವನ್ನುಂಟುಮಾಡುವುದಕ್ಕಾಗಿ ಕಾಂಗ್ರೆಸ್ ನಾಯಕರು ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ಚುನಾವಣೆಯು ಒಮ್ಮತದಿಂದ ನಡೆಯಬೇಕೆಂಬುದಕ್ಕಾಗಿಯೇ ದೆಹಲಿಯಿಂದ ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಯು. ಶ್ರೀನಿವಾಸ ಮಲ್ಯರು ಬೆಂಗಳೂರಿಗೆ ಅನೇಕ ಬಾರಿ ಆಗಮಿಸಿದ್ದರು. ಆದರೆ ಕಾಂಗ್ರೆಸಿನ ಈ ಪ್ರಭೃತಿಗಳ ಯತ್ನಗಳೂ ಫಲಿಸಲಿಲ್ಲವೆಂದ ಮೇಲೆ ಮೈಸೂರಿನ ತಂಡ ರಾಜಕೀಯ ಕಾಂಗ್ರೆಸನಲ್ಲಿ ಎಷ್ಟು ಪ್ರಬಲವಾಗಿದೆ ಎಂಬ ಮನವರಿಕೆಯಾಗದಿರದು. ನವ ಮೈಸೂರು ರಾಜ್ಯದ ಉದಯವಾದಂದಿನಿಂದಲೂ ಮೈಸೂರು ಕಾಂಗ್ರೆಸಿಗೆ ತಗಲಿದ ಈ ಕ್ಷತ್ರ ಬಿಟ್ಟಿಲ್ಲ. ಈ ರೋಗ ನಿವಾರಿಸುವ ವೈದ್ಯನ ಉದಯವು ಇನ್ನೂ ಆಗಿಲ್ಲ.

ಒಕ್ಕಟ್ಟು, ಒಮ್ಮತ ಎಂಬುದು ಇನ್ನೊಬ್ಬರ ಪ್ರಯತ್ನದ ದೆಸೆಯಿಂದ ಆಗಬಹುದಾದ ಕಾರ್ಯವೆನ್ನುವುದಕ್ಕಿಂತಲೂ, ಸದಸ್ಯರ ದೃಢ ನಿರ್ಧಾರದಿಂದ ಆಗಬೇಕಾದ ಕಾರ್ಯವಾಗಿದೆ. ಇದಕ್ಕಾಗಿ ಇತರರು ಬಂದು ಪ್ರಯತ್ನಿಸುವುದಕ್ಕಿಂತ ಸದಸ್ಯರೂ ವಿವೇಕಶಾಲಿಗಳಾಗಿ ವಿವೇಚಿಸುವುದರ ಆಗತ್ಯ ಇತ್ತು. ಕಾಂಗ್ರೆಸ್ ನಾಯಕರೊಳಗಣ ಭಿನ್ನಾಭಿಪ್ರಾಯ, ಗುಂಪು ರಾಜಕೀಯಗಳ ದೆಸೆಯಿಂದ ನವಮೈಸೂರು ರಾಜ್ಯದ ಉದಯವಾದಂದಿನಿಂದಲೂ ಮೈಸೂರಿಗೆ ಸುಭದ್ರವಾದ, ದಕ್ಷವಾದ ಸರಕಾರ ದೊರೆಯಲಿಲ್ಲ. ಆಡಳಿತ ಯಂತ್ರ ಸುಸೂತ್ರವಾಗಿ ಕಾರ್ಯನಾಗಿಸಲಿಲ್ಲ. ರಾಜ್ಯದ ಪ್ರಗತಿ ಕುಂಠಿತವಾಯಿತು. ಅಭಿವೃದ್ಧಿಯು ರಾಜ್ಯ ಅವನತಿಯ ದಾರಿ ಹಿಡಿಯುವಂತಾಯಿತು

ಗೃಹ ಕಲಹದಿಂದ ಗೃಹ ಸೌಖ್ಯ ಕೆಟ್ಟುಹೋಗುವುದೆಂಬುದು ಸರ್ವವಿದಿತವಾದ ವಿಷಯ. ಅಂತೆಯೇ ಸಂಸ್ಥೆಯೊಳಗಿನ ಬಿಕ್ಕಟ್ಟಿನ ಪರಿಣಾಮವಾಗಿ ಸಂಸ್ಥೆಯ ಶಕ್ತಿ ಕುಗ್ಗಿ, ಪ್ರಭಾವ ಕಡಿಮೆಯಾಗುವುದು ಕಾಂಗ್ರೆಸ್ಸೊಂದೇ ಇದು ಸಮರ್ಥವಾದ ಪ್ರಬಲವಾದ, ಹಿರಿಯ ರಾಜಕೀಯ ಪಕ್ಷವಾಗಿರುವಾಗ ಅಂತಹ ಸಂಸ್ಥೆಯ ಸದಸ್ಯರು, ಮೈಸೂರಲ್ಲಿ ಇನ್ನೂ ಕಚ್ಚಾಡುತ್ತಿರುವುದು ದುರ್ದೈವದ ಸಂಗತಿ. ಜಾತೀಯತೆ, ಕೋಮುವಾರು ಭಾವನೆಗಳು ಕಾಂಗ್ರೆಸಿನಲ್ಲೂ ತಾಂಡವವಾಡುತ್ತಿರುವುದು. ಕಾಂಗ್ರೆಸಿನ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ: ಈ ದಿಸೆಯಲ್ಲಿ ಕಾಂಗ್ರೆಸಿಗರು ವಿವೇಚಿಸಬೇಕಾದ ಕಾಲ ಒದಗಿದೆ.

ಮೈಸೂರಿನ ಹೊಲಸು ರಾಜಕೀಯದಿಂದ ರಾಷ್ಟ್ರದ ನಾಯಕರೆಲ್ಲರೂ ರೋಸಿಹೋಗಿರುವರು 'ಬಿಡಿಸಲಾಗದ ಕಗ್ಗಂಟು' ಎಂಬ ಕಲ್ಪನೆ ಇಂದು ಹಿರಿಯ ನಾಯಕರಲ್ಲಿ ಮೂಡಿದೆ. ಕಳೆದ ತಾ. ೬ರಂದು ಬೆಂಗಳೂರಲ್ಲಿ ಸದಸ್ಯರಲ್ಲಿ ಒಮ್ಮತ ಉಂಟುಮಾಡಲು ಆಗಮಿಸಿದ್ದ ಶ್ರೀ ಕೆ. ಸಿ. ರೆಡ್ಡಿಯವರು ಆ ದಿನ ಪತ್ರಿಕಾಕಾರರೊಡನೆ ಮಾತನಾಡುತ್ತ ಆಡಿದ ಮಾತುಗಳು ನಿಜಕ್ಕೂ ಕಾಂಗ್ರೆಸ್ ಸದಸ್ಯರು ಪರಿಶೀಲಿಸಬೇಕಾಗಿದೆ. ತಮ್ಮ ಪ್ರಯತ್ನಗಳು ವಿಫಲಗೊಂಡುದರ ದೆಸೆಯಿಂದ ಅವರು ಬೇಸರಗೊಂಡೇ, ನಗುತ್ತಾ ಈ ರೀತಿ ಹೇಳಿದರು ಎಂದು ಭಾವಿಸಬೇಕಾಗಿದೆ. ಅವರು, ಪತ್ರಿಕಾಕಾರರು ಐಕ್ಯದ ಮಾತುಕತೆಗಳು ಏನಾದುವೆಂದು ಕೇಳಿದಾಗ ನಗುತ್ತ "ಯಾವ ಮಾತುಕತೆ? ಮೂರು ವರುಷಗಳಿಂದ ಮಾತುಕತೆಗಳು ನಡೆಯುತ್ತಲೇ ಇವೆ ಇದನ್ನು ಯಾವ ರೀತಿಯಲ್ಲಾದರೂ ಅರ್ಥಮಾಡಿಕೊಳ್ಳಿ" ಎಂದರು. ಅಂದರೆ ಮೂರು ವರುಷಗಳ ಯತ್ನದಿಂದಲೂ ಮೈಸೂರಿನ ಕಾಂಗ್ರೆಸಿಗರಲ್ಲಿ ಒಮ್ಮತ ಉಂಟುಮಾಡಲು ಅಸಾಧ್ಯವೆಂದು ಅವರು ವಿಷಾದದಿಂದ ಹೇಳಿರಬೇಕು. ಈ ರೀತಿ ಒಬ್ಬ ಕಾಂಗ್ರೆಸ್ ನಾಯಕ ನುಡಿಯಬೇಕಾದರೆ, ಕಾಂಗ್ರೆಸ್ ವರಿಷ್ಠರ ಮನಸ್ಸು ಮೈಸೂರಿನ ಕಾಂಗ್ರೆಸಿಗರ ವರ್ತನೆಯಿಂದ ಎಷ್ಟು ನೊಂದಿದೆ ಎಂದು ಭಾವಿಸಬಹುದು. ಕಾಂಗ್ರೆಸ್ ಸದಸ್ಯರು ತಮ್ಮ ಭಿನ್ನಾಭಿಪ್ರಾಯಗಳನ್ನು ಬಿಟ್ಟುಕೊಡುವ ಸೂಚನೆ ಕಂಡ ಬರುವುದಿಲ್ಲ. ಕಾರಣ ಮೈಸೂರು ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಸ್ಪರ್ಧೆ ನಡೆದುದಾಗಿದೆ.

೧೯೬೨ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳ ದೃಷ್ಟಿಯಿಂದ ಈ ಸಲದ ಪ್ರದೇಶ ಕಾಂಗ್ರೆಸ್ ಅಧಿಕಾರಿವರ್ಗಕ್ಕೆ ಹೆಚ್ಚಿನ ಸ್ಥಾನಮಾನ, ಜವಾಬ್ದಾರಿಗಳಿರುವುದು. ಮುಂಬರುವ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳನ್ನು ಆರಿಸುವ ಜವಾಬ್ದಾರಿ, ಚುನಾವಣಾ ಪ್ರಚಾರ ಇತ್ಯಾದಿ ಕಾರ್ಯಭಾರಗಳು ಈ ಬಾರಿಯ ಅಧಿಕಾರಿವರ್ಗಕ್ಕೆ ಇರುವುದರಿಂದ ಕಾಂಗ್ರೆಸಿಗರ ಜವಾಬ್ದಾರಿ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ ಸದಸ್ಯರು ಒಮ್ಮತದಿಂದ ಚುನಾವಣೆಯನ್ನು ಎದುರಿಸುವ ಅವಶ್ಯಕತೆ ಇದೆ. ಕಮ್ಯೂನಿಸ್ಟರ ಪ್ರಭಾವ ಭಾರತದಲ್ಲಿ ದಿನದಿನಕ್ಕೆ ಹೆಚ್ಚುತ್ತಿರುವಾಗ ಕಾಂಗ್ರೆಸಿಗರು ಕಚ್ಚಾಡಿ ಕುಳಿತುಕೊಂಡರೆ ದೇಶಕ್ಕೆ ಗಂಡಾಂತರ ತಪ್ಪಿದಲ್ಲ. ಸಂದರ್ಭ ಸಾಧಕರಾದ ಕಮ್ಯುನಿಸ್ಟರು ಕಾಂಗ್ರೆಸಿಗರ ಒಳ ಜಗಳಗಳ ಸದುಪಯೋಗವನ್ನು ಪಡೆಯುತ್ತಲೇ ಇದ್ದಾರೆ. ಅಂತಲೇ ಮುಂಬರುವ ಚುನಾವಣೆಯಲ್ಲಿ ಮೈಸೂರಲ್ಲೂ ಅವರು ತಮ್ಮ ಪ್ರಭಾವತೋರಲು ಹಿಂಜರಿಯಲಿಕ್ಕಿಲ್ಲ. ಈ ಸಂದರ್ಭ ಮೈಸೂರು ಪ್ರದೇಶ ಕಾಂಗ್ರೆಸಿನ ಜವಾಬ್ದಾರಿ ಹೆಚ್ಚಾಗಿದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಆರಿಸಿಬಂದಿರುವ ಶ್ರೀ ನಿಜಲಿಂಗಪ್ಪನವರು ನಿಷ್ಠಾವಂತ ಕಾಂಗ್ರೆಸಿಗರು. ಪ್ರಾಮಾಣಿಕ ವ್ಯಕ್ತಿಯಾಗಿರುವರು. ಮೈಸೂರಿನ ಹಿರಿಯ ಕಾಂಗ್ರೆಸ್ ನಾಯಕರಾಗಿರುವ ನಿಜಲಿಂಗಪ್ಪನವರ ಆಯ್ಕೆಯು ಸಮಯೋಚಿತವಾದುದಾಗಿದೆ. ನಿಜಲಿಂಗಪ್ಪನವರು ಅಖಿಲಭಾರತದ ನೆಲೆಯಲ್ಲಿಯೂ ಒಬ್ಬ ಹಿರಿಯ ಕಾಂಗ್ರೆಸಿಗರಾಗಿದ್ದು, ಅವರ ಹೆಸರು ಅಖಿಲಭಾರತ ಕಾಂಗ್ರೆಸಿನ ಅಧ್ಯಕ್ಷಪದಕ್ಕೂ ಸೂಚಿತವಾದ ಸುದ್ದಿಯೂ ಇತ್ತು. ಅಂತೂ ಅವರು ಆ ಸ್ಥಾನಕ್ಕೆ ಅರ್ಹರು. ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಅನುಭವ ಅವರಿಗಿದೆ. ಅಖಿಲಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ದುಡಿದು ಅವರಿಗೆ ಅಭ್ಯಾಸವಿದೆ. ಹೀಗಿರುವಾಗ ಈ ಹೊಣೆಯನ್ನು ನಿರ್ವಹಿಸುವಲ್ಲಿ ಅವರು ಯಶಸ್ವಿಯಾದಾರೆಂದು ಹಾರೈಸಬಹುದು.

ಚುನಾವಣೆಯಲ್ಲಿ ಗೆದ್ದ ಬಳಿಕ ಶ್ರೀಗಳಾದ ಬಿ. ಡಿ. ಜತ್ತಿ, ಎಸ್. ಚೆನ್ನಯ್ಯ, ಎಚ್. ಕೆ. ವೀರಣ್ಣ ಗೌಡ, ನಾಗಯ್ಯ ರೆಡ್ಡಿ ಮೊದಲಾದವರು ನಿಜಲಿಂಗಪ್ಪನವರನ್ನು ಅಭಿನಂದಿಸಿ ಅವರಿಗೆ ಸಂಪೂರ್ಣ ಸಹಕಾರದ ಭರವಸೆಯನ್ನು ಮಾತಿನಲ್ಲಿ ಇತ್ತಿರುವರು. ಅವರ ಪ್ರತಿಸ್ಪರ್ಧಿಯಾಗಿ ಪರಾಭವ ಹೊಂದಿದ ನಾಗಯ್ಯ ರೆಡ್ಡಿಯವರೂ ಸೋತೆನೆಂಬ ಭಾವನೆ ಇಟ್ಟುಕೊಳ್ಳದೆ ನಿಮ್ಮನ್ನು ಅಭಿನಂದಿಸುತ್ತೇನೆ ಎಂದು ನುಡಿದಿರುವರು. ಅಂತೂ ಈ ಭರವ

(೧೦ನೇ ಪುಟ ನೋಡಿರಿ)

ಕಥಾವಿಹಾರ

ಬಯಲಾಗದ ರಹಸ್ಯವದು!

ಪದ್ಮಳಿಗೆ ಬಹಿಷ್ಕಾರದ ಆಜ್ಞೆಯಿತ್ತ ರಾಮಕೃಷ್ಣಯ್ಯ ವಿಷತಿಂದು ಆತ್ಮಹತ್ಯೆ ಮಾಡಿಕೊಂಡರು. ಆದರೆ, ಇದರ ಕಾರಣ ಮಾತ್ರ ಎಷ್ಟು ಜನರಿಗೆ ಗೊತ್ತು?

"ಸುಬ್ಬಾ ಜೋಯಿಸರೇ, ನೀವೇನೆನ್ನುತ್ತೀರಿ?" ಎಂದು ಮೂಗಿನ ರಂಧ್ರಗಳಿಗೆ ಮಂಗಳೂರು ನಶ್ಯವನ್ನು ತುರುಕಿಸುತ್ತಾ ಲಕ್ಷ್ಮೀನಾರಾಯಣ ಶಾಸ್ತ್ರಿಗಳು ಕೇಳಿದರು.

"ನನ್ನದೂ ಅದೇ ಅಭಿಪ್ರಾಯ ನೋಡಿ, ಹುಡುಗಿ ಮದುವೆಯಾಗುವ ಮುನ್ನ ಗರ್ಭಿಣಿಯಾಗಿದ್ದಾಳೆ. ಆದುದರಿಂದ ಅವಳನ್ನು ಜಾತಿಯಿಂದ ಬಹಿಷ್ಕರಿಸಬೇಕೆಂದೇ ಶಾಸ್ತ್ರಗಳು ಸಾರುತ್ತಿವೆ. ಆದುದರಿಂದ ನಾವೇನೂ ಮಾಡಲಾರೆವು" ಎಂದು ಸುಬ್ಬಾ ಜೋಯಿಸರು ಒಂದಿಷ್ಟೂ ಕನಿಕರವಿಲ್ಲದವರಂತೆ ಹೇಳಿಬಿಟ್ಟರು.

ಇದನ್ನು ಕೇಳುತ್ತಲೇ "ಅಯ್ಯೋ" ಎಂದು ಚೀರುತ್ತಾ ಅಲ್ಲೇ ನಿಂತಿದ್ದ ಹದಿನಾರರ ಹರೆಯದ ಸುಂದರ ತರುಣಿ ಪದ್ಮಾ ಕುಸಿದುಬಿದ್ದಳು. ಅವಳು ಮೂರ್ಛೆ ಹೋಗಿದ್ದಳು. ಇದನ್ನು ನೋಡಿದ ಅವಳ ತಂದೆ ಮಾಧವರಾಯರು ದಂಗು ಬಡಿದವರಂತೆ ನಿಂತುಬಿಟ್ಟರು. ಅವರಿಗೆ ಆಗೇನು ಮಾಡಬೇಕೆಂಬುದೇ ಹೊಳೆಯಲಿಲ್ಲ. ಥಕ್ಕನೆ ಯೋಚನೆ ಬರಲು ದೇವಸ್ಥಾನದ ಬಾವಿಯಿಂದ ಒಂದು ತಂಬಿಗೆ ನೀರು ತಂದು ಮುದ್ದಿನ ಮಗಳ ಮುಖದ ಮೇಲೆ ಚಿಮುಕಿಸಿದರು. ತುಸು ಹೊತ್ತಿನಲ್ಲಿ ಪದ್ಮಳ ಕಣ್ಣುಗಳು ಮೆಲ್ಲನೆ ತೆರೆದುವು. ತಾನೆಲ್ಲಿದ್ದೇನೆ ಎಂಬ ಅರಿವೇ ಅವಳಿಗಾಗಲಿಲ್ಲ. ನಿಧಾನವಾಗಿ ಗೋಡೆಯನ್ನು ಹಿಡಿದು ಕುಳಿತುಕೊಂಡಳು. ಅವಳ ಕಣ್ಣಿನಿಂದ ಕಂಬನಿಯು ಉರುಳುತಿತ್ತು. ಬಂದ ಅಳುವನ್ನು ಒತ್ತಿಹಿಡಿದುಕೊಂಡಳು. ಅಲ್ಲಿ ಕುಳಿತಿದ್ದ ಪಂಚರನ್ನು ನೋಡಿದೊಡನೆ ನಡೆದುದೆಲ್ಲದರ ಅರಿವು ಅವಳಿಗಾಯಿತು. ಪಂಚರಲ್ಲಿ ಒಬ್ಬರಾಗಿದ್ದ ರಾಮಕೃಷ್ಣಯ್ಯನವರನ್ನೇ ಆಕೆ ದುರುಗುಟ್ಟಿ ನೋಡತೊಡಗಿದಳು. ಅವಳ ನೋಟವನ್ನು ರಾಮಕೃಷ್ಣಯ್ಯನವರ ಕಣ್ಣುಗಳು ಎದುರಿಸದಾದವು. ಅವರ ವಿಶಾಲವಾದ ಹಣೆಯ ಮೇಲೆ ಬೆವರ ಹನಿಗಳು ಸಾಲಾಗಿ ಕಾಣಿಸಿಕೊಂಡುವು; ಮುಖ ಬಿಳುಪೇರಿತು, ಮೋರೆ ತಗ್ಗಿತು. ಆದರೆ ಇದನ್ನಾರೂ ಗಮನಿಸಲಿಲ್ಲ.

"ನೋಡಿ ಮಾಧವರಾಯರೇ, ನಾವೇನೂ ಮಾಡುವಂತಿಲ್ಲ. ಹುಡುಗಿ ಧರ್ಮಕ್ಕೆ ವಿರೋಧವಾಗಿ ಮದುವೆಯಾಗುವ ಮೊದಲು ಗರ್ಭಿಣಿಯಾಗಿದ್ದಾಳೆ. ಇದು ನಿಮ್ಮ ಮನೆತನಕ್ಕೂ ಮಸಿಬಳಿಯುವ ಯತ್ನವೇ ಸರಿ. ಹುಡುಗಿಯರನ್ನು ಪ್ರಾಯಬಂದ ಮೇಲೆ ಮನೆಯಲ್ಲಿ ಕುಳ್ಳಿರಿಸಿಕೊಂಡರೆ ಈ ಅನರ್ಥಗಳೆಲ್ಲಾ ಆಗುವುದು ಸ್ವಾಭಾವಿಕವೇ ಸರಿ. ಹುಡುಗಿಗೆ ಮದುವೆಮಾಡಿ ಎಂದು ನಾನು ಸಾವಿರ ಸಾರಿ ಹೇಳಿದರೂ ತಾವದಕ್ಕೆ ಕಿವಿಗೊಡಲೇ ಇಲ್ಲ. ಈಗ ಹುಡುಗಿಯನ್ನು ಮನೆಯಿಂದ ಹೊರಹಾಕದೆ ಬೇರೆ ದಾರಿಯಿಲ್ಲ. ಇದಕ್ಕೆ ತಪ್ಪಿದರೆ ನಿಮ್ಮನ್ನು ಜಾತಿಯಿಂದ ಬಹಿಷ್ಕರಿಸಬೇಕಾದೀತು. ನಾವೇನು ಮಾಡಬಲ್ಲೆವು?" ಎಂದು ತಿಪ್ಪಾ ಭಟ್ಟರು ಹೇಳಿದರು.

ಪದ್ಮಳ ಕಣ್ಣಿನಿಂದ ನೀರು ಧಾರಾಕಾರವಾಗಿ ಇಳಿಯುತಿತ್ತು. ಸೀರೆಯ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ಆಕೆ ಅಳುತಿದ್ದಳು. ಈ ದೃಶ್ಯವನ್ನು ಕಂಡ ಮಾಧವರಾಯರ ಕರುಳು ಕಿತ್ತುಬರುವಂತಾಯಿತು. ಹದಿನಾರುವರುಷ ಮಮತೆಯಿಂದ ಸಾಕಿ ಸಲಹಿದ ತಂದೆಯ ಪಾಲಿಗೆ ಮಗಳನ್ನು ಮನೆಯಿಂದ ಹೊರಗೆ ಹಾಕುವುದಕ್ಕಿಂತ ಹೆಚ್ಚಿನ ಸಂಕಷ್ಟ ಇನ್ನಾವುದು ಬಂದೀತು? ಆದರೆ ಸಾಲಿಗ್ರಾಮದ ನರಸಿಂಹದೇವರ ಸನ್ನಿಧಿಯಲ್ಲಿ ಪಂಚರು ಇತ್ತ ತೀರ್ಪಿಗೆ ಅವರು ತಲೆಬಾಗಲೇಬೇಕಿತ್ತು. ಇಲ್ಲದಿದ್ದರೆ ಜಾತಿಯಿಂದ ಬಹಿಷ್ಕಾರ ಅವರ ಪಾಲಿಗೆ ತಪ್ಪಿದುದಲ್ಲ.

"ಪಂಚರೇ, ನಿಮ್ಮ ನಿರ್ಧಾರದ ಕುರಿತು ನನ್ನ ಅಭಿಮತವನ್ನು ಬರುವ ಸೋಮವಾರ ತಿಳಿಸಿದರಾಗದೇ?" ವಿನೀತಭಾವದಿಂದ ಮಾಧವರಾಯರು ಕೇಳಿದರು. ಅವರ ಮುಖದಲ್ಲಿ ದೈನ್ಯತೆ ಎದ್ದುಕಾಣುತಿತ್ತು.

"ಏನು ಹೇಳುವುದು ಭಟ್ಟರೇ?" ತಿಪ್ಪಾ ಭಟ್ಟರೊಡನೆ ಶ್ರೀನಿವಾಸ ಶಾಸ್ತ್ರಿಗಳು ಕೇಳಿದರು.

"ಆಗಬಹುದು. ಸೋಮವಾರ ದಿನ ಸಂಜೆ ಪುನಃ ಇಲ್ಲಿ ಸಭೆಸೇರೋಣ" ಎಂದು ಹೇಳಿದರು. ಇದಕ್ಕೆ ಉಳಿದ ನಾಲ್ವರ ಸಮ್ಮತಿಯೂ ದೊರೆಯಿತು.

ತಿಪ್ಪಾ ಭಟ್ಟರೂ, ಸುಬ್ಬಾ ಜೋಯಿಸರೂ, ರಾಮಕೃಷ್ಣಯ್ಯನವರೂ, ಲಕ್ಷ್ಮೀನಾರಾಯಣ ಶಾಸ್ತ್ರಿಗಳೂ ಮತ್ತು ಶ್ರೀನಿವಾಸ ಶಾಸ್ತ್ರಿಗಳೂ ಅಲ್ಲಿಂದೆದ್ದು ಹೊರಟುಹೋದರು. ರಾಮಕೃಷ್ಣಯ್ಯನವರನ್ನುಳಿದು ಉಳಿದವರ ಮುಖದಲ್ಲಿ ಮಂದಸ್ಮಿತವೊಂದು ಮೂಡಿತ್ತು. ಪದ್ಮಳ ಗರ್ಭದಲ್ಲಿ ಅದಾರ ಶಿಶುವು ಬೆಳೆಯುತ್ತಿದೆಯೆಂಬುದರ ಕುರಿತು ಅವರು ಚರ್ಚಿಸುತಿದ್ದರು. ಆದರೆ ರಾಮಕೃಷ್ಣಯ್ಯನವರು ಮಾತ್ರ ಚರ್ಚೆಯಲ್ಲಿ ಭಾಗವಹಿಸದೆ ಮೌನ ತಾಳಿ ಮೆಲ್ಲನೆ ನಡೆಯುತಿದ್ದರು. ಅವರ ಮುಖವು ಕಳೆಗುಂದಿತ್ತು. ಕಳ್ಳತನ ಮಾಡಿ ಭಯಗ್ರಸ್ತನಾದ ಚೋರನ ಮುಖದಂತೆ ಅವರ ಮುಖವು ಕಂಡು ಬರುತಿತ್ತು.

೦೦ ೦೦

ಮಾಧವರಾಯರು ಮಗಳನ್ನು ಕರೆದುಕೊಂಡು ಮನೆಯ ಕಡೆಗೆ ಹೊರಟರು. ಅವರೀರ್ವರೂ ದುಃಖದಿಂದ ಭಾರವಾದ ಹೃದಯವನ್ನು ಹೊತ್ತು ಮೆಲ್ಲಮೆಲ್ಲನೆ ಕಾಲಿಡುತಿದ್ದರು. ಆಗಲೇ ಬಾನಿನ ಪಡುವಣ ಅಂಚನ್ನು ಸೇರಿದ್ದ ದಿನಕರನು ಪಡುಗಡಲಲ್ಲಿ ಸ್ನಾನಕ್ಕೆಂದು ಹೋಗಿ ಅದೃಶ್ಯನಾದನು. ಬೆಳಕು ದೂರ ಸರಿದು ಅಂಧಕಾರವು ವ್ಯಾಪಿಸತೊಡಗಿತ್ತು. ಮಾಧವರಾಯರು ಮಗಳನ್ನು ಸಂತೈಸುವ ಪ್ರಯತ್ನ ಮಾಡುತಿದ್ದರು. ಆದರೆ ಸ್ವತಃ ಅವರೇ ದುಃಖದಿಂದ ವಿಚಲಿತರಾಗಿದ್ದುದರಿಂದ ಅವರ ಯತ್ನಗಳೆಲ್ಲಾ ನೀರಿನಲ್ಲಿ ಮಾಡಿದ ಹೋಮಗಳಾದುವು. ಪದ್ಮಳಿಗೆ ಅಳು ಉಕ್ಕಿ ಉಕ್ಕಿ ಬರುತಿತ್ತು. ಮಾಧವರಾಯರ ಮನಸ್ಸಿನಲ್ಲಿ ನಾನಾತರದ ಯೋಚನಾತರಂಗಗಳು ಏಳುತಿದ್ದುವು. ಅವರ ಮನಸ್ಸಿನಲ್ಲಿ ತನ್ನ ಮಗಳ ಕೌಮಾರ್ಯವನ್ನು ಕೆಡಿಸಿದ ಪಾಪಿಯಾರೆಂಬುದನ್ನು ತಿಳಿಯುವ ಆಸೆಯೂ ಅಂಕುರಿಸುತಿತ್ತು. ಆ ಪಾಪಿಯನ್ನು ಒಂದೇ ಕ್ಷಣದಲ್ಲಿ ಭಸ್ಮಮಾಡಿ ಬಿಡುವೆನೆಂಬ ಕ್ರೋಧವೂ ಉತ್ಪನ್ನವಾಗುತಿತ್ತು. ಆದರೆ.... ಆದರೆ.... ಪದ್ಮ ಆ ಪಾಪಿಯ ಹೆಸರನ್ನು ಹೇಳಲು ಸಿದ್ಧಳಾಗಿರಲಿಲ್ಲ. ಮಾಧವರಾಯರಿಗೂ ಕೇಳಿ ತಿಳಿಯುವ ಧೈರ್ಯವಿರಲಿಲ್ಲ.

೦೦ ೦೦

ಮರುದಿನ ಬೆಳಗ್ಗೆ ಘಂಟೆ ಎಂಟಾಗಿರಬಹುದು. ರಾಮಕೃಷ್ಣಯ್ಯನವರು ಸ್ನಾನ ಮಾಡಿ, ಮಡಿಯುಟ್ಟು, ಭಸ್ಮವನ್ನು ಲೇಪಿಸಿಕೊಂಡು, ಕೈಯಲ್ಲಿ ನೀರಿರುವ ಕವಳಿಗೆಯನ್ನು ಹಿಡಿದುಕೊಂಡು ಪಾಂಡೇಶ್ವರದ ಶ್ರೀನಿವಾಸರಾಯರಲ್ಲಿ ಪೌರೋಹಿತ್ಯಕ್ಕೆಂದು ಹೊರಟಿದ್ದರು. ಬೊಜ್ಜು ಬೆಳೆದ ಮೈಯನ್ನು ಹೊತ್ತು ಮೆಲ್ಲಮೆಲ್ಲನೆ ಕಾಲಿಡುತ್ತ, ರಸ್ತೆಯ ಬಲಬದಿಯ ಕಾಲುದಾರಿಯಲ್ಲಿ ಅವರು ಮುಂದುವರಿಯುತ್ತಿದ್ದರು. ಸಾಸ್ತಾನಕ್ಕಿಂತ ಸ್ವಲ್ಪ ಹಿಂದೆ ಬರುತ್ತಿರುವಾಗ ಧಡಕ್ಕನೆ ಅವರ ಮೈಮೇಲೆ ಯಾರೋ ಬಿದ್ದಂತಾಯಿತು. ಅವನೇ ಪದ್ಮಳ ಅಣ್ಣ ಸೀತಾರಾಮ. ರಸ್ತೆಯ ಪಕ್ಕದ ಆಲದ ಮರದ ಮೇಲೆ ರಾಮಕೃಷ್ಣಯ್ಯನವರ ಬರವನ್ನೇ ಕಾದು ಕುಳಿತಿದ್ದ ಸೀತಾರಾಮ ಅವರು ಬರುತ್ತಲೇ ಅವರ ಮೈಮೇಲೆ ಬಿದ್ದು ಅವರನ್ನು ಚೆನ್ನಾಗಿ ಹೊಡೆಯತೊಡಗಿದನು. ಅವರ ಕೆನ್ನೆ ಬಾತುಹೋಯಿತು. ಹೊಡೆದ ಹೊಡೆದು ಅವರನ್ನು ಭೂಮಿಯಲ್ಲಿ ಕೆ ವಿದನು.

"ರಾಮಕೃಷ್ಣಯ್ಯನವರೇ, ನೀ ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿ ಮಾಡದೆ ಬಿಡೆನೆಂದು ನಿನ್ನೆ ನನ್ನ ತಂ ಪದ್ಮ ನಿಮ್ಮ ಅತ್ಯಾಚಾರದ ಕತೆ ನನ್ನ ಹೇಳಿದಾಗ ನಾನು ಶಪಥಮಾಡಿದ್ದೆ. ದೀಗ ನನ್ನ ಶಪಥ ಪೂರ್ಣವಾಯಿತು. ನೀವು ಧರ್ಮಶಾಸ್ತ್ರಗಳನ್ನು ತಿಳಿದವ ವೇದಾಧ್ಯಯನ ಮಾಡಿದವರು, ಹಲ ಮನೆಗಳ ಪೌರೋಹಿತ್ಯವನ್ನು ಮಾಡು ವರು. ತಿಳಿದವರಾದ ನೀವು ಕಾಮುಕ ಗಿರುವುದೇನು ಚೆಂದ? ಇಬ್ಬರು ಮಡ ಯರನ್ನು ನಿಮ್ಮ ಕಾಮಕೇಳಿಗೆ ಬಲಿತೆ ದುಕೊಂಡಿರಿ. ಆದರೂ ನಿಮ್ಮ ಕಾಮಲಾ ಲಸೆ ಹಿಂಗಲಿಲ್ಲ. ಪಶುವಿನಂತೆ ಸೊಸೆ ಮೇಲೆ ಅತ್ಯಾಚಾರಮಾಡಲು ಹೊಂಟೆ ಅವಳಿಗೆ ಹಿತ್ತಲಿನ ಬಾವಿಯೇ ಆಶ್ರ ವಿತ್ತು. ಆ ನಿರಪರಾಧಿನಿ ಸ್ತ್ರೀಯ ಕೊಲೆಗಳ ಪಾಪ ನಿಮ್ಮ ತಲೆಯಮೇಲಿ ಇಷ್ಟೂ ಸಾಲದೆ ನನ್ನ ತಂಗಿಯ ಮೇ ಬಲಾತ್ಕಾರದಿಂದ ತಾವು ಅತ್ಯಾಚಾರ ಡೆಸಿದಿರಿ. ಆ ಮೇಲೆ ಅವಳನ್ನು ಜಾ ಯಿಂದ ಬಹಿಷ್ಕರಿಸುವ ಸಲಹೆಯಿತ್ತಿ ಹೇಳಿ, ನಿಮಗೇನು ಶಿಕ್ಷೆಕೊಡಬೇಕ ಮೂಟೆಗಟ್ಟಲೆ ಪಾಪ ನಿಮ್ಮ ತಲೆ ಮೇಲೆ ಇರುವಾಗ ಪರರಿಗುಪದೇಶಿಸು ಅಧಿಕಾರ ನಿಮಗೆಲ್ಲಿ ಬಂತು?" ಎಂ ಹೇಳಿ ಅವರನ್ನು ಚೆನ್ನಾಗಿ ಒದೆದನು. ವರುಟ್ಟ ಪಂಚೆಯನ್ನೂ ಕಿತ್ತು ಚೂ ಚೂರು ಮಾಡಿ ಹರಿದು ಮೂಲೆಗೆಸೆ ಹೊರಟುಹೋದನು.

ಸೀತಾರಾಮನಿಂದ ಚೆನ್ನಾಗಿ ಒ ಕೊಂಡ ರಾಮಕೃಷ್ಣಯ್ಯನವರ ದೇಹ ಲ್ಲಿ ಎದ್ದು ಕುಳಿತುಕೊಳ್ಳುವಷ್ಟೂ ತ್ರಾ ವಿರಲಿಲ್ಲ. ಮೈ ಮೇಲೆ ಒಂದು ತುಂ ಬಟ್ಟೆ ಕೂಡಾ ಇದ್ದಿರಲಿಲ್ಲ. ಅವರ ದಂ ನೀಯ ಸ್ಥಿತಿಯನ್ನು ಕಂಡು ಮರುಗಿ ಸಮಯದಲ್ಲಿ ಆ ದಾರಿಯಾಗಿ ಹೋಗ ದ್ದ ಪಥಿಕನೊಬ್ಬನು ತಾನು ಹೊದ ಕೊಂಡಿದ್ದ ವಸ್ತ್ರವನ್ನು ಅವರ ಮೇಲೆ ಎಸೆದು ಹೊರಟುಹೋದನು. ಸು ಹೊತ್ತಿನ ಮೇಲೆ ರಾಮಕೃಷ್ಣಯ್ಯ ವರ ಶರೀರದಲ್ಲಿ ಕೊಂಚ ಶಕ್ತಿಯ ಚಾರವಾದಂತಾಯಿತು. ಅವರು ಅಲ್ಲಿಂ ದ್ದು ಆ ಮನುಷ್ಯನು ಎಸೆದ ಬಟ್ಟೆಯನ್ನೆ ಉಟ್ಟುಕೊಂಡು ಮನೆಯ ಹಾದಿ ಹಿ ದರು.

೦ ೦ ೦ ೦

ಮರುದಿನ ಊರವರ ಬಾಯಲ್ಲೆಲ ರಾಮಕೃಷ್ಣಯ್ಯನವರು ವಿಷ ತಿಂದು ತ್ತುಹೋದ ಸುದ್ದಿ ಕೇಳಬರುತಿದ್ದಿತು. ವರ ಆತ್ಮಹತ್ಯೆಯ ಕುರಿತು ಒಬ್ಬೊಬ್ಬ ಒಂದೊಂದು ತೆರನಾಗಿ ಮಾತನಾಡಿಕೊ ಡರು. ಆದರೆ ಅವರ ವಿಷಸೇವನೆಯ ನಿ ವಾದ ಕಾರಣದ ರಹಸ್ಯ ಮಾತ್ರ ಬ ಲಾಗಲಿಲ್ಲ.

— ಪಾ| ಚಂದ್ರಶೇಖರ ಚಡ
ಪಾಂಡೇಶ್ವರ.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು
ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ
ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ
ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿ

...ಕವ್ಯನಿಗೆ ಓಲೆ–೪

ಚಿತ್ರಕಾರ ಕಾಣದುದನ್ನು ಕವಿ ಕಾಣುತ್ತಾನೆ

(ಚಿತ್ರಕಾರ ಕಾಲಕೃತ ದೇಶಕೃತ ಬಂಧನದಲ್ಲಿರುತ್ತಾನೆ; ಆದರೆ, ಕವಿಯು ಅಪಾರೇ ಕಾವ್ಯಸಂಸಾರೇ ಕವಿರೇಕ ಪ್ರಜಾಪತಿಃ ಎಂಬ ಬಿರುದಿಗೆ ಪಾತ್ರನಾಗಿದ್ದಾನೆ)

...ಸೊಗಯಿಸಿ ಬಂದ ಮಾಮರನೆ, ತ...ತ್ರಿವಳ್ಳಿಯೆ, ಪೂತಜಾತಿ ಸಂಪಗೆಯೆ, ...ಶಿಲ್ಪ ಕೋಗಿಲೆಯೆ, ಪಾಡುವ ತುಂಬಿ...ಯೆ, ನಲ್ಲರ ಒಳ್ಕೊಗಂನಗ ಮೊಗದೊಳ್ ...ಕಂಚಲೆಯೆ ಕೂಡುವ ನಲ್ಲರೆ ನೊಳ್ಪು ...ಆವ ಬೆಟ್ಟುಗಳೊಳಂ ಆವ ನಂದನವ...ಂಗಳೊಳಂ ಬನವಾಸಿ ದೇಶದೊಳ್.... ...ಂಕಣಗಾಳಿ ಸೋಂಕಿದೊಡಂ, ಒಳ್ಪು ...ಳ್ದೊಡಂ, ಇಂಪನಾಳ್ದ ಗೇಯಂ ಕಿವಿ...ಕ್ಕೊಡಂ, ಬಿರಿದ ಮಲ್ಲಿಗೆ ಗಂಡೊ...ಂ, ಆದ ಕೆಂದಲಂಪಂ ಗಡೆಗೊಂಡೊ...ಂ, ಮಧು ಮಹೋತ್ಸವ ಮಾದೊಡಂ, ...ನನೆಂಬೆನ್? ಆರ್ ಅಂಕುಸಮಿಟ್ಟೊಡಂ ...ನೆವುದೆನ್ನ ಮನಂ ಬನವಾಸಿ ದೇಶ...ಂ....'' ಮೊದಲಾದ ಹಲವು ಪದ್ಯಗಳ...ನ್ನು ನೋಡು. ಮೇಲಿಂದ ಮೇಲೆ ವೀಕ್ಷಿ...ದಾಗ, ಇದನ್ನು ರೇಖೆಗಳ ಮೂಲಕ ...ತ್ರಿಸಬಹುದೆಂದು ಕಂಡರೂ ಅದು ಚಿ...ತ್ರಸೃಷ್ಟಿ ಮಾತ್ರವಾದೀತೇ ಹೊರತು ಭಾ...ಅಭಿವ್ಯಂಜನವಾಗುವುದು ಸರ್ವಥಾ ಸಾ...ಧ್ಯವಿಲ್ಲ. ಎಂದರೆ, ಚಿತ್ರಕಲೆಯೂ ಮಾಡ...ಲಾರದ ಅಭಿವ್ಯಂಜನೆಯನ್ನು ಶಬ್ದರೂ...ಪದಲ್ಲಿ ಕಾವ್ಯವು ಮೂಡಿಸಿತೋರಿಸುತ್ತದೆ.

ಇನ್ನೂ ಒಂದು ವಿಷಯ. ಮೇಲೆ ಸೂ...ಚಿತವಾದ ಎರಡು ಪದ್ಯಗಳ ಸನ್ನಿವೇಶವ...ನ್ನು ಬಹು ಪ್ರಯತ್ನದಿಂದ ಚಿತ್ರಿಸಿದರೆ, ...ದರಿಂದ ಕಾವ್ಯರೂಪದಲ್ಲಿ ದೊರೆಯಬಹು...ದಾದ ಆನಂದ ಎಂದಿಗೂ ಸಿಗಲಾರದು, ...ದರಿಂದ ಶಬ್ದ ಶಕ್ತಿಯೂ ಗೋಚರವಾ...ದು. ಚಿತ್ರಕಲೆಯ ವಿಷಯವೇನೋ ಅ...ೕ ಸನ್ನಿವೇಶವಾಗಬಹುದು; ಕಾವ್ಯವು ...ಂಧ ಮತ್ತು ಶಬ್ದಗಳ ಚಿತ್ರವನ್ನೂ ಎಳೆ...ಯಬಲ್ಲುದು. ಆದಿಕವಿ ಪಂಪ ಮಾಡಿದ್ದ ...ಬನವಾಸಿ ದೇಶದ ಸುಂದರ ಹಾಗೂ ರ...ಮಣೀಯಕವಾದ ಶಬ್ದ ಚಿತ್ರವನ್ನು ...ಮೇಲೆ ಉದ್ಧರಿಸಿ ಬರೆದಿದೆ. ಕೋಗಿಲೆಯ ...ಕಿಲ್, ತುಂಬಿಯ ಹಾಡುಗಳನ್ನೂ ...ವಿ ಚಿತ್ರಿಸಬಲ್ಲನಾದರೆ, ಚಿತ್ರಗಾರ ಅದ...ನ್ನೆಂತು ಬಿಡಿಸಬಲ್ಲ?

ಚಿತ್ರವು ಭೌತಿಕ ದೃಶ್ಯಗಳನ್ನೇ ಅವ...ಲಂಬಿಸಿಕೊಂಡಿರುತ್ತದೆ; ಅದರಲ್ಲಿ ಆಧ್ಯಾ...ತ್ಮಿಕತೆಯಿರುವುದೂ ನಿಜವೇ; ಆದರೆ, ...ಅದು ಭೌತಿಕ ಪದಾರ್ಥಗಳ ಮೂಲಕವೇ ...ಪ್ರಕಟವಾಗುವುದು. ಚಿತ್ರಕಲೆಯಲ್ಲಿಯೂ ...ವಾಸ್ತವಿಕತೆ ಮಾತ್ರವಲ್ಲದೇ ಆದರ್ಶವಾದ...ವಿರುವುದೂ ಉಂಟು. ಬಂಗಾಳದ ಮತ್ತು ...ಪ್ರಾಚೀನ ಬೌದ್ಧ ಕಲೆಯಲ್ಲಿ ನಾವಿಂತಹ ...ಆದರ್ಶವಾದವನ್ನು ಕಾಣಬಹುದು. ವಿ...ಶ್ವದ ಧರ್ಮೋತ್ತರದಲ್ಲಿ ಚಿತ್ರಕಲೆಯಲ್ಲಿಯೂ ಕಾವ್ಯಕಲೆಯಲ್ಲಿ ಪರಿಗಣಿತವಾದ ರಸಗಳನ್ನು ಮನ್ನಿಸಿದ್ದಾರೆ. ಆದರೆ, ಶುದ್ಧ ಆಧ್ಯಾತ್ಮಿಕ ಭಾವಪ್ರದರ್ಶನ ಅಥವಾ ಚಿತ್ರಣ ಕಾರ್ಯದಲ್ಲಿ ಚಿತ್ರಕಲೆಯು ಸಂಪೂರ್ಣ ಸಫಲವಾಗುತ್ತದೆ. ಚಿತ್ರಕಾರನು ಪ್ರೇಮಭಾವವನ್ನು ಅಭಿವ್ಯಕ್ತಗೊಳಿಸಬೇಕಾದರೆ ದೀರ್ಘ, ಆಕರ್ಷಕ, ಪ್ರಕಾಶಮಯ ನೇತ್ರಗಳನ್ನು ರೇಖಿಸುತ್ತಾನೆ; ಮುಖದಲ್ಲಿ ಪ್ರಸನ್ನತೆಯ ಭಾವವನ್ನೂ ಚಿತ್ರಿಸುತ್ತಾನೆ; ಸಾಮಾನ್ಯವಾಗಿ, ಸ್ವೇದ ಮತ್ತು ರೋಮಾಂಚಗಳ ಅನುಭಾವಗಳನ್ನೂ ಪ್ರಕಟೀಕರಿಸುತ್ತಾನೆ. ಬಟ್ಟೆಗಳು ಹಾರಾಡುತ್ತಿರಬಹುದು; ಆದರೆ, ಇವೆಲ್ಲವೂ ಬಾಹ್ಯ ವ್ಯಂಜಕಗಳು; ಇದೇ ಚಿತ್ರವನ್ನು ಕವಿಯು ಹೇಗೆ ಚಿತ್ರಿಸಿದ್ದಾನೆ ನೋಡಿರಿ: ''ಅಲರ್ಗಣ್ ಬೆಂಡೇಳೆ, ರೋಮಾಂಚನದೊದವಿನಿತುಂ ಧಾಂಟ ಥಟ್ಟಾಗೆ, ಬಾಯೊಳ್ ಪಲವುಂ ನುಣ್ಮಾತುಗಳ್ ಲಾವಣ್ಯದ ಕೊರಲನಲ್ಲಾಡಿದಂತಾಗೆ, ಝುಂಮೆಂಪೊಲೆವಂಗಂ ತೂಗೆ, ಸುಯ್ಯಂತೊಳಗಿಳಿಯೆ, ಜೀವರ್ ಪೊಣ್ಮೆ, ನಾಣ್ ಸೂಸೆ, ಕಾಮೋಜ್ವಲದಿಂ ಕೆಯ್ಮಿಕ್ಕ ಮಜ್ಜಂತ್ರಮನೆ ಕೆಡಪಿದಂತಿರ್ಪರುಂ ಮೂರ್ಛೆವೋದರ್''— ಈ ಚಿತ್ರವನ್ನು ಇದ್ದಕ್ಕಿದ್ದಂತೆ ಬಿಡಿಸುವುದು ಸಾಧ್ಯವೆ?

ಚಿತ್ರಕಾರನ ವರ್ಣನೆಯು ಚಿತ್ರಗಳಲ್ಲಿ ಸ್ಪಷ್ಟತೆಯು ಅಧಿಕವಿದ್ದರೂ ಅದು ಒಂದು ದೇಶ ಮತ್ತು ಕಾಲ ವಿಶೇಷವನ್ನು ಮಾತ್ರ ಗುರುತಿಸುತ್ತದೆ. ಒಂದು ಚಿತ್ರ ಒಂದುಕ್ಷಣದ ಸನ್ನಿವೇಶವನ್ನು ಮಾತ್ರ ಪ್ರದರ್ಶಿಸಬಲ್ಲುದು. ಜಗತ್ತು ಸ್ಥಿರವಾಗಿಲ್ಲ; ಅದು ಕ್ಷಣೇ ಕ್ಷಣೇ ಪ್ರವಹಿಸುತ್ತದೆ. ಚಿತ್ರಗಳಲ್ಲಿರುವ ಈ ಕೊರತೆಯನ್ನು ಚಲಚ್ಚಿತ್ರಗಳು ದೂರಮಾಡಿದುವು. ಚಲಚಿತ್ರಗಳಲ್ಲಿ ಕ್ಷಣ ಕ್ಷಣದ ಹಲವಾರು ಚಿತ್ರಗಳನ್ನು ಸಂಕಲಿಸಿ ಒಂದು ಚಿತ್ರವನ್ನಾಗಿ ಮಾಡಿದ್ದಾರೆ; ಇದರಲ್ಲಿ ವಾಸ್ತವಿಕ ಚಿತ್ರಗಳ ಗತಿಶೀಲತೆಯೂ ಬಂದಿದೆ. ಆದರೂ ಇದು ಸೀಮಿತವಾಗಿದೆ. ಪ್ಲಾಸ್ಟಿಕ ಕದನದ ಒಂದು ದೃಶ್ಯದ ಚಿತ್ರವನ್ನು ನಾಟ್ಯ ರಚಿಸಬಹುದು; ಈ ಚಿತ್ರವು ನಮ್ಮ ಮುಂದೆ ದೃಶ್ಯವನ್ನೇನೋ ಸ್ಥಿರವಾಗಿರುವಂತೆ ಮಾಡಬಹುದು. ಈ ದೃಶ್ಯದ ತಿಳುವಳಿಕೆಯು ನಮಗೆ ಕಾವ್ಯವರ್ಣನೆಯಿಂದಲೇ ಅಧಿಕವಾಗುವುದು. ಆದರೆ, ಇವೆಲ್ಲವೂ ಬಾಹ್ಯಾಭಿವ್ಯಕ್ತಿ. ಕವಿಯ ವರ್ಣನೆಯು ಬಾಹ್ಯವೂ ಹೌದು; ಆಂತರಿಕವೂ ಹೌದು. ಪ್ರಪಂಚದಲ್ಲಿ ಅಸಂಬಂಧಿತ ವಸ್ತುಗಳು ಯಾವವೂ ಇರುವುದಿಲ್ಲ. ಚಿತ್ರಗಳಲ್ಲಿ ಭಾವೋತ್ಪಾದಕ ಶಕ್ತಿಯಿರುತ್ತದೆ; ಆದರೆ, ಅವು ಆ ಭಾವ ವರ್ಣನೆಯಲ್ಲಿ ಅಸಮರ್ಥವಾಗಿವೆ. ಸೂರ್ಯಕಿರಣಗಳ ಚಿತ್ರಮಾಲೆಯನ್ನು ನಾವು ನಿರ್ಮಿಸಬಹುದು. ಆಗ ಆ ಚಿತ್ರವು ಬಿಳಿಯ ಗೆರೆಗಳಲ್ಲದೆ ಮತ್ತಾವ ರೂಪವನ್ನೂ ತಾಳಲಾರವು. ಸೂರ್ಯ ಬಿಂಬಗಳಿಂದ ನಮ್ಮಲ್ಲಿ ಉದಿತಗೊಳ್ಳುವ ಭಾವಗಳನ್ನು ಈ ಚಿತ್ರವು ವರ್ಣಿಸುವುದರಲ್ಲಿ ಸರ್ವಥಾ ಅಸಮರ್ಥವಾಗುತ್ತದೆ. ಕವಿಗೆ ಯಾವ ಪರಿಮಿತಿಯೂ ಇರುವುದಿಲ್ಲ. ಆತ ತನ್ನ ಭಾವಲಹರಿಯ ಧಾರಾಪ್ರವಾಹವನ್ನು ವರ್ಣಿಸುತ್ತ ಮುಂದುವರಿಯುತ್ತಾನೆ. ಕವಿಕುಂಜರ ನೇಮಿಚಂದ್ರನ ಸೂರ್ಯೋದಯ ವರ್ಣನೆಯನ್ನು ನೋಡ :

''ಅರವಿಂದ ಶ್ರೀಯ ಸೂಳ್ಗಿಂದಿನಂ ಅತಿಭರದಿಂ ಬರ್ಪುದಂ ಕಂಡು, ಚಂಚತ್ಕರದಿಂದಂ ಸೋವುತುಂ; ತೀವಿದ ತಿಮಿರಪಿಶಾಚಂಗಳಂ ವ್ಯೋಮಗೇಹೋದರಮಂ ಕೈಗೆಯ್ಯುತುಂ, ಸಂಪತಿಸದ ದಿಶಾಭಿತ್ತಿ ಭಾಗಂಗಳಂ ಬಿತ್ತರಿಸುತ್ತಿರ್ದಪ್ಪನೆಂಬಂತರುಣಸರುಣಾಂ ಅಗ್ರೇಸರಂ ಕಣ್ಗೆ ಬಂದಂ''—ಇದು ಅರುಣೋದಯ.

''ಪರೆಯೆ ಕುರುಳ್ಗಳಂತೆ ತಿಮಿರಂ, ಮುಗಿಯುತ್ತಿರೆ ನೆಯ್ದಿಲಚ್ಚಿಯಂತಿರೆ, ಬೆಮರಂತಿರಿಂಪಾಗುತಿರೆ ತಾರಗೆ ತೀರೆ, ವಿಭಾತಕಾಂತೆ ಕಾಂತನೊಳ್ ನೆರೆದು ಸುಖಾಂತದೊಳ್ ಕರಗುತಿರ್ಪ ಮನೋಹರಿ ಯಾದ್ರ್ರ ಕುಂಕುಮಾಂಬರಮೆ ಬೆಳಲ್ದು ಪೊಳ್ಪೆಳೆದು ದ್ಯೆಂದ್ರಿಯ ಸಾಂಧ್ಯ ಮಯೂಖ ಪಲ್ಲವಂ॥''—ಸೂರ್ಯ ಉದಯಿಸಲು ತೊಡಗಿದನು.

''ಎಳದಳಿರಂತೆ ಪೆರ್ಮರದ ಕೊಂಬುಗಳೊಳ್, ನವಧಾತು ನಿರ್ಝರಂಗಳ ಪೊನಲಂತೆ ಶೈಲ ಶಿಖರಂಗಳೊಳ್, ಉಜ್ವಲ ಮಪ್ಪ ಮಾಣಿಕಂಗಳ ರುಚಿ ಪರ್ವಿದಂತೆ ಸುರಕೂಟಕನತ್ಕಳಶಂಗಳೊಳ್ ತಳತ್ತಳಿಸಿದುದು ಈ ಪದುಮ್ನಿಷಿತ ಮಂಡಳ ಚಂಡಕರಾಂಶು ಜಾಳಕಂ॥ ಜಳಧಿ ಚಕೋರ್ಮಿ ಚಾಮರ ಚಯಂಗೆ, ದಿಶಾಧಿಪ ದಿಗ್ಗಜೇಂದ್ರ ಸಂಕುಳ ಪರಿವಾರ ಭಾಗಿಗೆ ನಭೋಮಣಿಮಂಡಪ ಮಂಡನಂಗೆ ಕಣ್ಗೊಳಿಸೆ ಜಗನ್ಮಹಾಪ್ರಭುಗೆ ಅಭಿಕ್ಷಿಪ್ತ ಲೆಕ್ಕಿತದ ಸುಪ್ರಭಾತ ಮಂಗಳ ಮಣಿದರ್ಪಣಕ್ಕೆ ದೊರೆಯಾಯ್ತು ಉದಯಾದ್ರಿಯೊಳರ್ಕಮಂಡಳಂ'' ಎಂದು ಮನೋಹರವಾಗಿ ವರ್ಣಿಸಿದ್ದಾನೆ.

ಸೂರ್ಯೋದಯವನ್ನು ಕಾಣುವಾಗ, ಒರ್ವನಿಗೆ ಯಾವರೀತಿಯ ಪ್ರಾಕೃತಿಕ ಮತ್ತು ಭೌತಿಕ ಭಾವಗಳು ಆಗಬಲ್ಲುವೋ ಅವೆಲ್ಲವನ್ನೂ ಇಲ್ಲಿ ಕವಿ ವರ್ಣಿಸುವ ಪ್ರಯತ್ನ ಮಾಡುತ್ತಾನೆ. 'ಕಮಳ'ದ ಮನೆಗೆ ಸೂರ್ಯನು ಬರುವುದನ್ನು ಕಂಡು, ಕತ್ತಲೆಯನ್ನು ದೂರೀಕರಿಸುತ್ತ, ದಾರಿಯನ್ನು ನಿಷ್ಕಂಟಕವಾಗಿಸುತ್ತ ಅರುಣನು ಮೊದಲು ಮೂಡುತ್ತಾನಂತೆ. ಹೀಗೆಯೇ ಮುಂದಿನ ವರ್ಣನೆಯೂ ಮನಮೋಹಕವಾಗಿದೆ. ಸೂರ್ಯಮಂಡಳವು 'ಎತ್ತಿದ ಸುಪ್ರಭಾತ ಮಂಗಳ ಮಣಿದರ್ಪಣವಾಗುವುದು, ಆತನ ಕಿರಣಗಳು ಮರದ ಕೊಂಬೆಗಳಲ್ಲಿ ಎಳದಳಿರಂತೆ, ಪರ್ವತ ಶಿಖರಗಳಲ್ಲಿ ನವಧಾತು ನಿರ್ಜರಿಯ ಪ್ರವಾಹದಂತೆ, ಬಂಗಾರದ ಕಲಶಗಳಲ್ಲಿ ಉಜ್ವಲವಾದ ಮಾಣಿಕ್ಯ ಪ್ರಭೆ ಹಬ್ಬಿದಂತೆ ತೋರಿಬರುವುದು. ಒಂದೇ ವಸ್ತುವನ್ನು ಕವಿ ಬಹುಮುಖವಾಗಿ ಕಾಣಬಲ್ಲನು; ಆದರೆ, ಚಿತ್ರಕಾರನಿಗೆ ಈ ಬಗೆಯ ಸ್ವಾತಂತ್ರ್ಯವೆಲ್ಲಿಯದು?

ಚಿತ್ರಗಾರ ಮತ್ತು ಕವಿಗಳ ನಡುವಣ ಅಂತರವಿದೇ. ಚಿತ್ರಕಾರ ತನ್ನ ಲೇಖನಿ ಹಂಸಿದರೆ, ಅದಂ ಮೇಲೆ ಪುನಃ ಅದನ್ನು ತೀಡಲಾರ. ಆತ ದೇಶಕೃತ ಬಂಧನದಲ್ಲಿರುತ್ತಾನೆ. ಒಂದು ದೇಶದಲ್ಲಿ ಎರಡು ರೇಖೆಗಳಿಗೆ ಅವಕಾಶವಿಲ್ಲ, ಕವಿಗಾಗುವಾಗ ಈ ಸಮಸ್ಯೆಯಿರುವುದಿಲ್ಲ; ಆತ ಪರಮಾತ್ಮನಂತೆ ದೇಶಕಾಲ ಬಂಧನ ವಿದೂರನಾಗಿದ್ದಾನೆ. ವಸ್ತು ಅನಂತವಾಗಿದೆ; ಚಿತ್ರ ಸಾಂತವಾಗಿದೆ; ವಸ್ತು ಬೆಳೆಯುತ್ತದೆ, ಇಳಿಯುತ್ತದೆ; ಆದರೆ, ಚಿತ್ರ ಸ್ಥಿರವಾಗಿರುತ್ತದೆ.

ಕವಿ ಸೌಂದರ್ಯಾತಿಶಯವನ್ನು ವರ್ಣಿಸುತ್ತಾನೆ; ಕ್ಷಣಕ್ಷಣದ ನಾವೀನ್ಯವನ್ನು ವಿವರಿಸುತ್ತಾನೆ; ಇದರಿಂದಾಗಿ ಆತ ಚಿತ್ರಕಾರನಿಗೂ ಒಂದಡಿ ಮುಂದುವರಿದಿದ್ದಾನೆ. ಆದರೆ, ವಾಸ್ತವಿಕತೆಯ ವರ್ಣನೆಯಲ್ಲಿ ಮಾತ್ರ ಆತ ಬಹುದೂರವಿದ್ದಾನೆ. ಇದನ್ನು ಉತ್ಪ್ರೇಕ್ಷೆ, ರೂಪಕ, ಅತಿಶಯೋಕ್ತಿ ಮೊದಲಾದ ಅಲಂಕಾರಗಳ ಅಲಂಕಾರವೇ ಪ್ರದರ್ಶಿಸುತ್ತದೆ. ನಯನಗಳ ಆಶಯವು ಮಹತ್ವವಾಗಿದೆಯಾದರೂ ಸೌಂದರ್ಯಸಾಗರದಲ್ಲಿ ಮುಳುಗಾಡುವ ನಯನಗಳು ಲಘುಮಾನಸ್ವರೂಪದವಾಗಿವೆ. ಅವುಎಂದಿಗೂ ಕೊನೆಗಾಣವು. ಇದರಿಂದಾಗಿ ಕವಿಗಳು ಯಾವಾಗಲೂ ಅನಿಮಿಷನೇತ್ರ, ಅಪಾಂಗದೃಷ್ಟಿ, ವಿಕಸಿತ ಅರವಿಂದ ನೇತ್ರ ಮೊದಲಾದ ರೂಪದಲ್ಲಿಯೇ ಕಣ್ಣುಗಳನ್ನು ವರ್ಣಿಸುತ್ತಾರೆಯೇ ಹೊರತು ಅವುಗಳಿಗೆ ಪರಿಮಿತಿಯನ್ನು ಎಂದಿಗೂ ಕಲ್ಪಿಸುವುದಿಲ್ಲ; ತಮ್ಮ ಕರ್ತವ್ಯವನ್ನು ಪಾಲಿಸುತ್ತಾರೆ. ಇದರಿಂದ ಕಾವ್ಯದ ಸೌಂದರ್ಯವು ಚಿತ್ರಕಲೆಯ ಸೌಂದರ್ಯಕ್ಕಿಂತ ಬಹು ಹೆಚ್ಚಿನದು ಎಂದೂ ಕವಿಯ ಸ್ಥಾನವು ಚಿತ್ರಕಾರನ ಸ್ಥಾನಕ್ಕಿಂತ ಉಚ್ಚತರವೆಂದೂ ಹೇಳಬಹುದು. ಎಂತಲೇ 'ರವಿ ಕಾಣದುದಂ ಕವಿ ಕಾಂಬಂ' ಎಂಬ ಲೋಕೋಕ್ತಿಯು ಹುಟ್ಟಿಕೊಂಡಿತು.

—ಗೋರಾ.

ರೋಗವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ಕಡದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ಪಶುಶಾಲೆಗಳು:

ಇಲ್ಲಿ ಪಶುಗಳು ಎರವಲು ದೊರೆಯುತ್ತವೆ!

ಒಂದು ಪಶುಶಾಲೆಯು ಪ್ರಾಣಿದಯೆ ಎಂದರೆ ಪ್ರಾಣಿಹತ್ಯೆಯ ನಿರೋಧವಲ್ಲ, ಆದರೆ, ಪ್ರಾಣಿ ಪ್ರೇಮವೆಂಬುದನ್ನು ನಮಗೆ ಕಲಿಸಿಕೊಡುತ್ತದೆ.

ಅಗಲ ಮುಖದ ಕೆದರಿದ ತಲೆಗೂದಲ ಒಬ್ಬ ಹುಡುಗ ಶುಭ್ರವಾಡಿದ ಹತ್ತಿ ಮೂಟೆಯಂತಹ ಒಂದು ಬಿಳಿ ವಸ್ತುವನ್ನು ಎತ್ತಿಕೊಂಡು ಕೋಣೆಯೊಳಗೆ ಬಂದು, ಮೇಜಿನ ಮುಂದೆ ಕುಳಿತಿದ್ದ ಕೌಂಟರ ನೊಡನೆ—"ಇದನ್ನು ತೆಗೆದುಕೊಳ್ಳಿ ಸ್ವಾಮಿ"? ಎಂದು ಹಾಲಿನಂತಹ ಬಿಳಿಯ ಮೊಲವೊಂದನ್ನು ಆತನ ಮುಂದಿಟ್ಟ. ಕೌಂಟರ್ ನೋಡುತ್ತ ಹೇಳಿದ—"ಸರಿ, ಆದರೆ, ನೀನು ಇದನ್ನು ಒಂದು ದಿನ ಹೆಚ್ಚು ಇಟ್ಟುಕೊಂಡಿದ್ದೀಯೊ? ಹತ್ತು ಸೆಂಟು ದಂಡ ತೆರಬೇಕು." ಬಾಲಕ ತನ್ನ ಕಿಸೆಗೆ ಕೈಹಾಕಿ ಐದೈದು ಸೆಂಟಿನ ಎರಡು ನಾಣ್ಯಗಳನ್ನು ತೆಗೆದು, ಮೇಜಿನಮೇಲೆಸೆದ. ಆ ಮೇಲೆ, ಆ ಮೊಲವನ್ನು ನೋಡುತ್ತ, "ಸ್ನಿಂಪಿ, ಹೆದರಬೇಡ. ನಿನ್ನ ನಾ ಮರೆಯೋಲ್ಲ. ಕ್ರಿಸ್ಮಸ್ ಸಮಯಕ್ಕೆ ಅಮ್ಮ ಡಾಲರ್ ಕೊಟ್ಟೊಡನೇ ನಿನ್ನ ಕೊಂಡ್ಕೊಳ್ತೀನೆ, ಏನೂ? ಆಗ ಯಾವಾಗ್ಲೂ ನೀನು ನಮ್ಮನೆಯಲ್ಲೇ ಇರ್ಬಹುದು" ಎಂದು ಹೇಳುತ್ತ ಆ ಮೊಲದ ಗುಲಾಬಿ ಬಣ್ಣದ ಮೂಗನ್ನು ನವಿರ ಬಾಲಿಶವಾದ ಮುಖವನ್ನು ಮುದ್ದಿಟ್ಟ.

ಅಮೆರಿಕೆಯ ಸಿಕ್ರಾಮೆಂಟ್ ನಗರದ ಪಶು—ಭಂಡಾರದ ಒಂದು ದೃಶ್ಯವಿದು. ಅಲ್ಲಿ ಇಂತಹ ಘಟನೆ ಪ್ರತಿದಿನವೆಂಬಂತೆ ನಡೆಯುತ್ತಿರುತ್ತದೆ. ಅಮೆರಿಕೆಯಲ್ಲಿ ಈ ರೀತಿಯ ಅನೇಕ ಪಶು ಶಾಲೆಗಳೂ ಇರುತ್ತವೆ.

ಪಶು ಶಾಲೆ ಎಂಬ ಪದದಿಂದ ನೀವು ವಿಸ್ಮಿತರಾಗಬಹುದು. ಇಲ್ಲಿ ಪಶುಗಳು ಬಂದು ಓದುತ್ತವೆಯೆ? ಎಂದು ಯಾರಾದರೂ ಕೇಳಬಹುದು. ಆದರೆ, ಇಲ್ಲಿ ಪಶುಗಳು ಓದಲು ಬರುವುದಿಲ್ಲ. ಬದಲು ಪುಸ್ತಕ ಶಾಲೆಯಲ್ಲಿ ಪುಸ್ತಕಗಳನ್ನು ಇಡುವಂತೆಯೇ ಇಲ್ಲಿ ಪಶುಗಳನ್ನು ಸಂಗ್ರಹಿಸಿ ಇಡುತ್ತಾರೆ. ಪುಸ್ತಕಾಲಯದಲ್ಲಿ ಸದಸ್ಯನಾಗಿ, ಬೇಕಾದ ಪುಸ್ತಕಗಳನ್ನು ನಾವು ಕೊಂಡುಹೋಗುವಂತೆಯೇ ಇಲ್ಲಿಯೂ ಪಶು ಶಾಲೆಯಲ್ಲಿರುವ ನಿಮಗೆ ಇಷ್ಟ ಬಂದು ಪಶುವನ್ನು ಸಾಕಲು ಮನೆಗೊಯ್ಯಬಹುದು. ಆದರೆ, ಈ ಶಾಲೆಯ ಕೆಲವು ನಿಯಮಗಳಿವೆ. ಏಳು ವರ್ಷ ಮೀರಿದ ಹುಡುಗರು ಮಾತ್ರ ಇದರ ಸದಸ್ಯರಾಗಬಲ್ಲರು. ಯಾವುದೇ ಒಂದು ಪಶುವನ್ನು ಏಳು ದಿನಗಳ ಮಟ್ಟಿಗೆ ಮಾತ್ರ ಅವರು ತಮ್ಮೊಡನೆ ಇರಿಸಿಕೊಳ್ಳಬಹುದು. ಇದಕ್ಕಿಂತ ಹೆಚ್ಚಿಗೆ ಇಟ್ಟುಕೊಂಡರೆ, ದಿನವೊಂದಕ್ಕೆ ಹತ್ತು ಸೆಂಟುಗಳ ದಂಡನೆಯನ್ನು ತೆರಬೇಕಾಗುವುದು. ಅಲ್ಲದೇ ಆನೆ, ಕುದುರೆ, ಸಿಂಹ ಮತ್ತು ಹುಲಿ ಮೊದಲಾದ ಪ್ರಾಣಿಗಳನ್ನು ಬಯಸಬಾರದು. ಸಾಮಾನ್ಯವಾಗಿ ಮನೆಯಲ್ಲಿ ಪ್ರೀತಿಯಿಂದ ಸಾಕುವ ಸಣ್ಣ ಸಣ್ಣ ಪಶುಗಳು ಮಾತ್ರ ಇಲ್ಲಿ ದೊರೆಯುತ್ತವೆ.

ಇಂದಿಗೆ ಏಳು ವರ್ಷಗಳಿಗೆ ಮೊದಲು ಪ್ರಪಂಚದ ಪ್ರಪ್ರಥಮ 'ಪಶು ಲೈಬ್ರೆರಿ' ಯನ್ನು ಶ್ರೀ ಜಾನ್ ರಿಪ್ಲೆ ಫೋರ್ಬ್ಸ್ ಎಂಬವರು ಸಿಕ್ರಾಮೆಂಟಿನಲ್ಲಿ ಸ್ಥಾಪಿಸಿದರು. ಶ್ರೀ ಫೋರ್ಬ್ಸ್ ಪ್ರಾಣಿಶಾಸ್ತ್ರದ ಅಧ್ಯಾಪಕರಾಗಿದ್ದರು. ತಾವು ಪಾಠವನ್ನು ಕಲಿಸುತ್ತಿರುವಾಗ, ಸಂಬಂಧಿತ ಪ್ರಾಣಿಗಳನ್ನು ತರಗತಿಗೆ ಒಯ್ದು ವಿವರಿಸಿದರೆ, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಠದತ್ತ ಗಮನಹರಿಸುವರೆಂದೂ ಇದರಿಂದ ಅಂದಿನ ಪಾಠವು ಯಶಸ್ವಿಯಾಗಿ ವಿದ್ಯಾರ್ಥಿಗಳ ಮೆದುಳಿನಲ್ಲಿ ಮುದ್ರೆಯೊತ್ತಿದಂತೆ ಸ್ಥಿರವಾಗುವುದೆಂದೂ ಅವರು ಅನುಭವದಿಂದ ಕಂಡುಕೊಂಡರು. ಈ ವಿಷಯವಾಗಿ ಆಲೋಚಿಸುತ್ತಿದ್ದ ಅವರ ಬುದ್ಧಿಯಲ್ಲಿ ಪಶು ಶಾಲೆಯೊಂದನ್ನು ತೆರೆಯುವ ಕಲ್ಪನೆ ಹುಟ್ಟಿಕೊಂಡಿತು. ಬಾಲಕರಿಗೆ ಏಳೆಂಟು ದಿನಗಳವರೆಗೆ ಸಾಕು ಪ್ರಾಣಿಗಳನ್ನು ಇಟ್ಟುಕೊಳ್ಳುವ ಅವಕಾಶವೊದಗಿಸುವ ಸಂಸ್ಥೆಯೊಂದಿದ್ದರೆ, ಅವರಿಗೆ ಅವುಗಳನ್ನು ಸಮೀಪದಲ್ಲಿಯೇ ಕಾಣುವ, ತಿಳಿಯುವ ಸದವಸರ ಪ್ರಾಪ್ತವಾಗುವುದೆಂದೂ ಇದರಿಂದ, ಪಶುಪಕ್ಷಿಗಳನ್ನು ಪ್ರೀತಿಸುವ ಮತ್ತು ಸಾಕುವ ಸಹಜವಾದ ಬಾಲ ಪ್ರವೃತ್ತಿಯೂ ತೃಪ್ತಿಗೊಂಡಂತಾಗುವುದೆಂದೂ ಅವರು ಯೋಚಿಸಿದರು.

ಫೋರ್ಬ್ಸ್‌ರು ತನ್ನ ನಾಲ್ಕಾರು ಗೆಳೆಯರೊಡನೆ ಈ ಬಗ್ಗೆ ವಿಚಾರವಿನಿಮಯ ಮಾಡಿ, ಅವರ ನೆರವಿನಿಂದ ಪ್ರಥಮ ಪಶು ಶಾಲೆಯೊಂದನ್ನು ಸ್ಥಾಪಿಸಿದರು. ಬಾಲಕರು ಮತ್ತು ಅವರ ರಕ್ಷಕರು ಈ ಕಾರ್ಯಕ್ರಮವನ್ನು ಹಸ್ತದ್ವಯಗಳಿಂದ ಸ್ವಾಗತಿಸಿದರು. ಇದರಿಂದಾಗಿ ಫೋರ್ಬ್ಸ್‌ರ ಉಪಕ್ರಮವೊಂದು ಆಂದೋಲನವನ್ನೇ ಎಬ್ಬಿಸಿತು. ಇಂದು ಅಮೆರಿಕೆಯ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಟ್ಟು ೨೦ ಪಶುಶಾಲೆಗಳಿವೆ. ನ್ಯೂಯಾರ್ಕ್ ನಗರದಲ್ಲಿ ಪಶು ಶಾಲೆಯ ಉದ್ಘಾಟನೆಯಾದ ದಿನವೇ ಕೆಲವು ಸಾವಿರಕ್ಕೂ ಮಿಕ್ಕಿದ ಬಾಲಕ ಬಾಲಿಕೆಯರು ಸದಸ್ಯತನದ ಅರ್ಜಿಯನ್ನು ಕಳಿಸಿದ್ದರು. ಇವರಲ್ಲಿ ಮೂರು ಸಾವಿರ ಸದಸ್ಯರಿಗೆ ಆ ದಿನವೇ ಪಶುಗಳನ್ನು ಕೊಡಲಾಯಿತು. ವೆಸ್ಟ್ ಫೋರ್ಟ್ ಎಂಬಲ್ಲಿ ಇನ್ನೊಂದು ದೊಡ್ಡ ಪಶು ಆಲಯವಿದೆ. ಇದರ ವಿಸ್ತರಣೆಗಾಗಿ ಫೋರ್ಬ್ಸ್‌ರು ೧ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ.

ಹೆಚ್ಚಿನ ಪಶು ಶಾಲೆಗಳಲ್ಲಿ ನವಿಲು, ಪಾರಿವಾಳ, ಗಿಳಿ, ಬುಲ್ ಬುಲ್, ಮೈನಾ ಬಿಳಿ ಇಲಿ, ಮೊಲ, ಬೆಕ್ಕು, ನರಿ ಮತ್ತು ವಿಷವಿಲ್ಲದ ಹಲವು ಬಗೆಯ ಹಾವುಗಳನ್ನು ಇಟ್ಟಿರುತ್ತಾರೆ. ಮಕ್ಕಳು ಶಾಲೆಯೊಳಗೆಬಂದು ಎಷ್ಟುಹೊತ್ತು ಬೇಕಾದರೂ ಅವನ್ನು ನೋಡುತ್ತ ಇರಲು ಅನುಮತಿಯಿದೆ. ಅವರು ಅವುಗಳ ಮೈ ಸವರಬಹುದು; ಕರೆಯಬಹುದು; ಅವುಗಳೊಡನೆ ಮಾತಾಡಲೂ ಬಹುದು. ಅರ್ಧವೋ ಒಂದೋ ತಾಸು ಕಳೆದ ಮೇಲೆ ತಾವು ಬಯಸುವ ಪಶುವಿನ ಕ್ರಮ ಸಂಖ್ಯೆಯನ್ನು ಲೈಬ್ರೆರಿಯ ಕಾರಕೂನನಿಗೆ ತಿಳಿಸುತ್ತಾರೆ.

ಅನಂತರ, ಅದನ್ನು ಬಯಸುವವನು ಒಂದು ಆವೇದನಾ ಪತ್ರವನ್ನು ತುಂಬಿಸಿ ಕೊಡಬೇಕಾಗುವುದು. ಅದರಲ್ಲಿ ಒಂದು ದೃಢಪತ್ರಿಕೆಯೂ ಇರುವುದು. ಈ ಪತ್ರಿಕೆಯು ಹೀಗಿದೆ—"ನನ್ನ ವಯಸ್ಸು ಏಳು ವರ್ಷಗಳಿಗಿಂತ ಹೆಚ್ಚಿದೆ. ನಾನು ತೆಗೆದುಕೊಂಡು ಹೋಗುವ ಪಶುವನ್ನು ಹೇಗೆ ಸಾಕಬೇಕು, ಅದರ ಆಹಾರ ಯಾವುದು, ಅದನ್ನು ಹೇಗೆ ಇಟ್ಟುಕೊಳ್ಳಬೇಕು-ಎಲ್ಲವನ್ನೂ ತಿಳಿದುಕೊಂಡಿರುವೆನು." ಇದಕ್ಕಾಗಿ ಯಾರೂ ಸುಳ್ಳುಹೇಳಬೇಕಾಗುವುದೂ ಇಲ್ಲ. ಏಕೆಂದರೆ, ಲೈಬ್ರೆರಿಯು ಪ್ರತಿಯೊಂದು ಪ್ರಾಣಿಯ ಸ್ವಭಾವ, ಅದರ ಆಹಾರ ಮೊದಲಾದುವುಗಳ ಬಗ್ಗೆ ಸಣ್ಣ ಪುಟ್ಟ ಸುಂದರ ಸರಳ ಪುಸ್ತಕಗಳನ್ನು ಮುದ್ರಿಸಿರುತ್ತದೆ. ಯಾರೇ ಆಗಲಿ ಈ ಕಿರುಹೊತ್ತಗೆಯನ್ನು ಓದಿ ಅಗತ್ಯವೆನಿಸಿದ ತಿಳುವಳಿಕೆಯನ್ನು ಪಡೆಯಬಹುದು.

ಪಶು ಪಕ್ಷಿಗಳನ್ನು ಮಾಸದಲ್ಲಿ ಒಂದು ವಾರ ಮಾತ್ರ ಹೊರಗೆ ಬಿಡುತ್ತಾರೆ. ಸದಸ್ಯರು ಒಂದು ವಾರ ತಮ್ಮ ಮನೆಯಲ್ಲಿಟ್ಟುಕೊಂಡು, ಮರಳಿ ಅವನ್ನು ಲೈಬ್ರೆರಿಗೆ ಒಪ್ಪಿಸಿದ ಕೂಡಲೇ ಡಾಕ್ಟರರ ಪರೀಕ್ಷೆಗಾಗಿ ಮೂರು ದಿನಗಳ ವರೆಗೆ ಒಂದು ವಿಶೇಷ ವಾರ್ಡಿನಲ್ಲಿ ಇಡಲಾಗುವುದು. ಮಕ್ಕಳು ಅವನ್ನು ಸರಿಯಾಗಿ ಕಾಪಾಡಲಿಲ್ಲ ಎಂದು ನೀವು ತಿಳಿಯಬೇಡಿರಿ; ಸತ್ಯಸಂಗತಿ ಇದಕ್ಕೆ ವಿಪರೀತವಿದೆ. ಎಂದರೆ, ಮಕ್ಕಳು ಅವನ್ನು ಅತಿಯಾಗಿ ಪ್ರೀತಿಸಿ ಉಣಿಸುವುದರಿಂದ ಅವುಗಳ ಆರೋಗ್ಯ ಕೆಡುವ ಸಂಭವವೂ ಇದೆ.

ಪಶುಗಳ ಆರೈಕೆ ನೋಡಲು ಲೈಬ್ರೆರಿಯಲ್ಲಿ ಯೋಗ್ಯ ಡಾಕ್ಟರರಿರುತ್ತಾರೆ. ಪಶುಗಳನ್ನು ಹೊರಗೆ ಕಳಿಸುವುದಕ್ಕೆ ಮೊದಲು ಅವರು ಅವನ್ನು ಸಂಪೂರ್ಣವಾಗಿ ಪರಿಶೀಲಿಸುತ್ತಾರೆ; ಎಂದರೆ, ಸ್ಪರ್ಶರೋಗವೇನಾದರೂ ಅವಕ್ಕಿದ್ದರೆ, ಅದು ಕೊಂಡುಹೋಗುವವರಿಗೂ ಅಂಟುವುದರಿಂದ ಇದೊಂದು ಎಚ್ಚರಿಕೆ. ಒಯ್ದವರು ಮರಳಿಸಿದನಂತರ ಪುನಃ ನೋಡಿ, ಅವಶ್ಯವೆನಿಸಿದರೆ, ಔಷಧವನ್ನೀಯುತ್ತಾರೆ. ಕ್ರೋಧ ಮತ್ತು ಉಗ್ರಸ್ವಭಾವದ ಪಶು ಪಕ್ಷಿಗಳನ್ನು ಮಕ್ಕಳಿಗೆ ಎಂದೂ ಕೊಡುವುದಿಲ್ಲ. ಸರ್ಪವನ್ನೊಯ್ಯಬೇಕಾದರೆ, ಅವರು ತಮ್ಮ ತಾಯ್ತಂದೆಯರಿಂದ ಲಿಖಿತ ಅನುಮತಿ ಪತ್ರವನ್ನು ತರಬೇಕಾಗುವುದು. ನಾಯಿ ಮೊದಲಾದ ಪಶುಗಳನ್ನು ಗೂಡು ಸಮೇತ ಈಯುತ್ತಾರೆ; ಎಂದರೆ, ಅವು ಬಾಲಕರಿಗೆ ಉಪದ್ರವ ಮಾಡಬಾರದಲ್ಲ, ಅದಕ್ಕೆ ಮುನ್ನೆಚ್ಚರಿಕೆ.

ಸಾಮಾನ್ಯವಾಗಿ ತಾಯ್ತಂದೆಯರು

(೭ನೇ ಪುಟ ನೋಡಿರಿ)

ಈ ದಿನ
ಕೊರ್ಪೊರೇಶನ್ ಬೇಂಕಿನ
2 ಶಾಖೆಗಳು
ಈ ಕೆಳಗಣ ಸ್ಥಳಗಳಲ್ಲಿ ಏಕಕಾಲದಲ್ಲಿ
ತೆರೆಯಲ್ಪಡುವುವು:

• ಕುಶಾಲ ನಗರ
(ಕೊಡಗು— ಮೈಸೂರು ರಾಜ್ಯ)

• ಈರೋಡು
(ಕೊಯಮುತ್ತೂರು ಜಿಲ್ಲೆ— ಮದರಾಸು ರಾಜ್ಯ)

ಈ 2 ಶಾಖೆಗಳನ್ನು ಹೊಸತಾಗಿ ತೆರೆಯುವುದರಿಂದ
ಕೊರ್ಪೊರೇಶನ್ ಬೇಂಕಿನ
ಒಟ್ಟು ಶಾಖೆಗಳ ಸಂಖ್ಯಾಬಲವು 56 ಕ್ಕೇರುವುದು.

ದಿ. ಕೆನರಾ ಬೇಂಕಿಂಗ್
ಕೊರ್ಪೊರೇಶನ್ ಲಿಮಿಟೆಡ್
ಪ್ರಧಾನ ಕಚೇರಿ: ಉಡುಪಿ.
ಉಳಿತಾಯದ ಉಪಾಯಗಳನ್ನು ಜನರಿಗೆ ಉಪದೇಶಿಸುವ ಬೇಂಕು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ
ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ
ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೨-೫-'೬೦	೩೬

ಕಡ್ಡಾಯದ ರಾಷ್ಟ್ರೀಯ ಸೇವೆ

ಕೇಂದ್ರ ವಿದ್ಯಾಮಂತ್ರಿ ಡಾ. ಕೆ. ಎಲ್. ಶ್ರೀಮಾಲಿಯವರು ಕಳೆದ ತಾ. ೩ರಂದು ಪೂನೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಇನ್ನು ಮುಂದೆ ವಿದ್ಯಾರ್ಥಿಗಳು ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದನಂತರ ಒಂದು ವರ್ಷದವರೆಗೆ ಕಡ್ಡಾಯವಾಗಿ ರಾಷ್ಟ್ರೀಯ ಸೇವೆಯನ್ನು ಮಾಡಬೇಕೆಂಬುದನ್ನು ಶೀಘ್ರವೇ ಜ್ಯಾರಿಗೆ ತರಲಾಗುವುದೆಂದು ಹೇಳಿರುವರು. ಮಾಧ್ಯಮಿಕ ಶಾಲಾಶಿಕ್ಷಣದ ನಂತರ ರಾಷ್ಟ್ರೀಯ ಸೇವೆಯನ್ನು ಪೂರ್ಣಗೊಳಿಸಿದ ನಂತರವೇ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳನ್ನು ಸೇರಲು ಅನುಮತಿ ಕೊಡಲಾಗುವುದೆಂದು ಹೇಳಿರುವರು ಈ ಬಗೆಯ ಯೋಜನೆಯೊಂದನ್ನು ಕೇಂದ್ರ ಸರಕಾರವು ಸಿದ್ಧಪಡಿಸಿದೆ ಎಂದೂ ತಿಳಿದುಬಂದಿದೆ. ಈ ಯೋಜನೆಯನ್ನು ರಾಷ್ಟ್ರೀಯ ಸೇವಾಸಮಿತಿಯ ಸೂಚನೆಗಳ ಪ್ರಕಾರ ಕೈಕೊಳ್ಳಲಾಗಿದೆ ಎಂದು ಊಹಿಸಬಹುದಾಗಿದೆ. ಈ ಸಮಿತಿಯನ್ನು ಕೇಂದ್ರದ ವಿದ್ಯಾ ಇಲಾಖೆಯವರು ರಚಿಸಿದ್ದರು.

ಇತ್ತೀಚಿಗಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮಗಳು ಕಡಿಮೆಯಾಗುತ್ತಿದ್ದು, ಅವರಲ್ಲಿ ರಾಷ್ಟ್ರೀಯ ಮನೋಭಾವನೆಯೂ ಕಡಿಮೆಯಾಗುತ್ತಿದೆ, ದಿನದಿಂದ ದಿನಕ್ಕೆ ವಿದ್ಯೆಯ ಮಟ್ಟವು ಕೆಳಗಿಳಿಯುತ್ತಿದ್ದು ಇಂದು ಶಿಕ್ಷಣ ಪದ್ಧತಿಯಲ್ಲಿ ರಾಷ್ಟ್ರೀಯ ಮನೋಭಾವ ಬೆಳೆದು ಬರಲು ಸಾಕಷ್ಟು ಅವಕಾಶವಿಲ್ಲವಾಗಿದೆ. ವಿದ್ಯಾರ್ಥಿಗಳು ರಾಷ್ಟ್ರೀಯ ಮನೋವೃತ್ತಿಯವರಾಗಬೇಕು, ಅವರು ಜೀವನರಂಗವನ್ನು ಪ್ರವೇಶಿಸುವಾಗ ಜೀವನಕ್ಕೆ ಅರ್ಹರಾಗಿರಬೇಕು, ಶಿಸ್ತು ಸಂಯಮ ಉಳ್ಳವರಾಗಿರಬೇಕು, ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವ ಶಕ್ತಿ ಪಡೆದವರಾಗಬೇಕು ಎಂಬುದೇ ಈ ಯೋಜನೆಯ ಉದ್ದೇಶವಾಗಿದೆ. ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು, ಈ ಒಂದು ವರ್ಷದ ಕಡ್ಡಾಯ ರಾಷ್ಟ್ರೀಯ ಸೇವೆಯಿಂದ ಉತ್ತಮ ಪ್ರಯೋಜನ ಹೊಂದುವರೆಂದೂ ಹೇಳಲಾಗಿದೆ.

ಆದರೆ ಈ ಬಗೆಯ ಯೋಜನೆಯಿಂದ ನಿರೀಕ್ಷಿಸಿದ ಫಲ ಲಭಿಸೀತೇ ಎಂಬುದು ತುಸು ಅನುಮಾನಾಸ್ಪದವಾದ ಸಂಗತಿಯಾಗಿದೆ. ಈ ಬಗೆಯ ಯೋಜನೆಯ ಸೂಚನೆ ಹಿಂದೊಮ್ಮೆ ಬಂದಿದ್ದಾಗ ಈ ಕುರಿತು ಹಲವರು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸುವಾಗ ಈ ಯೋಜನೆಯಿಂದ ನಿರೀಕ್ಷಿಸಿದಫಲಲಭಿಸಲಾರದೆಂದು ಅಭಿಪ್ರಾಯಪಟ್ಟಿರುವರು. ಆದರೂ ಕೂಡಾ ಸರಕಾರವು ಈ ಯೋಜನೆಯ ದೋಷ ಹಾಗೂ ದುಷ್ಪರಿಣಾಮಗಳನ್ನು ಮನವರಿಕೆಮಾಡಿಕೊಳ್ಳಲಿಲ್ಲ. ಕಡ್ಡಾಯದ ರಾಷ್ಟ್ರೀಯ ಸೇವೆಯನ್ನು ವಿದ್ಯಾರ್ಥಿಗಳ ಮೇಲೆ ಹೇರಲಾಗುವುದೆಂದು ಶಿಕ್ಷಣ ಮಂತ್ರಿಗಳ ಹೇಳಿಕೆಯಿಂದ ವ್ಯಕ್ತವಾಗುವುದು. ಈ ಯೋಜನೆಯ ಲೋಪ ದೋಷಗಳನ್ನು ತುಸು ವಿವೇಚಿಸಿ ಇವುಗಳ ನಿವಾರಣೆಗಾಗಿ ಯತ್ನಿಸುವುದು ಅತಿ ಅಗತ್ಯವೆನಿಸಿದೆ.

ಸ್ವೀಕೃತ ಶಿಕ್ಷಣ ಪದ್ಧತಿಯು ಪುಸ್ತಕ ಜ್ಞಾನ ಪ್ರಧಾನವಾಗಿದ್ದು, ವಿದ್ಯಾರ್ಥಿಗಳಿಗೆ ಸಮಾಜ ಜೀವನದ ಚಿತ್ರ ಒದಗಿಸುವಲ್ಲಿ ಅಸಮರ್ಥವಾಗಿದೆ. ವಿದ್ಯಾರ್ಥಿಗಳು ಉತ್ತಮ ಶೀಲ ಸಂಪಾದಿಸಿಕೊಳ್ಳುವ ಅವಕಾಶವಿಲ್ಲದೆ, ಕೇವಲ ಜರಗಲಿರುವ ಪರೀಕ್ಷೆಯ ದೃಷ್ಟಿಯಿಂದ ಪುಸ್ತಕ ಪಠನದಲ್ಲೇ ಕಾಲ ಕಳೆಯುತ್ತಾರೆ. ಅವರಲ್ಲಿ ಪ್ರಪಂಚ ಜ್ಞಾನ, ಸಮಾಜದಲ್ಲಿ ವರ್ತಿಸಬೇಕಾದ ಬಗೆ, ಕೂಡಿ ಬಾಳುವ ವಿಧಾನ, ಜೀವನದ ಸಮಸ್ಯೆಗಳನ್ನು ಎದುರಿಸುವ ಶಕ್ತಿ ಇಲ್ಲದೆ ಅವರು ಕೇವಲ ಪುಸ್ತಕದ ಕೀಟಗಳಾಗಿರುತ್ತಾರೆ. ಆಧುನಿಕ ಪ್ರಪಂಚದ ಸುಧಾರಣೆಗಳಿಂದ, ವಿಲಾಸದ ಜೀವನಕ್ಕಾಗಿ ಹಾರೈಸಿ, ಅವರು ಕಷ್ಟ ಸಹಿಷ್ಣುತೆಯನ್ನರಿಯದೆ ಕೇವಲ ಸುಖಸಂತೋಷಗಳನ್ನೇ ಹಾರೈಸುವರು. ದಿನದಿಂದ ದಿನಕ್ಕೆ ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚುತ್ತಿದೆಯಲ್ಲದೆ, ಅವರು ಇತ್ತೀಚೆಗೆ ಅನಪೇಕ್ಷಣೀಯವಾದ ಕಾರ್ಯಗಳಲ್ಲೂ ತೊಡಗಿರುವರು. ಹೀಗಾಗಿ ಇಂದಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಪ್ರವೇಶಿಸುವಾಗ ಉತ್ತಮ ಮನೋಭಾವದವರಾಗುವಂತೆ, ಮೇಲ್ಕಂಡ ದೋಷಗಳನ್ನು ನಿವಾರಿಸುವಂತೆ ರಾಷ್ಟ್ರೀಯ ಸೇವೆಯನ್ನು ಕಡ್ಡಾಯವಾಗಿ ಮಾಡಿ, ಅವರ ಮೇಲೆ ಹೇರಲಾಗುವುದು. ಆದರೆ ಈ ದೋಷಗಳನ್ನು ನಿವಾರಿಸಲು ಈ ಕ್ರಮ ಅಷ್ಟು ಸಮಂಜಸವಾದುದಲ್ಲವೆನಿಸುವುದು.

ಕಡ್ಡಾಯವಾಗಿ ವಿದ್ಯಾರ್ಥಿಗಳು ಒಂದು ವರ್ಷ ಈ ರಾಷ್ಟ್ರೀಯ ಸೇವೆಯನ್ನು ಮಾಡಬೇಕೆಂಬ ನಿಯಮದಿಂದ ನಿರೀಕ್ಷಿಸಿದ ಫಲ ಲಭಿಸಲಾರದು. ಅದರ ಬದಲಾಗಿ ಶಾಲೆ, ಕಾಲೇಜುಗಳಲ್ಲಿ ಈ ಉತ್ತಮ ಗುಣಗಳು ಬೆಳೆಯಲನುಕೂಲವಾಗುವಂತೆ ಶಿಕ್ಷಣ ಪದ್ಧತಿಯಲ್ಲಿ ತುಸು ಬದಲಾವಣೆ ಮಾಡುವುದು ಸೂಕ್ತ. ವಿದ್ಯಾರ್ಥಿಗಳ ಶಿಕ್ಷಣ ಕಾಲದಲ್ಲೇ ಇದಕ್ಕಾಗಿ ತುಸು ಸಮಯವನ್ನು ವಿನಿಯೋಗಿಸಿ, ಶಿಕ್ಷಣಾರಂಭದ ಕಾಲದಿಂದಲೂ ಈ ಗುಣಗಳು ಅವರಲ್ಲಿ ಮೊಳೆಯುವಂತೆ ಮಾಡುವುದು ಉತ್ತಮ. ಬದಲಾಗಿ ಪ್ರತ್ಯೇಕವಾಗಿ ಮಾಧ್ಯಮಿಕ ಶಿಕ್ಷಣದ ಬಳಿಕ ಈ ಗುಣ ಮೂಡಲು ಯೋಜನೆ ನಿರೂಪಿಸಿದರೆ ಏನು ಫಲ? ಉತ್ತಮ ಗುಣನಡತೆಗಳು, ಶೀಲಗಳು ಚಿಕ್ಕ ಪ್ರಾಯದಲ್ಲಿ ಹುಟ್ಟಿ, ಬೆಳೆದು ಬಂದರೇನೇ ಅದು ಮುಂದಿನ ಜೀವನದಲ್ಲಿ ಭದ್ರವಾಗಿ ನೆಲೆಯೂರುವುದಲ್ಲದೆ ಕಡ್ಡಾಯಕ್ಕೊಳಪಡಿಸಿ ಅಂತಹ ಗುಣ ಹೇರುವುದು ಮನಃಶಾಸ್ತ್ರಕ್ಕೆ ವ್ಯತಿರಿಕ್ತವಾದುದು. ಮತ್ತು ತೀರಾ ಕೃತಕವಾದುದಾಗಿದೆ. 'ಮಗುವು ಮನುಷ್ಯನ ತಂದೆಯಾಗಿದೆ'— ಹಾಗಾಗಿ ಚಿಕ್ಕ ಮಗುವಾಗಿರುವಾಗಲೇ ವಿದ್ಯಾರ್ಥಿಗಳಲ್ಲಿ ಈ ಗುಣ ನಡತೆಗಳನ್ನು ರೂಪಿಸುವುದು ಫಲಕಾರಿ. "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?" ಎಂಬ ನಾಣ್ಣುಡಿಯೊಂದು ನಮ್ಮಲ್ಲಿ ಬಳಕೆಯಲ್ಲಿದೆ. ಚಿಕ್ಕ ಪ್ರಾಯದಲ್ಲಿ ರೂಢಿಸಿಕೊಳ್ಳಲಾಗದ ಗುಣಗಳನ್ನು ದೊಡ್ಡವರಾದ ಮೇಲೆ ರೂಢಿಸಿಕೊಳ್ಳಬಹುದೆಂಬುದು ನಿಜಕ್ಕೂ ತಪ್ಪು ಕಲ್ಪನೆ. ಆದಕ್ಕಾಗಿ ಪ್ರಾಥಮಿಕ ಶಾಲೆಗಳಲ್ಲಿ, ಹೈಸ್ಕೂಲುಗಳಲ್ಲಿ, ಕಾಲೇಜುಗಳಲ್ಲಿ ಉತ್ತಮ ರೀತಿಯ ಶಿಕ್ಷಣ ದೊರೆಯುವಂತೆ ಮಾಡಬೇಕು. ದಕ್ಷರಾದ ಹಾಗೂ ಸಮರ್ಥರಾದ ಅಧ್ಯಾಪಕರನ್ನು ನೇಮಿಸಿ ಅವರಿಗೆ ಯೋಗ್ಯ ಹಾಗೂ ಆಕರ್ಷಕ ಸಂಬಳವನ್ನು ಈಯಬೇಕು. ಪ್ರತಿಭಾವಂತರು, ಬುದ್ಧಿವಂತರು ಇಂದು ಅಧ್ಯಾಪಕರಾಗಿ ದುಡಿಯಲು ಮುಂದೆ ಬರುತ್ತಿಲ್ಲ. ಪ್ರತಿಭಾವಂತರು ಈ ವೃತ್ತಿಯನ್ನು ಅವಲಂಬಿಸುವಂತೆ ಉತ್ತಮ ಹಾಗೂ ಆಕರ್ಷಕ ತಲಬು ಹಾಗೂ ಸವಲತ್ತುಗಳು ಸಿಗುವಂತೆ ಮಾಡಿದರೆ ಅಂತಹ ಉಪಾಧ್ಯಾಯರ ಶಿಕ್ಷಣದಿಂದ ನಾವು ಉತ್ತಮ ಪ್ರಜೆಗಳನ್ನು ಪಡೆಯಬಹುದು.

ಇಂದು ಶಿಕ್ಷಣದ ಮಟ್ಟ ಕೆಳಗಿಳಿಯಲು ಕಾರಣ ಅಧ್ಯಾಪಕ ವಿದ್ಯಾರ್ಥಿಗಳ ಪ್ರಮಾಣವು ಹೆಚ್ಚಿರುವುದೇ ಆಗಿದೆ. ಒಬ್ಬ ಅಧ್ಯಾಪಕನ ಕೈಕೆಳಗೆ ಮಿತಿಗಿಂತ ಹೆಚ್ಚು ಮಕ್ಕಳನ್ನು ಕೊಡುವುದರಿಂದ ಶಿಕ್ಷಣವು ಫಲಪ್ರದವಾಗಲಾರದು. ಆದಕ್ಕಾಗಿ ಒಂದು ಯೋಗ್ಯ ಪ್ರಮಾಣಕ್ಕನುಸಾರವಾಗಿ ನಿರ್ದಿಷ್ಟ ವಿದ್ಯಾರ್ಥಿಗಳು ಒಂದು ತರಗತಿಯಲ್ಲಿರುವಂತೆ ನೋಡುವುದು ಅವಶ್ಯವಾಗಿದೆ. ಇಷ್ಟು ಮಾತ್ರವಲ್ಲದೆ ಪ್ರತಿಯೊಂದು ಶಾಲೆಗಳಲ್ಲಿ ಬಾಲ ವೀರದಳ, ಪಂದ್ಯಾಟಗಳು, ಎನ್. ಸಿ. ಸಿ., ವಿದ್ಯಾರ್ಥಿಗಳ ಕ್ಲಬ್ಬುಗಳು, ಉಪವೃತ್ತಿಯ ಕೇಂದ್ರಗಳು, ಪುಸ್ತಕಭಂಡಾರ ಹಾಗೂ ವಾಚನಾಲಯಗಳು, ಪೌರತನ ತರಬೇತಿ ಇತ್ಯಾದಿಗಳಿಗೆ ಪ್ರೋತ್ಸಾಹವನ್ನು ಕೊಡಬೇಕು. ಇದರಿಂದ ರಾಷ್ಟ್ರೀಯ ಸೇವೆಯ ಭಾವನೆಯು ಮಕ್ಕಳಲ್ಲಿ ಖಂಡಿತವಾಗಿ ಮೂಡದಿರಲಾರದು. ಇವುಗಳಿಗೆ ಇಂದು ಶಾಲೆಗಳಲ್ಲಿ ಅವಕಾಶವಿರುವುದಾದರೂ, ಇವುಗಳು ಸುವ್ಯವಸ್ಥಿತವಾಗಿ, ನಿರ್ದಿಷ್ಟ ಕಾರ್ಯಕಲಾಪಗಳನ್ನು ನಿರ್ವಹಿಸಲು ಸಾಕಷ್ಟು ಅವಕಾಶ ಇಲ್ಲ. ಅದಕ್ಕೆ ಬೇಕಾದ ಸೌಕರ್ಯ ಸವಲತ್ತುಗಳೂ ಇಲ್ಲವಾಗಿವೆ. ಈ ಬಗೆಯ ಪಾಠೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ಹಾಗೂ ಅವಕಾಶ ಈಯುವುದರಿಂದ ಉತ್ತಮ ಫಲ ಪಡೆಯಬಹುದು, ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಸೇವಾ ಭಾವನೆಯನ್ನು ಒಡಮೂಡಿಸಬಹುದೆಂಬುದನ್ನು ನಮ್ಮ ದೇಶದ ಹಲವಾರು ಶಿಕ್ಷಣ ಸಂಸ್ಥೆಗಳು ತೋರಿಸಿಕೊಟ್ಟಿವೆ. ಹಾಗಾಗಿ ಇದಕ್ಕಾಗಿ ಅಭ್ಯಾಸಕಾಲದಲ್ಲೇ ಅನುವು ಹಾಗೂ ಅವಕಾಶ ಮಾಡಿಕೊಡುವುದು ವಿಹಿತವಾಗಿದೆ.

ರಾಷ್ಟ್ರೀಯ ಸೇವಾ ಭಾವನೆಯು ಇಂದು ಹಲವು ವಿದ್ಯಾರ್ಥಿಗಳಲ್ಲಿ ಬೇರೂರಿದೆ. ಸ್ವಯಂಪ್ರೇರಿತರಾಗಿ ಇಂದು ಹಲವಾರು ಕಡೆಗಳಲ್ಲಿ ವಿದ್ಯಾರ್ಥಿಗಳು ರಾಷ್ಟ್ರ ಸೇವೆ ಮಾಡುತ್ತಿದ್ದಾರೆ. ಭಾರತ ಸೇವಕ ಸಮಾಜದ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಶಾಲೆ, ಕಾಲೇಜುಗಳಲ್ಲಿಯ ಸಮಾಜಸೇವಾ ದಳಗಳಲ್ಲಿ ವಿದ್ಯಾರ್ಥಿಗಳು ಶ್ರಮದಾನ ಮಾಡಿ, ದುಡಿದ ನಿದರ್ಶನ.
ರಾಷ್ಟ್ರೀಯ ಸೇವಾ
ಸ್ವಯಂ ಪ್ರೇರಣೆಯಿಂದ
ದುದಲ್ಲದೆ ಒತ್ತಾಯದಿಂದಲ್ಲ
ವೇಳೆ ಒಂದು ವರ್ಷ ಒತ್ತಾಯ [illegible]ದ ಈ ಕಡ್ಡಾಯವನ್ನು ಹೇರಿಸಿದರೂ ಅನುಬಲವಾಗಿ ಮಕ್ಕಳಲ್ಲಿ ಬೇರೂರದೆ, ಉತ್ತಮ ಫಲ ದೊರೆಯಲಾರದು.

ಶಿಕ್ಷಣ ತಜ್ಞರು ವಿದ್ಯಾರ್ಥಿಗಳ ಶಿಕ್ಷಣ ಕಾಲದ ನಡುವೆ ಈ ಒಂದು ವರ್ಷದ ತಡೆಯಿಂದ ದುಷ್ಪರಿಣಾಮವಾಗಬಹುದೆಂಬ ಭಯವನ್ನು ವ್ಯಕ್ತಪಡಿಸಿರುತ್ತಾರೆ. ಅಭ್ಯಸಿಸುವಂತಹ ಚಟವನ್ನು ಒಮ್ಮೆ ಕಳೆದುಕೊಂಡರೆ ಅದನ್ನು ತಿರುಗಿ ಪಡೆಯುವುದು ಬಹಳ ಕಷ್ಟ ಎಂಬುದು ಸರ್ವರ ಅನುಭವದ ಮಾತಾಗಿರುತ್ತದೆ. ಒಮ್ಮೆ ಶಾಲೆ ಬಿಟ್ಟು ವಿದ್ಯಾರ್ಥಿ ಪುನಃ ಅಭ್ಯಾಸ ಮುಂದುವರಿಸುವುದು ತೀರಾ ಕಷ್ಟಸಾಧ್ಯವಾಗುತ್ತದೆ. ಹಾಗಿರುವಾಗ ಈ ಒಂದು ವರ್ಷದ ಕಡ್ಡಾಯದ ರಾಷ್ಟ್ರೀಯ ಸೇವೆಯಿಂದ ವಿದ್ಯಾರ್ಥಿಗಳ ಅಭ್ಯಸಿಸುವ ಚಟ ದೂರಾಗಿ, ಅವರ ವಿಶ್ವವಿದ್ಯಾಲಯದ ಅಭ್ಯಾಸವು ಕುಂಠಿತವಾಗಬಹುದು. ಈ ವಿಷಯವನ್ನು ಕೇಂದ್ರ ಸಮಿತಿಯು ಮನಗಂಡು ರಾಷ್ಟ್ರೀಯ ಸೇವೆ ಮಾಡಬೇಕೆಂದು ಶಿಕ್ಷಣ ಅವಧಿಯ ಮಧ್ಯೆ ವಿದ್ಯಾರ್ಥಿಗಳು ಶಾಲೆ ಬಿಡುವಂತಾಗಬಾರದು, ಅದರ ನಡುವೆ ಕಾಲಾವಕಾಶ ಇರಕೂಡದು ಎಂದಿದೆ. ಇಂತಹ ಕಡ್ಡಾಯ ರಾಷ್ಟ್ರೀಯ ಸೇವೆಯ ಕಾಲದಲ್ಲಿ ವಿಸ್ತೃತವಾದ ಸಾಮಾನ್ಯ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಬೇಕು. ಇಂಗ್ಲಿಷ್ ಹಿಂದಿ, ಇನ್ನಿತರ ಪ್ರಾದೇಶಿಕ ಭಾಷೆ, ಸಾಮಾನ್ಯ ಜ್ಞಾನಗಳ ಅಭಿವೃದ್ಧಿಗೆ ಅವಕಾಶ ಇರಬೇಕು ಎಂದಿದೆ. ಇದು ನಿಜಕ್ಕೂ ಯೋಗ್ಯವಾದ ಹಾಗೂ ಸ್ವೀಕರಿಸಬೇಕಾದ ಸಲಹೆಯಾಗಿದೆ. ವಿವಿಧ ವಿಷಯ ಹಾಗೂ ಭಾಷೆಗಳ ಅಭ್ಯಾಸವನ್ನು ಇನ್ನಷ್ಟು ಮುಂದುವರಿಸಲು ಈ ಒಂದು ವರ್ಷದ ಕಡ್ಡಾಯ ರಾಷ್ಟ್ರೀಯ ಸೇವಾ ಕಾಲದಲ್ಲಿ ಅವಕಾಶ ಕಲ್ಪಿಸಿಕೊಡಬೇಕು.

ಈ ಯೋಜನೆಯ ಅನ್ವಯ ಪ್ರತಿಯೊಬ್ಬ ವಿದ್ಯಾರ್ಥಿಗೆ ತಲಾ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳ ವೆಚ್ಚ ತಗಲುವುದೆಂದು ಹೇಳಲಾಗಿದೆ. ನಿಜಕ್ಕೂ ಇದು ಅನಾವಶ್ಯಕ ವೆಚ್ಚವೆನ್ನದೆ ಗತ್ಯಂತರವಿಲ್ಲ. ಆದರೂ ಈ ವೆಚ್ಚದ ಸದುಪಯೋಗವನ್ನು ಮೇಲೆ ಹೇಳಿದ ವಿಷಯಗಳನ್ನು ಕಲಿಸುವುದರಿಂದ ಮಾಡಿಕೊಳ್ಳಬಹುದೆಂದು ತೋರುವುದು.

ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಬೆಳೆಸಲು ಅವರು ಶಿಬಿರಗಳಲ್ಲಿ ಭಾಗವಹಿಸುವಂತೆ ಮಾಡುವುದು ಸೂಕ್ತ. ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಶಿಬಿರಗಳಲ್ಲಿ ಭಾಗವಹಿಸಿದರೇನೇ ಅದು ಒಂದು ಚಂದ. ಹೊರತು ಕಡ್ಡಾಯವಾಗಿ ರಾಷ್ಟ್ರೀಯ ಸೇವೆಯನ್ನು ಹೇರಿ, ಅದಕ್ಕಾಗಿ ಸಹಸ್ರಾರು ರೂಪಾಯಿಗಳನ್ನು ವ್ಯಯಿಸುವುದು ನಿಜಕ್ಕೂ ಉತ್ತಮವಲ್ಲ. ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಮನೋಭಾವ, ರಾಷ್ಟ್ರ ಸೇವಾ ಭಾವನೆ ಬೇರೂರಲು ಪ್ರಾಥಮಿಕ ಹಂತದಲ್ಲೇ ಯತ್ನಿಸಬೇಕಲ್ಲದೆ ಈ ಬಗೆಯಯೋಜನೆಯಿಂದಲ್ಲ ಕಡ್ಡಾಯದ ರಾಷ್ಟ್ರಸೇವೆಯು ಕೆಲವು ಸಂದ

ಅಲ್ಲಲ್ಲಿಯ ಸುದ್ದಿ ಸಾರ

ಶ್ರೀ ಕೆ. ಆರ್. ಆಚಾರ್ಯರ ಆಯ್ಕೆ— ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಪಾರ್ಲಿಮೆಂಟ್ ಸದಸ್ಯ ಶ್ರೀ ಕೆ. ಆರ್. ಆಚಾರ್ (‘ರಾಷ್ಟ್ರಬಂಧು’ ಪತ್ರಿಕೆಯ ಸಂಪಾದಕರು) ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ ಓರ್ವ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಕಾರ್ಯಕಾರಿಗಳ ಆಯ್ಕೆಯಲ್ಲಿ ಶ್ರೀ ಆಚಾರ್ಯರು ಲೋಕಸಭೆಯ ೧೬ ಮಂದಿಯಲ್ಲಿ ೨ನೇ ಸ್ಥಾನ ಪಡೆದು ಆರಿಸಲ್ಪಟ್ಟಿದ್ದಾರೆ. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡುದರಿಂದ ಶ್ರೀ ಕೆ. ಆರ್. ಆಚಾರ್ ಅ. ಭಾ. ಕಾಂಗ್ರೆಸ್ ಸಮಿತಿಯ ಸದಸ್ಯರೂ ಆಗಿದ್ದಾರೆ.

ಶಂಕರ ಜಯಂತಿ— ಬಾಳೆಕುದುರು ಮಠದಲ್ಲಿ ಈ ವರ್ಷದ ಶಂಕರ ಜಯಂತೀ ಮಹೋತ್ಸವವು ಎಪ್ರಿಲ್ 30, ಮೇ 1, ಈ ದಿನಗಳಲ್ಲಿ ಜರಗಿತು. ಮೊದಲದಿನ ಅಪರಾಹ್ನ ಶ್ರೀ ಬಿ. ಸುಬ್ರಹ್ಮಣ್ಯಂ ಜ್ಯೋತಿಷ್ಯರತ್ನ ಹರಿಹರಪುರ— ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಕೆ. ರಾಮಚಂದ್ರ ಸೋಮಯಾಜಿಗಳ ಭಾಷಣ, ಶೃಂಗೇರಿಯ ರಾಮಕೃಷ್ಣ ಶಾಸ್ತ್ರಿಗಳಿಂದ ಹರಿಕಥಾ ನಿರೂಪಣೆ, ಹುಂಡೂರು— ಪಾರ್ತಿಸುಬ್ಬ ಸ್ಮಾರಕ ಯಕ್ಷಗಾನ ಕಲಾಸಮಿತಿಯವರಿಂದ— ಯಕ್ಷಗಾನ ಮುಂತಾದ ಕಾರ್ಯಕ್ರಮಗಳೂ, ಮರುದಿನ ಪೂರ್ವಾಹ್ನ ಕೆ. ಶಂಕರನಾರಾಯಣ ಕಾರಂತರ ಅಧ್ಯಕ್ಷತೆಯಲ್ಲಿ ಕೆ. ನಾರಾಯಣ ಭಟ್ಟರಿಂದ ಮತ್ತು ವಿದ್ವಾನ್ ವೆಂಕಟರಾಜ ಪುಣಿಂಚಿತ್ತಾಯರಿಂದ ಭಾಷಣಗಳು, ಮತ್ತು ಅಪರಾಹ್ನ ಶ್ರೀ ಆನಂದಾಶ್ರಮ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ಶಂಕರಜಯಂತೀ ಮಹಾಸಭೆ ಪ್ರಾರಂಭವಾಗಿ, ಕೆ. ಹಿ. ಶಂಕರ ಶಾಸ್ತ್ರಿ (ಮೈಸೂರು) ಕೋಟೇಶ್ವ ವರ್ಣರು, ಆರ್. ಹಿ. ಆರ್. ಪಂತುಲು ಗುಂಟೂರು (ಆಂಧ್ರ) ಕೆ. ವಿ. ಸೋಮಯಾಜಿ ಮತ್ತು ಬಿ. ವಿ. ಸೋಮಯಾಜಿ— ಮುಂತಾದವರಿಂದ ಭಾಷಣಗಳು, ಕೆ. ವಿ. ಶಂಕರ ನಾರಾಯಣರಿಂದ ಯೋಗಾಸನಗಳ ಪ್ರದರ್ಶನ, ಪಿ. ಗೋಪಾಲಕೃಷ್ಣ ಪುಣಿಂಚಿತ್ತಾಯರು ಮತ್ತು ಪಾರ್ಟಿಯವರಿಂದ ಯಕ್ಷಗಾನ, ವೇದ-ವೇದಾಂತ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮತ್ತು ಬೇರೆಬೇರೆಕಡೆಗಳಿಂದಬಂದ ವಿದ್ವಾಂಸರಿಗೆ ಸಂಭಾವನಾ ವಿತರಣೆ — ಮುಂತಾದ ಕಾರ್ಯಕ್ರಮಗಳೊಂದಿಗೆ ಉತ್ಸವವು ಕೊನೆಗೊಂಡಿತು.

ವಾರ್ಷಿಕೋತ್ಸವ — ಕಡಿರುದ್ಯಾವರ ಪಂಚಾಯತ್ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವವು ದಿನಾಂಕ 3-5-60ರಂದು ಬೆಳ್ತಂಗಡಿ ತಾಲ್ಲೂಕು ತಹಶಿಲ್ದಾರರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ ಭಾಷಣ ಬಹುಮಾನವಿತರಣೆ, ಸಂಗೀತ ನೃತ್ಯ ಜಾನಪದ ಕಲೆಗಳು, ನಾಟಕಾದಿ ಕಾರ್ಯಕ್ರಮಗಳು, ಯಶಸ್ವಿಯಾಗಿ ನಡೆದುವು. ಹಳ್ಳಿಯ ರೈತರು ವಿದ್ಯೆಗಾಗಿ, ಕೊಡಬೇಕಾದ ಗಮನದ ಕುರಿತು, ಸಭಾಧ್ಯಕ್ಷರು, ಮತ್ತು ಶ್ರೀ ಟಿ. ಎಸ್. ಭಟ್ಟ ವಿದ್ವಾನ್, ಶಿರೋಮಣಿ, ಅವರೂ, ಭಾಷಣವಿತ್ತರು. ಶ್ರೀಮಾನ್ ತಿರುಮಲೇಶ್ವರ ಭಟ್, ಶಿರೋಮಣಿ, ವಿದ್ವಾನ್ ಇವರಿಂದ "ವಸಂತ ಹಿಂದೀ ಪಾಠಶಾಲೆ"ಯ ಉದ್ಘಾಟನೆಯೂ, ನೆರವೇರಿತು.

ಅಂಜಾರು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತಿಯು ಇತ್ತೀಚೆಗೆ ಮಲ್ಪೆ ಗವರ್ನಮೆಂಟ್ ಫಿಶರೀಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಎಸ್. ಆಮ್ಮಾನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಗುರುವಪ್ಪನವರು ವರದಿಯನ್ನೋದಿದ ಮೇಲೆ ಶ್ರೀ ಪಿ. ಉಮಯಕೊಂಡ ಹೆಗ್ಡೆಯವರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷೆಯರು ಬಹುಮಾನ ವಿತರಣೆ ಮಾಡಿ ಭಾಷಣವಿತ್ತ ಮೇಲೆ ವಿವಿಧ ವಿನೋದಾವಳಿಗಳಾದುವು. ಬೆಳಿಗ್ಗೆ ಪಟೇಲ್ ಶ್ರೀ ಕೆ. ಶಂಕರ ಹೆಗ್ಡೆಯವರು ಧ್ವಜಾರೋಹಣ ಮಾಡಿದ್ದರು. ಮುಂಚೆಟ್ಟು ಶ್ರೀ ಬಾಲಕೃಷ್ಣ ಹೆಗ್ಡೆಯವರ ವತಿಯಿಂದ ಮಕ್ಕಳಿಗೆ ಸಿಹಿತಿಂಡಿ ಹಂಚಲಾಗಿತ್ತು.

ಶಿರ್ವ— ಇಲ್ಲಿಯ ಡಾನ್‌ಬಾಸ್ಕೋಸ್ ಹಾ| ಎ| ಶಾಲೆಯ ವರ್ಧಂತ್ಯುತ್ಸವವು ಡಾ| ಪಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ವಿಜೃಂಭಣೆಯಿಂದ ನೆರವೇರಿತು.

ಆದಿಉಡುಪಿ— ಇಲ್ಲಿಯ ಕಿರಿಯ ಬುನಾದಿ ಮತ್ತು ಹಾ| ಎ| ಶಾಲೆಯ ವರ್ಧಂತಿಯು ಕಳೆದ ತಾ. 2೯ರಲ್ಲಿ ಶ್ರೀ ವೈ. ಗೋಪಾಲ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ವ್ಯವಸ್ಥಾಪಕ ಶ್ರೀ ಟಿ. ಸೀತಾರಾಮಯ್ಯನವರು ಸ್ವಾಗತಿಸಿದ ಮೇಲೆ ಮುಖ್ಯೋಪಾಧ್ಯಾಯರು ವರದಿಯನ್ನೋದಿದರು. ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ಬಹುಮಾನವಿತರಣೆ ಮಾಡಿ ಭಾಷಣವಿತ್ತ ಮೇಲೆ ಮನೋರಂಜನ ಕಾರ್ಯಕ್ರಮಗಳಾದುವು.

ಹಿರೇಬೆಟ್ಟು— ಇಲ್ಲಿಯ ಪಟ್ಲ ಲೋಕಮಾನ್ಯ ತಿಲಕ ಹಾ| ಎ| ಶಾಲೆಯ ವಾರ್ಷಿಕೋತ್ಸವವು ತಾ. 20ರಂದು ಪರೀಕ್ಷಾಧಿಕಾರಿ ಶ್ರೀ ಹರ್ಷ ಮೈಕಾರರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶಾಲಾ ಲೇಖಕ ಶ್ರೀ ಮರ್ಣೆ ಗೋವಿಂದ ಶೆಟ್ಟರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಎಂ. ವಾಸುದೇವ ಭಟ್ಟರು ವರದಿಯನ್ನೋದಿದರು. ಸಂದೇಶ ವಾಚನ, ಬಹುಮಾನ ವಿತರಣೆ, ಮೊದಲಾದ ಕಾರ್ಯಕ್ರಮಗಳಾದ ಮೇಲೆ ನಾಟಕಾಭಿನಯವಾಯಿತು. ಅಂದು ಮುಂಜಾನೆ ಶ್ರೀ ಹಿರೇಬೆಟ್ಟು ಸದಾಶಿವ ಹೆಗ್ಡೆಯವರು ರಾಷ್ಟ್ರಧ್ವಜವನ್ನು ಅರಳಿಸಿದ್ದರು. ಶ್ರೀ ರಾಮಚಂದ್ರ ಹೆಗ್ಡೆಯವರು ಮಕ್ಕಳ ಪತ್ರಿಕೆಯ ವಾರ್ಷಿಕ ಸಂಚಿಕೆಯನ್ನು ಉದ್ಘಾಟಿಸಿದರು.

ಶ್ರೀ ಕಾರಂತರಿಗೆ ಸನ್ಮಾನ ಸಮಾರಂಭ— ಕಳೆದ ತಾ 28ರಂದು ಕೋಟದ ನಾಗರಿಕರು ಶ್ರೀ ಶಿವರಾಮ ಕಾರಂತರ ಹುಟ್ಟೂರಾದ ಕೋಟದಲ್ಲಿ ಅವರಿಗೆ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭವನ್ನು ವಿವೇಕ ಹೈಸ್ಕೂಲಿನ ಪಠಾರದಲ್ಲಿ ಏರ್ಪಡಿಸಿದ್ದರು. ಶ್ರೀ ಕಾರಂತರಿಗೆ ಸಾವಿರದ ಒಂದು ರೂಪಾಯಿ ನಿಧಿಯನ್ನು ಸನ್ಮಾನ ಪತ್ರವನ್ನು ಅರ್ಪಿಸಲಾಯಿತು. ಶ್ರೀ ರಾಮಕೃಷ್ಣ ಹಂದೆಯವರು ಸ್ವಾಗತಿಸಿದರು. ಶ್ರೀಗಳಾದ ಪಿ. ಕೃಷ್ಣ ಉಡುಪ, ಬನ್ನಾಡಿ ಸುಬ್ಬಣ್ಣ ಹೆಗ್ಡೆ, ಎ. ಜೆ. ಅಲ್ಸೆ, ಬೈಕಾಡಿ ವೆಂಕಟಕೃಷ್ಣ ರಾವ್ ಇವರು ಕಾರಂತರ ಕುರಿತು ಮಾತನಾಡಿದರು. ಶ್ರೀ. ಕಾರಂತರು ಉತ್ತರವಿತ್ತ ಮೇಲೆ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಅಧ್ಯಕ್ಷ ಭಾಷಣವಿತ್ತರು. ಶ್ರೀ ಕೆ. ರಾಮಚಂದ್ರ ಉಡುಪರು ಕೃತಜ್ಞತೆಗಳನ್ನರ್ಪಿಸಿದರು

ವಾರ್ಷಿಕೋತ್ಸವ ಉಡುಪಿಯ ಶ್ರೀ ಬ್ರಹ್ಮ ಬೈದ್ಯರ್ಕಳ ಧೂಮಾವತಿ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ಇದೇ ತಾ 10ರಲ್ಲಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ, ವರದಿವಾಚನ, ಶ್ರೀ ಎ. ಜೆ. ಅಲ್ಸೆಯವರಿಂದ ಉಪನ್ಯಾಸಗಳಾದುವಲ್ಲದೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಟಿ. ಎ. ಪೈಗಳಿಗೆ ಇದೇ ಸಂದರ್ಭದಲ್ಲಿ ಮಾನಪತ್ರವನ್ನರ್ಪಿಸಲಾಯಿತು.

ಭ- ಅತ್ಯವಶ್ಯಕವಾಗಿ ಬೀಳಬಹುದು. ಯುದ್ಧ ಕಾಲದಲ್ಲಿ ಇಂತಹ ಪರಿಸ್ಥಿತಿ ಒದಗಿದ್ದೂ ಇದೆ. ಆದರೆ ಶಾಂತಿಯ ಈ ಕಾಲದಲ್ಲಿ ಈ ಬಗೆಯ ಒತ್ತಾಯದ ಅವಶ್ಯಕತೆಯೇನೆಂದು ನಮಗೆ ತಿಳಿಯುವುದಿಲ್ಲ.

ಪ್ರಜಾಪ್ರಭುತ್ವದ ದಿನಗಳಲ್ಲಿ ಈ ಬಗೆಯ ಕಡ್ಡಾಯವು ಅಪೇಕ್ಷಣೀಯವಲ್ಲ. ತತ್ವತಃ ಈ ಯೋಜನೆಯು ವಿದ್ಯಾರ್ಥಿಗಳು ಒಪ್ಪುವಂತಹುದಲ್ಲ, ತ್ಯಾಗ, ಸೇವೆಗಳು ಒತ್ತಾಯದಿಂದ ಮೂಡುವುವೆಂಬುದು ತೀರಾ ಸುಳ್ಳು. ಅದು ಮನಃಪೂರ್ವಕವಾಗಿ ಹೃದಯ ಪರಿವರ್ತನೆಯಿಂದ ಮೂಡಬೇಕು.

ಕೇಂದ್ರಸರಕಾರದ ಶಿಕ್ಷಣ ಶಾಖೆ ಈ ದಿಸೆಯಲ್ಲಿ ತುಸು ವಿಸ್ತೃತವಾಗಿ ವಿಚಾರಿಸಿ ತನ್ನ ಧೋರಣೆಯನ್ನು ಬದಲಾಯಿಸಬೇಕು. ಪ್ರಾಥಮಿಕ ಹಂತದಿಂದಲೇ ಶಿಕ್ಷಣ ಕ್ರಮದಲ್ಲಿ ಈ ಬಗೆಯ ಭಾವನೆಗೆ ಅವಕಾಶ ಒದಗಿಸಬೇಕು, ಮಾತ್ರವಲ್ಲ ಈ ಕ್ರಮ ಜಾರಿಗೆ ತರುವುದಾದರೂ, ಆ ಅವಧಿಯಲ್ಲಿ ಹಿಂದೆ ಹೇಳಿದ ಇಂಗ್ಲಿಷ್, ಹಿಂದಿ, ಪ್ರಾದೇಶಿಕ ಭಾಷೆ, ಹಾಗೂ ಸಾಮಾನ್ಯ ಜ್ಞಾನದ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕು. ಇನ್ನೂ ವಿವೇಚನೆಗೆ ಅವಕಾಶ ಇರುವುದರಿಂದ, ಈ ಸೂಚನೆಯ ಕುರಿತು ಸರಕಾರ ಪರ್ಯಾಲೋಚಿಸೀತೆಂದು ಹಾರೈಸುತ್ತೇವೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 77/60

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ— — ವಾದಿ.

ಮತ್ತು

ಕೆ. ಟಿ. ರಾಮಕೃಷ್ಣ ಮೂರರ್ ಕೂಡಾ — ಪ್ರತಿವಾದಿರು.

1ನೇ ಪ್ರತಿವಾದಿ— ಕೆ. ಟಿ. ರಾಮಕೃಷ್ಣ ಮೂರರ್, ಕೆ. ವಿ. ನಾರಾಯಣ ಮೂರರ ಮಗ, ಉಡುಪಿಯಲ್ಲಿ M. F. S.ನಲ್ಲಿ ಫಾಯರ್‌ಮೇನ್—

ಪ್ರತಿವಾದಿರು ವಾದಿಗೆ ತಾರೀಕು 29-9-58ರಲ್ಲಿ ರೂಪಾಯಿ 100/- ಒಂದು ನೂರಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ವ ಬಡ್ಡಿ ಕೂಡಾ ರೂಪಾಯಿ 114-63ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 13-6-60ಕ್ಕೆ ತನಖೆಗೆ ಬಿಡಲ್ಪಟ್ಟಿದೆ— ಆ ದಿವಸ ಸದ್ರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆಯಿದ್ರೆ ಅತನ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ,

M. Damodar Kamath,
Advocate for Plff.

ಉಡುಪಿ, ತಾರೀಕು 5-5-1960.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ. ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು. ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಸಂಕ್ಷಿಪ್ತ ಸುದ್ದಿಗಳು

ಅಮೇರಿಕೆಯ ವಿಮಾನ

ಸೋವಿಯೆಟ್ ಪಾರ್ಲಿಮೆಂಟಿನಲ್ಲಿ ಕಳೆದ ತಾ ೭ರಂದು ಶ್ರೀ ನಿಕಿಟಾ ಕುಶ್ಚೇವರು ಮಾತನಾಡುತ್ತಾ ರಶಿಯವು ಮೇ ಒಂದರಂದು ಹೊಡೆದು ಕೆಳಗುರುಳಿಸಿದ ಅಮೇರಿಕದ ವಿಮಾನವು ಬೇಹುಗಾರಿಕೆ ನಡೆಸಲು ಬಂದಿತ್ತೆಂದೂ ಅದರ ಚಾಲಕನು ಬದುಕಿದ್ದು ರಶಿಯದಲ್ಲಿದ್ದಾನೆಂದೂ, ಅವನನ್ನು ಶೀಘ್ರವೇ ವಿಚಾರಣೆಗೆ ಗುರಿಪಡಿಸಲಾಗುವುದೆಂದೂ ಹೇಳಿರುವರು.

ಅಮೇರಿಕನ್ ಅಧಿಕಾರಿಗಳೇ ಹೊಣೆ

ರಶಿಯದಲ್ಲಿ ಹೊಡೆದು ಕೆಳವಲ್ಪಟ್ಟಿರುವ ಅಮೇರಿಕನ್ ವಿಮಾನವನ್ನು ಅಮೇರಿಕೆಯ ಅಧಿಕಾರಿಗಳಾರೋ ಬುದ್ಧಿಪೂರ್ವಕವಾಗಿ ವರಿಷ್ಠ ಪರಿಷತ್ತನ್ನು ಅಸ್ತವ್ಯಸ್ತಗೊಳಿಸಲು ಕಳಿಸಿರಬೇಕು. ಆ ಅಧಿಕಾರಿಯು ಎಷ್ಟೇ ಉಚ್ಚ ಸ್ಥಾನದಲ್ಲಿದ್ದರೂ ಅವನನ್ನು ಅಧಿಕಾರದಿಂದ ಕಿತ್ತುಹಾಕಲಾಗುವುದೆಂದು ಅಧ್ಯಕ್ಷ ಐಸೆನ್ ಹಾವರರ ನಿಶ್ಶಸ್ತ್ರೀಕರಣ ಸಲಹೆಗಾರರಾಗಿದ್ದ ಹೆರಾಲ್ಡ್ ಸ್ಟ್ಯಾಸೆನ್ನರು ಹೇಳಿರುವರು.

ನೆಹರೂ—ಡಿಗಾಲೆ ಭೇಟಿ

ಕಾಮನ್‌ವೆಲ್ತ್ ಪರಿಷತ್ತಿನಲ್ಲಿ ಭಾಗವಹಿಸುತ್ತಿದ್ದ ಪ್ರಧಾನಿ ನೆಹರೂರವರು ಕಳೆದ ತಾ. ೮ರಂದು ಒಂದು ದಿನದ ಸಂದರ್ಶನಕ್ಕಾಗಿ ಲಂಡನಿನಿಂದ ಪ್ಯಾರಿಸಿಗೆ ಆಗಮಿಸಿ ಅಧ್ಯಕ್ಷ ಡಿಗಾಲೆಯವರೊಡನೆ ಮಾತುಕತೆ ನಡೆಸಿ ಅಂದೇ ಲಂಡನಿಗೆ ಮರಳಿ ಪ್ರಯಾಣ ಮಾಡಿರುವರು. ಇದು ಡಿಗಾಲೆ ಮತ್ತು ನೆಹರೂರವರ ಪ್ರಥಮ ಸಂದರ್ಶನವಾಗಿದೆ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ:

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-೪೫ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ—

ಭಾರತ—ಐಗುಪ್ತಗಳ ಸಮಾನತೆ

ರಾಜಕೀಯದಲ್ಲಿ, ಇತಿಹಾಸದಲ್ಲಿ ಮಾತ್ರವಲ್ಲ, ಪ್ರಾಕೃತಿಕ ಮತ್ತು ಸಂಸ್ಕೃತಿ ಸಮಾನತೆಗಳೂ ಉಭಯ ರಾಷ್ಟ್ರಗಳಲ್ಲಿವೆ.

ಸಂಯುಕ್ತ ಅರಬ ರಾಷ್ಟ್ರದ ಅಧ್ಯಕ್ಷ ಮೇ॥ ಜ॥ ಅಬ್ದುಲ್ ಗಮಾಲ್ ನಸ್ಸೇರರು ಭಾರತವನ್ನು ಎರಡನೆ ಬಾರಿ ಸಂದರ್ಶಿದುದು ನಮ್ಮೊಳಗಿರುವ ಸಮಾನತೆಯನ್ನು ಮತ್ತಷ್ಟು ದೃಢಪಡಿಸುತ್ತ ಬಹಿರಂಗಗೊಳಿಸುತ್ತದೆ. ನಮ್ಮ ಹಾಗೂ ಅವರ ರಾಷ್ಟ್ರಗಳೆರಡೂ ಸಾವಿರಾರು ವರ್ಷಗಳಿಂದಲೂ ವಿಶಾಲ ವಿಶ್ವಕ್ಕೆ ಮಹತ್ವಪೂರ್ಣ ದೇಣಿಗೆಯನ್ನಿತ್ತಿವೆ. ಎರಡೂ ರಾಷ್ಟ್ರಗಳು ಐತಿಹಾಸಿಕ ಪ್ರಸಿದ್ಧಿಯಿರುವ ಸ್ಮಾರಕ ಕಲೆಯನ್ನು ದಾನವಾಗಿತ್ತಿವೆ. ಎರಡೂ ದೇಶಗಳ ಜನ ನದಿಗಳನ್ನು ಆರಾಧಿಸಿ, ಅವುಗಳ ತಟದಲ್ಲಿಯೇ ನಗರಗಳನ್ನು ಕಟ್ಟಿ ನಾಗರಿಕತೆಯನ್ನು ಬೆಳೆಸುತ್ತ ಬಂದಿವೆ.

ಇಷ್ಟು ಮಾತ್ರವಲ್ಲದೇ ಇಬ್ಬರಿಗೂ ನದಿಗಳೇ ಜೀವನಾಧಾರವಾಗಿವೆ. ಸೋಣ ಅಥವಾ ಸಿಂಧೂ ನದಿಯಿರಲಿ; ಗಂಗೆ ಅಥವಾ ನೀಲ ನದಿಯಿರಲಿ ಅವುಗಳು ಹರಿಯುವ ಸ್ಥಾನ ವೈಶಿಷ್ಟ್ಯಗಳಿಂದ ಲಕ್ಷಾಂತರ ಜನತೆಯ ಜೀವನ ನಿರ್ವಾಹದಲ್ಲಿ ಪ್ರಮುಖ ಪಾತ್ರ ವಹಿಸಿವೆ. ನಸ್ಸೇರ ಮತ್ತು ನೆಹರುರವರ ದೇಶಗಳ ನಡುವೆ ಎದ್ದುತೋರುವ ಅಂತರವೆಂದರೆ ಕೇವಲ ಒಂದೇ ಒಂದಾಗಿದೆ. ನೆಹರೂರವರ ಭಾರತದಲ್ಲಿ ಎಲ್ಲೆಲ್ಲೂ ನದಿಗಳು ಹರಿದು ಅಖಂಡ ದೇಶವನ್ನು ಸಸ್ಯ ಶ್ಯಾಮಲವನ್ನಾಗಿ ಮಾಡಿದರೆ, ನಸ್ಸೇರರ ದೇಶದಲ್ಲಿ ನೀಲನದಿಯೊಂದೇ ಐಗುಪ್ತದ ಪೂರ್ವ ಭಾಗದಲ್ಲಿ ಸುಡಾನಿನಿಂದ ಪ್ರಾರಂಭಿಸಿ ಮೆಡಿಟರೇನಿಯನ್ ಸಮುದ್ರದವರೆಗೂ ಆ ಮರಳುಗಾಡಿನಲ್ಲಿ ಒಂದು ಸಪುರವಾದ ಹಸುರು ಗೀಟನ್ನೆಳೆಯುತ್ತದೆ. ದಾಮೋದರ ಕಣಿವೆಯೋಜನೆಯನ್ನು ಅಧ್ಯಕ್ಷ ನಸ್ಸೇರರು ಆಸಕ್ತಿಪೂರ್ಣರಾಗಿ ವೀಕ್ಷಿಸಲು ಇರುವ ಕಾರಣವಾದರೂ ಇದೊಂದೇ. 'ಸಾಡಲ್ ಎಲಾ' ಆಣೆಕಟ್ಟು ಆಸ್ವಾನಿನಲ್ಲಿ ಕಟ್ಟಲ್ಪಡುವದಿದ್ದು, ಇದು ವಿದ್ಯುತ್ ಮತ್ತು ನೀರಿನ ಆವಶ್ಯಕತೆಯಿರುವ ಬೆಂಗಾಡಿನಲ್ಲಿ ಎರಡನ್ನೂ ಒದಗಿಸಲು ರೂಪಿತವಾಗುತ್ತಿದೆ. ಈಗ ಇಲ್ಲಿ ಒಂದು ಸಣ್ಣ ಆಣೆಕಟ್ಟೆ ಮಾತ್ರವಿರುವುದು.

ಸಂಯುಕ್ತ ಅರಬ ಪ್ರಜಾರಾಜ್ಯವು ತನ್ನ ಭವಿಷ್ಯತ್ತಿಗಾಗಿ ತನ್ನ ಗತವೈಭವಗಳಲ್ಲಿ ಕಿಂಚಿತ್ ತ್ಯಾಗವನ್ನು ಮಾಡುವುದು. ಕಟ್ಟಲಾಗುವ ಅತ್ಯುನ್ನತವಾದ ಕಟ್ಟೆಯು ಮುನ್ನೂರು ಮೈಲುದ್ದದ ಒಂದು ಕೆರೆಯನ್ನೇ ನಿರ್ಮಿಸುವುದು. ಈ ಪ್ರದೇಶದಲ್ಲಿ ಕಳೆದ ನಾಲ್ಕು ಸಾವಿರ ವರ್ಷಗಳಿಂದಲೂ ಸುಪ್ರಸಿದ್ಧವಾದ ಐತಿಹಾಸಿಕ ಅವಶೇಷಗಳಿರುವುವು. ಅಶಕ್ಕೂ ಹೆಚ್ಚಿನ ಫಾರೋನಿಕ್ ದೇವಾಲಯಗಳು, ಸುಮಾರು ೫೦ ಕ್ರಿಶ್ಚಿಯನ್ ಇಗರ್ಜಿಗಳು ಮತ್ತು ೧,೫೦೦ಕ್ಕಿಂತಲೂ ಮಿಕ್ಕಿದ ಶಿಲಾಲೇಖಗಳು ಮುಳುಗಿ ಹೋಗುವುವು. ಇವೆಲ್ಲವೂ ಜ್ಞಾತಾವಶೇಷಗಳು. ಅಲ್ಲದೇ ಇನ್ನು ಸಂಶೋಧಿಸಲಿಕ್ಕಿರುವ ಸಾವಿರಾರು ಅವಶೇಷಗಳಿವೆಯೆಂಬುದು ಖಂಡಿತ.

ಈ ಅವಶೇಷಗಳನ್ನು ರಕ್ಷಿಸುವ ಸಲುವಾಗಿ ಸಂಯುಕ್ತ ಅರಬ ಪ್ರಜಾರಾಜ್ಯವು ಜಗತ್ತಿನ ಸರ್ವೋಚ್ಚ ಸಾಂಸ್ಕೃತಿಕ ಸಂಸ್ಥೆ ಯುನೆಸ್ಕೊವನ್ನು ಸಹಾಯಕ್ಕಾಗಿ ವಿನಂತಿಸಿತ್ತು. ಯುನೆಸ್ಕೊವಾದರೂ ಅದನ್ನೀಯಲು ಒಪ್ಪಿಕೊಂಡಿತ್ತು. ಅಧ್ಯಕ್ಷ ಐಸನ್ ಹಾವರರು ವಿವಿಧ ದೇಶಗಳ ಅನ್ವೇಷಕರಿಗೂ ಉದಾರ ಕೊಡುಗೆಯಿತ್ತರು. ಇವರನ್ನಯ ಅವರು ಕಂಡ ಅಥವಾ ಸಂಶೋಧಿಸಿದುದರಲ್ಲಿ ಅರ್ಧಾಂಶದಷ್ಟು ಭಾಗವನ್ನು ಅವರೇ ಕೊಂಡು ಹೋಗಬಹುದು.

ಈ ಸಮಸ್ಯೆಯು ಪರಮಾವಧಿಯು ಉಸಿರುಕಟ್ಟಿಸುವಷ್ಟಿದೆ. ಕ್ಯೈರೋ ಲೇಖನ ಸಂಗ್ರಹ ಕೇಂದ್ರವು ಯುನೆಸ್ಕೊವಿನ ಸಹಾಯದಿಂದ ಈ ಪ್ರದೇಶದ ವೈಜ್ಞಾನಿಕ ಪರೀಕ್ಷಣೆ ಮಾಡಲು ಕಳೆದ ಐದು ವರ್ಷಗಳಿಂದ ಐಗುಪ್ತ ತಜ್ಞರು ಭಾಷಾ ಶಾಸ್ತ್ರಜ್ಞರು, ಛಾಯಾ ಚಿತ್ರಗಾರರು, ಆಕಾರ ನಿರ್ಮಾತೃಗಳು ಹಾಗೂ ಕಲಾಕಾರರನ್ನು ಕೂಡಿಕೊಂಡು ಕಾರ್ಯ ತತ್ಪರವಾಗಿದೆ. ಆದರೆ, ಕೆಲಸವು ಇನ್ನೂ ಪೂರ್ಣಗೊಂಡಿಲ್ಲ. ಲೇಖನ ಸಂಗ್ರಹ ಮಾಲೆಯು ಇವುಗಳ ಐವತ್ತರಲ್ಲೊಂದು ಅಂಶ ಪ್ರಮಾಣವಷ್ಟೆ ಅವನ್ನು ಪುನಾರಚಿಸುವ ಕಾರ್ಯ ಕೈಗೊಂಡಿದೆ.

ನಮಗೂ ಇಂತಹುದೇ ಸಮಸ್ಯೆ ನಾಗಾರ್ಜುನ ಕೊಂಡದಲ್ಲಿ ಕಂಡು ಬಂದಿತ್ತು ಆದರೆ, ಇಲ್ಲಿದ್ದ ಅಮೂಲ್ಯ ಒಡವೆಗಳು ಸಂಖ್ಯೆಯಲ್ಲಿ ಕಿರಿಯವಾದುದರಿಂದ ಅವನ್ನು ಅನ್ಯ ಸುರಕ್ಷಿತ ಪ್ರದೇಶಕ್ಕೆ ಒಯ್ಯಲಾಯಿತು.

ಸಮಾನತೆಯ ಇನ್ನೊಂದು ವಿಷಯವಿದೆ. ನಮ್ಮ ಅಜಂತ ಎಲ್ಲೋರಗಳ ಕಲೆಗೆ ಸಮಾನವಾದ ಅಬು ಸಿಮೇಲನ್ನು ಇತ್ತೀಚೆಗೆ ಎಂದರೆ, ೧೯೫೯ರಲ್ಲಿ ಸ್ವಿಸ್ ಪ್ರವಾಸಿಯೊಬ್ಬನು ಐಗುಪ್ತದಲ್ಲಿ ಸಂಶೋಧಿಸಿದನು.

ಯುನೆಸ್ಕೊವಿನ ಅಧ್ಯಕ್ಷರು ಒಂದು ಬಲವಾದ ವಿನಂತಿಯನ್ನು ಮಾಡಿಕೊಂಡು ವ್ಯಕ್ತಿಗಳೂ ಸಂಘಸಂಸ್ಥೆಗಳೂ ಕೂಡಲೇ ಈ ಐತಿಹಾಸಿಕ ಸಾಧನಗಳ ರಕ್ಷಣೆಗೆ ಮುಂದಾಗ ಬೇಕೆಂದೂ ಇಲ್ಲವಾದರೆ, ಅವು ಎಂದೆಂದಿಗೂ ಕಣ್ಮರೆಯಾಗುವುವೆಂದೂ ಕೇಳಿಕೊಂಡಿದ್ದಾರೆ. ನೂಬಿಯನ್ ಸ್ಮಾರಕಗಳನ್ನು ಯಾವ ವಿಧದಲ್ಲಾದರೂ ಅವಶ್ಯ ರಕ್ಷಿಸಬೇಕು.

ವಿಚಿತ್ರ ವಾದರೂ ಸತ್ಯ!
ಇದೀಗ ಸೋಜಿಗ ನೋಡಿರಿ!

೧೬೬೪ನೆಯ ದಶಂಬರ ೫ರಂದು ನೌಕಾತಾಣ್ಯದ ಒಂದು ದೋಣಿ ಒಮ್ಮಿಂದೊಮ್ಮೆಲೇ ಕವಚಿಬಿತ್ತು. ಇದರಲ್ಲಿ ಪ್ರಯಾಣಿಸುತಿದ್ದ ೮೧ ಪ್ರವಾಸಿಗರಲ್ಲಿ ಕೇವಲ ಒಬ್ಬನೇ ಒಬ್ಬನು ಜೀವಂತನಾಗಿ ಉಳಿದು ಬಂದನು. ಅವನ ಹೆಸರು ಹ್ಯೂ ವಿಲಿಯಮ್ಸ್.

ಅದೇ ಪ್ರದೇಶದಲ್ಲಿ ೧೭೮೫ನೆಯ ದಶಂಬರ ೫ನೆ ದಿನದಂದು ಒಂದು ಬಿರುಗಾಳಿ ಎದ್ದಿತು. ಇದರಿಂದ ೬೦ ಜನರಿಂದ ತುಂಬಿದ ದೋಣಿಯೊಂದು ನೀರಲ್ಲಿ ಮುಳುಗಿತು. ಆದರಲ್ಲಿ ಕೇವಲ ಒಬ್ಬನೇ ಒಬ್ಬನು, ಅದು ಹೇಗೆ ಹೇಗೋ ಜಲಸಮಾಧಿಯನ್ನು ತಪ್ಪಿಸಿ ಬದುಕಿ ಬಂದನು. ಅವನ ಹೆಸರು ಹ್ಯೂ ವಿಲಿಯಮ್ಸ್.

ಇದಾದ ೩೫ ವರ್ಷಗಳ ನಂತರ, ಎಂದರೆ, ೧೮೨೦ನೆ ಅಗಸ್ಟ ೫ರಂದು ಇದೇ ಸ್ಥಳದಲ್ಲಿ ಸೈನ್ಯದ ನೌಕೆಯೊಂದು ಮುಗುಚಿತು. ಅದರಲ್ಲಿ ೨೫ ಯಾತ್ರಿಕರಿದ್ದರು. ಆದರೆ ಒಬ್ಬನು ಮಾತ್ರ ಬದುಕಿಬಂದನು. ಅವನ ಹೆಸರು ಹ್ಯೂ ವಿಲಿಯಮ್ಸ್.

ಮೇಲೆ ಹೇಳಿದ ಮೂರು ದುರ್ಘಟನೆಗಳೂ ಒಂದೇ ಪ್ರದೇಶದಲ್ಲಿ ನಡೆದುವು. ತಿಂಗಳ ೫ನೆ ತಾರೀಕಿನಂದೇ ಘಟಿಸಿದುವು ಮತ್ತು ಮೂರು ಅವಗಡಗಳಲ್ಲಿಯೂ ಪಾರಾಗಿಬಂದವನ ಹೆಸರು ಹ್ಯೂ ವಿಲಿಯಮ್ಸ್! ಇದು ಸೋಜಿಗವಲ್ಲವೆ?

ಪಶುಶಾಲೆಗಳು

೪ನೇ ಪುಟದಿಂದ

ತಾವಾಗಿಯೇ ಮಕ್ಕಳನ್ನು ಈ ಲೈಬ್ರರಿಗೆ ಕರೆದುಕೊಂಡು ಬರುತ್ತಾರೆ. ಮಕ್ಕಳಲ್ಲಿ ಪಶುಪಕ್ಷಿಗಳನ್ನು ಸಾಕುವ ಅಭಿಲಾಷೆಯು ಸಹಜವಾಗಿರುವುದು. ಆದರೆ, ಯಾವುದಾದರೂ ಒಂದು ಪ್ರಾಣಿಯನ್ನು ಅವರಿಗೆ ಕ್ರಯಕೊಟ್ಟು ಕೊಂಡು ಇತ್ತರೆ, ಒಂದು ನಾಲ್ಕು ದಿನ ಅವನ್ನು ಅತ್ಯಂತಾಸಕ್ತಿಯಿಂದ ಕಾಣುತ್ತಾರೆ. ಆದರೆ, ದಿನಗಳೆದಂತೆ, ಈ ಆಸಕ್ತಿಯು ಕುಂಠಿತವಾಗುತ್ತ ಬಂದು, ಸಾಕುವ ಕಾರ್ಯದಲ್ಲಿ ಅವರು ಉದಾಸೀನರಾಗುವರು. ಹೀಗಾಗಿ ಕೊನೆಕೊನೆಗೆ ಆ ಪ್ರಾಣಿಯನ್ನು ಪೋಷಿಸುವ ಸಮಸ್ತ ಭಾರವು ಮಕ್ಕಳಿಂದ ತಪ್ಪಿ, ಅವರ ಹೆತ್ತವರ ತಲೆಯ ಮೇಲೆ ಬೀಳುವುದು. ಲೈಬ್ರರಿಯು ಈ ಸಮಸ್ಯೆಗೊಂದು ಪರಿಹಾರವನ್ನು ಕಂಡುಹಿಡಿದಿದೆ. ಪ್ರತಿ ಏಳು ದಿನಗಳಿಗೊಮ್ಮೆ ಮಕ್ಕಳು ಹೊಸ ಪಶುವೊಂದನ್ನು ಪಡೆಯಬಲ್ಲರು. ಇದರಿಂದ ಅವರ ಆರಂಭಶೂರತನವೂ ದೂರವಾಗುವುದು. ಅಲ್ಲದೇ ಹಲವಾರು ಬಗೆಯ ಪಶು-ಪಕ್ಷಿಗಳ ಪರಿಚಯವೂ ಅವರಿಗಾಗಿ, ಅವರಲ್ಲಿ ಸದಾ ಉತ್ಸಾಹವನ್ನೇ ತುಂಬಿಸಲು ಸಹಾಯವಾಗಿದೆ.

ಪಶು ಸಂಗ್ರಹಾಲಯದಲ್ಲಿ ಪಶು ಪಕ್ಷಿಗಳನ್ನು ನಾವು ಕಣ್ಣಿನಿಂದ ನೋಡಬಹುದು ಮಾತ್ರ. ಆದರೆ, ಇದರಿಂದ ಹಾಗಲ್ಲ. ನಮಗೆ ಬೇಕಾದುದನ್ನೊಯ್ದು, ಅವುಗಳೊಡೆ ಆಡಿ, ನಲಿದು, ಉಂಡು, ತಿಂದು ನಲಿದಾಡಬಹುದು. ಅವುಗಳ ಪರಿಚಯವನ್ನು ಸರಿಯಾಗಿ ಮಾಡಿಕೊಳ್ಳಬಹುದು; ಇಂತಹ ಪಶು ಶಾಲೆಗಳು ಉಳಿದ ದೇಶಗಳಲ್ಲೂ ಅವಶ್ಯ ಸ್ಥಾಪನೆಗೊಳ್ಳಬೇಕು.

(ವಿವಿಧ ಮೂಲಗಳಿಂದ)

NAVAYUGA' WEEKLY. is in the list of periodicals and Newspapers approved or use in Secondarys School as per proceedings Roc· No· 466 N/50 date 2-12-1950 of the Director of public Instruction Madras·



ದುರ್ಗಾಪುರದ ಕೋಕ್ ಓವನ್ ಕಾರಖಾನೆಯ ಚಿತ್ರವಿದು

ನಮ್ಮ ಭಾರತ

ಜಾತ್ಯತೀತ ರಾಷ್ಟ್ರದಲ್ಲೊಂದು ಹೊಸ ಜಾತಿ

ದಿನಗಳೆದಂತೆ ಈ ಜಾತಿಯವರ ಸಂಖ್ಯೆ ಬೆಳೆದು ಬರುತ್ತಿದೆ; ಇದು ಅಭಿಮಾನಾಸ್ಪದವೇ ಅಪಮಾನಾಸ್ಪದವೆ - ಎಂದು ಯಾರು ಉತ್ತರಿಸಬೇಕು?

ಯುಗೊಸ್ಲಾವಿಯಾದ ಶಾಸ್ತ್ರಜ್ಞರಾದ ಶ್ರೀ ಮಿಲೋವನ್ ಡಿಜಿಲಾರು ಅಧಿಕಾರ ಚಲಾಯಿಸುವ ಮತ್ತು ಸ್ವರಕ್ಷಣೆ ನಡೆಸುವ ಹೊಸ ವರ್ಗವೊಂದು ಸಮಾಜದಲ್ಲಿ ಹುಟ್ಟುತ್ತಿದೆ ಎಂದು ಹೇಳಿ, ಈ ವರ್ಗವನ್ನು ರದ್ದುಗೊಳಿಸಬೇಕೆಂದು ವಾದಿಸಿದ್ದರು.

ಭಾರತೀಯರಾದ ನಾವು ವರ್ಗಗಳ ಬಗ್ಗೆ ಚಿಂತಿತರಾಗುವುದಿಲ್ಲ. ವರ್ಗವಿಂಗಡಣೆಯು ಅವೈಜ್ಞಾನಿಕವೆಂದು ನಾವು ಅದೆಂದೋ ನಿರ್ಧಾರ ಮಾಡಿಬಿಟ್ಟಿದ್ದೇವೆ. ನಿಜವಾಗಿಯೂ ಹೇಳುವುದಾದರೆ, ವರ್ಗಕ್ಕಿಂತಲೂ ಉತ್ತಮವಾದ 'ಜಾತಿ' ಎಂಬ ಸೂರಕವು ನಮಗಿರುವುದರಿಂದ ನಾವು ಜಾತಿವಾರಾಗಿ ವರ್ಗೀಕರಿಸುವುದೇ ವೈಜ್ಞಾನಿಕವೆಂದು ಕಂಡುಕೊಂಡಿದ್ದೇವೆ. ನಾವು ಜಾತ್ಯತೀತ ಸಮಾಜವನ್ನು ರಚಿಸುವುದೇ ನಮ್ಮ ಅಂತಿಮ ಧ್ಯೇಯ ಎಂದು ಪ್ರತಿಜ್ಞೆ ಮಾಡುತ್ತೇವೆ, ನಿಜವೆ. ಆದರೆ, ಈ ಜಾತಿವಾದವನ್ನು ಮಾನಸಿಕವಾಗಿ, ಆಂತರಿಕವಾಗಿ ಕಿತ್ತುಹಾಕುತ್ತೇವೆಯೇ ಎಂದು ಸಂದೇಹಪಡುವ ಬುದ್ಧಿವಂತರೂ ನಮ್ಮಲ್ಲಿದ್ದಾರೆ. ನಮ್ಮ ಪರಂಪರೆಯ ಶಕ್ತಿಯು ನಿಧಾನವಾಗಿ ಕ್ರಮೇಣವಾಗಿ, ಜಾತ್ಯತೀತ ಧಾರ್ಮಿಕ ಸಂಪ್ರದಾಯಗಳಲ್ಲೂ ಜಾತೀಯತೆಯನ್ನು ಪ್ರತಿಬಿಂಬಿಸಿರುವುದಿಲ್ಲವೆ? ಎನ್ನುತ್ತಾರೆ ಅವರು. ಉದಾಹರಣೆಗಾಗಿ ಅವರು, ಪಶ್ಚಿಮ ಕರಾವಳಿಯಲ್ಲಿ ವಾಸಿಸುವ ಕ್ರೈಸ್ತರು ತಮ್ಮನ್ನು ಬ್ರಾಹ್ಮಣ ಕ್ರೈಸ್ತರೆಂದು ಕರೆದುಕೊಂಡು, ತಾವು ಬ್ರಾಹ್ಮಣ ಕ್ರೈಸ್ತರನ್ನು ಮಾತ್ರ ವಿವಾಹವಾಗುತ್ತೇವೆ ಎಂದು ವಾದಿಸುವುದನ್ನು ಎತ್ತಿ ಹೇಳುತ್ತಾರೆ.

ಶಿಥಿಲ ರಾಷ್ಟ್ರೀಯರಾದ ನಾವು ಪದ್ಧತಿಪ್ರಿಯತೆಯ ಬಗ್ಗೆ ಆಶ್ಚರ್ಯಪಡಬೇಕು. ನಾವು ವ್ಯಾಕರಣಪ್ರಿಯರು. ಪ್ರತಿಯೊಂದಕ್ಕೂ ನಿಯಮಗಳನ್ನು ರಚಿಸುತ್ತೇವೆ; ಜಗತ್ತಿನ ಅತಿ ಉದಾತ್ತವಾದ ಸಂವಿಧಾನವು ನಮ್ಮದಾಗಿದೆ. ಪ್ರಖ್ಯಾತರಾದ ನಿರ್ಮಾಪಕರೂ ನಾವೇ. ಸಮಾಜದ ಪ್ರತಿ ಆಚರಣೆಗೂ ನಮ್ಮೊಡನೆ ಒಂದೊಂದು ಪೂರ್ವಾಧಾರವಿದೆ. ಸತ್ಯ ಹೇಳಬೇಕೆಂದ್ದೂ ಹೇಳಬಾರದೆಂದೂ ಸಾಧಿಸುವ ವಾದಿ ಪ್ರತಿವಾದಿಗಳಿಗೆ ಉಪಯುಕ್ತವಾದ ಸೂತ್ರಗಳೂ ನಮ್ಮ ನ್ಯಾಯಶಾಸ್ತ್ರಗಳಲ್ಲಿ ದೊರೆಯುತ್ತವೆ. ಅತಿಹಳೆಯ ಮರಗಳನ್ನು ಕಡಿದಾದ ಮೇಲೆಯೂ, ನಾವು ಅವುಗಳ ಸ್ಥಾನದಲ್ಲಿ ಬೇರೊಂದು ಹೊಸಮರವನ್ನು ನೆಡುತ್ತೇವೆ.

ಹೊಸ ಜಾತಿಯೊಂದು ಇತ್ತೀಚೆಗೆ ಹುಟ್ಟಿಕೊಂಡಿದೆ. ಅಧಿಕ ವಿದ್ಯಾಭ್ಯಾಸವನ್ನು ಪಡೆದು ಈ ಜಾತಿಯವರು ಸಾಮಾಜಿಕರಿಂದ ಪ್ರತ್ಯೇಕಿತರಾಗಿದ್ದಾರೆ. ಈ ಹೊಸ ಜಾತಿಯಲ್ಲೂ ಉಪಜಾತಿಗಳು ಸಾಕಷ್ಟು ಸಂಖ್ಯೆಯಲ್ಲಿ ಮೂಡಿಬರತೊಡಗಿವೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ, ಅಥವಾ ಸರಕಾರದ ಕಾರ್ಯಪ್ರಣಾಳಿಕೆಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅವಲೋಕಿಸಿರಿ. ಡಂಬೀ ಬಲವಂತ ಭಾರತವನ್ನು ಕಟ್ಟಬಲ್ಲುದೆಂಬ ಸತ್ಯಾಂಶವನ್ನು ಎಲ್ಲೆಲ್ಲಿಯೂ ಮರೆತುಬಿಟ್ಟಿರುವುದನ್ನು ನಾವು ಕಾಣಬಹುದು. ನಮ್ಮ ನೌಕರರು ಪರಿಶ್ರಮಪೂರ್ವಕವಾಗಿ ದುಡಿಯಬೇಕೆಂದು ನಾವು ಅಪೇಕ್ಷಿಸುತ್ತೇವೆಯೆ? ಹಾಗೆ ಮಾಡುವುದರಿಂದ ಅವರು ಉಳಿಸಲ್ಪಡಬೇಕು ಎಂದು ಅದೆಷ್ಟೋ ಶಕ್ತಿಗಳು ಕೂಗಾಡತೊಡಗುತ್ತವೆ. 'ಕಡಿಮೆ ಕೆಲಸ, ಹೆಚ್ಚು ಸಂಬಳ' ವೆನ್ನುವುದೇ ಇಂದಿನ ಯುಗವಾಣಿಯಾಗಿ ಪರಿಣಮಿಸಿದೆ.

ಉಚ್ಚ ಶಿಕ್ಷಣ ಕ್ಷೇತ್ರದಲ್ಲಿ ಈ ಹೊಸ ಜಾತೀಯವಾದವು ಹದಗೆಟ್ಟಿದೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಈ ಜಾತೀಯವಾದವು ಮಾಡುವ ಹಾವಳಿಯನ್ನು ಶ್ರೀ ಜೆ. ಬಿ. ಎಸ್. ಹಾಲ್ಡೆನೆಯವರು ವಿವರಿಸಿದ್ದರು.

ಜೀವನದ ಮೊದಲಲ್ಲಿಯೇ, ಆರ್ಟ್ಸ್‌ನ್ನು ತೆಗೆದುಕೊಂಡು ನಾವು ವೈಷ್ಣವರಾಗಬೇಕೇ, ವಿಜ್ಞಾನವನ್ನಾರಿಸಿ ಶೈವರಾಗಬೇಕೇ ಎಂಬುದನ್ನು ಹೈಸ್ಕೂಲು ವರ್ಗಗಳಲ್ಲಿಯೇ ನಾವು ನಿರ್ಧರಿಸಬೇಕಾಗುತ್ತದೆ. ಮುಂದೆ ಹಾಕಿದ ಗೇಟು ದಾಟುವುದು ಅಸಾಧ್ಯ. ವರ್ಷ ಕಳೆದಂತೆ ವಿದ್ಯಾರ್ಥಿಯಲ್ಲಿ ಹೊಸ ಅಭಿರುಚಿ ತೋರಬಹುದೆಂದು ನಾವು ತಿಳಿದುಕೊಳ್ಳುವುದಿಲ್ಲ. ಪರೀಕ್ಷೆಯನ್ನು ಉತ್ತೀರ್ಣಗೊಳಿಸಲು ಯೋಗ್ಯತೆಯೊಂದೇ ಸಾಲದು. 'ವಿದ್ಯಾರ್ಥಿಯು ಆ ಗ್ರೂಪನ್ನು ತೆಗೆದುಕೊಂಡಿದ್ದಾನೆಯೆ? ಇಲ್ಲವಾದರೆ, ಈ ಗ್ರೂಪಿಗೆ ಆತನನ್ನು ಹೇಗೆ ಸೇರಿಸಿಕೊಳ್ಳುವುದು?' ಎಂಬ ಪ್ರಶ್ನೆ ಏಳುತ್ತದೆ.

ನೇಮಕಗಳ ವಿಷಯದಲ್ಲಿ ನಿಯಮಗಳು ಮತ್ತೂ ಕಠೋರವಾಗಿವೆ. ರೀಡರ್ ಮತ್ತು ಪ್ರೊಫೆಸರ್ ಹುದ್ದೆಗಳಿಗೆ ಪಿ. ಎಚ್‌ಡಿ.ಯೇ ಬೇಕು. ತನ್ನ ವಿಷಯಗಳಲ್ಲಿ ಕೆಲವು ಪಿ.ಎಚ್‌ಡಿ.ಗಳು ಕೇವಲ ಮಗುಗಳಾಗಿಯೇ ಇರುತ್ತಾರೆ. ಆಧುನಿಕ ಕಾಲದ ಡಿಗ್ರಿಯಿಲ್ಲವೆಂದು ದಕ್ಷಿಣ ಭಾರತದ ಒಂದು ಕಾಲೇಜನಲ್ಲಿ ಹಳೆ ಮಾದರಿಯ ಪಂಡಿತರೊಬ್ಬರು ತನ್ನ ಅನುಭವ ಮತ್ತು ಸಾಹಿತ್ಯಕೃತಿಗಳಿಂದ ಅರ್ಹರಾಗಿದ್ದರೂ ಉಪನ್ಯಾಸಕರಾಗುವುದಕ್ಕೂ ಅನರ್ಹರೆಂದು ಪರಿಗಣಿಸಲ್ಪಟ್ಟಿದ್ದಾರೆ. ಪ್ರೊ| ಹಾಲ್ಡೆನೆಯವರಿಗೂ ವಿಜ್ಞಾನದಲ್ಲಿ ಪದವಿಯಿಲ್ಲ; ಭಾಷೆಗಳಲ್ಲಿಯೇ ಅವರು ಪದವೀಧರರು. ಕೇಂಬ್ರಿಜ್‌ನ ಗಣಿತ ಪ್ರಾಧ್ಯಾಪಕ ಪ್ರೊ| ಡಿರೇಕರು ಇಂಜಿನಿಯರಿಂಗ್ ಪದವೀಧರರು. ಬರ್ಮಿಂಗ್ಹಾಮ್ ವಿಶ್ವವಿದ್ಯಾಲಯದ ಗಣಿ ವಿಭಾಗದ ಪ್ರೊಫೆಸರಾಗಿದ್ದ ಪ್ರೊ| ಹಾಲ್ಡೆನೆಯವರ ತಂದೆಯವರು, ವೈದ್ಯಕೀಯ ಪದವೀಧರರಾಗಿದ್ದರು. ಹೀಗೆ ವಿದೇಶಗಳ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಲ್ಲಿನ ಪ್ರೊಫೆಸರುಗಳೇ ತಾವು ಕಲಿಸುವ ವಿಷಯಗಳಲ್ಲಿ ಪದವೀಧರರಾಗಿರುವುದಿಲ್ಲ; ಆದರೂ ತಮ್ಮ ಅಧ್ಯಾಪನ ಕಾರ್ಯವನ್ನು ಮಾತ್ರ ಯಶಸ್ವಿಯಾಗಿ ನಿರ್ವಹಿಸುತಿದ್ದಾರೆ, ಪದವಿಯಿಂದಲ್ಲ; ಯೋಗ್ಯತೆಯ ಬಲದಿಂದ.

ಆಂತರಿಕ ಯೋಗ್ಯತೆಯನ್ನು ಬಾಹ್ಯ ಚೀಟಿಯಿಂದ ಅಳೆಯುವುದು ಸರಿಯಲ್ಲ. ಬಾಹ್ಯ ಚೀಟಿಯು ಮಾರುಕಟ್ಟೆಗೆ ಅವಶ್ಯವಿರಬಹುದು ಆದರೆ, ಆಗಾಗ ನೇಮಿತವಾದ ವಿವಿಧ ಸಮಿತಿಗಳು ನೇಮಕಗಳಿಗೆ ಪದವಿಯೇ ಮಾನದಂಡವಲ್ಲವೆಂದು ತಿಸ್ಸಿದ್ದರೂ ಹೆಚ್ಚಿನ ಸೇವಾ ಬೋರ್ಡುಗಳು ಪದವಿಗಳಿಗೇ ಅಂಟಿಕೊಂಡಿವೆ.

(ಆಧಾರ—"ಯೋಜನಾ")

ಅರ್ಜೆಂಟೀನಾದಲ್ಲಿ ಅಮೆರಿಕೆಯ ಅಧ್ಯಕ್ಷರಿಗೆ ಭವ್ಯ ಸ್ವಾಗತ ಕಾದಿತ್ತು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವ್ಯಕ್ತಿ ಪರಿಚಯ

ಆಡಿಟರ್ ಜನರಲ್ ಎ. ಕೆ. ಚಂದ

ಜನ ಪ್ರತಿನಿಧಿಗಳು ಮತ್ತು ಆಡಳಿತೆ ನಡೆಸುವ ನೌಕರರ ನಡುವೆ ಎದ್ದ ಬೆಂಕಿಯ ಕಿಡಿ ಆರುವ ಬಗೆ ಎಂತು?

ಭಾರತದ ಲೋಕಸಭೆಯ ಹೆಚ್ಚಿನ ಸದಸ್ಯರು ಮತ್ತು ಕೆಲವು ಮಂತ್ರಿಗಳು ಈ ವರ್ಷದ ಲೆಕ್ಕಪತ್ರಗಳ ಪರಿಶೀಲನೆಯು ಅಸಮಾಧಾನಕರವಾಗಿದೆಯೆಂದೂ ಇದರಲ್ಲಿ ಕೆಲವು ಆವಶ್ಯಕ ನಿಯಮಗಳನ್ನು ಪಾಲಿಸಲಾಗಿಲ್ಲವೆಂದೂ ಆಡಿಟರ್ ಜನರಲ್ಲರು ತಮ್ಮ ಅಧಿಕಾರದ ಮಿತಿಯನ್ನು ಮೀರಿ ಪರಿಶೀಲನೆಯಲ್ಲಿ ಟೀಕೆಟಿಪ್ಪಣಿಗಳನ್ನು ಮಾಡಿರುವರೆಂದೂ ಉದ್ಗರಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಆಡಿಟರ್ ಜನರಲ್ಲರು ರಾಜಕೀಯ ನೇತಾರರು ಪ್ರಶಾಸನದಲ್ಲಿ ಈ ರೀತಿಯಾಗಿ ಹಸ್ತಕ್ಷೇಪ ನಡೆಸಿದರೆ, ಪ್ರಶಾಸನ ಕಾರ್ಯದಲ್ಲಿ ಮುಂದುವರಿಯುವುದೇ ಕಠಿಣವಾಗುತ್ತದೆ; ಸಂಸತ್ ಸದಸ್ಯರು ತನ್ನ ಮೇಲೆ ಅವಿಶ್ವಾಸವನ್ನು ವ್ಯಕ್ತಪಡಿಸುವುದಾದರೆ, ತನ್ನ ಕಾರ್ಯವನ್ನು ನಿರ್ವಹಿಸುವುದು ಅಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಒಂದೆಡೆ ಲೋಕಸಭೆಯಲ್ಲಿ ಸ್ವಯಂ ರಕ್ಷಣಾಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನ್ನರು ಸಂರಕ್ಷಣಾ ಶಾಖೆಯ ಲೆಕ್ಕಪತ್ರ ಪರಿಶೀಲನೆಯ ಮೇಲೆ ದೋಷಾರೋಪಣೆ ಮಾಡಿರುವರು; ಶ್ರೀ ಫಿರೋಜ ಗಾಂಧಿಯಂತಹ ಸಕ್ರಿಯ ಸದಸ್ಯರು ಪರಿಶೀಲನೆಯ ಅನಿಯಮಿತತೆಯ ಕಡೆಗೆ ಗಮನ ಸೆಳೆದಿರುವರು. ಇನ್ನೊಂದೆಡೆಯಲ್ಲಿ, ಶ್ರೀ ಅಶೋಕ ಕುಮಾರ ಚಂದಾರವರು ಸಂಸತ್ ಸದಸ್ಯರ ವರ್ತನೆಯನ್ನು ಪ್ರತಿಭಟಿಸಿ ಪ್ರಧಾನ ಮಂತ್ರಿಗಳಿಗೊಂದು ಪತ್ರವನ್ನು ಬರೆದಿರುವುದು ಮಾತ್ರವಲ್ಲ; ರಾಷ್ಟ್ರಪತಿಯವರೊಡನೆಯೂ ಮಾತುಕತೆ ನಡೆಸಿದ್ದಾರೆ.

ಆಡಳಿತೆಯ ಪ್ರತ್ಯಕ್ಷ ಭಾರವನ್ನು ಹೊರುವ ನೌಕರರ ಮತ್ತು ಜನಪ್ರತಿನಿಧಿಗಳ ಈ ವಿಧದ ಜಗಳವಿದೇನೂ ಹೊಸದಲ್ಲ. ಇದಕ್ಕೆ ಮೊದಲೂ ಇದೇ ಮಾದರಿಯ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿದ್ದುವು. ಆಡಿಟರ್ ಜನರಲ್ ಚಂದಾರವರು ಈಗಿಂದಂತಹ ಮಾತುಗಳನ್ನೂ ಅಂದು ಆಡಿದ್ದರು. "ತನ್ನ ಹೊಣೆಗಾರಿಕೆಯನ್ನು ಪೂರ್ಣಗೊಳಿಸಲು ಯಾವುದೇ ನಿಶ್ಚಿತ ಕಾರ್ಯಪದ್ಧತಿಯ ಬಂಧನವಿಲ್ಲ" ಎಂದವರು ಪ್ರಧಾನಿಗಳಿಗೆ ಬರೆದ ಪತ್ರದಲ್ಲಿ ಕಾಣಿಸಿರುವರು. ಪ್ರಾಯಶಃ ಈ ಕಾರಣದಿಂದಲೇ ಸಂಸತ್ತಿನ ಕಮ್ಯುನಿಸ್ಟೇತರ ಸದಸ್ಯರು ಆಡಿಟರ್ ಜನರಲ್ಲರ ಅಧಿಕಾರಗಳೆಷ್ಟು ಎಂಬುದನ್ನು ಸ್ಪಷ್ಟಪಡಿಸಬೇಕೆಂಬ ಬೇಡಿಕೆಯನ್ನು ಮಂಡಿಸಿದ್ದಾರೆ.

ಶ್ರೀ ಅಶೋಕ ಕುಮಾರ ಚಂದಾರವರು ೧೯೫೪ರಿಂದ ಭಾರತದ ಆಡಿಟರ್ ಜನರಲ್ ಆಗಿರುವರು. ಈ ಪದವಿಯನ್ನು ಸ್ವೀಕರಿಸುವುದಕ್ಕೆ ಮೊದಲು ಅವರು ಉತ್ಪಾದನಾ ಮಂತ್ರಿ ಶಾಖೆಯ ಕಾರ್ಯದರ್ಶಿಯಾಗಿದ್ದರು. ೫೮ ವರ್ಷದ ಶ್ರೀ ಚಂದರ ತಂದೆ ಶ್ರೀ ಕೆ. ಕೆ ಚಂದರವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರಾಗಿಯೂ, ಪಶ್ಚಿಮ ಬಂಗಾಳದ ಹೋಂ ರೂಲ್ ಲೀಗಿನ ಅಧ್ಯಕ್ಷರಾಗಿಯೂ ಇದ್ದರು.

ಶ್ರೀ ಅಶೋಕ್ ಕುಮಾರರ ವಿದ್ಯಾಭ್ಯಾಸವು ಕಲಕತ್ತೆಯ ವಿಶ್ವವಿದ್ಯಾಲಯದಲ್ಲಿ ಅದನಂತರ, ಲಂಡನ್ ಸ್ಕೂಲ್ ಆಫ್ ಇಕನಮಿಕ್ಸ್‌ನಲ್ಲಿ ನಡೆಯಿತು. ೧೯೨೭ರಲ್ಲಿ ಅವರು ಭಾರತೀಯ ಆಡಿಟ್ ಸರ್ವಿಸಿನಲ್ಲಿ ಸೇರಿಕೊಂಡರು. ೧೯೪೫ರಲ್ಲಿ ಅವರು ಭಾರತ ಸರಕಾರದ ಅರ್ಥಶಾಖೆಯ ಜತೆ ಕಾರ್ಯದರ್ಶಿಯಾದರು. ಎರಡು ವರ್ಷಗಳನಂತರ, ಅತಿರಿಕ್ತ (ಅಡಿಷನಲ್) ಕಾರ್ಯದರ್ಶಿಯಾದರು. ೧೯೪೮ನೆ ಅಕ್ಟೋಬರದಿಂದ ೪೯ನೆ ಮೇಯವರೆಗೆ ಬ್ರಿಟನ್ನಿನಲ್ಲಿ ಭಾರತದ ಉಪ ಉಚ್ಚಾಯುಕ್ತರೂ ಆದರು. ೧೯೫೦ರಲ್ಲಿ ಉತ್ಪಾದನಾ ಶಾಖೆಯ ಕಾರ್ಯದರ್ಶಿಯಾಗುವುದಕ್ಕೆ ಮೊದಲು ಇವರು ಅರ್ಥ ಮತ್ತು ಸಂರಕ್ಷಣಾ ಸಂಬಂಧದ ಅನೇಕ ಪ್ರತಿನಿಧಿ ಮಂಡಲಗಳಲ್ಲಿ ಸದಸ್ಯರಾಗಿ ಬ್ರಿಟನ್ ಮತ್ತು ಅಮೇರಿಕೆಗಳಿಗೆ ಹಲವಾರು ಬಾರಿ ತೆರಳಿದ್ದರು. ೧೯೫೩ರಲ್ಲಿ ಉಕ್ಕಿನ ಕಾರಖಾನೆಯೊಂದರ ಸ್ಥಾಪನೆಯ ಕುರಿತಾಗಿ ಮಾತುಕತೆ ನಡೆಸಲು ಯುರೋಪಿಗೆ ತೆರಳಿ, ಕ್ರುಪ ಮತ್ತು ಡೆಮಾಗರೊಡನಾದ ಒಪ್ಪಂದದಲ್ಲಿ ಇವರು ಭಾರತ ಸರಕಾರದ ಪರವಾಗಿ ಸಹಿ ಹಾಕಿದ್ದರು. ಸಿಂಧ್ರಿಯ ರಾಸಾಯನಿಕ ಗೊಬ್ಬರ ಕಾರಖಾನೆ ಮತ್ತು ಹಿಂದುಸ್ತಾನ್ ಮೆಶಿನ್ ಟೂಲ್ಸ್‌ಗಳ ಡೈರೆಕ್ಟರ ಮಂಡಳಿಯ ಅಧ್ಯಕ್ಷರಾಗಿಯೂ ಇದ್ದರು.

೧೯೫೪ರಲ್ಲಿ ಶ್ರೀ ಚಂದಾರು ಉತ್ಪಾದನಾ ಸಚಿವ ಶಾಖೆಯ ಕಾರ್ಯದರ್ಶಿಯಾಗಿದ್ದಾಗ, ಇವರ ವ್ಯಾಪಕ ಅನುಭವಗಳನ್ನು ಕಂಡುಕೊಂಡ ಪ್ರಧಾನಿಗಳು ಆಡಳಿತ ಸಂಬಂಧದ ಎಲ್ಲ ನಿಯಮಗಳನ್ನು ಮತ್ತು ಕಾರ್ಯಪದ್ಧತಿಯನ್ನು ಯೋಗ್ಯ ಪರಿವರ್ತನೆಗಳೊಂದಿಗೆ ರೂಪಿಸುವಂತೆ ವರದಿಯೊಂದನ್ನು ಕೇಳಿಕೊಂಡರು. ಆಡಿಟರ್ ಜನರಲ್ ಆಗಿ ನೇಮಕವಾದ ಮೇಲೆ ಬ್ರಿಟನ್ನಿನ ಆಡಿಟ್ ಪದ್ಧತಿಯನ್ನು ಅಭ್ಯಸಿಸಲು ಅವರು ಲಂಡನ್ನಿಗೆ ತೆರಳಿ, ಅಲ್ಲಿ ಆಡಿಟರ್ಸ್ ಸಮ್ಮೇಳನದಲ್ಲಿ ಭಾಗವಹಿಸಿದರು.

ಶ್ರೀ ಚಂದರು ತಮ್ಮ ಯೌವನಕಾಲದಲ್ಲಿ ಭಾರತೀಯ ಸ್ವಾತಂತ್ರ್ಯಾಂದೋಲನದಲ್ಲಿಯೂ ಸಹಯೋಗಿಯಾಗಿದ್ದರು. ನಿಯಮಗಳಿಗೆ ವ್ಯತಿರಿಕ್ತವಾಗಿ ಒಂದು ಸಭೆ ಸೇರಿಸಿದ್ದ ಅಪರಾಧದ ಮೇಲೆ ಮೂರು ತಿಂಗಳಿನ ಶಿಕ್ಷೆಯನ್ನೂ ಅನುಭವಿಸಿದ್ದರು. ತಾನು ಶಿಕ್ಷಿಸಿದ್ದ ಶ್ರೀ ಚಂದರಿಗೆ ಕೆಲವರ್ಷಾನಂತರ ಬ್ರಿಟಿಶ ಸರಕಾರವು ಓ. ಬಿ. ಇ. ಪದವಿಯನ್ನಿತ್ತಿತು. ಹಾಗಿದ್ದರೂ ತಮ್ಮ ಪತ್ನಿ ಶ್ರೀಮತಿ ಮೋನಿಕಾ ಚಂದರಿಂದಾಗಿ ರಾಜಕಾರಣದಲ್ಲಿ ಒಂದಲ್ಪವಾದರೂ ಸಂಬಂಧವಿಟ್ಟುಕೊಂಡಿದ್ದರು. ಶ್ರೀಮತಿ ಚಂದರು ದಿವಂಗತ ಡಾ| ರಮೇಶಚಂದ್ರ ದತ್ತರ ಪುತ್ರಿ. ಶ್ರೀ ದತ್ತರು ಒಂದೊಮ್ಮೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರೂ ಆಗಿದ್ದರು.



ಹೋಶಿಯಾರಪುರದಲ್ಲಿ ನಡೆಯುತ್ತಿರುವ ತೈಲಸಂಶೋಧನೆಯ ಕೆಲಸದಲ್ಲಿ ಕರ್ಮಚರರು ತತ್ಪರರಾಗಿದ್ದಾರೆ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣದ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

NAVAYUGA
REGD. NO. M. 3619

UDIPI, THURSDAY
12—5—1960

LICENSE NO. 31
Licensed to Post without Prepayment

ಇತಿಹಾಸ ಪ್ರಸಿದ್ಧ ಸ್ಥಳಗಳು

ಸಿಕಾಂದ್ರಾ ಮತ್ತು ಫತ್ತೇಪುರ ಸಿಕ್ರಿ

ಮೊಗಲರ ಸ್ಮಾರಕಗಳಲ್ಲಿ ಇವುಗಳು ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ.

ಭಾರತದ ಚರಿತ್ರೆಯಲ್ಲಿ ಮೊಗಲರ ಕಾಲವು ಒಂದು ಮಹತ್ವಪೂರ್ಣವಾದ ಕಾಲವಾಗಿದೆ. ಮೊಗಲರಲ್ಲಿ ಪ್ರಖ್ಯಾತ ರಾಜ ಸಾಮ್ರಾಟರು ಇಂದು ಭಾರತದ ಐತಿಹಾಸಿಕ ಪ್ರಸಿದ್ಧ ವ್ಯಕ್ತಿಗಳಾಗಿರುತ್ತಾರೆ. ಬಾಬರ, ಅಕ್ಬರ, ಷಾಜಹಾನ ಮೊದಲಾದ ಸಾಮ್ರಾಟರಂತೂ ತಮ್ಮ ಆಡಳಿತೆಯಿಂದ ಇಂದು ಗಣ್ಯರಾಗಿ ಕೊಂಡಾಡಲ್ಪಡುತ್ತಿದ್ದಾರೆ. ಮೊಗಲರ ಆಳ್ವಿಕೆಯನ್ನು ನಮಗೆ ಇಂದು ಕೂಡಾ ನೆನಪಿಗೆ ತಂದುಕೊಡುವ ಸ್ಮಾರಕಗಳು ಭಾರತದ ಡಿಲ್ಲಿ, ಆಗ್ರಾಗಳಲ್ಲಿ ಇಂದಿಗೂ ತಲೆ ಎತ್ತಿ ನಿಂತಿವೆ. ಆಗ್ರಾವಂತೂ ಮೊಗಲರ ಕಲಾಪ್ರೇಮಕ್ಕೆ ಸಾಕ್ಷಿಯನ್ನು ಹೇಳುತ್ತಿದೆ. ಆಗ್ರಾದ ತಾಜಮಹಲ್, ಮೋತಿ ಮಸೀದಿ, ಕೋಟೆ, ದಿವಾನಿ ಐಮ್, ನಗೀನಾ ಮಸೀದಿ, ಶೀಷ ಮಹಲ್ ಇತ್ಯಾದಿಗಳು ಪ್ರವಾಸಿಗಳನ್ನು ಸೆಳೆಯುವ ಸ್ಮಾರಕಗಳಾಗಿವೆ. ಹಾಗೆಯೇ ಆಗ್ರಾದಲ್ಲಿರುವ ಸಿಕಾಂದ್ರಾ ಮತ್ತು ಅಕ್ಬರನ ರಾಜಧಾನಿ ಫತ್ತೇಪುರ ಸಿಕ್ರಿಗಳೂ ಪ್ರೇಕ್ಷಣೀಯವಾಗಿವೆ.

ಸಿಕಾಂದ್ರಾ

ಸಿಕಾಂದ್ರಾವು ಅಕ್ಬರನ ಸಮಾಧಿ ಇರುವ ಸ್ಥಳವಾಗಿದೆ. ಅವನ ಗೋರಿಯು ಅಕ್ಬರನಂತೆ ಅಪರೂಪವಾದುದಾಗಿದೆ. ಈ ಗೋರಿಗೆ ನಾಲ್ಕು ಅಂತಸ್ತುಗಳಿದ್ದು ಅದರಲ್ಲಿ ಮೊದಲ ಅಂತಸ್ತು ೩೨೦ ಅಡಿ ಚಚ್ಚೌಕವಾಗಿದೆ. ನಂತರದ ಅಂತಸ್ತುಗಳು ಅಳತೆಯಲ್ಲಿ ಕಡಿಮೆಯಾಗುತ್ತಾ ಬಂದು ಕೊನೆಯ ಮತ್ತು ನಾಲ್ಕನೆಯ ಅಂತಸ್ತು ಮೊದಲನೆಯದರ ಅರ್ಧದಷ್ಟು ಅಂದರೆ ೧೬೦ ಅಡಿ ಚಚ್ಚೌಕವಾಗಿದೆ. ಈ ಗೋರಿಯ ತುದಿಯಲ್ಲಿ ಒಂದು ಗುಮ್ಮಟವನ್ನು ರಚಿಸಬೇಕೆಂಬ ಉದ್ದೇಶವಿದ್ದಿತಾದರೂ ಅದು ಕಾರಣಾಂತರದಿಂದ ಕೈಗೂಡಲಿಲ್ಲ.

ಅಕ್ಬರನ ಸಮಾಧಿಗೆ ಹೊಂದಿಕೊಂಡಿರುವ ಸುಂದರ ಉದ್ಯಾನಕ್ಕೆ ನಾಲ್ಕು ಪ್ರವೇಶ ದ್ವಾರಗಳು ಇವೆ. ಇವುಗಳಲ್ಲಿ ಮುಖ್ಯ ದ್ವಾರವು ದಕ್ಷಿಣ ದಿಕ್ಕಿನಲ್ಲಿದೆ. ಈ ಪ್ರವೇಶದ್ವಾರದ ತುದಿಯಲ್ಲಿ, ಪ್ರತಿಯೊಂದು ಮೂಲೆಯಲ್ಲಿ ಮೂರು ಅಂತಸ್ತಿನ ಚಂದ್ರಕಾಂತ ಶಿಲೆಯ ಶಿಖರಗಳು ಇವೆ.

ಅಕ್ಬರನ ಸಮಾಧಿಯು ಒಂದು ನೆಲಮಾಳಿಗೆಯ ವಿಶಾಲವಾದ ಸ್ಥಳದಲ್ಲಿದೆ. ಈ ನೆಲಮಾಳಿಗೆಗೆ ಇಳಿಜಾರಾದ ಪ್ರವೇಶದ್ವಾರವಿದೆ. ಈ ಪ್ರವೇಶದ್ವಾರಕ್ಕೊಯ್ಯುವ ಕೋಣೆಗಳ ನೆಲವು ಚಿನ್ನದ ಬಣ್ಣದಿಂದ ಶೋಭಿತವಾಗುತ್ತದೆ. ಈ ಕೋಣೆಗಳ ಪಕ್ಕದ ಕೋಣೆಗಳಲ್ಲಿ ಅಕ್ಬರನ ಸಂಬಂಧಿಕರ ಸಮಾಧಿಗಳು ಇವೆ.

ಕಡಿದಾದ ಮೆಟ್ಟಿಲುಗಳು ನಮ್ಮನ್ನು ಸಮಾಧಿಯ ಮೇಲ್ಭಾಗದ ವೇದಿಕೆಗೆ ಕರೆದೊಯ್ಯುತ್ತವೆ. ಅತಿ ಎತ್ತರದ ಅಂತಸ್ತಿನ ಸುತ್ತಲೂ ಸುಂದರವಾದ, ಚಂದ್ರಕಾಂತ ಶಿಲೆಯ ಒಂದು ಕಟ್ಟಡವಿದೆ. ಈ ಕಟ್ಟಡದ ಹೊರಭಾಗದಲ್ಲಿ ಎರಡು ಅಡಿಗಳ ಚಚ್ಚೌಕದ ಚಿಕ್ಕ ಕಿಟಕಿಗಳನ್ನು ಕೆತ್ತಿರುತ್ತಾರೆ. ಪ್ರತಿಯೊಂದು ಕಿಟಕಿಯೂ ಒಂದೊಂದು ವಿಧದಲ್ಲಿ ಕೆತ್ತಲ್ಪಟ್ಟಿದೆ. ಇದರ ಮಧ್ಯದಲ್ಲಿ ಅಕ್ಬರನ ಸ್ಮಾರಕವಾಗಿ ಕಟ್ಟಿಸಿದ ವೀರಗಲ್ಲು ಇದೆ. ಈ ವೀರಗಲ್ಲಿನ ಅಡಿಭಾಗದಲ್ಲಿ ಅಕ್ಬರನ ಮೃತದೇಹವನ್ನು ಸಮಾಧಿ ಮಾಡಲಾಗಿದೆ. ಈ ವೀರಗಲ್ಲಿನಲ್ಲಿ ತೊಂಭತ್ತೊಂಭತ್ತು ಅಲ್ಲಾನ ಹೆಸರುಗಳನ್ನು ಕೆತ್ತಿದ್ದಾರೆ. ಈ ವೀರಗಲ್ಲಿನ ಉತ್ತರ ಪಾರ್ಶ್ವದಲ್ಲಿ ಅಕ್ಬರನು ಬೋಧಿಸಿದ "ಅಲ್ಲಾಹೋ ಅಕ್ಬರ್" ಎಂಬ ಮಾತುಗಳನ್ನೂ, ದಕ್ಷಿಣ ಪಾರ್ಶ್ವದಲ್ಲಿ 'ಜಲ್ಲಾ ಜಲಾಲಹು" ಎಂಬ ಮಾತುಗಳನ್ನೂ ಕೆತ್ತಿದ್ದಾರೆ.

ಈ ವೀರಗಲ್ಲಿನ ಮೇಲ್ತುದಿಯಲ್ಲಿ ಎರಡು ಅಡಿ ಒಂಭತ್ತು ಇಂಚು ಎತ್ತರದ ಕೆತ್ತನೆಯ ಕೆಲಸಗಳಿಂದ ಕೂಡಿದ ಪಾದಪೀಠವಿದೆ. ಇದನ್ನು ಚಂದ್ರಕಾಂತ ಶಿಲೆಯಿಂದ ರಚಿಸಿರುತ್ತಾರೆ. ಈ ಪಾದಪೀಠಕ್ಕೆ ಚಿನ್ನದ ಒಪ್ಪವನ್ನೂ ಕೊಟ್ಟಿದ್ದರು. ಅಕ್ಬರನ ಸಮಾಧಿಯಾದ ಸಿಕಾಂದ್ರಾವೂ ಪ್ರೇಕ್ಷಣೀಯವಾದ ಒಂದು ಸ್ಥಳವಾಗಿದೆ.

ಫತ್ತೇಪುರ ಸಿಕ್ರಿ

ಅಕ್ಬರನು ನಿರ್ಮಿಸಿದ ಹೊಸ ರಾಜಧಾನಿ 'ಫತ್ತೇಪುರ ಸಿಕ್ರಿ'ಯೂ ಒಂದು ಮನೋಹರವಾದ ಸ್ಮಾರಕ. ಇದು ಆಗ್ರಾದಿಂದ ೨೩ ಮೈಲಿಗಳ ದೂರದಲ್ಲಿ ನೈಋತ್ಯ ದಿಕ್ಕಿನಲ್ಲಿದೆ. ಅಕ್ಬರನ ಗುಜರಾತಿನ ವಿಜಯದ ಬಳಿಕ ಆತನು ಈ ನಗರವನ್ನು ವಿಜಯದ ನಗರ ಎಂದು ಕರೆದನು. ಈ ಸ್ಥಳವು ಒಂದು ಹಳ್ಳಿಯಾಗಿದ್ದು ಇದರ ನಿಜ ನಾಮವು "ಸಿಕ್ರಿ" ಎಂದಾಗಿದೆ. ಇಲ್ಲಿಯ ಒಂದು ಗುಹೆಯಲ್ಲಿ ಶೇಕ್ ಸಲೀಮ್ ಚಿಸ್ತಿ ಎಂಬ ಮುಸ್ಲಿಂ ಸನ್ಯಾಸಿಯು ತಪಸ್ಸು ಮಾಡುತ್ತಿದ್ದನೆಂದು ಪ್ರತೀತಿ ಇದೆ. ಈತನ ಕೀರ್ತಿ ಹಾಗೂ ಅದ್ಭುತ ಶಕ್ತಿಗಳು ಆಗ್ರಾಕ್ಕೂ ಮುಟ್ಟಿದುವೆಂದೂ, ಅಕ್ಬರನು ತನ್ನ ದಿಗ್ವಿಜಯದಿಂದ ಮರಳುವಾಗ, ಈ ಸುದ್ದಿ ಕೇಳಿ ಸಿಕ್ರಿಯಲ್ಲಿ ತಂಗಿದನೆಂದೂ, ಸನ್ಯಾಸಿಗೆ ತನ್ನ ಗೌರವವನ್ನು ಸಲ್ಲಿಸಿ ತನಗೊಬ್ಬ ಪುತ್ರನನ್ನು ಕರುಣಿಸಬೇಕೆಂದು ಬೇಡಿದನೆಂದೂ ಹೇಳುವರು. ಶೇಕನು ಆತನನ್ನು ಆಶೀರ್ವದಿಸಿ ಆತನ ಆಸೆ ನೆರವೇರುವುದೆಂದು ಹೇಳಿದನಂತೆ.

ಅಕ್ಬರನಿಗೆ ಸನ್ಯಾಸಿಯ ಮಾತಿನಂತೆ ಒಂದು ವರ್ಷದಲ್ಲೇ ಪುತ್ರೋತ್ಸವವಾಗಿ ಸಲೀಮನ ಜನನವಾಯಿತು. ಸನ್ಯಾಸಿಯ ಆಶೀರ್ವಾದದ ಪ್ರಭಾವದ ಸತ್ಯತೆಯನ್ನು ಮನಸಾರೆ ಕಂಡುಕೊಂಡ ಅಕ್ಬರನು ಸಿಕ್ರಿಯಲ್ಲಿ ಒಂದು ಸುಂದರ ನಗರ ನಿರ್ಮಾಣ ಮಾಡಿ ತನ್ನ ರಾಜಧಾನಿಯನ್ನು ಅಲ್ಲಿಗೆ ಬದಲಾಯಿಸಿದನು. ಈ ರೀತಿ ತನ್ನ ಗೌರವವನ್ನು ವ್ಯಕ್ತಪಡಿಸಿದನು. ಕ್ರಮೇಣ ಈ ಫತ್ತೇಪುರಸಿಕ್ರಿಯು ಕ್ಷಾಮಕ್ಕೀಡಾಯಿತು. ಅಲ್ಲಿ ಉತ್ತಮ ನೀರು ಸಿಗದಾಯಿತು. ಈ ಕಾರಣಗಳಿಂದಾಗಿ ಅಕ್ಬರನು ತನ್ನ ರಾಜಧಾನಿಯನ್ನು ಪುನಃ ಆಗ್ರಾಕ್ಕೆ ಬದಲಾಯಿಸಬೇಕಾಯಿತು. ಅಲ್ಲದೆ ಈ ಬದಲಾವಣೆಗೆ ರಾಜಕೀಯ ಒತ್ತಡವೂ ಬಿದ್ದಿತ್ತು.

ಹಿಂದು ಮತ್ತು ಮುಸ್ಲಿಂ ಸಂಸ್ಕೃತಿಗಳ ಸಮ್ಮಿಳನದಲ್ಲಿ ಅಕ್ಬರನಿಗಿದ್ದ ತೀವ್ರ ಆಸಕ್ತಿಯನ್ನು ಅವನು ಫತ್ತೇಪುರ ಸಿಕ್ರಿಯ ರಚನೆಯಲ್ಲಿ ತೋರ್ಪಡಿಸಿದ್ದಾನೆ. ಫತ್ತೇಪುರ ಸಿಕ್ರಿಯಲ್ಲಿ ಹಲವಾರು ಕಟ್ಟಡಗಳಿದ್ದು ಅವು ಮನರಂಜಕವಾಗಿವೆ. ಹಿಂದೂ ಮತ್ತು ಇಸ್ಲಾಂ ಎರಡೂ ಮಾದರಿಗಳ ಸ್ಮಾರಕಗಳನ್ನು ನಾವು ಇಲ್ಲಿ ಕಾಣಬಹುದು. ಫತ್ತೇಪುರ ಸಿಕ್ರಿಯಲ್ಲಿ ಪ್ರವಾಸಿಗಳು ನೋಡಬೇಕಾದ ಸ್ಮಾರಕಗಳೆಂದರೆ, ದಿವಾನಿ-ಎ-ಐಮ್, ದಿವಾನಿ ಖಾಸ್, ಭವಿಷ್ಯವಾದಿಗಳ ಪೀಠ, ಗ್ಯಾಪ್ ಭಾಗ್, ಟರ್ಕಿಷ್ ಸುಲ್ತಾನರ ಅರಮನೆ—ಪಚ್ಚೀಸಿ ಕೋರ್ಟ್, ಪಂಚ್ ಮಹಲ್, ಮೂರ್ಯಾಮರ ನಿವಾಸ, ಜೋಧಾ ಬ್ಯಾ ಅರಮನೆ, ಬೀರಬಲನ ನಿವಾಸ, ಜುಮ್ಮಾ ಮಸೀದಿ, ಶೇಕ್ ಸಲೀಮ್ ಚಿಸ್ತಿಯ ಸ್ಮಾರಕ, ಮತ್ತು ಬುಲಾಂದ್ ದರ್ವಾಜಾಗಳಾಗಿವೆ.

ಫತ್ತೇಪುರ ಸಿಕ್ರಿಯ ಪ್ರತಿಯೊಂದು ರಚನೆಯೂ ಶಿಲ್ಪಕಲೆಯ ಉತ್ತಮ ಮಾದರಿಯಾಗಿದ್ದು, ಇದಕ್ಕಾಗಿ ಹೇರಳ ಹಣವೂ ವೆಚ್ಚವಾಗಿದೆ. ಅಕ್ಬರನು ಈ ನಗರ ನಿರ್ಮಾಣ ಕಾಲ, ಹಿಂದೂ, ಮುಸ್ಲಿಂ ಸಂಸ್ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ಸಮ್ಮಿಳನದ ದೃಷ್ಟಿಯಿಂದ ಈ ನಗರ ರಚಿಸಿರುವನೆಂಬುದಕ್ಕೆ ಇಲ್ಲಿನ ಸ್ಮಾರಕಗಳೇ ಸಾಕ್ಷಿ. ಈ ಫತ್ತೇಪುರ ಸಿಕ್ರಿಯ ದಕ್ಷಿಣ ಭಾಗದಲ್ಲಿ ಬುಲಾಂದ್ ದರ್ವಾಜಾ ಎಂಬ ಹೆಬ್ಬಾಗಿಲಿದ್ದು, ಇದು ಅತಿ ಎತ್ತರದ ಪ್ರವೇಶದ್ವಾರವಾಗಿದೆ. ಇದು ಭಾರತದಲ್ಲೇ ಅತಿ ಎತ್ತರವಾದ ಪ್ರವೇಶದ್ವಾರವಾಗಿದೆ. ಇದು ೧೭೬ ಅಡಿಯಷ್ಟು ಎತ್ತರವಾಗಿದೆ. ಈ ದ್ವಾರವನ್ನು ಅಕ್ಬರನು ೧೬೦೨ರಲ್ಲಿ ತನ್ನ ದಕ್ಷಿಣ ಭಾರತದ ವಿಜಯದ ಬಳಿಕ ಕಟ್ಟಿಸಿದನು.

ಮೊಗಲರ ಸ್ಮಾರಕಗಳು ಹಲವಿದ್ದರೂ ಪ್ರಕೃತ ಸಿಕಾಂದ್ರಾ, ಮತ್ತು ಫತ್ತೇಪುರ ಸಿಕ್ರಿಗಳು ನಿಜಕ್ಕೂ ಪ್ರೇಕ್ಷಣೀಯವಾಗಿವೆ. ಉತ್ತರ ಭಾರತ ಪ್ರವಾಸಿಗಳು ಅವಶ್ಯ ಸಂದರ್ಶಿಸಬೇಕಾದ ಸ್ಥಳಗಳು ಇವುಗಳಾಗಿವೆ.

—ಶ್ರೀ ಯಸ್. ಸದಾಶಿವ ರಾವ್
ಕಡಿಯಾಳಿ, ಉಡುಪಿ

ವಿಶೇಷ ಲಾಭದಾಯಕವಾದ

ಸಿಂಡಿಕೇಟ್ ಬೇಂಕ್ ಕೇಶ್ ಸರ್ಟಿಫಿಕೇಟುಗಳು

ರೂ. 100	ಮೂರು ವರುಷಗಳಲ್ಲಿ	ರೂ. 112-50

ನಿಮಗೆ ಸಮೀಪವಿರುವ ನಮ್ಮ ೧೩೭ ಶಾಖೆಗಳಲ್ಲೊಂದರಲ್ಲಿ ವಿಚಾರಿಸಿರಿ

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಮೈಸೂರು ಕಾಂಗ್ರೆಸು

(೧ನೇ ಪುಟದಿಂದ)

ಸೆ. ಅಭಿನಂದನೆಗಳು ಮಾತಿನಲ್ಲಿಯೇ ಕೊನೆಗೊಳ್ಳದೆ ಕೃತಿಯಲ್ಲೂ ತೋರಬೇಕಾದುದು ಆಗತ್ಯವೆನಿಸಿದೆ.

೧೯೬೨ರ ಸಾರ್ವತ್ರಿಕ ಚುನಾವಣೆಯು ಸಮೀಪಿಸುತ್ತಿದೆ. ಹೀಗಾಗಿ ಮೈಸೂರಿನ ಕಾಂಗ್ರೆಸ್ ನಾಯಕರು ಇನ್ನೂ ತಮ್ಮ ಪಕ್ಷ ಪಂಗಡಗಳನ್ನು ಕಟ್ಟಿಕೊಂಡು ಇರುವುದು ಸಮಂಜಸವಲ್ಲ. ಕಾಂಗ್ರೆಸಿನ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಮೈಸೂರ ಕಾಂಗ್ರೆಸಿಗರು ಇನ್ನಾದರೂ ಭಿನ್ನಾಭಿಪ್ರಾಯ ತೊರೆದು ಒಮ್ಮತದಿಂದ ದುಡಿದು, ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದಿಂದ ಆರಿಸಿಬರುವಂತೆ ಯತ್ನಿಸಬೇಕಾದುದು ಆಗತ್ಯವೆನಿಸಿದೆ. ಹಿರಿಯ ವ್ಯಕ್ತಿ ನಿಜಲಿಂಗಪ್ಪನವರ ಹಿರಿತನದಲ್ಲಿ ಮೈಸೂರು ಕಾಂಗ್ರೆಸ್ ಶಕ್ತಿಯುತವಾಗಿ ಬಾಳಲಿ, ಕಾಂಗ್ರೆಸಿನ ಶಕ್ತಿ ವೃದ್ಧಿಯಾಗಲಿ. ಕಾಂಗ್ರೆಸಿಗರಲ್ಲಿ ವಿವೇಕೋದಯವಾಗಿ ಸಂಸ್ಥೆಯ ಅಭಿವೃದ್ಧಿಗೆ ಅವರು ಒಮ್ಮತದಿಂದ ದುಡಿಯುವಂತಾಗಲಿ ಎಂದೇ ನಾಡಿನ ಹಿತಚಿಂತಕರು ಹಾರೈಸುತ್ತಿದ್ದಾರೆ. ಕಾಂಗ್ರೆಸಿಗರು ಗೃಹಕಲಹಕ್ಕೆಡೆಗೊಡದೆ, ನಿರ್ವಿಕಾರ ದೃಷ್ಟಿಯಿಂದ ಹೊಸ ಅಧಿಕಾರ ವರ್ಗಕ್ಕೆ ತಮ್ಮ ಸಹಕಾರವನ್ನು ಈಯುವುದು ಪಕ್ಷದ ದೃಷ್ಟಿಯಿಂದ ಆಗತ್ಯವೂ ಹೌದು, ಅನಿವಾರ್ಯವೂ ಹೌದು.

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸೋಣಾಗುತ್ತದೆ.

—ಮೆನೇಜರ್

Edited, Printed & Published by K. H. Shetty, at the Navayuga Press, Udipi, S. India,

ನವಯುಗ

ವಾ. ಚಂದಾ ರೂ. 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೩೭. 19-5-1960 Vol. 39. No. 37.

ಪ್ರಚಲಿತ ಪ್ರಸಂಗ

ಮನಃಪರಿವರ್ತನೆಯ ಮಹಾ ಸಾಹಸ

ಕೊಲೆ, ಸುಲಿಗೆಗಳಲ್ಲಿ ಎಂಟುನೂರು ವರ್ಷ ನಿರತವಾದ ಸಮಾಜವೊಂದರ ಮನಸ್ಸನ್ನು ಪರಿವರ್ತಿಸುವ ಸಾಹಸಕ್ಕೆ ಆಚಾರ್ಯ ವಿನೋಬಾ ಕೈಹಾಕಿದ್ದಾರೆ; ಇದರಲ್ಲಿ ಅವರು ಯಶಸ್ವಿಯಾದಾರೆ?

ಸರ್ವೋದಯ ಸೇವಕಾಗ್ರೇಸರರಾದ ಆಚಾರ್ಯ ವಿನೋಬಾ ಭಾವೆಯವರು ಭಾರತದಲ್ಲಿ ಭೂದಾನ, ಗ್ರಾಮದಾನ, ಸಂಪತ್ತಿದಾನ, ಶ್ರಮದಾನವೇ ಮೊದಲಾದ ವಿವಿಧ ಕಾರ್ಯಕ್ರಮಗಳನ್ನು ಉಪಕ್ರಮಿಸಿ, ಭಾರತದ ಚರಿತ್ರೆಯಲ್ಲಿಯೇ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದ್ದರು. ಆಗ ಅವರ ಈ ಬಗೆಯ ಪ್ರಯತ್ನವನ್ನು ವಕ್ರದೃಷ್ಟಿಯಿಂದ ಕಂಡವರು ಇಂದು ಅದರ ಯಶಸ್ವೀ ಮುನ್ನಡೆಯನ್ನು ವೀಕ್ಷಿಸಿ, ವಿಸ್ಮಯಾತುರಗಳಿಂದ ಮೂಗಿಗೆ ಬೆರಳೇರಿಸುವಂತಾಗಿದೆ. ಆಚಾರ್ಯ ವಿನೋಬಾರು ಗ್ರಾಮದಾನವನ್ನು ಪಡೆಯುವ ಉದ್ದೇಶವನ್ನಿಟ್ಟುಕೊಂಡು ಭಾರತದ ಭಿನ್ನ ಭಿನ್ನ ರಾಜ್ಯಗಳಲ್ಲಿ ಸಂಚರಿಸುವ ಯೋಜನೆಯೊಂದನ್ನು ರೂಪಿಸಿದ್ದರು. ಅದನ್ನು ಸದ್ಯ ಕಾರ್ಯಗತಗೊಳಿಸುವುದರಲ್ಲಿ ತತ್ಪರರಾಗಿದ್ದಾರೆ.

ಭೂದಾನ ಕಾರ್ಯಕರ್ತ ವಿನೋಬಾ ಈಗ ಹೊಸತೊಂದು ಕಾರ್ಯಕ್ರಮದ ಆವಿಷ್ಕಾರಕ್ಕೆ ತಳಹದಿಯನ್ನು ಹಾಕಿಕೊಂಡಿದ್ದಾರೆ. ಮನಃ ಪರಿವರ್ತನೆಯಿಂದಲೇ ಸರ್ವ ಕಾರ್ಯಗಳನ್ನೂ ಸಾಧಿಸಬಹುದು ಎಂಬುದನ್ನು ಅವರು ಇಷ್ಟರಲ್ಲಿಯೇ ತೋರಿಸಿಕೊಟ್ಟಿದ್ದಾರೆ. ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಹರಿಯುವ ಚಂಬಲ್ ನದೀದ್ರೋಣದಲ್ಲಿ ಶತಮಾನಗಳಿಂದಲೂ ನೆಲಸಿಕೊಂಡು, ಅಸಹಾಯಕ ಜನತೆಯನ್ನು ಲೂಟಿಗೆಯ್ದು ಅಪಹಾರ ಕಾರ್ಯದಲ್ಲಿ ತಲ್ಲೀನರಾಗಿ ಉದರ ಭರಿಸಿಕೊಳ್ಳುವ ಡಕಾಯಿತರನ್ನು ಈ ದುಷ್ಕಾರ್ಯದಿಂದ ಬಿಡುಗಡೆಗೊಳಿಸುವ ಸಾಹಸ ಕೆಲಸದಲ್ಲಿ ಅವರು ಉದ್ಯುಕ್ತರಾಗಿದ್ದಾರೆ.

ಆಚಾರ್ಯರ ಈ ಯೋಚನೆ ಹಾಗೂ ಅವರು ಇದುವರೆಗೆ ಎದುರಿಸಬೇಕಾದ ಸನ್ನಿವೇಶಗಳನ್ನು ಅವಲೋಕಿಸುವಾಗ, ಅವರು ತಮ್ಮ ಸಾಹಸದಲ್ಲಿ ಕೃತಕೃತ್ಯರಾಗಲಾರರು ಎಂದು ಹೇಳುವುದು ಸಾಧ್ಯವಿಲ್ಲ. [illegible]ರೂ ಆಚಾರ್ಯರ ಈ ಧೀರೋದಾತ್ತ [illegible]ನ್ಯಾಸವು ತನ್ನ ಮಹತ್ವವನ್ನು ಮಾತ್ರ ಎಂದಿಗೂ ಕಳೆದುಕೊಳ್ಳುವಂತಿಲ್ಲ.

ಈ ಡಕಾಯಿತರು ಅಥವಾ ದರೋಡೆಗೋರರು ಮೂಲತಃ ಈ ಪ್ರದೇಶಗಳವರಲ್ಲ; ಇಲ್ಲಿ ಅವರು ವಲಸಬಂದು ಎಂಟು ಶತಮಾನಗಳು ಮಾತ್ರ ಸಂದಿದ್ದುವು. ಇವರು ವಸ್ತುತಃ ಸಾಹಸ ಶೀಲರಾದ ರಾಜರಾಗಿ ಮೆರೆದಾಡಿದ ಡಿಲ್ಲಿಯ ತೋಮರ ಎಂಬ ರಾಜವಂಶಕ್ಕೆ ಸೇರಿದವರು. ಹನ್ನೆರಡನೆಯ ಶತಮಾನದಲ್ಲಿ ಡಿಲ್ಲಿಯನ್ನಾಳಿದ ಪೃಥ್ವೀರಾಜನು ಇವರನ್ನು ದೆಹಲಿಯಿಂದ ಹೊರಗೋಡಿಸಿಬಿಟ್ಟನು. ದೆಹಲಿಯ ಅರಸರನ್ನು ವಿರೋಧಿಸುತ್ತ, ಆಗಾಗ ಅವರನ್ನು ಸೋಲಿಸುವ ಹವಣಿಕೆಯನ್ನು ಮುಂದಿಟ್ಟು ಪುಂಡಾಟಿಕೆಯ ಕಾರ್ಯಗಳಲ್ಲಿ ತೊಡಗಿದ್ದರು. ಆದರೆ, ಈ ತೋಮರರ ಯಾವುದೇ ಪ್ರಯತ್ನವು ಅಯಶಸ್ವಿಯಾದುದರಿಂದ, ಅವರು ಕಾಲಕ್ರಮದಲ್ಲಿ ತಮ್ಮ ನೈಜ ಸಾಹಸಪ್ರಿಯತೆಯನ್ನು ಕಳೆದುಕೊಂಡು, ಕೇವಲ ಪುಂಡಾಟಿಕೆಯನ್ನೇ ತಮ್ಮ ಜೀವನದ ಉದ್ಯೋಗವನ್ನಾಗಿ ಮಾಡಿಕೊಂಡರು. ಹೀಗೆ ಒಂದು ಉತ್ತಮ ಸುಸಂಸ್ಕೃತ ರಾಜಜನಾಂಗವು ದರೋಡೆಗಾರರ ವಂಶವಾಗಿ ಮಾರ್ಪಟ್ಟಿತು. ಮತ್ತು ಇವರಿಂದಾಗಿ ಉತ್ತರ ಮತ್ತು ಮಧ್ಯಪ್ರದೇಶಗಳ ಒಂದು ಭಾಗದ ಜನತೆ ತೀವ್ರ ಹಿಂಸೆಗೆ ಗುರಿಯಾಗುತ್ತ ಬಳಲಿರಬೇಕಾಗಿ ಬಂದಿತು.

ಉತ್ತರ ಪ್ರದೇಶದಲ್ಲಿ ಒಂಭತ್ತು ದಿನ ಮತ್ತು ಮಧ್ಯಪ್ರದೇಶದಲ್ಲಿ ಹದಿನೈದು ದಿನಗಳವರೆಗೆ ಈ ಘನೋದ್ದೇಶವನ್ನು ಮುಂದಿರಿಸಿ ಸಂಚರಿಸುವುದಕ್ಕೆ ತೊಡಗಿದ ವಿನೋಬಾ ಈಗ ತಾನೇ ತನ್ನ ಸಂಚಾರದ ಕೊನೆಯ ಹಂತವನ್ನು ಮುಟ್ಟುತಿದ್ದಾರೆ. ಆದರೆ, ಇದುವರೆಗೆ ಯಾರೇ ಒಬ್ಬ ಪುಂಡುಗಾರನಾದರೂ ವಿನೋಬಾರಿಗೆ ಶರಣುಬಂದ ಸಂಗತಿಯು ಬಹಿರಂಗಗೊಂಡಿಲ್ಲ. ಡಕಾಯಿತರು ತನ್ನನ್ನು ನಿರಾತಂಕವಾಗಿ ಬಂದು ಕಾಣಬಹುದೆಂದು ಅವರು ಉದ್ಘೋಷಿಸುತ್ತ, ಬೋಧಪ್ರದವಾದ ಉಪನ್ಯಾಸಗಳನ್ನು ಮಾಡುತ್ತ ಮುಂದುವರಿಯುತಿದ್ದಾರೇನೋ ನಿಜವೆ. ಅವರ ಈ ಉಪಕ್ರಮದ ಸಾಫಲ್ಯ ಯಾವ ಪ್ರಮಾಣದಲ್ಲಿ ಆದೀತೆಂದು ನಾವು ಈಗಲೇ ಹೇಳುವುದು ಅಸಾಧ್ಯ.



ಎತ್ತರದ ಸ್ತಂಭದಲ್ಲಿ ಪರೀಕ್ಷಣಕ್ಕೆ ಗುರಿಯಾಗಲು ಆಕಾಶಯಾನ ಸಿದ್ಧವಾಗಿದೆ.

ಮನಃ ಪರಿವರ್ತನೆಯು ಕಠಿನ ಹಾಗೂ ದುಷ್ಕರವೆನಿಸುವ ಕಾರ್ಯವೆನಿಸಿದರೂ ಒಮ್ಮೆ ಅದು ಸಫಲವಾಯಿತೆಂದರೆ, ಸುಶಾಶ್ವತ ಫಲ ಪ್ರಾಪ್ತಿಯಾಗುವುದು ಎಂಬುದು ಅನುಭವವೇದ್ಯವೇ. ಇದಕ್ಕೆ ನಮ್ಮ ಪುರಾಣೇತಿಹಾಸಗಳಲ್ಲಿ ಸಾಕಷ್ಟು ಆಖ್ಯಾಯಿಕೆಗಳೂ ದೊರೆಯುತ್ತಿವೆ. ದೇವರ್ಷಿ ನಾರದನು ಕ್ರೂರ ವ್ಯಾಧ ವಾಲ್ಮೀಕಿಯ ಮನಸ್ಸನ್ನು ತಿರುಗಿಸಿದುದರಿಂದಲೇ ಆದಿಕಾವ್ಯ ರಾಮಾಯಣದ ರಚನೆಯಾಯಿತು. ಪಶು ಬಲಿಯನ್ನು ಕೊಡುವುದರಲ್ಲಿ ನಿಸ್ಸೀಮನಾಗಿದ್ದ ಬಿಂಬಿಸಾರನು ಗೌತಮ ಬುದ್ಧನ ಉಪದೇಶಾಮೃತ ಪ್ರಭಾವದಿಂದ ಅಹಿಂಸಾವ್ರತವನ್ನು ಕೈಕೊಂಡನು. ಅನೇ ಬುದ್ಧನು ತನ್ನ ಸಹೃದತೆಯಿಂದಾಗಿ ಅದೆಷ್ಟೋ ಮಂದಿ ಕುಕರ್ಮಿಗಳನ್ನು ಸದ್ಧರ್ಮಿಗಳಾಗಿ ಪರಿವರ್ತನೆಗೆಯ್ದ ಐತಿಹ್ಯಗಳು ನಮಗೆ ದೊರೆಯುತ್ತವೆ. ಹಾಗೆಯೇ ಮಹಾತ್ಮಾ ಗಾಂಧೀಜಿಯವರೂ ತಮ್ಮ ಪಾವನ ಜೀವನದಲ್ಲಿ ಒತ್ತಾಯಕ್ಕಿಂತ ಮನಃಪರಿವರ್ತನೆಗೆ ಪ್ರಮುಖ ಸ್ಥಾನವನ್ನಿತ್ತಿದ್ದರು. ಸರಕಾರವು ಕೈಗೊಳ್ಳುವ ಯಾವುದೇ ಕಾರ್ಯಕ್ರಮಗಳು ಹಾಗೂ ಕಾಯದೆಗಳನ್ನು ಒತ್ತಾಯದಿಂದ ಹೇರದೆ, ಜನತೆಯ ಮನಃ ಪರಿವರ್ತನೆಯಿಂದಲೇ ಉದ್ದೇಶವನ್ನು ಸಾಧಿಸಿಕೊಂಡರೆ, ಅದು ಸಫಲವಾಗುವುದು ಎಂದು ಎಲ್ಲರೂ ಅನ್ನುತ್ತಾರೆ. ಮದ್ಯಪಾನ ನಿರೋಧ ಶಾಸನವು ಇಂದು ಫಲಕಾರಿಯಾಗಿಲ್ಲವಾದರೆ, ಇದಕ್ಕೆ ಈ ಕಾಯದೆಯನ್ನು ಒತ್ತಾಯದಿಂದ ಹೊರಿಸಿದ್ದೇ ಕಾರಣವೆಂದು ಕೆಲವರ ಅಂಬೋಣವಿದೆ. ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡುವ ಮತ್ತದನ್ನು ಸರಕಾರದ ಅಧಿಕೃತ ಭಾಷೆಯನ್ನಾಗಿ ಸ್ವೀಕರಿಸುವಲ್ಲಿ ಜನತೆಯನ್ನು ಒಲಿಸಿ, ಅವರಲ್ಲಿ ಹಿಂದೀ ವಿರೋಧೀಭಾವನೆ ಮೂಡಲು ಎಡೆಗೊಡದೆ ಸೌಮ್ಯರೀತಿಯಲ್ಲಿ ಮನಃಪರಿವರ್ತನೆಯಿಂದಲೇ ಉದ್ದೇಶ ಸಾಧಿಸಿಕೊಳ್ಳಬೇಕೆಂದು ಅನ್ನುವವರಿದ್ದಾರೆ. ಹಾಗಾಗಿ, ಮನಃಪರಿವರ್ತನೆಯೇ ಉದ್ದೇಶ ಸಾಧನೆಯಲ್ಲಿ ಮಹತ್ವಪೂರ್ಣ ಪಾತ್ರ ವಹಿಸುವುದೆಂದು ನಿಸ್ಸಂದೇಹವಾಗಿ ಹೇಳಬಹುದು.

ನೈತಿಕದೃಷ್ಟಿಯಿಂದ ನಾವು ವಿವೇಚಿಸುವುದಾದರೆ, ಮನಃ ಪರಿವರ್ತನೆಯಿಂದ

(೭ನೇ ಪುಟ ನೋಡಿರಿ)

ಕಥಾವಿಹಾರ

ಪಟ್ಟಣ ಸೇರಿ ಮೂಢ ಕೆಟ್ಟ

'ಕೆಟ್ಟು ಪಟ್ಟಣ ಸೇರು' ಎಂಬ ಗಾದೆಯ ಮಾತನ್ನೇ ಮೂಢ ಬದಲಾಯಿಸಿಬಿಟ್ಟ, ತನ್ನ ಸ್ವಾನುಭವದಿಂದ. ಅದು ಹೇಗೆ?

"ಕೆಟ್ಟು ಪಟ್ಟಣ ಸೇರು"

—ಅದೊಂದು ಹಳ್ಳಿಯ ಹಳೆಯ ಗಾದೆ. ಅದನ್ನು ನಂಬಿದ ಹಲವರಲ್ಲಿ ನಮ್ಮೂರ ಮೂಢನೂ ಒಬ್ಬನಾಗಿದ್ದ. ಆತ ಅದನ್ನು ನಂಬಿದನೆನ್ನುವುದಕ್ಕಿಂತ ಅದೇ ಆತನನ್ನು ನಂಬಿಸಿತೆನ್ನುವುದು ಇನ್ನೂ ಸಮಂಜಸ. ಅದು ಅವನನ್ನು ನಂಬಿಸಿ ಪಟ್ಟಣಕ್ಕೆ ಸೇರಿಸಿತು.

ಪಟ್ಟಣ ಸೇರುವ ಮೊದಲು ಆತ ಹಳ್ಳಿಯಲ್ಲಿದ್ದು ಕೆಟ್ಟಿದ್ದನೇ ಎಂಬ ಪ್ರಶ್ನೆಗೆ ಉತ್ತರ, ನಾವು ಕೇಳದಿದ್ದರೂ ಆಗಾಗ ಅವನೇ ಹೇಳುತ್ತಿದ್ದ—

"ಏನು ಸ್ವಾಮಿ, ಎಂತಹ ಊರು ಇದು? ದುಡಿಯುವೆನೆಂದರೆ ಕೆಲಸವೇ ಸಿಗದು. ಚಾ ಕುಡಿಯಲೂ ಬಿಡಿಕಾಸು ದೊರೆಯುವುದಿಲ್ಲ. ಮಳೆಗಾಲವಿಡೀ ಕಷ್ಟಪಟ್ಟು ಬೆಳೆಸಿದ ಬೆಳೆಯಲ್ಲಿ ಧನಿಗಳ 'ಗುತ್ತಿಗೆ' (ಗೇಣಿ) ಆಗುವುದೇ ಕಷ್ಟ.... ಇನ್ನು ನನ್ನ ಜೀವನ ಹೇಗೆ ಸಾಗುವುದೆಂಬುದೇ ದೊಡ್ಡ ಯೋಚನೆಯಾಗಿದೆ."

ಇವಿಷ್ಟು ಮಾತುಗಳನ್ನು ಅವನು ಹೇಳುತ್ತಿರುವುದು ಕೃಷ್ಣಪ್ಪನ ಹೋಟೆಲಿನಲ್ಲಿ ದಿನಕ್ಕೊಮ್ಮೆ ನಾವು ಕಲೆತಾಗ. ನಾನು ಅಲ್ಲಿ ಹೋಗುವುದರೊಳಗೆ ಆತನ ಸಂಜೆಯ ಚಾ ಸೇವೆ ಮುಗಿದು, ಕೈಯಲ್ಲಿ 'ವಿರಾಮಕಾಲವನ್ನು ಸದುಪಯೋಗಗೊಳಿಸಲೆಂ'ದು ಇಸ್ಪೀಟು ಎಲೆಗಳನ್ನು ಹಿಡಿದುಕೊಂಡು, ಅವನಂತಿರುವ ಇನ್ನೂ ಕೆಲವರೊಡನೆ ಅದೇನೋ ಆಟದಲ್ಲಿ ಮಗ್ನನಾಗಿರುತ್ತಿದ್ದ. ಆದರೆ ನಾನು ಬಂದೊಡನೆಯೇ ಇಸ್ಪೀಟು ಎಲೆಗಳನ್ನು ಹಾಸಿದ್ದ ಗೋಣಿಯ ಮೇಲೆ ಬಿಸುಟು ನನ್ನ ಸಮೀಪ ಓಡಿಬಂದು ಹತ್ತಿರದ ಬೆಂಚಿನ ಮೇಲೆ ಕುಳಿತು ಎಂದಿನಂತೆ ತನ್ನ ನಿತ್ಯದ ಕತೆಗಳನ್ನು ಬಿಚ್ಚುತ್ತಿದ್ದ. ಕತೆ ಕೇಳಿದ ನಾನು ಆತನಿಗೂ ಒಂದು 'ಸಿಂಗಲ' ಕೊಡಿಸಿ ಅಲ್ಲಿಂದ ಹೊರಡಬೇಕಿತ್ತು.

ಕೃಷ್ಣಪ್ಪನ ಹೋಟೆಲಿಗೆ ಒಂದು ಬಾರಿ ಭೇಟಿ ಕೊಡುವುದು ನನ್ನ ದಿನಚರಿಯ ಒಂದು ಕಾರ್ಯಕ್ರಮವಾದರೆ ಮೂಢನಿಗೆ ಹಾಗಲ್ಲ. ಅವನ ದಿನಚರಿಯ ದೀರ್ಘವಾದ ಮತ್ತು ಪ್ರಾಮುಖ್ಯವಾದ ಕೆಲಸವದೇ ಆಗಿರುತ್ತದೆ. ಆತ ಮುಂಜಾನೆ ಚಹಾ ಕುಡಿಯಲೆಂದು ಅಲ್ಲಿಗಾಗಮಿಸಿದರೆ ಮನೆಗೆ ಮರಳುವುದು ಮನಸ್ಸಾದರೆ, 'ಇಸ್ಪೀಟು ರಾಣಿ' ಕೈಬಿಟ್ಟರೆ, ಮಧ್ಯಾಹ್ನದ ಊಟಕ್ಕೆ. ಇಲ್ಲವಾದರೆ, ಹೆಚ್ಚಿನ ದಿನಗಳಲ್ಲಿ ರಾತ್ರಿಯೂಟಕ್ಕೆ. ಇಂತಹ ಜೀವನದ ಪರಿಣಾಮವಾಗಿ ಅರೆಹೊಟ್ಟೆ ಉಣ್ಣುತ್ತಿರುವುದು ನಮ್ಮೂರಿನಲ್ಲಿ ಮೂಢನೊಬ್ಬನೇ ಅಲ್ಲ. ಅವನಂತೆಯೇ ವರ್ತಿಸುವ ಇನ್ನೂ ಕೆಲವರು ಅನುಯಾಯಿಗಳು ಆತನಿಗಿದ್ದಾರೆ. ಅವರೆಲ್ಲರ ಲೆಕ್ಕಾಚಾರದಂತೆ ಇಂದು– "ಕಾಲ ಕೆಟ್ಟೋಯ್ತು." ಹಾಗೆಂದು ಅವರಂತಿಲ್ಲದ, ಕಾಲಕೆಡದ ಅನೇಕ ಮಂದಿ ನಮ್ಮ ಊರಿನಲ್ಲಿದ್ದಾರೆ. ಅವರ 'ಕಾಲ ಕೆಡಲು'—ಅವರು ಸೋಮಾರಿಗಳಲ್ಲ. ದಿನದ ಇಪ್ಪತ್ತನಾಲ್ಕು ಗಂಟೆ ತಮ್ಮ ಕರ್ತವ್ಯ ಮರೆತು ಚಹಾ ಅಂಗಡಿಗಳಲ್ಲಿ ಸಮಯ ತಳ್ಳುವವರು ಅವರಲ್ಲ. ಮಳೆಗಾಲ ಬಂದಾಗಲೊಮ್ಮೆ ಯಾರ ಹೊಟ್ಟೆಯದೆನ್ನೋ ತುಂಬಿಸಲೆಂದುಕೊಂಡಂತೆ ನೊಗ ನೇಗಿಲುಗಳನ್ನು ಹೊತ್ತು, ತಮ್ಮ ಬಯಲನ್ನೊಮ್ಮೆ ತುಳಿದು ಪಾವನಗೊಳಿಸಿ, ಬೆಳೆ ಹೇಗೇ ಬರಲಿ—ಬಿಡಿ, ಮತ್ತೆ ಆಕ್ಟೋಬರ ತಿಂಗಳಲ್ಲಿ ಕಟಾವಿಗೆ ಮಾತ್ರ ಗಡಿಬಿಡಿಗೊಳಿಸಿ, ಹದಿನೈದು ದಿನಗಳಲ್ಲಿ ಮನೆಗೆ ಬಂದ ಬೆಳೆಯನ್ನು ಚಹಾದಂಗಡಿಯ ಸಾಲಕ್ಕೆ—ಅರ್ಧ ಬೆಲೆಗಾದರೆ ಅಷ್ಟಕ್ಕೇ ಕೊಟ್ಟು, ತಮ್ಮ ಅದೃಷ್ಟವನ್ನು ಹಳಿದುಕೊಂಡು ಉಳಿದ ದಿನಗಳಲ್ಲಿ ಹೊಟ್ಟೆಯ ಮೇಲೆ ಒದ್ದೆ ಬಟ್ಟೆಯಿಟ್ಟು ಮಲಗುವ ಮೂಢನಂತಹ ಮೈಗಳ್ಳ ಮಂದಿಗೆ 'ಕಾಲ ಕೆಟ್ಟೋಗದ'ಳಿದೀತೇ?

ಅದೊಂದು ದಿನ ಸಂಜೆ ಕೃಷ್ಣಪ್ಪನ ಹೋಟೆಲಿನಲ್ಲಿ ನಾವು ಕಲೆತಾಗ ಮೂಢ ಹೇಳಿದ ಸುದ್ದಿ ನನಗೆ ಆಶ್ಚರ್ಯವನ್ನುಂಟುಮಾಡಿತು—ಆತ ಹೇಳಿದ—

"ಸ್ವಾಮಿ, ಹೇಗೂ ನಾನು ಈ ಹಳ್ಳಿಯಲ್ಲಿದ್ದು ಕೆಟ್ಟುಹೋದೆ. ಇಷ್ಟು ದಿನಗಳ ಜೀವನಕ್ಕಾಗಿ ಮಾಡಿದ ಸಾಲದ ಹೊರೆ ಬಹಳ ಭಾರವಾಗಿದೆ. ಇನ್ನಾದರೂ ಎಲ್ಲಿಯಾದರೂ ಹೋಗಿ ದುಡಿದು, ಸಾಲ ತೀರಿಸಿಕೊಂಡು ಅನಂತರವಾದರೂ ಸುಖವಾಗಿ ಇರಬೇಕೆಂದು ಯೋಚಿಸಿದ್ದೇನೆ ಸ್ವಾಮಿ. ಏನೋ ...ದೇವರು ನನ್ನ ಹಣೆಯಲ್ಲಿ ಬರೆದಂತಾಗುತ್ತದೆ."

"ಎಲ್ಲಿಗಾದರೂ ಎಂದರೆ ಎಲ್ಲಿಗೆ ಹೋಗಬೇಕೆಂದು ನಿನ್ನ ಯೋಚನೆ?"

—ನಾನು ಕೇಳಿದೆ—ಮೂಢನಿಗೆ ದುಡಿಯುವ ಮನಸ್ಸು ಬಂತಲ್ಲಾ ಎಂಬ ಸಂತಸದಿಂದ

"ಎಲ್ಲಾದರೂ ಪಟ್ಟಣಕ್ಕೆ ಹೋಗಿಬಿಡುತ್ತೇನೆ. ಗಾದೆಯೇ ಇದೆಯಲ್ಲಾ—ಕೆಟ್ಟು ಪಟ್ಟಣ ಸೇರು ಅಂತಾ."

—ಇದು ಮಾತ್ರ ನನಗೆ ಸ್ವಲ್ಪ ಬೇಸರ ತರಿಸಿತು. ಮೂಢ ಹಳ್ಳಿಬಿಡುತ್ತಿದ್ದಾನೆಂಬು ನನಗೆ ಬೇಸರವಿರಲಿಲ್ಲ. ಆತ ನಮ್ಮೂರಲ್ಲಿದ್ದು ಆಗುವ ಉಪಕಾರ ಅಷ್ಟೇ ಇತ್ತು. ಆದರೆ ಅವನು ಪಟ್ಟಣದ ಸೊಬಗಿಗೆ ಮಾರುಹೋಗಿಯೋ ಇಲ್ಲವೇ ಅಲ್ಲಿ ಅವನಿಗೆ ದೊರಕುವ ಸುಖದ ಹಗಲುಗನಸು ಕಂಡೋ ಸುಮ್ಮನೇ ಪಟ್ಟಣ ಸೇರಿ ಹಾಳಾಗುವವನಲ್ಲಾ ಎಂದು ಸ್ವಲ್ಪ ಬೇಸರ. ನಾನು ಮೂಢನ ಮಾತು ಕೇಳಿ ಸುಮ್ಮನುಳಿದೆ; ಏನನ್ನೂ ಹೇಳಲಿಲ್ಲ. ನಾನು ಬುದ್ಧಿ ಹೇಳಿದರೂ ಕೇಳುವ ಆಸಾಮಿ ಆತನಲ್ಲ.

ಮೂಢ ಪಟ್ಟಣಕ್ಕೆ ಹೋಗಲು ನಿಶ್ಚಯಿಸಲು ಕಾರಣನಾದವ ಅವನ ಮಿತ್ರ ವೆಂಕಪ್ಪನೆಂದು ನನಗೆ ಕೊನೆಗೆ ತಿಳಿಯಿತು. ವೆಂಕಪ್ಪ ಒಮ್ಮೆ ನಮ್ಮೂರಿಗೆ ಬಂದಾಗ ಪಟ್ಟಣದ ಜೀವನ ಕುರಿತು ಮೂಢನ ಅಸ್ಥಿರ ಮನಸ್ಸಿನ ಮೇಲೆ ಮೋಸದ ಆಸೆಯ ಚಿತ್ರ ಬಿಡಿಸಿ ಹೋಗಿದ್ದ. ಅವನು ಬಣ್ಣಿಸಿದ್ದ—

ಪಟ್ಟಣವೆಂದರೆ ಇಲ್ಲಿಯಂತಲ್ಲ; ಏನು ಸುಖ, ಏನು ಸೊಗಸು, ಏನು ಮಜಾ! ಅಲ್ಲಿಯ ಹೋಟೆಲುಗಳ ಚಹಾ, ಕಾಫಿ, ತಿಂಡಿಯ ರುಚಿಯೇನು!.... ಪ್ರತಿನಿತ್ಯ ಸಿನಿಮಾ ನಾಟಕ......

"ಅಲ್ಲಿಯ ದುಡಿತವೆಂದರೇನು—ಕಾ
ರ್ಖಾನೆಗಳಲ್ಲಿ ದಿನಕ್ಕೆ ನಾಲ್ಕಾರು ಗಂಟೆ
ಮಾತ್ರ. ಆದರೆ ಕೈತುಂಬ ಸಂಬಳ. ವಾ
ರಕ್ಕೊಂದು ಮಜಾಮಾಡಲು ರಜೆ! ರಾ
ಯನಿನ ನಾವೆಲ್ಲ ನಮ್ಮದೇ ಒಂದು ಕ್ಲಬ್ಬಿ
ನಲ್ಲಿ ಸೇರಿ ಇಸ್ಪೀಟಾಡುತ್ತೇವೆ......."
—ಹೀಗೇ ಇನ್ನೆಷ್ಟೋ... ಇವೆಲ್ಲವುಗಳ
ಮೂಢ ಕಿವಿಗೊಟ್ಟು ಆಲಿಸಿದ ಎರಡ
ವಾಕ್ಯ—"ಹೋಟೇಲಿನ ರುಚಿರುಚಿಯ
ದ ಚಹಾ ತಿಂಡಿ ಮತ್ತು ರಜಾದಿನದ
ಇಸ್ಪೀಟಾಟ" ಉಳಿದ ದಿನಗಳಲ್ಲೂ, ದಿ
ನದ ಅಲ್ಪ ಸಮಯದ ಕೆಲಸ ಮುಗಿ
ಬೇಕಾದರೆ ಇಸ್ಪೀಟು ಆಡುತ್ತಿರಬಹುದೆಂ
ದು ಆತನ ಬುದ್ಧಿಗೆ ಹೊಳೆದು ಹೋಯಿ
ತು. 'ಹೌದು, ಪಟ್ಟಣಕ್ಕೆ ಹೋಗಿ ಅಲ್ಲಿ
ಯೇ 'ಸುಖವಾಗಿ' ಇರಬಹುದು. ಕೈ
ತುಂಬ ಹಣವನ್ನೂ ಸಂಪಾದಿಸಬಹುದು'
ಈ ಮಹದಾಸೆಗಳ ಗೋಪುರ ಕಟ್ಟಿ ಆ
ಪಟ್ಟಣ ಸೇರಿದ.

ಮರುವಾರದ ಆದಿತ್ಯವಾರ ದಿನ, ಮೂ
ದ ಊರಿಗೆ ಬಂದಿದ್ದ. ಆಗ ಆತ ಬಹ
ಬದಲಾಯಿಸಿಬಿಟ್ಟಿದ್ದ. ಸ್ವಲ್ಪ ಸ್ವಲ್ಪವಾ
ಪಟ್ಟಣದ ನಾಗರಿಕತೆಯೆಂದು ಕರೆಯಲ್ಪ
ಡುವ ನಡಾವಳಿ ಅವನ ನಡೆ, ನುಡಿಗಳಲ್ಲಿ
ಕಾಣಬಹುದಿತ್ತು. ಅವನ ಹಳ್ಳಿಯ ಭಾಷೆ
ಯೀಗ ಅಲ್ಪಸ್ವಲ್ಪ 'ಕರ್ನಾಟಕ'ಕ್ಕೆ ತಿರು
ಗಿತ್ತು. ಬಂದವನೇ ಕೃಷ್ಣಪ್ಪನ ಹೋಟೆ
ಲಿನಲ್ಲಿ ಅವನ ಹಳೆಯ ಸೋಮಾರಿ ಸಂ
ಗಾತಿಗಳಿಗೆ ತನ್ನ ಪಟ್ಟಣದ ಅನುಭವಗ
ಳನ್ನೆಲ್ಲ ಹೇಳತೊಡಗಿದ್ದ– "ನೀವು ಸಹಾ
ಅಲ್ಲಿಗೇ ಬಂದುಬಿಡಿ. ನಾನು ಕೆಲಸಮಾ
ಡುವ ಕಾರ್ಖಾನೆಯಲ್ಲಿಯೇ ನಿಮಗೂ
ಕೆಲಸ ದೊರಕಿಸುವಂತೆ ನಾನು ಮಾಡಿಕೊ
ತ್ತೇನೆ. "ಸುಖವಾಗಿರಬಹುದು" ಎಂದು
ಬುದ್ಧಿ ಹೇಳುತ್ತಿದ್ದ.

ನಾನು ಹೋಟೆಲಿನಲ್ಲಿ ಕಾಲಿಟ್ಟೊಡನೆ
ಹಿಂದಿನಂತೆ ನನ್ನ ಹತ್ತಿರಬಂದು
ತನ್ನ ಕತೆ ಹೇಳಹತ್ತಿದ. ಎಂದಿನಂ
ಕಾಫಿ ಕುಡಿದೊಡನೆಯೇ ತಾನೇ ಹಣ
ಕೊಡುವವನಂತೆ ಜೇಬಿಗೆ ಕೈಯಿಕ್ಕಿ ಅದ
ರೊಳಗಿದ್ದ ಚಿಲ್ಲರೆಯ 'ಝಣಝಣ'
ಶಬ್ದಮಾಡಿದ.— ಅದು ಆತ ಪೇಟೆಯ
ನಾಗರಿಕತೆಯಿಂದ ಎರವುತಂದ ಒಂದಂ
ಶವೆಂದುಕೊಂಡು, ನಾನು ಮುಗುಳ್ನಕ್ಕು
ಹಣ ತೆತ್ತೆ. ಮೂಢ ತನ್ನ ಆಟಕ್ಕೆ ಪುನ
ಮರಳಿದ.

೦೦ ೦೦

"ಪಟ್ಟಣದಲ್ಲಿ ಕಾರ್ಮಿಕರ ಮುಷ್ಕ
ರ!" - ಪತ್ರಿಕೆಯಲ್ಲಿ ಮುಖಪತ್ರದಲ್ಲಿ '
ಪ್ಪಕ್ಷರದಲ್ಲಿ ಪ್ರಕಟವಾಗಿತ್ತು.

"ಪಟ್ಟಣದಲ್ಲಿ ಕಾರ್ಮಿಕರ ಮೆರವಣಿ
ಮುಷ್ಕರ ಪ್ರದರ್ಶನ— ಪೋಲೀಸರ ಲಾಠಿ

(೯ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] (ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತವೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಚಾರ ವರ್ಷ

ಕೃತಜ್ಞತೆ ಕುಬೇರ ಭಂಡಾರದಿಂದಲೂ ಅಮೂಲ್ಯವಾಗಿದೆ.

ಹೃದಯದಿಂದ ಹೊರಬಂದ ಧನ್ಯವಾದ ಗುಲಾಬಿಯ ಪಿಷಣ್ಣವಳಗಳು ಕುಡಿದು ಮರಳಿ ಪುಲಕಿತವಾಗುವಂತೆಸಗುವ ಇಬ್ಬನಿಗೆ ಸಮವಾಗಿದೆ.

ಆ ದಿನ ನಾನು ಟೇಕ್ಸಿಯಲ್ಲಿ ಕುಳಿತು ನ್ಯೂಯಾರ್ಕ ನಗರದಲ್ಲಿ ತಿರುಗಾಡಲು ಹೊರಟಿದ್ದೆ. ಡ್ರೈವರನು ಮಾತಾಡುವ ರೀತಿ, ಆತ ಸ್ಟೀರಿಂಗ್ ಹಾಗೂ ಗೇರ್ ಹಿಡಿಯುವ ಕ್ರಮವೆಲ್ಲವೂ ಆತನ ಅಶಾಂತತೆಯನ್ನು ಪ್ರದರ್ಶಿಸುವಂತಿತ್ತು; ಏನೋ ಒಂದು ವಸ್ತುವನ್ನು ಕಳೆದುಕೊಂಡಂತಿತ್ತು. ಆದುದರಿಂದ, ಆತನೊಡನೆ ಪ್ರಶ್ನಿಸಿದೆ—"ಏನಪ್ಪಾ; ತುಸು ನೆಮ್ಮದಿಯಿಲ್ಲದವನಂತೆ ತೋರಿಬರುತ್ತೀರಲ್ಲಾ?" ಎಂದು.

ಆ ಡ್ರೈವರನಿಗೆ ಈ ಪ್ರಶ್ನೆ ಹೇಗನಿಸಿರಬಹುದೆಂದು ನಾನು ಹೇಳಲಾರೆ. ಆತ ನೇರವಾಗಿಯೇ ಹೇಳಿದ—"ಹೌದು. ಮನಸ್ಸಮಾಧಾನವಿಲ್ಲ. ಇಂದು ಮುಂಜಾನೆ ನನ್ನ ಗಾಡಿಯಲ್ಲಿ ಒಬ್ಬ ಪ್ರವಾಸಿ ತನ್ನ ಪರ್ಸ್ ಬಿಟ್ಟುಹೋಗಿದ್ದ. ಅದರಲ್ಲಿ ಮೂನ್ನೂರು ಡಾಲರ್‌ಗಳ ನೋಟುಗಳಿದ್ದುವು. ಎರಡು ತಾಸುಗಳ ಕಾಲ ಅಲ್ಲಿ ಇಲ್ಲಿ ಹುಡುಕಿದಾಗ ಒಂದು ಹೋಟೆಲ್ಲಿನಲ್ಲಿ ಆತನ ಭೆಟ್ಟಿಯಾಯಿತು. ಅವನಿಗೆ ಪರ್ಸ್ ಕೊಟ್ಟಾಗ, ಕೃತಜ್ಞತೆಯ ಭಾವವಿರುವುದಂತೂ ದೂರವುಳಿಯಿತೆನ್ನಿ; ಕಿರುಗಣ್ಣಿನಿಂದಲೇ ನನ್ನನ್ನಾತ ವೀಕ್ಷಿಸಿದ. ನಾನು ಆ ಪರ್ಸನ್ನು ಅಪಹರಿಸುವ ಇರಾದೆಯಿಂದಿದ್ದೆನೆಂದೇ ಆತ ತಿಳಿದುಕೊಂಡಿದ್ದನೆಂದು ಆ ತೀವ್ರ ದೃಷ್ಟಿಯಿಂದ ಅರಿತುಕೊಳ್ಳಬಹುದಾಗಿದ್ದಿತ್ತು."

"ನಿನಗಾತ ಸ್ವಲ್ಪ ಪುರಸ್ಕಾರವನ್ನೂ ಈಯಲಿಲ್ಲವೆ?" ನಾನು ವಿಸ್ಮಿತನಾಗಿ ಕೇಳಿದೆ.

"ಪುರಸ್ಕಾರ! ಶಾಂತಂ ಪಾಪಂ! ಶಾಂತಂ ಪಾಪಂ! ನಾನೇನು ಪುರಸ್ಕಾರದ ಅಭಿಲಾಷೆಯಿಂದ ಆತನ ಪರ್ಸ್ ಮರಳಿಸಲು ತೆರಳಿದ್ದೆನೆ? ಒಳ್ಳೆಯ ಮನುಷ್ಯನಾಗಿದ್ದಿದ್ದರೆ, ಧನ್ಯವಾದದ ಎರಡು ಪದಗಳನ್ನಾದರೂ ಆಡುತಿದ್ದ!"

ಈತನ ಮಾತುಗಳನ್ನು ಮುಖ್ಯವಾಗಿ ಕೊನೆಯವನ್ನು ಕೇಳಿದ ನನ್ನ ತಲೆಯು ಗಿರ್ರೆಂದು ಸುತ್ತತೊಡಗಿತು. ಅದು ಬಹು ಹಿಂದೆ ಸರಿದು ನಿಂತಿತು. ಹಲವು ವರ್ಷ ಪೂರ್ವದಲ್ಲಿ ನಡೆದಿದ್ದ ಘಟನೆಯೊಂದು ಸ್ಮೃತಿಪಟಲದಲ್ಲಿ ಅಂಕಿತವಾಯಿತು. ಕಳೆದ ಮಹಾಯುದ್ಧಕಾಲದಲ್ಲಿ ಸಿನ್ಸಿನೆಟಿ ನಿವಾಸಿಯಾಗಿದ್ದ ಒಬ್ಬಾಕೆ ತಾಯಿಗೆ ತನ್ನ ಅಶ್ವಾರೋಹೀ ಸೈನಿಕನಾಗಿದ್ದ ಪುತ್ರನ ಪತ್ರವೊಂದು ದೊರೆಯಿತು. ಅದರಲ್ಲಿ ಆ ಮಗನು ನಾರ್ಮಂಡಿಯ ಸುಮಂಗಲೆಯಾದ ಮಹಿಳೆಯೊಬ್ಬಳ ಕುರಿತಾಗಿ ಬರೆದಿದ್ದನು. ಈ ಸೈನಿಕನು ಜರ್ಮನರ ಕೈಯಿಂದ ಗಾಯಾಳುವಾಗಿ, ಹಸಿದಿರುವಾಗ ಆಕೆ ಆತನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಆಶ್ರಯವಿತ್ತಿದ್ದಳು. ಆದರೆ, ಮುಂದೆ ಈ ಯುವಕನು ದುರ್ಭಾಗ್ಯವಶದಿಂದ ಶತ್ರುಗಳ ಏಟಿಗೆ ಗುರಿಯಾಗಿ ಮೃತ್ಯುವನ್ನಪ್ಪಿದನು. ಆದರೂ ತಾಯಿಯ ಹೃದಯ ಸುಮ್ಮನಿರಲಿಲ್ಲ; ಒಂದು ತೀವ್ರ ಅಭಿಲಾಷೆಯು ಆಕೆಯಲ್ಲಿ ಚಂಚಲವಾಗಿ ಸುಳಿದಾಡಿತು. ಎರಡು ವರ್ಷಾನಂತರ, ಹೊಟ್ಟೆ ಬಾಯಿ ಕಟ್ಟಿ ತುಸು ಹಣವನ್ನು ಉಳಿಸಿ, ಒಂದು ದಿನ ಅತ್ಲಾಂತಿಕ ಮಹಾ ಸಾಗರವನ್ನು ದಾಟಿ, ನಾರ್ಮಂಡಿಯ ಆ ಗ್ರಾಮಕ್ಕೆ ಬಂದಳು. ಸಾಕಷ್ಟು ಅರಸಾಟ ನಡೆದನಂತರ, ಆ ತಾಯಿಯು ಆ ಬಡ ರೈತನೊಬ್ಬನ ಪತ್ನಿಯಾದ ಆ ಹೆಂಗಸನ್ನೂ ಕಂಡುಹಿಡಿದಳು. ಮತ್ತು, ಆಕೆಯ ಕೈಯಲ್ಲಿ ಒಂದು ಕರಡಿಗೆಯನ್ನಿಟ್ಟಳು. ಅದರಲ್ಲಿ ಆಕೆಯ ಪುತ್ರನಿಗೆ ಪರೀಕ್ಷೆಯಲ್ಲಿ ಸರ್ವಪ್ರಥಮನಾಗಿ ಉತ್ತೀರ್ಣನಾದುದಕ್ಕೆ ಬಹುಮಾನವಾಗಿತ್ತ ಒಂದು ಚಿನ್ನದ ಗಡಿಯಾರವಿತ್ತು.

ತಾಯಿಯ ಈ ಪರಿಯ ಕೃತಜ್ಞತಾ ಸಮರ್ಪಣೆಯನ್ನು ಕಂಡು, ಜನರ ಹೃದಯ ತುಂಬಿ ಬಂದಿತು. ಇಡಿ ನಾರ್ಮಂಡಿಯಲ್ಲಿ ಈ ಘಟನೆಯು ಹರಡಿತು. ಹಲವಾರು ಲೇಖನ ಮತ್ತು ಭಾಷಣಗಳಲ್ಲಿ ಅಮೆರಿಕನರ ಪ್ರಶಂಸೆಯನ್ನೂ ಅವರ ಬಗ್ಗೆ ಸದ್ಭಾವನೆಯನ್ನೂ ಮಾತೃಹೃದಯದ ಈ ಮೂಕ ಕೃತಜ್ಞತೆಯು ಉತ್ಪನ್ನಗೊಳಿಸಿತು.

ಆಭಾರ ಪ್ರದರ್ಶನವು ಶಿಷ್ಟಾಚಾರ ಮೂಲಕ ಸ್ವಾಗತಿಸುವ ಪ್ರತಿಯೊಂದು ಸಣ್ಣ ದೊಡ್ಡ ಕೃಪೆಯನ್ನು ಒರೆಗೆ ಹಚ್ಚಬಲ್ಲ ಒಂದು ಅನುಭವ ಕಲೆಯಾಗಿದೆ. ಆತಿಥ್ಯ, ಸಹಕಾರ ಅಥವಾ ಪ್ರತ್ಯಕ್ಷ ಲಾಭ ಪಡೆದನಂತರ ನಮ್ಮಲ್ಲಿ ಹೆಚ್ಚಿನವರು ತಮ್ಮ ಹಾರ್ದಿಕ ಸಂತೋಷವನ್ನು ಪ್ರಕಟಿಸದೆ ಇರುವುದಿಲ್ಲ; ನಮ್ಮ ಬಾಯಿಯಿಂದ ಧನ್ಯವಾದದ ಎರಡು ಶಬ್ದ ನಮಗರಿವಿಲ್ಲದೆಯೇ ಹೊರಬರುತ್ತದೆ. ಆದರೂ ಕೃತಜ್ಞತಾ ಸಮರ್ಪಣೆಯನ್ನು ಯಥಾಸಂಭವ ಅಧಿಕಾಧಿಕ ಸ್ವಾಭಾವಿಕ, ವೈಯಕ್ತಿಕ ಹಾಗೂ ಉದಾತ್ತಗೊಳಿಸಿ ನಾವು ಅದರಲ್ಲಿ ಮತ್ತಷ್ಟು ಪರಿಪೂರ್ಣತೆಯನ್ನು ತರಬಲ್ಲೆವು.

ಇತ್ತೀಚಿಗಿನ ವಿಷಯವಿದು. ನಾನು ಸಪತ್ನೀಕನಾಗಿ ದಕ್ಷಿಣ ಇಟೆಲಿಯಲ್ಲಿ ತಿರುಗಾಡುತಿದ್ದೆ. ಆಗ ನಾನು ಕನೆಕ್ಟಿಕಟದ ನನ್ನ ಗೆಳೆಯನೊಬ್ಬನಿಗೆ ಇಟೆಲಿಯ ಸುಪ್ರಸಿದ್ಧ ಹಾಗೂ ಸ್ವಾದಿಷ್ಟ ದ್ರಾಕ್ಷೆಯ ಶರಾಬನ್ನು ಕಳಿಸಿದೆ. ಇದು ಮಾಮೂಲಿನ ಉಡುಗೊರೆ. ನಾನೇನೋ ಅದನ್ನು ಮರೆತೂ ಬಿಟ್ಟಿದ್ದೆ. ಒಂದುದಿನ ಮಧ್ಯಾಹ್ನ ನನ್ನ ಮಿತ್ರನಿಂದ ಒಂದು ರೆಕಾರ್ಡಿಂಗ್ ಫೊನೋಗ್ರಾಫ್ ಬಂದುದನ್ನು ಕಂಡು ಚಕಿತನಾದೆ. ಅದನ್ನು ಬಾರಿಸಿದಾಗ, ಅದರಲ್ಲಿ ಮಧ್ಯಾಹ್ನ ಭೋಜನದನಂತರ ಆಡುತ್ತಿರುವ ನನ್ನ ಮಿತ್ರನ ಸ್ವರ ಕೇಳಿಬಂತು—ಇದರಲ್ಲಿ ಆತ ನನ್ನ ಸ್ನೇಹಪೂರ್ಣ ಬಹುಮಾನಕ್ಕೆ ಧನ್ಯವಾದವಿತ್ತಿದ್ದನು. ಇದನ್ನುಕೇಳಿ ನಾನು ಹರ್ಷ ಮತ್ತು ಆನಂದದಿಂದ ಗದ್ಗದಿತನಾದೆ.

ಕೆಲವೊಮ್ಮೆ ಕೃತಜ್ಞತೆಯು ವೈಯಕ್ತಿಕ ಕರ್ತವ್ಯಕ್ಕಿಂತಲೂ ವಿಸ್ತೃತವಾಗುವುದಿದೆ. ನನ್ನ ಮಗನು ಮೆಂಕಗಿಲ್ ವಿಶ್ವವಿದ್ಯಾಲಯದಲ್ಲಿ ಔಷಧ ವಿಜ್ಞಾನವನ್ನು ಅಭ್ಯಸಿಸುತಿದ್ದಾಗ, ನಡೆದ ಒಂದು ಘಟನೆಯನ್ನು ಹೇಳುತ್ತಿದ್ದ. ವಿಶ್ವವಿದ್ಯಾಲಯದ ಚಿಕಿತ್ಸಾಲಯದಲ್ಲಿ ಒಬ್ಬ ರೋಗಿಯಿದ್ದ. ಆತನಿಗೆ ರಕ್ತದಾನ ಮಾಡಿದರೆ ಮಾತ್ರ ಪ್ರಾಣವುಳಿಯಬಹುದಿತ್ತು, ರಕ್ತದಾನವೂ ಆಯಿತು; ಎನ್ನಿ. ಗುಣಮುಖನಾಗತೊಡಗಿದಂತೆಯೇ ಆ ರಕ್ತದಾನಿಗಳು ಯಾರು ಎಂಬು ಆತ ಪದೇ ಪದೇ ಕೇಳುತಿದ್ದ. ರಕ್ತದಾನಿಗಳ ಹೆಸರನ್ನು ಬಹಿರಂಗಪಡಿಸುವುದಿಲ್ಲ ಎಂದು ಅವನಿಗೆ ಹೇಳಲಾಯಿತ. ಆಸ್ಪತ್ರೆಯಿಂದ ರೋಗಮುಕ್ತನಾಗಿ ಹೊರಟುಹೋದ ಆತ ಕೆಲವು ಸಮಯಾನಂತರ ಅದೇ ಆಸ್ಪತ್ರೆಗೆ ಅರ್ಧ ರಾತಲು ರಕ್ತದಾನ ಮಾಡಲು ಬಂದ. ಆ ಮೇಲೆ, ಪ್ರತಿ ಎರಡು - ಮೂರು ಮಾಸಗಳಿಗೊಮ್ಮೆ ಆಗಮಿಸಿ ರಕ್ತದಾನ ಮಾಡುತ್ತ ಇರುತಿದ್ದ. ಒಂದುದಿನ, ಸರ್ಜನರು ಆತನ ಉದಾರತೆಯನ್ನು ಕಂಠೋಕ್ತವಾಗಿ ಪ್ರಶಂಸಿಸುತ್ತ, ಇದರ ಕಾರಣವನ್ನು ತಿಳಿಯಬಯಸಿದಾಗ, ಆತ ವಿನಮ್ರನಾಗಿ ಹೇಳಿದ- "ಡಾಕ್ಟರ್ ಮಹಾಶಯರೇ, ಒಬ್ಬ ಅಜ್ಞಾತ ದಾನವೀರನು ನನಗೆ ಹಾಗೆ ಮಾಡಿದ್ದಕ್ಕಾಗಿ ನಾನು ಆತನಿಗೆ ನಿರ್ಮಲ ಹೃದಯದಿಂದ ಧನ್ಯವಾದ ಮಾತ್ರ ಅರ್ಪಿಸುತಿದ್ದೇನೆ."

ಕೃತಜ್ಞತೆಯೆಂಬುದು ಕೇವಲ ಕ್ಷಣಿಕ ಭಾವನೆಯಲ್ಲ. ಅದು ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಜೀವನ ಪರ್ಯಂತ ಸ್ಥಾಯಿಯಾಗಿರಬಲ್ಲ ನಿತ್ಯ ನೂತನ ವಸ್ತುವಾದುದು ತನ್ನ ಪತ್ನಿಯ ಉದಾರತಾಪೂರ್ವಕವಾದ ಮತ್ತು ನಿಸ್ವಾರ್ಥವೆನಿಸಿದ ಕಾರ್ಯಗಳನ್ನು ಗಮನಿಸಿ, ಅವುಗಳನ್ನು ಮನಃಪೂರ್ವಕವಾಗಿ ಧಾರಾಳ ಪ್ರಶಂಸಿಸುವ ಪತಿ ಮತ್ತು ಪತಿಗೆ ಈಯಲಾಗುವ ಉಪಕಾರಗಳನ್ನು ಎಂದೂ ಮರೆಯಲಾರದ ಪತ್ನಿ ಸಾಂಸಾರಿಕ ಜೀವನದಲ್ಲಿ ಒಬ್ಬರಿನ್ನೊಬ್ಬರಿಗೆ ಸ್ವರ್ಗಸಮವಾದ ಸುಖವನ್ನೀಯಬಲ್ಲರು.

ಹುಟ್ಟು ಪ್ರಸಂಗಗಳಲ್ಲಿಯೂ ನಾವು ಕೃತಜ್ಞತೆಯನ್ನರ್ಪಿಸಿ, ಮಾನವೀಯ ಸಂಬಂಧಗಳ ಮಾರ್ಗವನ್ನು ನಿಷ್ಕಂಟಕಗೊಳಿಸುವುದು ಸಾಧ್ಯವಿದೆ. ಕೆಲವರ್ಷಗಳಿಗೆ ಮೊದಲು ನಾನು ಪ್ಯಾರಿಸ್ಸಿನ ಹೋಟೆಲೊಂದರಲ್ಲಿ ಉಳಕೊಂಡಿದ್ದೆ. ಅಲ್ಲಿಯೇ ಆಂಗ್ಲ ರಾಜನೀತಿಜ್ಞ ಲಾರ್ಡ್ ಗ್ರೆ ಕೂಡ ಉಳಿದಿದ್ದರು. ಹೋಟೆಲಿನ ಜವಾನ ಅವರಿಗಾಗಿ ಕೋಣೆಯ ಬಾಗಿಲು ತೆರೆಯುತಿದ್ದಾಗ, ಅವರು ಆತನಿಗೆ ನಮ್ರದಯತಾಪೂರ್ವಕವಾಗಿ ಧನ್ಯವಾದವೀಯುತಿದ್ದರು. ಒಂದು ದಿನ ಅತಿ ಸಾಹಸ ಮಾಡಿ ಅವರೊಡನೆ ಕೇಳಿದೆ—"ನೀವು ಈ ಪ್ರಯಾಸವನ್ನೆಲ್ಲಾ ಏಕೆ ವಹಿಸುತ್ತೀರಿ?" ಅವರು ಒಂದು ಕ್ಷಣ ನನ್ನ ಕಡೆಗೆ ಗಮನವಿರಿಸಿ ನೋಡಿದನಂತರ ಉತ್ತರಿಸಿದರು—"ಅವನೂ ನನ್ನ ಬಗ್ಗೆ ತುಸು ಪ್ರಯಾಸಪಡುತ್ತಾನಲ್ಲಾ, ಆದಕ್ಕಾಗಿ!"

ಸುಪ್ರಸಿದ್ಧ ಫ್ರೆಂಚ ವಿದ್ವಾಂಸರಾದ ಪೋಲ್ ವೆಲರಿಯವರ ಒಬ್ಬ ಮಿತ್ರ ಪೇರಿಸಿನಲ್ಲಿ ಒಂದು ರೆಸ್ಟೋರೆಂಟಿನಲ್ಲಿ ಭೋಜನ ಮಾಡುತಿದ್ದರು. ಬಡಿಸುವ ನೌಕರನೊಡನೆ ಅವರು ಮಾತಾಡುತ್ತಿರಲಿಲ್ಲ. ಒಂದು ಬಾರಿ ವೆಲರಿ ಮಹಾಶಯರು ತನ್ನ ಮಿತ್ರರೊಡನೆ ಅದೇ ರೆಸ್ಟೋರೆಂಟಿಗೆ ಹೋದರು. ಭೋಜನಾಂತ್ಯದಲ್ಲಿ ವೆಲರಿ

(ಆನೇ ಪುಟ ನೋಡಿರಿ)

CANARA BANK LIMITED

(Estd: 1906)

IMPRESSIVE PROGRESS

	31-12-1957	31-12-1958	31-12-1959
Paid up Capital	29 Lakhs	49·81 Lakhs	50 Lakhs
Share Premium	....	6·24 Lakhs	6·30 Lakhs
Reserves	40 Lakhs	45 Lakhs	50 Lakhs
Deposits	17·84 Crores	23·76 Crores	28·93 Crores
Total Resources	23 97 Crores	30·52 Crores	39·16 Crores
Number of Branches at Your Service	61	68	76*
Number of staff members at your service	1222	1410	1692

(* 3 more branches have been opened after 1—1—'60)

* * * * *

Administrative Office: BANGALORE—2. | Correspondents All Over The World | Foreign Departments: BOMBAY, CALCUTTA & MADRAS

ವಿಚಾರವರ್ಷ

ಎರಡು ನೂತನ ರಾಜ್ಯಗಳು

ಗುಜರಾತ ಮತ್ತು ಮಹಾರಾಷ್ಟ್ರಗಳ ಗೌರವಪೂರ್ಣ ಪರಂಪರೆಯು ಭಾರತೇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಗಳಿಸಿದೆ.

ಬೃಹತ್ ಬೊಂಬಾಯಿ ಪ್ರಾಂತ್ಯ ಇದೇ ತಿಂಗಳ ಮೊದಲ ತೇದಿಯಲ್ಲಿ ಗುಜರಾತು ಮತ್ತು ಮಹಾರಾಷ್ಟ್ರವೆಂದು ಎರಡು ಪ್ರಾಂತಗಳಾದುವು. ಆದರೆ ಇತಿಹಾಸದ ದೃಷ್ಟಿಯಿಂದ ಅವು ಬಹು ಪುರಾತನವಾಗಿವೆ. ಅವೆರಡು ಪ್ರಾಂತಗಳು ಭಾರತದ ಸಾಂಸ್ಕೃತಿಕ, ಸಾಹಿತ್ಯಿಕ, ಕಲಾತ್ಮಕ ಮತ್ತು ಸರ್ವಾಂಗೀಣ ಸಮೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿವೆ.

ಮೊದಲು ನಾವು ಗುಜರಾತು ಪ್ರಾಂತದ ಬಗ್ಗೆ ವಿವೇಚಿಸೋಣ. ಲೋಥಲ್ ಮತ್ತು ರಂಗಪುರದಲ್ಲಿ ಅಗೆದಾಗ ಸಿಕ್ಕಿದ ಪ್ರಾಚೀನ ಕುರುಹುಗಳು ಸಿಂಧು ನದಿಯ ತಟದಲ್ಲಿ ಸಿಕ್ಕ ನಾಗರಿಕತೆಯ ಕುರುಹುಗಳಂತೆಯೆ ಇವೆ. ಗುಜರಾತು ಅವುಗಳ ಉತ್ತರದಾಯಿತ್ವವನ್ನು ಪಡೆದಿದೆ. ಐದು ಸಾವಿರ ವರ್ಷದ ಹಿಂದಿನಿಂದಲೆ ಸೌರಾಷ್ಟ್ರದಿಂದ ರಂಗಪುರದ ತನಕ ನಾಗರಿಕತೆಯು ಹರಡಿಕೊಂಡಿತ್ತು. ಗುಜರಾತದಲ್ಲೂ ಉಚ್ಚ ತರಗತಿಯ ವಾಸಿಸುವಿಕೆ ಕಟ್ಟಡಗಳ ನಿರ್ಮಾಣ, ನಗರಯೋಜನೆ, ನಗರ ನೈರ್ಮಲ್ಯ, ಬಂದರಾಭಿವೃದ್ಧಿ ಮತ್ತು ಕಲಾಕೌಶಲದ ವಿಕಾಸ ಸಿಂಧು ತಟದಂತೆ ಸಾಗಿದೆ. ಸಿಂಧು ತಟದಲ್ಲಿ ನಾಗರಿಕತೆ ಅಳಿದಾಗ ನಾನಾರೂಪದಲ್ಲಿ ಗುಜರಾತಿನ ನಾಗರಿಕತೆ ವಿಕಸಿತವಾಗಿತ್ತು.

ಗುಜರಾತು ಭಗವಾನ್ ಕೃಷ್ಣ, ಮಹಾತ್ಮ ಗಾಂಧಿ, ಋಷಿ ದಯಾನಂದರು ಹಾಗೂ ನರಸೀ ಮೆಹತಾ ಮೊದಲಾದವರ ಕ್ರೀಡಾಸ್ಥಲವಾಗಿದೆ. ಪ್ರಾಚೀನ ಕಾಲದಲ್ಲಿ ಗುಜರಾತಿನಲ್ಲಿ ಕುಮಾರಪಾಲನೆಂಬ ರಾಜನು ಪರಾಕ್ರಮಿಯಾಗಿ ಹೆಸರುವಾಸಿಯಾದರೆ ಚತುರ ರಾಜನೀತಿಯಲ್ಲಿ ನವೀನಕಾಲದಲ್ಲಿ ಸರದಾರ ವಲ್ಲಭಭಾಯಿ ಪಟೇಲರು ನೆಗಳ್ತೆವೆತ್ತರು.

ಗುಜರಾತಿನ ಒಂದೊಂದು ನಗರವು ಗೌರವಪೂರ್ಣ ಇತಿಹಾಸವನ್ನು ಪಡೆದಿದೆ. ದ್ವಾರಕೆಯು ಕೃಷ್ಣನ ಬಾಲಲೀಲೆಗಳನ್ನು ನಮ್ಮ ಸ್ಮೃತಿಪಟದಲ್ಲಿ ಅಚ್ಚೊತ್ತುವುದು. ಯಾದವ ವಂಶೀಯರು ನಮ್ಮ ದೇಶದ ಕೀರ್ತಿಯನ್ನು ಬಗದಾದದವರೆಗೂ ಹರಡಿಸಿದ್ದರು. ಕಾತಿಯಾವಾಡದ ಕಾಠೀ ಜನರು ಬೆಬಿಲೋನಿನ ನಾಗರಿಕತೆಯ ಪ್ರವರ್ತಕರೆಂದು ಪ್ರಾಚೀನ ಇರಾಕಿನ ಇತಿಹಾಸಕಾರರು ಹೇಳುತ್ತಾರೆ.

ಸೋಮನಾಥ ದೇವಾಲಯವು ಭಾರತೀಯ ಯಾತ್ರಾಸ್ಥಳಗಳ ಮುಕುಟದಂತಿದೆ. ಜುನಾಗಡವು ನರಸೀ ಮೆಹತಾರಿಂದ ಅಮರವಾಗಿದೆ. 'ಡಾ ಕೌ ರ ಜೀ'ಯು ಎಲ್ಲಾ ವೈಷ್ಣವರಿಗೂ ಬಹುದೊಡ್ಡ ತೀರ್ಥಕ್ಷೇತ್ರವಾಗಿದೆ. ಋಷಿ ದಯಾನಂದರ ಜನ್ಮಭೂಮಿ ಟಂಕಾರಾ ಮತ್ತು ಮಹಾತ್ಮ ಗಾಂಧೀಯವರ ಜನ್ಮಸ್ಥಳ ಪೋರಬಂದರ ಮೊದಲಾದುವುಗಳೂ ಕೂಡಾ ಮಹತ್ವಪೂರ್ಣ ಸ್ಥಳಗಳಾಗಿವೆ. ಸಬರಮತಿ ಆಶ್ರಮದಿಂದ ಗುಜರಾತು ಪ್ರಖ್ಯಾತವಾಗಿದೆ. ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಶ್ರೀಗಣೇಶವನ್ನು ಮಹಾತ್ಮಜೀಯವರು ಅಲ್ಲೆ ಬರೆದರು.

ಗುಜರಾತು ಅನಾದಿಕಾಲದಿಂದಲೂ ಭಾರತದ ವೈದೇಶಿಕ ಕಿಟಿಕಿಯಾಗಿದೆ. ಭರೂಚ್ ಮತ್ತು ಸುಪರಿಖ ಬಂದರುಗಳು ನಮ್ಮ ಮತ್ತು ಏಶಿಯಾ ಜನರ ಸಂಬಂಧವನ್ನು ಬಲಪಡಿಸಿತ್ತು. ಗುಜರಾತಿನ ನಾವಿಕರು ಇಂಡೋನೇಶಿಯಾ ಮಲಯಾ ಮೊದಲಾದ ಕಡೆಗಳ ವ್ಯಾಪಾರವನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡಿದ್ದರು.

ಕೇವಲ ವೈಷ್ಣವ ಅಥವಾ ಹಿಂದೂ ಧರ್ಮದ ದೃಷ್ಟಿಯಿಂದ ಗುಜರಾತು ಮಹತ್ವಪೂರ್ಣವಾಗಿರಲಿಲ್ಲ. ಶತ್ರುಂಜಯ ತೀರ್ಥ ಮತ್ತು ಜೈನಮಂದಿರ ಇಂದಿಗೂ ದರ್ಶನೀಯವಾಗಿದೆ. ಬೌದ್ಧ ಧರ್ಮದ ಕೆಲವು ಗುಹೆಗಳ ಪ್ರಾಚೀನ ಅವಶೇಷಗಳು ಇಂದೂ ಇವೆ.

ಗುಜರಾತು ಪಾರಸಿಗಳ ವಾಸಸ್ಥಾನವಾಗಿದೆ. ಮತ್ತು ಅದು ನಮ್ಮ ದೇಶಕ್ಕೆ ಶ್ರೀ ತಾತಾರಂತಹವರನ್ನಿತ್ತು ಮಾತೃ ಋಣವನ್ನು ತೀರಿಸಲೆತ್ನಿಸಿದೆ. ಗುಜರಾತಿನ ಸೌರಾಷ್ಟ್ರದಲ್ಲೆ ಪಾಕಿಸ್ತಾನದ ಸ್ಥಾಪಕರಾದ ಮಹಮ್ಮದಅಲಿ ಜಿನ್ನರವರು ಜನ್ಮತಾಳಿದ್ದರು ರಣಜಿತ ಸಿಂಹ ಮತ್ತು ದಿಲೀಪ ಸಿಂಹರಂತಹ ಶ್ರೇಷ್ಠ ಆಟಗಾರರು ಗುಜರಾತದಲ್ಲಿ ಹುಟ್ಟಿಕೊಂಡಿರುವರು.

ಯಾದವರ ಕಾಲದಿಂದಲೂ ಜನರು ಇಲ್ಲಿ ಜನಪದ ನೃತ್ಯವೊಂದನ್ನು ಮಾಡುತ್ತಿರುತ್ತಾರೆ. ಶ್ರೀ ಧೂಮಕೇತು, ಶ್ರೀ ಮುನ್ಶಿ ಮೊದಲಾದ ಉತ್ಕೃಷ್ಟ ಸಾಹಿತ್ಯಕಾರರ ನೆಲೆವೀಡು ಕೂಡಾ ಆಗಿದೆ ಇದು. ಬಡೋದೆಯ ಮಹಾರಾಜ ಶ್ರೀ ಸಯಾಜೀರಾವ ಗಾಯಕವಾಡ ಹಾಗೂ ಪೋರ್ ಬಂದರಿನ ಶ್ರೀ ಪ್ರಭಾಶಂಕರ ಪಟ್ಟಣಿಕಾರರ ಹೆಸರು ಇತಿಹಾಸದಲ್ಲೆ ಸುಪ್ರಸಿದ್ಧವಾಗಿದೆ.

ಅಹಮದಾಬಾದ್ ನಗರವು ಕೇವಲ ವ್ಯಾಪಾರ ಮತ್ತು ಔದ್ಯೋಗಿಕ ಕ್ಷೇತ್ರವಲ್ಲ. ಅಲ್ಲಿಯ ಜುಮಾಮಸೀದಿ ಲೋಕಪ್ರಸಿದ್ಧವಾಗಿದೆ. 15ನೆ ಶತಮಾನದಲ್ಲಿ ನಿರ್ಮಿತವಾದ ಈ ನಗರ ಲಂಡನಿನ ಸಂಸದು ಮಾನವಾಗಿದೆ.

ಖಂಭಾತಿನ ತೊಲ್ಲಿಯ ಸಮೀಪದಲ್ಲಿ ಎಣ್ಣೆ ಸಿಗುವುತ್ತದೆ. ಅದು ಅಲ್ಲಿಯ ಔದ್ಯೋಗಿಕ ಕ್ಷೇತ್ರವನ್ನು ಇನ್ನೂ ವಿಸ್ತಾರಗೊಳಿಸಿದೆ. ಹೊಸ ಗುಜರಾತು ಹಿಂದಿನ ಸೌರಾಷ್ಟ್ರದ ಸಮುದ್ರ ತಟವನ್ನು ಪುನಃ ಪಡೆಯುತ್ತಿದೆ. ಇಂದು ಗುಜರಾತು ತನ್ನ ಗೌರವಸ್ಥಾನವನ್ನು ಪಡೆದು ಪುನರೋದಯವಾಗುತ್ತಿವೆ.

ಮಹಾರಾಷ್ಟ್ರವೂ ಕೂಡಾ ಅಂದೇ ಆರಂಭವಾಗಿದೆ. ಅದು ಕೇವಲ ಔದ್ಯೋಗಿಕ ಮತ್ತು ವ್ಯಾಪಾರ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದುದಲ್ಲದೆ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಉಚ್ಚ ಗೌರವವನ್ನು ಪಡೆದಿದೆ. ಪ್ರಸಿದ್ಧ ತೀರ್ಥಗಳು, ಪಾಪನಾಶಿನಿ ನದಿಗಳು, ಕಲೆ, ಚಿತ್ರಕಲೆ ಇತ್ಯಾದಿಗಳು, ವೀರಯೋಧರ ಕೀರ್ತಿಸ್ತಂಭಗಳು, ಬೇರೆಬೇರೆ ಧರ್ಮಗಳ ಪವಿತ್ರ ಸ್ಥಳಗಳು ಅಲ್ಲಿವೆ.

ಪ್ರಾಕೃತಿಕ ಬೆಡಗು ಅಲ್ಲಿದೆ. ಅದು ನಮ್ಮ ದೇಶಕ್ಕೆ ಬಲಿಷ್ಠ ಸ್ತ್ರೀಪುರುಷರನ್ನಲ್ಲದೆ ಮನುಷ್ಯ ಜೀವನಕ್ಕೆ ಅವಶ್ಯವಾದ ಪ್ರತಿಭೆಯನ್ನು ಇತ್ತಿದೆ. ಗೋದಾವರಿ ತಟದ ನಾಸಿಕ ಭಾರತೀಯರ ಪುಣ್ಯ ಕ್ಷೇತ್ರವಾಗಿದೆ. ಗಂಗೆ ಗೋದಾವರಿಗಳೆಡೆಯಲ್ಲಿ ಪ್ರಾಚೀನ ಕಾಲದಲ್ಲಿ ಅತ್ರಿ, ಅನುಸೂಯ ಮೊದಲಾದವರ ಮುನಿಪುಂಗವರ ಭಾರತೀಯ ನಾಗರಿಕತೆ ಗುಡಿಯನ್ನೆತ್ತಿ ಹಿಡಿದಿದ್ದರು. ರಾಮನು ಅಲ್ಲೆ ವಾಸವಾಗಿದ್ದು ಆ ಸ್ಥಳದ ಮಹಾತ್ಮ್ಯೆ ಹೆಚ್ಚಿದೆ. ನಾಸಿಕ ನಯನಾಭಿರಾಮವಾಗಿದೆ. ಸಹ್ಯಾದ್ರಿಯ ತೆಪ್ಪಲಲ್ಲಿರುವ ನಾಸಿಕವು ಪುರಾಣಕಾಲದಿಂದಲೂ ಹೆಸರುವಾಸಿಯಾಗಿದೆ.

ಕಲೆಯ ದೃಷ್ಟಿಯಿಂದ ವಿವೇಚಿಸುವುದಾದರೆ ಅಜಂತ ಎಲ್ಲೋರಾಗಳು ಜಗತ್ಪ್ರಸಿದ್ಧವಾಗಿವೆ. ಅಜಂತದಲ್ಲಿ ನಾವು ಶಿಲ್ಪಕಲೆಯ ಲಾಸ್ಯರೂಪವನ್ನು ಕಂಡಲ್ಲಿ ಎಲ್ಲೋರದಲ್ಲಿ ದೊಡ್ಡ ಬಂಡೆಯನ್ನೆ ಕಡಿದು ಮಾಡಿದ ತಾಂಡವ ರೂಪವನ್ನು ಕಾಣುತ್ತೇವೆ. ಕಾರ್ಲಾ ಮತ್ತು ಕಾಷ್ನೇರಿಯ ಗುಹೆಗಳು ಎಲಿಫೆಂಟದ ತ್ರಿಮೂರ್ತಿ ಮಂದಿರವು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ನಿಂತಿವೆ.

ಅರ್ವಾಚೀನ ಸಿಂಹಗಢದ ಕೋಟೆಯ ನಿರ್ಮಾಣವು ನಮ್ಮ ದೇಶದಲ್ಲೇ ಅದ್ವಿತೀಯವಾಗಿದೆ. ದೌಲತಬಾದಿನ ಚಾರಮಿನಾರ್ ಮತ್ತು ಔರಂಗಬಾದಿನ ಬೀಬಿಕಾಮಕಬರಾ ಮಧ್ಯಕಾಲೀನ ಶಿಲ್ಪಗಳಲ್ಲಿ ಶ್ರೇಷ್ಠವಾಗಿದೆ.

ಛತ್ರಪತಿ ಶ್ರೀ ಶಿವಾಜಿಯ ಉತ್ತರಾಧಿಕಾರಿಗಳಾದ ಪೇಶವೆಗಳಿಂದಲೇ ಮಹಾರಾಷ್ಟ್ರೀಯರ ಚರಿತ್ರೆ ಆರಂಭವಾಯಿತೆಂದು ಕೆಲ ಇತಿಹಾಸಕಾರರು ಹೇಳುತ್ತಾರೆ. ಆದರೆ ಮಹಾರಾಷ್ಟ್ರವನ್ನು, ಪ್ರಾಚೀನ ಚಾಲುಕ್ಯರು, ಯಾದವರು ಹಾಗೂ ರಾಷ್ಟ್ರಕೂಟರು ಉತ್ತರ ದಕ್ಷಿಣದ ಸಂಸ್ಕೃತಿ ಮಿಲನ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಚಾಲುಕ್ಯ ಚಕ್ರವರ್ತಿ ಶ್ರೀ ಪುಲಕೇಶಿಯ ವಿಚಾರ ತಾವೆಲ್ಲಾ ತಿಳಿದಿರುವಿರಿ. ಸ್ವಾತಂತ್ರ್ಯ ಆಂದೋಲನದ ವೀರ ಶ್ರೀ ಲೋಕಮಾನ್ಯ ತಿಲಕ ಮತ್ತು ಗೋಪಾಲಕೃಷ್ಣ ಗೋಖಲೆಯವರು ಮಹಾರಾಷ್ಟ್ರೀಯರೇ ಆಗಿರುವರು.

ಸಾಹಿತ್ಯ ಮತ್ತು ಸಂಗೀತ ದೃಷ್ಟಿಯಿಂದ ನಾವಿಲ್ಲಿ ವಿಚಾರಮಾಡೋಣ. ಸಂತ ಜ್ಞಾನೇಶ್ವರ, ನಾಮದೇವ, ತುಕಾರಾಮ ಮತ್ತು ಸಮರ್ಥ ರಾಮದಾಸ ತಮ್ಮ ಭಕ್ತಿಗೀತಗಳಿಂದ ಧಾರ್ಮಿಕ ಆಂದೋಲನವನ್ನೆ ಇಲ್ಲಿ ಮಾಡಿದ್ದಾರೆ. ಇಂದು ಕೂಡಾ ಪೂನೆಯು ಭಾರತದ ಸಾಂಸ್ಕೃತಿಕ ರಾಜಧಾನಿಯಾಗಿದೆ. ಅಲ್ಲಿ ಮನೆಮನೆಯಲ್ಲಿ ವಿದ್ಯಾಲಯಗಳಿವೆ. ಸಂಶೋಧನಾ ಮಂದಿರಗಳಿವೆ. ಒಂದು ಮನೆಯಲ್ಲಿ ಎಷ್ಟು ವಿದ್ವಾಂಸರು ತುಂಬಿರುವರೆಂದು ತಿಳಿಯುವುದೇ ಕಠಿಣವಾಗಿದೆ. ಅಲ್ಲಿಯ ಪ್ರಾಕೃತಿಕ ವಾತಾವರಣವು ಸುಂದರವಾಗಿದೆ. ವಿದರ್ಭ ದೇಶದ ಕನ್ಯೆಯಾದ ಇಂದುಮತಿ ವಿವಾಹವನ್ನು ಕಾಲಿದಾಸನು ಬಣ್ಣಿಸಿರುವನು. ಆ ವಿದರ್ಭ ಇಂದು ಮಹಾರಾಷ್ಟ್ರಕ್ಕೆ ಸೇರಿದೆ. ದಮಯಂತಿ, ರುಕ್ಮಿಣಿ ಮತ್ತು ಇಂದುಮತಿ ಮೊದಲಾದ ಸುಂದರ ಸ್ತ್ರೀಯರಿಗೆ ವಿದರ್ಭ ಪ್ರಸಿದ್ಧವಾಗಿದೆ. ಆದ್ದರಿಂದ ಇಲ್ಲಿಯೆ ಅಪಹರಣ ಕೂಡಾ ಆಗುತ್ತದೆ. ಕೃಷ್ಣ ರುಕ್ಮಿಣಿಯರ ಅಪಹರಣದ ಕತೆ ಯಾರಿಗೆ ತಾನೆ ತಿಳಿದಿಲ್ಲ'

ಯಕ್ಷನು ತನ್ನ ಪ್ರೇಯಸಿಗೆ ತನ್ನ ಸಂದೇಶ ಕಳುಹಿಸಿದ ರಾಮಚೇತ ಇಲ್ಲಿದೆ. ಇದರಲ್ಲಿ ಆಶ್ಚರ್ಯವೇನೂ ಯಿಲ್ಲ. ಸರ್ವೋತ್ತಮ ಕಾವ್ಯವನ್ನು ಕಾಲಿದಾಸ ರಾಮಚೇತದಲ್ಲೆ ಬರೆದಿರುವನೆಂಬುದರಲ್ಲಿ ಸತ್ಯಾಂಶವಿಲ್ಲದಿಲ್ಲ.

ಭಾತಖಂಡೆ, ವಿಷ್ಣು ದಿಗಂಬರ, ಪುಲುಸ್ಕರ ಮೊದಲಾದ ಸಂಗೀತಜ್ಞ ಮಹಾರಾಷ್ಟ್ರೀಯರಿದ್ದಾರೆ. ಮಹಾರಾಷ್ಟ್ರೀಯರ ನಾಟಕಶಾಲೆ ಮತ್ತು ಚಲಚಿತ್ರಗಳು ಭಾರತೀಯ ಸಂಸ್ಕೃತಿ ಹಾಗೂ ಸಂಗೀತದ ಉನ್ನತ ಮಟ್ಟವನ್ನೇ ಸೂಚಿಸುತ್ತವೆ.

ಮಹಾರಾಷ್ಟ್ರವು ಈ ರೀತಿಯಾಗಿ ಮಾನವನ ಸಮಗ್ರ ವಿಕಾಸದ ಪ್ರತೀಕವಾಗಿದೆ. ಹಿಂಗಡೆಯಲ್ಲಿ ಆಚಾರ್ಯ ಕರ್ವೆಯವರ ಪ್ರಸಿದ್ಧ ಶಿಕ್ಷಣಸಂಸ್ಥೆಯಿದೆ. ಪೂನಾದಲ್ಲಿ ಮಹಾರಾಷ್ಟ್ರೀಯ ಮಂಡಲದ ವ್ಯಾಯಾಮಕೇಂದ್ರವಿದೆ. ಅಲ್ಲಿ ಚಿಕ್ಕ ಬಾಲಕರಿಂದ ಹಿಡಿದು ಯುವಕರವರೆಗೂ ಶಾರೀರಿಕ ಶಿಕ್ಷಣ, ಸೈನಿಕ ಶಿಕ್ಷಣ ಮೊದಲಾದುವನ್ನು ಕೊಡುತ್ತದೆ. ಇಂದು ಮಹಾರಾಷ್ಟ್ರ ಒಂದಾಗಿದೆ. ನಮ್ಮ ದೇಶ ವಿಕಾಸದಲ್ಲಿ ಅದು ತನ್ನ ಉಚಿತ ಸ್ಥಾನವನ್ನು ಬೇಗನೆ ಪಡೆಯದಿರಲಾರದು.

(ನವಭಾರತ ಟೈಮ್ಸ್‌ದಿಂದ)

—ಕೆ. ದಾಮೋದರ ಐತಾಳ, ಉಡುಪಿ

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನೋಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

NAVAYUGA

Founder:—

Late Sri. A. B. SHETTY.
ormer Minister for Public Health
ovt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೯-೫-೬೦	೨೭

ವಿಶ್ವಶಾಂತಿಗೆ ಆಘಾತ

ಶಾಶ್ವತ ಶಾಂತಿಯನ್ನು ವಿಶ್ವದಲ್ಲಿ ಸಂಸ್ಥಾಪಿಸಬೇಕು ಎಂದು ಜಗತ್ತಿನ ಎಲ್ಲ ಹಿರಿಯ, ಕಿರಿಯ ರಾಷ್ಟ್ರಗಳು ಮನಸಾ ಬಯಸಿ, ಈಗಾಗಲೇ ಪ್ರಾರಂಭವಾದ ಶೃಂಗ ಸಮ್ಮೇಳನದ ಫಲಶ್ರುತಿಯಲ್ಲಿ ವಿಶ್ವಾಸವಿಟ್ಟಂತೆಯೇ ಈ ವಿಶ್ವಾಸವನ್ನು ಅಳಿದು ಬಿಡುವಂತಹ ದುರ್ಘಟನೆ ನಡೆದುದರಿಂದ ಬೇಸರದ ನಿಟ್ಟುಸಿರು ಬಿಡುವಂತಾಗಿದೆ. ಈ ಸಮ್ಮೇಳನದಲ್ಲಿ ಚರ್ಚೆಯ ವಿಷಯಗಳು ಹಲವಾರಿದ್ದರೂ ವಿಶ್ವಶಾಂತಿಯ ಪ್ರಶ್ನೆಯೇ ಅತಿ ಪ್ರಧಾನವಾದುದಾಗಿತ್ತು. ಆದರೆ, ನಾಯಕ ರಾಷ್ಟ್ರಗಳಾದ ಅಮೆರಿಕೆ ಮತ್ತು ರಶ್ಯಗಳ ಅಗ್ರೇಸರರು ಪರಸ್ಪರ ಸಂದೇಹ ಭಾವನೆಯಿಂದ ದೋಷ ಪ್ರತಿದೋಷಾರೋಪಣೆ ತೊಡಗಿದುದರ ಫಲವಾಗಿ ಸಮ್ಮೇಳನವು ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿಯಿತೆಂದೂ ನಾವು ಕೇಳುತ್ತೇವೆ. ಜಗ, ಸಮಸ್ಯೆಗಳಿಗೆ ಪರಿಹಾರವನ್ನು ಅರಸಬೇಕಾಗಿದ್ದ ಶೃಂಗ ಸಮ್ಮೇಳನವು ಮತ್ತೂ ಹೆಚ್ಚಿನ ಸಮಸ್ಯೆಗಳಿಗೆ ದಾರಿಮಾಡಿಕೊಟ್ಟು ಕೊನೆಗೊಂಡಿತು ಎಂದು ಹೇಳುವುದು ಅತಿಶಯೋಕ್ತಿಯೆನಿಸದು.

ಅಮೆರಿಕೆ-ರಶ್ಯಗಳ ಜಿದ್ದು ಇಂದು ನಿನ್ನಿನದಲ್ಲ. ಕೆಲವು ವಾರಗಳ ಮೊದಲು, ಅಮೆರಿಕೆಯ ವಿಮಾನವೊಂದು ರಶ್ಯನ್ ವಾಯುಮಂಡಳವನ್ನು ಅತಿಕ್ರಮಿಸಿತೆಂದೂ ಈ ಅತಿಕ್ರಮಣಕ್ಕೆ ರಶ್ಯದ ಮೇಲಿನ ಗೂಢಚಾರವನ್ನು ಹಾರಾಡಿಸುವ ಅಮೆರಿಕೆಯ ಇರಾದೆ ಹಾಗೂ ಉದ್ದೇಶವೇ ಮೂಲಕಾರಣವೆಂದೂ ರಶ್ಯವು ಮೊದಲೇ ಆರೋಪಿಸಿತ್ತು. ಅಲ್ಲದೇ ಆ ವಿಮಾನವನ್ನು ಕೆಡೆಸಿಯೂ ಆಗಿತ್ತು. ಅಮೆರಿಕೆಯಾದರೋ, ಈ ವಿಮಾನವು ಯಾವ ದುರುದ್ದೇಶದಿಂದಲಾದರೂ ಅತ್ತ ಹಾರಿದುದಿಲ್ಲ ಎಂದನ್ನುತ್ತಿದೆ. ಆದರೆ, ಈ ಮಾತನ್ನು ಅಥವಾ ಹೇಳಿಕೆಯನ್ನು ಅಕ್ಷರಶಃ ನಂಬುವುದು ಸಾಧ್ಯವಿಲ್ಲ. ಅದೇನೇ ಇದ್ದರೂ ಈ ವ್ಯಥನೀಯ ಘಟನೆಯ ದುಷ್ಪರಿಣಾಮವು ವರಿಷ್ಠ ಸಮ್ಮೇಳನದ ಮೇಲೆ ಸಾಕಷ್ಟು ಬೀರಿದುದರಿಂದ ಅದು ನಿಷ್ಫಲವಾಗಿದೆ. ಆದುದರಿಂದ ವರಿಷ್ಠ ಸಮ್ಮೇಳನವು ಮುಂದುವರಿದುದಕ್ಕೆ ಈ ದುರ್ಘಟನೆಯೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಶೃಂಗ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಈ ಘಟನೆ ನಡೆದರೂ ಅದಕ್ಕೂ ಮೊದಲು ಸಮ್ಮೇಳನವು ಫಲಪ್ರದವಾಗಲಾರದು ಎಂದು ಅಭಿಪ್ರಾಯ ಪಡಲಾಗಿತ್ತು. ಮುಂದೆ ವಿಮಾನ ಪ್ರಕರಣವನ್ನು ಗಮನಕ್ಕೆ ತಂದಾಗ ಸಮ್ಮೇಳನ ಸೇರುವ ಅವಕಾಶವೇ ಕಡಿಮೆಯೆಂದು ಊಹಿಸಲಾಗಿತ್ತು. ಸಮ್ಮೇಳನವೇನೋ ಸೇರಿತಾದರೂ ಅದರ ಪ್ರಾರಂಭದಲ್ಲಿಯೇ ಅಪಶಕುನಗಳು ಗೋಚರಿಸತೊಡಗಿ ಅಂದೇ ಅನಿರ್ದಿಷ್ಟಾವಧಿಯವರೆಗೆ ಮುಂದುವರಿದು ಹೋದುದನ್ನು ನೋಡುವಾಗ, ಭಿನ್ನಾಭಿಪ್ರಾಯದ ಪರಮಾವಧಿಯಿದು ಎಂದು ಹೇಳಬಹುದು. ಸಮ್ಮೇಳನದಲ್ಲಿ ಭಾಷಣ ಮಾಡಿದ ಐಕ ಅಥವಾ ಕ್ರುಶೇವರು ವಿಶ್ವಶಾಂತಿಯನ್ನೇನೋ ಬಯಸಿದ್ದರು. ಆದರೆ, ಪರಸ್ಪರ ಸಮ್ಮೇಳನವನ್ನು ವ್ಯರ್ಥಗೊಳಿಸುವ ಕೃತ್ಯಗಳನ್ನು ಮಾಡುತ್ತಾರೆ ಎಂದು ಒಬ್ಬರನ್ನೊಬ್ಬರು ಆರೋಪಿಸಿಕೊಂಡರು. ಹೀಗೆ ಉಭಯ ನಾಯಕರು ಆರೋಪ ಪ್ರತ್ಯಾರೋಪಗಳನ್ನು ಮಾಡಿಕೊಂಡುದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗಿ, ಸಮ್ಮೇಳನವನ್ನೇ ಮುಂದುವರಿಸುವ ಗತಿ ತಲೆದೋರಿತು. ರಶ್ಯನ್ ಪ್ರಧಾನಿ ಶ್ರೀ ಕ್ರುಶೇವರು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದ್ದಾರೆ— "ಈ ಸಮ್ಮೇಳನವು ಜಗತ್ತಿನ ಎಲ್ಲ ರಾಷ್ಟ್ರಗಳು ಹಾರೈಸಿದಂತಹ ಪರಿಣಾಮವನ್ನು ಉಂಟುಮಾಡದಿದ್ದುದು ನಮಗೆ ವಿಷಾದವನ್ನುಂಟುಮಾಡುವುದು; ಸೋವಿಯೆತ್ ಒಕ್ಕೂಟದೆಡೆಗೆ ವಿರೋಧಕೋರನೀತಿಯನ್ನು ಸಾರಿದವರ ಮೇಲೆ ಇದರ ಅಪಕೀರ್ತಿ ಮತ್ತು ಹೊಣೆಗಾರಿಕೆಯು ಹೇರಲ್ಪಡಲಿ"— ಇಷ್ಟು ಕಠೋರವಾದ ಉಕ್ತಿಯನ್ನು ನುಡಿದುದು ಮಾತ್ರವಲ್ಲ, ಅಮೆರಿಕೆಯು ಗೂಢಚಾರತನವನ್ನು ಕೈಗೊಂಡುದು ಶಾಂತಿನೀತಿಯಾಗಿರದೆ ಅನೀತಿಯೆಂದು ಸಾರಿದರು; ಅಲ್ಲದೇ ಮುಂದಿನ ಮಾಹೆಯಲ್ಲಿ ರಶ್ಯಕ್ಕೆ ಆಗಮಿಸಲು ಐಕರಿಗಿತ್ತ ಆಮಂತ್ರಣವನ್ನೂ ಅವರು ಹಿಂತೆಗೆದುಕೊಂಡರು. ಹೀಗಾಗಿ ಬಿಕ್ಕಟ್ಟು ಬಿರಿದುಹೋಗಿ ಸಮ್ಮೇಳನವು ವ್ಯರ್ಥವಾಗಿ ವಿಶ್ವಶಾಂತಿಯು ಮಾತು, ದೂರ, ಬಹುದೂರ ಉಳಿಯಿತು.

'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬಂತೆ ಬಹುಕಾಲ ಪ್ರಯತ್ನಿಸಿ, ಎದುರುಬಂದ ನಾನಾ ಅಡೆತಡೆಗಳನ್ನು ಪ್ರಯತ್ನಪೂರ್ವಕವಾಗಿ ದೂರೀಕರಿಸಿ, ಸಮ್ಮೇಳನವು ಕೂಡಿದರೂ, ಅಮೆರಿಕೆಯು ನಿರ್ವಹಿಸಿದ ನೀತಿಯಿಂದಾಗಿ ಅದು ನಿಷ್ಫಲವಾಯಿತು. ಸಮ್ಮೇಳನವು ಸೇರಿದ್ದರೂ ಅದರಿಂದ ಬಹು ಫಲ ದೊರೆಯುವ ಅಭಿಲಾಷೆಯನ್ನು ಕಟ್ಟಿಕೊಂಡಿರುವುದು ಸಾಧ್ಯವಿಲ್ಲವಾದರೂ ಪ್ರಚಲಿತ ಪರಿಸ್ಥಿತಿಯು ತೀವ್ರ ಗಂಭೀರವಾಗಿ ಎಂದಿಗೂ ಪರಿಣಮಿಸುತ್ತಿದ್ದಿಲ್ಲ. ಆದರೆ, ಇಂದು ನಡೆದ ಘಟನೆಯು ನಮಗೆ ನಿರಾಶಾಮಯ ವಾತಾವರಣವನ್ನು ಬೀಸಿಬಿಟ್ಟಂತಾಯಿತು. ಒಮ್ಮೆ ತಲೆದೋರಿದ ಈ ಬಿರುಕನ್ನು ಮತ್ತೆ ಬೆಸೆಯಲು ಇನ್ನೆಷ್ಟು ಕಾಲ ಬೇಕಾಗಬಹುದು ಎಂದು ಹೇಳಬರುವುದಿಲ್ಲ. ಕ್ರುಶೇವ-ಐಕರು ದೂರಿಕೊಂಡುದಲ್ಲದೇ ಅವರ ಬಿರಿದಮನಸ್ಸು ನಾಲ್ಕು ನಾಲ್ಕು ಪರುಷ ಮಾತುಗಳನ್ನೂ ಆಡಿಸಿಬಿಟ್ಟಿತು. ಬ್ರಿಟನ್ನಿನ ಮ್ಯಾಕಮಿಲನರು ಅಮೆರಿಕೆಗೆ ಬೆಂಬಲ ಸೂಚಿಸಿ ವಿಮಾನ ಹಾರಾಟದಿಂದ ಶೃಂಗ ಸಮ್ಮೇಳನದ ಕಾರ್ಯಕ್ರಮವು ತಡೆಯಬಾರದೆಂಬ ಆಶಯವನ್ನು ವ್ಯಕ್ತಪಡಿಸಿದ್ದರು. ಡಿಗಾಲೆಯವರೂ ರಶ್ಯದ ನೀತಿಯನ್ನು ಖಂಡಿಸಿದರೂ ವಾಯುಮಂಡಳವನ್ನು ಅತಿಕ್ರಮಿಸುವುದು ಸರಿಯಲ್ಲವೆಂದು ಅಭಿಪ್ರಾಯ ಸೂಚಿಸಿದರು. ಸಮ್ಮೇಳನವು ಮುಂದುವರಿದೊಡನೆಯೇ ಡಿಗಾಲೆಯವರು ಏರ್ಪಡಿಸಬೇಕೆಂದು ನಿರ್ಧರಿಸಿದ್ದ ಭೋಜನಸಮಾರಂಭವನ್ನೂ ಮನ್ನಾ ಮಾಡಿಬಿಟ್ಟರೆಂಬುದನ್ನು ನಾವು ನೋಡುವಾಗ, ಶೃಂಗ ಸಮ್ಮೇಳನದ ವಾತಾವರಣವು ಸಂಪೂರ್ಣ ಕಲುಷಿತವಾಗಿತ್ತು ಎಂದು ಹೇಳಬೇಕಾಗುತ್ತದೆ. ಹಾಗಾಗಿ ಇನ್ನೂ ಬಹುಕಾಲ ಪುನಃ ಈ ಸಮ್ಮೇಳನ ಕೂಡುವ ನಿಷ್ಕಲಂಕ ಮನೋವೃತ್ತಿ ಚತುರ್ನಾಯಕರಲ್ಲಿ ತಲೆದೋರಲಾರದು ಎಂದು ಹೇಳಬಹುದು. ಹಾಗಾಗಿ ಶಾಂತಿಯನ್ನು ಬಯಸುವವರಿಗೆ ಈ ನಿಷ್ಫಲತೆಯಿಂದ ಅತುಲ ವ್ಯಥೆಯಾಗಿರುವುದು ಮಾತ್ರವಲ್ಲ; ಶಾಂತಿಮಾರ್ಗದಲ್ಲಿ ಪುನಃ ಅಂಧಕಾರವು ಗಾಢವಾಗಿ ಹರಡಿತೆಂದೂ ಈ ತಮವನ್ನು ಭೇದಿಸುವ ದಿವಾಕರೋದಯ ಬಹುದೂರವೆಂದೂ ಅವರು ಯೋಚಿಸುವಂತಾಗಿದೆ. ಜಗತ್ತಿಗೆ ಮಾರ್ಗದರ್ಶನ ಮಾಡಬೇಕಾದ ಮಹಾರಾಷ್ಟ್ರಗಳು ಶಾಂತಿ ಶಾಂತಿಯೆಂದು ಉಚ್ಚರಿಸಿ, ಈ ರೀತಿಯಾಗಿ ವರ್ತಿಸುವುದರಿಂದ ಶಾಂತಿಸಾಧನೆಯಾಗಲಿಲ್ಲ; ಬದಲು ಅಶಾಂತಿಯೇ ಹೆಚ್ಚಿದಂತಾಯಿತು.

ಸ್ತುತ್ಯ ಉಪಕ್ರಮ

ವಿದ್ಯಾಭ್ಯಾಸವು ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುವುದರಿಂದ, ನಾಗರಿಕ ರಾಷ್ಟ್ರಗಳಲ್ಲಿ ಶೈಕ್ಷಣಿಕಕ್ಷೇತ್ರಕ್ಕೆ ಅಗ್ರಗಣ್ಯ ಸ್ಥಾನವಿದೆ. ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಈಗಾಗಲೇ ಕೊಡುತ್ತಿರುವ ಕರ್ನಾಟಕ ರಾಜ್ಯಸರಕಾರವು ಮುಂದಿನ ಶೈಕ್ಷಣಿಕ ವರ್ಷದಿಂದ ಮಾಧ್ಯಮಿಕ ಶಿಕ್ಷಣದ ಬಗ್ಗೆಯೂ ಅದೇ ಧೋರಣೆಯನ್ನು ಕೈಗೊಳ್ಳುವ ನಿರ್ಧಾರ ಮಾಡಿದೆ. ಇದರಂತೆ ವಾರ್ಷಿಕ ರೂ. ೧,೨೦೦ಕ್ಕಿಂತ ಕಡಿಮೆ ಆದಾಯವಿರುವವರ ಮಕ್ಕಳಿಗೆಲ್ಲ ಮಾಧ್ಯಮಿಕ ಶಿಕ್ಷಣದವರೆಗೆ ಉಚಿತ ವಿದ್ಯಾಭ್ಯಾಸವನ್ನು ಒದಗಿಸಲಾಗುವುದು. ಸರಕಾರದ ಆದಾಯದಲ್ಲಿ ಬಹುಭಾಗ ವಿದ್ಯಾಸೌಕರ್ಯಕ್ಕಾಗಿ ವ್ಯಯವಾಗುತ್ತಿದೆ; ಅಲ್ಲದೇ ಸರಕಾರವು ಹೊಸತಾಗಿ ರೂಪಿಸುತ್ತಿರುವ ನೂತನ ವಿದ್ಯಾಯೋಜನೆಗಳು, ಹೆಚ್ಚಿನ ಸೌಲಭ್ಯಗಳಿಂದಾಗಿ ಈ ವೆಚ್ಚವು ದಿನಂಪ್ರತಿ ಏರುತ್ತಲೇ ಇರುತ್ತದೆ. ಹಾಗಿರುವಾಗ, ಸರಕಾರದ ಈ ಹೊಸ ನಿರ್ಧಾರದಿಂದ ಈ ವೆಚ್ಚವು ಮತ್ತೂ ಹೆಚ್ಚುವುದು ಖಂಡಿತವೇ. ಈ ಏರಿಕೆಯನ್ನು ಅಡೆಗಣಿಸಿ, ನಿರ್ಧಾರವನ್ನು ಮಾಡಿದ ರಾಜ್ಯಸರಕಾರವನ್ನು ನಾವು ಅಭಿನಂದಿಸುತ್ತೇವೆ. ಆದರೆ, ಮಾಸಕ್ಕೆ ೧೦೦ ರೂಪಾಯಿಯೆಂಬುದೇನೂ ಇಂದಿನ ತುಟ್ಟಿಯ ಕಾಲದಲ್ಲಿ ಹೆಚ್ಚಿನದೆಂದು ಹೇಳಬಾರದು. ನಿಮಿಷ ನಿಮಿಷಕ್ಕೂ ಜೀವನ ಮಟ್ಟವು ಏರುತ್ತಿರುವ ಈ ಕಾಲದಲ್ಲಿ ಕನಿಷ್ಠ ಮಾಸಿಕ ಆದಾಯವೇ ರೂ. ೧೦೦ಕ್ಕಿಂತ ಹೆಚ್ಚಿರಬೇಕಾದುದು ಅವಶ್ಯವಿದೆ. ನಾಲ್ಕೈದು ಸದಸ್ಯರುಳ್ಳ ಒಂದು ಕುಟುಂಬವು ಜೀವನ ನಡೆಸಬೇಕಾದರೆ ಬರುವ ವೆಚ್ಚವನ್ನೂ ಈ ರೂ. ೧೦೦ನ್ನೂ ನಾವು ಗಮನಿಸುವಾಗ ಎರಡನೆಯದು ತೀರ ಹೀನಸ್ಥಿತಿಯಲ್ಲಿದೆ ಎಂದು ಹೇಳಬೇಕು. ಆದುದರಿಂದ, ಉಚಿತ ಶಿಕ್ಷಣ ಸೌಲಭ್ಯವನ್ನು ಪಡೆಯುವ ಮಕ್ಕಳ ಪಾಲಕರ ಇಲ್ಲವೇ ಹೆತ್ತವರ ಕನಿಷ್ಠ ಆದಾಯದ ಮಿತಿಯನ್ನು ರೂ. ೧,೮೦೦ಕ್ಕಾದರೂ ಏರಿಸಬೇಕಾದುದು ಸದ್ಯ ನ್ಯಾಯೋಚಿತವಿದೆ. ರಾಜ್ಯಸರಕಾರವು ಸಕಾಲದಲ್ಲಿ ಇತ್ತ ಗಮನಹರಿಸುವುದೆಂದು ಹಾರಯಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಶಿಕ್ಷಕರ ಸಂಬಳ ಹೆಚ್ಚಬೇಕು

ಲೋಕ ಸಭೆಯಲ್ಲಿ ದಿಲ್ಲಿ ರಾಜ್ಯ ಪ್ರಾಥಮಿಕ ಶಿಕ್ಷಣ ವಿಧೇಯಕದ ಬಗ್ಗೆ ಚರ್ಚೆನಡೆದಾಗ ಶಿಕ್ಷಣವಷ್ಟೇ, ಶಿಕ್ಷಕರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಬಡ ವಿದ್ಯಾರ್ಥಿಗಳಿಗೆ ಸಹಾಯ ಒದಗಿಸಬೇಕೆಂದು ಸದಸ್ಯರು ಕೇಳಿಕೊಂಡರೆನ್ನಲಾಗಿದೆ. ಈ ಕಾಲ ಶಿಕ್ಷಣ ಮಂತ್ರಿ ಡಾ| ಶ್ರೀಮಾಲಿಯವರು ಮಾತನಾಡುತ್ತಾ ಶಿಕ್ಷಕರ ಸಂಬಳ ಸ್ಥಿತಿ ಸುಧಾರಿಸದೆ ಶಿಕ್ಷಣದ ಸುಧಾರಣೆಯ ಯಾವುದೇ ಪ್ರಯತ್ನ ಯಶಸ್ವಿಯಾಗಲಾರದೆಂದು ತನಗೆ ಮನವರಿಕೆಯಾಗಿದೆಯೆಂದೂ ಹೇಳಿದರು. ಶಿಕ್ಷಕರ ಸಂಬಳ ಸುಧಾರಿಸಲು ತಗಲುವ ವೆಚ್ಚದಲ್ಲಿ ಅರ್ಧಾಂಶವನ್ನು ಕೇಂದ್ರ ಸರಕಾರವು ವಹಿಸಲು ಒಪ್ಪಿದ್ದರೂ ಕೆಲವು ರಾಜ್ಯಗಳು ಈ ಕೊಡುಗೆಯನ್ನು ಸ್ವೀಕರಿಸಲಿಲ್ಲವೆಂದೂ ಅವರು ಹೇಳಿದರು.

ರಾಜ್ಯ ಸಂಗೀತ ನಾಟಕ ಅಕೆಡೆಮಿಯ ಪುನಾರಚನೆ—

ಮೈಸೂರು ರಾಜ್ಯದ ಸಂಗೀತ ಮತ್ತು ನಾಟಕ ಅಕೆಡೆಮಿಯ ಸಾಧಾರಣ ಸಭೆ ಕಾರ್ಯಕಾರೀ ಮಂಡಳಿಯನ್ನು ರಾಜ್ಯ ಸರಕಾರವು ಪುನಾರಚಿಸಿದೆ. ಸಾಧಾರಣ ಸಭೆಯಲ್ಲಿ ಶಿಕ್ಷಣ ಮಂತ್ರಿ ಮತ್ತು ಉಪಶಿಕ್ಷಣ ಮಂತ್ರಿಗಳು ಕ್ರಮವಾಗಿ ಅಧ್ಯಕ್ಷ ಉಪಾಧ್ಯಕ್ಷರಾಗಿದ್ದು ಶಿಕ್ಷಣ ಶಾಖೆಯ ಡೈರೆಕ್ಟರರು ಕಾರ್ಯದರ್ಶಿಗಳಾಗಿರುವರು. ರಾಜ್ಯದ ವಿವಿಧಭಾಗಗಳಿಂದ ಸದಸ್ಯರನ್ನು ಆರಿಸಲಾಗಿದ್ದು ದಕ್ಷಿಣ ಕನ್ನಡದ ಶ್ರೀ ಕೆ. ಶಿವರಾಮ ಕಾರಂತ ಮತ್ತು ಶ್ರೀಮತಿ ಅನುಸೂಯಾ ಬಿ. ಶೆಟ್ಟಿ ಇವರು ಸದಸ್ಯರಾಗಿರುವರು. ಕಾರ್ಯಕಾರಿ ಮಂಡಳಿಯಲ್ಲೂ ಶ್ರೀ ಕೆ. ಶಿವರಾಮ ಕಾರಂತರು ಸದಸ್ಯರಾಗಿರುವರು!

ಆಡಳಿತದಲ್ಲಿ ಮಿತವ್ಯಯ

ತೃತೀಯ ಯೋಜನೆಗೆ ಹಣವನ್ನೊದಗಿಸುವುದಕ್ಕಾಗಿ ಮೈಸೂರು ಸರಕಾರವು ತನ್ನ ಆಡಳಿತ ವೆಚ್ಚದಲ್ಲಿ ಕೆಲವು ಮಿತವ್ಯಯದ ಮೂಲಕ ಎರಡು ಕೋಟಿ ರೂಪಾಯಿಗಳ ಉಳಿತಾಯ ಮಾಡಬೇಕೆಂದು ಉದ್ದೇಶಿಸಿದೆ. ಹೊಸ ಹುದ್ದೆಗಳನ್ನು ನಿರ್ಮಿಸದಿರುವುದು, ರಜದಿಂದ ತೆರವಾದ ಸ್ಥಾನಗಳಿಗೆ ನೇಮಕ ಮಾಡದಿರುವುದು, ನಾಲ್ಕನೇ ವರ್ಗದ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುವುದು ಇತ್ಯಾದಿಗಳಿಂದ ಈ ಉಳಿತಾಯವನ್ನು ಮಾಡಬೇಕೆಂದು ಆಶಿಸಿದೆ;

ಕೃಷ್ಣಾನದಿಗೆ ಅಣೆಕಟ್ಟು

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷ್ಣಾ ನದಿಗೆ ೭೫ ಕೋಟಿ ರೂ.ಗಳ ವೆಚ್ಚದಿಂದ ಆಲಮಟ್ಟಿ ಮತ್ತು ನಾರಾಯಣಪುರಗಳಲ್ಲಿ ಎರಡು ಜಲಾಶಯಗಳನ್ನು ಕಟ್ಟಬೇಕೆಂದು ಮೈಸೂರು ಸರಕಾರವು ನಿರ್ಧರಿಸಿದೆ. ಈ ಜಲಾಶಯಗಳಿಂದ ವಿಜಾಪುರ,

ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಸುಮಾರು ಎಂಟುಲಕ್ಷ ಎಕರೆ ಪ್ರದೇಶಕ್ಕೆ ನೀರು ಒದಗಿಸುವ ಉದ್ದೇಶವಿರಿಸಿಕೊಳ್ಳಲಾಗಿದೆ. ಈ ಯೋಜನೆಯ ಅಂದಾಜು ೪-೫ ತಿಂಗಳುಗಳಲ್ಲಿ ಸಿದ್ಧವಾಗುವುದು.

ಮಹಾಚುನಾವಣೆಯ ಸಿದ್ಧತೆ

೧೯೬೨ರ ಆದಿಭಾಗದಲ್ಲಿ ನಡೆಯುವ ಮಹಾ ಚುನಾವಣೆಯ ಪೂರ್ವ ಸಿದ್ಧತೆಗಳು ಈಗಾಗಲೇ ಪ್ರಾರಂಭವಾಗಿವೆ. ಮೈಸೂರಿನ ಮುಖ್ಯ ಚುನಾವಣಾಧಿಕಾರಿಗಳು ವಿಧಾನಸಭಾ ಮತದಾರ ಸಂಘಗಳ ಮತದಾರರ ಯಾದಿಗಳ ಪುನರ್ವಿಮರ್ಶೆಯ ಕಾರ್ಯವು ಇದೇ ಮೇ ತಿಂಗಳಿಂದ ಆರಂಭವಾಗುವುದು. ೧೯೬೦ ಜನವರಿಯಲ್ಲಿ ೨೧ ವರ್ಷ ವಯಸ್ಸಾದವರೆಲ್ಲರ ಹೆಸರು ಯಾದಿಯಲ್ಲಿ ಸೇರಿಸಲ್ಪಡುವಂತೆ ಪ್ರಯತ್ನಿಸಲಾಗುವುದು. ಈ ದಿಸೆಯಲ್ಲಿ ಸಾರ್ವಜನಿಕರ ಸಹಕಾರವನ್ನು ಚುನಾವಣಾಧಿಕಾರಿಗಳು ಯಾಚಿಸಿರುತ್ತಾರೆ.

ಯೋಜನಾ ಆಯೋಗದ ಒತ್ತಾಯ

ಭೂಸುಧಾರಣೆಯ ಬಗ್ಗೆ ಸರಕಾರದವರು ಕೈಗೊಂಡಿರುವ ವಿವಿಧ ಕಾರ್ಯಕ್ರಮಗಳನ್ನು ತಿಳಿಸಬೇಕೆಂದು ಯೋಜನಾ ಆಯೋಗವು ಕರ್ನಾಟಕ ರಾಜ್ಯ ಸರಕಾರವನ್ನು ಕೇಳಿಕೊಂಡಿದೆಯೆಂದು ಗೊತ್ತಾಗಿದೆ. ಭೂಸುಧಾರಣೆಯ ಬಗ್ಗೆ ಬೇಗನೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಈ ಆಯೋಗವು ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ಮುಂದೆ ಸೇರುವ ಶಾಸನಸಭೆಯ ಮುಂದೆ ಭೂಸುಧಾರಣಾ ವಿಧೇಯಕದ ಬಗ್ಗೆ ವಿಧಾನಮಂಡಲದ ಸಂಯುಕ್ತ ಸಲಹಾ ಸಮಿತಿಯ ವರದಿಯನ್ನಿಟ್ಟು, ೧೯೬೧ರ ಹೊತ್ತಿಗೆ ಜಾರಿಗೆ ತರಬೇಕೆಂದು ಸರಕಾರವು ಸರ್ವ ಪ್ರಯತ್ನ ನಡೆಸಿದೆಯೆಂದೂ ಹೇಳಲಾಗುತ್ತಿದೆ. ಕರ್ನಾಟಕ ಸರಕಾರವು ಮುಂದಿರಿಸಿದ ಭೂಸುಧಾರಣಾ ಮಸೂದೆಯನ್ನು ಸದ್ಯ ವಿಧಾನಸಭೆ ಮತ್ತು ಮಂಡಳಗಳ ಸಂಯುಕ್ತ ಪರಿಶೀಲನಾ ಸಮಿತಿಯು ಪರಿಶೀಲಿಸುತ್ತಿದೆ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 46/1960

ಅಬ್ಬು ಪೂಜಾರಿ ಕೂಡಾ— ವಾದಿರು.

ಚಿಕ್ಕಮ್ಮ ಕೂಡಾ— ಪ್ರತಿವಾದಿರು.

1ನೇ ಪ್ರತಿವಾದಿ ಚಿಕ್ಕಮ್ಮ, ಅಬ್ಬು ಪೆಂಗಸಿನ ಮಗಳು. 2ನೇ ಪ್ರತಿವಾದಿ ರತ್ನ, 3ನೇ ಪ್ರತಿವಾದಿ ವಾಮನ, 4ನೇ ಪ್ರತಿವಾದಿ ಲಕ್ಷ್ಮಿ, 5ನೇ ಪ್ರತಿವಾದಿ ಸೀತ—ಚಿಕ್ಕಮ್ಮನ ಮಕ್ಕಳು, 5ನೆಯವಳು ಮೈನರಳು ಗಾರ್ಡಿಯನ್ 1ನೇ ಪ್ರತಿವಾದಿ ಚಿಕ್ಕಮ್ಮ— ಬಂಟವಾಳ ತಾಲೂಕು ವಿಟ್ಲ ಕಸಬಾ ಗ್ರಾಮದಲ್ಲಿ.

—ಇವರಿಗೆ ತಿಳಿಯಪಡಿಸುವುದೇನೆಂದರೆ:

1ರಿಂದ 5 ವರೆಗಿನ ಪ್ರತಿವಾದಿರು ತಾ. 20—2—1951ರಲ್ಲು ವಾದಿರಿಗೆ ಬರೆಕೊಟ್ಟಿರುವ ಅಡವು ದಸ್ತಾವೇಜಿನ ಪ್ರಕಾರ ಬರಬೇಕಾದ ಹಣದ ವಸೂಲಿಗೆ ದಾಖಲು ಮಾಡಿದ ಈ ದಾವೆಯು ತಾ. 2—6—60ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Plaintiffs,

ಪುತ್ತೂರು, ತಾ. 5—5—60.



ಭಾರತದ ಅತಿದೊಡ್ಡ ಸಂಚಾರಿ ವಿಮಾನ ಬೊಂಬಾಯಿಯಲ್ಲಿ ತಲಪಿದಾಗ ತೆಗೆದಚಿತ್ರ

ಮಂತ್ರಿಯ ಮೇಲೆ ಕ್ರಮಾಚರಣೆ

ಆಂಧ್ರ ಪ್ರದೇಶದ ಮುಖ್ಯಮಂತ್ರಿ ಶ್ರೀ ಡಿ. ಸಂಜೀವಯ್ಯನವರು ತಮ್ಮ ಮಂತ್ರಿ ಶ್ರೀ ಎ. ಸಿ. ಸುಬ್ಬಾರೆಡ್ಡಿಯವರಿಗೆ ಒಪ್ಪಿಸಿದ್ದ ವಿವಿಧ ಶಾಖೆಗಳ ಮೇಲಿನ ಅಧಿಕಾರವನ್ನು ಗವರ್ನರರ ಅನುಮತಿಯ ಮೇರೆಗೆ ತಮ್ಮ ವಶಪಡಿಸಿಕೊಂಡಿರುವುದರಿಂದ ಆಂಧ್ರ ಕಾಂಗ್ರೆಸ್ ಹಾಗೂ ಮಂತ್ರಿಮಂಡಳದಲ್ಲಿ ವಿಸ್ಮಯವು ಉಂಟಾಗಿದೆ. ಎ. ಸಿ. ಸುಬ್ಬಾರೆಡ್ಡಿಯವರು ಪಕ್ಷದ ಪ್ರತಿನಿಧಿಗೆ ವಿರೋಧವಾಗಿ ಸ್ಪರ್ಧಿಸಿದುದರಿಂದ, ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗಿ ರಾಜಿನಾಮೆಯೀಯುವಂತೆ ಕೇಳಿಕೊಳ್ಳಲಾಯಿತೆಂದೂ ಅವರು ನಿರಾಕರಿಸಿದುದರಿಂದ ಅವರಿಗಿತ್ತಿದ್ದ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಯಿತೆಂದೂ ತಿಳಿಯುತ್ತದೆ. ಈಗ ಅವರು ಆಂಧ್ರ ಮಂತ್ರಿಮಂಡಳದಲ್ಲಿ ಶಾಖೆಯಿಲ್ಲದ ಮಂತ್ರಿಯಾಗಿ ಮುಂದುವರಿಯುತ್ತಿದ್ದಾರೆ. ಕಾಂಗ್ರೆಸ್ ವರಿಷ್ಠರು ಈ ಪ್ರಕರಣವನ್ನು ಪರ್ಯಾಲೋಚಿಸುವರೆಂದು ಹೇಳಲಾಗುತ್ತಿದೆ.

ರಶ್ಯದ ಉಪಗ್ರಹ

ಅಂತರಿಕ್ಷದಲ್ಲಿ ಮಾನವನು ಹಾರಲು ಅನುಕೂಲ ಪರಿಸ್ಥಿತಿಯಿರುವ ಕೋಣೆಯಲ್ಲಿರಿಸಲಾದ ಪ್ರತಿಮಾನವನಿಂದ ಕೂಡಿದ ಉಪಗ್ರಹವನ್ನು ರಶ್ಯವು ಮಾಸ್ಕೋವಿನಿಂದ ತಾ. ೧೫ರಂದು ಹಾರಿಸಿತು. ಈ ಉಪಗ್ರಹವು ೪ ಟನ್ ಭಾರವಿದ್ದು ೨೦೦ ಮೈಲು ಭೂಮಿಯಿಂದ ಎತ್ತರದಲ್ಲಿ ಪ್ರತಿ ೯೧ ನಿಮಿಷಗಳಿಗೊಂದು ಸುತ್ತಿನಂತೆ ಪ್ರದಕ್ಷಿಣೆ ಬರುತ್ತಿದೆ. ಈ ಉಪಗ್ರಹದ ಯಶಸ್ವಿಯಿಂದಲ್ಲಿ ಮಾನವನು ಅಂತರಿಕ್ಷದಲ್ಲಿ ಪರಿಭ್ರಮಣೆ ನಡೆಸುವ ಕಾರ್ಯದಲ್ಲಿ ಆಶಾದಾಯಕ ಪರಿಣಾಮವಾಗುವುದೆಂದು ನಿರೀಕ್ಷಿಸಲಾಗಿದೆ.

ಅಲ್ಲಲ್ಲಿಯ ಸುದ್ದಿಸಾರ

ಉದ್ಘಾಟನಾ ಸಮಾರಂಭ—ಉಡುಪಿ ವೀವರ್ಸ್ ಕೋ-ಓಪರೇಟಿವ್ ಪಿ. ಎಂಡ್ ಎಸ್. ಸೊಸೈಟಿಯ ನೂತನ ಕಟ್ಟಡದ ಉದ್ಘಾಟನೆಯು ಡಾ|| ಟಿ. ಎಂ. ಎ. ಪೈಗಳವರಿಂದ ತಾ. 16ರಂದು ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಸಂಸ್ಥಾನದ ಹತ್ತಿ ಕೈಮಗ್ಗ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಯಫ್. ಯಂ. ಭರದ್ವಾಜರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿ| ಪಿ. ಎ. ಪೈಗಳ ಭಾವ ಚಿತ್ರವನ್ನು ನಗರ ಸಭಾಪತಿ ಡಾ| ಕೆ. ಎಲ್. ಐತಾಳರು ಅನಾವರಣ ಮಾಡಿದರು.

ಸುರತ್ಕಲ್— ಮುಕ್ಕ ಮಿತ್ರಪಟ್ಟಣ ಗಂಗೆಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವೂ, ಪಾರಿತೋಷಕ ವಿತರಣಾ ಕಾರ್ಯಕ್ರಮಗಳೂ ತಾ. 8—5—60 ರಂದು ಫಂಡಿನ ಸಮಾಜ ಮಂದಿರ ಕಟ್ಟಡದಲ್ಲಿ ಶ್ರೀ ಯಂ. ಆರ್. ಯಚ್. ಪೂಂಜರ ಅಧ್ಯಕ್ಷತೆಯಲ್ಲಿ ಜತಗಿತು. ಶ್ರೀ ಯಸ್. ವಿ. ಶ್ಯಾಸುಭಾಗರು ಸ್ವಾಗತಿಸಿದರು, ಶ್ರೀ ದಾಮಪ್ಪ ಗುರಿಕಾರರು ವರದಿವಾಚನ ಮತ್ತು ಶುಭಸಂದೇಶಗಳನ್ನು ಓದಿಹೇಳಿದರು. ಸಭಾಧ್ಯಕ್ಷರ ಧರ್ಮಪತ್ನಿ ಸೌ| ಪದ್ಮಾವತಿ ಯಚ್. ಪೂಂಜರ ದಿವ್ಯಹಸ್ತದಿಂದ ಮಿತ್ರಪಟ್ಟಣ ವಿದ್ಯಾರ್ಥಿಸಂಘದವರಿಂದ ಸಂಗ್ರಹಿಸಲಾದ ಪಾರಿತೋಷಕ ವಿತರಣಾ ಕಾರ್ಯಕ್ರಮವು ನಡೆದ ಬಳಿಕ ಸಭಿಕರಲ್ಲಿ ಶ್ರೀ ಯಂ. ಗೋಪಾಲ, ಶ್ರೀ ಜೆ. ಟಿ. ಸುವರ್ಣ, ಶ್ರೀ ತಿಮ್ಮಪ್ಪ ಶೆಟ್ಟಿ, ಶ್ರೀ ಮಂಜುನಾಥ (ಫಿಶರೀಸ್ ಇನ್ಸ್‌ಪೆಕ್ಟರ್) ಮೊದಲಾದವರು ಭಾಷಣಗೈದರು. ಅಧ್ಯಕ್ಷರ ಸುರಸ ಭಾಷಣಾನಂತರ ಶ್ರೀ ಚಂದಯ ಸುವರ್ಣರು ಧನ್ಯವಾದಗಳನ್ನಿತ್ತರು. ಬಳಿಕ ಶ್ರೀ ಹರಿದಾಸ ರಾಮಕೃಷ್ಣ ಕಲ್ಲೂರಾಯರಿಂದ "ಮನ್ಮಥ ವಿಜಯ" ಎಂಬ ಹರಿಕಥಾ ಕಾಲಕ್ಷೇಪವು ನಡೆಯಿತು.

ಡಾ| ಬಾಲಕೃಷ್ಣ ಹೆಗ್ಡೆಯವರಿಗೆ ಪ್ರಶಸ್ತಿ—ಉನ್ನತ ವೈದ್ಯಕೀಯ ಶಿಕ್ಷಣಕ್ಕಾಗಿ 1956ರಲ್ಲಿ ಅಮೇರಿಕಕ್ಕೆ ತೆರಳಿದ್ದ ಶ್ರೀ ಕೆ. ಅನಂತ ಶೆಟ್ರ ಪುತ್ರ ಡಾ| ವಿ. ಬಾಲಕೃಷ್ಣ ಹೆಗ್ಡೆಯವರು ಇತ್ತೀಚೆಗೆ ಸಂಶೋಧನೆ, ಪರೀಕ್ಷೆಗಳಲ್ಲಿ ಅತ್ಯುನ್ನತ ಪ್ರಶಸ್ತಿ ಪಡೆದಿರುವರೆಂದು ತಿಳಿದು ಬರುತ್ತದೆ. ವಿವರವನ್ನು ಬರುವವಾರ ಪ್ರಕಟಿಸಲಾಗುವುದು.

ವಿವಾಹ ಶ್ರೀ ಚಂದ್ರಶೇಖರ ಹೆಗ್ಡೆಯವರ ಪುತ್ರಿ ಚಿ. ಸೌ. ಲೀಲಾವತಿಯನ್ನು ಕಣಂಜಾರು ಕಡೆಟಬೆ ಶ್ರೀ ಶೀನಪ್ಪ ಶೆಟ್ರ ಪುತ್ರ ಚಿ| ಸರ್ವೋತ್ತಮ ಶೆಟ್ರು ತಾ12ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

NAVAYUGA' WEEKLY is in the list of periodicals and Newspapers approved or use in Secondarys School as per proceedings Roc No. 466 N/50 date 2-12-1950 of the Director of public Instruction Madras.

ವಿನೋದ ಲಹರಿ

(೧ನೇ ಪುಟದಿಂದ)

ಹಾಕಿದಳು" ಎನ್ನುತ್ತಾ ಒಳಗೆ ಹೋದಳು. ನಿಟ್ಟುಸಿರುಬಿಟ್ಟು ಆರಾಮುಕುರ್ಚಿಯಲ್ಲಿ ಮಂಡಿಸಿದೆ. ಒಂದರೆ ಗಳಿಗೆ ಕಳೆಯಿತೆನ್ನುವಾಗ ಹೊರಗಿನಿಂದ—

"ಸಾರ್, ಸಾರ್...." ಯಾರದ್ದೊ ಕಿರುಚಾಟ ಕೇಳಿಸಿತು. ಅಂಚೆ ಪೇದೆಯೊಂದ ಮೇಲೆ, ದಿಗಿಲು, 'ಅತೆ, ನಾನು ಕಳುಹಿಸಿದ್ದ ಒಂದೆರಡು ಕಥೆಗೆ ಬಹುಮಾನ ಬಂದಿತೇನೋ? ಅಥವಾ ತಮ್ಮನಿಂದ 'ಹಣಕಳುಹಿಸು' ಎಂಬ ದೈನ್ಯತೆಯ ಮಾತೋ?

ಅಲ್ಲಲ್ಲ! ನನ್ನ ದಕ್ಷಿಣೆಯೊಂದಿಗೆ ಪೇದೆ ಒಂದೆರಡು ಪೆಟ್ಟಿಗೆ ಕೊಟ್ಟು ಹೊರಡಲಣಿಯಾದ. ಬೆನ್ನ ಮೇಲೆ ದೊಡ್ಡ ಚೀಲ, ಸೈಕಲ್ಲಿಗೆ, ಕೈಗೆರಡು ಚೀಲಗಳು ತುಂಬಿದ್ದವು. ಎಲ್ಲಾ ಪೆಟ್ಟಿಗೆ ಅಷ್ಟೆ! ಕುಚೇಷ್ಟೆ ಮಾಡುವಂತೆ ನಾನು ಕೇಳಿದೆ, "ಏನೋ ಇದೆಲ್ಲ ನಿನ್ನ ಟಪ್ಪಾಲು ಕೆಲಸ? ದಿನಾ ಇಷ್ಟು ತರುತ್ತಿಲ್ಲ? ಅದಕ್ಕೆ ಪ್ರತಿಯಾಗಿಯೇ "ಸ್ವಾಮಿ ಎಪ್ರಿಲ್ ಒಂದು" ಎಂದು ನಗೆಯಾಡಿ ದೂರ ಹೋಗಿದ್ದ.

ನನ್ನ ಎಡ್ರೆಸ್‌ನಲ್ಲಿಯೇ ಬಂದಿದ್ದ ಪೆಟ್ಟಿಗೆ. ಆ ಮಾತಿಗೆ ಉತ್ತರ? ದೇವರೇ ಬಲ್ಲರೆಂದು. ನನ್ನ ಹೆಮ್ಮೆಯನ್ನು ಕೊಚ್ಚಿಕೊಳ್ಳಲು ಹೆಂಡತಿಯನ್ನು ಎದುರಿಗೆ ಕುಳಿತುಕೊಳ್ಳುವಂತೆ ಹೇಳಿ ಏನೋ ದೊಡ್ಡ ಬಹುಮಾನ ಬಂದವರಂತೆ 'ಪಾರ್ಸೆಲ್' ಬಿಚ್ಚಿದೆ. ಒಂದು ಭಾಗ ಬಿಚ್ಚಿದೆ. ಕತ್ತರಿಸಿದ ಕಾಗದದ ಚೂರು ಅಷ್ಟೆ. ಅನಂತರ, ಎರಡು....ಮೂರು....ನಾಲ್ಕು.... ಒಂದರ ಹಿಂದೆ ಒಂದರಂತೆ ಎಲ್ಲಾ ಕಟ್ಟುಗಳನ್ನೂ ಬಿಚ್ಚಿದೆ. ಒಂದು ಕಾಗದದ ಪಾಕೆಟ್ ಉಳಿದಿತ್ತು. ಅದನ್ನು ಹೊರಗಿನಿಂದಲೇ ಮುಟ್ಟಿನೋಡಿದೆ. ಮಿದುವಾದ ಒಂದು ಪದಾರ್ಥ ನನ್ನವಳಿಗೆ ಅದನ್ನು ಕೊಟ್ಟೆ. "ನಿಮಗೆ ಗಡಿಯಾರ ಬಂದಿರಬಹುದು." ಎಂದು ಹೀಯಾಳಿಸುವಳಂತೆ ನನ್ನ ಮುಖ ನೋಡಿದಳು. ಧೈರ್ಯದಿಂದ ಬಿಚ್ಚಿದೆ.... ಅಯ್ಯೋ ಎಂದು ಗಟ್ಟಿಯಾಗಿ ನಕ್ಕಳು.

ನಾನು ನೋಡಲಾರದೆ ಕಣ್ಣು ಮುಚ್ಚಿದ್ದೆ. ಗೋ....ಮ....ಯ....ಎಂದು ಬಿಕ್ಕಿ ಬಿಕ್ಕಿ ನಕ್ಕಳು.

ಎರಡನೆಯ 'ಪಾರ್ಸೆಲ್' ಎಂದು ಅವಳು ಬಿಚ್ಚಲು ತೊಡಗಿದಳು. ನಾನು ಬೇಡವೆಂದು ಕೆಳಗೆ ಒಗೆದೆ. ಅಂತೂ ಬಿಚ್ಚಿದ್ದ ಆಯಿತು. ನನ್ನ ಕೋಣೆಯಲ್ಲಿ ನೂಲು, ಕಾಗದದ ಮುದ್ದೆ, ಮುಂತಾದ ಸಾಮಾನುಗಳನ್ನೂ ತುಂಬಲು ಆಗಲಿಲ್ಲ! ಇನ್ನೂ ಇದೆ. ಒಳಗೆ 'ಕಾಲೇಜಿಂದಾಚ'.... ಎನ್ನುವ ಶಬ್ದ ಅಡಗಿತ್ತು. ನನ್ನ ಕಾಲೇಜಿನ ಮಿತ್ರ ಚಂದ್ರು ಬರೆದಿದ್ದರೂ ಬರೆದಿರಬಹುದು. ಧೈರ್ಯದಿಂದ ಮತ್ತೂ ನೂಲು ಕಡಿದು ಪುನಃ ಬಿಚ್ಚಿದೆ. 'ಅಣಕ' ಎನ್ನುವ ಮಾತು ಬರೆಯಲ್ಪಟ್ಟಿತ್ತು. ಅಲ್ಲದೇ 'ಸಾಸೀವ್' ಎಂದೂ ಬರೆದಿತ್ತು. ನನಗೆ ಅರ್ಥವೇ ದೊರೆಯಲಿಲ್ಲ. ನನ್ನಾಕೆ ನಿಮ್ಮ ಹೆಸರಲ್ಲವೇ....ಅಂದಳು. ನನಗರ್ಥವಾಯಿತು 'ಸದಾಶೀವ್'. ಪಾರ್ಸೆಲುಗಳ ಗತಿ ಒಲೆಗೆ!

ಸಾಯಲಿ! ಎಂದು ಅಂಗಿ ಧರಿಸಿ ವಾಕಿಂಗ್‌ಗೆ ಹೊರಟೆ. ನನ್ನ ಬೆನ್ನಹಿಂದೆಯೇ ಕಾಲೇಜ್‌ಮಿತ್ರ ಬೆನ್ನುತಟ್ಟಿದ. ಏನಯ್ಯಾ ಸಾಸೀವ್‌ರ....ಎಲ್ಲಿಗೆ?

ನಾನು ಸಿಟ್ಟಿನಲ್ಲಿಯೇ ಮಾತನಾಡಲಿಲ್ಲ. 'ಎಪ್ರಿಲ್ ಒಂದು' ತಿಳಿಯಿತೇನೋ? ನಾನು ತಿಳಿಯದೆ ಏನು ನಿನ್ನೆ ಮೂರು, ಇಂದು ನಾಲ್ಕು ಅಷ್ಟೆ.

ನಿನ್ನನ್ನು ಇಂದು ಮೈದಾನಿಗೆ ಕರೆಸಿದ್ದೂ, ಪಾರ್ಸೆಲ್ ಕಳುಹಿಸಿದ್ದೂ ಎಲ್ಲವೂ ನಾನೇ. ಬೇಸರಿಸಿದೆಯೂ? ನನ್ನ ಚಮತ್ಕಾರ ಎಲ್ಲಿಯವರೆಗೆ. 'ಎಪ್ರಿಲ್ ನಾಲ್ಕು' ಎನ್ನುವ ಮನೆಯ ಎದುರಿನ ಬೋರ್ಡು ಕಾಣಿಸಿದ. ನನಗದರ ಅರ್ಥವೇ ದೊರೆಯಲಿಲ್ಲ. ಎಲ್ಲರೂ ನನ್ನನ್ನು ನೋಡಿ ನಗುವಂತೆ ಭಾಸವಾಯಿತು!

ನಮ್ಮ ಪೇಟೆಯಲ್ಲಿ ನಡೆದ ಬದಲಾವಣೆ ತೋರಿಸಲು ರಸ್ತೆಗೆ ಎಳೆದುಕೊಂಡು ಊರೂರು ಅಲೆಸಿದ.

"ವಿಲಾಸ ರೆಸ್ಟೋರೆಂಟ್"ನ್ನು ಕಿತ್ತು ಸುಂದರ ಹೇಯಿರ್ ಕಟ್ಟಿಂಗ್ ಸೆಲೂನಿನಲ್ಲಿ ಕಟ್ಟಲಾಗಿತ್ತು. ಅವರ ಬೋರ್ಡನ್ನು ಕಿತ್ತು 'ಸುಮತಿ ಕ್ಲೋತ್ ಸ್ಟೋರ್ಸ್'ನಲ್ಲಿ ನಿಲ್ಲಿಸಲಾಗಿತ್ತು. ಕ್ಲೋತ್ ಮರ್ಚಂಟನ ಬೋರ್ಡನ್ನು 'ಆಯುರ್ವೇದಾಶ್ರಮ'ದಲ್ಲಿ ಕಟ್ಟಲಾಯ್ತು. ಆಶ್ರಮ ಶಿರೋನಾಮೆಯ ಹಲಗೆಯನ್ನು ತೆಗೆದು ಬ್ಯಾಂಕಿನಲ್ಲಿ ತೂಗಿಸಲಾಯ್ತು. ಬ್ಯಾಂಕಿನ ಬೋರ್ಡನ್ನು 'ಜನತಾ ಜನರಲ್ ಮರ್ಚಂಟಿನಲ್ಲಿಯೂ ಮರ್ಚಂಟಿನ ಹಲಗೆಯನ್ನು ವಿನೋದ ವಿಹಾರವೆನ್ನುವ ಸುಬ್ಬಾ ಜೋಯಿಸರ ಮನೆಯಲ್ಲಿಟ್ಟು ಅಲ್ಲಿಯ ಬೋರ್ಡನ್ನು 'ಶ್ರೀ ಪೋರ್ಟ್‌ವೇರ್' ಕಂಪೆನಿಗೆ ವರ್ಗಾಯಿಸಿದ್ದರು ಆ ಬೋರ್ಡು ಶ್ರೀ ಶಾರದಾ ಯೈಡೆಡ್ ಎಲಿಮೆಂಟರಿ ಶಾಲೆಯನ್ನು ರಾರಾಜಿಸಿತು. ಶಾಲೆಯ ಬೋರ್ಡನ್ನು ಕಮ್ಮಾರ ನಾಲೆಯಲ್ಲಿ ಕಟ್ಟಲಾಯ್ತು. ಪ್ರೇಮ ಪತ್ರಗಳನ್ನು ಟಪ್ಪಾಲಾಫೀಸಿನ ಒಳಗೆ ದೂಡಲಾಯ್ತಂತೆ.

ಎಲ್ಲವೂ ತಿಳಿಸಿದ. ನಾನು ಕಣ್ಣಾರೆ ನೋಡಿದೆ.

ನನ್ನ ವಜ್ರಾಘಾತದ ಸೇಡನ್ನು ತೀರಿಸಲು ಮುಂದಿನ ಎಪ್ರಿಲ್ ತಿಂಗಳ ನಾಲ್ಕು ತಾರೀಕನ್ನು ನಿರೀಕ್ಷಿಸಲು ತೊಡಗಿದೆ.

ಮನೆಯಲ್ಲಿಯೇ ಎದುರಿಗೆ ಹೆಂಡತಿ ಎಪ್ರಿಲ್ ಫೂಲಿನ ಅರ್ಥವನ್ನು ತಿಳಿಸಲು ನಿಂತಿದ್ದಳು. ನಾನು ಆವಾಗಲೇ ತಿಳಿಸಿದೆ.

ಮುಂದಿನ ಎಪ್ರಿಲ್ ಫೂಲಿಗಾಗಿ ಕಾಯುತ್ತಿದ್ದೇನೆ.

—ಎಚ್. ಆನಂದರಾವ ಅಡಿಗ.

ಪ್ರಚಲಿತ ಪ್ರಸಂಗ

[೧ನೇ ಪುಟದಿಂದ]

ಅನಬಹುದಾದ ಪರಿಣಾಮವು ಅಜರಾಮರವಾಗುವುದೆನ್ನಬಹುದು. ಕಾಯಿದೆ, ಖಡ್ಗಗಳಿಂದ ಆಗದ ಮಹಾಕಾರ್ಯಗಳನ್ನು ಶಾಂತ ಲೇಖನಿಯು ಮಾಡಬಲ್ಲುದಾದರೆ, ಅಂತೆಯೇ ಮಾನವ ಮನವನ್ನು ಒಲಿಸಿಕೊಳ್ಳುವುದರಿಂದ ಯಾವುದೇ ಕಾರ್ಯವನ್ನು ನಾವು ಮಾಡಬಹುದು. ಏಕದೇಹನ್ಯಾಯದಿಂದ ಬಾಳಿ ಬೆಳೆದು ಬಂದ ಮಿತ್ರರನ್ನಾಗಲಿ, ಭ್ರಾತೃಸ್ನೇಹ ಪರಿಪೂರ್ಣ ಸಹೋದರರನ್ನಾಗಲೀ ನಾವು ನೋಡುವುದಾದರೆ, ಅವರ ವ್ಯವಹಾರಗಳಿಗೆ ಮನಸ್ಸಿನ ಏಕೀಭವನವೇ ಕಾರಣವೆನ್ನುತ್ತೇವೆ. 'ಸಮಾನ ಶೀಲಂ, ವ್ಯಸನೇಷು ಸಖ್ಯಂ' ಎಂಬ ಪ್ರಾಜ್ಞರ ಉಕ್ತಿಯೂ ಈ ವಾದವನ್ನು ಸಮರ್ಥಿಸುತ್ತದೆ. ಮಾನವನ ಚಂಚಲವಾದ ಮನಸ್ಸು ಸುರಾ ಸೇವಿತ ಮರ್ಕಟನಂತಾಗಿ ಡೋಲಾಯಮಾನವಾಗಿರುವುದರಿಂದ, ಅದನ್ನು ಬಿಗಿಹಿಡಿಯುವಂತೆ ಪ್ರೇರೇಪಿಸಿ ಅಂತಹರನ್ನು ಸನ್ಮಾರ್ಗ ಚರಿತರನ್ನಾಗಿಸುವುದು ಅತಿ ಶ್ರೇಯಸ್ಸಿನ ಕೆಲಸ. ಆದುದರಿಂದ, ವಿನೋಬಾಜೀಯವರು ಈಗಾಗಲೇ ಇರಿಸಿಕೊಂಡ ಧ್ಯೇಯಧೋರಣೆಗಳಿಗೆ ಪರಿಪೋಷಕವಾಗುವ ಅವರ ಸದ್ಯದ ಕಾರ್ಯಕ್ರಮವು ಸ್ವಾಗತಾರ್ಹವೇ ಸರಿ.

ಆದರೆ, ವಾತಾವರಣ ಎಣಿಸಿರುವಷ್ಟು ನಿಷ್ಕಂಟಕವೆನಿಸಲಿಲ್ಲ. ಡಕಾಯಿತರಾರೂ ವಿನೋಬಾರ ಶರಣುಬರಲಿಲ್ಲವೆಂದು ವರದಿಯಾಗಿದೆ. ತಾವು ಡಕಾಯಿತರೆಂದು ಒಪ್ಪಿಕೊಂಡಲ್ಲಿ, ಇದುವರೆಗೆ ತಾವು ಎಸಗಿದ ಅಪರಾಧಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಮೇಲೆ ಕಟ್ಲೆ ಹೊರಿಸಬಹುದೆಂಬ ಅಂಜಿಕೆಯೇ ಈ ತೆರದ ವಿಷಮತೆಗೆ ಕಾರಣವಾಗಿದೆ. ರಾಜ್ಯಸರಕಾರವಾದರೂ ವಿನೋಬಾ ಭಾವೆಯವರಿಗೆ ತನ್ನ ಸಂಪೂರ್ಣ ಸಹಕಾರವನ್ನು ನೀಡುವುದೆಂದು ಭರವಸೆಯಿತ್ತಿರುವುದು ಮಾತ್ರವಲ್ಲ, ಅದರಂತೆ ನಡೆಯುತ್ತಿದೆ. ಈ ಡಕಾಯಿತರನ್ನು ಸಾರ್ವತ್ರಿಕವಾಗಿ ಕ್ಷಮಿಸುವ ಇರಾದೆಯಿರಬಹುದಾದರೂ ಇದೆಷ್ಟು ಸಮಂಜಸವೆಂದು ಹೇಳಬರುವುದಿಲ್ಲ. ಅಲ್ಲದೇ ಹೀಗೆ ಕ್ಷಮಾದಾನಕ್ಕೆ ಪೋಲೀಸ್ ಅಧಿಕಾರಿಗಳಲ್ಲಿ ಭಿನ್ನಾಭಿಪ್ರಾಯವಿರುವುದೆಂದೂ ತಿಳಿಯುತ್ತದೆ. ಎಂದರೆ, ದರೋಡೆಗಾರರನ್ನೆಲ್ಲಾ ಕ್ಷಮಿಸಿಬಿಡುವುದು ಪ್ರಯೋಜನವಲ್ಲವಾದರೂ ಇದರ ಮುಂದಿನ ಪರಿಣಾಮ ಯಾವ ರೀತಿಯದಾಗಬಹುದೆಂದು ಊಹಿಸುವುದೂ ಕಷ್ಟವೇ. ಹಾಗಾಗಿ, ಸದ್ಯ ಭಾವೆಯವರ ಈ ಪಾದಯಾತ್ರೆಯ ಫಲಾಫಲಗಳು ಯಾವ ವಿಧದವೆಂದು ಕಲ್ಪಿಸಿದರೆ, ಅದು ಕೇವಲ ಕಲ್ಪನೆಯೇ ಆಗಬಹುದು.

ಹೀಗಿದ್ದರೂ ಒಂದು ಮಾತನ್ನು ನಾವು ಗಮನಿಸಬೇಕು. ಹುಟ್ಟುಗುಣ ಗಟ್ಟಿಹತ್ತಿದರೂ ಬಿಡಲಾರದು; ಅಥವಾ ಕರಿನಾಯಿ ಬಿಳಿಯದಾಗದು ಎಂದು ಮುಂತಾದ ಗಾದೆಯ ಮಾತುಗಳಲ್ಲಿ ಇಂದು ವಿಶ್ವಾಸ ಕಡಿಮೆಯಾಗಿದೆ. ಕರ್ಮ ಪ್ರಧಾನವಾದ ಈ ಕಾಲದಲ್ಲಿ ಸಾಧನೆಯಿಂದ ಸಾಧಿಸಲಾಗದ ಕೆಲಸಗಳಾವುವೂ ಇರುವುದಿಲ್ಲವೆಂಬುದೇ ಸಿದ್ಧಾಂತವಾಗಿದೆ. ಆದುದರಿಂದ, ಡಕಾಯಿತರಾದರೂ, ಅದರಿಂದಲೇ ತಮ್ಮ ಉದರ ಪೂರ್ತಿಮಾಡಿಕೊಳ್ಳುವವರಾದರೂ ಅಂತಹರ ಮನಸ್ಸನ್ನು ಪರಿವರ್ತನೆಗೊಳಿಸಿ ಅವರನ್ನು ಸನ್ಮಾರ್ಗಕ್ಕೆ ಹಚ್ಚುವುದು ಪ್ರಯಾಸವೆನಿಸಿದರೂ ಅಸಾಧ್ಯವಲ್ಲ. ಹಾಗಾಗಿ, ಇಂತಹ ದುರ್ಜನರ ಈ ಮೊದಲಿನ ಎಲ್ಲ ಅಪರಾಧಗಳನ್ನೂ ಕ್ಷಮಿಸಿಬಿಡುವ ಉದಾರತೆಯನ್ನು ರಾಜ್ಯ ಸರಕಾರ ತೋರಿಸಿದರೆ, ಅಡಗಿ ಕುಳಿತ ಡಕಾಯಿತರು ತಮ್ಮ ತಪ್ಪನ್ನು ಒಪ್ಪಿಕೊಂಡು, ಮುಂದಾದರೂ ಉತ್ತಮ ಜೀವನ ನಡೆಸುವ ಮನಮಾಡದಿರಲಾರರು. ಏಕೆಂದರೆ, ಒಂದು ಸಮಾಜದಲ್ಲಿ ಎಲ್ಲರೂ ಮೂರ್ಖರಾಗಿರುವುದು ಎಂದಿಗೂ ಅಸದಳವೇ ಸರಿ; ಹಾಗೆಯೇ ಚಂಬಲ್ ನದೀ ಕೊಳ್ಳದಲ್ಲಿ ನೆಲಸಿರುವ ಡಕಾಯಿತರಲ್ಲಿ ಪರಿವರ್ತನಶೀಲ ಮನಸ್ಸಿಲ್ಲವೆನ್ನುವುದೂ ದಪ್ಪರವೇ. ಈ ಬಗ್ಗೆ ಉಪಯುಕ್ತ ಕಾರ್ಯಕ್ರಮಗಳನ್ನು ಯಥಾಯೋಗ್ಯವಾಗಿ ರಾಜ್ಯಸರಕಾರ ಕೈಗೊಂಡಲ್ಲಿ, ಆಗ, ಪೂಜ್ಯ ವಿನೋಬಾರ ಈ ಸಾಹಸದ ಫಲಶ್ರುತಿಯು ಸಮಾಜ ಜೀವನದಲ್ಲಿ ದೊಡ್ಡದೊಂದು ಕ್ರಾಂತಿಯನ್ನು ಮಾಡಬಹುದು.

— ರಾಶಿ.

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

S. C. 45/1960

ನಾಗರಾಜ ಪಾಂಡಿ — ವಾದಿ

ಬವ್ರುತೀರ್ ಮಿನೇಜಸ್, ದೂಜೆ ಮಿನೇಜಸರ ಮಗ, ಬೆಳ್ತಂಗಡಿ ತಾಲ್ಕು ಮಚ್ಚಿನ ಗ್ರಾಮದ ಬಲ್ಲಂಜ ಎಂಬಲ್ಲಿರುವವ—

ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ:—

ಮೇಲಿನ ದಾವೆಯ ವಾದಿಯು, ನಿಮ್ಮ ಮೇಲೆ ಗೇಣಿ ಬಾಕಿ ಬಗ್ಗೆ ದಾಖ್ಲೆ ಮಾಡಿದ ಮೇಲ್ಕಂಡ ದಾವೆಯು ತಾ. 30-5-1960 ಕ್ಕೆ ಇಟ್ಟಿರುವುದ್ರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟ ಮುಂದೆ ನೀವು ಸ್ವತಹಾ ಹಾಜ್ರಾಗಿ ನಿಂಮ ಉದಾಹರ್ಣೆಯನ್ನು ದಾಖ್ಲೆ ಮಾಡತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು,

॥ ಕೋರ್ಟು ಹ್ಯುಂ ಪ್ರಕಾರ ॥

(Sd). P. Anantharaja Ariga
Advocate for Plaintiff.

ಪುತ್ತೂರು, 22-4 1960.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 37/1960

ಅಬ್ಬು ಬ್ಯಾರಿದಿ ಕೂಡಾ — ವಾದಿರು.

ಪಕೀರ ಮಡಿವಾಳ ಕೂಡಾ — ಪ್ರತಿವಾದಿರು.

6ನೇ ಪ್ರತಿವಾದಿ ನಾರಾಯಣ, ಕೊರಪೋಳು ಹೆಂಗಸಿನ ಮಗ—ಬಂಟನಾಳ ತಾಲೂಕು ಬಾಳ್ತಿಲ ಗ್ರಾಮದಲ್ಲಿ — ಇವರಿಗೆ ತಿಳಿಯಪಡಿಸುವುದೇನೆಂದರೆ:-

ದೇಜಪ್ಪ ಮಡಿವಾಳ ವಗೈರೆಯು ವಾದಿರಿಗೆ ತಾ. 6-5-50ರಲ್ಲು ಬರೆಕೊಟ್ಟ ಆಧವು ದಸ್ತಾವೇಜಿನ ಬಾಬ್ತು ಹಣ ವಸೂಲಿಗೆ ವಾದಿರು ದಾಖಲು ಮಾಡಿದ ಈ ದಾವೆಯು ತಾ. 13—6—60ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲಾದೀತು,

B. Chidananda Rao,
Vakil for Plaintiff.

ಪುತ್ತೂರು, ತಾ, 2-4-60.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ, 1-25 ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ,ಉಡುಪಿ.

ತಮ್ಮನಿಗೆ ಓಲೆ—೩

ಸಮಾಜ ಮಾರ್ಗದರ್ಶಕ—ಸಾಹಿತ್ಯ

ಭೂತಕಾಲವನ್ನು ನಮ್ಮ ಮುಂದೆ ಚಿತ್ರಿಸಿ ವರ್ತಮಾನದ ಬಗ್ಗೆ ಸಮಾಜದಲ್ಲಿ ಅಸಂತುಷ್ಟಿಯನ್ನು ಹರಿಸಿ, ಅದರಲ್ಲಿ ಕ್ರಾಂತಿಯ ಭಾವವನ್ನು ಮೂಡಿಸುವ ಶಕ್ತಿ ಸಾಹಿತ್ಯಕ್ಕಿರುವುದು.

ಮನುಷ್ಯ ಮನನಶೀಲನಾಗಿದ್ದಾನೆ. ಮನುಷ್ಯ ಶಬ್ದವೇ ಈ ಮಾತಿಗೆ ಪುಷ್ಟಿಯನ್ನು ಕೊಡುತ್ತದೆ. 'ಮನ್' ಧಾತುವಿಗೆ ಚಿಂತನೆ ನಡೆಸು ಎಂದು ಅರ್ಥವಾಗುವುದು. ಆದುದರಿಂದ ಚಿಂತನಾಶೀಲನಾದವನು ಅಥವಾ ವಿಚಾರಶೀಲನಾದವನೇ ಮನುಷ್ಯನೆನ್ನಬಹುದು. ವಿಚಾರಶೀಲನಾಗಿರುವುದರಿಂದಲೇ ಮನುಷ್ಯ ಉನ್ನತನಾಗುತ್ತ ಹೋಗುತ್ತಾನೆ. ಸಿಂಹ ಅಥವಾ ಆನೆಗಳು ಸಾವಿರಾರು ವರ್ಷಗಳಿಗೆ ಮೊದಲು ಹೇಗೆ ಜೀವಿಸುತಿದ್ದುವೋ ಅದೇ ರೀತಿಯಾಗಿ ಇಂದಿಗೂ ದಿನಗಳೆಯುತ್ತವೆ. ಅವುಗಳ ಜೀವನಕ್ರಮದಲ್ಲಿ ಯಾವುದೇ ಪರಿವರ್ತನೆಯು ಇದುವರೆಗೂ ಆಗಿಲ್ಲ; ಇನ್ನು ಮುಂದಕ್ಕೂ ಆಗುವಂತಿಲ್ಲ. ಕಿಂಚಿತ್ ಸುಸಂಸ್ಕೃತತೆಯ ಮುದ್ರೆ ಅವುಗಳಲ್ಲಿ ತೋರಿಬರುವಂತಿದ್ದರೂ ಅದಕ್ಕೆ ಮಾನವ ಸಂಸರ್ಗದ ಪ್ರಭಾವವೇ ಕಾರಣ ಹೊರತು, ಅವುಗಳ ವಿಚಾರಶೀಲತೆಯೆಂದು ಹೇಳಬರುವುದಿಲ್ಲ. ಆದರೆ, ಮನುಷ್ಯನ ಸ್ಥಿತಿಯಿದರಿಂದ ಭಿನ್ನವಾಗಿದೆ. ಆತನ ಶಾರೀರಿಕ ವಿಕಾಸವೇನೋ ತೋರಿಕೆಯಮಟ್ಟಿಗೆ ಸ್ಥಗಿತಗೊಂಡಂತಿರುವುದಾದರೂ ಆತನ ಮಾನಸಿಕ ಮತ್ತು ಸಾಮಾಜಿಕ ವಿಕಾಸವು ಪರ್ಯಾಪ್ತ ಪ್ರಮಾಣದಲ್ಲಿ ಮುನ್ನಡೆಯುತ್ತ ಇರುವುದು. ಪ್ರತ್ಯೇಕ ಕ್ಷೇತ್ರದಲ್ಲಿಯೂ ಅವನು ಉನ್ನತಿ ಹೊಂದುತಿದ್ದಾನೆ. ಪ್ರಕೃತಿಯನ್ನು ಅಧ್ಯಯನ ನಡೆಸಿ, ಅದನ್ನಾತ ಗೆದ್ದುಕೊಳ್ಳುತಿದ್ದಾನೆ. ಪ್ರಾಕೃತಿಕ ಶಕ್ತಿಗಳನ್ನು ಸೆರೆಹಿಡಿದು, ಅವನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಮಹಾರಾಜಾಧಿರಾಜರಿಗೂ ಅಲಭ್ಯವೆನಿಸಿದ್ದ ಭೌತಿಕ ಸುಖಸಂಪತ್ತು ಇಂದು ಜನಸಾಮಾನ್ಯರಿಗೂ ಲಭ್ಯಮಾನವಾಗುತ್ತಿವೆ. ಅತಿ ಪರಿಶ್ರಮದಿಂದಲೂ ಸಿದ್ಧವಾಗದ ಕಾರ್ಯಗಳು ಇಂದು ಅತಿ ಸುಲಭದಲ್ಲಿಯೇ ಸಾಧ್ಯವಾಗಿ ಪರಿಣಮಿಸಿವೆ. ಮೊದಮೊದಲು ಭಾಗ್ಯಶಾಲಿಗಳಿಗೆ ಮಾತ್ರ ದೊರೆಯುತಿದ್ದ ಜ್ಞಾನವಿಂದು ಜನಸಾಮಾನ್ಯರಿಗೂ ಸಿಗುವ ಪರಿಸ್ಥಿತಿ ಮೂಡಿಬಂದಿದೆ. ಇವೆಲ್ಲ ಸಾಧನೆಗಳಿಗೂ ಮಾನವ ವಿಚಾರಶೀಲನಾಗಿರುವುದೇ ಪ್ರಧಾನ ಕಾರಣವಾಗಿದೆ. ಏಕೆಂದರೆ, ವಿಕಾಸ ಅಥವಾ ಉನ್ನತಿಯು ವಿಚಾರವನ್ನು ಹಿಂಬಾಲಿಸಿಕೊಂಡು ಬರುತ್ತವೆ.

ವಿಚಾರವು ಯಾವ ರೀತಿ ಫಲಕಾರಿಯಾಗುತ್ತದೆ? ವಿಚಾರವು ಮಾನವ-ಮಸ್ತಿಷ್ಕದ ಅಂಧಕಾರಮಯವಾದ ಕಂದರದಲ್ಲಿ ಅಡಗಿಸಲು ಬಯಸುವುದಿಲ್ಲ. ಅದಕ್ಕೆ ಸದಾ ಪ್ರಕಾಶ ಬೇಕು. ಭಾಷೆಯ ವೇಷವನ್ನು ಧರಿಸಿಕೊಂಡು, ಅಥವಾ ಹೀಗೆ ಹೇಳಬಹುದಾದರೆ, ಭಾಷೆಯಲ್ಲಿ ಮೂರ್ತಿಮಂತವಾಗಿ, ಸಮಾಜದ ಮುಂದೆ ಬಂದು ನಿಲ್ಲುತ್ತವೆ; ಅಲ್ಲಿ ತನ್ನ ಕಾರ್ಯಕಲಾಪಗಳಿಂದ ಸಮಾಜದ ಗತಿವಿಧಿಗಳನ್ನು ನಿಶ್ಚಯಿಸುತ್ತದೆ. ಭಾಷಾರೂಪದಲ್ಲಿ ಅವತಾರಮಾಡಿದ ವಿಚಾರಗಳು ಅಮರತ್ವವನ್ನು ಹೊಂದುವುವು. ಉತ್ತಮ ಭಾಷೆಯಲ್ಲಿ ಪ್ರಕಟಗೊಂಡ ಮಾನವ ಸಮಾಜದ ಉತ್ತಮೋತ್ತಮ ವಿಚಾರಗಳು ಸಂಗ್ರಹಿಸಲ್ಪಟ್ಟು ಆ ಭಾಷೆಯ ಸಾಹಿತ್ಯ ರೂಪಗೊಳ್ಳುವುದು. 'ಸಹಿತ' ಭಾವಗಳನ್ನೇ ಸಾಹಿತ್ಯವೆನ್ನುವುದು. ಇಲ್ಲಿ 'ಸಹಿತ ಭಾವ'ವೆಂದರೆ 'ಹಿತದಿಂದ ಕೂಡಿಕೊಂಡಿರುವ ಭಾವ'ವೆಂದೂ 'ಭಾವ ಸಹಿತ'ವಾಗಿರುವುದೆಂದೂ ಅರ್ಥ ಹೇಳುತ್ತಾರೆ. ಸಾಹಿತ್ಯದ ಆವರಣವು ಸುವಿಶಾಲವಾದುದು, ವ್ಯಾಪಕವಾದುದು. ಅದರೊಳಗೆ ಇಲ್ಲದ ವಿಚಾರಗಳೇ ಇರುವುದಿಲ್ಲ. ಧರ್ಮ, ದರ್ಶನ ಮತ್ತು ವಿಜ್ಞಾನ, ಕಾವ್ಯ (ಇದರಲ್ಲಿ ಗದ್ಯ, ಪದ್ಯ, ನಾಟಕ, ಕಾದಂಬರಿ, ಆಖ್ಯಾಯಿಕೆ ಮೊದಲಾದ ಎಲ್ಲ ವಿಭಾಗಗಳೂ ಸೇರುತ್ತವೆ) ಇತಿಹಾಸ, ರಾಜನೀತಿ ಮತ್ತು ಅರ್ಥಶಾಸ್ತ್ರ ಮೊದಲಾದ ಸರಸ್ವತೀ ದೇವಿಯ ಭಂಡಾರವೆಲ್ಲವೂ ವಾಙ್ಮಯ ಪ್ರಕಾರವೆಲ್ಲವೂ ಎಲ್ಲವೂ ಸಾಹಿತ್ಯದ ಪ್ರಾಕಾರದೊಳಗೆ ನೆಲಸುತ್ತವೆ. 'ಸಾಹಿತ್ಯ'ವೆಂಬುದರ ಅಪರಿಮಿತ ಅರ್ಥವನ್ನು ಸಂಕುಚಿತಗೊಳಿಸಿ, ಕಾವ್ಯ ಮತ್ತು ಕಾವ್ಯಶಾಸ್ತ್ರಗಳಿಗೆ ಮಾತ್ರ ಹೇಳುವ ಪರಿಪಾಠ ಬಂದಿದ್ದು ಈಗದು ಮತ್ತೂ ಕುಂದಿ ಕಾವ್ಯ ಮತ್ತದರ ಉಪಾಂಗಗಳಿಗೆ ಮಾತ್ರ ಅನ್ವಯಿಸುವಂತೆ ಉಪಯೋಗಿಸುತ್ತಾರೆ.

ಸಾಹಿತ್ಯವು ವಿಚಾರಗಳ ಸಮೂಹವಾಗಿದೆ. ಈ ವಿಚಾರಗಳೇ ಸಮಾಜದಲ್ಲಿ ಕಾರ್ಯ ಸಾಧಿಸುತ್ತವೆ. ಸಾಹಿತ್ಯರೂಪವನ್ನು ಪಡೆದವಿಚಾರಗಳಲ್ಲಿ ಒಂದುವಿಧದ ಸಾಂಕ್ರಾಮಿಕತೆಯು ವಿಶೇಷವಾಗಿರುವುದು. ಒಂದು ವಿಚಾರವು ಒಂದೆಡೆಯಲ್ಲಿ ವ್ಯಕ್ತವಾದರೆ, ಅದೇ ಆದೇಶ ತುಂಬ ಅಗ್ನಿಯಂತೆ ವ್ಯಾಪಿಸುವುದು. ವಿಚಾರಗಳ ನಡೆ ಮತ್ತು ಸಂಕ್ರಾಮಿಕತೆಯು ಭಾಷೆಯನ್ನೇ ಮುಖ್ಯವಾಗಿ ಹೊಂದಿಕೊಂಡಿರುವುದು. ಭಾಷಾ ಮಾಧ್ಯಮವಿಲ್ಲದೆ, ಅದೆಷ್ಟು ಸುಂದರ ಮತ್ತು ಅಮೂಲ್ಯವಾದ ವಿಚಾರವೇ ಇರಲಿ, ಅದು ಮರಳಿನಲ್ಲಿ ಬಿದ್ದ ಬೀಜದಂತೆ ನಿಷ್ಪ್ರಯೋಜಕವಾಗುವುದು. ಭಾಷೆಯಿಂದಾಗಿಯೇ ವಿಚಾರವು ಓರ್ವನಿಂದ ಇನ್ನೋರ್ವನಿಗೆ ಹರಡುತ್ತ ಒಂದು ವ್ಯಾಪಕಸ್ವರೂಪವನ್ನು ಧರಿಸುವುದು. ಸಾಹಿತ್ಯ ಶರೀರದಲ್ಲಿ ಸುರಕ್ಷಿತವಾಗಿರುವ ವಿಚಾರವು ಹೊಸ ವಿಚಾರಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ. ಈ ಪ್ರಕಾರವಾಗಿ ವಿಚಾರಗಳ ಮಹಾಸ್ರೋತವು ಅವಿಚ್ಛಿನ್ನವಾಗಿ ಹರಿಯುತ್ತ ಮುಂದುವರಿಯುತ್ತದೆ. ಇದರಲ್ಲಿಯೇ ಈಸಾಡುತ್ತ ಮಾನವನು ಉನ್ನತಿಯ ಪಥದಲ್ಲಿ ಮುಂದುವರಿಯುತ್ತಾನೆ. ಸಾಹಿತ್ಯವೆಂಬುದು ಇಲ್ಲದೆ ಇರುತಿದ್ದರೆ, ನಮ್ಮ ವಿಚಾರಗಳೆಲ್ಲವೂ ನೀರಗುಳ್ಳೆ ಅಥವಾ ಬುದ್ಬುದಗಳಂತೆ ಕ್ಷಣಿಕವೂ ಅಸ್ಥಿರವೂ ಆಗಿರುತಿದ್ದುವು. ಸಾಹಿತ್ಯವು ವಿಚಾರಗಳನ್ನು ಅಮರವಾಗಿಸಿ, ಅವಕ್ಕೆ ಮಾರ್ಗದರ್ಶನವನ್ನೂ ಶಕ್ತಿಯನ್ನೂ ಈಯುತ್ತಿದೆ. ಇಂದಿನ ಜಗತ್ತು ವಿಚಾರ—ವಿಚಿಂತನೆಗಳದ್ದೇ ಆಗಿದೆ. ಒಂದು ಪರಿವರ್ತನೆಇಲ್ಲವೇ ವಿಪ್ಲವವಾದರೆ, ಅದರ ಮೂಲ ಸ್ರೋತವು ಯಾವುದೋ ಒಂದು ವಿಚಾರಧಾರೆಯಲ್ಲಿಯೇ ಇರುತ್ತದೆ. ಆಲದ ಬೀಜದಂತೆಯೇ ವಿಚಾರಗಳಲ್ಲಿಯೂ ಬಹಳ ಸಂಭಾವನೆಯಿರುವುದುಂಟು. ಸದ್ಯದ ಎಲ್ಲ ರಾಜನೀತಿಕ ಆಂದೋಲನವು ವಿಚಾರಗಳ ಫಲವಲ್ಲವೆಂದು ಹೇಗೆ ಹೇಳುವುದು ಸಾಧ್ಯ? ಸಾಹಿತ್ಯವೇ ನಮ್ಮ ಜ್ಞಾನವನ್ನು ಹೆಚ್ಚಿಸಿ, ವರ್ತಮಾನಕಾಲದ ಬಗ್ಗೆ ಅಸಂತುಷ್ಟರಾಗುವಂತೆ ಪ್ರೇರೇಪಿಸುತ್ತದೆ. ನಮ್ಮ ಹೀನಾವಸ್ಥೆಯನ್ನು ಬೇರೆಯವರ ಉನ್ನತಾವಸ್ಥೆಯೊಡನೆ ಹೋಲಿಸಿ, ನಮ್ಮ ಕಣ್ಣುಗಳನ್ನು ತೆರೆಯಿಸಿ, ನಮ್ಮಲ್ಲಿ ಶಕ್ತಿಸಂಚಾರವಾಗುವಂತೆ ಎಸಗುವುದು ಸಾಹಿತ್ಯವೇ. ಇಂದಿನ ನಿಷ್ಕ್ರಿಯ ಪ್ರತಿಷೇಧವು ಬೌದ್ಧಕಾಲೀನ ಮತ್ತು ಟಾಲಸ್ಟಾಯಿಯವರ ವಿಚಾರಗಳ ಫಲವಾಗಿದೆ. ರಶ್ಯದ ರಾಜ ವಿಪ್ಲವವು ಸಾಮ್ಯವಾದ ಸಂಬಂಧದ ವಿಚಾರಗಳ ಪರಿಣಾಮವೇ ಅಲ್ಲವೆ? ಫ್ರಾನ್ಸಿನ ರಾಜ್ಯಕ್ರಾಂತಿಯು ವಾಲ್ಟೇರ್ ಮತ್ತು ರೂಸೋರವರ ವಿಚಾರಗಳ ಪ್ರತಿಬಿಂಬವೇ ಸರಿ. ನಿತ್ಶೇ ಮೊದಲಾದ ದಾರ್ಶನಿಕರು ತಮ್ಮ ವಿಚಾರಗಳಿಂದ ಜರ್ಮನ್ ಜನಾಂಗದಲ್ಲಿ ಶಕ್ತಿಯ ಉಪಾಸನೆ ಮತ್ತು ತಮ್ಮ ಸಂಸ್ಕೃತಿಯ ವಿಸ್ತಾರದ ಭಾವಗಳನ್ನು ಹುಟ್ಟಿಸಿದುದೇ ಪ್ರಥಮ ಮಹಾಯುದ್ಧಕ್ಕೆ ಮೂಲಕಾರಣವಾಗಿದೆ. ಭಾರತದಲ್ಲಿಯೂ ದಾದೂ ಲೋಕಮಾನ್ಯತಿಲಕ, ಮಹಾತ್ಮಾ ಗಾಂಧಿ ಮೊದಲಾದವರು ಜನತೆಯಲ್ಲಿ ಸ್ವಾತಂತ್ರ್ಯದ ವಿಚಾರವನ್ನು ಹಬ್ಬಿಸಿ, ಅದನ್ನು ಉತ್ಸಾಹಿತಗೊಳಿಸಿದುದರಿಂದಲೇ ರಕ್ತ ಹರಿಯದ ಕ್ರಾಂತಿನಡೆದು ವಿಶ್ವದ ವಿಶಾಲ ದೇಶವೊಂದು ಸ್ವತಂತ್ರವಾಯಿತು. ಹೀಗೆ ಪ್ರಪಂಚದಲ್ಲಿ ಅದೆಷ್ಟು ಕ್ರಾಂತಿಗಳು ನಡೆದಿದ್ದರೂ ಅದಕ್ಕೆ ಸಾಹಿತ್ಯವೇ ಮೂಲಕಾರಣವಾಗಿದೆ.

—ಗೋರಾ.



— ಕುಮಾರಿ ಬಿಲ್ಲೆಗಳು —

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—I.

ವಿಚಾರವರ್ಷ

(೩ನೇ ಪುಟದಿಂದ)

ಆ ನೌಕರನೊಡನೆಂದರು— "ತಮ್ಮ
ಊಟ ಉತ್ತಮವಾಗಿತ್ತು. ಆದರೆ, ನೀನ
ಬಡಿಸಿದುದು ಅದನ್ನು ಮತ್ತೂ ರುಚಿಕ
ವಾಗಿ ಮಾಡಿಸಿತ್ತು." ಎಂದರು ನೌಕ
ನು ಮೆಲರಿಯುವರ ಈ ಸೌಜನ್ಯವನ್ನು
ರೆತು ಬಿಡಲಿಲ್ಲ; ಸದಾ ಅವರನ್ನೇ ಸ್ಮರಿ
ತಿದ್ದನು!

ದಕ್ಷಿಣ ವೇಲ್ಸ್‌ನ ಒಬ್ಬ ವಯೋ
ದ್ಧ ಡಾಕ್ಟರರು ಒಂದು ಪ್ರಕಾರದ ಉ
ದವ ರೋಗಿಗಳಿಗೆ 'ಧನ್ಯವಾದ'ದ ಚಿಕಿ
ಯನ್ನೇ ಹೇಳುತಿದ್ದರು. ಯಾರಾದರ
ಈ ಪ್ರಕಾರದ ರೋಗಿಗ
ಅವರಲ್ಲಿಗೆ ಬಂದರೆ, ಅವ
ಹೇಳುತಿದ್ದರು: "ತಮ್ಮ, ನಿನಗೆ ಯ
ರಾದರೂ ಏನಾದರೂ ಒಳಿತನ್ನು ಮಾ
ದರೆ, ಅವರಿಗೆ ನಗುನಗುತ್ತ ಧನ್ಯವಾ
ವನ್ನೀಯಬೇಕು." ಕೆಲವೊಮ್ಮೆ ರೋಗಿಗಳ
ಪ್ರಶ್ನಿಸುತಿದ್ದರು— ಆದರೆ, ಡಾಕ್ಟರ
ನನಗೆ ಯಾರೂ ಎಳ್ಳಷ್ಟೂ ಹಿತವೆಸಗು
ದಿಲ್ಲ. ಆಗ....?"

ಆಗ ಆ ಅನುಭವಿಕರಾದ ವೈದ್ಯ
ಅನ್ನುತಿದ್ದರು— "ಹೋಗು; ಅರಸಿನೋ
ಡು. ಖಂಡಿತವೂ ಸಿಕ್ಕೇಸಿಕ್ಕುತ್ತಾರೆ."
ನಿಜವಾಗಿಯೂ ನಾಲ್ಕಾರು ವಾರಾನಂ
ರ, ಮರಳಿ ಆ ರೋಗಿ ಬರುವಾಗ, ಆ
ನ ದೃಷ್ಟಿಕೋಣ ಸಂಪೂರ್ಣ ಬದಲಿ
ಹೋಗುತಿತ್ತು; ಮತ್ತು ಆತನ ಹೃದ
ವಾದರೂ ಆನಂದೋತ್ಸಾಹದಿಂದ ತು
ಬಿ ತುಳುಕಾಡುತಿತ್ತು.

ಇನ್ನು ಕೆಲವರಿದ್ದಾರೆ. ಅವರು ತಾ
ಸಲ್ಲಿಸಿದ ಕೃತಜ್ಞತೆಯನ್ನು ಅದರ ಕಾ
ರಣೀಭೂತರು ಸ್ವೀಕರಿಸುವರೆ ಇಲ್ಲವ
ಎಂಬ ಸಂದೇಹದಿಂದ ಧನ್ಯವಾ
ವನ್ನೀಯಲು ಹಿಂಜರಿಯುತ್ತಾರೆ. ಇ
ರಿಂದಾಗಿಯೇ ಅವರು ಆತ್ಮಸ
ತೋಷವನ್ನು ಪಡೆಯುವ ಸದವಕಾಶ
ದನ್ನು ಕಳೆದುಕೊಳ್ಳುತ್ತಾರೆ; ಮತ್ತು
ಮನ್ನನ್ನು ತಾವೇ ವಂಚಿಸಿಕೊಳ್ಳುತ್ತಾ
ಪ್ರಪಂಚದಲ್ಲಿ ಏನಾದರೊಂದು ವಸ್ತು
ನ್ನು ಯಾರಾದರೂ ಕೊಟ್ಟರೆ, ಅವನಿ
ಅದಕ್ಕಿಂತಲೂ ಬೆಲೆಬಾಳುವ ಒಡವೆ
ನ್ನು ಮರಳಿ ಈಯಬಹುದು; ಆದರೆ,
ದರೊಡನೆ ಅರ್ಪಿಸುವ ಹೃತ್ಪೂರ್ವಕ ಕೃ
ತಜ್ಞತೆಯನ್ನು ಮೂರು ಪದಾರ್ಥ
ಮೂರು ಲೋಕಗಳಲ್ಲೂ ನಾಪತ್ತೆಯೇ
ಸರಿ. ಮಂದಹಾಸದೊಡನೆ ಕೊಡಲಾಗು
ವ ಧನ್ಯವಾದದಲ್ಲಿ, ನಮ್ಮೆದುರಿರುವ ಆ
ಹೃದಯವನ್ನು ಸದಾ ನಮ್ಮದಾಗಿಸಿಕೊ
ಳ್ಳುವ ಅಪಾರಶಕ್ತಿ ಅಡಗಿದೆ.

ಇದರಿಂದಲೇ 'ಕೃತಜ್ಞತೆಯ ಸಿಂಹಾಸನದಲ್ಲಿ ಸಾಕ್ಷಾತ್ ಪರಮಾತ್ಮನ ವಿಭೂತಿ ವಿರಾಜಿಸುತ್ತದೆ' ಎಂಬ ತುರ್ಕಿಗಾದೆ, 'ಮನದ ಆಚಾರ ಈಶ್ವರನ ಅವತಾರ' ವೆಂಬ ಜಪಾನಿ ಗಾದೆ ಹುಟ್ಟಿಕೊಂಡಿವೆ. ಕುಬೇರನ ಕೋಶಕ್ಕಿಂತಲೂ ಕೃತಜ್ಞತೆ ಅಮೂಲ್ಯವಲ್ಲವೆ?

(ವಿವಿಧ ಮೂಲಗಳಿಂದ)

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಚಾರ್ಜು. ೨೦ ಮಂದಿಗೆ ಜಖಂ!"—ಮರುದಿನದ ವಾರ್ತೆ.

ಪಟ್ಟಣದ ತುಂಬ ಗುಲ್ಲೋಗುಲ್ಲು. ಕಾರ್ಮಿಕರು ಕಾರ್ಖಾನೆಯ ಮಾಲಕರಿಂದ ಬೋನಸ್ಸು ದೊರಕಿಸಲು ಮುಷ್ಕರ ಹೂಡಿದ್ದರು.

"ಕಾರ್ಮಿಕರಿಗೆ — ಜಯವಾಗಲಿ! "

"ಬಂಡವಾಳಶಾಹಿ—ನಿರ್ನಾಮವಾಗಲಿ!"

"ಇಂಕ್ವಿಲಾಬ್— ಜಿಂದಾಬಾದ್!"

"ಲಾಲ್‌ಝಂಡೆ— ಜಿಂದಾಬಾದ್!"

ಪೇಟೆಯ ಮಾರ್ಗದ ಮೇಲೆ ಕಾರ್ಮಿಕರ ಮೆರವಣಿಗೆ—ಘೋಷಣೆ; ಕಾರ್ಖಾನೆಗಳೆದುರು ಮುಖಪ್ರದರ್ಶನ. ಎಲ್ಲೆಲ್ಲೂ ಬಿಸಿವಾತಾವರಣ. ಮೆರವಣಿಗೆ, ಗುಂಪು ಚದುರಿಸಲು ಪೋಲೀಸರು ಲಾಠೀ ಪ್ರಯೋಗಿಸಿದರು. ಹಲವಾರು ಮಂದಿ ಜಖಂಗೊಂಡರು.

ಮೆರವಣಿಗೆ—ಗುಂಪುಗಳೇನೋ ಚದುರಿದುವು. ಆದರೆ ಕಾರ್ಮಿಕರು ಮುಷ್ಕರ ಮುರಿಯಲಿಲ್ಲ; ಎಂಟು ದಿನಗಳ ತನಕ ಮುಂದುವರಿಯಿತು. ಕಾರ್ಖಾನೆ ಮುಚ್ಚಿತು.

ಮುಷ್ಕರದಿಂದಾಗಿ ಉಪವಾಸ ವ್ರತ ಕೈಗೊಳ್ಳಬೇಕಾದ ಕಾರ್ಮಿಕರಲ್ಲಿ ಮಾದನೂ ಒಬ್ಬ. ಹಲವು ಮಂದಿ ಕೂಲಿಗಳು ಮಾಲಿಕರ ಹಿತವಚನ ಕೇಳಿ ಕೆಲಸದ ಮೇಲೆ ಹಾಜರಾದರು. ಹಲವರು ಬೋನಸ್ಸಿನ ಆಸೆಯಿಂದ ಮತ್ತೆ ಕೆಲವರು ನ್ಯಾಯ ದೊರಕಿಸುವ ಧ್ಯೇಯದಿಂದ ಮುಷ್ಕರ ಮುಂದುವರಿಸಿದರು. ಹೆಚ್ಚಿಗೆ ಹಣ ದೊರಕುವುದೆಂದು ಮುಷ್ಕರದ ಮುಂದಾಳುಗಳು ಆಸೆ ಹುಟ್ಟಿಸಿದ್ದರಿಂದ ಮಾದ ಅದನ್ನು ನಂಬಿ, ಆ ಆಸೆಗೆ ಬಾಯ್ಬಿಟ್ಟು ಅವರೊಡನೆ ಸೇರಿಕೊಂಡಿದ್ದ. ಆದರೆ ಮುಷ್ಕರಕ್ಕೆ ಪ್ರೋತ್ಸಾಹವಿತ್ತವರು ಅಥವಾ ಮುಂದಾಳುಗಳು ಹಸಿದ ಕೂಲಿಗಳಿಗೆ ಹೊಟ್ಟೆಗೆ ಕೊಡಲಿಲ್ಲ. ಮಾದ ಹಸಿವೆಯಿಂದ ಬಸವಳಿದ. ದಿನಕ್ಕೆಂಟು ಬಾರಿ ಚಹಾ ಕುಡಿದರೂ 'ಖಾಲಿ'ಯಾಗಿಯೇ ಉಳಿಯುತ್ತಿದ್ದ ಅವನ ಹೊಟ್ಟೆಯೀಗ ಅವನ ಮಾತು ಕೇಳುವುದನ್ನು ನಿಲ್ಲಿಸಿ ಮುಷ್ಕರ ಹೂಡಿತು. ಇನ್ನು ಜೀವ ಹೋಗುವ ಪರಿಸ್ಥಿತಿಯೂ ಒದಗಬಹುದೆಂದು ಹೆದರಿದ ಜೀವಗಳ್ಳ ಮಾದ ಕಾರ್ಖಾನೆಯ ಮಾಲಕರಿಗೆ ಶರಣುಹೋದ. ಆದರೆ ಅವರಿಂದ ಆತನಿಗೆ ದೊರೆತ ಉತ್ತರವೇ ಬೇರೆ—

"ಕೆಲಸಕ್ಕೆ ಸೇರಿ ಇನ್ನೂ ಎಂಟು ದಿನವಾಗಲಿಲ್ಲ; ಆಗಲೇ ಮುಷ್ಕರಕ್ಕಿಳಿದುಬಿಟ್ಟೆ. ಇನ್ನು ನಿನ್ನನ್ನು ಕೆಲಸದಲ್ಲಿರಿಸಿಕೊಂಡರೆ ನಮ್ಮ ಕಾರ್ಖಾನೆಯನ್ನೇ ಮುಗಿಸಿಬಿಡುವಿ. ನಿನಗೊಂದು ನಮಸ್ಕಾರ. ಇಲ್ಲಿಂದ ಒಮ್ಮೆ ಹೊರಟುಬಿಡು"

ಮಾದ ಅವರ ಕಾಲುಹಿಡಿದು, ಅತ್ತು ಕರೆದು ಬೇಡಿಕೊಂಡ. ಅದರಿಂದ ಆತನಿಗೆ ಯಾವ ಪ್ರಯೋಜನವೂ ದೊರೆಯಲಿಲ್ಲ. ಕಾರ್ಖಾನೆಯ ಸಿಪಾಯಿಯಿಂದ ದಬ್ಬಿಸಿಕೊಂಡು ಅಲ್ಲಿಂದ ಹೊರಬಿದ್ದ. ಒಂದೆಡೆ ಹಸಿವೆಯಿಂದ ಕಂಗೆಟ್ಟ ಆತನಿಗೆ ಕೆಲಸವೂ ದೊರೆಯದೇ, ತನ್ನ ಉದರ ಪೂಜೆಯ ಮುಂದಿನ ದಾರಿ ಆತ ಕಾಣದಾದ. ಆಗಲೇ ಆತನಿಗೊಂದು ಉಪಾಯವು ಹೊಳೆದಿತ್ತು: ತನ್ನನ್ನು ಇಲ್ಲಿಗೆ ಕರೆಸಲು ಕಾರಣನಾದ ವೆಂಕಪ್ಪನೊಡನೆ ಒಂದು ಮಾತು ಕೇಳಿದರೆ ಆತನಿಂದಲಾದರೂ ತನಗೆ ಸಹಾಯ ದೊರಕೀತೆಂದು ಆಶಿಸಿ ಮಾದ ವೆಂಕಪ್ಪನೆಡೆಗೆ ನಡೆದ... ಅಲ್ಲಿಯೂ ಅವನಿಗೆ ನಿರಾಶೆಯೇ ಕಾದಿತ್ತು. ಮಾದನ ಏಕಮಾತ್ರ ಮಿತ್ರ ವೆಂಕಪ್ಪ ತನ್ನ ಅಸಹಾಯಕತೆ ಸೂಚಿಸಿ ಕೈ ತಿರುಗಿಸಿ ಬಿಟ್ಟ. ಮಾದನಿಗೆ ಕತ್ತಲು ಕವಿದಂತಾಯಿತು; ಎಲ್ಲಿಯೂ ತನ್ನ ಹೊಟ್ಟೆಯ ಹಸಿವನ್ನು ಹಿಂಗಿಸುವ ಮಾರ್ಗ ಆತ ಕಾಣದಾದ.

ಹಾಗೇ ಆತ ಕಾಲೆಳೆದುಕೊಂಡು ಮುಂದೆ ನಡೆದ— ಹಿಂಗದ ಹಸಿವೆಯಿಂದ ಭಂಗಪಡುತ್ತಿದ್ದ ಆತನಿಗೆ ದೂರದ ಬಸ್ಸು ನಿಲ್ದಾಣದಲ್ಲಿ ಕೂಲಿಗಳು ಕಿರಿಚುತ್ತಿದ್ದ ಸದ್ದು ಕೇಳಿ ಅವನ ಕಿವಿ ನಿಮಿರಿ ನಿಂತಿತು.

"ಕೂಲೀ....ಕೂಲೀ...."

—ಮಾದನಿಗೆ ಹೊಸ ಉಪಾಯವೊಂದು ಹೊಳೆದಂತಾಯಿತು. ಅವನಲ್ಲಿ ಹೊರೆಯೆತ್ತುವ ಶಕ್ತಿಯೂ ಇರಲಿಲ್ಲ. ಆದರೆ ಹೊಟ್ಟೆ ಅವನ ಮಾತು ಕೇಳಬೇಕಲ್ಲ.... ಅವನೂ ಕೂಗಹತ್ತಿದ—

"ಕೂಲೀ....ಕೂಲೀ...."

ಬಸ್ಸೊಂದು ಬಂದು ನಿಂತಿತು. ಮಾದ ಎಲ್ಲರಂತೆ ಬಸ್ಸಿನೆಡೆಗೆ ಓಡಿದ— ಯಾರೋ ಒಬ್ಬರು ಮಾದನಿಗೆ ಹೇಳಿದರು—

"ಆ ಹೋಲ್ಡಾಲು ತೆಗೆದುಕೋ."

ಮಾದನ ಭಾಗ್ಯ ದೇವತೆ ಕಣ್ತೆರೆದಳು. ಮಾದ ಬಸ್ಸುಹತ್ತಿ ಹೋಲ್ಡಾಲಿಗೆ ಕೈಯಿಕ್ಕಿದ. ಆದರೆ ಅಷ್ಟರಲ್ಲಿ ಮತ್ತೊಬ್ಬ ಹಮಾಲ ಅದನ್ನೆಳೆದು, ಹೊತ್ತುಕೊಂಡು ಅವರನ್ನು ಹಿಂಬಾಲಿಸಿ ನಡೆದುಬಿಟ್ಟ....ಮಾದ ಕಣ್ಣೆಟ್ಟು ನೋಡುತ್ತಲೇ ಇದ್ದ.

"ಇಗೋ, ಆ ಟ್ರಂಕು, ಬೆಡ್ಡಿಂಗು ಇಂದ್ರ ಭವನಕ್ಕೆ ಕೊಂಡುಹೋಗಬೇಕು ಏನು ಕೊಡಬೇಕು?"— ಮಾದನನ್ನು ಒಬ್ಬಾಕೆ ವಿಚಾರಿಸಿದಳು.

ಮಾದನಿಗೆ ಇಂದ್ರಭವನವೆಲ್ಲಿದೆಯೋ ತಿಳಿಯದು. ಆದರೆ ಅವನಿಗೆ ಹಸಿವೆ ನೀಗಿಸಿಕೊಳ್ಳಲು ಪುಡಿಕಾಸಾದರೂ ಬೇಕಿತ್ತು. ಅದಕ್ಕೇ ಎಂದ— "ಎಂಟಾಣೆ ಕೊಡಿ ತಾಯೀ."

"ಎಂಟಾಣೆ? ...ಸಾಧ್ಯವಿಲ್ಲ. ಆರಾಣೆಗಾದರೆ ತೆಗೆದುಕೋ."

ಮಾದ ಸಿಕ್ಕಿದ್ದೇ ಪುಣ್ಯವೆಂದು 'ಆಗಲೆಂದ'. ಅಷ್ಟರಲ್ಲಿ ಎಲ್ಲಿಂದ ಬಂದನೇನೋ—ಒಬ್ಬ ಮಹಾರಾಯ —"ನಾನು ತೆಗೆದುಕೊಳ್ಳುತ್ತೇನೆ. ನಾಲ್ಕಾಣೆ ಕೊಡಿ"— ಎಂದವನೇ ಆಕೆಯ ಉತ್ತರಕ್ಕೂ ಕಾಯದೇ ಅವುಗಳನ್ನು ಹೊತ್ತು ಮುಂದೆ ನಡೆದುಬಿಟ್ಟ. ಆಕೆ ಒಮ್ಮೆ ಮಾದನತ್ತ ತಿರುಗಿ, ಕೊಂಕಿನ ನಗುಚೆಲ್ಲಿ ನಡೆದಳು. ಮಾದನ ಹೊಟ್ಟೆಗೇ ಚೂರಿಯಿಕ್ಕಿದಂತಾಯಿತು—ಆ ನಗು. ಮೊದಲೇ ಹಸಿವೆ ತಾಳಲಾರದೇ ಬಸವಳಿದ ಮಾದ, ಕೂಲಿದೊರಕಿಸುವುದರಲ್ಲಿ ಆತನಿಗುಂಟಾದ ಸೋಲಿನಿಂದ ಇನ್ನೂ ಬಾಡಿ, ಬೆಂಡಾದ.

"ಮೂರು ದಿನವಾಯ್ತು ಸ್ವಾಮೀ—ಅನ್ನವಿಲ್ಲದೇ. ಏನಾದರೂ ಭಿಕ್ಷೆ ನೀಡೀ..." — ಭಿಕ್ಷುಕರ ಅತ್ತಿಂದಿತ್ತ ತಿರುಗುತ್ತ ಬೇಡುತ್ತಿದ್ದರು. ಮಾದ ನೋಡಿದ. ಆತನ ಆ ನೋಟ ಆತನಿಗೆ ಜೀವ ಉಳಿಸಿಕೊಳ್ಳುವ ಕೊನೆಯ ದಾರಿಯನ್ನು ತೋರಿಸಿಕೊಟ್ಟಿತು.

ಛೇ...ಭಿಕ್ಷೆ ಬೇಡುವುದೇ?"—ಅವನ ಈ ತನಕದ ಬೇಜವಾಬ್ದಾರಿಯುತ ಜೀವನದಲ್ಲಿಯೂ ಆತ ಇದನ್ನು ನಿರೀಕ್ಷಿಸಿರಲಿಲ್ಲ. ಅದನ್ನು ಅವನ ಮನಸ್ಸೂ ಒಪ್ಪದು. ಆದರೆ....ಹೊಟ್ಟೆ?.... ಅವನ ಆ ಹೊಟ್ಟೆಗೆ ಒಮ್ಮೆ ಸಮಾಧಾನ ನೀಡಲು ಅವನೆದುರಿರುವ ಒಂದೇ ಒಂದು, ಕೊನೆಯ ಉಪಾಯ:— "ಭಿಕ್ಷೆ ಬೇಡುವುದು" ....ಇಲ್ಲವಾದರೆ...

ಇಲ್ಲವಾದರೆ..."ಸಾವು!"

'ಭಿಕ್ಷೆ'—'ಸಾವು'-ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳುವ ಆ ಕಠಿಣ ಪ್ರಸಂಗದಲ್ಲಿ ಮಾದನ ಆರಿಸುವಿಕೆ ಯಾವುದಿರಬಹುದೆಂಬುದನ್ನು—ಆತನ ಈ ತನಕದ ಜೀವನದ ಅರಿವಿರುವ ನಾವು ಸುಲಭವಾಗಿ ತಿಳಿದುಕೊಳ್ಳಬಹುದು... ಸಾವಿಗೆ ಅಂಜುವ ಆತ 'ಭಿಕ್ಷೆ'ಯನ್ನೇ ಆರಿಸಿದ.

ಅಷ್ಟು ಹೊತ್ತಿಗೆ ಅವನ ಪಾಪದ ಮೊತ್ತ ತೀರಿದ್ದಿತೋ ಏನೋ—ಅವನ ಬೇಡಿಕೆಗೆ ಬೆಲೆ ದೊರೆಯಿತು. —ಅಂತೂ ಸಂಜೆಯ ತನಕ ಬಿಸಿಲಲ್ಲಿ ತಿರುಗಿ, ಸಾವು, ಬೇಡಿ ಒಟ್ಟಾದ ಮೊತ್ತ 'ನಾಲ್ಕಾಣೆ!'

ಆ ನಾಲ್ಕಾಣೆ ಬಸ್ಸು ನಿಲ್ದಾಣದ ಚಹಾದಂಗಡಿಯ 'ಗಲ್ಲ' ಸೇರಿತು. 'ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ'ಯಂತೆ ಅವನ ಹೊಟ್ಟೆಯ ಕಿಚ್ಚಿಗೂ ಅದು ತಾಗಲಿಲ್ಲ. ಅಂತೂ ಒಮ್ಮೆ ಹಸಿದ ಹೊಟ್ಟೆ ತಣ್ಣಗಾಯಿತು. ನಡೆದಾಡುವ ಚೈತನ್ಯ ಬಂದಂತಾಯಿತು, ಹಾಗೇ ಮೆಲ್ಲನೆ ಆತ ಮುನ್ನಡೆದ—ಪಟ್ಟಣದ ಹದಿನೈದೇ ದಿನಗಳ ಆ ಜೀವನದಿಂದ ಮಾತ್ರ ಹೊಂದಿದ ಕಷ್ಟಪರಂಪರೆಗಳ ಫಲವಾಗಿ ಅವನಿಗೆ ಹಳ್ಳಿಯ ಮತ್ತು ಪಟ್ಟಣದ ಜೀವನ, ಸೊಗಸು, ಸುಖಗಳಲ್ಲಿರುವ ಅಪಾರ ಅಂತರದ ಅರಿವಾಯಿತು.

ಪಟ್ಟಣದಲ್ಲಿ ಕತ್ತಲೆಯಾಗಿ, ರಸ್ತೆಯ ವಿದ್ಯುದ್ದೀಪಗಳು ಹೊತ್ತಿಕೊಂಡು ಕತ್ತಲೆಯನ್ನೋಡಿಸಿದುವು.

ಮಾದನ ಮನಸ್ಸಿನಲ್ಲಿ ಆವರಿಸಿದ್ದ ಆಸೆಯ ಆಮಿಷ ಕಳೆದು, ತಪ್ಪು ಕಲ್ಪನೆಗಳ ಮೋಡ ದಾರಿಹೋಗಿ, ಅರಿವಿನ ದೀಪ್ತಿ ಬೆಳಗಿತು. ಆತ ಪಟ್ಟಣಕ್ಕೆ ಕೊನೆಯ ನಮಸ್ಕಾರ ಹೊಡೆದು ತನ್ನ ಜನ್ಮಭೂಮಿಗಭಿಮುಖನಾದ.

○○ ○○

ಮರುದಿನ ಕೃಷ್ಣಪ್ಪನ ಹೋಟೆಲಿನಲ್ಲಿ ಮಾದ ಭೇಟಿಯಾದಾಗ ಆತನಲ್ಲಿ ಬಹಳ ಬದಲಾವಣೆಯಾಗಿದ್ದುದು ಕಂಡುಬಂತು. ನನ್ನೊಡನೆ ಆತ ಯಾವ ಮಾತನ್ನೂ ಆಡಲಿಲ್ಲ. ನನ್ನನ್ನೊಮ್ಮೆ ನೋಡಿ ಬರೇ ಮುಗುಳುನಗೆ ಬೀರಿದ. ಆ ಕ್ಷೀಣವಾದ, ಕಳೆಗುಂದಿದ ಮುಖದಲ್ಲಿ ಮೂಡಿದ ಆ ಮುಗುಳುನಗೆ— ಆತ ಅಷ್ಟರ ತನಕ ಹೊಂದಿದ ಎಲ್ಲ ಅನುಭವಗಳನ್ನೂ ಹೊರಸೂಸಿತು. ಮತ್ತೆಂದೂ ಮಾದ ಪಟ್ಟಣದ ವೈಭವದ ಕುರಿತು ಮಾತೆತ್ತಲಿಲ್ಲ.

—'ಜನ್ನ', ಮರವಂತೆ.



ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

NAVAYUGA | UDIPI, THURSDAY | LICENSE NO. 31
REGD. NO. M. 3619 | 19—5—1960 | Licensed to Post without Prepayment

ವಿನೋದ ಲಹರಿ

ಮೊದಲು ತಿಳಿಯದ ಹರಿದಿನ

**ಹಾಸಿಗೆಯಿಂದ ಎದ್ದವನನ್ನೇ ಅಪಶಕುನ ಎದುರಾಯಿತು;
ಮುಂದೆ ಇಡಿ ದಿನವೂ ಅದು ನನ್ನ ಬೆಂಬಿಡಲಿಲ್ಲ! ಅದಕ್ಕೆ ಕಾರಣ
ರಾತ್ರೆ ತಾನೇ ತಿಳಿಯಿತು. ಅಂದು ಎಪ್ರಿಲ್........**

ಎಂದಿನಂತೆ ಸೂರ್ಯೋದಯ ಇಂದು ಆಗಲಿಲ್ಲವೆಂಬುದೇನೋ ಖಚಿತ. ಅದು ನನಗೆ ತಿಳಿದದ್ದು ನಾನು ಹಾಸಿಗೆಯನ್ನು ಬಿಟ್ಟು ಎದ್ದ ಮೇಲೆ, ಇಲ್ಲವಾದಲ್ಲಿ ಅದೂ ನನಗೆ ತಿಳಿಯುತ್ತಲೇ ಇಲ್ಲ.

ಮುಂಚಿನ ರಾತ್ರಿಯ ಪುಷ್ಕಳ ಭೋಜನವನ್ನು ಉಂಡ ನನಗೆ, ನಿದ್ರೆಯ ಆಲಿಂಗನ ಆದರ ಉಪಚಾರದ ಮಹಲಿನಲ್ಲೇ ನನ್ನ ಹಾಸಿಗೆಯನ್ನು ಬಿಡಿಸಿದೆ. ಕೊನೆಗೊಮ್ಮೆ ಬಾಗಿಲಿನ ಹೊರಗಡೆ ಸಾರ್‍ಕ... ಸಾರ್‍ಕ... ಬಾಗಿಲು ಬಡಿಯುವ ಸಪ್ಪಳ ಕೇಳಿಸಲು ನನಗೆ ಎಚ್ಚರಾದುದು. "ಹಾಲಿನವನು ಹಾಲನ್ನು ತೆಗೆದುಕೊಳ್ಳುತ್ತೀರೋ? ಎಂದು ಕೇಳಲು ಬಂದ್ದಿದ್ದನಂತ ಕಾಣುತ್ತೆ!" ಎಂದು ನನ್ನಾಕೆಯನ್ನು ನಾನೇ ಎಬ್ಬಿಸಬೇಕಾಯ್ತು. ನನಗಿಂತಲೂ ಆವಳಲ್ಲಿ ನಿದ್ರಾದೇವಿಗೆ ಅನುಶಕ್ತಿ ಹೆಚ್ಚು. ನಿದ್ರೆಯ ಮಬ್ಬುಕಣ್ಣಿನಲ್ಲಿಯೇ ಅವಳು ಹಾಲನ್ನು ತೆಗೆದುಕೊಂಡು ಕಾಫಿ ಕಾಯಿಸಲು ಒಳಗಡೆ ಹೋದದ್ದು ನನಗೆ ಜ್ಞಾಪಕವಿದೆ. ಇದೆಲ್ಲಾ ಕಣ್ಣು ಬಿಡದೇ ಮಾಡಿದ ಸಾಹಸಕ್ಕೆ ನಾನೇ ಒಮ್ಮೆ "ಭೇಷ್" ಎಂದು ಮೆಚ್ಚಿದ್ದೆ.

ಅನಂತರ ಕಾಫಿಗಾಗಿ ಹಾಸಿಗೆಯಲ್ಲೇ ಹೊರಳಿ ಬಾಯಾರಿ (ಮುಂಚೆಲ್ಲ) ಕಂಗೆಟ್ಟು ಕಾಫಿಗಾಗಿ ಒಂದು ಚಿಕ್ಕ ಕವನವನ್ನು ಕಟ್ಟಿದ್ದೂ, ಆಗ ಪುನಃ ಹಾಸಿಗೆಯನ್ನೆ ಆಧಾರವಾಗಿ ಕುಳಿತ್ತು, "ಆ!" ಎಂದು ಆಕಳಿಸಿ, ಕಣ್ಣು ತೆರೆದೆ. ಆವಾಗಲೇ ಸೂರ್ಯನ ವಿಚಿತ್ರ ವರ್ತನೆ ಅರಿವಾದದ್ದು. ಅಲ್ಲಿಗೆ ನನ್ನಾಕೆ ಕಾಫಿ ತಂದಿರಿಸಲಿಕ್ಕೂ ಸರಿಹೋಯ್ತು. ಮುಖ ಮಾರ್ಜನಕ್ಕಾಗಿ ತೆರಳಿ ಪುನಃ ಮರಳಿ ಕಾಫಿ ಬಾಯಿಗಿಟ್ಟುಕೊಂಡೊಡನೆ ಏನೋ ಒಂದು ರೀತಿಯ ಅಸಹ್ಯವಾಸನೆ ನನ್ನ ಚುರುಕು ಮೂಗನ್ನು ಇರಿಯಿತು, ಅಷ್ಟಕ್ಕೆ ನನ್ನಾಕೆ —"ಅಯ್ಯೋ, ಹಾಲಿನವನು ಏನು ಮೋಸ ಮಾಡಿದ" ಎನ್ನುತ್ತಾ ಪುನಃ ನನ್ನ ಬಳಿಗೆ ಬಂದು ಕಾಫಿ ಲೋಟವನ್ನು ಕೈಗೆತ್ತಿ ದೂರ ಚೆಲ್ಲಿದಳು. ನನ್ನ ಮುಖದ ಪರಿವರ್ತನೆ ನೋಡಿದವರಿಗೆ ಗೊತ್ತು; ನನ್ನ ಪೀಕಲಾಟ....ನನ್ನ ಕಾಫಿ!...

ಅಂತೂ ಕೊನೆಗೊಮ್ಮೆ ಧೈರ್ಯದಿಂದ ಪೇಟೆಯತ್ತ ಹೊರಡುವುದೆಂದು ನಿಶ್ಚಯಿಸಿ ಚಿಕ್ಕ ಡ್ರೆಸ್ಸಿನಲ್ಲಿಯೇ ಹೊರ ಹೊರಟೆ. ಹೋಗುವಾಗಲೇ ನಿತ್ಯದ ಬೆಳಗ್ಗಿನ ಕಾಫಿಯನ್ನು ಕುಡಿಯುತ್ತಿದ್ದ ಹೋಟೇಲಿನ ಎದುರು ನಿಂತೆ, ಬೋರ್ಡು ನೋಡಿದಾಗ "ಸುಂದರ ಹೇಯಿರ್ ಕಟ್ಟಿಂಗ್ ಸೆಲೂನ್" ಗೋಚರಿಸಿತು. "ಥೂ! ಹಾಳು" ದಿನವೂ ಕಾಫಿ ಕುಡಿಯುತ್ತಿದ್ದ ಹೋಟೇಲು ನಿನ್ನೆಯಿಂದ ಕಟ್ಟಿಂಗ್ ಸೆಲೂನಾಗಬೇಕೇ? ಎನ್ನುತ್ತಾ, ಹೊಟ್ಟೆಯ ಚುರುಕುತನ ತಾಳಲಾರದೇ; ಮುಂದೊತ್ತಿ 'ವಿಲಾಸ ರೆಸ್ಟೋರೆಂಟ್'ನ್ನು ಹೊಕ್ಕೆ. 'ಕಚ್ ಕಚ್' ಶಬ್ದದೊಂದಿಗೆ ನಾನೂ ಒಳಹೊಕ್ಕೆ. ಉರಿಯನ್ನು ದಹಿಸಲಾರದೇ ಗಟ್ಟಿಯಾಗಿ ಕಾಫಿ ಒಂದು. ಕೂಗಿದೆ, "ಹ್ಲೀ...ಹ್ಲೀ...ಸ್ವಾಮಿ ಏನು ಮಹಾರಾಯ್ರೆ!" ಎಂದು ಚೌರಿಕ ನಾರಾಯಣ ಕೇಳಿಯೇ ಬಿಟ್ಟ. ಅಂತೂ ನನ್ನ ಮರ್ಯಾದೆ ಮೂರುಕಾಸು ಆಯಿತೆನ್ನುವಾಗ ಅವನಿಗೆ ಮುಖ ತೋರಿಸದೆ ಅಲ್ಲಿಂದ ಪಾರಾದೆ. ಸಾಕು, ನನ್ನ ಕಾಫಿಯ ಗಲಾಟೆ ಎನ್ನುತ್ತಾ, ಎಲ್ಲರೂ ನನ್ನ ನೋಡಿ ನಗುತ್ತಾರೊ ಎಂದು ಕಣ್ಣು ಮುಚ್ಚಿ ಮನೆಗೆ ನಡೆದೆ.

'ಎಪ್ರಿಲ್ ೧'ರ ಬೋರ್ಡು ನನ್ನೆದುರಿಗೆ ಕುಣಿಯುತಿತ್ತು. ಆದರಲ್ಲೇನೂ ಸೋಜಿಗ ನನಗೆ ಕಾಣಲಿಲ್ಲ. ನಿನ್ನೆ ತಾನೆ ಮೂವತ್ತೊಂದು, ಇಂದು ಒಂದು. ಮನೆಯ ಮುಂದೆ ಹೆಂಡತಿಯನ್ನು ಕೂಗಿ ಅಡಿಗೆ ಮಾಡಲು ಹೇಳಿದೆ, ಕರೆಗೆ ಓಗೊಟ್ಟು ಸ್ನಾನಕ್ಕಾಗಿ ತೆರಳಿದಳು. ನನ್ನ ಹೊಟ್ಟೆಯಲ್ಲಿ ಏನೋ ಬೆಂಕಿ ಹೊತ್ತಿದ ಮನೆಯಂತೆ ವಿಕಾರವಾಗಿತ್ತು. "ಉಸ್ಸಪ್ಪ" ಎಂದು ಶಾಂತ (ಮಗಳ) ಳನ್ನು ಕರೆದು ಕುಳಿತುಕೊಂಡೆ.

ನನ್ನ 'ಫೋನ್' ಗಣಗಣನೆಂದು ಕರೆಯಿತು. ಇನ್ನೇನೆನ್ನುವಾಗ "ಹಲೋ, ಹಲೊ..." ನಾನು ಗಟ್ಟಿಯಾಗಿ ಯಾರು? ಎಂದೆ.

"ನಾನು ವಿಶ್ವಸಾಹಿತಿ 'ಚತುರ್ಥಾಚಾರ್' ನಿಮ್ಮ ಸಾಹಿತ್ಯ ಸೇವೆಯನ್ನು ಕೇಳಿ ಹರ್ಷಿತನಾಗಿದ್ದೇನೆ, ಅಲ್ಲದೇ ಇಂದು ನಿಮ್ಮ ಮೈದಾನಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಯಲಿದೆ, ಅದಕ್ಕಾಗಿ ತಾವು ಹ್ಲೀ....ಹ್ಲೀ ....ಅಧ್ಯಕ್ಷರು....ಅಂತ ನನ್ನ ನೆನಕೆ. ಕೂಡಲೇ ಹೊರಟು ಬನ್ನಿ."

"ಅಷ್ಟೆ ತಾನೇ, ನಾನೀವಾಗಲೆ ಬರುತ್ತೇನೆ." ಎಂದು ಶೃಂಗಾರವಾಗಲು ಕೋಣೆಗೆ ನಡೆದೆ. ನನ್ನಾಕೆಯನ್ನು ಕೂಗಿ ಬೇಗ ಬರುತ್ತೇನೆಂದೆ, ಅವಳು ಯಾವುದೋ ವಿಷಯವೆಂದು ಮರುಮಾತಾಡದೆ ಸೈಗುಟ್ಟಿದಳು.

ನಮ್ಮ ಮೈದಾನು ಸೇರುವುದು ಅರ್ಧ ಗಂಟೆ ಬೇಕಾದ ಸಮಯ. ಇಂದು ಲಗುಬಗನೆ ಬಿಡಿಬಿಡಿ ಹೋದೆ. ನಾಲ್ಕು ಮಿನಿಟುಗಳೊಳಗೆ ಮೈದಾನು ಸೇರಿದ್ದೂ ಆಯಿತು. ಅಲ್ಲಿಯ ಜನರ ಹಾರಾಟವನ್ನು ಕಾಣದೆ ಬೆಕ್ಕಸಬೆರಗಾದೆ ಮೈದಾನಿನ ತುದಿಯಲ್ಲಿ ನಾಲ್ಕಾರು ಎಮ್ಮೆಗಳು ಉದರ ಪೋಷಣೆಗಾಗಿ ಹುಲ್ಲನ್ನು ತಿನುತ್ತಿದ್ದವು. ನನ್ನ ಕರೆದ ಮಹಾನುಭಾವರು, ಹಾಗೂ ಯಾರೂ ನನ್ನ ದೃಗ್ಗೋಚರಕ್ಕೆ ಕಾಣಲಿಲ್ಲ.

....ಅರ್ಧ ಗಂಟೆ...ಒಂದು ಗಂಟೆ.... ಕಳೆಯಿತೆನ್ನುವಾಗ ನನ್ನ ತಲೆ ನನ್ನ ಸ್ಥಿಮಿತದಲ್ಲಿರಲಿಲ್ಲ. ಸಿಟ್ಟಿನ ಆವೇಶವೇರಿ ಆವರನ್ನು ಶಪಿಸಿ ಮನೆಯ ದಾರಿ ಹಿಡಿದೆ.

ಸತಿಯ ಹೀನಾಯವಾದ ಮಾತನ್ನು ಕೇಳುತ್ತಾ, ಇಲ್ಲದಸಲ್ಲದ ಪ್ರಶ್ನೆಗಳನ್ನು ಉತ್ತರಿಸುತ್ತ ಊಟವನ್ನು ಮುಗಿಸಿದೆ. ಹಸಿವು ನೀಗಿ ಆಯಾಸ ಹೆಚ್ಚಿತು. ಹಾಗೆಯೇ ಕೋಣೆಗೆ ಹೋಗಿ ಹಾಸಿಗೆ ಬಿಡಿಸಿ ನಿದ್ರಿಸಲು ಅಡ್ಡಾದೆ. ಮಲಗಿದ್ದು ಗೊತ್ತೇ ವಿನಃ ನಿದ್ರೆಯ ಅಮಲಿನಲ್ಲಿ ಯಾವುದೂ ತಿಳಿಯಲಿಲ್ಲ.

"ನೀವಿನ್ನೂ ನಿದ್ರೆಯಲ್ಲಿದ್ದೀರಾ?" ನನ್ನ ನಿದ್ದೆಗೆ ಭಂಗವಾದದ್ದು ಆವಾಗಲೇ. ಸಾಹಿತ್ಯದ ನೆನಪು ನನ್ನ ಕನಸಿನಲ್ಲಿಯೇ ಉಳಿದಿತ್ತು. ಅದಕ್ಕಾಗಿ ಯಾರೋ ಬಂದರೆಂದು ತಿಳಿದು ಇಲ್ಲ... ಇಲ್ಲ.... ವೆಂದು ಕಣ್ಣುಜ್ಜಿ ಹೇಳಿದೆ.

"ಹಾಗಲ್ಲ! ಶಾಂತಾ ಶಾಲೆಗೆ ಹೋದವಳು ಹಾಗೆಯೇ ಮನೆಗೆ ಬಂದಳಂತೆ. ಶಾಲೆ ಯಾವುದೆಂದು ತಿಳಿಯಲಿಲ್ಲವಂತೆ. ಬೋರ್ಡು ಕಮ್ಮಾರ ಸಾಲೆಯಲ್ಲಿದೆಯಂತೆ."

"ಹೋಗ್ಲಿ ನಾಳೇನೇ ಶಾಲೆಗೆ ಹೋಗಬಹುದಂತೆ!"

ಶಾಂತಾ ಒಳಗಿಂದ ಬಂದು "ಅಪ್ಪಾ ನನಗೊಂದು ಜೊತೆ ಮೆಟ್ಟು...."

ಎಷ್ಟು ದಿನಗಳಿಂದ ನನ್ನನ್ನು ಅದಕ್ಕಾಗಿ ಪೀಡಿಸಿದ್ದಳೋ? ಪುತ್ತೂರಿಗೂ ಅರಿವಿಲ್ಲ! ಅವಳ ಮಾತನ್ನು ತಿರಸ್ಕರಿಸಲಾರದೆ ಪೇಟೆಯತ್ತ ಮಗಳನ್ನು ಕರೆದುಕೊಂಡು ಹೊರಟೆ. ನನ್ನ ಮನೆಯ ಎದುರಿಗೆ 'ಎಪ್ರಿಲ್ ೧' ಎನ್ನುವ ಹಸ್ತಾಕ್ಷರದ ಕಾಗದ! ಆದರ ಗೂಢಾರ್ಥವೇ ಹೊಳೆಯಲಿಲ್ಲ.

ಆಲೋಚನಾ ಹಂದರದಲ್ಲಿ ಸಿಲುಕಿ ಫೂಟ್ ವೇಯರ್ ಅಂಗಡಿಯ ಬೋರ್ಡು ನನ್ನ ಮಗಳ ಕಣ್ಣಿಗೆ ಬಿತ್ತು. "ಅದೇ ಅಂಗಡಿ ಒಳ್ಳೆಯ ಮೆಟ್ಟುಗಳಿವೆ. ನನಗೆ ಒಳ್ಳೆಯದಾಗಬೇಕು. ಹುಂ!"

ಅಂತೂ ಅಂಗಡಿಯ ಮೆಟ್ಟಲು ಹತ್ತುವುದರೊಳಗೆ ಮಗಳು ಶಾಂತಾ "ಅಪ್ಪ ಶಾಲೆಯ ಮೇಸ್ಟ್ರು ಕುಳಿತಿದ್ದಾರೆ" ಎಂದು ನನ್ನ ಹಿಂದೆ ಸರಿದಳು. ರಾಯರು ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಅಲ್ಲಿಂದಲೇ ಹೊರಬಂದೆ. ಶಾಂತಾಳ ಹಟಮಾರಿತನ ಮೀರಿದ್ದು ಅಂದೇ. ಮುಂದುವರಿಯುತ್ತಾ ನಡೆದೆ ಸುಳ್ಳಿನ ಭರವಸೆ ಶಾಂತಾಳ ಮೆದುಳಿಗೆ ತುಂಬಿ ಅಂಗಡಿ ಮುಚ್ಚಿದೆ ಎಂದು ಪುನಃ ಮಂದಟ್ಟಾಗುವಂತೆ ಹೇಳಿ ಮನೆಯ ದಾರಿ ಹಿಡಿದೆ.

ಹೋಟೇಲಿನ ಕಾಫಿಗಿಚ್ಚಿಸಲಾರದೇ ಮನೆಯಲ್ಲಿಯೇ ಹೆಂಡತಿಯಿಂದ ಚೆನ್ನಾಗಿ ಮಾಡಿಸಿಕೊಂಡು ನಾನೇ ಸ್ವತಃ ಕುಳಿತುಕೊಂಡು ಕುಡಿದದ್ದು ಆಯಿತು. ಸಾಯಂಕಾಲದ ವರೆಗೆ ಕಾಲಹರಣ ಮಾಡಲು ಏನು ಮಾಡಬೇಕು? ಎನ್ನುತ್ತಾ ಪೇಪರಿಗಾಗಿ ಹುಡುಕಾಡಿದೆ. ನನ್ನವಳು ಒಳಗಿದ್ದವಳು ಹೊರಬಂದು "ಏನು ಏನೂಂದ್ರೆ?"– ಪ್ರಶ್ನಿಸಿದಳು ನನ್ನ ಪೇಚಾಟವನ್ನು ಕಂಡು. ನಾನು— ಎಲ್ಲಿ ನನ್ನ ಪೇಪರು? ಬಿರುಸಾಗಿ ಕೇಳಿದೆ.

"ಹೌದು! ಇವತ್ತು ಶಾಲೆಗೆ ಹೋಗದ ಶಾಂತಾ ದೋಣಿಯಾಟದಲ್ಲಿ ಹರಿದು

(೭ನೇ ಪುಟ ನೋಡಿರಿ)

ಹೊಸ ಹೆಜ್ಜೆ

- ವಾರ್ಷಿಕ ಉಳಿತಾಯ
- ರೂ. ೩೫ರಿಂದ ಪ್ರಾರಂಭಿಸಬಹುದು

ವರುಷಕ್ಕೆ ಒಂದು ಸಾವಿರ ರೂಪಾಯಿಗಳಂತೆ ಮೂವತ್ತೈದು ವರುಷಗಳಲ್ಲಿ ಸಂಗ್ರಹವಾಗುವ ಮೂವತ್ತೈದು ಸಾವಿರ ರೂಪಾಯಿಗಳು ಒಂದು ಲಕ್ಷ ರೂಪಾಯಿಗಳಿಗಿಂತಲೂ ಅಧಿಕ ಲಾಭವನ್ನು ತರಬಲ್ಲವು.

ವಿವರಗಳಿಗೆ ದಯಮಾಡಿ ವಿಚಾರಿಸಿರಿ:
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬೇಂಕ್

ಕುಂದಾಪುರ ಅಸಿಸ್ಟೆಂಟ್ ಕಮಿಶನರ್‌ರವರ ಕೋರ್ಟಿನಲ್ಲಿ

O. P. No 139/60

ರಾಮಕೃಷ್ಣ ನಾಯ್ಕ, ಅಂಗಡಿ ದುಗ್ಗಪ್ಪ ನಾಯ್ಕರ ಮಗ, ನಂಬ್ರ 34ನೇ ಕುದಿಗ್ರಾಮದ ಚಗ್ರಿಬೆಟ್ಟಿನಲ್ಲಿರುವವ —ಅರ್ಜಿದಾರ.

ಮತ್ತು

ಕಲ್ಯಾಣ ಆಚಾರ್ತಿ ಕೂಡಾ —ಯೆದ್ರಿರು ಯವರೊಳಗೆ.

2ನೇ ಯೆದ್ರಿ:— ಮಂಜುನಾಥ ಆಚಾರಿ. ಶಂಕ್ರಾಚಾರಿ—ವ 1ನೇ ಎದ್ರಿಳ ಮಗ. ಉಡ್ಪಿ ತಾಲ್ಕು ಹೊಸೂರು ಗ್ರಾಮದಲ್ಲಿರುವವ. ಸದ್ರಿ ಎದ್ರಿಗೆ ಯಿ ಮೂಲಕ ತಿಳಿಯಪಡಿಸುವದೇನೆಂದ್ರೆ—

ಅರ್ಜಿದಾರ ಮತ್ತು ಯೆದ್ರಿರು ರಿ. ನಿಶಿ. ತಾ 16—1—1949ರಲ್ಲು ಮಾಡಿಕೊಂಡ ಮೂಲಗೇಣಿ ಚೀಟು ಮೇರೆಗೆ ಬಹಾಮನ್ಸಥ ಸಂರದ ಲಾಗಾಯ್ತಿನ ಗೇಣಿ ಸಂಪೂರ್ಣ ಬಾಕಿಮಾಡಿಕೊಂಡಿರುವ ಕಾರಣ ಮೂಲಗೇಣಿ ಚೀಟಿನ ಶರ್ತಮೇರೆಗೆ ಮೂಲಗೇಣಿ ರದ್ದಾಗಿರುವುದರಿಂದ ಸದ್ರಿ ಮೂಲಗೇಣಿ ಆಸ್ತಿ ಸ್ವಾಧೀನತ್ತೆ ಕೇಳಿ ಅರ್ಜಿದಾರನು ಮಾಡಿದ ಮೇಲಿನ ಅರ್ಜಿಯು ತಾ. 26—5—60ಕ್ಕೆ ಉಡ್ಪಿ ಕೇಂಪಿನಲ್ಲಿ ತನ್ನಿಗೆ ಯಿಟ್ಟಿರುತ್ತದೆ ಎಂಬ ಸಂಗ್ತಿಯಿ ಮೂಲಕ ತಿಳಿಸೋಣಾಗುತ್ತದೆ.

(By order of the Court)

P.N. Krishnamoorthy Rao,
Advocate for Petitioner.

Udipi 12—5—60

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೩೮. 26-5-1960 Vol. 39. No. 38.

ಪ್ರಚಲಿತ ಪ್ರಸಂಗ

ಕುಷ್ಠರೋಗ ನಿವಾರಣಾ ಪ್ರಯತ್ನ

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳ ವಿನಿಯೋಗ. ಖಾಸಗಿ ಸಂಸ್ಥೆಗಳಿಗೂ ಉಚಿತ ಧನಸಹಾಯ ದೊರೆಯುವುದು.

ಮಾನವನನ್ನು ಕಾಡುವ ಮಹಾ ಮಾರಿ ಬೇನೆಗಳಲ್ಲಿ ಕುಷ್ಠರೋಗವೂ ಒಂದಾಗಿದೆ. ಮಾತ್ರವಲ್ಲ, ಇದು ದಿನೇ ದಿನೇ ಬಹು ವೇಗವಾಗಿ ಪಸರಿಸುತ್ತದೆ. ಆದುದರಿಂದ ಈ ರೋಗವನ್ನು ನಿಯಂತ್ರಿಸಲು ಮತ್ತು ಅದಕ್ಕೆ ಚಿಕಿತ್ಸೆಯನ್ನು ಒದಗಿಸಲು ಮೈಸೂರು ರಾಜ್ಯ ಸರಕಾರವೂ ಒಂದು ಯೋಜನೆಯನ್ನು ಸಿದ್ಧಪಡಿಸಿದೆ. ಅಲ್ಲದೇ, ರಾಜ್ಯದ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಅಡಕಗೊಳಿಸಿದೆ. ಈ ನಿಯೋಜಿತ ಯೋಜನೆಗಾಗಿ ಸುಮಾರು ೨೦ ಲಕ್ಷ ರೂಪಾಯಿಗಳು ಬೇಕಾಗುವುದು.

ರಾಜ್ಯ ಪುನರ್ಘಟನೆಗೆ ಮೊದಲು, ಕುಷ್ಠರೋಗವು ಮೈಸೂರು ರಾಜ್ಯದಲ್ಲಿ ಅಷ್ಟು ವ್ಯಾಪಕವಾಗಿರಲಿಲ್ಲ. ಮೈಸೂರು, ಕೋಲಾರ, ಬಳ್ಳಾರಿ ಜಿಲ್ಲೆಗಳ ಕೆಲವೊಂದು ತಾಲೂಕುಗಳಲ್ಲಿ ಮಾತ್ರ ಕುಷ್ಠರೋಗವು ವರದಿಯಾಗುತಿತ್ತು. ಬೊಂಬಾಯಿ, ಹೈದರಬಾದ ಮತ್ತು ಮದ್ರಾಸ ರಾಜ್ಯಗಳ ಕನ್ನಡ ಪ್ರದೇಶಗಳು ಮತ್ತು ಮೈಸೂರು ರಾಜ್ಯಗಳು ಒಟ್ಟುಸೇರಿ, ನೂತನ ರಾಜ್ಯೋದಯವಾದಮೇಲೆ, ಈ ಕುಷ್ಠರೋಗವು ಚಿಂತನೀಯವೆನಿಸುವ ಸ್ಥಿತಿಯು ಬರುತ್ತಿದೆ. ರಾಜ್ಯದ ಆರೋಗ್ಯ ಶಾಖೆಯು ಈ ಕಡೆಗೆ ವಿಶೇಷ ದೃಷ್ಟಿ ಹರಿಸಬೇಕಾಗಿ ಬಂದಿದೆ.

೧೯೫೭ಕ್ಕೆ ಮೊದಲು ಸೇಕಡಾ ೦.೨೮ರಷ್ಟಿದ್ದ ಕುಷ್ಠ ರೋಗಿಗಳ ಸಂಖ್ಯೆ ಈಗ ಸೇ. ೦.೭೭ರಿಂದ ಸೇ. ೧.೦ಕ್ಕೆ ಏರಿದೆ. ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಬಿಟ್ಟು ಉಳಿದ ಬೆಳಗಾವ್, ಧಾರವಾಡ, ಬಿಜಾಪುರ, ಬೀದರ, ಗುಲ್ಬರ್ಗ, ರಾಯ್‌ಚೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕುಷ್ಠ ರೋಗಿಗಳ ಸಂಖ್ಯೆಯು ಹೆಚ್ಚಿರುತ್ತದೆ.

ಬೆಂಗಳೂರಿನಿಂದ ೪೫ ಮೈಲು ದೂರದಲ್ಲಿನ ಅಂಟು ರೋಗಗಳ ಆಸ್ಪತ್ರೆಯಲ್ಲಿ ಕುಷ್ಠ ರೋಗಕ್ಕೆ ಚಿಕಿತ್ಸೆಯನ್ನು ಒದಗಿಸುವ ಒಂದು ಸ್ವತಂತ್ರ ವಿಭಾಗವನ್ನು ತೆರೆಯಲು ಸರಕಾರವು ನಿರ್ಧರಿಸಿದೆ. ಕುಷ್ಠ ರೋಗ ಕೇಂದ್ರವೊಂದು ಈಗಲೇ ಕೆಲಸ ಮಾಡುತ್ತಿದ್ದು ಇದನ್ನೇ ಸ್ಥಳಾಂತರಿಸಲಾಗುವುದು. ಈ ಕೇಂದ್ರದಲ್ಲಿ ಕೇವಲ ೫೦೦ ರೋಗಿಗಳ ಸ್ಥಳಾವಕಾಶವಿರುವುದಾದರೂ ಈಗ, ೨೫೦ ರೋಗಿಗಳು ಚಿಕಿತ್ಸೆಯನ್ನು ಪಡೆಯುತಿದ್ದಾರೆ.

ಕೇಂದ್ರ ಕುಷ್ಠರೋಗ ಸಂಸ್ಥೆಯಲ್ಲದೆ ಉಳಿದ ಕೆಲವೊಂದು ಸಂಸ್ಥೆಗಳೂ ಈಗ ಕುಷ್ಠರೋಗಕ್ಕೆ ಚಿಕಿತ್ಸೆಯನ್ನು ಒದಗಿಸುತ್ತಿವೆ. ಗಾಂಧೀ ಸ್ಮಾರಕ ಕುಷ್ಠಸಂಸ್ಥೆ ಮತ್ತು ಸರಕಾರಗಳ ಸಹಾಯದಿಂದ ಇಂತಹ ಒಂದು ಕೇಂದ್ರವು ಟಿ-ನರಸೀಪುರದಲ್ಲಿ ಕಾರ್ಯತತ್ಪರವಾಗಿದೆ. ಗಜೇಂದ್ರಗಡ, ಇಳಕಲ್ಲು, ಬೀದರ, ಗುಲ್ಬರ್ಗ, ಕುಂದಾಪುರ, ಗೋರಿಬಿದನೂರು ಮತ್ತು ಕೊಳ್ಳೆಗಾಲಗಳಲ್ಲಿ ಸಣ್ಣ ಮಟ್ಟದ ಚಿಕಿತ್ಸಕ ಕೇಂದ್ರಗಳಿವೆ. ಇವೆಲ್ಲಾ ಕೇಂದ್ರಗಳು ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ರಾಷ್ಟ್ರೀಯ ಕುಷ್ಠ ನಿಯಂತ್ರಣ ಯೋಜನೆಯನ್ವಯ ಸ್ಥಾಪಿತವಾಗಿದ್ದುವು.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ೧೪ ಜಿಲ್ಲೆಗಳಲ್ಲಿ ಯೋಗ್ಯ ನಿಯಂತ್ರಣ ಕಾರ್ಯಪಡೆಗಳು ಸರಕಾರವು ಯೋಚಿಸಿದೆ. ಕೇಂದ್ರ ಕುಷ್ಠ ರೋಗ ಸಂಸ್ಥೆಯಲ್ಲಿ ಕೊಡಲಾಗುತ್ತಿರುವ ಅಲ್ಪಾವಧಿ ತರಬೇತಿಯ ಯೋಜನೆಯು ಇನ್ನೂ ಮುಂದುವರಿಯುತಿದ್ದು ಇದೀಗ ಡಾಕ್ಟರುಗಳು ಮತ್ತು ೩೨ ಆರೋಗ್ಯ ಪರಿಶೀಲಕರು ತರಬೇತಿ ಪಡೆದಿದ್ದಾರೆ. ಬಿಜಾಪುರ, ಮಂಗಳೂರು, ಬೆಳಗಾವ್, ಗೋಕಾಕ, ಬೆಂಗಳೂರು ಮತ್ತು ಟಿ. ನರಸೀಪುರಗಳಲ್ಲಿರುವ ಕುಷ್ಠರೋಗ ನಿವಾರಣೆಗಾಗಿ ಪ್ರಯತ್ನಿಸುತ್ತಿರುವ ಖಾಸಗಿ ಸಂಸ್ಥೆಗಳಿಗೂ ಸರಕಾರವು ಸಹಾಯಧನವನ್ನು ನೀಡಲು ನಿರ್ಧರಿಸಿದೆ.

ದ್ವಿತೀಯ ಯೋಜನಾವಧಿಯಲ್ಲಿ ರಾಜ್ಯ ಸರಕಾರವು ಕುಷ್ಠರೋಗ ನಿವಾರಣೆಗಾಗಿ, ೨,೯೪,೫೦೦ ರೂಪಾಯಿಗಳನ್ನು ವೆಚ್ಚಮಾಡಲು ನಿಯೋಜಿಸಿದ್ದು, ಈ ಮೊತ್ತವನ್ನು ಸದುಪಯೋಗಪಡಿಸಿಕೊಳ್ಳಲಾಗಿದೆ. ಮೂರನೆಯ ಯೋಜನೆಯಲ್ಲಿ ಇದಕ್ಕಾಗಿ ಮೀಸಲಾದ ಹಣವು ಆರು ಪಾಲಷ್ಟು ಹೆಚ್ಚಿದ್ದು, ಅದಷ್ಟು ವ್ಯಾಪಕರೀತಿಯಲ್ಲಿ ಚಿಕಿತ್ಸಾ ಸೌಕರ್ಯವು ಪ್ರಜಾಜನರಿಗೆ ದೊರೆಯುವ ಸಾಧ್ಯತೆಯಿರುವುದು.

ಪೂರ್ವ ಜನ್ಮದ ಪಾಪದ ಫಲವಾಗಿ ಈ ರೋಗವು ಬರುವುದೆಂದು ಕೆಲವು ಹಿಂದೂ ಜನರಲ್ಲಿ ಅಂಧ ವಿಶ್ವಾಸವಿರುವುದು. ಇದರಿಂದಾಗಿ, ಈ ರೋಗವನ್ನು ನಿವಾರಿಸುವ ಬಗ್ಗೆ ವಿಶೇಷ ಗಮನವನ್ನೂ ಅವರು ಹರಿಸುತ್ತಿದಿಲ್ಲ. ಅಲ್ಲದೇ ಇದು ಬಹು ಮೆಲ್ಲನೆ ಯಾವ ರೀತಿಯ ಉಗ್ರತೆಯನ್ನೂ ಪ್ರದರ್ಶಿಸದೆ ಹರಡುವುದರಿಂದ, ಈ ರೋಗವನ್ನು ದೂರೀಕರಿಸುವ ಗೋಜಿಗೂ ಜನರು ಹೋಗುವುದು ಅಪರೂಪವಾಗಿದೆ. "ಕೋಷ್ಟದಿಂದ ನರಳಿ ಸಾಯು" ಎಂಬ ಶಾಪವು ಬಹು ಭಯಂಕರವಿದ್ದು, ಈ ರೋಗದ ತೀವ್ರತೆ ಮತ್ತು ಭಯಂಕರತೆಯನ್ನು ತೋರಿಸಿದರೂ 'ಮಹಾ ಪಾಪ ಫಲ'ವೆಂಬುದನ್ನೂ ಪ್ರದರ್ಶಿಸುತ್ತದೆ. ಜನತೆಯಲ್ಲಿರುವ ಅಂಧ ವಿಶ್ವಾಸವೆಲ್ಲವನ್ನೂ ದೂರೀಕರಿಸಿ, ಈ ರೋಗ ನಿವಾರಣೆಗಾಗಿ ಪ್ರಯತ್ನಿಸುವುದು ಎಲ್ಲರ ಕರ್ತವ್ಯವಾಗಿದೆ.



ಅಮೆರಿಕೆಯು ಎಪ್ರಿಲ್ ೧ರಂದು ಹಾರಿಸಿದ್ದ ಟಿರೋಸ್-೧ ಉಪಗ್ರಹದಲ್ಲಿನ ಕೆಮರಾವು ತೆಗೆದ ಭೂಭಾಗದ ಎರಡು ಚಿತ್ರಗಳು.

ಚಂದಾದಾರರು

ತಮ್ಮ ಚಂದಾ ಹಣವನ್ನು ‘ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ಕಥಾವಿಹಾರ

ತಿಂದು ಬಳಿದ ಜೀವ

ತನಗೆ ದ್ರೋಹವೆಸಗಿದ ಧನಿಗೆ ವೆಂಕಣ್ಣ ಪ್ರತಿದ್ರೋಹ ಬಗೆಯಲಿಲ್ಲ; ಈ ಸ್ನೇಹದೇವತೆಯೇ ಧನಿಯನ್ನು ಆತನ ಬಳಿಗೆ ಎಳೆದುತಂದಿತು.

ವೆಂಕಣ್ಣ ನಿಂತು ನೋಡುತಿದ್ದ!

ಆಳೆತ್ತರವಾಗಿ ಬೆಳೆದ ಬತ್ತದ ತೆನೆಗಳು ಬೀಸುವ ತಂಗಾಳಿಗೆ ಓಲಾಡುತ್ತಿವೆ, ಅತ್ತಿಂದಿತ್ತ, ಇತ್ತಿಂದತ್ತ. ಗದ್ದೆಗಳಿಗೆ ಗದ್ದೆಗಳೇ ಹೊಂಬಣ್ಣದ ತವರಾಗಿ ಮೆರೆಯುತ್ತಿವೆ. ಎಲ್ಲವೂ ಒಂದೇ ತರದ ಗಿಡಗಳು. ನಾಲ್ಕು ದಿನಗಳ ಕೆಳಗೆ ಕೊಯ್ದ ಬತ್ತದ ತೆನೆಗಳ ಗದ್ದೆಗಳ ತುಂಬ ನೀರಿನಲ್ಲಿ ಮುಳುಗಿ ತೇಲುತ್ತಿವೆ. ಒಂದು ಗದ್ದೆಯಿಂದ ಕೆಳಗಿನ ಮತ್ತೊಂದು ಗದ್ದೆಗೆ ಹರಿಯುವ ನೀರು ಜನರ ಹೃದಯದಿಂದ ಸಿಡಿಯುವ ದುಃಖಾಶ್ರುಗಳನ್ನು ಕೂಡಿಕೊಂಡು, ಅಲ್ಲಲ್ಲಿ ಉದುರಿದ ತೆನೆಗಳನ್ನು ಹೊತ್ತುಕೊಂಡು, ತೋಡಿನ ಕಡೆಗೆ ಸಾಗುತ್ತಿದೆ. ಗದ್ದೆಗಳ ಇಕ್ಕೆಡೆಗಳಲ್ಲಿ, ಪೇಟೆಯ ರಸ್ತೆಗಳ ಪಕ್ಕದ ಚರಂಡಿಗಳಂತೆ ಗಿಡ ಮರ ಬಳ್ಳಿಗಳನ್ನಾವರಿಸಿ ಬಲವಾದ ತೋಡು, ತಾನು ತನ್ನ ಕಾರ್ಯ...ನೀರಿನ ಸಹಾಯ—ಮಾಡುವಷ್ಟು ಬಲಿತಿದೆ.

ಕೊನೆಯ ಬಾರಿ ಕಂಡು ಹೋಗುವೆನೆಂದು ಬಂದ ವೆಂಕಣ್ಣ ನಿಂತು ನೋಡುತಿದ್ದ!

ತೋಟಗಳ ಇಳಿಜಾರು ತಿರುವು-ಮುರುವು ರಸ್ತೆಗಳಂತೆ ಬೆಳೆಯುತ್ತಾ ಸಾಗಿದ್ದ ಬಯಲು, ಎರಡು ಫರ್ಲಾಂಗ್ ದೂರ ಸರಿಯುತ್ತಲೇ, ಕರೆಗೆ 'ಓ'ಗೊಟ್ಟ ವ್ಯಕ್ತಿಯನ್ನು ಮರೆಯಲ್ಲಿರಿಸುವಂತೆ, ಬಲಕ್ಕೆ ತಿರುಗಿ ತಲೆಮರೆಸಿಕೊಂಡಿತ್ತು. ಕಣ್ಣು ಕೊನೆ ಹರಿಯುವ ತನಕ ಕಾಣುವ ಪೈರೆಲ್ಲಾ ವೆಂಕಣ್ಣನ ದಷ್ಟಪುಷ್ಟವಾದ ತೋಳುಗಳ ಕೃತ! ಭೂಮಿ ಒಡೆಯನದು—ಪೈರು ಒಡೆಯನಿಗೆ! ಆದರೆ ಆದರ ಬೇಸಾಯ ಸಾಗುವಾಗ ಅವನಿಗಾಗುವ ಹುರುಪೆಷ್ಟು? ಉತ್ಸಾಹವೆಷ್ಟು? ಆ ಆರುವತ್ತರ ಮುದುಕ, ಮಿತಿಮೀರಿ ಸುರಿಯುವ ಮುಂಗಾರು ಮಳೆಯ ದಿನಗಳಲ್ಲೂ, ಇಪ್ಪತ್ತಕ್ಕೆ ಚಿಕ್ಕದವನಾಗುತ್ತಾನೆ!

ನೆಟ್ಟ ದೃಷ್ಟಿಯಿಂದಾಗಿ ಬಳಲಿಯೋ, ಮುಂಬಂದ ಬಿಕ್ಕಟ್ಟನ್ನು ಪಾರುಮಾಡುವ ದಾರಿ ಕಾಣಲಾರದೆಯೋ, ತೆರೆದ ಕಣ್ಣು ಇದ್ದಕ್ಕಿದ್ದಂತೆ ಮುಚ್ಚಿಕೊಂಡಿತು.

ಉಳಿದ ಹಕ್ಕಿಗಳ ಉಲಿಯನ್ನು ಬದಿಗೊತ್ತಿ, ಕಿವಿಯನ್ನು ಕೊರೈಸುವ ಕೋಗಿಲೆಯ ಕೂಜನದಂತೆ, ಆತ ತಾನು ಮುಂದೆ ದುಡಿಯಲಿರುವ ಬಯಲ ದೃಶ್ಯ ಎಷ್ಟು ಪ್ರಯತ್ನಿಸಿ ತರಳಿಸಿದರೂ, ತನ್ನೆದುರಿದ್ದ ಬಯಲೇ, ಕಣ್ಣೆದುರು ತಾಂಡವವಾಡುತಿತ್ತು; ಕಣ್ಣೇ ಪಾರದರ್ಶಕವಾಗಿತ್ತು, ಆಗ! ನಿಂತ ದಣಿವಾರಿಸಲೆಂದೋ, ಗದ್ಗದಿತವಾದ ಕಂಠವನ್ನು ಸರಿಗೊಳಿಸಲೆಂದೋ, ಹೃದಯದಿಂದ ಕಟ್ಟೊಡೆದು ಉಕ್ಕಿಬಂದ ದುಃಖವನ್ನು ಹರಿಯಗೊಡಲೆಂದೋ, 'ಸುಬ್ಬಾ....ಏ....ಸುಬ್ಬಾ" ಎಂದು ದೂರದ ಬೆಟ್ಟದಿಂದಿಳಿದು, ಮತ್ತೊಂದು ಬೆಟ್ಟದ ತಡಿಗೆ ಕಾಲಿಟ್ಟ, ನೆರೆಹಳ್ಳಿಯ ಸುಬ್ಬನನ್ನು ಕೂಗಿದ ವೆಂಕಣ್ಣ! ಆದರೆ ಆತ ತಿರುಗಿ ನೋಡಲಿಲ್ಲ, ವೆಂಕಣ್ಣನೂ ಆ ವಿಷಯದಲ್ಲಿ ಕುತೂಹಲ ಹೆಚ್ಚು ಪಡಲಿಲ್ಲ!

ಆತ ಹುಟ್ಟಿದ್ದು ಅದೇ ಊರಲ್ಲಿ, ಬೆಳೆದದ್ದೂ ಅಲ್ಲಿಯೇ, ಸತ್ತು ಸೇರುವುದೂ ಅದೇ ಮಣ್ಣೆಂದು ಆತ ನಿರ್ಧರಿಸಿದ್ದ. ಆತನ ಮಡದಿ ಸಾತವ್ವನೂ ಅದಕ್ಕೆ ಎರಡೆಣಿಸದೆ, 'ಹೂಂ' ಗೊಟ್ಟಿದ್ದಳು. ಇಬ್ಬರೂ ತದೇಕಚಿತ್ತರಾಗಿ ದುಡಿಯುವರು, ಉಣ್ಣುವರು, ಸುಖಪಡುವರು. ಆದರೆ ಸುಖ ಸಂತಸಗಳ ಧಾಮಕ್ಕೆ ಬೆಂಕಿಯ ಕಿಡಿಯಿಡುವ ಘಟನೆಯೊಂದು ನಡೆದೇ ನಡೆಯಿತು!

ವೆಂಕಣ್ಣನ ಪಾಲಿಗೆ ಅದಕ್ಕೆ ಕಾರಣ ಮಗ ಸಂಕುವಲ್ಲ, ಸೊಸೆ. ಸರಿಯಾಗಿ ಓದುಬರಹ ತಿಳಿದು, ಕುಟುಂಬಕ್ಕೇ ಕೀರ್ತಿ ತರಲೆಂದು, ಆತ ಮಗ ಸಂಕುವನ್ನು ಲೋವರ್ ಸೆಕೆಂಡರಿಯ ತನಕ, ಸಂಬಳ ಕೊಟ್ಟು ಓದಿಸಿದ. ಮಾತ್ರವಲ್ಲ, ಮುಂದಿನ ಜೀವನೋಪಾಯಕ್ಕೆಂದು ತಾನು ಅರುವತ್ತರ ಹೊತ್ತಿಗೆ ಬೇಸಾಯದ ವಿಷಯದಲ್ಲಿ ಗಳಿಸಿದ ಅನುಭವವನ್ನು, ಆರೇ ವರ್ಷಗಳಲ್ಲಿ ಒಪ್ಪಿಸಿದ್ದ. ಅವರ ಆಶೆಯ ಬಳ್ಳಿಯು ಫಲ ಪಡೆಯುವ ಮೊದಲೇ, ಅದರ ಕುಡಿ ಬೇರೊಂದು ಮರದಾಶ್ರಯ ಹೊಂದಿ, ಹಬ್ಬಿ, ಬುಡವನ್ನೂ ಬದಲಾಯಿಸಿ, ದುಃಖಗೊಳಿಸಿತು.

ಅದನ್ನೆಲ್ಲಾ ಎಣಿಸಿದಾಗ, ತನಗೆ ಮುದಿಕಾಲದಲ್ಲಿ ಹುಡುಗ ಸಹಾಯಕ್ಕೈದುವನೆಂಬ ನಂಬಿಕೆ ನಿರ್ಮೂಲನವಾಗಿ ನಾಶವಾದಾಗ, ಅವನ ಮನದಲ್ಲಿ ಅಚ್ಚಳಿಯದೆ ಉಳಿಯುವ ದೃಶ್ಯ, ತನ್ನದು ಮತ್ತು ಮೂರ್ತಿ ರಾಯರದು!

ಅವನೊಡೆಯ ಮೂರ್ತಿರಾಯರು, ತಾನು ಗಳಿಸಿದ ಹಣ, ಆಸ್ತಿಗಳನ್ನು ಅನುಭವಿಸದೆ, ತೀರಿಹೋಗಿದ್ದರು. ಮೂರ್ತಿರಾಯರ ಇಬ್ಬರು ಮಕ್ಕಳೂ ಬೇರೆಬೇರೆ ಗುಣಗಳನ್ನು ಕೂಡಿಕೊಂಡಿದ್ದರಿಂದ ಪ್ರತಿಯೊಂದಕ್ಕೂ ಪರಸ್ಪರ ಜಗಳವಿದ್ದೇ ಇತ್ತು. ತೋರಿಕೆಗೆ ಒಂದಾಗಿ ಕಂಡರೂ, ಲೋಕದ ಸಹಜ ಗುಣಕ್ಕನುಸಾರವಾಗಿ, ಬೂದಿಯೊಳಗಿನ ಕೆಂಕೆಂಡದಂತೆ ಉರಿಯುತಿತ್ತು, ಮತ್ಸರದ ಉರಿ! ಆಚೀಚಿನ ಚಿಕ್ಕ ಕಾರಣಗಳು, ಆ ಗುಪ್ತ ವೈಷಮ್ಯಕ್ಕೆ ಪುಟವಿಟ್ಟಿದ್ದುವು.

ಅಂತೂ ಗಾಣಕ್ಕೆ ಕಟ್ಟಿದ ಎತ್ತು ಉಪಾಯವಿಲ್ಲದೆ ತಿರುಗುವಂತೆ, ಸಂಸಾರ ಚಕ್ರ ಉರುಳುತಿತ್ತು.

ಸಾತವ್ವ, ಆಕೆಯ ಒಡತಿ, ವಿಧವೆ ಗಂಗಮ್ಮನ ಬಟ್ಟೆಗಳನ್ನು ಒಗೆದು ಒಣಗಿಸಿ, ಮನೆ ಕೆಲಸ ಮಾಡಿಕೊಟ್ಟು, ತಿಂದುಳಿದ ತಂಗುಳನ್ನದೊಡನೆ ಹೊತ್ತು ನೆತ್ತಿಗೇರುವ ಹೊತ್ತಿಗೆ, ಮನೆಯ ಮುರುಕು ಬೀಗ ತೆಗೆಯಲು ಉರುಡಾಡುವ ಪದ್ಧತಿ. ಆದರೆ ತನ್ನ ಅಶಕ್ತತೆಯ ಕಾರಣ, ಮನೆಯುಳ್ಳಿಯ ಮಗನ ಮಡದಿ, ಮಿನಾಕ್ಷಿಯನ್ನು ಒಮ್ಮೊಮ್ಮೆ ಒಲ್ಲದ ಮನಸ್ಸಿನಿಂದ ಕಳಿಸುತಿದ್ದಳು. ಮಿನಾಕ್ಷಿ ಸೇರಿದ್ದೇ ಸೇರಿದ್ದು, ಹತ್ತಾರು ಬಟ್ಟೆಗಳ ಬದಲು, ಹನುಮಂತನ ಬಾಲದಂತೆ ನೂರಾರಕ್ಕೂ ಸರಿದಿತ್ತು. ಒಂದು ದಿನ ತಾನೇ ಹೋಗುತ್ತೇನೆಂದು, ಪ್ರೀತಿಯ ಸೊಸೆಯನ್ನು ಕುಳ್ಳಿರಿಸಿ, ಹೋದ ಸಾತವ್ವನಿಗೆ ಈ ವಿಷಯ, ಒಡತಿಯ ಕಿರಿಯ ಸೊಸೆ, ಅರುಹಿದಳು.

"ನೋಡು ಸಾತವ್ವ, ಅಕ್ಕ ಕಾಹಿಲೆ ಬಿದ್ದಿದ್ದಾಗ ಒಂದೆರಡು ಬಟ್ಟೆ, ಅತ್ತೆಯವರ ಬಟ್ಟೆಯೊಡನೆ ಕೊಡುತಿದ್ದಳು ಆದರೆ ಸೌಖ್ಯವಾದ ಮೇಲೂ ಆಕೆ ಒಗೆಯಲಿಲ್ಲ. ಕೊನೆಗೆ ನಾನೂ, ನನಗೆ ಒಗೆಯ ಕೂಡದುದರಿಂದ ಒಂದೆರಡು ಕೊಡತೊಡಗಿದೆ. ಒಗೆಯಲಾರದೆ ನಿನ್ನ ಸೊಸೆ "ಹೀಗೇಕೆ" ಎಂದಳಂತೆ, "ಹಿರಿಯವಳಾಗಿ, ಮನೆಯ ಯಜಮಾನಿತಿಯಾಗಿ ಹೆಚ್ಚು ಬಟ್ಟೆಯೊಗೆಯುವುದೆಂದರೇನು?" ಅಂದಳು ಅವಳು. "ಕಿರಿಯವಳಾದ ನಾನು ಹೆಚ್ಚು ಬಟ್ಟೆ ತೊಳೆಯುವುದು ಸರಿಯೇ" ಎಂದು ನನ್ನ ವಾದ. ಅವಳು ಹಾಗೆ ಹೇಳುವುದು ಸರಿಯೋ?"

ಸರಿಯೋ, ತಪ್ಪೋ! ಅಂತೂ ನಾಲ್ಕಾರು ತಿಂಗಳುಗಳ ತನಕ ನೀರು ಕಾಣದ ಬಟ್ಟೆಗಳನ್ನು ದಿನ ನಿತ್ಯ ಒಗೆಯಬೇಕಾಗಿದೆ, ಸಾತವ್ವನಿಗೆ. ಅದೊಂದು ಅವಳಿಗೆ ಚೆನ್ನಾಗಿ ಗೊತ್ತು. 'ಸರಿ'ಯೆಂದರೆ ಹಿರಿಯವಳೂ, 'ತಪ್ಪೆ'ಂದರೆ ಕಿರಿಯವಳೂ ಮುನಿದು ಬೀಳುವರೆಂದು ಮಾತ್ರ ತಿಳಿದಿತ್ತು. ದಣಿವಿನ ಒಗೆತದಿಂದಾಗಿ ಸೋತ ಸಾತವ್ವ, ಸೊಸೆಯನ್ನು ಕಳುಹಿಸಲ್ಕೇ ಬೇಕಾಗಿ ಬಂತು. ಸೊಸೆ ಬಂದು ಒಂದು ವರ್ಷವೂ ಕಳೆಯದ ಕಾರಣ, ಆಕೆಯೂ 'ಬಲ್ಲೆ'ನೆನ್ನುವಂತಿರಲಿಲ್ಲ. ಆದರೆ ಅಂತಹ ದಿನಗಳು ಹೆಚ್ಚು ಕಳೆಯಲಿಲ್ಲ. ಆಕೆ ಒಂದು ಉಪಾಯ ಹುಡುಕಿಯೇ ಬಿಟ್ಟಳು,—

ಗಂಡನೊಡನೆ, ಒಂದು ರಾತ್ರಿ, ಮುದ್ದಾದ ಮಾತಿನಿಂದ ಆಕೆ ಈ ವಿಷಯ ಉಸುರಿದಳು. ತರುಣ ಗಂಡ, ಪ್ರೀತಿಯ ಮಡದಿಯ—ಅದೂ ಬಾಳ ಬಯಲಿನ ಮೊದಲ ಮೆಟ್ಟಲಲ್ಲೇ—ಮಾತನ್ನು ಅಲ್ಲಗಳೆಯುವಂತಿರಲಿಲ್ಲ, —"ಆಯಿತು, ಸೌಖ್ಯವಿಲ್ಲವೆನ್ನು. ನಾಡಿದೇ ಬಿಟ್ಟುಬರುತ್ತೇನೆ. ನನಗೇನಾದರೇನು?" ಎಂದು ನುಡಿದ. ಒಪ್ಪಿಗೆ ದೊರೆತುದರಿಂದ ಅವಳು ಮತ್ತೂ ಒಂದು ಹೆಜ್ಜೆ ಮುಂದರಿದಳು —

"ನನಗೆ ಈಗೀಗ ಇಲ್ಲಿನ ಕೆಲಸವೇ ಸಾಕಾಗಿ, ಬೇಸರ ಬರುತ್ತಿದೆ. ನಾವು ನಮ್ಮ ತಂದೆ ಮನೆಗೆ ಹೋಗಿ ಸುಖದಿಂದ ಉಂಡಿರುವ. ನಿಮಗೂ, ಮಾವನ ಬೈಗಳು ತಪ್ಪುತ್ತದೆ. ನನಗೂ ಅತ್ತೆಯ ಬಿರುನುಡಿ ಸಿಗುವುದಿಲ್ಲ. ಅಲ್ಲಿಯೂ ತಂದೆ ಯಾರಿಲ್ಲದೆ ಕಷ್ಟದಿಂದಿದ್ದಾನೆ. ಅವನಬಳಿಕ ಆ ಆಸ್ತಿಯೆಲ್ಲ ನನಗೇ ಸೇರತಕ್ಕವು. ಇಲ್ಲಿ ಯಾರ್ಯಾರ ಆಳಾಗಿ ದುಡಿದು, ಯಾರ್ಯಾರ ಸುಖಕ್ಕಾಗಿ ರಟ್ಟೆ ಸವೆದು ದಣಿಯುವುದು ಉಳಿಯುತ್ತದಲ್ಲಾ...." ತುಟಿಗೆ ತುಟಿ ತಂದು, ಆಕೆ ಉತ್ತರಕ್ಕಾಗಿ ಕಾದಳು.

ಅಲ್ಲೊಂದು ಇಲ್ಲೊಂದು ನುಡಿಯುವ ತಂದೆಯ ಹಿತನುಡಿ—ಆತನ ಪಾಲಿನ ಬೈಗಳು—ತಪ್ಪುವದಾರಿ! ರಟ್ಟೆ ಸವೆಸುವ ದುಡಿತ ತಪ್ಪುವ ಮಾರ್ಗ! ಸುಖದ ತುತ್ತು ತನಗಾಗಿ ಮೀಸಲಾಗಿಟ್ಟಿದ್ದಾಗ, ಹೊಟ್ಟೆ ಹಸಿದಿದ್ದಾಗ, ಕೈ ಸುಮ್ಮನಿರುವುದು ಸರಿಯೇ? ತುತ್ತನ್ನೆತ್ತಿ ಬಾಯಿಗಿಡಬೇಕು!

ಆದ್ದರಿಂದ ಒಪ್ಪಿಗೆಯ ಉತ್ತರ ಬರಲೇಬೇಕಿತ್ತು, ಬಾರದಿರಲಿಲ್ಲ, ಬಂತು!

ನೂರಾರು ಚಿಂತೆಗಳ ಹಾಸಿಗೆಯ ಮೇಲೆ ಮಲಗಿ, ಮುಂದಿನ ದಿನಗಳ ಯೋಜನೆಯಲ್ಲಿ ಕಾಲ ತಳ್ಳುತ್ತಿದ್ದ ಸಾತವ್ವನಿಗೆ, ಈ ಮಾತು ಕೇಳಿ, ಮೈನವಿರೆದ್ದಿತು. ಆಗಲೇ ವೆಂಕಣ್ಣನನ್ನು ಎಬ್ಬಿಸಿ, ಮೆಲ್ಲನೆ ಎಲ್ಲವನ್ನೂ ವಿವರವಾಗಿ ತಿಳಿಸಿದಳು. ವೆಂಕಣ್ಣನಿಗೆ ಆರಾತ್ರಿ ಸುಖದ ರಾತ್ರಿಯಾಗಿರಲಿಲ್ಲ—ದುಃಖದ್ದು, ಚಾಪೆ ಈ ಚಲೋಲಿಯದಲ್ಲ—ಮುಳ್ಳಿನದಾಗಿತ್ತು. ಮದುವೆಗೆ ಹೆಣ್ಣಿನ ಕಡೆಯವರು ಬಂದಾಗಲೇ ಆತ ನುಡಿದಿದ್ದ—

"ನೋಡು ಸಾತೂ! ನಾವು ಬಡವರು ಮಾರಿ, ದುಡಿದು ಬಂದ ಕೂಲಿಯಿಂದ ಹೊಟ್ಟೆ ಹೊರೆದುಕೊಳ್ಳುವವರು. ಅವರು ಸ್ವಂತ ಆಸ್ತಿಯುಳ್ಳ ಧನಿಕರು. ನಮಗಿಂತ ಉತ್ತಮರ ಹೆಣ್ಣನ್ನು ನಾವು ಎಂದೆಂದಿಗೂ ತರಬಾರದು ಸಾತೂ....! ಮುಂದೆ ಆ ಮರ್ಯಾದೆ ಸಾಲದು, ಈ ಕಾಣಿಕೆ ಕಮ್ಮಿ ಎಂದು ಕಚ್ಚಾಡಿಕೊಳ್ಳುವದೇ ಆಗುತ್ತದೆ. ಅದು ಬೇಡ ನಮಗೆ, ಬೇರೆ ನೋಡೋಣ," ಎಂದು, ಎಷ್ಟು ಆಸೆಯಿಂದ ಸಾತವ್ವ ಆ ವಿಷಯ ಪ



ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಸ್ಥಾಪಿಸಿದ್ದಳೋ, ಆತ ಅದಕ್ಕೆ ಅಷ್ಟು ಕಟ್ಟುವಿಸುತ್ತಿರ, ನೋವಿನ ನುಡಿಯಾಡಿ, ನಿರಾಶೆಗೊಳಿಸಿದ್ದ. ಆದರೆ ಸಾತೂ ಬಿಡಲಿಲ್ಲ—

"ನೀವು ಗಂಡಸರು, ಮದುವೆ ವಿಚಾರ ಏನು ಗೊತ್ತು. ನಮಗಿಷ್ಟು ಒಳ್ಳೆಯ ಸೊಸೆಯರು ಎಲ್ಲಿ ಸಿಕ್ಕಾರು. ಅಲ್ಲದೆ ಹುಡುಗಿಗೆ ಸಂಪೂರ್ಣ ಮರುಳಾಗಿದ್ದಾನೆ ಹುಡುಗ. ಬಲ್ಲದ ಹೆಣ್ಣನ್ನು ತಂದು ಕಟ್ಟಿ, ಪಡುವ ಕಷ್ಟ ಯಾರಿಗೆಬೇಕು. ನೀವಾದರೋ ಗಂಡಸರು ಮನೆಯಲ್ಲಿರುವುದೇ ಕಮ್ಮಿ, ನಮಗೆ ಹಾಗಲ್ಲ...." ಸ್ವಲ್ಪ ಹೊತ್ತು ದುಃಖ ತರಲು ಪ್ರಯತ್ನಿಸಿ, ಮತ್ತೆ ಮುಂದರಿಸಿದಳು, "ಪಕ್ಕನೆ ಹಣಕ್ಕೋ ಕಾಳಿಗೋ ಕೊರತೆ ಬಂದಾಗ, ಸಹಾಯವಾಗದೇ ಇದ್ದಾರೇ........! ಹಾಲಿದ್ದಾಗ ಹಬ್ಬ ಮಾಡದೇ ಮತ್ತಾವಾಗ?", ಕಣ್ಣೀರು ಹರಿದು ಬಂದಿರಬೇಕು, ಮಾತು ನಿಲ್ಲಿಸಿದಳು.

ಆ ನಟನೆಯ ದುಃಖ ಅವನಿಗೆ ಅಪರಿಚಿತವಲ್ಲ. ಕಳೆದ ನಾಲ್ವತ್ತು ವರುಷಗಳಿಂದ ಅನುಭವಿಸಿದುದದು! ಆದ್ದರಿಂದಲೇ ಆತ ಮತ್ತೂ ಮುಂದೊತ್ತಿದ, "ನನಗೇನೂ ತಿಳಿಯೋಲ್ಲ ಎನ್ನೋಣ! ಚೆಂದದ ಹುಡುಗಿಗೆ ತಾಳಿಕಟ್ಟಿದ್ರೆ, ಹುಡುಗ ಆಕೆಯ ವೈಯ್ಯಾರ, ಬಿನ್ನಾಣಗಳನ್ನು ನೋಡುತ್ತಾ ಕುಳಿತುಕೊಳ್ಳುತ್ತಾನೇ ವಿನಃ, ನಾವು ಆಡಿದ ಮಾತು ಕೇಳೋಲ್ಲ, ಕೆಲಸ ಮಾಡೋಲ್ಲ. ಅವನಿಗೆ ಆ ಹೆಣ್ಣು ಬೇಡ, ಬೇರೆ ಹುಡುಕೋಣ. ಹೆಣ್ಣಾದರೆ ಮದುವೆ ತಡವಾದಾಗ ಮೈ ನೆರೆಯುತ್ತಾಳೆ ಎಂದಾಯಿತು, ಗಂಡಿಗೇನು ಹೆದರಿಕೆ? ಮುದುಕನಾಗುತ್ತಾನೆಯೇ... ನೋಡು ಸಾತೂ, ಚಾಪೆಯು ಇದ್ದ ಉದ್ದದಷ್ಟೇ ಕಾಲು ನೀಡೋಣ..." ಎಂದು ಅಂಗಾತ ಮಲಗಿ, ಕತ್ತಲೆಯಲ್ಲಿ ಕಾಣದ ಮಾಡಿನ ಮುಂದ ಬಿದಿರನ್ನು ಲೆಕ್ಕಿಸುತಿದ್ದ!

ಅವಳೂ ಅವನೊಡನೆ ನಾಲ್ವತ್ತು ವರುಷ ಬಾಳ್ವೆ ಸಾಗಿಸಿಲ್ಲವೆಂದಲ್ಲ, ಆದರೆ ಮಾತು ಬೆಳೆಸಿದರೆ ವಿರಸವಾದೀತೆಂದು ಬಗೆದು, ಅಲ್ಲಿಗೇ ಮುಕ್ತಾಯಮಾಡಿ, ಮಗ್ಗುಲಿಗೆ ಮಗುಚಿ, ಮಲಗಿದಳು.

ಇದಾದ ನಾಲ್ಕನೆ ದಿನ, ಮಗ ಹೆಂಡತಿ, ವೆಂಕಣ್ಣನೊಡನೆ ತಾವಾಗಿ ಮಾತನಾಡಲಿಲ್ಲ. ವೆಂಕಣ್ಣನೇ ಮುಂದಾಗಿ ಮಾತನಾಡಿಸಿದರೆ ಕೋರ್ಟಿನಲ್ಲಿ ಬರುವ ಉತ್ತರದಂತೆ—ಚುಟುಕು ಚುಟುಕು! ಅದೂ ಹೇಳಿಕೊಟ್ಟಂತೆ, ಅರ್ಥವಾಗದಂತೆ!

ಅಂತೂ ಸೋತ ವೆಂಕಣ್ಣ ಮಡದಿಯ ಮಾತಿಗೆ ಒಪ್ಪಲೇಬೇಕಾಗಿ ಬಂತು. ಒಪ್ಪಿದ. ಮದುವೆಯೂ ಆಯಿತು. ಸೊಸೆ ಮನೆಗೆ ಬಂದು, ಅತ್ತೆಯೊಡನೆ ಕೂಡಿಕೊಂಡಳು. ಆದರೆ ಮಗ ಮಾತ್ರ ಮೊದಲಿಗಿಂತ 'ಬಹಳ ಬದಲಾದ! ಒಮ್ಮೆ ಅದರ ಅನುಭವ ಅವರಿಬ್ಬರಿಗೂ ಅನ್ವಯಿಸಿತು!

ಮಗ ಸೊಸೆಯರ ಮಾತು ಕೇಳಿದ ತಾಯಿ ಮರುದಿನ ಬೆಳಗ್ಗೆ ಹಿಂದು ಮುಂದೆಣಿಸದೆ ಹೇಳಿಯೇ ಬಿಟ್ಟಳು, 'ನೀನು ಕವರುಮನೆಗೆ ಹೋಗಿ, ನಮ್ಮನ್ನು ಸುಮ್ಮನೆ ದೂರುವುದು ಬೇಡ. ಮನೆಯಲ್ಲಿ ಗಂಜಿ ಬೇಸಿಟ್ಟು, ಸುಖವಾಗಿರು. ಕೆಲಸವೆಲ್ಲ ನಾನೇ ಮಾಡುತ್ತೇನೆ. ಪುಣ್ಯಾತ್ಗಿತ್ತೀ..." ಎಂದು, ಕಡಾಕಾಠಿಯಾಗಿ.

ತಾಯಿಯ ಮಾತಿಗೆ ಸೊಸೆ ಮಗ ಮುನಿದುಬಿದ್ದರು, ಮಾತುಬಿಟ್ಟರು. ಒಂದು ದಿನ ಮಗ ಬಂದು ಹೇಳಿದ, "ನಾನು ಅವಳೊಡನೆ ಮಾವನ ಮನೆಗೆ ಹೋಗುತ್ತೇನೆ. ನೀವು ಬರುವ ಮನಸ್ಸಿದ್ದರೆ ಬನ್ನಿ. ಕೊನೆಯ ಕಾಲದಲ್ಲಿ ಮಗ ನೆರವಾಗಲಿಲ್ಲವಲ್ಲಾ ಎಂದು ಕೊರಗಬೇಡಿ" ಎಂದು! ಸುಳಿಯಲ್ಲೇ ಗರ ಗರ ತಿರುಗುತಿದ್ದ ಎಲೆಗೆ, ಹುಲ್ಲು ಕಡ್ಡಿ ಬಂದು ತಾಗುವುದೇ ತಡ, ಪ್ರವಾಹದೊಡನೆ ಅತ್ತ ಸರಿಯದೆ ಸಾಗುವುದು ಸಹಜ. ಆ ಕಿರು ಕಾರಣದ ಹುಲ್ಲು ಕಡ್ಡಿ, ಮಗನ ಮಾತನ್ನು ಹರಿಯಿಸಿತ್ತು!

ವೆಂಕಣ್ಣನಿಗೆ ಅಂದು ಎಂದಿಲ್ಲದ ಸಿಟ್ಟು ದುಃಖ ಉಮ್ಮಳಿಸಿ ಬಂತು, "ಸಾತೂ... ನೀನು ಹೋಗಿ ಐಶ್ವರ್ಯವಂತ ಸೊಸೆಯೊಡನೆ ಸುಖವಾಗಿ ಬಾಳು. ನಾನು ಸಾವನ್ನಿದಿರುನೋಡುತ್ತಾ ಇಲ್ಲೇ ಇರುತ್ತೇನೆ. ಹದಿನೈದು ದಿನಕ್ಕೊಮ್ಮೆ ಯಾರನ್ನಾದರೂ ಇತ್ತ ಕಳುಹಿಸುತ್ತಿರು" ಎಂದ. ಆ ನುಡಿಗಳಲ್ಲಿ ಕಿಚ್ಚು, ಪಶ್ಚಾತ್ತಾಪ, ಮತ್ಸರ, ನೋವು, ಮತ್ತಿನ್ನೆಷ್ಟು ಭಾವಗಳು ಮನೆಮಾಡಿದ್ದುವೋ ಏನೋ.

ತನಗೂ ಸೊಸೆಗೂ ಜಗಳವಾಗದಿದ್ದಲ್ಲಿ ಸಾತು 'ಹೂಂ'ಗೊಟ್ಟು, ಆ ಮಾತನ್ನು ಆ ಹೊತ್ತು ಅಲ್ಲಿಗೇ ತೇಲಿಬಿಟ್ಟು, ಒಂದಲ್ಲ ಒಂದು ದಿನ ನಡೆಸೇ ಬಿಡುತಿದ್ದಳು. ಆದರೆ ಇಂದಿನ ಪರಿಸ್ಥಿತಿ ಸಂದಿಗ್ಧವೆಂದರಿತು—

"ಹೌದು. ಅವನನ್ನು ಹೆರುವ ಬದಲು ನಾಯಿಯನ್ನು ಹೆತ್ತು ಹೊತ್ತು ಸಾಕಿ ಸಲಹಿದ್ದರೆ ಪ್ರಯೋಜನಕ್ಕಾದರೂ ಬೀಳುತಿತ್ತು" ಎಂಬ ವೆಂಕಣ್ಣನ ನುಡಿಗೆ ಕೆಣಕದೆ, ಸಹಾನುಭೂತಿ ತೋರಿಸಿದಳು. ಆ ವಿಷಯ ಅಲ್ಲಿಗೇ ಕೊನೆಗೊಂಡಿತು. ಮನೆಯಲ್ಲಿ ಮುದುಕ ಮುದುಕಿಯರೇ ಉಳಿದರು.

ಬೆಳಗ್ಗೆ ಹೋದರೆ ಸಂಜೆ ತನಕ ದುಡಿದ ಸಾತವ್ವನಿಗೆ ಜ್ವರ ಬಂತು. ಜ್ವರದಲ್ಲಿಯೇ ಎರಡು ದಿನ ದೂಡಿದಳು. ಮೂರನೇ ದಿನ, ಸಂಜೆ ತನಕವೂ ಒಡಕಿಯ ಒಟ್ಟೆಗಳು ಜಗಲಿಯ ಮೇಲೆಯೇ! ಸಾತವ್ವ ಮನೆಯ ಚಾಪೆಯ ಮೇಲೆ ಬಿದ್ದು ಹೊರಳಾಡುತ್ತಿದ್ದಳು.

ಯಾವುದೋ ವ್ಯಾಪಾರದಲ್ಲಿ ನಷ್ಟಗೊಂಡಿದ್ದ ಹಿರಿಯೊಡೆಯನಿಗೆ, ಮನೆಯಲ್ಲೂ ಸಿಟ್ಟು ಬಂದುದರಿಂದ, ಗದ್ದೆ ಬದಿಯಲ್ಲಿ ತಿರುಗುತ್ತಾ ಒಕ್ಕಲು ಮನೆಗೆ ಬಂದ. ಅಂಗಣದಲ್ಲಿ ನಿಂತಿದ್ದ ಒಡೆಯನಿಗೆ, ಸಾತವ್ವ, ಮಗನ ವರದಿ ಒಪ್ಪಿಸಿ, ಅಂದಿನ ದಿನದ ತಪ್ಪನ್ನು ಮನ್ನಿಸಬೇಕೆಂದಳು. ಅವಳೆಣಿಸಿದುದು, ದುಃಖ ತಿಳಿದ ಒಡೆಯ ಸುಮ್ಮನಾಗಿ ತಮ್ಮ ದಾರಿ ಹಿಡಿದಾನು ಎಂದು. ಆದರೆ ಅದು ಹಾಗಾಗಲಿಲ್ಲ.

ಒಡೆಯನ ಸಿಟ್ಟಿಗೆ ಕುಟವಿಟ್ಟಂತಾಯಿತು. ಆ ವರದಿ. "ನೀವು ನಮಗೆ ಮೋಸ ಮಾಡುತ್ತೀರಾ ಮಾರಿಗಳೇ, ಸ್ವಾಮಿ ದ್ರೋಹಿಗಳು! ನಿಮ್ಮಂತವರು ಊರಿನಲ್ಲಿದ್ದರೆ ನಷ್ಟ, ಬರಗಾಲವೇ ವಿನಃ ಸುಭಿಕ್ಷೆ ಬರದು. ನಾಲ್ಕು ದಿನಗಳಲ್ಲಿ ಮನೆ ಬಿಡದಿದ್ದರೆ, ಕೊರಳಿಂದ ಎಳೆದು ಹೊರಗೆ ಹಾಕಿಸುವೆ" ಮತ್ತೇನೇನೋ ಒದರಿದ. ಒಂದು ಕಡೆ ಮುಂದಿನ ಭವಿಷ್ಯದ ಭಯದ ಚಿಂತನೆ, ಉಕ್ಕೇರಿದ ಜ್ವರದ ನೋವು ಸಹಿಸಲಾರದ ಸಾತವ್ವನ ಕಿವಿಗೆ ಮಾತು ಕೇಳಿಸಲಿಲ್ಲ.

ಗದ್ದೆಯ ನೀರನ್ನು ಕಡಿದು ಕೆಳಗಿಳಿಸಿ, ಸುತ್ತಲೂ ತಿರುಗಿ ಕತ್ತಲಾಗುತ್ತಲೇ ಮನೆಯತ್ತ ಬಂದ ವೆಂಕಣ್ಣನಿಗೆ, ತನ್ನ ಅಳಿದುಳಿದ ತಾಳ್ಮೆಯಿಂದಲೇ ಸಾತವ್ವ ನಡೆದ ದುರ್ಘಟನೆಯನ್ನು ಹೇಳಿದಳು.

"ನೋಡು ಸಾತು. ನೀನಲ್ಲದಿದ್ದರೆ ನಾನು ಸುಖವಾಗಿರುತಿದ್ದೆ. ನಿನ್ನ ನಾಲಿಗೆ ಕಡಿವಾಣವಿಲ್ಲದ ಕುದುರೆ. ಇನ್ನುಳಿದ ಕಾಲವೂ ಇಲ್ಲದ ಕಷ್ಟಗಳನ್ನನುಭವಿಸಬೇಕಾಯ್ತು ನಿನ್ನಿಂದ" ಎಂದು, ಅಲ್ಲಿಯೇ ಕವುಚಿ ನೋಯುತಿದ್ದ ದುಃಖ ಕಟ್ಟೊಡೆದು ಹರಿದ ನೀರಂತೆ ಉಕ್ಕಿಬಂದುದರಿಂದ, ನುಡಿದ ವೆಂಕಣ್ಣ. ಆರುವ ಸೊಡರಿಗೆ ಪ್ರಕಾಶ ಮಿಗಿಲೆಂಬಂತೆ ಹಲವಾರು ಕಷ್ಟಗಳ ಕಟ್ಟುಪಾಡಿಗೆ ಗುರಿಯಾದ ಮನಸ್ಸು ಆ ಕಟು ಮಾತನ್ನು ಹೊರಸೂಸಿತ್ತು.

ಸಾತವ್ವನ ಅಳಲಿಗೆ ಪ್ರತಿಯಾಗಿ ತನ್ನ ದನಿಯನ್ನು ಜೋಡಿಸಿದ. ಹಲವು ಬಾರಿ ಇಂತಹ ಚಿಕ್ಕ ಪುಟ್ಟ ಘಟನೆಗಳು ಸಂಭವಿಸಿದಾಗ ವೆಂಕಣ್ಣ ಒಡೆಯನಿಗೆ ಬುದ್ಧಿ ಹೇಳಿ ಗೆದ್ದು ಬಂದಿದ್ದ. ಆದರೆ ಇಂದಿನ ಪ್ರಸಂಗವೂ ಕಠಿಣ, ಬಿಗಿ, ಆತ ಮುಂಬರಿದು ಹೋಗಲೂ ಹಿಂಜರಿದ!

ಮನೆಯ ಮಂದಿಯೆಲ್ಲಾ ಮಡಿದ ದಿನದಂತೆ 'ಚೆಕೋ' ಎನ್ನುವಂತಿತ್ತು, ಆ ಕಿರುಗುಡಿಸಲು, ಅಂದು ರಾತ್ರಿ. ಎಲ್ಲಿ ಹೋದರಲ್ಲಿ ಎತ್ತ ನೋಡಿದರತ್ತ, ಹಿಂದಿನ ಸವಿ ಅನುಭವದ, ಸುಖಾಂತಸದ ಸಂದರ್ಭ ಕಣ್ಣೆದುರು ಬಂದು ಕಾಣಿದು, ನಿರಾಶೆಯನ್ನು ಮತ್ತೂ ಪ್ರಬಲಗೊಳಿಸಿತು 'ತಾನು ಹುಟ್ಟಿ ಬೆಳೆದ ಮನೆಯನ್ನು ಬಿಟ್ಟು ಹೋಗುವಂತಾಯ್ತೇ' ಅದೇ ಯೋಚನೆ, ನೂರು ನೂರು ಬಾರಿಗೂ. ಊಟದ ಶಾಸ್ತ್ರ ಮಾಡುವಾಗಲೂ, ಹರಕು ಚಾಪೆ ಬಿಡಿಸುವಾಗಲೂ, ಮಲಗಿ ಕಣ್ಣೆವೆ ಮುಚ್ಚುವಾಗಲೂ, ಅದೇ ಯೋಚನೆ! ಆ ಬಿಕ್ಕಟ್ಟನ್ನು ಪರಿಹರಿಸುವ ಅದೇ ಯೋಚನೆಯ ಕ್ರಿಮಿಗಳ ಮೊತ್ತ ತಲೆಯನ್ನು ತಿನ್ನುತಿತ್ತು!!

ಮಗನ ಮನೆಗೆ ಹೋದರೆ ಮಾನ ಮರ್ಯಾದೆಯ ಹೋರಾಟ, ಒಡೆಯನಲ್ಲಿಗೆ ನಡೆದರೆ ಅವಮಾನದ ಸುರಿಮಳೆ, ನೆಂಟರಲ್ಲಿಗೆ ಸಾಗಿದರೆ ಮೂಕ ಪಶುಗಳಾಗುವಿಕೆ! ಸಮಾಜದ ಹತ್ತಾರು ಚಿತ್ರಗಳ ತೆರೆ ಕಣ್ಣೆದುರು ಕುಣಿಯುತಿತ್ತು. ಆದರೆ ಸ್ಥಿರವಾಗಿ ಒಂದೂ ಉಳಿಯುತ್ತಿರಲಿಲ್ಲ. ಒಂದೊಂದರಲ್ಲಿ ಒಂದಲ್ಲ ಒಂದು ತೊಡ

(೧೦ನೇ ಪುಟ ನೋಡಿರಿ)

ಕೆನರಾ ಬ್ಯಾಂಕಿನ
ಸುವರ್ಣ ಮಹೋತ್ಸವ ವಿದ್ಯಾನಿಧಿಯು
ಸಾಲವಾಗಿ ನೀಡುವ ವಿದ್ಯಾರ್ಥಿ ವೇತನಗಳು—

ಕೆನರಾ ಬ್ಯಾಂಕಿನ ಸುವರ್ಣ ಮಹೋತ್ಸವ ವಿದ್ಯಾನಿಧಿಯೊಡನೆ ಮಾಡಿಕೊಂಡಿರುವ ವ್ಯವಸ್ಥೆಯಂತೆ ಭಾರತದಲ್ಲಿ ಉಚ್ಚ ತಾಂತ್ರಿಕ ಶಿಕ್ಷಣವನ್ನು ಪೂರೈಸಲು ಧನ ಸಹಾಯವನ್ನು ಅಪೇಕ್ಷಿಸುವ ಅತ್ಯಂತ ಮೇಧಾವಿಗಳಾದ ವಿದ್ಯಾರ್ಥಿಗಳಿಗೆ ಕೆನರಾ ಬ್ಯಾಂಕ್ ಸಾಲರೂಪವಾಗಿ ವಿದ್ಯಾರ್ಥಿ ವೇತನಗಳನ್ನು ನೀಡುತ್ತದೆಯೆಂದು ತಿಳಿಸಲು ಹರ್ಷಿಸುತ್ತೇವೆ. ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ತಕ್ಕಂತೆ ವರ್ಷಕ್ಕೆ ರೂ. ೧೦೦೦/= ಗಳ ವರೆಗೆ ಸಾಲವು ಕೊಡಲ್ಪಡುತ್ತದೆ.

ಗೊತ್ತಾದ ಅರ್ಜಿಯ ಪತ್ರಗಳಿಗೆ ಕೆನರಾ ಬ್ಯಾಂಕಿನ ಸುವರ್ಣ ಮಹೋತ್ಸವ ವಿದ್ಯಾನಿಧಿಯ ಕಾರ್ಯದರ್ಶಿಗಳು, ೧೧೦-೧೧೨ ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆ, ಬೆಂಗಳೂರು-೨, ಇವರಿಗೆ ರೂ ೧/= ಮನಿಯಾರ್ಡರ್ ಮಾಡಿ ಬರೆಯಿರಿ ಮತ್ತು ಉತ್ತರಿಸಲು ಅನುಕೂಲವಾಗುವಂತೆ ಸಾಕಷ್ಟು ಅಂಚೆ ಚೀಟುಗಳನ್ನು ಕಳುಹಿಸಿರಿ.

ಮೇಲ್ಕಂಡ ಅರ್ಜಿಯು ಕಾರ್ಯದರ್ಶಿಗಳಿಗೆ 30—6—'60ರ ಒಳಗೆ ತಲುಪಬೇಕು. ಇಂಗ್ಲೀಷಿನಲ್ಲಿ ಮಾತ್ರ ವ್ಯವಹಾರ. ಇದೇ ಜುಲೈ ತಿಂಗಳಲ್ಲಿ ಆಯ್ಕೆಯು ಅಂತ್ಯಗೊಂಡು ಕೆನರಾ ಬ್ಯಾಂಕಿನಿಂದ ಸಾಲವು ನೀಡಲ್ಪಡುತ್ತದೆ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ — 1906)

ವಿಪುಲ ಸಂಪತ್ತು — ಅಪಾರ ಸೇವೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

R. I. A. Nos. 75 & 76 of 1960. in O. S. 200/56.

ಸರಸು ಸೆಟ್ಟಿ ಕೂಡಾ 15 ಜನರು—ಅರ್ಜಿದಾರರು

ಮತ್ತು

ಗೋಪಿ ಸೆಟ್ಟಿ ಕೂಡಾ 40 ಜನರು—ಎದ್ರಿರು. ಇವರೊಳಗೆ

2. ಲಿಂಗಿ ಸೆಟ್ಟಿ - ಗೋಪಿ ಸೆಟ್ಟಿರ ಮಗಳು. 5. ಕರಿಯ, 6 ಪ್ರಭಾಕರ ಮೈನರರು—ಗಾರ್ಡಿಯನ್ ತಾಯಿ 2ನೇ ಎದ್ರಿಳು—ಉಡುಪಿ ತಾಲೂಕು ಬೊಂಮಾರಬೆಟ್ಟು ಗ್ರಾಮದ—ಹೊಸಮನೆ

24. ತಿಂಮಪ್ಪ ಸೆಟ್ಟಿ - ಅಕ್ಕಂಮ ಸೆಟ್ಟಿರ ಮಗ ಉಡುಪಿ ತಾಲೂಕು ಬೊಂಮಾರ ಬೆಟ್ಟು ಗ್ರಾಮದ ಪಡುಮನೆ.

37. ಶ್ಯಾಮ ಸೆಟ್ಟಿ, 38 ಜಗನ್ನಾಥ ಸೆಟ್ಟಿ—ಕಮಲ ಸೆಟ್ಟಿರ ಮಗಂದಿರು—ಉಡುಪಿ ತಾಲೂಕು ಬೊಂಮಾರಬೆಟ್ಟು ಗ್ರಾಮ.

ಮೇಲ್ಕಂಡ 2, 5, 6, 24, 37, 38 ನೇ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರರು R. I. A. 75/60ನೇಗೆ ಪ್ರಿಲಿಮಿನರಿ ಡಿಕ್ರಿ ಆಸ್ತಿಯನ್ನು ಹಿಸೆ ಮಾಡುವರೆ ಕಮಿಶನ್ ಮೊಕ್ರೂರಾತಿಯಿಂದ ಫೈನಲ್ ಮಾಡಬೇಕಾಗಿಯೂ R. I. A. 76/60ನೇಗೆ ಪ್ರಿಲಿಮಿನರಿ ಡಿಕ್ರಿ ಆಸ್ತಿಗೆ ರಿಸಿವರ್ ನೊಕ್ರೂರು ಮಾಡಬೇಕಾಗಿ ವಗೈರೆ ನಿವೃತ್ತಿಗಳನ್ನು ಕೇಳಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಗಳು ತಾ. 1-6-60ಕ್ಕೆ ಈ ಕೋರ್ಟಿನಲ್ಲಿ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಮೇಲಿನ ಅರ್ಜಿಗಳಲ್ಲಿ ಆಕ್ಷೇಪಣೆಗಳಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ಅರ್ಜಿಗಳು ತೀರ್ಮಾನಿಸಲ್ಪಡುತ್ತದೆ.

Y. C. S. Hegde.
Advocate for Petitioners.

ಉಡುಪಿ, ತಾ. 16-5-60.

ವಿನೋದ ಲಹರಿ

ನನ್ನ ಪ್ರವಾಸದ ಅನುಭವಗಳು

ಒಬ್ಬನಿಗೆ ಪಯಣಿಸಲು ಬೇಸರವೆಂದು ಕರೆತಂದ ಜತೆಗಾರನನ್ನು ಗುರಿಮುಟ್ಟಿಸಬೇಕಾದರೆ, ಮಹಾಸಾಹಸ ಪಡಬೇಕಾಯಿತು.

ಬೇಸಗೆಯ ಕಾಲೇಜ ರಜೆ ಮುಗಿಸಿ ನಾನು ಶಹರಕ್ಕೆ ಹೊರಟು ನಿಂತಾಗ, ನಮ್ಮ ನೆರಮನೆಯ 'ಮಾಣಜ್ಜ' ತಾನೂ ೧೨ ಮೈಲಿಯವರೆಗೆ ಬರುವೆನೆಂದೂ ಕೆಲ ಗೃಹೋಪಯೋಗಿ ಮಳೆಗಾಲದ ಸಾಮಾನು ಖರೀದಿಸುವದಿದೆಯೆಂದೂ ತಿಳಿಸಿದ! ನಮ್ಮೂರ ಪೇಟೆಗೆ ೧೨ ಮೈಲಿ—ಅಲ್ಲಿಯ ತನಕ ಇಬ್ಬರೂ ಸಂಗಡವೇ ಹೊರಡುವದೆಂದು ತೀರ್ಮಾನವಾಯಿತು. ಎಲೆಯಡಿಕೆ ಸಾಮಾನು ಕಟ್ಟಿಕೊಂಡು "ಮುಂಡಾಸ" ಸುತ್ತಿ ಮಾಣಜ್ಜ ತಯಾರಾಗುವಷ್ಟರಲ್ಲಿ ಎಂಟೂವರೆ ಘಂಟೆಯಾಯಿತು. ಮುಂಗೋಪಿಯಾದ ಮಾಣಜ್ಜನನ್ನು ತ್ವರಿತಗೊಳಿಸುವ ಧೈರ್ಯ ನನಗಾಗಲಿಲ್ಲ! ಆವನನ್ನು ಬಿಟ್ಟು ಮುಂದಾಗಿ ಹೊರಡಲೂ ಧೈರ್ಯವಾಗಲಿಲ್ಲ! ಅಂತೂ ಮೊದಲಿನ ಎರಡು ಬಸ್ಸು ತಪ್ಪಿ ಮೂರನೇ ಬಸ್ಸಿಗಾಗಿ ಕಾಯುತ್ತ ಕುಳಿತಿದ್ದಾಯಿತು! ತಾಸೊಂದಾದರೂ ಬಸ್ಸು ಬರಲಿಲ್ಲ! ಅಂತೂ ೧೦-೩೦ಕ್ಕೆ ಬಸ್ಸು ಬಂದಿದ್ದಾಯಿತು! ತಿಕೀಟು ಪಡೆದು ಒಳಹೊಕ್ಕಬೇಕಾದ ಕ್ರಮ! ಆದರೆ ಮಾಣಜ್ಜ ತನ್ನ ಗೋಣಿಚೀಲಗಳು—ಕೈಚೀಲಗಳು ವಗೈರೆ ಒಂದು ಹೊರೆಯನ್ನೇ ಹಿಡಿದು—ಸೀದಾ ಮುನ್ನುಗ್ಗಿ ಒಳಹೊಗಲು ಯತ್ನಿಸಿದ—ಹಳ್ಳಿಯ ಬಸ್ ನಿಲ್ದಾಣ—ಆದರೂ ೧೫-೨೦ ಜನ ಪ್ರವಾಸಿಗರು ಸಾಲುಹಿಡಿದು ನಿಂತಿದ್ದರು. "ಮಾಣಜ್ಜ" ಎಲ್ಲರಿಗಿಂತ ಮುಂದಾಗುವ ಭರದಲ್ಲಿ—ಸಾಲಿನಲ್ಲಿ ನಿಂತ ಎಣ್ಣೆ ಕೊಡವನ್ನು ಹೊತ್ತು ನಿಂತ ಹೆಂಗಸನ್ನು ಅಡ್ಡಸರಿಸಿ ಮುಂದಾಗಿದ್ದ! ಅವನ ದಕ್ಕೆಗೆ ಮಣ್ಣಿನ ಕೊಡ ಕೆಳಜಾರಿಬಿದ್ದು, ಒಡೆಯಿತು! ಇಬ್ಬರಲ್ಲಿಯೂ ಬಾಯಿಗೆ ಬಾಯಾಗಿ—ಕೈಗೆ ಕೈಯಾಗುವ ಪ್ರಸಂಗ ಬಂದಿತ್ತು! ಅಂತೂ ಬಸ್ ಕಂಡಕ್ಟರು ಇಬ್ಬರಿಗೂ ಛಾಯಿಮಾಡಿ ಬಸ್ಸು ಬಿಡುವೆನೆಂದು ತಿಳಿಸಿದಾಗ ಎಲ್ಲ ಒಳಸೇರಿದರು. ಎಣ್ಣೆಯವಳು ಮಾತ್ರ ಮಣ್ಣಿನ ಮಡಕೆಯನ್ನೂ ಎಣ್ಣೆಯನ್ನೂ ಕಳೆಕೊಂಡಳು.

ಎಲ್ಲರೂ ಒಳಸೇರಿ ಬಸ್ಸಿನಲ್ಲಿ ಕುಳಿತಿದ್ದಾಯಿತು! ಬಸ್ಸು ವೇಗವಾಗಿ ಹೊರಟಿತ್ತು! ಒಳಗೆ ಕಂಡಕ್ಟರು ಸೀಟನ್ನೆಣಿಸಿದಾಗ ಒಬ್ಬರಿಗೆ ಟಿಕೇಟು ಆಗಲಿಲ್ಲವೆಂದು ನಾಲ್ಕಾರುಬಾರಿ ಕೂಗಿದರೂ ಯಾರೂ ಮಾತಾಡಲಿಲ್ಲ! ಬಸ್ಸು ನಿಲ್ಲಿಸಿ ತಿಕೀಟು ತಪಾಸಣೆ ಮಾಡಿದಾಗ "ಮಾಣಜ್ಜನು ಟಿಕೀಟು ಮಾಡಲಿಲ್ಲವೆಂದು ತಿಳಿಯಿತು! "ಎನ್ರೀ ನೀವು ಟಿಕೇಟು ಮಾಡಲಿಲ್ಲ?!" ಎಂದು ಕಂಡಕ್ಟರ್ ಕೇಳಿದರೆ, "ಟಿಕೇಟ್ ನೀವು ಕೊಟ್ಟಿರಲ್ಲವೇ! ನೀವು ಹಣ ಪಡೆದರಲ್ಲವೇ ನಾನು ಕೊಡುವದು" ಎನ್ನುತ್ತಾ ಎಣಿಸಿ ಎಂಟಾಣೆ ಎಸೆದಿದ್ದ! ಅಂತೂ ಬಸ್ ತಿರುಗಿ ಹೊರಟಿತು. ಬಸ್ಸು ವೇಗದಲ್ಲಿ ಹೊರಟಿದೆ, ಬೈಲು ಪ್ರದೇಶ ಗಾಳಿ ಬುರ್ರೆಂದು ಬೀಸುತ್ತಿದೆ! ಮಾಣಜ್ಜ ಎಲೆ ಅಡಿಕೆ ತಿಂದುಳಿದ ಉಗುಳನ್ನು ಹೊರಗೆ ಉಗುಳಿದ! ಗಾಳಿಗೆ ಮಾಣಜ್ಜನ ಉಗುಳು ತಿರುಗಬಂದು ಹಿಂದೆ ಕುಳಿತ ಜನರ ಮೈ ಮೇಲೆ ಬಿದ್ದಿತು! ಅವರು ಅದಾವ್ರೂನವರೇ ಸಭ್ಯಗೃಹಸ್ಥರು. ಮಾಣಜ್ಜನ ಆ ಕಾರ್ಯವನ್ನು ತಿಳಿದು ಸಾವಧಾನವಾಗಿಯೇ "ಇದೇನ್ರಿ ನೀವು ನಮ್ಮ ಮೈಮೇಲೆ ಉಗುಳುವಿರಿ! ನಿಮಗೆ ಅಷ್ಟೂ ತಿಳಿಯೊಲ್ಲವೇ? ಎಂತ ಕೇಳಿದರು. "ನಾನೇನು ಮಾಡಲಿ! ಗಾಳಿಯಿಂದ ಅತ್ತ ಹೋಗುವದೆಂದು ನನಗೇನು ಗೊತ್ತು!" ಎಂದು ಮಾಣಜ್ಜನು ಹೇಳಿದ್ದ "ಏನಯ್ಯ ಕೂದಲು ಹಣ್ಣಾದರೂ ಬುದ್ಧಿಯಿಲ್ಲ! ನಾವು ಉಗುಳಿದ್ದರೆ ನೀನು ಸುಮ್ಮನಿರುತಿದ್ದೀಯಾ! ಎನ್ನುವದೂ. ಮಾಣಜ್ಜ ರೇಗಿ "ನಾನು ಒಬ್ಬ ಹಳ್ಳಿಗನೆಂದು ತಿಳಿದಿದ್ದೀ ನಿಮ್ಮ ತಪ್ಪು ನಿಮ್ಮ ಶಹರವಾಸಿಗಳನ್ನು ನಾನು ಬಲ್ಲೆ" ಎನ್ನುತ್ತಾ ರೇಗಿನಿಂದ ಮಾತಾಡುತ್ತಲಿದ್ದ— ನಾನು, ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ಮಾಣಜ್ಜನ ಬಗ್ಗೆ ನಾನು ಮುಂದುವರಿದು ಅವರಲ್ಲಿ ಕ್ಷಮೆ ಬೇಡಿಕೊಂಡೆ!—ಅಂತೂ ಪ್ರವಾಸ ಮುಂದುವರಿಯಿತು.

ಶಹರ ಸಮೀಪಿಸಲು ಇನ್ನೂ ನಾಲ್ಕು ಮೈಲಿಯಿದೆ—ಜನಪಳ್ಳಿಯ ಸ್ಟಾಂಡನಲ್ಲಿ ಬಸ್ಸು ನಿಂತಾಗ ಹುರುಪಿನಲ್ಲಿದ್ದ ಮಾಣಜ್ಜ ಒಂದು ಕಟ್ಟು ಬೀಡಿಯನ್ನು ಖರೀದಿಸಿ ತನ್ನ ಎಲೆಯಡಿಕೆಯ ಜೊತೆಗೆ ಇರಿಸಿಕೊಂಡ!—ಬಸ್ಸು ಮುಂದೆ ಹೊರಡುತ್ತಲು ಬೀಡಿ ಬೆಂಕಿಪೊಟ್ಟಣ ತೆಗೆದು ಬೀಡಿ ಕಚ್ಚಿ "ದಮ್ಮು" ಎಳೆಯಲು ಪ್ರಾರಂಭಿಸಿದ್ದ—ಬಸ್ಸಿನ ಕಂಡಕ್ಟರು ಗದ್ದರಿಸುತ್ತಾ "ಎನ್ರಿ, ಧೂಮ್ರಪಾನ ಮಾಡಬಾರದು" ಎಂತ ಬೋರ್ಡು ನೋಡಿಲ್ಲವೇ? ಎಂದು ಕೇಳಿದರೂ ಕೇಳದವರಂತೆ ಬೀಡಿಯ ಹೊಗೆಯನ್ನು ನುಂಗುವುದರಲ್ಲಿ ತಲ್ಲೀನನಾದ ಮಾಣಜ್ಜ ಪುಸು ಪುಸ್—ಹೊಗೆ ಬಿಡುತ್ತಲೇ ಇದ್ದ! ಸಹ ಪ್ರವಾಸಿಗಳೂ ಗಲಭೆ ಮಾಡಿದೊಡನೆಯೇ ಕಂಡಕ್ಟರು ಬಸ್ಸು ನಿಲ್ಲಿಸಿದ ೧೦—೧೫ ನಿಮಿಷಗಳ ವಾಗ್ಯುದ್ಧವೆ ಆಯಿತು! "ನಾನು ಓದು ಬರಹ ಬರದವ"ನೆಂದೂ "ನಿಮ್ಮ ಬೋರ್ಡು ತನಗೆಲ್ಲಿಂದ ಅರ್ಥವಾಗಬೇಕೆಂ"ದೂ ಉತ್ತರಿಸಿದ್ದ—ಅದೂ ಅಲ್ಲದೆ "ಶಹರವಾಸಿಗಳೇ ಹೀಗೆ! ಹಳ್ಳಿಗರನ್ನು ಗದರಿಸಿ ಸ್ವಾರ್ಥಸಾಧಿಸುವ ಕೆಂತವಾ" ಬೈಯುತ್ತಲಿದ್ದ! ಕೈಯಲ್ಲಿದ್ದ ಬೀಡಿ ಪೂರ್ತಿ ಖರ್ಚಾದೊಡನೆ ಬಸ್ಸಿನ ಡ್ರಾವ್ಹರ್—ಕಂಡಕ್ಟರೇ ಮಾಣಜ್ಜನಿಗೆ ಹೆದರಿ—ಬಸ್ಸನ್ನು ಮುಂದೆ ಬಿಡಬೇಕಾಯಿತು! ಅಂತೂ ಪ್ರವಾಸ ಮುಂದೆ ಸಾಗಿತು! ಮುಂದಿನ ನಿಲ್ದಾಣದಲ್ಲಿ ಜನಸಂದಣಿ ಇನ್ನೂ ಜಾಸ್ತಿಯೂಯಿತು ಯಾರೋ ಇಳಿಯುವಾಗ ಮಾಣಜ್ಜನ ಕಾಲನ್ನು ತುಳಿದಿರಬೇಕು!

ಮಾಣಜ್ಜನು ಅವರ ಮೇಲೆ ರೇಗಿಬಿದ್ದ
ಆ ಜನವೂ ಸ್ವಲ್ಪ ಬಿಸಿನೆತ್ತರಿನದಿರಬೇ
ಕು—"ಏನ್ರಿ ಕಾಲ್ನೀಡಿ ಕುಳಿತಿದ್ದೀರಿ? ·
ದೇನು ಮಠವೆಂದು ತಿಳಿದಿದ್ದೀರಾ!
ಎನ್ನುತ್ತಲೆ......ಮಾಣಜ್ಜ ತ
ಊರುಗೋಲಿನ ಪ್ರತಾಪ ಅವನಿ
ತೋರಿಸಿಯೇ ಬಿಟ್ಟ! ಇಬ್ಬರಿಗೂ ಕೈ ಕ
ಹತ್ತುತ್ತಲೇ ಬಸ್ಸು ಪುನಃ ನಿಂತಿ
ಮಾಣಜ್ಜನ ಬಾಯಿಮಾತು ಏರಿನಲ್ಲಿಯ
ಇತ್ತು! ಏನೋ ಕಾಡಿದು ಬಂದಿದ್ದಾ
ನನ್ನ ಕಾಲು ಮೆಟ್ಟಿದ್ದಲ್ಲದೆ ನನ್ನ
ತಪ್ಪು ಹೊರಿಸುತ್ತಿದ್ದಾನೆ! ಕೋಟು ಪ್ಯಾ
ಟು ಹಾಕಿದವರೆಲ್ಲ ಹೀಗೆಯೇ ಶ
ಘಟಿಂಗರು! ಎನ್ನುತ್ತಾ ಮುಂದುವರಿ
ಇನ್ನೂ ಅವನಿಗೆ ಏಟು ಹಾಕುವದರಲ್ಲಿದ್ದ
ಆದರೆ ಈ ಮೊದಲೇ ಅವರನ್ನು ನಾ
ಹಿಡಿದಿದ್ದೆ! ಮೊದಲನೇ ಏಟಿಗೇ ಮಾ
ಜ್ಜನು ಅವರನ್ನು ತತ್ತರಿಸಿಬಿಟ್ಟಿದ್ದ! ಅ
ರ ಹೆಗಲಮೇಲೆ ಬಿದ್ದ ಪೆಟ್ಟು ಅವರನ
ಪೂರಾ ಘಾಸಿಮಾಡಿತ್ತು! ಅಂತೂ ಇ
ರನ್ನೂ ಅತ್ತಿತ್ತ ಮಾಡಿದ್ದಾಯ್ತು ಬಸ
ಮುಂದೆ ಹೊರಟಿತು.

ಬಸ್ಸು ಮುಂದಿನ ನಿಲ್ದಾಣದಲ್ಲಿಳಿಯ
ತ್ತಲೇ ಮಾಣಜ್ಜ ಕೆಳಗಿಳಿದ. "ಸಾಕಪ್ಪಾ
ಎಂದೆನ್ನುತ್ತಾ, ಸಂತುಷ್ಟ ಶ್ವಾಸಬಿಟ್ಟೆ
ಇನ್ನಾದರೂ ಹಾಯಾಗಿ ಪ್ರವಾಸನಡೆದಿ
ತೆಂಬ ಭರವಸೆಯಿಂದ! ಮಾಣಜ್ಜನಿಗೆ
ಲ್ಲಿಯೇ ಇಳಿದು ಜೀನಸು ಖರೀದಿ
ದೊ, ಜವಳಿ ವ್ಯಾಪಾರವೋ ಇದ್ದಿದ್ದ
ದ ಕೆಳಗಿಳಿದ್ದ "ಮಾಣಜ್ಜ, ನೀವು ಇ
ಯೇ ಇಳಿದಿರಿ! ನಾನು ಬರುವೆ ಮುಂದಿ
ರಜೆಗೆ" ಎನ್ನುತ್ತಾ ಧನ್ಯವಾದ ಅರ್ಪಿ
ದೆ! ಮಾಣಜ್ಜನೂ ಕಿರುನಗೆ ನಕ್ಕು "
ಯಿತಪ್ಪಾ ಮುದ್ದಾಂಬಾ" ಎಂದ ನ
ಪ್ರವಾಸ ಮುಂದೆ ಸಾಗಿತು.

NAVAYUGA' WEEKLY is in the list of periodical and Newspapers approve or use in Secondary School as per proceeding Roc· No· 466 N/50 dat 2-12-1950 of the Directo of public Instructio Madras·

ಕುಂದಾಪುರ ಅಸಿಸ್ಟೆಂಟ್ ಮುನಿಸಿಪಸರವರ ಕೋರ್ಟಿನಲ್ಲಿ

O. P. No. 327/1959.

ಓಕುಡೆ ಶ್ರೀನಿವಾಸ ಭಟ್ಟ — ಅರ್ಜಿದಾರ.

ಮತ್ತು

1. ಸಂಕ್ರಿ ಸೆಟ್ಟಿ. ಕುರ್ಕಾಲು ನಾಗಯ್ಯ ಸೆಟ್ರ ಸೊಸೆ 2. ಮುದ್ದು ಸೆಟ್ಟಿ. 1ನೇ ಎದ್ರಿಳ ಗಂಡ ಉಡ್ಪಿ ತಾಲೂಕು ಶಿವಳ್ಳಿ ಗ್ರಾಮದ ಪರಂಪಳ್ಳಿಯಲ್ಲಿರುವವರು— ಎದ್ರಿರು.

ಇವರೊಳಗೆ

ಸದರೀ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ಎದ್ರಿರು ಅರ್ಜಿದಾರನವರಿಗೆ ಚಾಲಗೇಣಿಗೆ ಅನುಭವಿಸಿಕೊಂಡುಬರುವ ಆಸ್ತಿಗಳ ಬಾಬ್ತು ಎದ್ರಿರಿಂದ ಕಳೆದ ಮನ್ಮಥ-ದುರ್ಮುಖಿ ಮತ್ತು ಹೇವಿಳಂಬಿ ಸಂವತ್ಸರಗಳ ಬಾಬ್ತು ಗೇಣಿಬಾಕಿಗೆ ಅರ್ಜಿದಾರನು ಪಡೆದ ಉಡ್ಪಿ. ಡಿ. ಮು. ಕೋರ್ಟು O. S· No 331/58 ನೇ ಡಿಕ್ರಿ ಐವೇಜನ್ನು ಮತ್ತು ಅನಂತರದ ವಿಳಂಬಿ ಸಂವತ್ಸರದ ಗೇಣಿ ಬಾಕಿ ಮಾಡಿಕೊಂಡಿರುವುದರಿಂದ ಗೇಣಿಗೆ ಕಾರಣವಾದ ಆಸ್ತಿಗಳ ಸ್ವಾಧೀನತೆಯ ಬಗ್ಗೆ ಅರ್ಜಿದಾರನು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯನ್ನು ತಾ. 3–6–1960 ಕ್ಕೆ ಎದ್ರಿರ ಹಾಜಾರತಿ ಬಗ್ಗೆ ಉಡ್ಪಿ ಕೇಂಪಿನಲ್ಲಿ ಇಟ್ಟಿರುವುದರಿಂದ ಎದ್ರಿರಿಗೆ ಆಕ್ಷೇಪಣೆ ಹೇಳುವುದಿದ್ದಲ್ಲಿ ಸದ್ರಿ ತಾ. 3–6–1960ನೇ ದಿವಸ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಎದ್ರಿರನ್ನು ಶಿವ್ಯಾ ಮಾಡಿ ಸದ್ರಿ ಅರ್ಜಿಯನ್ನು ಫೈಸಲು ಮಾಡಲ್ಪಡುವುದು.

P. V· Acharya
vakil for Petitioner.

ಮೊಕ್ಕಾಂ, ಉಡ್ಪಿ ತಾ 19.5.1960

ಅಮೆರಿಕೆಯ ರಾಷ್ಟ್ರಕ್ರಾಂತಿಯವೇಳೆ ಪರಾಕ್ರಮದಿಂದ ಹೋರಾಡಿ ಅಮರನಾದ ಕಾಶಿಮಿರ್ ಪುಲಾಕ್ಸಿಯ. ೧೮೦ ನೆಯ ವರ್ಧಂತಿಯನ್ನು ನ್ಯೂಯಾರ್ಕಿನಲ್ಲಿ ಆಚರಿಸಿದಾಗ ಎರಡು ವರ್ಷದ ಮಗುವೊಬ್ಬ ಭಾಗವಹಿಸುದನ್ನು ಕಾಣಬಹುದು.

ಮೂರ್ಖತೆಯಿಂದ ಪ್ರಾರಂಭವಾದ ಕೋಪವು ಪಶ್ಚಾತ್ತಾಪದಲ್ಲಿ ಅಂತ್ಯ ಕಾಣುತ್ತದೆ.

NAVAYUGA

Founder:—

Late Sri. **A. B. SHETTY,**
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೬-೫-'೬೦	೩೮

ಗಿರಿಜನರ ಉದ್ಧಾರ

ಉದಕಮಂಡಲದಲ್ಲಿ ಸೇರಿದ್ದ ಅಖಿಲ ಭಾರತೀಯ ಗಿರಿಜನರ ಆರನೆಯ ಸಮ್ಮೇಳನವನ್ನು ಉದ್ಘಾಟಿಸಿದ ಉಪರಾಷ್ಟ್ರಪತಿ ಡಾ| ಸರ್ವಪಲ್ಲಿ ರಾಧಾಕೃಷ್ಣನರು ಮಾತಾಡುತ್ತ "ದೇಶದ ಜನರು ಆದಿವಾಸಿಗಳೊಡನೆ ಹಿರೇ ಅಣ್ಣನ ಮನೋವೃತ್ತಿಯನ್ನು ತೋರಿಸಬಾರದು; ಅವರೊಡನೆ ಸ್ನೇಹ ಮತ್ತು ಮೈತ್ರೀಯುಕ್ತವಾದ ಭಾವನೆಯಿಟ್ಟುಕೊಂಡು ವ್ಯವಹರಿಸಬೇಕು ಅಲ್ಲದೆ ತಿರಸ್ಕಾರದ ಭಾವವನ್ನೆಂದೂ ಪ್ರಕಟಿಸಬಾರದು" ಎಂದು ಉಪದೇಶಿಸಿ ಮುಂದುವರಿದ ಅವರು, "ಗಿರಿಜನರ ಉದ್ಧಾರಕ್ಕಾಗಿ ಕಳೆದ ೧೦ ವರ್ಷಗಳಲ್ಲಿ ಸಾಧಿಸಿದ ಪ್ರಗತಿಯು ತೃಪ್ತಿದಾಯಕವಾಗಿಲ್ಲ" ಎಂದೂ ಅಭಿಪ್ರಾಯಪಟ್ಟರು. ಉಪರಾಷ್ಟ್ರಪತಿಯವರು ವ್ಯಕ್ತಪಡಿಸಿದ ಸಂಗತಿಗಳನ್ನು ನಾಗರಿಕ ಜನಾಂಗವು ಎಂದಿಗೂ ವಿರೋಧಿಸುವುದಿಲ್ಲ ಮಾತ್ರವಲ್ಲ, ಅದನ್ನು ಮನಃಪೂರ್ವಕವಾಗಿ ಸ್ವಾಗತಿಸುತ್ತದೆ. ಭಾರತದಲ್ಲಿ ಬಹು ಹಿಂದಿನ ಕಾಲದಿಂದಲೂ ಇದ್ದ ಸಾಮಾಜಿಕ ಕಟ್ಟುಪಾಡಿನಿಂದಾಗಿ, ನಾಗರಿಕ ಜನತೆಯಿಂದ ಬಿಡಿದು ಪ್ರತ್ಯೇಕವಾಗಿ ಬೆಳೆದು ಬಂದಿರುವ ಈ ಒಂದು ಜನಾಂಗವು ಎರಡು ಕೋಟಿ ಮೂವತ್ತು ಲಕ್ಷದಷ್ಟಿದ್ದು, ಒಟ್ಟು ಭಾರತೀಯ ಜನ ಸಂಖ್ಯೆಯಲ್ಲಿ ನೂರಕ್ಕೆ ಆರಕ್ಕಿಂತಲೂ ಹೆಚ್ಚಿನದಾಗಿದೆ. ಹೀಗಿರುವಾಗ ಅವರನ್ನು ಕಡೆಗಣಿಸುವುದು ಎಂದಿಗೂ ಸಾಧ್ಯವಿರುವುದಿಲ್ಲ. ಭಾರತವು ಸ್ವತಂತ್ರವಾದ ಮೇಲೆ ರೂಪಿತವಾದ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿಯೂ ಈ ಜನಾಂಗದ ಮೇಲ್ಮೆಗಾಗಿ ಗಣನೀಯ ಸ್ಥಾನವನ್ನು ಕೊಡಲಾಗಿದೆ. ಮುಖ್ಯವಾಗಿ ಗಿರಿಜನರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯನ್ನು ಉನ್ನತಗೊಳಿಸುವ ಪ್ರಯತ್ನಗಳು ನಡೆದುವು. ಆದರೆ, ಈ ಬಗ್ಗೆ ಕೈಗೊಂಡ ಪ್ರಯತ್ನಗಳು ಸಂಪೂರ್ಣ ಯಶಸ್ವಿಯಾಗದೆ ಇದ್ದುದರಿಂದ ಅಪೇಕ್ಷಿತ ಪರಿಣಾಮವು ಕೈಗೂಡಲಿಲ್ಲವೆಂಬ ಸತ್ಯ ಸಂಗತಿಯನ್ನು ಎಂದಿಗೂ ಮರೆಮಾಚುವಂತಿಲ್ಲ. ಆದುದರಿಂದ, ಸಮೃದ್ಧ ಮತ್ತು ಸುಸಂಸ್ಕೃತ ಭಾರತವನ್ನು ಕಟ್ಟಲು ಹೊರಟಿರುವ ನಾವು ಮನಸ್ವಿಯಾಗಿ ಈ ಬಗ್ಗೆ ಪ್ರಯತ್ನಿಸುವುದು ಅಗತ್ಯವಿದೆ.

ಜಾತ್ಯತೀತ ಹಾಗೂ ವರ್ಗರಹಿತ ಸಮಾಜದಲ್ಲಿ ಈ ಪಂಗಡದ ಜನತೆಯೂ ಸಹಯೋಗ್ಯವಾಗಿ ಹೊಕ್ಕು, ಬಳಿಕೆಯಿಂದ ಸೇರಿಕೊಂಡು, ತಮ್ಮ ಅಜ್ಞಾನವನ್ನು ದೂರೀಕರಿಸಿ, ಎಲ್ಲರಂತೆಯೇ ತಾವೂ ಸಮಾಜದ ಅವಿಭಾಜ್ಯ ಅಂಗವೆಂದೆಂಬ ಕಲ್ಪನೆಯು ಅವರಲ್ಲಿ ಮೂಡುವಂತೆ ಸಗುವುದು ಅತ್ಯವಶ್ಯವಾಗಿದೆ. ಸಮಾಜದ ಎಲ್ಲ ಜನಾಂಗಗಳಿಗೂ ಸಮಾನತೆಯನ್ನು ಒದಗಿಸಿರುವ ನಮ್ಮ ರಾಷ್ಟ್ರ ಘಟನೆಯು ಬಹಿರಂಗವಾಗಿ ಜಾತೀಯತೆ ಮತ್ತು ವರ್ಗೀಕರಣಗಳನ್ನು ನಿಷೇಧಿಸುತ್ತದೆ. ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಅನೇಕ ಪಂಗಡಗಳು ಇರುವುವು. ಅವರನ್ನು ಮುಂದುವರಿಯುವಂತೆ ಮಾಡುವ ಸಲುವಾಗಿ ಸರಕಾರ ಪ್ರಯತ್ನಿಸುತ್ತಿದೆ. ಈ ವರ್ಗೀಕರಣವು ನ್ಯಾಯೋಚಿತವಲ್ಲವಾದರೂ ರಾಷ್ಟ್ರದ ಹಿತದೃಷ್ಟಿಯಿಂದ ಅವಶ್ಯವಾಗಿದೆ. ಆದರೆ, ಈ ರೀತಿಯ ವರ್ಗವು ವರ್ಗಾತೀತ ಕಲ್ಯಾಣ ರಾಷ್ಟ್ರದಲ್ಲಿರುವುದು ಎಂದಿಗೂ ಶ್ರೇಯಸ್ಕರವಲ್ಲವಾದುದರಿಂದ ಇಂತಹ ಸೌಲಭ್ಯಗಳನ್ನು ಇನ್ನೂ ಬಹುಕಾಲ ಒದಗಿಸುವುದು ಸಾಧ್ಯವೆನಿಸದು. ಪ್ರಗತಿ, ಅಭಿವೃದ್ಧಿಯ ವಿಚಾರವು ಒಳಗಣಿಂದ ಬೆಳೆದು ಬರಬೇಕಲ್ಲದೇ ಅದನ್ನು ಒತ್ತಾಯದಿಂದ ಹೇರುವುದು ಅಸಾಧ್ಯ. ತನ್ನ ಪ್ರತಿಭೆಗೆ ಅನುಗುಣವಾದ ವಿಕಾಸ ವಿಚಾರವನ್ನು ಪ್ರತಿ ಸಮಾಜವೂ ಹೊರಹೊಮ್ಮಿಸಬೇಕು. ಭೂತ–ಭವಿಷ್ಯತ್ತುಗಳ ನಡುವೆ ಬಿರುಕು ಬೀಳದೆ ಗತಕಾಲದ ಗರ್ಭದಲ್ಲಿಯೇ ಭವಿಷ್ಯ ಮೂಡಿಬರಬೇಕು, ಹಸಿವು, ಬಡತನ ಮತ್ತು ಅಜ್ಞಾನಗಳು ತಾಂಡವವಾಡುವಲ್ಲಿ ಕಲೆ, ಸಂಸ್ಕೃತಿ ಮತ್ತು ಆಧ್ಯಾತ್ಮ ವಿಚಾರಗಳು ಎಂದಿಗೂ ಬೆಳೆಯಲಾರವು. ಗಿರಿಜನರು ವಾಸಿಸುವ ವಾತಾವರಣವನ್ನು ಸುಧಾರಿಸಿದಲ್ಲಿ ಅದರ ಪ್ರಭಾವವು ಅವರ ಮೇಲೆ ಬಿದ್ದು, ಕ್ರಮೇಣವಾಗಿಯಾದರೂ ಸ್ವಾಭಾವಿಕ ಪರಿವರ್ತನೆಯನ್ನು ನಾವು ನಿರೀಕ್ಷಿಸಬಹುದು. ಸರಕಾರಿ ನೌಕರಿಗಳನ್ನು ಒದಗಿಸುವುದು, ವಿದ್ಯಾಭ್ಯಾಸದಲ್ಲಿ ಪ್ರಗತಿ ಪಡೆಯುವುದು— ಇವಿಷ್ಟರಿಂದಲೇ ಗಿರಿಜನರ ಇಲ್ಲವೇ ಹಿಂದುಳಿದವರ ಉನ್ನತಿಯಾಗಲಾರದು. ಮುಂದುವರಿದ ಜನಾಂಗದವರೆನಿಸಿದವರು ಹಾಗಾಗಲು ಕಾರಣವೇನು ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅವರಲ್ಲಿರುವ ಉತ್ತಮ ಗುಣ, ಆಚಾರ, ವಿಚಾರಾದಿಗಳನ್ನು ಅನುಕರಣೆ ಮಾಡುವುದರಿಂದ ಸಾಮಾಜಿಕವಾಗಿ ಮುಂದುವರಿಯುವುದು ಸಾಧ್ಯವಿದೆ. ಸಾಮಾನ್ಯ ಜನತೆಯಿಂದ ಅವರನ್ನು ದೂರವಿರಿಸದೆ, ಅವರೆಲ್ಲರ ನಡುವೆಯೇ ವಾಸಿಸುವ ಸೌಕರ್ಯವನ್ನು ಗಿರಿಜನರಿಗೂ ಒದಗಿಸಿಕೊಡುವುದರಿಂದ ಇದಕ್ಕೆ ಸಹಾಯವಾಗುವುದು. ನಾಗರಿಕರೆಲ್ಲರಿಗೂ ಸಮಾನಾವಕಾಶವನ್ನು ಒದಗಿಸುವುದರಿಂದ ಪ್ರತಿಭೆಗೆ ಮನ್ನಣೆಯನ್ನು ನಾವು ಕೊಟ್ಟಂತಾಗುವುದು. ಇದೀಗ, ನಮ್ಮ ದೇಶದಲ್ಲಿ ಪ್ರತಿಭೆಗೆ ಗೌರವ ದೊರಕಿಸುವುದು ಸರಕಾರಗಳಿಗೆ ಸಾಧ್ಯವೆನಿಸಿಲ್ಲ. ಇದರಿಂದಾಗಿಯೇ ಆಡಳಿತ ಯಂತ್ರವು ಶಿಥಿಲಗೊಂಡು ಕುಸಿಯುತ್ತಿದೆ. ಉನ್ನತಿ ಪಥ ಭ್ರಮಣ ಮಾಡುವ ರಾಷ್ಟ್ರದಲ್ಲಿ ಸಮಾಜ ಕಲ್ಯಾಣ ಸಂಸ್ಥೆಗಳು ನೈತಿಕ ಅಧಃಪತನವನ್ನು ತಡೆಗಟ್ಟಿ ಎಲ್ಲ ಪ್ರಜೆಗಳೂ ಏಕಮನಸ್ಸಿನಿಂದ ಒಮ್ಮತದಿಂದ ಬಾಳಿ ಬದುಕುವಂತಹ ವಾತಾವರಣವನ್ನು ಒದಗಿಸಲು ಯತ್ನಿಸುವುದು, ಮತ್ತು ಅದರಿಂದ ರಾಷ್ಟ್ರ ಕಲ್ಯಾಣ ಸಾಧಿಸುವುದು ಅವಶ್ಯವಾಗಿದೆ. ಸಮಾಜದಿಂದ ಭಿನ್ನವಾಗಿ ದೂರ ನೆಲಸಿರುವ ಹರಿಜನ, ಗಿರಿಜನ ಮೊದಲಾದ ಪಂಗಡಗಳವರೂ ಇತರರೊಡನೆ ಸಮಾನ ವ್ಯವಹಾರ ನಡೆಸುವಂತೆ ಅವಕಾಶವೊದಗಿಸಿ ಕೊಡುವುದು ತಮ್ಮ ಕರ್ತವ್ಯವೆಂದು ತಿಳಿದ, ಅದಕ್ಕಾಗಿ ದುಡಿಯಬೇಕಾಗಿದೆ. ಅವರಲ್ಲಿರುವ ವಿಶಿಷ್ಟ ಪರಂಪರೆಗಳು ಭಗ್ನವಾಗದಂತೆ ಸಮಾಜಕ್ಕೆ ಅವುಗಳ ಪ್ರಯೋಜನ ಲಭಿಸುವಂತೆ ಹಳೆಯದನ್ನು ದೂರೀಕರಿಸದೆ ಹೊಸತರ ಸದ್ಗುಣಸಾರವನ್ನು ಹೀರಿಕೊಂಡು ಭವ್ಯ ಸಮಾಜ ನಿರ್ಮಾಣವಾಗುವಂತೆ ಶ್ರಮಿಸುವುದೂ ಇಂತಹ ವಿಭಾಗದ ಕಾರ್ಯಕರ್ತರ ಪರಮ ಕರ್ತವ್ಯವಾಗಿದೆ.

ಸೂಕ್ತ ಸಲಹೆ

ಮೈಸೂರು ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಸರಕಾರದ ವಿವಿಧ ಮನೆಗಳಲ್ಲಿ ಜನಪ್ರತಿನಿಧಿಗಳಾಗಿರುವವರು ತಮ್ಮ ಮತದಾರ ಕ್ಷೇತ್ರವನ್ನು ಆಗಾಗ ಸಂಚರಿಸಿ, ಜನತೆಯ ಸಮಸ್ಯೆಗಳನ್ನು ಅರಿತು ಅವನ್ನು ಪರಿಹರಿಸುವುದಕ್ಕಾಗಿ ಪ್ರಯತ್ನಿಸಬೇಕೆಂದೂ ಇದರಿಂದ ಸಮಾಜದ ಹಲವಾರು ಸಮಸ್ಯೆಗಳು ಸುಲಭದಲ್ಲಿ ಬಗೆಹರಿಯುವವೆಂದೂ ವಿನಂತಿಸಿದರು. ಈ ವಿನಂತಿಯನ್ನು ಮಾಡಿದವರಲ್ಲಿ ಶ್ರೀ ನಿಜಲಿಂಗಪ್ಪನವರೇ ಮೊದಲಿಗರಲ್ಲ. ಹಿಂದಿನಿಂದಲೂ ಉಚ್ಚ ವರ್ಗದ ಕಾಂಗ್ರೆಸ್ ನೇತಾರರು ಪದೇ ಪದೇ ಇದೇ ರೀತಿಯಾಗಿ ಎಚ್ಚರಿಸುತ್ತಿದ್ದಾರೆ. ಜನ ಪ್ರತಿನಿಧಿಗಳು ತಮ್ಮ ಸ್ಥಾನಕ್ಕೆ ಅಂಟಿ ಕೂರುವುದರಲ್ಲಿಯೇ ಕಾರ್ಯನಿಮಗ್ನರಾಗಿರುದರಲ್ಲದೇ ಜನತೆಯ ಆಶೆ ಆಮಿಷಗಳನ್ನು ಪೂರೈಸುವತ್ತ, ಅದರ ಸಂಪರ್ಕವನ್ನು ಬೆಳೆಸುವತ್ತ ಇವರು ಗಮನಹರಿಸುವುದು ತೀರ ಕಡಿಮೆಯಾಗಿದೆ. ಒಂದು ಬಾರಿ ಚುನಾವಣೆಯಲ್ಲಿ ಗೆದ್ದು ಹೋದ ಮೇಲೆ ಪುನಃ ಆ ಪ್ರತಿನಿಧಿ ತನ್ನ ಮತದಾರ ಕ್ಷೇತ್ರಕ್ಕೆ ಪಾದಾರ್ಪಣ ಮಾಡುವ ಶುಭಮುಹೂರ್ತ ಪ್ರಾಪ್ತವಾಗುವಾಗ, ಮತ್ತೊಂದು ಚುನಾವಣೆಯು ನಿಕಟವೆನಿಸುತ್ತದೆ. ಹೀಗೆ ಮಾಡುವುದರಿಂದ, ರಾಜಕೀಯ ಪಕ್ಷ ಮತ್ತು ಜನತೆಗಳ ನಡುವಣ ಸಂಬಂಧವು ಶಿಥಿಲವಾಗುತ್ತ ಹೋಗುತ್ತದೆ. ಪಕ್ಷದ ಬಲವೂ ಕುಂಠಿತವಾಗುತ್ತದೆ. ಮುಖ್ಯವಾಗಿ ಕಾಂಗ್ರೆಸ್ ಪ್ರತಿನಿಧಿಗಳು ಜನಸಂಪರ್ಕವನ್ನು ದೂರಮಾಡುತ್ತ ಬರುತ್ತಿರುವುದು ಗೋಚರವಾಗುತ್ತಿದೆ. ಇದರಿಂದ ಕಾಂಗ್ರೆಸ್ ಬಲಸಂವರ್ಧನೆಯಲ್ಲೂ ಹ್ರಸಿಕಾಣತೊಡಗಿದೆ. ಇಂತಹ ಸಂದರ್ಭಗಳ ಉಪಯೋಗವನ್ನು ವಿರೋಧೀ ಪಕ್ಷಗಳು ಮಾಡಿಕೊಂಡು ಬೆಳೆಯುವುವು. ಹೀಗಾಗಬಾರದು, ಕಾಂಗ್ರೆಸ್ ಜನಸಾಮಾನ್ಯರೆಲ್ಲರ ಸಂಸ್ಥೆಯಾಗಿ, ರಾಷ್ಟ್ರವನ್ನು ಉನ್ನತಿಯ ಮಾರ್ಗದಲ್ಲಿ ಮುಂದುವರಿಸುವಂತಾಗಲು ಕಾಂಗ್ರೆಸ್ ಜನತಾ ಪ್ರತಿನಿಧಿಗಳು ಪ್ರಯತ್ನಿಸಿ ಕಾರ್ಯ ನಿಮಗ್ನರಾಗಬೇಕು.

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ವ್ಯಾಪೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ. ಬಡ್ಡಿ ನೇಕಡಾ 5ರಂತೆ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕ ವ್ಯಾಪೆ,ನಿರಖು ಠೇವಣಾತಿಗಳ ಮೇಲೆ ಬಡ್ಡಿ ಸೇಕಡಾ 4½ರ ವರೆಗೆ. ದೊಡ್ಡ ಠೇವಣೆಗಳ ಮೇಲೆ ಹೆಚ್ಚಿನ ಬಡ್ಡಿ.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸ್ಥಾಪನೆ : 1920.

ಅಲ್ಲಲ್ಲಿಯ ಸುದ್ದಿಸಾರ

ದಿ| ಎ. ಬಿ. ಶೆಟ್ಟರ ಭಾವ ಚಿತ್ರದ ಅನಾವರಣವು ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ತಾ. 17ರಂದು ಮೈಸೂರಿನ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆ ಅವರಿಂದ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಜಿಲ್ಲಾ ವೈದ್ಯಾಧಿಕಾರಿ ಶ್ರೀ ಎ. ತಿಮ್ಮಪ್ಪಯ್ಯನವರು ಸ್ವಾಗತಿಸಿ ಈ ಆಸ್ಪತ್ರೆಯ ಬೆಳವಣಿಗೆಗೆ ದಿವಂಗತ ಶೆಟ್ಟರೇ ಕಾರಣವೆಂದರು. ಆರೋಗ್ಯ ಸಚಿವರು ಭಾವಚಿತ್ರವನ್ನು ಅನಾವರಣ ಮಾಡಿ ದಿವಂಗತರು ಜಿಲ್ಲೆಗೆ ಸಲ್ಲಿಸಿದ ಬಹುಮುಖ ಸೇವೆಗಳನ್ನು ವಿವರಿಸಿದರು. ಅನಂತರ ಶ್ರೀ ಕೆ. ಆರ್. ಆಚಾರ್, ಯಂ. ಪಿ. ಡಾ| ಶಿವರಾಮನ್; ಡಾ| ಗಿರಿಧರ ರಾವ್ ಇವರು ಸಾರ್ವಜನಿಕರ ಪರವಾಗಿ ಮಾತನಾಡಿ ದಿವಂಗತ ಶೆಟ್ಟರ ಸೇವಾ ಕಾರ್ಯಗಳನ್ನು ವಿವರಿಸಿದರು. ಅಧ್ಯಕ್ಷ ಡಾ| ಪೈಗಳು ದಿವಂಗತರು ಆದರ್ಶ ವ್ಯಕ್ತಿಗಳಾಗಿದ್ದರೆಂದು ಹೇಳಿ ಅವರು ಜಿಲ್ಲೆಗೆ ಸಲ್ಲಿಸಿದ ಸೇವೆಗಳನ್ನು ಕೊಂಡಾಡಿದರು. ಡಾ. ಕೆ. ಬಾಲಪ್ಪ ಶೆಟ್ಟರು ಸಂದೇಶಗಳನ್ನೋದಿದರು. ಅಂತ್ಯದಲ್ಲಿ ಶ್ರೀ ಕೆ. ಟಿ. ಆಳ್ವರು ಆಭಾರ ಸೂಚಿಸಿದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಭಾಷಣ— ಇದೇ ತಾ. 22ರಂದು ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಮಂಗಳೂರಲ್ಲಿ ಸಿಂಡಿಕೇಟ್ ಬ್ಯಾಂಕಿನ ಸಭಾಮಂದಿರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣವೀಯುತ್ತ ಜನಪ್ರತಿನಿಧಿಗಳು ಜನತೆಯನ್ನು ಮರೆಯದೆ ತಮ್ಮ ಕ್ಷೇತ್ರಕ್ಕೆ ಆಗಾಗ ಸಂದರ್ಶಿಸಿ ಜನತೆಯ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕೆಂದರು. ಆರಂಭದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತಿಸಿ ಜಿಲ್ಲೆಯ ಹಲವು ಸಮಸ್ಯೆಗಳನ್ನು ವಿವರಿಸಿದರು. ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸಿಗರು ದಕ್ಷತೆ ಹಾಗೂ ನಂಬಿಕೆಯಿಂದ ಕೆಲಸಮಾಡಬೇಕೆಂದರು. ವಿಚಾರವಿನಿಮಯವಾದ ಮೇಲೆ ಶ್ರೀ ಯಂ. ರಘುನಾಥರು ಅಭಿನಂದಿಸಿದರು.

ಅದಮಾರು ಮಠದ ಛತ್ರದ ಶಂಕುಸ್ಥಾಪನೆ — ಶ್ರೀ ಅದಮಾರು ಮಠದ ಶ್ರೀಪಾದಂಗಳವರು ಯಾತ್ರಿಕರ ಸೌಲಭ್ಯಕ್ಕಾಗಿ ಸಾರ್ವಜನಿಕರ ಸಹಾಯದಿಂದ ಸುಮಾರು ಎರಡೂವರೆ ಲಕ್ಷ ರೂಪಾಯಿ ವೆಚ್ಚದಿಂದ ನಿರ್ಮಿಸಲಿರುವ ಅದಮಾರು ಮಠದ ಛತ್ರದ ಶಂಕುಸ್ಥಾಪನಾ ಸಮಾರಂಭವು ಇದೇ ತಾ. 20ನೇ ಬೆಳಿಗ್ಗೆ ಆರೋಗ್ಯಮಂತ್ರಿ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯ ಡಾ| ಯು. ರಘುರಾಮ ರಾವ್ ಅವರಿಂದ ನೆರವೇರಿಸಲ್ಪಟ್ಟಿತು.

ಪಲಿಮಾರು ಮಠದ ಶ್ರೀಪಾದಂಗಳವರು ಸ್ವಾಗತ ಭಾಷಣಮಾಡಿದರು. ಅದಮಾರು ಶ್ರೀಪಾದಂಗಳವರು ಛತ್ರದ ಉದ್ದೇಶವನ್ನು ವಿವರಿಸಿದರು. ಶ್ರೀ ಎಲ್. ಆರ್. ಭಟ್ಟರು ಉದ್ಘಾಟಕರ ಪತಿಯಿಂದ ಮಾತನಾಡಿ ಡಾ| ಯು. ಆರ್. ರಾಯರು ದಾನವಾಗಿಕೊಟ್ಟ ರೂ. 5 ಸಾವಿರವನ್ನು ಒಪ್ಪಿಸಿದರು. ಶ್ರೀ ದೇವೇಂದ್ರ ಪೆಜತ್ತಾಯರು ಧನಸಹಾಯದ ವರದಿಯನ್ನು ಓದಿ ಇಷ್ಟರಲ್ಲೆ ರೂ. 70 ಸಾವಿರದಷ್ಟು ಸಂಗ್ರಹವಾಗಿದೆ ಎಂದರು. ಶ್ರೀ ಟಿ. ಎ. ಪೈ, ಶ್ರೀ ಯು. ಎಸ್. ನಾಯಕ್ ಎಂ. ಎಲ್. ಎ, ಕಾಣಿಯೂರು ಮಠದ ಕಿರಿಯ ಮತ್ತು ಹಿರಿಯ ಶ್ರೀಪಾದಂಗಳವರು, ಪಲಿಮಾರು ಹಾಗೂ ಚಿತ್ರಾಪುರ ಶ್ರೀಪಾದಂಗಳವರು ಈ ಕಾರ್ಯವನ್ನು ಶ್ಲಾಘಿಸಿ ಮಾತನಾಡಿದರು. ಅಧ್ಯಕ್ಷ ಡಾ. ಹೆಗ್ಡೆಯವರು ಹಿಂದುಸ್ಥಾನದಲ್ಲಿಯೇ ಸುಪ್ರಸಿದ್ಧವಾದ ಉಡುಪಿಯಲ್ಲಿ ಇಂಥಾ ಛತ್ರದ ವ್ಯವಸ್ಥೆಮಾಡಲು ಶ್ರೀ ಅದಮಾರು ಶ್ರೀಗಳವರು ತೊಡಗಿರುವುದು ಹರ್ಷದಾಯಕವೆಂದರು.

ಕೊನೆಗೆ ಶ್ರೀ ಅದಮಾರು ಶ್ರೀ ಪಾದಂಗಳವರು ಧನ್ಯವಾದಗಳನ್ನರ್ಪಿಸಿದರು.

ಕುದ್ಮುಲ್ ರಂಗರಾಯರ ಜನ್ಮಶತಾಬ್ದೋತ್ಸವ ದಲಿತ ವರ್ಗದವರ ಅಭಿವೃದ್ಧಿಗಾಗಿ 1887ರಲ್ಲಿ ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸ್ಥಾಪಿಸಿದ ಕುದ್ಮುಲ್ ರಂಗರಾಯರ ಜನ್ಮ ಶತಾಬ್ದಿ ಉತ್ಸವವು ತಾ. 22ರಂದು ಮಂಗಳೂರು ಕೊಡಿಯಾಲ್ ಬೈಲ್‌ನಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪ ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳಿಂದ ನೆರವೇರಿತು. ಈ ಸಂದರ್ಭದಲ್ಲಿ ದಿ| ರಂಗರಾಯರು ಕೈಕೊಂಡ ಸಮಾಜ ಸುಧಾರಣೆಯ ಕುರಿತು ಭಾಷಣಗಳಾದುವು.

ಮುಂಬಯಿ ದ. ಕ. ಬ್ರಾಹ್ಮಣರ ಸಂಘ— ಇದರ ಆಶ್ರಯದಲ್ಲಿ ಇದೇ ತಾ. 9 ರಂದು ಶ್ರೀ ನರಸಿಂಹ ಜಯಂತಿ ಮಹೋತ್ಸವವು ಸಯನಿನ ಸಂಘದ ಕಟ್ಟಡದ ಶ್ರೀ ಭುಜಂಗರಾಯರ ಹಾಲಿನಲ್ಲಿ ಆಚರಿಸಲ್ಪಟ್ಟಿತು. ಕುಮಾರಿ ಸಬಿತ ಉಪಾಧ್ಯಾಯರ ಕೀರ್ತನೆಗಳಾದ ಮೇಲೆ ಅತಿಥಿಗಳಾಗಿದ್ದ ವಿದ್ವಾನ್ ಪಿ. ಪದ್ಮನಾಭ ಭಟ್ಟ ಮತ್ತು ಶ್ರೀ ಕೆ. ಬಾಲಕೃಷ್ಣರಾಯರು ಶ್ರೀ ನರಸಿಂಹ ಜಯಂತಿಯ ವೈಶಿಷ್ಟ್ಯವನ್ನು ವಿವರಿಸಿದರು.

ತಾ. ೧೪ರಲ್ಲಿ ಸಂಜೆ ಆದೇ ಸದನದಲ್ಲಿ 'ಕರ್ಣಾರ್ಜುನ' ಯಕ್ಷಗಾನ ಕೂಟವನ್ನು ಶ್ರೀ ಕೆ. ಬಾಲಕೃಷ್ಣರಾಯರು ಮತ್ತು ಅವರ ಸಂಗಾತಿಗಳಾದ ಶ್ರೀಣಿ ಗೋಪಾಲಕೃಷ್ಣ ಭಟ್, ದೇರಾಜೆ ಸೀತಾರಾಮಯ್ಯ, ಕಜೆ ಈಶ್ವರ ಭಟ್ ಇವರೊಂದಿಗೆ ನೆರವೇರಿಸಿದರು ಶ್ರೀ ಕೆ. ಮಹಾಬಲ ಸೋಂಡರು ಭಾಗವತಿಗೆಯನ್ನೂ ಶ್ರೀ ಕೆ. ಈಶ್ವರಪ್ಪಯ್ಯನವರ ಮೃದಂಗ ವಾದನವನ್ನೂ ಕೈಕೊಂಡು ನೆರೆದ ಸಭೆಯನ್ನು ಸಂತೋಷಪಡಿಸಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿಯವರು ಸಂಘದ ಪರವಾಗಿ ಅವರೆಲ್ಲರಿಗೂ ಹೂವಿನ ಹಾರವಿತ್ತು ಧನ್ಯವಾದವನ್ನರ್ಪಿಸಿ ರೂ. ೭೫೧ರ ನಿಧಿಯನ್ನು ಅಂದಿನ ಸಭಾಧ್ಯಕ್ಷರಾದ ಶ್ರೀ ಕೆ. ಎಸ್. ಎನ್. ಹೆಬ್ಬಾರರ ಹಸ್ತದಿಂದ ಕೊಡಿಸಿದರು.

ವಿದ್ಯಾದಾನ ಉಚಿತ ಪ್ರಸಾದ ನಿಲಯ, ಹುಬ್ಬಳ್ಳಿ — ಜೂನ್ ತಿಂಗಳ ೨೦ ನೇ ತಾರೀಕಿನಿಂದ ಪ್ರತಿ ವರ್ಷದಂತೆ ವಿದ್ಯಾದಾನ ಉಚಿತ ಪ್ರಸಾದ ನಿಲಯದಲ್ಲಿ ಉಚಿತ ವಸತಿ, ದೀಪ, ಊಟ ಮೊದಲಾದ ಸೌಕರ್ಯಗಳನ್ನು ಒದಗಿಸಲಾಗುವದು. ಸ್ಥಳೀಯ ಎಲ್ಲ ಶಾಲೆ ಕಾಲೇಜಗಳಲ್ಲಿ ಕಲಿಯುತ್ತಿರುವ ಸರ್ವ ಮತದ ಬಡ ವಿದ್ಯಾರ್ಥಿಗಳಿಗೆ ಪ್ರವೇಶವುಂಟು. ಸೇರಬಯಸುವವರು ನಿಲಯದ ಸಂಚಾಲಕರಾದ ಶ್ರೀ ಸಿ. ಎಸ್. ಜಗತಿ, ವೀರಾಪೂರಗಲ್ಲಿ ಹುಬ್ಬಳ್ಳಿ ಇವರಿಗೆ ನಿರ್ದಿಷ್ಟವಾದ ಅರ್ಜಿ ಫಾರ್ಮುಗಳಲ್ಲಿ ವಿವರ ತುಂಬಿ, ಮೇ ೩೧ರೊಳಗಾಗಿ ಕಳಿಸಬೇಕು.

ಸಂಕ್ಷಿಪ್ತ ಸುದ್ದಿಗಳು

ಹಿಂದುಳಿಯಲು ಪ್ರಯತ್ನಿಸಬಾರದು

ನಾಮದೇವ ಶಿಂಪಿ ಸಮಾಜದ ಪರಿಷತ್ತು ಹುಬ್ಬಳ್ಳಿಯಲ್ಲಿ ಸೇರಿದಾಗ, ಮೈಸೂರಿನ ಮುಖ್ಯ ಮಂತ್ರಿ, ಶ್ರೀ ಬಿ. ಡಿ. ಜತ್ತಿಯವರು ದೇಶವು ಮುಂದೆ ಹೋಗುತ್ತಿರುವಾಗ ಹಿಂದುಳಿದವರೆಂದು ಕರೆದುಕೊಳ್ಳಲು ನಾವು ಯತ್ನಿಸಬಾರದು. ಹಿಂದುಳಿದವರ ಯಾದಿಯನ್ನು ಪ್ರಾರಂಭದಲ್ಲಿ ಮಾಡಿದಾಗ ಉದಾರ ರೀತಿಯಿಂದ ವರ್ತಿಸಿದುದರಿಂದ ರಾಜ್ಯದಲ್ಲಿ ಸೇ. ೯೦ರಷ್ಟು ಜನರು ಹಿಂದುಳಿದವರೆನಿಸಿದರು. ಯಾವುದೇ ಒಂದು ರಾಜ್ಯದಲ್ಲಿ ಬಹು ಸಂಖ್ಯೆಯ ಸಮಾಜವು ಹಿಂದುಳಿದಿದೆಯೆಂದು ಹೇಳುವುದು ಸರಿಯೆನಿಸದು. ಬಹಳವಾದರೆ, ನೂರಕ್ಕೆ ೪೫ರಷ್ಟು ಜನ ಹಿಂದುಳಿದವರೆಂದು ನಾವು ಹೇಳಬಹುದು ಎಂದು ಹೇಳಿ, ದೇಶವು ಮುಂದುವರಿಯುತ್ತಿರುವ ಈ ಕಾಲದಲ್ಲಿ ಹಿಂದುಳಿದ ವರ್ಗಕ್ಕೆ ಸೇರುವುದು ಯಾವುದೇ ಸಮಾಜಕ್ಕೆ ಅಭಿಮಾನದ ವಿಷಯವೆನಿಸದು ಎಂದು ಸಲಹೆಯಿತ್ತರು.

ಬಾಂಡುಂಗ ಪರಿಷತ್ತು ಸೇರುವುದೇ

ವರಿಷ್ಠ ಸಮ್ಮೇಳನವು ವಿಫಲಗೊಂಡುದರಿಂದ ಜಾಗತಿಕ ರಾಜಕಾರಣದಲ್ಲಿ ಪುನಃ ಕ್ಷೋಭೆಯೇಳತೊಡಗಿವೆ. ಮುಖ್ಯವಾಗಿ, ಚೀನಾದಿಂದ ಆಕ್ರಮಿತವಾದ ಭಾರತಕ್ಕೆ ವಿವಂಚನೆಯಾಗಿರುತ್ತದೆ. ಜಗತ್ತಿನ ಬಂಡವಳಶಾಹಿ ಮತ್ತು ಸಮಾಜವಾದಿ ವರ್ಗಗಳಿಗೆ ಸೇರಿದ ರಾಷ್ಟ್ರಗಳು ಭಾರತವನ್ನು ತಮ್ಮ ಶತ್ರುವೆಂದು ತಿಳಿದುಕೊಂಡಂತಾಗಿದೆ. ಸದ್ಯವೇ ಭಾರತಕ್ಕೆ ಮರಳಲಿರುವ ಪ್ರಧಾನಿ ನೆಹರೂ ದಿಲ್ಲಿ ತಲಪಿದನಂತರ ಬಾಂಡುಂಗ ಪರಿಷತ್ತಿನ ರಾಷ್ಟ್ರಗಳ ಸಮ್ಮೇಳನವೊಂದನ್ನು ಕರೆದು ವರಿಷ್ಠ ಸಮ್ಮೇಳನದ ವಿಫಲತೆಯ ಫಲಶ್ರುತಿಯ ಕುರಿತು ಚರ್ಚಿಸುವ ವ್ಯವಸ್ಥೆಯನ್ನು ಮಾಡುವ ಯೋಚನೆಯಲ್ಲಿರುವರೆಂದು ತಿಳಿಯುತ್ತದೆ.

ವಿನೋಬಾರ ನೈತಿಕ ವಿಜಯ

ಮಧ್ಯಪ್ರದೇಶದಲ್ಲಿ ಡಕಾಯಿತರ ಮನಃಪರಿವರ್ತನೆಯನ್ನು ಮಾಡುವ ಉದ್ದೇಶದಿಂದ ಪಾದಯಾತ್ರೆ ಕೈಗೊಂಡಿರುವ ವಿನೋಬಾ ತಮ್ಮ ಉದ್ಯಮದಲ್ಲಿ ಯಶಸ್ವಿಯಾಗ ಮುನ್ನಡೆಯುತ್ತಿರುವರು. ನಿಶ್ಶರ್ತ ಕ್ಷಮಾಪಣೆಯ ಭರವಸೆಯು ದೊರೆತಲ್ಲಿ ತಾವೆಲ್ಲರೂ ಶರಣು ಬರುವುದಾಗಿ ತಿಳಿಸಿದ ಒಂದು ಅನಾಮಧೇಯ ಪತ್ರವು ಅವರ ಕೈಸೇರಿತ್ತು. ಉದತವಾತಾದ ಭಯಂಕರ ದರೋಡೆ ಕೋರನಾದ ಮಾನಸಿಂಗನ ಪತ್ನಿಯು ವಿನೋಬಾರೊಡನೆ ಬಹುಕಾಲ ಮಾತಂಡಿದರೆಂದು ತಿಳಿದು ಬಂದಿದೆ. ಸುಮಾರು ೨೦೦ಕ್ಕೂ ಮಿಕ್ಕಿದ ದರೋಡೆಗಾರರು ಇದು ವರೆಗೆ ಶರಣು ಬಂದಿದ್ದಾರೆಂದೂ ಗೊತ್ತಾಗಿದೆ.

ಸಂಗೀತ ಪ್ರಚೋದನೆ

ಪಾಂಡಿಚೇರಿಯಲ್ಲಿ ನಡೆಸಿದ ಪ್ರಯೋಗದಿಂದ ಸಂಗೀತದ ಪ್ರಚೋದನೆಯನ್ನು ಪಡೆದ ಬತ್ತದ ಸಸಿಯು ಬೇಗನೆ ಚೆನ್ನಾಗಿ ಬೆಳೆಯುವುದೆಂದೂ ಇದರಿಂದ ಉತ್ಪಾದನೆಯು ಅಧಿಕವಾಗುವುದೆಂದೂ ತಿಳಿದು ಬಂದಿದೆ. ಇದೇ ರೀತಿಯ ಪ್ರಯೋಗವನ್ನು ನೆಲಕಡಲೆ, ಕಬ್ಬು ಮೊದಲಾದ ಇನ್ನಿತರ ಬೆಳೆಗಳಿಗೂ ಅನ್ವಯಿಸುವ ಪ್ರಯತ್ನ ನಡೆಸಲಾಗುವುದೆಂದು ಗೊತ್ತಾಗಿದೆ.

ವಿವಾಹ ಸಮಾರಂಭ— ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರ ಪುತ್ರ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ಟಿ, ಎಡ್ವಕೇಟ್ ಇವರ ಪುತ್ರಿ ಕುಮಾರಿ ಚಂದ್ರಲೇಖ ಇವರನ್ನು ಉಡುಪಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ತಾ. 20 ರಂದು ವಿಜೃಂಭಣೆಯಿಂದ ವಿವಾಹವಾದರು. ಈ ಸಮಾರಂಭಕ್ಕೆ ಅನೇಕ ಮಹಾನೀಯರನೇಕರು ಆಗಮಿಸಿದ್ದರು. ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆ, ಮಾಜಿ ಸಚಿವ ಶ್ರೀ ಬಿ. ಬಾಳಿಗ, ಜಸ್ಟೀಸ್ ಕೆ. ಯಸ್. ಹೆಗ್ಡೆ, ಮೊದಲಾದವರೂ ಉಪಸ್ಥಿತರಿದ್ದರು.

ಸ್ವೀಕಾರ— ಸುಪ್ರಸಿದ್ಧ ಪಿ. ವಿ. ಎಸ್. ಬೀಡಿಗಳ ತಯಾರಕರಾದ ಮಂಗಳೂರಿನ ಪಿ. ವಿ. ಎಸ್. ಬೀಡೀಸ್ ಪ್ರೈವೇಟ್ ಲಿಮಿಟೆಡ್ ಇವರ ತ್ರಿವರ್ಣರಂಜಿತ ಕೆಲಂಡರುಗಳನ್ನು ಸ್ವೀಕರಿಸಿದ್ದೇವೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S E.P. 63/60 (S. C. 397/58)

ಯುವರಾಜ ಹೆಗ್ಡೆ —ಅರ್ಜಿದಾರ.

K. ಜಗತ್ಪಾಲ ಕೊಂಡೆ, ಕಲ್ಲಾಜೆ ನಾಗರಾಜ ಕೊಂಡೆಯವರ ಮಗ, ಈಗಮತ್ತಿಲ ಗ್ರಾಮ, —ಎದ್ರಿ.

ಸದ್ರಿ ಎದ್ರಿಗೆ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:-

ಮಂಗಳೂರು ಸಬ್ ಕೋರ್ಟು O. S. 135/55ನೇ ದಾವೆಯಲ್ಲಿ ನಿಮ್ಮ ಲೆಕ್ಕಕ್ಕೆ ಡಿಪಾಜಿಟಿನಲ್ಲಿರುವ ಆ್ಯವಜು ಪೈಕಿ ರೂ. 450ನ್ನು ಮೇಲಿನ ಅಮಲ್‌ಜ್ಯಾರಿಯಲ್ಲಿ ಜಪ್ತು ಪಡಿಸಿದ ಬಾಬ್ತು ನಿಮ್ಮ ನೋಟೀಸಿನ ಬಗ್ಗೆ ತಾ. 3—6—60ಕ್ಕೆ ಇಟ್ಟಿರುವುದರಿಂದ ಆ ದಿವಸ ಹಾಜರಾಗಿ ಉದತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ ಹಾಜರಿ ವಾದಿಯಾಗಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/ M. Sadashiva Rao.

Vakil for Plaintiff.

ಪುತ್ತೂರು, ತಾ 5—5—60

‘ನವಯುಗ’ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸೋಣಾಗುತ್ತದೆ.

—ಮೆನೇಜರ್

ದಿ. ಕೆಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವ.

The Catholic Bank Limited, Shirva.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ, ಪಡಕೊಂಡ ಸಾಲವನ್ನು, ಕ್ರಮಪ್ರಕಾರ ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ, ವ, ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:- ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 9—6—’60ರ ವಳಗೆ ಬಿಡಿಸದಿದ್ದಲ್ಲಿ 11—6—’60ನೇ ಶನಿವಾರ, ಮಧ್ಯಾಹ್ನ ಗಂಟೆ 12ಕ್ಕೆ, ಯಾ, ನಮಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ, ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
35/100—16-1-59	ನೇಮು ಪೂಜಾರಿ N/o ಬೊಳ್ಳು ಪೂಜಾರಿ, ನಂಗೊಟ್ಟು, ಮಟ್ಟಾರ್ P.O. (S.K.)	67/-
35/530— 2-4-59	ವಿಕ್ಟರ್ ಸಲ್ಡಾನ S/o ಗಾಬ್ರಿಯೆಲ್ ಸಲ್ಡಾನ, ಮಂಚಕಲ್, ಶಿರ್ವ P.O. (S.K.)	175/-
35/714— 5-5-59	ಸಿಲ್ವೆಸ್ಟರ್ ಡಲ್ಮೇಡ S/o ಲುಜಾರ್ ಡಲ್ಮೇದ, ಕಂಜನ, ಪಿಲಾರ್ P.O. (S.K)	90/-
35/837—20-5-59	ಬಾಬು ಆಚಾರಿ S/o ರುಕ್ಕಯ್ಯ ಆಚಾರಿ, ಕೋಡು, ಶಿರ್ವ P.O (S.K.)	18/-
35/820—26-5-59	ಕೃಷ್ಣ ಪೂಜಾರಿ, S/o ಗುರುವ ಪೂಜಾರಿ, ಕಟ್ಟಿಂಗೇರಿ, ಹೊಸಮನೆ, ಮೂಡುಬೆಳ್ಳೆ P.O. (S.K)	40/-

Office of The Catholic Bank Ltd., Shirva, 21—5—60.

E. D'Cunha, Agent.

ತಮ್ಮನಿಗೆ ಓಲೆ—೬

ಜನತೆಯ ಜೀವನವೇ ಸಾಹಿತ್ಯ

ಸಾಹಿತ್ಯವು ಸಮಾಜವನ್ನು ಆಳಬಲ್ಲುದು; ಅಳಿಸಬಲ್ಲುದು; ಉತ್ಥಾನಪಥಕ್ಕೊಯ್ಯಬಹುದು; ಅಧಃಪತನಗೊಳಿಸಬಹುದು.

ಕಳೆದ ಪತ್ರದಲ್ಲಿ ಸಮಾಜಕ್ರಾಂತಿಗೆ ಸಾಹಿತ್ಯವೇ ಹೇತುವೆಂಬ ಅಭಿಪ್ರಾಯ ಹೊರಗೆಡಹಿದ್ದೇನೆ. ಅದೇ ರೀತಿಯಲ್ಲಿ ಸಮಾಜದ ಶಾಂತಿ, ಸುಖ ಮತ್ತು ಸ್ವಾತಂತ್ರ್ಯಭಾವಗಳಿಗೂ ಸಾಹಿತ್ಯವೇ ಕಾರಣವಾಗಿದೆ. ಕ್ರಾಂತಿಯ ಹೊಣೆಗಾರಿಕೆಯು ಸಾಹಿತ್ಯದ ಮೇಲಿರುವಷ್ಟೇ ಶಾಂತಿಯ ಉತ್ತರದಾಯಿತ್ವವೂ ಸಾಹಿತ್ಯದ ಮೇಲಿದೆ. ವಾಲ್ಮೀಕಿಯು ತನ್ನ ರಾಮಾಯಣದ ಮೂಲಕ ಅದೆಷ್ಟು ಕ್ರೌರ್ಯಾಂಧಕಾರಮಯ ಹೃದಯಗಳನ್ನು ನೋಡಲಿಲ್ಲ, ಅದೆಷ್ಟು ಮನೆಗಳಲ್ಲಿ ಸಂತೋಷ ಮತ್ತು ಶಾಂತಿಯ ಸಂದೇಶಗಳನ್ನು ಬೀರಲಿಲ್ಲ? 'ಈಸಬೇಕು, ಇದ್ದು ಜಯಿಸಬೇಕು' ಎಂದ ಪುರಂಧರ ದಾಸರು ಸಂಸಾರ ಬಂಧದಲ್ಲಿ ಅಸಾಧ್ಯವೇದನೆಯುಂಡ ಅದೆಷ್ಟು ಹತಾಶರಲ್ಲಿ ನವಪ್ರಾಣ ಸಂಚರಿಸುವಂತೆ ಮಾಡಲಿಲ್ಲ? ಹಿಂದೂ ಸಮಾಜದ ಆಧ್ಯಾತ್ಮಿಕ ಸಂಸ್ಕೃತಿ, ಧರ್ಮಭೀರುತನ, ಮತ್ತು ಅಹಿಂಸಾವಾದಗಳ ಪ್ರಕಾಶ ನಮ್ಮ ಸಾಹಿತ್ಯದಲ್ಲಿ ಗೋಚರಿಸುತ್ತದೆ. ಸಮರ್ಥ ರಾಮದಾಸ ಮೊದಲಾದ ಮಹಾರಾಷ್ಟ್ರ ಸಂತರ ಉಪದೇಶ ಮತ್ತು 'ಭೂಷಣ' ಮೊದಲಾದ ಕವಿಗಳ ಉತ್ತೇಜನಾಮಯ ಕೃತಿಗಳು ಮಹಾರಾಷ್ಟ್ರದ ಉತ್ಥಾನ ಕಾರ್ಯದಲ್ಲಿ ಬಹಳಷ್ಟು ಸಹಾಯಕವಾದುವು. ವೀರ ಕಥೆಗಳು ಆ ಕಾಲದಲ್ಲಿ ವೀರ ಭಾವಗಳನ್ನು ಹರಿಸಿದುವು. ಹಿಂದೀ ಸಾಹಿತ್ಯ ಸಾಮ್ರಾಟರಾದ ದಿ॥ ಮುನ್ಶಿ ಪ್ರೇಮಚಂದರ ಕಥೆ ಮತ್ತು ಕಾದಂಬರಿಗಳಲ್ಲಿ ಕೃಷಿಕರ ಸ್ಥಿತಿ ಸುಧಾರಣೆ, ಜಮೀನುದಾರಿ ಉನ್ಮೂಲನಗಳ ಮಿಂಚು ಹೊಳೆಯುತ್ತದೆ. ಇದೇ ರೀತಿಯಲ್ಲಿ ಪ್ರತಿಯೊಂದು ಭಾಷೆಯಲ್ಲೂ ಆಯಾ ಸಮಾಜದ ಕುಂದುಕೊರತೆಗಳ ಉಲ್ಲೇಖವಿರುವ ಸಾಹಿತ್ಯ ಸೃಷ್ಟಿಯಾಗುತ್ತದೆ.

ನಮ್ಮ ಅವ್ಯಕ್ತ ಭಾವಗಳನ್ನು ವ್ಯಕ್ತಗೊಳಿಸಿ ಸಾಹಿತ್ಯವು ನಮ್ಮ ಮೇಲೆ ಪ್ರಭಾವ ಬೀರುತ್ತದೆ. ನಮ್ಮವೇ ಆದ ವಿಚಾರಗಳು ಸಾಹಿತ್ಯದ ರೂಪದಲ್ಲಿ ಮೂರ್ತಿಮಂತವಾಗಿ ನಮಗೇನೇ ಮಾರ್ಗದರ್ಶಕವಾಗುತ್ತವೆ. ವಿಚಾರಗಳ ಗುಪ್ತಶಕ್ತಿಯನ್ನು ಒಂದುಸೇರಿಸಿ, ಅದನ್ನು ಸಾಹಿತ್ಯ ಕಾರ್ಯಕೃತಗೊಳಿಸುವುದು. ನಮ್ಮ ದೇಶದ ಭಾವಗಳನ್ನು ಜೀವಂತವಾಗಿರಿಸಿ, ನಮ್ಮ ಜನತೆಯ ವ್ಯಕ್ತಿತ್ವವನ್ನು ಸ್ಥಿರೀಕರಿಸುವುದೂ ಸಾಹಿತ್ಯವೇ. ಭಾರತದಲ್ಲಿ ಇಂದು ಇರುವ ಪರಿಸ್ಥಿತಿ, ತಮ್ಮ ಸನಾತನ ಧರ್ಮದ ಬಗ್ಗೆ ಜನತೆಯಲ್ಲಿರುವ ಅನಾಸಕ್ತಿಗಳಿಗೆ ವಿದೇಶೀಯ ಸಾಹಿತ್ಯಗಳ ಪ್ರಭಾವವೇ ಕಾರಣವಾಗಿದೆ. ಭಾರತೀಯ ವಿದೇಶನೀತಿಯು ಅದರ ಪ್ರಾಚೀನ ಶಾಂತಿ ಪ್ರಧಾನ ಸಾಹಿತ್ಯ ಫಲವಾಗಿದೆ. ಭೂದಾನ ಆಂದೋಲನವು ಸರ್ವೋದಯ ಸಾಹಿತ್ಯದಿಂದ ಅನುಪ್ರೇರಿತವಾಗಿದೆ.

'ಕತ್ತಿಗಿಂತ ಲೇಖನಿಯು ಶಕ್ತಿಶಾಲಿಯಾಗಿದೆ' ಎಂಬ ಉಕ್ತಿಯೇನೂ ಇಂದು ನಿನ್ನೆಯದಲ್ಲ. ಖಡ್ಗದಿಂದ ರೂಪಿಸಲ್ಪಟ್ಟ ಪರಿವರ್ತನೆಗಿಂತ ಸಾಹಿತ್ಯರೂಪದಿಂದ ಸಮಾಜದ ಮೇಲೆ ಮಾಡಿದ ಪರಿವರ್ತನೆಯು ಅಧಿಕ ಸ್ಥಾಯಿಯಾಗಿದೆ. ಇಂದು ನಮ್ಮಲ್ಲಿ ಪ್ರಚಲಿತವಿರುವ ಸೌಂದರ್ಯ ವಿಚಾರ, ಕಲೆಯ ಆದರ್ಶ, ಶಿಷ್ಟಾಚಾರ—ಎಲ್ಲವೂ ವಿದೇಶೀ ಸಾಹಿತ್ಯದಿಂದ ಪ್ರಭಾವಿತವಾಗಿರುವುದಲ್ಲವೆ? ಯೂನನ್ ದೇಶದ ಮೇಲೆ ರೋಮ್ ತನ್ನ ಅಧಿಕಾರವನ್ನೇನೋ ಯುದ್ಧರಂಗದಲ್ಲಿ ಗೆದ್ದು ಸ್ಥಾಪಿಸಿತು. ಆದರೆ, ಯೂನಾನಿಗಳು ತಮ್ಮ ಸಾಹಿತ್ಯದ ಮೂಲಕ ರೋಮನ್ನು ಮಾನಸಿಕವಾಗಿ ಗೆದ್ದುಕೊಂಡು ಅಖಂಡ ಯುರೋಪಿನಲ್ಲಿ ತಮ್ಮ ವಿಚಾರ ಮತ್ತು ಸಂಸ್ಕೃತಿಗಳನ್ನು ಹರಡಿಸಿದರು. ಪ್ರಾಚೀನ ಯೂನಾನಿನ ಸಾಮಾಜಿಕ ಸಂಸ್ಥೆಗಳು ಅಲ್ಲಿನ ತತ್ಕಾಲೀನ ಸಾಹಿತ್ಯದ ಪ್ರಭಾವವನ್ನು ಹೆಚ್ಚಿಸುತಿದ್ದುವು. ಯುರೋಪಿನಲ್ಲಿರುವ ಕಲೆಗಳೆಲ್ಲವೂ ಇಂದಿಗೂ ಯೂನಾನೀ ಆದರ್ಶಗಳನ್ನೇ ಹೊಂದಿಕೊಂಡು ಬೆಳೆಯುತ್ತಿವೆ. ನಮ್ಮ ಸಾಹಿತ್ಯವು ನಮ್ಮ ಮುಂದೆ ನಮ್ಮ ಜೀವನವನ್ನೇ ಮುಂದಿಟ್ಟು ಅದನ್ನು ಸುಧಾರಿಸಲು ನೆರವಾಗುತ್ತದೆ. ನಾವೊಂದು ಆದರ್ಶವನ್ನು ಆಧಾರವಾಗಿಟ್ಟುಕೊಂಡು ಮುಂದುವರಿಯುತ್ತೇವೆ. ಸಾಹಿತ್ಯವು ನಮ್ಮ ಮನಸ್ಸನ್ನು ಪ್ರಸನ್ನಗೊಳಿಸಿ, ನಮ್ಮ ಜೀವನದ ಭಾರವನ್ನು ಕಡಿಮೆಯಾಗಿಸುತ್ತದೆ. ಸಾಹಿತ್ಯದ ಅಭಾವವಿರುವಲ್ಲಿ ಜೀವನವೂ ಅಷ್ಟೊಂದು ರಮ್ಯವಾಗಿರುವುದಿಲ್ಲ.

ಸಾಹಿತ್ಯವು ಗುಪ್ತವಾಗಿ, ಸಾಮಾಜಿಕ ಸಂಘಟನೆ ಮತ್ತು ಜನತಾಜೀವನ ವರ್ಧನ ಕಾರ್ಯದಲ್ಲಿಯೂ ನೆರವಾಗಬಲ್ಲುದು. ನಾವು ನಮ್ಮ ವಿಚಾರಗಳನ್ನು ನಮ್ಮ ಅತ್ಯಮೂಲ್ಯ ಸಂಪತ್ತೆಂದು ಪರಿಭಾವಿಸಿ, ಅದನ್ನು ಗೌರವಿಸುತ್ತೇವೆ. ತನ್ನದೆಂಬುದನ್ನು ಗೌರವಿಸುವುದು ವೈಯಕ್ತಿಕ ಜೀವನ ಮತ್ತು ಸಾಮಾಜಿಕ ಸಂಘಟನೆಗೆ ಆಧಾರವಾಗಿದೆ. ಆಂಗ್ಲೇಯರಿಗೆ ಶೇಕ್ಸ್‌ಪಿಯರನ ಮೇಲೆ ತುಂಬ ಅಭಿಮಾನವಿದೆ. ಶೇಕ್ಸ್‌ಪಿಯರನೆದುರು ತಮ್ಮ ಸರ್ವ ಸಾಮ್ರಾಜ್ಯವನ್ನೂ ಕ್ಷುಲ್ಲಕವಾಗಿ ಕಾಣುತ್ತೇನೆ ಎಂದೊಬ್ಬ ಆಂಗ್ಲನು ಹೇಳಿದ್ದಾನೆ.

ಸಾಹಿತ್ಯವು ನಮ್ಮನ್ನು ಒಂದು ಸಂಸ್ಕೃತಿ ಮತ್ತು ಒಂದು ಸಮಾಜದ ಸೂತ್ರದಲ್ಲಿ ಕೋಯುತ್ತದೆ. ನಮ್ಮ ಸಾಹಿತ್ಯವಿರುವಂತೆಯೇ ನಮ್ಮ ಮನೋವೃತ್ತಿಗಳೂ ರೂಪಧರಿಸುತ್ತವೆ. ನಮ್ಮ ಮನೋವೃತ್ತಿಯನ್ನು ಹೊಂದಿಕೊಂಡೇ ನಮ್ಮ ಕಾರ್ಯಗಳು ಮುಂದುವರಿಯುತ್ತವೆ. 'ಕುಲವ ನಾಲಿಗೆಯು ರುಹುವುದು' ತಾನೆ? ಆದುದರಿಂದಲೇ "ನಿಜಭಾಷೆಯು ಉನ್ನತವಾದರೆ, ಎಲ್ಲವೂ ಉನ್ನತವಾದಂತೆ; ಭಾಷಾಭಿವೃದ್ಧಿಯೇ ಸರ್ವಾಭಿವೃದ್ಧಿಯ ಮೂಲ" ಎಂಬ ವಾದ ಮುಂದೆ ಬಂದಿದೆ.

ಹೀಗೆ ಸಾಹಿತ್ಯ ಮತ್ತು ಸಮಾಜದ ನಡುವೆ ಅತಿ ನಿಕಟ ಸಂಬಂಧವಿದೆ. ಸಮಾಜದ ಕುಂದು ಕೊರತೆಗಳನ್ನು ದೂರೀಕರಿಸಿ, ಸಮಾಜದಲ್ಲಿ ಧೈರ್ಯ ಮತ್ತು ಶಕ್ತಿ ಸಾಹಸಗಳನ್ನು ತುಂಬಿಸಿ, ಅದನ್ನು ಉನ್ನತಿಯದಾರಿಯತ್ತ ಕೊಂಡೊಯ್ಯಬಲ್ಲ ಏಕಮೇವ ಸಾಧನವೆಂದರೆ ಸಾಹಿತ್ಯ. ಆದುದರಿಂದಲೇ 'ಸಾಹಿತ್ಯ ಕಲಾ ವಿಹೀನನಾದವನು ಎರಡು ಕಾಲುಗಳ ಪಶು ಸಮಾನನು' ಎಂದು ಹೇಳುತ್ತಾರೆ.

—ಗೋರಾ.

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ನ.)

ಶ್ರೀ ರಾಮಾಶ್ವಮೇಧದ ರಸತರಂಗಗಳು— ಬರೆದವರು: ಶ್ರೀ ಎಮ್. ಲಕ್ಷ್ಮೀನಾರಾಯಣ ಆಳ್ವ. ಪ್ರಕಾಶಕರು: ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್, ಮಂಗಳೂರು, ೧. ದ. ಕ. ಪುಟಗಳು: xiii + ೧೩೩. ಬೆಲೆ: ಸಾಮಾನ್ಯ ಪ್ರತಿ: ೨-೨೫, ಉತ್ತಮ ಪ್ರತಿ: ರೂ. ೩-೦೦

ಆಧುನಿಕ ಕನ್ನಡ ಸಾಹಿತ್ಯವು ಗದ್ಯಮುಖವಾಗಿ ಪ್ರವಹಿಸುವುದಕ್ಕೆ ಮೂಲಕಾರಣವೆನಿಸಿದ ಮುದ್ದಣನ ರಾಮಾಶ್ವಮೇಧವು ನಿಜವಾಗಿಯೂ "ಮುಂತಿಲ್ಲ, ಪಿಂತಿಲ್ಲ" ಎಂದೆನಿಸುವ ಕೃತಿಯಾಗಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿರುವುದು. ಹಳೆಗನ್ನಡ—ಹೊಸಗನ್ನಡ ಭಾಷೆಗಳ ತಾಕಲಾಟದ ನಡುವೆ ಆತ್ಮಸಂತೋಷದಿಂದಾಗಿಯೇ ಶಬ್ದರೂಪಕ್ಕಿಳಿದುಬಂದ ರಾಮಾಶ್ವಮೇಧ ಕಥೆಯ ರಸಾಸ್ವಾದನೆಯಿಂದ ರಸಿಕರ ಹೃದಯವು ಪ್ರಫುಲ್ಲಿತವಾಗುವುದು. ಇಂತಹ ಅಮರ ಮತ್ತು ಅಮೋಘವೆನಿಸುವ ಕೃತಿಯ ಅಧ್ಯಯನಕ್ಕೆ ಮೂಲಗ್ರಂಥದ ಮೇಲಿನ ವಿಮರ್ಶೆಯು ಸಹಾಯಕವಾಗುವುದು. ಇತರೇತರ ಭಾಷೆಗಳಲ್ಲಿ ಒಂದು ಕೃತಿಯ ಮತ್ತು ಕವಿಯ ಮೇಲಣ ವಿಮರ್ಶಾ ಗ್ರಂಥಗಳು ಸಾಕಷ್ಟು ಹೊರ ಬಂದಿದ್ದರೂ ಕನ್ನಡವು ಮಾತ್ರ ಇದಕ್ಕೆ ಅಪವಾದವೆನಿಸಿದೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಕೃತಿಗಳ ದೀರ್ಘಾಧ್ಯಯನ ನಡೆಸಲು ನೆರವಾಗುವ ಸಹಾಯಕ ಗ್ರಂಥಗಳ ಕೊರತೆ ಕನ್ನಡದಲ್ಲಿದೆ. ಈ ಅಭಾವವನ್ನು ನೀಗಿಸಿ, ರಸಭರಿತ ಕೃತಿಗಳ ಪಠನ ಪಾಠನಗಳಿಂದ ದೊರೆಯಬಹುದಾದ ಬ್ರಹ್ಮಾನಂದ ಸಹೋದರವೆನಿಸುವ ಕಾವ್ಯರಸಾಮೃತಪಾನವು ಎಲ್ಲರಿಗೂ ಸಾಧ್ಯವೆನಿಸುವಂತೆಸಗುವ ಪ್ರಯತ್ನ ಸಾಗಬೇಕಾಗಿದೆ. ಖ್ಯಾತ ಕವಿ ಮುದ್ದಣನ ಮಹಾಮೇರು ಕೃತಿಯ ಮೇಲಿನ ವಿಮರ್ಶಾರೂಪವಾದ ನಾಲ್ಕು ಪ್ರಬಂಧಗಳ ಸಂಗ್ರಹವೇ ಮೇಲಿನ ಕೃತಿಯಾಗಿದೆ.

ಮುದ್ದಣನ ಕೃತಿಗಳನ್ನೇಕಚಿತ್ತದಿಂದ ಅಭ್ಯಸಿಸಿದ ಶ್ರೀ ಲಕ್ಷ್ಮೀನಾರಾಯಣ ಆಳ್ವರ ಈ ಪುಸ್ತಕದಲ್ಲಿ ಅವರೇ ಬರೆದಿರುವ 'ರಸಿಕ ಮುದ್ದಣ—ಮುಗುದೆ ಮನೋರಮೆ', 'ಮೂರು ಪಾತ್ರಗಳು', 'ಶೈಲಿ', 'ಕವಿ ಮತ್ತು ಕಾವ್ಯ' ಎಂಬ ನಾಲ್ಕು ವಿಮರ್ಶಾತ್ಮಕ ಲೇಖನಗಳಿವೆ. 'ಶ್ರೀ ರಾಮಾಶ್ವಮೇಧ'ದ ವೈಶಿಷ್ಟ್ಯವೆನಿಸಿದ ಮುದ್ದಣ—ಮನೋರಮೆಯರ ನಡುವಣ ಸರಸ ಸಂಭಾಷಣೆಯ ಭಾಗಗಳ ಮೇಲೆ ವಿಶೇಷ ದೃಷ್ಟಿ ಬೀರುವ ಪ್ರಯತ್ನವು ಮೊದಲನೆಯದರಲ್ಲಿ ನಡೆದಿದೆ. ಪಿತೃಸೇವಾ ಲಂಪಟನಾದ ರಾಮ, ಆದರ್ಶ ಸತಿ ಸೀತೆ ಮತ್ತು ಅನುಜಾನುವರ್ತಿ ಲಕ್ಷ್ಮಣರ ಪಾತ್ರಗಳ ಮೇಲೆ ಬೆಳಕು ಹರಿಸಿ, ಮುದ್ದಣನ ರಾಮನ ಮೇಲೆ ಅನೇಕ ವಿಮರ್ಶಕರು ಹೊರಿಸಿದ ಕಲಂಕವನ್ನು ತೊಡೆದೋಡಿಸುವ ಕೆಲಸ ಎರಡನೆಯದರಲ್ಲಿ ತೋರುತ್ತದೆ. ಕಾವ್ಯದ ಶೈಲಿಯ ಮೇಲಣ ವಿಮರ್ಶೆಯೆನಿಸುವ ಮೂರನೆಯ ಲೇಖನವು ಸುಸಂಗತವಾಗಿ ಸೋದಾಹರಣವಾಗಿ ಕೋಯಲ್ಪಟ್ಟಿದೆ. ಕವಿಯ ಜೀವನಸ್ಥಿತಿ ಮತ್ತು ಆತನ ಕಾವ್ಯ ಪ್ರಶಸ್ತಿಯನ್ನು ನಾಲ್ಕನೆಯದು ವಿವೇಚಿಸುತ್ತದೆ.

ಒಂದು ಕಾವ್ಯ ಇಲ್ಲವೇ ಗ್ರಂಥವನ್ನು ಭಿನ್ನ ಭಿನ್ನ ವಾಚಕರು ಅಥವಾ ವಿದ್ವಾಂಸರು ಓದುವಾಗ ಇಲ್ಲವೇ ಅಭ್ಯಸಿಸುವಾಗ, ಅವರವರ ವಿಚಾರ ಲಹರಿಗನುಗುಣವಾಗಿ ವ್ಯತಿರಿಕ್ತಾಭಿಪ್ರಾಯವು ಪ್ರಕಟವಾಗುವುದು ಸಾಮಾನ್ಯವೇ ಆಗಿದೆ. ಆದರೂ ಕವಿಯ ಹಿರಿಮೆ ಮತ್ತು ಕಾವ್ಯದ ಗರಿಮೆಗೆ ಮಾತ್ರ ಹೆಚ್ಚಿನ ಕೊರತೆಯಾಗಲಾರದು. 'ನಿರ್ದೋಷಿ ನಿರ್ಮಲೆ ನಿರ್ಮಲನಪ್ಪ ಫಣಿಯೆಂತಲಿತೆ ಸೀತೆಯ ನುಳಿದು ಸೊಗಂ ಬಾಳ್ವೆಂ' ಎಂಬ 'ವಿಚಾರ ಪರ'ನಾದ ರಾಮನ ಮೇಲೆ ಅನ್ಯ ವಿಮರ್ಶಕರು ಹಚ್ಚಿದ ಕಲಂಕವನ್ನು ಆಮೂಲಾಗ್ರ ಜಾಡಿಸಿದ ಯಶಸ್ಸು ಶ್ರೀ ಆಳ್ವರಿಗೆ ಸೇರಿದೆ. 'ರಾಮಾಶ್ವಮೇಧ'ದ ಅಧ್ಯಯನಗಾರರಿಗೆ ಈ ವಿಮರ್ಶಾತ್ಮಕ ಗ್ರಂಥವು ಸೂಕ್ತ ಮಾರ್ಗದರ್ಶನ ಮಾಡಲು ಸಮರ್ಥವಾಗಿದೆ. ಕನ್ನಡ ಗುಡಿಯ ಅನುಭವಿಕ ಸೇವಕರಾದ ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಮುನ್ನುಡಿಯ ಕುಂಕುಮವಿಟ್ಟು ಮಧುರ ಕೃತಿಯನ್ನು ಸ್ವಾಗತಿಸಲು ಬಿರುದು ಬಾವಲಿಗಳನ್ನು ನಮಗೆ ಒದಗಿಸಿಕೊಟ್ಟಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ವಿಮರ್ಶಾತ್ಮಕ ಕೃತಿಗಳು ಅಧಿಕಾಧಿಕವಾಗಿ ಬೆಳೆದು ಬರಲು ಈ ಗ್ರಂಥವು ಪ್ರೇರಕವಾಗಲಿ.

ದೇಶಭಕ್ತ ಕಾರ್ನಾಡ್ ಸದಾಶಿವ ರಾಯರ ಜೀವನ ಚರಿತ್ರೆ—ಪ್ರಕಾಶಕರು: ಸರಸ್ವತಿ ಕಾರ್ಯಾಲಯ, ಅರಳೀಪೇಟೆ, ಬೆಂಗಳೂರು ೨. ಪುಟಗಳು: ೫೨. ಬೆಲೆ. ರೂ. ೦—೫೦.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ದಕ್ಷಿಣ ಕನ್ನಡದ ಜನತೆಯಲ್ಲಿ ಕೆಚ್ಚಿನ ಹೊನಲನ್ನು ಹರಿಸಿದ ಕಾರ್ನಾಡು ಸದಾಶಿವರಾಯರ ಹೆಸರನ್ನು ಜನವರಿಯ ಕಾಂಗ್ರೆಸ್ ಅಧಿವೇಶನದ ಸಭಾಂಗಣಕ್ಕೆ ಇಡಲಾಯಿತು. ಆ ಸಂದರ್ಭದಲ್ಲಿ ಪ್ರಕಟವಾದ ಈ ಕಿರುಹೊತ್ತಿಗೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸದಾಶಿವರಾಯರ ಜೀವನಚರಿತ್ರೆಯನ್ನು ಸಂಕ್ಷಿಪ್ತರೂಪದಲ್ಲಿ ಕೊಡಲಾಗಿದೆ. ಜ್ಞಾನೇಚ್ಛುಗಳು ಇದರ ಸಹಾಯವನ್ನು ಅವಶ್ಯ ಪಡೆದುಕೊಳ್ಳಬಹುದು.

—ಗೋರಾ

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ ಕೆ. ಹೊನ್ನಯ್ಯ ಶೆಟ್ಟರ
ಮುಗುಳು
ದಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ.
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ದೇಶ ಮತ್ತು ರಾಜಕೀಯ

ಪಾಕಿಸ್ತಾನ ಆಕ್ರಮಿಸಿಕೊಂಡ ಕಾಶ್ಮೀರದ ಭೂಭಾಗ— ಗಿಲಜತ್

ಕಾಶ್ಮೀರದ ಪ್ರಾಕೃತಿಕ ಸೌಂದರ್ಯವೇ ಅದನ್ನು ಅಶಾಂತಿಯ ಮಡುವಿನಲ್ಲಿ ಮುಳುಗಿಸಿದೆ.

"ಕಾಶ್ಮೀರವು ಅನಂತ ಐಶ್ವರ್ಯದಿಂದ ತುಂಬಿದೆ. ಅದು ಕಾಶ್ಮೀರದ ಕಣ ಕಣಗಳಲ್ಲೂ ಎದ್ದು ಕಾಣುತ್ತಿದೆ. ಹಚ್ಚ ಹಸುರಿನ ಮರಗಳಿಂದ ತುಂಬಿದ, ರಮ್ಯ ಪ್ರದೇಶವಾಗಿರುವ, ನೀಲಿ ವರ್ಣದ ಪ್ರಪಾತಗಳಿಂದ ಕೂಡಿದ, ಹಿಮಪರ್ವತ ಶ್ರೇಣಿ ಮತ್ತು ತಂಗಾಳಿಯನ್ನು ಎಂದೆಂದೂ ಸೂಸುತ್ತಿರುವ ಈ ಪ್ರದೇಶದ ಸೌಂದರ್ಯ ಅದ್ಭುತವಾಗಿದೆ. ವರ್ಣನಾತೀತವಾಗಿದೆ." ಎಂದು ಫ್ರಾನ್ಸಿನ ಸುಪ್ರಸಿದ್ಧ ವಿದ್ವಾಂಸ ಮೂನ್ಸ ಸ್ಯಪೂಶರ್ ಉದ್ಗರಿಸಿರುವರು.

ಆದರೆ ಕಾಶ್ಮೀರವು ಕೇವಲ ಕಲೆ ಮತ್ತು ಸೌಂದರ್ಯ ಉಪಾಸಕರನ್ನು ಮಾತ್ರ ತನ್ನೆಡೆಗೆ ಆಕರ್ಷಿಸಿದೆಯೆಂದು ತಿಳಿಯಬೇಡಿರಿ. ಶುಷ್ಕ ಹೃದಯಹೀನ ರಾಜನೀತಿಜ್ಞರನ್ನು ಅದು ತನ್ನೆಡೆಗೆ ಸೆಳೆದಿದೆ. ಇಂದು ಕಾಶ್ಮೀರದ ಮೇಲೆ ಬೃಹತ್ ಜಾಗತಿಕ ರಾಷ್ಟ್ರಗಳು ಕಣ್ಣಿಟ್ಟಿರುವುದರಿಂದಲೆ ಜಾಗತಿಕ ಸಂಸ್ಥೆ ಈ ಸಮಸ್ಯೆಯನ್ನು ಬಿಡಿಸಲು ಅಸಮರ್ಥವಾಗಿದೆ. ಕಾಶ್ಮೀರದ ಪ್ರಾಕೃತಿಕ ಸೌಂದರ್ಯವು ಅದನ್ನು ಅಶಾಂತಿಯ ಮಡುವಿನಲ್ಲಿ ಮುಳುಗಿಸಿದೆ. ಅದರ ನಿವಾಸಿಗಳು ದುರ್ದಿನವನ್ನೆ ಕಾಣುತ್ತಿರುವರು. ಕಲಾಕಾರರ ಕುಂಚದಿಂದ ಬೆಳಗಬೇಕಾಗಿದ್ದ ಈ ಪ್ರದೇಶವಿಂದು ಸೈನಿಕರ ಬೂಟು, ಭರ್ಜಿ, ಮೆಶೀನ್‌ಗನ್ನುಗಳಿಂದ ಬೆಳಗುತ್ತಿದೆ. ರಶಿಯಾ ಅಫಗಾನಿಸ್ತಾನ, ಚೀನ ಮತ್ತು ಪಾಕಿಸ್ತಾನ ಈ ಭಾಗದ ಮೇಲೆ ಕಣ್ಣಿಟ್ಟಿವೆ.

ಕಾಶ್ಮೀರದ ಮಹತ್ವ ಭಾರತ ವಿಭಜನೆಯಾದೊಡನೆ ತೋರಿಬಂದಿತು. ಆಗ ಪಾಕ್ ಅಧಿಕಾರಿಗಳು ಅದರಮೇಲೆ 'ಕಬಾಯಲಿ' ಸೈನಿಕರಿಂದ ಆಕ್ರಮಣವನ್ನು ನಡೆಸಿದರು. ಹೂ ಹಣ್ಣುಗಳಿಂದ ತುಂಬಿದ ದೇಶದಲ್ಲಿಂದು ರಕ್ತದಹೊಳೆ ಹರಿಯಿತು. ಭಾರತೀಯ ಮಹಾಸೈನಿಕರ ಸಾಹಸದಿಂದ ಪಾಕಿಸ್ತಾನ್ ಸೈನ್ಯ ಹಿಮ್ಮೆಟ್ಟಿತು. ಆದರೂ ಕಾಶ್ಮೀರದ ಒಂದು ಚಿಕ್ಕ ಭಾಗವನ್ನು ಪಾಕಿಸ್ತಾನವಿದುವರೆಗೂ ವಶಪಡಿಸಿಕೊಂಡಿದೆ. ಶಾಂತಿ ಘೋರಣೆಯ ಭಾರತ ಈ ಸಮಸ್ಯೆಯನ್ನು ಯುಕ್ತ ರಾಷ್ಟ್ರ ಸಂಘಕ್ಕೊಯ್ದಿತು. ಬಲಶಾಲಿ ರಾಷ್ಟ್ರಗಳು ಈ ಸಂದರ್ಭವನ್ನುಪಯೋಗಿಸಿಕೊಳ್ಳುತ್ತಿರುವುದರಿಂದಲೆ ಅದು ಇನ್ನೂ ಇತ್ಯರ್ಥಗೊಂಡಿಲ್ಲ.

ಪಾಕಿಸ್ತಾನ ಆಕ್ರಮಿಸಿದ ಭಾಗದಲ್ಲಿ ಗಿಲಜತ್‌ಯಿದೆ. ಕಾಶ್ಮೀರದಲ್ಲಿ ಚೆಲುವಿನ ದೃಶ್ಯಗಳು ಇಲ್ಲಿ ಇವೆ. ಆದ್ದರಿಂದಲೇ ಪಾಕಿಸ್ತಾನ ಅದನ್ನು ಬಿಟ್ಟುಕೊಡುವ ಸ್ಥಿತಿಯಲ್ಲಿಲ್ಲ. ಅದು ತನ್ನ ಸಂಕಲ್ಪ ಪೂರ್ತಿಗಾಗಿಯೆ ಸೈನಿಕ ಒಪ್ಪಂದಕ್ಕೆ ಸೇರಿದೆ. ಆದುದರಿಂದಲೇ ಗಿಲ್‌ಜತನ ಸೌಂದರ್ಯ ಹಿಂದಿನಷ್ಟು ಉಳಿದಿಲ್ಲ. ಅದೀಗ ಸೈನಿಕರ ಠಾಣೆಯಾಗಿರುವುದೇ ಅದಕ್ಕೆ ಕಾರಣವಾಗಿದೆ.

ಗಿಲಜತ್ ಸಾಧಾರಣ ಅಫಘಾನಿಸ್ತಾನದಿಂದ ೫೦ ಕಿಲೊಮೀಟರ್ ದೂರದಲ್ಲಿದೆ. ಪಾಕಿಸ್ತಾನದ ವಾಯುವ್ಯ ಗಡಿಯು ಈ ಬದಿಯಲ್ಲಿಯಿದೆ. ಅದರ ಪೂರ್ವದಲ್ಲಿ ಯುದ್ಧ ವಿರಾಮ ರೇಖೆಯಿದೆ. ಅದರ ಸಮನಾಂತರದಲ್ಲಿ ಭಾರತವಿದೆ. ಮತ್ತು ಅದರ ಉತ್ತರದಲ್ಲಿ ಚೀನದ ಪರ್ವತೀಯ ಪ್ರದೇಶವಿದೆ. ರಶ್ಯಾದ ತಾಜಕಿಸ್ತಾನವು ಅದರ ಸಮೀಪದಲ್ಲಿದೆ.

ಗಿಲಜತನ್ನು ಒಂದು ರಸ್ತೆಯ ಮೂಲಕವಾಗಿ ಚಿತ್ರಾಲಿನ ಪರ್ವತಪ್ರದೇಶಕ್ಕೆ ಸೇರಿಸಲಾಗಿದೆ. ಈ ರಸ್ತೆ ಬಹಳ ಹಳೆಯದಾಗಿದೆ. ಅದರ ಮಧ್ಯದಲ್ಲಿ ಸುಂದರ ಪರ್ವತಾವಳಿಗಳಿವೆ. ಅದು ೧೨,೩೦೦ ಅಡಿ ಎತ್ತರವಾಗಿದೆ. ಗಿಲ್‌ಜತನ ಕಣಿವೆ ಮೂಲಕವಾಗಿ ಭಾರತಕ್ಕೆ ಬೇರೆ ದೇಶಗಳನ್ನು ಜೋಡಿಸಲಾಗಿದೆ. ಚೀನಾದಿಂದ ಫಾಹಿಯಾನ್ ಮತ್ತು ಹ್ಯೂಯಾನ್ ಸಾಂಗ ಭಾರತ ಪ್ರವೇಶವನ್ನು ಮಾಡಿದ್ದರು- ಈ ದಾರಿಯಿಂದಲೆ.

ಗಿಲಜತನ ಮೇಲೆನಿಂತ ಸಿಪಾಯಿಗಳ ಬಂದೂಕು ಪೂರ್ವ ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಪ್ರತಿಧ್ವನಿಸುವಷ್ಟು ಸಮರ್ಥವಾಗಿದೆ. ಗಿಲಜತ ಹಿಮಾಲಯ ದಂತೆ ಅಪರಾಜಿತವಾಗಿದೆ.

ಗಿಲಜತ ಇತಿಹಾಸದಿಂದ ಕೆಲವು ವಿಚಾರಗಳು ತಿಳಿದುಬರುವವು. ನೂರಾರು ವರ್ಷಗಳ ಹಿಂದೆ 'ತಾರಕನ್' ರಾಜರು ಇಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಅವರು ಬಲಹೀನರಾದಾಗ ವಿದೇಶಿಯರು ಅದನ್ನು ಹಾಳುಗೆಡಹಿದರು. ಸಿಕ್ಕರೂ ಇಲ್ಲಿ ರಾಜ್ಯಭಾರ ನಡೆಸುತ್ತಿದ್ದರು. ಆದರೆ ಸ್ವಲ್ಪ ಸಮಯವು ಕಳೆದ ಬಳಿಕ ಅಂದರೆ ಭಾರತವು ಬ್ರಿಟಿಷರ ವಶವಾದನಂತರ ಗಿಲಜತ್‌ನಿಂದ ಕೂಡಿದ ಕಾಶ್ಮೀರವು ಅವರ ಕೈವಶವಾಯಿತು. ಅವರು ಅದನ್ನು ಮಹಾರಾಜ ಗುಲಾಬಸಿಂಹನಿಗೆ ೭೫ಲಕ್ಷ ರೂಪಾಯಿಗೆ ಮಾರಿದರು. ಲೋರ್ಡ ಹಾರ್ಡಿಂಗನಕಾಲದಲ್ಲಿ ಈ ವಿಕ್ರಯವು ಆಯಿತು. ಬ್ರಿಟಿಷರು ಅಲ್ಲಿನ ಸೌಂದರ್ಯದಿಂದ ವಂಚಿತರಾಗಿರುವರೆಂಬುದು ಇದರ ಅಭಿಪ್ರಾಯವಲ್ಲ. ಆದ್ದರಿಂದ ಅವರಲ್ಲಿ 'ಗಿಲ್‌ಜತ್ ಏಜನ್ಸಿ'ಯನ್ನು ಸ್ಥಾಪಿಸಿದರು. ರಶ್ಯಾದ ದೃಷ್ಟಿ ಈ ಪ್ರದೇಶದ ಮೇಲೆ ಬೀಳದಿರುವಂತೆ ಅವರು ಚತುರ ಅಧಿಕಾರಿಗಳನ್ನು ಅಲ್ಲಿ ನೇಮಿಸಿದರು. ತಮ್ಮ ಸಂಶಯ ದೂರವಾಗುವಂತೆ ಸಮಯ ಸಂದರ್ಭಗಳನ್ನು ನೋಡಿ ರಶ್ಯಾದ ಕುದೃಷ್ಟಿ ಕಾಶ್ಮೀರದ ಮೇಲೆ ಬಿದ್ದಿದೆಯೆಂದು ಅಪಪ್ರಚಾರಮಾಡುತ್ತಿದ್ದರು.

ಹಾಗಿದ್ದರೂ ಅವರೇಕೆ ಆ ಪ್ರದೇಶವನ್ನು ಮಾರಿದರೆಂದು ಹೇಳುವುದು ಕಷ್ಟವಾಗಿದೆ. ಹೀಗೆ ಅವರು ತಮ್ಮ ಚಾತುರ್ಯವನ್ನು ಆಗಾಗ್ಗೆ ಪ್ರದರ್ಶಿಸುತ್ತಿದ್ದರು.

ಕಾಶ್ಮೀರದಲ್ಲಿ ಬಹುಸಂಖ್ಯಾಕರು ಮುಸ್ಲಿಮರಾಗಿದ್ದರೂ, ಗಿಲಜತ್ ಬಹುಭಾಷಿ ಜನರ ನೆಲೆವೀಡಾಗಿದೆ. ಅವರನ್ನು 'ದರ್ದ' ಯೆಂದು ಕರೆಯುತ್ತಾರೆ, ಅವರಲ್ಲಿ ಹೆಚ್ಚಿನವರು ಶಿಯಾ ಸಂಪ್ರದಾಯದವರಾಗಿದ್ದಾರೆ ಈ ಮುಸ್ಲಿಮರ ಪೂರ್ವಜರು ಹಿಂದೂಗಳೇ ಆಗಿದ್ದರೆಂದು ಈಗ ಸಿದ್ಧವಾಗಿದೆ ಕಾಶ್ಮೀರ ಹಿಂದುಗಳದ್ದೇ ಆದ ದಿನವೊಂದಿತ್ತು. ಕಾಲಾನಂತರದಲ್ಲಿ ವಿದೇಶಿ ಆಕ್ರಮಣಗಾರರ ಪ್ರಭಾವದಿಂದ ಹೀಗಾಯಿತು. ಆದ್ದರಿಂದಲೆ ಈಗ ಕಾಶ್ಮೀರದಲ್ಲಿ ಮುಸಲ್ಮಾನರು ತುಂಬಿದ್ದಾರೆ.

"ಅನೇಕ ವರ್ಷಗಳ ವರೆಗೆ ಧರ್ಮ ಪರಿವರ್ತನವಾದುತ್ತಿದ್ದುದರ ಪರಿಣಾಮವಾಗಿ ನೂರಕ್ಕೆ ೯೫ ಜನರಷ್ಟು ಇಲ್ಲಿ ಮುಸ್ಲಿಮರಾದರು, ಆದರೂ ಅವರು ಪ್ರಾಚೀನ ಹಿಂದೂ ಪದ್ಧತಿಗಳನ್ನೆ ಅನುಸರಿಸುತ್ತಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಕಾಶ್ಮೀರದ ಹಿಂದೂ ರಾಜನಿಗೆ ಈ ವಿಚಾರ ತಿಳಿಯಿತು. ಮಾತ್ರವಲ್ಲ ಮುಸ್ಲಿಮರು ಪುನಃ ಹಿಂದೂ ಮತವನ್ನು ಸೇರುವ ಲವಲವಿಕೆಯುಳ್ಳವರಾಗಿರುವರೆಂಬ ವಿಚಾರ ಆ ರಾಜನಿಗೆ ಜ್ಞಾತವಾದೊಡನೆ ಆತನು ಕಾಶಿಯ ಹಿಂದೂ ಪಂಡಿತರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದನು. ಪಂಡಿತರು ಅಂತಹ ಜಾತೀಯ ಪರಿವರ್ತನೆ ಅಸಾಧ್ಯವೆಂದು ತಿಳಿಸಿದುದರಿಂದಲೆ ಇಂದು ಅಲ್ಲಿ ಸಂಖ್ಯೆಯಲ್ಲಿ ಹಿಂದೂಗಳು ಕಡಿಮೆಯಾಗಿದ್ದಾರೆ"ಂದು ಭಾರತ ಪ್ರಧಾನಿ ಶ್ರೀ ಜವಾಹರಲಾಲ ನೆಹರು ತನ್ನ 'ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕದಲ್ಲಿ ಬರೆದಿರುವರು.

ಬ್ರಿಟಿಷರು ಕಾಶ್ಮೀರದ ಮಹತ್ವ ತಿಳಿದಿರುವುದರಿಂದಲೆ ಕಾಶ್ಮೀರದಲ್ಲಿ ಆಂತರಿಕ ಅಶಾಂತಿಯಿದೆಯೆಂದು ಹೇಳಿ ಅಲ್ಲಿನ ರಾಜನನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡರು. ಈ ಉದ್ದೇಶ ಸಾಧನೆಗಾಗಿ ಅದನ್ನು ಮುಸಲ್ಮಾನ ರಾಜರಿಗೆ ಮಾರುದು ಅಸಾಧ್ಯವಾಗಿತ್ತು. ಕಾಶ್ಮೀರದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿರುವುದರಿಂದಲೆ ಅವರು ಹಿಂದೂ ಅರಸನಿಗೆ ಪಟ್ಟಕಟ್ಟಿದ್ದರು. ಈಸಂದರ್ಭ ಬಂದಾಗ ರಾಜನನ್ನು ಅವರು ಅತ್ಯಾಚಾರಿ ಮತ್ತು ಮುಸಲ್ಮಾನರನ್ನು ನಾಶಪಡಿಸುವವನೆಂದು ಹೇಳಲು ಹಿಂಜರಿಯುತ್ತಿರಲಿಲ್ಲ. ಕಾಶ್ಮೀರದಲ್ಲಿ ಹಿಂದೂ ರಾಜರ ಆಳ್ವಿಕೆಯಿದ್ದುದರಿಂದ ಅಲ್ಲಿನ ಮುಸಲ್ಮಾನರು ತಾಜಕಿಸ್ತಾನ, ತುರ್ಕಿಸ್ತಾನ ಮತ್ತು ಅಫಗಾನಿಸ್ತಾನದ ಮುಸ್ಲಿಮರೊಂದಿಗೆ ಸೇರುವುದು ತೀರಾ ಅಸಾಧ್ಯವಾಗಿದೆ.



ಗಿಲಜತ್‌ನ ಪೂರ್ವದಲ್ಲಿ ಯುದ್ಧವಿರಾಮ ರೇಖೆಯ ದೃಶ್ಯ. ಇಲ್ಲಿ ರಕ್ಷಣಾಗಾರರು ಹಿಮದ ತಣ್ಣಗಿನ ಹವೆಯಲ್ಲಿ ಜೀವಿಸಿ ದೇಶಕ್ಕಾಗಿ ಕರ್ತವ್ಯವನ್ನು ನಿರ್ವಹಿಸುತ್ತಿರುವರು.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ತೆಯ

ದಿ. ಹರಿದಾಸ ರಾಯರು

ಸಾಹಿತ್ಯಕ್ಷೇತ್ರದಲ್ಲಿ ಅತ್ಯಲ್ಪಕಾಲದಲ್ಲಿ ಅತ್ಯದ್ಭುತ ಕಾರ್ಯ ಸಾಧಿಸಿದವರು ನಡುಹರೆಯದಲ್ಲೇ ನಮ್ಮನ್ನಗಲಿದರು.

ಂಡೆ ಪೇಟೆಯತ್ತ ಹೋಗಿರುವ. ಬ ಗ ಎಂದಿನಂತೆ ಕಣ್ಣುಹಂಪಲ ತ ಬರುತ್ತಲೂ ಕೈಚೀಲದಲ್ಲಿ ಇಣಕು ಲಗುಬಗೆಯಿಂದ ತೊಳೆ ತೆಗೆದು ಹಾಕಬೇಕು. ರಸಭರಿತವಾದ ....ಬಾಯಲ್ಲಿ ನೀರೂರಿ ಎಳೆ ಮಕ್ಕ ಕಂಚಲತೆಯಿಂದ ಕಿಟಿಕಿ ಬಾಗಿಲುಗ ಹತ್ತಾರುಸಲ ನೋಡಿರಬಹುದು. ೀ ಬರಲಿಲ್ಲ. ಏಕೆ ತಡವೋ. ಒಂದು ಟ್ಟಿ ಔಷಧ....ಕಾಯಿಲೆಯಪ್ಪಿಹಾಸಿಗೆ ದಲೂ ಕತ್ತು ಚಾಚಿ ಹತ್ತಿ ಬಾಗಿಲ ಕಿಗೆ ಕಣ್ಣು ಹಾಯಿಸಿರಬಹುದು. ಕತಿ— ಮಕ್ಕಳ ಆತುರದ ನಿರೀಕ್ಷಣೆ. ೩......

ವರು ಆಶಾಪೂರ್ಣ ನೇತ್ರದಿಂದ ಎ ು ನೋಡುತ್ತಿದ್ದ ಆ ವ್ಯಕ್ತಿ ಬರಲಿಲ್ಲ. ೀಟರದ ರಾಕ್ಷಸ ಚಕ್ರಗಳ ಕೆಳಗೆ ಜಜ್ಜಿ ಹೋಗಿದ್ದ. ಆತನ ರಕ್ತಮಯ ಜ್ಜಗುಜ್ಜಾದ ಕಳೇಬರ ಬೀದಿಯ ದಂ ತೂರಿ ಬಿದ್ದಿತ್ತು.

ಅದೃಷ್ಟದ ಎಂಥ ಕ್ರೂರ ಶಾಸನ. ರ್ಯಲೀಲೆ!

ಹರಿದಾಸ!

ನಡು ನಿಲುವಿನ ಆ ತೆಳು ಮೈ ವ್ಯಕ್ತಿ, ಂದಹಾಸದಿಂದ ತೊಳಗುವ ೖಕಂಗಳು, ಂತಿಯಿಂದ ಬೆಳಗುವ ೖವಿಶಾಲವಾದ ಸಲು, ಇದೀಗ ಮಾಗಿದ ಮಾಕಂದದ ್ದದ ಕೆನ್ನೆಗಳು, ಸೌಜನ್ಯಸೂಚಕ ೀಟ, ಗೌರವರ್ಣ, ಆ ಬಲು ಸುಂದರ ಖ........

ಅವರ ಮಾತು ಮುತ್ತಿನ ಹಾರದಂತೆ- ನ, ಬೆಳಗಿನ ೖಜಾವದ ಕ್ಷಿತಿಜದಂತೆ. ದಯ,ಬಿತ್ತರದ ಬೆಳ್ದಿಂಗಳಂತೆ. ವ್ಯಕ್ತಿ ಪರಾಗಸ್ತಿತುಂಬಿಕೊಂಡ ಅರಳು ಮೊಗ್ಗಿ ತೆ. ಜೀವನದ ಘೋರ ವಿಷಮತೆಗಳ ಥೈ ನಿಂತು ಧ್ಯೇಯದ ಉಪಾಸಕರಾಗಿ ೖ ವ್ಯಕ್ತಿತ್ವ ಗಳಿಸುವವರು' ವಿರಳ. ರುಣ್ಯದಲ್ಲಿಯೇ ಬದುಕಿನ ಅನುಭವ ಗಳನ್ನು ಮಾಗಿಸಿಕೊಂಡು ಗರಲವರ್ಷು ಒದಲ್ಲಿಯೂ ಅಧ್ಯಾಯನದ ವಾಹಿನಿಯ ನ್ನು ಕಂಡು ಅನಂತ ತಾಪ-ಶಾಪಗಳಿಗೆಡೆ ಗೊಟ್ಟು ಚಿನ್ನ ಬಾಳನ್ನು ಬದುಕುವವ ರು ತೀರ ವಿರಳ. ಇಂಥ ಕೀರವಿರಳರಲ್ಲಿ ಹರಿದಾಸರಾಯರೊಬ್ಬರಾಗಿದ್ದರೆಂದರೆ ಅ ತ್ಯುಕ್ತಿಯೇನೂ ಆಗದು.

ತೆಂಗುಕಂಗುಗಳ ಬನದಿಂದೊಪ್ಪುವ, ಕಡಲಿನ ಭವ್ಯ ಸೌಂದರ್ಯದಿಂದ ಮೆರೆ ಯುವ ತೆಂಕಣನಾಡಿನ ಪ್ರಕೃತಿ ವೈಭವ ದಲ್ಲಿ ಹರಿದಾಸರು ಬೆಳೆದರು. ಚಿಕ್ಕಂದಿ ನಲ್ಲಿ ಉದಯಾಸ್ತ ರವಿಯ ಹೊನ್ನ ಕಾಂ ತಿಯಲ್ಲಿ ಮಿಲಮಿಲಿಸುವ ಭತ್ತದ ಮಡಿ ಗಳನ್ನು, ತೆಂಗಿನ ನಳನಳಿಸುವ ಗರಿಗ ಳನ್ನು, ಜೋಗುಳವಾಡುವ ಕಡಲ ತೆರೆಗ ಳನ್ನು, ಗಿರಿ-ಘಟ್ಟ ತೊರೆ-ಕೆರೆಗಳ ಚೆಲು ವನ್ನು ದಿನನಿತ್ಯ ಕಾಣುವ ಸೌಭಾಗ್ಯವ ನ್ನವರು ಪಡೆದು ಬಂದಿದ್ದರೇ ನೋ ನಿಜ. ಆದರೆ ನಿಸರ್ಗದ ರೂಪರಾಶಿ ಯ ಖುಡಿಯಲ್ಲಿ ನಲಿದಾಡಿ ತಣಿಯಬೇ ಕೆಂದು ಹಂಬಲಿಸುವ ಅವರ ಚಿತ್ತ, ಹೃ ದಯಗಳನ್ನು ಕದಡಿಸುವ ಕಡು ಬಡ ತನವೂ ಅವರ ಪಾಲಿಗಿತ್ತೆಂಬುದನ್ನು ಮ ರೆಯುವಂತಿಲ್ಲ. ಅಂತೆಯೆ ಚರಿತಾರ್ಥ ಸಾಗಿಸಲು ವೃತ್ತಿಯೊಂದನ್ನು ಹುಡುಕು ತ್ತಾ ತಾಯ್ನೆಲವನ್ನು ಬಿಟ್ಟು ಅವರು ಉತ್ತರ ಕರ್ನಾಟಕಕ್ಕೆ ಬಂ ದರು. ಕಳೆದ ಹಲವಾರು ವರ್ಷ ಗಳಿಂದ ಉತ್ತರ ಕರ್ಣಾಟಕದಲ್ಲಿ ನೆಲೆಸಿ ಪತ್ರಿಕೋದ್ಯಮಿಯಾಗಿ ಸಾಹಿತಿಯಾಗಿ ಕ ನ್ನಡದ ಸಾಂಸ್ಕೃತಿಕ ಜೀವನಕ್ಕೆ ಅವರು ಸಲ್ಲಿಸಿದಸೇವೆಯು ಅತ್ಯಮೂಲ್ಯವಾದುದು

ಧುವಿಕ್ರಕ್ಯವ ಸಾಹಸದಿಂದ ಗುರಿಗೆ ಏರಬಲ್ಲ, ಪ್ರತಿಭೆ ಯೋಗ್ಯತೆಗಳಿಂದ ಸ್ವಂ ತದ ಜೀವನಕ್ಕೆ ಕೀರ್ತಿ, ಐಶ್ವರ್ಯ ದೊರಕಿ ಸಿಕೊಳ್ಳಬಲ್ಲ ಮಹದಾಕಾಂಕ್ಷೆಯ ತರು ಣರಿಂದು ನಾಡಿನಲ್ಲಿದ್ದಾರೆ. ಆದರೆ ಸ್ವಂತ ದ ಬಾಳಿಗೆ ಹಾನಿ ತೊಂದರೆ ತಂದುಕೊಂ ಡು ವಿಷಮಶಕ್ತಿಗಳೊಡನೆ ಸಂತತವಾಗಿ ಹೋರಾಡುತ್ತ ಧ್ಯೇಯದ ಎತ್ತರಕ್ಕೆ ಹೋಗುವ ಸಂಕಲ್ಪದಿಂದ ಒಳ್ಳೆ ಪರಂಪ ರೆಯನ್ನು ಆರಂಭಿಸುವವರು ಕಡಿಮೆಯೆಂ ದು ಹೇಳಬೇಕು. ಮಾನವತೆಯ ಸೇವೆ ಯಲ್ಲಿ ತನು ಸವೆಯಿಸುವ ಈ ಧ್ಯೇಯವಾ ದಿಗಳಿಗೆ ಸಮಕಾಲೀನರಿಂದ ಸಿಗಬೇಕಾದ ಸಹಾಯ ಸಹಕಾರಗಳು ಸಿಗುವದಿಲ್ಲ. ಸ ಮಾಜದ ಪ್ರತಿಗಾಮಿ ಅಂಶಗಳು ಇವರ ಧ್ಯೇಯಾದರ್ಶಗಳ ಅಸ್ತಿತ್ವವನ್ನು ಪ್ರಶ್ನಿಸ

ಎಪ್ರಿಲ್ ತಿಂಗಳಲ್ಲಿ ಅಮೆರಿಕವನ್ನು ಸಂದರ್ಶಿಸಿದ್ದ ನೇಪಾಳದ ರಾಜ ಮಹೇಂದ್ರ ಮತ್ತವರ ಪತ್ನಿಯರು ಅಮೆರಿಕಾಧ್ಯಕ್ಷ ಐಸೆನ್ ಹಾವರರೊಡನೆ ನಿಂತಿರುವುದನ್ನಿಲ್ಲಿ ನೋಡಬಹುದು.

ಲು ಧುತ್ತೆಂದು ನಿಂತಿರುತ್ತವೆ. ಪರಿಣಾ ಮತಃ ಇವರ ಬಾಳೊಂದು ವಿಷಮತೆ, ಸಂಕಟ, ಶಾಪ— ವಿಪತ್ತುಗಳ ಕದನಭೂ ಮಿಯಾಗುತ್ತದೆ. ಈ ಕದನ ಭೂಮಿಯ ಲ್ಲಿ ಕತ್ತು ಮುಟ ಇಳಿದಾಗ ಬೆನ್ನಹಿಂದೆ ಬಲವಿಲ್ಲದಿದ್ದರೆ ಈ ಧ್ಯೇಯ ಜೀವಿಗಳು ಭೌತಿಕ ಆರ್ಥಿಕ ಬಲವಿರಲಿಲ್ಲ ಮನೆತನ ದ ಬಲವಿರಲಿಲ್ಲ. ಅವರ ಧ್ಯೇಯಾದರ್ಶಗ ಳನ್ನು ಮೆಚ್ಚಿ ಕ್ರಿಯಾತ್ಮಕ ಸ್ಫೂರ್ತಿ ಸಹ ಕಾರನೀಡಿ ಅವರನ್ನು ಕರ್ತವ್ಯದ ರಂಗ ದಲ್ಲಿ ಮುನ್ನಡೆಯಿಸುವ ಸಂಘ ಟಿತ ಬಲವಿರಲಿಲ್ಲ. ಆದರಿಂದಾಗಿ ಅವರ ಬದುಕಿನಲ್ಲಿ ಆದರ್ಶ ಸಾಧನೆ ಗಾಗಿ ಹೆಣಗುವಾಗ ಅನೇಕ ಸಲ ತನ್ನ ಮುಗ್ಗುಗ ನ್ನೆದುರಿಸಬೇಕಾಗುತಿತ್ತು. ಆ ಶಾಪಾದವನ್ನು ಕುಗ್ಗಿಸುವ ವಿಷಗಳಿಗೆ ಗಳನ್ನು ಕಾಣಬೇಕಾಗುತ್ತಿತ್ತು. ಆದಾಗ ಲೂ ಆಂತರಿಕ ಸ್ಫೂರ್ತಿಯ ದೀಪದಿಂದ ಅವರು ತಮ್ಮ ಮನದ ನಿರಾಶೆಯ ಮೂ ಲೆಗಳನ್ನು ಬೆಳಗಿಕೊಳ್ಳುತ್ತಿದ್ದರು. ಆಶಾ ವಾದದ ಅಚಲಗತಿಯಿಂದ ಧ್ಯೇಯಪಥ ದ ಮೇಲೆ ದಣಿಯದ ದಾರಿಕಾರನಾಗಿ ಮುನ್ನಡೆಯುತ್ತಿದ್ದರು.

ಹರಿದಾಸರಾಯರನ್ನು ನಾನು ಮೊತ್ತ ಮೊದಲು ಕಂಡುದುದು ಹದಿನೆಂಟು ವ ರ್ಷಗಳ ಹಿಂದೆ. ನಲವತ್ತೆರಡರ ಚಲೇ ಜಾವ ಚಳವಳಿಯಲ್ಲಿ ಬಂಧಿತರಾದ ನಾ ವು ಹಿಂಡಲಗಿ ಜೇಲಿನ ಬ್ಯಾರಾಕಿನಲ್ಲಿದ್ದೆ ವು ಆಗ ಅವರನ್ನು ನಾನು ಅನೇಕ ಬಗೆ ಯಿಂದ ಅರಿತುಕೊಳ್ಳಲು ಶಕ್ತನಾದೆ. ಜೇಲು ಜೀವನದ ಆ ನೂರಾರು ದಿನಗಳ ಲ್ಲಿ ನಾನು ಹರಿದಾಸರ ಸನ್ನಿಧಿಯಲ್ಲಿ ಬ ಹು ವಿಧವಾಗಿ ಸ್ಫೂರ್ತಿ ಪಡೆದೆ. ಜೀವನ ನೀತಿಯ ಉತ್ತಮ ಪಾಠ ಕಲಿತೆ. ಆಗ ಅವರಿಗೆ ಅದೇ ಇಪ್ಪತ್ತೈದು ವರ್ಷಗಳಾ ಗಿರಬೇಕು. ಅಷ್ಟು ಚಿಕ್ಕ ವಯಸ್ಸಿನಲ್ಲಿ ಅವರು ಗಳಿಸಿದ ಜ್ಞಾನಾನುಭವವೆಷ್ಟು! ಯಾವದಾದರೂ ಗಡುಚಾದ ವಿಚಾರ ವಾಗಿ ತಿಳಿದುಕೊಳ್ಳಬೇಕಾದರೆ ಎಲ್ಲರೂ ಅವರತ್ತ ಹೋಗಬೇಕು. ಬ್ಯಾರಾಕಿಯಲ್ಲಿ ಅವರು ಒಂದು ಆಧಾರಗ್ರಂಥವಿದ್ದ ಹಾ ಗೆ. ಸಾಹಿತ್ಯ, ಪತ್ರಿಕೋದ್ಯಮ, ರಾ ಷ್ಟ್ರಾಂತರ ರಾಜಕೀಯ, ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಇವೆಲ್ಲವುಗಳಲ್ಲಿ ಅವರು ಆಳವಾದ ಅಭ್ಯಾಸದಿಂದ ಪರಿಣ ತರಾಗಿದ್ದರು. ಸಾಮ್ಯವಾದ, ಸೋವಿ ಯಾತ್ ರಶ್ಯಾ ಗಾಂಧಿವಾದಗಳ ಮೇಲೆ ಅವರು ಕೊಡುತ್ತಿದ್ದ ವಿವರಣೆಗಳು ತುಂ ಬ ಮಹತ್ವದವಾಗಿರುತ್ತಿದ್ದುವು. ಪ್ರತಿಭೆ ಪಾಂಡಿತ್ಯದಂತೆ ಅವರಿಗೆ ವಾಕ್ ವೈಖರಿ ಯೂ, ಜನ್ಮದತ್ತ ವರವಾಗಿ ಬಂದಿತ್ತು. ಅವರಂಥ ಮಾತುಗಾರರು ವಿರಳ. ಅವ ರ ಚುರುಕಾದ ಮಾತುಗಾರಿಕೆಯನ್ನು ಅ ಸ್ಖಲಿತವಾಗಿ ಪುಟಿಯುವ ಶೈಲಿಯ ಜಿಡ ಗನ್ನು, ಬುದ್ಧದವಾಗಿ ಬರುವ ವಿಚಾರ ಧಾರೆಯನ್ನು, ಚಿತ್ತಾಕರ್ಷಕವಾದ ಭಾವ ನಾವಿನ್ಯಾಸವನ್ನು, ಆವೇಶಭರಿತ ಮಧು ರ ವಾಣಿಯನ್ನು ನಾವೆಲ್ಲ ಬಹಳ ಮೆಚ್ಚಿ ಕೊಂಡಿದ್ದೆವು. ಜೇಲುಜೀವನದ ನೀರಸ ನಿಮಿಷಗಳಲ್ಲಿ ಅವರ ಭಾಷಣವೊಂದು ನ ಮಗೆ ಸದೂಟ. ಬ್ಯಾರಾಕಿನಲ್ಲಿ ವಾರಕ್ಕೆ ಒಮ್ಮೆಯೊ, ಎರಡಾವರ್ತಿಯೊ ಅವರ ಭಾಷಣವನ್ನೇರ್ಪಡಿಸದೆ ನಮಗೆ ಸಮಾ ಧಾನವಾಗುತ್ತಿರಲಿಲ್ಲ. ಯಾವ ಪಂಡಿತ ನೂ ಮೆಚ್ಚುವ ಭಾಷಣಕಲೆ ಅವರದು. ಅವರ ಮಾತು ಒಲ್ಲವರಿಗೆ ಮಾತ್ರ ಅರ್ಥ ವಾಗುವಂತಿರಲಿಲ್ಲ. ಎಲ್ಲ ಸಾಮಾನ್ಯರಿ ಗೂ ಅರ್ಥವಾಗುವ ಸರಳ ಸುಂದರ ನಿ ರಾಡಂಬರ ಮಾತುಗಾರಿಕೆ ಅವರದಾಗಿ ತ್ತು. ಹತ್ತಾರು ಆಧಾರಗ್ರಂಥಗಳನ್ನು ಮಗುಚಿಹಾಕಿ ಉದ್ದುದ್ದವಾದ ಉದ್ಧರಣ ಗಳನ್ನು (quotations) ತಲೆಯಲ್ಲಿ ತುಂಬಿಕೊಂಡು ಗಿಲಾಯಿ ಮಾಡಿದ ಶೈ ಲಿಯಲ್ಲಿ ಪಾಂಡಿತ್ಯ ಪ್ರದರ್ಶ ನವುದು ಅವರಿಗೆ ಸೇರುತ್ತಿರಲಿಲ್ಲ ಯಾವ ಪೂರ್ವಸಿದ್ಧತೆ ಯಿಲ್ಲದೆಯೂ

he Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ ಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ವರು ತಾಸುಗಟ್ಟಲೆ ಅಸ್ಖಲಿತವಾಗಿ ಮಾತಾಡಬಲ್ಲವರಾಗಿದ್ದರು. ಮಾತಾಡಲು ಎದ್ದರೆಂದರೆ ವಾಣಿ ನಿರ್ಗಳವಾಗಿ ಹರಿಯಲಾರಂಭಿಸುತಿತ್ತು. ಬೆಡಗಿನಿಂದ ಚಿಮ್ಮುವ ಆ ವಿಚಾರ ತರಂಗಗಳು, ನಿಬ್ಬರಿಸಿ ಬರುವ ಆ ಪ್ರವಾಹಮಯ ಶೈಲಿ, ಮಧ್ಯೆ ಮಧ್ಯೆ ಮಿಂಚಿನಂತೆ ಮಿನುಗಿಬರುವ ಆ ಉಜ್ವಲ ನುಡಿಗಳು, ಆ ಕವಿ ಹೃದಯದ ಭಾವಗಂಗಾ....ಅದೊಂದು ಮಾನಸಿಕ ರಸಭೋಜನ.

ಮಾತುಗಾರಿಕೆಯಂತೆ ಅವರ ಲೇಖನ ಕಲೆಯೂ ಸೊಗಸಾದುದು. ಕಳೆದ ಕೆಲವೇ ವರ್ಷಗಳಲ್ಲಿ ಸರ್ವೋದಯ ಸಾಹಿತ್ಯಮಾಲೆಯ ಮುಖಾಂತರ ತಮ್ಮ ಶ್ರೇಷ್ಠ ಶೈಲಿಯ ಸಾಹಿತ್ಯಕೃತಿಗಳನ್ನು ಕನ್ನಡಿಗರಿಗೆ ನೀಡಿದರು. ದ್ವಿತೀಯ ಮಹಾಯುದ್ಧ, ಉಕ್ಕಿನ ಮನುಷ್ಯ; ಸ್ಟಾಲಿನ್, ಮರುಳುಗಾಡಿನ ಅರಬರು, ಎಚ್ಚೆತ್ತ ಆಗ್ನೇಯ ಏಶಿಯಾ ಇತ್ಯಾದಿ ಅವರ ರಾಜಕೀಯ ಗ್ರಂಥಗಳು ಕನ್ನಡ ಸಾಹಿತ್ಯವನ್ನು ವಿಚಾರ ವಾಙ್ಮಯದ ಹೊಸ ಶೈಲಿಯಿಂದ ವಿಭೂಷಿತಗೊಳಿಸಿದುವು. ಅವರು ಆಗಿಂದಾಗ ಪತ್ರಿಕೆಗಳಲ್ಲಿ ಬರೆಯುತ್ತಿದ್ದ ರಾಜಕೀಯ ಪ್ರಬಂಧಗಳಂತೂ, ಸಂಖ್ಯಾತ್ಮಕ ವಿಶ್ಲೇಷಣೆ, ಅನ್ಯಾದೃಶ್ಯವಾದ ರಹಸ್ಯ ವಿವೇಚನೆಗಳಿಂದೊಡಗೂಡಿ ತುಂಬ ವಿದ್ವತ್ಪೂರ್ಣವಾಗಿರುತ್ತಿದ್ದವು.

ಹೃದಯ ಬಿಚ್ಚಿ ಮಾತಾಡುವ ನಿಷ್ಕಪಟ ಸರಳ ಸ್ವಭಾವ, ನಯವಿನಯಗಳಿಂದ ತುಂಬಿದ ನಡೆ ನುಡಿ, ಜೀವಿತದ ನೈಜಗುರಿಯತ್ತ ಸಾಗಿದ ಆದರ್ಶದ ಒಲವು, ಯಾವಾಗಲೂ ಒಳ್ಳೆಯದನ್ನು ಕಾಣುವ ವಿಶಾಲ ಮನೋಭಾವ, ಮಾನವತೆಯ ಕಲ್ಯಾಣ ಚಿಂತಿಸುವ ಪವಿತ್ರ ಉದಾತ್ತ ಹೃದಯ ಇತ್ಯಾದಿ ಗುಣಾತಿಶಯಗಳಿಂದ ಕೂಡಿದ ಹರಿದಾಸರ ವ್ಯಕ್ತಿತ್ವ ರಸಮಯ ಮತ್ತು ಆಕರ್ಷಕವಾಗಿತ್ತು. ಅವರ ವಿನಯಶೀಲತೆಯನ್ನಂತೂ ಮರೆಯಲಾಗದು. ಪ್ರತಿಭೆ ಪಾಂಡಿತ್ಯಗಳಿಂದ ಅಲ್ಪಸ್ವಲ್ಪ ಕೀರ್ತಿ ಗಳಿಸಿದ ಅನೇಕರಿಗೆ ತಾವು ದೊಡ್ಡವರೆಂಬ ಭಾವನೆ ಬಂದು ಸಣ್ಣವರನ್ನು ಮಾತಾಡಿಸುವ ಮನಸ್ಸೇ ಆಗುವದಿಲ್ಲ. ಸಣ್ಣವರೊಡನೆ ಮಾತಾಡಿದರೆ ತಮ್ಮ ಪ್ರತಿಷ್ಠೆಗೆ ಕುಂದೆಂದು ತಿಳಿಯುತ್ತಿರಬೇಕು ಈ ದೊಡ್ಡ ಮಹಾಶಯರು. ಒಂದೆರಡು ನುಡಿ ಹೆಚ್ಚು ಆಡಬೇಕಾದರೆ ಗಂಟುಮೋರೆ ಮಾಡುತ್ತಾರೆ. ಹರಿದಾಸರು ಹಾಗಲ್ಲ. ಪರಿಚಿತರು ಕಂಡಾಗ—ಅವರು ಎಷ್ಟು ಸಣ್ಣವರಿರಲಿ ಅವರನ್ನು ಪ್ರೀತಿಯಿಂದ ಮಾತಾಡಿಸುತ್ತಿದ್ದರು ಅವರ ಯೋಗಕ್ಷೇಮ, ಅನುಭವಗಳನ್ನು ಬಹು ಕಳಕಳಿಯಿಂದ ಕೇಳುತ್ತಿದ್ದರು. ನೊಂದವರಿಗಾಗಿ ಸಹಾನುಭೂತಿ ಸೂಚಿಸಲು ಅವರ ಮನ ತವಕಪಡುತಿತ್ತು. ಜೇಲಿನಿಂದ ಅಗಲಿದ ನಂತರ ಅನೇಕ ಸಲ ಉಗಿಬಂಡಿಯಲ್ಲಿ ದಾರಿ ಬೀದಿಯಲ್ಲಿ ಅವರನ್ನು ನಾನು ಕಂಡೆ. ಅದೇ ನೆಚ್ಚು ನಂಬಿಗೆಯ ನುಡಿ, ಬಗೆ ಸೂರೆಗೊಳ್ಳುವ ಒಲುಮೆಯ ಸಲ್ಲಾಪ, ಉತ್ಕಟ ಆತ್ಮೀಯ ಭಾವ... ....

ಅವರ ಅಕಾಲಿಕ ನಿಧನದಿಂದ ಕನ್ನಡದ ಸಾಂಸ್ಕೃತಿಕ ಜೀವನಕ್ಕೆ ಅಪಾರ ಹಾನಿಯಾಯಿತು. ಅವರ ಅಗಲುವಿಕೆಯಲ್ಲಿ ನಮ್ಮ ಸಾರಸ್ವತ ಮಂದಿರದ ದೀಪಮಾಲಿಕೆಯ ಬತ್ತಿಯೊಂದು ನಂದಿದಂತಾಯಿತು. ಸಾಹಿತ್ಯಾಕಾಶದ ದೇದೀಪ್ಯಮಾನವಾದ ತಾರೆಯೊಂದು ಕಳಚಿತು. ಕನ್ನಡಮ್ಮನ ಉಡಿಯ ರತ್ನವೊಂದು ಕಾಣದಾಯಿತು. ನಿತ್ಯ ವಿನೂತನವಾದ ಪ್ರತಿಭೆಯಿಂದ ನಾಡನ್ನು ಬೆಳಗಲಿದ್ದ ಆ ಚಿನ್ನ ಜೀವವನ್ನ ಹೀಗೆ ನಿರ್ದಯವಾಗಿ ಬೇಟೆಯಾಡಿದ ವಿಧಿಯ ಉದ್ದೇಶವಾದರೂ ಏನಿತ್ತೋ!

—ಅಬ್ಬಿಗೆರೆ ವಿರೂಪಾಕ್ಷಪ್ಪ ಸೂಡಿ.
(ಜಯಕರ್ನಾಟಕದ ಕೃಪೆಯಿಂದ)

ಕಥಾವಿಹಾರ

(೩ನೇ ಪುಟದಿಂದ)

ಉ ಇದ್ದೇ ಇತ್ತು. ಕಟ್ಟಕೊನೆಗೆ ಅವನಿಗೆ ಹೊಳೆದುದೊಂದೇ ದಾರಿ! ಅವನಿಗೆ ಉಳಿದುದದೊಂದೇ ದಾರಿ!!

ಮನೆ ಮನೆ ಅಲೆದು, ಊರೂರು ತಿರುಗಿ, ಭಿಕ್ಷಾಪಾತ್ರೆ ಹಿಡಿದು ತಿರಿದುಣ್ಣುವುದು. ಮಧ್ಯೆ ಅಳಾಗಿ ದುಡಿಯುವಂತಿದ್ದಲ್ಲಿ ಅಲ್ಲೇ ನಿಲ್ಲುವುದು!

ಅವರಿಗೆ ಸರಿಕಂಡದಾರಿ ಅದೊಂದೇ!

ಮೂರು ದಿನಗಳ ತನಕವೂ ಆತ ಅದನ್ನೇ ಯೋಚಿಸುತಿದ್ದ, 'ತಾನು ಹಿಡಿದ ದಾರಿ ಸರಿಯೇ' ಎಂದು ಹೊರಗೆ ಅತಿಯಾದ ಮಳೆ ಬಿಡದೆ ಸುರಿಯುತಿದ್ದರೂ, ವೆಂಕಣ್ಣನ ಮನಸ್ಸಿಗೆ ತಣಿವು ದೊರಕಲಿಲ್ಲ; ಸುರಿವ ಬೆವರು ನಿಲ್ಲಲಿಲ್ಲ! ಅವನ ಮಾಂಸಖಂಡದ ತುಂಡು ತುಣುಕುಗಳೂ ಕುಳಿತು ಆಲೋಚಿಸಿ, ಉಷ್ಣದ ಹೊನಲನ್ನು ಹರಿಸಿತ್ತು, ಹಗಲುರಾತ್ರಿಯೆನ್ನದೆ.

ತನಗೆ ಅಲ್ಲಿ ಋಣ ಹರಿಯುವ ಕೊನೆಯದಿನ, ಕೊನೆಯ ಗಳಿಗೆಗೆ ನೆಟ್ಟು ಬೆಳೆಸಿ ಕತ್ತರಿಸಿದ ಪೈರನ್ನು ಕಂಡುಬರುವೆನೆಂದು ವೆಂಕಣ್ಣ ಹೊರಟಿದ್ದ. ಹೋಗುತ್ತಲೇ, ಕಣ್ಮನಗಳನ್ನು ಕೋರೈಸಿ, ತಾವೇ ತಲೆದೂಗುವ ಬತ್ತದ ತೆನೆಗಳ ರಾಶಿ ರಾಶಿಗಳು, ನೀರಲ್ಲಿ ತೇಲುವ ನೋಟ ಕಂಡು, ಕಲ್ಲಾಗಿ ನಿಂತಿದ್ದ ವೆಂಕಣ್ಣ!

"ನೋಡು ವೆಂಕಣ್ಣಾ" ಎಂದು ಸುಬ್ಬ ಭುಜ ಒಡಿದು ಕೂಗಿದಾಗಲೇ, ಕನಸಿನ ಲೋಕದಲ್ಲಿ ಗಂಧರ್ವ ಕನ್ಯೆಯೊಡನೆ ವಿಹರಿಸುತಿದ್ದ ರಾಜ, ಅಜ್ಜಿ ಕತೆಗಳಲ್ಲಿ, ಇದ್ದಕ್ಕಿದ್ದಂತೆ ಹಾವನ್ನು ತುಳಿದೋ, ಶಾಪಸಿಗಳಿಗೆ ತೊಂದರೆಕೊಟ್ಟೋ, ಮಾನವನಾಗುವಂತೆ, ವೆಂಕಣ್ಣನಿಗೂ ಎಚ್ಚರವಾಯಿತು. "ಅಂ" ಎಂದು ಸುಬ್ಬನ ಮಾತಿಗೆ ಕಿವಿಕೊಟ್ಟ.

"ನೋಡು, ಆದದ್ದು ಆಗಿ ಹೋಯ್ತು. ಈಗಿನ ಕಾಲದಲ್ಲಿ ವಿನಾ ಕಾರಣ ಪಕ್ಕಲನ್ನು ಎಬ್ಬೋಡಿಸಬಾರದೆಂಬ ಕಾನೂನಿದೆ. ನೀನು ಕೋರ್ಟಿಗೊಂದು ಅರ್ಜಿ ಸಲ್ಲಿಸಿದರೆ ಕೀರ್ದಾ ನಿನಗೆ ವಾಪಿಸಾಗತ್ತೇ...ನಾವು ಬಡವರು. ಒಂದು ಕೈ ನೋಡೇ ಬಿಡೋಣ," ಎಂದು ತಾನು ಅಂಗಿಯನ್ನೆತ್ತಿ ತೋಳು ತೋರಿಸಿದ

ಆದರೆ ಅವರ ಉಪ್ಪನ್ನವನ್ನು ತಿಂದು ಬೆಳೆದ ದೇಹ, ಉಂಡಮನೆಗೆರಡನ್ನು ಕನಸಿನಲ್ಲೂ ಬಗೆಯದ ಅವನ ಮನ ಆ ಮಾತಿಗೆ 'ಓ'ಗೊಡಲಿಲ್ಲ. ಬದಲು,—

"ಏನು ಕಾನೂನೋ ಸುಬ್ಬ... ಇಂದೊಂದು ನಾಳೆಯೊಂದು. ಹುಟ್ಟಿದಂದಿನಿಂದ ದೇಹ ಸವೆಸಿದ ಮಣ್ಣಿನ ಮೇಲಿನ ಹಗೆಯೇ? ಸಾಕಿ ಸಲಹಿದ ಕುಟುಂಬದ ಮೇಲೆ ವೈರವೆ? ಕೆಟ್ಟಕಾಲ ಬಂತು, ಆಗಬಾರದ್ದು ಆಗಿಹೋಯಿತು. ತಂದೆ ಸಾಯುವ ಕಾಲಕ್ಕೆ ಆ ಮುದುಕ 'ಮಕ್ಕಳಿಬ್ಬರಿಗೂ ನೀನೇ ತಂದೆ'ಯೆಂದು ಹೇಳಿ ಹೋದನಲ್ಲಾ...... ಎಷ್ಟು ಕಷ್ಟಕಾಲದಲ್ಲಿ ಅವರಿಗೆ ಬುದ್ಧಿ ಹೇಳ್ಲಿಲ್ಲ. ಇನ್ಯಾರು ಮುಂದೆ ಅವರನ್ನು ತಿದ್ದುವವರು? ಆ ಹುಡುಗರ ಮೇಲೆ ವೈರ ತೀರಿಸುವ ಚಪಲ ಯೋಗ್ಯವೆ?" ಎಂದು ಮೆಲ್ಲುಡಿದ

ಸುಬ್ಬ ಮಾತು ಮುಂದುವರಿಸುವಂತಿರಲಿಲ್ಲ. ಮೊದಲ ಮಾತಿಗೇ ಪೆಟ್ಟು ತಗಲಿದ್ದುದರಿಂದ ಸುಮ್ಮನಾಗಿದ್ದ. ತಾನೂ ಮೌನಿಯಾಗಿರುವುದು ಏದಿತವಲ್ಲವೆಂದು ತಿಳಿದು ವೆಂಕಣ್ಣ "ನೆರೆಮನೆ ಸೋಮನನ್ನು ಓಡಿಸಿದರಂತೆ. ಅಜೆ ಬಯಲಿನ ತನಿಯನಿಗೆ ಬಡಿಯಲಿಕ್ಕೆ ಹೋಗಿದ್ದರಂತೆ. ಒಟ್ಟು ಒಕ್ಕಲಿಗರ ಮೇಲೆ ಏಕೋ ಬೇಸರ. ಅವರ ಸಾಲಿಗೆ ನನ್ನನ್ನೂ ಸೇರಿಸಿದರು," ಆ ತಪ್ಪಿಗಾಗಿ ಪಟ್ಟ ಪಶ್ಚಾತ್ತಾಪ ಅಷ್ಟಿಷ್ಟಲ್ಲ.

ಘಾನಾದ ಪ್ರಥಮ ಗವರ್ನರ ಜನರಲ್ಲರಾದ ಸರ್ ಚಾರ್ಲ್ಸ್ ನೋಬಲ್ ಆರ್ಡನ್ ಕ್ಲಾರ್ಕ

ಇಬ್ಬರೂ ನಿಂತು ಮುಂದೆ ಕಾಣುತಿದ್ದರು!

"ನನ್ನದೇ ತಪ್ಪಾಯಿತು, ಕ್ಷಮಿಸು ವೆಂಕಣ್ಣ" ಇಬ್ಬರೂ ತಮ್ಮ ಕಣ್ಣನ್ನು ತಾವೇ ನಂಬದಾದರು. ಆತನೊಡೆಯ ಕಾಲು ಬುಡದಲ್ಲಿ ಬಂದು ಬಿದಿದ್ದ. ಎಂದೆಂದೂ ಎಣಿಸದ ದೃಶ್ಯವಾದುದರಿಂದ ವೆಂಕಣ್ಣನಿಗಾದ ಸಂಕೋಚ, ಒಡೆಯನನ್ನು ಬಿಗಿದಪ್ಪಿತು. ಮಗನಂತೆ ಮುದ್ದಾಡಿದ ವೆಂಕಣ್ಣ!

ಆ ದೃಶ್ಯ ಕಂಡು ಬೆರಗಾದ ಸುಬ್ಬ ಕಾಣಲಾರದೆ ಮುಖ ಹಿಂದೆ ತಿರುಗಿಸಿದ.

ದೂರದ ಬೆಟ್ಟದಲ್ಲಿ ಅವರೆಲ್ಲರನ್ನು ಕಾಪಾಡುವ ಗ್ರಾಮದ ದೈವದ ಗುಡಿ, ಶೂನ್ಯವಾಗಿ ಕಾಣಿಸಿತು, ಸುಬ್ಬನಿಗೆ. ಅಲ್ಲಿಯ ಹರಕೆಗೆಂದು ಹೊತ್ತ ಹಣ್ಣು-ಕಾಯಿ ಗಂಟನ್ನು ಅಲ್ಲಿಗೊಯ್ಯುವ ಅವಶ್ಯಕತೆ ಅವನಿಗೆ ಕಾಣಿಸಲಿಲ್ಲ. ಭಯಸಂಕಟಕ್ಕೆ ಸಿಲುಕಿದ ಅವನ ಮನಸ್ಸನ್ನು ಕೆಳಗಿನ ಪ್ರವಾಹದಸೆಳೆತ ಒಯ್ದಿತು. ಏನೋ ಒಂದು ರೀತಿಯ ಅಪೂರ್ವ ವೇದನೆ ಅವನಿಗುಂಟಾಯಿತು.

ವೆಂಕಣ್ಣ ಮಾತ್ರ, ಒಡೆಯನನ್ನು ಅಪ್ಪಿಕೊಂಡು ನಿಂತು ನೋಡುತಿದ್ದ, ಎದುರಿನ ಭತ್ತದ ತೆನೆಗಳನ್ನಲ್ಲ, ತನ್ನ ಹೃದಯದ ಬೀಜ ಬಿತ್ತಿ ಬೆಳೆಸಿದ ಎದುರು ನಿಂತಿರುವ ಮತ್ತೊಂದು ಗಿಡವನ್ನು! ಅದರಿಂದ ಉಂಟಾಗುವ ಕೊಳೆ ತಗುಲದ ಹತ್ತಾರು ಮರಗಳನ್ನು!! ಆ ಹತ್ತಾರು ಹೋಗಿ ನೂರಾರು, ಸಾವಿರಾರುವಾಗುವುದನ್ನು!!!

—ಶ್ರೀ ಎಚ್. ರಾಮಕೃಷ್ಣ ಅಡಿಗ

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಹೊಸ ಹೆಜ್ಜೆ

- ವಾರ್ಷಿಕ ಉಳಿತಾಯ
- ರೂ. ೨೫೦ರಿಂದ ಪ್ರಾರಂಭಿಸಬಹುದು

ವರುಷಕ್ಕೆ ಒಂದು ಸಾವಿರ ರೂಪಾಯಿಗಳಂತೆ ಮೂವತ್ತೈದು ವರುಷಗಳಲ್ಲಿ ಸಂಗ್ರಹವಾಗುವ ಮೂವತ್ತೈದು ಸಾವಿರ ರೂಪಾಯಿಗಳು ಒಂದು ಲಕ್ಷ ರೂಪಾಯಿಗಳಿಗಿಂತಲೂ ಅಧಿಕ ಲಾಭವನ್ನು ತರಬಲ್ಲವು.

ವಿವರಗಳಿಗೆ ದಯಮಾಡಿ ವಿಚಾರಿಸಿರಿ:
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಇನ್ವೆಸ್ಟ್‌ಮೆಂಟ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬೇಂಕ್

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ಚಂದಾ ರೂ. 6-25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವ ೩೯. ವಾರ ೩೯. 2-6-1960 Vol. 39. No. 39.

ಚಲಿತ ಪ್ರಸಂಗ

ತುರ್ಕಿಯಲ್ಲಿ ಸೇನಾಡಳಿತೆಯ ಪ್ರಾರಂಭ

ರಾಜಕಾರಣದಲ್ಲಿ ಸಾಮಾನ್ಯ ಸ್ಥಿತಿಯನ್ನು ಸ್ಥಾಪಿಸುವ ಸಲುವಾಗಿ ಸೈನಿಕ ಶಾಸನದ ಘೋಷಣೆ

...ಾ. ೨೭ರಂದು ಮಧ್ಯರಾತ್ರಿಯ ನಂ... ತುರ್ಕಿಯ ಆಡಳಿತೆಯನ್ನು ಅಲ್ಲಿನ ...ಸೇನೆಯು ವಹಿಸಿಕೊಂಡಿತು. ...ರಹಿತವಾಗಿ ನಡೆದ ಈ ರಾಜ್ಯ ಕ್ರಾಂ...ು ತೋರಿಕೆಯ ಮಟ್ಟಿಗೆ ಆಕಸ್ಮಿಕ ...ಿದ್ದರೂ, ಅಲ್ಲಿನ ರಾಜಕೀಯ ವ...ಲಗಳಲ್ಲಿ ಈ ಘಟನೆಯು ನಡೆಯ...ದೆಂದು ನಿರೀಕ್ಷಿಸಲಾಗಿತ್ತೆಂದು ತಿಳಿ...ತ್ತದೆ.

ರಾಷ್ಟ್ರಪತಿ ಶ್ರೀ ಸೇಲಾಲ್ ಬಯೂ...ನುತ್ತವರ ಇವರು ಸಹಾಯಕರಾದ ...ಷ್ಟ್ರೀಯ ಪರಿಷತ್ತಿನ ಅಧ್ಯಕ್ಷ ಶ್ರೀ ...ರಾಲ ಟನ್ ಮತ್ತು ಗೃಹಮಂತ್ರಿ ...ನಾಮಿಕಗೇಡಿಕರನ್ನು ಕೈದು ಮಾಡಿ...ದು ಸೇನೆಯು ಸಾಮಾನ್ಯ ಸ್ಥಿತಿ ...ಪನೆಗಾಗಿ ರಾಜ್ಯಸೂತ್ರವನ್ನು ಕರ...ಮಾಡಿಕೊಂಡುದಕ್ಕಿಂತಲೂ ಅಧಿಕ ...ಘೋರ ಘಟನೆಯಾಗಿದೆ. ಏಕೆಂದರೆ, ...ಮಾನ್ಯ ಸ್ಥಿತಿಯ ಸ್ಥಾಪನೆಗಾಗಿ ಬ...ದಲ್ಲಿಯೂ ಶಾಸನಸೂತ್ರವನ್ನು ಸೇ...ಯು ವಹಿಸಿಕೊಂಡಿತ್ತು.

...ೀ ಬಯೂರರು ಕಳೆದರ್ಧಶತಮಾನದಿಂ... ಬಹುಮಹತ್ವಪೂರ್ಣಪಾತ್ರ ವಹಿಸಿದ್ದ... ಪ್ರಜಾಪ್ರಭುತ್ವದ ಸಂಸ್ಥಾಪಕ ಕ...ಾಲ ಅತ್ತಾತುರ್ಕರ ಮಂತ್ರಿ ಮಂಡಳಿ...ಲ್ಲಿ ಅವರು ವಿದೇಶ ಮಂತ್ರಿಯಾಗಿದ್ದ... ೧೯೩೮ರಲ್ಲಿ ಅತ್ತಾತುರ್ಕರು ಮೃ...ತ್ಯುವಶರಾದ ಬಳಿಕ ಪ್ರಧಾನ ಮಂ...ಯಾಗಿ ಅಧಿಕಾರ ಸ್ವೀಕರಿಸಿದರು. ...ಪ್ರಾರಂಭದಲ್ಲಿ ಇವರು ಪೀಪಲ್ಸ್ ರಿಪಬ್ಲಿ...ನ್ ಪಕ್ಷದ ಮುಖ್ಯ ಸದಸ್ಯರಾಗಿದ್ದರು. ...ದರೆ, ೧೯೪೫ರಲ್ಲಿ ತನಗೆ ಒಂದು ಪಕ್ಷ... ಶಾಸನವು ಮಾನ್ಯವಾಗದೆ ಇದ್ದುದರಿಂ...ದ ಮತ್ತು ತಾನು ಪತ್ರಿಕೆ ಮತ್ತು ವ್ಯಕ್ತಿ...ಳಿಗೆ ಸ್ವಾತಂತ್ರ್ಯಯಿರುವ ಪ್ರಜಾತಾಂ...ತ್ರಿಕ ಶಾಸನದಲ್ಲಿ ವಿಶ್ವಾಸವಿಟ್ಟವರೆಂಬ ...ಕಾರಣದಿಂದ ಪಕ್ಷಕ್ಕೆ ರಾಜಿನಾಮೆಯಿತ್ತ...ು. ಅನಂತರ ಶ್ರೀ ಬಯೂರರು ಡೆಮೊಕ್ರೆ...ಟಿಕ್ ಪಾರ್ಟಿಯನ್ನು ಕಟ್ಟಿದರು. ಈ ಪ...ಕ್ಷವು ಮೂರು ಬಾರಿ ಚುನಾವಣೆಯಲ್ಲಿ ...ಜಯಗಳಿಸಿತು.

ಶ್ರೀ ಇಸ್ಮತ್ ಇನೋನರು ಪೀಪಲ್ಸ್ ರಿಪಬ್ಲಿಕನ್ ಪಕ್ಷದ ನಾಯಕರಿದ್ದರು. ತುರ್ಕಿಯ ಅಸೆಂಬ್ಲಿಯ ಒಟ್ಟು ೬೧೦ ಸದಸ್ಯರಲ್ಲಿ ೪೨೪ ಸದಸ್ಯರು ಡೆಮೊಕ್ರೆಟಿಕ್ ಪಕ್ಷದವರೂ ೧೬೩ ಜನರು ಪೀಪಲ್ಸ್ ರಿಪಬ್ಲಿಕನ್ ಪಕ್ಷದವರೂ ಮೂವರು ಅನ್ಯ ಸದಸ್ಯರೂ ಆಗಿದ್ದಾರೆ. ಶ್ರೀ ಇನೋನರ ಪಾರ್ಟಿಯು ಸರಕಾರದ ಮೇಲೆ ಗತ ಚುನಾವಣೆಯಲ್ಲಿ ಕಪಟ ವ್ಯವಹಾರ ನಡೆಸಿದ ಆರೋಪವನ್ನು ಹೇರಿ, ಆಗ ಸ್ವತಂತ್ರ ಮತ್ತು ನಿಷ್ಪಕ್ಷಪಾತ ಚುನಾವಣೆಯಾಗಬೇಕೆಂದು ಕೇಳಿಕೊಂಡಿತ್ತು.

ಪ್ರಧಾನಮಂತ್ರಿ ಶ್ರೀ ಮೇಂದೆರೆಸರು ಡೆಮೊಕ್ರೆಟಿಕ್ ಪಕ್ಷದಲ್ಲಿ ವ್ಯಾವಹಾರಿಕ ರೂಪದಲ್ಲಿ ಮುಖ್ಯ ನೇತಾರರಾಗಿದ್ದರು. ಬಯೂರರೊಡನೆಯೇ ಇವರೂ ಪಕ್ಷಕ್ಕೆ ರಾಜಿನಾಮೆಯಿತ್ತಿದ್ದರು. ಮೇಂದೆರೆಸ ಮತ್ತು ಅತ್ತಾತುರ್ಕರ ನಡುವೆ ಬಹಳ ನಿಕಟವಾದ ಸಂಬಂಧವಿತ್ತು.

ಪ್ರಜಾತಾಂತ್ರಿಕ ಪಕ್ಷ ಮತ್ತು ವಿರೋಧೀ ದಳಗಳ ನಡುವೆ ಪಾರಸ್ಪರಿಕ ಹೊಡೆದಾಟವು ಕೆಲವು ಸಮಯದಿಂದ ಪ್ರಾರಂಭವಾಯಿತು. ಮೊದಲಿದು ಶೀತ ಯುದ್ಧದ ರೂಪದಲ್ಲಿದ್ದು ಮುಂದೆ ಇಸ್ತಾಂಬುಲ್ ಮತ್ತು ಅಂಕಾರಗಳಲ್ಲಿ ದಂಗೆಯ ಆಕಾರವನ್ನು ತಾಳಿತು. ಸರಕಾರವು ಈ ದಂಗೆಗಳನ್ನು ಅತಿ ಕಠೋರ ರೀತಿಯಲ್ಲಿ ದಮನಿಸಿತು. ಸಂವಿಧಾನದನ್ವಯ ೧೯೬೧ರಲ್ಲಿ ಚುನಾವಣೆಯು ನಡೆಯಲಿರುವುದರಿಂದ ಸದ್ಯ ಚುನಾವಣೆಯು ನಡೆಯುವುದು ಅನವಶ್ಯವೆಂದು ಸರಕಾರವು ವಾದಿಸಿತು. ಏನೇ ಇರಲಿ, ಸರಕಾರವು ವಿರೋಧೀ ದಳಗಳನ್ನು ಸಂತುಷ್ಟಗೊಳಿಸುವುದಕ್ಕಾಗಿ ಚುನಾವಣೆಗಳನ್ನು ನಡೆಸುವುದಿಲ್ಲವೆಂದು ಸಾರಿತು.

ಎಪ್ರಿಲ್‌ನಲ್ಲಿ ತುರ್ಕಿಯ ಸಂಸತ್ತು ಒಂದು ಅಸಾಧಾರಣ ಗೊತ್ತುವಳಿಯನ್ನು ಸ್ವೀಕರಿಸಿ, ೧೫ ಸದಸ್ಯರ ಒಂದು ಸಮಿತಿಯನ್ನು ಏರ್ಪಡಿಸಿ, ಪೀಪಲ್ಸ್ ರಿಪಬ್ಲಿಕನ್ ಪಾರ್ಟಿಯ ವಿನಾಶಕಾರಕ ಕಾರ್ಯಕ್ರಮಗಳನ್ನು ಪರಿಶೀಲಿಸುವಂತೆ ಕೇಳಿಕೊಂಡಿತು. ಆಯೋಗವು ಸ್ವಯಂ ಅಸಾಧಾರಣ ಕಾರ್ಯವೊಂದನ್ನು ಮಾಡಿ, ಮೂರು ಮಾಸಗಳ ವರೆಗೆ, ಸೈನಿಕ ಶಾಸನವನ್ನು ಜ್ಯಾರಿಗೊಳಿಸಿತು. ಸಂವಿಧಾನಕ್ಕನುಸಾರವಾಗಿ, ಸಂಕಟಕಾಲದಲ್ಲಿ ಅಧಿಕಾಧಿಕವೆಂದರೆ, ಒಂದು ತಿಂಗಳ ವರೆಗೆ ಮಾತ್ರ ಸೈನಿಕ ಆಡಳಿತೆಯನ್ನು ವ್ಯವಹೃತಗೊಳಿಸಬಹುದು. ಆಯೋಗವು ಕೆಲವಾರು ವರ್ತಮಾನ ಪತ್ರಿಕೆಗಳ ಪ್ರಕಾಶನವನ್ನು ಕೂಡಾ ಸ್ಥಗಿತಗೊಳಿಸಿತು. ನ್ಯಾಯಾಲಯದಲ್ಲಿ ಆಯೋಗದ ವಿರುದ್ಧವಾಗಿ ಯಾವುದೇ ವಾದವನ್ನು ಹೂಡುವಂತಿಲ್ಲ.

ಕಳೆದ ಮಾಸದಲ್ಲಿ ತುರ್ಕಿ ಸಂಸತ್ತಿನಲ್ಲಿ ಶ್ರೀ ಇನೋನರು ಪರಿಶೀಲನಾ ಆಯೋಗಕ್ಕೆ ಕೊಡಲ್ಪಟ್ಟ ಅಸಾಧಾರಣ ಆಡಳಿತೆಯನ್ನು ಭರ್ತ್ಸನೆ ಮಾಡಿದರು. ತನ್ನನ್ನೇ ನ್ಯಾಯಾಧೀಶ, ಜೂರಿ ಮತ್ತು ಅಭಿಯೋಕ್ತರನ್ನಾಗಿ ಮಾಡಿಕೊಂಡರು. ಇನೋನೂರರ ಈ ಆಲೋಚನೆಯನ್ನು ಮಾಡಿದಾಗ, ದಕ್ಷಿಣ ಕೋರಿಯಾದಲ್ಲಿ ಡಾ| ಸಿಂಗ್ಮನ್ ರೀಯವರ ಪತನವಾಗಿತ್ತು. ಅಲ್ಲಿಯ ಉದಾಹರಣೆಯನ್ನು ಕೊಡುತ್ತ ಅವರು; "ಅವರಿಗೆ ವಿರೋಧಿ ಪಕ್ಷವಾಗಿರುವುದು ಒಗ್ಗುವುದಿಲ್ಲ; ಸದಾ ಶಾಸನಾರೂಢರಾಗಿರಲೇ ಬಯಸುತ್ತಾರೆ" ಎಂದು ಹೇಳಿದ್ದರು. ಅಲ್ಲದೇ, "ನನ್ನ ವಿಚಾರ ಇದರಿಂದ ಭಿನ್ನವಾಗಿದೆ. ಇಂದು ತುರ್ಕಿಯ ಭಾಗ್ಯ ವಿಧಾತರಾಗಿರುವವರು ತುರ್ಕಿಯ ಜನತೆಯು ಕೋರಿಯಾದ ಜನತೆಯಿಂದ ಅಸಾಧಾರಣೇಯರಲ್ಲವೆಂಬುದನ್ನು ಅವಶ್ಯ ತಿಳಿಯಬೇಕು" ಎಂದೂ ಎಂದಿದ್ದರು.

ಶಾಸನಾರೂಢ ಪಕ್ಷಕ್ಕೆ ಶ್ರೀ ಇನೋನೂರರ ಈ ಘೋಷಣೆಯಲ್ಲಿ ನೇರತಡೆಯು ಬಂದಿದೆ. ಇದರ ಅರ್ಥ ಅಸಾಂವಿಧಾನಿಕ ವಿಧಾನದಿಂದ ಸರಕಾರವನ್ನು ಕಿತ್ತು ಹಾಕಬೇಕಾಗುತ್ತದೆ ಎಂದು ಪರಿಣಾಮ ಸ್ವರೂಪವಾಗಿ, ಸರಕಾರವು ತನ್ನ ದಮನ ಚಕ್ರ ಮತ್ತು ಅಧಿಕ ಬೆದರಿಕೆಗಳನ್ನು ಶುರು ಮಾಡಿತು. ಪೀಪಲ್ಸ್ ರಿಪಬ್ಲಿಕನ್ ಪಾರ್ಟಿಯ ನಾಯಕರು ನಾಗರಿಕ ಕಲಹದಲ್ಲಿ ಸೇನೆಯನ್ನು ಎಳೆದು ತರುವುದಕ್ಕೆ ಸಮ್ಮತರಿದ್ದಿಲ್ಲ. ಸತ್ತಾರೂಢ ದಳವೂ ಅಂತಹ ಭಾವನೆಯನ್ನೇ ವ್ಯಕ್ತಪಡಿಸಿತ್ತು.

ಓರ್ವ ತುರ್ಕಿಯ ನಾಯಕನು. ಇನೋನೂರು ಪ್ರಜಾತಂತ್ರಕ್ಕೆ ತಿಲಾಂಜಲಿಯನ್ನು ಕೊಟ್ಟು ಅವರು ತಮ್ಮ ಈ ಇರಾದೆಯ ಸೂಚನೆಯನ್ನು ಮಾತ್ರ ಸೇನಾಧ್ಯಕ್ಷರಿಗೆ ಕೊಡಬೇಕಿತ್ತು. ಆದರೆ, ತ

(೧೦ನೇ ಪುಟ ನೋಡಿರಿ)



ಮೂರಂತಸ್ತಿನ ಅಮೆರಿಕೆಯ ಥೋರ್ ಏಬಲ್ ರಾಕೇಟನ್ನು ಹಾರಿಸಿದಾಗ ತೆಗೆದ ಚಿತ್ರವಿದು. ಈ ರಾಕೇಟು ಹಲವು ದಶಕಗಳ ವರೆಗೆ ಪಥಭ್ರಮಣ ಮಾಡಬಹುದೆಂಬ ನಿರೀಕ್ಷೆಯಿದೆ.

ಕಥಾವಿಹಾರ

ಕಟು ಸತ್ಯ ಬಯಲಾದಾಗ

ನಟ್ಟನಡುರಾತ್ರಿಯಲ್ಲಿ ಹಗ್ಗದೊಡನೆ ಹೊರಹೊರಟ ನರಸಪ್ಪಯ್ಯನವರ ವರ್ತನೆ ಅಂಜಿಕೆಯನ್ನು ಹುಟ್ಟಿಸಿತ್ತು; ಆದರೆ ಮರುಮುಂಜಾನೆ ಅದಕ್ಕೆ ಸಮಾಧಾನ ದೊರೆಯಿತು.

ಆಷಾಢ ಮಾಸದ ಅಮಾವಾಸ್ಯೆಯ ರಾತ್ರಿ. ನಾಲ್ದೆಸೆಗಳಲ್ಲೂ ಕಾರ್ಗತ್ತಲು ಕವಿದಿತ್ತು. ಕಣ್ಣಿಗೆ ಕಣ್ಣಿಟ್ಟರೂ ಕಾಣಿಸದು. ಆಗಸದಲ್ಲಿ ಕವಿದ ಕಾರ್ಮೋಡಗಳು ತಾರೆಗಳ ಬೆಳಕಿನಿಂದಲೂ ವಸುಂಧರೆಯನ್ನು ವಂಚಿತಗೊಳಿಸಿದ್ದುವು. ಘೋರಾಂಧಕಾರದ ಜೊತೆಗೆ ನೀರವತೆಯೂ ಕೂಡಿತ್ತು ಗಾಳಿಯೊಂದಿಗೆ ಬೆಂಕಿ ಕೂಡಿದಂತೆ.

ಮನೆಯ ಮಹಡಿಯ ಮೇಲಿನ ಕೋಣೆಯಲ್ಲಿ ಕುಳಿತ ನನ್ನ ಬರೆವಣಿಗೆಯ ಕೆಲಸ ನಿರಾತಂಕವಾಗಿ ಸಾಗಿತ್ತು. ಅರ್ಧರಾತ್ರಿಯು ಸಂದಿದ್ದರೂ ಕೈಯಲ್ಲಿ ಲೇಖನಿ ಹಿಡಿದು ಕುಳಿತ ನನ್ನ ಬಳಿಗೆ ಸುಳಿವ ಸಾಹಸ ನಿದ್ರಾಂಗನೆಗೂ ಎಲ್ಲಿಂದ ಬಂದೀತು? ನನ್ನ ಕೋಣೆಯಲ್ಲಿ ಉರಿಯುತಿದ್ದ ದೀಪದ ಬೆಳಕು ಕಿಟಕಿಯ ಮೂಲಕ ಹಾದು ಮನೆಯ ಎದುರಿನ ಅಂಗಣದ ಒಂದು ಭಾಗವನ್ನು ಬೆಳಗಿಸಿತ್ತು. ಆಗೊಮ್ಮೆ ಈಗೊಮ್ಮೆ ಮಿಂಚುತಿದ್ದ ಮಿಂಚು ಭೂಮಿಯನ್ನು ಒಮ್ಮೆ ಬೆಳಗಿಸಿ ಮರುಚಣವೇ ಮಾಯವಾಗುತಿತ್ತು.

ತುಸುಹೊತ್ತು ತಲೆಯಮೇಲೆ ಕೈಯಿರಿಸಿ ಯೋಚಿಸುವುದು, ಮತ್ತೆ ಏನನ್ನೋ ಬರೆಯುವುದು, ಬರೆದುದನ್ನೇ ಓದುವುದು, ಅಸಮಾಧಾನದ ಭಾವ ಮೂಡಿದೊಡನೆ ಬರೆದುದನ್ನು ಹೊಡೆದುಹಾಕುವುದು. ಪುನಃ ಏನನ್ನೋ ಬರೆಯುವುದು — ಹೀಗೆ ನನ್ನ ಬರೆವಣಿಗೆಯ ಕಾರ್ಯ ಸಾಗಿತ್ತು. ಥಕ್ಕನೆ ಬಹುಹೊತ್ತಿನ ನೀರವತೆಯನ್ನು ಭೇದಿಸಿ ಮನುಷ್ಯನ ಕಾಲ ಸಪ್ಪಳ ಕಿವಿಗೆ ಕೇಳಿಸಿತು. ಆ ಕಾಳರಾತ್ರಿಯಲ್ಲಿ ಜನಸಂಚಾರ — ಅಬ್ಬಾ ಏನಾಶ್ಚರ್ಯ! ಬರೆಯುತಿದ್ದ ಲೇಖನಿ ನಿಂತಿತು. ಕತ್ತೆತ್ತಿ ನೋಡಿದೆ, ನಮ್ಮ ಮನೆಯ ಹಿಂದಿನ ಮನೆಯ ನರಸಪ್ಪಯ್ಯನವರು ಕೈಯಲ್ಲಿ ಹಗ್ಗವೊಂದನ್ನು ಹಿಡಿದುಕೊಂಡು ಮುನ್ನಡೆಯುತಿದ್ದುದು ಗೋಚರಿಸಿತು. ನನ್ನ ಆಶ್ಚರ್ಯಕ್ಕೆ ಪರಿಮಿತಿಯೇ ಇಲ್ಲದಂತಾಯಿತು.

ನರಸಪ್ಪಯ್ಯನವರನ್ನು ಕರೆದು "ಎಲ್ಲಿಗೆ ಹೋಗುತ್ತಿರುವಿರಿ?" ಎಂದು ವಿಚಾರಿಸಲೇ ಎಂದೊಮ್ಮೆ ಯೋಚಿಸಿದೆ. ಊಹುಂ "ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಿದರೆ ಅಪಶಕುನವಾಯಿತೆಂದು ಮುಖ ಸಿಂಡರಿಸಿಕೊಳ್ಳುತ್ತಾರೆ ಎಂದು ನನ್ನ ಬುದ್ಧಿಗೆ ಹೊಳೆಯಿತು. ಬಳಿಕಿನ್ನೊಮ್ಮೆ ಅಪಶಕುನವಾಗಿ ಕೆಡಬಹುದಾದಂತಹ ಯಾವ ಘನ ಕಾರ್ಯದ ಸಲುವಾಗಿ ಈ ನಡುರಾತ್ರಿಯಲ್ಲಿ ಅವರು ಹೋಗುತ್ತಿರಬಹುದೆಂದು ಯೋಚಿಸಿದೆ. ಎಲ್ಲೆಲ್ಲೂ ಇದ್ದಿರುವ ನೀರವತೆಯನ್ನು ಭೇದಿಸಿ ಥಕ್ಕನೆ ಮನೆಯ ಮಹಡಿಯಲ್ಲೇ ಕುಳಿತು ಮಾತನಾಡಿಸಿದರೆ ನರಸಪ್ಪಯ್ಯನವರು ಹೆದರಿ ಹೌಹಾರಿ ಮರುದಿನ ಹಾಸಿಗೆ ಹಿಡಿದರೆ....ಎಂಬ ಭೀತಿಯೂ ನನ್ನನ್ನು ಕಾಡುತಿತ್ತು. ಆದ ಕಾರಣದಿಂದ ಏನೂ ಕೇಳದೆ ಅವರು ಹೋಗುತಿದ್ದದನ್ನೇ ನೋಡುತ್ತಾ ಕುಳಿತೆನು.

ನಮ್ಮ ಮನೆಯ ಅಂಗಳವನ್ನು ದಾಟಿ ವೆಂಕಪ್ಪಯ್ಯನವರ ಮಾವಿನ ತೋಪಿನೆಡೆಗೆ ನರಸಪ್ಪಯ್ಯನವರು ಹೋದರು. ಈ ಘೋರಾಂಧಕಾರಮಯವಾದ ರಾತ್ರಿಯಲ್ಲಿ ಕೈಯಲ್ಲಿ ಹಗ್ಗವೊಂದನ್ನು ಹಿಡಿದು ನರಸಪ್ಪಯ್ಯನವರು ಎಲ್ಲಿಗೆ ಹೋಗುತಿದ್ದಾರೆ ಎಂಬ ಸಮಸ್ಯೆ ನನ್ನ ತಲೆ ತಿನ್ನತೊಡಗಿತು. ಇದಕ್ಕೆ ನಾನಾತರವಾದ ಉತ್ತರಗಳು ನನಗೆ ಹೊಳೆದುವು. ಎಲ್ಲವೂ ಒಂದು ಇನ್ನೊಂದಕ್ಕಿಂತ ತೀರಾ ಭಿನ್ನವಾಗಿದ್ದುವು.

ನರಸಪ್ಪಯ್ಯನವರು... ಅಹುದು.... ಇತ್ತೀಚೆಗೆ ಅವರ ಮೊದಲ ಹೆಂಡತಿ ಸರಸ್ವತಿ ಶಾಂತಿಭೇದಿಯಿಂದ ಮಡಿದಳು. ಆಗ ತಮ್ಮ ಹಸುಗೂಸುಗಳಿಗೆ ತಾಯಿಯೊಬ್ಬಳು ಬೇಕೆಂದು ಶಿವರಾಮ ಭಟ್ಟರ ಮಗಳು ರುಕ್ಮಿಣಿಯನ್ನು ಕೈಹಿಡಿದು ತಂದಿದ್ದರು. ಮದುವೆಯಾಗುವಾಗ ಅವರಿಗಿದ್ದ ಉತ್ಸಾಹ ಇತ್ತೀಚೆಗೆ ಉಳಿದಂತೆ ಕಾಣಿಸುತ್ತಿರಲಿಲ್ಲ. ದಿನ ಬೆಳಗಾದರೆ ಮನೆ ಕುರುಕ್ಷೇತ್ರವಾಗುತಿತ್ತು. ಆ ಎಳೆ ಮಕ್ಕಳಪಾಲಿಗೆ ರುಕ್ಮಿಣಿ ತಾಯಿಯಾಗಿರದೆ ರಕ್ಕಸಿಯೇ ಆಗಿದ್ದಳು. ಮಕ್ಕಳ ಪಾಡು ನೋಡಿ ನರಸಪ್ಪಯ್ಯನವರ ಮನಮಮ್ಮಲ ಮರುಗುತಿತ್ತು. ಆದರೂ ಹೆಂಡತಿಗೆ ಎದುರುತ್ತರ ಕೊಡುವ ಪೌರುಷ ಅವರಲ್ಲಿರಲಿಲ್ಲ. ಊರಿನ ಹಲವಾರು ಮಂದಿಯನ್ನು ಗದರಿಸಿ ತನ್ನ ಹಸ್ತವರ್ತಿಯಾಗಿ ಮಾಡಿಕೊಂಡ ನರಸಪ್ಪಯ್ಯನವರೂ ರುಕ್ಮಿಣಿಯ ಕಂಠಸ್ವರಕ್ಕೆ ಬೆದರುತಿದ್ದರು. ಅವಳು ಒಮ್ಮೆ ಬಾಯಿ ತೆರೆದಳೆಂದರೆ ನರಸಪ್ಪಯ್ಯನವರ ಎದೆ ಗಡಗಡ ನಡುಗುತಿತ್ತು. ಅಂದು ಮಧ್ಯಾಹ್ನ ಅವರ ಮನೆಯಲ್ಲೇನೋ ಜಗಳವಾಗಿತ್ತೆಂದು ತಮ್ಮ ಹೇಳುತಿದ್ದನು. ಇದರಿಂದಾಗಿ ಸಂಸಾರದಲ್ಲೇ ಜುಗುಪ್ಸೆಹೊಂದಿ ನರಸಪ್ಪಯ್ಯನವರು ಆತ್ಮಹತ್ಯೆಗೆ ಹೊರಟಿರಬಹುದೇ?... ವೆಂಕಪ್ಪಯ್ಯನವರ ತೋಪಂತೂ ಆತ್ಮಹತ್ಯೆಗೆ ಬಲು ಪ್ರಸಿದ್ಧವಾದುದು. ಕಳೆದ ವರ್ಷ ಬೀಡಾ ಅಂಗಡಿ ರಂಗಣ್ಣನ ಮಗಳು ಇಂದಿರೆ, ಹದಿನೆಂಟರ ಹರೆಯದ ಸುಂದರ ತರುಣಿ, ಕಾಲೇಜಿಗೆ ಹೋಗುತಿದ್ದವಳು ಮದುವೆಯಾಗುವ ಮೊದಲು ಗರ್ಭಿಣಿಯಾದಾಗ ಮನೆಯವರೆಲ್ಲ ಆಕೆಯನ್ನು ಚೆನ್ನಾಗಿ ಗದರಿಸಿದ್ದರಂತೆ, ಮರುದಿನ ಮುಂಜಾನೆ ಆಕೆಯ ಹೆಣ ವೆಂಕಪ್ಪಯ್ಯನವರ ತೋಪಿನ ಮಾವಿನ ಮರವೊಂದರಲ್ಲಿ ನೇಲುತಿತ್ತು! ಈ ಅಮಾವಾಸ್ಯೆಯ ಕಗ್ಗತ್ತಲೆಯಲ್ಲಿ ನರಸಪ್ಪಯ್ಯನವರೂ ಕೈಯಲ್ಲಿ ಹಗ್ಗ ಹಿಡಿದು ಆತ್ಮಹತ್ಯೆಗೆ ಹೊರಟಿರಬಹುದೇ ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆ.

ಊಹುಂ. ಹಾಗಿರದು. ನರಸಪ್ಪಯ್ಯನವರು ಆತ್ಮಹತ್ಯೆ ಮಾಡಿಕೊಳ್ಳಲು ಹೇಡಿಗಳೇ? ಬೇರೆಲ್ಲಿಗೋ ಹೊರಟಿದ್ದಾಗ ದಾರಿಯಲ್ಲಿ ಹಗ್ಗವೊಂದು ಬಿದ್ದುದನ್ನು ಕಂಡು ಅದನ್ನು ಹಿಡಿದುಕೊಂಡರೇ? ಆದರೆ ಅವರ ಕೈಯಲ್ಲಿ ಲಾಂದ್ರವಿರಲಿಲ್ಲವಲ್ಲ; ಹಗ್ಗ ಬಿದ್ದಿದ್ದರೆ ಈ ಕಾರ್ಗತ್ತಲಿನಲ್ಲಿ ಅದು ಹೇಗೆ ಅವರಿಗೆ ಕಾಣಿಸೀತು? ಹಗ್ಗವು ಅವರ ಕಾಲಿಗೆ ಸುತ್ತಿಕೊಂಡುದರಿಂದ ಅವರು ಅದನ್ನು ತೆಗೆದುಕೊಂಡಿರಬಹುದೇ ಅಥವಾ ಥಕ್ಕನೆ ಮಿಂಚೊಂದು ಮಿಂಚಿದಾಗ ಹಗ್ಗ ಕಾಣಿಸಿಕೊಂಡಿತೇ? ಹಾಗಿದ್ದರೆ ಅವರು ಈ ನಡುರಾತ್ರಿಯ ಹೊತ್ತು ಎಲ್ಲಿಗೆ ಹೊರಟುದುದು ಎಂದು ಯೋಚಿಸತೊಡಗಿದೆ.

ಊಹುಂ. ಇವೆಲ್ಲ ಅಸಂಬದ್ಧ ಯೋಚನೆಗಳು. ನರಸಪ್ಪಯ್ಯನವರಿಗೆ ಪರರ ಮನೆಯ ಕಟ್ಟಿಗೆ ಅಪಹರಿಸುವ ದುರಭ್ಯಾಸವಿದೆಯೆಂದು ಹೇಳುವರಲ್ಲಾ. ಹಾಗೇನಾದರೂ ಕಟ್ಟಿಗೆ ಕಳುವ ಕೆಲಸಕ್ಕೆ ಹಗ್ಗ ಹಿಡಿದುಕೊಂಡು ಹೊರಟಿರುವರೇ? ಛಿಃ ಯೋಚಿಸಬಾರದ ವಿಷಯಗಳು. ಪರರ ನಡತೆಯ ಬಗ್ಗೆ ಈ ರೀತಿ ಶಂಕಿಸಿ ಬಂದೆ ಪಾಪ ಕಟ್ಟಿಕೊಂಡಂತಾಗದೇ? ಇದೆಲ್ಲಾ ಅವರ ಹಗೆ ಗೋವಿಂದ ಭಟ್ಟರು ಕಲ್ಪಿಸಿಕೊಂಡ ಕಟ್ಟುಕತೆ ಇರಬಹುದು. ಇಲ್ಲವಾದರೆ ನರಸಪ್ಪಯ್ಯನವರು ಸಜ್ಜನರಂತೆ ಕಾಣುತ್ತಾರೆ. ಅವರೇಕೆ ಪರರ ಕಟ್ಟಿಗೆ ಅಪಹರಿಸುವರು ಎಂದು ನನ್ನನ್ನು ನಾನೆ ಪ್ರಶ್ನಿಸಿಕೊಂಡೆ.

ಆಂ. ಈಗೊಂದು ಕಾರಣ ಹೊಳೆಯಿತು. ಅದು ನಿಜವಾಗಿದ್ದರೂ ಇರಬಹುದು. ಆ ದಿನ ಸಂಜೆ ನರಸಪ್ಪಯ್ಯನವರ ಮನೆಯ ಮಕ್ಕಳಿಗೂ ಗೋವಿಂದ ಭಟ್ಟರ ಮನೆಯ ಮಕ್ಕಳಿಗೂ ದೊಡ್ಡ ಜಗಳವಾಗಿತ್ತಂತೆ. ಈ ಜಗಳದಲ್ಲಿ ಗೋವಿಂದ ಭಟ್ಟರು ಮಧ್ಯೆ ಪ್ರವೇಶಿಸಿ ನರಸಪ್ಪಯ್ಯನವರ ಮಕ್ಕಳನ್ನು ಕೈಯಲ್ಲಿ ಯಾವುದೋ ಕೆಲಸದ ಸಲುವಾಗಿ ಹಿಡಿದುಕೊಂಡಿದ್ದ ಹಗ್ಗದಲ್ಲೇ ಹೊಡೆದಿದ್ದರೆಂದು ನನ್ನ ತಮ್ಮ ಹೇಳುತಿದ್ದನು. ಅದೇ ಸೇಡನ್ನು ತೀರಿಸಿಕೊಳ್ಳಲು ಹಗ್ಗವೊಂದನ್ನು ಹಿಡಿದು ನರಸಪ್ಪಯ್ಯನವರು ಹೊರಟಿರಬಹುದೇ? ಛಿಃ, ಆದಿರಲಾರದು. ಈ ನಡುರಾತ್ರಿಯ ಹೊತ್ತು ಗೋವಿಂದ ಭಟ್ಟರ ಮನೆಯಲ್ಲಿ ಯಾರು ಎಚ್ಚರದಿಂದ್ದಾರೆ? ಕದ ಹಿಕ್ಕಿಕೊಂಡು ಎಲ್ಲರೂ ನಿದ್ರಿಸುತ್ತಿರಬಹುದಲ್ಲವೇ? ಹಾಗೇನಾದರೂ ಸೇಡು ತೀರಿಸಿಕೊಳ್ಳುವುದಿದ್ದರೆ ಈ ಮೊದಲೇ ಹೊರಡಬಹುದಿತ್ತಲ್ಲಾ ಎಂದು ನಾನೇ ಕೇಳಿಕೊಂಡೆ.

ಹೀಗೆ ನನ್ನ ಯೋಚನಾ ಲಹರಿ ವಿವಿಧ ರೀತಿಯಾಗಿ ಹರಿಯುತ್ತಿತ್ತು. ಆದರೆ ಕಟ್ಟಕಡೆಗೆ ನಾನು ಯಾವುದೊಂದೂ ನಿರ್ಧಾರಕ್ಕೆ ಬರಲಾಗದೆ ತಲೆ ತುರಿಸಿಕೊಳ್ಳುತ್ತಿದ್ದೆ. ಈ ಯೋಚನೆಗಳಿಂದ ಕಣ್ಣಿಗೆ ಜೊಂಪು ಹತ್ತುವುದರಲ್ಲಿತ್ತು. ಥಕ್ಕನೆ ನನ್ನ ಕಿವಿಗೆ "ನಂದಿನೀ, ನನ್ನ ಮುದ್ದಿನ ನಂದಿನೀ, ನನ್ನನ್ನು ಬಿಟ್ಟು ಎಲ್ಲಿಗೆ ಹೋಗಿದ್ದಿ" ಎಂಬ ಮಾತು ಕೇಳಿಬಂದಿತು. ಈ ವಾಕ್ಯಗಳು, ತೂಕಡಿಸುತಿದ್ದ ನನ್ನನ್ನು ಹೊಡೆದೆಬ್ಬಿಸಿದುವು. ಕತ್ತೆತ್ತಿ ನೋಡುತ್ತೇನೆ, ನರಸಪ್ಪಯ್ಯನವರು ತಮ್ಮ ಮನೆಯ ದನದ ಕರು ನಂದಿನಿಯನ್ನು ಕರೆದುಕೊಂಡು ಮನೆಯ ಕಡೆಗೆ ಹೊರಟಿದ್ದರು.

ಮಲಗಿದ ನರಸಪ್ಪಯ್ಯನವರ ಕಿವಿಗೆ ಏನೋ ಸಪ್ಪಳ ಕೇಳಿದಾಗ ಎಚ್ಚರವಾಯಿತಂತೆ. ಆಗ ಎದ್ದು ನೋಡಿದಾಗ ಕೊಟ್ಟಿಗೆಯಲ್ಲಿ ಕಟ್ಟಿದ ದನದ ಕರು ಇದ್ದಿರಲಿಲ್ಲವಂತೆ. ಅದನ್ನೇ ಹುಡುಕಲು ಮನೆಯಿಂದ ಹಗ್ಗದೊಂದಿಗೆ ನಡುರಾತ್ರಿ ಹೊರಬಿದ್ದಿದ್ದರೆಂದು ಮರುದಿನ ನನ್ನ ತಾಯಿ ಹೇಳಿದಳು. ಆಗಲೇ ನನ್ನ ಮನಸ್ಸಿನಲ್ಲಿ ಮೂಡಿದ ಪ್ರಶ್ನಾರ್ಥಕ ಚಿಹ್ನೆಗೆ ತಕ್ಕ ಉತ್ತರ ದೊರೆತದ್ದು.

— ಪಾ. ಚಂದ್ರಶೇಖರ ಚಡಗ
ಪಾಂಡೇಶ್ವರ.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಹಾರ್ಮೋನಿಯಮ್
ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

ತಮ್ಮನಿಗೆ ಓಲೆ—೭

ಸಮಾಜಪ್ರತಿನಿಧಿ--ಕವಿ

ಕವಿ ಅಥವಾ ಲೇಖಕ ಸ್ವಕಾಲೀನ ಸಮಾಜದ ಪ್ರತಿನಿಧಿಯಾಗಿದ್ದಾನೆ; ಆತನ ಕೃತಿ ತತ್ಕಾಲೀನ ಇತಿಹಾಸದಿಂದ ಪ್ರಭಾವಿತವಾಗುತ್ತದೆ.

ಕವಿ ಇಲ್ಲವೇ ಲೇಖಕನು ತನ್ನ ಕಾಲದ ಪ್ರತಿನಿಧಿಯಂತಿರುತ್ತಾನೆ. ಆತನಿಗೆ ಯಾವರೀತಿಯ ಮಾನಸಿಕ ಆಹಾರವು ದೊರೆಯುತ್ತದೆಯೋ ಅದರ ಪ್ರಭಾವವನ್ನು ಹೊಂದಿಕೊಂಡೇ ಆತನ ಕೃತಿಗಳು ಹೊರಬರುತ್ತವೆ. ನಿಸ್ತಂತು ಅಥವಾ ವಯರ್‌ಲೆಸ್‌ನ ಗ್ರಾಹಕ ಯಂತ್ರವು ಆಕಾಶಮಂಡಲದಲ್ಲಿ ಸಂಚರಿಸುತ್ತಿರುವ ವಿದ್ಯುತ್ ತರಂಗಗಳನ್ನು ಸೆಳೆದುಕೊಂಡು ಅವಕ್ಕೆ ಶಾಬ್ದರೂಪವನ್ನು ಕೊಡುವಂತೆ ಕವಿ ಅಥವಾ ಲೇಖಕನು ತನ್ನ ಸಮಯದ ವಾಯುಮಂಡಲದಲ್ಲಿ ತಿರುಗುತ್ತಿರುವ ವಿಚಾರಗಳನ್ನು ಹಿಡಿದುಕೊಂಡು ಅವನ್ನು ಮುಖರಾಯಮಾನವಾಗಿಸುತ್ತಾನೆ. ಎಲ್ಲರೂ ಅನುಭವಿಸುವ, ಎಲ್ಲರ ಅನುಭವಕ್ಕೆ ಬರುವ, ಆದರೆ, ಎಲ್ಲರಿಂದಲೂ ಹೇಳಲಾಗದ ವಿಷಯಗಳನ್ನು ಕವಿಯು ನುಡಿಯಬಲ್ಲನು. ಸಹೃದಯತಾಪೂರ್ಣ ಕವಿಯ ಮಾತುಗಳು ಆತನ ಅನುಭವದ ಆಳದಿಂದ ಉಕ್ಕಿ ಹರಿಯುವುದರಿಂದ, ಸಾಮಾನ್ಯ ಜನರ ಮಾತುಗಳಿಂತ ಉತ್ತಮ ಶಕ್ತಿಶಾಲಿಯಾಗಿರುತ್ತವೆ. ಒಂದುವೇಳೆ ಆತನಿಗೆ ಕೆಲವೆಡೆ ಯಾವುದೇ ಒಂದು ಸಂಗತಿಯ ಅಸ್ಪಷ್ಟ ಹಾಗೂ ಕ್ಷೀಣ ರೇಖೆಯು ಕಂಡುಬಂದರೆ, ಕವಿ ಅದರ ಆಧಾರದಿಂದ ಸುಸ್ಪಷ್ಟವಾದ ಚಿತ್ರವನ್ನು ಬರೆಯುತ್ತಾನೆ. ಸಾಮಾನ್ಯವಾಗಿ ಆತನು ಬರೆದ ಶಬ್ದರೂಪದ ಈ ಚಿತ್ರ ವಾಸ್ತವಿಕವಾಗಿಯೇ ಇರುತ್ತದೆ.

ಕವಿ ಇಲ್ಲವೇ ಲೇಖಕನು ತನ್ನ ಕಾಲದ ಜನತೆಯ ಹಾಗೂ ಸಮಾಜದ ಮೊದುಸು ಮತ್ತು ಮುಖಗಳನ್ನು ಪ್ರತಿನಿಧೀಕರಿಸುತ್ತಾನೆ. ಕವಿಯು ಕೂಗು ಸಮಾಜದ ಕೂಗಾಗಿರುತ್ತದೆ. ಸಮಾಜದ ಅಭಿಪ್ರಾಯಗಳನ್ನು ಕವಿಯು ವ್ಯಕ್ತವಾಗಿಸಿ ಅವು ಸಜೀವವೂ ಶಕ್ತಿಶಾಲಿಯೂ ಆಗಿರುವಂತೆ ಮಾಡುತ್ತಾನೆ. ಕವಿಯು ತೋರ್ಪಡಿಸಿದ ಸಾಮಾಜಿಕ ಭಾವಗಳ ಮೂರ್ತಿಯು ಸಮಾಜದ ಕಣ್ಣಾಗಿರುತ್ತದೆ. ಹೀಗೆ ಕವಿ ಮತ್ತು ಲೇಖಕರು ಸಮಾಜದ ಶ್ರೇಷ್ಠ ನಾಯಕರೂ ಇತಿಹಾಸದ ರಚಯಿತರೂ ಆಗಿರುತ್ತಾರೆ. ಅವರ ಭಾಷೆಯಲ್ಲಿ ನಮಗೆ ಸಮಾಜದ ಭಾವಗಳು ಮಿಂಚುತ್ತಿರುವುದು ಗೋಚರವಾಗುತ್ತದೆ. ನಾವು ಸಮಾಜದ ಹೃದಯವನ್ನು ಅರಿಯ ಬೇಕಾದರೆ ಅದಕ್ಕೆ ಕವಿಯೇ ಮಾಧ್ಯಮನಾಗುತ್ತಾನೆ. ಸಮಾಜವನ್ನು ಪ್ರಭಾವಿತಗೊಳಿಸಿ ವಾಯುಮಂಡಲದಲ್ಲಿ ಹೊಸ ಹೊಸ ಅಲೆಗಳನ್ನೆಬ್ಬಿಸುವ ಪರಿಸ್ಥಿತಿಗಳನ್ನೂ ನಾವು ಆತನಿಂದ ಕಂಡುಕೊಳ್ಳಬಹುದು. ಸಮಾಜದ ಪ್ರತಿನಿಧಿ ಸ್ವರೂಪರಾದ ಕವಿಗಳ ಮತ್ತು ಲೇಖಕರ ವಿಚಾರಗಳ ಸಂಗ್ರಹವೇ ಸಾಹಿತ್ಯವಾಗಿ ರೂಪಧಾರಣೆ ಮಾಡುತ್ತದೆ.

ಪ್ರತಿಯೊಂದು ಸಮಾಜದ ಸಾಹಿತ್ಯಕ್ಕೂ ಒಂದು ಸ್ವತಂತ್ರ ವ್ಯಕ್ತಿತ್ವವಿರುತ್ತದೆ. ಮಾನವ ಹೃದಯವು ಒಂದೇ ರೀತಿಯಾಗಿರುವುದಾದರೂ ಒಂದೊಂದು ಸಮಾಜದ ಸಾಹಿತ್ಯದಲ್ಲಿ ಒಂದೊಂದು ವೈಶಿಷ್ಟ್ಯವಿರುತ್ತದೆ ಅಲ್ಲದೇ ಪ್ರತಿಯೊಂದು ಸಮಾಜದ ಸಾಹಿತ್ಯವೂ ಬೆಳೆದು ಬಂದಂತೆ ಅದರಲ್ಲಿ ಆಗಾಗ ಬೆಳವಣಿಗೆಯ ಮೂಲಕ ಪರಿವರ್ತನೆಯಾಗುತ್ತ ಬರುತ್ತದೆ. ತ್ಯಾಗ ಮತ್ತು ಆತ್ಮ ವಿಷಯಕವಾದ ವಿಸ್ತಾರ ವಿವರಣೆ ಉಪನಿಷತ್ತುಗಳಲ್ಲಿ ತೋರಿಬರುವುದಾದರೂ, ಅಂತಹ ವಿಚಾರ ಬೇರೆ ಸಾಹಿತ್ಯದಲ್ಲಿ ನಾವು ಕಾಣಲಾರೆವು. ನಮ್ಮದು ತಪೋವನಗಳ ವಿಚಾರಧಾರೆಯೆಂದು ಹೇಳಬಹುದು. ವಿಶ್ವಕವೀಂದ್ರ ರವೀಂದ್ರರು "ಪ್ರಥಮ ಸಾಮರವ ತವ ತಪೋವನೇ" ಎಂದು ಉಚ್ಚ ಸ್ವರದೊಡನೆ ಹಾಡಿದ್ದಾರೆ. ಭಾರತದ ಸ್ವಚ್ಛ, ಉನ್ಮುಕ್ತ, ಉಜ್ವಲ, ಜ್ಯೋತಿಸ್ಸ್ವಮಯವಾದ ತಪೋವನಗಳು ಭಾರತೀಯ ಹೃದಯಗಳಲ್ಲಿ ಮೂಡಿಸಿದ ಸ್ವತಂತ್ರತೆಯ ಭಾವಗಳು ನಮಗೆ ನಮ್ಮ ಉಪನಿಷತ್ ಸಾಹಿತ್ಯದಲ್ಲಿ ಲಭ್ಯಮಾನವಾಗಿವೆ. ವಾತಾವರಣದ ಆವರ್ತನ—ಪರಿವರ್ತನ, ರಾಜ್ಯಗಳ ಏರು—ಪೇರು, ಮತ್ತು ವಿಚಾರಗಳ ಸಂಘರ್ಷಣೆಗಳ ಪರಿಣಾಮವಾಗಿ ಈ ಭಾವಗಳು ತಡೆಯಲ್ಪಡುತ್ತವೆ; ಆದರೆ, ಸಮಯ ಬಂದೊದಗಿದೊಡನೆಯೇ ಪುನಃ ಉದಯವಾಗುತ್ತವೆ. ಶೇಕ್ಸ್‌ಪಿಯರ ಮತ್ತು ಕಾಳಿದಾಸರನ್ನು ಪರಸ್ಪರ ಹೋಲಿಸುವ ಪರಿಪಾಠವೊಂದಿದೆ. ಆದರೆ, ಈ ಇರ್ವರು ಮಹಾಕವಿಗಳ ಕೃತಿಗಳಲ್ಲಿ ತಂತಮ್ಮ ದೇಶ ಕಾಲ ಮತ್ತು ಸಮಾಜದ ವಿಶಿಷ್ಟತೆಗಳು ಕಳೆಯೆತ್ತಿ ತೋರುತ್ತವೆ. ಕರ್ಮ ಮತ್ತು ಪುನರ್ಜನ್ಮದ ವಿಚಾರಗಳು ಹಿಂದೂ ಸಮಾಜದ ವಿಶೇಷತೆಗಳಾಗಿವೆ. ಕಾಳಿದಾಸನಲ್ಲಿ ಈ ಸಿದ್ಧಾಂತಗಳ ಸ್ಫುರದ್ರೂಪ ನಮಗೆ ಅಲ್ಲಲ್ಲಿ ದೊರೆಯುತ್ತವೆ; ಆದರೆ, ಶೇಕ್ಸ್‌ಪಿಯರನಲ್ಲಿ ಇವುಗಳು ತೋರುವುದಿಲ್ಲ. ರಘುವಂಶದ ಈ ಶ್ಲೋಕಗಳನ್ನು ನೋಡಿರಿ:

ಕಲ್ಯಾಣ ಬುದ್ಧೇರಥವಾ ತವಾಯಂ
ನಕಾಮ ಚಾರೀ ಮಯಿ ಶಂಕನೀಯಃ
ಮಮೈವ ಜನ್ಮಾಂತರ ಪಾತಕಾನಾಂ
ವಿಪಾಕ ವಿಸ್ಫೂರ್ಜಥುರಪ್ರಸಹ್ಯಃ ||
ಸಾಹಂ ತಪಃ ಸೂರ್ಯನಿವಿಷ್ಟ ದೃಷ್ಟಿಃ
ಊರ್ಧ್ವಂ ಪ್ರಸೂತೇಶ್ಚರಿತುಂ ಯತಿಷ್ಯೇ
ಭೂಯೋ ಯಥಾ ಮೇ ಜನನಾಂತರೇಪಿ
ತ್ವಮೇವ ಭರ್ತಾ ನಚ ವಿಪ್ರಯೋಗಃ||

ಸೀತಾದೇವಿಯು ಪರಿತ್ಯಕ್ತೆಯಾದ ಮೇಲೆಯೂ ಲಕ್ಷ್ಮಣನೊಡನೆ ಹೀಗೆ ಹೇಳುತ್ತಾಳೆ: "ರಾಮಚಂದ್ರನು ಈ ಕೃತ್ಯವನ್ನು ಸ್ವೇಚ್ಛಾಚಾರದಿಂದ ಗೈದನೆಂದು ನಾನು ಸಂದೇಹ ಪಡುವುದಿಲ್ಲ. ಇದು ನನ್ನ ಜನ್ಮಾಂತರದ ಪಾಪದ ಫಲವಾಗಿದೆ; ನನಗೆ ವಜ್ರದಂತೆ ಅಸಹ್ಯವಾಗುತ್ತಿದೆ ಎಂದು ತಿಳಿಯುತ್ತೇನೆ. ನಾನು ಈ ಪ್ರಸೂತಿ ಕಾರ್ಯದಿಂದ ಬಿಡುಗಡೆ ಹೊಂದಿದ ನಂತರ ಸೂರ್ಯನತ್ತ ದೃಷ್ಟಿಯಿರಿಸಿ ತಪವನ್ನಾಚರಿಸುವೆನು. ಜನ್ಮಾಂತರದಲ್ಲಿಯೂ ಅವರೇ ನನ್ನ ಪತಿಯಾಗಬೇಕು; ಮತ್ತು ಎಂದಿಗೂ ವಿಯೋಗವಾಗಬಾರದು ಎಂದು ಪ್ರಾರ್ಥಿಸುತ್ತೇನೆ"—ಮೇಲಿನ ಎರಡೂ ಶ್ಲೋಕಗಳಲ್ಲಿ ಹಿಂದೂ ಧರ್ಮದಲ್ಲಿ ಹೇಳಲಾದ ಸೂರ್ಯ ತಪಸ್ಸು ಮತ್ತು ಪುನರ್ಜನ್ಮದ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆಯಲ್ಲವೆ?

ಮುಸಲ್ಮಾನ ಸಾಹಿತ್ಯವನ್ನು ನಾವು ನೋಡುವುದಾದರೆ, ಅದರಲ್ಲಿ ನಾಟಕಗಳ ಕೊರತೆಯಿರುವುದು ಎದ್ದು ತೋರುತ್ತದೆ. ಇದಕ್ಕೆ ಅವರಲ್ಲಿ ಮೂರ್ತಿಪೂಜೆಗೆ ವಿರೋಧಭಾವನೆಯಿರುವುದೇ ಕಾರಣವಾಗಿದೆ. ಇವರ ವಿಚಾರಗಳಲ್ಲಿ ಅದೃಷ್ಟವಾದವೇನೋ ಇದೆ; ಆದರೆ, ಕರ್ಮವಾದವಿರುವುದಿಲ್ಲ. ಹಿಂದುಗಳಲ್ಲಿ ಅವರು ಗೈದ ಕರ್ಮವೇ ಭಾಗ್ಯವನ್ನು ರೂಪಿಸುತ್ತದೆ. "ಆರೇನು ಮಾಡುವರು ಆರಿಂದಲೇನಹುದು ಪೂರ್ವ ಜನ್ಮದ ಕರ್ಮ ವಿಧಿ ಬೆನ್ನ ಬಿಡದು" ಮತ್ತು "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನು ದೇವಾ" ಎಂಬ ಕೀರ್ತನೆಗಳಲ್ಲಿ ಇದು ಸುವ್ಯಕ್ತಪಟ್ಟಿದೆ. ಮುಸಲ್ಮಾನರಲ್ಲಿ ಪರಮಾತ್ಮನ ಇಚ್ಛೆಯೇ ಪ್ರಧಾನವಾಗಿದೆ. ಸಮ್ಮಿಲಿತ ಸಮಾಜದ ಚಿತ್ರ ಹಿಂದೂ ಸಾಹಿತ್ಯದಲ್ಲಿ ರೂಪಿತವಾದಂತೆ ಮತ್ತೆಲ್ಲಿಯೂ ತೋರಿಬರುವುದಿಲ್ಲ. ಶೇಕ್ಸ್‌ಪಿಯರನು ಲಕ್ಷ ಪ್ರಯತ್ನವನ್ನು ಮಾಡಿದರೂ ತುಲಸೀದಾಸನ ರಾಮಚರಿತಮಾನಸದ ಭಾವಗಳನ್ನೂ ಕಲ್ಪನೆಗಳನ್ನೂ ತರಲಾರನು. ಅದೇ ಮಾದರಿಯಲ್ಲಿ ತುಳಸೀದಾಸನು ತನ್ನ ಕೃತಿಯಲ್ಲಿ ಮಿಲ್ಟನ್ ಮಹಾಕವಿಯ 'ಪೆರಡೈಸ್ ಲಾಸ್ಟ್'ನಲ್ಲಿ ವ್ಯಕ್ತವಾದ ಕಲ್ಪನೆಯನ್ನು ಎಂದೂ ತಂದುಕೊಳ್ಳಲಾರನು ಏಕೆಂದರೆ, 'ಪೆರಡೈಸ್ ಲಾಸ್ಟ್'ನಲ್ಲಿ ಪರಮಾತ್ಮನಿಗೆ ವಿರುದ್ಧವಾಗಿ ಸೈತಾನನು ದ್ರೋಹವೆಸಗಿದುದರ ವರ್ಣನೆಯಿರುವುದು, ಮೊದಲಿಗೆ ಹಿಂದೂ ಸಾಹಿತ್ಯದಲ್ಲಿ ಪರಮಾತ್ಮನಿಗೆದುರಾದ ಯಾವುದೇ ಪ್ರತಿಶಕ್ತಿಯಿರಲಿಲ್ಲ. ಹಾಗಿರುವಾಗ ತುಲಸೀದಾಸನಂತಹ ಒಬ್ಬ ದೈವಭಕ್ತ ಅಂತಹ ಪ್ರತಿಸ್ಪರ್ಧಿಯ ಕಲ್ಪನೆಯನ್ನೂ ಮಾಡಲಾರ. ಹಿಂದುಗಳಲ್ಲಿ ದೇವತೆ ಮತ್ತು ದಾನವರ ನಡುವೆ ವೈರತ್ವವಿತ್ತು. ವಿಷ್ಣುವಿನೊಡನೆ ಹಿರಣ್ಯಕಶಿಪುವಿಗೆ ಶತ್ರುತ್ವವಿತ್ತು ಎಂಬುದು ನಿಜವೇ. ಆದರೆ, ಈ ದಾನವೇಶ್ವರನು ಸೈತಾನನಂತೆ ಸ್ವರ್ಗದಲ್ಲಿ ವಾಸಮಾಡುತ್ತಿರಲಿಲ್ಲ; ಅಥವಾ ಆತನಲ್ಲಿ ಸೈತಾನನಲ್ಲಿರುವಂತೆ ವ್ಯಾಪಕ ಪ್ರಭಾವವೂ ಇರಲಿಲ್ಲ. ಮಿಲ್ಟನನು ತನ್ನ ಗ್ರಂಥವನ್ನು ಬರೆದಕಾಲದಲ್ಲಿ ಇಂಗ್ಲೆಂಡಿನಲ್ಲಿ ಅಧಿಕಾರಿಗಳಿಗೆದುರಾಗಿ ಪ್ರತಿಧ್ವನಿಯೆದ್ದಿತ್ತು. ನಮ್ಮಲ್ಲಿ ರಾಜಸತ್ತೆಯ ವಿರೋಧದಿಂದ ನೊಂದ ರಾಜಾ ವೇಣುವಿನ ಕಥೆಯೇನೋ ಇದೆ; ಆದರೆ, ಈತನು ಬಹು ದೊಡ್ಡ ಅತ್ಯಾಚಾರಿಯಾಗಿದ್ದನು. ಹಿಂದೂ ಜನರು ಸ್ವಭಾವತಃ ಅಧಿಕಾರಿಗಳನ್ನು ಮನ್ನಿಸುವವರಾಗಿದ್ದಾರೆ.

ಹಿಂದೂ ಸಮಾಜದಲ್ಲಿ ತ್ಯಾಗ ಮತ್ತು ಅಹಿಂಸೆಗಳು ಪ್ರಧಾನ ಸ್ಥಾನವನ್ನು ಪಡೆದಿವೆ. ಆದುದರಿಂದಲೇ ನಮ್ಮ ಸಾಹಿತ್ಯದಲ್ಲಿ ಪುರುಷೋತ್ತಮ ಶ್ರೀ ರಾಮಚಂದ್ರ, ತ್ಯಾಗಿ ಬುದ್ಧದೇವ, ಸತ್ಯ ಪರಾಯಣ ಹರಿಶ್ಚಂದ್ರ, ದಾನಿ ಶಿರೋಮಣಿ ಶಿಬಿ, ಆತ್ಮೋತ್ಸರ್ಗ ದಧೀಚಿಗಳ ವರ್ಣನೆಗಳಿಗೆ ಪ್ರಾಧಾನ್ಯ ದೊರೆತಿದೆ. ಉರ್ದು ಕವಿಗಳಲ್ಲಿ ಪ್ರೇಮ ವರ್ಣ

(೧೩ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)

ಸಂಪಾದಕರು:- **ಯೋಗಿರಾಜ ಶ್ರೀ ಉಮೇಶಚಂದ್ರರು.**

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4	ತಿಂಗಳ ವರೆಗೆ	4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ಪರಿಚಯ

ಮೃತ್ಯು ದಂಡನೆಗೆ ಗುರಿಯಾದ ಚೆಸ್‌ಮನ್

೧೫ನೆ ವಯಸ್ಸಿನಲ್ಲಿಯೇ ಸೆರೆಮನೆವಾಸವನ್ನು ಅನುಭವಿಸಲು ತೊಡಗಿದ ಈತ ತನ್ನ ಪ್ರತಿಭಾಪೂರ್ಣ ಕೃತಿಗಳಿಂದ ಜನಮತವನ್ನು ಗಳಿಸಿದರೂ ಕೊನೆಗೆ ಸೋತುಹೋದನು.

ಇತ್ತೀಚೆಗೆ ಕಾರ್ಲ್ ಚೆಸ್‌ಮನ್‌ನಿಗೆ ಮೃತ್ಯುದಂಡನೆಯನ್ನು ವಿಧಿಸಿದ ವರ್ತಮಾನವನ್ನು ಕೇಳಿ ಕೇವಲ ಅಮೆರಿಕೆಯ ಸಂಯುಕ್ತ ರಾಷ್ಟ್ರ ಮಾತ್ರವಲ್ಲ, ಅಖಂಡ ಪ್ರಪಂಚದಲ್ಲಿಯೇ ಒಂದು ವಿಧದ ವಿವಂಚನೆಯು ತಲೆದೋರಿದೆ. ಕೆಲಿಫೋರ್ನಿಯಾದ ಸೈನ್ ಕ್ವೆನ್ಟಿನ್ ಜೇಲಿನಲ್ಲಿ ಇರಿಸಿ ಇದೇ ಮೇ ೨ರಂದು ಫಾಸಿ ಶಿಕ್ಷೆಯನ್ನು ಅವನಿಗೆ ಕೊಡಲಾಯಿತು. ತನ್ನ ಜೀವ ಸಂರಕ್ಷಣೆಗಾಗಿ ಈತ ಕಳೆದ ೧೨ ವರ್ಷಗಳಕಾಲ ನ್ಯಾಯಾಲಯಗಳ ಮೆಟ್ಟಲು ಹತ್ತಿ ಇಳಿಯುತಿದ್ದ; ಕಾನೂನಿನ ಜಗಳವನ್ನು ಕೆರಿಯುತ್ತಿದ್ದ; ಆದರೆ, ಆತನ ಪರಿಶ್ರಮ ವ್ಯರ್ಥವಾಯಿತು; ಅವನು ಕೊನೆಗೂ ಸೋಲನ್ನುಣ್ಣಬೇಕಾಯಿತು. ‹ಅಪಹರಣ'ದ ಆರೋಪವನ್ನು ಸ್ಥಿರೀಕರಿಸಿ, ಅವನಿಗೆ ಪ್ರಾಣದಂಡನೆಯನ್ನು ಘೋಷಿಸಲಾಯಿತು.

ಕೆಲಸಮಯದಿಂದ ಚೆಸ್‌ಮನ್‌ರ ಹೆಸರು ಬಹುವಾಗಿ ಎಲ್ಲೆಲ್ಲಿಯೂ ಕೇಳಿ ಬರುತಿತ್ತು. ಈತನು ಅಪರಾಧಿ ನಿಜವಾದರೂ ಬಹು ಪ್ರತಿಭಾ ಶಾಲಿಯಾದ ಪುರುಷನಾಗಿದ್ದ.

ಒಂದು ದಟ್ಟದರಿದ್ರ ಸಂಸಾರದಲ್ಲಿ ಹುಟ್ಟಿದ್ದ ಚೆಸ್‌ಮನ್ ವಿದ್ಯಾಭ್ಯಾಸಹೊಂದುವ ಸೌಭಾಗ್ಯವನ್ನು ಪಡೆಯಲಿಲ್ಲ. ಈತನ ಸಂಪೂರ್ಣ ನಾಮಧೇಯ ಕಾರ್ಲ್ ಕೇರಿಲ್ ಚೆಸ್‌ಮನ್ ಎಂದು ಎಳೆ ಪ್ರಾಯದಲ್ಲಿಯೇ ಶಾಲಾ ವಿದ್ಯಾಭ್ಯಾಸದಿಂದ ವಂಚಿತನಾದ ಇವನು ತನ್ನ ೧೫ನೆಯ ವಯಸ್ಸಿನಲ್ಲಿಯೇ ಕಳ್ಳತನ ಮಾಡಿದ ಆರೋಪದ ಮೇಲೆ ಸೆರೆಮನೆವಾಸವನ್ನು ಮಾಡಬೇಕಾಯಿತು. ಆದರೆ, ಕೆಲ ಸಮಯಾನಂತರ ಬಿಡುಗಡೆಹೊಂದಿದನು. ಆನಂತರ ಅವನು ಅನೇಕ ಬಾರಿ ಕಾರಾಗೃಹವನ್ನು ಹೊಕ್ಕಿದ್ದನು. ಹೀಗೆ ಆತನು ಸಂಪೂರ್ಣವಾಗಿ ಅಪರಾಧಿ ಜೀವನವನ್ನೇ ಬದುಕತೊಡಗಿದನು. ೧೯೪೮ರಲ್ಲಿ ಈತನು ಅಮೆರಿಕೆಯ ಕೆಲಿಫೋರ್ನಿಯ ಪ್ರದೇಶದಲ್ಲಿ ಕೆಲವು ಬಾರಿ ಚೋರತನವನ್ನು ಮಾಡಿದನು. ಎಲ್ಲವುಗಳಿಗಿಂತ ದೊಡ್ಡದಾಗಿ, ಆತನ ಮೃತ್ಯುವಿಗೆ ಇಬ್ಬರು ಸ್ತ್ರೀಯರನ್ನು ಓಡಿಸಿಕೊಂಡು ಹೋಗಿ, ಅವರಲ್ಲಿ ಒಬ್ಬಾಕೆಯೊಡನೆ ಬಲಾತ್ಕಾರ ಮಾಡಿದ ಅಪರಾಧವೇ ಕಾರಣವಾಗಿದೆ. ಈತನ ಪೈಶಾಚಿಕ ಕುಕೃತ್ಯದಿಂದಾಗಿ ಆ ಹುಡುಗಿಯು ಹುಚ್ಚಿಯಾಗಿ ಹೋದಳು. ಈ ಘಟನೆಯಿಂದಾಗಿ ಚೆಸ್‌ಮನ್‌ನನ್ನು 'ಕೆಲಿಫೋರ್ನಿಯಾ ಪ್ರದೇಶದ ಆತಂಕಕಾರಕ' ಎಂಬ ಉಪನಾಮಕ್ಕೆ ಗುರಿಯಾದನು.

೧೯೪೮ರ ಮಾರ್ಚ್ ತಿಂಗಳಲ್ಲಿ ಸ್ತ್ರೀಯರನ್ನು ಓಡಿಸಿದ ಮತ್ತು ಅವರೊಡನೆ ಬಲಾತ್ಕಾರ ನಡೆಸಿದ ಆರೋಪದ ಮೇಲೆ ಕೆಲಿಫೋರ್ನಿಯಾದ ಒಂದು ನ್ಯಾಯಾಲಯವು ಆತನಿಗೆ ಮರಣ ದಂಡನೆಯನ್ನು ವಿಧಿಸಿತು. ಕೆಲಿಫೋರ್ನಿಯಾದಲ್ಲಿ ಸ್ತ್ರೀಯರ ಅಪಹರಣದ ಮೇಲೆ ಕೂಡ ಪ್ರಾಣದಂಡವನ್ನು ಕೊಡಲಾಗುತಿತ್ತು.

ಮರಣದಂಡನೆಯ ಶಿಕ್ಷೆಯನ್ನು ಕೇಳಿದೊಡನೆಯೇ ಅವನು ಇದರ ವಿರುದ್ಧವಾಗಿ ಕೆಲಿಫೋರ್ನಿಯಾದ ಉಚ್ಚನ್ಯಾಯಾಲಯದಲ್ಲಿ ಅಪೀಲು ಮಾಡಿದನು. ಆದುದರಿಂದ ಮೃತ್ಯುದಂಡದ ಶಿಕ್ಷೆಯನ್ನು ಕಾರ್ಯಾನ್ವಿತಗೊಳಿಸುವ ಸಮಯವನ್ನು ಒಂದು ವರ್ಷ ಮುಂದುವರಿಸಲಾಯಿತು. ಇದರ ನಂತರ ಅವನು ಎಂಟು ಬಾರಿ ಅಪೀಲು ಮಾಡಿದನು. ಇದರಿಂದಾಗಿ ಅವನ ದಂಡನೆ ಅನುಭವಿಸುವ ಅವಧಿಯೂ ಮುಂದುವರಿಯುತ್ತಾ ಬಂತು. ಆದರೆ, ಒಂಬತ್ತನೆಯ ಬಾರಿಗೆ ಅವನ ಅಪೀಲನ್ನು ಇತ್ಯರ್ಥಗೊಳಿಸುವ ಭಾರವು ಕೆಲಿಫೋರ್ನಿಯೋದಿನ ಗವರ್ನರ ಶ್ರೀ ಎಡ್ಮಂಡ ಬ್ರ್ಯಾನ್‌ರ ತಲೆಯ ಮೇಲೆ ಬಿತ್ತು. ಗವರ್ನರರ ತೀರ್ಮಾನದಂತೆ ಚೆಸ್‌ಮನ್ ಮರಣ ಶಿಕ್ಷೆಯನ್ನು ಅನುಭೋಗಿಸಬೇಕಾಯಿತು.

ಕಾರ್ಲ್ ಚೆಸ್‌ಮನ್ ಅಪರಾಧಿಯಾಗಿದ್ದರೂ ಪ್ರತಿಭಾಶಾಲಿ ವ್ಯಕ್ತಿಯಾಗಿದನು. ಜೇಲಿನಲ್ಲಿ ಈತನು ಜೀವಿಸಿದ್ದ ೧೨ ವರ್ಷಗಳ ಕಾಲದಲ್ಲಿ ಅನೇಕಾನೇಕ ಕಾನೂನು ಗ್ರಂಥಗಳ ಅಧ್ಯಯನವನ್ನು ನಡೆಸಿದನು. ಸಂಯುಕ್ತ ರಾಷ್ಟ್ರಗಳ ದೊಡ್ಡ ದೊಡ್ಡ ವಕೀಲರು ಈತನ ಪರವಾಗಿ ವಾದಿಸಿದ್ದರು; ಅಲ್ಲದೇ ಈತನೂ ತನ್ನ ಜೀವರಕ್ಷಣೆಗಾಗಿ ಬಹು ಪ್ರಯತ್ನಪಟ್ಟನು. ಚೆಸ್‌ಮನ್‌ನ ಕಾನೂನು ಜ್ಞಾನವನ್ನು ಕಂಡು, ಕೆಲವು ಹಿರಿಯ ವಕೀಲರೂ ಕಂಗಾಲಾಗಿ ಹೋಗುತಿದ್ದರು.

ತನ್ನ ಕಾರಾಗೃಹವಾಸಾವಧಿಯಲ್ಲಿ ಚೆಸ್‌ಮನ್ನನು ನಾಲ್ಕು ಪುಸ್ತಕಗಳನ್ನು ಬರೆದು ತನ್ನ ಸಾಹಿತ್ಯಿಕ ಪ್ರತಿಭೆಯನ್ನು ಜಗತ್ತಿಗೆ ತೋರಿಸಿದ್ದಾನೆ. ಈತನ ಮೂರು ಪುಸ್ತಕಗಳು ಸಂಯುಕ್ತ ರಾಷ್ಟ್ರಗಳಲ್ಲಿ ಮತ್ತು ಅನ್ಯದೇಶಗಳಲ್ಲಿ ಪ್ರಕಟಗೊಂಡಾಗ, ಈ 'ಅಪರಾಧೀ ಲೇಖಕ'ನು ವಿಶ್ವವ್ಯಾಪಿಯಾದ ಕೀರ್ತಿ ಪಡೆದನು.

ಈತನ ಪ್ರಾಣದಂಡನೆಯನ್ನು ರದ್ದುಗೊಳಿಸುವಂತೆ ಅಮೆರಿಕೆಯಲ್ಲಿ ಮಾತ್ರವಲ್ಲ, ವಿಶ್ವದ ಹೆಚ್ಚಿನ ರಾಷ್ಟ್ರಗಳಲ್ಲಿ ಪ್ರದರ್ಶನವನ್ನು ನಡೆಸಿದರು. ಪ್ರಪಂಚದ ಸರ್ವ ಮೂಲೆಯಿಂದಲೂ ಈತನಿಗೀಯಲಾದ ಮೃತ್ಯುದಂಡನೆಯನ್ನು ತಡೆಗಟ್ಟಬೇಕೆಂಬ ಪ್ರಾರ್ಥನೆ, ವಿನಂತಿಗಳು ಕೋಟಿಗಟ್ಟಲೆಯಲ್ಲಿ ಕೆಲಿಫೋರ್ನಿಯಾದ ಗವರ್ನರ ಮತ್ತು ಅಮೆರಿಕೆಯ ಅಧ್ಯಕ್ಷರಿಗೆ ದಿನಂಪ್ರತಿ ಕೈಸೇರುತಿದ್ದುವು. ತನ್ನ ಪುಸ್ತಕಗಳ ಬಲದಿಂದಲೇ ಜನಮತವನ್ನು ತನ್ನ ಕಡೆಗೆಳೆದುಕೊಂಡವನೀತನೆಂದರೂ ತಪ್ಪಲ್ಲ. ಚೆಸ್‌ಮನ್ ಜನಮತವನ್ನು ಸೆಳೆದುಕೊಂಡುದನ್ನು ಕಂಡ ಜೇಲಿನ ಅಧಿಕಾರಿಗಳು, ಅದಕ್ಕೆ ಕಾರಣವಾಗಿದ್ದ ಪುಸ್ತಕ ಬರೆಯುವ ಸ್ವಾತಂತ್ರ್ಯವನ್ನು ಆತನಿಂದ ಕಿತ್ತುಕೊಂಡರು. ಆತನ ಪುಸ್ತಕಗಳು ಸಾಕಷ್ಟು ಲೋಕಪ್ರಿಯವಾಗಿದ್ದುವು. ಪುಸ್ತಕಗಳ ಮಾರಾಟದ ದೃಷ್ಟಿಯಿಂದ ಚೆಸ್‌ಮನ್ನನು ೧೯೫೪ರಲ್ಲಿ ಅಮೆರಿಕೆಯ ಪ್ರಮುಖ ಲೇಖಕರಲ್ಲಿಯೊಬ್ಬನೆನಿಸಿದನು. ಅವನ 'ಕಿಡ್ ವಾಜ್ ದಿ ಕಿಲ್ಲರ್' ಎಂಬ ನಾಲ್ಕನೆಯ ಪುಸ್ತಕವು ಪ್ರಥಮ ಮುದ್ರಣವನ್ನು ಹೊಂದಿ, ಅಂಗಡಿಯಲ್ಲಿ ಮಾರಾಟಕ್ಕೆ ತೆರಳಿದ ದಿನವೇ ಆತನೂ ತನಗೆ ವಿಧಿಸಲಾಗಿದ್ದ ಮೃತ್ಯುದಂಡನೆಯನ್ನು ಅನುಭವಿಸಲು ಸೈನ್ ಕ್ವೆನ್ಟಿನ್ ಜೇಲಿನ ಚೇಂಬರಿಗೆ ತೆರಳಿದನು; ಅಲ್ಲಿ ಮೃತ್ಯುವನ್ನು ಆಲಿಂಗಿಸಿದನು.

ಮೃತ್ಯುದಂಡವಿತ್ತ ಮೇಲೆ, ಆತನ ಶವವನ್ನು ಯಾವುದೇ ಗೌಜಿಯಿಲ್ಲದೆ ಸರಕಾರಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕೆಲಿಫೋರ್ನಿಯಾದ ಗ್ರೀನ್‌ಡೇಲ್ ಎಂಬಲ್ಲಿ ದಫನ ಮಾಡಲಾಯಿತು. ಅಲ್ಲಿಯೇ ಆತನ ತಾಯಿಯ ಸಮಾಧಿಯೂ ಆಗಿತ್ತು. ಈ ಅಪರಾಧೀ ಪ್ರತಿಭಾವಂತ ಲೇಖಕನ ದಫನ ಕಾಲದಲ್ಲಿ ಆತನ ಬಳಿ ಕೇವಲ ಕೆಲವು ಪೋಲೀಸು ಅಧಿಕಾರಿಗಳು, ಒಬ್ಬಿಬ್ಬರು ಪತ್ರಿಕಾ ಪ್ರತಿನಿಧಿಗಳು ಮತ್ತು ಸಾನ್ ಫ್ರಾನ್ಸಿಸ್ಕೊವಿನ ಒಂದು ಶಾಲೆಯ ಅಧ್ಯಾಪಕನಾದ ಆತನ ಒಬ್ಬನೇ ಒಬ್ಬ ಸ್ನೇಹಿತನು ಮಾತ್ರ ಇದ್ದರು. ಚೆಸ್‌ಮನನ ಕುಟುಂಬದವರಲ್ಲಿ ಯಾರೊಬ್ಬರೂ ಇರಲಿಲ್ಲ.

ಆತನನ್ನು ಶಿಕ್ಷಿಸಿದನಂತರ ಒಪ್ಪಂದಕ್ಕನುಸಾರವಾಗಿ, ಅಮೆರಿಕೆಯ ವರ್ತಮಾನ ಪತ್ರವು ೧೯೬೦ನೆ ಮೇ ೩ರಂದು ಚೆಸ್‌ಮನ್‌ರೊಡನೆ ತನ್ನ ಪ್ರತಿನಿಧಿಯಿತ್ತ ಭೆಟ್ಟಿಯ ವಿವರವನ್ನು ಪ್ರಕಟಿಸಿತು. ಇದರಲ್ಲಿ ಚೆಸ್‌ಮನ್ನನು ತನ್ನ ಅಪರಾಧಿ ಜೀವನದ ಬಗ್ಗೆ ಸಾಕಷ್ಟು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ್ದನು.

ತನ್ನ ಕರುಣಾಜನಕ ಮೃತ್ಯುವಿನ ನಂತರ, ಚೆಸ್‌ಮನ್ ಸಾಕಷ್ಟು ಸಮಯದ ವರೆಗೆ ಪ್ರಪಂಚದಲ್ಲಿ ತನ್ನ ನಾಲ್ಕು ಪುಸ್ತಕಗಳಿಂದಾಗಿ ಸ್ಮರಣೀಯನಾಗಿದ್ದಾನೆ. ಈತನು ಜೀವಂತನಾಗಿರುತಿದ್ದರೆ, ಇನ್ನಷ್ಟು ಪುಸ್ತಕಗಳನ್ನು ಬರೆಯಬಹುದಿತ್ತು. ಹಾಲಿವುಡ್ಡಿನ ಪ್ರಖ್ಯಾತ ತಾರೆ ಮೆರಲೆನ್ ಬ್ರೆಂಡೊವು ಚೆಸ್‌ಮನ್‌ನ ಜೀವನ ಚರಿತ್ರೆಯ ಒಂದು ಚಲಚ್ಚಿತ್ರವನ್ನು ತಯಾರಿಸಿರುವರಂತೆ. ಇದು ಚೆಸ್‌ಮನ್ನರ ಲೋಕಪ್ರಿಯತೆಯ ಪ್ರಮಾಣವಾಗಿದೆಯೆಂಬುದು ನಿಸ್ಸಂದೇಹ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ ಸಿಗುತ್ತವೆ.

ವಿಚಾರಿಸಿರಿ—

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ

ದಿ ಮೂಲ್ಕಿ ಬೇಂಕ್ ಲಿಮಿಟೆಡ್, ಮೂಲ್ಕಿ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಅಡವಿನಲ್ಲಿ ಸಾಲ ಪಡೆಕೊಂಡು ದೀರ್ಘಕಾಲದಿಂದ ಅಸಲು—ಬಡ್ಡಿಯನ್ನು ಬಾಕಿ ಮಾಡಿರುವುದರಿಂದ, ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರ ನಗಗಳನ್ನು ತಾರೀಕು 14—6—1960ನೇ ಮಂಗಳವಾರ ಅಪರಾಹ್ನ ಗಂಟೆ 3ಕ್ಕೆ ಯಾ ತದನಂತರ ಯುಕ್ತ ಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ತಾ. 31-3-1960ರ ವರೆಗಿನ ಬಡ್ಡಿ ಸಮೇತ ಬಾಕಿ
1741/58	ಹೆಚ್. ಯು. ಕೊಯಾಲಿ, C/o ಹೆಚ್. ಕುಂಞ ಮೂಸ ಮರ್ಚೆಂಟ್, ಹೆಜಮಾಡಿ	102 — 15
1748/58	ತನಿಯ ಮರಕಾಲ, S/o ತಿಮ್ಮಪ್ಪ ಫಿಶರಿಸ್ ಯಾರ್ಡಿನ ಬಳಿ, ಹೆಜಮಾಡಿ	57 — 02
1891/58	ರಾಜು ಪೂಜಾರಿ, N/o ಬೋಳಯ ಪೂಜಾರಿ, ಮಾನಂಪಾಡಿ, ಮುಲ್ಕಿ	28 — 56
1996/58	ಮೆಸ್ಸ ಮೇಸ್ತ್ರಿ, S/o ಅಂಗರ ಕಿಲ್ಪಾಡಿ, ಮುಲ್ಕಿ	9 — 43
2004/58	ಜೇಜು ಎಸ್. ಶೇರಿಗಾರ, S/o ಸೋಮಪ್ಪ ಸೇರಿಗಾರ, ಕರ್ನಿರೆ	67 — 72
56/59	ತಾಡ, S/o ಗುರುವ ಕಿಲ್ಪಾಡಿ, ಮುಲ್ಕಿ	24 — 91
83/59	ಐತು ಕೊಟ್ಯಾನ್, S/o ಸೋಮು, ಕಡ್ಕೆ, ಹಳೆಯಂಗಡಿ	55 — 89
377/59	ಎ. ಎಸ್. ಕಾಮತ್, ಪಟೇಲ್ ಮಾನಂಪಾಡಿ	77 — 06

ಮುಲ್ಕಿ,
24-5-1960.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಾರ ಸ್ವಾತಂತ್ರ್ಯ

ತಾರಾಸಿಂಗರ ವಿಚಾರ ಪರಿವರ್ತನೆ

ತಾರಾಸಿಂಗರಲ್ಲಿ ಪರಾಕ್ರಮ ಮತ್ತು ಪ್ರಾಮಾಣಿಕತೆಗಳೆಂಬ ಎರಡು ಉನ್ನತ ಗುಣಗಳಿವೆ.

ನಾಲ್ಕು ವರ್ಷಗಳಿಗೆ ಮೊದಲೊಮ್ಮೆ ಅಕಾಲೀದಳದ ನಾಯಕ ಮಾಸ್ಟರ್ ತಾರಾಸಿಂಗರನ್ನು ಒಬ್ಬ ಪತ್ರಿಕಾ ಪ್ರತಿನಿಧಿಯು ಸಂದರ್ಶಿಸಿದಾಗ, ತನ್ನ ವ್ಯಕ್ತಿತ್ವವನ್ನು ವಿಶ್ಲೇಷಿಸುತ್ತ ಅವರು "ನಾನು ಜನ್ಮಜಾತ ಸಾಮಾಜಿಕ ಕಾರ್ಯಕರ್ತನಾಗಿದ್ದೇನೆಯೇ ಹೊರತು! ರಾಜನೀತಿಜ್ಞನಲ್ಲ" ಎಂದು ಹೇಳಿದ್ದರು. ವಿಚಾರಗಳಲ್ಲಿ ಸ್ಥಿರತೆ, ಸುಸಂಗತಿ ಮತ್ತು ಪರಿಸ್ಥಿತಿಯನ್ನು ಸಮರ್ಪಕವಾಗಿ ವಿವೇಚಿಸುವ ಶಕ್ತಿ ಮಾಸ್ಟರ ತಾರಾಸಿಂಗರಲ್ಲಿಲ್ಲವಾದರೂ ತಮ್ಮ ಬಗ್ಗೆ ಅವರು ಅಭಿವ್ಯಕ್ತಗೊಳಿಸಿದ ವಿಚಾರವನ್ನು ಹಲವು ಬಾರಿ ಸತ್ಯವೆಂದು ಸಾಧಿಸಿ ತೋರಿಸಿದ್ದಾರೆ. ಕಳೆದ ಮೇ ೨೪ರಂದು ಇವರು ಹತ್ತನೆಯ ಬಾರಿಗೆ ಕೈದು ಮಾಡಲ್ಪಟ್ಟರು.

ಸಾಂಪ್ರದಾಯಿಕ ಭಾವನೆಗಳನ್ನು ಕೆರಳಿಸಿದ ಆರೋಪದ ಮೇಲೆ ಮಾಸ್ಟರರನ್ನು ಸೆರೆಹಿಡಿಯಲಾಗಿದೆ. ಇದಕ್ಕೆ ಮೊದಲಿಗೂ ಇವರನ್ನು ಇದೇ ಆರೋಪದ ಮೇಲೆ ಬಂಧಿಸಲಾಗಿತು. ಆದರೆ, ಈ ಸಂಬಂಧದಲ್ಲಿ ಅವರ ಅನೇಕ ಹೇಳಿಕೆಗಳು ಪರಸ್ಪರ ವಿರೋಧಿಗಳಾಗಿವೆ. ೧೯೪೦ರ ಜುಲಾಯಿಯಲ್ಲಿ ಅವರು ಹೀಗಂದಿದ್ದರು— "ಭಾರತದಲ್ಲಿ ಹಿಂದು ಮತ್ತು ಸಿಕ್ಖರಲ್ಲಿ ತಮ್ಮ ಅಸ್ತಿತ್ವದ ರಕ್ಷಣೆಗಾಗಿ ಸಂಘರ್ಷಣೆ ನಡೆಯುತ್ತಿದೆ. ಹಿಂದೂ ಸಂಪ್ರದಾಯವಾದದ ತರಂಗಗಳು ಭಾರತದಲ್ಲಿ ಸಿಕ್ಖರ ಅಸ್ತಿತ್ವವನ್ನೇ ನಾಶಮಾಡುತ್ತಿವೆ." ಇದಾದ ಒಂದು ವರ್ಷಾನಂತರ, ಪಾಕಿಸ್ತಾನದವರು ಭಾರತದ ಮೇಲೆ ಆಕ್ರಮಣ ನಡೆಸಿದಾಗ, ಈ ಸಿಕ್ಖ ನಾಯಕರು ಹಿಂದೂ—ಸಿಕ್ಖರ ಐಕ್ಯದ ಆವಶ್ಯಕತೆಯನ್ನು ಪ್ರತಿಪಾದಿಸಿದರು. ಈಗ ಮೂರು ವರ್ಷಗಳಿಗೆ ಮೊದಲು ಅವರು, "ನಾನು ನನ್ನ ಮುಂದಿನ ಜೀವನವನ್ನು ಹಿಂದು ಮತ್ತು ಸಿಕ್ಖರಲ್ಲಿ ಐಕ್ಯವನ್ನು ಸಂಸ್ಥಾಪಿಸುವುದಕ್ಕಾಗಿ ವಿನಿಯೋಗಿಸಲಿಚ್ಛಿಸುತ್ತೇನೆ; ಏಕೆಂದರೆ ಅವರಿಬ್ಬರೂ ಒಂದೇ ಶರೀರದ ಎರಡು ಅಂಗಗಳಂತಿದ್ದಾರೆ." ಎಂದಿದ್ದಾರೆ.

ಪಂಜಾಬೀ ಸುಬೆಯ ವಿಷಯದಲ್ಲಿ ೧೨೩ ಮಾಸ್ಟರರು ಹೊರಡಿಸಿದ ಉದ್ಗಾರಗಳು ಭ್ರಮೆಯನ್ನು ಹರಡಿಸಲು ದೊಡ್ಡ ಕಾರಣವಾಗಿವೆ. ರಾಜ್ಯ ಪುನರ್ಘಟನಾ ಆಯೋಗದ ವರದಿಯು ಪ್ರಕಟವಾಗುವುದಕ್ಕೆ ಮೊದಲು ಅವರು ಹೇಳಿದ್ದರು— "ನನಗೆ ಸಿಕ್ಖ ರಾಜ್ಯ ಬೇಕಾಗಿಲ್ಲ. ಪಂಜಾಬೀ ಭಾಷಾ ರಾಜ್ಯ ಮಾತ್ರ ನನ್ನ ಬೇಡಿಕೆಯಾಗಿದೆ." ಆದರೆ, ಕೇವಲ ನಾಲ್ಕೇ ವರ್ಷಗಳಲ್ಲಿ ಮಾಸ್ಟರರ ಧ್ವನಿಯು ಪರಿವರ್ತನೆ ಹೊಂದಿತು. ಅವರು ಈಗ ಹೇಳುತ್ತಾರೆ— "ಸಿಕ್ಖರಿಗೆ ಅವರ ರಾಜ್ಯ ದೊರೆಯಲೇಬೇಕು. ಸರಕಾರವು ಈ ರಾಜ್ಯವನ್ನು ಅವರಿಗೆ ಕೊಡಲು ಸಿದ್ಧವಿಲ್ಲವಾದರೆ, ಸಿಕ್ಖರಲ್ಲಿ ರಾಜ್ಯ ಸಂಪಾದಿಸುವ ಶಕ್ತಿಯಿರುವುದು" ಎಂದು. ಇಷ್ಟು ಮಾತ್ರವಲ್ಲ, ಕಳೆದ ತಿಂಗಳಲ್ಲಿಯೂ ಶ್ರೀ ತಾರಾಸಿಂಗರು, "ಪಂಜಾಬೀ ಭಾಷೆಯ ಸುಬೆಯನ್ನು ಪಡೆಯುವುದಕ್ಕಾಗಿ ಅಕಾಲೀ ದಳವು ಏನಾದರೂ ಮಾಡಬಲ್ಲುದು" ಎಂದು ಅಂದಿದ್ದಾರೆ.

ಹಿಂದುಗಳಿಗೆದುರಾಗಿ ಸಿಕ್ಖರ ಮನಸ್ಸಿನಲ್ಲಿ ವಿದ್ವೇಷವನ್ನು ಉತ್ಪಾದಿಸಿದ ಆರೋಪದ ಮೇಲೆ ಕೈದಿಯಾಗಿ ಮಾಸ್ಟರ ತಾರಾಸಿಂಗರು ಜನ್ಮದಿಂದ ಹಿಂದುವಾಗಿದ್ದಾರೆ. ಇಂದಿಗೆ ೭೫ ವರ್ಷಗಳಿಗೆ ಮೊದಲು ರಾವಲ್ಪಿಂಡಿ ಜಿಲ್ಲೆಯ ಹರಿಯಾಳ ಗ್ರಾಮದ ಒಂದು 'ಖತ್ರೀ' ಪರಿವಾರದಲ್ಲಿ ಒಬ್ಬ ಬಾಲಕನ ಜನನವಾಗಿತ್ತು. ಈತನಿಗೆ ನಾನಕಚಂದ ಎಂಬ ಹೆಸರನ್ನಿಡಲಾಯಿತು. ನಾನಕಚಂದನು ೧೭ನೆ ವರ್ಷ ಪ್ರಾಯದಲ್ಲಿ ಸಿಕ್ಖ ಸಂಪ್ರದಾಯದ ದೀಕ್ಷೆಯನ್ನು ತೆಗೆದುಕೊಂಡನು; ಅಂದಿನಿಂದ ನಾನಕಚಂದನು ತಾರಾಸಿಂಗ ಎಂಬ ಹೆಸರಿನಿಂದ ಕರೆಯಲ್ಪಟ್ಟನು.

೧೯೦೭—೦೭ರಲ್ಲಿ ಆಗಿನ ಬ್ರಿಟಿಷ ಸರಕಾರವು ಅಮೃತಸರದ ಖಾಲಸಾ ಕಾಲೇಜಿನ ಮೇಲೆ ಕಠೋರ ನಿಯಂತ್ರಣ ಹೇರಲು ಪ್ರಯತ್ನ ನಡೆಸತೊಡಗಿದಾಗ, ಮಾಸ್ಟರ ತಾರಾಸಿಂಗರು ಅದೇ ಕಾಲೇಜಿನಲ್ಲಿ ಬಿ. ಎ. ತರಗತಿಯಲ್ಲಿ ಓದುತಿದ್ದರು. ಇವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳು ಸಭೆಸೇರಿ, ನಿಯಂತ್ರಣವನ್ನು ವಿರೋಧಿಸತೊಡಗಿದರು. ಸರಕಾರದ ಎಲ್ಲ ಕಾರ್ಯಕಲಾಪಗಳನ್ನೂ ಎದುರಿಸಿದರು. ವಿದೇಶೀಯ ಸತ್ತಾಧಿಕಾರಿಗಳಿಗೆದುರಾಗಿ ಈ ಯುವಕ ಸಿಕ್ಖನಾಯಕನ ಕಾರ್ಯಪಟುತ್ವ ಪ್ರದರ್ಶನವಿದು ಮೊತ್ತಮೊದಲಿನದಾಗಿತ್ತು.

ಬಿ. ಎ. ಉತ್ತೀರ್ಣರಾದನಂತರ ಸರದಾರ ತಾರಾಸಿಂಗರು ಲಾಯಲಪುರದ ಒಂದು ಶಾಲೆಯಲ್ಲಿ ಮಾಸಿಕ ೧೫ ರೂಪಾಯಿ ವೇತನದ ಮೇಲೆ ಅಧ್ಯಾಪನ ಕಾರ್ಯವನ್ನು ಕೈಗೊಂಡರು. "ಶಾಲೆಯಲ್ಲಿ ಅಧ್ಯಾಪಕನ ಪದವಿಯನ್ನು ಸ್ವೀಕರಿಸುವುದರಲ್ಲಿ ನನ್ನ ಉದ್ದೇಶವು ಸಮಾಜದ ಶಿಕ್ಷಣ ವ್ಯವಸ್ಥೆಯನ್ನು ಕ್ರಮಶಃ ಸರಕಾರದ ಪ್ರಭಾವದಿಂದ ಮುಕ್ತಗೊಳಿಸುವುದೇ ಆಗಿದೆ. ಆದರೆ, ಕೊನೆಗೆ, ನನಗೆ ಶಾಲೆಯನ್ನು ಬಿಟ್ಟು ಬಿಡಬೇಕಾಯಿತು; ಏಕೆಂದರೆ, ಸರಕಾರವು ನನ್ನ ಕಾರ್ಯಭಾರವನ್ನು ಅಧಿಕಾಧಿಕ ಸಂದೇಹದಿಂದ ನೋಡತೊಡಗಿತು." ಎಂದವರು ಹೇಳಿದ್ದಾರೆ. ಲಾಯಲಪುರದ ಶಾಲೆಯಿಂದಾಗಿಯೇ ಸರದಾರ ತಾರಾಸಿಂಗರು ಮಾಸ್ಟರ ತಾರಾಸಿಂಗರೆಂಬ ಹೆಸರನ್ನು ಪಡೆದರು.

ಯುಕ್ತರಾಷ್ಟ್ರ ಸಂಘದಲ್ಲಿ ಅಮೆರಿಕೆಯ ಪ್ರತಿನಿಧಿ ಹೆನ್ರಿ ಕೆಬೊಟ್ ಲೋಜ್.

ಭಾರತೀಯ ಸ್ವಾತಂತ್ರ್ಯಾಂದೋಲನದೊಡನೆ ಮಾಸ್ಟರರ ಸಂಬಂಧ ೧೯೨೦ರಿಂದ ಇರುವುದು. ೧೦೦ ಸಿಕ್ಖರು ಮಡಿದು ಹೋಗುವುದಕ್ಕೆ ಕಾರಣವಾದ ನಾನಕಾನಾ ಹತ್ಯಾಕಾಂಡದಿಂದಾಗಿ ಇವರು ಅಧಿಕಾರಾರೂಢರ ಬಲವಾದ ದ್ವೇಷಿಗಳಾದರು. ಬ್ರಿಟಿಷ ಶಾಸನಾವಧಿಯಲ್ಲಿ ಶ್ರೀ ತಾರಾಸಿಂಗರು ಏಳು ಬಾರಿ ದಂಡಿತರಾಗಿದ್ದರು.

ಸಿಕ್ಖ ಪಂಥದ ಮೇಲೆ ತಾರಾಸಿಂಗರಿಗೆ ಹಾರ್ದಿಕ ಶ್ರದ್ಧೆಯಿರುವುದು. ಕೆಲವೊಮ್ಮೆ ಗುರುಗಳ ಕಥೆಯನ್ನು ಹೇಳುತ್ತ ಹೋಗುವ ಸಮಯದಲ್ಲಿ ಅವರ ಕಣ್ಣುಗಳಿಂದ ನೀರು ಸುರಿಯುವುದು. ಯುವಕ ಸಿಕ್ಖರು ತಮ್ಮ ಸಂಪ್ರದಾಯದ ನಿಯಮಗಳನ್ನು ಪಾಲಿಸದೆ ಇರುವುದನ್ನು ಕಾಣುವಾಗ, ಇವರಿಗೆ ಅತೀವ ದುಃಖವಾಗುವುದು. ಪರಿಣಾಮದತ್ತ ಯಾವ ಗಮನವನ್ನೂ ಹರಿಸದೆ ನಿರ್ಭೀಕತೆಯಿಂದ ಮುಂದುವರಿಯುತ್ತ ಹೋಗುವುದು ಇವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆ. ರಾಜಕಾರಣಿಯೆಂದಿವರನ್ನು ಕರೆಯುವುದಕ್ಕಿಂದ ಮಹಾಯೋದ್ಧರೆಂದಿವರನ್ನು ಹೆಸರಿಸಬಹುದು. ತಾರಾಸಿಂಗರ ೭೧ನೆಯ ಜನ್ಮದಿನೋತ್ಸವ ಸಮಾರಂಭದ ವೇಳೆಯಲ್ಲಿ ಪ್ರಧಾನ ನೆಹರೂರವರೇ ಹೇಳಿದ್ದರು— "ಮಾಸ್ಟರ ತಾರಾಸಿಂಗರಲ್ಲಿ ಪರಾಕ್ರಮ ಮತ್ತು ಪ್ರಾಮಾಣಿಕತೆಗಳೆಂಬ ಎರಡು ಉನ್ನತಗುಣಗಳಿವೆ"

ಇದರಿಂದ, ಮಾಸ್ಟರ ಸಿಂಗರ ಬಗ್ಗೆ ಸಿಕ್ಖ ಜನತೆಯು ಇಟ್ಟಿರುವುದು ಕೇವಲ ಮಿಥ್ಯಾಭಿಮಾನವಲ್ಲವೆಂಬುದು ದೃಢವಾಗುವುದಿಲ್ಲವೆ?

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಮಾನವನು ತನ್ನ ದೈನಂದಿನ ಯಥಾರ್ಥತೆಯಿಂದ ಬದುಕುವುದಿಲ್ಲ; ಭವಿಷ್ಯದ ಸುಂದರ ಸ್ವಪ್ನಗಳ ಆಧಾರದಿಂದ ಮಾತ್ರ ಜೀವಿಸುತ್ತಾನೆ.

NAVAYUGA

Founder:—

Late Sri. **A. B. SHETTY,**
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨-೬-'೬೦	೩೯

ರಾಜಕೀಯ ಚದುರಂಗ

ಜಗತ್ತಿನ ಪರ್ವತಶಿಖರಗಳಲ್ಲಿ ಅತ್ಯುನ್ನತವಾದ ಗೌರೀಶಂಕರವನ್ನು ಚೀನೀಯ ಪರ್ವತಾರೋಹೀ ತಂಡವೊಂದು ಏರಿತು ಎಂಬ ಬಿಸಿ ಬಿಸಿ ಸುದ್ದಿಯನ್ನು ಚೀನೀಯ ವಾರ್ತಾ ಸಂಸ್ಥೆಯು ಪ್ರಸಾರ ಮಾಡಿರುವುದು ಕುತೂಹಲಕಾರಿಯಲ್ಲವಾದರೂ ರಾಜಕೀಯ ದೃಷ್ಟಿಯಿಂದ ತುಸು ಮಹತ್ವಪೂರ್ಣವೆಂದೇ ಹೇಳಬೇಕಾಗಿದೆ. ಸಾಮಾನ್ಯವಾಗಿ ಇಂತಹ ಶಿಖರಾರೋಹಣ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಮೊದಲೇ ಜಗತ್ತಿನಲ್ಲೆಲ್ಲಾ ಪ್ರಚಾರ ಮಾಡುವುದು ಸಂಪ್ರದಾಯವಾಗಿ ನಡೆದು ಬಂದಿದೆ. ಈ ಹಿಂದೆ ಅಜೇಯವೆನಿಸಿದ ಈ ಗೌರೀಶಂಕರ ಶಿಖರವನ್ನು ಏರಿದ ತೇನಸಿಂಗ—ಹಿಲಾರಿ ಮತ್ತು ಆಲ್ಬರ್ಟ್ ಎಗರರ ನಾಯಕತ್ವದಲ್ಲಿ ಆಯಾ ತಂಡಗಳು ಶಿಖರವೇರುವ ತಮ್ಮ ಗುರಿಯನ್ನು ಮೊದಲಿಗೇ ಜಗತ್ತಿಗೆ ತಿಳಿಯಪಡಿಸಿದ್ದರು. ಅಂತೆಯೇ ಉಳಿದ ಹಲವಾರು ತಂಡಗಳು ಕೂಡ ಜಗತ್ತಿನ ಬೇರೆಬೇರೆ ಪರ್ವತ ಶಿಖರಗಳನ್ನು ಹತ್ತುವಲ್ಲಿ ತಮ್ಮ ಕಾರ್ಯಕ್ರಮವನ್ನು ಪ್ರಪಂಚಕ್ಕೆ ತಿಳಿಯಪಡಿಸುತಿದ್ದುವು. ಆದರೆ, ಈಗ ಚೀನೀಯರಿಂದ ಯಾವ ಪೂರ್ವಸೂಚನೆಯೂ ಇಲ್ಲದೆ ತೀರ ತಡವಾಗಿ ತಿಳಿದುಬಂದ ಈ ವಾರ್ತೆಯನ್ನು ಎಲ್ಲರೂ ತುಸು ಸಂದೇಹದೃಷ್ಟಿಯಿಂದ ವೀಕ್ಷಿಸುವಂತಾಗಿದೆ.

ಹಿಮಾಲಯದ ತುತ್ತತುದಿಯಾದ ಈ ಶಿಖರವು ತನಗೆ ಸೇರಿದುದೆಂದು ಚೀನವು ಈ ಮೊದಲು ವಾದಿಸಿದುದನ್ನೂ ಈಗ, 'ರಹಸ್ಯ'ವೆಂಬಂತೆ ಶಿಖರವೇರಿ, ಗುರಿ ಮುಟ್ಟಿದನಂತರವೇ ತಿಳಿಯಪಡಿಸಿದ ಅದರ ವರ್ತನೆಯನ್ನೂ ನಾವು ಯೋಚಿಸುವಾಗ, ನಿಜವಾಗಿಯೂ ಸಂದೇಹಪಡುವುದು ಅಸಮಂಜಸವಲ್ಲ. ನೇಪಾಲೀ ಸರಕಾರಕ್ಕೆ ಈ ಸುದ್ದಿಯು ತಿಳಿದುಬಂದನಂತರ, ಅದು ಪ್ರತಿಭಟನೆಯನ್ನೂ ವ್ಯಕ್ತಪಡಿಸಿತ್ತು. ಆದರೆ, ಈ ಪ್ರತಿಭಟನೆಯಿಂದ ಯಾವ ವಿಶೇಷ ಪ್ರಯೋಜನವೂ ದೊರೆಯಲಾರದು ಎಂಬುದು ನಿಶ್ಚಯವೇ. ಹಾಗಿದ್ದರೂ ಇದು ನೇಪಾಳವು ಚೀನದ ವಾದವನ್ನು ಒಪ್ಪುವುದಿಲ್ಲವೆಂಬುದನ್ನು ಮಾತ್ರ ತೋರಿಸುತ್ತದೆ. ಗೌರೀಶಂಕರದ ತುತ್ತತುದಿಗೇರಿದೆವೆಂದು ಹೇಳಿಕೊಳ್ಳುವ ಚೀನೀಯ ತಂಡದವರು ನಿಜವಾಗಿಯೂ ತಮ್ಮ ಗುರಿಯನ್ನು ಮುಟ್ಟಿದರೇ ಇಲ್ಲವೇ ಎಂಬ ವಿಷಯವನ್ನು ತಾವೇ ಸಿದ್ಧಪಡಿಸಬೇಕು. ಗೌರೀಶಂಕರವೇರಿದವರು ಅಲ್ಲಿಯ ಛಾಯಾಚಿತ್ರವನ್ನು ತೆಗೆದು ಅದನ್ನು ಅಂತಾರಾಷ್ಟ್ರೀಯ ಮಾನ್ಯವೆನಿಸಿದ ಸಂಸ್ಥೆಗಳ ಪರಿಶೀಲನೆಗೆ ಗುರಿಪಡಿಸುವುದು, ಮತ್ತು ಈ ಸಂಸ್ಥೆಗಳು ಆ ಚಿತ್ರವನ್ನು ಪರಿಶೀಲಿಸಿ, ಒಪ್ಪಿಕೊಳ್ಳುವುದು ಒಂದು ವಾಡಿಕೆಯಾಗಿದೆ ಆದುದರಿಂದ, ಸದ್ಯ, ಚೀನೀಯ ಪರ್ವತಾರೋಹಿ ತಂಡವು ಉತ್ತರ ದಿಕ್ಕಿನಿಂದ ಶಿಖರವೇರಿ ಜಯಶೀಲರಾದೆವೆಂಬ ಮತವನ್ನು ನಂಬಬೇಕಾದರೆ, ಈ ಪರೀಕ್ಷೆಯಲ್ಲದು ಸರಿಯೆಂದು ಕಂಡು ಬರಬೇಕಾಗಿದೆ. ರಾಜಕಾರಣದ ಭಿನ್ನಾಭಿಪ್ರಾಯಗಳಿಂದಾಗಿ ಅಂತಾರಾಷ್ಟ್ರೀಯ ಪ್ರಪಂಚದಿಂದ ದೂರ ಸರಿದು ನಿಂತಿರುವ ಚೀನವು ಇದು ವರೆಗಿನ ಕ್ರಮವನ್ನು ಅನುಸರಿಸುವುದೆಂದು ಭರವಸೆಯಿಂದಿರುವುದು ಸಾಧ್ಯವಿಲ್ಲ. ಅಲ್ಲದೇ ಇದೇ ಪರ್ವತ ಶಿಖರವನ್ನು ದಕ್ಷಿಣ ಕಡೆಯಿಂದ ಭಾರತೀಯ ತಂಡವೊಂದೂ ಏರುವ ಪ್ರಯತ್ನ ನಡೆಸಿದ್ದು, ಅದು, ೨೮, ೩೦೦ ಅಡಿ ಎತ್ತರವನ್ನು ಮಾತ್ರ ಮುಟ್ಟಿ ಕೊನೆಯ ಘಟ್ಟದಲ್ಲಿ ಪ್ರತಿಕೂಲ ಸನ್ನಿವೇಶಗಳಿಂದಾಗಿ ಮರಳಿ ಬರುವಂತಾದ ಘಟನೆಯನ್ನೂ ನಾವು ನೋಡುವಾಗ, ಚೀನೀಯರ ಸಫಲತೆಯಲ್ಲಿ ಒಂದಲ್ಪ ಸಂದೇಹಪಟ್ಟರೆ, ಆಶ್ಚರ್ಯವೇನಿಲ್ಲ. ಹಾಗಾಗಿಯೇ ಚೀನೀಯ ವರ್ತನೆ ಮತ್ತದರ ಫಲಶ್ರುತಿಯನ್ನು ನೇಪಾಳ ಇಲ್ಲವೇ ಭಾರತ ಮಾತ್ರವಲ್ಲ, ಪ್ರಪಂಚದ ಇತರ ರಾಷ್ಟ್ರಗಳೂ ತುಸು ಸಂಶಯ ದೃಷ್ಟಿಯಿಂದ ನೋಡುವುದು ಸ್ವಾಭಾವಿಕವೇ.

ಕಮ್ಯುನಿಸ್ಟ ಚೀನವು ಇತ್ತೀಚೆಗೆ ಹಮ್ಮಿಕೊಂಡಿರುವ ವಿಸ್ತಾರವಾದೀ ಯೋಜನೆಯನ್ನು ನಾವು ನೆನಪಿಸಿಕೊಂಡರೆ, ಗೌರೀಶಂಕರಾರೋಹಣದ ಫಲಶ್ರುತಿ ಪರ್ವದಾಯಕವೆಂದು ಹೇಳಬಾರದು. ಆದರೂ ಇಂತಹ ಮಹಾ ಸಾಹಸವನ್ನು ಪ್ರದರ್ಶಿಸಿದ ಚೀನೀಯ ತಂಡವನ್ನು ಅಭಿನಂದಿಸುವುದು ಮಾತ್ರ ನಾಗರಿಕ ಪ್ರಪಂಚದ ಕರ್ತವ್ಯ. "ಗುಣಕ್ಕೆ ಮತ್ಸರವುಂಟೆ" ಎಂಬ ಕವಿಸೂಕ್ತಿಯನ್ನು ಪೂರ್ವ ಪಶ್ಚಿಮ ಮಹಾ ರಾಷ್ಟ್ರನಾಯಕ ಕ್ರುಶ್ಚೇವ ಮತ್ತು ಐಕರೂ ಒಪ್ಪಿಕೊಂಡು ಅದಕ್ಕೆ ಸರಿಯಾಗಿ ಆಚರಣೆ ನಡೆಸುತ್ತಿರುವಾಗ, ಇತರರೂ ಅವರನ್ನು ಅನುಕರಿಸಿದರೆ ತಪ್ಪೆನಿಸದು. ಅಂತಾರಾಷ್ಟ್ರೀಯ ಶಾಂತಿ ಸ್ಥಾಪನೆಗೆ ವೈಜ್ಞಾನಿಕ ಪ್ರಗತಿಯೊಡನೆ ಇಂತಹ ಸಾಹಸಕೃತ್ಯಗಳು ಎಲ್ಲರಿಗೂ ಬಹಿರಂಗವಾಗಿ ತಿಳಿಯಬೇಕಾದುದು ಅಗತ್ಯ. ಆ ದೃಷ್ಟಿಯಿಂದ, ಚೀನಾವು ಗುಟ್ಟಿನಲ್ಲಿಯೇ ತನ್ನ ಕಾರ್ಯವನ್ನು ನಡೆಸಿದಂತೆ ತೋರಿಬಂದುದರಿಂದ, ಅದರ ಈ ಕೃತ್ಯವನ್ನು ವಕ್ರದೃಷ್ಟಿಯಿಂದೀಕ್ಷಿಸುವುದು ಸ್ವಾಭಾವಿಕವೇ; ಅಲ್ಲದೇ ಇದರ ಹಿಂದೆ ರಾಜಕೀಯ ದುರುದ್ದೇಶವೂ ಅಡಗಿರದೇ ಎಂಬ ಶಂಕೆಗೂ ಸಾಕಷ್ಟು ಕಾರಣಗಳು ದೊರೆಯುತ್ತವೆ ಆಧುನಿಕ ಪ್ರಪಂಚದ ಪ್ರತಿಯೊಂದು ಕ್ಷೇತ್ರದಲ್ಲೂ ರಾಜಕಾರಣವು ತಾಂಡವಾಡುತ್ತಿರುವಾಗ, ಇಂತಹ ಸಾಹಸಕಾರ್ಯಗಳೂ ಇದಕ್ಕೆ ಹೊರತಾಗುವುದು ಕಷ್ಟಸಾಧ್ಯವಾಗಿದೆ. ಈ ಕಾರಣದಿಂದಲೂ ಚೀನಾವನ್ನು ಸಂಶಯಗ್ರಸ್ತ ದೃಷ್ಟಿಯಿಂದ ನೋಡಲಾಗುತ್ತದೆ. ಅದೇನೇ ಇದ್ದರೂ, ಮಾನವನನ್ನು ಉನ್ನತಿ ಪಥಕ್ಕೇರಿಸುವ ಪ್ರತಿಯೊಂದು ಕಾರ್ಯವೂ ರಾಜಕೀಯ ಜಂಜಾಟದಿಂದ ವಿಮುಕ್ತವಾಗಿರಬೇಕಾದುದು ಅವಶ್ಯ. ಎಂತಲೇ ಪರ್ವತಾರೋಹಣದಂತಹ ಮಹಾ ಸಾಧನೆಯೂ ಇದಕ್ಕೆ ಅಪವಾದವಾಗಲಾರದು. ಆದುದರಿಂದ, ಅನವಶ್ಯವೆನಿಸುವೆಡೆಗಳಲ್ಲಿ ರಾಜಕೀಯ ಚದುರಂಗದಾಟವಾಡುವುದನ್ನು ಬಿಟ್ಟು ಸದ್ಭಾವನೆಯಿಂದ ಮುಂದೊತ್ತುವ ಆವಶ್ಯಕತೆಯಿರುವುದು. ಇದನ್ನು ಎಲ್ಲ ದೇಶಗಳು ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕನೂ ಅವಶ್ಯ ತಿಳಿದು ಅದರಂತೆ ಕಾರ್ಯಪ್ರವೃತ್ತರಾಗಬೇಕು; ಇದರಿಂದಾಗಿ ದೇಶ-ದೇಶಗಳ ನಡುವಣ ಸಂಬಂಧಗಳು ಬೆಳೆಯುವ ಅವಕಾಶಗಳು ದೊರೆಯುವುವು.

ಪ್ರಕೃತಿ ಪ್ರಕೋಪ

ಇತ್ತೀಚೆಗೆ ದಕ್ಷಿಣ ಅಮೆರಿಕೆಯ ಪಶ್ಚಿಮ ಕರಾವಳಿಯಲ್ಲಿ ಉತ್ತರದಕ್ಷಿಣವಾಗಿ ಹರಡಿದ ಅಗಲಕಿರಿದಾದ ರಾಜ್ಯ ಚಿಲಿಯಲ್ಲಿ ಭೀಕರ ಭೂಕಂಪಗಳು ನಡೆದು ಅಪಾರ ವಸ್ತುನಾಶ ಮಾತ್ರವಲ್ಲ, ಪ್ರಾಣಹಾನಿಯೂ ಆಯಿತೆಂದು ತಿಳಿದು ಬರುತ್ತದೆ. ಇದರ ಪರಿಣಾಮವಾಗಿಯೋ ಎಂಬಂತೆ ಶಾಂತಸಾಗರದ ದ್ವೀಪಗಳಾದ ಜಪಾನ್ ಮತ್ತು ಆಸ್ಟ್ರೇಲಿಯಾಗಳ ಕರಾವಳಿ ಪ್ರದೇಶಗಳು ಸಮುದ್ರದ ನೀರು ಉಕ್ಕಿ ಹರಿದು, ಹಲವಾರು ಪ್ರಾಣನಾಶವಾಗಿರುವುದೆಂದೂ ಗೊತ್ತಾಗಿದೆ. ಮಾನವನು ದಿನನಿತ್ಯವೆಂಬಂತೆ ಪ್ರಕೃತಿಯನ್ನು ಸರಿಯಾಗಿ ಕಂಡು ಅರಿಯಲು ವೈಜ್ಞಾನಿಕ ವಿಧಾನದಲ್ಲಿ ಮುಂದೊತ್ತುತ್ತಿರುವಂತೆಯೇ, ತನ್ನ ಸಾಹಸದ ಪ್ರತೀಕವಾದ ಸುಖಸಂಪತ್ತುಗಳನ್ನು ಗಳಿಸುವುದರಲ್ಲಿ ಆಸಕ್ತನಾಗಿರುತಿದ್ದಂತೆಯೇ ಪ್ರಕೃತಿಯು ಆತನ ಕೈಸೆರೆಯಿಂದ ತಪ್ಪಿಸಿಕೊಂಡು, ತನ್ನ ಪ್ರಕೋಪವನ್ನು ಪ್ರದರ್ಶಿಸಲು ಮುಂದಾದಂತೆ ಕಾಣುತ್ತದೆ. ಪ್ರಾಕೃತಿಕ ವಿಕೋಪವನ್ನು ಯಾವುದೇ ರೀತಿಯಿಂದ ತಡೆಗಟ್ಟುವಷ್ಟು ಅಥವಾ ಪ್ರಕೃತಿಯೆಲ್ಲವನ್ನೂ ತನ್ನ ಅಡಿಯಲ್ಲಿಟ್ಟುಕೊಳ್ಳುವಷ್ಟು ಮಾನವನಿನ್ನೂ ಮುಂದುವರಿದಿಲ್ಲ. ಭೂಖಂಡವನ್ನು ಬಿಟ್ಟು ಆತ ಅಂತರಿಕ್ಷವನ್ನು ಏರಲು ತೊಡಗಿದ್ದಾನೆ, ತನ್ನ ಸಾಹಸದಲ್ಲಿ ವಿಜಯಿಯಾಗಿ ಮರಳುವ ವಿಶ್ವಾಸವನ್ನೂ ಆತ ಇಟ್ಟುಕೊಳ್ಳುತ್ತಾನೆ. ಆದರೆ, ತನಗೆ ಅತಿನಿಕಟವಾಗಿರುವ ಪೃಥ್ವೀಮಾತೆಯಿಂದ ಆತನು ಯಾವಾಗಲೂ ಪರಾಜಿತನಾಗಿದ್ದಾನೆ. ಪ್ರಕೃತಿ ಯಾವ ನಿಯಂತ್ರಣಕ್ಕೂ ದಕ್ಕುವ ವಸ್ತುವಲ್ಲ. ಭೂಮಿತಾಯಿ ಕುಪಿತಳಾದಳೆಂದರೆ, ಪ್ರಪಂಚವೇ ನಡೆಯುವುದು ಕಷ್ಟಕರವಾಗಿದೆ. ಭೂಕಂಪ ಸಮುದ್ರದ ಉಬ್ಬರ, ಬಿರುಗಾಳಿ, ಬಿರುಮಳೆ ಮೊದಲಾದ ಪ್ರಕೃತಿಯ ಪ್ರಕೋಪಗಳ ಸೂಚನೆಯನ್ನು ಮಾತ್ರ ನಾವು ತಿಳಿಯಬಹುದು ಹೊರತು, ಅವೆಲ್ಲವನ್ನೂ ತಡೆಯುವೆನೆಂಬ ವಿಶ್ವಾಸ ಮಾನವನಲ್ಲಿಲ್ಲ ಎಂತಲೇ ಆಧುನಿಕ ಮಾನವನಿನ್ನೂ ಪ್ರಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ; ಅದರ ಪ್ರಕೋಪವನ್ನು ಎದುರಿಸುವ ಶಕ್ತಿಸಂಪನ್ನನಾಗಿಲ್ಲ. ಇದರಿಂದಾಗಿಯೇ ಪ್ರಕೃತಿಯೆದುರು ಆತ ಅವಶ್ಯ ಸೋಲನ್ನು ಉಣ್ಣಲೇ ಬೇಕಾಗಿದೆ. ಇಂತಿನ್ನಿತ್ತೀಚೆಗಾದ ಭೂಕಂಪವು ಬೃಹತ್ ಸ್ವರೂಪದ್ದೆಂದು ಹೇಳಲಾಗಿದ್ದರೂ ಸದ್ಯದ್ದು ಅದಕ್ಕಿಂತಲೂ ದೊಡ್ಡದೆಂದು ಬೇರೆ ಹೇಳಬೇಕಾಗಿಲ್ಲ. ಹಾಗಾಗಿ, ಜಪಾನ, ಆಸ್ಟ್ರೇಲಿಯಾ, ಶಾಂತ ಸಾಗರದ ದ್ವೀಪಗಳು ಮತ್ತು ಸ್ವಯಂ ಚಿಲಿಯಲ್ಲಿ ಅಪಾರ ಸಂಪತ್ತು ನಾಶ, ಜನ ನಾಶಗಳು ಆದುದನ್ನು ಕೇಳುವಾಗ ಹೃದಯ ಬತ್ತಿ ಬರುತ್ತದೆ. ಭೂಕಂಪ ಪೀಡಿತರಿಗೆ ಹೇಗೂ ಬಗೆಹರಿಯದ ದನೊಂದು ತಮ್ಮ ಮನೆಮಠ ಮೊದಲಾದುವುಗಳನ್ನು ಕಳೆದುಕೊಂಡವರಿಗೆ ಪುನಃ ಬದುಕನ್ನು ಮುಂದುವರಿಸುವಂತೆ ತಕ್ಕ ಸಹಾಯ ಸಲ್ಲಿಸುವುದು ನಾಗರಿಕ ಜಗತ್ತಿನ ಕರ್ತವ್ಯವಾಗಿದೆ. ವಿಶ್ವದ ಎಲ್ಲ ರಾಷ್ಟ್ರಗಳೂ ಅವುಗಳ ಪ್ರಜಾಜನರೂ ಇತ್ತ ಕೈಗೊಂಡಿರುವ ಯೋಜನೆಗಳೆಲ್ಲವನ್ನೂ ಯಶಸ್ವಿಯಾಗುವಂತೆ ಶಕ್ತ್ಯನುಸಾರ ಪ್ರಯತ್ನಿಸುವುದು ತಮ್ಮ ಕರ್ತವ್ಯವೆಂದು ಹೇಳಬೇಕಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಅಲ್ಯುಮಿನಿಯಂ ಕಾರಖಾನೆ

'ಮೊಂಟೆ ಕೆಟನಿ' ಎಂಬ ಇಟೆಲಿಯನ್ ಸಂಸ್ಥೆಯ ಸಹಕಾರದಿಂದ ಮದ್ರಾಸ್ ಅಲ್ಯುಮಿನಿಯಂ ಲಿಮಿಟೆಡ್ ಎಂಬ ಅಲ್ಯುಮಿನಿಯಂ ಕಾರಖಾನೆಯನ್ನು ಸೇಲಂ ಜಿಲ್ಲೆಯ ಮೆಟ್ಟೂರಲ್ಲಿ ತೆರೆಯಲು ಸರಕಾರವು ಸಮ್ಮತಿಸಿದೆ. ಇದು ವರ್ಷಕ್ಕೆ ೧೦ ಸಾವಿರ ಮೆಟ್ರಿಕ್ ಟನ್ನುಗಳಷ್ಟು ಅಲ್ಯುಮಿನಿಯಮನ್ನು ಉತ್ಪಾದಿಸುವುದೆಂದು ಅಂದಾಜು ಮಾಡಲಾಗಿದೆ. ಖಾಸಗಿ ಕ್ಷೇತ್ರದಲ್ಲಿರುವ ಈ ಕಾರಖಾನೆಯ ರಚನೆಗಾಗಿ ರೂ. ೪|| ಕೋಟಿಯಷ್ಟು ವಿದೇಶ ವಿನಿಮಯವು ಬೇಕಾಗುವುದು. ಸೇಲಂ ಜಿಲ್ಲೆಯಲ್ಲಿ ಅಲ್ಯುಮಿನಿಯಂ ತಯಾರಿಗೆ ಆವಶ್ಯವಾದ ಬಾಕ್ಸೈಟು ಧಾರಾಳವಾಗಿ ದೊರೆಯುತ್ತಿದ್ದು ಇದರಿಂದ ಸೇ. ೫೦ರಿಂದ ೬೦ರಷ್ಟು ಅಲ್ಯುಮಿನಿಯಮ್ ದೊರೆಯುವುದು.

ಕಾಲೇಜುಗಳಿಗೆ ಪ್ರವೇಶ

ಮೈಸೂರು ಸರಕಾರವು ಈ ವರ್ಷದಲ್ಲಿ ತಾಂತ್ರಿಕ ಮತ್ತು ವೃತ್ತಿಪರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶನೀಡುವ ಧೋರಣೆಯನ್ನು ಬಹಿರಂಗಪಡಿಸಿದೆ. ಇದರಿಂದಾಗಿ ಸೇಕಡಾ ೬೦ರಷ್ಟು ಸ್ಥಳಗಳನ್ನು ಅರ್ಹತೆಯ ಆಧಾರದಿಂದ ತುಂಬಲಾಗುವುದು. ಉಳಿದುದರಲ್ಲಿ ಸೇ. ೧೫ ಹರಿಜನರಿಗೆ, ಸೇ. ೩ ಗಿರಿಜನರಿಗೆ ಮತ್ತು ಸೇ. ೨೨ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾಗಿಡಲ್ಪಡುವುದು. ಹಿಂದುಳಿದ ವರ್ಗಗಳು ಯಾವುವೆಂದು ವರದಿಮಾಡಲು ನೇಮಿಸಿರುವ ಡಾ। ನಾಗನಗೌಡ ಸಮಿತಿಯು ತನ್ನ ವರದಿಯನ್ನು ಇದುವರೆಗೂ ಒಪ್ಪಿಸದಿರುವುದರಿಂದ, ಈಗಾಗಲೇ ಅದು ಸಲ್ಲಿಸಿದ ತಾತ್ಕಾಲಿಕ ವರದಿಯನ್ನೇ ಈ ಬಾರಿ ಅನುಸರಿಸಲಾಗುವುದೆಂದೂ ಮುಖ್ಯಮಂತ್ರಿ ಶ್ರೀ ಜತ್ತಿಯವರು ಅಂದಿದ್ದಾರೆ.

ಆಂಧ್ರದ ಜಟಾಪಟಿ

ಆಂಧ್ರ ಪ್ರದೇಶದಲ್ಲಿ ಮಂತ್ರಿ ಸಂಪುಟ

(೬ನೇ ಪುಟ ನೋಡಿರಿ)

ದಿವಂಗತ ಎ. ಬಿ. ಸೆಟ್ಟಿ ಮೆಮೋರಿಯಲ್ ಫಂಡು.

ವಿಜ್ಞಾಪನೆ

ಎ. ಬಿ. ಸೆಟ್ಟರು ನಮ್ಮಲ್ಲಿ ಜನಿಸಿ, ಬೆಳೆದು, ಬಿರೆತು, ಸಮಾಜ, ಜಿಲ್ಲೆ, ದೇಶಕ್ಕೆ ಸೇವೆ ಸಲ್ಲಿಸಿ ಕೀರ್ತಿ ಪಡೆದು ದೈವಾಧೀನರಾದರು. ಇದು ನಮಗೆಲ್ಲರಿಗೂ ದುಃಖ ಮತ್ತು ಹೆಮ್ಮೆಗಳನ್ನು ಒಮ್ಮೆಲೇ ಉಂಟುಮಾಡಬಲ್ಲ ಅಪೂರ್ವ ವಿಷಯವಾಗಿದೆ. ಇವರು ಕಷ್ಟಪಟ್ಟು ಸ್ಥಾಪಿಸಿ, ನಡೆಸಿಕೊಂಡು ಬಂದ ಎಲ್ಲ ಸಂಸ್ಥೆಗಳು ಮುಂದಕ್ಕೂ ಸಾಂಗವಾಗಿ ಬದುಕಿ ಉಳಿಯುವಂತೆ ಮಾಡುವ ಜವಾಬ್ದಾರಿ ನಮಗೆ ಸೇರಿದೆ. ಇವರ ಸೇವೆಯ ಸವಿನೆನಪು ಅಳಿಯದೆ, ಎಂದೆಂದಿಗೂ ಉಳಿಯುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ.

ಈ ಬಗ್ಗೆ ಎಪ್ರಿಲ್ ತಿಂಗಳ ೩ನೆ ತಾರೀಕಿನಂದು ಸೇರಿದ್ದ ಒಂದು ಸಾರ್ವಜನಿಕ ಸಭೆಯಲ್ಲಿ ದಿವಂಗತರು ಸಲ್ಲಿಸಿದ್ದ ಸೇವೆ, ಗಳಿಸಿದ್ದ ಕೀರ್ತಿಗಳಿಗೆ ಕಡಿಮೆಯೆನಿಸದ ಯೋಗ್ಯ ಸ್ಮಾರಕವೊಂದನ್ನು ಏರ್ಪಡಿಸಲು ನಿಶ್ಚಯಿಸಲಾಗಿದೆ. ಈ ಧನಕಾರ್ಯಕ್ಕೆ ಕನಿಷ್ಠ ಐದು ಲಕ್ಷ ರೂಪಾಯಿಗಳ ಒಂದು ನಿಧಿ ಅವಶ್ಯವೆಂದು ಯೋಜಿಸಲಾಯಿತು. ಧನಸಂಗ್ರಹದ ಬಗ್ಗೆ ಮಂಗಳೂರು, ಬೆಂಗಳೂರು, ಮದ್ರಾಸು, ಮುಂಬಯಿ ಮೊದಲಾದೆಡೆಗಳಲ್ಲಿ ಬೇರೆ ಬೇರೆ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಯ ಸದಸ್ಯರು ಎಲ್ಲರನ್ನೂ ಈ ಯೋಜನೆಯ ಪೂರ್ತಿಗಾಗಿ ಒಂದುಕಡೆ ಕಾಣುವುದು ಅಸಾಧ್ಯವಾದುದರಿಂದ, ತಾವು ಬಡವರು, ದೊಡ್ಡವರು, ಹೆಂಗಸರು, ಗಂಡಸರು ಎಲ್ಲರೂ ತಮ್ಮ ಶಕ್ತಿ ಮೀರಿ ತಂತಮ್ಮ ವಂತಿಗೆಗಳನ್ನು ವಿಜಯಾ ಬೇಂಕಿನ ಯಾವುದೇ ಶಾಖೆಯಲ್ಲಿ "ದಿವಂಗತ ಎ. ಬಿ. ಸೆಟ್ಟಿ ಮೆಮೋರಿಯಲ್ ಫಂಡ್" ಎಂಬ ಲೆಕ್ಕಕ್ಕೆ ಹಣವನ್ನು ಜಮೆಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ದಿವಂಗತ ಸೆಟ್ಟರು ಸಮಾಜಕ್ಕೆ ಸಲ್ಲಿಸಿದ ಅಪೂರ್ವಸೇವೆಯ ಪ್ರಯೋಜನವನ್ನು ಪಡೆದವರೆಲ್ಲರೂ ಉದಾರಮನಸ್ಸಿನಿಂದ ಈ ಕಾರ್ಯದಲ್ಲಿ ಸಹಭಾಗಿಗಳಾಗಬೇಕೆಂದು ನಮ್ರನಾಗಿ ಕೇಳಿಕೊಳ್ಳುತ್ತೇನೆ. ಉದಾರಿಗಳೂ ಧರ್ಮಶೀಲರೂ ಆದ ನಮ್ಮ ಹಿರಿಯರಂತೆ ತಾವೆಲ್ಲರೂ ಈ ಸಂದರ್ಭದಲ್ಲಿ ತಮ್ಮ ಉದಾರತೆ ಹಾಗೂ ಧರ್ಮಶೀಲತೆಯನ್ನು ಪ್ರದರ್ಶಿಸಿ, ನಮ್ಮ ಘನೋದ್ದೇಶವನ್ನು ಪೂರ್ಣಗೊಳಿಸುವ ಮಹಾಕಾರ್ಯದಲ್ಲಿ ಸಹಕರಿಸುವಿರಾಗಿ ನಂಬಿದ್ದೇನೆ.

— ಶ್ರೀ ಕೆ. ಎಸ್. ಹೆಕ್ಕಳ,
(ಸಮಿತಿಯ ಪರವಾಗಿ)

ಅಲ್ಲಲ್ಲಿಯ ಸುದ್ದಿ ಸಾರ

ಬಂಟರ ಯಾನೆ ನಾಡವರ ಸಂಘದ ಮಹಾಸಭೆ— ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ಸಂಘ ಮಂಗಳೂರು ಇದರ 1960ನೇ ಇಸವಿಯ ಮಹಾಸಭೆಯು ಮೇ 22ರಂದು ಪುತ್ತೂರು ಬೋರ್ಡ್ ಹೈಸ್ಕೂಲಿನ ಸಭಾಸದನದಲ್ಲಿ ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಬಳಿ ಅಧ್ಯಕ್ಷರನ್ನು ಸ್ವಾಗತಿಸಿ ಮೆರವಣಿಗೆಯಿಂದ ಬೋರ್ಡ್ ಹೈಸ್ಕೂಲಿಗೆ ಅವರನ್ನು ಕರೆತರಲಾಯಿತು.

ಪೂರ್ವಾಹ್ನ ಪ್ರಾರ್ಥನೆಯೊಂದಿಗೆ ಸಭೆಯ ಕಾರ್ಯಕ್ರಮಗಳು ಆರಂಭಗೊಂಡು ಶ್ರೀ ಮಾರಪ್ಪ ಶೆಟ್ಟರಿಂದ ಸ್ವಾಗತ ಭಾಷಣ ಮತ್ತು ಶ್ರೀ ಎ. ಶಂಕರ ಆಳ್ವರಿಂದ ಅಧ್ಯಕ್ಷರ ಪರಿಚಯ ವಿವರಣೆ ನಡೆಯಿತು. ತರುವಾಯ ಅಧ್ಯಕ್ಷರು ಕಣ್ಮರೆಯಾದ ಸಂಘದ ನಾಯಕರ ಕುರಿತು ಮಾತನಾಡಿದರಲ್ಲದೆ ಸಭೆಗೆ ಆಗಮಿಸಿದ್ದ ಅತಿಥಿಗಳ ಪರಿಚಯಗಳನ್ನೂ ಮಾಡಿಕೊಟ್ಟರು. ಆ ಮೇಲೆ ಶ್ರೀಮತಿ ಕಲ್ಯಾಣಿ ಬಿ. ಶೆಟ್ಟಿಯವರೂ ಶ್ರೀ ಭಾಸ್ಕರ ರೈಗಳೂ ಕ್ರಮವಾಗಿ ಮಹಿಳೆಯರ ಮತ್ತು ಅಳಿಯ ಸಂತಾನ ಹಾಗೂ ಭೂಸುಧಾರಣೆಗಳ ಸಂಬಂಧ ಭಾಷಣವಿತ್ತರು.

ಬೆಂಗಳೂರಿಂದ ಈ ಸಭೆಗೆ ಅತಿಥಿಗಳಾಗಿ ಆಗಮಿಸಿದ್ದ ಅಲ್ಲಿಯ ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀ ಎಂ. ಸಿ. ಲಿಂಗೇ ಗೌಡರೂ ಮತ್ತು ಕಾರ್ಯದರ್ಶಿ ಶ್ರೀ ಕೆ. ಸಿ. ಮುದ್ದಪ್ಪನವರೂ ಅವರ ಸಂಘದ ಚಟುವಟಿಕೆಗಳ ಕುರಿತು ಭಾಷಣವಿತ್ತರಲ್ಲದೆ ಬರುವ ದಸರಾ ಸಮಯದಲ್ಲಿ ನಡೆಸಲಿರುವ ದಕ್ಷಿಣ ಹಿಂದೂಸ್ಥಾನದ ಒಕ್ಕಲಿಗರ ಸಮ್ಮೇಳನಕ್ಕೆ ಈ ಜಿಲ್ಲೆಯ ಒಕ್ಕಲಿಗರೂ ಅವರ ಸಂಘದೊಂದಿಗೆ ಸೇರಿಕೊಳ್ಳಬೇಕಾಗಿ ವಿನಂತಿಸಿದರು.

ಭೋಜನದ ಮೇಲೆ ಮಧ್ಯಾಹ್ನ ಆರಂಭವಾದ ಸಭೆಯಲ್ಲಿ ಶ್ರೀ ಸುಬ್ಬಣ್ಣ ಹೆಕ್ಕಳರು ದಿ. ಎ. ಬಿ. ಶೆಟ್ಟರ ಸ್ಮಾರಕ ಸಮಿತಿಯ ಸಲಹೆಗಳನ್ನು ವಿವರಿಸಿದರಲ್ಲದೆ ಮೃತರನ್ನು ಗೌರವಿಸುವ ಸಲುವಾಗಿ ಒಂದು ನಿಮಿಷ ಮೌನ ಪ್ರಾರ್ಥನೆ ನಡೆಸಲಾಯಿತು.

ಅಧ್ಯಕ್ಷರು ತನ್ನ ಅಚ್ಚು ಮಾಡಿದ ಭಾಷಣವನ್ನು ಓದಿ ಈ ಸಂಘದ ಧ್ಯೇಯ ಧೋರಣೆಗಳನ್ನು, ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು. ಈ ಸಭೆಯಲ್ಲಿ ಹಲವಾರು ನಿರ್ಣಯಗಳು ಮಂಜೂರಾದುವು. ಅಧ್ಯಕ್ಷರ ಭಾಷಣದಲ್ಲಿದ್ದ ವಿಷಯಗಳನ್ನು ಕಾರ್ಯರೂಪಕ್ಕೆ ತರುವ ಅಧಿಕಾರವನ್ನು ಕಾರ್ಯಕಾರೀ ಸಮಿತಿಗೆ ಒಪ್ಪಿಸಲಾಯಿತು. ಸಂಘದ ಖಾಯಂ ಅಧ್ಯಕ್ಷ ಶ್ರೀ ಕೆ. ಟಿ. ಆಳ್ವರು ಸಂಘದ ಪರವಾಗಿ ಅಭಿನಂದನೆಗಳನ್ನು ಅರ್ಪಿಸಿದರಲ್ಲದೆ ಬೆಂಗಳೂರು ಒಕ್ಕಲಿಗರ ಸಂಘದವರ ಆಹ್ವಾನದ ಕುರಿತಾದ ಠರಾವೊಂದನ್ನು ಮಂಜೂರು ಮಾಡಲಾಯಿತು.

ಶ್ರೀ ಪುರಂದರ ರೈಗಳು ಸ್ವಾಗತ ಸಮಿತಿಗೆ ಧನಸಹಾಯ ಮಾಡಿದ ಮಹನೀಯರ ಹೆಸರನ್ನು ಓದಿ, ಚಾ ಸತ್ಕಾರ ನಡೆದು ಪಟೇಲ್ ಶ್ರೀ ಸೀತಾರಾಮ ರೈಗಳವರಿಂದ ಧನ್ಯವಾದ ಸಮರ್ಪಣೆ ನಡೆಯಿತು.

ವಸಂತೋತ್ಸವ — ತಾ. 22-5-60 ರಂದು ಉಡುಪಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ 'ಬಾಲಕ ವೃಂದ'ದವರ ವತಿಯಿಂದ ವಸಂತೋತ್ಸವವು ನಡೆಸಲ್ಪಟ್ಟಿತು. ಈ ವಸಂತೋತ್ಸವವು ಪೂಜೆ, ಪ್ರಸಾದ ವಿತರಣೆಗಳಿಂದ ವೈಭವೋಪೇತವಾಗಿ ಮಂಗಲಗೊಂಡಿತು. ಸದ್ರಿ ಉತ್ಸವಕ್ಕೆ ನಗರದ ನಾಗರಿಕರನೇಕರು ಉಪಸ್ಥಿತರಿದ್ದರು. ತಾ. 24 ರಂದು ಇದೇ ರೀತಿಯ ಉತ್ಸವವು 'ತರುಣ ವೃಂದ'ದವರಿಂದ ಜರಗಿಸಲ್ಪಟ್ಟಿತು.

ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ಮಹಾ ಸಭೆಯು ತಾ. 21ರಂದು ಉಡುಪಿ ಮುನ್ಸಿಪಲ್ ಮ| ಗಾಂಧಿ ಬುನಾದಿ ಶಾಲೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಆಯವ್ಯಯ, ಮುಂಗಡ ಪತ್ರ ಸ್ವೀಕಾರವಾಗಿ ಮುಂದಿನ ವರ್ಷಕ್ಕೆ ಶ್ರೀ ಟಿ. ಎ. ಪೈಗಳು ಅಧ್ಯಕ್ಷರಾಗುವ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಸಮಿತಿಯ ಪ್ರಮಾಣಪತ್ರ ವಿತರಣಾ ಸಮಾರಂಭವು ವರದೇಂದ್ರ ಕಲಾಮಂದಿರದಲ್ಲಿ ತಾ. 22ರಂದು ಎಲ್. ಐ. ಸಿ.ಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಕೃಷ್ಣರಾಯರು ಸ್ವಾಗತಿಸಿದ ಮೇಲೆ ಶ್ರೀ ಸಿ. ಮುಮ್ಮಟಲ ನಾಯಕರು ವರದಿಯನ್ನರ್ಪಿಸಿದರು. ಶ್ರೀಮತಿ ವಿಮಲಾ ಆರ್. ಪೈಯವರು ಪ್ರಮಾಣ ಪತ್ರ ವಿತರಣೆ ಗೈದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಸಮಿತಿಯು ಸಾಧಿಸಿದ ಪ್ರಗತಿಗೆ ಮೆಚ್ಚಿಗೆ ವ್ಯಕ್ತಗೊಳಿಸಿದರು. ಕೊನೆಗೆ ಮನರಂಜನೆ ಕಾರ್ಯಕ್ರಮಗಳಾದವು.

ನೀಲಗಿರಿ ದಾಸಪ್ರಕಾಶ ಹೋಟೇಲಿನಲ್ಲಿ ದಾಸಪ್ರಕಾಶ ಹೋಟೇಲಿನ ಮಾಲಕರಾದ ಕೆ. ಸೀತಾರಾಮರಾಯರು ತಾ. 21—5—60ರಂದು ಭಾರತದ ಉಪಾಧ್ಯಕ್ಷ ರಾಧಾಕೃಷ್ಣನ್ ಅವರಿಗೂ ತಾ. 27 ರಂದು ಕೇಂದ್ರ ಸಚಿವ ಡಾ. ಬಿ. ಗೋಪಾಲ ರೆಡ್ಡಿಯವರಿಗೂ ವೈಭವಪೂರ್ಣ ಸತ್ಕಾರ ಕೂಟಗಳನ್ನು ಏರ್ಪಡಿಸಿದ್ದರು.

ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್, ಉಡುಪಿ— ಡಾ. ಯು. ಸುಂದರರಾಮ ಪೈ ಸ್ಮಾರಕ ಬಯಲು ರಂಗ ಮಂಟಪ ಮತ್ತು ಕ್ಲಬ್ಬಿನ ವಿಸ್ತರಣೆಗಳ ಉದ್ಘಾಟನೆಯು ತಾ. 27-5-60ರಂದು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರ ಅಸಿಸ್ಟಂಟ್ ಕಮಿಶನರ್ ಶ್ರೀ ಕೆ. ನರಸಿಂಹ ಮೂರ್ತಿಯವರು ವಹಿಸಿದ್ದರು. ಉಪಾಧ್ಯಕ್ಷ ಡಾ. ಕೆ. ಎಲ್. ಐತಾಳರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎನ್. ವಿ. ಕಾಮತರು ಸಂದೇಶಗಳನ್ನು ಓದಿ ವರದಿಯನ್ನರ್ಪಿಸಿದರು. ಬಳಿಕ ಡಾ. ಟಿ. ಎಮ್. ಎ ಪೈ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಕೀರ್ತನ ಕೇಸರಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು. ಅಧ್ಯಕ್ಷ ಭಾಷಣ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಶಿರ್ವ:—26—5—60ರಲ್ಲು ಸ್ಥಳೀಯ ಕೆಥೋಲಿಕ್ ಬೇಂಕಿನ, ಜನಪ್ರಿಯ ಏಜಂಟರಾಗಿದ್ದು, ಈಗ ಬಜ್ಪೆ ಶಾಖೆಗೆ ವರ್ಗ ಹೊಂದಿದ ಶ್ರೀ ಇ. ಡಿ. ಕುಂಜಾರನ್ನು ಬೀಳ್ಕೊಡುವ ಹಾಗೂ ಅವರ ಸ್ಥಾನಕ್ಕೆ ಬಂದಿರುವ ಶ್ರೀ ಯಂ. ಭಾಸ್ಕರ ಶೇಟ್‌ರವರನ್ನು ಸ್ವಾಗತಿಸುವ ಸಮಾರಂಭವೊಂದು, ಸೈಂಟ್ ಮೇರೀಸ್ ಹೈಸ್ಕೂಲಿನಲ್ಲಿ, ರೆವೆ. ಪಿ. ಫಾ. ಗೋನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಜರಗಿತು. ನೆರೆದ ಸಭಿಕರನ್ನು ಡಾ. ಯು. ಕೆ. ಆಚಾರ್ಯರು ಸ್ವಾಗತಿಸಿ, ಶ್ರೀ ಕುಂಜಾರ ಸರ್ವ ಜನಾದರಣೀಯ ಸೇವೆಯ ಕುರಿತು, ಪ್ರಶಂಸಿಸಿ ಮಾತಾಡಿದ ಬಳಿಕ ಶ್ರೀ ರಾಮಕೃಷ್ಣ ಆಚಾರ್ಯರು ಸಭಿಕರ ಪರವಾಗಿ ಮಾತಾಡಿದರು. ಸಭಾಧ್ಯಕ್ಷರು ಮುಖ್ಯ ಅತಿಥಿಗಳನ್ನು ಹರಸಿ, ಕೆಲವು ಹಿತೋಕ್ತಿಗಳನ್ನು ಹೇಳಿದ ನಂತರ ಶ್ರೀ ಎಲ್. ಮೆಂಡೋನ್ಸರು ಧನ್ಯವಾದ ಸಮರ್ಪಣೆಗೈದ ಮೇಲೆ ಲಘು ಉಪಹಾರದೊಂದಿಗೆ ಸಭಾಂತ್ಯವಾಯಿತು.

ನಿಧನ-ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರ ಧರ್ಮಪತ್ನಿಯವರಾದ ರುಗ್ಮಿಣಿ ಹೆಗ್ಗಡ್ತಿಯವರು ಇದೇ ತಾ. 30ರಂದು ಮಧ್ಯಾಹ್ನ 12 ಗಂಟೆಗೆ ತನ್ನ ೭೮ನೇ ವಯಸ್ಸಿನಲ್ಲಿ ಅತ್ರಾಡಿ ದೊಡ್ಡಮನೆ ಸ್ವಗೃಹದಲ್ಲಿ ಆಕಸ್ಮಿಕ ನಿಧನರಾದರೆನ್ನಲು ವಿಷಾದಿಸುತ್ತೇವೆ. ಸದ್ರಿಯವರಿ ೪ ಜನ ಗಂಡು ಮಕ್ಕಳೂ 2ಜನ ಹೆಣ್ಣು ಮಕ್ಕಳೂ ಇರುವರು. ಸದ್ರಿಯವರ ಕುಟುಂಬದ ಅಪಾರ ದುಃಖದಲ್ಲಿ ಸಹಭಾಗಿಗಳಾಗಿ ಮೃತರ ಆತ್ಮಕ್ಕೆ ಶಾಂತಿಕೋರುವೆವು.

ವಿವಾಹ ಸಮಾರಂಭಗಳು— ಶಿರ್ವ ಮಾಣಿಬೆಟ್ಟು ದಿ. ಅಣ್ಣಯ್ಯನವರ ಪುತ್ರ ಶ್ರೀ ಎಸ್. ಕುಮಾರ ಸ್ವಾಮಿಯವರ ವಿವಾಹವು ಮಂಗಳೂರಿನ ನಿವೃತ್ತ ಡಿಪ್ಯುಟಿ ಪೋಸ್ಟ್ ಮಾಸ್ಟರ್ ಮರಿಯಪ್ಪಯ್ಯನವರ ಪುತ್ರಿ ಶ್ರೀಮತಿ ಜಯಲಕ್ಷ್ಮಿಯೊಡನೆ ಮೇ ತಾ. ೨೦ರಂದು ಮತ್ತು ಶಿರ್ವ ಮಾಣಿಬೆಟ್ಟು ದಿ. ಅಣ್ಣಯ್ಯನವರ ಪುತ್ರಿ ಶ್ರೀಮತಿ ಎಸ್. ಶಾಂಭವಿಯವರ ವಿವಾಹವು ಮೂಲ್ಕಿ ವೆಂಕಟಕೃಷ್ಣಯ್ಯನವರ ಪುತ್ರ ಶ್ರೀ ಬಿ. ವಿಷ್ಣುಸರ್ಮರೊಡನೆ ತಾ.೧೬ ರಂದು ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಾಲಯದಲ್ಲಿ ನೆರವೇರಿದುವು. ನೂತನ ವಧೂವರರಿಗೆ 'ನವಯುಗ'ದ ಶುಭಾಶಯಗಳು. — ಸಂ. ಸ.

(೩ನೇ ಪುಟದಿಂದ)

ರೆಡ್ಡಿಯವರಿಂದ ಅವರಿಗೊಪ್ಪಿಸಿದ್ದ ಮಂತ್ರಿಶಾಖೆಗಳ ಮೇಲಣ ಅಧಿಕಾರವನ್ನು ಮುಖ್ಯಮಂತ್ರಿ ಸಂಜೀವಯ್ಯನವರು ಹಿಂತೆಗೆದು ಕೊಂಡುದರಿಂದ ಉಂಟಾದ ಗೊಂದಲವು ಕೇಂದ್ರ ವರಿಷ್ಠರ ಕಿವಿಯನ್ನೂ ಸೇರಿದೆ. ಅಲ್ಲಿಯೂ ಇದು ವಿಸ್ಮಯವನ್ನುಂಟು ಮಾಡಿತ್ತು. ಮುಂದೆ ಈ ಪ್ರಕರಣದ ಬಗ್ಗೆ ಕೇಂದ್ರ ಮತ್ತು ರಾಜ್ಯ ಧುರೀಣರ ನಡುವೆ ವಿಚಾರ ವಿನಿಮಯಗಳು ನಡೆದು ಇದರ ಪರಿಣಾಮವಾಗಿ, ಉಭಯ ಪಕ್ಷಗಳ ನಡುವೆ ಸಂಧಾನ ನಡೆಸುವುದು ಅಸಾಧ್ಯವಾಗಿ ಪರಿಣಮಿಸಿದುದರಿಂದ ಶ್ರೀ ಡಿ. ಸಂಜೀವಯ್ಯನವರು ತನಗೆ ಸರಿಕಂಡ ಕ್ರಮವನ್ನು ಕೈಗೊಳ್ಳಲು ಕೇಂದ್ರ ಪಾರ್ಲಿಮೆಂಟ್ ಬೋರ್ಡ್ ಸಮ್ಮತಿಸಿತು.

ಪೇಕಿಂಗ್‌ಗೆ ಭಾರತೀಯ ನಿಯೋಗ

ಚೀನಾ—ಭಾರತ ಸೀಮಾ ವಿವಾದದ ಬಗ್ಗೆ ಎಪ್ರಿಲ್ ತಿಂಗಳಲ್ಲಿ ಉಭಯ ಪ್ರಧಾನಿಗಳು ಒಪ್ಪಿಕೊಂಡಂತೆ ದಾಖಲೆಗಳ ಪರಿಶೀಲನೆಗಾಗಿ ಕೇಂದ್ರ ಸರಕಾರದ ವಿದೇಶ ವ್ಯವಹಾರ ಮಂತ್ರಿ ಶಾಖೆಯ ಉತ್ತರ ವಿಭಾಗದ ಡೈರೆಕ್ಟರ ಶ್ರೀ ಜಗತ್ ಸಿಂಹ ಮೆಹತಾರ ಹಿರಿತನದಲ್ಲಿ ಭಾರತೀಯ ತಂಡವೊಂದು ಪೇಕಿಂಗಿನ ದಾರಿಯಾಗಿ ಹೊರಡುವುದು.

ದೆಹಲಿಯ ನರ್ಸಿಂಗ್ ಕಾಲೇಜು

ಮೇಲಿನ ಸಾಲಿನ ಎಡಪಕ್ಕದ ಚಿತ್ರದಲ್ಲಿ ನರ್ಸಿಂಗ್ ತರಗತಿಯ ಪ್ರಥಮ ವರ್ಷದ ವಿದ್ಯಾರ್ಥಿನಿಯರು ತರಗತಿಯಲ್ಲಿರುವುದನ್ನೂ ಬಲಪಕ್ಕದ ಚಿತ್ರದಲ್ಲಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿಯರು, ಆಸ್ಪತ್ರೆ, ಆರೋಗ್ಯ ಕೇಂದ್ರಗಳು ಮೊದಲಾದುವುಗಳಿಗೆ ಪ್ರತ್ಯಕ್ಷ ತರಬೇತಿಗಾಗಿ ತೆರಳಲು ಬಸ್ಸು ಹತ್ತುತ್ತಿರುವುದನ್ನೂ ಕಾಣಬಹುದು

ಕೆಳಗಿನ ಸಾಲಿನ ಎಡಚಿತ್ರವು ಸೂಲಗಿತ್ತಿತನದಲ್ಲಿ ತರಬೇತಿಯನ್ನು ಪಡೆಯುತ್ತಿರುವುದನ್ನೂ ಬಲಚಿತ್ರವು ರೋಗಿಗಳನ್ನು ಹೇಗೆ ಚಿಕಿತ್ಸೆ ನಡೆಸಬೇಕೆಂದು ವಿದ್ಯಾರ್ಥಿನಿಯರಿಗೆ ಹೇಳಿಕೊಡುತ್ತಿರುವುದನ್ನೂ ತೋರಿಸುತ್ತವೆ.

ಅಭಿಪ್ರಾಯ

ಭಾಷಾರಾಜ್ಯಗಳು ಉನ್ನತಿಹೇತುವಾಗಿಲ್ಲ

ಇದುವರೆಗಿನ ಅನುಭವದಂತೆ ಭಾಷಾವಾರಾಗಿ ಪುನಾರಚನೆಗೊಂಡ ರಾಜ್ಯಗಳು ಭಾರತದ ಏಕಸೂತ್ರತೆಗೆ ಅನುಕೂಲವಾದಂತೆ ತೋರಿಬಂದಿಲ್ಲ.

ಭಾರತವನ್ನೇ ಹೊಡೆದೆಬ್ಬಿಸಿದ ಮಹಾ ವಂಗಭಂಗ ಚಳುವಳಿಯಿಂದ, ಲೋಕ ಪ್ರಸಿದ್ಧ ಚರಿತ್ರಕಾರ, ಶ್ರೀ ನೆಹರೂರವರು, ಉತ್ತಮ ಪಾಠವನ್ನು ಕಲಿತಂತೆ ಕಂಡುಬರುವುದಿಲ್ಲ. ಏಕಭಾಷಾ ಸ್ವಾಯತ್ತತೆಯ ಪ್ರಾಂತ್ಯದಿಂದ ಇಡೀ ದೇಶದ ಐಕ್ಯತೆಗೆ ಧಕ್ಕೆ ಬರಬಹುದೆಂದು, ರಾಜಕಾರಣೀ ಧುರೀಣರಾದ ಬ್ರಿಟಿಷರು, ವಂಗ ವಿಭಜನಾಕಾರ್ಯದಲ್ಲಿ ಅಸಫಲರಾದರೂ, ದೇಶದ ಒಕ್ಕಟ್ಟಿನ ದೃಷ್ಟಿಯಲ್ಲಿ ಅವರ ಅಭಿಪ್ರಾಯವು ಶ್ಲಾಘನೀಯವಾಗಿತ್ತು.

ಆಂಧ್ರದಲ್ಲಿ ಶ್ರೀ ನೆಹರೂರವರು ತೋರ್ಪಡಿಸಿದ ಕ್ಷೀಣತೆಯ ಫಲಿತಾಂಶವಾಗಿ, ಭಾರತವು, ಹದಿನಾಲ್ಕು ಪ್ರಮುಖ ಭಾಷೆಗಳನ್ನೊಳಗೊಂಡ ಹದಿನಾಲ್ಕು ಪ್ರಾಂತ್ಯಗಳಾಗಿ ವಿಭಜಿಸಲ್ಪಟ್ಟಿತು. ಮುಂಬಾಯಿ ದ್ವಿಭಾಷಾ ರಾಜ್ಯವಾಗಿ ಪರಿಗಣಿಸಲ್ಪಟ್ಟಿತು. ಮುಂಬಾಯಿ ಪಟ್ಟಣವನ್ನು ಎಲ್ಲಾ ಭಾಷಿಕರಿಗಾಗಿ ಕಾಯ್ದಿಡುವ ಉದ್ದೇಶ್ಯವೇ ಇದಕ್ಕೆ ಕಾರಣವಾಗಿತ್ತು. ಆದರೆ ಪ್ರತಿಯೊಬ್ಬ ಪ್ರಾಂತೀಯನೂ ತಂತಮ್ಮ ಪ್ರಾಂತ್ಯೋದಯ ಗೀತೆಯನ್ನು ಹಾಡುತ್ತಿರುವಾಗ, ಮರಾಠೀ ಮತ್ತು ಗುಜರಾತೀ ಜನತೆಯಲ್ಲಿ ಭಾಷಾಪ್ರೇಮ ಸಾರ್ಥನಾಡಿಯು ಮಿಡಿಯುವುದರಲ್ಲಿ ಆಶ್ಚರ್ಯವಿಲ್ಲ. ಕಾಂಗ್ರೆಸ್ ಆಡಳಿತ್ತ ನಿರಾಕಾರದಿಂದಾಗಿ ರೊಚ್ಚಿಗೆದ್ದ ಮರಾಠ ಜನತೆ ಮುಂಬಾಯಿಯನ್ನೂ; ಗುಜರಾತಿ ಜನತೆ, ಅಹಮ್ಮದಾಬಾದ ನಗರವನ್ನೂ ಕೆಲವು ದಿನಗಳ ಮಟ್ಟಿಗೆ ಸ್ಮಶಾನದಂತೆ ಮಾರ್ಪಡಿಸಿತು! ಕಾಂಗ್ರೆಸನ್ನು ಎದುರಿಸಲು ಎಲ್ಲಾ ಪಕ್ಷಗಳು ಕೂಡಿ ಮುಂಬಾಯಿಯಲ್ಲಿ ಸಮಿತಿಯ ನಿರ್ಮಾಣವಾಯಿತು. ಗುಜರಾತದಲ್ಲಿ ಗಣತಂತ್ರ ಪರಿಷದ್ ಹುಟ್ಟಿಕೊಂಡಿತು. ಇವೆರಡರ ಅವಿಶ್ರಾಂತ ಹೋರಾಟದ ಫಲಿತಾಂಶವಾಗಿ ಮುಂಬಯಿ ನಗರ ಸಹಿತ ಮಹಾರಾಷ್ಟ್ರ ಮತ್ತು ಗುಜರಾತ್ ಎಂಬ ಎರಡು ಪ್ರಾಂತ್ಯಗಳು ಕಳೆದ ಏಪ್ರಿಲ್ ತಿಂಗಳ ಕಡೆಯ ವಾರದಲ್ಲಿ ತಮ್ಮ ಪ್ರಾಂತ್ಯೋದಯ ಗೀತೆಗಳನ್ನು ಹಾಡಿದುವು. ಮುಂಬಾಯಿ ನಗರವು ಪಂಚದಿನ ಮಹೋತ್ಸವವನ್ನು ಆಚರಿಸಿತು. ಭಾರತ ಸ್ವಾತಂತ್ರ್ಯ ದಿನಾಚರಣೆಯು ಒಂದು ದಿನವಾದರೆ ಮಹಾರಾಷ್ಟ್ರ ಪ್ರಾಂತ್ಯೋದಯಾಚರಣೆಯು ಐದು ದಿನ ಅಂದರೆ, ದೇಶಪ್ರೇಮಕ್ಕಿಂತ ನಾಲ್ಕು ಪಟ್ಟು ಪ್ರಾಂತ್ಯ ಪ್ರೇಮ ಹೆಚ್ಚು! ಎರವಾಡ ಜೈಲಿನಿಂದ ನಾಲ್ನೂರು ಕೈದಿಗಳು ಸಂತೋಷ ಸೂಚಕವಾಗಿ ಬಿಡಲ್ಪಟ್ಟರು! ಆದರೆ ಪ್ರಕರಣ ಇಷ್ಟರಲ್ಲೇ ಮುಗಿಯಿತೇ?

ಮಹಾರಾಷ್ಟ್ರದ ಇನ್ನೊಂದೆಡೆಯಲ್ಲಿ ಮಹಾರಾಷ್ಟ್ರ ವಿಭಜನೆಗಾಗಿ ಆಂದೋಲನ ನಡೆಯುತ್ತಿದೆ! ಡಾ. ಎಮ್. ಎಸ್. ಆನಿ ಮತ್ತು ಶ್ರೀ. ಟಿ. ಜಿ. ದೇಶಮುಖ್ ಮೊದಲಾದವರು ನಾಗ್-ವಿದರ್ಭ ಆಂದೋಲನ ಸಮಿತಿ ಕಟ್ಟಿಕೊಂಡು; ತಮ್ಮ ಮತ್ತೂ ಸಂಕುಚಿತ ಸ್ವಾರ್ಥಕ್ಕಾಗಿ ಹೋರಾಡುತಿದ್ದಾರೆ. ಇಟವಾರಿ ಪೋಸ್ಟ್ ಆಫೀಸ್ (ನಾಗಪುರ್) ಬೆಂಕಿಗೆ ಆಹುತಿಯಾಯಿತು. ಒಂದೆರಡು ಸಾರಿ ನಾಗಪುರದಲ್ಲಿ ಗೋಲೀಬಾರ್ ಕೂಡಾ ನಡೆಯಿತು, ಆದರೆ ಪ್ರಾಣ ಹಾನಿಯಾಗಲಿಲ್ಲ.

ಪಂಜಾಬಿನಲ್ಲಿ ಮಾಸ್ಟರ್ ತಾರಾಸಿಂಗ್, ಪಂಜಾಬ್ ಸುಬೆಯನ್ನು ಕೊಂಡಂದೇ ಸಿಕ್ ಜನತೆಗೆ ಶಾಂತಿಯೆಂದು ತನ್ನ ಅಚಲ ಧೋರಣೆಯನ್ನು ಪ್ರಕಟಿಸಿ ಮಹಾ ಆಂದೋಲನಕ್ಕಾಗಿ ತಯಾರಿಕೆಯಲ್ಲಿದ್ದಾರೆ. ಅದೆಷ್ಟೋ ಗಲಿನಾರ್ಹ ಚಳುವಳಿಯು ನಡೆದೂ ತೀರಿತು. ದ್ವಿಭಾಷಾ ಪ್ರಾಂತ್ಯ ವಿಷಯದಲ್ಲಿ ಮಿಂದೆದ್ದ ಕೇಂದ್ರ ಸರಕಾರಕ್ಕೆ ಹಾಗೂ ಕಾಂಗ್ರೆಸ್ಸಿಗೆ; ವಿದರ್ಭ ಮತ್ತು ಪಂಜಾಬ್ ಪ್ರಾಂತ್ಯ ರಚನಾ ವಿಷಯವು ಅಸಹನೀಯ ತಲೆ ನೋವಾಗಿ ಪರಿಣಮಿಸಿದೆ.

ವಿಶ್ವದಲ್ಲಿ ಇಂದು ಸಣ್ಣ ಸಣ್ಣ ದೇಶಗಳು, ಸಮಾನ ಅಭಿರುಚಿಯಿಂದ ಒಕ್ಕಟ್ಟಾಗಿ ಏಕ ಸರಕಾರವನ್ನು ಸ್ಥಾಪಿಸುತ್ತಿರುವಾಗ ಭಾರತದಲ್ಲಿ ಏಕ ಸರಕಾರದ ಕೈ ಕೆಳಗೆ ಅನೇಕ ಸರಕಾರಗಳು ಹುಟ್ಟಿಕೊಳ್ಳುತ್ತಿವೆ. ಭಾಷಾವಾರು ಪ್ರಾಂತ್ಯ ರಚನೆಯು ಭಾರತೀಯರಲ್ಲಿ ಸ್ವಾರ್ಥ ಭಾವನೆಯನ್ನು ಬೆಳೆಸಿತು ಬೆಳೆಸುತ್ತಿದೆ. ಒಂದು ಪ್ರಾಂತೀಯನು ಇನ್ನೊಂದು ಪ್ರಾಂತೀಯನನ್ನು ಪರದೇಶಿಕನಂತೆ ಕಾಣುತ್ತಾನೆಂಬುದಕ್ಕೆ ಗಡಿ ವಿವಾದವೇ ಸಾಕ್ಷಿಯಾಗಿದೆ.

ಭಾಷಾವಾರು ಪ್ರಾಂತ್ಯ ರಚನೆಯು ದೇಶದ ಉನ್ನತಿಗೆ ಕಾರಣವಾದೀತೆಂದು, ಯಾವೊಬ್ಬ ವಿದ್ಯಾವಂತ ಹಾಗೂ ಈ ಒಂದು ವರ್ಷದಿಂದ ನಡೆದ ಘಟನೆಗಳನ್ನೂ ಕೂಲಂಕಷವಾಗಿ ಪರೀಕ್ಷಿಸಿದ ಭಾರತೀಯನೂ ಹೇಳಲಾರ. ಯಾರು ಏನೇ ಆಗಲಿ, ಭಾರತದ ಭಾವೀ ದಿನಗಳು ಹೇಗೂ ಇರಲಿ, ಜನತೆಯಲ್ಲಿ ಜಾಗೃತಗೊಂಡ ಸ್ವಾರ್ಥವನ್ನು ಹತ್ತಿಕ್ಕಲು ಜನತೆ ತಮ್ಮ ಕರ್ತವ್ಯ ಅರಿತು ಚೇತರಿಸಲಿ.

—ಜೆ. ಎಚ್. ಮಜೂರು.

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಮಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ



(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೨೫

ನವಯುಗ ಪ್ರೆಸ್, ಉಡುಪಿ ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಂದಾಪುರ ಅಸಿಸ್ಟೆಂಟ್ ಕಮಿಶನರವರ ಕೋರ್ಟಿನಲ್ಲಿ

Eviction O. P. 409/1960.

ಮುಖ್ಯಪ್ರಾಣ ಉಪಾಧ್ಯ —ಅರ್ಜಿದಾರ.

ಮತ್ತು

ಅಮೀರ್ ಸಾಹೇಬ —ಎದ್ರಿ

ಇವರೊಳಗೆ

ಎದ್ರಿ. ಅಮೀರ್ ಸಾಹೇಬ—ಉಸ್ಮಾನ್ ಸಾಹೇಬರ ಮಗ-ಉಡ್ಪಿ ತಾಲೂಕು ಕೊಡವೂರು ಗ್ರಾಮಸ್ಥ ಹಾಲಿ ತರಿಕೆರೆ ತಾಲೂಕು ಶಿವಾನಿ ಯೆಂಬಲ್ಲಿರುವವ ಯವರಿಗೆ

ಅರ್ಜಿದಾರನ ಬಾಬ್ತು ನೀವು ಚಾಲಗೇಣಿಗೆ ಅನುಭವಿಸುವ ಕೊಡವೂರು ಗ್ರಾಮದ ಸ. ನಂಬ್ರ 177|7—ನಂಜ 0—28 ಸ್ಥಳವನ್ನು ಸ್ವಾಧೀನತೆ ಕೇಳಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 9—6—1960ಕ್ಕೆ ಇಟ್ಟಿದೆ ಉದಾಹರಿಸುವಂಥಾದಿದ್ದರೆ ಆ ದಿವಸ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜರಾಗಿ ಜ್ಞಾಹೀರು ಮಾಡಿಕೊಳ್ಳತಕ್ಕದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Ramakrishna Rao.
vakil for Petitioner.

Udipi Dated 26—6—60.

ಭಾರತೀಯ ರೇಲ್ವೆಗಳು

ಕಳೆದ ಎಪ್ರಿಲ್ ೧೬ಕ್ಕೆ ಭಾರತೀಯ ರೇಲ್ವೆಗಳಿಗೆ ೧೦೭ ವರ್ಷಗಳು ತುಂಬಿದುವು. ೧೮೫೩ರ ಇದೇ ದಿನದಂದು ಭಾರತೀಯ ಪ್ರಥಮ ರೇಲ್ವೆಯು ಬೊಂಬಾಯಿ-ಥಾನಾಗಳ ನಡುವೆ ಓಡಾಡಿತು. ೩೫ ಸಾವಿರ ಮೈಲುದ್ದದ ಭಾರತೀಯ ರೇಲ್ವೆಗಳಲ್ಲಿ ೧೧|| ಲಕ್ಷ ಪುರುಷ ಮತ್ತು ಸ್ತ್ರೀಯರು ದುಡಿಯುತ್ತಿದ್ದಾರೆ. ಮೇಲಿನ ಚಿತ್ರದಲ್ಲಿ ಮಾರ್ಗ ಪರೀಕ್ಷಕನೊಬ್ಬನು ರೇಲ್ವೆದಾರಿಗಳ ಮೇಲ್ವಿಚಾರಣೆ ನಡೆಸುತ್ತಿರುವುದನ್ನು ನಾವು ಕಾಣಬಹುದು.

ಆವಶ್ಯಕತೆ

ನಮಗಿಂದು ಯಾರು ಬೇಕು?

ಜನತೆಯ ಶಿಕ್ಷಕರು ಬೇಕೆ? ರಾಜ್ಯ ಆಂದೋಲನಕಾರರು ಬೇಕೆ? ನಮಗೆ ಸಮಾಜವನ್ನು ಸರಿದಾರಿಯಲ್ಲಿ ಮುನ್ನಡೆಸಬಲ್ಲ ಶಿಕ್ಷಕರು ಬೇಕೆನ್ನುತ್ತಾರೆ, ರಾಜಾಜಿ.

ನಮಗಿಂದು ಜನಶಿಕ್ಷಕರ ಅವಶ್ಯಕತೆಯಿದೆಯೋ, ಇಲ್ಲವೇ ಆಂದೋಲನಕಾರಿ ನಾಯಕರವೇ? ನನ್ನ ಅಭಿಪ್ರಾಯದಂತೆ ನಮಗೆ ಶಿಕ್ಷಕರು ಬೇಕಾಗಿದ್ದಾರೆ; ನಾಯಕರಲ್ಲ. ಇಲ್ಲಿ 'ಶಿಕ್ಷಕ' ಎಂಬ ಪದವನ್ನೂ ನಾನು ಶಾಲಾ ಅಧ್ಯಾಪಕರೆಂಬರ್ಥದಲ್ಲಿ ಬಳಸಿಕೊಂಡಿಲ್ಲ. ಈ ಪದವನ್ನು ಅಧಿಕ ವ್ಯಾಪಕಾರ್ಥದಲ್ಲಿ ಉಪಯೋಗಿಸಿದ್ದೇನೆ.

ವೈಯಕ್ತಿಕ ಚಾರಿತ್ರ್ಯದಲ್ಲಿ ವ್ಯಾಪಕ ಸುಧಾರಣೆಯ ಗುರಿಯನ್ನು ನಮಗೆ ಮುಟ್ಟಬೇಕಾಗಿದೆ. ನಮಗೆ ಈಗ, ತಮಗಿಂತ ಹೆಚ್ಚಾಗಿ ಪರರ ಬಗ್ಗೆ ಅನುಕಂಪ ಬೀರಬಲ್ಲ, ವಿಶ್ವಾಸ-ವರ್ತನೆಯುಳ್ಳ, ಮತ್ತು ಸಂಪತ್ತಿಗಿಂತ ಸತ್ಯ ಮತ್ತು ಉತ್ತಮತೆಯನ್ನು ಬಹುಮೂಲ್ಯವೆಂದು ತಿಳಿಯಬಲ್ಲ ಸ್ತ್ರೀಪುರುಷರು ಬೇಕಾಗಿದ್ದಾರೆ. ನಮ್ಮ ಅಭಿಲಾಷೆಯು ಇದಿರುವುದಾದರೆ, ಇದನ್ನು ನಾವು ಒಂದೆರಡು ವರ್ಷಗಳಲ್ಲಿ, ನನ್ನ ಅಭಿಪ್ರಾಯದಲ್ಲಿ ನಮ್ಮ ಜೀವನಕಾಲದಲ್ಲಿ, ಪೂರ್ಣ ಮಾಡುವುದಕ್ಕೆ ಬಯಸುವುದಾದರೆ, ಇವೆಲ್ಲವೂ ಯಾವುದೇ ನಾಯಕ ಮತ್ತು ಆತನ ನೇತೃತ್ವದಲ್ಲಿ ನಡೆಯುವ ಆಂದೋಲನದ ಮೂಲಕವೇ ಸಾಧ್ಯವಾಗಬಹುದು.

ಜೀವನದ ವಾಸ್ತವಿಕ ಮೌಲ್ಯಗಳ ಸಹಜ ಪ್ರಚಾರ–ಪ್ರಸಾರ ಮತ್ತು ಅವುಗಳಿಗನುಗುಣವಾದ ಚರಿತ್ರ ನಿರ್ಮಾಣದ ಮಾಧ್ಯಮದಿಂದ ನಾವು ಈ ಗುರಿಯನ್ನು ಪೂರ್ಣಮಾಡುವುದಾದರೆ, ಸಮಯದ ಅವಧಿಯ ಶರ್ತವನ್ನು ಹೇರುವುದು ಸರಿಯಾಗಲಾರದು. ಸಹಜವಾಗಿಯೂ ಇದು ಬಹಳ ದೀರ್ಘವಾದ ಮತ್ತು ಸುತ್ತುವರಿಯುವ ಮಾರ್ಗವಾಗಿದೆ. ಶಿಕ್ಷಣವನ್ನು ಕೊಟ್ಟು ತಮ್ಮ ಮಿಶನನ್ನು ಪೂರ್ಣ ಮಾಡುವ ಶಿಕ್ಷಕರ ಆವಶ್ಯಕತೆ ನಮಗಿದೆ. ಆಂದೋಲನಕಾರಿ ನಾಯಕರಿಗಿಂತ ಸಂಪೂರ್ಣ ವ್ಯತಿರಿಕ್ತವಾದ ವಿಧಾನದಲ್ಲಿ ಈ ಕಾರ್ಯವು ನಡೆಯಬೇಕೆಂದು ನಾವು ಬಯಸುತ್ತೇವೆ. ಇಂತಹ ಜನರು ಯಾವುದೇ ಆಡಂಬರವಿಲ್ಲದೆ, ಪ್ರದರ್ಶನವಿಲ್ಲದೆ ಸಹಜವಾದ ವಿಶ್ವಾಸ ಮತ್ತು ಧೈರ್ಯದಿಂದ ಪರಿಶ್ರಮಪಡುವರು. ಅಲ್ಲಿ 'ನನ್ನ ಸಮಯವು ಬಹುಮೂಲ್ಯವಾದುದು' ಎಂಬ ಗರ್ವೋಕ್ತಿ ಮತ್ತು ತೀಕ್ಷ್ಣವಾಣಿಗೆ ಯಾವ ಅವಕಾಶವೂ ಉಳಿಯುವುದಿಲ್ಲ. ನಾಯಕರಿಗೆ ಕೀರ್ತಿಗಳಿಸುವ ಮತ್ತು ಅಗ್ರನಾಯಕರೆನಿಸುವ ಹಂಬಲ ಬಹಳ; ಇದರಿಂದಾಗಿ ಯಾವುದೇ ಆಂದೋಲನವು ಮುಂದುವರಿಯುವುದಿಲ್ಲ. ಇವೆಲ್ಲವೂ ಅಲಕ್ಷ್ಯಭಾವದಿಂದಾಗಲೀ ಕುಶಲತಾಪೂರ್ವಕವಾಗಿಯಾಗಲೀ ಇವರಿಗೆ ತಮ್ಮ ಹಂಬಲವನ್ನು ಪೂರೈಸಿಕೊಳ್ಳಬೇಕಾಗಿದೆ.

ಆದರೆ, ಶಿಕ್ಷಕರ ಕಾರ್ಯದಲ್ಲಿ ಇಷ್ಟೊಂದು ಗಡಿಬಿಡಿ ಪಡುವ ಆವಶ್ಯಕತೆಯಿರುವುದಿಲ್ಲ. ಅಥವಾ ಶಿಕ್ಷಕರ ಮಾರ್ಗವೂ ಇದಲ್ಲ. ವಸ್ತುತಃ ಶಿಕ್ಷಕರು ಯಶೋಲೋಲುಪತೆಯಿಂದ ಬದುಕಬೇಕಾಗಿದೆ ಆತನು ಮೌನತಪಸ್ವಿಯಂತೆ ಸುಮ್ಮನಿದ್ದು ತನ್ನ ಕಾರ್ಯವನ್ನು ಮಾಡಬೇಕಾಗುತ್ತದೆ, ಆತನು ಖ್ಯಾತಿ ಪ್ರಾಪ್ತಿ ಮಾಡುವುದರಲ್ಲಿಯೇ ತತ್ಪರನಾಗಿರುವುದಾದರೆ, ಶಿಷ್ಯರ ಮನಸ್ಸಿನಲ್ಲಿ ಉತ್ತಮತೆಯನ್ನು ಪ್ರತಿಬಿಂಬಿಸಿ, ಅದನ್ನು ಪರಿಷ್ಕರಿಸುವ ಆತನ ಕೆಲಸದಲ್ಲಿ ಅಡೆತಡೆ ಬಂದಂತಾಗುವುದು. ಆತನಿಗೆ ಪ್ರಸಿದ್ಧಿಕೊಂಡುವುದರಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಆನಂದವನ್ನು ಪಡೆಯುವುದರಲ್ಲಿ ಆಸಕ್ತಿ ತೋರಿಸಿ ಅಂತಹ ಕಲೆಯನ್ನು ಅಭ್ಯಸಿಸುವ ಪ್ರಯತ್ನ ಮಾಡುವನಾದರೆ, ಆತ ಶಿಕ್ಷಕನಾಗಿ ಉಳಿಯುವುದಿಲ್ಲ; ಮುಂದುವರಿದು ಆತ ನಾಯಕನ ರೂಪದಲ್ಲಿ ಸಫಲನಾಗಬಹುದು; ಇಲ್ಲವೇ ಅಸಫಲನಾಗಬಹುದು.

ಶಿಕ್ಷಕನು ಎಂದಿಗೂ ತಾನು ದೊಡ್ಡವನಾಗಬೇಕು ಎಂದು ಪ್ರಯತ್ನಿಸುವುದಿಲ್ಲ. ಆತ ಸದಾ ಸತ್ಯ ಮತ್ತು ನ್ಯಾಯಗಳ ರಕ್ಷಣೆಗಾಗಿ ಪ್ರಯತ್ನ ನಡೆಸುತ್ತಾನೆ. ಹಾಗೆಯೇ ನಿಷ್ಠಾವಂತ ಮಾನವರು ಪ್ರಸಿದ್ಧಿ ಸಂಪಾದನೆಯಿಂದ ದೂರವಿರುವುದು ಅಗತ್ಯ. ಪ್ರತ್ಯೇಕ ಯುಗದಲ್ಲಿ ಪ್ರಪಂಚದ ಭಾರವನ್ನು ಕೇವಲ ೩೬ ಅಜ್ಞಾತ ನಿಷ್ಠಾವಂತ ವ್ಯಕ್ತಿಗಳ ಮೇಲೆ ಇರುತ್ತದೆ’ ಎಂಬ ಉಕ್ತಿಯೊಂದಿದೆ.

ಇಂತಹ ಶಿಕ್ಷಕರು ಎಲ್ಲಿಯಾದರೂ ಇದ್ದಾರೆಯೆ? ಕೆಲವು ವೇಳೆ ಪರಮಾತ್ಮನು ದಯೆದೋರಿ, ಅಂತಹರನ್ನು ಕಳಿಸುತ್ತಾನೆ. ಸುಕರಾತ ಎಂಬವನು ಇಂತಹ ಶಿಕ್ಷಕರಲ್ಲಿ ಒಬ್ಬನು. ಯೇಸು, ಗೌತಮ ಬುದ್ಧರೂ ಇದೇ ಮಾದರಿಯ ಶಿಕ್ಷಕರಾಗಿ ಪರಮಾತ್ಮನಿಂದ ಕಳಿಸಲ್ಪಡುತ್ತಾರೆ. ರಾಮಕೃಷ್ಣ ಪರಮಹಂಸರೂ ಇಂತಹರಲ್ಲಿ ಒಬ್ಬರು. ಇವರು ಶಿಷ್ಯರಿಗೆ ವಿದ್ಯೆಗಳನು ಕಲಿಸುವುದರಲ್ಲಿ ನಿಸ್ಸೀಮರಾಗಿದ್ದರು. ಇಂದು ನಮಗೂ ಇವರಂತೆಯೇ ಇರುವ ಶಿಕ್ಷಕರು ಬೇಕಾಗಿದ್ದಾರೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ–

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾದರ ಸ್ವೀಕಾರ

ವೀರಮಾತೆ:—(ಧಾರವಾಡದ, ವನಿತಾ ವಿದ್ಯಾಸಂಸ್ಥೆಗಳ ವಾರ್ಷಿಕ ಸಂಚಿಕೆಗಳು) ವನಿತಾ ಟ್ರೇನಿಂಗ ಕಾಲೇಜ, ವನಿತಾ ಪ್ರಾಥಮಿಕ ಶಾಲೆ, ವನಿತಾ ಹೈಸ್ಕೂಲ, ವನಿತಾ ಔದ್ಯೋಗಿಕ ಶಾಲೆ, ಸಂಗೀತ ಹಾಗೂ ನೃತ್ಯ ಕಲೆಗಳ ಶಾಲೆಗಳ ವಾರ್ಷಿಕ ಸಂಚಿಕೆಯ ರೂಪದಲ್ಲಿರುವ ಈ ಸಂಚಿಕೆಯನ್ನು ಸ್ವಾಗತಿಸುತ್ತೇವೆ. ವನಿತಾ ಹೈಸ್ಕೂಲಿನ ಪತ್ರಿಕೆಯ ವಿಭಾಗದಲ್ಲಿ ಕನ್ನಡ ಮಾತ್ರವಲ್ಲದೇ ಇಂಗ್ಲಿಷ್ ಹಾಗೂ ಹಿಂದೀ ವಿಭಾಗಗಳೂ ಇರುತ್ತವೆ. ದಕ್ಷ ಸಂಪಾದಕರ ಮಾರ್ಗದರ್ಶನದಲ್ಲಿ ಸಂಕಲಿತವಾದ ಈ ವಾರ್ಷಿಕಾಂಕಗಳಲ್ಲಿ ವಿವಿಧ ವಿಚಾರಗಳ ಬಗ್ಗೆ ಸರಳ ವಿಚಾರ ಪರಿಪ್ಲುತ ಲೇಖನಾದಿಗಳೂ ಅಲ್ಲಲ್ಲಿ ವಿದ್ಯಾಲಯಗಳಿಗೆ ಸಂಬಂಧಿಸಿದ ಚಿತ್ರಪಟಗಳೂ ಇರುತ್ತವೆ.

ಮೊಗವೀರ—(ವಿಶೇಷ ಸಂಚಿಕೆ) ಸಂಪಾದಕರು: ರಮಾನಂದ ಅಮೀನ್. ಪ್ರಕಾಶಕರು: ಎಚ್. ಕೆ. ಪುತ್ರನ್, ಮೊಗವೀರ ವ್ಯವಸ್ಥಾಪಕ ಮಂಡಳಿ, ಬೊಂಬಾಯಿ. ಬೆಲೆ: ರೂ. ೧—೦೦.

ಮುಂಬಯಿಯಲ್ಲಿ ಅರ್ಧದಶಮಾನಕ್ಕೂ ಮಿಕ್ಕಿದ ಸಮಯದಿಂದ ನಾನಾ ವಿಧಾನಗಳಿಂದ ಮೊಗವೀರ ಸಮಾಜದ ಸೇವೆಯನ್ನು ಮಾಡಿಕೊಂಡು ಬರುತ್ತಿರುವ ಮೊಗವೀರ ವ್ಯವಸ್ಥಾಪಕ ಮಂಡಳಿಯ ಪತ್ರಿಕೆ 'ಮೊಗವೀರ'ದ ಈ ವಿಶೇಷ ಸಂಚಿಕೆಯಲ್ಲಿ ಮಂಡಳಿಯು ನಡೆಸಿಕೊಂಡುಬರುವ ಕಾರ್ಯಕ್ರಮಗಳ ಪರಿಚಯ ಮಾತ್ರವಲ್ಲದೆ, ಮೊಗವೀರ ಧರ್ಮಾರ್ಥ ರಾತ್ರಿಶಾಲೆಯ ಸುವರ್ಣಮಹೋತ್ಸವದ ಕಾರ್ಯಕಲಾಪಗಳ ವಿವರಗಳೂ ಲೇಖನ, ಕಥೆ, ಕವನಾದಿಗಳೂ ಅಡಕವಾಗಿದ್ದು ವಾಚನೀಯವಿವೆ. ಮೊಗವೀರ ಬಂಧುಗಳ ರಚನಾತ್ಮಕ ಕಾರ್ಯಗಳು ಭರದಿಂದ ಬೆಳೆದುಬರಲಿ; ಮಂಡಳಿಯು ತನ್ನ ಧ್ಯೇಯಸಾಧನೆಯಲ್ಲಿ ಸಂಪೂರ್ಣ ಯಶಸ್ವಿಯಾಗಲಿ.

—ಗೋರಾ.

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗುತ್ತದೆ.

—ಮೆನೇಜರ್

ಅಂಧರಿಗೆ ಶಿಕ್ಷಣ

ಕುರುಡರೂ ದುಡಿಯಬಲ್ಲರು

ಯೋಗ್ಯ ವಿದ್ಯಾಭ್ಯಾಸ ಪಡೆದ ಕುರುಡರು ಅತಿ ಸೂಕ್ಷ್ಮವಾದ ಕೆಲಸಗಳನ್ನೂ ಮಾಡಲು ಸಮರ್ಥರೆಂದು ಸಿದ್ಧವಾಗಿವೆ.

ಪೂನ್ನಮಲೆಯಲ್ಲಿರುವ ಸರಕಾರಿ ಅಂಧರ ಶಾಲೆಯಲ್ಲಿ ಸದ್ಯದಲ್ಲಿಯೇ ಅಂಧರಿಗೆ ಓದಲು ಅನುಕೂಲವಾಗುವಂತೆ ಬ್ರೈಲ್ ಮಾದರಿಯಲ್ಲಿ ಪುಸ್ತಕಗಳನ್ನು ಮುದ್ರಿಸುವ ಮುದ್ರಣಾಲಯವೊಂದು ಪ್ರಾರಂಭವಾಗುವುದು. ಮದ್ರಾಸ ರಾಜ್ಯ ಸರಕಾರವು ಈ ಮುದ್ರಣಾಲಯದ ವಸ್ತುಗಳಿಗಾಗಿ ಪಶ್ಚಿಮ ಜರ್ಮನಿಗೆ ಕೇಳಿಕೆಯನ್ನು ಅರ್ಪಿಸಿದ್ದು ಅವು ಮದ್ರಾಸಕ್ಕೆ ಬರುವ ದಾರಿಯಲ್ಲಿರುವುವು. ಅಮೆರಿಕೆಯ ಅಂಧರ ಸಂಸ್ಥೆಯೊಂದು ಆವಶ್ಯಕತೆಯಿದ್ದರೆ, ಮುದ್ರಣಾಲಯದ ಕಾರ್ಯಕಲಾಪಗಳನ್ನು ಯಶಸ್ವಿಗೊಳಿಸಲು ಒರ್ವ ತಜ್ಞನನ್ನೂ ಕಳಿಸುವುದಾಗಿ ಒಪ್ಪಿದೆಯೆಂದು ತಿಳಿದು ಬಂದಿದೆ. ಕುರುಡರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಅನುಕೂಲವಾದ ಪಠ್ಯಪುಸ್ತಕಗಳನ್ನು ತಯಾರಿಸುವ ಮುದ್ರಣಾಲಯಗಳು ಭಾರತದಲ್ಲಿ ಸದ್ಯ ಬೊಂಬಾಯಿ ಮತ್ತು ಡೆಹರಾಡೂನ್‌ಗಳ ಅಂಧ ಪಾಠ ಶಾಲೆಗಳಲ್ಲಿ ಮಾತ್ರವಿರುವುವು.

ಪೂನ್ನಮಲೆಯ ಸರಕಾರಿ ಅಂಧಪಾಠ ಶಾಲೆಯು ಕುರುಡರನ್ನು ಇತರ ವಿದ್ಯಾರ್ಥಿಗಳಂತೆಯೇ ತರಬೇತಿಗೊಳಿಸುವುದೆಂಬುದನ್ನು ಪ್ರತ್ಯಕ್ಷಪಡಿಸಿದ ಶಾಲೆಗಳಲ್ಲಿ ಒಂದಾಗಿದೆ. ೫ರಿಂದ ೧೦ ವರ್ಷಗಳ ಪ್ರಾಯದ ಮಕ್ಕಳಿಗೆ ಶಕ್ತಿಯಿದ್ದ ಪಕ್ಷದಲ್ಲಿ ಅವರಿಗೆ ಪ್ರೌಢ ಶಾಲಾ ಶಿಕ್ಷಣವನ್ನೂ ಇಲ್ಲಿ ನೀಡಲಾಗುವುದು. ಇಲ್ಲವಾದರೆ, ವೃತ್ತಿಪರ ಶಿಕ್ಷಣವೀಯಲಾಗುವುದು. ಈ ಶಾಲೆಯಲ್ಲಿ ಸುಮಾರು ೨೦೦ ವಿದ್ಯಾರ್ಥಿಗಳು ಅಧ್ಯಯನ ನಡೆಸುತಿದ್ದಾರೆ. ಇತ್ತೀಚೆಗಿನ ವರ್ಷಗಳಲ್ಲಿ ಎಸ್. ಎಸ್. ಎಲ್. ಸಿ. ಸರಕಾರಿ ಪರೀಕ್ಷೆಗೆ ಕೆಲವೊಂದು ವಿದ್ಯಾರ್ಥಿಗಳನ್ನು ಕಳಿಸಿ ಕೊಡುತ್ತಿದೆ. ಇದುವರೆಗೆ ೧೦ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಈ ವರ್ಷದಲ್ಲಿ ನಾಲ್ವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉಪಸ್ಥಿತರಾಗಿದ್ದಾರೆ. ಇವರಿಗೆ ಅಧಿಕಾರಿಗಳಿಂದ ಅಧಿಕರಿಸಲ್ಪಟ್ಟ ಗುಮಾಸ್ತರು ಸಹಾಯ ಮಾಡಿದ್ದರು.

ಈ ಶಾಲೆಯ ಪಾಠ ಪಟ್ಟಿ ಮತ್ತು ಪಠ್ಯ ಪುಸ್ತಕಗಳು ಇತರ ಶಾಲೆಗಳಲ್ಲಿಯವೇ ಆಗಿವೆ. ಈ ಪಠ್ಯ ಪುಸ್ತಕಗಳು "ಬ್ರೈಲ್" ಪದ್ಧತಿಯಲ್ಲಿ ಮುದ್ರಿಸಲ್ಪಟ್ಟಿವೆ ಯಷ್ಟೆ. ಪುಸ್ತಕವು ದೊಡ್ಡದಾಗಿದ್ದರೆ, ಅದನ್ನು ಟೇಪ್ ರೆಕಾರ್ಡ್ ಮಾಡಿ ವಿದ್ಯಾರ್ಥಿಗಳಿಗೆ ಉಪಯೋಗ ಹೆಚ್ಚು ದೊರೆಯುವಂತೆ ಏರ್ಪಾಡು ಮಾಡಲಾಗಿದೆ.

ಈ ಶಾಲೆಯಿಂದ ಎಸ್.ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾದ ಒಬ್ಬ ವಿದ್ಯಾರ್ಥಿಯು ಸರಕಾರಿ ಕಲಾಶಾಲೆಯಲ್ಲಿ ಇತರ ವಿದ್ಯಾರ್ಥಿಗಳೊಡನೆಯೇ ಪ್ರಿಯುನಿವರ್ಸಿಟಿ ತರಗತಿಯಲ್ಲಿ ಅಧ್ಯಯನ ನಡೆಸಿದ್ದಾನೆ. ಇವನು ಗಣಿತ ಪಾಠದಲ್ಲಿ ಅನುತ್ತೀರ್ಣನಾದನೇನೋ ನಿಜವೇ; ಆದರೆ, ಈತನು ಉಳಿದವರಿಗಿಂತ ಕಡಿಮೆಯವನಲ್ಲವೆಂಬುದು ಸ್ವಯಂವಿದಿತವಾಗಿದೆ.

ಅಂಧರಿಗೆ ಶಿಕ್ಷಣವೀಯುವುದರಲ್ಲಿ ನಿಷ್ಣಾತರಾದ ಒಬ್ಬ ಅಧ್ಯಾಪಕರ ಅಭಿಪ್ರಾಯದಂತೆ ಗಣಿತ ಮತ್ತು ಪ್ರಕೃತಿ ವಿಜ್ಞಾನಗಳನ್ನು ಕುರುಡರಿಗೆ ಕಲಿಸುವುದು ಬಹಳ ಕಷ್ಟಕರವಾಗಿದೆ. ಕಲಿಯುವುದೂ ಪ್ರಯಾಸವಾಗುತ್ತದೆ. ಇದರಿಂದಾಗಿ ವಿಶ್ವವಿದ್ಯಾಲಯವು ಕೂಡಾ ಪಿ. ಯು. ಸಿ. ವರ್ಗದ ವಿದ್ಯಾರ್ಥಿಗಳು ಅನಿವಾರ್ಯವಾಗಿ ಗಣಿತ ಅಥವಾ ಪ್ರಕೃತಿ ವಿಜ್ಞಾನಗಳಲ್ಲಿ ಒಂದನ್ನು ತೆಗೆದುಕೊಳ್ಳಬೇಕಾಗಿದ್ದರೂ ಕುರುಡರ ಪಟ್ಟಿಗೆ ಈ ಸಂಬಂಧದಲ್ಲಿ ವಿನಾಯತಿಯಿತ್ತಿದೆ. ಆದರೂ ಈ ಅನುತ್ತೀರ್ಣನಾದ ವಿದ್ಯಾರ್ಥಿಯು ಪುನಃ ತೇರ್ಗಡೆಹೊಂದುವ ಬಗ್ಗೆ ಪ್ರಯತ್ನ ನಡೆಸುತಿದ್ದಾನೆ. ಈ ನಡುವಿನ ಒಂದು ವರ್ಷವನ್ನಾತ ಹಾಳು ಮಾಡದೆ ಹಿಂದಿಯಲ್ಲಿ ಪ್ರವೀಣ—ಪ್ರಚಾರಕ ಪರೀಕ್ಷೆಯ ಬಗ್ಗೆ ಅಧ್ಯಯನ ನಡೆಸುತ್ತಾನೆ.

ಅಂಧರಲ್ಲಿ ವಿದ್ಯಾಭ್ಯಾಸವನ್ನು ಪಸರಿಸುವ ಮಂಜೂರಾತಿ ಪಡೆದ ನಾಲ್ಕು ಶಾಲೆಗಳಲ್ಲಿ ಪೊನ್ನಮಲೆಯ ಶಾಲೆಯೂ ಒಂದಾಗಿದೆ. ಉಳಿದ ಮೂರು ಸೇಲಂ, ಮದ್ರಾಸಿನ ಚಿನ್ನಪೇಟೆ, ಮತ್ತು ಪಾಳಯಂ ಕೊಟ್ಟೆಗಳಲ್ಲಿವೆ. ಸೇಲಂನದು ಸರಕಾರಿ ಶಾಲೆಯಾಗಿದ್ದು ಉಳಿದುವು ಕ್ರಿಶ್ಚಿಯನ್ ಮಿಶನರಿಗೆ ಸೇರಿದುವು. ಮದ್ರಾಸ ರಾಜ್ಯದಲ್ಲಿ ಸುಮಾರು ೧½ ಲಕ್ಷ ಕುರುಡರಿರುವರೆಂದು ಅಂದಾಜು ಮಾಡಲಾಗಿದೆ. ಇವರಲ್ಲಿ ಸುಮಾರು ೧ ಲಕ್ಷದಷ್ಟು ವೃದ್ಧರಾಗಿದ್ದು ಯಾವುದೇ ತರಬೇತಿಗೆ ಅನರ್ಹರಿದ್ದು, ಇವರನ್ನು ಅನಾಥಾಶ್ರಮಗಳಲ್ಲಿಯೇ ರಕ್ಷಿಸಬೇಕಾಗಿದೆ. ಉಳಿದ ೫೦ ಸಾವಿರ ಕುರುಡರನ್ನು ಮಾತ್ರ ತರಬೇತಿಗೊಳಿಸುವ ಕೆಲಸವುಳಿದಿದೆ. ಇದರಲ್ಲಿಯೂ ಶಾಲಾ ಪ್ರಾಯದ ಮಕ್ಕಳು ಕೇವಲ ೩,೦೦೦ ಮಾತ್ರ. ಇವರಿಗೆ ವಿದ್ಯಾದಾನ ಮಾಡುವ ಸಂಸ್ಥೆಗಳ ಸಂಖ್ಯೆಯು ಹೆಚ್ಚಬೇಕಾಗಿದ್ದು, ರಾಜ್ಯದ ಪ್ರತಿ ಜಿಲ್ಲೆಗೊಂದರಂತೆ ಅಂಧಪಾಠ ಶಾಲೆಯನ್ನು ಸಂಸ್ಥಾಪಿಸುವ ಯೋಜನೆಯು ರಾಜ್ಯ ಸರಕಾರಕ್ಕಿದೆ.

ದೃಷ್ಟಿಯಿಂದ ವಂಚಿತರಾದವರಿಗೆ ವಿದ್ಯಾಭ್ಯಾಸವನ್ನು ಒದಗಿಸಿದ ಮಾತ್ರಕ್ಕೆ ಸಮಸ್ಯೆಯು ಪರಿಹಾರವಾದಂತಾಗಲಿಲ್ಲ. ತರಬೇತಿ ಪಡೆದ ಕುರುಡರಿಗೆ ಉದ್ಯೋಗವನ್ನು ಕಂಡುಹಿಡಿಯುವುದೇ ದೊಡ್ಡ ಸಮಸ್ಯೆಯಾಗಿದೆ. ಪೊನ್ನಮಲೆಯ ಅಂಧ ಶಿಕ್ಷಣಾಲಯದಲ್ಲಿ ಎಸ್. ಎಸ್. ಎಲ್. ಸಿ. ಉತ್ತೀರ್ಣರಾದ ೧೦ ವಿದ್ಯಾರ್ಥಿಗಳಲ್ಲಿ ಒಬ್ಬರಾದರೂ ಇದುವರೆಗೆ ಉದ್ಯೋಗವನ್ನು ಪಡೆದಿಲ್ಲವೆಂದು ತಿಳಿದುಬಂದಿದೆ. ಸಂಸ್ಥೆಯ ಪ್ರಧಾನರು ಕುರುಡರು ಮಾಡಬಲ್ಲ ಹಲವಾರು ಕೆಲಸಗಳಿವೆಯೆಂದು ಹೇಳುತ್ತಾರೆ. ವಿದೇಶಗಳಲ್ಲಿ ಅಂಧರು ಸ್ಟೆನೋಗ್ರಾಫರರಾಗಿಯೂ ಪತ್ರಿಕಾ ವರದಿಗಾರರಾಗಿಯೂ ದುಡಿಯುತ್ತಿರುವರೆಂದವರು ಅನ್ನುತ್ತಾರೆ. ಕುರುಡ ಸ್ಟೆನೋಗ್ರಾಫರರು ನಿಮಿಷಕ್ಕ ೧೩೦ ಪದಗಳ ವೇಗದಲ್ಲಿ ಟಿಪ್ಪಣಿಯನ್ನು 'ಬ್ರೈಲ್' ಪದ್ಧತಿಯಲ್ಲಿ ಬರೆದುಕೊಳ್ಳುತ್ತಾರೆಂದೂ ತಿಳಿಯುತ್ತದೆ.

ಭೌತಿಕವಾಗಿ ವಂಚಿತರಾದವರಿಗೆ ಯೋಗ್ಯ ಉದ್ಯೋಗವನ್ನು ಕಲ್ಪಿಸಲು ಸರಕಾರವೂ ಪ್ರಯತ್ನಿಸುತ್ತದೆ. ಯೋಜನಾ ಆಯೋಗವು ಕೂಡ ಈ ಬಗ್ಗೆ ಬಲವಂತವನ್ನು ಹೇರಿದೆ. ಡೆಹರಾಡನ್ ಕೇಂದ್ರದ ಪ್ರಾಯಸ್ಥ ಅಂಧ ತರಬೇತಿದಾರರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವ ಒಂದು ಆಫೀಸು ಮದ್ರಾಸದಲ್ಲಿರುವುದು. ಈ ಸಂಸ್ಥೆಯನ್ನು ಸರಕಾರವು ತೆಗೆದುಕೊಂಡು ಅಂಧರೆಲ್ಲರಿಗೂ ಮಾತ್ರವಲ್ಲ, ಇತರ ಅಂಗಿಕವಂಚಿತರಿಗೂ ಉದ್ಯೋಗವನ್ನು ಒದಗಿಸುವ ವ್ಯವಸ್ಥೆ ಮಾಡುವ ನಿರೀಕ್ಷೆಯಿದೆ.

ಹೀಗೆಯೇ ಎಲ್ಲ ರಾಜ್ಯಗಳಲ್ಲೂ ಅಂಧರೇ ಮೊದಲಾದ ಅಂಗವಿಕಲರ ಜೀವನವೂ ಯಶಸ್ವಿಯಾಗುವಂತೆ ಅಲ್ಲಲ್ಲಿ ಪ್ರಯತ್ನಗಳು ನಡೆಯುತ್ತಿದೆ. ಭಾರತದ ಪುನಾರಚನಾ ಯೋಜನೆಯಲ್ಲಿಯೂ ಈ ಬಗ್ಗೆ ತೀವ್ರ ಗಮನವನ್ನು ಹರಿಸಲಾಗುತ್ತಿದೆ.

THE MOOLKY BANK, LIMITED, MULKI.

(Incorporated in India. Liability of Shareholders Limited)

* * * * *

(In continuation of the Balance Sheet, Profit & Loss Account for the year ending 31—12—1959 and the Auditor's Report, published in the issue of "Navayuga" dated 17—3—1960.)

DIRECTOR'S 30TH ANNUAL REPORT.

1. Your Directors have pleasure in presenting herewith the Audited Balance Sheet and the Profit & Loss account for the year ended 31st December 1959, of your Bank, together with their 30th Annual Report.

2. The result of the Bank's working for the period under review is a net profit of:

		Rs. 3,506 - 73
Add: Amount brought forward from last year		Rs. 116 - 64
Total		Rs. 3,623-37
The following appropriations have been made or are recommended by your Directors:-		
(a) To Statutory Reserve Fund	Rs. 2,000 - 00	
(b) To Provision for Income Tax	Rs. 1,400 - 00	3,400 - 00
Leaving a balance to be carried forward:		Rs. 223 - 37

Though some Divided could have been declared, your Directors feel it better to build up the Reserve Fund in the interest of the Bank. Hence they regret that they are unable to recommend the declaration of any Dividend.

3. During the year under Report the Reserve Bank of India, has held an Inspection of your Bank under Section 35 of the Banking Companies Act, 1949.

4 We take this opportunity to thank you and the various constituents of the Bank for their increased confidence and patronage. We desire to place on record the appreciation of the work of the Manager and the Members of the Staff.

(By order of the Board)

Office of the Bank, Mulki,
Date: 24—1—1960.

(Sd.) N. M. Adyanthaya,
President.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ವಿಚಾರವರ್ಷ

ಭಾರತೀಯ ಸಂಸ್ಕೃತಿಯ ಮಾಧ್ಯಮ

ಭಾರತೀಯರನ್ನು ಏಕಸಂಸ್ಕೃತಿಸೂತ್ರದಲ್ಲಿ ಕೋದ ಸಂಸ್ಕೃತ ಭಾಷೆ ಕೇವಲ ಹಿಂದುಗಳ ಭಾಷೆಯಲ್ಲ; ಅದು ಭಾರತೀಯ ಸಂಸ್ಕೃತಿಯ ಮಾಧ್ಯಮವಾಗಿದೆ.

ಸಂಸ್ಕೃತ ಭಾಷೆಯೆಂದು ಯಾರ ಮಾತೃಭಾಷೆಯೂ ಅಲ್ಲವಾದರೂ ಅದನ್ನು ಮೃತಭಾಷೆಯೆನ್ನಲು ಸಾಧ್ಯವಿಲ್ಲ. ಸಾಮಾನ್ಯ ವ್ಯಾವಹಾರಿಕ ಭಾಷೆಯ ರೂಪದಲ್ಲಿ ಅದರ ವ್ಯವಹಾರ ಬಹು ಸಮಯದಿಂದ ನಿಂತುಹೋಗಿದೆಯಾದರೂ ಸಂಸ್ಕೃತಿಯ ವಿಸ್ತಾರಕ್ಕೆ ಅದು ಮಾಧ್ಯಮವಾಗಿದೆಯೆನ್ನುವುದರಲ್ಲಿ ಕೊಂಚವೂ ಸಂಶಯವಿಲ್ಲ. ಇಂದಿಗೂ ಶಾಸ್ತ್ರೀಯ ವಿಚಾರಗಳ ವಾದ ವಿವಾದಗಳು ಸಂಸ್ಕೃತ ಭಾಷೆಯಲ್ಲೇ ನಡೆಯುತ್ತವೆ. ಈಗಲೂ ಸಂಸ್ಕೃತ ಭಾಷೆಯಲ್ಲಿ ಪುಸ್ತಕ ಪ್ರಣಯನವೂ, ಪ್ರಕಾಶನವೂ ನಡೆಯುತ್ತಿದೆ. ಅದು ಶಕ್ತಿಶಾಲೀ ಭಾಷೆಯು. ಮಾತನಾಡುವ ಭಾಷೆಯಾಗಿ ಅಲ್ಲದಿದ್ದರೂ ಸಜೀವ ಸಂಸ್ಕೃತಿಯ ಮಾಧ್ಯಮವಾಗಿ ಅದರ ಅಭ್ಯಾಸ ಅನಿವಾರ್ಯವಾಗಿದೆ.

ಸಂಸ್ಕೃತದ ಅವಶ್ಯಕತೆ

ನಮ್ಮ ರಾಷ್ಟ್ರೀಯ ಜೀವನದಲ್ಲಿ ಸಂಸ್ಕೃತದ ಅಧ್ಯಯನ ಏತಕ್ಕಾಗಿ ಅತ್ಯಾವಶ್ಯಕವಾಗಿದೆ? ನಮ್ಮ ಪವಿತ್ರ ಗ್ರಂಥಗಳೆಲ್ಲವೂ ಸಂಸ್ಕೃತದಲ್ಲಿವೆಯೆಂದೆ? ಹಿಂದೂ–ಜೈನ–ಬೌದ್ಧರ ಧಾರ್ಮಿಕ ಗ್ರಂಥಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆಯೆಂದೆ? ಕಾಳಿದಾಸ ಬಾಣ ಭಟ್ಟ ಹಾಗೂ ಶಂಕರಾಚಾರ್ಯರಂಥ ಮಹಾ ಮಹಿಮ ಲೇಖಕರ ಭಾಷೆಯೆಂದೆ? ಎಂಬ ಪ್ರಶ್ನೆ ಮೂಡುತ್ತದೆ. ಅಲ್ಲ; ಕೇವಲ ಅದಕ್ಕಾಗಿಯಲ್ಲ. ಮಹತ್ವದ ಮಾತೆಂದರೆ, ನಮ್ಮ ಸಾಂಸ್ಕೃತಿಕ ಐಕ್ಯವನ್ನು ಅಕ್ಷುಣ್ಣವಾಗಿಡಲು ಸಂಸ್ಕೃತವೇ ಏಕಮಾತ್ರ ಸಾಧನವಿದೆ.

ಸಾಮಾನ್ಯವಾಗಿ ಸಂಸ್ಕೃತ ಭಾಷೆ ನಮಗೆ ಏಕತೆಯ ದೃಷ್ಟಿಕೋಣದಿಂದ ವಿಚಾರ ಮಾಡಲು ಪ್ರೇರಣೆಯನ್ನೀಯುತ್ತದೆ. ನಮ್ಮ ಜೀವನ ನಿರ್ಮಾಣ ಮಾಡುವ ಪ್ರಾದೇಶಿಕ ಭಾಷೆಗಳಿಗೆ ಸಂಸ್ಕೃತದಿಂದ ಸಂಪುಷ್ಟಿ ದೊರೆತಿದೆ. ಈಗಲೂ ಅವು ಶಕ್ತಿ ಪಡೆಯುತ್ತಿವೆ. ಸಂಸ್ಕೃತ ಭಾಷೆಯ ವಿನಾಶವೆಂದರೆ ಒಬ್ಬ ಪ್ರಜೆಯ ರೂಪದಲ್ಲಿ ನಮ್ಮ ಸ್ವಂತ ವಿನಾಶವೆಂದೇ ತಿಳಿಯಬೇಕು. ಆ ವೇಳೆ ನಾವು ವಿವಿಧ ರಾಷ್ಟ್ರಗಳ ಒಂದು ಸಮುಚ್ಚಯ ಮಾತ್ರವಾಗಿ ಬಿಡುತ್ತೇವೆ. ಆದುದರಿಂದ ರಾಷ್ಟ್ರೀಯ ಐಕ್ಯ ಅವಶ್ಯಕವೆಂದು ತಿಳಿಯುವುದಾದರೆ ಸಂಸ್ಕೃತ ಭಾಷೆಯು ವಿಕಾಸಮಾಡಿ ಪ್ರಾದೇಶಿಕ ಭಾಷೆಗಳ ಜೊತೆಯಲ್ಲಿ ಅದು ನಿಬಿಡ ಸಂಬಂಧ ಸ್ಥಾಪಿಸಬೇಕಾಗಿದೆ.

ತಪ್ಪು ಭಾವನೆ

ಸಂಸ್ಕೃತ ಭಾಷೆ ನಮ್ಮ ಪುರಾಣ ಪಂಥಿಗಳನ್ನಾಗಿ ಮಾಡಿದೆಯೆಂದೂ ಅದರಿಂದ ನಾವು ಅನೇಕ ವಿಧವಾದ ಭ್ರಾಂತಿಗಳಿಗೆ ಸಿಲುಕಿರುವೆವೆಂದೂ ಕೆಲವರ ಅಂಬೋಣ. ಇಂದಿನ ವೈಜ್ಞಾನಿಕ ಪ್ರಯೋಗಗಳು ಸಂಸ್ಕೃತ ಗ್ರಂಥಗಳಲ್ಲಿವೆಯೆಂದು ಯಾರೂ ಸಾರುವುದಿಲ್ಲ. ಸಂಸ್ಕೃತದಲ್ಲಿ ಬರೆದ ಅನೇಕ ಗಣಿತ ಜ್ಯೋತಿಷ ಹಾಗೂ ಇತರ ವಿಜ್ಞಾನಗಳ ಗ್ರಂಥಗಳು ಇಂದಿನ ಯುಗದಲ್ಲಿಯೂ ಸೇಕಡಾ ನೂರರಂತೆ ಮಾನ್ಯವಾಗಿವೆಯೆಂದೂ ತಿಳಿಯುವುದಿಲ್ಲ.

ಇದೇ ಮಾತು ಹದಿನಾರನೇ ಶತಮಾನದಲ್ಲಿನ ಗ್ರಂಥಗಳಿಗೂ ಒಪ್ಪುತ್ತದೆ. ಇಷ್ಟಕ್ಕೆ ಶೇಕ್ಸಪಿಯರನ ಗ್ರಂಥಗಳ ಮಹತ್ವ ಕಡಿಮೆಯಾಗುವುದಿಲ್ಲ. ಅವನ್ನು ಓದುವವರನ್ನು ಯಾರೂ ಪುರಾಣ ಪಂಥಿಗಳೆಂದು ಕರೆಯುವುದಿಲ್ಲ. ರೋಜರ ಬೇಕನ್ (೧೨೧೪–೯೨) ಖಗೋಳ ವಿದ್ಯೆಯ ಸಿದ್ಧಾಂತ ಪ್ರಾರಂಭಿಕ ವಿದ್ವಾಂಸನಾಗಿದ್ದ. ಆದರೆ, ಅವನ ಬೇರೆ ಗ್ರಂಥಗಳನ್ನೂ ಈಗ ಓದಬಾರದೆಂದು ಯಾರೂ ಹೇಳುವುದಿಲ್ಲ. ಸರ್ ಐಸಾಕ್ ನ್ಯೂಟನ್ (೧೬೪೨–೧೭೨೭)ನ ಎಷ್ಟೋ ಲೇಖನಗಳು ಇಂದಿಗೆ ಮಾನ್ಯವಾಗಿರುವುದಿಲ್ಲ. ಇಷ್ಟೇ ಅಲ್ಲ; ಹತ್ತೊಂಭತ್ತನೆ ಶತಾಬ್ದಿಯ ಎಷ್ಟೋ ಮಹಾ ಗ್ರಂಥಗಳು ಇಂದಿಗೆ ಪುರಾಣ ಕೋಟಿಯಲ್ಲಿ ಬಂದು ಬಿಟ್ಟಿವೆ. ಅಂದ ಮಾತ್ರಕ್ಕೆ ಹತ್ತೊಂಭತ್ತನೆ ಶತಮಾನದ ಗ್ರಂಥಗಳನ್ನು ಓದಲೇ ಬಾರದೆಂದಿಲ್ಲ.

ಇದೇ ರೀತಿ, ಸಂಸ್ಕೃತ ಭಾಷೆಯನ್ನು ಓದುವುದರಿಂದ ಪುರಾಣಗಳ ಸೃಷ್ಟಿ ವಿಷಯ ಅಥವಾ ವರಾಹಮಿಹಿರನ ಜ್ಯೋತಿಷ ವಿಚಾರಗಳ ಪ್ರಚಾರವಾಗುವುದೆನ್ನುವುದು ಶುದ್ಧ ತಪ್ಪು ಭಾವನೆ. ಅದರಿಂದ ಸಂಸ್ಕೃತ ಭಾಷೆಯಲ್ಲಿ ಪ್ರಕಟಪಡಿಸಲ್ಪಟ್ಟ ವಿಚಾರ ಮತ್ತು ಸಾಹಿತ್ಯದ ಸನಾತನ ಮಹತ್ವಕ್ಕೆ ಆದರ ಮಾತ್ರ ದೊರೆಯುವುದು.

ಸಂಸ್ಕೃತದಲ್ಲಿ ಬರೆದ ವಿಚಾರಗಳೆಲ್ಲವೂ ಸನಾತನ ಸತ್ಯ ಅಥವಾ ಶಾಸ್ತ್ರೋಕ್ತವಾಗಿವೆಯೆಂದು ನಾವು ತಿಳಿಯುವುದಾದರೆ ನಾವು ಪ್ರತಿಗಾಮಿಗಳಾಗುತ್ತೇವೆ. ಅನೇಕ ಮಂದಿ ಉಚ್ಚ ಶಿಕ್ಷಣಪಡೆದವರಲ್ಲಿಯೂ ಇಂಗ್ಲಿಷ್, ಫ್ರೆಂಚ್ ಅಥವಾ ರಶ್ಯನ್ ಭಾಷೆಯಲ್ಲಿ ಬರೆದ ಸಾಹಿತ್ಯವೆಲ್ಲವೂ ಬ್ರಹ್ಮ ಲಿಪಿಯೆಂದು ಭಾವಿಸುವವರು ಸಿಗುತ್ತಾರೆ. ಇದೇ ರೀತಿ ಸಂಸ್ಕೃತದಲ್ಲಿ ಬರೆದುದನ್ನು 'ಸಂಸ್ಕೃತಂ ವಾಕ್ಯಂ ಪ್ರಮಾಣಂ' ಎಂದು ತಿಳಿಯುವವರೂ ಸಿಗುತ್ತಾರೆ. ಸಂಸ್ಕೃತ ಬೇರಾವುದೇ ಭಾಷೆಯ ವಿಷಯದಲ್ಲಿ ಇಂತಹ ಮನೋಭಾವನೆಯಿಟ್ಟಿರುವುದು ಖರಾ ತಪ್ಪು ವಿಚಾರ.

ಕೇವಲ ಹಿಂದುಗಳ ಭಾಷೆಯಲ್ಲ

ಸಂಸ್ಕೃತವು ಹಿಂದುಗಳ ಪವಿತ್ರ ಭಾಷೆಯೆಂಬುದು ನಿಜ. ಆದರೆ, ಅದು ಬರಿಯ ಹಿಂದುಗಳದೇ ಭಾಷೆಯಲ್ಲ. ಜೈನ ಬೌದ್ಧರಿಗೂ ಅದು ಪವಿತ್ರವಾಗಿದೆ. ಭಾರತದ ಮಹಾ ಮಹಾ ವಿಚಾರ ಕರ್ತರು ತಮ್ಮ ತತ್ವಜ್ಞಾನದಿಂದಲೂ, ಅನ್ಯ ವಿಷಯಗಳಿಂದಲೂ ಸಂಸ್ಕೃತ ಭಾಷೆಯನ್ನು ಸಮೃದ್ಧಪಡಿಸಿದ್ದಾರೆ. ವಸುಬಂಧು, ನಾಗಾರ್ಜುನ ಹಾಗೂ ಅಶ್ವಘೋಷ ಪ್ರಭೃತಿ ವಿದ್ವಾಂಸರು ಬೌದ್ಧ ಮತಾವಲಂಬಿಯಾಗಿದ್ದರು. ಸಂಸ್ಕೃತದಲ್ಲಿ ಬರೆಯಲ್ಪಟ್ಟ ಜೈನ ಸಾಹಿತ್ಯವೇನೂ ಕಡಿಮೆಯಿಲ್ಲ. ಬರಿಯ ಸಾಹಿತ್ಯವನ್ನಷ್ಟೇ ತೆಗೆದುಕೊಂಡರೂ ಹೇಮಚಂದ್ರನ ಸಾಹಿತ್ಯವನ್ನು ವ್ಯಾಸ, ವಾಲ್ಮೀಕಿ ಮೊದಲಾದ ಕವಿಗಳ ಸಾಹಿತ್ಯದ ಜೊತೆಯಲ್ಲಿ ತುಲನೆ ಮಾಡಬಹುದು ಈ ರೀತಿ ಸಂಸ್ಕೃತ ಸಾಹಿತ್ಯವು ಬರೇ ಹಿಂದುಗಳದಾಗಿಲ್ಲ ಮತ್ತು ಸಂಸ್ಕೃತದ ಸಂಬಂಧವನ್ನು ಕೇವಲ ಹಿಂದುಗಳ ಜೊತೆಯಲ್ಲಿ ಪೋಣಿಸುವುದು ದೊಡ್ಡ ತಪ್ಪು.

ಭಾರತೀಯ ಸಂಸ್ಕೃತಿಯಲ್ಲಿ ಸಂಸ್ಕೃತ ಭಾಷೆಯು ಅಗ್ರಸ್ಥಾನದಲ್ಲಿರುವುದು ಆವಶ್ಯಕ. ಆದರೆ, ಭಾರತೀಯ ವಿದ್ಯೆಗಳಲ್ಲಿ ಸಂಸ್ಕೃತ ಭಾಷೆ ಹಾಗೂ ಅದರ ಪುತ್ರಿ ಸ್ಥಾನದಲ್ಲಿರುವ ಭಾಷೆಗಳು ಮಾತ್ರ ಪ್ರಾಧಾನ್ಯ ಪಡೆಯುವುದೂ ಸರಿಯಲ್ಲ. ತಮಿಳಿನ ಪ್ರಾಚೀನ ಸಾಹಿತ್ಯ, ದಕ್ಷಿಣ ಭಾರತದ ನಾಲ್ಕು ದ್ರಾವಿಡ ಭಾಷೆಗಳ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಂಪರೆಗಳು ಸಂಸ್ಕೃತ ಹಾಗೂ ಅದರ ಪುತ್ರೀ ರೂಪವಾದ ಭಾಷೆಗಳಷ್ಟೇ ಭಾರತೀಯ ಸಂಸ್ಕೃತಿಯ ಅಂಗವಾಗಿವೆ. ಆದುದರಿಂದ ಭಾರತದ ಸಂಸ್ಕೃತೇತರ ಭಾಷೆಗಳ ಉಪೇಕ್ಷೆ ಮಾಡುವುದು ಉಚಿತವಲ್ಲ. ಈ ಮಹತ್ವಪೂರ್ಣವಾದ ಪರಂಪರೆಯನ್ನು ಬೇರ್ಪಡಿಸುವುದರಿಂದ ಭಾರತೀಯ ವಿದ್ಯೆಯ ಮಹತ್ವ ಕಡಿಮೆಯಾಗುತ್ತದೆ. ಆದುದರಿಂದ ನಮ್ಮ ಸಂಸ್ಕೃತಿಯ ನಿರ್ಮಾಣದಲ್ಲಿ ಮಹತ್ವಪೂರ್ಣ ಭಾಗವಹಿಸಿದ ಸಮಸ್ತ ಪದಾರ್ಥಗಳು ಭಾರತೀಯ ವಿದ್ಯೆಯಲ್ಲಿ ಸಮಾವಿಷ್ಟವಾಗುವುದು ಪರಮಾವಶ್ಯಕ.

ದ್ರಾವಿಡ ಸಂಸ್ಕೃತಿ ಮಾತ್ರವಲ್ಲ, ನಮ್ಮ ಜೀವನವನ್ನು ಸಮೃದ್ಧಿಯತ್ತ ಸಾಗಿಸುವ ಪ್ರತಿಯೊಂದು ಸಂಸ್ಕೃತಿಯನ್ನೂ ನಾವು ಗೌರವಿಸಬೇಕು. ನಮ್ಮ ಸಂಸ್ಕೃತಿಯ ಮೇಲೆ ಫಾರಸೀ ಸಂಸ್ಕೃತಿ ಬೀರಿದ ಪ್ರಭಾವವನ್ನು ನಾವು ಅಲ್ಲಗಳೆಯಲಾರೆವು. ಅಮೀರ ಖುಸರೋನಿಂದ ಹಿಡಿದು ಕಳೆದ ಶತಮಾನದವರೆಗಿನ ಚಿತ್ರ ಹಾಗೂ ಶಿಲ್ಪ ಕಲೆಗಳಲ್ಲಿ ಇದು ಸ್ಪಷ್ಟವಾಗಿದೆ.

ಅಷ್ಟು ಮಾತ್ರವಲ್ಲ, ಆಧುನಿಕ ಭಾರತೀಯ ಉತ್ಕ್ರಾಂತಿಯಲ್ಲಿ ಆಂಗ್ಲ ಭಾಷೆಯಲ್ಲಿ ಬರೆದ ಸಾಹಿತ್ಯವನ್ನೂ ನಾವು ಅವಗಣಿಸಲು ಸಾಧ್ಯವಿಲ್ಲ. ರಾಜಾ ರಾಮಮೋಹನರಾಯರಿಂದ ಹಿಡಿದು ಅರವಿಂದರವರೆಗಿನ ವಿಚಾರಕರ್ತರ ವಿಚಾರಗಳ ಮಾಧ್ಯಮವು – ಆಂಗ್ಲಭಾಷೆಯಾಗಿತ್ತು. ತತ್ವಜ್ಞಾನದ ವಿಷಯ ತೆಗೆದುಕೊಳ್ಳುವುದಾದರೆ ಕಳೆದ ಶತಮಾನದಲ್ಲಿ ಹೆಚ್ಚಾದ ವಿಚಾರಗಳು ಆಂಗ್ಲ ಭಾಷೆಯಲ್ಲಿಯೇ ಪ್ರಕಟವಾಗಿವೆ. ಈ ರೀತಿ ಇಂಗ್ಲೀಷು ಭಾರತೀಯ ಜೀವನದ ಒಂದು ಭಾಗವಾಗಿ ಬಿಟ್ಟಿದೆ. ಭಗವದ್ಗೀತೆಯ ಮೇಲೆ ಬರೆದ ಅರವಿಂದರ ಪ್ರಬಂಧಗಳೂ 'ದಿವ್ಯ ಜೀವನ' ಗ್ರಂಥವೂ, ಸ್ವಾಮಿ ವಿವೇಕಾನಂದ, ಮಹಾದೇವ ಗೋವಿಂದ ರಾನಡೇ ಮಹಾತ್ಮಾ ಗಾಂಧೀಜೀ ಹಾಗೂ ಇತರ ಲೇಖಕರ ಗ್ರಂಥಗಳನ್ನು ನಮ್ಮ ಸಾಂಸ್ಕೃತಿಕ ದೇಣಿಗೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲ.

ಸಂಕುಚಿತ ಮನೋವೃತ್ತಿ ಬೇಡ

ಭಾರತ ವರ್ಷವೆಂದಿಗೂ ಸಂಕುಚಿತ ಮನೋವೃತ್ತಿಯನ್ನು ಅಂಗೀಕರಿಸಿಲ್ಲ. ನಮ್ಮ ಮಹಾಪುರುಷರಲ್ಲಿ ಬರೇ ಹಿಂದೂ ಋಷಿಗಳು ತತ್ವವೇತ್ತರು ಮತ್ತು ಕವಿಗಳನ್ನು ಮಾತ್ರ ಎಣಿಸದೆ ಬೌದ್ಧ ಜೈನ ಸಿಖ್ ಮೊದಲಾದ ವಿವಿಧ ಧಾರ್ಮಿಕ ಆಂದೋಲನಗಳ ವಿಭೂತಿಪುರುಷರನ್ನೂ ಲೆಕ್ಕಿಸಿದ್ದಾರೆ. ಭಾರತೀಯ ಜೀವನಸರಣಿಯನ್ನು ಅಪ್ಪಿಕೊಂಡ ವಿಧರ್ಮೀ ಸಂತರೂ, ವಿದ್ವಾಂಸರೂ ಭಾರತೀಯ ವಿಚಾರ–ಜೀವನಗಳನ್ನು ಸಮೃದ್ಧಪಡಿಸಿದ್ದಾರೆ. ಅವರನ್ನೂ ನಾವು ಗೌರವಿಸುತ್ತೇವೆ. ಪಂಡಿತೆ ರಮಾಬಾಯಿ ಹಾಗೂ ಕನಕರಾಮ ಟಿ. ಪಾಲ್‌ರಂತಹ ಕ್ರೈಸ್ತ ವಿದ್ವಾಂಸರು ಸ್ವಧರ್ಮಪಾಲನೆಯ ಜೊತೆಯಲ್ಲಿ ಭಾರತೀಯ ಜೀವನ ಪ್ರಣಾಳಿಕೆಯ ಪ್ರಬಲ ಸಮರ್ಥಕರಾಗಿದ್ದರು. ಕಬೀರರಿಂದ ಹಿಡಿದು ಇಂದಿನ ವರೆಗಿನ ಮುಸ್ಲಿಂ ಸಂತರೂ ವಿದ್ವಾಂಸರೂ ನಮ್ಮ ವಿಚಾರಗಳನ್ನೂ ಜೀವನವನ್ನೂ ಪ್ರಭಾವಕ್ಕೊಳಪಡಿಸಿದ್ದಾರೆ.

ಸರ್ ವಿಲಿಯಂ ಜೋನ್ಸ್‌ನಿಂದ ಹಿಡಿದು ಫ್ರೆಂಚ್ ವಿದ್ವಾಂಸ ಸಿಲ್ವನ್ ಲೇವಿ ವರೆಗಿನ ಯೂರೋಪಿಯನ್ ವಿದ್ವಾಂಸರು ನಮ್ಮ ಪವಿತ್ರ ಗ್ರಂಥಗಳ ಅಧ್ಯಯನ ಪೂಜ್ಯ ಭಾವನೆಯಿಂದ ಮಾಡಿದ್ದಾರೆ. ಭಾರತೀಯ ಶಿಲಾ ಲೇಖಗಳನ್ನೂ, ತಾಮ್ರ ಲಿಪಿಗಳನ್ನು ಉದ್ಧಾರಪಡಿಸಿದ್ದಾರೆ. ಭಾರತದಲ್ಲಿಯೇ ಲೋಪಗೊಂಡ ಎಷ್ಟೋ ವಸ್ತುಗಳ ಜೀರ್ಣೋದ್ಧಾರ ಮಾಡಿದ್ದಾರೆ. ಮಧ್ಯ ಏಶ್ಯಾದಲ್ಲಿ ಹರಡಿದ ನಮ್ಮ ಸಂಸ್ಕೃತಿಯ ಅವಶೇಷಗಳನ್ನು ಹುಡುಕಿ ತೆಗೆದಿದ್ದಾರೆ. ಆಗ್ನೇಯ ಏಶ್ಯಾದಲ್ಲಿರುವ ಭಾರತೀಯ ಸಂಸ್ಕೃತಿಯತ್ತ ನಮ್ಮ ಗಮನ ಸೆಳೆದಿದ್ದಾರೆ. ಅವರೆಲ್ಲರನ್ನು ಭಾರತ ಪ್ರೇಮೀ ವಿಭೂತಿ ಪುರುಷರ ಸಾಲಿನಲ್ಲಿಡಬೇಕಾಗಿದೆ. ಆದಕ್ಕಾಗಿ ನಾವು ಕೂಪಮಂಡೂಕ ವೃತ್ತಿಯನ್ನು ತ್ಯಜಿಸಿ, ವಿಶಾಲ ಹಾಗೂ ವಿಪುಲ ಸಂಸ್ಕೃತಿಯ ಅಧ್ಯಯನಮಾಡಬೇಕು. ಆಗಲೇ ನಮ್ಮ ಸಂಸ್ಕೃತಿ ಪ್ರಗತಿಶೀಲವಾಗುವುದು.

ಮೂಲ: ಸರ್ದಾರ ಕೆ. ಎಂ. ಪಣಿಕ್ಕರ್.

ಅನುವಾದಕ: ಮಂಜುನಾಥ ಶಾಸ್ತ್ರೀ, ಎಂ. ಎ.

ಕುಮಾರಿ ಚಿಕ್ಕೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶಲ್), ರೂ. 8/- (ಎಕ್ಸ್ಟ್ರಾ ಸ್ಪೆಶಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ತಮ್ಮನಿಗೆ ಓಲೆ

(೪ನೇ ಪುಟದಿಂದ)

ನೆಯಲ್ಲಿರುವಷ್ಟು ಹತ್ಯಾ ಕಾಂಡವು ಹಿಂದೀ ಸಾಹಿತ್ಯದಲ್ಲಿರುವುದಿಲ್ಲ; ಸಂಸ್ಕೃತ, ಕನ್ನಡ ಸಾಹಿತ್ಯಗಳಲ್ಲಿಯಂತೂ ಇಲ್ಲವೇ ಇಲ್ಲ. ಭಾರತದಲ್ಲಿ ನಾಟಕಗಳಲ್ಲಿ ಕೊಲೆಯನ್ನು ಪ್ರದರ್ಶಿಸಿ ತೋರಿಸುವುದು ನಿಷಿದ್ಧವೆಂದು ಲಕ್ಷಣ ಶಾಸ್ತ್ರ ಹೇಳುತ್ತದೆ. ಇಲ್ಲಿ ಹಾಲು ತುಪ್ಪಗಳನ್ನು ಆದರಿಸಲಾಗುತ್ತದೆ. ದೇಹಾತ್ಮವಾದಿಗಳಾದ ಚಾರ್ವಾಕ ಮತದವರು ಕೂಡಾ 'ಋಣಂ ಕೃತ್ವಾ ಘೃತಂ ಪಿ ಬೇತ್' ಎಂದು ಹೇಳಿದ್ದಾರೆಯೇ ಹೊರತು, 'ಸುರಾಂ ಪಿ ಬೇತ್' ಎಂದು ಎಂದಿಗೂ ಹೇಳಲಿಲ್ಲ!

ಪೌರ್ವಾತ್ಯ ದೇಶಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ಅಲಂಕಾರ ಪ್ರಿಯತೆಯು ಅಧಿಕವಾಗಿರುತ್ತದೆ. ಭಾರತೀಯ ನಾರಿಯರು ಕಾಲಕ್ರಮದಲ್ಲಿ ಮೆಚ್ಚುತ್ತ ಬಂದ ಆಭರಣಗಳನ್ನೂ ಪ್ರಸಾಧನಗಳನ್ನೂ ಕವಿಗಳು ತಮ್ಮ ಕೃತಿಗಳಲ್ಲಿ ವರ್ಣಿಸ ಹೊರಟಿರುವರು. ಆ ಭೂಷಣಗಳ ಅಲಂಕಾರಗಳಲ್ಲಿ ಬಗೆ ಬಗೆಗಳಿರುವಂತೆಯೇ ಕವಿ ಕೃತಿಗಳಲ್ಲಿಯೂ ಹೊಸ ಹೊಸ ಅಲಂಕಾರಗಳನ್ನು ಅವರು ರೂಪಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇದರಿಂದಾಗಿ ನಮ್ಮ ಸಾಹಿತ್ಯದಲ್ಲಿ ದೊರೆಯುವಷ್ಟು ಅಲಂಕಾರಗಳು ಪಾಶ್ಚಾತ್ಯ ಸಾಹಿತ್ಯದಲ್ಲಿ ಸಿಗುವುದಿಲ್ಲ. ಪ್ರತ್ಯೇಕ ಸಮಾಜದ ಭಾವವು, ಅದೆಷ್ಟು ಒಳ್ಳೆಯದಿರಲಿ, ಅಥವಾ ಕೆಟ್ಟದಿರಲಿ, ಆ ಸಮಾಜದ ಸಾಹಿತ್ಯದಲ್ಲಿ ಪ್ರತಿಬಿಂಬಿಸಲ್ಪಡುತ್ತದೆ.

ಭಿನ್ನ ಭಿನ್ನ ಸಮಾಜದ ಸಾಹಿತ್ಯಗಳಲ್ಲಿ ಭಿನ್ನತೆಯಿರುವಂತೆ ಒಂದು ಸಮಾಜದ ಸಾಹಿತ್ಯದಲ್ಲಿಯೂ ಕಾಲಕ್ರಮದಲ್ಲಿ ಪರಿವರ್ತನೆಯಾಗುತ್ತಿರುವುದನ್ನು ನಾವು ಕಾಣಬಹುದು. ಒಂದು ಸಾಹಿತ್ಯದ ಇತಿಹಾಸವನ್ನು ನಾವು ಅವಲೋಕಿಸುವಾಗ, ಆ ಸಮಾಜದ ಇತಿಹಾಸದ ಪ್ರಭಾವವು ಅದರ ಮೇಲೆ ಬಿದ್ದಿರುವುದನ್ನು ಮರೆಯುವಂತಿಲ್ಲ. ಆದಿಕವಿ ಪಂಪನ ಕಾಲದಲ್ಲಿ ಪುರಂಧರದಾಸರು ಎಂದಿಗೂ ಜನ್ಮವೆತ್ತಲಾರರು. ಅಂತೆಯೇ ಪುರಂಧರದಾಸರಿದ್ದ ಸಮಯ ಪಂಪನೆಂತು ಹುಟ್ಟುವುದು ಸಾಧ್ಯ? ಹಿಂದೀ ಸಾಹಿತ್ಯದಲ್ಲಿನ 'ಭೂಷಣ'ರಲ್ಲಿ ಮುಸಲ್ಮಾನರ ವಿರುದ್ಧ ಇದ್ದ ತಿರಸ್ಕಾರ ಭಾವನೆಯನ್ನು ಸೂರದಾಸ— ತುಲಸೀದಾಸರಲ್ಲಿ ನಾವು ಕಾಣಲಾರೆವು. ಪಂಪ ಕವಿಯಲ್ಲಿ ನಾವು ಕಾಣಬಹುದಾದ ವೀರರಸವನ್ನು ನಾರಣಪ್ಪನಲ್ಲಿ ಸವಿಯುವುದು ಸಾಧ್ಯವಿಲ್ಲ. ಪಂಪಯುಗದ ಕಾವ್ಯಗಳಲ್ಲಿ ನಾವು ನೋಡುವ ಒಂದು ಗಂಭೀರತೆ ಬಸವಯುಗದ ಕಾವ್ಯಗಳಲ್ಲಿ ಎಂದಿಗೂ ಸಿಗದು. ಇದಕ್ಕೆಲ್ಲ ಆಯಾ ಕವಿಗಳು ಜೀವಿಸಿದ್ದ ಕಾಲದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಪ್ರಭಾವವೇ ಕಾರಣವಾಗಿದೆ.

ಇಂದಿನ ಸಾಹಿತ್ಯದಲ್ಲಿ ನಮಗೆ ತೋರುವ ಅಂತರ್ವೇದನೆ ಮತ್ತು ಹೃದಯದ ಮಿಡಿತಗಳು ಕೂಡ ಸಾಮಾಜಿಕ ಭಾವಗಳ ಪ್ರತಿಬಿಂಬವೇ ಆಗಿದೆ. ಸಮಾಜದಲ್ಲಿ ದುಃಖ ಸಮವೇದನೆಯು ವ್ಯಾಪಕವಾಗಿ ಪರಿಣಮಿಸಿದೆ; ಇದರಿಂದ ದುಃಖದ ಮಹತ್ವವು ಹೆಚ್ಚಿದೆ. ದುಃಖಿತರಿಗೆ ಈಗ ಆದರವು ದೊರೆಯಲು ಪ್ರಾರಂಭವಾಗಿದೆ; ದುಃಖವನ್ನು ಪವಿತ್ರವೆಂದು ತಿಳಿಯಲಾಗುತ್ತದೆ. ಇದೇ ರೀತಿಯಲ್ಲಿ ಭಾರತವು ಪರತಂತ್ರತೆಯಲ್ಲಿರುವಾಗ ಸಮಾಜದ ಅತೃಪ್ತಿಯನ್ನು ಹೊರಗೆಡಹುವ ಕವಿತೆಗಳು ಪ್ರಧಾನಸ್ಥಾನ ಪಡೆದಿದ್ದುವು. ರಾಷ್ಟ್ರದೇವಿಯ ವರ್ಣನೆ, ದೇಶಪ್ರೇಮದ ಆವಶ್ಯಕತೆ, ಸ್ವಾತಂತ್ರ್ಯ ಸುಖ ಮೊದಲಾದುವುಗಳು ಕವಿತೆಗಳ ವಸ್ತುವಾಗಿದ್ದುವು. ಭವ್ಯಭಾರತದ ಕನಸು, ಕಾರ್ಮಿಕರ ಹಿತಚಿಂತನೆ, ಪ್ರಜಾಪ್ರಭುತ್ವದ ಪ್ರಯೋಜನ—ಇತ್ಯಾದಿಗಳೂ ಈಗೀಗ ವರ್ಣಿತವಾಗುತ್ತಿವೆ. ಈ ಯೆಲ್ಲ ವಿಷಯಗಳ ಬಗ್ಗೆ ವಿವೇಚನೆಯನ್ನು ಮುಂದಿನಬಾರಿ ಮಾಡೋಣ.

—ಗೋರಾ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ರ್ಕಿಯ ಮಟ್ಟಿಗೆ ಹೇಳುವುದಾದರೆ, ಶ್ರೀ ಇನೋನೂರು ಹಾಗೆ ಮಾಡದಿರುವುದು ಮಹಾ ದುರ್ದೈವದಘಟನೆಯಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಆರಿತ ವಲಯಗಳು ಸೇನೆಯಲ್ಲಿ ಸ್ವಯಂ ಅತೃಪ್ತಿಯಿತ್ತೆಂದು ಹೇಳುತ್ತವೆ; ಅದು ರಾಜಸೂತ್ರಧಾರಿಗಳ ಕೈಗೊಂಬೆಯಾಗಿರಲು ಬಯಸುತ್ತಿರಲಿಲ್ಲವೆಂದೂ ತಿಳಿಸುತ್ತವೆ. ವಿಶ್ವದ ಆ ಭಾಗದಲ್ಲಿ ತುರ್ಕಿ ಸೇನೆಯು ಉತ್ತಮವಾದ ಸೇನೆಯೆಂದು ತಿಳಿಯಲಾಗುತ್ತದೆ. ಮಧ್ಯಪೂರ್ವ ಮತ್ತು ಪೂರ್ವ ಯುರೋಪುಗಳಲ್ಲಿ ಕೂಡ ಈ ಸೇನೆಗೆ ಸರಿಯೆನಿಸಿದ ಸೇನೆಯಿರುವುದಿಲ್ಲ.

ಪರಿಶೀಲನಾ ಸಮಿತಿಯು ಸೈನಿಕ ಶಾಸನವನ್ನು ವ್ಯವಹೃತಗೊಳಿಸಿದೊಡನೆಯೇ ಸೇನೆಯೂ ಅಸಂತೋಷಗೊಂಡಿತು. ರಾಜಿನಾಮೆ ಈಯುವ ಪ್ರಕರಣಗಳು ಮಾತ್ರವಲ್ಲದೇ ಕೆಲವಾರು ಆತ್ಮಹತ್ಯೆ ಮತ್ತು ಉಚ್ಚಾಧಿಕಾರಿಗಳ ಸೆರೆ ಮೊದಲಾದುವೂ ಘಟಿಸಿದುವು. ಸೇನೆಯು ಸ್ವದೇಶೀಯರಾದ ತುರ್ಕೀಯರ ಮೇಲೆ ಗುಂಡು ಹಾರಿಸಲು ನಿರಾಕರಿಸಿತು. ಮೇ ೨ಿರಂದು ಅತ್ತಾತುರ್ಕ್ ಜೊಲೆ ವಾರ್ಡನಲ್ಲಿ ಸೈನಿಕ ಪ್ರಶಿಕ್ಷಣಾರ್ಥಿಗಳ ಪ್ರಯಾಣವನ್ನು ತುರ್ಕಿಯ ರಾಜನೀತಿಜ್ಞರು ಬಹು ಚಿಂತೆ ಮತ್ತು ಶಂಕೆಗಳಿಂದ ನೋಡುತ್ತಿದ್ದರು. ಶ್ರೀ ಮೆಂಡರೆಸರನ್ನು ಕೂರಿಸಿದ ಮುಂದುವರಿದ ಕಾರು ಪತ್ರಿಕಾವರದಿಗಾರರ ಕಾರುಗಳ ಹಿಂದೆ ಒಬ್ಬ ಸೇನೆಯ ಅಧಿಕಾರಿಯ ಕಾರೂ ಇತ್ತು. ಜನತೆ ಆಗ ತೋರಿಸಿದ ಅಭಿರುಚಿಯಲ್ಲಿ ಮುಂದೆ ನಡೆದ ಘಟನೆಗಳ ಸಂಕೇತವೂ ಇತ್ತು ಎಂದು ಹೇಳಲಾಗುತ್ತದೆ

ಮುಂದೆ ತುರ್ಕಿಯ ಸ್ಥಿತಿ ಹೇಗೆ ನಿಂತೀತು ಎಂದು ಹೇಳುವುದು ಕಷ್ಟ. ಬರ್ಮಾದಂತೆ ಒಂದು ಚುನಾವಣೆಯನ್ನು ನಡೆಸಿದೊಡನೆಯೇ ಅಧಿಕಾರವನ್ನು ತ್ಯಜಿಸಿ ಹೊರಡುವುದೇ ಇಲ್ಲ, ಪಾಕಿಸ್ತಾನದಂತೆ ಒಮ್ಮೆ ರುಚಿನೋಡಿ ಶಾಶ್ವತವಾಗಿ ನೆಲೆನಿಲ್ಲುವ ಸಂಚು ನಡೆಸುತ್ತದೆಯೋ, ಎನ್ನಬರುವುದಿಲ್ಲ. ಹೊಸ ಸೈನಿಕ ಸರಕಾರವು ಕೆಲವೊಂದು ಘೋಷಣೆಗಳನ್ನು ಮಾಡಿದ್ದು, ಅವು ಈ ರೀತಿಯಾಗಿವೆ; ಎಲ್ಲ ರಾಜನೀತಿಯ ಗತಿವಿಧಿಗಳ ಮೇಲೆ ಪ್ರತಿಬಂಧವನ್ನು ಹೇರಿ, ಪಕ್ಷದ ಪ್ರಧಾನ ಕಾರ್ಯಾಲಯವನ್ನು ಮುಚ್ಚಲಾಗಿದೆ. ಸಮಸ್ತ ಸಾರ್ವಜನಿಕ ಕರ್ಮಚಾರಿಗಳು ಸೇನೆಯ ಆದೇಶದಂತೆ ಕಾರ್ಯವೆಸಗುವರು; ಅವರು ಸೇನೆಗೆ ತಮ್ಮ ಸಹಾಯ ನೀಡಬೇಕೆಂದು ಆದೇಶವೀಯಲಾಗಿದೆ. ಎಲ್ಲ ಬೇಂಕು ಲೆಕ್ಕಗಳನ್ನು ಪರಿಶೀಲನೆ ನಡೆಸುವುದಲ್ಲದೇ ಮುಂದೆ ಸೂಚನೆ ಈಯುವ ವರೆಗೆ ಬೇಂಕುಗಳೆಲ್ಲವೂ ಮುಚ್ಚಲ್ಪಡುವುವು. ಸೇನೆಯು ಬೇಂಕಿನ ರಕ್ಷಣೆಯನ್ನು ಮಾಡುವುದು. ರಕ್ಷಣಾ ದಳಗಳ ಎಲ್ಲ ಅಧಿಕಾರವನ್ನೂ ಬ್ರಿಗೇಡಿಯರ್ ಜನರಲ್ ಮು

ಅಮೇರಿಕೆಯ ರೋಕೇಟನ್ನು ಹಾರಿಸಿ ... ಲೇರುತ್ತಿದ್ದಾಗ ತೆಗೆದ ಚಿತ್ರ.

ಆಮೇರ ಅಲಜನರಿಗೆ ಒಪ್ಪಿಸಲಾಗಿ... ಎಲ್ಲ ಸಾರ್ವಜನಿಕ ಕೆಲಸಗಾರರು ಮ... ಜಾನೆ ೯ ಗಂಟೆಗೆ ತಮ್ಮ ಕಾರ್ಯಗಳ... ಹಾಜರಾಗಬೇಕು; ಸಾರ್ವಜನಿಕ ಸಭೆ... ಳಿಗೆ ತಡೆ ಹೇರಲಾಗಿದೆಯಲ್ಲದೆ ರಾತ್ರಿ... ರಿಂದ ಮುಂಜಾನೆ ೫ರ ವರೆಗೆ ಅಂತಾ... ದ ಮಾರ್ಗಗಳೂ ಮುಚ್ಚಲ್ಪಡುವುವು... ಎಲ್ಲ ವಿಧದ ಪ್ರಯಾಣಗಳನ್ನು ನಿಷೇ... ಲಾಗಿದೆ.

ಸೇನಾಧಿಕಾರಿ ಜನರಲ್ ಜಮಾ... ಗುರ್ಸೆಲರ ನೇತೃತ್ವದಲ್ಲಿರುವ ಹೊಸ ಸ... ಕಾರಿ ಪಕ್ಷ ರಾಷ್ಟ್ರೀಯ ಯೂನಿಯನ... ಸಮಿತಿಯು ಸ್ಥಾಪನೆಯಾಗಿದೆ. "ರಾಜ... ತಿಕ ಮಹತ್ವಾಕಾಂಕ್ಷೆಗಳಿಂದಾಗಿ... ರಾಷ್ಟ್ರಕ್ಕೆ ಸಂಕಟವು ಪ್ರಾಪ್ತಿಯಾ... ತು. ಹೊಣೆಗಾರ ವ್ಯಕ್ತಿಗಳಿಗೆ ಒಳ್ಳೆ... ರೀತಿಯಲ್ಲಿ ತಿಳಿಸಿ ಹೇಳಿದರೂ ಸಮಾಧಾ... ನ ದೊರೆಯಲಿಲ್ಲ. ಹೊಸ ಕಾನೂನು... ಳಿಂದ ಅವರು ತುರ್ಕಿಯನ್ನೇ ಆಡಿಮ... ಲು ಮಾಡ ಬಯಸುತ್ತಿರುವಂತೆ ಕಂ... ಬಂದುದರಿಂದ, ಅವರ ಕಾರ್ಯಕ್ರಮಗ... ನ್ನು ತಡೆಯಲು ನಾನೇ ಅಧಿಕಾರವನ... ಕೈಗಳಿಗೆ ತೆಗೆದುಕೊಳ್ಳಬೇಕಾಯಿತು... ನನಗೆ ಅಧಿಕಾರ ಚಲಾಯಿಸಬೇಕೆಂ... ಇರಾದೆಯಿಲ್ಲ; ನಾನು ಶಾಂತಯುತ ಪ್ರ... ಜಾಪ್ರಭುತ್ವ ರಾಜ್ಯ ಸ್ಥಾಪನೆಮಾಡ... ಯಸುತ್ತೇನೆ" ಎಂದು ಶ್ರೀ ಗುರ್ಸೆಲ... ಜನತೆಯ ಮುಂದೆ ಮಾಡಿದ ಭಾಷಣ... ಲ್ಲಿ ನುಡಿದಿದ್ದಾರೆ. ಈ ಭರವಸೆಗಳು ... ಷ್ಟರ ಮಟ್ಟಿಗೆ ಫಲಕಾರಿಯಾಗುವವೋ... ಕಾಲಕ್ರಮದಲ್ಲಿ ನೋಡಬೇಕಷ್ಟೆ. ಸಂ... ಧಾನ ತಯಾರಿಸಲು ಇಸ್ತಾಂಬೂಲ ವಿ... ವಿದ್ಯಾಲಯದ ಪ್ರಾಧ್ಯಾಪಕಸದ್ದಿಕ್ ಸ... ಮಿಓನಾರರ ಅಧ್ಯಕ್ಷತೆಯಲ್ಲಿ ಒಂ... ಸಮಿತಿಯು ನೇಮಿತವಾಗಿದ್ದು ಇದ... ಕಾರ್ಯಪ್ರಣಾಳಿಯನ್ನು ಭವಿಷ್ಯ ಹೊಂ... ಕೊಂಡಿದೆಯೆನ್ನಬಹುದು.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾ... ಲೇಖನಗಳನ್ನು ಆಮಂತ್ರಿಸಲಾ... ದೆ. ಇವು ಚಿಕ್ಕದಿರ ಬೇಕಲ್ಲ... ಕಾಗದದ ಒಂದೇ ಮಗ್ಗುಲಿನಲ್ಲಿ... ಬೇಕು. ಲೇಖಕಬಂಧುಗಳು ಸ... ಕರಿಸಬೇಕಾಗಿ ವಿನಂತಿ. –ಸಂ. ನ...

ಸಿಂಡಿಕೇಟ್ ಬೇಂಕ್

112=50

100

ಕೇಶ್ ಸರ್ಟಿಫಿಕೇಟ್ಸ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೦. 9-6-1960 Vol. 39. No. 40

ಪ್ರಚಲಿತ ಪ್ರಸಂಗ

ಪೂನಾದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ

ಕಾಂಗ್ರೆಸಿಗರಿಗೆ ತ್ಯಾಗ ಮತ್ತು ಕಠಿನ ಪರಿಶ್ರಮಗಳೊಡನೆ ಸೇವಾ ತತ್ಪರರಾಗಲು ಕಾಂಗ್ರೆಸ್ ಅಧ್ಯಕ್ಷರ ಮತ್ತು ಪ್ರಧಾನಿ ನೆಹರೂರವರ ಕರೆ.

ಭಾರತದ ಏಕಮಾತ್ರ ಸುಸಂಘಟಿತ ಪ್ರಬಲ ರಾಜಕೀಯ ಪಕ್ಷವಾದ ಕಾಂಗ್ರೆಸ್ಸು ತನ್ನ ಜನಬಲವನ್ನು, ಗೌರವಾದರಗಳನ್ನೂ ದಿನೇ ದಿನೇ ಕಳೆದುಕೊಳ್ಳುತ್ತಿದೆ ಎಂಬುದರ ಬಗ್ಗೆ ಅಲ್ಲಲ್ಲಿ ಧ್ವನಿಯೇಳುತ್ತಿರುವುದೂ ಈ ದಿಸೆಯಲ್ಲಿ ಸಂಘಟನೆಯು ಮತ್ತಷ್ಟು ಸುಭದ್ರವಾಗುವಂತೆ ಮತ್ತು ಭಾರತೀಯರೆಲ್ಲರ ಆದರಕ್ಕೆ ಪಾತ್ರವಾಗುವಂತೆ, ಭಾರತೀಯರ ಬೆಂಬಲವನ್ನು ಗಳಿಸಲು ಸಮರ್ಥವಾಗುವಂತೆ ಅದನ್ನು ಪುನಾರಚಿಸಬೇಕೆಂಬ ವಾದವು ಬೇರೆ ಬೇರೆ ನಾಯಕರ ಬಾಯಿಯಿಂದ ಹೊರಬೀಳುತ್ತಿರುವುದೂ ಇತ್ತೀಚೆಗಿನ ಕೆಲವರ್ಷಗಳಿಂದ ಪರಿಪಾಠವೆಂಬಂತಾಗಿದೆ. ಮೈಸೂರಿನ ಶ್ರೀ ಕೆಂಗಲ್ ಹನುಮಂತಯ್ಯನವರು ಇಂತಹ ಉದ್ಗಾರಗಳನ್ನೆತ್ತಿದವರಲ್ಲಿ ಒಬ್ಬರು ಮಾತ್ರವಲ್ಲ, ಕಾಂಗ್ರೆಸ್ ಪಕ್ಷದ ಘಟನೆಯಲ್ಲಿಯೇ ಆಮೂಲಾಗ್ರ ಪರಿವರ್ತನೆಯಾಗಬೇಕೆಂದು ಅಭಿಪ್ರಾಯಪಡುವವರಿವರು. ಈ ಬಗ್ಗಾಗಿ, ಅವರು ಸೂಚನೆ ಮತ್ತು ವರದಿಗಳರೂಪದಲ್ಲಿ ಸಲಹೆಯಿತ್ತಿದ್ದರು. ಈ ವಿಷಯವನ್ನೆತ್ತಿಕೊಂಡು, ಸದ್ಯದ ಘಟನೆಯಲ್ಲಿ ಬದಲಾವಣೆಗಳು ಬೇಕೇ, ಬೇಡವೇ, ಬೇಕಾದರೆ, ಯಾವ ಯಾವೆಡೆಗಳಲ್ಲಿ ಎಂಬುದನ್ನು ಪರಿಶೀಲಿಸಲು ಕಳೆದ ಬೆಂಗಳೂರು ಅಧಿವೇಶನದಲ್ಲಿ ಕಾಂಗ್ರೆಸ್ ಒಂದು ಉಪಸಮಿತಿಯನ್ನು ನೇಮಿಸಿತ್ತು. ಈ ಉಪಸಮಿತಿ ಪ್ರಕೃತದ ವ್ಯವಸ್ಥೆಯಲ್ಲಿ ಯಾವುದೇ ಪರಿವರ್ತನೆಯು ಅನವಶ್ಯ ಎಂಬ ನಿರ್ಧಾರಕ್ಕೆ ಬಂದಿದೆ.

ಪೂನಾದಲ್ಲಿ ಕಳೆದ ವಾರ ನಡೆದ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಚರ್ಚಿಸಲ್ಪಟ್ಟ ಮತ್ತು ಎಲ್ಲ ಸದಸ್ಯರಲ್ಲೂ ತ್ವೇಷಮಯ ವಾತಾವರಣವನ್ನುಂಟು ಮಾಡಿದ ಸಂಗತಿಯಲ್ಲಿ ಇದೇ ಮುಖ್ಯವಾಗಿದೆ. ಶ್ರೀ ಹನುಮಂತಯ್ಯ, ಶ್ರೀ ಮಹಾವೀರತ್ಯಾಗಿ ಮೊದಲಾದ ಮುಖಂಡರು ಪರಿವರ್ತನೆ ಆಗತ್ಯವೆಂದು ಅಭಿವ್ಯಕ್ತಪಟ್ಟರೆ, ಪ್ರಧಾನಿ ನೆಹರೂ, ದೇಭಾರ ಇತ್ಯಾದಿ ವರಿಷ್ಠರು ಇದನ್ನು ಒಪ್ಪಲಿಲ್ಲ. ಶ್ರೀ ಹನುಮಂತಯ್ಯನವರು ಸೂಚಿಸಿದ್ದ ಮುಖ್ಯ ಪರಿವರ್ತನೆಗಳಲ್ಲಿ ಸಂಸತ್ ಕಾಂಗ್ರೆಸ್ ಧುರೀಣನೇ ಅಖಿಲ ಭಾರತೀಯ ಕಾಂಗ್ರೆಸ್ ನಾಯಕನೂ ಆಗಬೇಕು; ಮತ್ತು ಹಾಗೆಯೇ ಶಾಸನ ಸಭಾ ಕಾಂಗ್ರೆಸ್ ಧುರೀಣನೂ ಪ್ರಾದೇಶಿಕ ಕಾಂಗ್ರೆಸ್ ನಾಯಕನೂ ಒಬ್ಬನೇ ಆಗಬೇಕು ಎಂಬುದು ಒಂದು. ಎ. ಐ. ಸಿ. ಸಿ.ಗೆ ನೇರ ಮತದಾನದ ಮೂಲಕವೇ ಸದಸ್ಯರನ್ನು ಆರಿಸಬೇಕು ಎಂಬುದು ಮತ್ತೊಂದು. ಇವುಗಳಲ್ಲಿ, ಮೊದಲನೆಯ ಸೂಚನೆಯಿಂದ, ಶಾಸನ ವ್ಯವಸ್ಥೆ ಮತ್ತು ಕಾಂಗ್ರೆಸ್ ಸಂಸ್ಥೆಗಳ ನಡುವಿನ ಭಿನ್ನಾಭಿಪ್ರಾಯಗಳು ಕಡಿಮೆಯಾಗಿ, ಪಕ್ಷದ ಧ್ಯೇಯ ಧೋರಣೆಗಳಿಗನುಸಾರವಾಗಿ ಪ್ರಶಾಸನ ಪ್ರಣಾಳಿಯನ್ನು ರೂಪಿಸುವುದು ಸುಗಮವಾಗುವುದು ಎಂದೂ, ಎರಡನೆಯದರಿಂದ, ಕಾಂಗ್ರೆಸ್ ಸಮಿತಿಗಳಲ್ಲಿ ಹೊಸ ಉತ್ಸಾಹಭರಿತ ಯುವಕ ಮುಖಗಳನ್ನು ತರುವುದಕ್ಕೆ ಸಾಧ್ಯವಾಗುವುದೆಂದೂ ಹೇಳಲಾಗುತಿತ್ತು. ಆದರೆ, ಪೂನಾದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಈ ಎರಡರ ಬಗೆಗೂ ಸಾಕಷ್ಟು ಪ್ರೋತ್ಸಾಹ ದೊರೆಯದೆ ಅಬಗ್ಗಿನ ಸೂಚನೆಗಳು ಬಿದ್ದು ಹೋದುವು.

ಚರ್ಚಾವೇಳೆಯಲ್ಲಿ ನಡುವೆ ಎದ್ದು ನಿಂತು ಭಾಷಣ ಮಾಡಿದ ಪ್ರಧಾನಿ ನೆಹರುರವರು "ಕಾಂಗ್ರೆಸ್ ಅಧ್ಯಕ್ಷ ಮತ್ತು ಸಂಸತ್ ನಾಯಕರು ಒಬ್ಬರೇ ಆಗಿರುವುದರಿಂದ, ರಾಷ್ಟ್ರವು ಸರ್ವಾಧಿಕಾರಿತನದತ್ತ ಒಲಿಯುವ ಸಂಭವವಿರುವುದು. ಮಹಾತ್ಮಾಗಾಂಧಿಯವರೂ ಇದಕ್ಕೆ ವಿರೋಧಾಭಿಪ್ರಾಯವುಳ್ಳವರಾಗಿದ್ದರು. ಸದಸ್ಯರೆಲ್ಲರನ್ನೂ ನಾಮಕರಣ ರೀತ್ಯಾ ತುಂಬಿಸುತ್ತಿರುವ ಪದ್ಧತಿಯು ಹಿಂದಿನಿಂದಲೂ ಬಂದುದು. ಕೇವಲ, ಕೆಲವೇ ನಿರ್ದಿಷ್ಟ ವ್ಯಕ್ತಿಗಳೇ ಪ್ರತಿಬಾರಿಯೂ ಸದಸ್ಯರಾಗಿ ಆರಿಸಲ್ಪಡುವರೆಂಬ ದೂರು ಕೇಳಿಬರುತ್ತಿದೆ. ಕಾರ್ಯಕಾರಿಣಿಯಲ್ಲಿ ನವಮುಖಗಳನ್ನು ತರಬೇಕಾದುದು ಅವಶ್ಯ. ಆದರೆ, ಚುನಾವಣೆಗಳ ಮೂಲಕವೇ ಈ ಸ್ಥಾನಗಳನ್ನು ತುಂಬಿಸುವುದರಿಂದ, ವಿಭಿನ್ನ ಮನಸ್ಸಿನ ವಿಭಿನ್ನ ಧೋರಣೆಯ ವ್ಯಕ್ತಿಗಳು ಬಂದು ಸೇರುವುದು ಸಾಧ್ಯವಿರುವುದರಿಂದ, ಸಂಸ್ಥೆಯಲ್ಲಿಯೇ ಒಡಕು, ಗೊಂದಲಗಳುಂಟಾಗುವುದು; ಭಿನ್ನಾಭಿಪ್ರಾಯಗಳು ತೋರಿಬರುವುವು. ಆದರೂ ಹೊಸಬರಿಗೂ ಅವಕಾಶ ಕಲ್ಪಿಸಲು ತಕ್ಕ ವ್ಯವಸ್ಥೆಯನ್ನು ಹಿಂದುಗಡೆಯಿಂದ ಮಾಡಿಕೊಳ್ಳಬಹುದು" ಎಂದು ಹೇಳಿ ಶ್ರೀ ಹನುಮಂತಯ್ಯನವರ ಸೂಚನೆಗಳನ್ನು ವಿರೋಧಿಸಿದರು.



೬,೦೦೦ ಟನ್ ಭಾರದ ಜರ್ಮನ್ ಫ್ರೈಟರ್ ಫೂಲ್ಸ್‌ಗಾಂಗ್‌ರಸ್ ಚಿಕಾಗೋ ರೇವಿನಲ್ಲಿ ತಂಗಿದ ನೋಟ.

ಆದರೆ, ಮುಂದೊಂದು ಮೋಜಿನ ಪ್ರಸಂಗ ನಡೆಯಿತು. ಶ್ರೀ ಹನುಮಂತಯ್ಯನವರು, ಕಾಂಗ್ರೆಸ್ ಕಾರ್ಯಸಮಿತಿಯ ಸದಸ್ಯರಲ್ಲಿ ಮೂರರಲ್ಲಿ ಒಂದಂಶದಷ್ಟು ಸದಸ್ಯರನ್ನು ನೇರ ಚುನಾವಣೆಗಳಿಂದ ಭರ್ತಿಮಾಡಿಕೊಳ್ಳಬೇಕೆಂದು ಮಂಡಿಸಿದ ಸೂಚನೆಯು ಮತಕ್ಕೆ ಹಾಕಲಾಗಿ, ಅದು ಪ್ರಚಂಡ ಬಹುಮತದಿಂದ ಬಿದ್ದುಹೋಯಿತು. ಗೊತ್ತುವಳಿಗೆ ಪರವಾಗಿ ೭೮ ಮತಗಳೂ ವಿರೋಧವಾಗಿ ೧೪೮ ಮತಗಳೂ ಬಿದ್ದುವು. ಕಾಂಗ್ರೆಸ್ ವರಿಷ್ಠರಲ್ಲಿ ಪ್ರಧಾನಿ ನೆಹರೂರವರು ಮಾತ್ರ ಗೊತ್ತುವಳಿಗೆ ಪರವಾಗಿ ಮತವಿತ್ತುದು ಎಲ್ಲರನ್ನೂ ವಿಸ್ಮಯಕ್ಕೀಡುಮಾಡಿತು. ಉಳಿದ ವರಿಷ್ಠರೆಲ್ಲರೂ ವಿರೋಧವಾಗಿ ಮತದಾನ ಮಾಡಿದ್ದರು. ಇಂತಹ ಮೋಜು ಪ್ರಾಯಃ ಕಾಂಗ್ರೆಸ್ ಅಧಿವೇಶನಗಳ ಚರಿತ್ರೆಯಲ್ಲಿ ಇದುವರೆಗೂ ನಡೆದಿರಲಿಲ್ಲ. ಅವರು ಅನಧಿಕೃತ ಗೊತ್ತುವಳಿಗೆ ಮತವಿತ್ತುದರಲ್ಲಿ ರಹಸ್ಯವೇನಾದರೂ ಅಡಗಿದೆಯೋ ಎಂಬುದೂ ರಹಸ್ಯವಾಗಿಯೇ ಉಳಿದಿದೆ.

ಪೂನಾದ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷರು ತ್ಯಾಗ ಮತ್ತು ಪರಿಶ್ರಮಗಳಿಂದ ದುಡಿದು, ಜನತೆಯ ಸೇವೆ ಮಾಡಲು ಸಿದ್ಧರಾಗುವಂತೆ ಕಾಂಗ್ರೆಸಿಗರಿಗೆ ಹಿತವಾದ ನುಡಿದರು. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ತಾವು ತ್ಯಾಗ ಮತ್ತು ಕಠಿನ ಪರಿಶ್ರಮ ಮಾಡುವವರೆಂಬುದನ್ನು ದೇಶಕ್ಕೆ ತೋರಿಸಿಕೊಡಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಪ್ರಧಾನಿಗಳೂ ತಮ್ಮ ಭಾಷಣದಲ್ಲಿ ಈ ಮಾತುಗಳಿಗೆ ಪುಷ್ಟಿಯಿತ್ತರಲ್ಲದೇ ಕಾಂಗ್ರೆಸ್ ಧ್ಯೇಯ, ತತ್ವಗಳಿಗೆ ನಿಷ್ಠರಾಗಿರುವವರೇ ಪ್ರತಿನಿಧಿಗಳಾಗಿ ಕಾಂಗ್ರೆಸ್ ಸಂಸ್ಥೆಯ ಕಡೆಯಿಂದ ಆರಿಸಲ್ಪಡಬೇಕೆಂದು ಹೇಳಿದರು. ಪಕ್ಷದ ಧ್ಯೇಯವನ್ನು ವಿರೋಧಿಸುವವರನ್ನು ಸಂಸ್ಥೆಯಲ್ಲಿ ಸೇರಿಸಿಕೊಳ್ಳುವುದರಿಂದ, ಪಕ್ಷವು ದುರ್ಬಲವಾಗುವುದೆಂಬುದನ್ನು ಅವಶ್ಯ ನಾವು ಗಮನಿಸಬೇಕೆಂದರು. ಪಕ್ಷದ ಕೆಲವರು ತಮ್ಮ ಸ್ವಾರ್ಥಸಾಧನೆಗೋಸ್ಕರವಾಗಿ ಖೊಟ್ಟಿ ಸದಸ್ಯರನ್ನು ತಯಾರಿಸುವ ಕುರೀತಿಯನ್ನವರು ಬಲವತ್ತರವಾಗಿ ಖಂಡಿಸಿ, ಇಂತಹ ದುರ್ಘಟನೆಗಳನ್ನು ಬಯಲಿಗೆಳೆದು ಮರಳಿ ಆ ರೀತಿ ನಡೆಯಗೊಡದಂತೆ ನೋಡಬೇಕು; ಹೀಗೆ ಅದನ್ನು ತಡೆಗಟ್ಟಲು ಸಹಾಯಕನಾದವನು ಕಾಂಗ್ರೆಸ್ ಪಕ್ಷದ ಬಲಸಂಘಟನೆಗೆ ಅಮೂಲ್ಯ ಸಹಾಯ ಸಲ್ಲಿಸಿದಂತಾ

(೧೨ನೇ ಪುಟ ನೋಡಿರಿ)

ಕಥಾ ವಿಹಾರ—

ಪಾಷಾಣ ಹೃದಯದ ಪರಿಚಯ

ನಿರ್ಗತಿಕ ರಾಜೂವಿಗೆ ಗತಿತೋರಿಸಲು ಪ್ರಯತ್ನಿಸಿದ ನನಗೆ ಕೊನೆಗೂ ದೊರೆತುದು ಕೃತಜ್ಞತೆಯಲ್ಲ ಆತನ ಪಾಷಾಣ ಹೃದಯದ ಪರಿಚಯ ಮಾತ್ರ!

ಇಲ್ಲ—

ಸಹಾಯ ಮಾಡಬಾರದು;—

ಯಾರ ಮೇಲೂ—ಕರುಣೆ ತೋರಬಾರದು.

— ಖಂಡಿತ ತೋರಬಾರದು.

ಈಗಿನ ದಿನಗಳಲ್ಲಿ, ಈ ಜನರಲ್ಲಿ, ಎಂದೂ—

—ಸಹಾಯ, ಕರುಣೆಗಳ ಮಾತೆತ್ತಬಾರದು.

ಸಹಾಯ—ಕರುಣೆ!

ಕರುಣೆ-ಸಹಾಯ!!

ಹೌದು! ರಾಜನಿಗೆ—ನಿರ್ಗತಿಕ ರಾಜನಿಗೆ, ನಾನೆಷ್ಟು ರೀತಿಯಿಂದ ಸಹಾಯ ಮಾಡಿಲ್ಲ! —ಎಷ್ಟು ಕರುಣೆ ತೋರಿಲ್ಲ,- ಅವನ ಮೇಲೆ!

ಸಹಾಯ ಮಾಡಿದ್ದನ್ನು, —ಕರುಣೆ ತೋರಿದ್ದನ್ನು, ಬಾಯಿಂದಾಡಬಾರದು, ನಿಜ.

ಆದರೆ—

ಹಾಗಾಡುವ ಪ್ರಸಂಗ ಬಂದಿದೆ— ಈಗ!

ಹಾಗಾಡಿದರೂ ಈಗ ರಾಜನಿಂದ ಬರುವ ಪ್ರಶ್ನೆಯೇನು?

'ಯಾರು ನೀನು?'

ಅದೇ ಪ್ರಶ್ನೆ—

'ಯಾರು ನೀನು?'

ಹೌದು! ನಾನಾರು? ಅವನಿಗೆ ನಾನೇನು ಸಂಬಂಧ? ಅವನಾರೆಂದು, ಅವನು ನನಗೇನು ಮಾಡಿದ್ದಾನೆಂದು, ನಾನು ಸಹಾಯ ಮಾಡಿದೆ? ಕರುಣೆ ತೋರಿದೆ?

ಆತ ಕೇಳುತ್ತಿರುವದೀಗ ಸರಿ;—

'ಯಾರು ನೀನು?

ಹೌದು! ನಾನಾರು?

ರಾಜ! ಇವತ್ತು ನನಗೆ ಕೇಳುತ್ತಿದ್ದಾನೆ—'ಯಾರು ನೀನು?' ಎಂದು—ಆದರೆ, ತಾನಾರು? ಮೊದಲು ಹೇಗಿದ್ದೆ? ಈಗ ಹೇಗಿದ್ದೇನೆ? ಯಾರಿಂದ ಹೀಗಾದೆ?— ಈ ಪ್ರಶ್ನೆಗಳನ್ನು ತಾನು ಕೇಳಿಕೊಳ್ಳುತ್ತಿಲ್ಲ ತನ್ನನ್ನು ತಾ ಮರೆತು, ನನಗೇ—ಸಹಾಯ ಮಾಡಿದವನನ್ನೇ,—ಕರುಣೆ ತೋರಿದವನನ್ನೇ —ಈಗ ಕೇಳುತ್ತಿದ್ದಾನೆ—

'ಯಾರು ನೀನು?'

ಇದು ಆತ ಕೇಳುವ ಪ್ರಶ್ನೆಯೇ?

ಹೀಗೆ ಮಾತನಾಡುವದು ಸರಿಯೇ?

ಇದು ನೀತಿಯೇ?

ಆತನ ಬಾಯಿಯಿಂದ ಬಂತಕ್ಕ ಪ್ರಶ್ನೆಯೇ ಇದು?

........ಈಗ ನಿಮಗೆ ಮಾತು ಬಂದಿದೆಯೆಂದು ಹೇಳುತ್ತೇನೆ.

ಈತ ರಾಜ, ಚಿಕ್ಕಂದಿನಲ್ಲಿಯೇ ತಂದೆ —ತಾಯಿಗಳನ್ನು ಕಳೆದುಕೊಂಡವ— ಈತನನ್ನು ನಾನು ಚಿಕ್ಕಂದಿನಿಂದಲೇ ಬಲ್ಲೆ. ಈತನನ್ನು, ಇವನ ತಂದೆಯ ತಮ್ಮ, ಇದೇ ಊರಿನಲ್ಲಿದ್ದಾರೆ;—ಕಿರಾಣಿ ಅಂಗಡಿಯಿಟ್ಟುಕೊಂಡು. ಅವರು ಸಾಕಿ ಸಲುಹಿದರು. ಅವರೇ ಇವನನ್ನು ದೊಡ್ಡವನನ್ನಾಗಿ ಮಾಡಿದರು. ಇವನನ್ನು ಕಾಡಿಸಿ—ಪೀಡಿಸಿ ಬೆಳೆಸಿದರೆನ್ನುವದಕ್ಕಿಂತ ಮುಖ್ಯ, ಬೆಳೆಸಿದರಲ್ಲಾ! ಎಂದು ಸಂತೋಷಪಡಬೇಕು.

ಇವರ ಮನೆಯು ಹತ್ತಿರವೇ ನಮ್ಮ ಮನೆ. ಹೀಗಾಗಿ, ಚಿಕ್ಕಂದಿನಿಂದ ನನ್ನದೂ—ಅವನದೂ ಸ್ನೇಹ. ಆತ ರಾಜ, ನನ್ನೆಡೆಗೆ ಬಂದು, ತನ್ನ ಗೋಳನ್ನು ಹೇಳಿಕೊಳ್ಳುವ. ಅವನ ಗೋಳನ್ನು ಕೇಳಿದಾಗ, ಕೆಡುಕೆನಿಸುತ್ತದೆ. ಸಾದಾ ಒಬ್ಬ ವ್ಯಕ್ತಿಯಾಗಿದ್ದರೂ, ಕೆಡುಕೆನಿಸುವದು. ಆದರೆ ನಾನು ಲೇಖಕ; ಸಹೃದಯಿ! ಎಂದಮೇಲೆ, ಸಾಮಾನ್ಯರಿಗಿಂತ ನನ್ನ ಹೃದಯಕ್ಕೆ ಬಲು ಬೇಗ ನಾಟುತ್ತದೆ—ಆ ಗೋಳು. ಇದರಿಂದ ಅವನಿಗೆ ನಾನು ಕರುಣೆ ತೋರತೊಡಗಿದೆ. ಆಗಾಗ, ಹಣದಿಂದ—ಇತರ ರೀತಿಯಿಂದ ಸಹಾಯ ಮಾಡತೊಡಗಿದೆ.

ಅವನಿಗೆ ಆಗ ೧೬ ವಯಸ್ಸಾಗಿರಬಹುದು. ಅವರ ಕಾಕಾ ಹೊರಗೆ ಹಾಕಿದರು. ಅವತ್ತು ಇಡಿದಿನ, ನನ್ನ ಹತ್ತಿರ ಬಂದು ಗೋಳಿಡುತ್ತ ರೋದಿಸಿದ. ನನಗೂ ದುಃಖವಾಯಿತು—ಆ ಗೋಳು ಕೇಳಿ. ಆದರೇನು? ನನ್ನ ಕೈಯಲ್ಲೇನಿದೆ? ನಾನೇನು, ಅವನನ್ನು ನಮ್ಮ ಮನೆಯಲ್ಲಿ ಇಟ್ಟುಕೊಂಡು ಸಲುಹಲು ಸಾಧ್ಯವೇ?—ಶಕ್ಯವೇ? ನಾನೂ, ತಂದೆ—ತಾಯಿಗಳು ಹೇಳಿದಂತೆ ಕೇಳಿಕೊಂಡು ಬಿದ್ದಿರುವವ. ಅವನ ಗೋಳನ್ನು ಕೇಳಿ ದುಃಖಪಟ್ಟೆನೇ ವಿನಃ, ಕೈಯಿಂದ ಯಾವ ಸಹಾಯವೂ ಆಗಲಿಲ್ಲ. ಆದಕ್ಕಾಗಿ ಮರುಗಿದೆ, ಆ ರಾತ್ರಿ, ನನಗೆ ನಿದ್ರೆಯೇ ಆಗಲಿಲ್ಲ—ಬೇಗ ಬರುವದಾದರೂ ಹೇಗೆ?

ನನಗೆ ತಿಳಿದ ಮಟ್ಟಿಗೆ, ಕೆಲವು ಹಿತನುಡಿಗಳನ್ನು ಹೇಳಿದೆ;ಉಪದೇಶ ಕೊಟ್ಟೆ. ಹೊರಟ, ನನ್ನಿಂದ ಕಣ್ಮರೆಯಾದ. ಆಗಲುವಾಗ ಇಬ್ಬರಲ್ಲೂ ಆದ ದುಃಖವನ್ನು ನಿಮಗೀಗ ಯಾವ ಬಾಯಿಂದ ವರ್ಣಿಸಿದರೆ ಸರಿಯಾಗಿ ಕಂಡೀತು? ಯಾವ ಲೆಕ್ಕಣಿಕೆಯಿಂದ ವರ್ಣಿಸಿದರೆ ಸರಿಯಾದೀತು?

ಮತ್ತೆ ಕೆಲದಿನಗಳ ಮೇಲೆ ಆತ, ಇದೇ ವಾರಲ್ಲಿಯೇ ಕಂಡ. ನಮ್ಮ ಮನೆಗೆ ಬಂದಿದ್ದ. ಎಲ್ಲಿರುವೆ?—ಏನು ಸಮಾಚಾರ?...... ಎಂದು, ಕಾಫಿ ಹೊಟೆಲಿನಲ್ಲಿ, ಕಾಫಿ ಕುಡಿಸುತ್ತ ಕೇಳಿದೆ. ಆಗಿನ ಅವನ ಆರಿವೆ—ಮುಖ ಕಾಣುವಾಗ್ಗೆ ಏನೋ—ಎಲ್ಲಿಯೋ ಆಶ್ರಯ ಸಿಕ್ಕಂತಿದೆ; ಹೊಟ್ಟೆಗಿಷ್ಟು ಅನ್ನ ಸಿಕ್ಕುತ್ತದೆಂದು ತಿಳಿದುಕೊಂಡೆ.

ಆತ ಹೇಳಿದ:

ಇದೇ ವಾರ್ನಲ್ಲಿ ರಾಜಸ್ಥಾನದವ ಒಬ್ಬ ನಿದ್ದಾನೆ— ಮಾರವಾಡಿ— ಆತ ಒಂದು ನಾಟಕಕಂಪನಿ ಸ್ಥಾಪಿಸಿದ್ದಾನೆ.ಅಲ್ಲಿಲ— ೧೧ ಜನರ ಇರುತ್ತಾರೆ.ಆವನೇ ಸ್ವತಃ ಒಂದು ನಾಟಕ ಬರೆದಿದ್ದಾನೆ—'ಪೈಸೇ ಕೀ ದುನಿಯಾ'—ಅಂತ. ಅವನ ಹೆಸರು ಚಂಪಾಲಾಲ ಎಂದು. ಅವನಿಗೆ, ಮತ್ತಿತರರಿಗೆ ಅಡಿಗೆ ಮಾಡಿ ಹಾಕುವದು. ಅಡಿಗೆಯೆಂದರೇನು? — ಕೇವಲ ಚಪಾತಿ—ಪಲ್ಯ ಅಷ್ಟೆ! ಊಟ-ವಸತಿ ಎಲ್ಲ ಕೊಟ್ಟು, ೧೫ ರೂಪಾಯಿ ಸಂಬಳ—ತಿಂಗಳಿಗೆ— ಎಂದ.

ಈ ಸುದ್ದಿ ಕೇಳಿ ನನಗೆ ಕೊಂಚ ವ್ಯಥೆಯಾದರೂ, ಹೆಚ್ಚು ಸಂತೋಷವಾಯಿತು. ಅವನ ಮುಖದಲ್ಲಿ ನಿರ್ಮಲ ನಗೆಯನ್ನು ಕಂಡದ್ದು ಅಂದೇ ನಾನು!

ಆಗಲೇ, ಅಲ್ಲಿರುವಾಗಲೇ ನಾನು ಓದುವದನ್ನು ಬರೆಯುವದನ್ನು ಕಂಡು, ಅವನಿಗೂ ಓದಬೇಕು-ಬರೆಯಬೇಕೆಂಬ ಆಶೆ ಅಂಕುರಿಸಿತ್ತು. ಆವಾಗಲೇ, ಸಾಹಿತ್ಯದ ಬಗ್ಗೆ ನನ್ನನ್ನು ಕೇಳತೊಡಗಿದ. ನನ್ನಿಂದ ಗ್ರಂಥಗಳನ್ನು ತೆಗೆದುಕೊಂಡು, ಓದತೊಡಗಿದ. ಏನೇನೊ ಬರೆದು ತೋರಿಸುವ. ತಪ್ಪಿದಲ್ಲಿ ಹೇಳುತ್ತಿದ್ದೆ ಅವನ ಬರವಣಿಗೆಯ ವಿಷಯದಲ್ಲಿ-ಓದಿನ ವಿಷಯದಲ್ಲಿ, ಒಂದು ಮಾತು ಖಚಿತವಾಯಿತು. ಅದು—ಅವನು ಓದುವದು;—ನಾನು ಓದುವೆನೆಂದು. ಅವನು ಬರೆಯುವದು;—ನಾನು ಬರೆಯುವೆನೆಂದು. ಹೀಗೆ ಮಾಡಿದರೆ ಸಾಹಿತ್ಯವಾಗುವದೇ? ಹೀಗಾದರೆ ಲೇಖಕನಾಗುವನೇ ಈತ?... ಹೀಗೆ ನನ್ನಲ್ಲಿ ವಿಚಾರಗಳು ಬರುವವು. ಆದರೆ, ಈ ಪ್ರಶ್ನೆಗಳನ್ನು ರಾಜನ ಮುಂದಿಟ್ಟಿರಲಿಲ್ಲ. ಕಾರಣ, ಅವನನ್ನು ನಿರುತ್ಸಾಹಿಯನ್ನಾಗಿ ಮಾಡುವದು ನನಗೆ ಬೇಕಿರಲಿಲ್ಲ.

ಈತ ರಾಜ,ಕಾಕಾನ ಮನೆಯಲ್ಲಿರುವಾಗಲೇ ಕೆಲವು ಹಿಂದೀ ಪರೀಕ್ಷೆಗಳನ್ನು ಪಾಸು ಮಾಡಿದ್ದ. ಕಾರಣ,ಆ ಹಿಂದೀ ಮುಂದೆ ಉಪಯೋಗವಾಯಿತು. ಹೇಗೆಂದರೆ,ಆ ನಾಟಕ ಕಂಪನಿಯ ಮೂಲಕ ಚಂಪಾಲಾಲ, ನಾಟಕ ಆಡಿ ಮುಗಿಸಿದ. ಮುಂದೆ. ಅವನ ಸ್ನೇಹಿತರೆಲ್ಲ ದೂರಾದರು. ಕಡೆಗೆ ಉಳಿದವರೆಂದರೆ ಇವರಿಬ್ಬರೇ!ಆ ಮೂಲಕನಿಗೆ ಹಿಂದೀ ಬೇಕಾದಹಾಗೆ ಬರುತ್ತಿತ್ತು. ಕಾರಣ, 'ಆರ್ಯಸಮಾಜ'ದಲ್ಲಿ ತನಗಿರಲು ಸ್ಥಳ ಕೇಳಿಕೊಂಡು, ಅಲ್ಲಿ 'ಗಾಂಧಿ ಹಿಂದೀ ವಿದ್ಯಾಪೀಠ' ಎಂಬ ಬೋರ್ಡನ್ನು ತೂಗುಹಾಕಿ, ಅಲ್ಲಿರತೊಡಗಿದ. ಆ ಬೋರ್ಡನ್ನು ಕಂಡು, ೫-೬ ಬಾಲಕರು ಬರತೊಡಗಿದರು. ಒಂದು ಮಾತೆಂದರೆ, ಆ ಚಂಪಾಲಾಲನಿಗೆ ಕನ್ನಡ ಬರುತ್ತಿರಲಿಲ್ಲ ಸರಿಯಾಗಿ. ಈತ ರಾಜಸ್ಥಾನದವ. ಹೆಚ್ಚು ದಿನ ಇಲ್ಲಿದ್ದವನೂ ಅಲ್ಲ. ಬಂದು, ೧ ವರ್ಷವಾಗಿತ್ತೆ ನಿಜ. ಆದರೂ ಕನ್ನಡ ಕಲಿತಿರಲಿಲ್ಲ. ಬೇರೆಯವರು ಮಾತನಾಡಿದ್ದ ಅರ್ಥವರ್ಥ ತಿಳಿಯುತ್ತಿತ್ತು. ಆದರೆ, ಮಾತನಾಡಲು, ಸ್ವಲ್ಪವೂ ಬರುತ್ತಿರಲಿಲ್ಲ. ಹೀಗಾಗಿ, ಆತ ರಾಜನಿಗೆ ಆ ಹುಡುಗರಿಗೆ ಕಲಿಸಲು ಹೇಳಿ, ತಾ ಬೇರೆಡೆಗೆ ಕರಟಿಹೊಡೆಯತೊಡಗಿದ ಆಗಿನಿಂದ ರಾಜ, ಆ ಹುಡುಗರಿಗೆ ಮೇಷ್ಟ್ರಾದ.

ನನಗೆ ವೇಳೆ ದೊರೆತಾಗಲೆಲ್ಲ 'ಆರ್ಯಸಮಾಜ'ಕ್ಕೆ ಹೋಗಿ, ರಾಜನನ್ನು ಭೇಟಿಯಾಗುತ್ತಿದ್ದೆ. ಗಂಟೆ, ಎರಡು ಗಂಟೆಗಳವರೆಗೆ ಚರ್ಚೆ—ಕಾಫಿ....ಎಲ್ಲ ಸಾಗುತ್ತಿದ್ದವು. ಹೀಗೆಯೇ ನಡೆದಿತ್ತು.

ಹಾಗೆಯೇ ೧ ದಿನ ಹೋದಾಗ್ಗೆ, ರಾಜ ಹೇಳಿದ ವಿಷಯ ಕೇಳಿ ವಿಸ್ಮಯವೂ ಆಯಿತು – ಗಾಬರಿಯೂ ಆಯಿತು. ಆ ಮಾಲಕ ೪ ದಿನಗಳಲ್ಲಿ ಕನ್ನೂರಿಗೆ ಹೋಗಿಬರುವೆನೆಂದು ಹೇಳಿ ಹೋದವ ಇನ್ನೂ ಬಂದಿಲ್ಲ. "ಮುಂದೇನು?" ಎಂದು ನಾನು ಕೇಳಿದ ಆದಕ್ಕೆ "-ವಿದ್ಯಾರ್ಥಿಗಳ ಫಿ' ಬಿಟ್ಟುಹೋಗಿದ್ದಾರೆ" ಎಂದ. ಅದನ್ನು ಕೇಳಿ ಸ್ವಲ್ಪ ಸಮಾಧಾನವಾಯಿತು.

ಆದರೆ, ಮುಂದೆ ಬಹಳ ಕಷ್ಟಕ್ಕೀಡಾದ ರಾಜ. ಸಮಯಕ್ಕೆ ಸರಿಯಾಗಿ ಹಣ ಸಿಗಲಿಲ್ಲ-ವಿದ್ಯಾರ್ಥಿಗಳಿಂದ. ಊಟಕ್ಕೆ ಒಂದಿದ್ದರೆ ಒಂದಿಲ್ಲ. ಹಾಕಿಕೊಳ್ಳಲು ಅರಿವೆಗಳಿಲ್ಲ. ಒಂದೇ ಶರಟು-ಪ್ಯಾಂಟು ಅವೂ ಹರಿದಿವೆ. ಇಂಥ ಕಟು ಭೀಕರ ಪರಿಸ್ಥಿತಿ ಬಂತು ರಾಜನಿಗೆ. ಆದರೇನು? ಅಂಥ ಪರಿಸ್ಥಿತಿಯಲ್ಲೂ ರಾಜನಿಗೆ ಕೆಲ ದುಶ್ಚಟಗಳು ಅಂಟಿಕೊಂಡಿದ್ದವು. ಸಿಗರೇಟ ಸೇದುವದು, ಸಿನಿಮಾ ನೋಡುವದು. ಸಾಲ ಮಾಡಿಯಾದರೂ ಸಿಗರೇಟ ಸೇದುವದೇ!...ಇಂಥವ ಕೈಲ್ಲ ನಾನು ಸಲಹೆ ಕೊಡುತ್ತಿರಲಿಲ್ಲ. ಬದಲಾಗಿ ಖಂಡಿಸುತ್ತಿದ್ದೆ –

ಬೇಡ ರಾಜ. ನಿನ್ನ ಪರಿಸ್ಥಿತಿಯೇನು? ಈಗ ಸಾಲ ಮಾಡಿದರೆ, ನಾಳೆ ಮುಟ್ಟಿಸುವೆ ಹೇಗೆ—ಎಲ್ಲಿಂದ? ಸಿಗರೇಟ ಯಾಕೆ ನಿನಗೆ—ಹೊಟ್ಟೆಗಿಲ್ಲದಾಗ್ಗೆ? ಸಿನೇಮಾ ಯಾಕೆ?..." ಬಹಳ ಹೇಳಿದೆ. ಆದರೇನು! ಆತ ನನ್ನ ಒಂದು ಮಾತನ್ನಾದರೂ ಕೇಳಿದನೆ? ಕೇಳಬೇಡಿ. ನಾನು ಹೇಳುತ್ತಲೇ ಇದ್ದೆ. ಆತ—ತನಗೆ ತೋರಿದಂತೆ - ಮಾಡುತ್ತಲೇ ಇದ್ದ. ಒಂದೊಂದಿನ ಬರಿ ಸಿಗರೇಟಮೇಲೆಕಾಲಕಳೆದ್ದುಂಟು:-ರಾಜ, ನಾನು ಕಂಡದ್ದುಂಟು. ಉಪವಾಸದಿಂದ ಬಂದಾಗ್ಗೆ, ನನ್ನ ಹತ್ತಿರ ಇಲ್ಲದಿದ್ದರೂ, ಸಾಲಮಾಡಿಯಾದರೂ ಆಣೆ.ನಾಲ್ಕಾಣೆ ಕೊಡಿಸುತ್ತಿದ್ದೆ. ಆಗ ರಾಜ ಬಹಳ ನಿರ್ಗತಿಕನಾಗಿದ್ದ. ಇವತ್ತು ನನ್ನ ಹತ್ತಿರ ಬಂದರೆ, ನಾಳೆ ಮತ್ತೊಬ್ಬನ ಮನೆಗೆ ಹೋಗುತ್ತಿದ್ದ. ಹೀಗೇ ಕಾಲ ಕಳೆಯುತ್ತಿದ್ದ.

ಆಗಲೇ ನನ್ನ ೫೬ ಕಾದಂಬರಿಗಳನ್ನು ಕಳೆದು. ಓದಲು ತೆಗೆದುಕೊಂಡವ 'ಕಳೆದವು ಎಂದು ಬಿಟ್ಟ. ಕಳೆದವೆಂದ ಮೇಲೆ ಮಾಡುವದೇನು? ಬೇಡುವವದಾದರೂ ಕೇಗೆ? ಅವನಲ್ಲೇನು ದುಡ್ಡಿದೆಯೇ ಕೊಡಿಸಲು?....ಹೀಗೆ ಯೋಚಿಸಿ, ಕೇಳಲಿಲ್ಲ.

(೧೧ನೇ ಪುಟ ನೋಡಿರಿ)

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ಡಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ-

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦ ೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಾರವಿಮರ್ಶೆ

ವಿಶ್ವರಾಜ್ಯ--ಒಂದು ವ್ಯಾವಹಾರಿಕ ಕಲ್ಪನೆ

ಸರ್ವಮಾನವಗಣವನ್ನು ವಿಶ್ವಾಸದಿಂದ ಕಾಣುವುದೇ ವಿಶ್ವರಾಜ್ಯ ಕಲ್ಪನೆಯ ಅಡಿಗಲ್ಲು ಎಂದು ಆಂಗ್ಲ ಮನೀಷಿ ರಸ್ಸೆಲ್ ಹೇಳುತ್ತಾರೆ. ಕ್ಕೆ ಬೇಕಾದ ರಂಗಭೂಮಿ ನಿರ್ಮಾಣಕ್ಕೆ ಈ ಲೇಖನದಲ್ಲಿ ಕೆಲವು ಉಪಾಯಗಳ ಮೇಲೆ ಅವರು ಪ್ರಕಾಶ ಬೀರಿದ್ದಾರೆ.

ವಿಶ್ವಾಸ' ವೆಂದರೇನು? ಇದು ಯಾ ಗ ಗುಣವೆನಿಸುವುದು; ಮತ್ತು ಅದ್ಯಾ ಗ ದೋಷವಾಗುವುದು? ನಮ್ಮ ಸ ಜಕ್ಕಾಗಿ, ಅದರ ಹಿತಕ್ಕಾಗಿ ವ್ಯಕ್ತಿಗ ತ್ಯಾಗಕ್ಕೆ ಸಿದ್ಧರಾಗುವುದನ್ನೇ ನಾವು ಸ' ಎಂದು ಹೇಳಬಹುದು. ಈ ಸದ ಪ್ರಯೋಜನವನ್ನು ಪಡೆಯ ಮತ್ತು ಆವಶ್ಯಕವಾದ ಅನೇಕ ಸ ಜಗಳಿರುತ್ತವೆ. ಇವುಗಳಲ್ಲಿ ಪರಿವಾರ, ಷ್ಟ್ರ, ವರ್ಗ, ಪಕ್ಷ ಮತ್ತು ಧರ್ಮ ಅಗ್ರಗಣ್ಯ ಸ್ಥಾನವನ್ನು ಪಡೆಯು ವು. ಇವುಗಳಲ್ಲಿ ಮೊದಲಿನೆರಡರ ರ ಪ್ರಾಣ ಮತ್ತು ಕೊನೆಯ ಮೂ ಮನಸ್ಸೇ ಆಧಾರ. ಬುದ್ಧ, ಯೇಸು ಡಲಾದವರ ಮತ್ತು ಯೂನಾನಿನ ರ್ಶನಿಕರ ಉಪದೇಶವಾದರೂ "ನಾವು ಸ್ತ ಮಾನವಗಣವನ್ನು ವಿಶ್ವಾಸದಿಂ ಕಾಣಬೇಕು" ಎಂಬುದೇ ಆದರೂ ಆ ಇಂದಿನವರೆಗೂ ಜನತೆಯ ದೃಷ್ಟಿ ದಿರುವುದು ಕಡಿಮೆಯಾಗಿದೆ.

ಪ್ರತಿ ಸಂದರ್ಭದಲ್ಲಿಯೂ ವಿಶ್ವಾಸವು ಉವಾಗಿರುವುದೆ? ಇದಕ್ಕೆ ಇಲ್ಲವೆಂದೇ ಗ್ರಹಿಸಬೇಕು. ಸ್ವಾರ್ಥವು ಎಲ್ಲ ದುರಾ ಗಳಿಗೂ ಮೂಲ; ಎಂತಲೇ ನಿಸ್ವಾ ಕರ್ಮವೇ ಶ್ರೇಷ್ಠವೆಂಬುದಾಗಿ ಎಲ್ಲ ಹೇಳುತ್ತಾರೆ. 'ಶ್ರೇಷ್ಠ' ಪದಕ್ಕೆ ನಾ ಮಾನವಗಣಕ್ಕೆ ಹಿತಕರ' ಎಂಬ ಅ ವನ್ನು ಕಟ್ಟುವುದಾದರೆ, ಹೆಚ್ಚಿನ ನಿ ರ್ಥ ಕಾರ್ಯಗಳನ್ನು ಕೆಟ್ಟವೆಂದೇ ಬೇಕಾಗುತ್ತದೆ. ವಸ್ತುತಃ ತ್ಯಾಗ ಆತಕ್ಕೋಸ್ಕರ ಮಾಡಲ್ಪಟ್ಟಿತು ಎಂಬ ಗೆ ದೊರೆಯುವ ಉತ್ತರವನ್ನೇ ಎಲ್ಲ ಅವಲಂಬಿಸಿ ಕೊಂಡಿದೆ.

ಸಾಮಾನ್ಯವಾಗಿ ಹೇಳುವುದಾದರೆ, ಕೆ ಗುರಿಯನ್ನಿಟ್ಟುಕೊಂಡಿರುವ ಸಮೂ ಮೇಲೆ ವಿಶ್ವಾಸವಿಡುವುದು ಒಳ್ಳೆಯ ಕಳ್ಳರು ತಮ್ಮ ನಾಯಕನ ಪ್ರಾಣ ಣೆಗಾಗಿ ಸ್ವಂತ ಪ್ರಾಣವನ್ನು ಆಪತ್ತಿ ಒಡ್ಡುವುದುಂಟು; ನಿಜವಾಗಿ ನಾ ನ ನಾಶದಿಂದಲೇ ಲೋಕ ಸುಭಿಕ್ಷ ಗುವುದಲ್ಲವೆ? ಇದೇ ರೀತಿ ಅನ್ಯಾಯ ಆಕ್ರಮಣ ಗೈದ ಸೈನಿಕ ತನ್ನ ವನ್ನೇ ಬಲಿಯಿಡಬಲ್ಲನು. ಕಳೆ ಮಹಾಯುದ್ಧಗಳಲ್ಲಿ ಜರ್ಮನ್ ಕರು ತಮ್ಮ 'ವಿಶ್ವಾಸ'ವನ್ನು ಕಡಿ ಮೆ ತೋರ್ಪಡಿಸುತ್ತಿದ್ದರೆ, ಪ್ರಪಂಚದ ಸ್ಥಿತಿ ಇದಕ್ಕಿಂತ ಒಳ್ಳೆಯದಾಗುತಿತ್ತು ಎಂದು ಹೆಚ್ಚಿನವರು ಹೇಳುತ್ತಾರೆ. ಒಂದು ಒಳ್ಳೆಯ ಇಲ್ಲವೆ ಕೆಟ್ಟ ಸಮಾಜವು ತನ್ನ ಧ್ಯೇಯಸಾಧನೆಯಲ್ಲಿ ತನ್ನ ಅಧಿಕಾಂಶ ಸದಸ್ಯರು ವಿಶ್ವಾಸಿಗಳಾಗಿರದವರೆಗೆ ಯಶಸ್ವಿಯಾಗಲಾರದು; ಯಾವುದೇ ಒಳ್ಳೆಯ ಧ್ಯೇಯದತ್ತ ಅಂಥ ವಿಶ್ವಾಸವನ್ನು ತೋರ್ಪಡಿಸುವ ಅಭ್ಯಾಸ ಬರುವ ವರೆಗೆ ಅದೂ ಕೈಗೂಡುವ ಸಂಭವವಿಲ್ಲ ಎಂದು ಹೇಳಿದರೆ, ಅತಿಶಯೋಕ್ತಿಯೆನಿಸದು. ಆದುದರಿಂದ ವಿಶ್ವಾಸವೇ ಮುಖ್ಯವೆಂದೂ ವಿಶ್ವಾಸಕ್ಕೆ ಆಧಾರವಾದ ವಸ್ತು ಗೌಣವೆಂದೂ ಅಧಿಕ ಜನರು ಅಭಿಪ್ರಾಯಿಸುತ್ತಾರೆ. ಆದರೆ, ಸರ್ವ ನೀಚ ಮತ್ತು ಭಯಂಕರ ಸಮಸ್ಯೆಗಳ ಮೂಲದಲ್ಲಿ ಇಂತಹ ಅಂಧವಿಶ್ವಾಸಗಳ ಮೇಲೆ ಪೋಣಿಸಲ್ಪಟ್ಟಿದೆ ಎಂದು ಹೇಳದೆ ಗತ್ಯಂತರವಿಲ್ಲ.

ಹಿಂದು ರಾಷ್ಟ್ರದ ಸೀಮೆಗಳನ್ನು ಅತಿಕ್ರಮಣ ಮಾಡುವತ್ತ 'ವಿಶ್ವಾಸ'ವನ್ನು ಜನತೆಯಿಂದ ಗಳಿಸುವುದು ಸಾಧ್ಯವೇ ಎಂಬುದು ಇಂದು ಅತ್ಯಂತ ಆವಶ್ಯಕವಾಗಿದೆ. ರಾಷ್ಟ್ರೀಯ ವಿಶ್ವಾಸವನ್ನು ವಿಸ್ತೃತಗೊಳಿಸಿ, ಯಾವುದೇ ರಾಷ್ಟ್ರಸಮೂಹದತ್ತ ವಿಶ್ವಾಸ ಬೆಳೆಯುವಂತೆ ಮಾಡುವುದು ಸಾಧ್ಯವೆ? ರಾಜನೀತಿ ಮತ್ತು ಮನೋವಿಜ್ಞಾನಗಳೆರಡೂ ಈ ಪ್ರಶ್ನೆಗೆ ಸಮಾಧಾನಕರವಾದ ಉತ್ತರವೀಯಲಾರವು. ವಿಶ್ವಾಸವು ಬೆಳೆಯುವಂತೆ ಮಾಡಲು ಇರುವ ಮುಖ್ಯ ಕಾರಣವೆಂಬುದನ್ನು ನಾವು ತಿಳಿಯುವುದರಿಂದ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದು ಸುಲಭವಾಗುವುದು

'ವಿಶ್ವಾಸ' ಮೊಳೆಯಲಿರುವ ಮೂಲ ಕಾರಣಗಳಲ್ಲಿ ಸಹಜ ಸ್ಫೂರ್ತಿಯೂ ಒಂದಾಗಿದೆ ತನ್ನ ಸಮಾಜದವರಲ್ಲಿ ದ್ವೇಷ ಮತ್ತು ಅನ್ಯರಲ್ಲಿ ಪ್ರೇಮ ತೋರಿಸುವುದಕ್ಕೆ ವಿಶೇಷ ಕಾರಣವೇನೂ ಇರುವುದಿಲ್ಲವಾದರೂ, ಮಾನವನು ತನ್ನ ಸಮಾಜದವನನ್ನೆಲ್ಲಾ ಪ್ರೀತಿಸುತ್ತಾನೆ ಮತ್ತು ಅನ್ಯರನ್ನು ತನ್ನ ಶತ್ರುವೆಂದು ತಿಳಿಯುತ್ತಾನೆ ಇದು ತೀರ ಸ್ವಾಭಾವಿಕವೇ ಆಗಿದೆ.

ಕಾಡು ಮನುಷ್ಯರು ಚಿಕ್ಕ ಸಂಗಡಗಳಾಗಿ ವಾಸಿಸುವುದರಿಂದ, ಅದರ ಸದಸ್ಯರೆಲ್ಲರ ಪರಿಚಯವು ಪ್ರತಿಯೊಬ್ಬನಿಗೂ ಇರುತ್ತದೆ. ಈ ಪರಿಚಯವೇ ಅವರಲ್ಲಿ ವಿಶ್ವಾಸ, ಮಿತ್ರತೆ ಬೆಳೆಯಲು ಹೇತುವಾಗಿದೆ. ಇಂದಿನ ವಿಶಾಲ ರಾಷ್ಟ್ರಗಳಲ್ಲಿ ಈ ಪರಿಚಯ ತತ್ವ ಪ್ರತ್ಯಕ್ಷರೂಪದಲ್ಲಿ ತೋರಿಬಾರದಿರುವುದಾದರೂ ಮೈತ್ರಿಯ ಮೂಲಾಧಾರ ಅದೇ ಆಗಿದೆ. ಒಂದು ರಾಷ್ಟ್ರದ ನಾಗರಿಕನು ಭಾಷೆ, ಭೋಜನ, ವೇಷ ಭೂಷಣ, ವ್ಯವಹಾರ ಮೊದಲಾದವುಗಳಲ್ಲಿ ಸಾಕಷ್ಟು ಸಮತೆಯಿರಬಹುದಾದ ಇನ್ನೊಂದು ರಾಷ್ಟ್ರದ ನಾಗರಿಕರಲ್ಲಿ ಮಿತ್ರಭಾವ ತೋರಿಸಬಹುದಾದರೂ ಸಾಮಾನ್ಯತಃ ಪರಸ್ಪರ ಶತ್ರುಭಾವದಿಂದಲೇ ಆತನನ್ನು ಕಾಣುತ್ತಾನೆ. ವಿದೇಶಗಳಿಂದ ಎಂದಾದರೂ ಯಾವ ಪ್ರಕಾರದಲ್ಲಾದರೂ ಅಪಾಯಸಂಭವಿಸಬಹುದು; ಅಂತಹ ಗಂಡಾಂತರ ತಲೆದೋರಿದಾಗ, ಇಡಿ ದೇಶದ ಜನತೆ ತಮ್ಮನ್ನು ಒಂದೆಂದು ಭಾವಿಸುತ್ತದೆ. ಅಪಾಯದೊಡನೆಯೇ ರಾಷ್ಟ್ರಪ್ರೇಮದ ಭಾವವು ಇರುತ್ತದೆ. ತನ್ನ ಜೀವವನ್ನು ಜೋಕಾಲಿಯ ಮೇಲಿಟ್ಟು ಮೋಟಾರಿನೆದುರಿರುವ ಕೋಳಿ ರಸ್ತೆ ದಾಟಲು ಓಡುತ್ತದೆ; ಏಕೆಂದರೆ, ಅದು ತನ್ನ ಗೂಡಿನಲ್ಲಿ ಹೆಚ್ಚಿನ ಭದ್ರತೆಯಿದೆಯೆಂದು ತಿಳಿದಿದೆ ಮಾನವನಾದರೂ ಮನೆಯೊಳಗೆ ಅಧಿಕ ಭದ್ರತೆಯಿಂದಿರುವೆನೆಂದು ಭಾವಿಸುತ್ತಾನೆ. ಹಾಗೆಯೇ ದೇಶದ ಜನರಲ್ಲಿಯೂ ತಾವೆಲ್ಲರೂ ಒಂದೇ ಮನೆಯವರು ಎಂಬ ಭಾವವು ಇರುತ್ತದೆ. ಆದುದರಿಂದ ಅಪಾಯಕಾರಿ ಸಂದರ್ಭಗಳಲ್ಲಿ ಎಲ್ಲ ದೇಶವಾಸಿಗಳಲ್ಲಿಯೂ ಅನ್ಯೋನ್ಯತೆಯು ಅಧಿಕವಾಗಿರುತ್ತದೆ.

ಸಹಜ ಸ್ಫೂರ್ತಿಯನ್ನು ಬಿಟ್ಟು ವಿಶ್ವಾಸ ಬೆಳೆಯಲು ಇರುವ ಕಾರಣಗಳೆಲ್ಲವೂ ಬೌದ್ಧಿಕವಾದುವುಗಳು. ಇವುಗಳಲ್ಲಿ ಸಮಾನ ಧ್ಯೇಯ ಮತ್ತು ಸಮಾನ ನಂಬುಗೆಗಳು ಮುಖ್ಯವಾಗಿವೆ. ಕಳ್ಳರ ಗುಂಪು, ಆಕ್ರಮಣಕಾರಿ ಸೇನೆಗಳು, ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವ ಕಂಪೆನಿಗಳು ಸಮಾನ ಧ್ಯೇಯವುಳ್ಳ ಸಮೂಹಗಳಾಗುತ್ತವೆ. ಅಂತೆಯೇ ರಾಜಕೀಯ ಪಕ್ಷ ಮತ್ತು ಧಾರ್ಮಿಕ ಸಂಪ್ರದಾಯಗಳು ಸಮಾನ ನಂಬುಗೆಯನ್ನಿಟ್ಟ ಸಮೂಹಗಳಲ್ಲಿ ಸೇರುತ್ತವೆ. ಆದರೆ, ಸಹಜ ಸ್ಫೂರ್ತಿಜನ್ಯ ಸಹಾಯತೆ ಅಥವಾ ಸ್ಪಷ್ಟ ಹಾಗೂ ಪ್ರಬಲ ಸ್ವಹಿತ ಭಾವನೆಯಿಲ್ಲವಾದರೆ, ಸಂಕಟಕಾಲದಲ್ಲಿ ಈ ಪ್ರಕಾರದ ವಿಶ್ವಾಸ ದೃಢವಾಗಿರುವುದಿಲ್ಲ. ರಾಷ್ಟ್ರದಲ್ಲಿ ವಿಶ್ವಾಸವಿಡುವಂತೆಸಗುವ ಕಾರ್ಯದಲ್ಲಿ ಎಡತಾಕುವ ಅಡಚಣೆಯಲ್ಲಿ ಇದೇ ಪ್ರಧಾನವಾದುದು. ಇಂತಹ ವಿಶ್ವಾಸದ ಸಹಜ ಸ್ಫೂರ್ತಿಯ ಅಂಶವು ರಾಷ್ಟ್ರದ ಬಗ್ಗೆ ಮಾತ್ರವಿರುವುದು; ತರ್ಕ ಮತ್ತು ಯುಕ್ತಿಯನ್ನು ಆಶ್ರಯಿಸಿರುವ ಇನ್ನೊಂದಂಶವು ಅದರ ಆವಶ್ಯಕತೆಯಿರುವಾಗ, ಜಾರಿಬಿಡುತ್ತದೆ.

ರಾಷ್ಟ್ರದ ಮೇಲಿರುವ ವಿಶ್ವಾಸದ ಪ್ರಶ್ನೆಯಿಂದ ಹಲವಾರು ರಾಷ್ಟ್ರ ಸಂಗಡಗಳಾಗುವುದು ಸಾಧ್ಯ. ಈ ರಾಷ್ಟ್ರ ಸಂಗಡವು ಸಾರ್ವದೇಶಿಕವಾಗಲೂ ಬಹುದು ಇಲ್ಲವೇ ಕೆಲವೇ ರಾಷ್ಟ್ರಗಳ ಬಗ್ಗೆ ಸೀಮಿತವಾಗಿಯೂ ಇರಬಹುದು. 'ನಾಟೊ' ರಾಷ್ಟ್ರಗಳು ರಶ್ಯ ಅಥವಾ ಸಾಮ್ಯವಾದದ ಬೆದರಿಕೆಯಿಂದ ಮಾತ್ರ ಜನಿಸಬಹುದು; ಈ ರಾಜಕೀಯ ಸಮಾನತೆ ನಾಟೋ ರಾಷ್ಟ್ರಗಳಲ್ಲಿ ಮೈತ್ರಿಯನ್ನು ಬೆಳೆಸಬಹುದು. ಬಾಹ್ಯಶತ್ರುಗಳ ಭಯವು ಸಾಮಾಜಿಕ ಐಕ್ಯದ ಪ್ರವಾಹ ಹರಿಯುವಂತೆ ಸಗುತ್ತದೆ ಏನಾದರೂ ಅಪಾಯ ಹೊರಗಣಿಂದ ಬಂದೊಡನೆಯೇ ಈ ಐಕ್ಯ ಭಾವನೆಯು ಪ್ರಬಲ ಪ್ರಚಾರ ಬಲದಿಂದ ಹರಡುತ್ತದೆ; ಆದರೆ, ಈ ವಿಧಾನದಿಂದ ಸಮಸ್ತ ಮಾನವ ವರ್ಗ ಅಥವಾ ವಿಶ್ವರಾಜ್ಯದಲ್ಲಿ ವಿಶ್ವಾಸ ಭಾವನೆಯನ್ನು ಉಂಟುಮಾಡುವುದು ಅಷ್ಟು ಸುಲಭದ ಕೆಲಸವಲ್ಲ.

ತನ್ನ ಇತರ ಅನುಯಾಯಿಗಳೊಡನೆ ಸಾಮ್ಯವಾದಿಗಳು ಒಂದುತರದ ಅಂತಾರಾಷ್ಟ್ರೀಯ ವಿಶ್ವಾಸವು ಹುಟ್ಟುವಂತೆ ಮಾಡುವುದರಲ್ಲಿ ಬಹಳ ಅಂಶ ಸಫಲರಾಗಿದ್ದಾರೆ. ಮಾನ್ಯತೆಯಲ್ಲಿ ಸಂಪೂರ್ಣ ಸಮಾನತೆ, ಸಾಮ್ಯವಾದ್ಯೇತರರಲ್ಲಿ ದ್ವೇಷ ಮತ್ತು ಭಯಗಳ ಭಾವನೆಯನ್ನು ಹುಟ್ಟಿಸುವುದು, ಇಡಿ ಇತಿಹಾಸವನ್ನು ಹೊಸತಾಗಿ ರಚಿಸುವುದು ಮತ್ತು, ತಮ್ಮ ಕೈಯಲ್ಲಿ ಅಡಳಿತವಿರುವಲ್ಲೆಲ್ಲ ಶಿಕ್ಷಣ ಮತ್ತು ಪತ್ರಿಕೆಗಳ ಮೂಲಕ ಪ್ರಚಾರನಡೆಸುವ ನಾಲ್ಕು ವಿಧಾನಗಳಿಂದ ಇವರು ಯಶಸ್ವಿಯಾಗಿದ್ದಾರೆ. ಈ ಉಪಾಯಗಳು ವಿಶ್ವೈಕ್ಯ ಭಾವನೆಯನ್ನುಂಟುಮಾಡಲಾರವು. ಇಡಿ ಪ್ರಪಂಚವೇ ಸಾಮ್ಯವಾದಿಯಾದರೆ, ಆಗಿನ ಮಾತು ಬೇರೆ. ಆದುದರಿಂದ ವಿಶ್ವರಾಜ್ಯದಲ್ಲಿ ವಿಶ್ವಾಸವನ್ನು ಹುಟ್ಟಿಸಬೇಕಾದರೆ, ನಾವು ಬೇರೆಯೇ ದಾರಿಯನ್ನು ನೋಡಬೇಕಾಗುತ್ತದೆ.

(೧೦ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ಕಲಾಕ್ಷೇತ್ರ

ನಾಟಕಗಳು ಸತ್ವಶಾಲಿಯಾಗಬೇಕು

ಇಂದು ಅಧಃಪತನ ಹೊಂದುವ ನಾಟಕ ಕಲೆಯು ಅಭಿವೃದ್ಧವಾಗಬೇಕಾದರೆ, ನಾಟಕ ಕೃತಿಗಳು ಮನೋರಂಜನೆಗಿಂತ ಹೆಚ್ಚಾಗಿ ಸತ್ವಶಾಲಿತನಕ್ಕೆ ಪ್ರಾಧಾನ್ಯ ನೀಡಬೇಕು.

ನಾಟಕ ಮತ್ತು ಸಮಾಜವು ಒಂದನ್ನೊಂದು ಹೋಲುವಂತವುಗಳು. ನಾಟಕವು ಸಮಾಜದ ಮುಂದೆ ಬರುವುದಕ್ಕಿಂತ ಮುಂಚೆ, ಅಂದರೆ ಸಮಾಜದ ಜನರಿಗೆ ನಾಟಕದ ಪರಿಚಯವಿಲ್ಲದಿದ್ದ ಸಮಯದಲ್ಲಿ ನಾಟಕವು "ನಾಟಕ"ವೆಂದು ಕರೆಯಲ್ಪಡುತ್ತಿರಲಿಲ್ಲ. ಸಾಹಿತ್ಯದ ಮತ್ತೊಂದು ಅಂಗವು ಸಮಾಜದಲ್ಲಿ ಈ ರೂಪದಿಂದ ಅವಲಂಬಿತವಾಗಿರಲಿಲ್ಲ. ಕಾದಂಬರಿ ಕತೆ, ಕವಿತೆ, ಮುಂತಾದ ಸಾಹಿತ್ಯಗಳು ಸಮಾಜಕ್ಕೆ ಪರಿಚಿತವಾಗಿರಲಿಲ್ಲ. ಕಾದಂಬರಿ, ಕವಿತೆ ಮೊದಲಾದುವುಗಳು ಹರಿದಾಸರಿಂದ ಸಮಾಜಕ್ಕೆ ತಿಳಿಸಲ್ಪಡುತ್ತಿದ್ದುವು. ಕಾದಂಬರಿ ಕವಿತೆಗಳು ಶ್ರವ್ಯವಾಗಿವೆ. ನಾಟಕವು ದೃಶ್ಯವಾಗಿದೆ. ಅದರ ಪರಿಣಾಮವು ಕಣ್ಣು ಮತ್ತು ಕಿವಿಗಳ ಮುಖಾಂತರ ಮಾನವರ ಮನಸ್ಸಿಗಾಗುತ್ತದೆ. ನಾಟಕಕಾರರಿಗೆ ಸಮಾಜದ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡುತ್ತ ತನ್ನನ್ನು ತಾನೇ ಮರೆಯಬೇಕಾಗುವ ಪ್ರಸಂಗವೂ ಬರುವುದುಂಟು. ಇದು ಪ್ರತಿಯೊಬ್ಬ ನಾಟಕಕಾರರಿಗೂ ಮೊದಲಿನಿಂದಲೂ ತಿಳಿದಿರುವ ವಿಷಯವಾಗಿದೆ.

ನಾಟಕ ಕಲೆಯ ಅಭಿವೃದ್ಧಿಯು, ಇತಿಹಾಸವು ಮುಂದುವರಿಯುತ್ತಿದ್ದಂತೆ ಆಗುತ್ತಾ ಬಂದಿತ್ತು. ಬಹಳ ಹಿಂದಿನ ಕಾಲದಲ್ಲಿ ನಮ್ಮ ಸಮಾಜದ ಕ್ರಮವು ಭಿನ್ನಭಿನ್ನವಾಗಿತ್ತು. ಕ್ರಮ ಪ್ರಕಾರವಾಗಿತ್ತು. ಆಚಾರ ವಿಚಾರಗಳು ರೂಢಿಯಲ್ಲಿದ್ದುವು. ಆದರೆ ಅಂದಿನ ಸಮಾಜದ ಜನರಿಗೆ ತಮ್ಮ ಪದ್ಧತಿಗಳನ್ನು ಹೊರಗಿನವರಿಗೆ ಪ್ರಚಾರ ಮಾಡುವ ಕ್ರಮವು ಗೊತ್ತಿರಲಿಲ್ಲ. ಸಮಾಜದ ಅಕ್ರಮಗಳನ್ನು ಖಂಡಿಸಲು ತಿಳಿದಿರಲಿಲ್ಲ. ಯಾವ ಹೊಸ ವಿಚಾರವನ್ನು ತಿಳಿಯಬೇಕಾದರೂ ಅದನ್ನು ಜನರ ಮುಂದೆ ಇಡಲೇಬೇಕು. ಈ ಒಂದು ಪದ್ಧತಿಯು ಅಪೂರ್ವವೂ, ಆಶ್ಚರ್ಯಜನಕವೂ ಆಗಿದೆ. ಸಮಾಜದ ಧುರೀಣರು ಈ ತರದ ದುರ್ಗುಣಗಳನ್ನು ಹೊಗಲಾಡಿಸಲು ಪ್ರಯತ್ನಿಸಿದರು. ಅದಕ್ಕಾಗಿ ದುಡಿದರು. ಅವರ ದುಡಿಮೆಯ ಫಲದಿಂದಾಗಿ ಕತೆಗಳು ಬರೆಯಲ್ಪಟ್ಟವು. ಗ್ರಂಥಗಳ ರಚನೆಯಾಯಿತು, ರಂಗಮಂಟಪಗಳು ಕಟ್ಟಲ್ಪಡತೊಡಗಿದುವು. ನಟರ ತರಬೇತಿಯಾಗತೊಡಗಿತು. ನಾಟಕಗಳು ಆಡಲ್ಪಡತೊಡಗಿದವು. ಮೊತ್ತಮೊದಲನೆಯ ನಾಟಕವನ್ನು ನೋಡಿದ ಜನರಿಗೆ 'ನಾಟಕ'ವೆನ್ನುವುದು ಸಾಹಿತ್ಯದ ಒಂದು ಪ್ರಭಾವಶಾಲಿ ಅಂಗವೆಂಬ ಅರಿವಾಯ್ತು.

ಪ್ರಾಚೀನ ಭಾರತದಲ್ಲಿ ಧಾರ್ಮಿಕ ಸಭೆ, ಸಾಂಸ್ಕೃತಿಕ ಸಮ್ಮೇಳನ ಮೊದಲಾದುವುಗಳು ಜರಗುವಾಗ ನಾಟಕದ ಕಾರ್ಯಕ್ರಮವಿದ್ದಿರುತ್ತಿತ್ತು, "ರಾಮಲೀಲೆ" "ಕೃಷ್ಣಲೀಲೆ" "ಭೀಷ್ಮವಿಜಯ" ಮೊದಲಾದ ಪೌರಾಣಿಕ ನಾಟಕಗಳು ಅಂದು ಆಡಲ್ಪಡುತ್ತಿದ್ದುವು. ಆದರೆ ಇಪ್ಪತ್ತನೆಯ ಶತಮಾನವು ಬರುವುದಕ್ಕಿಂತ ಸ್ವಲ್ಪ ಮುಂಚಿನಿಂದ ಸಮಾಜದ ಸಾಮಾಜಿಕ ಜೀವನದ ವಿಷಯದಲ್ಲಿ ನಾಟಕಗಳು ಬರೆಯಲ್ಪಡತೊಡಗಿದುವು.

ಈ ಮಧ್ಯೆ ಕೆಲಸಮಯದ ವರೆಗೆ ನಾಟಕಗಳು ಕೇವಲ ಸ್ತ್ರೀಯರ ಶ್ರಮದ ವಿಷಯದಲ್ಲಿ ಬರೆಯಲ್ಪಟ್ಟುವು. ಹಿಂದಿನ "ರಾಮಲೀಲ" ಮೊದಲಾದ ಪೌರಾಣಿಕ ನಾಟಕಗಳು ಸಾಧಾರಣ ಜನರ ಸಮುದಾಯವಿರುವಲ್ಲಿ ಆಡಲ್ಪಟ್ಟು, ಸಮಾಜದ ವಿಚಾರವಂತ ಜನರಿಗೆ ಅವು ಒಂದು ಸಾಹಿತ್ಯದ ಕೃತಿಗಳಾಗಿ ಉಳಿದುವು. ಇದರಿಂದ ಪೌರಾಣಿಕ ನಾಟಕಗಳು ರಂಗಭೂಮಿಯ ಮುಂದೆ ಬರದೇ ಅವುಗಳ ಹೇಳಹೆಸರಿಲ್ಲದಂತಾಯ್ತು. ಜನರಿಗೆ ನೀತಿಪಾಠವಾದ ಕತೆಯಿಂದ ಕೂಡಿದ ಆ ನಾಟಕಗಳು ಹಿಡಿಸದಾದುವು. ಅವರಮನಸ್ಸು ಸಮಾಜದ ಸ್ತ್ರೀಯರ ಶ್ರಮದತ್ತ, ಅಧಿಕಾರದತ್ತ ಹೊರಟಿತು. ವಿದ್ಯಾವಂತರ ದೃಷ್ಟಿ ಅವುಗಳ ಕಡೆ ಹೊರಳದಾಯ್ತು. ಇದರಿಂದ ನಾಟಕ ಕಲೆಯ ಅವಸಾನವಾಗುವಂತಾಯ್ತು. ಆದರೆ ಮಧ್ಯಕಾಲದಲ್ಲಿ ಶೇಕ್ಸ್‌ಪಿಯರ್‌ನೆಂಬ ಪ್ರಸಿದ್ಧ ನಾಟಕಕಾರನಿಂದ ಪುನಃ ನಾಟಕ ಕಲೆಯು ಚೇತರಿಸಿಕೊಳ್ಳಲಾರಂಭಿಸಿತು. ಅಂದಿನಿಂದ ನಾಟಕ-ಸಾಹಿತ್ಯವು ಶ್ರೇಷ್ಠ ಭಾವನೆಗಳ ರಕ್ಷಣೆ ಮಾಡುತ್ತ ಸಾಮಾನ್ಯ ಜನರಿಂದ ಆಕರ್ಷಿಸ ತೊಡಗಿತು. ಆದರೆ ಇಲ್ಲಿಯ ವರೆಗೆ ನಾಟಕ ಕಲೆಯು ಸಾಮಾನ್ಯ ಜನರ ನಿಕಟವರ್ತಿಯಾಗಿದ್ದಿತು. ನಾಟಕವೆನ್ನುವುದು ಒಂದು ಸಾಮಾನ್ಯ ವಸ್ತುವಾಯ್ತು ಜನರಿಗೆ. ಅದಕ್ಕೆ ಕಾರಣವೇ ಸಿನೇಮಾ. ಸಿನೇಮಾವು ನಾಟಕ ರೂಪದಿಂದ ಸಮಾಜದ ಲಕ್ಷಾಂತರ ಜನರ ಮೇಲೆ ಪ್ರಭಾವ ಬೀರಿತು. ಸಮಾಜವನ್ನು ಉದ್ಧರಿಸುವ, ಅದನ್ನು ರಚಿಸುವ, ನಾಶಪಡಿಸುವ ಶಕ್ತಿಯನ್ನೂ ಸಿನೇಮಾವು ಪಡೆಯಿತು.

ನಾಟಕವು ನಮಗೆ ಇತಿಹಾಸವನ್ನು ವಿವರಿಸುತ್ತದೆ. ಅಲ್ಲದೆ ಅದು ಮೂರು ವಿಧದಿಂದ ಜನತೆಯ ಮನಸಂತೋಷಪಡಿಸುತ್ತದೆ. ಮೊದಲನೆಯದಾಗಿ ಮನೋರಂಜನೆಯಿಂದ. ಇಂದಿನ ಜನರು ಕೇವಲ ಮನೋರಂಜನೆಗಾಗಿಯೇ ನಾಟಕವನ್ನು ನೋಡುತ್ತಾರೆ. ನಾಟಕದ ಇತರ ಕಥಾವಸ್ತುವಿನ ಭಾಗವು ಅವರಿಗೆ ತಿರಸ್ಕರಣೀಯ. ಇದನ್ನು ನೋಡಿದ ನಾಟಕ ರಚನಾಕಾರರು "ಮನೋರಂಜನೆಯ ಜತೆಗೆ ಬೇರೆ ವಿಚಾರಗಳನ್ನು ಸೇರಿಸಬಹುದು" ಎಂದು ಯೋಚಿಸಿ ಮನೋರಂಜನೆಯ ಜತೆಗೆ ಇನ್ನಿತರ ವಿಷಯಗಳನ್ನೂ ನಾಟಕಗಳಲ್ಲಿ ಸೇರಿಸಿದರು. ಆಗ ಮನೋರಂಜನೆಯ ಜತೆಗೆ ಮತ್ತೊಂದು ವಿಧದ ನಾಟಕವು ಸಮಾಜದಲ್ಲಿ ಬಳಕೆಗೆ ಬಂದಿತು. ಈ ತರದ ನಾಟಕಗಳು ಧರ್ಮ, ನೀತಿ ಮತ್ತು ಅವುಗಳ ಆದರ್ಶಗಳ ಕುರಿತು ಸಮಾಜಕ್ಕೆ ಜ್ಞಾನವನ್ನುಂಟು ಮಾಡತಕ್ಕವುಗಳು. ಹಿಂದಿನ ಪುರಾಣ ಕಾಲದ ರಾಜರ ಜನತೆಯ, ಸಮಾಜದ ಧರ್ಮ, ರೀತಿ, ನೀತಿಗಳನ್ನು ಆಧಾರವಾಗಿರಿಸಿಕೊಂಡು ನಾಟಕಗಳ ರಚನೆಯಾಯಿತು. ಈಗ ಮೂರನೆ ವಿಧದ ನಾಟಕಕ್ಕೆ ಪ್ರಾರಂಭವಾಗಿದೆ. ಇಬ್ಸನ್, ಬರ್ನಾರ್ಡ್‌ಶಾ ಮೊದಲಾದ ವಿಖ್ಯಾತ ನಾಟಕಕಾರರು "ಸಮಾಜಕ್ಕೆ ವಿರುದ್ಧ"ವಾದ ಕಥಾವಸ್ತುಗಳನ್ನೊಳಗೊಂಡ ನಾಟಕಗಳನ್ನು ರಚಿಸಿ, ಸಮಾಜ ಮತ್ತು ನಾಟಕಗಳೊಳಗೆ ಒಂದು ಕಲಹವನ್ನೇ ಏರ್ಪಡಿಸಿ, ಸಮಾಜ ಮತ್ತು ನಾಟಕಗಳೆಂದರೆ ಒಂದೇ ಎಂಬ ಭಾವನೆಯನ್ನು ಮುರಿದರು. ಇದರಿಂದ ಒಂದು ವೈವಿಧ್ಯವೇ ಉಂಟಾಯ್ತು. ಆದರೆ ಇಂದಿನ ನಾಟಕಕಾರರಿಂದ ಸಮಾಜವನ್ನು ಉದ್ಧರಿಸುವ ಕಥಾವಸ್ತುಗಳನ್ನೊಳಗೊಂಡ ನಾಟಕಗಳ ರಚನೆಯಾಗಿ ಸಮಾಜ ಸುಧಾರಣೆಗೆ ಪ್ರಯತ್ನಗಳಾಗುತ್ತಿವೆ. ಅಂದರೆ ಇಂದಿನ ನಾಟಕಗಳು ಬುದ್ಧಿಪ್ರಧಾನವಾಗಿದ್ದು ವ್ಯಂಗ್ಯಾತ್ಮಕವಾಗಿವೆ. ಸಮಾಜದ ವಸ್ತುಸ್ಥಿತಿಯನ್ನು ಅಸ್ವೀಕರಿಸಿ, ಅದರ ಮರ್ಮದ ಮೇಲೆ ಕೊಡಲಿಯೇಟನ್ನು ಹಾಕುವ ಪ್ರಯತ್ನ ಇಂದಿನ ನಾಟಕಗಳ ಉದ್ದೇಶವಾಗಿದೆ. ಇದೂ ಅಲ್ಲದೆ ಇಂದು ನಾಟಕಗಳು ಸಮಾಜಕ್ಕಿಂತಲೂ ಮುಂದುವರಿದುದಾಗಿವೆ. ಅದರ ಕಥಾವಸ್ತುಗಳ ಬದಲಾವಣೆಯಾಗಿದೆ. ರೀತಿ ನೀತಿ ಕ್ರಮಗಳು ಹಿಂದಿನದವಕ್ಕೆ ವಿರುದ್ಧವಾಗಿದೆ.



ಅಮೆರಿಕೆಯ ಹೀನ್ಸ್ ಫೌಂಡೇಶನ್‌ನವರು ನ್ಯೂಯಾರ್ಕಿನಲ್ಲಿ ಕಟ್ಟಿಸಿದ ವಸ್ತು ಸಂಗ್ರಹಾಲಯದ ಬಾಹ್ಯ ದೃಶ್ಯ.

ಇಂದಿನ ನಾಟಕಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ, ಸಾರ್ವಭೌಮಿಕ ಮುಂತಾದ ಸಮಸ್ಯೆಗಳನ್ನು ತೋರಿಸುವ ಕಥಾವಸ್ತುಗಳಿಂದ ಕೂಡಿದವುಗಳಾಗಿವೆ. ಇದರಿಂದ ಇಂದಿನ ನಾಟಕವೆನ್ನುವುದು "ಸಮಾಜದಲ್ಲಿ ಕ್ರಾಂತಿಯನ್ನೆಬ್ಬಿಸುವ' ಒಂದು ಆಯುಧವಾಗಿವೆ. ಇಂದಿನ ನಾಟಕಕಾರರು ಸಮಾಜದ ವಿರೋಧಿಗಳು, ಕ್ರಾಂತಿಯನ್ನೆಬ್ಬಿಸಿ ಸಮಾಜವನ್ನು ನಾಶಪಡಿಸುವ ವಿದ್ರೋಹಿಗಳು, ಮತ್ತು ಕ್ರಾಂತಿಗಳನ್ನು ಸೃಷ್ಟಿಸುವ ಸಮಾಜದ್ರೋಹಿಗಳು. ಅಂತಹ ನಾಟಕಕಾರರಿಂದಲೇ ಇಂದು ಸಮಾಜವು ಅಸ್ತವ್ಯಸ್ತವಾಗತೊಡಗಿದೆ. ಅನೀತಿಯಿಂದ ನಡೆಯತೊಡಗಿದೆ. ಅಕ್ರಮಗಳನ್ನು ಆಚರಿಸುತ್ತಲಿವೆ. ಆದರೆ ಸಮಾಜವನ್ನು ಉದ್ಧರಿಸುವ, ಹೊಸ ಸಮಾಜವನ್ನು ಸೃಷ್ಟಿಸುವ ಶಕ್ತಿ ಇಂದಿನ ನಾಟಕಕಾರರಿಗಿದೆ. ಹಿಂದಿನ ನಾಟಕಗಳು ಹೇಗೆ ಧರ್ಮ, ನೀತಿ, ಆಚಾರಗಳಿಂದ ಕೂಡಿ ಸಮಾಜವನ್ನು ಉದ್ಧರಿಸುವ ಸಾಧನವಾಗಿತ್ತೋ, ಹಾಗೆಯೇ ಇಂದಿನ ನಾಟಕಗಳು ಸಮಾಜದಲ್ಲಿ ಹೊಸ ಭಾವನೆ, ರೀತಿ, ನೀತಿ ಆಚಾರಗಳನ್ನು ಸೃಷ್ಟಿಸಿ ಅದನ್ನು ನಾಶ

(೮ನೇ ಪುಟ ನೋಡಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ವಿಚಿತ್ರ ಸತ್ಯ

ಮೆಕ್ಸಿಕೋವಿನ ನರಬಲಿ ಪದ್ಧತಿ

ಸೆರೆಯಾಳನ್ನು ಅಲಂಕರಿಸಿ ದೇವತೆಗೆ ಬಲಿಯೀಯುವುದು, ಮಳೆರಾಯನನ್ನು ಒಲಿಸಲು ಬಾಲಬಲಿ ಕೊಡುವುದು—ಇವು ಮೆಕ್ಸಿಕೋವಿನ ಅನರ್ಥ ಪದ್ಧತಿಗಳಾಗಿದ್ದುವು.

ಉತ್ತರ ಅಮೇರಿಕೆಯಲ್ಲಿ ಮೆಕ್ಸಿಕೋ ದೇಶವಿದೆ. ಇಲ್ಲಿ ಕೆಲವೊಂದು ಚಿತ್ರ ವಿಚಿತ್ರವಾದ ಆಚರಣೆಗಳು ನಡೆದಿದ್ದುವು. ಅವುಗಳು ಈಗೀಗ ಕಡಿಮೆಯಾಗುತ್ತ ಬಂದಿವೆ. ಇಲ್ಲವೇ ಇಲ್ಲ ಎಂದು ಹೇಳಬಹುದು. ಅಲ್ಲಿ "ತಾಯೆಸ್ಕಟಲೀಕೋಪಾ" ಎಂಬ ಹೆಸರಿನ ದೇವತೆಯೊಂದಿತ್ತು. ಈ ದೇವತೆಯ ಹೆಸರಿನ ಅರ್ಥ "ಪ್ರಪಂಚದ ಆತ್ಮ" ಎಂದಾಗುವುದು. ಈ ದೇವತೆಯನ್ನು ಪೂಜಿಸಬೇಕಾದರೆ, ಬಲಿದಾನವನ್ನು ಅವಶ್ಯ ಸಲ್ಲಿಸಬೇಕಾಗುತಿತ್ತು. ಇತಿಹಾಸವನ್ನು ಅವಲೋಕಿಸುವಾಗ, ಪ್ರಾಣಬಲಿಯು ಮೆಕ್ಸಿಕೋ ದೇಶದಲ್ಲಿ ಪ್ರಾರಂಭ ಮತ್ತು ಮಧ್ಯಕಾಲದಲ್ಲಿ ಪ್ರಚಾರದಲ್ಲಿರಲಿಲ್ಲವೆಂದು ಗೊತ್ತಾಗುವುದು. ಆದರೆ, ೧೬ನೆಯ ಶತಮಾನದಲ್ಲಿ ಯುರೋಪಿನ ಸ್ಪೈನ್ ದೇಶಸ್ಥರು ಇಲ್ಲಿಗೆ ಬಂದು ನೆಲಸಿ, ತಮ್ಮ ಅಧಿಕಾರವನ್ನು ಜಮಾಯಿಸತೊಡಗಿದ ನಂತರ, ಪ್ರಾಣಬಲಿಯಿಲ್ಲದೆ ಯಾವುದೇ ಪೂಜೆ-ಪುರಸ್ಕಾರಗಳು ನಡೆಯುವುದಿಲ್ಲ ಎಂಬಷ್ಟು ಸ್ಥಿತಿಗೆ ಬಂದು ಮುಟ್ಟಿತು.

ಯುದ್ಧದ ಸಮಯದಲ್ಲಿ ಸೆರೆಯಾಳಾದ ಹಲವರಲ್ಲಿ ಸುಂದರ ಯುವಕನೊಬ್ಬನನ್ನು ಆರಿಸಿ, ಅವನನ್ನು 'ತಾಯೆಸ್ಕಟಲೀಕೋಪಾ'ಅವತಾರವೆಂಬುದು ನಂಬುತಿದ್ದರು. ಸ್ವಯಂ ದೇವತೆಯೇ ತಮ್ಮೆಡೆಗೆ ಬಂದಿರುವಂತೆ ಗೌರವಭಾವನೆಯಿಂದ ಭಕ್ತಿ ಪ್ರದರ್ಶಿಸುತಿದ್ದರು. ಈತನ ಬಳಿ ಹಲವರು ಪುರೋಹಿತರೂ ಇರುತಿದ್ದರು, ಪ್ರತಿದಿನವೂ ಹೂಮಾಲೆಗಳಿಂದ ಆತನನ್ನು ಸಿಂಗರಿಸುತಿದ್ದರು. ಆತನು ತಿರುಗಾಟಕ್ಕೆ ತೆರಳುವ ವೇಳೆ ಹಲವು ಸೈನಿಕರು ಸುತ್ತುವರಿಯುತಿದ್ದರು. ನಾಲ್ಕು ಸುಂದರ ಯುವತಿಯರಾದ ಕನ್ಯೆಯರನ್ನು ಆತನ ಸೇವೆಗಾಗಿ ಮೀಸಲಿಡುತಿದ್ದರು. ಈ ಕನ್ಯೆಯರನ್ನು ಜನರು 'ದೇವಿ'ಯರಂತೆ ಕಾಣುತಿದ್ದರು. ನಡೆಯುತಿದ್ದಂತೆಯೇ ಸಂದರ್ಭವಶದಿಂದ ಆತ ಹಾಡುವುದಕ್ಕೆ ತೊಡಗಿ ಸ್ತಬ್ಧನಾದನೆಂದರೆ, ಆಸುಪಾಸಿನ ಸಾವಿರಾರು ಸ್ತ್ರೀ ಪುರುಷರು ನಾಗಾಲೋಟದಿಂದ ಧಾವಿಸಿ, ಆತನ ಪಾದಧೂಳಿಯನ್ನು ಎತ್ತಿ ಹಣೆಗೆ ಹಚ್ಚಿಕೊಂಡು ತಮ್ಮ ಜೀವನ ಸಾರ್ಥಕವಾಯಿತು ಎಂದು ತೃಪ್ತಿಪಡುತಿದ್ದರು. ಇಂತಹ ಸುಂದರ ಯುವಕನು ಸೆರೆಯಲ್ಲಿರುವಂತೆ ಆತನಿಗೆ ಭಾಸವಾಗಬಹುದಾದರೂ ಜನತೆಯು ಆತನನ್ನು ಭಕ್ತಿಪುರಸ್ಸರವಾಗಿ ನೋಡುತಿದ್ದರು. ಅಲ್ಲದೆ, ಆತನು ಸ್ವೇಚ್ಛೆಯಿಂದ ಏನನ್ನೂ ಮಾಡಬಹುದಿತ್ತು; ಎಲ್ಲಿಗೂ ಹೋಗಬಹುದಿತ್ತು; ಆತನನ್ನು ತಡೆಗಟ್ಟುವವರೂ ಯಾರೂ ಇರಲಿಲ್ಲ ಎಂಬಂತಿತ್ತು.

ಆದರೆ, ಬಲಿದಾನದ ವೇಳೆ ಆತನ ಸ್ವರ್ಗಸುಖವೂ ಸಮಾಪ್ತವಾಗುತಿತ್ತು. ಪುರೋಹಿತರು ಆ ಯುವಕನನ್ನು 'ತಾಯೆಸ್ಕಟಲೀಕೋಪಾ'ನ ದೇವಾಲಯಕ್ಕೆ ಕರೆದುಕೊಂಡುಹೋಗುತಿದ್ದರು. ದಾರಿಯ ಇಕ್ಕಡೆಗಳಲ್ಲೂ ಕೂಡಿದ್ದ ಜನಸಂದಣಿಯು ಆತನ ಕೊರಳನ್ನು ಪುಷ್ಪಹಾರಗಳಿಂದ ಅಲಂಕರಿಸುತಿದ್ದರು. ಇವೆಲ್ಲವನ್ನೂ ಕಿತ್ತೆಸೆಯಲಾಗುತಿದ್ದು, ದೇವಸ್ಥಾನದ ಮುಖದ್ವಾರದಲ್ಲೇ ಆತನನ್ನೇ ನಿರೀಕ್ಷಿಸುತಿದ್ದರು. ದೀರ್ಘ ಕೇಶಪಾಶವುಳ್ಳ ಆತನಿಗೆ ಕರಿಯ ಬಟ್ಟೆಯನ್ನು ಉಡಿಸುತಿದ್ದರು. ಈ ವಸ್ತ್ರದ ಮೇಲೆ ಮೆಕ್ಸಿಕೋವಿನ ದೇಶಭಾಷೆಯಲ್ಲಿ ಏನೋ ಮಂತ್ರವನ್ನು ಬರೆಯುತಿದ್ದರು. ಮುಂದೆ ಆ ಪುರೋಹಿತ ವರ್ಗವು ಆತನನ್ನು ಒಂದು ಎತ್ತರವಾದ ರಂಗ ಭೂಮಿಯ ಮೇಲೆ ಕರೆದೊಯ್ಯುತಿದ್ದರು. ಇಲ್ಲಿ ಊರಿನ ಜನರೆಲ್ಲರೂ ಸುಲಭವಾಗಿ ಆ ಕರಿಬಟ್ಟೆಯುಟ್ಟ, ಕಪ್ಪನೆಯ ಉದ್ದ ತಲೆಗೂದಲುಳ್ಳ ನಿಸ್ಸಹಾಯ ಸುಂದರ ಯುವಕನನ್ನು ಕಣ್ಣಾರೆ ನೋಡಬಹುದಾಗಿತ್ತು. ಅಲ್ಲಿಟ್ಟಿರುವ ಕಲ್ಲಿನ ಮಂಚದ ಮೇಲೆ ಆತನನ್ನು ಮಲಗಿಸುತಿದ್ದರು. ಐವರು ಪುರೋಹಿತರು ಆತನ ಕೈಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತಿದ್ದರು. ಆರನೆಯ ಪುರೋಹಿತ ಒಂದು ಹರಿತವಾದ ಚೂರಿಯಿಂದ ಆತನ ಎದೆಯನ್ನು ತಿವಿದು, ಯುವಕನ ಹೃದಯವನ್ನು ಹೊರಗೆ ತೆಗೆಯುತಿದ್ದನು. ಈ ಕೆನ್ನೆತ್ತರಿನ ಪಿಂಡವನ್ನು ಮೊದಲು ಸೂರ್ಯನ ಮೂರ್ತಿಯ ಮೇಲೆ, ಮತ್ತು ತಾಯೆಸ್ಕಟಲೀಕೋಪಾನ ಬಿಂಬದ ಮೇಲೆ ಇರಿಸುತಿದ್ದನು. ಅಷ್ಟರಲ್ಲಿ ಇನ್ನೊಬ್ಬ ಅರ್ಚಕನು ಅಲ್ಲಿ ನೆರೆದಿದ್ದ ಜನರಿಗೆ ಉಪದೇಶ ನೀಡುತಿದ್ದನು. ಈ ಉಪದೇಶಾಮೃತದ ಸಾರವಿಷ್ಟೆ: "ಈ ಪ್ರಪಂಚವೆನ್ನುವುದು ತೀವ್ರ [illegible]ವೂ ಕ್ರೂರವೂ ಆದುದು; ಅತಿ ನೀಚವಾದುದು. ಪ್ರಾಪಂಚಿಕ ವಿಷಯಗಳಿಂದ ಮೊದಮೊದಲು ಸುಖ ದೊರೆಯುತ್ತದೆ; ಆದರೆ, ಕೊನೆಕೊನೆಗೆ ಅದರಿಂದ ದುಃಖವೇ ಪ್ರಾಪ್ತವಾಗುವುದು. ಆದುದರಿಂದ ಜಾಗತಿಕ ಸಂಗತಿಗಳ ಮೇಲೆ ಎಂದೆಂದಿಗೂ ವಿಶ್ವಾಸವಿಡಬೇಡಿರಿ; ಅದರ ಬಗ್ಗೆ ಅಭಿಮಾನವನ್ನೂ ತಾಳಬೇಡಿರಿ."

ಇದು ನರಬಲಿಯ ಸಾಮಾನ್ಯ ವಿಧಾನವಾಯಿತು. ಕೆಲವೊಮ್ಮೆ ಇಂತಹ ಅವಕಾಶದಲ್ಲಿ ಬಲಿಪಶುವಾದ ಸುಂದರ ಯುವಕನಿಗೆ ಶಾರೀರಿಕ ಸಂಕಷ್ಟಗಳನ್ನೂ ಧಾರಾಳ ಪ್ರಮಾಣದಲ್ಲಿ ಕೊಡಲಾಗುತಿತ್ತು. ಚಿತ್ರ—ದೊಣ್ಣೆಗಳಿಂದ ಏಟನ್ನು ತಿನ್ನಿಸುತಿದ್ದರು. ಬಾಣ ಅಥವಾ ಈಟಿಗಳನ್ನು ಆತನ ಶರೀರದಲ್ಲಿ ಚುಚ್ಚುವುದೂ ಇತ್ತು. ಆಗ ಆತನ ಶರೀರವು ಕೆನ್ನೀರ ಉಗಮಸ್ಥಾನವಾಗಿ, ಆ ಪ್ರದೇಶವೆಲ್ಲೆಲ್ಲಾ ಕೆನ್ನೀರ ಕಾಲುವೆಯೇ ಹರಿಯುತಿತ್ತು. ಇಂತಹ ಚಿತ್ರಹಿಂಸೆಯ ದೆಸೆಯಲ್ಲಿ ಕಂಗೆಟ್ಟು, ಪೀಡಿತನಾದ ಆತ, "ತುರಂತವಾಗಿ ಬಲಿಯೀಯಿರಿ" ಎಂದು ಮರುಕದಿಂದ ಪುರೋಹಿತರೊಡನೆ ಅಂಗಲಾಚುತಿದ್ದನು. ಆತನ ಸಂಬಂಧಿಕರಲ್ಲಿ ಯಾರಾದರೂ ಸೇನಾಪತಿ ಇಲ್ಲವೇ ವೀರ ಸೈನಿಕರು ಇರುವುದಾದರೆ, ಅವನನ್ನು ಹೋರಾಟಕ್ಕೆ ಆಹ್ವಾನಿಸಿ, ಡಾಲು, ಕತ್ತಿಗಳನ್ನು ನೀಡುತಿದ್ದರು. ನಡೆದ ದ್ವಂದ್ವ ಯುದ್ಧದಲ್ಲಿ ಆತನು ಗೆದ್ದನೆಂದರೆ, ಜೀವಂತವಾಗಿ ಅವನನ್ನು ಬಿಟ್ಟುಬಿಡುತಿದ್ದರು;

ಇಂತಹ ರುದ್ರ ನರಮೇಧವನ್ನು ಮೆಕ್ಸಿಕೋಜನರು ಏತಕ್ಕೆ ಮಾಡುತ್ತಾರೆ; ಅವರಷ್ಟು ದಯಾಶೂನ್ಯರೆ ಎಂದು ನೀವು ಕೇಳಬಹುದು. ಆದರೆ, ಅವರು ತಮ್ಮ ಧಾರ್ಮಿಕ ಪ್ರವೃತ್ತಿಗನುಸಾರವಾಗಿಯೇ ಹಾಗೆ ಪಾಷಾಣಹೃದಯಿಗಳಂತೆ ವರ್ತಿಸುತ್ತಿದ್ದರೇ ಹೊರತು ಕೇವಲ ಸ್ವವಿನೋದಕ್ಕಾಗಿ ಅಲ್ಲವೆಂಬುವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅವಕಾಶ ಕೈಸೇರಿದಾಗ ನರಬಲಿಯೀಯದಿರುವುದು ಅಶುಭಸೂಚಕವೆಂದು ತಿಳಿಯುತ್ತಾರೆ, ಅವರು. ಮಳೆಯು ಸಕಾಲದಲ್ಲಿ ಸುರಿಯದೆ ಹೋದರೆ, ಚಿಕ್ಕಪುಟ್ಟ ಬಾಲಕರನ್ನು ಬಲಿಕೊಡುವ ಕ್ರಮ ಮೆಕ್ಸಿಕೋದಲ್ಲಿತ್ತು. ಇನ್ನೂ ಒಂದು ವಿಚಿತ್ರ ಪದ್ಧತಿ. ಮೊದಲು ಮಕ್ಕಳನ್ನು ಬೆಲೆಬಾಳುವ ವಸ್ತ್ರಾದಿಗಳಿಂದ ಅಲಂಕರಿಸಿ, ಆಮೇಲೆ, ಅಮೂಲ್ಯ ಹೊದಿಕೆಯೊಂದರಲ್ಲಿ ಮಲಗಿಸುತಿದ್ದರು. ಹೊದಿಕೆಯ ಮಾಲೆಗಳ ಮೂಲಕ ಆತನನ್ನು ಪುರೋಹಿತರು ದೇವಾಲಯದೊಳಗೆ ಒಯ್ಯುತಿದ್ದರು. ಮಕ್ಕಳ ಕುತ್ತಿಗೆಗೆ ಮಾಲೆಗಳನ್ನು ತೊಡಿಸಿ, 'ಈಗ ನಿಮ್ಮ ಅಂತ್ಯಕಾಲ ಬಂದಿತು' ಎಂದು ಹೇಳುತಿದ್ದರು. ಇದನ್ನು ಕೇಳಿದ ಆ ಹುಡುಗರು ಗಟ್ಟಿಯಾಗಿ ಅಳುತಿದ್ದರು. ಈ ಅಳುವನ್ನು ಮೆಕ್ಸಿಕೋವಿನಲ್ಲಿ 'ಶುಭ'ವೆಂದು ತಿಳಿಯಲಾಗುತಿತ್ತು. ಈ ರೀತಿಯಾಗಿ ಬಲಿಗಾಗಿ ಆರಿಸಲ್ಪಟ್ಟ ಮಕ್ಕಳನ್ನು ದೇವಾಲಯದ ಪುರೋಹಿತ ವರ್ಗದವರು ಸಂತೆಯಲ್ಲಿನ ಪ್ರಾಣಿಗಳಂತೆ ತಕ್ಕ ಬೆಲೆಕೊಟ್ಟು ಕೊಂಡುಕೊಳ್ಳುತ್ತಾರೆ. ಅಲ್ಲಿನ ತಾಯ್ತಂದೆಯರಾದರೂ ಬಲಿಗಾಗಿ ತಮ್ಮ ಮಗು ಚುನಾಯಿತನಾದರೆ ಅದು ತಮ್ಮ ಹಾಗೂ ಮಗುವಿನ ಭಾಗ್ಯವೆಂದು ತಿಳಿದು, ಸಂತೋಷದಿಂದ ಪುರೋಹಿತರಿಗೆ ಮಾರಿಬಿಡುತಿದ್ದರು.

ಹೀಗೆ ಬಾಲಬಲಿಗೆ ತುತ್ತಾದ ಬಾಲಕರ ಸಂಖ್ಯೆ ಅತಿಯಾಗಿತ್ತು. ಅಲ್ಲಿ ಪ್ರತಿವರ್ಷವೂ ಸಹಸ್ರ ಸಂಖ್ಯೆಯ ಬಾಲಕರ ಜೀವಾಪಹರಣವಾಗುತಿತ್ತು. ರಾಜ್ಯದ ರಾಜನ ಪಟ್ಟಾಭಿಷೇಕ ಅಥವಾ ದೇವಪ್ರತಿಷ್ಠೆಯೇನಾದರೂ ಆಗುವುದಿದ್ದರೆ, ಈ ಸಂಖ್ಯೆಯು ಬಹುಪಾಲು ಏರುತಿತ್ತು. ವಿಶೇಷ ದಿನಕ್ಕೆ ಕೆಲವರ್ಷ ಮೊದಲಿಂದಲೇ ದೂರದೂರದ ಊರುಗಳಲ್ಲಿ ಬಾಲಕರ ಸಂಗ್ರಹಕಾರ್ಯವು ಪ್ರಾರಂಭವಾಗುತಿತ್ತು. ಪ್ರತಿಷ್ಠೆಯ ದಿನ ದೇವಾಲಯದಿಂದ ಎರಡು ಮೂರು ಮೈಲುದ್ದಕ್ಕೆ ಎರಡೂ ಸಾಲುಗಳಲ್ಲಿ ಅವರನ್ನು ನಿಲ್ಲಿಸಲಾಗುತಿತ್ತು. ಕೆಲವು ದಿನರಾತ್ರಿಗಳವರೆಗೂ ಈ ಬಾಲಬಲಿಯ ಕಾರ್ಯಕ್ರಮ ಮುಂದುವರಿಯುತಿತ್ತು. ಸ್ಪೈನಿನ ಇಬ್ಬರು ಸೈನಿಕರು ನೋಡಿದ ಇಂತಹ ಒಂದು ಬಲಿಯಲ್ಲಿ ಒಂದು ಲಕ್ಷದ ಮೂವತ್ತಾರು ಸಾವಿರ ಬಾಲಕರಿದ್ದರಂತೆ!

ಮೆಕ್ಸಿಕೋವಿನ ಜನರು ಪ್ರತಿವರ್ಷವೂ ತಮ್ಮ ಯಾವುದಾದರೂ ನೆರೆಯ ರಾಜ್ಯದ ಮೇಲೆ ದಂಡಯಾತ್ರೆ ಕೈಗೊಳ್ಳುತಿದ್ದರು. ಆದರೆ, ಒಂದು ವಿಷಯವನ್ನು ನಾವು ಅವಶ್ಯ ನೆನಪಿಡಬೇಕು. ಈ ದಂಡಯಾತ್ರೆ ಅವರನ್ನು ಸೋಲಿಸಬೇಕು, ತಾವು ಗೆಲ್ಲಬೇಕೆಂಬ ಉದ್ದೇಶದಿಂದ ನಡೆಯುತ್ತಿರಲಿಲ್ಲ. ತಮ್ಮ ನೆಚ್ಚಿನ ದೇವತೆಗೆ ಈಯಬೇಕಾದ 'ನರಬಲಿ'ಗೆ ತಕ್ಕವನ ಬೇಟೆಯನ್ನು ತಂದು, ದೇವರಿಗೆ ಪ್ರಿಯತಮ ಬಲಿಯಿತ್ತು ಆತನನ್ನು ಪ್ರಸನ್ನೀಕರಿಸುವುದಕ್ಕಾಗಿ ಮಾತ್ರ ಈ ರೀತಿಯ ರಣಭೇರಿ ಹೊಡೆಸುತಿದ್ದರು.

(ವಿವಿಧ ಮೂಲಗಳಿಂದ)

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಆಧಾರದಲ್ಲಿ ಸಾಲ ಪಡಕೊಂಡು ದೀರ್ಘಕಾಲದಿಂದ ಅಸಲು-ಬಡ್ಡಿಯನ್ನು ಬಾಕಿ ಮಾಡಿರುವುದರಿಂದ ರಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಆಧಾರವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರು ಇಟ್ಟ ನಗಗಳನ್ನು ತಾರೀಕು 23—6—1960ನೇ ಬುಧವಾರ ಮಧ್ಯಾಹ್ನ ಘಂಟೆ 12ಕ್ಕೆ ಯಾ ತದನಂತರ ಯುಕ್ತಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲಾದೀತು ತಿಳಿದಿರಲಿ!

ಲೋನು ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು ರೂ.
35/548	ಸುಬ್ಬಣ್ಣ ಸೆಟ್ಟಿ, N/o ಸಿದ್ದಯ್ಯ ಸೆಟ್ಟಿ, ಹರ್ಕೂರ್, ಮೇಲ್ಮನೆ, ಆಲೂರು ಪೋಸ್ಟು.	75/-
566	ಎ. ನಾರಾಯಣ ಸೆಟ್ಟಿ, S/o ಎ. ನಂಜಪ್ಪ ಸೆಟ್ಟಿ, C/o ವಿ. ಶ್ರೀನಿವಾಸ ಸೆಟ್ಟಿ, ವಕೀಲ್, ಕುಂದಾಪುರ ಪೋಸ್ಟು.	150/-

Office of the Catholic Bank Ltd., Coondapoor. D. 31—5—1960.

I. Menezes, Agent.

'ಉದಯನ ಕಥೆ ಮತ್ತು ಆಯ್ದ ಕನ್ನಡ ಪಾಠಗಳು— ಎಂಟನೇ ತರಗತಿಗೆ ಸೌತ್ ಕೆನರಾ ಡಿಸ್ಟ್ರಿಕ್ಟಿಗೆ ಪಠ್ಯ ಪುಸ್ತಕವಾಗಿವೆ. ಮಾರಾಟಗಾರರು:— ಎಸ್. ಎಸ್. ಎನ್. ಬುಕ್ ಡಿಪೋ, ಸಿಟಿ ಮಾರ್ಕೆಟ್, ಬೆಂಗಳೂರು — ೨''

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ಮನದಲ್ಲಿ ದುರ್ವಿಚಾರ ತುಂಬಿರದ ಮುಖದಿಂದ ದುರ್ನುಡಿಗಳೆಂದೂ ಹೊರಬರಲಾರವು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೯-೬-'೬೦	೪೦

ಎರಡು ನಿರ್ಧಾರಗಳು

ಪೂನಾದಲ್ಲಿ ಸೇರಿದ್ದ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ "ಇನ್ನು ಮುಂದೆ ರಾಜ್ಯಗಳ ಪುನರ್ಘಟನೆ ನಡೆಯದು; ಮತ್ತು ಪುನಾರಚಿತ ರಾಜ್ಯಗಳ ಈಗಿನ ಸ್ವರೂಪವೇ ಶಾಶ್ವತವಾದುದು" ಎಂಬರ್ಥದ ಒಂದು ಗೊತ್ತುವಳಿಯು ಸ್ವೀಕೃತವಾಗಿದೆ. ಭಾಷಾನುಗುಣವಾಗಿ ರಾಜ್ಯಗಳನ್ನು ವಿಂಗಡಿಸಲು ಒಪ್ಪಿದ್ದು ಅದರಂತೆಯೇ ನಡೆದ ಕಾಂಗ್ರೆಸ್ಸು ಇದೀಗ ತಾನೇ ಈ ಗೊತ್ತುವಳಿಯನ್ನು ಸ್ವೀಕರಿಸ ಬೇಕಾದರೆ, ಅದರ ಮನಸ್ಸಿನಲ್ಲಿ ಎಲ್ಲ ಪ್ರಧಾನ ಭಾಷೆಯಾಡುವವರಿಗೂ ಒಂದೊಂದು ರಾಜ್ಯ ದೊರೆಯಿತು ಎಂಬ ಸಮಾಧಾನವುಂಟಾಗಿರಬೇಕು; ಅಥವಾ ಭಾಷಾಧಾರದಲ್ಲಿ ಇನ್ನೂ ಇನ್ನೂ ಹೊಸ ರಾಜ್ಯಗಳನ್ನು ನಿರ್ಮಿಸುವುದರಿಂದ ರಾಷ್ಟ್ರಕ್ಕೆ ಹಿತಕ್ಕಿಂತ ಹೆಚ್ಚು ಅಹಿತವೇ ಸಂಭವಿಸೀತು ಎಂಬ ಅಂಜಿಕೆಯೂ ಕಾರಣವಾಗಿರಲೂ ಸಾಕು. ಏಕೆಂದರೆ, ಪಂಜಾಬದಲ್ಲಿ ಪ್ರತ್ಯೇಕ ಪಂಜಾಬದ ಬೇಡಿಕೆಯನ್ನು ಮುಂದಿಟ್ಟು ಮಾಸ್ಟರ ತಾರಾಸಿಂಗರ ನೇತೃತ್ವದಲ್ಲಿ ಅಕಾಲಿ ದಳವು ಆಂದೋಲನವನ್ನು ಕೈಗೊಂಡು, ಅದನ್ನು ಮತ್ತೂ ಮತ್ತೂ ಬಲಪಡಿಸುತ್ತಿದೆ. ಹಾಗೆಯೇ ದಕ್ಷಿಣದಲ್ಲಿ ಪ್ರತ್ಯೇಕ ತಮಿಳು ನಾಡಿನ ಕೇಳಿಕೆಯೂ ಕೇಳಿಬರುತ್ತಿದೆ. ಮಧ್ಯಭಾಗದಲ್ಲಿ ಮಹಾರಾಷ್ಟ್ರದಲ್ಲಿ ಸದ್ಯ ಸೇರಿಕೊಂಡಿರುವ ವಿದರ್ಭವ ಬೇಡಿಕೆಯಿನ್ನೂ ಶಾಂತವಾದಂತೆ ತೋರಿಬಂದಿಲ್ಲ. ಹೀಗೆಯೇ ಇನ್ನೂ ಕೆಲವು ಚಿಕ್ಕ ಪುಟ್ಟ ವಿನಂತಿಗಳೂ ಇಲ್ಲದಿಲ್ಲ. ಹೀಗಿರುವಾಗ, ರಾಜ್ಯಗಳ ಸಂಖ್ಯೆಯನ್ನು ಹೆಚ್ಚಿಸುತ್ತ ಹೋದರೆ, ಅದಕ್ಕೆ ಕೊನೆಯೆಂಬುದೂ ಅತಿನಿಕಟದಲ್ಲಿರಲಾರದು. ಈ ದೃಷ್ಟಿಯಿಂದ ಕಾಂಗ್ರೆಸ್ ಸ್ವೀಕರಿಸಿದ ಈ ಗೊತ್ತುವಳಿಯು ನ್ಯಾಯೋಚಿತವಾದುದೆನ್ನಬಹುದು.

ಇಲ್ಲಿ ಒಂದು ಮಾತು ಮಾತ್ರ ಸತ್ಯ. ಕಾಂಗ್ರೆಸ್ ಸರಕಾರವು ೧೯೫೬ರಲ್ಲಿ ರಾಜ್ಯಗಳನ್ನು ಪುನರ್ವಿಂಗಡಿಸಿತೆ ಹೊರತು ಭಾಷಾವಾರು ರಾಜ್ಯಗಳನ್ನು ರೂಪಿಸಿಲ್ಲ. ಈ ಬಗ್ಗೆ ನಿಯೋಜಿತವಾಗಿದ್ದ ಸಮಿತಿಯಾದರೂ ರಾಜ್ಯ ಪುನರ್ವಿಂಗಡನಾ ಪರಿಶೀಲನ ಸಮಿತಿ; ಮತ್ತು ಸಂಸತ್ತು ಸ್ವೀಕರಿಸಿದ್ದೂ ರಾಜ್ಯ ಪುನರ್ಘಟನಾ ಮಸೂದೆಯನ್ನು ಅದರನ್ವಯ ರಾಜ್ಯಗಳು ಪುನಾರಚನೆಗೊಂಡುವೇ ಹೊರ [illegible] ವಾಯಿತೆಂದು ಹೇಳಬರುವುದಿಲ್ಲ. ಆದರೆ, ಈ ಸಂಬಂಧದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಭಾಷೆಯನ್ನೇ ಮುಖ್ಯ ತಳಹದಿಯಾಗಿಟ್ಟುಕೊಳ್ಳಲಾಗಿತ್ತು ಎಂಬುದನ್ನು ಒಪ್ಪಬೇಕು. ಪುನರ್ವಿಂಗಡಣೆಯಿಂದಾಗಿ ಉಂಟಾದ ರಾಜ್ಯಗಳ ನಡುವೆ ಗಡಿ ಪ್ರದೇಶಗಳ ಬಗ್ಗೆ ಇರುವ ವಾದ-ಪ್ರತಿವಾದಗಳನ್ನು ನಾವು ಅವಲೋಕಿಸುವಾಗ, ಒಂದು ಭಾಷೆಯನ್ನಾಡುವ ಎಲ್ಲ ಪ್ರದೇಶಗಳನ್ನೂ ಒಂದೇ ರಾಜ್ಯದಲ್ಲಿ ಇರುವಂತೆ ಮಾಡುವುದು ಸರ್ವಥಾ ಅಸಾಧ್ಯವೆಂಬುದು ಸ್ವಯಂವೇದ್ಯವಾಗಿದೆ. ಭಾಷೆಯ ಆಧಾರದಿಂದಲೇ ರಾಜ್ಯ ರಚಿಸುವುದರಿಂದ ಉಂಟಾಗಬಹುದಾದ ಲಾಭಾಲಾಭಗಳನ್ನು ದಕ್ಷಿಣ ಭಾರತೀಯರು ಈಗಾಗಲೇ ಸಾಕಷ್ಟು ಅನುಭವಿಸಿದ್ದಾರೆ; ಇನ್ನೂ ಅನುಭವಿಸಲಿದ್ದಾರೆ. ಮೈಸೂರಿನ ಬಗ್ಗೆ ಹೇಳುವುದಾದರೆ, ಅದು ಕನ್ನಡ ಭಾಷೆಯಾಡುವ ಹಲವು ಪ್ರದೇಶಗಳನ್ನು ಕಳೆದುಕೊಂಡಿದೆ. ಇದರಿಂದಾಗಿ, ಸೀಮಾ ಪ್ರದೇಶದ ಜನಗಳಲ್ಲಿ ಸತತ ದ್ವೇಷವೂ ಉದ್ವೇಗವೂ ತಾಂಡವವಾಡುವಂತಾಗಿದೆ. ಅದೇನಿದ್ದರೂ, ಇನ್ನು ಮುಂದಕ್ಕೆ ಹೊಸ ರಾಜ್ಯಗಳು ಉದಯವಾಗುವುದಕ್ಕೆ ಒಪ್ಪದಿರುವ ನೀತಿಯನ್ನು ಕಾಂಗ್ರೆಸ್ ಒಪ್ಪಿಕೊಂಡಿರುವುದರಿಂದ, ಅದು ಇದಿರಿಸಬೇಕಾದ ಪ್ರಶ್ನೆಗಳೂ ಕೆಲವಿರುತ್ತವೆ. ಪ್ರತ್ಯೇಕ ಪ್ರಾಂತೀಯತೆಯನ್ನು ಮುಂದಿಟ್ಟು ನಡೆಯುವ ಯಾವುದೇ ಚಳವಳಿಗಳಿಗೆ ಅದು ಪ್ರೋತ್ಸಾಹಕೊಡದಿರುವುದು ಮಾತ್ರವಲ್ಲ; ಅಂತಹ ಆಂದೋಲನಗಳನ್ನು ಕೆಚ್ಚೆದೆಯಿಂದ ಅಣಗಿಸುವುದೂ ಅಗತ್ಯವಾಗುತ್ತದೆ. ಆದರೆ, ಇಂತಹ ಧೈರ್ಯ ಕಾಂಗ್ರೆಸ್ಸಿಗಿದೆಯೋ ಎಂಬುದೂ ಒಂದು ಪ್ರಶ್ನೆ. ೧೯೫೭ರಲ್ಲಾದ ಸಾರ್ವತ್ರಿಕ ಚುನಾವಣೆಯ ವೇಳೆ, ದ್ವಿಭಾಷಾ ಮುಂಬಯಿ ರಾಜ್ಯದಲ್ಲಿ ಕಾಂಗ್ರೆಸ್ಸು ಉಂಡ ಸೋಲೇ ಅದರ ವಿಭಜನೆಗೆ ಹೇತುವಾಯಿತೆನ್ನುವುದಾದರೆ, ಜನಮತಕ್ಕೆ ಅದು ತಲೆತಗ್ಗಿಸಲೇ ಬೇಕಾಗುತ್ತದೆ ಎಂದು ಅನ್ನಬೇಕು. ಪ್ರಜಾಪ್ರಭುತ್ವದಲ್ಲಿ ಜನಮತವನ್ನು ದುರ್ಲಕ್ಷಿಸುವುದು ನ್ಯಾಯವೆಂದು ಯಾರೂ ಅನ್ನಲಾರರು. ಈ ದೃಷ್ಟಿಯಿಂದ ಕಾಂಗ್ರೆಸ್ ತನ್ನ ಧೋರಣೆಯನ್ನು ಖಡಾಖಂಡಿತವಾಗಿ ವ್ಯಕ್ತಪಡಿಸಿದುದರ ಔಚಿತ್ಯವೇನು ಎಂಬ ಪ್ರಶ್ನೆಯೂ ಎದ್ದುತೋರುತ್ತದೆ.

ಅಲ್ಲದೇ ಈಗಿರುವ ರಾಜ್ಯಗಳ ಸ್ವರೂಪವು ಶಾಶ್ವತವಾಗಿದೆಯೆಂಬ ಗೊತ್ತುವಳಿಯನ್ನೇನೋ ಪೂನಾದ ಅಧಿವೇಶನದಲ್ಲಿ ಸ್ವೀಕರಿಸಲಾಯಿತು. ಆದರೆ ಅದೇ ಸಮಯದಲ್ಲಿ ಮಹಾರಾಷ್ಟ್ರ-ಮೈಸೂರು ರಾಜ್ಯಗಳ ಮುಖ್ಯಮಂತ್ರಿಗಳು ಕಾಂಗ್ರೆಸ್ ವರಿಷ್ಠರೂ ಕೇಂದ್ರ ಗೃಹ ಮಂತ್ರಿಗಳೂ ಆದ ಪಂಡಿತ ಗೋವಿಂದ ಪಂತರೊಡನೆ ಎರಡು ರಾಜ್ಯಗಳ ನಡುವಿರುವ ಸೀಮಾ ವಿವಾದವನ್ನು ಪರಿಹರಿಸಲು ಚತುರ್ಸದಸ್ಯ ಸಮಿತಿಯೊಂದನ್ನು ರಚಿಸಲು ಒಪ್ಪಿಕೊಂಡಿರುವುದು ವಿರೋಧಾಭಾಸವೆನಿಸದೆ? ಕಾಂಗ್ರೆಸ್ ನೀತಿಯು ಮಹಾರಾಷ್ಟ್ರದವರು ಅಧಿವೇಶನದ ವೇಳೆ ನಡೆಸಿದ ಮತಪ್ರದರ್ಶನದಿಂದ ತುಸು ಮಾಲಿಕೊಂಡಿತೆ? ಮಹಾರಾಷ್ಟ್ರೀಯರು ಈ ಮೊದಲು ನಡೆಸಿದ್ದ ಅನರ್ಥಕಾರಿ ಪುಂಡಾಟಿಕೆಯೇ ಈ ಸಮಿತಿ ರಚನೆಗೆ ಕಾರಣವಾಯಿತೆ? ಹೌದಾದ್, ಬೇರೆ ಯಾವ ರಾಜ್ಯಕ್ಕೂ ಇಲ್ಲದ ಒಂದು ಸೌಲಭ್ಯ ಮಹಾರಾಷ್ಟ್ರಕ್ಕೆ ಮಾತ್ರ ದೊರೆಯುವುದು ನ್ಯಾಯೋಚಿತವೆ? ಈಗ, ಕೇರಳಕ್ಕೆ ಸೇರಿದ ಕನ್ನಡದಭಾಗ ಕಾಸರಗೋಡಿನ ಕನ್ನಡಿಗರೂ ತಾವು ಮೈಸೂರಿನೊಂದಿಗೆ ಸೇರಬೇಕೆಂಬ ತಹತಹದಿಂದಿದ್ದು ಶಾಂತ ವಿಧಾನಗಳಿಂದ ಕಾರ್ಯತತ್ಪರರಾಗಿರುವಾಗ, ಈ ಬಗ್ಗೆ ಮಾತ್ರ ಮೌನತಾಳಿ ಕೈಕಟ್ಟಿ ಕೂರುವುದು ಅದಾವ ನ್ಯಾಯ? ಈ ಸವತಿ ಧೋರಣೆಯೇಕೆ ಎಂಬ ಪ್ರಶ್ನೆಯೇಳುವುದು. ಅದುದರಿಂದ, ಸ್ವೀಕೃತ ಗೊತ್ತುವಳಿಯ ದ್ವಿತೀಯಾರ್ಧವು ಪ್ರಾರಂಭದಲ್ಲಿಯೇ ಅರ್ಥಗೆಟ್ಟು ಹೋಯಿತು ಎಂದು ಹೇಳಬೇಕಾಗುತ್ತದೆ. ಹೊಸ ರಾಜ್ಯಗಳ ಉದಯವಿಲ್ಲ ಎಂಬ ಮೂಲನೀತಿಯನ್ನು ಕಟ್ಟುನಿಟ್ಟಾಗಿಟ್ಟುಕೊಂಡು, ಸದ್ಯ ರೂಪಿತವಾಗಿರುವ ರಾಜ್ಯಗಳ ಗಡಿಹೊಂದಾಣಿಕೆಯನ್ನು ಸಂಬಂಧಿತ ರಾಜ್ಯಗಳ ನಡುವಣ ಸೌಹಾರ್ದತೆ ಮತ್ತು ಸಮ್ಮತಿಯಿಂದ ಮಾಡಿಕೊಳ್ಳುವ ನೀತಿಯನ್ನು ಕಾಂಗ್ರೆಸ್ಸು ಸ್ವೀಕರಿಸುತ್ತಿದ್ದರೆ, ತುಂಬ ಅರ್ಥವತ್ತಾಗುತ್ತಿದ್ದಿತು; ಅಸಮಾಧಾನಗೊಂಡಿರುವ ಕೆಲವು ರಾಜ್ಯಗಳ ಸೀಮಾಪ್ರದೇಶದ ಜನರಲ್ಲಿಯೂ ತಮ್ಮ ಬಯಕೆ ಈಡೇರಬಹುದೆಂಬ ಆಶಾಂಕುರವಾದರೂ ಉದಿಸುತಿತ್ತು. ಈಗ, ಸ್ವೀಕೃತ ರೀತಿಯಿಂದ ರೊಚ್ಚಿಗೆದ್ದ ಗಡಿನಿವಾಸಿಯವರು ಹಿಂಸಾಚಾರಕ್ಕೂ ಕೈಹಾಕಿದರೆಂದರೆ, ಅದು ದೇಶದ ಹಿತದೃಷ್ಟಿಯಿಂದ ನೆಮ್ಮದಿಯನ್ನು ವಂತಿಲ್ಲ.

ತರಬೇತಿಹೊಂದಿದ ಶಿಕ್ಷಕರು

ಮೈಸೂರು ರಾಜ್ಯದಲ್ಲಿ ತರಬೇತಿ ಹೊಂದಿದ ಶಿಕ್ಷಕರ ಸಂಖ್ಯೆ ಕೇವಲ ಸೇಕಡಾ ೩೦ರಷ್ಟು. ಆದುದರಿಂದ, ಶಿಕ್ಷಕರ ತರಬೇತಿಯ ಬಗ್ಗೆ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷ ಗಮನ ಹರಿಸಬೇಕೆಂದು ಬೆಂಗಳೂರಲ್ಲಿ ಸೇರಿದ್ದ ಪ್ರಾದೇಶಿಕ ಪ್ರಾಥಮಿಕ ಶಿಕ್ಷಣ ವಿಚಾರ ಗೋಷ್ಠಿಯು ಅಭಿಪ್ರಾಯಪಟ್ಟಿದ್ದು, ಇದಕ್ಕಾಗಿ ಕೇಂದ್ರ ಸರಕಾರದ ಸಹಾಯವನ್ನೂ ಕೇಳಿಕೊಂಡಿದೆ. ಹಿಂದಿನ ಮದ್ರಾಸ ರಾಜ್ಯಕ್ಕೆ ಸೇರಿ, ರಾಜ್ಯ ಪುನರ್ಘಟನಾನಂತರ ಮೈಸೂರಿನಲ್ಲಿ ಸೇರ್ಪಡೆಯಾದ ಪ್ರದೇಶದಲ್ಲಿ ಈ ಶಿಕ್ಷಕರ ತರಬೇತಿಯ ಸಮಸ್ಯೆಯನ್ನು ಪರಿಹರಿಸಲಾಗಿದೆಯೆಂದೂ ಈ ಗೋಷ್ಠಿಯು ಗಮನಕ್ಕೆ ತಂದುಕೊಂಡಿದೆ. ಈ ಮದ್ರಾಸ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ತರಬೇತಿ ಹೊಂದದ ಶಿಕ್ಷಕರು ದೊರೆಯಲಾರರು. ಏಕೆಂದರೆ, ಹಿಂದಿನ ಮದ್ರಾಸ ಸರಕಾರವು ತರಬೇತಿ ಹೊಂದಿದ ಅಧ್ಯಾಪಕರನ್ನಷ್ಟೇ ಶಿಕ್ಷಕರಾಗಿ ಸೇವೆ ಸಲ್ಲಿಸಲು ಆರಿಸಿಕೊಳ್ಳುವ ಕ್ರಮ ಮಾಡಿತ್ತು. ಇದರಿಂದಾಗಿಯೇ ಇಂದಿಗೂ ಈ ಪ್ರದೇಶದ ಶಿಕ್ಷಣಮಟ್ಟವು ಉನ್ನತವಾಗಿ ಉಳಿದುಕೊಂಡಿದೆ. ಮದ್ರಾಸ ಕರ್ನಾಟಕ ಪ್ರದೇಶದಲ್ಲಿ ವರ್ಷಂಪ್ರತಿ ನೂರಾರು ಶಿಕ್ಷಕರು ತರಬೇತಿ ಹೊಂದುತ್ತಿರುವುದನ್ನೂ ಅವರು ನಿರುದ್ಯೋಗಿಗಳಾಗಿ ತಿರುಗಾಡುತ್ತಿರುವುದನ್ನೂ ನಾವು ಕಾಣಬಹುದು. ಇದಕ್ಕೆ ಸರಕಾರದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ ಶಿಕ್ಷಕ—ಅಭ್ಯರ್ಥಿಗಳ ಸಂಖ್ಯೆಯೇ ಸಾಕ್ಷಿಯಾಗಿದೆ. ಮೈಸೂರು ರಾಜ್ಯದಲ್ಲಿ ತರಬೇತಿ ಹೊಂದಿದ ಶಿಕ್ಷಕರು ದೊರೆಯುವುದಿಲ್ಲವೆಂದಿರುವಾಗ, ಇಲ್ಲಿ ಸರಕಾರದ ಹಣದಿಂದಲೇ ಅವಶ್ಯಕ ದೃಢಪತ್ರ ಬರೆದುಕೊಟ್ಟು ತರಬೇತಿ ಹೊಂದಿದ ಶಿಕ್ಷಕಾಭ್ಯರ್ಥಿಗಳು ಉದ್ಯೋಗದ ಬೇಟೆಯಾಡುತ್ತಿರುವಾಗ, ನಮ್ಮ ರಾಜ್ಯ ಸರಕಾರದ ಗಮನ ಇವರತ್ತ ಏಕೆ ಹರಿಯುವುದಿಲ್ಲ ಎಂದು ಕೇಳಬೇಕಾಗುತ್ತದೆ. ಹಳೆಯ ಮೈಸೂರಿಗೆ ಈ ಪ್ರದೇಶದ ಜನರು ಬಂದು ಉದ್ಯೋಗ ಪಡೆಯುವ ಸೌಲಭ್ಯವನ್ನೇ ಅವರಿಗೆ ನೀಡಬಾರದು ಎಂಬ ಧೋರಣೆಯು ಸರಕಾರದ್ದಿದೆ ಎಂಬ ಒಂದು ಕುಕಲ್ಪನೆಯನ್ನು ಇಲ್ಲಿನವರು ಮಾಡಿಕೊಳ್ಳುವ ಪರಿಸ್ಥಿತಿಯೂ ಬಂದಿದೆ. ಶಿಕ್ಷಣ ಮಟ್ಟ ಉನ್ನತವಾಗಬೇಕು; ತರಬೇತಿ ಪಡೆದವರನ್ನಷ್ಟೇ ಶಿಕ್ಷಕ ಹುದ್ದೆಗೆ ನೇಮಿಸಬೇಕು ಎಂಬ ಆಶಯವಿರುವವರು ಮದ್ರಾಸ-ಕರ್ನಾಟಕ ವಿಭಾಗದ ತರಬೇತಿ ಹೊಂದಿದ ನಿರುದ್ಯೋಗಿ ಶಿಕ್ಷಕರತ್ತ ತುಸು ಲಕ್ಷ್ಯ ಹರಿಯಿಸಿದರೆ, ಸಮಸ್ಯೆಯ ಪರಿಹಾರ ಪಥಭ್ರಮಣದಲ್ಲಿ ಒಂದು ಮೈಲಿಗಲ್ಲನ್ನು ದಾಟಿದಂತಾಗುವುದಲ್ಲವೆ?

ಸಂಕ್ಷಿಪ್ತ ಸುದ್ದಿಗಳು

ಶ್ರೀ ಕಂಠಿಯವರ ಉಪದೇಶ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿನ ವಸಂತ ಸಾಹಿತ್ಯೋತ್ಸವದ ಉದ್ಘಾಟನಾ ಭಾಷಣ ಮಾಡುತ್ತ ಮೈಸೂರು ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರು "ಕನ್ನಡ ಸಾಹಿತ್ಯದ ಬೆಳವಣಿಗೆ ಕಳೆದ ಎರಡು ಸಾವಿರ ವರ್ಷಗಳಲ್ಲಿ ಬೆಳೆದುದಕ್ಕಿಂತ ಹೆಚ್ಚಾಗಿ ಮಹಾರಾಷ್ಟ್ರ ಹಾಗೂ ಇತರ ಭಾಷೆಯ ಸಾಹಿತ್ಯ ಬೆಳೆದಿದೆ. ಆದುದರಿಂದ ನಾವು ನಮ್ಮ ಸಾಹಿತ್ಯವನ್ನು ಚೆನ್ನಾಗಿ ಬೆಳೆಸಿಕೊಂಡು ಹೋಗಬೇಕಾದುದು ಅಗತ್ಯವಿದೆ. ಪರಿಷತ್ತಿನ ಕಾರ್ಯ ಚಟುವಟಿಕೆಗಳು ಚೆನ್ನಾಗಿ ಬೆಳೆಯಲು ಈ ಸಂಸ್ಥೆಯು ರಾಜಕಾರಣಿಗಳೊಂದಿಗೆ ಸಂಪರ್ಕವಿಟ್ಟುಕೊಳ್ಳುವುದು ಯೋಗ್ಯ. ವಿಶೇಷ ಶ್ರಮದ ಫಲವಾಗಿ ಕನ್ನಡರಾಜ್ಯ ಸಂಪಾದಿಸಿದ ಬಳಿಕ, ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಪುಷ್ಟಿಯುತವನ್ನಾಗಿ ಬೆಳೆಸಿಕೊಂಡು ಹೋಗಬೇಕಾಗಿದೆ. ರಾಜ್ಯವನ್ನು ಮೈಸೂರೆಂದು ಕರೆಯಬೇಕೇ, ಕರ್ನಾಟಕವೆಂದು ಕರೆಯಬೇಕೇ ಎಂಬ ವಿವಾದಕ್ಕೆ ಯಾರೂ ಅವಕಾಶ ಕೊಡಬಾರದು. ಕಾಲ ಪರಿಪಕ್ವವಾದಾಗ ವಿಷಯವನ್ನು ಪರಿಶೀಲಿಸಬಹುದಾಗಿದೆ" ಎಂದು ಉಪದೇಶಿಸಿದರು.

ವಿನೋಬಾ ಪಾದಯಾತ್ರೆ

ದರೋಡೆಗಾರರ ಮನಸ್ಸನ್ನು ಪರಿವರ್ತಿಸಲು ಮಧ್ಯಪ್ರದೇಶದಲ್ಲಿ ಪಾದಯಾ

(೭ನೇ ಪುಟ ನೋಡಿ)

ಅಲ್ಲಲ್ಲಿಯ ಸುದ್ಧಿಸಾರ

ಭರತ ನಾಟ್ಯ ಪ್ರದರ್ಶನ— ಉಡುಪಿಯ ಕಲಾನಿಕೇತನದ ಆಶ್ರಯದಲ್ಲಿ ತಾ. 28-5-60ರಂದು ಪದ್ಮಶ್ರೀ ಟಿ. ಬಾಲಸರಸ್ವತಿಯವರ ಶಿಷ್ಯೆ ಕುಮಾರಿ ಚಂದ್ರಕಲಾ ಅವರ ಭರತನಾಟ್ಯ ಪ್ರದರ್ಶನವೊಂದು ಸಂಸ್ಕೃತ ಕಾಲೇಜಿನಲ್ಲಿ ನೆರವೇರಿತು. ಶ್ರೀ. ಬಾಲಸರಸ್ವತಿಯವರು ಹಿಮ್ಮೇಳ ಗಾಯಕಿಯಾಗಿ ಭಾಗವಹಿಸಿದ್ದರು. ಆರಂಭದಲ್ಲಿ ಶ್ರೀ ಎ. ಜೆ. ಅಲ್ಸೆಯವರು ಸ್ವಾಗತಿಸಿ ಕುಮಾರಿ ಚಂದ್ರಕಲಾರವರ ಕಲಾನಿಪುಣತೆಯ ಪರಿಚಯ ಮಾಡಿದರು. ಅಂತ್ಯದಲ್ಲಿ ಅದಮಾರು ಶ್ರೀಗಳವರು ಕುಮಾರಿಯ ಅಭೂತಪೂರ್ವ ಭರತನಾಟ್ಯ ಪ್ರದರ್ಶನವನ್ನು ಮೆಚ್ಚಿ ಆಶೀರ್ವದಿಸಿದರು. ಶ್ರೀ ಕೆ. ಎಮ್. ರಾಧಾಕೃಷ್ಣರವರು ವಂದನಾರ್ಪಣೆ ಮಾಡಿದರು.

ಪನೆ ಬೆಲ್ಲ ಸಹಕಾರಿ ಸಂಘಗಳ ಸಮ್ಮೇಳನ— ಮೈಸೂರು ರಾಜ್ಯದ ಖಾದಿ ಹಾಗೂ ಗ್ರಾಮ ಕೈಗಾರಿಕೆಗಳ ಮಂಡಲದ ಆಶ್ರಯದಲ್ಲಿ ಕಳೆದ ಮೇ ತಾ. 28 ಮತ್ತು 29ರಂದು ಮಣಿಪಾಲದ ಕಸ್ತೂರ್‍ಬಾ ಮೆಡಿಕಲ್ ಕಾಲೇಜು ಕಟ್ಟಡದಲ್ಲಿ ಪನೆ ಬೆಲ್ಲ ಸಹಕಾರಿ ಸಂಘಗಳ ಸಮ್ಮೇಳನವೊಂದು ಶ್ರೀ ಹನುಮಂತಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ನಾರಾಯಣ ರಾಯರು ಸ್ವಾಗತಿಸಿದರು. ಶ್ರೀ ಗಜಾನನ್ ನಾಯ್ಕರು ಸಮಾರಂಭವನ್ನು ಉದ್ಘಾಟಿಸಿದರು. ಸಭಿಕರ ಭಾಷಣಗಳಾದ ಮೇಲೆ ಕೆಲವು ನಿರ್ಣಯಗಳಾದುವು. ಡಾ| ಟಿ. ಎಮ್. ಎ. ಪೈಗಳು ಸಹಕಾರ ಹಾಗೂ ಆತ್ಮವಿಶ್ವಾಸಗಳ ಪ್ರಾಮುಖ್ಯತೆಯ ಕುರಿತು ಭಾಷಣವಿತ್ತರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ಯಚ್. ಕೆ. ಕುಮಾರ ಸ್ವಾಮಿಯವರು ಧನ್ಯವಾದಗಳನ್ನರ್ಪಿಸಿದರು.

ಪಲಿಮಾರು ಹೈಸ್ಕೂಲಿನ ಹೊಸ ಕಟ್ಟಡದ ಉದ್ಘಾಟನೆಯು ತಾರೀಕು 30-5-60ರಂದು ಮೈಸೂರು ರಾಜ್ಯ ಸರಕಾರದ ಮಂತ್ರಿ ಶ್ರೀ ಟಿ. ಸುಬ್ರಹ್ಮಣ್ಯಮ್ ಅವರ ಅಧ್ಯಕ್ಷತೆಯಲ್ಲಿ ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥಶ್ರೀಪಾದಂಗಳವರಿಂದ ಜರಗಿಸಲ್ಪಟ್ಟಿತು. ಶ್ರೀ ಪಲಿಮಾರು ಶ್ರೀಗಳವರು ಸ್ವಾಗತಿಸಿದರು. ಶ್ರೀ ದೇವೇಂದ್ರ ಪೆಜತ್ತಾಯರು ವರದಿಯನ್ನೊಪ್ಪಿಸಿದರು. ಉದ್ಘಾಟಕರು ಹಿಂದಿನ ಪಲಿಮಾರು ಶ್ರೀಗಳವರ ಕೃಪೆಯಿಂದ ಬೆಳೆದು ಬಂದ ಪಲಿಮಾರಿನಲ್ಲಿ ಈ ಶಿಕ್ಷಣ ಸಂಸ್ಥೆಯು ನವ ಕಟ್ಟಡದೊಂದಿಗೆ ಕಳೆಯೆತ್ತುತ್ತಿರುವುದು ಸಂತೋಷವೆಂದರು. ಅದಮಾರು ಶ್ರೀಗಳವರು ಭಾಷಣವಿತ್ತ ಮೇಲೆ ಮಂತ್ರಿಗಳು ಶ್ರೀ ಪಾದಂಗಳವರ ಕಾರ್ಯವನ್ನು ಕೊಂಡಾಡಿ ಮಾತಾಡಿದರು. ಶ್ರೀ ಕೆ. ಸೀತಾರಾಮ ಅಡಿಗರು ವಂದನೆಗಳನ್ನರ್ಪಿಸಿದರು.

ಲಯನ್ಸ್ ಕ್ಲಬ್ಬಿನ ಸಭೆ— ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯೊಂದು ಮುಕುಂದ ನಿವಾಸದಲ್ಲಿ ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಕೆ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಕಳೆದ ತಾ. 27ರಂದು ಜರಗಿತು. ಅಂದಿನ ಮುಖ್ಯ ಅತಿಥಿ ಕುಂದಾಪುರ, ಅಸಿಸ್ಟಂಟ್ ಕಮಿಷನರ್ ಶ್ರೀ ಕೆ ನರಸಿಂಹ ಮೂರ್ತಿಯವರು ಪ್ರಬಂಧವೊಂದನ್ನು ಓದಿದರು. ಕಾರ್ಯದರ್ಶಿ ಶ್ರೀ ಟಿ. ಜಗನ್ನಾಥ ಹೆಗ್ಡೆಯವರು ಸದಸ್ಯರ ಪರಿಚಯ ಮಾಡಿಕೊಟ್ಟು ಅಭಾರ ಸೂಚಿಸಿದರು.

ಉಡುಪಿಯಲ್ಲಿ ಲೀಲಾವತಿ ಮಾಗಡಿ— ಮೈಸೂರು ರಾಜ್ಯದ ಕೈಗಾರಿಕಾ ಶಾಖೆಯ ಉಪ ಸಚಿವೆ ಶ್ರೀಮತಿ ಲೀಲಾವತಿ ಮಾಗಡಿಯವರು ತಾ. ೧೮ರಂದು ಪೂರ್ವಾಹ್ನ ಮಲ್ಪೆಗೆ ತೆರಳಿ, ಅಲ್ಲಿಯ ಮೀನುಗಾರರ ಉದ್ಯಮ ಸಂಘವನ್ನು ಸಂದರ್ಶಿಸಿ, ಉಡುಪಿ ನೇಕಾರ ಸಂಘಕ್ಕೆ ಭೇಟಿಯಿತ್ತರು. ನಗರ ಸಭಾಧ್ಯಕ್ಷ ಡಾ. ಐತಾಳರು ಮತ್ತು ನೇಕಾರ ಸಂಘದ ಅಧ್ಯಕ್ಷ ಶ್ರೀ ಕೆ. ಗುರುರಾಜ ರಾಯರು ಶ್ರೀಮತಿಯವರನ್ನು ಸ್ವಾಗತಿಸಿ, ನೇಕಾರರಿಗೆ ವಸತಿ ಸೌಕರ್ಯ ಒದಗಿಸುವ ಆಕ್ಟ್ರಾಯ್ ತೆರಿಗೆ ರದ್ದತಿಯ ಬಗ್ಗೆ ಮನವಿ ಸಲ್ಲಿಸಿದರು. ಉಪಸಚಿವೆಯವರು ಈ ಬಗ್ಗೆ ನಿರಾಶಾದಾಯಕವಾದ ಉತ್ತರವಿತ್ತರು.

ಶ್ರೀ ಬನ್ನಂಜೆಯವರಿಗೆ ವಿದಾಯ ಸತ್ಕಾರ— ಉಡುಪಿಯ ಸುದರ್ಶನ ಪತ್ರಿಕೆಯ ಸಂಪಾದಕರೂ ಪ್ರಸಿದ್ಧ ಪತ್ರಿಕಾ ವ್ಯವಸಾಯಿ ಹಾಗೂ ಲೇಖಕರೂ ಆದ ಶ್ರೀ ಬನ್ನಂಜೆ ರಾಮಾಚಾರ್ಯರು ಮಂಗಳೂರಿನ ನವಭಾರತ ಪತ್ರಿಕೆಯ ಸಂಪಾದಕ ಮಂಡಳಿಗೆ ಸೇರಲು ಹೋಗಲಿರುವ ಪ್ರಯುಕ್ತ ಅವರನ್ನು ಸತ್ಕರಿಸಲು ಧನ್ಯವಾಣಿ ಪತ್ರಿಕೆಯ ಸಂಪಾದಕ ಶ್ರೀ ಕೆ. ಎಲ್. ಭಟ್ಟರು ತಮ್ಮ ಕಾರ್ಯಾಲಯದಲ್ಲಿ ವಿದಾಯ ಕೂಟವೊಂದನ್ನು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ತಾ. 7ರಲ್ಲಿ ಏರ್ಪಡಿಸಿದ್ದರು. ಶ್ರೀ ಕೆ. ಎಲ್. ಭಟ್ಟರು ಸ್ವಾಗತಿಸಿದ ಮೇಲೆ ಶ್ರೀಗಳಾದ ಕು. ಶಿ. ಹರಿದಾಸ ಭಟ್, ಎಸ್. ಎಲ್. ಎಸ್. ಭಟ್, ಪಿ. ರಂಗನಾಥ ಶೆಣೈ, ಎ. ಜೆ. ಅಲ್ಸೆ ಕವಿರಾಜ ಎಂ. ಜಿ. ಶೆಣೈ, ಡಾ. ಕೆ. ಎಲ್. ಐತಾಳ್, ಕೆ. ಹೊನ್ನಯ್ಯ ಶೆಟ್ಟಿ ಮೊದಲಾದವರು ಶ್ರೀ ಬನ್ನಂಜೆಯವರಿಗೆ ಪತ್ರಿಕಾ ವ್ಯವಸಾಯದಲ್ಲಿರುವ ದಕ್ಷತೆಯ ಕುರಿತು ಮಾತನಾಡಿ ಶುಭ ಕೋರಿದರು. ಶ್ರೀ ಬನ್ನಂಜೆಯವರು ಮಿತ್ರರ ಸದ್ಭಾವನೆಗಳಿಗೆ ಆಭಾರ ಸೂಚಿಸಿ ಮಾತನಾಡಿದರು. ಅಧ್ಯಕ್ಷ ಶ್ರೀ ಪೈಗಳು ಉತ್ತಮ ಲೇಖಕರಾದ ಶ್ರೀ ಬನ್ನಂಜೆಯವರು ನವಭಾರತದ ಮೂಲಕ ಜಿಲ್ಲೆಗೂ, ರಾಜ್ಯಕ್ಕೂ ಕೀರ್ತಿತರುವಂತಾಗಲೆಂದು ಹಾರೈಸಿದರು. ಶ್ರೀ ಯು. ಎಸ್. ಭಟ್ಟರು ಧನ್ಯವಾದವನ್ನರ್ಪಿಸಿದರು.

ಉಡುಪಿಯಲ್ಲಿ ಶ್ರೀ ಮಂತ್ರಿ ಸುಬ್ರಹ್ಮಣ್ಯಂರವರು — ಮೈಸೂರಿನ ಸ್ಥಾನಿಕ ಸಚಿವ ಶ್ರೀ ಟಿ. ಸುಬ್ರಹ್ಮಣ್ಯಂ ಅವರು ಮೇ 30ರಂದು ಉಡುಪಿಗೆ ಆಗಮಿಸಿ ಪೌರ ಸಭೆಯವರು ಏರ್ಪಡಿಸಿದ ಉಪಹಾರ ಸತ್ಕಾರದಲ್ಲಿ ಭಾಗವಹಿಸಿ ನಗರ ಸಭಾಪತಿ ಡಾ. ಕೆ. ಎಲ್. ಐತಾಳರು ಕೊಟ್ಟ ಮನವಿಯನ್ನು ಸ್ವೀಕರಿಸಿದರು. ಮನವಿಗೆ ಉತ್ತರವಾಗಿ ಮಂತ್ರಿಗಳು ನಗರ ಸಭೆಯು ಕಟ್ಟಲಿರುವ ಮಾರ್ಕೆಟಿಗೆ ಸಾಲದ ಸೌಕರ್ಯವನ್ನು ಒದಗಿಸಬಹುದೆಂದೂ ನಳ್ಳಿ ನೀರಿನ ಯೋಜನೆಗೆ ಸಾಕಷ್ಟು ಸಹಾಯ ಒದಗಿಸಲಾಗುವದೆಂದೂ ಚರಂಡಿ ಯೋಜನೆಗೆ ಸ್ವಲ್ಪ ಸಮಯ ಹೋಗಬಹುದೆಂದೂ ಮುಂತಾಗಿ ಉತ್ತರವಿತ್ತರು. ಆ ನಂತರ ಮಂತ್ರಿಗಳು ಮಲ್ಪೆಗೆ ಹೋಗಿ ಬಂದರವನ್ನು ಪರಿಶೀಲಿಸಿದರು. ಮಲ್ಪೆಯನ್ನು ಮೀನುಗಾರಿಕೆಯ ರೇವಾಗಿ ಮಾಡುವ ಸಾಧ್ಯಾಸಾಧ್ಯತೆಯ ಕುರಿತು ಪರಿಶೀಲನೆ ಮಾಡಲಾಗುತ್ತಿದೆ ಎಂದರು.

(೬ನೇ ಪುಟದಿಂದ)

ತ್ತಿ ಕೈಗೊಂಡಿರುವ ವಿನೋಬಾ ಭಾವೆಯವರು ಆದರ್ಶ ಕಾರ್ಯ ಮಾಡುತ್ತಿದ್ದಾರೆಂಬ ಅಭಿಪ್ರಾಯ ಒಂದೆಡೆ ಪ್ರಕಟಗೊಳ್ಳುತ್ತಿದ್ದಂತೆ ಅವರು ಪೋಲಿಸು ಕಾಯಿದೆಯನ್ನು ಮೀರಿ ನಡೆಯುತ್ತಿದ್ದಾರೆಂದೂ ಅವರ ಕಾರ್ಯಕ್ರಮದಿಂದ ಪೋಲೀಸು ದಳದವರು ತಮ್ಮ ಕರ್ತವ್ಯವನ್ನು ನೆರವೇರಿಸುವುದು ಅಸಾಧ್ಯವಾಗುತ್ತದೆಯೆಂದೂ ಮಧ್ಯಪ್ರದೇಶದ ಪೋಲೀಸ್ ವರಿಷ್ಠರಾದ ಶ್ರೀ ರುಸ್ತುಂ ಒಂದು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದರು. ಆದರೆ, ಶ್ರೀ ರುಸ್ತುಂರವರ ಹೇಳಿಕೆಗೆ ವಿರುದ್ಧಾಭಿಪ್ರಾಯವೂ ಅಲ್ಲಲ್ಲಿ ಹೊರಬಿದ್ದಿದೆ.

ಸ್ಥಾನ ತುಂಬಲು ಸಮಿತಿ

ಮೈಸೂರು ರಾಜ್ಯದಲ್ಲಿಯ ವಿವಿಧ ಇಂಜನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ನಡೆಸಲು ಅಭ್ಯರ್ಥಿಗಳನ್ನು ಆರಿಸುವ ಸಲುವಾಗಿ ಪ್ರತ್ಯೇಕ ಅಧಿಕಾರಿ ಸಮಿತಿಯೊಂದನ್ನು ರಚಿಸಲು ಸರಕಾರವು ಉದ್ದೇಶಿಸಿದೆ. ಇದರಿಂದಾಗಿ, ಸಮಿತಿಯು ಯಾವ ಪ್ರಭಾವಕ್ಕೂ ಬಲಿಬೀಳದೆ, ಸರಕಾರವು ಹೊರಡಿಸುವ ಆಜ್ಞೆಗನುಗುಣವಾಗಿ ಸೀಟುಗಳನ್ನು ಹಂಚುವದೆಂದೂ ಮತ್ತು ಈ ಬಗ್ಗೆ ಯಾವ ಗೊಂದಲವೂ ಉಂಟಾಗುವ ಸಂಭವವಿಲ್ಲವೆಂದೂ ಸರಕಾರ ಭಾವಿಸಿದೆ.

ಕೇರಳದಲ್ಲಿ ಕೇಬಲ್ ಕಾರಖಾನೆ

ಕೇರಳದ ಎರ್ನಾಕುಲಮ್‌ನಲ್ಲಿರುವ ತಾಕರೋಲ್ ಕೇಬಲ್ ಕಂಪೆನಿ ಲಿ; ಮತ್ತು ಜಾಪಾನಿನ ಫುರುಕುವಾ ಇಲೆಕ್ಟ್ರಿಕ್ ಕಂಪೆನಿ ಲಿ. ಗಳ ನಡುವೆ ಒಂದು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದರಿಂದ, ಜಾಪಾನೀ ಸಂಸ್ಥೆಯು ಕೇರಳದಲ್ಲಿ ಕೇಬಲ್ ಕಾರಖಾನೆಯೊಂದನ್ನು ತೆರೆಯಲು ತಾಂತ್ರಿಕ ಸಹಾಯ ಮತ್ತು ತಜ್ಞರ ಸಹಾಯವನ್ನು ನೀಡುವುದು. ಈ ಕಾರಖಾನೆಯು ಮುಂದಿನ ವರ್ಷದಲ್ಲಿ ಸಂಪೂರ್ಣವಾಗುವ ನಿರೀಕ್ಷೆಯಿದೆ. ಜಾಪಾನು ಕೊಡಮಾಡುವ ಯಂತ್ರ ಆಯಾತವು ಎರಡು ವರ್ಷಗಳಿಗೆ ಮೊದಲು ಅದು ಭಾರತಕ್ಕಿತ್ತ ಯೆನ್ ಸಾಲದಿಂದ ಬರುವುದೆಂದೂ, ಬಂಡವಾಳ ವೆಚ್ಚವೆಲ್ಲವೂ ಭಾರತದ್ದೆಂದೂ ತಿಳಿದಿದೆ.

ವೆರ್ವರ್ಡರಿಗೆ ಮನವಿ

ದಕ್ಷಿಣ ಆಫ್ರಿಕೆಯ ನಿವಾಸಿಗಳಲ್ಲಿ ಸುಮಾರು ೧೫ ಲಕ್ಷ ನೌಕರರ ಒಡೆಯರಾದ ೫ ಸಂಸ್ಥೆಗಳ ಮಾಲಕರು ಪ್ರಧಾನ ಮಂತ್ರಿ ಶ್ರೀ ವೆರ್ವರ್ಡರಿಗೊಂದು ಮನವಿಯನ್ನು ಸಲ್ಲಿಸಿ ಅನುಮತಿ ಚೀಟಿ ಪದ್ಧತಿಯೇ ಮೊದಲಾದ ಕೆಲವು ಆಫ್ರಿಕನರಿಗೆ ಮಾತ್ರ ಅನ್ವಯಿಸಲಾಗುವ ನಿಯಮಗಳನ್ನು ಸಡಿಲು ಬಿಡಬೇಕೆಂದೂ, ಇದರಿಂದ ವರ್ಣದ್ವೇಷವು ಕಡಿಮೆಯಾಗುವುದೆಂದೂ ತಿಳಿಸಿದರು. ಆಂದೋಲನಗಾರರು ಅವಿರತವಾಗಿ ಹೋರಾಡುತ್ತಿರುವುದರ ಹಿಂದೆ ಬಲವಾದ ವಿವಂಚನೆಯಡಗಿದೆ ಎಂದೂ ಆ ಮನವಿಯಲ್ಲಿ ಹೇಳಲಾಗಿತ್ತು.

ಕುಂದಾಪುರ ಅಸಿಸ್ಟೆಂಟ ಕಮಿಶನರ ಕೋರ್ಟಿನಲ್ಲಿ

O. P 225/1960

ರಾಮಚಂದ್ರಯ್ಯ ಕೂಡಾ—

— ಅರ್ಜಿದಾರರು.

ಮತ್ತು

ಬಚ್ಚಿ ಮರಕಾಲ್ತಿ ಕೂಡಾ —ಎದ್ರಿರು,

ಇವರೊಳಗೆ

1ನೇ ಎದ್ರಿ—ಬಚ್ಚಿ ಮರಕಾಲ್ತಿ—ಅಣ್ಣಯ್ಯ ಮರಕಾಲನ ಹೆಂಡ್ತಿ ಉಡ್ಪಿ ತಾಲ್ಲೂಕು ಸಾಂಡೇಶ್ವರ ಗ್ರಾಮ—ಇವರಿಗೆ—

ಎದ್ರಿರು ಮೈರ್ಕೊಮೆ ಅನಂತಯ್ಯನವರ ಮಗಳು ಗೌರಮ್ಮನ ಒಳಗೆ ಅರ್ಜಿಯಲ್ಲಿ ವಿವರಿಸಿದ ಆಸ್ತಿಯನ್ನು ಚಾಲಗೇಣಿ ಅನುಭವಿಸಿ ಬರುವ ಆಸ್ತಿ ಬಾಬ್ತು ಕಳೆದ ದುರ್ಮುಖಿ ಸಂ|ರದ ಲಾಗ್ವಾತು ಗೇಣಿ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿ ಗೌರಮ್ಮನ ಮರಣಾನಂತ್ರ ಅರ್ಜಿದಾರರಿಗೆ ಅರ್ಜಿಯಲ್ಲಿ ನಮೂದಿಸಿದ ಪ್ರಕಾರ ಹಕ್ಕು ಬಂದು ಆಸ್ತಿಯನ್ನು ಸ್ವಾಧೀನ ಕೇಳಿ ವಗೈರೆ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ. 15—6—60ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವ್ಸ ಪೂರ್ವಾಹ್ನ 11 ಗಂಟೆಗೆ ಉಡ್ಪಿ ಕೋರ್ಟಿನಲ್ಲಿ ಹಾಜ್ರಾಗ ತಕ್ಕದ್ದು ಎಂತ ಸಂಗ್ತಿಯನ್ನು ಈ ಮೂಲಕ ತಿಳಿಯಪಡಿಸೋದಾಗಿಯದೆ—

(By order of the Court).

Sri P N Krishnamurthi Rao,
Advocate for Petitioner.

Udipi, S. K.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಅಭಾರ ಮನ್ನಣೆ

ನಮ್ಮ ಪುತ್ರಿ ವಿಲಾಸಳಿಗೆ ಜಗನ್ನಾಥ ಶೆಟ್ಟರೊಡನೆ ಜ್ಯೋತಿ ಟಾಕೀಸಿನಲ್ಲಿ ತಾ. 27-5-1960ರಂದು ವಿವಾಹವಾದ ಶುಭಸಂದರ್ಭದಲ್ಲಿ ಆಗಮಿಸಿದವರಿಗೂ ಶುಭಾಶಯಗಳನ್ನು ಕಳಿಸಿದವರಿಗೂ ಉಚಿತ ಉಡುಗೊರೆಗಳನ್ನಿತ್ತವರಿಗೂ ಈ ಮೂಲಕ ನಾವು ನಮ್ಮ ಹಾರ್ದಿಕ ಧನ್ಯವಾದಗಳನ್ನರ್ಪಿಸುತ್ತೇವೆ. ಮತ್ತು ಇದನ್ನೆ ವೈಯಕ್ತಿಕ ಕೃತಜ್ಞತೆಯೆಂದು ಪರಿಗಣಿಸಬೇಕಾಗಿಯೂ ವಿನಂತಿಸುತ್ತೇವೆ.

ಶ್ರೀಮತಿ ಮತ್ತು ಶ್ರೀಯುತ
ಪಿ. ಎಮ್. ಹೆಗ್ಡೆ.

ಸೀತಾ—ಸದನ್' ಮಂಗಳೂರು-3.
ತಾ. 8-6-1960.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಿತ್ರ ಸತ್ಯ

ಹೆಂಗಸರೇ ಇಲ್ಲದ ದೇಶವಿದು!

೨೦ನೆ ಶತಮಾನದ ಅತ್ಯಾಧುನಿಕ ಕಾಲದಲ್ಲೂ ನಾರಿಯರಿಲ್ಲದ ದೇಶವಿದೆ ಎಂದರೆ ನೀವು ವಿಸ್ಮಿತರಾಗಬಹುದು; ಆದರೆ, ಏಥೋಸ್ ದೇಶದಲ್ಲಿ ನಾರಿಯರು ಮಾತ್ರವಲ್ಲ, ಸ್ತ್ರೀ ಜೀವಿಗಳೆಲ್ಲವೂ ಪ್ರತಿಬಂಧಿಸಲ್ಪಟ್ಟಿದ್ದಾರೆ.

ಯೂನಾನ್ ದೇಶದಿಂದ ಏಜಿಯನ್ ಸಾಗರದ ಕಿನಾರೆಯಲ್ಲಿ ೪೦ ಮೈಲು ಮುಂದುವರಿದರೆ, ಒಂದು ಪರ್ಯಾಯದ್ವೀಪವು ಇರುವುದು. ಇದರಲ್ಲಿ ಏಥೋಸ್ ಪರ್ವತಗಳ ಸನ್ಯಾಸಿಗಳು ವಾಸವಾಗಿರುತ್ತಾರೆ. ಈ ಜನರು ಇಂದಿಗೂ ಯೂನಾನಿನ ಪರಂಪರಾಗತ ಧರ್ಮದಲ್ಲಿ ವಿಶ್ವಾಸ ಪ್ರದರ್ಶಿಸುತ್ತಾರೆ; ಅಲ್ಲದೇ ಕುಮಾರಿ ಮೇರಿಯು ತಮ್ಮ ಪರ್ಯಾಯ ದ್ವೀಪದಲ್ಲಿ ವಾಸಾರ್ಪಣೆ ಮಾಡಿರುವಳೆಂದು ನಂಬುತ್ತಾರೆ.

ಕುಮಾರಿ ಮೇರಿಯ ಆಗಮನದಿಂದ ಒಂದುಬಾರಿ ಪವಿತ್ರವಾದ ಈ ಪರ್ಯಾಯ ದ್ವೀಪದ ಪಾವಿತ್ರ್ಯವನ್ನು ನಿರಂತರ ರಕ್ಷಿಸುವ ಸಲುವಾಗಿಯೋ ಎಂಬಂತೆ ಕಳೆದೊಂದು ಸಾವಿರ ವರ್ಷಗಳಿಂದಲೂ ನಾರಿಯರ ಆಗಮನಕ್ಕೆ ಇಲ್ಲಿ ಪ್ರತಿಬಂಧವಿರುವುದು. ಇಲ್ಲಿ ನೆಲಸಿಕೊಂಡಿರುವ ಸನ್ಯಾಸಿಗಳು ಈ ಒಂದು ನಿಯಮವನ್ನು ಬಹು ಕಠೋರರೀತಿಯಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ. ಹಾಗಾಗಿ ಸ್ತ್ರೀಯರನ್ನು ಬಿಡಿ, ಹೆಣ್ಣು ಪಶು ಪಕ್ಷಿಗಳು ಕೂಡ ಏಥೋಸ್ ಪ್ರದೇಶದಲ್ಲಿ ಮೂಗು ಹರಿಸುವುದು ಸಾಧ್ಯವಿರುವುದಿಲ್ಲವೆಂದರೆ, ನಿಮಗೆ ಆಶ್ಚರ್ಯವೆನಿಸಬಹುದು.

ಏಥೋಸ್ ಪರ್ವತವೊಂದು ಅದ್ವಿತೀಯ ಪ್ರದೇಶವಾಗಿದೆ. ಒಂದು ಪರ್ವತ, ಸ್ವಲ್ಪ ಭೂಮಿ, ವಾಸಿಸಲು ತುಸು ಅನುಕೂಲತೆ ಮಾತ್ರ ಇಲ್ಲಿವೆ. ಏಥೋಸ್ ಪ್ರಜಾತಂತ್ರವೆಂದು ಪ್ರಸಿದ್ಧವಾದ ಈ ದೇಶದ ಒಟ್ಟು ಜನಸಂಖ್ಯೆ ಕೇವಲ ನಾಲ್ಕು-ಐದು ಸಾವಿರಗಳ ಒಳಗೆ! ನಾಲ್ಕು ಸಾವಿರ ಸನ್ಯಾಸಿಗಳಲ್ಲದೇ ಇನ್ನೂ ಕೆಲವು ನೂರು ಇತರ ಜನರೂ ಇಲ್ಲಿದ್ದಾರೆ. ಇವರು ಸನ್ಯಾಸಿಗಳ ಸೇವೆ-ಶುಶ್ರೂಷೆಗಳನ್ನು ಮಾಡುತ್ತಿದ್ದು ಇಲ್ಲಿಯೇ ತಳವೂರಿದ್ದಾರೆ. ಸುಮಾರು ಒಂದು ಸಾವಿರ ವರ್ಷಗಳಿಗೆ ಮೊದಲು ಏಥೇಂಶಿಯಸ್ ಎಂಬ ಒಬ್ಬ ಧಾರ್ಮಿಕ ಪುರುಷನು ಇಲ್ಲಿಗೆ ಆಗಮಿಸಿದಾಗ ಕಟ್ಟಿಸಲಾಗಿದ್ದ ಹಳೆಯ ಮಠಗಳಲ್ಲಿ ಕೆಲವು ಈಗಲೂ ಇವೆ. ಹೆಚ್ಚಿನ ಸನ್ಯಾಸಿಗಳು ಪರ್ಯಾಯ ದ್ವೀಪದ ಹಳ್ಳಿಗಳಲ್ಲಿ ವಾಸಿಸಿಕೊಂಡಿರುತ್ತಾರೆ. ಈ ಗ್ರಾಮ—ಪತ್ತನಗಳಲ್ಲಿ ಮನೆಗಳು ಮಾತ್ರವಲ್ಲದೆ ಪೇಟೆಗಳೂ ಅಂಗಡಿಗಳೂ ಇವೆ. ಆದರೆ, ನಾರಿಯರು ಮಾತ್ರ ಎಲ್ಲಿಯೂ ಇರುವುದಿಲ್ಲ. ಅಲ್ಲದೇ ಹೆಣ್ಣುನಾಯಿ, ದನ ಮೊದಲಾದ ಹೆಣ್ಣು ಜಾನುವಾರುಗಳೂ ಇಲ್ಲಿ ಎಲ್ಲಿಯೂ ತೋರಿಬರುವುದಿಲ್ಲ. ಆದರೂ ಇತ್ತೀಚೆಗೆ ಒಳ್ಳೆಯ ಮೊಟ್ಟೆಗಳ ಆವಶ್ಯಕತೆಯನ್ನು ಪೂರಯಿಸಿಕೊಳ್ಳಲು ಹೇಂಟೆಗಳನ್ನು ತರುವುದಕ್ಕೆ ಅನುಮತಿ ದೊರೆತಿದೆ. ಮಠಗಳಲ್ಲಿ ನೆಲಸಿರುವ ಸನ್ಯಾಸಿಗಳು ಧಾರ್ಮಿಕ ಚಿಂತನೆಯಲ್ಲಿ ಹಾಗೂ ಚರ್ಚೆಗಳಲ್ಲಿಯೇ ತಮ್ಮ ಸಮಯದಲ್ಲಿ ಬಹ್ವಂಶವನ್ನು ಕಳೆಯುತ್ತಾರೆ. ಉಳಿದ ಹೊತ್ತು ಸಾಂಸಾರಿಕ ಕಾರ್ಯಗಳಲ್ಲಿ ವಿನಿಯೋಗವಾಗುತ್ತದೆ.

ಏಥೋಸ್ ಪರ್ವತಕ್ಕೆ ಹೊಸತಾಗಿ ಆಗಮಿಸಿದ ನವಪುರುಷನೊಡನೆ ಆತನು ಏಕೆ ಮತ್ತು ಎಲ್ಲಿಂದ ಬಂದನು ಎಂದು ಯಾರೂ ಪ್ರಶ್ನಿಸುವುದಿಲ್ಲ. ವಿರಾಮ ಕಾಲದಲ್ಲಿ ಕೆಲವರು ಇಲ್ಲಿ ವಾಸಿಸಲು ಆಗಮಿಸುತ್ತಾರೆ. ಇನ್ನು ಕೆಲವರು ಕೆಲವರ್ಷ ಇದ್ದು ಹೋಗೋಣವೆಂದೂ ಬೇರೆ ಕೆಲವರು ಬಾಹ್ಯ ಜಗತ್ತಿನ ಕಷ್ಟವನ್ನು ದೂರೀಕರಿಸುವುದಕ್ಕಾಗಿ ಇಲ್ಲವೇ ಶಾಂತಿಯ ಸಂಶೋಧನೆಗಾಗಿಯೂ ಏಥೋಸನ್ನೇ ಮರೆ ಹೋಗುತ್ತಾರೆ.

ಇಲ್ಲಿರುವ ಸನ್ಯಾಸಿಗಳನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು. ಮೊದಲನೆಯ ವರ್ಗದವರಲ್ಲಿ ತಮ್ಮದೆಂಬ ಒಂದೇ ಒಂದು ವಸ್ತು ಕೂಡ ಇರುವುದಿಲ್ಲ ಎಂದರೆ, ಅವರೊಡನೆ ಉಡಲು ಬಟ್ಟೆಗಳೂ ಇಲ್ಲ! ಎಲ್ಲವೂ ಮಠಗಳ ಸೊತ್ತುಗಳಾಗಿವೆ. ಎರಡನೆಯ ಗುಂಪಿನವರು ತಮ್ಮದೆಂಬುದನ್ನುಳಿಸಿಕೊಂಡು ಬಂದಿದ್ದಾರೆ: ಭೂಮಿಯನ್ನೂ ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುವವರಿದ್ದಾರೆ.

ಕ್ಯಾರೀಸ್ ಎಂಬುದು ಈ ಪರ್ಯಾಯ ದ್ವೀಪದ ರಾಜಧಾನಿಯಾಗಿದೆ. ೨೦ ಸನ್ಯಾಸಿಗಳ ಒಂದು ಸಮಿತಿಯು ದೇಶವನ್ನಾಳುತ್ತದೆ. ಈ ಸನ್ಯಾಸಿಗಳು ಬೇರೆ ಬೇರೆ ೨೦ ಪ್ರಧಾನ ಮಠಗಳನ್ನು ಪ್ರತಿನಿಧೀಕರಿಸುತ್ತಾರೆ. ಕೆಲವು ಮಠಗಳಿಗೆ ಪ್ರಪಂಚದ ನಾನಾ ಕಡೆಯಲ್ಲಿರುವ ಭೂಭಾಗಗಳಿಂದ ಸಾಕಷ್ಟು ಸಂಪತ್ತು ದೊರೆಯುತ್ತದೆ; ಅವುಗಳ ಸದಸ್ಯರಾದರೂ ಶ್ರೀಮಂತರಾಗಿರುತ್ತಾರೆ. ಕೆಲ ಮಠಗಳ ಸದಸ್ಯರು ವಸತಿಹೀನರಾಗಿ ಏಥೋಸಕ್ಕೆ ಬಂದಿದ್ದರು; ಇವರು ಕೃಷಿಮಾಡಿ ಇಲ್ಲವೇ ಮೀನುಹಿಡಿದು ತಮ್ಮ ಉದರಂಭರಣೆ ಮಾಡುತ್ತಾರೆ. ಇನ್ನು ಕೆಲವು ಸನ್ಯಾಸಿಗಳು ಈ ಪರ್ಯಾಯದ್ವೀಪದ ಉತ್ತಮ ಫಲ, ಹುಲ್ಲು, ಮರ, ಇವ್ವಲು ಮೊದಲಾದ ಪದಾರ್ಥಗಳನ್ನು ಯೂನಾನಿಗೆ ಮಾರಿ ಹೇರಳ ಹಣ ಕಮಾಯಿಸುವುದೂ ಇದೆ.

ಏಥೋಸ್‌ನ ಸ್ಥಾಪನೆಯಾದ ಸಮಯದಲ್ಲಿ ಬೈಜೆಂಟಾಯಿನ್ ಸಾಮ್ರಾಜ್ಯವು ತನ್ನ ವೈಭವದ ತುತ್ತ ತುದಿಯನ್ನೇರಿತ್ತು. ಇಂದಿಗೂ ಇದರ ಗತಗುರುತುಗಳು ಏಥೋಸ್‌ನಲ್ಲಿ ಲಭಿಸುತ್ತವೆ. ಮಠಗಳ ವಿಶಾಲ ಕಲಾಪೂರ್ಣ ಭಿತ್ತಿ ಚಿತ್ರಗಳು, ಹಸ್ತಲಿಖಿತ ಗ್ರಂಥಗಳು ಇಂದಿಗೂ ಆ ಯಶಸ್ವೀ ಸಾಮ್ರಾಜ್ಯಕ್ಕೆ ಗೌರವವನ್ನು ತಂದೀಯುತ್ತವೆ. ಆದರೆ, ಸ್ವಯಂ ಮೌಂಟ್ ಏಥೋಸ್ಸಿನ ಕೀರ್ತಿಯು ಕ್ರಮಕ್ರಮೇಣ ಲೋಪವಾಗುತ್ತ ಬರುತ್ತಿರುವುದು ಆಶ್ಚರ್ಯದ ಸಂಗತಿ. ಇಲ್ಲಿ ತಳವೂರಲು ಆಗಮಿಸುತ್ತಿರುವ ಪುರುಷರ ಸಂಖ್ಯೆ ವರ್ಷಪ್ರತಿ ಇಳಿಯುತ್ತ ಬರುತ್ತಿದೆ.



ಕೇಂದ್ರ ಮೂಲಿಕಾ ಸಂಶೋಧನಾಲಯ

೧೯೫೧ ರಲ್ಲಿ ಭಾರತ ಸರಕಾರವು ಲಖನೌನಲ್ಲಿ ಕೇಂದ್ರ ಮೂಲಿಕಾ ಸಂಶೋಧನಾಲಯವನ್ನು ಸ್ಥಾಪಿಸಿತು. ದೇಶದಲ್ಲಿ ದೊರೆಯುವ ಎಲ್ಲ ವಿಧದ ಮೂಲಿಕೆಗಳ ಸಹಾಯವನ್ನು ರಾಷ್ಟ್ರೀಯರಿಗೆ ದೊರಕಿಸಲು ಇದೂ, ಇನ್ನಿತರ ಇದೇ ಮಾದರಿಯ ಸಂಸ್ಥೆಗಳೂ ಪ್ರಯತ್ನಿಸುತ್ತವೆ. ಸಂಶೋಧನಾಲಯದ ಬಯೋ-ಕೆಮಿಸ್ಟ್ರಿ ವಿಭಾಗದಲ್ಲಿ ಓರ್ವ ತಜ್ಞನು ಕೋಲೆರಾ ರೋಗಾಣುಗಳ ಬಗ್ಗೆ ಪರಿಶೀಲನೆ ನಡೆಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಕಲಾಕ್ಷೇತ್ರ

(೪ನೇ ಪುಟದಿಂದ)

ಪಡಿಸುವ ಒಂದು ಮಹಾ ಸಾಧನವಾಗಿದೆ. ಇದಕ್ಕೆಲ್ಲ ಇಂದಿನ ನಾಟಕಕಾರರೇ ಕಾರಣ. ಸಮಾಜದ ಒಳಿತು ಕೆಡುಕುಗಳು ಅವರ ಕೈಯಲ್ಲಿದೆ. ಅವರು ಒಳ್ಳೆಯವರಾದರೆ ಸಮಾಜ ಒಳ್ಳೆಯದು ಕೆಟ್ಟವರಾದರೆ ಸಮಾಜ ಕೆಟ್ಟದಾಗುತ್ತದೆ. ಅಂದಿನ ಇಂದಿನ ನಾಟಕಗಳು ಸಾಹಿತ್ಯದ ಒಂದು ಭಿನ್ನ ಅಂಗವಾಗಿದ್ದು ಕೊಂಡು ಅದೊಂದು ಪ್ರಭಾವ ಶಾಲಿಯೂ, ಪ್ರಗತಿಶೀಲವೂ ಆದ ಒಂದು ಭಾಗವಾಗಿದೆ.

ಸಮಾಜವೆಂದರೆ ವ್ಯಕ್ತಿಗಳ ಸಮೂಹ ಅದರಲ್ಲಿ ಒಳ್ಳೆಯವರಿದ್ದಾರೆ, ಕೆಟ್ಟವರಿದ್ದಾರೆ, ವಿದ್ಯಾವಂತರಿದ್ದಾರೆ, ಅವಿದ್ಯಾವಂತರಿದ್ದಾರೆ. ಭಿನ್ನ ಭಿನ್ನ ಧರ್ಮದವರಿದ್ದಾರೆ. ಭಿನ್ನಭಿನ್ನ ದೇವರನ್ನು ನಂಬಿದ ವ್ಯಕ್ತಿಗಳಿದ್ದಾರೆ. ಅಂತೂ ಹಲವಾರು ವ್ಯಕ್ತಿಗಳು ಸೇರಿದ ಒಂದು ಗುಂಪು ಒಂದು ಸಮಾಜವೆನಿಸುವುದು. ಪ್ರತಿಯೊಂದು ನಾಟಕವನ್ನು ನೋಡುವ ಪ್ರೇಕ್ಷಕರು ಸಮಾಜದ ವ್ಯಕ್ತಿಗಳಾಗಿದ್ದಾರೆ. ಇದರಿಂದ ವ್ಯಕ್ತಿಯ ಮೇಲೆ ಬಿದ್ದ ನಾಟಕದ ಪ್ರಭಾವವು ಸಮಾಜದ ಮೇಲೆ ಬೀಳುತ್ತದೆ. ಅದು ಒಳ್ಳೆಯದಾಗಲಿ, ಕೆಟ್ಟದಾಗಲಿ ಯಾವ ನಾಟಕವು ಸಮಾಜದಲ್ಲಿಂದು ಆಗುತ್ತಿರುವ ಅಕ್ರಮ, ಅನೀತಿ, ಅಧರ್ಮ, ಅವಿಚಾರಗಳನ್ನು ಖಂಡಿಸಿ, ಆ ಖಂಡನೆಯ ವಿಚಾರವು ಹಾಳಾದ್ದೂ, ಆ ಅನೀತಿಯನ್ನು ನಾವು ದೂರಪಡಿಸಬೇಕು, ಅಕ್ರಮವನ್ನು ಹೊಗಲಾಡಿಸಿ ಒಳ್ಳೆಯ ಕ್ರಮದಿಂದಿರಬೇಕು, ರೀತಿನೀತಿ, ಆಚಾರವಿಚಾರಗಳಿಗೆ ಪ್ರಾಧಾನ್ಯವನ್ನು ಕೊಡಬೇಕು, ಧರ್ಮಕ್ಕೆ ವಿಧೇಯರಾಗಬೇಕು ಎಂಬ ಭಾವನೆಯು ವ್ಯಕ್ತಿಯ ಮನಸ್ಸಿಗೆ ಹೊಳೆದು, ತನ್ನ ಹಿಂದಿನ ಅಕೃತ್ಯಗಳಿಗೆ ಪಶ್ಚಾತ್ತಾಪ ಪಟ್ಟು, ಇನ್ನು ಮುಂದಿನಿಂದಲಾದರು ನಾನು ಒಳ್ಳೆಯವನಾಗಿ, ಸಮಾಜವನ್ನು ಉದ್ಧರಿಸಬೇಕು ಎಂಬ ಭಾವನೆಯನ್ನು ಪ್ರೇಕ್ಷಕನ ಮನಸ್ಸಿಗೆ ಹೊಳೆಯುವಂತೆ ಮಾಡಿ, ಅದರ ಪ್ರಭಾವದಿಂದ ಅವನನ್ನು ಸಮಾಜ ಸುಧಾರಣೆಗೆಳಸಿದರೆ ಅದೊಂದು ಸಮಾಜವನ್ನು ಉದ್ಧರಿಸುವ, ಉತ್ತಮ ಕಥಾ ವಸ್ತುವಿನಿಂದ ಕೂಡಿದ ನಾಟಕವೆಂದು ಹೇಳಬೇಕು. ಇದನ್ನೇ ನಮ್ಮ ಸಮಾಜವು ತನ್ನ ಉದ್ಧಾರದ ಸಾಧನವೆಂದು ಸ್ವೀಕರಿಸೀತು. ಇದರಿಂದ ಜನತೆಯ, ಸಮಾಜದ, ದೇಶದ, ವಿಶ್ವದ ಉದ್ಧಾರವಾದೀತು. ವಿಶ್ವತ್ವ ಧರ್ಮದಿಂದ ಮೆರೆದೀತು. ಚಿರಶಾಂತಿಯು ನೆಲಸೀತು.

— ಶ್ರೀ ಎಸ್. ದತ್ತಾರಾಮ ಪೈ, ಸಾಲಿಕೇರಿ.

…ದ್ಧ ಹರಟೆ—

…ಹ್ಮಚಾರಿಗಳ ಬೃಹತ್ ಸಂಘ ಸ್ಥಾಪನೆಯಾಗಬೇಕು

ಮಹನೀಯರೆ! ಮಹಿಳೆಯರೆ! ನೀವೆಲ್ಲರೂ ಮುಂದೆ ಬ್ರಹ್ಮಚಾರಿಗಳಾಗಿ ಮೃತ್ಯುಮುಖದಲ್ಲಿರುವ ಭಾರತವನ್ನುಳಿಸಿರಿ

'ಕುಟುಂಬ ಯೋಜನೆ', (family …anning) 'ಜನನ ನಿಯಂತ್ರಣ'ದ …ಗು ಈಗ ಎಲ್ಲೆಡೆಯಿಂದಲೂ ಕೇಳಿ …ತ್ತಿದೆ. ದೇಶದಲ್ಲಿ ಜನನ ನಿಯಂತ್ರಣ …ಗದೆ ಹೋದರೆ ನಾವು ಪಟ್ಟ ಶ್ರಮ …ರ್ಥವಾಗಬಹುದು. ನಮ್ಮ ಯೋಜನೆ …ಳು ತಲೆಕೆಳಗಾಗಬಹುದು ಎಂದು ನ…ಮ್ಮಲ್ಲಿಯ ದೇಶ ಬಾಂಧವರನೇಕರು ಹೇ…ಕೊಳ್ಳುತ್ತಿದ್ದಾರೆ. ಅವರಲ್ಲಿ ಕೆಲವರನ್ನು …ಚಾರಿಸಿದಾಗ ಸರಾಸರಿ ಅವರಿಗೆಲ್ಲಾ …ವರೊಂದು ಡಜನಿನಂತೆ ಮಕ್ಕಳಿರುವ …ಗತಿ ಈಗಾಗಲೆ ತಿಳಿದುಬಂದಿದೆ.

ವರ್ಷಂಪ್ರತಿ ಜನನ ಸಂಖ್ಯೆ ಹೆಚ್ಚುತ್ತ ಯೆಂಬುದಕ್ಕೆ ನಾನು ಪ್ರತ್ಯಕ್ಷ ಉದಾ…ರಣೆಯೊಂದನ್ನೀಯುತ್ತೇನೆ. ನಾನು …ನ್ನ ಎಳೆಯ ಪ್ರಾಯದಲ್ಲೇ ನಮ್ಮ ಮನೆ…ಲ್ಲಿ ಹತ್ತು ಮಕ್ಕಳು ಜನಿಸುವುದನ್ನು …ಡಿದ್ದೇನೆ. ಪುಣ್ಯಕ್ಕೆ ನಮ್ಮಲ್ಲಿ ಕಳೆದ … ವರ್ಷಗಳಿಂದ ಯಾರು ಸತ್ತಿಲ್ಲವೆನ್ನ…ಲೂ ಅದೇನೊ ಸಂತೋಷವಾಗುತ್ತದೆ. …ಯಲು ಸಿದ್ಧರಾದವರು ಅವರ ಹಣೆ…ರಹದಿಂದಲೊ, ದೇಶದ ಅದೃಷ್ಟದಿಂದ …ಸಾಕುವವರ ವೈದ್ಯೆಯದಿಂದಲೊ …ಥವ ಡಾಕ್ಟರರ ಇಂಜೆಕ್ಷನ್ ಬಲದಿಂದ …ಲೂ ಬದುಕಿಕೊಳ್ಳುತ್ತಾರೆ. ಹೀಗೆ 10 …ರ್ಷ ಕಳೆವರೆ ನಮ್ಮ ಪರಿಸ್ಥಿತಿ ಹೇಗೊ …ಬ ಸಂದೇಹ ನನಗುಂಟಾಗುತ್ತಿದೆ.

ಹದಿನೇಳು ಮಕ್ಕಳ 'ಅಪ್ಪಾ' ಒಬ್ಬರು …ನ್ನ ಬಲು ಸಮೀಪದ ಮಿತ್ರರಾಗಿದ್ದಾರೆ. …ನಗೇಕೊ ಅವರನ್ನು ಕಂಡೊಡನೆ ಏನೊ …ತಿ' ಸ್ಥಿತಿಅಂತಾರಲ್ಲ ಅದೇ ಆಗುತ್ತದೆ. …ಕೆಂದರೆ ಅವರ ಕೈಯಲ್ಲಿ ಒಂದೆರಡು …ದ್ದಿನ ಬಾಟ್ಲಿ ಅಥವಾ ಒಂದೆರಡು ಸ್ಲೇ…ಕಡ್ಡಿ ಮತ್ತು ಪುಸ್ತಕಗಳು ಎಂದೂ …ಪ್ಪಿದ್ದಿಲ್ಲ. ನಾನು ಅವರನ್ನೊಮ್ಮೆ ಹೀಗೆ …ಗುತ್ತಾ ಪ್ರಶ್ನಿಸಿದೆನು— "ಇದೇನು …ಸ್ವಾಮಿ! ತಮ್ಮ ಕೈಯಲ್ಲಿ ಆಯುಧಗ…ಳ?" ಎಂದು.

"ಸಂಸಾರ ಸಮರದಲ್ಲಿ ಹೋರಾಡಲು …ಕಾಗುವ ಆಯುಧ ಸಾಮಾಗ್ರಿಗಳು …ವು" ಎಂದವರು ತುಂಬಾ ಅಭಿಮಾನ…ದಿಂದ ಉತ್ತರಕೊಟ್ಟರು.

ಅವರಲ್ಲಿ ದೇಶಭಕ್ತನಲ್ಲಿರಬಹುದಾದ ಕೃ…ಜ್ಞತಾಭಾವ ಕೂಡಾ ಅಡಗಿದೆ. ಅವರು …ಲವುಸಲ ನನ್ನಲ್ಲಿ ಹೇಳುವುದಿದೆ—"ಬರ… ಚೀನಾ ಮುಂದೊತ್ತಿ ಬರಲಿ! ಶೃಂಗ …ಮ್ಮೇಳನ ಅಯಶಸ್ವಿಯಾದ್ದರಿಂದ ಮೂ…ನೆಯ ಜಾಗತಿಕ ಯುದ್ಧವಾಗಲಿ! ನ…ಮ್ಮ ಭಾರತ ನಮ್ಮಂತಹ ಧೀರ ಪುರುಷ…ದಯೆಯಿಂದಲೆ ಸುರಕ್ಷಿತವಾಗಿ ಉಳಿ…ಯುವುದು. ನಿಮ್ಮಂತಹ ಬ್ರಹ್ಮಚಾರಿಗಳಿಂ… ದೇಶ ಭದ್ರವಾಗಿರಲಾರದು." ಎಂದು.

ಜಟಿಲವಾದ ನಮ್ಮ ಆಹಾರ ಸಮಸ್ಯೆ…ಯನ್ನು ಬಿಡಿಸಲು ಅಸಮರ್ಥರಾಗಿ ನ…ಮ್ಮ ಮಾಜಿ ಕೇಂದ್ರ ಸಚಿವ ಶ್ರೀ ಎ. ಪಿ. …ನರು ರಾಜಿನಾಮೆಯಿತ್ತರು ನಮ್ಮ …ಪ್ರಾಂತ ಸಚಿವರು ಕೆಲವು ತಿಂಗಳಿಗೊಬ್ಬ…ರಂತೆ, ಮಂತ್ರಿ ಮಂಡಲ ಬದಲಾವಣೆ…ಯಾಗದಿದ್ದರೂ, ತಮ್ಮ ಆಹಾರ ಖಾತೆ…ಯನ್ನು ವರ್ಗಾಯಿಸಿಕೊಳ್ಳುತ್ತಿದ್ದಾರೆ. ಪೇಟೆಯ ಧಾನ್ಯಗಳ ಧಾರಣೆ ಹೆಚ್ಚಿದೆ ಯೆಂದು ಹೇಳಿ ಅನೇಕರು ಮುಷ್ಕರವ…ನ್ನು ಹೂಡುವುದಂತೂ ವಾಡಿಕೆಯಾಗಿದೆ. ಸತ್ಯಾಗ್ರಹ, ಸಂತೆ ಮಾರ್ಕೆಟಿನ ತರಕಾರಿ…ಯನ್ನು ಆಗ್ಗವಾಗಿದೆ. ಇವೆಲ್ಲದಕ್ಕೂ ಕಾ…ರಣ ಹುಟ್ಟುವವರ ಸಂಖ್ಯೆ ಹೆಚ್ಚಾಗಿ ಸಾ…ಯುವವರ ಸಂಖ್ಯೆ ಕಡಿಮೆಯಾದುದ…ಲ್ಲವೆ?

ದೇವಾಲಯದಿಂದ ಹೊರ ಬಂದ ಮಿ…ಮಿತ್ರರೊಬ್ಬರನ್ನು ಕೇಳಿದೆ—"ಏನು ಸ್ವಾ…ಮಿ! ದೇವರಲ್ಲಿ ಏನನ್ನು ಬೇಡಿದಿರಿ"ಯೆಂ…ದು. ಅದಕ್ಕೆ ಅವರಿಂದ ಬಂದ ಉತ್ತರ ಬಹಳ ಸ್ವಾರಸ್ಯವಾಗಿದೆ.

"ವಿಶೇಷವೇನೂಯಿಲ್ಲ. ನಮ್ಮ ನೆರ…ಮನೆ ಸೀತಾರಾಮರಾಯರಿಗೆ ಜ್ವರ ಬರು…ತ್ತಿದೆ. ಎರಡು ತಿಂಗಳು ಅವರು ರಜೆ ಪಡೆ…ದಿದ್ದಾರೆ. ಕಾಯಿಲೆ ಸ್ವಲ್ಪ ಗುಣವಾಗು…ತ್ತಿದೆಯಂತೆ. ನನಗೀಗ ಅವರ ರಜೆಯಲ್ಲಿ ಕೆಲಸಕ್ಕೆ ಆರ್ಡರ ಬಂದಿದೆ. ನಾನೀಗ ಕೆ…ಲಸದಲ್ಲಿದ್ದೇನೆ ಆರ್ಡರ ಬಂದು ಹತ್ತು ದಿನಗಳು ಸಂದವು. ನಾಳಿನಿಗೆ ರಜೆ ಮು…ಗಿಯುತ್ತೆ. ನನ್ನ ಕೆಲಸ ಮುಂದುವರಿಯ…ಬೇಕಾದರೆ ಅವರು ರಜೆ ಮುಂದುವರಿಸ…ಬೇಕು."

"ಅದಕ್ಕೇಕಪ್ಪ! ನೀವು ದೇವಸ್ಥಾನಕ್ಕೆ ಬಂದಿರಿ?"

"ಹೇಗಾದರೂ ಅವರು ರಜೆ, ಆರು ತಿಂಗಳಾದರೂ ಮುಂದವರಿಸುವಂತೆ ಮಾ…ಡೊ ಪರಮಾತ್ಮ. ನನ್ನದೊಂದು ಸಣಗೆ ಹರಕೆ ಎಂದು ಹರಕೆ ಹೊತ್ತು ಬರುತ್ತಿ…ದ್ದೇನೆ"ಎಂದರು.

ಇಲ್ಲಿ ಈ ನಿರುದ್ಯೋಗ ಸಮಸ್ಯೆಯ ಹಿಂದೆ ಜನಸಂಖ್ಯೆಯ ಸಮಸ್ಯೆಯು ತಾಂ…ಡವವಾಡುತ್ತಿದೆ. ದೇಶದಲ್ಲಿಂದು ಅಶಾಂ…ತಿ ಹೆಚ್ಚಲು ಕಾರಣ ಜನಸಂಖ್ಯೆ. ಇದನ್ನು ತಡೆಗಟ್ಟುವುದು ಅನಿವಾರ್ಯವಾಗಿದೆ.

ಶಾಲೆಯೊಬ್ಬ ಮಾಸ್ತರರನ್ನು ಭೇಟಿ…ಯಾದಾಗ ಅವರು ಹೇಳಿದರು. "ಏನು ಸ್ವಾಮಿ! ಹಿಂದೆ ಒಂದು ಕ್ಲಾಸಿನಲ್ಲಿ ಹ…ಚ್ಚೆಂದರೆ ಮೂವತ್ತು ಹುಡುಗರಿರುತ್ತಿದ್ದ…ರು. ಈಗ ನೋಡಿ ಅರುವತ್ತು ಹುಡುಗರ…ನ್ನು ತುಂಬಿಸುತ್ತಾರೆ. ಅದಕ್ಕೊಂದು ಮಿ…ತಿಯೆ ಇಲ್ಲ. ಪ್ರತಿನಿತ್ಯ ಪೂ…'ಬ್ಲೇಕ ಹೋಲ್ ಆಫ್ ಕಲ್ಕತ್ತಾ'ದ ಸನಸು ಬರುತ್ತಿದೆ. ನಮಗೆ ಎಂದು ಹೇಳಿ…ದರು.

ಇವರ ಮಾತಿನಲ್ಲೂ ಜನನ ಸಮಸ್ಯೆ…ಯೇ ಅಡಗಿದೆಯಷ್ಟೆ!

ಒಂದುದಿನ ನಾನು ಮಳೆಯ ದಿನಗಳ…

ಭಾರತದ ಯುದ್ಧ ನೌಕೆಯೊಂದನ್ನು ನೀರಿಗಿಳಿಸುವುದನ್ನು ಕಾಣಬಹುದು.

…ಲ್ಲಿ ಮನೆಬಿಟ್ಟು ಬರುತ್ತಿದ್ದಾಗ ತೋಡಿನ ಬದಿಯಲ್ಲಿ ಜನರ ಗುಂಪು ಸೇರಿದ್ದನ್ನು ಕಂಡೆನು. ಸಮೀಪ ಹೋಗಿ ಒಬ್ಬನನ್ನು ವಿಚಾರಿಸಿದೆನು. ಆತನು —"ಇಲ್ಲೊಂದು ಮಗು ಬಿದ್ದಿದೆ. ಹುಟ್ಟಿ ನಾ…ಲ್ಕಾರು ತಾಸು ಕಳೆದಿರಬಹುದು. ನೀರಲ್ಲಿ ಬಂದಿದೆ. ಸತ್ತು ಹೋಗಿದೆ." ಎಂದು ಹೇ…ಳಿದನು.

ಅದು ತನಕ ನನ್ನ ಮಿದುಳು ಜನನ ಸ…ಮಸ್ಯೆಯ ಬಗ್ಗೆ ತೀವ್ರ ಗತಿಯಲ್ಲಿ ಯೋ…ಚಿಸುತ್ತಿತ್ತು. ಥಟ್ಟನೆ ಯೋಜನೆಗೊಂದು ಪರಿಹಾರ ಹೊಳೆಯಿತು. ಮನೆಗೆ ಹಿಂತು…ರುಗಿದವನೆ "ಬ್ರಹ್ಮಚಾರಿಗಳ ಬೃಹತ್ ಸಂಘ"ವನ್ನು ಸ್ಥಾಪಿಸಬೇಕೆಂದು ನಿರ್ಣ…ಯಿಸಿದೆನು.

ನಮ್ಮ ಸಂಘಕ್ಕೆ ಅಗ್ನಿ ಸಾಕ್ಷಿಯಾಗಿ ಆಗಲಿ, ಇಲ್ಲವೆ ರಿಜಿಸ್ಟ್ರಿ ಮೂಲಕವಾಗಿ ಯಾಗಲಿ ಮದುವೆ ಯಾಗದವರೆ ಕಾಯಂ ಸದಸ್ಯರಾಗಿರುವರು. ಲೈಂಗಿಕ ಕಾಮನೆ…ಯನ್ನು ತೀರಿಸಿಕೊಂಡವರಿಗೆ ಅಥವಾ ಕೊಳ್ಳುವವರಿಗೆ ವಿನಾಯಿತಿಯನ್ನೀಯ…ಲಾಗುವುದು. ಮದುವೆಯಾಗದೆ ಮಕ್ಕ…ಳು ಜೀವಂತವಿದ್ದವರನ್ನು ದೇಶದ್ರೋಹಿ…ಗಳ ಸಾಲಿಗೆ ಸೇರಿಸಲಾಗುವುದು. ಅವರಿ…ಗೆ ನಮ್ಮ ಸಂಘದ ಸದಸ್ಯತ್ವದ ಹಕ್ಕೇ ಇರಲಾರದು.

ಉದ್ದೇಶ, ಮೃತ್ಯು ಮುಖದಲ್ಲಿರುವ ಭಾರತವನ್ನು ಉಳಿಸುವುದೇ ಆಗಿದೆ. ದೇ…ಶಭಕ್ತರಾಗಿ, ದೇಶೋದ್ಧಾರಕರಾಗಿ ಜಗ…ದೋದ್ಧಾರ ಮಾಡಬೇಕೆಂಬ ಅಭಿಲಾಷೆ…ಯುಳ್ಳವರೆಲ್ಲರೂ ಒಂದಾಗಿ ಮೇಲೆ ಹೇಳಿ…ದ ಸಂಘವನ್ನು ಸ್ಥಾಪಿಸಿವರೆ, ನಡೆಸಿದರೆ, ಮುನ್ನಡೆಸಿದರೆ, ಮುನ್ನಡೆಸುವ ಭರವಸೆ…ಯುಳ್ಳವರಾದರೆ ನಮ್ಮ ದೇಶದ ಯೋಜ…ನೆಗಳು ಪೂರ್ಣ ಫಲಪ್ರದವಾಗುವುದೆಂ…ದು ಹೇಳಿ ನನ್ನ ಲೇಖನಿಗೆ ವಿರಾಮವನ್ನೀ…ಯುತ್ತೇನೆ.

—ಕುಂತಳಾಪ್ರಿಯ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು.

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಕಳಿಸಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA' WEEKLY is in the list of periodicals and Newspapers approved or use in Secondarys School as per proceedings Roc· No· 466 N/50 date 2-12-1950 of the Director of public Instruction Madras·

ವಿಚಾರವರ್ಷ

(೩ನೇ ಪುಟದಿಂದ)

ಮುಂದಿನ ಅರ್ಧಶತಮಾನದ ಕಾಲಾವಧಿಯಲ್ಲಿ ಪಶ್ಚಿಮಯೂರೋಪು, ಆಂಗ್ಲಭಾಷೆಯಾಡುವ ಉತ್ತರ ಅಮೇರಿಕೆಯ ಭಾಗಗಳು ಮೊದಲಾದುವುಗಳಲ್ಲಿ ವಿಶ್ವಾಸ ಉತ್ಪನ್ನ ಮಾಡುವುದು ಅಸಂಭವವೆನಿಸಲಾರದು. ಈ ಭಾಗಗಳಲ್ಲಿ ಇಂದಿಗೂ ಸಾಕಷ್ಟು ಸಾಂಸ್ಕೃತಿಕ ಏಕತೆಯಿರುವುದು. ಈ ಐಕ್ಯವನ್ನು ಮಧ್ಯಯುಗದಲ್ಲಿ ರೋಮನ್ ಕೆಥೋಲಿಕರೂ ನಮ್ಮ ಕಾಲಾವಧಿಯಲ್ಲಿ ವಿಜ್ಞಾನ ಮತ್ತು ವೈಜ್ಞಾನಿಕ ಯಂತ್ರತಂತ್ರಗಳೂ ಬೆಳೆಸಿಕೊಂಡು ಬಂದಿವೆ. ಈ ಪ್ರದೇಶಕ್ಕೆ ಪೂರ್ವ ಯುರೋಪಿನಿಂದ ಗಂಡಾಂತರ ಬರುವ ಅಂಜಿಕೆಯಿದೆ. (ಇದು ಸರಿಯೋ, ತಪ್ಪೋ ಅದು ಮುಂದಿನ ವಿಚಾರ.) ಇದರಿಂದಾಗಿ ಇಲ್ಲಿ ರಾಜಕೀಯ ಐಕ್ಯಕ್ಕಾಗಿ ತುರುಸಿನಿಂದ ಆಂದೋಲನವು ನಡೆಯುತ್ತಿದೆ; ಕೆಲ ಸಮಯದಲ್ಲಿಯೇ ಇವುಗಳ ನಡುವೆ ಆರ್ಥಿಕ ಸಹಯೋಗವೂ ಶಾಶ್ವತೀಕರಿಸಲ್ಪಡುವುದು.

ಪಾಶ್ಚಾತ್ಯ ಶಕ್ತಿಗಳು ತಮ್ಮ ರಾಷ್ಟ್ರಗಳ ಸದಸ್ಯರಲ್ಲಿ ಅಂತಾರಾಷ್ಟ್ರೀಯ ಐಕ್ಯ ಭಾವನೆಯನ್ನು ಹುಟ್ಟಿಸಲು ಉತ್ಸಾಹ ತೋರಿಸುವುದು ನಿಜವೆಂದಾದರೆ, ಅವು ತುಸು ಪರಿಶ್ರಮ ಪಡಬೇಕು. ಒಂದು ಹೊಸ ಇತಿಹಾಸ ಪುಸ್ತಕವನ್ನು ರಚಿಸಿ ಅದನ್ನು ಎಲ್ಲ ಸದಸ್ಯ ರಾಷ್ಟ್ರಗಳ ಶಾಲೆಗಳಲ್ಲೂ ಅನುಸರಿಸಬೇಕು. ಸದಸ್ಯ ರಾಷ್ಟ್ರಗಳಲ್ಲಿ ಒಂದು ಹೆಚ್ಚಿನದು ಇನ್ನೊಂದು ಕಡಿಮೆಯದು ಎಂಬ ಭಾವ ಮೂಡಲು ಎಂದೆಂದಿಗೂ ಆಸ್ಪದವೀಯಬಾರದು. ಈ ರಾಷ್ಟ್ರಗಳ ನಡುವೆ ಈ ಮೊದಲು ನಡೆದಿರಬಹುದಾದ ಎಲ್ಲ ಯುದ್ಧಗಳನ್ನೂ ಗೃಹಯುದ್ಧವೆಂದು ತಿಳಿಯಬೇಕು. ಈ ರಾಜ್ಯಸಂಘಟನೆಯು ಪರಸ್ಪರ ಶತ್ರುತ್ವವನ್ನು ಬಿಟ್ಟು, ಪಾರಸ್ಪರಿಕ ಮಿತ್ರತ್ವದ ಮೂಲಕವಾಗಿಯೇ ಮಾನವ ಸೇವೆಯನ್ನು ಹೆಚ್ಚಾಗಿ ಮಾಡುವುದು ಸಾಧ್ಯವೆಂಬುದನ್ನು ಸದಸ್ಯ ರಾಷ್ಟ್ರಗಳ ಜನತೆಯಲ್ಲಿ ಮೂಡಿಸಬೇಕು.

ಇವೆಲ್ಲ ರಾಷ್ಟ್ರಗಳಿಗೂ ಒಂದೇ ರಾಷ್ಟ್ರಗೀತೆಯಾಗಬೇಕು. ಇಂದಿನಂತೆ ಒಂದೊಂದು ದೇಶದ ಧ್ವಜ ಮತ್ತು ಗೀತೆಗಳು ನಮ್ಮ ಮಕ್ಕಳ ಮನಸ್ಸನ್ನು ಕೆಡಿಸಬಾರದು, 'ವಿಶ್ವಾಸ'ವನು ಎಚ್ಚರಿಸುವ ಭರದಲ್ಲಿ ಇವನ್ನು ನಾವು ಮರೆಯಬೇಕಾಗಿಲ್ಲ. ಇವನ್ನು ನಾವು ನೂತನಾದರ್ಶಗಳ ಸೂಚಕವನ್ನಾಗಿ ಮಾಡಬೇಕು. ಪಾತಕರು ಈ ಸೂಚನೆಯನ್ನು ಖಂಡಿತಕ್ಕೂ ವಿರೋಧಿಸುತ್ತಾರೆ. ನನ್ನ ಮನಸ್ಸೂ ಇದಕ್ಕೆ ಒಪ್ಪುವುದಿಲ್ಲ.

ಆದರೆ, ಈ ಪ್ರತಿರೋಧವೇ ಇಂತಹ ಪರಿವರ್ತನೆಯಾಗುವುದು ಅಗತ್ಯವೆಂದು ಪ್ರಮಾಣೀಕರಿಸುತ್ತದೆ.

ಐಕ್ಯ ಭಾವನೆಯನ್ನು ಜಾಗ್ರತಗೊಳಿಸುವ ಒಂದೇ ಒಂದು ಉಪಾಯವಿರುವುದು; ಅಲ್ಲದೇ ಇದು ಗಂಡಾಂತರಕಾರಿಯೆಂದೂ ಅದು ಸಿದ್ಧಗೊಳಿಸುವುದು. ರಾಜ ಅಥವಾ ರಾಷ್ಟ್ರಪತಿಯು ರಾಷ್ಟ್ರದ ಪ್ರತೀಕವಾಗಿದ್ದಾನೆ. ಅಂತಾರಾಷ್ಟ್ರೀಯ ಐಕ್ಯ ಭಾವನೆಯನ್ನು ನಾವು ಬೆಳೆಸುವುದಾದರೆ, ಇಂತಹ ಅಂತಾರಾಷ್ಟ್ರೀಯ ಸಂಘಟನೆಯು ಪ್ರತೀಕನೋರ್ವನಿರಬೇಕು. ಇಂದು ರಾಜ ಇಲ್ಲವೇ ಸಾಮ್ರಾಟರು ಇರುವುದಿಲ್ಲ. ಪ್ರತಿಜ್ಞಾವಿಧಿ ಸ್ವೀಕರಿಸಿದ ರಾಷ್ಟ್ರಪತಿಯೇ ಇಂತಹ ಪ್ರತೀಕವಾಗಿರಬಲ್ಲನು. ಆದರೆ, ಇದರಿಂದ ಎರಡು ಅಪಾಯಗಳು ತಲೆದೋರಬಹುದು. ಮೊದಲನೆಯದಾಗಿ ರಾಷ್ಟ್ರಪತಿಯು ಸರ್ವಾಧಿಕಾರಿಯಂತಾಗಬಹುದು; ಎರಡನೆಯದಾಗಿ ಯಾವ ರಾಷ್ಟ್ರದ ವ್ಯಕ್ತಿ ರಾಷ್ಟ್ರಪತಿಯಾಗಬೇಕು ಎಂಬ ಪ್ರಶ್ನೆಯು ಜಟಿಲವಾಗಿ ಸದಸ್ಯ ರಾಷ್ಟ್ರಗಳೊಳಗೆ ಸ್ಪರ್ಧೆ ಬೆಳೆದು ಮುಂದೆ ಕಲಹಗಳು ನಡೆಯಬಹುದು. ಮೊದಲನೆಯ ಅಪಾಯವನ್ನು ದೂರೀಕರಿಸುವುದಕ್ಕೆ ಬ್ರಿಟನ್ನಿನ ರಾಣಿಗಿರುವ ಅಧಿಕಾರವನ್ನಷ್ಟೇ ಇಂತಹ ರಾಷ್ಟ್ರಪತಿಯವರಿಗೆ ಈಯಬಹುದು. ಎರಡನೆಯದಕ್ಕೆ ಜನಸಂಖ್ಯೆ ಕಡಿಮೆಯಿರುವ ದೇಶದವನೇ ರಾಷ್ಟ್ರಪತಿಯಾಗಿ ಆರಿಸಲ್ಪಡಬೇಕೆಂದು ನಾನು ಬಯಸುತ್ತೇನೆ. ಈ ಎರಡು ವ್ಯವಸ್ಥೆಗಳು ನಡೆದುವೆಂದರೆ, ನನ್ನ ವಿಚಾರದಲ್ಲಿ ರಾಷ್ಟ್ರಪತಿಯು ಆಜೀವವಾಗಿ ಚುನಾಯಿಸಲ್ಪಡಬೇಕು; ಮಂದಿರ ಇಗರ್ಜಿಗಳಲ್ಲಿ ಆತನ ಆರೋಗ್ಯಕ್ಕಾಗಿ ಪ್ರಾರ್ಥಿಸಲ್ಪಡಬೇಕು ಮತ್ತು ಅವನಿಗೆ ೨೧ ತೋಪುಗಳಿಗಿಂತಲೂ ಹೆಚ್ಚಿನ ಗೌರವವೀಯಬೇಕು.

ವಿಶ್ವರಾಜ್ಯದ ವಿಕಾಸಕ್ಕೆ ಬಾಧಕವಾಗಿರುವ ಸಂಗತಿಗಳು ವಿಶ್ವವ್ಯಾಪಿಯಲ್ಲವೆ ಸೀಮಿತವಾಗಿರುವ ರಾಷ್ಟ್ರಸಮೂಹದಲ್ಲಿ ವಿಶ್ವಾಸ ಹುಟ್ಟಿಸುವುದರಲ್ಲಿ ಸಹಾಯಕವಾಗುವುವು. ಇಂದು ಎರಡು ಅಥವಾ ಹೆಚ್ಚು ರಾಷ್ಟ್ರಗಳ ನಡುವೆ ಇಂದು ಕಾಣುವ ಐಕ್ಯವು ಶತ್ರುಗಳ ಭಯದಿಂದಲೇ ಉತ್ಪನ್ನವಾಗಿದೆ. ಶಿಕ್ಷಣದಲ್ಲಿ ಮತ್ತು ರಾಜನೀತಿ ಪ್ರಚಾರದಲ್ಲಿ ಇದಕ್ಕೆ ಬಲವತ್ತರವಾದ ಸ್ಥಾನವನ್ನು ಕೊಡುವುದರಿಂದ ಏಕತೆಯ ಭಾವನೆಯನ್ನು ಸುಲಭದಲ್ಲಿ ಜಾಗ್ರತಗೊಳಿಸಬಹುದು. ತನ್ನ ರಾಷ್ಟ್ರವನ್ನು ಇತರ ರಾಷ್ಟ್ರಗಳಿಂದ ಶ್ರೇಷ್ಠವೆಂದು ಹೇಳಿಸಿಕೊಳ್ಳುವುದರಿಂದಲೂ ಈ ಕಾರ್ಯ ಕೈಗೂಡಬಹುದು. ಸಂಕುಚಿತ ರಾಷ್ಟ್ರೀಯತೆಯ ಯಮಪಾಶದಿಂದ ಮುಕ್ತವಾಗುವುದಕ್ಕೆ ಮಾತ್ರ ಈ ಉಪಾಯಗಳು ಪ್ರಯೋಜನಕಾರಿಯಾಗಿವೆ. ವ್ಯಾವಹಾರಿಕ ದೃಷ್ಟಿಯಿಂದ ಮಾತ್ರ ಇವು ಬಾಧಕಗಳೇ ಹೊರತು ಸಾಧಕಗಳಲ್ಲ. ಅನೇಕ ಕಾರಣಗಳಿಂದ ಇಂದು ಬೇರೆಬೇರೆಯಾಗಿರುವ ರಾಷ್ಟ್ರಗಳನ್ನು ಸಂಘಟಿತ ಸಮೂಹವಾಗಿಸುವುದು ಅತಿ ಅವಶ್ಯಕವಾಗಿದೆ; ಮಾನವ ಸಂಸ್ಕೃತಿಯೆದುರು ನಿಂತಿರುವ ಭಯಾನಕ ಸಮಸ್ಯೆಯನ್ನು ಸಮಸ್ತ ವಿಶ್ವವೇ ಒಂದಾಗುವುದರಿಂದಲೇ ಬಗೆಹರಿಸಬಹುದು.

ವಿಶ್ವರಾಜ್ಯಕ್ಕೆ ಸಹೇತುಕವಾಗಬಲ್ಲ ಭಾವನೆಗಳ ಬಗ್ಗೆ ಮೊದಲು ನಮ್ಮ ನಾಯಕರಿಗೆ ಮತ್ತು ಜನತೆಗೆ ಶಿಕ್ಷಣವನ್ನು ನೀಡಬೇಕು. ನಾವು ಸಮಗ್ರ ಮಾನವ ಜಗತ್ತನ್ನು ಒಂದೆಂದು ಭಾವಿಸುವುದಕ್ಕೆ ಕಲಿಯಬೇಕು. ಎಲ್ಲ ಜನತೆಯ ಕಾರ್ಯಕ್ರಮಗಳ ಮೇಲೆ, ಸಾಧನ ಸಿದ್ಧಿಯ ಮೇಲೆ-ಭಾಷೆ, ಕೃಷಿ, ಕಲೆ, ವಿಜ್ಞಾನ, ಉದ್ಯೋಗ ಮೊದಲಾದುವುಗಳು-ನಮ್ಮ ದೃಷ್ಟಿಯನ್ನಿಡಬೇಕು. ಪ್ರಾಣಿ ಜೀವನದ ಪ್ರಕ್ರಿಯೆಗಳು ವಿಕಾಸಗೊಂಡು, ಸಂಸ್ಕೃತಿಯು ಬೆಳೆದ ರೀತಿಯನ್ನು ನಾವು ಅಭ್ಯಸಿಸಬೇಕು. ಸಂಸ್ಕೃತಿಯು ಬೆಳೆದಂತೆ ಎಲ್ಲೆಡೆಯಲ್ಲೂ ಏಕರೂಪದ ಘಟ್ಟವನ್ನು ಮುಟ್ಟಿ ಮುಂದೆ ಅಲ್ಲಿಯೇ ತಡೆದುದರಿಂದ ಇಲ್ಲವೇ ಯುದ್ಧಗಳು ಸಂಭವಿಸಿದುದರಿಂದ ಹೇಗೆ ಭಿನ್ನಭಿನ್ನವಾದುವು ಎಂಬ ವಿಚಾರವನ್ನು ಮಕ್ಕಳಿಗೆ ಕಲಿಸುವಾಗ ಅವಶ್ಯ ತಿಳಿಸಬೇಕು.

ಅರ್ಥವ್ಯವಸ್ಥೆಯತ್ತ ಪೃಥಕ್‌ಭಾವನೆಯನ್ನು ಕೇಳಿಸುವುದಕ್ಕಿಂತ ಅಧಿಕಾಧಿಕ ರಾಷ್ಟ್ರಗಳ ಒಕ್ಕೂಟದಿಂದ ಸಂಪತ್ತು ಅಭಿವೃದ್ಧವಾಗುವುದೆಂಬುದನ್ನು ತೋರಿಸಿಕೊಡಬೇಕು. ಮಾನವನಲ್ಲಿ ಮಾನವತೆಯನ್ನೂ, ಮಾನವನಲ್ಲಿ ಆತ್ಮೀಯತೆಯನ್ನೂ ಪ್ರದರ್ಶಿಸಬಲ್ಲ ಸದ್ಭಾವನೆಯನ್ನು ಮೂಡಿಸಬೇಕು. ಒಂದು ಹೊಸ ವಿಚಾರ ಮುಂದೆ ಬಂದೊಡನೆಯೇ ಮಾನವ ಸಮೂಹದ ಮೇಲೆ ಇದು ಯಾವ ಪರಿಣಾಮ ಬೀರಬಹುದು ಎಂಬತ್ತ ಗಮನವನ್ನು ಮೊತ್ತ ಮೊದಲಿಗೆ ನಾವು ಹರಿಸಬೇಕು.

ಅಮೆರಿಕೆಯ ಸಾಜ್ವಂತಸ್ನಿನ ಫೋರ್-ಏಬಲ್ ರಾಕೆಟ್ ಪಯೊನೀರ್-೫ ಉಪಗ್ರಹದೊಂದಿಗೆ ಆಕಾಶಕ್ಕೆ ನೆಗೆಯಿತು.

ಸಫಲತೆಯ ಆಶೆಯನ್ನು ಬೆಳೆಸುವ ಕೂಡನೆ ಅಪಾಯದ ಸೂಚನೆಗಳನ್ನೂ ಯುಕ್ತಿಯಿಂದ ತಿಳಿಸಬೇಕಾಗುತ್ತದೆ. ಅಣುಬಾಂಬುಗಳಿಂದ ಮಾನವಗಣವು ಸಂಪೂರ್ಣ ನಾಶವಾಗುವುದು—ಎಂಬ ವಿಷಯವನ್ನು ತಿಳಿಸಬೇಕೆ? ಪ್ಲೇಗು, ಸಿಡುಬು ಮೊದಲಾದ ಬೇನೆಗಳಿಂದ ನರಳುತ್ತಿರುವವರನ್ನು ನಮ್ಮ ಸಮ್ಮಿಳಿತ ಪ್ರಯತ್ನಗಳಿಂದ ಗುಣಪಡಿಸಬಹುದೆಂದು ಹೇಳಿ ಕೊಡಬೇಕೆ? ಸುಮ್ಮನೆ ಕೈಕಟ್ಟಿ ಕೂತಿರುವುದರಿಂದ, ಜಗತ್ತಿನ ಜನಸಂಖ್ಯೆಯು ಏರಿ, ಆಹಾರ ಪ್ರಶ್ನೆಯು ಗಂಭೀರವಾಗಿರುವುದೆಂದು ತಿಳಿಸುವುದು ಅಗತ್ಯವೆ? ಇಂತಹ ಅನೇಕ ವಿಶ್ವವ್ಯಾಪೀ ಸಮಸ್ಯೆಗಳಿವೆ. ಇವೆಲ್ಲಕ್ಕೂ ಸಮುಚಿತ ಸಮಾಧಾನ ದೊರೆಯುವುದು ಅಸಂಭವ; ಏಕೆಂದರೆ ಇಡೀ ಮಾನವ ಜಾತಿಯ ದೃಷ್ಟಿಯಿಂದ ಇವುಗಳ ಮೇಲೆ ಯಾವ ರೀತಿಯಲ್ಲೂ ವಿಚಾರ ಮಾಡುವುದು ಸಾಧ್ಯವಿಲ್ಲ. ಸರಕಾರವು ತನ್ನ ದೇಶದ ಮಕ್ಕಳಲ್ಲಿ ಈ ಅಪಾಯಗಳ ಪರವಾದ ಶಿಕ್ಷಣವನ್ನೀಯುವ ಕಾರ್ಯವನ್ನು ತೀವ್ರವಾಗಿ ಮುಂದುವರಿಸುವಂತೆ ರಾಷ್ಟ್ರೀಯರಲ್ಲಿ ರಾಷ್ಟ್ರೀಯತೆಯ ಭಾವನೆಯು ಪಸರಿಸುವುದು.

ಆದರೆ, ಈ ಸನ್ನಿವೇಶಕ್ಕೆ ನಾವು ತಲಪಬೇಕಾದರೆ ಬಹುಕಾಲ ಬೇಕಾಗಬಹುದು. ಯೇಸುಕ್ರಿಸ್ತನು "ತನ್ನ ನೆರೆಯವನನ್ನು ತನಗಿಂತಲೂ ಹೆಚ್ಚಾಗಿ ಪ್ರೀತಿಸು" ಎಂದು ಹೇಳಿ ೧೯೬೦ ವರ್ಷಗಳು ಸಂದುವು. ಇದು ಬುದ್ಧಿವಂತಿಕೆಯ ಸಲಹೆ ಎಂದು ತಿಳಿಯಲು ಜನತೆಗೆ ಇನ್ನೆಷ್ಟು ವರ್ಷ ಬೇಕು, ಈ ಪ್ರಶ್ನೆಗೆ ಉತ್ತರ ಯಾರು ಕೊಡಬೇಕು?

(ಸಂಗ್ರಹ: ಗೋ.)



Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೨೫

ನವಯುಗ ಪ್ರೆಸ್, ಉಡುಪಿ ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಸುಖದ ಮೂಲ

ನೀವು ಸುಖಬೇಕೆಂದು ಬಯಸುವಿರಾ?

ಶೀಲ ಸಂಪಾದನೆಯೇ ಧರ್ಮ, ಸತ್ಯ ಮತ್ತು ಸಂಪತ್ತುಗಳಿಗೆ ಮೂಲವಾಗಿದೆ; ಅದರಿಂದಲೇ ಸರ್ವಸುಖ ಪ್ರಾಪ್ತಿಯಾಗುತ್ತದೆ

ಯುಗಾಂತರದ ಕಥೆಯಿದು. ಆಗ ದಾನವಕುಲ ಶಿರೋಮಣಿ ಪ್ರಹ್ಲಾದ ರಾಜ್ಯವಾಳುತಿದ್ದನು. ಆತನ ಶೀಲ ಸೌಜನ್ಯಗಳಿಗೆ ಮನಸೋತ ತ್ರಿಲೋಕದ ಪ್ರಜೆಗಳೆಲ್ಲರೂ ಪ್ರಹ್ಲಾದನನ್ನು ತಮ್ಮ ಅಧೀಶ್ವರನೆಂದು ಒಪ್ಪಿಕೊಂಡರು. ಇಂದ್ರನು ಮರಳಿ ದೇವಲೋಕದ ಸಿಂಹಾಸನವನ್ನು ಉಳಿಸಿಕೊಳ್ಳಲು ಅಸಮರ್ಥನಾಗಿ ಎಲ್ಲೆಲ್ಲಿಯೋ ಹೋಗಿ ಏನೇನನ್ನೋ ಯೋಚಿಸಿ ಹೊತ್ತು ತೆಗೆಯತೊಡಗಿದನು.

ಗುರುವಾದ ಬೃಹಸ್ಪತಿ ಆಚಾರ್ಯರ ಕೂಡನೆ ಆತನು ಕೇಳಿದನು—"ದೇವ, ಐಶ್ವರ್ಯವು ಹೇಗೆ ಪ್ರಾಪ್ತವಾಗುವುದು?" ಬೃಹಸ್ಪತಿಯು ಉತ್ತರಿಸಿದನು—"ಜ್ಞಾನದಿಂದ, ಇಂದ್ರ!" ಇಂದ್ರನಿಗೆ 'ಜ್ಞಾನ'ವೆಂಬ ಪದ ಹೇಗೆ ಮೆಚ್ಚುಗೆಯಾಗಬೇಕು? ಆತ ನೇರಾಗಿ ದಾನವ ಗುರು ಶುಕ್ರರ ಬಳಿಗೆ ಬಂದನು. ಆಚಾರ್ಯ ಶುಕ್ರರು ಎರಡು ಕ್ಷಣ ಯೋಚಿಸಿ, ಮರುಕ್ಷಣವೇ ಹೇಳಿದರು—ದೇವರಾಜನೇ, ನೀನು ಕೇಳಿದ ಪ್ರಶ್ನೆಗೆ ಸರಿಯಾದ ಮತ್ತು ಯಥಾರ್ಥವಾದ ಉತ್ತರವನ್ನು ರಾಜಾ ಪ್ರಹ್ಲಾದನೇ ನೀಡಬಲ್ಲನು. ನೀನು ಆತನನ್ನು ಭೆಟ್ಟಿಯಾಗಿ, ನಿನ್ನ ಸಮಸ್ಯೆಗಳನ್ನು ಆತನ ಮುಂದಿಡು".

ಅನಂತರ ಇಂದ್ರನು ಬ್ರಾಹ್ಮಣನ ವೇಶವನ್ನು ಹಾಕಿಕೊಂಡು ಮಹಾ ನಾವೂಟ ಪ್ರಹ್ಲಾದನ ಮುಂದೆ ಬಂದು ನಿಂತನು. ಪ್ರಹ್ಲಾದನು ಆತನ ಹೇಳಿಕೆಯನ್ನೆಲ್ಲ ಕೇಳಲಿಲ್ಲ, ಆದರೆ ಅವನನ್ನು ತನ್ನ ಬಳಿ ಇರುವಂತೆ ಆದೇಶವಿತ್ತು ಬಿಟ್ಟನು. ಇಂದ್ರನಿಂದ ಬಚ್ಚಿಟ್ಟ ಯಾವುದೇ ಆಚರಣೆಯಾಗಲಿ ವಿಚಾರವಾಗಲಿ ಪ್ರಹ್ಲಾದನಲ್ಲಿ ಇರಲಿಲ್ಲ. ಇಂದ್ರನಿಗಿದರ ಅರಿವಾಯಿತು. ಒಂದುದಿನ ಪ್ರಹ್ಲಾದನು ಇಂದ್ರನೊಡನೆ ಹೇಳಿದನು: "ಬ್ರಾಹ್ಮಣೋತ್ತಮಾ, ವಿಶ್ವದ ಸಕಲ ಐಶ್ವರ್ಯ ಮತ್ತು ವೈಭವಗಳಿಗೆಲ್ಲವೂ ಮೂಲ ಮಾನವನ ಶೀಲವಾಗಿದೆ".

ಮೇಲೆ, ಬ್ರಾಹ್ಮಣನ ಮೇಲೆ ಪ್ರಸನ್ನನಾದ ಪ್ರಹ್ಲಾದನು ಆತನ ಅಪೇಕ್ಷೆಯೇನೆಂದು ಹೇಳುವಂತೆ ಪ್ರಾರ್ಥಿಸಿದನು. ಆಗ ಸಂಕೋಚವು ಅಂಕುರಿಸುವುದಕ್ಕೆ ಮೊದಲೇ ಇಂದ್ರನೆಂದನು: "ಮಹಾರಾಜರು ನನ್ನ ಮೇಲೆ ಪ್ರಸನ್ನರಾಗಿರುವುದು ನಿಜವಾದರೆ, ನಿಮ್ಮ ಶೀಲವನ್ನು ನನಗೆ ಕೊಡೋಣಾಗಲಿ. ಅದರ ಆಧಾರದಿಂದ ನಾನು ಸುಖಿಯಾಗಿ ಜೀವಿಸಲು ಪ್ರಯತ್ನಿಸುವೆನು." ಶೀಲವೆನ್ನುವುದು ಪ್ರಹ್ಲಾದನ ಸರ್ವಸ್ವವಾಗಿತ್ತು. ಇದನ್ನು ಬೇಡಿದ ಬ್ರಾಹ್ಮಣನ ಮೇಲೆ ಆತನಿಗೆ ಕೊಂಚ ಕೋಪವೂ ಬಂದು ಬಿಟ್ಟಿತು. ಆದರೇನುಮಾಡುವುದು ತಾನೇ ಸಾಧ್ಯ? ಈಗ ಬೇಡಿದ ಈ ಬ್ರಾಹ್ಮಣನಿಗೆ ಅಂತಹ ಪವಿತ್ರ ಶೀಲವನ್ನೂ ಕೊಡಬೇಕಾಗಿತ್ತು.

ಛದ್ಮವೇಶಿ ಇಂದ್ರನು ಮಹಾರಾಜನನ್ನು ಬೀಳ್ಕೊಟ್ಟನು. ಆಗ, ಒಂದು ತೇಜೋಮಯವಾದ ಜ್ಯೋತಿಪುಂಜವು ಪ್ರಹ್ಲಾದನ ದೇಹದಿಂದ ಹೊರ ಹೊರಟು ಇಂದ್ರನ ಶರೀರವನ್ನು ಸೇರಿಬಿಟ್ಟಿತು. ಅದು ಶೀಲವಾಗಿತ್ತು. ಅಷ್ಟರಲ್ಲಿ ಇನ್ನೊಂದು ಪ್ರಕಾಶವು ಹೊರಬಂದಿತು. ಪ್ರಹ್ಲಾದನು ಅದರೊಡನೆ ಪ್ರಶ್ನಿಸಿದಾಗ ಅದು ಹೇಳಿತು: "ನಾನು ಧರ್ಮವಾಗಿದ್ದೇನೆ, ಮಹಾರಾಜ, ಶೀಲವಿರುವಲ್ಲಿಯೇ ನಾನು ವಾಸಿಸುತ್ತೇನೆ. ಶೀಲವಿರದ ನಿನ್ನಲ್ಲಿ ನನ್ನಿಂದ ಒಂದರೆ ಕ್ಷಣವೂ ನಿಲ್ಲಲಾರೆ." ನೋಡ ನೋಡುತ್ತಿದ್ದಂತೆಯೇ ಮೂರನೆಯ ಪ್ರಕಾಶಪುಂಜವೊಂದು ಕಾಯವನ್ನು ಬಿಟ್ಟು ಬಂದಿತು. ಹಿಂದಿನಂತೆಯೇ ಇಂದ್ರ ದೇಹವನ್ನು ಅದು ಪ್ರವೇಶಿಸಿತು. ಪ್ರಹ್ಲಾದನು ಕೇಳಿದ ಪ್ರಶ್ನೆಯನ್ನದು ಉತ್ತರಿಸಿತು—"ನಾನು ಸತ್ಯ. ಶೀಲ ಮತ್ತು ಧರ್ಮಗಳ ಸಹಚರ ನಾನು."

ಪ್ರಹ್ಲಾದನ ನಯನದ್ವಯದಲ್ಲಿ ಚಿಂತಾಭಾವ ಗೋಚರಿಸಿತು. ಅಷ್ಟರಲ್ಲಿ ನಾಲ್ಕನೆಯ ಜ್ಯೋತಿಯೊಂದೂ ಹೊರಟಿತು; ಗದ್ಗದ ಕಂಠದಿಂದ ಅದನ್ನು ಕೇಳಿದನು. ಆಗ ವೈಖರಿದಿಂದ ಇಂದ್ರನತ್ತ ಹೋಗ ಹೋಗುತ್ತ ಅದು ಹೇಳಿತು—"ರಾಜನೇ, ನನ್ನನು, ಬಲವೆನ್ನುತ್ತಾರೆ. ನನ್ನ ಸ್ಥಾನವೂ ಈಗ ದೇವರಾಜ ಇಂದ್ರನೆಡೆಗೆ ಸ್ಥಳಾಂತರಿಸಿದೆ." ನೆಟ್ಟ ದೃಷ್ಟಿಯಿಂದ ಪ್ರಹ್ಲಾದನು ಇಂದ್ರನತ್ತ ವೀಕ್ಷಿಸ ತೊಡಗಿದನು. ತತ್‌ಕ್ಷಣದಲ್ಲಿ ಆತನ ಅಂಗಾಂಗ ಮತ್ತು ವಾತಾವರಣವನು ಚುಚ್ಚುತ್ತ ಒಂದು ಪರಮ ತೇಜೋಮಯವಾದ ದೈವೀ ಮೂರ್ತಿ ಪ್ರಕಟಗೊಂಡಿತು. ಅದು ಹೇಳಿತು: "ದಾನವ ಶಿರೋಮಣಿ, ನಾನು ಲಕ್ಷ್ಮಿಯಿದ್ದೇನೆ. ಈಗ ನಾನು ಹೊರಟಿದ್ದೇನೆ. ಆದರೆ, ನೀನು ಈಗ ಮೋಸಹೋದೆ. ಈತನು ತನ್ನ ಚಾತುರ್ಯದಿಂದ ನಿನ್ನೆಲ್ಲ ಸಂಪತ್ತನ್ನು ಅಪಹರಿಸಿ ಅದರ ಮೇಲೆ ಅಧಿಕಾರ ನಡೆಸಲು ಹವಣಿಸಿದ ದೇವರಾಜ ಇಂದ್ರನಾಗಿದ್ದಾನೆ."

ಪ್ರಹ್ಲಾದನು ಸ್ತಬ್ಧನಾಗಿ ಮೆಲ್ಲ ಮೆಲ್ಲನೆ ಮುಂದಡಿಯಿಡುತ್ತಿದ್ದ ಇಂದ್ರನನ್ನು ನೋಡತೊಡಗಿದನು. ಆಗ "ಹರಿಯೇ, ಶೀಲವನ್ನು ಕೊಟ್ಟುಬಿಟ್ಟೆ. ಇದರಿಂದ ಧರ್ಮ ಸತ್ಯ, ಬಲ ಮತ್ತು ಲಕ್ಷ್ಮಿಯರೂ ಯಾವ ಆಧಾರವನ್ನು ಅವಲಂಬಿಸಿಕೊಂಡುಳಿಯಬಲ್ಲರು?" ಎಂಬ ಉದ್ಗಾರತುಟಿಗಳೆಡೆಯಿಂದ ಮೆಲ್ಲನೆ ಹೊರಬಂದು ಗಾಳಿಯಲ್ಲಿ ತೇಲಿಹೋಯಿತು.

ಅಂದಿನಿಂದ, ಪ್ರಹ್ಲಾದನ ಮುಂದಿನ ಜೀವನವು ದಾನವಾಗಿತ್ತು. ಶೀಲವನು ಪುನಃ ಗಳಿಸುವುದರಲ್ಲಿ ಕಳೆಯಿತೇ ಹೊರತು, ರಾಜ್ಯ ಶಾಸನದಲ್ಲಿ ಮುಂದುವರಿಯುವುದು ಅಸಾಧ್ಯವೆನಿಸಿತು.

ಕಥಾ ವಿಹಾರ

(ಎರಡನೆ ಪುಟದಿಂದ)

ಆ ನೂಲಕ ಮುಂಳಿ ಬರಲೇ ಇಲ್ಲ. 'ಆರ್ಯ ಸಮಾಜ'ದವರು ಇವನನ್ನು ಹೊರಗಟ್ಟಿದರು. ಆಗ ಮತ್ತೆ ನನ್ನೆಡೆಗೆ ಬಂದ. 'ಕೊಡಲಿಯೊಂದನ್ನು ಬಾಡಿಗೆಗೆ ಹಿಡಿಯೋಣ' ಎಂದೆ. ಅಷ್ಟರಲ್ಲಿ ಮೇಸ್ತ್ರ ಕೆಲಸಕ್ಕೆ ಹಾಕಿದ ಅರ್ಜಿ ಮುಕ್ಕಟಿ ಹೋಗಲಿಲ್ಲ. ಕೆಲಸಕ್ಕೆ ಕರೆ ಬಂತು. ರಾಜನಿಗೆ, ಆನಂದವಾಯಿತು. ಈ ಊರಿನಿಂದ ೮—೧೦ ಮೈಲು ದೂರದ - ಹಳ್ಳಿಯ ಶಾಲೆಯಲ್ಲಿ ಮೇಸ್ಟ್ರು—ನನ್ನ ರಾಜ ಆದನೆ, ಹೊರಡಲು ಅರಿವೆ—ಹಣದ ವ್ಯವಸ್ಥೆಯಿಲ್ಲ. ತಿಂಗಳವರೆಗೆ ಊಟದ ವ್ಯವಸೆ ಹೇಗೆ? ನನ್ನ ಹಳೆಯ ಪಾಯಿಜಾಮ ಒಂದನ್ನು ಕೊಟ್ಟೆ. ಶರಟನ್ನು ನೋಡುವೆನೆಂದಿದ್ದೆ. ಊಟಕ್ಕೆ—ಎಲ್ಲದಕ್ಕೆ ಅವನ ಕಾಕಾನೇ ಮುಂಬಂದ – ಪತ್ತೆ! ಅಗಾಗ್ಗೆ ಹಣವಿಲ್ಲೆಂದು, ನಿರ್ಗತಿಕನೆಂದು, ಮುಕ್ತಟೆ ಊಟಹಾಕಬೇಕೆಂದು— ಇವನನ್ನು ಹೊರಹಾಕಿದ್ದವರು, ಈಗ ೭೫ ರೂಪಾಯಿ ಕೆಲಸ ಸಿಕ್ಕಿದ್ದನ್ನು ಯಾರಿಂದಲೋ ಕೇಳಿ, ಬಂದು "ಏನು ರಾಜ? ನಮ್ಮನೆ ಕಡೆ ಬಂದೇ ಇಲ್ವಲ್ಲ? ಇದೇ ಊರಲ್ಲಿ ನಮ್ಮನೆ ಇರೋವಾಗ್ಗೆ, ಬೇರೆಡೆಗೆ ನೀನಿರೋದು! ಛೆ! ನಡೆ...." ಎಂದು ಎಬ್ಬಿಸಿ, ಕರೆದುಕೊಂಡು ಹೋಗಿಬಿಟ್ಟರು. ಒಳ್ಳೇದಾಯಿತೆಂದುಕೊಂಡೆ.

ಇದಕ್ಕಾ ನೊದಲೇ ಆ ಮೇಸ್ಟ್ರು ಕೆಲಸಕ್ಕಾಗಿ, ಯಾರಿಗೂ—ಏನೋ ಹೇಳುವದಕ್ಕೆ ದಾರವಾಡಕ್ಕೆ ಹೋಗಿದ್ದ. ಹೋಗಿಬರಲು ದುಡ್ಡಿಲ್ಲದ್ದಕ್ಕೆ, ನಡೆಯುತ್ತಲೇ ಹೋಗಿ, ನಡೆಯುತ್ತಲೇ ಬಂದಿದ್ದ. ರಾತ್ರಿ ೮|| ಆಗಿತ್ತು. ಬಂದು "ಹಸಿವೆಯಾಗಿದೆ, ಹೇಗಾದರೂ ಮಾಡು" - ಎಂದು ಕೇಳಿಕೊಂಡ. ಏನುಮಾಡಲಿ ಆಗ? ನನ್ನ ಹತ್ತಿರ ದುಡ್ಡಿರಲಿಲ್ಲ. ಮತ್ತೆ ನನ್ನ ಸ್ನೇಹಿತರಿಂದ ನಾಲ್ಕಾಣೆ ಸಾಲಮಾಡಿ ಕೊಟ್ಟೆ. ಆ ರಾತ್ರಿ ನನ್ನ ಹತ್ತಿರವೇ ಮಲಗಲು ಸ್ಥಳ ಕೊಟ್ಟೆ.

ಈಗ ಮೇಸ್ಟ್ರು ಕೆಲಸಕ್ಕೆ ಸೇರಿ ೪ ತಿಂಗಳಾಗಿವೆ. ಭೇಟಿಯಾಗಿಯೇ ಇಲ್ಲ. ಮೊನ್ನೆ ಅಗಿದ್ದೆ. ಅವತ್ತು ಸಾಲಮಾಡಿದ್ದ ೪ ಆಣೆಯನ್ನು ಕೇಳಿದೆ.

'ಇಲ್ಲ"ವೆಂದ. ಕೆಲಸಕ್ಕೆ ಸೇರಿ ನಾಲ್ಕು ತಿಂಗಳಾದರೂ ನಾಲ್ಕಾಣೆ ಕೊಡಲಾಗುವದಿಲ್ಲವೇ? ಸಾಧ್ಯವಿಲ್ಲವೇ? ಹಾಗೇ ವಿನೋದಕ್ಕೆ 'ಈಗ ನಾಲ್ಕಾಣೆ' ಕೊಡು ಎಂದೆ.

ಅವನೇನೆಂದ? 'ಎಲ್ಲಿ ನಾಲ್ಕಾಣೆ? ಯಾರು ಕೊಟ್ಟವರು? ಕೇಳುವವ ನೀನಾರು?' ಎಂದು ತಿರುಗಿ ನಿಂತ.

ಆಗ, ನನಗೆ ಹೇಗನಿಸಬಾರದು? ಆತ ಏನು ಕೇಳುತ್ತಾನೆ—

'ಯಾರು ನೀನು?'

ಹೌದು! ನಾನಾರು? ಅವನಿಗೆ ನಾನಾ ೪ ಆಣೆ ಕೇಳುವವ? ನಾನೇನಾದರೂ ಕೊಟ್ಟಿದ್ದೇನೆಯೇ? ಏನಾದರೂ ಸಹಾಯ ಮಾಡಿದ್ದೇನೆಯೇ?....ನಾನಾರು... ಕೇಳುವವ?

....ನಾನಾರು?....

ನಾನಿಷ್ಟು ಸಹಾಯ ಮಾಡಿದ್ದಕ್ಕೆ—ಕರುಣೆ ತೋರಿದಕ್ಕೆ, ಉಪಕಾರವೇ?

ಇದೆಯೇ ಉಪಕಾರ?—

ಕೇಳುವವ ನೀನಾರು?

—ಎಂಥ ಪ್ರಶ್ನೆ!

ನಾನಿಷ್ಟು ಮಾಡಿದ್ದಕ್ಕೆ, ಆತ ಕೊಡುವ ಗೌರವ ಇದೆಯೇ?

ಇಷ್ಟು ಕಲ್ಲು ಹೃದಯ!

ಇಷ್ಟು ಕ್ಷುದ್ರ ಜೀವ!!

ಇಷ್ಟು ಕಟುಗತನ!!!

ಥೂ! ಅದಕ್ಕೇ, ಈಗಿನ ದಿನಗಳಲ್ಲಿ ಯಾರಿಗೂ ಸಹಾಯಮಾಡಬಾರದು—ಕರುಣೆ ತೋರಬಾರದು ಎಂದದ್ದು.

'ಯಾರು ನೀನು?'

'ನೀನು ಯಾರು?

....ಯಾ....ರು....ನಾ....ನು?....

— ರಾಮದಾಸ ಹುಬ್ಬಳ್ಳಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1919

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA
REGD. NO. M. 3619

UDIPI, THURSDAY
9–6–1960

LICENSE NO. 31
Licensed to Post without Prepayment

ಪರಿಚಯ

ಜನರಲ್ ಕಾಮೇಲ್ ಗುರ್ಸೇಲ್

ತುರ್ಕಿಯ ರಕ್ತರಹಿತ ಕ್ರಾಂತಿಯ ನಾಯಕತ್ವವನ್ನು ವಹಿಸಿ, ಯಶಸ್ವಿಯಾದ ಇವರು ನಾಲ್ಕು ತಿಂಗಳೊಳಗೆ ಚುನಾವಣೆ ನಡೆಸುವ ಭರವಸೆಯಿತ್ತಿದ್ದಾರೆ.

ತುರ್ಕಿಯನ್ನು ರಾಜಕೀಯ ಪಕ್ಷಗಳ ತಾಕಲಾಟದ ನಡುವಿನಿಂದ ಬಿಡುಗಡೆಗೊಳಿಸುವ ಸಲುವಾಗಿ ಸೈನಿಕ ಕ್ರಾಂತಿಯ ನೇತೃತ್ವವನ್ನು ವಹಿಸಿದ ಜನರಲ್ ಕಾಮೇಲ್ ಗುರ್ಸೇಲರ ಹೆಸರು ಪ್ರಾಯಃ ಕ್ರಾಂತಿಗೆ ಮೊದಲು ತುರ್ಕಿಯ ಹೊರಗಡೆ ಕೇಳಬಾರದಿರಲೂಬಹುದು. ಆದರೆ, ತುರ್ಕಿಯ ಕ್ರಾಂತಿಯಿಂದಾಗಿ ಇರಾಕಿನ ಕಾಸಿಮರಂತೆ, ಪಾಕಿಸ್ತಾನದ ಅಯೂಬಖಾನರಂತೆ ಸೈನಿಕ ಪ್ರಶಾಸನದ ಸೂತ್ರಧಾರರಾಗಿದ್ದು, ದೇಶವನ್ನು ರಾಜಕೀಯ ಸಂಕಟದ ವಿಪತ್ತಿನಿಂದ ಉಳಿಸುವುದಕ್ಕಾಗಿ ಹಸ್ತಕ್ಷೇಪವನ್ನು ಮಾಡಿ ಜನರಲ್ ಗುರ್ಸೇಲರು ವಿಶ್ವವಿದಿತರಾದರು.

ಜನರಲ್ ಗುರ್ಸೇಲರು ರಾಷ್ಟ್ರಪತಿ ಸೇಲಾಲ್ ಬಾಯರ್, ಪ್ರಧಾನಮಂತ್ರಿ ಶ್ರೀ ಅದನಾನ್ ಮೆಂಡೆರಿಸ್ ಮತ್ತು ಹಿಂದಿನ ಆಡಳಿತೆಯ ಉಚ್ಚ ಸತ್ತಾಧಿಗಳೆಲ್ಲರನ್ನೂ ಕೈದು ಮಾಡಿದನಂತರ, ತಾನು ಸರ್ವಾಧಿಕಾರಿಯಾಗಲು ಅಭಿಲಷಿಸುವುದಿಲ್ಲವೆಂದೂ ಒಂದು—ಒಂದೂವರೆ ತಿಂಗಳುಗಳಲ್ಲಿಯೇ ನೂತನ ಸಂವಿಧಾನವನ್ನು ರಚಿಸಿ, ಮೂರು-ನಾಲ್ಕು ಮಾಸಗಳ ಅವಧಿಯಲ್ಲಿ ದೇಶದೊಳಗೆ ಸ್ವತಂತ್ರ ಮತ್ತು ನಿಷ್ಪಕ್ಷವಾದ ಚುನಾವಣೆಗಳನ್ನು ನಡೆಸುವೆನೆಂದೂ ಘೋಷಿಸಿದರು. ಜನರಲ್ ಗುರ್ಸೇಲರಿಗೆ ಜನರಲ್, ಅಯೂಬಖಾನರಂತೆ, ಚುನಾವಣೆಯ ನಿಶ್ಚಿತ ಅವಧಿಯನ್ನು ತಿಳಿಸುವುದರಲ್ಲಿ ಯಾವ ಕಷ್ಟವೂ ತೋರಿಬರಲಿಲ್ಲ.

ಜನ ಸ್ವಾತಂತ್ರ್ಯ—ಸಂಬಂಧದ ತನ್ನ ಘೋಷಣೆಯನ್ನು ಪುಷ್ಟೀಕರಿಸುವುದಕ್ಕಾಗಿ ಜನರಲ್ ಗುರ್ಸೇಲರ ಸೇನೆಯು ಅಧಿಕಾರಗ್ರಹಣ ಮಾಡಿದೊಡನೆಯೇ ತುರ್ಕಿಯ ಕೆಲವು ಕಾನೂನುಗಳನ್ನು ಸಡಿಲುಗೊಳಿಸಿ, ದೇಶದಲ್ಲಿ ಜನತಾ ಜೀವನವು ಸುಗಮವಾಗಿ ನಡೆಯುವಂತೆಸಗಿ ಅವರ ಕೃತಜ್ಞತೆಗೆ ಪಾತ್ರರಾದರು. ರಕ್ತರಹಿತ ಕ್ರಾಂತಿಯಾದೊಡನೆಯೇ ಅವರು ಆಕಾಶವಾಣಿ ಭಾಷಣವನ್ನು ಮಾಡಿ, ವ್ಯಕ್ತಿಗತ ಸ್ವಾರ್ಥಕ್ಕಾಗಿ ಪ್ರಚಲಿತ ಪರಿಸ್ಥಿತಿಗಳ ಲಾಭ ಗಳಿಸುವವರನ್ನು ವಿರೋಧಿಸುವ ನಿಶ್ಚಯವನ್ನು ಮಾಡಿರುವುದಾಗಿ ತಿಳಿಸಿದರು.

ಜನರಲ್ ಗುರ್ಸೇಲರು ಇಸ್ಲಾಂ ಧರ್ಮಕ್ಕಿಂತ ಕ್ರೈಸ್ತ ಧರ್ಮದಲ್ಲಿ ಅಧಿಕ ವಿಶ್ವಾಸವಿಟ್ಟವರು. ಕ್ರಾಂತಿಯಾದನಂತರ, "ನಮ್ಮ ಕಾಲದಲ್ಲಿ ಇಸ್ಲಾಂ ಹಿಂದುಳಿದ ಮುಲ್ಲಾ-ವ-ಆಲ್ವಿಯವರ ಕೈಗಳಿಂದ ವಿಕೃತವಾಗಿ ಹೋಗಿದೆ. ಕ್ರೈಸ್ತ ಧರ್ಮವನ್ನೂ ನಿರ್ಬುದ್ಧ ಪಾದಂಗಳ ಕೈಗಳಿಂದ ಮುಕ್ತಗೊಳಿಸಿದರೆ ಅವರಲ್ಲಿ ಧಾರ್ಮಿಕ ಕ್ರಾಂತಿಯಾಗಬಹುದು" ಎಂದವರು ಹೇಳಿದ್ದರು. ಇಷ್ಟಕ್ಕೇನೇ ನಿಲ್ಲಿಸದೆ ಅವರು ಮುಂದುವರಿದು, "ನಾನೇನೂ ನಾಸ್ತಿಕನಲ್ಲ; ಹಾಗೆಂದು ಅಧಿಕ ಧಾರ್ಮಿಕನೂ ಅಲ್ಲ; ಇಸ್ಲಾಂಧರ್ಮವನ್ನು ಬುದ್ಧಿಮತ್ತೆಯಿಂದ ತಿಳಿಯುವುದಾದರೆ, ಅದು ಪ್ರಗತಿ ಸಾಧಕವಾಗಬಹುದು" ಎಂದರವರು.

"ನಾವು ಮಾಡಿರುವುದು ಯಾರ ವಿರೋಧವೂ ಅಲ್ಲ. ನಾವು ಯಾರ ಕಡೆಗೂ ಆಕ್ರಾಮಕ ದೃಷ್ಟಿ ಬೀರುವುದಿಲ್ಲ; ಯಾರನ್ನೂ ನೋಡಬಿಡುವಂತೆಯೂ ಇಲ್ಲ" ಎಂದು ಗುರ್ಸೇಲರ ನೀತಿ. ತುರ್ಕಿಯ ನೂತನ ಸೇನಾನೀ ರಾಷ್ಟ್ರಪತಿ ಹೇಳುತ್ತಾರೆ—"ನಾವು ಯಾವಾಗಲೂ ಕಾನೂನನ್ನು ಬೆಂಬಲಿಸುತ್ತೇವೆ. ಪ್ರತ್ಯೇಕ ನಾಗರಿಕನನ್ನೂ ಕಾನೂನಿನ ಮೂಲಕವೇ ಸಂರಕ್ಷಿಸಲಾಗುವುದು." ಕ್ರಾಂತಿ ಜರುಗಿದ ಮೂರೇ ದಿನಗಳಲ್ಲಿ ತುರ್ಕಿಯಲ್ಲಿ ಶಾಂತಿ ಸ್ಥಾಪಿತಗೊಂಡಾಗ, ಜನರಲ್ ಗುರ್ಸೇಲರು ಸಾತ್ವಿಕ ಮೂರ್ತಿಯಾಗಿ ಹೇಳಿದರು: "ದೇಶವನ್ನು ವಿನಾಶದಿಂದ ಬದುಕಿಸುವುದಕ್ಕಾಗಿ ಸೇನೆಗಳು ಹಸ್ತಕ್ಷೇಪ ನಡೆಸಿದುವು ನಮ್ಮ ಕರ್ತವ್ಯಪಾಲನೆಯಲ್ಲಿ ನಾವು ಸಫಲರಾದೆವೆಂದು ನಮಗೆ ಸಂತೋಷ. ನವ ಕಾರ್ಯಕ್ರಮಗಳ ಬಗ್ಗೆ ಅಭಿಮಾನವೆನಿಸುತ್ತದೆ.

ತುರ್ಕಿಯಲ್ಲಿ ಅಧಿಕಾರ ಬದಲಾವಣೆಗೊಂಡರೂ ಅದರ ವಿದೇಶ ನೀತಿಯಲ್ಲೇನೂ ಪರಿವರ್ತನೆಯಿಲ್ಲ ಎಂಬುದನ್ನು ಜನರಲ್ ಗುರ್ಸೇಲರು ಸ್ಪಷ್ಟಪಡಿಸಿದ್ದಾರೆ—"ಸಂಯುಕ್ತ ರಾಷ್ಟ್ರ ಸಂಘದ ಘೋಷಣಾ ಪತ್ರ ಮತ್ತು ವ್ಯಕ್ತಿಗತ ಅಧಿಕಾರಗಳ ಬಗ್ಗೆ ನಿಷ್ಠೆಯನ್ನು ಇರಿಸುವುದೇ ನಮ್ಮ ಗುರಿ ನಮ್ಮ ಶ್ರೇಷ್ಠ ಕಮಾಲ ಅತಾತುರ್ಕರು ನೆಮ್ಮದುರಿಟ್ಟಿರುವ "ದೇಶದ ಶಾಂತಿ ಮತ್ತು ವಿಶ್ವದಲ್ಲಿ ಶಾಂತಿ" ಎಂಬ ಆದರ್ಶವೇ ನಮಗೆ ಪ್ರಕಾಶ ತೋರಿಸುವುದು. ನಾವು ಅದರ ಬೆಳಗಿನಲ್ಲಿಯೇ ದಾರಿ ನಡೆಯುವೆವು. 'ನಾಟೋ ಮತ್ತು ಸೀಟೋ'ಗಳೊಡನೆ ಸಂಬಂಧವಿರಿಸುವೆವು".

ದೀರ್ಘಕಾಯ, ಶ್ವೇತಕೇಶದ ೬೫ ವರ್ಷದ ಜನರಲ್ ಕಾಮೇಲ್ ಗುರ್ಸೇಲರು ಕಳೆದ ತಿಂಗಳ ಆರಂಭದ ವರೆಗೆ ತುರ್ಕಿ ಭೂಸೇನೆಯ ಪ್ರಧಾನ ಸೇನಾಪತಿಗಳಾಗಿದ್ದರು. ತುರ್ಕಿಯಲ್ಲಿ ಸರಕಾರ ವಿರೋಧೀ ಉಪದ್ರವ ಪ್ರಾರಂಭವಾಗುವುದಕ್ಕೆ ಕೆಲವೇ ದಿನಗಳನಂತರವೇ ಈ ಜನಪ್ರಿಯ ಸೇನಾಧಿಕಾರಿಗೆ ಎರಡು ತಿಂಗಳ ರಜೆಯನ್ನು ಕೊಡಲಾಯಿತು; ಜನರಲ್ ಗುರ್ಸೇಲರು ಇದೇ ಮಾಹೆಯಲ್ಲಿ ಸೇನೆಯಿಂದ ನಿವೃತ್ತರಾಗಲಿದ್ದರು.

ಕ್ರಾಂತಿಯೇಳಲು ಸನ್ನದ್ಧರಾದ ಸೈನಿಕರಿಗೆ ಅವರು ರಾಜಕಾರಣದಿಂದ ದೂರವಿರುವಂತೆ ಜ| ಗುರ್ಸೇಲರು ಎಚ್ಚರಿಸಿದರು. "ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಸೇನೆ ಮತ್ತು ಸಮವಸ್ತ್ರಗಳ ಪ್ರತಿಷ್ಠೆಯನ್ನು ಉಳಿಸಿಕೊಳ್ಳಬೇಕೆ"ಂದು ಅವರು ತಿಳಿಸಿದ್ದರು. ಜನರಲ್ ಗುರ್ಸೇಲರು ಎರಡೂ ಮಹಾಯುದ್ಧಗಳಲ್ಲಿ ಮತ್ತು ೧೯೧೯ರ ತುರ್ಕೀ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ್ದರು. ಇಜಮೀರದಲ್ಲಿ 'ನಾಟೊ' ಸೇನೆಯ ಸೇನಾಧಿಕಾರಿಯೂ ಆಗಿದ್ದರು. ಜನರಲ್ಲರ ೨೪ ವರ್ಷದ ಏಕಮಾತ್ರ ಮಗ ಈಗ ತುರ್ಕಿ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾನೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಗುವುದು ಎಂದು ಸೂಚನೆಯಿತ್ತರು. ಬೇಕದೊಳಗೆ ಕಾಂಗ್ರೆಸ್ಸು ಎದುರಿಸಬೇಕಾದ ಕೆಲವು ಸಮಸ್ಯೆಗಳಿದೆಯೆಂಬುದು ನಿಜವಾದರೂ ಅವು ಜಗತ್ತೇ ಎದುರಿಸಬೇಕಾದಂತಹವೆಂದವರು ಅಭಿಪ್ರಾಯಿಸಿದರು.

ಕಾಂಗ್ರೆಸ್ ಘಟನೆಗೆ ತಿದ್ದುಪಡಿ ಮಾಡುವ ಮಹಾಪ್ರಶ್ನೆಯನ್ನು ಮುಂದಿಟ್ಟುಕೊಂಡು ಪ್ರಾರಂಭವಾದ ಈ ಅಧಿವೇಶನದಲ್ಲಿ ಮಹತ್ವಪೂರ್ಣ ತಿದ್ದುಪಡಿಯೊಂದೂ ಅಸ್ವೀಕಾರವಾಗಿಯೇ ಉಳಿದು ಪ್ರಕೃತದ ವ್ಯವಸ್ಥೆಯೇ ಮುಂದುವರಿಯುವಂತಾಯಿತು. ಸಂಸತ್ತಿನ ಕಾಂಗ್ರೆಸ್ ಧುರೀಣನು ಅ. ಭಾ. ಕಾಂ. ಸಮಿತಿಯ ಅಧ್ಯಕ್ಷನಾಗಿರಬಾರದು; ಇದೇ ರೀತಿ ರಾಜ್ಯ ಮುಖ್ಯಮಂತ್ರಿ ಮತ್ತು ಶಾಸನ ಸಭಾ ಧುರೀಣನೂ ಬೇರೆಬೇರೆಯಾಗಿರಬೇಕು; ನಾಲ್ಕಾಣೆಯ ಸದಸ್ಯತ್ವ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬೇಕು; ಪ್ರತಿ ಕಾಂಗ್ರೆಸ್ ಸಮಿತಿಯ ಅವಧಿಯು ಈಗಿರುವಂತೆ ಮುಂದೆಯೂ ಎರಡೆರಡು ವರ್ಷಗಳಿರಬೇಕು; ಮಂತ್ರಿಗಳ ಅಧಿಕಾರಾವಧಿಯು ಇಂತಿಷ್ಟೇ ವರ್ಷಗಳಿರಬೇಕೆಂಬ ಕಟ್ಟುನಿಟ್ಟು ಇರುವ ಅಗತ್ಯವಿಲ್ಲ; ಸೇರ್ಪಡೆ ಹೊಂದಲ್ಪಟ್ಟ ಸದಸ್ಯರಿಗೆ ಸಮಿತಿಯ ಚುನಾವಣೆಗಳಲ್ಲಿ ಮತಾಧಿಕಾರವಿರಬಾರದು, ಸದಸ್ಯರಿಗಿರುವ ಇತರ ಎಲ್ಲ ಹಕ್ಕುಗಳೂ ಇರಬೇಕು ಮತ್ತು ಕಾಂಗ್ರೆಸ್ ಸಂಸತ್ ಪಕ್ಷದ ಕೆಲವೊಂದು ನಿರ್ದಿಷ್ಟ ಸಂಖ್ಯೆಯಷ್ಟು ಸದಸ್ಯರನ್ನು ಅ. ಭಾ. ಕಾಂಗ್ರೆಸ್ ಸಮಿತಿಗೆ ಕಳುಹಿಸಿ ಯೋಗ್ಯ ಪ್ರಾತಿನಿಧ್ಯ ದೊರೆಯುವಂತೆ ಕಾಂಗ್ರೆಸ ಕಾರ್ಯಕಾರಿ ಸಮಿತಿಯು ವ್ಯವಸ್ಥೆಮಾಡಬೇಕು; ಅಂತೆಯೇ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯಲ್ಲೂ ಶಾಸನಸಭಾ ಕಾಂಗ್ರೆಸಿಗೆ ಯಥೋಚಿತ ಪ್ರಾತಿನಿಧ್ಯ ದೊರೆಯಬೇಕು—ಎಂಬ ವಿಚಾರಗಳು ಮಾತ್ರ ಸರ್ವಾನುಮತದಲ್ಲಿ ಮಂಜೂರಾದುವು.

ದ್ವಿಭಾಷಾ ಮುಂಬಯಿ ರಾಜ್ಯವನ್ನು ವಿಭಜಿಸಿ ನೂತನವಾಗಿ ಸ್ಥಾಪಿಸಲಾದ ಮಹಾರಾಷ್ಟ್ರ ರಾಜ್ಯದ ಪುಣೆಯಲ್ಲಿ ಈ ಅಧಿವೇಶನವು ಸೇರಿದುದರಿಂದ ಮಹಾರಾಷ್ಟ್ರೀಯರಲ್ಲಿ ಕಾಂಗ್ರೆಸ್‌ನ ಬಗ್ಗೆ ಅಭಿಮಾನವುಂಟುಮಾಡುವುದು ಸಾಧ್ಯವಾಗಬಹುದು. ಮೈಸೂರು—ಮಹಾರಾಷ್ಟ್ರಗಳ ನಡುವಿದೆಯೆನ್ನಲಾಗುವ ಸೀಮಾವಿವಾದದ ಕುರಿತಾಗಿ ಕೆಲವು ಮರಾಟಿಗರ ಮತಪ್ರದರ್ಶನವೂ ಈ ಸಮ್ಮೇಳನದ ನಡುವೆ ಪುಣೆಯಲ್ಲಿ ನಡೆಯಿತು. ಕೇಂದ್ರ ಗೃಹಮಂತ್ರಿ ಪಂಡಿತ ಪಂತ, ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ವೈ. ಬಿ ಚವನ ಮತ್ತು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಈ ಸುಅವಸರದಲ್ಲಿಯೇ ಮಾತುಕತೆ ನಡೆಸಿ ಸೀಮಾ ವಿವಾದವನ್ನು ಬಗೆಹರಿಸಲು ಎರಡೂ ರಾಜ್ಯಗಳಿಂದ ತಲಾ ಇರ್ವರು ಪ್ರತಿನಿಧಿಗಳಿರುವ ಸಮಿತಿಯೊಂದನ್ನು ನೇಮಿಸುವುದಕ್ಕೆ ನಿರ್ಧರಿಸಿದುದು ಮಹಾರಾಷ್ಟ್ರೀಯರಿಗೆ ಹರ್ಷದಾಯಕ ವರ್ತಮಾನವೆನ್ನಬಹುದು. ಶ್ರೀ ಜತ್ತಿಯವರು ಈ ಬಗ್ಗೆ ಕೈಗೊಳ್ಳುವ ನೀತಿಯನ್ನು ಮಾತ್ರ ಕನ್ನಡಿಗರೆಲ್ಲರೂ ಕುತೂಹಲದಿಂದ ನಿರೀಕ್ಷಿಸುತ್ತಾರೆ.

ಹಣವಿದ್ದಾಗ ಉಳಿತಾಯ;
ನಿಶ್ಚಿತ ಆದಾಯ.
ಸಿಂಡಿಕೇಟ್ ಬೇಂಕ್
ಕೇಶ್ ಸರ್ಟಿಫಿಕೇಟ್
(ಮೂರು ವರುಷಗಳ ಅವಧಿಯವು)
ಸಿದ್ಧವಾಗಿ ಬಂದಿವೆ;
ನಿಮಗಾಗಿ ಕಾದು ನಿಂತಿವೆ.
ಬೇಗನೆ ಪಡೆದುಕೊಳ್ಳಿರಿ.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸೋಣಾಗುತ್ತದೆ.

—ಮೆನೇಜರ್

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.
ವರುಷ ೩೯. ವಾರ ೪೧. 16-6-1960 Vol. 39. No. 41.

ಪ್ರಚಲಿತ ಪ್ರಸಂಗ

ಜಪಾನದಲ್ಲಿ ಪ್ರತಿರೋಧ ಆಂದೋಲನ

ಅಮೇರಿಕಾಧ್ಯಕ್ಷರ ಪತ್ರಿಕಾಕಾರ್ಯದರ್ಶಿಯವರಿಗೆ ಜಪಾನೀಯರು ಇತ್ತ ಸ್ವಾಗತವು ಐಕರನ್ನೂ ಕಾಯುತ್ತಿರಬಹುದೆ? ಪ್ರಧಾನಿ ಕಿಶಿಯವರು ಉಭಯಸಂಕಟದಲ್ಲಿ ಸಿಲುಕಿರುವರೆ?

ಇದೇ ತಾ. ೧೯ರಿಂದ ೨೨ರ ವರೆಗೆ ವಿಶ್ವವಿಖ್ಯಾತ ಅಮೇರಿಕೆಯ ಅಧ್ಯಕ್ಷರಾದ ಶ್ರೀ ಐಸನ್ ಹಾವರರು ಪೂರ್ವದ ಜಪಾನ ರಾಜ್ಯವನ್ನು ಸಂದರ್ಶಿಸಲಿರುವರೆಂದು ಮೊದಲೇ ನಿಶ್ಚಿತವಾಗಿತ್ತು. ಆದರೆ, ಹೊಸ ಅಮೇರಿಕೆ—ಜಪಾನಗಳ ನಡುವಣ ಸಂರಕ್ಷಣಾ ಒಡಂಬಡಿಕೆಯನ್ನು ಮತ್ತು ಐಕರ ಸಂದರ್ಶನವನ್ನು ಪ್ರತಿಭಟಿಸುವ ಚಳವಳಿಯು ಈಗ್ಗೆ ಕೆಲವು ದಿನಗಳ ಹಿಂದಿನಿಂದಲೇ ಸಂಘಟಿಸಲ್ಪಟ್ಟಿರುವುದರಿಂದ ಜಪಾನದ ರಾಜಕೀಯ ಹಾಗೂ ಸಾಮಾಜಿಕ ವಾತಾವರಣವು ಕಲುಷಿತವಾಗಿರುವುದು. ಸರಕಾರೇತರ ಎಡ ಪಕ್ಷಗಳೆಲ್ಲವು ಗಳೊಡನೆ ಕ್ರಾಂತಿಕಾರಿ ವಿದ್ಯಾರ್ಥಿ ಸಂಸ್ಥೆಯೂ ಸೇರಿ ಈ ಆಂದೋಲನವನ್ನು ಮತ್ತಷ್ಟು ಬಲಪಡಿಸುವತ್ತ ತೀವ್ರಾಸಕ್ತಿ ವಹಿಸುವುದು ಕಂಡು ಬರುತ್ತದೆ.

ಅನಪೇಕ್ಷಿತ ವರ್ತನೆ

ಅಲ್ಲಲ್ಲಿ ಪ್ರತಿಭಟನಾ ಮತಪ್ರದರ್ಶನದಿಂದ ಪ್ರಾರಂಭವಾದ ಈ ಚಳವಳವು ದಿನೇ ದಿನೇ ಸಂಘಟಿತವಾಗುತ್ತ ಬಂದಿದ್ದು ಜಪಾನದ ಪರಿಸ್ಥಿತಿಯು ಭೀಕರವಾಗುತ್ತ ಹೋಗುತ್ತಿದೆ. ಪ್ರಧಾನಿ ನೊಬುಸೂಕೆ ಕಿಶಿಯವರ ಸರಕಾರವು ರಾಜಿನಾಮೆ ಕೊಡಬೇಕು; ಹೊಸ ಸಂರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳಬಾರದು; ಐಸನ್ ಹಾವರರು ಜಪಾನಕ್ಕೆ ಭೆಟ್ಟಿಯೀಯಬಾರದು—ಎಂಬ ಉದ್ದೇಶವನ್ನು ಚಳವಳಿಗಾರರಿಟ್ಟುಕೊಂಡಿದ್ದಾರೆ. ಕಿಶಿ ಸರಕಾರವು ಈ ಚಳವಳವನ್ನು ತಡೆಗಟ್ಟುವುದರಲ್ಲಿ ಅದೆಷ್ಟು ಪ್ರಯತ್ನಗಳನ್ನು ನಡೆಸಿದರೂ ಸಫಲವಾಗಿಲ್ಲವೆಂಬುದು ಇತ್ತೀಚಿಗಿನ ಘಟನೆಗಳಿಂದ ವ್ಯಕ್ತವಾಗುವುದು.

ಅಮೇರಿಕೆಯ ಅಧ್ಯಕ್ಷರ ಸಂದರ್ಶನದ ಪೂರ್ವಭಾವಿಯಾಗಿ, ಅವರ ಕಾರ್ಯಕ್ರಮಗಳನ್ನು ರೂಪಿಸಲು ಬಂದಿರುವ ಐಕರ ಪತ್ರಿಕಾ ಕಾರ್ಯದರ್ಶಿಯವರ ಕಡೆಗೆ ಆಂದೋಲನಕಾರರು ತೋರಿದ ವರ್ತನೆಯನ್ನು ಸಭ್ಯ ಜನಾಂಗವು ಎಂದೂ ಅನುಮೋದಿಸದು. ಪತ್ರಿಕಾಕಾರ್ಯದರ್ಶಿ ಶ್ರೀ ಜೇಮ್ಸ ಹೆಗರ್ಟಿಯವರು ವಿಮಾನದ ಮೂಲಕ ಟೋಕಿಯೋ ನಿಲ್ದಾಣದಲ್ಲಿ ಇಳಿದಾಗ, ಚಳವಳಿಗಾರರು ಅವರನ್ನು ಮುತ್ತಿಗೆ ಹಾಕಿದರು. ಟೋಕಿಯೋದಲ್ಲಿರುವ ಅಮೇರಿಕೆಯ ರಾಯಭಾರಿ ಡಾ॥ ಮೆಕ್ಸಆರ್ಥರರ ಮತ್ತು ಶ್ರೀ ಹೆಗರ್ಟಿಯವರಿಬ್ಬರೂ ಇವರ ನಡುವೆ ಸಿಕ್ಕಿಬಿದ್ದಂತಾದರು. ಸುಮಾರು ಒಂದು ತಾಸಿನಷ್ಟು ಹೊತ್ತು ಮುತ್ತಿಗೆಯನ್ನು ದೂರನೂಡಲು ಪ್ರಯತ್ನಗಳು ನಡೆದರೂ, ಅದು ಅಯಶಸ್ವಿಯಾದುದರಿಂದಾಗಿ, ಅಮೇರಿಕನ್ ಹೆಲಿಕಾಪ್ಟರವೊಂದು ಬಂದು ಅವರಿಬ್ಬರನ್ನು ಕ್ಷೇಮವಾಗಿ ಅಮೇರಿಕನ್ ರಾಯಭಾರಿಯ ಕಚೇರಿಗೆ ಒಯ್ಯಬೇಕಾಯಿತು.

ಸ್ವಾಗತದ ಎರಡು ಮುಖ

ಚಳವಳಗಾರರು ಕೆಲವೊಂದು ಘೋಷಣೆಗಳನ್ನು ಮಾಡುತಿದ್ದರು. "ನಾವು ಐಕರನ್ನು ದ್ವೇಷಿಸುತ್ತೇವೆ"; "ಹೆಗಾರ್ಟಿ, ಮನೆಗೆ ಮರಳಿರಿ"; "ಐಕರೇ, ಇಲ್ಲಿಗೆ ಬರಬೇಡಿರಿ, ಹಿರೋಶಿಮಾವನ್ನು ನೆನಪು ಮಾಡಿಕೊಳ್ಳಿರಿ" ಎಂದು ಮುಂತಾದುವು ಇವುಗಳಲ್ಲಿ ಪ್ರಧಾನ ವಾದುವುಗಳು. ಇವರು ಕೆಂಪು ನಿಶಾನೆಗಳನ್ನು ಹಿಡಿದುಕೊಂಡು ಕೂಗಾಡುತ್ತ, ಅಧಿಕಾಧಿಕ ಜನರನ್ನು ಕರೆತರುತ್ತಿದ್ದರು. ಇಲ್ಲಲ್ಲಿ ಧ್ವನಿವರ್ಧಕಗಳ ಮೂಲಕವಾಗಿ ಕ್ರಾಂತಿಗೀತೆಗಳನ್ನು ಹಾಡುತ್ತ ಜನರಲ್ಲಿ ಉತ್ಸಾಹವನ್ನು ಹುರಿದುಂಬಿಸುತ್ತಿದ್ದರು. ಆಗಾಗ ಚಳವಳಿಗಾರರು ರೊಚ್ಚಿಗೆದ್ದಂತೆ ತೋರಿ ಬರುತ್ತಿದ್ದರೂ ಅವರು ಹೆಗರ್ಟಿಯವರ ಮೇಲೆ ಏರಿ ಹೋಗುವ ಸಾಹಸವನ್ನು ಮಾತ್ರ ಮಾಡಲಿಲ್ಲವೆಂದು ತಿಳಿದು ಬಂದಿದೆ.

ಅತಿಥಿ ಸ್ವಾಗತದ ಇದೊಂದು ಮುಖವಾದರೆ, ಇನ್ನೊಂದು ಮುಖವೂ ಇತ್ತು. "ಹೆಗರ್ಟಿಯವರಿಗೆ ಸ್ವಾಗತ"ವೆನ್ನುವ ಕರಪತ್ರಗಳನ್ನೂ ಬೋರ್ಡುಗಳನ್ನೂ ಕಾಣಬಹುದಿತ್ತು. ಕಿಶಿ ಸರಕಾರದ ಸಮರ್ಥಕರು; ಐಕರನ್ನು ಸ್ವಾಗತಿಸಬೇಕು ಎಂದು ಜಪಾನೀಯರನ್ನು ವಿನಂತಿಸುವ ಕೂಗುಗಳನ್ನೂ ಎಬ್ಬಿಸುತಿದ್ದರು. ಈ ಬಗ್ಗೆ ಕೆಲವು ವಿದ್ಯಾರ್ಥಿಗಳಿಂದ ಕೂಡಿದ ಪ್ರಶ್ನೆಗಳನ್ನು ಉಪಯೋಗಿಸಲಾಗುತಿತ್ತು.

'ಶಾಂತಿದೂತ'ನೆಂಬ ಉಪನಾಮಧಾರಿಯಾಗಿ ಸದ್ಯದ ಜಪಾನದ ಅಶಾಂತಿಗೆ ಕಾರಣೀಭೂತರಾದ ಅಮೇರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರ್.

ನಗರದಲ್ಲಿ ಸಶಸ್ತ್ರ ಪೋಲೀಸ ದಳಗಳು ಕಾವಲನ್ನು ನಡೆಸುತ್ತಿದ್ದರು. ಪ್ರಮುಖ ಸರಕಾರಿ ಕಛೇರಿಗಳು, ಮುಖ್ಯವಾಗಿ, ಟೋಕಿಯೋವಿನ ಸಂಸತ್ ಭವನವನ್ನು ಕಾಯಲಾಗುತಿತ್ತು. ಮತಪ್ರದರ್ಶಕರನ್ನು ದೂರಪ್ರೇಡಿಸಲು ಪೋಲೀಸರು ನಡೆಸಿದ ಸಕಲ ಯತ್ನವೂ ಅಸಫಲವಾದುದರಿಂದ ಕಿಶಿ ಸಮರ್ಥಕರು ತುಂಬ ವಿಮನಸ್ಕರಾಗಿದ್ದಾರೆ. ಮುಂಬರುವ ಐಕರ ಸಂದರ್ಶನ ಕಾಲದಲ್ಲಿ ಎಂತಹ ಪರಿಸ್ಥಿತಿಯು ಉಂಟಾಗಬಹುದು ಎಂಬುದು ಮಾತ್ರ ಕಲ್ಪನಾತೀತವಾಗಿ ಉಳಿದಿದೆ. ಆದರೆ, ಶ್ರೀ ಹೆಗರ್ಟಿಯವರ ವಿರುದ್ಧವಾಗಿ ನಡೆದ ಪ್ರಚಂಡ ಮತಪ್ರದರ್ಶನವು ನಡೆದರೂ ಅಧ್ಯಕ್ಷ ಐಸನ್ ಹಾವರರು ಟೋಕಿಯೋ ಸಂದರ್ಶನವನ್ನು ಎಂದಿಗೂ ಬಿಟ್ಟುಕೊಡುವುದಿಲ್ಲವೆಂದು ಶ್ವೇತಭವನದ ಪ್ರಕಟನೆಯೊಂದು ತಿಳಿಸುತ್ತದೆ. ಹೇಗಿದ್ದರೂ ಅಧ್ಯಕ್ಷರು ಟೋಕಿಯೋವಿಗೆ ಭೆಟ್ಟಿಯಿತ್ತಾಗ, ಅವರನ್ನೂ ಬಿಸಿವಾತಾವರಣದಲ್ಲಿಯೇ ಕಿಶಿ ಸರಕಾರವು ಸ್ವಾಗತಿಸಬೇಕಾದ ಸನ್ನಿವೇಶ ಒದಗುವುದಂತೂ ಖಂಡಿತವೆಂದೇ ಹೇಳಬಹುದು.

ಪೂರ್ವ ದ್ವೇಷವಾಸನೆ

ಜಪಾನದ ಚಳವಳಕ್ಕೆ ನ್ಯಾಯವಾದ ಕಾರಣಗಳಿರಬಹುದು. ದ್ವಿತೀಯ ಲೋಕ ಯುದ್ಧದ ಅಂತಿಮ ಘಟ್ಟದಲ್ಲಿ ಅಮೇರಿಕೆಯು ಅಣು ಬಾಂಬುಗಳನ್ನೆಸೆದುದರಿಂದ ನೊಂದವರು ಜಪಾನೀಯರೇ. ಈಗ, ಸಂರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳುವುದರಿಂದ, ಕಿಶಿ ವಿರೋಧಿಗಳು ಮತ್ತಷ್ಟು ರೊಚ್ಚಿಗೆದ್ದಿರುವುದೂ ಸ್ವಾಭಾವಿಕವೇ. ಜಪಾನದ ಹಿತದೃಷ್ಟಿಯಿಂದ ಒಡಂಬಡಿಕೆಯು ಲಾಭದಾಯಕವೆಂದು ಪ್ರಧಾನಿ ಕಿಶಿ ಸಾಧಿಸಹೊರಟರೂ ಅದನ್ನವರು ಸುತರಾಂ ಒಪ್ಪುವುದಿಲ್ಲ. ಇದಕ್ಕೆಲ್ಲ ಮೂಲ, ಜಪಾನೀಯರ ನೊಂದ ಮನ ಮತ್ತು ಅಮೇರಿಕೆಯ ಬಗ್ಗೆ ಅವರು ತಳೆದ ನಿಲುಮೆಯೇ ಎಂದು ತಿಳಿದುಕೊಂಡರೆ, ತಪ್ಪಲ್ಲ. ಆದರೂ, ತಮ್ಮ ದೇಶಕ್ಕೆ ಅತಿಥಿಯಾಗಿ ಬರುವವನನ್ನು ಅವಮಾನಿಸಿ ಕಳಿಸುವುದು ಜಪಾನಕ್ಕೆ ಮಾತ್ರವಲ್ಲ; ಯಾವುದೇ ಸಭ್ಯ ದೇಶಕ್ಕೆ ಅಗೌರವವೆನ್ನಬೇಕಾಗುತ್ತದೆ.

ಭಾರತದ ಮಾದರಿ

ಎರಡು ತಿಂಗಳುಗಳಿಗೆ ಹಿಂದೆ ಕಮ್ಯುನಿಸ್ಟ

(೯ನೇ ಪುಟ ನೋಡಿರಿ)

ಕಥಾವಿಹಾರ

ಹೊಸ ಹಾದಿ ಹಿಡಿಯಿತು

ಆದರ್ಶದ ಅಮಲಿನ ಗುಂಗಿನಲ್ಲಿ ಪರಿಸ್ಥಿತಿಯನ್ನು ಮರೆತಿದ್ದ ಕವಿ ಶಂಕರ ಯಥಾರ್ಥವಾದಿಯಾಗುವಂತೆ ಪ್ರೇರೇಪಿಸಿದ ಘಟನಾವಳಿಯಿಂದಾಗಿ ಆತನ ಕವಿತಾಲಹರಿ ಹೊಸ ಹಾದಿಯನ್ನು ಹಿಡಿಯಿತು.

ಹಾಲ ಹೊಳೆಯು ಹರಿವ ನಾಡು
ಹೊಳೆವ ಹೊನ್ನ ಗನಿಯು ಬೀಡು
ನಮ್ಮ ನಾಡು ಭಾರತ ||

ಕವಿಯ ಲೇಖನಿ ಭರದಿಂದ ಬರೆಯುತಿತ್ತು. ಸಂಪತ್ತಿನ ಆ ಕರ ಭಾರತವೆಂಬ ಭಾವನೆಯನ್ನು ಅವನ ಶಿಶುಗೀತೆಯ ಪ್ರತಿಯೊಂದು ಚರಣವೂ ಸಾಗುತಿತ್ತು. ಕವಿ ಭಾವನಾ ಪ್ರಪಂಚದಲ್ಲೇ ವಿಹರಿಸುತಿದ್ದ. ಆ ಭಾವ ಜೀವಿ ಆದರ್ಶದ ಗುಂಗಿನಲ್ಲಿ ವಾಸ್ತವಿಕತೆಯನ್ನು ಸಂಪೂರ್ಣ ಮರೆತಿದ್ದ.

ಢಣ್, ಢಣ್, ಢಣ್........ ಗಡಿಯಾರದ ಘಂಟೆ ಹತ್ತು ಬಾರಿಸಿತು. ಕೋಣೆಯ ಗಡಿಯಾರ ಹತ್ತು ಬಾರಿಸಿದುದೂ ಶಂಕರನಿಗೆ ಕೇಳಿಸಲಿಲ್ಲ. ಆತ ತನ್ನ ಬರವಣಿಗೆಯಲ್ಲೇ ಮಗ್ನನಾಗಿದ್ದನು.

‘ಗಡಿಯಾರ ಹತ್ತು ಬಾರಿಸಿದುದೂ ಕಿವಿಗೆ ಕೇಳಿಸಲಿಲ್ಲವೇ?” ಕೋಣೆಯ ಬಾಗಿಲ ಬಳಿಯಿಂದ ಹೆಣ್ಣಿನ ಸ್ವರವೊಂದು ಕೇಳಿಸಿತು. ಆದರೂ ಶಂಕರನಿಂದ ಮಾರುತ್ತರ ಬರಲಿಲ್ಲ. ಆಕೆಯ ಸ್ವರ ಅವನ ಕಿವಿಗೆ ಕೇಳಿಸಿದ್ದರಲ್ಲವೇ ಅವನು ಅವಳ ಪ್ರಶ್ನೆಯನ್ನು ಉತ್ತರಿಸುವುದು. ಶಂಕರ ತಲೆ ಕೆರೆಯುತ್ತಾ ಯೋಚಿಸಿ ಯೋಚಿಸಿ ಬರೆವ ಲೇಖಕನಲ್ಲ. ಸ್ಫೂರ್ತಿಯ ಚಿಲುಮೆ ಉಕ್ಕಿ ಹರಿದಾಗ ತಡೆಯಿಲ್ಲದೆ ಬರೆಯುವುದು ಅವನ ಅಭ್ಯಾಸವಾಗಿತ್ತು,

“ಊಟಕ್ಕೇಳಿ, ಗಂಟೆ ಹತ್ತಾಯಿತು” ಲಲಿತೆ ಪುನಃ ಅಲ್ಲಿಂದಲೇ ಕೂಗಿ ಹೇಳಿದಳು. ಆದರೂ ಶಂಕರನಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

ಖಣ್, ಖಣ್, ಖಣ್........ ಹೆಣ್ಣಿನ ಕೈಬಳೆಗಳ ಸದ್ದು ಕೋಣೆಯೊಳಗೆ ಪ್ರತಿಧ್ವನಿಸಿತು. ಗಂಡನನ್ನು ಊಟಕ್ಕೆ ಕರೆದೊಯ್ಯಲು ಲಲಿತೆ ಕೋಣೆಯೊಳಗೆ ಕಾಲಿರಿಸಿದ್ದಳು. ಆಕೆ ಹಾಗೆ ಶಂಕರನ ಕೋಣೆಯೊಳಗೆ ಕಾಲಿರಿಸುವುದು ಬಲು ವಿರಳವಾಗಿತ್ತು. ಆದರೆ ಇಂದು ಗಂಟೆ ಹತ್ತಾದರೂ ಊಟಕ್ಕೇಳದ ಪತಿಯನ್ನು ಕರೆದೊಯ್ಯಲು ಬರುವುದು ಅನಿವಾರ್ಯವಾಗಿತ್ತು. ಆಕೆಗೂ ಹೊಟ್ಟೆ ಹಸಿವಿನಿಂದ ಚುಂಯ್ ಚುಂಯ್ ಎನ್ನುತಿತ್ತು. ಆ ಪತಿವ್ರತಾ ಶಿರೋಮಣಿಯು ಪತಿಯು ಊಟಮಾಡದೆ ಎಂತು ಉಂಡಾಳು? ಮಗು ಕಿಶೋರನ ಊಟ ಮುಗಿದಿತ್ತು. ಆದರೂ ಮಗುವಿಗೆ ನಿದ್ದೆ ಬಂದಿರಲಿಲ್ಲ. ಇದಕ್ಕೂ ಕಾರಣ ವಿಲ್ಲದಿಲ್ಲ.

ಬಳೆಗಳ ಸದ್ದು ಶಂಕರನ ಭಾವಸಮಾಧಿಯನ್ನು ಭಂಗಗೊಳಿಸಲು ಅಸಮರ್ಥವಾಯಿತು. ಲಲಿತೆ ಉದ್ದೇಶಪೂರ್ವಕವಾಗಿ ಕೆಮ್ಮಿದಳು. “ಊಹುಂ, ಶಂಕರನು ಭಾವ ಪ್ರಪಂಚದಿಂದ ಈ ಪ್ರಪಂಚಕ್ಕೆ ಇಳಿಯಲೇ ಇಲ್ಲ. ಲಲಿತೆ ಬಳೆಗಳನ್ನು ಬದಲಾಯಿಸುವ ನೆವದಲ್ಲಿ ಸದ್ದು ಮಾಡಿದಳು. ಆದರೂ ಅವನು ಬರೆಯುತ್ತಲೇ ಇದ್ದಿದ್ದ.

“ನೀವು ಊಟ ಮಾಡುವುದಿಲ್ಲವೇ?” ಲಲಿತೆ ಕೊಂಚ ಗಡುಸಾದ ಸ್ವರದಲ್ಲೇ ಕೇಳಿದಳು.

ಥಕ್ಕನೆ ಶಂಕರನ ಬರೆವಣಿಗೆಗೆ ಭಂಗ ಬಂದಿತು. ಕತ್ತೆತ್ತಿ ನೋಡುತ್ತಾನೆ—ಮಡದಿ ಲಲಿತೆ ಅವನ ಕುರ್ಚಿಯ ಹಿಂದೆ ನಿಂತಿದ್ದಳು. ಶಂಕರ ಆಕೆಯನ್ನೊಮ್ಮೆ ನೋಡಿದನು - ಏಕೆ ಬಂದಿರುವೆ ಎಂಬ ಪ್ರಶ್ನೆಯನ್ನು ಅವನ ನೋಟ ಸೂಚಿಸುತಿತ್ತು.

“ಗಂಟೆ ಹತ್ತಾಯಿತು. ಇನ್ನು ಊಟ ಮಾಡುವುದು ಯಾವಾಗ? ಅನ್ನ ಆರಿ ತಂಗಳಾಗುತ್ತಿದೆ.” ಲಲಿತೆ ಮೃದುವಾಗಿ ನುಡಿದಳು.

“ನಿನ್ನ ಊಟವಾಯಿತೇ?” ಶಂಕರನು ಕೇಳಿದ.

“ಊಹುಂ” ಲಲಿತೆ ತಲೆ ಅಲ್ಲಾಡಿಸುತ್ತಾ ಹೇಳಿದಳು.

“ಕಿಶೋರನ ಊಟ?”

“ಮುಗಿಯಿತು.”

“ನಾನು ಬಾರದಿದ್ದರೂ ಅಡಿಗೆ ಆದೊಡನೇ ನೀನು ಊಟ ಮಾಡಬಹುದೆಂದು ಅದೆಷ್ಟು ಬಾರಿ ನಿನಗೆ ಹೇಳಲಿಲ್ಲ?” ಶಂಕರನು ಪತ್ನಿಯನ್ನು ಕೇಳಿದನು. ಇದನ್ನು ಕೇಳಿ ಲಲಿತೆಯ ಕಣ್ಣು ತುಂಬಿ ಬಂದಿತು. ಸೀರೆಯ ಸೆರಗಿನಿಂದ ಕಂಬನಿಯನ್ನೊರಸಿಕೊಂಡಳು.

“ಲಲ್ಲೀ, ನನ್ನ ಮಾತು ನಿನ್ನನ್ನು ನೋಯಿಸಿತೇ?” ಶಂಕರ ಆಕೆಯ ಮುಂಗುರುಳನ್ನು ನೇವರಿಸುತ್ತಾ ಕೇಳಿದನು.

“ಇಲ್ಲ ನನ್ನ ದೇವರೇ, ನಿಮ್ಮ ಬರೆವಣಿಗೆಗೆ ನಾನು ಅಡ್ಡಿ ಮಾಡಿದುದರಿಂದ ನಿಮಗೆ ಸಿಟ್ಟು ಬಂತೇ? ನಿಮ್ಮ ಮೇಲಿನ ಪ್ರೀತಿ ನಿಮ್ಮ ಹೊಟ್ಟೆ ಹಸಿವುದನ್ನು ಕಂಡೂ ನನ್ನನ್ನು ಸುಮ್ಮನಿರಲು ಬಿಡುವುದಿಲ್ಲ.”

ಲಲಿತೆ ತನ್ನ ಮನಸ್ಸಿನ ಭಾವನೆಗಳನ್ನು ತೋಡಿಕೊಂಡಳು.

“ಕಿಶೋರ ಮಲಗಿದನೇ”?

“ಇಲ್ಲ”

“ಏಕೆ?”

“ಅವನು ಕುಡಿಯಲು ಹಾಲು ಬೇಕೆಂದು ಹಟ ಹಿಡಿದಿರುವನು”

“ಅವನಿಗೆ ಕುಡಿಯಲು ಹಾಲು ಕೊಡಲಿಲ್ಲವೇ?”

“ಇಲ್ಲ”

“ಅದೇಕೆ?”

“ಹಾಲಿನವಳ ಹಣ ಬಾಕಿಯಿದೆ. ಅದಕ್ಕೆ ಅವಳು ಇಂದಿನಿಂದ ಹಾಲು ಕೊಡುವುದನ್ನೇ ನಿಲ್ಲಿಸಿರುವುದಾಗಿ ಹೇಳಿದಳು”.

“ಯಾರು, ಸರಸಿಯೇ?”

‘ಹೌದು’.

‘ಲಚುಮಿ ಹಾಲು ತರಲಿಲ್ಲವೇ?’

‘ಅವಳ ಮನೆಯ ದನದ ಕರು ಬೆಳಗ್ಗೆ ಸತ್ತು ಹೋಯಿತಂತೆ. ದನ ದುಃಖದಿಂದ ಹಾಲು ಕೊಡುವುದಿಲ್ಲವಂತೆ.” ಕಣ್ಣುಗಳಿಂದ ಇಳಿದು ಬಂದ ಕಂಬನಿಯನ್ನುಜ್ಜಿಕೊಳ್ಳುತ್ತಾ ಲಲಿತೆ ಹೇಳಿದಳು. ತನಗರಿವಾಗದಂತೆ ಶಂಕರನ ಕಣ್ಣುಗಳಿಂದಲೂ ಕಂಬನಿ ಮಿಡಿಯುತಿತ್ತು. ಉಕ್ಕಿ ಬಂದ ದುಃಖವನ್ನು ತಡೆಹಿಡಿದು ಪತ್ನಿಯ ಕಡೆಗೊಮ್ಮೆ ನೋಡಿದನು. ಒಂದೆರಡು ಕಡೆ ತೇಪೆ ಹಾಕಿದ ಆಕೆಯ ಸೀರೆಯನ್ನು ಕಂಡು ಅವನ ಕರುಳು ಕಿತ್ತು ಬಂದಂತಾಯಿತು.

‘ಲಕ್ಷ್ಮೀ, ಯಾವ ಸುಖಕ್ಕೆಂದು ನೀನು ನನ್ನ ಕೈ ಹಿಡಿದೆ? ತಂದೆಯ ಸಂಪತ್ತಿಗೆ ತಿಲೋದಕವಿತ್ತು, ಅವರ ಮಾತು ಮೀರಿ, ಈ ಹತಭಾಗ್ಯನ ಕೈ ಹಿಡಿದೆ? ನನ್ನ ಕೈ ಹಿಡಿದ ಮೇಲೆ ಒಂದು ದಿನವೂ ನೀನು ಸುಖವನ್ನು ಕಂಡುದಿಲ್ಲ. ಉಡಲು ಒಂದು ಚೆನ್ನಾದ ಸೀರೆ ಉಣಲು ಉತ್ತಮ ಊಟ, ಇವೆರಡನ್ನಾದರೂ ನಾನು ನಿನಗೆ ಒದಗಿಸಲಿಲ್ಲ. ನಾನೆಂತಹ ಪಾಪಿ’! ಶಂಕರ ವೇದನಾಪೂರಿತ ಧ್ವನಿಯಲ್ಲಿ ನುಡಿದನು. ಮಾತನಾಡುತ್ತಾ, ಮಾತನಾಡುತ್ತಾ ಅವನ ಕಂಠ ಬಿಗಿದು ಬಂತು.

‘ನನ್ನ ದೇವ, ನೀವು ಹಾಗನ್ನಬೇಡಿ. ನಿಮ್ಮ ಈಗಿನ ಅವಸ್ಥೆಯನ್ನು ನೋಡಿದರೆ ನನ್ನ ಕರುಳು ಕಿತ್ತು ಬರುತ್ತಿದೆ. ಎಣ್ಣೆ ಕಾಣದೆ ಕೆಂಚಾಗಿ ಹಾರಾಡುತ್ತಿರುವ ಕೂದಲುಗಳು, ಪಾತಾಳಕ್ಕಿಳಿದ ಕಣ್ಣುಗಳು, ಗುಳಿಬಿದ್ದ ಕೆನ್ನೆಗಳು....ಇವು ನಿಮ್ಮ ರೂಪವನ್ನೇ ಬದಲಿಸಿವೆ. ಈ ದುರ್ಭಾಗ್ಯೆಯ ಕೈಹಿಡಿದ ದಿನದಿಂದ ನಿಮ್ಮನ್ನು ಶನಿ ಕಾಡುತ್ತಿರಬೇಕು”–ಲಲಿತೆ ಉತ್ತರಿಸಿದಳು.

ಶಂಕರ ನಿರುತ್ತರನಾದ. ಅವನ ಮನಸ್ಸು ಬೇರೇನನ್ನೋ ಯೋಚಿಸುತಿತ್ತು.

“ಹಾಲ ಹೊಳೆ ಹರಿವ ನಾಡು”

ಅಬ್ಬಾ! ಏನು ವಿಡಂಬನೆ! ನಿಜಕ್ಕೂ ನಮ್ಮದು ಹಾಲ ಹೊಳೆ ಹರಿವ ನಾಡೇ? ಮಗು ಕಿಶೋರನಿಗೆ ಕುಡಿಯಲು ಒಂದು ಔನ್ಸು ಹಾಲು ಸಿಗಲಿಲ್ಲ. ಇದ್ದ ಹಾಲನ್ನು ಕೊಂಡುಕೊಳ್ಳುವ ಸಾಮರ್ಥ್ಯ ತನ್ನ ಬಳಿಯಿಲ್ಲ ಅಹುದು, ಇಂದು ಭಾರತದ ಹಾಲ ಹೊಳೆ ಬತ್ತಿ ಬರಡಾಗಿದೆ. ಗತ ಕಾಲದ ವೈಭವವನ್ನು ನೆನೆದು, ವರ್ಣಿಸಿ ಏನು ಫಲ?

“ಹೊಳೆವ ಹೊನ್ನ ಗನಿಯು ಬೀಡು”

ಹುಂ! ಏನು ವಿಪರ್ಯಾಸ! ಕೈಹಿಡಿದ ಮಡದಿಗೆ ಒಂದೆಳೆ ಚಿನ್ನದ ಸರ ತಾನು ಮಾಡಿಸಿಲ್ಲ. ಬದಲು ಆಕೆಯ ಬೆಂಡೋಲೆಗಳನ್ನೂ ಗುಂಡಾಚಾರಿಯು ಕೈಸಾಲು ಮಾಡಿವೆ. ತನ್ನ ತಂದೆಯ ಮಾತನ್ನು ಕೇಳಿ ಆಕೆ ರಮೇಶನ ಕೈಹಿಡಿದಿದ್ದರೆ ತಂದೆ ಕೊಡುತಿದ್ದ ಐವತ್ತು ಪವನು ಚಿನ್ನಕ್ಕೆ ಆಕೆ ಒಡತಿಯಾಗುತಿದ್ದಳು. ಶ್ರೀಮಂತನ ಕೈ ಹಿಡಿದು ಸುಖವಾಗಿ ಜೀವಿಸುತಿದ್ದಳು.

ಒಂದು ಪವನು ಚಿನ್ನಕ್ಕೆ ೮೫ ರೂಪಾಯಿಗಳು. ಅಬ್ಬಾ, ಏನು ಧಾರಣೆ? ೮೫ ರೂಪಾಯಿಗಳು—ತನ್ನ ಒಂದು ತಿಂಗಳ ಸಂಪಾದನೆ ಕೂಡಾ ಇಷ್ಟಾಗದು. ಮತ್ತೆ ನಮ್ಮ ದೇಶ ಹೊಳೆವ ಹೊನ್ನ ಗನಿಯ ಬೀಡೇ? ವಿಚಾರಮಂಥನ ಶಂಕರನ ಮನದಲ್ಲಿ ನಡೆಯುತಿತ್ತು.

“ಊಟಕ್ಕೇಳಿ” ಎಂದು ಲಲಿತೆ ಪುನಃ ಹೇಳಿದೊಡನೆ ಮನಸ್ಸಿಲ್ಲದ ಮನಸ್ಸಿನಿಂದ ಊಟಕ್ಕೆದ್ದನು.

(೧೦ನೇ ಪುಟ ನೋಡಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)

ಸಂಪಾದಕರು:– **ಯೋಗಿರಾಜ ಶ್ರೀ ಉಮೇಶಚಂದ್ರರು.**

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.



ಶುದ್ಧ ಹರಟೆ

ಲಂಘನಂ ಪರಮೌಷಧಂ

ಸಹಾನುಭೂತಿಯನ್ನು ವ್ಯಕ್ತಪಡಿಸಿ, ಸಹಾನುಭೂತಿಯನ್ನು ಗಿಟ್ಟಿಸಿಕೊಳ್ಳುವ ಹೊಸ ವಿಧಾನ.

ಅಧ್ಯಾಪಕ ಮತದಾರ ಕ್ಷೇತ್ರದಿಂದ ಪಂಜಾಬು ವಿಧಾನ ಪರಿಷತ್ತಿಗೆ ಆಯ್ಕೆಗೊಂಡ ಶ್ರೀ ಗುರುಚರಣ ಸಿಂಘರು ಇದೇ ತಾ. ೨೨ರಂದು ಮೂರು ದಿನಗಳ ಉಪವಾಸ (ಲಂಘನಂ) ಮಾಡುವೆನೆಂದು ನಿರ್ಧರಿಸಿರುವರಂತೆ. ಶ್ರೀ ಸಿಂಘರು ಸಿರಿವಂತರೆ ಆಗಿರಬಹುದು. ಉಪವಾಸ ಮಾಡುವಷ್ಟು ಅವರು ದರಿದ್ರರೂ ಅಲ್ಲ. ಮೂರು ಏಕಾದಶಿಗಳೂ ಒಮ್ಮೆಲೆ ಬರಲು ಸಾಧ್ಯವಿಲ್ಲವೆಂದು ನಾನು ನನ್ನ ಮಿತ್ರ ಪಂಚಾಂಗ ಭಟ್ಟರನ್ನು ಕೇಳಿ ತಿಳಿದುಕೊಂಡಿದ್ದೇನೆ. ಆದ್ದರಿಂದ ಅವರು ಧಾರ್ಮಿಕ ಶ್ರದ್ಧೆಯುಳ್ಳವರೂ ಆಗಿಲ್ಲವೆಂದು ನಿಶ್ಚಯಿಸಬಹುದಾಗಿದೆ. ಅವರಿಟ್ಟುಕೊಂಡ ಘನ ಉದ್ದೇಶ ಅಧ್ಯಾಪಕರ ಸಂಕಷ್ಟಗಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸುವುದೇ ಆಗಿದೆಯಂತೆ.

ಮದುವೆಯಾದೊಡನೆ ಕೆಲ ದಿನಗಳವರೆಗೆ ದಂಪತಿಗಳಲ್ಲಿ ಉತ್ಸಾಹ ತುಂಬಿಕೊಂಡಿರುವುದನ್ನು ನಾವು ಕಂಡಿದ್ದೇವೆ. ಮಂತ್ರಿಗಳಾದೊಡನೆ ಮಾನ್ಯ ಮಂತ್ರಿವರ್ಯರಿಗೆ ತಮ್ಮ ರಾಜ್ಯದಲ್ಲಿ ಸುಭಿಕ್ಷೆ ನೆಲಸಬೇಕೆಂಬಾಸೆಯೊಂದಿಗೆ ಉತ್ಸಾಹ ತುಂಬುವುದಿದೆ. ಅದೇ ರೀತಿಯಲ್ಲಿ ಅಧ್ಯಾಪಕರ ಸಮಸ್ಯೆಯನ್ನು ದೂರಮಾಡಲು ಅನುಕೂಲವಾಗುವಂತೆ ಉತ್ಸಾಹೀ ಶ್ರೀ ಸಿಂಘರು ಉಪವಾಸ ವ್ರತವನ್ನಾಚರಿಸುವರಂತೆ.

ಈ ವಾರ್ತೆ ಹಬ್ಬಿದೊಡನೆ ಅಧ್ಯಾಪಕ ವರ್ಗಕ್ಕೆ ಬಹು ಸಂತಸವಾಗಿರಬೇಕು. ಯಾಕೆಂದರೆ ತಾವು ಓಟು ಕೊಟ್ಟು ಆರಿಸಿದ ಈ ವ್ಯಕ್ತಿ ತಮಗಾಗಿ ಈ ರೀತಿ ಉಪವಾಸ ಬೀಳುತ್ತಿದೆಯಲ್ಲಾ. ಅರೆ ಹೊಟ್ಟೆ ಊಟಮಾಡುವ ನಮ್ಮೊಂದಿಗೆ ಸೇರಿಕೊಂಡರಲ್ಲಾ" ಎಂದು. ಈ ರೀತಿಯ ಎಮ್ಮೆಲ್. ಸಿ. ಗಳು ಸಿಗುವುದೇ ದುರ್ಲಭವಲ್ಲವೆ?

ಅಧ್ಯಾಪಕರೆಂದರೆ ಅಲ್ಪತೃಪ್ತರು. ಮಂತ್ರಿಗಳು, 'ಅಧ್ಯಾಪಕರ ವೇತನದ ಕುರಿತು ಪರಿಶೀಲಿಸುವೆವೆಂದು ಹೇಳಿದರೆ ಸರಿ, ಅಧ್ಯಾಪಕರಿಗಾಯಿತು ಆತ್ಮತೃಪ್ತಿ. 'ಹೊಸ ವೇತನ ಮಟ್ಟವನ್ನು ಶೀಘ್ರವಾಗಿ ಘೋಷಿಸುವೆ'ವೆಂದು ಹೇಳಿದರೆ ಸಾಕು, ಅವರು ಚಾತಕ ಪಕ್ಷಿಗಳು ಮಳೆಯ ಬರವನ್ನು ಹಾರೈಸುವಂತೆ ಆ ಘೋಷಣೆಯನ್ನು ನಿರೀಕ್ಷಿಸುವರು. 'ಅಧ್ಯಾಪಕರೊಬ್ಬರಿಗೆ ಐದೈದು ರೂಪಾಯಿಗಳನ್ನು ಹೆಚ್ಚಿಸಿದಲ್ಲಿ ಐನೂರು ಲಕ್ಷ ರೂಪಾಯಿ ಬೇಕಾಗುವುದೆಂದು ಮಂತ್ರಿಗಳು ಹೇಳಿಕೆಯನ್ನು ಹೊರಡಿಸಿದೊಡನೆ ಉಪಾಧ್ಯಾಯರು, "ಅಯ್ಯೊ ಪಾಪವೆ! ಮಂತ್ರಿಗಳಾದರೂ ಏನು ಮಾಡುವುದು? ಸರಕಾರದ ಹತ್ತಿರ ಹಣವೇಯಿಲ್ಲ. ಒಟ್ಟಾರೆ ನಮ್ಮ ದುರದೃಷ್ಟ" ಎಂದು ತಮ್ಮೊಳಗೆ ತಾವೇ ಸಮಾಧಾನಪಟ್ಟುಕೊಳ್ಳುವರು.

ಶ್ರೀ ಗುರುಚರಣ ಸಿಂಘರ ಈ ನಿರ್ಧಾರವನ್ನು ಕೇಳಿ ಅಧ್ಯಾಪಕ ಬಂಧುಗಳೆಲ್ಲಾ "ಅಯ್ಯೊ! ಪಾಪವೆ!" ಎಂಬ ಮರುಕದೊಂದಿಗೆ ತೃಪ್ತಿರೂಪವಾದ ಸಂತೋಷವನ್ನು ಪಡದಿರಲಾರರು!

ನನ್ನ ಮಿತ್ರರೊಬ್ಬರು ಹುಚ್ಚನ ಪಾತ್ರವನ್ನು ವಹಿಸಿಕೊಳ್ಳುವುದರಲ್ಲಿ ಬಹು ನಿಸ್ಸೀಮರಾಗಿದ್ದರು. ಹುಚ್ಚನ ಪಾತ್ರ ವಹಿಸಬೇಕೆಂದಾದರೆ ಅವರಿಗೇ ಕರೆಬರುತ್ತಿತ್ತು. ಅವರು ಆ ಪಾತ್ರದಲ್ಲಿ ಹುಚ್ಚರಂತೆ ನಟಿಸುತ್ತಿದ್ದರು. ಅಧ್ಯಾಪಕರ ಭಾಷೆಯಲ್ಲೇ ಅನ್ನುವುದಾದರೆ "ಅಯ್ಯೋ ಪಾಪ!" ಕೊನೆಗೆ ಅವರಿಗೆ ಹುಚ್ಚೇ ಹಿಡಿಯಿತು. ಹುಚ್ಚನಂತೆ ನಟಿಸಿ ಅವರು ಹುಚ್ಚರಾದರು. ಹಾಗೆಯೇ ಅಧ್ಯಾಪಕ ಮತದಾರ ಕ್ಷೇತ್ರದಲ್ಲಿ ಆರಿಸಿ ಬಂದ ಅರ್ಥಾತ್ ಅರೆಹೊಟ್ಟೆಯವರಿಂದ ಆರಿಸಲ್ಪಟ್ಟ ಶ್ರೀ ಸಿಂಘರು ಈಗಾಗಲೇ ಉಪವಾಸವನ್ನೆ ಕೈಕೊಳ್ಳುವ ನಿರ್ಧಾರವನ್ನು ಮಾಡಿದ್ದಾರೆ. ಆದರೆ ಅವರು ನನ್ನ ಮಿತ್ರರಂತಾಗಬಾರದೆಂದು ಆಶಿಸುತ್ತೇನೆ.

ಶ್ರೀ ಚರಣ ಸಿಂಘರ ಈ ನಿರ್ಧಾರದಿಂದಾಗಿ ಉಳಿದ ರಾಜ್ಯದ ಎಮ್ಮೆಲೆ ಮತ್ತು ಎಮ್ಮೆಲ್. ಸಿ. ಯವರಿಗೆ ತಲೆ ಸಿಡಿತವೇ ಆರಂಭವಾಗಿದೆ. ಆ ತಲೆ ಸಿಡಿತ ಮುಂದಿನ ಚುನಾವಣೆ ಸಮಯದಲ್ಲಿ ಆಸ್ಪಿರಿನ್ ಯಾ ಅನೋಸಿನ್‌ನಿಂದಲೂ ದೂರವಾಗದು. ಅಂತಹ ಭೀಕರ ತಲೆ ಸಿಡಿತ ಅವರನ್ನಾವರಿಸಲಿದೆ. ಅಧ್ಯಾಪಕರ ಸಹಾನುಭೂತಿಯನ್ನು ಪಡೆದವರಿಗೆ ಮುಂದಿನ ಚುನಾವಣೆ ಉಗುಳಲಾರದ ಹಾಗೂ ನುಂಗಲಾರದ ತುತ್ತೇ ಆಗಿದೆ.

ಭಾವಿ ಚುನಾವಣೆಯ ದೃಷ್ಟಿಯಿಂದ ಶ್ರೀ ಚರಣಸಿಂಘರು ಮಾಡಿದ ನಿರ್ಧಾರ ಸ್ತುತ್ಯಾರ್ಹವೇ ಆಗಿದೆ. ಅಧ್ಯಾಪಕರ ಸಹಾನುಭೂತಿಯನ್ನು ಪಡೆದ ಅವರು ಅಧ್ಯಾಪಕರಿಗಾಗಿ ಏನೂ ಕಾರ್ಯಮಾಡದೆ ಹೋದರೂ ಮುಂದಿನ ಚುನಾವಣೆಯಲ್ಲಿ ಮಾತ್ರ ಸೀಟನ್ನು ಗಿಟ್ಟಿಸಿಕೊಂಡರೆಂದೆ ಹೇಳಬೇಕು. ಅಧ್ಯಾಪಕರು ಅಲ್ಪತೃಪ್ತರೆಂದು ನಾನು ಹಿಂದೆಯೆ ಹೇಳಿದ್ದೇನೆ. ಆದ್ದರಿಂದ ಅವರೆಲ್ಲರೂ ಇದರಿಂದಲೇ ತೃಪ್ತರಾಗಿ ಓಟು ಮುಂದೆ ಇವರಿಗೆ ಹಾಕುವುದರಲ್ಲಿ ಆಶ್ಚರ್ಯವೇನೂಯಿಲ್ಲ.

ಒಂದು ಕಲ್ಲಿನಿಂದ ಎರಡು ಹಣ್ಣುಗಳನ್ನು ಉದುರಿಸುವಂತೆ ಶ್ರೀ ಸಿಂಘರು ಉಪವಾಸ ಮಾಡುವ ಈ ನಿರ್ಧಾರದಿಂದೆ ಸರಕಾರದ ಗಮನವನ್ನು ಸೆಳೆಯುವದರೊಂದಿಗೆ ಸುಲಭದಲ್ಲಿ ಮುಂದಿನ ಸೀಟನ್ನು ಭದ್ರವಾಗಿರಿಸಿಕೊಂಡರು.

ನಮ್ಮ ರಾಜ್ಯದ ವಿದ್ಯಾಮಂತ್ರಿಗಳಿಗೂ ಮತ್ತು ಅಧ್ಯಾಪಕ ಮತದಾರ ಕ್ಷೇತ್ರದಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಗೂ ಈ ವಾರ್ತೆ ದಂಗುಬಡೆಯುವಂತೆ ಮಾಡಿರಬಹುದೆಂದು ಅಲ್ಪಮತಿಯವನಾದ ನಾನು ಊಹಿಸುತ್ತೇನೆ. ಇದಕ್ಕೆ ತಕ್ಕಂತೆ ಅವರೊಂದು ತೆರನಾದ ಹೊಸ ವಿಧಾನವನ್ನು ಅನುಸರಿಸಿದರೆ ಚುನಾವಣೆಯ ಸಮಯದಲ್ಲಿ ಯಾರೂ ಆಶ್ಚರ್ಯಪಡಬೇಕಾದುದಿಲ್ಲ.

ಸಹಾನುಭೂತಿ ಪಡುವುದು ಈಗ ನಮ್ಮ ದೇಶದಲ್ಲಿ 'ಇನ್‌ಫ್ಲುಯೆಂಜ'ದಂತೆ ಹರಡಿದೆ. ಸತ್ತವರಿಗಾಗಿ ಶೋಕ ಸಭೆಯನ್ನು ಮಾಡಿ ಅಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸುವ ಹವ್ಯಾಸ ನಮ್ಮಲ್ಲೀಗ ಹೆಚ್ಚಿದೆ. ಜೀವಂತರಾಗಿದ್ದಾಗ ಯಾವ ಉಪಕಾರವನ್ನು ಎಸಗದವರು ಸತ್ತನಂತರ ಸಹಾನುಭೂತಿ ವ್ಯಕ್ತಪಡಿಸುವ ಉಪಕಾರವನ್ನು ಮಾಡಿಯೇ ತೀರುತ್ತಾರೆ. ಸಹಾನುಭೂತಿಯ ಸಭೆಯಲ್ಲಿದ್ದ ಸಭಿಕರಿಗಂತೂ ಸಹಾನುಭೂತಿ ವ್ಯಕ್ತಪಡಿಸುವವರಿಗೂ, ಅದನ್ನು ಪಡಕೊಳ್ಳುವ ನಿರ್ಜೀವಿಗಳಿಗೂ ಇರುವ ಸಂಬಂಧದ ಬಗ್ಗೆ ತೀವ್ರಾಭಿಪ್ರಾಯವುಂಟಾಗುವುದು. ಆದರೆ ಆ ನಿರ್ಜೀವಿ ವ್ಯಕ್ತಿ ಜೀವಂತವಿರುವಾಗ ಯಾರು ಆವನ ಕಡೆಗೆ ಗಮನವನ್ನೆ ಯೀಯಲಾರರು.

ಈ ರೀತಿ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಸಹಾನುಭೂತಿಯನ್ನು ಗಿಟ್ಟಿಸಿಕೊಳ್ಳುವವರು ತೀರ ದುರ್ಲಭರಾಗಿರುವರೆಂದು ಈಗಿನ ಕಾಲದಲ್ಲಿ ನೀವು ನಂಬಬೇಡಿ. ಒಂದು ಕಲ್ಲಿನಿಂದ ಎರಡು ಹಣ್ಣನ್ನುದುರಿಸುವ ಬುದ್ಧಿವಂತರು ನಮ್ಮಲ್ಲೀಗ ವಿರಳರಾಗಿಲ್ಲ.

೦೦ ೦೦ ೦೦

ಕಾಶ್ಮೀರದ ಸುಮಾರು ಒಂದುವರೆ ಲಕ್ಷ ದೋಣಿವಾಲರ ಮಕ್ಕಳಿಗಾಗಿ ತೇಲಾಡುವ ಶಾಲಾ ಕ್ರಮವನ್ನು ತರಲಾಗುವುದಂತೆ. —ಸುದ್ದಿ.

ಅಧ್ಯಾಪಕರು ಮಕ್ಕಳಿಗೆ, ಗಲಾಟೆ ಮಾಡಿದರೆ ನಿಮ್ಮನ್ನು ನದಿಗೆ ದೂಡುವೆವೆಂದು ಬೆದರಿಸಿದರೆಂಬ ವಾರ್ತೆ ಹಿಂದಿನಿಂದ ಬರಬಹುದಂತೆ.

ವಿದ್ಯಾರ್ಥಿಗಳು ಅಧ್ಯಾಪಕರನ್ನು ನದಿ ನೀರಿಗೆ ಸೆದರೆಂಬ ಸುದ್ದಿ ಬಂದರೆ ಯಾರೂ ಆಶ್ಚರ್ಯಪಡಬೇಕಾದುದಿಲ್ಲ.

ಆ ಶಾಲೆಗಳಲ್ಲಿ ಗೋಟು ತೆಂಗಿನ ಕಾಯಿಗಳನ್ನು ಸಂಗ್ರಹಿಸುವುದು ಅವಶ್ಯವೆಂದು ಕುಂತಳಾ ಪ್ರಿಯರು ಸೂಚಿಸುವರು.

— ಕುಂತಳಾಪ್ರಿಯ.



ನಾಗಪುರದ ಅಗ್ನಿಶಾಮಕ ಸೇವಾ ಕಾಲೇಜಿನ ತರಬೇತಿದಾರರು ಅಗ್ನಿಯೊಡನೆ ಹೋರಾಡಲು ಅಭ್ಯಸಿಸುತ್ತಿದ್ದಾರೆ.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಭಾರತ ದರ್ಶನ

ಸಾರಿಗೆ ಸಂಪರ್ಕ--ಸಂಪ್ರದಾಯವಿಭಂಜಕ

ಪುನಾರಚಿತ ಭಾರತದ ಸಾರಿಗೆ ವ್ಯವಸ್ಥೆ, ಸಮಾಚಾರ ಪತ್ರಿಕೆ, ಆಕಾಶವಾಣಿ ಮತ್ತು ಚಲಚ್ಚಿತ್ರಗಳ ಬಗ್ಗೆ ವಿದೇಶೀಯ ಪತ್ರಿಕಾಕರ್ತ ಶ್ರೀ ತಾಯಜಿಂಕಿಂನ್‌ರವರ ಅಭಿಪ್ರಾಯ ಹೇಗಿದೆ ಎಂದು ಈ ಲೇಖನದಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಸಾರಿಗೆ ಸಂಪರ್ಕವು ಸರ್ವ ಕಾಲದಲ್ಲಿಯೂ ಅಭಿವೃದ್ಧಿಗೊಳ್ಳುತ್ತ ಬರುತ್ತಿದೆ. ಇದರಿಂದಾಗಿ ಸಂಪ್ರದಾಯ ಬದ್ಧತೆಯನ್ನು ಮೀರಿಸುತ್ತ, ದಿನೇ ದಿನೇ ಆಧುನಿಕ ತಂತ್ರಗಳನ್ನು ಅಳವಡಿಸಿಕೊಳ್ಳುವ ಕಾರ್ಯ ಭರದಿಂದ ಇಲ್ಲಿ ಸಾಗುತ್ತಿದೆ.

ಭಾರತದ ಹಳ್ಳಿಗಳು ಸರ್ವಸಾಮಾನ್ಯವಾಗಿ ವಿವಾಹಗಳ ನೆಪದಲ್ಲಿ ಒಂದರೊಡನೊಂದು ಸಂಬಂಧವನ್ನು ಪಡೆಯುತ್ತವೆ. ಅವುಗಳು ತಮ್ಮ ಆವಶ್ಯಕತೆಗಳಾದ ಚಿಮಣಿ ಎಣ್ಣೆ, ಉಪ್ಪು, ಬೆಂಕಿಪೆಟ್ಟಿಗೆ ಅಥವಾ ಬಟ್ಟೆಬರೆ ಮೊದಲಾದುವುಗಳನ್ನು ಕೊಂಡುಕೊಳ್ಳುವ ಮತ್ತು ತಮ್ಮ ಹಳ್ಳಿಯ ಉತ್ಪತ್ತಿಗಳನ್ನು ಮಾರುವ ಸಲುವಾಗಿ ನಗರಗಳೊಡನೆ ಅಪರೂಪವಾಗಿ ಸಂಬಂಧವನ್ನಿಟ್ಟುಕೊಳ್ಳುತ್ತವೆ. ಭಾರತದ ಸಮಾಜದ ಪದ್ಧತಿಯಲ್ಲಿ ಮುಖ್ಯವಾಗಿ ಹಿಂದೂ ಸಮಾಜದಲ್ಲಿ ತೀರ್ಥಯಾತ್ರೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪದೇ ಪದೇಯಲ್ಲವಾದರೂ, ತಮ್ಮ ಜೀವಮಾನದಲ್ಲೊಂದು ಬಾರಿ ಕನ್ಯಾ ಕುಮಾರಿಯಿಂದ ಕಾಶ್ಮೀರದ ವರೆಗೆ ತೀರ್ಥಪರ್ಯಟನೆ ಮಾಡಬೇಕೆಂಬ ಅಭಿಲಾಷೆ ಹಿಂದೂ ಜನರಲ್ಲಿರುತ್ತದೆ. ಈ ದೇಶಾಟನೆಯನ್ನು ನಾವು ಕೇವಲ ಸಂಪ್ರದಾಯತನ ಅಥವಾ ಮೂಢ ನಂಬಿಕೆ ಎಂದು ಹೆಸರಿಸಿ ಬಿಡುವುದು ಸರಿಯಲ್ಲ; ಇವುಗಳಲ್ಲಿ ನಿಜವಾದ ಲಾಭವಿರುವುದು. ತಮ್ಮ ಯಾತ್ರಾವಧಿಯಲ್ಲಿ ಯಾತ್ರಿಕರು ಬೇರೆ ಬೇರೆಡೆಯೊಡನೆ ಶಕ್ತಿಶಾಲಿಯಾದ ಸಂಬಂಧವನ್ನು ಕಲ್ಪಿಸಿಕೊಳ್ಳುವರು. ಅವರು ರೇಲುಗಾಡಿ ಇಲ್ಲವೇ ಬಸ್ಸುಗಳ ಮೂಲಕ ದೇಶದ ಒಂದು ಕೊನೆಯಿಂದ ಇನ್ನೊಂದು ಕೊನೆಯ ವರೆಗೆ ಸಂಚರಿಸಿ, ನೂತನ ಸನ್ನಿವೇಶಗಳನ್ನು ನೋಡುತ್ತಾರೆ.

ಭಾರತೀಯ ರೇಲ್ವೆಗಳು ಯಾತ್ರಾರ್ಥಿಗಳಿಗಾಗಿ ವಿಶೇಷ ರೇಲ್ವೆ ಗಾಡಿಗಳನ್ನು ಓಡಿಸುತ್ತವೆ. ಇದರಿಂದಾಗಿ, ರೂ. ೫೦೦ರಲ್ಲಿ ಒಬ್ಬನು ಭಾರತದ ಸುತ್ತ ೪೦ ದಿನಗಳವರೆಗೆ ಸಂಚರಿಸಬಹುದು ಮಾತ್ರವಲ್ಲ, ಆಹಾರ, ಮಲಗುವ ವ್ಯವಸ್ಥೆಗಳು ಹಾಗೂ ಮಾರ್ಗದರ್ಶಕ ಆಳುಗಳು ಮೊದಲಾದುವುಗಳಿಗಾಗಿ ಅತ ಪ್ರತ್ಯೇಕ ಹಣ ತೆರಬೇಕಾಗಿಲ್ಲ. ಈ ಯಾತ್ರೆಯಲ್ಲಿ ಧಾರ್ಮಿಕ ಕ್ಷೇತ್ರಗಳಾದ ಕಾಶಿ, ಋಷಿಕೇಶ, ಹರಿದ್ವಾರ ಮೊದಲಾದುವುಗಳೊಡನೆ ಬಾಕ್ರಾ ನಂಗಲ್, ಚಿತ್ತರಂಜನ ಕಾರಖಾನೆ ಮೊದಲಾದ ಔದ್ಯೋಗಿಕ ಕೇಂದ್ರಗಳೂ ಸೇರಿರುತ್ತವೆ. ಹಳೆಯ ಮಾದರಿಯಂತೆ ಎತ್ತಿನ ಗಾಡಿಯಲ್ಲಿ ಸಂಚರಿಸುವ ಸಂಪ್ರದಾಯಪ್ರಿಯರಾದರೂ ಈ ರೀತಿಯ ಯಾತ್ರಾ ಸಾಧನಗಳಿಂದ ಉಳಿಸಿಕೊಳ್ಳುವಂತಿಲ್ಲ. ಜಾತ್ರೆಗಳ ವೇಳೆಯಲ್ಲಿ ತೀರ್ಥಸ್ಥಳವನ್ನು ಸಂದರ್ಶಿಸುವುದಾದರೆ, ಅವನು ಕಾಲರಾ ಮತ್ತು ಸಿಡುಬುಗಳಿಗೆ ಪ್ರತಿಬಂಧಕ ದಾಕನ್ನು ಹಾಕಿಕೊಳ್ಳಬೇಕಾಗುವುದು. ಹೆಚ್ಚಿನ ಸುಪ್ರಸಿದ್ಧ ಯಾತ್ರಾ ಸ್ಥಳಗಳಲ್ಲಿ ವರ್ತಮಾನಪತ್ರ ಪುಸ್ತಕಗಳನ್ನೂ ಕೂಡ ಮಾರುವ ಆಳುಗಳಿರುತ್ತಾರೆ.'

ಮಾರ್ಗಗಳ ಮೇಲೆ ಸಂಚರಿಸುವ ವಾಹನಗಳ ಪ್ರಗತಿಯು ನಿಧಾನವೆಂಬಂತೆ ಗೋಚರವಾದರೂ ಕ್ರಾಂತಿಕಾರಿಯಾಗಿದೆ. ಒಂದು ಮಾರ್ಗವನ್ನು ಪಡೆದ ಹಳ್ಳಿಯ ರೂಪವೇ ಬದಲಾಗುತ್ತದೆ. ರಸ್ತೆ ತಯಾರಾದೊಡನೇ ಅದರ ಹಿಂದೆ ಬೈಸಿಕಲ್, ಬಸ್ಸುಗಳೂ ಒಂದು ಹಣ ಮಾಡುವ ಸಾಧನಗಳಾಗುತ್ತವೆ. ಜನರು ತಮ್ಮಲ್ಲಿರುವ ಹಾಳಾಗ ಬಹುದಾದ ಪದಾರ್ಥಗಳನ್ನು ಪೇಟೆಗೆ ತಂದು, ಅವನ್ನು ಮಾರಿ, ಅಲ್ಲಿ ಪರಸ್ಥಳದವರಂತೆ ಉಳಕೊಳ್ಳದೇ ಶೀಘ್ರವಾಗಿ ತಮ್ಮೂರಿಗೆ ಮರಳಿ ಹೋಗಬಹುದು. ತಾಸಿಗೆ ಮೂರು ಮೈಲು ವೇ
ಗದ ಎತ್ತಿನ ಗಾಡಿಯ ಸ್ಥಾನವನ್ನು ಮ
ವತ್ತು ಮೈಲು ವೇಗದ ಮೋಟಾರು
ಡಿ ಆಕ್ರಮಿಸುತ್ತದೆ. ತರಕಾರಿಗಳು,
ಣ್ಣುಹಂಪಲುಗಳು ಹಾಗೂ ಹಾ
ಇತ್ಯಾದಿಗಳನ್ನು ಲಾರಿಗಳು ಬಂ
ಒಯ್ಯುತ್ತವೆ. ಬಸ್ಸು ಅಥ
ಬೈಸಿಕಲ್ಲನ್ನು ಸಂಚಾರಕ್ಕೆ ತರಬೇಕಾ
ರಿ ಹಣ ಬೇಕಾಗುವುದು; ಈ ಮಾರ್ಗ
ಅಂತಹ ಹಣಗಳಿಕೆಗೆ ಅವಕಾಶವ
ಕೊಡುವುದು. ಪೇಟೆಯ ಸಂಪರ್ಕದಿಂ
ಗಿ, ರೈತರ ಕಾಳು ಕಡ್ಡಿಗಳು ಯೋ
ಧಾರಣೆಗೆ ಮಾರಿಹೋಗುವಂತಹ, ಮತ
ತಮ್ಮ ಫಸಲನ್ನು ಮತ್ತೂ ಉತ್ತಮಗೆ
ಳಿಸುವಂತಹ ಪ್ರೇರೇಪಣೆಯನ್ನೂ ಅ
ನೀಡುವುದು.

ಆರ್ಥಿಕ ಸ್ಥಿತಿ ಪರಿವರ್ತನೆಯನ
ಮಾತ್ರವಲ್ಲ, ಜಾತಿ ಪದ್ಧತಿಯಲ್ಲಿಯೂ
ಮಾರ್ಗಗಳು ಮಹಾ ಕ್ರಾಂತಿಯನ್ನು
ಬ್ಬಿಸಿವೆಯೆನ್ನಬೇಕು. ಜನದಟ್ಟಣೆ
ಒಂದು ಗಾಡಿಯಲ್ಲಿ ನೀವು ಕುಳಿತಿದ್ದ
ಬಹಳ ಇಕ್ಕಟ್ಟಿನಲ್ಲಿಯೇ ಇರಬೇಕಾಗು
ದೆ. ಇದರಿಂದಾಗಿ ಒರ್ವ ಬ್ರಾಹ್ಮಣ
ಹರಿಜನನೊಡನೆಯೋ, 'ಅಸ್ಪೃ
ನೊಡನೆಯೋ ಕುಳಿತಿರುವುದ
ಕಾಣಬಹುದು. ಯಾರಾದರೊಬ್ಬ
ಕೀಳು ಜಾತಿಯ ಪ್ರಯಾಣಿಕನು
ರಲು ಸಂಕೋಚ ಮಾಡುವುದು ಕಾನ
ನಿಗೆ ವಿರುದ್ಧವಾಗುತ್ತದೆ. ಹಾಗಾಗಿ ಇ
ರಿಂದ ಪ್ರಾಚೀನ ಸಂಪ್ರದಾಯತನ
ದೂರವಾಗುತ್ತ ಬರುತ್ತದೆ.

ಸರಕಾರದಿಂದಲೂ ಜನತೆಯಿಂದಲ
ಮಾರ್ಗಗಳು ಯಾವಾಗಲೂ ಕಡಿಯ
ಡುತ್ತವೆ. ಪ್ರಾಯಃ ಇನ್ನೂ ಧಾರಾಳ ರ
ಗಳನ್ನು ನಿರ್ಮಿಸಬಹುದು; ಆದರೂ,
ಗ ಆದುದು ಕಡಿಮೆಯೆನ್ನುವಂತಿಲ್ಲ.
ದ್ಯುತ್ತನ್ನೂ ಕ್ರಮೇಣ ಹಳ್ಳಿಗಳಿಗೆ ತರು
ಕಾರ್ಯವು ನಡೆಯುತ್ತಿದೆ; ಇದರೊಡ
ಪ್ರಗತಿಯೂ ಕಾಲಿಡುತ್ತದೆ. ಹಳೆ ಸಂ
ದಾಯದ ಶಾಸ್ತ್ರಾನುಕರಣಿಕರು ಇ
ನ್ನು ಮೆಚ್ಚಲಾರರು. ದಕ್ಷಿಣದ ಓ
ಹಳೆಯ ಮುದುಕ ಒದರುತಿದ್ದ— "
ದ್ಯುತ್ ಬಂದಿತೆಂದರೆ, ನಮ್ಮ ಪ್ರಾ
ನ ಸಂತೋಷವನ್ನೇ ಕಳೆದುಕೊಳ್ಳ
ವು, ನಾವು ಮತ್ತೂ ಬಡವರಾಗುವೆ
ಮನೆಯೆಲ್ಲವೂ ಸದಾಕಾಲ ಬೆಳ್ಳಂ
ಗಾಗಿದ್ದು, ನೆರೆಮನೆಯಲ್ಲೇನಿದೆಯೆಂ
ಕಾಣುವೆವು. ಆಗ, ಅವೂ ನಮಗೆ ದೇ
ನಿಸುವುದು. ಈಗ ನಾಳೆ ನಾವೇನು ಮ
ಡುವೆವೆಂದು ತಿಳಿದಿರುವ ಸೂರ್ಯನಿ
ವಾಗಲೇ ಹಾಸಿಗೆ ಸೇರುತ್ತೇವೆ" ಎಂದ
ಆದರೆ, ಯುವಕರು ಮಾತ್ರ ಹೀಗಿಲ್ಲ.
ವರು ಎಲ್ಲ ಗ್ರಾಮಗಳಿಗೂ ವಿದ್ಯುತ್
ಕೆನ್ನುತ್ತಾರೆ. ವಿದ್ಯುತ್ತಿನಿಂದಲೇ ಉದ್ಯೋ
ಗ—ದಂಧೆಗಳು ಮತ್ತು ಆಕಾಶ ವಾಣಿ
ಳು ಬರುವುವೆಂದವರು ತಿಳಿದಿದ್ದಾರೆ.

ಸಮಾಜ ವಿಕಾಸ ಯೋಜನೆಗಳಿಂ
ಗಿ ದೇಶದ ಹತ್ತು ಗ್ರಾಮಗಳ ಪೈಕಿ ಒ

(೯ನೇ ಪುಟ ನೋಡಿರಿ)

ಕುಂದಾಪುರ ಅಸಿಸ್ಟೆಂಟ ಕಮಿಶನರ ಕೋರ್ಟಿನಲ್ಲಿ

O. P. 349/1960.

ಪಿಣ್ಣು ಯಾನೆ ರುದ್ರಮ್ಮ ಶೆಡ್ತಿ
—ಅರ್ಜಿದಾರಳು.

ಮತ್ತು

1. ಸಾಲ್ವೋದೋರ್ ಮಸ್ಕರೇಂಞಾ ಲೋರೆಸ್ ಮಸ್ಕರೇಂಞಾರ ಮಗ,
2. ಲಾದ್ರು ಮಸ್ಕರೇಂಞಾ —1 ನೇಯವನ ಮಗ—ಉಡ್ಪಿ ತಾಲ್ಕು ಹಾವಂಜೆ ಗ್ರಾಮದಲ್ಲಿರುವವರು —ಎದ್ರಿರು.

ಸದ್ರಿ ಎದ್ರಿಂಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ.

ತಾರೀಕು 9-10-56ನೇ ಚಾಲಗೇಣಿ ಚೀಟಿನ ಆಧಾರದ ಮೇಲೆ ಚಾಲಗೇಣಿ ಚೀಟಿಗೆ ಕಾರಣವಾದ ಆಸ್ತಿಗಳನ್ನು ಅರ್ಜಿದಾರಳಿಗೆ ಅನುಭವಿಸಿಕೊಂಡು ಬರುವ ಬಾಬ್ತು ಎದ್ರಿರು ಆರ್ಜಿಯಲ್ಲಿ ನಮೂದಿಸಿದ ಗೇಣಿ ಬಾಕಿ ಮಾಡಿಕೊಂಡಿರುವದ್ರಿಂದ ಅರ್ಜಿಯಲ್ಲಿ ಕಾಣ್ಸಿದ ಆಸ್ತಿಯನ್ನು ಸ್ವಾಧೀನತೆ ಕೇಳಿ ವಗೈರೆ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 27-6-60ಕ್ಕೆ ನೋಟಿಸಿನ ಬಗ್ಗೆ ಇಟ್ಟಿದೆ—ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಹೇಳುವಂತಾದ್ದಿದ್ದರೆ ಆ ದಿವ್ಸ ಪೂರ್ವಾಹ್ಣ 11 ಗಂಟೆಗೆ ಸರಿಯಾಗಿ ಉಡ್ಪಿ ಕೇಂಪಿಗೆ ಈ ಕೋರ್ಟು ಮುಂದೆ ಬಂದು ಹಾಜ್ರಾಗತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು—

(By order of the Court).

P. N. Krishnamurthi Rao,
Advocate for Petitioner.

Udipi, S. K. 3—6—60.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

"ಉದಯನ ಕಥೆ ಮತ್ತು ಆ
ಕನ್ನಡ ಪಾಠಗಳು— ಎಂಟನೇ ತರ
ಗೆ ಸೌತ್ ಕೆನರಾ ಡಿಸ್ಟ್ರಿಕ್ಟಿಗೆ ಪಠ್ಯ ಪುಸ
ವಾಗಿವೆ. ಮಾರಾಟಗಾರರು:— ಎಸ
ಎಸ್. ಎನ್. ಬುಕ್ ಡಿಪೋ, ಸಿಟಿ ಮಾ
ಟ್, ಬೆಂಗಳೂರು—೨ "

ವಿಚಾರ ವರ್ಷ

ಶ್ರಮಿಕ ಕಲ್ಯಾಣ ಯೋಜನೆಗಳು

ಪ್ರಾಚೀನ ಭಾರತದಲ್ಲಿ ಆಧುನಿಕ ಯುಗಕ್ಕಿಂತ ಮಿಗಿಲಾದ ಸೌಕರ್ಯಗಳು ಶ್ರಮಿಕವರ್ಗದವರಿಗೆ ದೊರೆಯುತ್ತಿದ್ದುವು ಇದು ಎಷ್ಟು ಜನರಿಗೆ ಗೊತ್ತು?

ಸಾಮಾಜಿಕ ಸಂರಕ್ಷಣೆ, ಶ್ರಮಿಕ ಕಲ್ಯಾಣ, ಒಡೆಯ ಆಳುಗಳ ನಡುವಣ ಸಂಬಂಧ ಮೊದಲಾದುವು ಕೇವಲ ನವೀನ ವಿಚಾರಧಾರೆಗಳೆಂಬ ಕಲ್ಪನೆಯು ಇಂದು ಬಹು ಜನರಲ್ಲಿರುವುದು. ಆದರೆ, ಕ್ರಿ. ಪೂ. ಮೂರನೆಯ ಶತಮಾನದವೊಳಗೆ ಈ ಭಾರತವಾಸಿಗಳು ಇತ್ತ ಗಮನ ಹರಿಸಿದ್ದರು ಮಾತ್ರವಲ್ಲ, ಅವುಗಳನ್ನು ವ್ಯವಹಾರಕ್ಕೂ ತಂದಿದ್ದರು. ಪ್ರಾಚೀನ ಭಾರತದಲ್ಲಿ ನಿವೃತ್ತಿ ವೇತನ, ನಿತ್ಯಕ್ರಮಿಗೆ ಆರ್ಥಿಕ ಸಹಾಯ, ರೋಗದಿಂದ ನರಳುತ್ತಿರುವಾಗ, ಪ್ರಸವಕಾಲದಲ್ಲಿ ಧನಸಹಾಯ, ಪ್ರೊವಿಡೆಂಟ್ ಫಂಡ್, ಜೀವನ ನಿರ್ವಾಹ ಭತ್ತೆ ಮೊದಲಾದುವೆಲ್ಲವೂ ಶ್ರಮಿಕ ವರ್ಗದವರಿಗೆ ಕೊಡಲ್ಪಡುತ್ತಿದ್ದುವು. ವಸ್ತುತಃ ಈ ಸೌಕರ್ಯಗಳು ರಾಜಕರ್ಮಚಾರಿಗಳಿಗೆ ಮಾತ್ರ ದೊರೆಯುತ್ತಿದ್ದುವು. ಆದರೂ ಸಂಯುಕ್ತ ಕುಟುಂಬ ಪದ್ಧತಿಯು ಆಗ ಪ್ರಚಲಿತವಿರುತ್ತಿದ್ದುದರಿಂದ, ಈಯೆಲ್ಲ ಸುಖ ಸೌಕರ್ಯಗಳಿಗೂ ಮಿಗಿಲಾಗಿ, ವಿಧವೆಯರು, ಪಿತೃಹೀನ ಸಂತಾನಿಗರು ವೃದ್ಧರು ಹಾಗೂ ಅಸಮರ್ಥ ವ್ಯಕ್ತಿಗಳ ಪೋಷಣೆಯು ಸುವ್ಯವಸ್ಥ ರೀತಿಯಿಂದ ನಡೆಯುತ್ತಿತ್ತು.

ಸಾಮಾಜಿಕ ಭದ್ರತಾ ಸಂಬಂಧದಲ್ಲಿ ಕೌಟಿಲ್ಯ, ಮನು ಮತ್ತು ಶುಕ್ರಾಚಾರ್ಯರ ನಿಯಮಗಳು ಸುಪ್ರಸಿದ್ಧವಿವೆ. ಶುಕ್ರಾಚಾರ್ಯರ ಗ್ರಂಥವು ಅಗ್ರಗಣ್ಯವೆನಿಸಿದೆ. ಇವರ ಕಾಲದಲ್ಲಿ ಶ್ರಮಿಕರ ಸಂಖ್ಯೆ ಅತ್ಯಲ್ಪವಿದ್ದುದರಿಂದ ಅವರ ಗ್ರಂಥದಲ್ಲಿ ಅಷ್ಟೊಂದು ಸೌಕರ್ಯವೀಯಲಾಯಿತೆನ್ನುವ ಕೆಲವರಿದ್ದಾರೆ. ಆದರೂ ಶ್ರಮಿಕ ಕಲ್ಯಾಣದ ಉದ್ದೇಶದಿಂದಲೇ ಅವರು ಆ ರೀತಿ ಬರೆದರೆಂಬುದು ನಿಜವೇ. ಅವರ ಗ್ರಂಥದ ಬಹು ಭಾಗದಲ್ಲಿ ಈ ಉದ್ದೇಶವು ಸುವ್ಯಕ್ತಪಟ್ಟಿದೆ.

ಅನಾದಿ ಕಾಲದಿಂದಲೂ ಮಾನವ ನಾನಾ ವಿಧದ ರೋಗಗಳಿಗೆ ಅಥವಾ ದುರ್ಘಟನೆಗಳಿಗೆ ಬಲಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾಗುತ್ತಾನೆ. ಇದರಿಂದಾಗ ಆತನು ಸಂಪತ್ತನ್ನು ಮಾತ್ರವಲ್ಲ, ತನ್ನ ಉದ್ಯೋಗವನ್ನೂ ಕೈಬಿಡಬೇಕಾದ ಪ್ರಸಂಗಗಳು ತಲೆದೋರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಶ್ರಮಿಕ ರಕ್ಷಣೆಗಾಗಿ ನಿಯಮಕರ್ತರು ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ— "ಶ್ರಮಿಕನು ರೋಗದಿಂದ ನರಳಿ, ಅನುಪಸ್ಥಿತನಾದ ತರುವಾಯ, ತನ್ನ ಕೆಲಸ ನಿರ್ವಹಿಸಲು ಮರಳಿ ಬಂದರೆ, ಆತನು ಗೈರುಹಾಜರಾಗಿದ್ದ ಅವಧಿಯ ವೇತನವನ್ನು ಕೊಡಬೇಕು" ಎಂದು. ಅನುಮತಿ ಪಡೆದು ವಿರಾಮ ಪಡೆದರೆ, ವೇತನವೀಯಬೇಕು; ಪುನಃ ಕೆಲಸಕ್ಕೆ ಸೇರಿಸಿಕೊಂಡರೆ ಸಾಕು ಎಂದು ವಿಧಿಸುವ ನಿಯಮಗಳನ್ನೂ ಬೇರೆಯವರು ಹೇಳಿದ್ದಾರೆ. ಮನುವು,

ಆರ್ತಾಸ್ತು ಕುರ್ಯಾತ್ಸ್ವಸ್ಥಃ
ಸನ್ಯಥಾಭಾಷಿತಮಾದಿತಃ
ಸದೀರ್ಘಸ್ಯಾಪಿ ಕಾಲಸ್ಯ
ತಲ್ಲಭೇತೈವ ವೇತನಂ || (೮,೨೧೬)

ಅವನು ಪೀಡಿತನಾಗಿದ್ದರೆ, ಆರೋಗ್ಯ ಪಡೆದ ಮೇಲೆ ಮೊದಲಿನಂತೆಯೇ ಕೆಲಸ ಮಾಡುವನಾದರೆ, ಆತನ ಗೈರು ಹಾಜರಿಯ ಅವಧಿಯ ವೇತನವನ್ನೂ ಕೊಡಬೇಕು—ಎಂದು ಹೇಳಿದ್ದಾನೆ. ಆದರೆ, ಶ್ರಮಗಾರನು ಆರೋಗ್ಯ ಲಾಭಪಡೆದ ಬಳಿಕ ಮರಳಿ ಕೆಲಸಕ್ಕೆ ಸೇರದೆ ಹೋದರೆ, ಅನುಪಸ್ಥಿತಿಯ ವೇಳೆಯ ವೇತನಕ್ಕಾತ ಅಧಿಕಾರಿಯಾಗುವುದಿಲ್ಲ.

ಯಥೋಕ್ತಮಾರ್ತಃ ಸುಸ್ಥೋವಾ
ಯಸ್ತತ್ಕರ್ಮ ನ ಕಾರಯೇತ್
ನ ತಸ್ಯ ವೇತನಂ ದೇಯಮ್
ಅಲ್ಪೋನಸ್ಯಾಪಿ ಕರ್ಮಣಃ ||
(೮,೨೧೭)

ಕೂಲಿಯು ಪೀಡಿತನಾಗಿರಲಿ, ಆರೋಗ್ಯವಂತನಾಗಿರಲಿ, ತಾನು ಕೈಹಿಡಿದ ಕೆಲಸವನ್ನು ತಾನಾಗಲಿ ಬೇರೆಯವರ ಮೂಲಕವಾಗಲಿ ಪೂರ್ಣಗೊಳಿಸದೆ ಇದ್ದರೆ, ಅವನಿಗೆ ಕೊಡಬೇಕಾದ ಸಂಬಳದಲ್ಲಿ ಏನಾದರೂ ಬಾಕಿ ಉಳಿದಿದ್ದರೆ, ಅದನ್ನು ಕೊಡಬಾರದು.

ತನ್ನ ಅಸ್ವಸ್ಥದ ವೇಳೆಯಲ್ಲಿ ರೋಗಿ ಶ್ರಮಿಕನಿಗೆ ವೇತನದ ಹಣ ದೊರೆಯದಿರುವುದರಿಂದ ಸ್ವಲ್ಪ ಪ್ರಯಾಸವೆನಿಸುವುದು. ಆದರೂ ರುಗ್ಣಶಯ್ಯೆಯಿಂದೆದ್ದು ಪುನಃ ಕೆಲಸಕ್ಕೆ ಸೇರಿಕೊಂಡಾಗ, ಆ ಅವಧಿಯ ಸಂಬಳವು ಆತನಿಗೆ ಸಿಗುವುದು ಪ್ರಶಂಸನೀಯವಾಗಿದೆ. ರೋಗ, ರೋಗಾವಸ್ಥೆಯಲ್ಲಿ ಕರ್ಮಚರರಿಗೆ ನೀಡಲಾಗುವ ಆರ್ಥಿಕ ಸಹಾಯವೂ ಇದೇ ಮಾದರಿಯದು.

ಸ್ವೈವಂ ಪಕ್ಷಾರ್ಧಮಾರ್ತಸ್ಯ
ಹಾತವ್ಯಾಲ್ಪಾಪಿ ವೈಭೃತಿಃ ||(೨,೪೦೭

ಎಂದು ಶುಕ್ರಾಚಾರ್ಯರು ಶುಕ್ರನೀತಿಯಲ್ಲಿ ಹೇಳಿದ್ದಾರೆ. ಒಂದು ವಾರದಿಂದ ಅಧಿಕ ಕಾಲ ರೋಗಪೀಡಿತನಾಗಿರುವ ಶ್ರಮಿಕನ ವೇತನದಲ್ಲಿ ಏನೊಂದೂ ಕಡಿತ ಮಾಡಬಾರದು; ಅವನ ಪೂರ್ಣ ವೇತನವನ್ನು ಕೊಡಬೇಕು.

ದೀರ್ಘಾವಧಿ ರೋಗಾವಸ್ಥೆಯಲ್ಲಿ ಐದು ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದ ಕರ್ಮಚರರಿಗೆ ಮೂರು ತಿಂಗಳ ವರೆಗೆ ಮುಕ್ಕಾಲಂಶ ವೇತನ ನೀಡಬೇಕು; ರೋಗಕಾಲೀನ ಭತ್ತೆಯನ್ನು ಆರು ಮಾಸಗಳಿಂದ ಅಧಿಕ ಕೊಡಬಾರದು—ಎಂದು ಶುಕ್ರನೀತಿ ಹೇಳುತ್ತದೆ.

ಅಂತೆಯೇ ನಾರೀ ಕರ್ಮಚಾರಿಗಳಿಗೆ ಅವರ ಗರ್ಭಾವಸ್ಥಾವಧಿಯಲ್ಲಿ ಇಂತಹ ಸೌಕರ್ಯವಿರುವುದು. ಯಜಮಾನನು ಸಮುಚಿತ ಆವಶ್ಯಕತೆಗಳನ್ನು ಪೂರೈಸಬೇಕಾಗುವುದು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ "ಯಾವನೇ ಯಜಮಾನನು ತನ್ನ ಯಾವಳೇ ದಾಸಿಯನ್ನು ಮಾರ ಬಯಸುವನಾದರೆ, ಆಕೆಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಬೇಕು" ಎಂದು ಘೋಷಿಸಿದ್ದಾನೆ. ಈ ನಿಯಮವನ್ನು ಮೀರಿ ನಡೆಯುವವರಿಗೆ ಕಠೋರ ಶಿಕ್ಷೆಯು ಕೊಡಲ್ಪಡುತ್ತಿತ್ತು.

ವೃದ್ಧ ಜನರ ಸಂರಕ್ಷಣೆಯ ಬಗ್ಗೆ ಭಾರತದಲ್ಲಿ ಸುವ್ಯವಸ್ಥೆಯಿತ್ತೆಂದು ಶುಕ್ರನೀತಿಯಿಂದ ತಿಳಿಯುತ್ತದೆ. ಸರಕಾರಿ ಕೆಲಸಗಾರರಿಗೆ ನಿವೃತ್ತಿ ವೇತನ ಮತ್ತು ಸಂಚಿತ ಕೋಶ (ಪ್ರೊವಿಡೆಂಟ್ ಫಂಡ್) ಗಳ ಏರ್ಪಾಡಿತ್ತು.

ಚತ್ವಾರಿಂಶತ್ ಸಮಾನೀತಾಃ
ಸೇವಯಾ ಯೇನ ವೈ ನೃಪಃ
ತತಸ್ಸೇವಾಂ ವಿನಾ ತಸ್ಮೈ
ಭೃತ್ಯರ್ಧಂ ಕಲ್ಪಯೇತ್ ಸದಾ ||

೪೦ ವರ್ಷಗಳವರೆಗೆ ಸೇವೆ ಸಲ್ಲಿಸಿದ ವ್ಯಕ್ತಿಗೆ ರಾಜನು ಅವನಿಂದ ಮುಂದೆ ಕೆಲಸಮಾಡಿಸದೇನೇ ವೇತನದ ಅರ್ಧಾಂಶವನ್ನು ಕೊಡಬೇಕು. ಶುಕ್ರಾಚಾರ್ಯರ ನೀತಿಯ ಇನ್ನೊಂದೆಡೆಯಲ್ಲಿ,

ಷಷ್ಠಾಂಶಂ ವಾ ಚತುರ್ಥಾಂಶಂ
ಭೃತೇರ್ಭೃತ್ಯಸ್ಯ ಪಾಲಯೇತ್
ದದ್ಯಾತ್ ತದರ್ಧಂ ಭೃತ್ಯಾಯ
ದ್ವಿತ್ರಿವರ್ಷೇ ಬಲಂ ತುವಾ ||

ಎಂದು ಹೇಳಲಾಗಿದೆ. ಸಂಚಿತ ಕೋಶದ ಮಾದರಿಯ ರೂಪದಲ್ಲಿ ಮಾಲಕನು ವೇತನದ ಷಷ್ಠಾಂಶ ಅಥವಾ ಚತುರ್ಥಾಂಶವನ್ನು ಮುರಿದಿಟ್ಟುಕೊಂಡು ಎರಡು ಅಥವಾ ಮೂರು ವರ್ಷಗಳ ನಂತರ ಸಂಗ್ರಹಿತ ನಿಧಿಯ ಅರ್ಧಾಂಶ ಇಲ್ಲವೇ ಪೂರ್ಣಾಂಶವನ್ನು ಕರ್ಮಚರನಿಗೆ ಮರಳಿಸಬೇಕು. ಇದರಿಂದ ನೌಕರನು ಪ್ರತಿ ತಿಂಗಳೂ ಒತ್ತಾಯ ಪೂರ್ವಕವಾಗಿ ಒಂದು ಸ್ವಲ್ಪ ಹಣವನ್ನು ಉಳಿಸಲೇ ಬೇಕಾಗುತ್ತದೆ; ಈ ಹಣವು ಮುಂದೆ ಆವಶ್ಯಕತೆಯಿದ್ದಾಗ ಉಪಯೋಗಕ್ಕೆ ಬೀಳುತ್ತದೆ ಎಂದು ನಮಗೆ ಗೊತ್ತಾಗುವುದು. ಇದರ ಆಧಾರದಿಂದ ನಾವು ಪ್ರಾಚೀನ ಭಾರತದಲ್ಲಿ ರೋಗ ಭತ್ತೆ, ನಿವೃತ್ತಿ ವೇತನ ಹಾಗೂ ಸಂಚಿತ ಕೋಶಗಳ ವ್ಯವಸ್ಥೆಯಿದ್ದುವೆಂದು ನಿಶ್ಚಿತವಾಗಿ ಹೇಳಬಹುದು.

ಕೌಟಿಲ್ಯ ಮತ್ತು ಶುಕ್ರಾಚಾರ್ಯರಿಬ್ಬರೂ ಕರ್ಮಚರರು ತೀರಿ ಹೋದ ಬಳಿಕ ಅವರ ವಿಧವೆ ಪತ್ನಿ ಮತ್ತು ಅನಾಥ ಮಕ್ಕಳ ಪಾಲನೆ ಪೋಷಣೆಗಾಗಿ ವ್ಯವಸ್ಥೆ ಮಾಡಿದ್ದಾರೆ. ಮೃತ ಕರ್ಮಚರನ ವೇತನವನ್ನು ಅವನ ವಿಧವೆ ಮತ್ತು ಮಕ್ಕಳಿಗೆ ಕೊಡಬೇಕೆಂದು ಕೌಟಿಲ್ಯ ಆದೇಶಿಸಿದ್ದಾನೆ. ಮೃತ ಸೇವಕನ ಆಶ್ರಿತರನ್ನು ರಕ್ಷಿಸಿಕೊಂಡು ಬರುವುದು ರಾಜನ ಕರ್ತವ್ಯವೆಂದಾತ ಹೇಳಿದ್ದಾನೆ. ಆರ್ಥಿಕ ನೆರವೀಯುವುದು ಅಸಾಧ್ಯವಾದಲ್ಲಿ ಭೂಮಿ, ಪಶುಗಳನ್ನಿತ್ತು ಉಪಕಾರ ಮಾಡಬೇಕಂತೆ. ಹಾಗಿದ್ದರೂ ಚಿನ್ನ ಬೆಳ್ಳಿಗಳ ರೂಪದಲ್ಲಿ ಮಾತ್ರ ಈ ಸಹಾಯವನ್ನು ನೀಡುವುದು ವರ್ಜ್ಯವಾಗಿತ್ತು. ದೊಡ್ಡ ಮೊತ್ತವು ಅನಾಥ ಕುಟುಂಬಕ್ಕೆ ಸೇರುವುದಕ್ಕಿಂತ ಚಿಕ್ಕ ರೂಪದಲ್ಲಿ ಇಂತಹ ಸಹಾಯವು ಸಿಗುವುದು ಕುಟುಂಬದ ಆರೋಗ್ಯದ ದೃಷ್ಟಿಯಿಂದ ಉತ್ತಮವೆಂದು ಹೇಳುವುದು ಇದಕ್ಕೆ ಕಾರಣವಿರಬಹುದು.

ವಿಧವೆಯರು, ಅಪಹೃತ ಸ್ತ್ರೀಯರು, ಕುಮಾರಿಯರು, ಸಾಧ್ವಿಯರು, ದಂಡಿತ ನಾರಿಯರು, ಮೊದಲು ವೇಶ್ಯೆಯರಾಗಿದ್ದವರು ಮತ್ತು ದೇವದಾಸಿಯರಿಗೆ ಹತ್ತಿಯಿಂದ ನೂಲು ತೆಗೆಯುವ ಉದ್ಯೋಗವನ್ನಿತ್ತು ಅವರು ತಮ್ಮ ಮತ್ತು ತಮ್ಮ ಮಕ್ಕಳ ಪಾಲನೆಪೋಷಣೆಯನ್ನು ಮಾಡುವಂತೆ ಶುಕ್ರಾಚಾರ್ಯರು ನಿಯಮಿಸಿದ್ದರು.

ಶುಕ್ರಾಚಾರ್ಯರು ಕರ್ಮಚರರು ಮೃತ್ಯುಮುಖರಾದ ಬಳಿಕ, ಸಹಾಯ ನೀಡುವ ವ್ಯವಸ್ಥೆಯನ್ನು ಮಾಡುತ್ತ, "ಯಾವನೇ ಸೇವಕನು ಮೃತ್ಯುವನ್ನಪ್ಪಿದರೆ, ಅವನ ಅಪ್ರಾಯಸ್ಥ ಮಕ್ಕಳಿಗೆ ಅವರು ಪ್ರಾಯಸ್ಥರಾಗುವ ವರೆಗೆ ಆ ಕರ್ಮಚರನ ವೇತನವನ್ನು ಕೊಡಬೇಕು. ಆತನ ಯೋಗ್ಯತೆಯನ್ನನುಸರಿಸಿ, ಅವನ ವೇತನವನ್ನು ನಿರ್ಧರಿಸಬೇಕು" ಎಂದು ವಿಧಿಸಿದ್ದಾರೆ.

(೮ನೇ ಪುಟ ನೋಡಿರಿ)

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತನಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

ಅಜ್ಞಾನಿಯಾಗಿರುವುದು ಅಪರಾಧ; ತಾನು ಅಜ್ಞಾನಾಂಧಕಾರದಲ್ಲಿರುವೆನೆಂದು ತಿಳಿತಿಳಿದೂ ಮತ್ತೂ ಅದರಲ್ಲೇ ವಿಹರಿಸುವುದು ಮಹಾಪರಾಧ.

NAVAYUGA

Founder:—

Late Sri. **A. B. SHETTY,**
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ಎಕ್ಸ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೬-೬-'೬೦	೪೧

ಉಪಯುಕ್ತ ಸಲಹೆ

ಭಾರತದಲ್ಲಿ ಪ್ರಚಲಿತವಿರುವ ವಿದ್ಯಾಪದ್ಧತಿ ಮತ್ತು ಪರೀಕ್ಷಾಕ್ರಮಗಳು ದೋಷಪೂರಿತವಾಗಿವೆ ಎಂಬ ಉದ್ಗಾರವು ಬಹುಕಾಲದಿಂದಲೂ ಕೇಳಿಬರುತ್ತಿದೆ. ಆದರೆ, ಈ ಉದ್ಗಾರಗಳಿಂದ ಯಾವುದೇ ಪರಿಣಾಮಕರವಾದ ಸುಧಾರಣೆಗಳನ್ನು ಮಾಡಿಕೊಂಡಂತಾಗಲಿಲ್ಲ; ಅಥವಾ, ಹೇಳಿಕೆ, ಉದ್ಗಾರಗಳಿಂದ ಯಾವುದೇ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದೂ ಸಾಧ್ಯವಿಲ್ಲ. ಪ್ರಚಲಿತ ಪರೀಕ್ಷಾಪದ್ಧತಿಯು ಕೇವಲ ವಿದ್ಯಾರ್ಥಿಯ ಮಾನಸಿಕ ಶ್ರಮವನ್ನೂ ಸಂಚಿತ ಜ್ಞಾನವನ್ನೂ ಅಳೆಯಲು ಸಹಕಾರಿಯಾಗುವುದೇ ಹೊರತು, ಆತನ ನಿಜವಾದ ಜ್ಞಾನಶಕ್ತಿಯನ್ನು ಕಂಡುಕೊಳ್ಳುವುದಕ್ಕೆ ಮಾನದಂಡವಾಗಲಾರದು. ಭಾರತೀಯ ಪದವೀಧರರ ಬಗ್ಗೆ ಬರೆದ ಓರ್ವ ಆಂಗ್ಲ ಪಂಡಿತರು ಭಾರತದಲ್ಲಿ ವಿದ್ಯಾರ್ಥಿಗಳು ಉರುಹಾಡಿ ಎಂತಾದರೂ ಒಂದು 'ಪದವಿ'ಯನ್ನು ಪಡೆದರೆ ಸಾಕು ಎಂಬ ಇರಾದೆಯಿಂದ, ಪರೀಕ್ಷೆಗೆ ಬರಬಹುದೆಂದು ಊಹಿಸಲಾದ ಪಠ್ಯಭಾಗಗಳನ್ನಷ್ಟೇ ಅಭ್ಯಸಿಸಿ, ಕೆಲವೊಮ್ಮೆ ಕಂಠಪಾಠ ಮಾಡಿಕೊಳ್ಳುವ ಹವ್ಯಾಸದಲ್ಲಿರುವರೇ ಹೊರತು, ನಿಜವಾದ ಜ್ಞಾನವನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ಕೂಡಿರುವುದಿಲ್ಲ ಎಂದಂದಿದ್ದಾರೆ. ಇದು ಅತಿಶಯೋಕ್ತಿಯೆಂದು ಹೇಳುವಂತಿಲ್ಲ. ನಾವು ಕಣ್ಣಾರೆ ಕಾಣುವ ಚಿತ್ರವೂ ಇದೇ ಎನ್ನಬಹುದು.

ವಿಶ್ವವಿದ್ಯಾಲಯ ಸಹಾಯಧನ ಆಯೋಗಕ್ಕೆ ಈಗಿನ ಪರೀಕ್ಷಾ ಪದ್ಧತಿಯ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಸಲಹೆನೀಡಲು ನೇಮಿತವಾಗಿದ್ದ ಸಮಿತಿಯು ತನ್ನ ವರದಿಯನ್ನೀಗ ಅರ್ಪಿಸಿದೆ. ಈ ವರದಿಯಲ್ಲಿ ಅದು 'ಫೈನಲ್' ಪರೀಕ್ಷೆಯೊಂದನ್ನೇ ಮಾನದಂಡವಾಗಿ ಇಟ್ಟುಕೊಂಡು, ವಿದ್ಯಾರ್ಥಿಯ ಭವಿಷ್ಯವನ್ನು ನಿರ್ಧರಿಸುವುದು ಸಮಂಜಸವಲ್ಲ ಎಂದು ಘಂಟಾಘೋಷವಾಗಿ ಸಾರಿದೆ. "ಈಗಿನ ಪರೀಕ್ಷಾ ಪದ್ಧತಿಯಲ್ಲಿಯ ಮಾನಸಿಕ ಭಾರದಿಂದ ಅನೇಕ ಅನಿಷ್ಟ ಪರಿಣಾಮಗಳಾಗುತ್ತವೆ. ವಿದ್ಯಾರ್ಥಿಯ ಒಟ್ಟಿನ ಮೇಲಿನ ಉದ್ದೇಶವು ಪದವಿ ಪಡೆಯುವ ಒಂದೇ 'ಗುರಿ'ಯಾಗಿ ಸಂಕುಚಿತವಾಗುತ್ತಿದೆ." ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಸಾಂಕೇತಿಕವಾಗಿರುವ ಪದವಿಯನ್ನೇ ಅಮೂಲ್ಯವೆಂದು ತಿಳಿಯುವ ತಪ್ಪು ವಿದ್ಯಾರ್ಥಿಯಿಂದಾಗುತ್ತಿದೆ. ಇದರಿಂದಾಗಿ, ವಿದ್ಯಾರ್ಥಿಯು ಜ್ಞಾನಾರ್ಜನೆಯ ಮಹತ್ವವನ್ನೇ ಮುಖ್ಯವಾಗಿಟ್ಟುಕೊಂಡು, ಅಧ್ಯಯನ ನಡೆಸುವಂತೆ ಮಾಡುವ ಯೋಜನೆಯೊಂದನ್ನು ರೂಪಿಸಬೇಕೆಂದು ಸಮಿತಿಯು ಹೇಳಿದೆ. ಶಾಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪಾಸಾಗುವ ಉದ್ದೇಶವನ್ನೇ ಮುಂದಿರಿಸಿ, ಆ ಉದ್ದೇಶಪೂರ್ತಿಕೆಗಾಗಿ ದುಡಿಯುವಂತೆ ಪ್ರೇರೇಪಿಸುತ್ತ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಬಗ್ಗೆ ತರಬೇತಿಯಾಯಬಲ್ಲರೇ ಹೊರತು, ನಿಜವಾದ ಶಿಕ್ಷಣವನ್ನಿತ್ತು ವಿದ್ಯಾರ್ಥಿಯು ಸುಶಿಕ್ಷಿತನಾಗುವಂತೆ ಮಾಡುವುದರಲ್ಲಿ ವಿಫಲರಾಗುತ್ತಾರೆಂಬುದು ಈಗಾಗಲೇ ಗಮನಕ್ಕೆ ಬಂದಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳ ಬಗ್ಗೆ ಶಿಕ್ಷಕರು ಇಟ್ಟಿರುವ ದಾಖಲೆ ಮತ್ತು ಕಂಡುಕೊಂಡಿರುವ ವಾಸ್ತವಿಕ ಅಭಿಪ್ರಾಯಗಳಿಗೆ ಯಾವುದೇ ಪ್ರಾಧಾನ್ಯವು ಇಂದಿರುವುದಿಲ್ಲ. ಹಾಗಾಗಿ ಅಧ್ಯಾಪಕನ ಪ್ರಧಾನ ಕರ್ತವ್ಯವೆಂದರೆ, ವಿದ್ಯಾರ್ಥಿಗಳನ್ನು ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳುವುದಕ್ಕೆ ಆವಶ್ಯಕವಾದ ತರಬೇತಿಯೀಯುವುದು ಮಾತ್ರವಾಗಿದೆ. ಆದರೆ, ಇದರಿಂದ, ವಿದ್ಯಾರ್ಥಿಯ ಬುದ್ಧಿಮತ್ತೆಯನ್ನೂ ಆತನ ನಿಜವಾದ ಯೋಗ್ಯತೆಯನ್ನೂ ಅಳೆಯುವುದು ಅಸಾಧ್ಯವಾಗಿದೆ; ಅವಕ್ಕೆ ಪ್ರಾಧಾನ್ಯವೂ ಇಲ್ಲವಾಗಿದೆ. ಈ ಪದ್ಧತಿಯು ತಪ್ಪಬೇಕಾದರೆ, ವಾರ್ಷಿಕ ಲಿಖಿತ ಪರೀಕ್ಷೆಗಿರುವ ಮಹತ್ವವನ್ನು ಕಡಿಮೆ ಮಾಡಿ, ವಿದ್ಯಾರ್ಥಿಯ ಬಗ್ಗೆ ಶಿಕ್ಷಕರು ಇಟ್ಟಿರುವ ದಾಖಲೆಗಳಿಗೂ ಸಮಾನ ಪ್ರಾಶಸ್ತ್ಯವೀಯುವುದು ಅಗತ್ಯವೆಂದು ಹೇಳಿದ ಉಪಸಮಿತಿಯ ಅಭಿಪ್ರಾಯವನ್ನು ನಾವು ಸ್ವಾಗತಿಸುತ್ತೇವೆ. ಏಕೆಂದರೆ, ಈ ರೀತಿಯ ಪರಿವರ್ತನೆಯಿಂದ ವಿದ್ಯಾರ್ಥಿ ಅಥವಾ ಶಿಕ್ಷಕರು ಪರೀಕ್ಷೆಯನ್ನೇ ಗುರಿಯಾಗಿಡುವಂತಾಗಲಾರದು; ಇದರಿಂದ ಅಧಿಕ ಉಪಯುಕ್ತವಾದ ಅಧ್ಯಯನ ಪದ್ಧತಿಯು ಬೆಳೆದು ವಿದ್ಯಾರ್ಥಿಯು ಸತತ ಪರಿಶ್ರಮಶೀಲನಾಗುವುದು ಸಾಧ್ಯವಾಗುವುದು. ಈಗಿರುವ ಅಭ್ಯಾಸ ಪತ್ರಿಕೆಗಳಲ್ಲಿ ಸಂಗತಿಗಳಿಗೆ ಕುರಿತಾದ ಮಾಹಿತಿಗಳಿಗೇನೇ ಮಹತ್ವವಿರುವುದು ಮಾತ್ರವಲ್ಲ, ಅದರಲ್ಲಿ ಯಾವ ಬದಲಾವಣೆಯೂ ಹೆಚ್ಚಾಗಿ ನಡೆಯುವುದಿಲ್ಲ; ಹಾಗಾಗಿ ವಿದ್ಯಾರ್ಥಿಯು ನಿರಂತರ ಅಭ್ಯಾಸವನ್ನು ಮಾಡುವ ಗೋಜಿಗೆ ಹೋಗದೆ, ಪೇಟೆಯಲ್ಲಿ ದೊರೆಯುವ 'ಪರೀಕ್ಷಾರ್ಥಕ'ಗಳನ್ನೇ ಉಪಯೋಗಿಸಿ, ಪರೀಕ್ಷೆಗೆ ಸಿದ್ಧರಾಗುತ್ತಾರೆ. ಇದರಿಂದ ವಿದ್ಯಾರ್ಥಿಯ ಜ್ಞಾನ ಬೆಳೆಯುವುದಾದರೂ ಹೇಗೆ?

ಹೀಗೆ ಲೇಖಿ ಪರೀಕ್ಷೆಯ ಮಹತ್ವವನ್ನು ಇಳಿಸಿ, ಶಾಲೆಯ ಸಾಕ್ಷ್ಯ ದಾಖಲೆಗಳ ಬಗ್ಗೆ ಗಮನ ಹರಿಸಬೇಕಾದುದು ಕೇವಲ ವಿಶ್ವವಿದ್ಯಾಲಯಗಳಿಗೆ ಮಾತ್ರ ಸೀಮಿತವಾಗಿರದೆ, ಪ್ರೌಢ ಶಾಲೆ ಹಾಗೂ ಇತರ ಶಾಲೆಗಳಿಗೂ ಅನ್ವಯಿಸುವಂತಾಗಬೇಕು. ಅಗ್ಗದರದ ಟಿಪ್ಪಣಿ ಪುಸ್ತಕಗಳ ಪ್ರಕಟಣೆಯನ್ನು ಸಾಧ್ಯವಾದಷ್ಟು ತಡೆ ಹಿಡಿಯುವ ಪ್ರಯತ್ನ ಮಾಡಬೇಕು. ಏಕೆಂದರೆ, ಇಂದು ಶಾಲೆಗಳಲ್ಲಿ ಪಾಠ ಪ್ರವಚನದತ್ತ ವಿದ್ಯಾರ್ಥಿಗಳು ಅಸಡ್ಡೆಯನ್ನು ತೋರಿಸುವುದಕ್ಕೆ ಈ "ಪರೀಕ್ಷಾರ್ಥಕ"ಗಳೂ ಹೇತುವಾಗಿವೆಯೆಂಬುದು ನಿಜವೇ. ಶೈಕ್ಷಣಿಕ ಮಟ್ಟವು ಉನ್ನತವಾಗಿ ಕೊಡುವ ಮತ್ತು ದೊರೆಯುವ ಶಿಕ್ಷಣವು ಪ್ರಯೋಜನಕಾರಿಯಾಗಬೇಕಾದರೆ, ಈಗಿನ ಪರೀಕ್ಷಾ ಪ್ರಾಧಾನ್ಯವು ಸಂಪೂರ್ಣ ಕಡಿಮೆಯಾಗಬೇಕು. ಇದಕ್ಕಾಗಿ ವಿಶ್ವವಿದ್ಯಾಲಯಗಳು ಹಾಗೂ ರಾಜ್ಯ ಸರಕಾರಗಳು ತೀವ್ರ ಗಮನ ಹರಿಸುವುದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಹೀಗೆ ಮಾಡುವುದರಿಂದ, ವಿದ್ಯಾರ್ಥಿಗಳು ಅಧ್ಯಯನದಲ್ಲೇ ಆಸಕ್ತರಾಗಿ ಇತರ ಬಾಹ್ಯ ಕುಶಕ್ತಿಗಳ ಪ್ರೇರಣೆಗೆ ಒಳಗಾಗದೆ ಅವರಲ್ಲಿ ಶಿಸ್ತು ಬೆಳೆಯುವುದಕ್ಕೂ ಅನುಕೂಲವಾಗುವುದು.

ಐಕರ ವಿದೇಶ ಯಾತ್ರೆ

ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರರು ಫಿಲಿಪ್ಪಾಯಿನ್ಸ್, ಫಾರ್ಮೋಸಾ, ಒಕಿನಾವಾ, ಟೋಕಿಯೊ, ಸಿಯೊಲ್ ಹಾಗೂ ಹೊನೊಲುಲುಗಳ ಸಂದರ್ಶನದ ಕಾರ್ಯಕ್ರಮವನ್ನಿಟ್ಟುಕೊಂಡು ರಾಜಧಾನಿ ವಾಶಿಂಗ್‌ಟನ್ನಿನಿಂದ ವಿಮಾನ ಮೂಲಕ ಹೊರಟಿರುವರು. ದೂರಪ್ರಾಚ್ಯದ ಮಿತ್ರ ರಾಷ್ಟ್ರಗಳೊಡನಿರುವ ಅಮೆರಿಕೆಯ ಸೌಹಾರ್ದ ಭಾವನೆಯನ್ನು ಬೆಳೆಯಿಸುವುದೂ ಅಂತಾರಾಷ್ಟ್ರೀಯ ಸೌಹಾರ್ದತೆಯ ವಾತಾವರಣವನ್ನು ಅಭಿವೃದ್ಧಿಗೊಳಿಸುವುದೂ ಅವರ ಈ ಯಾತ್ರೆಯ ಉದ್ದೇಶವಾಗಿರುವುದು. ಅಧ್ಯಕ್ಷ ಐಕರು ಈ ಮೊದಲು ಐತಿಹಾಸಿಕ ಪ್ರಧಾನತೆಯಿರುವ ವಿದೇಶ ಯಾತ್ರೆಯನ್ನು ಕೈಗೊಂಡಿರುವರಾದರೂ ಈ ಬಾರಿಯದು ಇನ್ನೊಂದು ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಕಳೆದ ಕೆಲವಾರು ವಾರಗಳಿಂದ ಐಕರಿಗೆ ವೈಯಕ್ತಿಕವಾಗಿ ಸಾವಿರಾರು ಅಮೆರಿಕರಿಂದ ಮತ್ತು ಬೇರೆ ದೇಶಗಳಲ್ಲಿರುವ ಅಮೆರಿಕೆಯ ಹಿತಚಿಂತಕರಿಂದ ಈ ಯಾತ್ರೆಯನ್ನು ನಿಲ್ಲಿಸಬೇಕೆಂಬ ಸೂಚನೆ ಹಾಗೂ ವಿನಂತಿಗಳು ಬಂದಿದ್ದುವು. ಜಪಾನದಲ್ಲಿ ಐಕ-ವಿರೋಧೀ ಆಂದೋಲನವು ತೀವ್ರವಾಗುತ್ತ ನಡೆದಿದ್ದು, ಅದನ್ನು ಅಂಕಿತದಲ್ಲಿಡುವುದು ಅಸಾಧ್ಯವೆನಿಸಿದೆ. ಇಷ್ಟೊಂದು ಪ್ರತಿರೋಧ ಘಟನೆಗಳು ನಡೆಯುತ್ತಿದ್ದರೂ ಐಕರು ಧೈರ್ಯಗೆಡದೆ ತನ್ನ ನಿಯೋಜಿತ ಸಂದರ್ಶನ ಕಾರ್ಯಕ್ರಮವನ್ನು ತಡೆಹಿಡಿಯದೆ ಮುಂದುವರಿಸಿದ್ದಾರೆ. ಮುಖ್ಯವಾಗಿ ಜಪಾನದ ಸಂದರ್ಶನದಲ್ಲಿ ಇವರು ಯಾವ ರೀತಿಯ ಸ್ವಾಗತವನ್ನು ಪಡೆಯಬೇಕಾದೀತು ಎಂಬುದಕ್ಕೆ ಅವರ ಪತ್ರಿಕಾ ಕಾರ್ಯದರ್ಶಿ ಹೆಗರ್ಟಿಯವರು ಅನುಭವಿಸಿದ ಪಾಡೇ ಸಾಕ್ಷಿಯಾಗಿದೆ. ಅಲ್ಲಿನ ಕಿಶಿ ಸರಕಾರವು ಐಕರ ಸ್ವಾಗತ ಮತ್ತು ರಕ್ಷಣೆಯ ಬಗ್ಗೆ ಪೂರ್ವಭಾವೀ ಕ್ರಮಗಳನ್ನು ಕೈಗೊಂಡಿದೆಯೇನೋ ನಿಜವೇ. ಆದರೂ ಆಂದೋಲನಗಾರರ ಪುಂಡಾಟಿಕೆ ಎಲ್ಲಿಗೆ ಬಂದು ಮುಟ್ಟೀತೆಂದು ಹೇಳುವಂತಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜಪಾನ ಸಂದರ್ಶನದ ಕಾರ್ಯಕ್ರಮವನ್ನು ಪಟ್ಟಿಯಿಂದ ಕಿತ್ತುಹಾಕದಿದ್ದರೂ ಅದರಲ್ಲಿ ಈಗಾಗಲೇ ಸಾಕಷ್ಟು ಪರಿವರ್ತನೆಗಳು ಆಗಿವೆ. ಜೂನ ೧೯ರಂದು ಟೋಕಿಯೊವಿಗೆ ತೆರಳುವ ಕಾರ್ಯಕ್ರಮವು ಅಸ್ಥಿರವಾಗಿಲ್ಲವಾದರೂ ಅಚಲವಾಗಿ ನಿಂತಿಲ್ಲ. ಹಾಗೆಯೇ ಈ ಸಂದರ್ಶನ ಪರಿಣಾಮವೂ ಅಸಫಲವೆನ್ನುವುದು ಅಸಾಧ್ಯವಾದರೂ ಸಫಲವೆನ್ನಲು ಧೈರ್ಯಸಾಲದು, ಅಲ್ಲವೆ?

ಸಂಕ್ಷಿಪ್ತ ಸುದ್ದಿಗಳು

ದ. ಕನ್ನಡದಲ್ಲಿ ಕಬ್ಬಿಣ ಅದಿರು

ದಕ್ಷಿಣ ಕನ್ನಡ ಜಿಲ್ಲೆಯ ಯಾತ್ರಾಸ್ಥಳಗಳಲ್ಲಿ ಒಂದಾದ ಸುಬ್ರಹ್ಮಣ್ಯದ ಸ ಮೀಪ ಕಬ್ಬಿಣದ ಅದಿರುಗಳು ಕಾಣ ಸಿಕ್ಕಿವೆ. ಈ ಬಗ್ಗೆ ಸರ್ವೆ ಮತ್ತು ಸಾಗಾ ಟದ ಏರ್ಪಾಡುಗಳು ಮುಗಿಯುತ್ತ ಬರು ತ್ತಿವೆ. ಈ ಅದಿರುಗಳು ಮಂಗಳೂರ ಬಂದರದ ಮೂಲಕ ನಿರ್ಯಾತವಾಗುವ ವು. ಹೀಗಾಗಿ ಸರ್ವಋತು ಬಂದರವಾ ರೂಪಾಂತರಗೊಳ್ಳಲಿರುವ ಮಂಗಳೂರ ಹೆಚ್ಚಿನ ವಿದೇಶ ವಿನಿಮಯಗಳನ್ನು ಗಳಿ ಸುವ ನಿರೀಕ್ಷೆಯಿರುವುದು.

ಮೂರನೆಯ ಯೋಜನೆ

ತೃತೀಯ ಪಂಚವಾರ್ಷಿಕ ಯೋಜನೆ ಯ ಮೈಸೂರು ರಾಜ್ಯದ ಕರಡಿನಲ್ಲಿ ಒ ಟ್ಟು ೨೭೫ ಕೋಟಿ ರೂಪಾಯಿಗಳ ವೆ ಚ್ಚವನ್ನು ನಮೂದಿಸಲಾಗಿದೆ. ಈ ಮೊ ತ್ತದಲ್ಲಿ ರೂ. ೧೦೦ ಕೋಟಿ ಯನ್ನು ಸಾರ್ವಜನಿಕ ಸಾಲಗಳು, ಚಿಕ್ಕ ಉಳಿತಾಯ ಯೋಜನೆಗಳು, ಅಧಿ ಕರಾಕರಣೆ ಮೊದಲಾದುವುಗಳಿಂದ ತುಂ ಬಿಕೊಳ್ಳುವ ಯೋಚನೆಯಿದೆ. ನೂತನ ವಾಗಿ ಮೈಸೂರಿಗೆ ದೊರೆತ ೨೦೦ ಮೈಲ ದ್ದದ ಕರಾವಳಿಯ ಮೀನುಗಾರಿಕೆಯ ನ್ನು ಅಭಿವೃದ್ಧಿಗೊಳಿಸುವ, ೧೩.೭೦ ಕೋಟಿ ರೂಪಾಯಿಗಳ ವೆಚ್ಚದಿಂದ ಮಂ ಗಳೂರನ್ನು ಸರ್ವಋತು ಬಂದರವನ್ನಾ ರೂಪಾಂತರಿಸುವ, ಶರಾವತಿ ಯೋಜನೆ ಯನ್ನು ತೀವ್ರಗತಿಯಲ್ಲಿ ಮುಂದುವರಿಸಿ ಅದರ ಜಲವಿದ್ಯುತ್ತನ್ನು ಉಪಯೋಗಕ್ಕೆ ಬಳಸಿಕೊಳ್ಳುವ, ಗೊಬ್ಬರದ ಕಾರಖಾನೆ ಯೊಂದನ್ನು ತೆರೆಯುವ ಪಶ್ಚಿಮ ಕರಾ ಳಿಯ ಬಂದರವನ್ನು ರೇಲ್ವೆದಾರಿಗ ಮೂಲಕ ಒಳಪ್ರದೇಶಗಳೊಡನೆ ಜೋಡಿ ಸುವ ಯೋಜನೆಗಳು ಕರಡಿನಲ್ಲಿ ಸೇರಿ ಲ್ಪಟ್ಟಿವೆ. ಈ ಬಗ್ಗೆ ಕೇಂದ್ರ ಮಂತ್ರಿ ಸ ಪುಟ ಹಾಗೂ ಯೋಜನಾ ಆಯೋ ದೊಡನೆ ವಿಚಾರವಿನಿಮಯ ಮಾಡಿ ಅಂತಿಮ ರೂಪರೇಷೆಯನ್ನು ನಿರ್ಧರಿ ಲಾಗುವುದು.

ವರ್ಗಾವರ್ಗಿ

'ಗಂಡಾಂತರ ಪರಿಸ್ಥಿತಿ'ಯಲ್ಲಿ ಕೇರಳ ದ ರಾಜ್ಯಪಾಲರಾಗಿ ಸಮರ್ಥ ಸೇವೆ ಲ್ಲಿಸಿರುವ ಡಾ| ಕೆ. ರಾಮಕೃಷ್ಣ ರಾಯ ರನ್ನು ಉತ್ತರ ಪ್ರದೇಶಕ್ಕೂ, ಉತ್ತ ಪ್ರದೇಶದ ರಾಜ್ಯಪಾಲರಾದ ಶ್ರೀ ವಿ. ವಿ ಗಿರಿಯವರನ್ನು ಕೇರಳಕ್ಕೂ ಅವರವ ಕೇಳಿಕೆಯ ಮೇರೆಗೆ ರಾಜ್ಯಪಾಲರಾ ನೇಮಿಸಲಾಗಿದೆಯೆಂದು ತಿಳಿಯುತ್ತದೆ ಶ್ರೀ ಗಿರಿಯವರಿಗೂ ಉ. ಪ್ರದೇಶ ಮಂತ್ರಿಮಂಡಳಕ್ಕೂ ಎದ್ದಿರುವ ಭಿನ್ನಾ ಭಿಪ್ರಾಯವೇ ಈ ಬದಲಾವಣೆಗೆ ಕಾರಣ ವೆಂದು ತಿಳಿದುಬಂದಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಅಂಚೆ ತಂತಿ ಕೆಲಸಗಾರರ ಬಹಿರಂಗ ಸಮ್ಮೇಳನ— ಇದೇ ತಾ. 12ರಂದು ಮಂಗಳೂರಿನ ಪ್ರಧಾನ ಅಂಚೆ ಕಚೇರಿ ಕಟ್ಟಡದಲ್ಲಿ ರಾಷ್ಟ್ರೀಯ ಅಂಚೆ ತಂತಿ ಕೆಲಸಗಾರರ ಫೆಡರೇಶನಿನ ಸಂಯುಕ್ತ ಸಮ್ಮೇಳನವನ್ನು ಮೈಸೂರು ವಿಭಾಗದ ಅಂಚೆ ತಂತಿ ಖಾತೆಯ ಡೈರೆಕ್ಟರ್ ಶ್ರೀ ಕೆ. ವಿ. ಪೈಯವರು ಉದ್ಘಾಟಿಸುತ್ತ ಪ್ರತಿಯೊಬ್ಬ ಅಂಚೆ ತಂತಿ ಕೆಲಸಗಾರನೂ ಸಾರ್ವಜನಿಕರ ಸೇವೆಯನ್ನು ಇನ್ನಷ್ಟು ಉತ್ತಮವಾಗಿ ಹೇಗೆ ಮಾಡಬಹುದು ಎಂಬ ಕುರಿತು ಆಲೋಚಿಸುತ್ತಿರಬೇಕು ಎಂದು ತಿಳಿಸಿದರು. ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಕೆ. ಆರ್. ಆಚಾರ್, ಡಾ| ಎ. ಸುಬ್ಬರಾವ್ ಇವರೂ ಶ್ರೀ ಎಂ. ವಿ. ಶೇಖರ ವಾರಿಯರ್, ಶ್ರೀ ಬಿ. ಗಂಗಾಧರ ದಾಸ್ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ಶ್ರೀ ಬಿ. ಎನ್. ಭಾಸ್ಕರ ರೈಗಳು ಅಧ್ಯಕ್ಷತೆ ವಹಿಸಿದ್ದರು.

ಉಡುಪಿ ಲಾ ಕಾಲೇಜಿನ ಉತ್ತಮ ಫಲಿತಾಂಶ— ಉಡುಪಿ ಲಾ ಕಾಲೇಜಿನಿಂದ ಪ್ರಥಮ ಎಲ್‌ಎಲ್. ಬಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ 86% ಪಾಸಾಗಿರುವುದು ಅಭಿನಂದನೀಯವಿದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಎಲ್‌ಎಲ್. ಬಿ. ಯಲ್ಲಿ ಪ್ರಥಮ ತರಗತಿಯಲ್ಲಿ ಪಾಸಾದ ಐದು ವಿದ್ಯಾರ್ಥಿಗಳೂ ಈ ಕಾಲೇಜಿನವರೇ ಆಗಿರುತ್ತಾರೆ. ಇವರಲ್ಲಿ ಇಬ್ಬರು ವಿದ್ಯಾರ್ಥಿನಿಯರಿರುತ್ತಾರೆ. ಎರಡನೇ ಎಲ್‌ಎಲ್. ಬಿ. ಪರೀಕ್ಷೆಯಲ್ಲಿ 94% ಪಾಸಾಗಿರುವುದು ಪ್ರಶಂಸನೀಯವಿದೆ.

ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯೊಂದು ಇದೇ ತಾ. 10ರಂದು ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕು. ಶಿ. ಹರಿದಾಸ ಭಟ್ಟರು ವಿಶ್ವವಿದ್ಯಾನಿಲಯ ಮತ್ತು ಇಂದಿನ ಶಿಕ್ಷಣದ ಫಲಿತಾಂಶಗಳ ಕುರಿತು ಭಾಷಣವಿತ್ತರು. ಅಧ್ಯಕ್ಷ ಶ್ರೀ ಪೈಗಳು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಯಾಗಬೇಕೆಂದಿದ್ದರೆ ಅದನ್ನು ಶಿಕ್ಷಣ ತಜ್ಞರೇ ಸೂಚಿಸುವಂತಾಗಬೇಕೆಂದೂ ಹಿರಿಯರು ಮತ್ತು ಮಕ್ಕಳ ಅಭಿರುಚಿ ಹಾಗೂ ಆಕಾಂಕ್ಷೆಗೆ ಸರಿಯಾದ ವಿದ್ಯಾಭ್ಯಾಸವನ್ನೀಯುವ ವ್ಯವಸ್ಥೆಗೊಳಿಸಿದರೆ ಹುಟ್ಟಿನ ವಿದ್ಯಾರ್ಥಿಗಳು ಪ್ರತಿಭಾ ಶಾಲಿಗಳಾಗಬಹುದೆಂದೂ ತಮ್ಮ ಭಾಷಣದಲ್ಲಿ ಹೇಳಿದರು.

ಮಂಗಳೂರಲ್ಲಿ ಸಿಟಿ ಬಸ್ ಸ್ಟೇಂಡಿನ ಬದಲಾವಣೆ— ಇದೇ ತಾ. 13ರಿಂದ ಮಂಗಳೂರು ಹಂಪನಕಟ್ಟೆಯಲ್ಲಿಯ ಸಿಟಿ ಬಸ್ ಸ್ಟೇಂಡನ್ನು ಕೇಂದ್ರ ಮೈದಾನಿಗೆ ಪ್ರಾಯೋಗಿಕವಾಗಿ ಬದಲಾಯಿಸಲಾಗಿದೆ. ದಿನದಿಂದ ದಿನಕ್ಕೆ ಮೊದಲಿನ ಬಸ್ ಸ್ಟೇಂಡಿನಲ್ಲಿ ವಾಹನಗಳ ಓಡಾಟವು ಅತ್ಯಧಿಕವಾದುದರಿಂದ ಹೀಗೆ ಮಾಡಲಾಗಿದೆ. ಈ ಹೊಸ ವ್ಯವಸ್ಥೆಯಂತೆ ಎಲ್ಲ ಕಡೆಯ ಸಿಟಿ ಬಸ್ಸುಗಳು ಹಂಪನಕಟ್ಟೆಗೆ ಬಂದು ವಿಶ್ವಭವನ, ಸಿಂಡಿಕೇಟ್ ಬೇಂಕ್ ಮೊದಲಾದ ಕಡೆಗಳಲ್ಲಿ ನಿರ್ದಿಷ್ಟಪಡಿಸಿರುವ ಬಸ್ ಸ್ಟೇಂಡ್‌ಗಳಲ್ಲಿ ನಿಂತು ಮುಂದುವರಿಯುವುವು. ಇದರಿಂದಾಗಿ ಸರ್ವಿಸ್ ಬಸ್ಸಿನಲ್ಲಿ ಬರುವ ಪ್ರಯಾಣಿಕರಿಗೆ ತೊಂದರೆಯಾಗಲಾರದು.

ಕುಂದಾಪುರದಲ್ಲಿ ಕಾಲೇಜು— ಪ್ರಾರಂಭಿಸುವ ಸಲುವಾಗಿ ಇಲ್ಲಿಯ ರೋಟರಿ ಕ್ಲಬ್ಬಿನ ನೇತೃತ್ವದಲ್ಲಿ ಇದೇ ತಾ. 5ರಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಕೆ. ವೆಂಕಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀಗಳಾದ ವೈ. ಮಂಜಯ ಶೆಟ್ಟಿ ಎಂ. ಎಲ್. ಎ., ಎಸ್. ವಿ. ತೋಳಾರ್, ಎಂ. ಎಂ. ಉರಾಳ್, ಬಿ. ಶಿವರಾಮ ಶೆಟ್ಟಿ ಮೊದಲಾದವರು ಭಾಷಣವಿತ್ತ ವೇಳೆ ಅಧ್ಯಕ್ಷರ ಭಾಷಣವಾಗಿ ಶ್ರೀ ಕೆ. ರಘುನಾಥ ಶೆಣೈರವರು ಧನ್ಯವಾದಗಳನ್ನರ್ಪಿಸಿದರು.

ಕಾದಂಬರಿ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2–75
ಪಂಚಮುಖಿ (ಕಾದಂಬರಿ)	2–50
ನಮ್ಮ ಸುತ್ತಲಿನ ಕಡಲು	1–75
ಪರಮಾಣು—ಇಂದು—ನಾಳೆ	3–00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಪುಸ್ತಕ ವಿತರಣಾ ಸಮಾರಂಭ— ಇದೇ ತಾ ೭ರಂದು ಮಂಗಳೂರಿನ ಜಪ್ಪಿನಮೊಗರು ಮಂಡಳ ಕಾಂಗ್ರೆಸ್ ಸಮಿತಿಯಲ್ಲಿ ಬಡ ಮಕ್ಕಳಿಗೆ ಪುಸ್ತಕ ವಿತರಣೆ ಮಾಡುವ ಸಮಾರಂಭವೊಂದು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಬೆಮ್ಮರ್ ಶೆಟ್ಟರು ಸ್ವಾಗತಿಸಿದ ಮೇಲೆ ಶ್ರೀಗಳಾದ ಎಂ. ರಮಾನಾಥ, ವಿಶ್ವನಾಥ ಆಳ್ವ, ಶ್ರೀಮತಿ ಒಕ್ಕೇವಿಯಾ ಅಲ್ಬುಕರ್ಕ್ ಮೊದಲಾದವರು ಭಾಷಣವಿತ್ತರು. ಅಧ್ಯಕ್ಷ ಶ್ರೀ ಪೈಗಳು ದೇಶದ ಮುಂದಿನ ಜನಾಂಗವಾದ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನಕೊಡಬೇಕೆಂದೂ ಸ್ತ್ರೀ ವಿದ್ಯಾಭ್ಯಾಸ ಹೆಚ್ಚಿದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವುದೆಂದೂ ಹೇಳಿ ಕಾಂಗ್ರೆಸಿನ ಕಾರ್ಯಕ್ರಮಗಳನ್ನು ವಿವರಿಸಿ ಭಾಷಣವಿತ್ತರು. ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆಗಾಗಿ ಏರ್ಪಡಿಸಿದ್ದ ದ್ವಿತೀಯ ಸಮಾರಂಭವು ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ತಾ. 9ರಲ್ಲಿ ನೆರವೇರಿತು. ಅಧ್ಯಕ್ಷರು ಸುಮಾರು 50 ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಿ ಮಂಡಲ ಕಾಂಗ್ರೆಸ್ ಸಮಿತಿಯವರ ಈ ಹೊಸ ಕಾರ್ಯಕ್ರಮದ ಬಗ್ಗೆ ಮೆಚ್ಚಿಗೆಯನ್ನು ಸೂಚಿಸುವರಲ್ಲದೆ ತಾನೂ 100 ರೂಪಾಯಿ ಸಹಾಯಧನ ಕೊಡುವುದಾಗಿ ಸಾರಿದರು.

ಮರಾಟಿ ಸಮಾಜ ಸೇವಾ ಸಂಘ ದ. ಕ. ಜಿಲ್ಲಾ ಮರಾಟಿ ಸಮಾಜ ಸೇವಾ ಸಂಘ ಉಡುಪಿ—ಇದರ ಮಹಾ ಸಭೆಯು ಮಣಿಪಾಲದಲ್ಲಿ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ತಾ. ೭ರಂದು ಜರಗಿ ಲೆಖ್ಖಪತ್ರ ಸ್ವೀಕಾರ ಕಾರ್ಯಕಾರೀ ಸಮಿತಿಯ ಆಯ್ಕೆ ಮೊದಲಾದ ಕಾರ್ಯಕ್ರಮಗಳಾದುವು.

ಪರೀಕ್ಷಾ ಫಲಿತಾಂಶ:— (1960ನೇ ಏಪ್ರಿಲ್ ತಿಂಗಳಲ್ಲಿ ಜರಗಿದ ಪ್ರಿ-ಯುನಿವರ್ಸಿಟಿ ಪರೀಕ್ಷೆಯಲ್ಲಿ ದ. ಕ. ಜಿಲ್ಲೆಯಲ್ಲಿ ನಾಲ್ಕೂ ವಿಭಾಗಗಳಲ್ಲಿ ಸಂಪೂರ್ಣ ಉತ್ತೀರ್ಣರಾದವರ ಸೇಕಡಾ ಫಲಿತಾಂಶ 22.62 ಆಗಿರುತ್ತದೆ. ಮೈಸೂರು ರಾಜ್ಯದಲ್ಲಿ ಪ್ರಥಮದ ಹತ್ತು ಸ್ಥಾನಗಳಲ್ಲಿ ನಾಲ್ಕು ಸ್ಥಾನಗಳನ್ನು ದಕ್ಷಿಣ ಕನ್ನಡದ ವಿದ್ಯಾರ್ಥಿಗಳು ಪಡೆದಿರುವರು. ಅವರ ಹೆಸರುಗಳನ್ನು ಈ ಕೆಳಗೆ ಕೊಡಲಾಗಿದೆ.

1. ಶ್ರೀಪತಿ ಭಟ್, ವೈ— ಸ್ಯೆಂಟ್ ಎಲೋಸಿಯಸ್ ಕೊಲೇಜ್, ಮಂಗಳೂರು. (2ನೇ ಶ್ರೇಣಿ).

2 ನಿರ್ಮಲ ಕುಮಾರ್— ಎಂ. ಜಿ. ಎಂ. ಕೊಲೇಜ್, ಉಡುಪಿ (6ನೇ ಶ್ರೇಣಿ).

3. ವೆಂಕಟ್ರಮಣ ಶೆಣೈ ಬಿ.— ಸ್ಯೆಂಟ್ ಎಲೋಸಿಯಸ್ ಕೊಲೇಜ್, ಮಂಗಳೂರು (9ನೇ ಶ್ರೇಣಿ).

4. ಪಾರ್ವತಿ ಬಾಳಿಗ್ಯೆಲ್— ಸ್ಯೆಂಟ್ ಆಗ್ನೇಸ್ ಕೊಲೇಜ್, ಮಂಗಳೂರು (10ನೇ ಶ್ರೇಣಿ).

ರೊಟೆರಿ ಕ್ಲಬ್ ಸಭೆ— ಇದೇ ತಾ. 7ರಲ್ಲಿ ಉಡುಪಿ ರೊಟರಿ ಕ್ಲಬ್ಬಿನ ಸಭೆಯೊಂದು ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಫೋರಂ ಆಫ್ ಫ್ರಿ ಎಂಟರ್ ಪ್ರೈಸಿನ ಕಾರ್ಯದರ್ಶಿ ಶ್ರೀ ಎಂ. ಆರ್. ಪೈಗಳು ಪ್ರಜಾಪ್ರಭುತ್ವ ಮತ್ತು ಆರ್ಥಿಕ ಅಭಿವೃದ್ಧಿಯ ಕುರಿತು ಭಾಷಣವೀಯುತ್ತ ಜನತಾ ಸ್ವಾತಂತ್ರ್ಯವನ್ನು ನಿಯಂತ್ರಿಸಿದರೆ ಪ್ರಜಾರಾಜ್ಯ ಸಫಲವಾಗಲಾರದೆಂದರು. ಅಧ್ಯಕ್ಷ ಡಾ| ಪೈಗಳು ಮಾತನಾಡುತ್ತ ಸಮಷ್ಟಿ ಕಲ್ಯಾಣದ ದೃಷ್ಟಿಯಲ್ಲಿ ಬೇಕಾಗಬಹುದಾದ ನಿಯಂತ್ರಣವಿರುವುದು ಉಚಿತವೆಂದರು. ಆರಂಭದಲ್ಲಿ ಶ್ರೀ ಟಿ. ಎ. ಪೈಗಳು ಭಾಷಣಕರ್ತರ ಪರಿಚಯ ಮಾಡಿಕೊಟ್ಟರು.

ಅಕಾಲಿ ಆಂದೋಲನ

ಹಳೆದೆಹಲಿಯಲ್ಲಿ ಪ್ರತ್ಯೇಕ ಪಂಜಾಬ ರಾಜ್ಯ ಸ್ಥಾಪನೆಯ ಬಗ್ಗೆ ಎದ್ದಿರುವ ಆಂದೋಲನವು ವಿಪರೀತವಾಗಿ ಬೆಳೆದು, ಅಶಾಂತಿಯನ್ನು ಹರಡುತ್ತಿದೆ. ದೆಹಲಿಯ ಪೋಲೀಸರು ಮತ್ತು ಆಂದೋಲನಕಾರರ ನಡುವೆ ಚಕಮಕಿ ನಡೆದು ಅದು ಉಗ್ರರೂಪಧಾರಣೆ ಮಾಡಿದ ವರದಿಗಳು ಬಂದಿವೆ. ನಗರದಲ್ಲಿ ಪ್ರತಿಬಂಧಕಾಜ್ಞೆಯನ್ನು ಸಾರಿದ್ದರೂ ಅಕಾಲಿದಳಗಳು ಅದನ್ನು ಉಲ್ಲಂಘಿಸಿದ್ದರು. ಹಲವಾರು ಜನರನ್ನು ಬಂಧಿಸಲಾಗಿದ್ದು ಪರಿಸ್ಥಿತಿಯು ಇನ್ನೂ ಶಾಂತವಾಗಿರುವುದಿಲ್ಲ. ಕಮ್ಯುನಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯು ಪಂಜಾಬಿ ಭಾಷೆಯಾಡುವ ಜನರಿರುವ ಪ್ರತ್ಯೇಕ ಪಂಜಾಬ ರಾಜ್ಯರಚನೆಗೆ ಬೆಂಬಲವನ್ನಿತ್ತಿರುವುದು ಅಕಾಲಿದಳಗಳಲ್ಲಿ ಹೊಸ ಹುರುಪನ್ನು ಹುಟ್ಟಿಸಿದೆಯೆಂದು ಹೇಳಬಹುದು.

೬೫ ಕೋಟಿ ಜನರು ಹಿಂದುಳಿದವರು!

ಕೆಲ ವರ್ಷಗಳ ಹಿಂದೆ ಹಿಂದುಳಿದ ವರ್ಗದ ಜನರಪಟ್ಟಿಯನ್ನು ತಿಳವಡಿಸಿಕೊಳ್ಳಬಹುದೆಂದು ರಚಿಸಿದ ಸಮಿತಿಯು ಜಾತೀಯ ಆಧಾರದಿಂದ ತನ್ನ ವರದಿಯನ್ನು ಸಲ್ಲಿಸಿದ್ದು, ಸುಮಾರು ೨,೩೯೯ ಜಾತಿಗಳನ್ನು ಹಿಂದುಳಿದವುಗಳೆಂದು ಹೇಳಿದೆ. ಇದರನ್ವಯ ದೇಶದ ೬೫-೭೦ ಕೋಟಿ ಜನರು ಹಿಂದುಳಿದವರಾಗುವರಾದುದರಿಂದ ಸರಕಾರವು ಈ ವರದಿಯನ್ನು ನಿರಾಕರಿಸಿದೆಯೆಂದು ಕೇಂದ್ರ ಗೃಹಶಾಖೆಯ ಮಂತ್ರಿ ಶ್ರೀ ಬಿ. ಎನ್. ದಾತಾರರು ತಿಳಿಸಿದ್ದಾರೆ. ಯಾವುದೇ ರಾಜ್ಯವು ಒಂದೇ ತತ್ವಕ್ಕೆ ಅಂಟಿಕೊಳ್ಳದಿರುವುದರಿಂದ ಇದೀಗ ಕೇಂದ್ರ ಸರಕಾರವು ರಾಜ್ಯಗಳಿಗೆ ಹಿಂದುಳಿದ ವರ್ಗದ ಪಟ್ಟಿಯನ್ನು ಕೇಳಿ ಸಹಾಯ ಸಲ್ಲಿಸುತ್ತಿರುವುದಾಗಿಯೂ ಅವರು ಹೇಳಿದ್ದಾರೆ.

ಅಮೆರಿಕನ್ ಬಂಡವಾಳಗಾರರು

ಕಳೆದ ದಶಂಬರ ತಿಂಗಳಲ್ಲಿ ಭಾರತ ಸಂದರ್ಶನದ ಅವಧಿಯಲ್ಲಿ ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರರು ಒಂದು ಸಾರ್ವಜನಿಕ ಸಭೆಯಲ್ಲಿ ಅಮೆರಿಕೆಯ ಉದ್ಯಮಿಗಳು ಭಾರತದಲ್ಲಿ ಹಣ ತೊಡಗಿಸುವಂತೆ ಯಥಾಶಕ್ತಿ ಪ್ರಯತ್ನ ನಡೆಸುವುದಾಗಿ ಹೇಳಿದ್ದು, ಈಗ ಅನೇಕ ಅಮೆರಿಕನ್ ಬಂಡವಳಗಾರರು ಧನ ವಿನಿಯೋಗಕ್ಕಾಗಿ ಇಲ್ಲಿಗೆ ಆಗಮಿಸಿದ್ದಾರೆ. ನಾಲ್ಕು ವರ್ಷಗಳ ಮೊದಲು ಭಾರತದಲ್ಲಿ ಸಮಾಜವಾದ ಮಾದರಿಯ ಬಗ್ಗೆ ಜಿಜ್ಞಾಸೆಯೆದ್ದಾಗ, ಅಮೆರಿಕನ್ ಬಂಡವಳಗಾರರು ಯಾರೂ ಇಲ್ಲಿ ಧನ ವಿನಿಯೋಗಿಸಲು ಮುಂದಾಗಲಿಲ್ಲ. ಆದರೆ, ಎರಡು ವರ್ಷಗಳ ನಂತರ ವಿದೇಶೀ ಬಂಡವಾಳವನ್ನು ಸ್ವಾಗತಿಸಿದುದರಿಂದ ಮತ್ತು ಮೊದಲಿನ ಐದು ವರ್ಷಗಳವರೆಗೆ ವಿದೇಶೀ ವಿನಿಯೋಜಕರನ್ನು ಹಲವಾರು ಕರಗಳಿಂದ ಮುಕ್ತರನ್ನಾಗಿ ಮಾಡಿರುವುದರಿಂದ, ಈಗ ಹಿಂದಿಗಿಂತ ವಾತಾವರಣವು ಅನುಕೂಲವಾಗಿರುವುದೇ ಇದಕ್ಕೆ ಕಾರಣವಾಗಿದೆಯೆನ್ನಬಹುದು.

ಅರ್ಜೆಂಟೇನದಲ್ಲೂ ಕ್ರಾಂತಿ ಛಾಯೆ!

ವಿಮಾನ ಧಾಳಿ ಪ್ರತಿಬಂಧಕ ದಳದ ೩೦೦ ಜನ ಸೈನಿಕರಿಂದ ಪ್ರಚೋದಿತವಾದುದೆಂದು ಹೇಳಲಾದ ಡಾ| ಫ್ರೋಂಡಿಜಿಯವರ ಕಮ್ಯುನಿಸ್ಟ್ ಸರಕಾರದ ವಿರುದ್ಧವಾಗಿ ಅರ್ಜೆಂಟೇನಾದಲ್ಲಿ ನಡೆದ ಒಂದು ಸೇನಾಕ್ರಾಂತಿಯನ್ನು ಅಣಗಿಸಲಾಗಿದೆಯೆಂಬ ವರದಿಯು ಬಂದಿರುವುದು ಮಾತ್ರವಲ್ಲ ಕ್ರಾಂತಿಕಾರರು ಚಲಿಯತ್ತ ಪಲಾಯನ ಮಾಡಿರುವರೆಂದೂ ತಿಳಿದು ಬಂದಿದೆ.

ನೌಕಾಂಗಣ ಸ್ಥಾಪನೆ

ದ್ವಿತೀಯ ನೌಕಾಂಗಣವು ಪಶ್ಚಿಮ ಕರಾವಳಿಯ ಕೊಚ್ಚಿನದಲ್ಲಿ ನಿರ್ಮಾಣವಾಗಲಿರುವುದು ಈಗ ದೃಢಪಟ್ಟಿದೆ. ಈ ಬಗ್ಗೆ ಪಶ್ಚಿಮ ಜರ್ಮನ್ ಸರಕಾರದ ಒಡೆತನದಲ್ಲಿರುವ ಹ್ಯಾಂಬರ್ಗ ನೌಕಾ ನಿರ್ಮಾಣ ಕೇಂದ್ರದಿಂದ ತಾಂತ್ರಿಕ ಮತ್ತು ಆರ್ಥಿಕ ಸಹಕಾರವನ್ನು ಪಡೆಯುವ ಪ್ರಯತ್ನ ನಡೆಸಲಾಗುತ್ತಿದೆ. ಸದ್ಯ ಯುರೋಪದಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿರುವ ಭಾರತೀಯ ಅರ್ಥ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಪ. ಜರ್ಮನಿ ಸರಕಾರದೊಡನೆ ಈ ಕುರಿತಾಗಿಯೂ ಚರ್ಚಿಸಲಿರುವರೆಂದು ತಿಳಿಯುತ್ತದೆ.

ಸಹಾನುಭೂತಿಪರ ಆತ್ಮಹತ್ಯೆ

ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡ ವರದಿಗಳು ಈ ವರೆಗೆ ಬಾರದೆ ಇದ್ದರೂ ವರಿಷ್ಠ ಪರಿಷತ್ತು ಅಸಫಲಗೊಂಡುದಕ್ಕಾಗಿ ತನ್ನ ಪ್ರಾಣವನ್ನು ಕಳೆದುಕೊಂಡ ಇಟಲಿಯ ಒಕ್ಕಲಿಗನೊರ್ವನ ಹೆಸರು ಕೇಳಿ ಬಂದಿದೆ. ಓಸ್ಕಾರ್ ಪೆರಿನಿ ಎಂಬ ಹೆಸರಿನ ಇವನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮೊದಲು, ಒಂದು ಪತ್ರವನ್ನು ಬರೆದಿದ್ದು ಅದರಲ್ಲಿ 'ಜಾಗತಿಕ ಪರಿಸ್ಥಿತಿಯು ಇನ್ನೂ ಹದಗೆಡುವುದನ್ನು ನಾನು ಸಹಿಸಲಾರೆ' ಎಂದು ಹೇಳಿದ್ದಾನೆ.

ವಿದರ್ಭಾಂದೋಲನ

ನಾಗವಿದರ್ಭ ರಾಜ್ಯದ ಬೇಡಿಕೆಯ ಆಂದೋಲನವೂ ಮುಂದುವರಿಯುತ್ತಿದೆ. ನಾಗಪುರದ ಶಹೀದ ಚೌಕದಲ್ಲಿರುವ 'ವಿದರ್ಭ ಚಂಡಿಕಾ' ವಿಗ್ರಹವನ್ನು ವಿಸರ್ಜಿಸಲು ಜೂನ್ ೧೫ ನಿಶ್ಚಿತದಿನವಾಗಿದ್ದರೂ ಆಂದೋಲನಗಾರರಲ್ಲಿ ಕೆಲವರನ್ನು ಬಂಧಿಸಿರುವುದರಿಂದ ಈ ದಿನವನ್ನು ಮುಂದೆ ಹಾಕಲಾಗಿವೆ ಎಂದು ಗೊತ್ತಾಗಿದೆ.

ಬೇಕಾಗಿದ್ದಾರೆ

ಕನಿಷ್ಠ ಒಂದೆರಡು ವರ್ಷಗಳ ಮಾಹಿತಿ ಇರುವ ಕಂಪೋಸಿಟರ್ ಮತ್ತು ಬೈಂಡರರು ಬೇಕಾಗಿದ್ದಾರೆ,

ಅಲ್ಲದೆ ಕಂಪೋಸಿಂಗ್, ಬೈಂಡಿಂಗ್ ಮೊದಲಾದ ವಿಭಾಗಗಳಲ್ಲಿ ತರಬೇತಿ ಬಗ್ಗೆ ಕೆಲವು ಹುಡುಗರನ್ನೂ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ

ಹೊಸ ಮಾರ್ಗದರ್ಶನ ಅಗತ್ಯ

ರಾಜ್ಯಗಳ ಸೀಮಾವಿವಾದಕ್ಕೆ ಸಂಬಂಧಿತ ರಾಜ್ಯಗಳ ಮುಖ್ಯಮಂತ್ರಿಗಳ ಒಪ್ಪಿಗೆ ಅನವಶ್ಯವಾದುದರಿಂದ ಕೇಂದ್ರ ಸರಕಾರ ಶೀಘ್ರ ಈ ಮಧ್ಯೆ ಪ್ರವೇಶಿಸಿ ಸಮಸ್ಯೆಯನ್ನು ಪರಿಹರಿಸುವುದು ಅಗತ್ಯ.

೧೯೫೬ರ ರಾಜ್ಯ ಪುನಾರಚನಾ ಶಾಸನದ ನ್ವಯ ರಾಜ್ಯಗಳ ಗಡಿಗಳನ್ನು ರೂಪಿಸುವಾಗ ಹಲವು ಕಡೆಗಳಲ್ಲಿ ತಪ್ಪಾಗಿ ವಿಂಗಡಿಸಲಾಗಿದೆ ಎಂಬುದುನಿರ್ವಿವಾದ. ಇದರಿಂದಾಗಿ ಆಡಳಿತೆಯ ದೃಷ್ಟಿಯಿಂದ ಮಾತ್ರವಲ್ಲ, ಭಾಷೆ ಹಾಗೂ ಆರ್ಥಿಕ ದೃಷ್ಟಿಯಿಂದಲೂ ತೊಡಕುಗಳು ಆಗುತ್ತಿವೆ ಎಂಬ ಮಾತನ್ನೂ ಅಲ್ಲಗಳೆಯಲು ಸಾಧ್ಯವಿಲ್ಲ. ರಾಜ್ಯ ಪುನರ್ವಿಂಗಡಣೆಯಾಗಿ ನಾಲ್ಕು ವರ್ಷಗಳಾದರೂ, ಗಡಿ ಭಾಗದ ಜನತೆಯ ಈ ದೂರು ನಿವಾರಿಸಲ್ಪಡಲಿಲ್ಲ. ಇನ್ನಾದರೂ ಈ ತೊಡಕನ್ನು ನಿವಾರಿಸಲೇಬೇಕು. ಈ ರೀತಿಯ ತೊಡಕುಗಳಿಗೆ ಗುರಿಯಾಗದ ವ್ಯಕ್ತಿಗಳಿರಬಹುದು. ದೇಶದ ಐಕ್ಯದ ದೃಷ್ಟಿಯಿಂದ ಗಡಿ ವಿವಾದದ ಪ್ರಶ್ನೆಯನ್ನು ಎತ್ತಬಾರದೆಂದು ಅವರು ವಿನಂತಿಸುತಿದ್ದಾರೆ. ಆದರೆ ಭಾರತದ ಐಕ್ಯದ ಪ್ರಶ್ನೆ ಇಲ್ಲಿ ಹೇಗೆ ಬಂತು? ಒಂದು ರಾಜ್ಯದ ಅಂಗವಾಗಿರಬೇಕಾಗಿದ್ದ ಭಾಗ ತಪ್ಪಾಗಿ ಇನ್ನೊಂದು ರಾಜ್ಯಕ್ಕೆ ಜೋಡಿಸಲ್ಪಟ್ಟಿದೆ. ಉದಾಹರಣೆಗಾಗಿ ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗ, ಕೇರಳಕ್ಕೆ ಸೇರಿಸಲ್ಪಟ್ಟಿರುವ ಈ ಭಾಗ ಮೈಸೂರಿಗೆ ಸೇರತಕ್ಕುದೆಂಬುದನ್ನು ಕೇರಳದ ನಾಯಕರೇ ಆದ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಗೋವಿಂದ ನಾಯರ್, ಶ್ರೀ ಎ. ಕೆ. ಗೋಪಾಲನ್ ಮೊದಲಾದವರೂ ಒಪ್ಪಿದ್ದಾರೆ. ಕೇಂದ್ರ ಗೃಹ ಮಂತ್ರಿ ಶ್ರೀ ಗೋವಿಂದವಲ್ಲಭ ಪಂತರೂ ಈ ಬೇಡಿಕೆಯ ಯಥಾರ್ಥತೆಯನ್ನು ಒಪ್ಪುತ್ತಾರೆ ಆದರೆ, ನಾಲ್ಕು ವರ್ಷಗಳು ಕಳೆದರೂ, ಕಾಸರಗೋಡಿನ ಆ ಭಾಗ ಇನ್ನೂ ಕೇರಳದಲ್ಲಿದೆ. ಹೀಗೆಯೆ ಈಗ ಮೈಸೂರಿಗೆ ಸೇರಿಸಲ್ಪಟ್ಟಿರುವ ಬೆಳಗಾವಿ ಜಿಲ್ಲೆಯ ಕೆಲವು ಭಾಗ ಮಹಾರಾಷ್ಟ್ರಕ್ಕೆ ಸೇರಬೇಕು; ಕೋಲಾಪುರ ಜಿಲ್ಲೆಯ ಕೆಲವು ಭಾಗ ಮೈಸೂರಿಗೆ ಸೇರಬೇಕು. ಒರಿಸ್ಸಾ, ಬಿಹಾರ್ ಮತ್ತು ಬಂಗಾಳ ರಾಜ್ಯಗಳಲ್ಲಿ ಇದೇ ರೀತಿಯ ಸಮಸ್ಯೆಗಳಿವೆ. ಆ ಭಾಗದಲ್ಲಿರುವ ಜನತೆ ನಿಜವಾಗಿ ಸಂಕಷ್ಟಕ್ಕೀಡಾಗಿದೆ. ಈ ತೊಡಕಿನ ನಿವಾರಣೆಯ ವಿಚಾರದಲ್ಲಿ ಕಾಂಗ್ರೆಸ್ ವರಿಷ್ಠರು ಹಾಗೂ ಕೇಂದ್ರ ಸರಕಾರ ಅನುಸರಿಸುತ್ತಿರುವ ನೀತಿ ನಿರಾಶೆಗೆ ಎಡೆಮಾಡಿಕೊಟ್ಟು, ಸತ್ಯಾಗ್ರಹ, ಪೊಲೀಸ್ ಸ್ಟೇಶನ್ ಹಾಗೂ ಪೋಸ್ಟಾಫೀಸ್‌ಗಳ ಧ್ವಂಸ ಇತ್ಯಾದಿ ಪ್ರತಿಕ್ರಿಯೆಗಳಲ್ಲಿ ಪರ್ಯವಸಾನ ಹೊಂದುತ್ತಿದೆ.

ಭಾಷಾ ಅಲ್ಪ ಸಂಖ್ಯಾಕರ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವೇ ಇಲ್ಲವೆಂದು ವಾದಿಸಲಾಗುತ್ತಿದೆ. ಎಷ್ಟು ಜಾಗ್ರತೆಯಿಂದ ಗಡಿ ನಿರ್ಧರಿಸಿದರೂ ಕೆಲವು ದ್ವಿಭಾಷಾ ಅಥವಾ ತ್ರಿಭಾಷಾ ಭಾಗಗಳಲ್ಲಿ ಅಲ್ಪ ಸಂಖ್ಯಾತರ ಸಮಸ್ಯೆ ಉಳಿದೇ ಉಳಿಯುವುದೆಂದು ಹೇಳಲಾಗುತ್ತಿದೆ. ಆದರೆ, ಈ ಸಮಸ್ಯೆಯ ವ್ಯಾಪ್ತಿಯನ್ನು ಹೆಚ್ಚಿಸುವ ಬದಲು ಅದನ್ನು ಕಡಿಮೆಯಾದರೂ ಯಾಕೆ ಮಾಡಬಾರದು? ದ್ವಿಭಾಷಾ, ತ್ರಿಭಾಷಾ ಅಥವಾ ಬಹುಭಾಷಾ ಪ್ರದೇಶಗಳು ಇರಬಹುದು. ಆದರೆ ಹೆಚ್ಚಿನ ಕಡೆಗಳಲ್ಲಿ ಅಲ್ಲಿಯ ಅಧಿಕ ಸಂಖ್ಯೆಯ ಜನರು ಯಾವುದಾದರೂ ಒಂದು ಭಾಷೆಯನ್ನೇ ಬಳಸುತ್ತಿದ್ದು, ಆ ಭಾಷಾರಾಜ್ಯಕ್ಕೆ ಸೇರಲು ಬಯಸುತ್ತಾರೆ. ಈ ಬೇಡಿಕೆಯನ್ನು ಒಪ್ಪಿದರೆ ಈ ಸಮಸ್ಯೆ ಸ್ವಲ್ಪ ಮಟ್ಟಿಗೆ ಉಪಶಮನವಾಗುವುದು ಆದರೆ, ಈಗಿನ ಧೋರಣೆಯಂತೆ ಈ ಸಮಸ್ಯೆಯನ್ನು ಅವುಗಳ ಯೋಗ್ಯತೆಯ ಮೇಲೆ ಕೇಂದ್ರ ಸರಕಾರ ನಿರ್ಧರಿಸದಿರುವುದರಿಂದ ಅದು ಮತ್ತಷ್ಟು ವೃದ್ಧಿಸುತ್ತಿದೆ. ಸಂಬಂಧಪಟ್ಟ ಎರಡು ರಾಜ್ಯಗಳ ಮುಖ್ಯ ಮಂತ್ರಿಗಳು ಒಂದು ಒಪ್ಪಂದಕ್ಕೆ ಬಾರದೆ ಕೇಂದ್ರ ಸರಕಾರ ಕೈಹಾಕಲಾರದೆಂಬ ಗೃಹಶಾಖೆಯ ಈಗಿನ ಧೋರಣೆಯೇ ಇದಕ್ಕೆ ಕಾರಣ.

'ಸಂಬಂಧಪಟ್ಟ ಮುಖ್ಯಮಂತ್ರಿಗಳೊಳಗೆ ಒಪ್ಪಂದವಾಗಬೇಕು' ಎಂಬ ಈ ಧೋರಣೆ ನ್ಯಾಯ ಹಾಗು ವ್ಯವಹಾರ್ಯವಾದುದೆ? ಗಡಿ ಭಾಗದ ಜನರ ಸಂಕಷ್ಟ ನಿವಾರಣೆಗೆ ಇದು ಸಹಾಯಕವಾಗುವುದೆ? ಸ್ವಲ್ಪ ವಿವೇಚಿಸಿ ನೋಡಿದಲ್ಲಿ ವರಿಷ್ಠರ ಈ ಧೋರಣೆ ಸರಿಯಾದುದಲ್ಲವೆಂದು ಸ್ಪಷ್ಟವಾಗುವುದು. ರಾಜ್ಯವೂ ಓರ್ವ ವ್ಯಕ್ತಿ ಇದ್ದಂತೆ. ನ್ಯಾಯವಾಗಿಯಾಗಲಿ ಅನ್ಯಾಯವಾಗಿಯಾಗಲಿ ಓರ್ವನ ಸ್ವಾಧೀನತೆಯಲ್ಲಿದ್ದುದನ್ನು ಬಿಟ್ಟುಕೊಡಲು ಸಾಮಾನ್ಯವಾಗಿ ಆತ ಸಿದ್ಧನಿರುವನೆ? ಉದಾಹರಣೆಗಾಗಿ ಕಾಸರಗೋಡನ್ನು ಕೇರಳಕ್ಕೆ ಕೊಡಲಾಗಿದೆ. ಚುನಾವಣೆಯ ಕಾಲದಲ್ಲಿ ಕೇರಳ ಕಾಂಗ್ರೆಸ್ ಅಧ್ಯಕ್ಷರು ಅಥವಾ ಕಮುನಿಸ್ಟ ನಾಯಕರು ಯಾವುದೇ ವಾಗ್ದಾನ ಮಾಡಿದ್ದರೂ, ಕೇರಳದ ಮುಖ್ಯಮಂತ್ರಿಗಳು ಅದನ್ನು ಬಿಟ್ಟುಕೊಡಲು ಒಪ್ಪುವರೇ? ಬೆಳಗಾವಿಯ ಯಾವುದೇ ಭಾಗವನ್ನು ಬಿಟ್ಟುಕೊಡಲು ಒಪ್ಪಬಹುದೆ? ಬೆಳಗಾವಿಯ ವಿಚಾರದಲ್ಲಿ ಮೈಸೂರು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಒಂದು ಒಪ್ಪಂದಕ್ಕೆ ಬರುವಂತೆ ಕೇಂದ್ರ ಗೃಹಮಂತ್ರಿಗಳು ಸಾಧ್ಯವಿದ್ದುದನ್ನೆಲ್ಲ ಮಾಡಿದರು. ಆದರೆ ಒಪ್ಪಂದವಾಯಿತೆ? ಒಂದು ವೇಳೆ ಹಾಗೆ ಒಪ್ಪಿಗೆಕೊಟ್ಟರೆ, ಮೈಸೂರಿನ ಮುಖ್ಯ ಮಂತ್ರಿಗಳಾಗಲಿ. ಕೇರಳದ ಮುಖ್ಯ ಮಂತ್ರಿಗಳಾಗಲಿ ಅಧಿಕಾರದಲ್ಲಿ ಉಳಿಯುವುದು ಕಷ್ಟ. ಹೀಗಾಗಿ ಈ ಸಮಸ್ಯೆಯ ಬಗ್ಗೆ ವಾಸ್ತವಿಕ ದೃಷ್ಟಿಯಿಂದ ನೋಡಬೇಕಾಗಿದೆ. ಕೇಂದ್ರ ಸರಕಾರವೇ ಮಧ್ಯೆ ಪ್ರವೇಶಿಸಿ, ಯೋಗ್ಯತೆಯ ಮೇಲೆ ಈ ಸಮಸ್ಯೆ ಪರಿಹರಿಸಬೇಕು. ಹೀಗೆ, ಒಂದು ಭಾಗವು ಅದು ನ್ಯಾಯವಾಗಿ ಸೇರಬೇಕಾದ ರಾಜ್ಯಕ್ಕೆ ಸೇರಿ ಜನತೆಗೆ ಅನುಕೂಲವಾಗುವಂತೆ ಆಗುವುದು ದೇಶದ ಐಕ್ಯತೆಗೆ ಅಪಾಯಕಾರಿ ಎಂದು ಭಾವಿಸುವುದು ವ್ಯರ್ಥ.

ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳ ಒಪ್ಪಿಗೆಯಿಂದಲೇ ಗಡಿ ವಿವಾದವನ್ನು ಪರಿಹರಿಸಬೇಕೆನ್ನುವ ಸರಕಾರದ ಈಗಿನ ಧೋರಣೆಯು ರಾಜ್ಯ ಘಟನೆಯ ಆಶಯಕ್ಕೂ ವಿರೋಧವಾಗಿರುವಂತೆಯೂ ಕಂಡುಬರುತ್ತಿದೆ. ರಾಜ್ಯಘಟನೆಯ ೩ನೆಯ ನಿಬಂಧನೆಯಂತೆ, ರಾಜ್ಯಗಳ ಗಡಿಯನ್ನು ಸಂಬಂಧಪಟ್ಟ ಶಾಸನ ಸಭೆಗಳೊಡನೆ ವಿಚಾರ ವಿನಿಮಯ ನಡೆಯಿಸಿ "ಕೇಂದ್ರ ಸರಕಾರವು ಬದಲಾಯಿಸಬಹುದು. "ಒಪ್ಪಿಗೆ" ಪಡೆಯಬೇಕೆಂದು ನಿಬಂಧನೆ ಹೇಳುವುದಿಲ್ಲ ರಾಜ್ಯಘಟನ ತಯಾರಿಸಿದವರು ಈ "ಒಪ್ಪಿಗೆ" ಅಗತ್ಯವೆಂದು ಎಣಿಸಿದ್ದರೆ, ನಿಬಂಧನೆಯಲ್ಲೇ ಅದನ್ನು ಒತ್ತಿ ಹೇಳುತ್ತಿದ್ದರು. ಹೀಗಿರುವಾಗ ಕೇಂದ್ರ ಸರಕಾರವು ಈಗ ಗಡಿಬದಲಾವಣೆಗೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಒಪ್ಪಿಗೆ ಕಡ್ಡಾಯವೆಂದು ಹೇಳುತ್ತಿರುವುದು, ಆ ನಿಬಂಧನೆಯನ್ನು ಅಕ್ಷರಶಃ ವಿರೋಧಿಸಿದಂತಾಗದಿದ್ದರೂ, ಅದರ ಆಶಯವನ್ನು ಖಚಿತವಾಗಿ ವಿರೋಧಿಸುವಂತಿದೆ. ಕೇಂದ್ರ ಸರಕಾರವು ಆ ನಿಬಂಧನೆಯಿಂದ ದೂರಸರಿದು "ಒಪ್ಪಿಗೆ" ಅಗತ್ಯವೆನ್ನುವುದೇಕೆಂದು ನನಗೆ ಅರ್ಥವಾಗುವುದಿಲ್ಲ.

ಆದುದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಭಾರತ ಸರಕಾರಗಳು ಈ ಧೋರಣೆಯನ್ನು ಪುನರ್ವಿಮರ್ಶಿಸಿ ಗಡಿ ವಿವಾದ ಸಮಸ್ಯೆಯ ಬಗ್ಗೆ ತಕ್ಕ ಕ್ರಮ ಕೈಗೊಳ್ಳಬೇಕೆಂದು ನಾನು ಆಶಿಸುತ್ತೇನೆ. ಗಡಿವಿವಾದದಲ್ಲಿ ಆಸಕ್ತಿಯುಳ್ಳವರೆಲ್ಲರೂ ಸರಕಾರ ತನ್ನ ಧೋರಣೆಯನ್ನು ಬದಲಾಯಿಸಬೇಕೆಂದು ಒತ್ತಾಯಪಡಿಸಬೇಕು. ರಾಜ್ಯಗಳ ಮುಖ್ಯ ಮಂತ್ರಿಗಳ ಒಪ್ಪಿಗೆ ಇರಲಿ, ಇಲ್ಲದಿರಲಿ, ಕೇಂದ್ರ ಸರಕಾರವು ಸೂಕ್ತತೆಯನ್ನು ಗಮನಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು.

—ಶ್ರೀ ಕೆ. ಆರ್. ಆಚಾರ್,
ಎಂ. ಪಿ.



ಅತ್ಯಾಧುನಿಕ ಮಾದರಿಯ ಬ್ರಿಟಿಷ್ ಫೈಟರ್ ವಿಮಾನಗಳು.

ವಿಚಾರ ವರ್ಷ

(೫ನೇ ಪುಟದಿಂದ)

ಸರಕಾರ ಮತ್ತು ಮಾಲಿಕರು ಮಾತ್ರವಲ್ಲ, ಕಲಾಕಾರರ ಸಂಘಗಳೂ ತಮ್ಮ ಸದಸ್ಯರ ಮತ್ತು ಅವರನ್ನು ಆಶ್ರಯಿಸಿಕೊಂಡಿರುವ ಕೌಟುಂಬಿಕರ ಹಿತಕ್ಕಾಗಿ ಹಲವಾರು ಪ್ರಯತ್ನಗಳನ್ನು ಮಾಡುತಿದ್ದರು.

ಈ ವಿಚಾರಗಳಿಂದ, ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸಾಮಾಜಿಕ ಸಂರಕ್ಷಣೆಯ ಭಾವನೆಯು ಪ್ರಚಲಿತವಿತ್ತು; ಮತ್ತು ಆ ಕಾಲದಲ್ಲಿಯೂ ಸರಕಾರವು ಆ ಎಲ್ಲ ಕೆಲಸಗಳನ್ನೂ ಮಾಡುವುದರಲ್ಲಿ ಆಸಕ್ತಿ ತೋರುತಿತ್ತು ಎಂದು ತಿಳಿಯಬಹುದು. ಶ್ರಮಿಕ ವರ್ಗದ ಹಿತ ಚಿಂತನೆಯು ಆಧುನಿಕ ಕಾಲದ ಕೊಡುಗೆ ಎಂದು ಕೈಯೆತ್ತಿ ಘೋಷಿಸುವವರು ಈ ಯೆಲ್ಲಾ ವಿಚಾರಗಳತ್ತ ಗಮನ ಹರಿಸಿದರೆ, ಶ್ರಮಿಕ ವರ್ಗದ ಕಲ್ಯಾಣ ವ್ಯವಸ್ಥೆಯಲ್ಲಿ ಮಾಡಬೇಕಾದ ಸುಧಾರಣೆಗಳಲ್ಲಿ ಪ್ರಾಚೀನತೆ-ತತ್ಕಾಲೀನತೆಯ ಪರಿಸ್ಥಿತಿವನ್ನು ಹರಿಸಿ ಬಹಳ ಉಪಯುಕ್ತಗೊಳಿಸುವುದು ಸಾಧ್ಯವಿದೆ.

(ವಿವಿಧ ಮೂಲಗಳಿಂದ)

—ಗೋರಾ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ : ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಭಾರತ ದರ್ಶನ

(೪ನೇ ಪುಟದಿಂದ)

ದರಲ್ಲಿ ಶುಷ್ಕಕೋಶಗಳಿಂದ ನಡೆಯುವ ಆಕಾಶ ವಾಣಿಯಿರುವುದು. ಭಾರತೀಯ ಆಕಾಶ ವಾಣಿಯು ಸರಕಾರದ ಒಡೆತನದಲ್ಲಿದೆ. ಅದು ರೈತನಿಗೆ ಕೊಸೆಯ ಮಾರುಕಟ್ಟೆ ದರ, ಹವಾಮಾನದ ಮುನ್ಸೂಚನೆ, ಬೆಳೆಗಳ ಸ್ಪರ್ಧೆ, ಧಾರ್ಮಿಕ ಕಥೆ ಮೊದಲಾದುವುಗಳನ್ನು ತಿಳಿಸುತ್ತದೆ. ವರ್ತಮಾನ, ರಾಜಕಾರಣಿಗಳ ಭಾಷಣ ಇತ್ಯಾದಿಗಳು ರೈತರಲ್ಲಿ ಶಬ್ದಸಂಪತ್ತನ್ನು ಹೆಚ್ಚಿಸುವುವು; ಅನರಕ್ಷರಸ್ಥನೂ ಹೊಂದಿಸಿಕೊಂಡು ಹೋಗಬಲ್ಲ ಸಾಧನಗಳಲ್ಲಿ ಆಕಾಶವಾಣಿಯು ಅಗ್ರಗಣ್ಯ ಸ್ಥಾನವನ್ನು ಗಳಿಸಿದೆ.

ಶಾಲೆಗಳು ಮತ್ತು ಅಕ್ಷರಾಭ್ಯಾಸವು ಹೆಚ್ಚುತ್ತ ಬರುವುದರಿಂದ, ಭಾರತೀಯ ಸಮಾಜ ಪದ್ಧತಿಯ ಪರಿವರ್ತನೆಯ ಕಾರ್ಯದಲ್ಲಿ ವರ್ತಮಾನ ಪತ್ರಿಕೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಮುಂದಿನ ವರ್ಷದ ಕೊನೆಯೊಳಗೆ ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಲ್ಲಿ ನೂರಕ್ಕೆ ೬೦ರಷ್ಟು ಶಾಲೆಗೆ ಹೋಗುವರು ಪ್ರಾದೇಶಿಕ ಭಾಷೆಗಳಲ್ಲಿ ಹೆಚ್ಚುಹೆಚ್ಚಾಗಿ ಪತ್ರಿಕೆಗಳು ಪ್ರಾರಂಭವಾಗುತ್ತಲಿವೆ. ಹಳ್ಳಿಗರು ದಿನಂಪ್ರತಿ ಪತ್ರಿಕೆಯೋದುವ ಅಭ್ಯಾಸದವರಲ್ಲ. ಯಾರಾದರೊಬ್ಬನು ನಗರದಿಂದ ಹಳ್ಳಿಗೆ ಬರುವಾಗ, ಸಾಮಾನ್ಯವಾಗಿ ಹದಿನೈದು ದಿನಕ್ಕೊಂದು ಬಾರಿ, ಆತನ ಸುತ್ತಲೂ ಜನ ನೆರೆಯುತ್ತಾರೆ. ಅವನು ಘಟ್ಟಿಯಾಗಿ ಓದುತ್ತಾನೆ. ಪತ್ರಿಕೆಯಲ್ಲಿರುವ ಸುದ್ದಿಗಳನ್ನು ಅರ್ಥವಾಗದಿದ್ದರೂ ಕಿವಿಗೊಟ್ಟು ಅವರು ಆಲಿಸುತ್ತಾರೆ; ದೇವಾಲಯ, ನಾಯಕ ಮತ್ತು ತಾವು ಬೆಳೆಸುವ ಬೆಳೆಯ ದರ ಇವುಗಳ ವಿಷಯವನ್ನು ಮಾತ್ರ ಅವರು ಜ್ಞಾಪಕದಲ್ಲಿಟ್ಟುಕೊಳ್ಳುತ್ತಾರೆ. ಇವು ಅವರ ಹಳೆಯ ದಾರಿಯನ್ನು ಪರಿವರ್ತಿಸಲು ನೆರವಾಗುವುವು.

ಆಕಾಶವಾಣಿ ಇಲ್ಲವೆ ಸಮಾಚಾರ ಪತ್ರಗಳಿಗಿಂತ ನೂರು ಪಾಲು ಅಧಿಕ ಕ್ರಾಂತಿಕಾರಿಯಾದುದೆಂದರೆ-ಚಲಚ್ಚಿತ್ರ, ಯುವಕ ಯುವತಿಯರು ತಮ್ಮ ನೆಚ್ಚಿನ ನಾಯಕ ನಾಯಿಕೆಯರಂತೆ ಅಲಂಕರಿಸಿಕೊಳ್ಳಲು ಕಲಿಯುತ್ತಾರೆ. ಉಡುಗೆ ತೊಡುಗೆ, ತಲೆ ಬಾಚಣಿಗಳಲ್ಲಿ ಮಾತ್ರವಲ್ಲ, ಅಂತರಿಕ ಅಲಂಕಾರವೂ ಚಲಚ್ಚಿತ್ರದಿಂದಲೇ ಪ್ರಭಾವಿತವಾಗುತ್ತದೆ. ಕನ್ನಡಿ, ಬಾಚಣಿಗೆ, ರಿಬ್ಬನ್, ಕನ್ನಡಕ-ಗ್ಲಾಸುಗಳು, ಬಾಲ್ದಿಗಳು ಮೊದಲಾದುವು ಸಿನೆಮಾದ ಪರಿಣಾಮವಾಗಿ, ಮರದ, ಹಿತ್ತಾಳೆಯ ಸಾಮಾನುಗಳ ಸ್ಥಾನಗಳನ್ನು ಆಕ್ರಮಿಸಿವೆ. ಮೇಜು ಕುರ್ಚಿಗಳು ಹಳ್ಳಿ ಹಳ್ಳಿಯ ಸಂಪ್ರದಾಯಪ್ರಿಯರ ಮನೆಗಳಲ್ಲಿ ಇರುವುದು ಅಸಂಭವವಾದರೂ, ತುಂಬ ಪ್ರಗತಿ ಹೊಂದಿದ ಊರುಗಳಲ್ಲಿದ್ದು, ಇದಕ್ಕೆ ಚಲಚ್ಚಿತ್ರವೇ ಮೂಲ ಕಾರಣವಾಗಿದೆ. ಜನತೆಗೆ ಹೊಸ ದಾರಿಗಳನ್ನು ಕಲಿಸಿ ಕೊಡುವುದನ್ನುಳಿದರೆ, ಭಾರತೀಯರು ಒಂದೇ ಎಂಬ ಭಾವನೆಯನ್ನೂ ಚಲಚ್ಚಿತ್ರ ಮೂಡಿಸಲು ಸಹಕಾರಿಯಾಗಿದೆ. ಹೆಚ್ಚಾಗಿರುವ ಹಿಂದೀ ಸಿನೆಮಾದಲ್ಲಿ ವ್ಯಾವಹಾರಿಕ ಹಿಂದೀ ಭಾಷೆಯ ಪ್ರಯೋಗ ನಡೆಯುತ್ತಿದ್ದು, ಇದನ್ನು ಅಖಂಡ ಭಾರತದ ಎಲ್ಲ ಊರವರೂ ಸುಲಭದಲ್ಲಿ ಅರ್ಥಮಾಡಿಕೊಳ್ಳಬಲ್ಲರು.

ಸಿನೆಮಾ ಸಂಗೀತವೆಂಬುದು ಜನಾದರಣೀಯತೆಗಳಿಸಿದೆ. ಉತ್ತರ ಭಾರತದವರು ಕರ್ನಾಟಕ ಸಂಗೀತವನ್ನೂ, ದಕ್ಷಿಣ ಭಾರತೀಯರು ಉತ್ತರದ ಸಂಗೀತವನ್ನೂ ಮೆಚ್ಚಲು ತೊಡಗಿದ್ದಾರೆ. ಭಾರತೀಯ ಸಿನೆಮಾಗಳು ಪಾಶ್ಚಾತ್ಯ ಸಂಗೀತದ ಹಿಮ್ಮೇಳವನ್ನು ತಮ್ಮ ಪದ್ಯಗಳಿಗೆ ಹೆಚ್ಚಾಗಿ ತೆಗೆದುಕೊಳ್ಳುತ್ತವೆ. ಸಿನೆಮಾಗಳು ನಾಗರಿಕ ಜೀವನದಲ್ಲಿ ಕ್ರಾಂತಿಯೇಳಿಸುವಂತೆಯೇ ಪ್ರೇಮ ಸಂದೇಶವನ್ನೂ ಪಸರಿಸುತ್ತವೆ. ಪ್ರೇಮವೆನ್ನುವುದು ಭಾರತದಲ್ಲಿ ನೈತಿಕ ಶಕ್ತಿಯೆನಿಸಿದೆ. ಈ ಪ್ರೇಮವು ವಿವಾಹಗಳನ್ನು ಏರ್ಪಡಿಸುವುದರಲ್ಲಿ ಉಳಿದೆಲ್ಲ ಅಂಶಗಳಿಗಿಂತಲೂ ಮುಂದಿರುವುದಾದರೂ, ಭಾರತದಲ್ಲಿ ಮಾತ್ರ ಬಡತನಕ್ಕಿಂತಲೂ ಇದು ಸಮಾಜವನ್ನು ಹಿಂದೆಳೆಯುತ್ತದೆ. ಪ್ರೇಮ ವಿವಾಹವು ಕಾಯದೆ ಬದ್ಧವೆಂದಾದಲ್ಲಿ ಭಾರತವು ೨೦ನೆಯ ಶತಮಾನದ ಸಮಾಜವಾಗಿ ಕೇವಲ ಒಂದೇ ಒಂದು ತಲೆಮಾರಿನ ಅವಧಿಯಲ್ಲಿ ರೂಪಾಂತರಗೊಳ್ಳುವುದರಲ್ಲಿ ಸಂದೇಹವಿಲ್ಲ.

(ಡೆಕ್ಕನ್ ಹೆರಾಲ್ಡ್'ನ ಆಧಾರದಿಂದ)



ದಂತ ಪರೀಕ್ಷೆಗಾಗಿ ಮುಚ್ಚುಸುತ್ತಿನ ಟೆಲಿವಿಜನನ್ನು ಅಮೇರಿಕೆಯ ಜಲ ಸೇನೆಯ ದಂತ ವೈದ್ಯರು ಉಪಯೋಗಿಸುತ್ತಾರೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಚೀನಾದ ಪ್ರಧಾನಿ ಭಾರತವನ್ನು ಸಂದರ್ಶಿಸಿದ್ದರು. ಚೀನವನ್ನು ಭಾರತವು ಆಕ್ರಮಣಕಾರ ರಾಷ್ಟ್ರವೆಂದು ಹಿಂದಿನಿಂದಲೇ ಹೇಳುತ್ತ ಬರುತ್ತಿತ್ತು. ಶ್ರೀ ಚೌ ಎನ್ ಲಾಯರ ಆಗಮನಕ್ಕೆ ಭಾರತದಲ್ಲಿಯೂ ವಿರೋಧಾಭಿಪ್ರಾಯವಿತ್ತು. ಅಲ್ಲದೇ ಅವರು ಬಂದು ಮಾತುಕತೆ ಬೆಳೆಸುವುದರಿಂದ ಚೀನಾ—ಭಾರತ ಸೀಮಾ ವಿವಾದದ ಪರಿಹಾರದ ಬಗ್ಗೆ ಯಾವುದೇ ಸಮಾಧಾನ ದೊರೆಯುವುದಿಲ್ಲವೆಂದೂ ಮೊದಲೇ ಊಹಿಸಲಾಗಿತ್ತು. ಆದರೂ, ಭಾರತವಲ್ಲಿ ತನ್ನ 'ಶತ್ರು ರಾಷ್ಟ್ರ'ವೆಂತೆನಿಸುವ ಚೀನಾದ ಪ್ರಧಾನಿಯನ್ನು ಗೌರವಾದರ ಭಾವದಿಂದಲೇ ಸ್ವಾಗತಿಸಿ, ಕಳಿಸಲಾಯಿತೇ ಹೊರತು, ಯಾವ ರೀತಿಯಿಂದಲೂ ಅವರ ಮನನೋಯುವಂತಹ ಪುಂಡಾಟಿಕೆಗಳಿಗೆ ಎಡೆಕೊಡಲಿಲ್ಲ. ಭಾರತೀಯ ಪ್ರಧಾನಿಯವರ ಕರೆಗೆ ಜನತೆಯು ಓಗೊಟ್ಟು ಅದನ್ನು ಮನ್ನಿಸಿತು; ಎಂತಲೇ ಪರಿಸ್ಥಿತಿ ಬಿಗಡಾಯಿಸದೆ ಸಮಾಧಾನಕರವಾಗಿಯೇ ಉಳಿಯಿತು.

ಧರ್ಮ ಸಂಕಟ

ಇಂತಹ ಉದಾರ ವರ್ತನೆಯನ್ನು ತೋರಿಸುವುದರಿಂದ ಯಾರಿಗೂ ನಷ್ಟವಾಗುವುದಿಲ್ಲ. ರಷ್ಯ ಮತ್ತು ಅಮೆರಿಕ, ರಷ್ಯ ಮತ್ತು ಬ್ರಿಟನ್ ಮೊದಲಾದ ಮಹಾರಾಷ್ಟ್ರಗಳು ಪರಸ್ಪರ ಭಿನ್ನಾಭಿಪ್ರಾಯ, ಧ್ಯೇಯ ಧೋರಣೆಗಳಿಂದಾಗಿ ಉತ್ತರ ಧ್ರುವ—ದಕ್ಷಿಣ ಧ್ರುವದಂತಿವೆ. ಆದರೂ ಅವುಗಳು ಮನೆಗೆ ಬಂದ ಅತಿಥಿಯನ್ನು ಗೌರವದಿಂದ ಕಂಡು, ಅವರನ್ನು ಕ್ಷೇಮದಲ್ಲಿಯೇ ಮರಳಿ ಕಳಿಸಿವೆ. ಅಮೆರಿಕೆ—ಜಪಾನಗಳ ನಡುವೆಯೂ ದ್ವೇಷಕ್ಕೆ ಕಾರಣಗಳು ಸಾಕಷ್ಟು ಬಲಯುತವಾಗಿಯೇ ಇವೆಯಾದರೂ, ಜಪಾನೀಯರು ತಮ್ಮ ಪ್ರಧಾನಿಯ ಅತಿಥಿಯಾಗಿ ಬರುವ ಒಂದು ದೊಡ್ಡ ರಾಷ್ಟ್ರದ ಪ್ರಧಾನರನ್ನು ಅವಹೇಳನ ಮಾಡುವುದು ಆ ಸಂಸ್ಕೃತಿಯ ... ಅಲ್ಲವೇ ಈ ಉಭಯ ನಾಯಕ ಸಂದರ್ಶನದಿಂದ, ಉಭಯ ರಾಷ್ಟ್ರಗಳ ಬಗ್ಗಿರುವ ಸಂಬಂಧವನ್ನು ಹೆಚ್ಚಿಸುವ ಸದವಕಾಶಗಳನ್ನು ಕಳೆದುಕೊಂಡು, ವ್ಯಥ ಬಿಕ್ಕಟ್ಟು ಹೆಚ್ಚಿಸುವುದು ಭೂಷಣಪ್ರಾಯವಲ್ಲ. ಜಪಾನೀಯರು ತಮ್ಮ ದ್ವೇಷ ಸಾಧನೆಯನ್ನೀಗ ಮಾಡಿರುವರೆಂದು ಹೇಳಬಹುದಾದರೆ, ಐಕರಿಗೆ ಆಮಂತ್ರಣವನ್ನಿತ್ತ ಪ್ರಧಾನಿ ಕಿಶಿಯವರು ಧರ್ಮ ಸಂಕಟದಲ್ಲಿ ಬಿದ್ದಿದ್ದಾರೆ. ಈ ವಿಷಮಾವಸ್ಥೆಯಿಂದ ಅವರು ಹೇಗೆ ಉಳಿದುಕೊಂಡಾರು, ಬರುವ ಅತಿಥಿಯನ್ನು ಸುಕ್ಷೇಮದೊಡನೆ ಹೇಗೆ ಮರಳಿಸಿಯಾರು ಮತ್ತು ಐಕರು ಜಪಾನದ ಬಗ್ಗಿರುವ ತಮ್ಮ ಅಭಿಪ್ರಾಯಗಳಲ್ಲಿ ಯಾವ ರೀತಿಯ ಪರಿವರ್ತನೆಯನ್ನು ಮಾಡಿಕೊಂಡಾರು—ಎಂದಿಂದು ಅಖಂಡ ವಿಶ್ವವೇ ಕುತೂಹಲದಿಂದ ಪ್ರತೀಕ್ಷಿಸುತ್ತಿದೆ.

—ಗೋರ

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ-
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬೦ (ಟ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA' WEEKL[Y] is in the list of periodical and Newspapers approve[d] or use in Secondary School as per proceeding[s] Roc- No- 466 N/50 dat[ed] 2-12-1950 of the Direct[or] of public Instructio[n] Madras-

ಕಥಾವಿಹಾರ

(೨ನೇ ಪುಟದಿಂದ)

— ೨ —

ಶಂಕರ ಊಟ ಮಾಡುತಿದ್ದನು. ಆದ
ರೆ ಆವನ ಊಟ ಯಾಂತ್ರಿಕವಾಗಿ ಸಾಗು
ತ್ತಿತ್ತು. ಮನಸ್ಸು ಊಟದ ಮೇಲಿರದೆ
ಬೇರೆನನ್ನೋ ಯೋಚಿಸುತಿತ್ತು. ಬೇ
ಗ ಬೇಗ ಎರಡು ತುತ್ತು ಊಟಮಾಡಿ
ಕೈ ತೊಳೆದುಕೊಂಡು ಬಂದನು.

ಮಗು ತಂದೆಯನ್ನು ಕಂಡು, "ಅಪ್ಪಾ ಅಮ್ಮ ನನಗೆ ಹಾಲು ಕೊಡಲೇ ಇಲ್ಲ" ಎಂದಿತು. ಹಸುಗೂಸಿನ ಈ ಮಾತುಗಳು ಶಂಕರನ ಎದೆಯನ್ನು ಚೂರಿಯಂತೆ ತಿವಿದವು. ಏನು ಉತ್ತರಹೇಳಿ ಮಗುವನ್ನು ಸಂತೈಸಲಿಎಂದು ಯೋಚಿಸತೊಡಗಿದನು.

"ಕಿಶೂ, ನಾನು ನಿನಗೆಷ್ಟೊಚೆಂದದ ಕತೆಗಳನ್ನು ಹೇಳುವೆ. ನೀನು ಬೇಗ ನಿದ್ರೆ ಮಾಡು. ನಾಳೆ ನಿನಗೆ ಅಮ್ಮ ತುಂಬ ಹಾಲು ಕೊಡುತ್ತಾಳೆ. ನೋಡು ಕಂದಾ, ನಾನು ನಿನಗೆ ರಾಜ ರಾಣಿಯರ, ಗಂಧರ್ವರ ಕತೆಗಳನ್ನು ಹೇಳುವೆ".

"ಊಹೂಂ, ನನಗೆ ನಿನ್ನ ಕತೆ ಬೇಡವಪ್ಪಾ, ನನಗೆ ಹಾಲು ಬೇಕು" ಮಗು ದೃಢನಿರ್ಧಾರದ ಸ್ವರದಲ್ಲಿ ಉತ್ತರಿಸಿತು. ಶಂಕರ ನಿರುತ್ತರನಾದ. ಶಂಕರನ ಕಣ್ಣುಗಳಿಂದ ಎರಡು ಹನಿ ಕಣ್ಣೀರು ಉದುರಿತು. ಕಿಶೋರ ಅದನ್ನು ಕಾಣುವ ಮುನ್ನ ಶಂಕರ ಕಂಬನಿಯನ್ನೊಜ್ಜಿಕೊಂಡನು.

ಫಕ್ಕನೆ ಕಿಶೋರ, "ಅಪ್ಪಾ, ದೇವರು ಹಾಲಿನ ಸರೋವರದಲ್ಲೇ ಮಲಗುವರೆಂದು ನೀನು ಹೇಳುವೆಯಲ್ಲಾ, ನಾನೂ ದೇವರ ಬಳಿ ಹೋಗಲೇ? ಅವನು ನನಗೆ ತುಂಬ ಹಾಲು ಕೊಡುವನು"ಎಂದು ಹೇಳಿದನು. ಮಗುವಿನ ಮಾತು ಶಂಕರನ ಅಂತಃಕರಣವನ್ನು ಕಲಕಿತು. "ಅಬ್ಬಾ, ಈ ಎಳೆಯ ಕೂಸು ದೇವರ ಬಳಿಗೆ ಹೋಗಬಯಸುತ್ತಿದೆ. ಈ ಹಸುಗೂಸಿನ ಮನ ಅದೆಷ್ಟು ನೊಂದಿರಬೇಕು! ಅದರ ಈ ಚಿಕ್ಕ ಆಸೆಯನ್ನು ಕೂಡಾ ನಾನು ಪೂರೈಸದಾದೆ. ನನ್ನ ಬದುಕಿಗೇನು ಬೆಲೆ?" ಶಂಕರ ತನ್ನನ್ನು ತಾನೇ ಪ್ರಶ್ನಿಸಿಕೊಂಡ.

"ಮಗೂ, ಹಾಗೆಲ್ಲ ಹೇಳಬಾರದು. ನಿನ್ನನ್ನು ನಾನು ನಾಳೆ ಸಿನೇಮಾಕ್ಕೆ ಕರೆದುಕೊಂಡು ಹೋಗುತ್ತೇನೆ."ಸಿನೇಮಾ" ಎಂಬ ಶಬ್ದ ಕೇಳಿ ಮಗುವಿನ ಕಿವಿ ನೆಟ್ಟಗಾಯಿತು.

"ಅಪ್ಪಾ, ನಾವು ಸಿನೇಮಾ ನೋಡದೆ ಎಷ್ಟು ದಿನಗಳಾದುವು! ನೆರಮನೆಯ ಶ್ಯಾಮ ನಿತ್ಯವೂ ಅವನ ಅಪ್ಪನೊಂದಿಗೆ ಸಿನೇಮಾಕ್ಕೆ ಹೋಗುತ್ತಾನೆ. ನೀನು ಮಾತ್ರ ನನ್ನನ್ನು ಹಾಗೆ ಸಿನೇಮಾಕ್ಕೆ ಕೊಂಡೊಯ್ಯುವುದಿಲ್ಲ." ಐದು ವರ್ಷದ ಹಸುಳೆಯ ಬಾಯಿಯಿಂದ ಹೊರಬಿದ್ದ ಮಾತುಗಳಿವು.

"ಮಗೂ, ಅವರು ಶ್ರೀಮಂತರು, ನಾವು ಬಡವರು."

"ಹಾಗೆಂದರೇನು ತಾತಾ?"

"ಮಗೂ, ಅದೆಲ್ಲ ನಿನಗೆ ಈಗ ತಿಳಿಯಲಾರದು. ನೀನಿನ್ನೂ ಚಿಕ್ಕವನು ನೀನು ದೊಡ್ಡವನಾದ ಮೇಲೆ ಅದನ್ನೆಲ್ಲಾ ತಿಳಿಯುವಿಯಂತೆ. ಗದ್ಗದ ಕಂಠದಿಂದ ಶಂಕರ ಉತ್ತರಿಸಿದನು.

"ಅಪ್ಪಾ, ಶ್ಯಾಮನ ಬಳಿ ಪುಟ್ಟ ಸೈಕಲ್ ಇದೆ. ನನಗೆ ಮಾತ್ರ ಇಲ್ಲ. ನೀನು ಸೈಕಲು ತಂದು ಕೊಡುತ್ತೇನೆ ಎಂದು ಸುಳ್ಳು ಹೇಳುತ್ತಿ' ಮಗುವಿನ ಈ ಮಾತುಗಳು ಅವನೆದೆಯನ್ನು ಚಾಟಿಯಂತೆ ಹೊಡೆದುವು.

'ಮಗೂ, ನಾಳೆ ನಿನಗೆ ಖಂಡಿತ ಸೈಕಲ್ ತರುವೆನು'. ಎಂದು ಮಗುವನ್ನು ಸಂತೈಸುತ್ತಾ ಶಂಕರ ಹೇಳಿದನು. ಆದರೆ ಇದು ಬರಿಯ ಮಂತ್ರಿ ಆಶ್ವಾಸನೆಯೆಂದು ಆವನ ಹೃದಯ ಹೇಳುತಿತ್ತು. ಇಪ್ಪತ್ತು ರೂಪಾಯಿ ಕೊಟ್ಟು ಸೈಕಲ್ ಹೇಗೆ ಕೊಂಡುಕೊಳ್ಳಲಿ ಎಂದು ಆತ ಯೋಚಿಸುತಿದ್ದನು.

'ಅಪ್ಪಾ, ನಾನು ಸೈಕಲ್ ಬಿಡುವುದನ್ನು ಕಂಡು ಶ್ಯಾಮನ ಹೊಟ್ಟೆ ಉರಿಯಬೇಕು. ನನ್ನದು ಹೊಸ ಸೈಕಲ್—ಅವನದು ಹಳೆಯದು" ಎಂದು ಕಿಶೋರ ಹೇಳಿದನು. ಮತ್ತೆ ಪುನಃ 'ಅಪ್ಪಾ, ನನಗೆ ರಾಜ-ರಾಣಿಯ ಕತೆ ಹೇಳು" ಅನಂದದಿಂದ ಕಿಶೋರ ಕೇಳಿದನು. ಶಂಕರ ಕತೆ ಹೇಳ ತೊಡಗಿದ. ಕತೆ ಮುಗಿಯುವ ಮುನ್ನ ಕಿಶೋರ ನಿದ್ರಾ ಪ್ರಪಂಚದಲ್ಲಿ ವಿಹರಿಸುತಿದ್ದನು.

ಕನಸಿನಲ್ಲಿ ಕಿಶೋರ, 'ಸೈಕಲ್, ಸೈಕಲ್' ಎಂದು ಕನವರಿಸಿದನು. ಆ ಎಳೆ ಜೀವಿಗೆ ನಿದ್ರೆಯಲ್ಲೂ ಸೈಕಲಿನದೇ ಯೋಚನೆ. ಇದನ್ನು ಕಂಡು ಶಂಕರನಿಗೆ ಅಪಾರ ವೇದನೆ ಯಾಯಿತು. ತನ್ನ ದಾರುಣ ಸ್ಥಿತಿಯನ್ನು ನೆನೆದು ಆವನಿಗೆ ಮರುಕ ಬಂತು.

— ೩ —

ಅಷ್ಟರಲ್ಲಿ ಯಾರೋ ಬಾಗಿಲು ತಟ್ಟಿದಂತಾಯಿತು. ಶಂಕರ ಹೋಗಿ ಬಾಗಿಲು ತೆರೆದು ಎದುರು ನೋಡುತ್ತಾನೆ, ಸಾಹುಕಾರ್ ರಂಗಣ್ಣನವರು ಬಂದಿದ್ದರು.

'ಬನ್ನೀ, ಸಾಹುಕಾರರೇ, ಕುಳಿತುಕೊಳ್ಳಿ' ಎನ್ನುತ್ತಾ ಒಂದು ಹರಕು ಚಾಪೆಯನ್ನು ಹಾಸಿದನು.

'ಸಾಹುಕಾರರ ಸವಾರಿ, ಈ ರಾತ್ರಿಯ ಹೊತ್ತು ಬಡವನ ಮನೆಗೆ ಚಿತ್ತೈಸಲು ಏನು ಕಾರಣವೆಂದು ನಾನು ತಿಳಿಯಬಹುದೇ?' ನಮ್ರತೆಯಿಂದ ಕೂಡಿದ ಸ್ವರದಲ್ಲಿ ಶಂಕರ ಕೇಳಿದನು.

'ನೋಡು ಶಂಕರಾ, ಬಾರಿ ಬಾರಿ ಮನೆಗೆ ಬರುವಂತೆ ನೀನೇ ಮಾಡುವಾಗ ನಾನಾದರೂ ಏನು ಮಾಡಲಿ? ನೀನೊಬ್ಬ ಪ್ರಾಮಾಣಿಕನೆಂದು ನಾನು ನಂಬಿದ್ದೆ. ಆದರೆ ಇಂದು ನಿನ್ನ ಮೇಲಿನ ನನ್ನ ವಿಶ್ವಾಸ ಹಾರಿಹೋಗಿದೆ. ನೋಡು ಅಂಗಡಿಯ ಸಾಮಾನಿನ ಬಾಬತು ನಿನ್ನದು ೫೦ ರೂಪಾಯಿ ಬಾಕಿಯಿದೆ. ಆದರ ಮೇಲೆ ಕಳೆದ ಎರಡು ತಿಂಗಳಿಂದ ಮನೆಬಾಡಿಗೆ ಕೊಟ್ಟಿಲ್ಲ. ನಾನಾದರೂ ಎಷ್ಟು ದಿನ ತಡೆದುಕೊಳ್ಳಬಹುದು? ಏಳೆಂಟುಬಾರಿ ಆಳುಗಳನ್ನು ಕಳುಹಿಸಿದೆ, ಇವತ್ತು ಕೊಡುತ್ತೇನೆ, ನಾಳೆ ಕೊಡುತ್ತೇನೆ, ಸಂಜೆ ಕೊಡುತ್ತೇನೆ ಎಂದು ನೀನು ಉತ್ತರಿಸುತ್ತಾ ಇದ್ದೆ ಹೊರತು ಹಣ ಮಾತ್ರ ಕೊಡಲಿಲ್ಲ. ನಿನ್ನೆ ಸಂಜೆ ಬಂದಾಗ "ನಾಳೆ ಸಂಜೆ ಖಂಡಿತ ಅಂಗಡಿಗೆ ನಾನೇ ಬಂದು ಹಣ ಮುಟ್ಟಿಸುತ್ತೇನೆ" ಎಂದು ಹೇಳಿದೆ. ಸಂಜೆಯಾದರೂ ಸವಾರಿ ಬರಲೇ ಇಲ್ಲ. ಆದುದರಿಂದ ಅಂಗಡಿ ಮುಚ್ಚಿ ಮನೆಗೆ ಹೋಗುವವ ಹೀಗೆ ಇಲ್ಲಿಗೆ ಬಂದೆ. ನೋಡುವಾ, ನನ್ನ ಹಣವನ್ನೆಲ್ಲಾ ಈಗಲೇ ಕೊಟ್ಟುಬಿಡು". ರಂಗಣ್ಣನವರು ನಿರ್ಧಾರದ ಧ್ವನಿಯಲ್ಲಿ ಹೇಳಿದರು.

"ಸ್ವಾಮಿ, ಬಡವನ ಮೇಲೆ ದಯೆ ತೋರಬೇಕು" ಶಂಕರ ವಿನೀತಭಾವದಿಂದ ಸಾಹುಕಾರರೊಡನೆ ಬಿನ್ನವಿಸಿಕೊಂಡನು.

"ನೋಡು, ಮತ್ತೆ ಪುನಃ ನೀನು ನಿನ್ನ ಮಾಮೂಲು ರಾಗ ಎಳೆಯತೊಡಗಿದೆ. ಬಡವನಂತೆ ಬಡವ!! ಹಂ, ಎಲ್ಲರೂ ಬಡವರೇ, ನಮ್ಮ ಮನೆಯಲ್ಲೇನೂ ಚಿನ್ನದ ಕೊಪ್ಪರಿಗೆ ಇಲ್ಲ ನೋಡು. ನಮಗೂ ಖರ್ಚಿಗೆ ಹಣ ಬೇಕು. ಮೊದಲು ನನ್ನ ಹಣವಿಟ್ಟು, ಮಾತನಾಡು." ಗಡುಸಾದ ಧ್ವನಿಯಲ್ಲಿ ರಂಗಣ್ಣ ಉತ್ತರಿಸಿದ.

"ಸ್ವಾಮಿ, ಈಗ ನನ್ನಬಳಿ ಒಂದು ಕುರುಡು ಕಾಸೂ ಇಲ್ಲ, ಅನುಕೂಲವಾದೊಡನೆ ನಾನೇ ಬಂದು ಹಣ ಮುಟ್ಟಿಸುವೆನು". ಶಂಕರ ನಮ್ರನಾಗಿ ಹೇಳಿದನು.

"ಅದೆಲ್ಲಾ ಆಗದು. ಒಂದೋ ಈಗಲೇ ಹಣ ಕೊಡಬೇಕು; ಇಲ್ಲವೇ ನಾಳೆ ಬೆಳಗ್ಗಿನೊಳಗೆ ಮನೆ ಖಾಲಿಮಾಡಬೇಕು. ನಾಳೆಯಿಂದ ಅಂಗಡಿಯ ಸಾಮಾನಿಗೆ ಜನ ಕಳುಹಿಸುವುದು ಬೇಡ. ನಿನ್ನಿಂದ ನನಗೆ ಸಲ್ಲಬೇಕಾದ ಹಣಕ್ಕೆ ನಾನು ಕೋರ್ಟಿನಲ್ಲಿ ದಾವೆ ಹೂಡುತ್ತೇನೆ. ಇದೇ ಕಡೆಯ ಎಚ್ಚರಿಕೆ." ಎಂದು ಹೇಳಿ ಶಂಕರನ ಉತ್ತರವನ್ನು ಕೂಡಾ ಕೇಳಬಯಸದೆ. ಸಾಹುಕಾರ್ ರಂಗಣ್ಣನವರು ಹೊರಟು ಹೋದರು.

ಶಂಕರ ಕೊಂಚ ಹೊತ್ತಿನವರೆಗೆ ರಂಗಣ್ಣನವರನ್ನೇ ನೋಡುತ್ತ ನಿಂತನು. ಅವನಿಗೆ ತಲೆಯಮೇಲೆ ಪರ್ವತವೇ ಕುಸಿದು ಬಿದ್ದಂತೆ ಭಾಸವಾಯಿತು. ಸಾಹುಕಾರರ ಬಳಿ ತನ್ನ ದುಃಖದ ಕತೆ ಹೇಳುವುದು ಹೊಳೆಯಲ್ಲಿ ಹುಣಿಸೆ ಹಣ್ಣು ತೊಳೆದಂತೆ ವ್ಯರ್ಥವೆಂದು ಅವನ ಮನ ಹೇಳುತಿತ್ತು. ಅವರಿಗೆ ಅವರ ಸ್ವಾರ್ಥವೇ ಹೆಚ್ಚಾಗಿತ್ತು. ಅವರಿಗೆ ಹಣದೊಡನೆ ಮಾತ್ರ ಸಂಬಂಧವಲ್ಲದೆ ಇತರರ ಗೋಳಿನ ಕತೆ ಕೇಳಿ ಏನಾಗಬೇಕು? ಅವನಿಗರಿವಾಗದಂತೆ ಅವನ ಬಾಯಿಯಿಂದ

ಕವಿಯ ಬಾಳು ನಿಜಕೂ ಹಾಳು ಕೇಳು॥
ಭುವಿಯೊಳಾರು ಕೇಂಬರವನಗೋಳು|
ಜನರಿಗವನು ಪಥದಿ ಬಿದ್ದ ಧೂಳು॥
ಹಗಲುರಾತ್ರಿ ಬಿಡದೆ ದುಡಿದ ಮೇಲೂ।
ಸಿಗದು ಅವಗೆ ಹೊತ್ತಿಗೊಂದು ತುತ್ತು
ಕೂಳು॥

ಎಂಬ ಪದ್ಯ ಹೊರಬಿತ್ತು. ಆ ಕ್ಷಣಕ್ಕೆ ಶಂಕರನ ಆದರ್ಶದ ಅಮಲು ಇಳಿದು ಅವನು ಯಥಾರ್ಥವಾದಿಯಾದನು. ಅವನ ಕಾವ್ಯಲಹರಿ ಹೊಸ ಹಾದಿ ಹಿಡಿದು ಹರಿಯತೊಡಗಿತು.

—ಪಾ. ಚಂದ್ರಶೇಖರ ಚಡಗ,
ಪಾಂಡೇಶ್ವರ.

ಅಮೆರಿಕೆಯ ಮೂರನೆಯ ಅಣುಶಕ್ತಿ ಉತ್ಪಾದಕವು ಕಾರ್ಯನಿರತವಾಗಿರುವುದನ್ನಿಲ್ಲಿ ಕಾಣಬಹುದು.

═ ಕುಮಾರಿ ಬಿಲ್ಲೆಗಳು ═

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿನೋದ ಲಹರಿ

ಎಬ್ಬಿಸುವುದೂ ಅಮೋಘ ಕಲೆಯಲ್ಲವೆ?

ಚತುಷ್ಷಷ್ಟಿ ಕಲೆಗಳಲ್ಲಿ ಇದಕ್ಕೆ ಸ್ಥಾನವನ್ನು ಕಲ್ಪಿಸಿಕೊಟ್ಟಂತೆ ಕಾಣುವು ದಿಲ್ಲವಾದುದರಿಂದ ಈ ಕಲೆಗಾದ ಅಪಮಾನವನ್ನು ಹೋಗಲಾಡಿಸುವುದು ನಮ್ಮ ಕರ್ತವ್ಯವಲ್ಲವೆ?

ನಿದ್ರಿಸುವುದು ಸರ್ವಸಾಮಾನ್ಯ ಪ್ರತಿ ಒಬ್ಬನ ದೈನಂದಿನ ಒಂದು ಕರ್ತವ್ಯವೆಂದು ಭಾವಿಸಿದರೆ, ಎಬ್ಬಿಸುವುದು ಅರ್ಥಾತ್ ನಿದ್ರಾಂಗನೆಯ ಮಡಿಲಿನಿಂದ ಇಹಲೋಕಕ್ಕೆಳೆಯುವುದೂ ಒಂದು ಕರ್ತವ್ಯವಾಗದೇ?

ನಗುವುದು, ಹಾಡುವುದು, (ಜೋಗಳಕೆ) ಇವುಗಳೆಲ್ಲ ಕಲೆಯೆಂದು ಕರೆದವರಿಗೆ ನಿದ್ರೆಯಿಂದ ಎಬ್ಬಿಸುವುದೂ ಒಂದು ಕಲೆಯೆಂದು ಏಕೆ ಕರೆದುಕೊಳ್ಳಲಾಗಲಿಲ್ಲ?—ಬಹುಶಃ ಅವರು ಎಬ್ಬಿಸಿಕೊಂಡವರಲ್ಲವೋ ಏನೋ? ಹಾಗಿದ್ದರೆ ಅವರೀಕೆ ಅದರ ಬಗ್ಗೆ ಹಿಂಜರಿಯಬೇಕಾಯ್ತು ಎಂಬುದೂ ಅದರಲ್ಲಿಯ ಕಲಾಸ್ವಾರಸ್ಯವನ್ನು ಹೀರದಿದ್ದರಿಂದಲೇ ಇಂದದು ಕಲೆಯಿಂದ ಬಹುದೂರ ಉಳಿದು ಮೂಲೆಪಾಲಾದುದೆಂದು ತಿಳಿಯಬೇಕಾಗಿದೆ—ನೋಡಿ ನಿಮಗೂ ಕೂಡಾ ಇದೇನು ಅಷ್ಟು ದೊಡ್ಡ ವಿಚಾರವೆಂದಾಗಬಹುದು. ನೀವೂ ಒಮ್ಮೆ ಬೆಳಗ್ಗೆ ೮ ಘಂಟೆಯ ವರೆಗೂ ನಿದ್ರಿಸಿ ನೋಡಿ—ಅದರ ಸಾರಾಸಾರ ವಿಮರ್ಶೆಯ ಅರಿವು ನಿಮಗಾಗುವುದು.

ಸಾರ್, ಬಾಗಿಲು—ಬಾಗಿಲು........" ನೀವು ಏಳಬೇಡಿ ಆಗುವುದು ಆಗುತ್ತದೆ ನೋಡಿಬಿಡುವ. ಹಾಲಿನವನು ದುಡ್ಡಿಗಾಗಿ ಬಂದಿದ್ದರೆ, ನಿಮಗೆ ಮದುವೆಯಾಗಿ ಸಂಸಾರ ಹೂಡಿದ್ದರೆ ಹಾಲುಕೊಟ್ಟು ಹಿಂದಕ್ಕೆ ಹೋಗಿರುತ್ತಾನೆ. ಇದರಿಂದ ಲಾಭವೇ ಹೊರತು—ನಷ್ಟವಿದೆಯೆ? ದಿನವೂ ಹೀಗೆಯೆ ಪ್ರಯತ್ನಿಸಿರಿ.

ಹಾಲಿನವನ ದುಡ್ಡು ಕೇಳಲಾರದೆ (ಕೇಳಲು ಅಧಿಕಾರಿಗಳು ಎದ್ದಿದ್ದರೆ) ಹೊರಟು ಹೋದ—ಆಕೆ (ಆತನ ಪ್ರಿಯ ಪತ್ನಿ) ಕಾಫಿ ಮಾಡಿದಳು ಎಂತ ಇಟ್ಟುಕೊಳ್ಳುವ.) ಅದನ್ನು ಹೀರಲು ತ್ರಿಯುತರೇ ಬೇಕಲ್ಲ! ಅದಕ್ಕಾಗಿ ನೀವು ಮುಸುಕೆಳೆದು ಮಲಗಿ ಬಿಡಿರಿ—ಮುಖ ಹೊರಗಿದ್ದರೆ ನಿಮ್ಮನ್ನು ಎಬ್ಬಿಸುವ ಜಾಣ್ಮೆಯ ಮುಖಭಾವದಲ್ಲಿ ನೀವು ಆಕೆಯನ್ನು ಅರೆಗಣ್ಣು (ನಿದ್ರೆಬಂದ ಕಣ್ಣು)ಗಳಿಂದ ಕಂಡಿರೆಂದಾದರೆ (ಜೋಕೆ) ಖಂಡಿತವಾಗಿಯೂ ನೀವು ನಕ್ಕು ಬಿಡುತ್ತೀರಿ—ಎಂತಹ ಸೌಜನ್ಯ, ಸಂತೋಷ ಆತುರತೆ ಇದೆ ಅಭಿನಯ ಭಂಗಿಯಲ್ಲಿ? ಇದೆಲ್ಲ ಪ್ರೇಮ ಮಯ ಜೀವನದಲ್ಲಿಯ ಎಬ್ಬಿಸುವ ಕಲೆಯಾದರೆ....ಶಿಕ್ಷಣದಲ್ಲಿಯೂ ಕಲೆಯ ಆಗರವಿಲ್ಲದಿದೆಯೆ?

ಚಿಕ್ಕ ಮಕ್ಕಳು ಶಾಲೆಗೆ ಇನ್ನೂ ಹೋಗಲು ಅಭ್ಯಾಸಿಸುತ್ತಿದ್ದಾರೆ — ಅದರಲ್ಲಿ ದೊಡ್ಡ ಮಕ್ಕಳು ಬೇಗ ಸ್ನಾನಮಾಡು. 'ಇನ್ಸ್‌ಪೆಕ್ಟರ್ ಬಂದ್ರಾರೆ—ಅದು, ಇದು ಮಾಡ್ತಾರೆ ಅಂತಂದ (ಕೇಳಿದ ಕೂಡ್ಲೆ ಬರುವ ಹೊಟ್ಟೆ ನೋವಂತೆ) ಮಲಗಿದ ಲ್ಲಿಂದ ಏಳುವುದೇ ಇಲ್ಲ. ತಾಯಿ, ತಂದೆ, ಅಣ್ಣಂದಿರು, ಅಕ್ಕಂದಿರು ಎಲ್ಲರೂ ಎಬ್ಬಿಸಿ ನಿಲ್ಲಿಸಿದರೂ ನಿದ್ರಾಂಗನೆಯನ್ನೂ ಬಿಟ್ಟಿರುವುದಿಲ್ಲ. ಶಾಲೆಗೆ ತಡವಾಗುತ್ತದೆ ಉಳಿದ ಮಕ್ಕಳು ಹೊರಟು ಹೋದಾಗ ಆತನ (ಆಕೆ) ನಿದ್ರೆಯಲ್ಲೆ ನಿದ್ರೆಬಾರದಿದ್ದವರನ್ನು ಎಬ್ಬಿಸುವುದೂ (ಕಠಿಣ) ಕಲೆಯಾಗದೇ?

ಶಾಲೆಯ ಪ್ರೌಢ ಪ್ರಾಥಮಿಕ ಕ್ಲಾಸಿನಲ್ಲಿ ಓದುತ್ತಿರುವ ನನ್ನೋರ್ವ ಮಿತ್ರ ನನಗೆ— (ನಮಗೆ) ಜಾಣ್ಮೆಯನ್ನೇ ಪ್ರದರ್ಶಿಸಿದ. ಒಂದೇ ರೂಮಿನಲ್ಲಿ ದಿನವೂ ಓದಿ ಮಲಗುತ್ತಿದ್ದೆವು— ನನಗೆ ಬೆಳಗ್ಗೆ ಬೇಗ ಏಳಬೇಕು. ಆತನಿಗೆ ೮ ಗಂಟೆಯ ನಂತರ ೯ ಗಂಟೆಯ ಮೊದಲು ಏಳಬೇಕೆಂಬ ಕುತೂಹಲ ಇವರಿಂದಾಗಿ ನಮ್ಮ ಓದೇನೂ ಸಾಂಗವಾಗಿ ಸಾಗುತ್ತಿರಲಿಲ್ಲ. ನಾನಂತೂ ಅವನಿಗಿಂತ ಬೇಗ ಏಳುವವನೇ, ಇಲ್ಲವಾದರೆ ಅವನ ಗೊರಕೆಗೆ (ಆ ಶಬ್ದ ಬೇರೆಯಲ್ಲಿಯೂ ಕೇಳಿರದ ನೆನಪು (ನಮ್ಮ ಸಾಯನ್ಸ ಮಾಸ್ತರರು ಹೇಳಿದ್ದರು. ಅಮೇರಿಕ ಒಂದು ವ್ಯಾಗನಿಗೆ 'ಘೀರ್' ಅರಚುತ್ತದೆಂತ—ಅವರ ಹೆಸರು ಹೇಳಿರದಿದ್ದರೂ ನಾನೂ 'ಹೌದು ಸಾರ್' ಎಂದಿದ್ದೆ) ಶಬ್ದದಿಂದ ನಾನಂತೂ ಎಚ್ಚತ್ತು ಹೌಹಾರಲೇ ಬೇಕು—ಮುಂದೆ ದಿನವೂ ಕೇಳಿ ಕೇಳಿ ಅದೇ ಅಭ್ಯಾಸವಾಗಿ ಆವನೊಡನೆ ನಾನೂ ಎಂಟು ಗಂಟೆಯ ವರೆಗೂ ಮಲಗಿ ಇಬ್ಬರೂ ಏಕ ಕಾಲದಲ್ಲಿಯೆ ಏಳುತ್ತಿರುವೆವು — ಇವರ ಮಧ್ಯೆ 'ಮೋಜೊಂ'ದು ನಡೆದಿತ್ತು. ಕೇಳಿ,— ಆತ ನಿದ್ರೆಯಿಂದ ೯ ಗಂಟೆಯ ವರೆಗೂ ಏಳುತ್ತಿರಲಿಲ್ಲ ಅದಕ್ಕೆ ಪರೀಕ್ಷೆ ಸಮಯದಲ್ಲಿ ಸ್ವಲ್ಪ ಮುಂಚೆ ಏಳು-ಏಳು ಮಹಾರಾಯ ಎಂದು (ಏಳು ನಾರಾಯಣನೇ ಏಳು ಲಕ್ಷ್ಮೀ ರಮಣ) ಎಲ್ಲ ಮುಗಿಸಿದರೂ ಏಳಲಾರದ ಆತನನ್ನು ಹೊಡೆದೆಬ್ಬಿಸಿದರೆ ಅವನೇನು ಮಾಡುತ್ತಾನೆ? ಕಪಾಳಕ್ಕೆ 'ಛಳೀರೆಂ'ದು ಕಣ್ಣು ಮುಚ್ಚಿಕೊಟ್ಟೇ ಬಿಡುವ, ಬಿಡುವನೆಂದೇನು ಪ್ರಯೋಜನ? ನನ್ನ ಕನ್ನೆ ಅದಿನ ಮುಚ್ಚಿಯೇ ನೋಡಬೇಕಿತ್ತು. ಉಂ ಗೊತ್ತಾಗದಿದ್ದರೂ ಉಬ್ಬಿದ್ದು ಗೊತ್ತಾಗದಿದ್ದೀತೇ? ಇದೇನೋ ವಿಷ್ನೇಶಃ; ನನ್ನ ಕನ್ನೆ ಬೀಗಿತ್ತಲ್ಲೋ ಅಂತಂದ್ರೆ 'Sorry' 'ಸ್ಸಾರಿ ಸ್ಸಾರ್' ಎಂದೇ ಬಿಡುವ—ಮುಂದೇನು ಮಾತಿದೆಯೇ? ಹಿಂದಿನ ಕಾಲದಲ್ಲಿ ತಪಸ್ಸು ಮಾಡಿದರೂ 'ವರ' (ಸೂಚನೆ) ದೊರಕಬೇಕಾದರೆ ಅವರ ಜರ ನೆಲಕ್ಕೆಳೆಯಬೇಕಿತ್ತಂತೆ ಮತ್ತು ಅವರು ಕುಳಿತಲ್ಲಿ ಹುತ್ತ ಬೆಳೆದು ಅವರು ಮುಚ್ಚಿಹೋಗುತ್ತಿದ್ದರಂತೆ—ಆದರೆ ನನ್ನ ತಪಸ್ಸು ಅಂತಹ ಸುದೀರ್ಘ ತಪವಾಗಿರದೆ ಕೇವಲ ಒಂದೇ ಕ್ಷಣದ ತಪಸ್ಸಿಗೆ ಯಾವ ದೇವನೋ ಮೆಚ್ಚಿ ಒಂದು ವರರೂಪವಾದ ಕಲೆಗೆ ಯೋಚನ್ನಿತ್ತ (ಅದು ಮರಿದ ಬೆಂಚಿನ ಕಾಲು) ಮೂರನೇ ದಿನವೇ ಪುನಃ ಏಳಿಸಲು ಹೋದಾಗ ಕೈಯಲ್ಲಿ ಆ 'ವರ' (ಬೆಂಚಿನ ಕಾಲು) ವಿತ್ತು, ಎಬ್ಬಿಸಿದೆ. ಕ್ರೈಮಿತ್ರಿ (ಕಣ್ಣುಮುಚ್ಚಿ) ಕೆನ್ನೆಗೊಂದು ರಪಾರನೆ ಕೊಟ್ಟನನ್ನುವಾಗ ನನ್ನ ವರವನ್ನು ಆ ಕೈಗೆ ಪ್ರಸನ್ನನಾಗಿ 'ಅಮ್ಮ' ಎಂಗಿದ. ಅವನ ಮುಷ್ಠಿ ನನ್ನ ಹಲಗೆಗೆ ತಾ (ಬೀಸಿದುದರಿಂದ) ಘಾಯವೇ ಆಗಿತ್ತು. ಅಂದಿನಿಂದ ಕನಿವ ಕೂಡಲೇ ಸಾರ್... 'ಸ್ಸಾರಿ—ಸರಿ ಸ್ಸಾರಿ' ಯಾವುದೂ ಇಲ್ಲ. ನೋಡಿದಿರಾ? ಎಬ್ಬಿಸುವಾಗ ಎಚ್ಚರಿರುವುದು ಮೇಲು—

ನಮ್ಮ ಶಾಲಾ ಮೇಸ್ಟ್ರುಗಳು ಶಾಲೆಯಲ್ಲಿ ನಿದ್ದೆಮಾಡುವುದು ಜಾಸ್ತಿ (ಹಾಗಂದ್ರೆ ಯಾವಾಗಲೂ ನಿದ್ದೆಯೆಂದಲ್ಲ) ಅಂತೂ ಮಕ್ಕಳಿಗೆ ಓದಲು ಹೇಳಿ ತಾವು ಹಾಯಾಗಿ ಮೇಜಿನ ಮೇಲೆ ಕಾಲೂರಿ ಕುರ್ಚಿಗೆ ದೇಹವರ್ಪಿಸಿ 'ಸುರ್.... ಸುರ್...' ಎಂದು ಗೊರಕೆ ಹೊಡೆಯುವುದು ಪದ್ಧತಿ. ಮೊದ ಮೊದಲು ಕರ್ತವ್ಯವಾಗಿತ್ತದು. ಈಗೀಗ ಪದ್ಧತಿಯೇ ಆಗಿತ್ತು. ಮಕ್ಕಳಿಗೆ ಮಾಸ್ತರರು 'ಆಸನ' (ಮೇಜಿನ ಮೇಲೆ ಕಾಲು, ಕುರ್ಚಿಗೆ ದೇಹ) ಹಾಕಿದರೆಂದರೆ 'ಕೇಕ್—ಕೂಗು—ರಸ್ತೆಯಲ್ಲಿನ ನೋಟ-ಓಟ, ಸಾರ್, ಸಾರ್ ಗಲಭೆ ನಿರರ್ಗಳವಾಗಿ ಸಾಗಿಸಲು ಕೊರತೆಯಿದ್ದಿಲ್ಲ. ಮನೆಗೆ ಬಂದಾಗ ಯಾರಾದರೂ (ಬರಹಬಲ್ಲ) ಓದು ನೋಡುವ ಎಂತಂದ್ರೆ—ಓದುವುದೇನು? ದಿನಾ ಅವರು ಶಾಲೆಗೆ ಬಂದು ನಿದ್ದೆ ಮಾಡುತ್ತಾರೆ—ನಾವೇನು ಓದುವುದು? ಎನ್ನದೆ ಬಿಡಲಾರವು ಮಕ್ಕಳು— 'ಮನೆಯಲ್ಲಿ ಹೆಂಡತಿ ಕೀಕಲಾಟ ತಾಳಲಾರದೆ ಶಾಲೆಗೆ ಬಂದು ನಿದ್ದೆಮಾಡುತ್ತಾರಂತೇನೋ ಮಾಸ್ತರರು?' ಎಂದು ರಕ್ಷಕರು ಹೇಳಿದರೆ ಮಾತಿನ ಮಥಿತಾರ್ಥವಾಗದ ಮಕ್ಕಳಿಗೇನನ್ನಬೇಕು? ಇದೂ ಒಂದು ಹಾಸ್ಯಾಸ್ಪದವೇ—ನೋಡಿ—ಮಾಸ್ತರನ್ನ ಎಬ್ಬಿಸಲಿಕ್ಕೆ ಮಕ್ಕಳು ಒಂದು ಹಂಚಿಕೆ ಹೂಡಿದರು—ಸಾರ್, ಸಾರ್ ಎಂದರೂ—'ಸುಮ್ಮನೆ ಓದಿರೋ—ಕತ್ತೆಗಳ' ಎಂದು ಕಣ್ಣು ತೆರೆಯದೇ ಹೇಳುತ್ತಿದ್ದ ಆ ಮಾಸ್ತರಿಗೆ (ಅವರು ಒಬ್ಬರೇ ಆ ಶಾಲೆಯಲ್ಲಿ ನಿದ್ದೆಮಾಡಲು ಬರುವವರು, ಒಮ್ಮೆ 'ಇನ್ಸ್‌ಪೆಕ್ಟರ್ ಬಂದ್ರು ಸಾರ್.... ಎಂತ ಘಟ್ಟಿಯಾಗಿ ಕೂಗಿ ಬಿಟ್ಟವು—ಇನ್ಸ್‌ಪೆಕ್ಟರ್ ಎಂದೊಡನೆ ಹೌಹಾರಿ, ದಿಗ್ಗನೆದ್ದು ಕಾಲು ನೆಲಕ್ಕೂರುವಾಗ ನಾಲ್ಕೈದು ವರ್ಷಗಳಿಂದಲೂ ಅಖಂಡ ಸೇವೆಯನ್ನು ಸಲ್ಲಿಸಿಕೊಂಡು ಬಂದಿರುವ ಅದೆಷ್ಟೋ ಉಪಾಧ್ಯಾಯರನ್ನು ಹೊತ್ತ ಆ ಕುರ್ಚಿ 'ಸಾಕಪ್ಪ' ಎಂದಿತು. ಜೊತೆಗೆ ಮಾಸ್ತರರನ್ನೂ ನೆಲಕ್ಕೆಳೆಯಿತು—ಮಕ್ಕಳು ಘೊಳ್ಳನೆ ನಕ್ಕಾಗ—ಅವರ ಅರಿವಿರವೇ ಇನ್ಸ್‌ಪೆಕ್ಟರಿಗೆ ಹುಳಿತುಕೊಳ್ಳಲು 'ಕುರ್ಚಿಯಿಲ್ಲವಲ್ಲಾ ಎಂದು ರಸ್ತೆಗೆ ಬಂದರು—ಇನ್ಸ್‌ಪೆಕ್ಟರ ಸುಳಿವೇ—(ಗಾಳಿಯೆ) ಇದ್ದಿಲ್ಲ ಆ ಶಾಲೆಗೆ.(ನಿದ್ರಾಲಯಕ್ಕೆ) ನಮ್ಮ ಶಾಲೆಗೆ ಇನ್ಸ್‌ಪೆಕ್ಟರು ಬಂದಿಲ್ಲವೆಂದು ಖಚಿತವಾದಾಗ ಕೋಪವು ಪ್ರಕೋಪಕ್ಕೇರಿ ಮಕ್ಕಳಿಗೆಲ್ಲಾ ಏಟುಗಳ ಸುರಿಮಳೆಬಿದ್ದವು. ಹೀಗಾದ ಕೆಲವು ದಿನಗಳಲ್ಲಿ ಆ ಮಾಸ್ತರರಿಗೆ ಬೇರೆಲ್ಲೋ (ನಿದ್ರಾಲಯಕ್ಕೆ) ವರ್ಗವಾಯಿತಂತೆ.

ಎಬ್ಬಿಸುವುದೂ ಒಂದು 'ಕಲೆ'ಯೆಂದು ನಾವೇಕೆ ತಿಳಿಯಬಾರದು? ಅದು 'ಕಲೆಯ ಕೊಲೆ'ಯಾಗಲಾರದಲ್ಲ? ಇಷ್ಟಿರುವಾಗ ಇದನ್ನು ಜಾಣ್ಮೆಯ (ಶ್ರೇಷ್ಠ) ಕಲೆಯೆಂದು ನಾವೇಕೆ ಪರಿಗಣಿಸಬಾರದು? ಇಲ್ಲಿ—ಕಲಾಕಾಲ—ಸಾತ್ರಾ ಪಾತ್ರ ಮೆರೆತು ಮುನ್ನೆಚ್ಚರಿಕೆಯನ್ನು ನೀವು ವಹಿಸಿ ಈ ಕಲೆಗೆ ಪ್ರೋತ್ಸಾಹಿಸುವಿರೆಂದು ತಿಳಿಯುತ್ತಿರುವೆ.

—ಎಚ್. ಆನಂದ ರಾವ್, ಶಂಸಾ.

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್, ಬ್ಯಾಂಕಿನ ಯಾವದೇ ಶಾಖೆಯಲ್ಲಿ ನವಯುಗದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

NAVAYUGA **UDIPI, THURSDAY** **LICENSE NO. 31**
REGD. NO. M. 3619 **16–6–1960** Licensed to Post without Prepayment

ಒಂದು ಕಲ್ಪನೆ

ಒಂದು ಶತಮಾನದ ಅನಂತರ

ವಿಜ್ಞಾನದ ಭರದಿಂದ ಪ್ರಗತಿ ಪಡೆದಂತೆ ಅದು ಸಮಾಜವನ್ನೆಲ್ಲಿಗೊಯ್ಯ ಬಹುದು?—ಮನೋರಂಜಕವೂ ರೋಚಕವೂ ಆದ ಈ ಮಹಾಪ್ರಶ್ನೆಗೆ ಕುತೂಹಲಭರಿತ ಸಂಭಾವ್ಯ ಉತ್ತರಗಳು ಇಲ್ಲಿವೆ.

ಕೇವಲ ಒಂದೇ ಒಂದು ಶತಮಾನಕ್ಕೆ ಮೊದಲು, ಒಬ್ಬನು ತನ್ನ ಕೋಣೆಯೊಳಗೆ ಕೂತುಕೊಂಡು ದೇಶ-ವಿದೇಶಗಳ ಸಂಗೀತ-ಸಂವಾದಗಳನ್ನು ಕೇಳಬಲ್ಲೆನು, ಚಲ-ಅಚಲ ದೃಶ್ಯಗಳನ್ನು ಕಾಣಬಲ್ಲೆನು, ಪಕ್ಷಿಗಳಂತೆ ಹಾರಿ ಪ್ರಪಂಚ ಪ್ರದಕ್ಷಿಣೆ ಬರುವೆನು ಎಂಬುದರ ಸ್ವಪ್ನವನ್ನೂ ಕಾಣಲಾರದಾಗಿದ್ದನು, ಮಾನವನಿಂದ ನಿರ್ಮಿಸಲ್ಪಟ್ಟ ಒಂದು ಗ್ರಹ ಅಂತರಿಕ್ಷ ಪರಿಭ್ರಮಣೆ ಗೆಯ್ವುದು, ಚಂದ್ರನ ಅದೃಶ್ಯ ಭಾಗದ ಚಿತ್ರವನ್ನೂ ತೆಗೆಯುವುದು ಸಂಭವನೀಯವೆಂದಾತನು ಊಹಿಸಿಯೂ ಇರಲಾರನು. ಆದರೆ, ಇದೇ ಮಾದರಿಯ ಅನೇಕಾನೇಕ ಕಲ್ಪನಾತೀತ ಸಾಧನೆಗಳನ್ನು ನಾವಿಂದು ಉಪಭೋಗಿಸುತ್ತಿದ್ದೇವೆಯಲ್ಲವೆ?

ಈ ಸಂಗತಿಗಳನ್ನು ನಾವು ಗಮನಿಸುವಾಗ, ಒಂದು ಮನೋರಂಜಕ ಪ್ರಶ್ನೆಯು ನಮ್ಮ ಮುಂದೆ ಬಂದು ತೋರುತ್ತದೆ. ಇಂದಿನಿಂದ ಒಂದು ಅಥವಾ ಅರ್ಧ ಶತಮಾನಾನಂತರದ ನಮ್ಮ ಪೀಳಿಗೆಯವರು ಎಂತಹ ಸ್ಥಿತಿಯಲ್ಲಿರಬಹುದು? ಅವರು ಲೇಖನಗಳನ್ನು ಓದುವರೆ? ಪತ್ರಿಕೆಗಳಲ್ಲಿ ಮುದ್ರಿತ ಚಿತ್ರಗಳನ್ನೀಕ್ಷಿಸುವರೆ? ಎಂದು ಕೇಳಬಹುದು. ಇಲ್ಲ; ಖಂಡಿತಕ್ಕೂ ಅವರ ಕಾಲದಲ್ಲಿ ಹೀಗಿರಲಾರದು. ಸಂಗೀತವನ್ನಾಲಿಸಲು ಯಾವುದೇ ಸಂಗೀತ ಕಛೇರಿಗೆ ತೆರಳದೆ ಗ್ರಾಮೊಫೋನ್ ರೆಕಾರ್ಡಿನಿಂದ ಅದನ್ನು ಇಂದು ಆಲಿಸಬಲ್ಲವನು ಸಿಗರೇಟಿನ ಪೆಟ್ಟಿಗೆಯಂತಹ ಒಂದು ಸಣ್ಣ ಕರಡಿಗೆಯಲ್ಲಿ ಒಂದು ದೊಡ್ಡ ಪುಸ್ತಕಾಲಯ—ಇಲ್ಲವಾದರೆ, ಕಡಿಮೆ ಪಕ್ಷಕ್ಕೆ ಒಂದೆರಡು ತಿಂಗಳುಗಳ ವರೆಗಿನ ಓದು ಸಾಮಗ್ರಿಗಳನ್ನು ಕಲೆ ಹಾಕಬಲ್ಲನು.

ಇದೇ ಮಾದರಿಯ ಕೆಲವೊಂದು ಕುತೂಹಲಭರಿತ ಸಂಗತಿಗಳನ್ನು ಕಲ್ಪಿಸಿಕೊಳ್ಳಿರಿ. ತನ್ನ ಪತಿಯಿಂದ ಬಹುದೂರವಿರುವ ಒಬ್ಬಾಕೆ ಮೊಣಕಾಲೂರಿ ನಡೆಯುತ್ತಿರುವ ತನ್ನ ಮಗುವಿನ ಚಟುವಟಿಕೆಗಳ ಕುರಿತಾಗಿ ಈಗಿನಂತೆ ಪತ್ರ ಮೂಲಕ ಅವನಿಗೆ ವರ್ತಮಾನ ಕಳಿಸುವ ಅಗತ್ಯವಿರಲಾರದು. ಒಂದು ಕೆಮೆರಾದ ಗುಬ್ಬಿಯನ್ನು ಒತ್ತಿಬಿಟ್ಟು, ಆಡುವ ಬಾಲಕನ ಚಿತ್ರವನ್ನೂ ಜತೆಗೆ ಟೇಪ್ ರೆಕಾರ್ಡಿಂಗ್‌ನಂತೆ ಅವರ ವರ್ಣನೆಯ ಪದಜಾಲವನ್ನೂ ಕೇವಲ ಒಂದೇ ರೂಪಾಯಿಯೊಳಗೆ ಛಾಯಾ ಫಲಕದಲ್ಲಿ ರೂಪಿಸಿಕೊಳ್ಳುವಳು. ಇನ್ನು, ಈ ಫಲಕವನ್ನ ರವಾನಿಸುವ ಸಲುವಾಗಿ ಆಕೆ ಅಂಚೆ ಮನೆಗೂ ನಡೆಯಬೇಕಾಗಿಲ್ಲ. ಆಗ, ಪ್ರತಿ ಮನೆಯಲ್ಲೂ ದೇಶದಿಂದ ದೇಶಕ್ಕೆ, ನಗರದಿಂದ ನಗರಕ್ಕೆ, ಮನೆಯಿಂದ ಮನೆಗೆ ಈ ಪತ್ರಗಳನ್ನು ಮುಟ್ಟಿಸುವ ವಿಚಿತ್ರ ಉಪಕರಣಗಳಿರುತ್ತವೆ. ಅವು ಹೋಗಿ ಮುಟ್ಟಲು ಸಮಯಾವಕಾಶವೂ ಬೇಡ. ಪ್ರಕ್ಷೇಪಣ ಅಥವಾ ಆಕರ್ಷಣದ ಉಪಾಯಗಳಿಂದ ಇಲ್ಲಿಂದ ರವಾನಿಸಿದೊಡನೆಯೇ ಅಲ್ಲಿ ತಲಪುವುದು. ವಿದೇಶಗಳಲ್ಲಿ ಕೆಲವು ದೊಡ್ಡ ದೊಡ್ಡ ನಗರಗಳ ಅಂಗಡಿ ಮತ್ತು ಹೋಟೇಲುಗಳಲ್ಲಿ ಇಂತಹ ವ್ಯವಸ್ಥೆಯಿಂದಿದೆ. ಗಾಳಿಯ ಸೆಳೆತದಿಂದ ಸಣ್ಣ ದೊಡ್ಡ ಪಾರ್ಸೆಲುಗಳನ್ನು ಇದರಿಂದ ಮುಟ್ಟಿಸಲಾಗುತ್ತದೆ.

ಈ ಛಾಯಾ ಫಲಕದಲ್ಲಿ ವಿಳಾಸ ಬರೆಯುವ ಸ್ಥಾನದಲ್ಲಿ ಒಂದು ವಿಶೇಷ ಪ್ರಕಾರದ ಸಂಕೇತ ಗುರುತಿರುವುದು. ಇದನ್ನು ಓದಿಬಿಟ್ಟು, ಸರಿಯಾದ ಸ್ಥಾನಕ್ಕೆ ಸಾವಿರದಲ್ಲಿ ಒಂದು ಭಾಗವಷ್ಟು ಸೆಕುಂಡಿನಷ್ಟೇ ಹೊತ್ತಿನಲ್ಲೇ ಮುಟ್ಟಿಸಲು ಯಾಂತ್ರಿಕ ಮಸ್ತಿಷ್ಕವಿರುವುದು. ಛಾಯಾ ಫಲಕದಲ್ಲಿ ಬರೆದ ವಿವರಣೆಯನ್ನು ಓದಿ ಹೇಳುವ ಮತ್ತು ಅದರಲ್ಲಿ ಚಿತ್ರಿತವಾದ ಚಿತ್ರವನ್ನು ಪರದೆಯಲ್ಲಿ ಸರಿದಾಡುವಂತೆ ತೋರಿಸುವ ಕೆಲಸವನ್ನು ಗ್ರಾಮೊಫೋನಿನಂತಹ ಒಂದು ಚಿಕ್ಕ ಯಂತ್ರವು ಮಾಡುವುದು.

ದಾರಿಯಲ್ಲಿ ನೀವು ನಡೆಯುತ್ತಿರುವಂತೆಯೇ ನಿಮ್ಮ ಕಿಸೆಯ ಫೋನಿನ ಮೂಲಕ ಪ್ರಪಂಚದ ಯಾವುದೇ ಮೂಲೆಯ ಯಾವನೇ ಒಬ್ಬನೊಡನೆ ಸಂಭಾಷಣೆ ಮಾಡಬಲ್ಲಿರಿ. ಆಕಾಶ ವಿಮಾನದಲ್ಲಿ ಪಯಣಿಸುವ ಅಮೆರಿಕೆಯ ರಾಷ್ಟ್ರಾಧ್ಯಕ್ಷರು ರಾಜಧಾನಿಯ ಮಂತ್ರಿಗಳೊಡನೆ ಆಡಲು ಮಾತ್ರವಿರುವ ಇಂತಹ ಸದವಕಾಶ ಆಗ ಎಲ್ಲರಿಗೂ ದೊರೆಯುವುದು.

ಒಂದು ಶತಮಾನಾನಂತರ, ಪುಸ್ತಕಾಲಯವೆಂಬುದು ದೊಡ್ಡ ದೊಡ್ಡ ಕಟ್ಟಡಗಳಲ್ಲಿರುವುದಿಲ್ಲ. ಬೆಂಕಿಪೆಟ್ಟಿಗೆಯಂತಹ ಎಳೆಯ ಡಬ್ಬಿಯಲ್ಲಿ ಸಾವಿರಾರು ಪುಸ್ತಕಗಳನ್ನಿಡಬಹುದು. ಪುಸ್ತಕದ ಲಕ್ಷದಲ್ಲೊಂದು ಭಾಗಕ್ಕಿಂತಲೂ ಸೂಕ್ಷ್ಮವಾದ ಫಿಲ್ಮ್‌ಗಳಿದ್ದು, ಅವನ್ನು ಓದಲು, ಟೆಲಿಫೋನಿನಂತೆ ಫಿಲ್ಮ್ ಪ್ರೊಜೆಕ್ಟರಿನ ಮುಖಬಿಲ್ಲೆಯನ್ನು ತಿರುಗಿಸಿದರೆ ಬೇಕಾದ ಪುಸ್ತಕದ ಇಚ್ಛಿತ ಪುಟವು ವರ್ಣರಂಜಿತವಾಗಿ ನಿಮ್ಮ ಕಣ್ಣೆದುರು ಬಂದು ನಿಲ್ಲುವುದು. ನಿಮಗೆ ಪುಸ್ತಕ ಓದಬಾರದು; ವಿಷಯವನ್ನು ಕೇಳಿ ತಿಳಿದುಕೊಳ್ಳಬೇಕೆಂದಿದ್ದರೆ, ಅದಕ್ಕೆ ಬೇರೊಬ್ಬನ ಆಶ್ರಯವನ್ನು ಕೋರಬೇಕಾಗಿಲ್ಲ; ಆ ಪೆಟ್ಟಿಗೆಯ ಇನ್ನೊಂದು ಗುಬ್ಬಿಯನ್ನು ಒತ್ತಿ ಬಿಟ್ಟರೆ ಸರಿ, ಪುಟ ತನಗೆ ತಾನಾಗಿಯೇ ಓದ ತೊಡಗುವುದು.

ಆ ಸಮಯದಲ್ಲಿ ದೊಡ್ಡ ದೊಡ್ಡ ವಿದ್ಯುದುತ್ಪಾದಕ ಯಂತ್ರಗಳೇ ಇರಲಾರವು. ಇಂದಿನ ಮೋಟರ್ ಬ್ಯಾಟರಿಯಂತಹ ಸಣ್ಣ ಸಣ್ಣ ಅಣುವಿದ್ಯುತ್ ಕೋಶಗಳು ಬಳಕೆಯಲ್ಲಿ ಬರುವುವು. ಕೇವಲ ಒಂದೇ ಒಂದು ಕೋಶವು ದೊಡ್ಡ ನಗರಕ್ಕೂ ಕಾರಖಾನೆಗೂ ಬೇಕಾದ ಬೆಳಕನ್ನೂ ಶಕ್ತಿಯನ್ನೂ ಒದಗಿಸಿಕೊಡುವುದು. ಈ ವಿದ್ಯುತ್ತಿನ ವಿತರಣೆಗಾಗಿ ಇಂದಿನಂತೆ ತಂತಿ ಸರಿಗೆಗಳೇ ಬೇಡ; ಬದಲು ರೇಡಿಯೋ ಸಂಗೀತವು ಪ್ರಸಾರವಾಗುವಂತೆ ವಾಯುವಿನಲ್ಲಿಯೇ ಇದು ಸಂಚರಿಸಿ ಬಿಡುವುದು.

ಕ್ಷಿಪಣಿಗಳು ಮತ್ತು ಅಂತರಿಕ್ಷ ಪ್ರವಾಸ ಮಾಡುವ ರಾಕೇಟುಗಳು ಅತಿ ಸೂಕ್ಷ್ಮ ರೂಪವನ್ನು ಪಡೆದು ಅತ್ಯಂತ ವೇಗದಲ್ಲಿ ಪಯಣಿಸುವುವು. ಅವುಗಳಿದುರು ಸಾವಿರ-ಎರಡು ಸಾವಿರ ಮೈಲುಗಳಷ್ಟು ತಾಸಿಗೆ ಓಡುವ ವಾಯು ವಿಮಾನಗಳು ಎತ್ತಿನ ಗಾಡಿಗಳಂತೆ ಕಂಡು ಬರುತ್ತವೆ.

ಆಸುಪಾಸಿನ ಹೆಚ್ಚು ದೂರವಲ್ಲದ ಪ್ರವಾಸಕ್ಕಾಗಿ ಮೋಟಾರು ಗಾಡಿಗಳೇ ಬಳಕೆಯಲ್ಲಿರುವುವು. ಆದರೆ, ಅವುಗಳ ರಚನೆ ಮಾತ್ರ ಇಂದಿನಂತಲ್ಲ. ಮಾರ್ಗದಿಂದ ತುಸು ಎತ್ತರದಲ್ಲಿ ಗಾಳಿಯಲ್ಲಿ ಓಡುವ ಮೋಟಾರುಗಳು ಈಗಾಗಲೇ ತಯಾರಾಗಿವೆ; ಆದರೆ, ಆಕಾಲಕ್ಕಾಗುವಾಗ, ರಸ್ತೆಗಳೂ ಬೇಡ, ಪೆಟ್ರೋಲ್ ಪಂಪುಗಳೂ ಅನಾವಶ್ಯಕ ಮತ್ತು ನದಿಗಳಿಗೆ ಸಂಕಗಳನ್ನು ಕಟ್ಟುವ ಅವಶ್ಯವೂ ಇರುವುದಿಲ್ಲ. ಅಣುಶಕ್ತಿಯಿಂದ, ನೆಲದಿಂದ ನಾಲ್ಕಾರು ಅಡಿ ಎತ್ತರದ ಗಾಳಿಯಲ್ಲಿ ತೇಲಾಡುತ್ತ ಇವು ಸಂಚರಿಸುವುವು. ನದಿನದಿಗಳು ಇವನ್ನು ತಡೆಯಲಾರವು.

ಇರುವ ಮನೆ, ಉಡುವ ಬಟ್ಟೆ, ತಿನ್ನುವ ತಿಂಡಿಗಳಲ್ಲಿ ಆಗುವ ಪರಿವರ್ತನೆ ಇನ್ನೂ ವಿಚಿತ್ರವಾದುದು. ಪೇಟೆಗಳು ನಿರ್ಮಾಣವಾಗುವುದಿಲ್ಲ. ಕಟ್ಟುವ ಮನೆಗಳ ಅರ್ಧ ಭೂ ಭಾಗದಲ್ಲಿ, ಉಳಿದರ್ಧ ಆಕಾಶದಲ್ಲಿರುವುವು. ಮಾರ್ಗಗಳ ಮತ್ತು, ದೂರವೆಂಬಿವು ದೂರವಾಗುತ್ತವೆ. ಒಂದೇ ಕಟ್ಟಡದಲ್ಲಿ ಮನೆ, ಅಂಗಡಿ, ಕಾರಖಾನೆ, ಉದ್ಯಾನ, ಶಾಲೆ, ಗರಡಿ ಶಾಲೆ ಮೊದಲಾದುವೆಲ್ಲ ಇರುತ್ತವೆ. ಬಟ್ಟೆಗಳಿಗಾಗಿ ನೂಲುವ, ನೇಯುವ, ಹೊಲಿಯುವ ಕಷ್ಟಗಳೆಲ್ಲಾ ಮಾಯವಾಗಿ, ಅಲ್ಪ ಪ್ರಯಾಸದಿಂದಲೇ ಪ್ಲಾಸ್ಟಿಕ್ ಚೀಲದಂತಹ ಕೃತ್ರಿಮ ಪದಾರ್ಥ ಶರೀರವನ್ನು ತಾನಾಗಿಯೇ ಮುಚ್ಚಿಬಿಡುವುದು. ಯಂತ್ರಗಳು ಅಡಿಗೆ ಮಾಡುವುದನ್ನು ನಾವು ಈಗಾಗಲೇ ಕಂಡಿದ್ದೇವೆ. ಆಗ, ಒಂದು ವರ್ಷಕ್ಕೆ ಬೇಕಾದಷ್ಟು ಭೋಜನವನ್ನು ಒಂದೇ ಬಾರಿ ಕೊಂಡುಕೊಂಡು ಕಪಾಟಿನಲ್ಲಿ ಓರಣವಾಗಿರಿಸಲಾಗುವುದು. ಯಾವ ಆಹಾರಬೇಕು, ಅದಕ್ಕೆ ಸಂಬಂಧಿಸಿದ ಗುಬ್ಬಿ ಒತ್ತಿ ಬಿಟ್ಟರೆ ಸರಿ, ಅದು ಅಣುವಿದ್ಯುತ್ ಒಲೆಯಲ್ಲಿ ಬಿಸಿಯಾಗಿ ತನಗೆ ತಾನಾಗಿಯೇ ಬಟ್ಟಲಿಗೆ ಬಂದು ಬೀಳುವುದು. ಪ್ರಾಚೀನ ಕಾಲದಲ್ಲಿ ಹಾಲು ಜೇನುಗಳು ನದಿಯಾಗಿ ಹರಿಯುತ್ತಿದ್ದುವೆನ್ನುತ್ತಾರೆ; ಆದರೆ ಭವಿಷ್ಯತ್ ಕಾಲದಲ್ಲಿ ಮನೆ ಮನೆಯಲ್ಲಿ ವಿವಿಧ ಪೇಯ ರಸಗಳ ನಳ್ಳಿಗಳೇ ಇರುವುವು.

ಸಾಂಸಾರಿಕ ಸಂಬಂಧದ ದೃಷ್ಟಿಯಲ್ಲಿ ಪತಿ ಪತ್ನಿಯರಿರುತ್ತಾರೆ; ಅವರಲ್ಲಿ ಪ್ರೇಮ ಮತ್ತು ಆಕರ್ಷಣೆಗಳೂ ಇರುವುವೆನ್ನಿ. ಆದರೆ, ದಾಂಪತ್ಯದ ಸ್ವಾಭಾವಿಕ ಫಲ—ಸಂತತಿಯ ಸ್ವರೂಪ ಮಾತ್ರ ಬೇರೆಯೇ ಆಗುವುದು. ಜನ ಸಂಖ್ಯಾಧಿಕತೆಯನ್ನು ತಡೆಯಲು ಕೃತ್ರಿಮ ವಿಧಾನಗಳ ಮೂರೆ ಹೋಗುವಂತೆಯೇ ಕಡಿಮೆ ಜನಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಕೃತ್ರಿಮ ಉಪಾಯಗಳನ್ನು ಕೈಗೊಳ್ಳಲಾಗುವುದು. ಇದನ್ನು ಸಾಧಿಸುವ ಸಲುವಾಗಿ, ಸುಯೋಗ್ಯ ಸ್ತ್ರೀಯರ ಒಂದು ಕಾರಖಾನೆಯೇ ನಿರ್ಮಾಣವಾಗುವುದು. ಅಲ್ಲಿ ಪರೀಕ್ಷೆಯಲ್ಲಿ ಸರ್ವೋತ್ತಮವೆಂದು ಕಂಡುಬಂದ ವೀರ್ಯದಿಂದ ಕೃತಕ ಗರ್ಭಧಾರಣೆಯನ್ನು ಮಾಡಿಸಿ, ಆವಶ್ಯಕತೆಗನುಸಾರವಾಗಿ ಗಂಡು—ಹೆಣ್ಣು ಮಕ್ಕಳನ್ನು ಹುಟ್ಟಿಸುವ ಸಂಭವವಿದೆ. ಆ ಕಾಲದ ನವೀನ ಸಮಾಜದಲ್ಲಿ ಸಾಂಸಾರಿಕ ಸಂಬಂಧವೂ ಹೊಸ ವಿಧಾನದಲ್ಲಾಗುವುದು.

ಈ ರೀತಿಯಲ್ಲಿ ವಿಜ್ಞಾನದ ಚರಮ ವಿಕಾಸದಿಂದಾಗಿ, ಮನುಷ್ಯನ ಎಲ್ಲ ಆವಶ್ಯಕತೆಗಳೂ ಪೂರ್ಣಗೊಳ್ಳುವುವು. ಅನ್ನ—ವಸ್ತ್ರ, ಆಮೋದ—ಪ್ರಮೋದ ಮೊದಲಾದುವುಗಳಲ್ಲಿ ಯಾವ ಕಡಿಮೆಯೂ ಉಳಿಯಲಾರದು. ವಿಜ್ಞಾನವು ಸಂಗ್ರಹಣ ಭಾವನೆಯನ್ನು ದೂರ ಮಾಡುವುದರಲ್ಲಿ ಸಫಲವಾಗದೆ ಹೋದರೂ ಅದರ ಆವಶ್ಯಕತೆಯನ್ನು ಮಾತ್ರ ಸಮಾಪ್ತಗೊಳಿಸುತ್ತದೆ

ಕೊನೆಯಲ್ಲಿ ಇನ್ನೊಂದು ಪ್ರಶ್ನೆ ಏಳುತ್ತದೆ: ಜೀವನದ ಸಮಸ್ತ ಆವಶ್ಯಕತೆಗಳ ಪೂರ್ತಿಯಿಂದಾಗಿ ಎಲ್ಲೆಲ್ಲಿಯೂ ಸುಖ-ಶಾಂತಿಗಳೇ ತಾಂಡವವಾಡುವುವೆ? ಎಂಬುದು. ವಿಜ್ಞಾನದ ಸಾಧನೆಗಳ ಸುಖಫಲವೆಲ್ಲವನ್ನೂ ಧೂಳೀಧೂಸರಿತ ಮಾಡಬಲ್ಲ ಉತ್ತರಿಸಲಾಗದ ಪ್ರಶ್ನೆಯೊಂದಿದ್ದರೆ, ಇದೊಂದೇ. (ಸಂಗ್ರಹ)

ವಿದ್ಯಾರ್ಥಿಗಳಿಗೆ

ವಿದ್ಯಾರ್ಥಿಗಳಿಗೆ
ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ
ಉಳಿತಾಯದ ಸಾಧನವಿದೆ
ಅಲ್ಲದೆ
ಧರ್ಮಾರ್ಥವಾಗಿ
ಹಣ ಪಾವತಿಮಾಡುವ
ಅವಕಾಶವನ್ನೂ
ಕಲ್ಪಿಸಿ ಕೊಡಲಾಗಿದೆ

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬಿಡಿ: 13 ನ. ಪೈಸೆ.

ವರುಷ ೩೯. ವಾರ ೪೨. 23-6-1960 Vol. 39. No. 42.

ಪ್ರಚಲಿತ ಪ್ರಸಂಗ

ಶ್ರೀ ಗಿರಿಯವರ ಸ್ಥಾನಾಂತರೀಕರಣ

ಉತ್ತರ ಪ್ರದೇಶದ ರಾಜ್ಯಪಾಲ ಶ್ರೀ ಗಿರಿಯವರು ಅಲ್ಲಿಂದ ಬೇರೆಡೆಗೆ ತೆರಳಲು ಇದ್ದ ಮುಖ್ಯ ಕಾರಣಗಳ ವಿವೇಚನೆಯನ್ನಿಲ್ಲಿ ಮಾಡಲಾಗಿದೆ.

ಉತ್ತರ ಪ್ರದೇಶದ ರಾಜ್ಯಪಾಲರಾದ ಶ್ರೀ ವಿ. ವಿ. ಗಿರಿ ಮತ್ತು ಕೇರಳದ ರಾಜ್ಯಪಾಲ ಶ್ರೀ ಬಿ. ರಾಮಕೃಷ್ಣ ರಾಯರು ತಂತಮ್ಮ ಸ್ಥಾನಗಳನ್ನು ಬದಲಾಯಿಸಿಕೊಳ್ಳುವ ಅಭಿಲಾಷೆಯಿಂದ ಕೂಡಿದ್ದು, ಅದನ್ನು ಅನುಲಕ್ಷಿಸಿ, ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಒಂದು ಆಜ್ಞೆಯನ್ನು ಹೊರಡಿಸಿ, ಇದಕ್ಕೆ ಅನುಮತಿಯ ಮುದ್ರೆಯನ್ನಿತ್ತಿದ್ದಾರೆ. ಆದರೆ, ಶ್ರೀ ವಿ. ವಿ. ಗಿರಿಯವರು ತಮ್ಮ ಐದು ವರ್ಷದ ನಡುವೆಯೇ ಈ ಸ್ಥಾನಾಂತರವನ್ನು ಹೊಂದಲೇ ಬಯಸಿದ್ದರಿಂದ ಈ ವರ್ಗಾವಣೆಯಾಯಿತೆಂದು ತಿಳಿಯುತ್ತದೆ. ಶ್ರೀ ಗಿರಿಯವರು ಉತ್ತರ ಪ್ರದೇಶದ ರಾಜ್ಯಪಾಲ ಪದವಿಯನ್ನು ಮಧ್ಯದಲ್ಲಿಯೇ ಬಿಟ್ಟು ಬಿಡಲಪೇಕ್ಷಿಸಲು ಕಾರಣವೇನು ಎಂಬತ್ತ ಈಗ ತುಸು ಬೆಳಕು ಹರಿದಿದೆ. ರಾಜ್ಯದ ಮುಖ್ಯ ಮಂತ್ರಿ ಶ್ರೀ ಸಂಪೂರ್ಣಾನಂದ ಮತ್ತು ರಾಜ್ಯಪಾಲ ಶ್ರೀ ಗಿರಿಯವರ ನಡುವೆ ಬೃಹತ್ ರೂಪದ ಭಿನ್ನಾಭಿಪ್ರಾಯವು ಉದ್ಭವಿಸಿ, ಅದು ತೀವ್ರಗೊಂಡುದರ ಪರಿಣಾಮವೇ ಇದಕ್ಕೆ ಮೂಲ ಹೇತುವೆಂಬುದಾಗಿ ತಿಳಿದಿದೆ.

ಜನಪ್ರಿಯ ಸಮಾಜಸೇವೆ

ಶ್ರೀ ಗಿರಿಯವರು ಉತ್ತರ ಪ್ರದೇಶವನ್ನು ಅಗಲಿ ಹೋಗುವಾಗ, ಅಲ್ಲಿನ ಪ್ರಜೆಗಳಲ್ಲಿ ತುಸು ನಿರಾಶೆಯು ಕಾಣಿಸಿಕೊಂಡಿದೆ. ಇವರು ಹೋಟು ಹೋದ ನಂತರವೂ ಇವರ ಲೋಕಪ್ರಿಯತೆಯು ಎಂದೂ ಕಡಿಮೆಯಾಗಲಾರದು. ೧೯೫೬ರ ಜೂನಿನಿಂದ ಅಲ್ಲಿನ ರಾಜ್ಯಪಾಲರಾಗಿ ನಿಯುಕ್ತರಾದರೂ ಬಡವರ ಮತ್ತು ದಲಿತ ವರ್ಗದವರ ಉದ್ಧಾರಕ್ಕಾಗಿ ಆ ಜೀವನ ಹೋರಾಟ ನಡೆಸಿದ ಶ್ರೀ ಗಿರಿಯವರು ಆದಿಯಿಂದಲೂ ಉತ್ತರ ಪ್ರದೇಶದಲ್ಲಿ ಜನಪ್ರಿಯರಾಗಿದ್ದಾರೆ. ರಾಜ್ಯಪಾಲ ಪದವಿಗೇರಿದ ಮೂರು ವರ್ಷಗಳಲ್ಲಿ ಆ ರಾಜ್ಯದ ಉನ್ನತಾಧಿಕಾರಿಯ ಪದದಲ್ಲಿ ರಾರಾಜಿಸುತ್ತಿದ್ದರೂ ಅವರ ಸೇವಾಜೀವನದಲ್ಲಿ ಯಾವುದೇ ಮಹತ್ವದ ಪರಿವರ್ತನೆಯಾಗಿಲ್ಲ.

ಒಡಕಿಗೆ ಮೂಲಕಾರಣ

ರಾಜ್ಯಪಾಲ ಪದವಿಗೆ ನಿಯುಕ್ತರಾದ ಶ್ರೀ ಗಿರಿಯವರು ಪ್ರತಿಜ್ಞಾವಿಧಿ ಸ್ವೀಕರಿಸುವುದಕ್ಕೆ ಮೊದಲು ಮದ್ರಾಸಿನಲ್ಲಿ ಏರ್ಪಡಿಸಿದ್ದ ಒಂದು ಸತ್ಕಾರ ಕೂಟದಲ್ಲಿ ಮಾಡಿದ ಭಾಷಣದ ಮೇಲೆ ಆಗಲೇ ವಾದವಿವಾದವು ಹುಟ್ಟಿಕೊಂಡಿತ್ತು. ಈ ವಿವಾದವು ಅವರನ್ನು ನೆರಳಿನಂತೆಯೇ ಹಿಂಬಾಲಿಸಿ, ಉತ್ತರ ಪ್ರದೇಶವನ್ನೂ ಪ್ರವೇಶಿಸಿತು. "ನಾನು ಮಂತ್ರಿ ಮಂಡಳದ ಕೈಗೊಂಬೆಯಂತಿರದೆ, ಅವಶ್ಯಕತೆಯೊದಗಿದಾಗ, ಸರಕಾರಕ್ಕೆ ಯಾವುದೇ ಸಂಕೋಚವಿಲ್ಲದೆ ಸಲಹೆ ಸೂಚನೆಗಳನ್ನೀಯುತ್ತೇನೆ" ಎಂದವರು ಅಂದು ಅಂದ ಮಾತುಗಳೇ ಅಷ್ಟೊಂದು ಗಲಭೆ ನಡೆಸಿದ್ದವು. ಉತ್ತರ ಪ್ರದೇಶದ ಮುಖ್ಯ ಮಂತ್ರಿ ಡಾ| ಸಂಪೂರ್ಣಾನಂದರು ಶ್ರೀ ಗಿರಿಯವರು ಇರಿಸಿಕೊಳ್ಳುವ ನೆಂದ ಧೋರಣೆಗೆ ಆಪತ್ತು ತಂದೊಡ್ಡಿದರು. ಎಂತಲೇ ಅವರು ಉದ್ಗರಿಸಿದ್ದರು: "ನನಗೆ ಸಲಹೆಯೀಯುವುದು ರಾಜ್ಯಪಾಲರ ಕೆಲಸವಲ್ಲ; ನಾನು ಅವಶ್ಯ ಕಂಡರೆ, ಅವರ ಸಲಹೆ ಕೇಳಬಹುದು ಎಂದು ನನ್ನ ಅಭಿಪ್ರಾಯ." ಆದರೆ, ಶ್ರೀ ಗಿರಿಯವರು ತಮ್ಮ ವಚನವನ್ನು ಪಾಲಿಸಿದರು; ಉತ್ತರ ಪ್ರದೇಶದಲ್ಲಿ ಅವರು ನಿಷ್ಕ್ರಿಯ ಅಧಿಕಾರಿಯಾಗಿ ಉಳಿಯಲಿಲ್ಲ. ಮಂತ್ರಿಮಂಡಳಿಗೆ ಸಲಹೆಕೊಡುವುದಕ್ಕೆ ಹಿಂದೆ ಮುಂದೆ ನೋಡಲಿಲ್ಲ. ಎಲ್ಲ ಮುಖ್ಯಮಂತ್ರಿಗಳೂ, ಮುಖ್ಯವಾಗಿ ಡಾ| ಸಂಪೂರ್ಣಾನಂದರು, ರಾಜ್ಯಪಾಲರ ಪಥ ಪ್ರದರ್ಶನವನ್ನು ಮೆಚ್ಚಲಾರರು; ಹಾಗಿರುವಾಗ, ಉತ್ತರ ಪ್ರದೇಶ ರಾಜ್ಯ ಸರಕಾರವು ಹಲವು ಸಂದರ್ಭಗಳಲ್ಲಿ ರಾಜ್ಯಪಾಲರ ಸಲಹೆಗಳನ್ನು ತಿರಸ್ಕರಿಸಿದುದರಲ್ಲಿ ಹೆಚ್ಚಿನ ಆಶ್ಚರ್ಯವಿಲ್ಲ.

ಶ್ರೀ ರಾಜ್ಯಪಾಲ ಪ್ರಕರಣ

ಶ್ರೀ ಗಿರಿಯವರನ್ನು 'ರಾಜ್ಯಪಾಲ' ಅಥವಾ 'ಶ್ರೀ ರಾಜ್ಯಪಾಲ' ಎಂಬ ಪದಗಳಲ್ಲಿ ಯಾವುದರಿಂದ ಉಲ್ಲೇಖಿಸಬೇಕೆಂಬ ವಿಷಯದಲ್ಲಿಯೇ ಮೊತ್ತಮೊದಲು ಮತಭೇದವೆದ್ದಿತು. ಶ್ರೀ ಗಿರಿಯವರಿಗೆ ಮೊದಲು ಅಲ್ಲಿನ ರಾಜ್ಯಪಾಲರಾಗಿದ್ದ ಶ್ರೀ ಕೆ. ಎಂ. ಮುನಷಿಯವರು 'ಶ್ರೀ ರಾಜ್ಯಪಾಲ' ಎಂಬುದನ್ನೇ ಮೆಚ್ಚಿದ್ದುದರಿಂದ, ಅದೇ ಹೆಸರಿನಿಂದ ಕರೆಯಬೇಕೆಂದು ಮಂತ್ರಿಮಂಡಳಿ ಬಯಸಿದರೆ, ಶ್ರೀ ಗಿರಿಯವರು ಇದು ಸಾಮಂತಶಾಹಿಯ ಪ್ರದರ್ಶನದಂತಿರುತ್ತದೆ. ದೇಶದ ಎಲ್ಲೆಡೆಯಲ್ಲೂ 'ರಾಜ್ಯಪಾಲ'ರನ್ನು ಒಂದೇ ರೂಪದಿಂದ ಸಂಬೋಧಿಸಬೇಕು; ತನಗೆ 'ಶ್ರೀ ರಾಜ್ಯಪಾಲ' ಎಂಬುದು ಇಷ್ಟವಾಗಿರುವುದಿಲ್ಲ ಎಂದು ಹೇಳಿದರು. ಶ್ರೀ ಸಂಪೂರ್ಣಾನಂದರ ಮಂತ್ರಿಮಂಡಳಿಯು 'ಶ್ರೀ ರಾಜ್ಯಪಾಲ' ಪದವನ್ನೇ ಬಳಸಿಕೊಂಡಿತ್ತು; ಆದರೆ, ರಾಜಭವನದಿಂದ ಹೊರಡುವ ಕಾಗದಪತ್ರಗಳಲ್ಲಿ ಮಾತ್ರ 'ರಾಜ್ಯಪಾಲ' ಎಂದೇ ಅಂಕಿತವಾಗಿರುತಿತ್ತು.

ತೀವ್ರ ಅಸಮಾಧಾನ

೧೯೫೭ರಲ್ಲಿ ಶ್ರೀ ಗಿರಿಯವರು ತೋರಿಸಿದ ಒಂದು ವರ್ತನೆಯಿಂದಾಗಿ ರಾಜ್ಯ ಸಚಿವಾಲಯದಲ್ಲಿ ಗುಲ್ಲೆದ್ದಿತು. ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಕ್ಷಾಮವು ತಲೆದೋರಿದಾಗ, ಅವರು ದೇವರಿಯಾ ಜಿಲ್ಲೆಯ ಕುಶಿ ನಗರವನ್ನು ಸಂದರ್ಶಿಸಿದರು. ರಾಜ್ಯಪಾಲರ ಮೋಟಾರು ಕಾರು ಪ್ರತಿಯೊಂದು ಗುಡಿಸಲಿನೆದುರೂ ಬಂದು ನಿಂತಿತ್ತು. ಅಲ್ಲಿ ಹಸಿದ ಜನತೆ ರಾಜ್ಯಪಾಲರನ್ನು ಕಾಣಲು ಆತುರದಿಂದ ಗುಂಪು ಸೇರಿತ್ತು. ಅವರ ಕಾರ್ಯಕ್ರಮದಲ್ಲಿ ಈ ಸಂದರ್ಶನದ ಸುದ್ದಿಯೇ ಇದ್ದಿರಲಿಲ್ಲ; ಆದುದರಿಂದ, ಜಿಲ್ಲಾಧಿಕಾರಿಗಳಿಗೆ ಇದರ ಸುಳಿವೇ ದೊರೆತಿರಲಿಲ್ಲ. ಅಷ್ಟಿಂದ ಮರಳಿ ಗೋರಖಪುರದಲ್ಲವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದರಿಂದಾಗಿ, ಅಶಾಂತಿಯು ಮತ್ತೂ ಹೆಚ್ಚಿತು. ಗೋರಖಪುರದಲ್ಲಿ ತನ್ನನ್ನು ಬೆಟ್ಟಿಯಾಗಿದ್ದ ಒಂದು ಶಿಷ್ಟ ಮಂಡಳದೊಡನೆ, "ಪೂರ್ವ ಜಿಲ್ಲೆಗಳ ಆರ್ಥಿಕ ಸಮಸ್ಯೆಗಳ ಅಧ್ಯಯನಕ್ಕಾಗಿ ಒಂದು ಸರ್ವಪಕ್ಷೀಯ ಸಮಿತಿಯ ರಚನೆಯಾಗಬೇಕೆಂದು ಬಯಸುತ್ತೇನೆ" ಎಂದುತ್ತರಿಸಿದರು. ವಿಧಾನ ಸಭೆಯಲ್ಲಿ ವಿರೋಧೀದಳದವರು ಇಂತಹುದೇ ಬೇಡಿಕೆಯೊಂದನ್ನು ಮುಂಡಿಸಿದ್ದರು; ಸರಕಾರವು ಅದನ್ನು ಪ್ರತಿಭಟಿಸುತಿತ್ತು. ಆದುದರಿಂದ ರಾಜ್ಯಪಾಲರ ಸೂಚನೆ ಅದಕ್ಕೆ ಪಥ್ಯವಾಗಲಿಲ್ಲ. ೧೯೫೮ರ ಆರಂಭದಲ್ಲಿ ಅವರು ಶ್ರೀ ರಣಸಿಂಹರಿತ್ತ ರಾಜಿನಾಮೆಯನ್ನು ಮರಳಿ ಹಿಂತೆಗೆದುಕೊಳ್ಳುವಂತೆ ಪ್ರಯತ್ನಿಸಿ ಒಪ್ಪಿಸಿದರು. ೧೯೫೯ರಲ್ಲಿ ಅವರು ಡಾ| ಸಂಪೂರ್ಣಾನಂದ ಮತ್ತು ಸರಕಾರಗಳ ಗುಪ್ತ ರಹಸ್ಯಗಳನ್ನು ಸಂಪೂರ್ಣ ವಿಶ್ಲೇಷಿಸ ಬಯಸಿದರು. ಈ ಬಗ್ಗೆ ಅವರು ಮಾಡಿದ ಪ್ರಯತ್ನಗಳಿಗಾಗಿ ಅವರ ಮೇಲೆ ಕೆಲವರಿಗೆ ಅಸಮಾಧಾನ ಹುಟ್ಟಿಕೊಂಡಿತು.

ವಿದ್ಯಾಕ್ಷೇತ್ರದಲ್ಲಿ ಹಸ್ತಕ್ಷೇಪ

ಉತ್ತರ ಪ್ರದೇಶದ ಆರು ವಿಶ್ವವಿದ್ಯಾಲಯಗಳ ಕುಲಪತಿ ಮತ್ತು ಅಲಿಗಡ ಹಾಗೂ ಬೆನಾರಸ್ ವಿಶ್ವವಿದ್ಯಾಲಯಗಳ ಮುಖ್ಯ ವೀಕ್ಷಕರಾಗಿದ್ದು ಅವರು ವಿಶ್ವವಿದ್ಯಾಲಯಗಳ ಸ್ವಾಯತ್ತತೆಯು ಭಂಗಗೊಂಡಾಗ, ಉಳಿಸಲು ಹೆಣಗಾಡಿದರು. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವರ್ಚಸ್ಸು ಬೀರಲು ಪ್ರಯತ್ನಿಸುವ

(೧೩ನೇ ಪುಟ ನೋಡಿರಿ)



ಕೈಯಿಂದ ಟೈಪ್ ಮಾಡಲು ಅಶಕ್ತರಾದವರು ವಿದ್ಯುತ್ ಕೀ ಬೋರ್ಡನ್ನು ತಾಂತ್ರಿಕ ರೀತಿಯಿಂದ ಹೊಡೆಯಬಲ್ಲರು. ಅಮೆರಿಕೆಯಲ್ಲಿ ಈ ಮಾದರಿಯ ಟೈಪ್‌ರೈಟರ್‌ಗಳು ಪ್ರಚಲಿತವಾಗುತ್ತಿವೆ.

ನವಯುಗ

ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರ್ಷ ೩೯. ವಾರ ೪೨. 23-6-1960 Vol. 39. No. 42.

ಚಲಿತ ಪ್ರಸಂಗ

ಶ್ರೀ ಗಿರಿಯವರ ಸ್ಥಾನಾಂತರೀಕರಣ

ಉತ್ತರ ಪ್ರದೇಶದ ರಾಜ್ಯಪಾಲ ಶ್ರೀ ಗಿರಿಯವರು ಅಲ್ಲಿಂದ ಬೇರೆಡೆಗೆ ತೆರಳಲು ಇದ್ದ ಮುಖ್ಯ ಕಾರಣಗಳ ವಿವೇಚನೆಯನ್ನಿಲ್ಲಿ ಮಾಡಲಾಗಿದೆ.

ಉತ್ತರ ಪ್ರದೇಶದ ರಾಜ್ಯಪಾಲರಾದ ಶ್ರೀ ವಿ. ವಿ. ಗಿರಿ ಮತ್ತು ಕೇರಳದ ರಾಜ್ಯಪಾಲ ಶ್ರೀ ಕೆ. ರಾಮಕೃಷ್ಣ ರಾಯರು ತಂತಮ್ಮ ಸ್ಥಾನಗಳನ್ನು ಬದಲಾಯಿಸಿಕೊಳ್ಳುವ ಅಭಿಲಾಷೆಯಿಂದ ಕೂಡಿದ್ದು, ಅದನ್ನು ಅನುಲಕ್ಷಿಸಿ, ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಒಂದು ಆಜ್ಞೆಯನ್ನು ಹೊರಡಿಸಿ, ಇದಕ್ಕೆ ಅನುಮತಿಯ ಮುದ್ರೆಯನ್ನೊತ್ತಿದ್ದಾರೆ. ಆದರೆ, ಶ್ರೀ ವಿ. ವಿ. ಗಿರಿಯವರು ತಮ್ಮ ಐದು ವರ್ಷದ ನಡುವೆಯೇ ಈ ಸ್ಥಾನಾಂತರವನ್ನು ಕೊಡಲೇ ಬಯಸಿದ್ದರಿಂದ ಈ ವರ್ಗಾವರ್ಗಿಯಾಯಿತೆಂದು ತಿಳಿಯುತ್ತದೆ. ಶ್ರೀ ಗಿರಿಯವರು ಉತ್ತರ ಪ್ರದೇಶದ ರಾಜ್ಯಪಾಲ ಪದವಿಯನ್ನು ಮಧ್ಯದಲ್ಲಿಯೇ ಬಿಟ್ಟು ಬಿಡಲಪೇಕ್ಷಿಸಲು ಕಾರಣವೇನು ಎಂಬತ್ತು ಈಗ ತುಸು ಬೆಳಕು ಹರಿದಿದೆ. ರಾಜ್ಯದ ಮುಖ್ಯ ಮಂತ್ರಿ ಶ್ರೀ ಸಂಪೂರ್ಣಾನಂದ ಮತ್ತು ರಾಜ್ಯಪಾಲ ಶ್ರೀ ಗಿರಿಯವರ ನಡುವೆ ಬೃಹತ್ ರೂಪದ ಭಿನ್ನಾಭಿಪ್ರಾಯವು ಉದ್ಭವಿಸಿ, ಅದು ತೀವ್ರಗೊಂಡುದರ ಪರಿಣಾಮವೇ ಇದಕ್ಕೆ ಮೂಲ ಹೇತುವೆಂಬುದಾಗಿ ತಿಳಿದಿದೆ.

ಜನಪ್ರಿಯ ಸಮಾಜಸೇವೆ

ಶ್ರೀ ಗಿರಿಯವರು ಉತ್ತರ ಪ್ರದೇಶವನ್ನು ಅಗಲಿ ಹೋಗುವಾಗ, ಅಲ್ಲಿನ ಪ್ರಜೆಗಳಲ್ಲಿ ತುಸು ನಿರಾಶೆಯ ಕಾರ್ಮೋಡವು ಕವಿದಿದೆ. ಇವರು ಹೊರಟು ಹೋದ ನಂತರವೂ ಇವರ ಲೋಕಪ್ರಿಯತೆಯು ಎಂದಿಗೂ ಕಡಿಮೆಯಾಗಲಾರದು. ೧೯೫೬ರ ಜೂನಿನಿಂದ ಅಲ್ಲಿನ ರಾಜ್ಯಪಾಲರಾಗಿ ನಿಯುಕ್ತರಾದರೂ ಬಡವರ ಮತ್ತು ದಲಿತ ವರ್ಗದವರ ಉದ್ಧಾರಕ್ಕಾಗಿ ಆ ಜೀವ ಹೋರಾಟ ನಡೆಸಿದ ಶ್ರೀ ಗಿರಿಯವರು ಆದಿಯಿಂದಲೂ ಉತ್ತರ ಪ್ರದೇಶದಲ್ಲಿ ಜನಪ್ರಿಯರಾಗಿದ್ದಾರೆ. ರಾಜ್ಯಪಾಲ ಪದವಿಗೇರಿದ ಮೂರು ವರ್ಷಗಳಲ್ಲಿ ಆ ರಾಜ್ಯದ ಉನ್ನತಾಧಿಕಾರಿಯ ಪದವಿಯಲ್ಲಿ ರಾರಾಜಿಸುತ್ತಿದ್ದರೂ ಅವರ ಸೇವಾಜೀವನದಲ್ಲಿ ಯಾವುದೇ ಮಹತ್ವದ ಪರಿವರ್ತನೆಯಾಗಿಲ್ಲ.

ಒಡಕಿಗೆ ಮೂಲಕಾರಣ

ರಾಜ್ಯಪಾಲ ಪದವಿಗೆ ನಿಯುಕ್ತರಾದ ಶ್ರೀ ಗಿರಿಯವರು ಪ್ರತಿಜ್ಞಾವಿಧಿ ಸ್ವೀಕರಿಸುವುದಕ್ಕೆ ಮೊದಲು ಮದ್ರಾಸಿನಲ್ಲಿ ಏರ್ಪಡಿಸಿದ್ದ ಒಂದು ಸತ್ಕಾರ ಕೂಟದಲ್ಲಿ ಮಾಡಿದ ಭಾಷಣದ ವೇಳೆ ಆಗಲೇ ವಾದವಿವಾದವು ಹುಟ್ಟಿಕೊಂಡಿತ್ತು. ಈ ವಿವಾದವು ಅವರನ್ನು ನೆರಳಿನಂತೆಯೇ ಹಿಂಬಾಲಿಸಿ, ಉತ್ತರ ಪ್ರದೇಶವನ್ನೂ ಪ್ರವೇಶಿಸಿತು. "ನಾನು ಮಂತ್ರಿ ಮಂಡಳದ ಕೈಗೊಂಬೆಯಂತಿರದೆ, ಆವಶ್ಯಕತೆಯೊದಗಿದಾಗ, ಸರಕಾರಕ್ಕೆ ಯಾವುದೇ ಸಂಕೋಚವಿಲ್ಲದೆ ಸಲಹೆ ಸೂಚನೆಗಳನ್ನೀಯುತ್ತೇನೆ" ಎಂದವರು ಅಂದು ಆಂದ ಮಾತುಗಳೇ ಅಷ್ಟೊಂದು ಗಲಭೆ ನಡೆಸಿದ್ದುವು ಉತ್ತರ ಪ್ರದೇಶದ ಮುಖ್ಯ ಮಂತ್ರಿ ಡಾ| ಸಂಪೂರ್ಣಾನಂದರು ಶ್ರೀ ಗಿರಿಯವರು ಇರಿಸಿಕೊಳ್ಳುವೆನೆಂದ ಧೋರಣೆಗೆ ಆಪತ್ತು ತಂದೊಡ್ಡಿದರು. ಎಂತಲೇ ಅವರು ಉದ್ಗರಿಸಿದ್ದರು: "ನನಗೆ ಸಲಹೆಯೀಯುವುದು ರಾಜ್ಯಪಾಲರ ಕೆಲಸವಲ್ಲ; ನಾನು ಆವಶ್ಯ ಕಂಡರೆ, ಅವರ ಸಲಹೆ ಕೇಳಬಹುದು ಎಂದು ನನ್ನ ಅಭಿಪ್ರಾಯ." ಆದರೆ, ಶ್ರೀ ಗಿರಿಯವರು ತಮ್ಮ ವಚನವನ್ನು ಪಾಲಿಸಿದರು; ಉತ್ತರ ಪ್ರದೇಶದಲ್ಲಿ ಅವರು ನಿಷ್ಕ್ರಿಯ ಅಧಿಕಾರಿಯಾಗಿ ಉಳಿಯಲಿಲ್ಲ. ಮಂತ್ರಿಮಂಡಳಿಗೆ ಸಲಹೆಕೊಡುವುದಕ್ಕೆ ಹಿಂದೆ ಮುಂದೆ ನೋಡಲಿಲ್ಲ. ಎಲ್ಲ ಮುಖ್ಯಮಂತ್ರಿಗಳೂ, ಮುಖ್ಯವಾಗಿ ಡಾ| ಸಂಪೂರ್ಣಾನಂದರು, ರಾಜ್ಯಪಾಲರ ಪಥ ಪ್ರದರ್ಶನವನ್ನು ಮೆಚ್ಚಲಾರರು; ಹಾಗಿರುವಾಗ, ಉತ್ತರ ಪ್ರದೇಶ ರಾಜ್ಯ ಸರಕಾರವು ಹಲವು ಸಂದರ್ಭಗಳಲ್ಲಿ ರಾಜ್ಯಪಾಲರ ಸಲಹೆಗಳನ್ನು ತಿರಸ್ಕರಿಸಿದುದರಲ್ಲಿ ಹೆಚ್ಚಿನ ಆಶ್ಚರ್ಯವಿಲ್ಲ.

ಶ್ರೀ ರಾಜ್ಯಪಾಲ ಪ್ರಕರಣ

ಶ್ರೀ ಗಿರಿಯವರನ್ನು 'ರಾಜ್ಯಪಾಲ' ಅಥವಾ 'ಶ್ರೀ ರಾಜ್ಯಪಾಲ' ಎಂಬ ಪದಗಳಲ್ಲಿ ಯಾವುದರಿಂದ ಉಲ್ಲೇಖಿಸಬೇಕೆಂಬ ವಿಷಯದಲ್ಲಿಯೇ ಮೊತ್ತಮೊದಲು ಮತಭೇದವೆದ್ದಿತು. ಶ್ರೀ ಗಿರಿಯವರಿಗೆ ಮೊದಲು ಅಲ್ಲಿನ ರಾಜ್ಯಪಾಲರಾಗಿದ್ದ ಶ್ರೀ ಕೆ. ಎಂ. ಮುನಷಿಯವರು 'ಶ್ರೀ ರಾಜ್ಯಪಾಲ' ಎಂಬುದನ್ನೇ ಮೆಚ್ಚಿದ್ದುದರಿಂದ, ಅದೇ ಹೆಸರಿನಿಂದ ಕರೆಯಬೇಕೆಂದು ಮಂತ್ರಿಮಂಡಳಿ ಬಯಸಿದರೆ, ಶ್ರೀ ಗಿರಿಯವರು ಇದು ಸಾಮಂತಶಾಹಿಯ ಪ್ರದರ್ಶನದಂತಿರುತ್ತದೆ. ದೇಶದ ಎಲ್ಲೆಡೆಯಲ್ಲೂ 'ರಾಜ್ಯಪಾಲ'ರನ್ನು ಒಂದೇ ರೂಪದಿಂದ ಸಂಬೋಧಿಸಬೇಕು; ತನಗೆ 'ಶ್ರೀ ರಾಜ್ಯಪಾಲ' ಎಂಬುದು ಇಷ್ಟವಾಗಿರುವುದಿಲ್ಲ ಎಂದು ಹೇಳಿದರು. ಶ್ರೀ ಸಂಪೂರ್ಣಾನಂದರ ಮಂತ್ರಿಮಂಡಳಿಯು 'ಶ್ರೀ ರಾಜ್ಯಪಾಲ' ಪದವನ್ನೇ ಬಳಸಿಕೊಂಡಿತ್ತು; ಆದರೆ, ರಾಜಭವನದಿಂದ ಹೊರಡುವ ಕಾಗದಪತ್ರಗಳಲ್ಲಿ ಮಾತ್ರ 'ರಾಜ್ಯಪಾಲ' ಎಂದೇ ಅಂಕಿತವಾಗಿರುತ್ತಿತ್ತು.



ಕೈಯಿಂದ ಟೈಪ್ ಮಾಡಲು ಅಶಕ್ತರಾದವರು ವಿದ್ಯುತ್ ಕೀ ಬೋರ್ಡನ್ನು ತಾಂತ್ರಿಕ ರೀತಿಯಿಂದ ಹೊಡೆಯಬಲ್ಲರು. ಅಮೇರಿಕೆಯಲ್ಲಿ ಈ ಮಾದರಿಯ ಟೈಪ್‌ರೈಟರ್‌ಗಳು ಪ್ರಚಲಿತವಾಗುತ್ತಿವೆ.

ತೀವ್ರ ಅಸಮಾಧಾನ

೧೯೫೭ರಲ್ಲಿ ಶ್ರೀ ಗಿರಿಯವರು ತೋರಿಸಿದ ಒಂದು ವರ್ತನೆಯಿಂದಾಗಿ ರಾಜ್ಯ ಸಚಿವಾಲಯದಲ್ಲಿ ಗುಲ್ಲೆದ್ದಿತು. ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಕ್ಷಾಮವು ತಲೆದೋರಿದಾಗ, ಅವರು ದೇವರಿಯಾ ಜಿಲ್ಲೆಯ ಕುಶಿ ನಗರವನ್ನು ಸಂದರ್ಶಿಸಿದರು. ರಾಜ್ಯಪಾಲರ ಮೋಟಾರು ಕಾರು ಪ್ರತಿಯೊಂದು ಗುಡಿಸಲಿನೆದುರೂ ಬಂದು ನಿಂತಿತ್ತು. ಅಲ್ಲಿ ಹಸಿದ ಜನತೆ ರಾಜ್ಯಪಾಲರನ್ನು ಕಾಣಲು ಆತುರದಿಂದ ಗುಂಪು ಸೇರಿತ್ತು. ಅವರ ಕಾರ್ಯಕ್ರಮದಲ್ಲಿ ಈ ಸಂದರ್ಶನದ ಸುದ್ದಿಯೇ ಇದ್ದಿರಲಿಲ್ಲ; ಆದುದರಿಂದ, ಜಿಲ್ಲಾಧಿಕಾರಿಗಳಿಗೆ ಇದರ ಸುಳಿವೇ ದೊರೆತಿರಲಿಲ್ಲ. ಅಲ್ಲಿಂದ ಮರಳಿ ಗೋರಖಪುರದಲ್ಲವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದರಿಂದಾಗಿ, ಅಶಾಂತಿಯು ಮತ್ತೂ ಹೆಚ್ಚಿತು. ಗೋರಖಪುರದಲ್ಲಿ ತನ್ನನ್ನು ಭೆಟ್ಟಿಯಾಗಿದ್ದ ಒಂದು ಶಿಷ್ಟ ಮಂಡಳದೊಡನೆ, "ಪೂರ್ವ ಜಿಲ್ಲೆಗಳ ಆರ್ಥಿಕ ಸಮಸ್ಯೆಗಳ ಅಧ್ಯಯನಕ್ಕಾಗಿ ಒಂದು ಸರ್ವಪಕ್ಷೀಯ ಸಮಿತಿಯ ರಚನೆಯಾಗಬೇಕೆಂದು ಬಯಸುತ್ತೇನೆ" ಎಂದುತ್ತರಿಸಿದರು. ವಿಧಾನ ಸಭೆಯಲ್ಲಿ ವಿರೋಧೀದಳದವರು ಇಂತಹುದೇ ಬೇಡಿಕೆಯೊಂದನ್ನು ಮಂಡಿಸಿದ್ದರು; ಸರಕಾರವು ಅದನ್ನು ಪ್ರತಿಭಟಿಸುತಿತ್ತು. ಆದುದರಿಂದ ರಾಜ್ಯಪಾಲರ ಸೂಚನೆ ಅದಕ್ಕೆ ಸಹ್ಯವಾಗಲಿಲ್ಲ. ೧೯೫೭ರ ಆರಂಭದಲ್ಲಿ ಅವರು ಶ್ರೀ ರಣಸಿಂಹರಿತ್ತ ರಾಜಿನಾಮೆಯನ್ನು ಮರಳಿ ಹಿಂತೆಗೆದುಕೊಳ್ಳುವಂತೆ ಪ್ರಯತ್ನಿಸಿ ಒಪ್ಪಿಸಿದರು. ೧೯೫೮ರಲ್ಲಿ ಅವರು ಡಾ| ಸಂಪೂರ್ಣಾನಂದ ಮತ್ತು ಸರಕಾರಗಳ ಗುಪ್ತ ರಹಸ್ಯಗಳನ್ನು ಸಂಪೂರ್ಣ ವಿಚ್ಛೇದಿಸ ಬಯಸಿದರು. ಈ ಬಗ್ಗೆ ಅವರು ಮಾಡಿದ ಪ್ರಯತ್ನಗಳಿಗಾಗಿ ಅವರ ಮೇಲೆ ಕೆಲವರಿಗೆ ಅಸಮಾಧಾನ ಹುಟ್ಟಿಕೊಂಡಿತು.

ವಿದ್ಯಾಕ್ಷೇತ್ರದಲ್ಲಿ ಹಸ್ತಕ್ಷೇಪ

ಉತ್ತರ ಪ್ರದೇಶದ ಆರು ವಿಶ್ವವಿದ್ಯಾಲಯಗಳ ಕುಲಪತಿ ಮತ್ತು ಆಲಿಗಡ ಹಾಗೂ ಬೆನಾರಸ್ ವಿಶ್ವವಿದ್ಯಾಲಯಗಳ ಮುಖ್ಯ ವೀಕ್ಷಕರಾಗಿದ್ದು ಅವರು ವಿಶ್ವವಿದ್ಯಾಲಯಗಳ ಸ್ವಾಯತ್ತತೆಯು ಭಂಗಗೊಂಡಾಗ, ಉಳಿಸಲು ಹೆಣಗಾಡಿದರು. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವರ್ಚಸ್ಸು ಬೀರಲು ಪ್ರಯತ್ನಿಸುವ

(೧೨ನೇ ಪುಟ ನೋಡಿರಿ)

ಕಥಾವಿಹಾರ

ಸುವರ್ಣಧಾನ್ಯದ ಸುಗ್ಗಿ

ಅದೃಷ್ಟಹೀನವಾಗಿದ್ದ ಆ ಕುಟುಂಬದ ಅದೃಷ್ಟ ಖುಲಾಯಿಸಿಬಿಟ್ಟಿತು; ದೇಶದಲ್ಲಿಯೇ ಒಂದು ಬಗೆಯ ಕ್ರಾಂತಿಗದು ನಾಂದಿಯೆನಿಸಿತು.

ಒಂದಾನೊಂದು ಕಾಲದಲ್ಲಿ ಬಡವರ ಸಣ್ಣ ಹುಡುಗನೊಬ್ಬನಿದ್ದನು. ಅವನಿಗೆ ತಂದೆ ಇರಲಿಲ್ಲ. ತಾಯಿಯು ಕಷ್ಟಪಟ್ಟು, ಬೆವರು ಸುರಿಸಿ, ದುಡಿದು ಸಂಪಾದಿಸಿದ ಹಣವು ರೊಟ್ಟಿಗೂ ಸಾಕಾಗುತ್ತಿರಲಿಲ್ಲ. ಹುಡುಗನು ಪಾಠಶಾಲೆಗೆ ಹೋದನು. ಅವನ ಚೀಲದಲ್ಲಿ ಒಂದು ಮುರುಕು 'ಸ್ಲೇಟು' ಇದ್ದಿತಾದರೂ, ಬಾಲಬೋಧೆ ಪುಸ್ತಕವಿರಲಿಲ್ಲ. ಈ ಬಡ ಮಗು ಹುಟ್ಟಿದಾಗ, ನೆರೆಯಲ್ಲಿದ್ದ ಧನಿಕ ಮಹಿಳೆಯೊಬ್ಬಾಕೆಯು ಧರ್ಮಪೂತೆಯಾಗಿ ಅವನಿಗಾಗಿ ಆಕಳ ಕರುವೊಂದನ್ನು ಕೊಟ್ಟಿದ್ದಳು. ಏಳು ವರ್ಷಗಳು ಕಳೆದಿದ್ದುವು. ಈಗ ಆಕಳ ಕರು ಹಸುವಾಗಿ ಬೆಳೆದಿತ್ತಾದರೂ, ಅದು ಗೊಡ್ಡಾಗಿತ್ತು.

ಒಂದು ದಿನ ಹುಡುಗನು ಅಳುತ್ತಾ ಪಾಠಶಾಲೆಯಿಂದ ಮರಳಿ ಬಂದಾಗ, ತಾಯಿ ಕೇಳಿದಳು: "ಯಾಕಪ್ಪಾ ಅಳುತ್ತೀ?"—

"ನನ್ನ ತರಗತಿಯ ಹುಡುಗರೆಲ್ಲರ ಹತ್ತಿರವೂ ಬಾಲಬೋಧೆ ಪುಸ್ತಕವಿದೆ. ಅವರು ಓದುತ್ತಾರೆ. ನನ್ನ ಹತ್ತಿರವಿಲ್ಲ. ಒಂದು ಬಾಲಬೋಧೆ ತಕ್ಕೊಡು!"

"ನನ್ನ ಹತ್ತಿರ ಹಣವಿಲ್ಲ ಮಗು, ಈ ಹಾಳಾದ ಆಕಳಿನ ಮೇಲೆ ಆಸೆಯಿಟ್ಟುಕೊಂಡಿದ್ದೆ. ಅದು ಬೆಳೆದು ಕರುಹಾಕಿದ ಮೇಲೆ, ಪ್ರತಿದಿನವೂ ಒಂದು ಪಾತ್ರೆ ಹಾಲು ಕರೆದು, ಅದನ್ನು ಮಾರಿ ಹಣ ಸಂಪಾದಿಸೋಣ, ಅಂತ ಇದ್ದೆ. ಆದರೆ ಇದು ಗೊಡ್ಡು! ನಾಳೆ ಹಿಮದಗಡ್ಡೆ ಬೀಳುವ ಕಾಲಕ್ಕೇನು ಮಾಡೋದು? ನಮಗೇ ಊಟಕ್ಕಿಲ್ಲ. ಇನ್ನು ಅದಕ್ಕೆಲ್ಲಿಂದ ತರೋದು ಮೇವು? ನಮ್ಮಲ್ಲಿ ಹುಲ್ಲಿಲ್ಲ. ಹೋಗಪ್ಪಾ, ಇದನ್ನು ಅಡವೀಗೆ ಹೊಡೆದುಕೊಂಡು ಹೋಗಿ ಒಂದು ಮರಕ್ಕೆ ಕಟ್ಟಿಹಾಕು. ಯಾವುದಾದರೂ ತೋಳವಾದರೂ ಬಂದು ಅದನ್ನು ತಿಂದುಹಾಕುತ್ತೆ. ನಮಗೂ ಅದರ ಭಾರ ತಪ್ಪುತ್ತೆ"—ಎಂದು ತಾಯಿ ಹೇಳಿದಳು.

ಹುಡುಗನು ಆಕಳನ್ನು ಅಡವಿಗೆ ಹೊಡೆದುಕೊಂಡು ಹೋಗಿ, ಒಂದು ದೊಡ್ಡ ಮರಕ್ಕೆ ಕಟ್ಟಿಹಾಕಿ, ಮನೆಗೆ ಹೊರಟುಹೋದನು. ಅವನು ತನ್ನ ಹಳ್ಳಿಗೆ ಹೊರಟುಹೋದೊಡನೆಯೇ ಒಬ್ಬ ಒಳ್ಳೆಯ ಮುದುಕಿಯು ಆ ಕಡೆ ಬಂದಳು. ಆಕೆ ಯಾವಾಗಲೂ ಕಾಡಿನಲ್ಲಿ ಪಕ್ಷಿಗಳನ್ನೂ ಪ್ರಾಣಿಗಳನ್ನೂ ಕಾಪಾಡುತ್ತಿದ್ದಳು. ಆಕಳನ್ನು ಬಿಚ್ಚಿ ತನ್ನ ಮನೆಗೆ ಹೊಡೆದುಕೊಂಡು ಹೋದಳು.

ಹುಡುಗನು ಮನೆಗೆ ಹೋಗುತ್ತಾ ಹಾದಿಯ ಪಕ್ಕದಲ್ಲಿ ಒಂದು ಗುಬ್ಬಿ ಮರಿಯನ್ನು ಕಂಡನು. ಅದರ ಒಂದು ಕಾಲು ಮುರಿದಿದ್ದು, ಅದು ಹಾರಲಾರದಾಗಿತ್ತು.

"ಒಂದು ಗಾಡಿ ಬಂದರೆ ಈ ಪುಟ್ಟ ಗುಬ್ಬಚ್ಚಿಯ ಗತಿ ಏನಾದೀತು? ಗಾಡಿ ಚಕ್ರಕ್ಕೆ ಸಿಕ್ಕಿ ಸತ್ತುಹೋಗುತ್ತೆ."—ಎಂದುಕೊಂಡನು, ಆ ಹುಡುಗ.

ಅದನ್ನು ಅವನು ಜಾಗರೂಕತೆಯಿಂದ ಎತ್ತಿಕೊಂಡು ತನ್ನ ಜೇಬಿನಲ್ಲಿಟ್ಟುಕೊಂಡನು. ಮನೆಗೆ ಹೋದಾಗ, ಆಕಳ ವಿಷಯವನ್ನು ತಿಳಿಸಿ, ತನ್ನ ಜೇಬಿನಲ್ಲಿದ್ದ ಗುಬ್ಬಿ ಮರಿಯನ್ನು ತಾಯಿಗೆ ತೋರಿಸಿದನು.

"ಅದನ್ನು ಬೆಕ್ಕಿನ ಮುಂದೆ ಹಾಕು!"—ಎಂದಳು, ತಾಯಿ.

"ಇಲ್ಲಮ್ಮ ಅಮ್ಮ, ಅದರ ಕಾಲು ವಾಸಿಯಾಗುವವರೆಗೂ, ಅದಕ್ಕೆ ರೊಟ್ಟಿ ಚೂರುಗಳನ್ನು ನಾನು ಕೊಡುತ್ತೇನೆ-ಅದಕ್ಕೆ ಸಣ್ಣ ರೆಕ್ಕೆಗಳು ಬೆಳೆದು, ಅದು ಹಾರುವವರೆಗೂ ಅದನ್ನು ನಾನು ಬಿಡೋದಿಲ್ಲ"—ಎಂದು ಹುಡುಗ ಉತ್ತರ ಕೊಟ್ಟನು.

ಅವನೊಂದು ಹಳೆಯ ಬುಟ್ಟಿಯನ್ನು ತೆಗೆದುಕೊಂಡು, ಅದರಲ್ಲಿ ಒಣ ಹುಲ್ಲನ್ನು ತುಂಬಿಸಿ ಅದರಲ್ಲಿ ಗುಬ್ಬಿ ಮರಿಯನ್ನು ಮಲಗಿಸಿದನು. ಅದಕ್ಕೆ ಅವನು ಪ್ರತಿ ದಿನವೂ ರೊಟ್ಟಿ ಚೂರುಗಳನ್ನು ಕೊಡುತ್ತಿದ್ದನು. ಅದಕ್ಕೆ ನೀರು ಕುಡಿಸುತ್ತಿದ್ದನು. ಮನೆಯಲ್ಲಿ ತಾಯಿ—ಮಗನಿಗೆ ರೊಟ್ಟಿಯಿಲ್ಲದಿದ್ದಾಗ, ಗುಬ್ಬಿಯೂ ಸಹ ಉಪವಾಸವಿರುತ್ತಿತ್ತು.



ಆಫ್ರಿಕದ ನೀಗ್ರೊವಿದ್ಯಾರ್ಥಿಯೊಬ್ಬನು ಅಮೆರಿಕದಲ್ಲಿ ತರಬೇತಿಹೊಂದುತ್ತಿದ್ದಾನೆ.

ಹೀಗೆಯೇ ಚಳಿಗಾಲ ಕಳೆದುಹೋಯಿತು. ಗುಬ್ಬಿಯ ಕಾಲು ವಾಸಿಯಾಯಿತು ಅದು ವಸಂತಕಾಲದಲ್ಲೊಂದುದಿನ ಕಿಟಿಕಿಯ ಮುಖಾಂತರ ಅಡವಿಯಲ್ಲಿದ್ದ ಒಳ್ಳೆಯ ಮುದುಕಿಯ ಮನೆಗೆ ಹಾರಿಹೋಯಿತು. ಆಗ ಮುದುಕಿಯು ಚಿನ್ನದ ಬಾಚಣಿಗೆಯಿಂದ ಎರಡು ಕರುಗಳ ಜೂಲನ್ನು ಬಾಚುತ್ತಿದ್ದಳು.

"ಚಳಿಗಾಲದಲ್ಲಿ ಎಲ್ಲಿಗೆ ಹೋಗಿಬಿಟ್ಟಿದ್ದೆ, ಗುಬ್ಬಿ?"—ಎಂದು ಕೇಳಿದಳು, ಮುದುಕಿ. ಗುಬ್ಬಿಯು ತನ್ನ ಕತೆಯೆಲ್ಲವನ್ನೂ ಮುದುಕಿಗೆ ತಿಳಿಸಿತು. ತನ್ನ ಮಾತು ಮುಗಿದೊಡನೆಯೇ, "ಈ ಕರುಗಳು ಯಾರವು?" ಎಂದು ಅದು ಕೇಳಿತು.

"ಕೊಟ್ಟಿಗೆಯ ಮುಂದೆ ಮಲಗಿರುವ ಆಕಳಿನವು ಆ ಕರುಗಳು."

"ಎಲ್ಲಿಂದ ಬಂತು, ಆ ಆಕಳು?"

"ಇಲ್ಲೇ ಒಂದು ಮರಕ್ಕೆ ಕಟ್ಟಿಹಾಕಿದ್ದರು ಯಾರೋ. ತೋಳ ಬಂದು ತಿಂದುಹಾಕೀತೆಂದು, ನಾನು ಅದನ್ನು ಕರೆತಂದೆ. ಸಾಕಿದೆ, ಅದನ್ನು ಕೊಂಡೊಯ್ಯಲು ಯಾರೂ ಬರಲಿಲ್ಲ, ಚಳಿಗಾಲದಲ್ಲೆಲ್ಲಾ ಅದಕ್ಕೆ ಹುಲ್ಲೂ-ಸೊಪ್ಪೂ ತಿನಿಸಿದೆ. ಒಂದು ತಿಂಗಳ ಹಿಂದೆ ಈ ಸುಂದರ ಕರುಗಳು ಹುಟ್ಟಿದುವು.

ಗುಬ್ಬಿಯು ಹಾರಿ ಕರುಗಳನ್ನು ಕುಟುಕಿದಂತೆ ಮಾಡಲು, ಅವು ತಮ್ಮ ಬಾಲಗಳನ್ನೆತ್ತಿಕೊಂಡು ಕುಣಿದಾಡತೊಡಗಿದವು. ಆಕಳು ಅವುಗಳ ಕಡೆಗೇ ನೋಡುತ್ತಿತ್ತು.

ಒಂದು ದಿನ ಹುಡುಗನು ತಾಯಿಗೆ ಹೀಗೆಂದು ಹೇಳಿದನು.

"ಅಮ್ಮಾ, ನಾನು ಅಡವೀಗೆ ಹೋಗುತ್ತೇನೆ. ಹಸುವಿಗೇನಾಗಿದೆಯೋ ನೋಡುತ್ತೇನೆ. ಅದನ್ನಲ್ಲಿ ಬಿಡಬಾರದಾಗಿತ್ತು."

"ಒಳ್ಳೆಯದಪ್ಪಾ, ಹೋಗಿ ಬಾ."—ಎಂದಳು ತಾಯಿ.

ಹುಡುಗನು ಅಡವಿಗೆ ಹೋದನು. ಇಡೀ ದಿನ ಹುಡುಕಿದರೂ, ಅವನಿಗೆ ಆಕಳಿನ ಸುಳಿವು ಸಿಕ್ಕಲಿಲ್ಲ. ಕತ್ತಲಾಗುವ ವೇಳೆಗೆ ಅವನು ನಟ್ಟಡವಿಯಲ್ಲಿದ್ದನು. ಇನ್ನೂ ಸಣ್ಣ ಹುಡುಗನಾಗಿದ್ದುದರಿಂದ ಹೆದರಿ, ಅಡವಿಯಲ್ಲಿ ಅಳತೊಡಗಿದನು. ಆ ಮೇಲೆ ದೂರದಲ್ಲಿ ಅವನಿಗೊಂದು ದೀಪದ ಬೆಳಕು ಕಾಣಿಸುದುದರಿಂದ ಅವನು ಆ ಕಡೆಗೇ ಹೊರಟನು. ಸ್ವಲ್ಪ ಹೊತ್ತಿನ ತರುವಾಯ ಒಂದು ಜೋಪಡಿ ಕಾಣಿಸಿತು. ಅಂಗಳದಲ್ಲಿ ಅವನದೇ ಆಕಳೂ ಮತ್ತೆರಡು ಕರುಗಳೂ ಇದ್ದುವು.

"ಅವ್ವಾ ಹೊರಗೆ ಬಾ!"—ಎಂದು ಗುಬ್ಬಿಯು ಚಿಲಿಪಿಲಿಗುಟ್ಟುತ್ತ ಹೇಳಿತು "ನನ್ನನ್ನು ಕಾಪಾಡಿದ ಹುಡುಗ ಈತನೇ"

"ಯಾವ ಹುಡುಗ?"

"ಬೀದಿ ಬದಿಯಿಂದ ನನ್ನನ್ನೆತ್ತಿಕೊಂಡು ಹೋಗಿ ಸಾಕಿದ ಹುಡುಗ".

(೧೧ನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರ ಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE

ಹರಟೆ

ಭವಿಷ್ಯದಲ್ಲಿ......?......!

ಭವಿಷ್ಯದ ಬಗ್ಗೆ ಯೋಚನೆಯಿಲ್ಲದ ವ್ಯಕ್ತಿ, ಭವಿಷ್ಯದ ಆಗುಹೋಗುಗಳನ್ನು ನೋಡಿ ಆಶ್ಚರ್ಯಚಕಿತನಾಗುವನು.

"ಏನು ಸ್ವಾಮಿ? ನಿಮ್ಮ ಮಗನ ರಿಸಲ್ಟ್ ಬಂದಿದೆಯೊ?" ಎಂದು ನನ್ನ ಒಬ್ಬ ಪರಮ ಮಿತ್ರರನ್ನು ಭೇಟಿಯಾಗಿ ಪ್ರಶ್ನಿಸಿದೆ. ಅವರು ಸಾವಧಾನವಾಗಿ ಹೇಳಿದರು—"ರಿಸಲ್ಟ್ ಬಂದಿಲ್ಲ. ನಾಳೆ ನಾಡಿದಿನಲ್ಲಿ ಬರುವುದರಲ್ಲಿದೆ. ನನಗೆ ಅ ಬಗ್ಗೆ ವಿಶೇಷ ಗಮನವೇ ಇಲ್ಲ. ನನ್ನ ಮಗ ಅಂದರೆ ನೋಡಿ ಭಲೇಭೇಷ್ ಹುಡುಗ."

"ನೀವೂ ಭಲೇಭೇಷ್ ಮನುಷ್ಯರಲ್ಲವೆ?"

"ನನ್ನಂತಲ್ಲ ಸ್ವಾಮಿ ಆತ. ನಾನು ನನ್ನ ವಿದ್ಯಾಭ್ಯಾಸದ ಸಮಯದಲ್ಲಿ ಕೆಲವು ತರಗತಿಗಳಲ್ಲಿ ಪರ್ಯಾಯ ನಡೆಸಿದ್ದೇನೆ. ಆತನು ಹಾಗಲ್ಲ ನೋಡಿ. ಇದುವರೆಗೆ ಆತ ನಾಪಾಸಾದುದೆಂಬುದೇ ಇಲ್ಲ. ಇ.ಯಸ್.ಯಲ್.ಸಿ.ಪರೀಕ್ಷೆಯಲ್ಲಿ ಆ ವರ್ಷ ಅದೇನೋ ಪರೀಕ್ಷಾಪತ್ರ ಕಠಿಣವಾಗಿಯೆ ಇತ್ತಂತೆ ಆದರೂ ನಮ್ಮ ಹುಡುಗ ಪಾಸಾಗಿದ್ದ. ಐವತ್ತು ಹುಡುಗರು ಪರೀಕ್ಷೆಗೆ ಕುಳಿತಿದ್ದರು. ಆದರೆ ಅವರಲ್ಲಿ ಪಾಸಾಗಿದ್ದು ಐದು ಜನ ಮಾತ್ರ. ಆ ಐದು ಜನರಲ್ಲಿ ನನ್ನ ಮಗ ತೆಗೆದ ಮಾರ್ಕುಗಳೇ ಹೆಚ್ಚು."

"ಹಾಗಾದರೆ ನಿಮ್ಮ ಮಗ ಪಿ. ಯು. ಸಿ.ಯಲ್ಲಿ ಪಾಸು ಆದ ಹಾಗೆ ಅಲ್ಲವೆ?"

"ಅದನ್ನೆ ಹೇಳುತ್ತಿದ್ದೇನೆ. ಹೈಸ್ಕೂಲುಗಳಲ್ಲಿ ನಮ್ಮ ಹುಡುಗನಿಗೆ ಕರೆದುಸೀಟುಕೊಟ್ಟರು. ಹೈಸ್ಕೂಲು ಉಪಾಧ್ಯಾಯರಿಗೂ ನನ್ನ ಹುಡುಗನಲ್ಲಿ ಬಹುಮೆಚ್ಚಿಗೆಯಿತ್ತು. ಯಸ್. ಯಸ್. ಯಲ್. ಸಿ. ಯಲ್ಲಿ ಬಹಳ ಮಾರ್ಕುಗಳು ತೆಗೆದಿದ್ದ ನಮ್ಮ ಹುಡುಗನ ಸರ್ಟಿಫಿಕೇಟು ಹಿಡಿದುಕೊಂಡು ಬೇಂಕಿನ ಮೆನೇಜರರಲ್ಲಿಗೆ ಹೋಗಿ ನಾನು, "ಕೆಲಸ ಕೊಡುವಿರೆ?" ಎಂದು ಪ್ರಶ್ನಿಸಿದೆ. ಮೆನೇಜರರು ಸರ್ಟಿಫಿಕೇಟನ್ನು ನೋಡಿ "ನಿಜವಾಗಿಯೂ ಇಂತಹ ಹುಡುಗರಿಗೆ ಕೆಲಸಕೊಡಬೇಕು. ಆದರೆ ಪ್ರಾಯವಾಗಿಲ್ಲ ನೋಡಿ ಹುಡುಗನಿಗೆ. ಮುಂದಿನ ವರ್ಷ ಬನ್ನಿ. ಅವಶ್ಯ ಕೊಟ್ಟೇ ಕೊಡುತ್ತೇನೆ. ಬೇರಾವ ಕಡೆಗೂ ಹೋಗುವುದು ಬೇಡ. ನಮ್ಮಲ್ಲಿಗೆ ಬರಲಿ. ಇಂತಹ, ಇಷ್ಟು ಮಾರ್ಕು ತೆಗೆದ ಹುಡುಗರು ನಮಗೆ ಸಿಗುವುದೇ ದುರ್ಲಭ" ಎಂದು ಹೇಳಿ ಕಳುಹಿಸಿದರು.

"ಹಾಗಾದರೆ ನಿಮಗೆ ಕೆಲಸ ಹುಡುಕುವ ಒಂದು ದೊಡ್ಡ ಭಾರವೆ ತಗ್ಗಿ ಹೋದಂತಾಗಿದೆಯಲ್ಲಾ! ಈಗಿನ ಕಾಲದಲ್ಲಿ ಇಂತಹ ಹುಡುಗರನ್ನು ಪಡೆದ ನೀವೆ ಧನ್ಯರೆನ್ನಬೇಕು".

"ಏನು ಮಹಾರಾಯರೆ? ಹುಡುಗನನ್ನು ಈ ವರ್ಷ ನಾನು ಕೆಲಸಕ್ಕೆ ಹಾಕುತ್ತೇನೆಂದು ಮಾಡಿದರೆ? ಇಲ್ಲ ಇಲ್ಲ ಕೆಲಸಕ್ಕೆ ಹಾಕುವುದಿಲ್ಲ. ಸಾಲ ಮಾಡಿ ಪ್ರಿಯುನಿವರ್ಸಿಟಿ ಕ್ಲಾಸು ಓದಿಸಿದ್ದೇನೆ. ಕಾಲೇಜಿನ ಲೆಕ್ಚರರೂ ಹೇಳುತ್ತಿದ್ದಾರೆ, 'ಹುಡುಗನನ್ನು ಮುಂದೆ ಓದಿಸಿ. ಹಾಳುಮಾಡಬೇಡಿ' ಎಂದು. ಆದ್ದರಿಂದ ಮುಂದೆ ಓದಿಸಬೇಕು ಹುಡುಗನನ್ನು ಎಂಬ ಅಭಿಪ್ರಾಯ ನನ್ನಲ್ಲಿದೆ. ರಿಸಲ್ಟನ್ನು ನೋಡುವುದೆ ಬೇಡ. ಫಸ್ಟ್ ಕ್ಲಾಸ್ ಪಾಸಾದಾನು. ನೋಡಬೇಕಾದ ವಿಚಾರವಿಷ್ಟೆ! ರೇಂಕ್ ಏನಾದರೂ ಇದೆಯೊ ಎಂದು.

"ತುಂಬಾ ಸಂತೋಷ." ಎಂದು ಹೇಳಿ ನಾನು ಅವರನ್ನು ಬೀಳ್ಕೊಟ್ಟೆನು.

೦೦ ೦೦

ನನ್ನ ಇನ್ನೊಬ್ಬ ಓರಗೆಯ ಗೆಳೆಯರನ್ನು ಮಾತಾಡಿಸಿದಾಗ ಈ ರೀತಿಯಾಗಿ ಕೇಳಿದೆನು—"ಏನು ರಾಯರೆ? ನಿಮ್ಮ ಮಗಳು ಈ ವರ್ಷ ಪಿ. ಯು. ಸಿ. ಪರೀಕ್ಷೆಗೆ ಕುಳಿತಿದ್ದಾಳಲ್ಲಾ! ಹೇಗೆ ಮಾಡಿದ್ದಾಳೆ?

"ನನ್ನ ಮಗಳು ರುಕ್ಮಿಣಿಯ ವಿಚಾರ ತಾನೆ ನೀವು ಕೇಳೋದು? ಅವಳು ಈ ಬಾರಿ ಪಾಸಾಗದೆ ಇರಲಾರಳು ಖಂಡಿತ. ಕ್ಲಾಸುಕೂಡಾ ಅವಳಿಗೆ ಬರುತ್ತೆ. ನಮ್ಮ ಕಾಲೇಜಿನಲ್ಲಿ (ಇವರ ಹುಡುಗಿ ಕಾಲೇಜಿಗೆ ಕಲಿಯಲು ಹೋದ್ದರಿಂದ ನಮ್ಮ ಈ ಮಹಾರಾಯರು ಅದನ್ನು ಕ್ರಯಕ್ಕೆ ಪಡಕೊಂಡಂತೆ ಮಾತಾಡುತ್ತಾರೆ.) ನಮ್ಮ ಹುಡುಗಿ ಎಲ್ಲಾ ಹುಡುಗರನ್ನು ಹಿಂದಕ್ಕೆ ಹಾಕಿದ್ದಾಳೆ. ಇವಳು ಮುಂದುವರಿದವರಲ್ಲಿ ಮುಂದುವರಿದವಳು. ನನ್ನ ಮಕ್ಕಳಲ್ಲಿ ಕಲಿಯುವುದರಲ್ಲಿ ಹುಷಾರ್ ಎಂದರೆ ಅವಳೆನೋಡಿ. ನನ್ನ ಮಗನೊಬ್ಬನಿದ್ದಾನೆ. ಯಸ್. ಯಸ್. ಯಲ್. ಸಿ. ಮುಂದಿನ ವರ್ಷ. ಆತ ಸೋಮಾರಿ. ಅವಳ ತಂಗಿಯೊಬ್ಬಳಿದ್ದಾಳೆ. ಶತದಡ್ಡಿ. ಆದರೆ ರುಕ್ಮಿಣಿ ಮಾತ್ರ ಅಂತವಳಲ್ಲ ನೋಡಿ. ಸೋಮಾರಿಯೂ ಅಲ್ಲ, ದಡ್ಡಿಯೂ ಅಲ್ಲ. ಬಲು ಚುರುಕು."

"ಏನು ಸ್ವಾಮಿ, ಹುಡುಗಿಗೆ ಮದುವೆ ಮಾಡುವ ಯೋಚನೆಯಿಲ್ಲವೆ?"

"ಮದುವೆ ಮಾಡುವ ಯೋಚನೆಯಿಲ್ಲದೆ ಏನು ಸ್ವಾಮಿ? ಹುಡುಗಿ ಚಂದವಿದ್ದಾಳೆ. ಮುಂದೆ ಬಿ. ಯಸ್‌ಸಿ., ತನಕವಾದರೂ ಓದಿಸಬೇಕೆಂಬ ಆಸೆ ನನಗಿದೆ. ಹಾಗೆ ಓದಿಸಿದರೆ ಎಂ. ಯಸ್.ಸಿ. ಯ ಒಬ್ಬ ದೊಡ್ಡ ಲೆಕ್ಚರರೇ ಮಗಳಿಗೆ ವರನಾಗಿ ಬಂದಾನಲ್ಲ ಎಂದು ಯೋಜನೆ."

ಬಹು ಚೆನ್ನಾಗಿದೆ ನಿಮ್ಮ ಯೋಜನೆ ಎಂದು ಹೇಳಿ ಅವರನ್ನು ನಾನು ನಡುದಾರಿಯಲ್ಲಿ ಕೈಬಿಟ್ಟೆ.

೦೦೦

ನನಗೊಬ್ಬ ಮಗನಿದ್ದಾನೆ ಶತಮೂರ್ಖ. ಆತನ ತಾಯಿ ಎದುರು ಹೀಗೆ ಹೇಳುವಷ್ಟು ಧೈರ್ಯ ನನಗೆ ಬಂದಿಲ್ಲ. ಆತನಿಗೆ ಶಾಲೆಯ ಪರೀಕ್ಷೆಗಳಲ್ಲಿ ಯಾವಾಗಲೂ ಮಾರ್ಕು ಕಡಿಮೆ. ಪಬ್ಲಿಕ್ ಪರೀಕ್ಷೆಗೆ ಹೋಗುವುದಕ್ಕಿಂತ ಮುಂಚೆ ಆತನ ತಾಯಿ ಅರ್ಥಾತ್ ನನ್ನ ಹೆಂಡತಿ ದೇವರ ಸೇವೆ ಆರಂಭ ಮಾಡುತ್ತಾಳೆ. ಹರಕೆ ಹೊರಲು ಸುರುಮಾಡುತ್ತಾಳೆ. ಇವಳ ಹರಕೆ ಬಲದಿಂದಲೇ ಇರಬೇಕು. ಆತ ಇದು ತನಕದ ಎರಡು ಸರಕಾರಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದಾನೆ. ನಾನು ಯಸ್. ಯಸ್. ಯಲ್. ಸಿ. ಮುಗಿದೊಡನೆ ಎಲ್ಲಾದರೂ ಏನಾದರೂ ಕೆಲಸಕ್ಕೆ ಹಾಕಬೇಕೆಂಬ ಯೋಚನೆಯಲ್ಲಿದ್ದೆನು. ಆದರೆ ನಮ್ಮ ಮನೆ ಮಹಾರಾಣಿ ಬಿಡಬೇಕಲ್ಲ? ಊಟ ಮಾಡುವಾಗ ಪಿರಿ ಪಿರಿ. ಮಲಗುವಾಗ ಚಿರಿ ಚಿರಿ. ಬರೆಯುವಾಗ ಕರ ಕರ. ಓದುವಾಗ ಪರೆ ಪರೆ ಎಂದು ಹೇಳಿ ಹೇಗಾದರೂ ಕಾಲೇಜಿಗೆ ಸೇರಿಸುವಂತೆ ಮಾಡಿದಳು. ಶಾಲಾ ಪರೀಕ್ಷೆಗಳಲ್ಲಿ ಅನುತ್ತೀರ್ಣನಾಗಿದ್ದ ನನ್ನ ಮಗ ಕಾಲೇಜಿನ ಸಿಲೆಕ್ಷನ್ ಪರೀಕ್ಷೆಯಲ್ಲಿ ತಡೆಹಿಡಿಯುವದರಲ್ಲಿದ್ದ. ಅದು ಹೇಗೆ ಆತನಿಗೆ ತಿಳಿಯಿತೋ ನನಗೆ ಗೊತ್ತಿಲ್ಲ. ಹೋಯಿತು ತಾಯಿಗೆ ವರದಿ. ಬಂತು ತಂದೆಗೆ ಗುಡುದಿ. ಇನ್ನೇನು ಮಾಡೋಣ? ಹೋಗಿ ದಮ್ಮಯ್ಯ ಹೊಡೆದು ಮಾಡಿಕೊಂಡೆ ಸಿಲೆಕ್ಷನ್, ನನಗಲ್ಲ; ನನ್ನ ಮಗನಿಗೆ.

ನನ್ನ ಮಡದಿ ದೇವಸ್ಥಾನಗಳಿಗೆ ಬೆಳಗ್ಗೆ ಸಾಯಂಕಾಲ ಸುತ್ತು ತೆಗೆಯಲಾರಂಭಿಸಿದಳು. ಸತ್ಯನಾರಾಯಣ ವ್ರತವನ್ನು ಸುಳ್ಳು ನಾರಾಯಣನಾದ ನಾನು ಮಗನ ಉದ್ದೇಶಕ್ಕಾಗಿ ಮಾಡಬೇಕೆಂದು ನಮ್ಮ ಮನೆಯ ಯಜಮಾನ್ತಿ ತೀರ್ಮಾನವನ್ನಿತ್ತಳು, ಹೂವಿನ ಪೂಜೆ, ಆ ಪೂಜೆ ಈ ಪೂಜೆಯೆಂದು ಈ ಎಲ್ಲಾ ಅವಳ ಹರಕೆಗಳನ್ನು ತೀರಿಸುವುದಾದರೆ ನನ್ನ ಮಗನಿಗೆ ನಾನು ಈ ವರ್ಷ ಕಟ್ಟಿದ ಕಾಲೇಜು ಫೀಸಿಗಿಂತ ಹಣ ಹೆಚ್ಚಾದೀತು. ಆದಿರಲಿ.

ಪರೀಕ್ಷೆಯ ಮುಂಚಿನ ದಿನ ಹುಡುಗ (ನನ್ನ) ನನ್ನ ಕಾಲು ಹಿಡಿದು ನಮಸ್ಕರಿಸಿದನು. ಏನು ಹೇಳಬೇಕೆಂದು ನನಗೆ ತೋರಲಿಲ್ಲ. ಮಡದಿಯನ್ನು ಕರೆದು ನೀನೆ ಆಶೀರ್ವದಿಸಬೇಕೆಂದು ನಾನು ಆಜ್ಞಾಪಿಸಿದೆನು. ಆಕೆ ಮಗನನ್ನು ಕರೆದು ಏನೊ ಗುಟ್ಟನ್ನು ಹೇಳಿದಳು.

ಮರುದಿನ ನಾನು ಬೆಳಗ್ಗೆ ಏಳುಗಂಟೆಗೆ ಎದ್ದವನೆ ಮುಖ ತೊಳೆದುಕೊಂಡು ಬಂದು ಸೋಫಾದಲ್ಲಿ ಬಿದ್ದುಕೊಂಡು ಪೇಪರ್ ಓದುತ್ತಿದ್ದೆ. ಪರೀಕ್ಷೆಗೆ ಹೋಗುವ ಉಡುಪುಗಳಿಂದ ಶಿಂಗರಿಸಿಕೊಂಡು ನನ್ನ ಮಗ ಬಂದವನೆ ಬಗಿಯಾಗಿ ನನ್ನ ಕಾಲುಗಳನ್ನು ಹಿಡಿದನು. "ಇದೇನು?" ಎಂದು ನಾನು ಪ್ರಶ್ನಿಸಿದೆನು.

"ಈ ದಿವಸದಿಂದ ಪರೀಕ್ಷೆ ಆರಂಭ. ನಾನು ಪಾಸಾಗುವಂತೆ ನೀವು ಆಶೀರ್ವದಿಸಬೇಕು."

"ನಿನ್ನೆಯೆ ಈ ಸಮಾರಂಭ ಮುಗಿದಿತ್ತಲ್ಲ!"

"ಮುಗಿದಿತ್ತು. ಆದರೆ ಅಮ್ಮ ಈಗಲೂ ತಂದೆಗೆ ನಮಸ್ಕಾರ ಮಾಡಿಬರಬೇಕೆಂದು ಹೇಳಿದಳು."

ಅಷ್ಟರಲ್ಲಿ ನಮ್ಮ ಅವಳೆ ಬಂದು ನನಗೆ ಬುದ್ಧಿಯನ್ನೊರೆದಳು—"ಏನ್ರಿ! ಮಗನಿಗೆ ಆಶೀರ್ವದಿಸಬಾರದೆ?" ಎಂದಳು.

"ಅಸ್ತು ಮಹಾರಾಯತಿ ನನ್ನ ಆಶೀರ್ವಾದದಿಂದ ನನ್ನ ಮತ್ತು ನಿನ್ನ ಮಗ ಪಾಸಾಗುವುದಾದಲ್ಲಿ ಇಡಿ ವಿಶ್ವವಿದ್ಯಾಲಯದಲ್ಲೆ ಮೊದಲನೆಯ ರೇಂಕಿನಲ್ಲಿ ಪಾಸಾಗುತ್ತಾನೆ. ಹಾಗೆ ಆಗಲೆಂದು ಹೇಳಿ ನಾನು ಮುಖ ತಿರುಗಿಸಿ ವಾರ್ತಾಪತ್ರಿಕೆ ಓದುವುದರಲ್ಲಿ ಮಗ್ನನಾದೆನು. ಮತ್ತೇನಾಯಿತೆಂದು ನಾನು ನೋಡಲಿಲ್ಲ. ನಮ್ಮ ರಾಣಿಗೆ ನಮಸ್ಕಾರ ಮಗನಿಂದ ಬಂದಿರಬೇಕೆಂದು ಊಹಿಸಿದ್ದೇನೆ.

ಪರೀಕ್ಷೆ ಮುಗಿಯಿತು. ಫಲಿತಾಂಶ ಒಂದೆರಡು ದಿನಗಳಲ್ಲಿ ಬರುವುದೆಂದು ಹೇಳಿದಾಗ ನನ್ನಾಕೆಗೆ ಪೇಪರ್ ಓದುವ ಹುಚ್ಚು ಅಂಟಿಕೊಂಡಿತು. ದಿನದಿಂದ ದಿನಕ್ಕೆ ಹರಕೆಗಳ ಸಂಖ್ಯೆ ಹೆಚ್ಚಿತು. ಕನಸಿನಲ್ಲಂತೂ ಮಗನ ಪಾಸು ಫೈಲ್‌ಗಳ ಬಗ್ಗೆ ವಿವೇಚನೆ ನಡೆಯಿತು. ಒಂದು ದಿನ ಪಾಸೆಂದು ಕನಸಾದರೆ ಮರುದಿನ ನಾಪಾಸೆಂದು ಕನಸು ಬೀಳುತ್ತಿತ್ತು. ನನಗಂತೂ

(೯ನೇ ಪುಟ ನೋಡಿರಿ)

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	4
4 ಕುಶಲವ	0	8
5 ಕಾವ್ಯ ಸಾಮ್ರಾಜ್ಯ	1	8
6 ಮಧುವನ	3	0
7 ಮುಂದಿನ ದೇವರು	0	4
8 ವ್ಯಭಿಚಾರಿಣಿ ಯಾರು	1	0
9 ಹೆಂಡ್ತಿ ಗಂಡನಾದರೆ	0	4
0 ಪುರುಷ ವಧು	0	4
1 ಸನ್ಯಾಸಿಯ ಸೋಗಿನಲ್ಲಿ	0	12
2 ನಂದಾದೀಪ	0	14
3 ದೇಶಭಕ್ತ	1	4
4 ಪ್ರೇಮ ವಿಜಯ	1	0
5 ರಂಗಭೂಮಿ	0	10
6 ಸೇವಾಪಥ	0	8
7 ನಾರೀ ಹೃದಯ	1	8
8 ಭಾರತೀಯ ಕತೆಗಳು	1	12
9 ಪ್ರಕಾಶ	2	8
0 ಮೂರು ಪ್ರಹಸನಗಳು	1	4
1 ನಗೆ ನೋಟಗಳು	1	4
2 ಅನ್ನದೇವರು ಇತ್ಯಾದಿ ಕತೆಗಳು	1	0
3 ಭಾರತದಲ್ಲಿ ಜಾತಿಭೇದ	1	0
4 ವಿಷ್ಣುವಿನ ಪರಾಪರಾಧಗಳು ಅರ್ಥಾತ್ ದಶಾವತಾರಗಳು	0	12
5 ಆಕಾಶ ಗಂಗೆ	1	12
6 ಸ್ವಾತಂತ್ರ್ಯವೀರ ಸಾವರಕರರು	1	4
7 ಜೀವನ ಸಂಗ್ರಾಮ	1	8
8 ಕದಂಬ	1	4
9 ಕವಿತಾಕಾಮಿನಿ	2	0
0 ಸ್ವರಾಜ್ಯ ವಿಜಯ	0	8
1 ಸಪ್ತಸಾಗರ	0	12
2 ಜಪಿಾನ್ವಾರ	1	6
3 ಬಾಳಿನ ಬೆಡಗು	1	4
4 ಲೋಪಾಮುದ್ರೆ	1	0
5 ಮದುವೆ ಸೀರೆ	1	0

ರೂ33-6-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಯಾರಿಗೆ ಗೊತ್ತು?

ವೆಸುವಿಯಸ್ ಎಚ್ಚರಗೊಳ್ಳುವುದೆ?

ಒಬ್ಬ ಹಳೆಯ ರೋಗಿಯನ್ನು ಆತನನ್ನು ಕಾಡುವ ಉಬ್ಬಸದಿಂದ ಮುಕ್ತನಾಗಿಸುವ ಆಶ್ವಾಸನೆಯಿತ್ತ, ಒಬ್ಬ ವೈದ್ಯ. ಆಗ ರೋಗಿ ಹೇಳಿದ: "ವೈದ್ಯರೇ, ಉಬ್ಬಸವು ಕಳೆದ ನಲ್ವತ್ತು ವರ್ಷಗಳಿಂದಲೂ ನನ್ನ ಜೀವನದ ಅಂಗವಾಗಿದೆ. ಹಾಗಿರುವಾಗ, ಅದಿಲ್ಲದೆ ನಾನೆಂತಿರಲಿ?" ನೇಪಲ್ಸ್‌ನ ಜನತೆಯಲ್ಲಿಯೂ ತಮ್ಮ ನೆರೆಯ ಉಪದ್ರಕಾರಿ ವೆಸುವಿಯಸ್‌ನ ಬಗ್ಗೆ ಇದೇ ತರದ ಭಾವನೆಯಿದೆ.

ಎಲ್ಲರ ಮನಸ್ಸೂ ಜಗತ್ತಿನ ಅಶಾಂತ ವಾತಾವರಣದತ್ತ ಸರಿಯತೊಡಗಿರುವಾಗ, ನೇಪಲ್ಸ್‌ನ ಜನರು ಒಂದೇ ಚಿಂತೆಯಿಂದ ಕೊರಗತೊಡಗಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ವೆಸುವಿಯಸ್‌ನ ಜ್ವಾಲೆಗಳ ಉಷ್ಣತೆಯು ೬೦೦ ಡಿಗ್ರಿ ಸೆಂಟಿಗ್ರೇಡನ್ನೂ ಮೀರಿ ಏರುತ್ತಿರುವುದೇ ಇದಕ್ಕೆ ಕಾರಣವಾಗಿದೆ.

ನೇಪಲ್ಸ್‌ನ ಸಮೀಪದಲ್ಲಿರುವ ಜ್ವಾಲಾಮುಖಿ ಪರ್ವತ ವೆಸುವಿಯಸ್ ಕಳೆದ ಹದಿನೇಳು ವರ್ಷಗಳಲ್ಲಿ ಸುಖನಿದ್ರೆಗೈಯ್ಯುತಿತ್ತು. ಈ ನಿದ್ರೆಯು ಅಸಾಮಾನ್ಯವಾಗಿತ್ತೆಂದೇ ಹೇಳಬೇಕು; ಏಕೆಂದರೆ, ಸಾಮಾನ್ಯವಾಗಿ ಈ ಪರ್ವತವು ಪ್ರತಿ ಹದಿನಾಲ್ಕು ವರ್ಷಗಳಿಗೊಮ್ಮೆ ಅಗ್ನಿವಮನ ಮಾಡುವುದು ಪದ್ಧತಿ. ಆದರೆ, ೧೯೪೪ರ ನಂತರ ಸಂಪ್ರದಾಯದಂತೆ ೧೯೫೮ರಲ್ಲಿ ಅಗ್ನಿಕಾರ ಬೇಕಾಗಿದ್ದರೂ ಅದು ೬೦ರಲ್ಲೇ ಆಗುವ ನಿರೀಕ್ಷೆಯಿದೆ. ಆದರೆ, ಈ ವಮನವು ಅದಷ್ಟು ಬೇಗನೆ ಆಗುವುದು ಕ್ಷೇಮಕರ. ಅಪಸ್ಮಾರ ರೋಗದಂತೆ ಜ್ವಾಲಾಮುಖಿಯು ತಡವಾಗಿ ವಿಸ್ಫೋಟವಾದಂತೆ ಅದರ ಪರಿಣಾಮವೂ ಉಗ್ರವಾಗುತ್ತ ಹೋಗುವುದು.

ನೇಪಲ್ಸ್‌ನ ಜನತೆ ವೆಸುವಿಯಸ್‌ನಿಂದ ಭಯಭೀತರಾಗುತ್ತಾರೆ; ಜತೆಗೆ ಪ್ರೇಮಿಸಲ್ಪಡುವುದೂ ಇದೆ— ವೆಸುವಿಯಸ್ ಎಂಬುದು ನೇಪಲ್ಸ್ ದೇಶಸ್ಥರಿಗೆ ಶಾಪವೂ ಹೌದು; ವರದಾನವೂ ಹೌದು. ಸಮಯ ಸಮಯದಲ್ಲಿ ಅದು ಅಕ್ಕಪಕ್ಕದ ಪ್ರದೇಶಗಳಲ್ಲಿ ತೋರಿಸುವ ವಿನಾಶಲೀಲೆಗಳನ್ನು ಕೇಳುವಾಗಲೇ ರೋಮಾಂಚವೇಳುತ್ತದೆ. ಪ್ರತಿವರ್ಷ ಸೆಪ್ಟಂಬರ ೧೯ನೆಯ ತಾರೀಕಿನಂದು ನೇಪಲ್ಸ್‌ನ ಪ್ರಜೆಗಳು ತಮ್ಮ ನಗರರಕ್ಷಕ (ಕ್ಷೇತ್ರಪಾಲ?)ನಾದ ಜೆನುಯೇರಿಯಸ್‌ನನ್ನು ಭಕ್ತಿಪುರಸ್ಸರವಾಗಿ ಪ್ರೀತಿಸಿ, ವೆಸುವಿಯಸ್ ವಿಕೋಪಾಗ್ನಿಯನ್ನು ಕಾರದೆ ಶಾಂತಿಯಿಂದ ಕೂಡಿಕೊಂಡಿರಲಿ ಎಂದು ಪ್ರಾರ್ಥಿಸುತ್ತಾರೆ. ಮೇ ತಿಂಗಳಲ್ಲಿಯೂ ಇಂತಹುದೇ ಒಂದು ಉತ್ಸವ ನಡೆಯುತ್ತದೆ. ಆ ದಿನ ಇಗರ್ಜಿಗಳಲ್ಲಿ ಸಂತ ಜೆನುಯೇರಿಯಸ್‌ನಿಗೆ ಕೊಡಿಸಿದ ರಕ್ತಸಮರ್ಪಣೆಯಾಗುತ್ತದೆ. ಪೂಜಾವೇಳೆಯಲ್ಲಿ ಅರ್ಘ್ಯ ಪಾತ್ರೆಯಲ್ಲಿಟ್ಟ ರಕ್ತ ಕರಗಿತೆಂದರೆ, ಮುಂದಿನ ವರ್ಷದಲ್ಲಿ ವೆಸುವಿಯಸ್ ಉತ್ಪಾತಕಾರಿಯಾಗುವುದಿಲ್ಲ ಎಂದವರು ನಂಬುತ್ತಾರೆ. ರಕ್ತವು ಹೆಪ್ಪುಗಟ್ಟಿ ಮುದ್ದೆಯಾಗಿಯೇ ಉಳಿದರೆ ನಾಗರಿಕರ ಮುಖ ಒಣಗಿ ಕಳಾಹೀನವಾಗುವುದು. ಏಕೆಂದರೆ ಅದು ಮರುವರ್ಷ ಒಂದಲ್ಲ ಒಂದು ಪ್ರಮಾಣದಲ್ಲಿ ವೆಸುವಿಯಸ್ ತನ್ನ ಉರಿಯನ್ನು ಕಾರತೊಡಗುವುದು ಎಂಬುದರ ಸಂಕೇತವೆಂಬ ವಿಶ್ವಾಸ ಅವರಲ್ಲಿದೆ.

ನೇಪಲ್ಸ್‌ನ ಸೌಂದರ್ಯಕ್ಕೆ ಕಾರಣೀಭೂತವಾದುದೂ ವೆಸುವಿಯಸ್ ಎಂದು ಹೇಳಬೇಕಾಗುತ್ತದೆ. ಪ್ರಸ್ತುತ ಭೂಮಿಯ ನೆತ್ತಿಯಲ್ಲಿ ಈ ಜ್ವಾಲಾಮುಖಿ ಪರ್ವತ ಇಲ್ಲದಿರುತ್ತಿದ್ದರೆ, ದೇಶದ ಸುಂದರತೆಯೂ ಅರ್ಧದಷ್ಟು ಕಡಿಮೆಯೆನಿಸುತಿತ್ತು. ನೇಪಲ್ಸ್ ಕೊಲ್ಲಿಯನ್ನು ಅಲ್ಲಿನ ಪ್ರಜೆಗಳು ಗೌರವಾದರಗಳಿಂದ ಕಾಣುವುದಕ್ಕೆ ಅದೂ ವೆಸುವಿಯಸ್ಸಿನಿಂದಲೇ ರೂಪಗೊಂಡುದು ಕಾರಣವಾಗಿದೆ. ಪ್ರಪಂಚದ ಸುಂದರತಮ ದ್ವೀಪ ಮತ್ತು ಸುಪ್ರಸಿದ್ಧ ಯಾತ್ರಾಸ್ಥಳವೆನಿಸಿದ ಕಾಪ್ರಿ ಎಂಬುದರ ಉತ್ಪತ್ತಿಗೂ ಈ ಜ್ವಾಲಾಮುಖಿಯೇ ಹೇತುವಾಗಿತ್ತು.

ವೆಸುವಿಯಸ್ ಬರೇ ಒಂದು ಪರ್ವತ. ಅದು ಆಗಾಗ, ತನ್ನ ಆಕಾರವನ್ನು ರೂಪಾಂತರಿಸಿಕೊಳ್ಳುತ್ತದೆ. ಈಗ, ಅದು ೪,೦೦೦ ಅಡಿ ಎತ್ತರವಾಗಿದೆ. ಪ್ರತಿ ವಿಸ್ಫೋಟದ ಸಮಯ ಅದರ ಶಿಖರಗಳು ಮುರಿದು ಬಿದ್ದು ಹೊಸ ಶಿಖರಗಳು ಕಾಣಿಸಿಕೊಳ್ಳುತ್ತವೆ. ಇದರಿಂದಾಗಿ ಅದರ ಉನ್ನತಿಯೂ ಕೆಲವೊಮ್ಮೆ ಹೆಚ್ಚುತ್ತದೆ; ಮತ್ತೆ ಕೆಲವೊಮ್ಮೆ ಕಡಿಮೆಯೆನಿಸುತ್ತದೆ. ಈಗ ಇರುವ ಅದರ ಜ್ವಾಲೆ ಸೂಸುವ ಬಾಯಿಯು ಒಂದು ಮೈಲು ಉದ್ದಗಲವಿದೆ. ಈ ಬಾಯಿಯ ಪಕ್ಕದಲ್ಲಿ ನಿಂತು ಬೆಟ್ಟದ ಸುತ್ತಮುತ್ತ ದೃಷ್ಟಿಹಾಯಿಸಿದರೆ, ಎರಡು ಮೈಲು ವ್ಯಾಸವಿರುವ ಒಂದು ಹಳ್ಳದಂತಿರುವ ಸ್ಥಳವು ತೋರುವುದು. ಮೊಂಟೆ ಸೊಮ್ಮೇ ಎಂದು ಕರೆಯಲ್ಪಡುವ ಇದು ವೆಸುವಿಯಸ್‌ನ ಹಳೆಯ ಉರಿಕಾರುವ ಬಾಯಿಯಾಗಿತ್ತು. ಕ್ರಿ.ಶ. ೭೯ರಲ್ಲಾದ ವಿಸ್ಫೋಟದಲ್ಲಿ ಮೊಂಟೆ ಸೊಮ್ಮೇಯ ಆಗ್ನೇಯ ಭಾಗದ ಗೋಡೆ ಒಡೆಯಿತು. ಇದರಿಂದಲ್ಲಿ ಒಂದು ಹೊಸ ಶೃಂಗವು ನಿರ್ಮಿತವಾಯಿತು. ಸದ್ಯದ ಉರಿಯುವ ಬಾಯಿ ಈ ನೂತನ ಶಿಖರದಲ್ಲಿದೆ.

ಕ್ರಿ. ಶ. ೭೯ರಲ್ಲಿನ ವೆಸುವಿಯಸ್ ವಿಸ್ಫೋಟವು ಇತಿಹಾಸದಲ್ಲಿಯ ಬೃಹತ್ ದುರ್ಘಟನೆಗಳಲ್ಲಿ ಒಂದಾಗಿ ವರ್ಣಿತವಾಗಿದೆ. ಪಾಂಪೆ, ಹೆರ್ಕ್ಯುಲೇನಿಯಸ್ ಮತ್ತು ಸ್ಟ್ರೆಬಿಯೂ ಎಂಬ ಜನಘನ ಸಂಪದ್ಭರಿತ ನಗರಗಳು ಧ್ವಂಸಾವಶೇಷಗಳಾದುವು. ಈ ವಿಸ್ಫೋಟಕ್ಕೆ ಕೆಲವು ವರ್ಷಗಳಿಗೆ ಮೊದಲಿಂದ ವೆಸುವಿಯಸ್ ನಿದ್ರಿಸಿತ್ತು. ಆದರ ಜ್ವಾಲಾಮುಖಿವರ ಮೊಂಟೆಸೊಮ್ಮೇಯ ಮೇಲೆ ದಟ್ಟವಾದ ಅರಣ್ಯ ಬೆಳೆದಿತ್ತು. ರೋಮನ್ ಸರದಾರರು ಕಾಡುಹಂದಿಯನ್ನು ಇಲ್ಲಿ ಬೇಟೆಯಾಡುತಿದ್ದರು. ದಾಸ-ವಿದ್ರೋಹದ ವೇಳೆ ವಿದ್ರೋಹೀನಾಯಕನಾಗಿದ್ದ ಸ್ಪಾರ್ಟಕಸ್ ಎಂಬವನು ತನ್ನ ಅನುಯಾಯಿಗಳೊಡನೆ ತಲೆತಪ್ಪಿಸಿ, ಈ ಕಾಡಿನಲ್ಲಿ ಬಂದು ಅಡಗಿದ್ದ ವೇಳೆ, ಮೂರು ಸಾವಿರ ರೋಮನ್ ಸಿಪಾಯಿಗಳು ಅವರ ರೋಮವನ್ನು ಅಲ್ಲಾಡಿಸುವುದಕ್ಕೂ ಸಮರ್ಥರಾಗಿರಲಿಲ್ಲವೆಂದು ಹೇಳುತ್ತಾರೆ. ವೆಸುವಿಯಸ್‌ನ ಪರ್ವತ ಸೋಪಾನಾವಳಿಯಲ್ಲಿ ಅಂಜೂರದ ಪೊದೆಗಳು ಬೆಳೆದಿದ್ದು, ಇದರ ಶರಾಬು 'ವೆಸುವಿಯಸ್' ಎಂಬ ಹೆಸರಿನಿಂದ ರೋಮನ್ ಸಾಮ್ರಾಜ್ಯದಲ್ಲಿ ಸುಪ್ರಸಿದ್ಧವಾಗಿತ್ತು.

ಕ್ರಿ. ಶ. ೬೩ರಲ್ಲಿ ನೇಪಲ್ಸ್ ಕೊಲ್ಲಿಯಲ್ಲಿ ಭೂಕಂಪ ನಡೆದಾಗ, ದೇಶದ ಬಹು ದೊಡ್ಡ ವಿಜ್ಞಾ[...] ಗಳಿಗೂ ಅದು ಹದಿನಾರು ವರ್ಷಾ[...] ತರ ಸಂಭವಿಸಲಿರುವ ಭಯಾನಕ ವಿಸ್[...] ಟದ ಭೂಮಿಕೆಯಾಗಿತ್ತು ಎಂದು ತಿಳಿ[...] ಲಿಲ್ಲ. ಆದುದರಿಂದಾಗಿ, ೭೯ನೆ ಆ[...] ತಿಳರಂದು ಪರ್ವತದಲ್ಲಿ ಅದ್ವಿತೀಯ ಕೋ[...] ಲಾಹಲವೆದ್ದಾಗ, ಭೂಕಂಪದೊಡನೆ [ವೆ]ಸುವಿಯಸ್‌ನ ಶಿಖರವು ಮುರಿದು ಹೋ[...] ದಾಗ, ಪ್ರಲಯಕಾಲವೇ ಬಂದಿತು ಎಂ[...] ಜನರು ಗೊಂದಲವೆಬ್ಬಿಸಿದರು.

ಈ ವಿಸ್ಫೋಟದಲ್ಲಿ ಲಾವಾರಸ ಹ[...] ಚಿಮ್ಮಲಿಲ್ಲ; ಆದರೆ, ಕಲ್ಲು ಮತ್ತು [...] ಕಿಗಳ ಮಳೆ ಸುರಿದು, ಪಾಂಪೆ, ಹೆ[ರ್ಕ್ಯು]ಲೇನಿಯಸ್, ಮತ್ತು ಸ್ಟ್ರೆಬಿಯೂ ನ[ಗರ]ಗಳು ಹೂತು ಹೋದುವು. ನೂರಾ[...] ಮೈಲು ದೂರದ ವರೆಗೆ ಹೊಗೆಯು [...] ಯಿತು. ರೋಮ್ ನಗರದಲ್ಲಿ ಸೂರ್ಯ[...] ದರ್ಶನವೇ ಆಗಲಿಲ್ಲ. ಗಾಳಿಯೊಡನೆ [...] ಯ್ಗೆಯೂ ಹಾರಿ ಭೂಮಧ್ಯ ಸಮುದ್ರ[...] ಮತ್ತೊಂದು ತೀರದ ಸಿರಿಯಾ ವ[...] ಈಜಿಪ್ತಗಳಲ್ಲಿ ಸೇರಿಕೊಂಡಿತು. ಕಿರಿ[ಯ] ಪ್ಲಿನಿ ಎಂಬವನು ಈ ಘಟನೆಯನ್ನು [ಪ್ರ]ತ್ಯಕ್ಷ ಕಂಡಿದ್ದು ಅದನ್ನು ವರ್ಣಿಸಿ[ದ]ವನು.

ಅಂದಿನಿಂದ ಇದು ವರೆ[ಗಿನ] ೧೮ ಶತಮಾನಗಳಲ್ಲಿ ವೆಸು[ವಿ]ಯಸ್‌ನಲ್ಲಿ ಸುಮಾರು ೫೦ ವಿಸ್ಫೋ[ಟ]ಗಳಾಗಿವೆ. ಇವುಗಳಲ್ಲಿ ಕ್ರಿ. ಶ. ೧೬೩೧ರ ಒಳಗೆ ಆದುದು ಕೇವಲ ನಾಲ್ಕು ಮಾ[...] ೪೭೨ರಲ್ಲಿ ಘಟಿಸಿದ ವಿಸ್ಫೋಟವು ಅತ್ಯು[...] ಗ್ರವಾಗಿತ್ತು. ಒಬ್ಬ ಇತಿಹಾಸಕಾ[ರನ] ಹೇಳಿಕೆಯಂತೆ, ಆಗ ವೆಸುವಿಯಸ್‌ನ[...] ಅತಿ ಎತ್ತರವಾದ ಉರಿಯ ಜ್ವಾಲೆಗ[ಳು] ಎದ್ದು, ಅದನ್ನು ರೋಮಿನ ಸ[...] ಪೀಟರ್‌ನ ಇಗರ್ಜಿಯಿಂದಲೂ ಕಾ[ಣ]ಬಹುದಿತ್ತು.

೧೬೩೧ರಲ್ಲಿ ನಿರಂತರ ನಲುವತ್ತು [ದಿ]ನಗಳ ವರೆಗೆ ವೆಸುವಿಯಸ್ ಅಗ್ನಿವ[ರ್ಷ] ಸುರಿಸುತ್ತ ಇತ್ತು. ಇದರಿಂದ ಆಯಾ[ಸ]ಗೊಂಡ ಪರ್ವತ ಮುಂದಿನ ಏನೂ[...] ವರ್ಷ ಕೂಡಲು ಅಲ್ಲಾಡಿಸಿಲ್ಲ. ಅ[...] ಪುನಃ ಕಾಡುಹಂದಿಗಳು ಸಂಚರಿಸತೊ[ಡ]ಗಿದುವು; ಅಲ್ಲಲ್ಲಿ ಬೇಸಾಯಗಾರ[ರು] ಕಾಡನ್ನು ಕಡಿದು ವ್ಯವಸಾಯವನ್ನು ಮಾಡತೊಡಗಿದರು. ಈ ಬಾಯಿಯ

(೯ನೇ ಪುಟ ನೋಡಿರಿ)



ಸಿಗರೇಟುಗಳನ್ನು ಸರಿಯಾಗಿ ಗಣಿಸಬಲ್ಲ ಈ ಯಂತ್ರವನ್ನು ಇಂಗ್ಲೆಂಡಿನ ಇಲೆಕ್ಟ್ರೋನಿಕ್ಸ್ ಇನ್ಸ್ಟ್ರುಮೆಂಟ್ಸ್, ಲಿ. ಎಂಬ ಸಂಸ್ಥೆಯು ತಯಾರಿಸಿದೆ. ಏಕಪ್ರಕಾರವಾಗಿ ಹೊಗೆಸೊಪ್ಪನ್ನು ತುಂಬಿ ಸಿಗರೇಟುಗಳನ್ನು ತಯಾರಿಸುವ ಯಂತ್ರಭಾಗವೂ ಇದಕ್ಕೆ ಹೊಂದಿಕೊಂಡಿದೆ.

ಬೇಕಾಗಿದ್ದಾರೆ

ಕನಿಷ್ಟ ಒಂದೆರಡು ವರ್ಷಗಳ ಮಾಹಿತಿ ಇರುವ ಕಂಪೋಸಿಟರ್ ಮತ್ತು ಬೈಂಡರರು ಬೇಕಾಗಿದ್ದಾರೆ,

ಅಲ್ಲದೆ ಕಂಪೋಸಿಂಗ್, ಬೈಂಡಿಂಗ್ ಮೊದಲಾದ ವಿಭಾಗಗಳಲ್ಲಿ ತರಬೇತಿ ಬಗ್ಗೆ ಕೆಲವು ಹುಡುಗರನ್ನೂ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

NAVAYUGA ENTERPRISE LTD., UDIPI.

NOTICE.

The Register of members and share transfer books of the Company will remain closed from 5th July to 20th July 1960 (both days inclusive).

(By order of the board)

Office of the Company
Palukote, Udipi.
Date 26—5—1960.

K. Honnayya Shetty,
Managing Director.

ನಿಮಗಿದು ಗೊತ್ತೆ?

ಇವನು ಎಲ್ಲರಿಗಿಂತಲೂ ಸುಖಿ!

ಆಂಗ್ಲ ಭಾಷೆಯ ಪ್ರಸಿದ್ಧ ಕಾದಂಬರಿ ಲೇಖಿಕೆ ಶ್ರೀಮತಿ ಮೇರಿ ಕೊರೇಲೀ ಯವರು ತನ್ನ ಜೀವನದ ಅನುಭವಗಳನ್ನು ಈ ಲೇಖನದಲ್ಲಿ ವಿವರಿಸಿದ್ದಾರೆ.

ಸಮಸ್ತ ಸುಖಗಳ ಸಾರವು ವೈಚಾರಿಕ ಪಾವಿತ್ರ್ಯ, ಸತ್ಯಸಂಧತೆ ಮತ್ತು ಸ್ವಾತಂತ್ರ್ಯದಲ್ಲಿ ಅಡಗಿದೆ ಎಂದು ೧೬ನೆಯ ಶತಮಾನದ ಸುಪ್ರಸಿದ್ಧ ಕವಿ ಸರ್ ಥಾಮಸ್ ವಾಟನ್ ಎಂಬವರು ಬರೆದಿದ್ದಾರೆ. ಓರ್ವ ನಿಜವಾದ ಲೇಖಕನಲ್ಲಿ ಈ ಮೂರೂ ಸಾಕಷ್ಟು ಮನೆಮಾಡಿರುತ್ತವೆ. ಅವನು ತನ್ನ ವಿಚಾರಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದರೊಡನೆ ಅಭಿವ್ಯಕ್ತಿ ಕಲೆಯಲ್ಲಿಯೂ ನಿಪುಣನೆನಿಸುತ್ತಾನೆ. ಓರ್ವ ಲೇಖಕನನ್ನು ಆತ ಬಯಸದ ಹೊರತು ಯಾರೊಬ್ಬನಾದರೂ ಯಾವುದೇ ಬಂಧನದಲ್ಲಿ ಸಿಕ್ಕಿಸಲಾರನು. ಪ್ರಕೃತಿ ಮತ್ತು ಕಲ್ಪನಾಲೋಕಗಳೆರಡರ ಬಾಗಿಲುಗಳೂ ಆತನಿಗೆ ಉತ್ತರಾಯಣ ಕಾಲದಲ್ಲಿನ ಸ್ವರ್ಗದ್ವಾರಗಳಂತೆ, ಸದಾ ತೆರೆದಿರುತ್ತವೆ. ಒಂದು ವೇಳೆ ಮುಚ್ಚಿದ್ದರೂ ಆತ ತನ್ನ ಲೇಖನಿಯ ಕೀಲಿಕೈಯಿಂದ ಅದನ್ನು ತೆರೆಯಬಲ್ಲನು. ತನ್ನ ಸ್ಥಾನದ ಮಹತ್ವವನ್ನು ಅರಿತು, ಅದನ್ನು ಉಳಿಸಿಕೊಳ್ಳಲು ಸದಾ ಪ್ರಯತ್ನಶೀಲನಾಗುವ ಲೇಖಕನು ಕೋಟ್ಯಂತರ ಹೃದಯಗಳನ್ನು ಗೆದ್ದುಕೊಳ್ಳುತ್ತಾನೆ. ಹಾಗಿರುವಾಗ ಪರರ ಅಧೀನತ್ವವನ್ನು ಸ್ವೀಕರಿಸುವ ಪ್ರಶ್ನೆಯಾದರೂ ಎಲ್ಲಿಯದು? ನಿಜವಾಗಿಯೂ ಲೇಖಕನ ಪದವಿ ಪ್ರತಿಷ್ಠಾಪೂರ್ಣವಾಗಿದೆ; ಅದು ಅತುಲನೀಯವಾಗಿದೆ.

ಕೆಲವು ಲೇಖಕರು ಈ ವಿಚಾರವನ್ನು ಒಪ್ಪದಿರಬಹುದು. ಈ ಲೇಖನ ವೃತ್ತಿಯಲ್ಲಿ ಅಯಶಸ್ವಿಯಾದವರು ಮತ್ತು ತಮ್ಮ ಜೀವನವನ್ನು ಅಸಂತೋಷದ ತವರ್ಮನೆಯನ್ನಾಗಿಸಿಕೊಂಡವರು ಈ ಸಾಲಿಗೆ ಸೇರುತ್ತಾರೆ. ಪ್ರಕಾಶಕರಿಂದ ನೋಯಿಸಲ್ಪಟ್ಟ ಲೇಖಕರು, ತಮ್ಮ ಕೃತಿಗಳನ್ನು ತರಕಾರಿಗಳಂತೆ ಮಾರುವವರು ಮತ್ತು ಪ್ರಸಿದ್ಧಿಗಾಗಿ ಶ್ರೀಮಂತರ ಸುತ್ತಮುತ್ತ ಪ್ರದಕ್ಷಿಣೆ ಬರುವವರೂ ಈ ಶ್ರೇಣಿಯಲ್ಲಿಯೇ ಬರುತ್ತಾರೆ. ಆದರೂ ಈ ಬಗೆಯ ಲೇಖಕರ ದೃಷ್ಟಿಕೋಣವು ಪರಿವರ್ತನೆಗೊಳ್ಳಲು ಹೆಚ್ಚು ಸಮಯ ಬೇಕಾಗುವುದಿಲ್ಲ; ದೃಷ್ಟಿ ಬದಲಿದೊಡನೆಯೇ ಅವರ ಅದೃಷ್ಟವೂ ರೂಪಾಂತರಗೊಳ್ಳುತ್ತದೆ.

ಈ ಸಂದರ್ಭದಲ್ಲಿ ರಾಬರ್ಟ್ ಬರ್ನ್ಸ್‌ರವರ ಕಟು ಅನುಭವಗಳ ಸ್ಮರಣೆಯಾಗುತ್ತದೆ. ಮೊದಮೊದಲಿಗೆ ಸಮಾಜದ ಪ್ರತಿಷ್ಠಿತ ಹಾಗೂ ಪ್ರಭಾವಶಾಲಿ ನಾಯಕರು ಅವರನ್ನು ಆದರಿಸಿದರು. ಆದರೆ, ಕೊನೆಗೆ, ಅವರು ರುಗ್ಣಶಯ್ಯೆಯಲ್ಲಿ ಮಲಗಿ, ಮೃತ್ಯುವನ್ನು ಪ್ರತೀಕ್ಷಿಸುತ್ತ ಕ್ಷಣ ಗಣಿಸುತ್ತಿರುವಾಗ, ಅವೇ ಜನರು ಅವರ ಭಾಗ್ಯಕ್ಕೇನೇ ಅವರನ್ನು ಒಪ್ಪಿಸಿಬಿಟ್ಟು ತಾವು ದೂರನಿಂತರು. ನಿಸ್ಸಹಾಯಕರಾದ ರಾಬರ್ಟರು ಕೇವಲ ಐದೇ ಐದು ಪೌಂಡುಗಳಿಗಾಗಿ ಒಬ್ಬ ಪ್ರಕಾಶಕನ ಮುಂದೆ ಕೈಚಾಚಬೇಕಾಯಿತು. ಇಂತಹ ದುಸ್ಥಿತಿಯಲ್ಲಿ ಅವರನ್ನು ಗೌರವಾದರಗಳಿಂದ ಕಾಣುತಿದ್ದ ಯಾವನೇ ಮಿತ್ರ ಸಹಾಯ ಹಸ್ತ ನೀಡಲು ಮುಂಬರಲಿಲ್ಲ!

ಒಬ್ಬ ಲೇಖಕನಿಗೆ ಸಫಲತೆಯು ಲಭಿಸಬೇಕಾದರೆ, ಆತ ನಾಮಾಂಕಿತ ನಾಯಕ ಮಣಿಗಳ ಮರೆಹೋಗಬೇಕಾಗಿ ಬಂದರೆ, ಅದಕ್ಕಿಂತ ಕೀಳಾದ ದುರದೃಷ್ಟ ಬೇರೊಂದಿಲ್ಲವೆನ್ನಬೇಕು. ಈ ರೀತಿ ಬಂಧನಕ್ಕೆ ಗುರಿಯಾದ ಲೇಖಕನು ತನ್ನ ಜೀವಮಾನದಲ್ಲಿ ಎಂದಿಗೂ ಸಂತೋಷವನ್ನು ಪಡೆಯುವ ಬದಲು, ಮನಸ್ಸಿನ ಒಳಒಳಗೇ ಅಶಾಂತಿಯಿಂದ ಕೊರೆಯಲ್ಪಡುತ್ತಾನೆ. ಇದರಿಂದ ಆತನ ಅಂತರಿಕ ಶಾಂತಿಗೆಡುವುದು. ಇಂತಹ ಪರಿಸ್ಥಿತಿಯಲ್ಲಿ ಕಲ್ಪನಾಸಾಗರದಲ್ಲಿ ವಿಹರಿಸುವುದಾಗಲೀ, ವಿಚಾರಸ್ವಾತಂತ್ರ್ಯವನ್ನನುಭವಿಸುವುದಾಗಲೀ ಆತನಿಂದ ಸಾಧ್ಯವಾಗುವುದಿಲ್ಲ. ಇದರಿಂದಾಗಿ ಆತನ ಕಲ್ಪನೆಯು ವಿಚಾರವೂ ಕಲುಷಿತವಾಗುತ್ತವೆ. ಏಕಾಕೀ ಮತ್ತು ನಿರಾಶಾ ಮನಸ್ಸಿಗೆ ಪ್ರೇರಣೆಯನ್ನೂ ವ್ಯಥಿತ ಹೃದಯಕ್ಕೆ ಸ್ವಾಂತನವನ್ನೂ ನೀಡಬಲ್ಲ ಲೇಖಕನ ಲೇಖನಿ ಸಾರ್ಥಕವಾಯಿತೆಂದು ತಿಳಿಯಬೇಕು. ಈ ರೀತಿ ಕಾರ್ಯವೆಸಗದ ಲೇಖಕನು ಉತ್ತಮ ಲೇಖಕನೆನಿಸುವುದಿಲ್ಲ. ತತ್ಕಾರಣದಿಂದಾಗಿ, ಆವನಿಗೆ ಜೀವನದಲ್ಲಿ ಸತ್ಯವೆನಿಸಿದ ಆನಂದದ ಅನುಭವವಾಗುವುದಿಲ್ಲ.

ಲೇಖಕನಿಗೆ ಒಂದೆಡೆ ದೈವೀವರದಾನದ ರೂಪದಲ್ಲಿ ಮಹಾನ್ ಆತ್ಮಿಕ ಸುಖವು ದೊರೆಯುವುದು; ಮಾತ್ರವಲ್ಲ ಇನ್ನೊಂದೆಡೆಯಿಂದ ಅನೇಕಾನೇಕ ಸಂಘರ್ಷಗಳನ್ನು ಆತ ಜೀವನಾವಧಿಯಲ್ಲಿ ಎದುರಿಸಬೇಕಾಗುತ್ತದೆ. ಈ ಘರ್ಷಣೆ ಲೇಖನ ವ್ಯವಸಾಯದಿಂದಲೇ ಹುಟ್ಟುವುದರಿಂದ, ಇವುಗಳಿಂದ ಬೇಗನೇ ಬಿಡುಗಡೆಯಾಗುವಂತಿಲ್ಲ. ಲೇಖಕನ ಜೀವನದ ಬಹು ಕಠಿನ ಪ್ರಸಂಗವೆಂದರೆ ಇದೇ ಹೊಡೆತವನ್ನು ತಿಂದು, ಸನ್ನಿವೇಶಗಳ ಕಠಿನತೆಯನ್ನು ಸಹಿಸಿಕೊಂಡು, ಕಾದ ಬಂಗಾರದಂತೆ ಲೇಖಕನು ತುಸು ಕಠೋರನಾಗಲೇ ಬೇಕಾಗುತ್ತದೆ. ಲೇಖಕನ ಜೀವನವನ್ನು ಅನೇಕ ಕಷ್ಟ, ಪೀಡೆ, ನಿರಾಶೆ ಹಾಗೂ ಕಠಿನತೆಗಳು ಆವರಿಸುತ್ತ ಇರುತ್ತವೆ. ಆದರೂ ಉತ್ತಮ ಲೇಖಕನು ಬೇರೆಯವರ ಸಹಾಯವನ್ನು ಬಯಸದೆ ಅಭಾವಗ್ರಸ್ತ ಜೀವನವನ್ನು ಬದುಕುತ್ತಾನೆ; ಇದರಲ್ಲಿಯೇ ಅಧಿಕ ಸಂತೋಷವನ್ನು ಕಾಣುತ್ತಾನೆ. ಹಾಗೆಯೇ ಕಲ್ಪನೆ ಮತ್ತು ಆದರ್ಶಗಳನು ಉಚ್ಚಸ್ತರದಲ್ಲಿರಿಸಿದ ಲೇಖಕ ಸಾಂಸಾರಿಕ ವೈಭವಗಳಿಗೆ ಮಹತ್ವವೀಯುವುದಿಲ್ಲ. ಮಣಿಖಚಿತ ಮಹಲುಗಳಲ್ಲಿ ಪ್ರತಿಭೆಯು ಜನಿಸುವುದಾದರೂ ಹೇಗೆ?

ತನ್ನ ಕಾಲದ ಲೇಖಕರ ಈರ್ಷ್ಯಾಭಾವವೇ ನಿಜ ಲೇಖಕನನ್ನು ಕಾಡುವ ಅದೃಶ್ಯ ಪಿಶಾಚಿಯಾಗಿದೆ. ಹೀನ ವಿಚಾರವಂತರು ಉಚ್ಚ ವಿಚಾರವಾದಿಗಳನ್ನು ಈರ್ಷ್ಯೆಯಿಂದ ಕಾಣುವುದು ಪ್ರಕೃತಿನಿಷ್ಠವಾಗಿದೆ. ಮೊದಮೊದಲಿಗೆ ಉಚ್ಚರು ನಿಂದೆಯನ್ನೂ ತಿರಸ್ಕಾರವನ್ನೂ ಪಡೆಯಬೇಕಾಗುತ್ತದೆ.

"ನೀನು ಮಹಾ ವಿಚಾರವಾದಿಯಾಗಬೇಕಾದರೆ, ನಿನ್ನ ದಾರಿಯಲ್ಲಿ ನೀನೊಬ್ಬನೇ ಮುಂದುವರಿ. ಅಶಕ್ತನಾಗಿ, ಪ್ರಪಂಚದೊಡನೆ ಸಮಾಧಾನಮಾಡಿಕೊಳ್ಳುವ ಪ್ರಯಾಸ ವಹಿಸಬೇಡ" ಎಂದು ಶ್ರೀ ಎಮರ್ಸನರು ಉದ್ಗರಿಸಿದ್ದಾರೆ. ಸಾಮಾನ್ಯವಾಗಿ ಉನ್ನತ ಮಟ್ಟದ ಎಲ್ಲ ಲೇಖಕರೂ ಕೆಲವೊಂದು ಸಾಮಾನ್ಯ ವರ್ಗದವರ ಈರ್ಷ್ಯಾ ದೃಷ್ಟಿಯನ್ನು ಸಹಿಸಲೇ ಬೇಕಾಗಿದೆ. ಲೇಖಕರ ಜೀವನದಲ್ಲಿ ಇಂತಹ ಆರೋಪಗಳಿರುವುದೂ ಸ್ವಾಭಾವಿಕವಾಗಿದೆ. ಜೀವನದಲ್ಲಿ ಆದರ್ಶಗಳನ್ನು ಉನ್ನತಗೊಳಿಸುತ್ತ ಬಂದಂತೆ ಆತನು ಅನುಭವಿಸಬೇಕಾದ ಕಷ್ಟಗಳೂ ಹೆಚ್ಚುತ್ತ ಹೋಗುತ್ತವೆ. ಆದರೆ, ಇವೆಲ್ಲದರ ಪ್ರಭಾವವು ಲೇಖಕನ ಮಾನಸಿಕ ಶಾಂತಿಯ ಮೇಲೆ ಪರಿಣಾಮ ಬೀರಬಾರದು. ಇವೆಲ್ಲವನ್ನೂ ಲೇಖಕನು ತನ್ನ ಉತ್ಥಾನದ ಸೋಪಾನಗಳೆಂದು ತಿಳಿಯಬೇಕು. ಧೈರ್ಯಗೆಡಿಸುವ ಎಲ್ಲ ಕಠಿನತೆಗಳನ್ನೂ ಸಹನೆಯಿಂದ ತಾಳಿಕೊಂಡ ಲೇಖಕನು ಮಾತ್ರ ಸಫಲನಾಗುತ್ತಾನೆ. ಅತ್ಯಂತ ಭಾವುಕರಾದವರು ಇವುಗಳೆದುರು ನಿರುತ್ಸಾಹಿತರಾಗುವರೇನೋ ನಿಜ. ಕೆಲವೊಮ್ಮೆ ಈರ್ಷ್ಯಾಲುಗಳ ದೆಸೆಯಿಂದಾಗಿ ಪ್ರಸಿದ್ಧ ಲೇಖಕರ ಲೇಖನಿಯ ಮೊನೆ ಮೊಂಡಾಗುವುದು ಮಾತ್ರವಲ್ಲ, ಲೇಖಕರ ಪ್ರಾಣವನ್ನೂ ಅದು ಅಪಹರಿಸುವುದುಂಟು.

ಲೇಖಕನು ಕೀರ್ತಿಯ ಬಯಕೆಯಿಂದ ದೂರವಿರಬೇಕು. ಕೀರ್ತಿ ಗಳಿಸಲು ಸ್ವಪ್ರತಿಭೆಯೊಂದನ್ನುಳಿದರೆ, ಬೇರೆ ಯಾವುದೇ ಬಾಹ್ಯ ವಸ್ತುಗಳ ಆವಶ್ಯಕತೆಯು ಆತನಿಗಿರುವುದಿಲ್ಲ. ಪ್ರಖರ ಪ್ರತಿಭಾವಂತ ಲೇಖಕನನ್ನು ಪ್ರಪಂಚವೇ ದ್ವೇಷಿಸುತ್ತ ಬಂದರೂ, ಆತನು ಅವಶ್ಯ ಯಶಸ್ಸು ಗಳಿಸುತ್ತಾನೆ; ಆದರೆ, ಲೇಖಕನು ಧೈರ್ಯಪೂರ್ವಕವಾಗಿ ತನ್ನ ಕರ್ತವ್ಯವನ್ನು ಮಾಡಿಕೊಂಡು ಬರಬೇಕಾಗಿದೆ.

ಲೇಖಕನು ತನ್ನ ಜೀವನ ತುಂಬ ಆತಂಕ ಸಂಘರ್ಷಗಳನ್ನು ಎದುರಿಸಬೇಕೆಂಬುದು ಸಹಜ. ಆದರೂ ಇಂತಹ ವಿಷಮ ಸನ್ನಿವೇಶಗಳ ನಡುವೆ ಲೇಖಕನು ಅನುಭವಿಸುತ್ತಿರುವ ಆತ್ಮಿಕ ಸುಖ ಮತ್ತು ಆನಂದಗಳನ್ನು ಚಿನ್ನ ಬೆಳ್ಳಿಗಳ ರಾಶಿಯಿಂದಲೂ ಪಡೆಕೊಳ್ಳಲಾಗುವುದಿಲ್ಲ; ಆ ಸುಖಾನಂದಗಳನ್ನು ಯಾರೂ ಅಪಹರಿಸಲಾರರು. ಈ ಆನಂದಾನುಭೂತಿಗಳನ್ನು ಭೌತಿಕ ಸುಖಸಾಧನಗಳೊಡನೆ ಹೋಲಿಸುವುದಾದರೂ ಹೇಗೆ? ಕಲ್ಪನೆ ಮತ್ತು ಅನುಭೂತಿಯ ನೆಲೆಯಿರುವ, ಮಾನವ ಕಲ್ಯಾಣದ ಆದರ್ಶವನ್ನೇ ಮುಖ್ಯವಾಗಿರಿಸಿಕೊಂಡಿರುವ, ತನ್ನ ಜೀವನದ ಸುಖದುಃಖಗಳಂತೆಯೇ ಸಮಾಜದ ತನ್ನ ಪ್ರೀತಿಯ ಪಾಠಕರ ಸದ್ಭಾವನೆಗಳನ್ನೂ ಹೊಂದಿರುವ, ಲೇಖಕನಷ್ಟು ಸುಖಿಯಾದವನು ಬೇರಾರೂ ಇಲ್ಲವೆಂದರೆ, ಅತಿಶಯೋಕ್ತಿಯೆನಿಸದು. ಲೇಖಕನನ್ನು ಎಲ್ಲ ಬಗೆಯ ಕಠಿನತೆಗಳು ಪರಿಶೀಲಿಸಿ, ಆತನ ಧೈರ್ಯ, ಸ್ಥೈರ್ಯ ಮತ್ತು ಶಕ್ತಿ, ಪ್ರತಿಭೆಗಳ ಬಗ್ಗೆ ದೇವಿ ಸರಸ್ವತಿಗೆ ವರದಿಯೊಪ್ಪಿಸಿದ ಮೇಲೆ, ಆಕೆಯು ಆ ವರದಿಯನ್ನು ಕೂಲಂಕಷವಾಗಿ ಅಭ್ಯಸಿಸಿ, "ಈ ಲೇಖಕನು ಸಫಲನಾಗಿದ್ದಾನೆ" ಎಂದು ಘೋಷಿಸಿಬಿಟ್ಟಕೂಡಲೇ ಲೇಖಕನನ್ನು ಸಮಾಜವು ಗುರುತಿಸಿಕೊಳ್ಳತೊಡಗುವುದು. ಕಲುಷಿತ ಅಂಧಕಾರ ಪರಿಪೂರ್ಣ ವಾತಾವರಣದಲ್ಲಿ ಪ್ರಕಾಶಪುಂಜದಂತೆ ಹೊಳೆಯುವವನಿವನೇ ಎಂದು ಜನತೆ ತಿಳಿಯುವುದು.

ಒಬ್ಬ ಅರಬೀ ಸಂತನು ಉದ್ಗರಿಸಿದ್ದಾನೆ—"ಸತ್ಯವನ್ನು ತಾನಾಗಿಯೇ ಕಂಡುಕೊಳ್ಳುವುದು ನಿಜವಾಗಿಯೂ ಒಂದು ಮಹಾಸಂಗತಿಯಾಗಿದೆ. ಆದರೆ, ಪ್ರಪಂಚದಲ್ಲಿ ಅಂತಹನ ಕಡೆಗೆ ಸಹಾನುಭೂತಿಯು ಹರಿಯುವಂತೆ ಮಾಡುವುದು ಮತ್ತೂ ಶ್ರಯಾಸವಾಗಿದೆ" ಈ ಮಾತು ಲೇಖಕನ ವಿಷಯದಲ್ಲಿ ಸಂಪೂರ್ಣ ಅನ್ವಯಿಸುತ್ತದೆ ಅಲ್ಲವೆ?

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಕೃಷ್ಣನವರಿಂದ
ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಜೀವನದಲ್ಲಿ ದುಃಖವು ಕಾಣಿಸಿಕೊಳ್ಳುವ ವರೆಗೆ ಮಾನವನಲ್ಲಿ ಆಶೆಯೆಂಬುದು ತಲೆದೋರುವುದಿಲ್ಲ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೩-೬-'೬೦	೪೩

ಪುನರ್ವಿಮರ್ಶೆ ಅವಶ್ಯ

ಶಿಕ್ಷಣ ಪ್ರಸಾರದತ್ತ ಪ್ರಜಾಸತ್ತೆಯ ಸರಕಾರವು ತೀವ್ರ ಗಮನ ಹರಿಸುವ ಆವಶ್ಯಕತೆಯನ್ನು ನಾವು ಹಿಂದಿನಿಂದಲೂ ಪ್ರತಿಪಾದಿಸುತ್ತ ಬಂದಿದ್ದೇವೆ. ಅಂತೆಯೆ, ಸರಕಾರವು ಮಾಧ್ಯಮಿಕ ಶಿಕ್ಷಣವನ್ನೂ ವಾರ್ಷಿಕ ರೂ. ೧,೨೦೦ಕ್ಕಿಂತ ಕಡಿಮೆ ಆದಾಯವಿರುವವರ ಮಕ್ಕಳಿಗೆ ಉಚಿತವಾಗಿ ನೀಡುವ ನಿರ್ಧಾರ ಮಾಡಿರುವುದನ್ನೂ ಸ್ವಾಗತಿಸಿದ್ದೇವೆ. ಆದರೆ, ವಾರ್ಷಿಕ ರೂ. ೧,೨೦೦ರ ಆದಾಯವೆಂಬುದು ಇಂದಿನ ಕಾಲದಲ್ಲಿ ತೀರ ಅತ್ಯಲ್ಪವೆಂದೂ, ಈ ಮಿತಿಯನ್ನು ಅವಶ್ಯ ಹೆಚ್ಚಿಸಬೇಕೆಂದೂ ನಾವು ಸೂಚಿಸಿದ್ದೇವೆ. ಈಗ ಪುನಃ ಈ ವಿಷಯವನ್ನು ನಾವು ಬಲವಾಗಿ ಪ್ರತಿಪಾದಿಸ ಬಯಸುತ್ತೇವೆ. ವಿದ್ಯಾ ಇಲಾಖೆಯೆಂಬುದು ಬಕಾಸುರನ ಹೊಟ್ಟೆಯೆಂಬುದನ್ನು ಎಲ್ಲರೂ ತಿಳಿದಿರುವರು. ಆದರೂ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ, ಅನಕ್ಷರಸ್ಥರ ತವರೂರಾದ ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕಾಗಿ ಬಹು ವ್ಯಯವನ್ನು ಮಾಡುವುದಕ್ಕೆ ಹಿಂದೆಮುಂದೆ ನೋಡಬಾರದು. ಸರಕಾರ ಕೆಲವೊಂದು ಪ್ರಾಯೋಗಿಕ ಪ್ರಯೋಗಗಳಿಗೇನೇ ಲಕ್ಷಗಟ್ಟಲೆಯ ಹಣವನ್ನು ವ್ಯರ್ಥವಾಗಿ ಹಾಳು ಮಾಡುವುದನ್ನು ಬಿಟ್ಟು, ಪವಿತ್ರವಾದ ವಿದ್ಯಾಕ್ಷೇತ್ರದಲ್ಲಿ ಬಲವತ್ತರವಾದ ಕ್ರಾಂತಿಯನ್ನೆಸಗಲು ತೊಡಗಿದರೆ, ನಮ್ಮ ಮುಂದಿನ ಜನಾಂಗವಾದರೂ ನೆಮ್ಮದಿಯ ಬಾಳನು ಬದುಕಬಹುದು.

ಕರ್ನಾಟಕ ರಾಜ್ಯ ಸರಕಾರವು ರೂ. ೧,೨೦೦ ವಾರ್ಷಿಕ ಆದಾಯವಿರುವವರ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣವನ್ನು ಉಚಿತವಾಗಿ ಕೊಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಆದರೆ, ಮಾಸಿಕ ರೂ. ೧೦೦ (ಇದರಲ್ಲಿ ಪ್ರೊವಿಡೆಂಟ್ ಫಂಡ್ ಇತ್ಯಾದಿಗಳಿಗೆ ನಿಯಮಿತ ವೇತನ ಪಡೆಯುವವರು ಕೊಡಬೇಕಾಗುತ್ತದೆ) ಅಥವಾ ದಿನಕ್ಕೆ ರೂ. ೩ರ ಆದಾಯವು ಪ್ರತಿ ಪ್ರಸಕ್ತದ ಈ ಕಾಲದಲ್ಲಿ ಏನೇನೂ ಇರುವುದಿಲ್ಲ. ನಿಯಮಿತ ವೇತನ ಪಡೆಯದಿರುವವರ ಆದಾಯವೆಷ್ಟು ಎಂಬುದನ್ನು ನಿರ್ಧರಿಸಲು ಯಾವುದೇ ಆಧಾರವಿಲ್ಲದಿರುವುದರಿಂದ, ಸಾಮಾನ್ಯ ಕೆಳವರ್ಗದ ದಿನಕೂಲಿಗಳು ಈ ವಿನಾಯತಿಯನ್ನು ಸುಲಭದಲ್ಲಿ ಪಡೆಯಬಲ್ಲರು. ಆದರೆ, ಶಿಕ್ಷಕರು, ಎನ್. ಜಿ. ಓ.ಗಳು ಮೊದಲಾದ ನಿಯಮಿತ ವೇತನ ಪಡೆಯುವ ನೌಕರರಿಗೆ, ತಮ್ಮ ವೇತನದ ಮೊತ್ತವನ್ನು ಮರೆಮಾಚುವುದು ಸಾಧ್ಯವಿರುವುದಿಲ್ಲ. ಹಾಗಾಗಿ ಇವರು ವಂಚನೆ ನಡೆಸುವ ಸಂಭವವೇ ಬರುವುದಿಲ್ಲ. ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಅವಶ್ಯ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಐದು ಜನರಿರುವ ಒಂದು ಕುಟುಂಬದ ಮಾಸಿಕ ಆದಾಯ ರೂ. ೧೦೦ ಇಲ್ಲವೆಂದಾದರೆ, ಈ ಕಾಲದಲ್ಲಿ ಹೊಟ್ಟೆಬಟ್ಟೆಗಳನ್ನು ಹೊಂದಿಸಿಕೊಳ್ಳುವುದು ಸಾಧ್ಯವೆ? ತೀರ ಬಡತನದಲ್ಲಿಯೇ ಜೀವಿಸುವ ಹೆತ್ತವರು ಹೈಸ್ಕೂಲು ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಲು ಸಮರ್ಥರಾಗಿರುವರೆ? ಪ್ರಾಥಮಿಕ ಶಾಲೆಗಳಲ್ಲಿಯೇ ಕೊನೆಯ ವರೆಗೆ ಅಭ್ಯಾಸ ಮುಂದುವರಿಸದ ಈ ಬಡವರು 'ಉಚಿತ ಶಿಕ್ಷಣ'ದ ರಂಗಿಗೆ ಮಾರುಹೋಗುವುದು ಸರ್ವಥಾ ಸಾಧ್ಯವಿರುವುದಿಲ್ಲ. ೮—೧೦ ವರ್ಷದ ಮಕ್ಕಳಿಗೆ ನಾಲ್ಕಕ್ಷರ ಪ್ರಾಥಮಿಕ ಶಾಲೆಗಳಲ್ಲಿ ಕಲಿಸಿ, ಮುಂದೆ ಸಂಪಾದನೆ ಮಾಡುವ ದಾರಿಗೆ ಅಟ್ಟುವ ತಾಯ್ತಂದೆಯರು ಧಾರಾಳರಾಗಿದ್ದಾರೆ. ಶಾಲೆಗಳಲ್ಲಿ ೧ನೆ ವರ್ಗಕ್ಕೆ ದಾಖಲು ಹೊಂದಿದ ವಿದ್ಯಾರ್ಥಿಗಳು ಮತ್ತು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿದವರ ಪಟ್ಟಿಯನ್ನು ನಾವು ವೀಕ್ಷಿಸಿದರೆ, ಸತ್ಯಸಂಗತಿಯು ಅರಿವಾಗುವುದು. ಆದುದರಿಂದ, ನಮ್ಮ ಸರಕಾರ ಈ ಉದಾರತೆಯನ್ನು ಒಂದೆಡೆ ತೋರಿಸಿ, ಹಿಂದೆಳೆದ, ಕೊಂಡಂತೆಯೇ ಆಗಿದೆ ಎಂದರೆ, ಅತಿಶಯೋಕ್ತಿಯಲ್ಲ. ಸರಕಾರದ ಈ ಯೋಜನೆಯಿಂದ ಬಹಳಷ್ಟು ಜನರಿಗೆ ಲಾಭವಿಲ್ಲ. ಒಂದು ಸಂಸಾರದ ಆಯವೇನೇ ಇದ್ದರೂ, ವೆಚ್ಚವು ಆ ಸಂಸಾರದ ಸದಸ್ಯರ ಸಂಖ್ಯೆಯನ್ನು ಹೊಂದಿಕೊಂಡಿದೆ. ಪುರುಷರು ಮಾತ್ರ ಸಂಪಾದನೆ ಮಾಡಿ ಅದರಿಂದ ಅವರ ಸಂಬಂಧಿಕರು ಕೂರಿ ತಿನ್ನುವ ನಿದರ್ಶನಗಳು ನಮ್ಮಲ್ಲಿ ಧಾರಾಳವಾಗಿವೆ. ಆದುದರಿಂದ ಆದಾಯವನ್ನು ಗಮನಿಸುವಾಗ, ವೆಚ್ಚವನ್ನು ಕಡೆಗಣಿಸುವುದೂ ಅಸಾಧ್ಯವೆ? ನಗರದಲ್ಲಿ ಮಾಸಿಕ ರೂ. ೧೦೦ ವೇತನದಲ್ಲಿ ದುಡಿಯುವ ಒಬ್ಬನ ಮೂರು ಮಕ್ಕಳು ಹೈಸ್ಕೂಲು-ಕಾಲೇಜುಗಳ ಶಿಕ್ಷಣ ಪಡೆಯಬೇಕಾದರೆ, ಆತ ಅದಕ್ಕಾಗಿ ತನ್ನ ಮುಂಗಡಪತ್ರದಲ್ಲಿ ಕಾದಿರಿಸಬೇಕಾದ ಮೊತ್ತವೆಷ್ಟಾಗಬಹುದು? ಉಳಿದುದರಲ್ಲಿ ಐದು ಜನ ಹೊಟ್ಟೆ ತುಂಬ ಉಣ್ಣುವುದು ಸಾಧ್ಯವೆ? ಮನೆ ಬಾಡಿಗೆ, ಬಟ್ಟೆಬರೆ, ದೀಪ ಇತ್ಯಾದಿಗಳ ಬಿಲ್ಲು ತೆರಲು ಆತ ಶಕ್ತನಾದಾನೆ? ಇವೆಲ್ಲ ಪ್ರಶ್ನೆಗಳನ್ನೂ ನಾವು ಅವಶ ಲಕ್ಷ್ಯಿಸಬೇಕು. ಪ್ರತಿಯೊಂದು ಸಾಮಾನಿನ ಬೆಲೆಯೂ ನಿಮಿಷನಿಮಿಷಕ್ಕೆ ಏರುತ್ತಿರುವ ಈ ಕಾಲದಲ್ಲಿ ರೂ. ೧೦೦ರ ಮಾಸಿಕ ಆದಾಯ ಪಡೆವವ ಎಂದರೆ, ಒಬ್ಬ ಬಡವ—ಮರ್ಯಾದೆಗಾಗಿ ಹಗಲಿರುಳು ಹೋರಾಡಿ ದುಃಖಜೀವನವನ್ನು ಬಾಳುವವ ಎಂದು ಅರ್ಥ.

ಆದಾಯಕರ ಮಿತಿಯನ್ನು ಒಬ್ಬನ ಆದಾಯವು ವಾರ್ಷಿಕ ರೂ. ೩,೦೦೦ದ ವರೆಗೆ ಮತ್ತು ಆತನಿಗೆ ಮಕ್ಕಳಿದ್ದರೆ ರೂ. ೩,೬೦೦ರ ವರೆಗೆ ಹೇರಿದಿರುವುದನ್ನು ನಾವು ಎತ್ತಿ ಹಿಡಿಯುವುದಾದರೆ, ಉಚಿತ ಶಿಕ್ಷಣದ ಯೋಜನೆಯನ್ನು ಸರಕಾರವು ಉದಾರ ದೃಷ್ಟಿಯಿಂದ ಪುನರ್ವಿಮರ್ಶಿಸಿ ರೂ. ೧,೨೦೦ ವಾರ್ಷಿಕ ಆದಾಯದ ಮಿತಿಯನ್ನು ರೂ. ೩,೬೦೦ಕ್ಕೆ ಏರಿಸುವುದು ನ್ಯಾಯೋಚಿತವಾಗಿದೆ. ಹೀಗೆ ಮಾಡಿದರೆ ಕಡಿಮೆ ವೇತನ ಪಡೆಯುವ ಶಿಕ್ಷಕರು ಮತ್ತು ಎನ್. ಜಿ. ಓ. ಗಳಿಗೂ ಈಗ ಕಳೆದು ಕೊಂಡ ಸೌಲಭ್ಯ ಲಭಿಸಿದಂತಾಗುವುದು. ಆದುದರಿಂದ ನಮ್ಮ ರಾಜ್ಯ ಸರಕಾರವು ಈ ಬಗ್ಗೆ ತೀವ್ರಾಸಕ್ತಿಯನ್ನು ತೋರಿ, ತನ್ನ ಧೋರಣೆಯನ್ನು ಪುನರ್ವಿಮರ್ಶಿಸುವುದು ಅತ್ಯವಶ್ಯ.

ಸಂಕ್ಷಿಪ್ತ ಸುದ್ದಿಗಳು

ಸಂಚಾರ ನಿಂತಿತು

ದೂರ ಪ್ರಾಚ್ಯದ ಸಂದರ್ಶನವನ್ನು ತೊಡಗಿರುವ ಅಮೆರಿಕನ್ ಅಧ್ಯಕ್ಷ ಐಸನ್ ಹಾವರರು ತನ್ನ ಪೂರ್ವನಿಯೋಜಿತ ಜಪಾನ ಸಂಚಾರವನ್ನು ನಿಲ್ಲಿಸಿದ್ದಾರೆ. ಜಪಾನದಲ್ಲಿ ನಡೆಯುತ್ತಿರುವ ಅಮೆರಿಕಾ ಪ್ರತಿರೋಧ ಆಂದೋಲನವು ಹಿಂಸಾಚಾರಕ್ಕಿಳಿದು ತುಂಬ ಅನಾಹುತಗಳನ್ನು ನಡೆಸಿದುದರಿಂದ, ಜಪಾನ ಪ್ರಧಾನಿ ಶ್ರೀ ಕಿಶಿಯವರ ಅಪೇಕ್ಷೆಯನ್ನ... ಶ್ರೀ ಐಕರು ಮನ್ನಿಸಿರುವರು; ಈ ಮಧ್ಯೆಯೇ ಅಮೆರಿಕಾ—ಜಪಾನ ಭದ್ರತಾ ... ಪ್ಪಂದವು ಸ್ವಯಂ ಮಂಜೂರಾಗಿ ಬಿಟ್ಟಿದೆ. ಆಂದೋಲನಗಾರರು ರೊಚ್ಚಿನಿಂ... ಕೂಡಿದ್ದು ತಮ್ಮ ಗುರಿಯನ್ನು ಸಾಧಿಸುವತ್ತ ಧಾವಿಸುತ್ತಿದ್ದಾರೆ. ಐಕರಾದರ ... ಜಪಾನವನ್ನುಳಿದ ನಿಯೋಜಿತ ರಾಷ್ಟ್ರಗಳನ್ನು ಸಂದರ್ಶಿಸಿರುವರು. ಫಾರ್ಮೋಜಾದಲ್ಲಿ ಮಾತನಾಡಿದ ಅವರು ಅಮೆರಿಕವು ಫಾರ್ಮೋಜಾದ ಕೈಯೆಂದಿಗೂ ... ಡುವುದಿಲ್ಲವೆಂಬ ಭರವಸೆಯಿತ್ತಿದ್ದಾರೆ. ಈ ನಡುವೆ ಪ್ರಧಾನಿ ಕಿಶಿಯವರು ರಾಜೀನಾಮೆಯೀಯುವರೆಂಬ ವದಂತಿಯು ... ಹರಡಿದೆ.

ಪ್ರಸಾದರ ಸಂಚಾರ

ಕಳೆದ ಬಾರಿ ರಶ್ಯನ್ ಅಧ್ಯಕ್ಷರು ಭಾರತವನ್ನು ಸಂದರ್ಶಿಸಿ ಹೋದ ನಂತರ ಈಗ ಭಾರತದ ರಾಷ್ಟ್ರಪತಿಯವರು ರಶ್ಯ ಸಂಚಾರದಲ್ಲಿ ಉದ್ಯುಕ್ತರಾಗಿದ್ದಾರೆ. ಈ ಭೇಟಿಯು 'ಸಂದಾಯ ಸಂದರ್ಶನ'ವೆನ್ನಬಹುದಾದರೂ ಸೌಹಾರ್ದದ ಹಿನ್ನೆಲೆಯೂ ಈ ಸಂದರ್ಶನಕ್ಕಿದೆಯೆಂದು ಧೈರ್ಯವಾಗಿ ಹೇಳಬಹುದು. ಇತ್ತೀಚೆಗಿನ ಕೆಲ ವರ್ಷಗಳಿಂದ ರಶ್ಯ—ಭಾರತಗಳ ನಡುವಿನ ಸಂಬಂಧವು ಸುದೃಢವಾಗುತ್ತ ಬೆಳೆದು ಬಂದಿದೆ. ಉಭಯ ರಾಷ್ಟ್ರಗಳ ನಾಯಕ ಮಣಿಗಳು ಪರಸ್ಪರ ಸೌಹಾರ್ದ ಶಾಂತಿಮಯ ಸಂದರ್ಶನಗಳನ್ನು ಮಾಡಿಕೊಂಡಿದ್ದಾರೆ. ಈಗ, ಭಾರತದ ರಾಷ್ಟ್ರಪತಿಯವರ ಸಂದರ್ಶನದಿಂದ, ಈ ಸಂಬಂಧವು ಮತ್ತಷ್ಟು ಬಲಗೊಳ್ಳಬಹುದೆಂದು ನಿರೀಕ್ಷಿಸಬಹುದು. ಚೀನಾವು ಭಾರತದ ಸೀಮಾತಿಕ್ರಮಣ ಮಾಡಿದ ನಂತರ, ಕಮ್ಯುನಿಸ್ಟ್ ರಾಷ್ಟ್ರಗಳ ಬಗ್ಗೆ ಭಾರತದಲ್ಲಿದ್ದ ಸದ್ಭಾವನೆಯು ಕೆಡುತ್ತ ಬರುವ ಭರದಲ್ಲಿ ರಶ್ಯವನ್ನೂ ತುಸು ವಕ್ರ ದೃಷ್ಟಿಯಿಂದ ನೋಡಿರಲಿಲ್ಲ ಎಂದು ಕೇಳಿದರೆ, ಸುಳ್ಳಾಗಬಹುದು. ಆದರೂ ಜಗತ್ತಿನ ಎರಡು ಬಣಗಳಲ್ಲಿ ಒಂದರ ನಾಯಕಸ್ಥಾನವನ್ನು ಪಡೆದ ರಶ್ಯವು ಭಾರತದ ಪಾಳಯಾತೀತ ಧೋರಣೆಯಿಂದ, ಅದನ್ನು ದ್ವೇಷಿಸುವ ಗೋಜಿಗೆ ಹೋಗದೆ, ಪ್ರೀತಿಸುವ ಕೆಲಸವನ್ನೇ ಮಾಡುತ್ತಿದೆ. "ವಿಶ್ವಶಾಂತಿ" ಎಂಬ ಕೂಗಾಟವನ್ನೆಬ್ಬಿಸುವ ರಶ್ಯ ಮತ್ತು ವಿಶ್ವಶಾಂತಿಗಾಗಿ ದುಡಿಯುತ್ತಿರುವ ಭಾರತಗಳ ಪರಸ್ಪರ ಭೇಟಿಯಿಂದ ಜಾಗತಿಕ ಸ್ಥಿತಿಗತಿಗಳ ಮೇಲೆ ಹೆಚ್ಚು ಪರಿಣಾಮ ಬೀರಬಹುದಾದರೂ ರಶ್ಯ-ಭಾರತಗಳ ನಡುವಣ ಬಾಂಧವ್ಯವು ಆವೆರಡು ರಾಷ್ಟ್ರಗಳ ಮೈತ್ರಿಯನ್ನು ಇನ್ನೂ ದೃಢಪಡಿಸಲು ಸಹಕಾರಿಯಾದೀತು; ಮತ್ತು ವಿಶ್ವಶಾಂತಿಯ ಪ್ರಶ್ನೆಯ ಮೇಲೆಯೂ ಇದರ ಪ್ರತಿಫಲನವಾದೀತು.

ರಾಷ್ಟ್ರಪತಿಯ ಅಧಿಕಾರ

ಭಾರತೀಯ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಸೋವಿಯತ್ ರಶ್ಯವನ್ನು ಸಂದರ್ಶಿಸುವ ಸಲುವಾಗಿ ತಾ. ೨೦ರಂದು ನವದೆಹಲಿಯಿಂದ ಹೊರಟರು. ಈ ಅವಧಿಯಲ್ಲಿ ಉಪರಾಷ್ಟ್ರಪತಿಗಳಿಗೆ ರಾಷ್ಟ್ರಪತಿಗಳ ಅಧಿಕಾರಗಳನ್ನು ತಾತ್ಕಾಲಿಕವಾಗಿ ನೀಡಲಾಯಿತು. ರಾಷ್ಟ್ರಪತಿ ಪ್ರಸಾದರು ಈ ಮೊದಲು ನಾಲ್ಕು ಬಾರಿ ವಿದೇಶ ಯಾತ್ರೆಯನ್ನು ಕೈಗೊಂಡಿದ್ದರಾದರೂ ... ವೇಳೆ ಉಪರಾಷ್ಟ್ರಪತಿಗಳಿಗೆ ಅಧಿಕಾರ ನೀಡಿರುವುದಿಲ್ಲ. ಈಗ ದೇಶದಲ್ಲಿ ನಡೆಯುತ್ತಿರುವ ಅಕಾಲೀ ಆಂದೋಲನ ಮತ್ತು ಗಿರಣಿ ವೇತನ ಮಂಡಳದ ನಿರ್ಣಯದಿಂದ ವಸ್ತ್ರೋದ್ಯೋಗದಲ್ಲಿ ಸಂಕಟಾವಸ್ಥಿತಿ ತಲೆದೋರಬಹುದು ಎಂಬಸಂದೇಹಗಳಿಂದ, ಆ ಸಮಯದಲ್ಲಿ ದೇಶದ ಸಂರಕ್ಷಣೆಯ ದೃಷ್ಟಿಯಿಂದ ಮೊತ್ತ ಮೊದಲನ ಬಾರಿಗೆ ಈ ರೀತಿ ಅಧಿಕಾರ ನೀಡುವ ನಿರ್ಧಾರಕ್ಕೆ ಬರಲಾಗಿದೆಯೆಂದು ತಿಳಿಯುತ್ತದೆ. ರಾಷ್ಟ್ರಪತಿಯವರ ಸಂಚಾರಾವಧಿ ೧೮ ದಿನವಿರುವುದು.

ನಿಜಲಿಂಗಪ್ಪನವರ ಮೇಲೆ ಆರೋಪ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಇತ್ತೀಚೆಗೆ ಶಿವಮೊಗ್ಗ ಮತ್ತು ಬೆಂಗಳೂರುಗಳಲ್ಲಿ ಮಾಡಿದ್ದ ಭಾಷಣಗಳು ಕಾಂಗ್ರೆಸ್ ಸಂಸ್ಥೆ ಮತ್ತು ಅದರ ಕಾರ್ಯಕರ್ತರಿಗೆ ಅವಮಾನ ಕಾರಕವಾದುದರಿಂದ, ... ವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮೈಸೂರು ನಗರ ಮಂಡಲ ಕಾಂಗ್ರೆಸ್ ಸಮಿತಿಗಳಲ್ಲಿ ... ದು ಗೊತ್ತುವಳಿಯನ್ನು ಸ್ವೀಕರಿಸಿದೆ. ಕಾಂಗ್ರೆಸ್ಸಿಗರು ಪೋಲಿಗಳು ಗೂಂಡಾಗಳು ಸ್ವಾರ್ಥಿಗಳು, ಅಸಮರ್ಥರು ಮತ್ತು ಲಂಚಕೋರರು ಎಂದು ಶ್ರೀ ನಿಜಲಿಂಗಪ್ಪನವರು ಈ ಭಾಷಣಗಳಲ್ಲಿ ಟೀಕಿಸಿದವರಾಗಿ ವರದಿಯಾಗಿತ್ತು.

ಮದ್ರಾಸ ವೇತನ ಸಮಿತಿ ವರದಿ

ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಮದ್ರಾಸ ವೇತನ ಸಮಿತಿಯ ವರದಿಯನ್ನು ಮದ್ರಾಸ ಸರಕಾರವು ಬಹಿರಂಗಗೊಳಿಸಿ ಅದರನ್ವಯ ನೌಕರರ ವೇತನವನ್ನು ಪುನರ್ವಿಮರ್ಶಿಸಿದೆ. ಈ ಪರಿಷ್ಕೃತ ವೇತನ ... ರವು ಜೂನ್ ೬ರಿಂದ ವ್ಯ... ಹೃತವಾಗುವುದು. ಈ ಮೇರೆಗೆ ರಾಜ್ಯ ಸರಕಾರದ ನೌಕರರ ಕನಿಷ್ಠ ವೇತನ ಮಾಸಿಕ ರೂ. ೬೦ ಮತ್ತು ತುಟ್ಟಿಭತ್ಯೆ ರೂ. ೧೦ ಆಗುವುದು. ಪರಿಷ್ಕರಣದಿಂದ ಪ್ರಾಥಮಿಕ ಶಿಕ್ಷಕರಿಗೆ ತುಂಬ ಲಾಭವಾಗುವುದೆಂದು ಹೇಳಲಾಗಿದೆ. ರಾಜ್ಯ ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ ಎಂದೇ ಸದ್ಯ ನಿರ್ಧರಿಸಲಾಗಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿಗೆ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಇವರ ಆಗಮನ

ಮೈಸೂರು ರಾಜ್ಯದ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್ ಡಾ. ಪಿ. ಆರ್. ನಾಯ್ಡುರವರು ಇದೇ ತಾ. 15ರಲ್ಲಿ ಉಡುಪಿಗೆ ಆಗಮಿಸಿ ಸ್ಥಳೀಯ ಸರಕಾರೀ ಆಸ್ಪತ್ರೆಯನ್ನು ಸಂದರ್ಶಿಸಿ ಆಸ್ಪತ್ರೆಯ ಸಲಹೆಗಾರ ಸಮಿತಿಯ ಸದಸ್ಯರೊಡನೆ ಆಸ್ಪತ್ರೆಯ ವಿಸ್ತರಣೆ ಮತ್ತು ವರ್ಗನಣೆಯ ಕುರಿತು ವಿಚಾರವಿನಿಮಯ ಮಾಡಿದರು.

ಆ ಮೇಲೆ ಡಾ| ನಾಯ್ಡುರವರು ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ ಕೆಲ [illegible] ಉಪದೇಶವನ್ನಿತ್ತರು. ಖಾಸಗಿ ಪ್ರಯತ್ನದ ಈ ಕಾಲೇಜಿನ ಉನ್ನತ ಮಟ್ಟವನ್ನು ಕೊಂಡಾಡಿದರು.

ರೋಟರೀ ಕ್ಲಬ್ಬಿನಲ್ಲಿ ಏಕಡೆಮಿಯ ರೆಜಿಸ್ಟ್ರಾರ ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಭಾಷಣ ವೀಯುತ್ತ ವೈದ್ಯರ ಅಭಾವದಿಂದಾಗಿ ಹಳ್ಳಿಗಳಲ್ಲಿ ವೈದ್ಯಕೀಯ ಸವಲತ್ತುಗಳನ್ನೊದಗಿಸಲು ಅಸಾಧ್ಯವಾಗಿರುವುದೆಂದೂ ನಮ್ಮ ಮೆಡಿಕಲ್ ಕಾಲೇಜುಗಳಲ್ಲಿರುವ ಈಗಿನ ಪದ್ಧತಿಯಂತೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಖಾಸಾಗಿರುವುದು ಹೆಚ್ಚಿನ ತೊಡಕಿನದಾಗಿದೆಯೆಂದೂ ಹೇಳಿದರು. ಆಯುರ್ವೇದ ಕಾಲೇಜನ್ನು ಸಂದರ್ಶಿಸಿ ಅಲ್ಲಿಯ ಕಾರ್ಯಕಲಾಪಗಳನ್ನು ಪರಿಶೀಲಿಸಿದರು.

ಡಾ| ಯು. ಬಿ. ನಾರಾಯಣರಾಯರ ನಿಧನ— ಮುಂಬಯಿ ಕನ್ನಡಿಗರಲ್ಲಿ ಪ್ರಮುಖರೂ ಜನಪ್ರಿಯರೂ ಆಗಿದ್ದು ಮುಂಬಯಿಯಲ್ಲಿ ವೈದ್ಯಕೀಯ ಮತ್ತು ವೈದ್ಯಕೀಯ ಪತ್ರಿಕಾ ವ್ಯವಸಾಯ ಮಾಡುತ್ತಿದ್ದ ಡಾ| ಯು. ಬಿ. ನಾರಾಯಣ ರಾಯರು ಇದೇ ತಾ. 14ರಂದು 65ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಡಾ| ರಾಯರು ಇಪ್ಪತ್ತು ವರ್ಷಗಳಿಂದ ಮುಂಬಯಿ ಮೆಡಿಕಲ್ ಕೌನ್ಸಿಲಿನ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಓರ್ವ ಸದಸ್ಯರಾಗಿದ್ದರು. ಅವರು ಕೆಲವು ವೈದ್ಯಕೀಯ ಗ್ರಂಥಗಳನ್ನು ಬರೆದಿರುವರಲ್ಲದೆ ದಿ. ಮೆಡಿಕಲ್ ಡೈಜೆಸ್ಟ್ ಎಂಬ ವೈದ್ಯಕೀಯ ಆಂಗ್ಲ ಮಾಸ ಪತ್ರಿಕೆಯ ಸಂಪಾದಕರಾಗಿದ್ದರು. ಉಡುಪಿ ಸಮೀಪದ ಉದ್ಯಾವರ ಇವರ ಜನ್ಮಸ್ಥಾನವಾಗಿತ್ತು. ಇವರು ಹೈದರಾಬಾದಿನಲ್ಲಿ ವೈದ್ಯಪದವಿ ಪಡೆದು ಪ್ರಾರಂಭದಲ್ಲಿ ಮುಂಬಯಿಯಲ್ಲಿ ಅಸಿಸ್ಟೆಂಟ್ ಸರ್ಜನರಾಗಿ ಸರಕಾರಿ ಕೆಲಸಕ್ಕೆ ಸೇರಿದರು. ಸುಮಾರು ಎರಡು ವರ್ಷಗಳಲ್ಲಿ ತನ್ನ ಹುದ್ದೆ ತ್ಯಜಿಸಿ ಮುಂಬಯಿಯ ಗಿರ್ಗಾಮ್‌ನಲ್ಲಿ ಸ್ವಂತ ಪ್ರಾಕ್ಟೀಸ್ ಆರಂಭಿಸಿ ಜನಾನುರಾಗಗಳಿಸಿದರು. ಅವರು ಅಖಿಲ ಭಾರತ ಚರ್ಮ ರೋಗಜ್ಞರ ಮತ್ತು ಗುಹ್ಯರೋಗ ಚಿಕಿತ್ಸಕರ ಸಂಘಗಳನ್ನು ಸ್ಥಾಪಿಸಿದ್ದರಲ್ಲದೆ 1952ರಲ್ಲಿ ಲಂಡನಿನಲ್ಲಿ ಸೇರಿದ ಅಂತಾರಾಷ್ಟ್ರೀಯ ಚರ್ಮ ರೋಗಜ್ಞರ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ದಿವಂಗತರು ಮುಂಬಯಿ ಕನ್ನಡಿಗರ ಚಟುವಟಿಕೆಗಳಲೆಲ್ಲ ಉತ್ಸಾಹದಿಂದ ಭಾಗವಹಿಸುತ್ತಿದ್ದರಲ್ಲದೆ ಅಲ್ಲಿಯ ಕನ್ನಡಿಗರ ಉನ್ನತಿಗಾಗಿ ತುಂಬ ದುಡಿದಿದ್ದರು.

ವಿದ್ಯಾರ್ಥಿಗಳಿಗೆ ಧರ್ಮಾರ್ಥ ಪುಸ್ತಕ ವಿತರಣೆ ಶ್ರೀ ಕೆ. ಪ್ರಭಾಕರ ರೈಯವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಕೊಡಿಯಾಲ್‌ಬೈಲ್ ಸೇವಾಸಮಿತಿಯವರು ಇದೇ ತಾ. 13ರಂದು ಕೊಡಿಯಾಲ್ ಗುತ್ತಿನಲ್ಲಿ ಶ್ರೀಮತಿ ಒಕ್ಕೇನಿಯ ಅಲ್ಬುಕರ್ಕರ ಅಧ್ಯಕ್ಷತೆಯಲ್ಲಿ ಸೇರಿದ ಸಮಾರಂಭದಲ್ಲಿ ಸುಮಾರು ರೂ. 220 ಬೆಲೆಯ ಪುಸ್ತಕಗಳನ್ನು 125 ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದರು. ಶ್ರೀ ಕೆ. ಪ್ರಭಾಕರ ರೈಯವರು ಸ್ವಾಗತಿಸಿದ ಮೇಲೆ ಕಾರ್ಯದರ್ಶಿ ಶ್ರೀ ಕೆ. ವಾಮನ ದೇವಡಿಗರು ಸಭೆಯ ಉದ್ದೇಶಗಳನ್ನೂ, ಕೋಶಾಧ್ಯಕ್ಷೆ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಸಮಿತಿಯ ಉದ್ದೇಶಗಳನ್ನೂ ವಿವರಿಸಿದರು. ಸಭಿಕರ ಭಾಷಣಗಳಾದ ಮೇಲೆ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಹೊಯ್ಗೆ ಬಜಾರಿನ ಜೈಹಿಂದ್ ಯುವಕ ಸಂಘದ ಆಶ್ರಯದಲ್ಲಿ ಶ್ರೀ ಜ್ಞಾನೋದಯ ಸಮಾಜ ಮಂದಿರದಲ್ಲಿ ಇದೇ ತಾ. 15ರಲ್ಲು ಶ್ರೀ ಎಚ್. ಕೆ. ತಿಂಗಳಾಯರ ಅಧ್ಯಕ್ಷತೆಯಲ್ಲಿ ಶ್ರೀಮತಿ ಒಕ್ಕೇಸಿಯಾ ಅಲ್ಬುಕರ್ಕರು ಸುಮಾರು ನೂರು ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಮತ್ತು ವಸ್ತ್ರಗಳನ್ನು ವಿತರಣೆ ಮಾಡಿದರು.

ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಪರೀಕ್ಷಾ ಫಲಿತಾಂಶ— ಎಸ್. ಇ. ತರಗತಿಯಲ್ಲಿ 37%, ಬಿ. ಇ. (ಸಿವಿಲ್) ದಿಗ್ರಿ ಪರೀಕ್ಷೆಯಲ್ಲಿ 77%, ಎಸ್. ಇ. ತರಗತಿಯಲ್ಲಿ 30% ಫಲಿತಾಂಶವನ್ನು ಮಣಿಪಾಲ ಇಂಜಿನಿಯರಿಂಗ್ ಕಾಲೇಜು ಪಡೆದಿರುತ್ತದೆ. ಈ ಫಲಿತಾಂಶಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲೇ ಉತ್ತಮವಾದುದೆಂದು ತಿಳಿದುಬರುತ್ತದೆ. ಈ ಕಾಲೇಜು ಬಿ. ಇ. ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯದಲ್ಲಿಯೇ ಒಂದನೇ ಸ್ಥಾನವನ್ನೂ ಎಸ್. ಇ. ಪರೀಕ್ಷೆಯಲ್ಲಿ ಎರಡನೇ ಸ್ಥಾನವನ್ನೂ ಗಳಿಸಿರುವುದಾಗಿ ತಿಳಿಯುತ್ತದೆ.

ಉಚ್ಚಿಲ- ಭಕ್ತ ಮಹನೀಯರ ಉದಾರ ಸಹಾಯದಿಂದ ನಿರ್ಮಿಸಿದ ಸ್ಥಳೀಯ ಬಡ್ಡಂಜೆ ಮಠದ ಶ್ರೀ ಭೂವರಾಹ ಲಕ್ಷ್ಮೀ ವೆಂಕಟೇಶ್ವರ ದೇವರ ಗರ್ಭ ಗುಡಿಯ ಜೀರ್ಣೋದ್ಧಾರ ಮತ್ತು ಬ್ರಹ್ಮ ಕಲಶಾಭಿಷೇಕವನ್ನು ಅರ್ಚಕ ಶ್ರೀ ರಾಮಚಂದ್ರ ಭಟ್ಟರು ತಾ. 27-5-1960ರಲ್ಲು ಸಾಂಗವಾಗಿ ನೆರವೇರಿಸಿದರು. ಈ ಬಗ್ಗೆ ಭಕ್ತಾದಿಗಳಿಂದ ರೂ. 4309= 19 ಸಹಾಯ ಬಂದಿದ್ದು ಒಟ್ಟು ರೂ. 6500= 55 ಖರ್ಚು ತಗಲಿರುವುದೆಂದೂ ರೂ. 2191= 36 ಸ್ವಂತ ಕೈಯಿಂದ ತಗಲಿರುವುದೆಂದೂ ತಿಳಿದು ಬರುತ್ತದೆ.

ಅಂಚೆ ತಂತಿ ರಿಕ್ರಿಯೇಶನ್ ಕ್ಲಬ್ ಕುಂದಾಪುರ ಅಂಚೆ ತಂತಿ ರಿಕ್ರಿಯೇಶನ್ ಕ್ಲಬ್ಬಿನ ಸಭೆಯು ತಾ. 19ರಂದು ಕುಂದಾಪುರ ಪೋಸ್ಟ ಆಫೀಸಿನಲ್ಲಿ ಸಬ್ ಪೋಸ್ಟಮಾಸ್ಟರ್ ಶ್ರೀ ಕೆ. ಆರ್. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ, ಆಯವ್ಯಯಗಳ ಪರಿಶೀಲನೆಯ ನಂತರ ಸಭೆಯು ಕುಂದಾಪುರ ಸಬ್ ಡಿವಿಜನಿಗೆ ಹೊಸದಾಗಿ ಇನ್ಸ್‌ಪೆಕ್ಟರರಾಗಿ ನೇಮಕಗೊಂಡ ಶ್ರೀ ಪಿ. ಶಿವಶಂಕರ ರಾಯರನ್ನು ಕ್ಲಬ್ಬಿನ ಎಕ್ಸ್ ಒಫೀಸಿಯೊ ಉಪಾಧ್ಯಕ್ಷರಾಗುವಂತೆ ಕೇಳಿಕೊಂಡಿತು. ಉಪಾಧ್ಯಕ್ಷರ ಸಮ್ಮತಿಯ ನಂತರ, ಮುಂದಿನ ವರ್ಷದ ಕಾರ್ಯಕಲಾಪಗಳ ವಿವೇಚನೆ, ಕಾರ್ಯದರ್ಶಿ ಶ್ರೀ ಕೆ. ಆರ್. ಕೊತ್ವಾಲರಿಂದ ಧನ್ಯವಾದ ಸಮರ್ಪಣೆಯ ನಂತರ ಶ್ರೀ ಶಾಂತಾರಾಮರಿಂದ ರಾಷ್ಟ್ರಗೀತೆಯ ಹಾಡುವಿಕೆಯೊಡನೆ ಸಭೆಯು ಮುಕ್ತಾಯವಾಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿ ಸಭೆಯು ಇತ್ತೀಚೆಗೆ ಪುತ್ತೂರಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಕೆಲವು ಮುಖ್ಯ ನಿರ್ಣಯಗಳನ್ನು ಮಾಡಿದೆ.

ಪ್ಯಾಕೇಜ್ ಡೀಲ್ ಕಾರ್ಯಕ್ರಮದ ಪ್ರಾಥಮಿಕ ಪ್ರಯೋಗಗಳನ್ನು ಕೂಡಾ ನಡೆಸಲು ದಕ್ಷಿಣ ಕನ್ನಡ ಜಿಲ್ಲೆಯನ್ನು ಮೈಸೂರು ಸರಕಾರವು ಆರಿಸದಿರುವುದಕ್ಕಾಗಿ ದಕ್ಷಿಣ ಕನ್ನಡಿಗರಲ್ಲಿ ತೀವ್ರ ಅಸಮಾಧಾನವುಂಟಾಗಿದೆ. ನಮ್ಮ ಜಿಲ್ಲೆಯಲ್ಲಿ 4,52,000 ಎಕ್ರೆ ಭೂಮಿಯಲ್ಲಿ ಭತ್ತ ಬೆಳೆಸಲಾಗುತ್ತಿದ್ದು 1,93,000 ಟನ್ ಅಕ್ಕಿ ಉತ್ಪಾದನೆಯಾಗುತ್ತಿದ್ದು ರಾಜ್ಯದ ಅಕ್ಕಿ ಉತ್ಪಾದನೆಯಲ್ಲಿ 19 1/2% ಇದ್ದರೂ ಸರಕಾರವು ಈ ಜಿಲ್ಲೆಯನ್ನು ಪ್ಯಾಕೇಜ್ ಡೀಲ್ ಕಾರ್ಯಕ್ರಮದ ಪ್ರಯೋಜನಕ್ಕಾಗಿ ಆರಿಸದಿದ್ದುದು ತೀವ್ರ ಕಳವಳಕ್ಕೆ ಕಾರಣವಾಗಿದೆ. ಇನ್ನೂ ಹೆಚ್ಚಿನ ಪ್ರಯತ್ನ ನಡೆಸಿದರೆ ಎರಡನೇ ಮತ್ತು ಮೂರನೇ ಬೆಳೆ ಬೆಳೆಸುವುದರಲ್ಲಿ ಹೆಚ್ಚಿನ ಆಸಕ್ತಿ ತೋರಿದರೆ 3,00,000 ಎಕ್ರೆ ಭೂಮಿಯಲ್ಲಿ ಭತ್ತ ಬೆಳೆಸಬಹುದು ಮತ್ತು ವರ್ಷಕ್ಕೆ 1,50,000 ಟನ್ ಅಧಿಕ ಅಕ್ಕಿ ಉತ್ಪಾದಿಸಬಹುದು. ಮಾತ್ರವಲ್ಲದೆ ಇಲ್ಲಿ 200" ಮಳೆ ಬೀಳುವುದರಿಂದಲೂ ಹಸುರೆಲೆ ಗೊಬ್ಬರ ಯಥೇಷ್ಟ ಸಿಗುವುದರಿಂದಲೂ ನಮ್ಮ ಜಿಲ್ಲೆಯು ಪ್ಯಾಕೇಜ್ ಡೀಲ್ ಪ್ರಯೋಗಕ್ಕೆ ಅರ್ಹವಾಗಿದೆ. ವರ್ಷಂಪ್ರತಿ ಸರಾಸರಿ 30,000 ದಂತೆ ಜಿಲ್ಲೆಯಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ನಿರುದ್ಯೋಗ ಸಮಸ್ಯೆಯು ಇಲ್ಲಿ ಅನರಿಸಿದೆ. ಪ್ಯಾಕೇಜ್ ಡೀಲ್ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದರೆ ಜಿಲ್ಲೆಯ ಜನರ ನಿರುದ್ಯೋಗ ನಿವಾರಣೆಯೂ ಕೃಷಿ ಮತ್ತು ಕೈಗಾರಿಕಾಭಿವೃದ್ಧಿಗೆ ಅಸ್ಪದ ಮಾಡಿ ಕೊಟ್ಟಂತಾಗುವುದು ಎಂಬುದನ್ನು ಈ ಸಮಿತಿಯು ರಾಜ್ಯ ಮತ್ತು ಕೇಂದ್ರ ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತದೆ. ಅಲ್ಲದೆ ಈ ಜಿಲ್ಲೆಯ ಶಾಸಕರ ಮತ್ತು ಜನತೆಯ ಒಮ್ಮತದ ಅಭಿಪ್ರಾಯವನ್ನು ಮನ್ನಿಸಿ ಕೊನೆಯ ಆಯ್ಕೆಯಾಗುವ ಮೊದಲೇ ಇಲ್ಲಿ ಪ್ರಯೋಗ ಕಾರ್ಯ ನಡೆಸುವಂತೆ ಮೈಸೂರು ಸರಕಾರವನ್ನು ಒತ್ತಾಯಪೂರ್ವಕ ಈ ಸಮಿತಿಯು ಕೇಳಿಕೊಂಡಿತು.

ಈ ವರೆಗೆ ಹರಿಜನ ವೆಲ್ಫೇರ್ ಶಾಲೆಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ ಇದ್ದುದನ್ನು ಸರಕಾರ ನಿಲ್ಲಿಸಿರುವುದಕ್ಕಾಗಿ ಸಭೆ ವಿಷಾದ ವ್ಯಕ್ತಗೊಳಿಸಿತಲ್ಲದೆ ಇನ್ನುಮುಂದಕ್ಕೂ ಈ ಸವಲತ್ತನ್ನು ಹರಿಜನ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇತರ ಎಲ್ಲಾ ಶಾಲಾ ಮಕ್ಕಳಿಗೂ ಒದಗಿಸಬೇಕೆಂದು ಸರಕಾರವನ್ನು ಕೇಳಿಕೊಂಡಿತು. ಸರಕಾರವು ಗ್ರಾಮ ಸೇವಕರನ್ನು ಸ್ಥಳೀಯ ಭಾಷೆ ತಿಳಿದವರನ್ನೇ ನೇಮಿಸಬೇಕೆಂದೂ ಮೂರನೇ ವರ್ಗದ ನೌಕರರನ್ನು ವರ್ಗಾಯಿಸುವಾಗ ಸಾಧ್ಯವಿದ್ದಷ್ಟು ಜಿಲ್ಲೆಯ ಒಳಗೇನೇ ವರ್ಗಾಯಿಸಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಯಿತು. ಮೈಸೂರು ಹಾಗೂ ಕೇರಳ ಗಡಿ ನಿರ್ಣಯದ ಪ್ರಶ್ನೆಯ ವಿಚಾರದಲ್ಲಿ ಸರಕಾರಕ್ಕೆ ನಿವೇದಿಸಿಕೊಳ್ಳಲು ಶ್ರೀಗಳಾದ ಟಿ. ಎ. ಪೈ, ಕೆ. ಕೆ. ಶೆಟ್ಟಿ, ಕೆ. ಸೂರ್ಯನಾರಾಯಣ ಅಡಿಗ, ಕಳ್ಳಿಗೆ ಮಹಾಬಲ ಭಂಡಾರಿ, ಬಾಡೂರು ಜಗನ್ನಾಥ ರೈ, ಬಿ. ದೇವಪ್ಪ ಆಳ್ವ ಮೊದಲಾದವರಿರುವ ಶಿಷ್ಟಮಂಡಳಿಯೊಂದನ್ನು ರಚಿಸಲಾಯಿತು.

ಮೈಸೂರು ಸರಕಾರವು ಒಂದು ಸಾವಿರದ ಇನ್ನೂರು ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಉಳ್ಳವರ ಮಕ್ಕಳಿಗೆ ಎಸ್. ಎಸ್. ಎಲ್. ಸಿ. ಯವರೆಗೆ ಧರ್ಮಾರ್ಥ ಶಿಕ್ಷಣ ನೀಡುವ ನಿರ್ಧಾರ ಮಾಡಿದುದಕ್ಕಾಗಿ ಸರಕಾರವನ್ನು ಅಭಿನಂದಿಸುತ್ತದೆ. ಆದರೆ ಎಸ್. ಜಿ. ಒ. ಗಳು, ಉಪಾಧ್ಯಾಯರು, ಗ್ರಾಮೀಣ ಕಸಬುದಾರರಿಗೆ ಈ ಆಜ್ಞೆಯ ಜಾರಿಯಿಂದ ಹಿಂದೆ ಅವರಿಗೆ ಸಿಗುತ್ತಿದ್ದ ಸೌಲಭ್ಯ ದೂರವಾದಂತಾಗುತ್ತದೆ. ಆದುದರಿಂದ ಸರಕಾರವು ಅವರಿಗೆ ಮೊದಲು ದೊರೆಯುತ್ತಿದ್ದ ಸವಲತ್ತುಗಳನ್ನೇ ಮುಂದುವರಿಸಬೇಕೆಂದು ಸರಕಾರವನ್ನು ವಿನಂತಿಸಿಕೊಂಡಿತು.

ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಿರುವ ನಿರುದ್ಯೋಗ ನಿವಾರಣೆಗಾಗಿ ಈ ಕೆಳಗಿನ ಯೋಜನೆಗಳನ್ನು ಸರಕಾರ ಕೈಗೊಳ್ಳಬೇಕೆಂದು ಸೂಚಿಸಿತು. ಹಿಂದೆ ಮದ್ರಾಸ್ ಸರಕಾರವು ನಿರ್ಧರಿಸಿದ ಯೋಜನೆಯಂತೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೇ ಜಿಲ್ಲೆಯ ಮುನ್ನೂರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ವಿಸ್ತರಿಸುವ ಯೋಜನೆಯನ್ನು ಕೈಗೊಳ್ಳಬೇಕು. ಇದರಿಂದ ಕೃಷಿ ಮತ್ತು ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು. ಸಣ್ಣಮಟ್ಟದ ಕೈಗಾರಿಕೆಗಳ ವಿಸ್ತರಣೆಗಾಗಿ ಜಿಲ್ಲೆಯಾದ್ಯಂತ ಸರ್ವ ಸಹಾಯವನ್ನು ಒದಗಿಸಬೇಕು. ಹಾಗೂ ಮಂಗಳೂರಿನ ಕೈಗಾರಿಕಾ ಎಸ್ಟೇಟನ್ನು ತೀವ್ರ ಪೂರ್ತಿಗೊಳಿಸಬೇಕು. ಈ ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಯೊಂದು ಸ್ಥಾಪನೆಯಾಗುವಂತೆ ಕೇಂದ್ರ ಸರಕಾರವನ್ನು ನಮ್ಮ ಸರಕಾರ ಒತ್ತಾಯಪಡಿಸಬೇಕು.

ಜನರು ಕೂಡಾ ಜಾಗರೂಕರಾಗಿ ಜಿಲ್ಲೆಯಲ್ಲಿ ಕೈಗಾರಿಕಾ ನಿಧಿಯನ್ನು ಸ್ಥಾಪಿಸಬೇಕೆಂದೂ ಸರಕಾರದ ಯಾವತ್ತೂ ಯೋಜನೆಗಳ ಸಂಪೂರ್ಣ ಲಾಭವನ್ನು ಪಡೆಯಬೇಕೆಂದೂ ಜಿಲ್ಲೆಯ ಜನತೆಯನ್ನು ಕೇಳಿಕೊಂಡಿತು.

ಮದ್ರಾಸು, ಬೊಂಬಾಯಿ, ಆಂಧ್ರ ರಾಜ್ಯದಲ್ಲಿರುವಂತೆ ಮೈಸೂರಿನಲ್ಲಿಯೂ ಗುಡ್ ಫ್ರೈಡೇಯನ್ನು ಸಾರ್ವಜನಿಕ ರಜಾದಿನವಾಗಿ ಸಾರುವಂತೆ ಈ ಸಮಿತಿಯು ಮೈಸೂರು ಸರಕಾರವನ್ನು ಕೇಳಿಕೊಂಡಿತು.

ಪುತ್ತೂರು— ಇದೇ ತಾ. 11ರಲ್ಲಿ ಸ[illegible] ಮಂಡಲ ಕಾಂಗ್ರೆಸ್ ಸಮಿತಿಯ ಹೊಸ ಕಛೇರಿಯನ್ನು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಇಲ್ಲಿಯ ಬೋರ್ಡ್ ಹಾ. ಎ. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಸಮಾರಂಭವು ಶ್ರೀ ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಇದೇ ತಾ. 16ರಲ್ಲಿ ನೆರವೇರಿತು. ಇದೇ ಸಂದರ್ಭದಲ್ಲಿ ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರ್ ಶ್ರೀ ಗಂಗಾಧರನ್ ಅವರು ಸಂಘದ ರಂಗಮಂಟಪದ ಉದ್ಘಾಟನೆಯನ್ನು ನೆರವೇರಿಸಿದರು.

ಉಡುಪಿ ಹಿಂದೀ ಪ್ರಚಾರ ಪರಿಷತ್ತಿನಲ್ಲಿ ಸಾಹಿತ್ಯಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಶ್ರೀ ಕೆ. ನಾರಾಯಣ ಬಲ್ಲಾಳರು ಉಚ್ಚ ಶಿಕ್ಷಣ ಪಡೆಯುವ ಬಗ್ಗೆ ಬೆಂಗಳೂರಿಗೆ ತೆರಳಿದ ಸಂದರ್ಭದಲ್ಲಿ ಪರಿಷತ್ತು ಅವರಿಗೊಂದು ವಿದಾಯಕೂಟವನ್ನು ಶ್ರೀ ಕೆ. ದಾಮೋದರ ಐತಾಳರ ಅಧ್ಯಕ್ಷತೆಯಲ್ಲಿ ಏರ್ಪಡಿಸಿತ್ತು. ಪರಿಷತ್ತಿನ ಪ್ರಧಾನರಾದ ಶ್ರೀ ಎಸ್. ಗೋಪೀಚಂದರಾಯರು ಶ್ರೀ ಬಲ್ಲಾಳರು ಪರಿಷತ್ತಿಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿ, ಅವರ ಭವಿಷ್ಯವು ಉಜ್ವಲವಾಗಲೆಂದು ಹಾರೈಸಿದರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 152/1960
R. E. A. 242/60
O. S. 191/58

ರೆವರೆಂಡ್ ಫಾದರ್ ರೋಬರ್ಟ್ ಗೋವಿಯಸ್. (— ವಾದಿ ಅರ್ಜಿದಾರ.

ಮತ್ತು

1. ವೆಲಿಯಮಂಣಿಲ್ ತೆಕ್ಕರೆಯಿಲ್ ಪಿಲಿಪ್ಪೋಸ್, ವೆಲಿಯಮಂಣಿಲ್ ತೆಕ್ಕರೆಯಿಲ್ ಅಪ್ಪರ ಮಗ.
2. ವೆಲಿಯಮಂಣಿಲ್ ತೆಕ್ಕರೆಯಿಲ್ ಪೈಪ್ಪು, 3. ವೆಲಿಯಮಂಣಿಲ್ ತೆಕ್ಕರೆಯಿಲ್ ಮೋತೇ, ವೆಲಿಯಮಂಣಿಲ್ ತೆಕ್ಕರೆಯಿಲ್ ಕೋಶಿಯವರ ಮಗಂದಿರು. ಪುತ್ತೂರು ತಾಲ್ಲೂಕು ಆತ್ತೂರು ಗ್ರಾಮದಲ್ಲಿ.

— ಪ್ರತಿವಾದಿರು ಎದ್ರಿರು.

ಎದ್ರಿರೀಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದರೆ,

ವಾದಿಯು ನಿಂಮ ಮೇಲೆ ಪಡೆದ ಮೇಲ್ಕಂಡ ಡಿಕ್ರಿ ಮೇಲೆ ನಿಂಮ ಬಾಬ್ತು ಆತ್ತೂರು ಗ್ರಾಮದ ಸರ್ವೆ ನಂಬ್ರ $\frac{6}{1, 2, 3, 4, 5,}$ ರ ಆಸ್ತಿಯನ್ನು ಏಲಂಗೆ ಅಪೇಕ್ಷಿಸಿ ಇಸ್ತಿಹಾರು ದಾಖಲ್ಲು ಮಾಡಿರುವುದರಿಂದ ಸದ್ರಿ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ಬಗ್ಗೆ, ಮತ್ತು ಅರ್ಜಿದಾರನು ತನಗೆ ದರ್ಖಾಸ್ತಿಗೆ ನಿಸ್ತುವರೆ ಪರ್ಮಿಶನ್ ಕೊಡಿಸಬೇಕಾಗಿ ಸಹಾ ಎರಕೊಂಡ R. E. A. 242/60ನೇ ಅರ್ಜಿಗೆ ನಿಂಮ ಆಕ್ಷೇಪಣೆಗಳಿದ್ದ್ರೆ ಸಹಾ ಸದ್ರಿ ವ್ಯವಹರಣೆಗಳ ತನ್ನಿ ವ್ಯಾದೆಯು ತಾ. 5—7—60ಕ್ಕೆ ಇಟ್ಟಿರುವುದರಿಂದ ನಿಂಮ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ವ, ವಕೀಲರ ದ್ವಾರಾ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(Sd) C. S. Shastry,
Vakil for Petitionar.

ಪುತ್ತೂರು ತಾ. 6—6—1960

ವರ್ಗ — ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ಸ.)

೧. ಆಳು-ಕಾಳು— ಬರೆದವರು: "ಅಷ್ಟಾವಕ್ರ." ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು: ೧೧೯ ಬೆಲೆ: ರೂ. ೧

"ಆಳು—ಕಾಳು" ಒಂದು ಕಾದಂಬರಿ. ಕಾದಂಬರಿಯೆಂದೊಡನೆಯೇ ಇಂದಿನ ಅತ್ಯಾಧುನಿಕ ಮಾದರಿಯ ಕಾದಂಬರಿಗಳನ್ನು ಓದಿ ಓದಿ ನಿರಾಸೆಗೊಂಡವರು ಚಿಂತಿತರಾಗಬೇಕಿಲ್ಲ. 'ಕಾದಂಬರಿಕಾರ' ಎಂದೊಡನೆಯೇ ಬೇಸರ ಹುಟ್ಟಿದರೂ ಕೊನೆಗೆ 'ಅಷ್ಟಾವಕ್ರ' ಎಂದು ಓದಿದ ವಾಚಕರ ಮುಖದಲ್ಲಿ ನಗೆಯ ಸೆಲೆ ಮೂಡುವುದು. ಹೆಸರಿನಲ್ಲಿಯೇ ವಿನೋದ—ವಿಡಂಬನೆಗಳಿಂದ ಕೂಡಿದ ಈ ಅಷ್ಟಾವಕ್ರರ ಕಾದಂಬರಿ ಕೇವಲ ಅಥವಾ ಬರಿಯ ಕಾದಂಬರಿಯಲ್ಲ; ಅದು ವಿನೋದಾತ್ಮಕ—ವಿಡಂಬನಾತ್ಮಕ ಕಾದಂಬರಿ. 'ನಗುಬಲ್ಲ, ನಗಬಲ್ಲ ನಾಡಿನ ನೇಹಿಗರಿಗೆ' ಈ ಮೊದಲೇ ಹಲವಾರು ನಗುತುಂಬಿದ, ಹರಟೆ, ಪ್ರಬಂಧಗಳನ್ನಿತ್ತ ಶ್ರೀ ಅಷ್ಟಾವಕ್ರರು ಈಗ ತಮ್ಮ ಸ್ವಾಭಾವಿಕವಾದ ವಿನೋದಪೂರ್ಣ ಲೇಖನಿಯನ್ನು ಮತ್ತೂ ಉದ್ದಕ್ಕೆ ಬೆಳೆಸಿ, ಕಾದಂಬರಿಯನ್ನು ರೂಪಿಸಿದ್ದಾರೆ.

'ಸತ್ಯನಾರಾಯಣ ಇದ್ದಲು ಡಿಪ್ಪೊ'ವಿನ ಮಾಲಕರಾದ ಸಂತೋಷಾಚಾರ್ರಿ 'ಸುಖ ವಿಲ್ಲಾ'ದ ಸುತ್ತಲೂ ಹೆಣೆದುಕೊಂಡ ಈ ವಿನೋದ ಕಾದಂಬರಿಯು ನಗುವಿನ ಅರಿವಿಲ್ಲದವನಿಗೂ ಅದರ ಮಹತ್ವವನ್ನು ತಿಳಿಸುವುದು. ನಗರವೊಂದರ ಸಾಮಾನ್ಯ ಜನತೆಯ ಜೀವನ ನಿರ್ವಹದಲ್ಲಿ ಅವರೆಲ್ಲರೂ ಎದುರಿಸಿಕೊಳ್ಳಬೇಕಾದ ಹತ್ತುಹಲವು ಮುಖಗಳ ವರ್ಣನೆಯನ್ನು ನಾವಿಲ್ಲಿ ಕಾಣಬಹುದು. ಅವು ವಿಡಂಬನಾರೂಪದಲ್ಲಿ ನಮ್ಮ ಮುಂದೆ ಬಂದಿದೆಯೇನೋ ನಿಜವಾದರೂ ಅದರೆಡೆಯಲ್ಲಿ ವಾಸ್ತವಿಕತೆಯ ಮಿಂಚು ಕಾಣಿಸುತ್ತದೆ. ವ್ಯಂಗ್ಯ ಬಾಣಗಳು ನಮ್ಮ ಕಣ್ಣುಗಳನ್ನು ತೆರೆಸುವಷ್ಟು ತೀಕ್ಷ್ಣವಾಗಿವೆ. ಸಮಾಜ ಜೀವನವನ್ನು ಈ ರೀತಿಯಲ್ಲಿ ವರ್ಣಿಸಿದ ಅಷ್ಟಾವಕ್ರರ ಈ ಕಾದಂಬರಿ ತನ್ನ ಉದ್ದೇಶವನ್ನು ಸಾಧಿಸುವುದರೊಡನೆ, ವಾಚಕನ ಮನಸ್ಸನ್ನೂ ಸದಾ ನಗುತ್ತಿರುವಂತೆ ಮಾಡಬಲ್ಲುದು. ಎಂತಲೇ ನಗು ಬಲ್ಲವರು ಅವಶ್ಯ ಓದಲೇಬೇಕಾದ ವಿಡಂಬನಾತ್ಮಕ ಕಾದಂಬರಿಯಿದು.

೨. Life and work of Deshbhakta Sadashiv Rao Karnad. ಬೆಲೆ: ೦=೬೦.

೩. ತ್ಯಾಗಜೀವಿ ಕಾರ್ನಾಡ ಸದಾಶಿವರಾಯರು—ಲೇಖಕರು: ಸೇವ ನಮಿರಾಜ ಮಲ್ಲ ಎಂ. ಎ., ಬಿ. ಎಲ್. ಬೆಲೆ: ೦=೪೦.

೪. ಸದಾಶಿವ ರಾವ್‌ಜೀಕೀ ಪುಣ್ಯಸ್ಮೃತಿ ಮೆಂ—(ಹಿಂದಿ)—ಲೇಖಕ: ಶ್ರೀ ಎಸ್. ಯು. ರಾಮಚಂದ್ರರಾವ್. ಬೆಲೆ: ರೂ. ೦=೪೦.

ಮೇಲಿನ ಮೂರೂ ಪುಸ್ತಕಗಳ ಪ್ರಕಾಶಕರು: ಬಾಲ ಸಾಹಿತ್ಯ ಮಂಡಲ, ಮಂಗಳೂರು-೩.

ದೇಶದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯೂ ಅಗ್ರಗಣ್ಯ ಸೇವೆಯನ್ನು ಸಲ್ಲಿಸಿದ್ದು ದಿವಂಗತ ಕಾರ್ನಾಡು ಸದಾಶಿವರಾಯರು ಇವರು ವಹಿಸಿದ ಪಾತ್ರವು ಮಹತ್ವಪೂರ್ಣವಾಗಿದೆ. ದೇಶತ್ಯಾಗಿ; ದೇಶದ ಜನತೆಗಾಗಿ ಅವರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಅಮರರಾದ ದೇಶ-ಜನಸೇವಕರು. ಇಂತಹ ಮಹನೀಯರ ಪುಣ್ಯನಾಮವನ್ನು ಬೆಂಗಳೂರಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸಭಾಭವನಕ್ಕಿಟ್ಟು ಕಾಂಗ್ರೆಸ್ ತನ್ನ ಭೂತಪೂರ್ವ ನಾಯಕನಿಗೆ ಶ್ರದ್ಧಾಂಜಲಿಯನ್ನರ್ಪಿಸಿದೆ. ಈ ಸುಅವಸರದಲ್ಲಿ ಮಂಗಳೂರಿನ ಬಾಲ ಸಾಹಿತ್ಯ ಮಂಡಲದವರು ಅವರ ಪುಣ್ಯ ಚರಿತ್ರೆಯನ್ನು ಇಂಗ್ಲಿಷ್, ಕನ್ನಡ ಮತ್ತು ಹಿಂದೀ ಭಾಷೆಗಳಲ್ಲಿ ಸಂಗ್ರಹಿಸಿ ಪ್ರಕಾಶಪಡಿಸಿ ಸಮಗ್ರ ಜನತೆಗೆ ಅದನ್ನು ತಿಳಿಯಪಡಿಸಿದ್ದಾರೆ. ಪ್ರಮಾಣದಲ್ಲಿ ಈ ಚರಿತ್ರೆಯು ಕಿರಿಯದಾಗಿದ್ದರೂ ಅದರಲ್ಲಿ ದಿವಂಗತರ ಚರಿತ್ರೆಯನ್ನು ಕ್ರೋಢೀಕರಿಸುವ ಪ್ರಯತ್ನ ಮಾಡಲಾಗಿದೆ. ಸುಪ್ರಸಿದ್ಧ ಲೇಖಕರೇ ಈ ಕಾರ್ಯಕ್ಕೆ ಕೈಹಾಕಿದ್ದುದರಿಂದ ಮತ್ತು ದಿವಂಗತರ ಪರಿಚಯವುಳ್ಳವರೂ ಸಂಬಂಧಿತರೂ ಸಹಕರಿಸಿದ್ದರಿಂದ, ಸಂಗ್ರಹವು ಪರ್ಯಾಪ್ತವಾಗಿದೆ. ಸರಳ ಲಘು ಭಾಷೆಯು ಹೃದಯಾಕರ್ಷಿಯಾಗಿದೆ. ಶ್ರೀ ಕಾರ್ನಾಡು ಸದಾಶಿವರಾಯರ ಜೀವಮಾನದಲ್ಲಿ ಘಟಿಸಿದ ಸನ್ನಿವೇಶಗಳ ೧೧ ಚಿತ್ರಗಳೂ ಇದರಲ್ಲಿದ್ದು, ಪುಸ್ತಕವು ಆಕರ್ಷಕವಾಗಿದೆ. ಶ್ರೀ ರಾಯರ ಆತ್ಮಚರಿತೆಯನ್ನು ಅರಿಯಬಯಸುವ ಪ್ರತಿಯೊಬ್ಬರೂ ಅವಶ್ಯ ಸಂಗ್ರಹಿಸಬೇಕಾದ ಕೃತಿಗಳಿವು.

೫. ಜೈನವಾಙ್ಮಯ— ಲೇಖಕರು ಮತ್ತು ಪ್ರಕಾಶಕರು: ವಿದ್ಯಾಭೂಷಣ ಶ್ರೀ ಪಂ. ಕೆ. ಭುಜಬಲಿ ಶಾಸ್ತ್ರಿಗಳು, ಮೂಡಬಿದಿರೆ. ಪುಟಗಳು: ೫೪. ಬೆಲೆ: ರೂ.೦.೭೫.

ಭಾರತದಲ್ಲಿ ಜೈನರ ಪ್ರಾಬಲ್ಯದ ಕಾಲವೊಂದಿತ್ತು. ಭಗವಾನ್ ಮಹಾವೀರರ ಕಾಲಾನಂತರದಲ್ಲಿ ಸುವಿಖ್ಯಾತ ಜೈನ ಕವಿಗಳು ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ನಾನಾ ಮುಖವಾದ ಕೃಷಿಯನ್ನು ಮಾಡಿ, ಅದರ ಫಲವನ್ನು ಮುಂದಿನ ಪೀಳಿಗೆಯವರಿಗೆ ಬಿಟ್ಟುಹೋದರು. ಆಧುನಿಕ ಗೌಡ ಭಾಷೆಗಳು ಹುಟ್ಟಿಕೊಳ್ಳುವುದಕ್ಕೆ ಮೊದಲು ಉತ್ತರ ಭಾರತದಲ್ಲಿ ಸಾಹಿತ್ಯಿಕ ಭಾಷೆಯಾಗಿ ವಿರಾಜಮಾನವಾಗಿದ್ದ ಪ್ರಾಕೃತ ಮತ್ತು ಸಮಗ್ರ ಭಾರತದಲ್ಲಿಯೇ ತನ್ನ ಪ್ರಭಾವಬೀರಿದ ಸಂಸ್ಕೃತ, ಆಧುನಿಕ ಭಾಷೆಯಾದ ಹಿಂದಿ ಮತ್ತು ದ್ರಾವಿಡ ಭಾಷೆಗಳಾದ ತಮಿಳು ಮತ್ತು ಕನ್ನಡಗಳಲ್ಲಿ ಜೈನ ಕವಿಗಳು ಸಾಹಿತ್ಯದ ವಿವಿಧ ಪ್ರಾಕಾರಗಳನ್ನು ಬೆಳೆಸಿಕೊಂಡು ಬಂದ ಬಗೆಯನ್ನು ಸಯುಕ್ತಿಕವಾಗಿ, ಸಕಾರಣವಾಗಿ ವಿವರಿಸುವ ಈ ಕೃತಿಯು ಜೈನ ಕವಿಗಳ ಹಿರಿಮೆಯನ್ನು ಸಾರ್ವಜನಿಕರಿಗೆ ಎತ್ತಿ ತೋರಿಸಲು ಸಮರ್ಥವಾಗಿದೆ. ಪಂ. ಶಾಸ್ತ್ರಿಗಳೇ ಹೇಳುವಂತೆ ಈ ಬಗ್ಗಿನ ವಿಮರ್ಶೆ ಹಾಗೂ ಸಮಾಲೋಚನೆಯು ಸಂಪೂರ್ಣವಾಗಬೇಕಾದರೆ, ಅದಕ್ಕೊಂದು ಬೃಹತ್ ಪ್ರಮಾಣದ ಗ್ರಂಥವೇ ಬೇಕಾಗುವುದು. ಆದರೂ ಆ ಸಾಹಿತ್ಯದ ಸಾಮಾನ್ಯ ಪರಿಚಯವನ್ನು ಮಾಡಿಕೊಡುವ ಯತ್ನವನ್ನು ಪಂ. ಶಾಸ್ತ್ರಿಗಳು ಇಲ್ಲಿ ಮಾಡಿ ಅದರಲ್ಲಿ ಸುಯಶಸ್ವಿಯಾಗಿದ್ದಾರೆ. ಜೈನ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಮೇಲೆ ಪರಿಣಾಮ ಬೀರಿದೆ; ಅದು ಸತ್ವಶಾಲಿಯಾಗುವಂತೆ ಮಾಡಿದೆ. ಆದುದರಿಂದಲೇ ಜೈನ ವಾಙ್ಮಯವು ಭಾರತೀಯ ವಾಙ್ಮಯದ ಒಂದು ಅಮೂಲ್ಯ ಅಂಗವಾಗಿದೆ. ಈ ಕಿರಿಯ ಪುಸ್ತಕದಲ್ಲಿ ಆಯಾ ಭಾಷಾ ವಾಙ್ಮಯದ ವೈಶಿಷ್ಟ್ಯಗಳನ್ನು ನಿರೂಪಿಸುವುದರೊಡನೆ ಆ ಕಾಲದ ವಿಖ್ಯಾತ ಕವಿ ಮತ್ತು ಕೃತಿಗಳನ್ನೂ ಹೆಸರಿಸಿದ್ದಾರೆ. ಲೇಖಕರು ಸಮಗ್ರ ಜೈನ ಕನ್ನಡ ವಾಙ್ಮಯದ ಬಗ್ಗೆ ಅಧಿಕಾರಿಕ ಇತಿಹಾಸ ಗ್ರಂಥವೊಂದರ ಅಭಾವವಿರುವುದನ್ನು ಎತ್ತಿತೋರಿಸಿ, ಈ ಕೊರತೆಯನ್ನು ತುಂಬಿಕೊಡಲು ವಾಙ್ಮಯ ಪ್ರೇಮಿಗಳಿಗೆ ಕರೆಯಿತ್ತಿದ್ದಾರೆ. ಕೇವಲ ಜೈನ ವಾಙ್ಮಯ ಮಾತ್ರವಲ್ಲ, ಕನ್ನಡದ ಸಾಹಿತ್ಯದ ಬಗ್ಗೆ ವಿವೇಚನೆ; ಇತಿಹಾಸ ರಚನೆಗಳು ನ್ಯಾಯೋಚಿತ ವಿಧಾನದಲ್ಲಿ ಆಗದೆ ಇರುವುದರಿಂದ, ಇದನ್ನೂ ಪೂರ್ಣಗೊಳಿಸುವ ಅವಶ್ಯಕತೆಯನ್ನು ಎತ್ತಿ ಹೇಳಬೇಕಾಗಿದೆ.

'ಜೈನವಾಙ್ಮಯ' ಪುಸ್ತಕದಲ್ಲಿ ಪ್ರಯುಕ್ತವಾದ ಪಾಂಡಿತ್ಯಪೂರ್ಣ ಭಾಷೆಯು ಮನೋಜ್ಞವಾಗಿದೆ; ಗಂಭೀರವಾಗಿದೆ. ಲೇಖಕರು ಕೆಲವೆಡೆ ಅನ್ಯರು ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನು ಅಲ್ಲಗಳೆದು, ತಮ್ಮ ನೂತನ ಸ್ವತಂತ್ರಾಭಿಪ್ರಾಯವನ್ನೂ ಹೊರಗೆಡಹಿದ್ದಾರೆ. ತಮಗೆ ಸಂದಿಗ್ಧವೆಂದು ತೋರಿಬಂದ ಕಡೆ ಹೆಚ್ಚಿನ ಸಮಾಲೋಚನೆ ನಡೆಯಬೇಕೆಂದು ಸೂಚಿಸಿದ್ದಾರೆ. ಹಲವೆಡೆ ಹಿಂದಿನ ಸಂಶೋಧಕರ ಅಭಿಪ್ರಾಯವನ್ನೇ ಇದ್ದಕ್ಕಿದ್ದಂತೆ ಒಪ್ಪಿಕೊಂಡಿದ್ದಾರೆ. ತಮ್ಮ ಸತ್ವಪೂರ್ಣ ಲೇಖನಿಯನ್ನು ನಿರಾತಂಕವಾಗಿ ಆಡಿಸಿ, ಜೈನ ವಾಙ್ಮಯದ ಬಗ್ಗೆ ಚಿಕ್ಕ ಆದರೂ ಚೊಕ್ಕ ಪರಿಚಯ ಗ್ರಂಥವೊಂದನ್ನು ಕನ್ನಡಿಗರಿಗೆ ಒದಗಿಸಿದುದರ ಬಗ್ಗೆ ಶ್ರೀ ಭುಜಬಲಿ ಶಾಸ್ತ್ರಿಯವರನ್ನು ಅವಶ್ಯ ಅಭಿನಂದಿಸಲೇಬೇಕು. ಪಂಡಿತರ ಇತರ ಸಂಶೋಧನಾತ್ಮಕ ಕೃತಿಗಳಂತೆಯೇ ಇದೂ ಜನಪ್ರಿಯತೆಯನ್ನು ಗಳಿಸಬೇಕು; ಗಳಿಸುತ್ತವೆ

ಸಚೇತನ—ಸಂಪಾದಕ: ಶ್ರೀ ಶಂಕರ ಹೆಜ್ಮಾಡಿ; ಪೊ. ಬಾ. ನಂ. 10,091; ಬೊಂಬಾಯಿ—೧. ವಾರ್ಷಿಕ ಚಂದಾ: ರೂ. ೫. ಬಿಡಿ ಸಂಚಿಕೆ: ರೂ. ೦=೫೦.

೧೯೬೦ರ ಮೇ ತಿಂಗಳಿಂದ ಬೊಂಬಾಯಿಯ ಕನ್ನಡಿಗ ಸಹೋದರರು 'ಸಚೇತನ'ವೆಂಬ ಮಾಸಪತ್ರಿಕೆಯನ್ನು ಹೊರಡಿಸಲು ನಿರ್ಧರಿಸಿ, ಕಾರ್ಯಕೃತರಾಗಿದ್ದಾರೆ. ಬೊಂಬಾಯಿ ಮಹಾನಗರದಲ್ಲಿ ಲಕ್ಷಗಟ್ಟಲೆ ಕನ್ನಡಿಗರಿದ್ದಾರೆ ಎಂಬುದು ಅನುಭವವೇದ್ಯ. ಈ ಮೊದಲೂ ಬೊಂಬಾಯಿಯ ಕನ್ನಡಿಗರು ಕೆಲವೊಂದು ಪತ್ರಿಕೆಗಳನ್ನು ಪ್ರಕಾಶಪಡಿಸಲು ತೊಡಗಿ, ಜನತೆಯ ಸಹಾಯ ಸಹಕಾರಗಳ ಅಭಾವದಿಂದಾಗಿ ಕೆಲಸಮಯಾನಂತರ ಅವರು ನಿಸ್ಸಹಾಯಕರಾದಂತಾಗಿ ಕೈಸುಟ್ಟುಕೊಳ್ಳಬೇಕಾಗಿ ಬಂದುದನ್ನು ನಾವು ನೆನೆಯಬೇಕು. ಬೊಂಬಾಯಿಯ ಕನ್ನಡಿಗರ ಬಳಗವೊಂದು ಕೆಚ್ಚೆದೆಯಿಂದ ಪುನಃ 'ಸಚೇತನ'ವನ್ನು ಪ್ರಕಟಿಸಿ, ಕನ್ನಡಿಗರಲ್ಲಿ ನವಚೇತನವನ್ನು ತುಂಬುವ ಕಾರ್ಯಕ್ಕೆ ಸಿದ್ಧವಾಗಿದೆ. ಈ ಬಳಗದವರ ಅತ್ಯಮೂಲ್ಯ ಹಾಗೂ ಸ್ತುತ್ಯ ಕಾರ್ಯದಲ್ಲಿ ಕನ್ನಡಿಗರೆಲ್ಲರೂ ಯಥಾಶಕ್ತಿ ಸಹಕರಿಸಿ, 'ಸಚೇತನ'ವು ಚೇತನಯುತವಾಗಿ ಬಾಳಿ ಬೆಳಗುವಂತೆ ನೋಡಿಕೊಳ್ಳಬೇಕಾಗಿದೆ. ಈ ಹೊಣೆಯನ್ನು ಹೊರುವುದರಲ್ಲಿ ಎಲ್ಲರೂ ಮುಂಬರಬೇಕಾಗಿದೆ.

ಯುಕ್ತ ರಾಷ್ಟ್ರಸಂಘದ ಪ್ರಧಾನ ಕಾರ್ಯದರ್ಶಿ ಡಾಗ್ ಹೆಮ್ಮರ್‌ಶೀಲ್ಡ್.

ನವೋದಯ—೧೯೬೦—ವಿದ್ಯಾದಾಯಿನೀ ಹೈಸ್ಕೂಲ್ (ಸುರತ್ಕಲ್) ವಿದ್ಯಾರ್ಥಿ ಸರಕಾರದ ಈ ಪತ್ರಿಕೆಯನ್ನು ಆದರದಿಂದ ಸ್ವಾಗತಿಸುತ್ತೇವೆ. ಶಿಕ್ಷಣಾಲಯಗಳು ಪಾಠಗಳಂತೆಯೇ ಪಾಠೇತರ ಚಟುವಟಿಕೆಗಳಿಗೂ ಸಮಾನ ಸ್ಥಾನವನ್ನಿತ್ತು ವಿದ್ಯಾರ್ಥಿಗಳಲ್ಲಿ ಹುದುಗಿರುವ ಅವ್ಯಕ್ತ ಶಕ್ತಿಯು ಹೊರ ಚಿಮ್ಮಿ ಹರಿಯಲು ಸದವಕಾಶಗಳನ್ನು ಕಲ್ಪಿಸಿಕೊಡಬೇಕಾಗಿದೆ. ಈ ಕೆಲಸಕ್ಕೆ ವಿದ್ಯಾರ್ಥಿ ಪತ್ರಿಕೆಯೂ ಒಂದು ಸಾಧನವಾಗಿದೆ. ಎಂತಲೇ ಎಲ್ಲ ಶಾಲೆಗಳಲ್ಲಿಯೂ ಈ ಮಾದರಿಯ ಶಾಲಾ ಪತ್ರಿಕೆಯೊಂದು ಪ್ರಕಟಗೊಳ್ಳುವ ಪರಿಪಾಠ ಇತ್ತೀಚೆಗೆ ಹೆಚ್ಚಿದೆ. ಈ ಹಿಂದಿನ ವರ್ಷಗಳ ಸಂಚಿಕೆಯಂತೆಯೇ ವಿದ್ಯಾದಾಯಿನೀ ಹೈಸ್ಕೂಲಿನ ವಾರ್ಷಿಕ ಪತ್ರಿಕೆಯು ವಿದ್ಯಾರ್ಥಿಗಳಿಂದಲೇ ಬರೆಯಲ್ಪಟ್ಟ ಕನ್ನಡ, ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳ ಲೇಖನಗಳಿಗೆ ಪ್ರಾಶಸ್ತ್ಯವಿತ್ತು ಬೆಳಕು ಕಂಡಿದೆ; ವಿದ್ಯಾರ್ಥಿ-ಲೇಖಕರ ಪರಿಶ್ರಮವು ಸಾರ್ಥಕವಾಗಿದೆ; ಅವರ ಭವಿಷ್ಯವನ್ನು ಸಂಕೇತಿಸುತ್ತದೆ. ಶಾಲೆಯ ವಿವಿಧ ಚಟುವಟಿಕೆಗಳ ಹಲವು ಚಿತ್ರಪಟಗಳನ್ನು ಇದರಲ್ಲಿ ಸಂಕಲಿಸಿದ್ದು, ಪತ್ರಿಕೆ ಆಕರ್ಷಕವಾಗಿದೆ.

—ಗೋರಾ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ
S. C. No. 181/1960.
ಕೆ. ಉಮಾನಾಥ ಶೆಣೈ —ವಾದಿ.
ಮತ್ತು
N. ರಾಮ ಬಲ್ಲಾಳ—N. ಅನಂತತೀರ್ಥ ಬಲ್ಲಾಳರ ಮಗ, ಪ್ರೊಪ್ರೈಟರ್—ಉಡ್ಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಬಡಗು ಪೇಟೆಯಲ್ಲಿರುವವರು —ಪ್ರತಿವಾದಿ.
—ಪ್ರತಿವಾದಿಗೆ

ವಾದಿಗೆ ಪ್ರತಿವಾದಿಯಿಂದ ಬರತಕ್ಕ ತಾ. 1-4-59ರಿಂದ 11-9-59ರ ವರೆಗಿನ ದಿನ 1ರ ರೂ. 2/-ರ ಪ್ರಕಾರದ ಸಂಬಳದ ಬ್ಯಾಲೆನ್ಸು—ಬಡ್ಡಿ—ವ—ರಿಜಿಸ್ಟ್ರಿ ನೋಟೀಸು ಖರ್ಚು—ಕೂಡಾ ರೂ. 333-47nPನ್ನು ಬರಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯು ಪ್ರತಿವಾದಿಯ ನೋಟೀಸಿನ ಬಗ್ಗೆ ತಾ. 28-6-1960ಕ್ಕೆ ಇಟ್ಟಿರುತ್ತದೆ. ಪ್ರತಿವಾದಿಯು ತನ್ನ ಆಕ್ಷೇಪವಿದ್ದಲ್ಲಿ ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಾದಿಗುಣಕ್ಕೆ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

(By order of the Court)
ಯು. ಬಿ. ಕೃಷ್ಣರಾವ್,
ವಾದಿ ಕಡೆಯ ಎಡ್ವೊಕೇಟ್.
ಉಡುಪಿ, 15-6-1960.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.
ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಈರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2-75
ಪಂಜಯಿತು (ಕಾದಂಬರಿ)	2-50
ನಮ್ಮ ಸುತ್ತಲಿನ ಕಡಲು	1-75
ಪರಮಾಣು—ಇಂದು—ನಾಳೆ	3-00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಹರಟೆ

(೩ನೇ ಪುಟದಿಂದ)

ಈ ವಿಚಾರ ಕೇಳಿ ತಲೆಗೆ ಚಿಟ್ಟೆ ಹಿಡಿಯಿತು.

○○ ○○ ○○

ಈಗ ಪರೀಕ್ಷೆಯ ಫಲಿತಾಂಶ ಬಂದಿದೆ.

○○ ○○ ○○

ಬಂದೊಡನೆ ನಾನು ನನ್ನ ಮೊದಲನೆಯ ಮಿತ್ರರನ್ನು ಭೇಟಿಯಾಗಿ ಅವರ ಮಗನ ಬಗ್ಗೆ ವಿಚಾರಿಸಿದೆನು.

ಅವರು ಈ ರೀತಿಯಾಗಿ ಉತ್ತರ ಕೊಟ್ಟರು:

"ನನ್ನ ಮಗನದ್ದು ಹೋಯಿತಲ್ವ ಸ್ವಾಮಿ! ಪರೀಕ್ಷೆಗೆ ಕುಳಿತವರಲ್ಲಿ ಮುಕ್ಕಾಲಂಶ ಜನರೂ ನಾಪಾಸಾಗಿರುವರಂತಲ್ಲ. ಯಸ್. ಯಸ್. ಯಲ್. ಸಿ. ಯಲ್ಲಿ ನೂರಕ್ಕೆ 85 ಮಾರ್ಕು ತೆಗೆದವನೂ ಪಾಸಾಗಿಲ್ಲವಂತೆ. ಆದ್ದರಿಂದ ನಮ್ಮ ಹುಡುಗ ಫೈಲಾದ್ದರಲ್ಲಿ ಏನೂ ವಿಶೇಷವಿಲ್ಲ. ಮೈಸೂರು ವಿಶ್ವವಿದ್ಯಾಲಯದ ಪರೀಕ್ಷೆಯೆಂದರೆ ಅದೃಷ್ಟ ಪರೀಕ್ಷೆಯಂತೆ. ಮುಂದೆ ಬೇಂಕಿಗೆ ಸೇರಿಸಿದರೆ ಆಗಬಹುದೊ ಎಂದು ಯೋಚಿಸುತ್ತಿದ್ದೇನೆ"

○○ ○○

ಎರಡನೆಯವರನ್ನು ಭೇಟಿಯಾಗಿ ಅವರ ಮಗಳ ರಿಸಲ್ಟಿನ ಬಗ್ಗೆ ಕೇಳಿದೆನು. ಅವರು—

"ಊಹುಂ. ಪಾಸಾಗಲಿಲ್ಲ ಸ್ವಾಮಿ ನಮ್ಮ ಹುಡುಗಿ. ಬಹಳಮಂದಿ ಫೈಲಾಗಿದ್ದಾರಂತಲ್ಲ! ಹುಡುಗಿಯರೂ ಕಲಿತರೆ ನಿರುದ್ಯೋಗ ಸಮಸ್ಯೆ ಇನ್ನೂ ಬಲಿಯುವುದೆಂದು ವಿಶ್ವವಿದ್ಯಾಲಯದವರು ಹೀಗೆ ಹುಡುಗಿಯರನ್ನೆ ಫೈಲ್ ಮಾಡಿದ್ದಾರಂತೆ.

"ಕಾಲೇಜಿನಲ್ಲಿ ಹುಡುಗಿಯರಾಗಲಿ ಹುಡುಗರಾಗಲಿ ಪಾಸಾಗಿಲ್ಲವೆ?"

"ಪಾಸಾಗಿದ್ದಾರೆ. ಆದರೆ ಸಂಖ್ಯೆ ಕಡಿಮೆ. ಯಾರ ಯಾರದ್ದೊ ಕೈಕಾಲು ಹಿಡಿದು ಪೀಡಾಡಿ ಅವರು ಮೇಲೆ ಬಿದ್ದರು. ಯೋಗ್ಯರು ಪಾಸಾಗಲೇ ಇಲ್ಲ."

ನನ್ನ ಸಮೀಪದಲ್ಲಿದ್ದ ನನ್ನ ಬಂಧುಗಳೊಬ್ಬರು—"ಈ ಬಾರಿ ಯುವಜನೋತ್ಸವದ ವಿಚಾರದಲ್ಲಿ ವಿದ್ಯಾರ್ಥಿಗಳು ಮಾಡಿದ ಗಲಾಟೆಯ ದೆಸೆಯಿಂದ ಯುನಿವರ್ಸಿಟಿಯವರು ವಿದ್ಯಾರ್ಥಿಗಳಲ್ಲಿ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡಿದ್ದಾರಂತೆ." ಎಂದು ಸ್ವರಗೂಡಿಸಿದರು ಆ ಮಾತುಗಳಿಗೆ ಉತ್ತರಿಸುವ ಅಧಿಕಾರ ನನಗಿಲ್ಲವಷ್ಟೆ!

○○ ○○ ○○

ನನ್ನ ಹುಡುಗ ನಾಪಾಸಾದ್ದರಲ್ಲಿ ನನಗೇನೂ ಆಶ್ಚರ್ಯವಿಲ್ಲ. ನನ್ನ ಹೆಂಡ್ತಿಗೆ ಅದೇ ಒಂದು ಆಶ್ಚರ್ಯವಾಗಿತ್ತು. ಆಕೆ ಬಗೆಬಗೆಯಾಗಿ ಮಗನ ವಿಚಾರ ಬಣ್ಣಿಸುತ್ತಾ ಪರೀಕ್ಷೆಯ ಉತ್ತರ ಪತ್ರಗಳನ್ನು ತಿದ್ದಿದವರನ್ನು ಶಪಿಸಿದಳು. ಅಂತೂ ಫೈಲು ಮಾಡಿದವರಿಗೆ ಶಾಪವನ್ನಿತ್ತು ಅಲ್ಪ ತೃಪ್ತಳಾದಳು.

ನನ್ನ ಹುಡುಗ ನಾಪಾಸಾದಕ್ಕೆ ನಾನೇ ದೇವರಿಗೆ ಕೈಮುಗಿದೆನು. ಕಾರಣವೇನೆಂದರೆ ಮೊದಲನೆಯದಾಗಿ ಹೇಳಿದ ಎಲ್ಲಾ ಹರಕೆಗಳು ರದ್ದುಗೊಳಿಸಲ್ಪಟ್ಟುವು. ಎರಡನೆಯದಾಗಿ ಮುಂದೆ ಆತನನ್ನು ಕಲಿಸಬೇಕೆಂದು ನನ್ನ ಮಡದಿಯಲ್ಲಿ ಹುದುಗಿದ್ದ ಆಸೆಯು ನಿರಾಶೆಲಾಯಿತು.

ನನ್ನ ಮಗನಂತೂ ದೇವರಿಗೆ ತಿರುಪತಿ ನಾಮ ಹಾಕಿದನು.

—ಕುಂಠಳು ಪ್ರಿಯ.

ಯಾರಿಗೆ ಗೊತ್ತು?

(೪ನೇ ಪುಟದಿಂದ)

ಮೂರು ಪರೀವರಗಳು ಇದ್ದು, ಒಂದು ಬಿಸಿನೀರಿನದು; ಇನ್ನೊಂದು ಉಪ್ಪು ನೀರಿನದು ಮತ್ತು ಕೊನೆಯದು ಒಗರು ನೀರಿನದಾಗಿದ್ದುವು.

ಆದರೆ, ೧೬೩೧ರಲ್ಲಿ ದೈತ್ಯ ನಿದ್ದೆಯಿಂದೆಚ್ಚತ್ತಿತು. ನೇಪಲ್ಸ್‌ನ ಜನರು ಭೂಮಿಯೊಳಗಡೆ ಗಡಬಡ ಶಬ್ದವನ್ನು ಕೇಳಿದರು. ಕೆಲದಿನಗಳನಂತರ ರಾತ್ರಿಯಲ್ಲಿ ಪರ್ವತದ ಶಿಖರದಲ್ಲಿ ಕೆಂಪು ಕಬ್ಬಿಣದಂತಹ ಕೆಂಬಣ್ಣ ತೋರತೊಡಗಿತು. ನೇಪಲ್ಸ್‌ನ ಹಿರಿಯ ಪಾದ್ರಿಯು ಸಂತ ಜೆನುಯೇರಿಯಸನ ಮುಂಬಟ್ಟಿದ್ದ ರಕ್ತದ ಮುದ್ದೆ ದ್ರವಿತವಾಗಿರುವುದನ್ನು ಕಂಡುಕೊಂಡನು. ಜನತೆಗೆ ಪ್ರತಾಪಚಂಡೆ ನಡೆಸುವಂತೆ ಆ ದೇಶ ಹೊರಟಿತು. ಸಂತ ವಿಗ್ರಹಕ್ಕೆ ಉತ್ಸವ–ಮೆರವಣಿಗೆಗಳು ನಡೆದುವು. ಆದರೆ, ಅಷ್ಟರಲ್ಲಿಯೇ ವಿಸ್ಫೋಟಕ್ಕೆ ಮೊದಲಾಯಿತು. ಹಲವು ಮಣ ಭಾರದ ಶಿಲೆಗಳು ಆಕಾಶದಲ್ಲಿ ಹಾರಾಡತೊಡಗಿದುವು. ಕೆಂಪು ಲಾವಾವು ಏಳು ಧಾರೆಗಳಾಗಿ ಒಂದು ಸೆಕೆಂಡಿಗೆ ಒಂದಡಿಯಂತೆ ಪರ್ವತದಿಂದ ಹರಿಯತೊಡಗಿತು. ಇದರಲ್ಲಿ ಒಂದು ಪ್ರವಾಹವು ಮೆರವಣಿಗೆ ಬರುತಿದ್ದ ಮೂರು ಸಾವಿರ ಜನರನ್ನು ತನ್ನೊಡನೆ ಕೊಚ್ಚಿಕೊಂಡು ಸಮುದ್ರಯಾತ್ರೆ ಮಾಡಿಸಿಬಿಟ್ಟಿತು.

ಈ ದುರ್ಘಟನೆಯಲ್ಲಿ ಒಟ್ಟು ಇಪ್ಪತ್ತು ಸಾವಿರ ಮನುಷ್ಯರ ಪ್ರಾಣ ಹೋಗಿದೆಯೆಂದು ಅಂದಾಜು ಮಾಡಿದ್ದಾರೆ. ವಿಸ್ಫೋಟದ ನಂತರ ಕೆಲವೇ ದಿನಗಳಲ್ಲಿ ಅದೆಷ್ಟೋ ಅರಬ ಟನ್ನುಗಳಷ್ಟು ಬಿಸಿ ನೀರನ್ನು ಉಗುಳಲು ಪ್ರಾರಂಭಿಸಿತು; ಇದರಿಂದಲೂ ಸಾವಿರಾರು ಜನರು ಕೊಚ್ಚಿ ಹೋದರು. ಈ ನೀರಿನಲ್ಲಿ ಮೀನು, ಸಮುದ್ರನಾಯಿ ಮೊದಲಾದ ಜಲಚರ ಪ್ರಾಣಿಗಳಿದ್ದುವೆಂದು ಆ ಕಾಲದ ಲೇಖಕನೊಬ್ಬನು ಬರೆದಿದ್ದಾನೆ. ತೋರಿಕೆಗೆ ಇದು ಅಸಂಭವವೆಂದು ತೋರಿ ಬಂದರೂ ಇತ್ತೀಚೆಗೆ ನಡೆದ ಸಂಶೋಧನೆಯಿಂದ, ವೆಸುವಿಯಸ್‌ನ ಬಾಯಿಯಲ್ಲಿ ಸಮುದ್ರ ಪ್ರಾಣಿಗಳ ಅವಶೇಷವಿದೆಯೆಂದು ಗೊತ್ತಾಗಿದೆ.

೧೬೬೭ರಲ್ಲಿನ ವಿಸ್ಫೋಟದ ವಿಶದ ವರ್ಣನೆಯು ನಮಗೆ ದೊರೆಯುತ್ತದೆ. ಆ ಕಾಲದಲ್ಲಿ ನೇಪಲ್ಸ್ ರಾಜಧಾನಿಯಲ್ಲಿ ಬ್ರಿಟನ್ನಿನ ರಾಯಭಾರಿಯಾಗಿದ್ದ ಸುವಿಖ್ಯಾತ ಭೂ ಭೌತ ಶಾಸ್ತ್ರಜ್ಞ ಸರ್ ವಿಲಿಯಮ್ ಹೆಮಿಲ್ಟನ್‌ನು ಈ ವರ್ಣನೆಯನ್ನು ಮಾಡಿದ್ದಾನೆ. ವಿಸ್ಫೋಟವಾಗುವಾಗ, ಆತನು ಪರ್ವತದ ಒಂದು ಕಿರಿಯ ಜ್ವಾಲಾಮುಖಿಯ ಬಳಿಯಲ್ಲೇ ನಿಂತಿದ್ದು ವೃಕ್ಷವಿನಿಂದ ಬಹು ಕಾಳಿದಿದ್ದನು.

ಕಳೆದ ಶತಮಾನದ ಮಧ್ಯಕಾಲದವರೆಗೆ ವೆಸುವಿಯಸ್ ಯಾತ್ರಿಕರ ಆಕರ್ಷಕ ಕೇಂದ್ರವಾಗಿತ್ತು. ನೇಪಲ್ಸ್‌ನ ಯಾತ್ರಾವೇಳೆಯಲ್ಲಿ ವೆಸುವಿಯಸ್‌ನ ಒಂದೆರಡು ಅಗ್ನಿನದಿಗಳು ಕಣ್ಣಿಗೆ ಸಿಕ್ಕಿದರೆ ಯಾತ್ರಿಕ ನಿರಾಶನಾಗುತ್ತಿದ್ದನೆ. ೧೮೭೨ರ ಎಪ್ರಿಲ್ ೨೬ರ ಮಧ್ಯಾಹ್ನದಲ್ಲಿ ಬಹಳ ಯಾತ್ರಿಕರು ವೆಸುವಿಯಸನ್ನು ಹತ್ತಿದರು. ಅವರು ಜ್ವಾಲಾಮುಖದೊಳಗೆ ಬಗ್ಗಿನೋಡುವಾಗ, ಅವರ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಒಳಗಡೆ ಲಾವಾರಸ ಕುದಿಯುತಿತ್ತು. ಯಾತ್ರೆಯೇನೋ ನಿಷ್ಫಲವಾಗಲಿಲ್ಲ. ಆದರೆ, ಆ ರಾತ್ರೆ ವೆಸುವಿಯಸ್ ಏಕಾಏಕಿಯಾಗಿ ಪ್ರಕುಪಿತಗೊಂಡೊಡನೆಯೇ ಅವರೆಲ್ಲರ ಪ್ರಾಣವು ಸಂಕಟಕ್ಕೀಡಾಯಿತು. ಅಗ್ನಿಜ್ವಾಲೆಗಳು ಸುರಿದುವು. ಪ್ರಾಣ ಕೈಯಲ್ಲಿ ಹಿಡಿದು ಓಡುತಿದ್ದವರು ತಮ್ಮ ದಾರಿಯನ್ನು ಲಾವಾರಸದ ನದಿಗಳು ತಡೆದುದನ್ನು ಕಂಡು ಅಚೇತನರಾದರು.

೧೯೪೪ರಲ್ಲಿ ದ್ವಿತೀಯ ಲೋಕಯುದ್ಧ ನಡೆಯುತ್ತಿರುವಾಗಲೇ ವೆಸುವಿಯಸ್‌ನ ಕೊನೆಯ ವಿಸ್ಫೋಟನಡೆಯಿತು ಆ ವರ್ಷ ಜನವರಿಯಿಂದಲೇ ವಿಸ್ಫೋಟದ ಲಕ್ಷಣಗಳು ತೋರಿ ಬರುತಿದ್ದುವು. ಮಾರ್ಚ್ ೧೮ಕ್ಕೆ ಪರ್ವತ ಶಿಖರದಿಂದ ಹೊಗೆ ಹರಿಯ ತೊಡಗಿತು; ಇದು ಆಕಾಶದಲ್ಲಿ ೨೦,೦೦೦ ಅಡಿ ಎತ್ತರವೇರಿತ್ತು. ಎರಡು ದಿನಾನಂತರ ೩೦ ಅಡಿ ಎತ್ತರ ಮತ್ತು ೩೦೦ ಅಡಿ ಅಗಲದ ಲಾವಾರಸದ ನದಿಯು ಪ್ರತಿ ನಿಮಿಷಕ್ಕೆ ನಾಲ್ಕು ಗಜದ ವೇಗದಲ್ಲಿ ಹರಿಯ ತೊಡಗಿತು. ೨೪ನೆ ಮಾರ್ಚಿಯ ದಿನ ಮಿತ್ರ ಸೇನೆಯ ಪ್ರಧಾನ ಜಲ ಸೇನಾನಿಯು ಇದನ್ನು ಕಂಡು, ಒಂದು ವರದಿಯೊಪ್ಪಿಸಿದ್ದನು. ಅದರಲ್ಲಿ, ನೇಪಲ್ಸ್ ಮತ್ತು ಆಸುಪಾಸಿನ ಎಲ್ಲ ಬಂದರಗಳು ಒಟ್ಟು ಒಂದು ವರ್ಷದಲ್ಲಿ ೧ ಕೋಟಿ ೨೦ ಲಕ್ಷ ಟನ್ನು ಸಾಮಾನನ್ನು ನಿರ್ಯಾತ ಮಾಡುತ್ತವೆ. ಆದರೆ, ವೆಸುವಿಯಸ್ ಒಂದೇ ದಿನದಲ್ಲಿ ನೂರು ಕೋಟಿ ಟನ್‌ಗಿಂತಲೂ ಅಧಿಕ ಲಾವಾವನ್ನು ಉಗುಳುತ್ತದೆ" ಎಂದು ಉಲ್ಲೇಖಿಸಲಾಗಿತ್ತು.

ವೆಸುವಿಯಸ್ ಇಷ್ಟೊಂದು ಭಯಾನಕ ಹಾಗೂ ಉಗ್ರವಾಗಿದ್ದರೂ ನೇಪಲ್ಸ್ ಜನರಿಗಿದು ಪ್ರಿಯವಾಗಿದೆ. ಯಾರಾದರೂ ಮಕ್ಕಳು ವೆಸುವಿಯಸ್‌ನಲ್ಲಿ ಹೊಗೆ ಅಥವಾ ಆವಿಯನ್ನು ಕಂಡರೆ, ಕೈತ್ತ ಕೈತೋರಿಸಿ ಸಂತೋಷದಿಂದ ಕೂಗುತ್ತಾರೆ: "ಅಜ್ಜ ಚುರುಟು ಸೇದುತಿದ್ದಾನೆ" ಎಂದ.!

(ಸಂಗ್ರಹ)

—ಗೋರಾ.

ಕೊಲಂಬೋ ಯೋಜನೆಯ ಮೇರೆಗೆ ಭಾರತದ ವಿದ್ಯಾರ್ಥಿಯೊಬ್ಬನು ಬ್ರಿಟನಿನಲ್ಲಿ ತರಬೇತಿ ಪಡೆಯುತ್ತಿದ್ದಾನೆ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅನುಭವ

ಮೃತ್ಯುಲೋಕದ ಬಾಹ್ಯದರ್ಶನ

ಕವೀಂದ್ರ ರವೀಂದ್ರರು ಮೃತ್ಯುವನ್ನು ಮಧುರ ಮಿತ್ರನೆಂದು ಕಲ್ಪಿಸಿದ್ದರೆ ಅವರ ವಾಗ್ಮಿ ಶ್ರೀನಿವಾಸ ಶಾಸ್ತ್ರಿಯವರು ಅದನ್ನು ಅಂಧಕಾರಮಯ ಮಾರ್ಗವೆಂದು ಹೇಳಿದ್ದರು. ಪ್ರಪಂಚದ ಅಂತಿಮ ದೃಶ್ಯವನ್ನು ಕಂಡ ಶ್ರೀ ಇಂದ್ರವಾಚಸ್ಪತಿಯವರ ಈ ಅನುಭವವು ಆ ರಹಸ್ಯ ಲೋಕದ ಮೇಲೆ ಹೊಸ ಬೆಳಕು ಬೀರುವುದಿಲ್ಲವೆ?

ಕಳೆದ ವರ್ಷದಲ್ಲಿ ನನಗೊಂದು ದುರ್ಲಭ ಅನುಭವವಾಯಿತು. ಮೃತ್ಯುದ್ವಾರವು ಯಾವ ರೀತಿಯಲ್ಲಿದೆ ಮತ್ತು ಅಲ್ಲಿ ವರೆಗೆ ಹೇಗೆ ಹೋಗಬಹುದು ಎಂಬುದನ್ನು ನಾನು ಕಂಡುಕೊಂಡೆ. ಒಂದು ಹೆಜ್ಜೆ ನಾನು ಮುಂದುವರಿದಿದ್ದರೆ, ನಾನು ಅನಂತದೊಡನೆ ವಿಲೀನವಾಗಿ ಹೋಗುತಿದ್ದೆ. ನಾನು ಮೃತ್ಯುದ್ವಾರವನ್ನು ಮುಟ್ಟಿದೊಡನೆಯೇ ಯಾರೋ ಬಂದು ಹಿಂದೆಳೆದರು; ನಾನು ಗಾಢಾಂಧಕಾರದಿಂದ ಮರಳಿ ಶುಭ್ರ ಪ್ರಕಾಶದತ್ತ ಸರಿದೆನು.

ಇದರ ಇಡಿ ಕಥೆಯನ್ನು ನೀವು ಕೇಳಬಯಸುವಿರಾ? ಹಾಗಾದರೆ, ಮುಂದೆ ಓದಿರಿ. ಕಳೆದ ವರ್ಷ ನನ್ನ ಶರೀರದ ಮೇಲೆ ನ್ಯುಮೋನಿಯಾವು ದೊಡ್ಡ ಆಕ್ರಮಣ ನಡೆಸಿತು. ಆ ಸಮಯದಲ್ಲಿ ನಾನು ಕಾಂಗ್ರಿಯ ಗುರುಕುಲದಲ್ಲಿದ್ದೆನು. ಈ ಆಕ್ರಮಣವು ತುಸು ಭಯಂಕರ ರೂಪ ಧಾರಣೆ ಮಾಡಿದನಂತರ, ಅದನ್ನೆದುರಿಸುವ ಸದಿಚ್ಛೆಯಿಂದ, ದಿಲ್ಲಿಗೆ ತೆರಳಿದೆ. ದಿಲ್ಲಿಯಲ್ಲಿ ಕಾಲಿರಿಸಿದೊಡನೆಯೇ ದಾಳಿ ಬಹಳಷ್ಟು ಬಲವಾಯಿತು. ಹಿಂದೆಯೇ ರೋಗಗ್ರಸ್ತ ಶರೀರ, ಮಿತ ಭೋಜನದಿಂದ ಪಾಲಿತವಾದ ಶರೀರ ಈ ಆಕ್ರಮಣವನ್ನು ಹೇಗೆ ತಾನೇ ಸಹಿಸಬಲ್ಲುದು? ಪ್ರಾತಃಕಾಲದಿಂದ ಎದೆಯಲ್ಲಿ ನೋವೂ ಜತೆಗೆ ಜ್ವರವೂ ಏರುತ್ತ ಬಂದುವು. ಸಂಜೆ ೫ ತಾಸಾಗುವಷ್ಟರಲ್ಲಿ ಪರಿಸ್ಥಿತಿ ಮತ್ತಷ್ಟು ವಿಕೋಪಗೊಂಡಿತು. ಈ ದೆಸೆಯಲ್ಲಿ ಚಿಕಿತ್ಸೆ ನಡೆಸಿದ ಹೋಮಿಯೋಪಥಿ ಮತ್ತು ಅನಂತರ ಎಲೋಪಥಿಯ ಮಹಾ ಡಾಕ್ಟರರು ಯಾವುದಾದರೂ ನರ್ಸಿಂಗ್ ಹೋಮಿಗೆ ರೋಗಿಯನ್ನು ಕೊಂಡೊಯ್ಯುವುದು ಅತ್ಯಂತಾವಶ್ಯಕವೆಂದು ಅಭಿಪ್ರಾಯಪಟ್ಟರು.

ಆಗ, ನನ್ನ ಪರಿಸ್ಥಿತಿ ಹೇಗಿತ್ತು ಎಂದು ಸರಿಯಾಗಿ ಹೇಳಲಾರೆ. ಆದರೂ ಇಷ್ಟು ಮಾತ್ರ ಬರೆಯಬಲ್ಲೆ: ಜ್ವರವು ನಿರಂತರವಾಗಿ ಹೆಚ್ಚುತಿತ್ತು; ಶ್ವಾಸ ತೆಗೆದುಕೊಳ್ಳುವುದಕ್ಕೂ ನನಗೆ ಪ್ರಯಾಸವೆನಿಸುತಿತ್ತು; ಶ್ವಾಸವು ನಡುದಾರಿಯಲ್ಲಿಯೇ ಮರಳಬರುವಂತೆ ಭಾಸವಾಗುತಿತ್ತು. ನಾನು ಸದಾ ರೋಗಿಯಾಗಿ ಆಸ್ಪತ್ರೆ ಅಥವಾ ನರ್ಸಿಂಗ್ ಹೋಮಿನಲ್ಲಿ ಉಳಕೊಳ್ಳುವುದನ್ನು ವಿರೋಧಿಸುತಿದ್ದೆ. ಮನೆಯಲ್ಲಿಯೇ ಸರಿಯಾದ ಆರಯ್ಕೆ ಹಾಗೂ ಪರಿಚರ್ಯೆಗಳು ನಡೆಯುವುದಾದರೆ, ಬೇರೆಲ್ಲಿಗೂ ತೆರಳಬಾರದೆ ಎಂಬ ದೃಢ ನಿರ್ಧಾರ ನನ್ನ ಮನಸ್ಸಿನಲ್ಲಾಗಿತ್ತು. ಆದರೆ, ಮನೆಗೆ ಬಂದು ಸಂಗತಿ ತಿಳಿಸಿದೊಡನೆಯೇ, ನನ್ನ ಕೈಹಿಡಿದ ಮಡದಿ "ನನಗಾಗಿ ಯಾವುದಾದರೂ ನರ್ಸಿಂಗ್ ಹೋಮನ್ನು ಸೇರಿಕೊಳ್ಳಿರಿ" ಎಂದು ಕಣ್ಣೀರು ಸುರಿಸಿ ಉದ್ಗರಿಸಿದೊಡನೆಯೇ, ಆ ನಿರ್ಧಾರವನ್ನು ತೊಡೆದು ಹಾಕಿ ಸಮ್ಮತಿಸಿದೆ. ಅನಂತರ ಆವಶ್ಯಕ ತಯಾರಿಗೆ ಆರಂಭವಾಯಿತು. ದಿಲ್ಲಿಯಲ್ಲಿ ಅಂಬುಲೆನ್ಸ್ ಕಾರುಗಳು ಸಮಯಕ್ಕೆ ಸರಿಯಾಗಿ ದೊರೆಯುವುದು ಬಲು ಕಷ್ಟವಾಗಿ ಪರಿಣಮಿಸಿತ್ತು. ಮಿತ್ರರ ಮತ್ತು ಅದೃಷ್ಟದ ಬಲದಿಂದ ಒಂದರ್ಧ ತಾಸಿನಲ್ಲೇ ರೆಡ್ ಕ್ರಾಸ್‌ನವರ ಗಾಡಿ ಬಂದಿತು. ಆ ಕೂಡಲೇ ನನ್ನನ್ನು ಕಾರಿನಲ್ಲಿ ತುಂಬಿಸಿ ಕರೆದುಕೊಂಡು ಹೋದರು.

ಆ ಸಮಯದಲ್ಲಿ ಉಬ್ಬಸ ಬನ್ನ ಬಾಧಿಸುತಿತ್ತು. ಶ್ವಾಸವು ತಡೆದಂತಾಗುತಿತ್ತು. ಡಾಕ್ಟರರ ಸಲಹೆಯಂತೆ ಪ್ರತಿ ಐದು ಮಿನಿಟಿಗೊಮ್ಮೆ ಒಂದು ಚಮಚ ನೀರು ಬೆರೆಸಿದ ಬ್ರಾಂಡಿಯನ್ನು ಕುಡಿಸುತಿದ್ದುದರಿಂದ ಚೇತನ ಸಚೇತವಾಗಿ ಉಳಿದಿತ್ತು. ಕಾರು ಡಾ| ಸೇನರ ನರ್ಸಿಂಗ್ ಹೋಮನ್ನು ಸೇರುವಷ್ಟರಲ್ಲಿ ನನ್ನ ಶಕ್ತಿಯು ಕ್ಷೀಣವಾಗಿರುವಂತೆಯೂ ನಾನು ನೀರಿನಲ್ಲಿ ಮುಳುಗುತ್ತಿರುವಂತೆಯೂ ಭಾಸವಾಯಿತು. ನಾನಾಗಿಯೇ ನೀರಿನಿಂದ ಮೇಲೇಳುವ ಪ್ರಯತ್ನವನ್ನು ಮಾಡದಿರುತಿದ್ದರೆ, ಆ ನರ್ಸಿಂಗ್ ಹೋಮಿನ ಬಾಗಿಲನ್ನೂ ಮುಟ್ಟುತ್ತಿರಲಿಲ್ಲವೆಂದೂ ತಿಳಿದುಕೊಂಡೆ. ನನ್ನ ಶಕ್ತಿಯೆಲ್ಲವನ್ನೂ ಕೇಂದ್ರೀಕರಿಸಿ, ನೀರಿನ ಮೇಲೇರಲು ಒದ್ದಾಡುತಿದ್ದ. ಮಲಗಿದ್ದ ನಾನು ಮಾರ್ಗದ ಪಕ್ಕದಲ್ಲಿದ್ದ ಮರಗಳ ತುದಿಯನ್ನಷ್ಟೇ ಕಾಣುತ್ತಿದ್ದೆ. ನನ್ನ ಮನಸ್ಸಿಗೆ, ಪತ್ನಿಗೆ ಹಾಗೂ ಇತರ ಮಿತ್ರರಿಗೆ ನಾನಿನ್ನೂ ಎಚ್ಚರ ತಪ್ಪಿಲ್ಲ; ಸಚೇತನಾಗಿಯೇ ಉಳಿದಿದ್ದೇನೆ ಎಂಬುದನ್ನು ತೋರಿಸಿಕೊಡುವ ಸಲುವಾಗಿ, ಆಗಾಗ ಹೇಳುತ್ತಿದ್ದೆ—"ನಾವೀಗ ಬೆಟ್ಟದ ದಾರಿಯಲ್ಲಿ ಹೋಗುತಿದ್ದೇವೆ; ಈಗ, ಕಾಶ್ಮೀರದ ಬಾಗಿಲು ಬಂದಿತು; ಇದು ದರಿಯಾಗಂಜದ ತಿರುವು ಅಲ್ಲವೆ? ನರ್ಸಿಂಗ್ ಹೋಮ್ ಸಮೀಪ ಬಂದಿತು; ಇನ್ನೇನು, ಮುಟ್ಟಿದಂತೆಯೇ". ಅಲ್ಲಿಯೇ ಇದ್ದ ತಿರುವಿನವರೆಗೆ ಇದೇ ರೀತಿ ನಡೆಯಿತು. ಆದರೆ, ಹೋಮಿನ ಬಾಗಿಲು ತಲಪುವಾಗ, ನನ್ನ ಅರ್ಧಾಂಶ ಶಕ್ತಿ ಉಡುಗಿ ಹೋದಂತಾಗಿತ್ತು. ಏನೋ ದೂರದಲ್ಲಿ ಆದೆಂತಹ ದೋ ಶಬ್ದ ಕೇಳಿಬರುವಂತಿತ್ತು. ನರ್ಸಿಂಗ್ ಹೋಮಿನವರು ಕೊಂಚ ಮುಂಗಡ ಹಣ ಕೇಳುತ್ತಿರುವಂತೆ, ನನ್ನ ಹೆಂಡತಿಯು ಏನೋ ಅವರೊಡನೆ ಹೇಳುತ್ತಿರುವಂತೆ; "ಮಗಳು ಉಪೆಯು ಅದಕ್ಕೆ ಬೇಕಾದ ವ್ಯವಸ್ಥೆ ಮಾಡಲು ಮರಳಿ ಓಡುತ್ತಿರುವಂತೆ ಭಾಸವಾಗುತಿತ್ತು. ನಾನು ಕಂಡ ದೃಶ್ಯ ಮತ್ತು ಕೇಳಿದ ಧ್ವನಿಯಲ್ಲಿ ಇದೇ ಕೊನೆಯದಾಯಿತು. ಅನಂತರ ನನ್ನ ಕಣ್ಣ ಮುಂದೆ ಘೋರಾಂಧಕಾರ ಹರಡಿತು; ಏನೊಂದೂ ತೋರಲಿಲ್ಲ, ಕಿವಿಗಳು ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತುವು. ಬಹಳ ನಿಧಾನವಾಗಿ ಶ್ವಾಸೋಚ್ಛ್ವಾಸ ನಡೆಯುತಿತ್ತೆಂದು ಹೇಳುತ್ತಾರೆ. ಆಗ ಪ್ರಾಯಃ ಸಂಜೆಯ ಆರು ತಾಸಾಗಿರಬೇಕು. ಮುಂದಿನ ಏಳು ಗಂಟೆಗಳ ಹೊತ್ತು ನಾನು ಸಂಪೂರ್ಣ ಅಚೇತನಾಗಿಯೇ ಇದ್ದೆ. ನನ್ನ ಶ್ವಾಸವೂ ಕೆಲಕಾಲ ನಿಂತುಹೋಗಿತ್ತು ಎಂದು ಶುಶ್ರೂಷೆ ಮಾಡಿದವರು ಹೇಳುತ್ತಾರೆ; ಆಗ ಶರೀರದ ಚೇತನವು ಸಂಪೂರ್ಣ ಹಾರಿ ಹೋಗಿತ್ತಂತೆ. ಜ್ವರವು ೧೦೬ ಡಿಗ್ರಿಗಳ ಮಿತಿಯನ್ನು ಮುಟ್ಟಿತ್ತಂತೆ. ನಿಮೋನಿಯಾವು ನನ್ನನ್ನು ಕಬಳಿಸಲು ಅಂತಿಮ ಸಾಹಸ ಪಡುತಿತ್ತಂತೆ. ನನ್ನ ಪತ್ನಿ, ಮಗಳು, ಅನ್ಯ ಬಂಧುಗಳು, ಚಿಕಿತ್ಸೆ ನಡೆಸುವ ಡಾಕ್ಟರರು, ಇಂಜೆಕ್ಷನ್ ಕೈಯಲ್ಲಿ ಹಿಡಿದುಕೊಂಡಿದ್ದ ನರ್ಸ್ ಎಲ್ಲರೂ ರೋಗಿಯ ಶರೀರ ಪಂಜರದಲ್ಲಿ ಪ್ರಾಣಪಕ್ಷಿ ಇದೆಯೋ ಹಾರಿ ಹೋಗಿದೆಯೋ ಎಂದು ಸಂದೇಹಪಡುತಿದ್ದರಂತೆ. ನರ್ಸಿಂಗ್ ಹೋಮಿನ ಹಾಸಿಗೆಯಲ್ಲಿ ಮಲಗಿಸಿದೊಡನೆಯೇ ಆಮ್ಲಜನಕದ ಕೊಳವೆಯನ್ನು ನನ್ನ ಮೂಗಿಗೆ ಜೋಡಿಸಲಾಗಿದ್ದಿತಂತೆ.

ರಾತ್ರಿ ೧೨ ತಾಸುಗಳ ವರೆಗೆ ನನ್ನ ಸ್ಥಿತಿ ಇದೇ ಆಗಿತ್ತು. ಈ ಅಚೇತನಾವಧಿಯಲ್ಲಿ ನಾನು ಮೃತ್ಯುವಿನತ್ತ ಯಾತ್ರೆ ಮಾಡುತಿದ್ದೆನೆಂದು ಹೇಳುತ್ತೇನೆ. ಈ ದೆಸೆಯನ್ನು ನಾನು ಹೊಂದಿದ ನಂತರ ನಾನು ಹೋಗಬೇಕಾದ ದಾರಿಯು ನಿಜವಾಗಿಯೂ ಮೃತ್ಯುದ್ವಾರದ ದಾರಿಯೇ ಆಗಿತ್ತು. ಆದರೆ, ನಾನು ಆದರ ಹೊಸ್ತಿಲನ್ನು ದಾಟುತ್ತಿರುವಂತೆಯೇ ಸ್ವಜನರ ಅಭಿಲಾಷೆ, ಹಾಗೂ ಡಾಕ್ಟರ ಮತ್ತು ನರ್ಸ್‌ಗಳ ಅವಿರತ ಪರಿಶ್ರಮಗಳು ನನ್ನ ರಟ್ಟೆಗೆ ಕೈಹಾಕಿ ಹಿಂದಕ್ಕೆ ಎಳೆದುಬಿಟ್ಟುವು.

ಈ ಅನುಭವದಿಂದ ನನಗೆ ಮೂರು ಸತ್ಯಾಂಶಗಳು ಕಂಡುಬಂದುವು. ಮೊದಲನೆಯದಾಗಿ, ಮಾನವನಲ್ಲಿ ಜೀವಿಸುವ ಬಯಕೆ ಅತಿ ಪ್ರಬಲವಾಗಿರುತ್ತದೆ; ಸ್ವಾಭಾವಿಕವಾಗಿ ತಾನು ಅತ್ಯಂತ ನಿರ್ಬಲನಾಗಿ ಇಲ್ಲವೇ ಶಾಶ್ವತ ರೋಗಿಯಾಗಿ ಬದುಕುವುದನ್ನು ಆತ ಮೆಚ್ಚುತ್ತಾನೆಯೇ ಹೊರತು ಸಾಯಲು ಸಿದ್ಧನಾಗಿರುವುದಿಲ್ಲ. ಎರಡನೆಯದಾಗಿ, ಸಾಯುವುದಕ್ಕೆ ಮೊದಲಿನ ಜೀವನ ಪ್ರಯತ್ನಗಳು ವಸ್ತುತಃ ಬಹಳ ದುಃಖಮಯವಾಗಿರುತ್ತವೆ; ಅವನ್ನು ಅತ್ಯಂತ ಧೈರ್ಯದಿಂದಲೇ ನಾವು ಸಹಿಸಿಕೊಳ್ಳಬೇಕಾಗುತ್ತದೆ. ಮೂರನೆಯದು, ಮನುಷ್ಯನು ಚೇತನವನ್ನು ಕಳೆದುಕೊಂಡು ಅಂಧಕಾರದಲ್ಲಿ ಪ್ರವೇಶಿಸುತಿದ್ದಂತೆಯೇ ಆತನು ಸುಖ ದುಃಖಗಳೆರಡರಿಂದಲೂ ಮುಕ್ತನಾಗುತ್ತಾನೆ; ಆ ಸಮಯದಲ್ಲಿ ಆತನು ತಾನು ಅಸ್ತಿತ್ವದಲ್ಲಿದ್ದೇನೆ ಎಂಬುದನ್ನೂ ತಿಳಿದುಕೊಳ್ಳುತ್ತಾನೆ.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.
ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.
ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.
ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ಕಥಾವಿಹಾರ

(೨ನೇ ಪುಟದಿಂದ)

ಮುದುಕಿಯು ಹುಡುಗನನ್ನು ಸ್ವಾಗತಿಸಲು ಮುಂಬಂದಳು, ಅವನಿಗೆ ಹಾಲು—ರೊಟ್ಟಿ ಕೊಟ್ಟು, ಮಲಗಲು ಹಾಸಿಗೆ ಹಾಸಿಕೊಟ್ಟಳು. ಮಾರನೆಯ ದಿನ ಬೇಗನೆ ಅವನನ್ನು ಎಬ್ಬಿಸಿದಳು.

"ಮಾರುಕಟ್ಟೆಗೆ ಹೋಗು! ಈ ಹಸುವನ್ನೂ, ಕರುಗಳನ್ನೂ ಹೊಡೆದುಕೊಂಡು ಹೋಗು. ಹಸುವನ್ನು ಮಾರಿಬಿಟ್ಟು, ಕರುಗಳನ್ನಿಟ್ಟುಕೋ. ಹಸು ಮಾರಿಬಂದ ಹಣದಿಂದ ಒಂದು ಕಬ್ಬಿಣದ ಗಾಡಿ, ಕಬ್ಬಿಣದ ನೇಗಿಲನ್ನು ಕೊಂಡುಕೋ, ಕರುಗಳನ್ನು ಕಟ್ಟು. ಅವು ಸಣ್ಣವಾದರೂ ಬಲಿಷ್ಠವಾಗಿವೆ. ಅವು ನಿನ್ನ ಗಾಡಿ ಎಳೆಯುವುವು."—ಎಂದು ಮುದುಕಿಯು ಹೇಳಿದಳು.

ಹುಡುಗನು ಮುದುಕಿ ಹೇಳಿದಂತೆಯೇ ಮಾಡಿದನು. ಆ ರಾತ್ರಿ ಕಬ್ಬಿಣದ ಗಾಡಿ, ಕಬ್ಬಿಣದ ನೇಗಿಲುಗಳೊಂದಿಗೆ ಅವನು ಮನೆಗೆ ಹೋದನು. ಎರಡೂ ಕರುಗಳು ಸರಾಗವಾಗಿ ಗಾಡಿಯನ್ನೆಳೆದುಕೊಂಡು ಹೋಗುತ್ತಿದ್ದುವು. ಕಬ್ಬಿಣದ ನೇಗಿಲು ಗಾಡಿಯ ಮೇಲಿರುವ ಭಾರವೇ ಅವುಗಳಿಗೆ ತಿಳಿಯುತ್ತಿರಲಿಲ್ಲ—ಮೈಮೇಲೆ ನೊಣ ಕುಳಿತಿದ್ದ ಹಾಗೆ.

ಅಂಗಳದೊಳಕ್ಕೆ ಹೋಗಿ ಆತನು ಕರುಗಳನ್ನು ಗಾಡಿಯಿಂದ ಬಿಚ್ಚುತ್ತಿದ್ದಾಗ, ಬೀದಿಯಲ್ಲಿ ನಗರದ ಡಂಗುರದವನು ಕೂಗುತ್ತಿದ್ದನು.

"ಕೇಳಿರಿ, ಕೇಳಿರಿ! ದೊರೆಯ ಹೊಲದಲ್ಲಿ ಜೋಳ ಬಿತ್ತಿದರೆ, ತೆನೆಗಳಲ್ಲಿ ಚಿನ್ನದ ಕಾಳುಗಳು ಬಿಡುತ್ತವೆ. ಯಾರಾದರೂ ದೊರೆಯ ಹೊಲವನ್ನು ಉತ್ತರೆ, ಅವರಿಗೆ ದೊರೆಯು ಬಯಸಿದ್ದನ್ನು ಕೊಡುವರು. ಕೆಲಸ ಮಾಡದಿದ್ದರೆ ಮಾತ್ರ ತಲೆ ಹೋಗುವುದು!"

ಮಾರನೆಯ ದಿನ ತನ್ನ ಕರುಗಳನ್ನು ಹೂಡಿಕೊಂಡು ಹುಡುಗನು ಪ್ರಯಾಣ ಹೊರಟನು.

"ಎಲ್ಲಿಗೆ ಪ್ರಯಾಣ?"—ಎಂದು ಕೇಳಿದಳು, ತಾಯಿ.

"ದೊರೆಯ ಹೊಲ ಉಳುವುದಕ್ಕೆ!"

"ಬೇಡಪ್ಪ, ಹೋಗಬೇಡ. ಕರುಗಳಿನ್ನೂ ಚಿಕ್ಕವು. ದೊರೆಯ ಹೊಲ ಕಬ್ಬಿಣದ ಹಾಗೆ ಗಟ್ಟಿಯಾಗಿದೆ. ದೊರೆ ಕೆಟ್ಟವನು ಕೂಡ, ಆಸೆ ತೋರಿಸಿ, ಕಡೆಗೆ ಸಾಯಿಸುತ್ತಾನೆ."

"ಹೆದರಬೇಡ, ಅಮ್ಮಾ. ನನ್ನ ನೇಗಿಲು ಕೂಡ ಕಬ್ಬಿಣದ್ದೇ."

—ಎಂದು ಹೇಳುತ್ತ ಹುಡುಗನು ಹೊರಟು ಹೋದನು, ತನ್ನ ಗಾಡಿಯಲ್ಲಿ.

ದೊರೆಯ ಹೊಲದ ಬಳಿಗೆ ಬಂದೊಡನೆಯೇ ಹುಡುಗನು ತನ್ನ ಕಬ್ಬಿಣದ ನೇಗಿಲನ್ನು ಕೆಳಗಿಳಿಸಿಕೊಂಡು, ಕರುಗಳನ್ನು ಅದಕ್ಕೆ ಹೂಡಿದನು. ಸ್ವಲ್ಪ ಹೊತ್ತಿನಲ್ಲಿಯೇ ಕೆಟ್ಟ ದೊರೆಯು ಅಶ್ವಾರೂಢನಾಗಿ ಬಂದನು.

"ಏನು ಮಾಡುತ್ತಿದ್ದೀಯಯ್ಯಾ, ಹುಡುಗಾ, ನೀನಿಲ್ಲಿ?"—ಎಂದು ಆತನು ಕೇಳಿದನು.

"ನಾನು ಭೂಮಿ ಉತ್ತು, ಜೋಳ ಬಿತ್ತುತ್ತೇನೆ"—ಎಂದು ಹುಡುಗನು ಉತ್ತರವಿತ್ತನು.

"ಕಂಬಿ ಕೇಳಿಕ್ಕಿಂದ! ಇದು ಹುಡುಗರ ಕರುಗಳ ಕೆಲಸವಲ್ಲ".

"ನೋಡುವಿರಂತೆ!"—ಎಂದು ದಿಟ್ಟತನದಿಂದ ಹುಡುಗನು ಉತ್ತರಕೊಟ್ಟು, ತನ್ನ ಕರುಗಳೊಂದಿಗೆ ಹೊರಟನು, ಉಳುಮೆಗೆ.

ಕಬ್ಬಿಣದ ನೇಗಿಲು ಗಟ್ಟಿ ನೆಲವನ್ನು ಉಳುಮೆ ಮಾಡ ತೊಡಗಿತು. ಕರುಗಳು ಸುಲಭವಾಗಿಯೂ, ವೇಗವಾಗಿಯೂ ನೇಗಿಲನ್ನು ಎಳೆದುಕೊಂಡು ಹೋಗ ತೊಡಗಿದುವು. ಹುಡುಗನು ಸಂತಸದಿಂದ ಸಿಳ್ಳು ಹಾಕ ತೊಡಗಿದನು. ನೇಗಿಲ ನಾಲುಗಳು ಒಂದಾದ ಮೇಲೊಂದು ಆಳವಾಗಿ, ಸ್ಪಷ್ಟವಾಗಿ ಮೂಡಿದುವು. ದೊರೆಯು ತುಟಿ ಕಚ್ಚಿಕೊಂಡನು; ಏಕೆಂದರೆ, ಆತನು ಜರೆದು ಮಾತನಾಡಿದುದನ್ನು ಹುಡುಗನು ಲೆಕ್ಕಿಸದೆ ಕೆಲಸಮಾಡಿ ತೋರಿಸಿದ್ದನು. ಸಿಟ್ಟಿಗೆದ್ದ ದೊರೆಯು ಮಾಟಗಾತಿಯನ್ನು ಕರೆಸಿ, ಹುಡುಗನಿಗೆ ಮಂತ್ರ ಹಾಕಬೇಕೆಂದು ಹೇಳಿದನು. ಆಕೆಯು ಹೊಲದ ಬಳಿ ಬಂದು ಹುಡುಗನನ್ನು ನಿಲ್ಲಿಸಿದಳು.

"ನಿಲ್ಲಪ್ಪಾ, ಹುಡುಗ, ವಿಶ್ರಾಂತಿ ತಗೋ! ನೋಡು, ಹೊತ್ತು ನೋಡು ಎಷ್ಟಾಗಿದೆಯೋ! ಇನ್ನು ನೀನು ಉಳಬೇಕಾಗಿರುವುದು ಒಂದೇ ಪಟ್ಟೆ. ಬೇಕಾದಷ್ಟು ಹೊತ್ತು ಇದೆ, ಬಾ, ಕುಳಿತುಕೋ, ನನ್ನ ಹತ್ತಿರ. ನಾನೊಂದು ಕತೆ ಹೇಳುತ್ತೇನೆ, ಕೇಳು"—ಎಂದಳಾಕೆ.



ಭಾರತದ ಆರ್ಥಿಕ ಮಂತ್ರಿ ಶ್ರೀ ಮುರಾರ್ಜಿಯವರು ಪತ್ರಿಕಾಕರ್ತರನ್ನುದ್ದೇಶಿಸಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತು ಭಾಷಣಮಾಡುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಹುಡುಗನಿಗೆ ಕತೆಗಳೆಂದರೆ ಪ್ರಾಣ, ಆದುದರಿಂದಲೇ ಆತನು ಕರುಗಳನ್ನು ನಿಲ್ಲಿಸಿ, ಮುದುಕಿಯ ಕತೆ ಕೇಳುವುದಕ್ಕಾಗಿ ಕುಳಿತುಕೊಂಡನು. ಮಾಟಗಾತಿಯು ಒಂದು ಕತೆಯನ್ನು ಪ್ರಾರಂಭಿಸಿದಳು. ಕತೆ ಹೇಳುತ್ತಿದ್ದಾಗಲೇ ಆಕೆಯು ಹುಡುಗನಿಗೆ ತಿಳಿಯದಂತೆ ಆತನ ಕಣ್ಣುಗಳಲ್ಲಿ ನಿದ್ರಾಧೂಳಿಯನ್ನೆರಚಿದಳು. ಹುಡುಗನು ತತ್‌ಕ್ಷಣ ನಿದ್ರಿಸಿದನು. ಆಗ ಆ ಮಾಟಗಾತಿಯು ಹೊರಟುಹೋದಳು.

ಸೂರ್ಯನು ಅಸ್ತಮಿಸುತ್ತಿದ್ದನು. ಮುಳುಗುವ ಹೊತ್ತಾದಾಗ, ಒಂದು ಕರು ಇನ್ನೊಂದರೊಡನೆ ಹೇಳಿತು:

"ಸೂರ್ಯನು ಮುಳುಗುತ್ತಿದ್ದಾನೆ. ನಾವಿನ್ನೂ ಈ ಹೊಲವನ್ನು ಪೂರ್ತಿ ಉತ್ತಿಲ್ಲ. ನಮ್ಮ ಯಜಮಾನನ ಪ್ರಾಣಕ್ಕೆ ತೊಂದರೆಯಾಗುವುದು. ಈಗೇನು ಮಾಡೋಣ?"

"ಹೌದು, ನಿಜ ಆ ಮಾತು! ನಾನು ಆ ಬೆಟ್ಟಕ್ಕೆ ಹೋಗಿ, ಅಲ್ಲಿ ಸೂರ್ಯನನ್ನು ಕೊಂಬಿನಿಂದ ಹಾಯ್ದು, ಮಧ್ಯಾಹ್ನದ ಹೊತ್ತಿಗೆ ನೂಕಿಬಿಡುವೆನು. ಈ ಮಧ್ಯೆ ನೀನು ಅಲ್ಲಿಗೆ ಹೋಗಿ, ಯಜಮಾನನನ್ನು ಎಬ್ಬಿಸು"—ಎಂದು ಇನ್ನೊಂದು ಕರು ಉತ್ತರ ಕೊಟ್ಟಿತು.

ಎರಡು ಕರುಗಳೂ ನೊಗವನ್ನು ತಪ್ಪಿಸಿಕೊಂಡುವು. ಒಂದು ಬೆಟ್ಟದ ಕಡೆ ಹೋಯಿತು. ಇನ್ನೊಂದು ಮಲಗಿದ್ದ ಹುಡುಗನ ಕೈಯನ್ನು ನೆಕ್ಕತೊಡಗಿತು. ಹುಡುಗನು ಎದ್ದು ಸೂರ್ಯನ ಕಡೆ ನೋಡಿದನು. ಸೂರ್ಯಾಸ್ತವಾಗುತ್ತ ಬಂದಿದ್ದುದು ಕಂಡು ಗಾಬರಿಯಾಯಿತು. ಆ ಹೊತ್ತಿಗೆ ಇನ್ನೊಂದು ಕರು ಬೆಟ್ಟಕ್ಕೆ ಹೋಗಿ ಸೂರ್ಯನನ್ನು ಹಾಯ್ದು ನೆತ್ತಿಯ ಮೇಲಕ್ಕೇರಿಸಿ, ಹೊಲಕ್ಕೆ ತಿರುಗಿ ಬಂದಿತು!

ಹುಡುಗನು ಜಿಗಿದೆದ್ದು, ಕರುಗಳನ್ನು ಪುನಃ ಹೂಡಿದನು. ಕಡೆಯ ಪಟ್ಟೆಯನ್ನುತ್ತು, ದೊರೆಯ ಅರಮನೆಗೆ ಹೋದನು. ದೊರೆಯ ಮುಂದೆ ನಿಂತು, "ನಿಮ್ಮ ವಾಗ್ದಾನ ನಡೆಸಿಕೊಡು, ದೊರೆ"—ಎಂದು ಕೇಳಿದನು.

"ಏನು ಬೇಕು? ಕೇಳು, ಕೊಡುತ್ತೇನೆ"—ಎಂದನು ದೊರೆ.

"ನೀನು ಗದ್ದುಗೆಯಿಂದ ಕೆಳಗಿಳಿಯಬೇಕು. ಹೊಲದ ಬೆಳೆಯನ್ನು ಜನತೆಗೆ ಹಂಚಬೇಕು. ಭೂಮಿ ನಿನ್ನದಲ್ಲ, ಜನರದು"—ಎಂದನು ಹುಡುಗ.

ದೊರೆಗೆ ಸಿಟ್ಟೇರಿತು. ಮಾಡುವುದೇನು? ಆತನು ಸಿಂಹಾಸನ ಇಳಿದು ಟೆಲ್ಲಿಬಿಗ್ ಅಡವಿಗೆ ಹೋದನು. ಹುಡುಗನು ಒಳ್ಳೆ ಕಮ್ಮಾರನ ಬಳಿ ಹೋಗಿ, ಉಕ್ಕಿನ ಕೊಡಲಿ ಮಾಡಿಸಿದನು, ಸುವರ್ಣ ಧಾನ್ಯದ ಸುಗ್ಗಿ ತೆಗೆಯಲು!

(ಬಲ್ಗೇರಿಯಾದ ಜಾನಪದ ಕತೆ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಕಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price Rs. 1=25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
23–6–1960

LICENSE NO. 31
Licensed to Post without Prepayment

ಸತ್ಯದರ್ಶನ

ಮಹಾತ್ಮರ ಅನುಭವಾಮೃತ ಬಿಂದುಗಳು

ಹಿರಿಯರ ಜೀವನದ ಘಟನೆಗಳಿಂದ ಕಿರಿಯರು ಅವಶ್ಯ ಸಾತಕಲಿಯಬೇಕು.

ಚಳಿಯಿಂದ ರಕ್ಷಣೆ

ಶೀತಕಾಲದ ಒಂದು ದಿನ ಶ್ರೀ ರಮಣ ಮಹರ್ಷಿಯವರೊಡನೆ ಒಬ್ಬ ಶ್ರೀಮಂತನು ಕೇಳಿದನು:– "ಮಹಾರಾಜರೇ, ಇಂದು ಇಷ್ಟೊಂದು ಶೀತೋದ್ವಾದ ತಂಡಿ ಹರಡಿದೆ. ಜನರು ಎರಡೆರಡು ಕೋಟುಗಳನ್ನು ತೊಟ್ಟುಕೊಂಡಿದ್ದರೂ ಅವರು ಚಳಿ ಚಳಿ ಎಂದು ಹರಿದಾಡುತಿದ್ದಾರೆ. ಆದರೆ, ತಾವು ನಗ್ನ ಶರೀರದಲ್ಲಿಯೇ ಸಂಚರಿಸುತ್ತಿರುವಿರಿ. ತಮಗೇನು ಚಳಿಯೆನಿಸುವುದಿಲ್ಲವೆ?"

ಮಹರ್ಷಿ ಶ್ರೀ ರಮಣರು ಮುಗುಳ್ನಗುತ್ತ ಉತ್ತರಿಸಿದರು— "ತಪ್ಪೂ, ಚಳಿಯೊದರೂ ಹೇಗೆ ಆಗಬೇಕು? ತಾವೆಲ್ಲರೂ ಕೇವಲ ಎರಡೆರಡೇ ಕೋಟುಗಳನ್ನು ತೊಟ್ಟಿರುವಿರಿ ನನ್ನ ಶರೀರವನ್ನು ಪಂಚ ಮಹಾಭೂತಗಳ ಐದೈದು ಅಂಗಿಗಳು ಸದಾಕಾಲವೂ ಹೊದ್ದುಕೊಂಡಿರುತ್ತವೆ. ಹಾಗಿರುವಾಗ ಚಳಿಯಾಗುವುದಿಲ್ಲವೆ? ಎಂಬ ಪ್ರಶ್ನೆಗೆ ಅವಕಾಶವಾದರೂ ಎಲ್ಲಿಯದು?"

ಶ್ರೀಮಂತ ತಲೆತಗ್ಗಿಸಿದ.

ಮೂಕ ಧನ್ಯವಾದ

ಬಡೋದೆಯ ಅರಸ ಮಹಾರಾಜ ಸರ್ ಸಯಾಜೀರಾವ್ ಗಾಯಕವಾಡರ ಕೃಪೆಯಿಂದ ಒಬ್ಬ ಯುವಕ ಅಧ್ಯಾಪಕನಾದ ಶ್ರೀ ಆರ್. ಟಿ. ಪಾಂಡ್ಯ ಎಂಬವನು ಉಚ್ಚ ಶಿಕ್ಷಣಕ್ಕಾಗಿ ನ್ಯೂಯಾರ್ಕಿಗೆ ತೆರಳಿದ್ದನು. ಒಮ್ಮೆ ಅವನು ಅಮೆರಿಕೆಯ ಒಂದು ಕುಟುಂಬದೊಡನೆ ನದಿಯಲ್ಲಿ ಈಜಾಡಲು ತೆರಳಿದನು. ನೀರಿನೊಳಗೆ ಅವನ ಸ್ಥಿತಿ ಕೆಟ್ಟುಹೋಗಿ, ಪ್ರಾಣಸಂಕಟಕ್ಕೆ ಗುರಿಯಾದನು. ಆತನ ಈ ಅವಸ್ಥೆಯನ್ನು ಕಂಡು ಶ್ರೀಮತಿ ಗೆಸ್ಟ್‌ರವರ ಪ್ರೇರಣೆಯಿಂದ ಶ್ರೀ ಗೆಸ್ಟರು ಪಾಂಡ್ಯನನ್ನು ಎಳೆದುತಂದು ನದೀ ತಟದಲ್ಲಿರಿಸಿದರು. ಪಾಂಡ್ಯನು ಧನ್ಯವಾದವನ್ನೂ ಅರ್ಪಿಸದೆ ಮನೆದಾರಿ ಹಿಡಿದುಬಿಟ್ಟ.

ಕೆಲದಿನಾನಂತರ ಪುನಃ ಭೆಟ್ಟಿಯಾದಾಗ ಶ್ರೀಮತಿ ಗೆಸ್ಟ್ ಹೇಳಿದರು— "ಅಮೆರಿಕನರಾದ ನಮ್ಮಲ್ಲಿ ಒಂದು ಪದ್ಧತಿಯಿದೆ: ನಮಗೆ ಯಾರೇ ಒಬ್ಬ ವ್ಯಕ್ತಿ ಸಹಾಯಮಾಡಿದರೆ, ನಾವು 'ಧನ್ಯವಾದ' ಎಂದು ಹೇಳುತ್ತೇವೆ".

ಆಗ ಪಾಂಡ್ಯನು ಉತ್ತರವಿತ್ತನು— ಶ್ರೀಮತಿಯವರೆ, ನನಗೆ ನಿಮ್ಮ ದೇಶದ ಶಿಷ್ಟಾಚಾರ ತಿಳಿದಿದೆ. ಅಲ್ಲದೇ ನೀವೆಸಗಿದ ಉಪಕಾರಕ್ಕೆ ಯಾವ ರೀತಿಯಿಂದ ಧನ್ಯವಾದ ಹೇಳಲಿ ಎಂದು ಯೋಚಿಸುತ್ತಿದ್ದೇನೆ. ಆದರೆ, ನಮ್ಮ ದೇಶದಲ್ಲಿಯೂ ಒಂದು ಕ್ರಮವಿದೆ: ಶಬ್ದಗಳಿಂದ ಧನ್ಯವಾದ ಹೇಳುವುದು ಅಸಾಧ್ಯವೆನಿಸುವಷ್ಟು ದೊಡ್ಡ ಸಹಾಯವನ್ನು ಪಡೆದಾಗ, 'ಧನ್ಯವಾದ' ಎಂದು ಹೇಳ ತೊಡಗಬಾರದು. ನಾವು ಅಂತಹ ಸಂದರ್ಭದಲ್ಲಿ ಮೌನರೂಪದಲ್ಲಿಯೇ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಅಲ್ಲದೇ ಆ ಉಪಕಾರವನ್ನು ಸದಾ ಸ್ಮರಣೆಯಲ್ಲಿಟ್ಟುಕೊಂಡು, ನಮಗೂ ಮರಳಿ ಉಪಕಾರ ಮಾಡುವ ಸದವಕಾಶ ಒದಗಿ ಬರಲಿ ಎಂದು ಹಾರೈಸುತ್ತಿರುತ್ತೇವೆ. ಹಾಗಿರುವಾಗ, ನಾನು ತಮಗೆ ಮತ್ತು ತಮ್ಮ ಪತಿದೇವರಿಗೆ ಹೇಗೆ ಧನ್ಯವಾದವೀಯಲಿ?"

ಅಮೆರಿಕನ್ ಮಹಿಳೆ ನಾಚಿ ತಲೆಗುತಿದ್ದಳು.

ಅಧಿರಾಜರಿಲ್ಲದೆ ಹೋದರೆ....?

ತನ್ನ ಅಧೀನದಲ್ಲಿದ್ದ ರಾಜರೆಲ್ಲರನ್ನೂ ಪದಚ್ಯುತಗೊಳಿಸಿ, ಅವರ ರಾಜ್ಯವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿ, ಇಡಿ ದೇಶದ ಸೂತ್ರಧಾರತನವನ್ನು ಔರಂಗಜೇಬನು ತನ್ನ ಕೈಯಲ್ಲಿಟ್ಟುಕೊಳ್ಳಲು ಹವಣಿಸುತಿದ್ದನು. ಹಲವಾರು ವರ್ಷಗಳ ಕಾಲ ಹೋರಾಟ ನಡೆಸಿ, ಕೊನೆಯದಾಗಿ ಉಳಿದಿದ್ದ ಗೋಲ್ಕೊಂಡೆಯ ಸುಲ್ತಾನ ತಾನಶಾಹನನ್ನೂ ಸೋಲಿಸಿ, ಆತನ ರಾಜ್ಯವನ್ನೂ ದಿಲ್ಲಿ ಸಾಮ್ರಾಜ್ಯದ ಒಂದು ಭಾಗವನ್ನಾಗಿ ಮಾಡಿಕೊಂಡನು. ಆಗ, ಸರಿಸಾಟಿಯಿಲ್ಲದ ರಾಜ ಎಂದು ಮುಂತಾಗಿ ಆತನನ್ನು ಎಲ್ಲರೂ ಹೊಗಳತೊಡಗಿದರು. ಆದರೆ, ಆತನ ಪಟ್ಟದರಾಣಿ ಮಾತ್ರ ಮುಖ ಮುದುಡಿಸಿಕೊಂಡಳು. ಇದನ್ನು ಕಂಡ ರಾಜ ಔರಂಗಜೇಬ ತನ್ನ ವಿಜಯದಿಂದ ದೇಶಕ್ಕೆ ದೇಶವೇ ಹರ್ಷೋನ್ಮಾದಗಳಿಂದ ನಲಿಯುತ್ತಿರುವಾಗ, ಆಕೆ ಮಾತ್ರ ಹಾಗೇಕೆ ಖಿನ್ನವದನಳಾಗಿರುವಳೆಂದು ತಿಳಿಯುವ ಇಚ್ಛೆಯಿಂದ ಪ್ರಶ್ನಿಸಿದನು. ಆಗ, ಆಕೆ ಹೇಳಿದಳು —"ಪ್ರಾಣ ಪ್ರಿಯರೆ, ತಾವು ಇದುವರೆಗೆ ಮಹಾರಾಜಾಧಿರಾಜರಾಗಿದ್ದಿರಿ. ಆದರೆ ಈಗ ಕೇವಲ ರಾಜರು ಮಾತ್ರರಾಗಿ ಹೋದಿರಿ. ಹಾಗಿರುವಾಗ, ನಿಮ್ಮ ವಿಜಯದಿಂದ ನಾನೇಕೆ ಸಂತೋಷಿಸಿ ನಿಮ್ಮ ಪರಾಕ್ರಮವನ್ನು ಕೊಂಡಾಡಲಿ?"

ರಾಜ ಔರಂಗಜೇಬ ಮಿಕಮಿಕನೆ ಕಣ್ಣು ಬಿಟ್ಟುದಲ್ಲದೇ ಮತ್ತೇನು ತಾನೇ ಮಾಡಬಲ್ಲ?

ಆಯುಷ್ಯ ಹ್ರಾಸವೆಂತು?

ಚೀನದ ಅರಸರು ಬಹು ದೀರ್ಘಾಯುಗಳಾಗಿರುವರು ಎಂದು ಕೇಳಿದ ಒಬ್ಬ ಭಾರತೀಯ ರಾಜನು ಚೀನೀ ರಾಜನಿಗೆ ಪತ್ರ ಬರೆದನು—'ನಮ್ಮಿಂದ ತಾವು ದೀರ್ಘಾಯುಗಳಾಗಿರುವಿರಿ. ಇದರ ಕಾರಣವನ್ನು ತಿಳಿಸುವ ಕೃಪೆ ಮಾಡಬೇಕು.' ಈ ಪತ್ರವನ್ನು ಒಬ್ಬ ಮಂತ್ರಿಯೊಡನೆ ಕೊಟ್ಟು ಕಳುಹಿಸಿ ಇದಕ್ಕೆ ಉತ್ತರವನ್ನು ತಾರದೆ ಹೋದರೆ, ಗಲ್ಲಿನ ಶಿಕ್ಷೆ ನೀಡಲಾಗುವುದೆಂದು ವಿಧಿಸಿದನು.

ಚೀನಾದಲ್ಲಿ ಭಾರತೀಯ ರಾಜಮಂತ್ರಿಗೆ ಸಂಭ್ರಮದ ಸ್ವಾಗತ ಲಭಿಸಿತು. ಆದರೆ, ಚೀನೀಯ ರಾಜ ಉತ್ತರವೀಯಲು ಮಾತ್ರ ಹಿಂಜರಿಯುತಿದ್ದನು. ಪದೇ ಪದೇ ತನ್ನನ್ನು ಕಾಡುತಿದ್ದ ಮಂತ್ರಿಯ ಕಾಟದಿಂದ ತಪ್ಪಿಸಿಕೊಳ್ಳಲು, ಒಂದು ದಿನ ಹೇಳಿದನು— 'ನೀನು ವಟವೃಕ್ಷದ ಬಳಿ ನಿಂತಿರುವಿಯಲ್ಲಾ? ಅದು ಸುಟ್ಟು ಮಸಿಯಾದ ದಿನ ನಿನಗೆ ಉತ್ತರ ದೊರೆಯುವುದು. ತಿಳಿಯಿತೆ?"

ಭಾರತೀಯ ರಾಜಮಂತ್ರಿಯು ಹತಾಶನಾದನು. ಐನೂರು ವರ್ಷ ಪ್ರಾಯದ ಆ ವಟವೃಕ್ಷ ಎಂದು ಉರಿದು ಮಸಿಯಾಗುವುದೆಂದು ಯಾರಿಗೆ ಗೊತ್ತು? ಆತ ಪ್ರತಿನಿತ್ಯ ಆ ಮರ ಸುಟ್ಟುಹೋಗಲಿ ಎಂದು ಪ್ರಾರ್ಥಿಸತೊಡಗಿದನು. ಮುಂದೆರಡು ಮಾಸಾನಂತರ ಆ ವೃಕ್ಷ ಉರಿದು ಕರಿಮಸಿಯಾಗಿ ಬಿಟ್ಟಿತು. ಮಂತ್ರಿಯು ಓಡಿಯೋಡಿ ರಾಜನ ಬಳಿಗೆ ಬಂದು ಹೇಳಿದನು—"ಈಗಲಾದರೂ ಪ್ರಶ್ನೆಗೆ ಉತ್ತರವನ್ನು ಕೊಡಿರಿ. ನಾನು ಅವಶ್ಯ ಮರಳುತ್ತೇನೆ."

ಆಶ್ಚರ್ಯ ಚಕಿತನಾದ ಚೀನೀಯ ಅರಸು ಉತ್ತರಿಸಿದನು—"ಅಯ್ಯೋ, ಇನ್ನೂ ಉತ್ತರ ಕೊಡುವುದುಳಿದಿದೆಯೆ? ನಿನ್ನ ನಿಃಶ್ವಾಸದಿಂದ ಐನೂರು ವರ್ಷ ಪ್ರಾಯದ ಆ ಮುದಿ ಮರವು ಭಸ್ಮವಾಯಿತು. ಅದೇ ರೀತಿಯಲ್ಲಿ ತನ್ನ ಪ್ರಜೆಗಳ ಅಸಂತೋಷ ಮತ್ತು ದುಃಖ ಮಿಶ್ರಿತ ನಿಃಶ್ವಾಸಗಳಿಂದಾಗಿಯೇ ನಿನ್ನ ಅರಸನ ಆಯುಷ್ಯವು ಕಡಿಮೆಯಾಗುವುದು."

ರಾಜಮಂತ್ರಿ ಕಿವಿಯರಳಿಸಿ ಕೇಳುತಿದ್ದವನು ಕೇಳುತ್ತಲೇ ಇದ್ದನು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

"ರಾಜನೀತಿಕ ಶಿಕ್ಷಣಜ್ಞರು" ಮತ್ತು "ಅಧ್ಯಾಪಕ ರಾಜನೀತಿಜ್ಞ"ರಿಬ್ಬರನ್ನೂ ಏಕಸಮವಾಗಿ ಅವರು ಕಂಡರು. ಅವರು ಲಖನೌ ವಿಶ್ವವಿದ್ಯಾಲಯದ ಕಾನೂನುಗಳನ್ನು ತಮ್ಮ ಹಿಂದಿನ ಪದಾಧಿಕಾರಿಯೇ ರಚಿಸಿದ್ದರೂ ತಿದ್ದುವ ಅವಶ್ಯಕತೆಯನ್ನು ಎತ್ತಿತೋರಿಸಿದರು. ಈ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯಲ್ಲಿ ಕುಲಪತಿಯವರಿಂದ ನಾಮಕರಣ ಮಾಡಲ್ಪಟ್ಟ ವ್ಯಕ್ತಿ ಲೋಕಪ್ರಿಯರಾಗಿರಲಿಲ್ಲ; ಆದರೆ, ಆಲೋಚಕರು ರಾಜ್ಯ ಶಿಕ್ಷಣ ವಿಭಾಗದ ದೋಷವಿದೆಂದು ಅನ್ನುತಿದ್ದರು.

ಪ್ರಧಾನ ಕಾರಣ

ಉತ್ತರ ಪ್ರದೇಶದ ಒಂದು ಸುಪ್ರಸಿದ್ಧ ವಿಶ್ವವಿದ್ಯಾಲಯದಲ್ಲಿ ಇಂತಹವೊಬ್ಬನನ್ನೇ ಉಪಕುಲಪತಿಯನ್ನಾಗಿ ನೇಮಿಸಬೇಕೆಂಬ ಅವರ ಮೇಲೆ ಒತ್ತಾಯ ತರಲಾಗಿತ್ತೆಂದು ತಿಳಿಯುತ್ತದೆ. ಇದರಿಂದಾಗಿಯೇ ಅವರು ಬೇರೆ ರಾಜ್ಯಕ್ಕೆ ತೆರಳುವ ನಿರ್ಧಾರವನ್ನು ಮಾಡಿದರೆಂದೂ ಹೇಳಲಾಗುತ್ತದೆ. ರಾಜಭವನದಲ್ಲಿ ಇದನ್ನು ಖಂಡಿಸಲಾಗುತ್ತಿದೆಯಾದರೂ, ಕಾರ್ಯಕಾರೀ ಸಮಿತಿಯಲ್ಲಿ ಅತ್ಯಧಿಕ ಮತ ಪಡೆಯುವವನನ್ನೇ ಆ ಪದವಿಗೆ ನಿಯುಕ್ತಗೊಳಿಸುವುದಾಗಿ ವರದಿಯಾಗಿದೆ.

ತೋರಿಕೆಯ ಕಾರಣ

ಆದರೆ, ಶ್ರೀ ಗಿರಿಯವರು ಉತ್ತರ ಪ್ರದೇಶದಿಂದ ಹೊರ ತೆರಳಲು ಬೇರೆಯೇ ಕಾರಣ ಹೇಳುತ್ತಾರೆ. "ತನ್ನ ಪತ್ನಿಗೆ ಉತ್ತರ ಭಾರತದ ಒಣಹವೆಯು ಅನುಕೂಲವಾಗಿಲ್ಲ; ಆದುದರಿಂದ ನಾನು ದಕ್ಷಿಣ ಭಾರತಕ್ಕೆ ಹೋಗುತ್ತೇನೆ" ಎಂದವರು ತಿಳಿಸುತ್ತಾರೆ. ಶ್ರೀಮತಿ ಗಿರಿಯವರು ಅಸ್ವಸ್ಥರಾಗಿರುವುದರಿಂದ ಈ ಮಾತನ್ನು ಸರ್ವಸಾಮಾನ್ಯವಾಗಿ ನಂಬಬೇಕಾಗುತ್ತದೆ. ಪರಂತು, ರಾಜಕಾರಣದ ಪರಿಸ್ಥಿತಿಯು ಅಸ್ಪಷ್ಟವಾಗಿರುವುದರಿಂದ, ತನ್ನ ಹಾಗೂ ಮಂತ್ರಿ ಮಂಡಳಿಯ ಅನುಕೂಲಕ್ಕಾಗಿ ಅವರು ಉತ್ತರ ಪ್ರದೇಶವನ್ನು ಬಿಟ್ಟು ದಕ್ಷಿಣದ ಕೇರಳಕ್ಕೆ ಹೋಗಲಿರುವರೆಂದು ತಿಳಿದುಕೊಳ್ಳಬಹುದು. ಉತ್ತರ ಪ್ರದೇಶದಿಂದ ಇವರು ಹೊರ ನಡೆದರೆ, ಮುಂದಕ್ಕಾದರೂ ಅಲ್ಲಿನ ರಾಜ್ಯಪಾಲ—ಸರಕಾರಗಳ ನಡುವೆ ಘರ್ಷಣೆ ನಡೆಯದೆಂದು ಹೇಳುವುದು ಪ್ರಯಾಸವೇ. ಕಮ್ಯೂನಿಸ್ಟ್ ಮಂತ್ರಿ ಮಂಡಳಿಯ ಅವಧಿಯಲ್ಲೂ ಸಂವಿಧಾನಕ್ಕನುಗುಣವಾಗಿ ನಡೆದಿದ್ದ ರಾಮಕೃಷ್ಣರಾಯರು ಡಾ| ಸಂಪೂರ್ಣಾನಂದರ ದೃಷ್ಟಿಗೆ ಹೇಗೆ ತೋರುವರೆಂದು ಶೀಘ್ರವಾಗಿ ಹೇಳುವಂತಿಲ್ಲ.

ಇನ್ವೆಸ್ಟರ್ಸ್ ಏಜನ್ಸಿ

- ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲೊಂದು ಹೊಸ ಅಧ್ಯಾಯ
- ಸಿಂಡಿಕೇಟ್ ಬ್ಯಾಂಕಿನ ಅತ್ಯುತ್ತಮ ಸೇವೆಗೆ ಮತ್ತೊಂದು ಹೊಸ ಸಾಧನ
- ನಮ್ಮ ಆರ್ಥಿಕ ತಜ್ಞರ ಮತ್ತು ೧೩೭ ಶಾಖೆಗಳ ಸೇವೆಗೆ ಇನ್ನೊಂದು ಸದವಕಾಶ

ಸಾವಿರ ವಿನಿಯೋಗಿಸಿ ಲಕ್ಷ ಉಳಿಸಿರಿ.

ವಿವರಗಳಿಗೆ ಬರೆಯಿರಿ:

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6–25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೩. 30–6–1960 Vol. 39. No. 43.

ಪ್ರಚಲಿತ ಪ್ರಸಂಗ

ಕೇಂದ್ರ ನೌಕರರು ಸಂಪು ಹೂಡುವರಂತೆ!

ಬೇಡಿತಿನು ವವರ ದೇಶದಲ್ಲಿ ಹುಟ್ಟಿಕೊಳ್ಳುವ ಬಕಾಸುರ ಜನರನ್ನೇ ಹಿಡಿಮು ಮುಕ್ಕದೇನು ಮಾಡುತ್ತಾನೆ? ಅತೃಪ್ತ ಸರಕಾರಿ ನೌಕರರು ಜನತೆಯ ಶೋಷಣೆಗೆ ಕಾರಣರಾಗುವುದಿಲ್ಲವೆ?

"ಕೊಡುವ ಕೈ ಹಿಂದೆ; ಕೊಳ್ಳುವ ಕೈ ಮುಂದೆ" ಎಂಬುಕ್ತಿಯ ಸತ್ಯಾಸತ್ಯತೆಯನ್ನು ಇಷ್ಟರಲ್ಲಿಯೇ ಒರೆಗೆ ಹಚ್ಚಿದವರು ಅನೇಕ ಮಂದಿ. ಇಂದಾದರೂ ಕೊಡುವವರು ಬೆರಳೆಣಿಕೆಯಷ್ಟು; ಕೊಳ್ಳುವವರು ತಲೆ ಕೂದಲಿನಷ್ಟಾಗಿದ್ದಾರೆ. ಕೊಟ್ಟು ಒಬ್ಬನನ್ನು ತೃಪ್ತಿಪಡಿಸುವುದು ಎಂದಾದರೂ ಸಾಧ್ಯವಿದೆಯೇ ಎಂದರೆ ಇಲ್ಲವೆಂಬ ಉತ್ತರ ಬೇರೆ ಶೋಧಿಸಬೇಕಾಗಿಲ್ಲ. "ಕಃ ಕೇನಾರ್ಥೀ ಕೋ ದರಿದ್ರಃ" ಎಂದು ಕೇಳುವುದೂ ಇಂದಿನ ಸರ್ವದರಿದ್ರರ ಈ ನಾಡಿನಲ್ಲಿ ಸಾಧ್ಯವೂ ಇಲ್ಲ; ಸಾಮರ್ಥ್ಯವೂ ಇಲ್ಲ. ಎಲ್ಲರೂ ಕೊಳ್ಳುವವರೇ ಆದರೆ ಕೊಡುವವರು ಯಾರು ಎಂಬ ಪ್ರಶ್ನೆ ಸಹಜವಾಗಿ ಎದ್ದೇಳುತ್ತದೆ.

ಸಂಪು ಹೂಡುವ ನಿರ್ಧಾರ

ಕೇಂದ್ರ ಸರಕಾರಿ ನೌಕರರು ಜುಲೈ ೧೧ರಿಂದ ಮುಷ್ಕರವನ್ನು ಪ್ರಾರಂಭಿಸುವೆವೆಂಬ ಮುನ್ಸೂಚನೆಯನ್ನು ಕೊಟ್ಟಿರುವರೆಂಬ ವಾರ್ತೆ ಬಂದೊಡನೆಯೇ ಭಾರತದಲ್ಲಿಂದು 'ಅತೃಪ್ತ'ರ ಒಂದು ವರ್ಗ ಹಿಂದುಳಿದವರಿಗಿಂತಲೂ ಬಹಳ ಮುಂದುವರಿದು ಬೆಳೆಯುತ್ತಿದೆ ಎಂಬ ಭಾವನೆ ಯಾರಿಗೂ ಬಾರದಿರದು. ವೇತನ ಹುಟ್ಟಿ ಭತ್ತೆಯೆಂದು ಕೇಂದ್ರ ಸರಕಾರೀ ನೌಕರರಿಗೆ ಕೊಡಲಾಗುವ ಮೊತ್ತ ಅವರಿಗೆ ಸಾಲದು. ತುಟ್ಟಿ ಭತ್ತೆಯು ಜೀವನವೆಚ್ಚ ಸೂಚಿ ಪತ್ರಕ್ಕೆ ಅನುಗುಣವಾಗಿರಬೇಕು; ಮತ್ತು ಇತ್ತೀಚೆಗೆ ಸೇರಿದ್ದ ೧೫ನೆಯ ಕೂಲಿಕಾರ ಪರಿಷತ್ತು ಶಿಫಾರಸು ಮಾಡಿದಂತೆ ಕನಿಷ್ಠ ವೇತನ ಪ್ರಮಾಣವನ್ನು ನಿರ್ಧರಿಸಬೇಕು ಎಂಬ ಮುಖ್ಯ ಬೇಡಿಕೆಗಳನ್ನು ಮುಂದಿಟ್ಟು ಕೇಂದ್ರ ನೌಕರರು ಸಂಪನ್ನು ಮುಂದಿಟ್ಟಿರುವರು ಎಂದು ಗೊತ್ತಾಗಿದೆ. ಈ ಸಂಪಿನಿಂದಾಗಿ ಕೇಂದ್ರಸರಕಾರದ ವಿವಿಧ ಶಾಖೆಗಳ ಕಾರ್ಯಗಳಲ್ಲಿ ವಿಘ್ನ ತಲೆದೋರುವುದು ಖಂಡಿತವೆ. ಕೇಂದ್ರ ಸರಕಾರವು ನೇಮಿಸಿದ್ದ ದ್ವಿತೀಯ ವೇತನಾ ಆಯೋಗದ ಶಿಫಾರಸುಗಳನ್ನು ಸ್ವೀಕರಿಸಿ, ಅವನ್ನು ಕಾರ್ಯಾಚರಣೆಗೆ ತಂದೀಗ ಕೆಲವೇ ಮಾಸಗಳು ಸಂದಿರುವಾಗ, ಇಷ್ಟರಲ್ಲಿಯೇ ತಮ್ಮ ಅತೃಪ್ತಿಯನ್ನು ಪ್ರದರ್ಶಿಸುವ ಈ ನೌಕರರ ಸಂಪು ಜನತೆಯ ಬೆಂಬಲವನ್ನು ಪಡೆಯಲಾರದು.

ಜನತೆಯನ್ನು ಪೋಲು ಮಾಡಬಾರದು

ದೇಶದಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ಹೊಂದಿಕೊಂಡು, ದೇಶದ ಜನತೆಯ ಜೀವನಸ್ತರವನ್ನು ಗಮನದಲ್ಲಿಟ್ಟುಕೊಂಡು ಸರಕಾರಿ ನೌಕರರ ವೇತನವನ್ನು ನಿರ್ಣಯಿಸಬೇಕಾಗುತ್ತದೆಂಬುದನ್ನು ಮರೆಯುವಂತಿಲ್ಲ. ಸರಕಾರಕ್ಕೆ ತನ್ನ ನೌಕರರ ವೇತನ ನೀಡಲು ಬೇಕಾಗುವ ಹಣ ಬರುವುದು ಜನತೆಯಿಂದ ಹಾಗಿರುವಾಗ, ಸರಕಾರದ ಹೆಸರಿನಲ್ಲಿ ನೌಕರರು ದುಡಿದು ಪಡೆಯುವುದು ಜನತೆಯ ಹಣವನ್ನು ಎಂಬುದು ಸರ್ವವೇದ್ಯ. ಕರಾಕರಣೆಯಿಂದ ಹಾಗೂ ಇನ್ನಿತರ ವಿಧಾನಗಳಿಂದ ಜನತೆಯಿಂದ ಗಳಿಸಿದ ಈ ಹಣವು ನೌಕರರ ಹೊಟ್ಟೆ ತುಂಬಿಸುವುದಕ್ಕೆ ಮಾತ್ರ ವಿನಿಯೋಗವಾಗಬೇಕೆಂಬ ವಿಚಿತ್ರವಾದವನ್ನು ನಾವು ಒಪ್ಪುವಂತಿಲ್ಲ. ಮುಂದೆ, ಸಾಮಾನ್ಯ ಜನತೆಯಿಂದ ಈಗಾಗಲೇ ಪ್ರತ್ಯೇಕಗೊಂಡಿರುವ ಈ ಸರಕಾರಿ ನೌಕರವರ್ಗವು ಇನ್ನೂ ಇನ್ನೂ ಬೇರೆಯಾಗಿಯೇ ಮುಂದುವರಿದರೆ, ದೇಶದಲ್ಲಿ ತೆರಿಗೆದಾರರು—ತೆರಿಗೆಯಿಂದ ಜೀವಿಸುವವರು ಎಂಬ ಎರಡು ಅನಪೇಕ್ಷಿತ ಬಣಗಳು ಹುಟ್ಟಿಕೊಂಡು, ಕಾಲಕ್ರಮದಲ್ಲಿ ಈ ಎರಡು ವರ್ಗಗಳ ನಡುವೆ ಘರ್ಷಣೆಯೇಳುವುದಿಲ್ಲವೆಂದು ನಂಬುವುದು ಅಸಾಧ್ಯ. ೧೪ನೆ ಲೂಯಿಯ ವೈಭವವೆಚ್ಚಕ್ಕಾಗಿ ಪ್ರಜೆಗಳಿಂದ ವಿಪರೀತ ಪ್ರಮಾಣದಲ್ಲಿ ಕರಗಳನ್ನು ವಸೂಲುಮಾಡಿದುದರ ಪರಿಣಾಮವಾಗಿ, ಕರ ತೆರಲು ಅಸಮರ್ಥರಾದ ಜನರು ಉದ್ರಿಕ್ತರಾಗಿ ಫ್ರಾನ್ಸದಲ್ಲಿ ಕ್ರಾಂತಿ ನಡೆಯಿತೆಂಬುದನ್ನು ನಾವು ಮರೆಯುವುದು ಸಾಧ್ಯವಿಲ್ಲ. ಅಂತೆಯೇ ತನ್ನ ನೌಕರರ ವೇತನವನ್ನು ಹೆಚ್ಚಿಸಬೇಕಾದರೆ, ಹೆಚ್ಚಿನ ವೆಚ್ಚದ ಭಾರ ಜನತೆಯ ಮೇಲೆಯೇ ಬೀಳುತ್ತದೆ; ನಮ್ಮ ದೇಶದ ಸಾಮಾನ್ಯ ಪ್ರಜೆಯೊಬ್ಬನ ಆದಾಯ ಹಾಗೂ ಕೇಂದ್ರ ಸರಕಾರದ ಕನಿಷ್ಠ ವರ್ಗದ ನೌಕರನ ಆದಾಯಗಳನ್ನು ನಾವು ಹೋಲಿಸುವುದಾದರೆ, ಎರಡನೆಯವನು ಉನ್ನತ ಜೀವನವನ್ನೇ ಬಾಳುತ್ತಿದ್ದಾನೆ ಎನ್ನಬಹುದು. ಆದುದರಿಂದ, ಸರಕಾರವು ತನ್ನ ನೌಕರರ ವೇತನಾದಿಗಳ ಬಗ್ಗೆ ವಿಮರ್ಶಿಸುವಾಗ, ಪರಿಸ್ಥಿತಿಯನ್ನೇ ನೋಡಿಕೊಂಡಿರಬೇಕಾದುದು ಅವಶ್ಯವಾದರೂ ದೇಶದ ಜನತೆಯ ಜೀವನಸ್ತರವನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಜನತೆಯಲ್ಲಿ ಹೊಂದಿಕೊಂಡು ಅವರಿಗೆ ಅನುಕೂಲತೆಗಳನ್ನು ಒದಗಿಸಿಕೊಡಬೇಕಾದ ಸರಕಾರಿ ನೌಕರರು ಅವರಿಂದ ದೂರಸರಿದು ನಿಲ್ಲುವುದು ಸರ್ವಥಾ ಅನಪೇಕ್ಷಣೀಯವೇ.



ಸ್ಫೋಟನಕ್ರಿಯೆಯಲ್ಲಿ ಬಳಸುವ ಆರ್. ಡಿ. ಎಕ್ಸ್.ನ್ನು ಉತ್ಪಾದಿಸುವ ಈ ಸಲಕರಣೆಗಳನ್ನು ಭಾರತದ ರಕ್ಷಣಾ ವಿಜ್ಞಾನ ಪ್ರದರ್ಶನದಲ್ಲಿ ಇಡಲಾಗಿತ್ತು.

ಅಕಾಲಿಕ ವರ್ತನೆ

ಉಚ್ಚಾಧಿಕಾರವುಳ್ಳ ಒಂದು ಆಯೋಗವು ಮಾಡಿದ ಶಿಫಾರಸುಗಳನ್ನು ಸರಕಾರವು ಸ್ವೀಕರಿಸಿದ ಈ ಅವಧಿಯಲ್ಲೇ ಅದನ್ನು ಕಡೆಗಣಿಸುವುದು ಎಂದಿಗೂ ಸಾಧ್ಯವಿಲ್ಲ. ಒಂದು ವೇಳೆ ಹಾಗೆ ಮಾಡಿದರೆ, ಮುಂದೆ, ಇಂತಹ ಆಯೋಗಗಳನ್ನು ರಚಿಸುವುದೂ ವ್ಯರ್ಥವಾಗಬಹುದು ಎಂಬ ಸಂದೇಹವನ್ನು ಪ್ರಧಾನಿ ನೆಹರೂ ವ್ಯಕ್ತಪಡಿಸಿದರು. ಆಯೋಗದ ವರದಿಯಲ್ಲಿಲ್ಲದ ಯಾವುದೇ ಪ್ರಶ್ನೆಯನ್ನು ಚರ್ಚಿಸಲು ಸರಕಾರವು ಸಿದ್ಧವಿದೆಯೆಂದೂ, ಆದರೆ, ಒಂದು ಬಾರಿ ವಿಮರ್ಶಿಸಿ ಸ್ವೀಕರಿಸಿದ ನಿರ್ಣಯವನ್ನು ಅಷ್ಟು ಶೀಘ್ರದಲ್ಲಿ ತೆಗೆದು ಹಾಕುವುದು ಅಸಾಧ್ಯ.

ಜನತೆ ವಿರೋಧಿಸುತ್ತದೆ

ದೇಶವು ದ್ರುತಗತಿಯಿಂದ ಪ್ರಗತಿಮಾರ್ಗ ಭ್ರಮಣ ಮಾಡುತ್ತಿರುವ ಈ ಸಂಧಿಕಾಲದಲ್ಲಿ ದೇಶದ ರೂಪವೇ ಪರಿವರ್ತನೆಯಾಗುತ್ತಿರುವಾಗ, ಜನತೆಯ ಜೀವನಸ್ತರವನ್ನು ಉನ್ನತೀಕರಿಸುತ್ತ ಮೊದಲು ಮತ್ತು ಅದಕ್ಕೆ ಅನುಗುಣವಾಗಿ ನೌಕರರ ವೇತನವನ್ನು ಹೆಚ್ಚಿಸಬೇಕೆಂಬುದನ್ನು ಮರೆಯಬಾರದು. ಅದು ಬಿಟ್ಟು, ಕೇಳಿದಂತೆ ವೇತನವನ್ನು ಏರಿಸುತ್ತ ಹೋದರೆ, ಹಣದುಬ್ಬರದೊಡನೆ ಜನತೆಯ ದುರಭಿಪ್ರಾಯವೂ ಕೂಡಿಕೊಂಡು ದೇಶದ ಭದ್ರತೆಯ ಮೇಲೆಯೂ ಇದರ ದುಷ್ಪರಿಣಾಮ ಬೀಳಬಹುದು. ಇದನ್ನು ಗಮನಿಸಿಯೇ ಕೇಂದ್ರ ಸರಕಾರಿ ನೌಕರರ ಮಹಾಮಂ

(೧೨ನೇ ಪುಟ ನೋಡಿರಿ)

ಕಥಾವಿಹಾರ

ಜನ್ಮದಿನದ ಉಡುಗೊರೆ

ಪೋಲೀಸ್ ಇನ್ಸ್‌ಪೆಕ್ಟರ್ ಮಾಧವರಾಯರ ಜನ್ಮದಿನದಂದು ಅವರಿಗೊಂದು ಉಡುಗೊರೆ ದೊರೆಯಿತು; ಆದರೆ, ಅದನ್ನವರ ಕೀರ್ತಿಬಿಂಬದ ಮೇಲೆ ಕರಿಬರೆಯೆಳೆಯಿತು.

"ಸಾರ್, ಈ ಸಲ ಮಾಫಿ ಬಿಡಿ ಸಾರ್, ಇನ್ನೊಮ್ಮೆ ಸುಧಾರಿಸುತ್ತೇನೆ" ದೀನನಾಗಿ ರಂಗಯ್ಯ ಗೌಡ ಅಂಗಲಾಚಿದ. ಅದಕ್ಕೆ ಕಾರಣವೂ ಬಹಳಷ್ಟಿತ್ತು. ರಂಗಯ್ಯ ಗೌಡನ ಜೀವನಕ್ರಮ ವಿಚಿತ್ರವಾಗಿತ್ತು. ನಮ್ಮನ್ನಾಳುವ ಸರಕಾರ ಯಾವುದನ್ನು ಪ್ರತಿಬಂಧಿಸುತಿತ್ತೋ ಅಂತಹುದನ್ನೇ ಬೆಳಸಿ ಅದರಿಂದಲೇ ಹೇರಳ ಹಣಗಳಿಸುವ ದೊಡ್ಡ ಸಾಹಸ ಮಾಡಲು ಅಣಿಯಾಗುತಿದ್ದನಾತ. ಅಧಿಕಾರಿಗಳೆಲ್ಲರೂ ಆತನ ಸನ್ಮಿತ್ರರು. ಊರಿಗೆ ಬಂದ ಪೋಲೀಸ್ ಇನ್ಸ್‌ಪೆಕ್ಟರರಿಗೆ ಏನಾದರೂ ಕಾಣಿಕೆ ತೆತ್ತು ಪರಿಚಯ ಮಾಡಿಕೊಳ್ಳುವ ತಹತಹದಿಂದ ಆತ ಮಾಧವರಾಯರಲ್ಲಿಗೆ ಬಂದ—"ಸರ್, ತಾವು ಈ ಊರಿಗೆ ಹೊಸಬರು!"

"ಹೌದು...."

'ನೀವು ನಮ್ಮಂತಹರ ಪರಿಚಯ ಮಾಡಿಕೊಂಡರೆ ಮಾತ್ರ ಖಂಡಿತಕ್ಕೂ ಕಾಲ ದೂಡಬಹುದು.'

'ತಾವು ಈ ಊರನ್ನು ಪೋಷಿಸುವ ಮಹಾಧೀರರು. ನಿಮ್ಮ ಪಾದ ಸೇವೆಯಲ್ಲಿ ಯಾವತ್ತೂ ಸಹಕಾರಿ ನೌಕರರು ಕಾಲಯಾಪನೆ ಮಾಡಬೇಕೆ?'

'ಅಬ್ಬಬ್ಬಾ....' ಗೌಡ ತಬ್ಬಿಬ್ಬಾದ. 'ಇಂತಹವರನ್ನು ನೀನಿನ್ನೂ ಕಂಡಿಲ್ಲ' ಎಂದೊಂದು ಮನಸ್ಸು ಹೇಳಿದರೆ, 'ಮೊದಲು ಇದೇ ರೂಪ; ಕೊನೆಗೆ ನಿನ್ನ ಸುರೆಯ ಸೆರೆಯಾಳು' ಎಂದಿತು ಮತ್ತೊಂದು. ಆಗ ಮೊದಲನದೆಂದಿತು: 'ಜಾಗ್ರತೆಯಾಗಿರು; ಸರ್ಪದೊಡನೆಸೆಣಸಾಟ ಸಲ್ಲದು; ಸಲ್ಲದು ಸಲ್ಲದು.' 'ಏನು? ಇದು ಮಹಾಕಾಳೋರಗವೆ? ಛೀ, ಇಂತಹರ ಕೋಪವೇನು ಹೊಸತೆ? ಕ್ರಮೇಣ ನನ್ನ ಬೆನ್ನ ಹಿಂದೆ ದುಂಬಾಲು ಬೀಳುವರು'—ಗೌಡ ಸಮಾಧಾನಪಟ್ಟುಕೊಂಡ.

'ಸರ್, ಸಿಟ್ಟಾಗಬೇಡಿ. ನಮ್ಮೂರಲ್ಲಿ ಪೋಕ್ರಿಗಳಿದ್ದಾರೆ; ಎಚ್ಚರಾಗಿರಿ ಅಂತ ಹೇಳಿದೆ. ಇದು ಅಸಮಂಜಸವಾದರೆ, ಬಿಟ್ಟುಬಿಡಿ.'

'ನಿಜ, ನಿಜ. ನೀರಿದ್ದಲ್ಲಿ ಕೆಸರಿದ್ದೇ ಇದೆ. ಅಂತಹದನ್ನು ಪತ್ತೆ ಹಚ್ಚುವುದೇ ನಮ್ಮ ಕೆಲಸವಲ್ಲವೆ? ಇದರಲ್ಲಿ ನಮ್ಮ ವಿಭಾಗ, ನಾವು ಎಂದೂ ಬೆದರಲಾರೆವು. ಯಾವುದಕ್ಕೂ ಅಂಜದ, ಯಾರ ಮಾತಿಗೂ ಮಾರುಹೋಗದೆ, ಸತ್ಯಕ್ಕೆ ತಲೆವಾಗಿ ಸನ್ಮಾರ್ಗದಲ್ಲಿ ನಡೆಯುವ ನನಗೆ ಯಾರ ಅಂಜಿಕೆಯೂ ಇಲ್ಲ; ನೆನಪಿರಲಿ."—ಮಾಧವರಾಯರ ಕಟ್ಟುನಿಟ್ಟಿನ ಮಾತುಗಳಿಂದ ದಂಗುಬಡೆದರು ಗೌಡರು! ತಂದ ಕೈಗಾಣಿಕೆಯನ್ನು ಮರಳಿ ತೆಗೆದುಕೊಂಡು ಹೊರಡಲೇ ಬೇಕಾಯಿತು, ಅವರು! ರಂಗಯ್ಯ ಗೌಡರ ನಿರ್ಗಮನಾನಂತರ ನಖಶಿಖಾಂತ ಉರಿದಿದ್ದ ಮಾಧವರಾಯರು ತನ್ನ ಆಫೀಸಿನಿಂದ ಹೊರವರಾಂಡಕ್ಕೆ ಬಂದು ದೂರಕ್ಕೆ ದೃಷ್ಟಿ ಹಾಯಿಸಿದರು—

ದೀರ್ಘಕಾಯ, ತೆಳ್ಳನೆಯ ಬೆಳ್ಳಗಿನ ಆಳು; ಸದಾ ಕೋಪ ಸ್ವಭಾವ; ಮಾತಿನಲ್ಲಿ ನಯ—ಇವು ರಂಗೇ ಗೌಡರ ಗುರುತು! ಇಂತಹ ಪಾಷಂಡಿಗಳಿಗೆ ತಾನು ಬಗ್ಗುವವನಲ್ಲ ಎಂದು ಪುನರುಚ್ಚರಿಸಿದರು ರಾಯರು.

ತಾನು ಒಬ್ಬಾಕೆ ಸ್ತ್ರೀಯನ್ನು ಕೊಂದು ಮರೆಯಾದ ಪಿಶಾಚಿಯೊಬ್ಬನನ್ನು ಶತಪ್ರಯತ್ನದಿಂದ ಹಿಡಿದು. ಶಿಕ್ಷೆಗೀಡುಮಾಡಿಲ್ಲವೆ? ಆದರಿಂದ ತಾನೇ ಉದ್ಯೋಗದಲ್ಲಿ ಭಡ್ತಿ, ಜನತೆಯಲ್ಲಿ ಗೌರವ ದೊರೆತುದು! ಲಂಚಕ್ಕೆ ಬಲಿಬಿದ್ದು ಗೌರವಕ್ಕೆ ಕಳಂಕ ತಂದುಕೊಂಡಿದ್ದರೆ, ಹೇಗಾಗುತಿತ್ತು?— ಎಂದು ಕೊಂಡರವರು. 'ಎಲೆ ಮನವೆ, ಲಂಚಕ್ಕೆ ಹಾತೊರೆಯದಿರು; ವಂಚಕನಾಗಿ ಉದ್ಯೋಗದ ಮರ್ಯಾದೆಯ ಜೀವಂತ ಸಮಾಧಿ ಗೆಯ್ಯದಿರು' ಎಂದು ಹಾರೈಸಿದರು.

ಕಂಪು ತಂಗಾಳಿ ಅವರನ್ನು ಪ್ರಸನ್ನೀಕರಿಸಿತು. ತಾಸು ಐದೂ ಆಗಿರಲಿಲ್ಲ. ಮನೆಯಲ್ಲೂ ನೆಮ್ಮದಿಯಿಲ್ಲ. ಹೊಸ ಊರು; ಹೊಸ ಜನ; ಹೊಸ ವ್ಯವಹಾರ—ಇವುಗಳನ್ನು ಹೊಂದಿಸಿಕೊಳ್ಳಬೇಕಾಗಿದೆ. ಸಿಗರೇಟಿನ ಹೊಗೆ ಸುರುಳಿ ಸುರುಳಿಯಾಗಿ ಗಾಳಿಯೊಡನೆ ಲಾಸ್ಯವಾಡುತಿತ್ತು. ಒಂದರ ಹಿಂದೊಂದರಂತೆ ಅದು ಸುಟ್ಟು ಬೂದಿಯಾಗುತಿತ್ತು. ಒಂದು...ಎರಡು.... ಮೂರು...ಒಂದೇ ದಿನ ಮೂರು ಕೊಲೆಗಳು! ಈ ಸಮಸ್ಯೆಯ ಝಂಜಾಟದ ನಡುವೆ ಈ ಗೌಡನ ಕಿರಿಕಿರಿ!

ಟ್ರಿಣ್....ಟ್ರಿಣ್ .... ಟ್ರಿಣ್ .... —ಫೋನ್ ಕರೆಯಿತು.

"ಹಲ್ಲೋ...ಹಲ್ಲೋ..." ಕಿವಿಗಿಟ್ಟು ಫೋನಿನಲ್ಲಿ ಮಾತಾಡಿದರು, ರಾಯರು.

"ಯಾರು ಮಾತಾಡೋದು?"

"ಯಾರು ಬೇಕಾಗಿತ್ತು, ತಮಗೆ?"

"ಪೋಲೀಸ್ ಇನ್ಸ್‌ಪೆಕ್ಟರ್ ಮಾಧವ ರಾವ್"

"ಸರಿ, ಅವರೇ ಆಡುತಿದ್ದಾರೆ."

"ನಮಸ್ತೆ!....ನಮ್ಮಲ್ಲಿಂದು ಕಗ್ಗೊಲೆ ನಡೆದಿವೆ ನನ್ನೊಬ್ಬನನ್ನುಳಿದು ಉಳಿದ ಮೂವರೂ ಯಾವುದೋ ನರಪಿಶಾಚಿಯ ಗುಂಡಿಗೆ ಆಹುತಿಯಾದರು...."

"ಕೊಲೆ!! ಮೂವರ ಕೊಲೆ!!—ತಮ್ಮ ಮನೆ...?"

"ಸುಂದರ ರಾವ್ ರೋಡ, ಟರ್ನ್. ಮನೆ ನಂಬ್ರ ೧೮೭."

"ತಮ್ಮ ಹೆಸರು?"

"ಶ್ರೀಕಾಂತ ರಾವ್"

"ಉದ್ಯೋಗ?"

"ವಕೀಲ್...."

"ಹೊರಟೆ, ಬಂದುಬಿಟ್ಟೆ"—ಫೋನನ್ನು ಬಲವಾಗಿಯೇ ಕೆಳಗಿಟ್ಟರು. ಇದೀಗ ನಾಲ್ಕನೆಯ ಕೊಲೆ! ಒಂದೇ ದಿನ.... ನಾಲ್ಕು ಕೊಲೆಗಳ ವರದಿ!

"ಇಂದು ನನ್ನ ಹುಟ್ಟು ಹಬ್ಬ! ಅದಕ್ಕೆಂದೇ ಇಷ್ಟೊಂದು ಕೊಲೆಗಳು ನಡೆದಿರಬೇಕು. ಶುಭಾಶಯಗಳ ಸುರಿಮಳೆ ಇನ್ನೂ ಬರಬಹುದು; ಆದರೆ, ಕರ್ತವ್ಯಚ್ಯುತನಾಗುವುದು ಸಾಧ್ಯವಿಲ್ಲ." ಎಂದು ನಿಶ್ಚೈಸಿದರು ಮನದೊಳಗೆ.

ಬಹುವೇಗದಿಂದ ಜೀಪ್ ಓಡಿತು. ಜತೆಗೆ ನಾಲ್ಕಾರು ಸಿ. ಐ. ಡಿ. ಗಳೂ ಇದ್ದರು. ತಪಾಸಣೆ, ಶವಗಳ ಪರಿಶೀಲನೆಯೆಲ್ಲಾ ಆಗಬೇಕಾಗಿತ್ತು. ಸ್ಥಳ ಮಹಜರು ನಡೆಸಲು ಮನೆಯ ಮುಂದೆ ನಿಂತಾಗ ಒಬ್ಬ ಕುಂಟ ವ್ಯಕ್ತಿ ಅವರನ್ನು ಸ್ವಾಗತಿಸಿ ನಡೆದ ವಿಚಾರ ತಿಳಿಸಿದ—'ತಾನು ಬೇಂಕಿನ ನೌಕರ. ಬೇಂಕಿನ ಮೆನೇಜರ, ಅವರ ಹೆಂಡತಿ ಮತ್ತು ೧೦ ವರ್ಷದ ಹೆಣ್ಣು ಮಗು ಅಸುನೀಗಿದ್ದುವು; ಬಾಗಿಲು ತೆರೆದಿದ್ದುವು". ಬೇಕಾದ ಪುರಾವೆಗಳನ್ನು ದಾಖಲುಮಾಡಿಕೊಳ್ಳಲಾಯಿತು.

"ಶ್ರೀಕಾಂತ ರಾಯರೆಂದರೆ ಯಾರು?"

"ಯಾರು, ಶ್ರೀಕಾಂತರಾಯರು! ಆ ಹೆಸರಿನವರೇ ಇಲ್ಲಿಲ್ಲವಲ್ಲಾ!"

ಸಮಸ್ಯೆ ಬಿಗುವಾಗಿ ಕಂಡಿತು. ಆದರೂ ಅದನ್ನು ತೋರಿಸಿಕೊಳ್ಳದೆ, 'ತಮ್ಮ ಹೆಸರು?' ಎಂದು ಪ್ರಶ್ನಿಸಿದರು ಆತನೊಡನೆ.

'ನನ್ನನ್ನು ಈ ಊರಲ್ಲಿ ವೆಕ್ಕೆಂಟ ಕರೀತ್ತಾರೆ. ಪೂರಾ ಹೆಸರು ವೆಂಕಟ್ರಮಣಾಂತ'

'ಉದ್ಯೋಗ?'

'ಬೇಂಕಿನಲ್ಲಿ'

'ಮನೆ?'

'ಇಲ್ಲೇ ಆಚೆಕಡೆಯಿದೆ ಸ್ವಾಮಿ...'

'ನೋಟ್' ಮಾಡಿಕೊಂಡ ಮಾಧವ ರಾಯರು ಶವಗಳನ್ನು ಪರಿಶೀಲಿಸಿದರು. ಮೆನೇಜರರ ಕಿಸೆಯಲ್ಲಿ ಒಂದು ನೋಟ್ ಬುಕ್ ಕಾಣಿಸಲು, ಅದನ್ನು ಕಿಸೆಗೆ ಸೇರಿಸಿಕೊಂಡರು. ಮೇಲೆ, ವೆಂಕಟರಮಣರೊಡನೆ, 'ತಾವೂ ಬಂದು ನಾಲ್ಕೆಂಟು ದಿನ ನನ್ನೊಡನಿದ್ದು ಸಹಾಯ ನೀಡಬೇಕು' ಎಂದರು.

ವೆಂಕಟರಮಣ ಸಂಕಟದಲ್ಲಿ ಬಿದ್ದಂತಾದನು. ಆದರೆ, ಆತ ಏನು ತಾನೇ ಆಡಲು ಸಮರ್ಥ? ಸಿ. ಐ. ಡಿ. ಗಳಿಗೆ ತಕ್ಕ ಕಣ್ಸನ್ನೆ ಮಾಡಿ, ಶವಗಳನ್ನು ಡಾಕ್ಟರರ ಪರೀಕ್ಷೆಗೆ ಗುರಿಪಡಿಸಲು ಆಜ್ಞಾಪಿಸಿ, ವೆಂಕಟರಮಣನನ್ನು ಒತ್ತಾಯದಿಂದ ಜೀಪಿಗೇರಿಸಿದರು, ಮಾಧವರಾಯರು. ಜೀಪು ಧೂಳನ್ನೆಬ್ಬಿಸುತ್ತ ವೇಗದಿಂದ ಓಡುತಿತ್ತು—ಅಳಿದುಳಿದವುಗಳ ಪರಿವೆಯೋ ಅದಕ್ಕಿದ್ದಂತೆ ತೋರುತ್ತಿರಲಿಲ್ಲ.

oo oo oo

ವೆಂಕಟರಮಣ ಸೆರೆಮನೆಯ ಕೈದಿಯಾಗಿರದಿದ್ದರೂ ಮಾಧವರಾಯರ ಮನೆಯ ಕೈದಿಯಾದ. ಮೆನೇಜರರ ಮೃತ ಶರೀರದ ಜೇಬಿನ ಡೈರಿಯನ್ನು ಪರಿಶೀಲಿಸ ತೊಡಗಿದರು ಮಾಧವರಾಯರು.

ತಾ. ೮-೮-೫೮—ಡೈರಿಗ್ಗೆ—ಇಂದು ಬೇಂಕಿಗೆ ರಜೆ ಏಕಾಗಿ? ಏಕಾಗಿಯೋ ಇರಲಿ. ನಯವಿನಯವನ್ನು ತೋರಿಸಿ ನನ್ನನ್ನು ಮೋಸದ ಮಡುವಿನಲ್ಲಿ ದೂಡಿದ ವೆಂಕಟರಮಣ ಇಂದೂ ಬಂದ—೧೦ ಸಾವಿರ ರೂಪಾಯಿ ನಷ್ಟಕೊಟ್ಟು, ಬೇಂಕಿನಿಂದ ಹೊರಗೆ ಕಳುಹಿಸಲು ಮಾಡಿದ ವ್ಯಕ್ತಿಯಾತ. ಮನೆಯ ಒಳಗೆ ಬರಬಿಡಬಾರದಾಗಿತ್ತು. ಆದರೆ, ಆತನ ಸಂಪರ್ಕ ಆದೇಕೋ ಬೇಕೆನಿಸುತಿತ್ತು......ಇದೇ ನನ್ನ ಜೀವನದ ಕೊಡಲಿಯಾಗಲೂ ಬಹುದು"— ಅಬ್ಬಾ, ಇನ್ನೂ ತಿಳಿಯು ಅಂತಹನಿಗೆ ಆಸರೆಯಿತ್ತನೆ? ನಾಲ್ಕಾರು ಪುಟಗಳೂ ವೆಂಕಟರಮಣನ ದುರ್ವರ್ತನೆಯನ್ನು ಸಾರುತಿದ್ದುವು. ಕೊಲೆಗಾರನಿಗೆ ಮೆನೇಜರರ ಡೈರಿಯು ಎಲ್ಲಿದೆಯೆಂದು ತಿಳಿದಿರಲಿಲ್ಲವೋ ಏನೋ?

o o o

ಮಾಲಿನಿ ೧೮ ವಯಸ್ಸಿನ ಮಾಧವರಾಯರ ಏಕೈಕ ಪುತ್ರಿ. ಕಾಲೇಜಿಗೆ ಸೇರಿ ಕೊನೆಗೆ ತಾಯಿಗಾದ ಕಷ್ಟ ಸಹಿಸಲಾರದೆ ಮನೆಯಲ್ಲಿಯೇ ಉಳಿದುಕೊಂಡಳು ತಂದೆಯಲ್ಲಿದ್ದ ಪ್ರತಿಯೊಂದು ಗುಣವೂ

(೧೧ನೇ ಪುಟ ನೋಡಿರಿ)

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆಃ 1906)

ನೋವುಗಳ ಅತ್ಯುತ್ತಮ ಸಂಹಾರಿಣಿ

ಶುದ್ಧ ಹರಟೆ

ಛತ್ರಾಧಿಪ ಪುರಾಣಮ್

ವರ್ಷಾಕಾಲದ ಸುದೀರ್ಘ ದಿನಗಳಲ್ಲಿ ಕೇಳಿ ಮುಗಿಯದ ಪುರಾಣಕಥಾಶ್ರವಣ ಬಯಸುವಿರಾ?

ಹಲ್ಲುನೋವು ಬೇನೆಯನ್ನು ತಡೆಯಲಾರದ ನಾನು ಡಾಕ್ಟರರಲ್ಲಿಗೆ ಹೋಗಲು ತಯಾರಾಗಿದ್ದೆನು. ಒಳಗಿನ ನೋವಿನಿಂದಾಗಿ ವಸಡು ಊದಿಕೊಂಡಿತ್ತು. ಡಾಕ್ಟರರಲ್ಲಿಗೆ ಹೊರಟಾಗಲೆ ತಾಯಿ ಕರೆದು ಹೇಳಿದಳು—"ಕೊಡೆ ಹಿಡಿದುಕೊಂಡು ಹೋಗು. ಮಳೆ ಬರಬಹುದು." ಎಂದು. ತಾಯಿ ಮಾತನ್ನು ಮೀರಿದರೆ ಕುಂಭೀಪಾಕ (ನಳಪಾಕವಂಶಹದ್ದೆ ಆಗಿದ್ದರೆ ಒಂದು ಕೈ ನೋಡಬಹುದಿತ್ತು. ಆದರೆ........?) ದೊರೆಯಬಹುದೆಂದು ಬೆದರಿ ನನ್ನ ಚಂದದ ಕೊಡೆಯನ್ನು ಹಿಡಿದುಕೊಂಡು ಹೊರಟೆನು.

ಪ್ಲೇಸ್ಟಿಕ್ ಹಿಡಿಯುಳ್ಳ ನನ್ನ ಕೊಡೆ ಅರ್ಥಾತ್ ಗಂಡಸರ ಕೊಡೆಯನ್ನೆ ಹಿಡಿದುಕೊಂಡು ನಾನು ಹೊರಟೆನು. ಮಳೆ ಬರುತ್ತಿರಲಿಲ್ಲವಾದರೂ ಬರುವುದರಲ್ಲಿತ್ತು. ಬಸ್ಸನ್ನು ನಿಲ್ಲಿಸಿ ಹತ್ತಿದೆನು. ಬಾಗಿಲ ಎದುರುಬದಿಯ ಸೀಟಿನಲ್ಲಿ ಆಸನಾರೂಢನಾದೆನು. ಕೊಡೆಯನ್ನೊಂದುಬದಿಗೆ ಸರಿಸಿದೆನು.

ನಾನು ಬಸ್ಸನ್ನೇರುವುದನ್ನೆ ನಿರೀಕ್ಷಿಸಿಕೊಂಡಿದ್ದ ಮಳೆ ಭೋರ್ ಭೋರ್ನೆ ಬರಲಾರಂಭಿಸಿತು. ಅಷ್ಟರಲ್ಲಿ ನಮ್ಮ ಬೋರೆಗೌಡರು ಬಸ್ಸನ್ನು ನಿಲ್ಲಿಸಿದರು. ಬಸ್ಸು ನಿಂತಿತು ನನ್ನ ಇದಿರ ಬಾಗಿಲಲ್ಲಿ ಕೊಡೆಯನ್ನು ನೆಟ್ಟಗೆ ನಿಲ್ಲಿಸಿಕೊಂಡು ಬೋರೆಗೌಡರು ಪ್ರವೇಶಿಸಿದರು. ದುರ್ದೈವವಶಾತ್ ಎನ್ನಲೆ, ದೈವವಶಾತ್ ಎನ್ನಲೆ ಅವರ ಕೊಡೆಯ ಕೋಲು ನನ್ನ ವಸಡಿಗೆ ಸರಿಯಾಗಿ ತಾಗಿತು. ಗಾಯವಾಗಿ ಅದರೊಳಗಿನ ದುರ್ವಾಸನಾಯುಕ್ತ ರಕ್ತವು ಹೊರಸೂಸಿತು. ಬಸ್ಸಿನ ಕಂಡೆಕ್ಟರ್ ಮೊದಲಾದವರೆಲ್ಲರೂ ನನಗೆ ಸಹಾನುಭೂತಿಯನ್ನು ತೋರಿಸಿ ಆತನಿಗೆ ಬಾಯಿ ಬಂದಂತೆ ಬೈಯ್ಯಲಾರಂಭಿಸಿದರು ನನ್ನ ಕೈಯಲ್ಲಿದ್ದ ಟವಲ್ ನನಗೆ ಈ ಸಂದರ್ಭದಲ್ಲಿ ಮಹದುಪಕಾರವನ್ನು ಮಾಡಿತು. ಬಸ್ಸು ಮುಂದುವರಿಯಿತು.

ನಮ್ಮೂರ ತಿರುಪತಿ ಆಚಾರ್ಯರು ಬಸ್ಸನ್ನು ನಿಲ್ಲಿಸಿದರು. ಅವರೊಂದಿಗೆ ತಾಳಿಗರಿಯ ಒಂದು ಅಗಲವಾದ ತತ್ರವಿತ್ತು. (ಇದು ಛತ್ರದ ಅಪಭ್ರಂಶವಿರಬಹುದೆಂದು ಕನ್ನಡಿ ಭಾಷಾ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರಂತೆ.) ಬಸ್ಸು ನಿಂತಿತು. ನಾನು ಬಹು ಜಾಗ್ರತೆಯಿಂದಲೇ ಬಹುವರನ್ನು ಸ್ವಾಗತಿಸಿದೆನು. ಅವರು ಬಸ್ಸಿನ ಉದ್ದದ ಸೀಟಿನಲ್ಲಿ ಕುಳಿತುಕೊಂಡರು. ನಿಜ ಹಸ್ತದಲ್ಲಿ ತಮ್ಮ ಛತ್ರವನ್ನು ಹಿಡಿದುಕೊಂಡರು. ಬಸ್ಸು ಮುಂದುವರಿಯಿತು. ಶ್ರೀ ಆಚಾರ್ಯರು ನನ್ನನ್ನು ನೋಡಿದೊಡನೆ—"ಮರಾಯ! ಇದೇನು ನಿನ್ನ ಅವತಾರವೆಂದು ಪ್ರಶ್ನಿಸಿದರು.

"ಆಚಾರರೆ! ಇದು ನನ್ನ ನಾರಸಿಂಹಾವತಾರ' ಎಂದು ಮಾತು ಮುಂದುವರಿಸಬೇಕೆಂದು ಯೋಚಿಸುವಲ್ಲೆ ಉಳಿದ ನನ್ನ ಸಂಗಡಿಗರು ನಡೆದ ಸಂಗತಿಯನ್ನು ವಿವರಿಸಿ ಹೇಳಿದರು.

ನನ್ನ ಸಮೀಪದಲ್ಲಿದ್ದ ಬಸ್ಸು ಬಂಧುವೊಬ್ಬ ಆವರ್ಯಾರೆಂದು ಪ್ರಶ್ನಿಸಿದನು. ಥಕ್ಕನೆ ನನ್ನ ಬಾಯಿಯಿಂದ 'ತಿರುಪತಿ ಆಚಾರ್ಯ' ಎಂದು ಬಂದು ಹೋಗಿ ಪತ್ತೆ ಪಶ್ಚಾತ್ತಾಪಕ್ಕೆ ಎಡೆ ಮಾಡಿಕೊಟ್ಟಿತು.

ಹಾಗೆಂದರೆ...' ಎಂದು ಅವನು ನಾನು ನಿರೀಕ್ಷಿಸಿದಂತೆ ಮರು ಪ್ರಶ್ನೆಯನ್ನು ಹಾಕಿದನು.

"ಹಾಗೆಂದರೆ ಹಾಗೆಯೆ. ಅವರ ನಿಜವಾದ ಹೆಸರು ಶ್ರೀಪತಿ ಆಚಾರ್ಯ ಎಂದು. ಆದರೆ ಅವರು ಅನೇಕ ಜನರಿಗೆ ತಿರುಪತಿ ನಾಮ ಹಾಕಿದವರಾದ್ದರಿಂದ ತಿರುಪತಿ ಆಚಾರ್ಯ ಎಂದು ಕರೆಯಲ್ಪಡುತ್ತಾರೆ ನನ್ನಂತಹರಿಂದ" ಎಂದು ಹೇಳಿ ಮುಗಿಸುವಾಗಲೆ ಇನ್ನೊಬ್ಬ ಬಸ್ಸು ನಿಲ್ಲಿಸಿದ.

ಆತನು ನಮ್ಮೂರ ಕಾಲೇಜಿನ ವಿದ್ಯಾರ್ಥಿ ಗೋವಿಂದ. ಮಳೆ ಬರುತ್ತಿದ್ದುದರಿಂದ ಗಂಡಸರು ಹಿಡಿಯಲಯೋಗ್ಯವಾದ (?) ಕೊಡೆಯೊಂದನ್ನು ಹಿಡಿದುಕೊಂಡಿದ್ದನು. ಬಸ್ಸಿನೊಳಹೊಗ್ಗುವುದರಲ್ಲಿದ್ದ ಆತನನ್ನು ತಡೆದು ನಿಲ್ಲಿಸಿದ ಕಂಡೆಕ್ಟರ್ ಸಾಹೇಬರು—"ನಿಲ್ಲಿ ಸ್ವಾಮಿ! ಸ್ಟೇಂಡಿಂಗ್ ಪ್ಯಾಸಂಜರ ತಮಗೆ ಆಗಬಹುದಲ್ಲ" ಎಂದರು.

"ಆಗಬಹುದು" ಎಂದು ರಾಗ ಎಳೆದು ಮುಖ ಹೆಂಗಸರಂತೆ ತಿರುಗಿಸಿ ಕಣ್ಣು ಮಿಟುಕಿಸಿ ಹೇಳಿದನು ಗೋವಿಂದ.

ಬಸ್ಸಿನ ಮೇಲೆ ಬಂದವನೆ ಮುಂದೆ ಮುಂದೆ ಹೋಗುತ್ತಿದ್ದನು. ಥಟಕ್ಕನೆ ಬಸ್ಸು ಮುಂದೆ ಹೋಯಿತು. ಮುಂದೆ ಮುಂದೆ ಹೋಗುತ್ತಿದ್ದ ಗೋವಿಂದ ತಿರುಪತಿ ಆಚಾರ್ಯರ ಕೊಡೆಯ ಮೇಲೆ ಬಿದ್ದುಬಿಟ್ಟನು. ಆತನ ಇಸ್ತ್ರಿ ಅಂಗಿಯಲ್ಲಿ ತಾಗಿತು. ಆಚಾರ್ಯರ "ತತ್ರ"ದ ಮೇಲೆ ಗೋವಿಂದ ಬಿದ್ದುದರಿಂದ ಅವರ ತತ್ರ 'ಗೋವಿಂದ' ಆಯ್ತು.

ತಿರುಪತಿ ಆಚಾರ್ಯರು ಕಂಗಾಲಾಗಿ "ಅಯ್ಯೋ! ನನ್ನ ಕೊಡೆಯೆ!" ಎಂದು ಅದನ್ನು ಮೇಲಕ್ಕೆತ್ತಿದರು. ಬಸ್ಸಿನಲ್ಲಿ ಕುಳಿತಿದ್ದ ಜನರೆಲ್ಲ ಆಚಾರ್ಯರನ್ನು ಕಸಿಸಲಾರಂಭಿಸಿದರು.

ನಾನು ಅವರ 'ಒಲಿಕೊಡೆ'ಯನ್ನು ಇಣಿಕಿ ನೋಡಿದೆನು, ಅದರಲ್ಲಿ ತಿರುಪತಿ ಆಚಾರ್ಯ, ತಪ್ಪಿದೆ ಶ್ರೀಪತಿ ಆಚಾರ್ಯ ಎಂದು ಡಾಮರ್‌ನಲ್ಲಿ ಬರೆದಿತ್ತು. ಮತ್ತೊಂದು ಬದಿಯಲ್ಲಿ ಮಾವಿನ ಎಲೆಯೊಂದು ತುರುಕಿಸಲ್ಪಟ್ಟಿತ್ತು. ಕೊಡೆಗೇನೂ ವಿಶೇಷ ಜಖಂ ಆಗಲಿಲ್ಲ.

'ಆಚಾರ್ಯರೆ! ಮಾವಿನಎಲೆಯನ್ನು ಅದೇಕೆ ಅಲ್ಲಿಟ್ಟಿರುವಿರಿ?' ಎಂದು ನಾನು ಕುತೂಹಲಚಿತ್ತನಾಗಿ ಪ್ರಶ್ನಿಸಿದೆನು.

'ನಮ್ಮ ಕೊಡೆಯ ಗುರುತು ನಮಗಾಗುವುದಕ್ಕಾಗಿ." ಎಂದು ಅವರು ಸಮಾಧಾನದಿಂದ ಉತ್ತರಿಸಿದರು.

'ಹೆಸರು ಕೆತ್ತಿಸಿದ ನಂತರವೂ ಇದರ ಆವಶ್ಯಕತೆಯಿದೆಯೆ?" ಎಂದು ಪುನಃ ಪ್ರಶ್ನಿಸಿದೆನು.

"ಬೆಳಗ್ಗೆ ಎದ್ದೊಡನೆ ಹಲ್ಲು ತಿಕ್ಕಲು ಮಾವಿನೆಲೆಬೇಕು. ನಾಳೆ ಎಲೆಯನ್ನು ಈ ದಿನವೆ ನಾನು ಸಿದ್ಧಮಾಡಿ ಇಡುತ್ತೇನೆ ಈ ಕೊಡೆಯಲ್ಲಿ." ಎಂದರು ಬುದ್ಧಿವಂತ ಆಚಾರ್ಯರು. ನಮ್ಮವರ ದ್ವಿಉದ್ದೇಶವನ್ನು ಕಂಡು ನನಗೆ ಬಹಳ ಸಂತೋಷವಾಯಿತು.

ಇಷ್ಟರಲ್ಲೇ ಪರೀಕ್ಷಾ ಫಲಿತಾಂಶ ಬಂದಿಲ್ಲವೆಂದು ಗೋವಿಂದನಾಮ ಸಂಕೀರ್ತನೆಯನ್ನು ಮಾಡುತ್ತಿರುವ ಗೋವಿಂದ ನನ್ನನ್ನು ಮಾತಾಡಿಸಿದನು. ಆತನು ನನ್ನನ್ನು ಮಾತಾಡಿಸಿದಕ್ಕಾಗಿ ನಾನು ಸ್ವಲ್ಪ ಸರಿದು ಸೀಟನ್ನು ಮಾಡಿಕೊಟ್ಟೆನು. ಆತನು ಅಲ್ಲೆ ಕುಂಡಿಸಿದನು. ಹೊಲಸು ರಕ್ತ ಸುರಿದು ಹೋದುದರಿಂದ ನನಗೆ ಹಲ್ಲುನೋವು ಸ್ವಲ್ಪ ಕಡಿಮೆಯಾಗಿತ್ತು. ಆದ್ದರಿಂದ ನಾನು ಮಾತು ಬೆಳೆಸಿದೆನು.

"ನಿಮ್ಮ ರಿಸಲ್ಟ್ ಬಂದಿಲ್ಲವೆ?"

"ಬಂದಿಲ್ಲ. ಬರಬಹುದು ಇನ್ನೊಂದು ವಾರದಲ್ಲಿ ಪಿ. ಯು. ಸಿ. ರಿಸಲ್ಟ್ ನೋಡಿದಾಗ ನನಗೆ ಹೆದರಿಕೆಯಾಗುತ್ತಿದೆ."

"ಹೆದರಿಕೆ ಹೋಗಲು ಗೋವಿಂದ ಭಜನೆಯನ್ನು ಮಾಡಬಹುದಲ್ಲ!"

"ಮಾಡುತ್ತಿದ್ದೇನೆ. ಆದರಿಂದಲೆ ನಾನು ಪಾಸಾಗಬೇಕು ಎಂದು ಹೇಳಲು ಬಹಳ ನಾಚಿಕೆಯಾಗುತ್ತಿದೆ.' ಎಂದು ನಾಚಿಕೆ ಮುಳ್ಳಿನಂತೆ ನಾಚಿದ ಗೋವಿಂದ.

"ಇದೇನು ಗೋವಿಂದ? ಹೆಂಗಸರಂತೆ ನಾಚುತ್ತಿದ್ದಿ!"

"ಹೂಂ..." ಎಂದು ಮತ್ತೂ ನಾಚಿಯೆ ಹೇಳಿದ ಗೋವಿಂದ.

ಅವನ ಈ ವರ್ತನೆಯನ್ನು ನೋಡಿ ನಾನು ಆತನು 'ಲೇಡಿಸ್ ಅಂಬ್ರೆಲ್ಲಾ' ಹಿಡಿದುಕೊಂಡದ್ದು ಅರ್ಥಯುಕ್ತವಾಗಿದೆಯೆಂದು ಎಣಿಸಿದೆನು. ಹೆಣ್ಣಾಗಳು, ಹೆಣ್ಣಿನಂತಹ ಹೃದಯವುಳ್ಳವರು, ಹೆಣ್ಣಿಗಾಗಿ ಆಶಿಸುವವರು, ಹೆಣ್ಣಿನೆದುರಲ್ಲಿ ತಮ್ಮ ಪ್ರತಿಷ್ಠೆಯನ್ನು ಇಸ್ತ್ರಿ ಅಂಗಿಯೊಂದಿಗೆ ಪ್ರದರ್ಶಿಸಲು ಇಚ್ಛಿಸುವವರು ಮತ್ತು ಹೆಣ್ಣಿನಂತಹ ವರ್ತನೆಯುಳ್ಳವರು ಈ 'ಲೇಡಿಸ್ ಕೊಡೆ'ಯನ್ನುಪಯೋಗಿಸುವರೆಂಬ ಮಾತು ನನ್ನ ಅನುಭವದಿಂದ ನನಗೆ ಸಿದ್ಧವಾದಂತಾಗಿದೆ.

ನನ್ನ ವಿಚಾರಧಾರೆ ಏಕಪ್ರಕಾರವಾಗಿ ಮುಂದುವರಿಯುತ್ತಿರುವಲ್ಲಿ ಬಸ್ಸು ಗರಕ್ಕನೆ ನಿಂತಿತು. 'Standing passenger'ಗಳು ಇಲ್ಲದೆ ಹೋದ್ದರಿಂದ ಯಾವ ದುರ್ಘಟನೆಗಳು ಸಂಭವಿಸಲಿಲ್ಲ.

ಕಂಡೆಕ್ಟರನ ಅನುಮತಿ ಪಡೆದು ಪ್ರವೇಶಿಸಿದವಳು ಒಬ್ಬ ಮುದುಕಿ ಗೊರಬಿನೊಂದಿಗೆ. ಗೊರಬನ್ನು ಮುಂದೆ ಮಾಡಿಕೊಂಡು ಅವಳು ಮುಂಬಂದಳು. ಅವಳ ಹಿಂದಿನಲ್ಲಿ ಆರೆಂಟು ಜನರು ಬಸ್ಸು ಹತ್ತಿದರು 'ಸ್ಟೇಂಡಿಂಗ್ ಪೇಸೆಂಜರ್'ಗಳಾಗಿ. ಕಂಡೆಕ್ಟರ್‌ನ ರೈಟ್ ಶಬ್ದ ಕೇಳುವುದಕ್ಕೆ ಮುಂಚಿತವಾಗಿಯೆ ಬಸ್ ಸ್ಟಾರ್ಟ್ ಆಗಿತ್ತು. ಈ ನಿಲ್ಲುವ ಪ್ರಯಾಣಿಕರು ತಮ್ಮ ವ್ಯವಸ್ಥೆ ಸರಿಪಡಿಸಿಕೊಳ್ಳದೆ ಹೋದುದರಿಂದ ಒಬ್ಬರ ಮೇಲೊಬ್ಬರು ಬಿದ್ದರು. ಗೊರಬಿನ ಮೇಲೆ ಮುದುಕಿ. ಮುದುಕಿಯ ಮೇಲೆ ಉಳಿದ ನಿಲ್ಲುವ ಪ್ರಯಾಣಿಕರು. ಬಿದ್ದವರೆದ್ದು ಸಾವರಿಸಿಕೊಳ್ಳುವಷ್ಟರಲ್ಲಿ ಬಸ್ಸು ಗರಕ್ಕನೆ ನಿಂತಿತು. ಪುನಃ ದುರ್ಘಟನೆ ನಡೆಯಿತು. ಮುದುಕಿಗೆ ಪೆಟ್ಟಾಗಿದೆಯೊ ಇಲ್ಲವೊ ತಿಳಿಯದು. ಅಂತೂ ಅದು ಅಳಲಾರಂಭಿಸಿತು. ಗೊರಬಿಗಾಗಿ ಇರಬಹುದೆ...?

ಗೊರಬು ಸಂಪೂರ್ಣ ಪುಡಿಯಾಗಿತ್ತು. ಅದರ ಒಳಬದಿ ಹೊರಬಂದಿತ್ತು. ಅದರಲ್ಲಿ "ಬಾಗಲ್" ಎಂದು ಮಸಿಯಿಂದ ಬರೆದಿತ್ತು ಅದನ್ನು ಗೇರುಬೀಜದ ಎಲೆಯೊಂದು ಕಾಯುತಿತ್ತು.

ಅಷ್ಟರಲ್ಲಿ ಮುದುಕನೊಬ್ಬ ಬಸ್ಸಿನಿಂದ ಕಷ್ಟಪಟ್ಟು ಕೆಳಕ್ಕಿದನು. ಮಳೆ ಬರುತ್ತಲೆ ಇದ್ದುದರಿಂದ

(೧೦ನೇ ಪುಟ ನೋಡಿರಿ)

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲ ಹಿತಚಿಂತನೆ

ಮಕ್ಕಳ ಮನಸ್ಸನ್ನು ನೋಯಿಸ ಬೇಡಿ

ಸುಶಿಕ್ಷಿತ ವಿದ್ವಾಂಸ ಮಾತಾಪಿತರೂ ತಮ್ಮ ಮಕ್ಕಳ ವಿಕಾಸಕಾರ್ಯದಲ್ಲಿ ಸಹಾಯಕರಾಗುವ ಬದಲು ಬಾಧಕರಾಗಿರುತ್ತಾರೆ. ಇದರಿಂದ ಮಕ್ಕಳಲ್ಲಿ ಸಹಜವಾಗಿರುವ ಕುತೂಹಲದ ಲತೆಯು ಮುರುಟಿ, ಜೀವನವು ಸತ್ವಹೀನವಾಗುವುದು.

ಕೆಲವು ಮಕ್ಕಳು ತಮ್ಮ ತಾಯ್ತಂದೆಯರೊಡನೆ ಕೆಲವೊಂದು ಪ್ರಶ್ನೆಗಳನ್ನು ಕೇಳುವುದುಂಟು. ಈ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಹೆತ್ತವರು ಕೊಡಲಾರದೇ ಅವನ್ನು ಹಾರಿಸಿ ತೆಗೆಯಬೇಕಾದ ಪ್ರಸಂಗಗಳೂ ಬರುವುದುಂಟು. ಅಲ್ಲ ಸಲ್ಲದ ಪ್ರಶ್ನೆಗಳನ್ನು ಕೇಳಿ ತಮ್ಮ ಅಶಾಂತಿಯನ್ನು ಬಾಲಕರು ಹೆಚ್ಚಿಸಬಾರದೆಂದು ಹೆಚ್ಚಿನ ಹೆತ್ತವರು ಇಚ್ಛಿಸುತ್ತಾರೆ. ಇದರಿಂದಾಗಿ ತಮ್ಮ ಮಕ್ಕಳು ಕೇಳುವ ಪ್ರಶ್ನೆಗಳಿಂದಾಗಿ ರೇಗಿ ಹೋಗಿ, ಅವರನ್ನು ಗದರಿಸಿ ಸುಮ್ಮನಿರಿಸುವ ಪ್ರಯತ್ನ ನಡೆಸುತ್ತಾರೆ; ಅವರಲ್ಲಿ ಸ್ವಾಭಾವಿಕವಾಗಿರುವ ಕುತೂಹಲವನ್ನು ಮೊಟ್ಟೆ ಮುಲುಗಿಸಿ ಬಿಡುತ್ತಾರೆ. ಶಿಕ್ಷಣದ ದೃಷ್ಟಿಯಿಂದ ಈ ರೀತಿ ಮಾಡುವುದು ಮಕ್ಕಳಲ್ಲಿ ಬಹಳ ದುಷ್ಪರಿಣಾಮ ಬೀರುವುದು.

ಬಾಲಕರು ತಮ್ಮ ಮಾತಾಪಿತರ ಅಂಕಿತದಲ್ಲೇ ಬೇಕು; ಅವರ ರೀತಿನೀತಿಯನ್ನು ಅನುಸರಿಸಬೇಕು; ಕುಟುಂಬದ ಸಂಪ್ರದಾಯ ಪರಂಪರೆಗಳನ್ನು ಕಾಯ್ದುಕೊಂಡು ಬರಬೇಕು ಎಂಬುದಕ್ಕೆ ಯಾರೂ ಅಡ್ಡಿ ಹೇಳುವುದಿಲ್ಲ. ಆದರೆ, ಮಗುವಿಗೂ ಒಂದು ಪರಿಮಿತಿಯಲ್ಲಿ ಅದರ ಇಚ್ಛೆಯಂತೆ ಮುಂದುವರಿಯಗೊಟ್ಟಲ್ಲಿ ಅದರ ವ್ಯಕ್ತಿತ್ವದ ವಿಕಾಸಕ್ಕೆ ಬಹು ಪ್ರಯೋಜನಕಾರಿಯೆನಿಸುವುದು; ಇದರಿಂದಾಗಿ ಕಾಲಕ್ರಮದಲ್ಲಿ ಹಳೆಯ ಸಂಪ್ರದಾಯ-ವಿಶ್ವಾಸಗಳಲ್ಲಿನ ಒಳಿತು ಕೆಡುಕುಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅದು ಸಮರ್ಥವಾಗುವುದು.

ಮಕ್ಕಳಲ್ಲಿನ ಸ್ವಾಭಾವಿಕ ಭಾವಗಳು ಉದ್ರೇಕಗೊಳ್ಳುವಂತೆ ನಾವು ಮಾಡಬೇಕಾಗಿದೆ. ಮಗು ಈ ಪ್ರಪಂಚದಲ್ಲಿ ತನ್ನ ಶಕ್ತಿಗೊಂದು ಪರಿಮಿತಿಯಿದೆ ಎಂದು ತಿಳಿದೊಡನೆಯೇ ಹತಾಶವಾಗುವುದಾದರೂ ಅದು ಸ್ವಾಭಾವಿಕವೇ ಆಗಿದೆ. ಆದರೆ, ಮನೆಯ ಹಿರಿಯರು ಆ ಮಗುವಿನ ಅಶಕ್ತತೆಯನ್ನೂ, ಪರಿಮಿತಿಯನ್ನೂ ಪದೇ ಪದೇ ತಿಳಿಸಿ ಹೇಳಿ, ಅವರ ಹೃದಯದಲ್ಲಿ ನಿರಾಶೆಯನ್ನು ಎಂದಿಗೂ ಹುದುಗಿಸಬಾರದು. ತನ್ನ ಶಕ್ತಿಗೆ ಹೊರಗಾದ ಸಂಗತಿಯ ಬಗ್ಗೆ ಮಗು ಆಗ್ರಹತೊಟ್ಟರೂ ಅದನ್ನು ನಿರುತ್ಸಾಹಿತಗೊಳಿಸಬಾರದು.

ನಾನು ಐದು ವರ್ಷ ಪ್ರಾಯದವನಿರುವಾಗ, ನಮ್ಮ ಹಳ್ಳಿಯ ಸಮೀಪದ ನದಿ ನೆರೆಯಿಂದ ತುಂಬಿತು. ನೆರೆಯ ವೈಭವ ಕಾಣಲು ಜನರೆಲ್ಲರೂ ಅಲ್ಲಿ ತೆರಳಿದರು. ನಾನೂ ತಲಪಿದೆ. ತೇಲಿ ಬರುತ್ತಿರುವ ಒಣ ಮರಗಳನ್ನು ಸಂಗ್ರಹಿಸುವ ಆಶೆಯಿಂದ, ಕೆಲವರು ನದಿಯಲ್ಲಿ ಈಜುತಿದ್ದರು; ದೋಣಿಗಳಲ್ಲಿ ತಿರುಗುತಿದ್ದರು. ಅವರಂತೆ ನನಗೂ ಈಜಬೇಕೆಂಬ ಆಶೆಯೂಯಿತು. ಮನೆಯ ಒಣ ಮರಗಳಿಂದ ಸಣ್ಣ ತೆಪ್ಪವೊಂದನ್ನು ಕಟ್ಟಿ, ನಾನೂ ನೆರೆ ನೀರಿಗಿಳಿದೆ. ನನ್ನ ತೆಪ್ಪ ಪ್ರವಾಹಕ್ಕೆ ಸಿಕ್ಕು ಕೊಚ್ಚಿಕೊಂಡು ನಡೆಯಿತು, ನನ್ನ ಸಾಹಸದಿಂದ ಮೂಗಿಗೆ ಬೆರಳೇರಿಸಿದ ಕೆಲವರು ಧಾವಿಸಿ, ನೀರಿನಿಂದ ನನ್ನ ಮೇಲೆತ್ತಿದರು. ನನಗಿದು ಬೇಕಿರಲಿಲ್ಲವಾದುದರಿಂದ ಗಟ್ಟಿಯಾಗಿ ಅಳ ತೊಡಗಿದೆ. ಅಷ್ಟರಲ್ಲಿ ನನ್ನ ತಂದೆಯವರೂ ಅಲ್ಲಿ ಬಂದರು; ನನ್ನನ್ನು ಸಮಾಧಾನಪಡಿಸಿದರು. ನಾನು ಈಜುವ ನನ್ನ ಬಯಕೆಯನ್ನು ತೋಡಿಕೊಂಡಾಗ, ಅವರು ಸೊಂಟದೆತ್ತರದ ನೀರಲ್ಲಿ ನಿಂತು ತೆಪ್ಪದ ಮೂಲಕ ನನ್ನ ತೇಲಿಸ ತೊಡಗಿದರು.

ತಂದೆಯವರು ನನ್ನನ್ನು ಹತಾಶಗೊಳಿಸದೆ ಪ್ರೋತ್ಸಾಹನೆ ನೀಡಿದರು. ಇದರ ಫಲವಾಗಿಯೇ ನಾನು ಮುಂದೆ ಈಜಾಟದಲ್ಲಿ ನಿಪುಣನಾದೆ. ಶಾಲೆ ಕಾಲೇಜುಗಳಲ್ಲಿ ಈಜಾಟ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಹಲವು ಬಾರಿ ಗಳಿಸಿದೆ. ಅಂದು ತಂದೆಯವರು 'ನೀರೆಂದರೆ ಹೆದರಿಕೆ' ಎಂಬುದನ್ನು ತಿಳಿಸಿ ಉತ್ಸಾಹ ಭಂಗಗೊಳಿಸುತಿದ್ದರೆ, ಪ್ರಾಯಶಃ ನಾನು ಈಜಾಟವನ್ನೇ ಕಲಿಯುತ್ತಿರಲಿಲ್ಲ; ಮತ್ತೆ ಪ್ರವೀಣತೆ ತಾನೇ ಎಲ್ಲಿಂದ?

ಒಬ್ಬ ಬಾಲಕ ಕಠಿನ ಕಾರ್ಯವೊಂದನ್ನು ಮಾಡುವ ತಹತಹದಲ್ಲಿದ್ದಾನೆ ಎಂದಿಟ್ಟುಕೊಳ್ಳಿ. ಆಗ, 'ಒಳ್ಳೆಯ ಕೆಲಸ. ಈಗ ಎಷ್ಟು ಸಾಧ್ಯವೋ ಅಷ್ಟೇ ಮಾಡು. ಮುಂದೆ ಇನ್ನೂ ಹೆಚ್ಚು ಮಾಡಬಹುದು' ಎಂದು ಅನ್ನಬೇಕು ಹೊರತು, ಆತನ ಆಶೆಗೆ ನೀರೆರೆಯಬಾರದು. ಜೀವನದ ಕಷ್ಟಕಾರ್ಪಣ್ಯಗಳನ್ನು ಎದುರಿಸುವುದರಿಂದಲೇ ಮನಸ್ಸು ವಿಶಾಲವಾಗುವುದು. ಆದುದರಿಂದ ಮಗು ಜೀವನದ ಬಗ್ಗೆ ಅಧಿಕಾಧಿಕ ಅಭ್ಯಾಸ ಮಾಡುವ ಸೌಲಭ್ಯಗಳನ್ನು ನಾವು ಒದಗಿಸಬೇಕು. ಆತನ ಜೀವನದ ಬಗ್ಗಿನ ಜ್ಞಾನವು ಬೆಳೆಯುತ್ತ ಹೋದಂತೆ ಅವನು ತನ್ನ ಕಾಲ ಮೇಲೆ ತಾನೇ ನಿಲ್ಲಲು ಶಕ್ತನಾಗುತ್ತ ಬರುತ್ತಾನೆ.

ಕುಟುಂಬದಲ್ಲಿ ಕೆಲವರು ಹಿರಿಯರು ಎಳೆಯ ಮಕ್ಕಳಿಗೆ ಮಗುವಿಗೆ ಈ ಪ್ರಪಂಚದಲ್ಲಿ ಯಾವ ಸ್ಥಾನವೂ ಇರುವುದಿಲ್ಲ; ಅವನ ಆಶೆ ಆಕಾಂಕ್ಷೆಗಳೆಲ್ಲವೂ ಅಕಿಂಚನವಾಗಿದೆ ಎಂಬ ಅನುಭವವನ್ನು ಮಾಡಿಸಿ ಬಿಡುವುದುಂಟು. ಇದು ಕೆಲಮಟ್ಟಿಗೆ ಯಥಾರ್ಥವಿರಬಹುದಾದರೂ ಮುಂದೆ ಈ ರೀತಿ ತಿಳಿದ ಮಗು ಜೀವನವನ್ನು ನೋಡುವ ಪ್ರೇಕ್ಷಕನಾಗಬಹುದೇ ಹೊರತು ಅದರಲ್ಲಿ ಧುಮುಕಿ ಜಯಶೀಲನೆನಿಸಲು ಅಸಮರ್ಥನಾಗುವನು.

ಬಾಲಕನನ್ನು ಆತ್ಮವಿಕಾಸ ಮಾಡಿಕೊಳ್ಳುವಂತೆ ಪ್ರೇರೇಪಿಸುವ ಅಥವಾ ಅವನ ನಿರ್ಬಲತೆ ಹಾಗೂ ನ್ಯೂನತೆಗಳನ್ನು ಗೆಲ್ಲುವಂತಹ ಶಕ್ತಿಯನ್ನು ತಂದುಕೊಡುವ ವಸ್ತುವೆಂದರೆ, ಪ್ರೇಮ. ತನ್ನ ತಾಯ್ತಂದೆಯರ ಪ್ರೇಮಕ್ಕೆ ನಾನು ಪಾತ್ರವಾಗಿದ್ದೇನೆ ಎಂಬ ಭಾವವು ಮಗುವಿನಲ್ಲಿ ಹುಟ್ಟಿತೆಂದರೆ, ಅದರ ಆತ್ಮವಿಶ್ವಾಸವು ಬೆಳೆಯುತ್ತದೆ. "ನೀನು ಹೀಗೆ ಮಾಡದೆ ಹೋದರೆ, ನಮ್ಮ ಪ್ರೀತಿಗೆ ಎರವಾಗುವೆ" ಎಂಬ ಹೆತ್ತವರ ಮಾತು ಮಗುವಿನಲ್ಲಿ ನಿರಾಶೆಯ ಬೀಜವನ್ನು ಬಿತ್ತುವುದು. ಉನ್ನತ ಆಶೆಯ ಅಭಾವದಿಂದಾಗಿ, ಅಸತ್ಯತೆ, ಚೌರ್ಯ ಹಾಗೂ ನಿರರ್ಥಕ ಕಾರ್ಯಕಲಾಪಗಳತ್ತ ಮಗುವಿನ ಮನಸ್ಸು ಹರಿದು, ಆದರಿಂದಾಗಿ ಮಗುವೊಂದು ವಿಕಟ ಸಮಸ್ಯೆಯ ರೂಪತಾಳುವುದು.

ತನ್ನ ಕಠಿನ ಪ್ರಶ್ನೆಗಳಿಗೆ ಸುಲಭದಲ್ಲಿ ಉತ್ತರವು ದೊರೆಯಿತೆಂದಾದರೆ, ಮಗು ಆ ಪ್ರಶ್ನೆಗಳನ್ನು ಬಿಟ್ಟುಗೊಟ್ಟು ಹೊಸ ಪ್ರಶ್ನೆಗಳನ್ನು ಅರಸ ತೊಡಗುತ್ತದೆ. ಅದರ ಸಮಸ್ಯೆಗಳಿಗೆ ಸಮರ್ಪಕ ಉತ್ತರ ದೊರೆಯದೆ ಹೋದಲ್ಲಿ, ಉತ್ತರ ಹುಡುಕುವ ನೆಪದಲ್ಲಿ ಮಗು ಅಡ್ಡತಿಡ್ಡ ದಾರಿಯರಸಲು ಮುಂದುವರಿಯುತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ಹುಡುಗ–ಹುಡುಗಿಯರ ಶಾರೀರಿಕ ರಚನೆಯಲ್ಲಿನ ಭಿನ್ನತೆಯ ಬಗ್ಗೆ ಜಿಜ್ಞಾಸೆ ವ್ಯಕ್ತಪಡಿಸುವ ಬಾಲಕನನ್ನು, "ಇಂತಹ ಮರುಳು ಸವಾಲುಗಳನ್ನು ಕೇಳಲು ನಾಚಿಗೆಯೆನಿಸುವುದಿಲ್ಲವೆ?" ಎಂದು ಹೇಳಿ ಗದರಿಸಿದರೆ, ಬಾಲಕನು ಲೈಂಗಿಕ ವಿಷಯವನ್ನು ಅಪಾಂಭಸೀಯ, ದೂಷಿತ ಹಾಗೂ ತ್ಯಾಜ್ಯವೆಂದು ಖಾತ್ರಿ ಮಾಡಿಕೊಳ್ಳುವನು. ಅವನ ಮನಸ್ಸು ಕವಲಾಗಿ ಹರಿಯತೊಡಗಿ ಕಾಲಕ್ರಮದಲ್ಲಿ ವಾಸ್ತವಿಕತೆಯನ್ನು ಸ್ವೀಕರಿಸುವುದಕ್ಕೂ ಅವನು ಅಸಮರ್ಥನಾಗುವ ಸಂಭವವಿದೆ.

ತಾಯ್ತಂದೆಯರು ಮಕ್ಕಳ ಅಸಂಬದ್ಧ ಪ್ರಶ್ನೆಗಳನ್ನು ತಡೆಯುವುದರಿಂದ ಹಾನಿಯೊದಗುವಂತೆ ಮಕ್ಕಳೊಡನೆ ಹೆತ್ತವ

(೯ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಬೇಕಾಗಿದ್ದಾರೆ

ಕನಿಷ್ಠ ಒಂದೆರಡು ವರ್ಷಗಳ ಮಾಹಿತಿ ಇರುವ ಕಂಪೋಸಿಟರ್ ಮತ್ತು ಬೈಂಡರರು ಬೇಕಾಗಿದ್ದಾರೆ,

ಅಲ್ಲದೆ ಕಂಪೋಸಿಂಗ್, ಬೈಂಡಿಂಗ್ ಮೊದಲಾದ ವಿಭಾಗಗಳಲ್ಲಿ ತರಬೇತಿ ಬಗ್ಗೆ ಕೆಲವು ಹುಡುಗರನ್ನೂ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ತಮ್ಮನಿಗೆ ಓಲೆ—೮

ಸಾಹಿತ್ಯದ ಮೇಲೆ ಸಾಮಯಿಕ ಪ್ರಭಾವ

ಸಾಹಿತ್ಯವು ಆರಂಭದಿಂದ ಇಂದಿನವರೆಗೂ ಆಯಾ ಸಮಯದ ರಾಜಕೀಯದಿಂದ ಪರ್ಯಾಪ್ತ ಪ್ರಚೋದಿತವಾಗಿದೆ.

ಭಾರತದ ಅರ್ವಾಚೀನ ಭಾಷೆಗಳಲ್ಲಿ ಸಾಹಿತ್ಯವು ಬೆಳೆದು ಬಂದುದು ಸಾಮಾನ್ಯತಃ ಕ್ರಿ. ಶ. ಆರನೆಯ ಶತಮಾನದಿಂದೀಚೆಗೆ. ದ್ರಾವಿಡ ಭಾಷೆಗಳಲ್ಲಿ ಪ್ರಧಾನವಾದ ತಮಿಳಿನಲ್ಲಿ ಇದಕ್ಕೆ ಮೊದಲೇ ಸಾಹಿತ್ಯ ಕೃತಿಗಳು ಹುಟ್ಟಿರಬಹುದಾದರೂ ಅದು ಸಮೃದ್ಧಿಪಥ ಭ್ರಮಣ ಮಾಡಿದ್ದುದು ಇದೇ ಸಮಯದಲ್ಲೆಂದು ಹೇಳಬಹುದು. ಕನ್ನಡದಲ್ಲಿಯೂ ಹೀಗೆಯೇ. ತೆಲುಗು ಮಲೆಯಾಳಗಳು ಬೆಳೆದು ಬಂದುದು ಆ ಮೇಲೆಯೇ. ಗೌಡ ಭಾಷೆಗಳಾದ ಹಿಂದಿಯೇ ಮೊದಲಾದುವು ಮೂಲ ಅಪಭ್ರಂಶದಿಂದ ಪ್ರತ್ಯೇಕವಾಗಿ ರೂಪುಗೊಂಡುದು ೧೦ನೆಯ ಶತಮಾನಾನಂತರವೇ ಸರಿ. ಹೀಗೆ ಸಾಮಾನ್ಯವಾಗಿ ಅತ್ಯುತ್ತಮವಾದ ಸಾಹಿತ್ಯ ಕೃತಿಗಳು ಭಾರತೀಯ ಸಾಹಿತ್ಯದಲ್ಲಿ ಆಧುನಿಕ ಭಾರತೀಯ ಭಾಷೆಗಳಲ್ಲಿ ಅದೇ ಕಾಲದಿಂದ ಎಂದು ನಿಸ್ಸಂದಿಗ್ಧವಾಗಿ ಎನ್ನಬಹುದು.

ಕನ್ನಡ ಭಾಷೆಯನ್ನೇ ನಾವು ತೆಗೆದುಕೊಳ್ಳುವುದಾದರೆ, ನಮಗೆ ಉಪಲಬ್ಧವಿರುವ ಆದಿಮ ಮಹಾ ಕಾವ್ಯವೆಂದರೆ ಆದಿಪಂಪನದು. ಪಂಪನು ಬರೆದ ಲೌಕಿಕ ಕಾವ್ಯ 'ಭಾರತ'ವು ವೀರರಸ ಪ್ರಧಾನವಾದುದು. ಅಂತೆಯೇ ಆ ಕಾಲದ ಎಲ್ಲ ಕನ್ನಡ ಕಾವ್ಯಗಳಲ್ಲಿಯೂ ವೀರರಸವು ಅಗ್ರಗಣ್ಯ ಸ್ಥಾನವನ್ನು ಆಕ್ರಮಿಸಿತ್ತು. ಶೃಂಗಾರ ಅಥವಾ ವೀರಗಳಲ್ಲಿ ಯಾವುದಾದರೂ ಒಂದು ಕಾವ್ಯದ ಪ್ರಧಾನ ರಸವಾಗಿರಬೇಕೆಂದು ನಿಯಮವೂ ಇದ್ದಿತ್ತು. ಹಳೆಯ ವಸ್ತುಗಳಿಗೇನೇ ಹೊಸ ಮೆರುಗನ್ನಿತ್ತು ತಮ್ಮ ಪ್ರೌಢಿಯನ್ನು ಪ್ರದರ್ಶಿಸುವುದು ಕವಿಗಳ ಕೆಲಸವಾಗಿದ್ದರೂ ನಾಯಕ—ಪ್ರತಿನಾಯಕ; ಅವರ ಹೋರಾಟಾದಿಗಳ ವರ್ಣನೆಯೇ ಕಾವ್ಯಗಳಲ್ಲಿ ತುಂಬಿರುತ್ತಿತ್ತು. ಅರ್ಥಾತ್ ವೀರರಸ ವರ್ಣನೆಯೇ ಕಾವ್ಯದ ಉದ್ದೇಶವಾಗಿರುತ್ತಿತ್ತು.

ಇದಕ್ಕೆ ಕಾರಣವನ್ನೂ ನಾವು ಊಹಿಸಲು ಕಷ್ಟಪಡಬೇಕಾಗಿಲ್ಲ. ಕ್ರಿ. ಶ. ೯ರಿಂದ ಮುಂದಿನ ಮೂರು ನಾಲ್ಕು ಶತಮಾನಗಳ ಕಾಲವೆಂಬುದು ಕರ್ನಾಟಕದ ರಾಜಕೀಯ ಪರಿಸ್ಥಿತಿಯು ಗೊಂದಲಮಯವಾಗಿದ್ದ ಸಮಯ. ಚಿಕ್ಕಪುಟ್ಟ ಅರಸರು ಪರಸ್ಪರ ಕಾದಾಡುತ್ತಿದ್ದುದು; ದೊಡ್ಡ ಅರಸರೊಡನೆ ಸಾಮಂತರಾಗಿ ಕೂಡಿಕೊಂಡಿದ್ದುದು ಇತಿಹಾಸದಿಂದಲೇ ತಿಳಿಯುವುದು. ಆ ಸ್ಥಾನದಲ್ಲಿ ಕವಿಯಾಗಿದ್ದವರು ಸಂದರ್ಭವೊದಗಿದರೆ, ರಣರಂಗದಲ್ಲಿ ಕತ್ತಿ ಹಿಡಿಯುವುದಕ್ಕೂ ಹಿಂಜರಿಯುವವರಾಗಿರಲಿಲ್ಲ. ಇದರಿಂದಾಗಿ ಅಂತಹರು ಲೇಖನಿ ಎತ್ತಿಕೊಂಡರೂ ಕತ್ತಿ ಹಿರಿದಂತೆಯೇ ವೀರರಸದ ಹೊನಲೇ ಪ್ರವಾಹವಾಗಿ ಕೋಡಿ ಹರಿಯುತ್ತಿತ್ತು. ಇದೇ ಮಾದರಿಯ ಕಾವ್ಯಗಳು ನಮಗೆ ಉತ್ತರ ಭಾರತದಲ್ಲಿಯೂ ದೊರೆಯುತ್ತವೆ. ಹಿಂದೀ ಸಾಹಿತ್ಯದಲ್ಲಿ ಇಂತಹ ವೀರರಸದ ಸುಗ್ಗಿಯ ಕಾಲವನ್ನು ವೀರಗಾಥಾಕಾಲವೆಂದು ಹೆಸರಿಸಿದ್ದಾರೆ. ಕನ್ನಡದಲ್ಲಿ ಈ ಮಾದರಿಯ ಕಾಲ ವಿಭಜನೆಯಿಲ್ಲವಾದರೂ ವೀರರಸವು ಪ್ರಧಾನ ಸ್ಥಾನ ಪಡೆದಿತ್ತು. ಆದರೆ, ಕನ್ನಡದ ಆದಿಮ ಕವಿಗಳು ಅಹಿಂಸೆಯನ್ನೇ ನೆಚ್ಚಿದ್ದ ಜೈನ ಸಂಪ್ರದಾಯದವರಾಗಿದ್ದುದರಿಂದ ಕೇವಲ ವೀರರಸ ಮಾತ್ರವೇ ಕಾವ್ಯಾಕಾಶದಲ್ಲಿ ಹರಡಿರಲಿಲ್ಲ; ಅವರು ಶಾಂತ ರಸವನ್ನೂ ಕಾವ್ಯಗಳಲ್ಲಿ ಬಳಸತೊಡಗಿದುದರಿಂದ, ವೀರರಸ ಮಾತ್ರ ಎದ್ದು ತೋರುತ್ತಿರಲಿಲ್ಲ.

ಮುಂದೆ, ಭಾರತದ ರಾಜಕೀಯ ವಾತಾವರಣ ಪರಿವರ್ತನೆಗೊಂಡಿತು. ಭಾರತೀಯ ಅರಸರು ತಮ್ಮ ಶಕ್ತಿಯನ್ನು ಕಳೆದುಕೊಂಡು ಮುಸಲ್ಮಾನ ಅರಸರ ಅಂಕಿತದಲ್ಲಿ ಕಾಲ ದೂಡಬೇಕಾಗಿಬಂದಿತು. ಗತ ಸತ್ವರಾದ ಭಾರತೀಯರ ಮನಸ್ಸು ಈ ಕಾಲದಲ್ಲಿ ಪರಮಾತ್ಮನತ್ತ ಒಲಿಯಿತು. ಹೀಗಾಗಿ ಭಕ್ತಿ ಕಾಲದ ಆರಂಭವಾಯಿತು. ಉತ್ತರ ಭಾರತದ ಸೂರದಾಸ, ನಂದದಾಸ, ಮೀರಾಬಾಯಿಯವರಂತೆಯೇ, ಕನ್ನಡದಲ್ಲಿ ವೀರಶೈವ ವಚನಗಾರ ಭಕ್ತಿ ಭಂಡಾರಿ ಬಸವಣ್ಣನವರಿಂದ ಮೊದಲ್ಗೊಂಡ ಈ ಸಂಪ್ರದಾಯವು ಪುರಂದರ-ಕನಕ ದಾಸರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಹೊಂದಿತು. ಮಾನವನು ಪರಮಾತ್ಮನ ಅನುಮತಿಯಿಲ್ಲದೆ ಎಳ್ಳಷ್ಟೂ ಚಲಿಸಲಾರನು; ಆದುದರಿಂದ, ಆತನ ಇಚ್ಛೆಯೇ ಇಲ್ಲಿ ನಡೆಯುತ್ತದೆ; ಮಾನವರಾದರೋ ಆತನ ಕೈಗೊಂಬೆಗಳು—ಆತನ ಇಂಗಿತದಂತೆ ಕುಣಿಯುತ್ತಾರೆ; ಆದುದರಿಂದ ಪರಮಾತ್ಮನೇ ಸರ್ವೋತ್ತಮ; ಆತನ ಸೇವೆಯೇ ಜೀವನ ಉದ್ದೇಶ—ಎಂಬಿತ್ಯಾದಿಯಾಗಿ ಬೋಧಪ್ರದವಾದ ಕಾವ್ಯಗಳು ನಿರ್ಮಾಣಗೊಳ್ಳತೊಡಗಿದವು. ಈ ಕಾವ್ಯಗಳಲ್ಲಿ ಭಕ್ತಿಯೇ ಪ್ರಧಾನ ಸ್ಥಾನವನ್ನು ಗಳಿಸಿಬಿಟ್ಟಿತು. ನಾರಣಪ್ಪನ ಭಾರತವಾಗಲಿ, ನರಹರಿಯ ರಾಮಾಯಣವೇ ಆಗಲಿ ಅವುಗಳು ವೀರ ಪ್ರಧಾನವೆಂಬಂತೆ ತೋರಿಬಂದರೂ ಭಕ್ತಿಭಾವವನ್ನೇ ಮೂಲೋದ್ದೇಶವಾಗಿಟ್ಟು ಹರಿದು ಬಂದುವುಗಳೆಂದು ನಿರ್ವಿವಾದವಾಗಿ ಹೇಳಬಹುದು.

ಇದಾದನಂತರ ರಾಜಕೀಯ ಅಸ್ಥಿರತೆ ಮತ್ತೂ ಬಲವಾಯಿತು. ಜನತೆಯಲ್ಲಿ ಕಾವ್ಯಗಳತ್ತ ಗಮನಹರಿಸುವ ಬದಲು ಆತ್ಮರಕ್ಷಣೆ—ಜೀವನ ನಿರ್ವಹಣೆಗಳ ಭಾರವೇ ಹೊರೆಯಾಗಿ ಕಂಡಿರಬೇಕು. ರಾಜಕಾರಣದ ಜಂಜಾವಾತದಿಂದ ಕಂಗೆಟ್ಟ ಜನರು ಕಾವ್ಯರಸಾಸ್ವಾದನೆಗೆ ಮನಮಾಡುವುದುಂಟೆ? ಹೀಗಾಗಿ ಕಾವ್ಯಗಳ ಪ್ರಾಬಲ್ಯವು ಇಳಿಮುಖವಾಯಿತು. ಅವುಗಳ ಗುಣಗಳೂ ಕಡಿಮೆಯಾಗ ತೊಡಗಿದುವು. ಸಾಹಿತ್ಯವೃಕ್ಷ ಮೆಲ್ಲ ಮೆಲ್ಲನೆ ಮುರುಟುವ ಸ್ಥಿತಿ ಬಂದೊದಗಿತು. ಆದರೂ ಅಲ್ಲಲ್ಲಿನ ತುಂಡರಸರ ಕಾಲದಲ್ಲಿ ಒಂದೊಂದು ಉತ್ತಮ ರಚನೆಯೇನೋ ಆಯಿತು. ಆದರೂ ಅವು ಆದಿಮ ಕಾವ್ಯಗಳಂತೆ ಮನಚೇತೋಹಾರಿಗಳಾಗುವುದು ಅಸಾಧ್ಯವೆನಿಸಿತು.

ಮುಂದೆ ಆಂಗ್ಲರ ಆಧಿಪತ್ಯವು ಸ್ಥಾಪನೆಯಾದ ತರುವಾಯ ಪುನಃ ರಾಜಕೀಯ ಸ್ಥಿತಿ ಶಾಂತವಾಯಿತು. ಹೀಗಾಗಿ ಮರಳಿ ಸಾಹಿತ್ಯದಲ್ಲಿ ಕಸುವು ತೋರತೊಡಗಿತು. ಈ ಸಮಯದಲ್ಲಿಯೇ ರಾಜಕಾರಣದ ಒತ್ತಡದಿಂದ ಪಾಶ್ಚಾತ್ಯ ಪ್ರಭಾವವು ಭಾರತೀಯರ ಮೇಲೆ ಬೀಳಲು ತೊಡಗಿದ್ದು ಇದಕ್ಕೆ ಸಾಹಿತ್ಯ ಕ್ಷೇತ್ರವೂ ಅಪವಾದವಾಗಿ ಉಳಿಯುವುದು ಸಾಧ್ಯವಾಗಲಿಲ್ಲ. ಇಂಗ್ಲಿಷ್ ಭಾಷೆಯ ಅಧ್ಯಯನವು ಇಲ್ಲಿ ಬೆಳೆಯುತ್ತ ಬಂದಂತೆ ಆ ಭಾಷಾ ಸಾಹಿತ್ಯದ ಹಾಗೂ ಆಧುನಿಕ ರಾಜಕಾರಣದ ಪ್ರತಿಧ್ವನಿ ನಮ್ಮ ಸಾಹಿತ್ಯದೊಳಗೂ ಕೇಳಿ ಬರತೊಡಗಿತು. ರಾಜಕೀಯದಲ್ಲಿ ಬ್ರಿಟಿಷರ ವರ್ತನೆಯ ಒಳಗುಟ್ಟು ಭಾರತೀಯರಿಗೆ ತಿಳಿಯುತ್ತ ಬಂದಾಗ, ಪಾರತಂತ್ರ್ಯಕ್ಕಿಂತ ಸ್ವಾತಂತ್ರ್ಯವೇ ಹಿತಕರವೆಂಬುದರ ಅರಿವು ಮೂಡತೊಡಗಿದಾಗ, ದೇಶಭಕ್ತಿಯ ಧಾರೆ ಹರಿಯತೊಡಗಿದುದನ್ನು ನಾವು ಕಾಣಬಹುದು. ಜನತೆಯಲ್ಲಿ ಸ್ವಾತಂತ್ರ್ಯದ ಬೆಲೆಯನ್ನು ಅರಿತುಕೊಳ್ಳುವ ಸಲುವಾಗಿ ನಮ್ಮ ಎಲ್ಲ ಭಾಷೆಯಲ್ಲೂ ಈ ಮಾದರಿಯ ಸಾಹಿತ್ಯಗಳು ಉದಿಸತೊಡಗಿದುವು. ದೇಶಪ್ರೇಮ, ದೇಶಭಕ್ತಿಗಳೊಡನೆ ಸ್ವಾತಂತ್ರ್ಯದ ಸ್ವರ್ಗಸುಖ, ಭಾರತಮಾತೆಯ ಖಿನ್ನತೆ, ಆಕೆಯ ಕಷ್ಟಕಾರ್ಪಣ್ಯಗಳು, ಅವುಗಳನ್ನು ದೂರೀಕರಿಸುವ ಪ್ರಜೆಗಳ ಪ್ರತಿಜ್ಞೆಗಳೊಡನೆ ಭಾರತದ ಗತವೈಭವಗಳ ನೆನಕೆ, ಬ್ರಿಟಿಷರ ಆಡಳಿತೆಯ ನೊಗದಿಂದ ಆಕೆಗೆ ಬಿಡುಗಡೆಯಾಗಬೇಕಾದ ಆವಶ್ಯಕತೆ—ಇತ್ಯಾದಿಗಳನ್ನೇ ಮುಖ್ಯ ವಿಷಯವಾಗಿಟ್ಟು ಹಲವಾರು ಗೀತೆಗಳೂ ಸಾಹಿತ್ಯ ಕೃತಿಗಳೂ ಹುಟ್ಟಿಕೊಂಡುವು. ಈ ಸಾಹಿತ್ಯದಿಂದ ಪ್ರೇರಿತರಾದ ಜನರು ದೇಶ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುರುಪಿನಿಂದ ದುಡಿದರು.

ಮದ್ಯಪಾನ ನಿರೋಧದ ಪ್ರಚಾರಾರ್ಥವಾಗಿ, ದೇಶದ ಆಡಳಿತೆಯ ನೀತಿಯ ವಿರೋಧವಾಗಿ, ಗೀತ ರೂಪದಲ್ಲಿ ಹಾಡುತ್ತಿರುವುದನ್ನು ನಾವು ಈಗಲೂ ಕೇಳಬಹುದು. ದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಸಮೃದ್ಧ ಭಾರತದ ನಿರ್ಮಾಣಪರವಾದ ಸಾಹಿತ್ಯ ಕೃತಿಗಳು ಅಲ್ಲಲ್ಲಿ ಕಾಣುತ್ತಿವೆ. ಈಗೀಗ ಜನತೆಯಲ್ಲಿ ಶ್ರಮಗಾರರತ್ತ ತೀವ್ರ ಗಮನ ಹರಿಯುವಂತಿದೆ. ಮೊದಮೊದಲು ಶ್ರೇಷ್ಠನಾದ ರಾಜ ಇಲ್ಲವೇ ಆತನ ವಂಶಕ್ಕೆ ಸೇರಿದ ಆದರ್ಶ ಪುರುಷನೇ ಕಥಾ ನಾಯಕನಾಗಿರಬೇಕಾಗಿದ್ದರೂ ಈಗ, ಸಮಾಜದ ಯಾವನೇ ಒಬ್ಬ ವ್ಯಕ್ತಿ ಕುಲ, ಜಾತಿ, ಸ್ಥಿತಿ ಇತ್ಯಾದಿಗಳ ಭೇದವಿಲ್ಲದೆ ಕಥೆಯ ನಾಯಕನಾಗುತ್ತಾನೆ. ಆತನು ಶ್ರೀಮಂತನಿದ್ದು ದುಷ್ಟನಿರಬಹುದು; ದರಿದ್ರನಿದ್ದು ಶಿಷ್ಟನಿರಲೂ ಬಹುದು. ಸಮಾಜದ ನೀತಿಯನ್ನು ಕೆಡಿಸುವ ಲಂಪಟನಾಗಬಹುದು; ಲಂಪಟನಾಗಿದ್ದರೂ ಉನ್ನತಜೀವನ ಬಾಳುವವನಿರಬಹುದು. ಹೀಗೆ, ಹಿಂದೆ ಪುರಾಣಾದಿಗಳ ಕಥಾಭಾಗವೊಂದನ್ನೇ ಆರಿಸಿ, ಹಳೆಯ ಮದ್ದನ್ನೇ ಹೊಸ ಬಾಟಲಿಯಲ್ಲಿ ಈಯುತ್ತಿದ್ದರೆ, ಇಂದು ನಮ್ಮ ಕಾಲದ ಜನರನ್ನೇ ನಮ್ಮ ಮುಂದೆ ಎತ್ತಿ ನಿಲ್ಲಿಸುತ್ತಾರೆ. ಆದರೂ ಎರಡೂ ಕಾಲಗಳಲ್ಲಿ ಆಯಾ ಕಾಲದ ಸಮಾಜ ಜೀವನದ ಪ್ರಭಾವವು ಬೀಳುತ್ತಿತ್ತು. ಆದರೆ, ಈ ಪ್ರಭಾವವು ನಮ್ಮ ಇಂದಿನ ಕಾಲದ ಸಾಹಿತ್ಯದಲ್ಲಿ ಸುಗೋಚರವಾಗುತ್ತದೆ; ಹಿಂದಿನ ಕಾಲದಲ್ಲಿ ಎತ್ತಿ ತೋರುವಂತಿರಲಿಲ್ಲ—ವಿದ್ವಜ್ಜನರು ಮಾತ್ರ ಆ ಪ್ರಭಾವವನ್ನು ಅರಿತುಕೊಳ್ಳಬಹುದಿತ್ತು; ಸಾಮಾನ್ಯರು ಕಥೆ ತಿಳಿದೇ ತೃಪ್ತಿಪಟ್ಟುಕೊಳ್ಳಬೇಕಾಗಿತ್ತು.

—ಗೋರಾ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ಸಮೀಪ್ಪದ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ ಸಿಗುತ್ತವೆ.

ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ನಿನಗೆ ನಗಬೇಕೆಂದು ಎಲ್ಲಾದರೂ ಕಂಡರೆ, ನಿನ್ನ ಮೂರ್ಖತೆಯನ್ನು ಸ್ಮರಿಸಿಕೊಂಡು ಅದಕ್ಕಾಗಿ ನಕ್ಕುಬಿಡು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೩೦-೬-'೬೦	೪೩

ವಿಳಂಬ ಧೋರಣೆಯೇಕೆ?

ಮುಂದಿನ ಜನಾಂಗವನ್ನು ಸಮರ್ಥ ರೀತಿಯಲ್ಲಿ ತರಬೇತಿ ನೀಡುವ ಕರ್ತವ್ಯದ ಹೊಣೆ ಹೊತ್ತಿರುವ ರಾಜ್ಯ ಸರಕಾರದ ವಿದ್ಯಾಂಗ ಇಲಾಖೆಯು ವಿದ್ಯಾಕ್ಷೇತ್ರವೆಂದರೆ ಬಾಲಿಶ ಕ್ರೀಡಾಂಗಣವೆಂಬಂತೆ ಪರಿಗಣಿಸುತ್ತಿರುವ ಕೆಲವೊಂದು ದುರ್ಘಟನೆಗಳು ಇತ್ತೀಚೆಗೆ ಮೈಸೂರು ಸರಕಾರದ ಆಡಳಿತೆಯಲ್ಲಿ ಸರ್ವಸಾಮಾನ್ಯವೆಂಬಂತೆ ನಡೆಯುತ್ತಿವೆ. ಮುಖ್ಯವಾಗಿ ಎಳೆಯ ಮಕ್ಕಳಲ್ಲಿ ದಕ್ಷತೆ ಮತ್ತು ಶಿಸ್ತುಗಳ ಬೀಜವನ್ನು ಬಿತ್ತಿ ಅವರು ಬೆಳೆದು ದೊಡ್ಡವರಾಗುವಾಗ ಸಮರ್ಥ ಪ್ರಜೆಗಳಾಗಿ ರೂಪಾಂತರಗೊಳ್ಳುವಂತೆ ದುಡಿಯಬೇಕಾದ ಈ ವಿದ್ಯಾಂಗವು ತನ್ನ ಅಶಕ್ತತೆ, ಅಸಮರ್ಪಕತೆಗಳ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಜಿಗುಪ್ಸಾಭಾವನೆಯನ್ನು ಪರ್ಯಾಯವಾಗಿ ಬೆಳೆಸುವಂತಿದೆ. ಸರಕಾರದ ಈ ತೆರದ ನಿಷ್ಕ್ರಿಯತನವು ಪವಿತ್ರವಾಗಿರಬೇಕಾದ ವಿದ್ಯಾಕ್ಷೇತ್ರದಲ್ಲಿ ಅವಾಂಛನೀಯ ಧೂಳನ್ನೆಬ್ಬಿಸಿ, ಕಿರಿಯರ ಕ್ರೀಡಾಂಗಣದ ಕೇಳಿಯ ಚಿತ್ರವನ್ನು ಬೇಡವೆಂದರೂ ನಮ್ಮ ಮನಃಪಟಲದಲ್ಲಿ ಪ್ರತಿಬಿಂಬಿಸುತ್ತಿದೆ.

ಪ್ರಾಥಮಿಕ ಶಾಲೆಗಳು ಮೇ ೨೩ರಂದೇ ತೆರೆದಿದ್ದರೂ ೩ ಮತ್ತು ೪ನೆಯ ತರಗತಿಗಳ ಹೊಸಕನ್ನಡ ಪಠ್ಯಪುಸ್ತಕಗಳು ಸಕಾಲದಲ್ಲಿ ಮಕ್ಕಳ ಕೈಗೆ ಸೇರಲಿಲ್ಲ. ಪುಸ್ತಕವು ಸರಕಾರಿ ಪ್ರಕಟಣೆಯಾದುದರಿಂದಲೋ ಏನೋ, ಸರಕಾರದ ಮಂದಗಮನವೇ ಈ ಪಠ್ಯ ಪುಸ್ತಕಗಳಿಗೂ ಬಂದಿರಬೇಕು. ಈ ತೆರನ ಅನನುಕೂಲತೆಯು ಕಳೆದ ವರ್ಷ ೧ ಮತ್ತು ೨ನೆ ವರ್ಗಗಳ ಕನ್ನಡ ಪಠ್ಯಗಳು ಕೈಸೇರುವಾಗ ನಡೆದಿದ್ದು ಅದರಿಂದ ಆಗುವ ಅನರ್ಥಗಳನ್ನು ಪ್ರತ್ಯಕ್ಷ ಅನುಭವಿಸಿದ್ದರೂ, ಸಕಾಲದಲ್ಲಿ ಪುಸ್ತಕಗಳನ್ನು ಒದಗಿಸಲಾಗುವುದೆಂಬ ಉದ್ಗಾರ,ಹೇಳಿಕೆಗಳು ಅಧಿಕಾರಿ ವರ್ಗದಿಂದ ಬಂದಿದ್ದರೂ ಈ ವರ್ಷ ಮರಳಿ ಅದೇ ದುಃಸ್ಥಿತಿಯು ಪುನರಾವರ್ತನೆಗೊಂಡುದು ಶೋಚನೀಯವೇ ಸರಿ. ಪುಸ್ತಕಗಳು ಮಾರುಕಟ್ಟೆಗೆ ಬರುವವರೆಗೆ ಅಧ್ಯಾಪಕರಾದರೂ ಮಾಡಬೇಕೇನು? ವಿದ್ಯಾರ್ಥಿ-ರಕ್ಷಕರಲ್ಲಿ ಈ ಪ್ರಾಮಾದರಿಯ ಅಶಕ್ತತೆಯ ಬಗ್ಗೆ ತಿರಸ್ಕಾರ ಭಾವನೆ ಹುಟ್ಟಿದರೂ ಅದು ಅಸಹಜವೆಂದು ಹೇಳುವಂತಿಲ್ಲ. ಹಳೆಯ ಎಂಟನೆ ತರಗತಿಯ ಪಠ್ಯ ಪುಸ್ತಕಗಳು ಯಾವುವೆಂದು ನಿಶ್ಚಯ ಮಾಡುವಲ್ಲಿಯೂ ಇದೇ ಮಾದರಿಯ ವಿಳಂಬ ನಡೆಯುತಿದ್ದು, ಇದರಿಂದ ಕೆಲವೊಮ್ಮೆ ನಿಯತ ಸಮಯದಲ್ಲಿ ನಿಯಮಿತ ಪಾಠಗಳನ್ನು ಮಾಡಿ ಪೂರಯಿಸುವುದೂ ಅಧ್ಯಾಪಕರಿಗೆ ಕಷ್ಟಪ್ರದವಾಗಿ ತೋರುತ್ತದೆ. ಮುಂದಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗುವುದಕ್ಕೆ ಸಾಕಷ್ಟು ಪೂರ್ವಭಾವಿಯಾಗಿಯೇ ಪುಸ್ತಕಗಳನ್ನು ನಿಯತಗೊಳಿಸುವುದು ಮತ್ತು ಅವುಗಳನ್ನು ಮಾರುಕಟ್ಟೆಗೆ ಸಕಾಲದಲ್ಲಿ ಒದಗಿಸುವ ವ್ಯವಸ್ಥೆ ಮಾಡುವತ್ತ ತೀವ್ರ ಗಮನ ಹರಿಸಿದರೆ, ಇದರಿಂದ ವಿದ್ಯಾರ್ಥಿಗಳಿಗೆ ಲಾಭವಾಗುವುದು; ಅಧ್ಯಾಪಕ—ಹೆತ್ತವರಿಗೆ ಸಮಾಧಾನವೆನಿಸುವುದು.

ಇದೇ ಮಾದರಿಯ ವಿಳಂಬಗಳು ಪರೀಕ್ಷಾ ಪರಿಣಾಮಗಳನ್ನು ಸಾರುವಾಗ ಮತ್ತು ಉತ್ತೀರ್ಣರಾದವರಿಗೆ ಪ್ರಮಾಣ ಪತ್ರವನ್ನು ಕೊಡುವಾಗಲೂ ನಡೆಯುತ್ತಿರುವುದು ಸಂಪ್ರದಾಯವೆಂಬಂತೆ ನಡೆದು ಬಂದಿದೆ. ಸರ್ಟಿಫಿಕೇಟುಗಳಲ್ಲಿ ಗಳಿಸಿದ ಅಂಕಗಳನ್ನು ನಮೂದಿಸುವಾಗ ಅಲಕ್ಷ್ಯದಿಂದ ಸಾಕಷ್ಟು ತಪ್ಪುಗಳು ನಡೆದ ಸಂದರ್ಭಗಳು ವರದಿಯಾಗಿವೆ. ಪರಿಣಾಮ ಸಾರಿದರೂ ಸರ್ಟಿಫಿಕೇಟು ಕಳಿಸುವಾಗ ವಿಪರೀತ ತಡವಾಗುತ್ತಿರುವುದರಿಂದ, ವಿದ್ಯಾಭ್ಯಾಸವನ್ನು ಮುಂದುವರಿಸುವ ವಿದ್ಯಾರ್ಥಿಗಳಿಗೆ ಕರ್ತರೀಕ್ರಮುಖ ಸ್ಥಿತಿಯನ್ನು ತಂದೊದಗಿಸುತ್ತದೆ. ಹೈಸ್ಕೂಲುಗಳು ಜೂನ್ ೧ಕ್ಕೆ ಕ್ರಮಪ್ರಕಾರ ತೆರೆಯಲ್ಪಟ್ಟರೂ ೮ನೆ ತರಗತಿಯ ಪ್ರಮಾಣಪತ್ರಗಳು ಇದುವರೆಗೂ ಹಸ್ತಗತವಾಗಿಲ್ಲ; ಅದಿಲ್ಲದೆ, ವಿದ್ಯಾಭ್ಯಾಸ ಮುಂದುವರಿಸುವ ವಿದ್ಯಾರ್ಥಿಪಾಲಕರ ಇಚ್ಛೆಯು ನೀರ ಮೇಲಣ ಗುಳ್ಳೆಯಂತಾಗುವುದು. ಕಳೆದ ವರ್ಷ ನಾಲ್ಕನೆ ಫಾರಂಗೆ ೮ನೆ ತರಗತಿ ತೇರ್ಗಡೆ ಹೊಂದಿ ಸೇರ್ಪಡೆಯಾದವರು ಮೂರು ತಿಂಗಳ ಪಾಠವನ್ನು ಕಳೆದುಕೊಂಡಿದ್ದುದರಿಂದ, ಅನುತ್ತೀರ್ಣರಾದವರೂ ಧಾರಾಳವಾಗಿದ್ದಾರೆ. ಬಂದ ಸರ್ಟಿಫಿಕೇಟುಗಳಲ್ಲಿಯಾದರೂ ಅಂಕಗಳನ್ನು ತಪ್ಪಾಗಿ ಅಂಕಿಸುತ್ತಿರುವ ಗಡಿಬಿಡಿಯನ್ನು ನಾವು ಗಮನಿಸುವುದಾದರೆ, ವಿದ್ಯಾಂಗ ಶಾಖೆಯ ಕಾರ್ಯಕಲಾಪಗಳಲ್ಲಿ ಜಾಣಾಕ್ಷತೆಯಿಷ್ಟಿದೆಯೆಂದು ತಿಳಿಯುತ್ತದೆ. ಸರ್ಟಿಫಿಕೇಟುಗಳು ಸಕಾಲದಲ್ಲಿ ದೊರೆಯದಿರುವುದರಿಂದ, ವಿದ್ಯಾಭ್ಯಾಸವನ್ನು ಮುಂದುವರಿಸಲೆಳಸುವ ಅಭ್ಯರ್ಥಿಗಳಿಗೆ ತುಂಬ ತೊಡಕುಂಟಾಗುತ್ತಿರುವುದು ಅನುಭವವೇದ್ಯ. ತಿದ್ದುಪಡಿಗಾಗಿ ಮರಳಿಸಲ್ಪಟ್ಟವುಗಳಾದರೂ ಕ್ಲಪ್ತ ಸಮಯದಲ್ಲಿ ಬಾರದಿರುವುದರಿಂದ ಇನ್ನೂ ಕಷ್ಟವಾಗಿ ಪರಿಣಮಿಸಿದೆ. ಈ ರೀತಿ ಪರಿಪೂರ್ಣ ವ್ಯವಸ್ಥಿತ ರೀತಿಯಲ್ಲಿ ನಡೆದು ಮಾರ್ಗದರ್ಶನ ಮಾಡಬೇಕಾದ ಒಂದು ಶಾಖೆಯ ಅಸಮರ್ಪಕತೆಯಿಂದಾಗಿ ಜನತೆಯಲ್ಲಿ ವಿದ್ಯಾಂಗದ ಕುರಿತಾದ ಜುಗುಪ್ಸಾಭಾವನೆಯೊಂದು ತಲೆದೋರಿದೆ. ಇದೇ ಭಾವನೆಯು ವಿದ್ಯಾರ್ಥಿಗಳ ಮೇಲೆಯೂ ಸೂಕ್ತ ಪ್ರಭಾವವನ್ನು ಬೀರುವುದು ಖಂಡಿತವೇ. ಶಾಲೆಗಳ ಅಧ್ಯಾಪಕರಿಗಂತೂ ವಿದ್ಯಾಶಾಖೆಯ ಧೋರಣೆ ಮತ್ತು ನಡವಳಿಕೆಗಳ ಬಗ್ಗೆ ಯಾವುದೇ ವಿಶ್ವಾಸವಿಡುವುದು ಸಾಧ್ಯವಿಲ್ಲವೆಂಬಂತಾಗಿದೆ. ಎಂದರೆ, ವಿದ್ಯಾಶಾಖೆಯಲ್ಲಿ ಕ್ಲಪ್ತತೆ ಮತ್ತು ಸಮರ್ಪಕತೆ ಎಂಬುದು ಬಹು ದೂರದ ಮಾತಾಗಿದೆ. ಇದೇ ಮಾದರಿಯು ಮುನ್ನಡೆದರೆ ರಾಜ್ಯದ ವಿದ್ಯಾಕ್ಷೇತ್ರವು ಖಂಡಿತಕ್ಕೂ ಕೆಟ್ಟು ಹೋಗುವುದು. ಜನತೆಗೆ ಸತ್ಯ ಮಾರ್ಗದರ್ಶನ ಮಾಡಬೇಕಾದ ಈ ಕ್ಷೇತ್ರದಲ್ಲಿ ಕೊಳಚೆ ತುಂಬಿ ಹರಿದು, ವಿಭಾಗವು ಪೂರಾ ಕೆಟ್ಟು ಹೋಗುವುದು. ಆದುದರಿಂದ, ಸರಕಾರದ ಸಂಬಂಧಿತ ಅಧಿಕಾರಿಗಳು ಈ ರೀತಿಯಲ್ಲಿ ಮಕ್ಕಳನ್ನೂ ಅವರ ಹೆತ್ತವರನ್ನೂ ಅಧ್ಯಾಪಕರನ್ನೂ ಗೋಳುಹೊಯ್ಯುವ ಉಪಕ್ರಮವನ್ನು ಬಿಟ್ಟುಕೊಟ್ಟು ಸಮರ್ಪಕ ಸೇವೆಯನ್ನು ಸಕಾಲದಲ್ಲಿ ಒದಗಿಸುವ ಧೋರಣೆಯನ್ನು ಅವಶ್ಯ ಅನುಸರಿಸಲಿ.

ಕಿಶಿ ಅಶಾಂತರೆ?

ದೇಶದಲ್ಲಿ ದೊಂಬಿ ಗಲಭೆಗಳು ಬಹುಕಾಲದಿಂದ ನಡೆದು ಬಂದಿದ್ದರೂ, ತನ್ನ ಧೋರಣೆಯನ್ನು ದೇಶದ ಪ್ರಜೆಗಳು ಒಂದು ಗುಂಪು ಪ್ರಬಲವಾಗಿ ವಿರೋಧಿಸಿದರೂ ಕೊನೆಯ ಗಳಿಗೆಯವರೆಗೂ ಧೈರ್ಯದಿಂದ ಮುನ್ನಡೆದ ಜಪಾನದ ಮುತ್ಸದ್ದಿ ಶ್ರೀ ನುಬುಸಿಕೇ ಕಿಶಿಯವರು ಅಂತಿಮ ಘಳಿಗೆಯಲ್ಲಿ ಜಪಾನ—ಅಮೆರಿಕಾ ಸಂರಕ್ಷಣೆಯ ಒಡಂಬಡಿಕೆಯನ್ನು ಮಂಜೂರುಮಾಡಿಸಿಯೇ ಬಿಟ್ಟರು. ಈ ಮಂಜೂರಾತಿಗೆ ಅವರು ಅನುಸರಿಸಿದ ವಿಧಾನ ಯಾವುದು, ಅದು ಸರಿಯೇ, ಅಲ್ಲವೇ ಎಂಬ ಪ್ರಶ್ನೆಗಳು ಅವಾಂಛನೀಯ. ಅಂತೂ ಒಡಂಬಡಿಕೆಯ ಗೊತ್ತುವಳಿ ಮಂಜೂರಾಯಿತು. ಅದರ ಬೆನ್ನಲ್ಲೇ ಶ್ರೀ ಕಿಶಿಯವರು ತಮ್ಮ ಪ್ರಧಾನಿಪದವಿಗೆ ರಾಜಿನಾಮೆಯೊಯುವರೆಂಬವಾರ್ತೆಯು ಹರಡಿತು. ಈ ವಾರ್ತೆಯು ಅಷ್ಟೊಂದು ಅನಿರೀಕ್ಷಿತವಾಗಿರಲಿಲ್ಲವಾದರೂ ಜಪಾನದ ಮುಂದಿನ ಸ್ಥಿತ್ಯಂತರಗಳಿಗೂ ಇದಕ್ಕೂ ನಿಕಟ ಸಂಬಂಧವಿರುವುದರಿಂದ, ತುಸು ವಿವಂಚನೀಯವೆನಿಸಿದೆ. ಮುಂದಿನ ಪ್ರಧಾನಿ ಯಾರೇ ಆಗಲಿ, ಅವನನ್ನು ಆರಿಸುವುದಕ್ಕೆ ಕೆಲ ದಿನಗಳು ಕಳೆಯುತ್ತವೆ. ಆದರೆ, ಕಿಶಿಯವರ ರಾಜಿನಾಮೆಯಿಂದಾಗಿ ಮಂಜೂರಾದ ಸಂರಕ್ಷಣಾ ಒಡಂಬಡಿಕೆಯನ್ನು ಕಾರ್ಯಕೃತಗೊಳಿಸುವುದರಲ್ಲಿ ಕೆಲವೊಂದು ತಾಂತ್ರಿಕ ಅಡೆತಡೆಗಳು ಕಾಣಿಸಿಕೊಂಡಿವೆಯೆಂಬುದು ಕಿಂವದಂತಿ, ಹೀಗಾದರೆ, ಪಾಪ, 'ಪರ್ವತ ಪ್ರಸವ'ದಿಂದ ಮಂಜೂರಾದ ಈ ಸಂಧಿಯು ಕೇವಲ ಕಾಗದ ಪತ್ರಗಳಲ್ಲಿಯೇ ತತ್ಕಾಲ ಉಳಿಯುವಂತಾಯಿತಲ್ಲಾ ಎಂದು ಶ್ರೀ ಕಿಶಿಯವರು ಸದ್ಯ ವಿಚಿಂತೆಯಿಂದ ಅಶಾಂತರಾಗಿರಬಹುದೆ?

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿ ಲಯನ್ಸ್ ಕ್ಲಬ್ಬಿನ ಸನದು ಸಮರ್ಪಣಾ ಸಮಾರಂಭ—ಉಡುಪಿ ಲಯನ್ಸ್ ಕ್ಲಬ್ಬಿನ ಚಾರ್ಟರ್ ಸಮರ್ಪಣಾ ಸಮಾರಂಭವು ಇದೇ ತಾ. 25ನೇ ರಾತ್ರಿ ಉಡುಪಿ ಲಾ ಕಾಲೇಜಿನಲ್ಲಿ ಡಿಸ್ಟ್ರಿಕ್ಟ್ ಕೆಬಿನೆಟ್ ಸೆಕ್ರೆಟರಿ ಲಯನ್ ಎರಿಕ್ ಸಿ ಗ್ನಾನರ್ ಇವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಲಯನ್ ಕು. ಶಿ. ಹರಿದಾಸ ಭಟ್ಟರು ಪ್ರಾರ್ಥನೆಮಾಡಿದ ಬಳಿಕ ಲಯನ್ ಪ್ರೆಸಿಡೆಂಟ್ ಟಿ. ಎ. ಪೈಗಳು ಸ್ವಾಗತ ಭಾಷಣಮಾಡಿ ಕ್ಲಬ್ಬಿನ ಮುಖ್ಯ ಉದ್ದೇಶಗಳೇನೆಂಬುದನ್ನು ವಿವರಿಸಿದರು. ಲಯನ್ ಸೆಕ್ರೆಟರಿ ಬಿ. ಜಿ. ಹೆಗ್ಡೆಯವರು ಶುಭ ಸಂದೇಶಗಳನ್ನು ಓದಿದರು. ಡಿಸ್ಟ್ರಿಕ್ಟ್ ಕೆಬಿನೇಟಿನ ಸೆಕ್ರೆಟರಿ ಲಯನ್ ಎರಿಕ್ ಸಿ ಗ್ನಾನರ್ ಅವರು ಉಡುಪಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳಿಗೆ ಸನದನ್ನು ಸಮರ್ಪಿಸುತ್ತ ಸೇವೆಯೇ ನಮ್ಮ ಧ್ಯೇಯ ಎಂಬುದು ಲಯನ್ಸ್ ಕ್ಲಬ್ಬಿನ ಪ್ರಮುಖ ಧೋರಣೆ. ಇಲ್ಲಿ ಹೆಚ್ಚಿನ ಸೇವೆ ನಡೆಯಲೆಂದರು. ಉಡುಪಿ ಡಿ. ಮುನ್ಸಿಫರೂ ಲಯನ್ಸ್ ಕ್ಲಬ್ಬಿನ ಉಪಾಧ್ಯಕ್ಷರೂ ಆದ ಲಯನ್ ಜಿ. ಎಸ್. ನಾಗಮೋತಿಯವರು ಅಂತಾರಾಷ್ಟ್ರೀಯ ಲಯನ್ಸ್ ಕ್ಲಬ್ಬುಗಳಿಗೆ ಸ್ವಸ್ತಿವಾಚನ ಗೈದು ಉಡುಪಿಯಲ್ಲಿ ಈ ಕ್ಲಬ್ಬು ಈಗಾಗಲೇ ಸೇವಾತತ್ಪರವಾಗಿದೆ ಎಂದರು. [illegible] ನಾಯಕ್ ಬೇಂಕಿನ ಜನರಲ್ ಮೆನೇಜರರೂ ಕ್ಲಬ್ಬಿನ ಎರಡನೇ ಉಪಾಧ್ಯಕ್ಷರೂ ಆದ ಲಯನ್ ಕೆ. ಯಸ್. ಕಾಮತರು ಕ್ಲಬ್ಬಿನ ಅಸ್ತಿತ್ವಕ್ಕಾಗಿ ಶುಭಾಕಾಂಕ್ಷೆ ಮಾಡಿ, ಇದರ ಮೂಲಕ ಜನಸೇವೆಯಾಗಲೆಂದರು. ಈ ಕ್ಲಬ್ಬು ಸ್ಥಾಪನೆಗೆ ಮುಖ್ಯ ಕಾರಣರಾದ ಬೆಂಗಳೂರು ಲಯನ್ಸ್ ಕ್ಲಬ್ಬಿನ ಲಯನ್ ಪ್ರೆಸಿಡೆಂಟ್ ಪುರುಷೋತ್ತಮ ಸಿಂಗ್ ಬಜಾಜ್ ಇವರು ಮಾತನಾಡುತ್ತ ಭಾರತದ ದೀನ ದರಿದ್ರರ ಸೇವೆಗಾಗಿ ಇನ್ನಷ್ಟು ಕ್ಲಬ್ಬುಗಳು ಸ್ಥಾಪಿಸಲ್ಪಡಲೆಂದು ಹೇಳಿ ಬೆಂಗಳೂರು ಕ್ಲಬ್ಬು ಸಾಧಿಸಿರುವ ಕಾರ್ಯಕಲಾಪಗಳನ್ನು ನಿವೇದಿಸಿದರು. ಲಯನ್ ಎನ್. ವಿ. ಕಾಮತರು ಅತಿಥಿ ಅಭ್ಯಾಗತರಿಗೆ ಧನ್ಯವಾದಗಳನ್ನರ್ಪಿಸಿ ಕ್ಲಬ್ಬು ಸಾಧಿಸಲಿರುವ ಸಾರ್ವಜನಿಕ ಕೆಲಸಗಳ ಕುರಿತು ಮಾತನಾಡಿದರು. ವಕೀಲ್ ಬಿ. ಶೀನಪ್ಪ ಹೆಗ್ಡೆಯವರೂ ಮಂಗಳೂರು ಲಯನ್ಸ್ ಕ್ಲಬ್ಬಿನ ಲಯನ್ ಪ್ರೆಸಿಡೆಂಟ್ ಕೆ. ಎಸ್. ಯನ್. ಅಡಿಗರೂ ಉಡುಪಿ ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ. ಟಿ. ಎಂ. ಎ. ಪೈಗಳೂ ಸಂದರ್ಭೋಚಿತ ಭಾಷಣ ಮಾಡಿ ಈ ಹೊಸ ಕ್ಲಬ್ಬು ಯಶಸ್ವಿಯಾಗಲೆಂದರು. ಲಯನ್ ಸೆಕ್ರೆಟರಿ ಬಿ. ಜಿ. ಹೆಗ್ಡೆಯವರು ಕೃತಜ್ಞತೆಗಳನ್ನರ್ಪಿಸಿದರು. ಕೊನೆಗೆ ಇತ್ತೀಚೆಗೆ ವಿವಾಹವಾಗಿದ್ದ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ಏರ್ಪಡಿಸಿದ್ದ ಭೋಜನ ಕೂಟ ಜರಗಿತು.

ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕೋಲೇಜಿನ ಹಾಸ್ಟೆಲಿನ ಸಿಂಧಿ ವಿದ್ಯಾರ್ಥಿಗಳ ವಿಭಾಗಕ್ಕಾಗಿ ಶ್ರೀ ಪುರುಷೋತ್ತಮ ಸಿಂಗ್ ಬಜಾಜರು 12 ಸಾವಿರ ರೂಪಾಯಿ ದೇಣಿಗೆ ಕೊಟ್ಟಿರುವರೆಂದು ತಿಳಿದು ಬರುತ್ತದೆ.

ವಿಪುಲ ಪ್ರಾಕೃತಿಕ ಸಂಪತ್ತನ್ನು ಸದುಪಯೋಗಿಸೋಣ— ಇದೇ ತಾ. 21ರಂದು ಉಡುಪಿ ರೋಟರೀ ಕ್ಲಬ್ಬಿನ ಸಭೆಯು ಮಣಿಪಾಲದಲ್ಲಿ ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಮೈಸೂರು ಇಲೆಕ್ಟ್ರಿಸಿಟಿ ಬೋರ್ಡಿನ ಸದಸ್ಯ ಶ್ರೀ ಟಿ. ಎ. ಪೈಗಳು ಭಾಷಣಮಾಡುತ್ತ ರಾಜ್ಯದಲ್ಲಿ ಅಧಿಕವಾಗಿ ಪ್ರಕೃತಿದತ್ತ ಸಂಪತ್ತಿದೆ. ನಮ್ಮ ಕವಿವರ್ಯರು ಹೃದಯಂಗಮವಾಗಿ ವರ್ಣಿಸಿದ ಅವ್ಯಕ್ತ ಸಂಪತ್ತನ್ನು ನಾವು ಸದುಪಯೋಗಮಾಡಿಕೊಂಡಲ್ಲಿ ನಾವು ದೀನ ದರಿದ್ರರಾಗಿ ಉಳಿಯಬೇಕಾಗಿಲ್ಲ. ಈ ಪ್ರಾಕೃತಿಕ ಸಂಪತ್ತನ್ನು ಜನಜೀವನಕ್ಕಾಗಿ ಉಪಯೋಗಿಸಿಕೊಳ್ಳಲು ಈಗ ಮಾಡುತ್ತಿರುವ ಪ್ರಯತ್ನ ಏನೇನೂ ಸಾಲದಾಗಿದೆ. ರಾಜ್ಯದ ಕಾಮಗಾರಿ ಮಂತ್ರಿ ಶ್ರೀ ಚೆನ್ನಬಸಪ್ಪನವರು ಇದನ್ನು ಮನವರಿತು ಶರಾವತಿ ಮೊದಲಾದ ಯೋಜನೆಗಳ ಪರಿಪೂರ್ಣತೆಗಾಗಿ ಶ್ರಮಿಸುತ್ತಿರುವುದು ಭಾವೀ ಉನ್ನತಿಯ ಮುನ್ಸೂಚನೆಯೆಂದರು. ಇಲೆಕ್ಟ್ರಿಸಿಟಿ ಬೋರ್ಡಿನ ಬೇರೆ ಬೇರೆ ಯೋಜನೆಗಳನ್ನು ವಿವರಿಸಿ ಆದ ಪ್ರಗತಿಯನ್ನೂ ನಮ್ಮ ಜಿಲ್ಲೆಯ ನಿರುದ್ಯೋಗ ನಿವಾರಣೆಗೆ ಕೈಗಾರಿಕೋನ್ನತಿ ಅತ್ಯಾವಶ್ಯಕವೆಂದೂ ಹೇಳಿದರು. ಅಧ್ಯಕ್ಷ ಡಾ. ಪೈಗಳು ಭಾಷಣಕರ್ತರ ಅಭಿಪ್ರಾಯಗಳನ್ನು ಸಮರ್ಥಿಸಿ ಮಾತನಾಡಿದರು. ಶ್ರೀ ಯು. ಎನ್. ಕಾಮತರು ಆಭಾರ ಮನ್ನಿಸಿದರು.

ಯುವಕ ಕಾಂಗ್ರೆಸ್—ಮಂಗಳೂರು ಯುವಕ ಕಾಂಗ್ರೆಸಿನ ಸಾಪ್ತಾಹಿಕ ಕಾರ್ಯಕ್ರಮವು ತಾ. 19ರಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಶ್ರೀ ಕೆ. ಆರ್. ಆಚಾರ್, ಎಂ. ಪಿ.ಯವರು ಕೆಲವು ಸಲಹೆಗಳನ್ನಿತ್ತರು.

ರೆ|ಫಾ| ಜೆ. ಸಿಕ್ವೇರ ಅವರ ನಿಧನ
ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ರೆ| ಫಾ. ಜೆ. ಸಿಕ್ವೇರರವರು ಇದೇ ತಾ. 21ರಂದು ಹೃದಯ ಸ್ತಂಭನದಿಂದ ನಿಧನರಾದರೆಂದು ತಿಳಿದು ಬರುತ್ತದೆ. ಇವರು ಕಾಲೇಜಿಗೆ 32 ವರ್ಷಗಳ ಸೇವೆ ಸಲ್ಲಿಸಿರುತ್ತಾರೆ.

ಬಂಟರನ್ನು ಹಿಂದುಳಿದವರೆಂಬುದಾಗಿ ಪರಿಗಣಿಸಬೇಕು.— ದ. ಕ. ಜಿಲ್ಲೆಯ ಬಂಟರ ಯೂನೆ ನಾಡವರ ಸಂಘದ ಶಿಷ್ಟ ಮಂಡಳಿಯೊಂದು ತಾ. 23ರಂದು ಬೆಂಗಳೂರಲ್ಲಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರನ್ನು ಕಂಡು ತಾಂತ್ರಿಕ ಮತ್ತು ವೃತ್ತಿಪರ ಸಂಸ್ಥೆಗಳಿಗೆ ಪ್ರವೇಶ ನೀಡುವರೆಯೂ ಸರಕಾರಿ ಕೆಲಸಕ್ಕೆ ನೇಮಕಗೊಳಿಸುವರೆಯೂ ಬಂಟ ಸಮಾಜವನ್ನು ಹಿಂದುಳಿದವರೆಂದು ಪರಿಗಣಿಸಬೇಕೆಂಬುದಾಗಿ ಭಿನ್ನವತ್ತಳೆಯೊಂದನ್ನು ಒಪ್ಪಿಸಿದರು. ಈ ಶಿಷ್ಟ ಮಂಡಳಿಯಲ್ಲಿ ಶ್ರೀಗಳಾದ ಬಿ. ಎಸ್. ಭಾಸ್ಕರ ರೈ, ಎಂ. ಎಸ್. ಚೌಟ, ಬಿ. ಬಿ. ಶೆಟ್ಟಿ, ಎಂ. ಗೋಪಾಲ ಕೃಷ್ಣ ಶೆಟ್ಟಿ ಹಾಗೂ ಡಾ. ಪಿ. ಎಸ್. ಶೆಟ್ಟಿ ಇವರು ಇದ್ದರು.

ತೆಲ್ಲೂರು—ಸ್ಥಳೀಯ ವಿವಿಧೋದ್ದೇಶ ಸಹಕಾರಿ ಸಂಘದ ಮಹಾಸಭೆಯು ತಾ. 24—6—60ರಲ್ಲು ಶ್ರೀ ಹ. ರಾಮಚಂದ್ರ ಪ್ರಭುರವರ ಅಧ್ಯಕ್ಷತೆಯಲ್ಲಿ, ಸಹಕಾರಿ ಸಂಚರ್ಶನಾಧಿಕಾರಿ ಶ್ರೀ ಬಾಲಕೃಷ್ಣ ಶೆಟ್ಟಿ ಇವರ ಸಮಕ್ಷಮದಲ್ಲಿ ನಡೆಯಿತು. ಸಂಘದ ಉಪನಿಬಂದನೆಗಳ ಸ್ವೀಕಾರ, 1958—59ನೇ ವರ್ಷದ ಆಡಿಟ್ ರಿಪೋರ್ಟಿನ ಮಂಜೂರಾತಿ ಆದ ಮೇಲೆ ಶ್ರೀ ಶೆಟ್ಟರು ಸಹಕಾರಿ ಚಳವಳದಲ್ಲಿ ಸರಕಾರವು ವಹಿಸಿರುವ ಪಾತ್ರವನ್ನು ವಿವರಿಸಿದರು.

ಸುರತ್ಕಲ್ — ಮುಕ್ಕ ಮಿತ್ರಪಟ್ಟಣ ಗಂಗಯ ಸ್ಮಾರಕ ಫಂಡಿನವರು ನಡೆಸಿಕೊಂಡು ಬರುವ ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ವಾಚನಾಲಯ ಮತ್ತು ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆಗಳು ಮುಕ್ಕದಿಂದ ಈ ಮೊದಲಿದ್ದ ಸುರತ್ಕಲ್ ಅಗ್ನಿದಳರ ಹಾ. ಎ. ಶಾಲೆಗೆ ಇದೇ ತಿಂಗಳ ಆದಿಯಿಂದ ಸ್ಥಳಾಂತರಿಸಲ್ಪಟ್ಟಿವೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಈ ಫಂಡಿನ ಕಾರ್ಯದರ್ಶಿಗಳೂ ಸುರತ್ಕಲ್ಲಿನ ಗಣ್ಯವ್ಯಕ್ತಿಗಳಲ್ಲೊಬ್ಬರೂ ಆದ ಶ್ರೀಯು. ಲಕ್ಷ್ಮಣ ಗುರಿಕಾರರ 50ನೇ ಹುಟ್ಟುಹಬ್ಬವು ಭಜನೆ ಭಾಷಣಾದಿ ಕಾರ್ಯಕ್ರಮಗಳಿಂದ ತಾ. 19ರಂದು ನೆರವೇರಿತು.

ಬ್ರಹ್ಮಾವರ—ಸ್ಥಳೀಯ ಎಸ್. ಎಂ. ಎಸ್. ಹೈಸ್ಕೂಲಿನ ಶಾಲಾ ಮುಖಂಡ ಚುನಾವಣೆಯು ತಾ. 20ರಂದು ಜರಗಿ ಶ್ರೀ ಜಗಜ್ಜೀವನದಾಸ್ ಶೆಟ್ಟರು ಬಹುಮತದಿಂದ ಆರಿಸಲ್ಪಟ್ಟಿದ್ದಾರೆ.

ದೆಂದೂರು ಪಮ್ಮಯ್ಯ ಶೆಟ್ಟರ ನಿಧನ— ಮಣಿಪುರ ಗ್ರಾಮದ ದೆಂದೂರು ಪಮ್ಮಯ್ಯ ಶೆಟ್ಟರು ತಾ. 22ರಂದು ತಮ್ಮ 80ನೇ ವಯಸ್ಸಿನಲ್ಲಿ ಹೃದಯಸ್ತಂಭನದಿಂದ ನಿಧನರಾದರು. ದಿವಂಗತರು ಪಂಚಾಯತ್ದಾರರೂ, ಜನೋಪಕಾರಿಗಳೂ, ಧರ್ಮಿಷ್ಠರೂ ಆಗಿದ್ದರಲ್ಲದೆ ಆಳಿಯ ಸಂತಾನದ ಆದರ್ಶ ಯಜಮಾನರಾಗಿದ್ದರು. ಇವರ ಸ್ಮಶಾನ ಯಾತ್ರೆಯ ಕಾಲದಲ್ಲಿ ಸುಮಾರು 500ರಕ್ಕೂ ಮಿಕ್ಕಿ ಜನಸೇರಿ ಕೊನೆಯ ಶ್ರದ್ಧಾಂಜಲಿಯನ್ನರ್ಪಿಸಿದರು.

ಗೀತೆಯ ಕುರಿತು ಭಾಷಣ—ದಿಲ್ಲಿಯ ಶ್ರೀ ರಾಮಕೃಷ್ಣ ಮಿಶನಿನ ಅಧ್ಯಕ್ಷ ಸ್ವಾಮಿ ರಂಗನಾಥಾನಂದಜೀಯವರು ಉಡುಪಿಯ ಮುಕುಂದ ನಿವಾಸದಲ್ಲಿ ಇದೇ ತಾ. 22 ರಂದು ಮಂಗಳೂರು ಶ್ರೀ ರಾಮಕೃಷ್ಣ ಮಿಶನಿನ ಅಧ್ಯಕ್ಷ ಸ್ವಾಮಿ ಆದಿದೇವಾನಂದಜೀಯವರ ಅಧ್ಯಕ್ಷತೆಯಲ್ಲಿ ಗೀತೆಯ ಕುರಿತು ಭಾಷಣವಿತ್ತರು. ಸಭಾರಂಭದಲ್ಲಿ ಡಾ. ಟಿ. ಎಂ. ಎ. ಪೈಗಳು ಸ್ವಾಗತಭಾಷಣ ಮಾಡಿದ್ದರು. ಅಂತ್ಯದಲ್ಲಿ ಶ್ರೀ ಟಿ. ಎ. ಪೈಗಳು ವಂದನೆಗಳನ್ನರ್ಪಿಸಿದರು.

ಬೆಳ್ಮಣ್ಣು—ಸ್ಥಳೀಯ ಮಂಡಲ ಕಾಂಗ್ರೆಸ್ ಸಮಿತಿಯ ಸಭೆಯು ತಾ. 23ರಲ್ಲಿ ಶ್ರೀ ಕೆ. ಆರ್. ಆಚಾರ್ ಎಂ. ಪಿ. ಇವರ ಅಧ್ಯಕ್ಷತೆಯಲ್ಲಿ ಜರಗಿ ಮಂಡಲ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಕೆ. ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ಬಿ. ಕಿಟ್ಟಣ್ಣ ರೈ, ಇವರು ಮದ್ಯಪಾನ ನಿಷೇಧದಿಂದಾಗುತ್ತಿರುವ ದೋಷಗಳ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಶಂಕರರಾಯರು ವಂದನೆಗಳನ್ನರ್ಪಿಸಿದರು.

ಹೊಸ ಹೈಸ್ಕೂಲುಗಳು - ಉಡುಪಿ ತಾಲೂಕಿನ ಪಡುಬಿದ್ರೆಯಲ್ಲಿಯೂ ಕೆಮ್ಮಣ್ಣಿನಲ್ಲಿಯೂ ಈ ವರ್ಷದಿಂದಲೇ ಹೊಸ ಫಸ್ಟ್ ಫೋರ್ಮ್ ಹೈಸ್ಕೂಲುಗಳನ್ನು ತೆರೆಯಲು ಮೈಸೂರು ಸರಕಾರವು ಅನುಮತಿಯನ್ನಿತ್ತಿರುವುದು.

ಕಾರ್ಕಳ ವೆಂಕಟೇಶ ಪ್ರಭುಗಳ ನಿಧನ—ಇದೇ ತಾ. 24ರಂದು ಅತ್ಯಂತ ಗಾಂಧೀವಾದಿಗಳೂ, ಕಾಂಗ್ರೆಸಿಗರೂ, ಕಾರ್ಕಳದ ಧಾರ್ಮಿಕ ವಿದ್ಯಾ ಮೊದಲಾದ ಯಾವತ್ತೂ ಸಂಸ್ಥೆಗಳ ಬೆಂಬಲಿಗರೂ ಆದ ಕಾರ್ಕಳ ವೆಂಕಟೇಶ ಪ್ರಭುಗಳು ತಮ್ಮ 67ನೇ ವಯಸ್ಸಿನಲ್ಲಿ ನಿಧನರಾದರು. ಇವರು ಕಾರ್ಕಳ ತಾಲೂಕು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರಲ್ಲದೆ ವೈಯಕ್ತಿಕ ಸತ್ಯಾಗ್ರಹದಲ್ಲಿ ಎರಡೆರಡು ಬಾರಿ ಕಾರಾಗ್ರಹವಾಸವನ್ನು ಅನುಭವಿಸಿದ್ದರು. 1942ರ ಮಹಾಚಳವಳಿಯಲ್ಲಿ ಮುಂದಾಳಾಗಿ ಭಯಂಕರ ಲಾಠಿ ಪೆಟ್ಟುಗೊಳಗಾಗಿ 600 ರೂಪಾಯಿ ಜುಲ್ಮಾನೆ ಮತ್ತು ಶಿಕ್ಷೆಗೊಳಗಾಗಿದ್ದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರಲ್ಲದೆ ಕಾರ್ಕಳ ಹರಿಜನ ಸೇವಾ ಸಂಘದ ಸಂಸ್ಥಾಪಕರಲ್ಲಿ ಮುಖ್ಯರಾಗಿದ್ದರು. ಇವರಿಗೆ 4 ಹೆಣ್ಣು 3 ಗಂಡು ಮಕ್ಕಳಿದ್ದು ಓರ್ವ ಪುತ್ರಿ ಕುಮಾರಿ ಭಾಗೀರಥೀ ಎಂಬವರು ಸರ್ವೋದಯ ಕಾರ್ಯಕರ್ತರಾಗಿ ವಿನೋಬಾಜಿಯವರೊಂದಿಗಿರುವರು.

ಉಡುಪಿ ಹಿಂದೀ ಪ್ರಚಾರ ಪರಿಷತ್ತಿನ ಕಾರ್ಯಕಾರಿ ಸಮಿತಿಯು ಇತ್ತೀಚೆಗೆ ಸಭೆಸೇರಿ ಮುಂದಿನ ವರ್ಷದ ಅಧಿಕಾರಿ ವರ್ಗವನ್ನು ಆರಿಸಿತು. ಅಧ್ಯಕ್ಷರು ಶ್ರೀ ಎ ವರದರಾಜ ಬಲ್ಲಾಳ. ಉಪಾಧ್ಯಕ್ಷರು ಶ್ರೀ ಬಿ. ಎಸ್. ರಾಮ ರಾವ್. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪಿಚಂದ ರಾವ್, ಉಪಕಾರ್ಯದರ್ಶಿ ಕೆ. ವಾದಿರಾಜ ಪುರಾಣಿಕ. ಸದಸ್ಯರು ಶ್ರೀಗಳಾದ ಪಿ. ಹರಿದಾಸ ಆಚಾರ್ಯ, ಪಿ. ರಾಘವೇಂದ್ರ ತಂತ್ರಿ, ಕೆ. ವಾಸುದೇವ ಆಚಾರ್ಯ. ಗ್ಲೇಡ್ಸನ್ ಜತ್ತನ್ನ, ಬಿ. ಎಲ್. ಆಚಾರ್ ಕೆ. ದಾ. ಪತಾಳೆ.

ಸಂಕ್ಷಿಪ್ತ ಸುದ್ದಿಗಳು

ಪರಿಷತ್ತು ಕುಸಿಯಿತು!

ಪೂರ್ವ ಪಶ್ಚಿಮ ನಿಶ್ಶಸ್ತ್ರೀಕರಣ ಪರಿಷತ್ತು ಈಗ ಸಂಪೂರ್ಣ ಅಸಫಲಗೊಂಡಂತಾಗಿದೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಪುನರ್ವಿಮರ್ಶಿತ ನಿಶ್ಶಸ್ತ್ರೀಕರಣ ಯೋಜನೆಯೊಂದನ್ನು ಮುಂದಿಡುವ ಯೋಚನೆಯಲ್ಲಿದ್ದಂತೆಯೇ ಕಮ್ಯೂನಿಸ್ಟ್ ಬಣಗಳಾದ ರಷ್ಯ, ಝೆಕೊಸ್ಲೊವಾಕಿಯೂ, ಪೋಲೇಂಡ್, ರುಮೇನಿಯೂ ಮತ್ತು ಬಲ್ಗೇರಿಯೂ ರಾಷ್ಟ್ರಗಳ ಪ್ರತಿನಿಧಿಗಳು ಪರಿಷತ್ತನ್ನು ಬಹಿಷ್ಕರಿಸಿ ನಡೆದುದು ನಿಶ್ಶಸ್ತ್ರೀಕರಣ ಪರಿಷತ್ತು ಅಸಫಲಗೊಳ್ಳುವುದಕ್ಕೆ ಮೂಲಕಾರಣವೆನ್ನಲಾಗಿದೆ. ಈ ಮೊದಲು ಪರೋಕ್ಷವಾಗಿ ಕಮ್ಯುನಿಸ್ಟ ರಾಷ್ಟ್ರಗಳು ವಿರೋಧ ಸೂಚಿಸಿದ್ದರೂ ಪ್ರತ್ಯಕ್ಷವಾಗಿ ತೆಗೆದುಕೊಂಡ ಈ ಕಾರ್ಯಕ್ರಮದಿಂದ ಪರಿಷತ್ತಿನಲ್ಲಿ ಸೇರಿದ ಪ್ರತಿನಿಧಿಗಳು ಆಶ್ಚರ್ಯಚಕಿತರಾಗಿದ್ದಾರೆ.

ಜಾಗತಿಕವಾಗಿ ಬಹಿಷ್ಕರಿಸಿರಿ

'ಆಫ್ರಿಕನ್ ರಾಷ್ಟ್ರಗಳಲ್ಲಿ ಬಿಳಿಯರ ಆಡಳಿತೆಯ ವಿರೋಧ ಭಾವನೆಯು ತಲೆದೋರುತ್ತಿದ್ದು, ಆಫ್ರಿಕನರಲ್ಲಿ ಆಫ್ರಿಕನ್ ಭಾವನೆ'ಯು ದಿನದಿನಕ್ಕೆ ಬೆಳೆದು ಬರುತ್ತಿದೆ. ಇದರ ಪರಿಣಾಮವಾಗಿ ಅಲ್ಲಿ ಶ್ವೇತರ ಅಧಿಕಾರವು ಕೊನೆಯುಸಿರು ಎಳೆಯಬೇಕಾದ ಪರಿಸ್ಥಿತಿ ನಿಕಟವಾಗುತ್ತಿದೆ. ಒಂದೊಂದೇ ಆಫ್ರಿಕನ್ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯಾಭಿಲಾಷೆಯು ಬೆಳೆಯುತ್ತಿದ್ದುದರಿಂದ, ಇದಕ್ಕೆ ಮತ್ತಷ್ಟು ಸಹಾಯ ನೀಡಿದಂತಾಗಿದೆ. ದಕ್ಷಿಣ ಆಫ್ರಿಕೆಯ ಸರಕಾರವು ತನ್ನ ವರ್ಣಭೇದನೀತಿಯನ್ನು ತಿದ್ದಿಕೊಳ್ಳದೆ ಹೋದರೆ, ಅದು ಸಂಪೂರ್ಣ ನಾಶವಾಗುವುದು ಖಂಡಿತ' ಎಂದು ದ. ಆಫ್ರಿಕೆಯ ಭಾರತೀಯ ಧುರೀಣ ಶ್ರೀ ವೈ. ಎಂ. ದಾದೂರವರೆಂದರು. ಬ್ರಿಟನ್ನು ದ. ಆಫ್ರಿಕೆಯ ಸರಕುಗಳ ಮೇಲೆ ಬಹಿಷ್ಕಾರ ಹಾಕಿದುದನ್ನವರು ಸ್ವಾಗತಿಸಿ, ಜಾಗತಿಕ ಮಟ್ಟದ ಬಹಿಷ್ಕಾರ ಹಾಕಲು ಪ್ರಯತ್ನಿಸಬೇಕೆಂದರವರು.

ಸ್ವಾತಂತ್ರ್ಯಕ್ಕೆ ಪ್ರತಿಬಂಧನ

ಆಂಧ್ರದ ಮಂತ್ರಿಯಾಗಿದ್ದ ಶ್ರೀ ಸುಬ್ಬಾ ರೆಡ್ಡಿಯವರು ಕಾಂಗ್ರೆಸ್ ಪಕ್ಷದ ಒಂದು ಚುನಾವಣೆಯಲ್ಲಿ ಪಕ್ಷದ ಅಧಿಕೃತ ಪ್ರತಿನಿಧಿಯೆದುರು ಸ್ಪರ್ಧಿಸಿದುದರಿಂದಾಗಿ, ಅವರ ಅಧಿಕಾರವನ್ನು ಮುಖ್ಯಮಂತ್ರಿಯವರು ಕಿತ್ತುಕೊಂಡಿದ್ದರು. ತನ್ನ ಮೇಲೆ ಕೈಗೊಂಡ ಕ್ರಮವು ಹಾಗೂ ತಾನಿಯಬೇಕಾಗಿ ಬಂದ ರಾಜೀನಾಮೆಯ ಪ್ರಕರಣದಿಂದ ಓರ್ವ ವ್ಯಕ್ತಿಗೆ ನ್ಯಾಯವಾಗಿ ದೊರೆತ ಹಕ್ಕು, ಸ್ವಾತಂತ್ರ್ಯಗಳನ್ನು ಉಪಯೋಗಿಸುವುದಕ್ಕೆ ಆತನಿಗೆ ಪ್ರತಿಬಂಧ ಹೇರಿದಂತಾಗಿದೆ, ಎಂದು ಶ್ರೀ ರೆಡ್ಡಿಯವರು ಉದ್ಗರಿಸಿದರು. ವೈಯಕ್ತಿಕವಾಗಿರುವ ಮೂಲಭೂತ ಹಕ್ಕುಗಳನ್ನು ನಿರಾಕರಿಸಿದುದರಿಂದ ತನಗೆ ಆಘಾತವುಂಟಾಗಿದೆಯೆಂದೂ, ಪ್ರಜಾಸತ್ತಾತ್ಮಕ ಆಳಿಕೆಯಲ್ಲಿದು ಅತ್ಯಪೂರ್ವ ಘಟನೆಯೆಂದೂ ಅವರೆಂದರು.

ಚೀನೀಯರ ಸೈನ್ಯ ಸಂಗ್ರಹಣ

ನೇಪಾಳದ ಪ್ರಧಾನಿ ಶ್ರೀ ಬಿ. ಪಿ. ಕೊಯಿರಾಲಾರವರು ಟಿಬೇಟದಲ್ಲಿ ಚೀನೀಯರು ಹೇರಳವಾಗಿ ಸೈನ್ಯವನ್ನು ಸಂಗ್ರಹಿಸುತ್ತಿರುವ ವರದಿಗಳು ಬಂದಿರುವುದಾಗಿ ತಿಳಿಸಿದ್ದಾರೆ. ಅವರು ಯಾವ ಪ್ರದೇಶದಲ್ಲಿ ಈ ಸೈನ್ಯವು ಜಮೆಯಾಗಿರುವುದೆಂದು ತಮಗೆ ತಿಳಿದಿಲ್ಲ ಎಂದೂ ನೇಪಾಳೀಯರ ಕಗ್ಗೊಲೆ ನಡೆದಿದೆಯೆಂಬುದನ್ನು ತಾವು ನಂಬುವುದಿಲ್ಲವೆಂದೂ ಒಂದು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಭಾರತದ ಸಂವಿಧಾನ ಆದರ್ಶ

ಪಾಕಿಸ್ತಾನದ ಭಾವಿ ಸಂವಿಧಾನದ ಕುರಿತಾಗಿ ಚರ್ಚೆ ನಡೆಸಲು ಸೇರಿದ್ದ ಅಲ್ಲಿನ ಧಾರ್ಮಿಕ ಮುಂದಾಳುಗಳು ಸಮಾಲೋಚನೆ ನಡೆಸಿ ಪಾಕಿಸ್ತಾನಕ್ಕೂ ಭಾರತದಂತಹ ಆದರ್ಶ ಸಂವಿಧಾನ ಬೇಕು ಎಂದು ಪ್ರತಿಪಾದಿಸಿದರು. ಭಾರತದ ಜನತೆಗೆ ತಮ್ಮ ಪ್ರತಿನಿಧಿಗಳನ್ನು ಆರಿಸುವ ಅಧಿಕಾರ ದೊರಕಿದ್ದು, ಈ ಅಧಿಕಾರವನ್ನು ಹಲವು ಬಾರಿ ಉಪಯೋಗಿಸಿರುವರೆಂದೂ ಪಾಕಿಸ್ತಾನದಲ್ಲಿ ಪಾರ್ಲಿಮೆಂಟರಿ ರಾಜ್ಯ ವಿಧಾನವು ಅಸಫಲಗೊಂಡಿಲ್ಲವೆಂದೂ ಅವರು ಹೇಳಿ, ಸಂವಿಧಾನ ರಚಿಸುವ ಕೆಲಸವನ್ನು ಚುನಾಯಿತರಾದ ಜನತಾ ಪ್ರತಿನಿಧಿಗಳಿಗೆ ಒಪ್ಪಿಸಬೇಕಲ್ಲದೆ ದಂಡಿನಾಳಿಕೆಯು ನ್ಯಾಯ ರಚಿಸಿದ ಆಯೋಗವೊಂದು ಅದನ್ನು ಸಿದ್ಧಪಡಿಸಿ ಮಂತ್ರಿ ಮಂಡಳವು ಅದನ್ನು ಮಂಜೂರು ಮಾಡಿದರೆ, ಅದಕ್ಕೆ ಜನತೆಯ ನಿಷ್ಠೆ ದೊರೆಯಲಾರದು ಎಂದವರು ತಿಳಿಸಿದರು. ಪಾಕಿಸ್ತಾನಕ್ಕೂ ಭಾರತದ ಮಾದರಿಯ ಪ್ರೌಢ ಮತದಾನ ಪದ್ಧತಿಯಿಂದ ಚುನಾಯಿತ ಪ್ರತಿನಿಧಿಗಳಿರುವ ವಿಧಾನ ಮಂಡಲಕ್ಕೆ ಹೊಣೆಗಾರರಾಗಿರುವ ಮಂತ್ರಿ ಮಂಡಳಿಯಿರುವ ಫೆಡರಲ್ ಮಾದರಿಯ ಸಂವಿಧಾನವೇ ಬೇಕೆಂದು ಪೂ. ಪಾಕ್ ವಕೀಲ ಸಂಘವೂ ನಿರ್ಣಯಿಸಿದೆ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

Notice

In the Court of the Subordinate Judge of S. Kanara
II Additional

R. E. P. No. 23/1959 (O. S. 218/1950)

Between

Dhanakeerthy and others ... Petitioners (D 5, 6 & 7)

and

Padmavathy as Ejamanthy of her branch and others...Respondents

To

R 1. Padmavathy—as Ejamanthy of her branch family, w/o Patna Shetty Padmanabha Shetty.
R 2. Thungamma alias Sachi Devi, d/o Padmavathy.
R 4. Udaya Varma—Advocate.
R 5. Gulabi wife of Nellikaru Mitrasenaya.
R 6. Shiva Devi alias Sushila—minor by guardian 4th respt.
R 7. Vimala Kumar—minor by guardian 1st respondent.
R 8. S. Nagarajiah (Plaintiff) s/o Dharnaya Shetty.

Respondents 1, 7 & 8 are residing at Mudabidri Kasba. Respondent 2 residing at Padubidri, Nadsal village, Udipi Taluk. Respondents 4 and 6 residing at Lalbhag, Mangalore Town. Respondent 5 residing at Danasale Pete, Karkal Kasba.

Please take notice that the above execution petition filed by the petitioners against you, for sale of the mortgaged properties, now stands posted to 14—7—1960 for settlement of the terms of the sale proclamation. Should you fail to appear either in person or through lawyer before this Court on that day at 11 A. M. the case will be heard on their absence,

(By Order)

Mangalore, 23—6—1960.

(*Sd.*) G. Somashekar Rao,
Advocate for petitioners

ಇಂದಿನ ಮಾತು

ದಕ್ಷ ಯೋಜನಾ ನಿರ್ಮಾತ—ಕೃಷ್ಣಮಾಚಾರಿ

ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಅವಿರತ ದುಡಿದ ಶ್ರೀ ವಿ. ಕೆ. ಕೃಷ್ಣಮಾಚಾರಿಯವರು ನಿವೃತ್ತರಾದರು; ಅವರ ಅನುಭವವಿನ್ನೂ ದೇಶಕ್ಕೆ ಬೇಕಾಗಿದೆ.

ಭಾರತದ ಯೋಜನಾ ಆಯೋಗದಲ್ಲಿ ಹತ್ತು ವರ್ಷಗಳಿಗೂ ಮಿಗಿಲಾಗಿ ಸೇವೆ ಸಲ್ಲಿಸಿದ ಶ್ರೀ ವಿ. ಟಿ. ಕೃಷ್ಣಮಾಚಾರಿಯವರು ಇದೀಗ ವಿರಾಮ ಪಡೆದಿರುವರು. ೧೯೫೦ರಲ್ಲಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರುರವರ ಕೋರಿಕೆಯ ಮೇರೆಗೆ ಅವರು ಆಯೋಗದ ಸದಸ್ಯರಾಗಿರಲು ಒಪ್ಪಿದರು. ಮುಂದೆ, ೧೯೫೩ರಲ್ಲಿ ಆಯೋಗದ ಉಪಾಧ್ಯಕ್ಷರಾಗಿದ್ದ ಶ್ರೀ ಗುಲ್ಜಾರೀಲಾಲ ನಂದಾರವರು ಆ ಪದವಿಯಿಂದ ನಿವೃತ್ತರಾದುದರಿಂದ, ಇವರನ್ನು ಆ ಸ್ಥಾನಕ್ಕೆ ನೇಮಿಸಲಾಯಿತು.

ಆಯೋಗದ ಸದಸ್ಯರಾಗಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕೃಷ್ಣಮಾಚಾರಿಯವರು ಭಾರತದ ಮೂರು ಪಂಚವಾರ್ಷಿಕ ಯೋಜನೆಗಳ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೊದಲಿನೆರಡು ಯೋಜನೆಗಳನ್ನು ರೂಪಿಸಿ ಅವನ್ನು ಕಾರ್ಯಾನ್ವಿತಗೊಳಿಸಿರುವರಲ್ಲದೇ ಮೂರನೆಯದರ ಸಾಮಾನ್ಯ ರೂಪವನ್ನು ತಯಾರಿಸಿ, ದೇಶಕ್ಕೆ ಪ್ರಗತಿ ಪಥ ದರ್ಶನವನ್ನು ಮಾಡಿತೋರಿಸಿರುವರು.

ಯೋಜನಾ ಆಯೋಗದ ಉಪಾಧ್ಯಕ್ಷರಾಗುವುದಕ್ಕೆ ಮೊದಲು ಶ್ರೀ ಕೃಷ್ಣಮಾಚಾರಿಯವರು ಬಡೋದೆ ಮತ್ತು ಜಯಪುರ ಸಂಸ್ಥಾನಗಳ ದಿವಾನರಾಗಿದ್ದರು. ಆಧುನಿಕ ಬಡೋದೆಯ ನಿರ್ಮಾಣ ಕಾರ್ಯದಲ್ಲಿ ಶ್ರೀಯುತರ ಕೈವಾಡ ಅಪರಿಮಿತವಾಗಿತ್ತು. ಬಡೋದೆಯ ರಾಜರಾಗಿದ್ದ ಸ್ವರ್ಗೀಯ ಸಯಾಜಿರಾವ್ ಗಾಯಕವಾಡರ ಕಾಲದಲ್ಲಿ ೧೭ ವರ್ಷಗಳ ಸಮಯ ದಿವಾನ ಪದವಿಯಲ್ಲಿ ರಾರಾಜಿಸಿದ್ದ ಶ್ರೀ ಆಚಾರಿಯವರು ಅಲ್ಲಿ ಉದಾರ ಮತ್ತು ಪ್ರಗತಿಶೀಲ ಪ್ರಶಾಸನ ಪ್ರಣಾಳಿಯನ್ನು ಕಾರ್ಯಗತಗೊಳಿಸಿ, ಬಡೋದೆಯ ರಾಜ್ಯವನ್ನು ಉತ್ತಮ ರಾಜ್ಯವಾಗಿ ರೂಪಿಸುವಲ್ಲಿ ಅಗ್ರಗಣ್ಯ ಪಾತ್ರವಹಿಸಿದ್ದರು. ಶ್ರೀಯುತರು ತಮ್ಮ ನೀತಿಯನ್ನು ಸ್ವರ್ಗೀಯ ರಾಜರ ಮೊಮ್ಮಗ ಪ್ರತಾಪಸಿಂಹ ಗಾಯಕವಾಡರವರ ಕಾಲದ ವರೆಗೆ ಮುಂದುವರಿಸಿಕೊಂಡು ಬಂದರು. ಇವರ ಅಧಿಕಾರಾವಧಿಯಲ್ಲಿಯೇ ಬಡೋದೆಯ ರಾಜ್ಯದಲ್ಲಿ ಪ್ರಗತಿಯು ತೋರಿ ಬಂದಿತು; ಆಡಳಿತೆಯಲ್ಲಿ ಮಹತ್ವಪೂರ್ಣ ಪರಿವರ್ತನೆಯೂ ಆಯಿತು; ಕೃಷಿ ಬಂದರವು ಅಭಿವೃದ್ಧಿಗೊಂಡಿತು; ರಾಜ್ಯದಲ್ಲಿ ಬೇರೆ ಬೇರೆ ಮಾದರಿಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯೂ ಆಯಿತು.

ಪ್ರಶಾಸನ ಕಾರ್ಯದಲ್ಲಿ ಅನುಭವಿಗಳಾದ ಮತ್ತು ಆಡಳಿತ ತಜ್ಞರಾದ ಶ್ರೀ ಕೃಷ್ಣಮಾಚಾರಿಯವರು ದೇಶೀಯ ಸಂಸ್ಥಾನಗಳ ಇತಿಹಾಸದಲ್ಲಿಯೇ ಮಹತ್ವಪೂರ್ಣ ಸದನ್ಯಾಸವನ್ನಿಟ್ಟರು. ಎಲ್ಲ ದುಂಡು ಮೇಜಿನ ಪರಿಷತ್ತುಗಳಲ್ಲಿ ಅವರು ಭಾಗವಹಿಸಿ, ಭಾರತದ ಸಾಂವಿಧಾನಿಕ ವಿಕಾಸ ಸಂಬಂಧದ ಕೆಲವು ವಿಶೇಷ ಸಮಿತಿಗಳಲ್ಲಿ ಸದಸ್ಯರಾಗಿ ದುಡಿದರು. ೧೯೩೭ರಲ್ಲಿ ಇಂಪೀರಿಯಲ್ ಕಾನ್ಫೆರೆನ್ಸಿನ ಭಾರತೀಯ ಪ್ರತಿನಿಧಿ ಮಂಡಳದ ಪರಾಮರ್ಶದಾತರಾಗಿದ್ದರು. ಅಲ್ಲದೇ ಚೇಂಬರ್ ಆಫ್ ಪ್ರಿನ್ಸೆಸ್‌ನ ಶಕ್ತಿಸ್ತಂಭವಾಗಿದ್ದರು.

ಬ್ರಿಟಿಷ ಪ್ರಶಾಸನ ಕಾಲದಲ್ಲಿ ಶ್ರೀ ಕೃಷ್ಣಮಾಚಾರಿಯವರಿಗೆ ರಿಸರ್ವ ಬ್ಯಾಂಕಿನ ಉಪಾಧ್ಯಕ್ಷ ಪದವಿ ಹಾಗೂ ವೈಸರಾಯರ ಶಾಸನ—ಪರಿಷತ್ತಿನ ಸದಸ್ಯತ್ವವನ್ನು ಸ್ವೀಕರಿಸಬೇಕೆಂಬ ಕರೆಯು ಬಂದಿತು. ಆದರೆ, ಶ್ರೀಯುತರು ಇವನ್ನು ಸ್ವೀಕರಿಸಲು ಒಪ್ಪಲಿಲ್ಲ. ೧೯೪೭ರಲ್ಲಿ ಬಡೋದೆಯ ದಿವಾನಗಿರಿಯಿಂದ ಬಿಡುಗಡೆಯಾದ ಶ್ರೀ ಆಚಾರಿಯವರು ಜಯಪುರ ಸಂಸ್ಥಾನದಲ್ಲಿ ದಿವಾನರಾಗಿ ನಿಯುಕ್ತರಾದರು. ಸರ್ ಅಕ್ಬರ್ ಹೈದರರ ನಂತರ ಇವರು ಭಾರತೀಯ ರಾಜ್ಯ ಮಂತ್ರಿಮಂಡಳಿಯ ಅಧ್ಯಕ್ಷರಾದರು.

ಬ್ರಿಟಿಷ ಸರಕಾರವು ಶ್ರೀ ವಂಗಲ್ ತಿರುವೆಂಕಟ ಕೃಷ್ಣಮಾಚಾರಿಯವರನ್ನು ರಾವ್ ಬಹಾದುರ್, ಸರ್ ಮೊದಲಾದ ಪದವಿಗಳನ್ನಿತ್ತು ಗೌರವಿಸಿತ್ತು. ೮೦ ವರ್ಷ ಪ್ರಾಯದ ಶ್ರೀಯುತರು ಮದ್ರಾಸ ರಾಜ್ಯದಲ್ಲಿ ಜನ್ಮವೆತ್ತಿದ್ದರು. ಮದ್ರಾಸದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಹಾಗೂ ಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಗಳಿಸಿದರು. ತಮ್ಮ ೨೨ನೆ ವಯಸ್ಸಿನಲ್ಲಿಯೇ ಇವರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮೂರು ವರ್ಷಗಳ ನಂತರ ಕೊಚ್ಚಿನ ರಾಜ್ಯದಲ್ಲಿ ಮುಖ್ಯ ರಾಜ ಪ್ರತಿನಿಧಿಯಾಗಿ ನೇಮಿತರಾದರು. ೧೯೧೩ರಿಂದ ೧೯೧೯ರ ವರೆಗೆ ಇವರು ಮದ್ರಾಸ ಸರಕಾರದ ಸಹಾಯಕ ಕಾರ್ಯದರ್ಶಿಯಾಗಿದ್ದರು. ೧೯೨೪ರಿಂದ ೩೭ರ ವರೆಗೆ ಮದ್ರಾಸ ಸರಕಾರದ ಕಾನೂನು, ಶಿಕ್ಷಣ ಮತ್ತು ಇತರ ವಿಭಾಗಗಳ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದು ೧೯೪೪ರಲ್ಲಿ ನಿವೃತ್ತರಾದರು.

ಶಿಕ್ಷಣ ಕ್ಷೇತ್ರದಲ್ಲಿ ಶ್ರೀ ಆಚಾರಿಯವರು ತುಂಬ ಅಭಿರುಚಿ ತೋರಿಸಿದ್ದರು. ಇದರಿಂದಾಗಿಯೇ ೧೯೪೦ ರಿಂದ ೪೭ರ ವರೆಗೆ ಇವರು ಭಾರತ ಸರಕಾರದ ಕೇಂದ್ರೀಯ ಶಿಕ್ಷಣ ಸಲಹಾಮಂಡಳಿಯ ಸದಸ್ಯರೂ ಆಗಿದ್ದರು.

ಭಾರತವು ಸ್ವತಂತ್ರವಾದ ನಂತರವೂ ಶ್ರೀಯುತರ ಸೇವೆಯನ್ನು ಒಂದಲ್ಲ ಒಂದು ವಿಧದಿಂದ ಪಡೆಯುವುದು ಅವಶ್ಯ ಮತ್ತು ಲಾಭದಾಯಕವೆಂದು ಭಾರತ ಸರಕಾರವು ಕಂಡುಕೊಂಡಿತು. ೧೯೪೭ರಲ್ಲಿ ಘಟನಾ ಸಮಿತಿಯ ಉಪಾಧ್ಯಕ್ಷರಾಗಿ, ೧೯೪೯ರಲ್ಲಿ ಅರ್ಥ ಆಯೋಗದ ಅಧ್ಯಕ್ಷರಾಗಿ ಅದು ನೇಮಿಸಿತು. ೧೯೫೨ರಲ್ಲಿ 'ಅಧಿಕ ಆಹಾರ ಬೆಳೆಯಿರಿ' ಆಂದೋಲನದ ಕಾರ್ಯಾನ್ವಯ ಪರಿಶೀಲಕ ಸಮಿತಿಯ ಅಧ್ಯಕ್ಷರನ್ನಾಗಿ ಇವರನ್ನೇ ಆರಿಸಿತು. ಯೋಜನಾ ಆಯೋಗದ ಉಪಾಧ್ಯಕ್ಷ ಪದವಿಯಿಂದ ನಿವೃತ್ತರಾಗಲಿರುವ ಶ್ರೀಯುತರನ್ನು ನವೋದಿತ ಗುಜರಾಥ ರಾಜ್ಯದ ಪ್ರಥಮ ರಾಜ್ಯಪಾಲರಾಗಿ ನೇಮಿಸಲಾಗುವುದೆಂ ಒಂದು ವಾರ್ತೆಯೂ ಹಬ್ಬಿತ್ತು. ಆದ ತಮ್ಮ ವೃದ್ಧಾಪ್ಯದ ದೆಸೆಯಿಂದಾಗಿ ಶೇಷ ದುಡಿಯಲಾರದಾದುದರಿಂದ ಸೂಚನೆಯು ನಡುವೆಯೇ ಬಿದ್ದು ಹೋಯಿತು.

ಭಾರತವು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಸಾಕಷ್ಟು ಪ್ರಮಾಣದಲ್ಲಿ ಪ್ರಗ ಹೊಂದಿರುವುದಕ್ಕೆ ಅದು ಕಾರ್ಯಾನ್ವಿ ಗೊಳಿಸಿರುವ ಪಂಚವಾರ್ಷಿಕ ಯೋಜ ಗಳೇ ಕಾರಣ. ಈ ಯೋಜನೆಗಳನ ಯೋಜಿಸುವುದರಲ್ಲಿ ಪ್ರಮುಖಪಾತ್ರ ಹಿಸಿದ ಶ್ರೀ ಕೃಷ್ಣಮಾಚಾರಿಯವರನ ಭಾರತೀಯರು ಎಂದಿಗೂ ಮರೆಯಲಾ ರು. ಆಧುನಿಕ ಭಾರತದ ಪುನಾರಚನ ಕಾರ್ಯದಲ್ಲಿ ತನ್ನ ವಯಸ್ಸನ್ನೂ ಗಮ ಸದೆ ದುಡಿದ ಶ್ರೀ ಆಚಾರಿಯವರು ಸಮಸ್ತ ಭಾರತೀಯರ ಗೌರವಾದರಕ್ಕೆ ಪಾತ್ರರಾಗಿರುವರು ಶ್ರೀಯುತರು ತಮ್ಮ ಪ ವಿಯಿಂದ ನಿವೃತ್ತರಾದರೂ ದೇಶಕ್ಕೆ ವರ ಅನುಭವಗಳ ಲಾಭ ದೊರೆಯದಿ ದು; ಅದು ದೊರೆಯಲೇ ಬೇಕು.

Notice.

In the Court of the District Munsif of Coondapoor.

O. P. No. 31 of 1960.

Between:

Krishnai Hengsu and others ... Petitioners.

and

1. Marla Pujary, son of Venku Hengsu. 2. Kusta Pujary, 3. Chenna Pujary— Children of 1st respondent Malra Pujary. ... Respondents.

All the respondents are residing at Kody of Coondapoor village, Coondapoor Taluk.

To the respondents and to whomsoever it is concerned.

Please take notice that the petitioners have applied for a succession certificate for recovering a sum of Rs. 1331-95 nP. due to their mother Durgi Hengsu in I. P. 2/57 on the file of the Subordinate Judge of South Kanara and the said petition stands posted to 30—7—60 before the above court at 11 A. M. if you fail to appear before the said court on that day succession certificate will be issued to the 1st petitioner on behalf of all the petitioners.

(Sd.) K. Ramappayya,
B. A., B. L.,
Advocate for petitioners.

Coondapoor, 24—6—1960.

ಕುಂದಾಪುರ ಅಸಿಸ್ಟಾಂಟ ಮುನ್ಸಿಫರ
ಕೋರ್ಟಿನ ಉಡುಪಿ ಕ್ಯಾಂಪಿನಲ್ಲಿ

O. P. 451/1960

Between

ಪುಟ್ಟಮರಿ ಮಂಜ — ಅರ್ಜಿದಾರ,

ಮತ್ತು

ಗೋಳಿಮನೆ ಶೀನಪ್ಪ ಶೆಟ್ಟಿ, ಕೊರ ಶೆಟ್ರ ಅಳಿಯ—ಉಡುಪಿ ತಾಲ್ಲೂಕು, ಬೆಳ್ಳಂಪ ಗ್ರಾಮ. — — ಎದ್ರಿ

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪ ಸುವುದೇನಂದ್ರೆ:—

ತಾರೀಕು 9—4—58ರಲ್ಲಿ ಉಡುಪಿ ದಿ ಮು. ಕೋರ್ಟಿನಲ್ಲಿ R.E.P. 625/5 ನೇ ಅಮಲ್ದಾರಿಯಲ್ಲಾದ ಕೋರ್ಟು ಏಲಂ ಪ್ರಕಾರ ಅರ್ಜಿದಾರನ ಪಕ್ಕಿನ ಅರ್ಜಿಯ ಕಾಣ್ಸಿದ ಸ್ಥಿರಾಸ್ತಿಗಳನ್ನು ಅರ್ಜಿದಾರ ವಳಗೆ ಎದ್ರಿಯು ಅನುಭವಿಸಿ ಬರುವ ಬ ಬ್ಬು ತಾರೀಕು 9—4—58ರ ನಂತ್ರ ವಿಳ ಬಿ ಸಂ|ರದ ಅಂಶದ ಗೇಣಿ ಮತ್ತು ವಿಳ ಸಂ|ರದ ಪೂರಾ ಗೇಣಿ ಬಾಕಿಮಾಡಿಕೊಂ ದ್ದರಿಂದ ಅರ್ಜಿಯಲ್ಲಿ ಕಾಣ್ಸಿದ ಆಸ್ತಿ ಸ್ವಾಧೀ ನತೆ ಕೇಳಿ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 4—7—60ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ದರೆ ಆ ದಿನ ಹಗಲು 11 ಗಂಟೆಗೆ ಆ ಕೋರ್ಟು ಮುಂದೆ ಬಂದು ಹಾಜರಾಗತಕ್ ದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂ ತೀರ್ಮಾನಿಸಲ್ಪಡುವುದು.

P. N. Krishnamurthi Rao
Advocate for Petitioner

Udipi, S. K. 15—6—60.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2—75
ಪಂಚಮುಖಿ (ಕಾದಂಬರಿ)	2—50
ನಮ್ಮ ಸುತ್ತಲಿನ ಕಡಲು	1—75
ಪರಮಾಣು—ಇಂದು—ನಾಳೆ	3—00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಚಾರುಚಿಂತನ

ಆರೋಪ ಹೊರಿಸುವ ಕಲೆ

ಬೇರೆಯವರ ಮೇಲೆ ಆರೋಪಹೊರಿಸಿ ತನ್ನ ನಿರಪರಾಧಿತನವನ್ನು ಪ್ರದರ್ಶಿಸುವುದು ಎಲ್ಲರ ಸ್ವಭಾವ; ಆದರೆ, ಈ ಕಲೆಯು ಸರಿದಾರಿಯಲ್ಲಿ ಕೊಂಡೊಯ್ಯುವುದೆ?

ಒಬ್ಬ ಮಿತ್ರನ ಅಪರೂಪವೆನಿಸುವ ಪತ್ರ ಬಂತು "ವಿದ್ಯುತ್ ಬೀಸಣಿಗೆಯಿಂದಾಗಿ ಕೈ ಮುರಿಯಿತು. ಕೆಲವು ದಿನ ತುಂಬ ಕಷ್ಟವೆನಿಸಿತು. ಆದುದರಿಂದ ಉತ್ತರಿಸಲು ವಿಳಂಬವಾಯಿತು. ಆರಾಮಾಸನದ ಬಳಿ ಸ್ಟೂಲಿನಲ್ಲಿ ಬೀಸಣಿಗೆ ತಿರುಗುತಿತ್ತು; ತಾನು ಉಪ್ಪವಡಿಸುತ್ತಿರುವಾಗ, ಕೈ ಮುಂದೆ ಚಾಚುವಾಗ, ಬೀಸಣಿಗೆಯ ಅರೆಗಳು ತಾಗಿದುವು; ಒಂದೆರಡು ಬೆರಳುಗಳಿಗೆ ಭಯಂಕರ ಗಾಯವಾಯಿತು. ಅದನ್ನೇನೋ ನಾನೇ ಅಲ್ಲಿರಿಸಿದ್ದೆ; ಆದರೆ, ಅದು ತಿರುಗುತಿತ್ತು ಎಂದು ನಾನು ಮರೆತುಬಿಟ್ಟಿದ್ದೆ."

ಮಿತ್ರನ ಪತ್ರವನ್ನು ಓದಿದೊಡನೆಯೇ ಒಮ್ಮೆ ಎದೆ ಧಸಕ್ಕೆಂದಿತು. ಆದರೆ, ಬೀಸಣಿಗೆ ತಾಗಿ ಬೆರಳನ್ನು ನೋಯಿಸಿಕೊಳ್ಳುವುದು ಆಧುನಿಕ ಯುಗದಲ್ಲಿ ಸರ್ವಸಾಮಾನ್ಯವಾಗಿದೆ ಎಂದು ತಿಳಿದುಕೊಂಡೆ. ಆದರೂ ಆಗಾಗ ವಿಸ್ಮಯ ಮನಸನ್ನು ಆವರಿಸುತ್ತಿತ್ತು. ಅಂತೆಯೇ ಮನಸ್ಸು ತನ್ನ ವಿಚಾರವನ್ನು ವ್ಯಥಿಸತೊಡಗುವುದು—ಬೀಸಣಿಗೆಯಿಂದ ಯಾರಿಗೆ, ಹೇಗೆ ಮತ್ತು ಎಂದು ನೋವಾಗುವುದು? ತಮ್ಮ ಮರವಿನಿಂದಲೇ ಅದು ಗಾಯಗೊಳಿಸುವುದಲ್ಲವೆ?

ಬೀಸಣಿಗೆ ಪಕ್ಕದಲ್ಲಿಯೇ ಇದೆ, ಎಂಬುದನ್ನು ನನ್ನ ಮಿತ್ರ ಮರೆತುಬಿಟ್ಟಿದ್ದ. ಅದು ತಿರುಗುತ್ತದೆ ಯೆಂಬುದರ ಜ್ಞಾನ ಅವನಿಗಿಲ್ಲಿರಬೇಕು?—ಈ ಅಜ್ಞಾನದಿಂದಲೇ ಆತನ ಬೆರಳು ಮುರಿಯಿತು.

ಒಂದು ಪೆಟ್ಟು, ಅಥವಾ ಕಷ್ಟವೆನ್ನುವುದು ಮನುಷ್ಯನಿಗೆ ಆತನ ಮರೆವನ್ನು, ಅಥವಾ ತಪ್ಪನ್ನು ತಿಳಿಸಿ, ಮುಂದಕ್ಕಾದರೂ ಆತನು ಎಚ್ಚರಿಕೆಯಿಂದಿರುವಂತೆ ಸೂಚಿಸುವ ಒಂದು ಎಲಾರ್ಮ್ ಅಥವಾ ಘಂಟೆ—ಆದರೆ, ಈ ಸಂಗತಿಯನ್ನು ನಾವು ಆದೆಷ್ಟು ಮಂದಿ ತಿಳಿಯುತ್ತೇವೆ? ತಿಳಿದು ಅದರಂತೆ ವರ್ತಿಸುತ್ತೇವೆ?

ಆದರೆ, ನಾವು ನಮ್ಮ ತಪ್ಪನ್ನು ಬೇರೆಯವರ ತಲೆಯ ಮೇಲೆ ಹೇರುವುದರಲ್ಲಿ ನಿಷ್ಣಾತರಾಗಿದ್ದೇವೆ. ಕೈ ತಪ್ಪಿನಿಂದ ಬೀಸಣಿಗೆಗೆ ತಾಗಿತು; ಆದರೆ ಆರೋಪ ಬೀಸಣಿಗೆಯ ಮೇಲೆ! ಕೈ ನಮ್ಮ ದೃಷ್ಟಿಯಲ್ಲಿ ನಿರಪರಾಧಿ!—ನಮ್ಮ ಮನಸ್ಸಿನಲ್ಲಿರುವ ಈ ಭಾವನೆ ಅಪಾಯಕಾರಿಯಾದುದು. ಇದರಿಂದ, ನಮ್ಮ ತಪ್ಪಿನತ್ತ ನಮ್ಮ ದೃಷ್ಟಿ ಹರಿಯುವುದಿಲ್ಲ; ನಾವು ನಮ್ಮ ವರ್ತನೆಯ ಬಗ್ಗೆ ಎಚ್ಚರಿಕೆ ವಹಿಸುವತ್ತ ಪ್ರಯಾಸ ಕೈಗೊಳ್ಳುವುದಿಲ್ಲ; ಅಪಾಯದಿಂದ ಉಳಿದುಕೊಳ್ಳುವ ಜಾಗ್ರತ ಭಾವವೂ ನಮ್ಮಲ್ಲಿ ಮೂಡುವುದಿಲ್ಲ. ಇದರ ಪರಿಣಾಮವಾಗಿ ಪ್ರಾಕೃತಿಕ ಘಂಟೆಯ ಸ್ವರವು ನಮ್ಮ ಕಿವಿದೆರೆಯನ್ನು ಹೊಕ್ಕು ಹೃದಯಕ್ಕಿಳಿಯುವುದಿಲ್ಲ.

ಇದರಿಂದಾಗಿ, ನಮ್ಮ ಜೀವನದಲ್ಲಿ ಮರೆಯುವ ಅಭ್ಯಾಸವಷ್ಟೇ ಬೆಳೆಯುವುದು; ನಮ್ಮ ಭವಿಷ್ಯವು ಮತ್ತಷ್ಟು ಅಪಾಯಕಾರಿಯೆನಿಸುವುದು. ಆದುದರಿಂದ, ನಾವು ನಮ್ಮ ವರ್ತನೆಯ ಬಗ್ಗೆ ಎಚ್ಚರರಾಗಿರಬೇಕು. ಪ್ರತಿಯೊಂದು ಅಪಾಯದಿಂದಲೂ ನಾವು ಭವಿಷ್ಯಕ್ಕೆ ಪಾಠವನ್ನು ಕಲಿತುಕೊಳ್ಳಬೇಕು. ಕೇವಲ ದೋಷಾರೋಪಣೆಯಿಂದ ಶುಭವಾಗುವುದಿಲ್ಲ; ನಮ್ಮನ್ನು ನಾವು ತಿದ್ದಿಕೊಳ್ಳುವುದರಿಂದ ಅಲ್ಲವೆ?

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಬಾಲ ಹಿತಚಿಂತನೆ

(೪ನೇ ಪುಟದಿಂದ)

ರು ಅಸಂಬದ್ಧ ಪ್ರಶ್ನೆಗಳನ್ನು ಕೇಳುವುದರಿಂದಲೂ ದುಷ್ಪರಿಣಾಮವಾಗುವುದು. ಒಬ್ಬ ಹುಡುಗ, ಒಂದು ಉತ್ಸವ ನೋಡಿ ಮನೆಗೆ ತಡವಾಗಿ ಮರಳಿದನೆಂದುಕೊಳ್ಳಿರಿ. ಆಗ, ತಂದೆ, 'ಎಲ್ಲಿಗೆ ಹೋದೆ? ಏನು ತಡ? ಅಲ್ಲೇನು ಕಂಡೆ?" ಎಂದು ಮುಂತಾಗಿ ಕೇಳಿದರೆ, ಬಾಲಕ ಹೆದರಿ ಕಂಗಾಲಾಗಿ ಹೋಗುವನು. ಆತನು ತಾನು ಗಳಿಸಿದ ನವ ಅನುಭವಗಳನ್ನೂ ಜೀರ್ಣಿಸುವ ಶಕ್ತಿಯನ್ನು ಕಳೆದುಕೊಳ್ಳುವನು. ಆದುದರಿಂದ, ಒಂದೇ ಸವನೆ ಪ್ರಶ್ನಾವಳಿ ಹಾಕುವುದೂ ಸಮಂಜಸವಲ್ಲ. ಮಗುವಿನ ಹೃದಯದಲ್ಲಿ ಹೊಕ್ಕ ಅನುಭವಗಳು ತಾವಾಗಿಯೇ ಪ್ರಕಟಗೊಳ್ಳಬಹುದು; ಅಥವಾ ಸಂದರ್ಭಾನುಸಾರ ಹೊರಬರಬಹುದು.



ಮೈಸೂರಿನ ಕೇಂದ್ರ ಆಹಾರ ತಾಂತ್ರಿಕ ಸಂಶೋಧನಾಲಯದಲ್ಲಿನ 'ಟಪಿಯೋಕಾ ಮಕರೋನಿ' ಕಾರಖಾನೆಯ ಚಿತ್ರವನ್ನು ಮೇಲ್ಗಡೆಯೂ, ಅಕ್ಕಿಯನ್ನು ಶುದ್ಧೀಕರಿಸುವುದನ್ನು ಕೆಳಗಿನ ಚಿತ್ರದಲ್ಲಿಯೂ ಕಾಣಬಹುದು.

ಮನೆಯಲ್ಲಿ ಪರಸ್ಪರ ವಿಶ್ವಾಸದ ವಾತಾವರಣವನ್ನು ನಾವು ಉತ್ಪಾದಿಸಬೇಕಾದರೆ, ಬಾಲಕನ ಮಾತುಗಳಲ್ಲಿ ತಾಯ್ತಂದೆಯರು ಆಸಕ್ತಿಯನ್ನು ತೋರಿಸಬೇಕಾಗುತ್ತದೆ. ಆದರೆ, ಹೀಗೆ ತೋರಿಸುವ ಆಸಕ್ತಿಯಲ್ಲಿ ಕೇವಲ ಪ್ರಶ್ನೋತ್ತರಗಳೇ ಇರಬೇಕು. ಮಗುವಿಗೆ ಸ್ವತಂತ್ರ ರೂಪದಲ್ಲಿ ಹೊರಗೆ ಹೋಗುವುದಕ್ಕೆ, ಮಿತ್ರರೊಡನೆ ಬೆರೆಯುವುದಕ್ಕೆ, ಸ್ವತಂತ್ರ ಜೀವನ ನಡೆಸುವುದಕ್ಕೆ ಸಾಧ್ಯವೆನಿಸಿದಷ್ಟು ಅವಕಾಶಗಳನ್ನು ಬೇಗನೇ ಒದಗಿಸಬೇಕು. ಮಗುವಿನ ವಿಳಾಸಕ್ಕೆ ಬರಬಹುದಾದ ಪತ್ರಾದಿಗಳನ್ನು ಬೇರೆಯವರು ಒಡೆಯಬಾರದು. ಅಲ್ಲದೇ "ನೀನೇನು ಬರೆದಿದ್ದೆ? ಅವನ ಉತ್ತರವೇನು? ಈ ಪತ್ರ ಎಲ್ಲಿಂದ ಬಂತು? ಯಾರದ್ದು?" ಎಂದು ಮುಂತಾದ ಪ್ರಶ್ನೆಗಳನ್ನೂ ಕೇಳಬಾರದು.

ಪಾರಸ್ಪರಿಕ ವಿಶ್ವಾಸದ ವಾತಾವರಣವಿರುವ ಮನೆಯಲ್ಲಿ ಮಗು ಗೂಢಾದ್ಗೂಢಕರವಾದ ವಿಷಯವನ್ನಾದರೂ ಎಲ್ಲರಿಗೂ ತಿಳಿಸುವುದು. ತಾನು ಕಂಡುಕೊಂಡ ಹೊಸ ವಿಷಯವನ್ನು ಕೇಳುವುದಕ್ಕೆ ಮೊದಲೇ ಬಹಿರಂಗಗೊಳಿಸುವುದು. ಮಗು ತನ್ನ ಸ್ನೇಹಿತರೊಡನೆ ಆಡುತ್ತಿರುವಾಗ, "ನನ್ನ ತಾಯ್ತಂದೆಯರು ನನ್ನ ಮನಸ್ಸನ್ನು ಚೆನ್ನಾಗಿ ತಿಳಿದಿದ್ದಾರೆ. ನಾನು ಅವರೊಡನೆ ಎಲ್ಲವನ್ನೂ ಮುಚ್ಚುಮರೆಯಿಲ್ಲದೆ ಹೇಳುತ್ತೇನೆ. ನನ್ನ ಕೆಲಸಗಳ ನಡುವೆ ಅವರು ಅಕಾರಣವಾಗಿ ಹಸ್ತಕ್ಷೇಪ ನಡೆಸುವುದಿಲ್ಲ" ಎಂದು ಮೊದಲಾಗಿ ಹೇಳಿದರೆ, ಅದು ಒಂದು ಪ್ರಶಸ್ತಿ ಪತ್ರವೆಂದು ಹೆತ್ತವರು ತಿಳಿಯಬೇಕಾಗುತ್ತದೆ.

ಬಾಲಕನಿಗೆ ಜೀವನದ ಸರಿಯಾದ ಮಾರ್ಗವನ್ನು ತೋರಿಸುವುದು ಮತ್ತು ಆಪತ್ತಿನಿಂದ ಅವನನ್ನು ರಕ್ಷಿಸುವುದು ಹೆತ್ತವರ ಹೊಣೆಗಾರಿಕೆಯಾಗಿದೆ. ಅವರು ಹೇಳಿದುದನ್ನು ಕೇಳುವ ಪ್ರಯತ್ನವಾಡುವ ಬಾಲಕನು ಅವರಿಂದ ಹೆಚ್ಚು ಹೆಚ್ಚು ವಿಷಯಗಳನ್ನು ತಿಳಿಯಬಯಸುವನೆಂದು ತಿಳಿಯಬೇಕು. ಆದರೆ, ಬಾಲಕನ ನಿಜವಾದ ಗುರು, ಆತನ ಜೀವನವೇ ಸರಿ. ಜೀವನದಿಂದ ತಿಳಿದುಕೊಳ್ಳಬೇಕಾದ ಬಹುತೇಕ ವಿಷಯಗಳಿರುವುವು. ಈ ಜೀವನದ ಹಿಂಗಡೆಯಲ್ಲಿ ಮಾತಾಪಿತರ ಪ್ರೇಮ ಮತ್ತು ಅರ್ಥಪೂರ್ಣ ಸಹಾನುಭೂತಿಯಿರುವುದಾದರೆ, ಬಾಲಕನ ಜೀವನವು ಚುಕ್ಕಾಣಿಸಹಿತವಾದ ನಾವೆಯಂತೆ ತನ್ನ ಗುರಿಯನ್ನು ಅವಶ್ಯ ಸೇರುತ್ತದೆ ಎಂದು ಹೇಳಲು ಅಭ್ಯಂತರವಿಲ್ಲ.

(ಧೀರೇಂದ್ರ ಮೆಹತಾರ ಲೇಖದ ಆಧಾರದಿಂದ)

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶುಭ್ರ ಹರಟೆ

(೩ನೇ ಪುಟದಿಂದ)

ತನ್ನ ಶ್ವೇತ ಛತ್ರ (ಬೆಳ್ಗೊಡೆ)ವನ್ನು ಮೆಲ್ಲನೆ ಬಿಡಿಸಿದನು. ಕರಿ ಬಟ್ಟೆಯ ಮೇಲೆ ಬಿಳಿ ಬಟ್ಟೆಯನ್ನು ಹೊದಿಸಲಾಗಿತ್ತು. ಶ್ವೇತ ಛತ್ರಧಾರಿಗಳು ಈ ಕಾಲದಲ್ಲಿ ಇಲ್ಲದೆ ಹೋದರೂ (ರಾಜರುಗಳು ಈಗ ಇಲ್ಲವಷ್ಟೆ!) ಬೆಳ್ಗೊಡೆಗಳು ಇನ್ನೂ ಕಾಣಸಿಗುವವೆಂದು ನಾನು ತುಂಬ ಸಂತೋಷಚಿತ್ತನಾದೆನು.

ನಾನು ಇಳಿಯಬೇಕಾದೆಡೆಯಲ್ಲಿಳಿದು ಡಾಕ್ಟರರಲ್ಲಿಗೆ ಹೋದೆನು, ಡಾಕ್ಟರರಿಲ್ಲದೆ ಹೋದುದರಿಂದ ಕೊಡೆಯ ಬಗ್ಗೆ ವಿವೇಚನೆ ನನ್ನಲ್ಲುಂಟಾಯಿತು.

ಅಂಬರವು ಇಲ್ಲದೆ ಹೋದಲ್ಲಿ ಇದರ ಪ್ರಯೋಜನವು ಇಲ್ಲವಾದುದರಿಂದ ಇದಕ್ಕೆ ಇಂಗ್ಲೀಷ ಭಾಷೆಯಲ್ಲಿ 'ಅಂಬ್ರೆಲ್ಲಾ' ಎನ್ನುವರು. ಇನ್ನೊಬ್ಬರಿಗೆ ದಾನವೀಯುವ ವಸ್ತುವಲ್ಲವಾದುದರಿಂದ ಕೊಡೆ ಎನ್ನುವರು ಕನ್ನಡದಲ್ಲಿ 'ಶತ್ರ' 'ಛತ್ರಿ' ಈ ಶಬ್ದಗಳು 'ಛತ್ರ'ದ ಅಪಭ್ರಂಶವಾಗದಿರುವು. ಛತ್ರಗಳಲ್ಲಿ (ಧರ್ಮ ಛತ್ರಗಳಲ್ಲಿ) ಇದು ಹಿಂದೆ ಮಾರಲ್ಪಡುತಿತ್ತೆಂದು ತೋರುತ್ತೆ. ಆದ್ದರಿಂದ ಇದಕ್ಕೆ ಛತ್ರವೆನ್ನುವರು. ಗೊರಬು ಇವುಗಳ ಮೂಲರೂಪವಾಗಿರಬೇಕೆಂದು ನಾನು ಭಾವಿಸುತ್ತೇನೆ.

ಭಾವನಾಲೋಲುಪನಾದ ನನ್ನನ್ನು ಡಾಕ್ಟರರು ಎಚ್ಚರಿಸಿದರು.

೦೦ ೦೦

ಕಾಂಡ್ಲ, ವಿಶಾಖಪಟ್ಟಣ ಮತ್ತು ಮಂಗಳೂರು ಬಂದರಗಳು ತೃತೀಯ ಯೋಜನೆಯಲ್ಲಿ ಅಭಿವೃದ್ಧಿಯನ್ನು ಕಾಯುತ್ತಿರುವ ಬಂದರುಗಳಾಗಿವೆ" ಎಂದು ಕೇಂದ್ರ ಸಾರಿಗೆಸಂಪರ್ಕ ಖಾತೆ ಮಂತ್ರಿ ಡಾ| ಪಿ. ಸುಬ್ಬರಾಯನ್ ನುಡಿದರೆಂದು ಸುದ್ದಿ.

—ಯೋಗ್ಯತೆಯುಳ್ಳವರು ತಮಗೆ ಯೋಗ್ಯವಾದ ಕೆಲಸಕ್ಕಾಗಿ ಕಾಯುವಂತೆ "ಇನ್‌ಫ್ಲುಯೆನ್ಸ್" ಉಪಯೋಗಿಸಲು ಸಮರ್ಥರಾದವರು ಕಾರ್ಯಸಫಲರಾಗುವುದರಲ್ಲಿ ಸಂದೇಹವಿಲ್ಲವಷ್ಟೆ!

"ಗೋವಾ ಸಮಸ್ಯೆಯನ್ನು ಬಿಡಿಸುವುದರಲ್ಲಿ ಸರಕಾರವು ಸಫಲವಾದರೆ ಅದನ್ನು ಅತ್ಯಂತ ಉಪಯುಕ್ತವಾದ ಬಂದರವಾಗಿ ಅಭಿವೃದ್ಧಿಪಡಿಸಬಹುದಾಗಿದೆ" ಎಂದು ಮಾನ್ಯ ಮಂತ್ರಿಗಳು ಅದೇ ಸಂದರ್ಭದಲ್ಲಿ ಹೇಳಿದರೆಂದು ವಾರ್ತೆ.

—ಕುದುರೆಯನ್ನು ಕ್ರಯಕ್ಕೆ ಪಡೆದುಕೊಳ್ಳುವುದಕ್ಕೆ ಮುಂಚಿತವಾಗಿ ಒಬ್ಬ ಹುರುಳಿ ತೆಗದಿಟ್ಟಿದ್ದನಂತೆ. ಹಾಗೆಯೆ ಪ್ರಕೃತದ ಸಮಸ್ಯೆಯನ್ನು ಇತ್ಯರ್ಥಿಸಲು ಸಾಮರ್ಥ್ಯವಿಲ್ಲದವರು ಮುಂದಿನ ಸಮಸ್ಯೆಗಳ ಕನಸನ್ನು ಕಂಡು ಅದನ್ನು ಕನಸಿನಲ್ಲೆ ಇತ್ಯರ್ಥಪಡಿಸುತ್ತಿದ್ದಾರೆನ್ನಬಹುದೆ?

—ಕುಂತಳಾಪ್ರಿಯ.

NAVAYUGA' WEEKLY is in the list of periodicals and Newspapers approved or use in Secondarys School as per proceedings Roc· No· 466 N/50 date 2-12-1950 of the Director of public Instruction Madras·

ಪರಿಚಯ

ಗೀತಗೋವಿಂದ ಮತ್ತು ಜಯದೇವ

ಸಂಸ್ಕೃತ ಸಾಹಿತ್ಯಸಾಮ್ರಾಟರಲ್ಲಿ ಮಹಾಕವಿ ಜಯದೇವ ಗಣನೀಯನಾಗಿರುವಂತೆ ಆತನ ಗೀತಗೋವಿಂದವು ಹೃದಯಾಪಹಾರಿಯಾಗಿದೆ.

ಜಯದೇವ!

ಹೆಸರಿನಲ್ಲೇ ಒಂದು ಮೋಹಕ ಮಾಧುರ್ಯವಿದೆ.

ಮೃದುಲ ಪದಸರಣಿಯಿಂದ ಲಸಿತವಾದ, ಜಯದೇವ ಕವಿ ಪ್ರಣೀತವಾದ "ಗೀತ ಗೋವಿಂದದ" ರಸವಾಹಿನಿಯಲ್ಲಿ ತೇಲಿದ ರಸಿಕನಿಗೆ ಅವನ ಜೀವನದ ಇತಿವೃತ್ತವನ್ನರಿಯುವ ಬಯಕೆ ಆಗುತ್ತದೆ; ಆ ರಸಋಷಿಯ ಸ್ನಿಗ್ಧ ಮನೋಹರ ಜೀವನ ಸೌರಭವನ್ನು ಸವಿಯಬೇಕೆನ್ನಿಸುತ್ತದೆ.

ಈ ಮಹಾಕವಿಯು ಉತ್ಕಲ ಪ್ರಾಂತದ "ತಿಂದು ಬಿಲ್ವ" ಗ್ರಾಮವಾಸಿಯು. 'ಪುರಿಯ ಜಗನ್ನಾಥನ' ಭಕ್ತನಾದ ಜಯದೇವನಿಗೆ "ಪದ್ಮಾವತಿ"ಯೆಂಬ ಸಾಧ್ವಿ ಮಡದಿ ಇದ್ದಳು.

ಕೌಂಡಿನ್ಯ ಗೋತ್ರದ ಭೋಜದೇವನೇ ಜಯದೇವನ ತಂದೆ. ವಿದ್ಯಾಧರ, ಪಾರಿಜಾತ, ಶೇಷ ರತ್ನಾಕರರು ಜಯದೇವನ ಪೂರ್ವಿಕರು ಆ ಕಾಲದಲ್ಲಿ ಸಾರಸ್ವತ ಸಮಾಜದಲ್ಲಿ ಖ್ಯಾತರಾದ ಉಮಾಪತಿ ಧರ ಶರಣ–ಗೋವರ್ಧನಾಚಾರ್ಯ ದೇಯಿಕ ಶರಣರೂ–ಕವಿಯ ಸಮಕಾಲೀನರು.

ಚಂದ್ರದತ್ತನ 'ಭಕ್ತಮಾಲಾ' ಎಂಬ ಗ್ರಂಥವೇ ಈ ಕವಿಯ ಜೀವನ ಚರಿತ್ರೆಗೆ ನಿದರ್ಶಕವಾಗಿದೆ. ಅದರ ೩೯ರಿಂದ ೪೧ನೇ ಸರ್ಗಗಳಲ್ಲಿ ಜಯದೇವನ ಜೀವನ ಚರಿತ್ರೆಯು ಲಭ್ಯವಾಗಿದೆ. ಅದರಂತೆ!–

ಜಯದೇವನಿಗೆ ಪದ್ಮಾವತಿಯು ಕೈಹಿಡಿಯುವ ಭಾಗ್ಯವನ್ನೂ ಜಗನ್ನಾಥನೇ ಕರುಣಿಸಿದನಂತೆ!

ಸದಾಚಾರ ಸಂಪನ್ನನಾದ ದೇವಶರ್ಮನಿಗೆ ಮಕ್ಕಳು ಹುಟ್ಟಲಿಲ್ಲ. ಆದ ಕೊರಗಿನಿಂದ ಅವನು ಪುರುಷೋತ್ತಮನ ಮರೆಹೊಕ್ಕನು. ಮೊದಲು ಹುಟ್ಟಿದ ಮಗುವನ್ನು ಅವನಿಗರ್ಪಿಸುವೆನೆಂದು ಹರಕೆ ಹೊತ್ತು ಮರಳಿದನು. ಹರಕೆಯ ಬಲದಿಂದ "ಪದ್ಮಾವತಿ" ಜನಿಸಿದಳು. ದೇವಶರ್ಮನು ಮಗಳನ್ನು ಜಗನ್ನಾಥನಿಗೆ ಅರ್ಪಿಸಿದನು. ಸ್ವಪ್ನದಲ್ಲಿ ತೋರಿದ ದೇವರು ಅವಳನ್ನು ಜಯದೇವನಿಗೆ ಮದುವೆಮಾಡಿಸಬೇಕೆಂದನು.

ದೇವಶರ್ಮನು ಜಯದೇವನ ಕುಟೀರಕ್ಕೆ ಹೋದನು. ದೇವರ ಅನುಗ್ರಹ ವಿಧಾನ—ಸ್ವಪ್ನ ವೃತ್ತಾಂತವನ್ನು ಅರುಹಿದನು. ತನ್ನ ಸ್ಥಿತಿಯನ್ನರಿತ ಜಯದೇವನು ಆ ಮಾತನ್ನೆ ಒಪ್ಪಲಿಲ್ಲ. ದೇವಶರ್ಮನು ಕೊನೆಗೆ ಮಗಳನ್ನು ಅಲ್ಲಿಯೇ ಬಿಟ್ಟು ನಡೆದನು.

ಜಯದೇವನು ಪದ್ಮಾವತಿಯೊಡನೆ "ತಂದೆ ತಾಯಿಗಳು ನಿನ್ನನ್ನು ಬಿಟ್ಟರು! ಈ ಕಾನನದಲ್ಲಿ ಏಕಾಂಗಿನಿಯಾದ ನೀನು ಹೇಗೆ ಇರಬಲ್ಲೆ?" ಎಂದನು.

"ನೀನು ಜತೆಯಲ್ಲಿರುವಾಗ ನಾನು ಹೇಗೆ ಏಕಾಂಗಿನಿಯಾಗುವೆನು?"

ಆಕೆ ಅವನನ್ನೇ ಪ್ರಶ್ನಿಸಿದಳು. ಇದರಿಂದ ಮುಗ್ಧನಾದ ಜಯದೇವನು ಅವಳನ್ನು ತವರಿಗೆ ಕರೆದುಕೊಂಡು ಹೋಗಿ ವಿಧಿವತ್ತಾಗಿ ಲಗ್ನವಾದನು.

ಭಿನ್ನದೇಹಿಗಳಾದರೂ ಏಕ ಪ್ರಾಣರಾದ ಈ ನವದಂಪತಿಗಳು ನೃತ್ಯಗಾನಗಳಲ್ಲಿ ಕಾಲ ಕಳೆಯ ತೊಡಗಿದರು. ಜೀವನದ ಮೋಹಕ, ಮಧುರ, ಸ್ನಿಗ್ಧ ಸನ್ನಿವೇಶಗಳಲ್ಲಿ ಮೈಮರೆತು ಆನಂದ ಸಾಗರದಲ್ಲಿ ವಿಹರಿಸುವಾಗ ಒಮ್ಮೆ ಜಯದೇವನಿಗೆ ಒಂದು ಬೆಳಕು ಹೊಳೆಯಿತು. "ಸ್ವಯಂ ಕೃತೇನ ಪದ್ಯೇನ ತೋಷ ಇಷ್ಯಾದಿ ಕೇಶವಂ" ತಾನೇ ರಚಿಸಿದ ಪದ್ಯಗಳಿಂದ ದೇವರನ್ನು ಹೊಗಳಬೇಕೆಂದು ಕೊಂಡನು.

ಲಲಿತ ಪದಲಾಸ್ಯದ – ಸರಾಗ ಸಮ್ಮಿಲಿತವಾದ ಪದ್ಯಗಳನ್ನು ಹೇಳುತ್ತಾ ನರ್ತಿಸ ತೊಡಗಿದನು—ಜಯದೇವ. ಈ ನವೀನ ಸಾಹಿತ್ಯಾವಿಷ್ಕಾರದಿಂದ ನವಚೇತನ ಮೂಡಿತು, ಜನ ಹುಚ್ಚಾಗಿ ಅದನ್ನು ಹಾಡಿ ನರ್ತಿಸ ತೊಡಗಿದರು. ಮಾಲವಗೌಡ, ವಸಂತ, ಗೂರ್ಜರೀ, ಕರ್ಣಾಟ, ಭೈರವಿ, ವರಾಡಿ, ರಾಮಕರಿ, ಮಾಲವಾದಿ ರಾಗಗಳಲ್ಲಿ ಅವನು ರಾಧಾಕೃಷ್ಣರ "ರತಿ ಸುಖಸಾರ"ವನ್ನು ಹಾಡಿ ಕುಣಿದನು. ಅವರ ಪ್ರಣಯ ಕೇಳಿ, ವಿಪ್ರಲಂಬ ಶೃಂಗಾರಗಳ—ವನಪು— ಆ ಸೊಗಸು—ಆ ಮೋಹಕತೆಯು "ಗೀತಗೋವಿಂದ ದಲ್ಲಿ ಪುಂಜೀಕೃತವಾದುದರಿಂದ ಅದೊಂದು ಅಪೂರ್ವವಾದ ಮಧು ಕುಂಭದಂತಿದೆ.

೧೧೯೩ರ ಸುಮಾರಿಗೆ ಕುತುಬುದ್ದೀನನು ದಿಲ್ಲಿಯನ್ನು ಆಳುತಿದ್ದ ಕಾಲವದು. ಅವನು ಬಖ್ತಿಯಾರ್ ಖಿಲಜಿಯ ತೋಳ್ಬಲ್ಮೆಯಿಂದ 'ವಂಗದೇಶ'ವನ್ನು ಗೆದ್ದನು ರಾಜನಾದ "ಲಕ್ಷ್ಮಣ ಸೇನನು" ಅವನ ಉಪಟಳವನ್ನು ಸಹಿಸಲಾರದೆ ಪೂರಿಯ ಜಗನ್ನಾಥನನ್ನೂ ಮರೆಹೊಕ್ಕ ಕಾಲವದು. ಆ ರಾಜನೂ ಅಂಥದೇ ಒಂದು ಕಾವ್ಯವನ್ನು ರಚಿಸಿ ಎಲ್ಲರೂ ತನ್ನ ಕಾವ್ಯವನ್ನೇ ಓದಬೇಕೆಂದು ಶಾಸನ ಮಾಡಿದನು.

ರಾಜ ಶಾಸನವನ್ನು ಮೀರಿಯುವ ಶಕ್ತಿ ಜಯದೇವನಿಗೆ ಇಲ್ಲವಾದರೂ—ಅವನು ಸ್ವಾಮಿಯ ಸನ್ನಿಧಿಯಲ್ಲಿ ಸ್ವಕೃತ 'ಗೀತ ಗೋವಿಂದವನ್ನೇ' ಮಾಡುತ್ತಾ ನರ್ತಿಸುತಿದ್ದನು. ಇದರಿಂದ ರಾಜನು ಅಸಹನೆಗೊಂಡನು. ಆಗ ಜಯ ದೇವನು 'ತನ್ನ ಗ್ರಂಥವೇ ದೇವರಿಗೆ ಪ್ರಿಯವಾದುದು' ಎಂದನು. ಇದನ್ನು ಪರೀಕ್ಷಿಸುವ ಸಲುವಾಗಿ ಎರಡು ಗ್ರಂಥಗಳನ್ನೂ ಗರ್ಭ ಗೃಹದಲ್ಲಿಟ್ಟು ಬಾಗಿಲು ಹಾಕಿದರು. ಎಲ್ಲರೂ ನಿರೀಕ್ಷಿಸುತ್ತಿದ್ದಂತೆ ಕ್ಷಣಾರ್ಧದಲ್ಲಿ ಬಾಗಿಲು ತೆರೆಯಿತು. ನೋಡುವಾಗ ರಾಜನ ಪುಸ್ತಕದ ಮೇಲೆ ಜಯದೇವನ ಗ್ರಂಥವಿತ್ತು. ರಾಜನೂ ಆಶ್ಚರ್ಯ ಚಕಿತನಾಗಿ ಸ್ವಾಮಿಯ ಅನುಜ್ಞೆಯಂತೆ ನಡೆದನು. ಆ ಮೇಲೆ 'ಗೀತ ಗೋವಿಂದನ ಖ್ಯಾತಿ ದಿಗಂತಕ್ಕೆ ಹಬ್ಬಿತು.

ಆ ಪದ್ಯವನ್ನು ಹಾಡುವಲ್ಲಿಗೆ ಜಗನ್ನಾಥನು ಬಂದು ಆಲಿಸುತ್ತಿದ್ದನಂತೆ. ಒಮ್ಮೆ ಗುಳ್ಳದ ಕಾಯಿ ಕೊಯ್ಯುವ ಹೆಂಗುಸೊಬ್ಬಳು ಆ ಪದ್ಯಗಳನ್ನು ಹಾಡುತ್ತಿದ್ದಳಂತೆ. ಅವನ್ನು ಆಲಿಸುವುದಕ್ಕೆ ದೇವರು ಬಂದರಂತೆ, ಮುಳ್ಳು ವಸ್ತ್ರಕ್ಕೆ ಸಿಕ್ಕಿ ವಸ್ತ್ರ ಹರಿಯಿತು. ಮರುದಿನ ದೇವರ ವಿಗ್ರಹದಲ್ಲಿದ ವಸ್ತ್ರವೂ ಹರಿದು ಕೊಂಡಿತ್ತು. ಅಲ್ಲಲ್ಲಿ ಗುಳ್ಳದ ಮುಳ್ಳು ನೆಟ್ಟು ಕೊಂಡಿತ್ತು. ಅಷ್ಟು ಮಧುರ ಪದ್ಯವನ್ನು ಕೇಳುವುದೆಂದರೆ ಅಷ್ಟು ಪ್ರೀತಿ. ದೇವರಿಗೆ ದೇವರ ಮಾತಿನಲ್ಲೇ ಹೇಳುವುದಾದರೆ:—"ಗೀತ ಗೋನಿಂದ ಸದೃಶಂ ನಾನ್ಯಂ ಕಾವ್ಯಂ ಪ್ರಿಯಂ ಮಮ."

ಸಹಗಮನವು ಪಾಷಂಡ ಪ್ರವೃತ್ತಿಯೆಂದೂ, ಪತಿಯ ಮರಣ ವಾರ್ತೆ ತಿಳಿದೊಡನೆ ನಿಜವಾದ ಸತಿಯಾದರೆ ಪ್ರಾಣತ್ಯಾಗ ಮಾಡುವಳೆಂದೂ— ಪದ್ಮಾವತಿಯು ಒಮ್ಮೆ ರಾಣಿಗೆ ಹೇಳಿದಳು. ಜಯದೇವನು ದೇವದರ್ಶನಕ್ಕಾಗಿ ಹೋಗಿದ್ದಾಗ ಒಮ್ಮೆ ರಾಣಿಯು ಪದ್ಮಾವತಿಯೊಡನೆ ಜಯದೇವನು ನಿಧನನಾದನೆಂದು ಹೇಳಿದಳು. ಪರೀಕ್ಷೆಗಾಗಿ ಆಡಿದ ಮಾತೆಂದು ತಿಳಿಯದೆ ಪದ್ಮಾವತಿಯು ಅಲ್ಲೇ ಗತಾಸುವಾದಳು. ಆ ಮೇಲೆ ಜಯದೇವನು ಆರ್ತನಾಗಿ ಬೇಡಿ ದೇವಾನುಗ್ರಹದಿಂದ ಪತ್ನಿಯನ್ನು ಮರಳಿ ಪಡೆದನು.

ಜಯದೇವನು ನಿಸ್ಪೃಹನಾಗಿದ್ದನು. ಅವನು ಗ್ರಾಮಾಂತರದಲ್ಲಿ ಒಳ್ಳೆಯ ಆತಿಥ್ಯ ಪಡೆದು, ಧನಕನಕ ವಸ್ತ್ರಾಭರಣಗಳೊಂದಿಗೆ ಹಿಂದೆರಳುವಾಗ ಕಳ್ಳರು ಸಿಕ್ಕಿದರು. ಈ ಆಭರಣಗಳಿಂದ ತನಗೆ ಸಾವು ಬಂದೀತೆಂದು ಅವನು ಅದನ್ನು ಕಳ್ಳರಿಗೇ ಒಪ್ಪಿಸಿದನು. ಕಳ್ಳರು ಇವನಿಂದ ಮುಂದಾವ ವಿಪತ್ತು ಬರಬಾರದೆಂದು ಇವನನ್ನು ಕಟ್ಟಿ ಬಿಗಿದು, ಕೈಕಾಲುಗಳನ್ನು ಕತ್ತರಿಸಿ ಕೆಡೆದರು. ದೈವಾತ್ ಮೃಗಯಾ ವಿಹಾರಕ್ಕಾಗಿ ಬಂದ ರಾಜನು,

(೧೨ನೇ ಪುಟ ನೋಡಿರಿ)

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮು ಗು ಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ–

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦ ೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಆಕೆಯಲ್ಲಿ ಮೂರ್ಛೆನಿಸುತಿತ್ತು. ವಿಚಾರಿಸಿ ಆಕೆ ಆಡಿದ ಮಾತು ಮಾಧವರಾಯರ ಆ ದಿನ್ನೊಂ ಸಮಸ್ಯೆಗಳನ್ನು ಪರಿಹರಿಸಿತ್ತು. ಕೊಲೆಯ ತಪಾಸಣೆಯಲ್ಲಿಯೂ ಆಕೆ ಕೈ ಹರಿಡಿಸುತ್ತಿದ್ದಳು. ಮಾಲಿನಿಯನ್ನು ಮ ದುವೆ ಮಾಡದೇನೇ ಮನೆಯಲ್ಲಿರಿಸುವುದು ಸರಿಯಾಗಿ ಕಂಡಿರಲಾರದು—ರಾಯರಿಗೆ. ಹಾಗೆಯೇ ಅನುರೂಪ ವರನಿಗಾಗಿ ಕಾದು ಕಾದು ಅತ್ಯುತ್ತಮ ಗುಣವಂತ, ವಿದ್ಯಾ ವಂತನಾದ ಶ್ರೀನಾಥನೊಡನೆ ಮಾಲಿನಿ ಯ ವಿವಾಹ ನಡೆಯುವ ಬಗ್ಗೆ ಪ್ರಸ್ತಾಪ ನಡೆದಿತ್ತು. ಸಾಕಷ್ಟು ವರದಕ್ಷಿಣೆ ಕೇಳಿ ದ್ದರಿಂದ, ನಿರ್ಧನರಾದ ಮಾಧವರಾಯರು ಏನೂ ಮಾಡುವಂತಿರದೆ ನೋಡುವ ಎಂ ದಿದ್ದರು. ಮಾಲಿನಿ ಅಂದಿದ್ದ ಮಾತು ಅವ ರ ಮನಃ ಪಟಲದಿಂದ ಅಳಿಸಿರಲಿಲ್ಲ—

'ಅಪ್ಪಾ, ಸಾಲಮಾಡಿ ಶುಲಕ್ಕೆ ಎದೆ ಯೊಡ್ಡಬೇಡಿ. ನನಗಾಗಿ ನೀವು ಕಷ್ಟಕ್ಕೀ ಡಾಗಬೇಡಿ. ಮದುವೆಗಾಗಿ ತ್ವರೆಯೇ ಕೆ?"—"ಹೌದು, ಹೆಣ್ಣು ಹೃದಯ—ಗಂ ಡಿನ ಹೃದಯದಂತೆ ಅದಕ್ಕೂ ಆಸೆ-ಆ ಕಾಂಕ್ಷೆಗಳಿಲ್ಲವೆ?....ಛಿ, ಎಷ್ಟು ವರ್ಷಗ ಳು ಗತಿಸಿದುವು! ಈ ವರ್ಷ ಆಗಿಯೇ ತೀ ರಬೇಕು." ಎಂದು ಒಮ್ಮೆ ಅಂದುಕೊಂ ಡರೆ, ಅಷ್ಟರಲ್ಲಿ ಮಾಲಿನಿ ಬಂದು ಅವರ ಕೊಟ್ಟ ಕೋಟನ್ನು ನೇವರಿಸುತ್ತ, 'ಅಪ್ಪಾ, ವ್ಯರ್ಥ ಚಿಂತಿಸಿ ಆಯುಷ್ಯ ಇಳಿ ಸಬೇಡಿ. ಬರೇ ಆಲೋಚನೆಯಿಂದೇನು ಪ್ರಯೋಜನ? ಈ ವರ್ಷ ಬೇಡ. ಮುಂ ದಿನ ಬಾರಿ ಕಾಣೋಣ." ಎಂದಳು.

"ಹೌದು ಮಗೂ, ನೀನನ್ನುವುದೂ ನಿಜವೇ. ಆದರೆ, ನಾನೊಬ್ಬ ಸಾಮಾನ್ಯ ನು ನು ಷ್ಯ ನಾ ಗಿ ರ ದೆ ದೊ ಡ್ಡ ಬುದ್ಧಿವಾದಿನಾಗಿರುವೆ. ಹಾಗಿದ್ದರೂ ಬಂಡವ ಮಾಯಾಮಂತ್ರಕ್ಕೆ ಇಂದಿ ನ ವರೆಗೂ ಬಲಿಯಾಗಿಲ್ಲ. ನನಗೆ ಯಾವು ದೂ ಬೇಡವಾಗಿತ್ತು. ಆದರೆ, ಮಗು. ಪ್ರತಿಯೊಬ್ಬನ ಒಳದನಿಯನ್ನು ದೂರ ದಿಂದಲೇ ನೋಡಿ ಗ್ರಹಿಸಬಲ್ಲೆ ನಾನು. ನಿನ್ನ ಹೃದಯ ಯಾವುದನ್ನು ಆಶಿಸುತ್ತ ದೆ. ಮತ್ತು ನನ್ನಾತ್ಮ ಯಾವುದನ್ನು ತಿಳಿ ಸುಲು ತವಕಿಸುತ್ತವೆ. ಆವೆರಡೂ ಒಂ ದೇ. ನೀನು ಸುಖದಿಂದಿರದಿದ್ದರೆ, ನನ ಗೇನು ಸುಖ? ನೀನೇ ಮಗಳು, ನೀನೇ ಮಗ ಅಲ್ಲವೆ?'

ಮಾಧವರಾಯರ ಮನಃಪಟಲದಲ್ಲಿ ಈ ಸ್ಮರಣೆಗಳು ಮಿಂಚಿ ತೋರಿ ಮಾಯವಾ ದುವು.

ಮಾಲಿನಿಗೆ ಇನ್ನೊಂದು ಮಾಸದಲ್ಲಿ ಮದುವೆ ನೆರವೇರಲಿದೆ. ನಾಲ್ಕು ಕೊಲೆ ಗಳ ತಪಾಸಣೆಯಲ್ಲಿ ತುಂಬ ದಣಿದಿದ್ದರು ಮಾಧವರಾಯರು ೧೦ ಘಂಟೆಯ ವರೆ ಗೂ ಆಲೋಚನಾಪರರಾಗಿದ್ದು, ಶತಪಥ ಭ್ರಮಿಸ ತೊಡಗಿ ಮಲಗಲೆದ್ದ. ರಾಯರ ಲ್ಲಿಗೆ ಏದುತ್ತಾ ಬಂದ ರಂಗಯ್ಯ ಗೌಡ!

'ಸರ್. ನಮಸ್ಕಾರಾಂ....'

'ಓ ಈ ಅಪರ ರಾತ್ರಿಯಲ್ಲೂ ನಮ ಸ್ಕಾರದ ಹೊರೆ ಹೊತ್ತುಕೊಂಡು ಬಂದಿ ರಲ್ಲಾ?'

'ಬರಬೇಕಾಯ್ತು ಬಂದೆ. ನಮ್ಮ ನಿ ಮ್ಮ ಸುಖದುಃಖ ಎಲ್ಲಾ ಒಂದೇ ಆಗಿರು ವಾಗ, ಬಾರದೆ ಇದೀತೇದಕ್ಕಾಗುತ್ತೆಯೆ?'

ರಾಯರು ಪ್ರಶ್ನಾರ್ಥಕ ಚರ್ಯೆ ವ್ಯ ಕ್ತಪಡಿಸಿದರು; ಏನೊಂದೂ ಅರಿಯದವ ರಂತೆ.

'ನನ್ನಿಂದಲೇ ಬಾಯಿಬಿಡಬೇಕೂಂತ ತಮ್ಮ ಆಶೆ ಆದ್ರೆ, ಆಯ್ತು. ಹೇಳ್ತೀನೆ. ತಮ್ಮ ಮಗಳ ಮದುವೆ ಅಂತ ಕೇಳಿದೆ. ವರದಕ್ಷಿಣೆ ಭಾರಿ ರೊಕ್ಕ ಬೇಕಾಯ್ತೂಂ ತ್ಲೂ ಕೇಳಿವೆ ಆಸ್ಸಿ. ಇಂತಹ ಕಷ್ಟ ಕಾಲ ದಲ್ಲಿ ನಿಮ್ಮಂಥೋರಿಗೆ ನಮ್ಮಂಥೋರು ಸಹಾಯಮಾಡದೇ ಇದ್ರೆ ತಪ್ಪಾಗುದಿಲ್ವಾ? ಅಂಥ್ಲೇ ಹೇಳ್ತೀನೆ—ಎಷ್ಟು ಸಾವಿರ ಬೇ ಕಾದ್ರೂ ಕೊಡ್ತೀನೆ...ಆದರೆ...'

'ಅಂದರೆ....?'

'ವೆಂಕಟ್ರಮಣ ನಿಮ್ಮಲ್ಲೇಲಿರುವ್ನಂತೆ' ಹೌದು'.

'ಅವನನ್ನ ಬಿಟ್ಟು ಬಿಡ್ಬೇಕು ಸರ್, ಅಷ್ಟೆ.'

'ಹಾಗೆಂದು ಕೇಳಲು ನೀವಾರು?'

'ಇದಾರೇ ಇಲ್ಲಿ, ದಯಮಾಡಿ ತಾವು ಅವನನ್ನ ಬಿಟ್ಟು ಬಿಟ್ರೆ...ನಾನು...'

"ಆತ ಕೊಲೆಗಡುಕನೆಂದು ಸ್ಪಷ್ಟ ಸಾ ರುತ್ತದೆ. ಅಂತಹವನನ್ನು ಬಿಟ್ಟುಕೊಟ್ಟು ನಾನೇ ಅಂತಹ ವಿಷಸರ್ಪದಿಂದ ಕಚ್ಚಿಸಿ ಕೊಳ್ಳಲೆ? ನೀವೇ ಹೇಳಿ ಗೌಡರೆ?"— ಇಷ್ಟೊಂದು ವಿನಯವಾದರೂ ಪ್ರಕಟ ವಾಗಲು ಅವರ ಮನದ ಮಂಥನವೇ ಕಾ ರಣವಾಗಿತ್ತು: 'ಮದುವೆಗಾಗಿ ೧೦ ಸಾ ವಿರ!...ಮಾಲಿನಿಯ ಮನಸ್ಸಿಗೆ ತಕ್ಕ ವರ ಶ್ರೀನಾಥ!.......ನಮಗೆ ದೊರಕಲಾರದ ದೊಡ್ಡ ಕುಟುಂಬದ ಗಂಡು....ಉನ್ನತ ನೌಕರಿಗಾಗಿ ತೆರಳಲಿರುವ ಶ್ರೀನಾಥ... ಮದುವೆಗಾಗಿ ೧೦ ಸಾವಿರ!" ಹತ್ತು ಸಾ ವಿರಕ್ಕೆ ಹತ್ತು ನೂರುಗಳು ಮಾಧವರಾ ಯರಲ್ಲಿ ಇಂದು ತೋರುತ್ತಿಲ್ಲ! ಇಂತಹ ಹತ್ತು ಪ್ರಶ್ನೆಗಳು ತಲೆಯಲ್ಲಿ ಸುಳಿದು ಆ ವರನನ್ನು ಕಂಗಾಲು ಮಾಡಿದುವು.

"ಸರ್, ವೆಂಕಟರಮಣನನ್ನ ಬಿಟ್ಟು ಬಿಟ್ರೆ..." ಆಡಿದ್ದೋ ನೂರರ ನೋಟು ಗಳನ್ನು ತಿರುವುತಿದ್ದ ಗೌಡ.

"ಛಿ, ಹಣಕ್ಕಾಗಿ ಹಾತೊರೆದು ಕೀರ್ತಿ ಗೆ ಭಂಗ ತಂದುಕೊಳ್ಳಲಾರೆ. ನಡೆಯಿರಿ; ಆತನನ್ನು ಬಿಡಲಾರೆ"—ಮಾಧವರಾಯರ ಕಟ್ಟು ನಿಟ್ಟಿನ ಮಾತು ಹೊರಬಿತ್ತು.

ನೂರರ ಹತ್ತು ನೋಟನ್ನು ಹಿಡಿದು ಗೌಡರೆಂದರು— 'ಇಷ್ಟೊಕ್ಕರೆ, ಲಂ ಚವೆಂಬುದು ಹೇಯವೆಂದು ತಿಳೀಬೇಡಿ. ಅಲ್ಲದೇ ನಾನು ಲಂಚವೀಯುತ್ತಿಲ್ಲ; ಬ ಹುಮಾನ ಮಾತ್ರ. ಎಲ್ಲರೂ ಇದನ್ನು ಆತ್ಮ ಸಂತೋಷದಿಂದ ಸ್ವೀಕರಿಸುತ್ತಿರು ವಾಗ, ನೀವು ಮಾತ್ರ ತಿರಸ್ಕರಿಸಿದ್ರೆ ಯಾ ರಿಗೆ ನಷ್ಟ? ವಿಚಾರ್ಸಿ ನೋಡಿ; ನನ್ನ ಮಾ ತ್ನ ಕೇಳಿ....'

ಮಾಧವರಾಯರ ಮನ ಹೇಳಿತು. 'ಛೇ, ಕೇವಲ ಹಣದಾಸೆಗಾಗಿ ಕೈಸಿಕ್ಕಿದ ಕೈದಿಯನ್ನು ಬಿಡುವುದೆ?....ಮಗಳ ಮ ದುವೆಗೆ ಹಣವಿಲ್ಲ....ಹಣಕ್ಕಾಗಿ ಯಾವ ಕೆಲಸವೂ ನಡೆಯುವುದು....' ಮೇಜಿನ ಮೇಲೆ ಹತ್ತು ನೋಟುಗಳನ್ನು ತೋರು ವಂತಿಟ್ಟು ಗೌಡ ಮಾತು ತಿರುಗಿಸಿದ— 'ಮಾಧವರಾಯರೇ, ನಿಮ್ಮನ್ನು ಜಾಣರ ನ್ನ ನಾವು ಇದು ವರೆಗೆ ಕಂಡಿಲ್ಲ. ಇಂದಿ ನ ನಾಲ್ಕೂ ಕೊಲೆಗಳ ಬಗ್ಗೆ ತಾವು ದಿನ ವಿಡಿ ದುಡ್ಡು ಸೋಶಿಸ್ದೀರಿ ನಿಮ್ಮ ಧೈ ರ್ಯ ಸಾಹಸಗಳಿಗೆ ಮೆಚ್ಚಿದ್ದೇನೆ. ಮಗ್ಳ ವಿವಾಹಕ್ಕೆ ಇನ್ನೆಷ್ಟು ಬೇಕೋ ಕೇಳಿರಿ. ನೀವಿಲ್ಲೇ ನಾವಿಲ್ಲ; ನಾವಿಲ್ದೆ! ನೀವಿಲ್ಲ. ಆದುದ್ರಿಂದ ನಮ್ಮ ನಿಮ್ಮಲ್ಲಿ ಭೇದವೇಕೆ? ಕೊಡ್ತೇನೆ....'

ನಡುಗುವ ಕೈಗಳಿಂದ ಮಾಧವರಾಯ ರು-ತಮ್ಮ ಹೃದಯ, ಮನಸ್ಸುಗಳ ವಿ ರೋಧವನ್ನು ಕಡೆಗಣಿಸಿ ಅದನ್ನು ಮೇಜಿ ನೊಳಗೆ ಇರಿಸಿದರು.

"ಪಟ್...ಪಟ್..." ಬೂಟುಗಳ ಛೀ ಕರ ಸದ್ದು...

"ಎಟೆನ್ಷ"—ನಾಲ್ಕು ಜನ ಲಂಚ ನಿರೋಧ ಶಾಖೆಯವರು ಮಾಧವರಾಯ ರನ್ನು ಸುತ್ತುವರಿದರು. ದೀವಾಲಯದ ಗೊಂಬೆಯಂತೆ—ಗೋಮಟನಂತೆ ಅಲು ಗದೆ ಮಾಧವರಾಯರು ದಂಗು ಬಡಿದು ನಿಂತುಬಿಟ್ಟರು!

"ಮಾಲಿನಿ, ನಿನ್ನ ತಂದೆ ರಂಗೇ ಗೌಡ ನ ಮೋಸದ ಕುಂಡಕ್ಕೆ ಬಲಿಯಾದ"— ಎಂದು ಚೀತ್ಕರಿಸಿದ ತಂದೆಯ ಧ್ವನಿಗೇಳಿ, ತಂದೆಯ ಕೋಣೆಯಲ್ಲಿ ನಾಲ್ವೆಂಟು ಜನ ನಿಂತಿದ್ದುದನ್ನು ಕಂಡು ತಂದೆಯನ್ನು ಬ ಳಿಸಿ ನಿಂತಿದ್ದ ನಾಲ್ವರನ್ನೂ ದೂರ ಸರಿ ಯಲು ಹೇಳಿ, ತಂದೆಗೆಂದಳು! ಮಾಲಿನಿ: 'ಅಪ್ಪಾ, ಇಂದಿನವರೆಗೂ ನೀವು ಕಾರ್ಯ ದಕ್ಷತೆಯಲ್ಲಿ ಶ್ರೇಷ್ಠರಾಗಿದ್ದು ಯಶಸ್ಸ ಪಡೆದಿರುವಿರಿ. ನಿಮ್ಮ ಜನ್ಮದಿನವಾದ ಇಂ ದು ನಾಲ್ಕು ಕೊಲೆಗಳ ತಪಾಸಣೆಯಲ್ಲಿ ಗೆಲ್ಲುವವರಿದ್ದು, ಬೆಳೆದ ನನ್ನ ಲಗ್ನದ ಬ ಗ್ಗೆ ತಲೆತುಂಬ ಚಿಂತಿಸಿ, ಘೋರ ವಾದ ಅಪರಾಧ ಮಾಡಿ ಮರ್ಯಾ ದೆಗೆ ಭಂಗ ತಂದುಕೊಂಡಿರಾ? ....ಅಧಿಕಾರಿಗಳೇ, ಈ ಬಾರಿಗೆ ಇವರ ನ್ನು ಬಿಟ್ಟುಬಿಡಿ... ಅವರ ಸ್ವಬುದ್ಧಿಯಿಂ ದ ಇಂತಹ ಅಪರಾಧ ನಡೆದಿಲ್ಲ. ನನ್ನ ಲಗ್ನಕ್ಕಾಗಿ...ಹಣವಂತ ವರನ ವರದಕ್ಷಿ ಣೆಗಾಗಿ....ತಕ್ಕ ಶಿಕ್ಷೆಯನ್ನು ನಾನೇ ಅ ನುಭವಿಸುವೆ; ಅವರನ್ನು ಬಿಟ್ಟು ಬಿಡಿರಿ' —ಹೀಗೆಂದ ಮೋಹಿನಿ ಅಲ್ಲಿಯೇ ಮೂ ರ್ಛಿತಳಾಗಿ ಬಿದ್ದು ಉರುಳಿದಳು.

ಸೂರ್ಯ ಉದಯಿಸಿದ. ಮಾಲಿನಿ ಆ ರೆಗಣ್ಣಿಂದ ಈ ಪ್ರಪಂಚವನ್ನು ಕಂಡಳು. ತುಸು ಅರಿವೂ ಆಗಿರಬೇಕು. ಎದ್ದವಳೇ ತಂದೆಯ ಕೋಣೆ ಪ್ರವೇಶಿಸಿದಳು. ಅ ವರಿರಲಿಲ್ಲ. ತಂದೆಯ ಹರಿಯ ಸ್ವಭಾವ ಚಿ ತ್ರಕ್ಕೆ ನಮಿಸಿ, 'ಅಪ್ಪಾ' ೧೮ ವರ್ಷ ಸಾಕಿ ಸಲಹಿದಿರಿ. ಆದರೆ, ನಿಮಗೆ ಬಡತನವೇ ಮುದ್ದಾಗಿದ್ದರೂ ಮರ್ಯಾದೆ ಮಹತ್ತ ಮವಾಗಿತ್ತು. ನನ್ನ ಲಗ್ನಕ್ಕಾಗಿ ಅದನ್ನಿಂ ದು ಮಾರಿಕೊಂಡಿರಿ. ಅಂತಹ ದುರ್ಬುದ್ಧಿ ಗೆ ಹೇತುವಾದ ನಾನು ತಕ್ಕ ಶಿಕ್ಷೆಯನ್ನು ಅನುಭವಿಸಲೇ ಬೇಕು; ನನ್ನ ಬಗ್ಗೆ ಕಾಳ ಜಿಮಾಡಬೇಡಿರಿ. ತವರು ಮನೆಗೆ ತೆರ ಳಿದ ತಾಯಿಗೆ ಸಂಗತಿ ತಿಳಿಸಿರಿ. ನನಗೆ ಆತ್ಮಹತ್ಯೆಗಿಂತಲೂ ಮಿಗಿಲಾದ ಶಿಕ್ಷೆ ಬೇರೆ ಕಾಣದ್ದರಿಂದ, ನಿಮ್ಮಿಚ್ಛರ ಆಶೀ ರ್ವಾದ ಬಲದಿಂದ ಹೊರಡುತ್ತೇನೆ. ನಿ ಮ್ಮನ್ನು ನೋಯಿಸಿದ್ದಕ್ಕೆ ಕ್ಷಮೆಯಿರಲಿ" ಎಂದು ಅಡ್ಡಬಿದ್ದಳು.

೦ ೦ ೦

ಬೆಳಕು ಹರಿದಿತ್ತು. ಸಮುದ್ರ ದಂಡೆ ಯತ್ತ ಸಾಗುತಿದ್ದ ಮಾಲಿನಿಯನ್ನು ಗೆಳ ತಿಯರು ಕೂಗಿ ಕರೆದರು. "ಎಲ್ಲಿಗೆ ಹೋ ಗುವೆ?", "ಈ ಮುಂಜಾನೆ ಏನು ಕೆಲ ಸ?" ಇತ್ಯಾದಿ ಪ್ರಶ್ನೆಗಳ ಸುರಿಮಳೆಗೆ 'ಈಗ ಬಂದೆ' ಎಂದು ಆಕೆ ಮುಂದುವರಿ ದಳು.

ಎತ್ತರದ ದಿನ್ನೆ. ಕೆಳಗೆ ಕಾರ್ಗಲ್ಲಿರಾಶಿ ಗೆ ತೆರೆಗಳು ಭೂತ ಭವಿಷ್ಯತ್ತುಗಳನ್ನು ಗ ಮನಿಸದೆ ಸದಾ ಬೋರ್ಗರೆದು ಬಡಿಯು ತ್ತಿವೆ. ದೇಹಕ್ಕೆ ಸೀರೆಯನ್ನು ಬಿಗಿಯಾಗಿ ಸುತ್ತಿಕೊಂಡು ಪ್ರಪಂಚದತ್ತ ಶೀಘ್ರಗತಿ ಯಿಂದ ನೋಡಿ ತಾಯಿಯ ನೋಯುವ ಕರುಳಿಗೆ ನಮಸ್ಕರಿಸಿ, ಭವಬಂಧನವನ್ನು ಬಿಗಿಯಾಗಿ ಹರಿದು, ಪಂಚಭೂತಗಳಲ್ಲಿ ಲೀನವಾದಳು—ಮಾಲಿನಿ. ಆಕೆಯ ಆ ಮುಗ್ಧ ಮನಸ್ಸಿನ ಯುವ ಶರೀರವನ್ನು ತನ್ನತ್ತ ಬರ ಸೆಳೆದುಕೊಂಡು ಸಮುದ್ರರಾ ಜ ತೆರೆದುಟಿಗಳಿಂದ ಮುದಿಟ್ಟು ಅಪ್ಪಿ ಕೊಂಡ.

ಮಾಧವರಾಯರು ಮನೆಗೆ ಕಾಲಿರಿಸಿ ಮಾಲಿನಿಯನ್ನು ಕಾಣದೆ ಅವಾಕ್ಕಾದರು. ಆದಿನ ಸಂಜೆ ಸಮುದ್ರ ತೀರದಲ್ಲಿ ನೂರಾರು ಜನ ಒಂದು ಹರಿದ ಹೆಣ್ಣಿನ ನಗ್ನಾವಶೇಷವನ್ನು ಕಂಡು. ಇನ್ಸ್‌ಪೆಕ್ಟರ ರಿಗೆ ನಿವೇದಿಸಿಕೊಂಡರು—ಮಾಧವರಾ ಯರನೊಂದ ಹೃದಯ ಬಿರಿದು ಹೋದಂ ತಾಯಿತು!

—ಶ್ರೀ ಎಚ್. ಆನಂದರಾಮ ಅಡಿಗ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

೧ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ ಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1919



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟಿನ ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (I) ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
30—6—1960

LICENSE NO. 31
Licensed to Post without Prepayment

ಪರಿಚಯ

(೧ನೇ ಪುಟದಿಂದ)

ಬಾಯೂರಿ ಬಸವಳಿದು ಆರ್ತನಾದ ಜಯದೇವನನ್ನು ಉಪಚರಿಸಿ, ಅವನ ದಾರುಣ ಯಾತನೆಯಿಂದ ನೊಂದು ಅರಮನೆಗೆ ಕರತಂದನು.

ಕೆಲಕಾಲದ ಮೇಲೆ ಆ ಕಳ್ಳರೇ ಸಾಧು ವೇಷದಿಂದ ಜಯದೇವನಲ್ಲಿಗೆ ಬಂದರು. ಜಯದೇವನು ಅವರನ್ನು ತನ್ನ ಗುರುಗಳೆಂದು ಹೇಳಿದನು. ರಾಜನು ಅವರಿಗೆ ಹೇರಳ ಉಡುಗೊರೆ ಉಚಿತಗಳನ್ನಿತ್ತನು.

ವನಮಧ್ಯದಲ್ಲಿ ಕಳ್ಳರು ಅವರನ್ನು ಲೂಟಿ ಮಾಡಬಹುದೆಂಬ ಶಂಕೆಯಿಂದ ರಾಜನು ಭೃತ್ಯರನ್ನು ಅವರ ಜತೆಗೆ ಕಳುಹಿಸಿದನು.

ರಾಜಭೃತ್ಯರು ದಾರಿಯಲ್ಲಿ ಆ ಸಾಧುಗಳ ಇತಿವೃತ್ತವನ್ನು ಕೇಳಿದಾಗ ಆ ಧೂರ್ತ ಕಳ್ಳರು ಒಂದು ಕಥೆಯನ್ನು ಕಟ್ಟಿ ಹೇಳಿದರು. "ಕಾರ್ಣಾಟ" ದೇಶದಲ್ಲಿ ಈ ಜಯದೇವನು ಕಳ್ಳತನಮಾಡಿ ಸಿಕ್ಕಿಬಿದ್ದಾಗ ರಾಜನು ಅವನ ಕೈಕಾಲುಗಳನ್ನು ಕಡಿಸಿದನೆಂದು ಹೇಳಿದರು. ಆದರೆ ಅವರು ಆಡಿದ ಬಾಯನ್ನು ಮುಚ್ಚುವಷ್ಟರಲ್ಲಿ ಒಂದು ಸಿಡಿಲೆರಗಿತು. ಅವರು ಸತ್ತರು.

ಈ ವರ್ತಮಾನವನ್ನು ಕೇಳಿ ಜಯದೇವನು ಕರುಣೆಯಿಂದ ಕೈಕೈ ಬಡಿದು ಅಳುತ್ತಿರುವಾಗ ಹೋದ ಹಸ್ತಪಾಣಿಗಳು ಮರಳಿದವು! ಜಯದೇವನು ಕ್ರೂರಿಗಳೊಡನೆ ವ್ಯವಹರಿಸಿದ ರೀತಿ—ಈ ನವಯುಗಕ್ಕೂ ಒಂದು ನವಮಾದರಿಯೇ ಆಗಬಹುದು.

ಅವನು ನಿತ್ಯವೂ ಗಂಗಾಸ್ನಾನ ಮಾಡುತ್ತಿದ್ದನು. ಆದರೆ ಒಮ್ಮೆ ಮೂರ್ಛಿತನಾಗಿ ಬಿದ್ದು ಅದು ಅಸಾಧ್ಯವಾಯಿತು. ಮರುದಿನ ಜಯದೇವನು, ರಾಜನ-ಮಹಾಂತರ ಸಮ್ಮುಖದಲ್ಲೇ— ಮನೆಯ ಬಾವಿಯ ಬಳಿಗೆ ಬಂದು ಗಂಗೆಯನ್ನು ಪ್ರಾರ್ಥಿಸಿದನು. "ದುಗ್ಧ ಕುಂದೇಂದು"ವಿನಂತೆ ನಿರ್ಮಲವಾದ ನೀರು ಉಕ್ಕಿ ಹರಿಯಿತು. ಅಲ್ಲೇ ಗಂಗೆ ನೆಲಸಿದಳು. ಮಹಾರೋಗಗಳನ್ನೂ ಗಂಗೆ ಅಲ್ಲಿ ಪರಿಹರಿಸಿದ ಪವಾಡವಿದೆ.

ಇಂಥ ನಿರ್ಮಲ, ಸರಳ ಜೀವಿಯಾದ ಜಯದೇವನ ಜೀವನ ಪಾವಿತ್ರ್ಯವನ್ನು—ರಸಧ್ವನಿಯನ್ನು ನಾವು ಅವನ ಗೇಯ ಕಾವ್ಯದ ಮೂಲಕವೇ ಚೆನ್ನಾಗಿ ಮನನ ಮಾಡಿಕೊಳ್ಳಬಹುದು. ಗೀತ ಗೋವಿಂದದ ಮಧುರ ಭಾವಲಹರಿಯಲ್ಲಿ ನಾವು ಮಿಂದರೆ—ಈ ಮನಸ್ಸಿಗೆ ಬೇರೆ ಕ್ಷುದ್ರ ಕಾಮನೆಗಳ ಸೋಂಕು ತಗಲಲಾರದು.

ರಾಸಕೇಲಿಯಲ್ಲಿ ಒಮ್ಮೆ ಕೃಷ್ಣನ ಮೇಲೆ ರಾಧೆಗೆ ಸಿಟ್ಟುಬರುತ್ತದೆ. 'ಮದನ ಕದನ'ದಲ್ಲಿ ಇದೇನೂ ಹೊಸತಲ್ಲ! ಕೃಷ್ಣನೂ ಚಾಟೂಕ್ತಿಗಳಿಂದ ರಾಧೆಯನ್ನು ಸಂತೈಸುತ್ತಾನೆ. ಆದರೆ ಅವಳ ಕೋಪ ಶಾಂತವಾಗದು." ಸಿರಸ್ಯಾ ಧೇಹಿ ಮೆ ಪಾದಂ" ಎಂದು ಬರೆಯಬೇಕಾದ ಸಂದರ್ಭವದು. ಆದರೆ ರಾಧೆಯು ಕೃಷ್ಣನ ತಲೆಯ ಮೇಲೆ ಕಾಲಿನ್ನಿಡುವುದು ಅಸಮಂಜಸವೆಂದು ಕವಿಗೆ ತೋರಲಿಲ್ಲ. ಅಷ್ಟಕ್ಕೇ ಬರೆಯುವುದನ್ನು ನಿಲ್ಲಿಸಿ ಸ್ನಾನಮಾಡಲು ಹೋದನು.

ಆದರೆ ಜಯದೇವನು ಸ್ನಾನಮಾಡಿಬರುವಾಗ ಆ ಪದ್ಯ ಪೂರ್ಣವಾಗಿತ್ತು!

ದೇವರೇ ಕವಿಯ ರೂಪದಿಂದ ಬಂದು ಪದ್ಮಾವತಿಯಿಂದ ಆ ಪುಸ್ತಕವನ್ನು ಪಡೆದುಕೊಂಡು ಕವಿ ಯೋಚಿಸಿದಂತೆಯೇ ಪೂರ್ಣಗೊಳಿಸಿ ಹೋಗಿದ್ದನು. ವಿಸ್ಮಯದಿಂದ ಜಯದೇವನು ಹೆಂಡತಿಯ ಮುಖ ನೋಡಿದನು. ಆಕೆ ಏನೂ ಅರಿಯದಂತೆ ಇದ್ದಳು.

"ಸರಸ ಲಸದಲಕ್ತಕರಾಗಂ
ಸ್ಮರಗರಲ ಖಂಡನಂ । ಮಮ ಸಿರಸಿ
ಮಂಡನಂ
ಧೇಹಿ ಪದಪಲ್ಲವ ಮುದಾರಂ."

"ಅಲಕ್ತಕ ರಾಗ ರಂಜಿತವಾದ ಶಿರೋಭೂಷಣದಂತಿರುವ ನಿನ್ನ ಚರಣವನ್ನು ನನ್ನ ತಲೆಯ ಮೇಲಿಡು" ಎಂಬ ಭಾವದೊಂದಿಗೆ ಆ ಪದ್ಯ ಪೂರ್ಣವಾಗುತ್ತದೆ.

ಆ ಕವಿಯು ಮಧುರ ಲಲಿತ ಪದಯುಗಲದಿಂದ ಭಾವ ಪ್ರಮಾಣವನ್ನೇ ಹರಿಸುವ ಚಾತುರ್ಯ ನಿಜಕ್ಕೂ ಮನನೀಯವಾಗಿದೆ. "ಕೋಕಿಲ ಕೂಜಿತ ಕುಂಜ ಕುಟೀರೇ". ಮತ್ತೊಂದೆಡೆ "ಅಲಿಕುಲ ಸಂಕುಲ ಕುಸುಮ ಸಮೂಹ" ಎನ್ನುತ್ತಾನೆ. ಒಂದು ನೋಟದ ವೈಭವವನ್ನು ನೋಡಿರಿ "ವಿಗಲಿತ ಲಜ್ಜಿತ ಜಗದವಲೋಕನ." ಅಂತೂ "ಮುನಿಮನಸಾಮಪಿ ಮೋಹನ ಕಾರಿಣಿ"ಯಾಗಿ ಈ ಕಾವ್ಯದ ಶಬ್ದಜಾಲವು ತೆರೆ ತೆರೆಯಾಗಿ ಬಂದು ಲಾಸ್ಯವಾಡುತ್ತಿದೆ.

ಇಂತಹ ಮನೋಹರ ಶೈಲಿಯ ವಾಕ್ಯ ವೈಭವವನ್ನು, ಭಾವಾಭಿಜ್ಞತೆಯನ್ನು ಗೀತ ಗೋವಿಂದದಲ್ಲಿಯಲ್ಲದೆ ಅನ್ಯತ್ರ ಕಾಣಲಾರೆವು. ಗಂಗೆಯನ್ನು ಭೂಮಂಡಲಕ್ಕೆ ಸತತಪ್ರಯತ್ನದಿಂದ ಭಗೀರಥನು ಹರಿಸಿದಂತೆ ಗೀತಗೋವಿಂದವನ್ನು ಜಯದೇವನು ಮಹಾ ತಪಸ್ಸಿನಿಂದ ನಮಗೊದಗಿಸಿರುವನು. ಈ ಸಾಹಿತ್ಯ ಪುಣ್ಯವಾಹಿನಿಯಲ್ಲಿ ಮಿಂದರೆ, ಕಾವ್ಯಾನಂದದ ಜತೆಗೇ ಪಾರಮಾರ್ಥಿಕ ಸಾಧನೆಯನ್ನೂ ಮಾಡಿಕೊಂಡಂತಾಗುತ್ತದೆ. ಆದುದರಿಂದಲೇ ಜಯದೇವನು ಚಿರಸ್ಮರಣೀಯನಾಗಿ ನಿಂತು ನಮ್ಮ ಬಾಳಿಗೊಂದು ಸಂಸ್ಕಾರವನ್ನು ಕೊಡುವನು.

—ಶ್ರೀ ಕೆ. ವಿಶ್ವಂಬರ ಉಪಾಧ್ಯಾಯ,
ವಿದ್ವಾನ್.

ಅಮೇರಿಕೆಯಲ್ಲಿ ವಾಸಿಸುತ್ತಿರುವ ಆಫ್ರಿಕದ ಒಂದು ನೀಗ್ರೋ ಕುಟುಂಬ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಡಳದ ಸಂಯುಕ್ತ ಕ್ರಿಯಾಸಮಿತಿಯು ಸಂಪಿನ ಕರೆಯನ್ನಿತ್ತರೂ 'ದೇಶವು ಐತಿಹಾಸಿಕ ಮಹತ್ವದ ಸ್ಥಿತ್ಯಂತರವನ್ನು ಕಾಣುತ್ತಿರುವಾಗ ಸರಕಾರಿ ನೌಕರರು ಸಂಪು ಹೂಡುವುದು ಜಾಣತನದ್ದೆನಿಸಲಾರದು, ಹಾಗೂ ಕಾರ್ಮಿಕ ಆಂದೋಲನಕ್ಕೆ ವಿರುದ್ಧವಾದುದಾಗುವುದು' ಎಂದ ಹಿಂದ್ ರಾಷ್ಟ್ರೀಯ ಮಜೂರ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಎನ್. ಆರ್. ವಾಸಪಾಡರವರ ಮಾತುಗಳು ಸೂಚ್ಯವಾಗಿ ಈ ಸಂಪಿನ ಪರಿಣಾಮವನ್ನು ಸೂಚಿಸುತ್ತವೆ.

ಮಾನವೀಯ ದೃಷ್ಟಿ ಬೇಕು

ಇಂದು ಜನಸಾಮಾನ್ಯರಂತೆಯೇ ಸರಕಾರಿ ನೌಕರರೂ ಹೇಳುವಷ್ಟು ಉನ್ನತ ಸ್ಥಿತಿಯಲ್ಲಿಲ್ಲ; ಪ್ರಾಮಾಣಿಕನಾಗಿ ಆತನು ಬಾಳಬೇಕಾದರೆ ತುಸು ಕಷ್ಟಪಡಬೇಕಾಗುತ್ತದೆ. ಆದರೆ, ಸರಕಾರಿ ನೌಕರರು ತಾವೀಗ ಪಡೆಯುತ್ತಿರುವ ಸೌಲಭ್ಯಗಳಿಂದ ತೃಪ್ತರಾಗಬೇಕು; ತಮ್ಮ ಹಾಗೂ ತಮ್ಮಗಿಂತಲೂ ಹೀನ ಸ್ಥಿತಿಯಲ್ಲಿರುವ ನೌಕರ ವರ್ಗ ಹಾಗೂ ಜನತೆಯ ಜೀವನದತ್ತ ಮಾನವೀಯ ದೃಷ್ಟಿಯಿಂದ ನೋಡಬೇಕು. 'ನಮಗೆ ಕೊಡಿ' ಎಂಬ ಸ್ವಾರ್ಥಭಾವನೆಯನ್ನು ಮೊದಲು ಬದಿಗೊತ್ತಿ, ತಾನೂ ಎಲ್ಲರೊಡನೆ ಸೇರಿಕೊಂಡಿರುವ ಒರ್ವ ಭಾರತೀಯನೆಂಬ ಭಾವನೆಯಿಂದ ಕೂಡಿಕೊಂಡಿರಬೇಕು. ವೈಯಕ್ತಿಕ ನೆಲೆಯನ್ನು ಬಿಟ್ಟು, ರಾಷ್ಟ್ರೀಯ ಹಿನ್ನೆಲೆಯಲ್ಲಿ ತಮ್ಮ ಬೇಡಿಕೆಗಳನ್ನು ಅವರು ಪರ್ಯಾಲೋಚಿಸಿದರೆ, ತಾವು ಮಾಡಹೊರಟಿರುವುದು ಅನುಚಿತ ವರ್ತನೆ ಎಂಬುದರ ಅರಿವು ಅವರಿಗೆ ಮೂಡದಿರದು; ಅವಶ್ಯ ಮೂಡಲೇ ಬೇಕು.

—ಗೋ.

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸೋಣಾಗುತ್ತದೆ.

—ಮೆನೇಜರ್

ಶ್ರೀಮಂತರಾಗಲು ......

ನಿಮ್ಮ ವಾರ್ಷಿಕ ಉಳಿತಾಯವನ್ನು
ಅಧಿಕ ಲಾಭ ತರುವಂತೆ
ವಿನಿಯೋಗಿಸಬೇಕೆಂದಿದ್ದರೆ

ಸಂಪಾದನೆ ಮಾಡುವ
ಪ್ರಾಯದಲ್ಲಿ
(ಸುಮಾರು ೩೫ ವರುಷಗಳ ಅವಧಿಯಲ್ಲಿ)
ಉಳಿಸಿ ವೃದ್ಧಿಗೊಳಿಸ
ಬೇಕೆಂಬ ಅಪೇಕ್ಷೆ
ನಿಮಗಿದ್ದರೆ

ಕೊನೆಯ ಪಕ್ಷ ರೂ. ೨೫೦ನ್ನಾದರೂ
ವಾರ್ಷಿಕವಾಗಿ ಉಳಿಸಲು
ನೀವು ಬಯಸುವುದಾದರೆ

ನಿಮಗೆ—

ಇನ್ವೆಸ್ಟರ್ಸ್ ಏಜನ್ಸಿಯ

ಆದರದ ಆಹ್ವಾನವಿದೆ

ಸಿಂಡಿಕೇಟ್ ಬೇಂಕ್

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.